
ತೀ.ನಂ.ಶ್ರೀ.

ಪಥ - ಪರಿಸರ



ಸಂಪಾದಕ

ತೀ.ಶ್ರೀ.ನಾಗಭೂಷಣ

ಈ ಸಂಪುಟದ ವ್ಯಕ್ತಿ ಪ್ರೊ॥ ತೀ.ನಂ.ಶ್ರೀ. ಎಂಬುದು ನಿಜವಾದರೂ ಅವರ ಕಾಲದ ಸ್ನೇಹಮಯ ವಾತಾವರಣ, ಮೌಲ್ಯ ವ್ಯವಸ್ಥೆ, ಸಾಮಾಜಿಕ ಸಂಬಂಧಗಳು, ಶಿಕ್ಷಣದ ರೀತಿ ನೀತಿ ಇವುಗಳ ಆತ್ಮೀಯವಾದ ಪರಿಚಯ ವಾಗುವುದಲ್ಲದೆ ಅವರ ಆತ್ಮೀಯ ಗೆಳೆಯ ರಾಗಿದ್ದ ನೂರಾರು ಶ್ರೇಷ್ಠರ ಮಾಹಿತಿ ದೊರಕುತ್ತಿದ್ದು ಅದೆಲ್ಲವನ್ನು ಓದುತ್ತಿದ್ದರೆ ಈ ಕಾಲದವರಿಗೆ ಅದು ಸ್ಫೂರ್ತಿಯ ಸೆಲೆಯೂ ಆಗುತ್ತದೆ. ತೀ.ನಂ.ಶ್ರೀ. ನೆಪದಲ್ಲಿ ಸುಮಾರು ೧೯೪೫-೧೯೬೬ರ ಕಾಲಘಟ್ಟವೇ ನಮ್ಮ ಮುಂದೆ ಬಂದು ನಿಲ್ಲುತ್ತದೆ.

ಇದು ಬರೀ ನೀರಸ ಸಂಗತಿಗಳ ಶುಷ್ಕ ದಾಖಲೆ ಅಲ್ಲ. ಓದುಗರನ್ನು ಮತ್ತೆ ಮತ್ತೆ ಓದುವಂತೆ ಮಾಡುವ, ಅಲ್ಲಲ್ಲಿ ಪುಟಗಳನ್ನು ತೆಗೆದು ಇಣುಕಿ ಹಾಕಿ ಖುಷಿಪಡುವಂತೆ ಮಾಡುವ ರಸಮಯ ಕೃತಿಯೂ ಆಗಿದೆ. ನಾನಂತೂ ಬಿಡುವು ಸಿಕ್ಕಾಗ ಅಥವಾ ಬೇಸರವಾದಾಗ ಉತ್ಸಾಹದ ಚಿಲುಮೆ ಚಿಮ್ಮುವ ಈ ಕೃತಿಯ ಪುಟಗಳನ್ನು ತಿರುವಿ ಹಾಕುತ್ತ ಆ ಹಿಂದಿನ ಸುಂದರಲೋಕದಲ್ಲಿ ವಿಹರಿಸಿ ಸಂತೋಷಿಸುತ್ತೇನೆ.

ಎಂ. ಚಿದಾನಂದ ಮೂರ್ತಿ

(ಮುನ್ನುಡಿಯಲ್ಲಿ)

ಬಿ.ಎಂ.ಶ್ರೀ ಪ್ರತಿಷ್ಠಾನದ ಗ್ರಂಥಾಲಯಕ್ಕೆ

17 ನೇ ಜುಲೈ 2019.

ಪಿ.ವಿ.ನಾರಾಯಣ

ಪ್ರೊ॥ ತೀ.ನಂ.ಶ್ರೀ. ಜನ್ಮಶತಮಾನೋತ್ಸವ ವರ್ಷ

ತೀ.ನಂ.ಶ್ರೀ. ಪಥ – ಪರಿಸರ

ಸಂಪಾದಕ
ತೀ.ಶ್ರೀ. ನಾಗಭೂಷಣ

ತೀ.ನಂ.ಶ್ರೀ. ಸಂಸಾರವರ್ಗ
ಬೆಂಗಳೂರು

TEENAMSREE PATHA-PARISARA : Volume in memory of Late Prof. T.N. Sreekantaiya. Editor : T.S. Nagabhushana, Published by Prof. T.S. Nagabhushana, 53/E, 'Olume', 1st Cross, 3rd Phase, 4th Block, Banashankari 3rd Stage, Bangalore - 560 085

Pages : xvi + 920

First Impression : 2006

Price : Rs. 300/-

ಪುಟಗಳು : xvi + 920


ಪ್ರಥಮ ಮುದ್ರಣ : 2006

ಬೆಲೆ : ರೂ. 300/-

ಪ್ರಕಾಶಕರು :
ಪ್ರೊ|| ಟಿ.ಎಸ್. ನಾಗಭೂಷಣ
53/ಇ, 'ಒಲುಮೆ', 1ನೇ ಕ್ರಾಸ್,
3ನೇ ಮೇನ್, 4ನೇ ಬ್ಲಾಕ್,
ಬನಶಂಕರಿ 3ನೇ ಸ್ಟೇಜ್,
ಬೆಂಗಳೂರು – 560 085
ದೂರವಾಣಿ : 26696874

ಮುದ್ರಣ :
ಇಳಾ ಮುದ್ರಣ
ನಂ. 36, 40 ಅಡಿ ರಸ್ತೆ, ರಾಘವನಗರ,
ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು – 560 026
✆ : 26757159 / 32715773

ಪುಣ್ಯ ಸ್ಮರಣೆ



ಪೂಜ್ಯ ಮಾತಾಪಿತೃಗಳಾದ (ದಿ) ಶ್ರೀಮತಿ ಎಸ್. ಜಯಲಕ್ಷ್ಮಮ್ಮ
ಮತ್ತು (ದಿ) ಪ್ರೊ|| ತೀ.ನಂ. ಶ್ರೀಕಂಠಯ್ಯ ಅವರಿಗೆ
ಭಕ್ತಿಪುರಸ್ಸರ ನಮಸ್ಕಾರಗಳು

"ಅಭಿಮಾನ ಸತ್ಯದ ಕಣ್ಣು ಮುಚ್ಚಬಾರದು"

– *ತೀ.ನಂ.ಶ್ರೀ.*

ಮುನ್ನುಡಿ

(ದಿ) ಪ್ರೊ॥ ತೀ.ನಂ.ಶ್ರೀಕಂಠಯ್ಯನವರ ಬದುಕು–ಬರಹಗಳನ್ನು ಕುರಿತಂತೆ ಅವರ ಮಗ ಪ್ರೊ॥ ತೀ.ಶ್ರೀ ನಾಗಭೂಷಣ ತಮ್ಮ ಮನೆಯಲ್ಲಿ ಜೋಪಾನವಾಗಿ ಸಂಗ್ರಹಿಸಿ ಇಟ್ಟಿದ್ದ ಹಳೆಯ ಪತ್ರಗಳು, ವೃತ್ತ ಪತ್ರಿಕೆಗಳು, ಮಾಸಿಕಗಳು ಬೇರೆ ಬೇರೆ ಕೃತಿಗಳು ಇವೇ ಮೊದಲಾದ ಮೂಲಗಳನ್ನಿಟ್ಟುಕೊಂಡು ಅತ್ಯಂತ ಅಪೂರ್ವ ದಾಖಲೆಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿರುವುದು ಕನ್ನಡದಲ್ಲಂತೂ ಅತಿ ವಿರಳ; ಅಥವಾ ಇದಕ್ಕೆ ಸರಿಗಟ್ಟುವಂತಹ ಕೃತಿ ನನಗೆ ತಿಳಿದ ಮಟ್ಟಿಗೆ ಬಹುಶಃ ಇಲ್ಲ. ೧೯೫೦, ೧೯೬೦ ಈ ದಶಕಗಳಲ್ಲಿ ನಾನೇ ಕಂಡಂತೆ ಮೈಸೂರಿನಲ್ಲಿ ಒಂದು ವಿದ್ವತ್ತಿನ, ಕಾವ್ಯಮಯ ವಾತಾವರಣವಿದ್ದಿತು. ಯಾವುದೇ ಪ್ರಾಧ್ಯಾಪಕರ ಮನೆಗಳಿಗೆ ಹೋದರೂ ಅವರು ಪುಸ್ತಕಗಳ ಮಧ್ಯೆ ತಮ್ಮನ್ನು ತಾವು ಮುಳುಗಿಸಿಕೊಂಡು ಕುಳಿತಿರುತ್ತ ಉಳಿದ ಎಲ್ಲವನ್ನೂ ಮರೆತು ಅಧ್ಯಯನದಲ್ಲಿ ನಿರತರಾಗಿದ್ದುದು ಸರ್ವೇ ಸಾಮಾನ್ಯ ದೃಶ್ಯವಾಗಿತ್ತು. ಪ್ರೊ. ನಾಗಭೂಷಣ ತಮ್ಮ ತಂದೆಯಂತೆಯೇ ತಾನು ಮಾಡುವ ಕೆಲಸದಲ್ಲಿ ಶ್ರದ್ಧೆ ನಿಷ್ಠೆಯನ್ನು ಬೆಳಸಿಕೊಂಡು ಹೊರತಂದಿರುವ ಈ ಸಾವಿರ ಪುಟಗಳ ಬೃಹತ್ ಸಾರ್ಥಕ ಸಂಪುಟಕ್ಕಾಗಿ ಅವನನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಈ ಸಂಪುಟದ ಕೇಂದ್ರ ವ್ಯಕ್ತಿ ಪ್ರೊ॥ ತೀ.ನಂ.ಶ್ರೀ. ಎಂಬುದು ನಿಜವಾದರೂ ಅವರ ಕಾಲದ ಸ್ನೇಹಮಯ ವಾತಾವರಣ, ಮೌಲ್ಯ ವ್ಯವಸ್ಥೆ, ಸಾಮಾಜಿಕ ಸಂಬಂಧಗಳು, ಶಿಕ್ಷಣದ ರೀತಿ ನೀತಿ ಇವುಗಳ ಆತ್ಮೀಯವಾದ ಪರಿಚಯವಾಗುವುದಲ್ಲದೆ ಅವರ ಆತ್ಮೀಯ ಗೆಳೆಯರಾಗಿದ್ದ ಪು.ತಿ.ನ., ಎ.ಎನ್. ಮೂರ್ತಿರಾವ್, ಡಿ.ಎಲ್. ನರಸಿಂಹಾಚಾರ್, ಎಸ್.ಎಂ. ಕತ್ರೆ, ಎಂ.ಬಿ. ಎಮಿನೋ, ನಂ. ಶಿವರಾಮಶಾಸ್ತ್ರಿ, ಟಿ.ಪಿ. ಕೃಷ್ಣಾಚಾರ್, ಆರ್.ಎಲ್. ನರಸಿಂಹಯ್ಯ, ಸುನೀತಿ ಕುಮಾರ ಛಟರ್ಜಿಯವರಂತಹ ನೂರಾರು ಶ್ರೇಷ್ಠರ ಬಗ್ಗೆ ಉಪಯುಕ್ತ ಮಾಹಿತಿ ಇಲ್ಲಿ ದೊರಕುತ್ತಿದ್ದು ಅದೆಲ್ಲವನ್ನೂ ಓದುತ್ತಿದ್ದರೆ ಈ ಕಾಲದವರಿಗೆ ಅದು ಸ್ಫೂರ್ತಿಯ ಸೆಲೆಯೂ ಆಗುತ್ತದೆ. ತೀ.ನಂ.ಶ್ರೀ. ಸೇರಿದಂತೆ ಆ ಕಾಲದ ಕವಿಗಳು, ವಿಮರ್ಶಕರು, ಸಂಶೋಧಕರು, ಭಾಷಾವಿಜ್ಞಾನಿಗಳು ಇವರ ಬಗ್ಗೆ ತಿಳಿಯಬಯಸುವವರಿಗೆ, ಸಂಶೋಧನೆ ಮಾಡುವವರಿಗೆ ಇದೊಂದು ತೇದಿಗಳುಳ್ಳ ಅಪೂರ್ವ ಆಕರ ಗ್ರಂಥ : ತೀ.ನಂ.ಶ್ರೀ. ನೆಪದಲ್ಲಿ ಸುಮಾರು ೧೯೪೫–೧೯೬೮ರ ಕಾಲಘಟ್ಟವೇ ನಮ್ಮ ಮುಂದೆ ಬಿಚ್ಚಿಕೊಂಡು ನಿಲ್ಲುತ್ತದೆ. ಅವರ ಬಹುಮುಖ ವ್ಯಕ್ತಿತ್ವದ ಆತ್ಮೀಯ ಪರಿಚಯವೂ ಇಲ್ಲಿ ಓದುಗರಿಗಾಗುತ್ತದೆ.

ಗಮನಿಸಬೇಕಾದ ಸಂಗತಿಯೆಂದರೆ – ಇದು ಬರೀ ನೀರಸ ಸಂಗತಿಗಳ ಶುಷ್ಕ ದಾಖಲೆ ಅಲ್ಲ. ಓದುಗರನ್ನು ಮತ್ತೆ ಮತ್ತೆ ಓದುವಂತೆ ಮಾಡುವ, ಅಲ್ಲಲ್ಲಿ ಪುಟಗಳನ್ನು ತೆಗೆದು ಇಣುಕಿ ಹಾಕಿ ಖುಷಿಪಡುವಂತೆ ಮಾಡುವ ರಸಮಯ ಕೃತಿಯೂ ಆಗಿದೆ.

ಪ್ರೊ|| ಎಂ. ಹಿರಿಯಣ್ಣನವರ ಇಂಗ್ಲಿಷ್ ಭಾಷೆಯ ಭಾರತೀಯ ತತ್ವಶಾಸ್ತ್ರ ಹಾಗೂ ಕಾವ್ಯಮೀಮಾಂಸೆ ಕೃತಿಗಳನ್ನು ಓದಿದ ಪಾಶ್ಚಾತ್ಯ ವಿದ್ವಾಂಸರೊಬ್ಬರು "ಇವರು ಎಂದೂ ವ್ಯರ್ಥ ಪದವನ್ನು ಬಳಸಿದವರಲ್ಲ" ಎಂದಿರುವ ಮಾತು ಕನ್ನಡದಲ್ಲಿ ಯಾರಿಗಾದರೂ ಅನ್ವಯವಾಗುವುದಾದರೆ ಅದು ತೀ.ನಂ.ಶ್ರೀ. ಅವರಿಗೆ. ಅವರು ಬದುಕಿದ್ದಾಗ ಬರೆಯಬೇಕಾದಷ್ಟು ಬರೆಯಲಿಲ್ಲ ಎಂಬ ಅವರ ಅಭಿಮಾನಿಗಳ ಕೊರಗನ್ನು ಈ ಕೃತಿ ಒಂದು ರೀತಿಯಲ್ಲಿ ಕಡಿಮೆ ಮಾಡಿದೆ.

೧೯೫೮–೧೯೬೦ರ ಅವಧಿಯಲ್ಲಿ ಅವರ ಆತ್ಮೀಯ ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದ ನಾನು ಅವರನ್ನು ತೀರ ಹತ್ತಿರದಿಂದ ಬಲ್ಲೆನಾದರೂ ಈ ಕೃತಿ ಅವರ ವ್ಯಕ್ತಿತ್ವದ ಬಗ್ಗೆ ನನಗೆ ತಿಳಿಯದಿದ್ದ ಹಲವು ಆಯಾಮಗಳನ್ನು ಎತ್ತಿ ಹಿಡಿಯುತ್ತದೆ. ವಿಶೇಷವಾಗಿ ತರುಣ ಸಂಶೋಧಕರು ಈ ಕೃತಿಯನ್ನು ಎಚ್ಚರದಿಂದ ಅಭ್ಯಾಸಮಾಡಿ ಅಮಿತ ಲಾಭವನ್ನು ಪಡೆಯ ಬಹುದು. ಈ ಕೃತಿ ಅಚ್ಚಾಗಿ ಹೊರಬಂದ ಮೇಲೆ ನಾನಂತೂ ಬಿಡುವ ಸಿಕ್ಕಾಗ ಅಥವಾ ಬೇಸರವಾದಾಗ ಉತ್ಸಾಹದ ಚಿಲುಮೆ ಚಿಮ್ಮುವ ಅದರ ಪುಟ ಪುಟಗಳನ್ನು ತಿರುವಿ ಹಾಕುತ್ತ ಆ ಹಿಂದಿನ ಸುಂದರಲೋಕದಲ್ಲಿ ವಿಹರಿಸಿ ಸಂತೋಷಿಸುತ್ತೇನೆ.

ಈ ಕೃತಿಯ ಸಂಗ್ರಹ, ಸಂಪಾದನೆಯಲ್ಲಿ ವಹಿಸಿರುವ ಅಪಾರ ಶ್ರಮ, ಅಪರಿಮಿತ ಶ್ರದ್ಧೆ ಇವುಗಳಿಗಾಗಿ ಕನ್ನಡ ಸಾಹಿತ್ಯಲೋಕ ಪ್ರೊ. ತೀ.ಶ್ರೀ. ನಾಗಭೂಷಣನಿಗೆ ಬಹು ಕೃತಜ್ಞವಾಗಿರುತ್ತದೆ.

ಎಂ. ಚಿದಾನಂದ ಮೂರ್ತಿ

ಸಂಪಾದಕನ ಮಾತು

ನಮ್ಮ ಪೂಜ್ಯ ತಂದೆಯವರಾದ ಪ್ರೊ॥ ತೀ.ನಂ.ಶ್ರೀಕಂಠಯ್ಯನವರು ದಿವಂಗತರಾಗಿ ೪೦ ವರ್ಷಗಳಾಯಿತು. ಅವರ ಅಕಾಲ ನಿಧನದ ಸಮಯದಲ್ಲಿ ನಮ್ಮ ಕನ್ನಡ ನಾಡು ಮತ್ತು ದೇಶ ಅವರ ಬಗ್ಗೆ ತೋರಿದ ಅಪಾರ ಗೌರವ ಮತ್ತು ಅಂತಃಕರಣ ನಮ್ಮ ಸಂಸಾರದವರನ್ನು ದಿಗ್ಭ್ರಮೆಗೊಳಿಸಿತಲ್ಲದೆ ನಮ್ಮ ದುಃಖವನ್ನು ಸಾಂತ್ವನಗೊಳಿಸುವುದರಲ್ಲಿ ತುಂಬಾ ಸಹಕಾರಿಯಾಯಿತು. ಆಗ ಬಂದ ವರದಿಗಳು, ಪತ್ರಗಳು, ಲೇಖನಗಳು, ಕವಿತೆಗಳು ಇತ್ಯಾದಿಗಳು ನಮ್ಮ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟುಮಾಡಿ ಇವೆಲ್ಲವನ್ನೂ ಸಂಗ್ರಹಿಸಿ ಅವನ್ನು ಮತ್ತೆ ಮತ್ತೆ ಅವಲೋಕಿಸುತ್ತಿರಬೇಕೆಂಬ ಭಾವನೆ ಬೇರೂರಿತು. ಆದ್ದರಿಂದ ಆಗಿನಿಂದಲೇ ಅವನ್ನು ಸಂಗ್ರಹಿಸುವ ಮತ್ತು ಸಂರಕ್ಷಿಸುವ ಕಾರ್ಯ ಪ್ರಾರಂಭವಾಯಿತು. ಒಮ್ಮೆ ಪ್ರಾರಂಭವಾದ ಈ ಕೆಲಸ 'ಶ್ರೀಕಂಠತೀರ್ಥ' ಪ್ರಕಟವಾದ ಮತ್ತು 'ಭಾರತೀಯ ಕಾವ್ಯಮೀಮಾಂಸೆ'ಗೆ 'ಪಂಪ ಪ್ರಶಸ್ತಿ' ಪ್ರದಾನವಾದ ಸಂದರ್ಭಗಳಲ್ಲಿಯೂ ಮುಂದುವರಿಯಿತು. ತೀ.ನಂ.ಶ್ರೀ.ಯವರು ತಮ್ಮ ಜೀವಿತಕಾಲದಲ್ಲಿಯೇ ತಮಗೆ ಬಂದ ಪತ್ರಗಳನ್ನು ಸಂರಕ್ಷಿಸಿ ಇಟ್ಟಿದ್ದರು. ತಮ್ಮ ಕೃತಿಗಳ ಬಗ್ಗೆ ಬಂದ ವಿಮರ್ಶೆಗಳು ಮತ್ತು ಅಭಿಪ್ರಾಯ ಪತ್ರಗಳೂ ಅವರ ಬಳಿಯಲ್ಲಿದ್ದವು. 'ಶ್ರೀಕಂಠತೀರ್ಥ' ಸಂಭಾವನಾ ಗ್ರಂಥವನ್ನು ಯೋಜಿಸಿದಾಗ ಅದರಲ್ಲಿ ತೀ.ನಂ.ಶ್ರೀ.ಯವರ ಪತ್ರ ವ್ಯವಹಾರದ ಕೆಲವು ಭಾಗಗಳನ್ನು ಸೇರಿಸುವ ಉದ್ದೇಶವಿತ್ತು. ಆದರೆ ಆ ಗ್ರಂಥದ ಗಾತ್ರ ನಮ್ಮ ನಿರೀಕ್ಷೆಗೆ ಮೀರಿ ಬೆಳೆದುದರಿಂದ ಆಗ ಕೈಬಿಟ್ಟು, ಅದನ್ನು ಇನ್ನೊಂದು ಭಾಗವಾಗಿ ಪ್ರಕಟಿಸುವುದೆಂದು ಆಲೋಚನೆ ಮಾಡಲಾಗಿತ್ತು. ಆದರೆ ಅದೂ ಮುಂದುವರಿಯಲಿಲ್ಲ.

'ಭಾರತೀಯ ಕಾವ್ಯಮೀಮಾಂಸೆ'ಗೆ 'ಪಂಪ ಪ್ರಶಸ್ತಿ' ಪ್ರದಾನವಾದ ನಂತರ ತೀ.ನಂ.ಶ್ರೀ.ಯವರ ಪತ್ರ ವ್ಯವಹಾರ, ಅವರ ಬಗ್ಗೆ ವಿವಿಧ ಸಂದರ್ಭಗಳಲ್ಲಿ ಬಂದ ಲೇಖನಗಳು ಇತ್ಯಾದಿಗಳನ್ನು ಸಂಕಲಿಸಿ ಒಂದು ಪುಸ್ತಕವನ್ನು ಹೊರತರಬೇಕೆಂಬ ಮಹದಾಶೆ ಪ್ರಬಲವಾಯಿತು. ಈ ಯೋಚನೆ ನಿಧಾನವಾಗಿ ಹರಿಯುತ್ತ ಬಂದು, ವರ್ಷಗಳು ಕಳೆದಂತೆ ಗ್ರಂಥದ ಸಮಗ್ರತೆಯ ಬಗ್ಗೆ ಹೊಸ ವಿಚಾರಗಳು ಮೂಡುತ್ತ ಬಂದವು. ಅದರಂತೆ ತೀ.ನಂ.ಶ್ರೀ.ಯವರ ಜೀವನದ ಕೆಲವು ಘಟನೆಗಳ ನಿರೂಪಣೆ, ಅವರ ಗ್ರಂಥದ ವಿಮರ್ಶೆಗಳು, 'ದಿನಚರಿ' ಮತ್ತು 'ವಿದೇಶ ಪ್ರವಾಸ' ಎಲ್ಲವೂ ಇದರಲ್ಲಿ ಸೇರಿ ಈಗ ಸುಮಾರು ಒಂದು ಸಹಸ್ರ ಪುಟಗಳ ಬೃಹದ್ಗ್ರಂಥವಾಗಿ ಬೆಳಕು ಕಾಣುತ್ತಿದೆ. ಈ ಅನೇಕ ವರ್ಷಗಳ ಯೋಜನೆ ತುಂಬಾ ತಡವಾದರೂ "ಪ್ರೊ. ತೀ.ನಂ.ಶ್ರೀ. ಜನ್ಮ ಶತಮಾನೋತ್ಸವ ವರ್ಷ"ದ ಆಚರಣೆಯ ಅಂಗವಾಗಿ ಸಮಗ್ರವಾಗಿ ಪ್ರಕಟವಾಗುತ್ತಿರುವುದು ನಮ್ಮ ಸಂಸಾರವರ್ಗದವರಿಗೆ ತುಂಬಾ ಸಂತೋಷವನ್ನುಂಟುಮಾಡಿದೆ.

ಆದರೆ ನಮ್ಮ ಪೂಜ್ಯ ಮಾತೋಶ್ರೀಯವರ ಜೀವಿತಕಾಲದಲ್ಲಿ ಇದು ಸಾಧ್ಯವಾಗಲಿಲ್ಲವೆನ್ನುವ ದುಃಖವೂ ಜೊತೆಯಲ್ಲಿಯೇ ಇದೆ. ಈ ತೀ.ನಂ.ಶ್ರೀ.ಯವರ ನಂದಾನೆನಪು ಸಹೃದಯರನ್ನು ಪುನಶ್ಚೇತನಗೊಳಿಸುವುದೆಂದು ನಂಬಿದ್ದೇನೆ.

ಈ ಗ್ರಂಥವನ್ನು ಸ್ಥೂಲವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯ ಭಾಗ 'ತೀ.ನಂ.ಶ್ರೀ. ಅವರ ಜೀವನ ಪಥ'ದಲ್ಲಿ ಅವರ ಜೀವನ ಸಾಗಿದ ದಾರಿ ಮತ್ತು ವಿವಿಧ ಹಂತಗಳಲ್ಲಿ ಸಂಭವಿಸಿದ ಕೆಲವು ಘಟನೆಗಳನ್ನು ಲಭ್ಯವಿರುವ ದಾಖಲೆಗಳೊಡನೆ ವಸ್ತುನಿಷ್ಠವಾಗಿ ವಿವರಿಸಲಾಗಿದೆ. ಎರಡನೆಯ ಭಾಗದಲ್ಲಿ ತೀ.ನಂ.ಶ್ರೀ.ಯವರ ಕೃತಿಗಳ ಬಗ್ಗೆ ವಿಮರ್ಶೆಗಳು, 'ದಿನಚರಿ'ಯಲ್ಲಿರುವ ವಿಷಯಗಳು, ಅವರ 'ವಿದೇಶ ಪ್ರವಾಸ'ದ ವಿವರಗಳನ್ನು ತಿಳಿಸುವ ಟಿಪ್ಪಣಿಗಳು ಮತ್ತು ಪತ್ರ ವ್ಯವಹಾರ ಇತ್ಯಾದಿಗಳನ್ನು ಯಥಾರೀತಿಯಾಗಿ ಸೇರಿಸಲಾಗಿದೆ.

ಮೂರನೆಯ ಭಾಗದಲ್ಲಿ ಅವರ ಬಗ್ಗೆ ಬಂದಿರುವ ಲೇಖನಗಳು, ಕವಿತೆಗಳು, ಇತ್ಯಾದಿಗಳನ್ನು ಕೊಡಲಾಗಿದೆ. ತೀ.ನಂ.ಶ್ರೀ.ಯವರ ಸ್ಮರಣೆ ನಮ್ಮ ನಾಡಿನಲ್ಲಿ ನಿರಂತರವಾಗಿ ನಡೆಯುತ್ತಿದೆ ಮತ್ತು ಅವರ ವಿದ್ವತ್ತು ಮತ್ತು ವ್ಯಕ್ತಿತ್ವಗಳ ಬಗ್ಗೆ ಅಪಾರ ಗೌರವ ವ್ಯಕ್ತವಾಗುತ್ತಿದೆ. ತೀ.ನಂ.ಶ್ರೀ. ಯವರ ನಿಧನ, 'ಶ್ರೀಕಂಠತೀರ್ಥ' ಪ್ರಕಟಣೆ, 'ಭಾರತೀಯ ಕಾವ್ಯಮೀಮಾಂಸೆ'ಗೆ 'ಪಂಪ ಪ್ರಶಸ್ತಿ' ಪ್ರದಾನ ಮುಂತಾದ ಸಂದರ್ಭಗಳಲ್ಲಿ ಅವರ ಬಗ್ಗೆ ಅನೇಕ ಲೇಖನಗಳು, ಕವಿತೆಗಳು ಪ್ರಕಟವಾದವು ಮತ್ತು ಪತ್ರಿಕಾ ವರದಿಗಳು, ಸಂಪಾದಕೀಯಗಳು ಬಂದವು. ಅನಂತರ ತೀ.ನಂ.ಶ್ರೀ.ಯವರ ಬಗ್ಗೆ ಕೆಲವು ಪುಸ್ತಕಗಳು ಪ್ರಕಟವಾಗಿವೆ. ಈ ಪ್ರಕಟಣೆಗಳಲ್ಲಿ ಬಹುಪಾಲು ಲೇಖನಗಳು, ಕವಿತೆಗಳು ಮತ್ತು ಪುಸ್ತಕಗಳ ಆಯ್ದ ಭಾಗಗಳನ್ನು ಇಲ್ಲಿ ಸೇರಿಸಲಾಗಿದೆ. ತೀ.ನಂ.ಶ್ರೀ.ಯವರ ಜೀವನ ಚರಿತ್ರೆಗೆ ಸಂಬಂಧಿಸಿದ ಕೆಲವು ವಿಷಯಗಳು ಮತ್ತು ಅವರ ಕೃತಿಗಳಿಗೆ ಸಂಬಂಧಪಟ್ಟ ವಿವರಾಣತ್ಮಕ ವರ್ಣನೆಗಳು ಈ ಲೇಖನಗಳಲ್ಲಿ ಸೇರಿರುವುದು ಸ್ವಾಭಾವಿಕ. ಈ ವಿವರಣೆಗಳು ಅನೇಕ ಬಾರಿ ಪುನರಾವೃತ್ತಿಯಾಗದಂತೆ ಆದರೆ ಲೇಖಕರ ಸ್ವಂತ ಅಭಿಪ್ರಾಯಗಳು ಹಾಗೂ ವಿಮರ್ಶೆಗಳ ನಿರೂಪಣೆಗೆ ಕುಂದು ಬಾರದಂತೆ ಇಲ್ಲಿ ಕೈಬಿಡಲಾಗಿದೆ. ಆದರೆ ತೀ.ನಂ.ಶ್ರೀ.ಯವರ ವಿದ್ವತ್ತು ಮತ್ತು ವ್ಯಕ್ತಿತ್ವ ಅನೇಕ ವಿದ್ವಾಂಸರ, ಲೇಖಕರ ಮತ್ತು ವಿದ್ಯಾರ್ಥಿಗಳ ಬೆಳವಣಿಗೆಗೆ ಒಂದು ಪರಿಣಾಮಕಾರಿಯಾದ ಒತ್ತುಕೊಟ್ಟಿರುವುದರಿಂದ, ಕೆಲವು ಸಂಗತಿಗಳು ಮತ್ತು ವಿಷಯಗಳು ಕೆಲವು ಲೇಖನಗಳಲ್ಲಿ ಪುನರಾವೃತ್ತಿ ಎನ್ನಿಸಬಹುದಾದರೂ, ಅದು ಲೇಖಕರಿಗೆ ವೈಯಕ್ತಿಕವಾಗಿ ಮುಖ್ಯವಾಗಿದ್ದು, ಅದನ್ನು ಬಿಟ್ಟರೆ ಅವರು ಸೂಚಿಸುವ ಸಮಗ್ರ ಅಭಿಪ್ರಾಯಗಳಿಗೆ ಅಡ್ಡಿಯಾಗಬಹುದೆನ್ನುವ ಭಾವನೆಯಿಂದ ಹಾಗೆಯೇ ಉಳಿಸಿಕೊಳ್ಳಲಾಗಿದೆ. ತೀ.ನಂ.ಶ್ರೀ.ಯವರ ಪ್ರತಿಬಿಂಬವನ್ನು ವಿವಿಧ ಕೋನಗಳಲ್ಲಿ ಅಳವಡಿಸಿರುವ ಕನ್ನಡಿಗಳಲ್ಲಿ ಲೇಖಕರು ಬೇರೆ ಬೇರೆ ದೃಷ್ಟಿಯಲ್ಲಿ ನೋಡಿರುವ ಸಂಗತಿಗಳು ಪ್ರಸ್ತುತವಾಗಿರುತ್ತವೆ. ಆದರೆ ಅದೇ ಪ್ರತಿಬಿಂಬವನ್ನು ಸಮಾನಾಂತರವಾಗಿಟ್ಟಿರುವ ಕನ್ನಡಿಗಳಲ್ಲಿ – ವಿವಿಧ ಕೋನಗಳಲ್ಲದಿದ್ದರೂ – ದೂರಾಂತರಗಳಲ್ಲಿ ಲೇಖಕರು ನೋಡಿರುವ ಸಂಗತಿಗಳು ಅಷ್ಟೇ ಪ್ರಸ್ತುತವಾಗಿರುತ್ತದೆಂದು ಇಲ್ಲಿಯ ಅಭಿಪ್ರಾಯವಾಗಿದೆ. ತೀ.ನಂ.ಶ್ರೀ. ಯವರನ್ನು ಬೇರೆ ಬೇರೆ ಕಾಲಗಳಲ್ಲಿ, ಸಂದರ್ಭಗಳಲ್ಲಿ, ವಯಸ್ಸುಗಳ ಅಂತರದಲ್ಲಿ ಮತ್ತು ವಿವಿಧ ಸಾನಿಧ್ಯಗಳಲ್ಲಿ ನೋಡಿರುವುದು ಇಲ್ಲಿ ಅನುಭವವಾಗುತ್ತದೆ.

ನಾಲ್ಕನೆಯ ಭಾಗದಲ್ಲಿ ತೀ.ನಂ.ಶ್ರೀ.ಯವರು ಅವರ ಹಿರಿಯರು, ಸ್ನೇಹಿತರು, ಶಿಷ್ಯರು, ಸಂಸಾರದವರೊಡನೆ ಮಾಡಿದ ಪತ್ರವ್ಯವಹಾರದ ಆಯ್ದ ಭಾಗಗಳನ್ನು ಇಲ್ಲಿ ಸೇರಿಸಲಾಗಿದೆ. ಅವರು ತಮ್ಮ ಪ್ರಿಯ ಮಿತ್ರ ವರಕವಿ ಪು.ತಿ.ನ. ಅವರೊಡನೆ ಮಾಡಿದ ಪತ್ರ ವ್ಯವಹಾರಗಳನ್ನು ದೀರ್ಘವಾಗಿ ಕೊಡಲಾಗಿದೆ.

ಇಲ್ಲಿಯ ಲೇಖನಗಳು, ಪತ್ರಗಳು ಇತ್ಯಾದಿಗಳಲ್ಲಿ ನಮ್ಮ ನಾಡಿನ ಹಿರಿಯರು ಮತ್ತು ಲೇಖಕರು ಉಪಯೋಗಿಸಿದ ಕೆಲವು ವಿಶೇಷ ಶೀರ್ಷಿಕೆಗಳು ಮತ್ತು ಕಾಗುಣಿತಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಇಲ್ಲಿಯ ಇಂಗ್ಲಿಷ್ ಬರಹಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಸೇರಿಸುವ ಯೋಚನೆ ಸುಳಿಯಿತು. ಆದರೆ ಇದರಿಂದ ಈ ಬರಹಗಳ ಮೂಲ ಸೊಗಡಿನಿಂದ ವಂಚಿತವಾಗುವ ಸಾಧ್ಯತೆಯಿದೆಯೆಂದು ಭಾವಿಸಿ ಅದನ್ನು ಮೂಲ ಇಂಗ್ಲಿಷ್‌ನಲ್ಲಿಯೇ ಕೊಡಲಾಗಿದೆ. ಇಲ್ಲಿ ಸೇರಿರುವ ಲೇಖನಗಳು, ಕವಿತೆಗಳು ಇತ್ಯಾದಿಗಳು ಬಹುಭಾಗ ಮೊದಲೇ ಪ್ರಕಟವಾಗಿರುವುದರಿಂದ ಇದರ ಮುದ್ರಣದ ಅಕ್ಷರಗಳ ಜೋಡಣೆ ಹೆಚ್ಚು ತೊಂದರೆಯಾಗಲಿಲ್ಲ. ಆದರೆ ಅನೇಕ ಪತ್ರಗಳಲ್ಲಿ ಲೇಖಕರ ಕೈಬರಹಗಳು ಸ್ಪಷ್ಟವಾಗಿಲ್ಲದೆ, ಅದರ ತೊಡಕನ್ನು ಪರಿಹರಿಸಲಾಗದ ತುಂಬಾ ಕಠಿಣವಾದ ಸಂದರ್ಭಗಳಲ್ಲಿ ...... ಎಂದು ಗುರುತಿಸುವುದು ಮಾತ್ರ ಸಾಧ್ಯವಾಗಿದೆ. ಆದ್ದರಿಂದ ಈ ಗ್ರಂಥದ ವ್ಯಾಪ್ತಿಗೆ ಒಳಗಾಗಿರುವ ವಿವಿಧ ಬರಹಗಳ ವಿವಿಧ ರೂಪಗಳ ಕರಡು ತಿದ್ದುವಿಕೆಯ ಸಮಸ್ಯೆಗಳನ್ನು ಓದುಗರು ಊಹಿಸುವುದು ಕಷ್ಟವಾಗಲಾರದು. ಇಷ್ಟಾದರೂ ಅನೇಕ ಪ್ರಯತ್ನಗಳ ನಂತರವೂ ಲೇಖಕರ ಮೂಲ ಬರವಣಿಗೆಗೆ ಚ್ಯುತಿ ಬರುವಂತಹುದೇನಾದರೂ ಉಳಿದ್ದರೆ ಅದಕ್ಕೆ ಲೇಖಕರ ಕ್ಷಮೆ ಕೋರುತ್ತೇನೆ.

ಈ ಗ್ರಂಥವನ್ನು ಹೊರತರುವುದಕ್ಕೆ ಪ್ರೇರಣೆ ಮೊದಲಿನಿಂದ ಪ್ರಬಲವಾಗಿದ್ದರೂ, ಈ ಗ್ರಂಥದ ಉದ್ದೇಶ ಈಗ ಹೆಚ್ಚು ಖಚಿತವಾಗಿದೆಯೆಂದು ಹೇಳಬಹುದು. ಇಲ್ಲಿಯ ಉದ್ದೇಶ ತೀ.ನಂ.ಶ್ರೀ.ಯವರ ಶ್ಲಾಘನೆಯಲ್ಲ. ಅದು ನಾನು ಮಾಡಬೇಕಾದ ಕೆಲಸವೂ ಅಲ್ಲ ಮತ್ತು ಅದರ ಅವಶ್ಯಕತೆಯೂ ಇಲ್ಲ. ತೀ.ನಂ.ಶ್ರೀ. ಅವರ ವ್ಯಕ್ತಿತ್ವ ಮತ್ತು ಜೀವನದ ಜೊತೆಗೆ ಅವರು ಬಾಳಿದ ಸುಮಧುರವಾದ ಪರಿಸರದ ಅನುಭವ ಸಹೃದಯರಿಗೆ ಆಗಬೇಕೆನ್ನುವುದು ಇಲ್ಲಿಯ ಒಂದು ಮುಖ್ಯ ಉದ್ದೇಶವಾಗಿದೆ. ತೀ.ನಂ.ಶ್ರೀ.ಯವರು ತಾವು ಕ್ರಮಿಸಿದ ಪಥದಲ್ಲಿ ಹೇಗೆ ಒಂದು ಆದರ್ಶ ಪರಿಸರವನ್ನು ನಿರ್ಮಾಣ ಮಾಡಿದರೋ ಹಾಗೆಯೇ ಅವರ ವ್ಯಕ್ತಿತ್ವವನ್ನು ರೂಪಿಸಿದ ಪರಿಸರವೂ ಅಷ್ಟೇ ಮಧುರ ಮತ್ತು ಪರಿಣಾಮಕಾರಿಯಾಗಿತ್ತೆನ್ನುವುದನ್ನು ಇಲ್ಲಿ ಕಾಣಬಹುದು. ತೀ.ನಂ.ಶ್ರೀ.ಯವರು ಅವರದೇ ಆದ "ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು" ಎನ್ನುವ ಉಕ್ತಿಯಂತೆ, ಅವರ ಜೀವಿತಕಾಲದಲ್ಲಿ ಚಿರ ವಿದ್ಯಾರ್ಥಿಯಾಗಿದ್ದರು. ಅದೇ ಪ್ರಕಾರದಲ್ಲಿ ಅವರ ಜೀವನವು ಒಂದು ಆದರ್ಶ ಮಾರ್ಗದ ಚಿಂತನೆ ಮತ್ತು ಅನ್ವೇಷಣೆಯಲ್ಲಿ ಸಾಗಿ ಅದು ಮತ್ತು ಅಂದಿನ ಪರಿಸರ ಇಂದಿಗೂ ಪ್ರಸ್ತುತವಾಗಿದ್ದು ಅದರಿಂದ ನಾವು ತಿಳಿಯಬಹುದಾದುದೂ ಮತ್ತು ಕಲಿಯಬಹುದಾದುದು ಸಾಕಷ್ಟಿದೆ ಎಂದು ನನಗನಿಸುತ್ತದೆ. ಇದಕ್ಕಾಗಿಯೇ ಈ ಗ್ರಂಥಕ್ಕೆ "ತೀ.ನಂ.ಶ್ರೀ. ಪಥ-ಪರಿಸರ" ಎಂದು ಶೀರ್ಷಿಕೆ ಕೊಡಲಾಗಿದೆ. ಒಂದು ಕಲಾಕೃತಿಯನ್ನಾಗಲಿ ಅಥವಾ ಛಾಯಾಚಿತ್ರವನ್ನಾಗಲಿ ಓರ್ವ ದರ್ಶಕ ಅಥವಾ

ಸಹೃದಯ ತನ್ನ ಹಿನ್ನೆಲೆ, ಕಲ್ಪನೆ ಮತ್ತು ಸ್ವಂತ ದೃಷ್ಟಿಯಲ್ಲಿ ನೋಡಿ ಅದನ್ನು ಹೇಗೆ ತನ್ನದೇ ಆದ ಮೆಚ್ಚಿಗೆ ಅಥವಾ ವಿಮರ್ಶೆಗೆ ಒಳಪಡಿಸಬಹುದೋ ಹಾಗೆಯೇ ಈ ಪುಸ್ತಕದಲ್ಲಿರುವ ವಿಷಯಗಳನ್ನು ಓದಿ ಸಹೃದಯರು ತೀ.ನಂ.ಶ್ರೀ.ಯವರ ವ್ಯಕ್ತಿತ್ವ, ಜೀವನ ಮತ್ತು ಪರಿಸರದ ಕಲ್ಪನೆ ಮತ್ತು ಚಿಂತನೆಯನ್ನು ಮಾಡಿಕೊಳ್ಳುವುದು ಸಾಧ್ಯವಾದರೆ ಈ ಗ್ರಂಥದ ಉದ್ದೇಶ ಸಾಧನೆಯಾಗಿದೆಯೆಂದು ಭಾವಿಸುತ್ತೇನೆ. ಈ ಗ್ರಂಥದ ರೂಪುರೇಷೆಗಳನ್ನು ನಮ್ಮ ಕನ್ನಡದ ಅನೇಕ ಹಿರಿಯರು ತೀ.ನಂ.ಶ್ರೀ.ಯವರ ಸ್ನೇಹಿತರು, ಶಿಷ್ಯರು ಮತ್ತು ನಮ್ಮ ಸಂಸಾರವರ್ಗದ ವರೊಡನೆ ಚರ್ಚಿಸಿದಾಗ ಇದು ಒಂದು ಹೊಸ ಪಥದಲ್ಲಿ ಸಾಗುವ ಪ್ರಯತ್ನವಾಗಿದೆ ಎಂದು ಅಭಿಪ್ರಾಯಪಟ್ಟು ಇದರ ಅವಶ್ಯಕತೆಯನ್ನು ಒತ್ತಿಹೇಳಿ, ಇದರ ಬಗ್ಗೆ ನನಗಿದ್ದ ಕೆಲವು ಅಳಕುಗಳನ್ನು ಅಳಿಸಿ ಈ ಪ್ರಕಟಣೆಗೆ ನನಗೆ ಕೊಟ್ಟ ಉತ್ತೇಜನಕ್ಕಾಗಿ ಅವರೆಲ್ಲರನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ.

ಈ ಪುಸ್ತಕದಲ್ಲಿ ಅವರ ಲೇಖನಗಳು ಪತ್ರಗಳು ಮತ್ತು ವಿವರಿಸಿದ ಸಂಗತಿಗಳ ಮೂಲಕ ಪ್ರಸ್ತಾಪವಾಗಿರುವ ನಮ್ಮ ನಾಡಿನ ಹಿರಿಯರು ಮತ್ತು ತೀ.ನಂ.ಶ್ರೀ. ಅವರ ಅಭಿಮಾನಿಗಳನ್ನು ನೆನೆಸಿಕೊಂಡಾಗ ಮನಸ್ಸು ಪುಲಕಿತವಾಗುತ್ತದೆ. ಅವರ ಪ್ರೀತಿ, ವಿಶ್ವಾಸ ಮತ್ತು ಹಿರಿಯರ ಆಶೀರ್ವಾದಗಳು ಇಂದಿಗೂ ನಮಗೆ ಉತ್ತೇಜನಪೂರ್ವಕವಾಗಿವೆ. ಈ ಸಂಪಾದನೆ ಕಾರ್ಯದಲ್ಲಿ ಮತ್ತು ಕರಡು ತಿದ್ದುವಾಗ ಈಗ ನಮ್ಮೊಡನೆ ಇಲ್ಲದ ಹಿರಿಯರ ಉನ್ನತ ಆದರ್ಶಗಳು ಮತ್ತು ನಮ್ಮೊಡನಿರುವ ತೀ.ನಂ.ಶ್ರೀ.ಯವರ ಶಿಷ್ಯರು, ಅಭಿಮಾನಿಗಳು ಅವರಲ್ಲಿ ಇಟ್ಟಿದ್ದ ಗೌರವ, ಪೂಜ್ಯಭಾವನೆ ಹಾಗೂ ನಮ್ಮ ಪೂಜ್ಯ ತಂದೆಯವರ ನೆನಪು ನನ್ನ ಸ್ಮೃತಿಪಟಲದ ಮುಂದೆ ಸದಾ ಬಂದು ಕಣ್ಣು ಮಂಜಾಗುತ್ತಿದ್ದುದು ಸಾಮಾನ್ಯವಾಗಿತ್ತು. ಈ ಹಿರಿಯರ ಸ್ಮರಣೆ ಮತ್ತು ಅಭಿಮಾನಿಗಳ ವಿಶ್ವಾಸ ನಮಗೆ ನಿರಂತರವಾಗಿದೆ. ಈ ಪುಸ್ತಕದಲ್ಲಿ ತಮ್ಮ ಲೇಖನ, ಕವಿತೆ, ಪತ್ರ ಇತ್ಯಾದಿಗಳನ್ನು ಸೇರಿಸಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತಮ್ಮ ಅನುಮತಿಯನ್ನು ಕೊಟ್ಟಿರುವ ಇವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಸಂಪಾದನೆಯ ಕಾರ್ಯದಲ್ಲಿ ನನಗೆ ಮೊದಲಿನಿಂದಲೂ ಮಾರ್ಗದರ್ಶಕರಾಗಿರುವವರು ನಮ್ಮ ನಾಡಿನ ಸುಪ್ರಸಿದ್ಧ ವಿದ್ವಾಂಸರು, ತೀ.ನಂ.ಶ್ರೀ.ಯವರ ಪ್ರಿಯ ಶಿಷ್ಯರು ಮತ್ತು ನಮ್ಮ ಮನೆಯ ಹಿರಿಯಣ್ಣನ ಪ್ರೀತಿ ಗೌರವಗಳಿಗೆ ಪಾತ್ರರಾಗಿರುವ ಡಾ॥ ಎಂ. ಚಿದಾನಂದ ಮೂರ್ತಿಯವರು. ತೀ.ನಂ.ಶ್ರೀ.ಯವರ ಬಗ್ಗೆ ಅವರಿಗಿರುವ ಪೂಜ್ಯ ಭಾವನೆ, ಗೌರವ ಮತ್ತು ತೀ.ನಂ.ಶ್ರೀ.ಯವರಿಗೆ ಸಂಬಂಧಪಟ್ಟ ಕೆಲಸಗಳಲ್ಲಿ ಅವರು ತೋರುವ ಕ್ರಿಯಾಶೀಲತೆ, ಶ್ರದ್ಧೆ ಮತ್ತು ಉತ್ಸಾಹಗಳು ನಮ್ಮನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿವೆ. ಈ ಬಗ್ಗೆ ನಾನು ಎಷ್ಟು ಹೇಳಿದರೂ ಸಾಲದು. ಅವರು ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಟ್ಟಿರುವುದು ನಮಗೆ ತುಂಬಾ ಸಂತೊಷವನ್ನುಂಟುಮಾಡಿದೆ. ಅವರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ.

ತೀ.ನಂ.ಶ್ರೀ.ಯವರ ಇನ್ನೊಬ್ಬ ಪ್ರಿಯಶಿಷ್ಯರೂ ಮತ್ತು ನಮ್ಮ ಸಂಸಾರಕ್ಕೆ ಇನ್ನೊಬ್ಬ ಪ್ರೀತಿಯ ಅಣ್ಣನ ಸ್ಥಾನದಲ್ಲಿರುವ ಮತ್ತು ತೆರೆಯ ಮರೆಯಲ್ಲಿಯೇ ನಮ್ಮ ಎಲ್ಲ ಕಾರ್ಯಗಳಲ್ಲೂ

ಭಾಗಿಯಾಗಿರುವ ಪ್ರೊ. ಎಸ್. ರಾಘವೇಂದ್ರ ಭಟ್ಟರಿಗೆ ನನ್ನ ಪ್ರೀತಿಪೂರ್ವಕ ವಂದನೆಗಳು. ಈ ನನ್ನ ಕಾರ್ಯದಲ್ಲಿ ನನ್ನ ತೊಂದರೆಗಳನ್ನೆಲ್ಲ ಸಹಿಸಿಕೊಂಡು ನನಗೆ ಸದಾ ಉತ್ತೇಜನ ನೀಡಿರುವ ನನ್ನ ಸಹಧರ್ಮಿಣಿ ಚಿ॥ ಸೌ॥ ಶಾರದಾಳ ಸಹಾಯವನ್ನು ಇಲ್ಲಿ ನೆನೆಯಲು ಬಯಸುತ್ತೇನೆ. ಈ ದೀರ್ಘಕಾಲದ ಕೆಲಸದ ವಿವಿಧ ಹಂತಗಳಲ್ಲಿ ಆಸಕ್ತಿಯನ್ನು ತೋರಿಸಿ ನನಗೆ ಸಹಾಯಮಾಡಿರುವ ನನ್ನ ಅಕ್ಕ ಮಾ॥ ಸೌ॥ ನಾಗರತ್ನಳಿಗೆ ನನ್ನ ವಂದನೆಗಳು. ಇಲ್ಲಿಯ ವಿಷಯಗಳ ಸಂಕಲನದಲ್ಲಿ ನನಗೆ ನೆರವಾಗಿರುವ ನನ್ನ ಬಂಧು ಚಿ॥ ತೀ.ನಂ. ಶಂಕರನಾರಾಯಣನಿಗೆ ನನ್ನ ಧನ್ಯವಾದಗಳು.

ಈಗಾಗಲೇ ತಿಳಿಸಿರುವ ಹಿನ್ನೆಲೆಯಲ್ಲಿ ಈ ಪುಸ್ತಕದ ಮುದ್ರಣ ಕಾರ್ಯ ಎಷ್ಟು ಸಾಹಸವಾದುದೆಂದು ನಾನು ಹೇಳಬೇಕಾಗಿಲ್ಲ. ಆದರೂ ನಾನು ಕೊಟ್ಟಿರುವ ಎಲ್ಲ ತೊಂದರೆಗಳನ್ನು ಮತ್ತು ನನ್ನ ತಡತಡೆಗಳನ್ನು ಸಹಿಸಿಕೊಂಡು ನಮ್ಮ ಮೇಲಿನ ವಿಶ್ವಾಸದಿಂದ ಮತ್ತು ತೀ.ನಂ.ಶ್ರೀ. ಅವರ ಮೇಲಿನ ಗೌರವದಿಂದ ಈ ಪುಸ್ತಕವನ್ನು ಬಹು ಶ್ರದ್ಧೆಯಿಂದ ಅಂದವಾಗಿ ಮುದ್ರಿಸಿ ಕೊಟ್ಟಿರುವ ಇಳಾ ಮುದ್ರಣದ ಶ್ರೀ ಬಿ. ಗುರುಮೂರ್ತಿ ಮತ್ತು ಅವರ ಸಹಾಯಕ ಸಿಬ್ಬಂದಿ ವರ್ಗದವರಿಗೆ ನನ್ನ ವಿಶ್ವಾಸಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಈ ಪುಸ್ತಕಕ್ಕೆ ಸುಂದರವಾದ ರಕ್ಷಾಪತ್ರವನ್ನು ರಚಿಸಿಕೊಟ್ಟಿರುವ ಸುಪ್ರಸಿದ್ಧ ಕಲಾವಿದ ಶ್ರೀ ಚಂದ್ರನಾಥ ಆಚಾರ್ಯ ಅವರಿಗೆ ನನ್ನ ವಂದನೆಗಳು.

ನಾವೇ ಪ್ರಕಾಶನ ಮಾಡುತ್ತಿರುವ ನನ್ನ ಸಂಪಾದಕತ್ವದಲ್ಲೇ ಹೊರಬರುತ್ತಿರುವ ತೀ.ನಂ.ಶ್ರೀ. ಅವರ ಸ್ಮರಣಪೂರ್ವಕವಾದ ಈ ಗ್ರಂಥಕ್ಕೆ ನಮ್ಮ ನಾಡಿನ ತೀ.ನಂ.ಶ್ರೀ.ಯವರ ಅಪಾರ ಅಭಿಮಾನಿಗಳ ಶುಭ ಹಾರೈಕೆಯನ್ನು ಕೋರುತ್ತೇನೆ.

ಬೆಂಗಳೂರು
೧೫-೮-೨೦೦೬

ತೀ.ಶ್ರೀ. ನಾಗಭೂಷಣ

ಪರಿವಿಡಿ

ಕವಿತೆಗಳು

ತೀ.ನಂ.ಶ್ರೀ. ಅವರ ಜೀವನ ಪಥ

ತೀ.ನಂ.ಶ್ರೀ.ಯವರ ಜೀವನ ಒಂದು ಆದರ್ಶ ಜೀವನ. ಅದು ಸಾಗಿದ ರೀತಿ ಬಹು ಶ್ಲಾಘನೀಯವಾದುದು. ತೀ.ನಂ.ಶ್ರೀ.ಯವರು ಅವರ ವಿದ್ಯಾರ್ಥಿ ಜೀವನದಿಂದ ಪ್ರಾರಂಭಿಸಿ ತಮ್ಮ ಜೀವನದ ಅಂತ್ಯದವರೆಗೂ ಕ್ರಮಿಸಿದ ಪಥದಲ್ಲಿ ನಡೆದ ಕೆಲವು ಸಂಗತಿಗಳು ಮತ್ತು ಘಟನೆಗಳನ್ನು ಇಲ್ಲಿ ವಿವರಿಸಲಾಗಿದೆ. ಇಲ್ಲಿ ತಿಳಿಸಿರುವ ಕೆಲವು ವಿಷಯಗಳು ಬಾಹ್ಯ ಪ್ರಪಂಚಕ್ಕೆ ತಿಳಿದೂ ಇಲ್ಲ ಮತ್ತು ಎಲ್ಲಿಯೂ ಉಲ್ಲೇಖವೂ ಆಗಿಲ್ಲ. ತೀ.ನಂ.ಶ್ರೀ.ಯವರ ವಿದ್ಯಾರ್ಥಿ ಜೀವನದ ಪ್ರತಿಭೆ, ಅವರ ಸೇವಾ ಜೀವನದ ತ್ಯಾಗಗಳು ಹಾಗೂ ಸಾಧನೆಗಳು ಮತ್ತು ಕನ್ನಡ ಸಾಹಿತ್ಯ, ಶಾಸ್ತ್ರಗಳು ಮತ್ತು ಭಾಷಾವಿಜ್ಞಾನಕ್ಕೆ ಅವರ ಅಮೂಲ್ಯವಾದ ಕೊಡುಗೆಗಳು, ಇತ್ಯಾದಿಗಳು, ಅನೇಕ ವಿದ್ವಾಂಸರುಗಳ ಮತ್ತು ಲೇಖಕರ ಬರವಣಿಗೆಗಳಲ್ಲಿ ಸಾಕಷ್ಟು ಪ್ರಸ್ತಾಪವಾಗಿ ವಸ್ತುನಿಷ್ಠ ವಿಮರ್ಶೆಗಳು ಮತ್ತು ಮೆಚ್ಚುಗೆಗೆ ಒಳಗಾಗಿರುವುದರಿಂದ, ಆ ವಿಷಯಗಳನ್ನು ವಿಸ್ತರಿಸುವುದು ಇಲ್ಲಿಯ ಉದ್ದೇಶವಲ್ಲ ಮತ್ತು ಅದು ಅನಾವಶ್ಯಕ ಪುನರಾವರ್ತನೆಯೂ ಆಗಬಹುದು.

ಈ ಕೆಲವು ಸಂಗತಿಗಳು ಮತ್ತು ಘಟನೆಗಳಲ್ಲಿ ಭಾಗಿಯಾಗಿರುವ ಮತ್ತು ಸಂಬಂಧಪಟ್ಟಿರುವ ಕೆಲವು ವ್ಯಕ್ತಿಗಳು ಈ ವಿಷಯಗಳನ್ನು ತಮ್ಮ ಬರವಣಿಗೆಗಳಲ್ಲಿ ಸಾಂದರ್ಭಿಕವಾಗಿ ಪ್ರಸ್ತಾಪಿಸಿರುವಾಗ ಅವುಗಳನ್ನು ಬಹು ವಸ್ತುನಿಷ್ಠವಾಗಿ ನೋಡಿ, ಸತ್ಯನಿಷ್ಠೆಯಿಂದ ಬರೆದಿರುತ್ತಾರೆ. ಆದರೆ ಇನ್ನೂ ಕೆಲವರು ಈ ವಿಷಯಗಳನ್ನು ತಮ್ಮ ಸ್ವಂತ ದೃಷ್ಟಿಕೋನದಿಂದ ವಿವರಿಸಿ ಅದು ಪೂರ್ತಿ ವಸ್ತುನಿಷ್ಠವಾಗಿರದೆ–ಕೆಲವು ಸಾರಿ ತಮ್ಮ ಅನುಕೂಲಕ್ಕೆತಕ್ಕಂತೆ ಸತ್ಯದಿಂದ ದೂರವಾಗಿ, ವಿರೂಪವಾಗಿ – ತೀ.ನಂ.ಶ್ರೀ.ಯವರಿಗೆ ನ್ಯಾಯವಾಗಿ ಸಲ್ಲಬೇಕಾದ ಮಾನ್ಯತೆ ಸಂದಿಲ್ಲವೆನ್ನುವ ಭಾವನೆ ನನ್ನನ್ನು ಬಹು ದಿನಗಳಿಂದ ಕಾಡುತ್ತಿದೆ. ಅದೂ ಅಲ್ಲದೆ ಮೊದಲೇ ತಿಳಿಸಿದಂತೆ ಕೆಲವು ಸಂಗತಿಗಳ ವಾಸ್ತವಾಂಶ ನಮ್ಮ ತಂದೆಯವರ ಕಡೆಯಿಂದ ಬಹಿರಂಗವೇ ಆಗದೆ ಅವು ಕಾಲಗರ್ಭದಲ್ಲಿ ಸೇರಿಹೋಗಿವೆ. ಈ ಬಗ್ಗೆ ತೀ.ನಂ.ಶ್ರೀ.ಯವರ ಕೆಲವರು ಸಮಕಾಲೀನರು, ಪ್ರಿಯ ಸ್ನೇಹಿತರುಗಳು, ಶಿಷ್ಯರು ಮತ್ತು ಅಭಿಮಾನಿಗಳೊಡನೆ ಪ್ರಸ್ತಾಪ ಮಾಡಿದಾಗ, ಈ ಸಂಗತಿಗಳ ಸತ್ಯವನ್ನು ವಸ್ತುನಿಷ್ಠ ದೃಷ್ಟಿಯಲ್ಲಿ ದಾಖಲಿಸುವ ಅವಶ್ಯಕತೆಯನ್ನು ಒತ್ತಿ ಹೇಳಿ ಈ ಕೆಲಸವನ್ನು ನಾನು ಮಾಡಬೇಕೆಂದು ತಿಳಿಸಿದ್ದಾರೆ. ಆದ್ದರಿಂದ ಈ ಪ್ರಯತ್ನಕ್ಕೆ ನಾನು ಇಲ್ಲಿ ಕೈಹಾಕಿದ್ದೇನೆ. ಈ ಸಂದರ್ಭದಲ್ಲಿ ಹೆಸರಿಸಿರುವ ಹಿರಿಯ ವ್ಯಕ್ತಿಗಳು ಪ್ರಸಿದ್ಧ ವಿದ್ವಾಂಸರುಗಳು, ತಮ್ಮ ಸಜ್ಜನಿಕೆಗೆ ಮಾದರಿಯಾದವರು ಮತ್ತು ನಮ್ಮ ತಂದೆಯವರ

ಪ್ರಿಯಮಿತ್ರರುಗಳು ಮತ್ತು ನಮ್ಮ ಸಂಸಾರಕ್ಕೆ ಬಹು ಪ್ರೀತಿ, ವಿಶ್ವಾಸವನ್ನು ತೋರಿಸಿದವರು. ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ ಕೆಲವು ಸತ್ಯಗಳು ಮುಚ್ಚಿ ಹೋಗಬಾರದೆನ್ನುವುದು ಮಾತ್ರ ಇಲ್ಲಿಯ ಉಲ್ಲೇಖಗಳ ಉದ್ದೇಶವೆಂದು ಪುನರುಚ್ಚರಿಸಲು ಬಯಸುತ್ತೇನೆ.

ಅಭಿಲೇಖಜ್ಞರ (archivists) ದೃಷ್ಟಿಯಲ್ಲಿ ಒಂದು ತಲೆಮಾರು ಅಂದರೆ ಸುಮಾರು ಮೂವತ್ತು ವರ್ಷಗಳು ಕಳೆದರೆ ಯಾವ ದ್ವೇಷಾಸೂಯೆಗಳಿಗೂ ಸ್ಥಾನವಿಲ್ಲ. ಯಾವ ವಿಷಯವೂ ಗೋಪ್ಯವಾಗಿರಬೇಕಾದ್ದಿಲ್ಲ. (ಈ ತತ್ವದಂತೆಯೇ ಅನೇಕ ದೇಶಗಳು ಮೂವತ್ತು ವರ್ಷಗಳ ನಂತರ ಅನೇಕ ಗೋಪ್ಯ ದಾಖಲೆಗಳನ್ನು ಸಾರ್ವಜನಿಕರ ಅವಗಾಹನೆಗೆ ಬಿಡುಗಡೆ ಮಾಡುವುದು ಎಲ್ಲರಿಗೂ ಗೊತ್ತಿರುವ ವಿಷಯ.) ಅದೂ ಅಲ್ಲದೆ ತೀ.ನಂ.ಶ್ರೀ.ಯವರ ಜೀವಿತಕಾಲದ ಬಹುಮಟ್ಟಿನ ಸುಮಧುರ ವಾತಾವರಣವನ್ನು ನೆನಸಿಕೊಂಡರೆ ಆಗ ಈ ಕೆಲವು ಘಟನೆಗಳು ಪ್ರಾಸಂಗಿಕವಾಗಿ ಮತ್ತು ಬೇರೆ ಕೆಲವು ಒತ್ತಡಗಳಿಂದ ನಡೆದಿರಬಹುದೇ ಹೊರತು ಈ ಹಿರಿಯರುಗಳಿಗೆ ಬೇರೆ ಭಾವನೆಗಳೂ ಇದ್ದಂತೆ ಅನಿಸುವುದಿಲ್ಲ. ನಮ್ಮ ತಂದೆಯವರಂತೂ ಇಲ್ಲಿರುವ ಕೆಲವು ಅಸಮಾಧಾನಕರವಾದ ಸಂಗತಿಗಳನ್ನು (ತಮ್ಮ ಆಪ್ತ ಸ್ನೇಹಿತರೊಬ್ಬರೊಡನೆ ಆದ ಸ್ನೇಹಭಂಗದ ಹೊರತಾಗಿ) ನೆನಸಿಕೊಂಡು ಕೊರಗಿದವರಲ್ಲ. ನಿಜವಾಗಿ ಹೇಳಬೇಕೆಂದರೆ ಅವರಿಗೆ ಅದರ ನೆನಪೇ ಬರುತ್ತಿರಲಿಲ್ಲ. ಅದೂ ಅಲ್ಲದೆ ಸಮಾಧಾನ ಮತ್ತು ಸಂತೋಷದ ಮಹತ್ಸಾಧನೆಯ ಆದರ್ಶ ಜೀವನವನ್ನು ಬಾಳಿದ ತೀ.ನಂ.ಶ್ರೀ.ಯವರಿಗೆ ಮತ್ತು ಅವರ ಸ್ನೇಹಿತರುಗಳಿಗೆ ಇವೆಲ್ಲವೂ ಗೌಣವಿಷಯವಾಗಿತ್ತು ಎನ್ನುವುದು ಅವರನ್ನು ಚೆನ್ನಾಗಿ ಬಲ್ಲವರೆಲ್ಲರಿಗೂ ತಿಳಿದ ವಿಷಯವಾಗಿದೆ. ಅವರ ಆಪ್ತಮಿತ್ರರಾದ ಪ್ರೊ॥ ಎ.ಎನ್. ಮೂರ್ತಿ ರಾಯರು ನನ್ನೊಡನೆ ಮಾತನಾಡುವಾಗ, ಅವರ ಸ್ನೇಹಿತರ ಗುಂಪು ಸದಾ ಮಾಡುತ್ತಿದ್ದ ಸರಸ-ಸಲ್ಲಾಪಗಳು ಮತ್ತು ಸಾಹಿತ್ಯ ಚರ್ಚೆಗಳ ಸಮಯದಲ್ಲಿ ಅವರುಗಳ ಬಡ್ತಿ, ವೇತನ ಇತ್ಯಾದಿ ವೈಯಕ್ತಿಕ ವಿಷಯಗಳು ಪ್ರಸ್ತಾಪಕ್ಕೆ ಬಂದಿದ್ದು ತುಂಬಾ ಕಡಿಮೆ ಅಥವಾ ಇಲ್ಲವೆಂದೇ ಹೇಳಬಹುದೆಂದು ತಿಳಿಸಿದ್ದರು.

ನಮ್ಮ ತಂದೆಯವರು ನನ್ನೊಡನೆ ಮಾತನಾಡುವಾಗ ಒಮ್ಮೊಮ್ಮೆ ಪ್ರಾಸಂಗಿಕವಾಗಿ ತಮ್ಮ ಜೀವನದಲ್ಲಿ ನಡೆದ ಕೆಲವು ಸಂಗತಿಗಳನ್ನು ಹೇಳಿದ್ದರು. ಈಗ ಆ ಮಾತುಕತೆಗಳನ್ನು ಅವಲೋಕಿಸಿದಾಗ ಈ ವಿಷಯಗಳ ಸತ್ಯ ನನಗೆ ತಿಳಿದಿರಲೆಂದು ಒಮ್ಮೊಮ್ಮೆ ಹೇಳಿರಬಹುದೆಂದು ನನಗೆ ಅನಿಸುತ್ತದೆ. ನಮ್ಮ ತಂದೆಯವರ ನಿಧನದ ನಂತರ ಅವರ ಆಪ್ತಮಿತ್ರರುಗಳೂ ಮತ್ತು ನಮ್ಮ ಪಿತೃಸಮಾನರೂ ಆದ ಪ್ರೊ॥ ಎ.ಎನ್. ಮೂರ್ತಿರಾವ್ ಮತ್ತು ವರಕವಿ ಪು.ತಿ. ನರಸಿಂಹಾಚಾರ್ ಅವರುಗಳೊಡನೆ ಈ ಕೆಲವು ವಿಷಯಗಳನ್ನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿದಾಗ, ಈ ಸತ್ಯಗಳನ್ನು ಪುಷ್ಟೀಕರಿಸಿದ್ದಾರೆ. ಈ ಮಾತುಕತೆಗಳು ಮತ್ತು ಉದ್ಧರಿಸಿರುವ ಪತ್ರಗಳ ಆಧಾರದಿಂದ ಈ ವಿಷಯಗಳನ್ನು ವಸ್ತುನಿಷ್ಠವಾಗಿ ಇಲ್ಲಿ ಬರೆಯಲು ಸಾಧ್ಯವಾಗಿದೆ. ಆದರೆ ಇವುಗಳ ಬಗ್ಗೆ ನಮ್ಮ ತಂದೆಯವರಿಗೆ ಯಾವ ತರಹವಾದ ಅಹಿತಕರ ಭಾವನೆಗಳೂ ಇರಲಿಲ್ಲವೆಂದು ಅವರ ನಿರೂಪಣೆಯ ರೀತಿಯಲ್ಲಿ ಮತ್ತು ನಡೆವಳಿಕೆಗಳಲ್ಲಿ ವ್ಯಕ್ತವಾಗುತ್ತಿತ್ತು. ಅವರ ಸೇವಾ ಜೀವನದ ಕೆಲವು ಬಡತಿಗಳು ಮತ್ತು ಕೆಲವು ಪ್ರಶಸ್ತಿ ಪ್ರದಾನ ಇಂತಹ ಸಂದರ್ಭಗಳಲ್ಲಿ

ತಮಗೆ ನ್ಯಾಯವಾಗಿ ಸಿಗಬೇಕಾಗಿದ್ದು ದೊರಕಲಿಲ್ಲವೆಂದು ತತ್ಕಾಲದಲ್ಲಿ ಅವರಿಗೆ ಅನಿಸಿರಲಿಲ್ಲವೆಂದು ಹೇಳಲಾಗುವುದಿಲ್ಲ. ಅದು ಮಾನವಸಹಜವಾದ ಗುಣ. ಆದರೆ ಇವು ಯಾವುದೂ ಆ ವ್ಯಕ್ತಿಗಳೊಡನೆಯ ವೈಯಕ್ತಿಕ ಪ್ರೀತಿಪೂರ್ವಕ ಸ್ನೇಹಗಳಿಗೆ ಮತ್ತು ಜ್ಞಾನದ ಸತ್ಯಪರತೆಯ ಮೇಲೆ ಯಾವ ಅಡ್ಡಿ ಮತ್ತು ಪರಿಣಾಮಗಳನ್ನು ಮಾಡಲಿಲ್ಲ. ಅದೂ ಅಲ್ಲದೆ ತೀ.ನಂ.ಶ್ರೀ.ಯವರು ಈ ವಿಷಯಗಳನ್ನು ಯಾವ ಸಾರ್ವಜನಿಕ ಸಭೆಯಲ್ಲಾಗಲಿ, ತಮ್ಮ ಬರವಣಿಗೆಗಳಲ್ಲಾಗಲಿ ಅಥವಾ ತಮ್ಮ ಬಂಧುಬಳಗ, ಅಭಿಮಾನಗಳು ಮತ್ತು ಶಿಷ್ಯರುಗಳೊಡನೆ ಮಾತನಾಡುವಾಗಲಿ ಒಮ್ಮೆಯಾದರೂ ಪ್ರಸ್ತಾಪಿಸಿದ್ದಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅವರ ಆಪ್ತಸ್ನೇಹಿತರುಗಳಿಗೆ ಮಾತ್ರ ಕೆಲವು ವಿಷಯಗಳು ತಿಳಿದಿತ್ತೆಂದು ನನಗೆ ಗೊತ್ತಾದುದು ನಮ್ಮ ತಂದೆಯವರ ನಿಧನದ ನಂತರವೇ ಹೊರತು ಅವರ ಜೀವಿತ ಕಾಲದಲ್ಲಲ್ಲ.

ಆದ್ದರಿಂದ ಇಲ್ಲಿ ಪ್ರಸ್ತಾಪಮಾಡಿರುವ ಸಂಗತಿಗಳನ್ನು ಅದರ ಸ್ವಾರಸ್ಯ, ಅಂದಿನ ವಾತಾವರಣದ ಪರಿಜ್ಞಾನ ಮತ್ತು ಅದರ ವಸ್ತುನಿಷ್ಠ ನಿರೂಪಣೆಗಳ ದೃಷ್ಟಿಯಿಂದ ಮಾತ್ರ ಅವಲೋಕಿಸಬೇಕೆಂದು ಸಹೃದಯರಲ್ಲಿ ನನ್ನ ಕೋರಿಕೆ.

ವಿದ್ಯಾರ್ಥಿ ಜೀವನ

●

ತೀ.ನಂ.ಶ್ರೀ.ಯವರ ಊರು ತೀರ್ಥಪುರ. ಇದು ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿಯಿಂದ (ತಾಲ್ಲೂಕು ಸ್ಥಳ) ಹತ್ತು ಮೈಲಿಗಳ ದೂರದಲ್ಲಿದೆ. ಇದು ಆ ಕಾಲದಲ್ಲಿ ಒಂದು ಚಿಕ್ಕ ಗ್ರಾಮ. ನಮ್ಮ ಪೂರ್ವಜರು ಈ ಹಳ್ಳಿಯ ಸಮೀಪದಲ್ಲಿರುವ ಹಾಗಲವಾಡಿಯ ಪಾಳೇಗಾರರಲ್ಲಿ ಮಂತ್ರಿಗಳಾಗಿದ್ದರಂತೆ. ಆದರೆ ಆ ಪಾಳೇಗಾರರು ಸೋಲನ್ನನುಭವಿಸಿದಾಗ ಇವರು ಸಮೀಪದ ತೀರ್ಥಪುರಕ್ಕೆ ವಲಸೆ ಬಂದು ನೆಲೆಸಿದರು. ಆ ಹಳ್ಳಿಯ ಶಾನುಭೋಗತನ ನಮ್ಮ ಹಿರಿಯರಿಗೆ ಬಂದಿತ್ತು.

ತೀರ್ಥಪುರಕ್ಕೆ ಆ ಕಾಲದಲ್ಲಿ ಯಾವ ವಾಹನ ಸೌಕರ್ಯವಾಗಲಿ, ವಿದ್ಯುಚ್ಛಕ್ತಿ ಸಂಪರ್ಕ ವಾಗಲಿ ಇರಲಿಲ್ಲ. ನನಗೆ ತಿಳಿದಿರುವಂತೆ ಈ ಸೌಕರ್ಯಗಳೆಲ್ಲ ಅಲ್ಲಿಗೆ ಬಂದುದು ೧೯೫೦ರ ದಶಕದಲ್ಲಿ. ಅಲ್ಲಿಯಯವರೆಗೂ ಎತ್ತಿನ ಗಾಡಿಯಲ್ಲೇ ಓಡಾಟ ಮತ್ತು ಸೀಮೆಎಣ್ಣೆ ಕಂದೀಲುಗಳೇ ದೀಪ.

ನಮ್ಮ ತಂದೆಯವರ ಜನ್ಮದಿನ ೨೬-೧೧-೧೯೦೬. ಪ್ರಾಥಮಿಕ ಶಾಲೆಯ ಅಭ್ಯಾಸ ಹಳ್ಳಿಯಲ್ಲಿಯೇ ಈಗಲೂ ಇರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಅನಂತರ ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಚಿಕ್ಕನಾಯಕನಹಳ್ಳಿಯಲ್ಲಿ ಬಂಧುಗಳ ಮನೆಯಲ್ಲಿ ನಡೆಯಿತು. ಅನಂತರ ೧೯೧೯ನೆಯ ಇಸವಿಯಲ್ಲಿ ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕೆ ತುಮಕೂರಿನ ಸರ್ಕಾರಿ ಕೊಲೇಜಿಯಟ್ ಸ್ಕೂಲ್‌ಗೆ ತೆರಳಿದರು. ಅಲ್ಲಿ ೧೯೨೫ರಲ್ಲಿ ಎಂಟ್ರನ್ಸ್ ಪರೀಕ್ಷೆಯಲ್ಲಿ (ಈಗಿನ ಪ್ರಿಯೂನಿವರ್ಸಿಟಿಗೆ ಸಮಾನ) ತೇರ್ಗಡೆಯಾಗಿ ಬಿ.ಎ. ವ್ಯಾಸಂಗಕ್ಕೆ ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದರು. ಪ್ರೌಢಶಾಲೆಯಿಂದ ಅವರು ಇಂಗ್ಲಿಷ್ ಎಂ.ಎ. ಮುಗಿಸುವವರೆಗೂ- ತೀ.ನಂ.ಶ್ರೀ ಯವರಿಗೆ ೬ ವರ್ಷಗಳಾಗಿದ್ದಾಗಲೆ ಅವರ ತಾಯಿಯವರು ನಿಧನರಾದುದರಿಂದ – ಅವರ ವಿಧವೆ ಸೋದರತ್ತೆ ಅವರ ಮಾತೃಸ್ಥಾನದಲ್ಲಿ ನಿಂತು ವ್ಯಾಸಂಗದ ಕಾಲದಲ್ಲಿ ಅವರೊಡನೆಯೇ ಇದ್ದು ಅವರನ್ನು ಬೆಳೆಸಿದರು. ಅನಂತರ ೧೯೪೫ರಲ್ಲಿ ಅವರ ನಿಧನದವರೆಗೂ ನಮ್ಮ ಸಂಸಾರದ ಜೊತೆಯೇ ಇದ್ದರು.

ತೀ.ನಂ.ಶ್ರೀ.ಯವರು ಪ್ರೌಢಶಾಲೆಯಲ್ಲಿ ಇದ್ದಾಗಲೇ ಅವರು ಕೆಲವು ಕವಿತೆಗಳನ್ನು ಬರೆದು ಅದು School Folk ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನಮ್ಮ ತಂದೆಯವರು ನನಗೆ

ತಿಳಿಸಿದ್ದಂತೆ ಅವರ ವಿದ್ಯಾರ್ಥಿ ಪ್ರತಿಭೆ ವಿಕಸಿತವಾಗಿದ್ದು ಅವರು ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾಗಿ ಪ್ರವೇಶಮಾಡಿದ ನಂತರ. ೧೯೨೬ರಲ್ಲಿ ಬಿ.ಎ. ಪರೀಕ್ಷೆಗೆ ೧೫ ದಿನ ಮೊದಲು ಒಂದು ವಾರಗಳ ಕಾಲ ತುರುವೇಕೆರೆಯಲ್ಲಿ ನಡೆದ ವಿವಾಹ ಮಹೋತ್ಸವದಲ್ಲಿ ನಮ್ಮ ತಾಯಿ ಶ್ರೀಮತಿ ಜಯಲಕ್ಷ್ಮಮ್ಮನವರು ಅವರ ಪತ್ನಿಯಾಗಿ ಬಂದರು. ಅವರು ೧೯೨೬ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಘಟಿಕೋತ್ಸವದಲ್ಲಿ ಅವರಿಗೆ ಅಂದಿನ ಶ್ರೀಮನ್ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸ್ವಹಸ್ತದಿಂದ ೬ ಸುವರ್ಣ ಪದಕಗಳು ಮತ್ತು ಒಂದು ನಗದು ಬಹುಮಾನ ಸ್ವೀಕರಿಸಿದಾಗ, ಬಹು ಗಾಂಭೀರ್ಯದ ಶ್ರೀಮನ್ಮಹಾರಾಜರೇ ನಕ್ಕಿದ್ದನ್ನು ನೋಡಿ ಸಭಿಕರೆಲ್ಲ ಆಶ್ಚರ್ಯಚಕಿತರಾದರಂತೆ. ಅದೇ ಘಟಿಕೋತ್ಸವದಲ್ಲಿ ನಮ್ಮ ತಾತನವರ ಪಕ್ಕದಲ್ಲಿ ಕುಳಿತಿದ್ದ ಕೆಲವು ಸಭಿಕರು ಈತನ ತಂದೆ ಎಂತಹ ಪುಣ್ಯಾತ್ಮನೋ ಎಂದು ಉದ್ಗಾರ ತೆಗೆದಾಗ, ತನ್ನಂತಹ ಹಳ್ಳಿಯವನ ಮಗನು ಅವನೆಂದು ತಿಳಿಸಲು ಸಂಕೋಚಪಟ್ಟು "ಹೌದು, ಹೌದು....." ಎಂದು ನಮ್ಮ ತಾತನವರೂ ಧ್ವನಿಗೂಡಿಸಿದರಂತೆ.

೧೯೨೬ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪ್ರಾರಂಭವಾಗಿಲ್ಲದುದರಿಂದ (ಅದು ೧೯೨೭ರಲ್ಲಿ ಪ್ರಾರಂಭವಾಯಿತು) ತೀ.ನಂ.ಶ್ರೀ.ಯವರು ಇಂಗ್ಲಿಷ್ ಎಂ.ಎ. ಗೆ ಸೇರಿದರು. ೧೯೨೮ರಲ್ಲಿ ಎಂ.ಎ. ಪರೀಕ್ಷೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ಆ ವರ್ಷ ಮೈಸೂರು ಸಿವಿಲ್ ಸರ್ವೀಸ್ (MCS) ಪರೀಕ್ಷೆಗೆ ಕುಳಿತಿದ್ದರಿಂದ ೧೯೨೯ರಲ್ಲಿ ಇಂಗ್ಲಿಷ್ ಎಂ.ಎ. ಪರೀಕ್ಷೆ ತೆಗೆದುಕೊಂಡರು.

೧೯೨೯ರಲ್ಲಿ ಇಂಗ್ಲಿಷ್ ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಯಿತು. ೧೯೩೧ರಲ್ಲಿ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮ ಸ್ಥಾನ ದೊರಕಿ ಮತ್ತೆ ಮೂರು ಸುವರ್ಣ ಪದಕಗಳು ತೀ.ನಂ.ಶ್ರೀ.ಯವರ ಕೈಸೇರಿದವು.

ತೀ.ನಂ.ಶ್ರೀ.ಯವರಿಗೆ ಅವರ ವಿದ್ಯಾರ್ಥಿ ಜೀವನದಲ್ಲಿ ಅವರ ಪ್ರತಿಭೆ ಮತ್ತು ಸಾಧನೆಯನ್ನು ಮೆಚ್ಚಿ ಅಂದಿನ ಹಿರಿಯ ಮತ್ತು ಗೌರವಯುತ ಪ್ರಾಧ್ಯಾಪಕರುಗಳಿಂದ ಅವರಿಗೆ ಬಂದ ಅರ್ಹತಾ ಪತ್ರಗಳನ್ನು (certificates) ಇಲ್ಲಿ ನೋಡಬಹುದು (ಅನುಬಂಧಗಳು ೧ ರಿಂದ ೬ ವರೆಗೆ).

ತೀ.ನಂ.ಶ್ರೀ.ಯವರಿಗೆ ಪ್ರೌಢಶಾಲೆಯಲ್ಲಿದ್ದಾಗ ಶ್ರೀ ಟಿ.ಪಿ.ಕೃಷ್ಣಾಚಾರ್ (ಕರ್ನಾಟಕ ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಾಗಿ ನಿವೃತ್ತರಾಗಿದ್ದವರು), ಶ್ರೀ ಟಿ.ಎಲ್.ಕೆ. ಆಚಾರ್ಯ (ಮೈಸೂರು ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರ ಅಧ್ಯಾಪಕರಾಗಿದ್ದು ನಂತರ UNESCOದಲ್ಲಿ ವಿಷಯ ಪರಿಣತರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದವರು), ಡಾ.ಕೆ. ರಾಮರಾವ್ (ಬೆಂಗಳೂರು ನಗರದ ಬಹು ಪ್ರಸಿದ್ಧ ಮತ್ತು ಜನಪ್ರಿಯ ವೈದ್ಯರಾಗಿದ್ದವರು) ಅವರು ಸಹಪಾಠಿಗಳಾಗಿದ್ದು ಮುಂದೆ ಅವರ ಪ್ರಿಯ ಸ್ನೇಹಿತರುಗಳಾಗಿದ್ದರು. ಪ್ರೊ॥ ಡಿ.ಎಲ್. ನರಸಿಂಹಾಚಾರ್ಯರು ಇದೇ ಪ್ರೌಢಶಾಲೆಯಲ್ಲಿ ಓದಿದವರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ತರಗತಿಯಲ್ಲಿ ಮೂರುವರ್ಷಗಳೂ ಶ್ರೀ ಪು.ತಿ.ನರಸಿಂಹಾಚಾರ್, ಶ್ರೀ ಕೂಡಲಿ ಚಿದಂಬರಂ (ಕಾವ್ಯಾಲಯ ಪ್ರಕಾಶಕರು), ಪ್ರೊ॥ ನಂ.ಶಿವರಾಮಶಾಸ್ತ್ರಿ (ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು) ಮತ್ತು ಶ್ರೀ ಬಿ. ನಂಜುಂಡಯ್ಯ (ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಪಕರಾಗಿ ನಿವೃತ್ತ ರಾಗಿದ್ದವರು) ಅವರ ಸಹಪಾಠಿಗಳಾಗಿದ್ದು ಮುಂದೆಯೂ ಅವರ ಪ್ರಿಯ ಸ್ನೇಹಿತರುಗಳಾಗಿದ್ದರು. ಕನ್ನಡ ಎಂ.ಎ. ತರಗತಿಯಲ್ಲಿ ಇನ್ನೊಬ್ಬ ಪ್ರಿಯ ಸ್ನೇಹಿತ ಪ್ರೊ॥ ಜಿ.ಪಿ. ರಾಜರತ್ನಂ ಅವರು ಸಹಪಾಠಿಗಳಾಗಿದ್ದರು.

ಸೇವಾ ಜೀವನ : ಪ್ರಾಧ್ಯಾಪಕರಾಗುವ ಮೊದಲು

●

ತೀ.ನಂ.ಶ್ರೀ.ಯವರಿಗೆ ೧೯೨೮ನೆಯ ವರ್ಷದಲ್ಲಿ ಸಿವಿಲ್ ಪರೀಕ್ಷೆಯಲ್ಲಿ ಮೂರನೆ ಸ್ಥಾನ ಬಂದಿತು. ಮೊದಲು ಎರಡು ಸ್ಥಾನ ಪಡೆದವರನ್ನು ನೇರವಾಗಿ ಪ್ರೊಬೇಶನರಿ ಅಸಿಸ್ಟೆಂಟ್ ಕಮೀಷನರ್ ಎಂದು ನೇಮಿಸಿಕೊಳ್ಳಲಾಯಿತು. ತೀ.ನಂ.ಶ್ರೀ.ಯವರು ಪ್ರೊಬೇಶನರಿ ಅಮಲ್ದಾರರಾಗಿ ಶ್ರೀರಂಗಪಟ್ಟಣಕ್ಕೆ ನೇಮಕವಾದರು. ಅವರಿಗೆ ಮೊದಲೆರಡು ಸ್ಥಾನದಲ್ಲಿ ಬಂದಿದ್ದರೆ ಅವರ ಸೇವಾಜೀವನ ಯಾವ ತಿರುವು ಪಡೆಯುತ್ತಿತ್ತೆಂದು ಊಹಿಸಲಾಗದು! ಅದು ಹಾಗಾಗದೆ ತೀನಂಶ್ರೀಯವರಿಂದ ವಿದ್ವತ್ತು ಮತ್ತು ಶಿಕ್ಷಣ ಕ್ಷೇತ್ರಕ್ಕೆ ಆದ ಅಪಾರ ಲಾಭವನ್ನು ಈಗಲೂ ಎಲ್ಲರೂ ಸಂತೋಷದಿಂದ ನೆನೆಯುತ್ತಾರೆ.

ಆಗ ಕನ್ನಡದಲ್ಲಿ ಎಂ.ಎ. ಪಡೆದವರ ಕೊರತೆ ಇದ್ದುದರಿಂದ ಕನ್ನಡದಲ್ಲಿ ಡಿಗ್ರಿ ಪಡೆದು ಬೇರೆ ವಿಷಯಗಳಲ್ಲಿ ಎಂ.ಎ. ಪದವಿ ಪಡೆದಿದ್ದ ಶ್ರೀ ವಿ. ಸೀತಾರಾಮಯ್ಯನವರು ಮತ್ತು ತೀ.ನಂ.ಶ್ರೀ.ಯವರನ್ನು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರನ್ನಾಗಿ ನೇಮಿಸಿಕೊಳ್ಳಲಾಯಿತು. ಆಚಾರ್ಯ ಬಿ.ಎಂ.ಶ್ರೀ.ಯವರ ಉತ್ತೇಜನದಿಂದ ಮತ್ತು ತಮ್ಮ ಸ್ವಂತ ಒಲವಿನಿಂದ ತೀ.ನಂ.ಶ್ರೀ.ಯವರು ಆಗಿನ ಕಾಲದ ಬಹು ಗೌರವಯುತ ಮತ್ತು ಅಧಿಕಾರಯುತವಾದ ಅಮಲ್ದಾರ್ ಹುದ್ದೆಯನ್ನು ತ್ಯಜಿಸಿ (ಇದರಿಂದಾಗಿ ನಮ್ಮ ತಾತನವರಿಗೆ ನಮ್ಮ ತಂದೆಯವರ ಮೇಲೆ ತುಂಬಾ ಕೋಪ ಬಂದಿತ್ತಂತೆ!), ಮೈಸೂರಿನಲ್ಲಿ ಕನ್ನಡ ಅಧ್ಯಾಪಕ ಹುದ್ದೆಯನ್ನು ಸ್ವೀಕರಿಸಿ ಬಂದರು. ವಿ.ಸೀ.ಯವರು ತೀ.ನಂ.ಶ್ರೀ.ಯವರಿಗಿಂತ ವಯಸ್ಸಿನಲ್ಲಿ ಏಳು ವರ್ಷ ಹಿರಿಯರು. ಆದರೆ ಇಬ್ಬರೂ ಒಟ್ಟಿಗೆ ೧೯೨೮ರಲ್ಲಿ ಕನ್ನಡ ಅಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾಲಯವನ್ನು ಸೇರಿದರು. ವಿ.ಸೀ.ಯವರು ೬-೭ ವರ್ಷಗಳ ಕಾಲ ಅರ್ಥಶಾಸ್ತ್ರಜ್ಞರಾಗಿ ಬೊಂಬಾಯಿಯಲ್ಲಿ ಕೇಂದ್ರ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿದ ನಂತರ ಕನ್ನಡದ ಮೇಲಿನ ವ್ಯಾಮೋಹದಿಂದ ಆ ಕೆಲಸವನ್ನು ತ್ಯಾಗಮಾಡಿ, ಕನ್ನಡ ಅಧ್ಯಾಪಕರಾಗಿ ಬಂದಿದ್ದರು.

ಬಿ.ಎಂ.ಶ್ರೀ.ಯವರು ೧೯೨೬ರಲ್ಲಿ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿ ಸೂತ್ರಗಳನ್ನು ವಹಿಸಿಕೊಂಡನಂತರ ೧೯೨೭ರಲ್ಲಿ ಕನ್ನಡ ಎಂ.ಎ. ತರಗತಿಗಳು ಪ್ರಾರಂಭವಾದವು. ಆಗ ಶ್ರೀ ಡಿ.ಎಲ್. ನರಸಿಂಹಾಚಾರ್ಯರು, ಕುವೆಂಪು ಅವರು ಮೊದಲನೆಯ ಗುಂಪಿನಲ್ಲಿ ಸೇರಿದ ವಿದ್ಯಾರ್ಥಿಗಳಲ್ಲಿದ್ದರು. ೧೯೨೯ರಲ್ಲಿ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಶ್ರೀ ಡಿ.ಎಲ್. ನರಸಿಂಹಾಚಾರ್ಯರು ಪ್ರಥಮ ಶ್ರೇಣಿಯಲ್ಲಿ ಪ್ರಥಮ ಸ್ಥಾನ ಪಡೆದರು.

೧೯೨೯ರಲ್ಲಿ ಕನ್ನಡ ಎಂ.ಎ. ಮುಗಿಸಿದ ನಂತರ ಕುವೆಂಪು ಅವರು ಕನ್ನಡ ಅಧ್ಯಾಪಕರಾಗಿ ಮಹಾರಾಜ ಕಾಲೇಜಿನಲ್ಲಿ ನೇಮಕವಾದರು. ಡಿ.ಎಲ್.ಎನ್. ಅವರು ಓರಿಯಂಟಲ್ ಲೈಬ್ರರಿಯಲ್ಲಿ ಕನ್ನಡ ಪಂಡಿತರಾಗಿ ನೇಮಕವಾದರು.

೧೯೩೯ರಲ್ಲಿ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದಲ್ಲಿ ಒಂದು ಅಸಿಸ್ಟೆಂಟ್ ಪ್ರೊಫೆಸರ್ ಕೆಲಸ ಖಾಲಿಯಾಯಿತು. ಅದಕ್ಕೆ ವಿ.ಸೀ.ಯವರಾಗಲಿ ಅಥವಾ ತೀ.ನಂ.ಶ್ರೀ.ಯವರಾಗಲಿ ಅವರ ಸೇವಾ ಹಿರಿತನದಿಂದ ಬಡ್ತಿ ಪಡೆಯುವರೆಂದು ಎಲ್ಲರ ನಿರೀಕ್ಷೆಯಾಗಿತ್ತು. ಆದರೆ ಅದು ಕುವೆಂಪು ಅವರಿಗೆ ದೊರಕಿತು. ಈ ಸಂದರ್ಭದಲ್ಲಿ ತೀ.ನಂ.ಶ್ರೀ.ಯವರಿಗೆ ಅವರ ಮಾವನವರು (ನನ್ನ ತಾತ) ಮತ್ತು ಅವರ ಸ್ನೇಹಿತರಾದ ಶ್ರೀ ಕೂಡಲಿ ಚಿದಂಬರಂ ಅವರು ಬರೆದಿರುವ ವಿಷಯದ ಪತ್ರಗಳು ಇಲ್ಲಿ ಪ್ರಸ್ತುತವೆನಿಸಬಹುದು (ಅನುಬಂಧಗಳು ೭ ಮತ್ತು ೮).

ಆದರೆ ಅಂದಿನ ಶೈಕ್ಷಣಿಕ ವಾತಾವರಣ ಎಷ್ಟು ಸುಮಧುರವಾಗಿತ್ತೆಂದರೆ, ಈ ಬಡತಿ ಇತ್ಯಾದಿಗಳು ಯಾರ ಮನಸ್ಸನ್ನೂ ಕಲುಷಿತಗೊಳಿಸಲಿಲ್ಲ. ಎಲ್ಲರೂ ತಮ್ಮ ವ್ಯಾಸಂಗ, ಸಂಶೋಧನೆ, ಅಧ್ಯಾಪನೆಗಳೇ ಮುಖ್ಯವಾದ ಕೆಲಸಗಳೆಂದು ಭಾವಿಸಿದ್ದರು. ಮತ್ತು ಈ ಮೂವರಿಗೂ ಅವರು ಬದುಕಿದಷ್ಟು ಕಾಲವೂ ಈ ಸಂಗತಿಗಳಿಂದ ಅವರ ಸ್ನೇಹ, ಪ್ರೀತಿ, ವಿಶ್ವಾಸಗಳಿಗೆ ಯಾವ ಭಂಗವೂ ಬರಲಿಲ್ಲ. ಅವರು ಎಂದೂ ಆ ವಿಷಯವನ್ನು ಪ್ರಸ್ತಾಪಿಸಿದ್ದೇ ಇಲ್ಲ ಮತ್ತು ಒಬ್ಬರು ಮತ್ತೊಬ್ಬರಲ್ಲಿ ತುಂಬಾ ಗೌರವವನ್ನಿಟ್ಟುಕೊಂಡಿದ್ದರು. ಸಂದರ್ಭ ಬಂದಾಗ ಕುವೆಂಪು ಅವರು ತೀ.ನಂ.ಶ್ರೀ.ಯವರನ್ನು ಮಹಾರಾಜ ಕಾಲೇಜಿನ ಪ್ರಾಂಶುಪಾಲ ರನ್ನಾಗಿ ಮಾಡಲು ನಡೆಸಿದ ಪ್ರಯತ್ನ ಮುಂದೆ ತಿಳಿಸಲಾಗಿದೆ. ಕುವೆಂಪು ಅವರಿಗೆ ತೀ.ನಂ.ಶ್ರೀ. ಅವರ ವಿದ್ವತ್ತಿನ ಮೇಲೆ ಎಷ್ಟು ಗೌರವವಿತ್ತೆಂದರೆ ಅವರಿಗೆ ೬೦ ವರ್ಷ ತುಂಬಿದ್ದಾಗ ನಮ್ಮ ತಂದೆಯವರು ಅವರನ್ನು ನೋಡಿ ಶುಭಾಶಯಗಳನ್ನು ತಿಳಿಸಲು ಹೋಗಿದ್ದರು. ಆಗ ಕುವೆಂಪು ಅವರು ಅಂದಿನ ಕನ್ನಡದ ವಿದ್ವತ್ತಿನ ಬಗ್ಗೆ ಮಾತನಾಡುತ್ತಾ ಅದು ನಿಂತಿರುವುದು ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಅವರಿಂದಲೇ ಎಂದು ಹೇಳಿದರೆಂದು ಮನೆಗೆ ಬಂದನಂತರ ನಮ್ಮ ತಂದೆಯವರು ನನಗೆ ತಿಳಿಸಿದ್ದರು.

ಈ ಸಂದರ್ಭದಲ್ಲಿ ತೀ.ನಂ.ಶ್ರೀ.ಯವರಿಗೆ ಈ ಹುದ್ದೆ ದೊರಕದಿದ್ದುದು ಅವರ ಗುರುಗಳು ಮತ್ತು ಆಗ ಪ್ರಾಧ್ಯಾಪಕರಾಗಿದ್ದ ಪ್ರೊ॥ ಟಿ.ಎಸ್. ವೆಂಕಣ್ಣಯ್ಯನವರಿಗೆ ನಿರಾಶೆಯಾಯಿತೆಂದು ತಿಳಿದುಬರುತ್ತದೆ. ಆದರೆ ಮತ್ತೊಂದು ಅವಕಾಶ ಬಂದಾಗ ಇದನ್ನು ಸರಿಪಡಿಸಬಹುದೆನ್ನುವ ಭಾವನೆ ಅವರಿಗಿತ್ತಂತೆ.

೧೯೪೧-೪೨ರಲ್ಲಿ ಮತ್ತೊಮ್ಮೆ ಅಸಿಸ್ಟೆಂಟ್ ಪ್ರೊಫೆಸರ್ ಸ್ಥಾನ ಖಾಲಿಯಾಯಿತು. ಆ ವೇಳೆಗೆ ಪ್ರೊ॥ ಟಿ.ಎಸ್. ವೆಂಕಣ್ಣಯ್ಯನವರು ದಿವಂಗತರಾಗಿದ್ದರು. ಈ ಬಡ್ತಿ ಶ್ರೀ ವಿ.ಸೀ. ಅವರಿಗೆ ದೊರಕಿತು. ಈ ಎರಡು ಬಾರಿಯೂ ತೀ.ನಂ.ಶ್ರೀ.ಯವರ ಗುರುಗಳಾಗಿದ್ದ ಪ್ರೊ॥ ಬಿ.ಎಂ.ಶ್ರೀ. ಯವರು ಈ ವಿಷಯದಲ್ಲಿ ತಟಸ್ಥರಾಗಿದ್ದರೆಂದು ತಿಳಿಯುತ್ತದೆ. ಆದರೆ

ಈ ಸಂದರ್ಭದಲ್ಲಿ ವಿ.ಸೀ.ಯವರಾಗಲಿ ತೀ.ನಂ.ಶ್ರೀ. ಯವರಾಗಲಿ, ಈ ಬಡ್ತಿಯು ತಮಗೆ ದೊರಕಬೇಕೆಂದು ಒಂದು ಬಾರಿಯೂ ಹೇಳಲಿಲ್ಲವಂತೆ. ಪ್ರಯತ್ನಮಾಡುವುದಂತೂ ದೂರವೇ ಉಳಿಯಿತು. ಇಂತಹ ಸಂದರ್ಭಗಳಲ್ಲಿ ಇಬ್ಬರು ಸ್ಪರ್ಧಿಗಳ ಸ್ಥಾನದಲ್ಲಿದ್ದವರು ನಡೆದು ಕೊಂಡ ರೀತಿ, ಗಾಂಭೀರ್ಯ ಮತ್ತು ಒಬ್ಬರು ಇನ್ನೊಬ್ಬರಿಗೆ ತೋರಿಸಿದ ನಿಜವಾದ ಗೌರವ ತುಂಬಾ ಅಪೂರ್ವ ಮತ್ತು ಬಹು ಅನುಕರಣೀಯವಾದುದು ಎಂದು ಪ್ರೊ॥ ಎ.ಎನ್. ಮೂರ್ತಿರಾಯರು ಸದಾ ನೆನೆಯುತ್ತಿದ್ದರು. ಈ ವಿಷಯದ ಬಗ್ಗೆ ತಮ್ಮ ಭಾಷಣಗಳಲ್ಲಿ ಅನೇಕ ಬಾರಿ ಪ್ರಸ್ತಾಪ ಮಾಡಿದ್ದರು.

೧೯೪೦ರಲ್ಲಿ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜಒಡೆಯರ್ ಅವರು ನಿಧನರಾದ ನಂತರ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಮೈಸೂರು ಸಂಸ್ಥಾನದ ಮಹಾರಾಜ ರಾದರು. ಆದ್ದರಿಂದ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳೂ (Chancellor) ಆದರು.

ವಿ.ಸೀ.ಯವರ ಅಸಿಸ್ಟೆಂಟ್ ಪ್ರೊಫೆಸರ್ ನೇಮಕಾತಿಯ ನಿರ್ಧಾರ ವಿಶ್ವವಿದ್ಯಾಲಯದಿಂದ ಕುಲಪತಿಗಳ ಒಪ್ಪಿಗೆಗೆ ಹೋದಾಗ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು ತಮ್ಮ ಟಿಪ್ಪಣಿಯಲ್ಲಿ ಹೀಗೆ ಬರೆದಿದ್ದರಂತೆ:

"I endorse the appointment of Sri V.Sitaramaiah as Asst. Professor as recommended by the selection committe. But I feel that an injustice has been done to T.N. Sreekantaiya twice. So I suggest that action must be taken immediately to correct the situation."

ಈ ಸಲಹೆಯಿಂದಲೇ ಇರಬೇಕು. ಮೈಸೂರು ವಿಶ್ವವಿದ್ಯಾಲಯವು ೧೯೪೩ರಲ್ಲಿ ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಒಂದು ಕನ್ನಡ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಯನ್ನು ಸೃಷ್ಟಿಸಿ ತೀ.ನಂ.ಶ್ರೀ.ಯವರನ್ನು ಅಲ್ಲಿಗೆ ಬಡ್ತಿಯೊಡನೆ ವರ್ಗ ಮಾಡಿತು. ಇದರಿಂದಾಗಿ ಅವರು ಮೈಸೂರಿನ ಮಹಾರಾಜ ಕಾಲೇಜನ್ನು ಬಿಟ್ಟು ಬೆಂಗಳೂರಿಗೆ ಬಂದರು. (ಇದರೊಡನೆ ವಿಧಿಯ ವಿಲಾಸವೋ ಏನೋ. ಅವರ ನೇಮಕ ದಿನಪತ್ರಿಕೆಗಳಲ್ಲಿ ಪ್ರಕಟವಾದ ದಿನವೇ ಅವರನ್ನು ಸದಾ ಅವರ ಮಾತೃ ಸ್ಥಾನದಲ್ಲಿ ಇದ್ದು ನೋಡಿಕೊಂಡು ಅವರೊಡನೆಯೇ ಸದಾಕಾಲವೂ ಇದ್ದ ಅವರ ವಿಧವೆ ಸೋದರತ್ತೆಯವರು ನಿಧನ ಹೊಂದಿದ್ದರು. ಬೆಂಗಳೂರಿಗೆ ಅವರಿಲ್ಲದ ಸಂಸಾರದೊಡನೆ ಬಂದ ತೀ.ನಂ.ಶ್ರೀ.ಯವರು ಮತ್ತೆ ಆರು ತಿಂಗಳಿನಲ್ಲಿಯೇ ಅವರು ಚೊಚ್ಚಲ ಮುದ್ದಿನ ಪುತ್ರಿ ೧೨ ವರ್ಷದ ವಿಶಾಲಾಕ್ಷಿಯನ್ನು ಕಳೆದುಕೊಂಡರು.)

ತೀ.ನಂ.ಶ್ರೀ ಯವರು ೧೯೩೦ರ ದಶಕದಲ್ಲಿ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಅಂದಿನ ಯುವರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಅವರ ಶಿಷ್ಯರಾಗಿದ್ದರು. ಅದಲ್ಲದೆ, ಅವರು ಬಿ.ಎ, ವ್ಯಾಸಂಗಮಾಡುತ್ತಿದ್ದ ಮೂರು ವರ್ಷಗಳ ಕಾಲವೂ ತೀ.ನಂ.ಶ್ರೀ. ಯವರು ಯುವರಾಜರಿಗೆ 'ಕನ್ನಡ' ವಿಷಯದಲ್ಲಿ ಖಾಸಗಿ ಟ್ಯೂಟರ್ ಆಗಿದ್ದರು. ಆದರೆ ಅದರ ನಂತರ ತೀ.ನಂ.ಶ್ರೀ.ಯವರು ತಮ್ಮ ಜೀವಿತಕಾಲದಲ್ಲಿ ಮಹಾರಾಜ ಶ್ರೀ ಜಯಚಾಮರಾಜ

ಒಡೆಯರ್‌ರವರನ್ನ ಖಾಸಗಿ ವಿಷಯಕ್ಕಾಗಿ ಒಮ್ಮೆಯೂ ಭೇಟಿ ಮಾಡಲಿಲ್ಲ. ಆದರೂ ಶ್ರೀ ಜಯಚಾಮರಾಜ ಒಡೆಯರ್‌ರವರ ಮೇಲಿನ ಟಿಪ್ಪಣಿ ಅವರು ಆಯ್ಕೆ ಸಮಿತಿಯ ನಿರ್ಧಾರಕ್ಕೆ ಕೊಟ್ಟ ಗೌರವವನ್ನು ಮತ್ತು ತೀ.ನಂ.ಶ್ರೀ. ಅವರಿಗೆ ಅನ್ಯಾಯವಾಗಿರುವ ಬಗ್ಗೆ ತಮ್ಮ ಕಳಕಳಿ ಎರಡನ್ನೂ ಏಕಕಾಲಕ್ಕೆ ತೋರಿಸುತ್ತದೆ. ತೀ.ನಂ.ಶ್ರೀ.ಯವರು ೧೯೫೨ನೆಯ ಇಸವಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಧಾರವಾಡಕ್ಕೆ ಹೋದ ಸಂದರ್ಭ ದಲ್ಲಿ ಶ್ರೀ ಡಿ.ಎಲ್. ನರಸಿಂಹಾಚಾರ್ಯರು ತೀ.ನಂ.ಶ್ರೀ.ಯವರಿಗೆ ೧೪-೧-೫೨ರಂದು ಬರೆದ ಒಂದು ಪತ್ರದ ಭಾಗ ಹೀಗಿದೆ (ಅನುಬಂಧ ೯). ಆದರೆ ತೀ.ನಂ.ಶ್ರೀ. ಮಹಾರಾಜರ ಭೇಟಿಗೆ ಅವಕಾಶ ಕೋರಲಿಲ್ಲ.

ತೀ.ನಂ.ಶ್ರೀ.ಯವರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರನ್ನು ನೋಡಲು ಯಾವಾಗಲೂ ಹೋಗದಿದ್ದರೂ ಮಹಾರಾಜರಿಗೆ ತೀ.ನಂ.ಶ್ರೀ.ಯವರ ಮೇಲಿದ್ದ ಗೌರವ ಮತ್ತು ಅಭಿಮಾನಗಳನ್ನು ಕೆಳಗಿನ ಈ ಎರಡು ಸಂದರ್ಭಗಳು ತೋರಿಸುತ್ತವೆ.

೧) ೧೯೫೩ನೆಯ ಇಸವಿಯಲ್ಲಿ ಮೈಸೂರು ಮಹಾರಾಜ ಕಾಲೇಜಿನ ಶತಮಾನೋತ್ಸವ ಸಮಾರಂಭ. ರಾಜಪ್ರಮುಖರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ತೀ.ನಂ.ಶ್ರೀ.ಯವರು ಅನೇಕ ಸಭಿಕರ ಮಧ್ಯೆ ಎಲ್ಲೋ ಕುಳಿತಿದ್ದರು. ಆದರೆ ರಾಜಪ್ರಮುಖರು ಕೆಳಗೆ ಬಂದು ತೀ.ನಂ.ಶ್ರೀ.ಯವರನ್ನು ಭೇಟಿ ಮಾಡಿ ಅವರ ಕುಶಲದ ಬಗ್ಗೆ ಮಾತನಾಡಿಸಿಕೊಂಡು ಹೋದರು.

೨) ೧೯೫೬ನೆಯ ಇಸವಿಯಲ್ಲಿ ರಾಜಪ್ರಮುಖರು ಧಾರವಾಡಕ್ಕೆ ಬಂದಿದ್ದರು. ಅಲ್ಲಿಯ ಕರ್ನಾಟಕ ಸಹಕಾರಿ ಬ್ಯಾಂಕಿನ ಸುವರ್ಣೋತ್ಸವ ಭವನವನ್ನು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ತೀ.ನಂ.ಶ್ರೀ.ಯವರು ಸಭಿಕರಲ್ಲಿ ಒಬ್ಬರಾಗಿದ್ದರು. ಮತ್ತೆ ರಾಜಪ್ರಮುಖರು ಬಂದು ತೀ.ನಂ.ಶ್ರೀ.ಯವರನ್ನು ಭೇಟಿಮಾಡಿ "ಏನು ಧಾರವಾಡದಲ್ಲಿಯೇ ಖಾಯಂ ಆಗಿ ನೆಲೆಸಬೇಕೆಂದಿದ್ದೀರಾ. ಮತ್ತೆ ಮೈಸೂರು ವಿಶ್ವವಿದ್ಯಾಲಯಕ್ಕೆ ಬರುವುದಿಲ್ಲವೇ?" ಎಂದು ವಿಚಾರಿಸಿದರು.

ಮಹಾರಾಜರು ಕಾಲೇಜಿನಲ್ಲಿ ಶಿಷ್ಯರಾಗಿದ್ದಾಗಲೂ ಕೂಡ ಅವರ ಪರೀಕ್ಷೆಯ ಫಲಿತಾಂಶದ ಬಗ್ಗೆ ತೀ.ನಂ.ಶ್ರೀ.ಯವರೊಡನೆ ಒಮ್ಮೆಯೂ ಮಾತನಾಡುತ್ತಿರಲಿಲ್ಲವಂತೆ. ಅವರ ಉತ್ತರಕ್ಕೆ ತಕ್ಕಂತೆ ಅವರಿಗೆ ಬಿ.ಎ. ಪರೀಕ್ಷೆಯಲ್ಲಿ ಕನ್ನಡದಲ್ಲಿ ಪ್ರಥಮ ದರ್ಜೆ ಬರದಿದ್ದಾಗ ಅದನ್ನು ಸಮಾಧಾನವಾಗಿ ಸ್ವೀಕರಿಸಿದ್ದರಂತೆ. ಮತ್ತು ಈ ವಿಷಯದ ಬಗ್ಗೆ ಯಾರೊಡನೆಯೂ ಒಂದು ಮಾತನ್ನೂ ಆಡಿರಲಿಲ್ಲವಂತೆ. ಆ ಉತ್ತರ ಪತ್ರಿಕೆಯನ್ನು ತೀ.ನಂ.ಶ್ರೀ.ಯವರೇ ಮೌಲೀಕರಣ ಮಾಡಿದ್ದರು.

ಮಹಾರಾಜರಿಗೆ ತಾವು ತೀ.ನಂ.ಶ್ರೀ.ಯವರ ಶಿಷ್ಯರಾಗಿದ್ದಕ್ಕೆ ತುಂಬಾ ಹೆಮ್ಮೆಯೆಂದು ಕಾಣುತ್ತದೆ. ತೀ.ನಂ.ಶ್ರೀ.ಯವರು ನಿಧನರಾದ ದಿನ ಅಂದು ಬೆಳಿಗ್ಗೆಯೇ ಅವರು ವಿದೇಶ ಪ್ರವಾಸದಿಂದ ಬೆಂಗಳೂರಿಗೆ ಹಿಂತಿರುಗಿದ್ದರು. ಅವರು ವಿಮಾನ ನಿಲ್ದಾಣದಿಂದಲೆ ನಮ್ಮ ತಾಯಿಯವರಿಗೆ ಶೋಕ ಸೂಚಕ ತಂತಿಯನ್ನು ಕಳಿಸಿದ್ದರು (ಅನುಬಂಧ ೧೦).

೧೯೫೬ನೆಯ ಇಸವಿಯಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು. ಆ ಸಮಯದಲ್ಲಿ ತೀ.ನಂ.ಶ್ರೀ.ಯವರಿಗೆ ಶ್ರೀ ಮಂಜಪ್ಪನವರು ಅನಿರಿಕ್ಷಿತವಾಗಿ ಒಮ್ಮೆ ಭೇಟಿಯಾದಾಗ, ತಾವು ತೀ.ನಂ.ಶ್ರೀಯವರಿಗೆ ಕಾಲೇಜಿನಲ್ಲಿ ಶಿಷ್ಯರಾಗಿದ್ದರೆಂದು ತಿಳಿಸಿದರಂತೆ. ತೀ.ನಂ.ಶ್ರೀ.ಯವರು ನಿಧನದ ಸಂದರ್ಭದಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರು ಬರೆದ ಶೋಕಸೂಚನೆ ಪತ್ರದಲ್ಲಿ ಇದು ವ್ಯಕ್ತವಾಗುತ್ತದೆ (ಅನುಬಂಧ ೧೧).

೧೯೫೬-೫೭ರಲ್ಲಿ ಅಂದಿನ ರಾಜ್ಯಪಾಲರಾಗಿದ್ದ ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರು ಮತ್ತು ಮುಖ್ಯಮಂತ್ರಿಗಳಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರು ಇಬ್ಬರೂ ತಮ್ಮ ಶಿಷ್ಯರು ಎಂದು ತೀ.ನಂ.ಶ್ರೀ.ಯವರು ಮುಗುಳ್ನಗೆಯೊಡನೆ ಹೇಳಿದ್ದರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ

●

೧೯೫೧ನೆಯ ಇಸವಿಯಲ್ಲಿ ತೀ.ನಂ.ಶ್ರೀ.ಯವರು ಬೆಂಗಳೂರಿನ ಸರ್ಕಾರಿ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದರು. ಆ ವರ್ಷದಲ್ಲಿ ಆಗತಾನೇ ಪ್ರಾರಂಭವಾಗಿದ್ದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಥಮ ಕನ್ನಡ ಪ್ರಾಧ್ಯಾಪಕ ಹುದ್ದೆಯ ನೇಮಕಕ್ಕೆ ಅರ್ಜಿಗಳನ್ನು ಕರೆಯಲಾಯಿತು. ತೀ.ನಂ.ಶ್ರೀ.ಯವರ ಪ್ರಿಯ ಮಿತ್ರರಾದ ಶ್ರೀ ವಿ.ಜಿ. ಕುಲಕರ್ಣಿ ಅವರು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ರಾಗಿದ್ದರು. ಅವರಿಗೆ ತೀ.ನಂ.ಶ್ರೀ.ಯವರೇ ಈ ಹುದ್ದೆಗೆ ಅರ್ಹರು ಮತ್ತು ಅವರು ಅರ್ಜಿ ಹಾಕಬೇಕು ಎಂದು ಬಲವಂತದ ಪತ್ರಗಳನ್ನು ಬರೆದರು. ತೀ.ನಂ.ಶ್ರೀ.ಯವರಿಗೂ ಇನ್ನೂ ೪–೫ ವರ್ಷಗಳವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗುವ ಸಂಭವವಿರಲಿಲ್ಲ. ಆದರೆ ತೀ.ನಂ.ಶ್ರೀ.ಯವರಿಗೆ, ಶ್ರೀ ರಂ.ಶ್ರೀ. ಮುಗಳಿಯವರಿಗೆ ಸರಿಯಾದ ಕನ್ನಡ ಪ್ರಾಧ್ಯಾಪಕ ಹುದ್ದೆ ದೊರಕಿಲ್ಲ, ಅವರಿಗೆ ಈ ಹುದ್ದೆ ಸಿಗಬೇಕು ಎನ್ನುವ ಉದ್ದೇಶದಿಂದ ತಾವು ಅರ್ಜಿ ಹಾಕಲು ಇಷ್ಟವಿರಲಿಲ್ಲ. (ಏಕೆಂದರೆ ತಮ್ಮ ಅರ್ಜಿಯಿಂದ ಶ್ರೀ ರಂ.ಶ್ರೀ. ಮುಗಳಿಯವರಿಗೆ ಅದು ಅಡ್ಡಿಯಾಗಬಹುದೆಂದು.) ಆದರೆ ಅದು ಶ್ರೀ ಸ.ಸ. ಮಾಳವಾಡರಿಗೆ ದೊರಕುತ್ತದೆ; ರಂ.ಶ್ರೀ. ಮುಗಳಿಯವರಿಗೆ ಸಿಗುವುದಿಲ್ಲವಾದ್ದರಿಂದ ತೀ.ನಂ.ಶ್ರೀ.ಯವರು ಅರ್ಜಿಹಾಕಲೇ ಬೇಕೆಂದು ಶ್ರೀ.ವಿ.ಜಿ. ಕುಲಕರ್ಣಿ ಯವರಿಂದ ಮತ್ತೆ ಒತ್ತಾಯದ ಪತ್ರಗಳು ಬಂದವು. ಆದರೆ ಕೊನೆಯ ದಿನಾಂಕವಾದರೂ ತೀ.ನಂ.ಶ್ರೀ.ಯವರು ಅರ್ಜಿ ಹಾಕಲಿಲ್ಲ. ವಿ.ಜಿ. ಕುಲಕರ್ಣಿ ಯವರಿಗೆ ತೀ.ನಂ.ಶ್ರೀ.ಯವರ ಮೇಲೆ ಅಸಮಾಧಾನ. ಆದರೆ ಮತ್ತೆ ವಿಧಿಯ ವಿಲಾಸ. ಕರ್ನಾಟಕ ವಿಶ್ವವಿದ್ಯಾಲಯ ಅರ್ಜಿಹಾಕಬೇಕಾದ ದಿನವನ್ನು ಮುಂದಕ್ಕೆ ಹಾಕಿತು. ಆಗ ಶ್ರೀ ವಿ.ಜಿ. ಕುಲಕರ್ಣಿಯವರು ಅರ್ಜಿಫಾರಂಗಳೊಡನೆ ಸ್ವತಃ ಬೆಂಗಳೂರಿಗೆ ಬಂದು ತೀ.ನಂ.ಶ್ರೀ. ಯವರನ್ನು ಒಪ್ಪಿಸಿ, ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಹಾಕಿಸಿದರು. ತೀ.ನಂ.ಶ್ರೀ.ಯವರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಪ್ರಾಧ್ಯಾಪಕರಾಗಿ ೧೯೫೧ರಲ್ಲಿ ತಜ್ಞರ ಸಮಿತಿಯಿಂದ ಆಯ್ಕೆಯಾದರು. ಶ್ರೀ ವಿ.ಜಿ. ಕುಲಕರ್ಣಿಯವರು ನಿರೀಕ್ಷಿಸಿದ್ದಂತೆ ಸಮಿತಿಯವರು ಶ್ರೀ ಸ.ಸ. ಮಾಳವಾಡ ಅವರನ್ನು ಎರಡನೆಯ ಕ್ರಮಾಂಕವಾಗಿ ಮತ್ತು ಶ್ರೀ ರಂ.ಶ್ರೀ. ಮುಗಳಿ ಯವರನ್ನು ಮೂರನೆಯ ಕ್ರಮಾಂಕವಾಗಿ ಪಟ್ಟಿಯಲ್ಲಿ ಸೇರಿಸಿದ್ದರು.

ಈ ನೇಮಕ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಮಿತಿಯ ಒಪ್ಪಿಗೆಗೆ ಹೋಯಿತು. ಆಗ ಬೊಂಬಾಯಿ ಪ್ರಾಂತದ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ತಮ್ಮ ಅಧಿಕಾರದ

ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದ ಡಾ. ಡಿ.ಸಿ. ಪಾವಟೆಯವರು, ಇದಕ್ಕೆ ಶ್ರೀ ಸ.ಸ. ಮಾಳವಾಡ ಅವರು ನೇಮಕವಾಗಬೇಕು: ಹಾಗೆಂದು ಸಿಂಡಿಕೇಟ್ ಸಮಿತಿ ನಿರ್ಣಯ ಮಾಡಿದರೆ ಅದು ನೇಮಕ ಸಮಿತಿಯ ನಿರ್ಣಯಕ್ಕೆ ವಿರುದ್ಧವಾದುದರಿಂದ– ಇದಕ್ಕೆ ಬೇಕಾದ ಒಪ್ಪಿಗೆಯನ್ನು ವಿಶ್ವವಿದ್ಯಾಲಯದ ಕುಲಪತಿಗಳಿಂದ (ಬೊಂಬಾಯಿಯ ರಾಜ್ಯದ ರಾಜ್ಯಪಾಲರು) ತಾವು ಪಡೆದು ತಂದುಕೊಡುವುದಾಗಿ ತಿಳಿಸಿದರಂತೆ. ಆಗ ಉಪಕುಲಪತಿಗಳಾಗಿದ್ದ ಶ್ರೀ ಆರ್.ವಿ. ಜಹಗೀರ್‌ದಾರ್ ಅವರು (ಹಿಂದೆ ಬೊಂಬಾಯಿ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದವರು)

" I don't find any need for this and I don't allow this syndicate to pass any such resolution against the recommendeation of the Expert Selection Committee. If there is going to be a Professor of Kannada in the Karnatak University it will be Sri T.N. Sreekantiaya. Otherwise there will be no Professor of Kannada in the Karnatak University" ಎಂದು ಗುಡುಗಿದರಂತೆ. ಅನಂತರ ತೀ.ನಂ.ಶ್ರೀ.ಯವರ ನೇಮಕಕ್ಕೆ ಸಿಂಡಿಕೇಟ್ ಸಮಿತಿ ತನ್ನ ಒಮ್ಮತದ ಒಪ್ಪಿಗೆಯನ್ನು ನೀಡಿತು.

ತೀ.ನಂ.ಶ್ರೀ.ಯವರು ೧೯೫೨ನೆಯ ಇಸವಿಯ ಜನವರಿಯಲ್ಲಿ ಕರ್ನಾಟಕದ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಹುದ್ದೆಯನ್ನು ವಹಿಸಿಕೊಂಡರು. ತೀ.ನಂ.ಶ್ರೀ.ಯವರು ಧಾರವಾಡಕ್ಕೆ ತೆರಳಿದ ಸಂದರ್ಭದಲ್ಲಿ ಅವರ ಶಿಷ್ಯೆ ಮತ್ತು ಕನ್ನಡದ ಪ್ರಸಿದ್ಧ ಕಾದಂಬರಿಗಾರ್ತಿ ಶ್ರೀಮತಿ ಹೆಚ್.ವಿ. ಸಾವಿತ್ರಮ್ಮನವರು ೬–೨–೫೨ರಂದು ಬರೆದ ಪತ್ರ ಹಳೆಯ ಮೈಸೂರು ರಾಜ್ಯದ ತೀ.ನಂ.ಶ್ರೀ.ಯವರ ಅನೇಕ ಅಭಿಮಾನಿಗಳ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತದೆ. (ಅನುಬಂಧ ೧೨). ತೀ.ನಂ.ಶ್ರೀ. ಅವರಿಗೆ ಮೈಸೂರು ಸರ್ಕಾರದ ಹುದ್ದೆಗೆ ರಾಜೀನಾಮೆ ಕೊಟ್ಟು ಧಾರವಾಡಕ್ಕೆ ಹೋಗುವ ಮನಸ್ಸಿರಲಿಲ್ಲ. ಅದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಕೊಟ್ಟು ಎರಡು ವರ್ಷಗಳ ಎರವಲು ಸೇವೆಯ ಮೇಲೆ ಧಾರವಾಡಕ್ಕೆ ಹೋದರು. ೧೯೫೪ನೆಯ ಇಸವಿಗೆ ಎರಡು ವರ್ಷ ಮುಗಿದಾಗ ಡಾ. ಡಿ.ಸಿ. ಪಾವಟೆಯವರು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. ಆಗ ತಾನೆ ತೀ.ನಂ.ಶ್ರೀ.ಯವರು ಪ್ರಾರಂಭಿಸಿದ ಯೋಜನೆಗಳು ಮತ್ತು ಭಾಷಾಶಾಸ್ತ್ರದ ಕೆಲಸಗಳು (ಪುಣೆಯ ಡೆಕ್ಕನ್ ಕಾಲೇಜಿನ ಸಂಪರ್ಕದಿಂದ) ಫಲಕೊಡಲು ಪ್ರಾರಂಭವಾಗಿದ್ದರಿಂದ ಅವರಿಗೆ ತಕ್ಷಣ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಿಂತಿರುಗಿ ಬರಲು ಒಲವಿರಲಿಲ್ಲ. ಅದೂ ಅಲ್ಲದೆ ಮತ್ತೆ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಹಿಂತಿರುಗಬೇಕಾಗಿತ್ತು. ಆದ್ದರಿಂದ ಅವರ ಎರವಲು ಸೇವೆಯನ್ನು ಇನ್ನೂ ಮೂರು ವರ್ಷಗಳ ಕಾಲ ವಿಸ್ತರಿಸಬೇಕಾಗಿ ಮೈಸೂರು ವಿಶ್ವವಿದ್ಯಾಲಯವನ್ನು ಕೇಳಿಕೊಂಡರು. (ಈ ಸೌಲಭ್ಯವಿಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಂದಿನ ಆಡಳಿತ ವಾತಾವರಣದಲ್ಲಿ ಅನಿವಾರ್ಯವಾದ ಹೊರತು ಮುಂದುವರಿಯಲು ಅವರಿಗೆ ಉತ್ಸಾಹವಿರಲಿಲ್ಲ!) ಈ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಾಗ ಆಗಿನ ಮೈಸೂರಿನ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದ ಶ್ರೀ ಎಂ.ಪಿ.ಎಲ್.

ಶಾಸ್ತ್ರಿಯವರನ್ನು ಕಂಡಾಗ, ಆಗಿನ ಉಪಕುಲಪತಿಗಳಿಗೆ ಇದಕ್ಕೆ ವಿರೋಧವಿರುವುದರಿಂದ ಇದು ದೊರಕುವ ಸಂಭವವಿಲ್ಲ, ಆದರೂ ಪ್ರಯತ್ನ ಮಾಡುವುದಾಗಿ ತಿಳಿಸಿದ್ದರಂತೆ. ತೀ.ನಂ.ಶ್ರೀ. ಯವರು ಆಗ ಕೆಲವು ದಿನ ಅನಿಶ್ಚಿತ ಸ್ಥಿತಿಯಲ್ಲಿದ್ದರು. ಆದರೆ ಒಂದು ದಿನ ಶುಭವರ್ತಮಾನ ಬಂದು ಅವರಿಗೆ ೩ ವರ್ಷಕಾಲ ಎರವಲು ಸೇವೆ ವಿಸ್ತಾರವಾಗಿರುವ ವಿಷಯ ತಿಳಿದು ಅವರಿಗೆ ಆಶ್ಚರ್ಯ ಮತ್ತು ಸಂತೋಷವಾಯಿತು.

ಅನಂತರ ಬೆಂಗಳೂರಿಗೆ ಹೋಗಿದ್ದಾಗ ಶ್ರೀ ಎಂ.ಪಿ.ಎಲ್. ಶಾಸ್ತ್ರಿಯವರನ್ನು ಕಂಡಾಗ ಅವರು ಹೇಳಿದರಂತೆ:– "ನಾನು ಮೊದಲೇ ತಿಳಿಸಿದ್ದಂತೆ ಉಪಕುಲಪತಿಗಳಿಗೆ ಈ ವಿಷಯದಲ್ಲಿ ವಿರೋಧವಿತ್ತು. ಆದರೆ ಸಿಂಡಿಕೇಟ್ ಸಭೆ ನಡೆಯುತ್ತಿದ್ದಾಗ ಉಪಕುಲಪತಿಗಳಿಗೆ ಒಂದು ತುರ್ತು ಕರೆ ಬಂದು ಅವರು ಸಭೆಯನ್ನು ಮುಂದುವರಿಸುವಂತೆ ತಿಳಿಸಿ ಹೊರಗೆ ಹೋದರು. ಆಗ ಸಭೆಯ ಹಂಗಾಮಿ ಅಧ್ಯಕ್ಷತೆ ವಹಿಸಿದ್ದ ಇನ್ನೊಬ್ಬ ಹಿರಿಯ ಸದಸ್ಯರು, ಇನ್ನಾವುದಾದರೂ ವಿಷಯ ಚರ್ಚೆಗೆ ತೆಗೆದುಕೊಳ್ಳೋಣವೇ ಎಂದು ಕೇಳಿದಾಗ ನಾನು ನಿಮ್ಮ ವಿಷಯ ಎತ್ತಿದೆ. ಬೇರೆಯವರಿಗೆ ಈ ವಿಷಯದಲ್ಲಿ ಯಾವ ಆಕ್ಷೇಪಣೆಯೂ ಇಲ್ಲದ್ದರಿಂದ ಅದು ಕೂಡಲೆ ಒಪ್ಪಿಗೆಯಾಗಿ ಸಭೆಯ ದಾಖಲೆಗಳಲ್ಲಿ ಸೇರಿತು; ಅನಂತರ ಉಪಕುಲಪತಿಯವರು ಸಭೆಗೆ ಹಿಂತಿರುಗಿದಾಗ ಅವರು ಅಸಮಾಧಾನ ಮಾತ್ರ ವ್ಯಕ್ತಪಡಿಸಲು ಸಾಧ್ಯವಾಯಿತು."

ತೀ.ನಂ.ಶ್ರೀ.ಯವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ೫ ವರ್ಷ ಕನ್ನಡ ಪ್ರಾಧ್ಯಾಪಕರಾಗಿದ್ದು ಆ ಸಮಯದಲ್ಲಿ ಅವರ ಹೆಸರು ಕನ್ನಡ ಭಾಷೆ ಮತ್ತು ಭಾಷಾಶಾಸ್ತ್ರಗಳಿಗೆ ಸಂಬಂಧಪಟ್ಟಂತೆ ದೇಶ ವಿದೇಶಗಳಲ್ಲಿ ಪ್ರಸಿದ್ಧವಾಯಿತು. ಆಗ "ಕನ್ನಡ ಸಾಹಿತ್ಯದ ಇತಿಹಾಸ"ದ ಬಗ್ಗೆ ಒಂದು ಬೃಹತ್ ಯೋಜನೆ ರೂಪಿಸಿ ಕಾರ್ಯಪ್ರವೃತ್ತರಾಗಿದ್ದರು. ತೀ.ನಂ.ಶ್ರೀ.ಯವರಿಗೆ ಅವರು ಅಲ್ಲಿದ್ದ ವರ್ಷಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಾತಾವರಣ ಸುಖಕರವಾಗಿತ್ತೆಂದು ಹೇಳುವಂತಿಲ್ಲ. ಅವರು ಅಲ್ಲಿದ್ದ ೫ ವರ್ಷಗಳ ಕಾಲವೂ, ಅಷ್ಟೇ ಏಕೆ, ಅವರ ಜೀವಮಾನದ ಕಾಲ ಪೂರ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪರೀಕ್ಷೆಗಳಿಗೆ ಒಂದು ಬಾರಿಯೂ ಪರೀಕ್ಷಕರಾಗಿ ನೇಮಕಗೊಳ್ಳಲಿಲ್ಲ. ಇದು ಒಂದು ವಿಪರ್ಯಾಸವೇ ಸರಿ! ಬಹುಶಃ ಯಾವುದೇ ವಿಶ್ವವಿದ್ಯಾಲಯದಲ್ಲಿ ಒಂದು ವಿಷಯದ ಪ್ರಾಧ್ಯಾಪಕ ಮತ್ತು ಮುಖ್ಯಾಧಿಕಾರಿಯಾಗಿ ಆ ವಿಷಯದ ಸ್ನಾತಕೋತ್ತರ ಪರೀಕ್ಷೆಗೆ ಪರೀಕ್ಷಕ ಆಗದಿರುವ ದೃಷ್ಟಾಂತ ತೀ.ನಂ.ಶ್ರೀ.ಯವರಿಗೆ ಮೀಸಲಾಗಿತ್ತೆಂದು ಕಾಣುತ್ತದೆ!

ತೀ.ನಂ.ಶ್ರೀ.ಯವರು ಕರ್ನಾಟಕ ವಿಶ್ವವಿದ್ಯಾಲಯದ ಮೊದಲ ಮೂರು ವರ್ಷಗಳ ಕಾಲದಲ್ಲಿ ಅವರ ಡೆಕ್ಕನ್ ಕಾಲೇಜು ಮತ್ತು ಭಾಷಾಶಾಸ್ತ್ರ ವಿದ್ವಾಂಸರುಗಳ ಸಂಪರ್ಕ ತುಂಬಾ ಚೆನ್ನಾಗಿ ಬೆಳೆಯಿತು. ಅದರಂತೆ ೧೯೫೫ರಲ್ಲಿ ಅಮೆರಿಕದ ರಾಕಿಫೆಲ್ಲರ್ ಪ್ರತಿಷ್ಠಾನದಿಂದ ಫೆಲೋಶಿಪ್ ಆಹ್ವಾನ ಬಂದಿತು. ಅವರೇ ಭಾರತದಲ್ಲಿ ಮನೆಯವರಿಗೆ ಸಂಬಳ ಮತ್ತು ಅಮೆರಿಕದಲ್ಲಿ ತೀ.ನಂ.ಶ್ರೀ.ಯವರಿಗೆ ಫೆಲೋಶಿಪ್ ಇತ್ಯಾದಿಗಳನ್ನು ಕೊಡುವುದಾಗಿ ಹೇಳಿದರು. ವಿಶ್ವವಿದ್ಯಾಲಯ ಕೇವಲ ಸಂಬಳರಹಿತ ಸುಮಾರು ಒಂದು ವರ್ಷಕಾಲ ರಜೆ ಕೊಡಬೇಕಾಗಿತ್ತು, ಅಷ್ಟೆ. ಕನ್ನಡ ಸಾಹಿತ್ಯ ಮತ್ತು ವಿದ್ವತ್ ಪ್ರಪಂಚಕ್ಕೆ ಸಂಬಂಧಪಟ್ಟಂತೆ ಮೂರು ನಾಲ್ಕು

ಕನ್ನಡಿಗರು ಮಾತ್ರ ಆ ವೇಳೆಗೆ ವಿದೇಶಕ್ಕೆ ಹೋಗಿ ಬಂದಿದ್ದರು. ಆದರೆ ಯಾರೂ ವಿದೇಶದ ಸಂಸ್ಥೆಗಳ ಆಹ್ವಾನದ ಮೇಲೆ ಹೋಗಿರಲಿಲ್ಲವೆಂದು ತಿಳಿದುಬರುತ್ತದೆ. ಆದ್ದರಿಂದ ತೀ.ನಂ.ಶ್ರೀ. ಯವರಿಗೆ ಬಂದಿದ್ದ ಆಹ್ವಾನ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂದ ಮೊದಲ ಗೌರವವಾಗಿತ್ತು.

ಆದರೂ ಅಂದಿನ ಉಪಕುಲಪತಿಗಳಾಗಿದ್ದ ಡಾ.ಡಿ.ಸಿ. ಪಾವಟೆಯವರು ಇದಕ್ಕೆ ಸುಲಭವಾಗಿ ಒಪ್ಪಲಿಲ್ಲ. ಡೆಕ್ಕನ್ ಕಾಲೇಜಿನ ಅಂದಿನ ನಿರ್ದೇಶಕರಾಗಿದ್ದ ಡಾ. ಎಸ್.ಎಂ. ಕತ್ರೆಯವರು ಸ್ವತಃ ಈ ವಿಷಯದಲ್ಲಿ ಡಾ.ಡಿ.ಸಿ. ಪಾವಟೆಯವರಿಗೆ ಮನವಿ ಮಾಡಿಕೊಂಡ ಪತ್ರದ ಮತ್ತು ದೂರವಾಣಿಯ ಕೋರಿಕೆಗಳು ಸಫಲವಾಗಲಿಲ್ಲ. ಆದ್ದರಿಂದ ಡಾ. ಕತ್ರೆಯವರು ಅವರ ಅನೇಕ ಕಾರ್ಯಬಾಹುಳ್ಯದ ಮಧ್ಯೆಯೂ ಬಿಡುವು ಮಾಡಿಕೊಂಡು ಧಾರವಾಡಕ್ಕೆ ಒಂದು ದಿನ ಬಂದು ಡಾ. ಪಾವಟೆಯವರನ್ನು ಭೇಟಿ ಮಾಡಿ ಅವರ ಮನ ಒಲಿಸಬೇಕಾಯಿತು. (ಈ ಸಮಯದಲ್ಲೆ ಶ್ರೀ ಆರ್.ಸಿ. ಹಿರೇಮಠ ಅವರನ್ನು ರಾಕಿಫೆಲ್ಲರ್ ಪ್ರತಿಷ್ಠಾನದ ಯೋಜನೆಯಲ್ಲಿ ಮುಂದೆ ಅಮೆರಿಕಕ್ಕೆ ಕಳಿಸಬೇಕೆನ್ನುವ ಆಶ್ವಾಸನೆಯನ್ನು ಡಾ. ಪಾವಟೆಯವರು ಡಾ. ಕತ್ರೆ ಯವರಿಂದ ಪಡೆದ ನಂತರ ತೀ.ನಂ.ಶ್ರೀ.ಯವರಿಗೆ ರಜ ಕೊಡಲು ಒಪ್ಪಿದರೆಂದು ನಮ್ಮ ತಂದೆಯವರೇ ನನಗೆ ತಿಳಿಸಿದ್ದರು. ಅದರಂತೆ ಶ್ರೀ ಆರ್.ಸಿ. ಹಿರೇಮಠ ಅವರನ್ನೂ ಅನಂತರ ಅಮೆರಿಕೆಗೆ ಕಳಿಸಲಾಯಿತು.) ಇದ್ದಕ್ಕೆ ಸಂಬಂಧಪಟ್ಟಂತೆ ಡಾ. ಕತ್ರೆಯವರು, ಡಾ. ಪಾವಟೆ ಅವರಿಗೆ ಮತ್ತು ರಾಕಿಫೆಲ್ಲರ್ ಪ್ರತಿಷ್ಠಾನದ ಉಪನಿರ್ದೇಶಕರಾದ ಶ್ರೀ ಗಿಲ್‌ಪ್ಯಾಟ್ರಿಕ್ ಅವರಿಗೆ ಬರೆದ ಪತ್ರಗಳಿಂದ ಅವರ ತೀವ್ರ ಪ್ರಯತ್ನದ ಕೆಲವು ಅಂಶಗಳು ವ್ಯಕ್ತವಾಗುತ್ತದೆ. ಮತ್ತು ಡಾ. ಪಾವಟೆಯವರ ಪತ್ರವೂ ಪ್ರಸ್ತುತವಾಗಿದೆ (ಅನುಬಂಧಗಳು ೧೩ರಿಂದ ೧೬).

೧೯೫೮ರ ಜೂನ್‌ನಲ್ಲಿ ವಿದೇಶಕ್ಕೆ ಪ್ರಯಾಣ ಬೆಳೆಸಿದ ತೀ.ನಂ.ಶ್ರೀ.ಯವರು ೧೯೫೯ರ ಏಪ್ರಿಲ್‌ನಲ್ಲಿ ಧಾರವಾಡಕ್ಕೆ ಹಿಂತಿರುಗಿದರು. ಅನೇಕ ಮಿತ್ರರುಗಳು ತೀ.ನಂ.ಶ್ರೀ.ಯವರನ್ನು ರೈಲ್ವೆ ನಿಲ್ದಾಣದಿಂದ ಬೀಳ್ಕೊಟ್ಟರೂ ತೀ.ನಂ.ಶ್ರೀ.ಯವರ ಈ ಪ್ರಯಾಣದ ಬಗ್ಗೆ ಧಾರವಾಡ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ತೋರಿಸಿದ ಅನಾಸಕ್ತಿ ಶ್ರೀ ರಂ.ಶ್ರೀ ಮುಗಳಿಯವರು ತೀ.ನಂ.ಶ್ರೀ.ಯವರಿಗೆ ಅಮೆರಿಕೆಗೆ ಬರೆದ ಪತ್ರದ ಒಂದು ಭಾಗದಿಂದ ವ್ಯಕ್ತವಾಗುತ್ತದೆ (ಅನುಬಂಧ ೧೭).

೧೯೫೭ನೆಯ ಇಸವಿಯಲ್ಲಿ ತೀ.ನಂ.ಶ್ರೀ.ಯವರು ಮೈಸೂರಿಗೆ ಹಿಂತಿರುಗಿದ ನಂತರ ಕರ್ನಾಟಕ ವಿಶ್ವವಿದ್ಯಾಲಯ ಅವರನ್ನು ಪೂರ್ತಿಯಾಗಿ ಮರೆಯಿತೆಂದೇ ಹೇಳಬಹುದು. ಅವರ ವಿಶ್ವವಿದ್ಯಾಲಯದ ಸಂಪರ್ಕದ ಕುರುಹಾಗಿ ಅಲ್ಲಿ ಯಾವ ಸಂಕೇತಗಳೂ ಇರಲಿಲ್ಲ. ಈಗ ಕೆಲವು ವರ್ಷಗಳ ಹಿಂದೆ ಅಲ್ಲಿಯ ಕನ್ನಡ ಅಧ್ಯಯನ ಪೀಠದಲ್ಲಿ ತೀ.ನಂ.ಶ್ರೀ.ಯವರ ಛಾಯಾಚಿತ್ರವನ್ನು ಇಡಲಾಗಿದೆ. ಇದೂ ಕೂಡ ಸಾಧ್ಯವಾದುದು ಅಲ್ಲಿ ಉಪಕುಲಪತಿಗಳಾಗಿದ್ದ ತೀ.ನಂ.ಶ್ರೀ.ಯವರ ಒಬ್ಬ ಅಭಿಮಾನಿಗಳಿಂದ. ಈ ವಿಷಯವನ್ನು ಆ ಉಪಕುಲಪತಿಗಳೇ ನನಗೆ ತಿಳಿಸಿದ್ದರು.

ಮೈಸೂರಿಗೆ ಹಿಂತಿರುಗಿದ ನಂತರ ತೀ.ನಂ.ಶ್ರೀ.ಯವರು ಧಾರವಾಡಕ್ಕೆ ಹೋದುದು ಒಂದು ಬಾರಿ ಮಾತ್ರ. ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕ

ಹುದ್ದೆಯನ್ನು ತ್ಯಜಿಸಿದ ನಂತರ ಆ ಹುದ್ದೆಗೆ ಮತ್ತೆ ಅರ್ಜಿಗಳನ್ನು ಕರೆಯಲಾಯಿತು. ಅದಕ್ಕೆ ಅಲ್ಲಿ ರೀಡರ್ ಆಗಿದ್ದ ಶ್ರೀ ಆರ್.ಸಿ. ಹಿರೇಮಠ ಮತ್ತು ಸಾಂಗ್ಲಿಯದಲ್ಲಿದ್ದ ಶ್ರೀ ರಂ.ಶ್ರೀ.ಮುಗಳಿ ಅವರೂ ಅರ್ಜಿ ಹಾಕಿದ್ದರು. ನೇಮಕ ಸಮಿತಿಯಲ್ಲಿ ಕುಲಪತಿಗಳ (ಅಂದಿನ ರಾಜ್ಯಪಾಲರಾದ ಮೈಸೂರು ಮಹಾರಾಜರ) ಪ್ರತಿನಿಧಿಯಾಗಿ, ಮೈಸೂರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ರಾಗಿದ್ದ ತೀ.ನಂ.ಶ್ರೀ.ಯವರು ಸದಸ್ಯರಾಗಿದ್ದರು. ಡಾ. ಪಾವಟೆಯವರು ಮತ್ತು ಸಮಿತಿಯ ಇತರ ಸದಸ್ಯರು ಶ್ರೀ ಆರ್.ಸಿ. ಹಿರೇಮಠ ಅವರಿಗೆ ಪ್ರಾಧ್ಯಾಪಕ ಹುದ್ದೆ ಕೊಡಬೇಕೆಂದು ಅಭಿಪ್ರಾಯಪಟ್ಟಾಗ ಅವರಿಗಿಂತ ಎಲ್ಲಾ ರೀತಿಯಲ್ಲೂ ಹೆಚ್ಚಿನ ಅರ್ಹತೆಯಿರುವ ಶ್ರೀ ರಂ.ಶ್ರೀ. ಮುಗಳಿಯವರಿಗೆ ಕೊಡಬೇಕೆಂದು ತೀ.ನಂ.ಶ್ರೀ. ಪ್ರತಿಪಾದಿಸಿದರು. ಸಮಿತಿಯವರು ಅದನ್ನು ಸಮ್ಮತಿಸದಿದ್ದಾಗ ತೀ.ನಂ.ಶ್ರೀ.ಯವರು ಅವರ 'ಅಸಮ್ಮತಿ ಟಿಪ್ಪಣಿ' (Note of dissent) ಬರೆದು ಸಮಿತಿಯ ನಿರ್ಧಾರಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಿ ಶ್ರೀ ರಂ.ಶ್ರೀ. ಮುಗಳಿಯರಿಗೆ ಈ ಹುದ್ದೆ ದೊರೆಯಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದರು. ಆದರೆ ಸಮಿತಿಯ ಬಹುಮತದ ಅಭಿಪ್ರಾಯದಂತೆ ಶ್ರೀ ಆರ್.ಸಿ. ಹಿರೇಮಠ ಅವರು ಪ್ರಾಧ್ಯಾಪಕರಾಗಿ ನೇಮಕವಾದರು. ಇದು ಸಿಂಡಿಕೇಟ್‌ನ ಒಪ್ಪಿಗೆಗೆ ಹೋದಾಗ ಡಾ. ಡಿ.ಸಿ. ಪಾವಟೆಯವರು ನೇಮಕದ ಬಗ್ಗೆ ತಿಳಿಸಿದರು. ಆದರೆ ಇದರ ಪೂರ್ಣ ವಿವರಗಳು ಬೇಕೆಂದು ಕೆಲವು ಸದಸ್ಯರು ಒತ್ತಾಯಿಸಿದಾಗ ಉಪಕುಲಪತಿಯವರು ಮುಜುಗರದೊಂದಿಗೆ ತೀ.ನಂ.ಶ್ರೀ.ಯವರ ಅಸಮ್ಮತಿ ಟಿಪ್ಪಣಿಯನ್ನು ಓದಬೇಕಾಯಿತು. ಈ ವಿಷಯ ಅನೇಕ ದಿನಗಳವರೆಗೆ ತೀ.ನಂ.ಶ್ರೀ. ಯವರ ಧೈರ್ಯ ಮತ್ತು ವಿದ್ವತ್ ಪಕ್ಷಪಾತಕ್ಕಾಗಿ ಧಾರವಾಡದಲ್ಲಿ ಪ್ರಚಲಿತವಾಗಿತ್ತು.

ಶ್ರೀ ಆರ್.ಸಿ. ಹಿರೇಮಠ ಅವರು ಪ್ರಾಧ್ಯಾಪಕ ಹುದ್ದೆಯನ್ನು ವಹಿಸಿಕೊಂಡ ನಂತರ ರೀಡರ್ ಹುದ್ದೆ ಖಾಲಿಯಾಗಿ ಅದರ ನೇಮಕಕ್ಕೆ ಅರ್ಜಿಗಳನ್ನು ಕರೆಯಲಾಯಿತು. ಅದಕ್ಕೆ ಅರ್ಜಿ ಹಾಕಿದವರಲ್ಲಿ ಶ್ರೀ ಜಿ.ಎಸ್. ಶಿವರುದ್ರಪ್ಪನವರು ಮತ್ತು ಶ್ರೀ ಎಂ.ಎಸ್. ಸುಂಕಾಪುರ ಅವರು ಇದ್ದರು. ಡಾ. ಪಾವಟೆ ಮತ್ತು ಶ್ರೀ ಹಿರೇಮಠ ಅವರಿಗೆ ಶ್ರೀ ಎಂ.ಎಸ್. ಸುಂಕಾಪುರ ಅವರನ್ನು ನೇಮಕ ಮಾಡಿಕೊಳ್ಳಬೇಕೆಂಬ ಒಲವು ಇತ್ತು. ಹಿಂದಿನ ಸಂದರ್ಭವನ್ನು ನೋಡಿ ಇದಕ್ಕೆ ತೀ.ನಂ.ಶ್ರೀ.ಯವರು ಒಪ್ಪದಿರಬಹುದೆಂದು ಭಾವಿಸಿ ಡಾ. ಪಾವಟೆಯವರು ಕುಲಪತಿಗಳಿಗೆ ಬಿನ್ನವಿಸಿ ಅವರ ಪ್ರತಿನಿಧಿಯಾಗಿ ತೀ.ನಂ.ಶ್ರೀ.ಯವರನ್ನಲ್ಲದೆ ಬೇರೆ ಯಾರನ್ನಾದರೂ ನೇಮಕ ಸಮಿತಿಗೆ ಕಳಿಸಬೇಕೆಂದು ಕೋರಿದ್ದರು. ಅದಕ್ಕನುಗುಣವಾಗಿ ಕುಲಪತಿಗಳಾದ ರಾಜ್ಯಪಾಲರು ಪ್ರೊ|| ಡಿ.ಎಲ್. ನರಸಿಂಹಾಚಾರ್ ಅವರನ್ನು ಅವರ ಪ್ರತಿನಿಧಿಯಾಗಿ ಕಳಿಸಿದರು. ಡಿ.ಎಲ್.ಎನ್. ಅವರು ಸಭೆಗೆ ಹೋಗುವ ಮೊದಲು ತೀ.ನಂ.ಶ್ರೀ. ಮತ್ತು ಅವರು ಮಾತನಾಡಿ ಈ ಹುದ್ದೆಗೆ ಶ್ರೀ ಜಿ.ಎಸ್. ಶಿವರುದ್ರಪ್ಪನವರು ಎಲ್ಲರಿಗಿಂತಲೂ ಅರ್ಹರು ಎಂದು ನಿರ್ಧರಿಸಿ ಆ ರೀತಿ ಮಾಡುವುದಾಗಿ ಡಿ.ಎಲ್.ಎನ್. ಹೇಳಿ ಹೋದರು. ಆದರೆ ಧಾರವಾಡದಲ್ಲಿ ಸಮಿತಿಯ ಒತ್ತಡಕ್ಕೆ ಮಣಿದು ಶ್ರೀ ಎಂ.ಎಸ್. ಸುಂಕಾಪುರ ನೇಮಕಕ್ಕೆ ಒಪ್ಪಿಗೆ ಕೊಟ್ಟು ಹಿಂತಿರುಗಿದರು.

ಪ್ರಾಧ್ಯಾಪಕರಾಗಿ ಮೈಸೂರಿಗೆ

●

೧೯೩೩–೩೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ (ಮಹಾರಾಜ ಕಾಲೇಜಿನಲ್ಲಿ) ಇನ್ನೊಂದು ಕನ್ನಡ ಪ್ರಾಧ್ಯಾಪಕ ಹುದ್ದೆಗೆ ಅನುಮತಿ ದೊರಕಿತು. (ಕುವೆಂಪು ಅವರು ಆಗಲೇ ಕನ್ನಡ ಪ್ರಾಧ್ಯಾಪಕರು ಮತ್ತು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು.) ಈ ಹುದ್ದೆ ಸೃಷ್ಟಿಯಾಗುತ್ತದೆಂದು ಒಂದೆರಡು ವರ್ಷಗಳಿಂದ ಸುದ್ದಿಯಲ್ಲಿತ್ತು. ಶ್ರೀ ವಿ. ಸೀತಾರಾಮಯ್ಯನವರು ಅಸಿಸ್ಟೆಂಟ್ ಪ್ರೊಫೆಸರಾಗಿ ೧೯೩೪ರಲ್ಲಿ ನಿವೃತ್ತಿಯಾಗುವ ಮೊದಲೇ ಈ ಹುದ್ದೆ ಅಸ್ತಿತ್ವಕ್ಕೆ ಬಂದು, ಅದು ವಿ.ಸೀ. ಅವರಿಗೆ ದೊರಕಿ ಅವರು ಪ್ರೊಫೆಸರ್ ಆಗಿ ನಿವೃತ್ತರಾಗಬೇಕೆಂಬ ಅಭಿಲಾಷೆ ತೀ.ನಂ.ಶ್ರೀ. ಮತ್ತು ಅವರ ಅನೇಕ ಸ್ನೇಹಿತರಿಗಿತ್ತು. ಆದರೆ ದುರದೃಷ್ಟವಶಾತ್ ಅದು ಆಗಿರಲಿಲ್ಲ.

ಈ ಹುದ್ದೆ ಪ್ರಕಟವಾದಾಗ ತೀ.ನಂ.ಶ್ರೀ.ಯವರು ವಿದೇಶ ಪ್ರವಾಸದಲ್ಲಿದ್ದರು. ತೀ.ನಂ.ಶ್ರೀ.ಯವರು ಸಹಜವಾಗಿಯೇ ಇದಕ್ಕೆ ಅರ್ಜಿ ಹಾಕಬೇಕಾಗಿತ್ತು. ಕುವೆಂಪು, ಡಿ.ಎಲ್.ಎನ್. ಮತ್ತು ಇವರ ಅಭಿಮಾನಿಗಳೆಲ್ಲರಿಗೂ ತೀ.ನಂ.ಶ್ರೀ.ಯವರು ಮೈಸೂರಿಗೆ ಪ್ರಾಧ್ಯಾಪಕರಾಗಿ ಹಿಂತಿರುಗಬೇಕೆಂದು ಅಭಿಲಾಷೆ ಇತ್ತು. ಈ ಸಂದರ್ಭದಲ್ಲಿ ಮೈಸೂರಿನಿಂದ ಡಿ.ಎಲ್.ಎನ್, ನಂ. ಶಿವರಾಮಶಾಸ್ತ್ರಿ, ಕೂಡಲಿ ಚಿದಂಬರಂ ಮುಂತಾದ ಸ್ನೇಹಿತರುಗಳ ಒತ್ತಾಯ ಪತ್ರಗಳು ಅವರಿಗೆ ಹೋದವು. ಈ ಪ್ರಾಧ್ಯಾಪಕ ಸ್ಥಾನಕ್ಕೆ ನೇಮಕದ ಸಂದರ್ಭದಲ್ಲಿ ಮೈಸೂರಿನಿಂದ ಅಮೆರಿಕದಲ್ಲಿದ್ದ ತೀ.ನಂ.ಶ್ರೀ.ಯವರಿಗೆ ಅವರ ಸ್ನೇಹಿತರುಗಳಾದ ನಂ. ಶಿವರಾಮಶಾಸ್ತ್ರಿಗಳು ಮತ್ತು ಡಿ.ಎಲ್. ನರಸಿಂಹಾಚಾರ್ಯ ಅವರಿಂದ ಬಂದ ಕೆಲವು ಪತ್ರಗಳ ಭಾಗದಿಂದ ಈ ವಿಷಯದ ಬಗ್ಗೆ ವಿವರಗಳು ಗೊತ್ತಾಗುತ್ತವೆ. ಈ ಪತ್ರಗಳಿಂದ ನಂ. ಶಿವರಾಮಶಾಸ್ತ್ರಿಗಳು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ನೇಮಕವಾದುದಕ್ಕೆ ಸಂಬಂಧಪಟ್ಟ ವಿಷಯಗಳೂ ತಿಳಿಯುತ್ತವೆ. ನಂ. ಶಿವರಾಮಶಾಸ್ತ್ರಿಗಳು ಸಂಸ್ಕೃತ ಪ್ರಾಧ್ಯಾಪಕರಾಗಿ ನೇಮಕವಾದ ವಿಷಯ ತಿಳಿದು ತಮಗೆ ಆದ ಸಂತೋಷವನ್ನು ತೀ.ನಂ.ಶ್ರೀ.ಯವರು ನನ್ನ ಅಕ್ಕನಿಗೆ ಬರೆದ ಪತ್ರದಲ್ಲೂ ತಿಳಿಸಿದ್ದಾರೆ (ಅನುಬಂಧಗಳು ೧೮ರಿಂದ ೨೩).

ತೀ.ನಂ.ಶ್ರೀ.ಯವರು ಈ ಸ್ಥಾನಕ್ಕೆ ಅರ್ಜಿಯನ್ನು ಅಮೆರಿಕೆಯಿಂದಲೇ ಕಳಿಸಿದರು. ಈ ಸ್ಥಾನಕ್ಕೆ ತೀ.ನಂ.ಶ್ರೀ.ಯವರ ಗೈರುಹಾಜರಿಯಲ್ಲೇ ೧೯೩೭ರ ಫೆಬ್ರುವರಿ ತಿಂಗಳಿನಲ್ಲಿ ಸಂದರ್ಶನ ನಡೆದು ಅವರು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ನೇಮಕವಾದರು. ಈ

ಸಂದರ್ಭದಲ್ಲಿ ಶ್ರೀ ಎಂ.ಪಿ.ಎಲ್. ಶಾಸ್ತ್ರಿ ಅವರು (ಆಗಿನ ವಿಧಾನಪರಿಷತ್ ಸದಸ್ಯರು) ಬರೆದ ಪತ್ರದಿಂದ ಅವರಿಗೆ ಮತ್ತು ವಿಶ್ವವಿದ್ಯಾಲಯದ ಸಮಿತಿಗೆ ಆದ ಸಂತೋಷವನ್ನು ತಿಳಿಸುತ್ತದೆ (ಅನುಬಂಧ ೨೬).

ತೀ.ನಂ.ಶ್ರೀ.ಯವರು ೧೯೫೬ರ ಏಪ್ರಿಲ್ ತಿಂಗಳಿನಲ್ಲಿ ಭಾರತಕ್ಕೆ ಹಿಂತಿರುಗಿ ಅವರ ಎರವಲು ಸೇವೆ ಮುಗಿದು ಮೈಸೂರಿಗೆ ಹಿಂತಿರುಗುವುದಕ್ಕೆ ೧೯೫೭ನೇ ಜನವರಿತನಕ ಕಾಲವಕಾಶವಿತ್ತು. ಆದ್ದರಿಂದ ಈ ಸಮಯದಲ್ಲಿ ಡಿ.ಎಲ್.ಎಸ್. ಅವರು ತಾತ್ಕಾಲಿಕವಾಗಿ ಈ ಪ್ರೊಫೆಸರ್ ಹುದ್ದೆಯನ್ನು ವಹಿಸಿಕೊಂಡು ಕನ್ನಡ ನಿಘಂಟು ಕಚೇರಿಯಿಂದ ಮೈಸೂರಿಗೆ ಹಿಂತಿರುಗಿದರು.

ಈ ಪ್ರಾಧ್ಯಾಪಕ ಹುದ್ದೆಯ ಸಂಬಳದ ಗ್ರೇಡ್ ರೂ. ೪೦೦/- ರಿಂದ ೭೦೦/- ವರೆಗೆ ಇತ್ತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಆಗಲೇ ತೀ.ನಂ.ಶ್ರೀ.ಯವರಿಗೆ ರೂ. ೮೦೦/-ಕ್ಕೂ ಮಿಗಿಲಾದ ಸಂಬಳ ಬರುತ್ತಿದ್ದುದರಿಂದ, ಈಗ ರೂ. ೬೫೦/- ಪ್ರಾರಂಭ ಸಂಬಳ ಕೊಡಬೇಕೆಂದು ಸರ್ಕಾರದಿಂದ ಒಪ್ಪಿಗೆಯಾಗಿ ಬಂತು. ಆದರೆ ೧೯೫೬ ವರ್ಷದಲ್ಲಿ ಕುವೆಂಪು ಅವರು ಇನ್ನು ಪ್ರಾಧ್ಯಾಪಕರಾಗಿದ್ದುದರಿಂದ ತೀ.ನಂ.ಶ್ರೀ.ಯವರು ತಾವು ಇನ್ನೊಂದು ಪ್ರಾಧ್ಯಾಪಕ ಹುದ್ದೆಗೆ ಮೈಸೂರಿಗೆ ಹಿಂತಿರುಗಿದರೆ ಡಿ.ಎಲ್.ಎನ್. ಅವರಿಗೆ ತೊಂದರೆಯಾಗುವುದರಿಂದ, ತಾವು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಾತಾವರಣ ಅಷ್ಟು ಸುಖಕರವಲ್ಲದಿದ್ದರೂ ಮುಂದುವರೆಯುವ ಬಗ್ಗೆ ಗಂಭೀರವಾಗಿ ಯೋಚಿಸುತ್ತಿದ್ದರು. ಆದರೆ ಆ ಸಮಯದಲ್ಲಿ ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡದ್ದರಿಂದ ಅವರ ಪ್ರಾಧ್ಯಾಪಕ ಹುದ್ದೆ ತೆರವಾಗಿ ಡಿ.ಎಲ್.ಎನ್. ಅವರಿಗೆ ಆ ಹುದ್ದೆಗೆ ಬಡ್ತಿ ದೊರೆತು, ಅವರೂ ಕೂಡ ಖಾಯಂ ಆಗಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕವಾದರು. ಇದರಿಂದ ತೀ.ನಂ.ಶ್ರೀ.ಯವರಿಗೆ ತುಂಬಾ ಸಂತೋಷವಾಗಿ ಅವರು ಮೈಸೂರಿಗೆ ಹಿಂತಿರುಗಲು ದೃಢನಿರ್ಧಾರ ತೆಗೆದುಕೊಳ್ಳಲು ಅನುಕೂಲವಾಯಿತು.

ಕುವೆಂಪು ಅವರು ಉಪಕುಲಪತಿಗಳಾದ ನಂತರ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆ ತೆರವಾಯಿತು. ಆ ಜಾಗಕ್ಕೆ ತಾತ್ಕಾಲಿಕವಾಗಿ ಅಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಪ್ರೊ॥ ಸಿ.ಡಿ. ನರಸಿಂಹಯ್ಯನವರು ನೇಮಕವಾದರು. ಆದರೆ ಸೇವೆಯಲ್ಲಿ ಹಿರಿಯರಾದ ಮತ್ತು ಎಲ್ಲರ ಗೌರವಗಳಿಗೂ ಪಾತ್ರರಾಗಿದ್ದ ತೀ.ನಂ.ಶ್ರೀ.ಯವರನ್ನು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕ ಮಾಡಬೇಕೆಂದು ಕುವೆಂಪು ಅವರಿಗೂ ಮತ್ತು ಈ ರೀತಿ ಆಗಬೇಕೆಂದು ವಿಶ್ವವಿದ್ಯಾಲಯದಲ್ಲಿದ್ದ ಅನೇಕ ತೀ.ನಂ.ಶ್ರೀ. ಅಭಿಮಾನಿಗಳಿಗೂ ತುಂಬಾ ಆಶೆಯಿತ್ತು. ಆ ಸಂದರ್ಭದಲ್ಲಿ ತೀ.ನಂ.ಶ್ರೀ.ಯವರಿಗೆ ಬಂದ ಪತ್ರಗಳು ಆಗಿನ ಪರಿಸ್ಥಿತಿಯನ್ನು ತಿಳಿಸುತ್ತವೆ (ಅನುಬಂಧಗಳು ೨೭ರಿಂದ ೨೯). ಆದರೆ ತೀ.ನಂ.ಶ್ರೀ.ಯವರು ಬೆಂಗಳೂರು, ಮೈಸೂರಿಗೆ ಬಂದು ಯಾರನ್ನು ನೋಡಲೂ ಇಲ್ಲ ಮತ್ತು ಯಾವ ಪ್ರಯತ್ನವನ್ನು ಮಾಡಲಿಲ್ಲ. ಮತ್ತೆ ಸಂಬಂಧಪಟ್ಟ ಸಮಿತಿಗಳಲ್ಲಿ ವೋಟಿನ ಬಾಹುಳ್ಯದಿಂದ ತೀ.ನಂ.ಶ್ರೀ.ಯವರ ಶಿಷ್ಯರಾಗಿದ್ದ

ಪ್ರೊ॥ ಸಿ.ಡಿ. ನರಸಿಂಹಯ್ಯನವರು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿ ಖಾಯಂ ಆಗಿ ನೇಮಕವಾದರು.

ತೀ.ನಂ.ಶ್ರೀ.ಯವರು ೧೯೫೭ರ ಜನವರಿಯಲ್ಲಿ ಅವರ ಅಪಾರ ಸಹೋದ್ಯೋಗಿಗಳು, ಶಿಷ್ಯರು, ಅಭಿಮಾನಿಗಳ ಓಲಗ ಮತ್ತು ತೋರಣಗಳ ಸ್ವಾಗತದೊಡನೆ ತಮ್ಮ ಮಾತೃಶಾಲೆ ಮಹಾರಾಜ ಕಾಲೇಜಿಗೆ ಪ್ರಾಧ್ಯಾಪಕರಾಗಿ ಹಿಂತಿರುಗಿದರು.

೧೯೫೭ ಜನವರಿಯಿಂದ ಸುಮಾರು ಮೂರು ವರ್ಷಗಳ ಕಾಲ ತೀ.ನಂ.ಶ್ರೀ.ಯವರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಈ ಮಧ್ಯದಲ್ಲಿ ತಾತ್ಕಾಲಿಕವಾಗಿ ಅವರು ಯು.ಜಿ.ಸಿ. ಪ್ರಾಧ್ಯಾಪಕರಾಗಿ ನೇಮಕವಾದರು. ಕನ್ನಡ ಪ್ರೊಫೆಸರಾಗಿ ವಿಧ್ಯುಕ್ತವಾಗಿ ಆಯ್ಕೆಗೊಂಡು ೧೯೬೦ರಲ್ಲಿ ಕನ್ನಡ ಸ್ನಾತಕೋತ್ತರ ಬೋಧನೆ ಮತ್ತು ಸಂಶೋಧನೆ ವಿಭಾಗದ ಮುಖ್ಯಸ್ಥರಾಗಿ ಮಾನಸಗಂಗೋತ್ರಿಗೆ ತೆರಳಿದರು. ತೀ.ನಂ.ಶ್ರೀ.ಯವರು ಈ ಹುದ್ದೆಗೆ ಆಯ್ಕೆ ಆಗುವ ಸಂದರ್ಭ ದಲ್ಲಿ ಶ್ರೀ ರಂ.ಶ್ರೀ ಮುಗಳಿ ಮತ್ತು ತೀ.ನಂ.ಶ್ರೀ. ಅವರ ಪತ್ರವ್ಯವಹಾರ ಗಮನಾರ್ಹವಾಗಿವೆ. ಈ ಹುದ್ದೆಗೆ ತೀ.ನಂ.ಶ್ರೀ.ಯವರಲ್ಲದೆ ಶ್ರೀ ರಂ.ಶ್ರೀ. ಮುಗಳಿ ಮತ್ತು ಶ್ರೀ ಸಿ.ಮಹಾದೇವಪ್ಪ ಇಬ್ಬರು ಮಾತ್ರ ಅರ್ಜಿ ಹಾಕಿದ್ದರು. ಆದರೆ ಅವರಿಬ್ಬರೂ ಸಂದರ್ಶನಕ್ಕೆ ಬರಲಿಲ್ಲ (ಅನುಬಂಧಗಳು ೩೦ ರಿಂದ ೩೩).

ತೀ.ನಂ.ಶ್ರೀ. ೧೯೬೬ನೇ ಮಾರ್ಚ್ ೩೧ನೇ ತಾರೀಖು ತಮ್ಮ ೫೫ ವಯಸ್ಸಿನ ನಂತರ ಸೇವೆಯಿಂದ ನಿವೃತ್ತರಾದರು. ಅನಂತರ ೧೯೬೬ರಿಂದ ಅವರ ನಿಧನದವರೆಗೂ ಯು.ಜಿ.ಸಿ. ಸಂದರ್ಶಕ ಪ್ರಾಧ್ಯಾಪಕರಾಗಿ, ಮಾನಸಗಂಗೋತ್ರಿಯೊಡನೆ ತಮ್ಮ ಸಂಪರ್ಕವನ್ನು ಇಟ್ಟು ಕೊಂಡಿದ್ದರು ಮತ್ತು ಕೆಲವು ಸ್ನಾತಕೋತ್ತರ ಭಾಷಣಗಳನ್ನು ಮಾಡುತ್ತಿದ್ದರು. ಇದರೊಡನೆ ತಮ್ಮ ಸಂಶೋಧನೆ ಕಾರ್ಯವನ್ನು ಮುಂದುವರಿಸಿ ಡೆಕ್ಕನ್ ಕಾಲೇಜಿನ ಸತತವಾದ ಸಂಪರ್ಕದಲ್ಲಿದ್ದರು.

ನಮ್ಮ ತಂದೆಯವರು ಒಮ್ಮೆ ನನ್ನೊಡನೆ ಮಾತನಾಡುವಾಗ ಹೇಳಿದ್ದರು. ಅವರು ತಮ್ಮ ಅಧ್ಯಾಪಕ ಸೇವಾ ಜೀವನದಲ್ಲಿ ಎಂದೂ ಬೇರೆಯವರ ಜಾಗವನ್ನು ತೆಗೆದುಕೊಳ್ಳಲಿಲ್ಲ ಎಂದು. ಮೈಸೂರಿನಲ್ಲಿ ೧೯೨೮ರಲ್ಲಿ ಕನ್ನಡ ಅಧ್ಯಾಪಕ ಹುದ್ದೆ, ಬೆಂಗಳೂರಿನಲ್ಲಿ ೧೯೪೩ ಉಪಪ್ರಾಧ್ಯಾಪಕ ಹುದ್ದೆ, ಧಾರವಾಡದಲ್ಲಿ ೧೯೫೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆ, ೧೯೫೭ರಲ್ಲಿ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕ ಹುದ್ದೆ, ೧೯೬೦ರಲ್ಲಿ ಮಾನಸಗಂಗೋತ್ರಿ ಯಲ್ಲಿ ಯು.ಜಿ.ಸಿ. ಪ್ರಾಧ್ಯಾಪಕ ಹುದ್ದೆ ಎಲ್ಲವೂ ಹೊಸದಾಗಿ ಸೃಷ್ಟಿಯಾದವು. ಇನ್ನೂ ಹೇಳಬಹುದಾದರೆ ದೆಹಲಿ ವಿಶ್ವವಿದ್ಯಾಲಯದಲ್ಲಿ ಅವರು ಕೊನೆಗೆ ಒಪ್ಪಿಕೊಳ್ಳದಿದ್ದ ಭಾಷಾಶಾಸ್ತ್ರ ಪ್ರಾಧ್ಯಾಪಕ ಹುದ್ದೆಯೂ ಕೂಡ ಹೊಸದಾಗಿ ಸೃಷ್ಟಿಯಾದುದು.

‘ಕನ್ನಡ ನಿಘಂಟು’ ಕೆಲಸ

●

೧೯೫೮ರಲ್ಲಿಯೇ ತೀ.ನಂ.ಶ್ರೀ.ಯವರು ‘ಕನ್ನಡ ಸಾಹಿತ್ಯ ಪರಿಷತ್ತು’ ಕೈಗೊಂಡಿದ್ದ ‘ಕನ್ನಡ ನಿಘಂಟು’ವಿನ ಸಂಪಾದಕ ಸಮಿತಿಯ ಅಧ್ಯಕ್ಷರಾದರು. ೧೯೬೨ರಲ್ಲಿ ನಿವೃತ್ತರಾದ ನಂತರವೂ ಅಧ್ಯಕ್ಷರಾಗಿ ಮುಂದುವರಿದರು.

ಕನ್ನಡ ನಿಘಂಟುವಿನ ಕೆಲಸ ಬಹಳ ಸಮಯವನ್ನು ತೆಗೆದುಕೊಳ್ಳುತ್ತಿತ್ತು. ಈ ಕೆಲಸಕ್ಕಾಗಿ ತಿಂಗಳಿನಲ್ಲಿ ಮೂರು ದಿನ ಸಮಿತಿಯ ಸಭೆಗಾಗಿ ಬೆಂಗಳೂರಿಗೆ ಹೋಗಬೇಕಾಗಿತ್ತು. ಜೊತೆಗೆ ನಿಘಂಟಿನ ಸಂಪಾದರಾದ ಶ್ರೀ ಬಸವಾರಾಧ್ಯರು ತಿಂಗಳಲ್ಲಿ ೩–೪ ದಿನ ಚರ್ಚೆಗಳಿಗಾಗಿ ಮೈಸೂರಿನಲ್ಲಿರುತ್ತಿದ್ದರು. ಇದಲ್ಲದೆ ಬೇರೆ ಕೆಲವು ದಿನಗಳಲ್ಲೂ ಇದರ ಸಂಬಂಧಪಟ್ಟ ವಿಷಯಗಳ ಬಗ್ಗೆ ಪತ್ರ ವ್ಯವಹಾರ, ಕರಡುಗಳನ್ನು ತಿದ್ದುವುದು, ಪರಾಮರ್ಶನೆ ಮಾಡುವುದು ಇತ್ಯಾದಿ ನಡೆಯುತ್ತಲೇ ಇತ್ತು. ಇದು ಒಟ್ಟಿನಲ್ಲಿ ತೀನಂಶ್ರೀಯವರಿಗೆ ತಿಂಗಳಲ್ಲಿ ಪೂರ್ತಿ ೧೪–೧೫ ದಿನಗಳ ಕೆಲಸವಾಗಿ ಪರಿಣಮಿಸಿತ್ತು. ಇದು ಪೂರ್ಣವಾಗಿ ಯಾವ ಸಂಭಾವನೆಯೂ ಇಲ್ಲದ ಗೌರವಯುತವಾದ ಕೆಲಸ. ಇದೂ ಅಲ್ಲದೆ ತೀ.ನಂ.ಶ್ರೀ.ಯವರು ಬೆಂಗಳೂರಿಗೆ ಹೋದಾಗ ಅವರಿಗೆ ಸಿಗುತ್ತಿದ್ದುದು ಎಲ್ಲ ಸೇರಿ ದಿನ ಭತ್ಯ ಕೆಲವು ರೂ. 10/- ಮಾತ್ರ. ಸಭೆಗಾಗಿ ಬೇರೆ ಸಂಭಾವನೆಯೂ ಇರಲಿಲ್ಲ. ಇದರಲ್ಲೆ ಅವರ ವಸತಿ, ಊಟ, ಸ್ಥಳೀಯ ಸಂಚಾರ ವೆಚ್ಚಗಳು ಎಲ್ಲಾ ನಡೆಯಬೇಕು. ಕೆಲವು ಸಾರಿ ಅವರ ಸ್ನೇಹಿತರುಗಳಾದ ಪು.ತಿ.ನ., ಎ.ಎನ್. ಮೂರ್ತಿರಾಯರುಗಳ ಮನೆಯಲ್ಲಿರುತ್ತಿದ್ದರು. ಮತ್ತೆ ಕೆಲವು ಸಾರಿ ಹೋಟಲಿನಲ್ಲಿರಬೇಕಾಗಿತ್ತು. ಅಂತೂ ಇದಕ್ಕಾಗಿ ಅವರಿಗೆ ಕೈಯಿಂದಲೇ ಖರ್ಚಾಗಬೇಕಾಗಿತ್ತು. ಪರಿಷತ್ತಿನ ಆಡಳಿತವರ್ಗ ದವರು ಏನು ಮಾಡುತ್ತಿರುತ್ತಾರೆಂದೆ ತೀ.ನಂ.ಶ್ರೀ.ಯವರಿಗೆ ತಿಳಿದಿರುತ್ತಿರಲಿಲ್ಲ. ಒಂದು ಬಾರಿ ಅಕಸ್ಮಾತ್ತಾಗಿ ಶ್ರೀ. ಬಸವಾರಾಧ್ಯರು ನಮ್ಮ ತಂದೆಯವರಿಗೆ ದಿನ ಭತ್ಯ ರೂ. 13/- ದೊರಕುತ್ತದಲ್ಲವೇ ಎಂದು ವಿಚಾರಿಸಿದಾಗ ತಿಳಿಯಿತಂತೆ– ಬೆಂಗಳೂರಿನ ಸ್ಥಳೀಯ ಸದಸ್ಯರಿಗೆ ಸಭೆಯಲ್ಲಿ ಹಾಜರಾಗುವುದಕ್ಕೆ ದಿನಕ್ಕೆ ರೂ. 10/- ಮತ್ತು ಸಂಚಾರ ಖರ್ಚಿಗೆ ರೂ. 3/- ಪ್ರತ್ಯೇಕ ಎಂದು. ಆದರೆ ಹೊರಗಿನ ಊರಿಂದ ಬಂದು ತಮ್ಮ ಖರ್ಚುಗಳನ್ನು ತಾವೇ ನೋಡಿಕೊಳ್ಳಬೇಕಾದ ಅಧ್ಯಕ್ಷರಿಗೆ ಎಲ್ಲಾ ಸೇರಿ ರೂ. 10/- ಮಾತ್ರ. ಇದು ಗೊತ್ತಾಗಿ ತೀ.ನಂ.ಶ್ರೀ. ಯವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದಾಗ ಎಲ್ಲರಿಗೂ ಒಂದೇ ರೀತಿಯ ದಿನ ಭತ್ಯ ರೂ. 20/- ಮಾಡಿದರಂತೆ. (ತೀ.ನಂ.ಶ್ರೀ.ಯವರ ನಿಧನದ ಸಂದರ್ಭದಲ್ಲಿ ‘ಕನ್ನಡ ನುಡಿ’ಯ ಸಂಪಾದಕೀಯ ಇದನ್ನೂ ಪ್ರತಿಧ್ವನಿಸುತ್ತದೆಂದು ಕಾಣುತ್ತದೆ!)

೧೯೬೬ನೆಯ ಆಗಸ್ಟ್ ತಿಂಗಳ ಮೊದಲನೆಯ ವಾರದಲ್ಲಿ ಬೆಂಗಳೂರಿನಲ್ಲಿ ಕನ್ನಡ ನಿಘಂಟುವಿನ ಸಮಿತಿ ಸಭೆ ನಡೆಯುತ್ತಿತ್ತು. ತೀ.ನಂ.ಶ್ರೀ.ಯವರಿಗೆ ಈಚೆಗಿನ ಕೆಲವು ವರ್ಷಗಳಿಂದ ಕೈ ನೋವು ಬಂದು ಅದನ್ನು ಎತ್ತುವುದಕ್ಕೇ ಆಗುತ್ತಿರಲಿಲ್ಲ. ಸಭೆ ನಡೆಯುತ್ತಿದ್ದಾಗ ನಿಘಂಟುವಿನ ಅನುದಾನದ ಬಗ್ಗೆ ತಮಗೇ ತಿಳಿಯದಂತೆ ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆ ಹಣದ ಬಹುಭಾಗವನ್ನು ಪರಿಷತ್ತಿನ ಆಡಳಿತದ ಖರ್ಚಿಗೆ ವಿನಿಯೋಗಿಸಿರುವುದು ತಿಳಿದು ಬಂದು ತೀ.ನಂ.ಶ್ರೀ.ಯವರಿಗೆ ತುಂಬಾ ಕೋಪ ಬಂದಿತು. ತಾವು ಮತ್ತು ಹಿಂದಿನ ಕ.ಸಾ.ಪ. ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರು ಎಷ್ಟೋ ವರ್ಷಗಳ ಸತತ ಪ್ರಯತ್ನದ ಯಶಸ್ವಿನಿಂದ ನಿಘಂಟಿನ ಖರ್ಚಿಗಾಗಿಯೇ ಸರ್ಕಾರದಿಂದ ದೊರಕಿಸಿಕೊಂಡ ಅನುದಾನದ ಹಣವನ್ನು ತಮಗೆ ತಿಳಿಯದಂತೆಯೇ ಪರಿಷತ್ತಿನ ಆಡಳಿತಕ್ಕೆ ಉಪಯೋಗಿಸಿಕೊಂಡಿರುವುದು ಅವರಿಗೆ ತುಂಬಾ ನೋವನ್ನುಂಟುಮಾಡಿತು. ತಕ್ಷಣ ಸಭೆಯಲ್ಲಿ ಹೌಹಾರಿದರು. "ನಾನು ಇನ್ನು ಮುಂದೆ ಈ ಹುದ್ದೆಗೆ ರಾಜೀನಾಮೆ ಕೊಟ್ಟುಬಿಡುತ್ತೇನೆ. ನಾನು ಇನ್ನು ನಿಘಂಟುವಿನ ಕೆಲಸಕ್ಕಾಗಿ ಲೇಖನಿಯನ್ನು ಎತ್ತುವುದಿಲ್ಲ" ಎಂದು ಹೇಳಿ, ಸಭೆಯಿಂದ ಹೊರಗೆ ಹೋದರು. ಅವರ ಅಭಿಮಾನಿಗಳಾದ ಇತರ ಸದಸ್ಯರು ತಕ್ಷಣ ಅವರ ಹಿಂದೆ ಹೋಗಿ ಅವರನ್ನು ಸಾಂತ್ವನಗೊಳಿಸಿದರು. ಆದರೆ ತೀ.ನಂ.ಶ್ರೀ.ಯವರಿಗೆ ಸಮಾಧಾನವಾಗಲಿಲ್ಲ. ಅಂದು ಸಂಜೆಯೇ ಮೈಸೂರಿಗೆ ಹಿಂತಿರುಗಿದರು. ಮತ್ತೆ ವಿಧಿಯ ವಿಲಾಸ. ಅದಾದ ನಂತರ ಒಂದು ವಾರದಲ್ಲಿ ತಮ್ಮ ದೀರ್ಘಯಾತ್ರೆಗೆ ಉತ್ತರ ಭಾರತಕ್ಕೆ ಪ್ರಯಾಣ ಬೆಳೆಸಿದ ತೀ.ನಂ.ಶ್ರೀ. ಮತ್ತೆ ಹಿಂತಿರುಗಲಿಲ್ಲ. ಪುನಃ ನಿಘಂಟುವಿನ ಕೆಲಸದಲ್ಲಿ ಎಂದೂ ಪಾಲ್ಗೊಳ್ಳಲಿಲ್ಲ! ಈ ನಿಘಂಟಿನ ಕೆಲಸಕ್ಕಾಗಿ ತೀ.ನಂ.ಶ್ರೀ.ಯವರು ತಮ್ಮ ಜೀವನವನ್ನೇ ತೇದಿದ್ದರೆಂಬುದು ಎಲ್ಲರಿಗೂ ತಿಳಿದಿರುವ ವಿಷಯ.

ತೀ.ನಂ.ಶ್ರೀ.ಯವರು ನಿಘಂಟು ಸಮಿತಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರು ನಿರ್ಧರಿಸಿದ ರೂಪರೇಷೆಗಳನ್ನೊಳಗೊಂಡ ೧೬ ಪುಟಗಳ ಎರಡು ಸಂಚಿಕೆಗಳು ಬಿಡುಗಡೆಯಾಗಿ ಮುಂದಿನ ಕೆಲಸಗಳಿಗೆ ನಾಂದಿಯಾಯಿತು ಮತ್ತು ನಿಘಂಟಿನ ಕೆಲಸಕ್ಕೆ ಗಟ್ಟಿಯಾದ ತಳಹದಿಯನ್ನು ಹಾಕಿಕೊಟ್ಟಿತು. ಆದರೆ ಅವರ ಅಕಾಲ ನಿಧನದಿಂದ ಈ ನಿಘಂಟುವಿಗೆ ಅವರ ಭಾಷಾಶಾಸ್ತ್ರದ ಪಾಂಡಿತ್ಯದ ಮತ್ತು ಅವರ ವಿಶಿಷ್ಟ ವಿದ್ವತ್ತಿನ ನೆರವು ಮತ್ತು ಕೊಡುಗೆ ಶಾಶ್ವತವಾಗಿ ವಂಚಿತ ವಾಯಿತು ಎಂದು ಸಮಿತಿಯ ಎಲ್ಲ ಸದಸ್ಯರ ಮತ್ತು ನಾಡಿನ ಎಲ್ಲಾ ವಿದ್ವಾಂಸರುಗಳ ಒಮ್ಮತದ ಅಭಿಪ್ರಾಯವಾಗಿದೆ.

ದೆಹಲಿ ವಿಶ್ವವಿದ್ಯಾಲಯದ ಆಹ್ವಾನ

೧೯೬೪-೬೫ರಲ್ಲಿ ದೆಹಲಿ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನ ವಿಭಾಗವನ್ನು ತೆಗೆಯುವ ನಿರ್ಧಾರವಾಯಿತು. ಡಾ. ಸಿ.ಡಿ ದೇಶಮುಖ್ ಅವರು ಆಗ ದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. ಅವರು ಅಲ್ಲಿಯ ಪ್ರೊಫೆಸರ್ ನೇಮಕದ ವಿಷಯದಲ್ಲಿ ಡೆಕ್ಕನ್ ಕಾಲೇಜಿನ ಸಲಹೆಯನ್ನು ಕೇಳಿದ್ದರು. ಡಾ. ಕತ್ರೆಯವರಿಗೆ ತೀ.ನಂ.ಶ್ರೀ.ಯವರು ಆ ಹುದ್ದೆಯನ್ನು ತೆಗೆದುಕೊಳ್ಳಬೇಕೆಂದು ಅಭಿಲಾಷೆ ಮತ್ತು ಉತ್ಕಟ ಅಪೇಕ್ಷೆಯಾಗಿತ್ತು. ಈ ವಿಷಯವಾಗಿ ಅವರು ತೀ.ನಂ.ಶ್ರೀ.ಯವರೊಡನೆ ಮಾತನಾಡಿದಾಗ ಮೊದಲು ತೀ.ನಂ.ಶ್ರೀ.ಯವರು ಅಷ್ಟು ಉತ್ಸಾಹ ತೋರಲಿಲ್ಲ. ಮತ್ತು ತೀ.ನಂ.ಶ್ರೀ.ಯವರ ಆರೋಗ್ಯ ಅಷ್ಟು ಸರಿಯಲ್ಲದಿದ್ದುದರಿಂದ ನಮ್ಮ ಮನೆಯವರಿಗೆ ಮತ್ತು ಮೈಸೂರಿನ ಅವರ ಸ್ನೇಹಿತರುಗಳಿಗೆ ಅದರ ಬಗ್ಗೆ ಅಷ್ಟು ಒಲವಿರಲಿಲ್ಲ. ಈಗ ಮತ್ತೆ ಅಷ್ಟು ದೂರ ಏಕೆ ಹೋಗಬೇಕೆಂದು ಅದೂ ಅಲ್ಲದೆ ತೀ.ನಂ.ಶ್ರೀ.ಯವರಿಗೆ ಮೈಸೂರಿನಲ್ಲಿ ತಿಂಗಳಿಗೆ ೩೦೦ ರೂಪಾಯಿ ನಿವೃತ್ತಿವೇತನ ಮತ್ತು ಯುಜಿಸಿ ಸಹಾಯಧನ ೫೦೦ ರೂಪಾಯಿ ಒಟ್ಟು ೮೦೦ ರೂಪಾಯಿ ದೊರೆಯುತ್ತಿತ್ತು. ಆದರೆ ಭಾಷಾಶಾಸ್ತ್ರದ ಮೇಲಿನ ಅಭಿಮಾನದಿಂದ ಮತ್ತು ಡಾ. ಕತ್ರೆಯವರ ವಿಶ್ವಾಸಪೂರ್ವಕವಾದ ಒತ್ತಾಯಕ್ಕೆ ಮಣಿದು ಅವರು ಡಾ. ಕತ್ರೆಯವರಿಗೆ ಇದನ್ನು ವಹಿಸಿಕೊಳ್ಳುವುದಾಗಿ ಮಾತುಕೊಟ್ಟರು. ತೀ.ನಂ.ಶ್ರೀ.ಯವರು ಪುಣೆಯಿಂದ ಮೈಸೂರಿನಲ್ಲಿದ್ದ ನನಗೆ ಬರೆದ ಪತ್ರದ ಭಾಗದಿಂದ ಈ ವಿಷಯ ತಿಳಿಯುತ್ತದೆ (ಅನುಬಂಧ ೩೪). ಡಾ. ಕತ್ರೆಯವರ ಸಲಹೆಯಂತೆ, ದೆಹಲಿ ವಿಶ್ವವಿದ್ಯಾಲಯದವರು ಈ ಹುದ್ದೆಗೆ ಅರ್ಜಿಗಳನ್ನು ಕರೆದಿದ್ದರೂ ಮತ್ತು ಇದಕ್ಕಾಗಿ ಸಂದರ್ಶನ ವನ್ನು ನಡೆಸಿದ್ದರೂ ಕೂಡ, ತೀ.ನಂ.ಶ್ರೀ.ಯವರು ಈ ಹುದ್ದೆಗೆ ಅರ್ಜಿಯನ್ನು ಹಾಕದಿದ್ದರೂ, ಡಾ. ದೇಶಮುಖ ಅಧ್ಯಕ್ಷತೆಯ ನೇಮಕ ಸಮಿತಿ ತೀ.ನಂ.ಶ್ರೀ.ಯವರನ್ನು ಭಾಷಾಶಾಸ್ತ್ರದ ಪ್ರಾಧ್ಯಾಪಕ ಹುದ್ದೆಗೆ ನೇಮಕಮಾಡಿ ಆಹ್ವಾನವನ್ನು ಕಳಿಸಿತು. (ಆಗ ಈ ಹುದ್ದೆಯ ಸಂಬಳ ತಿಂಗಳಿಗೆ 1000 ದಿಂದ 1500 ರೂಪಾಯಿ.) ತೀ.ನಂ.ಶ್ರೀ.ಯವರು ಡಾ. ಕತ್ರೆಯವರಿಗೆ ಆಗಲೇ ತಿಳಿಸಿದ್ದಂತೆ ಹುದ್ದೆಯನ್ನು ಒಪ್ಪಿಕೊಂಡು. ತಮ್ಮ ನಿವೃತ್ತಿ ವೇತನದ ಜೊತೆಗೆ (ಹುದ್ದೆಯ ಸಂಬಳದ ಗರಿಷ್ಠಮಿತಿ) ತಿಂಗಳಿಗೆ ರೂ. 1500/- ಸಂಬಳ ಕೊಡಬೇಕೆಂದು ಕೋರಿ ಉತ್ತರ ಬರೆದರು. ಇಲ್ಲವಾದರೆ ಅವರಿಗೆ ಆರ್ಥಿಕವಾಗಿ ಅನುಕೂಲವೇನು ಇರಲಿಲ್ಲ. ಆದರೆ ಸರ್ಕಾರದ ನಿಯಮದಂತೆ ಇದು ಸಾಧ್ಯವಿಲ್ಲವೆಂದು ಅವರ ನಿವೃತ್ತಿ ವೇತನ ಮತ್ತು ಅಲ್ಲಿ ಕೊಡುವ

ಸಂಬಳ ಎರಡು ಒಟ್ಟು ಅವರಿಗೆ ಹಿಂದೆ ಬರುತ್ತಿದ್ದ ಸಂಬಳವನ್ನು ಮೀರಬಾರದೆಂದು ದೆಹಲಿ ವಿಶ್ವವಿದ್ಯಾಲಯದಿಂದ ಅನೇಕ ದಿನಗಳ ಮೇಲೆ ಪತ್ರ ಬಂದುದರಿಂದ ತೀ.ನಂ.ಶ್ರೀ. ಯವರು ದೆಹಲಿಗೆ ಹೋಗಲಿಲ್ಲ. ಆದರೆ ದೆಹಲಿ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದ ಪ್ರಥಮ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡ ಗೌರವ ತೀ.ನಂ.ಶ್ರೀ.ಯವರಿಗೆ ಸಲ್ಲಿತ್ತು.

ತೀ.ನಂ.ಶ್ರೀ.ಯವರಿಗೆ 'ಕನ್ನಡ ಭಾಷಾ ಚರಿತ್ರೆ' ಗ್ರಂಥವನ್ನು ಬರೆಯಬೇಕೆನ್ನುವ ವಿಚಾರ, ಅವರ ಭಾಷಾಶಾಸ್ತ್ರದ ಸಂಪರ್ಕದಷ್ಟೇ ಹಳೆಯದು. ಅದಕ್ಕಾಗಿ ತುಂಬಾ ವ್ಯಾಸಂಗ, ಸಂಶೋಧನೆ. ವಿಷಯ ಸಂಗ್ರಹಣೆಯಲ್ಲಿ ತೊಡಗಿದ್ದರು. ೧೯೬೬ರಲ್ಲಿ ಅವರ ಪ್ರಯಾಣದಿಂದ ಹಿಂತಿರುಗಿದ ನಂತರ ಆ ಕೆಲಸಕ್ಕೆ ಮೊದಲು ತೊಡಗಿಸಿಕೊಳ್ಳುವುದಕ್ಕಾಗಿ ಎಲ್ಲರಿಗೂ ತಿಳಿಸಿದ್ದರು. ಆ ಪ್ರವಾಸದಲ್ಲಿ ಅವರು ನಮ್ಮ ತಾಯಿಯವರೊಡನೆ ಆಗ್ರಾದಲ್ಲಿ "ನಿಜವಾದ ಸಂಶೋಧನೆ ಎಂದರೆ ಏನು ಎಂದು ಈಗ ನನಗೆ ಸ್ವಲ್ಪ ಸ್ಪಷ್ಟವಾಗುತ್ತಿದೆ. ಈ ಪ್ರವಾಸದಿಂದ ಹಿಂತಿರುಗಿದ ನಂತರ ಕನ್ನಡ ಭಾಷಾ ಚರಿತ್ರೆಯ ಕೆಲಸವನ್ನು ಪಟ್ಟಾಗಿ ಕುಳಿತು ಮಾಡಬೇಕು" ಎಂದು ಹೇಳಿದ್ದರು. ಇದಕ್ಕೆ ಅನುಕೂಲವಾಗುವಂತೆಯೇ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ೧೯೬೭ರಲ್ಲಿ ಒಂದು ವರ್ಷ ಸಂದರ್ಶನ ಪ್ರಾಧ್ಯಾಪಕರಾಗಿ ತಿಂಗಳಿಗೆ ೧೨೫೦ ರೂಪಾಯಿ ಗೌರವ ಸಂಬಳದ ಮೇಲೆ ಬರಬೇಕೆಂದು ಆಹ್ವಾನವೂ ಬಂದಿತ್ತು. ಈ ಕೆಲಸ ಮಾಡುವುದಕ್ಕೆ ಅಲ್ಲಿಯ ವಾತಾವರಣ ಮತ್ತು ಗ್ರಂಥಭಂಡಾರ ಬಹು ಸೂಕ್ತವಾದ ಸ್ಥಳ ಎಂದು ತಿಳಿದು ತೀ.ನಂ.ಶ್ರೀ. ಯವರು ಅದಕ್ಕೆ ಎದುರು ನೋಡುತ್ತಿದ್ದರು. ಈ ಗ್ರಂಥವನ್ನು ಮೊದಲು ಇಂಗ್ಲಿಷಿನಲ್ಲಿ ಬರೆಯಲು ನಿರ್ಧರಿಸಿರುವುದಾಗಿ ನನಗೆ ತಿಳಿಸಿದ್ದರು. ಆದರೆ ಅವರ ಈ ಅಂತಿಮ ಪ್ರಯಾಣ ಎಲ್ಲವನ್ನೂ ಅಸಾಧ್ಯವನ್ನಾಗಿ ಮಾಡಿತು. ತೀ.ನಂ.ಶ್ರೀ.ಯವರ ಅಕಾಲ ನಿಧನದಿಂದ ಕನ್ನಡ ಭಾಷೆಯ ನಿಷ್ಕೃಷ್ಟವಾದ ಭಾಷಾವಿಜ್ಞಾನ, ವಿದ್ವತ್ಪೂರ್ಣವಾದ ಚರಿತ್ರೆಯಿಂದ ಶಾಶ್ವತವಾಗಿ ವಂಚಿತವಾಗಿದೆ ಎಂದು ಎಲ್ಲಾ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಸಂಶೋಧನ ವಿದ್ಯಾರ್ಥಿಗಳು

●

ತೀ.ನಂ.ಶ್ರೀ.ಯವರು ಪ್ರಾಧ್ಯಾಪಕರಾಗಿದ್ದ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಅನೇಕ ಅಧ್ಯಾಪಕರು, ಸಂಶೋಧನ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಅವರಲ್ಲಿ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾಗ ಮೈಸೂರಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಶ್ರೀ ಎಸ್. ಅನಂತನಾರಾಯಣ ಅವರು ಒಬ್ಬರು.

ಶ್ರೀ ಅನಂತನಾರಾಯಣ ಅವರ ವಿಷಯ "ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ". ಶ್ರೀ ಅನಂತನಾರಾಯಣ ಅವರು ಈ ವಿಷಯದಲ್ಲಿ ಸುಮಾರು ೫-೬ ವರ್ಷಗಳ ಗಂಭೀರವಾದ ಕೆಲಸಮಾಡಿ ಅದರ ನಿಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಈ ನಿಬಂಧದಲ್ಲಿ ಸಮಕಾಲೀನ ಅನೇಕ ಕನ್ನಡ ಸಾಹಿತಿಗಳ ಮತ್ತು ಕವಿಗಳ ಕೃತಿಗಳು ವಿಮರ್ಶೆಗೆ ಒಳಪಟ್ಟಿರುವುದರಿಂದ ಇದರ ವಸ್ತುನಿಷ್ಠ ಪರೀಕ್ಷಣೆಗಾಗಿ ಅದರಲ್ಲಿ ವಿಮರ್ಶಿಸಲಾಗಿರುವ ವ್ಯಕ್ತಿಗಳನ್ನು ಈ ಸಂಶೋಧನೆ ನಿಬಂಧಕ್ಕೆ ಪರೀಕ್ಷಕರನ್ನಾಗಿ ನೇಮಕ ಮಾಡಬಾರದೆಂದು ತೀ.ನಂ.ಶ್ರೀ.ಯವರ ನಿಲುವಾಗಿತ್ತು. (ತೀ.ನಂ.ಶ್ರೀ.ಯವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪರೀಕ್ಷೆಗಳ ಸಮಿತಿಗಳಿಗೆ ಯಾವಾಗಲೂ ಸಂಬಂಧಿಸಿರಲಿಲ್ಲ ಎಂದು ಮೊದಲೇ ತಿಳಿಸಿದೆ.) ಆದರೆ ಈ ನಿಬಂಧಕ್ಕೆ ತೀ.ನಂ.ಶ್ರೀ.ಯವರಲ್ಲದೆ ಶ್ರೀ ವಿ.ಕೃ. ಗೋಕಾಕ್ ಮತ್ತು ಶ್ರೀ ಕುವೆಂಪು ಅವರನ್ನು ಪರೀಕ್ಷಕರನ್ನಾಗಿ ನಿಯಮಿಸಲಾಯಿತು. ಈ ನಿಬಂಧದಲ್ಲಿ ಇವರಿಬ್ಬರ ಕಾವ್ಯಗಳನ್ನು ಸಾಕಷ್ಟು ಚರ್ಚಿಸಲಾಗಿದೆ. ನಿಬಂಧದ ವಿಷಯದಲ್ಲಿ ಶ್ರೀ ಗೋಕಾಕ್ ಅವರ ಅಭಿಪ್ರಾಯ ತುಂಬಾ ಶ್ಲಾಘ್ಯಪೂರ್ವಕವಾಗಿತ್ತು. (ಈ ಅಭಿಪ್ರಾಯ ಈ ನಿಬಂಧವನ್ನು ಶ್ರೀ ಅನಂತನಾರಾಯಣ ಅವರು ಮುಂದೆ ಪ್ರಕಟಿಸಿದ ಈ ಪುಸ್ತಕಕ್ಕೆ ಶ್ರೀ ಗೋಕಾಕ್ ಅವರು ಬರೆದಿರುವ ಮುನ್ನುಡಿಯಲ್ಲಿ ವ್ಯಕ್ತವಾಗಿದೆ.)

ಆದರೆ ಈ ನಿಬಂಧದಲ್ಲಿ ಕೆಲವು ಕೃತಿಗಳ ಮೇಲೆ ಶ್ರೀ ಅನಂತನಾರಾಯಣ ಅವರ ಅಭಿಪ್ರಾಯಗಳು ಮತ್ತು ತೀರ್ಮಾನಗಳು ಅಪ್ರಬುದ್ಧವಾಗಿಯೆಂದು ತಿಳಿಸಿ ಶ್ರೀ ಕುವೆಂಪು ಅವರು ಈ ನಿಬಂಧ ಪಿಎಚ್.ಡಿ ಪದವಿಗೆ ಅನರ್ಹವಾಗಿದೆಯೆಂದು ತಿಳಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ನಿಯಮದಂತೆ ಒಂದು ಪಿಎಚ್.ಡಿಯ ನಿಬಂಧದಲ್ಲಿ ಮೂವರು ಪರೀಕ್ಷಕರಲ್ಲಿ ಒಬ್ಬರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೂ ಅದನ್ನು ಇನ್ನೊಬ್ಬರು ನಾಲ್ಕನೆಯ ಪರೀಕ್ಷಕರಿಗೆ ಕಳಿಸಲಾಗುತ್ತಿತ್ತು. ಮತ್ತು ಅವರ ಅಭಿಪ್ರಾಯವೇ ಈ ವಿಷಯದಲ್ಲಿ ನಿಬಂಧವ

ಬಗ್ಗೆ ಅಂತಿಮ ನಿರ್ಧಾರವಾಗುತ್ತಿತ್ತು. ಅದರಂತೆ ಈ ನಿಬಂಧವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಂದಿನ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಶ್ರೀ ಎಸ್.ಎನ್. ಶಾಂತಿವೀರಪ್ಪನವರಿಗೆ ಕಳಿಸಲಾಯಿತು. ಅವರು ಅದನ್ನು ಪರಿಶೀಲಿಸಿ ಈ ನಿಬಂಧವು 'Not upto the mark' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಶ್ರೀ ಅನಂತನಾರಾಯಣ ಅವರ ನಿಬಂಧ ನಿರಾಕರಿಸಲ್ಪಟ್ಟು ಅವರಿಗೆ ಪಿಎಚ್.ಡಿ. ಪದವಿ ದೊರಕಲಿಲ್ಲ. ತೀ.ನಂ.ಶ್ರೀ.ಯವರು ಈ ಸಮಯದಲ್ಲಿ ಪ್ರಥಮ ಗರ್ಭಪಾತದ ದುಃಖವನ್ನು ಅನುಭವಿಸಿದರು.

(ಇದಾದ ಕೆಲವು ತಿಂಗಳುಗಳಲ್ಲಿ ಒಂದು ಇಂಗ್ಲಿಷ್ ವಿದ್ವತ್ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಎಸ್.ಎನ್. ಶಾಂತಿವೀರಪ್ಪನವರು ಬರೆದ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಒಂದು ಲೇಖನ ಶ್ರೀ ಅನಂತನಾರಾಯಣ ಅವರ ನಿಬಂಧದಲ್ಲಿದ್ದ ವಿಷಯಗಳನ್ನು ಆಧಾರವಾಗಿ ಬಳಸಿಕೊಂಡಿತ್ತು ಎಂದು ಈ ಗ್ರಂಥದ ಪ್ರಕಟಣೆಯ ನಂತರ ಅನೇಕರ ಗಮನಕ್ಕೆ ಬಂದಿತು!)

ಶ್ರೀ ಅನಂತನಾರಾಯಣ ಅವರು ಈ ನಿಬಂಧವನ್ನು ಅನಂತರ ಸ್ವಂತವಾಗಿ ಗ್ರಂಥರೂಪದಲ್ಲಿ ಪ್ರಕಟಿಸಿ ಅದನ್ನು ಕನ್ನಡನಾಡು ಬಹು ಆದರದಿಂದ ಮತ್ತು ಬಹು ವಿದ್ವತ್ಪೂರ್ಣವಾಗಿದೆಯೆಂದು ಸ್ವೀಕರಿಸಿದ ವಿಷಯ ಎಲ್ಲರಿಗೂ ತಿಳಿದಿದೆ. ಈ ಗ್ರಂಥದ 'ಅರಿಕೆ'ಯಲ್ಲಿ ಶ್ರೀ ಅನಂತನಾರಾಯಣ ಅವರು ಈ ರೀತಿ ಬರೆದಿರುತ್ತಾರೆ (ಅನುಬಂಧ ೩೫). ಈ ಗ್ರಂಥ ಈಗಾಗಲೇ ನಾಲ್ಕು ಮುದ್ರಣಗಳನ್ನು ಕಂಡಿದೆ ಎಂದರೆ ಇದರ ಮೌಲ್ಯದ ಬಗ್ಗೆ ಮತ್ತು ಇಂದಿಗೂ ಅದರ ಪ್ರಸ್ತುತತೆಯ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ಶ್ರೀ ಅನಂತನಾರಾಯಣ ಅವರೇ ಒಂದು ಮುದ್ರಣದ 'ಅರಿಕೆ'ಯಲ್ಲಿ ತಿಳಿಸಿರುವಂತೆ ಈ ಗ್ರಂಥದ ಅಧ್ಯಾಯಗಳನ್ನೇ ಆಧಾರವಾಗಿರಿಸಿ ಕೊಂಡು, ಕೆಲವು ಸಂಶೋಧನ ವಿದ್ಯಾರ್ಥಿಗಳು ಅನಂತರ ಪಿಎಚ್.ಡಿ. ಪದವಿಗಳನ್ನು ಪಡೆದಿರುತ್ತಾರೆ.

ಅನಂತರ ತೀ.ನಂ.ಶ್ರೀ.ಯವರು ಮೈಸೂರು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿದ ನಂತರ ಅನೇಕರು ಅವರಲ್ಲಿ ಪಿಎಚ್.ಡಿ.ಗಾಗಿ ನೋಂದಾಯಿಸಿದರು. ಶ್ರೀ ಉ.ಕಾ. ಸುಬ್ಬರಾಯ ಚಾರ್ಯರು 'ರಾಮಾಯಣ'ಕ್ಕೆ ಸಂಬಂಧಪಟ್ಟಂತೆ ಕೆಲಸ ಮಾಡಿ, ಸುಮಾರು ಶೇಕಡಾ ೮೫ರಷ್ಟು ನಿಬಂಧ ಬರೆದು ಅದನ್ನು ಪೂರೈಸದೆ ನಿಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಲಿಲ್ಲ.

ಶ್ರೀ. ಕೆ.ಜಿ. ಶಾಸ್ತ್ರಿಯವರು ಹವ್ಯಕ ಭಾಷೆಗೆ ಸಂಬಂಧಪಟ್ಟಂತೆ ಕೆಲಸ ಮಾಡಿ ನಿಬಂಧದ ಬಹು ಭಾಗವನ್ನು ಬರೆದು ತೀ.ನಂ.ಶ್ರೀ.ಯವರ ಜೀವಿತಕಾಲದಲ್ಲಿ ಕೆಲಸದ ಸ್ವಲ್ಪಭಾಗ ಉಳಿದು, ಅನಂತರ ಅದನ್ನು ಮುಗಿಸಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪದವಿ ಪಡೆದರು. ಸಂಶೋಧನ ವಿದ್ಯಾರ್ಥಿಗಳಾಗಿದ್ದ ಶ್ರೀ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಶ್ರೀ ಎಂ.ವಿ. ಶ್ರೀನಿವಾಸಮೂರ್ತಿ ಇಬ್ಬರು ತೀ.ನಂ.ಶ್ರೀಯವರಲ್ಲಿ ತಮ್ಮ ಸಂಶೋಧನ ಕೆಲಸವನ್ನು ಮುಂದುವರಿಸಲಿಲ್ಲ. ಶ್ರೀ.ಎಸ್. ನಾರಾಯಣಸೆಟ್ಟರು (ಸುಜನಾ) ಕುಮಾರವ್ಯಾಸ ಭಾರತಕ್ಕೆ ಸಂಬಂಧಪಟ್ಟಂತೆ ನಿಬಂಧ ಬರೆಯುವ ಹಂತವನ್ನೇ ಮುಟ್ಟಲಿಲ್ಲ. ಶ್ರೀ ಸುಜನಾ ಅವರು ಶ್ರೀ ಎಂ. ಚಿದಾನಂದಮೂರ್ತಿ ಅವರ ಗೌರವ ಸಂಪುಟ 'ಸಂಶೋಧನ'ದಲ್ಲಿ ಬರೆದ ಲೇಖನದ

"ಸಹಪಾಠಿ ಗೆಳೆಯ ಚಿದಾನಂದ"ದ ಭಾಗದಿಂದ ಈ ವಿಷಯ ತಿಳಿಯುತ್ತದೆ (ಅನುಬಂಧ ೩೬).

ಆದ್ದರಿಂದ ಮೊದಲನೆಯ ಬಾರಿಗೆ ತೀ.ನಂ.ಶ್ರೀ.ಯವರಿಗೆ ಅವರ ಸಂಶೋಧನ ಶಿಷ್ಯ ಶ್ರೀ ಎಂ. ಚಿದಾನಂದಮೂರ್ತಿಯವರಿಗೆ ಅವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ನಿಬಂಧಕ್ಕೆ ಪಿಎಚ್.ಡಿ. ಪದವಿ ದೊರಕಿದಾಗ ಅತೀವ ಸಂತೋಷವಾಗಿ "ನಾನು ಬಂಜೆಯಾಗಲಿಲ್ಲ" ಎನ್ನುವ ಉದ್ಗಾರವನ್ನು ಅವರಿಂದ ಹೊರಡಿಸಿತು! ಇದರಿಂದ ಶ್ರೀ ಚಿದಾನಂದಮೂರ್ತಿಯವರಿಗೆ ತೀ.ನಂ.ಶ್ರೀ.ಯವರ 'ಸಂಶೋಧಕ ಪುತ್ರ' ಎಂದು ನಾಮಕರಣವಾಯಿತು.

ಶ್ರೀ ಎಂ. ಚಿದಾನಂದಮೂರ್ತಿಯವರು ತೀ.ನಂ.ಶ್ರೀ.ಯವರ ಮಾರ್ಗದರ್ಶನದಲ್ಲಿ ತಾವು ಮಾಡಿದ ಸಂಶೋಧನೆಗೆ ಸಂಬಂಧ ಪಟ್ಟಂತೆ ಅವರ ಅಭಿಪ್ರಾಯ ಅವರ ಗೌರವ ಸಂಪುಟ 'ಸಂಶೋಧನೆ'ಯಲ್ಲಿ ಬರೆದ 'ಆ ನನ್ನ ಬದುಕು ಒಂದು ಕಿರುಚಿತ್ರ' ಲೇಖನದ ಭಾಗ ಮತ್ತು ಪ್ರಕಟವಾದ ತಮ್ಮ ಸಂಶೋಧನ ನಿಬಂಧ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿಶ ೪೫೦–೧೧೫೦"ರ 'ಮೊದಲ ಅರಿಕೆ'ಯಲ್ಲಿ ಬರೆದ ಭಾಗಗಳಿಂದ ತಿಳಿಯುತ್ತದೆ (ಅನುಬಂಧಗಳು ೩೭ ಮತ್ತು ೩೮).

ನೇಮಕ ಸಮಿತಿಗಳ ಸದಸ್ಯರಾಗಿ

●

ತೀ.ನಂ.ಶ್ರೀ.ಯವರು ಮೈಸೂರಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾಗ ದೆಹಲಿಯ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗ ಪ್ರಾರಂಭವಾಗಿ ಅಲ್ಲಿಯ ಕನ್ನಡ ಅಧ್ಯಾಪಕ ಹುದ್ದೆಗೆ ಜಾಹಿರಾತು ಬಂದಿತ್ತು. ಅದಕ್ಕೆ ಆಗ ಮೈಸೂರು ಮಹಾರಾಜ ಕಾಲೇಜಿನಿಂದ ನಿವೃತ್ತರಾಗಿದ್ದ ಶ್ರೀ ಕೆ.ವಿ. ರಾಘವಾಚಾರ್ಯರು ಅರ್ಜಿ ಹಾಕಿದ್ದರು. ಈ ನೇಮಕ ಸಮಿತಿಗೆ ದೆಹಲಿ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ತೀ.ನಂ.ಶ್ರೀ.ಯವರು ಸದಸ್ಯರಾಗಿ ಹೋಗಿದ್ದರು. ಆ ಸಮಿತಿಯಲ್ಲಿ ಉತ್ತರ ಭಾರತದ ಕಡೆಯ ಒಬ್ಬರು ಕನ್ನಡ ಎಂ.ಎ. ಮಾಡಿದವರನ್ನು ನೇಮಕ ಮಾಡಿಕೊಳ್ಳಬೇಕೆಂದು ಒಲವು ಇತ್ತಂತೆ. ಆದರೆ ತೀ.ನಂ.ಶ್ರೀ.ಯವರು ಆ ಸಭೆಯಲ್ಲಿ ಉಪಕುಲಪತಿಗಳಿಗೆ ತಿಳಿಸಿ, ಆ ಹುದ್ದೆಗೆ ಬೇಕಾದ ಅರ್ಹತೆಗಳನ್ನು ತಿಳಿಯಪಡಿಸಿ ಶ್ರೀ ಕ.ವೆಂ. ರಾಘವಾಚಾರ್ಯರನ್ನು ನೇಮಕ ಮಾಡುವಂತೆ ಅವರು ಮತ್ತು ಸಮಿತಿಯವರನ್ನು ಒಪ್ಪಿಸಿದರು. ಇದರಿಂದಾಗಿ ಶ್ರೀ ಕೆ.ವಿ. ರಾಘವಾಚಾರ್ಯರು ದೆಹಲಿ ವಿಶ್ವವಿದ್ಯಾಲಯಕ್ಕೆ ಕನ್ನಡ ಅಧ್ಯಾಪಕರಾಗಿ ಹೋಗುವಂತಾಯಿತು.

೧೯೬೩ರಲ್ಲಿ ತೀ.ನಂ.ಶ್ರೀ.ಯವರು ಸೇವೆಯಿಂದ ನಿವೃತ್ತರಾಗಿದ್ದರೂ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ರೀಡರ್ ಆಯ್ಕೆ ಸಮಿತಿಗೆ ಸದಸ್ಯರಾಗಿ ಅವರನ್ನು ಆಹ್ವಾನಿಸ ಲಾಯಿತು. ಆ ಸಮಿತಿಯಲ್ಲಿ ತೀ.ನಂ.ಶ್ರೀ.ಯವರ ಪಾತ್ರ ಏನೆಂದು ಶ್ರೀ ಜಿ.ಎಸ್. ಶಿವರುದ್ರಪ್ಪ ನವರು ಅವರ "ಚತುರಂಗ"ದಲ್ಲಿ ಉಲ್ಲೇಖಿಸಿರುವ ಭಾಗದಿಂದ ತಿಳಿದುಬರುತ್ತದೆ (ಅನುಬಂಧ ೩೯). ತಾವು ಮುಂದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗುವುದಕ್ಕೆ ತಮ್ಮ ಅಧ್ಯಾಪಕ ಜೀವನದಲ್ಲಿ ತೀ.ನಂ.ಶ್ರೀ.ಯವರು ಕೊಟ್ಟ ಈ ಬಹು ಉಪಯುಕ್ತವಾದ ತಿರುವೇ ಕಾರಣವೆಂದು ಶ್ರೀ ಜಿ.ಎಸ್.ಎಸ್. ಅವರು ಸಂತೋಷದಿಂದ ಮತ್ತು ಕೃತಜ್ಞತೆಯಿಂದ ಇಂದಿಗೂ ಸ್ಮರಿಸುತ್ತಾರೆ.

ಗುರುವರ್ಯ ಪ್ರೊ. ಎಂ.ಹಿರಿಯಣ್ಣ ಅವರೊಡನೆ

ಪ್ರೊ. ಎಂ. ಹಿರಿಯಣ್ಣನವರು ತೀ.ನಂ.ಶ್ರೀ.ಯವರಿಗೆ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಕಾಲೇಜಿನಲ್ಲಿ ಮಾತ್ರವಲ್ಲ ಸದಾ ಕಾಲವೂ ಅವರಿಗೆ ಗುರುವಾಗಿದ್ದರು. 'ಭಾರತೀಯ ಕಾವ್ಯಮೀಮಾಂಸೆ'ಯ 'ಅರಿಕೆ'ಯಲ್ಲಿ ತೀ.ನಂ.ಶ್ರೀ.ಯವರು ಹೀಗೆ ಬರೆಯುತ್ತಾರೆ: "ಈ ರಚನೆ ಇಷ್ಟುಮಟ್ಟಿಗಾದರೂ ರೂಪುಗೊಳ್ಳುವುದಕ್ಕೆ ನನ್ನ ಪೂಜ್ಯ ಗುರುಗಳಾದ ಎಂ.ಹಿರಿಯಣ್ಣನವರ ಆಶೀರ್ವಾದವೂ ಉಪದೇಶವೂ ಮುಖ್ಯಕಾರಣ. ರಸಧ್ವನಿ ತತ್ವವನ್ನು ನಾನು ಮೊದಲ ಬಾರಿ ಕೇಳಿದ್ದು ಅವರ ಮುಖದಿಂದ. ಕಾಲೇಜಿನ ವಿದ್ಯಾರ್ಥಿಯಾಗಿರುವಾಗ 'ಕಾವ್ಯ ಪ್ರಕಾಶದ' ಹಲವು "ಉಲ್ಲಾಸ"ಗಳನ್ನು ಅವರ ಬಳಿ ಓದುವ ಅವಕಾಶ ನನಗೆ ದೊರೆಯಿತು. ಮುಂದೆ ನಾನು ಈ ಗ್ರಂಥರಚನೆಯ ಕಾರ್ಯವನ್ನು ಒಪ್ಪಿಕೊಂಡ ವಿಷಯವನ್ನು ಅವರಿಗೆ ಶ್ರುತಪಡಿಸಿ, ಅದಕ್ಕೆ ಕೈಹಾಕಲು ಧೈರ್ಯ ಬರುವಂತೆ ನನಗೆ 'ಧ್ವನ್ಯಾಲೋಕ'ವನ್ನು ಪಾಠ ಹೇಳಬೇಕೆಂದು ಕೇಳಿಕೊಂಡೆ. ಪ್ರಾಧ್ಯಾಪಕ ವೃತ್ತಿಯಿಂದ ವಿಶ್ರಾಂತಿ ಪಡೆದು ಲೇಖನ ಕಾರ್ಯಕ್ಕೆ ತಮ್ಮ ವಿರಾಮಕಾಲವನ್ನು ಮೀಸಲಾಗಿಟ್ಟಿದ್ದ ಈ ಹಿರಿಯ ಗುರುಗಳು ಶಿಷ್ಯವಾತ್ಸಲ್ಯದಿಂದ ಪ್ರವಚನ ಭಾರವನ್ನು ಮತ್ತೆ ಅಂಗೀಕರಿಸಿದರು. ಅವರ ಪಾದಸಮೀಪದಲ್ಲಿ ಮತ್ತೆ ಒಂದೂವರೆ ವರ್ಷಕಾಲ ಕುಳಿತು ಅವರ ಉಕ್ತಿಯನ್ನು ಆಲಿಸುತ್ತಾ, ಕಾವ್ಯರಹಸ್ಯವನ್ನು ಶಾಸ್ತ್ರಸಮಸ್ಯೆಯನ್ನೂ ಅರ್ಥಮಾಡಿಕೊಳ್ಳುತ್ತಾ ಅವರ ಪರಿಣತ ಪ್ರಜ್ಞೆಯ ಬೆಳಕಿನಲ್ಲಿ ಸಂಶಯಗಳನ್ನು ಪರಿಹರಿಸಿಕೊಳ್ಳುತ್ತಾ ನಾನು ಪಡೆದ ಅನುಭವ ಅನಿರ್ವಚನೀಯ. ಗುರುಕೃಪೆ ಇಷ್ಟಕ್ಕೇ ನಿಲ್ಲಲಿಲ್ಲ. ಗ್ರಂಥದ ಬರವಣಿಗೆ ಮುಗಿದಮೇಲೆ, ಇದರ ಅನೇಕ ಅಧ್ಯಾಯಗಳನ್ನು (ಎಂದರೆ ೧-೭, ೧೫, ೧೯, ೨೧, ೨೨ ಇವನ್ನು) ಅವರು ಸಮಗ್ರವಾಗಿ ಓದಿ ನ್ಯೂನತೆಗಳನ್ನು ತಮ್ಮ ಸೌಜನ್ಯ ಮಯವಾದ ರೀತಿಯಲ್ಲಿ ನನಗೆ ತಿಳಿಸಿ ತಿದ್ದಿಸಿ ಪರಮೋಪಕಾರ ಮಾಡಿದರು. ಅಚ್ಚಾದ ಪುಸ್ತಕವನ್ನು ಅವರ ಕೈಯಲ್ಲಿಟ್ಟು ತೃಪ್ತಿಗೊಳ್ಳುವ ಭಾಗ್ಯ ಮಾತ್ರ ನನಗೆ ಇಲ್ಲವಾಯಿತು" (ಈ ಪುಸ್ತಕ ಪ್ರಕಟವಾಗುವ ವೇಳೆಗೆ ಗುರುಗಳು ದೈವಾಧೀನರಾಗಿ ಮೂರು ವರ್ಷಗಳಾಗಿತ್ತು). ತೀ.ನಂ.ಶ್ರೀ.ಯವರಿಗೆ ಅವರ ಗುರುಗಳಲ್ಲಿದ್ದ ಉತ್ಕಟವಾದ ಪೂಜ್ಯ ಭಾವನೆ ಮತ್ತು ಗುರುಗಳಿಗೆ ಅವರ ಶಿಷ್ಯನಲ್ಲಿದ್ದ ಅಪಾರ ವಿಶ್ವಾಸ ಎರಡೂ ಇದರಿಂದ ವ್ಯಕ್ತವಾಗುತ್ತದೆ

ತಮ್ಮ "ಬಿಡಿಮುತ್ತು" (ಸಂಸ್ಕೃತ ಮುಕ್ತಕಗಳ ಕನ್ನಡಾನುವಾದ) ಪುಸ್ತಕವನ್ನು ಆಚಾರ್ಯ ಎಂ. ಹಿರಿಯಣ್ಣನವರಿಗೆ ಅರ್ಪಣೆ ಮಾಡಿ ತೀನಂಶ್ರೀ ಹೀಗೆ ಬರೆದಿರುತ್ತಾರೆ:

ಅಮರವಾಣಿಯ ಸೂಕ್ತಿ ಸಾಗರದೊಳಿಳಿದು
ನನ್ನುಸಿರ ಬಲಕೆ ಸಲುವಳವಿಯಲಿ ಸುಳಿದು
ಒಂದು ಹಿಡಿ ಬಿಡಿಮುತ್ತನಾಯ್ದು ತಂದಿರುವೆ
ಒಪ್ಪಿಸಲು ನಿಮ್ಮಡಿಗೆ ಕಣ್ ತೆರೆದ ಗುರುವೆ!

ಈ ತಮ್ಮ ಪೂಜ್ಯ ಗುರುಗಳೊಡನೆ ತೀ.ನಂ.ಶ್ರೀ.ಯವರಿಗೆ ಆದ ಈ ಕೆಳಗಿನ ಅನುಭವವನ್ನು ಈಗಲೂ ಎಲ್ಲರೂ ತುಂಬಾ ನೆನೆಯುತ್ತಿರುತ್ತಾರೆ. ಸುಮಾರು ೧೯೩೪ರಲ್ಲಿ ತೀ.ನಂ.ಶ್ರೀ.ಯವರ "ಕಾಳಿದಾಸನ ನಾಟಕಗಳಲ್ಲಿ ದುರಂತವಸ್ತು ವಿನ್ಯಾಸ" ಪ್ರಕಟವಾಗಿ ಅದನ್ನು ಪ್ರೊ॥ ಎಂ. ಹಿರಿಯಣ್ಣನವರು ಓದಿದರು. ಈ ಲೇಖನದಲ್ಲಿ ಕಾಳಿದಾಸನ ಬಗ್ಗೆ ತೀ.ನಂ.ಶ್ರೀ.ಯವರು ವ್ಯಕ್ತಪಡಿಸಿರುವ ಭಿನ್ನಾಭಿಪ್ರಾಯ ತಿಳಿದು ಅವರಿಗೆ ತುಂಬಾ ಕೋಪವೇ ಬಂದಿತಂತೆ. ತೀ.ನಂ.ಶ್ರೀ.ಯವರು ಅವರನ್ನು ಭೇಟಿಮಾಡಿ ಲೇಖನದ ಬಗ್ಗೆ ಅವರ ಅಭಿಪ್ರಾಯ ಕೇಳಿದಾಗ "ಏನು ನೀನು ಕಾಳಿದಾಸನಿಗಿಂತ ದೊಡ್ಡವನಾಗಿಬಿಟ್ಟೆಯಾ?" ಎಂದು ಹೇಳಿದರಂತೆ. ಗುರುವರ್ಯರ ಅಸಮಾಧಾನ ಮುಖದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತಿತ್ತು. ಇದನ್ನು ನೋಡಿ ಮತ್ತೇನೂ ಮಾತನಾಡಲಾರದೆ ತೀ.ನಂ.ಶ್ರೀ.ಯವರು ಅಲ್ಲಿಂದ ಹೊರಟು ಬಂದುಬಿಟ್ಟರು. ಮತ್ತು ಗುರುಗಳಿಗೆ ಈ ವಿಷಯದಲ್ಲಿ ಆದ ಅಸಮಾಧಾನ ಅವರಲ್ಲಿ ತುಂಬಾ ಗೊಂದಲವನ್ನುಂಟುಮಾಡಿತು. ಮತ್ತು ತಮ್ಮ ಸ್ನೇಹಿತರುಗಳಾದ ಎ.ಎನ್. ಮೂರ್ತಿರಾವ್, ಜಿ. ಹನುಮಂತರಾವ್ ಅವರುಗಳಲ್ಲಿ ಈ ಬಗ್ಗೆ ತುಂಬಾ ವಿಷಾದ ವ್ಯಕ್ತಪಡಿಸಿದರಂತೆ. ಆದರೆ ಗುರುಗಳನ್ನು ನೋಡಲು ಮತ್ತೆ ಒಂದು ವಾರದ ನಂತರ ತೀ.ನಂ.ಶ್ರೀ. ಹೋದರು. ಪ್ರೊ॥ ಹಿರಿಯಣ್ಣನವರು ಇವರನ್ನು ನೋಡಿದ ಕೂಡಲೆ ತಬ್ಬಿಕೊಂಡು ಅತ್ತುಬಿಟ್ಟರಂತೆ! ತೀ.ನಂ.ಶ್ರೀ.ಯವರ ಅಭಿಪ್ರಾಯಗಳ ಬಗ್ಗೆ ತಮ್ಮ ಅನಂತರದ ಮನವೊಪ್ಪಿಗೆ ಮತ್ತು ಅವರ ಮೊದಲಿನ ಅಭಿಪ್ರಾಯಕ್ಕಾಗಿ ಪಟ್ಟ ಪಶ್ಚಾತ್ತಾಪ ದುಃಖದಲ್ಲಿ ಉಕ್ಕಿಬಂದಿತು. ಇದನ್ನು ನೋಡಿ ತೀ.ನಂ.ಶ್ರೀ.ಯವರೂ ಅತ್ತುಬಿಟ್ಟರಂತೆ. ಗುರುಗಳ ಮೆಚ್ಚುಗೆ ಮುಖದಲ್ಲೇ ವ್ಯಕ್ತವಾಯಿತು. ಇಬ್ಬರೂ ಆ ಲೇಖನದ ವಿಷಯವನ್ನು ಎತ್ತಲೇ ಇಲ್ಲ. ಮತ್ತೆ ಎಲ್ಲ ವಿಷಯಗಳನ್ನು ಮಾತನಾಡಿದರು. ಸಾಮಾನ್ಯವಾಗಿ ತಮ್ಮ ಕೊಠಡಿಯಲ್ಲೇ ಶಿಷ್ಯನನ್ನು ಬೀಳ್ಕೊಡುತ್ತಿದ್ದ ಗುರುವರ್ಯರು ಅಂದು ತಮ್ಮ ಮನೆಯ ಗೇಟಿನ ತನಕ ಬಂದು ಅವರ ಹೆಗಲ ಮೇಲೆ ಕೈ ಹಾಕಿ ಪ್ರೀತಿಯಿಂದ ಬೀಳ್ಕೊಟ್ಟರು! ಶಿಷ್ಯನ ಲೇಖನವನ್ನು ಗುರು ಮೆಚ್ಚುವುದಕ್ಕೆ ಇದಕ್ಕಿಂತ ಇನ್ನಾವ ನಿದರ್ಶನವಿದ್ದೀತು!

ಹಣದ ವಿಷಯದಲ್ಲಿ ತೀ.ನಂ.ಶ್ರೀ.ಯವರ ನಿಲುವು

●

ನಮ್ಮ ತಂದೆಯವರು ತಮ್ಮ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಪರೀಕ್ಷೆಗಳಿಗಾಗಿ ಮೈಸೂರಿನ ಸರ್ಕಾರಿ ಆಸ್ಪತ್ರೆಗೆ ಕೆಲವು ಸಾರಿ ಹೋಗಿಬರಬೇಕಾಗುತ್ತಿತ್ತು. ಅಲ್ಲಿಯೂ ಅವರ ಸ್ನೇಹಿತರುಗಳು ಮತ್ತು ಶಿಷ್ಯರುಗಳು ಹಿರಿಯ ಮತ್ತು ಕಿರಿಯ ವೈದ್ಯರುಗಳಾಗಿ ಕೆಲಸ ಮಾಡುತ್ತಿದ್ದುದರಿಂದ ಅವರು ಆಸ್ಪತ್ರೆಯಲ್ಲಿ ತೀ.ನಂ.ಶ್ರೀ.ಯವರನ್ನು ತುಂಬಾ ಗೌರವದಿಂದ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದರು. ನಾನೂ ಅವರೊಡನೆ ಹೋಗುತ್ತಿದ್ದೆ.

ಒಮ್ಮೆ ನಾನು ನಮ್ಮ ತಂದೆಯವರು ಒಬ್ಬ ವೈದ್ಯರ ನಿರೀಕ್ಷೆಯಲ್ಲಿ ಕುಳಿತಿದ್ದಾಗ ಅಲ್ಲಿಯೇ ಓಡಾಡುತ್ತಿದ್ದ ಸೇವಕನೊಬ್ಬನಿಂದ ಯಾವುದೋ ಸಹಾಯವನ್ನು ಕೇಳಿದರು. ಮೊದಲು ನಿರುತ್ಸಾಹ ತೋರಿಸಿದವನು ಅನಂತರ ಕೆಲಸಮಾಡಿ ನಮ್ಮಿಂದ ಒಂದು ಭಕ್ಷಿಸನ್ನು ನಿರೀಕ್ಷಿಸಿದನು. ನಮ್ಮ ತಂದೆಯವರು ಎಂಟು ಆಣೆ ಕೊಟ್ಟಾಗ ಅವನ ನಡವಳಿಕೆಯೇ ಬದಲಾಗಿ ನಮ್ಮ ತಂದೆಯವರಿಗೆ ಮುಗುಳ್ನಗೆ ಬೀರಿ ದೊಡ್ಡ ನಮಸ್ಕಾರ ಮಾಡಿ ಹೋದನು. ಆಗ ನಾನು "ಅವನು ಎಷ್ಟು ಬೇಗ ನಿಮ್ಮ ಸೇವಕನಾಗಿಬಿಟ್ಟ!" ಎಂದು ಹೇಳಿದೆ. ಅದಕ್ಕೆ ನಮ್ಮ ತಂದೆಯವರು ಅವನು ತಮಗೆ ಸೇವಕನಾಗಲಿಲ್ಲ. ಹಣಕ್ಕೆ ಸೇವಕನಾದ ಎಂದು "ನರೋ ಅರ್ಥಾನುದಾಸಃ" ಎಂಬ ಸಂಸ್ಕೃತದ ಉಕ್ತಿಯನ್ನು ಹೇಳಿದರು.

ಮನೆಗೆ ಬಂದ ನಂತರ ಈ ವಿಷಯವನ್ನು ವಿಸ್ತರಿಸುತ್ತಾ ಅನೇಕಬಾರಿ ಒಬ್ಬ ಅಧಿಕಾರಿ ತನ್ನ ಹಿರಿಯ ಅಧಿಕಾರವನ್ನು ಗೌರವಿಸುವುದು(!) ಈ ಸಂಬಳಗಳ ತಾರತಮ್ಯದಿಂದಲೇ ಎಂದು ತಿಳಿಸಿದರು. ಕಮ್ಮಿ ಸಂಬಳ ಹೆಚ್ಚಿನ ಸಂಬಳಕ್ಕೆ ದಾಸನಾಗುತ್ತದೆ ಎಂದು ಹೇಳಿದರು. (ಇದು ಸುಮಾರು ೪೫ ವರ್ಷಗಳ ಹಿಂದೆ ಹೇಳಿದ ಮಾತು ಎಂದು ನೆನಪಿಸುತ್ತಿದ್ದೇನೆ!)

ಈ ಪ್ರಸಂಗದ ಹಿನ್ನೆಲೆಯಲ್ಲಿ ಪ್ರಸ್ತುತದ ವಿಷಯವೆಂದರೆ, ನಮ್ಮ ತಂದೆಗೆ "ಜೀವನದಲ್ಲಿ ಹಣಕ್ಕೆ ಯಾವ ಸ್ಥಾನ ಕೊಡಬೇಕು?" ಎನ್ನುವುದು ಎಲ್ಲರೂ ಗಂಭೀರವಾಗಿ ಆಲೋಚಿಸಬೇಕಾದ ವಿಷಯವಾಗಿತ್ತು. ಈ ಪ್ರಶ್ನೆಯನ್ನು ನನ್ನೆದುರಿಗೆ ಕೆಲವು ಸಾರಿ ಎತ್ತಿ ತಮ್ಮ ಅಭಿಪ್ರಾಯವನ್ನು ನನ್ನ ಮೇಲೆ ಹೇರದೆ ಅದನ್ನು ನಾನೇ ನಿರ್ಧಾರ ಮಾಡಬೇಕೆಂದು ಸೂಚ್ಯವಾಗಿ ತಿಳಿಸಿದ್ದರು. ಅವರ ಅಭಿಪ್ರಾಯದಲ್ಲಿ ಮತ್ತು ನಡವಳಿಕೆಯಲ್ಲಿ ಅವರ ನಿಲುವು ಸ್ಪಷ್ಟವಾಗಿತ್ತು: "ಜೀವನದಲ್ಲಿ ಹಣಕ್ಕೆ ಎರಡನೆಯ ಸ್ಥಾನವೇ ಹೊರತು ಮೊದಲನೆಯದು ಖಂಡಿತಾ ಆಗಬಾರದು. ಮೊದಲನೆಯ ಸ್ಥಾನ ಮೌಲಿಕವಾದ ಕಾರ್ಯಗಳಿಗೆ ಮೀಸಲಾಗಿರಬೇಕು."

ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ

●

ತೀ.ನಂ.ಶ್ರೀ.ಯವರು ಮಾನಸಗಂಗೋತ್ರಿಗೆ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗಕ್ಕೆ ಬಂದಮೇಲೆ, ಆಗ ತಾನೇ ಮಾನಸಗಂಗೋತ್ರಿಗೆ ಬದಲಾಯಿಸಿದ್ದರಿಂದ ಅಲ್ಲಿ ಅನೇಕ ಅಸೌಕರ್ಯಗಳೂ ತೊಡಕುಗಳೂ ಇದ್ದವು. ಮತ್ತು ಕೆಲವು ಮನಃಕ್ಲೇಶಗಳೂ ಇದ್ದವು. ಇವರು ಮಾನಸಗಂಗೋತ್ರಿಗೆ ಬರುವ ವೇಳೆಗೆ ಕುವೆಂಪು ಅವರು ಉಪಕುಲಪತಿ ಸ್ಥಾನದಿಂದ ನಿವೃತ್ತರಾಗಿ ಇನ್ನೊಬ್ಬರು ಪ್ರಾಧ್ಯಾಪಕರು ಆ ಸ್ಥಾನಕ್ಕೆ ಬಂದಿದ್ದರು. ಮಾನಸ ಗಂಗೋತ್ರಿಯಲ್ಲಿನ ಪ್ರಾಧ್ಯಾಪಕರುಗಳ ಬಗ್ಗೆ, ಅಲ್ಲಿಯ ಆಡಳಿತ ವ್ಯವಸ್ಥೆಗಳ ಬಗ್ಗೆ ಮತ್ತು ತೀ.ನಂ.ಶ್ರೀ.ಯವರ ಬಗ್ಗೆ ವೈಯಕ್ತಿಕವಾಗಿಯೂ ಅವರಿಗೆ ಸ್ವಲ್ಪ ಅಸಮಾಧಾನಗಳಿದ್ದವು.

ಯು.ಜಿ.ಸಿ.ಯವರು ಈ ಸ್ನಾತಕೋತ್ತರ ಕೇಂದ್ರದ ಬಗ್ಗೆ ಉತ್ಸಾಹ ತೋರಿಸಿ ಅದರ ಅಭಿವೃದ್ಧಿಗೆ ಅನುದಾನ ನೀಡಲು ವಿಶ್ವವಿದ್ಯಾಲಯದಿಂದ ಯೋಜನೆಗಳನ್ನು ಕೇಳಿತ್ತು. ತೀ.ನಂ.ಶ್ರೀ.ಯವರು ತಮ್ಮ ಸಹೋದ್ಯೋಗಿಗಳೊಡನೆ ದೀರ್ಘವಾಗಿ ಚರ್ಚಿಸಿ ತಮ್ಮ ವಿಭಾಗದ ಅಭಿವೃದ್ಧಿಯ ಬಗ್ಗೆ ಒಂದು ಶ್ರಮಪೂರಿತ ಮತ್ತು ಮೌಲಿಕವಾದ ಉದ್ದೇಶಿತ ಯೋಜನೆಗಳ ವರದಿಯನ್ನು ತಯಾರಿಸಿ ಅದನ್ನು ಯು.ಜಿ.ಸಿ.ಗೆ ಕಳಿಸಲು ಉಪಕುಲಪತಿಯವರಿಗೆ ನಿಯಮಿತ ಅವಧಿಯೊಳಗೆ ಕಳಿಸಿದ್ದರು.

ಯು.ಜಿ.ಸಿ.ಯ ತಜ್ಞರ ಸಮಿತಿ ಈ ವಿಷಯದಲ್ಲಿ ಪರಿಶೀಲಿಸಲು ಖ್ಯಾತ ತಜ್ಞ ಡಾ॥ ಭಟ್ಟಾಚಾರ್ಯ ನೇತೃತ್ವದಲ್ಲಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿತು. ಡಾ॥ ಭಟ್ಟಾಚಾರ್ಯರು ತೀ.ನಂ.ಶ್ರೀ.ಯವರ ಖ್ಯಾತಿಯ ಬಗ್ಗೆ ಸಾಕಷ್ಟು ಬಲ್ಲವರಾಗಿದ್ದು ರಾಷ್ಟ್ರೀಯ ಮಟ್ಟದ ತಜ್ಞ ಸಮಿತಿಗಳಲ್ಲಿ ಮತ್ತು ವೇದಿಕೆಗಳಲ್ಲಿ ತೀ.ನಂ.ಶ್ರೀ.ಯವರನ್ನು ಭೇಟಿ ಮಾಡಿದ್ದು ಅವರ ಬಗ್ಗೆ ತುಂಬಾ ಗೌರವವನ್ನುಳ್ಳವರಾಗಿದ್ದರು. ಈ ಸಮಿತಿಯು ಕನ್ನಡ ವಿಭಾಗಕ್ಕೆ ಬಂದಾಗ ತೀ.ನಂ.ಶ್ರೀ.ಯವರಿಗೆ ಸಖೇದಾಶ್ಚರ್ಯ ಕಾದಿತ್ತು!

ಡಾ॥ ಭಟ್ಟಾಚಾರ್ಯರು ತೀ.ನಂ.ಶ್ರೀ.ಯವರನ್ನು ಕಂಡಕೂಡಲೆ "What is this Sreekantaiya, I have not received any proposal for the development and request for grants of your department. I am really surprised about this with a well known scholar like you heading the Kannada

Department" ಎಂದು ತಿಳಿಸಿದರೆಂದು ಅಂದು ಮನೆಗೆ ಬಂದ ನಂತರ ನಮ್ಮ ತಂದೆ ನನಗೆ ತಿಳಿಸಿದ್ದರು.

ನಿಜವಾದ ವಿಷಯವೆಂದರೆ ಮೇಲೆ ಸೂಚಿಸಿದ ಕಾರಣಗಳಿಂದಾಗಿ ಉಪಕುಲಪತಿಯವರು ತೀ.ನಂ.ಶ್ರೀ.ಯವರು ಕಳಿಸಿದ್ದ ಪ್ರಸ್ತಾಪಗಳನ್ನು ಯು.ಜಿ.ಸಿ.ಗೆ ಕಳಿಸದೆ ತಡೆಹಿಡಿದಿದ್ದರು. ಅನಂತರ ತೀ.ನಂ.ಶ್ರೀ. ಇದರ ಬಗ್ಗೆ ತಮ್ಮ ಖೇದವನ್ನು ಸೂಚಿಸಿ ನಿಜಸ್ಥಿತಿಯನ್ನು ತಿಳಿಸಿ ಡಾ॥ ಭಟ್ಟಾಚಾರ್ಯ ಅವರಿಗೆ ಅಲ್ಲಿಯೇ ಅದರ ಪ್ರತಿಯೊಂದನ್ನು ಕೊಟ್ಟರಂತೆ. ಅದನ್ನು ಓದಿ ಡಾ॥ ಭಟ್ಟಾಚಾರ್ಯ ಅವರು ಮೆಚ್ಚುಗೆಯನ್ನು ಸೂಚಿಸಿ ಅದಕ್ಕೆ ಸಾಧ್ಯವಾದ ಎಲ್ಲ ಸಹಾಯಗಳನ್ನು ನೀಡಲು ಪ್ರಯತ್ನಿಸುದಾಗಿ ತಿಳಿಸಿದರಂತೆ.

ತೀ.ನಂ.ಶ್ರೀ. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ?

●

೧೯೬೧-೬೨ ಇಸವಿಯಲ್ಲಿ ಮೈಸೂರು ರಾಜ್ಯದಲ್ಲಿ ವಿಧಾನಸಭೆಗೆ ಚುನಾವಣೆಯ ಸಮಯ ಸನ್ನಿಹಿತವಾಗಿತ್ತು. ಆಗ ತೀ.ನಂ.ಶ್ರೀ.ಯವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇನ್ನೂ ಕನ್ನಡ ಪ್ರಾಧ್ಯಾಪಕರಾಗಿದ್ದರು.

ಆಗ ಮಂಡ್ಯ ಕ್ಷೇತ್ರದಿಂದ ಶ್ರೀ ಕೆ.ವಿ. ಶಂಕರೇಗೌಡರು ಕಾಂಗ್ರೆಸ್ ಪಕ್ಷದಿಂದ ವಿಧಾನಸಭೆಗೆ ಚುನಾವಣೆಗೆ ನಿಲ್ಲುವವರಾಗಿದ್ದರು. ಆಗಿನ ವಾತಾವರಣದಲ್ಲಿ ಕೆ.ವಿ. ಶಂಕರೇಗೌಡರಿಗೆ ಒಳ್ಳೆಯ ಗೌರವ ಮತ್ತು ಜನರ ಅಭಿಮಾನವಿದ್ದುದರಿಂದ ಅವರು ಗೆಲ್ಲುವ ನಿರೀಕ್ಷೆಯೊಂದೇ ಅಲ್ಲ, ಅವರು ಆರಿಸಿಬಂದು ಮಂತ್ರಿಮಂಡಲದಲ್ಲಿ ಶಿಕ್ಷಣ ಸಚಿವರಾಗುವವರೆನ್ನುವ ನಿರೀಕ್ಷೆಯೂ ದಟ್ಟವಾಗಿತ್ತು. ಈ ವಿಷಯದಲ್ಲಿ ಶ್ರೀ ಶಂಕರೇಗೌಡರು ಬಹಳ ಭರವಸೆಯನ್ನಿಟ್ಟುಕೊಂಡಿದ್ದರು. ಸಾಮಾನ್ಯವಾಗಿ ಸಾರ್ವಜನಿಕರ ನಿರೀಕ್ಷೆಯೂ ಅದೇ ಆಗಿತ್ತು.

ಆ ಸಮಯದಲ್ಲಿ ಅವರ ವಿಶ್ವಾಸಿಗಳೊಬ್ಬರು ಬಂದು ನಮ್ಮ ತಂದೆಗೆ ಹೇಳಿದ್ದರು. "ಶ್ರೀ ಶಂಕರೇಗೌಡರು ಹೇಳಿದರು. 'ನಾನು ಈ ಬಾರಿ ಶಿಕ್ಷಣ ಸಚಿವನಾದಾಗ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡಕ್ಕೆ ಒಳ್ಳೆಯ ಅಭಿವೃದ್ಧಿ ಕೆಲಸ ಮಾಡಬೇಕು. ಅದಕ್ಕಾಗಿ ಅನೇಕ ಯೋಜನೆಗಳನ್ನು ಆಲೋಚಿಸಿದ್ದೇನೆ. ಆದ್ದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರೊ॥ ತೀ.ನಂ.ಶ್ರೀ.ಯವರನ್ನು ಉಪಕುಲಪತಿಗಳನ್ನಾಗಿ ಮಾಡಲು ನಾನು ಆಗಲೇ ನಿರ್ಧರಿಸಿದ್ದೇನೆ'. ಇದನ್ನು ನಿಮಗೆ ತಿಳಿಸುವಂತೆ ನನಗೆ ಹೇಳಿದ್ದಾರೆ." ಈ ವಿಷಯ ಆಗಿನ ಸ್ಥಳೀಯ ವರ್ತಮಾನ ಪತ್ರಿಕೆಯಲ್ಲಿ ಬಂದಿದ್ದೂ ನನಗೆ ನೆನಪಿದೆ. ಈ ಪ್ರಸ್ತಾಪಕ್ಕೆ ತೀ.ನಂ.ಶ್ರೀ.ಯವರು ಹೆಚ್ಚಿನ ಪ್ರತಿಕ್ರಿಯೆಯನ್ನೇನೂ ತೋರಿಸಿರಲಿಲ್ಲ.

ಆದರೆ ಯಾರ ದುರಾದೃಷ್ಟವೋ! ಶ್ರೀ ಶಂಕರೇಗೌಡರು ಚುನಾವಣೆಯಲ್ಲಿ ವಿಜಯರಾಗಲಿಲ್ಲ! (ಅವರು ಕೆಲವು ತಿಂಗಳಾದ ಮೇಲೆ ಮರುಚುನಾವಣೆಯಲ್ಲಿ ವಿಜಯಿಗಳಾಗಿ ಶಿಕ್ಷಣ ಸಚಿವರಾಗಿದ್ದು ಬೇರೆ ವಿಷಯ. ಆ ವೇಳೆಗೆ ತೀ.ನಂ.ಶ್ರೀ. ಸೇವೆಯಿಂದ ನಿವೃತ್ತರಾಗಿದ್ದರು.) ಶ್ರೀ ಶಂಕರೇಗೌಡರಿಗೆ ತೀ.ನಂ.ಶ್ರೀ.ಯವರ ಮೇಲೆ ಅಪಾರ ಗೌರವವಿತ್ತು.

ಈ ಸಮಯದಲ್ಲಿ ನಮ್ಮ ತಂದೆ ನನಗೆ ಹೇಳಿದ್ದರು: "ಈ ಶಂಕರೇಗೌಡರು ಚುನಾವಣೆಯ ಸಮಯದಲ್ಲಿ ನನ್ನ ಹೆಸರನ್ನು ಎತ್ತಿ, ತಾವು ಏಕೆ ಸೋಲನ್ನನುಭವಿಸಿದರು!"

‘ಪ್ರಜಾವಾಣಿ’ಯಲ್ಲಿ ತೀ.ನಂ.ಶ್ರೀ.ಯವರ ಲೇಖನ?

●

೧೯೫೦ನೆಯ ಇಸವಿಯಲ್ಲಿ ತೀ.ನಂ.ಶ್ರೀ.ಯವರ ‘ಸಮಾಲೋಕನ’ ಮುದ್ರಣವಾಗುತ್ತಿತ್ತು. ಆ ಸಮಯದಲ್ಲಿ ಒಂದು ಬೆಳಗ್ಗೆ ನಮ್ಮ ತಂದೆಯವರು ನನ್ನನ್ನು ಕೂಗಿದರು. ಆಗ ಅವರ ಕೈಯಲ್ಲಿ ‘ಪ್ರಜಾವಾಣಿ’ ಇತ್ತು. “ಇಲ್ಲಿ ತೀ.ನಂ.ಶ್ರೀಕಂಠಯ್ಯ ಎಂದು ನನ್ನ ಹೆಸರಿನಲ್ಲಿ ‘ಕನ್ನಡ ಜಾನಪದ ಸಾಹಿತ್ಯ’ ಎಂದು ಲೇಖನ ಪ್ರಕಟವಾಗಿದೆ ನೋಡು” ಎಂದರು. ಅದನ್ನು ನೋಡಿ ನನಗೂ ಆಶ್ಚರ್ಯ. ನಮ್ಮ ತಂದೆಯವರು ಸಾಮಾನ್ಯವಾಗಿ ದಿನಪತ್ರಿಕೆಗೆ ಯಾವ ಲೇಖನವನ್ನೂ ಕಳಿಸುತ್ತಿರಲಿಲ್ಲ. ಮತ್ತು ಆ ಲೇಖನ ನೋಡಿದರೆ ಅದು ತೀ.ನಂ.ಶ್ರೀ.ಯವರ ಶೈಲಿಯೂ ಅಲ್ಲ ಮತ್ತು ಅವರ “ಪರಿಪೂರ್ಣತೆಯ ಮೂಸೆ”ಯಿಂದ ಹದವಾಗಿ ಬಂದಂತಹುದೂ ಅಲ್ಲ! ಇದಾದ ಸ್ವಲ್ಪ ಹೊತ್ತಿಗೆ ‘ಸಮಾಲೋಕನ’ವನ್ನು ಪ್ರಕಟಿಸುತ್ತಿದ್ದ ಶ್ರೀ ಹೆಚ್.ಎಂ. ಶಂಕರ ನಾರಾಯಣರು ‘ಪ್ರಜಾವಾಣಿ’ಯನ್ನು ಹಿಡಿದುಕೊಂಡು ಬಂದು “ಸಾರ್ ಈ ಲೇಖನವನ್ನೂ ‘ಸಮಾಲೋಕನ’ ಸಂಕಲನದಲ್ಲಿ ಸೇರಿಸೋಣವೇ” ಎಂದು ಕೇಳಿದರು. ತೀ.ನಂ.ಶ್ರೀ.ಯವರ ನೇರವಾದ ಹೇಳಿಕೆ “ಈ ಲೇಖನ ನನ್ನದೆಂದು ನಿಮಗೆ ಅನಿಸಿದರೆ ಸೇರಿಸಿ”. ಇದಕ್ಕೆ ಶ್ರೀ ಶಂಕರನಾರಾಯಣರಾಯರ ಮೌನವೇ ಪ್ರತಿಕ್ರಿಯೆಯಾಯಿತು.

ಈ ಸಂಬಂಧದಲ್ಲಿ ತೀ.ನಂ.ಶ್ರೀ.ಯವರು ‘ಪ್ರಜಾವಾಣಿ’ಯ ಸಂಪಾದಕರಿಗೆ ಬರೆದ ಪತ್ರ ಮತ್ತು ಅವರ ಉತ್ತರ ಇದರ ವಿವರಗಳನ್ನು ತಿಳಿಸುತ್ತದೆ (ಅನುಬಂಧಗಳು ೪೦ ಮತ್ತು ೪೧). ಅನಂತರ ಪ್ರಜಾವಾಣಿಯಲ್ಲಿ ಇದರ ಬಗ್ಗೆ ಯಾವ ಪ್ರಕಟಣೆಯೂ ಬರಲಿಲ್ಲ ಮತ್ತು ಅಲ್ಲಿಂದ ಪತ್ರವೂ ಬರಲಿಲ್ಲ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ತೀ.ನಂ.ಶ್ರೀ.ಯವರ ಭಾಷಣ

●

೧೯೬೧ನೆಯ ಇಸವಿಯಲ್ಲಿ ಮೇಲಿನ ಸಂಸ್ಥೆಯಲ್ಲಿ ಭಾಷಣಕ್ಕಾಗಿ ತೀ.ನಂ.ಶ್ರೀ.ಯವರಿಗೆ ಆಹ್ವಾನ ಬಂದಿತು. ಕನ್ನಡಕ್ಕೆ ಸಂಬಂಧಪಟ್ಟಂತೆ ಒಂದು ವಿಚಾರಪೂರಿತ ಭಾಷಣಗಳ ಸಪ್ತಾಹವನ್ನು ನಡೆಸುತ್ತಿರುವುದಾಗಿಯೂ ಅದು ಅಕ್ಟೋಬರ್ ೬ರಂದು ಆರಂಭವಾಗುವುದಾಗಿಯೂ ಅದೇ ದಿನ ತೀ.ನಂ.ಶ್ರೀ.ಯವರು "ಕನ್ನಡ ಸಾಹಿತ್ಯ"ದ ಮೇಲೆ ಭಾಷಣಮಾಡಿ ಈ ಸಪ್ತಾಹವನ್ನು ಉದ್ಘಾಟಿಸಬೇಕೆಂದು ತಿಳಿಸಿದ್ದರು. ಈ ಸಪ್ತಾಹದ ವಿಷಯದಲ್ಲಿ ತೀ.ನಂ.ಶ್ರೀ.ಯವರು ಉತ್ಸಾಹ ತೋರಿ, ಈ ಭಾಷಣಕ್ಕಾಗಿಯೇ ಬೆಂಗಳೂರಿಗೆ ಪ್ರಯಾಣಮಾಡಿ ಮೈಸೂರಿಗೆ ಹಿಂತಿರುಗಿದರು. ಹಿಂತಿರುಗಿದನಂತರ ಭಾಷಣ ಚೆನ್ನಾಗಿ ಬಂತೆಂದು ಮತ್ತು ಶ್ರೋತೃಗಣ ತುಂಬಾ ಉತ್ಸಾಹ ತೋರಿದರೆಂದು ಸಂತೋಷ ವ್ಯಕ್ತಪಡಿಸಿ ಇದರ ಉಳಿದ ವ್ಯವಸ್ಥೆಗಳ ಬಗ್ಗೆ ನನಗೆ ಸ್ವಲ್ಪ ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಸಂಬಂಧದಲ್ಲಿ ತೀ.ನಂ.ಶ್ರೀ.ಯವರಿಗೂ ಮತ್ತು ಆ ಸಂಸ್ಥೆಯವರಿಗೂ ನಡೆದ ಪತ್ರ ವ್ಯವಹಾರವನ್ನೂ ಇಲ್ಲಿ ಕೊಡಲಾಗಿದೆ (ಅನುಬಂಧಗಳು ೪೨ ರಿಂದ ೪೪).

ಇದರಿಂದ ಭಾಷಣಕಾರರ ಬಗ್ಗೆ ಸಂಸ್ಥೆಗಳು ವಹಿಸಬೇಕಾದ ಕಾಳಜಿಯ ಬಗ್ಗೆ ತೀ.ನಂ.ಶ್ರೀ.ಯವರ ಅಭಿಪ್ರಾಯ ತಿಳಿದುಬರುತ್ತದೆ.

ದಾವಣಗೆರೆಯ ಕಾಲೇಜಿನಲ್ಲಿ ವಿದ್ಯಾರ್ಥಿಯೊಬ್ಬನಿಗೆ ಶುಲ್ಕ ಮಾಫಿ

●

ಈ ವಿಷಯವನ್ನು ನನ್ನ ಬಂಧುಗಳೊಬ್ಬರು ನನಗೆ ತಿಳಿಸಿದ್ದಾರೆ. ತೀ.ನಂ.ಶ್ರೀ.ಯವರು ೧೯೪೪-೪೫ರಲ್ಲಿ ದಾವಣಗೆರೆಯ ಧ.ರಾ.ಮ. ಕಾಲೇಜಿನಲ್ಲಿ ಸ್ವಲ್ಪ ಕಾಲ ಸೂಪರಿಂಟೆಂಡೆಂಟ್ ಆಗಿದ್ದರು. ಆಗ ನಮ್ಮ ಸ್ಥಳೀಯ ಹಿರಿಯರು ಮತ್ತು ವೈದೀಕರಾದ ಬಂಧುಗಳೊಬ್ಬರ ಮೊಮ್ಮಗ ದಾವಣಗೆರೆಯ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ವಿದ್ಯಾರ್ಥಿಯಾಗಿ ಸೇರಿದರು. ಆಗ ಆ ಹಿರಿಯರು ನಮ್ಮ ತಂದೆಯವರಿಗೆ ಒಂದು ಪತ್ರ ಕೊಟ್ಟು ಇವನಿಗೆ ಮನೆಯಲ್ಲಿ ಹೆಚ್ಚಿನ ಅನುಕೂಲವಿಲ್ಲದಿರುವುದರಿಂದ ಅವನಿಗೆ ಶುಲ್ಕಮಾಫಿ (Freeship) ದೊರಕಿದರೆ ಅನುಕೂಲವಾಗುತ್ತದೆಂದು ತಿಳಿಸಿದ್ದರು.

ನಮ್ಮ ತಂದೆಯವರು ಈ ವಿದ್ಯಾರ್ಥಿಗೆ ಈ ವಿಷಯ ಇಷ್ಟರಲ್ಲೇ ಗಣನೆಗೆ ಬರುವುದಾಗಿಯೂ ಆಗ ಮಾಡುವುದಾಗಿ ತಿಳಿಸಿದ್ದರು. ಆದರೆ ಇದಕ್ಕೆ ಮೊದಲೇ ನಮ್ಮ ತಂದೆ ಬೆಂಗಳೂರಿಗೆ ವರ್ಗವಾಗಿ ಬಂದರು. ಆ ಜಾಗಕ್ಕೆ ಶ್ರೀ ನಾ.ಕಸ್ತೂರಿಯವರು ಬಂದರು. ಈ ವಿದ್ಯಾರ್ಥಿ ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತೆಂದು ಭಾವಿಸಿದ್ದರು. ಆದರೆ ಸ್ವಲ್ಪ ದಿನಗಳಲ್ಲಿಯೇ ಶ್ರೀ ಕಸ್ತೂರಿಯವರು ಅನಿರೀಕ್ಷಿತವಾಗಿ ಈ ವಿದ್ಯಾರ್ಥಿಗೆ ಹೇಳಿ ಕಳಿಸಿದರು. ವಿದ್ಯಾರ್ಥಿ ಸ್ವಲ್ಪ ಆತಂಕದಿಂದಲೇ ಅವರನ್ನ ಭೇಟಿ ಮಾಡಿದರು. ಆಗ ಶ್ರೀ ಕಸ್ತೂರಿಯವರು "ನೋಡಪ್ಪ ನಿನ್ನ ವಿಷಯವನ್ನು ಶ್ರೀಕಂಠಯ್ಯ ನನಗೆ ಆಗಲೇ ಹೇಳಿ ಹೋಗಿದ್ದಾನೆ. ಅದು ಇಷ್ಟರಲ್ಲಿಯೇ ನಿರ್ಧಾರವಾಗುತ್ತದೆ. ಆಗ ಮಾಡುತ್ತೇನೆ" ಎಂದು ಭರವಸೆ ಕೊಟ್ಟು ಕಳಿಸಿದರು. ಆದರೆ ಮತ್ತೆ ಇದರ ನಿರ್ಧಾರಕ್ಕೆ ಮೊದಲು ಶ್ರೀ ನಾ. ಕಸ್ತೂರಿಯವರಿಗೆ ವರ್ಗವಾಯಿತು. ಮತ್ತೆ ವಿದ್ಯಾರ್ಥಿಯಲ್ಲಿ ನಿರಾಶೆ ಕವಿಯಿತು ಮತ್ತು ಈಗ ಇದು ನಿಜವಾಗಿಯೂ ಮುಕ್ತಾಯವಾದ ವಿಷಯ ಎನ್ನುವ ಭಾವನೆ ಬಂದಿತು. ಈ ಜಾಗಕ್ಕೆ ಶ್ರೀ ತ್ಯಾಗರಾಜನ್ ಅವರು ಬಂದರು. ಮತ್ತೆ ಕೆಲವು ದಿನಗಳಲ್ಲಿ ಅವರಿಂದ ಈ ವಿದ್ಯಾರ್ಥಿಗೆ ಅನಿರೀಕ್ಷಿತವಾದ ಕರೆ ಬಂದಿತು. ಅವರನ್ನು ಭೇಟಿಯಾದಾಗ "ನೋಡಪ್ಪ ನಿನ್ನ ವಿಷಯ ಕಸ್ತೂರಿ ಹೇಳಿಹೋಗಿದ್ದಾರೆ. ಶ್ರೀಕಂಠಯ್ಯ ಅವರಿಗೆ ಹೇಳಿ ಹೋಗಿದ್ದಾರಂತೆ. ಈ ವಿಷಯ ಈಗಲೇ ನಿರ್ಧಾರವಾಗುತ್ತಿದೆ. ನೀನು ಈ ವಿಷಯ ಯೋಚನೆ ಮಾಡಬೇಡ" ಎಂದು ತಿಳಿಸಿದರಂತೆ. ಅದರಂತೆ ಈ ವಿದ್ಯಾರ್ಥಿಗೆ ಎರಡು ವರ್ಷಗಳ ವಿದ್ಯಾಭ್ಯಾಸದಲ್ಲಿ ಶುಲ್ಕಮಾಫಿ ದೊರಕಿತ್ತು. ಈ ಎಲ್ಲ ಹಿರಿಯರ ನಿಜವಾದ ದೊಡ್ಡತನ ಮತ್ತು ಕಳಕಳಿಯನ್ನು ನನ್ನ ಬಂಧುಗಳು ಈಗಲೂ ನೆನೆಯುತ್ತಿರುತ್ತಾರೆ.

‘ಆಚಾರ್ಯ ಕೃತಿ’ ಭಾರತೀಯ ಕಾವ್ಯಮೀಮಾಂಸೆ

●

ತೀ.ನಂ.ಶ್ರೀ.ಯವರ ಈ ಗ್ರಂಥದ ಬಗ್ಗೆ ಇಲ್ಲಿ ಹೇಳಬೇಕಾದದ್ದು ಹೆಚ್ಚೇನೂ ಉಳಿದಿಲ್ಲ. ತೀ.ನಂ.ಶ್ರೀ.ಯವರು ಈ ಗ್ರಂಥವನ್ನು ಬರೆದು ಮುಗಿಸಿ ಅಚ್ಚು ಮನೆಗೆ ಕಳಿಸಿದ್ದು ೧೯೪೨ರಲ್ಲಿ. (ಆಗ ಅವರಿಗೆ ಕೇವಲ ೩೫ ವರ್ಷ ವಯಸ್ಸಾಗಿತ್ತು.) ಆದರೆ ಮಹಾಯುದ್ಧದ ಬಿಸಿ ಮತ್ತು ಇತರ ಕಾರಣಗಳಿಂದ ಇದು ಅಲ್ಲಿಯ ಗಜಗರ್ಭದಿಂದ ಹೊರಬಂದದ್ದು ೧೯೫೩ರಲ್ಲಿ. ಅದು ಪ್ರಕಟವಾದಾಗ ಮತ್ತು ಇಂದಿನವರೆಗೂ ಸತತವಾಗಿ ಅದರ ಮೌಲ್ಯದ ಬಗ್ಗೆ ಇರುವ ಅಭಿಪ್ರಾಯ ಇಲ್ಲಿ ಪುನರಾವರ್ತನೆ ಮಾಡುವ ಅವಶ್ಯಕತೆ ಇಲ್ಲ.

ಕೇಂದ್ರ ಸಾಹಿತ್ಯ ಅಕಾಡೆಮಿಯು ಬೇರೆ ಬೇರೆ ಭಾಷೆಗಳಲ್ಲಿ ಹಿಂದಿನ ೩ ವರ್ಷಗಳಲ್ಲಿ ಪ್ರಕಟವಾದ ಉತ್ತಮ ಕೃತಿಗೆ ಕೊಡುವ ಬಹುಮಾನವನ್ನು ೧೯೫೦ರ ದಶಕದಲ್ಲಿ ಪ್ರಾರಂಭಿಸಿತು. ಕನ್ನಡ ಭಾಷೆಯಲ್ಲಿ ಇದರ ಮೊದಲನೆಯ ಬಹುಮಾನ ಶ್ರೀ ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ"ಗೆ ಬಂದಿತು. ಅನಂತರ ಅದರ ಮುಂದಿನ ವರ್ಷ ಅದು "ಭಾರತೀಯ ಕಾವ್ಯಮೀಮಾಂಸೆ"ಗೆ ಬರುತ್ತದೆಂದು ಹಳೆಯ ಮೈಸೂರಿನ ಭಾಗದ ಕನ್ನಡ ವಿದ್ವಾಂಸರುಗಳ ಅಭಿಪ್ರಾಯವಾಗಿತ್ತು. ಆದರೆ ಆ ವರ್ಷ ಶ್ರೀ ರಂ.ಶ್ರೀ. ಮುಗಳಿಯವರ "ಕನ್ನಡ ಸಾಹಿತ್ಯ ಚರಿತ್ರೆ"ಗೆ ದೊರಕಿತು. ಆದರೆ ಸ್ವಾತಂತ್ರ್ಯೋತ್ತರ ಪುಸ್ತಕಗಳನ್ನು ಪರಿಗಣಿಸಿದ ಈ ಮೊದಲ ಬಹುಮಾನಗಳು ಭಾರತೀಯ ಕಾವ್ಯಮೀಮಾಂಸೆ ಯನ್ನು ಮೂರನೆಯ ಬಾರಿಗೆ ಪರಿಗಣಿಸಲು ಅವಕಾಶವಿಲ್ಲದಾಯಿತು. ಏಕೆಂದರೆ ೧೯೫೩ರ ವರೆಗೆ ಪ್ರಕಟವಾದ ಪುಸ್ತಕಗಳನ್ನು ಪರಿಗಣಿಸಲು ಎರಡು ಬಾರಿ ಮಾತ್ರ ಅವಕಾಶವಿತ್ತು. ಆದ್ದರಿಂದ "ಭಾರತೀಯ ಕಾವ್ಯಮೀಮಾಂಸೆ"ಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬರಲೇ ಇಲ್ಲ. ಇದರಂತೆ ತೀ.ನಂ.ಶ್ರೀ.ಯವರಿಗೆ ಅವರ ಜೀವಿತಕಾಲದಲ್ಲಿ ಯಾವ ಬಹುಮಾನ, ಸನ್ಮಾನ ಹಾಗೂ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಯಾವುದೂ ಒದಗಿ ಬರಲಿಲ್ಲ. ಅವರ ನಿಧನಕ್ಕೆ ಮೊದಲು ರಾಜ್ಯ ಸಾಹಿತ್ಯ ಅಕಾಡಮಿ ಸನ್ಮಾನ ಪ್ರಕಟವಾಗಿತ್ತು. ಆದರೆ ೧೯೯೦ರಲ್ಲಿ ದೊರೆತ 'ಪಂಪ ಪ್ರಶಸ್ತಿ' ಅವರ ಅಭಿಮಾನಿಗಳ ಕೊರತೆಯನ್ನು ತಕ್ಕಮಟ್ಟಿಗೆ ನೀಗಿಸಿತು.

ಭಾರತೀಯ ಕಾವ್ಯಮೀಮಾಂಸೆಯ ಮೊದಲನೆಯ ಮತ್ತು ಎರಡನೆಯ ಪರಿಷ್ಕೃತ ಆವೃತ್ತಿ ಮೈಸೂರು ವಿಶ್ವವಿದ್ಯಾಲಯದಿಂದಲೇ ಪ್ರಕಟವಾಗಿದ್ದು ತೀ.ನಂ.ಶ್ರೀ.ಯವರ ನಿಧನದ

ನಂತರ ಐದು ಮರುಮುದ್ರಣಗಳನ್ನು ಕಂಡಿದೆ. ಮೈಸೂರು ವಿಶ್ವವಿದ್ಯಾಲಯದಿಂದಲೆ ಸುಮಾರು ೨೫ ಸಾವಿರ ಪ್ರತಿಗಳು ಮುದ್ರಣವಾಗಿದೆ. ಇದಲ್ಲದೆ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಶ್ವ ಕನ್ನಡ ಸಮ್ಮೇಳನದ ಪ್ರಕಟಣೆಗಳಲ್ಲಿ ಸುಮಾರು ೨೫ ಸಾವಿರ ಪ್ರತಿಗಳು ಮುದ್ರಣವಾಗಿದೆ. ಮತ್ತು ಇದಕ್ಕೆ ಮಾರುಕಟ್ಟೆಯಲ್ಲಿ ಯಾವಾಗಲೂ ಬತ್ತದ ಬೇಡಿಕೆ ಇರುತ್ತದೆ.

ಕನ್ನಡ ಮಧ್ಯಮ ವ್ಯಾಕರಣ

●

ಸಾಮಾನ್ಯ ಜನರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ತುಂಬಾ ಪ್ರಚಲಿತವಾದ ತೀ.ನಂ.ಶ್ರೀ.ಯವರ ಇನ್ನೊಂದು ಪುಸ್ತಕ 'ಕನ್ನಡ ಮಧ್ಯಮ ವ್ಯಾಕರಣ'. ಮಾಧ್ಯಮಿಕ ಶಾಲೆಗಳಿಗೆ ಪಠ್ಯಪುಸ್ತಕವಾಗಿ ನಿಯಮಿತವಾದ ಈ ಪುಸ್ತಕವನ್ನು ತೀ.ನಂ.ಶ್ರೀ.ಯವರು ಬರೆದದ್ದು ೧೯೩೭–೩೮ರಲ್ಲಿ. ಇದರ ಸಂಪೂರ್ಣ ಹಕ್ಕುಗಳು ಮೈಸೂರು ಸರ್ಕಾರಕ್ಕೆ ಸೇರಿದ್ದು, ಇದಕ್ಕಾಗಿ ತೀ.ನಂ.ಶ್ರೀ.ಯವರಿಗೆ ದೊರೆತ ಒಟ್ಟು ಸಂಭಾವನೆ ೩೦೦ ರೂಪಾಯಿಗಳು ಮಾತ್ರ. ಸರ್ಕಾರ ಇದರ ಕನಿಷ್ಠ ಹತ್ತು ಲಕ್ಷ ಪ್ರತಿಗಳನ್ನಾದರೂ ಮುದ್ರಿಸಿ ಮಾರಾಟ ಮಾಡಿದೆ. ಇದು ಅನೇಕ ಮರು ಮುದ್ರಣಗಳನ್ನು ಕಂಡಿದೆ. ಆದರೆ ಯಾವ ಸಾರಿಯೂ ಇದಕ್ಕೆ ಸಂಬಂಧಪಟ್ಟ ಸಮಿತಿ ಅಧಿಕಾರಿಗಳಿಗೆ ಸೌಜನ್ಯಕ್ಕಾಗಿಯಾದರೂ ಪುನರ್ಮುದ್ರಣಗಳನ್ನು ತರುವಾಗ ಇದರಲ್ಲೇನಾದರೂ ಬದಲಾವಣೆ ಇದೆಯೇ ಎಂದು ಕೇಳುವ ಮತ್ತು ಅದರ ಒಂದು ಪ್ರತಿಯನ್ನಾದರೂ ತೀ.ನಂ.ಶ್ರೀ.ಯವರಿಗೆ ಕಳಿಸುವ ಅವಶ್ಯಕತೆ ಕಾಣಲಿಲ್ಲ. ತೀ.ನಂ.ಶ್ರೀ.ಯವರ ಬಳಿ ಇದ್ದದ್ದು ಇದರ ಮೊದಲನೆಯ ಆವೃತ್ತಿಯ ಒಂದು ಪ್ರತಿ ಮಾತ್ರ. ಆದ್ದರಿಂದ ಅದನ್ನು ತಮ್ಮ ಬಳಿಯೇ ತಮ್ಮ ಉಪಯೋಗಕ್ಕಾಗಿ ಇಟ್ಟುಕೊಂಡಿದ್ದರು. ಅವರ ಮನೆಯಲ್ಲಿದ್ದ ಹುಡುಗರು ವಿದ್ಯಾರ್ಥಿಗಳು – ನಾನೂ ಮತ್ತು ನನ್ನ ಅಕ್ಕ ಸೇರಿದಂತೆ – ಮಾಧ್ಯಮಿಕ ತರಗತಿಗಳಲ್ಲಿ ಇದನ್ನು ಅಭ್ಯಾಸ ಮಾಡಿದಾಗ, ತೀ.ನಂ.ಶ್ರೀ.ಯವರ ಹಣದಿಂದಲೇ ಮತ್ತೆ ಪ್ರತಿಯನ್ನು ಮಾರುಕಟ್ಟೆಯಲ್ಲಿ ಕೊಳ್ಳಬೇಕಾಗುತ್ತಿತ್ತು. ಸುಮಾರು ೨೦–೨೫ ವರ್ಷಗಳ ಕಾಲ ಮಾಧ್ಯಮಿಕ ಶಾಲೆಗೆ ಪಠ್ಯಪುಸ್ತಕವಾಗಿದ್ದು ಇದನ್ನು ವ್ಯಾಸಂಗಮಾಡಿದ ವಿದ್ಯಾರ್ಥಿಗಳ ಮತ್ತು ಇತರ ಓದುಗರ ಒಟ್ಟು ಸಂಖ್ಯೆ ಹತ್ತು ಲಕ್ಷವನ್ನು ಮೀರಿರಬಹುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈಗ ಅದು ಪಠ್ಯಪುಸ್ತಕವಾಗಿ ನಿಯಮಿತವಾಗಿಲ್ಲದಿದ್ದರೂ ಅದಕ್ಕೆ ಈಗಲೂ ಸತತವಾಗಿ ಬೇಡಿಕೆ ಇದೆ. ಇದನ್ನು ಈಗಲೂ ಬಿ.ಎ. ಮತ್ತು ಎಂ.ಎ. ತರಗತಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಆದರೆ ಇದರ ಪ್ರಕಟಣೆಯ ವಿಷಯದ ಬಗ್ಗೆ ನಮಗೆ ಯಾವ ಮಾಹಿತಿಯೂ ಇಲ್ಲವಾಗಿದೆ.

ಇಷ್ಟು ಪ್ರತಿಗಳು ಮಾರಾಟವಾಗಿ ಬೇಕಾದಷ್ಟು ಹಣ ಸರ್ಕಾರಕ್ಕೆ ಬಂದಿರುವಾಗ "ನಿಮಗೆ ಯಾವ ಸಂಭಾವನೆಯೂ ಬರುತ್ತಿಲ್ಲವಲ್ಲ?" ಎಂದು ನಮ್ಮ ತಂದೆಯವರೊಡನೆ ಯಾರಾದರೂ ಪ್ರಸ್ತಾಪಿಸಿದರೆ, ಅವರು "ಸರ್ಕಾರ ಒತ್ತಾಯ ಮಾಡದಿದ್ದರೆ ನಾನು ಈ ಪುಸ್ತಕವನ್ನೇ ಬರೆಯುತ್ತಿರಲಿಲ್ಲವಲ್ಲ!" ಎಂದು ಹೇಳಿ ಎಲ್ಲರೊಡನೆ ತಾವೂ ನಗುತ್ತಿದ್ದರು.

ನಂಟರು

ತೀ.ನಂ.ಶ್ರೀ.ಯವರು ೧೯೫೭ನೆಯ ಇಸವಿಯಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಹಿಂತಿರುಗಿದಾಗ ಅಲ್ಲಿಯ ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರಾದರು. ಆ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಿಯೂನಿವರ್ಸಿಟಿ ಪ್ರಾರಂಭವಾಯಿತು. ಆಗ ಇಂಟರ್‌ಮೀಡಿಯಟ್ ಪರೀಕ್ಷೆಗೆ ನಿಯಮಿಸಿದ್ದ ಕನ್ನಡ ಪಠ್ಯಪುಸ್ತಕಗಳನ್ನು ಪ್ರಿಯೂನಿವರ್ಸಿಟಿ ತರಗತಿಗೆ ಅಳವಡಿಸಬೇಕಾಯಿತು. ಇದು ಒಂದು ಔಪಚಾರಿಕವಾದ ತೀರ್ಮಾನ. ಆ ವೇಳೆಗಾಗಲೇ (ತೀ.ನಂ,ಶ್ರೀ. ಸಂಬಂಧವಿರದಿದ್ದ) ಹಿಂದಿನ ಸಮಿತಿಯಿಂದ ತೀ.ನಂ.ಶ್ರೀ.ಯವರ 'ರಾಕ್ಷಸನ ಮುದ್ರಿಕೆ' ಪುಸ್ತಕ ಇಂಟರ್‌ಮೀಡಿಯೆಟ್ ತರಗತಿಗೆ ಪಠ್ಯಪುಸ್ತಕವಾಗಿ ನಿಯಮಿತವಾಗಿತ್ತು. ಆದರೆ ತಾವು ಸಮಿತಿಯ ಅಧ್ಯಕ್ಷರಾಗಿರುವ ಕಾಲದಲ್ಲಿ ತೀ.ನಂ.ಶ್ರೀ.ಯವರು ತಾವು ಬರೆದ ಯಾವ ಪುಸ್ತಕಗಳನ್ನು ಯಾವ ತರಗತಿಗೂ ಪಠ್ಯಪುಸ್ತಕವನ್ನಾಗಿ ಪರಿಗಣಿಸಬಾರದೆಂದು ಸಮಿತಿಯಲ್ಲಿ ಖಡಾಖಂಡಿತವಾಗಿ ತಿಳಿಸಿದರು. ಉಳಿದ ಸದಸ್ಯರು ಈ ರಾಕ್ಷಸನ ಮುದ್ರಿಕೆಯದು ಹಳೆಯ ಸಮಿತಿಯ ತೀರ್ಮಾನ, ಆದ್ದರಿಂದ ಇದರಲ್ಲಿ ಈ ಸಮಿತಿಯ ಯಾವ ನಿರ್ಣಯವೂ ಇಲ್ಲ ಎಂದು ವಾದ ಮಾಡಿದರೂ ತೀ.ನಂ.ಶ್ರೀ.ಯವರು ಅದಕ್ಕೆ ಒಪ್ಪದೆ ರಾಕ್ಷಸನ ಮುದ್ರಿಕೆ ಈ ಪಟ್ಟಿಯಿಂದ ಹಿಂದಕ್ಕೆ ಸರಿಯಿತು. ಇದರಿಂದ ಇದರ ಪ್ರಕಟನೆಗೆ ಮೊದಲೇ ವ್ಯವಸ್ಥೆ ಮಾಡಿಕೊಂಡಿದ್ದ ಅವರ ಮಿತ್ರ ಶ್ರೀ ಕೂಡಲಿ ಚಿದಂಬರಂ (ಕಾವ್ಯಾಲಯ ಪ್ರಕಾಶಕರು) ಅವರಿಗೆ ಸ್ವಲ್ಪ ನಷ್ಟವೂ ಆಯಿತು! (ಆದರೆ ಶ್ರೀ ಚಿದಂಬರಂ ಅವರಿಗೆ ತೀ.ನಂ.ಶ್ರೀ.ಯವರ ಸ್ನೇಹದಲ್ಲಿ ಇವೆಲ್ಲ ಗಣನೀಯವಲ್ಲ. ಚಿದಂಬರಂ ಅವರಿಗೆ ತೀ.ನಂಶ್ರೀಯವರ ಬಗ್ಗೆ ಅಪಾರ ವಿಶ್ವಾಸ ಮತ್ತು ಅವರ ತತ್ವಗಳಲ್ಲಿ ತುಂಬಾ ಅಭಿಮಾನ.) ಇದರಂತೆ ತೀ.ನಂ.ಶ್ರೀ.ಯವರು ೧೯೬೨ರಲ್ಲಿ ಅವರು ನಿವೃತ್ತರಾಗುವ ತನಕ, ೫ ವರ್ಷಗಳ ಕಾಲವೂ ಅವರು ಬರೆದ ಯಾವ ಪುಸ್ತಕಗಳೂ ಮೈಸೂರು ವಿಶ್ವವಿದ್ಯಾಲಯದಲ್ಲಿ ಯಾವ ತರಗತಿಗೂ ಪಠ್ಯ ಪುಸ್ತಕವಾಗುವುದಕ್ಕೆ ಪರಿಗಣನೆಗೇ ಬರಲಿಲ್ಲ.

೧೯೬೨ರಲ್ಲಿ ತೀ.ನಂ.ಶ್ರೀ.ಯವರು ನಿವೃತ್ತರಾದ ನಂತರ ಪ್ರಾಧ್ಯಾಪಕರಾದ ಶ್ರೀ ದೇ. ಜವರೇಗೌಡರು ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರಾದರು. ಶ್ರೀ ದೇಜಗೌ ಅವರಿಗೆ 'ರಾಕ್ಷಸನ ಮುದ್ರಿಕೆ'ಯ ವಿಷಯ ಮನಸ್ಸಿನಲ್ಲಿ ಕೊರೆಯುತ್ತಲೇ ಇತ್ತು. ಮತ್ತು ವಿದ್ಯಾರ್ಥಿಗಳಿಗೆ ತೀ.ನಂ.ಶ್ರೀ.ಯವರ ಪುಸ್ತಕಗಳು ಪಠ್ಯದಿಂದ ವಂಚಿತವಾಗಬಾರದೆಂದು ಅವರ ಉತ್ಕಟವಾದ

ಅಭಿಲಾಷೆ. ಆದ್ದರಿಂದ ೧೯೬೩-೬೪ರ ಸಾಲಿಗೆ ಪ್ರಿಯೂನಿವರ್ಸಿಟಿ ತರಗತಿಗೆ ತೀ.ನಂ.ಶ್ರೀ.ಯವರ 'ನಂಟರು' ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಮಾಡಬೇಕೆಂದು ಸಮಿತಿಯಲ್ಲಿ ಪ್ರಸ್ತಾಪ ಮಾಡಿದರು. ಅದಕ್ಕೆ ಇತರ ಸದಸ್ಯರುಗಳ ಒಕ್ಕೊರಲಿನ ಬೆಂಬಲವೂ ಇತ್ತು. ಆದರೆ ಶ್ರೀ ರಂ.ಶ್ರೀ. ಮುಗಳಿಯವರು ಸಮಿತಿಯಲ್ಲಿ ಇದನ್ನು ವಿರೋಧಿಸಿ ಅದರ ಜಾಗದಲ್ಲಿ ಮತ್ತೊಂದು ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಮಾಡಬೇಕೆಂದು ಒತ್ತಾಯ ಮಾಡಿ ಅದರಲ್ಲಿ ಯಶಸ್ವಿಯಾದರು. ಆದರೆ ಶ್ರೀ ದೇ.ಜ.ಗೌ ಅವರು ಈ ವಿಷಯವನ್ನು ಕಡೆಗಣಿಸುವವರಲ್ಲ. ೧೯೬೪-೬೫ರ ಸಾಲಿನ ಪಠ್ಯಪುಸ್ತಕಗಳ ನಿರ್ಧಾರಕ್ಕೆ, ಒಂದು ವರ್ಷದ ನಂತರ ಶ್ರೀ ದೇಜಗೌ ಅವರು ಮತ್ತೆ 'ನಂಟರು' ಪುಸ್ತಕವನ್ನು ಪ್ರಸ್ತಾಪ ಮಾಡಿದರು. ಶ್ರೀ ರಂ.ಶ್ರೀ. ಮುಗಳಿಯವರಿಂದ ಮತ್ತೆ ವಿರೋಧವಿತ್ತು. ಆದರೆ ಈ ಸಾರಿ ಸಮಿತಿ ೧೯೬೪-೬೫ರ ಸಾಲಿಗೆ ಪ್ರಿಯೂನಿವರ್ಸಿಟಿಗೆ ನಂಟರು ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಮಾಡಿತು. ಆಗ ಈ ಪುಸ್ತಕದ ಸುಮಾರು ೧೨ ಸಾವಿರ ಪ್ರತಿಗಳು ಮಾರಾಟವಾಯಿತು. ಈ ಪುಸ್ತಕಕ್ಕೆ ಮುಖಬೆಲೆಯನ್ನು ೩ ರೂಪಾಯಿಗಳಿಡಬೇಕೆಂದು ಅದರ ಪ್ರಕಾಶಕರಾದ ಶ್ರೀ ಶಂಕರನಾರಾಯಣರಾಯರ ಅಭಿಪ್ರಾಯವಾಗಿತ್ತು. ಆದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು – ತಮಗೆ ಬರುವ ರಾಜಧನ ಕಡಿಮೆಯಾದರೂ ಪರವಾಗಿಲ್ಲವೆಂದು – ಅದರ ಬೆಲೆಯನ್ನೂ ತೀ.ನಂ.ಶ್ರೀ.ಯವರು ರೂಪಾಯಿ ೨.೫೦ಕ್ಕೆ ನಿಗದಿಮಾಡಿಸಿದ್ದರು.

ಇದಾದ ನಂತರ ಮತ್ತೆ ೧೯೭೦ರ ದಶಕದಲ್ಲಿ ಸರ್ಕಾರದಿಂದ ಮತ್ತೆ ೩ ವರ್ಷಗಳ ಕಾಲ ಸತತವಾಗಿ 'ನಂಟರು' ಪುಸ್ತಕ ಪ್ರಿಯೂನಿವರ್ಸಿಟಿ ತರಗತಿಗೆ ಪಠ್ಯಪುಸ್ತಕವಾಗಿ ನಿಯಮಿತವಾಗಿ ಈ ವರ್ಷಗಳಲ್ಲಿ ಈ ಪುಸ್ತಕ ಸುಮಾರು ಒಂದು ಲಕ್ಷ ಪ್ರತಿಗಳು ಮಾರಾಟವಾಗಿ, ಕನ್ನಡ ನಾಡಿನಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಸಹೃದಯರು ಈ ಪುಸ್ತಕವನ್ನು ಓದುವಂತಾಯಿತು.

ಈ 'ನಂಟರು' ಪುಸ್ತಕದ ಅನೇಕ ಬಿಡಿಲೇಖನಗಳು–ಮುಖ್ಯವಾಗಿ 'ನೆಗಡಿ', 'ಕಾಸಿನ ಸಂಘ' ಇತ್ಯಾದಿಗಳು–ಬೇರೆಯವರು ಸಂಪಾದಿಸಿದ ಸಂಕಲನಗಳಲ್ಲಿ ಸೇರ್ಪಡೆಯಾಗಿವೆ. ಈ ಕೆಲವು ಸಂಕಲಗಳು ಪಠ್ಯಪುಸ್ತಕಗಳಾಗಿ ನಿಯಮಿತವಾಗಿ, ವಿದ್ಯಾರ್ಥಿಗಳು ಈ ಲೇಖನಗಳನ್ನು ವ್ಯಾಸಂಗ ಮಾಡುತ್ತಿದ್ದಾರೆ.

ತೀ.ನಂ.ಶ್ರೀ. ನಿಧನಾನಂತರದ ಪ್ರಕಟಣೆಗಳು

●

ತೀ.ನಂ.ಶ್ರೀ.ಯವರ ಜೀವಿತಕಾಲದಲ್ಲಿ ಅವರು ಪ್ರಕಟಣೆಗೆ ಬಿಡುಗಡೆ ಮಾಡಿದ್ದು ಕೇವಲ ಹನ್ನೊಂದು ಕೃತಿಗಳು ಮಾತ್ರ, ಅವೆಂದರೆ ಒಲುಮೆ, ಕನ್ನಡ ಮಧ್ಯಮ ವ್ಯಾಕರಣ, ಪಂಪ, ಹೆಣ್ಣುಮಕ್ಕಳ ಪದಗಳು, ಕಾವ್ಯ ಸಮೀಕ್ಷೆ, ಭಾರತೀಯ ಕಾವ್ಯಮೀಮಾಂಸೆ, ರಾಕ್ಷಸನ ಮುದ್ರಿಕೆ, ನಂಬಿಯಣ್ಣನ ರಗಳೆ, ಗದಾಯುದ್ಧ ಸಂಗ್ರಹ, ಸಮಾಲೋಕನ ಮತ್ತು ನಂಟರು. 'ಕನ್ನಡ ಭಾಷಾ ಚರಿತ್ರೆ'ಯಂಥ ಕೆಲವು ಕೃತಿಗಳು ಇನ್ನೂ ಯೋಚನೆ ಮತ್ತು ಯೋಜನೆಯ ಹಂತ ದಲ್ಲಿದ್ದವು. 'ಬಿಡಿಮುತ್ತು' ಪ್ರಕಟಣೆಗೆ ಸಿದ್ಧವಾಗಿದ್ದರೂ ನಮ್ಮ ತಂದೆಯವರ 'ಪರಿಪೂರ್ಣತೆಯ ಅನ್ವೇಷಣೆ' ದೃಷ್ಟಿಯಲ್ಲಿ ಅದು ಮುದ್ರಣಾಲಯವನ್ನು ತಲುಪಿರಲಿಲ್ಲ. ಆದರೆ ಅವರ ನಿಧನದ ನಂತರ ಅವರ ಸ್ನೇಹಿತರಾದ ಶ್ರೀ ಕೂಡಲಿ ಚಿದಂಬರಂ ಮತ್ತು ಪ್ರಿಯ ಶಿಷ್ಯರಾಗಿದ್ದ ಶ್ರೀ ಹೆಚ್.ಎಂ. ಶಂಕರನಾರಾಯಣರಾವ್ ಮತ್ತು ಇತರ ಪ್ರಕಾಶಕರು ಕೆಲವು ಅಪ್ರಕಟಿತ ಕೃತಿಗಳು ಮತ್ತು ಸಂಕಲನಗಳನ್ನು ಪ್ರಕಟಿಸಿ ತೀ.ನಂ.ಶ್ರೀ.ಯವರ ಮೇಲಿನ ಪ್ರೀತಿ ಮತ್ತು ಅಭಿಮಾನಗಳನ್ನು ತೋರಿದ್ದಾರೆ. ಈ ಪ್ರಕಟಣೆಗಳ ಬಗ್ಗೆ ಇಲ್ಲಿ ಸ್ವಲ್ಪ ಮಾಹಿತಿಯನ್ನು ಕೊಡಲಾಗಿದೆ.

೧) ಇಂಗ್ಲಿಷ್ ಲೇಖನಗಳ ಸಂಕಲನ

ತೀ.ನಂ.ಶ್ರೀ.ಯವರು ಸಾಹಿತ್ಯ ಮೀಮಾಂಸೆ, ವಿಮರ್ಶೆ ಮತ್ತು ಭಾಷಾಶಾಸ್ತ್ರದ ವಿಷಯಗಳ ಬಗ್ಗೆ ಬರೆದ ಇಂಗ್ಲಿಷ್ ಲೇಖನಗಳು ಭಾರತೀಯ ಮತ್ತು ವಿದೇಶ ವಿದ್ವತ್‌ಪತ್ರಿಕೆಗಳಲ್ಲಿ ಮತ್ತು ಕೆಲವು ಗ್ರಂಥಗಳ ಭಾಗವಾಗಿ ಪ್ರಕಟವಾಗಿದ್ದವು. ಅವರು ಇಂಗ್ಲಿಷ್‌ನಲ್ಲಿ ಕೃತಿಯ ರೂಪದಲ್ಲಿ ಯಾವುದನ್ನು ಪ್ರಕಟಮಾಡಿರಲಿಲ್ಲ. 'ಕನ್ನಡ ಭಾಷಾ ಚರಿತ್ರೆ' ಪುಸ್ತಕವನ್ನು ಮೊದಲು ಇಂಗ್ಲಿಷ್‌ನಲ್ಲಿ ಬರೆದು ತರಬೇಕೆಂದು ಯೋಚಿಸುತ್ತಿದ್ದರು.

ತೀ.ನಂ.ಶ್ರೀ.ಯವರು ಈ ಬಿಡಿ ಇಂಗ್ಲಿಷ್ ಲೇಖನಗಳನ್ನೆಲ್ಲ ಸಂಕಲಿಸಿ ಅದರಲ್ಲಿ ಕೆಲವು ಲೇಖನಗಳಲ್ಲಿ ಅವಶ್ಯವೆನಿಸಿದ ಅನೇಕ ಮಾರ್ಪಾಡುಗಳನ್ನು ಮಾಡಿ, ತಮ್ಮ ಅಂತಿಮ ಪ್ರವಾಸಕ್ಕೆ ತೆರಳುವ ಮೊದಲು ಮೈಸೂರಿನ ಗೀತಾ ಬುಕ್ ಹೌಸ್‌ನ ಕೋರಿಕೆಯಂತೆ ಅವರಿಗೆ ಕೊಟ್ಟಿದ್ದರು. ಈ ಹಸ್ತಪ್ರತಿ ನೇರವಾಗಿ ಮುದ್ರಣಕ್ಕೆ ಸಿದ್ಧವಾಗಿತ್ತು. ಇದಕ್ಕೆ 'Literary and Linguistic Studies' ಎಂದು ಶೀರ್ಷಿಕೆಯನ್ನೂ ಅವರೇ ಕೊಟ್ಟಿದ್ದರು. ತೀ.ನಂ.ಶ್ರೀ.ಯವರು ಪ್ರವಾಸದಿಂದ ಹಿಂತಿರುಗುವ ವೇಳೆಗೆ ಮುದ್ರಣ ಪ್ರಾರಂಭಿಸಿ ಅದರ ಮೊದಲ ಸಂಚಿಕೆಯ ಕರಡುಪ್ರತಿಯನ್ನು

(Proof) ಅವರಿಗೆ ತಲುಪಿಸುವುದಾಗಿ ಪ್ರಕಾಶಕರು ತಿಳಿಸಿದ್ದರು. ಆದರೆ ದುರಾದೃಷ್ಟವಶಾತ್ ತೀ.ನಂ.ಶ್ರೀ.ಯವರು ಹಿಂತಿರುಗಲಿಲ್ಲ ಮತ್ತು ಮುದ್ರಣವೂ ಪ್ರಾರಂಭವಾಗಲಿಲ್ಲ. ಅನಂತರ ಅನೇಕ ವರ್ಷಗಳವರೆಗೆ ಇದರ ಬಗ್ಗೆ ಪ್ರಕಾಶಕರನ್ನು ವಿಚಾರಿಸಿದಾಗ ಇದರ ಬಗ್ಗೆ ಯಾವ ಖಚಿತ ಮಾಹಿತಿಯೂ ದೊರಕಲಿಲ್ಲ. ಅನಂತರ ಅವರಿಂದ ತಿಳಿದು ಬಂದ ಪ್ರಕಾರ ಅದರ ಹಸ್ತಪ್ರತಿ ಎಲ್ಲಿದೆ ಎಂದು ತಿಳಿಯುವುದೇ ಒಂದು ಸಮಸ್ಯೆಯಾಯಿತು. ಬೇರೆ ಯಾರಾದರೂ ಒಂದು ಬಾರಿ ಅದನ್ನು ನೋಡಿಕೊಡಲೆಂದು ಕೊಟ್ಟಿರುವುದಾಗಿ ಅವರು ಭಾವಿಸಿದ್ದರು (!). ತೀ.ನಂ.ಶ್ರೀ.ಯವರೇ ಸಿದ್ಧಮಾಡಿಕೊಟ್ಟ ಮುದ್ರಣಕ್ಕೆ ಹೋಗಬೇಕಾದ ಹಸ್ತಪ್ರತಿಯನ್ನು ಬೇರೆ ಯಾರಾದರೂ ಪರಿಶೀಲಿಸುವ ಅವಶ್ಯಕತೆ ಮತ್ತು ಔಚಿತ್ಯವೇನಿತ್ತು ಎನ್ನುವುದೇ ಇಂದಿಗೂ ಒಗಟಾಗಿದೆ. ಈ ಮಧ್ಯೆ ಈ ಲೇಖನಗಳ ಪ್ರತಿಗಳನ್ನು ಅದು ಪ್ರಕಟವಾಗಿದ್ದ ಪತ್ರಿಕೆಗಳಿಂದ ಮತ್ತೆ ಸಂಕಲಿಸುವ ಪ್ರಯತ್ನ ನಡೆಯಿತಾದರೂ ಕೆಲವು ಲೇಖನಗಳು ದೊರಕದೆ ಅದು ಸಫಲವಾಗಿಲ್ಲ. ಅದೂ ಅಲ್ಲದೆ ತೀ.ನಂ.ಶ್ರೀ.ಯವರು ಮಾಡಿದ ಮಾರ್ಪಾಡುಗಳು ಅದರಲ್ಲಿ ಸೇರಿಸಲಾಗುತ್ತಿರಲಿಲ್ಲ. ಅನೇಕ ವರ್ಷಗಳ ನಂತರ ಇದು ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಶ್ರೀ ಹಾ.ಮಾ. ನಾಯಕರ ಬಳಿ ದೊರೆಯಿತು. ಅದನ್ನು ಅಲ್ಲಿಂದ ಹಿಂದಕ್ಕೆ ಪಡೆದ ನಂತರ ಅವುಗಳಲ್ಲಿದ್ದ ಒಂದು ಲೇಖನ ಆಗಲೇ ವಿಶ್ವವಿದ್ಯಾಲಯದ ಇಂಗ್ಲಿಷ್ ಪತ್ರಿಕೆಯಲ್ಲಿ ತೀ.ನಂ.ಶ್ರೀ.ಯವರ ಹೆಸರಿನಲ್ಲಿ ಪ್ರಕಟವಾಗಿರುವ ವಿಷಯ ತಿಳಿಯಿತು. ಅದು ಅದುವರೆಗೂ ನಮಗೆ ಗೊತ್ತಿರಲಿಲ್ಲ! ಇದರ ಮೂಲ ಪ್ರತಿಯೂ ಸಂಕಲನದಲ್ಲಿರಲಿಲ್ಲ. ಇನ್ನೊಂದು ಲೇಖನ ಪೂರ್ತಿಯಾಗಿ ಆ ಸಂಕಲನದಿಂದ ಕಣ್ಮರೆಯಾಗಿತ್ತು. ಅದು ಇಂದಿಗೂ ದೊರಕಿಲ್ಲ. ಇನ್ನೊಂದು ಲೇಖನದ ಕೊನೆಯ ಒಂದೆರಡು ಪುಟಗಳು ಬಿಟ್ಟು ಹೋಗಿದ್ದವು. ಬಹುಶಃ ಒಂದು ಲೇಖನ ತೆಗೆದುಕೊಂಡಾಗ ಅದರೊಡನೆ ಇದೂ ಹೋಗಿರಬೇಕು. ಅಂತೂ ಲೇಖನಗಳ ಸಂಕಲನ ದೊರಕಿತ್ತು.

ಅನಂತರ ಈ ಲೇಖನಗಳ ಬಗ್ಗೆ ಗೀತಾ ಬುಕ್ ಹೌಸ್‌ನವರೊಡನೆ ಮತ್ತೆ ವ್ಯವಹರಿಸಿದಾಗ ಅದರ ಸಾಹಿತ್ಯದ ಲೇಖನಗಳನ್ನು ಮಾತ್ರ ತಮಗೆ ಪ್ರಕಟಿಸಲು ಸಾಧ್ಯವೆಂದು ಅವರು ತಿಳಿಸಿ, " Imagination in Indian Poetics and Other Literary Studies" ಎನ್ನುವ ಶೀರ್ಷಿಕೆಯಲ್ಲಿ ತೀ.ನಂ.ಶ್ರೀ.ಯವರ ನಿಧನದ ೧೪ ವರ್ಷಗಳ ನಂತರ ೧೯೮೦ರಲ್ಲಿ ಅದು ಪ್ರಕಟವಾಯಿತು. ಈ ಪುಸ್ತಕದ ಪ್ರಕಟಣೆಗೆ ಶ್ರೀ ಎಂ. ಚಿದಾನಂದಮೂರ್ತಿ ಅವರು ತುಂಬಾ ಶ್ರದ್ಧೆಯಿಂದ ಕರಡು ಪ್ರತಿಗಳನ್ನು ನೋಡಿ, ಅದು ಅಚ್ಚುಕಟ್ಟಾಗಿ ಹೊರಬರುವಂತೆ ಅಪಾರ ಶ್ರಮವಹಿಸಿದರು. ಈ ಪ್ರಕಟಣೆ ವಿದ್ವಾಂಸರುಗಳ ಶ್ಲಾಘನೆಗೆ ಪಾತ್ರವಾಗಿ ತೀ.ನಂ.ಶ್ರೀ.ಯವರ ಭಾಷಾಶಾಸ್ತ್ರದ ಲೇಖನಗಳ ಸಂಕಲನವು ಆದಷ್ಟು ಶೀಘ್ರವಾಗಿ ಪ್ರಕಟವಾಗಬೇಕೆಂದು ಅಭಿಪ್ರಾಯಪಟ್ಟರು.

ಆದರೆ ಭಾಷಾಶಾಸ್ತ್ರದ ಲೇಖನಗಳ ಸಂಕಲನದ ಪ್ರಕಟಣೆ ಬಗ್ಗೆ ಯಾವ ಪ್ರಕಾಶಕರೂ ಮುಂದೆ ಬರಲಿಲ್ಲ. ಮತ್ತೆ ಇದನ್ನು ಪ್ರಕಟಿಸುವ ಬಗ್ಗೆ ನಮ್ಮಿಂದ ಪ್ರಯತ್ನಗಳು ಮುಂದುವರೆದರೂ ಮೈಸೂರಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೇಜಸ್‌ನವರು ಅವರ

ರಜತಮಹೋತ್ಸವ ಪ್ರಕಟಣೆಯ ಸರಣಿಯಲ್ಲಿ ಈ ಸಂಕಲನವನ್ನು ಪ್ರಕಟಿಸಲು ಒಪ್ಪಿ ೧೯೯೪ರಲ್ಲಿ " Affricates in Kannada Speech and Other Linguistic Papers" ಎನ್ನುವ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ಇದರ ಪ್ರಕಟಣೆಗೆ ಎಲ್ಲಾ ಸಹಾಯಮಾಡುವುದಾಗಿ ಮತ್ತು ಕರಡು ಪ್ರತಿಯನ್ನು ತಿದ್ದಿಕೊಡುವುದಾಗಿ ಮತ್ತೆ ಶ್ರೀ ಎಂ. ಚಿದಾನಂದಮೂರ್ತಿ ಅವರು ಸ್ವಇಚ್ಛೆಯಿಂದ ತಿಳಿಸಿದರು. ಆ ಕೆಲಸವನ್ನು ತಾವೇ ನೋಡಿಕೊಳ್ಳುವುದಾಗಿ ಸಂಸ್ಥೆಯು ತಿಳಿಸಿದ್ದರಿಂದ, ಇದು ಶ್ರೀ ಚಿದಾನಂದಮೂರ್ತಿಯವರ ಶ್ರದ್ಧಾತ್ಮಕವಾದ ಸೇವೆಯಿಂದ ವಂಚಿತ ವಾಗಿ ಕರಡುಪ್ರತಿಯ ತಿದ್ದುವಿಕೆ ಸರಿಯಿಲ್ಲದೆ ಅನೇಕ ಮುದ್ರಣ ದೋಷಗಳೊಡನೆ ಹೊರಬರು ವಂತಾಯಿತು. ಆದರೆ ಇದು ಕೊನೆಗೂ (ತೀ.ನಂ.ಶ್ರೀ.ಯವರ ನಿಧನದ ೨೮ ವರ್ಷಗಳ ನಂತರ) ಪ್ರಕಟವಾಯಿತಲ್ಲ ಎಂದು ನಾವೆಲ್ಲರೂ ಸಮಾಧಾನ ಪಟ್ಟುಕೊಳ್ಳುವಂತಾಯಿತು.

ಈ ತಡತಡೆ ಮತ್ತು ಕೊರತೆಗಳೇನಿದ್ದರೂ ತೀ.ನಂ.ಶ್ರೀ.ಯವರ ಎರಡು ಮಾತ್ರ ಇಂಗ್ಲಿಷ್ ಲೇಖನಗಳ ಸಂಕಲನ ಪುಸ್ತಕಗಳಾಗಿ ಪ್ರಕಟವಾಗಿ ಬೆಳಕಿಗೆ ಬರಲು ನೆರವಾದ ಈ ಎರಡು ಪ್ರಕಾಶನ ಸಂಸ್ಥೆಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

೨) ಕಾವ್ಯಾನುಭವ

ತೀ.ನಂ.ಶ್ರೀ.ಯವರು ಬರೆದ ಅನೇಕ ಲೇಖನಗಳು ಬೇರೆ ಬೇರೆ ವಿದ್ವತ್ ಪತ್ರಿಕೆಗಳಲ್ಲಿ ನಿಯತಕಾಲಿಕ ಪತ್ರಿಕೆಗಳಲ್ಲಿ ಮತ್ತು ಕೆಲವು ಪುಸ್ತಕಗಳ ಮುನ್ನುಡಿಗಳಾಗಿ, ಭಾಗವಾಗಿ ಮತ್ತು ಭಾಷಣಗಳಾಗಿ ಪ್ರಕಟವಾಗಿದ್ದವು. ಆದರೆ ಈ ಕೆಲವು ಲೇಖನಗಳನ್ನೆಲ್ಲ ಅವರು ಸಂಕಲಿಸಿ ಕೆಲವು ಅವಶ್ಯವಾದ ತಿದ್ದುಪಡಿಗಳೊಂದಿಗೆ 'ಸಮಾಲೋಕನ' ಎನ್ನುವ ಶೀರ್ಷಿಕೆಯಲ್ಲಿ ನಮ್ಮ ತಂದೆಯವರು ಜೀವಿತ ಕಾಲಸದಲ್ಲಿಯೇ ಪ್ರಕಟವಾಯಿತು. ಆದರೆ ಅದರಲ್ಲೂ, ಆಗಲೇ ಪ್ರಕಟವಾಗಿದ್ದ ಕೆಲವು ಲೇಖನಗಳು ಸೇರಲಿಲ್ಲ. ಬಹುಶಃ ತೀ.ನಂ.ಶ್ರೀ.ಯವರಿಗೆ ಈ ಲೇಖನಗಳು ಇನ್ನೂ ಪರಿಪೂರ್ಣತೆಯ ದಾರಿಯಲ್ಲಿ ಸಾಗುವುದಿದೆ ಅನಿಸಿರಬೇಕು! ಆದರೆ ತೀ.ನಂ.ಶ್ರೀ.ಯವರ ನಿಧನದ ನಂತರ ಅವರ ಪ್ರಿಯ ಶಿಷ್ಯರಾಗಿದ್ದ ಶ್ರೀ ಹೆಚ್.ಎಂ. ಶಂಕರನಾರಾಯಣರಾಯರು ತಮ್ಮ 'ಶಾರದಾ ಮಂದಿರ' ಪ್ರಕಾಶನದಲ್ಲಿ 'ಸಮಾಲೋಕನ'ದ ನಂತರ ಬರೆದಿದ್ದ ಲೇಖನಗಳು ಮತ್ತು ತೀ.ನಂ.ಶ್ರೀ.ಯವರ ಉಳಿದಿದ್ದ ಎಲ್ಲ ಸಂಪಾದಕೀಯ ಬರಹಗಳನ್ನು ಸೇರಿಸಿ 'ಕಾವ್ಯಾನುಭವ' ಎನ್ನುವ ಶೀರ್ಷಿಕೆಯಲ್ಲಿ ೧೯೭೦ರಲ್ಲಿ ಪ್ರಕಟಿಸಿದರು. ಇದರಿಂದ ತೀ.ನಂ.ಶ್ರೀ. ಯವರ ಅಲಭ್ಯವಾಗಿದ್ದ ಕೆಲವು ಸಂಶೋಧನ ಲೇಖನಗಳೂ ಸುಲಭವಾಗಿ ದೊರೆಯುವಂತಾಯಿತು.

೩) ಬಿಡಿಮುತ್ತು

ತೀ.ನಂ.ಶ್ರೀ.ಯವರ ಸಹಪಾಠಿಗಳೂ ಮತ್ತು ಪ್ರಿಯಮಿತ್ರರೂ ಆದ ಶ್ರೀ ಕೂಡಲಿ ಚಿದಂಬರಂ ಅವರು ತಮ್ಮ ಅಗಲಿದ ಸ್ನೇಹಿತನಿಗೆ ಶ್ರದ್ಧಾಂಜಲಿಯಂತೆ "ಬಿಡಿಮುತ್ತು"ವನ್ನು ೧೯೭೦ರಲ್ಲಿ ಪ್ರಕಟಿಸಿದ್ದಾರೆ. ತೀ.ನಂ.ಶ್ರೀ.ಯವರ ಸುಮಾರು ೨೦ ವರ್ಷಗಳ ಪ್ರಯತ್ನದ ಫಲ ಈ ಸಂಸ್ಕೃತ ಮುಕ್ತಕಗಳ ಕನ್ನಡಾನುವಾದ. ಇದಕ್ಕೆ ತೀ.ನಂ.ಶ್ರೀ.ಯವರ ಸಾಹಿತ್ಯಪ್ರೇಮಿ

ಸ್ನೇಹಿತರುಗಳೆಲ್ಲರ ಪ್ರೇರಣೆಯೂ ಇದೆ. ಶ್ರೀ ಚಿದಂಬರಂ ಅವರು ಈ ಪುಸ್ತಕದ ಅರಿಕೆಯಲ್ಲಿ ತಿಳಿಸಿರುವಂತೆ, ತೀ.ನಂ.ಶ್ರೀ.ಯವರ ಜೀವಿತಕಾಲದಲ್ಲಿ ಪ್ರಕಟಿಸುವುದಕ್ಕೆ ತೀ.ನಂ.ಶ್ರೀ. ಅವರಿಂದಲೇ ಸ್ವಲ್ಪ ತಡತಡೆಗಳುಂಟಾಯಿತು. ಈ ಹಸ್ತಪ್ರತಿಯನ್ನು ಅವರ ನಿಧನದ ನಂತರ ಶ್ರೀ ಚಿದಂಬರಂ ಅವರಿಗೆ ಕೊಟ್ಟಾಗಲೂ ಅದರಲ್ಲಿ ಕೆಲವು ಕಡೆ ಇನ್ನೂ ಪ್ರಶ್ನಾರ್ಥಕ ಚಿಹ್ನೆಗಳು ಕಾಣುತ್ತಿದ್ದವು (ಅವುಗಳಲ್ಲಿ ಮಾರ್ಪಾಡಿನ ಅವಶ್ಯಕತೆ ಇದೆಯೆಂದು!). ಆದರೆ ಶ್ರೀ ಚಿದಂಬರಂ ಅವರು ತಮ್ಮ ಆಪ್ತಸ್ನೇಹಿತನ ಮೇಲಿನ ಪ್ರೀತಿಯಿಂದ ಇದರ ಪ್ರಕಟಣೆಯ ಬಗ್ಗೆ ಬಹು ಶ್ರದ್ಧೆಯಿಂದ ತುಂಬಾ ಶ್ರಮವಹಿಸಿ, ಮೂಲಕ್ಕೆ ಯಾವ ಚ್ಯುತಿಯೂ ಬಾರದಂತೆ ತೀ.ನಂ.ಶ್ರೀ.ಯವರ ನಿಧನದ ನಂತರ ಆದಷ್ಟು ಬೇಗ ಬೆಳಕಿಗೆ ತಂದರು. ಪ್ರಕಟಣೆಯಾದಾಗಿನಿಂದ ಇದನ್ನು ಬಹಳವಾಗಿ ಮೆಚ್ಚಿರುವ ಅನೇಕ ಸಹೃದಯರುಗಳಿದ್ದಾರೆ. ತೀ.ನಂ.ಶ್ರೀ.ಯವರು (ಅವರು ಕೂಡ ಅನೇಕ ಸಾರಿ ಒಮ್ಮೆ ಯೋಚಿಸಿದ್ದಂತೆ!) ಕೆಲವಾದರೂ ಸಂಸ್ಕೃತ ಕಾವ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡದೆ ಬಹು ನಷ್ಟವಾಗಿದೆ ಎಂದು ಇಂದಿಗೂ ಅನೇಕರು ಪರಿತಪಿಸುತ್ತಿದ್ದಾರೆ. ಈ ಪುಸ್ತಕವನ್ನು ತಮ್ಮ ಜೀವಿತಕಾಲದಲ್ಲಿಯೇ ಸಹೃದಯರ ಕೈಸೇರಿದುದನ್ನು ನೋಡಬೇಕೆಂದು ತೀ.ನಂ.ಶ್ರೀ.ಯವರಿಗೆ ಉತ್ಕಟ ಅಪೇಕ್ಷೆಯಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಈ ಪುಸ್ತಕದ ಎರಡನೆಯ ಮುದ್ರಣವೂ ೨೦೦೧ರಲ್ಲಿ ಹೊರಬಂದಿದೆ. ಶ್ರೀ ಮೂರ್ತಿರಾಯರು ಮತ್ತು ಶ್ರೀ ಪು.ತಿ.ನ. ಅವರಿಗಂತೂ ಇದು ಬಹು ಪ್ರಿಯವಾದ ಪುಸ್ತಕವಾಗಿತ್ತು.

ತೀ.ನಂ.ಶ್ರೀ.ಯವರ ಅಭಿಪ್ರಾಯದಲ್ಲಿ ಈ 'ಬಿಡಿಮುತ್ತು' ಪುಸ್ತಕ ತರುಣರುಗಳ ವಿವಾಹದ ಸಂದರ್ಭದಲ್ಲಿ ಕೊಡಬಹುದಾದ ಒಂದು ಬಹು ಸೂಕ್ತವಾದ ಉಡುಗೊರೆ.

೪) ತೀ.ನಂ.ಶ್ರೀ. ಸಮಗ್ರ ಕವಿತೆಗಳು

ತೀ.ನಂ.ಶ್ರೀ.ಯವರು ಬರೆದ 'ಒಲುಮೆ' ಹೊಸಗನ್ನಡ ಕಾವ್ಯವಾಹಿನಿಯಲ್ಲಿ ಪ್ರೇಮಗೀತೆಗಳಿಗೇ ಮೀಸಲಾಗಿ ಹೊರಬಂದ ಮೊದಮೊದಲಿನ ಪುಸ್ತಕಗಳಲ್ಲಿ ಒಂದು. ಮತ್ತು ಅವರ ಜೀವಿತಕಾಲದಲ್ಲಿ ಪ್ರಕಟವಾದ ಅವರ ಒಂದೇ ಒಂದು 'ಕವಿತೆಗಳ' ಸಂಕಲನ. ತಮ್ಮ ಕಾವ್ಯ ರಚನೆಯ ವಿಷಯದಲ್ಲಿ ತಮಗೆ ಅಂತಹ ಭ್ರಮೆ ಯಾವುದೂ ಇಲ್ಲ ಎಂದು ಅವರೇ ಹೇಳುತ್ತಿದ್ದರು! ಆದರೂ ಬೇರೆ ಬೇರೆ ಸಮಯದಲ್ಲಿ ಅವರು ಅನೇಕ ಕವಿತೆಗಳನ್ನು ರಚಿಸಿದ್ದರು ಮತ್ತು ಕವಿತೆಗಳನ್ನು ಸಂಸ್ಕೃತದಿಂದ ಮತ್ತು ಇಂಗ್ಲಿಷಿನಿಂದ ಅನುವಾದ ಮಾಡಿದ್ದರು. ('ಬಿಡಿಮುತ್ತು' ಪುಸ್ತಕಕ್ಕಾಗಿ ಸಂಸ್ಕೃತ ಮುಕ್ತಕಗಳನ್ನು ಪ್ರತ್ಯೇಕವಾಗಿ ಅನುವಾದಿಸಿದ್ದರು.) ಅವರ ಶಿಷ್ಯ ಶ್ರೀ ಹೆಚ್.ಎಂ. ಶಂಕರನಾರಾಯಣರಾಯರ ಪ್ರೇರಣೆಯಂತೆ ಈ ಎಲ್ಲ ಕವಿತೆಗಳನ್ನು ಸೇರಿಸಿ ಒಂದು ಸಂಕಲನವನ್ನು ('ಒಲುಮೆ' ಹೊರತಾಗಿ) ತರಬೇಕೆಂದು ನಿರ್ಧರಿಸಿ ಇದರ ಹಸ್ತಪ್ರತಿಗಳನ್ನು ಅವರಿಗೆ ಕೊಟ್ಟಿದ್ದರು. ಆದರೆ ಇದು ಬೇಗ ಆಗಲಿಲ್ಲ. ತೀ.ನಂ.ಶ್ರೀ.ಯವರ ನಿಧನದ ನಂತರ ಅವರ ಪುಸ್ತಕಗಳ ಮರುಮುದ್ರಣ ಮತ್ತು 'ಕಾವ್ಯಾನುಭವ' ಪ್ರಕಾಶನವನ್ನು ಶ್ರೀ ಶಂಕರನಾರಾಯಣರಾಯರು ಮಾಡಿದರೂ ಅವರ ಇತರ ತೊಂದರೆಗಳಿಂದ ಈ ಕವನ ಸಂಗ್ರಹ ತರಲು ಸಾಧ್ಯವಾಗುವುದಿಲ್ಲವೆಂದು ಅವರು ತಮ್ಮ ಅಸಹಾಯಕತೆಯನ್ನು ಮತ್ತು ವಿಷಾದವನ್ನು ವ್ಯಕ್ತಿಪಡಿಸಿದರು. ಮತ್ತು ಅದರ ಹಸ್ತಪ್ರತಿಯನ್ನು ನನಗೆ ಹಿಂತಿರುಗಿಸಿ ಅದರ

ಪ್ರಕಟಣೆಗೆ ಎಲ್ಲ ಪ್ರಯತ್ನವನ್ನು ಮಾಡಬೇಕೆಂದು ನನಗೆ ಹೇಳಿದರು. ಈ ದಾರಿಯಲ್ಲಿ ನಮ್ಮ ಪ್ರಯತ್ನ ಅನೇಕ ವರ್ಷಗಳ ಕಾಲ ಸಫಲವಾಗಲಿಲ್ಲ. ಅನಂತರ ನಮ್ಮ ಸ್ಥಳೀಯರಾದ ಚಿಕ್ಕನಾಯಕನಹಳ್ಳಿಯ ಶೃಂಗಾರ ಪ್ರಕಾಶನದ ಶ್ರೀ ನಾಗರಾಜರಾಯರು ಇದರ ಪ್ರಕಟಣೆಗೆ ದಯವಿಟ್ಟು ಒಪ್ಪಿದರು. ಈ ವೇಳೆಗೆ 'ಒಲುಮೆ'ಯ ಪ್ರತಿಗಳೂ ಮುಗಿದಿದ್ದು ತಾವು ಮತ್ತೆ ಅದರ ಮರುಮುದ್ರಣ ಮಾಡಲು ಅಸಾಧ್ಯವಾಗಿದೆಯೆಂದು ತಿಳಿಸಿ, ಇದನ್ನು ಈ ಕವಿತೆಗಳ ಸಂಕಲನದಲ್ಲಿ ಸೇರಿಸಬೇಕೆಂದು ಶ್ರೀ ಶಂಕರನಾರಾಯಣರಾಯರು ಸೂಕ್ತವಾದ ಸಲಹೆಯನ್ನು ಕೊಟ್ಟರು.

ಇದರ ಕಾರ್ಯಸಾಧನೆಗೆ ನಮಗೆ ಸೂಕ್ತ ಮಾರ್ಗದರ್ಶನದ ಅವಶ್ಯವಿದ್ದು ಇದಕ್ಕಾಗಿ ಮಿತ್ರ ಮತ್ತು ಕನ್ನಡದ ಪ್ರಸಿದ್ಧ ಕವಿ ಶ್ರೀ ಎಚ್.ಎಸ್. ವೆಂಕಟೇಶಮೂರ್ತಿ ಅವರ ಸಹಾಯವನ್ನು ಕೋರಿದಾಗ ಅವರು ಬಹುಸಂತೋಷದಿಂದ ಒಪ್ಪಿ ಈ ಕವಿತೆಗಳನ್ನೆಲ್ಲ ಸಂಕಲಿಸಿ ಅವುಗಳನ್ನು ವಿವಿಧ ಭಾಗಗಳಲ್ಲಿ ವಿಂಗಡಿಸಿ ಬಹು ಅಮೂಲ್ಯವಾದ ಮತ್ತು ವಿದ್ವತ್ಪೂರ್ಣವಾದ 'ಅಂತರಂಗದ ನಿಷ್ಠೆ' ಎನ್ನುವ ಮುನ್ನುಡಿಯನ್ನೂ ಬರೆದುಕೊಟ್ಟಿದ್ದಾರೆ. ಮತ್ತು ಪ್ರಕಟಣೆಗೆ ಬೇಕಾದ ಎಲ್ಲ ನೆರವನ್ನು ನೀಡಿದ್ದಾರೆ. ತೀ.ನಂ.ಶ್ರೀ.ಯವರ ಪ್ರಿಯ ಸ್ನೇಹಿತರು ಪ್ರಸಿದ್ಧ ಕವಿಗಳೂ ಮತ್ತು ನಮಗೆ ಪಿತೃಸಮಾನರಾದ ಶ್ರೀ ಪು.ತಿ.ನ. ಅವರ 'ಸ್ನೇಹದ ನುಡಿ'ಯೂ ಈ "ತೀ.ನಂ.ಶ್ರೀ. ಸಮಗ್ರ ಕವಿತೆಗಳು" ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ. ಇದು ೧೯೯೬ರಲ್ಲಿ ಪ್ರಕಟವಾಗಿ ಎಲ್ಲ ಪ್ರತಿಗಳೂ ಮುಗಿದು ಮತ್ತೆ ಮರುಮುದ್ರಣವಾಗಿದೆ.

ದ್ರಾವಿಡ ಭಾಷಾವಿಜ್ಞಾನ

●

ತೀ.ನಂ.ಶ್ರೀ.ಯವರು ಅವರ ಪಾಂಡಿತ್ಯಕ್ಕೆ ತಕ್ಕಷ್ಟು ಬರೆಯಲಿಲ್ಲ ಎನ್ನುವುದು ಸರ್ವವಿದಿತವಾದ ವಿಷಯ. 'ಓದು ಬರಹಕ್ಕೆ ಶತ್ರು' ಮತ್ತು 'ಮಾತು ಕೃತಿಗೆ ಶತ್ರು' ಎನ್ನುವುದು ಅವರದೇ ಅಣಿಮುತ್ತುಗಳು. 'ಮಾತು'ವಿನಲ್ಲಿ ಅವರ ಉಪನ್ಯಾಗಳು ಮತ್ತು ತರಗತಿಯ ಪಾಠಗಳೂ ಒಳಗೊಂಡಿದ್ದವು. ಅವರು ತಾವು ಬರೆಯಬೇಕಾಗಿದ್ದ ಮತ್ತು ತಾವು ಮಾತ್ರ ಬರೆಯಬಹುದಾಗಿದ್ದ ಅನೇಕ ವಿಷಯಗಳನ್ನು ತರಗತಿಗಳಲ್ಲಿ ಪಾಠಮಾಡುವಾಗ ತಿಳಿಸಿ ಅದಕ್ಕೆ ಆಗಲೇ ಅಭಿವ್ಯಕ್ತಿ ಕೊಟ್ಟಿದ್ದಾಗಿದೆಯೆಂದು ಸಮಾಧಾನ ಪಟ್ಟುಕೊಳ್ಳುತ್ತಿದ್ದರು. ಬರೆಯಬೇಕೆಂಬ ಉತ್ಸಾಹ ಅಲ್ಲಿಯೇ ಕ್ಷೀಣಿಸುತ್ತಿತ್ತೆಂದು ಕಾಣುತ್ತದೆ!

ತೀ.ನಂ.ಶ್ರೀ.ಯವರ ಶಿಷ್ಯರಾಗಿದ್ದ ಶ್ರೀ ಹಂಪ ನಾಗರಾಜಯ್ಯ (ಹಂಪನಾ) ಅವರು ೧೯೬೬ರಲ್ಲಿ 'ದ್ರಾವಿಡ ಭಾಷಾವಿಜ್ಞಾನ' ಗ್ರಂಥವನ್ನು ಪ್ರಕಟಿಸಿ ಅದನ್ನು ತೀ.ನಂ.ಶ್ರೀ.ಯವರಿಗೆ ಅರ್ಪಣೆ ಮಾಡಿದ್ದರು. ಅದರ 'ಮೊದಲ ಮಾತು'ವಿನಲ್ಲಿ "..... ನಾನು ನನ್ನ ಸಹಪಾಠಿಗಳು 'ತೀ.ನಂ.ಶ್ರೀ'ಯವರ ಜ್ಞಾನದ ತೇರಿನಲ್ಲಿ ಕುಳಿತು ಭಾಷಾಪ್ರಪಂಚದಲ್ಲಿ ಸಂಚರಿಸಿ ಅದರ ಅಂದ ಚೆಂದಗಳನ್ನು, ಆಶ್ಚರ್ಯ ಅದ್ಭುತಗಳನ್ನು ವಿಲಾಸ ವೈಭವಗಳನ್ನು ಸಂದರ್ಶಿಸಿದೆವು. ಆ ರಸಯಾತ್ರೆಯ ಬಹುಮಟ್ಟಿನ ಪರಿಣಾಮ ಈ ಪುಸ್ತಕದ ಪುಟಗಳಲ್ಲಿ ಪ್ರತಿಬಿಂಬಿಸಿದೆ" ಎಂದು ತಿಳಿಸಿದ್ದಾರೆ.

ಆದರೆ ತೀ.ನಂ.ಶ್ರೀ.ಯವರ ಶಿಷ್ಯರುಗಳು ಹೇಳುವಂತೆ ಈ ಪುಸ್ತಕ ಬಹುಮಟ್ಟಿಗೆ ತೀ.ನಂ.ಶ್ರೀ.ಯವರು ಬಿ.ಎ. (ಆನರ್ಸ್) ಮತ್ತು ಎಂ.ಎ. ತರಗತಿಗಳಿಗೆ ಪಾಠಮಾಡುತ್ತಿದ್ದ 'ದ್ರಾವಿಡ ಭಾಷಾಶಾಸ್ತ್ರ' ವಿಷಯದ ತರಗತಿಯ ಟಿಪ್ಪಣಿಗಳ ಆಧಾರದಿಂದ ಸಿದ್ಧವಾದ ಪುಸ್ತಕ. ಈ ಗ್ರಂಥವನ್ನು ತೀ.ನಂ.ಶ್ರೀ.ಯವರು ೧೯೬೬ರಲ್ಲಿ ತಮ್ಮ ಅಂತಿಮ ಪ್ರಯಾಣಕ್ಕೆ ತೆರಳುವ ಕೆಲವು ದಿನಗಳ ಮೊದಲು ಹಂಪನಾ ಅವರು ತೀ.ನಂ.ಶ್ರೀ.ಯವರಿಗೆ ಕೊಟ್ಟಿದ್ದರು. ತೀ.ನಂ.ಶ್ರೀ.ಯವರು ಇದನ್ನು ನೋಡಿ ಒಬ್ಬ ಅಧ್ಯಾಪಕನ ತರಗತಿಯ ಪಾಠದ ಟಿಪ್ಪಣಿಗಳು ಒಬ್ಬ ವಿದ್ಯಾರ್ಥಿಯಿಂದ ಈ ರೀತಿ ಸಂಪೂರ್ಣವಾಗಿ ಬಳಕೆಯಾಗಿ ಸ್ವಂತ ಗ್ರಂಥಕ್ಕೆ ಮಾರ್ಗವಾದರೆ ಈ ವಿಷಯದ ಬಗ್ಗೆ ಗಂಭೀರವಾಗಿ ಯೋಚಿಸಿ ಕೆಲವು ತತ್ವ ಮತ್ತು ನಿಯಮಗಳನ್ನು ಅವಶ್ಯವಾಗಿ ರೂಪಿಸಬೇಕಾಗುತ್ತದೆ ಮತ್ತು ತಾವು ಈ ಪ್ರವಾಸದಿಂದ ಹಿಂತಿರುಗಿದನಂತರ ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಹಿರಿಯರು ಪರಿಣತರು ಮತ್ತು ವಿದ್ವಾಂಸರು

ಗಳೊಡನೆ ಚರ್ಚಿಸುವುದಾಗಿ ನನ್ನೊಡನೆಯೂ ತಿಳಿಸಿದ್ದರು. ಆದರೆ ನಮ್ಮೆಲ್ಲರ ದುರದೃಷ್ಟದಿಂದ ಅವರು ಮತ್ತೆ ಹಿಂತಿರುಗಲಿಲ್ಲ.

ಅನಂತರ ಈ ವಿಷಯ ಸಾಕಷ್ಟು ವಿವಾದಕ್ಕೆ ಎಡೆಮಾಡಿಕೊಟ್ಟಿತು. ತೀ.ನಂ.ಶ್ರೀ.ಯವರ ಅನೇಕ ವಿದ್ಯಾರ್ಥಿಗಳು ತಾವು ಅಧ್ಯಾಪಕರಾಗಿ ಕಾಲೇಜಿನ ತರಗತಿಗಳಲ್ಲಿ ಈ ವಿಷಯವನ್ನು ಪಾಠ ಮಾಡುವಾಗ, ಈ ಪುಸ್ತಕ ಮತ್ತು ತೀ.ನಂ.ಶ್ರೀ.ಯವರ ತರಗತಿಯ ಟಿಪ್ಪಣಿಗಳೆರಡನ್ನೂ ಜೊತೆಯಲ್ಲಿ ಇಟ್ಟುಕೊಂಡು ಅವೆರಡರಲ್ಲಿನ ನೇರ ಸಾಮ್ಯಗಳ ಅನೇಕ ನಿದರ್ಶನಗಳನ್ನು ಕೊಟ್ಟಿದ್ದುಂಟು.

ತೀ.ನಂ.ಶ್ರೀ.ಯವರ ನಿಧನದ ನಂತರ ಪ್ರಕಟವಾದ ಈ ಗ್ರಂಥದ ಮುಂದಿನ ಆವೃತ್ತಿಯಲ್ಲಿ ತೀ.ನಂ.ಶ್ರೀ.ಯವರ ಅಭಿಪ್ರಾಯವೆಂದು (ಇದು ತೀ.ನಂ.ಶ್ರೀ.ಯವರ ಶೈಲಿಯೇ ಅಲ್ಲವೆಂದು ಅವರನ್ನು ಬಲ್ಲವರೆಲ್ಲರ ಅಭಿಪ್ರಾಯ!) ಮುದ್ರಿತವಾಗಿದ್ದುದನ್ನು ಅನೇಕರು ಪ್ರಶ್ನಿಸಿ ಇದಕ್ಕೆ ಆಧಾರವನ್ನು ಕೇಳಿದಾಗ, ಮತ್ತು ಶ್ಯಾಮಸುಂದರ್ ಆಯೋಗದ ಮುಂದೆ ಈ ವಿಷಯ ಪ್ರಸ್ತಾಪವಾದಾಗ ಇದರ ಬಗ್ಗೆ ಸೂಕ್ತ ಆಧಾರವನ್ನು ತೋರಿಸಲು ಗ್ರಂಥಕರ್ತರಿಗೆ ಸಾಧ್ಯವಾಗಲಿಲ್ಲ. ಅಂತೂ ಈ ಸಂಗತಿ ಹೀಗೆಯೇ ಕಾಲಗರ್ಭದಲ್ಲಿ ಹುದುಗಿಹೋಯಿತು.

ತಮ್ಮ ಬರವಣಿಗೆ ಸಾಲದು ಎಂದು ಯಾವಾಗಲಾದರೂ ಒಮ್ಮೆ ತೀ.ನಂ.ಶ್ರೀ.ಯವರೂ ಕೊರಗಿ(!) "Publish or Perish" ಎಂದು ನೆನಸಿಕೊಳ್ಳುತ್ತಿದ್ದ ಉಕ್ತಿ ನಿಜವಾಯಿತೆ?

ಶೂನ್ಯ ಸಂಪಾದನೆಯನ್ನು ಕುರಿತು

●

ಶ್ರೀ ಎಂ. ಚಿದಾನಂದಮೂರ್ತಿಯವರು ಬರೆದ 'ಶೂನ್ಯ ಸಂಪಾದನೆಯನ್ನು ಕುರಿತು' ಪುಸ್ತಕ ೧೯೬೭ರಲ್ಲಿ ಪ್ರಕಟವಾಯಿತು. ಅದಕ್ಕೆ ತೀ.ನಂ.ಶ್ರೀ.ಯವರು ಮುನ್ನುಡಿ ಬರೆದುಕೊಟ್ಟಿದ್ದರು. (ಈ ಲೇಖನ 'ಕಾವ್ಯಾನುಭವ' ಪುಸ್ತಕದಲ್ಲಿ ಸೇರ್ಪಡೆಯಾಗಿದೆ.)

ಚಿದಾನಂದಮೂರ್ತಿಯವರು ಈ ಪುಸ್ತಕದಲ್ಲಿ ವ್ಯಕ್ತಪಡಿಸಿರುವ ಕೆಲವು ಸಂಶೋಧಕ ಅಭಿಪ್ರಾಯಗಳು ಈ ವಿಷಯಗಳಲ್ಲಿ ತೀ.ನಂ.ಶ್ರೀ.ಯವರ ಅಭಿಪ್ರಾಯಗಳಿಗಿಂತ ಭಿನ್ನವಾಗಿದೆ. ತೀ.ನಂ.ಶ್ರೀ.ಯವರು ತಮ್ಮ ಮುನ್ನುಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಚಿದಾನಂದ ಮೂರ್ತಿಗಳ ಪ್ರತಿಪಾದನೆಗಳ ನಂತರವೂ ತಮ್ಮ ಹಳೆಯ ಗ್ರಹಿಕೆಗಳನ್ನು ಮಾರ್ಪಡಿಸಲು ತಮಗೆ ಆಗಿಲ್ಲ ಎಂದು ತಿಳಿಸಿ, ಆದರೆ ಇಂಥ ಗ್ರಂಥಗಳಲ್ಲಿ ಸಿದ್ಧಾಂತಕ್ಕಿಂತ ಮಾರ್ಗ ಮುಖ್ಯ ವೆಂದು ಒತ್ತಿ ಹೇಳಿ, ಲೇಖಕರ ನೇರ ಮತ್ತು ಶಾಸ್ತ್ರೀಯ ಮಾರ್ಗವನ್ನು ಮೆಚ್ಚಿದ್ದಾರೆ.

ಚಿದಾನಂದಮೂರ್ತಿಯವರು ಈ ಗ್ರಂಥ ಬರೆದಾಗ ತೀ.ನಂ.ಶ್ರೀ.ಯವರ ಸಂಶೋಧನ ವಿದ್ಯಾರ್ಥಿಯಾಗಿ ತಮ್ಮ ಪಿಎಚ್.ಡಿ. ಪದವಿಗೆ ಕೆಲಸ ಮಾಡುತ್ತಿದ್ದರು. ಆದರೆ ಸಂಶೋಧನೆಯಲ್ಲಿ, ತಮ್ಮ ಗುರುಗಳೊಡನೆ ಕೂಡಾ ಭಿನ್ನಾಭಿಪ್ರಾಯವಿದ್ದರೂ, ಅದರ ಸತ್ಯ ನಿರೂಪಣೆ ಎಷ್ಟು ಮುಖ್ಯ ಎನ್ನುವುದನ್ನು ತಮ್ಮ ಗುರುಗಳಾದ ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಅವರಿಂದಲೇ ಅರಿತಿದ್ದೇನೆ ಎಂದು ತಿಳಿಸುತ್ತಾರೆ ಮತ್ತು ಈ ನಿಲುವು ಸಂಶೋಧನೆಯಲ್ಲಿ ಸದಾ ಕಾಲಕ್ಕೂ ಅನುಕರಣೀಯವಾದುದು ಎಂದು ತಿಳಿಸುತ್ತಾರೆ.

ಈ ಗ್ರಂಥದ ಪ್ರಕಟಣೆ ಯಾವ ರೀತಿಯ ಸಾಮಾಜಿಕ ಧೋರಣೆಯನ್ನು ಕೆರಳಿಸಿತೆಂದು ಮತ್ತು ಅದು ಲೇಖಕರಿಗೆ ಎಷ್ಟು ನೋವನ್ನುಂಟು ಮಾಡಿತೆಂದು ಚಿದಾನಂದಮೂರ್ತಿಯವರು ಈ ಗ್ರಂಥದ ಎರಡನೆಯ ಪರಿಷ್ಕೃತ ಮುದ್ರಣದ (ಪ್ರಕಟಣೆ ೧೯೮೮) ಮೊದಲ ಮಾತುಗಳ ಈ ಕೆಳಗೆ ಕೊಟ್ಟಿರುವ ಭಾಗದಿಂದ ಗೊತ್ತಾಗುತ್ತದೆ.

*

ಈ ಪ್ರಕಟಣೆ ವಿಶೇಷವಾಗಿ ಮೈಸೂರಿನ ಮತ್ತು ಧಾರವಾಡದ ಸಾಂಪ್ರದಾಯಕ ವಲಯ ಗಳಲ್ಲಿ ದೊಡ್ಡ ಕೋಲಾಹಲವನ್ನೇ ಎಬ್ಬಿಸಿತು. ನನ್ನ ಒಬ್ಬ ಎಂ.ಎ. ವಿದ್ಯಾರ್ಥಿ – ಆತ ಸಭ್ಯ

ಮತ್ತು ಪ್ರೌಢಶಾಲಾ ಅಧ್ಯಾಪಕ – ನನ್ನ ಪುಸ್ತಕ ಓದಿ ನಾನಿಲ್ಲದಾಗ ಮನೆಗೆ ಬಂದು ಗಲಾಟೆ ಮಾಡಿ ಹೋದನಂತೆ (ಆಮೇಲೆ ಆತ ಬಂದು ಕ್ಷಮೆ ಯಾಚಿಸಿದ). ಅದು ತೀರ ಸಣ್ಣ ವಿಷಯ. ಆದರೆ ಧಾರವಾಡದಲ್ಲಿ ಕೆಲವು ಜನ "ನಮ್ಮ ಬೆರಳು ನಮ್ಮ ಕಣ್ಣಲ್ಲಿ" ಎಂಬರ್ಥ ಬರುವಂತೆ ಮಾತನಾಡಿದ್ದಲ್ಲದೆ, ತೀ.ನಂ.ಶ್ರೀ.ಯವರೂ ಡಿ.ಎಲ್.ಎನ್. ಅವರೂ ತಾವು ಬರೆಯಲಾರದ್ದನ್ನು ನನಗೆ ಹೇಳಿ ಬರೆಯಿಸಿದ್ದಾರೆ ಎಂಬರ್ಥ ಬರುವಂತೆ ಬಗೆ ಬಗೆಯಾಗಿ ಮಾತನಾಡಿಕೊಂಡದ್ದನ್ನು ಅಲ್ಲಿನ ಮಿತ್ರರೊಬ್ಬರು ಪತ್ರ ಬರೆದು ತಿಳಿಸಿದರು. ಅದೂ ದೊಡ್ಡ ವಿಷಯವಲ್ಲ. ಪ್ರಕಟವಾದ ಹೊಸತರಲ್ಲಿ ಕೆಲವು ತಿಂಗಳು ಮೈಸೂರಿನ ಕೆಲವರು ಮೃದುವಾಗಿ ಹೆದರಿಸುವ ಧ್ವನಿಯಲ್ಲಿ "ನಿಮ್ಮ ಪುಸ್ತಕಕ್ಕೆ ಎಚ್. ತಿಪ್ಪೇರುದ್ರಸ್ವಾಮಿಯವರು ಉತ್ತರ ಬರೆಯುತ್ತಿದ್ದಾರೆ, ಕಾದು ನೋಡಿ" ಎಂದು ಎಚ್ಚರಿಸುತ್ತಿದ್ದರು. ಕೊನೆಗೊಂದು ದಿನ ಆ ಕಾದ ಪುಸ್ತಕ ೧೯೬೩ರ ನವೆಂಬರ್‌ನಲ್ಲಿ "ಶೂನ್ಯ ತತ್ವ ವಿಕಾಸ ಮತ್ತು ಶೂನ್ಯ ಸಂಪಾದನೆ" ಎಂಬ ಹೆಸರಲ್ಲಿ ಹೊರಬಂತು. ನನ್ನ ಪುಸ್ತಕದಲ್ಲಿ ೧೫೪ ಪುಟ ಇದ್ದರೆ ಅದಕ್ಕೆ ಪ್ರತಿಕ್ರಿಯೆಯಾಗಿ ಬಂದ ಅದರಲ್ಲಿ ೨೬೨ ಪುಟ ಇದ್ದವು. ಅದನ್ನು ಪ್ರಕಟಿಸಿದ ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ನಡೆದ ಬಿಡುಗಡೆ ಸಮಾರಂಭವು ಕೃತಿಕಾರರಿಗೆ ಶಾಲು ಹೊದಿಸುವ ಸಮಾರಂಭಕ್ಕಿಂತ ನನ್ನನ್ನೂ, ಜ್ಞಾನಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದ ನನ್ನ ಇಬ್ಬರು ಪ್ರೀತಿಯ ಗುರುಗಳನ್ನೂ ವಾಚಾಮಗೋಚರವಾಗಿ ನಿಂದಿಸುವ ಸಭೆಯಾಗಿ ಪರಿಣಮಿಸಿತಂತೆ. ನಾನು ಆಗಿನ್ನೂ ಚಿಕ್ಕವನು, ಬೈಗುಳನ್ನು ತಡೆದುಕೊಳ್ಳಬಹುದಿತ್ತು. ಆದರೆ ನನ್ನ ಗುರುಗಳ ಅನ್ಯಾಯದ ನಿಂದೆ ನನ್ನ ಮನಸ್ಸಿಗೆ ತೀರ ನೋವುಂಟುಮಾಡಿತು. ಅದನ್ನೆಲ್ಲ ನುಂಗಿಕೊಂಡೆ; ಮತ್ತು ಆ ನೋವು ನನ್ನನ್ನು ಬೆಳೆಸಿತು. ಸಂಶೋಧನೆಯ ಕ್ಷೇತ್ರದಲ್ಲಿ ಸತ್ಯದ ಪರವಾಗಿ ದಿಟ್ಟವಾಗಿ ತಲೆ ಎತ್ತಿ ನಿಲ್ಲುವ ಸ್ಥೈರ್ಯವನ್ನು ತುಂಬಿಕೊಟ್ಟಿತು.

ಡಾ॥ ಸ್ವಾಮಿ ತಮ್ಮ ಪುಸ್ತಕದಲ್ಲಿ ಬಳಸಿದ್ದ ಭಾಷೆ ಉತ್ತಮ ಅಭಿರುಚಿಯದು ಆಗಿರಲಿಲ್ಲ. ಅವರ ಅಭಿಪ್ರಾಯಗಳು ಒಂದು ಧರ್ಮದ ಆಭಿಮಾನಿಯವಕ್ಕಿಂತ ಹೆಚ್ಚಿನವಾಗಿರಲಿಲ್ಲ.

ಮುಂದೆ, ಅವರೇ ೧೯೭೩ರಲ್ಲಿ ತಮ್ಮ ಮೊದಲ "ಶೂನ್ಯ ತತ್ವ ವಿಕಾಸ ಮತ್ತು ಶೂನ್ಯ ಸಂಪಾದನೆ" ಗ್ರಂಥದ "ಬಹುಭಾಗವನ್ನು ಬಳಸಿಕೊಂಡು" "ಶೂನ್ಯ ಸಂಪಾದನೆ–ವಿವರಣಾತ್ಮಕ ಪರಿಚಯ" ಎಂಬ ಪುಸ್ತಕವನ್ನು ಹೊರ ತಂದರು. ಅದರಲ್ಲಿ ಮೊದಲ ಪುಸ್ತಕದ ಅವಹೇಳನಾತ್ಮಕ ಭಾಷೆ ಕಟಕಿ ವ್ಯಂಗ್ಯಗಳನ್ನು ತೆಗೆದುಹಾಕಿದರು. ಐತಿಹಾಸಿಕ ಚರ್ಚೆಗಳ ಭಾಗಗಳನ್ನು ತೆಗೆದುಹಾಕಿದರು. ಇದರ ಅರ್ಥ ಸ್ಪಷ್ಟವಾಗಿದೆ. ಅವರಿಗೆ ತಮ್ಮ ಅಭಿಪ್ರಾಯ, ಭಾಷೆಗಳ ಬಗ್ಗೆ ತಮಗೇ ವಿಶ್ವಾಸವಿರಲಿಲ್ಲ. ಬರವಣಿಗೆಯನ್ನು ಗಂಭೀರವಾಗಿ ಭಾವಿಸದಿದ್ದರೆ ಆಗುವುದು ಹೀಗೆಯೇ.

ಈ ಮಾತುಗಳನ್ನು ಬರೆಯಲು ಉದ್ದೇಶಗಳಿವೆ. ಸಾಹಿತ್ಯಕ ಸಂಶೋಧನೆಗೆ ಧಾರ್ಮಿಕ ಶ್ರದ್ಧೆಗಳು ಎಲ್ಲ ಸಾರಿಯೂ ಅನುಕೂಲಕರ ಪ್ರತಿಕ್ರಿಯೆಗಳನ್ನು ತೋರುವುದಿಲ್ಲ. ಯಾವುದೇ ಕೃತಿ ಪ್ರಬಲ ಧಾರ್ಮಿಕ ಸಂಸ್ಥೆಯ ಮತ್ತು ಪ್ರಭಾವಶಾಲಿಗಳ ಬೆಂಬಲವನ್ನು ಪಡೆದೂ ಸ್ವತಃ

ಅಂತಸ್ಸತ್ವವನ್ನು ಹೊಂದಿರದಿದ್ದರೆ ಅದು ನಿಲ್ಲುವುದಿಲ್ಲ. ಇದನ್ನು ಸಂಶೋಧನೆಯ ಇತಿಹಾಸ ಮತ್ತೆ ಮತ್ತೆ ಸಾಧಿಸಿ ತೋರಿಸಿದೆ. ಅದಕ್ಕೆ ಒಂದು ಜೀವಂತ ನಿದರ್ಶನವನ್ನು ನಾನು ಕಣ್ಣಾರೆ ಕಂಡುದನ್ನು ಮೇಲೆ ದಾಖಲು ಮಾಡಿದ್ದೇನೆ. ಸಂಶೋಧನೆಯಲ್ಲಿ ಸತ್ಯವೊಂದೇ ಉಳಿಯತಕ್ಕದ್ದು. ಅದೊಂದೇ ಮಾನ್ಯ. ಜನಪ್ರಿಯತೆಯೊಂದು ಮನುಷ್ಯನನ್ನು ಜಾಗ್ರತೆ ಮುಂದಕ್ಕೆ ಸಾಗಿಸುವ ಮತ್ತು ಬೀಳಿಸುವ ಒಂದು ಜಾರು ಹಾವಸೆಗಲ್ಲು.

ಆದರೂ ಒಂದು ಮಾತನ್ನು ಇಲ್ಲಿ ಹೇಳಲೇಬೇಕು : ಡಾ॥ ಸ್ವಾಮಿ ಮತ್ತು ನಾನು ಇಂದಿಗೂ ಸ್ನೇಹಿತರು.

ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್:
ಪವಿತ್ರ ಸ್ನೇಹ, ದುರದೃಷ್ಟಕರ ಮನಸ್ತಾಪ

●

ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಅವರ ಸ್ನೇಹ ಇಬ್ಬರು ದಿಗ್ಗಜ ವಿದ್ವಾಂಸರುಗಳ ಸ್ನೇಹ, ಬಹು ಅಪರೂಪವಾದ ಮತ್ತು ಪವಿತ್ರವಾದ ಸ್ನೇಹ. ಈ ಜೋಡಿ ಕನ್ನಡ ವಿದ್ವತ್ಪ್ರಪಂಚಕ್ಕೆ ಅಮೂಲ್ಯ ಕಾಣಿಕೆಗಳನ್ನು ನೀಡಿದೆ. ಆದರೆ ಈ ಸ್ನೇಹವೇ "ಡಿ.ಎಲ್.ಎನ್. ಮುಂಚೆ ಬರೆಯಲಿ" ಎಂದು ತೀ.ನಂ.ಶ್ರೀ., "ತೀ.ನಂ.ಶ್ರೀ. ಮುಂಚೆ ಬರೆಯಲಿ" ಎಂದು ಡಿ.ಎಲ್.ಎನ್., ಅವರ ಪರಸ್ಪರ ಗೌರವದ ಜಿಜ್ಞಾಸೆಯಲ್ಲಿ ಕೊನೆಗೆ ಇಬ್ಬರೂ ಬರೆಯದೆ, ಕನ್ನಡ ವಿದ್ವತ್ಪ್ರಪಂಚ ಇವರಿಂದ ಮಾತ್ರ ಬರಬಹುದಾಗಿದ್ದ ವಿದ್ವತ್ಪೂರ್ಣ ಲೇಖನಗಳಿಂದ ವಂಚಿತವೂ ಆಗಿದೆ.

ತೀ.ನಂ.ಶ್ರೀ ಮತ್ತು ಡಿ.ಎಲ್.ಎನ್. ೧೯೨೦ನೇ ಇಸವಿಯಿಂದ ಬಲ್ಲವರು. ಅವರಿಬ್ಬರೂ ಒಂದೇ ಊರಿನಲ್ಲಿದ್ದಾಗ ಭೇಟಿಯಾಗುತ್ತಿದ್ದುದು ಸಾಮಾನ್ಯ ಮತ್ತು ಬೇರೆ ಊರುಗಳಲ್ಲಿದ್ದಾಗ ಮಾಡುತ್ತಿದ್ದ ಪತ್ರವ್ಯವಹಾರ ಅಪಾರ. ೧೯೫೦ರಲ್ಲಿ ತೀ.ನಂ.ಶ್ರೀ. ಮೈಸೂರಿಗೆ ಹಿಂತಿರುಗಿ ಬಂದನಂತರ ಅವರಿಬ್ಬರ ಮನೆಗಳು ಸರಸ್ವತಿಪುರದಲ್ಲಿ (ಇಬ್ಬರೂ ವಾಸಿಸುತ್ತಿದ್ದ ಬಡಾವಣೆಗೆ ಎಷ್ಟು ಸೂಕ್ತವಾದ ಹೆಸರು!) ಸುಮಾರು ಅರ್ಧ ಮೈಲಿ ದೂರದೊಳಗಿತ್ತು. ಮಹಾರಾಜ ಕಾಲೇಜಿನಲ್ಲಿ ಮಧ್ಯಾಹ್ನದ ಸಮಯದಲ್ಲಿ ಒಬ್ಬರನ್ನೊಬ್ಬರು ಭೇಟಿಯಾಗಿರುತ್ತಿದ್ದರೂ ಮತ್ತೆ ಪ್ರತಿದಿನ ಸಂಜೆ ಡಿ.ಎಲ್.ಎನ್. ನಮ್ಮ ಮನೆಗೆ ಬಂದು "ಶ್ರೀಕಂಠಯ್ಯ ಮನೆಯಲ್ಲೇ ಇದಾನೋ" ಎಂದು ಒಮ್ಮೆ ಗರ್ಜಿಸಿ (!) ನಮ್ಮ ತಂದೆಯವರೊಡನೆ ಮನೆಯಲ್ಲೇ ಮಾತನಾಡುತ್ತಿದ್ದರು ಮತ್ತು ಸ್ವಲ್ಪ ಕಾಲ ಒಟ್ಟಿಗೆ ವಾಯುವಿಹಾರಕ್ಕೆ ಹೋಗಿ ಬರುತ್ತಿದ್ದರು. ಅವರಿಬ್ಬರೂ ಜೊತೆಯಾಗಿ ಮೈಸೂರಿನ ಮಾರುಕಟ್ಟೆಯಲ್ಲಿ ಹೋಗುತ್ತಿದ್ದರೆ ದಾರಿಯಲ್ಲಿ ಹೋಗುತ್ತಿದ್ದ ಎಷ್ಟೋ ಜನ ಸಾರ್ವಜನಿಕರು, ಹಾಲಿ ಮತ್ತು ಹಳೇ ವಿದ್ಯಾರ್ಥಿಗಳು, ಅಧಿಕಾರಿಗಳು ಗೌರವಪೂರ್ವಕವಾಗಿ ಅವರನ್ನು ನೋಡುತ್ತ ನಿಂತು ದೂರದಿಂದಲೇ ವಂದನೆಗಳನ್ನರ್ಪಿಸುತ್ತಿದ್ದ ದೃಶ್ಯ ಸಾಮಾನ್ಯ ವಾಗಿತ್ತು. ತೀ.ನಂ.ಶ್ರೀ., ಡಿ.ಎಲ್.ಎನ್. ಅವರ ವಿದ್ವತ್‌ಸ್ನೇಹ ಮತ್ತು ಗೌರವಗಳ ಬಗ್ಗೆ ಸಾಕಷ್ಟು ದಾಖಲೆಯಾಗಿದೆ. ತೀ.ನಂ.ಶ್ರೀ. ಅವರ ಪ್ರಕಾರ "ಡಿ.ಎಲ್.ಎನ್. ಅಂದರೆ ಪಾಂಡಿತ್ಯ. ಪಾಂಡಿತ್ಯ ಅಂದರೆ ಡಿ.ಎಲ್.ಎನ್." ಮತ್ತು ಡಿ.ಎಲ್.ಎನ್. ಅವರು ಹಳಗನ್ನಡದ ಶ್ರೇಷ್ಠ ನ್ಯಾಯಾಲಯವಾಗಿದ್ದರು. ಅಲ್ಲಿ ಬಂದಿರುವ ತೀರ್ಪಿಗೆ ಬೇರೆ ಯಾವ ಮೇಲ್ಮನವಿಯೂ

ಸಾಧ್ಯವಿಲ್ಲ. ಡಿ.ಎಲ್.ಎನ್. ಅವರಿಗೆ ಈ ಹಳಗನ್ನಡದ ವಿಷಯಗಳಲ್ಲಿ ಏನಾದರೂ ಅಸ್ಪಷ್ಟವಾಗಿದ್ದರೆ, ಬೇರೆ ಯಾರಿಗೂ ಅದು ಸ್ಪಷ್ಟವಾಗಲು ಅಸಂಭವ ಮತ್ತು ಅಶಕ್ಯ. ಡಿ.ಎಲ್.ಎನ್ ಅವರಿಗೂ ತೀ.ನಂ.ಶ್ರೀ.ಯವರ ಮೇಲೆ ಅಪಾರ ಗೌರವ. "ಭಾರತೀಯ ಕಾವ್ಯಮೀಮಾಂಸೆ" ಅಂತಹ ಗ್ರಂಥವನ್ನು ಕನ್ನಡದಲ್ಲಾಗಲಿ ಅಥವಾ ಇಂಗ್ಲಿಷ್ ಸೇರಿದಂತೆ ಬೇರೆ ಯಾವ ಭಾರತೀಯ ಭಾಷೆಯಲ್ಲಾಗಲಿ ಯಾರಾದರೂ ತೋರಿಸಲಿ ಎಂದು ಅವರ ನಿರಂತರ ಸವಾಲು. ಆದರೆ ಅವರ ವೈಯಕ್ತಿಕ ಪ್ರೀತಿ, ವಿಶ್ವಾಸ ಮತ್ತು ಸಲಿಗೆಯ ಸಂವಾದಗಳನ್ನು ಅವರ ಸಮೀಪವರ್ತಿಗಳೆಲ್ಲರೂ ಬಲ್ಲರು.

೧೯೫೯–೬೦ರಲ್ಲಿ ಬಿದರೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ತೀ.ನಂ.ಶ್ರೀ.ಯವರಿಗೆ ಆಹ್ವಾನ ಬಂದಾಗ ಅದು ಡಿ.ಎಲ್.ಎನ್. ಅವರಿಗೆ ಸಲ್ಲಬೇಕಾದ ಗೌರವವೆಂದು ತೀ.ನಂ.ಶ್ರೀ. ನಿರಾಕರಿಸಿದ್ದರು. ಡಿ.ಎಲ್.ಎನ್. ಅವರು ಅಧ್ಯಕ್ಷತೆಯನ್ನು ಒಪ್ಪಿದಾಗ ನಾನು ಅವರನ್ನು ಅಭಿವಂದಿಸಿದ್ದಕ್ಕೆ ಅವರು "ನಿನ್ನ ಅಪ್ಪ ಇದನ್ನೂ ನನ್ನ ತಲೆಗೆ ಕಟ್ಟಿದ್ದಾನೆ!" ಎಂದು ಹೇಳಿ ನಕ್ಕಿದ್ದರು.

ಆ ಸಮಯದಲ್ಲಿ ಮಹಾರಾಜ ಕಾಲೇಜಿನಲ್ಲಿ ಡಿ.ಎಲ್.ಎನ್. ಅವರಿಗೆ ಸನ್ಮಾನ ಸಮಾರಂಭ ಏರ್ಪಾಡಾಗಿತ್ತು. (ಆ ಸಭೆಯಲ್ಲಿ ನಾನೂ ಪ್ರೇಕ್ಷಕನಾಗಿ ಕುಳಿತಿದ್ದೆ.) ಆ ಸಮಯದಲ್ಲಿ ತೀ.ನಂ.ಶ್ರೀ. ಮಾತನಾಡುತ್ತ ಅವರ ಮತ್ತು ಡಿ.ಎಲ್.ಎನ್. ಅವರ ಪ್ರೀತಿಯ ಸ್ನೇಹವನ್ನು ಪ್ರಸ್ತಾಪಿಸಿ ಡಿ.ಎಲ್.ಎನ್. ಅವರ ಪಾಂಡಿತ್ಯದ ಬಗ್ಗೆ ಮಾತನಾಡುತ್ತ "ಡಿ.ಎಲ್.ಎನ್ ಸಂಪಾದಿಸಿರುವ 'ವಡ್ಡಾರಾಧನೆ' ಒಂದು ಕೃತಿಯೇ ಸಾಕು, ಅವರ ಆಳವಾದ ಪಾಂಡಿತ್ಯದ ನಿದರ್ಶನಕ್ಕೆ. ವಿದೇಶಗಳಲ್ಲಿ ಇಂಥ ಗ್ರಂಥ ಪ್ರಕಟವಾಗಿದ್ದರೆ ಅಲ್ಲಿಯ ಪ್ರಖ್ಯಾತ ವಿಶ್ವವಿದ್ಯಾಲಯಗಳು ಅದಕ್ಕೆ ಮೂರು ನಾಲ್ಕು ಗೌರವ ಡಾಕ್ಟರೇಟ್‌ಅನ್ನು ಪ್ರದಾನ ಮಾಡಿ ಗೌರವಿಸುತ್ತಿದ್ದವು. ಈ ಮಾತನ್ನು ನಾನು ಸಾಮಾನ್ಯ ಮನುಷ್ಯನಾಗಿ ಮಾತನಾಡುತ್ತಿಲ್ಲ. ಮೈಸೂರು ವಿಶ್ವವಿದ್ಯಾಲಯ ಕನ್ನಡ ಪ್ರಾಧ್ಯಾಪಕನಾಗಿರುವೆನೆಂಬ ಅರಿವು ಇಟ್ಟುಕೊಂಡು (ಆ ಅಧಿಕಾರವಾಣಿಯಿಂದ) ಹೇಳುತ್ತಿದ್ದೇನೆ ಎಂದು ಎಲ್ಲರೂ ಗಮಿಸಬೇಕು" ಎಂದು ಹೇಳಿ, ಆದರೆ "ಇಲ್ಲಿಯ ಪರಿಸ್ಥಿತಿಯೇ ಬೇರೆ" ಎಂದು ಕೊರಗಿದ್ದರು.

ಡಿ.ಎಲ್.ಎನ್. ಅವರ ಸಾಹಿತ್ಯ ಸಮ್ಮೇಳನದ ಭಾಷಣ ಮಾರನೆಯ ದಿನ ಪತ್ರಿಕೆಗಳ ಮುಖಪುಟದಲ್ಲಿ ದಪ್ಪ ಶೀರ್ಷಿಕೆಯಲ್ಲಿ "ಸರಸ್ವತಿಯ ರಾಜ್ಯದಲ್ಲಿ ಜಾತೀಯತೆ, ಮತೀಯತೆಗಳಿಗೆ ಸ್ಥಾನವಿಲ್ಲ....." ಎನ್ನುವ ಘೋಷಣೆಯಲ್ಲಿ ಪ್ರಕಟವಾದಾಗ, ನಾನು ನಮ್ಮ ತಂದೆಯವರಿಗೆ "ಡಿ.ಎಲ್.ಎನ್. ಅವರು ಬಹು ದಿಟ್ಟವಾಗಿ ಮಾತನಾಡಿದ್ದಾರೆ....." ಎಂದು ಹೇಳಿದೆ. ಆಗ ಅವರು ಇದು ತಾವಿಬ್ಬರೂ ಒಟ್ಟಿಗೆ ಸಿದ್ಧಮಾಡಿದ ಭಾಷಣ ಎಂದು ನನಗೆ ತಿಳಿಸಿದ್ದರು. ಈ ಭಾಷಣದ ಪ್ರತಿಯೊಂದು ವಾಕ್ಯವನ್ನು ಇಬ್ಬರೂ ಒಟ್ಟಿಗೆ ಚರ್ಚಿಸಿ ಸಿದ್ಧಪಡಿಸಿದ್ದರು. ಇವರಿಬ್ಬರ ನಡುವಿನ ಆಂತರಿಕ ಪರಸ್ಪರ ಪ್ರೀತಿ, ಗೌರವ ಬಹು ಆಳವಾದದ್ದು ಮತ್ತು ಪವಿತ್ರವಾದದ್ದು. ಇದಕ್ಕೆ ತೀ.ನಂ.ಶ್ರೀ.ಯವರ ಡಿ.ಎಲ್.ಎನ್. ಮೇಲಿನ ಲೇಖನವೇ ಸಾಕ್ಷಿ (ಅನುಬಂಧ ೪೫).

ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಅವರ ನಡುವಿನ ಪ್ರೀತಿ ವಿಶ್ವಾಸಗಳು ಇದರೊಡನೆ ಕೊಟ್ಟಿರುವ ಎಂ. ಚಿದಾನಂದಮೂರ್ತಿಯವರ ಲೇಖನ ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಟಿ.ಪಿ. ಕೃಷ್ಣಾಚಾರ್ ಅವರ ಲೇಖನಗಳ ಭಾಗಗಳಿಂದಲೂ ಗೊತ್ತಾಗುತ್ತದೆ (ಅನುಬಂಧಗಳು ೪೬ರಿಂದ ೪೮). ಈ ಲೇಖನಗಳು ಆಗಸ್ಟ್ ೧೯೭೧ರ 'ಕನ್ನಡನುಡಿ' : ಡಿ.ಎಲ್.ಎನ್. ಸ್ಮರಣ ಸಂಚಿಕೆಯಲ್ಲಿ ಪ್ರಕಟವಾಗಿದ್ದವು.

ಇಲ್ಲಿ ಕೊಟ್ಟಿರುವ ತೀ.ನಂ.ಶ್ರೀ. ಡಿ.ಎಲ್.ಎನ್. ಅವರ ಪತ್ರವ್ಯವಹಾರದ ಕೆಲವು ಪತ್ರಗಳಿಂದ ಅವರಿಬ್ಬರ ನಡುವೆ ಇದ್ದ ಪರಸ್ಪರ ಗಾಢವಾದ ಪ್ರೀತಿ, ಸಲಿಗೆ, ಗೌರವ ಮತ್ತು ಖಾಸಗಿ ವಿಚಾರ ವಿನಿಮಯ ತಿಳಿದುಬರುತ್ತದೆ. ಮತ್ತು ಕನ್ನಡ ನಿಘಂಟುವಿನ ಮತ್ತು ಶಾಸ್ತ್ರೀಯ ವಿಚಾರಗಳಲ್ಲಿ ಇಬ್ಬರ ನಡುವಿನ ವಿದ್ವತ್ಪೂರ್ವಕವಾದ ದೀರ್ಘವಾದ ಚರ್ಚೆಗಳೂ ವ್ಯಕ್ತವಾಗುತ್ತವೆ (ಅನುಬಂಧಗಳು ೪೯ ರಿಂದ ೫೩).

ಆದರೆ ಈ ಪವಿತ್ರವಾದ ಸ್ನೇಹ ತೀ.ನಂ.ಶ್ರೀ.ಯವರ ಜೀವನದ ಕೊನೆಯ ೫–೬ ವರ್ಷಗಳಲ್ಲಿ ಕೆಲವರ ದುರುದ್ದೇಶಪೂರಿತ ಪ್ರಯತ್ನಗಳಿಂದ ದೊಡ್ಡ ಆಘಾತಕ್ಕೆ ಒಳಗಾಗಿದ್ದು ಒಂದು ಮಹಾ ದುರಂತವೆಂದು ಬಹು ದುಃಖದಿಂದ ಹೇಳಬೇಕಾಗುತ್ತದೆ.

೧೯೫೭ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರುಗಳಾಗಿ ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಮತ್ತೆ ಜೊತೆಯಾದರು. ೧೯೬೦ರಲ್ಲಿ ಮಾನಸಗಂಗೋತ್ರಿಯ ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗದ ಯು.ಜಿ.ಸಿ. ಕನ್ನಡ ಪ್ರಾಧ್ಯಾಪಕ ಹುದ್ದೆ ಪ್ರಕಟವಾಯಿತು. ಡಿ.ಎಲ್.ಎನ್. ಅವರೂ ಈ ಹುದ್ದೆಗೆ ಅರ್ಜಿ ಹಾಕಬೇಕೆಂದು ತೀ.ನಂ.ಶ್ರೀ.ಯವರ ಒತ್ತಾಯ. ಆದರೆ ತೀ.ನಂ.ಶ್ರೀ. ಮಾತ್ರ ಹಾಕಬೇಕೆಂದು ಡಿ.ಎಲ್.ಎನ್. ಅವರ ಸ್ಪಷ್ಟವಾದ ನಿಲುವು. ಈ ವಿಷಯದಲ್ಲಿ ಯಾವ ಅನುಮಾನವೂ ಬೇಡ ಎಂದು ನಾನೇ ಕೇಳಿಸಿಕೊಂಡಂತೆ ಡಿ.ಎಲ್.ಎನ್. ಅವರ ಹೃತ್ಪೂರ್ವಕವಾದ ಮತ್ತು ನಿಷ್ಕಲ್ಮಶವಾದ ಭರವಸೆ. ಅದರಂತೆ ತೀ.ನಂ.ಶ್ರೀ.ಯವರು ಮಾತ್ರ ಅರ್ಜಿ ಹಾಕಿ ಯು.ಜಿ.ಸಿ. ಪ್ರಾಧ್ಯಾಪಕರಾಗಿ ಮಾನಸಗಂಗೋತ್ರಿಗೆ ತೆರಳಿದರು. ಆದರೆ ಡಿ.ಎಲ್.ಎನ್. ಮಹಾರಾಜ ಕಾಲೇಜಿನಲ್ಲಿದ್ದರೂ ಅವರ ಸಹಾಯವಿಲ್ಲದೆ ಕನ್ನಡ ಸ್ನಾತಕೋತ್ತರ ತರಗತಿಗಳು ಸಾಧ್ಯವೇ ಇಲ್ಲವೆಂದು ತೀ.ನಂ.ಶ್ರೀ.ಯವರ ಅಭಿಪ್ರಾಯ ಮತ್ತು ಹೇಳಿಕೆ. ಇದಕ್ಕೆ ಡಿ.ಎಲ್.ಎನ್. ಅವರು ಒಪ್ಪಿಯೂ ಇದ್ದರು. ಮೊದಲನೆಯ ಬಾರಿಗೆ ಕನ್ನಡ ಎಂ.ಎ. ತರಗತಿಯ ಪಠ್ಯಕ್ರಮದಲ್ಲಿ ಸೇರಿಸಿದ "ಗ್ರಂಥ ಸಂಪಾದನೆ"ಯ ವಿಷಯವನ್ನು ಡಿ.ಎಲ್.ಎನ್. ಅವರೇ ಪಾಠ ಹೇಳಿ ಪ್ರಾರಂಭಿಸಬೇಕೆಂದು ತೀ.ನಂ.ಶ್ರೀ.ಯವರ ಉತ್ಕಟವಾದ ಅಭಿಲಾಷೆ.

ಈ ಅರ್ಜಿ ಮತ್ತು ನೇಮಕಗಳ ಸಮಯದಲ್ಲಿ ಡಿ.ಎಲ್.ಎನ್. ಅವರು ತಾವು ಮಾನಸ ಗಂಗೋತ್ರಿಯ ರೀಡರ್ ಹುದ್ದೆಗೆ ಅರ್ಜಿ ಹಾಕಬೇಕೆಂದು ಕೆಲವರು ಸಲಹೆ ಮಾಡಿರುವುದಾಗಿಯೂ ಅದರಂತೆ ಅರ್ಜಿ ಹಾಕಲೆ ಎಂದು ತೀ.ನಂ.ಶ್ರೀ.ಯವರನ್ನು ಕೇಳಿದರು. ತೀ.ನಂ.ಶ್ರೀ.ಯವರ ಖಂಡಿತವಾದ ಮತ್ತು ನೇರವಾದ ಉತ್ತರ "ಇದು ಸಾಧ್ಯವಿಲ್ಲ".

ಡಿ.ಎಲ್.ಎನ್. ತಮ್ಮ ಸಮಾನರೇ ಹೊರತು ಅವರ ಮೇಲಿನ ಹುದ್ದೆಯಲ್ಲಿ ತಾನು ಇರಲು ಅಸಾಧ್ಯ ಎಂದು ತೀ.ನಂ.ಶ್ರೀ.ಯವರ ಸ್ಪಷ್ಟ ನಿಲುವು. ಇದನ್ನು ಡಿ.ಎಲ್.ಎನ್. ಅವರೂ ಒಪ್ಪಿದ್ದರು.

ಇಲ್ಲಿಂದ ಮುಂದಕ್ಕೆ ಕೆಲವರ ದುರುದ್ದೇಶಗಳಿಂದ ಈ ಪವಿತ್ರ ಸ್ನೇಹಕ್ಕೆ ಹುಳಿ ಹಿಂಡುವ ಕೆಲಸ ಪ್ರಾರಂಭವಾಯಿತು. ಡಿ.ಎಲ್.ಎನ್.ಗೆ ಅನ್ಯಾಯವಾಗಿದೆ ಎಂದು ಕೆಲವರು ಚುಚ್ಚಿದರು. ಡಿ.ಎಲ್.ಎನ್. ಅವರ ಮುಗ್ಧತೆಯನ್ನು ಚೆನ್ನಾಗಿ ಬಳಸಿಕೊಂಡು ತೀ.ನಂ.ಶ್ರೀ. ಅವರ ಜೊತೆ ಸಹಕರಿಸಬಾರದೆಂದು ತಿಳಿಸಿದರು. ಡಿ.ಎಲ್.ಎನ್. ಅವರು ಮಾನಸಗಂಗೋತ್ರಿಗೆ ಪಾಠಗಳಿಗೆ ಹೋಗದಂತೆ ತಡೆಯಲು ತಾತ್ಕಾಲಿಕವಾಗಿ ಯಶಸ್ವಿಯೂ ಆದರು. ಡಿ.ಎಲ್.ಎನ್. ಅವರೇ ಪ್ರಾರಂಭಿಸಬೇಕಾದ "ಗ್ರಂಥ ಸಂಪಾದನೆ" ವಿಷಯ ಅವರು ಬರುವುದು ತಡವಾಗುತ್ತ ಬಂದಾಗ ಸುಮಾರು ಎರಡು ತಿಂಗಳುಗಳ ಮೇಲೆ ತೀ.ನಂ.ಶ್ರೀ.ಯವರೇ ಪ್ರಾರಂಭಿಸಿದರು. ಅಂದು ಸಂಜೆ ಮನೆಗೆ ಬಂದು "ಡಿ.ಎಲ್.ಎನ್. ಅವರಿಗೆ ಸೂಕ್ತವಾಗಿ ಸೇರಬೇಕಾಗಿದ್ದ ಈ ಗೌರವದ ಕೆಲಸವನ್ನು ನಾನು ಮಾಡಬೇಕಾಯಿತು" ಎಂದು ನನಗೆ ದುಃಖದಿಂದ ತಿಳಿಸಿದರು.

ಈ ದುರಂತಕ್ಕೆ ಕಾರಣರಾದ ವ್ಯಕ್ತಿಗಳು ಯಾರೆಂದು ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಅವರ ನಿಜವಾದ ಅಭಿಮಾನಿಗಳೆಲ್ಲರಿಗೂ ತಿಳಿದ ವಿಷಯ. ನಮ್ಮ ತಂದೆಯವರಿಗೂ ಇದು ಚೆನ್ನಾಗಿ ಗೊತ್ತಿತ್ತು. ಆದರೆ ಡಿ.ಎಲ್.ಎನ್. ಏಕೆ ಈ ಬಲೆಗೆ ಒಳಗಾದರು ಎನ್ನುವುದು ಇಂದಿಗೂ ಬಗೆಹರಿಸಲಾಗದ ಒಗಟಾಗಿದೆ. ಬಹುಶಃ ಮುಗ್ಧರಾದ ಡಿ.ಎಲ್.ಎನ್. ಅವರಿಗೂ ತಿಳಿಯದು! ಇದರಿಂದ ಏನನ್ನು ಸಾಧಿಸಲಾಯಿತು ಎನ್ನುವುದೂ ತಿಳಿಯದಾಗಿದೆ. ಈ ವಿಷಯ ದಲ್ಲಿ ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಸ್ನೇಹಿತರುಗಳಿಗೂ ಮತ್ತು ಸಂಸಾರವರ್ಗದವರಿಗೂ ತುಂಬಾ ಬೇಜಾರಾಗಿತ್ತು. ಈ ವಿಷಯದ ಪರಿಣಾಮ ಎಲ್ಲರನ್ನೂ ಹೇಗೆ ವಿಷಣ್ಣರನ್ನಾಗಿ ಮಾಡಿತ್ತೆಂದು ಎ.ಎನ್. ಮೂರ್ತಿರಾವ್, ಪು.ತಿ.ನ. ಅವರು 'ಶ್ರೀಕಂಠತೀರ್ಥ' ಕ್ಕೆ ಬರೆದಿರುವ ಲೇಖನಗಳ ಭಾಗಗಳಿಂದ ಗೊತ್ತಾಗುತ್ತದೆ (ಅನುಬಂಧಗಳು ೫೪ ಮತ್ತು ೫೫).

ಈ ವಿಷಯದಲ್ಲಿ ತೀ.ನಂ.ಶ್ರೀ.ಯವರಿಂದ ಡಿ.ಎಲ್.ಎನ್. ಅವರೊಡನೆ ನೇರವಾಗಿ ಮಾತನಾಡಲು ಅನೇಕ ಬಾರಿ ಪ್ರಯತ್ನಗಳಾದವು. ಅವರ ಸ್ನೇಹಿತರುಗಳಿಂದಲೂ ಆಯಿತು, ಆದರೆ ಯಾವುದೂ ಸಫಲವಾಗದೆ ತೀ.ನಂ.ಶ್ರೀ.ಯವರಿಗೆ ಏನು ಮಾಡಬೇಕೆಂದೇ ಗೊತ್ತಾಗಲಿಲ್ಲ. ಈ ಮಾನಸಗಂಗೋತ್ರಿಯ ಪ್ರಾಧ್ಯಾಪಕ ಹುದ್ದೆಯೇ ತಮ್ಮ ಸ್ನೇಹಕ್ಕೆ ಮುಳುವಾಗಿದ್ದರೆ, ತಾವು ನಿವೃತ್ತಿಪೂರ್ವ ಒಂದು ವರ್ಷ ರಜೆ ತೆಗೆದುಕೊಂಡು ಡಿ.ಎಲ್.ಎನ್. ಅವರು ಆ ಹುದ್ದೆಯನ್ನು ವಹಿಸಿಕೊಳ್ಳಲಿ ಎಂದು ತೀ.ನಂ.ಶ್ರೀ.ಯವರ ಸಲಹೆ. ಆದರೆ ಯಾವ ಪ್ರಯೋಜನವೂ ಇಲ್ಲ. ಈ ವಿಷಯದಲ್ಲಿ ಇಬ್ಬರು ದುಃಖಪಡುತ್ತಿದ್ದರು ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಮತ್ತು ಇದೇ ಮುಂದಕ್ಕೆ ಅವರಿಬ್ಬರ ಆರೋಗ್ಯಗಳಿಗೂ ಧಕ್ಕೆ ತಂದಿತು ಎನ್ನುವುದೂ ನಿಜ. ಈ ವಿರಸದ ಒಡಕನ್ನು ಪ್ರೇರೇಪಿಸಿದ ಜನರ ನಡವಳಿಕೆ ಈ ವಿಷಯದಲ್ಲಿ ಅಕ್ಷಮ್ಯ.

ಅನಂತರ ವಿದ್ಯಾರ್ಥಿಗಳ ಮೇಲಿನ ಅಭಿಮಾನದಿಂದ ಡಿ.ಎಲ್.ಎನ್ ಅವರು ಮಾನಸ ಗಂಗೋತ್ರಿಗೆ ಬಂದು ಎಂ.ಎ. ತರಗತಿಗೆ ಪಾಠಗಳನ್ನು ತೆಗೆದುಕೊಂಡರು. (ಮತ್ತು ಅವರಿಂದ ಬಹು ಅಮೂಲ್ಯವಾದ 'ಗ್ರಂಥ ಸಂಪಾದನೆ' ಗ್ರಂಥವೂ ಮೂಡಿ ಬಂದಿತು.) ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಅವರ ಮಾತುಕತೆ ನಡೆಯುತ್ತಲೂ ಇತ್ತು. ಆದರೆ ಹಿಂದಿನ ಸಂಬಂಧ ಪೂರ್ತಿಯಾಗಿ ಮರಳಿ ಬರಲೇ ಇಲ್ಲ. ಆದರೆ ಪರಸ್ಪರ ವಿದ್ವತ್ತಿನ ಗೌರವಗಳು ಎಂದೂ ಕಡಿಮೆಯಾಗಲಿಲ್ಲ. ನಮ್ಮ ತಂದೆ ನನಗೆ ಒಮ್ಮೆ ಹೇಳಿದ್ದರು "ಈ ನಮ್ಮ ಜಗಳ ತಾತ್ಕಾಲಿಕ. ಇದನ್ನು ಮುಂದೆ ಯಾರೂ ನೆನಸಿಕೊಳ್ಳುವುದಿಲ್ಲ, ಆದರೆ ಡಿ.ಎಲ್.ಎನ್. ಅವರ ವಿದ್ವತ್ತು ಮಾತ್ರ ಸದಾಕಾಲ ನಿಲ್ಲುತ್ತದೆ."

ಈ ಕಾಲದಲ್ಲಿಯೇ ಡಿ.ಎಲ್.ಎನ್. ಅವರ ಗೌರವ ಗ್ರಂಥ "ಉಪಾಯನ"ಕ್ಕೆ ತೀ.ನಂ.ಶ್ರೀ. ಯವರು ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಗ್ರಂಥದ ಮೌಲ್ಯ ಇಂದಿಗೂ ಕಡಿಮೆಯಾಗಿಲ್ಲ. ಸಂಪಾದನೆಯ ಎಲ್ಲ ಕೆಲಸವನ್ನೂ ಮುಗಿಸಿ ಇದನ್ನು ಅಚ್ಚಿಗೆ ಸಿದ್ಧಮಾಡಿ ಅದರ ಮುದ್ರಣ ಮುಗಿಯುವವರೆಗೂ ನೋಡಿಕೊಂಡಿದ್ದ ತೀ.ನಂ.ಶ್ರೀ.ಯವರು ಈ ಗ್ರಂಥ ಸಮರ್ಪಣೆಯ ಸಮಾರಂಭದ ವೇಳೆಗೆ ಇಹಲೋಕ ತ್ಯಜಿಸಿದ್ದು ವಿಪರ್ಯಾಸವೇ! ಈ ಸಂಪುಟಕ್ಕೆ ತೀ.ನಂ.ಶ್ರೀ.ಯವರು ಮಾಡಿದ ಕೆಲಸವನ್ನು ಡಿ.ಎಲ್.ಎನ್. ಗೌರವ ಸಮರ್ಪಣ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ.ಪಿ. ಕೃಷ್ಣಾಚಾರ್ಯರು ಗ್ರಂಥದ 'ಅರಿಕೆ'ಯಲ್ಲಿ ಬರೆದಿರುವ ಭಾಗದಿಂದ ತಿಳಿದುಬರುತ್ತದೆ (ಅನುಬಂಧ ೫೬).

ತೀ.ನಂ.ಶ್ರೀ.ಯವರ ಅಕಾಲಿಕ ನಿಧನಕ್ಕೆ ಅತ್ಯಂತ ಸಂತಾಪಪಟ್ಟವರಲ್ಲಿ ಡಿ.ಎಲ್.ಎನ್ ಅವರೂ ಒಬ್ಬರು. ತೀ.ನಂ.ಶ್ರೀ.ಯವರು ನಿಧನರಾದ ಸಂದರ್ಭದಲ್ಲಿ ಹೃದಯ ಸಂಬಂಧದ ಖಾಯಿಲೆಯಿಂದ ಡಿ.ಎಲ್.ಎನ್. ಅವರ ಆರೋಗ್ಯ ಸರಿಯಿರಲಿಲ್ಲ. ಈ ಘೋರ ಸುದ್ದಿಯನ್ನು ಡಿ.ಎಲ್.ಎನ್. ಅವರಿಗೆ ಹೇಗೆ ತಿಳಿಸುವುದು ಎಂದು ಅವರ ಸ್ನೇಹಿತರುಗಳಿಗೆ ಆತಂಕವಾಗಿತ್ತು. ಈ ಸಂದರ್ಭದಲ್ಲಿ ನಾವು ಮೈಸೂರಿಗೆ ಹಿಂತಿರುಗಿದ ದಿನವೇ ನಮ್ಮೆಲ್ಲರನ್ನು ನೋಡಲು ಬಂದಾಗ ಡಿ.ಎಲ್.ಎನ್. ಬಿಕ್ಕಿಬಿಕ್ಕಿ ಅತ್ತುಬಿಟ್ಟರು. ಡಿ.ಎಲ್.ಎನ್. ಅವರಿಗೆ ತುಂಬಾ ದುಃಖ ಮತ್ತು ಪಶ್ಚಾತ್ತಾಪವಾಗಿತ್ತು. ಅಲ್ಲಿ ಬಂದಿದ್ದವರೆಲ್ಲರಿಗೂ ಇನ್ನೇನು ಆಘಾತ ಕಾದಿದೆಯೋ ಎಂದು ಆತಂಕ ಮೂಡಿಸಿತ್ತು. ತಮ್ಮ ಗ್ರಂಥ ಸಮರ್ಪಣ ಸಮಾರಂಭದಲ್ಲೂ ಕೂಡ ತಮ್ಮ ಸ್ನೇಹಿತ ತೀ.ನಂ.ಶ್ರೀ.ಯವರನ್ನು ನೆನಸಿಕೊಂಡು ಅವರಿಲ್ಲದ ಈ ಸಮಾರಂಭದಲ್ಲಿ ತಮಗೆ ಯಾವ ಸಂತೋಷವೂ ಇಲ್ಲ ಎಂದು ಅತ್ತುಬಿಟ್ಟರು. "ತೀ.ನಂ.ಶ್ರೀ.ಯವರು ನಿಮ್ಮಲ್ಲಿ ಕೆಲವರಿಗೆ ಆಪ್ತಮಿತ್ರರಾಗಿದ್ದರು, ಕೆಲವರಿಗೆ ಗುರುಗಳಾಗಿದ್ದರು, ಕೆಲವರಿಗೆ ಮಾರ್ಗದರ್ಶಕರಾಗಿದ್ದರು, ಕೆಲವರಿಗೆ ಬಂಧುಗಳಾಗಿದ್ದರು. ಆದರೆ ನನಗೆ ತೀ.ನಂ.ಶ್ರೀ. ಎಲ್ಲವೂ ಆಗಿದ್ದರು" ಎಂದು ಗದ್ಗದಿತರಾಗಿ ಭಾಷಣದಲ್ಲಿ ತಿಳಿಸಿದರು. ಅನಂತರ ಡಿ.ಎಲ್.ಎನ್. ಅವರಿಗೆ ತೀ.ನಂ.ಶ್ರೀ. ಯವರನ್ನು ನೆನೆಯದ ದಿನವೇ ಇಲ್ಲವೆಂದು ಕಾಣುತ್ತದೆ. ಯಾರು ಅವರನ್ನು ನೋಡಲು ಹೋದರೂ ಅವರೊಡನೆ ತೀ.ನಂ.ಶ್ರೀ. ಸ್ಮರಣೆ ಮತ್ತು ಗುಣಗಾನ. ನಾನು ಭೇಟಿಯಾದಾಗಲಂತೂ ಸರಿಯೇ.

೧೯೭೦ನೆ ಇಸವಿಯಲ್ಲಿ ಡಿ.ಎಲ್.ಎನ್. ಅವರಿಗೆ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿದ ಸಂದರ್ಭದಲ್ಲಿ ನಾನು ಅವರಿಗೆ ಅಭಿವಂದಿಸಿ ಬರೆದ ಕಾಗದಕ್ಕೆ ಅವರು ನನಗೆ ಬರೆದ ಉತ್ತರವನ್ನು ಇದರೊಡನೆ ಕೊಡಲಾಗಿದೆ. ಇದರಿಂದ ಅವರ ಸ್ನೇಹಿತನ ಮೇಲಿನ ಎಂದೂ ಬತ್ತದ ಪ್ರೀತಿ ಮತ್ತು ಗೌರವ ವ್ಯಕ್ತವಾಗುತ್ತದೆ (ಅನುಬಂಧ ೫೭).

ಎಷ್ಟೇ ಒಡಕುಗಳು ಬಂದರೂ ತಮ್ಮ ಪ್ರೀತಿಯ ಸ್ನೇಹಿತ ತೀ.ನಂ.ಶ್ರೀ.ಯವರನ್ನು ಮರೆಯಲಾಗದ ಡಿ.ಎಲ್.ಎನ್. ಅವರು ಅನಂತರ ಬರೆದ 'ಪಂಪ ಭಾರತ ದೀಪಿಕೆ' ಗ್ರಂಥವನ್ನು ತೀ.ನಂ.ಶ್ರೀ.ಯವರ ಪ್ರೀತಿಯ ನೆನಪಿಗೆ ಅರ್ಪಿಸಿದ್ದಾರೆ.

ಆದರೆ ಒಂದು ಮಾತ್ರ ನಿಜ. ಇಂದಿಗೂ ಕನ್ನಡ ವಿದ್ವತ್ಪ್ರಪಂಚದಲ್ಲಿ ಮತ್ತು ಅವರ ಅಭಿಮಾನಿಗಳಲ್ಲಿ ಎಲ್ಲರಿಗೂ ನೆನಪಿರುವುದು ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಅವರ ಅಪೂರ್ವವಾದ ಬಹು ಅನುಕರಣೀಯವಾದ ಮತ್ತು ಮಾರ್ಗದರ್ಶಕವಾದ ವಿದ್ವತ್ತು ಮತ್ತು ಪ್ರೀತಿಯ ಸ್ನೇಹ. ಅವರಿಬ್ಬರೂ ಹೇಳುತ್ತಿದ್ದಂತೆ ಇದೇ ಅಮರವಾದುದು.

ತೀ.ನಂ.ಶ್ರೀ.ಯವರ ಗ್ರಂಥಭಂಡಾರ

●

ತೀ.ನಂ.ಶ್ರೀ. ಅವರಿಗೆ ಪುಸ್ತಕಗಳಲ್ಲಿ ಅಪಾರ ಪ್ರೇಮವಿತ್ತು. ಅವರು ಅಧ್ಯಯನ ಮಾಡುತ್ತ ಕುಳಿತಿದ್ದರೆ ಅವರಿಗೆ ಬೇರೆ ಯಾವ ನೆನಪೂ ಬರುತ್ತಿರಲಿಲ್ಲ. ಊಟ, ನಿದ್ದೆಗೂ ಕೆಲವು ಸಾರಿ ನೆನಪಿಸಬೇಕಾಗಿತ್ತು. ಅವರ ಗ್ರಂಥಭಂಡಾರದಲ್ಲಿ ಅವರ ವಿದ್ಯಾರ್ಥಿ ಜೀವನದಿಂದಲೂ ಪ್ರಾರಂಭವಾಗಿ ತಮ್ಮ ಜೀವಿತ ಕಾಲದಲ್ಲಿ ತಾವೇ ಕೊಂಡಿದ್ದ ಪುಸ್ತಕಗಳಿದ್ದವು. ಇಂಗ್ಲಿಷ್, ಕನ್ನಡ, ಸಂಸ್ಕೃತ ಮತ್ತು ಕೆಲವು ತಮಿಳು, ಹಿಂದಿ ಪುಸ್ತಕಗಳೂ ಅದರಲ್ಲಿದ್ದವು. ಅವರ ಸಂಬಳದಲ್ಲಿ ಸುಮಾರು ಶೇಕಡಾ ೨೦ ಭಾಗವನ್ನು ಪುಸ್ತಕಗಳನ್ನು ಕೊಳ್ಳುವುದಕ್ಕೆ ಉಪಯೋಗಿಸುತ್ತಿದ್ದರು. ಅದಲ್ಲದೆ ಅವರ ವಿದ್ವತ್ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ, ಅವರ ಸ್ನೇಹಿತರು ಶಿಷ್ಯರು ಮತ್ತು ಅವರಲ್ಲಿ ಗೌರವವಿದ್ದ ಅನೇಕ ಲೇಖಕರು ಅವರಿಗೆ ಕಳಿಸಿದ್ದ ಗೌರವಪ್ರತಿಗಳು ಅವರ ಗ್ರಂಥಭಂಡಾರದಲ್ಲಿದ್ದವು. ನಮ್ಮ ಮನೆಯ ಎರಡು ಕೊಠಡಿಗಳು ನಮ್ಮ ತಂದೆಯವರ ಬಳಿಯಿದ್ದ ಸುಮಾರು ಐದುಸಾವಿರ ಗ್ರಂಥಗಳಿಂದ ಭರ್ತಿಯಾಗಿದ್ದವು.

ತೀ.ನಂ.ಶ್ರೀ.ಯವರು ಅವರ ಜೀವಿತಕಾಲದಲ್ಲಿಯೇ ಅವರ ಬಳಿಯಿದ್ದ ಸುಮಾರು ೧೨೦ ಓಲೆಗರಿ ಪ್ರತಿಗಳನ್ನು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗೆ ದಾನ ಮಾಡಿದ್ದರು. ಈ ಪುಸ್ತಕ ಭಂಡಾರವನ್ನು ಹೇಗೆ ವಿತರಣೆ ಮಾಡಬೇಕೆಂದು ಯೋಚನೆ ಬಂದಿದ್ದುಂಟು. ಆದರೆ ಇದನ್ನು ಗ್ರಂಥಾಲಯಗಳಿಗೆ ಕೊಡಬೇಕೆನ್ನುವ ಉದ್ದೇಶ ಮಾತ್ರ ಸ್ಪಷ್ಟವಾಗಿತ್ತು. ಆದ್ದರಿಂದ ಅವರ ನಿಧನದ ನಂತರ ಈ ಗ್ರಂಥಭಂಡಾರದ ಪುಸ್ತಕಗಳನ್ನು (ಕೆಲವನ್ನು ಅವರ ನೆನಪಿಗಾಗಿ ನಮ್ಮಲ್ಲಿಟ್ಟುಕೊಂಡು) ವಿವಿಧ ಹಂತಗಳಲ್ಲಿ ಅನೇಕ ಸಂಸ್ಥೆಗಳ ಗ್ರಂಥಭಂಡಾರಗಳಿಗೆ ತೀ.ನಂ.ಶ್ರೀ. ಅವರ ಹೆಸರಿನಲ್ಲಿ ದಾನವಾಗಿ ಕೊಡಲಾಗಿದೆ. ಆ ಸಂಸ್ಥೆಗಳ ಹೆಸರುಗಳು ಮತ್ತು ಅವರಿಗೆ ದಾನವಾಗಿ ಕೊಟ್ಟಿರುವ ಪುಸ್ತಕಗಳ ಸುಮಾರು ಸಂಖ್ಯೆಗಳ ವಿವರವನ್ನು ಇಲ್ಲಿ ಕೊಡಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು	೨೦೦೦
ದೇಶೀಯ ವಿದ್ಯಾಶಾಲೆ, ಚಿಕ್ಕನಾಯಕನಹಳ್ಳಿ	೫೦೦
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	೧೦೦
ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ ಕೃಷ್ಣರಾಜನಗರ	೫೦
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ	೧೨೦೦
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು	೩೫೦
ಮಿಥಿಕ್ ಸೊಸೈಟಿ, ಬೆಂಗಳೂರು	BORIನ ಮಹಾಭಾರತ ಪೂರ್ತಿ ಸೆಟ್

ತೀ.ನಂ.ಶ್ರೀ. ಚರಮಗೀತೆ

●

ತೀ.ನಂ.ಶ್ರೀ.ಯವರು ತಮ್ಮ ದಿನಚರಿ(?)ಯಲ್ಲಿ ಜೂನ್– ಜುಲೈ ತಿಂಗಳು ೧೯೪೬ನೆಯ ಇಸವಿಯಲ್ಲಿ (ಇದರ ದಿನಾಂಕವನ್ನು ಹಾಕಿಲ್ಲ) ಗುರುತು ಮಾಡಿರುವ ಒಂದು ಪದ್ಯ ಹೀಗಿದೆ

ಪದ್ಯ ಹೋಯ್ತು ಗದ್ಯ ಬಂತು ಡುಂಡುಂ!
ಗದ್ಯ ಹೋಯ್ತು ಮಾತು ಬಂತು ಡುಂಡುಂ!
ಮಾತು ಹೋಯ್ತು ಮೌನ ಬಂತು ಡುಂಡುಂ!

This is my epitaph! ಎಂದು ಬರೆದು ನಂತರ 'is' ಅನ್ನುವುದನ್ನು ಹೊಡೆದು 'will be' ಎಂದು ತಿದ್ದಿರುತ್ತಾರೆ. ಮತ್ತು " an old composition of mine" ಎಂದು ಪಕ್ಕದಲ್ಲಿ ಗುರುತು ಹಾಕಿರುತ್ತಾರೆ.

ಪದ್ಯ ಹೋದದ್ದೇನೋ ನಿಜ, ಗದ್ಯವೂ ಸಾಕಷ್ಟು ಬರಲಿಲ್ಲ ಎನ್ನುವುದನ್ನು ಒಪ್ಪಬಹುದು. ಮಾತು ಕೂಡ ಹೋಗಿ ಮೌನ ಬಂದಿತು ಎನ್ನುವುದಕ್ಕೆ ಒಂದು ಹೊಸ ಅರ್ಥದ ಆಯಾಮವೇ ಇರುವಂತೆ ಕಾಣುತ್ತದೆ. ಆದರೆ ಅವರ ವಿದ್ವತ್ತಿನ ಮನಸ್ಸು ಮತ್ತು ದೃಷ್ಟಿ ಸದಾ ಕಾರ್ಯನಿರತ ವಾಗಿರುತ್ತಿತ್ತು. ಅವರಿಂದ ಇನ್ನೂ ಬರಬಹುದಾಗಿದ್ದ, ಬರುವುವೆಂದು ನಿರೀಕ್ಷಿಸಿದ್ದ ಗದ್ಯ, ಸಂಶೋಧನೆ ಮತ್ತು ಭಾಷಣಗಳ ವಿಷಯಗಳ ಗಹನತೆ ಮತ್ತು ಹರವು ಎಷ್ಟಿತ್ತು ಎನ್ನುವುದು ಒಂದು ಚಿಕ್ಕಪುಸ್ತಕದಲ್ಲಿ ತೀ.ನಂ.ಶ್ರೀ.ಯವರು ಆಗಾಗ ಗುರುತು ಮಾಡಿಕೊಂಡಿದ್ದ ಪಟ್ಟಿಗಳಿಂದ ಗೊತ್ತಾಗುತ್ತದೆ (ಅನುಬಂಧ ೫೮). 'History of Kannada Language' (ಕನ್ನಡ ಭಾಷಾ ಚರಿತ್ರೆ) ಬಹುಶಃ ಅವರ ಅಭಿಪ್ರಾಯದಲ್ಲಿ ಇಂಗ್ಲಿಷು ಮತ್ತು ಕನ್ನಡ ಭಾಷೆಗಳಲ್ಲಿ ಇನ್ನೊಂದು ಆಚಾರ್ಯ ಕೃತಿಯಾಗಿಯೇ ರೂಪುಗೊಳ್ಳುತ್ತಿದ್ದುದರಿಂದ ಈ ಪಟ್ಟಿಯಲ್ಲಿ ಎಲ್ಲೂ ಕಾಣಿಸಿಕೊಂಡಿಲ್ಲವೆಂದೆನಿಸುತ್ತದೆ.

ನಮ್ಮ ದೌರ್ಭಾಗ್ಯದಿಂದ ಈ ಪಟ್ಟಿಯೂ ಕೂಡ ಅಂತ್ಯದಲ್ಲಿ ಅವರ 'ಚರಮಗೀತೆ'ದ ಭಾಗವಾಗಿ ಪರಿಣಮಿಸಿದೆಯೇ?

ತೀ.ನಂ.ಶ್ರೀ. ಅವರ ಜೀವನದ ಮಹತ್ತ್ವದ ಘಟನೆಗಳು

●

೧೯೦೬ ನವೆಂಬರ್ ೨೬ : ತೀರ್ಥಪುರದಲ್ಲಿ ಜನನ
ತಂದೆ : ತೀರ್ಥಪುರದ ನಂಜುಂಡಯ್ಯ
ತಾಯಿ : ಬಳುವನೇರಲಿನ ಭಾಗೀರಥಮ್ಮ

೧೯೧೫ ತಾಯಿ ಭಾಗೀರಥಮ್ಮನವರ ನಿಧನ

೧೯೧೮ ಉಪನಯನ

೧೯೨೩ ತುಮಕೂರಿನಲ್ಲಿ ಎಂಟ್ರೆನ್ಸ್ ಪರೀಕ್ಷೆ ತೇರ್ಗಡೆ

೧೯೨೬ ತುರುವೇಕೆರೆಯ ಜಯಲಕ್ಷ್ಮಿಯೊಡನೆ ವಿವಾಹ
ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ ಪರೀಕ್ಷೆ ತೇರ್ಗಡೆ

೧೯೨೮ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆ ತೇರ್ಗಡೆ
ಶ್ರೀರಂಗಪಟ್ಟಣದಲ್ಲಿ ಎರಡು ತಿಂಗಳು ಕಾಲ ರೆವೆನ್ಯೂ ಪ್ರೊಬೇಶನರ್ ಕೆಲಸ
ಮೈಸೂರು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕ

೧೯೨೯ ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಎಂ.ಎ. ಪರೀಕ್ಷೆ ತೇರ್ಗಡೆ
ತಂದೆ ನಂಜುಂಡಯ್ಯನವರ ನಿಧನ
ಮಹಾರಾಜ ಕಾಲೇಜಿಗೆ ಕನ್ನಡ ಅಧ್ಯಾಪಕರಾಗಿ ವರ್ಗ

೧೯೩೧ ಕನ್ನಡ ಎಂ.ಎ. ಪರೀಕ್ಷೆ ತೇರ್ಗಡೆ
ಮಗಳು ವಿಶಾಲಾಕ್ಷಿ ಜನನ

೧೯೩೬ ಮಗಳು ನಾಗರತ್ನಳ ಜನನ

೧೯೪೨ ಮಗ ನಾಗಭೂಷಣನ ಜನನ

೧೯೪೩ ಕನ್ನಡ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜಿಗೆ ವರ್ಗ
ಮಾತೃಸಮಾನರಾದ ಸೋದರತ್ತೆ ಲಕ್ಷ್ಮಿದೇವಮ್ಮನವರ ನಿಧನ
ಮಗಳು ವಿಶಾಲಾಕ್ಷಿಯ ನಿಧನ

೧೯೪೮ ಮೈಸೂರು ಸಂವಿಧಾನ ಪರಿಷತ್ತಿನಲ್ಲಿ ಭಾಷಾಂತರಕಾರರಾಗಿ ಕೆಲಸ
–೫೦ ದಾವಣಗೆರೆ ಧ.ರಾ.ಮ. ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಕೆಲವು ತಿಂಗಳು (ಎರಡು ಸಾರಿ) ಸೂಪರಿಂಟೆಂಡೆಂಟ್

ಕೋಲಾರ ಇಂಟರ್‌ಮೀಡಿಯಟ್ ಕಾಲೇಜಿನನಲ್ಲಿ ಕೆಲವು ತಿಂಗಳು ಸೂಪರಿಂಟೆಂಡೆಂಟ್

೧೯೫೦ ಭಾರತ ಸಂವಿಧಾನ ಪರಿಷತ್ತಿನ ಭಾಷಾತಜ್ಞರ ಸಮ್ಮೇಳನದ ಪ್ರತಿನಿಧಿ

೧೯೫೨ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ನೇಮಕ

೧೯೫೩ ಆಚಾರ್ಯ ಕೃತಿ "ಭಾರತೀಯ ಕಾವ್ಯಮೀಮಾಂಸೆ" ಪ್ರಕಟಣೆ

೧೯೫೪ ಪೂನಾ ಡೆಕ್ಕನ್ ಕಾಲೇಜು ಛಳಿಗಾಲದ ಭಾಷಾವಿಜ್ಞಾನ ಶಾಲೆಯಲ್ಲಿ ಗೌರವ ಪ್ರಾಧ್ಯಾಪಕ

೧೯೫೫ ರಾಕ್‌ಫೆಲ್ಲರ್ ಪ್ರತಿಷ್ಠಾನದ ಗೌರವ ವೇತನದ ಮೇಲೆ ಅಮೆರಿಕ ಸಂಯುಕ್ತ ಸಂಸ್ಥಾನದ
–೫೬ ಮಿಚಿಗನ್, ಮತ್ತು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯಗಳಲ್ಲಿ ಭಾಷಾಶಾಸ್ತ್ರದ ಉನ್ನತ ವ್ಯಾಸಂಗ.

ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಸರ್ಲೆಂಡ್, ಹಾಲಂಡ್, ಇಟಲಿ ದೇಶಗಳಲ್ಲಿ ಪ್ರವಾಸ

೧೯೫೭ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕ
ದೆಹಲಿಯಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ವಿದ್ವತ್ಸಮ್ಮೇಳನದ ದ್ರಾವಿಡ ಭಾಷಾವಿಜ್ಞಾನ ಶಾಖೆಯ ಅಧ್ಯಕ್ಷ

೧೯೫೮ ಕನ್ನಡ ಸಾಹಿತ್ಯ ಪರಿಷತ್ತಿನ "ಕನ್ನಡ ನಿಘಂಟು ಸಂಪಾದಕ ಸಮಿತಿ" ಅಧ್ಯಕ್ಷರಾಗಿ ನೇಮಕ

೧೯೬೦ ಮೈಸೂರು ಮಾನಸಗಂಗೋತ್ರಿಯ ಕನ್ನಡ ಸ್ನಾತಕೋತ್ತರ ವ್ಯಾಸಂಗ ಮತ್ತು ಸಂಶೋಧನ ವಿಭಾಗದ ಪ್ರಾಧ್ಯಾಪಕರಾಗಿ ನೇಮಕ
ಅಖಿಲ ಭಾರತ ಭಾಷಾ ವಿಜ್ಞಾನಿಗಳ ಸಂಘದ ಅಧ್ಯಕ್ಷ

೧೯೬೧ ಗದಗಿನಲ್ಲಿ ನಡೆದ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಾಬಾಂಧವ್ಯ ಗೋಷ್ಠಿಯ ಅಧ್ಯಕ್ಷ

೧೯೬೨ ಮಾರ್ಚ್ ೩೧ : ಸೇವೆಯಿಂದ ನಿವೃತ್ತಿ

೧೯೬೬ ಸೆಪ್ಟೆಂಬರ್ ೭ : ಕಲ್ಕತ್ತೆಯಲ್ಲಿ ನಿಧನ.

ತೀ.ನಂ.ಶ್ರೀ. ನಿಧನದ ನಂತರ

●

೧೯೭೫ ‘ಶ್ರೀಕಂಠತೀರ್ಥ’ ಗೌರವ ಗ್ರಂಥ ಸಮರ್ಪಣೆ

೧೯೯೦ ‘ಭಾರತೀಯ ಕಾವ್ಯಮೀಮಾಂಸೆ’ಗೆ ಮರಣೋತ್ತರ ‘ಪಂಪ ಪ್ರಶಸ್ತಿ’ ಪ್ರದಾನ

೧೯೯೮ ಬೆಂಗಳೂರಿನಲ್ಲಿ ತೀ.ನಂ.ಶ್ರೀ. ಪುತ್ಥಳಿ ಅನಾವರಣ

೨೦೦೨ ಬೆಂಗಳೂರಿನಲ್ಲಿ ‘ಪ್ರೊ॥ ತೀ.ನಂ.ಶ್ರೀ. ವೃತ್ತ’ ನಾಮಕರಣ

೨೦೦೫–೦೬ ಪ್ರೊ॥ ತೀ.ನಂ.ಶ್ರೀ ಜನ್ಮಶತಮಾನೋತ್ಸವ ವರ್ಷ ಆಚರಣೆ

ತೀ.ನಂ.ಶ್ರೀ. ಅವರ ಕೃತಿಗಳು

●

ಕವಿತೆಗಳು	:	ಒಲುಮೆ
		ತೀ.ನಂ.ಶ್ರೀ ಸಮಗ್ರ ಕವಿತೆಗಳು
ವಿಮರ್ಶೆ	:	ಪಂಪ
		ಕಾವ್ಯ ಸಮೀಕ್ಷೆ
		ಸಮಾಲೋಕನ
		ಕಾವ್ಯಾನುಭವ
ಕಾವ್ಯಮೀಮಾಂಸೆ	:	ಭಾರತೀಯ ಕಾವ್ಯಮೀಮಾಂಸೆ
ಲಲಿತ ಪ್ರಬಂಧಗಳು	:	ನಂಟರು
ಅನುವಾದ	:	ಬಿಡಿಮುತ್ತು
(ರೂಪಾಂತರ)		ರಾಕ್ಷಸನ ಮುದ್ರಿಕೆ
ವ್ಯಾಕರಣ	:	ಕನ್ನಡ ಮಧ್ಯಮ ವ್ಯಾಕರಣ
ಸಂಪಾದನೆ	:	ಹೆಣ್ಣುಮಕ್ಕಳ ಪದಗಳು
		ಹರಿಹರ ಕವಿಯ ನಂಬಿಯಣ್ಣನ ರಗಳೆ
		ರನ್ನಕವಿ 'ಗದಾಯುದ್ಧ ಸಂಗ್ರಹಂ'
ಇಂಗ್ಲೀಷಿನಲ್ಲಿ	:	'Imagination in Indian Poetics and Other Literary Studies
		Affricates in Kannada Speech and Other Lingistic Papers

ಅನುಬಂಧಗಳು

೧

J.C. Rollo
Offg. Prinicipal

Maharaja's College
Mysore, Sept. 24, 1926

I am glad to recommend Mr. T.N. Sreekantaiya, who studied in this college throughout his B.A. course and has passed the B.A. degree examination, taking a Second Class in Part I and a First Class in Part II. He did magnificent work in all subjects throughout his course, and I do not know how he missed a First Class in part I of the B.A. examination. He possesses ability of the highest order, seconded by untiring industry. He continually secured first prizes in various subjects; in the second and third year classes he held both a subject scholarship (for Sanskrit) and the Sir P.N. Krishnamurthi Scholarship; in the third year he was awarded the Kasturi Iyengar Prize for Sanskrit; and he won the Honna Setty Prize for a Kannada essay. He is of good physique, and went in for gymnastics. He played a prominent part in the Union.

* * *

೨

M. Hiriyanna
Professor of Sanskrit

Maharaja's College
Mysore, 25 Sept, 1926

This is to certify that I have known Mr. T.N. Srikantiah for the past three years as a student of this college. He passed the B.A. Degree Examination of last March with distinction, taking a first class in the Optional Group. His progress in Classwork was very good and he

was easily the first in his class in more than one subject including English. He also held throughout his three years stay here scholarships awarded on the ground of merit. He belongs to a respectable family and his character is excellent.

* * *

೩

V.L. D'Souza
Professor of Economics

Maharaja's College
Mysore, 25th Sept. 1926

Mr. T.N. Srikantaiya is a distinguished student of the Mysore University. He is a young man of outstanding ability. He will certainly take a higher rank even among the students of the Maharaja's College who have attained distinction in their University careers. To his ability, literary attainments and intellectual competence there is ample testimony in the several medals he has won and in the marks he has obtained at the public examinations. He was a student under me for two years and throughout the period I was greately impressed by the uniformly high quality of his work, by the abundant signs he showed of originality, the marked aptitude he displayed for economic investigations and also by the elegance, ease & precision of his style. His character is certainly above reproach and his habits are such that will make for success in life. His manners are those of a well-bred youth and his ways are extremely polished and pleasing. He is industrious, methodical and thorough. I have no doubt he will quickly make his mark in the profession that he chooses for himself.

* * *

೪

J.C.Rollo
Offg. Principal

Maharaja's College
Mysore, June 3, 1927

Mr. T.N. Sreekantaiya studied in this college throughout his B.A. course, and is now studying in the M.A class (English Literature). He

possesses very remarkable ability and industry. During his course he attained an extraordinary high level in every subject. He passed the B.A. Degree examination in March 1926, taking second classs in Part-I and a first class in Part-II. His failure to secure first class in Part-I is a mystery to me, since in ability and knowledge he stands above the level of the ordinary first class man. On the results of the B.A. degree examination he received the Navinam Ramanujacharya Medal for Sanskrit (optional), the Sir Seshadri Medal and the Sha Chhumanlal Dungaji medal for Economics, the Saklesapura Sidde Gowda Medal, the Keni Siddappa medal, and the Sri Bhaskarammal Prize for Kannada; and the H. Ramanuja Iyengar medal for total marks for the Maharaja's College. Throughout his B.A. course he held the Sir P.N. Krishnamurthi Scholarship for Optional Sanskrit. In the second year class he held a subject scholarship for Sanskrit and in third year for Sanskrit and English. He now holds a M.A Studentship. He was twice rewarded the prize for Kannada oratory and he secured the Honna Setty prize for a Kannada essay. He has taken a prominent part in the affairs of the Union.

He bears an excellent charactor and is a man of special attainments and promise, and I strongly recommand him.

* * *

ಶ್ರೀ

N.S Subba Rao
Principal

Maharaja's College
Mysore, 20 Mar 1928

Mr. T.N Sreekantaiya was a student of this college, from 1923-28 and passed the B.A.degree Examination in 1926 with Economics, Political Science and Sanskrit Group I as his optional subjects. He has also finished the M.A course in English but did not sit for the public examination. He was a scholar and prizeman throughout his B.A. and M.A courses.

He was awarded the following University Medals and Prizes:-

1. Mr. H. Ramanuja Iyengar Gold Medal for highest total number of marks.
2. The Sir Seshadri Medal for distinction in Political Economy.
3. The Honna Setty Prize for the best essay in Kannada.
4. The Navinam Ramanujacharya Gold Medal for distinction in Sanskrit.
5. The Keni Siddappa Gold Medal.
6. The Sha Chhumanlal Dungaji Medal for proficiency in the optional subjects.
7. The Bhaskarammal prize for proficiency in Kannada.
8. The Saklespur Shop Sidde Gowda medal for proficiency in Kannada.

He is a person of exceptional ability and attractive character and I have every confidence that he will prove himself worthy of any position of trust and responsibility.

* * *

೬

V.L. D' Souza
Professor of Economics

Maharaja's College
Mysore, 21st March 1928

Mr. T.N.Sreekantaiya is a young man of brilliant intellectual attainments and achievements. The results of the University examinations, the prizes and medals bear witness to his ablity and scholarship. He also took the M.C.S examination in which he is believed to have taken third rank. That he did not take a higher rank is partly explained by the illness and operation he underwent a few days before the examination resulting in loss of blood and waste of

time. I came to know him as a student of Economics and I was deeply impressed by his power of expression, penetrating analysis of economic problems and his wide knowledge of the subject. Mr. T.N.Sreekantaiya is remarkable not only for what he has achieved in his short college career but also for the rich promise be holds out for a great future. His character has always been above reproach and his manners those of a perfect gentleman. He is entirely free from all sorts of snobbishness and hauteur which frequently accompany intellectul gifts. Briefly he will be an asset of the first order to any office or institution that will secure his services.

* * *

೭

ಎನ್.ವಿ. ಸುಬ್ಬರಾವ್ ಆಲೂರು, ಹಾಸನ, ೨೯-೧೦-೧೯೩೯

ಈ ದಿವಸ ತಾಯಿನಾಡು ಪತ್ರಿಕೆಯಲ್ಲಿನ ಸಮಾಚಾರವು-ನಿನ್ನ ವಿಷಯದಲ್ಲಿ ದೈವ ಸಹಾಯವು ತುಂಬಾ ಇಲ್ಲವೆನ್ನುವುದು - ನನ್ನ ಮತ್ತು ನಮ್ಮಗಳ ಮನಸ್ಸಿಗೆ ತುಂಬಾ ನೋವನ್ನುಂಟು ಮಾಡಿರುತ್ತದೆ. ಇದೂ ಒಂದು ಯುದ್ಧವೇ ಅನ್ನಬಹುದಲ್ಲವೆ. ಜಯಾಪಜಯಗಳನ್ನು ಯಾರೂ ಮೊದಲರಿಯರು. ಆದರೆ ನಿನ್ನ ವಿಷಯದಲ್ಲಿ ಈ ತೆರನಾದ ಅನ್ಯಾಯವು ನಡೆಯುತ್ತೇಂತ ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಸಾಮಾನ್ಯವಾಗಿ ಸಾಧುಗಳಿಗೆ ಹೀಗೆ ಆಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಸಂದರ್ಭದಲ್ಲಿ ನಡೆದ ವಿದ್ಯಮಾನಗಳನ್ನೆಲ್ಲಾ ಪರಿಶೀಲಿಸಿದರೆ ಒಂದು ಜ್ಞಾಪಕಕ್ಕೆ ಬರುತ್ತದೆ.

"ಸದ್ಯಾವಂಪ್ರತಿಪನ್ನಾಮಂ ಪಂಚನೇಕಾರಿದಗ್ಧತಾ॥"

All a conspiracy ಆಗಿದೆಯೇನೋ. ನನಗೆ ಈ ಸಮಾಚಾರ 'a bolt from the blue' ಆಗಿ ಹೋಗಿದೆ. ಮೊದಲೇ ನನಗೆ ಈ ಒಂದು ತಿಂಗಳಿಂದ ಅನೇಕ ವಿಧವಾದ ನೋವು. ಅದರ ಜೊತೆಗೆ ಇದು ಒಂದು ಭಾರಿ ಪೆಟ್ಟು, ಯತ್ನವಿಲ್ಲ, ಬರೆಯುತ್ತಾ ಹೋದರೆ ಅಂತ್ಯ ತೋರುವುದಿಲ್ಲ. ಇಲ್ಲಿ ಸೌಭಾಗ್ಯವತಿಯ ಖಾಯಿಲೆ ತರಹವಾರಿಯಾಗಿ ಹೋಗಿದೆ. ಏನು ಮಾಡಬೇಕೋ ತಿಳಿಯದೆ ಮುಗ್ಧನಾಗಿ ಹೋಗಿದ್ದೇನೆ. ಆಸ್ಪತ್ರೆಯಿಂದ ಔಷಧಿ ಮಾತ್ರ ತಂದು ಕೊಡುತ್ತಿದ್ದೇನೆ. ಒಟ್ಟಿನಲ್ಲಿ ಭಗವದಿಚ್ಛೆಯಂತೆ ನಡೆಯಲಿ.

* * *

೮

Kudli Chidambaram Tirthahally, 6-11-39

My feelings go to you in your hour of disappointment. I learnt that the question was decided by Voting! What an ugly way of deciding things. The authorities could have as well tossed a coin and decided your fates! Probably that would have been more decent. I feel very keenly about your disappointment as keenly as in a personal one. You are probably, hopelessly dejected. And I do not wish to trouble you with further writing just now.

Hope you are keeping good health.

* * *

೯

ಡಿ.ಎಲ್ ನರಸಿಂಹಾಚಾರ್ ಮೈಸೂರು, ೧೪-೧-೧೯೫೨

ಪ್ರೊ. ವಿ.ಎಲ್.ಡಿ. ಅವರಿಗೆ ಬ್ಯಾಂಕಿಂಗ್ ಟ್ರಿಬ್ಯೂನಲ್‌ನಲ್ಲಿ ಕೆಲಸ ಆಗಿರುವುದು ನಿಮಗೆ ತಿಳಿದಿರಬಹುದು. ಅವರು ಮಹಾರಾಜರನ್ನು ಕಾಣಲು ಹೋಗಿದ್ದರು. ಆಗ ಅವರು ನಿಮ್ಮ ಹೆಸರನ್ನು ಹೇಳಿದರಂತೆ. ಅದಕ್ಕೆ ಮಹಾರಾಜರು "ಅವರು ಒಳ್ಳೆಯ ವಿದ್ವಾಂಸರು. ಅವರು ಇಲ್ಲಿಂದ ಹೊರಟು ಹೋಗುವುದು ನಮಗೆ ನಷ್ಟ" ಎಂದು ಹೇಳಿದರಂತೆ. ಹೀಗೆ ನಿಮ್ಮ ಪ್ರಸ್ತಾಪ ಅಲ್ಲಿ ಆಗಲೇ ಬಂದಿರುವುದರಿಂದ ನೀವು ಅವರನ್ನು ಭೇಟಿ ಮಾಡಲೇಬೇಕಾದ ಪರಿಸ್ಥಿತಿ ಒದಗಿದೆ. ಇಲ್ಲದಿದ್ದರೆ ಚೆನ್ನಾಗಿ ಕಾಣುವುದಿಲ್ಲ. ಇದಕ್ಕೋಸ್ಕರ ನೀವು ಪಾಳೆಗಾರರಿಗೆ ಪತ್ರ ಬರೆದು ಒಂದು ದಿನವನ್ನು ಗೊತ್ತು ಮಾಡಿಕೊಳ್ಳುವುದು ಅವಶ್ಯಕ.

* * *

೧೦

DEEPLY GRIEVED TO LEARN ABOUT THE SAD DEMISE OF PROFESSOR SRIKANTIAH WHO WAS MY PERSONAL TUTOR DURING COLLEGE DAYS STOP PRAY GOD TO GIVE YOU AND FAMILY STRENGTH TO BEAR THIS IRREPAIRABLE LOSS.

MAHARAJA, MYSORE

* * *

೧೧

ಕಡಿದಾಳ್ ಮಂಜಪ್ಪ ಬೆಂಗಳೂರು, ೯-೯-೧೯೬೬

ಶ್ರೀಮತಿ ತೀ.ನಂ.ಶ್ರೀಕಂಠಯ್ಯನವರಿಗೆ

ತಮ್ಮ ಪತಿ ಶ್ರೀ ತೀ.ನಂ.ಶ್ರೀಕಂಠಯ್ಯನವರು ದಿವಂಗತರಾದ ವಾರ್ತೆಯನ್ನು ಕೇಳಿ ಬಹಳ ವ್ಯಸನವಾಯಿತು. ಅವರು ಮಹಾರಾಜಾ ಕಾಲೇಜಿನಲ್ಲಿ ನನ್ನ ಅಧ್ಯಾಪಕರಾಗಿದ್ದರು. ಅವರ ಪ್ರತಿಭೆಯನ್ನು ಕಂಡು ನಾನು ಮೆಚ್ಚಿದವನು. ಅವರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ಜನತೆ ಅವರನ್ನು ಎಂದಿಗೂ ಮರೆಯುವಹಾಗಿಲ್ಲ.

ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ. ತಮಗೂ ಮತ್ತು ತಮ್ಮ ಕುಟುಂಬ ವರ್ಗದವರಿಗೂ ಆಗಿರುವ ಅಪಾರ ದುಃಖವನ್ನು ಸಹಿಸಲು ಭಗವಂತನು ಶಕ್ತಿಯನ್ನೀಯಲಿ.

* * *

೧೨

ಹೆಚ್.ವಿ. ಸಾವಿತ್ರಮ್ಮ ಬೆಂಗಳೂರು, ೬-೨-೧೯೫೨

ಪೂಜ್ಯರಲ್ಲಿ ಅನೇಕ ವಿಜ್ಞಾಪನೆಗಳು.

ನೀವು ನಮ್ಮ ವಿಶ್ವವಿದ್ಯಾನಿಲಯವನ್ನು ಬಿಟ್ಟು ಧಾರವಾಡಕ್ಕೆ ಹೋದಿರೆಂಬ ಸುದ್ದಿಯನ್ನು ಕೆಲವು ದಿನಗಳ ಕೆಳಗೆ ಅಕಸ್ಮಾತ್ "ಕನ್ನಡ ನುಡಿ"ಯಲ್ಲಿ ಓದಿದೆ. ಬಹಳ ಸಂತೋಷವೇ ಆಯಿತು. ನಿಮ್ಮ ಪ್ರತಿಭೆ, ಪಾಂಡಿತ್ಯಗಳಿಗೆ ಮನ್ನಣೆ ಅಲ್ಲಿ ಸಿಕ್ಕಿದುದು ತುಂಬಾ ಸಂತೋಷದ ಸುದ್ದಿಯೇ. ಆದರೆ ಅದನ್ನು ತಿಳಿದು, ತಕ್ಕ ಪುರಸ್ಕಾರ ಕೊಟ್ಟು ಇಲ್ಲಿಯೇ ಉಳಿಸಿಕೊಳ್ಳಲಾರದ ನಮ್ಮ ವಿಶ್ವವಿದ್ಯಾನಿಲಯದ ದೌರ್ಭಾಗ್ಯಕ್ಕಾಗಿ ಮರುಗುತ್ತೇನೆ. ಇದು ಬರಿಯ ಉಪಚಾರದ ಮಾತಲ್ಲ. ನಿಮ್ಮನ್ನು ಕಳುಹಿಸಿದುದರಿಂದ ಉಂಟಾಗಿರುವ ನಷ್ಟವನ್ನು ತುಂಬಿಸಿಕೊಳ್ಳಲು ವಿಶ್ವವಿದ್ಯಾನಿಲಯಕ್ಕೆ ಸಾಧ್ಯವೇ ಇಲ್ಲವೆಂದು ತೋರುತ್ತದೆ.

ಇನ್ನೊಂದು ವಿಚಾರ ತಿಳಿಯದುದರಿಂದ ಈ ಕಾಗದ ಬರೆಯುತ್ತಿದ್ದೇನೆ. ನೀವು ಸಂಪೂರ್ಣ ವಾಗಿ ಈ ವಿಶ್ವವಿದ್ಯಾನಿಲಯದ ಕೈ ಬಿಟ್ಟಿರೋ ಅಥವಾ ಒಂದೆರಡು ವರ್ಷಗಳ ಮಟ್ಟಿಗೆ ಹೋಗಿ ಹಿಂತಿರುಗುವಿರೋ ತಿಳಿಯಲಿಲ್ಲ. ನೀವು ಬೇಗ ಹಿಂದಕ್ಕೆ ಬಂದು ಹೆಚ್ಚು ಗೌರವ ಸ್ಥಾನವನ್ನು ಪಡೆಯಬೇಕೆಂಬುದೇ ನನ್ನ ಹೃತ್ಪೂರ್ವಕ ಆಸೆ.

ಹೊರಡುವುದಕ್ಕೆ ಮುಂಚೆ ನಿಮ್ಮನ್ನು ಕಂಡು ಮನೆಗೆ ಕರೆದು ಆದರಿಸಲಿಲ್ಲವೆಂದು ವ್ಯಥೆ ಪಡುತ್ತೇನೆ. ಬೆಂಗಳೂರಿಗೆ ಬಂದಾಗ ದಯವಿಟ್ಟು ಮನೆಗೆ ಬಂದು ಹೋಗಬೇಕು.

ಮಾತೃಶ್ರೀ ಯವರಿಗೆ ನನ್ನ ನಮಸ್ಕಾರಗಳನ್ನೂ ಮಕ್ಕಳಿಗೆ ಆಶೀರ್ವಾದಗಳನ್ನೂ ತಿಳಿಸಬೇಕು.

* * *

Dr. S.M. Katre Poona, 5-2-1955

My dear Pavate,

Many thanks for your letter of 11th January. I am looking forward to my meeting you in Dharwar, in Poona or in Bombay, whichever is earlier, as I shall not be able to leave Poona for Dharwar before the 15th of this month. Apart from the many questions on which I wish to consult you in connection with the affairs of my Institute, there is one very urgent matter on which I should like to have your concurrence. Last spring, when I went to the U.S.A. at the invitation of the Rockefeller Foundation, I had a long talk with the officers of the Humanities Division who were deeply interested in sponsoring the work of the Deccan College connected with the revival of interest in linguistic studies. Apart from the Foundation assistance which was to be given to projects sponsored by the Deccan College, the Foundation expressed readiness to offer fellowships to some of the senior linguists in this country for a short or long-term visit to the States as Research Fellows to participate in Seminars and to attend specialised courses which would give them an idea of the progress that has been made in the United States in these subjects. They accepted my recommendation that as an initial measure, they might offer one fellowship for southern Indian and one northern Indian language and I had also recommended the name of Prof. T.N. Sreekantaiya as one of the most promising scholars who would benefit by these contacts and through whom this knowledge could be made available to a large number of University students in the Karnatak area. As a result of these informal discussions, when Mr. Gilpatric came here in winter this year, he contacted Prof. Sreekantaiya and requested him to submit an application for a fellowship through the Vice-Chancellor of the Karnatak Univesity. I had already seconded the proposal as a part of the Deccan College project and Mr. Gilpatric

thought that if a formal recommendation through the Vice-Chancellor of the University could be sent along with a letter, the Foundation would offer a research fellowship to Prof. Sreekantaiya for a period ranging from 9 to 12 months. The idea is that Prof. Sreekantaiya might leave by about the third week of June this year and reach the States in time to attend a two months, Linguistic Institute in Chicago or elsewhere followed by visits to two or three Universities in the States specialising in Linguistic Studies and visit some Institutions, on his way back, in the United Kingdom and in Europe. I am therefore, writing this to you as an important matter and as a very great opportunity for Indian scholarship to benefit by contact with the best that is in western tradition as specialised in the United States. I am sure you will find little difficulty in granting, some kind of leave to Prof. Sreekantaiya for the duration of his stay in the States. Considering the importance of this training to the over all planning of language studies in India and of the Linguistic Survey and other matters connected with the development of our regional languages, I am quite sure that the University authorities under your inspiration will grant the necessary permission to Prof. Sreekantaiya. Once this liason is establised, I am quite sure that many more scholars from the Karnatak University could be deputed on such fellowships through the joint sponsorship of your University and the Deccan College. These were some of the matters which I wanted to discuss personally with you in addition to my personal problems connected with the organisation and development of the Deccan College. This I shall reserve for our personal talk. In the meantime as the question of Prof. Sreekantaiya's deputation to U.S.A. on a research fellowship is a very urgent one, I have devoted the greater part of my letter to that question.

* * *

೧೪

Dr. S.M. Katre Poona 16-2-1955

My dear Pavate,

I hope you received my letter of 5th February. You will be glad to know that Mr. Kimball, the Vice President of the Rockefeller Foundation will be visiting India during this month and he proposes to meet me at a conference here on the 1st of March. Since we are likely to have a very long discussion about the projects which the Deccan College has undertaken in connection with the study of the principal languages of India and related matters, the question of Professor Sreekantaiya's going abroad this June may also crop up. I was thinking of coming over to Dharwar for a personal discussion with you on all these matters. But, unfortunately both the BUT meeting here and my Budget Sub-Committee meetings follow each other in quick succession early next week and I shall be unable to leave Poona just at this moment. I have, therefore, to postpone discussion with you some aspects of the work of this Institute in relation to myself and the various projects that we have undertaken to some other time. So today I merely request you to let me have your opinion re: the possibility of deputing Prof. Sreekantaiya to the U.S.A. This is such a wonderful opportunity and Dravidian studies are so highly held in academic circles that there should be possibilities of award of such fellowships each year to one or two selected Indian scholars and by general agreement this will be by a joint recommendation by the Deccan college and the sponsoring University or Institute.

* * *

Dr. S.M. Katre Poona, 26-2-1955

My dear Gilpatric,

I have just returned to-day from my hurricane visit to Dharwar in connection with the proposed educational tour of Prof.T.N. Sreekantaiya to the United States. I had to contact personally Mr. D.C. Pavate, Vice-Chancellor of the Karnatak University to see that Prof. Sreekantaiya could be given leave on deputation without salary as Mr. Pavate was not quite sure what this fellowship was for and what its connection would be in relation to the work of the University. I found my visit very fruitful and Mr. Pavate has agreed to take the necessary steps to relieve Prof. Sreekantaiya, but suggests that a letter should come from you saying that with a view to encouraging linguistic studies in India your Foundation would be willing to offer a fellowship to Prof, Sreekantaiya to cover cost of his travel and stay in the States and also to compensate him for his loss of pay during the period of deputation. With such a letter from you it will be easier for him to get the sanction of the Syndicate of the University allowing Prof. Sreekantaiya the necessary leave of absence. I had previously written to Mr. Pavate, but he thought that instead of the Deccan College or Prof. Sreekantaiya coming into the picture it might be helpful if an informal letter from you to him suggesting possibilities of the Foundation making this grant to Prof. Sreekantaiya was forthcoming to ensure the approval of the University authorities. I shall therefore be very much obliged if you will kindly do the needful in the matter. Mr. Pavate told me that he knew you personally when you were first in India at Mr. Barve's place when you had all a dinner together.

* * *

೧೬

D.C. Pavate — Dharwar, 15th March, 1955

Dear Prof. Sreekantaiya,

I have since heard from Gilpatric about your application for Fellowship assistance to carry on advanced studies in the United States. Did you ask Katre to send your application direct or do you intend to send it through us ? I shall pass on your application to the proper authorities when it is received. Personally I have no objection to your proceeding to America as it does not entail any additional expenditure to this University. It appears they will provide for a allowance to your family during your stay over there. In any case please let me have your official application as soon as possible.

* * *

೧೭

ರಂ.ಶ್ರೀ.ಮುಗಳಿ — ವಿಶ್ರಾಮಬಾಗ, ೮-೮-೧೯೫೫

ಕುವೆಂಪು ಮುಂದಿನ ವರ್ಷ ವಿ.ಸಿ. ಆಗಬಹುದೆಂದೂ ನೀವು ಕನ್ನಡ ಪ್ರೊಫೆಸರ ಸ್ಥಳಕ್ಕೆ ಬರುವಿರೆಂದೂ ಮೈಸೂರಲ್ಲಿ ಸುದ್ದಿ ಅಂದರೆ ಹಾರ-ಸುದ್ದಿ. ನೀವು ಭಾಷಾಶಾಸ್ತ್ರದ ಬೆನ್ನುಹತ್ತಿ ಬೇರೆ ಕಡೆ ಹೋಗಬಹುದೆಂದೂ ಕೆಲವರ ನಿರೀಕ್ಷೆ. ದೈವದಾಟ ಏನೇ ಇರಲಿ, ನೀವು ಅಲ್ಲಿಯ ನಿಮ್ಮ ವ್ಯಾಸಂಗ ಮತ್ತು ಸಂಪರ್ಕಗಳ ಫಲವಾಗಿ ಉತ್ತಮ ಜ್ಞಾನವನ್ನು ಸಂಪಾದಿಸಿ ಕೊಂಡು ಬನ್ನಿ. ಸಾಧ್ಯವಿದ್ದಲ್ಲಿ ಕರ್ನಾಟಕ ಸಂಸ್ಕೃತಿ, ಕನ್ನಡ ಭಾಷೆ, ಸಾಹಿತ್ಯಗಳ ಪರಿಚಯವನ್ನು ಅಲ್ಲಿಯ ವಿದ್ಯಾವಂತರಿಗೆ ಮಾಡಿಕೊಡಿ. ನಿಮಗೆ ಇನ್ನೂ ವಿಶಾಲವಾದ ವ್ಯಾಸಂಗ ಕ್ಷೇತ್ರ; ಕಾರ್ಯಕ್ಷೇತ್ರ ದೊರೆಯುತ್ತಿದೆ. ಅದರಿಂದ ನಿಮಗೂ ಕನ್ನಡಕ್ಕೂ ಹೆಚ್ಚಿನ ಕೀರ್ತಿ ಲಭಿಸುತ್ತವೆ.

ನಿಮ್ಮ ಪ್ರಯಾಣಕ್ಕಿಂತ ಮುಂಚೆ ಕರ್ನಾಟಕ ವಿಶ್ವವಿದ್ಯಾನಿಲಯದ ಪರವಾಗಿ ಅಥವಾ ಯಾವುದೇ ಸಂಸ್ಥೆಯ ಪರವಾಗಿ ಬೀಳ್ಕೊಡುವ ಸಭೆ-ಸಮಾರಂಭ ನಡೆಯಲಿಲ್ಲವೆಂದು ಕೇಳಿದೆ. ಮೈಸೂರು ಮಿತ್ರರು ಮಾತ್ರ ಟೀಪಾರ್ಟಿ ಕೊಟ್ಟರಂತೆ. ಸಂ.ಕ.ದಲ್ಲಿಯೂ ನೀವು ಹೊರಟಿದ್ದರ ವರದಿ ಬರಲಿಲ್ಲ. ಇದು ತಿಳಿದು ನನಗೆ ವಿಷಾದವಾಯಿತು. ವಿಶ್ವವಿದ್ಯಾನಿಲಯದ ಪರವಾಗಿ ಸಂತೋಷಕೂಟ ನಡೆಯಲೇ ಇಲ್ಲವೇ? ನಿಜವೇನು ತಿಳಿಸಿ. ನಿಮ್ಮ ಕಾಗದ ಬಂದಾಗ ಗೋಕಾಕ ಇಲ್ಲಿಯೇ ಇದ್ದನು. ಅವನಿಗೆ ನೀವು ಬರೆದದ್ದನ್ನು ತಿಳಿಸಿದ್ದೇನೆ.

೧-೨ ತಿಂಗಳಿಗೊಮ್ಮೆ ಬರೆಯುತ್ತೀರಿ ನಾನೂ ಬರೆಯುವೆ. ನಿಮ್ಮ ಸ್ವಭಾವದಲ್ಲಿಯ ಆಲಸ್ಯ ಅಮೆರಿಕದಲ್ಲಿ ಇರುವಷ್ಟು ಕಾಲವಾದರೂ ಹೋದೀತು ಎಂದು ಆಶಿಸಬಹುದೇ?

* * *

೧೮

ನಂ. ಶಿವರಾಮ ಶಾಸ್ತ್ರಿ ಮೈಸೂರು, ೭-೯-೫೫

ಪ್ರಿಯ ಶ್ರೀ,

ಕೊನೆಗೂ ನಿಮಗೆ ಕಾಗದ ಬರೆಯುವ ಲಗ್ನ ಒದಗಿ ಬಂತು. ಎಲ್ಲಕ್ಕೂ ಮೊದಲಾಗಿ ನಿಮಗೊಂದು ಶುಭಸಮಾಚಾರವನ್ನು ಕೊಡುತ್ತೇನೆ. ಇನ್ನೊಂದು ಕನ್ನಡ ಪ್ರೊಫೆಸರ್ ಷಿಪ್ಪನ್ನು ಕ್ಯಾಬಿನೆಟ್ಟು ಮಂಜೂರು ಮಾಡಿದೆಯಂತೆ- ನಂಬಲರ್ಹ'ತರ'ವಾದ ಕಡೆಯಿಂದ ನನಗೆ ತಿಳಿದು ಬಂತು. ಅದಕ್ಕೆ ಮುಂದೇನು ಮಾಡಬೇಕೋ ಅದನ್ನು ಯೋಚಿಸಿ. ದೊಡ್ಡಬೆಲೆಗೂ ತಿಳಿಸಿದ್ದೇನೆ. ಈ ಮಧ್ಯೆ ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ನಿನವರು ಸೆಂಟ್ರಲ್‌ಸ್ಕೇಲ್ಸ್ ಅಫ್ ಪೇ ಕೊಡಿ ಎಂದೂ – ಶೇಕಡಾ ೮೦ರಷ್ಟು ನಾವು ಸಹಾಯ ಮಾಡುತ್ತೇವೆಂದು ಎಲ್ಲಾ ಸ್ಟೇಟ್ಸ್ ಸರಕಾರಗಳಿಗೂ ಸರ್ಕ್ಯುಲರ್ ಕಳಿಸಿದ್ದಾರೆ. ಆ ವಿಷಯವೂ ಮನಸ್ಸಿನಲ್ಲಿ ಒಂದು ಕಡೆ ಇರಲಿ. ನಮ್ಮ ಘನ ಸರ್ಕಾರದವರು ಶೇಕಡಾ ೨೦ನ್ನು ನಾವು ಕೊಡಬೇಕಲ್ಲಾ, ಇವರು ಹೇಳುವುದು ಎರಡನೆಯ ಪಂಚವಾರ್ಷಿಕ ಯೋಜನೆಗೆ ಅನ್ವಯಿಸುತ್ತದೆ, ಆಮೇಲೆ ಕೊಡುತ್ತಾರೋ ಇಲ್ಲವೋ, ನಾವೇನೋ ಶಾಶ್ವತವಾಗಿ ತಲೆಗೆ ಮೊಳೆ ಬಡಿದುಕೊಂಡು ಕೂತಿರುತ್ತೇವೆ, ಎಂದು ಮುಂತಾಗಿ ಮುಂದಾಲೋಚನೆ ಮಾಡಿ, ನಮಗೆ ನಿಮ್ಮ ಸಹಾಯ ಬೇಡ ಎಂದು ಬಿಟ್ಟರೆ ಆಗ ವಿಶ್ವವಿದ್ಯಾಲಯದ ಅಧ್ಯಾಪಕರ ಗತಿ ಯಾರಿಗೂ ಬೇಡ. ಈಗಲೇ ಬಾಯಿಗೆ ಅಕ್ಕಿಕಾಳು ಹಾಕಿಕೊಂಡು ಜೀವಿಸುತ್ತಿದ್ದಾರೆ. ಆಮೇಲೆ ಅದೇ ಶಾಶ್ವತ "ಪ್ರಕೃತಮನುಸರಾಮಃ".

ನಿಮ್ಮ ಅಡಿಗೆ ಕೆಲಸ ಎಲ್ಲಾ ಸಾಂಗವಾಗಿ ಸುಸೂತ್ರವಾಗಿ ನಡೆಯುತ್ತಿದೆಯೇ? "ಅಪಿತಪೋ ವರ್ಧತೇ?" ವ್ಯಾಸಂಗ ಹೇಗಿದೆ? ಈಗ ಎಲ್ಲಿದ್ದೀರಿ? ಪಾತಾಳಲೋಕದಲ್ಲೇನೋ ಇದ್ದೀರಿ ಅಲ್ಲಿ ಯಾವ ಪಟ್ಟಣ! ಯಾವ ನಾಗರ, ನಾಗಕನ್ನಿಕೆಯರ ಸಹವಾಸ, ಸೇವೆ?

ನೀವು ಚಿದಂ ಅವರಿಗೆ ಬರೆದ ಒಂದು ಕಾಗದದಲ್ಲಿ ಏಬ್ರಹ್ಯಾಂ ಕೆಪ್ಲ್ಯಾನ್ ಎಂಬಾತನು ಬಹಳ ಸೊಗಸಾಗಿ ಭಾಷಣ ಮಾಡಿದನೆಂದು ಬರೆದಿದ್ದೀರಿ. ಅದರ ವಿಷಯವನ್ನು – 'ವಾರ್ಫ್ ಥೀಸಿಸ್' ವಿಷಯವಲ್ಲವೇ?– ತಿಳಿಯಬೇಕೆಂದು ನನಗೆ ಬಹಳ ಕುತೂಹಲ. ಈಗಲ್ಲದಿದ್ದರೆ ನೀವು ಬಂದ ಮೇಲಾದರೂ ನಿಮ್ಮ 'ಟಿಪ್ಪಣಿ' ಗಳಿಂದ ತಿಳಿಯ ಬಯಸುತ್ತೇನೆ. ಯಾಕೋ ಕನ್ನಡ 'ಪೌಸ್ತಕಿಕ' ವಾಗುತ್ತ ಬಂತು! ನಿಮ್ಮ ಕೋಪ ಇಷ್ಟು ಹೊತ್ತಿಗೆ ಸ್ವಲ್ಪ ಶಾಂತವಾಗಿದ್ದರೆ – ಇಲ್ಲದಿದ್ದರೆ ಸ್ವಲ್ಪಹೊತ್ತು ಬಿಟ್ಟು ಓದನ್ನು ಮುಂದುವರಿಸಿ–ನನ್ನ ವಿಷಯ. ಯೂನಿವರ್ಸಿಟಿ ಕೌನ್ಸಿಲ್‌ನವರು ಜುಲೈ ೨೭ರಲ್ಲೇ ನನ್ನ ಪ್ರತಿಸ್ಪರ್ಧಿಯನ್ನು ಸರ್ಕಾರಕ್ಕೆ ಶಿಫಾರಸು

ಮಾಡಿ ಬಿಟ್ಟರು. ಈ ಕಾರ್ಯದಲ್ಲಿ 'ವಿಲನ್ ಆಫ್ ದಿ ಪೀಸ್' ಯಾರೆಂಬುದನ್ನು ಕ್ರಮೇಣ ನಿಮಗೆ ತಿಳಿಸುತ್ತೇನೆ. ನಾನು ಮಾಮೂಲಿನಂತೆ ಒಂದಷ್ಟು ದಿನ ಬಿಟ್ಟು ಒಂದು ಅಪೀಲನ್ನು ವಿದ್ಯಾಮಂತ್ರಿಗಳಿಗೆ ಗುಜರಾಯಿಸಿಕೊಂಡೆ. ಹಾಗೇ ಡಾ॥ ಕತ್ರೆಯವರಿಗೆ ಒಂದು ಕಾಗದವನ್ನು ಬರೆದು ವಿಷಯವನ್ನು ತಿಳಿಸಿದೆ. ಅವರು ನಿಮ್ಮ ಯೂನಿವರ್ಸಿಟಿ ಕೌನ್ಸಲ್ಲಿನವರು ಹೀಗೆ ತಜ್ಞರ ಸಮಿತಿಯ ತೀರ್ಮಾನವನ್ನು ತಳ್ಳಿ ಹಾಕುವುದು ಶೋಚನೀಯವೆಂದೂ, ಸೀನಿಯಾರಿಟಿಯ ಪ್ರಶ್ನೆ ಆಗ ಏಳದ್ದು ಈಗ ಏಕೆ ಎದ್ದಿತೆಂದೂ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಜೊತೆಗೆ ನಿಘಂಟಿನ ಕಾರ್ಯಗಳು ಇನ್ನೂ ಇತ್ಯರ್ಥವಾಗುವುದು ಎರಡು ತಿಂಗಳುಗಳಾಗುವುದೆಂದೂ ವಿಷಯಗಳನ್ನು ನನಗೆ ತಾವಾಗಿಯೇ ತಿಳಿಸುತ್ತೇನೆಂದೂ ಬರೆದರು. ನನಗೆ ಈ ನಿರ್ಣಯ ವಾದಂದಿನಿಂದ ಮನಸ್ಸಿನ ಶಾಂತಿ ಸಂಪೂರ್ಣವಾಗಿ ಕಲಕಿ ಹೋಗಿದೆ. ನಿದ್ರೆ ಬರುತ್ತಿಲ್ಲ, ಉತ್ಸಾಹವಿಲ್ಲ. ಈ 'ಹವಾಯೀಪತ್ರ'ವನ್ನು ಕೊಂಡುತಂದು ಎರಡು ತಿಂಗಳ ಹತ್ತಿರ ಹತ್ತಿರಕ್ಕೆ ಬಂತು. ಬರೆಯಲು ಕೂತರೆ ಏನೂ ತೋಚುತ್ತಲೇ ಇರಲಿಲ್ಲ. ನೀವು ಭೂಗೋಳದ ಅತ್ತಕಡೆ ಇದ್ದೀರಿ. ಏನು ಕಾಗದ ಬರೆದರೂ ನಿಮಗೆ ಅದು ಹಿತವಾಗುತ್ತದೆ. ಮಿತ್ರರು ನನ್ನನ್ನು ಮರೆತಿಲ್ಲ ಎಂದು ಸಂತೋಷವಾಗುತ್ತದೆ ಎಂದು ನನಗೆ ಗೊತ್ತು. ಹಾಗೆ ಯೋಚಿಸಿಕೊಂಡು ಕೂತರೂ ಬರೆಯುವುದು ಸಾಧ್ಯವಾಗಲಿಲ್ಲ. ಜೊತೆಗೆ ನನ್ನ ಗೋಳನ್ನು ಬರೆಯಬೇಕಲ್ಲಾ, ಅದನ್ನು ಬಿಟ್ಟುಬಿಡುವುದೂ ಸರಿಯಲ್ಲವಲ್ಲಾ – ಹೀಗೆಲ್ಲಾ ಚಿಂತಿಸಿ, ಚಿಂತಿಸಿ ಕಾಲ ಹಾಕುತ್ತಿದ್ದೆ. ಈಗ ಕೆಲವು ದಿನಗಳ ಕೆಳಗೆ ಮಂತ್ರಿಗಳನ್ನು ನೋಡಿದ್ದೆ. ಅವರೇನೋ ನನ್ನ ಕಡೆ ಇದ್ದಾರೆಂದು ಮನದಟ್ಟಾಯಿತು. ಆದರೆ ಈ ಕೌನ್ಸಿಲ್ಲಿನ ತೀರ್ಮಾನವನ್ನು ತಳ್ಳಿಹಾಕುವ ಧೈರ್ಯ ಅವರಿಗೆ ಬರಬೇಕು – ತಳ್ಳಿ ಹಾಕುವುದೇನೋ ಬಹಳ ಸುಲಭ, ನ್ಯಾಯಸಮ್ಮತವಾಗಿಯೂ ಇದೆ. ಏಕೆಂದರೆ ಕೌನ್ಸಿಲ್ಲು ಮೊದಲಬಾರಿ ತಜ್ಞರ ಸಮಿತಿಯ ತೀರ್ಮಾನವನ್ನು ಎತ್ತಿ ಹಿಡಿಯಿತು. ಈಗ ಅದನ್ನು ಮೂಲೆಗೊತ್ತಿದೆ. ಅಷ್ಟೇ ಸಾಕು. ಆದರೆ ಅವರಿಗೆ ಆ ಧೈರ್ಯವಿದೆಯೋ ಇಲ್ಲವೋ ಹೇಳಲಾರೆ. ಅವರ ಮನಸ್ಸೇನೋ ನನ್ನ 'ಕೇಸು' ನ್ಯಾಯವೆಂದೂ, ನ್ಯಾಯವನ್ನು ಮಾಡಬೇಕೆಂದೂ ಇರುವಂತೆ ನನಗೆ ಅನ್ನಿಸಿತು. ಅದಷ್ಟೇ ಇದರಲ್ಲಿನ ಶುಭಸೂಚನೆ. ನೋಡೋಣ, ಏನಾಗುತ್ತದೆಯೋ.

ನಾನು ಪುಣೆಯಿಂದ ಹೊರಟು ಬರುವಾಗ ಡಾ.ಎಸ್.ಕೆ. ಚಟರ್ಜಿಯವನ್ನು ಕಂಡಿದ್ದೆ. ಅವರು ನಿಮ್ಮ ವಿಷಯವಾಗಿ ಬಹಳ ಒಳ್ಳೆಯ ಮಾತುಗಳನ್ನು ಆಡಿದರು. ಅಮೆರಿಕದ ಭಾಷಾಶಾಸ್ತ್ರ ದೃಷ್ಟಿ ಒಂದು ಅತಿರೇಕವೆಂದೂ, ಆದರೆ ಶ್ರೀಕಂಠಯ್ಯನವರು ಅವರಿಂದ ಗ್ರಹಿಸ ಬಹುದಾದ ಗುಣಗಳನ್ನೆಲ್ಲಾ ಹೀರಿಕೊಂಡು ತಮ್ಮ ಸಂಸ್ಕೃತೇತ್ಯಾದಿ ಜ್ಞಾನದ ಹಿನ್ನೆಲೆಯಿಂದ ತಕ್ಕ ಮಾರ್ಪಾಡುಮಾಡಿಕೊಂಡು ನಮ್ಮ ಜನಕ್ಕೆ ಅವರ ಅನುಭವವನ್ನು ಕೊಡುವವರಾಗಿ ದ್ದಾರೆಂದೂ ಇತ್ಯಾದಿ. ಬೆನ್ನು "ಚಪ್ಪರಿಸಿಕೊಳ್ಳಿ"!

ನಿಮ್ಮ ವ್ಯಾಸಂಗದ, ಹಾಗೇ ಸಂಸ್ಕೃತಕ್ಕೆ ಸಂಬಂಧಪಟ್ಟ–ಇನ್ನೂ ಯಾವುದಾದರೂ ನಿಮಗಾಗಲೀ ನನಗಾಗಲೀ ಉಪಯುಕ್ತವಾದ– ವಿಷಯಗಳಿದ್ದರೆ ತಿಳಿಸಿ. ಈಗ ನಿಮಗೆ ಸಮಯ ಹೆಚ್ಚಾಗಿರಲಾರದು. ಪಾಠ ಪ್ರವಚನಗಳ ಹೊರೆ ಅತಿಯಾಗಿಲ್ಲ ತಾನೆ! ಎಲ್ಲಾದರೂ ನಿಮ್ಮ "ಪ್ಲೇಟು"ಗಳನ್ನು ತಿರುಗಿಸಲು ಅವಕಾಶ ದೊರೆಯಿತೇ?

ಅಮೆರಿಕಕ್ಕೆ ಹೋದರೂ ಕೃಷ್ಣಶಾಸ್ತ್ರಿಗಳ ಸಂಪುಟಕ್ಕೆ ನೀವು ಲೇಖನವನ್ನು ಕಳಿಸಿದಿರಂತೆ. ನಾನು ಇಲ್ಲಿದ್ದರೂ – ಅಕ್ಕಸಾಲೆ, ಅಡಿಗಲ್ಲು, ಬೆರಕೆ ಚಿನ್ನ ಸಿದ್ಧವಿದ್ದರೂ– ಬರೆಯಲಾಗಿಲ್ಲ. ಆ ನಮ್ಮ "ಗ್ರಫ್ಘ್" ಮಹಾಶಯವನ್ನು ಕಂಡರೆ ನನಗೆ "ಒಳಗೊಳಗೇ" "ಅಡ್ಮಿರೇಷನ್", ಈ ಅವಕಾಶವನ್ನು ನಾನು ಕಳೆದುಕೊಳ್ಳಬಾರದು.... ಬರೆಯಿರಿ, ಏನಾದರೂ ನಾನೂ ಬರೆಯುತ್ತೇನೆ, ಏನೇನಾದರೂ.

ನಮ್ಮ ಉಪಾಧ್ಯಾಯರಾದ ಪ್ರೊ॥ ಹೊನಿಗ್ಸ್‌ವಾಲ್ಡರನ್ನು ಕಂಡರೆ ನನ್ನ "ನಮಸ್ತೇ" ತಿಳಿಸಿ. ಅವರಿಗೆ ಹಿಂದೀ ಬರುತ್ತದೆಯಲ್ಲವೇ?

* * *

೧೯

ನಂ.ಶಿವರಾಮಶಾಸ್ತ್ರಿ ಮೈಸೂರು, ೧೯–೧೨–೧೯೫೫

ನಿಮ್ಮ ಕಾಗದಕ್ಕೆ ಉತ್ತರ ಬರೆಯುವುದು ನನಗೆ ಬಹಳ ಕಷ್ಟವಾಗಿದೆ. ಅರ್ಧಕಾಗದ ನೀವು ನನ್ನ ವಿಷಯ ಆದರದ ಮಾತು ಬರೆದು ನನಗೆ ಉತ್ತರಿಸುವುದು ಕಷ್ಟವಾಯಿತು. ಈ ಹೊತ್ತು ಏನಾದರೂ ಆಗಲಿ ಬಂದದ್ದನ್ನು ಬರೆದು ಬಿಡುತ್ತೇನೆ ಎಂದು ಕುಳಿತಿದ್ದೇನೆ. ಇಷ್ಟು ಹೊತ್ತಿಗೆ ನೀವು ಪೆನ್ಸಿಲ್ವೇನಿಯಾವನ್ನೇ ಬಿಟ್ಟಿದ್ದೀರೇನೋ! ಪ್ರೊ. ಹೊನಿಗ್ಸ್‌ವಾಲ್ಡರಿಗೆ ನನ್ನ ನಮಸ್ಕಾರಗಳನ್ನೂ ಧನ್ಯವಾದಗಳನ್ನೂ ತಿಳಿಸಿ. 'ಬುಲೆಟಿನ್' ಪ್ರತಿ ನನ್ನಲ್ಲಿ ಒಂದೇ ಒಂದು ಇದೆ – ಅದನ್ನು ಚಿದಂಬರಂ ಕೈಗೆ ಕೊಟ್ಟಿದ್ದೇನೆ. ಅದರ ಕಥೆ ನಿಮಗೆ ಹೇಳಿದಂತೆ ಜ್ಞಾಪಕ. ಈಗಲ್‌ಟನ್ ಸಾಹೇಬನ ಬಟ್ಲರು ಅದರ ಪ್ರತಿಗಳನ್ನೆಲ್ಲಾ ಕ್ರಮಕ್ರಮವಾಗಿ ತೂಕಕ್ಕೆ ಮಾರುತ್ತಿದ್ದಂತೆ ಕಾಣುತ್ತದೆ. ಊರಿನ ಒಂದು ಹೋಟಲಿನಲ್ಲಿ ಕೈ ಒರೆಸುಕೊಳ್ಳುವುದಕ್ಕೆ–ಸೊಗಸಾದ ಬೆಂಡು ಕಾಗದ, ಈ ಕೆಲಸಕ್ಕೆ ಅಂಥ ಕಾಗದ ಸಿಕ್ಕಬೇಕಾದರೆ ಪುಣ್ಯ ಮಾಡಿರಬೇಕು! – ಕಾಗದವನ್ನು ಕೊಟ್ಟಾಗ, ನನ್ನ ಒಬ್ಬ ಇಂಡಾಲಜಿ ವಿದ್ಯಾರ್ಥಿ ನನ್ನ ಹೆಸರನ್ನು ಅಲ್ಲಿ ನೋಡಿ, ಗಾಬರಿಯಾಗಿ, ಅವನಲ್ಲಿದ್ದ–ಉಳಿದಿದ್ದ–ಎರಡೇ ಪ್ರತಿಗಳನ್ನು ಬೇರೆ ಕಾಗದ ಕೊಟ್ಟು ತಂದು, ನೀಲಕಂಠ ಶಾಸ್ತ್ರಿಗಳಿಗೊಂದು ಕೊಟ್ಟು ತಾನೊಂದು ಇಟ್ಟುಕೊಂಡು ವಿಷಯವನ್ನು ನನಗೆ ಕ್ಲಾಸಿನಲ್ಲಿ ತಿಳಿಸಿದ. ನನಗೆ ನಿಜವಾಗಿಯೂ ಗಾಬರಿಯಾಯಿತು. ವಿಚಾರಿಸಿದ್ದರಲ್ಲಿ ಇನ್ನು ಪ್ರತಿಗಳು ಸಿಕ್ಕುವಂತಿರಲಿಲ್ಲ. ಡಿ.ಎಲ್. ಯಾವುದೋ ಒಂದು ಸೆಕೆಂಡ್ ಹ್ಯಾಂಡ್ ಬುಕ್‌ಸ್ಟಾಲಿನಲ್ಲಿ ಒಂದು ಪ್ರತಿಯನ್ನು ಕಂಡ. ಅದನ್ನು ನಾಲ್ಕಾಣೆಗೆ ಕೊಂಡುತಂದು ನನಗೆ ಕೊಟ್ಟಿದ್ದಾನೆ. ಅದನ್ನೇ ಈಗ ನಾನು ಚಿದಂಬರಂ ಅವರಿಗೆ ಕೊಟ್ಟಿರುವುದು! ಇದೇ ಇದರ ಪೂರ್ವಕಥೆ! ನಿಮಗೆ ಆಗಲೇ ಹೇಳಿದ್ದೇನೆಂದು ಜ್ಞಾಪಕ.... ಹೋಗಲಿ. ನನ್ನ ಪ್ರೊಫೆಸರ್‌ಷಿಪ್ ಬಂದ ಸ್ವಲ್ಪ ದಿನದಲ್ಲೇ ನನಗೆ ಯುವರಾಜಾ ಕಾಲೇಜಿನಲ್ಲೂ, ನಮ್ಮ ಕಾಲೇಜಿನಲ್ಲೂ ಅಭಿನಂದನ ಸಭೆಗಳನ್ನೂ ಏರ್ಪಡಿಸಿದ್ದರು. ನಮ್ಮ ಕಾಲೇಜಿನಲ್ಲಿ ನಡೆದ ಈ 'ಉತ್ಸವ' ನನಗೆ ದಿಗ್ಭ್ರಮೆಯನ್ನುಂಟುಮಾಡಿತು–ಕಾರ್ಯಕರ್ತರಿಗೇ ಆಶ್ಚರ್ಯವಾಯಿತಂತೆ – ಇಷ್ಟರ ಮಟ್ಟಿಗೆ

responseಬಂದದ್ದನ್ನು ನೋಡಿ! ನಿಮಗೆ ನಮ್ಮ ಕಾಲೇಜಿನಲ್ಲಿ 'ನಾಡಹಬ್ಬ'ವನ್ನು ಆಚರಿಸುತ್ತಿದ್ದು ಜ್ಞಾಪಕವಿರಬಹುದು. ಹಾಗೆ– ಓಲಗ, ಬಾಳೆಕಂಬಗಳು, ತಳಿರುತೋರಣ, ರಂಗೋಲಿ, ತೋರಣದ ಸಾಲು, ದೊರಸ್ವಾಮಯ್ಯಂಗಾರ್ ವೀಣೆ, ನಾಟಕ, ಟಾಬ್ಲೋ, ಸಂಸ್ಕೃತವಾಕ್ಯಾರ್ಥ, ಸ್ವಾದು ಭಾಷಣಗಳು, 'ಹಾರಾವಾಳಿ'! ನಿಜವಾಗಿಯೂ ಹೇಳುತ್ತೇನೆ–ಇದನ್ನೆಲ್ಲಾ ನೋಡಿ ನನಗೆ ಸ್ವಲ್ಪವೂ ಗರ್ವವುಂಟಾಗಲಿಲ್ಲ. ಸಂತೋಷವೇನೋ ಆಯಿತು, ಮಿತ್ರರ ವಿದ್ಯಾರ್ಥಿಗಳ ಮಮತೆಯನ್ನು ಕಂಡು. ಉಪಾಧ್ಯಾಯರೂ (ಸಂಸ್ಕೃತದ) ಕೂಡ ನನ್ನ ವಿದ್ಯಾರ್ಥಿಗಳೇ ತಾನೆ, ಒಬ್ಬಿಬ್ಬರನ್ನು ಬಿಟ್ಟು. ಆದರೆ ಇದಕ್ಕಿಂತ ಹೆಚ್ಚಾಗಿ ಒಂದು ವಿಧವಾದ ಕೃತಜ್ಞ ಭಾವನೆ, ನಮ್ರ ಭಾವನೆಯುಂಟಾಯಿತು. ನಮ್ಮ ಗುರು ಹಿರಿಯಣ್ಣನವರ ಸ್ಮರಣೆ ಕ್ಷಣಕ್ಷಣಕ್ಕೂ ಉಂಟಾಗುತ್ತಿತ್ತು. (ಉತ್ಸವದ ಅಂಗವಾಗಿ ಸಂಸ್ಕೃತದ ಕೊಠಡಿಯನ್ನು ಅಲಂಕರಿಸಿದ್ದರು. ಅಲ್ಲಿ ಗುರು ಹಿರಿಯಣ್ಣನವರ ತೈಲಚಿತ್ರಕ್ಕೆ ನಾನೊಂದು ಪುಷ್ಪಹಾರವನ್ನು ಹಾಕಿ ಕೈಮುಗಿದೆ.) ಇದರ ವಿಷಯ ಇನ್ನು ಹೆಚ್ಚು ಬರೆಯುವುದು ಉಚಿತವಲ್ಲ. ಇದೇ ಔಚಿತ್ಯವನ್ನು ಮೀರಿತೇನೋ! ಆದರೆ ನಿಮಗೆ ಮಾತ್ರ ಬರೆದಿದ್ದೇನೆ, ಅಷ್ಟೆ. ಆದರೆ ಒಂದು ವಿಷಯ ಹೇಳಬೇಕು. ಈ ಅಭಿನಂದನೆಯಿಂದ ಕೆಲವು ಕಾಲೇಜಿನ ಸಹೋಪಾಧ್ಯಾಯರಿಗೆ ಅಸೂಯೆಯುಂಟಾಯಿತು. ಒಬ್ಬಿಬ್ಬರು ಶತ್ರುಗಳೂ ಆದರೇನೊ. ಆದರೆ ಅದಕ್ಕೆ ನಾನೇನು ಮಾಡಲಿ? ಅಂಥವರು ಹಿಂದೆ ಪ್ರಚ್ಛನ್ನ ಶತ್ರುಗಳಾಗಿದ್ದಿರಬೇಕು, ಅಷ್ಟೆ..... ಇನ್ನೊಂದು ವಿಷಯ. ಗೌರ್ನಮೆಂಟ್ ಆರ್ಡರಿನಲ್ಲಿ 'ಆನ್ ಪ್ರೊಬೇಷನ್ ಫಾರ್ ಟೂ ಯಿಯರ್ಸ್' ಎಂದಿದೆ – ಎಲ್ಲಾ ಪ್ರೊಫೆಸರ್‌ಷಿಪ್ ಆರ್ಡರುಗಳಲ್ಲಿಯೂ ಬಂದಿರುವಂತೆ. ಆದರೆ ನಾನು ಆ ಅವಧಿಯೊಳಗಾಗಿಯೇ ರಿಟೈರ್ ಆಗುತ್ತೇನೆ! ಈ ವಿಷಯವನ್ನು ಕೆಲವು ದಿನಗಳ ಕೆಳಗೆ ಮಂತ್ರಿಗಳನ್ನು ಕಂಡು ವಿವರಿಸಿದೆ. ಅವರು ಇದು ನನಗೆ ಹೊಳಿದಿರಲಿಲ್ಲ, ಒಂದು ರೆಪ್ರಸೆಂಟೇಷನ್ ಕಳಿಸಿ ಸರಿಪಡಿಸುತ್ತೇನೆ ಎಂದು ಭರವಸೆ ಕೊಟ್ಟಿದ್ದಾರೆ. ಅದನ್ನು ಇನ್ನೂ ಕೊಟ್ಟಿಲ್ಲ, ಆದಷ್ಟು ಬೇಗ ಕೊಡಬೇಕು. (ನನ್ನ ಈ ಕನ್ನಡವನ್ನು ನೋಡಿದರೆ ಮುಂದಿನ ಇಪ್ಪತ್ತೈದು ವರ್ಷಗಳ ನಂತರ ನಮ್ಮ ಭಾಷೆ ಹೀಗಿರುತ್ತೆಂದು ತೋರುತ್ತದೆ – ಮಧ್ಯೆ ಮಧ್ಯೆ ಅನ್ಯಭಾಷೆಗಳ, ಅದರಲ್ಲೂ ಇಂಗ್ಲೀಷಿನ ಮಾತುಗಳು ತುಂಬಿಕೊಂಡು)...

ಇನ್ನಾದರೂ ನಿಮ್ಮ ವಿಷಯಕ್ಕೆ ಬರೋಣ. ಏನು, ಒಂದು ವರುಷ ಪೂರ್ತಿ ಸೀಮೆಯಲ್ಲೇ ಕಳೆಯುತ್ತೀರೋ, ಅಥವಾ ಬೇಜಾರು ಪಟ್ಟುಕೊಂಡು ಮುಂಚೆಯೇ ಬಂದು ಬಿಡುತ್ತೀರೋ? ಡಿ.ಎಲ್. ಏನೋ ಹೇಳಿದ್ದು ನೋಡಿದರೆ, ೯ ತಿಂಗಳ ಮೇಲೆ ಬಂದು ಬಿಡುವಂತಿದೆ– ವೈದೀಕಕ್ಕೆ ಅಡ್ಡಿ ಬರದಿರಲಿ ಎಂದೋ? ನೀವೂ ಹಾಗೊಂದು ಮಾತು ಹಾಕಿದ್ದು ಜ್ಞಾಪಕ..... ಅಂತೂ ಆದಷ್ಟು ಅಮೇರಿಕನ್ನರಿಂದ ಹಿರಿದುಕೊಂಡು ಬನ್ನಿ. ಅವರು ನಮ್ಮ ಹಾಗೆ ಸಂಪ್ರದಾಯಬದ್ಧರಲ್ಲ. ಎಲ್ಲದರಲ್ಲೂ ಸ್ವತಂತ್ರವಾಗಿ – ಕೆಲವು ಸಮಯದಲ್ಲಿ ಸ್ವಚ್ಛಂದವಾಗಿ ಮುನ್ನುಗ್ಗತಕ್ಕವರು..... ನಿಮಗೀಗಾಗಲೇ ತಿಳಿದಿರಬೇಕು. ಚಟರ್ಜಿಯವರಿಗೆ ಸಂಭಾವನೆಯ ಸಂಪುಟವನ್ನು ಅಣ್ಣಾಮಲೆ ನಗರದಲ್ಲಿ ಓರಿಯಂಟಲ್ ಕಾನ್‌ಫೆರೆನ್ಸ್ ಸಂದರ್ಭದಲ್ಲಿ– ಡಾ॥ ರಾಧಾಕೃಷ್ಣನ್‌ರವರ ಹಸ್ತದಿಂದ ಕೊಡಿಸುತ್ತಾರೆ. ನಾನೂ ಕಾನ್‌ಫೆರೆನ್ಸಿಗೆ ಡೆಲಿಗೇಟಾಗಿ

ಹೋಗುತ್ತಿದ್ದೇನೆ. ಚಟರ್ಜಿಯವರನ್ನು ಕಂಡು ನಿಮ್ಮ ನೆನಪು ಕೊಡುತ್ತೇನೆ..... ಕೃಷ್ಣಶಾಸ್ತ್ರಿಗಳ ಸಂಪುಟಕ್ಕೆ ಲೇಖನ ಇನ್ನೂ ಬರೆದಿಲ್ಲ! ಬರೆಯಬೇಕೆಂಬ ಉತ್ಕಟವಾದ ಆಕಾಂಕ್ಷೆ ಇದೆ. ಶಂಕರನಾರಾಯಣರಾಯರು ಕೊಟ್ಟ ವೇಳೆ ಮೀರಿ ಹೋಗಿದೆ. ಅಕ್ಕಸಾಲೆ, ಅಡಿಗಲ್ಲು ಚಿನ್ನವೂ ಸಿದ್ಧವಾಗಿದೆ. ಅಗ್ಗಿಷ್ಟಿಕೆ ಹಚ್ಚಬೇಕು. ಕಾವೇ ಬರುತ್ತಿಲ್ಲ! ಕೆಲಸಕ್ಕೆ ಕೈ ಹಾಕಿದರೆ ಬರಬಹುದು – ಈ ಕಾಗದ ಬರೆದು ಮುಗಿಸುತ್ತಿರುವಂತೆ. ಆದರೆ ಲೇಖನ ಇಷ್ಟು ಲಕ್ಷಣವಾದರೆ ಪ್ರಯೋಜನವಿಲ್ಲ! ವಾಪಸಾಗಬಹುದು!...... ಮಿತ್ರರೆಲ್ಲಾ ಆರೋಗ್ಯ. ಮೂರ್ತಿರಾಯರು ಈಗ "ಸಂಸ್ಕೃತಿ ಪ್ರಸಾರ"ದ ಡೈರೆಕ್ಟರು! ಸಿ.ಕೆ. ವೆಂಕಟರಾಮಯ್ಯನವರ ಸ್ಥಾನದಲ್ಲಿ! ರಾಯಚೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಆದ್ಯರಂಗಾಚಾರ್ಯರ ಅಧ್ಯಕ್ಷತೆಯಲ್ಲಿ! ಕುವೆಂಪು ಅವರು ಅಧ್ಯಕ್ಷರಾಗಲು ಒಪ್ಪಲಿಲ್ಲ.... ನಿಮ್ಮೂರಿನಲ್ಲಿ ಅಂದರೆ ಧಾರವಾಡದಲ್ಲಿ ಎಲ್ಲರೂ ಕ್ಷೇಮವೆಂದು ತಿಳಿಯುತ್ತೇನೆ. ನೀವು ಕ್ಷೇಮ ತಾನೆ? – ಎಷ್ಟು ಪೌಂಡು ತೂಕ ಹೆಚ್ಚಿದ್ದೀರಿ? ಅಂಗಿಗಳು, ಷರಾಯಿಗಳು ಷೂಗಳು ಈಗ ಹದವಾಗಿರಬಹುದು! ಅಥವಾ ಬಿಗಿಯೋ?.........

* * *

೨೦

ನಂ. ಶಿವರಾಮಶಾಸ್ತ್ರಿ ಮೈಸೂರು, ೧೧–೧–೧೯೫೬

ನಿನ್ನೆಯ ದಿನ ಶ್ರೀ ಚಿದಂಬರಂ ಅವರ ಕೈಯಲ್ಲಿ ಎಂಟು ಯೂನಿವರ್ಸಿಟಿಯ ಅಪ್ಲಿಕೇಷನ್ ಫಾರಂಗಳನ್ನೂ, ಕನ್ನಡ ಪ್ರಾಧ್ಯಾಪಕ ಸ್ಥಾನದ ಜಾಹಿರಾತನ್ನೂ – ಜೊತೆಗೆ ನೀವು ಹೇಳಿದ್ದ Bulletin of Phonetic Sudies ನ ಒಂದು–ಇದ್ದ ಒಂದೇ ಒಂದು–ಪ್ರತಿಯನ್ನು ಕಳಿಸಿ, ಜೊತೆಗೆ ನಾಲ್ಕು ಸಲಹೆಗಳನ್ನು ತಿಳಿಸಿದ್ದೇನೆ. ಅಷ್ಟೂ ಇವತ್ತಿನ ಪೋಸ್ಟಿನಲ್ಲೇ ನಿಮ್ಮ ಕಡೆಗೆ ಹೊರಡುತ್ತದೆ. ಜೊತೆಗೆ ನಾನೂ ಒಂದು ಕಾಗದವನ್ನು ಬರೆಯೋಣವೆಂದು ಕುಳಿತಿದ್ದೇನೆ.

Kannada Professorship ಅನ್ನು ಜಾಹೀರಾತು ಇಲ್ಲದೆ "ಪೂರೈಸ"ಬೇಕೆಂದು ಪುಟ್ಟಪ್ಪನವರು ಸಲಹೆ ಮಾಡಿದರಂತೆ. ಆದರೆ ಇನ್ನೂ 'ಬೆಟರ್ ಮ್ಯಾನ್' ಸಿಕ್ಕಬಹುದು ಜಾಹಿರಾತು ಮಾಡಿಸಿ, ಎಂದು ಮಿಕ್ಕವರು ಅಂದರಂತೆ. ಅದರಂತೆ ಇದು ಹೊರಟಿದೆ. ನೀವು 'ಅಪ್ಲೈ'ಮಾಡುವುದು ಒಳ್ಳೆಯದು. ಅವಧಿಯೇನೋ ೧–೨–೧೯೫೬. ಆದರೂ ನನ್ನ ಸಲಹೆ ಇದು. ಈ ಕಾಗದ ತಲಪಿದ ಒಡನೆಯೇ ಒಂದು 'ಕೇಬಲ್' ಕಳಿಸಿ – ನನ್ನ ಹೆಸರನ್ನು ಪ್ರೊಫೆಸರ್‌ಷಿಪ್ಪಿಗೆ ರಿಜಿಸ್ಟರ್ ಮಾಡಿ, ಅಪ್ಲಿಕೇಷನ್ನು ಹಿಂದೆಯೇ ಬರುತ್ತದೆ ಎಂದು. ಜೊತೆಗೆ ಅದೇ ದಿನವೇ ಅದೇ ವಿಷಯವನ್ನು ಕಾಗದ ಮುಖೇನ 'ಕನ್‌ಫರ್ಮ್'ಮಾಡಿ – ಅಪ್ಲಿಕೇಷನ್ ತಯಾರಿಕೆಗೆ ಒಂದೆರಡು ದಿನವಾದರೂ ಬೇಕಾದೀತು, ಅದರಿಂದ; ಸ್ವಲ್ಪ ಕಾಲಾವಕಾಶವನ್ನು ಕೊಡಿ ಎಂದೂ ಸೇರಿಸಿ. ನಾನು ಡಿಸೋಜರವರನ್ನು ಕಂಡು ಅವರ ಕಿವಿಯ ಮೇಲೆ ಒಂದು ಮಾತನ್ನು ಹಾಕಿರುತ್ತೇನೆ. ನೀವು 'ಟೆಸ್ಟಿಮೋನಿಯಲ್' ಇತ್ಯಾದಿಗಳನ್ನೆಲ್ಲಾ ಬೇಕಾದರೆ – 'ಇಂಟರ್‌ವ್ಯೂ'ಗೆ ಬರುವಾಗ ತರುತ್ತೇನೆ ಎಂದು ಬರೆಯಬಹುದು. ಹೀಗೆ 'ಲೇಟಾಗಿ' ಅಪ್ಲಿಕೇಷನ್ ಕಳಿಸಿ ಅದನ್ನು ಒಪ್ಪಿಕೊಂಡಿದ್ದಕ್ಕೆ ಸಂಸ್ಕೃತ ಪ್ರೊಫೆಸರ್‌ಷಿಪ್ ಸಂದರ್ಭದಲ್ಲಿ

"ಪ್ರಸಿಡೆಂಟ್" ಇದೆ. ('ಇಂಟರ್‌ವ್ಯೂ' ತಡವಾಗಬಹುದು. ನಮ್ಮ ಯೂನಿವರ್ಸಿಟಿಯ ಚುರುಕನ್ನು ಗಮನಿಸಿದರೆ!) ನೀವು ಅಪ್ಲಿಕೇಷನ್ ಹಾಕದೇ ಇರಬೇಡಿ – ತಡವಾದರೂ ಚಿಂತೆಯಿಲ್ಲ. ಡಾ॥ ಗೋಪಾಲ್ ಇಲ್ಲಿ ಪ್ರೊಫೆಸರಾಗಿ ಕೆಲಸ ವಹಿಸಿಕೊಂಡು – ೫೦೦ರೂಗಳ ಸಂಬಳವನ್ನು ಗೋಗರೆದು ದೊರಕಿಸಿಕೊಂಡು – ಈಗ ಮದ್ರಾಸಿನಲ್ಲಿ ಫೋರ್ಡ್ ಫೌಂಡೇಷನ್ನಿನಲ್ಲಿ ಸುಮಾರು ಎಂಟುವರ್ಷಕ್ಕೆ ಒಬ್ಬ ಪ್ರೊಫೆಸರಾಗಿ ಹೋಗಬೇಕೆಂದು–ರಿಟೈರ್‌ಮೆಂಟಿಗೆ ಅಪ್ಲಿಕೇಷನ್ ಹಾಕಿದ್ದಾನೆ. ನೀವೂ ಹಾಗಯೇ ಇದನ್ನು 'ಸ್ಪಿಂಗ್ ಬೋರ್ಡ್' ಮಾಡಿಕೊಳ್ಳಬಹುದು – ನಿಮಗೆ ಈಗಲೇ ಒಂದು ಬೋರ್ಡಿದೆ ನನಗೆ ಗೊತ್ತು– ಆದರೆ ಇದು ಮೂಲಭೂತವಾದ ಮೈಸೂರಿನ ಬೋರ್ಡು, ಅಷ್ಟೆ. ಡಾ॥ ಹೊನಿಗ್ಸ್‌ವಾಲ್ಡರಿಗೆ ನನ್ನ ನಮಸ್ಕಾರಗಳು. ಈ ಕಳಿಸಿರುವ ಪ್ರತಿಯನ್ನು ಅವರಿಗೆ ಕೊಟ್ಟು ನಿಮ್ಮದನ್ನು ವಾಪಸು ಪಡೆಯಿರಿ. ಅಲ್ಲದೆ ನನ್ನ ಲೇಖನದಲ್ಲಿ ಉಳಿದಿರುವ ಎರಡು "ಅವ್ಯುತ್ಪನ್ನ"ವಾದ ತಪ್ಪುಗಳನ್ನು ತಿದ್ದಿದ್ದೇನೆ. ಆರೋಗ್ಯ ಸರಿತಾನೆ? ಮನೆಯ ಕಡೆ ಎಲ್ಲಾ ಆರೋಗ್ಯ? "ಅಪಿತಪೋ ವರ್ಧತೇ?"– ಮಧ್ಯೆ "ಸರಿತಃ ಸಾಗರಾ: ದ್ರುಮಾ:" – 'ತಪಸ್ಸು' ವರ್ಧಿಸುತ್ತಲೇ ಇರಬೇಕು! ನನ್ನನ್ನು ಖಾಯಂ ಮಾಡಿ ಎಂದು ಅರ್ಜಿ ಗುಜರಾಯಿಸಿ ಕೊಂಡಿದ್ದೇನೆ, ನೋಡಬೇಕು. ನೀವು ಬರುವುದು ಯಾವಾಗ? ಇನ್ನು ಯಾವ ಯಾವ "ದ್ವೀಪ"ಗಳ ಸಂಚಾರ "ವರ್ಷ"ಗಳ ಯಾತ್ರೆ? ಅಣ್ಣಾಮಲೆ ನಗರದಲ್ಲಿ ಓರಿಯೆಂಟಲ್ ಕಾನ್‌ಫೆರೆನ್ಸಿಗೆ ಹೋಗಿದ್ದೆ. ಸುನೀತಿ ಕುಮಾರ ಚಟರ್ಜಿಯವರನ್ನು ನೋಡಿದ್ದೆ – (ಸಂಭಾವನಾ ಸಮಾರಂಭ ನಡೆಯಿತು). ಅಭಿನಂದನೆಗಳನ್ನು ಅರ್ಪಿಸಿದೆ. ಕೂಡಲೆ ಒಂದು 'ಕಥೆ' ಹೇಳಿದರು. ಒಬ್ಬ ಇಂಗ್ಲೀಷಿನವ, ಸ್ಕಾಟ್ಲೆಂಡಿನವ, ಐರ್ಲೆಂಡಿನವ ಕೂತು ಕುಡಿಯುತ್ತಿದ್ದರಂತೆ. ಸ್ವಲ್ಪ ಹೊತ್ತಾದ ಮೇಲೆ 'ಐರಿಷ್‌ಮೆನ್' ಇದ್ದಕ್ಕಿದ್ದಂತೆ ನೀವು ನನ್ನ ದೇಶಕ್ಕೆ ಅವಮಾನ ಮಾಡಿದ್ದೀರಿ ಎಂದು ಗರ್ಜಿಸಿದನಂತೆ! ಮಿಕ್ಕವರು ಬೆಪ್ಪಾಗಿ "ಅಯ್ಯಾ, ನಿನ್ನ ದೇಶದ ಹೆಸರನ್ನೇ ಹೇಳಲಿಲ್ಲವಲ್ಲ! ಅವಮಾನವೆಲ್ಲಿ ಬಂತು!" ಎಂದರಂತೆ. ಅದಕ್ಕೆ ಅವನು "ಅದು ಅವಮಾನವಲ್ಲವೇನು?" ಎಂದನಂತೆ! ಅವರು ಎಂದಿನಂತೆ ಗೆಲುವಾಗಿದ್ದಾರೆ. Linguistic Society of India Presidentship ಅನ್ನು ತ್ಯಜಿಸಿದರು. ಸುಕುಮಾರಸೇನರು ಇನ್ನು ಮೇಲೆ ಅಧ್ಯಕ್ಷರು.

* * *

೨೧

ನಂ. ಶಿವರಾಮಶಾಸ್ತ್ರಿ — ಮೈಸೂರು, ೧೪–೨–೧೯೫೬

ನಿಮ್ಮ ಕಾಗದ ಮತ್ತು ಜೊತೆಯಲ್ಲಿದ್ದ ಅಪ್ಲಿಕೇಷನ್ ಪ್ರತಿ. ಮ॥ ಡಿಸೋಜರವರನ್ನು ಅಕೆಡಿಮಿಕ್ ಕೌನ್‌ಸಿಲ್ ಮೀಟಿಂಗಿನ ದಿನ ನೋಡಿದ್ದೆ. ಅಪ್ಲಿಕೇಷನ್ ಕಳಿಸಿದ್ದಾರೆ ತಾನೆ? ಅದು ಮುಖ್ಯ. ಸ್ವಲ್ಪ ತಡವಾದರೂ ನಾನು ಸಮಾಧಾನ ಹೇಳುತ್ತೇನೆ ಎಂದರು. ಅದು ಅಷ್ಟು ಮುಖ್ಯವಲ್ಲ ಈಗ. ನಿನ್ನೆಯದಿನ ಸಮಾಚಾರ ಕೇಳಿದೆ. ಇಂಟರ್‌ವ್ಯೂಅನ್ನು ಈ ತಿಂಗಳು ೨೯ನೇ ತಾರೀಖಿಗೆ ಇಟ್ಟಿದ್ದಾರಂತೆ! ಅದೇನು ಇಷ್ಟು ಲವಲವಿಕೆಗೆ–ಅಪೂರ್ವವಾದ –ಕಾರಣವೋ ತಿಳಿಯದು. ಕೂಡಲೇ ನಿಮಗೆ ಇದನ್ನು ತಿಳಿಸೋಣವೆಂದು ಬರೆದಿದ್ದೇನೆ. ಕಮಿಟಿಯ

ಮೆಂಬರುಗಳು ಯಾರು ಯಾರೊ ತಿಳಿಯದು. ವಿಚಾರಿಸಬೇಕು. ಅವರ ಹೆಸರನ್ನು ತಿಳಿಯುವುದರಿಂದ ನಿಮಗೇನೂ ಈಗ ಪ್ರಯೋಜನವಿಲ್ಲವಲ್ಲ! ಡಿಸೋಜರನ್ನು ತಿರುಗಿ ಇನ್ನೊಂದು ಬಾರಿ ನೋಡುತ್ತೇನೆ. ಆತ ಸಿಕ್ಕುವುದೇ ಕಷ್ಟ. ಸಿಕ್ಕಿದಾಗ ಸುತ್ತಲೂ ಒಂದು ವಂದಿಮಾಗಧರ ತಂಡ ಇದ್ದೇ ಇರುತ್ತದೆ. ಹೆಚ್ಚು ಮಾತಿಗೂ ಅವಕಾಶವಿರುವುದಿಲ್ಲ. ನೋಡೋಣ. ಹಿಂದೆ ಎಂ.ಪಿ.ಎಲ್. ಶಾಸ್ತ್ರಿಗಳು ನನಗೊಂದು ಕಾಗದ ಬರೆದು ಪ್ರೊಫೆಸರ್‌ಷಿಪ್ ಜಾಹಿರಾತಿನ ವಿಚಾರವನ್ನು ತಿಳಿಸಿ ನಿಮಗೆ ಅಪ್ಲೈ ಮಾಡಿರೆಂದು ತಿಳಿಸಬೇಕೆಂದು ಅಂದಿದ್ದರು. ಕಂಡಾಗ ಅವರಿಗೂ ಒಂದು ಮಾತನ್ನು ಹೇಳಿರುತ್ತೇನೆ. ಇಷ್ಟರಮೇಲೆ ಪುಟ್ಟಪ್ಪನವರೂ ಕೂಡ ನಿಮ್ಮ ಪರವಾಗಿಯೇ ಇರಬಹುದೆಂದು ನನ್ನ ಊಹೆ. ಸರಿ, ಇದರ ವಿಷಯ ಇಷ್ಟು ಸಾಕು.

ಬುಲೆಟಿನ್ ಪ್ರತಿಯನ್ನು ಚಿದಂಬರಂ ಅವರು ಬುಕ್‌ಪೋಸ್ಟ್ ಮೂಲಕ ಅದೇ ದಿನವೇ ಕಳಿಸಿದರಂತೆ. ಆದ್ದರಿಂದ ಆ 'ಅಪೂರ್ವ' ಪ್ರತಿ ನಿಮ್ಮನ್ನು ಹುಡುಕಿಕೊಂಡು ಭೂಪ್ರದಕ್ಷಿಣೆ ಮಾಡುತ್ತಾ ಇರಬಹುದು. ನೀವು ಇಂಡಿಯಕ್ಕೆ ಬಂದ ಮೇಲೆ ನಿಮ್ಮ ಕೈ ಸೇರುತ್ತದೆಯೋ, ಅಥವಾ ಸತ್ತ ಕಾಗದಗಳ ಕಛೇರಿಗೆ ಭೇಟಿ ಕೊಡುತ್ತದೋ ಗೊತ್ತಿಲ್ಲ. ದೈವೀ ವಿಚಿತ್ರಾಗತಿ:, ಈ ಫೋನೆಟಿಕ್ ಅಸೋಸಿಯೇಷನ್ನು, ಗಿಡಗಾಚಾರಿ, ಈ ಬುಲೆಟಿನ್ನು, ನನ್ನ ನಿಮ್ಮ ಅನಾಥ ಬರೆವಣಿಗೆಗಳು, ಇವುಗಳು ಮೈಸೂರು ಹೋಟೆಲುಗಳ ಎಂಜಲು ಕೈಗಳನ್ನೆಲ್ಲಾ ಒರೆಸಿ ಶುದ್ಧಿ ಮಾಡಿದ್ದು, ಈಗ ಈ ಪ್ರತಿ ಹೀಗೆ ಸುತ್ತುತ್ತಿರುವುದು ಒಂದು ರೀತಿಯಲ್ಲಿ ವಿನೋದವಾಗಿ ಕಂಡರೂ ನನಗೊಂದು 'ಲೋನ್ಲಿನೆಸ್'ಇನ ಪ್ರತೀಕದಂತೆ ಕಾಣುತ್ತಿದೆ.

ನಿಮ್ಮ ಇಂಗ್ಲೆಂಡಿನ –"ಓಲ್ಡ್ ವರ್ಲ್ಡ್"ಇನ– ಅನುಭವಗಳನ್ನು ಸಾಧ್ಯವಾದರೆ ಬರೆಯಿರಿ. ನಾನು ಹೇಳುವುದೇನೆಂದರೆ; ನಿಮ್ಮ ಈ ಪ್ರವಾಸದ–ಪ್ರವಚನ, ಜ್ಞಾನಾರ್ಜನೆಯ ಮಾತಿರಲಿ – ಈ ಅನುಭವದ, ಅಂದರೆ ಪ್ರಪಂಚದ ಹಿನ್ನೆಲೆಯ ವಿಷಯವಾಗಿ ನಿಮಗೆ ಉಂಟಾಗಿರ ಬಹುದಾದ ಅನುಭವಗಳನ್ನು ನಿಮ್ಮ ಪ್ರತಿಕ್ರಿಯೆಗಳನ್ನು ಆಗಾಗಲೇ ಗುರುತು ಹಾಕಿಟ್ಟು, ಮುಂದೆ – ಬಹಳ ತಡಮಾಡದೆ – ಒಂದು ಪುಸ್ತಕವನ್ನು ಬರೆಯಬೇಕು ನೀವು – ನಮ್ಮಂಥವರ ಓದಿಗಾಗಿ.

ಇಂಗ್ಲೆಂಡಿನಲ್ಲಿ ಎಲ್ಲೆಲ್ಲಿಗೆ ಹೋಗಿ ಬರುತ್ತೀರಿ? ಕೇಶವನ್ನಿಗೆ ನೀವೇನಾದರೂ ಕಾಗದ ಬರೆದಿದ್ದರೋ, ಅವನೇನಾದರೂ ಉತ್ತರಿಸಿದ್ದಾನೋ? ನಿಮ್ಮ ಮಾಳವಾಡರು ಇಲ್ಲಿ ಮೂರು ವಿಶೇಷ ಉಪನ್ಯಾಸಗಳನ್ನು–ಹರಿಹರನ ಆಧ್ಯಾತ್ಮಿಕ ದೃಷ್ಟಿಯ ಮೇಲೆ–ಕೊಟ್ಟರು. ಒಂದು ದಿನ ನಾನೂ ಹೋಗಿದ್ದೆ. ನನಗೇನೂ ರುಚಿಸಲಿಲ್ಲ. ಹರಿಹರನ ರಗಳೆಯ ಕಥೆಯನ್ನು ಓದುತ್ತಿದ್ದರು–ರಗಳೆಯ ವಾಕ್ಯಗಳನ್ನು ತಮ್ಮ ವಾಖ್ಯಾನಗಳಲ್ಲಿ ಹೊಂದಿಸಿಕೊಂಡು. ರಗಳೆಗಳ ಭಾಗಗಳನ್ನಾದರೂ ಚೆನ್ನಾಗಿ ಓದಿದ್ದರೆ ಮೇಲಾಗುತ್ತಿತ್ತು. ಆತ ನನಗೆ ಅಷ್ಟು ಬುದ್ಧಿಶಾಲಿಯೆಂದು ಅನ್ನಿಸಲಿಲ್ಲ. ವಿಮರ್ಶೆಯೂ ಕೂಡ ತೀರ ನಮ್ಮ ವಿದ್ಯಾರ್ಥಿಗಳ ಬರೆವಣಿಗೆಯಂತೆ. ಈ ವಿಶೇಷ ಉಪನ್ಯಾಸಗಳಲ್ಲಿ ನನಗೆ ತೋರಿದ ವಿಶೇಷ ಇಷ್ಟೆ. ನಿಮ್ಮ ರಾಘವಾಚಾರ್ಯರು ಬಹಳ ನಿಷ್ಠೆಯಿಂದ ಕೇಳುತ್ತಿದ್ದರು. ನನಗೇನೋ ಹಿಡಿಸಲಿಲ್ಲ.

ಇಲ್ಲಿಯ ವಾತಾವರಣ ತೀರ 'ಅನಕಡಿಮಿಕ'ವಾಗಿದೆ. (ಈಗ ನಮ್ಮ ಅಬ್ದುಲ್ ಕಲಾಮ್ ಆಜಾದರು 'ಅಕಡೆಮಿ' ಎಂಬ ಪದವನ್ನು ದೇಶೀಯವನ್ನಾಗಿ ಮಾಡಿದ್ದಾರಷ್ಟೇ!) ಮನಸ್ಸಿಗೆ ಹರ್ಷವಿಲ್ಲ. ಸುತ್ತ 'ಸಂಗ್ರಾಹಕ' (ಗ್ರ್ಯಾಬಿಂಗ್) ಮನೋಭಾವ, ಪಿತೂರಿಯ ಪಿಸಿಪಿಸಿ ಸರ್ವದಾ. ಯಾರಿಗೂ ಕಾಲೇಜಿನ ಕೀರ್ತಿಯ ವಿಷಯವಾಗಲೀ, ಅದಕ್ಕೆ 'ಲಾಯಲ್ಟಿ' ಯಾಗಲೀ ಕಾಣಲಿಲ್ಲ. ಒಬ್ಬೊಬ್ಬರೇನೋ ಆ ರೀತಿ ಮನೋಭಾವವಿದ್ದಂತೆ ಓಡಾಡುತ್ತಾರೆ. ಆದರೆ ಅವರಿಗೆ ಸಾಕಷ್ಟು ಯೋಗ್ಯತೆ ಇದ್ದಂತೆ ಕಾಣುವುದಿಲ್ಲ. ಆದರೂ ಅಂಥವರನ್ನು ಕಂಡರೆ ನನಗೆಷ್ಟೋ ಸಂತೋಷ – ಕುರುಡು ಕುರುಡಾಗಿಯಾದರೂ ಈ ಕಾಲೇಜಿನ ಮೇಲಿನ ಅಭಿಮಾನ, ವಿದ್ಯಾಭಿಮಾನ, ವ್ಯಕ್ತ ಪಡಿಸುತ್ತಾರಲ್ಲಾ ಎಂದು. ಹೆಸರನ್ನು ಹೇಳಲಾರೆ.

ಕಾಗದ ಮುಗಿಸಬೇಕು. ಯಾಕೋ ಬರೆವಣಿಗೆ ಡಲ್ ಆಗಿದೆ.

* * *

೨೨

ಡಿ.ಎಲ್. ನರಸಿಂಹಾಚಾರ್ ಬೆಂಗಳೂರು, ೨೯-೧೧-೧೯೫೫

ಇಲ್ಲಿನ ವಿದ್ಯಮಾನಗಳು ಅತಿಶಯವಾಗಿ ವ್ಯತ್ಯಾಸವಾಗಿಲ್ಲ. ಒಂದು ಸಂತೋಷದ ವಿಷಯ. ಶ್ರೀ ನಂ. ಶಿವರಾಮ ಶಾಸ್ತ್ರಿಗಳಿಗೆ ಪ್ರೊಫೆಸರ್ ಕೆಲಸ ದೊರೆಯಿತು. ಈಗ ಅವರ ಮುಖದ ಮೇಲೆ ಸ್ವಲ್ಪ ಕಳೆ ಬಂದಿದೆ. ಕನ್ನಡಕ್ಕೆ ಇನ್ನೊಂದು ಪ್ರೊಫೆಸರ್ ಜಾಗವನ್ನು ಸರಕಾರ ಮಂಜೂರು ಮಾಡಿದೆ. ಈಗ ಕೆಲವು ದಿನಗಳ ಹಿಂದೆ ನಾನು ಮೈಸೂರಿಗೆ ಹೋಗಿದ್ದಾಗ V.C. ಡಿಸೋಜ ಅವರು ಸಿಕ್ಕಿದ್ದರು. ಅವರೇ ಹೇಳಿದ್ದು ಈ ವಿಷಯ. ಶ್ರೀಕಂಠಯ್ಯ ವಾಪಸು ಬರುತ್ತಾರೆಯೆ ಎಂದು ಕೇಳಿದರು. ಬಂದರೆ ಬರಬಹುದು ಈ ವಿಷಯ ನನಗೆ ಖಚಿತವಾಗಿ ತಿಳಿಯದು ಎಂದು ಹೇಳಿದೆ. ಅಂತೂ ಆ ಜಾಗ ನಿಮಗೆ ಸಿಕ್ಕಬೇಕು. ಏನಾಗುತ್ತದೋ ನೋಡಬೇಕು. ಅದನ್ನು advertise ಮಾಡುತ್ತಾರೋ ಇಲ್ಲ ಹಾಗೆಯೇ ಅದನ್ನು ಭರ್ತಿ ಮಾಡುತ್ತಾರೋ ಗೊತ್ತಿಲ್ಲ. advertise ಆದರೆ ಅದರ ವಿವರವನ್ನು ತಮಗೆ ಬರೆಯುತ್ತೇನೆ. ನೀವು ಖಂಡಿತ ಅದಕ್ಕೆ apply ಮಾಡಬೇಕು, ನಾನು ಮಾಡುವುದಿಲ್ಲ. ಅಲ್ಲದೆ ಸೆಂಟ್ರಲ್ ಕಾಲೇಜಿಗೆ ಒಂದು ಪ್ರೊಫೆಸರ್ ಸ್ಥಾನವನ್ನು ಕೊಡುವರಂತೆ. ಇಂಗ್ಲಿಷಿನ ಒಂದು ಪ್ರೊಫೆಸರ್ ಸ್ಥಾನವನ್ನು ಖೋತಾ ಮಾಡಿ ಕನ್ನಡಕ್ಕೆ ಕೊಡುವರೆಂದು ವದಂತಿ. ಇದೇನಾದರೂ ಆದರೆ ನನಗೆ ಅನುಕೂಲವಾಗಬಹುದು. ಇನ್ನೇನೂ ವಿಶೇಷಗಳಿಲ್ಲ. ಡಿಸೋಜ ಅವರಿಗೆ ಮುಂದಿನ ಜೂನ್‌ವರೆಗೆ ಅಧಿಕಾರ ಮುಂದುವರಿದಿದೆ. ಕುವೆಂಪು ವಿ.ಸಿ. ಆಗುವುದು ಮುಂದುವರಿದಂತೆ ಆಯಿತು.

* * *

D.L. Narasimhachar Bangalore 11-1-1956

After all the place of the additional Professor of Kannada has been advertised. I have enclosed a copy of it which occured in the "Tayinadu". I have sent you eight application forms. Please fill them and transmit them to the Registrar of the Mysore University as early as possible within the due date.

It is with a heavy heart I am writing to you this letter. After 25 years of devoted service in the University we have been put to the humiliation of applying for the post. I am more sorry for you than for myself.

Kindly do not think of not sending in your application. Please do send. I will also send my application. Beyond this I am not going to do anything. Let them decide in whichever way they please.

* * *

೨೪

ಡಿ.ಎಲ್. ನರಸಿಂಹಾಚಾರ್ ಬೆಂಗಳೂರು, ೨೦-೨-೧೯೫೬

ನೀವು Yale ವಿಶ್ವವಿದ್ಯಾನಿಲಯದಿಂದ ಬರೆದ ಪತ್ರ ತಲುಪಿತು. ನೀವು ಪ್ರೊಫೆಸರ್ ಅರ್ಜಿಯನ್ನು ಸಲ್ಲಿಸಿರುವುದನ್ನು ಕೇಳಿ ಸಂತೋಷವಾಯಿತು. ಇದೇ ತಿಂಗಳು ೨೯ನೆಯ ತಾರೀಖು ಇಂಟರ್‌ವ್ಯೂ ಇದೆ. ಆ ಸಮಿತಿಗೆ ಸದಸ್ಯರು ಎ.ಆರ್.ಕೃ., ಬೇಂದ್ರೆ, ಕುವೆಂಪು, ಎಂ.ಪಿ.ಎಲ್.ಶಾಸ್ತ್ರಿ, ಧರ್ಮಪ್ಪ; ಡಿಸೋಜ ಅವರು ಅಧ್ಯಕ್ಷರು. ಒಟ್ಟು ಹತ್ತು ಜನ ಅರ್ಜಿ ಸಲ್ಲಿಸಿದ್ದಾರೆ. ಎಲ್ಲರೂ ಇಲ್ಲಿಯವರೇ, ಹೊರಗಿನವರು ಯಾರೂ ಇಲ್ಲ. ನಿಮ್ಮನ್ನು ಆ ಜಾಗಕ್ಕೆ ನೇಮಿಸಿ ನೀವು ಬರದಿದ್ದರೆ ನನ್ನನ್ನು ನಿಮಗೆ ಬದಲಾಗಿ ಹಾಕಬಹುದು. ಆಗ ನಾನು ಮೈಸೂರಿಗೆ ಹೋಗಲೇಬೇಕಾಗುತ್ತದೆ. ನಿಮ್ಮ ಅರ್ಜಿಯನ್ನು ನೀವು maximum in the grade ಕೊಟ್ಟರೆ ಬರುವೆನೆಂದು ಬರೆದಿದ್ದೀರಿ. ಇದು ಸ್ವಲ್ಪ ಅಸಾಧ್ಯವೆಂದು ತೋರುತ್ತದೆ. ನಿಮಗೆ ೫೦೦/- ರೂಗಳನ್ನು ಕೊಡಬಹುದು. ಎಂ.ಎಚ್. ಗೋಪಾಲ್, ಬಿ. ಕುಪ್ಪುಸ್ವಾಮಿ, ಪುಟ್ಟಸ್ವಾಮಿ, ಇವರಿಗೆ ಕೊಟ್ಟ ಹಾಗೆ. ಆಗ ನೀವು ಇಲ್ಲಿಗೆ ಬರುತ್ತೀರಲ್ಲವೆ? ಬಂದರೆ ನನಗೆ ತುಂಬ ಸಂತೋಷ. ಕುವೆಂಪು ಅವರು ವೈಸ್ ವ್ಯಾನ್‌ಸೆಲ್ಲರ್ ಆಗುವರೆಂದು, ಇದೇ ವರ್ಷ ಜೂನ್ ೧೫ರಿಂದ ಆಚೆಗೆ, ಬಲವಾದ ವದಂತಿ ಇದೆ. ಆಗ ನನಗೂ ಒಂದು ಪ್ರೊಫೆಸರ್

ಜಾಗ ಸಿಕ್ಕಬಹುದು. ಇಲ್ಲಿನ ಪರಿಸ್ಥಿತಿ ಹೀಗಿದೆ. ನಾನು ಇಲ್ಲಿರುವುದಾಗಲಿ ಮೈಸೂರಿಗೆ ಹೋಗುವುದಾಗಲಿ ನಿಮ್ಮ ನಿರ್ಣಯವನ್ನು ಅವಲಂಬಿಸಿರುತ್ತದೆ.

ಒಂದು ವೇಳೆ ನಾನು ಮೈಸೂರಿಗೆ ಹೋಗಲೇಬೇಕಾದರೆ ಕೋಶದ ಕೆಲಸದ ವಿಚಾರ ಸಮಸ್ಯೆ ಬರುತ್ತದೆ. ಕೋಶದ ಕಚೇರಿಯನ್ನು ಮೈಸೂರಿಗೆ ವರ್ಗಾಯಿಸುವುದೆಂದು, ಇಲ್ಲದೆ ಇದ್ದರೆ ಸರ್ಕಾರದಿಂದ special order ತರಿಸಿ ನನಗೆ ಪ್ರೊಫೆಸರ್ ಕೆಲಸ ಕೊಟ್ಟರೂ ಇಲ್ಲಿಯೇ ಇರುವ ಹಾಗೆ ಮಾಡುವುದು;. ಇಲ್ಲದೆ ಹೋದರೆ ಸೆಂಟ್ರಲ್ ಕಾಲೇಜಿಗೆ ಪ್ರೊಫೆಸರನ್ನು ಲಗತ್ತಿಸಿ ಅಲ್ಲಿಗೆ ನನ್ನನ್ನು ವರ್ಗಾಯಿಸುವುದು– ಈ ಮೂರು ವಿಧಾನಗಳಿವೆ, ನಾನೇ ಆ ಕೆಲಸವನ್ನು ಮುಂದುವರಿಸಬೇಕೆಂಬ ಅಪೇಕ್ಷೆ ಪರಿಷತ್ತಿಗೆ ಇದ್ದ ಪಕ್ಷದಲ್ಲಿ. ಇಲ್ಲದೆ ಹೋದರೆ ಬೇರೆ ಯಾರನ್ನಾದರೂ ಅವರು ನೇಮಿಸಿಕೊಳ್ಳಬೇಕು. ಮುಗಳಿ ಅವರೇನಾದರೂ ಇಲ್ಲಿಗೆ ಬಂದರೆ ಅವರ ಸಮಸ್ಯೆ ಪರಿಹಾರವಾಗಬಹುದು. ನೀವು ಇಲ್ಲಿಗೆ ಬಂದರೆ ಸದ್ಯಕ್ಕೆ ಈ ಸಮಸ್ಯೆಯೇನೂ ತಲೆದೋರುವುದಿಲ್ಲ. ಆದರೆ ಜೂನ್ ೧೫ರ ಆಚೆಗೆ ಉಂಟಾಗಬಹುದು. ಇವೆಲ್ಲ ಇಲ್ಲಿಯ ವಿದ್ಯಮಾನಗಳು.

ಶ್ರೀ ಬಿ.ಎಸ್. ಕೇಶವನ್ ಅವರು ಇಲ್ಲಿಗೆ ಅನಿರೀಕ್ಷಿತವಾಗಿ ಬಂದಿದ್ದರು. ಇಲ್ಲಿನ ವಿಮಾನ ನಿಲ್ದಾಣದಲ್ಲಿ ೨೦ ನಿಮಿಷಗಳು ಮಾತ್ರ ಇದ್ದು ಮುಂದಕ್ಕೆ ಹೋದರು. ಆಗ ಟೆಲಿಫೋನಿನಲ್ಲಿ ಮಾತಾಡಿದರು. ನಿಮ್ಮನ್ನು ಅವರು ಲಂಡನ್ನಿನಲ್ಲಿ ಕಂಡಿದ್ದರಂತೆ. ನಿಮ್ಮ ವಿಷಯವನ್ನು ಸ್ವಲ್ಪ ಹೇಳಿದರು. ನಿಮಗೆ ರಕ್ತದ ಒತ್ತಡವಿದೆಯೆಂದು ಅವರು ಹೇಳಿದ್ದನ್ನು ಕೇಳಿ ಮನಸ್ಸಿಗೆ ತುಂಬ ಆತಂಕವಾಗಿದೆ. ಅಂತು ಎಚ್ಚರಿಕೆಯಿಂದ ಇರಬೇಕಲ್ಲವೆ?

* * *

೨೫

ತೀ.ನಂ.ಶ್ರೀಕಂಠಯ್ಯ ಫಿಲಡೆಲ್ಫಿಯ, ನವೆಂಬರ್ ೪, ೧೯೫೫

ಚಿ॥ಸೌ॥ ನಾಗರತ್ನಳಿಗೆ–ಪ್ರೀತಿಯ ಆಶೀರ್ವಾದಗಳು. ಉ॥ಕು॥ಸಾಂ॥

ಧಾರವಾಡದ ಕಾಗದ ನಿನ್ನೆ (ಗುರುವಾರ) ಬರಬಹುದೆಂದು ಎಂದಿನಂತೆ ನಿರೀಕ್ಷೆ ಮಾಡಿದ್ದೆ. ಆದರೆ ಅದು ಬರಲಿಲ್ಲ. ಮನಸ್ಸಿಗೆ ಸ್ವಲ್ಪ ವ್ಯಾಕುಲವಾಯಿತು. ಆದರೆ ಅದೇ ದಿನದ ಟಪಾಲಿನಲ್ಲಿ ಶ್ರೀ ಚಿದಂಬರಂ ಅವರ ಕಾಗದ ಬಂದಿತು. ಶ್ರೀ ಶಿವರಾಮಶಾಸ್ತ್ರಿಗಳಿಗೆ ಸಂಸ್ಕೃತದ ಪ್ರೊಫೆಸರ್ ಕೆಲಸ ದೊರೆಯಿತೆಂದೂ "ಛಾರ್ಜ್"ವಹಿಸಿಕೊಂಡರೆಂದೂ ಆ ಕಾಗದ ದಿಂದ ಗೊತ್ತಾಯಿತು. ಈ ಸಂತೋಷದ ವೃತ್ತಾಂತವನ್ನು ಕೇಳಿ, ಊರಿನ ಕಾಗದ ಏಕೆ ಬರಲಿಲ್ಲ ಎಂಬ ದುಗುಡ ಕೂಡ ಬಲುಮಟ್ಟಿಗೆ ಮರೆಯಾಯಿತು. ಅಂತೂ, ಈ ಶುಭವಾರ್ತೆ ಯನ್ನು ಕೇಳಲು ಬಲು ದಿನಗಳಿಂದ ಮಿತ್ರರೆಲ್ಲ ಕಾದಿದ್ದೆವು. ಈಗ ಮನಸ್ಸಿಗೆ ಸಮಾಧಾನ ವಾಯಿತು. ಶ್ರೀ ಹಿರಿಯಣ್ಣನವರು ಕೆಲಸದಿಂದ ನಿವೃತ್ತರಾದಮೇಲೆ (೧೯೨೭ರಲ್ಲಿ ಅದು ಆದದ್ದು) ಇದುವರೆಗೂ ಆ ಸ್ಥಾನಕ್ಕೆ ಸರಿಯಾದವರು ಬಂದಿರಲಿಲ್ಲ. ಕಳೆದ ಎರಡು

ವರ್ಷಗಳಿಂದಲಂತೂ ಎಳೆದಾಟ, ತಂತ್ರ ಬಲವಾಗಿತ್ತು. ಹರಿಯಪ್ಪನವರನ್ನು ಆ ಜಾಗಕ್ಕೆ ನೇಮಿಸಬೇಕೆಂದಿದ್ದ ವಿಷಯ ನಿಮಗೂ ತಿಳಿದಿರಬೇಕು. ಅರ್ಹನಾಗಿರಲಿ, ಇಲ್ಲದಿರಲಿ; ಆ ನೇಮಕವಾದ ಹುಕುಂ ಕೈಗೆ ಬರುವ ಮೊದಲೇ ಕಳೆದ ಬೇಸಗೆಯಲ್ಲಿ ಆತ ದೈವಾಧೀನವಾದನು! ಮತ್ತೆ ಚರ್ಚೆ, ತಂತ್ರ ಆದರೂ ಕಡೆಗೆ ನ್ಯಾಯವೇ ಗೆದ್ದಿತು! ಅಂತೂ ಈ ನೌಕರಿಗಳ ಹಣೆಯ ಬರಹವೇ ಇಷ್ಟು.

* * *

೨೬

M.P.L. Sastry | Bangalore, 26-4-56

Dear Sri Srikantaiah

I am very happy to hear that you have returned from the States after a successful and a useful tour. I am glad that the University Council has recommended you for the Professorship with higher starting salary. It was a matter of joy for me to witness both in the Standing Committee and the University, the goodwill prevailing in all quarters in regard to your case. That is how it should be. Please accept my congratulations.

I am sure when you come over to Bangalore next, you would give me the pleasure of spending sometime with your delightful company.

Trust this finds you in excellent health.

* * *

೨೭

N. Sivarama Sastry | Mysore, 10-11-1956

Congratulations. You must have heard the news already. You have been appointed as Professor on Rs 650/-. But that is only a small matter. I am writing this to tell you of something else. I have strong reasons to believe that you have now the very best chances to be made Principal-because of your service, pay and excellent

reputation for everything that matters and should matter. Only as in these evil days things are not done smoothly. You will have to make some effort in this direction. It seems to me as if things are propitious now and let me add--urgent. I would advise you to take few days leave at once and come over to Bangalore and see persons that you know & who have faith in you & who also matter. Let me remind you of what Prof. Hiriyanna told me once. If you wish to keep your things in a box, you must learn to lock it also. Either you keep a box & lock it or keep no box at all. I am convinced that if I had not put forth some effort myself I would not have been Professor at all & I would have wrung my hands the rest of my life. And let me tell you I never did anything which compromised my self-respect. So now-for the sake of your friends (I know there are so many of them·who think like me)-you must take a few days leave & come at once to Bangalore and do as your friends wish. I know you have more powerful friends than many of us. Let me add-a week later it will be too late. more later.

* * *

೨೮

ಕೂಡಲ ಚಿದಂಬರಂ ಮೈಸೂರು, ೧೨-೧೧-೧೯೫೬

ಮೈಸೂರು ಸರಕಾರದವರು ನಿಮ್ಮನ್ನು ಕನ್ನಡದ ಪ್ರೊಫೆಸರಾಗಿ ನೇಮಿಸಿರುವ ಆಜ್ಞೆಯು ಈ ವೇಳೆಗೆ ನಿಮ್ಮ ಕೈ ಸೇರಿರಬೇಕು. ನೀವು ಈ ಕೆಲಸವನ್ನು ಒಪ್ಪಿಕೊಂಡು ಮೈಸೂರಿಗೆ ಬರುವಿರಾಗಿ ಸ್ನೇಹಿತರೆಲ್ಲ ನಂಬಿದ್ದಾರೆ.

ಕನ್ನಡದ ಪ್ರೊಫೆಸರಾಗಿ ನಿಮಗೆ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರ ಹುದ್ದೆ ದೊರೆಯುವ ಅವಕಾಶವಿದೆಯೆಂದು ಎಲ್ಲರೂ ಹೇಳುತ್ತಿದ್ದಾರೆ. ವಿ.ಸಿ.ಯವರು ಪ್ರಿನ್ಸಿಪಾಲ್‌ಗಿರಿಗೆ ನಿಮ್ಮ ಹೆಸರನ್ನು ಬಲವಾಗಿ ಶಿಫಾರಸು ಮಾಡಿರುವುದಾಗಿ ತಿಳಿಯಿತು. ಆದರೆ ಅದನ್ನು ದೊರಕಿಸಿ ಕೊಳ್ಳಲು ನಿಮ್ಮ ಪ್ರಯತ್ನವೂ ಅಗತ್ಯವೆಂದು ಮಿತ್ರರೆಲ್ಲರು ಹೇಳುತ್ತಿದ್ದಾರೆ. ಒಂದು ಬಾರಿ ಸಿಕ್ಕಿರುವ ಅವಕಾಶವನ್ನು ಬಿಟ್ಟರೆ ಪುನಃ ದೊರೆಯುವುದು ಕಷ್ಟವಲ್ಲವೆ? ಆದ್ದರಿಂದ ನೀವು ಕೂಡಲೆ ಅಲ್ಲಿಂದ ಹೊರಟು ಬೆಂಗಳೂರಿಗೆ ಬಂದು ಪ್ರಯತ್ನಗಳನ್ನು ನಡೆಸುವುದು ಸೂಕ್ತವೆಂದು ತೋರುತ್ತದೆ. ಉದಾಸೀನ ಮಾಡಬೇಡಿ, ಶೀಘ್ರವಾಗಿ ಕಾರ್ಯಶೀಲರಾಗಿ.

* * *

೨೯

ದೇ. ಜವರೇಗೌಡ ಮೈಸೂರು, ೯-೧೧-೧೯೫೬

ಪೂಜ್ಯರೆ,

ಈ ಕಾಗದ ತಲುಪುವ ವೇಳೆಗೆ ನನ್ನ ತಂತಿ ನಿಮ್ಮ ಕೈ ಸೇರಿರಬಹುದು. ನಿಮ್ಮನ್ನು ೬೫೦/-ರ ತಲಬಿನ ಮೇಲೆ ಕನ್ನಡ ಪ್ರೊಫೆಸರ್ ಆಗಿ ನೇಮಕ ಮಾಡಿದ್ದಾರೆ. ನನಗಂತು ಇದು ತುಂಬ ಸಂತೋಷದ ವಿಷಯ.

ಮತ್ತೂ ಒಂದು ವಿಷಯ. ಸ್ವಲ್ಪ ರಹಸ್ಯ- ತಮ್ಮನ್ನು ಪ್ರಿನ್ಸಿಪಾಲ್ ಹುದ್ದೆಗೆ ನೇಮಿಸುವಂತೆ ಶಿಫಾರಸ್ಸು ಇಷ್ಟರಲ್ಲೇ ಸರ್ಕಾರಕ್ಕೆ ಹೋಗಲಿದೆ. (ಕೌನ್ಸಿಲ್ ನಿರ್ಣಯಕ್ಕೆ ವಿರುದ್ಧವಾಗಿ V.C. ಬರೆದಿದ್ದಾರೆ.) ವಿವರಗಳನ್ನು ಕಾಗದದಲ್ಲಿ ಬರೆಯಲಿಷ್ಟವಿಲ್ಲ. ಒಳ್ಳೆಯದಾಗುತ್ತದೆಂದು ನನ್ನ ನಂಬಿಕೆ. ವಿದ್ಯಾಭ್ಯಾಸ ಕಾರ್ಯದರ್ಶಿಗೆ ಯಾರಿಂದಾದರೂ ಹೇಳಿಸಲು ಸಾಧ್ಯವೇ? ನಮ್ಮ ಕೈಲಾದುದನ್ನು ಇಲ್ಲಿ ಮಾಡಲಾಗುತ್ತದೆ.

ಅವಸರದಲ್ಲಿ ಪತ್ರ ಬರೆಯುತ್ತಿದ್ದೇನೆ ಕ್ಷಮಿಸಿ.

ಎಲ್ಲರೂ ಆರೋಗ್ಯವೆಂದು ನಂಬಿದ್ದೇನೆ.

* * *

೩೦

ರಂ.ಶ್ರೀ.ಮುಗಳಿ ಸಾಂಗಲಿ, ೧೩-೯-೧೯೫೮

ಇಂದು ಪ್ರಿಯ ಹಬ್ಬುನಿಂದ ಮೈಸೂರು ವಿಶ್ವವಿದ್ಯಾಲಯದ ಜಾಹೀರಾತಿನ ಪ್ರತಿ ಬಂದಿದೆ. ಅದರಲ್ಲಿ ಕನ್ನಡ ಪ್ರಾಧ್ಯಾಪಕರು, ರೀಡರ್ ಸ್ಥಳಗಳಿಗೆ ಅರ್ಜಿ ಕೇಳಿದ್ದಾರೆ. ನಾನೂ ಕೂಡಲೆ ಅರ್ಜಿ ಹಾಕಬೇಕೆಂದು ಅವನ ಒತ್ತಾಯದ ಸೂಚನೆ. ಪ್ರಿಯ ಕೆ.ವಿ. ರಾಘವಾಚಾರ್ಯರೂ ಅವನಿಗೆ ಬೆಂಬಲವಿತ್ತರಂತೆ. ಇವೆಲ್ಲಾ ನನಗೆ ಹೊಸ ಸುದ್ದಿ. ಅರ್ಜಿ, ಸಂದರ್ಶನ ಈ ಸುಳಿಯಲ್ಲಿ ಸಿಕ್ಕು ನಾನು ಸಾಕಷ್ಟು ನಿರಾಶನಾಗಿದ್ದೇನೆ. ಇಂಥ ಪರಿಸ್ಥಿತಿಯಲ್ಲಿ ಮತ್ತೆ ಅರ್ಜಿ ಹಾಕಬೇಕೋ ಹೇಗೆ ಎಂಬ ಯೋಚನೆಯಲ್ಲಿದ್ದೇನೆ. ದಯವಿಟ್ಟು ಕೂಡಲೆ ನಿಮ್ಮ ಸಲಹೆ ತಿಳಿಸಿ. ಕೊನೆಯ ನಿರ್ಣಯವನ್ನು ಯಾರೂ ಹೇಳಲಾರೆಂಬುದು ನಿಜ. ಆದರೂ ಯಾರಿಗಾದರೂ ಪ್ರೊಫೆಸರ್ ಸ್ಥಾನವನ್ನು ಮೀಸಲಾಗಿಟ್ಟು ಔಪಚಾರಿಕವಾಗಿ ಜಾಹೀರಾತು ಕೊಟ್ಟಿರುವರೋ ಹೇಗೆ? ಮಾಡುವುದಾದರೆ ಪ್ರೊಫೆಸರ್ ಸ್ಥಳಕ್ಕೆ ಮಾತ್ರ ನಾನು ಅರ್ಜಿ ಮಾಡಬೇಕೆಂದು ತೋರುತ್ತದೆ. ವಯಸ್ಸಿನ ನಿರ್ಬಂದ ೪೫, ಆದರೆ ಸಡಿಲಿಸಬಹುದು ಎಂದು ಅದರಲ್ಲಿದೆ. Qualification ಎಲ್ಲ ನನಗೆ ಸರಿಹೋಗುತ್ತವೆ. ಕನ್ನಡ D.Litt ಪಡೆದವರು ಯಾರೂ ಇಲ್ಲದ್ದರಿಂದ Post Graduate Teaching ೧೦ ವರ್ಷಕ್ಕೆ ಮೇಲ್ಪಟ್ಟು ಅನುಭವ ನನಗೆ ಇರುವುದರಿಂದ ಗುಣದೃಷ್ಟಿ ಪ್ರಭಾವಿಯಾದರೆ ನನಗೆ ದೊರೆಯಬೇಕು. ಆದರೆ ಕಾಲಧರ್ಮ

ಬೇರೆಯಾಗಿದೆ. ನನ್ನ ಅರ್ಜಿ ನೋಡಿ ಅರ್ಹತೆ-ಅನುಭವ, ಗಮನಕ್ಕೆ ತಂದು invite ಮಾಡುವ ಸಾಧ್ಯತೆ ಏನಾದರೂ ಇದೆಯೋ? ನೀವು ಇಡೀ ಜಾಹೀರಾತನ್ನು ನೋಡಿ ನನಗೆ ೧-೨ ದಿನದಲ್ಲಿಯೇ ನಿಮ್ಮ ಸಲಹೆ ತಿಳಿಸಬೇಕಾಗಿ ಬಿನ್ನಹ. ಅಕ್ಟೋಬರ ೧ರೊಳಗೆ ಅರ್ಜಿ ಕಳಿಸಬೇಕಾಗಿದೆ. ನಿಮ್ಮ ಮನೆಯವರು ಆಸ್ಪತ್ರೆಯಿಂದ ಮನೆಗೆ ಬಂದಿರಬೇಕು. ಈಗ ಆರೋಗ್ಯವಾಗಿರುವರಷ್ಟೆ? ಇಲ್ಲಿ ಕ್ಷೇಮ.

ನನಗೆ ಈಗ ೫೨ ವರ್ಷ ವಯಸ್ಸು, ೫೩ ಪ್ರಾರಂಭ. ನಿಮ್ಮಲ್ಲಿ ೫೫ಕ್ಕೆ ನಿವೃತ್ತಿಯೋ ಹೇಗೆ? ಹೇಗಿದ್ದರೂ ಈ ಸ್ಥಳಕ್ಕೆ ನನ್ನ ನೇಮಕವಾದರೆ ೨-೩ ವರ್ಷದ ಮಟ್ಟಿಗೆ ಮಾತ್ರವೇ. ಈ ನೇಮಕದಲ್ಲಿ ನಿಮ್ಮ ಶಿಫಾರಸಿಗೆ ಅತ್ಯಂತ ಮಹತ್ವವಿದೆ. ಅಲ್ಲಿ ಯಾರಾದರೂ ವಿಶೇಷವಾಗಿ ಯೂನಿವರ್ಸಿಟಿಯ ಸೇವೆಯಲ್ಲಿದ್ದವರು ಅರ್ಹರಾಗಿದ್ದು ಪ್ರಯ್ನತ್ನ ಮಾಡಬಹುದೇ? ನಿಮ್ಮ ಪತ್ರ ನೋಡಿ ನಿರ್ಣಯಿಸುತ್ತೇನೆ.

* * *

೩೧

ತೀ.ನಂ.ಶ್ರೀಕಂಠಯ್ಯ ಮೈಸೂರು, ೧೭-೯-೧೯೫೮

ಪ್ರಿಯ ಮುಗಳಿಯವರಲ್ಲಿ

ನಾನು ಕಳೆದ ಶನಿವಾರ ಸಂಜೆ ಬೆಂಗಳೂರಿಗೆ ಹೋಗಿದ್ದು, ನಿನ್ನೆಯ ಬೆಳಗ್ಗೆ ಗಣೇಶನ ಹಬ್ಬದ ದಿನ ಇಲ್ಲಿಗೆ ಹಿಂದಿರುಗಿದೆ; ನಿಮ್ಮ ಪತ್ರ ನನಗಾಗಿ ಕಾದಿತ್ತು.

U.G.C ಅವರು ಸಹಾಯಮಾಡಲು ಮುಂದೆ ಬಂದಿರುವುದರಿಂದ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೆಲವು ಶಾಖೆಗಳನ್ನು ಪ್ರಬಲಪಡಿಸಲು ಹೊಸ ಕೆಲವು ಸ್ಥಾನಗಳನ್ನು ಏರ್ಪಡಿಸಿದ್ದಾರೆ. ಕನ್ನಡವೂ ಇಂಥ ಶಾಖೆಗಳಲ್ಲಿ ಒಂದು. ಇದರಲ್ಲಿ ಒಂದು ಪ್ರೊಫೆಸರ್‌ಸ್ಥಾನ, ಎರಡು ರೀಡರ್ ಸ್ಥಾನಗಳು (ಈ ರೀಡರ್ ಸ್ಥಾನಗಳಲ್ಲಿ ಒಂದು ಕನ್ನಡದ ಪ್ರಾದೇಶಿಕ ಭೇದಗಳ 'ಸರ್ವೆಗಾಗಿ'). ಈ ಸ್ಥಾನಗಳನ್ನು ನಿರ್ಮಿಸುವ ಚರ್ಚೆ ಬಂದಾಗ, ಈಗ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿರುವವರಿಗೇ ಬಡತಿ ಕೊಟ್ಟು ನೇಮಿಸಬೇಕೆ, ಅಥವಾ ಸ್ಥಾನಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿ ಅರ್ಜಿಗಳನ್ನು ಬರಮಾಡಿಕೊಳ್ಳಬೇಕೆ ಎಂದು ಚರ್ಚೆನಡೆದು, U.G.C ಯವರು ಪ್ರಕಟಸಲೇಬೇಕೆಂದು ನಿರ್ದೇಶನ ಕೊಟ್ಟರು. ಆ ಪ್ರಕಾರ ಪ್ರಕಟನೆ ಬಂದಿದೆ. ಆದ ಕಾರಣ ನೀವು ಅವಶ್ಯವಾಗಿ ಅರ್ಜಿಹಾಕಬೇಕು. Board of Appointmentsನಲ್ಲಿ ವೈಸ್-ಛಾನ್ಸೆಲರೂ, ಮೈಸೂರು ಸರ್ಕಾರ ಮತ್ತು ವಿಶ್ವವಿದ್ಯಾನಿಲಯಗಳ ಹೊರಗಿನ ಪ್ರವೀಣರಿಬ್ಬರೂ ಇರುತ್ತಾರೆ, ಯಾರು ಎಂಬುದು ಈಗಲೇ ಗೊತ್ತಾಗುವಂತಿಲ್ಲ.

ಇನ್ನೊಂದು ಅಂಶವನ್ನು ಇಲ್ಲಿ ಹೇಳಬೇಕಾಗಿದೆ. ಪ್ರೊಫೆಸರ್ ಕೆಲಸಕ್ಕೆ ನಾನೂ ಅನಿವಾರ್ಯವಾಗಿ ಅರ್ಜಿಹಾಕಬೇಕಾಗಿದೆ: ಏಕೆಂದರೆ ಇದು ವಿಶ್ವವಿದ್ಯಾನಿಲಯ Post Graduate ಶಾಖೆಯ

ಪ್ರೊಫೆಸರ್ ಕೆಲಸ. ಇನ್ನೂ ಯಾರು ಯಾರು ಅರ್ಜಿ ಹಾಕುತ್ತಾರೋ ತಿಳಿಯದು. ರೀಡರ್ ಕೆಲಸಗಳಿಗೂ ಹಾಗೆಯೇ. ಇಲ್ಲಿಯವರಿಂದಲೂ ಹೊರಗಿನವರಿಂದಲೂ ಅರ್ಜಿಗಳು ಬರಬಹುದು.

ಇದೊಂದನ್ನೂ ನೀವು ಮನಸ್ಸಿಗೆ ಹತ್ತಿಸಿಕೊಳ್ಳದೆ ನೀವೂ ಅರ್ಜಿಹಾಕಬೇಕೆಂದು ನನ್ನ ಸೂಚನೆ.

ಇಲ್ಲಿ ವಿಶ್ವವಿದ್ಯಾನಿಲಯದಲ್ಲಿ ಸದ್ಯಕ್ಕೆ ೫೫ ನಿವೃತ್ತಿಯ ವಯಸ್ಸು. ಮುಂದೇನಾದರೂ ಆ ಮಿತಿಯನ್ನು ಹೆಚ್ಚಿಸುತ್ತಾರೋ ಹೇಗೋ ತಿಳಿಯದು.

ನನ್ನ ಹೆಂಡತಿ ಆಸ್ಪತ್ರೆಯಿಂದ ಹಿಂದಿನ ಮಂಗಳವಾರ, ಎಂದರೆ ಎಂಟು ದಿನಗಳ ಕೆಳಗೆ, ಮನೆಗೆ ಬಂದಳು. ಆರೋಗ್ಯ ಉತ್ತಮವಾಗುತ್ತಿದೆ.

* * *

೩೨

ರಂ.ಶ್ರೀ.ಮುಗಳಿ ಸಾಂಗಲಿ, ೨೦-೯-೧೯೫೮

ನಿಮ್ಮ ತಾ. ೧೭ರ ಪತ್ರ ತಲಪಿ ಅರ್ಥವಾಯಿತು. ನೀವು ತಿಳಿಸಿದ ಹಿನ್ನೆಲೆಯಲ್ಲಿ ನೀವು ಅರ್ಜಿ ಹಾಕುವುದು ಅನಿವಾರ್ಯ, ಸ್ವಾಭಾವಿಕ. ನೀವು ಅರ್ಜಿ ಹಾಕಿದ ಮೇಲೆ ನಿಮಗೆ ಆ ಸ್ಥಾನ ದೊರೆಯುವುದು ಸೂಕ್ತ ಮತ್ತು ಖಂಡಿತವೆಂದು ತೋರುತ್ತದೆ. ಹೀಗಿರುವಾಗ ನಾನು ಅರ್ಜಿ ಹಾಕುವುದು ಯೋಗ್ಯವಾದೀತೇ ಎಂಬ ಪ್ರಶ್ನೆಯೇಳುತ್ತದೆ. ಹಾಕುವುದು ಬೇಡ ಎಂಬ ಉತ್ತರ ನನ್ನ ದೃಷ್ಟಿಯಿಂದ ಸಹಜ. ಒಂದು, ನಮ್ಮಿಬ್ಬರಲ್ಲಿ ಸ್ಪರ್ಧೆ ಎಂಬ ಸ್ವರೂಪ ಇಷ್ಟವಲ್ಲ, ಎರಡು, ಹಲವು ಸಲ ಸೋತು ಸುಣ್ಣಾದ ನನಗೆ ಇನ್ನೊಂದು ಸೋಲು ಸುಖವಲ್ಲ. ಹೀಗಾಗಿ ಅರ್ಜಿ ಹಾಕಬಾರದೆಂದು ನಿರ್ಧಾರಕ್ಕೆ ಬಂದಂತಾಗಿದೆ. ಆದರೂ ಇನ್ನೊಮ್ಮೆ ಯೋಚಿಸುತ್ತೇನೆ, ಅರ್ಜಿಯ ಫಾರ್ಮುಗಳು ಬಂದಿವೆ. ಹಬ್ಬು ಮತ್ತು ರಾಘವಾಚಾರ್ಯರಿಂದ ಒತ್ತಾಯದ ಸೂಚನೆಯೂ ಬಂದಿದೆ. ನೀವೂ 'ಅವಶ್ಯವಾಗಿ ಅರ್ಜಿಹಾಕಬೇಕು' ಅಂದಿದ್ದೀರಿ. ಇದನ್ನೆಲ್ಲ ಮನದಂದು ಸರಿಕಂಡರೆ ಸಕಾಲಕ್ಕೆ ಅರ್ಜಿ ಕಳಿಸಬಹುದು. ಮುಂದೆ ಪರಿಸ್ಥಿತಿ ನೋಡಿಕೊಂಡು ನಿರ್ಣಯಿಸಬಹುದು.

ಒಂದೆರಡು ವಿಷಯ ನಿಮ್ಮಿಂದ ಮಾಹಿತಿ ಬೇಕು. ಹೊಸ ಪ್ರೊಫೆಸರ್ ಸ್ಥಳಕ್ಕೆ ನಿಮ್ಮ ನೇಮಕ ಮಾಡಿದರೆ ನಿಮ್ಮ ಸದ್ಯದ ಸ್ಥಳವೇನಾದರೂ ನನಗೆ ದೊರೆಯುವ ಸಂಭವವಿದೆಯೆ? ಅಥವಾ ಅದನ್ನು ನಿಮ್ಮಲ್ಲಿಯ ಸೀನಿಯಾರಿಟಿ ಕ್ರಮದಿಂದ ದೊಲನರಿಗೆ ಕೊಡುವರೇ? ನಿಮ್ಮನ್ನು ವಿಶ್ವಕೋಶದ ಸಂಪಾದಕರೆಂದು ಶ್ರೀ ಮೂರ್ತಿರಾಯರ ತರುವಾಯ ನೇಮಿಸುವರೆಂದು ಸುದ್ದಿಯೊಂದು ಬಂದಿದೆ. ಅದರಲ್ಲಿ ಸತ್ಯಾಂಶವೆಷ್ಟು? ನನ್ನ ಕೊನೆಯ ನಿರ್ಣಯಕ್ಕೆ ಈ ಮಾಹಿತಿ ಸಹಾಯ ಮಾಡಬಹುದು ಎಂದು ಕೇಳಿದ್ದೇನೆ. ಸಾಧ್ಯವಾದಷ್ಟು ಬೇಗ ಉತ್ತರಿಸಿರಿ.

ನಿಮ್ಮ ಮನೆಯವರ ಆರೋಗ್ಯ ಉತ್ತಮವಾಗಿರುತ್ತಿದೆ ಎಂದು ತಿಳಿದು ಸಮಾಧಾನವಾಯಿತು. ಇಲ್ಲಿ ಕ್ಷೇಮ.

* * *

೩೩

ತೀ.ನಂ.ಶ್ರೀಕಂಠಯ್ಯ ಮೈಸೂರು, ೨೪-೯-೧೯೫೮

ಪ್ರಿಯ ಮುಗಳಿಯವರಲ್ಲಿ

ಹೊಸ ಪ್ರೊಫೆಸರ್ ನೇಮಕವಾದ ಬಳಿಕ, ಈಗ ಇರುವ ಸ್ಥಳವೇನಾದರೂ ಖಾಲಿಯಾದರೆ ಅದನ್ನು ಕೂಡಲೆ ಭರ್ತಿಮಾಡುವರೆ ಹೇಗೆ, ಎಂಬುದು ಇನ್ನೂ ನಿರ್ಧಾರವಾದಂತೆ ಕಾಣಲಿಲ್ಲ. ಹಾಗೆ ಅದು ಖಾಲಿಯಾಗಿ ಮತ್ತೆ ಅದಕ್ಕೆ ನೇಮಕ ಮಾಡಬೇಕೆಂದು ವಿಶ್ವವಿದ್ಯಾನಿಲಯದವರು ನಿಶ್ಚಯ ಮಾಡಿದರೆ, ಅದನ್ನು ಮತ್ತೆ ಬಹುಶಃ ಪ್ರಕಟನೆಯ (advertizement) ಮೂಲಕವೇ ಭರ್ತಿಮಾಡಬೇಕಾಗುವುದೆಂದು ನನಗೆ ತೋರುತ್ತದೆ. ಆದರೆ ಇದೆಲ್ಲ ತತ್ಕಾಲದಲ್ಲಿ ತೀರ್ಮಾನವಾಗುವ ವಿಷಯವಲ್ಲ.

ವಿಶ್ವಕೋಶದ ವಿಷಯ ನನಗೆ ಏನೂ ತಿಳಿಯದು. ನನ್ನ ಹೆಸರು ಆ ಪ್ರಸಂಗದಲ್ಲಿ ಏಳಬಹುದೆಂಬ ವಿಷಯವೂ ನನಗೆ ತಿಳಿಯದು. ಅಲ್ಲದೆ ಆ ಕಡೆಗೆ ನನ್ನ ಮನಸ್ಸು ಹರಿದಿಲ್ಲ, ಹರಿಯುವಂತೆಯೂ ಇಲ್ಲ. ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನಾಗಿರುವುದೇ ನನಗೆ ಇಷ್ಟವಾದ ವಿಷಯ.

ಇನ್ನು ಕೆಲವು ದಿನಗಳಲ್ಲೇ ನಾನು ನನ್ನ ಅರ್ಜಿಯನ್ನು ಕಳಿಸಬೇಕಾಗುತ್ತದೆ. ನೀವೂ ಕಳಿಸುತ್ತೀರಷ್ಟೆ.

ಎಲ್ಲ ವಿಚಾರಕ್ಕೂ ಬರೆಯಿರಿ.

* * *

೩೪

ತೀ.ನಂ.ಶ್ರೀಕಂಠಯ್ಯ ಪೂನಾ, ೧೦-೨-೬೪

ಚಿ॥ ನಾಗಭೂಷಣನಿಗೆ

ನನ್ನ ಶನಿವಾರದ ಕಾಗದ ಈ ದಿನ ಈ ವೇಳೆಯೊಳಗೆ (11a.m) ನಿಮ್ಮ ಕೈಗೆ ಮುಟ್ಟಿರಬೇಕು. ಅದರಿಂದ ಇಲ್ಲಿಯ ವಿದ್ಯಮಾನ ತಕ್ಕಮಟ್ಟಿಗೆ ಗೊತ್ತಾಗುತ್ತದೆ. ನಾನು ಡೆಲ್ಲಿಗೆ ಹೋಗಲೇಬೇಕೆಂದು ಡಾ. ಕತ್ರೆಯವರ ಮತ್ತು ಡಾ. ಘಾಟಗೆಯ ಅವರ ಅಪೇಕ್ಷೆ. ನನಗೆ ಹೆಚ್ಚಿನ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ, ಎಲ್ಲ ಸಹಾಯವನ್ನು ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ. ಡಾ. ದೇಶಮುಖ್, ಡಾ. ಫೇರ್‌ಬ್ಯಾಂಕ್ಸ್ ಇವರ ಸಂಗಡ ಡಾ. ಕತ್ರೆ ಮಾತಾಡಿದ್ದಾರೆ. ನಾನು

ಡಾ. ದೇಶಮುಖರ ಸಂಗಡ ಪ್ರತ್ಯೇಕವಾಗಿ ಮಾತಾಡಲು ಅವಕಾಶವಿರಲಿಲ್ಲ; ಒಂದು ನಿಮಿಷ ಮಾತ್ರ ಅವರನ್ನು ಜನರ ಗುಂಪಿನಲ್ಲಿ ನೋಡಿದ್ದೆ, ಅಷ್ಟೆ. ಆದರೆ ಡಾ. ಕತ್ರೆಯವರು ಹೇಳಿದ್ದರಲ್ಲಿ, a salary very near the Maximum (1400 ಕ್ಕೆ ಕಡಿಮೆಯಿಲ್ಲದಂತೆ) **exclusive** of my pension: ಇದನ್ನು ಅವರು ಗೊತ್ತುಮಾಡಲು ಕಷ್ಟವೇನೂ ಆಗುವುದಿಲ್ಲವೆಂದು ತೋರುತ್ತದೆ. ಹೆಚ್ಚಿನ ವಿವರಗಳನ್ನು ಊರಿಗೆ ಬಂದಾಗ ತಿಳಿಸುತ್ತೇನೆ. (ನನ್ನಂತೆಯ ಡಾ॥ ಕುರಿಯನ್ ಎಂಬ Geography Professor ಒಬ್ಬರ ವಿಷಯವೂ ಇದೆಯಂತೆ)

ನಾನು ಡಾ॥ ಕತ್ರೆಯವರಿಗೆ ನನ್ನ ಒಪ್ಪಿಗೆಯನ್ನು ಕೊಟ್ಟಿದ್ದೇನೆ ಎಂದೇ ಹೇಳಬೇಕು. ಅವರ ಮಾತಿನಲ್ಲಿ, " I have been persuaded".

* * *

೩೫

'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ'

ಎಸ್. ಅನಂತನಾರಾಯಣ ಅವರ 'ಅರಿಕೆ'ಯಿಂದ

ಪೂಜ್ಯ ಪ್ರೊಫೆಸರ್ ತೀ.ನಂ.ಶ್ರೀಕಂಠಯ್ಯನವರಂತೂ ತಾವು ಮಾಡಿಕೊಂಡಿದ್ದ ಟಿಪ್ಪಣಿಗಳನ್ನು ಕೂಡ ನನಗೆ ಕೊಟ್ಟು ಈ ನಿಬಂಧವನ್ನು ಆಗ ಮಾಡಿಸಿದರು. ನಾನು ಈ ವಿಷಯವನ್ನು ಆರಿಸಿಕೊಂಡು ಕೆಲಸ ಮಾಡಲು ಪ್ರೊಫೆಸರ್ ತೀ.ನಂ.ಶ್ರೀಯವರೇ ಮೂಲಕಾರಣರು. ವಿಷಯ ಸಂಗ್ರಹಣೆ, ನಿರೂಪಣೆ, ವಿಮರ್ಶೆ ಇವೆಲ್ಲ ವಿಷಯುಗಳಲ್ಲಿಯೂ ಅವರು ನನಗೆ ನಿರ್ದೇಶಕರಾಗಿದ್ದು (Guide), ಬಹಳ ಪ್ರೀತಿಯಿಂದ, ಸಹನೆಯಿಂದ ಈ ಕೆಲಸವನ್ನು ನಡೆಸಲು ಉತ್ತೇಜನ ಕೊಟ್ಟರು. ಅವರ ಪ್ರೀತಿ, ಕನ್ನಡ ಪ್ರೇಮಗಳು ರಕ್ಷೆಯಾಗಿ ನಿಂತು ನನ್ನ ಈ ಕೆಲಸವನ್ನು ಆಗ ಮಾಡಿಸಿದವು.

* * *

೩೬

'ಸಹಪಾಠಿ ಗೆಳೆಯ ಚಿದಾನಂದ' – ಸುಜನಾ ಅವರ ಲೇಖನದಿಂದ

ಆ ದಿನಗಳಲ್ಲಿ ಶ್ರೀ ಕುವೆಂಪು ಅವರ ಮಾರ್ಗದರ್ಶನದಲ್ಲಿ ಫೆಲೋಗಳಾಗಿ ಶಿವರುದ್ರಪ್ಪ, ಪ್ರಭುಶಂಕರ ಪಿಎಚ್.ಡಿ. ಪ್ರಬಂಧ ಸಿದ್ಧಪಡಿಸುತ್ತಿದ್ದರು. ತೀ.ನಂ.ಶ್ರೀ. ಅವರ ಆಗಮನದಿಂದ ಪಿಎಚ್.ಡಿ. ಕನಸು ನಮ್ಮಲ್ಲಿ ಮತ್ತೆ ಚಿಗುರಿತು. (ಕುವೆಂಪು ಅವರು ಕುಲಪತಿಗಳಾಗಿದ್ದು, ಡಿ.ಎಲ್.ಎನ್. ಬೆಂಗಳೂರಿನ ನಿಘಂಟುವಿನ ಪ್ರಧಾನ ಸಂಪಾದಕರಾಗಿದ್ದುದರಿಂದ ಆ ಆಸೆ ಮುದುರಿತ್ತು.) ಚಿದಾನಂದ ಮೊದಲು ತೀ.ನಂ.ಶ್ರೀ. ಅವರ ಪಿಎಚ್.ಡಿ. ಶಿಷ್ಯರಾದರು. ಆಮೇಲೆ ಉ.ಕಾ.ಸು. ನಾನಿನ್ನೂ ಹಿಂದೇಟು ಹಾಕುತ್ತಿದ್ದಾಗ ತೀ.ನಂ.ಶ್ರೀ. ಅವರೇ ಮಮತೆ ತೋರಿ

ಮಾರ್ಗದರ್ಶನ ಮಾಡುವುದಾಗಿ ವಿಷಯವನ್ನೂ ಕೊಟ್ಟರು. 'ಕುಮಾರವ್ಯಾಸನ ರೂಪಕ' ನನ್ನ ವಿಷಯ. ಉ.ಕಾ.ಸು. ರಾಮಾಯಣ ಕುರಿತು ವ್ಯಾಸಂಗ ಮಾಡುತ್ತಿದ್ದರು. ಆಮೇಲೆ ೧೯೫೫ರಲ್ಲಿ ಲಕ್ಷ್ಮೀನಾರಾಯಣಭಟ್ಟ ಮತ್ತು ಶ್ರೀನಿವಾಸಮೂರ್ತಿ ಫೆಲೋ ಆಗಿ ತೀ.ನಂ.ಶ್ರೀ. ಅವರ ಪಿಎಚ್.ಡಿ. ಶಿಷ್ಯರಾದರು. ಈ ಐವರಲ್ಲಿ ಚಿದಾನಂದ ಮತ್ತು ನಾನು ಅಧ್ಯಾಪಕರಾಗಿದ್ದು ಕೊಂಡೇ ಅಧ್ಯಯನ ನಡೆಸುತ್ತಿದ್ದೆವು. ಗಮನಾರ್ಹ ಸಂಗತಿಯೆಂದರೆ ನಾವಾರೂ ಚಿದಾನಂದರನ್ನು ಬಿಟ್ಟರೆ ನಮ್ಮ ವ್ಯವಸಾಯದ ಒಕ್ಕಣೆ ಮಾಡಲಾಗಲೇ ಇಲ್ಲ. ಗುರುವರ್ಯರಿಗೆ ಅಮೋಘ ಶಿಷ್ಯನಾಗಿ ಬೆಳೆದವರು ಇವರೆ. ಗುರುಗಳಿಗೆ ಚಿನ್ನದಂತಹ ಒಬ್ಬ ಮಗಳು, ಒಬ್ಬ ಮಗ; ಜೊತೆಗೆ ಈ ಒಬ್ಬ ಶಿಷ್ಯೋತ್ತಮ. ಇವರ ಅಸಾಮಾನ್ಯ ಪ್ರಬಂಧ ಹಾಗೂ ಅದು ಪಡೆದ ಪ್ರತಿಫಲದಿಂದಾಗಿ ಗುರುಗಳಿಗೆ ಉಳಿದಂತೆ ಆದ ಎಲ್ಲ ಹುಸಿಬೆಳೆಯ ನಷ್ಟವೂ ಮರೆಯಿತು. ನನ್ನ ಕುಂಠಿತ ವ್ಯಾಸಂಗವನ್ನು ಕಂಡು ತೀ.ನಂ.ಶ್ರೀ. ಅವರು ವಿಷಾದಪಡುವಾಗ ಈ ಅಂಶ ವ್ಯಕ್ತವಾಗುತ್ತಿತ್ತು.

ತೀ.ನಂ.ಶ್ರೀ. ಅವರು ನಮಗೆ ಸಂಶೋಧನದ ಅ–ಆ–ಇ–ಈ ಗಳನ್ನೆಲ್ಲ ಕಲಿಸಿದರು. ವಿಷಯ ಸಂಗ್ರಹಣ ವಿಧಾನ, ನಿರ್ದಿಷ್ಟಾಕಾರದ ಕಾಗದದ ಹಾಳೆಗಳನ್ನು ಮಾಡಿ ಬಳಸುವ ರೀತಿ, ಈ ಹಾಳೆಗಳನ್ನೆಲ್ಲ ಒಂದು ಒಪ್ಪವಂಥ ಖಾನಿಯಲ್ಲಿ ಇಡುವ ರೀತಿ ಇತ್ಯಾದಿ ಹತ್ತೆಂಟು ವಿಷಯಗಳನ್ನೆಲ್ಲ ತಿಳಿಸಿದರು. ಗುರುಗಳು ತಿಳಿಸಿದಂತೆ ಖಾನಿ ಮಾಡಿಸಿದೆವು; ಸ್ಲಿಪ್‌ಗಳನ್ನು ಮಾಡಿಸಿದೆವು. ಆದರೆ ಅವುಗಳ ಪೂರ್ಣ ಬಳಕೆ ಒಬ್ಬೊಬ್ಬರಲ್ಲಿ ಒಂದೊಂದು ತೆರನಾಯಿತು. ಅದಕೆ ತಕ್ಕಂತೆ ಫಲವೂ ಬಂತು ಸರಿಯೆ.

* * *

೩೭

'ನನ್ನ ಬದುಕು:ಒಂದು ಕಿರುಚಿತ್ರ' ಚಿ.ಮೂ. ಅವರ ಲೇಖನದಿಂದ

ಪಿಎಚ್.ಡಿ. ಸಂಶೋಧನ ಕಾರ್ಯದಲ್ಲಿ ನಾನು ತೀ.ನಂ.ಶ್ರೀ.ಯವರಿಗೆ ಸಂಪೂರ್ಣವಾಗಿ ಒಪ್ಪಿಸಿಕೊಂಡಿದ್ದೆ. ಅಂದಿನ ಶ್ರೇಷ್ಠ ವಿದ್ವಾಂಸರಾಗಿದ್ದ ಅವರು ತಮ್ಮ ವಿದ್ಯಾರ್ಥಿಯನ್ನು ಒಬ್ಬ ಸಂಶೋಧಕನನ್ನಾಗಿ ರೂಪುಗೊಳಿಸುವ ಬಗೆಯನ್ನು ಬಲ್ಲವರಾಗಿದ್ದರು. ಶ್ರಮಪಟ್ಟು ಕೆಲಸ ಮಾಡುವಲ್ಲಿ ಅವರೆಂದೂ ರಿಯಾಯ್ತಿ ತೋರಿಸಲಿಲ್ಲ; ಸಂದರ್ಭ ಬಿದ್ದಾಗ ಪ್ರಶಂಸಿಸದೆ ಇರುತ್ತಿರಲಿಲ್ಲ. ನನಗಿನ್ನೂ ನೆನಪಿದೆ. ನಾನು ಮೊದಲು ಬರೆದ ಅಧ್ಯಾಯವೆಂದರೆ ಜೈನ ಧರ್ಮಕ್ಕೆ ಸಂಬಂಧಿಸಿದ್ದು; ಆ ಬರಹದ ಅಪಕ್ವತೆಯನ್ನು ಅವರು ಮೃದುವಾಗಿಯೇ ತಿಳಿಸಿದ ದಿನ ನಾನು ಭೂಮಿಗೆ ಇಳಿದುಹೋದೆ. ಅವರು ನನ್ನನ್ನು ತಿದ್ದಿದರು; ತೀಡಿದರು. ಕಷ್ಟಪಟ್ಟು ಕೆಲಸ ಮಾಡಿಸಿದರು; ಮೆಚ್ಚಿಕೊಂಡರು. ಕೆಲವು ಅಧ್ಯಾಯಗಳನ್ನು ಓದಿ ಅವರು "ಸಮರ್ಪಕ ವಾಗಿದೆ" ಎಂದು ಒಂದು ಒಳ್ಳೆಯ ಮಾತಾಡಿ ಹಿಂದಕ್ಕೆ ಕೊಟ್ಟಾಗ ಆಗುತ್ತಿದ್ದ ಸಮಾಧಾನ ಅವರ್ಣನೀಯವಾಗುತ್ತಿತ್ತು. ಅವರ ಜೊತೆ ಕಳೆಯುತ್ತಿದ್ದ ಒಂದೊಂದು ಗಂಟೆಯೂ ಅತ್ಯಂತ

ಲಾಭದಾಯಕ. ನನಗೋ ಅಮಿತ ಉತ್ಸಾಹ: ಕಾಲೇಜಿನಲ್ಲಿ ಪಾಠಗಳ ಜೊತೆ ಸಂಜೆ ಟೆನಿಸ್. ರಜಾ ದಿನಗಳಲ್ಲೆಲ್ಲ ನನಗೆ ಒಂದೇ ಕೆಲಸ–ಮಹಾರಾಜಾ ಕಾಲೇಜಿನ ಪಕ್ಕದ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಪಿಎಚ್.ಡಿ. ಸಂಬಂಧವಾದ ಕೆಲಸ. ಎಂದೋ ಒಂದು ದಿನ ನಿಬಂಧವು ಸಿದ್ಧವಾಗಿ ವಿಶ್ವವಿದ್ಯಾನಿಲಯಕ್ಕೆ ಅದನ್ನು ಒಪ್ಪಿಸಿದೆ. ಅದಕ್ಕೆ ಹಿಂದೆ ಅವರ ಮಾರ್ಗದರ್ಶನದಲ್ಲಿ ಸಿದ್ಧವಾಗಿದ್ದ ಒಂದು ಶ್ರೇಷ್ಠ ನಿಬಂಧಕ್ಕೆ ಕೆಲವು ತೀರ ವೈಯಕ್ತಿಕ ಕಾರಣಗಳಿಗಾಗಿ ಪಿಎಚ್.ಡಿ. ಪದವಿಯು ಲಭ್ಯವಾಗಿರಲಿಲ್ಲ. (ಆ ನಿಬಂಧವು ಪ್ರಕಟವಾಗಿರುವುದರಿಂದ ಯಾರು ಬೇಕಾದರೂ ಅದು ಪಿಎಚ್.ಡಿ.ಗೆ ಅರ್ಹವೇ ಅಲ್ಲವೇ ಎಂಬುದನ್ನು ಪರೀಕ್ಷಿಸಬಹುದು.) ಆ ರೀತಿ ನನ್ನ ನಿಬಂಧವೂ ತಿರಸ್ಕೃತವಾಗಬಹುದೋ ಏನೋ ಎಂಬ ಅಳುಕು ಅವರಿಗಿತ್ತಾದರೂ ನನ್ನ ನಿಬಂಧದ ಪರೀಕ್ಷಕರ ಎರಡು ವರದಿಗಳೂ ಬಂದಾಗ ನನಗಿಂತ ಅವರಿಗೆ ಸಮಾಧಾನವಾಯಿತು. ನನಗೆ ಪಿಎಚ್.ಡಿ. ಪದವಿಯು ದೊರಕಿತು.

೧೯೬೬ರಲ್ಲಿ ನನ್ನ ಪಿಎಚ್.ಡಿ. ನಿಬಂಧವು ಪ್ರಕಟವಾಯಿತು. ಅದನ್ನು ನಾನು ಪೂಜ್ಯ ಗುರುಗಳಾದ ಪ್ರೊ॥ ತೀ.ನಂ.ಶ್ರೀಕಂಠಯ್ಯನವರಿಗೆ ಅರ್ಪಿಸಲು ಅವರ ಒಪ್ಪಿಗೆ ಪಡೆದು ಶ್ರದ್ಧೆಯಿಂದ ಅದರ ಕರಡುಗಳನ್ನು ನೋಡಿದ್ದೆ. ಅದು ಅಚ್ಚಾಗಿ ಹೊರ ಬರುವ ಮುನ್ನವೇ ಅವರು ದೂರದ ಕಲ್ಕತ್ತೆಯಲ್ಲಿ ಕಣ್ಣು ಮುಚ್ಚಿದ ದಿನ (ಸೆಪ್ಟೆಂಬರ್ ೭, ೧೯೬೬) ನಾನು ಮಾತ್ರವೇ ಅಲ್ಲ, ನನ್ನಂತೆ ಅನೇಕರು ಒಂದು ಬಗೆಯ ಅನಾಥಸ್ಥಿತಿಯನ್ನು ಅನುಭವಿಸಿದರು. ಅಂತಹ ವಿದ್ವಾಂಸರು ಆ ಕಾಲಕ್ಕೆ ಹೇಗೋ ಇಂದೂ ಅಪೂರ್ವವೆಂಬಲ್ಲಿ ನನಗೆ ಅನುಮಾನವಿಲ್ಲ. ನನ್ನನ್ನು ಅವರು ತಮ್ಮ 'ಜ್ಞಾನಪುತ್ರ' ಎಂದು ಭಾವಿಸಿದರು; ಹಾಗೆಂದು ಹೇಳಿಕೊಂಡೂ ಇದ್ದರು. ನನಗೆ ಪಿಎಚ್.ಡಿ. ಪದವಿಯು ಪ್ರದಾನವಾದ ದಿನ "ನಾನಿನ್ನು ಬಂಜೆ ಅಲ್ಲ" ಎಂದು ಅವರು ತಮ್ಮ ಮಗ ತೀ.ಶ್ರೀ. ನಾಗಭೂಷಣನ ಜೊತೆ ಹೇಳಿಕೊಂಡುದು ಈಗಾಗಲೇ ದಾಖಲಾಗಿದೆ. (ಅವರ ಬಳಿ ಕೆಲಸ ಮಾಡಿ ಆ ಪದವಿ ಪಡೆದವರಲ್ಲಿ ನಾನೇ ಮೊದಲಿಗ ಮತ್ತು ನಾನೇ ಕೊನೆಯವ.) ಅವರು ನನ್ನನ್ನು ಒಬ್ಬ ಸಂಶೋಧಕನನ್ನಾಗಿ ರೂಪಿಸಿದರು. ನನ್ನಲ್ಲಿ ಭರವಸೆಯಿಟ್ಟುಕೊಂಡು ನನ್ನನ್ನು ಬೆಳೆಸಿದರು. ಅವರೂ ಅವರ ಕುಟುಂಬವರ್ಗವೂ ನನ್ನನ್ನು ನೋಡಿಕೊಂಡ ರೀತಿಯನ್ನು ಈಗಲೂ ಸ್ಮರಿಸಿದಾಗ ಕಣ್ಣಲ್ಲಿ ನೀರು ಬರುತ್ತದೆ. (ಆ ಸಂಬಂಧ ಅವರು ನಿಧನರಾದ ಮೇಲೂ ಮುಂದುವರಿಯುತ್ತಿರುವುದು ನನ್ನ ಬದುಕಿನ ಭಾಗ್ಯ.)

* * *

೩೮

'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಕ್ರಿ.ಶ. ೪೫೦–ಕ್ರಿ.ಶ ೧೧೫೦'

ಎಂ. ಚಿದಾನಂದ ಮೂರ್ತಿ

ಮೊದಲ ಅರಿಕೆ

ಕನ್ನಡದ ಆದಿಕವಿಯೆಂದು ಪ್ರಸಿದ್ಧನಾಗಿರುವ ಪಂಪನಿಗೆ ಹಿನ್ನೆಲೆಯಾದ ಸಾಮಾಜಿಕ ಜೀವನವನ್ನು ಚಿತ್ರಿಸಲು ಪ್ರೊ॥ ಡಿ.ಎಲ್. ನರಸಿಂಹಾಚಾರ್ಯರ ಸೂಚನೆಯ ಪ್ರಕಾರ ಒಂಬತ್ತು, ಹತ್ತು ಮತ್ತು ಹನ್ನೊಂದನೆಯ ಶತಮಾನಗಳ ಶಾಸನಗಳನ್ನು ಅಧ್ಯಯನ ಮಾಡುವ ಅವಕಾಶ ಕೆಲವು ವರ್ಷಗಳ ಹಿಂದೆ ಒದಗಿತು. ಅದರ ಫಲವಾಗಿ ಮೂಡಿಬಂದ 'ಪಂಪ ಕವಿ ಮತ್ತು ಮೌಲ್ಯಪ್ರಸಾರ' ಎಂಬ ಲೇಖನವು ಮುಂದೆ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಯಿತು. ಶಾಸನಗಳಲ್ಲಿ ನಿಕ್ಷಿಪ್ತವಾಗಿರುವ ವಿಷಯಸಂಪತ್ತಿನ ಕಡೆಗೆ ನನ್ನ ಗಮನವು ಹೊರಳಿದ್ದು ಆಗಲೇ. ನನ್ನ ಈ ಆಸಕ್ತಿಯನ್ನು ದಿ. ಪ್ರೊ॥ ತೀ.ನಂ.ಶ್ರೀಕಂಠಯ್ಯನವರ ಮುಂದೆ ಹೇಳಿಕೊಂಡಾಗ, ಶಾಸನಗಳ ಅಧ್ಯಯನವನ್ನೇ ಏಕೆ ಮುಂದುವರಿಸಬಾರದು ಎಂದು ಸಲಹೆಯನ್ನಿತ್ತರು. ಅವರ ಪ್ರೋತ್ಸಾಹದ ಮತ್ತು ಮಾರ್ಗದರ್ಶನದ ಫಲವೇ ಈ ನಿಬಂಧ.

ನನ್ನ ಅಧ್ಯಯನದ ರೀತಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು. ಸಣ್ಣಸಣ್ಣ ಪಟ್ಟಿಕೆಗಳ (slips) ಮೇಲೆ ವಿಷಯಗಳನ್ನು – ಒಂದು ಪಟ್ಟಿಕೆಗೆ ಒಂದೇ ಅಂಶದಂತೆ – ಸಂಗ್ರಹಿಸುವ, ಮುಂದೆ ಆ ಪಟ್ಟಿಕೆಗಳನ್ನು ಬೇಕಾದಂತೆ ಜೋಡಿಸಿಕೊಳ್ಳುವ ಪದ್ಧತಿ ವಿಶೇಷವಾಗಿ ಪಾಶ್ಚಾತ್ಯರಲ್ಲಿ ರೂಢಿಯಲ್ಲಿದೆ. ಈ ಪದ್ಧತಿಯ ಪರಿಚಯವಾದುದು ಪ್ರೊ॥ ತೀ.ನಂ.ಶ್ರೀಕಂಠಯ್ಯನವರಿಂದಲೇ. ಈ ಪದ್ಧತಿಯು ನನ್ನ ಅಧ್ಯಯನದಂತಹ ಅಧ್ಯಯನಗಳಲ್ಲಂತೂ ತೀರ ಅಗತ್ಯವಾದುದು. ಒಂದೊಂದು ವಿಷಯವನ್ನು ಮಾತ್ರ ಲಿಖಿಸಿರುವ ಅಂತಹ ಪಟ್ಟಿಕೆಗಳಿದ್ದರೆ ಅವುಗಳನ್ನು ವಿಷಯಾನುಕ್ರಮವಾಗಿ, ಕಾಲಾನುಕ್ರಮವಾಗಿ, ನಮಗೆ ಅನುಕೂಲವಾದ ರೀತಿಯಲ್ಲಿ ಜೋಡಿಸಿಕೊಳ್ಳಬಹುದು; ಅರ್ಥಕೋಶದಲ್ಲಿ ನಮಗೆ ಬೇಕಾದ ಪದದ ಮೇಲೆ ಸುಲಭವಾಗಿ ಕೈಹಾಕುವಂತೆ ನಮಗೆ ಬೇಕಾದ ವಿಷಯದ ಪಟ್ಟಿಕೆಯನ್ನು ಸುಲಭವಾಗಿ ಎತ್ತಿಕೊಳ್ಳಬಹುದು. ಈ ಪಟ್ಟಿಕೆಗಳ ಪದ್ಧತಿಯು ಭಾರತದಲ್ಲಿ ಹೆಚ್ಚು ಹೆಚ್ಚು ಪ್ರಚಾರಕ್ಕೆ ಬರುತ್ತಿದೆ.

ನಾನು ಇತಿಹಾಸವನ್ನೇ ಪ್ರಧಾನ ವಿಷಯವನ್ನಾಗಿ ತೆಗೆದುಕೊಂಡು ಓದಿದ ವಿದ್ಯಾರ್ಥಿಯಲ್ಲ. ಅದರೆ ಕನ್ನಡ ಬಿ.ಎ. ಆನರ್ಸ್ ತರಗತಿಯಲ್ಲಿ ಕರ್ಣಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸಗಳಿಗೆ ಸಂಬಂಧಿಸಿದ ಪಾಠಗಳನ್ನು ಹಿರಿಯ ವಿದ್ವಾಂಸರಾದ ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳವರಿಂದ ಕೇಳುವ ಸದವಕಾಶವು ಒದಗಿದ್ದಿತು. ಮೊದಲಿನಿಂದಲೂ ಇತಿಹಾಸ ಸಂಸ್ಕೃತಿಗಳ ವಿಷಯದಲ್ಲಿ ಬಹುವಾದ ಆಸಕ್ತಿಯನ್ನು ಹೊಂದಿದ್ದ ನಾನು ಅದನ್ನು ಬೆಳಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಕನ್ನಡ ಭಾಷಾ ಸಾಹಿತ್ಯಗಳ ವಿದ್ಯಾರ್ಥಿಯಾದ ನಾನು ಶಾಸನಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಂಡದ್ದು ಕೆಲವರಿಗೆ ಆಶ್ಚರ್ಯವನ್ನುಂಟುಮಾಡಿತು. ನನ್ನ ಅನುಭವದಿಂದ

ಹೇಳುವುದಾದರೆ ಈ ಅಧ್ಯಯನದ ಸಮಯದಲ್ಲಿ ವಿಷಯಕ್ಕೆ ನಾನು ಹೊಸಬನೆಂಬ ಭಾವನೆಯೇ ಬರಲಿಲ್ಲ. ಇಲ್ಲಿ ನಾನು ನೀರಸ ಸಂಗತಿಗಳನ್ನು ಬರಿಯ ಪಟ್ಟಿಮಾಡುವ ಕೆಲಸಕ್ಕೆ ಕೈಹಾಕಿಲ್ಲ; ಅವುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿಕೊಡಲು, ಪರಸ್ಪರ ಸಂಬಂಧ ಕಲ್ಪಿಸಿ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದೇನೆ. ಇಂತಹ ಒಂದು ಅಧ್ಯಯನವು ಕನ್ನಡ ಶಾಸನಗಳ ವಿಷಯದಲ್ಲಿ ಇಲ್ಲಿಯವರೆಗೆ ಇಷ್ಟು ಕ್ರಮಬದ್ಧವಾಗಿ ನಡೆದಿರಲಿಲ್ಲವೆಂದು ವಿನಯದಿಂದ ಸೂಚಿಸಲು ಇಚ್ಛಿಸುತ್ತೇನೆ.

ನನಗೆ ನಿಬಂಧದ ವಿಷಯವನ್ನು ಸೂಚಿಸಿದ್ದಲ್ಲದೆ ಉದ್ದಕ್ಕೂ ಮಾರ್ಗದರ್ಶಕರಾಗಿ ನಿಂತು ನನ್ನಿಂದ ಕೆಲಸಮಾಡಿಸಿದ ನನ್ನ ಪೂಜ್ಯ ಗುರುಗಳಾದ ಪ್ರೊ॥ ತೀ.ನಂ.ಶ್ರೀಕಂಠಯ್ಯನವರು ಈ ನಿಬಂಧವು ಒಂದು ರೂಪವನ್ನು ತಳೆಯಲು ಬಹುಮಟ್ಟಿಗೆ ಕಾರಣ. ಅವರು ನನ್ನಿಂದ ಕಷ್ಟಪಟ್ಟು ಕೆಲಸ ಮಾಡಿಸಿದ್ದಾರೆ; ಒಂದೊಂದು ಅಧ್ಯಾಯನವನ್ನೂ ಕೂಲಂಕಷವಾಗಿ ಓದಿ, ವಿಚಾರಮಾಡಿ ವಿಮರ್ಶಿಸಿದ್ದಾರೆ; ಸಲಹೆಗಳನ್ನಿತ್ತಿದ್ದಾರೆ, ತಿದ್ದಿದ್ದಾರೆ; ಭಿನ್ನಾಭಿಪ್ರಾಯಗಳಿದ್ದಾಗ ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಅಂತಿಮ ತೀರ್ಮಾನವನ್ನು ನನ್ನ ಇತ್ಯರ್ಥಕ್ಕೇ ಬಿಟ್ಟಿದ್ದಾರೆ. ಅಂತಹ ಚರ್ಚೆಗಳ ಸಮಯದಲ್ಲಿ ಅವರ ಮಾತುಗಳನ್ನು ಕೇಳುವುದೇ ಒಂದು ಸೊಗಸು, ಒಂದು ವಿದ್ಯಾಭ್ಯಾಸ. ಈ ನಿಬಂಧದ ಶ್ರೇಯಸ್ಸಿನ ಬಹುಭಾಗ ಅವರಿಗೆ ಸಲ್ಲಬೇಕು.

ನನಗೆ ಪಿಎಚ್.ಡಿ. ಪ್ರಶಸ್ತಿಯು ದೊರೆತಾಗ ಅವರು ತಮಗೆ ಪುತ್ರೋತ್ಸವವಾದಷ್ಟು ಸಂತೋಷವಾಗಿದೆಯೆಂದು ಅನೇಕರ ಮುಂದೆ ಹೇಳಿಕೊಂಡು ಹಿಗ್ಗಿದರು. ಈ ಗ್ರಂಥವು ಬೇಗ ಪ್ರಕಟವಾಗಲೆಂದು ಹಾರೈಸಿದರು. ಅವರ ಹಾರೈಕೆಯ ಫಲವೋ ಏನೋ ಎಂಬಂತೆ ಇದು ಬಹುಬೇಗ ಅಚ್ಚಿನ ಮನೆಗೂ ಹೋಯಿತು; ಅಚ್ಚಿನ ಕಾರ್ಯವೂ ಮುಗಿಯಿತು. ಆರಂಭದ ಈ ಪುಟಗಳ ಪ್ರೂಫುಗಳೂ ಕೈಗೆ ಬಂದುವು. ಅವುಗಳನ್ನು ತಿದ್ದಿಕೊಟ್ಟಿದ್ದೆ; ಇನ್ನೇನು ಅವು ಅಚ್ಚಾಗಿಬಿಟ್ಟಿದ್ದರೆ ಅಚ್ಚಿನ ಕೆಲಸ ಸಂಪೂರ್ಣವಾದಂತಾಗಿ ಗ್ರಂಥವು ಹೊಲಿಗೆಗೆ ಸಿದ್ಧವಾಗುತ್ತಿದ್ದಿತು. ಪ್ರೊ. ತೀ.ನಂ.ಶ್ರೀ. ಯವರಿಗೆ ನಾನು ಎಷ್ಟು ವಿಧಗಳಲ್ಲಿ ಋಣಿ ಎಂಬುದನ್ನು ಸ್ಮರಿಸಿದಾಗ ಕಣ್ಣಲ್ಲಿ ನೀರು ಚಿಮ್ಮುತ್ತದೆ. ನನ್ನನ್ನು ತಮ್ಮ ವಿದ್ಯಾರ್ಥಿ ಎಂಬುದಕ್ಕಿಂತ ಹೆಚ್ಚು ಆತ್ಮೀಯವಾಗಿ ನಡೆಸಿಕೊಂಡಿದ್ದರು. ಈ ಮಧುರ ಸಂಬಂಧದ ಸ್ಮರಣೆಗಾಗಿ ನಾನು ಈ ನಿಬಂಧವನ್ನು ಅವರಿಗೆ ಅರ್ಪಿಸುವುದಾಗಿಯೂ ಅದಕ್ಕೆ ಒಪ್ಪಿಗೆ ಕೊಡಬೇಕೆಂದೂ ಕೇಳಿಕೊಂಡಿದ್ದೆ. ಅವರು ಉದಾರವಾದ ಮನಸ್ಸಿನಿಂದ, ಸಂತೋಷದಿಂದ ಒಪ್ಪಿಗೆಯನ್ನೂ ಕೊಟ್ಟಿದ್ದರು. ಆದರೆ ಪೂರ್ತಿ ಸಿದ್ಧವಾದ ಗ್ರಂಥವನ್ನು ಅವರಿಗೆ ಒಪ್ಪಿಸಲು ವಿಧಿ ನನಗೆ ಅವಕಾಶವನ್ನು ಕೊಡದೇ ಹೋಯಿತು. ಅಸಂಖ್ಯಾತ ಆತ್ಮೀಯರನ್ನೂ ಅಭಿಮಾನಿಗಳನ್ನೂ ಅಪಾರವಾದ ದುಃಖದಲ್ಲಿ ಅದ್ದಿ ಅವರು ಸೆಪ್ಟೆಂಬರ್ ಏಳನೇ ತಾರೀಖು ಈ ಲೋಕದಿಂದ ನಡೆದೇಬಿಟ್ಟರು. ಇನ್ನು ಹೇಳುವುದು ಏನಾದರೂ ಉಳಿದಿದೆಯೇ?

ಆಧುನಿಕ ಸಂಶೋಧನೆಯ ಪ್ರತೀಕದಂತಿದ್ದ ನನ್ನ ಆ ಪ್ರಿಯಗುರುಗಳಿಗೆ ನಾನು ಈ ಗ್ರಂಥವನ್ನು ಪ್ರೀತಿಯಿಂದ ಮತ್ತು ಕೃತಜ್ಞತೆಯಿಂದ ಸಮರ್ಪಿಸಿದ್ದೇನೆ.

* * *

೩೯

ಜಿ.ಎಸ್.ಶಿವರುದ್ರಪ್ಪ ಅವರ 'ಚತುರಂಗ'ದಿಂದ

ನಾನು, ನಾಳೆ ಏನಾಗಬೇಕು, ಎಂತಾಗಬೇಕು ಎಂಬ ಬಗ್ಗೆ ಯಾವತ್ತೂ ತಲೆ ಕೆಡಿಸಿಕೊಳ್ಳಲಿಲ್ಲ. ಏನು ಬರುತ್ತದೋ ಅದನ್ನು ಎದುರಿಸುತ್ತ ಒಪ್ಪಿಕೊಳ್ಳುವುದು ನನಗೆ ಅಭ್ಯಾಸವಾಗಿಬಿಟ್ಟಿದೆ. ಇದರಿಂದಾಗಿ ನಾನು ಯಾವ ಜ್ಯೋತಿಷಿಗೂ ನನ್ನ ಕೈಯನ್ನು ತೋರಿಸಿ, ಅಥವಾ ಜಾತಕವನ್ನು ತೋರಿಸಿ, ನಾಳೆ ನನಗೇನಾಗುತ್ತದೆ ಎಂಬುದನ್ನು ತಿಳಿಯಲು ಅಶಿಸಲೇ ಇಲ್ಲ. ನನ್ನ ಜತೆಗಿದ್ದ ಹಲವರು ಸ್ನೇಹಿತರಿಗೆ, ಕೈ ತೋರಿಸುವುದು, ಭವಿಷ್ಯ ಕೇಳುವುದು ಇತ್ಯಾದಿಗಳಲ್ಲಿ ಸಾಕಷ್ಟು ಆಸಕ್ತಿ ಇತ್ತು. ಈ ಬಗ್ಗೆ ನನಗಿದ್ದ ನಿರಾಸಕ್ತಿ ಅವರಿಗೆ ಆಶ್ಚರ್ಯದಂತೆ ತೋರಿರಬೇಕು.

೧೯೬೩ನೇ ಮಾರ್ಚಿಯೋ-ಏಪ್ರಿಲ್ ತಿಂಗಳೋ ಇರಬೇಕು. ನನಗೆ ಪರಿಚಿತರಾದವರೊಬ್ಬರು, ಅವತ್ತಿನ ಹಿಂದೂ ಪತ್ರಿಕೆಯನ್ನು ಹಿಡಿದುಕೊಂಡು ಬಂದು, 'ನೋಡ್ರಿ ಇದರಲ್ಲಿ ಒಂದು ಜಾಹೀರಾತು ಇದೆ. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ರೀಡರ್ ಹುದ್ದೆಗೆ ಅರ್ಜಿ ಕರೆದಿದ್ದಾರೆ. ಆರುನೂರು ರೂಪಾಯಿ ಸಂಬಳ. (ನನಗಾಗ ಬರುತ್ತಿದ್ದುದು ಮುನ್ನೂರು ರೂಪಾಯಿ) ಇದಕ್ಕೆ ಬೇಕಾದ ಎಲ್ಲಾ ಕ್ವಾಲಿಫಿಕೇಷನ್ನೂ ನಿಮಗಿದೆ. ನೀವ್ಯಾಕೆ ಅರ್ಜಿ ಹಾಕಬಾರದು?' ಅಂದರು. ನಾನು ನಕ್ಕು, 'ಅಯ್ಯೋ ಅಷ್ಟು ದೂರ ಯಾರು ಹೋಗುತ್ತಾರೆ. ಅಲ್ಲಿಗೆ ಹೋದೆ ಅನ್ನಿ, ಮಕ್ಕಳ ವಿದ್ಯಾಭ್ಯಾಸ ಹಾಳು. ಇದ್ದುದರಲ್ಲಿ ಇಲ್ಲೇ ನಾನು ಹಾಯಾಗಿದ್ದೇನೆ' ಅಂದೆ. ಅವರು 'ಸುಮ್ಮನೆ ಅರ್ಜಿಹಾಕಿ, ಕಳಕೊಳ್ಳೋದು ಏನಿದೆ? ಅವರೇ ಇಂಟರ್‌ವ್ಯೂಗೆ ಕರೆದರೆ ಹೋಗಿ ಬರೋ ಖರ್ಚನ್ನೂ ಕೊಡಬಹುದು, ಬಿಟ್ಟಿಯಾಗಿ ಹೈದರಾಬಾದ್ ನೋಡಿಕೊಂಡು ಬಂದರಾಯಿತು' ಅಂದರು. ಅವರ ಮಾತು ಸರಿ ಅನ್ನಿಸಿತು. ಮರುದಿನವೇ ಅರ್ಜಿಯೊಂದನ್ನು ತಯಾರಿಸಿ ಕಳುಹಿಸಿಕೊಟ್ಟೆ ಅಂಚೆಯಲ್ಲಿ.

ಇದಾದ ಮೂರುವಾರ ಆಗಿರಬಹುದೇನೋ. ಆ ಸಂಜೆ ನಾನು, ಪ್ರಭುಶಂಕರ್ ಮತ್ತು ಸುಬ್ಬರಾಯರು ಎಂದಿನಂತೆ ಕುಕ್ಕನಹಳ್ಳಿಯ ಕೆರೆಯ ಏರಿಯ ಮೇಲೆ ತಿರುಗಾಟಕ್ಕೆ ಹೋಗಿ, ಲತಾಕುಂಜವೊಂದರ ಕಲ್ಲು ಬೆಂಚಿನ ಮೇಲೆ ಕುಳಿತು, ಸಂಜೆಯ ಕಾಂತಿಯನ್ನು ಬಿಂಬಿಸುತ್ತಾ ದಡಕ್ಕೆ ಬಡಿಯುವ ಅಲೆಗಳನ್ನು ವೀಕ್ಷಿಸುತ್ತಾ, ಹರಟೆ ಹೊಡೆಯುತ್ತಿದ್ದೆವು. ಮಾತಿನ ಮಧ್ಯೆ 'ನೋಡಿ ಪ್ರಭುಶಂಕರ್ ನಾನು ನಿಮಗೊಂದು ಸಂಗತಿಯನ್ನು ಹೇಳುವುದನ್ನು ಮರೆತೆ. ಈಗ್ಗೆ ಸುಮಾರು ಮೂರು ವಾರದ ಹಿಂದೆ ನಮ್ಮ ಪಕ್ಕದ ಮನೆಯವರು ನನಗೊಂದು ಜಾಹೀರಾತು ತೋರಿಸಿದರು, ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದದ್ದು. ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ರೀಡರ್ ಹುದ್ದೆಗೆ ಕರೆದಿದ್ದರು. ಇರಲಿ ಅಂತ ನಾನೂ ಅರ್ಜಿ ಕಳುಹಿಸಿದ್ದೇನೆ.'

ಹಾಂ. ಅಂದರು ಪ್ರಭುಶಂಕರ್. 'ನಾನೂ ಅದೇ ಹುದ್ದೆಗೆ ಅರ್ಜಿ ಹಾಕಿದೀನಲ್ಲ ಶಿವರುದ್ರಪ್ಪ. ಕಳೆದ ತಿಂಗಳು ನಾನು ಎನ್.ಸಿ.ಸಿ. ಟ್ರೇನಿಂಗಿಗೆ ಅಂತ ಹೈದರಾಬಾದಿಗೆ ಹೋಗಿದ್ದೆನಲ್ಲ, ಆಗ ಅಲ್ಲೇ ಗೊತ್ತಾಯಿತು ಸಮಾಚಾರ. ನಾನು ಆಗಲೇ ಅಲ್ಲೇ ಅದಕ್ಕೆ ಮುಂಗಡ ಅರ್ಜಿ ಸಲ್ಲಿಸಿಯೇ

ಬಂದೆ. ಈಗ ನೋಡಿ, ನೀವೂ ಹಾಕಿರುವುದಾಗಿ ಹೇಳ್ತೀರಿ.' ನಾನೆಂದೆ 'ನಾನು ಏನೋ ಸುಮ್ಮನೆ ಹಾಕಿದ್ದೇನೆ ಅಷ್ಟೆ. ನೀವೂ ಅದಕ್ಕೆ ಅರ್ಜಿಹಾಕಿರೋ ಸಮಾಚಾರ ತಿಳಿದದ್ದೇ ಈಗ. ಇರಲಿಬಿಡಿ. ನಿಮಗೆ ಅದು ಸಿಗುವುದಾದರೆ ನಾನು ಯಾಕೆ ಅಡ್ಡ ಬರಲಿ. ಇಂಟರ್‌ವ್ಯೂಗೆ ನಾನು ಹೋಗದೆ ಇದ್ದರೆ ಆಯಿತಲ್ಲ?'

ನನ್ನದು ತೀರಾ ಸಹಜವಾದ ಅನಿಸಿಕೆ. ನಾನಾಗಲೇ ಗಂಗೋತ್ರಿಯ ಸ್ನಾತಕೋತ್ತರ ಕೇಂದ್ರದಲ್ಲಿ ಪಾಠ ಹೇಳುವ ಅವಕಾಶವನ್ನು ಪಡೆದುಕೊಂಡಿದ್ದೆ. ಆದರೆ ನನ್ನ ಗೆಳೆಯ ಪ್ರಭುಶಂಕರ್‌ಗೆ ಈ ಅವಕಾಶವೂ ಇರಲಿಲ್ಲ. ಯಾಕೆಂದರೆ ಆಗ ಅವರಿದ್ದದ್ದು ಮಹಾರಾಜ ಕಾಲೇಜಿನಲ್ಲಿ–ಕೇವಲ ಡಿಗ್ರಿ ತರಗತಿಗಳಿಗೆ ಪಾಠ ಹೇಳುವ ಪರಿಸರದಲ್ಲಿ. ಒಂದು ವೇಳೆ ಹೈದರಾಬಾದ್‌ನ ವಿಶ್ವವಿದ್ಯಾಲಯದಲ್ಲಿ ಅವರು ರೀಡರ್ ಆದರೆ, ಅವರಿಗೂ ಸ್ನಾತಕೋತ್ತರ ತರಗತಿಗಳಿಗೆ ಪಾಠಹೇಳುವ ಅವಕಾಶ ದೊರೆಯುತ್ತದೆ. ಹಾಗೆ ದೊರೆಯುವುದಾದರೆ ಅದು ಅವರಿಗೇ ದೊರೆಯಲಿ. ಇದು ನನ್ನ ಅನ್ನಿಸಿಕೆ. ರೀಡರ್ ಪ್ರೊಫೆಸರ್ ಇತ್ಯಾದಿ ಹುದ್ದೆಗಳು ತುಂಬ ದೊಡ್ಡವೆಂದು, ಅವುಗಳಿಗಾಗಿ ಏನಾದರೂ ಮಾಡಿ ಹೊಡೆದಾಡಿ ಅವುಗಳನ್ನು ಗಿಟ್ಟಿಸಿ ಕೊಳ್ಳಬೇಕು ಎಂಬ ವಿಚಾರ ಯಾವತ್ತೂ ನನ್ನ ತಲೆಗೇ ಹೊಳದಿರಲಿಲ್ಲ.

ಜುಲೈ ತಿಂಗಳ ವೇಳೆಗೆ ನನಗೆ ಮತ್ತು ಪ್ರಭುಶಂಕರ್ ಇಬ್ಬರಿಗೂ ಹೈದರಾಬಾದಿನಿಂದ ಸಂದರ್ಶನಕ್ಕೆ ಕರೆಬಂತು. ನಾನು ನನ್ನ ಗೆಳೆಯರಿಗೆ ಮಾತುಕೊಟ್ಟಂತೆ ಸಂದರ್ಶನಕ್ಕೆ ಹೋಗದಿರಲು ನಿರ್ಧರಿಸಿದೆ. ಅದರ ಬದಲು, ಸಂದರ್ಶನಕ್ಕೆ ಪ್ರಭುಶಂಕರ್ ಅವರು ಹೈದರಾಬಾದ್‌ಗೆ ಹೊರಡುವ ದಿನ ರೈಲ್ವೆ ನಿಲ್ದಾಣಕ್ಕೆ ಹೋಗಿ ಅವರಿಗೆ ನನ್ನ ಶುಭಾಶಯಗಳನ್ನು ಹೇಳಿ ಮನೆಗೆ ಬಂದೆ.

ಹೈದರಾಬಾದ್ ಸಂದರ್ಶನಕ್ಕೆ ನನ್ನ ಶುಭಾಶಯಗಳನ್ನು ಹೊತ್ತು ಹೋದ ನನ್ನ ಗೆಳೆಯರು ಒಂದು ವಾರದ ನಂತರ ಮೈಸೂರಿಗೆ ಬಂದರು. ಸಂದರ್ಶನ ಹೇಗಾಯಿತು ಇತ್ಯಾದಿ ಕೇಳಿದೆ. 'ಸಂದರ್ಶನ ಚೆನ್ನಾಗಿ ಆಯಿತು, ಬಹುಶಃ ಇಷ್ಟರಲ್ಲೆ ನನಗೆ (ಅಂದರೆ ಅವರಿಗೆ) ಆರ್ಡರ್ ಬಂದರೂ ಬರಬಹುದು' ಎಂದರು ಪ್ರಭುಶಂಕರ್.

ಆದರೆ ಇದಾದ ಒಂದು ತಿಂಗಳ ವೇಳೆಗೆ, ಬಹುಶಃ ಆಗಸ್ಟ್ ಹದಿನೈದರ ಅನಂತರ, ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ರೀಡರ್ ಮತ್ತು ಮುಖ್ಯಸ್ಥನನ್ನಾಗಿ, ನನ್ನನ್ನು ನೇಮಿಸಿದ ಆಜ್ಞೆ ಬಂತು!

ಇದಕ್ಕೆ ಏನು ಹೇಳೋಣ? ಇದನ್ನೆ ವಿಚಿತ್ರ ಅಥವಾ ಯೋಗಾಯೋಗ ಅನ್ನುವುದು.

ಆದರೆ ಎರಡು ಮೂರು ದಿನಗಳಲ್ಲಿ. ಪ್ರೊ. ತೀ.ನಂ.ಶ್ರೀಕಂಠಯ್ಯನವರು, ನಾನು, ತೀರಾ ತುರ್ತಾಗಿ ಅವರನ್ನು ಹೋಗಿ ನೋಡಬೇಕೆಂದು ಹೇಳಿ ಕಳುಹಿಸಿದರು. ಆ ವೇಳೆಗೆ ತೀ.ನಂ.ಶ್ರೀಕಂಠಯ್ಯನವರು ನಿವೃತ್ತರಾಗಿ ಜಯಲಕ್ಷ್ಮೀಪುರಂನಲ್ಲಿ ಆಗ ತಾನೇ ಕಟ್ಟಿಸಿಕೊಂಡ ಹೊಸ ಮನೆಯಲ್ಲಿದ್ದರು. ಅವರ ಮನೆಗೆ ಹೋದೆ. ಹಸನ್ಮುಖರಾಗಿ ಬರಮಾಡಿಕೊಂಡರು.

ಒಳಗಿನಿಂದ ಬಿಸಿ ಬಿಸಿ ಕಾಫಿ ಬಂತು. 'ಏನು ಸಾರ್ ಹೇಳಿ ಕಳುಹಿಸಿದಿರಂತೆ' ಎಂದೆ. 'ಇದೆಯಪ್ಪ ಇದೆ, ಒಂದು ಒಳ್ಳೆಯ ಸಮಾಚಾರಾನೆ ಇದೆ, ಕೇಳಿ. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ನಿಮ್ಮನ್ನು ರೀಡರ್‌ಆಗಿ ಆಯ್ಕೆ ಮಾಡಿದ್ದಾರೆ. ನೀವು ಹೋಗಬೇಕಾಗುತ್ತೆ, ಏನಂತೀರಿ?' ಎಂದು ಮುಗುಳ್ನಕ್ಕರು.

"ಇದೇನು ಸಾರ್; ನಾನು ಇಂಟರ್‌ವ್ಯೂಗೇ ಬಂದಿರಲಿಲ್ಲ. ಹೀಗಿರೋವಾಗ ನನ್ನನ್ನ....."

"ಹಾ. ಅದೇ ನೋಡಿ ಸ್ವಾರಸ್ಯ. ನೀವು ಬಂದಿರಲಿಲ್ಲ. ಬಂದಿದ್ದರೆ ಚೆನ್ನಾಗಿತ್ತು. ಆದರೂ ಆಯ್ಕೆಯಾಗಿದ್ದೀರಿ."

"ನಾನು ಬರಲಿಲ್ಲ ಸಾರ್. ಅರ್ಜಿಹಾಕಿದ್ದೇನೋ ನಿಜ. ನನ್ನ ಸ್ನೇಹಿತರಾದ ಪ್ರಭುಶಂಕರರಿಗಾಗಿ ನಾನು ಹಿಂದೆ ನಿಂತೆ. ನಾವಿಬ್ಬರೂ ಬಹುಕಾಲದ ಸ್ನೇಹಿತರು. ಹೀಗಿರುವಾಗ ಒಂದೇ ಹುದ್ದೆಗೆ ನಾವಿಬ್ಬರೂ ಸ್ಪರ್ಧಿಸುವುದು ಯಾಕೆ, ಸಿಗುವುದಾದರೆ ಅದು ಅವರಿಗೇ ಸಿಗಲಿ ಅಂತ....."

"ಆಯಿತಲ್ಲ. ಅದು ಅವರಿಗೆ ಸಿಗಲಿಲ್ಲ....."

"ಸಾರ್ ಒಂದು ವೇಳೆ ನಾನು ಈಗಲೂ ಹೋಗದೆ ಇದ್ದರೆ ಅದು ಅವರಿಗೆ ಸಿಕ್ಕಬಹುದಾ....."

"ಇಲ್ಲಪ್ಪಾ ಇಲ್ಲ. ಹೋದರೆ ನೀವೇ ಹೋಗಬೇಕು. ನೀವು ಹೋಗದೆ ಇದ್ದರೆ ಮತ್ತೆ ಅದನ್ನು ಹೊಸದಾಗಿ ಜಾಹೀರಾತು ಕೊಡಬೇಕಾಗುತ್ತೆ. ಪರಿಸ್ಥಿತಿ ಹೀಗಿದ್ದದ್ದರಿಂದಲೇ, ಅಲ್ಲಿನ ವೈಸ್‌ಛಾನ್ಸಲರ್ ಅವರು, ನಿಮ್ಮನ್ನು ರೀಡರ್ ಹುದ್ದೆಗೆ ಯಾಕೆ ಆಹ್ವಾನಿಸಬಾರದು ಎಂದು ಯೋಚಿಸಿ, ನಿಮ್ಮನ್ನು ಒಪ್ಪಿಸುವ ಜವಾಬ್ದಾರಿಯನ್ನು, ಸೆಲೆಕ್ಷನ್ ಕಮಿಟಿಯ ಸದಸ್ಯರಲ್ಲಿ ಒಬ್ಬನಾದ ನನಗೆ ವಹಿಸಿದ್ದಾರೆ. ಹೀಗಾಗಿ ಸಮಿತಿಯು ಎರಡು ವರ್ಷಗಳ ಕಾಲ ನಿಮ್ಮನ್ನು ಮೈಸೂರು ವಿಶ್ವವಿದ್ಯಾಲಯದಿಂದ ಡೆಪ್ಯುಟೇಷನ್ ಮೇಲೆ ಆಹ್ವಾನಿಸುವುದು ಅಂತ ತೀರ್ಮಾನ ಮಾಡಿದೆ. ಎರಡು ವರ್ಷತಾನೇ. ಒಂದಷ್ಟು ಅನುಭವ ದೊರೆತ ಹಾಗಾಯಿತು. ಎರಡು ವರ್ಷಗಳ ನಂತರ ಹಿಂದಕೆ ಬಂದರಾಯಿತು."

ನನಗೆ ಪರಿಸ್ಥಿತಿ ಅರ್ಥವಾಯಿತು. "ಸಾರ್ ಒಂದು ಮಾತು" ಅಂದೆ. "ಏನದು?" ಎಂದರು ತೀ.ನಂ.ಶ್ರೀ.

"ನೀವು ತಪ್ಪು ತಿಳಿಯಬಾರದು. ಈ ಬಗ್ಗೆ ನಾನು ಶ್ರೀ ಕುವೆಂಪು ಅವರನ್ನು ಒಂದು ಮಾತು ಕೇಳಬೇಕು" ಎಂದೆ.

ತೀ.ನಂ.ಶ್ರೀಯವರು ದೊಡ್ಡ ಮನುಷ್ಯರು. ಗಟ್ಟಿಯಾಗಿ ನಕ್ಕು "ಆಗಲಿ ಹಾಗೇ ಮಾಡಿ. ನಾಳೆ ಸಂಜೆ ಇದೇ ಹೊತ್ತಿಗೆ ಬಂದು ನಿಮ್ಮ ಅಭಿಪ್ರಾಯ ತಿಳಿಸಬೇಕು. ಯಾಕೆಂದರೆ ನಾನು ಈ ಬಗ್ಗೆ ಉಸ್ಮಾನಿಯಾ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಿಗೆ ಆದಷ್ಟು ಬೇಗ ಬರೆಯಬೇಕಾಗಿದೆ" ಎಂದರು.

"ಆಗಲಿ ಸಾರ್" ಎಂದು ಹೊರಕ್ಕೆ ಬಂದೆ. ಕುವೆಂಪು ಅವರ ಮನೆಯ ಕಡೆ ಹೊರಟೆ. ಕುವೆಂಪು ಅವರ ಮನೆಯಿದ್ದ ಪಶ್ಚಿಮ ದಿಕ್ಕು ಉಜ್ವಲವಾಗಿತ್ತು. ಅವರಿನ್ನೂ ಸಂಜೆಯ ಸಂಚಾರಕ್ಕೆ ಹೊರಟಿರಲಿಲ್ಲ. ನಾನು ಅವರ ಮನೆ ತಲುಪಿದಾಗ, ವರಾಂಡದಲ್ಲಿ ಏನನ್ನೋ ಓದುತ್ತಾ ಕೂತಿದ್ದರು. ಒಳಗೆ ಹೋದೆ. ಧ್ಯಾನಸ್ಥರಂತಿದ್ದ ಅವರು ಎದುರಿನ ಕುರ್ಚಿಯನ್ನು ತೋರಿಸಿದರು.

ನಾನು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಅರ್ಜಿ ಹಾಕಿದಂದಿನಿಂದ ಹಿಡಿದು, ಅದೇ ಸ್ವಲ್ಪ ಹೊತ್ತಿನ ಕೆಳಗೆ ತೀ.ನಂ.ಶ್ರೀ ಅವರನ್ನು ಭೇಟಿಯಾದವರೆಗಿನ ಸಂಗತಿಯನ್ನೆಲ್ಲ ವಿವರವಾಗಿ ಹೇಳಿದೆ. "ಈ ಬಗ್ಗೆ ನೀವು ಹೇಗೆ ಹೇಳುತ್ತೀರಿ, ಹಾಗೆ ನಾನು ಮಾಡುತ್ತೇನೆ ಸಾರ್" ಎಂದೆ.

ನಾನು ಹೇಳಿದ್ದನ್ನೆಲ್ಲ ಕೇಳಿ ಕುವೆಂಪು ಗಂಭೀರ ವದನರಾದರು. ಒಂದೆರಡು ನಿಮಿಷ ಕಣ್ಣು ಮುಚ್ಚಿದರು. ಅವರ ಮನೆಯಂಗಳದ ತೋಟದ ಮರಗಳ ಮೇಲೆ ನಾಲ್ಕಾರು ಗುಬ್ಬಚ್ಚಿಗಳು ಕಿಚಿಪಿಚಿ ಸದ್ದು ಮಾಡುತ್ತಿದ್ದವು. ಈ ಮೌನದಿಂದ ಹೊರಬಂದು ಹೇಳಿದರು "ಶಿವರುದ್ರಪ್ಪ, ಹೈದರಾಬಾದಿಗೆ ಹೋಗಿ ಬನ್ನಿ; ಒಳ್ಳೆಯದಾಗುತ್ತದೆ."

ನನ್ನ ತಳಮಳವೆಲ್ಲಾ ಶಾಂತವಾಯಿತು. ಮನೆಗೆ ಬಂದೆ. ಮರುದಿನ ತೀ.ನಂ.ಶ್ರೀ. ಅವರಿಗೆ ನನ್ನ ತೀರ್ಮಾನವನ್ನು ತಿಳಿಸಿದೆ. ಅನಂತರ ನಡೆದ ಸಂಗತಿಯನ್ನೆಲ್ಲಾ ನನ್ನ ಗೆಳೆಯ ಪ್ರಭುಶಂಕರ್ ಅವರಿಗೆ ವರದಿ ಮಾಡಿದೆ. ಸಹಜವಾಗಿಯೇ ಅವರು ಸಂತೋಷಪಡುವ ಸ್ಥಿತಿಯಲ್ಲಿರಲಿಲ್ಲ.

ಆಗ ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದವರು ಸರ್ದಾರ್ ಕೆ.ಎಂ.ಪಣಿಕ್ಕರ್ ಅವರು. ಆತ ಸಿಂಹದಂಥ ಮನುಷ್ಯ. ಅವರಿಗೆ, ಉಸ್ಮಾನಿಯಾ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್, ಡಾ. ಡಿ.ಎಸ್. ರೆಡ್ಡಿಯವರು, ಪತ್ರ ಬರೆದು, ನನ್ನನ್ನು ಇಲ್ಲಿಂದ ಅಲ್ಲಿಗೆ ಎರಡು ವರ್ಷಗಳ ಕಾಲ ಕನ್ನಡ ವಿಭಾಗದ ರೀಡರ್ ಮತ್ತು ಮುಖ್ಯಸ್ಥನಾಗಿ ಡೆಪ್ಯುಟೇಷನ್ ಮೇಲೆ ಕಳುಹಿಸಿಕೊಡುವಂತೆ ಕೇಳಿಕೊಂಡರು. ಯಾವುದೇ ತೊಡಕಿಲ್ಲದೆ ಎಲ್ಲ ಸುಸೂತ್ರವಾಗಿ, ನನಗೆ ಉಸ್ಮಾನಿಯಾದಿಂದ ಕೆಲಸದ ಆರ್ಡರ್ ಬಂತು. ೧೯೬೩ನೇ ಸೆಪ್ಟಂಬರ್‌ದಲ್ಲಿ ಕರ್ಮ ಧರ್ಮಸಂಯೋಗದಿಂದ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಹೋದೆ.

* * *

೪೦

ತೀ.ನಂ.ಶ್ರೀಕಂಠಯ್ಯ ಮೈಸೂರು, ૩-૩-೧೯೫೮

'ಪ್ರಜಾವಾಣಿ'ಯ ಸಂಪಾದಕರಲ್ಲಿ ವಿಜ್ಞಾಪನೆಗಳು

ತಮ್ಮ ಪತ್ರಿಕೆಯ ೨-૩-೧೯೫೮ನೆಯ ಭಾನುವಾರದ ಸಂಚಿಕೆಯಲ್ಲಿ, ಆರನೆಯ ಪುಟದಲ್ಲಿ 'ಕನ್ನಡ ಜಾನಪದ ಸಾಹಿತ್ಯ'ಎಂಬ ಲೇಖನ "ತೀ.ನಂ.ಶ್ರೀಕಂಠಯ್ಯ" ಎಂಬ ಕರ್ತೃ

ನಿರ್ದೇಶನದೊಡನೆ ಪ್ರಕಟವಾಗಿರುವುದನ್ನು ನೋಡಿ ನನಗೆ ತುಂಬ ಆಶ್ಚರ್ಯವಾಯಿತು. ಕೊನೆಯಲ್ಲಿ ಏಳನೆಯ ಪುಟದಲ್ಲಿ "(ಆಕಾಶವಾಣಿ– ಧಾರವಾಡ)" ಎಂದು ಆಕರವನ್ನು ಬೇರೆ ಸೂಚಿಸಿದೆ.

ಈ ಲೇಖನಕ್ಕೂ ನನಗೂ ಯಾವ ಸಂಬಂಧವೂ ಇಲ್ಲ. ಆಕಾಶವಾಣಿಯಲ್ಲಿ ನಾನು "ಕನ್ನಡ ಜಾನಪದ ಸಾಹಿತ್ಯ" ಎಂಬ ಯಾವ ಭಾಷಣವನ್ನೂ ಪ್ರಸಾರ ಮಾಡಿಲ್ಲ. (ನಿಜವಾದ ವಿಷಯವನ್ನು ಹೇಳಬೇಕಾದರೆ ಕಳೆದ ಸುಮಾರು ನಾಲ್ಕು ವರ್ಷಗಳಿಂದ ನಾನು ಕಾರಣಾಂತರದಿಂದ "ಆಕಾಶವಾಣಿ"ಯ ಸಂಪರ್ಕವನ್ನೇ ಇಟ್ಟುಕೊಂಡಿಲ್ಲ.)

ಅಲ್ಲದೆ, ನಾನಂತೂ ತಮಗೆ ಪ್ರಕಟನೆಗಾಗಿ ಯಾವ ಲೇಖನವನ್ನೂ ಕಳಿಸಿಕೊಟ್ಟಿಲ್ಲ ವೆಂಬುದು ತಮಗೇ ತಿಳಿದಿದೆ. ಹೀಗಿರುವಲ್ಲಿ "ಕನ್ನಡ ಜಾನಪದ ಸಾಹಿತ್ಯ" ಎಂಬ ಈ ಲೇಖನ ಹೇಗೆ ನನ್ನ ಹೆಸರಿನಲ್ಲಿ ತಮ್ಮ ಪತ್ರಿಕೆಯಲ್ಲಿ ಪ್ರಕಟವಾಯಿತೆಂಬುದು ನನ್ನ ಊಹೆಗೆ ಮೀರಿದ ವಿಷಯವಾಗಿದೆ. (ತೀ.ನಂ.ಶ್ರೀಕಂಠಯ್ಯ ಎಂಬ ಹೆಸರಿನ ಬೇರೊಬ್ಬ ಲೇಖಕರು ಇರುವ ವಿಷಯವಾದರೂ ನನ್ನ ಗಮನಕ್ಕಂತೂ ಬಂದಿಲ್ಲ.)

ಪ್ರಕೃತ ಲೇಖನಕ್ಕೆ ನನ್ನ ಹೆಸರು ಹೇಗೆ ಅಂಟಿಕೊಂಡಿತೆಂಬುದನ್ನು ದಯವಿಟ್ಟು ನನಗೆ ಕೂಡಲೆ ತಿಳಿಸಬೇಕಾಗಿ ಕೋರುತ್ತೇನೆ. ಅಲ್ಲದೆ, ಈ ಲೇಖನ ನನ್ನದಲ್ಲವೆಂಬ ಅಂಶವನ್ನು ತಮ್ಮ ಪತ್ರಿಕೆಯಲ್ಲಿ ದಯವಿಟ್ಟು ಸ್ಪಷ್ಟವಾಗಿ ಪ್ರಕಟಿಸಬೇಕು. ಲೇಖನದ ನಿಜವಾದ ಕರ್ತೃಗಳ ಹೆಸರನ್ನೂ ಹಾಗೆಯೇ ಪ್ರಕಟಿಸಿದರೆ ಅವರಿಗೆ ಆಗಿರತಕ್ಕ ಅನ್ಯಾಯವೂ ಒದಗಿರಬಹುದಾದ ಮನಃಕ್ಲೇಶವೂ ಪರಿಹಾರವಾಗಬಹುದು.

ತಮ್ಮ ಉತ್ತರದ ನಿರೀಕ್ಷೆಯಲ್ಲೇ ಇದ್ದೇನೆ.

* * *

೪೧

ಸಂಪಾದಕರು, ಪ್ರಜಾವಾಣಿ — ಬೆಂಗಳೂರು, ೭–೩–೧೯೫೮

ಸನ್ಮಾನ್ಯರೇ,

ಮಾರ್ಚ್ ೩ನೆಯ ತಾರೀಕು ನೀವು ಬರೆದ ಪತ್ರ ತಲುಪಿದೆ. ಪ್ರಜಾವಾಣಿಯ ಕಳೆದ ಭಾನುವಾರದ ಸಂಚಿಕೆಯಲ್ಲಿ ತೀ.ನಂ.ಶ್ರೀ ಹೆಸರಿನಡಿಯಲ್ಲಿ ಪ್ರಕಟವಾದ ಲೇಖನ, "ಕರ್ಣಾಟಕ ವೈಭವ" ಎಂಬ ಹೆಸರಿನಲ್ಲಿ ಭಾರತ ಸರಕಾರದ ವಾರ್ತಾ ಪ್ರಸಾರ ಮಂತ್ರಿ ಶಾಖೆಯವರು ಪ್ರಕಟಿಸಿರುವ ಸಂಗ್ರಹದಲ್ಲಿ "ಶ್ರೀ.ತೀ.ನಂ.ಶ್ರೀಕಂಠಯ್ಯ" ಎಂಬ ಹೆಸರಿನಿಂದ ಪ್ರಕಟವಾಗಿದೆ. ಈ ಸಂಗ್ರಹದಲ್ಲಿರುವ ಲೇಖನಗಳೆಲ್ಲ ಆಕಾಶವಾಣಿಯಲ್ಲಿ ಪ್ರಸಾರವಾದ ಭಾಷಣಗಳು. ಅವನ್ನು ನಾವು ಒಂದೊಂದಾಗಿ ಪ್ರಕಟಿಸುತ್ತಿದ್ದೇವೆ.

'ತೀ.ನಂ.ಶ್ರೀ.'ಎಂಬ ಹೆಸರಿನ ಲೇಖಕರು ನೀವಲ್ಲದೆ ಬೇರೊಬ್ಬರಿದ್ದಾರೆಯೆ? ಎಂಬ ಬಗ್ಗೆ ಪ್ರಸಾರ ಶಾಖೆಯೊಡನೆ ವ್ಯವಹರಿಸುತ್ತಿದ್ದೇವೆ. ಫಲಿತಾಂಶವನ್ನೂ, ಆಗಿರಬಹುದಾದ ತಪ್ಪನ್ನು ಸರಿಪಡಿಸುವ ಕ್ರಮವನ್ನು ಅನಂತರ ತಿಳಿಯಪಡಿಸುತ್ತೇವೆ.

ಇತಿ ವಿಶ್ವಾಸಿ
ರಾಮಚಂದ್ರರಾವ್

* * *

೪೨

T.N. Sreekantaiya — Mysore, 10th October 1961

Secretary
Indian Institute of World Culture, Bangalore

Dear sir

Your kind letter of the 6th inst. It makes me happy to know that my lecture on "Kannada Literature" was received well by your audience.

I should have ordinarily closed this letter with an expression of thanks to your Institute for the invitation to address a cultured gathring. But after a long deliberation I have come to the conclusion that I should invite your kind attention to the following.

I am sure you are not unaware of the fact that in the Kannada country it is customary for an Institution which invites a lecturer from a place outside its headquarters to meet the travelling and incidental expenses incurred by the lecturer particulary when he undertakes the journey for the sole purpose of delivering the lecture. This practice is so common now a days that the inviting Institution does not ever refer ordinarily to this arrangement about the expenses in its letter of invitation. If the Institution for a any reason, cannot undertake to bear the expenses, it requests the lecturer to deliver his lecture when he happens to visit the city for some other purpose. And the Institution arranges to bring the lecturer from and send him back to the place of

his stay in the city at the time, unless the host with whom the lecturer is staying offers to undertake this responsibility.

I readily agreed to accept your invitation and come to Bangalore on the date suggested by you since I cherish a high regard for your Institute and the splendid work it has been doing all these years, and I did not want that the inauguration of the series of lectures on "Literatures" should be delayed unduly on my account. I went to Bangalore on the 5th inst for the sole purpose, as you know of delivering the lecture ; and I may even mention that I took a day's casual leave for doing so. My actual travelling-expenses including first class railway fare to and fro and the incidental conveyance charges - amounted to not less than twenty five rupees. I expected-not unreasonably I hope - that you would make reference, when we met after the lecture, to my travelling expenses, etc. But I must confess that I was rather surprised when there was not even the usual enquiry about my place of stay at Bangalore and the conveyance to and from the lecture hall, let alone my travelling expenses from and to Mysore. I went to the Bus stand with few young friends who happened to attend the lecture and helped me to overcome my sense of loneliness; infact they accompanied me to Malleswaram where I was staying.

I am afraid that what I have written above is likely to displease you; but I felt that in fairness to the reputaton of the Indian Institute of World Culture and to the lecturers who, like myself, happen to come to Bangalore from elsewhere, silence on my part over this affair would not be right. I belive that unless there is a definite understanding to the contrary a lecturer should not be put to the trouble of spending his own money on travel, etc. for the pleasure of delivering a lecture. I have no wish to elaborate this point. I only request that some considertaion be given to what I have written above.

* * *

೪೩

The Indian Institute of World Culture

Bangalore, 16th October 1961

Dear Shri Sreekantaiya,

We thank you for your letter of 10th October. We are very sorry for the misunderstanding that has occurred and we entirely agree with you. I was ill and out of station and not able therefore to inform you as we do generally to all our lecturers in advance. We also not only provide transport but alwlays meet our lecturers. I am sure you will understand that we have a very small staff and our Secretary.... has just joined our Institute. Therefore please excuse us for all the inconvenience. We are very sorry that this should have happened to you. We thank you for having written to us and we are sending you by Money Order today Rs. 25/- to meet the expenses of your fare as requested by you.

With best wishes,

Sincerely yours,
(Jacques Dedeyn)
Honorary Director

* * *

೪೪

T.N. Sreekantaiya — Mysore, 21st Oct, 1961

Dear Mr Dedeyn

Your kind letter of the 16th inst. I have also received with thanks the sum of rupees twenty-five sent by you to meet my travelling and incidental expenses.

Please excuse me if my earlier letter has caused you any unintended pain. It was only meant to safeguard the interest of both the Institute and the Lecturer. Let us forget the episode.

with kind regards

* * *

೪೫

'ಜ್ಞಾನೋಪಾಸಕ' ಪುಸ್ತಕಕ್ಕೆ ತೀ.ನಂ.ಶ್ರೀ.ಯವರ ಮುನ್ನುಡಿ

ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರೂ ನಾನೂ ಒಬ್ಬರನ್ನೊಬ್ಬರು ಬಾಲ್ಯದಿಂದ ಬಲ್ಲವರು; ಕೆಲಕಾಲ ಜೊತೆಯಲ್ಲಿ ಓದಿದವರು; ಬಹುಕಾಲ ಜೊತೆಯಾಗಿ ದುಡಿದವರು; ವಯಸ್ಸಿನೊಂದಿಗೆ ಸ್ನೇಹವನ್ನೂ ಜೊತೆ ಜೊತೆಗೇ ಬೆಳಸಿಕೊಂಡವರು. ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನೂ ಅವರ ಕಾರ್ಯಕ್ಷೇತ್ರದ ಹಲವು ಸಾಧನೆಗಳನ್ನೂ ಕುರಿತು ಅವರ ಶಿಷ್ಯರೂ ಮಿತ್ರರೂ ನಿಕಟ ಪರಿಚಯದಿಂದ ಬರೆದಿರುವ ಲೇಖನಗಳ ಈ ಸಂಕಲನಕ್ಕೆ ಮುನ್ನುಡಿಯಾಗಿ ನನ್ನ ಎರಡು ಮಾತನ್ನೂ ಸೇರಿಸಬೇಕೆಂದು ಇದರ ಪ್ರಕಾಶಕರು ಅಪೇಕ್ಷಿಸಿ ನನ್ನನ್ನು ಗೌರವಿಸಿದ್ದಾರೆ. ನರಸಿಂಹಾಚಾರ್ಯರಲ್ಲಿ ನನಗಿರುವ ಪ್ರೀತಿಯನ್ನೂ ಮೆಚ್ಚಿಕೆಯನ್ನೂ ಸೂಚಿಸುವುದು ನನಗೆ ಯಾವಾಗಲೂ ಸಂತೋಷದ ವಿಷಯವೇ. ಅದರಲ್ಲೂ, ಇನ್ನೂ ಹಲವರಿಗಿದ್ದಂತೆಯೇ ನಮ್ಮಿಬ್ಬರಿಗೂ ಕೂಡ ಹಿರಿಯ ಕನಸಾಗಿದ್ದ ಕನ್ನಡ ನಾಡಿನ ಏಕೀಕರಣವು ಈಚೆಗೆ ಫಲಿಸಿ, ದೂರದ ಬಿದರೆ ಪಟ್ಟಣ ರಾಜ್ಯದ ಉತ್ತರದ ಗಡಿಯೊಳಕ್ಕೇ ಬಂದು, ಅಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಪ್ರೊ॥ ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ವಿಶೇಷ ಸಂದರ್ಭದಲ್ಲಿ ಈ ಎರಡು ಮಾತನ್ನು ಬರೆಯುವುದು ನನಗೆ ಹೆಚ್ಚಿನ ಸಂತೋಷದ ವಿಷಯ. ಆದರೆ, ಆಪ್ತಮಿತ್ರನನ್ನು ಕುರಿತು ಬರೆಯುವುದರಲ್ಲಿ ಸಂತೋಷದ ಜೊತೆಗೆ ಸಂಕೋಚವೂ ಬೆರೆಯುತ್ತದೆ. ಆತ್ಮೀಯತೆಯ ಬಣ್ಣ ಕವಿದು ಪ್ರಶಂಸೆ ಎಲ್ಲಿ ಹದಮೀರುತ್ತದೊ ಎಂಬ ಭಯದಿಂದ ಉತ್ಸಾಹವನ್ನು ಅದುಮಿಕೊಳ್ಳುವ ಸಂಭವವೂ ಇಲ್ಲಿ ಉಂಟು!

ಡಿ.ಎಲ್.ಎನ್. ಎಂದರೆ ಪಾಂಡಿತ್ಯ, ಪಾಂಡಿತ್ಯ ಎಂದರೆ ಡಿ.ಎಲ್.ಎನ್.ಎನ್ನುವುದು ಕನ್ನಡ ಬಲ್ಲವರಲ್ಲೆಲ್ಲಾ ಈಗ ರೂಢಿಯ ಭಾವನೆಯಾಗಿದೆ. ಪಾಂಡಿತ್ಯದ ಗಳಿಕೆಗಾಗಿ, ಬೆಳವಣಿಗೆಗಾಗಿ, ಏಳಿಗೆಗಾಗಿ ಜೀವಮಾನವನ್ನೇ ತೇಯುತ್ತಿರುವವರು ನರಸಿಂಹಾಚಾರ್ಯರು. ಪಾಂಡಿತ್ಯ ಎನ್ನುವುದು ಕೇವಲ ಸಮಯಸ್ಫೂರ್ತಿಯಿಂದ ಮಿಂಚುವ ವಸ್ತುವಲ್ಲ. ನಿರಂತರವಾದ ವ್ಯಾಸಂಗವೇ ಅದನ್ನು ಸಾಧಿಸುವ ರಾಜಮಾರ್ಗ. ಕಣಕಣವಾಗಿ ವಿಷಯ ಸಂಗ್ರಹಮಾಡಿ, ಸಂಶೋಧನೆ ಮಾಡಿ, ತನ್ನ ಕಣಜವನ್ನು ತುಂಬಿಕೊಳ್ಳಬೇಕು. ಈ ತುಣುಕುಗಳು ಎಲ್ಲಿ ದೊರೆಯುತ್ತವೆ?–ಯಾವ ನಿಘಂಟಿನಲ್ಲಿ, ಯಾವ ಓಲೆಗರಿಯ ಪ್ರತಿಯಲ್ಲಿ, ಯಾವ ಶಾಸನದಲ್ಲಿ, ಯಾವ ಶಾಸ್ತ್ರಗ್ರಂಥದಲ್ಲಿ, ಯಾವ ಭಾಷೆಯ ಯಾವ ಸಂಶೋಧನ ಪತ್ರಿಕೆಯಲ್ಲಿ, ಯಾವ ಪ್ರದೇಶದ ಮನೆ ಮಾತಿನಲ್ಲಿ?–ಎಂದು ಕಣ್ಣು ಕಿವಿಗಳನ್ನು ತೆರೆದುಕೊಂಡೇ ಗಮನವಿಡಬೇಕು. ಒಂದು ಶಬ್ದದ ಮೂಲವನ್ನು ಪರಿಶೋಧಿಸುವುದಕ್ಕಾಗಿ, ಅದರ ಅರ್ಥವನ್ನು ನಿರ್ಣೈಸುವುದಕ್ಕಾಗಿ ನರಸಿಂಹಾಚಾರ್ಯರು ಪಟ್ಟಿರುವ ಶ್ರಮವನ್ನು ಅವರೇ ಬಲ್ಲರು. ಫಲ ದೊರೆತಾಗ ಅವರಿಗೆ ಯಾವ ಆನಂದ ದೊರೆಯಿತೆಂಬುದನ್ನು ಅವರ ಮುಖ ನೋಡಿಯೇ ಅರಿಯಬೇಕು; ಆ ಆನಂದದಲ್ಲಿ ನಾವೂ ಭಾಗಿಗಳಾಗಬೇಕು.

ಕೆಲವು ತಿಂಗಳ ಕೆಳಗೆ ಇಂಥ ಒಂದು ಕಗ್ಗಂಟನ್ನು ಅವರು ಬಿಡಿಸಿದ ಸಂದರ್ಭ ನೆನಪಿಗೆ ಬರುತ್ತದೆ. ಒಂದು ಸಂಜೆ ನರಸಿಂಹಾಚಾರ್ಯರು ನಮ್ಮ ಮನೆಗೆ ಬಂದಿದ್ದಾಗ, "ಎಲ್ಲಿ, ಆದಿಪುರಾಣ ತೆಗೆಯಿರಿ" ಎಂದರು;

ಪೊಳೆವಲರಮರ್ದಿನ ಕಪ್ಪುರ-
ವಳುಕಿನ ಕತ್ತುರಿಯ ಕೊಳತ (ದೂ) ರ್ವಾಭರಣಂ-।
ಗಳ ಪೊಳೆವ ಮಾಣಿಕಂಗಳ
ಬೆಳಗಿದೆ ಸೂಚಿಸಿತು ಭರತನಂತಃಪುರಮಂ॥ (೧೧.೪೩)

ಎಂಬ ಪದ್ಯವನ್ನು ತೋರಿಸಿ, "ಇಲ್ಲಿ 'ಕೊಳತ' ಎಂದರೆ ಏನು?" ಎಂದರು. ಇದು ಬಹುದಿನಗಳಿಂದ ಕನ್ನಡದ ಉಪಾಧ್ಯಾಯರನ್ನು ಬಾಧಿಸಿರುವ ಪ್ರಶ್ನೆ. ಪ್ರೊ. ಕುಂದಣಗಾರರ ಇತ್ತೀಚಿನ ಪರಿಷ್ಕರಣದಲ್ಲಿ ಕೂಡ "(ಕೊಳದ)" ಎಂಬುದು ಮೂಲಪಾಠವಾಗಿರಬಹುದೆಂದು ಊಹೆ ಮಾಡಿ ಕೈ ಬಿಡಲಾಗಿದೆ. ನಾನು ತಲೆಯಲ್ಲಾಡಿಸಿದೆ. "ಅದು 'ಕೊಳೆತು ಹೋದ' ಎಂಬುದಂತೂ ಅಲ್ಲ. ಇಲ್ಲಿ ಱಟಿ ಇರಬೇಕೋ ಹೇಗೆ?" ಎಂದೆ. ನರಸಿಂಹಾಚಾರ್ಯರು "ಅದರ ಸರಿಯಾದ ರೂಪ 'ಕೊಱತ', 'ಎಳೆಯ, ಹೊಸ' ಎಂದು ಅದರ ಅರ್ಥ. ತೆಲುಗಿನ 'ಕ್ರೊತ್ತ'ವನ್ನು ಜ್ಞಾಪಿಸಿಕೊಳ್ಳಿ" ಎಂದರು. ಅವರ ಮುಖದ ಮೇಲೆ ಉಲ್ಲಾಸದ ಮಿಂಚು ಹೊಳೆಯಿತು. ಅದರ ಬೆಳಕಿನಲ್ಲಿ ನನ್ನ ಬಹುಕಾಲದ ಸಂದೇಹ ಹರಿದುಹೋಯಿತು! ತೆಲುಗಿನ 'ಕ್ರೊತ್ತ' (=ಹೊಸ)ದ ಪೂರ್ವರೂಪವೂ ಹಳಗನ್ನಡದಲ್ಲಿ ನಿಂತ ರೂಪವೂ ಒಂದೇ: 'ಕೊಱತ'. ತೆಲುಗಿನಲ್ಲಿ, *ಕೊಱತ>ಕ್ರೊತ್ತ, *ಪೊಱಿಲ್>ಪ್ರೋಲು: ಹೀಗೆ ಧ್ವನಿ ವ್ಯತ್ಯಾಸವಾಗುವುದು ಹಳೆಯ ತೆಲುಗಿನ ಸಾಮಾನ್ಯ ನಿಯಮ. ತಮಿಳಿನ 'ಕುಱನ್ದೈ' (=ಶಿಶು) ಮೊದಲಾದ ಶಬ್ದಗಳನ್ನು ಇಲ್ಲಿ ಸ್ಮರಿಸಬಹುದು. ಅಂತೂ ಪಂಪನ ಆದಿಪುರಾಣದಲ್ಲಿ 'ಕೊಱತ ದೂರ್ವಾಭರಣ' ಎಂದರೆ 'ಎಳೆಯ ಗರಿಕೆಯ ಆಭರಣ'; ಇದು ಮಾಂಗಲ್ಯ ಸೂಚಕವಾದ ದ್ರವ್ಯ. ಪಂಪನು ಈ ಅಪೂರ್ವದ ಪದವನ್ನು ಉಳಿಸಿಕೊಟ್ಟದ್ದಕ್ಕಾಗಿ ಅವನಿಗೆ ನಾವು ಕೃತಜ್ಞರಾಗಿರಬೇಕು; ದ್ರಾವಿಡ ಭಾಷಾಶಾಸ್ತ್ರ ಜ್ಞಾನದ ಬಲದಿಂದ ಅದರ ಮೂಲವನ್ನು ಬೆಳಗಿ, ಅರ್ಥವನ್ನು ಸ್ಫುಟಮಾಡಿಕೊಟ್ಟದ್ದಕ್ಕಾಗಿ ಪಂಪನ ಭಕ್ತರಾದ ನರಸಿಂಹಾಚಾರ್ಯರಿಗೆ ನಾವು ಕೃತಜ್ಞರಾಗಿರಬೇಕು. ಕಾಲಪುರುಷನ ವಿಸ್ಮೃತಿಯ ತೆರೆಮರೆಯಿಂದ ಜ್ಞಾನಕಣಗಳನ್ನು ನರಸಿಂಹಾಚಾರ್ಯರು ಬಯಲಿಗೆ ತರುವುದನ್ನು ನೋಡಿದಾಗ ನನಗೆ ಇಂಗ್ಲಿಷಿನ ಒಂದು ದ್ವಿಪದಿ ಜ್ಞಾಪಕಕ್ಕೆ ಬರುತ್ತದೆ; ಕ್ರಿ.ಶ. ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿದ್ದ ಹರ್ನ್ ಎಂಬ ಪ್ರಾಕ್ತನ ಸಂಶೋಧಕನನ್ನು ಕುರಿತ ಪದ್ಯ ಅದು:

"Quoth Time to Thomas Hearne-
Whatever I forgot you learn"

ಪಾಂಡಿತ್ಯವೆಂದರೆ ಕೇವಲ ವಿಷಯರಾಶಿಯ ಸಂಗ್ರಹವಲ್ಲ. ಆ ರಾಶಿ ಬೇಕೇ ಬೇಕು. ಆದರೆ ಅಷ್ಟೇ ಸಾಲದು. ಆ ವಿವಿಧ ವಿಷಯಗಳಲ್ಲಿ ಮರೆಯಾಗಿರುವ ಸಂಬಂಧಗಳನ್ನು ಊಹಿಸಿ ಗ್ರಹಿಸಿ, ಎಳೆಗಳ ತೊಡಕುಗಳನ್ನು ಬಿಡಿಸಿ ಕೂಡಿಸಿ, ತತ್ತ್ವವನ್ನು ಬೆಳಗುವ ಸಂಯೋಜಕ

ಪ್ರತಿಭೆಯೂ ಜೊತೆಗೆ ಅವಶ್ಯವಾಗಿ ಬೇಕು. ಇದು ನರಸಿಂಹಾಚಾರ್ಯರಲ್ಲಿ ಹೇಗೆ ಕೆಲಸ ಮಾಡುತ್ತಿರುತ್ತದೆ ಎಂಬುದನ್ನು ನಾನು ಹಲವು ಸಂದರ್ಭಗಳಲ್ಲಿ ಮನಗಂಡು ಬೆರಗಾಗಿದ್ದೇನೆ. ಹಳಗನ್ನಡ ಭಾಷೆ ಸಾಹಿತ್ಯಗಳ ವಿಷಯಕ್ಕಂತೂ– ಹಲವರು ಹೇಳಿರುವಂತೆ, ನಾನೂ ಬಲ್ಲಂತೆ– ಅವರೊಂದು "ಜಂಗಮ ಬೃಹತ್ಕೋಶ". ಅವರಿಗೂ ಹರಿಯದಿರುವ ಪ್ರಶ್ನೆಗಳು ಇಲ್ಲವೆಂದಲ್ಲ. ಆದರೆ ಹಳಗನ್ನಡದಲ್ಲಿ ಅವರಿಗಿಂತಲೂ ನಿಷ್ಣಾತರಾದ ವಿದ್ವಾಂಸರನ್ನು ಸದ್ಯದಲ್ಲಿ ಕಾಣುವುದು ಅಶಕ್ಯವೆಂದೇ ನನ್ನ ಭಾವನೆ.

ನರಸಿಂಹಾಚಾರ್ಯರ ಪಾಂಡಿತ್ಯಕ್ಕೆ ಅವರ ಜ್ಞಾಪಕಶಕ್ತಿಯ ಬೆಂಬಲ ಅತ್ಯಧಿಕ. ಚಿಕ್ಕಂದಿನಲ್ಲಿ ಪ್ರಖರವಾಗಿದ್ದ ತಮ್ಮ ಸ್ಮೃತಿಶಕ್ತಿ ಈಗ ಕುಗ್ಗಿದೆಯೆಂದು ಅವರು ಒಮ್ಮೊಮ್ಮೆ ಕೊರುಗುವುದುಂಟು. ಆದರೆ ಇದೆಲ್ಲ ಶ್ರೀಮಂತನು ಕೊಂಚ ಹಣವನ್ನು ಕಳೆದುಕೊಂಡು ಕೊರಗಾಡುವಂತೆ; ಈ ವಿಷಯದಲ್ಲಿ ಅವರಿಗೆ ನಾನು ಹೆಚ್ಚು ಸಹಾನುಭೂತಿಯನ್ನು ತೋರಿಸಲಾರೆ. ಈ ವಯಸ್ಸಿನಲ್ಲಿ ಕೂಡ ಅವರಿಗೆ ವಿಸ್ತಾರವಾದ ಟಿಪ್ಪಣಿಗಳು, ಸೂಚೀಪಟ್ಟಿಕೆಗಳು (Index cards) ಮೊದಲಾದ ಆಧುನಿಕ ವಿದ್ವತ್ತಿನ ಪರಿಕರಗಳು ಅವಶ್ಯವೆನಿಸಿಲ್ಲ. ಕಂಬಚ್ಚಿನಲ್ಲಿ ಚಿನ್ನದ ತಂತಿಯನ್ನು ಎಳೆದ ಹಾಗೆ ಅವರ ಬಾಯಿಂದ ಹಳಗನ್ನಡದ ಪದ್ಯಮಾಲೆ ಈಗಲೂ ಸರಾಗವಾಗಿ ಹರಿದು ಬರುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಯಾವುದೋ ಒಂದು ಸಂಶೋಧನ ಪತ್ರಿಕೆಯಲ್ಲಿ ಅವರು ಒಮ್ಮೆ ಓದಿದ್ದ ಒಂದು ಲೇಖನದೊಳಗಿನ ವಿಷಯ ರೇಡಿಯೋವಿನಲ್ಲಿ ಮುಳ್ಳನ್ನು ಗೊತ್ತಾದ ಸ್ಥಾನಕ್ಕೆ ಜರುಗಿಸಿದ ಕೂಡಲೆ ಸಂಗೀತದ ಧ್ವನಿ ಎದ್ದು ಬರುವಂತೆ ಅವರ ಕಣ್ಣಮುಂದೆ ಎದ್ದು ನಿಲ್ಲುತ್ತದೆ.

ನರಸಿಂಹಾಚಾರ್ಯರ ಶಿಷ್ಯರಾಗಿ ಅವರಿಂದ ಪಾಠ ಕಲಿತ ವಿದ್ಯಾರ್ಥಿಗಳು ನಿಜವಾಗಿಯೂ ಧನ್ಯರು. ಭಾಷೆಯ ರಹಸ್ಯ, ಸಾಹಿತ್ಯದ ಸ್ವಾರಸ್ಯ ಎರಡನ್ನೂ ಏಕರೀತಿಯ ಉತ್ಸಾಹದಿಂದ ಮನಮುಟ್ಟಿಸಬಲ್ಲ ಸವ್ಯಸಾಚಿಗಳು ಅವರು. ಪ್ರಸ್ತುತ ಲೇಖನ ಸಂಗ್ರಹದಲ್ಲಿ ಅವರ ಶಿಷ್ಯರು ಬರೆದಿರುವುದನ್ನು ಓದಿದಾಗ, ಈ ಶ್ರೇಷ್ಠ ಉಪಾಧ್ಯಾಯನ ತರಗತಿಗಳಲ್ಲಿ ಕುಳಿತು ಪಾಠ ಕೇಳುವ ಅವಕಾಶ ನನಗೂ ಒದಗಬಾರದಾಗಿತ್ತೆ ಎಂದು ನಿಜವಾಗಿಯೂ ಅನ್ನಿಸಿತು. ಆದರೆ, ಆಗ ಅವರ ಆತ್ಮೀಯ ಸ್ನೇಹವೂ ಸಲಿಗೆಯೂ ನನಗೆ ಈಗಿನಂತೆ ಬಹುಶಃ ದೊರೆಯುತ್ತಿರಲಿಲ್ಲವೇನೋ ಎಂದು ತೋರಿ ಮನಸ್ಸು ಸಮಾಧಾನಕ್ಕೆ ಬಂದಿತು!

ಜೀವನದಲ್ಲಿ ಪ್ರೇಮ ಎಷ್ಟು ದೊಡ್ಡದೋ ಸ್ನೇಹವೂ ಅಷ್ಟೇ ದೊಡ್ಡದು. ಪ್ರೇಮಕ್ಕೆ ಏಕವ್ಯಕ್ತಿನಿಷ್ಠೆಯ ನಿಯಮವುಂಟು. ಸ್ನೇಹಕ್ಕಾದರೆ ಆ ಪರಿಮಿತಿಯೂ ಇಲ್ಲ. ನರಸಿಂಹಾಚಾರ್ಯರಂಥ ದೊಡ್ಡಮನಸ್ಸಿನ ಪ್ರಿಯಮಿತ್ರರನ್ನು ಪಡೆದಿರುವುದು ನನ್ನ ಭಾಗ್ಯವಿಶೇಷ. ವಿದ್ವತ್ತಿನ ವಿಷಯವಾಗಿ ಅವರೂ ನಾನೂ ಹಲವು ಸಲ ಬಿರಿಸಾಗಿಯೇ ಚರ್ಚೆ ಮಾಡಿದ್ದೇವೆ; ಕಾದಾಡಿದ್ದೇವೆ ಕೂಡ! ಎಷ್ಟೋ ವಿಚಾರಗಳಲ್ಲಿ ಅಭಿಪ್ರಾಯ ಭೇದಗಳನ್ನು ಜೋಕೆಯಿಂದ ಉಳಿಸಿಕೊಂಡು ಬಂದಿದ್ದೇವೆ. ಆದರೆ ಇದೊಂದು ಸ್ನೇಹದ ನಿರ್ಮಲತೆಯನ್ನು ಕದಡಿಲ್ಲ. ಹಾಗೆ ನೋಡಿದರೆ, ಕಾಲಚಕ್ರ ಉರುಳಿದಂತೆಲ್ಲ ಸಂಕೋಚದ ತೆರೆಗಳು ಸರಿದು, ಮನಸ್ಸುಗಳು

ಬಲು ಹತ್ತಿರಕ್ಕೆ ಬಂದಿವೆ. ನರಸಿಂಹಾಚಾರ್ಯರಂಥ ಮಿತ್ರರನ್ನು ನೆನೆದಾಗ, "ಕೇನಾಮೃತಮಿದಂ ಸೃಷ್ಟಂ ಮಿತ್ರಮಿತ್ಯಕ್ಷರದ್ವಯಂ" ಎಂದು ಚಿಕ್ಕಂದಿನಲ್ಲಿ ಓದಿದ ಸುಭಾಷಿತ ಪಂಕ್ತಿ ನೆನಪಾಗುತ್ತದೆ. ಈ ಸನ್ಮಿತ್ರನ ಅಪರಂಜಿಯಂಥ ಮನಸ್ಸಿನ ಅರಿವು ಕನ್ನಡಿಗರಿಗೆಲ್ಲ ಚೆನ್ನಾಗಿ ಉಂಟಾಗಲಿ. ಈತನ ಪಾಂಡಿತ್ಯಸೌಧಕ್ಕೆ ಕಳಶವಿಟ್ಟಂತೆ ಒದಗಿರುವ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆ ಈತನ ಸಿದ್ಧಿಯ ಔನ್ನತ್ಯಕ್ಕೆ ದೀವಿಗೆಯಾಗಿ ಬೆಳಗಲಿ.

* * *

೪೬

ತೀ.ನಂ.ಶ್ರೀ ಮತ್ತು ಡಿ.ಎಲ್.ಎನ್.: ಕೆಲವು ನೆನಪುಗಳು

ಎಂ. ಚಿದಾನಂದಮೂರ್ತಿ

ಈ ಇಬ್ಬರಲ್ಲಿ ಯಾರ ಬಗ್ಗೆ ಮಾತನಾಡುವಾಗಲಾಗಲಿ ಅಥವಾ ಬರೆಯುವಾಗಲಾಗಲಿ ಇನ್ನೊಬ್ಬರ ಜ್ಞಾಪಕ ಬಂದೇ ಬರುತ್ತದೆ. ಹಿಂದಿನ ತಲೆಮಾರಿನ ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿಗಳನ್ನು ನೆನಪಿಗೆ ತರುತ್ತದೆ ಈ ಜೋಡಿ.

ತೀ.ನಂ.ಶ್ರೀ.ಮತ್ತು ಡಿ.ಎಲ್.ಎನ್. ಇಬ್ಬರೂ ಪರಮ ಮಿತ್ರರು ಎಂಬುದು ಸುಪ್ರಸಿದ್ಧ ಸಂಗತಿಯೇ. ಅವರಿಬ್ಬರೂ ದೊಡ್ಡ ವಿದ್ವಾಂಸರು ಎಂಬ ಸಂಗತಿಯೂ ಅಷ್ಟೇ. ಆದರೆ ಪಾಂಡಿತ್ಯದಲ್ಲಿ ಒಂದು ರೀತಿಯಲ್ಲಿ ಅವರು ಪರಸ್ಪರ ಪೂರಕವಾಗಿದ್ದಂತೆ ಅನೇಕರಿಗೆ ಅನ್ನಿಸಿದೆ. ಅವರಲ್ಲಿ ಯಾರು ದೊಡ್ಡವರು ಎಂದಾಗ, ಯಾವ ಕ್ಷೇತ್ರದಲ್ಲಿ ಎಂದು ಪ್ರಶ್ನಿಸಬೇಕಾಗುತ್ತದೆ. ಹಳಗನ್ನಡ ಪಾಂಡಿತ್ಯದಲ್ಲಿ ಡಿ.ಎಲ್.ಎನ್., ವಿಮರ್ಶೆಯಲ್ಲಿ ತೀ.ನಂ.ಶ್ರೀ. ದೊಡ್ಡವರು. ಆದರೆ ಸತ್ಯನಿಷ್ಠೆ, ಕಾವ್ಯಪ್ರೇಮ, ದುಡಿಮೆ ಇವುಗಳಲ್ಲಿ ಇಬ್ಬರೂ ಸಮಾನರು.

ನನಗೆ ತೀ.ನಂ.ಶ್ರೀ.ಯವರು ದಾವಣಗೆರೆಯಲ್ಲಿ ಉಪಾಧ್ಯಾಯರಾಗಿದ್ದರು. (ನಾನು ಇಂಟರ್ ನಲ್ಲಿದ್ದಾಗ.) ಮೈಸೂರಿಗೆ ಆನರ್ಸ್‌ಗೆ ಹೋಗಿ ಸೇರಿದ ಬಳಿಕ ಡಿ.ಎಲ್.ಎನ್. ಉಪಾಧ್ಯಾಯ ರಾದರು. ಒಂದು ಸಾರಿ ತೀ.ನಂ.ಶ್ರೀ. ಯವರು ಡಿ.ಎಲ್.ಎನ್. ಅವರ ಮನೆಯಲ್ಲಿ ಉಳಿದು ಕೊಂಡಿದ್ದು, ರಾತ್ರಿ ಅವರನ್ನು ಮನೆಗೆ ಕಳುಹಿಸಲು ಕೆಲವರು ವಿದ್ಯಾರ್ಥಿಗಳು ಹೋದೆವು. ಆಗ ಅವರು ನರಸಿಂಹಾಚಾರ್ಯರನ್ನು ದಾರಿಯುದ್ದಕ್ಕೂ ಮುಕ್ತಕಂಠದಿಂದ ಹೊಗಳುತ್ತ ಅವರನ್ನು ಉಪಾಧ್ಯಾಯರನ್ನಾಗಿ ಪಡೆದು ನೀವೇ ಧನ್ಯರು ಎಂದರು. ಆ ಮಾತು ಆಗಿನ ಕಾಲದಲ್ಲಿ ಎಷ್ಟು ಅರ್ಥವಾಯಿತೋ ತಿಳಿಯದು. ಈಗ ಅದರ ಅರ್ಥ ತೋರಿ ಬರುತ್ತಿದೆ.

ಆನರ್ಸ್ ಮುಗಿಸಿದ ಮೂರು ವರ್ಷಗಳ ಬಳಿಕ ಎಂ.ಎ.ಗೆ ಹೋದಾಗ ನರಸಿಂಹಾಚಾರ್ಯರು ಮೊದಲು ಕೆಲವು ಕಾಲ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದು, ಧಾರವಾಡದಿಂದ ತೀ.ನಂ.ಶ್ರೀ. ಬಂದಾಗ ಬಹು ಸಂಭ್ರಮದಿಂದ ಜವಾಬ್ದಾರಿಯನ್ನು ಅವರ ಕೈಗೆ ಒಪ್ಪಿಸಿದರು. ಶ್ರೀಕಂಠಯ್ಯ ನವರು ಬಂದದ್ದು ತಮಗೆ 'ಕಣ್ ಬಂದಂತೆ', 'ಕೈ ಬಂದಂತೆ' ಆಗಿದೆ ಎಂದು

ನರಸಿಂಹಾಚಾರ್ಯರು ಉಬ್ಬಿ ಹೇಳಿಕೊಂಡದ್ದನ್ನು ನಾನೆಂದೂ ಮರೆಯಲಾರೆ. ಅವರಿಬ್ಬರೂ ಆಗಾಗ್ಗೆ ಸರಸ ಸಂಭಾಷಣೆ ಮಾಡುತ್ತ, ಹಾಸ್ಯ ಮಾಡಿ, ಮಾಡಿಸಿಕೊಂಡು ನಗುತ್ತಿದ್ದುದನ್ನು ಎಲ್ಲರೂ ಬಲ್ಲರು.

ಮುಂದೆ ಎಂ.ಎ. ತರಗತಿಗಳು ಮಹಾರಾಜಾ ಕಾಲೇಜಿನಿಂದ ಮಾನಸಗಂಗೋತ್ರಿಯ ಹೊಸ ಆವರಣಕ್ಕೆ ವರ್ಗವಾದಾಗ, ಶ್ರೀಕಂಠಯ್ಯನವರು ಅಲ್ಲಿಗೆ ಹೋಗಬೇಕಾಯಿತು. ನರಸಿಂಹಾಚಾರ್ಯರು ಮಹಾರಾಜಾ ಕಾಲೇಜಿನಲ್ಲಿಯೇ ಉಳಿದರು. ಆದರೆ 'ಅವರಿಲ್ಲದೆ ಎಂ.ಎ.ಗೆ ಎಂತಹ ಪಾಠ' ಎಂದು ನಂಬಿದ್ದ ಶ್ರೀಕಂಠಯ್ಯನವರು ಕೆಲವು ಕಾಲದಲ್ಲಿಯೇ ಅವರನ್ನು ಕರೆಯಿಸಿಕೊಂಡರು. ಆಗ ಹೊಸದಾಗಿ ಗ್ರಂಥ ಸಂಪಾದನೆಯನ್ನು ಅಧ್ಯಯನ ವಿಷಯವಾಗಿ ಗೊತ್ತು ಮಾಡಿದ್ದರು. ನರಸಿಂಹಾಚಾರ್ಯರು ಗಂಗೋತ್ರಿಗೆ ವರ್ಗವಾಗಿ ಬರುವುದು ಕೆಲವು ಕಾಲ ಹಿಡಿದಿದ್ದರಿಂದ ಶ್ರೀಕಂಠಯ್ಯನವರೇ ಆ ಪಾಠಗಳನ್ನು ಆರಂಭಿಸಿದ್ದರು. ವಿದ್ಯಾರ್ಥಿಗಳ ಜೊತೆ ನಾವು ಕೆಲವರು ಹೋಗಿ ಪಾಠಗಳನ್ನು ಕೇಳುತ್ತಿದ್ದೆವು. ಮುಂದೆ ನರಸಿಂಹಾಚಾರ್ಯರು ಬಂದ ತಕ್ಷಣ ಆ ಪಾಠಗಳ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿದರು. ನರಸಿಂಹಾಚಾರ್ಯರು ಪ್ರತಿ ಪಾಠದ ದಿನವೂ ತರಗತಿಗೆ ಪೂರ್ಣ ಸಿದ್ಧತೆಯನ್ನು ಮಾಡಿಕೊಂಡು ಬರುತ್ತಿದ್ದರು. ಒಂದು ದಿನ ಅವರ ಟಿಪ್ಪಣಿ ಅರ್ಧ ಗಂಟೆಗೆ ಮುಗಿದು ಹೋಯಿತು. ಆಗ ಅವರು ಕೊನೆಯ ಹಾಳೆಯನ್ನು ತೋರಿಸಿ 'ಇಲ್ಲಿಗೆ ಸರಕು ಮುಗಿಯಿತು. ಇನ್ನು ಅಂಗಡಿ ಮುಚ್ಚುತ್ತೇನೆ' ಎಂದು ಹೇಳಿ ಹೊರಟು ಹೋದದ್ದನ್ನು ಆ ತರಗತಿಯಲ್ಲಿದ್ದವರು ಯಾರೂ ಮರೆಯಲಾರರು. ಮುಂದೇ ಅದೇ ಟಿಪ್ಪಣಿಗಳು 'ಕನ್ನಡ ಗ್ರಂಥ ಸಂಪಾದನೆ'ಯಾಗಿ ಹೊರ ಬಂದವು.

ಶ್ರೀಕಂಠಯ್ಯನವರು ಬಹುಕಾಲದಿಂದ ಚತ್ತಾಣ ಬೆದಂಡೆಗಳ ಬಗ್ಗೆ ವಿಚಾರ ಮಾಡುತ್ತಿದ್ದಾರೆ ಎಂದು ತಿಳಿದಿದ್ದ ನಾವು ಒತ್ತಾಯ ಮಾಡಿ, ವಿಚಾರ ಗೋಷ್ಠಿಯಲ್ಲಿ ಆ ಬಗ್ಗೆ ಪ್ರಬಂಧವನ್ನು ಓದಲು ಒಪ್ಪಿಸಿದೆವು. ಆ ದಿನಕ್ಕೆ ನರಸಿಂಹಾಚಾರ್ಯರೇ ಅಧ್ಯಕ್ಷರಾದರು. ತೀ.ನಂ.ಶ್ರೀಯವರ ಬರಹವೆಂದರೆ ಕೇಳಬೇಕೇ! ಬಹು ಸೊಗಸಾದ ಪ್ರಬಂಧ! ನರಸಿಂಹಾಚಾರ್ಯರು ಕೊನೆಯಲ್ಲಿ ಮಾತನಾಡುತ್ತ, 'ಗುಬ್ಬಚ್ಚಿ ಕಾಳನ್ನು ಸಂಗ್ರಹಿಸುವಂತೆ ಬಹುಕಾಲದಿಂದ ವಿಷಯವನ್ನು ಕೂಡಿ ಹಾಕಿಕೊಂಡು ಬಂದಿದ್ದಾರೆ' ಎಂದು ಆರಂಭಿಸಿ, ಆ ಪ್ರಬಂಧದ ಒಂದೆರಡು ವಿವರಗಳ ಬಗ್ಗೆ ಆಕ್ಷೇಪಣೆಗಳನ್ನು ಎತ್ತಿದ್ದರು. ಅದಕ್ಕೆ ತೀ.ನಂ.ಶ್ರೀ. ಉತ್ತರಿಸಿದ್ದು, ಡಿ.ಎಲ್.ಎನ್. ಒಪ್ಪದೇ ಇದ್ದದ್ದು, ಭಿನ್ನಾಭಿಪ್ರಾಯಗಳಲ್ಲೂ ವ್ಯಕ್ತವಾಗುತ್ತಿದ್ದ ಸಜ್ಜನಿಕೆ ಇವು ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿದುವು. ಆ ಪ್ರಬಂಧ ಮುಂದೆ 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟವಾಯಿತು. ಹಾಗೆಯೇ, ಡಿ.ಎಲ್.ಎನ್. ಅವರ 'ಕನ್ನಡ ಗ್ರಂಥ ಸಂಪಾದನೆ'ಯ ಬಿಡುಗಡೆಯ ದಿನ ತೀ.ನಂ.ಶ್ರೀ. ಸೂಚಿಸಿದ ಕೆಲವು ಭಿನ್ನಾಭಿಪ್ರಾಯಗಳ ಬಗ್ಗೆ ಡಿ.ಎಲ್.ಎನ್. ನಡೆದುಕೊಂಡ ರೀತಿಯೂ ಅಷ್ಟೇ ಕೇವಲ ಅನುಕರಣ ಯೋಗ್ಯವಾದುವು.

ಇಬ್ಬರ ಬಗ್ಗೆಯೂ ನನಗೆ ತುಂಬು ಗೌರವವಿದ್ದರೂ ತೀ.ನಂ.ಶ್ರೀ.ಯವರ ಬಳಿ ಇರುವಾಗ ಒಂದು ರೀತಿಯ ಅಳುಕು ಇರುತ್ತಿತ್ತು. ಆದರೆ ನರಸಿಂಹಾಚಾರ್ಯರ ಹತ್ತಿರ ಮಾತ್ರ ಹೆಚ್ಚು

ಸಲಿಗೆಯಿರುತ್ತಿತ್ತು. ಅವರು ಒಮ್ಮೊಮ್ಮೆ ರೇಗಿದರೂ ಸರಿಯೇ, ನಾವು ಸಲೀಸಾಗಿಯೇ ಮಾತನಾಡುತ್ತಿದ್ದೆವು. ತೀ.ನಂ.ಶ್ರೀ. ಮಾತಿನಲ್ಲಿ ತೀರಾ ಸಂಯಮಿಗಳು; ಸ್ವಲ್ಪ ಸೂಕ್ಷ್ಮವೂ ಹೌದು. ಡಿ.ಎಲ್.ಎನ್. ಮಾತಿನಲ್ಲಿ ಗಡುಸು; ಒಮ್ಮೊಮ್ಮೆ ಉಜಾಯಿಸುತ್ತಿದ್ದುದೂ ಉಂಟು. ಆದರೆ ಇಬ್ಬರದೂ ಶುಭ್ರ ಮನಸ್ಸು; ಅಲ್ಲಿ ಸ್ನೇಹಕ್ಕೆ, ಸದ್ಭಾವನೆಗಳಿಗೆ ಮಾತ್ರ ಅವಕಾಶ.

ಅವರಿಬ್ಬರ ದೊಡ್ಡತನಕ್ಕೆ ಸಾಕ್ಷಿಯಂತಿರುವ ಒಂದು ಪ್ರಸಂಗವನ್ನು ಕುರಿತು ಹೇಳಬೇಕೆಂದೆನ್ನಿಸುತ್ತದೆ. ಜಯಕೀರ್ತಿಯ "ಛಂದೋನುಶಾಸನ" ಎಂಬ ಕೃತಿಯಾಗಲಿ ಅದರ ಬಗ್ಗೆ ಎಚ್.ಡಿ. ವೇಲಂಕರ್ ಅವರ ಲೇಖನವಾಗಲಿ ಪ್ರಕಟವಾಗುವ ಮುನ್ನವೇ ಮಂದಾನಿಲರಗಳೆಗೆ ಅಪಭ್ರಂಶ ಸಾಹಿತ್ಯದ ಪಜ್ಝಟಿಕೆ ಎಂಬ ಮಾತ್ರಾ ವೃತ್ತವೇ ಮೂಲ ಎಂಬ ಸಂಗತಿಯನ್ನು ಅವರಿಬ್ಬರೂ ಸ್ವತಂತ್ರವಾಗಿಯೇ ಕಂಡುಕೊಂಡಿದ್ದರು. ಈ ಸಂಗತಿ ಇಬ್ಬರಿಗೂ ಗೊತ್ತಾದಾಗ, ಅದರ ಬಗ್ಗೆ ಇನ್ನೊಬ್ಬರು ಬರೆಯಲಿ ಎಂದು ಇಬ್ಬರೂ ಸುಮ್ಮನಾಗಿ ಬಿಟ್ಟರು. ನಾನು ಅದರ ಬಗ್ಗೆ ಇಬ್ಬರ ಜೊತೆಯೂ ಮಾತನಾಡಿದ್ದೇನೆ. ಇಬ್ಬರದೂ ಅದೇ ಉತ್ತರ. ಕೊನೆಗೆ ನರಸಿಂಹಾಚಾರ್ಯರೇನೋ 'ಸುಕುಮಾರ ಚರಿತೆ'ಯ ಮುನ್ನುಡಿಯಲ್ಲಿ ಸ್ವಲ್ಪ ಪ್ರಸ್ತಾಪಿಸಿದ್ದರೂ, ಅದು ಸಮಾಧಾನವನ್ನು ತರುವುದಿಲ್ಲ. ಇನ್ನೂ ವಿಸ್ತಾರವಾಗಿ ಬರೆಯ ಬೇಕಿದ್ದಿತೆಂದು ಯಾರಿಗಾದರೂ ಅನ್ನಿಸುತ್ತದೆ. ತೀ.ನಂ.ಶ್ರೀ. ಯವರೇನೋ "ಮಟ್ಟ ರಗಳೆ"ಯ ವಿಷಯಲ್ಲಿ ಬರೆಯ ಹೊರಟು, ವಿಷಯ ಶೇಖರವಾದಂತೆ, ರಗಳೆಯ ಇತಿಹಾಸದ ಬಗ್ಗೆ ವಿಸ್ತಾರವಾಗಿಯೇ ಬರೆಯಲು ಮನಸ್ಸು ಮಾಡಿದ್ದರು. ಅಷ್ಟರಲ್ಲಿ ಅವರು ವಿಧಿವಶರಾಗಿದ್ದರಿಂದ ಅಲ್ಲಿಗೆ ಆ ಲೇಖನವೂ ಹಾಗೇ ನಿಂತು ಹೋಯಿತು.

ತೀ.ನಂ.ಶ್ರೀ., ಡಿ.ಎಲ್.ಎನ್., ಎ.ವೆಂಕಟಸುಬ್ಬಯ್ಯ ಮೂವರು ಅಗ್ರಗಣ್ಯ ವಿದ್ವಾಂಸರನ್ನು ಕನ್ನಡನಾಡು ಈ ಐದು ವರ್ಷಗಳಲ್ಲಿ ಕಳೆದುಕೊಂಡು ಬಡವಾಯಿತು. ಇದಕ್ಕಿಂತ ಬೇರೊಂದು ದುರದೃಷ್ಟ ಇದೆಯೇ?

* * *

೪೭

ಪುಣ್ಯಸ್ಮರಣೆ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಈಗ ಅನೇಕ ವರುಷಗಳ ಕೆಳಗೆ ಬೆಳ್ಳಾರ ಚಿನ್ನದ ಗಣಿಗೆ ಆಗಿನ ಅಲ್ಲಿನ ಮುಖ್ಯಾಧಿಕಾರಿ ಶ್ರೀ ಟಿ.ಪಿ. ಕೃಷ್ಣಾಚಾರ್ ಅವರ ಆಹ್ವಾನದ ಮೇರೆಗೆ ಕೆಲವು ಮಿತ್ರರು ಗಣಿಯನ್ನು ನೋಡಲು ಹೋದೆವು. ಅವರ ಪೈಕಿ, ನನಗೆ ನೆನಪಿರುವ ಮಟ್ಟಿಗೆ ತೀ.ನಂ.ಶ್ರೀ., ಪು.ತಿ.ನ., ಡಿ.ಎಲ್.ಎನ್., ನಂ. ಶಿವರಾಮಶಾಸ್ತ್ರಿ, ನಾನು-ಮತ್ತಾರಿದ್ದರೋ ಸರಿಯಾಗಿ ನೆನಪಿಲ್ಲ – ಇದ್ದೆವು. ಶ್ರೀಮಾನ್ ಬಿ.ಪಿ. ರಾಧಾಕೃಷ್ಣ ಮತ್ತು ಟಿ.ಪಿ. ಕೃಷ್ಣಾಚಾರ್ಯರು ಅತಿಥಿ ಸತ್ಕಾರದ ವ್ಯವಸ್ಥೆಯನ್ನೆಲ್ಲ ಬಹು

ಸೊಗಸಾಗಿ ಮಾಡಿದ್ದರು. ಅಚ್ಚುಕಟ್ಟಾಗಿ ರಾತ್ರಿಯ ಭೋಜನವನ್ನು ಹೊಡೆದು ಹಾಸಿಗೆಗಳ ಮೇಲೆ ಹೊರಳಾಡುತ್ತ ಲೋಕಾಭಿರಾಮವಾಗಿ ಹರಟೆ ಹೊಡೆಯುತ್ತಿದ್ದೆವು.

ಅನಂತರ ಮಾತು ಸಾಹಿತ್ಯ, ಕನ್ನಡ ಕಾವ್ಯಗಳ ಕಡೆಗೆ ತಿರುಗಿತು. ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಇವರಿಬ್ಬರ ನಡುವೆ ಬೇಕಾದಂತೆ ಸರಸ ವಾಗ್ವಾದ ನಡೆಯಿತು. ಮಧ್ಯೆ ಮಧ್ಯೆ ನಾವು ಸುಮ್ಮನಿರಬಾರದೆಂದು – ಒಂದೊಂದು ಮಾತನ್ನು ಎಸೆಯುತ್ತಿದ್ದರೂ – ಚರ್ಚೆ ಪೂರ್ಣವಾಗಿ ಆ ಇಬ್ಬರು ವಿದ್ವಾಂಸರಿಗೆ ಸೀಮಿತವಾಗಿತ್ತು. ಡಿ.ಎಲ್.ಎನ್ ಅವರು ಹತ್ತು ಹನ್ನೆರಡು ಹಳಗನ್ನಡ ಪದ್ಯ, ಗದ್ಯಗಳನ್ನೇ ಬಾಯಲ್ಲಿ ಹೇಳಿಬಿಡುತ್ತಿದ್ದರು. ಅವರ ಜ್ಞಾಪಕಶಕ್ತಿ ಇಂದಿಗೂ ನನಗೆ ಆಶ್ಚರ್ಯವಾಗಿಯೇ ಇದೆ. ಅದೊಂದು ಅನೌಪಚಾರಿಕವಾದ ವಾಗ್ವಾದವಾದರೂ ಎರಡು ದಿಗ್ಗಜಗಳು ಒಂದನ್ನೊಂದು ತಾಕುವಂತೆ, ಎರಡು ಕತ್ತಿವರಸೆ ವೀರರು ಒಬ್ಬರನ್ನೊಬ್ಬರು ತಮ್ಮ ಚೂಪಾದ ವಾಗ್ಬಾಣದಿಂದ ಪರೀಕ್ಷಿಸುವಂತೆ ಇತ್ತು. ಮಧ್ಯೆ ಮಧ್ಯೆ ಕತ್ತಿಗಳ ಘರ್ಷಣೆಯಿಂದ ಹೊರಡುವ ಕೆಂಡದ ಕಿಡಿಗಳಂತೆ ಅನಿರೀಕ್ಷಿತವಾದ ಕಾವ್ಯರತ್ನದ ಉದಾಹರಣೆಗಳು ಚಿಮ್ಮುತ್ತಿದ್ದವು. ಅದು ಪರಸ್ಪರ ಮೆಚ್ಚಿಕೆ ಮತ್ತು ಪ್ರೇಮದ ವಾಗ್ಯುದ್ಧ. ಅವರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎಂದು ಹೇಳುವುದು ನಮಗಂತೂ ಸಾಧ್ಯವಾಗಲಿಲ್ಲ. ಆದರೆ ಅವರಿಬ್ಬರೂ ನಮಗಿಂತ ಹೆಚ್ಚು ಎಂಬುದಂತೂ ಖಚಿತವಾಯಿತು. ನನಗೆ ಹೊಳೆದುದು "ನರಸಿಂಹಾಚಾರ್ಯರದು ಆಳವಾದ ಪಾಂಡಿತ್ಯ, ಶ್ರೀಕಂಠಯ್ಯನವರದು ಸರ್ವವ್ಯಾಪಿ ವಿಶಾಲವಾದ ಪಾಂಡಿತ್ಯ" (ಆ ಮಾತುಗಳಿಗೆ ಏನಾದರೂ ಅರ್ಥವಿರಲಿ). ಕೇಳುವವರಿಗೆ ಅದೇ ಒಂದು ರಸಕವಳ.

* * *

೪೮

ಪ್ರಿಯ ಮಿತ್ರ ಡಿ.ಎಲ್.ನರಸಿಂಹಾಚಾರ್ಯ

ಟಿ.ಪಿ. ಕೃಷ್ಣಾಚಾರ್

ತೀ.ನಂ.ಶ್ರೀಕಂಠಯ್ಯನವರಲ್ಲಿ ನರಸಿಂಹಾಚಾರ್ಯರಿಗೆ ಅಪಾರ ಪ್ರೀತಿ ಗೌರವ. ಅವರಿಬ್ಬರೂ ಜೊತೆ ಜೊತೆಯಾಗಿ ಕನ್ನಡಕ್ಕಾಗಿ ಕೆಲಸ ಮಾಡಿದವರು. ಇಬ್ಬರದೂ ಅಪಾರ ವಿದ್ವತ್ತು ಮತ್ತು ಸಾಧನೆ. ಎರಡು ದಿಗ್ಗಜಗಳಂತೆ ಮೆರೆದು ಅವರ ಇರುವು ನಾಡಿಗೆ ಅತ್ಯಗತ್ಯವಾಗಿ ಬೇಕಾಗಿದ್ದಾಗಲೇ ಇಬ್ಬರೂ ದೈವಾಧೀನರಾದರು. ೧೯೬೬ರಲ್ಲಿ ಶ್ರೀಕಂಠಯ್ಯನವರು ನಿಧನರಾದರೆ ೫ ವರ್ಷಗಳ ನಂತರ ನರಸಿಂಹಾಚಾರ್ಯರು ಅವರನ್ನು ಹಿಂಬಾಲಿಸಿದರು.

ಮೈಸೂರು ವಿಶ್ವವಿದ್ಯಾನಿಲಯದವರು ನರಸಿಂಹಾಚಾರ್ಯರಿಗೆ ಡಿ.ಲಿಟ್. ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದಾಗ ನಾನು ಅವರಿಗೆ ಅಭಿನಂದನಾ ಪತ್ರವೊಂದನ್ನು ಬರೆದೆ. ಅದಕ್ಕೆ ಉತ್ತರವಾಗಿ ಬಂದ ಕಾಗದದ ಒಂದು ಭಾಗವು ಹೀಗಿದೆ.

" How I wish I had been conferred this degree along with the late T.N.S. That would have been the greatest happiness for me. But destiny has willed it otherwise".

ಪುನಃ ಇನ್ನೊಂದು ಪತ್ರದಲ್ಲಿ (ಇದು ಘಟಿಕೋತ್ಸವ ಆದ ನಂತರದ್ದು)

"I would have been supremely happy if the late T.N.S, and myself had recieved the degree together" ಎಂದು ಬರೆದಿದ್ದಾರೆ.

* * *

೪೯

ಡಿ.ಎಲ್. ನರಸಿಂಹಾಚಾರ್ ಮೈಸೂರು, ೨-೨-೧೯೪೫

ನಾನು ತಕ್ಕಮಟ್ಟಿಗೆ ಆರೋಗ್ಯವಾಗಿದ್ದೇನೆ. ಈಗ ೧೫ ದಿನದಿಂದ ಆರೋಗ್ಯ ಕೊಂಚ ಕೆಟ್ಟಿದೆ. ಕಾರಣ ಮನಃಕ್ಲೇಶ. ಅದಕ್ಕೆ ಕಾರಣವನ್ನು ನಿಮಗೆ ಹೇಳಬೇಕು. ಎಸ್.ವಿ.ಆರ್ ಅವರು ತಮ್ಮನ್ನು ಕಂಡಾಗ ಆ ವಿಷಯವನ್ನು ಹೇಳಿರಬಹುದು. ಈ ಸಲ ಪರೀಕ್ಷಕರ ಪಟ್ಟಿಯಲ್ಲೂ ಚ.ಬಾಯಿಯವರ ಹೆಸರಿದೆ. ನ್ಯಾಯವಾಗಿ ನನ್ನ ಹೆಸರು ಇರಬೇಕಲ್ಲವೆ? ಅವರ ಹೆಸರು ಅಲ್ಲಿ ಬಂದ ಬಗೆ ಹೇಗೆ? ಇದಕ್ಕೆ ಬಿ.ಎಂ.ಶ್ರೀ.ಗಳು ಕಾರಣವೆಂದು ನನಗೆ ತೋರುತ್ತದೆ; ಎ.ಆರ್.ಕೆ ಅವರು ಅವರನ್ನೇ ಅನುಸರಿಸಿ ನನಗೆ ಅನ್ಯಾಯ ಮಾಡಿದರು. ವಿವರಗಳನ್ನೆಲ್ಲಾ ಕಂಡಾಗ ಹೇಳುವೆನು. ಈ ವಿಷಯದಲ್ಲಿ ಎ.ಆರ್.ಕೆ ಅವರೊಡನೆ ಬಿರುಸಾದ ಮಾತುಗಳನ್ನು ಆಡಿದೆನು. ಅವರು ಏನಾದರೂ ತಿಳಿದುಕೊಳ್ಳಲಿ. ನನಗೆ ವಂಚನೆ ಮಾಡಿದ್ದಾರೆಂದು ನನ್ನ ನಂಬಿಕೆ. ಈ ವಿಷಯವಾಗಿ ಕೊರಗಿ ಚಿಂತಿಸಿ ನನ್ನ ದೇಹದ ಸ್ಥಿತಿ ಹದಗೆಟ್ಟಿದೆ ಕೊಂಚ; ಇರಲಿ.

ಈಚೆಗೆ ತಿಳಿದು ಬಂದ ಹೊಸ ವಿಷಯ ನಿಮಗೆ ಹೇಳಬೇಕು. ಕನ್ನಡದಲ್ಲಿ ಪ್ರಭುಸೇನ ಎಂಬೊಬ್ಬ ಛಂದೋಗ್ರಂಥಕಾರನಿದ್ದನಂತೆ. ಅವನ ಗ್ರಂಥ 'ನೀತಿಕಾಲಂಕಾರ'. ಛಂದೋನುಶಾಸನ (ಜಯಕೀರ್ತಿ ಕೃತ) ಎಂಬ ಗ್ರಂಥದಲ್ಲಿ ಇದರ ಉಲ್ಲೇಖವಿದೆ. ಅಲ್ಲದೆ ಆ ಗ್ರಂಥ ೭ನೆಯ ಅಧ್ಯಾಯದಲ್ಲಿ ಕರ್ಣಾಟಕ ವಿಷಯ ಜಾತಿಯ ನಿರೂಪಣೆಯಿದೆಯಂತೆ. ಅಲ್ಲಿ ಉದಾಹೃತವಾದ ಪದ್ಯಗಳು ಕನ್ನಡದಲ್ಲಿವೆ. ಕರ್ಣಾಟಕ ಮಾಲತೀ ಮಾಧವ, ಶೃಂಗಾರ ಪಿಂಡಿಕ, ಕರ್ಣಾಟೇಶ್ವರ ಚರಿತ್ರೆ, ಮುಂತಾದ ಹಲವು ಗ್ರಂಥಗಳಿಂದ ಆ ಪದ್ಯಗಳು ಉಧೃತವಾಗಿದೆಯಂತೆ. ಜಯಕೀರ್ತಿಯ ಗ್ರಂಥದ ಒಂದು ಪ್ರತಿ ಶ್ರೀ ವೇಲಂಕರ್ ಅವರಲ್ಲಿದೆ. ಅವರೊಡನೆ ನಾನು ವ್ಯವಹಾರ (ಪತ್ರ) ನಡೆಸುತ್ತಿದ್ದೇನೆ. ಅವರೇನಾದರೂ ೭ನೇ ಅಧ್ಯಾಯವನ್ನು ನನಗೆ ಕೊಟ್ಟರೆ ಒಳ್ಳೆಯದೇ ಆಯಿತು. ಈ ವಿಷಯ ಗೋಪ್ಯವಾಗಿ ನಿಮ್ಮಲ್ಲಿಯೇ ಇರಲಿ; ಶಿವರಾಮಶಾಸ್ತ್ರಿಗೆ ಮಾತ್ರ ಹೇಳಿದ್ದೇನೆ.

* * *

೫೦

ಡಿ.ಎಲ್.ನರಸಿಂಹಾಚಾರ್ ಮೈಸೂರು, ೧೬-೯-೧೯೫೪

ತಮ್ಮ ಪತ್ರವೂ ಶ್ರೀಮಾನ್ ಎಸ್.ವಿ.ರಂಗಣ್ಣನವರೊಡನೆ ಕಳಿಸಿದ 'ರಸಮಂಜರಿ' ಮುಂತಾದವೂ ತಲಪಿವೆ. ಅದಕ್ಕಾಗಿ ವಂದನೆಗಳು.

ನಾನು ನಿಮಗೆ ಪತ್ರ ಬರೆಯದೆ ಇದ್ದದು ನನ್ನ ಅಪರಾಧ. ಏನೋ ಆಲಸ್ಯ ಕಾರಣವಾಗಿ ಬರೆಯಲಿಲ್ಲ. ಕೋಪವೇನೂ ಇಲ್ಲ, ಏತಕ್ಕೆ ಕೋಪ? ಇಲ್ಲಿನ Board of Studies ಸಭೆ ನಡೆಯಿತು. ಅಲ್ಲಿಯೇ ನನಗೆ ತುಂಬ ಬೇಸರವಾಯಿತು. ಇಲ್ಲಿನ ನಾಲ್ವರು ಮತ್ತು ಮದ್ರಾಸಿನಿಂದ ಮರಿಯಪ್ಪ ಭಟ್ಟರು- ಇಷ್ಟು ಮಾತ್ರ ಸದಸ್ಯರು. ಇಂಟರ್‌ಮೀಡಿಯೆಟ್ ಮತ್ತು ಬಿ.ಎ. ಪಠ್ಯಪುಸ್ತಕಗಳ ವಿಚಾರದಲ್ಲೂ ತುಂಬ ಚರ್ಚೆ ನಡೆಯಿತು. ಅವರು ಮೂವರು ಒಂದಾದರು; ನಾನೊಬ್ಬನೇ ಬೇರೆಯಾದೆ. ಡಿ.ವಿ.ಜಿ. ಅವರ 'ವಿದ್ಯಾರಣ್ಯ ವಿಜಯ'ಕ್ಕೆ ಅವಕಾಶ ದೊರೆಯಲಿಲ್ಲ. ಆ ವಿಷಯದಲ್ಲಿ ಆ ಮೂವರದು ತೀವ್ರ ವಿರೋಧ. ಡಿ.ವಿ.ಜಿ. ಮತ್ತು ಎಂ.ಆರ್. ಶ್ರೀ. ಅವರ ವಿಷಯವಾಗಿ ಕೆಲವು ಸಣ್ಣ ಮಾತುಗಳೂ ಬಂದವು. ಕೊನೆಗೆ ಡಿ.ವಿ.ಜಿ. ಅವರ ಶ್ರೀರಾಮಕೃತಿ ಪರೀಕ್ಷಣವನ್ನು ಬಿ.ಎ.ಗೂ, ನಿವೇದನವನ್ನು ಇಂಟರ್(common)ಗೂ ಹಾಕಿಸುವುದೇ ಕಷ್ಟವಾಯಿತು. ಎಂ.ಆರ್.ಶ್ರೀ ಅವರ 'ನಾಗರಿಕ'ವನ್ನು ಇಂಟರ್‌ಗೆ(common) ಹಾಕಿಸಿದ್ದಾಯಿತು. ಇಷ್ಟು ಮಾಡುವುದೇ ಪ್ರಯಾಸವಾಯಿತು. ಬಿ.ಎ.ಗೆ.......... ನನಗೆ ಇಷ್ಟವಿಲ್ಲದಿದ್ದರೂ ನಿಯಮಿತವಾಯಿತು. ಆ ಮೂವರೂ ಮೊದಲೇ ಮಾತಾಡಿಕೊಂಡಿದ್ದರು; ಅವರಲ್ಲಿ ಒಬ್ಬರನ್ನು ಮೊದಲೇ ನಾನು ಕರೆದು ಈ ವಿಷಯ ಮಾತಾಡೋಣವೆಂದು ಕೇಳಿದೆ; ಆದರೆ ಅವರು ಬರಲಿಲ್ಲ. ಇಂಟರ್‌ಗೆ (common) ಎಚ್.ಎಲ್. ನಾಗೇಗೌಡರ 'ಕೆನಿಲ್‌ವರ್ತ್' ಎಂಬ ಕಾದಂಬರಿ, Scot ಕಾದಂಬರಿಯ ಭಾಷಾಂತರವೂ, ವೀರಪ್ಪನವರ ಛಾರ್ಲ್ಸ್ ಡಾರ್ವಿನ್ ಗ್ರಂಥವೂ, ನಿಯಮಿತವಾದವು. ಇವರಿಬ್ಬರಿಗೆ ಎಡೆಮಾಡಿಕೊಡಲು ಎಂ.ಆರ್. ಶ್ರೀ. ಅವರ (ರಂಗಣ್ಣನ ಕನಸಿನ ದಿನಗಳು) ಗ್ರಂಥ ಬಿದ್ದು ಹೋಯಿತು. ಅಂದು ವಾತಾವರಣ ಚೆನ್ನಾಗಿರಲಿಲ್ಲ.

ನನ್ನನ್ನು ಕನ್ನಡ ಕೋಶದ ಸಂಪಾದಕನಾಗಿ ನಿಯಮಿಸಿರುವ ಆಜ್ಞೆ ಸರಕಾರದಿಂದ ಬಂದಿದೆ. ಆದರೆ ನಾನಿನ್ನೂ ಇಲ್ಲಿಂದ ಬಿಡುಗಡೆ ಹೊಂದಿ ಹೊರಟಿಲ್ಲ. ಈ ವಿಷಯದಲ್ಲಿ ಇರುವ ಅಧಿಕಾರದ ವ್ಯಾಪ್ತಿಯೇನೆಂಬುದನ್ನು ತಿಳಿಯಬೇಕಾಗಿದೆ. ನನಗೆ ಕೊಡಬೇಕೆಂದು ಪರಿಷತ್ತು ತೀರ್ಮಾನಿಸಿರುವ ೨೦೦ರೂ ಅಲೋಯನ್ಸ್‌ನ್ನು ಅವರು ಒಪ್ಪದಿರಬಹುದು. ಪರಿಷತ್ತಿನವರು ಅವರನ್ನು ಕೇಳದೆಯೇ ಈ ವಿಷಯವನ್ನು ತೀರ್ಮಾನ ಮಾಡಿದ್ದಾರೆ. ಇದು ಸರಿಯಲ್ಲ. ಅವರನ್ನು ಕಂಡು ಈ ವಿಷಯವನ್ನು ಮಾತಾಡಿ ಅನಂತರ ನನಗೆ ತಿಳಿಸಬೇಕೆಂದು ಶ್ರೀ ಮೂರ್ತಿರಾಯರಿಗೆ ಬರೆದಿದ್ದೇನೆ. ಅಲ್ಲದೆ ಕೋಶದ ಕಚೇರಿಯನ್ನು ಇಲ್ಲಿಯೇ ಏಕೆ ನಡೆಸಬಾರದೆಂಬ ವಿಷಯವನ್ನು ಆಲೋಚಿಸಬೇಕೆಂದೂ ಕೇಳಿದ್ದೇನೆ. ಇನ್ನೂ ಒಂದು ವಿಷಯ. ಶ್ರೀ ಕುವೆಂಪು ಅವರು ಕಾಲೇಜಿನ ಪ್ರಿನ್ಸಿಪಾಲರಾಗಿ ದಸರಾ ಕಳೆದ ಮೇಲೆ ನಿಯಮಿತ ವಾಗುವರೆಂದು ಬಲವಾದ ವದಂತಿ ಇದೆ; ಈಗಿನ ಪ್ರಿನ್ಸಿಪಾಲರನ್ನು ರಜ ತೆಗೆದುಕೊಂಡು

ಹೊರಟು ಹೋಗಬೇಕೆಂದು ಒತ್ತಾಯ ಮಾಡುತ್ತಿದ್ದಾರಂತೆ. ಇದೇನಾದರೂ ಆದರೆ ಆಗ ನನಗೆ ಡಿಪಾರ್ಟಿಮೆಂಟಿನ ಛಾರ್ಜ್ ಬರಬಹುದು, ಅದಕ್ಕಾಗಿ ಕೊಂಚ (50) ಅಲೋಯನ್ಸ್ ಬರುತ್ತದೆ– ಶ್ರೀ.ವಿ.ಸೀ. ಅವರು ಇಲ್ಲಿಗೆ ಬರಲು ಸಮ್ಮತಿಸದಿದ್ದರೆ. ನಾನು ಇಲ್ಲಿಂದ ಬಿಟ್ಟು ಹೋದರೆ ನನಗೆ ಏನಾಗುತ್ತದೋ ಎಂಬ ಅಂಜಿಕೆ ಬಂದಿದೆ. ಅಲ್ಲದೆ ಕೋಶಕ್ಕಾಗಿ ವರ್ಷಂಪ್ರತಿ ಸಲ್ಲುವ 15000 ರೂಗಳಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ನನಗೊಬ್ಬನಿಗೇ ವ್ಯಯವಾಗುತ್ತದೆ. ಇನ್ನು ಸಿಬ್ಬಂದಿ ಮುಂತಾದುದಕ್ಕೆ ಏನು ಮಾಡುವುದು? ಪರಿಷತ್ತಿನಲ್ಲಿ ಹಣವಿಲ್ಲ. ಸರ್ಕಾರಕೊಟ್ಟರೆ ಉಂಟು. ಸುಮ್ಮನೆ ಅಲ್ಲಿಗೆ ಹೋಗಿ ಕೆಲಸ ನಡೆಯದೆ ಕೆಟ್ಟ ಹೆಸರು ಬರಬಹುದು. ಇತ್ಯಾದಿ ಸಮಸ್ಯೆಗಳಿವೆ. ಇವೆಲ್ಲ ಪರಿಹಾರವಾಗಿಬೇಕಾಗಿದೆ. ಈ ಮಧ್ಯೆ ಸಂಪಾದಕ ಮಂಡಲದ ಸಭೆಯನ್ನು ಶ್ರೀ ಮೂರ್ತಿರಾಯರು ಕರೆಯಬಹುದು.

* * *

೫೧

ತೀ.ನಂ.ಶ್ರೀಕಂಠಯ್ಯ ಧಾರವಾಡ, ೨೩–೪–೧೯೫೫

ನಾನು ನಿನ್ನೆ ಬರೆದ ಕಾರ್ಡು ನಿಮಗೆ ತಲುಪಿದೆಯೆಂದು ಭಾವಿಸುತ್ತೇನೆ. ನಿಮ್ಮ ಪ್ರಶ್ನೆಗಳಿಗೆ ನನಗೆ ತಿಳಿದ ಉತ್ತರಗಳನ್ನು ಈ ಕೆಳಗೆ ಸೂಚಿಸಿದ್ದೇನೆ.

೧: ಈ<ಇದು : ಕಿಟೆಲ್ ಅವರು ಕೊಟ್ಟಿರುವ ಪ್ರಯೋಗಗಳೆಲ್ಲವನ್ನು ನಾವೂ ಕೊಡಬೇಕೆಂಬ ನಿರ್ಬಂಧವೇನೂ ಇಲ್ಲ. ಅವುಗಳಲ್ಲಿ ಅವಶ್ಯವೆಂದು ತೋರಿದವುಗಳನ್ನು ಮಾತ್ರ ನಾವು ಸೇರಿಸಿಕೊಳ್ಳಬಹುದು. "ಈವೊತ್ತು, ಈಹೊತ್ತು" ಇವುಗಳನ್ನು ತೆಗೆದುಕೊಳ್ಳಬೇಕಲ್ಲವೆ?

೨: ನಾಮ, ಧಾತು, ಗುಣವಾಚಕ ಎಂಬುದನ್ನು ಸೂಚಿಸಬೇಕಲ್ಲವೆ? 'ಓದು', 'ನಡೆ' ಇತ್ಯಾದಿಗಳು ನಾಮವಾಚಕ ಧಾತು ಎರಡೂ ಆಗುತ್ತದೆ. ಎರಡನ್ನೂ ಗುರುತಿಸಿ ಅರ್ಥವನ್ನು ವಿಂಗಡಿಸಬೇಕೆಂದು ತೋರುತ್ತದೆ. ಹಾಗೆಯೇ ಒಂದು (ಧಾ), ಒಂದು (ಸಂ.) ಎರಡನ್ನೂ ಬೇರೆಬೇರೆಯಾಗಿ ಕೊಡಬೇಕಷ್ಟೆ.

೩: ಶಬ್ದ ನಿಷ್ಪತ್ತಿಯನ್ನು ಭಾಷಾಶಾಸ್ತ್ರದ ದೃಷ್ಟಿಯಿಂದಲೇ ಹೇಳಬೇಕು. ವ್ಯಾಕರಣದ ವಿವರಣೆಗೂ ಅದಕ್ಕೂ ಬಹಳ ಭೇದವಿದ್ದು **ವಿಚಾರ ತೊಡಕುಗಳಿದ್ದರೆ,** ಕೇಶರಾಜನ ಅಭಿಪ್ರಾಯ ಹೀಗೆ, ಭಟ್ಟಾಕಳಂಕನ ಅಭಿಪ್ರಾಯ ಹೀಗೆ ಎಂದು ಬೇಕಾದರೆ ನಿರ್ದೇಶಿಸಬಹುದು. ಎಲ್ಲಿ ಶಬ್ದನಿಷ್ಪತ್ತಿಯನ್ನು ನಿರ್ವಿಚಾರವಾಗಿ ಹೇಳಲು ಕಷ್ಟವೋ ಅಲ್ಲಿ ಭಿನ್ನಾಭಿಪ್ರಾಯಗಳನ್ನು ಸೂಚಿಸಿ ಸಂದೇಹ ಚಿಹ್ನೆಯನ್ನು ಮುಂದೆ ಕಾಣಿಸಬಹುದು; ಅಥವಾ ಇತರ ದ್ರಾವಿಡ ಭಾಷೆಗಳಲ್ಲಿನ ಜ್ಞಾತಿ ಶಬ್ದರೂಪಗಳನ್ನು ಕೊಟ್ಟು ಅಷ್ಟಕ್ಕೇ ನಿಲ್ಲಿಸಬಹುದು. ದ್ರಾವಿಡ ಶಬ್ದನಿಷ್ಪತ್ತಿಶಾಸ್ತ್ರ

ಇನ್ನೂ ಬಹುದೂರ ಮುಂದುವರಿದಿಲ್ಲವಾದ ಕಾರಣ ಅನೇಕ ಸಂದರ್ಭಗಳಲ್ಲಿ ಇಷ್ಟನ್ನು ಮಾಡುವುದು ಮಾತ್ರ ನಮಗೆ ಸದ್ಯದಲ್ಲಿ ಸಾಧ್ಯವೆಂದು ತೋರುತ್ತದೆ.

ಆದಲೆ ಎಂಬಲ್ಲಿ 'ಅತ್ತಲೈ' ಎಂಬುದೇ ಮೂಲರೂಪವೆಂದು ಒಪ್ಪುವುದು ನನಗೆ ಕಷ್ಟವಾಗಿದೆ. ತಲೈ ಎನ್ನುವುದು ತಮಿಳಿನಲ್ಲಿ ಕಾಣಬರುವ ರೂಪ, ಕನ್ನಡದಲ್ಲಿ **ತಲೆ,** ತೆಲುಗಿನಲ್ಲಿ **ತಲ**. ಇಲ್ಲಿ ದ್ರಾವಿಡ ಮೂಲಸ್ವರ ಯಾವುದು? 'ಐ' ಯೆ, 'ಎ'ಯೆ 'ಅ'ವೆ? ಇದು ಖಚಿತವಾಗಿ ನಿರ್ಧಾರವಾಗಿದೆಯೆಂದು ನಾನು ಹೇಳಲಾರೆ? ಕನ್ನಡದಲ್ಲಂತೂ–ತಲೈ ಎಂಬುದು ಎಂದಾದರೂ ಇದ್ದಿತೆಂಬುದಕ್ಕೆ ನಮಗೆ ಯಾವ ಪ್ರಮಾಣವೂ ದೊರೆತಿಲ್ಲ. ಆದಕಾರಣ ಆದಲೆಯ ಅಂತ್ಯ ಸ್ವರವನ್ನು ಐ ಎಂಬುದರಿಂದ ಸಾಧಿಸುವುದು ನಿರ್ವಿವಾದ ವೆಂದು ನನಗೆ ತೋರುವುದಿಲ್ಲ. ಇನ್ನು 'ಅತ್ತಲೈ' ಎಂಬ ರೂಪ ಎಲ್ಲಿ ಪ್ರಯೋಗವಾಗಿದೆ? Tamil Lexicon ನಲ್ಲಿ ದೊರೆಯಲಿಲ್ಲ.

ಆದಲೆ, ಈದಲೆ (ಪಂಪಭಾ, ೫. ೬೨), ತವುದಲೆ, ಅಗುಂದಲೆ–ಈ ಮೊದಲಾದ ರೂಪಗಳನ್ನು ಒಟ್ಟಿಗೆ ಪರಿಭಾವಿಸಿದಾಗ, ಸಮಾಸಮಧ್ಯದಲ್ಲಿ **ತಲೆ**ಯ ತಕಾರ ದಕಾರವಾಗಿರಬೇಕೆಂದು ನನಗೆ ತೋರುತ್ತದೆ. *ಅತ್ತಲೆ>ಆದಲೆ ಆಗಬಾರದೆಂದಲ್ಲ. ಆದರೆ, ಈ ಸಂಬಂಧದಲ್ಲಿ ಅತ್ತಲೆ ಎಂಬ ರೂಪವನ್ನು ಕನ್ನಡದಲ್ಲಿ ಕಲ್ಪಿಸಿಕೊಳ್ಳ ಬೇಕಾದ ಅವಶ್ಯಕತೆ ನನಗೆ ಕಾಣಿಸುವುದಿಲ್ಲ–ಈ ವಿಷಯವನ್ನು ಕುರಿತು ಮುಖತಃ ಮತ್ತೆ ಮಾತಾಡೋಣ.

೪: ಒಂದು ಧಾತುವಿನ ವಿವಿಧ ರೂಪಗಳನ್ನು ಮುಖ್ಯವಾಗಿ ಭೂತಕಾಲದ ರೂಪಗಳನ್ನು ಕೊಡುವುದು ಉತ್ತಮ. ಎಲ್ಲವನ್ನೂ ಸಮಗ್ರವಾಗಿ ಕೊಡಬೇಕಿಲ್ಲ.

೫: ೬: ಯುಕ್ತವೆಂದು ತೋರುತ್ತದೆ.

ನಾನು ಬಹುಶಃ ೨೭, ೨೮ಕ್ಕೆ ಬೆಂಗಳೂರಿನಲ್ಲಿರುತ್ತೇನೆ. ಬಂದ ಕೂಡಲೆ ಆದಷ್ಟು ಬೇಗ ನಿಮ್ಮನ್ನು ಕಾಣುತ್ತೇನೆ. ಮಿಕ್ಕ ವಿಷಯಗಳನ್ನು ಆಗ ಚರ್ಚಿಸೋಣ.

ನರಸಿಂಹಾಚಾರ್, ನಿಮ್ಮ ಕೆಲಸದಲ್ಲಿ ಅನಾವಶ್ಯಕವಾಗಿ ತೊಡಕನ್ನುಂಟು ಮಾಡಬೇಕು ಎಂಬ ಆಶಯ ಸರ್ವಾತ್ಮನಾ ನನಗಿಲ್ಲ. ದಯವಿಟ್ಟು ಇದನ್ನು ನಂಬಿ. ಕೋಶ ನಮಗೆ ತಿಳಿದಮಟ್ಟಿಗೆ ನಿರ್ದುಷ್ಟವಾಗಬೇಕು, ಸಪ್ರಮಾಣವಾಗಬೇಕು ಎಂಬುದೇ ನಮ್ಮೆಲ್ಲರ ಹಂಬಲಕೆಯಾಗಿರುವುದರಿಂದ ನನಗೆ ತೋರಿದ ಒಂದೆರಡು ವಿಷಯಗಳನ್ನು ನಾನು ಒತ್ತಿ ಹೇಳುವ ಸಂಭವ ಹೆಚ್ಚು, ಇದನ್ನು ಅನ್ಯಥಾ ಭಾವಿಸಬೇಡಿ. ಕೋಶದ ಕಾರ್ಯ ನನಗೆ ಪ್ರಿಯ! ನಿಮ್ಮ ಸ್ನೇಹ ನನಗೆ ಅದಕ್ಕಿಂತಲೂ ಪ್ರಿಯ.

* * *

ಡಿ.ಎಲ್.ನರಸಿಂಹಾಚಾರ್ ಬೆಂಗಳೂರು, ೨೬-೪-೧೯೫೫

ನಿಮ್ಮ ಎರಡು ಪತ್ರಗಳೂ ತಲುಪಿವೆ; ಅವುಗಳಿಗಾಗಿ ತಮಗೆ ವಂದನೆಗಳು. ತಮ್ಮ ಎರಡನೆಯ ಪತ್ರದಲ್ಲಿರುವ ೧, ೨ ಸೂಚನೆಗಳನ್ನು ನಾನು ಒಪ್ಪುತ್ತೇನೆ. ಅವುಗಳಲ್ಲಿ ನನಗೂ ನಿಮಗೂ ಭಿನ್ನಾಭಿಪ್ರಾಯಗಳಿಲ್ಲ.

೩ನೆಯ ಸೂಚನೆಯಾದ "ಶಬ್ದ ನಿಷ್ಪತ್ತಿ ವಿಚಾರದಲ್ಲಿ ಭಾಷಾಶಾಸ್ತ್ರದ ದೃಷ್ಟಿಯಿಂದಲೇ ಹೇಳಬೇಕು, ವ್ಯಾಕರಣದ ವಿವರಣೆಗೂ ಅದಕ್ಕೂ ಬಹಳ ಭೇದವಿದ್ದು ವಿಚಾರ ತೊಡಕಾಗಿದ್ದರೆ ಕೇಶಿರಾಜನ ಅಭಿಪ್ರಾಯ ಹೀಗೆ, ಭಟ್ಟಾಕಳಂಕನ ಅಭಿಪ್ರಾಯ ಹೀಗೆ ಎಂದು ಬೇಕಾದರೆ ನಿರ್ದೇಶಿಸಬಹುದು". ಉದಾ. ಬಂದು (ಧಾ) ಶಬ್ದ ಇದಕ್ಕೆ ಕೇಶಿ, ಭಟ್ಟ...... ಇವರ ಅಭಿಪ್ರಾಯಗಳು ಏನಾದರೂ ಇವೆಯೆ? ಭಿನ್ನಾಭಿಪ್ರಾಯಗಳನ್ನು ಸೂಚಿಸಲು ಹೊರಟರೆ ಅದಕ್ಕೆ ಮಿತಿ ಎಲ್ಲಿ? ಸಮಿತಿಯ ಸದಸ್ಯರು ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ಹೇಳಿದರೆ, ಅವುಗಳಲ್ಲಿ ಕೆಲವನ್ನು ಇಟ್ಟುಕೊಂಡು ಉಳಿದವನ್ನು ಬಿಡುವಂತಿಲ್ಲ? ಬಿಡುವುದು ಅಸಮಾಧಾನಕ್ಕೆ ಕಾರಣವಲ್ಲವೆ? ಈ ತೊಡಕನ್ನು ಹೇಗೆ ಬಿಡಿಸುತ್ತೀರಿ? ಎಲ್ಲರ ಅಭಿಪ್ರಾಯಗಳನ್ನೂ ಸೇರಿಸಿಕೊಳ್ಳುವುದು ನಾನೆಲ್ಲಿಯೂ ಕಂಡಿಲ್ಲ; ಯಾವ ನಿಘಂಟಿನಲ್ಲೂ ಈ ಕ್ರಮವನ್ನನುಸರಿಸಿಲ್ಲ. ಇದಕ್ಕೆ ಏನು ಮಾಡುವುದು? ನನಗೆ ಸಂದೇಹ ಬಂದ ಎಡೆ ಪ್ರಶ್ನೆ ಚಿಹ್ನೆಯನ್ನು ಧಾರಾಳವಾಗಿ ಉಪಯೋಗಿಸುತ್ತೇನೆ. ಇದರಲ್ಲಿ ನೀವೇನೂ ಸಂದೇಹ ಪಡಬೇಕಾಗಿಲ್ಲ; ಇತರರಿಗೆ ಸಂದೇಹವೆಂದು ತೋರಿದಡೆಯೂ ಹೀಗೆ ಮಾಡುತ್ತೇನೆ. ಎಷ್ಟೋ ಶಬ್ದಗಳಿಗೆ ನಿಷ್ಪತ್ತಿಯೇ ಶಕ್ಯವಲ್ಲದಿರುವುದು ನನ್ನ ಗಮನಕ್ಕೆ ಬಂದಿದೆ. ಅಲ್ಲಲ್ಲಿ ಜ್ಞಾತಿಶಬ್ದಗಳನ್ನು ಸೂಚಿಸುವುದಷ್ಟೇ ಮಾಡಬೇಕಾದ್ದು; ಜ್ಞಾತಿಶಬ್ದಗಳೂ ದೊರೆಯದಿರಬಹುದು. ಆಗ ನಿಷ್ಪತ್ತಿಯ ಪ್ರಸಕ್ತಿಯೇ ಇಲ್ಲ. ಯಾವ ಮೂಲದಲ್ಲಿದೆ ಎಂಬುದು ಕೂಡ ತಿಳಿಯದಿರುವ ಸಂದರ್ಭಗಳು ಬರುತ್ತವೆ. ಅಂತೂ ನಿಷ್ಪತ್ತಿಯ ವಿಷಯದಲ್ಲಿ ಕೊನೆಯ ನಿರ್ಧಾರವನ್ನು ನನಗೇ ಬಿಟ್ಟರೆ ಒಳ್ಳೆಯದಲ್ಲವೆ? ಇಲ್ಲದಿದ್ದರೆ ನಾನು ಹೇಗೆ ಕೆಲಸ ಮುಂದುವರಿಸಲಿ? ಸಂದೇಹವಿದ್ದರೆ ಪ್ರಶ್ನೆ ಚಿಹ್ನೆ ಇದ್ದೇ ಇದೆಯಲ್ಲ!

ಆದಲೈ ವಿಚಾರ. ಇಲ್ಲಿ ಕೊನೆಯದಾದ ಐ ಎಂಬುದರ ಮೂಲ ಯಾವುದಾದರೂ ಇರಲಿ; ಅದನ್ನು ಖಚಿತವಾಗಿ ಈಗ ಹೇಳುವಂತಿಲ್ಲ. ಅದು ಎ ಆಗಿದ್ದಿರಬೇಕೆಂಬುದೂ ಊಹೆಯೇತಾನೆ? ಪ್ರಕೃತ ಈ ಅಂಶ ಅಷ್ಟು ಮುಖ್ಯವಲ್ಲ. ಈಗ ಕಂಡ ಹಾಗೆ ತಮಿಳಿನ ಐ ಎಂಬುದು ಕನ್ನಡದಲ್ಲಿ ಎ ಆಗಿಯೂ ತೆಲುಗಿನಲ್ಲಿ ಅ ಆಗಿಯೂ ಆಗಿರಬೇಕೆಂಬುದರಲ್ಲಿ ಸಂದೇಹವಿಲ್ಲ ತಾನೆ? ಅಷ್ಟು ಮಾತ್ರ ಹಿಂದಕ್ಕೆ ಏಕೆ ಹೋಗಬಾರದು? ಆದ್ದರಿಂದ ನಾನು -ತಲೈ>-ತಲೆ ಬಂದಿರಬಹುದೆಂದು ಹೇಳುವುದರಲ್ಲೂ ತಪ್ಪೇನು? ಅತ್ತಲೈ ಎಂಬುದಕ್ಕೆ ಪ್ರಯೋಗವೂ ಇಲ್ಲ. ಜ್ಞಾತಿಶಬ್ದವೂ ಇಲ್ಲ; ಇದು ನನಗೆ ತಿಳಿದಿತ್ತು. ಆದ್ದರಿಂದ ಅದರ ಹಿಂದೆ * ಈ ಚಿಹ್ನೆಯನ್ನು ಹಾಕಿ Reconstructed term ಎಂದೇಕೆ ಸೂಚಿಸಬಾರದು? ಹಾಗೆ

ಮಾಡಿದರೆ ಸರಿಯೇ? ಬೇಕಾದರೆ ಮುಂದೆ ಪ್ರಶ್ನೆ ಚಿಹ್ನೆಯನ್ನು ಹಾಕುತ್ತೇನೆ. ಇಲ್ಲಿ ಇನ್ನೊಂದು ಸಮಸ್ಯೆಯೂ ಇದೆ; ಅದು ಎಂಬುದರ ಮೂಲ ರೂಪ ಏನು? ಕೆಲವರು ಅ ಎಂದು ಹೇಳುತ್ತಾರೆ; ಮತ್ತೆ ಕೆಲವರು ಅವ್ ಇರಬೇಕೆಂದು ವಾದಿಸುತ್ತಾರೆ; ತಮಿಳಿನ ಅವ್ವಿಡಂ ಮುಂತಾದ ರೂಪಗಳನ್ನು ನೋಡಿ (Dravidic Studies, Madras University ಒಂದು ಲೇಖನವಿದೆ). ಆದ್ದರಿಂದ ಮೂಲಕ್ಕೆ ಹೋದರೆ ಸಂದೇಹ; ನಡುವೆ ನಿಲ್ಲಬೇಕಾಗುತ್ತದೆ. ಅಲ್ಲಿ ನಾನು ನಿಂತಿದ್ದೇನೆಂದು ನನ್ನ ಭಾವನೆ. ಆದ್ದರಿಂದ ಅತ್ತಲೈ ಎಂದು ಎಷ್ಟು ಹಿಂದೆ ಹೋಗಲು ಸಾಧ್ಯವೋ ಅಷ್ಟರ ಮಟ್ಟಿಗೆ ಹೋಗಿ ಆ ರೂಪವನ್ನು ಕಾಣಿಸಿದ್ದೇನೆ. ಅದಕ್ಕೆ ಪ್ರಯೋಗವಿಲ್ಲ ದಿರುವುದರಿಂದ * ಚಿಹ್ನೆಯನ್ನು ಹಿಂದೆ ಹಾಕುತ್ತೇನೆ. ಈ ಸಂದರ್ಭದಲ್ಲಿ ಅತ್ತಲ್, ಇತ್ತಲ್ ಇತ್ಯಾದಿ ಶಬ್ದಗಳನ್ನು ಗಮನಿಸಿ; ಇಲ್ಲಿಯ ಎರಡನೆಯ ಅಂಶ ಅ+ತಲ್ or ಅವ+ತಲ್– ತಲ್ ತಾನೇ? ಇದೂ ಕೂಡ–ತಲೆಯ ಇನ್ನೊಂದು ರೂಪವಷ್ಟೇ? ಹಾಗೆಂದು ನನ್ನೆಣಿಕೆ;– ತಲೆಯ ಅಂತ್ಯ ಸ್ವರ ಮಾಯವಾಗಿದೆ, ಕಾತರ ಕಾದಲ್(ಪ್ರಾ) ನೋಡಿ. ಆದ್ದರಿಂದ ಅತ್ತಲೈ ಎಂದು ಹೇಳುವುದಕ್ಕೆ ಅತ್ತಲ್ ರೂಪ ಉಪಷ್ಟಂಭಿಕವಾಗಿದೆ. ಇದಕ್ಕೆ ನಿಮ್ಮ ತೀರ್ಮಾನವೇನು?

ಅಗುಂದಲೆ, ತವುದಲೆ ಮುಂತಾದ ಶಬ್ದಗಳ ವಿಚಾರ ಬೇರೆ ತೆರನಾಗಿದೆ. ಇಲ್ಲಿ ತಲೆ ಶಬ್ದವಿಲ್ಲ;–ದಲ್, ದಲೆ ಎಂಬ ಭಾವನಾಮ ಸೂಚಕ ಪ್ರತ್ಯಯಗಳಷ್ಟೇ ಇರುವುವು. ತಮಿಳಿನಲ್ಲಿ ಶೊಲ್ಲುದಲ್, ಪಣ್ಣುದಲ್, ವಿಡುದಲೈ ಮುಂತಾದ ಶಬ್ದಗಳನ್ನು ನೋಡಿ; ಇವು ಅಲ್ಲಿ ಸಾಮಾನ್ಯ ರೂಪಗಳು. ಆದ್ದರಿಂದ* ಆಗುದಲ್, ಅಂಗುಂದಲೆ, ತನದಲೆ– ಇವು ದಲೆ ಪ್ರತ್ಯಯಾಂತ ಭಾವನಾಮಗಳು. ಇವುಗಳ ಆಧಾರದ ಮೇಲೆಯೇ ಕುಮಾರವ್ಯಾಸನು ಮರಳುದಲೆ (=ಮರಳುವಿಕೆ), ಎಡಹುದಲೆ (ಎಡಹುವಿಕೆ) ಎಂಬ ರೂಪಗಳನ್ನು ಸೃಷ್ಟಿಸಿಕೊಂಡಿರುವುದು. ಈ ವಿಷಯದಲ್ಲಿ ಸಂದೇಹಕ್ಕೆ ಕಾರಣ ನನಗೆ ತೋರಲಿಲ್ಲ. ಏನಾದರೂ ಇದ್ದರೆ ಹೇಳಿ. ತನದಲ್ > ತೌದಲ್ ಎಂಬ ರೂಪವೂ ಉಂಟು. (ಅನಂತನಾಥ ಪುರಾಣ) ಬೀದಿಯ **ತೌದಲೊಳ್?**

ಕಿಟ್ಟಲೆ, ಕಿಟಿಂದಲೆ – ಇಲ್ಲಿ ಎರಡನೆಯ ಅಂಶ ತಲೆ; ಕೀಟ್ಟಲೆ ಎಂದರೆ ಕುಸಿದಿರುವ (ಕೆಳಕ್ಕೆ ಜಗ್ಗಿರುವ) ತಲೆ, ಕಿಟಿಂದಲೆ – ಇನ್ನೂ ಕೆಳಕ್ಕೆ ಕುಸಿದಿರುವ ತಲೆ; ಸೇನಾ ಭಾರದಿಂದ "ಕಿಟ್ಟಲೆ ಕಿಟಿಂದಲೆಯಾದುದು ಕುರ್ಗಿ ದಿಗ್ಗಜಂ" (ಜನ್ನ or ಗಣವರ್ಮII) ಎಂಬ ಪ್ರಯೋಗವನ್ನು ನೋಡಿ. ಆದ್ದರಿಂದ ಅಗುಂದಲೆ ಶಬ್ದ ಸಮುದಾಯವನ್ನೂ ಕಿಟ್ಟಲೆ ಶಬ್ದ ವೃಂದವನ್ನೂ ಒಟ್ಟಿಗೆ ಪರಿಗಣಿಸುವಂತಿಲ್ಲ. ಅವೆರಡೂ ಬೇರೆ ಬೇರೆ.

*ಅತ್ತಲೆ ಎಂಬುದರ ಕಲ್ಪನೆಗೆ ಕಾರಣ ಈಗ ವಿವಾದವಾಗಿರಬೇಕಲ್ಲವೆ?

(೪) ಧಾತುವಿನ ವಿವಿಧರೂಪಗಳನ್ನು ಪ್ರಯೋಗಗಳ ಸಮೇತ ಕಾಣಿಸಬೇಕೆಂದು ನನ್ನ ನಿಶ್ಚಯವೂ ಆಗಿದೆ. ಹಾಗೆಯೆ ಸಾಧ್ಯವಾದಷ್ಟು ಮಾಡುತ್ತೇನೆ. ಭೂತಕಾಲಕ್ಕೆ ಪ್ರಾಧಾನ್ಯ. ಎಲ್ಲ ರೂಪಗಳನ್ನು ಕೊಡಬೇಕಾಗಿಲ್ಲವೆಂಬ ನಿಮ್ಮ ಸಲಹೆಗೆ ಕೃತಜ್ಞತೆಗಳು. ೫, ೬ ಸರಿ.

ನೀವು ಇಲ್ಲಿಗೆ ಬಂದಾಗ ನಿಮಗೆ ಬಿಡುವಾಗುವುದೇ ಕಷ್ಟ. ಮಾತಾಡಲು ಅವಕಾಶವೇ ಇರುವುದಿಲ್ಲ; ಓಡಾಟದಲ್ಲಿ ಮುಗಿದು ಹೋಗುತ್ತದೆ. ಆದ್ದರಿಂದ ಈ ಪತ್ರವನ್ನು ಮೊದಲೇ ಬರೆದಿದ್ದೇನೆ.

ನಾನು ನಿಮ್ಮ ವಿಷಯದಲ್ಲಿ ಅನ್ಯಥಾ ಭಾವಿಸಲಾರೆ, ಅದು ಎಂದೂ ಇಲ್ಲ, ಇಂದೂ ಇಲ್ಲ. ಆದರೆ ನನ್ನ ದುಡಿತವನ್ನು ಕಂಡು ಸಹಾನುಭೂತಿಯಿಂದ ಕೂಡಿರಬೇಕೆಂಬುದೇ ನನ್ನ ಅಪೇಕ್ಷೆ. ಅದೂ ಇಲ್ಲದೆ ಹೋದರೆ ನನಗೆ ಕೆಲಸ ಮಾಡಲು ಏನು ಉತ್ಸಾಹ? ನಾನು ಇಲ್ಲಿ, ಸಂಬಳಕ್ಕಾಗಿ ಬಂದಿಲ್ಲ; ಕೆಲಸಮಾಡಬೇಕೆಂದು ಮುದಿತಾಯನ್ನು ತೊರೆದು ಬಂದಿದ್ದೇನೆ. ಈಗಲೂ ನನಗೆ ಅತ್ತಕಡೆಯೇ ಮನಸ್ಸೆಳೆಯುತ್ತಿದೆ. ಏನಾದರೂ ನನಗೆ ಇಲ್ಲಿ ಅಸಮಾಧಾನವಾದರೆ ಕೆಲಸವನ್ನು ಬಿಡುವುದು ಖಂಡಿತ. ಅದಾಗದಂತೆ ನೀವು ನೋಡಿಕೊಳ್ಳಬೇಕು – ಇಷ್ಟು ನನ್ನ ಪ್ರಾರ್ಥನೆ–ಎಲ್ಲ ಆರೋಗ್ಯ.

* * *

೫೩

ಡಿ.ಎಲ್. ನರಸಿಂಹಾಚಾರ್ ಬೆಂಗಳೂರು, ೧೩-೬-೧೯೫೫

ನಾನು ಪರಿಷತ್ ಸಂಮೇಳನಕ್ಕೆ ಮೈಸೂರಿಗೆ ಹೋಗಬಾರದೆಂದೇ ಇದ್ದೆ. ಆದರೆ ಕೊನೆಯ ಗಳಿಗೆಯಲ್ಲಿ ಕೆಲವು ಮಿತ್ರರ ಒತ್ತಾಯದಿಂದ ಅಲ್ಲಿಗೆ ಹೋದದ್ದಾಯಿತು. ಸಮ್ಮೇಳನವೇನೋ ಚೆನ್ನಾಗಿಯೇ ನಡೆಯಿತು. ಭಾಷಣಗಳ ಪರಂಪರೆಯಲ್ಲಿ ಹೇಗೋ ನುಸುಳಿಕೊಂಡು ಹೋದದ್ದಾಯಿತು. ಅಧ್ಯಕ್ಷರ ಭಾಷಣವನ್ನು ನೀವು ಇದುವರೆಗೆ ಓದಿರಬಹುದು. ಅಲ್ಲಿನ ಆವೇಶ ಆಕ್ರೋಶಗಳು ಅನುಚಿತವೆಂದು ನನ್ನ ಭಾವನೆ. ಕನ್ನಡ ಕೋಶದ ವಿಷಯವಾಗಿ ಅವರ ಟೀಕೆ ಗಮನಾರ್ಹವಲ್ಲವೆ? ಅದು ನಮಗೆ ಯಾರಿಗೂ ತಿಳಿದೇ ಇರಲಿಲ್ಲ! ಇವರಿಂದ ತಿಳಿಯಬೇಕಾಯಿತು! ನಮ್ಮ ದುರ್ದೈವ!! ಅರ್ಥಪುಟ ಹಳಗನ್ನಡವನ್ನು ಓದಲಾರದ ಇಂಥ ಜನರ ಔದಾರ್ಯವನ್ನೂ ದುರಹಂಕಾರವನ್ನೂ ನೋಡಿದರೆ ಆಶ್ಚರ್ಯವಾಗುತ್ತದೆ. ಇದು ಅಂಥವರಿಗೇ ಕಾಲ, ಇರಲಿ.

ಕೋಶದ ಕೆಲಸ ಚುರುಕಾಗಿ ನಡೆಯುತ್ತಿದೆ. ಊಟಿಯಲ್ಲಿರುವ ಶಾಸನಗಳನ್ನೆಲ್ಲಾ ೧೯೫೩ರ ಕೊನೆಯವರೆಗೆ ನೋಡಿದ್ದು ಮುಗಿದಿದೆ. ಮಿಕ್ಕ ಕೆಲಸ ಸಾಗುತ್ತಿದೆ. ಶ್ರೀಮಾನ್ ದೇಶಿಕಾಚಾರ್ಯರಿಂದ ತುಂಬ ಸಹಕಾರ ದೊರೆಯುತ್ತಿದೆ. ಅವರನ್ನು ನನಗೆ ನೀವು ದೊರಕಿಸಿ ಕೊಟ್ಟಿದ್ದಕ್ಕಾಗಿ ನಿಮಗೆ ಕೃತಜ್ಞತೆಗಳು.

U.S.A.ಯಿಂದ Mr. Bright ಕನ್ನಡ ವ್ಯಾಸಂಗಕ್ಕಾಗಿ ಬಂದಿರುವುದನ್ನು ಕೇಳಿ ಸಂತೋಷ. ಅವರು ಇಲ್ಲಿಗೆ ಬಂದಾಗ ನನ್ನ ಕೈಲಾದ ಸಹಾಯವನ್ನು ಮಾಡಲು ಸಿದ್ಧನಿದ್ದೇನೆ.

ನಿಮ್ಮ ಅಮೆರಿಕ ಪ್ರವಾಸವು ಸುಖಪ್ರದವಾಗಿ ನಡೆಯಲಿ, ನಿಮ್ಮ ಸಾರಸ್ವತ ದಿಗ್ವಿಜಯ ವಿಖ್ಯಾತವಾಗಲಿ, ಭಗವಂತನ ಅಭಯ ಹಸ್ತ ನಿಮ್ಮ ತಲೆಯ ಮೇಲಿರಲಿ. ನಿಮ್ಮ ಅಗಲಿಕೆಯ ನೋವನ್ನು ನಾವೆಲ್ಲ ಅನುಭವಿಸುವುದು ಮುಂದಕ್ಕೆ ಸಾರ್ಥಕವಾಗಲಿ. ಸುಖವಾಗಿ ಹೋಗಿ ಸುಖತರವಾಗಿ ಬನ್ನಿ, ಇಲ್ಲಿಂದಲೇ ನನ್ನ ಬೀಳ್ಕೊಡಿಗೆ. "ಭವಂ ಶುಭಂ ಮಂಗಳಂ"

* * *

೫೪
ತೀ.ನಂ.ಶ್ರೀ–ಆಪ್ತರೊಡನೆ

ಎ.ಎನ್. ಮೂರ್ತಿರಾವ್

ಭಿನ್ನಾಭಿಪ್ರಾಯಗಳೆಷ್ಟೇ ಇದ್ದರೂ ಅವುಗಳಿಂದಾಗಿ ಶ್ರೀಕಂಠಯ್ಯನವರ ಮತ್ತು ಅವರ ಮಿತ್ರವರ್ಗದವರ ಸ್ನೇಹಕ್ಕೆ ಎಂದೂ ಚ್ಯುತಿ ಬರಲಿಲ್ಲ. ಈ ಮಾತಿಗೆ ಒಂದೇ ಒಂದು ವಿನಾಯಿತಿಯುಂಟು. ಅವರ ಜೀವನದಲ್ಲಿ ಅವರಿಗೆ ಮಾತ್ರವಲ್ಲದೆ ಅವರ ಸ್ನೇಹಿತರೆಲ್ಲರಿಗೂ ವಿಷಾದವನ್ನುಂಟುಮಾಡಿದ ಪ್ರಸಂಗವೊಂದು ಬಂತು. ಅವರಿಗೂ ಡಿ.ಎಲ್ ನರಸಿಂಹಾಚಾರ್ಯರಿಗೂ ಯಾವುದೋ ಕಾರಣಗಳಿಂದಾಗಿ ಮನಸ್ತಾಪ ಬಂತು. ಇದಕ್ಕೆ ಕಾರಣರು ಅವರಿಬ್ಬರಲ್ಲಿ ಯಾರೂ ಅಲ್ಲ, ಯಾರೋ ಮೂರನೆಯವರು ಎಂದು ನಮ್ಮೆಲ್ಲರ ಅಭಿಪ್ರಾಯ. ಮಹಾರಾಜರ ಕಾಲೇಜಿನಲ್ಲಾಗಲಿ ಮಾನಸಗಂಗೋತ್ರಿಯಲ್ಲಾಗಲಿ ಅವರಿಬ್ಬರ ನಡುವೆ ಸ್ಪರ್ಧೆಯೆನ್ನುವುದು ಇರಲೇ ಇಲ್ಲ. ಕನ್ನಡನಾಡು ಇಬ್ಬರನ್ನೂ **ಉದ್ದಾಮಪಂಡಿತರೆಂದು** ಒಪ್ಪಿತ್ತು– ಇವರು ಹೆಚ್ಚು ಅವರು ಕಡಮೆ ಎಂಬ ಮಾತನ್ನು ನಾನು ಯಾರಿಂದಲೂ ಕೇಳಿಲ್ಲ; ಡಿ.ಎಲ್. ಮತ್ತು ತೀ.ನಂ.ಅವರಿಂದಲಂತೂ ಖಂಡಿತ ಕೇಳಿಲ್ಲ. ಶ್ರೀಕಂಠಯ್ಯನವರು ಜಯಲಕ್ಷ್ಮೀಪುರದ ಮನೆಯಲ್ಲಿದ್ದಾಗ ಒಂದು ದಿನ ಅವರನ್ನು ನೋಡಬಂದ ಮೂರು ನಾಲ್ಕು ಜನ ವಿದ್ಯಾರ್ಥಿಗಳು ಪಂಪಭಾರತದ ಯಾವುದೋ ಸಮಸ್ಯೆಯ ಮಾತೆತ್ತಿದರು. ಶ್ರೀಕಂಠಯ್ಯ ತಲೆ ಅಲ್ಲಾಡಿಸಿ "ಅದು ಡಿ.ಎಲ್.ಗೆ ಸಹಿತ ಸ್ಪಷ್ಟವಾಗಿಲ್ಲ. ನಾನೇನು ಹೇಳಲಿ!" ಎಂದರು. ಈ ಮಾತನ್ನಾಡಿದ್ದು ಅವರಿಬ್ಬರ ಶಿಷ್ಯರೆದುರಿಗೆ! " No Indian language has a book that can even distantly approach 'Bharatiya Kavya Mimamse"- ಇದು ಡಿ.ಎಲ್. ಹೇಳಿದ ಮಾತು. ಇವೆರಡೂ ಅವರವರಿಗೆ ಮನಸ್ತಾಪವಿದ್ದ ಕಾಲದಲ್ಲಿ ಆಡಿದ, ನಾನೇ ಸ್ವತಃ ಕೇಳಿದ, ಮಾತುಗಳು! ಇವರಿಬ್ಬರಲ್ಲಿ ಶ್ರೀಕಂಠಯ್ಯನಿಗೆ 'ಸೀನಿಯಾರಿಟಿ' ಇತ್ತು. ಒಂದು ಸಲ ಪ್ರೊಫೆಸರ್ ಕೆಲಸದ ಜಾಹಿರಾತು ಬಂದಾಗ ಡಿ.ಎಲ್ "ಇದು ಶ್ರೀಕಂಠಯ್ಯನಿಗೆ ಆಗಬೇಕಾದ್ದು; ನಾನು ಅರ್ಜಿ ಹಾಕುವುದಿಲ್ಲ" ಎಂದು ನಿಶ್ಚಯಿಸಿದರು. "ಮಾನಸಗಂಗೋತ್ರಿಯಲ್ಲಿ ಕನ್ನಡಕ್ಕೆ ಮತ್ತೊಬ್ಬ ಪ್ರೊಫೆಸರ್ ಆವಶ್ಯಕ. ಆ ಸ್ಥಾನವನ್ನು ಏರ್ಪಡಿಸಿ ಅದಕ್ಕೆ ಡಿ.ಎಲ್. ನರಸಿಂಹಾಚಾರ್ಯರನ್ನು ನೇಮಿಸಬೇಕು" ಎಂದು ಶ್ರೀಕಂಠಯ್ಯ ಸಲಹೆ ಮಾಡಿದ್ದರು. ಪರಸ್ಪರ ಇಷ್ಟೊಂದು ಅಭಿಮಾನವುಳ್ಳವರಲ್ಲಿ ಮನಸ್ತಾಪ ಬಂದದ್ದು ದುರದೃಷ್ಟ.

ಶ್ರೀಕಂಠಯ್ಯನವರ ಮಗಳ ಮದುವೆಯ ಮತ್ತು ಮಗನ ಮುಂಜಿಯ ಉತ್ಸವಗಳಿಗೆ ನರಸಿಂಹಾಚಾರ್ ಬಂದಿದ್ದರು–ಅದು ಶ್ರೀಕಂಠಯ್ಯನ ಮನಸ್ಸಿಗೆ ಬಹಳ ಸಮಾಧಾನ ತಂದಿತು. ಸುಮಾರು ೧೯೬೪ರಲ್ಲಿ ನಮ್ಮೆಲ್ಲರಿಗೂ ಬಹು ಆತ್ಮೀಯರೂ ಪ್ರಿಯರೂ, ಹೋದ ಕಡೆಯಲ್ಲೆಲ್ಲ, 'ಸಂತೋಷಂ ಜನಯೇತ್' ಎಂಬ ಮಾತನ್ನು ಅಯತ್ನತಃ ಪಾಲಿಸುವ ಶಕ್ತಿಯುಳ್ಳವರೂ ಆದ ಬಿ.ಎಸ್.ಕೇಶವನ್ ಮೈಸೂರಿಗೆ ಬಂದಿದ್ದರು. ನನ್ನ ಮನೆಗೆ ಬಂದಾಗ "ನಿನ್ನೆ ಡಿ.ಎಲ್. ಮನೆಗೆ ಹೋಗಿದ್ದೆ. 'ಟಿ.ಪಿ.ಕೃಷ್ಣಾಚಾರ್, ಮೂರ್ತಿರಾವ್ ಇಬ್ಬರೂ ನನಗೂ ಶ್ರೀಕಂಠಯ್ಯನಿಗೂ ಆತ್ಮೀಯರೂ. ಅವರು ನಮ್ಮಿಬ್ಬರನ್ನು ಮತ್ತೆ ಒಟ್ಟುಗೂಡಿಸುವ ಪ್ರಯತ್ನ ಮಾಡಿಲ್ಲ' ಎಂದು ಹೇಳಿದ. ನೀನೇನಾದರೂ ಮಾಡಬಾರದೆ?" ಎಂದು ಕೇಳಿದರು. ನಾನು ಇಬ್ಬರೊಡನೆಯೂ ಮಾತನ್ನು ಆಡಿದೆ. ಆದರೆ ಅದಾದ ಕೆಲವೇ ದಿನಗಳಲ್ಲಿ ಮೈಸೂರನ್ನು ಬಿಟ್ಟು ಉತ್ತರ ಇಂಡಿಯದಲ್ಲಿ ನೆಲಸುವ ಪ್ರಸಂಗ ಬಂತು. ಕೃಷ್ಣಾಚಾರ್ಯರೂ ತೀರಿಕೊಳ್ಳುವುದಕ್ಕೆ ೨-೨½ ತಿಂಗಳು ಮುಂಚೆ ಅವರನ್ನು ನೋಡಲು ನಾನು ತುಮಕೂರಿಗೆ ಹೋಗಿದ್ದಾಗ ಇದನ್ನೆಲ್ಲ ನೆನೆದುಕೊಂಡೆವು. ಕೃಷ್ಣಾಚಾರ್ಯರು " It is a pity that there was no actual spoken reconciliation. But in their minds the quarrel was dead, and they were tender to each other" ಎಂದರು. ಮೊನ್ನೆ ಮೊನ್ನೆ ನಡೆದ ಮಾತಾದ್ದರಿಂದ ಅವರು ಬಳಸಿದ ಪದಗಳು ಮರೆತಿಲ್ಲ. ಅವರ ಮಾತು ಅಕ್ಷರಶಃ ನಿಜ.

ಈ ಪ್ರಸಂಗವನ್ನು ಮರೆತು ಅವರು ಹಿಂದಿನ ಸ್ನೇಹ ಎಷ್ಟು ಆಳವಾದದ್ದು ಎಂಬುದನ್ನು ನೆನೆಯುವುದು ಹಿತ. ಅದಕ್ಕೆ ಒಳ್ಳೆಯ ನಿದರ್ಶನ ನನ್ನ ಹಳೆಯ ಕಾಗದವೊಂದನ್ನು ನೋಡಿದಾಗ ನೆನಪಿಗೆ ಬಂತು. ಇದು ೧೯೪೩-೪೪ರ ಮಾತು. ೧೯೪೩ರಲ್ಲಿ ಶ್ರೀಕಂಠಯ್ಯನಿಗೆ ಬೆಂಗಳೂರಿಗೆ ವರ್ಗವಾಯಿತು. ಆ ಕಾಲದಲ್ಲಿ ಡಿ.ಎಲ್.ನ ಆರೋಗ್ಯ ಸರಿಯಾಗಿರಲಿಲ್ಲ. ಮನಸ್ಸಿಗೂ ನೆಮ್ಮದಿಯಿರಲಿಲ್ಲ. ಇದರಿಂದಾಗಿ "ನನ್ನ ಮನೋಧರ್ಮದಲ್ಲೇ, ನನ್ನ ಸ್ವಭಾವದಲ್ಲೇ ಏನೋ ದೊಡ್ಡ ದೋಷವಿದೆ" ಎಂಬ ಭ್ರಮೆ ಅವರನ್ನು ಆವರಿಸಿತ್ತು. ಈ ಭ್ರಮೆಯ ಮತ್ತು ದೇಹದ ಅನಾರೋಗ್ಯದ ಪರಸ್ಪರ ಪತ್ರಿಕ್ರಿಯೆಯಿಂದಾಗಿ ಅವರ ಮನೋರೋಗ ಉಲ್ಬಣಿಸಬಹುದೆಂಬ ಭಯವಿತ್ತು. ಇದರ ವಿಷಯ ನಾವು ಮೂವರಿಗೆ ಹೊರತು ಬಹುಶಃ ಇತರರಿಗೆ ತಿಳಿಯದು. ಶ್ರೀಕಂಠಯ್ಯ ಮೈಸೂರಿನಲ್ಲಿದ್ದಾಗ ಬಹುಕಾಲ ನರಸಿಂಹಾಚಾರ್ಯರೊಡನೆಯೇ ಕಳೆದು ಅವರ ಮನಸ್ಸಿಗೆ ಗೆಲುವು ಕೊಡುತ್ತಿದ್ದರು. ಬೆಂಗಳೂರಿಗೆ ಹೋಗುವಾಗ "ಡಿ.ಎಲ್. ಈ ವಿಷಯವನ್ನೆಲ್ಲ ಮತ್ತೊಬ್ಬರಲ್ಲಿ ಹೇಳಿಕೊಳ್ಳುವುದಿಲ್ಲ. ಮನಸ್ಸಿನಲ್ಲೇ ಅದನ್ನು ಕೊರೆಯಬಿಟ್ಟರೆ ಅವರ ಸ್ಥಿತಿ ಮತ್ತಷ್ಟು ಕೆಡಬಹುದು. ನೀವು ಸಾಧ್ಯವಾದರೆ ಪ್ರತಿದಿನ, ಕೊನೆಯ ಪಕ್ಷ ದಿನ ಬಿಟ್ಟು ದಿನ ಅವರೊಡನೆ ಒಂದೆರಡು ಘಂಟೆ ಇರಬೇಕು. ಇದೊಂದು ವ್ರತ ಎಂದುಕೊಳ್ಳಿ" ಎಂದು ನನಗೆ ಹೇಳಿ ನನ್ನಿಂದ ಭರವಸೆ ಪಡೆದರು. ಅಂತೆಯೇ ನಾನು ಹೆಚ್ಚು ಕಡಿಮೆ ಪ್ರತಿ ದಿನ ಅವರ ಮನೆಗೆ ಹೋಗುವುದು ಅಥವಾ ಗೊತ್ತಾದ ಕಡೆ ಅವರನ್ನು ಭೇಟಿ ಮಾಡುವುದು, ಅವರೊಡನೆ ಡಿ. ಸುಬ್ಬಯ್ಯ ರೋಡಿನಲ್ಲಿದ್ದ ಡಾ॥ ದಾಸ್ ಅವರ ಷಾಪಿಗೆ ಹೋಗುವುದು, ಅಲ್ಲಿ ಕಾಲು ಘಂಟೆ ಮಾತಾಡಿ, ಸ್ವಲ್ಪ ದೂರ ಸುತ್ತಿ ನಮ್ಮ ನಮ್ಮ ಮನೆಗಳಿಗೆ ಹಿಂದಿರುಗುವುದು– ಈ ಕಾರ್ಯಕ್ರಮ ಕೆಲವು ಕಾಲ ನಡೆಯಿತು.

ಒಂದು ಸಲ ನಾನು ಎಲ್ಲೆಲ್ಲೋ ಸುತ್ತಿ ಬೆಂಗಳೂರಿಗೆ ಹೋದಾಗ ಶ್ರೀಕಂಠಯ್ಯ ಡಿ.ಎಲ್. ಬರೆದಿದ್ದ ಕಾಗದವನ್ನು ತೋರಿಸಿ "ಇದನ್ನು ನೋಡಿದರೆ ಅವರ ಸ್ಥಿತಿ ಸಮರ್ಪಕವಾಗಿರುವಂತೆ ತೋರುವುದಿಲ್ಲ. ಮೈಸೂರಿಗೆ ಹೋದಕೂಡಲೆ ಅವರನ್ನು ನೋಡಿ ನನಗೆ ಕಾಗದ ಬರೆಯಿರಿ" ಎಂದರು. ನಾನು ಬರೆಯುವುದು ೩-೪ ದಿನ ತಡವಾಯಿತು. ನನ್ನ ಕಾಗದದ ಒಕ್ಕಣೆಯಿಂದ ಅವರಿಬ್ಬರ ಪರಸ್ಪರ ಪ್ರೀತಿಗೌರವಗಳನ್ನು ಊಹಿಸಬಹುದಾದ್ದರಿಂದ ಅದನ್ನು ಇಲ್ಲಿ ಕೊಟ್ಟಿದ್ದೇನೆ.

My dear Srikantaiah,

I had promised to write to you soon after seeing D.L., and I remember you said it was very important. I am writing long after the importance has passed; but you will be glad to learn that it has passed....... He poured out his tale...... and it has done him a lot of good....... Then came your letter which he showed me the next day. It made him open his eyes in wide eyed wonder..... he could't picture his saint (T.N.S) in his own image! (ಡಿ.ಎಲ್.ನ ಮನೋಧರ್ಮ ಅವರೊಬ್ಬರಿಗೇ ವಿಶಿಷ್ಟವಾದದ್ದಲ್ಲ, ನಾವೆಲ್ಲರೂ ಅವರಂತೆಯೇ, ಎಂದು ಅವರಿಗೆ ನಂಬಿಕೆ ಕೊಡಲು ನಾವಿಬ್ಬರೂ ಪ್ರಯತ್ನಿಸುತ್ತಿದ್ದೆವು.) ....I think he is all right now. He walks with his old-earth shaking tread, shoulders rounded, his head bent aggressively forward, and his old purposeful swing. He may any moment shout 'Fe Fa Fo Fum!'

"ನಿಮ್ಮ ಕಾಗದದ ಹಾಸ್ಯಧ್ವನಿಯನ್ನು ನೋಡಿ ಡಿ.ಎಲ್. ಹುಷಾರಾಗಿದಾರೆ ಅಂತ ವಿಶ್ವಾಸವುಂಟಾಯಿತು. ನನ್ನ ಮನಸ್ಸಿಗೆ ಬಹಳ ಸಮಾಧಾನ" ಎಂದು ಶ್ರೀಕಂಠಯ್ಯ ಉತ್ತರ ಬರೆದರು.

* * *

೫೫

ಸ್ನೇಹ ಸ್ಮರಣೆ

ಪು.ತಿ.ನರಸಿಂಹಾಚಾರ್

ಆದರೆ ಪಂಡಿತರು ಒಮ್ಮೆ ತಾವು ಹಿಡಿದ ಪಟ್ಟನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ತೀ.ನಂ.ಶ್ರೀ.ಯೂ ಅಷ್ಟೆ. ದೊ.ಲ.ನವೂ ಅಷ್ಟೆ. ಇಂಥ ಮೃದು ಅಭಿಪ್ರಾಯ ಭೇದಗಳಿಂದ ಸ್ನೇಹಕ್ಕೆ ಒಗ್ಗರಣೆಯೇ ಹೊರತು ಭಂಗವೆಂತು?

ಆದರೆ ತಮ್ಮ ಕೊನೆಗಾಲದಲ್ಲಿ ದೊ.ಲ.ನ.ಗೂ ತೀ.ನಂ.ಶ್ರೀ.ಗೂ ನಡುವೆ ವಿರಸವೆದ್ದಿತ್ತು, ಇದರಿಂದ ತೀ.ನಂ.ಶ್ರೀ. ತುಂಬ ನೊಂದುಹೋದರು. ಆ ವೇದನೆ ನನಗೆ ಗೊತ್ತು. ಅವರ ಮೈ ಹಗುರ ಕೆಟ್ಟಿತು. ದೊ.ಲ.ನ. ಕಂಡರೆ ತೀ.ನಂ.ಶ್ರೀ.ಗೆ ತುಂಬ ಪ್ರೀತಿ ತುಂಬ ಗೌರವ. ಆದರೆ ಮಾನಸ ಗಂಗೋತ್ರಿಯ ಆ ವಿಭಾಗದಿಂದ ಇಬ್ಬರಿಗೂ ಮನಃಕಷಾಯ ಏರ್ಪಟ್ಟಿತು, ಇಬ್ಬರೂ ಕೊರಗಿದರು. ಆ ಎಳಗಾಲದಲ್ಲಿ ಸ್ನಾತಕೋತ್ತರ ಕನ್ನಡ ವಿಭಾಗಕ್ಕೆ ಇಬ್ಬರು ಪ್ರೊಫೆಸರುಗಳಿಗೆ ಅವಕಾಶವಿರಲಿಲ್ಲ, ಆಡಳಿತ ವರ್ಗದವರ ದೃಷ್ಟಿಯಲ್ಲಿ. ಇದ್ದ ಒಂದು ಜಾಗಕ್ಕೆ ಸೀನಿಯಾರಿಟಿ ಪ್ರಕಾರ ತೀ.ನಂ.ಶ್ರೀ ಬರಬೇಕಾಯಿತು. ದೊ.ಲ.ನ. ಅಲ್ಲಿಯೇ ಉಳಿಯ ಬೇಕಾಯಿತು: ಎಲ್ಲ ವಿಧದಲ್ಲೂ ಒಬ್ಬರಿಗಿಂತ ಒಬ್ಬರು ಕೀಳಲ್ಲ. ಆದರೆ ಸ್ಥಾನವೊಂದು, ಸ್ಪರ್ಧಿಗಳಿಬ್ಬರಾಗಿಬಿಟ್ಟರು. ಪ್ರಯತ್ನಿಸಿದರೆ ಎರಡು ಸ್ಥಾನಗಳನ್ನು ಕಲ್ಪಿಸಬಹುದು ಎಂದು ಒಂದು ಕಡೆಯ ವಾದ. ಅದು ತತ್ಕಾಲಕ್ಕೆ ದುಸ್ಸಾಧ್ಯವಂದು ಇನ್ನೊಂದು ಕಡೆಯವಾದ. ಮೈತ್ರೀಭಂಗಕ್ಕೆ "ಅಗ್ರತಃ ಸ್ಥಾನಂ" ಎಂಬುದು ಒಂದು ಕಾರಣ ಎಂಬುದಕ್ಕೆ ಇವರ ಅ–ಸಹ್ಯವಾದ ವಿರಸ ಒಂದು ಉದಾಹರಣೆ. ದೊ.ಲ.ನ. ಪಾಠ ಕೇಳದ ಎಂ.ಎ. ತರಗತಿ ಎಂಥದು ಎಂದು ಹೋರಾಡಿ ವಿದ್ಯಾರ್ಥಿಗಳಿಗೆ ಆ ಅಪೂರ್ವ ಲಾಭವನ್ನು ದೊರಕಿಸಿಕೊಟ್ಟರೂ ದೊ.ಲ.ನ.ಗೆ ಕರಕರೆ ಉಳಿಯಿತು. ತುಂಬಾ ವಿಷಾದಕರವಾದ ಪ್ರಸಂಗವಿದು. ನಾವು ನಿರುಪಾಯರು. ತೀ.ನಂ.ಶ್ರೀ. ಅವರನ್ನು ಆದಷ್ಟು ಸಮಾಧಾನಪಡಿಸಿದೆ. ಅಂತರ್ಯವಾಗಿ ತೀ.ನಂ.ಶ್ರೀ. ದೊ.ಲ.ನ. ಅವರನ್ನು ತುಂಬ ಪ್ರೀತಿಸುತ್ತಿದ್ದರು. ಅವರ ಸಂಭಾವನಾ ಗ್ರಂಥದ ಸಂಪಾದಕರಾಗಿ ಶ್ರಮಿಸಿದರು. ಆದರೆ ಸಮಾರಂಭ ನಡೆಯುವುದಕ್ಕೆ ಎರಡು ಮೂರು ತಿಂಗಳ ಮುಂಚೆ ತೀರಿಕೊಂಡರು. ದೊ.ಲ.ನ.ರೂ ತೀ.ನಂ.ಶ್ರೀ.ಯವರ ವಿಷಯದಲ್ಲಿ ತುಂಬ ವಿಶ್ವಾಸ ತಳೆದಿದ್ದರು. ಇವರಿಬ್ಬರ ಮೈತ್ರಿಯನ್ನು ಕೃಷ್ಣಶಾಸ್ತ್ರಿಗಳು ಮತ್ತು ವೆಂಕಣ್ಣಯ್ಯನವರ ಸ್ನೇಹಕ್ಕೆ ಹೋಲಿಸುವಂತಿತ್ತು. ದೊ.ಲ.ನ. ಸಹ ತಮ್ಮ ಕಡೆಗಾಲದಲ್ಲಿ ತಮ್ಮ ಉದ್ಗ್ರಂಥವಾದ 'ಪಂಪಭಾರತ ದೀಪಿಕೆ'ಯನ್ನು ತೀ.ನಂ.ಶ್ರೀ ಅವರಿಗೆ ಅರ್ಪಿಸಿ ತಮ್ಮ ಉದಾರ ಸ್ನೇಹಭಾವವನ್ನು ಪ್ರಕಾಶಗೊಳಿಸಿದ್ದಾರೆ. ತೀ.ನಂ.ಶ್ರೀ.ಯವರ ಜೀವಿತದಲ್ಲಿ ಬಂಧುವಿಯೋಗಕ್ಕಿಂತ ತೀವ್ರವಾದ ದುರಂತ ಪ್ರಸಂಗವಿದು ಈ ಮೈತ್ರೀಭಂಗ.

* * *

೫೬

'ಉಪಾಯನ'ದ ಅರಿಕೆಯಿಂದ

ಈ ಸಂಪುಟ ಮುದ್ರಣ ಮೊದಲಾದ ದಿನದಿಂದ ಹಿಡಿದು ಅದರ ಕೊನೆಯ ಲೇಖನ ಅಚ್ಚಾಗುವವರೆಗೂ, ಪ್ರೊ॥ ತೀ.ನಂ.ಶ್ರೀಕಂಠಯ್ಯನವರು ತಮ್ಮ ದೇಹಶ್ರಮವನ್ನು ಲೆಕ್ಕಿಸದೆ ದುಡಿದಿದ್ದಾರೆ. ತಮ್ಮಲ್ಲಿಗೆ ಬಂದ ಲೇಖನಗಳನ್ನು ಓದಿ, ಸರಿನೋಡಿ ಅಚ್ಚಿಗೆ ಸಿದ್ಧಗೊಳಿಸುವುದರಲ್ಲಿ, ಅಚ್ಚಿನ ಮೊಳೆಗಳನ್ನು ನಿರ್ಣಯಿಸುವುದರಲ್ಲಿ, ಕರಡು ಪ್ರತಿಗಳನ್ನು ತಿದ್ದುವುದರಲ್ಲಿ, ಗ್ರಂಥದ ಸಮಷ್ಟಿ ಸೌಂದರ್ಯವನ್ನು ರೂಪಿಸುವುದರಲ್ಲಿ ಅವರ ಕೈವಾಡ ಪುಟಪುಟಗಳಲ್ಲಿಯೂ ಕಂಡುಬರುತ್ತವೆ.

ಈ ಗ್ರಂಥದ ಪ್ರಕಟಣೆಯಲ್ಲಿ ಅವರು ಪಟ್ಟಿರುವ ಶ್ರಮ ಎಷ್ಟೆಂಬುದು ಅವರು ನಿರ್ವಹಿಸುತ್ತಿದ್ದ ಕಾರ್ಯವನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ತಿಳಿಯುವುದು ಸಾಧ್ಯ. ಶ್ರೀಯುತರು ಡಿ.ಎಲ್.ಎನ್. ಅವರ ಒಡನಾಡಿಗಳಾಗಿದ್ದರು, ಸಹೋದ್ಯೋಗಿಗಳಾಗಿದ್ದರು. ಕನ್ನಡ ವಿದ್ವತ್ ಪ್ರಪಂಚವನ್ನು ಬೆಳೆಸಲು ಇಬ್ಬರೂ ಜೊತೆ ಜೊತೆಯಾಗಿ ಕೆಲಸ ಮಾಡಿದರು. ಅವರು ಈ ದಿನ ನಮ್ಮೊಡನೆ ಇದ್ದು ಈ ಉತ್ಸವದಲ್ಲಿ ಭಾಗವಹಿಸಿದ್ದರೆ, ಇದಕ್ಕೆ ಎಂಥ ಸಡಗರ ಉಂಟಾಗುತ್ತಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ನಮ್ಮ ಮತ್ತು ನಾಡಿನ ದುರ್ದೈವದಿಂದ ನಮ್ಮನ್ನು ಅವರು ಅಗಲಿದರು. ಶ್ರೀಯುತರ ಅಕಾಲ ನಿಧನಕ್ಕಾಗಿ ಕಣ್ಣೀರಿಡುತ್ತ, ಈ ಗ್ರಂಥ ಪ್ರಕಟಣೆಗೆ ಅವರಿಂದಾದ ನೆರವನ್ನು ಸಮಿತಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತದೆ.

* * *

೫೭

ಡಿ.ಎಲ್. ನರಸಿಂಹಾಚಾರ್ ಮೈಸೂರು, ೨೬–೧–೧೯೭೦

ಚಿ॥ಸ॥ ಟಿ.ಎಸ್. ನಾಗಭೂಷಣನಿಗೆ ಮಾಡುವ ಆಶೀರ್ವಾದಗಳು. ನಿನ್ನ ೧೮ನೆಯ ತಾರೀಖಿನ ಪತ್ರ ತಲುಪಿದೆ. ನೀನೂ ನಿನ್ನ ತಾಯಿಯವರೂ ಬೆಂಗಳೂರಿನ ಕಡೆ ಬಂದಿದ್ದ ವಿಷಯ ನನಗೆ ತಿಳಿದಿರಲಿಲ್ಲ. ನಿನ್ನ ಪತ್ರದಿಂದ ಗೊತ್ತಾಯಿತಷ್ಟೆ! ಇಲ್ಲಿಗೂ ಬಂದಿದ್ದರೆ ನಿಮ್ಮನ್ನೆಲ್ಲ ನೋಡಬಹುದಾಗಿತ್ತು.

ನಾಳೆ ಡಾಕ್ಟರೇಟ್ ಡಿಗ್ರಿಯನ್ನು ನಾನು ಸ್ವೀಕರಿಸಲಿದ್ದೇನೆ. ನಿಮ್ಮ ಅಭಿನಂದನೆಗಳಿಗೆ ನಾನು ಕೃತಜ್ಞನಾಗಿದ್ದೇನೆ. ಇದು ನನಗೆ ಬಂದಿರುವುಕ್ಕೆ ಮುಖ್ಯ ಕಾರಣ ನನ್ನ ವಿದ್ಯಾರ್ಥಿಗಳೂ ಸ್ನೇಹಿತರೂ ಆಗಿರುವ, ಈಗ ವೈಸ್‌ಛಾನ್ಸಲರ್ ಆದ ಶ್ರೀ ಡಿ. ಜವರೇಗೌಡರವರು. ಅವರಿಲ್ಲದಿದ್ದರೆ ನನ್ನನ್ನು ಯಾರು ಕೇಳುತ್ತಿದ್ದರು.? ಈ ವಿಷಯದಲ್ಲಿ ನಾನು ಸಂತೋಷ ಪಡುವುದು ಸಹಜವಾಗಿದ್ದರೂ ನನಗೆ ಅದೇನೂ ಅಧಿಕವಾಗಿಲ್ಲ. ತೀ.ನಂ.ಶ್ರೀಕಂಠಯ್ಯನವರು ಬದುಕಿದ್ದು ಅವರ ಜೊತೆಯಲ್ಲಿ ನಾನು ಈ ಡಿಗ್ರಿಯನ್ನು ಪಡೆಯುವ ಅವಕಾಶವುಂಟಾಗಿದ್ದಿದ್ದರೆ ನನ್ನ ಸಂತೋಷಕ್ಕೆ ಪಾರವಿರುತ್ತಿರಲಿಲ್ಲ. ಆದರೆ ದೈವೇಚ್ಛೆ ಬೇರೆಯಾಗಿ ಬಿಟ್ಟಿತು.

ನಾನು ತಕ್ಕಮಟ್ಟಿಗೆ ಆರೋಗ್ಯವಾಗಿದ್ದೇನೆ. ಆದರೆ ಜೋರು ಮಾಡುವ ಹಾಗಿಲ್ಲ. ಎಲ್ಲ ಒಂದು ಮಿತಿಯಲ್ಲಿ ಇದ್ದರೆ ಪರವಾಗಿಲ್ಲ. ದೇಹಕ್ಕೆ ಹೆಚ್ಚು ಆಯಾಸವಾಗದಂತೆ ನೋಡಿ ಕೊಳ್ಳಬೇಕಾಗಿದೆ.

ನನ್ನ ನಮಸ್ಕಾರಗಳನ್ನು ನಿನ್ನ ತಾಯಿಯವರಿಗೆ ತಿಳಿಯಪಡಿಸು. ನಿಮ್ಮ ಆರೋಗ್ಯಾದಿಗಳಿಗೆ ಬರೆಯುತ್ತಿರು. ಭಗವಂತನು ನಿಮಗೆ ಒಳ್ಳೆಯದನ್ನು ಮಾಡಲಿ.

ಇಂತೀ ಆಶೀರ್ವಾದಗಳು

* * *

೫೮

ತೀ.ನಂ.ಶ್ರೀ ಗುರುತು ಮಾಡಿದ್ದ ವಿಷಯಗಳು

ಲೇಖನಗಳು(?)

- ಗೊಲ್ಗೊಥಾ
- ಪಂಪಭಾರತದ ಆಕರಗಳು
- ಹರಿಹರನ ಕಾಲ
- ಎಂ.ಎಸ್.ಪುಟ್ಟಣ್ಣನವರ ಕಾದಂಬರಿಗಳು
- ಸೀತಾಪರಿತ್ಯಾಗ
- ಮುದ್ರಾಮಂಜೂಷ ಪ್ರವೇಶ
- ಶಕುಂತಲೆಯ ಚಿತ್ರ
- ಕಾಳಿದಾಸ ಮತ್ತು ಮಕ್ಕಳು
- ಶಾಕುಂತಲದ ಪಾಠಾಂತರ (ಹೆಂಗಸರ ಹಾಡಿನಲ್ಲಿ)
- ನಾವು ಆಡುವ ಮಾತು
- ಸಾಹಿತ್ಯದಲ್ಲಿ ಶೃಂಗಾರ
- ರನ್ನನ ಎರಡು ಕೃತಿಗಳು
- ಕೆಲವು ಉಪಮೆಗಳು
- ಚತ್ತಾಣ – ಬೆದಂಡೆ
- ಸಂಸ್ಕೃತ ವೃತ್ತಗಳಲ್ಲಿ ಮಾತ್ರಾಗಣಗಳು
- ರಗಳೆಗಳು : 'ಮಟ್ಟರಗಳೆ'
- ಸರಳರಗಳೆ
- ಹೊಸಛಂದಸ್ಸಿನಲ್ಲಿ ಪದ್ಯಬಂಧ
- ಕನ್ನಡ ಛಂದಸ್ಸಿಗೆ "ಶ್ರೀ"ಯವರ ಕಾಣಿಕೆ (why not deliver this as a lecture & develop into an article)
- ಪಂಪಭಾರತದಲ್ಲಿ ಕುಲಾಭಿಮಾನದ ಸಮಸ್ಯೆ
- ಕನ್ನಡ ಅಲಂಕಾರಿಕರ ಮೇಲೆ (ಮುಖ್ಯವಾಗಿ ಕವಿರಾಜಮಾರ್ಗಕಾರ, ನಾಗವರ್ಮರ ಮೇಲೆ) ಭಾಮಹ ದಂಡಿ ವಾಮನ ರುದ್ರಟರ ಪ್ರಭಾವ
- ಕನ್ನಡ ಛಂದಸ್ಸಿನಲ್ಲಿ ಯತಿ
- ಹಳಗನ್ನಡ ಓದುವವರಿಗೆ ಬೇಕಾದ ಸಂಸ್ಕೃತ ಜ್ಞಾನ (ಇದರ ಮುಖ್ಯಾಂಶಗಳನ್ನು ಕೂಡಿಸಿ ಒಂದು ಪುಸ್ತಕವನ್ನು ಏಕೆ ಬರೆಯಬಾರದು?)
- ಶಾಕುಂತಲದ ಭಾಷಾಂತರಗಳು–ದೋಷಗಳು

- The Concept of the Zero in Indian Thought
- Panini as a descriptive Grammarian
- The Passive Voice in Dravidian Language
- ಅರಿಸಮಾಸ in Kannada & other Languages
- Analysis of the Language of a ಕೈಫಿಯತ್
- ಬಹುವಚನದ ಪ್ರಯೋಗ
- A phonemic interpretation of the material in ಶಬ್ದಮಣಿದರ್ಪಣ
- What is a "word" in Kannada
- The syntax of 10th Century prose in Kannada
- The problems of multiple meaning
- The meaning of Proper Name
- Glossaray of Linguistic terms with equivalent in "Indian"
- A Quantitative analysis of the influence of Sanskrit (and Prakrit) on Dravidian Vocabulary period by period

Subjects ; Linguistics

- ವೃತ್ತಿ ಪದಕೋಶ – (Carpenters, Weavers, ರೈತರು etc)
- Kannada Syntax
- ಶಬ್ದಮಣಿದರ್ಪಣ as a descriptive Grammar of Kannada
- Place names
- Personal names
- The Kannada Verbal System
- The Study of difference between the Literary Kannada of Mysore & Dharwar area (News Papers, books, plays etc)
- ಅಪಭ್ರಂಶ ಪ್ರಕರಣ
- Prakrit Loan words in Kannada.
- The Translation of English & others Languages into Kannada.
- The alphabetic order in Kannada
  (ಕೋಶ, ನಿಘಂಟು, ಅನುಕ್ರಮಣಿಕೆ ಇತ್ಯಾದಿಗಳಲ್ಲಿ)
- The History of 'ಸಂಭಾವನಾರ್ಥ' in Kannada.
- The Compounds (ಸಮಾಸ)

Subjects : Others

- "ರಾಜಾ ಕಾಲಸ್ಯ ಕಾರಣಂ"
- ಮುಖೇಹೇಡಿ(ಮುಖೇಡಿ)ತನ
- ತಗುಣೆ
- ಶಾಂತಿ
- ಪುಸ್ತಕಗಳು
- ಪುನರುಕ್ತ (Stories retold)
- ಮರವು
- ಪ್ರವಾಸಿ
- ಉಪನ್ಯಾಸಕ (from behind the table)
- ತಾರಾದರ್ಶನ
- ಹಿಮದರ್ಶನ
- The Translation of Poetry

Subjects for Debates

- " ಸಾಹಿತ್ಯ ಸೋಮಾರಿಗಳ ಉದ್ಯೋಗ/ವೃತ್ತಿ"
- "ಹ್ಯಾಟಗಿಂತ ರುಮಾಲು ಮೇಲು"/ (ಎರಡಕ್ಕಿಂತ ಬರಿತಲೆ ಮೇಲು)
- " This generation envies its grandparents / grandchildren"
- "Religion divides, Art unites"
- "The world is more indebted to a Ford than to a Shakespeare"
- "It would be good for humanity if all books were burnt / + periodically"

Topics for Lectures

- ಕಾವ್ಯವೆಂದರೆ ಏನು?
- ಸಾಹಿತ್ಯ ಮತ್ತು ನಾವು
- ಕಾವ್ಯದಲ್ಲಿ ಧ್ವನಿ
- ಕಾವ್ಯಲೋಕ
- ಸಾಹಿತ್ಯ ಮತ್ತು ಸಮಾಜ
- ಕಲೆ ಮತ್ತು ನೀತಿ (Art & Morals)
- ಕಾವ್ಯಸತ್ಯ
- ರಸ

- ಅಭಿರುಚಿ (Literary Taste)
- ಸಾಹಿತ್ಯ ವಿಮರ್ಶೆ
- ಸಹೃದಯ
- Poetry & Magic
- ಕಾವ್ಯದ ಭಾಷೆ (The Language of Poetry)
- The uses of Poetry
- ಕವಿಯ ದೃಷ್ಟಿಯಲ್ಲಿ ಲಲಿತ ಕಲೆ
- ಸಾಹಿತ್ಯ ಮತ್ತು ವಿಜ್ಞಾನ
- ಪ್ರತಿಭೆ
- ಸಾಹಿತ್ಯದಲ್ಲಿ ಸಂಭಾವ್ಯತೆ
- ಕಾವ್ಯದ ರೀತಿ / ದಾರಿ
- ಸಾಹಿತ್ಯದ ಸವಿಗಳು (The Pleasures of Literature)
- The concept of the Poetic image in the light of the Dhvani Theory ("ಕಾವ್ಯ ವೃತ್ತಿಸ್ರದಾಶ್ರಯಾ")
- ಕಾವ್ಯ ಮತ್ತು ಪುರುಷಾರ್ಥಗಳು (Poetry and Values)
- ವಾಲ್ಮೀಕಿ ರಾಮಾಯಣದ ಭಾರತ (ಪ್ರತಿಮಾ ನಾಟಕದಲ್ಲೂ ಕೂಡ)
- ಕೈಕೆ
- ಸೀತಾ ಪರಿತ್ಯಾಗ – ಉರಾಚ, ಮುದ್ದಣ ಇತ್ಯಾದಿ
- ದ್ರೌಪದಿಯ ದಾಸ್ಯ
- ಭಾಸನ ದುರ್ಯೋಧನ
- ಭಾಸನ ಬಾಲಕರು
- ಕಾಳಿದಾಸ ಮತ್ತು ಮಕ್ಕಳು
- ಕಾಳಿದಾಸನ ಮನೋಧರ್ಮ
- ಕಾಳಿದಾಸನ ನಾಯಿಕೆಯರು
- ಅಶ್ವಘೋಷನ ಬುದ್ಧಚರಿತ
- ಮೃಚ್ಛಕಟಿಕ
- ಮುದ್ರಾರಾಕ್ಷಸ
- ಸ್ವಪ್ನವಾಸವದತ್ತ
- ಕಾದಂಬರಿ
- ಕಾಳಿದಾಸನ ಕಲಾಭಿಜ್ಞಾನ
- ಶಾಕುಂತಲ ನಾಟಕದಲ್ಲಿ ಅಭಿಜ್ಞಾನ
- ವಾಲ್ಮೀಕಿಯ ವರ್ಣನೆಗಳು
- ಶಕುಂತಲಾ ಚಿತ್ರ

- ಅಭಿಮನ್ಯು (ವ್ಯಾಸ-ಭಾಸ-ಪಂಪ-ಕುಮಾರವ್ಯಾಸ)
- ಪಂಪನ ಕರ್ಣ
- ಗದಾಯುದ್ಧ
- ಈಗ ದೊರೆಯದ ಕೆಲವು ಕನ್ನಡ ಕಾವ್ಯಗಳು
- ರಾಘವಾಂಕನ ಹರಿಶ್ಚಂದ್ರಕಾವ್ಯ
- ಹರಿಹರ
- ಕನ್ನಡ ಸಾಹಿತ್ಯದಲ್ಲಿ ಗೊಮ್ಮಟೇಶ್ವರನ ಮೂರ್ತಿ
- ಯಶೋಧರ ಚರಿತೆ
- ಕುಮಾರವ್ಯಾಸ
- ಅಹಲ್ಯೆ
- ವಿಕಟಕವಿ ವಿಜಯ
- ಹದಿಬದೆಯ ಧರ್ಮ
- ಆದಿಪುರಾಣ
- ಕನ್ನಡ ಸಾಹಿತ್ಯದಲ್ಲಿ ದುರಂತ ದೃಷ್ಟಿ
- ಅಶ್ವತ್ಥಾಮನ್
- ನಮ್ಮ ಕವಿಗಳು
- ಹೊಸಗನ್ನಡ ಕವಿತೆಯ ರೀತಿ
- ನವ್ಯಕಾವ್ಯ
- ಪುಟ್ಟಣ್ಣನವರ ಕಾದಂಬರಿಗಳು
- 'ಮರಳಿಮಣ್ಣಿಗೆ'
- ಅತ್ತಿಮಬ್ಬೆ
- ಹಳ್ಳಿಯ ಹಾಡುಗಳು
- "ಪಿಡಿದನೆ ಪುರಿಗಣೆಯಂ"
- "ಕರ್ಣಂಗೊಡ್ಡಿತ್ತು ದಲ್‌ಭಾರತಂ"
- ಕನ್ನಡ ಸಾಹಿತ್ಯದಲ್ಲಿ ಶೃಂಗಾರರಸ
- The Spirit of Kannada Poetry ; Old & New
- ಕನ್ನಡದ ವ್ಯಾಸಂಗ
- ಕನ್ನಡದ ಪ್ರಾದೇಶಿಕರೂಪಗಳ ಪರಿವೀಕ್ಷಣ
- ಭಾರತದ ಆದರ್ಶಕ್ಕೆ ಕನ್ನಡದ ಕಾಣಿಕೆ
- ವೀರಶೈವ ವಚನಗಳಲ್ಲಿ ಕಾವ್ಯಸೌಂದರ್ಯ
- ಕನ್ನಡ ಸಾಹಿತ್ಯದಲ್ಲಿ ಮುಕ್ತಕಗಳು
- ದಾಸರ ಪದಗಳಲ್ಲಿ ಕಾವ್ಯಸೌಂದರ್ಯ

- ಜೈನ ಪುರಾಣಗಳಲ್ಲಿ ಭವಾವಳಿ
- ಪುರಂದರದಾಸರು
- ಪುಸ್ತಕಗಳು
- ಆಚಾರ್ಯಾತ್ ಪಾದಮಾದತ್ತೇ........
- ಸಾಹಿತ್ಯದಲ್ಲಿ ಶಿವತಾಂಡವ
- ಸಾಹಿತಿಯ ದೃಷ್ಟಿಯಲ್ಲಿ ಗಾಂಧೀಜಿ
- ಶ್ರೀ ರಾಮಕೃಷ್ಣ
- ಮಾನವಧರ್ಮ
- ಬ್ರಾಹ್ಮಣಧರ್ಮ
- Research
- Living Sanskrit
- ನಾವು ಆಡುವ ಮಾತು
- ಕಾವ್ಯದಲ್ಲಿ ಬೆಳುದಿಂಗಳು
- ಸಂಸ್ಕೃತಿ
- ವಿದ್ಯಾರ್ಥಿಗಳು ಮತ್ತು ಸಮಾಜ
- ಗಣೇಶ
- ಆಧುನಿಕ ಕಾಲ ಮತ್ತು ಜೀವನದ ಮೌಲ್ಯಗಳು
- The Age of Plenty- The Age of Anxiety
- ಪಾಂಡಿತ್ಯ

Research Projects : Subjects (Literary etc)

- ಮಹಾಭಾರತಗಳ ಸ್ತ್ರೀಪಾತ್ರಗಳು
- ಕನ್ನಡ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ
- ಕನ್ನಡ ಸಾಂಗತ್ಯ ಕೃತಿಗಳು (ಐತಿಹಾಸಿಕ ವಸ್ತುವಿಲ್ಲದವು)
- ಜೈನಭಾರತಗಳು–ಕನ್ನಡದಲ್ಲಿ : ಹರಿವಂಶ
- ವಚನ ಸಾಹಿತ್ಯದಿಂದ ವ್ಯಕ್ತವಾಗುವ ೧೨ನೆಯ ಶತಮಾನದ ಧಾರ್ಮಿಕ ಮತ್ತು ಸಾಮಾಜಿಕ ಜೀವನ
- Pampa and Indian Culture (ಪಂಪನ ಕಾಲದ ಭಾರತೀಯ ಸಂಸ್ಕೃತಿ)
- ಕನ್ನಡ ಗದ್ಯದ ಬೆಳವಳಿಗೆ
- ರಾಜಕೀಯ ಶ್ಲೇಷೆ–ಕನ್ನಡ ಕಾವ್ಯಗಳಲ್ಲಿ
- ಕನ್ನಡ ಜನಪದ ಸಾಹಿತ್ಯ – an evaluation
- ಕನ್ನಡ ಭಾರತಗಳಲ್ಲಿ ಕೃಷ್ಣನ ಪಾತ್ರ

- ಜೈನಪುರಾಣಗಳಲ್ಲಿ ಚಕ್ರವರ್ತಿ ದಿಗ್ವಿಜಯ ವರ್ಣನೆಗಳು
- ಮಹಾಪುರಾಣ ಮತ್ತು ಕನ್ನಡ ಸಾಹಿತ್ಯ
- ತ್ರಿಷಷ್ಟಿ ಪುರಾತನ ಕಥೆಗಳು–ಕನ್ನಡ, ತಮಿಳು, ತೆಲುಗಳಲ್ಲಿ
- ಜೈನ ಪುರಾಣಗಳು
- ಕನ್ನಡ ಕಾವ್ಯಗಳಲ್ಲಿ ಗಾದೆಗಳು
- ವಚನ ಸಾಹಿತ್ಯ–ದಾಸ ಸಾಹಿತ್ಯ : a comparitive study
- ಜೈನ ಪುರಾಣಗಳಲ್ಲಿ ಭವಾವಳಿ: artistic & religious use
- ಜೈನ ಪುರಾಣಗಳಲ್ಲಿ ಶಾಂತರಸ (ಮುಖ್ಯವಾಗಿ ಆದಿಪುರಾಣದಲ್ಲಿ)
- ಜೈನವಿಡಂಬನ ಕಾವ್ಯಗಳು
- ಕೈಫಿಯತ್ತು
- Folktales : ಕನ್ನಡ ಸಾಹಿತ್ಯದಲ್ಲಿ ಇವುಗಳ ಉಪಯೋಗ
- The Poetic Imagery of Kumaravyasa
- The Romantic element in Jaina Stories
- ಜೈನ ಕಾವ್ಯಗಳಲ್ಲಿ/ ಕಥೆಗಳಲ್ಲಿ ಸಾಮಾಜಿಕ ಜೀವನ
- Imagery in Kannada Literature
- Literature as an Art (ಇದರ ತೊಡಕುಗಳು, ಸೌಕರ್ಯಗಳು)
- The Virasaiva Movement-Comparitive Study

ತೀ.ನಂ.ಶ್ರೀ.ಯವರ ಗ್ರಂಥಗಳು : ವಿಮರ್ಶೆಗಳು ಮತ್ತು ಅಭಿಪ್ರಾಯಗಳು

ತೀ.ನಂ.ಶ್ರೀ.ಯವರು ಅವರ ಜೀವಿತ ಕಾಲದಲ್ಲಿ ಬರೆದದ್ದು ಬಹಳ ಕಡಿಮೆ. ಅವೆಲ್ಲವೂ ಬಹು ಮೌಲಿಕವಾದ ಬರಹಗಳು ಎಂದು ಕನ್ನಡ ಭಾಷೆ ಮತ್ತು ಸಾಹಿತ್ಯದ ವಿದ್ವಾಂಸರುಗಳ ಅಭಿಪ್ರಾಯವಾಗಿದೆ. ಅವರ ಗ್ರಂಥಗಳು ಮತ್ತು ಲೇಖನಗಳು ಪ್ರಕಟವಾದಾಗ ಅವುಗಳ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಬಂದ ವಿಮರ್ಶೆಗಳು ಮತ್ತು ಅವರ ಸ್ನೇಹಿತರು ಮತ್ತು ಸಹೃದಯರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಬರೆದ ಪತ್ರಗಳನ್ನು ತೀ.ನಂ.ಶ್ರೀ.ಯವರು ರಕ್ಷಿಸಿ ಇಟ್ಟು ಕೊಂಡಿದ್ದರು. ಅವರು ಇವನ್ನು ಬಹಳ ಗಂಭೀರವಾಗಿ ಪರಿಗಣಿಸಿ ತುಂಬಾ ಗೌರವದಿಂದ ಸ್ವೀಕರಿಸಿದ್ದರು. ಕೆಲವರಿಗೆ ಉತ್ತರವನ್ನು ಬರೆದಿದ್ದರೆಂದು ಕಾಣುತ್ತದೆ. ಆದರೆ ಆ ಪ್ರತಿಗಳು ಈಗ ನನ್ನ ಬಳಿ ಇಲ್ಲ. ನನಗೆ ದೊರಕಿದ ಕೆಲವು ಉತ್ತರಗಳನ್ನು ಇಲ್ಲಿ ಸೇರಿಸಲಾಗಿದೆ.

ಇದರಿಂದ ಅಂದಿನಕಾಲದ ಲೇಖಕ ಮತ್ತು ಸಹೃದಯರ ಹಾಗೂ ವಿಮರ್ಶಕರ ನಡುವಿನ ಪರಸ್ಪರ ವಿದ್ವತ್ತಿನ ಮತ್ತು ಬಹು ಉಪಯುಕ್ತವಾದ ಕ್ರಿಯೆ ಪ್ರಕ್ರಿಯೆಗಳ ಒಂದು ಅಪೂರ್ವವಾದ ಸುಮಧುರ ವಾತಾವರಣದ ಅನುಭವವನ್ನು ಇಲ್ಲಿ ಪಡೆಯಬಹುದಾಗಿದೆ.

ಭಾರತೀಯ ಕಾವ್ಯಮೀಮಾಂಸೆ

●

ವಿಮರ್ಶೆಗಳು

V. Sitaramaiah The Hindu, 08-08-1955

This is so far the most lucid and comprehensive book on Indian Poetics in Kannada; and perhaps, no English work covers this ground so systematically. A brief and succinct account of it was given by Prof. A.R. Krishna Sastry in his section of the Kannada Hand-Book published by the University of Mysore, the dramaturgy portions being fairly full. The present work does not go into that part of it again. Prof. Sreekantaiya concentrates on Rasa Dhvani (with or without an 'and' between the two limbs of the term), like Abhinavagupta whose lead he follows largely.

The book is in three parts with 25 chapters and ends with three short appendices on the content of the extant Kannada works on Poetics. The First Section called the "Development of the Sastra" is in seven chapters and deals with the materials in the source books; the Second, on Kavi-Kavya-Sahrudaya, in another seven chapters, is the most stimulating containing within it the kernel of his own sensing and indicating the link which makes the poem a bridge between the Poet and the Sahrudaya leading one upto what the moderns call Literary Criticism: a subject not much in showing in our classical past. The third section in eleven chapters is an analysis and exposition of Rasa and Dhvani and deals with the controversies connected with the nature, the forms and the number of these items right up to the time of Jagannatha. The coverage, thus, is full and the author's

statement that the regional languages do no more than reflect and echo the Sanskrit classics, is centpercent true: so substantial and awesome is the Sanskrit achievement. The sterility in the Desabhasas is because the best talent in the country has ever devoted itself to the languge which brings them prestige. If it was Sanskrit then, it is English now, Tomorrow will bring in another.

Though the author places the several classics in proper sequence his attention is on themâtic development rather than chronology and the disputes on date, name, authorship, etc., such for example as to who is the earlier between Bhamaha and Dandi or as to whether the Karikas and Vritti in the Dhvanyaloka are both by Anandavardhana or not. He states his preferences straight and pursues his main theme. He makes summary decisions on Alamkara, Guna and Riti in the earlier stages even as he does on the Vakrokti, Anumiti and Tatparya schools later. Abhinavagupta is exempler, as he has been these nearly 1,000 years shaping, ordaining and directing all thought and study in this subject. Perhaps the importance attached to Dhvani has been disproportionate but Abhinavagupta's analysis of the field is the most searching and thorough on record. It has supplied a basis for discrimination and judgement and - along with his establishment of Rasa Dhvani as the highest point of articulation, it offers the most inclusive standard of evaluation in our Poetics. Prof. Sreekantaiya is aware of the full lie of the ground and knows too where he would personally not care to go the whole hog with the master.

In a telling sentence he calls the trio - Rasa, Dhvani and Aucitya - the Gayatri of our Poetics. While his exposition of this thesis is full and despite the brilliant summing up of the position in the closing pages of the book one feels still that the Aucitya - reference leaves us not quite reconciled. For Aucitya (with Ruci and Paka) introduces extra literary categories which exercise a more intellectual, a more cultural consideration into the Rasa situation, altogether a different class of values one would think. Life will not be baulked of its dues

and invades the scene. To deal with Rasa and Aucitya as if they were the obverse and reverse of the same process in realization is perhaps valid but not quite the conclusion. Even when a dominant Rasa establishes rule over the Angarasa and the Angadhvanis to produce an Ekaghana or in achieving a Paryantarasa the function of the two is different; more complementary than similar.

The author is very illuminating on Pratibha. His chapter 10 brings together much that was scrappy and fugitive and presents a wealth of relevent matter. That Rasavesa and Pratibha work together to produce the Kriti is well brought out. He prefers the Ullekha-Salini feature of the Pratibha to its Unmesa Salitva, stressing thus the creativity in action. He knows that neither the ancient explanation by Samskara or prasada nor the modern ones by the subconscious and the creative imagination, which in function are synthetic; bipolar. Like the tree which sucks sustenance both from its roots in the ground and from the atmosphere all about it in nature, they derive as much from the roots of the poet's being and impulse to expression, as from the mood and the moment and by all the aspiration and purpose which guide and shape the expression in a state of heightened sensibility.

The analysis of Rasanubhava in process is so much the concern of our writers that the Samadhis and enjoyments of that condition make them almost indifferent to the claims and considerations of life and value around them. It is a value sui generis - a Yoga or even a Purusartha and is realized in a Tanmayatva in an Alaukika either for, the rest of the world is there an obstacle, a disturbing element and is abolished. This along with their zeal to get at the soul of poetry makes their decisions coloured by philosophical predilections, according as they belong e.g., to the Samkhya, the Mimamsa or the Vedanta schools; the resultant Ananda gets a coloured definition. The lesser delights and demands of literary criticism become secondary. The Rasa and Dhvani can possess and canalize all consideration and rationalize it at any level and at all levels of sensing. The enjoyment

and experience must also become indistinguishable at some stage between not only different individual forms and occasions for the same Rasa as between the enjoyment and experience of the Prayogas of other arts like Music, Dancing and Painting.

The history of the subject has also dogged its fortunes and accented its progress. For it started with the Natyasastra with the consideration of a dramatic performance (a Natya prayoga). And the technique used for such an analysis and its impact on a sympathetic, enlightened body of spectors was not easy to adapt to poetry as read to oneself or for that matter heard. The Dhvankara supplied a compelling inclusive hypothesis about the secret of the aesthetic and artistic appeals in poetry. At later stages we see almost an identification of Drama and Poetry: (Cf. the radical sensing of Tauta's Prayogatva manapanne etc., on pp. 85, 26 and 187). In between there has been much compromise between the poetry school and the drama school on both sides of the account. The history of Santa is another illustration in point. Asvaghosa and the Jain poets and scholars had to be quartered and assimilated. And in the preoccupations with the Rasa experience and theories the individual poem was lost to view; the general and the abstract swallowed up the concrete and the particular.

Prof. Sreekantaiya knows all the highways and byways, the blind-ends and the peaks and points of beauty in his subject. For almost every phrase or sentence he seems to have the authority of some ancient master. Yet each word is naturally in place, meticulously correct. Himself a teacher he knows the needs of our students who are generally ignorant of Sanskrit and of the methodology of our Sastra works. So he takes trouble to explain terms not alone like Saadhaaranikarana, Aavaranabhanga, Alaukikataa etc., which are technical and tricky, but words commonly used like Ananda, Sammita, Pratiti, Saundarya, Vaicitrya which tend to become jargon if not even cliches, and on which much obscurantism flourishes. The notes he should have made for charting out the seas, the details of each section

and stage of the arguments, the links and the transitions, the insight he brings to bear into the heart of the matter do credit to any scholar here or elsewhere. Use has been made of almost all the critical and expository information available in books and periodicals. Well may, the editor of the series greet such works as a Vidagdhakrti, an Aacaryakrti.

It seems to us that a concept like Alam - (aram) - kara as Finish - in the sense that nothing more needs to be done, that the piece is ready, fully equipped now for public presentation could have enlivened the elucidation of another aspect of the subject. The Guna contribution could have been shown up a little more to advantage as correlated with the discussions of what is called Nityaguna and Nityadosa vis-a-vis Aucitya. The meaning of Druti, Dipti, Vistara is no doubt well elucidated and integrated into the several Rasaguna relationships. It seems able to illuminate very much more of the process which begins with Hrudaya Samvada leading one forward through Saadhaaranikarana etc., to Rasa realization, and it is likely to yield rich results if one worked out the functions of these terms in the creative process as well.

One point which deserves note is the fact that we have had no theatre criticism in this country to study as record and check up of responses. When the Drsya is on the spectators get absorbed in the enjoyment of their own sthaayiibhaavas. They can do so with different successful presentations of the same play (even as we get geared to the different expositions of Tyagaraja and Dikshitar Kritis by several masters). Each is capable of producing a major effect. When this is so will and must the impression be the same to the readers of the plays as literary items? There will be as many poems and plays in enjoyment this way as there are levels of responses and differences in sensibility. Whose is the Samaananubhava, with the playwright and the actor or between the poet and the reader? To say that the best is sensed by and is commensurate with the best is a pompous escape

declaration. That then is the meaning of the essential quality of original composition? This is an aspect of the subject which is bypassed - as even alogical - but to which some attention needs to be devoted. When one goes through a poem or begins to look on a stage performance, he responds continuously; each new stage adds to his experience and he arrives at the end at which alone a full view of it is possible. It is then that the Akhandacarvana is possible; - in process; in the recollection of the details of it; and, in the reintegration of it for a further mental enjoyment of it as a unit. One is throughout feeling the want of Bhatta Tauta's and Bhattanayaka's works in this situation in our libraries. They seem to have sensed the root of the matter. If Abhinavagupta and the later writers had not shored up a few of their observations the world of our poetics would really very much have been the poorer.

Prof. Sreekantaiya renders into beautiful and correct prose or verse each quotation he uses. Some of his renderings from Gaathaasaptasati, Amaruka and Bhartrhari are good in their own right; - even when (as on p. 275) they do not convey the roll and passion of the original. The sections when put together will make a fine and lively anthology.

Chapters 10-13 and 21, 22 are highlights and reward study. There is need for a full index and one wishes there was a more rigorous enforcement of the distinction at some points between the main matter, the footnote and the skirmish or the excursion; though, it must in fairness be said that, the writing nowhere clouds the thought or impedes the advance of the argument.

*

Principal K.V. Puttappa, the editor of the series and himself the most outstanding poet in modern Kannada speaks handsomely of this work and also of what more needs now to be done in and for the subject. Prof. Sreekantaiya is aware of all that he has not done here: his provisos, his notes on bearings and on the limitations of an

argument should be fully kept in mind before accepting his exposition as final or indubitable certainties.

It is right, as the editor says and proper that we should not ape the westerners; nor blindly follow our own ancients but must move forward on our own. But when we speak of the aid one should take from Modern Philosophy, Psychology, Aesthetics and Yoga Vignana etc. - toil and turmoil will be let into the field; and all the wilderness and the anarchy as well as the freedom, the enterprise and the exhilaration of the Western sensing of the poetic and critical situations will irrevocably flood into the field and affect methodology as well.

To keep clear of that is impossible today, as it will be blindness and crassness. If the result still bears the true Indian stamp, well and welcome, but it will be a miracle. For literature is one. Neither space nor time can limit consideration today. East and West are but 'halves of the dissevered world' and neither - and certainly no thought - can progress without attention paid to and assimilation of the other.

* * *

ಎಸ್. ರಂಗನಾಥ ಶರ್ಮ ಜನಪ್ರಗತಿ : ೨೨/೨೯.೪.೧೯೫೬

ಶ್ರೀ ಟಿ.ಎನ್. ಶ್ರೀಕಂಠಯ್ಯನವರು ಬರೆದಿರುವ ಭಾರತೀಯ ಕಾವ್ಯಮೀಮಾಂಸೆ ಒಂದು ಉದ್ಗ್ರಂಥ, ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ೨೯ನೆಯ ಕುಸುಮ. ಇದರ ಸೌಂದರ್ಯವನ್ನು ಸವಿಯುವ, ಸುಗಂಧವನ್ನು ಆಘ್ರಾಣಿಸುವ ಭಾಗ್ಯ ಕೆಲವು ದಿನಗಳ ಹಿಂದೆ ನನಗೆ ಕೂಡಿಬಂದಿತು. ಈ ಗ್ರಂಥದ ಉಪಯೋಗವನ್ನು ಕುರಿತು ಶ್ರೀ ಕೆ.ವಿ. ಪುಟ್ಟಪ್ಪನವರು ತಮ್ಮ ಮುನ್ನುಡಿಯಲ್ಲಿ "ಉತ್ತಮವಾದ ಸಾಹಿತ್ಯ ವಿಮರ್ಶೆಗೆ ಕಾವ್ಯಮೀಮಾಂಸೆಯ ಅವಶ್ಯಕತೆ ಅನಿವಾರ್ಯ, ಕಾವ್ಯಮೀಮಾಂಸೆ ಬೆಳೆಯದೆ ಅದರ ಪ್ರಾಯೋಗಿಕ ರೂಪವಾದ ಉತ್ತಮ ಸಾಹಿತ್ಯ ವಿಮರ್ಶೆ ಬೆಳೆಯಲು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ. ಇದು ಅಕ್ಷರಶಃ ಸತ್ಯ. ಕಾವ್ಯದ ಸ್ವರೂಪವೇನು? ಅದರ ಉದ್ದೇಶವೆಂತಹುದು? ಶಬ್ದಾರ್ಥಗಳನ್ನು ಪೋಣಿಸುವ ಕವಿಕರ್ಮದ ರಹಸ್ಯವೇನು? ಅದರಲ್ಲಿ ಯಾವುದು ಅನುಚಿತ ದೋಷ? ಇವುಗಳನ್ನರಿತು ಉತ್ತಮ ಕಾವ್ಯವನ್ನು ವಿಭಜಿಸಿ, ಓದಿ, ಆನಂದಿಸಿ ಬರೆಯಬೇಕಾದ ಸಾಹಿತ್ಯ ವಿಮರ್ಶೆಗೆ ಕಾವ್ಯಮೀಮಾಂಸೆ ಜ್ಞಾನದ ಹಿನ್ನೆಲೆ ಅತ್ಯಾವಶ್ಯಕ. ಅದಿಲ್ಲದಿದ್ದರೆ ಕಾವ್ಯಮೀಮಾಂಸೆ ಬರಿಯ

ಪುಸ್ತಕ ಪರಿಚಯವಾದೀತು. ಕಾವ್ಯಮೀಮಾಂಸೆಯು ಕೇವಲ ವಿಮರ್ಶಕರಿಗೆ ಮಾತ್ರವಲ್ಲ; ಕಾವ್ಯವನ್ನು ಓದುವ ಸಹೃದಯರಿಗೂ ಬೇಕು. ಕಾವ್ಯರಚನೆ ಮಾಡುವ ಕವಿಗೂ ಬೇಕು.

ಕನ್ನಡದಲ್ಲಿ ಕಾವ್ಯ ವೇಷಧಾರಿ ಪುಸ್ತಕಗಳು ಹೆಚ್ಚುತ್ತಿರುವ ಈ ಕಾಲದಲ್ಲಿ ಈ ಗ್ರಂಥವನ್ನು ಬೆಳಕಿಗೆ ತಂದು ಶ್ರೀ ಟಿ.ಎನ್. ಶ್ರೀಕಂಠಯ್ಯನವರು ಕಾವ್ಯಪ್ರೇಮಿಗಳಿಗೆ ಪರಮೋಪಕಾರವನ್ನು ಮಾಡಿದ್ದಾರೆ. ಇಂತಹ ಲಕ್ಷಣ ಗ್ರಂಥದ ರಚನೆ ಸುಲಭವಲ್ಲ. ಇದನ್ನು ಓದುತ್ತಿರುವಾಗಲೇ ಲೇಖಕರ ಶ್ರಮ ನಮಗೆ ಅರಿವಾಗುತ್ತದೆ. ಸಂಸ್ಕೃತ ಲಕ್ಷಣ ಗ್ರಂಥಗಳನ್ನೆಲ್ಲಾ ಓದಿ, ಗ್ರಂಥಕರ್ತರ ಆಶಯಗಳನ್ನೆಲ್ಲಾ ಜೀರ್ಣಿಸಿಕೊಂಡು, ಆಧುನಿಕರು ಬರೆದ ಟೀಕೆ, ಟಿಪ್ಪಣಿ, ವಿಮರ್ಶೆಗಳನ್ನು ಪರಿಶೀಲಿಸಿ ವಿಷಯಗಳನ್ನೆಲ್ಲಾ ಕ್ರೋಡೀಕರಿಸಿ ಬರೆಯುವುದು ಸಾಮಾನ್ಯವಾದ ಹೊರೆ-ಹೊಣೆಗಳಲ್ಲ. ಕನ್ನಡದಲ್ಲಿ ಸಾಮಾನ್ಯ ಜನಗಳಿಗೂ ಅರಿವಾಗುವಂತೆ ಶಾಸ್ತ್ರೀಯ ವಿಷಯವನ್ನು ತಿಳಿಯಾದ ಶೈಲಿಯಲ್ಲಿ ಪ್ರತಿಪಾದಿಸುವುದು ಇನ್ನೂ ಕಠಿಣ. ಈ ಹೊಣೆಗಾರಿಕೆಯೆಲ್ಲವನ್ನೂ ಲೇಖಕರು ಯಶಸ್ವಿಯಾಗಿ ನಿರ್ವಹಿಸಿ ಕೃತಕೃತ್ಯರಾಗಿದ್ದಾರೆಂದು ಹೇಳಲು ಹೆಮ್ಮೆಯಾಗುತ್ತದೆ.

ಕಾವ್ಯಮೀಮಾಂಸೆಯ ಇನ್ನೊಂದು ಅಂಗ ಪಾಶ್ಚಾತ್ಯ ಕಾವ್ಯಮೀಮಾಂಸೆ. ಭಾರತೀಯ ಕಾವ್ಯಮೀಮಾಂಸೆಯನ್ನು ಯಶಸ್ವಿಯಾಗಿ ಬರೆದು ಪಳಗಿದ ಕೈಯಿಂದ ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಉದಯವಾಗಲೆಂದು ಹಾರೈಸೋಣ.

ಈ ಗ್ರಂಥದ ಶ್ರೇಷ್ಠತೆಯನ್ನು ಪ್ರತಿಪಾದಿಸುವುದಕ್ಕೆ ಯೋಗ್ಯ ಉದಾಹರಣೆಗಳನ್ನು ಪ್ರತಿಯೊಂದು ಪ್ರಕರಣದಿಂದಲೂ ಪ್ರತಿಯೊಂದು ಪುಟದಿಂದಲೂ ಆರಿಸಿಕೊಡಬಹುದು. ಈ ಕೆಲಸವನ್ನು ಸಹೃದಯರಾದ ಪಂಡಿತರು ನಿರ್ವಹಿಸಿರಬಹುದು, ನಿರ್ವಹಿಸಬೇಕು.

ಈ ಲೇಖನದ ಉದ್ದೇಶ ಅದಲ್ಲ. ನನಗೊದಗಿದ ಸಂದೇಹಗಳನ್ನು ಭಿನ್ನಾಭಿಪ್ರಾಯಗಳನ್ನು ವಿವರಿಸಬೇಕೆಂಬುದೇ ಉದ್ದೇಶ. ಗುಣ ಪ್ರಶಂಸೆಯಂತೆ ದೋಷ ದರ್ಶನವೂ ವಿಮರ್ಶೆಯ ಒಂದು ಭಾಗವಷ್ಟೆ. ಶ್ರೀ ಟಿ.ಎನ್. ಶ್ರೀಕಂಠಯ್ಯನವರು ಸಹೃದಯತೆಯಿಂದ ಇದನ್ನು ಗ್ರಹಿಸಬೇಕಾಗಿ ಆಶಿಸುತ್ತೇನೆ. "ಇಂಥ ಕೆಲಸದಲ್ಲಿ ನಿರೂಪಣಕಾರನ ಶಕ್ತಿ ಪರಿಮಿತಿಯ ಫಲವಾಗಿ ಕೆಲವಾದರೂ ಲೋಪ, ಪ್ರಕ್ಷೇಪ ವಿಪರ್ಯಾಸಗಳು ಒದಗುವುದು ಅನಿವಾರ್ಯ"ವೆಂದು ಲೇಖಕರು 'ಅರಿಕೆ'ಯಲ್ಲಿ ವಿನಯೋಕ್ತಿಯನ್ನಾಡಿದ್ದಾರೆ.

"ಕಾವ್ಯ ಲಕ್ಷಣಗಳು" ಎಂಬ ಪ್ರಕರಣದಲ್ಲಿ ಭಾಮಹ; ದಂಡಿ, ವಾಮನ ಮತ್ತು ಆನಂದ ವರ್ಧನರು ಒಂದು ಪರಿಷ್ಕೃತವಾದ ಕಾವ್ಯ ಲಕ್ಷಣವನ್ನು ಕೊಟ್ಟಿಲ್ಲವೆಂದು ಹೇಳಿ ಕಾವ್ಯ ಲಕ್ಷಣವನ್ನು ಶ್ರದ್ಧಾಪೂರ್ವಕವಾಗಿ ರಚಿಸಿದ ಮೊದಲನೆಯ ಲಕ್ಷಣಕಾರನು ಕುಂತಕನೆಂದು ಅಭಿಪ್ರಾಯ ಪಟ್ಟಿದ್ದಾರೆ. (ಭಾ.ಕಾ.ಮೀ. ಪುಟ ೧೩೨-೧೩೩).

'ಶಬ್ದಾರ್ಥೌ ಸಹಿತೌ ಕಾವ್ಯಂ' (ಶಬ್ದಾರ್ಥಗಳು ಒಂದುಗೂಡಿ ಕಾವ್ಯ) ಎಂದು ಹೇಳಿದ ಭಾಮಹನ ಲಕ್ಷಣವು ಪರಿಷ್ಕೃತವಲ್ಲವೆಂದು ಒಪ್ಪಿಕೊಳ್ಳೋಣ. ಆದರೆ, 'ಶರೀರಂ ತಾವದಿಷ್ಟಾರ್ಥ ವ್ಯವಚ್ಛಿನ್ನಾ ಪದಾವಲೀ' (ಕಾವ್ಯದ ಶರೀರವೆಂದರೆ ಇಷ್ಟವಾದ ಅರ್ಥವನ್ನುಳ್ಳ ಪದ ಸಮೂಹ)

ಎಂಬ ದಂಡಿಯ ಲಕ್ಷಣ ಪರಿಷ್ಕೃತವಲ್ಲವೆಂದು ಹೇಗೆ ಹೇಳುವುದು? ಇಷ್ಟವೆಂದರೆ ಸಹೃದಯನಿಗೆ ಇಷ್ಟವಾದದ್ದು. ಅದೇ ರಮಣೀಯ. 'ಅಲೌಕಿಕಾನಂದವನ್ನು ಉಂಟುಮಾಡುವ' ಎಂಬುದೇ ಅದರ ಅರ್ಥ. ಜಗನ್ನಾಥ ಪಂಡಿತನು ರಸಗಂಗಾಧರದಲ್ಲಿ ಹೇಳಿದ 'ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ' ಎಂಬ ಸುಪರಿಷ್ಕೃತ ಲಕ್ಷಣಕ್ಕೂ ದಂಡಿಯ ಲಕ್ಷಣಕ್ಕೂ ಭೇದವೇನೂ ಇಲ್ಲ. ವಾಮನನು "ಕಾವ್ಯಶಬ್ದೋಯಂ ಗುಣಾಲಂಕಾರ ಸಂಸ್ಕೃತಯೋಃ ಶಬ್ದಾರ್ಥ ಯೋರ್ವರ್ತತೇ" (ಕಾವ್ಯವೆಂಬ ಶಬ್ದವು ಗುಣಾಲಂಕಾರಗಳಿಂದ ಪರಿಷ್ಕಾರ ಹೊಂದಿದ ಶಬ್ದಾರ್ಥಗಳಿಗೆ ಅನ್ವಯಿಸುತ್ತದೆ) ಎಂದು ಹೇಳುತ್ತಾನೆ. ಇದೂ ಕಾವ್ಯದ ಪರಿಷ್ಕೃತ ಲಕ್ಷಣವೇ ಸರಿ. 'ತದದೋಷೌ ಶಬ್ದಾರ್ಥೌ....' ಎಂಬ ಮಮ್ಮಟನ ಲಕ್ಷಣಕ್ಕೆ ವಾಮನನ ಲಕ್ಷಣವೇ ಆಧಾರ. ಆದರೆ 'ದೋಷವಿರಬಾರದು, ಸ್ಫುಟಾಲಂಕಾರವಿಲ್ಲದಿದ್ದರೂ ಚಿಂತೆ ಇಲ್ಲ' ಎಂಬುದು ಮಮ್ಮಟನ ಅಧಿಕ ಕಲ್ಪನೆ. ಮಾನ್ಯ ಗ್ರಂಥಕಾರರು 'ವಾಮನನು "ರೀತಿರಾತ್ಮಾ ಕಾವ್ಯಸ್ಯ" (ರೀತಿಯೇ ಕಾವ್ಯದ ಆತ್ಮ) ಎಂದು ಇನ್ನೊಂದು ಕಡೆ ಹೇಳಿದನು' ಎಂದು ಬರೆದು ವಾಮನನ ಹೇಳಿಕೆಯಲ್ಲಿ ಪೂರ್ವಾಪರ ವಿರೋಧವಿದೆಯೆಂದು ಧ್ವನಿಯಿಂದ ಸೂಚಿಸಿದ್ದಾರೆ. ಈ ಸೂಚನೆಯು ಹೌದಾದರೆ ಸಂಗತವಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ, ವಾಮನನು ಕಾವ್ಯ ಲಕ್ಷಣವನ್ನು ಹೇಳುವಾಗ ಶಬ್ದವು ಗುಣಯುಕ್ತವಾಗಿರಬೇಕೆಂದು ಹೇಳಿದ್ದಾನೆ. ಅವನ ಮತದಲ್ಲಿ ಗುಣ ವಿಶಿಷ್ಟವಾದ ಪದರಚನೆಯೇ ರೀತಿ. (ವಿಶಿಷ್ಟಾ ಪದರಚನಾ ರೀತಿಃ ವಿಶೇಷೋ ಗುಣಾತ್ಮಾ=ವಾ.ಸೂ.) ಕಾವ್ಯ ಲಕ್ಷಣದಲ್ಲಿ ರೀತಿಯೂ ಸೇರಿದೆ ಎಂಬುದು ಸ್ಪಷ್ಟವಾಗಿದೆ. "ಶಬ್ದಾರ್ಥಗಳೆರಡೂ ಸೇರಿ ಕಾವ್ಯ. ಅದರಲ್ಲಿ ಶಬ್ದವೇ ಆತ್ಮ ಎಂದರೆ ಪ್ರಧಾನ"ವೆಂದು ವಾಮನನ ಆಶಯ.

"ಸಹೃದಯ ಹೃದಯಾಹ್ಲಾದಿ ಶಬ್ದಾರ್ಥಮಯತ್ತ್ವಮೇವ ಕಾವ್ಯ ಲಕ್ಷಣಂ" (ಸಹೃದಯರ ಸಹೃದಯವನ್ನು ಆಹ್ಲಾದಗೊಳಿಸುವ ಶಬ್ದಾರ್ಥಗಳಿಂದ ಪ್ರಚುರವಾಗಿರುವದೇ ಕಾವ್ಯದ ಲಕ್ಷಣ) ಎಂದು ಆನಂದವರ್ಧನನೂ ಘೋಷಿಸಿದ್ದರೂ ಕೂಡ "ಆನಂದವರ್ಧನನೂ ಕೂಡ ಒಂದು ಪರಿಷ್ಕೃತವಾದ ಕಾವ್ಯ ಲಕ್ಷಣವನ್ನು ಕೊಟ್ಟಿಲ್ಲ" ಎಂದು ಮಾನ್ಯ ಗ್ರಂಥಕಾರರು ಏಕೆ ಬರೆದರೋ ತಿಳಿಯದಾಗಿದೆ. ಈ ಲಕ್ಷಣವು ಜಗನ್ನಾಥ ಪಂಡಿತನ ಕಾವ್ಯ ಲಕ್ಷಣಕ್ಕೆ ನಿಕಟವರ್ತಿಯಾಗಿದೆ.

'ಈ ಲಕ್ಷಣಗಳಲ್ಲಿ ದೋಷಗಳಿವೆ. ಸಿದ್ಧಾಂತದಲ್ಲಿ ಸರ್ವಸಂಮತವಾಗಿ ನಿಲ್ಲತಕ್ಕ ಲಕ್ಷಣಗಳಲ್ಲ' ಎಂಬುದು ಗ್ರಂಥಕಾರರ ಆಶಯವಾಗಿದ್ದರೆ ಆ ಮಾತು ಬೇರೆ. ಆಗ ಕುಂತಕ, ಮಮ್ಮಟ, ವಿಶ್ವನಾಥ ಮುಂತಾದವರೂ ಪರಿಷ್ಕೃತ ಲಕ್ಷಣಗಳನ್ನು ಹೇಳಿಲ್ಲವೆಂದು ಒಪ್ಪಬೇಕಾದೀತು.

ಜಗನ್ನಾಥ ಪಂಡಿತನು 'ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ (ರಮಣೀಯವಾದ ಅರ್ಥವನ್ನು ಪ್ರತಿಪಾದಿಸಿರುವ ಶಬ್ದವು ಕಾವ್ಯ) ಎಂದು ಕಾವ್ಯ ಲಕ್ಷಣವನ್ನು ಕೊಡುತ್ತಾನೆ. ಲೋಕೋತ್ತರವಾದ ಆನಂದವನ್ನು ಕೊಡುವ ವಿಷಯವನ್ನು (ಅರ್ಥವನ್ನು) ಬೋಧಿಸುವ ಶಬ್ದವೇ ಕಾವ್ಯ ಎಂದು ತಾತ್ಪರ್ಯ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ: ಶಬ್ದಾರ್ಥಗಳೆರಡೂ ಸೇರಿ ಕಾವ್ಯವಲ್ಲ; ಶಬ್ದ ಮಾತ್ರವೇ ಕಾವ್ಯ ಎಂಬ ಜಗನ್ನಾಥನ ಸಿದ್ಧಾಂತ. ಅತಿ ಸೂಕ್ಷ್ಮವಾಗಿ

ಪರಿಶೀಲಿಸಿ ಸಿದ್ಧಾಂತಿಸಿದ ಈ ಲಕ್ಷಣದ ಮೇಲೂ ಆಕ್ಷೇಪಗಳನ್ನು ಅಲಂಕಾರಿಕರು ಮಾಡಿದ್ದಾರೆ. ಶ್ರೀ ಶ್ರೀಕಂಠಯ್ಯನವರು ಈ ಆಕ್ಷೇಪಗಳಲ್ಲಿ ಕೆಲವನ್ನು ಅನುವಾದಿಸಿ ಜಗನ್ನಾಥನ ಲಕ್ಷಣದಲ್ಲಿ ತಮ್ಮ ಅಸ್ವರಸವನ್ನು ತೋರಿಸಿದ್ದಾರೆ. ಈ ವಿಷಯವನ್ನು ಇಲ್ಲಿ ವಿವರವಾಗಿ ಚರ್ಚಿಸುವುದು ಅವಶ್ಯಕವೆಂದು ಕಾಣುತ್ತದೆ.

ಜಗನ್ನಾಥ ಪಂಡಿತನ ವಾದ ಇದು:- ಶಬ್ದಾರ್ಥಗಳೆರಡೂ ಸೇರಿ ಕಾವ್ಯವೆನ್ನುವುದಕ್ಕೆ ಪ್ರಮಾಣವೇನು? "ಕಾವ್ಯವನ್ನು ಗಟ್ಟಿಯಾಗಿ ಓದುತ್ತಾನೆ," "ಕಾವ್ಯದಿಂದ ಅರ್ಥ ತಿಳಿದು ಬರುತ್ತದೆ," "ಕಾವ್ಯವನ್ನು ಕೇಳಿದ್ದಾಯಿತು. ಅರ್ಥ ಗೊತ್ತಾಗಲಿಲ್ಲ" ಹೀಗೆ ಜನರೆಲ್ಲರೂ ವ್ಯವಹಾರ ಮಾಡುತ್ತಾರೆ. ಶಬ್ದದ ಅರ್ಥವನ್ನು ನಿರ್ಣಯಿಸಲು ವ್ಯವಹಾರ ಒಂದು ಪ್ರಮಾಣ. ಈ ವ್ಯವಹಾರ ಪ್ರಮಾಣದಿಂದ ಕಾವ್ಯವೆಂದರೆ ಶಬ್ದ ವಿಶೇಷವೆಂದು ಗೊತ್ತಾಗುತ್ತದೆ. ಆದ್ದರಿಂದ ಶಬ್ದ ವಿಶೇಷವೇ ಕಾವ್ಯ. ಅರ್ಥವು ಕಾವ್ಯವಾಗಿದ್ದರೆ ಮೇಲೆ ಹೇಳಿದಂತೆ ಮಾತಾನಾಡುವುದು ಅಸಂಗತವಾಗುತ್ತಿತ್ತು.

ಇನ್ನು ಅರ್ಥವು ಕಾವ್ಯವಾದರೂ ಲಕ್ಷಣಾವೃತ್ತಿಯನ್ನಾಶ್ರಯಿಸಿ ಮೇಲ್ಕಂಡ ವ್ಯವಹಾರಕ್ಕೆ ಸಮಾಧಾನ ಹೇಳಬಹುದಲ್ಲವೇ? 'ಕಾವ್ಯವೆಂಬುದಕ್ಕೆ ಶಬ್ದ ವಿಶೇಷವು ಲಕ್ಷ್ಯಾರ್ಥವಾಗಲಿ' ಎಂದು ಯಾರಾದರೂ ಆಕ್ಷೇಪಿಸಬಹುದು. ಅದು ಸರಿಯಲ್ಲ. ಶಬ್ದಾರ್ಥಗಳೆರಡೂ ಕೂಡಿ ಕಾವ್ಯ ಎಂಬುದಕ್ಕೆ ದೃಢತರವಾದ ಆಧಾರವಿದ್ದಿದ್ದರೆ ಮೇಲ್ಕಂಡ ಸ್ಥಳದಲ್ಲಿ ಲಕ್ಷಣಾವೃತ್ತಿಯನ್ನು ಹೇಳಬಹುದಾಗಿತ್ತು. ಅಂತಹ ಆಧಾರ ಏನಿದೆ? ನಮ್ಮ ಹೇಳಿಕೆಗೆ ಮೇಲ್ಕಂಡ ವ್ಯವಹಾರವೇ ಆಧಾರ. ಆದ್ದರಿಂದ ಶಬ್ದ ವಿಶೇಷವೇ ಕಾವ್ಯ. ಹೀಗೆ ವೇದ ಪುರಾಣಾದಿಗಳೂ ಶಬ್ದ ವಿಶೇಷವೆಂದೇ ತಿಳಿಯಬೇಕು.

ಇನ್ನು, ಲೋಕೋತ್ತರಾನಂದವನ್ನುಂಟು ಮಾಡುವುದೇ ಕಾವ್ಯದ ಧರ್ಮ; ಅದು ಶಬ್ದಾರ್ಥಗಳೆರಡರಲ್ಲೂ ಇದೆಯಾದ್ದರಿಂದ ಎರಡೂ ಕಾವ್ಯವಾಗಬಹುದೆಂದು ವಾದಿಸಿದಲ್ಲಿ, ರಾಗ, ನೃತ್ಯ, ವಾದ್ಯಗಳಲ್ಲಿಯೂ ಆನಂದಜನಕ ಧರ್ಮವಿರುವುದರಿಂದ ಅವುಗಳನ್ನೂ ಕಾವ್ಯವೆಂದು ಕರೆಯಬೇಕಾದೀತು. ಆದ್ದರಿಂದ ಕಾವ್ಯತ್ತ್ವವು ಶಬ್ದನಿಷ್ಠವೇ ಸರಿ.

ಜಗನ್ನಾಥನು ಕೊಟ್ಟಿರುವ ಕಾವ್ಯ ಲಕ್ಷಣ ನವೀನವೆಂದು ಮಾನ್ಯ ಲೇಖಕರು ಹೇಳುತ್ತಾರೆ. "ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ" ಎಂಬ ದಂಡಿಯ ಲಕ್ಷಣವನ್ನೇ ಸ್ಪಷ್ಟ ಶಬ್ದಗಳಿಂದ ಜಗನ್ನಾಥನು ಹೇಳಿದ್ದಾನೆ. ಆನಂದವರ್ಧನನು 'ಸಹೃದಯ ಹೃದಯಾಹ್ಲಾದಿ ಶಬ್ದಾರ್ಥ ಮಯತ್ತ್ವಮೇವ ಕಾವ್ಯ ಲಕ್ಷಣಮ್' ಎಂದು ಹೇಳಿದ್ದಾನೆ. ಈ ಕಾವ್ಯ ಲಕ್ಷಣ ಜಗನ್ನಾಥನು ಏರಿ ಕುಳಿತ ವೇದಿಕೆಗೆ ಸೋಪಾನ.

ಈಗ ಜಗನ್ನಾಥನ ಲಕ್ಷಣದ ಮೇಲೆ ಬರುವ ಆಕ್ಷೇಪಗಳ ಕಡೆ ತಿರುಗೋಣ. "ಕಾವ್ಯವನ್ನು ಓದುತ್ತಾನೆ" ಎನ್ನುವಂತೆಯೇ 'ಕಾವ್ಯ ತಿಳಿಯಿತು' (ಕಾವ್ಯಂ ಜ್ಞಾತಂ) ಎಂದು ಜನರು ಹೇಳುವುದಿಲ್ಲವೇ? ಇಲ್ಲಿ ಕಾವ್ಯ ಎಂದರೆ ಅರ್ಥ ತಾನೆ? (ಭಾ.ಕಾ.ಮೀ. ಪುಟ ೧೪೧)

ಈ ಆಕ್ಷೇಪಕ್ಕೆ ನಮ್ಮ ಸಮಾಧಾನ ಇದು:– 'ಮಾತು' ಎಂದರೆ ಶಬ್ದವೆಂದು ಎಲ್ಲರಿಗೂ ಗೊತ್ತು. 'ನಿಮ್ಮ ಮಾತು ತಿಳಿಯಿತು.' ಇಲ್ಲಿ 'ಮಾತು' ಎಂದರೇನು? ಮಾತಿನ ಅರ್ಥ ಎಂದು ತಾನೆ? ಅದು ಲಕ್ಷ್ಯಾರ್ಥ. ಶಬ್ದವು ವಾಚ್ಯಾರ್ಥ. ಭೂರಿ ಪ್ರಯೋಗವು ಯಾವ ಅರ್ಥದಲ್ಲಿದೆಯೋ ಅದು ವಾಚ್ಯಾರ್ಥ. ವಿಶೇಷ ಸಂದರ್ಭದಲ್ಲಿ ಆ ಅರ್ಥವು ಹೊಂದದೆ ಅದಕ್ಕೆ ಸಂಬಂಧಿಸಿದ ಇನ್ನೊಂದು ಅರ್ಥವನ್ನು ಗ್ರಹಿಸಬೇಕಾಗುತ್ತದೆ. ಅದೇ ಲಕ್ಷ್ಯಾರ್ಥ. ಶಬ್ದ ವಿಶೇಷವೇ ಕಾವ್ಯ ಎಂದು ಒಪ್ಪಿದರೆ ಭೂರಿ ಪ್ರಯೋಗಗಳು ಹೊಂದಿಕೊಳ್ಳುತ್ತವೆ. ಮೇಲೆ ಹೇಳಿದ ವ್ಯವಹಾರಗಳಲ್ಲದೆ ಪದ್ಯ ಕಾವ್ಯ, ಗದ್ಯ ಕಾವ್ಯ ಲಕ್ಷ ಶ್ಲೋಕಾತ್ಮಕ ಕಾವ್ಯ, ಸಂಸ್ಕೃತ ಕಾವ್ಯ, ಕನ್ನಡ ಕಾವ್ಯ ಮುಂತಾದ ವ್ಯವಹಾರಗಳೂ ಶಬ್ದವನ್ನೇ ಬೋಧಿಸುತ್ತವೆ. ಆದ್ದರಿಂದ 'ಕಾವ್ಯಂ ಜ್ಞಾತಂ' ಎಂಬ ಒಂದು ಪ್ರಯೋಗದಿಂದ ವಾಚ್ಯಾರ್ಥವನ್ನು ನಿರ್ಣಯಿಸುವುದು ತಪ್ಪು.

ರಸಗಂಗಾಧರದ ವ್ಯಾಖ್ಯಾನಕಾರನಾದ ನಾಗೇಶಭಟ್ಟನು ಈ ವಾದವನ್ನು ಇನ್ನೂ ಬೆಳೆಸುತ್ತಾನೆ. ಅವನ ವಾದದ ಸಾರಾಂಶ ಇಷ್ಟು: ವೇದ, ವ್ಯಾಕರಣ, ಪುರಾಣ ಮುಂತಾದ ಶಬ್ದಗಳಿಗೆ ಅರ್ಥವನ್ನು ನಿರ್ಣಯಿಸಿದರೆ ಅದೇ ನ್ಯಾಯದಿಂದ ಕಾವ್ಯ ಶಬ್ದಾರ್ಥವೂ ನಿರ್ಣೀತ ವಾಗುತ್ತದೆ. 'ತದಧೀತೇ ತದ್ವೇದ' ಎಂಬ ಪಾಣಿನಿ ಸೂತ್ರದಲ್ಲಿ ಮಹಾಭಾಷ್ಯಕಾರ ಪತಂಜಲಿಯು ವೇದ, ವ್ಯಾಕರಣ ಶಬ್ದಗಳಗೆ ಶಬ್ದಪರವಾಗಿಯೂ ಅರ್ಥಪರವಾಗಿಯೂ ಅರ್ಥ ಮಾಡಿದ್ದಾನೆ. 'ವೇದವನ್ನು ಕಂಠಪಾಠ ಮಾಡುತ್ತಾನೆ.' ಇಲ್ಲಿ ವೇದವೆಂದರೆ ಶಬ್ದ ವಿಶೇಷ. 'ವೇದವನ್ನು ತಿಳಿದಿದ್ದಾನೆ.' ಇಲ್ಲಿ ವೇದವೆಂದರೆ ಅರ್ಥ ವಿಶೇಷ. ಆದ್ದರಿಂದ ವೇದಾದಿ ಶಬ್ದಗಳು ಶಬ್ದಾರ್ಥಗಳೆರಡನ್ನೂ ಬೋಧಿಸುತ್ತವೆ.

ಇದು ಹುರುಳಿಲ್ಲದ ವಾದ. 'ತಿಳಿ' ಮುಂತಾದ ಜ್ಞಾನಾರ್ಥಕ ಶಬ್ದಗಳ ಯೋಗವಿದ್ದರೆ ಲಕ್ಷಣಾವೃತ್ತಿಯಿಂದ ವೇದವೆಂದರೆ ವೇದಾರ್ಥವೆಂದಾಗಬಹುದು. ಇದನ್ನು ನಾವು ಹಿಂದೆ ವಿಚಾರಮಾಡಿದ್ದೇವೆ. ವೇದ ಶಬ್ದದ ಉತ್ಪತ್ತಿ ಹೇಗೆ? ಇದು 'ವಿದ್' ಧಾತುವಿನಿಂದ ಹುಟ್ಟಿದೆ. 'ವಿದಂತಿ ಅನೇನ ಇತಿ ವೇದಃ (ಶ್ರೇಯಃ ಸಾಧನವನ್ನು) ಇದರಿಂದ ತಿಳಿದುಕೊಳ್ಳುತ್ತಾರೆ. ಆದ್ದರಿಂದ ವೇದ.' 'ವೇದಯತೀತಿ ವೇದಃ' (ಶ್ರೇಯಃ ಸಾಧನವನ್ನು ಬೋಧಿಸುತ್ತದೆಯಾದ್ದರಿಂದ ವೇದ). ಎರಡು ಬಗೆಯ ವ್ಯುತ್ಪತ್ತಿಯಿಂದಲೂ ವೇದವು ಶಬ್ದಪರವೆಂದು ಸ್ಪಷ್ಟವಾಗುತ್ತದೆ. ಅಥರ್ವ ಋಷಿಯಿಂದ ಪ್ರೋಕ್ತವಾದದ್ದು ಅಥರ್ವಣವೇದ, ಪ್ರೋಕ್ತವಾದದ್ದು ಶಬ್ದ ತಾನೆ? ಪಾಣಿನಿಯಿಂದ ಪ್ರೋಕ್ತವಾದ ವ್ಯಾಕರಣ ಪಾಣೀನಿಯ. ಇದೇ ಅಷ್ಟಾಧ್ಯಾಯಿ, ವರರುಚಿಯಿಂದ ಕೃತವಾದ ಗ್ರಂಥ ವಾರರುಚ; ಕಿರಾತಾರ್ಜುನರನ್ನು ಅಧಿಕರಿಸಿ ಬರೆದ ಗ್ರಂಥ ಕಿರಾತಾರ್ಜುನೀಯ. ಪಾಣಿನಿಯ 'ತೇನ ಪ್ರೋಕ್ತಂ ಕೃತೇ ಗ್ರಂಥೇ, ಅಧಿಕೃತ್ಯ ಕೃತೇ ಗ್ರಂಥೇ' ಮುಂತಾದ ಸೂತ್ರಗಳನ್ನೂ, ಅವುಗಳ ಭಾಷ್ಯವನ್ನೂ ಪರಿಶೀಲಿಸಿದರೆ ಗ್ರಂಥಗಳೆಲ್ಲಾ ಶಬ್ದಪರವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಶಬ್ದವನ್ನು ಪ್ರಮಾಣವೆಂದು ಭಾವಿಸುವ ಶಾಸ್ತ್ರಕಾರರೆಲ್ಲರೂ ವೇದವನ್ನು ಶಬ್ದ ಪ್ರಮಾಣವೆಂದು ಉದಾಹರಿಸುವುದೂ ಗಮನಿಸಬೇಕಾದ ಅಂಶ.

‘ಕಾಳಿದಾಸನು ರಘುವಂಶವನ್ನು ರಚಿಸಿದನು’ ಎಂಬ ವಾಕ್ಯವನ್ನು ತೆಗೆದುಕೊಳ್ಳೋಣ. ಇದರ ಅರ್ಥವೇನು? ರಘುವಿನ ವಂಶವನ್ನು ಪ್ರತಿಪಾದಿಸುವ ಶಬ್ದ ವಿಶೇಷವನ್ನು ರಚಿಸಿದನು ಎಂದು ಅರ್ಥವೇ ಹೊರತು ರಘುವಿನ ವಂಶವನ್ನೇ ಸೃಷ್ಟಿಸಿದನು ಎಂದಲ್ಲ!

ಇನ್ನೊಂದು ಉದಾಹರಣೆ ಭಗವದ್ಗೀತೆ. ಗೈ ಶಬ್ದೇ ಎಂಬ ಧಾತುವಿನಿಂದ ‘ಗೀತಾ’ ಶಬ್ದ ಹುಟ್ಟಿದೆ. ಭಗವಂತನಿಂದ ಹಾಡಲ್ಪಟ್ಟಿದ್ದು ಶಬ್ದವೇ. ‘ದೇವೀ ಸಪ್ತಶತಿ’ ಸಪ್ತಶತಶ್ಲೋಕಾತ್ಮಕ ವೆಂದು ಅರ್ಥವೇ ಹೊರತು ಸಪ್ತಶತ ಅರ್ಥ ಉಳ್ಳದ್ದು ಎಂದಲ್ಲ.

ಶಬ್ದಾರ್ಥಗಳೆರಡೂ ಸೇರಿ ಕಾವ್ಯವೆಂಬ ಮತ ಮಾನ್ಯಲೇಖಕರಿಗೆ ಸಂಮತವಾಗಿದೆ. ಪುನಃ ಬರೆಯುತ್ತಾರೆ. “ಶಬ್ದವಿಲ್ಲದೆ ಅರ್ಥ ತಿಳಿಯದು; ಅರ್ಥವಿಲ್ಲದೆ ಶಬ್ದ ಸಲ್ಲದು. ಇವೆರಡೂ ಪರಸ್ಪರಾವಲಂಬಿಗಳು. ಕಾವ್ಯರಸವನ್ನು ಆಸ್ವಾದಿಸುವಾಗ ಶಬ್ದವನ್ನೂ ಅರ್ಥವನ್ನೂ ನಾವು ಬೇರೆ ಬೇರೆಯಾಗಿ ಗ್ರಹಿಸುವುದಿಲ್ಲ. ಅಖಂಡ ಬುದ್ಧಿಯಿಂದ ಒಟ್ಟಿಗೆ ಗ್ರಹಿಸುತ್ತೇವೆ. ವಿಮರ್ಶನ ಕಾಲದಲ್ಲಿ ಮಾತ್ರ ಶಬ್ದ, ವಾಚ್ಯಾರ್ಥ, ವ್ಯಂಗ್ಯಾರ್ಥ ಹೀಗೆ ಪೃಥಕ್ಕರಿಸಿ ನೋಡುತ್ತೇವೆ. ಆಸ್ವಾದಕ್ಕೆ ಒಮ್ಮೆ ಶಬ್ದದಿಂದ ಹೆಚ್ಚು ಸಹಾಯವಾಗಬಹುದು. ಮತ್ತೊಮ್ಮೆ ಅರ್ಥದಿಂದ ಹೆಚ್ಚು ಸಹಾಯ ವಾಗಬಹುದು. ಆದರೆ ಎರಡೂ ಬೇಕು. ಎರಡೂ ಸಹಕರಿಸಬೇಕು.”

ಇದಕ್ಕೆ ನಮ್ಮ ಸಮಾಧಾನ ಇದು:- ಶಬ್ದವಿಲ್ಲದೆ ಅರ್ಥ ತಿಳಿಯಬಹುದು. ಚಂದ್ರೋದಯವನ್ನು ಕಣ್ಣಿನಿಂದ ನೋಡಿ ತಿಳಿಯುತ್ತೇವೆ. ಅದು ಕಾವ್ಯವೆಂದು ಯಾರೂ ಹೇಳುವುದಿಲ್ಲ. ಆನಂದವು ಚಂದ್ರೋದಯವನ್ನು ನೋಡಿದಾಗಲೂ ಆಗುವುದು. ಅದರ ವರ್ಣನೆಯನ್ನು ಕೇಳಿದಾಗಲೂ ಆಗುವುದು. ಇಲ್ಲಿ ಚಂದ್ರೋದಯ ಅರ್ಥ. ಅದು ಕಾವ್ಯವಲ್ಲ, ಚಂದ್ರೋದಯ ವರ್ಣನೆ ಕಾವ್ಯ. ವರ್ಣನೆಯೆಂದರೆ ಶಬ್ದರಚನೆ. ಆನಂದ ಉಂಟಾಗುವುದು ಅರ್ಥದಿಂದಲೇ ಹೊರತು ಶಬ್ದದಿಂದಲ್ಲ. ಶಾಕುಂತಲ ನಾಟಕದ ಒಂದು ಶ್ಲೋಕವನ್ನು ಓದಿದಾಗ ಅದರ ಅರ್ಥವನ್ನರಿಯದ ಆಂಗ್ಲನಿಗೆ ಆನಂದಾನುಭವ ಆಗಲಾರದು. ಅದನ್ನೇ ಆಂಗ್ಲಭಾಷೆಗೆ ಪರಿವರ್ತಿಸಿದಾಗ ಆನಂದಾನುಭವ ಆಗುವುದು. ಆದ್ದರಿಂದ ಶಬ್ದವು ಅರ್ಥಜ್ಞಾನಕ್ಕೆ ದ್ವಾರ. ಆನಂದಕ್ಕೆ ಸಹಕಾರಿಯಾಗಬಹುದು. ಆನಂದದ ಉತ್ಕರ್ಷ, ಅಪಕರ್ಷಗಳಿಗೆ ಶಬ್ದ ಕಾರಣವೂ ಆಗಬಹುದು. ಮಾವಿನ ಹಣ್ಣನ್ನು ಸವಿಯುವಾಗ ದೊರೆಯುವ ಆನಂದಕ್ಕೆ ರಸವೇ ಮುಖ್ಯ ಕಾರಣ. ಹಣ್ಣಿನ ಸುವಾಸನೆಯು ಆನಂದವನ್ನು ಹೆಚ್ಚಿಸಬಹುದು; ದುರ್ವಾಸನೆಯು ಕುಗ್ಗಿಸಲೂಬಹುದು; ಅಷ್ಟೆ.

ವಸ್ತುಸ್ಥಿತಿ ಏನೆಂದರೆ, ಚಂದ್ರೋದಯವನ್ನು ನೋಡಿದಾಗ ಆಗುವ ಆನಂದವೇ ಬೇರೆ. ಕವಿಯಿಂದ ವರ್ಣಿತವಾದ ಚಂದ್ರೋದಯದಿಂದ ಆಗುವ ಆನಂದವೇ ಬೇರೆ. ಅರ್ಥವು ಶಬ್ದದಿಂದ ಪ್ರತಿಪಾದಿತವಾದಾಗ ವಿಲಕ್ಷಣವಾದ ಆನಂದವನ್ನು ಕೊಡುತ್ತದೆ. ಕಬ್ಬಿನಲ್ಲಿರುವುದು ಸಕ್ಕರೆಯೇ ಆದರೂ ಸಕ್ಕರೆಯ ರುಚಿ ಬೇರೆ; ಕಬ್ಬಿನ ರುಚಿ ಬೇರೆ. ಜಗನ್ನಾಥ ಪಂಡಿತನು ‘ರಮಣೀಯ’ವಾಗಬೇಕಾದದ್ದು ಅರ್ಥವೆಂದನೇ ಹೊರತು ಶಬ್ದವೆನ್ನಲಿಲ್ಲ.

ಈ ವಿಷಯವನ್ನು ಇನ್ನೊಂದು ಬಗೆಯಲ್ಲಿ ಶೋಧಿಸೋಣ. ಚಂದ್ರೋದಯವನ್ನೇ ಒಬ್ಬ ಚತುರವಾದ ಚಿತ್ರಗಾರನು ಕಾಗದದ ಮೇಲೆ ಚಿತ್ರಿಸಿದನೆನ್ನಿ. ನಿಜವಾದ ಚಂದ್ರೋದಯಕ್ಕಿಂತ ಈ ಚಿತ್ರದಿಂದಾಗುವ ಆನಂದ ವಿಲಕ್ಷಣ. ಚಿತ್ರಗಾರನು ಕೌಶಲದಿಂದೆಳೆದ ರೇಖೆಯೇ ಇದಕ್ಕೆ ಕಾರಣ. ದರ್ಜಿಯು ಬಟ್ಟೆ ಹೊಲಿಯುವುದನ್ನು ಯಾರು ನೋಡಿಲ್ಲ? ಅದು ನಮ್ಮನ್ನು ಆಕರ್ಷಿಸದು. ಆದರೆ ಕಾಗದದಲ್ಲಿ ಚಿತ್ರಿತವಾದಾಗ ಆಕರ್ಷಿಸುತ್ತದೆಯೆಂಬುದು ಅನುಭವದ ವಿಷಯ. ಹೀಗೆ ಕಾವ್ಯದಲ್ಲಿಯೂ ಸ್ವಾಭಾವೋಕ್ತಿ, ಪ್ರಕೃತಿ ವರ್ಣನೆಗಳು ಲೋಕದಲ್ಲಿ ಕಂಡು ಬರುವ ಸ್ವಭಾವ, ಪ್ರಕೃತಿಗಳಿಗಿಂತ ವಿಲಕ್ಷಣವಾದ ಆನಂದವನ್ನು ಕೊಡುತ್ತವೆ. ಆದ್ದರಿಂದಲೇ ಕಾವ್ಯಾನಂದವನ್ನು ಅಲೌಕಿಕ, ವಿಲಕ್ಷಣ ಎಂದು ಕರೆಯುವುದು.

ಶಬ್ದದಿಂದ ಅರ್ಥ ಬೋಧವಾಗುವುದೆಂದು ಸರ್ವಶಾಸ್ತ್ರಕಾರರೂ ಒಪ್ಪುತ್ತಾರೆ. 'ಶಬ್ದವನ್ನೂ ಅರ್ಥವನ್ನೂ ಒಟ್ಟಿಗೆ ಗ್ರಹಿಸುತ್ತೇವೆ' ಎಂಬುದು ಭ್ರಮೆ. ಶಬ್ದಾರ್ಥಗಳೆರಡು ಒಟ್ಟಿಗೆ ಜ್ಞಾತವಾಗು ವಂತೆ ತೋರುವುದು. ವೇಗಾತಿಶಯವೇ ಅದಕ್ಕೆ ಕಾರಣ. ಭರ್ತೃಹರಿಯು ವಾಕ್ಯಪದೀಯದಲ್ಲಿ 'ಅನುವಿದ್ಧಮಿವ ಜ್ಞಾನಂ ಸರ್ವಂ ಶಬ್ದೇನ ಭಾಸತೇ' ಎಂದು ಹೇಳುತ್ತಾನೆ. 'ಪದಾರ್ಥ ಜ್ಞಾನವು ಪದದಿಂದ ಕೂಡಿಕೊಂಡಂತೆ ಭಾಸವಾಗುತ್ತದೆ' ಅನುವಿದ್ಧವಾದಂತೆ ತೋರುತ್ತದೆ. ಆದರೆ ಅನುವಿದ್ಧವಲ್ಲ. ಕಾವ್ಯದಲ್ಲಿ ವರ್ಣಿಸಲ್ಪಟ್ಟಾಗ ಮಾತ್ರ ಅರ್ಥವು ಅಲೌಕಿಕವಾದ ಚಮತ್ಕಾರ ವನ್ನು ಕೊಡುತ್ತದೆಯೆಂದು ಜಗನ್ನಾಥನ ಆಶಯ. ಶಬ್ದದಿಂದ ಅರ್ಥ, ಅರ್ಥದಿಂದ ಆನಂದ. ಶಬ್ದವು ಅರ್ಥ ದ್ವಾರಾ ಆನಂದಕ್ಕೆ ಕಾರಣವಾಗುವುದು. ರೀತಿ, ಶಯ್ಯೆ, ಅನುಪ್ರಾಸ, ಯಮಕಗಳಲ್ಲಿ ಕೇವಲ ಶಬ್ದದಿಂದಲೇ ಚಮತ್ಕಾರವಾಗಬಹುದು. ಅಲ್ಲಿ ಶಬ್ದಸ್ವರೂಪವೇ ಶಬ್ದಾರ್ಥ. ಶಬ್ದವು ಅರ್ಥದೊಂದಿಗೆ ತನ್ನ ಸ್ವರೂಪವನ್ನೂ ಪ್ರತಿಪಾದಿಸುವುದು. ಆದ್ದರಿಂದ ಶಬ್ದಾರ್ಥಗಳೆರಡೂ ಆಸ್ವಾದಕ್ಕೆ ಕಾರಣವೆನ್ನುವುದು ಸಹಜ.

ಇಷ್ಟು ವಾದವಿವಾದಗಳು ಬೆಳೆದರೂ ಅರ್ಥ ಮಾತ್ರವೇ ಕಾವ್ಯವೆಂದೂ ಯಾರೂ ಹೇಳಲಿಲ್ಲ! ಅರ್ಥದ ಜೊತೆಗೆ ಶಬ್ದವನ್ನು ಸೇರಿಸಿ ಎರಡೂ ಸೇರಿ ಕಾವ್ಯವೆಂದರು! ಹಿಂದೆ ಹೇಳಿದ ಭೂರಿ ವ್ಯವಹಾರಗಳಲ್ಲಿ ಕಾವ್ಯವೆಂದಾಗ ಶಬ್ದವನ್ನು ಬಿಡಲು ಸಾಧ್ಯವಿಲ್ಲದ್ದೇ ಅದಕ್ಕೆ ಕಾರಣ. ಮಲ್ಲಿಗೆ ಹೂ ಕಾವ್ಯವಲ್ಲ. ಮಲ್ಲಿಗೆ ಹೂವಿನ ವರ್ಣವೆ ಕಾವ್ಯವೆಂದು ಎಲ್ಲರೂ ತಿಳಿದಿದ್ದರು. ಲಕ್ಷಣ ಹೇಳುವಾಗ ಮಲ್ಲಿಗೆ ಹೂ-ವರ್ಣನೆ ಎರಡೂ ಸೇರಿ ಕಾವ್ಯವೆಂದರು. ಜಗನ್ನಾಥನು 'ಎರಡೂ ಕಾವ್ಯವಲ್ಲ. ಮಲ್ಲಿಗೆ ಹೂವಿನ ವರ್ಣನೆಯೇ' ಕಾವ್ಯವೆಂದನು.

'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬುದು ಸಾಹಿತ್ಯ ದರ್ಪಣಕಾರನಾದ ವಿಶ್ವನಾಥನು ಹೇಳಿದ ಲಕ್ಷಣ. 'ರಸ ಪ್ರತಿಪಾದಕವಾದ ವಾಕ್ಯ ಕಾವ್ಯ'. ಕಾವ್ಯವೆನಿಸಿಕೊಳ್ಳಬೇಕಾದರೆ ರಸವಿರಲೇ ಬೇಕೆಂದು ಅವನ ಸಿದ್ಧಾಂತವಾಗುತ್ತದೆ. ಇದನ್ನು ಜಗನ್ನಾಥನು ಒಪ್ಪುವುದಿಲ್ಲ. ಕೇವಲ ವಸ್ತು ಅಲಂಕಾರಗಳು ವ್ಯಂಗ್ಯವಾಗಿದ್ದರೂ ಉತ್ತಮ ಕಾವ್ಯವೆಂದು ಪ್ರಾಚೀನರೆಲ್ಲಾ ಒಪ್ಪಿದ್ದಾರೆ. ಅಲ್ಲಿ ರಸವಿಲ್ಲದಿರಬಹುದು. ಅದು ಕಾವ್ಯವೇ ಅಲ್ಲವೆನ್ನುವುದು ದುರಾಗ್ರಹವಲ್ಲವೆ? ಇತರ ಕಾವ್ಯ ಭೇದಗಳಲ್ಲಿಯೂ ರಸವಿಲ್ಲದಿರಬಹುದು. "ಅವುಗಳನ್ನು ಔಪಚಾರಿಕವಾಗಿ ಕಾವ್ಯವೆಂದು

ಹೇಳುತ್ತಾರೆ. ವಸ್ತುತಃ ಅವು ಕಾವ್ಯಗಳಲ್ಲ" ಎಂಬುದು ವಿಶ್ವನಾಥನ ಆಗ್ರಹ. ಈ ಆಗ್ರಹ ಸರಿಯೇ? ಕಾವ್ಯದ ಪರಮ ಪ್ರಯೋಜನ ಚಮತ್ಕಾರ. ಚಮತ್ಕಾರ ಯಾವುದರಿಂದಾಗುವುದೋ ಅದೇ ಕಾವ್ಯದ ಜೀವಾತು. ರಸದಿಂದಲೇ ಚಮತ್ಕಾರವಾಗುವುದೆಂದು ಯಾರಾದರೂ ಒಪ್ಪಬಹುದೇ? ಭಾಮಹ, ದಂಡಿ ಮುಂತಾದವರು ಸಂಮತಿಸಿದ್ದಾರೆಯೇ? ಕುಂತಕನು ವಕ್ರೋಕ್ತಿಯೇ ಕಾವ್ಯಜ ಜೀವಾತುವೆಂದು ಹೇಳಲಿಲ್ಲವೆ? ಉಪಮಾ ರೂಪಕಾದ್ಯಲಂಕಾರಗಳು ಮುಖ್ಯ ಚಮತ್ಕಾರಿಯಾಗಲಾರವೆ? ಅಲಂಕಾರ ಸ್ವರೂಪವನ್ನೇ ಲಾಕ್ಷಣಿಕರು ವಿವರವಾಗಿ ಉಚ್ಚರಿಸಿ ಅಲಂಕಾರಶಾಸ್ತ್ರವನ್ನು ರಚಿಸಿದ್ದಾದರೂ ಏಕೆ? ಆನಂದವರ್ಧನನೂ ಕೂಡ ಶಬ್ದಾರ್ಥಗಳು ಸಹೃದಯ ಹೃದಯಾಹ್ಲಾದಿಯಾಗಬೇಕೆಂದನೇ ಹೊರತು ರಸಪ್ರತಿಪಾದಕವಾಗಬೇಕೆನ್ನಲಿಲ್ಲ, ಒಳ್ಳೆಯದು. ವಿಶ್ವನಾಥನ ಮತದಂತೆ ಗುಣೀಭೂತವ್ಯಂಗ್ಯದಲ್ಲಿ ಚಮತ್ಕಾರಿ ಯಾವುದು? ಅಲ್ಲಿ ವಾಚ್ಯವಾದ ವಸ್ತುವೋ, ಅಲಂಕಾರವೋ ಮುಖ್ಯ ಚಮತ್ಕಾರಿಯೆಂದೂ ವ್ಯಂಗ್ಯವಾದ ರಸವು ಕೆಳಮಟ್ಟದ್ದೆಂದೂ ಒಪ್ಪಲೇ ಬೇಕಷ್ಟೆ? ಕೆಳಮಟ್ಟದಲ್ಲಿರುವ ರಸಕ್ಕೆ ಅಲ್ಲಿ ಸಲ್ಲದ ಗೌರವವೇಕೆ? ವಸ್ತುತಃ ಗುಣೀಭೂತವಾದದ್ದು ರಸವೇ ಅಲ್ಲ. ಅದನ್ನು ರಸವೆಂಬದು ಔಪಚಾರಿಕ.

ಮಾನ್ಯ ಲೇಖಕರು ಪುನಃ ಬರೆಯುತ್ತಾರೆ. "ಜಗನ್ನಾಥ ಪಂಡಿತನು ಅಪವಾದವೆಂದು ಸೂಚಿಸುವ ಕೆಲವು ನಿದರ್ಶನಗಳು (ರಸವಿಲ್ಲದ ಉದಾಹರಣೆಗಳು....ಲೇ) ನಿಜವಾಗಿಯೂ ವಿಚಾರ ಕ್ಷಮವಲ್ಲ. ಜಲಪಾತದ ವರ್ಣನೆಯಲ್ಲಿ ಅದ್ಭುತ ರಸವು ಸ್ವಯಂ ವ್ಯಕ್ತವಲ್ಲವೆ? ಇದನ್ನು ಬೇರೆ ರಸಗಳಿಗೆ ಪೋಷಕವಾಗಿ ವರ್ಣಿಸಿರುವ ಕವಿಗಳೂ ಉಂಟು. ಮಕ್ಕಳ ತೊದಲು ಮಾತು, ತಪ್ಪು ನಡಗೆ ಈ ಮೊದಲಾದವನ್ನು ನೋಡಿ ಒಂದು ಕಡೆ ವಾತ್ಸಲ್ಯವನ್ನೂ ಇನ್ನೊಂದು ಕಡೆ ವಿಸ್ಮಯವನ್ನೂ ಅನುಭವಿಸದವರು ಯಾರುಂಟು? ಕಪಿಗಳ ಆಟದಲ್ಲಂತೂ ಹಾಸ್ಯವೂ ಸ್ಪಷ್ಟವಾಗಿ ಗೋಚರವಾಗುತ್ತದೆ. ಇವೆಲ್ಲಾ ಚಿತ್ತ ವೃತ್ತಿ ವಿಶೇಷಗಳೇ ತಾನೇ? ಜಗನ್ನಾಥ ಪಂಡಿತನಿಗೆ ಇವೆಲ್ಲಾ ರಸಸ್ಪರ್ಶ ಹೇಗೆ ತೋರಲಿಲ್ಲವೋ?" (ಭಾ.ಕಾ.ಮಿ. ಪುಟ ೧೪೨-೧೪೩)

ಇಲ್ಲಿ ಲೇಖಕರು ಜಗನ್ನಾಥನ ಆಶೆಯವನ್ನು ಸರಿಯಾಗಿ ಗ್ರಹಿಸಲೇ ಇಲ್ಲದನ್ನು ವಿಷಾದದಿಂದ ಹೇಳಬೇಕಾಗಿದೆ. ಜಗನ್ನಾಥನು ಹೇಳಿದ್ದೇನು? 'ರಸವತ್ತಾದ ವಾಕ್ಯವೇ ಕಾವ್ಯವೆನ್ನುವುದಾದರೆ, ವಸ್ತು ಮತ್ತು ಅಲಂಕಾರಗಳೇ ಪ್ರಧಾನವಾದ ವಾಕ್ಯಗಳು ಕಾವ್ಯವಾಗದೇ ಹೋಗದು. ಅವು ಕಾವ್ಯವಲ್ಲವೆಂದರೆ ಮಹಾಕವಿ ಸಂಪ್ರದಾಯಕ್ಕೇ ವಿರೋಧವಾದೀತು. ಮಹಾಕವಿಗಳು ಜಲಪ್ರವಾಹಾದಿಗಳನ್ನೂ ಕಪಿ ಬಾಲಾದಿ ಚೇಷ್ಟೆಗಳನ್ನೂ ವರ್ಣಿಸಿದ್ದಾರೆ ಎಂದು ಹೇಳಿದ್ದಾನೆ. ಜಲಪಾತವನ್ನಾಗಲಿ ಕಪಿ ಚೇಷ್ಟೆಯನ್ನಾಗಲಿ ರಸವತ್ತಾಗಿ ವರ್ಣಿಸಲು ಬರುವುದಿಲ್ಲವೆಂದೂ ಅವು ನೀರಸವೆಂದೂ ಅವನ ಅಭಿಪ್ರಾಯವಲ್ಲ. ವಸ್ತ್ವಲಂಕಾರ ಪ್ರಧಾನಕಾವ್ಯಗಳಿಗೆ ಅವು ಉದಾಹರಣ ಸ್ಥಳ ಅಷ್ಟೆ. ಮಹಾ ಕಾವ್ಯದಲ್ಲಿ ಇಂತಹ ಖಂಡ ವಿಷಯಗಳಿಗೆ ತಕ್ಕಷ್ಟು ವಿಭಾವಾದಿಗಳು ದೊರೆಯದೆ ರಸ ಹುಟ್ಟಿತೆಂದೂ ಅಲ್ಲಿ ವಸ್ತ್ವಲಂಕಾರಗಳೇ ಮುಖ್ಯ ಚಮತ್ಕಾರಿಯೆಂದೂ ಅವನ ಆಶಯ.

ಅನಂತರ "ಹಸು ಹೋಗುತ್ತದೆ", "ಜಿಂಕೆ ಓಡುತ್ತಿದೆ" ಎಂಬ ವಾಕ್ಯಗಳೂ ಉಚಿತ ಸಂನಿವೇಶದಲ್ಲಿ ಕಾವ್ಯವಾಗಬಹುದು ಎಂಬುದು ಇನ್ನೊಂದು ಆಕ್ಷೇಪ. ಇಲ್ಲಿಯೂ ಜಗನ್ನಾಥನ ಆಶಯವನ್ನು ತಿಳಿದುಕೊಳ್ಳಲಿಲ್ಲವೆಂದು ಹೇಳಬೇಕಾಗಿದೆ. "ಹೇಗಾದರೂ ಪರಂಪರೆಯಿಂದ ಜಲಪಾತಾದಿ ವರ್ಣನೆಗಳಿಗೆ ರಸಸ್ಪರ್ಶ ಬರುವುದೆಂದರೆ 'ಹಸು ಹೋಗುತ್ತಿದೆ', 'ಜಿಂಕೆ ಓಡುತ್ತದೆ' ಮೊದಲಾದ ವಾಕ್ಯಗಳೂ ಕಾವ್ಯವಾಗಬೇಕಾದೀತು" ಎಂಬುದು ಜಗನ್ನಾಥನ ವಾದ. ಉಚಿತ ಸಂನಿವೇಶದಲ್ಲಿ ಇವು ವಿಭಾವಾದಿಗಳಲ್ಲಿ ಸೇರಿ ರಸ ಪ್ರತಿಪಾದಕವಾಗಬಹುದು. ಇಲ್ಲವೆಂದು ಯಾರು ಹೇಳಿದರು? (ಶಾಕುಂತಲದ 'ಗ್ರೀವಾಭಂಗಾಭಿರಾಮಂ.....' ಎಂಬ ಶ್ಲೋಕವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.) ಅವನ ಅಭಿಪ್ರಾಯ ಇದು:- ದಿನಚರಿಯಲ್ಲಿ ಬಳಸುವ ಈ ವಾಕ್ಯಗಳು ಕಾವ್ಯದಲ್ಲಿ ವಿಭಾವಾದಿಗಳಲ್ಲೊಂದಾಗಿ ರಸ ಪ್ರತಿಪಾದಕವಾಗುತ್ತವೆ. ಕಾಲಾಂತರದಲ್ಲಿ ಉಚಿತ ಸಂನಿವೇಶದಲ್ಲಿ 'ಜಿಂಕೆಯ ಓಟ' ಭಯಾನಕರಸಕ್ಕೆ ಅನುಭಾವವಾಗ ಬಹುದಷ್ಟೆ. ಆಗ ಪರಂಪರಾ ಸಂಬಂಧದಿಂದ ರಸಸ್ಪರ್ಶವಾಯಿತೆಂದು ದಿನಚರಿಯ ಈ ವಾಕ್ಯಗಳನ್ನೇ ಕಾವ್ಯವೆನ್ನಬೇಕಾಯಿತು.

ಜಗನ್ನಾಥ ಪಂಡಿತನ ಮೇಲೆ ಇನ್ನೊಂದು ಅಪವಾದ ಉಂಟು. ಏನೆಂದರೆ, "ಹಿಂದಿನ ಅಲಂಕಾರಿಕರೆಲ್ಲ ಕಾವ್ಯ ಸೌಂದರ್ಯಕ್ಕೆ ಆಧಾರವೆಂದು ತಾವು ಭಾವಿಸಿದ್ದ ಅಲಂಕಾರ, ಗುಣ, ರಸ, ಧ್ವನಿ ಇವುಗಳಲ್ಲಿ ಒಂದನ್ನು ಹಲವನ್ನು ತಮ್ಮ ಲಕ್ಷಣಗಳಲ್ಲಿ ಸ್ಫುಟವಾಗಿ ಹೇಳುತ್ತಿದ್ದರು.... ಜಗನ್ನಾಥ ಪಂಡಿತನ ಲಕ್ಷಣದಲ್ಲಿ ಈ ಸ್ಫುಟತ್ತ್ವಕ್ಕೇ ಅಭಾವ ಬಂದಿದೆ. "ರಮಣೀಯತೆ", "ಲೋಕೋತ್ತರಾಹ್ಲಾದ" ಎಂದರೇನು ಎಂಬುದನ್ನು ನಿರ್ಣಯಿಸಿದ ಹೊರತು ಕಾವ್ಯಲಕ್ಷಣವೂ ನಿರ್ಣಯವಾಗುವಂತಿಲ್ಲ" (ಭಾ.ಕಾ.ಮೀ. ಪುಟ ೧೪೩).

ಈಗ ಒಂದು ವಿಷಯವನ್ನು ಗಮನಿಸಬೇಕು. 'ಆಹ್ಲಾದವೆಂಬುದು ಚಿತ್ತವೃತ್ತಿ. ಎಲ್ಲಾ ಚಿತ್ತವೃತ್ತಿಯೂ ಅನುಭವೈಕ ಗೋಚರವೇ ಹೊರತು 'ಘಟ ಪಟ'ಗಳಂತೆ ಎದುರಿಗೆ ತೋರಿಸಲು ಸಾಧ್ಯವಿಲ್ಲ. ಮೂರ್ತವಾಗಿ ಬಹಿರಿಂದ್ರಿಯಗಳಿಗೆ ತೋರದ ಮಾತ್ರಕ್ಕೆ ಆ ಪದಾರ್ಥವೇ ಇಲ್ಲವೆಂದು ಹೇಳಲಾಗದು. ಇಂತಹ ಸಂದರ್ಭಗಳಲ್ಲಿ ಅದೊಂದು ಜಾತಿವಿಶೇಷವೆಂದೂ, ಧರ್ಮವಿಶೇಷ ವೆಂದೂ ಶಾಸ್ತ್ರಕಾರರು ಹೇಳುತ್ತಾರೆ. ಕೆಲವು ಕಡೆ ಅದು ಅನುಭವಗೋಚರವಾಗಬಹುದು. ಕೆಲವು ಕಡೆ ಯುಕ್ತಿಗೆ ಸಾಧ್ಯವಾಗಬಹುದು. ಚಿತ್ತವೃತ್ತಿಯ ಮಾತಿರಲಿ. ಸಕ್ಕರೆಯಲ್ಲಿ 'ಸಿಹಿ'ಯೆಂಬ ಗುಣವಿದೆಯಷ್ಟೆ. ಅದರ ಲಕ್ಷಣವೇನು? ಅದರ ಸ್ವರೂಪವನ್ನು ಅರಿಯಬೇಕು. ಇನ್ನು ಬೆಲ್ಲದ 'ಸಿಹಿ'ಗೂ, ಸಕ್ಕರೆಯ 'ಸಿಹಿ'ಗೂ ಇರುವ ಭೇದವನ್ನಾದರೂ ಶಬ್ದದಿಂದ ತಿಳಿಸಲು ಶಕ್ಯವೋ? ಆ ಭೇದ ವಿಲಕ್ಷಣವಾದದ್ದು ಎಂದುತಾನೆ ಹೇಳಬೇಕು. ಲಕ್ಷಣವಿಲ್ಲದ್ದೇ ವಿಲಕ್ಷಣ. ಶಬ್ದದಿಂದ ವಿವರಿಸಲು ಸಾಧ್ಯವಿಲ್ಲವೆಂದೇ ಅದರ ಅರ್ಥ. 'ವಿಲಕ್ಷಣವಾದ ಸಿಹಿ'ಯ ಸ್ವರೂಪವನ್ನು ಶಬ್ದದಿಂದ ನಿಶ್ಚಯಿಸದ ಹೊರತು ಸಕ್ಕರೆಯ ಪರಿಚಯವಾಗದೊ? ಹಾಗೆಯೇ ಕಾವ್ಯದ ಆಹ್ಲಾದವನ್ನಾಗಲಿ ಅದರ 'ಅಲೌಕಿಕತೆ'ಯನ್ನಾಗಲಿ ಶಬ್ದದಿಂದ ಸ್ಫುಟಪಡಿಸಲು ಸಾಧ್ಯವಿಲ್ಲ. ಅದು ಸಕಲ ಸಹೃದಯರಿಗೂ ಅನುಭವ ಗೋಚರವೆಂದು ಮಾತ್ರ ಹೇಳಬೇಕು. ಅದನ್ನುಂಟು ಮಾಡುವ ಪದಾರ್ಥವೇ 'ರಮಣೀಯ'. ರಸ, ಭಾವ, ವಸ್ತು, ಅಲಂಕಾರಗಳೆಲ್ಲಾ ರಮಣೀಯ ವಾಗಬಹುದು.

ಜಗನ್ನಾಥ ಪಂಡಿತನ ಲಕ್ಷಣದಲ್ಲಿ 'ಸ್ಫುಟತ್ತ್ವ' ಇಲ್ಲವೆನ್ನುವುದಾದರೆ ಈ ಆಕ್ಷೇಪ ಪ್ರಾಚೀನಾಲಂಕಾರಿಕರಿಗೂ ಬಿಟ್ಟಿದ್ದಲ್ಲ. 'ರಸಾತ್ಮಕ ವಾಕ್ಯವೇ ಕಾವ್ಯ'ವೆನ್ನುವ ವಿಶ್ವನಾಥನ ಲಕ್ಷಣದಲ್ಲಿ ರಸವೆಂದರೇನು? ಕಬ್ಬನ್ನು ಹಿಂಡಿ ರಸವನ್ನು ತೋರಿಸುವಂತೆ ಕಾವ್ಯವನ್ನು ಹಿಂಡಿ ರಸವನ್ನು ತೋರಿಸಲು ಸಾಧ್ಯವೊ? ಅನುಭವಕ್ಕೆ ಶರಣು ಹೋಗಬೇಕಷ್ಟೆ. ಅಲಂಕಾರ, ಗುಣ, ಧ್ವನಿಗಳ ಗತಿಯೂ ಅಷ್ಟೆ. ಸಹೃದಯ ಹೃದಯ ಸಂವಾದಿಯಾಗಿಯೇ ಅವುಗಳನ್ನು ಸಿದ್ಧಪಡಿಸಬೇಕಲ್ಲದೆ ಗತ್ಯಂತರವಿಲ್ಲ. ಶಬ್ದಾರ್ಥಗಳು 'ಸಹೃದಯ ಹೃದಯಾಹ್ಲಾದಿ'ಯಾಗಬೇಕೆಂದು ಧ್ವನಿಕಾರನು ಹೇಳಿದನು. 'ಸಹೃದಯ ಹೃದಯಾಹ್ಲಾದ'ವೇ ಜಗನ್ನಾಥನ 'ಅಲೌಕಿಕಾಹ್ಲಾದ.'

ಪಂಡಿತ ಡಿ.ಟಿ. ತಾತಾಚಾರ್ಯ ಶಿರೋಮಣಿ ಎಂ.ಒ.ಎಲ್. ರವರು ತಮ್ಮ ಸಿದ್ಧಾಂತವನ್ನು ಹೀಗೆ ಕೊಡುತ್ತಾರೆ. "I conclude that word and sense which directly aim at and produce pleasure are poetry" (ಆಹ್ಲಾದವನ್ನೇ ನೇರವಾಗಿ ಗುರಿ ಹಿಡಿದು ಅದನ್ನು ಉಂಟು ಮಾಡುವ ಶಬ್ದಾರ್ಥಗಳು ಕಾವ್ಯವೆಂದು ನನ್ನ ಸಿದ್ಧಾಂತ). (ಭಾ. ಕಾ.ಮೀ. ಪುಟ ೧೪೪. ಟಿಪ್ಪಣಿ)

ಅದು ಅವರ ಹೊಸ ಸಿದ್ಧಾಂತವೇನಲ್ಲ. ಆನಂದವರ್ಧನನ 'ಸಹೃದಯ ಹೃದಾಯಾಹ್ಲಾದಿ ಶಬ್ದಾರ್ಥಮಯತ್ತ್ವವೇವ ಕಾವ್ಯ ಲಕ್ಷಣಂ' ಎಂಬ ಸಿದ್ಧಾಂತವೇ ಅದು.

ನೃಪತುಂಗನ ಕವಿರಾಜ ಮಾರ್ಗದಲ್ಲಿ ಈ ಪದ್ಯವಿದೆ.

> "ಧ್ವನಿಯೆಂಬುದಳಂಕಾರಂ
> ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ!
> ನೆನವುದಿದನಿಂತು ಕಮಳ ದೊ
> ಳನಿಮಿಷಯುಗು ಮೊಪ್ಪಿ ತೋರ್ಪುದಿಂತಿದು ಚೋದ್ಯಂ॥

ಈ ಪದ್ಯದ ತಾತ್ಪರ್ಯ ಸ್ಫುಟವಾಗಿಲ್ಲ. ಮಾನ್ಯ ಲೇಖಕರು ಈ ಬಗ್ಗೆ ವಿಶದವಾಗಿ ವಿಮರ್ಶೆ ಮಾಡಿ ಕೊನೆಯಲ್ಲಿ ಹೀಗೆ ಹೇಳುತ್ತಾರೆ. "ಉದಾಹರಣ ವಾಕ್ಯದಲ್ಲಿ ಮೀನ, ಮತ್ಸ್ಯ ಮುಂತಾದ ಪರ್ಯಾಯ ಪದಗಳನ್ನು ಉಪಯೋಗಿಸದೆ 'ಅನಿಮಿಷ (=ಎವೆಯಿಕ್ಕದ್ದು) ಎಂಬುದನ್ನು ಕವಿ ಉಪಯೋಗಿಸಿದ್ದಾನೆ. ಇದರ ಸ್ವಾರಸ್ಯವೇನು? ವಾಸ್ತವವಾಗಿ 'ನಿಮೇಷ' ವುಳ್ಳ (ಎಂದರೆ ಎವೆಯಿಕ್ಕುವ) ಮಾನವಿಯೊಬ್ಬಳ ಕಣ್ಣುಗಳಿಗೆ ಅವುಗಳ ಸ್ವಭಾವಕ್ಕೆ ಅತ್ಯಂತ ವ್ಯತಿರಿಕ್ತವಾದ ಅನಿಮಿಷ ಎಂಬ ಶಬ್ದ ಇಲ್ಲಿ ಸೂಚಕವಾಗುತ್ತದೆ, ದೇವತೆಗಳು ಅನಿಮಿಷರಾಗಿರುವುದರಿಂದ ಅವಳು ಮಾನವಿಯಲ್ಲ, ದೇವಿ ಎಂಬ ಅರ್ಥವೂ ಇಲ್ಲಿ ಸ್ಫುರಿಸಬಹುದು. ಇದೇ ಇಲ್ಲಿಯ 'ಚೋದ್ಯ'ವಾಗಿರಬಹುದೆ? ಇದು ಶಬ್ದ ಶಕ್ತಿಯಿಂದ ಧ್ವನಿಸುವುದನ್ನೂ ಲಕ್ಷಿಸಬೇಕು" (ಭಾ.ಕಾ.ಮಿ. ಪುಟ ೪೬೦.)

ಈ ಅರ್ಥವು ದೂರಾಕೃಷ್ಟ (Far-fetched) ಎಂದು ನಮಗೆ ತೋರುತ್ತದೆ. ಆ ಅರ್ಥ ಧ್ವನಿಸಬೇಕಾದರೆ 'ಕಮಲದೊಳ್ ಎಂಬ ಅತಿಶಯೋಕ್ತಿಯೂ ಬೇಕಿಲ್ಲ. ವದನದೊಳ್ ಎಂದರೂ ಸಾಕು. ಇವಳು ದೇವಿ ಎಂಬ ಅರ್ಥದಲ್ಲಿ ಚೋದ್ಯವಾದರೂ ಏನು? ಆಶ್ಚರ್ಯಕಾರಿಯಾದರೆ

ತಾನೇ ಚೋದ್ಯವಾಗುವುದು? ಮತ್ತು ಲಕ್ಷಣ ವಾಕ್ಯದಲ್ಲಿ ಹೇಳಿದ 'ಅರ್ಥದೆ ದೂಷ್ಯಂ' ಎಂಬುದರ ಸಂಗತಿಯೂ ತಪ್ಪಿಹೋಗುತ್ತದೆ. ಡಾ॥ ಕೆ. ಕೃಷ್ಣಮೂರ್ತಿಯವರು 'ಆನಂದವರ್ಧನನ ಕಾವ್ಯ ಮೀಮಾಂಸೆಯಲ್ಲಿ "ಧ್ವನಿಯೆಂಬುದಳಂಕಾರಂ" ಎಂಬ ಪದ್ಯದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. "ಧ್ವನಿಯಿಸುಗುಂ ಶಬ್ದಿದಿಂದಮರ್ಥದೆ ದೂಷ್ಯಂ" ಎಂಬುದಕ್ಕೆ ಅವರು "ಮುಖ್ಯವಾದ ಅರ್ಥ ಅಸಂಗತ, ಅತ ಏವ ದೂಷ್ಯ, ಎನ್ನುವಂತಿದ್ದರೂ ಧ್ವನಿಯೆಂಬ ವ್ಯಾಪಾರಾಂತರದಿಂದ ಶಬ್ದವು ಅರ್ಥಾಂತರವನ್ನು ಬೋಧಿಸುವುದರಲ್ಲಿ ಇರುವ ಚಮತ್ಕಾರವೇ ಈ ಅಲಂಕಾರದ ಲಕ್ಷಣ" ಎಂದು ಅರ್ಥಮಾಡುತ್ತಾರೆ (ಪು. ೫೧). ಇಷ್ಟು ಅರ್ಥವು ಮೂಲಕಾವ್ಯದಿಂದ ಹೊರಡಲಾರದೆಂದು ನಮಗೆ ತೋರುತ್ತದೆ." (ಭಾ.ಕಾ.ಮೀ. ಪುಟ ೪೬೧ ಟಿಪ್ಪಣಿ)

ಶ್ರೀ ಕೆ. ಕೃಷ್ಣಮೂರ್ತಿಯವರು ಹೇಳುವ ಅರ್ಥವೇ ಹೆಚ್ಚು ಸಂಗತವೆಂದು ನಮಗೆ ತೋರುತ್ತದೆ. ಆದರೆ ರೂಪಕಾತಿಶಯವನ್ನೇ ಇಲ್ಲಿ ಧ್ವನ್ಯಲಂಕಾರವೆಂದು ಕವಿರಾಜ ಮಾರ್ಗಕಾರನು ಕರೆದಿದ್ದಾನೆಂದು ಮಾತ್ರ ಭಾವಿಸಬಾರದು. ರೂಪಕಾತಿಶಯೋಕ್ತಿಯಲ್ಲಿ ವಾಚ್ಯಾರ್ಥವು ಅಸಂಗತವೂ, ದೂಷ್ಯವೂ ಆಗಬೇಕಾಗಿಲ್ಲ. ಕಮಲ, ಅನಿಮಿಷಯುಗಗಳೆಂದು ಇಲ್ಲಿ ಎರಡು ಅತಿಶಯೋಕ್ತಿಗಳಿವೆ. ಅವೆರಡರ ಕಾರ್ಯ ಕಾರಣ ಭಾವಸಂಬಂಧ ಮಾತ್ರ ದೂಷ್ಯ ಎಂದರೆ ಬಾಧಿತ. ಬಾಧಿತವಾದ್ದರಿಂದಲೇ ಆಶ್ಚರ್ಯಕಾರಿಯಾಗಿ ಚೋದ್ಯವಾಗಿದೆ. ಜಲದಲ್ಲಿರಬೇಕಾದ ಮತ್ಸ್ಯಯುಗ ಕಮಲದಲ್ಲಿದೆಯೆಂದು ಹೇಳಿದ್ದರಿಂದ ಅರ್ಥ ದೂಷ್ಯ. ಮುಖ ಮತ್ತು ನೇತ್ರ ಯುಗ್ಮವೆಂಬ ವ್ಯಂಗ್ಯಾರ್ಥವನ್ನು (ವಸ್ತುತಃ ಲಕ್ಷ್ಯಾರ್ಥವನ್ನು) ಇಟ್ಟುಕೊಂಡಲ್ಲಿ ದೋಷ ಪರಿಹಾರ ವಾಗುತ್ತದೆ. 'ಅರ್ಥದೆ ದೂಷ್ಯಂ' ಎಂಬುದಕ್ಕೆ 'ವಾಚ್ಯಾರ್ಥದಿಂದ ಬಾಧಿತ' ಎಂಬ ಅರ್ಥವೇ ಯುಕ್ತ. ಇದು ವಿಭಾವನಾಲಂಕಾರ (ರಸಗಂಗಾಧರದಲ್ಲಿ ವಿಭಾವನಾಲಂಕಾರದ ಕೊನೆಯ ಪ್ರಕರಣವನ್ನು ನೋಡಿ). ಇನ್ನೊಂದು ವಿಷಯ. ವರ್ಣನೆಯಲ್ಲಿ ತೋರುವ ಮುಖನೇತ್ರ ಎಂಬ ಅರ್ಥಗಳೆರಡೂ ವ್ಯಂಗ್ಯವಲ್ಲ. ಅವು ಲಕ್ಷ್ಯಾರ್ಥ. ಸೌರಭ, ಸೌಂದರ್ಯಾದಿಗಳು ವ್ಯಂಗ್ಯ. ಧ್ವನಿವಾದ ಕವಿರಾಜ ಮಾರ್ಗಕಾರನಿಗೆ ಚೆನ್ನಾಗಿ ಗೊತ್ತಿರಲಿಲ್ಲವೆಂಬುದರಲ್ಲಿ ವಿವಾದವೇನೂ ಇಲ್ಲ.

ಪಂಪನ ಆದಿ ಪುರಾಣದಲ್ಲಿ,

> ಧ್ವನಿಯೆನಿಸಿದಳಂಕಾರ
> ಧ್ವನಿಯೆ ಸವಿನಮೆಸೆವುದಲ್ಲಿ ಮಧುರವಿಪಂಚೀ
> ಧ್ವನಿಯೊಡನೇಕರಾಗ
> ಧ್ವನಿಯೆನೆ ಸೊಗಯಿಪುದು ಕಿಂನರಧ್ವನಿನಗದೋಳ್॥ (ix-೧೧೯)

ಎಂಬ ಪದ್ಯವಿದೆ. ಇದನ್ನು ವಿಮರ್ಶಿಸುತ್ತಾ "ಬಳೆ, ಕಡಗ ಮೊದಲಾದ ಅಲಂಕಾರಗಳೂ ಅಲುಗಾಡಿ ಅವುಗಳ ಧ್ವನಿಯೂ ಇಂಪಾಗಿ ಕೇಳಿಸುತ್ತಿದ್ದಿತು–ಎಂಬುದು ಇಲ್ಲಿ ಕವಿಯ ಮುಖ್ಯಾಶಯ" ಎಂದು ಮಾನ್ಯ ಲೇಖಕರು ಬರೆಯುತ್ತಾರೆ. (ಭಾ.ಕಾ.ಮೀ. ಪುಟ ೪೬೧)

ಬಳೆ, ಕಡಗಗಳ ಧ್ವನಿಯನ್ನು ಕವಿಯು ಇಲ್ಲಿ ವರ್ಣಿಸಿದ್ದಾನೆಂದು ಹೇಗೆ ಹೇಳುವುದು? ಆಭರಣಗಳು ಶಬ್ದಮಾಡಲು ಅದೇನು ನೃತ್ಯವೇ? ಅಲಂಕಾರ ಧ್ವನಿ ಎಂಬ ಶಬ್ದದ ಬಲದಿಂದ

ಲೇಖಕರು ಹಾಗೆ ಊಹಿಸಿರಬೇಕು. ಕಿಂನರರ ಕಂಠ ಧ್ವನಿ ವೀಣಾ ಧ್ವನಿ ಹೀಗೆ ಎರಡು ಧ್ವನಿಗಳ ವರ್ಣನೆ ನಮಗೆ ಕಂಡುಬರುತ್ತದೆ. ನಮಗೆ ತೋರುವ ಅರ್ಥ ಹೀಗೆ : ಪದ್ಯದಲ್ಲಿ 'ಎಸೆವುದು' 'ಸೊಗಯಿಪುದು' ಎಂದು ಎರಡು ಕ್ರಿಯಾಪದಗಳಿರುವುದರಿಂದ ಎರಡು ವಾಕ್ಯಗಳನ್ನು ಮಾಡಬೇಕಾದ್ದು ಅನಿವಾರ್ಯ. 'ನಗದೊಳ್ ಕಿಂನರ ಧ್ವನಿ ಸೊಗಯಿಪುದು' ಎಂಬುದು ಪ್ರಧಾನ ವಾಕ್ಯ. ಕಿಂನರ ಧ್ವನಿಯೆಂದರೆ ಕಿಂನರರ ಸಂಗೀತ. ಇಲ್ಲಿ 'ಧ್ವನಿ' ಶಬ್ದ ಕೇವಲ ಶಬ್ದಾಲಂಕಾರದ ಮೋಹದಿಂದ ಉಪಯೋಗಿಸಲ್ಪಟ್ಟಿದೆ. ಈ 'ಕಿಂನರ ಧ್ವನಿ' ವೀಣಾನಾದ, ಕಂಠಗಾನ ಇವೆರಡನ್ನೂ ಒಳಗೊಳ್ಳುತ್ತದೆ. ಅದೇ ಇಲ್ಲಿ ವರ್ಣನೀಯ. 'ಅನೇಕ ರಾಗಧ್ವನಿ ಎಸೆವುದು' ಎಂಬುದು ವಿಶೇಷಣ ವಾಕ್ಯ. ಅದರ ಪೂರ್ಣ ಸ್ವರೂಪ ಹೀಗೆ : 'ಧ್ವನಿಯೆಂದು ಕರೆಯಲ್ಪಡುವ ಯಾವ ಅಲಂಕಾರ ಉಂಟೋ ಅದರ ಧ್ವನಿಯಂತೆ ಅನೇಕ ರಾಗ ಧ್ವನಿಯು ಮಧುರ ವಿಂಪಚೀ ಧ್ವನಿಯೊಡನೆ ಅಲ್ಲಿ ಎಸೆವುದು' 'ಎನೆ' ಶಬ್ದವು ಸಂಭಾವನಾರ್ಥಕ. ಅದು ಎರಡು ವಾಕ್ಯಗಳನ್ನು ಒಂದುಗೂಡಿಸುವುದು. "........ಎಸೆವುದು. ಹೀಗೆ ಭಾವನೆಯುಂಟುಮಾಡುವಂತೆ ಕಿಂನರರ ಸಂಗೀತ ನಗದಲ್ಲಿ ಮನೋಹಾರವಾಗಿದ್ದಿತು" ಎಂಬುದು ಪೂರ್ಣ ವಾಕ್ಯಾರ್ಥ. ವಿಶೇಷ್ಯ ವಾಕ್ಯದಲ್ಲಿ ಅಲಂಕಾರದ 'ಧ್ವನಿ' ಉಪಮಾನ ಇಲ್ಲಿ ಧ್ವನಿಯೆಂದರೆ ಧ್ವನಿತ ವಾದ ಅರ್ಥ. 'ಅನೇಕ ರಾಗಧ್ವನಿ' ಉಪಮೇಯ. ಇಲ್ಲಿ ಧ್ವನಿಯೆಂದರೆ ಅವ್ಯಕ್ತ ಮನೋಹರ ಶಬ್ದ ರಾಗರೂಪ ವಾದ ಧ್ವನಿಯೆಂದು ಅರ್ಥ. ಇನ್ನು ಧ್ವನ್ಯಲಂಕಾರಕ್ಕೂ, ವಿಪಂಚೀ ಧ್ವನಿಗೂ ಉಪಮಾನೋ ಪಮೇಯ ಭಾವವಿದೆ. ಇದೇ ಬಿಂಬಪ್ರತಿಬಿಂಬ ಭಾವ. "ಕಿಂನರ ಸ್ತ್ರೀ ಪುರುಷರು ವೀಣೆಯನ್ನು ನುಡಿಸುಕೊಂಡು ಅನೇಕ ರಾಗದಲ್ಲಿ ಹಾಡುತ್ತಿದ್ದರು. ಅವರ ಧ್ವನಿಯು ವೀಣೆಯ ಪ್ರತಿ ಧ್ವನಿಯಂತೆ ಬಹಳ ಇಂಪಾಗಿತ್ತು. ವೀಣಾ ಧ್ವನಿಯೊಡನೆ ಮಿಶ್ರವಾಗಿ ಅದರ ಪ್ರತಿ ಧ್ವನಿಯಂತಿದ್ದ ಅವರ ಗಾನ ಧ್ವನ್ಯಲಂಕಾರದಿಂದ ಧ್ವನಿಸುವ ವಿವಿಧ ವ್ಯಂಗ್ಯಾರ್ಥದಂತೆ ಮನೋಹರವಾಗಿತ್ತು" ಇದು ತಾತ್ಪರ್ಯ,

ಶ್ರೀ ಕೆ. ಕೃಷ್ಣಮೂರ್ತಿಯವರು ಪಂಪನ ಈ ಪದ್ಯಕ್ಕ "ಆ ಬೆಟ್ಟದಲ್ಲಿ ಕಿಂನರರು ಸಪ್ತ ತಂತ್ರೀ ವೀಣೆಯನ್ನು ಬಾರಿಸಿಕೊಂಡು ಹಾಡುತ್ತಿರುವಾಗ ಅನೇಕ ಬೇರೆ ಬೇರೆ ರಾಗಚ್ಛಾಯೆಗಳು ಏಕಕಾಲದಲ್ಲಿ ವ್ಯಂಗ್ಯವಾಗುತ್ತಿದ್ದವು. ವ್ಯಂಗ್ಯಾರ್ಥದ ಚಮತ್ಕಾರವೇ ಪ್ರಧಾನವಾಗಿ 'ಧ್ವನಿ' ಕಾವ್ಯ (=ಉತ್ತಮ ಕಾವ್ಯ) ಎನ್ನಿಸಿಕೊಳ್ಳಲು ಯೋಗ್ಯವಾದ 'ಆಲಂಕಾರ ಧ್ವನಿ'ಯಲ್ಲಿ ವಿಧವಿಧವಾದ ಅಲಂಕಾರಾಂತರಗಳು ಅಭಿವ್ಯಕ್ತವಾಗುವಂತೆ" ಎಂದು ಅರ್ಥ ಹೇಳಿ, "ಈ ಅರ್ಥವೇ ಪಂಪನ ಮನಸ್ಸಿನಲ್ಲಿದ್ದಿರಬೇಕೆಂಬುದು ಸುನಿಶ್ಚಿತ" ಎಂಬ ನಿರ್ಧಾರಕ್ಕೆ ಬಂದಿದ್ದಾರೆ (ಭಾ.ಕಾ.ಮೀ. ಪುಟ ೪೬೨ ಟಿಪ್ಪಣಿ)

ಅಲಂಕಾರ ಧ್ವನಿಗೆ 'ಧ್ವನಿಕಾವ್ಯ' (=ಉತ್ತಮ ಕಾವ್ಯ) ಎಂದು ಹೆಸರಿದೆಯೆ? ಅಲಂಕಾರ ಧ್ವನಿಯನ್ನು ಪ್ರತಿಪಾದಿಸುವ ಕಾವ್ಯ ಧ್ವನಿಕಾರ್ಯ ಎಂದು ಹೇಳಬೇಕಲ್ಲವೆ? ಶ್ರೀ ಕೃಷ್ಣ ಮೂರ್ತಿಯವರು ಹೇಳುವ ಅರ್ಥದಲ್ಲಿ 'ಧ್ವನಿಯೆನಿಸಿದಲಂಕಾರ ಧ್ವನಿ' ಎಂಬಲ್ಲಿ ಅಭೇದಾನ್ವಯ ಬಾಧಿತವಾಗುತ್ತದೆ. ಅಲಂಕಾರ ಧ್ವನಿ ಧ್ವನಿಕಾವ್ಯವಲ್ಲ. ಮತ್ತು 'ಅಲಂಕಾರ ಧ್ವನಿಯಂತೆ ಅನೇಕ ರಾಗಧ್ವನಿ ಎಸೆವುದು' ಎಂಬ ಅರ್ಥಪದ್ಯದಲ್ಲಿ ಸ್ಫುಟವಾಗಿದೆ. ಉಪಮಾನವಾದ ಅಲಂಕಾರ

ಧ್ವನಿಯಲ್ಲಿ ವಿಧವಿಧವಾದ ಅಲಂಕಾರಾಂತರಗಳು ಅಭಿವ್ಯಕ್ತವಾದರೆ 'ಅಲಂಕಾರ ಧ್ವನಿ' ವ್ಯಂಜಕವಾಯಿತು. ಅದಕ್ಕೆ ಅನುಗುಣವಾಗಿ ಉಪಮೇಯವಾದ ಅನೇಕ ರಾಗ ಧ್ವನಿ 'ವ್ಯಂಜಕವೆನ್ನ ಬೇಕೇ ಹೊರತು ವ್ಯಂಗ್ಯವೆನ್ನುವುದು ತಪ್ಪು. ಆದ್ದರಿಂದ ಅನೇಕ ರಾಗಚ್ಛಾಯೆಗಳು ಏಕ ಕಾಲದಲ್ಲಿ ವ್ಯಂಗ್ಯವಾಗುತ್ತಿದ್ದವು' ಎಂಬುದು ಅಸಂಗತವಾಗುತ್ತದೆ. ರಾಗಗಳಾಗಲಿ, ರಾಗಚ್ಛಾಯೆ ಗಳಾಗಲಿ ವ್ಯಂಗ್ಯವಾಗುತ್ತವೆಯೆ ಎಂಬುದು ಸಂಗೀತ ಶಾಸ್ತ್ರಜ್ಞರು ವಿವೇಚಿಸಬೇಕಾದದ್ದು. ನಮಗೆ ಅದರ ಪರಿಚಯವಿಲ್ಲ. 'ಅನೇಕ ರಾಗಧ್ವನಿ' ವ್ಯಂಜಕವಾದರೆ ವ್ಯಂಗ್ಯ ಯಾವುದು ಎಂಬ ಪ್ರಶ್ನೆ ಉಳಿಯುತ್ತದೆ. ವಿಪಂಚೀಧ್ವನಿ ವ್ಯಂಗ್ಯವೆಂದು ಹೇಳಬೇಕಾದೀತು. ಆಗ ರಾಗಧ್ವನಿಗೆ ಅನುಗುಣವಾಗಿ ವೀಣೆಯನ್ನು ನುಡಿಸುತ್ತಿದ್ದರು ಎಂಬ ಅರ್ಥ ಹೊರಡಬಹುದು. ಆದರೆ ಉಪಮಾನದಲ್ಲಿ ವ್ಯಂಗ್ಯ ಯಾವುದೇಂಬುದನ್ನು ನಿರ್ದೇಶಿಸದೇ ಇದ್ದುದರಿಂದ ಉಪಮಾ ಲಂಕಾರವು ಅಸಂಸ್ಥುಲವಾಗುತ್ತದೆ. 'ಅಲಂಕಾರಧ್ವನಿ'ಯಲ್ಲಿ ಅಲಂಕಾರಾಂತರಗಳೇ ಅಭಿವ್ಯಕ್ತ ವಾಗಬೇಕಾಗಿಯೂ ಇಲ್ಲ. ವಸ್ತುವೂ ಅಭಿವ್ಯಕ್ತವಾಗಬಹುದು. ಇದನ್ನೆಲ್ಲಾ ಪರಿಶೀಲಿಸಿದರೆ ಪಂಪನ ನಾವು ಹೇಳಿದ ಅರ್ಥವೇ ಯುಕ್ತವೆಂದು ಗೊತ್ತಾಗುವುದು.

* * *

ಕೋ. ಶ. ಕಾರಂತ ಪ್ರಭಾತ, ೨೨-೮-೧೯೫೪

ಒಂದು ಸಮೀಕ್ಷೆ

ಗ್ರಂಥಕರ್ತೃಗಳು ತಮ್ಮ ಪೀಠಿಕೆಯಲ್ಲಿ ಹೇಳಿರುವಂತೆ "ಭಾರತೀಯ ಕಾವ್ಯ ಮೀಮಾಂಸೆ ಎಂದು (ಈ ಗ್ರಂಥಕ್ಕೆ) ಹೆಸರಿಟ್ಟಿದ್ದರೂ ಸಂಸ್ಕೃತ ಭಾಷೆಯಲ್ಲಿರುವ ಕಾವ್ಯ ಲಕ್ಷಣ ಗ್ರಂಥಗಳನ್ನೇ ಪ್ರಧಾನವಾಗಿ ಅವಲಂಬಿಸಿ ಇದನ್ನು ಬರೆಯಲಾಗಿದೆ; ಕನ್ನಡದಲ್ಲಿ ದೊರೆಯುವ ಲಕ್ಷಣ ಗ್ರಂಥಗಳನ್ನು ಕುರಿತು ಒಂದು ಅಧ್ಯಾಯ ಇದಕ್ಕೆ ಪರಿಶಿಷ್ಟವಾಗಿ ಬಂದಿದೆ" (ಪು. XII). ಕಾವ್ಯ ಮೀಮಾಂಸೆಯ ತಿರುಳಾಗಿರುವ ರಸ, ಧ್ವನಿ, ಔಚಿತ್ಯ ಎಂಬೀತತ್ತ್ವತ್ರಯಗಳ ತೌಲನಿಕ ಶಾಸ್ತ್ರವನ್ನು ನಿರೂಪಿಸುವ ಆಧುನಿಕ ಗ್ರಂಥವು ಕನ್ನಡದಲ್ಲಿ ಇಲ್ಲವೇ ಇಲ್ಲ. ಈ ನ್ಯೂನತೆಯನ್ನು ಇವರು ವಿದ್ವತ್ಪೂರ್ವಕವಾಗಿ ಬರೆದಿರುವ ಈ ಗ್ರಂಥವು ನಿವಾರಿಸುತ್ತದೆ. ಭಾರತೀಯ ಇನ್ನಾವ ಭಾಷೆಯಲ್ಲಿಯೂ ಇಂಥ ಗ್ರಂಥವು ಇಲ್ಲವೆಂದು ಹೇಳಬಹುದು. ನಮ್ಮ ಪ್ರೌಢ ವಿದ್ಯಾಭ್ಯಾಸ ಕಾಲದಲ್ಲಿ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಇಂಥ ಗ್ರಂಥವು ಪರಿಚಯವನ್ನು ಯಾವ ಪ್ರಾಧ್ಯಾಪಕರೂ ಮಾಡಿರುವುದಿಲ್ಲ. ಆದ ಕಾರಣ ಇದೊಂದು ಅಭಿನಂದನೀಯ ಗ್ರಂಥವೆಂಬುದು ನಿರ್ವಿವಾದ.

ಇದರಲ್ಲಿ ಪರಿಶಿಷ್ಟವನ್ನು ಬಿಟ್ಟರೆ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ "ಸಂಸ್ಕೃತದ ಪ್ರಸಿದ್ಧ ಕಾವ್ಯಮೀಮಾಂಸಕರು, ಅವರ ಕೃತಿಗಳು, ಅವರ ಕೈಯಲ್ಲಿ ಈ ಶಾಸ್ತ್ರ ಬೆಳೆದು ರೂಪುಗೊಂಡ ಬಗೆ, ಅದರ ವಿಶೇಷ ಲಕ್ಷಣಗಳು" ಮುಖ್ಯಾಂಶವನ್ನು ಬಿಡದೆ ಸಂಗ್ರಹಿಸಲ್ಪಟ್ಟಿದೆ. ಇದರಲ್ಲಿ ರಸ, ಧ್ವನಿ, ತತ್ತ್ವದ ತತ್ತವು ಬಂದು ನಿರೂಪಣೆಗೆ ಏಕಮುಖವನ್ನು ಕೊಟ್ಟಿದೆ. ಎರಡನೆಯ ಭಾಗದಲ್ಲಿ ಕವಿ-ಕಾವ್ಯ-ಸಹೃದಯ ಎಂಬುದು ಸವಿಸ್ತಾರವಾಗಿ

ವಿವೇಚಿಸಲ್ಪಟ್ಟಿದೆ. ಕಾವ್ಯ ಸೃಷ್ಟಿ, ಕಾವ್ಯ ಜಗತ್ತು ಕಾವ್ಯಪ್ರಯೋಜನ ಈ ಮೊದಲಾದ ವಿಷಯಗಳು ಪರಿಶೀಲಿಸಲ್ಪಟ್ಟಿವೆ. ಮೂರನೆಯ ಭಾಗದಲ್ಲಿ ರಸ, ಧ್ವನಿ, ಸವಿಸ್ತಾರವಾಗಿ ನಿರೂಪಿತವಾಗಿದೆ. ಕನ್ನಡದ ಲಕ್ಷಣ ಗ್ರಂಥಗಳ ವಿಚಾರವು ಪರಿಶಿಷ್ಟದಲ್ಲಿದೆಯೆಂದು ಮೇಲೆ ಹೇಳಿರುವೆ.

ಇದರ ಶೈಲಿಯು ಬಹಳ ಲಲಿತ ಮತ್ತು ಮನೋಹರವಾಗಿ ಪ್ರವಹಿಸುತ್ತದೆ. ಸಕ್ಕದ ಸವಿಯಿದೆ, ಆದರೆ ಅದರ ಬಿಂಕಿಲ್ಲ, ಕಾದಂಬರಿಯಂತೆ ಓದು ಇದಕ್ಕಿದೆ.

ಕಾವ್ಯದ ಮೂಲ ಜೀವನ; ಜೀವನದ ವಿಚಾರಣೆ ಕಾವ್ಯ ಮೀಮಾಂಸೆ. ಕಾವ್ಯವು ಜೀವನ ಸೌಂದರ್ಯೋಪಾಸನೆಯ ಒಂದು ಸಾಧನೆ.

ಕಾವ್ಯದ ಶರೀರ ಮಾತು. ಆದರೆ ಎಲ್ಲಾ ಮಾತುಗಳೂ ಕಾವ್ಯವಾಗಲಾರದು. ಮಾತುಗಳ ಪ್ರಪಂಚದಲ್ಲಿ ಕಾವ್ಯವು ಮುಖ್ಯಾಂಶ. ಮಾತುಗಳು ವಿದ್ವಾಂಸರ ಹಿಡಿತಕ್ಕೆ ಅಧೀನವಾದಾಗ–ಕಾವ್ಯವಾಗುತ್ತದೆ. ಮಾತಿನ ಹಿರಿಮೆಯನ್ನು ದಂಡಿಕವಿಯು ತನ್ನ ಕಾವ್ಯದರ್ಶನದಲ್ಲಿ ಈ ಪ್ರಕಾರ ವರ್ಣಿಸಿರುವನು.

ಇಹಶಿಷ್ಟಾನುಶಿಷ್ಟಾನಾಂ
ಶಿಷ್ಟಾನಾಮಪಿ ಸರ್ವದಾ।
ವಾಚಮೇವ ಪ್ರಸಾದೇನ
ಲೋಕಯಾತ್ರಾ ಪ್ರವರ್ತತೆ॥
ಇದಮಂಧಂತಮಃಕೃತ್ಸ್ನಂ
ಜಾಯತೇ ಭುವನತ್ರಯಂ।
ಯದಿಶಬ್ದಾಹ್ವಯಂ ಜ್ಯೋತಿರಾ.
ಸಂಸಾರನ್ನದೀಪ್ಯತೆ॥ ೧–೩ ಮತ್ತು ೪

“ಭಾಷೆಗಳು ವಿದ್ವಾಂಸರ ಅನುಶಾಸನಕ್ಕೆ ಒಳಪಟ್ಟವಾಗಿರಬಹುದು; ಬಿಟ್ಟವಾಗಿರಬಹುದು; ಅಂತೂ ಎಲ್ಲ ರೀತಿಯಲ್ಲಿ ಅವುಗಳ ಅನುಗ್ರಹದಿಂದ ಮಾತ್ರವೇ ಲೋಕವ್ಯವಹಾರ ಸಾಗುತ್ತಿದೆ. ಮಾತೆಂಬ ಜ್ಯೋತಿ ಸಂಸಾರದ ಉದ್ದಕ್ಕೂ ಬೆಳಗದೆ ಇದ್ದರೆ ಅಶೇಷ ಭುವನತ್ರಯವೂ ಕಗ್ಗತ್ತಲಾಗಿ ಬಿಟ್ಟಿತು” (ಎರಡನೇಭಾಗ–ಪು. ೧೨೪).

ಜನರು ತಮ್ಮ ಅನುಭವಗಳನ್ನು ಗ್ರಂಥವಾಗಿ ರಚಿಸುತ್ತಾರೆ. ಇಂಥ ಗ್ರಂಥಗಳ ಸಮುದಾಯವೇ ವಾಙ್ಮಯ. ವಾಙ್ಮಯವನ್ನು ವೇದ, ಶಾಸ್ತ್ರ ಮತ್ತು ಕಾವ್ಯ ಎಂಬ ತ್ರಿವರ್ಗವಾಗಿ ವಿಭಾಗಿಸಿದ್ದಾರೆ. ವೇದವು ಶಬ್ದಪ್ರಧಾನ. ಶಾಸ್ತ್ರವು ಅರ್ಥಪ್ರಧಾನ, ಮತ್ತು ಕಾವ್ಯವು ವ್ಯಂಗ್ಯಾರ್ಥ ಪ್ರಧಾನ. ಕೆಲವರು ಧ್ವನಿಪ್ರಧಾನವೆಂದು ಹೇಳುತ್ತಾರೆ. ಇನ್ನು ಕೆಲವರು ರಸಪ್ರಧಾನವೆಂದು ಸಾಧಿಸುತ್ತಾರೆ. ಭಟ್ಟಶೌತನ ಈ ಶ್ಲೋಕವು ಈ ಬೇಧವನ್ನು ಸ್ಪಷ್ಟಪಡಿಸುತ್ತದೆ.

ದ್ವೇ ವರ್ತ್ಮನೀ ಗಿರೋದೇವ್ಯಾಃ
ಶಾಸ್ತ್ರಂಚ ಕವಿಕರ್ಮಚ।
ಪ್ರಜ್ಞೋಪಜ್ಞಂ ತಯೋರಾದ್ಯಂ
ಪ್ರತಿಭೋಧ್ಭವಮಂತಿಮಂ॥

ಶಾಸ್ತ್ರ ಮತ್ತು ಕಾವ್ಯ ಎಂಬೆರಡು ವಾಗ್ದೇವಿಯ ಮಾರ್ಗಗಳು ಅಥವಾ ವಾಙ್ಮಯ ಎರಡು ಶಾಖೆಗಳು. ಶಾಸ್ತ್ರವು ಪ್ರಜ್ಞೆಯಿಂದ ಜನ್ಯ. ಕಾವ್ಯವು ಪ್ರತಿಭೆಯಿಂದ ಸೃಷ್ಟಿ. ಕಾವ್ಯಕ್ಕೆ ಸಾಹಿತ್ಯ ಎಂದೂ ಕರೆಯುತ್ತಾರೆ. ಕಾವ್ಯವು ಪದ್ಯ ಮತ್ತು ಗದ್ಯ ಎಂಬೆರಡು ರೂಪದಲ್ಲಿ ಪಳಗಿರುವುದಾದರೂ ಪದ್ಯವು ಹೆಚ್ಚಾಗಿದೆ.

"ಶಬ್ದರ್ಥೌ ಸಹಿತೌ ಕಾವ್ಯಂ". ಶಬ್ದ ಮತ್ತು ಅರ್ಥ ಇವೆರಡು ಸೇರಿರುವುದು ಕಾವ್ಯ ಎಂದು ಭಾಮಹನು ತನ್ನ ಕಾವ್ಯಾಲಂಕಾರದಲ್ಲಿ ಹೇಳಿ ತೃಪ್ತನಾಗಿರುವನು. ದಂಡಿಯು ತನ್ನ ಕಾವ್ಯಾದರ್ಶದಲ್ಲಿ "ಶರೀರಂ ತಾಮದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ." ಇಷ್ಟಾರ್ಥವುಳ್ಳ ಪದಗಳ ಸಮಾಜವೇ ಕಾವ್ಯದ ಶರೀರ ಎಂದಿರುವನು. ವಾಮನನು "ಕಾವ್ಯಶಬ್ದೋऽಯಂ ಗುಣಾಲಂಕಾರ ಸಂಸ್ಕೃತಯೋ ಶಬ್ದಾರ್ಥಯೋರ್ವರ್ತತೇ" ಗುಣಾಲಂಕಾರದಿಂದ ಪರಿಷ್ಕೃತ ಹೊಂದಿಕೆಯಾಗಿರುವ ಶಬ್ದಾರ್ಥಗಳೇ ಕಾವ್ಯ ಎಂದಿರುವನು. "ರೀತಿರಾತ್ಮ ಕಾವ್ಯಸ್ಯ"-ರೀತಿಯೇ ಕಾವ್ಯದ ಆತ್ಮ ಎಂದು ವಾಮನನು ಕಾವ್ಯಲಂಕಾರದ ಸೂತ್ರವೃತ್ತಿಯಲ್ಲಿ ಹೇಳಿರುವನು. ಆನಂದವರ್ಧನನು "ಕಾವ್ಯಸ್ಯಾತ್ಮಾ ಧ್ವನಿ" ಕಾವ್ಯದ ಆತ್ಮವೇ ಧ್ವನಿ ಎಂದು ತನ್ನ ಧ್ವನ್ಯಾಲೋಕದಲ್ಲಿ ಕಾವ್ಯದ ಸ್ವರೂಪವನ್ನು ನಿರೂಪಿಸಿರುವನು. ಕುಂತಕನು ತನ್ನ ವಕ್ರೋಕ್ತಿ ಜೀವಿತದಲ್ಲಿ ಕಾವ್ಯದ ಲಕ್ಷಣವನ್ನು ಈ ಪ್ರಕಾರ ವರ್ಣಿಸಿರುವನು.

ಸಬ್ದಾರ್ಥೌ ಸಹಿತೌವಕ್ರ-
ಕವಿವ್ಯಾಪಾರಶಾಲಿನಿ।
ಬಂಧೇ ವ್ಯವಸ್ಥಿತೌ ಕಾವ್ಯಂ
ತದ್ವಿದಾಹ್ಲಾದಕಾರಿಣಿ॥

ವಕ್ರಕವಿವ್ಯಾಪಾರದಿಂದ ಕೂಡ, ಬಲ್ಲವರಿಗೆ ಆಹ್ಲಾದವನ್ನುಂಟುಮಾಡುವ ರೀತಿಯ ಬಂಧದಲ್ಲಿ ವ್ಯವಸ್ಥಿತಗೊಂಡ ಶಬ್ದಾರ್ಥ ಸಹಿತವಾಗಿರುವುದು ಕಾವ್ಯ.

ಕವಿ ವರ್ಣೇ-ವರ್ಣಿಸು ಎಂಬ ಧಾತುದಿನಿಂದ ಕವಿಪದವಾಗಿದೆ. ಕವಿಯ ಧರ್ಮವೇ ಕಾವ್ಯ. ಕವಿಯ ವಿಚಾರ ಮತ್ತು ವರ್ಣನೆಯ ದೃಷ್ಟಿಯೇ ಬೇರೆ. ಕವಿಯ ಕಣ್ಣು ಬುದ್ಧಿಯ ಕಣ್ಣಲ್ಲ ಅದು ಅವನ ಹೃದಯದ ಕಣ್ಣಾಗಿದೆ. ಈ ಕಣ್ಣು ತೆರೆದಾಗ ಕವಿಯ ದೃಷ್ಟಿಗೆ ವಿಶ್ವದ ಹೃದಯವೇ ತೆರೆಯಲ್ಪಡುತ್ತದೆ. ರವಿ ಕಾಣದ್ದನ್ನು ಕವಿ ಕಂಡ ಎಂಬ ನಾಣ್ನುಡಿಯು ಇದನ್ನೇ ಸ್ಪಷ್ಟಪಡಿಸುತ್ತಿದೆ. ಆದ ಕಾರಣ ರಾಜಶೇಖರನು ತನ್ನ ಕಾವ್ಯ ಮೀಮಾಂಸೆಯಲ್ಲಿ ಈ ಪ್ರಕಾರ ಹೇಳಿರುವನು.

ಯಃ ಹೃದಯೇ ವಿನ ಕವತೇ
ನಿಹ್ನುತೆ ಚು ಸಹೃದಯ ಕವಿಃ

ಯಾರು ತನ್ನ ಹೃದಯದಲ್ಲಿಯೇ ಕವಿತೆಯನ್ನು ರಚಿಸಿ ಅದನ್ನು ರಹಸ್ಯವಾಗಿಟ್ಟು ಕೊಳ್ಳುವನೋ ಅವನೇ ಹೃದಯ ಕವಿ. ಕವಿಯ ಋಷಿ. ಋಷಿದರ್ಶನಾತ್ ಎಂಬುದು ಕವಿಗೂ ಸಮನ್ವಿಸುತ್ತದೆ.

ಕವಿ ಸೃಷ್ಟಿಯ ರಹಸ್ಯವೆಲ್ಲಾ ಮೂರು ಅಕ್ಷರಗಳ ಪದವಾದ "ಪ್ರತಿಭೆ"ಯಲ್ಲಿ ನಿಹಿತವಾಗಿದೆ. ಹೊಸ ಹೊಸ ಭಾವನೆಗಳನ್ನು ಕಾಣುವ ದೃಷ್ಟಿಯೇ ಪ್ರತಿಭೆ. ಪ್ರತಿಭೆ ಎಂದರೆ ಪ್ರಕಾಶ ಅಥವಾ ಹೊಳಪು. ಕವಿಯ ದೃಷ್ಟಿಯೇ ಪ್ರತಿಭೆ. ಕವಿಯ ಹೃದಯ ಶಬ್ದಾರ್ಥಗಳ ಚಿಂತನೆಯಲ್ಲಿದ್ದಾಗ ವಿಷಯದ ನಿಜವಾದ ಸ್ವರೂಪವನ್ನು ಪ್ರಚೋದಯ ಮಾಡುವ ಚೇತನ ಶಕ್ತಿಯೇ ಪ್ರತಿಭೆ. ಆಗ ಕವಿಗೆ ವಸ್ತುವಿನ ನಿಜ ಸ್ವರೂಪವೂ ದರ್ಶನವಾಗುತ್ತದೆ. ಕವಿಯು ದೃಷ್ಟನಾಗುತ್ತಾನೆ. ಆಗ ಅವನ ಕಾವ್ಯವು ಪ್ರಸವಿಸುತ್ತದೆ. ಈ ಪ್ರಕಾರ ಸ್ಫುರಿಸುವ, ಪ್ರಚೋದಯವಾಗುವ ಪ್ರತಿಭೆಯೇ ಕಾವ್ಯದ ಬೀಜ.

ದೃಷ್ಟಿ ಮತ್ತು ಸೃಷ್ಟಿಶಕ್ತಿಯೇ ಪ್ರತಿಭೆ. ಪ್ರತಿಭೆ ಉಕ್ಕಲು ರಸಾವೇಶವು ಅಗತ್ಯ. ಕಾವ್ಯನಿರ್ಮಾಣಕ್ಕೆ ಬೇಕಾದ ರಚನಾತ್ಮಕ ಪ್ರತಿಭೆಗೆ "ಕಾರಯತ್ರೀ" ಎಂದು ರಾಜಶೇಖರನು ಹೆಸರಿಟ್ಟಿರುವನು. ಸಹಜ ಮತ್ತು ಔಪಾಧಿಕ ಎಂದು ಪ್ರತಿಭೆಯನ್ನು ಎರಡು ವಿಭಾಗಮಾಡಿದ್ದಾರೆ.

ಮೂರನೆ ಭಾಗದ ಮುಖ್ಯಾಂಶವೇ ರಸ ಮತ್ತು ಧ್ವನಿ ಈ ಎರಡು ತತ್ವಗಳ ವಿವೇಚನೆ.

೨

ಮೊದಲು ಭಾಷೆಯೇನೆಂದು ವಿವೇಚನೆ ಮಾಡಿರುವನು, ಭಾಷೆಯೆಂದರೆ ಸಂಕೇತಗಳ ಸಮುದಾಯ ಎಂದಿರುವನು. ಅದು ಹೇಗೆ?

ಭಾಷೆಯಿಲ್ಲದ ಮಾನವ ವರ್ಗವೇ ಇಲ್ಲ. ಅತ್ಯಂತ ಅನಾಗರಿಕರೆಂದು ಕರೆಯಲ್ಪಡುವ ಕಾಡುಮನುಷ್ಯರು ಕೂಡ ಮಾತುಕಥೆಯಿಲ್ಲದೆ ಬಾಳುವುದಿಲ್ಲ. ಮಾನವ ಜಾತಿಯಲ್ಲಿ ಮೊದಲು ನಲಿವು ನರಳಿಕೆಯ ಮೊದಲಾದ ಭಾವಗಳನ್ನು ಹೊರಗಡೆಹಲು ಹೊರೆಹೊಮ್ಮುತ್ತಿದ್ದ ಕೂಗು ಪರಿಣಾಮಗೊಂಡು ಭಾಷೆಯಾಯಿತು. ಮಾತಿನ ಮೂಲಕ ನಿರ್ದೇಶಿಸಲು ಸಮಾಜದಲ್ಲಿ ರೂಢಿಯಾಗಿರುವ ಸಂಕೇತವೇ ಶಬ್ದ (ಪು. ೨೨೨). ಶಬ್ದ ಸಮುದಾಯವೇ ಭಾಷೆ. ತನ್ನ ಅಭಿಪ್ರಾಯವನ್ನು ಅನ್ಯರಿಗೆ ತಿಳಿಸಲು ಉಪಯೋಗಿಸುವ ಒಂದು ಸಾಧನೆ ಭಾಷೆ (ಪು. ೨೨೪). ಹೀಗೆ ಸಾಂಕೇತಿಕವಾದ ಅರ್ಥವನ್ನು ತಿಳಿಸುವ ಶಬ್ದ ಶಕ್ತಿಗೆ ಅಭಿಧಾವೃತ್ತಿಯೆಂದು ಹೆಸರು. ಇದರಿಂದ ತಿಳಿಯಲ್ಪಡುವ ಅರ್ಥಕ್ಕೆ ಅಭಿಧೇಯಾರ್ಥ, ವಾಚ್ಯಾರ್ಥ ಅಥವಾ ಮುಖ್ಯಾರ್ಥ ಎಂದು ಹೆಸರು. ಶಬ್ದ ವಾಚ್ಯಾರ್ಥವು ಕೇಳಿದ ಕೂಡಲೇ ಥಟ್ಟನೆ ಗೊತ್ತಾಗುತ್ತದೆ. ಈ ಅರ್ಥಗಳು ಭಾಷೆಯ ಕೋಶ, ನಿಘಂಟುಗಳಲ್ಲಿ ಸಿಗುತ್ತದೆ.

"ನಕ್ಷತ್ರಗಳು ಮಿನುಗುತ್ತವೆ" "ಅವನು ಮನೆಗೆ ಹೋದನು" ಈ ಮೊದಲಾದ ವಾಕ್ಯಗಳನ್ನು ಕೇಳಿದಾಗಲೇ ಎಲ್ಲರಿಗೂ ಒಂದೇ ರೀತಿಯಲ್ಲಿ ಅರ್ಥವಾಗುತ್ತದೆ. ಈ ವಾಕ್ಯಗಳಲ್ಲಿರುವ ಪದಗಳ ಅರ್ಥವನ್ನು ಬೇರೆ ಬೇರೆಯಗಿ ತಿಳಿದು ಒಟ್ಟರ್ಥ ಮಾಡುತ್ತೇವೆ. ವಾಕ್ಯದಲ್ಲಿರುವ ಪದಗಳ ಬೇರೆ ಬೇರೆಯಾವ ಅರ್ಥವನ್ನು ಸೂಚಿದಷ್ಟಕ್ಕೆ ಅವುಗಳ ಅಭಿಧಾವೃತ್ತಿಯು ಮುಗಿಯುತ್ತದೆ. ವಾಕ್ಯದಲ್ಲಿರುವ ಕ್ರಿಯೆ, ಕರ್ತೃ ಮೊದಲಾದವುಗಳಿಗೆ ವಿಶಿಷ್ಟ ಸಂಬಂಧ ಇದ್ದೇ ಇದೆ. ಈ ವಿಶಿಷ್ಟ ಸಂಬಂಧಕ್ಕೆ – ಅನ್ವಯಕ್ಕೆ "ಸಂಸರ್ಗ" ಎಂದು ಹೆಸರು. ಈ

"ಸಂಸರ್ಗ'ವನ್ನು ತಿಳಿಸುವ ಶಕ್ತಿ ಅಭಿಧಾವೃತ್ತಿಗಿಲ್ಲ. ಆ ರಕಾರ ಹೊರಡುವ ಅರ್ಥಕ್ಕೆ "ತಾತ್ಪರ್ತ್ಯಾರ್ಥ" ಎಂದು ಹೆಸರು. ಈ ಪ್ರಕಾರದ ಶಬ್ದ ವ್ಯಾಪಾರಕ್ಕೆ ತಾತ್ಪರ್ಯ ವೃತ್ತಿ ಎಂದು ಹೆಸರು.

ಅರ್ಥವಿಚಾರದಲ್ಲಿ ಈ ಕೆಳಗಿನ ವಾಕ್ಯಗಳನ್ನು ಪರಿಶೀಲಿಸಿದ್ದಾರೆ. "ಕೇರಿಯೆಲ್ಲ ಕಣ್ಣೀರು ಸುರಿಸಿತು" ಕೇರಿ ಎಂದರೆ ಮನೆಗಳ ಸಾಲು. ಮನೆಗಳು ಕೂಗುವುದುಂಟೇ? ಇಲ್ಲಿ "ಕೇರಿ" ಎಂದರೆ ಆ ಕೇರಿಯಲ್ಲಿರುವ ಜನರು" ಎಂದರ್ಥ ಮಾಡಬೇಕಾಗಿದೆ. "ಅವನ ಬುದ್ಧಿ ಪಾದರಸ" ಎಂಬ ಇನ್ನೊಂದು ವಾಕ್ಯವನ್ನು ವಿಚಾರಿಸುವ. ಬುದ್ಧಿಯು ಪಾದರಸವಾಗುವುದುಂಟೆ? ಇಲ್ಲಿ ಪಾದರಸದಂತೆ ತೀವ್ರಗತಿವುಳ್ಳ ಬುದ್ಧಿ ಎಂದರ್ಥವನ್ನು ಮಾಡಬೇಕಾಗಿದೆ. ಆದ ಕಾರಣ ಇಂಥ ವಾಕ್ಯಗಳಲ್ಲಿ ವಾಚ್ಯಾರ್ಥವು ನಿಜವಾದ ಅರ್ಥವಾಗಿಲ್ಲ. ಬೇರೊಂದು ಅರ್ಥವು ಹೊರಹೊಮ್ಮುತ್ತದೆ. ಇಂಥ ಅರ್ಥವನ್ನು ಲಕ್ಷ್ಯಾರ್ಥವೆಂದೂ ಮತ್ತು ಅದನ್ನು ತಿಳಿಸುವ ವ್ಯಾಪಾರಕ್ಕೆ 'ಲಕ್ಷಣಾವೃತ್ತಿ' ಎಂದೂ ಹೆಸರು (ಪು. ೨೨೯). ಕೇರಿ ಎಂದರೆ ಕೇರಿಯ ಜನರೆಲ್ಲ ಎಂಬರ್ಥವನ್ನು ಸೂಚಿಸುವುದಕ್ಕಾಗಿ ಕೇರಿ ಶಬ್ದವು ಪ್ರಯೋಗಿಸಲ್ಪಟ್ಟಿದೆ. ಈ ಪ್ರಕಾರದ ಪ್ರಯೋಜನವೇ ಇಲ್ಲಿಯ ವ್ಯಂಗ್ಯಾರ್ಥ (ಪು. ೨೩೫). "ತಾಯಿಯ ಮುಖವನ್ನು ಕಾಣುತ್ತಲೇ ಮಗುವಿನ ಮುಖ ಅರಳಿತು" ಎಂಬ ಈ ವಾಕ್ಯದಲ್ಲಿ ಅರಳಿತು ಎಂದರೆ ಮಗುವಿಗಾದ ಸಂತೋಷ ಹಿಗ್ಗು ಉಲ್ಲಾಸವನ್ನು ಹೊರಡಿಸುವುದೇ ವ್ಯಂಜನಾರ್ಥ. ಈ ಅರ್ಥಗಳು ಅರಳಿತು ಎಂಬ ಪದದಲ್ಲಿ ವ್ಯಂಗ್ಯವಾಗುತ್ತದೆ.

ವ್ಯಂಜ್ಯಾರ್ಥವು ವ್ಯಂಜಕವಾಗಿ ಶಬ್ದಾರ್ಥಗಳಿಗಿಂತ ಹೆಚ್ಚಿಗೆ ಮನೋಹರವಾಗಿದ್ದರೆ ಅದಕ್ಕೆ 'ಧ್ವನಿ' ಎಂದು ಹೆಸರು. ಆದಕಾರಣ ಧ್ವನಿಯು ವ್ಯಂಗದ ಒಂದು ಭೇದ. ಧ್ವನಿಯೆಲ್ಲಾ ವ್ಯಂಗವೇ. ಆದರೆ ವ್ಯಂಗ್ಯ ಮಾತ್ರ ಯಾವಾಗಲೂ ಧ್ವನಿಯಾಗಿರಬೇಕಾಗಿಲ್ಲ (ಪು. ೨೪೫). ಈ ಪ್ರಧಾನ್ಯವನ್ನು ತಿಳಿಯುವ ಬಗೆ ಹೇಗೆ? ಇದಕ್ಕೆ ಸಹೃದಯನ ಅನುಭವವೇ ಪರಮ ಪ್ರಮಾಣ ಎಂದಿರುವರು. ಇಲ್ಲಿ ಸಹೃದಯ ಎಂದರೇನೆಂದು ವಿವರಿಸಬೇಕಾಗಿದೆ. ಇದಕ್ಕೆ ನಾವು ಎರಡನೆಯ ಭಾಗವನ್ನು ತಿಳುಹಬೇಕಾಗಿದೆ.

ಕವಿ ಹೃದಯಕ್ಕೆ ಸಮಾನವಾದ ಹೃದಯವಿರುವವನೇ ಸಹೃದಯ. ಎಂದರೆ ಕಾವ್ಯವನ್ನು ಓದುವಾಗ ಕವಿಯ ಹೃದಯದೊಂದಿಗೆ ಹೊಂದಿಕೆಯಾಗುವ ಸಮಾನಹೃದಯ. ಅಭಿನವ ಗುಪ್ತನು ತನ್ನ ಧ್ವನ್ಯಾಲೋಚನದಲ್ಲಿ ಈ ಸಹೃದಯಯದ ನಿರುಕ್ತಿಯನ್ನು ರಮ್ಯವಾಗಿ ನಿರೂಪಿಸಿರುವನು.

"ಯೇಷಾಂ ಕಾವ್ಯನುಶೀಲನವಶಾತ್ ವಿತಾನುಭೂತೇ ಮನೋಮುಕುರೇ ವರ್ಣನೀಯ ತನ್ಮಯಾ ಭವನಯೋಗ್ಯತಾತೇ ಹೃದಯ ಸಂವಾದ ಭಾಜಃ ಸಹೃದಯಾಃ" ಕಾವ್ಯಗಳನ್ನು ಪರಿಶೀಲಿಸಿ ಮನಸ್ಸೆಂಬ ಕನ್ನಡಿ ನಿರ್ಮಲವಿರುವುದರಿಂದ ವರ್ಣಿತವಿಷಯದಲ್ಲಿ ತನ್ಮಯವಾಗುವ ಯೋಗ್ಯತೆ ಇರುವವರೇ ಸಹೃದಯರು (ಪು. ೧೯೯-೨೦೦).

ವ್ಯಂಜನಾವೃತ್ತಿಯ ಮೂಲಕ ಸೂಚಿತವಾಗುವ ಉಪಮಾ ಮೊದಲಾದ ಧ್ವನಿಗೆ 'ಅಲಂಕಾರಧ್ವನಿ' ಎಂದು ಹೆಸರು. ಕಾವ್ಯ ನಾಟಕಗಳಲ್ಲಿ ಅಸ್ವಾದ್ಯವಾಗುವ ಚಿತ್ತವೃತ್ತಿ ವಿಶೇಷಕ್ಕೆ 'ರಸ' ಎಂದು ಹೆಸರು. ರಸವು ವ್ಯಂಗಾರ್ಥದ ಒಂದು ಬಗೆ. ರಸಧ್ವನಿ ಮತ್ತು ವ್ಯಂಗಾರ್ಥಧ್ವನಿ ಇವೆರಡೂ ಇರದ ವ್ಯಂಗಾರ್ಥವನ್ನು ವಸ್ತುಧ್ವನಿ–ಎಂದು ಕರೆಯುತ್ತಾರೆ. ಹೀಗೆ ವಸ್ತು, ಅಲಂಕಾರ ಮತ್ತು ರಸ ಎಂದು ಧ್ವನಿಗಳಲ್ಲಿ ಮೂರು ವಿಭಾಗಗಳಿವೆ.

ವ್ಯಂಜಕ ಸಾಮಗ್ರಿಗಳು ೧೭ನೆ ಅಧ್ಯಾಯದಲ್ಲಿ ವಿವೇಚಿಸಲ್ಪಟ್ಟಿವೆ. ಆಮೇಲೆ ೧೮ನೇ ಅಧ್ಯಾಯದಲ್ಲಿ ಗುಣೀಭೂತ ವ್ಯಂಗ ಚಿತ್ರ ಮತ್ತು ೧೯ನೆಯ ಅಧ್ಯಾಯದಲ್ಲಿ ವ್ಯಂಜನಾವಿಚಾರ ಇವುಗಳಿವೆ. ೨೦ನೆ ಅಧ್ಯಾಯದಲ್ಲಿ ಭಾವ, ವಿಭಾವ, ಮತ್ತು ಅನುಭಾವ ಇವು ವರ್ಣಿತವಾಗಿವೆ.

'ಭಾವ ಎಂಬುದು ಭೌ ಎಂಬ ಧಾತುವಿನಿಂದಾಗಿದೆ' 'ಭಾವ' ಎಂದರೆ ಇರುವಿಕೆ ಎಂದರ್ಥ. ಕೆಲವು ವಸ್ತುಗಳನ್ನು ನೋಡಿದೊಡನೆ ಚಿತ್ತವು ಕಲಕಿ ಭಯವುಂಟಾಗುತ್ತದೆ. ಶರೀರವು ಕಂಪಿಸುತ್ತದೆ. ಈ ಪ್ರಕಾರದ ಚಿತ್ತದಲ್ಲಾಗುವ ಪರಿಣಾಮವು ಬಾಹ್ಯದೃಷ್ಟಿಗೆ ಅಗೋಚರವು. ಚಿತ್ತದಲ್ಲಿ ಬಗೆಬಗೆಯಾಗಿ ಉದ್ಭವಿಸುವ ವೃತ್ತಿಗಳನ್ನು ವಿವೇಚಿಸಿ ವಿಭಾಗಿಸಿ ದವರಿಲ್ಲ. ಚಿತ್ತವೃತ್ತಿಗಳಲ್ಲಿ ಕೆಲವು ಜೀವಿತಕ್ಕೆ ಅಂಟಿಕೊಂಡೇ ಇವೆ. ಅವು ಸ್ಥಾಯಿಯಾಗಿ ಇರುವ ಕಾರಣ ಸ್ಥಾಯಿಭಾವಗಳೆಂದು ಕರೆಯುತ್ತಾರೆ. ಸ್ಥಾಯಿಭಾವಗಳು ಎರಡು ಬಗೆ ಮಾತ್ರ ಎಂದು ತನ್ನ ನಾಟ್ಯಶಾಸ್ತ್ರದಲ್ಲಿ ನಿರೂಪಿಸಿರುವನು.

ರತಿರ್ಹಾಸಶ್ಚ ಶೋಕಶ್ಚ ಕ್ರೋಧೋ
ತ್ಸಾಹೌ ಭಯಂ ತಥಾ।
ಜುಗುಪ್ಸಾ ವಿಸ್ಮಯಶ್ಚೇತಿ
ಸ್ಥಾಯಿಭಾವಾಃ ಪ್ರಕೀರ್ತಿತಾಃ॥

ರತಿ, ಹಾಸ್ಯ, ಶೋಕ, ರೌದ್ರ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ ಮತ್ತು ವಿಸ್ಮಯ ಇವು ಎಂಟು ಸ್ಥಾಯಿಭಾವಗಳು.

ಶಂಕೆ, ನಾಚಿಕೆ ಮೊದಲಾಧ ಭಾವಗಳು ಸ್ಥಿರವಾಗಿ ನಿಲ್ಲುವುದಿಲ್ಲ. ಅವು ಏಳುತ್ತವೆ ಮತ್ತು ಲಯಗೊಳ್ಳುತ್ತವೆ. ಆದಕಾರಣ ಅಂಥ ಭಾವಗಳನ್ನು ಸಂಚಾರಿ ಭಾವ ಅಥವಾ ವ್ಯಭಿಚಾರಿ ಭಾವಗಳೆಂದು ಕರೆದಿರುತ್ತಾರೆ. ಸಂಚಾರಿಭಾವಗಳು ಮೂವತ್ತಮೂರು ಎಂದು ಭರತನಾಟ್ಯ ಶಾಸ್ತ್ರದಲ್ಲಿ ವಿವೇಚಿಸಲ್ಪಟ್ಟಿದೆ.

ಕಲಾಪ್ರಪಂಚದಲ್ಲಿ ಭಾವದ ಕಾರಣಗಳನ್ನು 'ವಿಭಾವ' ಎಂದೂ ಕರೆದಿರುವರು.

ಅನುಭಾವ ವಿಭಾವಾನಾಂ ವರ್ಣನಾ ಕಾವ್ಯಮುಚ್ಯತೇ।
ತೇಷಾಮೇವ ಪ್ರಯೋಗಸ್ತು ನಾಟ್ಯಂ ಗೀತಾದಿರಂಚಿತಂ॥

(ಭಟ್ಟತೌತನ ಕಾವ್ಯಕೌತುಕ –ಪು.೯೬)

ಅನುಭಾವ ಮತ್ತು ವಿಭಾವಗಳ ವರ್ಣನೆಯೇ ಕಾವ್ಯ. ಇವುಗಳನ್ನು ನಾಟ್ಯಗೀತಾ ಮೊದಲಾದವುಗಳಿಂದ ರಚಿಸಿ ತೋರಿಸಿದರೆ ನಾಟ್ಯ ಎಂದು ಕರೆಯಲ್ಪಡುತ್ತವೆ. ಆದಕಾರಣ ಕಾವ್ಯ ಮತ್ತು ನಾಟಕ ಇವುಗಳಲ್ಲಿ ಭೇದಗಳಿರುವುದಿಲ್ಲ.

ವಿಭಾವಾನುಭಾವ ವ್ಯಭಿಚಾರಿ ಸಂಯೋಗಾದ್ರಸನಿಷ್ಪತ್ತಿ.....

ವಿಭಾವಗಳು, ಅನುಭಾವಗಳು, ಸಂಚಾರಿಭಾವಗಳು. ಇವುಗಳ ಸಂಯೋಗದಿಂದ ರಸದ ನಿಷ್ಪತ್ತಿಯಾಗುತ್ತದೆಂದು ಭರತನ ಈ ವಿಖ್ಯಾತ ಸೂತ್ರದಿಂದ ವ್ಯಕ್ತವಾಗುತ್ತದೆ. ರಸದ ನಿಷ್ಪತ್ತಿಯನ್ನು ಬಗೆಬಗೆಯಾಗಿ ನಿರುಪಿಸಿದ್ದಾರೆ. ಇವರ ವಿಚಾರಣೆಯ ಇಲ್ಲಿ ಅಸಾಧ್ಯವಾಗಿದೆ.

ನಾಟಕವನ್ನು ನೋಡುವಾಗ ನಾವು ನಮ್ಮ ಸ್ವಂತ ವಿಚಾರಗಳನ್ನು ಮರೆತು ದೃಶ್ಯವಿಚಾರಗಳಲ್ಲಿ ತಲ್ಲೀನರಾಗುತ್ತೇವೆ. ಆಗ ನಾಟ್ಯದ ವಿಭಾವಾನುಭಾವಗಳು ನಮ್ಮ ಹೃದಯದಲ್ಲಿ ಪರಿಣಾಮ ವನ್ನುಂಟುಮಾಡುತ್ತವೆ. ಆಗ ನಮ್ಮಲ್ಲಿ ಅಂಥ ವಿಭಾವಾನುಭಾವಗಳು ಮೂಡುತ್ತವೆ. ದೃಶ್ಯ ವಿಚಾರಗಳಿಗೆ ಅನುಗುಣವಾಗಿ ನಮ್ಮಲ್ಲಿ ಶೋಕ, ಉತ್ಸಾಹ ಮೊದಲಾದ ವಾಸನೆಗಳು ನಮ್ಮ ಹೃದಯದಲ್ಲಿ ಉಕ್ಕಿ ಬರುತ್ತವೆ. ಈ ಪ್ರಕಾರ ಹೃದಯದಲ್ಲಿ ವಾಸನೆಗಳು ಉಕ್ಕಿಬಾರದೆ ಸ್ಥಾಯಿಭಾವಗಳು ಹೊರಹೊಮ್ಮುವುದಿಲ್ಲ. ಆಗ ರಸವು ಪ್ರತೀಕವಾಗುತ್ತದೆ. ಆಗ ನಮಗೆ ರಸದ ಆಸ್ವಾದನೆಯಾಗುವುದು.

ರಸದ ಆಸ್ವಾದನೆಯನ್ನು ಭರತನು ಪಾನಕದ ಆಸ್ವಾದಕ್ಕೆ ಹೋಲಿಸಿರುವನು. ಪಾನಕದಲ್ಲಿರುವ ಬೆಲ್ಲ, ಹುಳಿ, ಏಲಕ್ಕಿ ಮೊದಲಾದ ವಿಭಾವಾನುಭಾವಾದಿಗಳು ಪಾನಕವನ್ನು ಕುಡಿಯುವಾಗ ಇವುಗಳ ರುಚಿಯು ಬೇರೆಬೇರೆಯಾಗಿ ಅನುಭವವಾಗುವುದಿಲ್ಲ.

ವಿಭಾವಾದಿ ಜೀವಿತಾವಧಿಃ ಪಾನಕರಸ ನ್ಯಾಯೇನ ಚರ್ವ್ಯಮಾಣ.

(ಕಾವ್ಯ ಪ್ರಕಾಶ ೪-೫ ವೃತ್ತಿ)

ಸಹೃದಯನು ನಾಟಕವನ್ನು ಅನುಶೀಲನಮಾಡುವಾಗ, ರಸವು ನಿಷ್ಪತ್ತಿಗೊಂಡು ಕಂಬನಿ, ರೋಮಾಂಚ ಮೊದಲಾದ ಶಾರೀರಕ ಕ್ರಿಯೆಗಳು ತಮ್ಮಷ್ಟಕ್ಕೆ ಆಗುತ್ತವೆ. ಈ ಪ್ರಕಾರದ ಅನುಭವಗಳಿಗೆ ಕವಿಯ ರಸಾನುಭವಗಳೇ ಮೂಲಾಧಾರ.

ಬೇಡನ ಬಾಣದ ಹತಿಯಿಂದ ಕ್ರೌಂಚ ಪಕ್ಷಿಗಳಲ್ಲಿ ಒಂದು ಹತವಾದ ಸನ್ನಿವೇಶವನ್ನು ನೋಡಿದ ವಾಲ್ಮೀಕಿಯ ಹೃದಯಶೋಕದಿಂದ ಉಕ್ಕಿಬಂದ ಮಾತು ಶ್ಲೋಕರೂಪವಾಗಿ ಹೊರಹೊಮ್ಮಿತು. ಆ ಶೋಕಭರದಲ್ಲಿ.

ಮಾನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ।
ಯತ್ ಕ್ರೌಂಚಮಿಥುನಾದೇಕ ಮವಧೀ ಕಾಮಮೋಹಿತಂ॥

(ರಾಮಾಯಣ ೧-೨-೧೫)

ಆದಿಕವಿಯ ಕೃತಿಯಾದ ರಾಮಾಯಣ ಕಾವ್ಯದ ಸೃಷ್ಟಿಗೆ ಈ ಸನ್ನಿವೇಶವೇ ಮೂಲಕಾರಣವು. ಕವಿಯ ರಸಾನುಭಾವದಿಂದ ಈ ಪ್ರಕಾರ ಕಾವ್ಯದ ಸೃಷ್ಟಿಯಾಗುತ್ತದೆ.

ಈ ಪ್ರಕಾರ ಪ್ರತೀತವಾಗುವ ರಸಗಳು ಎಂಟು ಮಾತ್ರ ಎಂದು ಭರತನು ನಿರ್ಧರಿಸಿರುವನು.

ಶೃಂಗಾರ ಹಾಸ್ಯಕರುಣಾ ರೌದ್ರವೀರ
ಭಯಾನಕಾಃ।
ಬೀಭತ್ಸಾದ್ಭುತ ಸಂಜ್ಞಾ ಚೇತ್ಯಷ್ಟೌ
ನಾಟ್ಯೇರಸಾಃ ಸ್ಮೃತಾಃ॥ ೬-೧೬

ಶೃಂಗಾರಕ್ಕೆ ಸ್ಥಾಯಿಭಾವ ರತಿ: ಹಾಸ್ಯಕ್ಕೆ ಹಾಸ; ಕರುಣಕ್ಕೆ ಶೋಕ, ರೌದ್ರಕ್ಕೆ ಕ್ರೋಧ: ವೀರಕ್ಕೆ ಉತ್ಸಾಹ, ಭಯಾನಕಕ್ಕೆ ಭಯ. ಬೀಭತ್ಸಕ್ಕೆ ಜುಗುಪ್ಸೆ ಮತ್ತು ಅದ್ಭುತಕ್ಕೆ ವಿಸ್ಮಯಗಳೆಂಬ ಈ ಎಂಟು ರಸಗಳು ನಾಟ್ಯದಲ್ಲಿ ಪರಿಗಣಿತವಾಗುವ ರಸಗಳಾಗಿವೆ. ಶಾಂತರಸವು ಒಂಭತ್ತನೇ ರಸವಾಗಿ ಪರಿಗಣಿಸಲ್ಪಡಬೇಕಾದರೆ ಎಷ್ಟು ಕಷ್ಟಪರಂಪರೆಗಳಿದ್ದವೆಂಬುದು ೨೪ನೆಯ ಅಧ್ಯಾಯದಲ್ಲಿ ನಿರೂಪಿತವಾಗಿದೆ.

ಕಾವ್ಯದ ಸಾರವಾದ ರಸವು ಅಭಿವ್ಯಕ್ತವಾಗಬೇಕಾದರೆ ಕಾವ್ಯದೆಲ್ಲಾ ವಿಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿರಬೇಕು. ಈ ಪ್ರಕಾರದ ಹೊಂದಿಕೆ ಅಥವಾ ಅನುಗುಣ್ಯವೇ ಔಚಿತ್ಯವು. ಇದು ೨೫ನೇ ಅಧ್ಯಾಯದಲ್ಲಿ ವಿಶದಮಾಡಲ್ಪಟ್ಟಿದೆ.

ಈ ಪ್ರಕಾರ ಕಾವ್ಯದ ಚರಿತ್ರೆ ಮತ್ತು ಮೀಮಾಂಸೆಯು ಈ ಗ್ರಂಥದಲ್ಲಿ ಸುಮನೋಹರವಾಗಿ ಚಿತ್ತಾರ್ಷಣೀಯ ವಾಕ್ಸರಣಿಯಿಂದ ನಿರೂಪಿತವಾಗಿದೆ. ಕನ್ನಡಿಗರೆಲ್ಲರ ಅದರಕ್ಕೆ ಯೋಗ್ಯವಾದ ಉದ್ಗ್ರಥವಿದೆಂದರೆ ಅತಿಶಯವಾಗದು.

* * *

ಕರ್ಮವೀರ, ೨೩.೮.೧೯೫೪

ಕಾವ್ಯವೆಂದರೇನು? ಅದರ ಪ್ರಯೋಜನವೇನು? ಅದರಿಂದ ಸಹೃದಯನಿಗೆ ಮನಃಪ್ರಸಾದವಾಗುವ ಬಗೆ ಹೇಗೆ? ಯಾವ ಕಾವ್ಯವು ಶ್ರೇಷ್ಠ? ಕಾವ್ಯವು ಹೇಗಿರಬೇಕು? ಎಂಬೀ ಕಲಾತ್ಮಕ ಪ್ರಶ್ನೆಗಳ ಜಿಜ್ಞಾಸೆ ಭಾರತದಲ್ಲಿ ಬೆಳೆದಷ್ಟು ಬೇರಾವ ದೇಶದಲ್ಲಿಯೂ ಸಮಾನ ಕಾಲ ಖಂಡದಲ್ಲಿ ಉದ್ಭವಿಸಿದಂತಿಲ್ಲ. ನೂರಾರು ಸ್ವತಂತ್ರ ಗ್ರಂಥಗಳೂ ಅವುಗಳಿಗೆ ಸಾವಿರಗಟ್ಲೆಯಲ್ಲಿ ವಾಖ್ಯಾನಗಳು (ಕಾವ್ಯ ಪ್ರಕಾಶ ಗ್ರಂಥವೊಂದಕ್ಕೇ ೭೦ ವ್ಯಾಖ್ಯಾನಗಳು ದೊರೆತಿವೆ) ಸೇರಿ ಸಂಸ್ಕೃತ ಭಾಷೆಯಲ್ಲಿ ಕಾವ್ಯ ಮೀಮಾಂಸೆಯನ್ನು ಕುರಿತ ಸಾಹಿತ್ಯಸಾಗರವೇ ಇದೆಯೆನ್ನಬಹುದು. ಭಾರತೀಯ ವಿದ್ವಾಂಸರ ಸಹಜ ಸ್ವಭಾವವನ್ನನುಸರಿಸಿ ಕಾವ್ಯ ಕಲೆಯನ್ನು ವಿವೇಚಿಸಿದವರೂ ಕೂದಲೆಳೆಯನ್ನು ಸೀಳುವಂಥ ಸೂಕ್ಷ್ಮಾತಿಸೂಕ್ಷ್ಮ ತರ್ಕಗಳನ್ನು ಮಾಡಿದ್ದಾರೆ. ದರ್ಶನಶಾಸ್ತ್ರದ ಸಾಂಖ್ಯ, ಮೀಮಾಂಸಕ, ವೇದಾಂತ ಮೊದಲಾದ ಶಾಖೆಗಳ ವಿಚಾರ ಪದ್ಧತಿಯೂ ಕಾವ್ಯ ಸ್ವರೂಪ ವಿಚಾರದಲ್ಲಿ ತಮ್ಮ ತಮ್ಮ ಪ್ರಭಾವ ಬೀರಿ ಒಂದೇ ಪ್ರಶ್ನೆಗೆ ಹಲವು ಉತ್ತರಗಳನ್ನು ತಂದುದೂ ಉಂಟು.

ಇಂಥ ಅಗಾಧ ಸಾಹಿತ್ಯ ಶರಧಿಯನ್ನು ಮಥಿಸಿ, ಆಧುನಿಕ ಕಾಲಕ್ಕೆ ಅವಶ್ಯವಾದ ರೀತಿಯಲ್ಲಿ ಈ ಎಲ್ಲ ಚರ್ಚೆಯ ಸಾರ ಸಾಮಗ್ರಿಯನ್ನು ಸಂಗ್ರಹಿಸುವ ಕೆಲಸವನ್ನು

ಪ್ರೊ|| ತೀ.ನಂ. ಶ್ರೀಕಂಠಯ್ಯನವರು ಚೆನ್ನಾಗಿ ಮಾಡಿದ್ದಾರೆ. ಇದು ಭಾರತೀಯ ಕಾವ್ಯಮೀಮಾಂಸೆಯ ಚರಿತ್ರೆಯೂ ಅಲ್ಲ; ಲಕ್ಷಣಶಾಸ್ತ್ರವನ್ನು ಕುರಿತ ಎಲ್ಲ ಅಂಶಗಳನ್ನು ಸಂಗ್ರಹಿಸುವ ರಸ ಅಥವಾ ಅಲಂಕಾರ ಪಠ್ಯಪುಸ್ತಕವೂ ಅಲ್ಲ. ಭಾರತೀಯ ಚಿಂತಕರು ಕಾವ್ಯವನ್ನು ಮತ್ತು ಅದಕ್ಕೆ ಹೊಂದಿ ಕಲಾವ್ಯಾಪಾರವನ್ನು ಕುರಿತು ವಿಚಾರಿಸುತ್ತ ಹೋದಂತೆ ಅದರ ಸ್ವರೂಪದ ಬಗ್ಗೆ ರೂಪುಗೊಂಡ ಕಲ್ಪನೆಯನ್ನು ರೇಖಿಸುವ ಗ್ರಂಥ.

ಲೇಖಕರು ಗ್ರಂಥವನ್ನು ಮೂರುಭಾಗವಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಕಾವ್ಯಶಾಸ್ತ್ರದ ಬೆಳವಣಿಗೆಯನ್ನು ವಿವರಿಸುತ್ತದೆ. ಅದರಲ್ಲಿ ಭರತಮುನಿಯಿಂದ ಜಗನ್ನಾಥಪಂಡಿತ ರಾಜನವರೆಗಿನ ಮುಖ್ಯ ಮುಖ್ಯ ಕಾವ್ಯ ಮೀಮಾಂಸಕರು ಶಾಸ್ತ್ರವನ್ನು ರೂಪುಗೊಳಿಸಿದ ಬಗೆಯನ್ನು ವಿವರಿಸಿದ್ದಾರೆ. ಈ ಕಾವ್ಯಶಾಸ್ತ್ರ ದಿಗ್ಗಜರೆಲ್ಲರಿಗೂ ಕಾವ್ಯಸೌಂದರ್ಯದ ಅರಿವು ಅಂತರಂಗದಲ್ಲಿ ಸರಿಯಾಗಿಯೇ ಇದ್ದಿರಬಹುದಾದರೂ ಧ್ವನ್ಯಾಲೋಕಕಾರನಾದ ಆನಂದ ವರ್ಧನಾಚಾರ್ಯನು ರಸ-ಧ್ವನಿಗಳನ್ನು ಕಾವ್ಯ ಸಿಂಹಾಸನದ ಮೇಲೆ ಕೂರಿಸುವ ವರೆಗೂ ಯಾರಿಗೂ ಕಾವ್ಯವನ್ನು ಸುಂದರವಾಗಿ ಮಾಡುವಂಥ ನಿಜವಾದ ಕಾರಣ ಯಾವುದೆಂಬುದನ್ನು ಬೊಟ್ಟಿಟ್ಟು ತೋರಿಸಲು ಸಾಧ್ಯವಾಗಿರಲಿಲ್ಲ. ಧ್ವನಿತತ್ವಸ್ಥಾಪನೆಯಿಂದ ಶಾಸ್ತ್ರದಲ್ಲಿ ಒಂದು ಕ್ರಾಂತಿಯಾಯಿತಲ್ಲದೆ ಬಹಳ ಮಟ್ಟಿಗೆ ಕಾವ್ಯವೆಂದರೇನೆಂಬ ಬಗ್ಗೆ ಚರ್ಚೆಯೂ ಮುಕ್ತಾಯವಾಗಿ ಪರಿಷ್ಕಾರ ಪ್ರಾರಂಭವಾಯಿತು.

ಹೀಗೆ ಪ್ರತಿಷ್ಠಿತವಾದ ರಸ-ಧ್ವನಿ-ಔಚಿತ್ಯಗಳ ಕಲ್ಪನೆಯೇ ನಮ್ಮ ಕಾವ್ಯ ಮೀಮಾಂಸೆಯ ತಿರುಳು. ಇದರ ಮೇರೆಗೆ ಕಾವ್ಯವೆಂದರೇನು, ಅದರ ಆಕರವಾವುದು, ಪರಿಕರಗಳಾವುವು, ಕವಿ ಸೃಷ್ಟಿಗೂ ಲೌಕಿಕಕ್ಕೂ ಇರುವ ಅಂತರವೇನು, ಕಾವ್ಯ ಪ್ರಯೋಜನವೇನು ಇತ್ಯಾದಿ ಪ್ರಶ್ನೆಗಳನ್ನು ಎರಡನೇ ಭಾಗದಲ್ಲಿ ಚರ್ಚಿಸಿದೆ.

ಮೂರನೇ ಭಾಗವು ರಸ ಧ್ವನಿಗಳನ್ನು ವಿವರಿಸುತ್ತದೆ. ಶಬ್ದ ಅರ್ಥಗಳ ಸಂಬಂಧ ಮತ್ತು ರಚನೆ, ವ್ಯಂಜನಾ ವ್ಯಾಪಾರವೆಂಬ ಶಬ್ದವ್ಯಾಪಾರವು ಉಂಟಾಗುವ ಬಗೆ, ಧ್ವನಿಪ್ರಭೇದಗಳು, ರಸಗಳು, ರಸಾನುಭವವಾಗುವ ಬಗೆ ಹೇಗೆ ಮೊದಲಾದ ಗಹನ ತಾತ್ವಿಕ ವಿಚಾರಗಳನ್ನು ಅದು ಒಳಗೊಡಿದೆ. ಯೋಗ್ಯವಾದ ಉದಾಹರಣೆಗಳು ವಿಷಯಗ್ರಹಣಕ್ಕೆ ನೆರವಾಗುತ್ತದೆ.

ಕೊನೆಗೆ ಪರಿಶಿಷ್ಟದಲ್ಲಿ ಕನ್ನಡದಲ್ಲಿರುವ ಕಾವ್ಯಲಕ್ಷಣಗ್ರಂಥಗಳ ಪರಿಚಯವಿದೆ. ಸಂಸ್ಕೃತದಲ್ಲಿ ಹುಟ್ಟಿದ ಲಕ್ಷಣಗ್ರಂಥಗಳ ಮಾನದಿಂದ ಕನ್ನಡದವು ಅಲ್ಪ, ಹೆಚ್ಚು ಕಡಿಮೆ ಸಂಸ್ಕತೋಪಜೀವಿ ಮತ್ತು ಎಷ್ಟೋ ವೇಳೆ ತೀರ ಹಿಂದುಳಿದ ವಿಚಾರಗಳನ್ನೇ ಒಳಗೊಂಡಂಥವು. ಆದರೆ ಕನ್ನಡ ಇದಕ್ಕಾಗಿ ನಾಚಬೇಕಾಗಿಲ್ಲ; ಭಾರತದ ಎಲ್ಲ ದೇಶಭಾಷೆಗಳ ವಿಚಾರವೂ ಹೀಗೆಯೆ.

ಶ್ರೀಕಂಠಯ್ಯನವರು ವಿಶಾಲ ದೃಷ್ಟಿಯಿಂದ, ಯಾವುದೊಂದು-ಧ್ವನಿಪಕ್ಷದವರದು ಕೂಡ-ವಿಶಿಷ್ಟ ಪಂಥಕ್ಕೆ ಕಟ್ಟುಬೀಳದೆ, ವಿಚಾರ ವಿಮರ್ಶೆ ಮಾಡಿದ್ದಾರೆ. ಧ್ವನಿವಿರೋಧಿಗಳ ಬಲವತ್ತರವಾದ ವಾದಗಳಿದ್ದಲ್ಲಿ ಅವುಗಳ ಸಾಮಂಜಸ್ಯವನ್ನು ಒಪ್ಪಿಕೊಂಡು ಸಾಧ್ಯವಾದಲ್ಲಿ

ದಿಕ್ಕನ್ನು ತೋರಿಸಿದ್ದಾರೆ. ಅವರ ನಿರೂಪಣೆ ಸರಳವೂ ವ್ಯವಸ್ಥಿತವೂ ಆಗಿದೆ. ಕಾವ್ಯಶಾಸ್ತ್ರದ ಅಭ್ಯಾಸಿಗಳಿಗೆ ಅತ್ಯಗತ್ಯವಾದ ಗ್ರಂಥವಿದು.

(ಈ ಲೇಖನದ ಕರ್ತೃ ಯಾರು ಎನ್ನುವುದು ನಮೂದಿತವಾಗಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ –ಸಂಪಾದಕ)

* * *

ಕೆ.ವಿ. ಪುಟ್ಟಪ್ಪ ಗ್ರಂಥದ ಮುನ್ನುಡಿಯಲ್ಲಿ

ಮುಂಬರಲಿರುವ ಕನ್ನಡ ಕಾವ್ಯಮೀಮಾಂಸೆಯ ಮತ್ತು ಸಾಹಿತ್ಯ ವಿಮರ್ಶೆಯ ಸಾಹಸಕ್ಕೆ ಶ್ರೀಮಾನ್ ಶ್ರೀಕಂಠಯ್ಯನವರು ಸುಸಮರ್ಥವೂ ಮಾರ್ಗದರ್ಶಕವೂ ಆಗಿರುವ ಒಂದು ಆಚಾರ್ಯ ಕೃತಿಯನ್ನು ಒದಗಿಸಿದ್ದಾರೆ, ಈ "ಭಾರತೀಯ ಕಾವ್ಯಮೀಮಾಂಸೆ"ಯಲ್ಲಿ.

* * *

ವಿ.ಕೃ. ಗೋಕಾಕ್ 'ಪಂಪ ಪ್ರಶಸ್ತಿ' ಪ್ರದಾನ ಸಂದರ್ಭದಲ್ಲಿ

ಒಟ್ಟಾರೆ, ಬರಿ ಅಲಂಕಾರಶಾಸ್ತ್ರವನ್ನಲ್ಲ – ಕಾವ್ಯಮೀಮಾಂಸೆಯನ್ನೇ ಪುಟ್ಟಪೂರ ಕೆದಕಿ ನೋಡಿ ಅದರದೊಂದು ಪ್ರೌಢ, ರಮ್ಯ ಇಡೀ ನೋಟವನ್ನು ಮೂಡಿಸಿ ಅದರ ಮೇಲೆ ಒಂದು ವ್ಯಕ್ತಿತ್ವದ ಮುದ್ರೆಯೊತ್ತಿ ಮೂಡಣದ ದೃಷ್ಟಿಗೆ ಪಡುವಣದ ದೃಷ್ಟಿಯ ಸಂಪರ್ಕ ಸೂಚಿಸಿ, ಪ್ರಾಚೀನ, ಅರ್ವಾಚೀನ, ಸಮಕಾಲೀನ ಪ್ರಜ್ಞೆಗಳನ್ನು ಸಮನ್ವಯಿಸಿ,..... ಒಂದು ವ್ಯಾಪಕ, ಮಹತ್ವದ ವಿಷಯವಾದ ಕಾವ್ಯವನ್ನೆತ್ತಿ, ಕಾವ್ಯವ್ಯಾಪಾರವನ್ನೆಲ್ಲ ಲೀಲಾಜಾಲವಾಗಿ ಗ್ರಹಿಸಿ, ವಿದ್ವತ್ತು – ಸೃಜನಶೀಲತೆಗಳು ಅವಿರಳವಾಗಿ ಬೆರೆತ ಇಂಥದೊಂದು ಹೆಡೆಮಣಿಯಂತಹ ಕೃತಿಯನ್ನು ರಚಿಸುವುದೆಂದರೆ ಅದೊಂದು ಪವಾಡವೇ ಸರಿ.

* * *

ದೇ. ಜವರೇಗೌಡ "ತೀನಂಶ್ರೀ" ಪುಸ್ತಕದಲ್ಲಿ

ಪ್ರತಿಭೆ ಪಾಂಡಿತ್ಯಗಳೆರಡೂ ಏಕತ್ರ ಸಂಗಡಿಸಿರುವ ಕೆಲವೇ ಕೆಲವು ವ್ಯಕ್ತಿಗಳಲ್ಲಿ ತೀನಂಶ್ರೀ ಒಬ್ಬರು. ಅವರು ಬರೆದದ್ದು ಸ್ವಲ್ಪ. ಆದರೆ ಬರೆದದ್ದೆಲ್ಲಾ ಗಟ್ಟಿ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅವರ ಕೀರ್ತಿಯ ಗೆಲ್ಗಂಬಗಳಾಗಿ ಅವರ ವೈಶಿಷ್ಟ್ಯಕ್ಕೆ ತೋರ್ಬೆರಳಾಗಿ ನಿಲ್ಲುವಂತಹ ಪ್ರಥಮ ಶ್ರೇಣಿಯ ಕೃತಿಯೆಂದರೆ 'ಭಾರತೀಯ ಕಾವ್ಯಮೀಮಾಂಸೆ'. ಅದು ಭಾರತೀಯ ಕಾವ್ಯಮೀಮಾಂಸೆಯೆಂತೋ ಕನ್ನಡ ಕಾವ್ಯಮೀಮಾಂಸೆಯೂ ಹೌದು. ಸಂಸ್ಕೃತದ ಅಲಂಕಾರ ಗ್ರಂಥಗಳಿಗೆ ಇದು ಕನ್ನಡದ ವ್ಯಾಖ್ಯಾನವಾಗಿದೆ. ವಿಷಯಸಂಗ್ರಹ, ವಿಷಯ ಪ್ರತಿಪಾದನೆ ಮತ್ತು ಪ್ರಮುಖ ಸಂಗತಿಗಳ ವ್ಯಾಖ್ಯಾನದಲ್ಲಿ ಅವರ ಜಾಣ್ಮೆ ಮತ್ತು ಸಾಮರ್ಥ್ಯಗಳು ಎದ್ದು ಕಾಣುತ್ತಿವೆ. ಲಕ್ಷ್ಯ ಪದ್ಯಗಳ ಆಯ್ಕೆಯಲ್ಲಂತೂ ಅವರ ನಿಶಿತಮತಿಯೂ ರಸಜ್ಞತೆಯೂ ಗೋಚರವಾಗುತ್ತವೆ.

ಒಳಹೊಕ್ಕು ನೋಡಿದಾಗ ಆ ಕೃತಿ ಶಂಕರ ರಾಮಾನುಜ ಮಾಧ್ವರ ಭಾಷ್ಯಗಳಂತೆ ಸ್ವತಂತ್ರವಾಗಿ ಕಾಣುತ್ತದೆ. ಬಹುಶಃ ಆಧುನಿಕ ಭಾರತೀಯ ಸಾಹಿತ್ಯ ಇತಿಹಾಸದಲ್ಲಿಯೇ ಇದೊಂದು ಅಪೂರ್ವ ಕೃತಿಯೆನ್ನಬಹುದು.

* * *

ಜಿ.ಎಸ್. ಶಿವರುದ್ರಪ್ಪ ‘ಶ್ರೀಕಂಠತೀರ್ಥ’ದ ಲೇಖನದಿಂದ

ಈ ಕೃತಿ ಒಂದೂವರೆ ಸಾವಿರ ವರ್ಷಕ್ಕೂ ಮೀರಿದ ಇತಿಹಾಸವುಳ್ಳ ಕಾವ್ಯಮೀಮಾಂಸೆಯನ್ನು ಕನ್ನಡದಲ್ಲಿ ಅಡಕವಾಗಿ ಪರಿಚಯಮಾಡಿಕೊಡುವ ಸಾಹಸದ ಪರಿಣಾಮವಾಗಿದೆ. ಕಾಲದಿಂದ ಕಾಲಕ್ಕೆ ಈ ಶಾಸ್ತ್ರದ ಚರಿತ್ರೆಯಲ್ಲಿ ಅದರ ಮುಖ್ಯವಾದ ಬೆಳವಣಿಗೆಯ ಘಟ್ಟಗಳು, ಈ ಬೆಳವಣಿಗೆಗೆ ಕಾರಣರಾದ ಅಲಂಕಾರಿಕರು ಮತ್ತು ಅಲಂಕಾರ ಗ್ರಂಥಗಳು, ಇವುಗಳಲ್ಲಿ ನಡೆದ ಚರ್ಚೆ–ಪ್ರತಿಚರ್ಚೆ, ಸಿದ್ಧಾಂತಗಳು, ವ್ಯಕ್ತಿ ವಿಶಿಷ್ಟವಾದ ಕೊಡುಗೆಗಳು–ಇವೆಲ್ಲವನ್ನೂ ಹದವರಿತು ಪರಿಚಯ ಮಾಡಿಕೊಡುವುದರ ಜತೆಗೆ, ಭಾರತೀಯ ಕಾವ್ಯಮೀಮಾಂಸೆಯ ನಿಜವಾದ ಸಾರವನ್ನು ತೌಲನಿಕ ದೃಷ್ಟಿಯಿಂದಲೂ ವಿವೇಚನೆ ಮಾಡಿರುವ ಪ್ರಯತ್ನ ವಿಶೇಷ ರೀತಿಯದು. ಒಂದೆಡೆ ತೀನಂಶ್ರೀಯವರು ‘ರಸ–ಧ್ವನಿ–ಔಚಿತ್ಯ : ಇದೇ ಕಾವ್ಯ ಗಾಯತ್ರಿ’–ಎನ್ನುತ್ತಾರೆ. ಈ ಗಾಯತ್ರಿಗೆ ತೀನಂಶ್ರೀಯವರು ಬರೆದ ಭಾಷ್ಯವೇ ಅವರ ‘ಭಾರತೀಯ ಕಾವ್ಯಮೀಮಾಂಸೆ.’

\- - - - - -

ಶ್ರೀಕಂಠಯ್ಯನವರ ‘ಭಾರತೀಯ ಕಾವ್ಯಮೀಮಾಂಸೆ’ಯನ್ನು ಓದಿ ಮುಗಿಸಿದಾಗ, ಇದೊಂದು ಅಪೂರ್ವ ವಿದ್ವತ್ ಸಾಹಸ ಎಂದು ಯಾರಿಗಾದರೂ ಅನ್ನಿಸುತ್ತದೆ. ‘ಭಾರತೀಯ ಕಾವ್ಯಮೀಮಾಂಸೆ’ಯ ಬಗೆಗೆ ಅದನ್ನು ಸಾವಿರ ವರ್ಷಗಳ ಕಾಲ ಬೆಳೆಯಿಸಿದ ಮೇಧಾವಿಗಳ ಸಾಧನೆಯ ಬಗೆಗೆ ಗೌರವ ಹುಟ್ಟುವುದಲ್ಲದೆ ಇಂಥ ಅರಿವಿಲ್ಲದೆ ಹೋದರೆ ಆಧುನಿಕ ಸಾಹಿತ್ಯ ವಿಮರ್ಶಕರಿಗೆ ಆಗುವ ನಷ್ಟ ಎಷ್ಟೆಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ. ಶ್ರೀಕಂಠಯ್ಯನವರ ಅಗಾಧವಾದ ವಿದ್ವತ್ತು, ಸಂಶೋಧಕನ ದೃಷ್ಟಿ, ವಿಮರ್ಶನ ಶಕ್ತಿ, ‘ಪಾಂಡಿತ್ಯಕ್ಕೆ ಪರಿಮಳವನ್ನು ಕಟ್ಟುವ ರಸಿಕತೆ’, ಅಕೃತಕವಾದ, ನಿಷ್ಪಕ್ಷವಾದ ನಿರೂಪಣೆ, ಇವೆಲ್ಲ ಗುಣಗಳಿಂದ ‘ಭಾರತೀಯ ಕಾವ್ಯಮೀಮಾಂಸೆ’ ಖಂಡಿತವಾಗಿಯೂ ಒಂದು ‘ಆಚಾರ್ಯಕೃತಿ’ (Masterpiece) ಎಂಬ ಪ್ರಶಂಸೆಗೆ ಅರ್ಹವಾಗಿದೆ.

* * *

ಪತ್ರಗಳು

D.V. Gundappa Oct 06, 1953

Our good friend Mr. Krishnacharya delivered at my place 4 or 5 days ago the copy of ಭಾರತೀಯ ಕಾವ್ಯಮೀಮಾಂಸೆ which you so kindly sent to me. Need I say I am very grateful? I at once dipped into the book here and there: so great was my eagerness to have a taste of it. May I say I was at once gripped by the mastery with which you have handled the topics? All that your friends have associated with you is there - learning and insight and critical acumen and thoroughness of inquiry. I feel sure all who care for literature and would understand its true nature will value your work. Let me thank you as well as congratulate you.

* * *

ಮಾಸ್ತಿ ವೆಂಕಟೇಶ ಅಯ್ಯಂಗಾರ್ ೦೫-೧೦-೧೯೫೩

ನೀವು ಪ್ರೀತಿಯಿಂದ ಕಳುಹಿಸಿದ ಕಾವ್ಯಮೀಮಾಂಸೆ ಗ್ರಂಥ ಮುಟ್ಟಿತು. ನಿಮ್ಮ ಎಲ್ಲ ಕೆಲಸದಂತೆ ಇದು ನಿಮ್ಮ ಪ್ರತಿಭೆಯನ್ನು, ವಿಸ್ತಾರವಾದ ಓದನ್ನು, ಹರಿತವಾದ ಅಲೋಚನೆಯನ್ನು ಪ್ರಕಟಿಸುತ್ತದೆ. ಅಲ್ಪಶ್ರುತರಾದ ನಮ್ಮಂಥ ಜನರಿಗೆ ಇದರಿಂದ ಆಗುವ ಸಹಾಯ ಎಷ್ಟೆಂದು ಹೇಳಿ ಮುಗಿಸುವಂತಿಲ್ಲ.

ಸಾವಕಾಶವಾಗಿಯಾದರೂ ಪುಸ್ತಕ ಹೊರಕ್ಕೆ ಬಂದದ್ದು ತುಂಬ ಸಂತೋಷ. ನೀವು ನಿಮ್ಮ ಕಾವ್ಯಾನುಭವವನ್ನು ಕವಿತೆ ಕತೆಯಾಗಿ ಬರೆಯದೆ ಇದ್ದೀರಲ್ಲಾ ಎಂದು ನನಗೆ ಎಂದೂ ಬಂದ ಕೊರೆ. ಕವಿತೆ ಕತೆಯನ್ನು ಬರೆಯದೆ ಇದ್ದರೂ ಅಷ್ಟೇ ಸ್ವತಂತ್ರವಾದ ವಿಚಾರಧಾರೆಗಾದರೂ ಹೀಗೆ ರೂಪುಕೊಟ್ಟರೆ ಇಂದಿನ ಹಾಗೆಯೇ ಮುಂದೆ ಬರುವ ಲೇಖಕ ಕುಲಕ್ಕೆ ಸಹಾಯವೇ ಸರಿ.

ನಮ್ಮ ನುಡಿ ನಮ್ಮ ಜನ ಬಹುಕಾಲ ನಿಮ್ಮಿಂದ ಇಂಥ ಸೇವೆ ಬಹಳವಾಗಿ ಪಡೆಯುವಂತೆ ದೇವರು ಅನುಗ್ರಹಿಸಲಿ.

* * *

M. Govinda Pai 28-12-1953

I apologize to you for the very long delay in writing you about your book, ಭಾರತೀಯ ಕಾವ್ಯಮೀಮಾಂಸೆ. The delay must seem inexcusable as well as unconscionable, if you would not be told the truth about it. I was all the while in no mood to read or write or do anything of a serious nature........ The mood now seems to be slowly receding, and I am writing this letter to you. I have read your book. In one word it is a superb work. There cannot be two opinions about it. It is said that when the great French writer Voltaire was asked his opinion on the dramas of the great French dramatist Racine, he said the word 'superb' must be written at the bottom of every page of them. That is exactly what I felt when I read your great work ಭಾರತೀಯ ಕಾವ್ಯಮೀಮಾಂಸೆ.

God bless you and yours!

* * *

ಫ.ಗು. ಹಳಕಟ್ಟಿ ೧೧-೦೯-೧೯೫೩

ಅನೇಕ ನಮಸ್ಕಾರಗಳು. ಮೈಸೂರು ವಿಶ್ವವಿದ್ಯಾಲಯದವರು ತಾವು ಸಿದ್ಧಪಡಿಸಿದ 'ಭಾರತೀಯ ಕಾವ್ಯಮೀಮಾಂಸೆ' ಈ ಗ್ರಂಥವನ್ನು ನನ್ನ ಕಡೆಗೆ ಕಳಿಸಿದ್ದಾರೆ. ಅದು ಮಹತ್ವದ ಗ್ರಂಥವಾಗಿದೆ. ಇಂಥ ಗ್ರಂಥವನ್ನು ತಾವು ಸಿದ್ಧಪಡಿಸಿದ್ದು ಅತ್ಯಂತ ಅಭಿನಂದನೀಯವು. ಅದನ್ನು ನಾನು ಓದಿ ಪುನಃ ತಮಗೆ ಬರೆಯಲಪೇಕ್ಷಿಸುತ್ತೇನೆ.

ಮಮತೆ ಇರಲಿ.

* * *

ಶ್ರೀ ಪೇಜಾವರ ಮಠದ ವಿಶ್ವೇಶತೀರ್ಥ ಶ್ರೀಪಾದಂಗಳವರು ೨೭-೦೮-೧೯೫೩

ನೀವು ಕಳುಹಿಸಿರುವ ಕಾವ್ಯಮೀಮಾಂಸೆಯು ತಲುಪಿ ಬಹಳ ಆನಂದವಾಗಿದೆ. ನೀವು ವಿಶ್ವಾಸದಿಂದ ಕಳುಹಿಸಿರುವ ಈ ಪುಸ್ತಕವನ್ನು ಅಭಿನಂದನಪೂರ್ವಕವಾಗಿ ಆನಂದದಿಂದ ಸ್ವೀಕರಿಸುವೆನು. ನಿಮ್ಮ ಈ ನೂತನ ಉಜ್ವಲ ಕೃತಿಯು ಲೋಕಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಈ ಪುಸ್ತಕವನ್ನು ಓದಿದ ನಂತರ ಹೆಚ್ಚಿನ ಅಭಿಪ್ರಾಯವನ್ನು ಬರೆಯುವೆನು. ಅಂತೂ ನಿಮ್ಮ ಈ ಸಾಹಿತ್ಯ ಸೇವಾಯಜ್ಞವು ಹೀಗೆಯೇ ಮುನ್ನಡೆಯಲಿ.

ಇತಿ ನಾರಾಯಣ ಸ್ಮರಣೆಗಳು.

* * *

ಆರ್.ಎಲ್. ನರಸಿಂಹಯ್ಯ ೨೭-೧೧-೧೯೫೩

ನಿಮ್ಮ 'ಭಾರತೀಯ ಕಾವ್ಯಮೀಮಾಂಸೆ' ಬಂತು, ದೀಪಾವಳಿಯ ಶುಭಸಂದೇಶವೂ ಬಂದಿತು, 'ಒಲುಮೆ'ಯೂ ನಿನ್ನೆ ನನ್ನ ಕೈಸೇರಿತು. ಆದರೂ ನಿಮಗೆ ಇನ್ನೂ ಉತ್ತರ ಬರೆಯದಿದ್ದಕ್ಕಾಗಿ ನಿಮ್ಮ ಕ್ಷಮಾಪಣೆಯನ್ನು ಕೇಳಬೇಕೆನ್ನಿಸುವುದಿಲ್ಲ. ಏಕೆಂದರೆ ನಿಮ್ಮಿಂದ ಕಾಗದವೇ ಬಂದಿಲ್ಲ, ಮನುಷ್ಯನಿಗೆ ಎಷ್ಟು ದೊರೆತರೂ ತೃಪ್ತಿಯಾಗುವುದಿಲ್ಲವೇ?

ಇರಲಿ; ನಿಮ್ಮ 'ಕಾವ್ಯಮೀಮಾಂಸೆ' ನನ್ನ ಕೈಸೇರಿದ್ದು ಈ ರೀತಿ. ಒಂದು ದಿನ ಬೆಳಿಗ್ಗೆ ಎಲ್ಲೆಲ್ಲಿಯೋ ಅಲೆದು ಮನೆಗೆ ೧೨ ಘಂಟೆಗೆ ಬಂದೆ. ನನ್ನ ಕುರ್ಚಿಯ ಪಕ್ಕದಲ್ಲಿಯೇ ಷೆಲ್ಫ್ ಮೇಲೆ ಕೈಯಿಟ್ಟಾಗ ಒಂದು ಪುಸ್ತಕ ಸಿಕ್ಕಿತು. ಆ ಕ್ಷಣದಲ್ಲಿ ಅದನ್ನು ನನ್ನ ಹತ್ತಿರ ಇದ್ದ 'ವ್ರತರಾಜ' ಎಂದು ಕೊಂಡೆ. ಇದು ಇಲ್ಲಿ ಏಕೆ ಬಂತು ಎಂದುಕೊಳ್ಳುವಷ್ಟರಲ್ಲಿಯೇ ಪುಸ್ತಕ 'ವ್ರತರಾಜ'ವಲ್ಲವೆಂದು ಮನಸ್ಸಿಗಂಟಿತು. ಅಲ್ಲಿಂದಲೇ ಈ ಪುಸ್ತಕ ಯಾವಾಗ ಬಂತು ಯಾರು ತಂದುಕೊಟ್ಟರು ಎಂದು ಒಳಗೆ ಕೇಳಿಸುವಂತೆ ಕೂಗಿಕೊಂಡೆ. ಅಲ್ಲಿಂದ ಉತ್ತರ ಬರುವುದರೊಳಗೆ ಅಕಸ್ಮಾತ್ತಾಗಿ ಪುಸ್ತಕ 'ಅನುಕ್ತಿ' ಪ್ರಸಂಗದಲ್ಲಿ ತೆಗೆದುಕೊಂಡಿದ್ದು ನನ್ನ ಕಣ್ಣಿಗೆ ಬಿತ್ತು. ಮುಂದಿನ ಮೂರು ಪುಟಗಳನ್ನು ಓದುವಷ್ಟು ಕಾಲ ಜಗತ್ತನ್ನು ನಾನು ಮರೆತಿದ್ದೆ.

ಆ ಮೂರು ಪುಟ ಓದಿದ್ದಾದ ಮೇಲೆ ಕಾವ್ಯಮೀಮಾಂಸೆಯು ವ್ರತರಾಜದ ಹಾಗೆ ಕಾಣುತ್ತದೆಯಲ್ಲ ಎಂದು ನನಗೆ ಬಹಳ ಸಂಕಟವಾಯಿತು. ಪುಸ್ತಕವನ್ನು ತಿರುಗಿ ನಾನು ಓದಲಿಲ್ಲ. ಆದಿನ ಊಟವಾದ ಮೇಲೆ ಅದೇ ಮಧ್ಯಾಹ್ನ ೪ ಘಂಟೆಗೆ ಬಿ.ಬಿ.ಡಿ. ಪವರ್‌ಪ್ರೆಸ್‌ಗೆ ಹೋಗಿ ನಿಮ್ಮ ಪುಸ್ತಕಕ್ಕೆ ಸುಂದರವಾದ ಕವಚ ತೊಡಿಸಬೇಕೆಂದು ಪ್ರೆಸ್ ಯಜಮಾನರಿಗೆ ಹೇಳಿಬಂದೆ. ಅವರು ೧೦ ದಿನಗಳಾದ ಮೇಲೆ ನನಗೆ ಸಾಲಂಕೃತ ಪುಸ್ತಕವನ್ನು ಕಳಿಸಿಕೊಟ್ಟರು. ತಡ ಇಷ್ಟೇಕೆ ಎಂದು ನಾನು ಅವರನ್ನು ಪ್ರಶ್ನಿಸಲಿಲ್ಲ.

ಈಗ ನಿಮ್ಮ ಪುಸ್ತಕದ ಬಹುಭಾಗವನ್ನು ಓದಿ ಸಂತೋಷಪಟ್ಟಿದ್ದೇನೆ. ಇಬ್ಬರು ನರಸಿಂಹಾಚಾರ್ಯರೂ ನಿಮ್ಮ ಗ್ರಂಥವನ್ನು ಮೆಚ್ಚಿಕೊಂಡು ನಿಮಗೆ ಕಾಗದ ಬರೆದಿದ್ದಾದ ಮೇಲೆ ನನ್ನಂಥವನು ಪುಸ್ತಕವನ್ನು ಪ್ರಶಂಸಿಸಿ ಏನು ಪ್ರಯೋಜನ? ನೀವು ಉಪಯೋಗಿಸಿರುವ ಅನೇಕ ಹೊಸ ಶಬ್ದಗಳಲ್ಲಿ (ನನಗೆ ಹೊಸತು ಇತರರಿಗಲ್ಲದಿದ್ದರೂ) "ಸುಕುಮಾರ ಮತಿ" ಎಂಬುದು ನನಗೆ ಬಹಳ ರಮ್ಯವಾಗಿ, ಬಹಳ ಉಚಿತವಾಗಿ ಕಾಣುತ್ತದೆ. ಅದೂ ಸಂಸ್ಕೃತ ಕಾವ್ಯಮೀಮಾಂಸಾ ಶಾಸ್ತ್ರದ ಪರಿಭಾಷೆಗೆ ಸೇರಿದ್ದೋ ಇಲ್ಲ ಶ್ರೀಕಂಠಯ್ಯ ಕೃತವೋ? 'ಭಾವ, ವಿಭಾವ, ಅನುಭಾವ'ಗಳ ಅಧ್ಯಾಯ ಬಹಳ ಗಂಭೀರವಾಗಿ, ಶಾಸ್ತ್ರೀಯವಾಗಿ ನನಗೆ ತೋರುತ್ತದೆ. ನಿಮ್ಮ ಗ್ರಂಥ ಓದಿದ ಮೇಲೆ ಕಾವ್ಯಮೀಮಾಂಸೆಯನ್ನು ಪುರಾತನ ಭಾರತೀಯರು ಎಷ್ಟು ಆಳವಾಗಿ ಅಭ್ಯಸಿಸಿದ್ದರೆಂದು ನನಗೆ ತಿಳಿಯಿತು. ನಾವು ಅತ್ಯಾಧುನಿಕ ತತ್ತ್ವಗಳೆಂದು ತಿಳಿದುಕೊಂಡಿರುವ ಸಂಗತಿಗಳನ್ನೆಲ್ಲ ಅವರು ಶೋಧಿಸಿ ಒಂದು ಹದವಾದ ನಿರ್ಣಯಕ್ಕೆ ಬಂದಿದ್ದರೆಂದು ಕಾಣುತ್ತದೆ.

* * *

ಗೊರೂರು ರಾಮಸ್ವಾಮಿ ಅಯ್ಯಂಗಾರ್ ೦೧-೧೦-೧೯೫೩

ನಿಮ್ಮ ಹಸ್ತಾಕ್ಷರ ನೋಡಿ ಬಹಳ ಖುಷಿಯಾಯಿತು. ಧಾರವಾಡದ ಮಂದಿ ನಿಮ್ಮನ್ನು ಪೂರ್ತಾ ನುಂಗಿಬಿಟ್ಟು, ನಮ್ಮನ್ನೆಲ್ಲ ನೀವು ಮರೆತೇಬಿಟ್ಟಿರೆಂದು ಭಾವಿಸಿದ್ದೆ.

ಪುಸ್ತಕ ನಿಜವಾಗಿ ಚೆನ್ನಾಗಿದೆ. ಕೆಲವು ಭಾಗ ಪಿಟಿ ಮನೆಯಲ್ಲಿ ಅವನು ಎಲ್ಲಿಂದಲೋ ತಂದಿಟ್ಟುಕೊಂಡಿದ್ದ ಒಂದು ಪ್ರತಿಯಲ್ಲಿ ಹಿಂದೆ ಓದಿದ್ದೆ. ನಿಧಾನವಾಗಿ ನಿತ್ಯ ೧೦-೧೨ ಪುಟ ಓದುತ್ತೇನೆ. ನನಗೆ ಬಂದಿರುವ ಪ್ರತಿಯಲ್ಲಿ ೨-೩ ಬಗೆಯ ಕಾಗದ ಇದೆ. ಎಲ್ಲವುಗಳಲ್ಲಿಯೂ ಹಾಗೆಯೇ ಇದೆಯೇ? ಹೇಗಾದರೂ ಆಗಲಿ, ಪುಸ್ತಕ ಸರ್ಕಾರ ಹೊರಕ್ಕೆ ತಂದಿತಲ್ಲ.

('ಭಾರತೀಯ ಕಾವ್ಯಮೀಮಾಂಸೆ' ಗ್ರಂಥದ ಮುದ್ರಣದಲ್ಲಿ ಬಳಸಿರುವ ವಿವಿಧ ಬಗೆಯ ಕಾಗದ ನೋಡಿದರೆ, ಭದ್ರಾವತಿ ಕಾಗದ ಕಾರ್ಖಾನೆಯ ಕಾಗದ ಉತ್ಪತ್ತಿಯ ಇತಿಹಾಸ ಗೊತ್ತಾಗುತ್ತದೆ ಎಂದು ಶ್ರೀ ಎಸ್.ವಿ. ಪರಮೇಶ್ವರ ಭಟ್ಟರು ಹೇಳಿದ್ದರಂತೆ! -ಸಂಪಾದಕ)

* * *

ಎಂ.ವಿ. ಸೀತಾರಾಮಯ್ಯ ೦೩-೧೦-೧೯೫೩

ನಿಮ್ಮ ೨೬-೦೯-೫೩ ರ ಕಾಗದವೂ, ಪ್ರೀತಿಯ ಆಶೀರ್ವಾದಗಳೊಡನೆ ಕಳಿಸಿಕೊಟ್ಟಿರುವ 'ಭಾರತೀಯ ಕಾವ್ಯಮೀಮಾಂಸೆ'ಯ ಪ್ರತಿಯೂ ತಲುಪಿದವು. ಬಳ್ಳಾರಿ ಮೈಸೂರಿಗೆ ಸೇರಿದ ಶುಭದಿನದ ಬೆಳಗ್ಗೆ ಒಸಗೆಯುಡುಗೊರೆಯೋ ಎಂಬಂತೆ ಶ್ರೀ. ಟಿ.ಪಿ. ಕೃಷ್ಣಾಚಾರ್ ಅವರು ಗ್ರಂಥಪ್ರತಿಯನ್ನು ತಂದು ಕೈಗಿತ್ತರು. ಆಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಎಲ್ಲ ಕನ್ನಡಿಗರ ಮಾತು ಹಾಗಿರಲಿ: ನನ್ನಂಥ ಸಂಸ್ಕೃತದ ಪರಿಶ್ರಮವಿಲ್ಲದ ಆಜೀವ ವಿದ್ಯಾರ್ಥಿಗಳಿಗೆ ನಿತ್ಯೋಪಯುಕ್ತವಾದ ಗ್ರಂಥವಿದು. 'ಕನ್ನಡ ಕೈಪಿಡಿ'ಯೊಂದಿಗೆ ಸದಾ ಕೈಚಾಚಿನಳತೆಯಲ್ಲೇ ಇರಬೇಕಾದ ಅಮೂಲ್ಯ ಕೃತಿ...... ಗ್ರಂಥವನ್ನು ಇದೇ ತಾನೇ ಆಸಕ್ತಿಯಿಂದ ಓದತೊಡಗಿದ್ದೇನೆ.

* * *

ಸ.ಸ. ಮಾಳವಾಡ ೧೩-೦೮-೧೯೫೩

ತಾವು ವಿಶ್ವಾಸದಿಂದ ಕಳುಹಿಸಿದ 'ಭಾರತೀಯ ಕಾವ್ಯಮೀಮಾಂಸೆ' ಗ್ರಂಥದ ಪ್ರತಿಗಾಗಿ ಕೃತಜ್ಞನಾಗಿದ್ದೇನೆ.

ಸಂತೋಷ. ಬಹುದಿನಗಳಿಂದ ನಿರೀಕ್ಷಿಸಿದ್ದ ಈ ಹೊತ್ತಗೆ ಒಮ್ಮೆ ಹೊರಗೆ ಬಂದುದಾಯಿತು. ಪ್ರೊ. ಪುಟ್ಟಪ್ಪನವರನ್ನು ಕಂಡಾಗಲೆಲ್ಲ ಅವರು ನನ್ನೊಂದಿಗೆ ಈ ಪುಸ್ತಕದ ವಿಷಯವನ್ನು, ತಮ್ಮ ಮುನ್ನುಡಿಯಲ್ಲಿಯ ಒಂದು ಮಾತನ್ನು ಮತ್ತೆ ಮತ್ತೆ ಹೇಳುತ್ತಿದ್ದರು. 'ಇನ್ನೇನು ಬರಲಿದೆ' ಎಂದೂ ಹೇಳುತ್ತಿದ್ದರು. 'ಅದೇನು ಇಷ್ಟು ನಿಧಾನ?' ಎಂದು ಕೇಳಿದಾಗ ಅವರು ಹೇಳಿದ್ದರು : 'ಮಹಮನೆಯ ಗಂಭೀರ ಕನ್ಯೆ. ಇಷ್ಟೊಂದು ನಿಧಾನ ಸಹಜ' ಎಂದು. ನಿಮ್ಮ ಗ್ರಂಥದ ಪ್ರತಿ ಕೈಸೇರಿದಾಗ ಹಾಗೆಯೆ ಕಣ್ಣು ಹೊರಳಿಸಿದಾಗ ಈ ಮಾತುಗಳು ಸಾರ್ಥಕವೆಂದೇ ತೋರಿತು.

* * *

ಕು.ಶಿ. ಹರಿದಾಸಭಟ್ಟ ಜನ್ಮಾಷ್ಟಮಿ, ೫೩

ತಾವು ಶ್ರೀ ಪೇಜಾವರ ಸ್ವಾಮಿಯವರಿಗೆ ಕಳಿಸಿದ 'ಕಾವ್ಯಮೀಮಾಂಸೆ'ಯನ್ನು ನೋಡಿದೆ, ಓದಿದೆ. ಇತ್ತೀಚೆಗೆ ಬಂದ ಹಲವು ಗ್ರಂಥಗಳ ಪೈಕಿ ಇದು ವಿದ್ಯಾರ್ಥಿಗಳಿಗೂ, ಲೇಖಕರಿಗೂ ಅತ್ಯಂತ ಉಪಯುಕ್ತವಾದುದು. 'ಕನ್ನಡ ಕೈಪಿಡಿ'ಯ ಅನಂತರದಲ್ಲಿ ಇದರಷ್ಟೇ ಚೆನ್ನಾಗಿರುವ ಗ್ರಂಥ ಅಂದರೆ ಇದೊಂದೇ ಎಂದು ನನ್ನ ಭಾವನೆ.

'ಪಾಶ್ಚಾತ್ಯ ಕಾವ್ಯಮೀಮಾಂಸೆ'ಯೂ ತಾವೇ ಬರೆಯುವಿರಾ? ಬರೆದರೆ ಒಳ್ಳೆಯದು. ಅದು Comparitive Poetics ಆಗಿ ಇರಬೇಕೆಂದು ನನ್ನ ಆಸೆ. ಅದಕ್ಕೆ ತಾವೇ ಸಮರ್ಥರು ಎಂದು ನನ್ನ ಎಣಿಕೆ.

* * *

ಕೂಡಲಿ ಚಿದಂಬರಂ ೧೫-೦೧-೧೯೫೭

ನಿಮ್ಮ "ಭಾರತೀಯ ಕಾವ್ಯಮೀಮಾಂಸೆ"ಯ ಮೊದಲನೆಯ ಭಾಗವನ್ನು ಓದಿದೆ. ಅದರಲ್ಲಿನ ಬರವಣಿಗೆಯ ಸೊಗಸಿಗೆ ಸಂಪೂರ್ಣವಾಗಿ ಮನಸೋತೆ. ಸಂಕ್ಷೇಪವಾದರೂ ಸುಸ್ಪಷ್ಟವಾದ ಗಂಭೀರವಾದ ತೂಕವಾದ ಅದರ ಶೈಲಿಗೆ ಮುಗ್ಧರಾಗದವರು ಇರಲಾರರು. ವಿಷಯ ನಿರೂಪಣೆ ಬಹು ಸ್ವಾರಸ್ಯಯುತವಾದದ್ದಾಗಿದೆ. ವಿಷಯವನ್ನು ಕಥೆಯೆಂಬಂತೆ ಕಟ್ಟಿಕೊಂಡು ಹೋಗಿದ್ದೀರಿ – ಮುಂದುವರಿಸಿಕೊಂಡು ನಡೆದಿದ್ದೀರಿ. ನಾಲ್ಕಾರು ಮಾತುಗಳಲ್ಲೋ ನಾಲ್ಕಾರು ವಾಕ್ಯಗಳಲ್ಲೋ ನೀವು ಕಟ್ಟುವ ಆಲಂಕಾರಿಕರ ಚಿತ್ರವಂತೂ ಅವರ ವ್ಯಕ್ತಿತ್ವವನ್ನೇ, ಜೀವಂತರೂಪವನ್ನೇ ಕಣ್ಣ ಮುಂದೆ ನಿಲ್ಲಿಸುವಂತೆ ಭಾಸವಾಗುತ್ತದೆ. ಶಾಸ್ತ್ರ ವಿಷಯವನ್ನು ಇಷ್ಟು ಮೋಹಕವಾಗಿ ಚಿತ್ರಿಸುವ ಬೇರೆ ಗ್ರಂಥ ಯಾವುದೂ ಕನ್ನಡದಲ್ಲಿಲ್ಲ. ಕನ್ನಡಿಗರೆಲ್ಲರ ಧನ್ಯವಾದಗಳೂ ನಿಮಗೆ ಸಲ್ಲಬೇಕು.........

* * *

ಡಿ.ಎಲ್. ನರಸಿಂಹಾಚಾರ್ ೨೫-೦೮-೧೯೫೩

ನಿಮ್ಮ ಸಾಹಿತ್ಯಮೀಮಾಂಸೆಯನ್ನು ಮತ್ತೊಮ್ಮೆ ಓದಿದೆ. ಬಹು ಪ್ರಶಸ್ತವಾಗಿದೆ. ಬರವಣಿಗೆ ಎಲ್ಲೆಲ್ಲೂ ವಿಷಯ ನಿಷ್ಠವಾಗಿದೆ, ಖಚಿತವಾಗಿದೆ; ಎಲ್ಲಿಯೂ ಸಂದೇಹಕ್ಕೆ ಅವಕಾಶವಿಲ್ಲ, ಅತ್ಯುಕ್ತಿಯಿಲ್ಲ. ಶೈಲಿ ಬಿಗಿಯಾಗಿ ಸತ್ವಪೂರ್ಣವಾಗಿದೆ. ಹಿಂದಿನವರ ಅಭಿಪ್ರಾಯಗಳನ್ನು ಅದೆಷ್ಟು ಪ್ರಾಮಾಣಿಕತೆಯಿಂದ, ಅದೆಷ್ಟು ಸಂಗ್ರಹವಾಗಿ ನೀವು ನಿರೂಪಿಸಿದ್ದೀರಿ! ಇದೇ ನನಗೆ ಆಶ್ಚರ್ಯ. ಇದು ನಿಜವಾಗಿಯೂ "ಆಚಾರ್ಯ ಕೃತಿ" – masterly work. ಸಂಸ್ಕೃತ ತಿಳಿಯದ ನನ್ನಂಥವರಿಗೆ ಇದು ಪ್ರಮಾಣ ಭೂತವಾದ ಗ್ರಂಥವಾಗಿದೆ. ಅಲ್ಲಲ್ಲಿ ಕಾಣಿಸುವ ಉದಾಹರಣೆಗಳು ಬಹು ಉಚಿತವಾಗಿವೆ. ಅವುಗಳ ಭಾಷಾಂತರವೂ ಸೊಗಸಾಗಿವೆ. ನಾನು ನೋಡಿರುವಮಟ್ಟಿಗೆ

ಇಷ್ಟು ವಿಷಯಗಳನ್ನು ಒಳಗೊಂಡಿರುವ ಗ್ರಂಥ ಯಾವುದೂ ಇರುವಂತೆ ಕಾಣುವುದಿಲ್ಲ. ಈ ಗ್ರಂಥಾವಲೋಕನ ನನ್ನ ಪಾಲಿಗೆ ಹೊಸದೊಂದು ರಸ ಪ್ರಪಂಚದ ಲೋಕಸವಾಗಿದೆ. ಈ ನನ್ನ ಮೆಚ್ಚಿಗೆಯನ್ನು ನಿಮಗೆ ತಿಳಿಸಿದ್ದೇನೆ.

* * *

ಪು.ತಿ. ನರಸಿಂಹಾಚಾರ್ ೧೪-೦೮-೧೯೫೩

ಪುಸ್ತಕವನ್ನು ಹೇಗೋ ಸಂಪಾದಿಸಿದೆ. ಒಂದು ಸಲ ಅಲ್ಲಿ ಇಲ್ಲಿ ತಿರುವಿ ಹಾಕಿ ಈಗ ೭೦ ಪುಟಗಳಿಗೆ ಸಾವಧಾನ ವ್ಯಾಸಂಗದ ಮೂಲಕ ತಲುಪಿದ್ದೇನೆ. ಗ್ರಂಥ ಎಷ್ಟು ಮನೋಹರವಾಗಿದೆಯೋ ಬಣ್ಣಿಸತೀರದು. ಶೈಲಿಯ ಪ್ರಸಾದ ಗುಣ ತುಂಬ ಮಧುರವಾಗಿದೆ. ನನಗಂತೂ ಒಂದು ಕಣಸು. ಮುಳುಗಿದ ನಮ್ಮ ನಾಡು ಏಳುತ್ತಿರುವಂತೆ ಭಾಸವಾಗುತ್ತಿದೆ – ಈ ಪುಸ್ತಕವನ್ನು ಓದುತ್ತಿದ್ದರೆ. ನಿನ್ನೆಯ ಸ್ವಪ್ನದಲ್ಲೂ ನೀವೇ. ಇಂಥ ಪುಸ್ತಕ ಯಾರು ಬರೆದಿದ್ದರೂ ಚೆನ್ನಾಗಿತ್ತು – ನೀವು ಬರೆದಿದ್ದರಿಂದ ಅದು ಎಷ್ಟೊಂದು ಮುದ್ದಾಗಿಬಿಟ್ಟಿದೆಯೋ. ಹತ್ತಿರದಲ್ಲಿದ್ದರೆ ಆಲಿಂಗನ ಕೊಡುತ್ತಿದ್ದೆ. ಈಗ ಆ ದೆಸೆಗೆ ಈ ದೂರದಿಂದಲೇ ತೋಳನ್ನು ಚಾಚಿ ಗಾಳಿಯನ್ನು ಅಪ್ಪುತ್ತೇನೆ. ಪುಸ್ತಕ ಬರುವುದು ತಡವಾಯಿತು ದಿಟ, ಆದರೆ ಸ್ವತಂತ್ರ ಭಾರತದಲ್ಲಿ ಅದು ಜನ್ಮ ತಾಳಿರುವುದು ಅಪೂರ್ವ ಸುಯೋಗವಲ್ಲವೇ – ಈ ತರುಣದಲ್ಲೇ ನಿಮ್ಮ ಮುಕ್ತಕಗಳು ಬಂದರೆ ಎಷ್ಟೊಂದು ಚೆನ್ನು – ಯಾಕೆ ತಾತ್ಸಾರ.

* * *

(ತೀ.ನಂ.ಶ್ರೀ.ಯವರು ಪು.ತಿ.ನ. ಅವರಿಗೆ ಬರೆದ ಪತ್ರ ಈ ಸಂದರ್ಭದಲ್ಲಿ ಪ್ರಸ್ತುತವಾಗಿದೆಯೆಂದು ಇಲ್ಲಿ ಕೊಡಲಾಗಿದೆ.)

ಪ್ರಿಯ ನರಸಿಂಹಾಚಾರ್ ೨೮-೦೮-೧೯೫೩

ನಿಮ್ಮ ಪ್ರೀತಿಯ ಮೆಚ್ಚಿಗೆಯ ಕಾಗದ ಕೈಸೇರಿ ಹತ್ತು ಹನ್ನೆರಡು ದಿನವಾಯಿತು. ನನ್ನ ಪುಸ್ತಕದ ಬಹುಭಾಗವನ್ನು ಹಸ್ತಪ್ರತಿಯಲ್ಲೇ ನೀವು ತಿರುವಿಹಾಕಿದ್ದಿರಿ. ನನ್ನಿಂದ ಒಂದು ಪ್ರತಿ ಪ್ರೀತಿಯ ಕಾಣಿಕೆಯಾಗಿ ಬಂದೇ ಬರುವುದೆಂಬುದನ್ನೂ ಅರಿತಿದ್ದಿರಿ. ಆದರೂ ಅಚ್ಚಿನ ಪುಸ್ತಕವನ್ನು ಓದಬೇಕೆಂಬ ತವಕದಿಂದ "ಪುಸ್ತಕವನ್ನು ಹೇಗೋ ಸಂಪಾದಿಸಿ" ಓದಿ ನನಗೆ ಬರೆದಿರುವುದನ್ನು ನೋಡಿದರೆ, ನನ್ನ ಮೇಲಿನ ಅಭಿಮಾನ ನಿಮಗೆ ಎಷ್ಟೊಂದು ಉತ್ಕಟವೆಂಬುದು ಮತ್ತೆ ನನಗೆ ಅರಿವಾಗುತ್ತದೆ. ಶ್ರೀ ಮೂರ್ತಿರಾಯರ ಸಂಗಡ ಪುಸ್ತಕದ ಒಂದು ಪ್ರತಿಯನ್ನು ನಿಮಗೆ ಕಳಿಸಿದ್ದೇನೆ. ಅದು ಆಗಲೆ ಕೈಸೇರಿರಬೇಕೆಂದು ಭಾವಿಸುತ್ತೇನೆ. ನಿಮ್ಮಂಥ ಶ್ರೇಷ್ಠ ಕವಿಗಳು ನನ್ನ ಬರಹವನ್ನು ಒಪ್ಪಿ ಆದರಿಸುತ್ತಿರುವುದು ನಿಜವಾಗಿಯೂ ನನಗೆ ಹೆಮ್ಮೆ; ಆಪ್ತಮಿತ್ರನೂ ಕೂಡ ಒಮ್ಮೊಮ್ಮೆ ಈ ಮಾತನ್ನು ಹೃದಯದ ಅರಿವಿಗೇ ಬಿಡದೆ ಮಾತಿನಲ್ಲಿ ಮೂಡಿಸಿದಲ್ಲದೆ ಅಂತರಂಗದ ಭಾರ ಇಳಿಯುವುದಿಲ್ಲ. ನಿಮಗೂ ಹಾಗೆಯೇ,

ನನಗೂ ಹಾಗೆಯೇ! ಡಿ.ಎಲ್.ನ ಕೂಡ ಮೆಚ್ಚಿಗೆಯ ನಾಲ್ಕು ಮಾತನ್ನು ಬರೆದಿದ್ದಾರೆ. ನನಗೆ ಇನ್ನೇನು ಬೇಕು? ಕವಿ, ವಿದ್ವಾಂಸ ಇಬ್ಬರಿಗೂ ಪುಸ್ತಕ ಇಷ್ಟವಾಯಿತು. "ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ!". ಹನ್ನೆರಡು ವರ್ಷದ ನಿರೀಕ್ಷೆಯ ಬೇಸರ ಕೂಡ ಬಹುಮಟ್ಟಿಗೆ ಹರಿಯಿತು. ಪುಸ್ತಕದ ಮುದ್ರಣ ಇನ್ನಷ್ಟು ನಿರ್ದುಷ್ಟವೂ, ಸುಂದರವೂ ಆಗಬಹುದಾಗಿತ್ತೆಂಬ ಕೊರತೆಯೂ ದೂರವಾಯಿತು!

........ಇನ್ನು ಜನಸಾಮಾನ್ಯವೂ ಉದಾಸೀನ ವರ್ಗವೂ ವಿಮರ್ಶಕ ವೃಂದವೂ ಏನೆನ್ನುತ್ತದೆಯೋ ಕಾದು ನೋಡಬೇಕು! – ಆದರೆ ಇದರ ಚಿಂತೆಯನ್ನು ನಾನು ಹೆಚ್ಚಾಗಿ ಹತ್ತಿಸಿಕೊಂಡಿಲ್ಲ.

*

ಶ್ರೀ ಬಿಳಿಗಿರಿಯವರಿಗೆ ಈ ಕೆಳಗಿನ ಪ್ರಯೋಗದ ನೆನಪು ಕೊಡಿ :

> "ಬರ್ದನೆ ಬಂಟಂ ಎಂಬ ನಾಣ್ನುಡಿಯುಂಟು
> ಶರೀರಮಾದ್ಯಂ ಖಲು ಧರ್ಮಸಾಧನಂ ಎಂಬ
> ಪುರಾಣ ವಾಕ್ಯ ಮುಂಟಪ್ಪುದಱಿಂ...."
>
> (ದುರ್ಗಸಿಂಹನ ಪಂಚತಂತ್ರ, ಪು. ೧೧೫)

ಇಲ್ಲಿ, ಬರ್ದನೆ = ಬದುಕಿದವನೇ ("One who survives is a soldier"ಎಂಬುದು ಇದರ ಭಾವ).

* * *

S.S. Raghavachar Davangere, 30-05-1956

Dear Sir,

In continuation of my talk with you I am forwarding the reference in Locana to Bhattanayaka's contention that 'ರಸಾನುಭವ' is ಬ್ರಹ್ಮಾಸ್ವಾದಸ್ ವಿಧ. Please see Locana in the 2nd chapter in elucidation of the verse ವಾಚ್ಯವಾಚಕ ಚಾರುತ್ಯ ಹೇತುನಾಂವಿವಿಧಾಶ್ಮನಾಂ। ರಸಾದಿ ಪರತಾಯತ್ರ ಸದ್ವನೇರ್ವಿಷಯೋಮತಃ ।೪। In view of this definite reference to and the recognition of the fact that 'ರಸಾನುಭವ' is an approximation to the experience of the highest, I wonder, how we can regard Bhattanayaka as a follower of Sānkhya.

I am definitely aware that you do not pursue in your book the philosophical aspect of the discussions to the bitter end (page 361 -

note - in your book). I notice the tendency to keep away from definite commitments in the philosophical field. Hence the characterization of Bhattanayaka as an adherent of Sānkhya is not quite a vital matter in your perspective. But still here is a text that throws doubt on that characterization.

May I ask one Question? You have used the sloka 'ಯಾ ವ್ಯಾಪಾರವತೀ ರಸಾ..... ತ್ವದ್ಭಕ್ತಿತುಲ್ಯಂ ಸುಖಂ' (page 194) for showing that in the view of ಆನಂದವರ್ಧನ the intellectual and the poetic faculty enjoy an equal status. But you do not feel confident that he is right in placing love of God on a higher level. May I construe that this scepticism is due to a genuine disagreement? Do you think that the beautiful verse has been fairly treated by you, when you do not assent to the poet's conception of the highest value in life? How does Anandavardhana enjoy authority on the question of the place of the poetic insight and loses his authoritativeness when he speaks of Bhakti? I feel that the core of the poem is disregarded in your use of it.

I know that you are likely to be very busy. I do not expect an immediate reply. The purpose of this letter was just to forward the reference to ಬ್ರಹ್ಮಾಸ್ವಾದ in Bhattanayaka. Now I realize I have prolonged the letter too far.

With profound regards

* * *

(ತೀನಂಶ್ರೀಯವರು ಪ್ರೊ॥ ಎಸ್.ಎಸ್. ರಾಘವಾಚಾರ್ಯರಿಗೆ ಉತ್ತರವಾಗಿ ಬರೆದ ಪತ್ರದ ಕರಡು ಪ್ರತಿ ಅವರ ಬಳಿ ಇತ್ತು. ಅದು ಬಹುಶಃ ಪರಿಪೂರ್ಣ ಪತ್ರವಾಗಿದೆಯೆಂದು ಅನಿಸುತ್ತದೆ. ಆ ಪತ್ರವನ್ನು ಇಲ್ಲಿ ಪ್ರಸ್ತುತವೆಂದು ಕೊಡಲಾಗಿದೆ.)

29-06-1956

I some how stopped here and it is only a week later that I have been able to take up this letter again. I hope to finish it today at least.

That Bhattanayaka was one of the earliest to hold rasasvada is allied to Brahmasvada is certainly an important factor in ascertaining

his philosophical affiliations. But the same Abhinavagupta on whom we depend for this piece of information also ridicules Bhattanayaka for his mimamsaka tendencies (please see page 73 of my book for reference). Again it must be admitted that Bhattanayaka's explanation of Rasanispatti closely follows the Samkhya system. This point has been very well brought out by Prof. Hiriyanna, as you know (Art Experience pp. 13-15). I have just followed Prof. Hiriyanna in my account of this matter. I don't think I have said Bhattanayaka "an adherent of Samkhya" in his general philosophical position. I could not make such a statement knowing that there are grounds for believing he had *mimamsaka* characteristics too. All I have said is that Bhattanayaka follows the Samkhya principle in expounding *rasanispatti.* Is this statement wrong? You are right in noticing that I have avoided as far as possible entering into strictly philosophical discussions. That is due frankly to limitations in my own equipment; but I do hope that this has not materially affected my account of poetic experience which after all is my main theme and interest. But I should certainly like to avoid in my writing wrong and misleading statements about the unavoidable philosophical implications of aesthetic doctrines.

Now about the "ಯಾ ವ್ಯಾಪಾರವತೀ...........". My purpose in quoting it was to as you have recognized, just to point out the poetic (or artistic) eye and the eye of the intellect have an equal status in the appraisal of reality. I have neither affirmed nor denied the superiority of the love of God to these. It does not involve any diagreement with the stand of Anandhavardhana. I just confess my own incapacity to bear testimony to what he says because I (and I believe many others like me) lack the intensive religious experience he is speaking to the ultimate end. I hope I have made this point clear on pp 217-8 of my book where I have commented upon a stanza of Bhattanayaka.

One general query. *Supposing* you agree with part of what an authority says and cannot go with him the rest of the way, or *even*

disagree with these (in the present case the latter point is hypothetical) is it wrong to refer to the partial agreement, particularly when you make it clear that there might be differences as regards some other aspects? I am sure you would not expect one to subscribe to all the views of the authority.

Let me once again refer to the great pleasure I had in discussing with you so many important matters on the day we travelled together some five weeks ago. Alas that such meetings should be so rare!

* * *

ಇಂಗ್ಲಿಷಿನಲ್ಲಿ 'ಭಾರತೀಯ ಕಾವ್ಯ ಮೀಮಾಂಸೆ'

ಪ್ರೊ॥ ಎನ್. ಬಾಲಸುಬ್ರಹ್ಮಣ್ಯ ಅವರ ಅನುವಾದ "Indian Poetics" ಬಗ್ಗೆ ವಿಮರ್ಶೆ

ಎಲ್.ಎಸ್. ಶೇಷಗಿರಿರಾವ್ ಕನ್ನಡಪ್ರಭ, ೨೭-೦೩-೨೦೦೧

ಪ್ರೊ. ತೀ.ನಂ. ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ' ೧೯೫೩ರಲ್ಲಿ ಪ್ರಕಟವಾಯಿತು. ಈ ಕೆಲಸವನ್ನು ಅವರಿಗೆ ವಹಿಸಿಕೊಟ್ಟವರು ಆಚಾರ್ಯ ಬಿ.ಎಂ.ಶ್ರೀ ಅವರು. ತೀ.ನಂ.ಶ್ರೀ ಅವರು ಇದನ್ನು ಬರೆದು ಮುಗಿಸಿದ್ದು ೧೯೪೨ರಲ್ಲಿ. ಅದು ಅಚ್ಚಾಗಿ ಅಚ್ಚುಕೂಟದಿಂದ ಹೊರಕ್ಕೆ ಬಂದದ್ದು ೧೯೫೩ರಲ್ಲಿ. ಇದಕ್ಕೆ ಮುನ್ನುಡಿ ಬರೆಯುತ್ತ ಕುವೆಂಪು ಅವರು ಇದನ್ನು ಆಚಾರ್ಯಕೃತಿ ಎಂದು ವರ್ಣಿಸಿದರು. ಆ ಬಣ್ಣನೆಗೆ ಸರ್ವಥಾ ಅರ್ಹವಾದ ಕೃತಿ ಇದು. ಕೆಲವು ವರ್ಷಗಳ ಕೆಳಗೆ ಈ ಕೃತಿಗೆ ಪಂಪ ಪ್ರಶಸ್ತಿ ಲಭ್ಯವಾಯಿತು.

ತೀ.ನಂ.ಶ್ರೀ ಅವರು ಈ ಕೃತಿಯನ್ನು ಬರೆಯಲು ಮಾಡಿಕೊಂಡ ಬಹುಮುಖ ಸಿದ್ಧತೆಯಲ್ಲಿ ಒಂದು ಮುಖ ಎರಡನೆಯ ಬಾರಿ ಶಿಷ್ಯ ವೃತ್ತಿ. ಇದು ಕುತೂಹಲಕರವಾಗಿರುವುದರಿಂದ ಮತ್ತು ಇಂದಿನವರಿಗೆ ಹಿಂದಿನವರ ರೀತಿಯ ಪರಿಚಯವಾಗಲಿ ಎಂಬ ಕಾರಣದಿಂದ ಈ ಅಂಶವನ್ನು ಇಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸುತ್ತಿದ್ದೇನೆ. ತೀನಂಶ್ರೀ ಅವರ ಹಿಂದಿನ ಪೀಳಿಗೆಯ ಅದ್ಭುತ ವಿದ್ವಾಂಸರಲ್ಲಿ ಎಂ. ಹಿರಿಯಣ್ಣನವರು ಒಬ್ಬರು. ಕಾಲೇಜಿನಲ್ಲಿ ತೀ.ನಂ.ಶ್ರೀ. ಅವರು ಪ್ರೊ॥ ಹಿರಿಯಣ್ಣನವರ ವಿದ್ಯಾರ್ಥಿ. ತೀ.ನಂ.ಶ್ರೀ. ಬರೆಯುತ್ತಾರೆ, ಈ ಕೃತಿಯನ್ನು ನಾನು ಬರೆಯಲು ಒಪ್ಪಿಕೊಂಡ ನಂತರ ಈ ವಿಷಯವನ್ನು ಅವರಿಗೆ ಶೃತಪಡಿಸಿ, ಅದಕ್ಕೆ ಕೈ ಹಾಕಲು ಧೈರ್ಯ ಬರುವಂತೆ ನನಗೆ 'ಧ್ವನ್ಯಾಲೋಕ'ವನ್ನು ಪಾಠ ಹೇಳಬೇಕೆಂದು ಕೇಳಿಕೊಂಡೆ. ಪ್ರಾಧ್ಯಾಪಕ ವೃತ್ತಿಯಿಂದ ವಿಶ್ರಾಂತಿ ಪಡೆದು, ಲೇಖನ ಕಾರ್ಯಕ್ಕೆ ತಮ್ಮ ವಿರಾಮಕಾಲವನ್ನು

ಮೀಸಲಾಗಿಟ್ಟಿದ್ದ ಈ ಹಿರಿಯ ಗುರುಗಳು ಶಿಷ್ಯವಾತ್ಸಲ್ಯದಿಂದ ಪ್ರವಚನಭಾರವನ್ನು ಮತ್ತೆ ವಹಿಸಿದರು. ಸ್ವತಃ ಆಗಲೇ ಉದ್ದಾಮಪಂಡಿತರೆಂದು ಹೆಸರು ಪಡೆದಿದ್ದ ತೀ.ನಂ.ಶ್ರೀ. ಅವರು ಮತ್ತೆ ಅವರಿಂದ 'ಧ್ವನ್ಯಾಲೋಕ' ಪಾಠವನ್ನು ಕೇಳಿದರು. ಬರವಣಿಗೆ ಮುಗಿದ ಮೇಲೆ ಕೆಲವು ಅಧ್ಯಾಯಗಳನ್ನು ಗುರುಗಳು ಓದಿ ನ್ಯೂನತೆಗಳನ್ನು ತಮ್ಮ ಸೌಜನ್ಯಮಯವಾದ ರೀತಿಯಲ್ಲಿ ತಿಳಿಸಿಕೊಟ್ಟರಂತೆ. ಅಪೂರ್ವ ಗುರುಗಳು, ಅಪೂರ್ವ ಶಿಷ್ಯ!

ಹೀಗೆ ಮೂಡಿ ಬಂದ ಕೃತಿ ಒಂದು ಅನರ್ಘ್ಯ ರತ್ನವಾಯಿತು. ತೀ.ನಂ.ಶ್ರೀ. ಅವರೇ ಹೇಳಿರುವಂತೆ, "ನಮ್ಮ ಕಾವ್ಯಮೀಮಾಂಸೆಯ ತಿರುಳೆಲ್ಲ ರಸ-ಧ್ವನಿ-ಔಚಿತ್ಯ ಎಂಬ ಮಾತುಗಳಲ್ಲಿ ಅಡಗಿದೆ. ಈ ತತ್ವಗಳ ತೌಲನಿಕ ಕಾವ್ಯಮೀಮಾಂಸಾ ಶಾಸ್ತ್ರಕ್ಕೆ (ಕಂಪಾರಟಿವ್ ಪೊಯಟಿಕ್ಸ್) ಭರತಖಂಡದ ಕಾಣಿಕೆ. ಧ್ವನಿ ರಸ ತತ್ವಗಳ ನಿರೂಪಣೆ ಕೃತಿಯ ಮುಖ್ಯೋದ್ದೇಶ." 'ಶಾಸ್ತ್ರದ ಬೆಳವಳಿಗೆ' ಎನ್ನುವ ಮೊದಲನೆಯ ಭಾಗದಲ್ಲಿ ಸಂಸ್ಕೃತದ ಪ್ರಸಿದ್ಧ ಕಾವ್ಯ ಮೀಮಾಂಸಕರು, ಅವರ ಕೃತಿಗಳು, ಅವರ ಕೈಯಲ್ಲಿ ಈ ಶಾಸ್ತ್ರ ಬೆಳೆದು ರೂಪುಗೊಂಡ ಬಗ್ಗೆ ಇದರ ವಿಶೇಷ ಅಂಶಗಳು ಇವುಗಳ ನಿರೂಪಣೆ. 'ಕವಿ-ಕಾವ್ಯ-ಸಹೃದಯ' ಪುಸ್ತಕದ ಎರಡನೆಯ ಭಾಗ. ಕಾವ್ಯ ಸೃಷ್ಟಿ, ಕಾವ್ಯ ಜಗತ್ತು, ಕಾವ್ಯ ಪ್ರಯೋಜನ ಈ ವಿಷಯಗಳ ವಿವೇಚನೆ ಈ ಭಾಗದಲ್ಲಿ.

ಪ್ರಾಯಶಃ ಬೇರೆ ಯಾವ ಭಾರತೀಯ ಭಾಷೆಯಲ್ಲಿಯೂ ಭಾರತೀಯ ಕಾವ್ಯ ಮೀಮಾಂಸೆಯನ್ನು ಕುರಿತ ಇಂಥ ಸಮಗ್ರ, ನಿಷ್ಕೃಷ್ಟ ಕೃತಿ ರಚಿತವಾಗಿಲ್ಲ. ತೀ.ನಂ.ಶ್ರೀ. ಅವರದು ಈ ಕಾರ್ಯಕ್ಕೆ ಹೇಳಿ ಮಾಡಿಸಿದ ವ್ಯಕ್ತಿತ್ವ. ಉದ್ದಾಮ ಸಂಸ್ಕೃತ ವಿದ್ವಾಂಸರು, ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಅಪೂರ್ವ ಪ್ರಭುತ್ವ, ಇಂಗ್ಲಿಷ್ ಸಾಹಿತ್ಯವನ್ನು ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದವರು. ಶಾಸ್ತ್ರ ಭಾಗದ ಮೇಲೆ ಅಸಾಧಾರಣ ಪ್ರಭುತ್ವವಷ್ಟೇ ಅಲ್ಲ; ಅವರಲ್ಲಿ ಸೃಜನ ಪ್ರತಿಭೆಯೂ ಇತ್ತು. ಸೊಗಸಾದ ಕವನಗಳನ್ನು ಬರೆದಿದ್ದಾರೆ. ಅವರು ಉಪನ್ಯಾಸ ಮಾಡುತ್ತಿದ್ದಾಗ, ಬರಹದಲ್ಲಿ ಭಾಷೆಯನ್ನು ಬಳಸುವ ಬಗೆಯೇ ಅವರ ಸೂಕ್ಷ್ಮ ಸಂವೇದನೆಗಳಿಗೆ ಕನ್ನಡಿಯಾಗಿತ್ತು. (ಅವರು ತೌಲನಿಕ ಕಾವ್ಯ ಮೀಮಾಂಸೆಯನ್ನು ಕುರಿತು ಪುಸ್ತಕವನ್ನು ಬರೆಯದಿದ್ದದು ನಮಗೊಂದು ನಷ್ಟ.) ಈ ಕೃತಿಯಲ್ಲಿ ನಿದರ್ಶನಗಳಿಗಾಗಿ ಅವರು ಆಯ್ಕೆ ಮಾಡಿರುವ ಪದ್ಯಗಳು, ಅವನ್ನು ಕುರಿತ ಅವರ ವಿವರಣೆ ಇದೇ ಕಾವ್ಯ ಪ್ರಕಾರದ ಅಧ್ಯಯನಕ್ಕೆ ಒಂದು ವಿಷಯ ಪ್ರವೇಶವಾಗ ಬಹುದು.

ಇಂಗ್ಲಿಷಿಗೆ

ಈ ಕೃತಿಯನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿಸಬೇಕೆಂಬುದು ಹಲವು ವರ್ಷಗಳ ಒತ್ತಾಯಪೂರ್ವಕ ಸಲಹೆ. ಕೃತಿಗೆ ಪಂಪ ಪ್ರಶಸ್ತಿ ದೊರಕಿದ ನಂತರ ಇದು ಬಲವಾಯಿತು. ಭಾರತೀಯ ಕಾವ್ಯಮೀಮಾಂಸೆಯನ್ನು ಕುರಿತ ಇಂಥ ಸಮಗ್ರವಾದ ಮತ್ತು ಅಧಿಕಾರಯುತವಾದ ನಿರೂಪಣೆ ಎಲ್ಲ ಭಾರತೀಯ ಕಾವ್ಯಮೀಮಾಂಸೆಯ ಅಧ್ಯಯನಶೀಲರಿಗೆ ಲಾಭವಾಗಬೇಕು ಎನ್ನುವುದು ಒಂದು ಕಾರಣ. ಸಾಹಿತ್ಯ ಮತ್ತು ಸಾಹಿತ್ಯ ಮೀಮಾಂಸೆಗಳ ತೌಲನಿಕ ಅಧ್ಯಯನ

ಎಲ್ಲ ದೇಶಗಳಲ್ಲಿ ನಡೆಯುತ್ತಿದೆ. ಇಂಥ ಕಾಲದಲ್ಲಿ ಈ ಪುಸ್ತಕ ಭಾರತದಾಚೆಗೂ ಉಪಯುಕ್ತವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿ ಈ ಕಾರ್ಯವನ್ನು ಕೈಗೊಂಡು ಹಲವು ವರ್ಷಗಳು ಕಳೆದವು. ಈಗ 'ಇಂಡಿಯನ್ ಪೊಯಟಿಕ್ಸ್' ಎಂಬ ಶೀರ್ಷಿಕೆಯಲ್ಲಿ ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

ಈ ಪುಸ್ತಕದ ಅನುವಾದ ಬಹು ಕಷ್ಟಸಾಧ್ಯವಾದ ಕಾರ್ಯ. ಒಂದು ಪುಸ್ತಕದ ವಸ್ತು. ಎರಡನೆಯದು ಅದರ ಭಾಷೆ. ಮೂರನೆಯದು ತೀ.ನಂ.ಶ್ರೀ. ಅವರ ಶೈಲಿ. ಅನಿವಾರ್ಯವಾಗಿ ಇಲ್ಲಿ ಇಂಗ್ಲಿಷ್ ಭಾಷೆಗೆ ಪರಿಚಿತವಲ್ಲದ ಪರಿಕಲ್ಪನೆಗಳು, ಪಾರಿಭಾಷಿಕ ಶಬ್ದಗಳು ಸಮೃದ್ಧವಾಗಿವೆ. ರಸ, ಧ್ವನಿ, ಔಚಿತ್ಯ, ಅಲಂಕಾರ ಧ್ವನಿ, ಪ್ರತಿಭಾ ಗುಣ, ಸಂಚಾರೀ ಭಾವ, ವ್ಯಂಜನ, ವ್ಯಂಗ್ಯ, ರೀತಿ – ಇಂಥ ಹಲವಾರು ಶಬ್ದಗಳು ಪ್ರಯೋಗವಾಗಿವೆ. ಸಂಸ್ಕೃತದ ಸೂತ್ರ ಪ್ರಾಯ ವಾಕ್ಯಗಳು, ಕವನ ಭಾಗಗಳು ಉದ್ಧೃತವಾಗಿವೆ. ಸಹಜವಾಗಿಯೇ ತೀ.ನಂ.ಶ್ರೀ. ಹಲವು ಕನ್ನಡ ಕವನಗಳ ಭಾಗಗಳನ್ನು ಉದ್ಧರಿಸಿದ್ದಾರೆ. ಅಭಿನವಗುಪ್ತ, ಆನಂದವರ್ಧನ, ದಂಡೀ ಮೊದಲಾದವರ ಮೀಮಾಂಸೆ ಕೃತಿಗಳಿಂದ ಅಲ್ಲದೆ ವಾಲ್ಮೀಕಿ ರಾಮಾಯಣ, ಕಾಳಿದಾಸನ ಶಾಕುಂತಲಾ, ರಾಜಶೇಖರನ 'ಬಾಲರಾಮಾಯಣ', ಭವಭೂತಿ, 'ಸ್ವಪ್ನ ವಾಸವದತ್ತ', 'ಪಂಚರಾತ್ರ', ಭಾಸನ 'ಊರುಭಂಗ', ಮೊದಲಾದ ಸಂಸ್ಕೃತ ಕವಿಗಳು–ಕೃತಿಗಳಿಂದಲೂ, ಪಂಪ, ರನ್ನ, ರತ್ನಾಕರ ವರ್ಣಿಯ 'ಭರತೇಶ ವೈಭವ', ನೃಪತುಂಗನ 'ಕವಿರಾಜಮಾರ್ಗ', ನೇಮಿಚಂದ್ರನ 'ಲೀಲಾವತಿ', ಜನ್ನನ 'ಯಶೋಧರ ಚರಿತೆ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ', ಕುವೆಂಪು, ಬೇಂದ್ರೆ ಮೊದಲಾದ ಕನ್ನಡ ಕವಿಗಳ – ಕೃತಿಗಳಿಂದಲೂ, ಹಳ್ಳಿಯ ಹಾಡುಗಳಿಂದಲೂ ಆರಿಸಿದ ಪಂಕ್ತಿಗಳಿವೆ. ತೀ.ನಂ.ಶ್ರೀಯವರ ಕನ್ನಡ ಅರ್ಥ ಸ್ಫುಟವಾದದ್ದು; ತೇಜಸ್ವಿಯಾದದ್ದು. ಅದರಲ್ಲಿ ಸಂಸ್ಕೃತದಿಂದ ಕನ್ನಡಕ್ಕೆ ಬಂದ ಮತ್ತು ಸಂಸ್ಕೃತದ ಶಿಲ್ಪಗಳು ಹೇರಳವಾಗಿವೆ. "ಇಲ್ಲಿ ಅರ್ಥ ಪ್ರತೀತಿಗೆ ರೌದ್ರ ರಸವೇ ವಿಶ್ರಾಂತಿ ಸ್ಥಾನ. ಇಲ್ಲಿಯ ಚಿತ್ತವೃತ್ತಿ ವಿಶೇಷವನ್ನು ವಾಚ್ಯವಾಗಿ ಹೇಳುವುದು ಹೇಗೆ ಸಾಧ್ಯ?" "ಒಟ್ಟು ಪದದ ಬಹುಭಾಗದಲ್ಲಿ ವಾಚ್ಯಾರ್ಥವು ತಿರಸ್ಕಾರ ಹೊಂದಿ ಲಕ್ಷಣಾ ವೃತ್ತಿಗೆ ಅವಕಾಶ ಕಲ್ಪಿಸಿಕೊಟ್ಟು, ಅತಿಶಯವಾದ ವ್ಯಂಗ್ಯಾರ್ಥಗಳನ್ನು ಸೂಚಿಸುತ್ತದೆ" – ಇಂಥ ಬರಹವನ್ನು ಇಂಗ್ಲಿಷಿಗೆ ಅನುವಾದಿಸುವುದು ಎಷ್ಟು ಕಷ್ಟ ಎಂದು ಹೇಳಬೇಕಾಗಿಲ್ಲ. (ಕುತೂಹಲವನ್ನು ತಣಿಸುವುದಕ್ಕಾಗಿ, ಈ ಎರಡು ಉದ್ಧೃತ ಭಾಗಗಳಲ್ಲಿ ಪ್ರೊ. ಬಾಲಸುಬ್ರಹ್ಮಣ್ಯ ಅವರು ಮೊದಲನೆಯದನ್ನು ಅನುವಾದಿಸಿರುವುದನ್ನು ಇಲ್ಲಿ ಕೊಡುತ್ತಿದ್ದೇನೆ. "Here for the final resting place for the semantic process is the sentiment of fury. How is it possible to express the peculiar mental mode here through designation?") ಅಗತ್ಯವೆನಿಸಿದಾಗ ತೀ.ನಂ.ಶ್ರೀ ಬಹಳ ಸಂಗ್ರಹವಾಗಿ ಬರೆಯಬಲ್ಲರು. "ಕಾವ್ಯದ ಆತ್ಮ ರಸ; ಅದನ್ನು ಕಾವ್ಯ ಶರೀರವು ಅಭಿವ್ಯಕ್ತಿಪಡಿಸುವ ಮಾರ್ಗ ಧ್ವನಿ; ಆತ್ಮ ಶರೀರಗಳ ಹೊಂದಿಕೆಯೇ ಔಚಿತ್ಯ. ರಸ–ಧ್ವನಿ–ಔಚಿತ್ಯ; ಇದೇ ಕಾವ್ಯ ಗಾಯಿತ್ರಿ."

ಅನುವಾದಕನಿಗೆ ನೆರವಾಗುವ ಒಂದು ಅಂಶ ಎಂದರೆ ತೀ.ನಂ.ಶ್ರೀ ಅವರೇ ಇಂಗ್ಲಿಷಿನಲ್ಲಿ ಭಾರತೀಯ ಕಾವ್ಯಮೀಮಾಂಸೆಯನ್ನು ಕುರಿತು, 'Imagination in Indian Poetics and Other Literary Studies' ಎನ್ನುವ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ ಅವರು ಸಂಸ್ಕೃತ ಕಾವ್ಯಮೀಮಾಂಸೆಯ ಹಲವು ಪಾರಿಭಾಷಿಕ ಶಬ್ದಗಳಿಗೆ ಇಂಗ್ಲಿಷ್ ಸಮಾನ ಶಬ್ದಗಳನ್ನು ಕೊಟ್ಟಿದ್ದಾರೆ. ಉದಾ: ಪ್ರತಿಭಾ: Imagination, ಭಾವಯಿತ್ರಿ ಪ್ರತಿಭಾ: Responsive or contemplative imagination; ಕಾರಯಿತ್ರಿ ಪ್ರತಿಭಾ: creative imagination.

ಆದರೂ 'ಭಾರತೀಯ ಕಾವ್ಯಮೀಮಾಂಸೆ'ಯ ಅನುವಾದ ಗಾಂಡೀವಕ್ಕೆ ಹೆದೆ ಏರಿಸುವ ಕಾರ್ಯವೇ. ಅನುವಾದಕನಿಗೆ ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಸಂಸ್ಕೃತದ ಮೇಲೆ ಕನ್ನಡದ ಮೇಲೆ ಪ್ರಭುತ್ವ ಇರಬೇಕೆಂಬುದು ಸ್ಪಷ್ಟ. ಇಷ್ಟೇ ಸಾಲದು, ಈ ಮೂರು ಭಾಷೆಗಳ ಕಾವ್ಯಮೀಮಾಂಸೆಯನ್ನೂ ಆಳವಾಗಿ ಆತ ಅಧ್ಯಯನ ಮಾಡಿರಬೇಕು. ಇಂಥ ಸಾಧನೆ ಮಾಡಿರುವ ವಿದ್ವಾಂಸರು ವಿರಳ. ಆದರೆ ಪ್ರೊ. ಎನ್. ಬಾಲಸುಬ್ರಹ್ಮಣ್ಯ ಇಂಥ ವಿದ್ವಾಂಸರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗದ ತರಗತಿಗಳಲ್ಲಿ ಅವರು ನನಗಿಂತ ಒಂದು ವರ್ಷ ಕಿರಿಯರು. (ಈ ಅಂಶದಲ್ಲಿ ಮಾತ್ರ ನನಗಿಂತ ಕಿರಿಯರು). ಸಂಸ್ಕೃತವನ್ನು ಆಳವಾಗಿ ಅಭ್ಯಾಸ ಮಾಡಿರುವವರು. ಗ್ರೀಕ್ ಮೀಮಾಂಸಕಾರ ಅರಿಸ್ಟಾಟಲ್‌ನ 'ಪೊಯಟಿಕ್ಸ್' ಗ್ರಂಥವನ್ನು ಅನುವಾದ ಮಾಡಿದಾಗ ವಿದ್ವಾಂಸರ ಗಮನವನ್ನು ಸೆಳೆದರು. ಹಾರೆಸ್ ಮತ್ತು ಲಾಂಜೈನಸರ ಮೀಮಾಂಸೆಯ ಕೃತಿಗಳನ್ನು ಅನುವಾದಿಸಿದರು. ಹಲವು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ – ಕನ್ನಡ ನಿಘಂಟಿನ ಮುಖ್ಯ ಸಂಪಾದಕರಾಗಿ, ಆ ಯೋಜನೆಯ ಮುಕ್ತಾಯದ ಹಂತಗಳಲ್ಲಿ ವಿಶೇಷ ಭಾರವನ್ನು ಹೊತ್ತವರು. (ಈ ವರ್ಷ ಅವರಿಗೆ ಡಾ. ಜಿ.ಎಸ್.ಎಸ್. ಪ್ರಶಸ್ತಿ ಸಂದಿದೆ). ತೀ.ನಂ.ಶ್ರೀ. ಅವರ ಕೃತಿಯ ಇಂಗ್ಲಿಷ್ ಅನುವಾದವನ್ನು ಬಹು ಶ್ರದ್ಧೆಯಿಂದ ಸಮರ್ಥವಾಗಿ ಸಿದ್ಧಪಡಿಸಿದ್ದಾರೆ. ಇದು ಇಂಗ್ಲಿಷ್ ಲೇಖನವಾಗಿದ್ದಿದ್ದರೆ ವಾಕ್ಯಗಳನ್ನು ಉದ್ಧರಿಸಿ ನಿದರ್ಶನಗಳನ್ನು ಕೊಡಬಹುದಾಗಿತ್ತು. ಇಂಥ ವಸ್ತುವನ್ನು ಕುರಿತು ಬರೆಯುವಾಗ ತೀರ ಸರಳವಾದ ಭಾಷೆಯಲ್ಲಿ ಬರೆಯುವುದು ಸಾಧ್ಯವಿಲ್ಲ. ಈ ರೀತಿಯಲ್ಲಿ ಭಾಷೆ ಸರಳವಾಗಿದೆ, ಸ್ಫುಟವಾಗಿದೆ, ಮುಖ್ಯವಾಗಿ ನಿಷ್ಕೃಷ್ಟವಾಗಿದೆ. ಯಾರೇ ಅನುವಾದ ಮಾಡಿದರೂ ಭಿನ್ನಾಭಿಪ್ರಾಯಗಳು ಅಲ್ಲಲ್ಲಿ ಮೂಡುವುದು ಸಹಜ. 'ಸಮಸ್ತ ವಸ್ತುವಂ ಕೊಡುವ' ಎನ್ನುವುದಕ್ಕೆ Presenting her all kinds of things ಅಷ್ಟು ಹಿತವಲ್ಲದ ಅನುವಾದವಾವೇನೊ! 'All kinds of things' ನಲ್ಲಿ ಅಷ್ಟು ಸೊಗಸಲ್ಲದ ಛಾಯೆ ಇದೆ ಎಂದು ನನ್ನ ಅನಿಸಿಕೆಯಷ್ಟೆ. ಬಾಲಸುಬ್ರಹ್ಮಣ್ಯ ಅವರು ಬಹು ಪಾರಿಭಾಷಿಕ ಶಬ್ದಗಳನ್ನು ಹಾಗೆಯೇ ಉಳಿಸಿಕೊಂಡಿದ್ದಕ್ಕೆ ಇದು ಉಚಿತವಾದ ರೀತಿ. ಪುಟ ೨೧ರಲ್ಲಿ 'ಸ್ವಭಾವೋಕ್ತಿ' ಎನ್ನುವ ಶಬ್ದವನ್ನು ಉಳಿಸಿಕೊಂಡು ಕಂಸಗಳಲ್ಲಿ Naturalistic expression ಎಂದು ಹೇಳಿದೆ. Naturalism ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯಲ್ಲಿ ಅರ್ಥವನ್ನು ಹೊಂದಿದೆ. ಆದರೆ ಒಟ್ಟಿನಲ್ಲಿ ಪ್ರೊ. ಬಾಲಸುಬ್ರಹ್ಮಣ್ಯ ಅವರು ತೀ.ನಂ.ಶ್ರೀ. ಅವರ ಪುಸ್ತಕದ ಸಂಪತ್ತು ಇಂಗ್ಲಿಷ್ ಓದುಗರಿಗೆ ಲಭ್ಯ ಮಾಡಿಕೊಟ್ಟಿದ್ದಾರೆ.

ಒಂದು ಲೋಪವನ್ನು ಪ್ರಸ್ತಾಪಿಸಬೇಕು. ಇಂಥ ಪುಸ್ತಕಗಳಿಗೆ ವಿಷಯ ಸೂಚಿ ಇದ್ದೇ ತೀರಬೇಕು. ಮೂಲ ಕನ್ನಡ ಕೃತಿಗೆ ಇಲ್ಲ. ಆದರೆ ಕರ್ನಾಟಕದಾಚೆಯೂ, ಭಾರತದಾಚೆಯೂ ವಿದ್ವಾಂಸರು ಬಳಸುವ ಇಂಥ ಶಾಸ್ತ್ರೀಯ ಗ್ರಂಥದಲ್ಲಿ ವಿಷಯ ಸೂಚಿಯನ್ನು ಬಿಡುವಂತಿಲ್ಲ. ಮುಂದಿನ ಆವೃತ್ತಿ ಪ್ರಕಟವಾಗುವಾಗ ವಿಷಯ ಸೂಚಿಯನ್ನು ಒಳಗೊಂಡಿರುತ್ತದೆ ಎಂದು ಆಶಿಸುತ್ತೇನೆ.

ಭಾರತೀಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯಮೀಮಾಂಸೆ ಒಂದನ್ನೊಂದು ಶ್ರೀಮಂತಗೊಳಿಸಬಲ್ಲವು. ಭಾರತೀಯ ಕಾವ್ಯಮೀಮಾಂಸೆಯ ಒಳನೋಟಗಳನ್ನೂ ಪರಿಕಲ್ಪನೆಗಳನ್ನೂ ಪಾಶ್ಚಾತ್ಯ ಕಾವ್ಯಮೀಮಾಂಸೆಯೂ ಸಾಹಿತ್ಯ ವಿಮರ್ಶೆಯೂ ಬಳಸಿಕೊಂಡರೆ ಸಾಹಿತ್ಯದ ಅಧ್ಯಯನದಲ್ಲಿ ಸಂಭ್ರಮಗೊಳಿಸುವ ಬೆಳವಣಿಗೆಗಳು ಆಗಬಹುದು.

(ತೀನಂಶ್ರೀಯವರಿದ್ದಾಗಲೆ ೧೯೬೧ರಲ್ಲಿ ಪ್ರಕಟವಾದ ಎರಡನೆಯ ತಿದ್ದಿದ ಆವೃತ್ತಿ ಮತ್ತು ಅನಂತರದ ಮರುಮುದ್ರಣಗಳಲ್ಲಿ 'ವಿಷಯ ಸೂಚಿ'ಯನ್ನು ಸೇರಿಸಲಾಗಿದೆ –ಸಂಪಾದಕ)

ಒಲುಮೆ

●

ಪತ್ರಗಳು .

ಗೋಪಾಲಕೃಷ್ಣ ೦೬-೦೧-೧೯೩೩

ತಮ್ಮ ಒಲವಿನ ಒಲುಮೆಯು ಕರಗತವಾಗಿ ಇಷ್ಟು ದಿವಸಗಳಾದರೂ ನಾನು ತಮಗೆ ಬರೆಯದೇ ಇದ್ದುದು ನನ್ನ ದೊಡ್ಡ ತಪ್ಪು. ಆದರೆ ಅದು ಆದುದು ಹೀಗೆ. ಅದನ್ನು ಓದಿದ, ಓದಿ ಆನಂದಿಸಿದ ಮರುದಿನವೇ ತಮಗೆ ಕಾಗದ ಬರೆಯಬೇಕೆಂದು ಕುಳಿತೆ. ಎಷ್ಟೋ ಬರೆಯಬೇಕೆಂದೆನಿಸುತ್ತಿತ್ತು. ಅವುಗಳನ್ನು ಓದುತ್ತಿದ್ದಾಗ ಪ್ರತಿ ಪದ್ಯವೂ ಹೃದಯದಲ್ಲಿನ ಚಿಲುಮೆಯನ್ನು ತಣಿಸುತ್ತಿತ್ತು. ತಾವು ಏನು ತಿಳಿದುಕೊಳ್ಳುತ್ತೀರೋ. ಆ ಹೊತ್ತಿನಲ್ಲಂತೂ ಕವಿಯನ್ನು ಆಲಂಗಿಸಕೊಳ್ಳಬೇಕೆಂದು ಎನಿಸುತ್ತಿತ್ತು. ಅದರಲ್ಲಿಯೂ ತಮ್ಮ "ಒಲವೋ ಹಗೆಯೋ", "ಪ್ರಶ್ನೆ ಉತ್ತರ", "ಹೂವಿನ ಸರ", "ಏಕೆ ನಲುಗಿತು", "ಪ್ರೇಮ ಭೈರವ", ಯಾವುದು ಹೇಳಲಿ, ಯಾವುದು ಬಿಡಲಿ. ನಿಮ್ಮ ಕವಿತೆಗಳನ್ನೇ ಮೀರಿಸುವ ನಿಮ್ಮ ಸಂಸ್ಕೃತದ ಅನುವಾದಗಳು, ಅವು ಒಂದೊಂದೂ ಒಂದೊಂದು ರತ್ನಗಳು. ಇವು ಎಲ್ಲವಕ್ಕಿಂತಲೂ ಕೋಲರಿಡ್ಜ್ ಕವಿಯ ಆ ಭಾಷಾಂತರ, ಅದನ್ನು ಅನೇಕರು ಮಾಡಿದ್ದಾರೆ. ನಾನೇ ಒಂದು ಸಲ ಮಾಡಿ ಕೃಷ್ಣರಾಯನ ಪುಸ್ತಕದಲ್ಲಿ ಬರೆದಿಟ್ಟಿದ್ದೆನಂತೆ, ಆದರೆ ತಮ್ಮ ಭಾಷಾಂತರ– ಎಲ್ಲವೂ ನನ್ನನ್ನು ಮುಗ್ಧನನ್ನಾಗಿ ಮಾಡಿಬಿಟ್ಟಿತು. ಇವುಗಳನ್ನು ನಾನು ತಮಗೆ ಬರೆಯುವದಕ್ಕಿಂತ ಅಲ್ಲಿಗೆ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ಬಂದಾಗ ತಮ್ಮಲ್ಲಿ ಬಿನ್ನವಿಸಿಕೊಳ್ಳಬೇಕೆಂದಿದ್ದೆ. ತಾವಿತ್ತ ಆನಂದಕ್ಕೆ ವಂದನೆಗಳನ್ನು ಅರ್ಪಿಸಬೇಕೆಂದಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ.

ನಮ್ಮ ರಾಮಚಂದ್ರಯ್ಯ ಹೇಳಿದ, ತಮ್ಮ ಕೋಲರಿಡ್ಜ್ ಕವಿಯ ಭಾಷಾಂತರ ಕವಿ ಸಮ್ಮೇಳನದಲ್ಲಿ ಎಲ್ಲರನ್ನೂ ತಲ್ಲೀನಗೊಳಿಸಿತಂತೆ. ಅದರಲ್ಲಿ ಆಶ್ಚರ್ಯವೇನು!

ಈ ಕವನಗಳಿಗೋಸ್ಕರ ತಮಗೆ ನನ್ನ ವಂದನೆಗಳನ್ನು ಅರ್ಪಿಸಬೇಕೋ "ನನ್ನೆದೆಯೊಳಡಗಿದ್ದ ಕಿಡಿಯಿದನು ಮೊದಲು, ನಿನ್ನೊಲುಮೆಯೆಲರುರುಹಿ ಬಯಲಿಗೆಳೆದ" – ಗೆ ಯವರಿಗೆ ನಮಸ್ಕಾರಗಳನ್ನು ಮೊದಲು ಸಮರ್ಪಿಸಬೇಕೋ ನಾನರಿಯೆ.

* * *

ಗೊರೂರು ರಾಮಸ್ವಾಮಿ ಅಯ್ಯಂಗಾರ್ ೦೧-೦೨-೧೯೩೩

ತಾವು ನನ್ನಲ್ಲಿ ವಿಶ್ವಾಸವಿಟ್ಟು ಕಳುಹಿಸಿದ ತಮ್ಮ ಅಮೌಲ್ಯವಾದ ಗ್ರಂಥದ ಪ್ರತಿ ನನಗೆ ಸಕಾಲದಲ್ಲಿ ತಲುಪಿತು. ಪುಸ್ತಕವನ್ನು ಓದಿದುದರಿಂದ ಬಹಳ ಸಂತೋಷವೂ, ತಾವು ಅದನ್ನು ನನಗೆ ಕಳುಹಿಸಿದಿರೆಲ್ಲಾ ಎಂಬ ಹೆಮ್ಮೆಯೂ ಆಗಿನಿಂದ ನನಗೆ ಉಂಟಾಗಿದ್ದುದನ್ನು ಹೇಳಿಕೊಳ್ಳಲು ಈವರೆಗೆ ಅವಕಾಶವಾಗಲಿಲ್ಲ. ಎರಡು ಮೂರು ಸಲ ಕಾಗದ ಬರೆಯುವುದಕ್ಕೆ ಪ್ರಾರಂಭಿಸಿ ಏನೂ ಬರೆಯುವುದಕ್ಕೆ ತೋರದೆ ಹಾಗೆಯೇ ಸುಮ್ಮನಾದೆ. ತಾವು ಕಳುಹಿಸಿದ ಅಮೌಲ್ಯವಾದ ಪುಸ್ತಕಕ್ಕೆ ಪ್ರತಿಯಾಗಿ ತೆಪ್ಪನೆ "ನಾನೂ ಕ್ಷೇಮ ನೀನೂ ಕ್ಷೇಮ ತಾನೆ" ಎಂದು ಬರೆದು ಸುಮ್ಮನಾಗುವುದಕ್ಕೆ ಧೈರ್ಯ ಬರಲಿಲ್ಲ. ಆದರೆ ಈಗ ಮಾತ್ರ ಬಹಳ ಪ್ರೌಢವಾದ ಕಾಗದವನ್ನು ಬರೆಯುತ್ತಿದ್ದೇನೆಂದಲ್ಲ. ನನ್ನಿಂದ ಸಾಧ್ಯವಿಲ್ಲದ ಯಾವುದೋ ಕೆಲಸವನ್ನು ಮಾಡುತ್ತೇನೆಂದು ಕಾಲ ಹಾಕುತ್ತಾ ಮಾಡಬೇಕಾದುದನ್ನು ಮರೆತುಬಿಡಬಹುದೆಂಬ ಭಯದಿಂದ ಈ ಕಾಗದ ಗೀಚಿದ್ದೇನೆ.

ತಮ್ಮ ಕವಿತೆಯ ವಿಚಾರ ನಾನೇನೂ ಹೇಳುವುದಿಲ್ಲ. ತಾವು ಸ್ವತಃ ಕವಿಗಳು, ಕನ್ನಡ ಸಂಸ್ಕೃತ ಇಂಗ್ಲೀಷಿನಲ್ಲಿ ವಿದ್ವಾಂಸರು. ಕಾವ್ಯದ ತಿರುಳಿಂದ ಸ್ಫೂರ್ತಿಯನ್ನೂ, ಅದರ ತೊಗಟೆಯಾದ ವ್ಯಾಕರಣಾದಿ ಭಾಷಾ ಪಾರಿಶುದ್ಧತೆಯನ್ನೂ ಪೂರ್ಣವಾಗಿ ಹೊಂದಿದವರು. "ಭಾಷೆ ಸೊಗದಾಗಿದೆ, ವ್ಯಾಕರಣ ಕೆಟ್ಟಿಲ್ಲ, ಆದರೆ ಒಳಗೇನಿದೆಯೋ" ಎಂಬುದಾಗಿ ನೋಡಿದರೆ "ಭಾವಗಳೆಲ್ಲಾ ಹಿತವಾಗಿವೆ. ಪಾಂಡಿತ್ಯವೂ ಕಾವ್ಯವೂ ಒಂದನ್ನೊಂದು ಅನುಸರಿಸಿಕೊಂಡು ಹೋಗಿವೆ" ಎಂದು ತೋರುತ್ತದೆ. ಎರಡನೆಯ ಭಾಗದಲ್ಲಿಯ ಸಂಸ್ಕೃತದ ಅನುವಾದಗಳು "ಪ್ರೇಮ ಭೈರವ, ತ್ರಿಪದಿ, ಅರಿತಗಳನ್ನು ತಾಳದವರಿಗದರ ಗೊಡವೆ ಏತಕೆ, ಒಲವೊ ಹಗೆಯೋ" ಎಲ್ಲಾ ಬಹಳ ಚೆನ್ನಾಗಿ ಬಂದಿವೆ. ನಾನು ಕವಿಯಲ್ಲ, ವಿಮರ್ಶಕನಲ್ಲ ಆದರೆ ತಮ್ಮ ಕವಿತೆಗಳನ್ನು ಓದಿದೆ. ಬಹಳ ಆನಂದವಾಯಿತು. ಮನಸ್ಸು ಕೆಣಕಿ ವಿಚಾರವು ಉದ್ಭವಿಸುವಂತೆ ಆಯಿತು. ಸಾಮಾನ್ಯ ಜನರು ನನ್ನಷ್ಟೇ ಸಂಸ್ಕೃತಿಯುಳ್ಳವರೆಂದು ಕಾಣುತ್ತದೆ. ಅವರಿಗೂ ತಮ್ಮ ಗ್ರಂಥವು ಆನಂದವನ್ನು ಉಂಟುಮಾಡಿಯೇ ಮಾಡುತ್ತದೆ. ಟಾಗೋರರ 'ಎಂತು ನೀನಿರುವೆಯೋ ಅಂತೆ ಬಾ ನನ್ನ ಬಳಿಗೆ' ಎಂಬ ಪದ್ಯವನ್ನು ಸೇರಿಸಬಹುದಾಗಿತ್ತು. ಶ್ರೀಮಾನ್ ಮಾಸ್ತಿಯವರು ತಾವು ಮಾಡಿದ ಟಾಗೋರರ ಮೇಲಿನ ಉಪನ್ಯಾಸದಲ್ಲಿ, ತಾವು ಅನುವಾದ ಮಾಡಿದ come on you are ಎಂಬ ಪದ್ಯವನ್ನು ಹೇಳಿದರು. ಶ್ರೀಮಾನ್ ಮಾಸ್ತಿಯವರ ಅನುವಾದ ಸ್ವಲ್ಪವೂ ಚೆನ್ನಾಗಿರಲಿಲ್ಲ. ಆಗ ನನಗೆ ನಿಮ್ಮ ಅನುವಾದದ ಜ್ಞಾಪಕ ಬಂತು. ಅದನ್ನು ನೀವು ಇಲ್ಲಿ ಯಾಕೆ ಸೇರಿಸಲಿಲ್ಲವೋ ಕಾಣೆ. Copyright ನ ಅವಸ್ಥೆಯೇನೋ! ಆ ಪದ್ಯ ಮೊದಲು ಜಯಕರ್ನಾಟಕದಲ್ಲಿ ಬಂದಾಗ ನೋಡಿದ್ದೆ. ಉರು ಹಾಕಿದ್ದೆ. ಈಚೆಗೆ ಶ್ರೀಮಾನ್ ಮಾಸ್ತಿಯವರೂ ಧಾರವಾಡದ ಒಬ್ಬಿಬ್ಬರು ಇತರರೂ ಅದನ್ನೇ ಅನುವಾದ ಮಾಡಿದ್ದಾರೆ. ಆದರೆ ಅವು ಯಾವುದೂ ನಿಮ್ಮ ಪದ್ಯದಷ್ಟು ಹಿತವಾಗಿಲ್ಲ. ತಮ್ಮನ್ನು ಹೊಗಳುವ ಅಭಿಪ್ರಾಯದಿಂದ ನಾನು ಈ ರೀತಿ ಬರೆದಿಲ್ಲವೆಂದೂ ಮನಸ್ಸಿನಲ್ಲಿ ಇದ್ದುದ್ದನ್ನು ಹೇಳಿರುವೆನೆಂದೂ ನೀವು ತಿಳಿಯಬೇಕೆಂದು ಕೋರುತ್ತೇನೆ.

ಕಾಗದ ಉದ್ದವಾಯಿತು, ಬೇಜಾರಾಗಬಹುದು ಕ್ಷಮಿಸಿ.

* * *

ಹೆಚ್.ಎಂ. ಶಂಕರನಾರಾಯಣರಾವ್ ೨೦-೧೦-೧೯೫೩

ಒಲುಮೆ ಹೃದಯದ ಪವಾಡ, ಅದು ಬರಿದೆ ಹೇಗೆ ತಾನೆ ಘಟಿಸುತ್ತದೆ ಎಂದು ನೀವು ಹೇಳಿಲ್ಲವೇ? ಈ ಉಕ್ತಿ ಒಲಿದ ಹೃದಯಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಪ್ರೇಮ ವಾತ್ಸಲ್ಯಗಳು ಎಲ್ಲೆಲ್ಲಿ ಉಂಟೋ ಅಲ್ಲೆಲ್ಲ ಅನ್ವಯಿಸುತ್ತದೆ ಎಂದು ನನಗೆನಿಸುತ್ತದೆ. ನಾನು ಇದುವರೆಗೆ ನಾಲ್ಕಾರು ಪುಸ್ತಕಗಳನ್ನು ಅಚ್ಚು ಮಾಡಿಸಿದೆ. ಆದರೆ ಒಲುಮೆಯ ಪುಸ್ತಕದ ಅಚ್ಚು ಪ್ರಕಟನೆ ಆದಷ್ಟು ಸುಸೂತ್ರ ಇನ್ನಾವುದೂ ಆಗಲಿಲ್ಲ. ಹೂವಿನ ಸರವೆತ್ತಿದಂತೆ ಈ ಪ್ರಕಟನೆ ಆಯಿತು. ಇದಕ್ಕೆ ನಿಮ್ಮ ನಿಷ್ಕಲ್ಮಷವಾದ ವಾತ್ಸಲ್ಯವೇ ಕಾರಣವೆಂದು ತಿಳಿಯುತ್ತೇನೆ. ನೀವಿಟ್ಟ ಒಂದು ತುತ್ತು ಅನ್ನ, ಕಲಿಸಿದ ಎರಡು ಅಕ್ಷರವಲ್ಲವೆ ನನ್ನ ಮನೆ ಬೆಳಗುತ್ತಿರುವುದು? ಈ ಊರಿನಲ್ಲಿ ನೀವಿದ್ದಿದ್ದರೆ ಅಚ್ಚಾದ ಪುಸ್ತಕವನ್ನು ನಿಮ್ಮ ಕೈಯಲ್ಲಿಟ್ಟು ಹರಕೆಯನ್ನು ಪಡೆಯುತ್ತಿದ್ದೆ. ಈಗ ಅದಕ್ಕೆ ಮಾರ್ಗವಿಲ್ಲವಾಗಿ ಅಂಚೆಯ ಮೂಲಕ ಅದನ್ನು ಕಳುಹಿಸಿ ಇಲ್ಲಿಂದಲೇ ಭಕ್ತಿಯಿಂದ ಕೈ ಮುಗಿದು ನಿಮ್ಮ ಹರಕೆಯನ್ನು ಬೇಡುತ್ತೇನೆ. ಅದೇ ನನಗಿರುವ ರಕ್ಷೆ.

ಈ ಶನಿವಾರ ಕರ್ಣಾಟಕ ಸಂಘದವರು ಒಲುಮೆಯ ಪ್ರೇಮಾರಾಧನದ ಉದ್ಘಾಟನದ ಉತ್ಸವವನ್ನು ಶ್ರೀ ಎನ್. ಶಿವರಾಮಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನೆರವೇರಿಸುವರು. ಗಾಥಾ ಸಪ್ತಶತಿಯ ಅನುವಾದಗಳು ಬಹುಮುದ್ದಾಗಿ ಬಂದಿವೆಯೆಂದು ಎಲ್ಲರೂ ಹೇಳುತ್ತಾರೆ. ಇನ್ನೂ ಹೆಚ್ಚಾಗಿ ತಾವು ಮಾಡಿದರೆ ಸೊಗಸು ಎನ್ನುತ್ತಾರೆ.

* * *

ಹೆಚ್.ಎಂ. ಶಂಕರನಾರಾಯಣರಾವ್ ೩೧-೧೦-೧೯೫೩

ಇಷ್ಟು ಶ್ರಮಪಟ್ಟರೂ ಮೂರು ಜನ ನೋಡಿದರೂ ಮುದ್ದಾಗಿ ಅಚ್ಚಾದ ಪುಸ್ತಕದಲ್ಲಿ ಕಳಂಕ ಒಂದಲ್ಲ ಎರಡು ಉಳಿದದ್ದು ನನ್ನ ಮನಸ್ಸಿಗೆ ತುಂಬ ಖೇದವನ್ನು ತಂದಿದೆ. ಈ ಎರಡು ತಪ್ಪುಗಳು ಖಂಡಿತ ಪ್ರೆಸ್ಸಿನ ಚಾತುರ್ಯಗಳಲ್ಲ. ನಿಮ್ಮ ಕಾಗದ ಬಂದ ಮೇಲೆ Strike order Proof ನೋಡಿದಾಗ ಆ ತಪ್ಪುಗಳಿದ್ದು ನಮ್ಮ ಕಣ್ಣಿನಿಂದ ನುಸುಳಿಕೊಂಡು ಹೋಗಿದ್ದುದು ಗೊತ್ತಾಯಿತು. ಅಂಜಿಕೆ ಪದ್ಯದಲ್ಲಿ ಮೈಮರೆತು ಎಂಬುದಕ್ಕೆ ಮೈಮರತು ಎಂದಿದ್ದುದನ್ನು ನೋಡಿ ತಿದ್ದಿದೆ. ಇವು ನನ್ನಿಂದ ನುಸುಳಿಕೊಂಡವು. ಒಲಿದನೇಕೆ ಎಂಬ ತಪ್ಪು ಕಣ್ಣಿಗೆ ಬೀಳುವ ವೇಳೆಗೆ ಅಚ್ಚು ಮುಗಿದಿತ್ತು! ಮೌನ ಸನ್ನಿವೇಶಕ್ಕೆ ಸರಿಯೆಂದುಕೊಂಡಿದ್ದೆ. ಶನಿವಾರ ಶ್ರೀ ಶಿವರಾಮಶಾಸ್ತ್ರಿಗಳು ಅಮರು ಶತಕದ ಪದ್ಯಗಳನ್ನು ರಮ್ಯವಾಗಿ ಬಣ್ಣಿಸಿದ್ದರು. ಅದರ ಗುಂಗು ತಲೆಯಲ್ಲೇ ಇತ್ತು. ನಿಮ್ಮ ಕಾಗದ ಸೋಮವಾರ ಬಂದು ಮಾತಿನ ಅರ್ಥ ಪರಿಸ್ಫುಟವಾಗಿ ಮನಸ್ಸಿಗೆ ಖೇದವನ್ನು ತಂದಿತು. ಈಗ ಕೆಲಸ ಮಿಂಚಿ ಹೋಗಿದೆ. ಈ ಪ್ರೆಸ್ಸಿಗೆ ಇಷ್ಟರ ಮಟ್ಟಿಗೆ ಆದುದೇ ಒಂದು ಸಮಾಧಾನ. ಈ ಅಚಾತುರ್ಯಕ್ಕೆ ನನ್ನನ್ನು ಕ್ಷಮಿಸಿ.

ಪ್ರಕಾಶನ ಕಾರ್ಯ ಚೆನ್ನಾಗಿ ನೆರವೇರಿತು. ಆದರೆ ಸಂಜೆ ಮಳೆ ಬಂದಿದ್ದರಿಂದ ಎಷ್ಟು ಜನ ಬರಬೇಕೋ ಅಷ್ಟು ಜನ ಬರಲಿಲ್ಲ. ಶ್ರೀ ರಾಘವಾಚಾರ್ಯರ, ಶ್ರೀ ಭಟ್ಟರ,

ಶ್ರೀ ಶಾಸ್ತ್ರಿಗಳ ಭಾಷಣಗಳು ಬಲು ಸೊಗಸಾಗಿದ್ದವು. ರಾಘವಾಚಾರ್ಯರು ನಿಮ್ಮ ಕವಿತೆ ವಿಮರ್ಶೆಯನ್ನು ಆರನಾಡ್ಡಿಗೆ ಹೋಲಿಸಿದರು. ಶಾಸ್ತ್ರಿಗಳು ಒಲುಮೆಯನ್ನು ಕನ್ನಡ ಅಮರು ಶತಕವೆಂದರು. ಓದುತ್ತಿದ್ದಾಗ ನೀವಿಬ್ಬರೂ ಕನ್ನಡದಲ್ಲಿಯೇ ಬರೆಯಬೇಕು ಮಾತನಾಡಬೇಕು ಎಂದು ಮಾಡಿಕೊಂಡು ರುಜು ಹಾಕಿದ್ದ ಪ್ರತಿಜ್ಞೆಯನ್ನು ನೆನಪಿಗೆ ತಂದುಕೊಂಡರು. ಅಪೂರ್ವ ಕಲ್ಪನೆಗಳ ತೌರು ಒಲುಮೆ ಎಂದು ಒಲವೊ ಹಗೆಯೊ ಎಂಬ ಪದ್ಯವನ್ನು ತಾವೇ ಓದಿ ತೋರಿಸಿದರು. ಆ ಬಳಿಕ ಅಮರು ಶತಕದ ಸ್ವಾರಸ್ಯವನ್ನು ವಿವರಿಸಿದರು. ಎಲ್ಲಕ್ಕೂ ಮಿಗಿಲಾಗಿ ಶ್ರೀ ಇಂದಿರಾಬಾಯಿಯವರು ತಮ್ಮ ಮೃದು ಮಧುರವಾದ ವಾಣಿಯಿಂದ ನೇತ್ರ ನಟಿಯರು ಬಿಸಿಲುಕುದುರೆಯನ್ನು ಹಾಡಿ ನಮ್ಮನ್ನು ಮುಗ್ಧಗೊಳಿಸಿದರು. ಈ ಭಾಷಣಗಳ ವಾಚನಗಳ ಗುಂಗು ಮೂರು ನಾಲ್ಕು ದಿನಗಳವರೆಗೂ ಇತ್ತು. ನಿಮ್ಮ ಗ್ರಂಥದ ಪುನಪ್ರಕಾಶನವನ್ನು ನಿಮ್ಮ ಮಿತ್ರರಾದ ಶಾಸ್ತ್ರಿಗಳು ಮಾಡುತ್ತಿರುವುದನ್ನು ಧಾರವಾಡದಲ್ಲಿ ನೀವು ನೆನೆದು ಹರ್ಷಗೊಳ್ಳುತ್ತಿರುವಿರೆಂದು ನಾನು ಸ್ವಾಗತ ಭಾಷಣದಲ್ಲಿ ಹೇಳಿದ ಮಾತು ಉಚಿತವೆಂದು ನಂಬುತ್ತೇನೆ.

* * *

D.V. Gundappa 27-11-1953

By the courtesy, of our friend Mr. Krishnachar, I got this morning your love gift - ಒಲುಮೆ. It will be among my dear bed-books: and if we had true aristocrats, it would be adorning their bondoirs.

I am very grateful.

* * *

ಪು.ತಿ. ನರಸಿಂಹಾಚಾರ್ ಬೆಂಗಳೂರು, ೧೯೫೩

'ಒಲುಮೆ' ತಲುಪಿದೆ. ಹೊಲಕಾಯುವ ಚದುರೆ is my discovery–ಬಹಳ ಚಲೋ ಇದೆ. ನೇತ್ರನಟಿಯರು Sastry's discovery. 'ನೀಡುಪಾಥೇಯ'ದಲ್ಲಿ ಮುತ್ತಿಗೆ ಹೆದರದವನು ಮುಕ್ತಕದ ಲೀಲೆಗೆ ಅಂಜಿದನಲ್ಲಾ – ಕಿಮಾಶ್ಚರ್ಯ ಮಿತಃಪದಂ? "ಅದನು ಬಿಗಿಯಲಿ ನಿನ್ನದಿಟ್ಟ ಹನಿದೋರಿ – Ah, honey! ಪ್ರೇಮಭೈರವ and ಒಲವೊ ಹಗೆಯೋ remain still untamable thrillers. ಪುಸ್ತಕ ನನ್ನ ಕಣ್ಮರೆಯಾಗಿ ಎಷ್ಟೋ ದಿವಸಗಳಾಗಿತ್ತು ಈಗ ಪುನಃ ಹಸ್ತಗತವಾಗಿ ಬಹಳ ಸಂತೋಷವನ್ನು ತಂದಿದೆ. ಹಳೆಯ ಪ್ರತಿ ಹೇಗಿತ್ತೆಂದೆ ಮರೆತು ಹೋಗಿರುವುದರಿಂದ ಈ ಪ್ರತಿಯೇ ಬಲು ಓದಲು ಸೊಗಸಾಗಿ ಕಾಣುತ್ತದೆ. ಪಾರಿಜಾತ ಮತ್ತು ಇತರ ಪದ್ಯಗಳು Tagore's translations ಏನು ಪಾಪ ಮಾಡಿದ್ದುವು – ಔಚಿತ್ಯಾನೌಚಿತ್ಯಗಳ ವಿಮರ್ಶೆಗೆ ಸಿಕ್ಕಿ ಅವು ಕಂದಿ ಹೋಗಬೇಕೆ? – ಇವರ ಮೂರನೆಯ ಭಾಗವಾಗಿ

ಸೇರಿಸಬಹುದಾಗಿತ್ತು. ಒಲುಮೆಗೆ ಕೊನೆಮೊದಲುಂಟೆ "ಎಂತು ನೀನಿರುವೆಯೋ ಅಂತೆ ಬಾ ನೀನೆನ್ನ ಬಳಿಗೆ" ಇದು ಒಲವಲ್ಲವೆ? ಪುಷ್ಪ ಪ್ರೇಮ ಯಾವ ಜಾತಿಯ ಪ್ರೇಮಕ್ಕೆ ಸೇರಿದ್ದು? 'ತಾವರೆಯೊಂದೇ ಜಗದಲಿ ಹೂವೆ' ಎಂದ ಕವಿ ಪ್ರಣಯಕ್ಕೆ ಮಾತ್ರ ಒಲವನ್ನು ಲಗತ್ತಿಸಿರುವುದು ಮೌಢ್ಯವಲ್ಲವೆ? ಇತ್ಯಾದಿ ನಿಷ್ಠುರ ವಾಕ್ಯಗಳು ಹೊರಬೀಳುತ್ತವೆ. ತದ್ರಿಕ್ತ ಪುಸ್ತಕವನ್ನು ನೋಡಿ ಉದ್ರಿಕ್ತನಾಗಿ.

* * *

ಎಂ.ವಿ. ಸೀತಾರಾಮಯ್ಯ ಬೆಂಗಳೂರು, ೧೪-೧೨-೧೯೫೩

ಶ್ರೀ. ಎಚ್.ಎಂ. ಶಂಕರನಾರಾಯಣರಾಯರು 'ಒಲುಮೆ'ಯ ಪ್ರತಿಯೊಂದನ್ನು ಕಳಿಸಿ ಕೊಟ್ಟಿದ್ದಾರೆ. ತೃಪ್ತಿಕರವಾಗಿ ಮುದ್ರಣವಾಗಿದೆ. ಕವನಗಳನ್ನು ಮತ್ತೆ ಓದಿದೆ: ಮಾಸದ ಹೊಸತನ ಇದ್ದೇ ಇದೆ; ಪರಿಶುದ್ಧ ರುಚಿ ಸಂಸ್ಕಾರವುಳ್ಳವರಿಗೆ ಎಂದೆಂದಿಗೂ ಸೊಗಸತಕ್ಕವು.

ಓದಿಯಾದ ಮೇಲೆ, ಪ್ರಣಯಭಾರ ಪ್ರಪಂಚದಲ್ಲಿದ್ದಾಗ, ಅಕಸ್ಮಾತ್ ರಾಧಾಕೃಷ್ಣ ಚಿತ್ರವೊಂದು ಕಣ್ಣಿಗೆ ಬಿದ್ದಾಗ, ಒಂದು ಕವನ ಮೂಡಿತು. ಅದನ್ನು ಇದರೊಂದಿಗೆ ಇರಿಸಿದ್ದೇನೆ. ಓದಿ, ನಿಮ್ಮ ಅಮೂಲ್ಯ ಅಭಿಪ್ರಾಯ ತಿಳಿಸಬೇಕೆಂದು ಬೇಡುತ್ತೇನೆ. ಸದ್ಯಃ ಪ್ರಕಟನೆಗೆ ಅರ್ಹವಾಗಿದೆಯೆ? ಮುಖ್ಯವಾಗಿ, ಗುರುತುಮಾಡಿರುವ ಪದಗಳ ಔಚಿತ್ಯದ ಬಗೆಗೆ ಮನಸ್ಸು ಇಬ್ಬಗೆಯಾಗಿದೆ. ನಿಮ್ಮ ರುಚಿ ಸಿದ್ಧಿಯ ಸಲಹೆಯ ಬೆಳಕು ಅವಶ್ಯ. ತೊಂದರೆ ಕ್ಷಮಿಸಬೇಕು.

* * *

ಕೆ.ಎಸ್. ನರಸಿಂಹಸ್ವಾಮಿ 'ಶ್ರೀಕಂಠತೀರ್ಥ'ದ ಲೇಖನದಿಂದ

\- - - - - -

ಪ್ರೇಮಜೀವನದ ಬಗೆಬಗೆಯ ಸುಳಿವು ಹೊಳಹುಗಳನ್ನು ಚಿತ್ರಿಸುತ್ತ ಹೋಗುತ್ತದೆ 'ಒಲುಮೆ'. ಕೆಲವು ಚಿತ್ರಗಳಂತೂ ಅನ್ಯಾದೃಶ :

"ಹಿರಿಯರಿರುವರೆಂದು ನಾಚಿ ನುಡಿಯಲಾರದವಳ ಕೊರಗು
ತೆರೆದ ತುಟಿಯ ನಡುಕ, ಇನಿಸು ಬೆವತು ಕೆಂಪಗಾದ ಕೆನ್ನೆ,
ನೀರ ತೆರೆಯ ಹಿಂದೆ ಕಣ್ಣು ಬೀರುತಿರುವ ಬಯಕೆ ನೋಟ-
ಊರಿಗಿದನು ನೋಡಿ ನೋಡಿ ಹೊರಡಲಾರೆ, ನಿಲ್ಲಲಾರೆ."

ಕವಿ ಎಷ್ಟು ಜಾಣ್ಮೆಯಿಂದ ಮುತ್ತಿನಂಥ ಮಾತುಗಳನ್ನು ಆಯ್ಕೆಮಾಡಿ ಅವುಗಳಲ್ಲಿ ಎಷ್ಟು ನವಿರಾದ ಭಾವಗಳನ್ನು ನುಡಿಸಬಲ್ಲರು ಎಂಬುದನ್ನು ಈ ಮುಕ್ತಕದಲ್ಲಿ ಕಾಣಬಹುದು. ಅಮರುಕನ ಶ್ಲೋಕಕ್ಕೆ ಸಮನಾಗಿ ನಿಲ್ಲಬಲ್ಲ ಇಂಥ ಕೆಲವನ್ನಾದರೂ ಇವರು ಹೊಸಗನ್ನಡ ಸಾಹಿತ್ಯಕ್ಕೆ ಅರ್ಪಿಸಿರುವುದು ಇಲ್ಲಿ ನಾವು ಗಮನಿಸಬೇಕಾದ ಸಂಗತಿ. ಈ ನಯ, ಈ ಹದ,

ಈ ಅಚ್ಚುಕಟ್ಟು, ಈ ಬಿಗಿ – ಇವರ ಪ್ರತಿಭೆಯ ವಿಶೇಷ ಲಕ್ಷಣಗಳು. 'ಒಲುಮೆ' ಅವರ ಒಂದು ವಿಶಿಷ್ಟ ಕೃತಿ. ಮೂರ್ತಿ ಚಿಕ್ಕದು, ಪ್ರಭಾವ ದೊಡ್ಡದು.

ಇಷ್ಟು ಚೆಲುವಾಗಿ ಕವಿತೆ ಬರೆಯುತ್ತಿದ್ದವರು ಬರೆದ ಒಟ್ಟು ಕವಿತೆ ಪ್ರಮಾಣದಲ್ಲಿ ಸ್ವಲ್ಪವೇ ಆಯಿತು ಎನಿಸಬಹುದು. ಒಂದು ಕವನ ಸಂಗ್ರಹ. ಒಂದು ಅನುವಾದ ಮಾಲೆ, ಜತೆಗೆ ಮೂರೋ ನಾಲ್ಕೋ ಬಿಡಿಕವನಗಳು. ಹೀಗಾದ್ದಕ್ಕೆ ಕಾರಣಗಳನ್ನು ನಾನು ಹುಡುಕುತ್ತಿಲ್ಲ. ಅವರು ಕೊಟ್ಟಿದ್ದರಲ್ಲಿ ನಮಗೆ ಪ್ರಿಯವೆನಿಸಿದ್ದನ್ನು ನಾವು ಇಟ್ಟುಕೊಳ್ಳಬಹುದು. ಇಲ್ಲಿನ ಕೆಲವಾದರೂ ಕವನಗಳು ಕಾಲದ ಉಪಟಳದಿಂದ ಪಾರಾಗುವಷ್ಟು ಶಕ್ತಿಯುತವಾಗಿವೆ ಎಂದು ನನ್ನ ಭಾವನೆ.

'ಒಲುಮೆ'ಯದು ಶುಚಿಯಾದ ವಾಣಿ, ಹಿತವಾದ ರೀತಿ.

ರಾಕ್ಷಸನ ಮುದ್ರಿಕೆ

●

ವಿಮರ್ಶೆಗಳು

V. Sitaramaiah The Hindu, 20-09-1942

Mudrarakshasa is known to students of the Indian Drama as perhaps the best play of political intrigue written in ancient India. It has been put into Kannada once before, but a free version like the one under review clearing the plot of much intricacy and cumber was very much needed. The play is here rendered into excellent Kannada flexible, smooth and efficient - the kind of writing for which Mr. T.N. Sreekantaiya has a special gift. The drift of events is shown up as it progresses from point to point till it fulfils itself in achievement. The author permits himself some transposition of scenes, incident and dialogue; a few new links are added; character and situation are occassionally interpreted; and long monologues with their bunches of verse are either condensed or as in the one by Chanakya in Act One, worked into dialogue. No essential elements are sacrificed and a high degree of accuracy is achieved in translating many tough and terse bits of Sanskrit. Altogether the play is now made extremely fit for enjoyment and presentation on the stage.

But gain in clearness and directness may not quite compensate for a loss in subtlety, suspense and dramatic vigour which are so much a feature of Visakhadatta's play. When motive is presented as a programme of action in too open analysis, much liveliness and tenseness get lost. Flab must no doubt, be cut; but all real muscle may not be kneaded, nor good red blood let off.

The play, it is well known, centres round a battle of wits between that supreme master of craft and intrigue Chanakya, and the trustful, generous, yet not so ruthlessly efficient, nor so lucky Rakshasa, the minister of the Nandas, who plays himself into the hands of a wily opponent, till he is outmanoeuvred and overwhelmed with the same instruments which he had employed to destroy the enemy. Chanakya works as surely as Fate (Niyatiriva) and as inscrutably. He uses the very virtues of the minister to enmesh and capture the worthy. His intellect dominates from beginning to end rendering subjects all other intelligence, effort and purpose, and is ever wakeful, reckless of the means used, confident of itself and of its agents, dividing, betraying, playing on feelings, pretending, plotting and gaining all round. Indeed, if Chanakya was not thoroughly unselfish, or his purpose was less beneficent, and, if his appreciation of real merit was less handsome (*pace* Chandanadasa and Rakshasa) all this would have been evil and hateful.

The minister's signet ring discovered by accident becomes the instrument with which Chanakya encompasses his isolation, so as by a further stroke of skill to make him accept office under Chandragupta, the enemy of his beloved masters. It may look natural, that Chanakya must, therefore, be the one who should speak the last words in the play, a change which our author makes here. But it must be noted that even Chanakya did all this to gain the Rakshasa for Chandragupta's minister; and a Bharatavakya, uttered by the Rakshasa as in the original, will, we think, be the more appropriate as symbolic of the new felicity to achieve which all Chanakya's efforts, and, withal, the entire action of the play have been directed.

Another small point: Chanakya's vow, is only part fulfilled with the destruction of the Nandas and the elimination of other foes. Till the great minister is bound in loyalty to the new king his work is not completed. It is in token of such secure completion of his task that in the original play he is made to tie up his hair, with the magnificent stanza

"Vinaa Vaahana hastibhyo Muchyataam Sarva bandhanam
Poorna pratijnena mayaa kevalam badhyate Sikhaa"

though there is no specific stage direction on it in the play. This point is lost by representing Chanakya as having tied it up even at the beginning of the play. Does he not enter the stage,

Muktaam sikhaam paraamrsan Kupitah?

And stanzas I (9) and III (29) need not be a contrary indication.

Mr. Sreekantaiya's insight into character and powers of interpretation score a beauty when he makes the broken Rakshasa say sadly to himself that his service to the Nandas was over and done with when he threw away his sword on the execution grounds before he offered himself to save his heroic friend. This has turned out to be a first unconscious step towards the new position, almost a preparatory disengagement to the actual transfer of loyalty. The new sword of office must be accepted as a necessary precondition of redeeming the only true friend of the old order now left alive. All this is made bearable because of the genuineness of the approach of Chanakya and Chandragupta to him. Rakshasa's words,

"Aakarah Sarvasaastranam ratnaanaamiva Saagarah
Gunairna paritushyaamo yasya matsarino Vayam"

which are in appreciation of Chanakya's merits should not have been omitted, for they express not only the awe and admiration for a great enemy but are part of an element in self-conciliation. It is noteworthy that Chanakya has more than once avowed his great regard for the Rakshasa's ability and character: and this, along with Chanakya's humility - yes, humility for all his brave sounding swagger - in saying soothingly that it is not he but their fates which have wrought the annihilation of the Nanda race.

* * *

This is a simplified rendering of Vishakhadatta's play, Mudrarakshasam which holds a position unique in the whole range of Sanskrit drama. Sri Sreekantaiya has here cut down long soliloquies and superfluous descriptions. Except in one or two cases, he has either eliminated the verses or else woven their substance into the dialogue. Many other minor changes have been made so as to facilitate telling the story plainly and directly. It concerns the plots, the counterplots, the subterfuges and the ultimate triumph of Chanakya in his determination to force the equally great Rakshasa into the service of Chandra Gupta, whom he was out to slay. The ordinary reader may suspect that for the sake of simplicity and actability, Sri Sreekantaiya may have sacrificed a certain depth in the principal characters. This suspicion hardens, in one who has read the original, into the conviction that Chanakya and the Rakshasa of the present version are not so sweeping and irresistible as in the Sanskrit play. We have evidence of their power but they look washed out and pale. Chanakya's plans work, but the power that motivates them lacks that imperiousness which in the original inspires in all who have to deal with him a feeling of awe and fateful inevitability. A comparison of the opening scenes will bear this out. Chanakya's entrance in the Sanskrit drama is more characteristic - dynamic, defiant, supremely self-possessed. Of the respective soliloquies of Chanakya and the Rakshasa very little remains. Those in the original are full of innumerable minute touches, the cumulative effect of which is a disclosure of contrasting and otherwise little revealed aspects of those two personalities.

This, however, would not lead one to call the present version flat. That it definitely is not. To say that the reader does not experience the fullness of the original is not just criticism of the rendering, because of Sri Sreekantaiya's declared purpose. But when the bare conflict of two characters, within a limited sphere, is expected to support the entire structure of a play, it does not do to have "lean men".

ಕಾವ್ಯ ಸಮೀಕ್ಷೆ

•

ವಿಮರ್ಶೆಗಳು

M. Mariappa Bhat The Hindu, 23-12-1949

In the work under notice, Professor T.N. Sreekantiya has attempted to look at some of the literary gems in a healthy critical spirit and produced a fine piece of literary criticism which is a desideratum in our writings. There are five sections as follows : (1) The tragic element in Kalidasa's dramas, (2) About "Shakuntala", (3) Delineation of Love Sentiment in Janna's Poetry, (4) Sringara incidents in Kannada Bharata and (5) Some of MahaDevi-akka's musings (vachanas). The first two relate to Sanskrit Literature while the rest relate to Kannada Literature. Some years back readers of Prabuddha Karnataka Journal might have read a good bit of these, but now they are presented to us in one volume after a thorough revision. Although they were written at different periods on various incidents, we find in all of them as the author himself puts it, a kindred element - the knotty problem of love.

The first section begins with a beautiful definition of tragedy. He points out how Sanskrit dramatists have all along scrupulously avoided constructing tragedies inspite of Sanskrit Literature being replete with several incidents such as the fall of Ravana, or Duryodhana having true tragic elements in them. He says that Bhasa's "Uru Bhanga" is the only Sanskrit drama that may be termed a tragedy. Then he critically examines the theme of "Vikramorvasiya" of Kalidasa and points out how the Urvasi-Pururava love story of the Rig Veda, a truly tragic one, has been altered by Kalidasa to suit the then prevailing

dramatic cannons of Sanskrit thus missing a golden opportunity for the construction of an essentially beautiful tragic play. In spite of the pleasing poetic excellence, superb similes, wise dialogues treasured in "Vikramorvasiya", the development of the plot is not as it ought to be. Then he takes up "Shakuntala" and after discussing the various criticisms about the drama by great scholars including poet Tagore, he rightly concludes that the work has been executed with consumate skill. He says that Kalidasa probably did not have an eye for tragedy. Yet "Shakuntala" as a drama with a happy-ending has become ten times more beautiful than it would have been had it been a tragedy. In the second section, he deals with the drama "Shakuntala" as a love story and illustrates how in the "crucible of love" Shakuntala's life came off in true lustre.

Then comes a correct estimate of Poet Janna whom he describes as one of the rare poets that could captivate the hearts of their readers by the creation of stirring poetry on love themes. With suitable illustration from his famous works Ananthanatha Purana and Yashodhara Charitra, Mr. Sreekantaiya traces the course of mad immoral love which leads the victims on to miserable ends. Herein Janna stands out pre-eminently as the greatest Kannada poet that beat a new track, true to life, exposing the weakness of the flesh and picturing the terrible hand of fate. The remaining sections too are written in an admirable manner. The style is simple, direct and full of effect. This work is indeed a mile-stone in the highway of literary criticism in Kannada.

* * *

N.K. Kulkarni Indian P.E.N.

This is a collection of five articles all but one of which were orignially contributed to the *Prabuddha Karnataka.* The first two are devoted to the "Consideration of the Tragic Element in Kalidasa's Plays" and to *Shakuntala* which is analysed with a view to showing that the tribulations undergone by the king himself and by Shakuntala

ennoble them and purify their mutual love. Mr. Sreekantaiya presumes that the tragic heroine must have a "tragic flaw" and concludes that since Shakunatala does not possess such a flaw, the play could not end in tragedy. This may not appear convincing to many readers of Kalidasa.

In two other articles in the collection are reviewed the treatment of love in Janna and Kumara Vyasa and the last gives an account of the "Vachans" of Akka Mahadevi, one of the most inspired and saintly poets in Karnataka.

Mr. Sreekantaiya's criticism is both scholarly and sensitive, which makes this booklet valuable to every student of modern Kannada Criticism.

* * *

ಪತ್ರಗಳು

M. Hiriyanna 11-03-1948

I have taken a long time to read your "ಕಾವ್ಯ ಸಮೀಕ್ಷೆ", a copy of which you so kindly sent me. Of the five papers contained in it, I could follow well only the first two which relate to Sanskrit Literature. They are full of acute and discerning comments. As you point out, there is need for a change in our literary outlook; and essays in new criticism like these are very valuable, particularly now when India is entering on a fresh phase in her history.

* * *

ಎಂ. ಗೋವಿಂದ ಪೈ ಡಿಸೆಂಬರ್ ೬

ಈ ಲೇಖನಗಳನ್ನೆಲ್ಲ ಈ ಮುಂಚೆ ಅವು ಅಲ್ಲಲ್ಲಿ ಪ್ರಕಟಿತವಾದಾಗ ಅತ್ಯಾದರದಿಂದ ಓದಿ ಸಂತೋಷಪಟ್ಟಿರುತ್ತೇನೆ. ಆ ಬಗ್ಗೆ ತಮ್ಮನ್ನು ಅಭಿನಂದಿಸುತ್ತೇನೆ. ಈಗ ಅವನ್ನು ಏಕತ್ರ ಪ್ರಕಟಿಸಿ ಪ್ರಚಲಿತ ಸಾಹಿತ್ಯಕ್ಕೆ ತಾವು ಬಹಳ ಉಪಕಾರವನ್ನು ಮಾಡಿರುವ ಬಗ್ಗೆ ತಮ್ಮನ್ನು ಮತ್ತೊಮ್ಮೆ ಅಭಿನಂದಿಸುತ್ತೇನೆ. ಪ್ರಬಂಧಗಳೆಲ್ಲವೂ ತುಂಬ ಸೊಗಸಾಗಿವೆ, ನಿಶ್ಚಾಯಕವಾಗಿವೆ, ವಿಚಾರಪೂರ್ಣವಾಗಿವೆ.

ರನ್ನನ ಗದಾಯುದ್ಧ ಸಂಗ್ರಹಂ : ಭಾಗ ೧

●

ವಿಮರ್ಶೆಗಳು

M. Mariappa Bhat The Hindu, 19-03-1950

It is a matter of great pleasure that the publication of this famous classic synchronizes with the 1000-year anniversary of its illustrious author, Kavi Chakravarti Ranna (949 A.D), one of the "three gems" of Kannada Poetry. This work was first published in 1895 by the late Pandits S.G. Narasimhachar and M.A. Ramanuja Ayyangar. In 1925 Ramanuja Ayyangar brought out a revised edition of the same with critical introduction. For the past many years no copies of this work were available. Prof. T.N. Sreekantaiya deserves the congratulations of the entire Kannada public for filling this void.

This volume under notice is an abridgement (Sangraha) wherein several stanzas and intervening prose passages of the original, dealing with contemporary historical details, etc., have been left out. As against the 576 stanzas of the original, this contains only 336 stanzas. Among our best Kannada classics Ranna's Gadayuddha is the shortest. Hence there would be some who may rightly feel whether there was a necessity to bring out an abridged edition of this masterpiece. However, while pruning, the learned editor has taken abundant care to preserve all the important stanzas with an eye to the sequence of events and smooth continuity of narration. The whole work is arranged under ten sections as follows : Avataranike, Bhimasena pratigne, Sanjaya vachanam, Dhritarastra vachanam, Duryodhana vilapam, Bhishma vachanam, Bhimasenadambaram, Gadayuddham,

Duryodhanavasanam and Bhimasena pattabandhan. These headings make the scope of the subject matter clear.

The present work is of historical interest on account of the fact that the author has identified his own patron, the Chalukya Prince "Iriva Bedamga" with Bhima and sung in praise of his valiant deeds.

The excellence of the work consists in the beauty of its style, dignity of expression, loftiness of sentiments, naturalness of characterization and superb conversations and soliloquies. Although the various sentiments (rasas) are to be found in the poems in varying degrees (and all deftly handled), the most dominant one is the "veera-rasa". The peculiar beauty of this work is that the character of Duryodhana has been portrayed in brighter colours. He is a great personage (Mahanubhava) with all the milk of human kindness. Duryodhana's soul-stirring lamentations over the dead bodies of Karna and Abhimanyu alone will bid gair to leave the poet's name green for all time. Also he is shown to be a better observer of the rules of war than Bhima during the actual "Gadayuddha". These are only some of the fine things found in the work.

The value of the present edition is very much enhanced by the excellent notes (critical at times) and short commentaries, coming immediately after the text. Prof. Sreekantaiya has been an experienced teacher of Kannada and a keen research worker, and his notes bear ample testimony to this fact. Perhaps this is the first venture to bring out an edition of a classical work in Kannada with original notes and commentaries. In this the editor has succeeded well. He promises to bring out soon a second volume dealing with a detailed criticism of the present work. That will complete the picture.

* * *

The Indian P.E.N.

The ancient poet Ranna is one of the chief glories of Kannada literature, contemporary with the sculptor who created that unique monument of spiritual art, the image of Gomateshwara at Sravanabelagola. The work under review deals with the episode of the *Mahabharata* in which Bhima and Duryodhana meet at last in mortal combat and the latter meets with his death after a bitter fight. The astonishing power of the poet to evoke the heroic emotions, and his incredible mastery of expression characterized by terseness and vigour, was first brought to the attention of the present generation of English-educated readers with wonderful enthusiasm by the late Shri B.M. Srikantia, who was in many ways the *acharya* of the renaissance in Kannada. The editor of the text under review is a pupil of the great teacher, inheriting his mantle in many ways : in depth of scholarship, in poetic nature, in devotion to the best in literature and scholarship, in many sided acquisitions in many fields of learning-English, Dravidian grammar, Sanskrit and Kannada. The edition, it need hardly be said, fills a want with conspicuous merit, full of scholarly suggestions regarding emendations of the text, full of brief but insightful notes, clarifying where clarification is indicated and often throwing a ray of light or suggesting a line of appreciation. A second part giving critical appreciation is promised which is awaited eagerly by all discriminating lovers of literature.

(ಈ ಲೇಖನದ ಕರ್ತೃವಿನ ಹೆಸರು ನಮೂದಿಸಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ – ಸಂಪಾದಕ)

* * *

ಪತ್ರ

A.N. Upadhye ೨೨-೧೧-೧೯೪೯

It is very kind of you to have remembered me with a copy of the Gadayuddhasamgraham part I, edited by you.

I carefully read a major portion of the text and the Notes. The text is very carefully and judiciously presented, and the notes are a welcome aid to the reader. This is the way how the early Kannada classics can be popularised; and these Samgrahas in the long run will furnish sufficient material for a really critical edition of the entire poem. I eagerly await the publication of the second part.

I would like to draw your attention to a book 'Yasastilaka and Indian Culture' by Prof. K.K. Handiqui. The copies of it are available from: The Secratary, Jain Sanskrit Samraksaka Sangha, Santosh Bhavana, Phaltan Galli, Sholapur. Please see whether your University has already got a copy of it. The first chapter of this book would help you to sketch the background of the literary age in which Ranna lived.

ಸಮಾಲೋಕನ

●

ಪತ್ರಗಳು

ಎ.ಆರ್. ಕೃಷ್ಣಶಾಸ್ತ್ರಿ ೦೫-೧೦-೧೯೫೮

ನೀವು ಶ್ರೀ ಕೃಷ್ಣಾಚಾರ್ಯರೊಡನೆ ದಯವಿಟ್ಟು ಕಳುಹಿಸಿದ 'ಸಮಾಲೋಕನ'ವು ತಲುಪಿತು. ಮುದ್ರಣಾದಿಗಳು ಚೆನ್ನಾಗಿವೆ. ಇಂಥ ಲೇಖನಗಳನ್ನು ಬರೆದವರು ತಮ್ಮ 'ಲೇಖನ ವ್ಯವಸಾಯ ಅಷ್ಟೇನೂ ಹುಲುಸಲ್ಲ' ಎಂದು ಸಂಕೋಚಪಟ್ಟುಕೊಳ್ಳಬೇಕಾಗಿಲ್ಲ. ಇನ್ನೂ ಹೆಚ್ಚು ಬರೆಯಲಾಗಿಲ್ಲವಲ್ಲ ಎಂಬ ವ್ಯಥೆಯಿರಬೇಕಾದದ್ದು ಕನ್ನಡಿಗರಿಗೆ. ದಿ.ವೆಂಕಣ್ಣಯ್ಯನವರು ಇನ್ನೂ ನಾಲ್ಕು ಕಾಲ ಬದುಕಿದ್ದರೆ ಇಂಥ ಇನ್ನೂ ನಾಲ್ಕಾರು ಲೇಖನಗಳು ನಿಮ್ಮಿಂದ ಬಂದಿರುತ್ತಿದ್ದವೇನೋ? ನನ್ನ ವ್ಯಾಯಾಮಗಳೂ ಸಾಧನೆಗಳೂ ನನ್ನನ್ನು ಅವರ ವ್ಯಕ್ತಿತ್ವದ ಔನ್ನತ್ಯಕ್ಕೆ ಬೆಳೆಸಲಿಲ್ಲ. ಏನೇ ಆಗಲಿ ಈ ಪುಸ್ತಕದ ಲೇಖನಗಳನ್ನು ನೋಡಿದವರಿಗೆ ಸ್ಪಷ್ಟವಾಗುವುದು "ಪ್ರಬುದ್ಧ ಕರ್ಣಾಟಕ"ಕ್ಕೆ ನಿಮ್ಮಿಂದ ಆಗಿರುವ ಅನಲ್ಪವಾದ ಪೋಷಣೆ.

ಐದನೆಯ ಪುಟದಲ್ಲಿ ದಿ. ಶ್ರೀಕಂಠಯ್ಯನವರು ಅವರ 'ಇಂಗ್ಲೀಷ್‌ಗೀತ' ಗಳನ್ನು ಓದಿದ ಸಂಭ್ರಮಗಳನ್ನು ನೆನೆದಿದ್ದೀರಿ. ಅಂಥ ಆನಂದವನ್ನು ನಾವು ಎಂದಿಗೂ ಮರೆಯುವ ಹಾಗಿಲ್ಲ. ಅಂಥ ಆತಿಥ್ಯವನ್ನು ನಡೆಸುವವರು ಹಲವರಿದ್ದಾರು, ಆದರೆ ಅಂಥ ಅತಿಥಿಗಳು, ಅಂಥ ಹಬ್ಬ, ದೊರೆಯಬೇಕಲ್ಲ! ಅಂಥ ಕಿತ್ತಲೆ ಹಣ್ಣುಗಳೂ ಈಗ ದೊರೆಯುವುದಿಲ್ಲ. ಅವೆಲ್ಲಾ ಡಾಲರ್ ಸಂಪಾದನೆಗೆ ಹೋಗುತ್ತವೆ ಎಂದು ತೋರುತ್ತದೆ.

ಕರಿಬಸಪ್ಪ ಶಾಸ್ತ್ರಿಗಳ ಭಾರತ ಮುದ್ರಣಕ್ಕೆ ಮೂಲ ಮಾತೃಕೆ ಯಾವುದೋ ಶೋಧಿಸಬೇಕು – ಅವರ ಮುದ್ರಣದಲ್ಲಿಯೇ ನನಗೆ 'ದುಷ್ಷಂತ' ರೂಪ ದೊರೆತದ್ದು. ನಿಮಗೆ 'ಏನಿ' ದೊರೆತಿರುವುದೂ ಅದರಲ್ಲಿಯೇ.

'ಗೊಮ್ಮಟ'ದ ವ್ಯುತ್ಪತ್ತಿ ನನಗೆ ಇನ್ನೂ ಹಿಡಿಸಿಲ್ಲ. 'ಕುಂಬಳ'ವು ದ್ರಾವಿಡವಾಗಿದ್ದು ಕೂಷ್ಮಾಂಡವು ಅದರ ಸಂಸ್ಕೃತೀಕರಣವಾಗಿ ಕಾಣುತ್ತದೆ, ಕೂಷ್ಮಕ್ಕೆ ಅರ್ಥವೇನು? ಅದು ಕ್ಲಿಷ್ಟ ಕಲ್ಪನೆ. ಗುಮ್ಮಡಿ, ಗುಮ್ಮಿಡಿ ಎರಡೂ ತೆಲುಗಿನಲ್ಲಿ ಕೇಳುತ್ತದೆ. ಕುಂಬಳದೊಡನೆ ತಮಿಳಿನ 'ಕುಂಬಿಡು'(ನಮಸ್ಕರಿಸು)ವನ್ನು ಹೋಲಿಸಬಹುದು. ಕುಂಬಳಕಾಯಿ ಮನೆಯ ಮೇಲೋ

ಹುಲ್ಲಹಸಲೆಯ ಮೇಲೊ 'ಮಲಗಿ'ರುವುದು ಸಾಮಾನ್ಯ ದೃಶ್ಯ. ಕುಂ–ಪಟಿಂ, ಕುಂ–ಮಿಡಿ ಎರಡೂ ಇರಬಹುದು. ಕುಂಬಳದ ಹಣ್ಣು, ಕುಂಬಳಕಾಯಿ ಎರಡೂ ಕನ್ನಡದಲ್ಲಿ ರೂಢಿಯಾಗಿವೆ. 'ಕುಂತು' ಎಂಬುದು 'ನಿಂತು' ಎಂಬುದರಿಂದ ಹುಟ್ಟಿದ analogical form ಅಲ್ಲದಿದ್ದರೆ ಈ 'ಕುಂ'ಗೆ ಸಂಬಂಧಿಸಿರಬಹುದು.

ಕೊನೆಯ ಪುಟದಲ್ಲಿ ಕನ್ನಡ ನಿಘಂಟಿನ ವಿಚಾರ ಓದಿ ಮನಸ್ಸು ಸೊರಗಿತು. ವೆಂಕಣ್ಣಯ್ಯನವರು ಇದಕ್ಕಾಗಿ ಆರಂಭ ಮಾಡಿದ ಕೆಲಸ ಗಾಳಿಗೆ ಹೋಯಿತು. ನಾವು ಮಾಡಿದ್ದು "ಅಷ್ಟವರ್ಷಾ(ಪತ್ರ) ಭವೇನ್ ಕನ್ಯಾ ಪುತ್ರವತ್ ಪಾಲಿತಾಮೆಯಾ (ತ್ವಯಾ)" – ಎಂಬಂತಾಗಿದೆ. ಉತ್ತರಾರ್ಧವನ್ನು ಹೇಳುವ ಕಾಲ ಯಾವಾಗ ಬರುತ್ತದೆಯೋ, ಬರುವುದೇ ಇಲ್ಲವೋ! ಮೊದಲ ನೂರು ಪುಟಗಳ ಪ್ರಥಮಭಾಗವನ್ನು ನೋಡುವವರೆಗೂ ನನಗೆ ನಂಬಿಕೆ ಯಿಲ್ಲ. ತಮಿಳರು ಗಟ್ಟಿಗರು, 'Tamil Lexicon' ಬಂತು. ಆಂಧ್ರರೂ ಘಟ್ಟಿಗರೇ, ಅಷ್ಟು ಘಟ್ಟಿಗರಲ್ಲ – ಅವರ ಸೂರ್ಯಾರಾವು ನಿಘಂಟು ಪೂರ್ತಿಯಾಗಿಲ್ಲ. – "ಜೀವನ್ ಭದ್ರಾಣಿ ಪಶ್ಯತಿ".

* * *

D.V. Gundappa 05-10-1958

I am really grateful for "ಸಮಾಲೋಕನ", you have so kindly sent me.

I support from my personal knowledge your ಮಿಕ್ಕ ಮಾತು – p. 255. In the context of "ರೀ" please consider "ರೇ", "ಅರೇ", etc., in Sanskrit & Hindustani.

* * *

ಮಾಸ್ತಿ ವೆಂಕಟೇಶ ಅಯ್ಯಂಗಾರ್ ೧೯–೧೧–೧೯೫೮

ತಾವು ವಿಶ್ವಾಸದಿಂದ ಕಳುಹಿಸಿದ ತಮ್ಮ "ಸಮಾಲೋಕನ" ಗ್ರಂಥದ ಪ್ರತಿ ತಲುಪಿತು. ಈ ಬಗ್ಗೆ ತುಂಬಾ ವಂದನೆ.

ಈ ಲೇಖನಗಳು ಹೀಗೆ ಒಂದು ಕಡೆ ದೊರೆಯುವಂತಾದದ್ದು ಬಹಳ ಒಳ್ಳೆಯದಾಯಿತು.

ನೀವೂ ಶ್ರೀ ಡಿ.ಎಲ್. ನರಸಿಂಹಾಚಾರ್ಯರೂ ಇನ್ನಷ್ಟು ಬರಹ ಪ್ರಕಟಿಸಿ ಕನ್ನಡದ ಹೊಸ ಪಾಂಡಿತ್ಯದ ತಳಹದಿಯನ್ನು ಭದ್ರವೂ, ವಿಸ್ತಾರವೂ ಆಗುವಂತೆ ಮಾಡಬೇಕು.

* * *

ಪು.ತಿ. ನರಸಿಂಹಾಚಾರ್ ೯-೧೦-೧೯೫೫

'ಸಮಾಲೋಕನ' ತಲುಪಿತು. ಬಹಳ 'ನೆನಕೆ'ಗಳು. ಪುಸ್ತಕವಿದ್ದರೆ ಹೀಗಿರಬೇಕು. ಒಂದಚ್ಚಿನ ತಪ್ಪಾದರೂ ಕಣ್ಣಿಗೆ ಬೀಳಬೇಡವೇ – ಮಾತುಗಳು ಅಷ್ಟು ಮಜಭೂತಾಗಿ ಆದರೂ ಒಟ್ಟು ಪ್ರಬಂಧ ಅಷ್ಟು ಹಗುರವಾಗಿ ಹೇಗಿರಬೇಕೋ ಹಾಗಿವೆಯಲ್ಲ! Hearty Congratulations. ("ಮುಗಿಲ ಬೆನ್ನೇರಿ" I disagree with your assessment) ಬೆನ್ನಿನಲ್ಲಿ is tame, does not indicate the action of getting up - putting one in the stirrups and vaulting up a horse. This apart - ಎಂಥ ಪ್ರಬಂಧಗಳು! ಮುಡಿ, ಪದ್ಮಗಣ is a real contribution – ಎಲ್ಲವನ್ನೂ ಓದಿದೆ. ಪಾಂಡಿತ್ಯ + ರಸಿಕತೆ ಇವು ಬೆರೆತಿರುವುದು ಅಪೂರ್ವ – ಅದರ ಸೊಗಡು ಇಲ್ಲಿದೆ. ಇಂಥ ಪುಸ್ತಕಗಳೇ ಕನ್ನಡಕ್ಕೆ ನಿಜವಾದ ಭೂಷಣಗಳು. ನಿಮ್ಮ ಶೈಲಿಯು ಅದ್ವಿತೀಯವಾಗಿದೆ. ಈ ಪ್ರಬಂಧಗಳನ್ನು ಓದುತ್ತಿರುವಾಗ ಒಳ್ಳೆ ಶಾಸ್ತ್ರೀಯ ಸಂಗೀತವನ್ನು ಕೇಳಿದ ಸುಖ ನನಗಾಯಿತು. ಕಲೆ ಎಲ್ಲದರ ಗುರಿಯೂ ಈ ಸ್ಥಿತಿಯನ್ನುಂಟು ಮಾಡುವುದು ಅಲ್ಲವೆ? ಮಿಕ್ಕ ಎಲ್ಲ ವಿವರಗಳು – ವಸ್ತು ಸ್ವಭಾವ ಅವನ್ನು ಬಳಸುವವನ ಕೌಶಲ – ಅವನ್ನು ಅದಕ್ಕೆ ಎರೆಯುವ ಮನಸ್ಸಿನ ರುಚಿ ಮತ್ತು ಗುಣ ಇವುಗಳನ್ನು ಅವಲಂಬಿಸುತ್ತದೆ. ಸೊಗಡು ಕನ್ನಡ ಓದುವ ಹಾಗೆ ತೋರಲೇ ಇಲ್ಲ – ಇದನ್ನು ಓದುತ್ತಿದ್ದರೆ. ಇಂಥ ಪುಸ್ತಕಗಳನ್ನು ಬರೆಯುತ್ತಿರಿ. ನಿಮ್ಮ ಅಮೆರಿಕ ಪ್ರವಾಸದ ಕತೆಯೇನಾಯಿತು? ಚಿ.ಸೌ. ನಾಗರತ್ನ ನಿಮ್ಮ ಕೈ ಬಿಡುವ ಮುನ್ನ ರಾತ್ರಿ ಒಂದು ಗಂಟೆ ಹೊತ್ತು ವಿಜಯದಶಮಿಯಿಂದ ಇದಕ್ಕೆ ಮೀಸಲಿಡಿ.

It gave me great pleasure to read your wonderfully good essays so heavy with scholarship and so light in treatment.

The getup is excellent.

* * *

A.N. Upadhye 18-10-1958

It is very kind of you to have remembered me with a copy of your Samalokana. Please accept my hearty greetings that you have been able to put together in a suitable form some of your earlier writings. Some of the papers are of research and referential value - and I am not only glad but also proud to possess this volume.

* * *

ಗೊರೂರು ರಾಮಸ್ವಾಮಿ ಅಯ್ಯಂಗಾರ್ ೨೭-೧೦-೧೯೫೮

ನಿಮ್ಮ ಪುಸ್ತಕ ಸಮಾಲೋಕನ ಬಂತು. ಕಳುಹಿಸಿದುದಕ್ಕಾಗಿ ವಂದನೆ. ನೀವೇ ಅರಿಕೆಯಲ್ಲಿ ಹೇಳಿರುವಂತೆ ಅದರಲ್ಲಿರುವ ಅನೇಕ ಲೇಖಗಳನ್ನು ಹಿಂದೆ ಓದಿದ್ದೆ. ಆದರೆ ಒಂದೂ ಜ್ಞಾಪಕವಿಲ್ಲ. "ಅನೇನಾಧೀ ಅಹೋರಾತ್ರಾನ್ ಸಂದಧಾಮಿ" ಎಂದೇನೋ ವೇದದಲ್ಲಿ ಹೇಳಿದೆಯಲ್ಲ ಹಾಗೆ. ಪದೇ ಪದೇ ಓದುತ್ತಿರಬೇಕು. ಎನಿತ್ತೆನಿತ್ತಂಬುಜಪತ್ರನೇತ್ರೆಯಾ, ಏನಿ–ಗಡಿಂ–ರೀ ಇವು ಆ ಹೆಸರುಗಳ ವಿಚಿತ್ರತೆಯಿಂದ ಚೆನ್ನಾಗಿ ಜ್ಞಾಪಕವಿತ್ತು – ಅರ್ಥವಾಗಿದೆ ಎಂದಲ್ಲ. ಒಟ್ಟಿನಲ್ಲಿ ಅರ್ಥವಾಗದಿರುವ ೧೬,೧೭,೧೮,೧೯,೨೨ ಇವುಗಳನ್ನು ಬಿಟ್ಟರೂ (ನಮ್ಮಂತಹವರು) ಪುಸ್ತಕ ಓದಲು ನಿಜವಾಗಿ ಹಿತವಾಗಿದೆ.

Get up ವಗ್ಗೈರೆ ನಿಮ್ಮ ಘನತೆಗೆ ಅನುಸಾರವಾಗಿ ಭರ್ಜರಿಯಾಗಿದೆ. ಪ್ರತಿಯೊಂದು ಲೇಖನವೂ ವಿದ್ವತ್ಪೂರ್ಣವಾಗಿದೆ. ನಿಮ್ಮ ಲೇಖನ ವ್ಯವಸಾಯ ಹುಲುಸಲ್ಲ ಎನ್ನುತ್ತೀರಿ. ಇದನ್ನು ನೋಡಿದರಂತೂ ಹಾಗೆ ಕಾಣುವುದಿಲ್ಲ. ಪುಸ್ತಕವನ್ನು ನಿಜವಾಗಿ ಪ್ರೀತಿಯಿಂದ ಇಟ್ಟುಕೊಳ್ಳುವಂತೆ ಆಗುತ್ತದೆ.

ನಂಟರು

●

ವಿಮರ್ಶೆ

ಶ್ರೀರಂಗ — ಪ್ರಜಾವಾಣಿ, ೨೬-೧೦-೧೯೬೩

ಹದಿಮೂರು ಪ್ರಬಂಧಗಳ ಸಂಗ್ರಹವನ್ನು "ತೀ.ನಂ.ಶ್ರೀ" ಅವರು ಇಲ್ಲಿ ಒದಗಿಸಿದ್ದಾರೆ. ಪ್ರಬಂಧ ಸಾಹಿತ್ಯ ಕನ್ನಡದಲ್ಲಿ ತೀರ ವಿರಳ ಎಂದು ಎಲ್ಲರೂ ಹೇಳುವರು. ಇಲ್ಲಿಯ ಪ್ರಬಂಧಗಳನ್ನು ಓದಿದರೆ ಯಾಕೆ ಈ ಸಾಹಿತ್ಯ ವಿರಳ ಎಂಬುದು ಸೂಕ್ಷ್ಮಬುದ್ಧಿಯವರಿಗೆ ತಟ್ಟನೆ ಹೊಳೆಯುವುದು. ಒಂದು ಪ್ರಬಂಧ ಓದುಗನನ್ನು ಮೆಚ್ಚಿಸಬೇಕಾದರೆ ಆ ಲೇಖಕನು ಎಷ್ಟು ಪರಿಶ್ರಮ, ಎಷ್ಟು ಅಭ್ಯಾಸ ಮಾಡಿರಬೇಕಾಗುವುದು? ಬೇರೆ ಬೇರೆ ಸಾಹಿತ್ಯಗಳು, ಜಗತ್ತಿನ ಶ್ರೇಷ್ಠ ಸಾಹಿತಿಗಳು, ಶಾಸ್ತ್ರ-ಸಂಪ್ರದಾಯ-ಲೋಕರೂಢಿಗಳ ನಿಕಟ ಪರಿಚಯ, ವಿಧವಿಧದ ಅನುಭವ, ಕೊನೆಗೆ ಒಂದು ಮಾತನ್ನು ಒಂದೇ ರೀತಿಯಲ್ಲಿ ಪರಿಣಾಮಕಾರಕವಾಗಿ ಹೇಳಲು ಶಕ್ಯ ಎಂಬುದಕ್ಕಾಗಿ ಸಮರ್ಪಕ ಶಬ್ದಗಳ ಆಯ್ಕೆ-ಇವೆಲ್ಲವೂ ಸೇರಿ ಈ ಪ್ರಬಂಧಗಳನ್ನು ನಾವು ಮೆಚ್ಚುವಂತಾಗಿದೆ. ಇಲ್ಲಿರುವ ತಿಳಿಹಾಸ್ಯವು ಓದುಗನನ್ನು ವಾತಾವರಣದಂತೆ ಆವರಿಸಿ ಮೈಮರೆಯಿಸುತ್ತಿದೆ. ನಂಟರು, ನೆಗಡಿ, ತಗುಣೆ, ಪ್ರವಾಸಿಯ ಪೆಟ್ಟಿಗೆಗಳು ಮತ್ತು ಪ್ರವಾಸಿ ಇವನ್ನು ಎಷ್ಟು ಸಲ ಓದಿಯೂ ರಂಜಿಸಬಹುದು. ಹುಚ್ಚರ ಉದ್ಗಾರಗಳಂತೆ ನಮ್ಮಲ್ಲಿ ಜಿಗುಪ್ಸೆಯನ್ನುಂಟುಮಾಡುವ ಕನ್ನಡ ಶೈಲಿಯೆ ರಾಕ್ಷಸನಂತೆ ನಮ್ಮನ್ನು ಹೆದರಿಸುವ ಈ ಕಾಲದಲ್ಲಿ ತನ್ನಲ್ಲಿ ಅಗಾಧವಾದ ಶಕ್ತಿ ಇದೆ, ಚೇತೋಹಾರಿಯಾದ ವ್ಯಕ್ತಿತ್ವವಿದೆ ಎಂದು ತೋರಿಸಲು ಇಲ್ಲಿ ಕನ್ನಡವು ದುಷ್ಟನಿಗ್ರಹದ ಅವತಾರ ತಾಳಿದಂತೆ ನಮ್ಮನ್ನು ಸಂತಸಗೊಳಿಸುವುದು.

* * *

ಪತ್ರಗಳು

D.V. Gundappa — 08-10-1963

I am delighted with your ನಂಟರು -the book, of course. I see justice in your having counted ನೆಗಡಿ and ತಿಗುಣೆ among ನಂಟರು. It is justice all round.

I Suppose you have assured your son-in-law that the ಮಾವ–ಅಳಿಯ references do not apply to him. I want to ask mr. ANM to find out from mrs. T.N.S. whether she is sure the references don't apply to her father. I hope they will both forgive you.

It is all fine good writing. I am glad to find Varadacharyar among your remembered ಗುರು's.

I would never have joined your ಕಾಸಿನ ಸಂಘ - though I am sure I w'd have egged you on to form it. It is such good fun.

Do you know ಒತ್ತು ಸೇವಗೆ is one of my favourite delicacies?

Thanks very much for the gift.

What does ನಂಟರು mean in Dharwar?

* * *

ಪು.ತಿ. ನರಸಿಂಹಚಾರ್ ಗಣೇಶ ಚೌತಿ, ೨೮–೦೮–೧೯೬೩

'ನಂಟರು' ಈ ಮಧ್ಯಾಹ್ನ ಕೈ ತಲುಪಿತು. ನೋಡಿ ಮನಸ್ಸು ತುಂಬಾ ಗೆಲುವಾಯಿತು. ಬೆಳಗ್ಗೆ ಅನೇಕ ಕಾರಣಗಳಿಂದ ನಾನು ಅರವತ್ತು ಮುಟ್ಟುತ್ತೇನೋ ಇಲ್ಲವೋ ಎಂಬ ಶಂಕೆ ಮೂಡಿತ್ತು. ಗಣೇಶನ ಪೂಜೆಯಲ್ಲೂ ಆಸ್ಥೆ ಇರಲಿಲ್ಲ. ದೇಹದಲ್ಲೂ ಮನಸ್ಸಿನಲ್ಲೂ ಲವಲವಿಕೆ ಇಲ್ಲದಿರುವುದರಿಂದ ಹೀಗಾಗುವುದು ಸ್ವಾಭಾವಿಕ. ನಿಮ್ಮ ಪುಸ್ತಕ ನೋಡಿದ ಮೇಲೆ ಅರವತ್ತು ನೋಡಬಹುದೆನ್ನಿಸಿದೆ. ಪುಸ್ತಕ ಓದಿದೆ. ಮನಸ್ಸು ಗಮಗಮಿಸುತ್ತಿದೆ. ನಂಟರಲ್ಲಿ ಮಾವ–ಅಳಿಯನ ವಿಷಯ ನನ್ನ ಅನುಭವಕ್ಕೆ ಬಂದಿಲ್ಲ. ಇನ್ನೂ ಮೂರು ಹೆಣ್ಣು ಮಕ್ಕಳಿದ್ದಾರಲ್ಲ, ನೋಡಬೇಕು. 'ಮನೆಗಳು' ಅಷ್ಟು ಹಗುರವಾಗಿ ಬಂದಂತೆ ಕಾಣುವುದಿಲ್ಲ. ತುಂಬಾ matter of fact ಆಯಿತೇನೋ. ಮಿಕ್ಕವು ತುಂಬಾ ಸ್ವಾರಸ್ಯವಾಗಿವೆ. ನಿಮ್ಮ ಪ್ರವಾಸಿ ಅದೊಂದು ರತ್ನ. ಅದರ ಕೊನೆಯ ವಚನವಂತೂ ಬಹು ಹೃದ್ಯ. ಹಾಗೆಯೇ ಗಾಂಧಿಯವರ ಮೇಲಣ ಪದ್ಯವೂ – ಶತ ಪಥ – ಭಲೆ ತುಂಬ ಮಡಿ ಮಾತು – ಇದೆಲ್ಲಿಂದ ಕಲಿತಿರಿ – ಕುಸು[illegible] ಕಂಡೆ ಇರಿಗರಿಕೆ ಕಾಣಲಿಲ್ಲ. "ಹಚ್ಚನೆಯ ಗರಿಕೆಯ ಹಸಲೆ" ಬಾಯಲ್ಲಿ ನೀರೂರಿಸಿತು. ಅಹುದು ಕೆಲವು ಮಾತುಗಳಿಗೆ ಪರಿಸರ ನಿರ್ಮಾಣ ಚಾತುರ್ಯತೆ ಇದೆ. ಅಂತಾರಾಷ್ಟ್ರೀಯವೋ ಅಥವಾ ರಾಷ್ಟ್ರೀಯವೋ – ತಿರುಗಿ ಸಂಶಯ ಬರಿಸಿಬಿಟ್ಟಿರಿ. ತಿಗುಣೆಯನ್ನು ತಗುಣೆಯೆಂದು ಕರೆದು ತುಂಬಾ ಮರ್ಯಾದೆಯನ್ನೆ ಕೊಟ್ಟಿರಿ. ತಿಗುಣೆಯನ್ನು ಒಂದೆರೆಡು ವಾಕ್ಯಗಳಲ್ಲೇ ಹೊಸಕಿ ಹಾಕಬಿಡಬಹುದು. ಆದರೆ ತಗುಣೆಗೆ ಒಂದು ಪ್ರಬಂಧವೇ ಬೇಕು. "ಮತ್ಕುಣ ಭರಣಿ"ಯು ಕಣ್ಣು ತುಂಬಿ ನಿಂತಿದ್ದಾಳೆ. "ಹಗಲು ಬಿಸಿಲು ಮೂಡು"ವುದು ಹೇಗೆ

ನೋಡೋಣವೆಂದರೆ ಈ ದಿನವೆಲ್ಲ ಬರಿಮೋಡ, ತುಂತುರು ಮಳೆ. ಪ್ರವಾಸದ ವಿಷಯದಲ್ಲಿ "ಒಳಸೋರದ" ಉತ್ಸಾಹ ನನಗಿನ್ನು ಬರುವಂತಿಲ್ಲ. "ಬೃಹತ್ತು ಮಹತ್ತಾಗುವ" "ವಿಭೂತಿ ಸ್ಥಾನಗಳು" ಸ್ವಪ್ನಪ್ರಾಯವಾಗಿಯೇ ನನಗುಳಿಯಬೇಕು. ನಿಮ್ಮ ಪ್ರಬಂಧಗಳಿಂದ......... ನನಗೆ ದೊರಕಿದೆ. ಶೈಲಿ ಬಹಳ ಮನೋಜ್ಞವಾಗಿದೆ. "ಮಮತೆ" perception ಗೆ ತುಂಬ......... ಉದಾಹರಣೆ. 'ವೋಟು' ಚಿಕ್ಕದಾದರೂ ಚೊಕ್ಕವಾಗಿದೆ. ಅಂತೂ ಈ ದಿನವೆಲ್ಲ ನಿಮ್ಮ ಪ್ರಬಂಧಗಳನ್ನು ಓದಿ ಸವಿಯುತ್ತಾ ಕಳೆದೆ. ಮನಸ್ಸು ಹಗುರವಾಯಿತು.

ದೀಪಕ್ಕೆ ಸ್ನೇಹವೆರಯದಿದ್ದರೆ ಅದು ಬೆಳಗುವುದೆಂತು ಬದುಕುವುದೆಂತು. ನೀವು ಪ್ರಬಂಧಗಳನ್ನು ಬರೆಯದೆ ಜನವನ್ನು ತುಂಬಾ ವಂಚಿಸಿದ್ದೀರಿ. ಘನವೂ ಹಗುರವೂ ಆದ ಇಂಥ ಬರವಣಿಗೆ ಬಹಳ ಅಪೂರ್ವ ವಸ್ತು. "ಪಶ್ಚಿಮಾಯನ"ದ ಕೈ ಬಿಡುವುದು ನಿಮಗೆ ಸಲ್ಲದು – ಏಕೆಂದರೆ ಅದು ವಂಚನೆಯಾಗುತ್ತದೆ. BGL ಸ್ವಾಮಿಯ ಬರಹವನ್ನು ನಾನು ನೋಡಿಲ್ಲ. "ಕಸ್ತೂರಿ"ಯಲ್ಲಿ ಅದರ ಸಾರಾಂಶ ಕಂಡೆ. ನಿಮ್ಮದು ತೀರ ಭಿನ್ನವಾದ ಪುಸ್ತಕವಾಗುತ್ತದೆ. ಅದಕ್ಕೆ ಸ್ವಲ್ಪ ಕಾಲ ಮೀಸಲಿರಿಸುವುದೊಳ್ಳೆಯದು.

* * *

ಶ್ರೀ ನಿಟ್ಟೂರು ಶ್ರೀನಿವಾಸರಾವ್ ರಾಜಭವನ, ಬೆಂಗಳೂರು
ಮೈಸೂರಿನ ರಾಜ್ಯಪಾಲರು ೧೬–೦೯–೬೩

ತಾವು ವಿಶ್ವಾಸವಿಟ್ಟು ಕಳಿಸಿದ ತಮ್ಮ ಪುಸ್ತಕ 'ನಂಟರು' ತಲುಪಿತು. ಅದಕ್ಕಾಗಿ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಆಸಕ್ತಿಯಿಂದಲೂ, ಸಂತೋಷದಿಂದಲೂ ಓದುತ್ತೇನೆಂದು ಬೇರೆ ಹೇಳಬೇಕಾಗಿಲ್ಲ.

* * *

ವಿ. ಸೀತಾರಾಮಯ್ಯ ೨೯–೦೯–೧೯೬೩

ನೀವು ವಿಶ್ವಾಸ ಪೂರ್ವಕವಾಗಿ ಕಳುಹಿಸಿದ 'ನಂಟರು' ನಿನ್ನೆ ಕೈ ಸೇರಿತು, ಥ್ಯಾಂಕ್ಸ್. ಮೊದಲನೆಯ ಮತ್ತು ಕಡೆಯ ಎರಡು ಲೇಖನಗಳು ಹೊಸವು. ಅದನ್ನು ಕೂಡಲೆ ಓದಿದೆ. ಸಂಕಲನ ಚೆನ್ನಾಗಿದೆ. ನಿಮ್ಮ ಬರವಣಿಗೆಯನ್ನು ಕುರಿತು ಯಾರು ಹೊಸತಾಗಿ ಯಾವ ಪ್ರಶಂಸೆಯನ್ನು ಮಾಡುವುದು? ಎಲ್ಲದರಲ್ಲಿಯೂ ಇರುವ ನಿಮ್ಮ ಅಚ್ಚುಕಟ್ಟು, ಖಚಿತತೆ, ನುಣುಪು ಪ್ರತಿ ಲೇಖನದಲ್ಲಿಯೂ ಇವೆ. ಒಂದು ಜೀವದ ಸಂಸ್ಕಾರ ಹಾಗೆ ತಾನೆ ರೂಪಗೊಳ್ಳುವುದು? ಅದನ್ನು ಗುರುತಿಸುವುದು ಮೆಚ್ಚಿ ಸಂತೋಷಪಡುವುದು ನಮ್ಮ ಪಾಲಿಗೆ ಬರುವ ಭಾಗ್ಯ.

ವ್ಯಾಸರ ವಾಕ್ಯವನ್ನೆತ್ತಿ ಹೇಳಿ ಧರ್ಮ ಎಲ್ಲ ಕಾಲವೂ ಹೇಗೆ ಓಸರಿಸಿದ್ದಾಯಿತೆಂಬುದನ್ನು ತಿಳಿಸಿದ್ದೀರಿ. ಮೊಸಸ್ ಒಂದು ರೀತಿ. ವ್ಯಾಸರು ಬೇರೊಂದು. ಆದರೆ ಶ್ರದ್ಧಾಳುವಾದ ಯಾರಿಗೆ

ತಾನೆ ಆ ಬಗೆಗೆ ಮನಸ್ಸಿಗೆ ಗಾಸಿ ಆಗಿಲ್ಲ? ನಾನು ಅದನ್ನು ನೆನೆಸಿಕೊಳ್ಳುತ್ತಿದ್ದೆನಾದರೂ ಪೂರ್ತಿ ಆವಾಕ್ಯ ನನ್ನ ಕೈಗೆ ಸಿಕ್ಕಿರಲಿಲ್ಲ. ಆರಂಭ ಮರೆತು ಮರೆತು ಹೋಗುತ್ತಿತ್ತು. ಪುನಃ ಈಗ ಕೈಗೆ ಸಿಕ್ಕಿತು. ಸಂತೋಷ.

* * *

A.N. Upadhye 24-10-1963

Excuse me for this belated acknowledgement of the receipt of your 'ನಂಟರು'. Your letter 'ಪ್ರವಾಸಿಯ ಪೆಟ್ಟಿಗೆಗಳು' so thrilling. I can imagine what a trial it must have been on your nerves till you got back your kit! Do you think, we can get back our luggage like this, if we miss it on our Railway?

* * *

ಎಂ.ವಿ. ಸೀತಾರಾಮಯ್ಯ ೩೦-೧೦-೧೯೬೩

ನೀವು ಪ್ರೀತಿಯಿಂದ ಆಶೀರ್ವಾದಪೂರ್ವಕ ಕಳಿಸಿಕೊಟ್ಟ 'ನಂಟರು' ಕೈಸೇರಿ ಎಷ್ಟೋ ದಿನಗಳಾದವು. ಅದರಲ್ಲಿ ನಾನು ಓದದೆ ಇದ್ದ ಪ್ರಬಂಧಗಳನ್ನು ಓದಿದ ಮೇಲೆ ಕಾಗದ ಬರೆಯುವುದೆಂದುಕೊಂಡು ಸುಮ್ಮನಾದೆ. ಈ ನವರಾತ್ರಿಯ ರಜಾದಿನಗಳಲ್ಲಿ ಸ್ವಲ್ಪ ಬಿಡುವು ದೊರೆತು, ಬಹುಮಟ್ಟಿಗೆ ಎಲ್ಲ ಪ್ರಬಂಧಗಳನ್ನು ಓದಿ ತುಂಬ ಆನಂದಿಸಿದೆ. ಅಲ್ಲದೆ, ಮುಂದಿನ ವರ್ಷ PUCಗೆ ಈ ಗ್ರಂಥ ಪಠ್ಯಪುಸ್ತಕವಾಗಿ ಗೊತ್ತಾಗಿದೆ ಎಂದು ಕೇಳಿ ನನ್ನ ಸಂತೋಷ ಅಧಿಕವಾಯಿತು. ಈ ಬಗೆಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸ್ವೀಕರಿಸಬೇಕೆಂದು ಬೇಡುತ್ತೇನೆ. 'ನಂಟರು'ವಿನಂಥ ಶ್ರೇಷ್ಠ ವರ್ಗದ ಪುಸ್ತಕವೊಂದು ಪಠ್ಯಪುಸ್ತಕವಾಗಿ ನೇಮಕ ವಾಗಿರುವುದು ಉಪಾಧ್ಯಾಯನಾದ ನನಗೆ ಇಮ್ಮಡಿಯ ಸಂತೋಷಕ್ಕೆ ಕಾರಣವಾಗಿದೆ.

ಕೆಲವು ಪ್ರಬಂಧಗಳನ್ನು (ಈಗ ಮಾತ್ರವಲ್ಲದೆ) ಈ ಹಿಂದೆಯೇ ಓದಿ ಹರ್ಷಪಟ್ಟಿದ್ದೇನೆ, ಮೆಚ್ಚಿಕೊಂಡಿದ್ದೇನೆ. ನಿಜ ಹೇಳುವುದಾದರೆ, ನಿಮ್ಮ 'ತಾರೆಗಳು' ಪ್ರಬಂಧವನ್ನು 'ಪ್ರಬೋಧ'ಕದಲ್ಲಿ ಓದಿದ ಮೇಲೆಯೇ 'ಮುಗಿಲುಗಳು' ಎಂಬ ನನ್ನ ಪ್ರಬಂಧವನ್ನು ಬರೆಯಲು ಸ್ಫೂರ್ತಿ ಯುಂಟಾಯಿತೆಂದು ನನ್ನ ನೆನಪು. ನಾನೂ ಕೆಲವು ಕಾಲ 'ಕಾಸಿನ ಸಂಘ'ದ ಸದಸ್ಯ ನಾಗಿದ್ದುದರಿಂದ ಆ ಬರಹವೂ, ಸದಾ ನೆಗಡಿಯಿಂದ ನರಳುತ್ತಿರುವುದರಿಂದ 'ನೆಗಡಿ'ಯೂ ನನಗೆ ಆತ್ಮೀಯವಾಗಿ ಬಿಟ್ಟಿವೆ.

ಈಚಿನ ಪ್ರಬಂಧಗಳಾದ 'ತಗುಣೆ' (ನನ್ನ ಬಾಯಲ್ಲಿ 'ತಿಗಣೆ' ಎಂದು ನುಡಿಯುತ್ತದೆ), 'ಪ್ರವಾಸಿ' ಮತ್ತು 'ಪ್ರವಾಸಿಯ ಪೆಟ್ಟಿಗೆಗಳು' ಬಹು ಮನೋಜ್ಞವಾಗಿ ಮೂಡಿಬಂದಿವೆ. 'ಪ್ರವಾಸಿಯ

ಪೆಟ್ಟಿಗೆಗಳು' ಸ್ವಲ್ಪ ಮಟ್ಟಿಗೆ ಸಣ್ಣಕಥೆಯ ಹತ್ತಿರ ಹತ್ತಿರಕ್ಕೆ ಓಲಿದೆ ಎಂದು ನನಗೆ ತೋರುತ್ತದೆ. ಒಟ್ಟಿನಲ್ಲಿ ಗಂಗಾ ಪ್ರವಾಹದಂತೆ ಗಂಭೀರವೂ ಸ್ವಚ್ಛ ಸುಂದರವೂ ಆದ ಭಾಷಾ ಶೈಲಿ, ಪ್ರಬಂಧದ ಒಡಲಿನಲ್ಲಿ ಸಹಜವಾಗಿ ಹೊಮ್ಮಿರುವ ವಿದ್ವತ್ತಿನ ಕಾಂತಿ, ಕಂಡೂ ಕಾಣದಂತಹ ನವಿರಾದ ಹಾಸ್ಯದ ಬೆಳ್ಳಿಗೆರೆಗಳು, ವಿಸ್ತಾರವಾದ ಲೋಕಾನುಭವದ ಪಕ್ವ ಮಾಧುರ್ಯ, ಹದವಾದ ರಸವತ್ತಾದ ನಿರೂಪಣೆ – ಇತ್ಯಾದಿ ಇತ್ಯಾದಿ ಗುಣಗಳಿಂದ ಶೋಭಿಸುವ ನಿಮ್ಮ ಪ್ರಬಂಧಗಳು ಈಗ ಸಂಕಲನ ರೂಪದಲ್ಲಿ ಹೊರಬಂದಿರುವುದು ಅಷ್ಟೇನೂ ಪುಷ್ಟವಲ್ಲದ ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಅತ್ಯಮೂಲ್ಯವಾದ ಕಾಣಿಕೆಯಾಗಿದೆ. ನಿಮಗೆ ಈಗ ಬಿಡುವು ದೊರೆತಿರುವುದರಿಂದ ಇಂಥ ನೂರಾರು ಪ್ರಬಂಧಗಳು ನಿಮ್ಮಿಂದ ರಚಿತವಾಗಬೇಕೆಂದು ನನ್ನ ನಿರೀಕ್ಷೆ; ಪ್ರಾರ್ಥನೆ.

ಸಂಕೀರ್ಣ

●

ಪತ್ರಗಳು

M. Hiriyanna 28-05-1946

The copy of ನಂಬಿಯಣ್ಣನ ರಗಳೆ, which you so kindly sent a few days ago, has reached me. The work has been edited on modern critical lines; and, with the publication of Part II containing discussions of historical, textual and literary problems arising in connection with the work, your edition, I am sure, will serve as a model to all future editors of Kannada classics. I read several portions of the book particularly in the prose sections.

The theme is quite interesting; but, owing to my deficient knowledge of Kannada, I could not follow well the details of its treatment by the poet.

Thanking you for the gift.

* * *

D.V. Gundappa 27-03-1947

I have read your article on 'ಏನಿ' etc., in P.K. I am glad of it.

I have heard people using the form 'ಏನಿ'. They are unsophisticated

....

I think "ಇ" ending is (was) a favourite one: ಸಲ=ಸಲಿ.

Why not treat 'ಏನ್' as an 'ಅವ್ಯಯ' also? Such multiplicity of capacities is possible, as you will no doubt recall, in English.

An absent minded man like me, forgetting for just the moment, the name of the person he is talking to, may address him or her as : "ಎಲೋ ಇವನೇ, ಎಲೇ ಅವಳೇ, ಎಲೋ ನೀನೇ". The last usage is imaginary. I don't remember having ever used that form myself. But I think this form is just possible, though of course awkward. It is of course to be addressed to a person dull or absent minded like me.

* * *

D.V. Gundappa 30-03-1947

I am grateful for your emendation in the verse ಎನಿತ್ತೆನಿತ್ತಂಬುಜ. Your interpretation is convincing.

I first chanced to see the verse when I was in the V form or the VI. The rhythm it was that then attracted me. ವಂಶಸ್ಥ has some fascination for me. I've given much time and energy to the stringing of verses in that metre - though I've had good sense given me to keep them for myself. In the verse before us, there's some sound influence more than the mere metre or rhythm, - the emphony & the repetitive rhyming, I think, - that captivates my ear. Some childish instinct of mine I s'pose.

My inquiry for the meaning came later. I don't think I am to be classed among the precocious. I am a dull pedestrian. And I was too shy to ask my dear and revered Pandit for the meaning - having myself appreciated already the suggestion of ಘನಸ್ತನಂಗಳ್. I can't say how he would have construed the verse if I had asked him.

Relying upon my own native genius - and not aware of the technique of archery, - I interpreted the verse as follows: ಬಿಲ್+ಆನದನಂತೆ ಕೀಸುಗುಂ: The kirata wore himself out - pined away - (as though) incapable of wielding his bow. Not that I was satisfied fully thus, but I couldn't think of any other way with that ಅಂತೆ there. Your correction does add to the meaning and makes the verse richer in content. I accept it. But, even as amended, the meaning of the verse is not so

very captivating as is the form. The ಅದನ್ is a superfluous. ವನದೊಳ್ is also a bit of padding when you see that the words ಕಿರಾತೆ & ವನೇಚರ are enough to indicate the background.

Here is a brain - flash.

Why not construe the verse thus :-

ಕಿರಾತೆಯ ಘನಸ್ತನ ಹೇಗೆ ಹೇಗೆ ಬೆಳೆದು ರೂಪುಗೊಳ್ಳುತ್ತದೆಯೋ

(Sorry! Not as rotund as in my fancy! Moreover, young man, my knowledge is of the pre-Harapa & Mohanjodaro age!)

ಕಿರಾತನು ಬಿಲ್ಕೋಲನ್ನು ಹಾಗೆ ಹಾಗೆ (ಬಗ್ಗಿಸಿ) ಸಣ್ಣದಾಗಿಸುತ್ತಿದಾನೆ.

I fear you will reject this because it is obviously less romantic - indeed devoid of erotic pathos. But in so rejecting it, could you swear you are not being actuated or instigated by an inner prejudice or predilection of your own? When the whole context of the verse is not before us, I am, I s'pose bound to take your word as final.

Your interpretation, I don't forget, is supported by the parallels you've cited from the ಗಾಥಾ. Suppose you hadn't them, then...........?

I know you've sense of humour enough *not* to regard my exercises of fancy in a solemn light. No mortal man that doesn't want to nudge his neighbour & laugh with him.

The verse is, on the whole, pretty, not great - even as eroticism more accurately. I sh'd perhaps say it isn't as great as it probably was once upon a time. The significance of the simile doesn't so readily come home to us now as the age of achery of ಕಿರಾತ's is gone.

Secondly (forgive me for the seeming levity!) are ಘನ- s either so very prosperous? My field of observation is an extremely small one; and to my distant eye the great old type seems to be going out. The rogues that wrought on stone at Belur & Halebid & Somnathpur must have smelt the far-off decadence; so they took extra care to preserve these types of rotund beauty.

And where are such devoted, self-consecrated worshippers Eros as the fabled ವನೇಚರ? Ours is the age of poor hasty timid sparrows. Nobody today makes any sacrifice. Every one calculates.

Well, I shouldn't forget you are young & impressionable. It may not be to your heart's good that I sh'd discourse further on this topic - on this immortal topic.

* * *

D.V. Gundappa 08-05-1953

I saw your little lyric ನೀಡುಪಾಥೇಯವನು in the spl number of ರಾಷ್ಟ್ರಬಂಧು of Mangalore.

It is pure poetry - true poetry. Beautiful.

my congrats

* * *

M. Govinda Pai October, 15

I am extremely obliged to you for the copy of the ಹೆಣ್ಣು ಮಕ್ಕಳ ಪದಗಳು edited by you, which you have so kindly sent me. It is a very interesting collection, and its value is enhanced by the notes which you have given here & there. The preface is beautiful as well as scholarly. I congratulate you.

* * *

ಎಂ. ಗೋವಿಂದ ಪೈ ೩೦-೦೧-೧೯೫೪

ತಾವು ಪ್ರೀತಿಪೂರ್ವಕವಾಗಿ ಕಳುಹಿಸಿರುವ ಶ್ರೀ ಶ್ರೀ ಬಿ.ಎಮ್.ಶ್ರೀಯವರ ಇಂಗ್ಲೀಷು ಗೀತಗಳಿಗೆ ತಾವು ಬರೆದ ಪ್ರಸ್ತಾವನೆಯ ಪ್ರತಿ ನಿನ್ನೆ ಬಂದು ಮುಟ್ಟಿತು. ಆ ಬಗ್ಗೆ ತಮಗೆ ತುಂಬ ಕೃತಜ್ಞನಾಗಿರುತ್ತೇನೆ.

ಓದಿ ನೋಡಿದೆ, ಬಹಳ ಚೆನ್ನಾಗಿದೆ, ತುಂಬ ಸೊಗಸಾಗಿದೆ. ತಮ್ಮನ್ನು ಅಭಿನಂದಿಸುತ್ತೇನೆ. ಅದನ್ನು ಕುರಿತು ಒಂದೇ ಮಾತಿನಲ್ಲಿ ಹೇಳಿ ಮುಗಿಸಬಹುದಾದರೆ, ಈ ಪ್ರಸ್ತಾವನೆಯನ್ನು

ಬರೆದು ತಾವು ಹೇಗೆ ತಮ್ಮ ಗುರುದಕ್ಷಿಣೆಯನ್ನು ಸಲ್ಲಿಸಿ ಕೃತಕೃತ್ಯರಾದಿರೊ, ಹಾಗೆಯೇ ಅದನ್ನು ತಮ್ಮಿಂದ ಬರೆಯಿಸಿದವರೂ ತಮ್ಮ ಪಳಗಿದಕೆಯ್ಗೆ, ತಮ್ಮ ನುರಿತ ಕೆಯ್ಗೆ, ಅರಿತಕೆಯ್ಗೆ ಆ ಕಾರ್ಯಭಾರವನ್ನು ಒಪ್ಪಿಸಿ ಅವರೂ ಕೃತಾರ್ಥರಾದರು ಎನ್ನಬಹುದು. ತಮ್ಮನ್ನು ಮನಸಾರೆ ಅಭಿನಂದಿಸುತ್ತೇನೆ. ಶ್ರೀ ದೇವರು ತಮಗೆ ಸದಾ ಒಳ್ಳೇದನ್ನು ಮಾಡುತ್ತಿರಲಿ.

* * *

D.V. Gundappa 04-09-1957

Thanks very much for the copy of your Sanskrit College speech. I have gone through it with interest and agreement.

* * *

ಕೆ.ಎಸ್. ವರದಾಚಾರ್ಯ ಮೈಸೂರು, ೭-೧೦-೧೯೫೭

ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ೨-೧೦-೫೭ರಲ್ಲಿ ತಾವು ಮಾಡಿದ ಭಾಷಣವನ್ನು ಓದಿ ಕೃತಾರ್ಥನಾದವರಲ್ಲಿ ನಾನೂ ಒಬ್ಬನು. ಅದಕ್ಕಾಗಿ ನನ್ನ ಕೃತಜ್ಞತೆಯನ್ನು ತಮ್ಮಲ್ಲಿ ಅರ್ಪಿಸುತ್ತೇನೆ.

ಅದರಲ್ಲಿ ಮುಖ್ಯವಾಗಿ ಎರಡು ವಿಷಯ ನನ್ನನ್ನು ಆಕರ್ಷಿಸಿತು. ಮೊದಲನೆಯದು ಸಂಸ್ಕೃತ ವಿದ್ವಾಂಸರ ಶೋಚನೀಯ ಪರಿಸ್ಥಿತಿ ನಿರೂಪಣೆ (ಪುಟ ೭). ತಾವು ಹೇಳಿರುವಂತೆ ಈಗ ನಮ್ಮ ದೇಶದಲ್ಲಿ ವಿದ್ಯೆಯು ಒಂದು ಜೀವನೋಪಾಯ ಎನ್ನುವ ನೀಚವಾದ ಮನೋಭಾವ ವಿದ್ಯಾವಂತರಲ್ಲಿಯೂ ಅನೇಕರಲ್ಲಿ ನೆಲೆದಿರುವುದು ಶೋಚನೀಯ. ವಿಶುದ್ಧವಾದ ಜ್ಞಾನವೇ ವಿದ್ಯಾಭ್ಯಾಸದ ಫಲ ಎನ್ನುವ ಉತ್ತಮ ಲಕ್ಷ್ಯವನ್ನು ಬಿಟ್ಟು ನಾವು ಉದರಪೋಷಣೆಯು, ಹೆಂಡತಿಗೆ ಒಡವೆ ಹಾಕಿಸುವುದು ಇತ್ಯಾದಿಯೇ ವಿದ್ಯಾಭ್ಯಾಸದ ಪರಮೋದ್ದೇಶವೆಂದು ಭಾವಿಸುತ್ತಿದ್ದೇವೆ ಎನ್ನುವುದನ್ನು ನಾಚಿಕೆಯಿಂದ ಒಪ್ಪಲೇಬೇಕು. ಪಾಶ್ಚಾತ್ಯರಿಂದ ನಮ್ಮ ದೇಶಕ್ಕೆ ಆಗಿರುವ ಮಹತ್ತರವಾದ ಹಾನಿ ಇದೇ. ಈ ಭಾವನೆ ಹೋದ ಹೊರತು ನಮ್ಮ ದೇಶಕ್ಕೆ ಗತಿಮೋಕ್ಷವೇ ಇಲ್ಲ.

ಎರಡನೆಯದಾಗಿ (ಪುಟ. ೧೪) ವಿದ್ಯಾಭ್ಯಾಸದಲ್ಲಿ ಈಗಿರುವ ಎರಡು ಪದ್ಧತಿಯನ್ನು ತಾವು ವಿವರಿಸಿ ಒಂದು ಘರ್ಷಣೆಯಪರಿಹಾರ ಮಾರ್ಗವನ್ನು ಉಪದೇಶಿಸಿರುವುದಕ್ಕೆ ಧನ್ಯವಾದ. ಪಂಡಿತರಿಗೆ ಏನು ಗೊತ್ತು? ಎಂದು ಗ್ರ್ಯಾಜುಯೇಟ್‌ಗಳು, ಗ್ರಾಜ್ಯುಯೇಟ್‌ಗಳಿಗೆ ಏನು ಗೊತ್ತೆಂದು ಪಂಡಿತರು ಪರಸ್ಪರ ತೆಗಳುವುದು ಶೋಚನೀಯ. ತಾವು ಹೇಳಿರುವ ರೀತಿಯಲ್ಲಿ ಆಳವಾದ ಜ್ಞಾನವುಳ್ಳ ಪಂಡಿತರು, ಅಗಲವಾದ ಜ್ಞಾನವುಳ್ಳ ಗ್ರ್ಯಾಜುಯೇಟ್‌ಗಳು ಪ್ರತ್ಯೇಕ ಅಪೂರ್ಣರೇ. ಹೀಗಿರುವಾಗ ಪರಸ್ಪರ ನಿಂದೆ ಅರ್ಥರಹಿತ. ಒಂದು ಗುಂಪಿನ ಕೂಗಿಗೆ ಈ

ಕಾಲದಲ್ಲಿ ಬೆಲೆಯಿದ್ದರೂ ಅದು ಸತ್ಯ ಆಗಲಾರದು. ತಾವು ಹೇಳಿರುವ ಈ ಸತ್ಯಾಂಶವನ್ನು ಎಲ್ಲರೂ ಅರಿತರೆ ಎಷ್ಟೋ ಕಹಿಯಾದ ವಾತಾವರಣವನ್ನು ಪರಿಹರಿಸಬಹುದು. ಪಾಶ್ಚಾತ್ಯರ ಕಾಲದಲ್ಲಿ ನಮ್ಮವರನ್ನು ಅಪಮಾನಗೊಳಿಸಲು ಬೇಕೆಂದೇ ಏರ್ಪಡಿಸಿದ್ದ ಅನೇಕ ಕಟ್ಟು ಸಂಪ್ರದಾಯಗಳು ನಾಶವಾಗಿ ದೇಶಕ್ಕೆ ಹಿತವಾಗಬಹುದು. ಇಂತಹ ವಿವೇಕವನ್ನು ವಿದ್ಯಾವಂತರಿಗಾದರೂ ತಮ್ಮ ಭಾಷಣದ ಮೂಲಕ ಪರಮಾತ್ಮನು ಅನುಗ್ರಹಿಸಲಿ.

ಕೊನೆಯದಾಗಿ (೧೫ನೇ ಪುಟದ ಕೊನೆಯಲ್ಲಿ) ಸಂಸ್ಕೃತ ಪಂಡಿತರಿಗೆ ತಾವು ಕೊಟ್ಟಿರುವ ಉಪದೇಶಕ್ಕೆ ಅವರು ಕೃತಜ್ಞರಾಗಿರುತ್ತಾರೆ. ಆದರೆ ಇದಕ್ಕಿಂತಲೂ ಗಂಭೀರವಾದ-ಗಣ್ಯವಾದ ಭಾಷೆಯಲ್ಲಿ ಇದನ್ನು ಹೇಳಲು ತಮಗೆ ಶಕ್ತಿ ಇದೆ ಎನ್ನುವುದು ನಮ್ಮ ನಂಬಿಕೆ.

ನವೀನತೆಯ ಮೇಲಿರುವ ವ್ಯಾಮೋಹದಿಂದ ಪ್ರಾಚೀನತೆಯನ್ನೇ ನಿಂದಿಸಬಾರದು. ಹೊಸದನ್ನು ಕಾಣುವ-ಅಥವಾ ಕಂಡ ಉತ್ಸಾಹದಲ್ಲಿ ನಮ್ಮ ಪೂರ್ವಿಕರೆಲ್ಲರೂ ಅನಾಗರೀಕರು. ನಮ್ಮ ತಾಯಿ ತಂದೆಯರು ಮತ್ತು ಗುರುಹಿರಿಯರು ಅಸಂಸ್ಕೃತರು ಎಂದು ಕೆಲವರು ಸಾಹಸದಿಂದ ಹೇಳುವುದು ಶೋಚನೀಯ.

ಸಂಸ್ಕೃತಿಯೆನ್ನುವುದು ಮಾನಸಿಕ ಪರಿಣಾಮವನ್ನು ಹೇಳುವುದೇ ಹೊರತು ಬಾಹ್ಯ ವೇಷಭೂಷಗಳನ್ನು ಮಾತ್ರ ಹೇಳುವುದಿಲ್ಲ. ನಾಗರಿಕತೆಯ ಪ್ರಧಾನ ಕುರುಹು - ಅನುದ್ವೇಕರ ವಾಕ್ಯ ಪರಸ್ಪರ ಸಹನೆಯೇ. ಕೌಪೀನರಹಿತರ ಮಧ್ಯದಲ್ಲಿ ಕೌಪೀನಧಾರಿಯೇ ಹುಚ್ಚನು ಎನ್ನುವುದನ್ನೇ ಸಿದ್ಧಾಂತ ಪಡಿಸಬಾರದು. ನಮ್ಮ ದೇಶ ಭಾರತ ದೇಶ ಎನ್ನುವುದನ್ನು ನಾವು ಮರೆಯಬಾರದು. ಗಾಂಧೀಜಿ, ವಿನೋಬಾಜಿ ಮುಂತಾದವರು ಹೇಳುವಂತೆ ನಾವು ನಮ್ಮ ವಿವೇಕವನ್ನು - ವೈಶಿಷ್ಟ್ಯವನ್ನು ಕಳೆದುಕೊಂಡು ಇತರರನ್ನೇ ಕಾಪಿ ಮಾಡುವುದು ಹಿತವಲ್ಲ. ಈ ವಿಚಾರಗಳೆಲ್ಲವನ್ನೂ ತಾವು ತಿಳಿಸಿದ್ದರೂ ಉತ್ಸಾಹದಿಂದ ನಾನು ಹೇಳಿದ್ದು ಪುನರುಕ್ತವಾದರೆ ಅದಕ್ಕಾಗಿ ಕ್ಷಮಾಪಣೆಯನ್ನು ನಾನು ಬೇಡುತ್ತೇನೆ. ತಮ್ಮಂತಹ ಸುಸಂಸ್ಕೃತರು ಸದ್ವಿದ್ವಾಂಸರು ಅಭಿವೃದ್ಧಿಯಾಗಿ ದೇಶೋದ್ಧಾರವಾಗಲೆಂದು ಸದಾಪರಮಾತ್ಮನನ್ನು ಪ್ರಾರ್ಥಿಸುತ್ತಿರುವೆನು.

(ತೀ.ನಂ.ಶ್ರೀಯವರು ಈ ಪತ್ರವನ್ನು ಮೆಚ್ಚಿ ಶ್ರೀ ವರದಾಚಾರ್ಯರಿಗೆ ಉತ್ತರಪತ್ರ ಬರೆದಿದ್ದು ನನಗೆ ನೆನಪಿದೆ. ಅದರಲ್ಲಿ ಮೇಲಿನ ೪ನೆಯ ಪ್ಯಾರಾಗೆ ಸಂಬಂಧಿಸಿದಂತೆ - ಅದರಲ್ಲಿ ತಮಗೆ ಯಾರನ್ನೂ ನಿಂದಿಸುವ ಉದ್ದೇಶವಿರಲಿಲ್ಲವೆಂದು ಸ್ಪಷ್ಟಪಡಿಸಿ, ಅದರಿಂದ ಯಾರಿಗಾದರೂ ಮನಸ್ಸಿಗೆ ನೋವಾಗಿದ್ದರೆ ತಮ್ಮನ್ನು ಕ್ಷಮಿಸಬೇಕೆಂದು ತಿಳಿಸಿದ್ದರು. ಈ ಪತ್ರದ ಪ್ರತಿ ಮಾಡಿರಲಿಲ್ಲ -ಸಂಪಾದಕ)

(ಈ ಭಾಷಣ 'ಸಮಾಲೋಕನ'ದಲ್ಲಿ 'ಅಮರವಾಣಿ' ಶೀರ್ಷಿಕೆಯಲ್ಲಿ ಸೇರ್ಪಡೆಯಾಗಿದೆ.)

* * *

ಎರಡು ತುಣುಕುಗಳು

೧

ಉನ್ಮತ್ತ, ಪ್ರೇಮಿ, ಕವಿ – ಇವರಲಿ ವಿಜೃಂಭಿಸಿಹು–
ದೇಕಘನವಾಗಿ ಕಲ್ಪನೆ. ಒಬ್ಬ ಕಾಣುವನು
ವಿಸ್ತರದ ನರಕವೂ ಹಿಡಿಸದ ಪಿಶಾಚಿಗಳ
ಮೊತ್ತವನು; ಇವನೆ ಉನ್ಮತ್ತ. ಅಂತುಟೆ ಮರುಳು
ಮಸಗಿ, ಹೆಲೆನಳ ಚೆಲುವನೊಂದು ಕರಿಮೋರೆಯಲಿ
ಕಾಣುವನು ಪ್ರೇಮಿ. ಭಾವಾವೇಶದಲಿ ಕವಿಯ
ಕಣ್ಣು ಹೊರಳುವ, ಸ್ವರ್ಗದಿಂದ ಭೂಮಿಗೆ ಮತ್ತೆ
ಭೂಮಿಯಂ ಸ್ವರ್ಗಕ್ಕೆ ದಿಟ್ಟಿಹಾಯಿಸುತಿಹುದು;
ಅರಿಯದಿಹ ವಸ್ತುಗಳ ಆಕಾರಗಳನೆಲ್ಲ
ಹಿಡಿದು ಮೈದೊಡಿಸಿ ಕಲ್ಪನೆ ಹೊಮ್ಮಿಸುತ್ತಲಿರೆ,
ಕವಿಯ ಲೆಕ್ಕಣಿಕೆ ಮೂರ್ತಿಗಳಾಗಿ ಕಡೆಯುವುದು,
ಗಾಳಿಹಗುರದ ಶೂನ್ಯಕೊಂದು ನೆಲೆದಾಣವನು
ನೀಡುವುದು, ಜೊತೆಗೊಂದು ನಾಮಧೇಯವನು!

–A Midsummer – night's Dream, V.1. 7-17

೨

ಎನಿತು ದೂರಕೆ ತನ್ನ ಕಿರಣಗಳನಾ ಪುಟ್ಟ ಹಣತೆ ಬೀರುವುದು.
ಅನಿತು ಸತ್ಕೃತಿಯೊಂದು ದುಷ್ಟಚಿಂತದ ಲೋಕದೊಳಗೆ ಬೆಳಗುವುದು.

–The Merchant of Venice V. 1. 90-91

* * *

(ಶ್ರೀ ಶಾ. ಬಾಲುರಾವ್ ಅವರ ಸಂಪಾದಕತ್ವದಲ್ಲಿ ಪ್ರಕಟವಾದ "ಷೇಕ್‌ಸ್ಪಿಯರ್‌ಗೆ ನಮಸ್ಕಾರ" ಪುಸ್ತಕಕ್ಕೆ ಅವರ ಕೋರಿಕೆಯಂತೆ ತೀನಂಶ್ರೀಯವರು ಮೇಲಿನ ಎರಡು ಅನುವಾದಗಳನ್ನು ಕಳಿಸಿದ್ದರು. ಅದಕ್ಕೆ ಕೆಳಗಿನದು ಶ್ರೀ ಶಾ. ಬಾಲುರಾವ್ ಅವರ ಪತ್ರ)

೧೯–೬–೧೯೬೪

ತಮ್ಮ ದಿನಾಂಕ ಸೆಪ್ಟೆಂಬರ್ ೧೪ರ ಪತ್ರ ಹಾಗೂ ಅದರೊಡನೆ ದಯವಿಟ್ಟು ಕಳುಹಿಸಿದ ಅನುವಾದಗಳು ಕೈಸೇರಿದವು. ಅದಕ್ಕಾಗಿ ವಂದನೆಗಳು.

ಎರಡು ಅನುವಾದಗಳೂ ಸೊಗಸಾಗಿವೆ, ಮೂಲದೊಡನೆ ಹೋಲಿಸಿ ನೋಡಿದಾಗ ಅನುವಾದಗಳು ಪ್ರಾಮಾಣಿಕವಾಗಿರುವುದಷ್ಟೇ ಅಲ್ಲದೇ ಮೂಲವನ್ನು ಮರೆತು ಓದಿದರೆ ಅವು ಸ್ವತಂತ್ರ ಕೃತಿಗಳೋ ಎಂಬ ಭಾವ ತರುವಷ್ಟು ಸುಲಲಿತವೂ ಸುಂದರವೂ ಆಗಿವೆ. ಒಂದು ಅನುವಾದಕ್ಕೆ ಇದಕ್ಕಿಂತ ಹೆಚ್ಚಿನ ಗುಣ ಏನು ಬೇಕು? ಅವನ್ನು ಓದಿದ ಮೇಲೆ ತಾವು ಉಳಿದೆಲ್ಲ ಗಡಿಬಡಿಗಳಿಂದ ಒಂದೆರಡು ವರ್ಷ ಬಿಡುಗಡೆ ಪಡೆದು ಷೇಕ್‌ಸ್ಪಿಯರ್‌ನ ಕೆಲವಾದರೂ ಅನುವಾದಿತ ಕೃತಿಗಳ ಅನುವಾದಕ್ಕೆ ತೊಡಗಬಾರದೇ ಎಂದು ಅರಿಕೆ ಮಾಡಿಕೊಳ್ಳೋಣವೆನಿಸುತ್ತದೆ. ಒಂದರ ನಷ್ಟ ಇನ್ನೊಂದರ ಲಾಭ!

ನಮ್ಮ ಸಂಪುಟದಲ್ಲಿ "ಮಿಡ್ ಸಮ್ಮರ್" ನಿಂದ ಆಯ್ದು ಮಾಡಿದ ಭಾಗವನ್ನು ಉಪಯೋಗಿಸಿಕೊಳ್ಳುವೆ. "ದಿ ಮರ್ಚೆಂಟ್ ಆಫ್ ವೆನಿಸ್" ನದರ ಬಗ್ಗೆ ಒಂದು ಸಣ್ಣ ವಿಜ್ಞಾಪನೆ; ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅನುವಾದಿತವಾಗದ ಕೃತಿಗಳ ಭಾಗಗಳನ್ನಷ್ಟೇ ಅನುವಾದ ಮಾಡಿಸಿ ಅಚ್ಚು ಹಾಕುವುದೆಂದು ನಿರ್ಧರಿಸಿದ್ದೇವೆ. ಇದರಿಂದ ಈವರೆಗೆ, ಹೊಸಗನ್ನಡದಲ್ಲಾಗದ ಕೃತಿಗಳ ಭಾಗಗಳು ಅನುವಾದವಾಗಿ ಬರಲು ಅನುಕೂಲವಾಗುತ್ತದೆ. ಈ ದೃಷ್ಟಿಯನ್ನು ತಾವೂ ಒಪ್ಪುವಿರೆಂದುಕೊಂಡಿದ್ದೇನೆ. ತಾವು ಸಾನೆಟ್ಟನ್ನು ಅನುವಾದ ಮಾಡುವಿರೆಂದುಕೊಂಡಿದ್ದುದರಿಂದ ಈ ಮಾತನ್ನು ಮೊದಲೇ ತಮ್ಮ ಗಮನಕ್ಕೆ ತರಲು ಅವಕಾಶವಾಗಲಿಲ್ಲ. ತೊಂದರೆಗೆ ಕ್ಷಮೆಯಿರಲಿ.

ಅಂತೂ ನಾನು ಪಟ್ಟು ಹಿಡಿದುದಕ್ಕೂ ಸಾರ್ಥಕವಾಯಿತು. ಒಳ್ಳೆಯ ಕೃತಿ, ಅದರಲ್ಲಿ ಮುತ್ತಿನಂತಹ ಭಾಗ, ಅಷ್ಟೇ ಸುಂದರವಾದ ಅನುವಾದ. ತಮ್ಮ ನೂರೆಂಟು ಕೆಲಸಗಳ ಹೊರೆಯಿಂದ ಬಿಡುವು ಪಡೆದು ಉಪಕರಿಸಿದುದಕ್ಕೆ ನನ್ನ ಅನಂತ ಕೃತಜ್ಞತೆಗಳು.

ಮರೆತಮಾತು :

"ಪಿಶಾಚಿಗಳ ಮೊತ್ತವನು....." ಎಂಬಲ್ಲಿ ಮೂಲಕ್ಕೂ ಹೆಚ್ಚಿನ ಸೊಗಸು ದೊರೆಯುತ್ತದೆ. 'ಮೊತ್ತ' ಶಬ್ದದ ಉಪಯೋಗ ಸಂದರ್ಭಕ್ಕೆ ಚೆನ್ನಾಗಿ ಹೊಂದುತ್ತದೆ.

* * *

ಎ.ಎನ್. ಮೂರ್ತಿರಾವ್ ನವದೆಹಲಿ, ೫-೩-೧೯೭೭

ಪ್ರಿಯ ನಾಗಭೂಷಣ

ನೀನು ಆದರದಿಂದ ಕಳಿಸಿದ 'ಕಾವ್ಯಾನುಭವ' ತಲುಪಿತು, ಅದರಲ್ಲಿರುವ ಲೇಖನಗಳಲ್ಲಿ, ಬಹುಭಾಗ ನನಗೆ ಹೊಸದು-ಆದ್ದರಿಂದ ಅದನ್ನು ಬಹು ಸಂತೋಷದಿಂದ ಸ್ವಾಗತಿಸುತ್ತೇನೆ. 'ವಚನ ಸುಂದರಿ', 'ಎರಡು ವಚನಗಳು', 'ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು'-ಇವು ಮೂರನ್ನು ಓದಿದ ನೆನಪಿದೆ. ಸ್ಥಾನಂ ನರಸಿಂಹರಾಯರ ಕಲೆಯನ್ನು ಕುರಿತು ನಾವು ಚರ್ಚೆ ಮಾಡಿದ ನೆನಪಿದೆಯಾದರೂ ತೀ.ನಂ.ಶ್ರೀ. ಲೇಖನವನ್ನು ಬರೆದದ್ದು ನೆನಪಿರಲಿಲ್ಲ. 'ಚತ್ತಾಣ ಮತ್ತು

ಬೆದಂಡೆ'ಯಲ್ಲಿ ಬೆದಂಡೆ ಎಂಬ ಮಾತನ್ನು ಶ್ರೀಕಂಠಯ್ಯನಿಂದ ಕೇಳಿ "ನಿಮ್ಮ (!) ಕನ್ನಡದವರು ಹೆಸರಿಟ್ಟುಕೊಳ್ಳುವಾಗ ಎಷ್ಟು ಮಧುರವಾದ melodious ಆದ, ಕಿವಿಗೆ ಹಿತವಾದ ಹೆಸರನ್ನು ಆರಿಸುತ್ತಾರೆ! 'ಪೋಚಿಕಬ್ಬೆ, ಅತ್ತಿಮಬ್ಬೆ' ಇವೆರಡನ್ನೂ ಕೇಳಿ ಆನಂದಪಟ್ಟಿದ್ದೆ. ಆದರೆ ಈ 'ಬೆದಂಡೆ' ಅವರೆಡನ್ನೂ ಮೀರಿಸುತ್ತದೆ" ಎಂದು ಹಾಸ್ಯ ಮಾಡಿದ ನೆನಪಿದೆ. ಆದರೆ ಆ ಬೆದಂಡೆ ಮನುಷ್ಯನೋ ಮೃಗವೋ ನಿರ್ಜೀವಿಯೋ– ಒಂದು ನನಗೆ ಗೊತ್ತಿರಲಿಲ್ಲ!

ಉಳಿದವೆಲ್ಲ ಪೂರ್ತಿ ಹೊಸಲೇಖನಗಳು–ಅಥವಾ ಮರವಿನಿಂದಾಗಿ ಹೊಸದಾಗಿ ಕಾಣುತ್ತವೆ. ಪುಸ್ತಕವನ್ನು ಸಾವಧಾನವಾಗಿ ಓದುತ್ತೇನೆ.

ತೀ.ನಂ.ಶ್ರೀ. 'ದಿನಚರಿ'ಯಿಂದ

ತೀ.ನಂ.ಶ್ರೀ. ಅವರ ಬರವಣಿಗೆಯ ವಿಷಯದಲ್ಲಿ ಮಾತನಾಡುವಾಗ 'ದಿನಚರಿ' ಎನ್ನುವ ಪದ ಅಪಭ್ರಂಶವಾಗಬಹುದು. ಏಕೆಂದರೆ ಅವರು ಪಟ್ಟಾಗಿ ಕುಳಿತು ದಿನಚರಿ ಬರೆದವರಲ್ಲ. ಈ ರೀತಿಯ ಸಂಸ್ಕಾರ (ritual) ಅವರಿಗೆ ಒಗ್ಗಿದ್ದಲ್ಲ. ಆದರೂ **"ಓದಿದ್ದು, ಕಂಡದ್ದು, ಕೇಳಿದ್ದು, ತೋರಿದ್ದು"** ಎನ್ನುವ ಶೀರ್ಷಿಕೆಯಲ್ಲಿ ತಮ್ಮ ಬಳಿ ಇಟ್ಟುಕೊಂಡಿದ್ದ ಒಂದು ಕಪ್ಪು ರಟ್ಟಿನ ಪುಸ್ತಕದಲ್ಲಿ ತೀ.ನಂ.ಶ್ರೀ. ಅವರು ಕೆಲವು ವಿಷಯಗಳನ್ನು ಬರೆದಿದ್ದಾರೆ. ಅವು ಎಂದು ಬರೆದವು ಎನ್ನುವ ದಿನಾಂಕವನ್ನು ಗುರುತಿಸಿರುತ್ತಾರೆ. ಅವರು ಬೇರೆಯ ಪುಸ್ತಕಗಳಿಂದ ಗುರುತು ಮಾಡಿಕೊಂಡಿರುವುದನ್ನು ಅದು ಸಾಂದರ್ಭಿಕ ನಿರೂಪಣೆಗೆ ಅಗತ್ಯವಾಗಿದ್ದ ಹೊರತು ಇಲ್ಲಿ ಸೇರಿಸಿಲ್ಲ.

ಈ ಪುಸ್ತಕದಲ್ಲಿದ್ದ ಒಂದು ಕಿರು ಲೇಖನ 'ವೋಟು' ಎನ್ನುವ ಶೀರ್ಷಿಕೆಯಲ್ಲಿ ಅವರ 'ನಂಟರು' ಪುಸ್ತಕದಲ್ಲಿ ಪ್ರಕಟವಾಗಿರುವುದರಿಂದ ಇಲ್ಲಿ ಸೇರಿಸಿಲ್ಲ.

ತೀ.ನಂ.ಶ್ರೀ. ಅವರಿಗೆ ಮಹಾತ್ಮಾ ಗಾಂಧಿಯ ಮೇಲೆ ಅಪಾರ ಗೌರವ. ಗೌತಮ ಬುದ್ಧ, ಏಸುಕ್ರಿಸ್ತನ ನಂತರ ಸುಮಾರು ಎರಡು ಸಹಸ್ರ ವರ್ಷಗಳ ನಂತರ ನಮ್ಮ ಜಗತ್ತು ಕಂಡ ಒಬ್ಬ ನಿಜವಾದ ಮಹಾಪುರುಷ ಮಹಾತ್ಮಾ ಗಾಂಧಿ ಎಂದು ಅವರ ಭಾವನೆ. ಗಾಂಧಿಯ ಬಗ್ಗೆ ಅವರು ಬರೆದಿರುವ 'ನಂದಾದೀವಿಗೆ' ಲೇಖನಕ್ಕೆ ('ನಂಟರು' ಪ್ರಬಂಧ ಸಂಕಲನದಲ್ಲಿ ಪ್ರಕಟವಾಗಿರುವುದು) ಈ ಪುಸ್ತಕದಲ್ಲಿ ಗುರುತು ಮಾಡಿರುವ ಅನೇಕ ಅಂಶಗಳೇ ಆಧಾರವಾಗಿವೆ. ಆದರೂ ಕೂಡ ತೀ.ನಂ.ಶ್ರೀ. ಅವರ ಗಾಂಧಿಯ ಮೇಲಿನ ಗೌರವ, ಆ ಭೀಕರ ಕೊಲೆಯ ಸಂದರ್ಭದಲ್ಲಿ ಅವರಿಗಾದ ನೋವು ಸಂಕಟಗಳು ಸಮಗ್ರವಾಗಿ ವ್ಯಕ್ತವಾಗಲೆಂದು ಇಲ್ಲಿ ಆ ಭಾಗವನ್ನು ಸಂಪೂರ್ಣವಾಗಿ ಉದ್ಧರಿಸಲಾಗಿದೆ. ಆದ್ದರಿಂದ 'ನಂದಾದೀವಿಗೆ' ಲೇಖನದ ಬಹುಭಾಗ ಇಲ್ಲಿ ಪುನರಾವೃತ್ತಿಯಾದರೂ, ಇದು ತೀ.ನಂ.ಶ್ರೀ. ಅವರು ಮಹಾತ್ಮಾ ಗಾಂಧಿಗೆ ಸಲ್ಲಿಸುವ ಪುನಃಶ್ರದ್ಧಾಂಜಲಿ ಎಂದು ನನ್ನ ಭಾವನೆ.

ತೀ.ನಂ.ಶ್ರೀ. ಅವರು ನಿಧನರಾದ ಸ್ವಲ್ಪ ಕಾಲದಲ್ಲಿಯೇ ೧೯೬೬ರಲ್ಲಿ, ದೇಜಗೌ ಅವರು ಅವರ ಪೂಜ್ಯ ಗುರುಗಳ ಅಗಲಿಕೆಯ ದುಃಖದಿಂದ ಸ್ವಲ್ಪ ಸಮಾಧಾನ ತಂದುಕೊಳ್ಳಲು 'ತೀ.ನಂ.ಶ್ರೀ. (ಜೀವನ)' ಎಂಬ ಒಂದು ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆದರು (ಪ್ರಕಟಣೆ ಕನ್ನಡ ಸಂಘ, ಮಾನಸಗಂಗೊತ್ರಿ, ಮೈಸೂರು). ಆಗ ನಾನು ದೇಜಗೌ ಅವರಿಗೆ ತೀ.ನಂ.ಶ್ರೀ. ಅವರ 'ದಿನಚರಿ'ಯನ್ನು ಕೊಟ್ಟಿದ್ದೆ. ಇದರಲ್ಲಿರುವ ಅನೇಕ ಭಾಗಗಳು ಆಗಲೇ ಅದರಲ್ಲಿ ಸೇರ್ಪಡೆಯಾಗಿವೆ. ಆದರೂ ಅದು ಪ್ರಕಟವಾಗಿ ಅನೇಕ ವರ್ಷಗಳಾಗಿರುವುದರಿಂದ ಮತ್ತು ತೀ.ನಂ.ಶ್ರೀ. ಅವರ ಸಮಗ್ರ ವ್ಯಕ್ತಿತ್ವ ನಿರೂಪಣೆಗೆ ಅವು ಅವಶ್ಯವೆನಿಸಿದುದರಿಂದ ಈ 'ದಿನಚರಿ'ಯನ್ನು ಯಥಾಸ್ಥಿತಿಯಾಗಿ ಇಲ್ಲಿ ಸೇರಿಸಲಾಗಿದೆ.

ಓದಿದ್ದು, ಕಂಡದ್ದು, ಕೇಳಿದ್ದು, ತೋರಿದ್ದು

●

ಶ್ರೀಃ

೧೯-೧೦-೪೪

"ಹಿಮಾಚಲಕ್ಕೆ ಹಲವು ಶಿಖರಗಳು"

ನಿನ್ನೆ ಸಂಜೆ ಗೋಪಾಲಕೃಷ್ಣರಾಯರ ಮನೆಯಲ್ಲಿ ಪು.ತಿ.ನ. 'ಗೋಕುಲ ನಿರ್ಗಮನ'ವನ್ನು ಓದಿದರು. ಇಲ್ಲ, ಕಿರುದನಿಯಲ್ಲಿ ಹಾಡಿದರು. ಮಿತ್ರರ ಮಿತಗೋಷ್ಠಿ; ಕರೆದಿದ್ದವರೆಲ್ಲ ಬಂದಿರಲಿಲ್ಲ. ಆದರೂ ಹಿತವಾಗಿತ್ತು. ಅದರಿಂದಲೇ ಹಿತವಾಗಿತ್ತೋ ಏನೋ. ಜೊತೆಗೆ, ಕೆ. ನರಸಿಂಹಮೂರ್ತಿ ಒಬ್ಬರು ಮಾತ್ರ ಬಂದಿದ್ದರೆ ನನಗೆ ತುಂಬ ಸಂತೋಷವಾಗುತ್ತಿತ್ತು.

(ಈ ಗೋಷ್ಠಿ ನಮ್ಮ ಮನೆಯಲ್ಲಿ ಸೇರಬೇಕಾಗಿತ್ತು. ಆದರೆ ಕಳೆದ ತಿಂಗಳು ಇದೇ ಸುಮಾರಿಗೆ ತಪ್ಪಿಹೋಯಿತು. ಈ ಸಲವೂ ನನಗೆ ಲಭ್ಯವಿರಲಿಲ್ಲ.)

ಹಾಡುಗಳಿಗೆ ಉದ್ದೇಶಿಸಿದ್ದ ರಾಗಗಳು ಅಲ್ಲಲ್ಲೇ ಸರಿಯಾಗಿ ಬರಲಿಲ್ಲ ಎಂದು ನರಸಿಂಹಾಚಾರ್ಯರೇನೋ ಕೊಂಚ ಪೇಚಾಡಿಕೊಂಡರು; ಆದರೆ ಅತೃಪ್ತಿ ಪಟ್ಟವರು ಅವರೊಬ್ಬರೇ, ಸಂಗೀತ ಚತುರರಲ್ಲದ ನಾವು ಯಾರೂ ಅಲ್ಲ. ಸಣ್ಣರವೆಯಲ್ಲಿ ಸೇವಗೆ ತೆಗೆದಂತೆ ಎಲ್ಲವೂ ಸರಾಗವಾಗಿ ಬಂತು. ಮಿತ್ರರೆಲ್ಲ ಹಾಡುಗಳನ್ನು ಮೆಚ್ಚಿದರು, ಮನಗರಗಿದರು.

ಈ ಹಾಡುಗಳಲ್ಲಿ ಯಾವುದನ್ನು ಹೊಗಳುವುದು, ಯಾವುದನ್ನು ಬಿಡುವುದು. ಕೃಷ್ಣ-ರಾಧೆಯ ಪ್ರೇಮ; "ಇವೆ ಒಲವಿನ ಸರಿಗಮಪದನಿ", ರಾಸಕ್ರೀಡೆಯಲ್ಲಿ ಋಷಿಗಳ ಹಾಡು; "ಬಿಡುಗಡೆಯೋಹೋ ಬಿಡುಗಡೆ"-ಈ ಒಂದೆರಡಂತೂ ನಾಟಕದ ಶಿಖರವೆಂದು ಹಲವರು ಕರೆದರು; ಮುಂದುವರಿದೆವು. "ನಿಲ್ಲಿಸದಿರು ವನಮಾಲೀ ಕೊಳಲಗಾನವ"-ಇದು ನನ್ನ ಮನಸ್ಸನ್ನೇನೋ ಈ ಮೊದಲೇ ಸೂರೆಗೊಂಡಿತ್ತು. ಇನ್ನೂ ಕೊನೆಗೆ ಕೃಷ್ಣನು ಬಿಟ್ಟು ಹೋದ ಕೊಳಲನು ಕುರಿತು ರಾಧೆಯ ಹಾಡು: "ಯಮುನೆಯ ಬನದೊಳು"…. ಇದರ ಸವಿಗೆ ಮುಗ್ಧರಾಗದ ಮಂದಿಯೇ ಇರಲಿಲ್ಲ. ಎಲ್ಲರ ಹೃದಯವೂ ಕರಗಿ ನೀರಾಯಿತು. ಹಿಂದಿನ ಹಾಡುಗಳೇ ಶಿಖರವೆಂದಿದ್ದೆವಲ್ಲ, ಇದಕ್ಕೇನು ಹೇಳುವುದು ಎಂದು ಒಬ್ಬಿಬ್ಬರು ಬೆರಗು ಪಟ್ಟರು. ಆಗ ನಾನು ಹೇಳಿದೆ: "ಹಿಮಾಚಲಕ್ಕೆ ಹಲವು ಶಿಖರಗಳು."

ನರಸಿಂಹಾಚಾರ್ಯರಿಗೆ ನಿನ್ನೆ ಸಂತೋಷವಾಗಿರಬೇಕು, ಸಮಾಧಾನವಾಗಿರಬೇಕು, ಕೃತಿ ರಚನೆಯಲ್ಲಿ ಹುರುಪು ಬಂದಿರಬೇಕು. ಇಂಥ ಮಿತ ಮಿತ್ರಗೋಷ್ಠಿಯಲ್ಲೇ ಆತನ ಸಂಕೋಚ ಹರಿಯುವುದು, ಕಂಠ ಬಿಡುವುದು, ಮನಸ್ಸು ಅರಳುವುದು, ಆತ್ಮವಿಶ್ವಾಸ ಬಲಿಯುವುದು.

ಗೋಕುಲ ನಿರ್ಗಮನದ ಹಾಡುಗಳು ಬಲು ತಿಳಿಯಾಗಿ, ಬಲು ಸವಿಯಾಗಿ ಬಂದಿವೆ. ಇವನ್ನು ನಮ್ಮ ಜನ ಮನೆಗಳಲ್ಲಿ, ಬೀದಿಗಳಲ್ಲಿ ಸಿನಿಮಾ ಹಾಡುಗಳಂತೆ ಹಾಡಿಕೊಂಡು ಉಲ್ಲಾಸ ಪಡುವುದು ಎಂದಿಗೆ? ಸಿನಿಮಾ ಹಾಡುಗಳ ಸ್ಥಾನದಲ್ಲಿ ಇವು ನಿಂತು ಜನದ ಮನಸ್ಸನ್ನು ಉತ್ತಮ ಪಡಿಸುವುದು ಎಂದಿಗೆ!

* * *

೨೫-೧೦-೪೪

ಔತನದ ಊಟಕ್ಕೆ ಹೋಗಿಬಂದ ಮೇಲೆ ಯಾರಾದರೂ "ಭೋಜನ ಚೆನ್ನಾಗಿತ್ತೆ" ಎಂದು ಕೇಳಿದರೆ, "ಈಗಲೇ ಹೇಳಲಾರೆ, ಇನ್ನು ಹನ್ನೆರಡು ಘಂಟೆ ಬಿಟ್ಟು ಉತ್ತರ ಕೊಡುತ್ತೇನೆ" ಎಂದು ಹೇಳಬೇಕು.

* * *

ಮನಸ್ಸಿನಲ್ಲಿ ಉದಿಸಿದ ಭಾವಗಳಿಗೆ ಮಾತಿನಲ್ಲಿ ರೂಪು ಕೊಡದಿದ್ದರೆ ಅದು ಭ್ರೂಣಹತ್ಯಕ್ಕೆ ಸಮಾನ ಎಂದು ಪು.ತಿ.ನ. ಹೇಳುವುದು ನನಗೆ ಮತ್ತೆ ಮತ್ತೆ ನೆನಪಾಗುತ್ತದೆ.

* * *

೨-೧೧-೪೧

ತಟಸ್ಥತಾಂ ವಿಹಾಯಾಪಿ
ಪ್ರತಿಮಾಲಾ' ಮಹಾಹವೇ।
ಪಕ್ಷಯೋರು ಭಯೋಸ್ತುಲ್ಯಾಂ
ಶ್ರಿತವಾನಸ್ಮಿ ಶಲ್ಯತಾಂ॥

['ಶೇಷಮಕ್ಷರಮಾದಾಯ ಪ್ರತಿಶ್ಲೋಕಂ ಕ್ರಮೇಣ ಯತ್।
ಅನ್ಯೋನ್ಯಂ ಪಠ್ಯತೇ ಶ್ಲೋಕಃ ಪ್ರತಿಮಾಲೇತಿ ಸಾ ಮತಾ॥
–ಹಾರಾವಲೀ quoted by R.A.K. Sarma]
ಇದರ ಕಥೆ ಸ್ವಾರಸ್ಯವಾಗಿದೆ –ಯಾವಾಗಲಾದರೂ (!) ಬರೆದಿಡುತ್ತೇನೆ.

(೨೨-೧೨-೪೪)

* * *

೪-೩-೪೫

ಸಂಸಾರ ಕುದುರೆ ರಾಟವಾಳದಂತೆ (merry-go-round). ಅದನ್ನು ಹತ್ತಿ ಸುತ್ತುತ್ತಿರಬೇಕೆಂದು ಮೊದಲು ಬಲು ಆಸೆಯಾಗುತ್ತದೆ; ಕೆಲವು ಹೊತ್ತಾದ ಮೇಲೆ ನಿಲುಗಡೆಗೆ ಬಂದೇವೆ ಎನ್ನಿಸುತ್ತದೆ.

* * *

ಆ ಮೇಲೆ ಹತ್ತಿರಕ್ಕೆ ಕರೆದು ಮುದ್ದಿಸಲು ನಿನಗೆ ಸಾಧ್ಯವಾಗುವಂತಿದ್ದ ಹೊರತು ಹುಡುಗರನ್ನು ಹೊಡೆಯಬಾರದು-ಅವರು ತಪ್ಪು ಮಾಡಿದ್ದರೂ, ನಿನಗೆ ಕೋಪ ಬರಿಸಿದ್ದರೂ, ಹೊಡೆಯ ಬಾರದು.

* * *

೧೫-೧-೪೬

ದಿವಸಕ್ಕೆ ಇಪ್ಪತ್ತು ನಾಲ್ಕು ಘಂಟೆ ಸಾಲದು-ಅಲಸನಿಗೆ.

* * *

೩೦-೬-೪೬

ಗಾಳಿ ಬೀಸಿದರೆ ಹಣತೆಯ ದೀಪ ನಂದಿಹೋಗುತ್ತದೆ; ದೊಡ್ಡ ಉರಿ ಪ್ರಜ್ವಲಿಸುತ್ತದೆ (ಉದಾ: ಕಾಡುಕಿಚ್ಚು). ಅಡ್ಡಿ ತಡೆಗಳಿಗೆ ಅಲ್ಪಸ್ಫೂರ್ತಿ ಉಡುಗಿ ಹೋಗುತ್ತದೆ; ಮಹಾಸ್ಫೂರ್ತಿ ಮತ್ತಷ್ಟು ಕಳೆಯೇರುತ್ತದೆ.

ಈ ಭಾವ ಹೊಳೆದ ಕೆಲವು ತಿಂಗಳ ಬಳಿಕ ಕೆಳಗಿನ ಉಕ್ತಿ ಕಣ್ಣಿಗೆ ಬಿತ್ತು:

The same wind snuffs candles yet kindles fires; so, where absence kills a little love, it fans a great one.

-La Rochefoucauld

* * *

ವಿದ್ವಾಂಸರು (ಪಂಡಿತರು) ಸಾಹಿತ್ಯದ ಹೇಸರಗತ್ತೆಗಳು.

(They carry a heavy burden & lack creative power, or more bluntly, they (ie. we!) are sterile beasts of burden

They are beasts of burden and they are sterile)

* * *

ಪದ್ಯ ಹೋಯ್ತು ಗದ್ಯ ಬಂತು ಡುಂಡುಂ!
ಗದ್ಯ ಹೋಯ್ತು ಮಾತು ಬಂತು ಡುಂಡುಂ!
ಮಾತು ಹೋಯ್ತು ಮೌನ ಬಂತು ಡುಂಡುಂ!

(an old composition of mine)

This will be my epitaph!

* * *

As in photography, in the other arts too, you must look at life from an angle; the front view is usually disappointing.

* * *

9-7-46

"I believe in what Max Muller said years ago, namely that truth needed to be repeated as long as there were men who disbelieved it."

-Gandhiji ('Harijan',7-7-46; p. 212)

* * *

ಎರಡೂವರೆ ವರ್ಷದ ಹಿಂದೆ ಪ್ರಾಥಮಿಕ ಪಾಠಶಾಲೆಗಳ ಉಪಾಧ್ಯಾಯರ ಕೂಟದಲ್ಲಿ ಶ್ರೀ ಡಿ.ವಿ. ಗುಂಡಪ್ಪನವರು ಅಧ್ಯಕ್ಷ ಪೀಠದಿಂದ ಉಪಸಂಹಾರ ಭಾಷಣ ಮಾಡುತ್ತಾ ಈ ಕಥೆಯನ್ನು ಹೇಳಿದರು. ನನಗೆ ಈಗ ನೆನಪಾದಂತೆ ಅದನ್ನು ಬರೆಯುತ್ತಿದ್ದೇನೆ. ಕಥೆಯ ಮೂಲ ಯಾವುದೋ ನಾನು ಶೋಧಿಸಿಲ್ಲ; ಅದರ ಸ್ವಾರಸ್ಯವೇನೋ ಎಂದಿಗೂ ಕುಗ್ಗುವುದಲ್ಲ:

ಮನುಷ್ಯರು ಏತಕ್ಕಾಗಿ ದುಡಿಯುತ್ತಾರೆ? ಇದರ ರಹಸ್ಯವನ್ನು ತಿಳಿಯಬೇಕೆಂದು ಒಬ್ಬ ತತ್ತ್ವಶೋಧಕನಿಗೆ ಅಪೇಕ್ಷೆ ಹುಟ್ಟಿತು. ದಾರಿಯಲ್ಲಿ ಹೋಗುತ್ತಾ ಒಬ್ಬ ಕಲ್ಲು ಕೆಲಸ ಮಾಡುತ್ತಿರುವುದನ್ನು ಕಂಡನು. "ಏಕಯ್ಯ ಕೆಲಸ ಮಾಡುತ್ತಿದ್ದೀಯೆ?" ಎಂದು ಕೇಳಿದನು. "ಕೆಲಸ ಮಾಡದಿದ್ದರೆ ಯಾರು ಸಂಬಳ ಕೊಡುತ್ತಾರೆ? ಹೊಟ್ಟೆ ಹೊರೆದು ಕೊಳ್ಳಬೇಡವೆ, ಸ್ವಾಮಿ" ಎಂದು ಅವನು ಉತ್ತರ ಕೊಟ್ಟನು.

ನಮ್ಮ ಶೋಧಕನು ಕೆಲವು ಹೆಜ್ಜೆ ಮುಂದಕ್ಕೆ ಹೋದನು. ಅಲ್ಲಿ ಕಲ್ಲು ಕೆಲಸ ಮಾಡುತ್ತಿದ್ದ ಇನ್ನೊಬ್ಬನನ್ನು ಕೇಳಿದನು. "ಏಕಯ್ಯ ಕೆಲಸ ಮಾಡುತ್ತಿದ್ದೀಯೆ?" "ಅಯ್ಯೋ ಸ್ವಾಮಿ ಕೆಲಸ ಮಾಡದಿದ್ದರೆ ಮೇಸ್ತ್ರಿ ನನ್ನನ್ನು ಸುಮ್ಮನೆ ಬಿಡುತ್ತಾನೆಯೆ?" ಎಂಬ ಉತ್ತರ ಬಂತು.

ಇನ್ನೂ ನಾಲ್ಕು ಹೆಜ್ಜೆ ಮುಂದಕ್ಕೆ ಹೋದಾಗ ಮತ್ತೊಬ್ಬ ಕೆಲಸಗಾರ ಸಿಕ್ಕಿದನು. "ಏಕಯ್ಯ ಕೆಲಸ ಮಾಡುತ್ತಿದ್ದೀಯೆ?" "ಸ್ವಾಮಿ ಯಾರೋ ಪುಣ್ಯಾತ್ಮರು ದೇವಸ್ಥಾನ ಕಟ್ಟಿಸುತ್ತಿದ್ದಾರೆ. ನಾನು ಮಾಡುವುದು ಕೂಲಿ ಕೆಲಸ; ಆದರೂ ನನ್ನ ಸೇವೆಯೂ ಅದರಲ್ಲಿ ಒಂದಿಷ್ಟು ಸೇರಲಿ ಎಂದು ನನ್ನ ಆಸೆ".

ಎಲ್ಲರೂ ತಮ್ಮ ಕೆಲಸಕ್ಕೆ ಕೂಲಿ ತೆಗೆದುಕೊಳ್ಳುತ್ತಿದ್ದವರೇ. ಆದರೆ ಒಬ್ಬೊಬ್ಬನ ದೃಷ್ಟಿಗೂ ಎಷ್ಟೊಂದು ಅಂತರ!

* * *

(ಹಳೆಯ ಸರಕು)

ಓದು ಬರಹಕ್ಕೆ ಶತ್ರು!

(ಮಾತು ಕೃತಿಗೆ ಶತ್ರು – ಎಂದೂ ಜೊತೆಗೆ ಸೇರಿಸಿಕೊಳ್ಳಬಹುದು)

* * *

ಮೌನಂ ದಾಕ್ಷಿಣ್ಯ ಲಕ್ಷಣಂ
ಮೌನಮಾನಂದ ಲಕ್ಷಣಂ
(ಮೌನಂ ಸಮ್ಮತಿ ಲಕ್ಷಣಂ – ಇದು ಮಾತ್ರವೇ ಅಲ್ಲ.)

* * *

ದುಃಖಂ ದುಃಖಸ್ಯ ಭೇಷಜಂ
(ದುಃಖಕ್ಕೆ ದುಃಖವೇ ಮದ್ದು – ಡಿ.ವಿ.ಜಿ.)

* * *

ನಡೆದಷ್ಟೂ ದಾರಿ ಸವೆಯುತ್ತದೆ.

* * *

ಆದಿಪ್ರಾಸ ಗರತಿ ಅಂತ್ಯಪ್ರಾಸ ಗಣಿಕೆ
ಅನುಪ್ರಾಸ ಗೆಳತಿ.

* * *

೧೮–೭–೪೬

ಸ್ಮರಣಂ ವಿಕೃತಿಃ ಶರೀರಿಣಾಂ
ಪ್ರಕೃತಿರ್ವಿಸ್ಮೃತಿರುಚ್ಯತೇ ಮಯಾ।
(ಮರಣಂ ಪ್ರಕೃತಿಃ ಶರೀರಿಣಾಂ
ವಿಕೃತಿರ್ಜೀವಿತಮುಚ್ಯತೇ ಬುಧೈಃ
ರಘುವಂಶ, viii. ೮೭)

* * *

14-7-46

Hope and forgetfulness are the two (twin) props of life.

* * *

ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ
ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ ।
ಕೇನಾಪಿ ರಾಗೇಣ ಹೃದಿ ಸ್ಥಿತೇನ (ಸ್ಥಿರೇಣ better?)
ಯಥಾ ನಿಯುಕ್ತೋऽಸ್ಮಿ ತಥಾ ಕರೋಮಿ॥

* * *

೨೩-೭-೪೬

ಅನೇಕ ಉಪಮೆಗಳನ್ನು ಕಾವ್ಯಗಳಲ್ಲಿ ನೋಡಿದ್ದೇನೆ, ಮರುಳಾಗಿದ್ದೇನೆ. ಧ್ವನಿಪರಿಪೂರ್ಣವಾದ ವ್ಯೋಮವಿಶಾಲವಾದ ಅನೇಕ ಉಪಮೆಗಳನ್ನು ಅರಿತಿದ್ದೇನೆ. ಕಾಳಿದಾಸನಿಗೆ 'ದೀಪಶಿಖಾಕಾಳಿದಾಸ' ಎಂಬ ಹೆಸರನ್ನು ಗಳಿಸಿಕೊಟ್ಟ,

ಸಂಚಾರಿಣೀ ದೀಪಶಿಖೇವ ರಾತ್ರೌ
ಯಂ ಯಂ ವ್ಯತೀಯಾಯ ಪತಿಂವರಾ ಸಾ।
ನರೇಂದ್ರಮಾರ್ಗಾಟ್ಟ ಇವಪ್ರಪೇದೇ
ವಿವರ್ಣಭಾವಂ ಸ ಸ ಭೂಮಿಪಾಲಃ ॥

ಇಂಗ್ಲಿಷ್ ಸಾಹಿತ್ಯದಲ್ಲೇ ವಿಖ್ಯಾತವಾದ ಷೆಲ್ಲಿಯ

Life like a dome of many-coloured glass.
Stains the white radiance of Eternity

ಇವೆಲ್ಲ ಹೃದಯದಲ್ಲಿ ನಿತ್ಯ ಪೀಠವನ್ನು ಗಳಿಸಿವೆ.

(ಇದರ ಸೊಗಸು ಮನದಟ್ಟಾಗ ಬೇಕಾದರೆ Chartres, Delft ಇಲ್ಲಿಯ ಚರ್ಚ್‌ಗಳನ್ನು ನೋಡಬೇಕು.)

ಆದರೆ, ನಾನು ಬಲ್ಲ ಉಪಮೆಗಳಲ್ಲಿ ಅತ್ಯದ್ಭುತವಾದದ್ದು ಅನಿರೀಕ್ಷಿತವಾದ ಸ್ಥಲದಲ್ಲಿ ದೊರೆಯಿತು. ಚಿಕ್ಕಂದಿನಲ್ಲೇ ಅದರ ಪರಿಚಯವಾಗಿದ್ದರೂ, ಅದರ ಮಹಿಮೆ ಥಟ್ಟನೆ ಇತ್ತೀಚೆಗೆ ಹೊಳೆಯಿತು. ಕನ್ನಡ ಜೈಮಿನಿ ಭಾರತದಲ್ಲಿ, ಚಂದ್ರಹಾಸನನ್ನು ಚಂಡಾಲರು ಎತ್ತಿಕೊಂಡು ಹೋಗುವಾಗ ಅವರ ನಡುವೆ ಅವನಿದ್ದ ಬಗೆಯನ್ನು ಉಪಮೆಗಳ ಸಾಲಿನಲ್ಲಿ ಲಕ್ಷ್ಮೀಶನು ನಿರೂಪಿಸಿದ್ದಾನೆ!

ಪಾತಕಿಗಳೊಡಲೊಳಿಹ ಪರಮಾತ್ಮನಂತೆ ಯಮ
ದೂತರೆಳೆತಂದಜಾಮಿಳನಂತೆ ಕಾಕ ಸಂ
ಘಾತದೊಳೆ ಸಿಕ್ಕಿರ್ದ ಕೋಗಿಲೆಯ ಮರಿಯಂತೆ
ನಲುಗಿ ಕತ್ತಲೆಯೊಳಿರ್ದ।
ಶೀತಲಮರೀಚಿ ಲಾಂಛನದಂತೆ ಬಹಳ ಕೋ
ಪಾತಿಶಯದೊಳಗಿಹ ವಿವೇಕದಂತೆ........

ಇಲ್ಲಿ **ಪಾತಕಿಗಳೊಡಲೊಳಿಹ ಪರಮಾತ್ಮನಂತೆ** ಎಂಬ ಉಪಮೆ! What a breath taking simile! ಇದರ ಅರ್ಥ ಮೊದಲ ಸಲ ನನ್ನ ಮನಸ್ಸಿಗೆ ಹೊಳೆದಾಗ ಸೃಷ್ಟಿಯ ರಹಸ್ಯವೇ ಕಣ್ಣಮುಂದೆ ಬೆಳಗಿದಂತೆ ಬೋಧೆಯಾಯಿತು. ಎಂಥ ಪಾತಕಿಯೇ ಆಗಲಿ, ಅವನಲ್ಲೂ ಪರಮಾತ್ಮನು ಇದ್ದಾನೆ. ನಂಬುವುದು ಅತಿ ಕಷ್ಟ! ಆದರೂ ಅಣುಸ್ವರೂಪ ದಲ್ಲಾದರೂ ಇದ್ದೇ ಇದ್ದಾನೆ! ಅವನ ಪ್ರಭಾವ ಪಾತಕಿಯ ಕಲ್ಲೆದೆಯನ್ನು ಒಂದಲ್ಲ ಒಂದು ದಿನ ಕರಗಿಸದೆ ಇರುತ್ತದೆಯೆ? ಆ ನರಕದಲ್ಲಿ ಸ್ವರ್ಗದ ಸೌರಭ ಕೊಂಚವಾದರೂ ಸುಳಿಯದೆ ಇರುತ್ತದೆಯೆ?– ಪಶುವೃತ್ತಿಯನ್ನು ತುಳಿದು ದಿವ್ಯತೆಯ ಕಡೆಗೆ ಒಂದಲ್ಲ ಒಂದು ಸಲವಾದರೂ ಆ ಪಾತಕಿ ಈ ಪರಮಾತ್ಮ ಸಾನ್ನಿಧ್ಯದ ಮಹಿಮೆಯಿಂದ ಮೊಗವೆತ್ತಲಾರನೆ?........

ಈ ಬೆಳಗ್ಗೆ ಹರಿಜನ ಪತ್ರಿಕೆಯನ್ನು ಓದುತ್ತಿದ್ದಾಗ, ಗಾಂಧೀಜಿಯ ಈ ವಾಕ್ಯಗಳು ನನ್ನ ಮನಸ್ಸನ್ನು ಸೆಳೆದವು.

........In God's world unmixed evil never prospers. God rules even where Satan seems to hold sway, because the latter exists only on this sufferance. Some people say that Satyagraha is of no avail against a person who has no moral sense. I join issue with that. The stoniest heart must melt if we are true and have enough patience. A Satyagrahi lays down his life, but never gives up.......

(Harijan, July 21, 1946. p. 226)

ದೇವರಲ್ಲಿ ಗಾಂಧೀಜಿಗೆ ಇರುವ ಶ್ರದ್ಧೆ ನನಗೆ ಇನ್ನೂ ಬಂದಿಲ್ಲ; ಈ ಜನ್ಮದಲ್ಲೇ ಬರುವಂತೆ ಕಾಣಲಿಲ್ಲ. ಸರ್ವಶಕ್ತನೂ ಪರಿಪೂರ್ಣನೂ ಆದ ದೇವರು ಉಂಟೇ ಎಂಬುದರಲ್ಲೇ ನನಗೆ ಸಂದೇಹ.... ಆದರೂ ಮೇಲಿನ ವಾಕ್ಯಗಳು ನನ್ನ ಹೃದಯಕ್ಕೆ ನಾಟಿದವು. ಈ ಹಿಂದೆಯೇ ನಾನು ಅದ್ಭುತವೆಂದು ಪರಿಗಣಿಸಿದ್ದ ಲಕ್ಷ್ಮೀಶನ ಉಪಮೆ ನೆನಪಿಗೆ ಬಂದಿತು!

* * *

ದೇವರ ವಿಷಯದಲ್ಲಿ ನನ್ನ ಭಾವನೆ ಏನು?.....

ಕರಾರವಿಂದೇನ ಪದಾರವಿಂದಂ
ಮುಖಾರವಿಂದೇ ವಿನಿವೇಶಯಂತಂ।
ವಟಸ್ಯ ಪತ್ರಸ್ಯ ಪುಟೇ ಶಯಾನಂ
ಬಾಲಂ ಮುಕುಂದಂ ಮನಸಾ ಸ್ಮರಾಮಿ॥

ಎಂಬ ಸ್ತುತಿ ಪದ್ಯವೊಂದು ಉಂಟಲ್ಲವೆ? ವಟಪತ್ರಶಾಯಿಯಾಗಿ ಕಾಲಬೆರಳನ್ನು ಬಾಯಿಗಿಟ್ಟುಕೊಂಡು ಚೀಪುತ್ತಾ ಬಾಲಲೀಲೆಯಾಡುತ್ತಿರುವ ಈ ಹಸುಳೆ ಸದ್ಯಕ್ಕೆ ನನಗೆ ದೇವರ ಪ್ರತೀಕವಾಗಿದ್ದಾನೆ! ದೇವರಿನ್ನೂ ಹಸುಳೆ! ಅವನ ಲೀಲೆ ಬಾಲಲೀಲೆ! ಮುರಿಯುತ್ತಾನೆ, ಕಟ್ಟುತ್ತಾನೆ, ಕೆಡಿಸುತ್ತಾನೆ, ಬೀಳಿಸುತ್ತಾನೆ, ಎತ್ತುತ್ತಾನೆ, ತನ್ನ ಕೊನೆಯ ಗುರಿ ಇನ್ನೂ ಅವನಿಗೇ ಗೊತ್ತಿಲ್ಲ. ತನ್ನ ಕೈಯ ಬೊಂಬೆಗಳಿಗೆ ಎಷ್ಟು ನೋವಾಗಬಹುದೆಂಬುದರ ಅರಿವೂ ಅವನಿಗಿಲ್ಲ! ಅದಕ್ಕೇ ಜಗತ್ತಿನಲ್ಲಿ ಇಷ್ಟು ದುಃಖ, ನೋವು; ಅರ್ಥವಾಗದ ಸಂಕಟ! ಆದರೆ ದೇವರು ದುಷ್ಟನಲ್ಲ; ಅವನಿಗೆ ದುರುದ್ದೇಶವಿಲ್ಲ. ಹಸುಳೆ ಒಂದು ಬೊಂಬೆಯನ್ನು ಚಚ್ಚಿ ಒಡೆದು ಹಾಕುವಾಗಲೂ ಅದರ ಹೃದಯದಲ್ಲಿ ಕಲ್ಮಷ ಕಿಲ್ಬಿಷಗಳೇನೂ ಇರುವುದಿಲ್ಲ. ಈ ದೇವರು ಬೇಗ ಪ್ರಬುದ್ಧನಾಗಲಿ ಅವನ ಲೀಲೆ ಅಹಿಂಸಾತ್ಮಕವಾಗಲಿ!

* * *

೧೦-೮-೪೬

"ದೇವರೇ, ನನಗೆ ಮೋಕ್ಷವನ್ನು ಕೊಡು-
ಆದರೆ ಇನ್ನೆರಡು ಜನ್ಮ ಬಿಟ್ಟು ಕೊಡು!"

-ಹೀಗೆನ್ನುವುದು ಅನೇಕರ ಹೃದಯದ ಒಳ ಹಂಬಲಿಕೆ!

* * *

16-8-46

Everyone-without exception, I think will be ready to face the jail for some objective. But the objective differs from case to case. To understand a man you must find out this objective -often, he may not know it himself, until the hour arrives.

* * *

17-8-46

What a man has done he may do again.

* * *

(ಬಲು ಹಳೆಯ ಸರಕು)
ರಘುವಂಶದಲ್ಲಿ ಈ ಪದ್ಯ ಬರುತ್ತದೆ:

ಅನಿಗ್ರಹತ್ರಾಸ ವಿನೀತಸತ್ತ್ವ–
ಮಪುಷ್ಪಲಿಂಗಾತ್ ಫಲಬಂಧಿ ವೃಕ್ಷಂ।
ವನಂ ತಪಃಸಾಧನಮೇತದತ್ರೇ
ರಾವಿಷ್ಕೃತೋದಗ್ರ **ತಪಃ ಪ್ರಭಾವಂ॥** ೧೩.೫೦

ಇದಕ್ಕೆ ಪ್ರತ್ಯುಕ್ತಿ:

ತಪಃ ಪ್ರಭಾವಾತ್ ತರವಃ ಫಲಾನಿ
ಬಧ್ನಂತಿ ಯತ್ ಪುಷ್ಪಚಯಂ ವಿನೈವ।
ನಾರೀಷು ನೂನಂ ತನಯೋದಯಸ್ತತ್
ಮಂತ್ರೇಣ ಸಂಭೋಗಸುಖಂ ವಿನೈವ॥

(ನಾನು ಎಂ.ಎ ತರತಿಯಲ್ಲಿದ್ದಾಗ ರಚಿಸಿದ ಪದ್ಯ ಇದು.)

* * *

೨೮–೧೦–೪೬

ಸಾಹಿತ್ಯ ಜೀವನಕ್ಕೆ ಆದರ್ಶ – ಆದರ್ಶ ಶಬ್ದದ ಎರಡೂ ಅರ್ಥದಲ್ಲಿ.

* * *

೧–೧೨–೪೬

"ವಾರ್ಷಿಕೋತ್ಸವಗಳ ಅಧ್ಯಕ್ಷಭಾಷಣ ಸಮಾರಾಧನೆಯ ಮಜ್ಜಿಗೆಯನ್ನದಂತೆ"

ನಿನ್ನೆಯ ಸಂಜೆ ಒಂದು ಸಂಘದ ವಾರ್ಷಿಕೋತ್ಸವಕ್ಕೆ ಹೋಗಿದ್ದೆ – ಅಧ್ಯಕ್ಷನಾಗಿ. ತರುಣರು ಉತ್ಸಾಹಿಗಳು – ವರ್ಷದ ಉದ್ದಕ್ಕೂ ಬಹುಮುಖವಾದ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದವರು. ವೀಣಾಗಾನ, ಕಾವ್ಯವಾಚನ, ನಾಟಕವಾಚನ, ದೇವರನಾಮ ಮೊದಲಾದ ಹಲವು ಅಂಶಗಳನ್ನು ಸುದೀರ್ಘವಾಗಿಯೇ ಕಾರ್ಯಕ್ರಮದಲ್ಲಿ ಜೋಡಿಸಿದ್ದರು. ಎಲ್ಲ ಅಂಗಗಳೂ ಒಂದೇ ರೀತಿಯಾಗಿ ಮಧುರವಾಗಿದ್ದುವೆಂದೂ ನಾನು ಹೇಳಲಾರೆ. ಶ್ರೋತೃವೃಂದದಲ್ಲಿ ಹಿರಿಯರು ಕಿರಿಯರು, ಹೆಂಗಸರು ಮಕ್ಕಳು–ಎಲ್ಲ ನೆರೆದಿದ್ದರು. ಕಾರ್ಯಕಲಾಪದ ಕೊನೆಗೆ ಬರುವ ವೇಳೆಗೆ, ಆರಂಭವಾದಾಗಿನಿಂದ ಎರಡು ಘಂಟೆ ಮೀರಿಹೋಗಿತ್ತು. ಆ ಬಳಿಕ ಅಧ್ಯಕ್ಷ ಭಾಷಣ! ಸಮಾರಾಧನೆಯಲ್ಲಿ ಭಕ್ಷ್ಯ ಭೋಜ್ಯಾದಿಗಳನ್ನು –ಎಲ್ಲವೂ ರುಚಿಯಾಗಿಲ್ಲದಿದ್ದರೂ–ಹೆಚ್ಚು ಹೆಚ್ಚಾಗಿಯೇ ಬಡಿಸಿ, ಕಡೆಗೆ ಮಜ್ಜಿಗೆಯನ್ನ ಯಾರಿಗೆ ಬೇಕು? – ಬಡಿಸುವವನಿಗೂ ತಾತ್ಸಾರ. ಒಂದು ಸೌಟು ನೀರು ಮಜ್ಜಿಗೆಯನ್ನು ದೊನ್ನೆಗೆ ಸುರಿದು

ಮುಂದೆ ಸಾಗುವ ಸಂಭವವೇ ಹೆಚ್ಚು! – ಅಲ್ಲದೆ ಊಟಕ್ಕೆ ಕುಳಿತವರಲ್ಲಿ ಅರ್ಧಮಂದಿ ಆಗಲೇ, ಇವನ ಸರದಿ ಬರುವಮೊದಲೇ, ಎದ್ದೇ ಹೋಗಿರುತ್ತಾರೆ!

(ನನ್ನ ಮಜ್ಜಿಗೆ ನೀರಾಗಿತ್ತೆ, ಗಟ್ಟಿಯಾಗಿತ್ತೆ–ಎಂಬುದರ ವಿಚಾರ ಇಲ್ಲಿ ಅಪ್ರಕೃತ)

* * *

೨೭–೩–೪೭

ಈ ಪುಸ್ತಕವನ್ನು ಮುಟ್ಟಿ ಎಷ್ಟು ದಿನವಾಯಿತು! ತಿಂಗಳುಗಳು ದಾಟಿಹೋದವು. ಹೊಸ ಭಾವಗಳು ದಿನದಿನಕ್ಕೆ ಅತಿ ದೂರವಾಗುತ್ತಿವೆ. ಅವರಿವರ ಬರೆಹಗಳನ್ನು ಓದಿ ಓದಿ ಓದುವುದು, ನಾನೇಕೆ ಬರೆಯುವುದಿಲ್ಲ, ಏಕೆ ಬರೆಯಲಾರೆ ಎಂದು ನಿಟ್ಟುಸಿರು ಬಿಡುವುದು, ಬರೆಯಲು ಯಾವ ಪ್ರಯತ್ನವನ್ನೂ ಪಟ್ಟು ಹಿಡಿದು ಮಾಡದಿರುವುದು – ಇದರಲ್ಲೇ ಹಗಲು ಇರುಳಾಗುತ್ತಿವೆ. ಅಂತೂ ನನ್ನ ಬದುಕು ಎರವಲು ಬದುಕು, ನನ್ನ ಬರೆಹ ಎಂಜಲು ಬರೆಹ, ನನ್ನ ಮನಸ್ಸು ಬರಡು ಮನಸ್ಸು! "ಪರೋಪಜೀವಿ" ಎಂದರೆ ಉಪಾಧ್ಯಾಯ!!

ಒಮ್ಮೊಮ್ಮೆ, ಪುಸ್ತಕಗಳ ಸಾಲುಗಳನ್ನು ನೋಡಿದರೆ ಬೇಸರವೂ ಬರಲು ತೊಡಗಿದೆ. ಕೈಯಲ್ಲಿ ಪುಸ್ತಕವಿದ್ದರೆ ಸಾಕು, ಇವನಿಗೆ ಊಟ ನಿದ್ದೆ ಮಾತುಕಥೆ ಏನು ಬೇಡ ಎಂದು ಮನೆಯವರು ಅರ್ಧಸರಸವಾಗಿ ಹಂಗಿಸುವ ಮಾತು ಮನಸ್ಸನ್ನು ಹೊಗತೊಡಗಿದೆ. ಆದರೆ ಇದೆಲ್ಲ ಕ್ಷಣಿಕ! ಮತ್ತೆ ಪುಸ್ತಕದ ಕಡೆಗೇ ಕಣ್ಣು ಹೊರಳುತ್ತದೆ. ಬರೆವಣಿಗೆಯಾದರೂ ನಿತ್ಯ ಕ್ರಮವಾಗಿದ್ದರೆ ಪುಸ್ತಕಗಳನ್ನು ದೂರ ನೂಕಬಹುದಾಗಿತ್ತು. ಓದಿ ಓದಿ ಮರುಳಾದದ್ದೇನೋ ನಿಜ. ಆದರೆ "ನಡುವಂತರ"ದಲ್ಲಿ ಅದನ್ನೂ ತೊರೆದುಬಿಟ್ಟರೆ, ಜೀವನಕ್ಕೆ ಬೇರೆ ಯಾವ ಅವಲಂಬನ! ಈ ಜನ್ಮಕ್ಕೆ ಓದು ಗಂಟು!

* * *

೨೯–೩–೪೭

ಈ ದಿನ ಬೆಳಗ್ಗೆ ಶ್ರೀಮಾನ್ ಡಿ.ವಿ. ಗುಂಡಪ್ಪನವರನ್ನು ನೋಡಿಕೊಂಡುಬರಲು ಡಿ.ಎಲ್.ನ. ಜೊತೆಯಲ್ಲಿ ಹೋಗಿದ್ದೆ. ಕೊಂಚ ದೇಹಾಲಸ್ಯದಿಂದ ಹಾಸಿಗೆಯ ಮೇಲೆ ಮಲಗಿದ್ದರು. ಆದರೆ ಅವರ ಮನಸ್ಸಿನ ಬುದ್ಧಿಯ ಲವಲವಿಕೆ ಮಾತ್ರ ಉತ್ಕರ್ಷದಲ್ಲಿಯೇ ಇತ್ತು. ಎಷ್ಟೆಷ್ಟೋ ಮಾತುಕಥೆ ನಡೆಯಿತು. ಈತ ಎಷ್ಟೊಂದು ಸರಕನ್ನು – ಹಳೆಯದು, ಹೊಸದು ಎಲ್ಲಾ:– ಇಟ್ಟಿದ್ದಾರೆ!

ಆ ಮಾತು ಈ ಮಾತು ಸಾಗಿ, ಕೊನೆಯಲ್ಲಿ ಪ್ರೊ॥ ಹಿರಿಯಣ್ಣನವರ ಪ್ರಸ್ತಾವ ಬಂದಿತು. "Prof Hiriyanna is unlucky in his students" ಎಂದು (ಶಿವರಾಮ) ಶಾಸ್ತ್ರಿ ಆಗಾಗ ಹೇಳುವ ಮಾತು ತುಂಬ ದಿಟ. ಹಿರಿಯಣ್ಣನವರ ಪಾಠಕ್ರಮದಲ್ಲಿ ಉತ್ಸಾಹಕ್ಕೆ ಎಡೆಯಿರಲಿಲ್ಲವೆಂದು ಯಾರೋ ಶಿಷ್ಯೋತ್ತಮ (!!!)ರು ಗುಂಡಪ್ಪನವರಿಗೆ ಹೇಳಿರುವಂತೆ

ಕಾಣುತ್ತದೆ. ಮೊದಮೊದಲ ದಿನಗಳಲ್ಲಿ ಹಿರಿಯಣ್ಣನವರು ಶಿಷ್ಯರ ಮೇಲೆ ಬಿದ್ದು ಭುಜಕ್ಕೆ ಕೈಹಾಕಿ, ಸದರವಾಗಿ ಮಾತಾಡಿಸುತ್ತಿರಲಿಲ್ಲವೆಂಬುದೇನೋ ದಿಟ. ಆದರೆ ಪರಿಚಯ ಕೆಲವು ಮಟ್ಟಿಗೆ ಬೆಳೆದ ಬಳಿಕ, – "ಕಾಲೇನಾ ವರಣಾತ್ಯಯೇ", – ಶಿಷ್ಯನ ಉತ್ಸಾಹಶ್ರದ್ಧೆಗಳ ವಿಷಯದಲ್ಲಿ ಗುರುಗಳಿಗೂ ನಂಬಿಕೆ ಮೂಡಿದ ಬಳಿಕ, ಹೊಸ ಆತ್ಮೀಯತೆಯೇ ಹಬ್ಬುತ್ತಿರಲಿಲ್ಲವೆ! ಹಿರಿಯಣ್ಣನವರು ಎಷ್ಟು ಕಥೆಗಳನ್ನು ಹೇಳಬಲ್ಲರು, ಹಾಸ್ಯ ತರಬಲ್ಲರು, ಹಸುಮಗುವಿನಂತೆ ಹೊಟ್ಟೆತುಂಬ ನಗಬಲ್ಲರು! ಆ ನಗೆಯ ತೇಜಸ್ಸು ಎಂಥದು: ಎಷ್ಟೋ ದಿನ – ತರಗತಿಯಲ್ಲಲ್ಲ!– ಘಂಟೆಗಟ್ಟಳೆ ಅವರ ಸಂಗಡ ನಾನೂ ನನ್ನಂತೆಯೇ ಇತರ ಕೆಲವರೂ ಹರಟೆ ಕೊಚ್ಚಿಲ್ಲವೆ!

ಗುಂಡಪ್ಪನವರಿಗೆ ಹಿರಿಯಣ್ಣನವರಲ್ಲಿ ಅಧಿಕ ಗೌರವ. "ಅವರು ಹಿಮಾಲಯದಂಥ ಮನುಷ್ಯರು–ಆ ಹೋಲಿಕೆಯ ಹಲವು ಅರ್ಥದಲ್ಲಿ!" ಎಂದು ಅವರು ಅಂದರು. "ಆ ಹಿಮಾಲಯದಿಂದ ಎಂಥ ಗಂಗೆ ಬರುತ್ತದೆ!" ಎಂಬ ಉತ್ತರ ಅದೃಷ್ಟವಶದಿಂದ ನನಗೆ ತೋಚಿತು! ಗುಂಡಪ್ಪನವರು ಮೆಚ್ಚಿಕೊಂಡರು, ಒಪ್ಪಿಕೊಂಡರು.

*

೧೯–೯–೫೦ರಂದು ಈ ಪಾವನ ಹಿಮಾಲಯ ನಮ್ಮ ಚರ್ಮಚಕ್ಷುಸ್ಸಿಗೆ ಅಗೋಚರ ವಾಯಿತು. ಶಿಷ್ಯರೆಲ್ಲ ನಿಜವಾಗಿ ಅನಾಥರಾದೆವು!

(೧೦–೧೦–೧೯೫೦)

* * *

8-7-1947

Question : India minus Pakistan is still India?

Mr. Menon: Yes.

(Hindu : July 7, 1947 : Press Conference Report)

'ಪೂರ್ಣ್ಯಸ್ಯ ಪೂರ್ಣಮಾದಾಯ ಪೂರ್ಣಮೇವಾ ವಶಿಷ್ಯತೇ"!

* * *

24-10-1947

Criticism is a reasoned account of the response of a trained senisitive mind to a work of art.

* * *

ಭರತಖಂಡಕ್ಕೆ ಸ್ವಾತಂತ್ರ್ಯ ಆಗಸ್ಟ್ ೧೫ರಂದು ಬಂದಿತು. ಮೈಸೂರಿಗೆ ಬರಲು ಇನ್ನೂ ಎರಡು ತಿಂಗಳ ಮೇಲೆ ಬೇಕಾಯಿತು. ಈ ದಿನ ಕಾಂಗ್ರೆಸ್ ಪಕ್ಷದವರು ಅಧಿಕಾರ ಸ್ವೀಕಾರ

ಮಾಡಿದ್ದಾರೆ. ಸ್ವಾತಂತ್ರ್ಯ ಬಂತೆಂದೇ ಎಲ್ಲರೂ ಭಾವಿಸಿದ್ದಾರೆ; ನಾನೂ ಭಾವಿಸಿದ್ದೇನೆ. ಇದು ದೇಶೈಕಹಿತಕ್ಕಾಗಿ ದುಡಿಯುವ ಸ್ವಾತಂತ್ರ್ಯವಾಗಲಿ!

ಹಿಂದೆಲ್ಲ ರಾಜರ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತಿದ್ದರು.–ಈಗ, ಪ್ರಜಾರಾಜ್ಯದ ಕಾಲದಲ್ಲಿ, ಮಂತ್ರಿಗಳ ಶ್ರೇಯಃಪ್ರಾರ್ಥನೆಯನ್ನು ಮಾಡಬೇಕಾಗಿದೆ. "ದೇವರೇ, ಇವರ ಬುದ್ಧಿ ಶಕ್ತಿಯನ್ನು ಬೆಳಸು, ಸೇವಾತತ್ಪರತೆಯನ್ನು ಹೆಚ್ಚಿಸು, ನಿಃಸ್ವಾರ್ಥತೆಯನ್ನು ನೆಲೆಗೊಳಿಸು, ಸತ್ಪಥದಲ್ಲಿ ಇವರನ್ನು ನಡಸು" ಇದೇ ಎಲ್ಲ ಪ್ರಜೆಗಳ ಹೃತ್ಪೂರ್ವಕವಾದ ಪ್ರಾರ್ಥನೆಯಾಗಬೇಕು. ಈ ವಿಗ್ರಹಗಳನ್ನು ಪ್ರಜಾಶಕ್ತಿ ಮಂತ್ರಿಪೀಠದಲ್ಲಿ ನಿಲ್ಲಿಸಿದೆ; ಇವಕ್ಕೆ ಪ್ರಾಣ ಪ್ರತಿಷ್ಠಾಪನೆಯನ್ನೂ ಪ್ರಜಾಶಕ್ತಿಯೇ ಮಾಡಬೇಕು. ತನ್ನ ಸಂಕಲ್ಪಬಲದಿಂದ ಉಸಿರನ್ನು ತುಂಬಿ, ಇವುಗಳಿಂದ ವರವನ್ನು ಪಡೆಯಬೇಕು. ಆ ಚೈತನ್ಯವೂ ತಿಳಿವೂ ನಮ್ಮ ಪ್ರಜಾವರ್ಗಕ್ಕೆ ಬೇಗ ಸಿದ್ಧಿಸಲಿ.

* * *

೨೧–೧೨–೪೭

"ಅನೇಕ ಮಂದಿ ಬರೆಹಗಾರರು ಅಂಚನ್ನು ಸ್ವಲ್ಪವೂ ಬಿಡದೆಯೇ ಬರೆಯುತ್ತಾರೆ. ಆ ಬಳಿಕ ಪಂಕ್ತಿಗಳನ್ನು ಹೊಡೆದು ಹಾಕುವುದು ಮಾತ್ರ ಸಾಧ್ಯ; ಸೇರಿಸಲು ಜಾಗವೇ ಇರುವುದಿಲ್ಲ." ನಾನು ಮಿತ್ರರೊಬ್ಬರ ಲೇಖನ ರೀತಿಯನ್ನು ಕುರಿತು ಈ ಮಾತನ್ನು ಆಡಿದಾಗ ಪು.ತಿ.ನ. "ಈ ವಿಮರ್ಶೆ ಧ್ವನಿಪೂರ್ಣವಾಗಿದೆ" ಎಂದರು.

* * *

10-10-1950

A cup of good coffee in the morning makes one feel even with the world.

* * *

14-11-1950

I feel so lazy that I would rather copy four pages of the Encyclopedia Britannica than write letters.

ವ್ಯಾಯಾಮ ಮಾಡಬೇಕು ಎನ್ನಿಸಿದಾಗ ಆ ಅನಿಸಿಕೆ ಹೋಗುವವರೆಗೂ ಹಾಗೆಯೇ ಮಲಗಿರುತ್ತೇನೆ ಎಂದು ಒಬ್ಬಾತ ಹೇಳಿದ್ದಾನೆ. ವ್ಯಾಯಾಮ ಮಾತ್ರವೇ ಏಕೆ, ಬರವಣಿಗೆಯ ವಿಷಯದಲ್ಲೂ ನನಗೆ ಹಾಗೆಯೇ.

* * *

೫-೧೨-೧೯೫೦

ನಾನು ಮಲಗಿಕೊಂಡಾಗಲಿ, ಹಾಯಾಗಿ ಕುಳಿತುಕೊಂಡಾಗಲಿ ಇನ್ನೊಬ್ಬರಿಗೆ ಹೇಳಿ ಬರಸಲು ನನ್ನಿಂದ ಆಗುತ್ತಲೇ ಇಲ್ಲ. I am a very bad "dictator"! ನನ್ನನ್ನು ಎಬ್ಬಿಸಿ ಮೇಜಿನ ಮುಂದೆ ಕೂರಿಸಿ, ಲೇಖನಿಯನ್ನು ನನ್ನ ಕೈಯಲ್ಲೇ ಹಿಡಿಸಿ ಬರಸಬೇಕೆಂಬುದು ವಾಣಿಯ ಇಚ್ಛೆಯೆಂದು ತೋರುತ್ತದೆ. ಇದರಿಂದ ಅವಳಿಗೇನು ತೃಪ್ತಿಯೋ! ನನಗಂತೂ ಯಾವ ಸೌಕರ್ಯವೂ ಇಲ್ಲ. ಅದಕ್ಕೇ ಸೋಮಾರಿಯಾದ ನಾನು ಬರಹದ ಸೋಂಕೇ ಇಲ್ಲದೆ ದೀರ್ಘಕಾಲವನ್ನು ತಳ್ಳುವುದು. ಸೇವೆ ಮಾಡಿಸಿಕೊಳ್ಳುವ ಅದೃಷ್ಟ ಅವಳಿಗೇ ಇಲ್ಲ!

* * *

೧೪-೬-೫೧

"ಸ್ವಾತಂತ್ರ್ಯವನ್ನು ದೇವ ಏತಕೆಮಗಿತ್ತೆ – ಅದು
ನೀತಿಯಿಂದೆಮ್ಮ ಬೀಳಿಪ ಯುಕುತಿಯೇನೈ"....

ಎಂದು ಡಿ.ವಿ.ಜಿ. ಬಹಳ ಹಿಂದೆ ಹಾಡಿದರು. ನಮಗೆ ಸ್ವಾತಂತ್ರ್ಯ ಬಂದ ಈಚಿನ ವಿದ್ಯಮಾನಗಳನ್ನು ಪರಿಭಾವಿಸಿದಾಗ, ಈ ಪಂಕ್ತಿಗಳು ನಮ್ಮ ಮುಖಂಡರನೇಕರಿಗೆ ಎಷ್ಟು ಚೆನ್ನಾಗಿ ಅನ್ವಯಿಸುತ್ತವೆ!

* * *

೨೦-೬-೫೧

ನಿನ್ನೆಯ ದಿನ ಮೊನ್ನೆಯ ದಿನ ಮಾಸ್ತಿಯವರ ಅರುವತ್ತನೆಯ ವರ್ಷದಹೆಚ್ಚಿನ ಉತ್ಸವವನ್ನು ಆಚರಿಸಿದೆವು. (ಮಾಸ್ತಿಯವರಿಗೆ ಅರುವತ್ತು ತುಂಬಿದ್ದು ಜ್ಯೇಷ್ಠ ಶು॥ ೨ನೆಯ ದಿನ ೬-೬-೫೧ರಂದು.) ನಿನ್ನೆಯ ಭಾಷಣಗಳಲ್ಲಿನ ಎರಡು ವಾಕ್ಯ ನನ್ನ ಮನಸ್ಸಿನಲ್ಲಿ ನಟ್ಟಿದೆ.

ಅಧ್ಯಕ್ಷ ನವರತ್ನ ರಾಮರಾಯರು ಮಾಸ್ತಿಯವರಿಗೆ ಒಂದೆರಡು ಕಥೆಗಳಿಗಾಗಿ ತಾವು ವಿಷಯವನ್ನು ಒದಗಿಸಿಕೊಟ್ಟಿದ್ದನ್ನು ಪ್ರಸ್ತಾವಿಸುತ್ತಾ "ನಾನು ಮಾಡಿದ್ದೆಲ್ಲ ಬೆಂಕಿಕಡ್ಡಿಯನ್ನು ಗೀಚಿ ದೀಪವನ್ನು ಹೊತ್ತಿಸಿದ ಹಾಗೆ, ಆದರೆ ದೀಪದ್ದು ಎಂಥ ಬೆಳಕು" ಎಂಬ ಅರ್ಥ ಬರುವಂತೆ ಹೇಳಿದರು.

.........ಮಾಸ್ತಿಯವರು, ನನ್ನನ್ನು ಇಷ್ಟೊಂದು ಜನ ಇಷ್ಟೊಂದು ಬಗೆಯಾಗಿ ಹೊಗಳಿದ್ದೀರಿ. ಇಷ್ಟೊಂದು ಸಕ್ಕರೆಯನ್ನು ತಿಂದು ನನ್ನ ಹೊಟ್ಟೆಯಲ್ಲಿ ಜಂತು ಹುಳುವಾದರೆ ಏನು ಗತಿ ಎನ್ನಿಸಿದೆ. ಇದು ಜೀರ್ಣವಾಗುವಂತೆ ದೇವರು ಅನುಗ್ರಹಿಸಬೇಕು ಎಂದರು.........

ಇನ್ನೊಂದು ಗಮನಾರ್ಹವಾದ ಉಕ್ತಿ: ಕೆ.ಎಚ್. ರಾಮಯ್ಯನವರು ವಿಶ್ವೇಶ್ವರಯ್ಯನವರನ್ನು ಕುರಿತು ಹೇಳುತ್ತಿದ್ದ ಕಥೆಯನ್ನು ಮಾಸ್ತಿಯವರು ಅನುವಾದಮಾಡಿದರು. ನಮ್ಮ ಜನ ಗುಡ್ಸ್ ಬಂಡಿಗಳ ಹಾಗೆ, ವಿಶ್ವೇಶ್ವರಯ್ಯನವರು ಒಳ್ಳೆಯ ಎಂಜಿನ್ ಹಾಗೆ. ಎಂಜಿನ್ ಬಂಡಿಗಳನ್ನು ಒಂದು ಸಲ ಎಳೆಯಿತು, ಇವು ಜಗ್ಗಲಿಲ್ಲ ಇನ್ನೊಂದು ಸಲ ಎಳೆಯಿತು, ಜಗ್ಗಲಿಲ್ಲ. ಇನ್ನೊಂದು ಸಲ ಎಳೆದಾಗ ಎನ್‌ಜಿನ್ನೇ ಕಳಚಿಕೊಂಡು "ಹೊಂಟೇ ಹೋಯಿತು"! ಬಂಡಿಗಳು ಇದ್ದಕಡೆಯೇ

ಇದ್ದುಬಿಟ್ಟವು! (ಇಷ್ಟು ಕಥೆಯನ್ನು ಹೇಳುವಾಗ, ಮುಂದಿನ ವಿಸ್ತರಣ **ಆಕ್ಷಣದಲ್ಲಿ** ಮಾಸ್ತಿಯವರಿಗೆ ಹೊಳೆಯಿತಂತೆ;) ಬಂಡಿಗಳು ಯಾಕೆ ಕದಲಲಿಲ್ಲ ಗೊತ್ತೆ? ಎಂಜಿನ್‌ನ ಕೊಕ್ಕೆ (Hook) ಬಂಡಿಗಳಿಗೆ ಸರಿಯಾಗಿ ತಗುಲಿರಲಿಲ್ಲ! ಈ ಕೊಕ್ಕೆ ಯಾವುದು? ಕನ್ನಡ ಮಾತು. ವಿಶ್ವೇಶ್ವರಯ್ಯನವರು ತಮ್ಮ ಉದ್ದೇಶಗಳನ್ನು ಧ್ಯೇಯಗಳನ್ನು ಜನಕ್ಕೆ ತಿಳಿಯುವ ಹಾಗೆ ಕನ್ನಡದಲ್ಲಿ ಹೇಳಿ ಜನಸಾಮಾನ್ಯರ ಮನಸ್ಸಿಗೆ ಹತ್ತಿಸಿದ್ದರೆ ಅವರ ಪ್ರಗತಿಯ ಭಾವನೆಗಳಲ್ಲಿ ಜನಗಳೂ ಭಾಗಿಗಳಾಗುತ್ತಿದ್ದರು. ಆದರೆ, ವಿಶ್ವೇಶ್ವರಯ್ಯನವರ ಭಾವನೆಗಳೆಲ್ಲ, ಆಲೋಚನೆಯೆಲ್ಲ ಇಂಗ್ಲಿಷಿನಲ್ಲಿ! ಜನಸಾಮಾನ್ಯಕ್ಕೂ ಅವರಿಗೂ ಬಿಗಿಯಾದ ಸಂಬಂಧವೇ ಏರ್ಪಡಲಿಲ್ಲ!

* * *

೨೮-೬-೫೧

ಸಂಗೀತದಲ್ಲಿ ರಾಗಗಳನ್ನು ಗುರುತಿಸುವುದೂ, ಪರಿಚಿತವಾದ ಮುಖವನ್ನು ಕಂಡಾಗ ಹೆಸರನ್ನು ಜ್ಞಾಪಕಕ್ಕೆ ತಂದುಕೊಳ್ಳುವುದೂ ಒಂದೇ. ಹೆಸರಿನಲ್ಲಿ ಏನಿದೆ ಎನ್ನುತ್ತಾರೆ. ಆದರೆ ಒಂದೊಂದು ಹೆಸರೂ ಒಂದೊಂದು ಅನುಭವ ಕೋಶ. ಹೆಸರು ನೆನಪಾದರೆ ಸಾಕು, ಆ ವ್ಯಕ್ತಿಯ ಪೂರ್ವೋತ್ತರವೆಲ್ಲ ನೆನಪಿಗೆ ಬಂದು ಪರಿಚಯವು ಪ್ರತ್ಯಭಿಜ್ಞಾನವಾಗುತ್ತದೆ; ಕತ್ತಲೆಯ ಕೋಣೆಯಲ್ಲಿ ದೀಪವನ್ನು ಹೊತ್ತಿಸಿದಂತಾಗುತ್ತದೆ. (ಈ ಅನುಭವ ನನಗೆ ಎಷ್ಟೋ ಸಲ ಆಗಿದೆ.) ನಿಜವಾಗಿ ನೋಡಿದರೆ ಪ್ರತಿಯೊಂದು ಹೆಸರೂ ಅರ್ಥಾಂತರಸಂಕ್ರಮಿತ ವಾಚ್ಯ ಧ್ವನಿಗೇ ನಿದರ್ಶನ. ಆದರೆ ಆಲಂಕಾರಿಕರು ಶಬ್ದದ ಈ ಶಕ್ತಿ ಅತಿಶಯವಾಗಿ ಪ್ರಕಾಶಗೊಳ್ಳುವ ಕಡೆಗಳಲ್ಲಿ ಮಾತ್ರ ಈ ಬಗೆಯ ಧ್ವನಿಯನ್ನು ಗುರುತಿಸುತ್ತಾರೆ.

* * *

22-3-54

The enemies of a legislator are the reporters
The enemies of a writer are the printers
The enemies of a lecturer are the children!

* * *

ವರಾನ್ವೇಷಿಯ ಶತ್ರುಗಳು – ಗಂಡಿನ ಮದುವೆಗೆ ನೆರೆದ ತಂಗಿಯರು

(೧೯೫೯-೬೦)

* * *

೨೭-೧೨-೧೯೫೨

ಭಾಷಣಕಾರನ ಮುಖ್ಯಶತ್ರುಗಳು–ಮಕ್ಕಳು, ಸಭೆಯಲ್ಲಿ ಎಲ್ಲಕ್ಕೂ ಮುಂದೆ ಕೂತಿರುವ ಮಕ್ಕಳು.

* * *

ನೀವು ಬರೆಯುವುದಕ್ಕಿಂತ ಹೊಡೆಯುವುದು ಹೆಚ್ಚು ಎಂದು ನನ್ನ ಹೆಂಡತಿ ಮತ್ತೆ ಮತ್ತೆ ಹೇಳುತ್ತಿರುತ್ತಾಳೆ. ಈ ದಿನವೂ ಹೇಳಿದಳು.

* * *

೧೪-೨-೧೯೫೪

"ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ॥"

ಸಂಗೀತ, ನಾಟ್ಯ, ಸಾಹಿತ್ಯ ಮೊದಲಾದ ಕಲೆಗಳನ್ನೂ, ಶಾಸ್ತ್ರಗಳನ್ನೂ ಜೀವನದ ವ್ರತವಾಗಿ ಹಿಡಿದು ಅನನ್ಯಭಕ್ತಿಯಿಂದ ಅಭ್ಯಾಸಮಾಡುವ ಜನದ ಯೋಗಕ್ಷೇಮವನ್ನು ನಾನು ವಹಿಸಿ ಕೊಳ್ಳುತ್ತೇನೆ ಎಂದು ಸಮಾಜ ಹೇಳುವ ಕಾಲ ಬರಬೇಕು. ಹಾಗೆ ಬಂದರೆ, ಹೊಟ್ಟೆಪಾಡಿನ ಯೋಚನೆ ತಪ್ಪಿ ವರ್ಷಗಟ್ಟಳೆ ಇವುಗಳ ಉಪಾಸನೆಗೆ ಏಕೈಕಧ್ಯಾನದಿಂದ ತೊಡಗಲು ಸಮಾಜದಲ್ಲಿ ಕೆಲವರಾದರೂ ಮುಂದೆ ಬರುವುದು ಖಂಡಿತ.

* * *

೨೨-೩-೫೪

ಚಾಕ್ಷುಷ ಶಿಕ್ಷಣ = visual instruction
what a tongue-twister!

* * *

೨೩-೩-೫೪

"ನ ಲಜ್ಜಾ ಪಂಚಭಿಃ ಸಹ"!

* * *

Nov, 1954

A linguistician is not necessarily a linguist.
Very often he isn`t one.

* * *

A Tamilian never closes his mouth.

* * *

ನಮ್ಮ ಜನಕ್ಕೆ ಇಂದು ಬೇಕಾಗಿರುವುದು ಎಂಥ ನಾಟಕ ಎಂದರೆ ಬಿಟ್ಟಿ ನಾಟಕ!

* * *

ವಯಸ್ಸಾದ ಮೇಲೆ ಮತಿ ಹದವಾಗಬಹುದು, ಸ್ಮೃತಿ ಮಾತ್ರ ಮಂದವಾಗುತ್ತದೆ.

* * *

ಹಳೆಯ ಕೆಲವು ಟಿಪ್ಪಣಿಗಳು

೧೯-೧-೧೯೫೨ (ಧಾರವಾಡ)

ನಿನ್ನೆಯ ದಿನ Prof H.G. Champion ಎಂಬಾತನು 'Forests, their importance and utility' ಎಂಬ ವಿಷಯವನ್ನು ಕುರಿತು ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಭಾಷಣ ಮಾಡಿದನು. ಆತನು ಹೇಳಿದ ವಿಷಯಗಳಲ್ಲಿ ಒಂದೆರಡು ಜ್ಞಾಪಕದಲ್ಲಿವೆ:

ಬಿದಿರು ಅರಣ್ಯಶಾಸ್ತ್ರಜ್ಞರಿಗೆ ಒಂದು ವಿಶೇಷ ಸಮಸ್ಯೆ. ಬಿದಿರು ಅಪೂರ್ವವಾಗಿ-ಎಷ್ಟೋ ವರ್ಷಗಳಿಗೆ ಒಂದು ಬಾರಿ-ಹೂವು ಬಿಡುತ್ತದೆ; ಅಲ್ಲಿಗೆ ಅದರ ಬೆಳೆವಣಿಗೆ ಮುಗಿಯಿತು. ಮುಂದೆ ಅದು ಒಣಗಿಹೋಗುತ್ತದೆ. ಆ ಬಳಿಕ ಬಿದಿರುಮೆಳೆಗಳಲ್ಲಿ ಬೆಂಕಿ ಹಬ್ಬಿ ಅರಣ್ಯವೇ ದಹಿಸಿಹೋಗುವ ಸಂಭವ ಹೆಚ್ಚು.

ಶ್ರೀಗಂಧ, ಲಾಂಟಾನಾ - ಇವುಗಳ ವ್ಯಾಪನೆ ಇನ್ನೂ ನಿಂತಿಲ್ಲ. ಎಷ್ಟೆಷ್ಟು ದೂರ ಹರಡುತ್ತವೆ, ಯಾವ ಯಾವ ಭೂಭಾಗವನ್ನು ಆಕ್ರಮಿಸುತ್ತವೆ ಎಂಬುದನ್ನು ಮುಂದಾಗಿ ಹೇಳಲು ಆಗಿಲ್ಲ.

* * *

೨೯/೩೧-೧-೫೨

ಇನ್ನೊಂದು ಉಪನ್ಯಾಸದಲ್ಲಿ ಕೇಳಿದ್ದು:

Red tape was abolished in the British army during the first world war, since red dye was no longer available, its manufacture being almost exclusively in the hands of the Germans. Then the British army began to use white tape instead!

* * *

೩೧-೧-೫೨

ಧಾರವಾಡದಲ್ಲಿ ಈಗ ವಿದ್ಯಾರ್ಥಿನಿಲಯಗಳ ಹೆಸರುಗಳನ್ನೆಲ್ಲಾ ಬದಲಾಯಿಸುತ್ತಿದ್ದಾರೆ. ಜಾತಿ ಮತ ಪ್ರದೇಶ ಸೂಚಕವಾಗಿ ಇಲ್ಲದಿರಲೆಂದು. Lingayat Block ಈಗ Liberal Block ಆಯಿತು. Kanara club ಈಗ Friends' club ಆಯಿತು. Christian club ಈಗ Cosmopolitan club ಆಯಿತು. ಹೀಗೆಯೇ. Ladies' club ಎಂಬುದರ ಹೆಸರನ್ನೂ ಬದಲಾಯಿಸಬೇಕು ಎಂದು ಒಬ್ಬರು ಒಂದು ಗೋಷ್ಠಿಯಲ್ಲಿ ವಿನೋದಕ್ಕಾಗಿ ಸೂಚಿಸಿದರು. "ಹಾಗಾದರೆ ಏನು ಹೆಸರಿಡಬೇಕು?" "Sing-sing club" ಎಂದು ಇನ್ನೊಬ್ಬರ ಸ್ಫೂರ್ತಿ

ಯುತವಾದ ಉತ್ತರ ಬಂತು! ('Sing Sing Prison' ಎನ್ನುವುದು U.S.A.ಯಲ್ಲಿ ಪ್ರಖ್ಯಾತವಾಗಿದೆ.)

* * *

31-1-1952

One evening while Sri Hiremath and myself were wondering in the streets of Dharwar, in search of a house for me, I remarked "The roads are not at right angles to one another here.'' Hiremath added: "The angles are all wrong in Dharwar''

* * *

ಹುಚ್ಚೂರಾವ್ ಎಂಬವರು ಹೆಸರನ್ನು ಮೊಟಕುಮಾಡಿ – ಜನರ ಕೀಟಲೆಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ಇರಬಹುದು!–H. Rao ಎಂದು ಇಟ್ಟುಕೊಂಡರು. ಟೀಕೆ; "ಹುಚ್ಚೂರಾಯರ ಹುಚ್ಚು ಹೆಚ್ಚಾ(H)ಯಿತು!" (TPK)

(ಎಚ್="ಹೆಚ್")

* * *

The last great English.....?..., Charles I's Archic Armstrong was a strong parliamentarion. He was unfriendly to Archbishop Laud, and at a royal meal offerd a grace: "Great praise to God and little Laud to the Devil.

from the 'Lilliput',

* * *

೯-೨-೧೯೫೨

ಬೆಳಗ್ಗೆ ಎದ್ದಕೂಡಲೆ ಕಥೆಯನ್ನೋ ಕಾದಂಬರಿಯನ್ನೋ ಓದುತ್ತಾ ಕುಳಿತರೆ, ಉಪಾಹಾರಕ್ಕಾಗಿ ಕರಿದ ತಿಂಡಿಯನ್ನು–ಕೋಡುಬಳೆಯನ್ನೋ ಲಾಡನ್ನೋ–ತೆಗೆದುಕೊಂಡ ಹಾಗೆ.

* * *

ಪ್ರವಾಸಿಯ ಪಂಚಪ್ರಾಣಗಳು: ಪ್ಯಾಸ್‌ಪೋರ್ಟ್, ಪರ್ಸ್, ಹೆಂಡತಿ, ಮಕ್ಕಳು ಮತ್ತು ತನ್ನ ಜೀವ.

* * *

10-7-1957

The mystic's attitude, his "glimpses" & "visions"-I can only look at it through a window of my room of realism; cannot share it first hand.

* * *

26-5-1959

A paradise is always lost;
it cannot be retained.
And it is very doubtful
if it can be regained.

* * *

1/2 –10-59

Man has three babyhoods: First when he is a baby-then all that he sees is a wonder. Secondly when he is an adolescent-then all that wears a sari (skirt) is a wonder. And lastly when he is old-then all that he remembers is a wonder.

* * *

13-6-1960

P.T.N. recounted to me years ago (Sivarama) Sastry's observation: "Children are one`s moving limbs." Yes. They move about and do your work when you sit and rest.

* * *

೨೯–೬–೧೯೬೧
(ಆಸ್ಪತ್ರೆಯಲ್ಲಿ)

ಗಾಯ ಮಾಯುತ್ತದೆ, ಕರೆ ನಿಲ್ಲುತ್ತದೆ.
–ನೋವೂ ಆಗಾಗ ಮರುಕಳಿಸುತ್ತದೆ.
(The wound heals, the scar remains)

* * *

2-2-1962

You have no need to lose your temper
when you are in the right;
You cannot afford to lose your temper
when you are in the wrong.

(ಇದನ್ನು ಬೇರೆ ಯಾರಾದರೂ ಆಗಲೆ ಹೇಳಿಬಿಟ್ಟಿದ್ದಾರೆಯೆ?)

* * *

29-7-63

"What is life?'
"That which stirs and is stirring"

* * *

5-9-63

Some persons think with the pen,
some others with the tongue.

* * *

5-10-63

When young I used to read for
knowledge as well as pleasure;
now I read only for pleasure,
since I promptly forget all that I read.

* * *

9-12-1963

If you don`t have a good memory,
keep at least a good note-book.

* * *

೪-೬೫

"ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು"

* * *

Stray thoughts
(ಬೇರೆಬೇರೆ ಕಡೆ ಗುರುತು ಮಾಡಿಕೊಂಡಿದ್ದು)

೧೩-೨-೬೩

"ಸ್ವರ್ಗಮಪಾರಿಜಾತಂ......."

ಈ ಪದ್ಯವನ್ನು ಯಾವುದಾದರೂ ಹಳೆಯ ಸಂದರ್ಭವನ್ನು ಕುರಿತು ಪ್ರಸಂಗಿಸುವಾಗ ಉಪಯೋಗಿಸಬಹುದು.

–ನಾನು ಜಾಂಬವಂತ ಎಂದು ಹೇಳುವ ಬದಲು

* * *

17-2-1963

"The Essay is a lyric in a lower key''

("ಪ್ರಬಂಧವೆನ್ನುವುದು ಮಂದ್ರಸ್ಥಾಯಿಯ (ಶೃತಿಯ) ಭಾವಗೀತೆ")

* * *

೧೧-೨-೬೩

ಈಗಿನ ಉಲ್ಬಣ ಪರಿಸ್ಥಿತಿಯಲ್ಲಿ ಜನತೆಯ ಉತ್ಸಾಹ ನಂದದಂತೆ ಕುಂದದಂತೆ ನೋಡಿಕೊಳ್ಳಬೇಕು. ಈ ಉತ್ಸಾಹದ ನಂದಾದೀಪವನ್ನು ಸಂರಕ್ಷಿಸಿಕೊಂಡು ಬರಬೇಕು. ಇದು ಮುಖ್ಯ ಕಾರ್ಯ.

ನಂದಾದೀಪದ ಪ್ರತಿಮೆಯನ್ನೇ ಉಪಯೋಗಿಸಿಕೊಂಡು ಪದ್ಯ ಬರೆಯಬಹುದು.

ಆದರೆ ಇದನ್ನು ಆಗಲೆ ನಾನು ಎರಡು ಬಾರಿ ಉಪಯೋಗಿಸಿದ್ದೇನೆ. (೧) ವಿಶ್ವವಿದ್ಯಾಲಯದ ರಜತೋತ್ಸವವನ್ನು ಕುರಿತು ಬರೆದ ಪದ್ಯದಲ್ಲಿ (೨) ಗಾಂಧೀಜಿಯನ್ನು ಕುರಿತು ಬರೆದ ಪ್ರಬಂಧದಲ್ಲಿ

* * *

16-2-62

Beauty

(1) Formal beauty (2) Expressive beauty

1) Where only symmetry is involved: geometrical figures, proportions etc; even in human figures.

2) Where **emotion** is exposed
e.g. wry face, tousled hair, wrinked face etc.

Has this been noticed before? must have been

* * *

Poetic Contemplation

Is it a continuous process?

But in the creation of a long poem or a play don`t we have breaks & resumptions?

∴ ಪುನರನುಸಂಧಾನ is freqently necessary.

* * *

The artist sees his experience itself
in terms of the medium

* * *

ಮಹಾತ್ಮಾ ಗಾಂಧಿ

೨-೨-೧೯೪೮

ಜನವರಿ ೩೦ರ ಮಹಾದುರಂತವನ್ನು ನೆನೆದು

ನಂಬಲಾಗದ್ದು ನಡೆದು ಹೋಯಿತು!

ಆ ಸಂಜೆ ಕಾಲೇಜಿನ ಕೆಲಸದ ಹೊರೆಯನ್ನು ತೀರಿಸಿಕೊಂಡು ಪಬ್ಲಿಕ್ ಲೈಬ್ರರಿಗೆ ಹೋಗಿ ಅಲ್ಲಿಂದ ಮನೆಯ ಕಡೆ ಬರುವ ವೇಳೆಗೆ ಹತ್ತಿರ ಹತ್ತಿರ ಆರೂವರೆ ಘಂಟೆಯಾಗಿತ್ತು. ತಾಯಿನಾಡು ಕಚೇರಿಯ ಮುಂದೆ ವಿಶೇಷವಾಗಿ ಜನಸಂದಣಿ! ಬೈಸಿಕಲ್ಲಿನಿಂದ ಇಳಿಯ ಬೇಕಾಯಿತು. ಅಲ್ಲಿಯ ಪ್ರಕಟನೆಯಲ್ಲಿ "ಮಹಾತ್ಮಾಗಾಂಧಿ"..... "ಮೃತಿ(?)..." ಎಂಬ ಕೆಲವು ಅಕ್ಷರಗಳು ದೂರಕ್ಕೆ ಸ್ವಲ್ಪ ಸ್ವಲ್ಪ ಕಾಣಿಸುತ್ತಿದ್ದವು. "ಮಹಾತ್ಮಾ ಗಾಂಧಿ ಮರಣದಿಂದ ಪಾರಾದರು" ಎಂದಿರಬಹುದು ಎಂದು ಮನಸ್ಸು ಭಾವಿಸಿತು. ಅವರು ಮೃತರಾದರೆಂದು ಊಹಿಸಲು ಕೂಡ ಆಗಲಿಲ್ಲ. ಆಗ ನಾನು ಬಲ್ಲ ನಮ್ಮ ಕಾಲೇಜಿನ ವಿದ್ಯಾರ್ಥಿಯೊಬ್ಬನು "ಗಾಂಧಿಗೆ ನೊಬೆಲ್ ಪ್ರೈಸ್ ಕೊಟ್ಟುಬಿಟ್ಟರು!" ಎಂದು ಹೇಳಿದನು. ಆಗಲೂ ನನಗೆ ಪೂರ್ತಿಯಾಗಿ ಅರ್ಥವಾಗಲಿಲ್ಲ. "ಗಾಂಧಿಯನ್ನು ಕೊಂದರಂತೆ- ಹಿಂದೂ ಕೊಂದನಂತೆ!" ನಂಬಬಾರದ್ದು ನಡೆದೇ ಹೋಗಿತ್ತು!

ಆ ಹಿಂಸೆಯ ಮೂರ್ತಿ ಹೀಗೆ ಹಿಂಸೆಗೆ ಬಲಿಯಾಗಿ ಪ್ರಾಣ ಬಿಡಬೇಕೆ? ಹಿಂದೂ ಧರ್ಮದ ಏಕಮಾತ್ರ ರಕ್ಷಾಮಣಿ "ಹಿಂದು"ವೊಬ್ಬನ ಗುಂಡಿನೇಟಿಗೆ ಆಹುತಿಯಾಗಬೇಕೆ? ಏನು ದುರಂತ ವಿಧಿ ಇದು!

ಬದುಕಿದ್ದಾಗಲೆ ಸೋಕ್ರಟೀಸ್, ಯೇಸುಕ್ರಿಸ್ತರ ಮಾಲೆಗೆ ಸಾಲಿಗೆ ಸೇರಿದ್ದ ಮಹಾತ್ಮನು ಸಾವಿನಲ್ಲೂ ಅದೇ ದಾರಿಯನ್ನೇ ಹಿಡಿದನು; ತನ್ನವರ ಕೈಯಿಂದಲೇ ಕೊಲೆಯಾದನು.

ಎಂಥ ಮರಣ! ಪ್ರಾರ್ಥನೆಗೆ ಹೋಗುತ್ತಿರುವ ವೇಳೆಯಲ್ಲಿ, ಎಂದೆಂದೂ ಪರಿಶುದ್ಧವಾಗಿರುವ ಹೃದಯ ಪರಿಶುದ್ಧತಮವಾಗಿರುವ ವೇಳೆಯಲ್ಲಿ! ಕೊಲೆಪಾತಕನು "ನೀವು ಬಂದದ್ದು ಹೊತ್ತಾಯಿತು!" ಎಂದನಂತೆ; (ಆ ಐದು ನಿಮಿಷ ಕಾಯುವುದಕ್ಕೆ ಅವನಿಗೆ ಎಷ್ಟು ಕಷ್ಟವಾಗಿತ್ತೋ!) ಅದಕ್ಕೆ "ಹೌದು ತಡವಾಯಿತು" ಎಂದು ನಸುನಗೆಯೊಡನೆ ಉತ್ತರ ಕೊಟ್ಟರಂತೆ;* ಇವನು ನಮಸ್ಕರಿಸುವವನಂತೆ ಬಗ್ಗಿದನು. ಉತ್ತರಕ್ಷಣದಲ್ಲೇ ಢಂ, ಢಂ, ಢಂ! ಎಂದು ರಿವಾಲ್ವರಿನ ಗುಂಡುಗಳು!

ಏನಾಯಿತೆಂದು ಅರಿಯುವ ಮೊದಲೇ ಬಾಪೂಜಿ ಪ್ರಾರ್ಥನಾಸಭೆಯ ಕಡೆಗೆ ಕೈ ಜೋಡಿಸಿಕೊಂಡಿದ್ದರು. ಅದು ದೇವರಿಗೆ ಪ್ರಾರ್ಥನೆಯೋ, ಕೊಲೆಪಾತಕನ ಪರವಾಗಿ ಕ್ಷಮೆಯ ಯಾಚನೆಯೋ?–ಎರಡೂ ಇರಬಹುದು. ಸತ್ತಮುಖದಲ್ಲಿ ಶಾಂತಿ ಕ್ಷಮೆಗಳಿದ್ದುವೆಂದು ಸರ್ದಾರ್ ಪಟೇಲರು ಹೇಳಿದ್ದನ್ನು ನೋಡಿದರೆ–ಎರಡೂ ಇರಬಹುದು. ನುಡಿದಂತೆ ನಡೆದು ಮರಣವನ್ನು ಸ್ವಾಗತಿಸಿದ ಮಹಾತ್ಮ ಧನ್ಯ. "ಶರಣರ ಗುಟ್ಟನ್ನು ಮರಣದಲ್ಲಿ ನೋಡು."

ಮಹಾತ್ಮನ ಚರಿತೆ ಇಲ್ಲಿಗೆ ಪರಿಪೂರ್ಣವಾಯಿತು. ನಿರೀಕ್ಷೆಗೆ ಮೀರಿ ಸರ್ವಾಂಗಪೂರ್ಣವಾದ ಕಲಾ ಕೃತಿಯಾಯಿತು–ಮಹಾದುರಂತವಾಯಿತು. ಉಪವಾಸ ಮಾಡಿದಾಗ ದೇಹ ತೊರೆದಿದ್ದರೇ ಚೆನ್ನಾಗಿತ್ತೆಂದು ಒಬ್ಬಿಬ್ಬರು ಹಿರಿಯರು ಹೇಳಿದ್ದಾರೆ. ಆದರೆ, ಮಾನವಸ್ವಭಾವವನ್ನು ಪರಿಭಾವಿಸಿದರೆ, ಆ ಬಾಳಿಗೆ ಈ ಕೊನೆಯೇ ಭೀಕರವಾದರೂ ಸಹಜ ಶಿಖರವೆಂದು ನನಗೆ ಈಗ ತೋರುತ್ತಿದೆ. ಕಲಾಕೃತಿಯಲ್ಲಿ ಅನಿರೀಕ್ಷಿತವಾದ ಅನಿವಾರ್ಯತೆ ಇರುವುದಷ್ಟೆ. ಅದೇ ಇಲ್ಲಿ ಮಹಾಪರಿಮಾಣದಲ್ಲಿ ಗೋಚರವಾಗಿದೆ........

ಬೇರೆ ಯಾರಾದರೊಬ್ಬರ ಮರಣವನ್ನು ಕುರಿತು ಮಾತಾಡುವಾಗ ಅವರ ಸಾವಿನಿಂದಾದ ನಷ್ಟವನ್ನು ಪೂರೈಸುವುದು ಅಶಕ್ಯ ಎನ್ನುತ್ತೇವೆ. (His loss is irreparable). ಆದರೆ ಇಲ್ಲಿಯ ನಷ್ಟ ಅಪೂರ್ಯವಲ್ಲ, ಅಚಿಂತ್ಯ (inconceivable). ಮಿಕ್ಕ ಮಹನೀಯರೆಲ್ಲರೂ ಬುದ್ಧಿಯ ದಾರಿಯಲ್ಲಿ ನಡೆಯತಕ್ಕವರು. ಗಾಂಧೀಜಿ ಪ್ರತಿಭಾನದ ಬೆಳಕನ್ನು ಲೋಕಕ್ಕೆ ಬೀರುತ್ತಿದ್ದವರು. ತಿಳಿವಿಗೆ ಮೀರಿದ ಸತ್ಯ ಅವರ ಪ್ರತಿಭಾದೃಷ್ಟಿಗೆ ಹೊಳೆಯುತ್ತಿತ್ತು. ಇಂಥ ನಾಯಕ, ಇಂಥ ತಂದೆ ಯಾವ ಜನಕ್ಕೆ ಯಾವ ರಾಷ್ಟ್ರಕ್ಕೆ ದೊರೆತಾನು! ನಮ್ಮ ನಷ್ಟ ಏನೆಂಬುದನ್ನು ಊಹಿಸಲು ಕೂಡ ನಮಗೆ ಶಕ್ಯವಿಲ್ಲ. ನಮ್ಮ ಉತ್ಕರ್ಷದ ಸೂರ್ಯ ಮುಳುಗಿ ಹೋದನು. ಇನ್ನು ಮುಂದೆ ನಮ್ಮ ಹಿರಿಯರು–ಸುದೈವದಿಂದ ಹಲವರಿದ್ದಾರೆ, ಉದಾತ್ತರಿದ್ದಾರೆ–ತಮ್ಮ ತಮ್ಮ ಬುದ್ಧಿಯ ಹಣತೆಗಳನ್ನು ಬೆಳಗಿ ಉಜ್ವಲಗೊಳಿಸಿಕೊಂಡು ಹೃದಯದ ಸ್ನೇಹವನ್ನು ವರ್ಧಿಸಿಕೊಂಡು ನಾಡಿಗೆ ದಾರಿ ತೋರಿಸಬೇಕು.......

---

* ಈ ಸಂವಾದ ನಡೆಯಿತೆಂಬ ವಿಷಯ ಹಿಂದೂಪತ್ರಿಕೆಯ ಬಾತ್ಮೀದಾರನ ಹೇಳಿಕೆಯಲ್ಲಿ ಮಾತ್ರ ಇದೆ. ಮಿಕ್ಕವರು ಯಾರೂ ಇದನ್ನು ಸೂಚಿಸಿಲ್ಲ. ಗಾಂಧೀಜಿಯ ಮೊಮ್ಮಗಳೂ ಇದನ್ನು ಕೇಳಿದಂತೆ ತೋರಲಿಲ್ಲ. ಗುಂಡಿನೇಟು ಬಿದ್ದ ಮೇಲೆ ಗಾಂಧೀಜಿ "ಹಾ ರಾಮ್ ಹಾ ರಾಮ್" ಎಂದರೆಂದು ಆಕೆ ತಿಳಿಸಿದ್ದಾಳೆ. ಮುಂದಿನ ವಿಚಾರಣೆಯಲ್ಲಿ ಸತ್ಯಾಂಶ ಹೊರಬೀಳಬೇಕು.

ಮಹಾತ್ಮನು ಸ್ವಾತಂತ್ರ್ಯವನ್ನು ಗೆದ್ದುಕೊಟ್ಟನು. ಆದರೆ ಜನರೆಲ್ಲರ ಹೃದಯವನ್ನು ಗೆಲ್ಲಲು ಅವನ ಪ್ರೇಮಕ್ಕೂ ಆಗದೆ ಹೋಯಿತು. ದ್ವೇಷ-ಪ್ರೇಮಗಳ ನಿರಂತರವಾದ ಹೋರಾಟದಲ್ಲಿ ದ್ವೇಷದ ಕೈಯೇ ಸದ್ಯಕ್ಕೆ ಮೇಲಾಯಿತು! ಇನ್ನೂ ಎಷ್ಟು ಕಾಲ ಬೇಕೋ ಈ ವಿಷವೃಕ್ಷ ಸಮೂಲವಾಗಿ ವಿಚ್ಛೇದಗೊಳ್ಳುವುದಕ್ಕೆ!

ಭಗವಾನ್ ಬುದ್ಧನಾದ ಮೇಲೆ ನಮ್ಮ ನಾಡು ಮಹಾತ್ಮಾ ಗಾಂಧಿಯನ್ನು ಪಡೆಯಲು ಎರಡೂವರೆ ಸಾವಿರ ವರ್ಷ ಬೇಕಾಯಿತು-ಇನ್ನೆಷ್ಟು ಶತಮಾನ ಸಹಸ್ರಮಾನ ಬೇಕೋ "ಮೈವೆತ್ತ ಪ್ರೇಮ" ಇನ್ನೊಮ್ಮೆ ಅವತರಿಸಿ ಜಗತ್ತನ್ನು ಉದ್ಧರಿಸುವುದಕ್ಕೆ!

ಚರಿತ್ರೆಯ ತಿಳಿವಿನಿಂದ ಜನದ ಹೃದಯ ತಿದ್ದುವುದು ಎಂದಿಗೆ, ಎಂದಿಗೆ!

* * *

ಮೊನ್ನೆಯ ದಿನ ಮುಸ್ಲಿಂ ತರುಣ ಅಧ್ಯಾಪಕರೊಬ್ಬರು ಕಾಲೇಜಿಗೆ ಬಂದರು; ಸಂತಾಪ ಸೂಚಕ ಸಭೆ ಆದೀತೇನೋ, ಎಂದು ನಿರೀಕ್ಷಿಸಿ ಹತ್ತೂವರೆ ಘಂಟೆಗೆ ಬಂದಿದ್ದರಂತೆ. ಆದರೆ ಅದು ಮೌನದ ಅಳಲಿನ ದಿನ-ಶ್ಮಶಾನಯಾತ್ರೆಯ ದಿನ; ಸಭೆ ಹೇಗೆ ಸೇರೀತು!.... ಆತನೂ ಗಾಂಧೀಜಿಯನ್ನು ನೆನೆದು ತುಂಬ ವ್ಯಥೆಪಟ್ಟಿದ್ದನು. ಆಮಾತು ಈ ಮಾತು ಆಡುತ್ತಾ, ನವಖಾಲಿಯಲ್ಲಿ ಕೂಡ ಗಾಂಧೀಜಿ ಸುರಕ್ಷಿತವಾಗಿ ಇದ್ದದ್ದನ್ನು ಆತ ಜ್ಞಾಪಿಸಿದನು; ಉದ್ದೇಶ ಪೂರ್ವಕವಾಗಿ ಆತ ಹೇಳಲಿಲ್ಲವಾದರೂ ಅದರಿಂದ ನನಗೆ ತಲೆ ತಗ್ಗಿಸುವಂತಾಯಿತು. ಮುಸ್ಲಿಮರು ಅನೇಕ ಘೋರಪಾತಕಗಳನ್ನಾಚರಿಸಿದ್ದಾರೆ. ಆದರೆ ಮಹಾತ್ಮನ ರಕ್ತವನ್ನು ಸುರಿಸಿ ಅವರು ಕೈಯನ್ನು ಹೊಲಸು ಮಾಡಿಕೊಳ್ಳಲಿಲ್ಲ. ಆ ಅಪೂರ್ವಯೋಗ ಒಬ್ಬ "ಹಿಂದೂ ವೀರ"ನಿಗೇ ಮೀಸಲಾಗಿತ್ತು!

* * *

೩-೨-೪೮

ಓ ಭರತ ಭೂಮಿ, ನಿನ್ನ ಸ್ವಾತಂತ್ರ್ಯದ ಹೆಸರಿನಲ್ಲಿ ಇದುವರೆಗೆ ಸುರಿದ ರಕ್ತಬಲಿ ಸಾಲಲಿಲ್ಲವೆ? ಈ ಮಹಾತ್ಮನ ಸಿರಿನೆತ್ತರ ತರ್ಪಣವಿಲ್ಲದೆ ನಿನ್ನ ದಾಹ ತೀರುತ್ತಿರಲಿಲ್ಲವೆ?

* * *

ಗಾಂಧೀಜಿಯನ್ನು ಯಾರು ನಿಜವಾಗಿ ಕೊಂದವರು?

ಗೋಡ್ಸೆ ಒಂದು ನಿಮಿತ್ತಮಾತ್ರ. ನಿಜವಾದ ಕೊಲೆಗಾರ ಜಿನ್ನನೇ ಸರಿ. ಅವನು ಬೆಳಸಿ ಪೋಷಿಸಿದ ವಿಷವೃಕ್ಷದ ಪರಮಫಲವೇ ಇದು-ಸಂಶಯವಿಲ್ಲದೆ. ದ್ವೇಷದ ಉದ್ಗಾರಗಳನ್ನು ಕೂಗಿ ಕೂಗಿ, ಅಣ್ಣತಮ್ಮಂದಿರ ಮನಸ್ಸುಗಳನ್ನು ಕೆಡಿಸಿ ಇಂಡಿಯವನ್ನು ಇಬ್ಭಾಗ ಮಾಡಿ ಕೋಟ್ಯಂತರ ಹೃದಯಗಳಲ್ಲಿ ಪೈಶಾಚಿಕ ಭಾವಗಳನ್ನು ಯಾರು ಕೆರಳಿಸಿದನೋ ಆತನೇ ನಿಜವಾದ ಕೊಲೆಗಾರ.

“ಕರ್ಮಮೀ ಪರಿ ಮಱಿಗೆ ಮಱಿ ಇಕ್ಕುತಿರ್ಕುಂ!”

ಅಪರಾಧಿಗಳಲ್ಲದವರ ರಕ್ತವನ್ನು ಸಂತತವಾಗಿ ಇತ್ತ ಕಡೆಯೂ ಅತ್ತ ಕಡೆಯೂ ಸುರಿಸುತ್ತಿರುವುದೇ ಇಲ್ಲಿಯ ವಿಶೇಷ! ಈ ಕೊನೆಯ ಮಹಾತರ್ಪಣ ನಡೆದು ಹೋದ ಮೇಲಾದರೂ, ಇದರ ಘೋರ ಭೀಷಣತೆಯನ್ನು ಕಂಡು ಬೆಚ್ಚಿ ಜನರ ಬುದ್ಧಿ ದಾರಿಗೆ ಬಂದೀತೆ, ಹೃದಯದಲ್ಲಿ ಮಾನವತೆ ಮತ್ತೆ ತಲೆಯೆತ್ತೀತೆ?–

“ಕರ್ಮಮೀಪರಿ ಮಱಿಗೆ ಮಱಿ ಇಕ್ಕುತಿರ್ಕುಂ
ಕ್ಷಮೆಯಿಂದೆ ಸಮೆಯದಿರೆ ಮಱುಕೊಳಿಸುತಿರ್ಕುಂ........
ಸಾಲದೇ ರಕ್ತದೊಳ್ ಸ್ನಾನಂ
ಸಾಲದೇ ಈ ರಕ್ತಪಾನಂ!”

“ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ”!

* * *

9-2-1948

.....‘A glance at the observations on Gandhiji reveals the range of criteria allowed in summing up of career. He is compared to Buddha, Jesus Christ, Socrates, but none of them as world-teachers and disturbers of orthodox life had such a lengthy and so many-sided mission as Mahatma Gandhi-60 years of stormy life in diverse roles. Buddha took the vow of renunciation; devotion brought illumination to him; and he preached the message that spread. It is a life contained within a symmetrical outline. The ministry of Jesus lasted only three years; in period of time it was as short as one of the detentions of Gandhiji in jail, and Jesus was crucified the moment his contemporeries suspected in him traits of the political agitator and the subveresionist. .... Socrates talked and talked in the market-place of Athens, “Corrupting youth'' but he did not undergo a fraction of the miscellaneons turmoil of the Mahatma’s mission. Gandhiji’s prolonged ministry on earth has broken the record. What happened came into the world-circuit of news in his own life-time, without the aid of long voyages by apostles and the testimony of gospel-writers to spread the story down the centuries.

From 'Art of writing obituary' (Tributes to Gandhiji analysed) by Pothan Joseph,-The Indian Express, Feb 4, 1948

* * *

'I have heard it exclaimed how much better it would have been if the Mahatma had gone off in one of his fasts. I don't agree; Destiny is a better artist than poor mortals, and the tact of the present termination will grow more and more abvious with the passing of time.''..

From ' what expiation can we make?' by "chitragupta" - Swatantra, Feb 7,1948.

(Good criticism badly expressed! TNS)

* * *

"ನಂದಾದೀವಿಗೆ ನಂದಿ ಹೋಯಿತು!......" ಎಂದು ಸಿ.ಆರ್. (ತಮಿಳುನಾಡಿನವರಿಗೆ ಕಳಿಸಿದ ಮೊದಲ ಸಂದೇಶದಲ್ಲಿ)

* * *

ನಂದಾದೀವಿಗೆಯನ್ನು ನಂದಿಸಿಬಿಟ್ಟೆವು. ನಾವು ಹಿಂದುಗಳು ನಂದಿಸಿಬಿಟ್ಟೆವು! – ಅದಾಗಿ ಆರಿ ಹೋಗಲಿಲ್ಲ ! ಅದರ ಬೆಳಕು ನಮಗೆ ಬೇಡವೆಂದು, ಅದರ ರಕ್ಷೆ ನಮಗೆ ಬೇಡವೆಂದು ನಮ್ಮವರು ಆ ಸೊಡರ ಕುಡಿಯನ್ನು ಆರಿಸಿಬಿಟ್ಟರು!

ನಮ್ಮ ಅಂತರಾತ್ಮದ ವಾಣಿಯನ್ನು ನಾವು ಉಡುಗಿಸಿಬಿಟ್ಟೆವು. ನೀವು ಮಾಡುತ್ತಿರುವುದು ಅಧರ್ಮ ಎಂದು ಅದು ಕೂಗಿ ಹೇಳಿದ್ದನ್ನು ಕೇಳಲೊಲ್ಲದೆ ಆ ಉಸಿರನ್ನು ಕಟ್ಟಿಬಿಟ್ಟೆವು – ಆ ಸಾಕ್ಷಿಯ ಭಯವಿಲ್ಲದೆ ನಿರಾತಂಕವಾಗಿ ಹಿಂಸಾಮಾರ್ಗದಲ್ಲಿ ಮುಂದುವರಿಯಲೆಂದು!

* * *

೧೦-೨-೪೮

ಗಾಂಧೀಜಿಯ ದೇಹವನ್ನು ಧೃತಿದ್ರಾವಕಗಳ ಸಹಾಯದಿಂದ ಭದ್ರವಾಗಿಡದೆ ಅಗ್ನಿಗೆ ಅರ್ಪಿಸಿದ್ದು ಪೂರ್ಣವಾಗಿ ಸರಿ. ದೇಹಕ್ಕೆ ಬೆಲೆ ಜೀವದಿಂದ, ಆತ್ಮದಿಂದ. ಜೀವವಿಲ್ಲದ ದೇಹ ಬರಿಯ ಕಟ್ಟಿಗೆ. ಜೀವ ಹೊರಟುಹೋದ ಮೇಲೆ, ಪಂಚಭೂತಗಳ ಸಾಲವನ್ನು ಪಂಚಭೂತಗಳಿಗೆ ಸಲ್ಲಿಸಿಬಿಡುವುದೊಂದೇ ಶ್ರೇಷ್ಠಮಾರ್ಗ. ಭಸ್ಮವನ್ನು ಹರಿಯುವ ನೀರಿನಲ್ಲಿ

ಕದಡಿಬಿಡಬೇಕು. ಅರ್ಚನೆಗಾಗಿ, ಸ್ಮಾರಕಕ್ಕಾಗಿ ಎಲ್ಲೂ ಉಳಿಸಿಕೊಳ್ಳಬಾರದು. ಅವರು ಬಿದ್ದ ಸ್ಥಳದ ಮೃತ್ತಿಕೆಯನ್ನು ತಂದು ಅದರ ಮೇಲೆ ಗುಡಿ ಗೋಪುರಗಳನ್ನು ಕಟ್ಟಬಾರದು. ಸ್ಫೂರ್ತಿ ಕೊಡಲು ಈ ಜಡವಸ್ತು ಬೇಕೆ? ಅವರ ಉಕ್ತಿ ಉಪದೇಶ ಮಾರ್ಗದರ್ಶನ ಜೀವನದ ಮೇಲ್ಪಂಕ್ತಿ ಇವಿಲ್ಲವೆ? ಇವು ಸಾಲವೆ?

ಚಿತಾಭಸ್ಮವನ್ನು ಪೂಜಿಸುವುದು ವಾಮಾಚಾರಕ್ಕೆ ಸೇರಿದ್ದಲ್ಲವೆ?

* * *

೧೦-೨-೪೮

ಗಾಂಧೀಜಿ ಬದುಕಿದ್ದಾಗ ಮೇಲ್ಪಂಕ್ತಿಯಿಂದ ಉಪದೇಶದಿಂದ ಸತ್ಪ್ರೇರಣೆಯಿಂದ ನಮ್ಮ ಜನತೆಗೆ ನಿರ್ಭಯವನ್ನು ಕಲಿಸಿ, ಬಾಗಿದ್ದ ಬೆನ್ನನ್ನು ಮೇಲಕ್ಕೆತ್ತಿ ವಜ್ರಸ್ತಂಭವಾಗಿ ನಿಲ್ಲಿಸಿದರು; ಅವರ ಕೊಲೆಯಾದ ಮೇಲೆ ಕಂಬನಿ ಹರಿದು ಹೃದಯದ ಶಿಲೆ ಕರಗಿ ಮೃದುವಾಗಬೇಕಾಗಿದೆ!– ಆಗುತ್ತಿರುವಂತೆ ತೋರುತ್ತಿದೆ!

ಅಯ್ಯೋ, ಆದಹಾಗೆ ಕಾಣುವುದಿಲ್ಲ! (೧೦-೧೦-೧೯೫೦)

* * *

17-2-48

......."What was his great power over the mind and heart of man due to? Ages to come will judge and we are too near him to assess the many facets of his extraordinarily rich personality. But even we realise that his dominating passion was truth. That truth led him to proclaim without ceasing that good ends can never be attained by evil methods, that the end itself is distorted if the method pursued is bad. That truth led him to confess publicly whenever he thought he had made a mistake -Himalayan errors he called some of his own mistakes. That truth led him to fight evil and untruth whenever he found them, regardless of the consequences. That truth made the service of the poor and the dispossessed the passion of his life, for where there is inequality and discrimination and suppression, there is injustice and evil and untruth. And thus he became the beloved of all those who have suffered from social and political evils, and the great represantative of humanity as it should be. Because of that truth in

him, wherever he sat became a temple and wherever he trod was hallowed ground....

from Jawaharlal Nehru`s
broadcast speech. Feb. 14

* * *

(ತೀನಂಶ್ರೀಯವರು ಮೊದಲ ಬಾರಿಗೆ ದೆಹಲಿಗೆ ಹೋದಾಗ ೬-೧೧-೪೯ರಂದು ಪು.ತಿ.ನ. ಅವರಿಗೆ ಬರೆದಿರುವ ಪತ್ರದಲ್ಲಿ ಹೀಗಿದೆ:)

.......(ಇಲ್ಲಿಯ ಕೆಲಸದಿಂದ ಎರಡು ಮೂರುದಿನ) ಏನನ್ನೂ ನೋಡಲು ಆಗಿರಲಿಲ್ಲ; ಅನಂತರ ಎರಡು ದಿನ ಸುತ್ತಾಡಿದೆನು. ಮೊದಲು ನೋಡಿದ ಸ್ಥಳವೆಂದರೆ – ನಿಮಗೆ ಗೊತ್ತಷ್ಟೆ: ರಾಜಘಾಟ್: ಗಾಂಧೀಜಿಯ ಸಂಸ್ಕಾರ ವೇದಿಕೆಯ ಮೇಲೆ ಹೂವನ್ನು ಅರ್ಪಿಸುವಾಗ ನನ್ನ ಕಣ್ಣು ನೀರು ತುಂಬಿತು!.....

ವರ್ಣಿಸತಕ್ಕದ್ದು ಎಷ್ಟೋ ಇದೆ –ಆದರೆ ಈಗ ಅವಕಾಶವಿಲ್ಲ. ಎಲ್ಲ ಮುಖತಃ.........

ವಿದೇಶದಲ್ಲಿ ತೀ.ನಂ.ಶ್ರೀ.

ತೀ.ನಂ.ಶ್ರೀ.ಅವರು 'ರಾಕ್‌ಫೆಲ್ಲರ್ ಫೆಲೊ' ಆಗಿ ೧೯೫೫ರ ಜೂನ್ ತಿಂಗಳಿನಿಂದ ೧೯೫೬ರ ಏಪ್ರಿಲ್ ತಿಂಗಳವರೆಗೆ ಹತ್ತು ತಿಂಗಳು ಕಾಲ ವಿದೇಶದಲ್ಲಿ – ಅಮೆರಿಕದಲ್ಲಿ ಎಂಟು ತಿಂಗಳು, ಇಂಗ್ಲೆಂಡಿನಲ್ಲಿ ಒಂದು ತಿಂಗಳು ಮತ್ತು ಯುರೋಪಿನ ಫ್ರಾನ್ಸ್, ಸ್ವಿಝರ್ಲೆಂಡ್, ಇಟಲಿ ಮತ್ತು ಹಾಲೆಂಡಿನಲ್ಲಿ ಒಂದು ತಿಂಗಳು ಪ್ರವಾಸ ಮಾಡಿಬಂದರು. ಅಮೆರಿಕದಲ್ಲಿ ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ಎರಡು ತಿಂಗಳುಗಳು ಮತ್ತು ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯಗಳಲ್ಲಿ ನಾಲ್ಕು ತಿಂಗಳುಗಳ ಕಾಲ ಇದ್ದು ಇನ್ನೂ ಎರಡು ತಿಂಗಳು ಅಲ್ಲಿಯ ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಭೇಟಿ ಕೊಟ್ಟು ಅಲ್ಲಿಯ ಭಾಷಾಶಾಸ್ತ್ರ ವಿದ್ವಾಂಸರುಗಳೊಡನೆ ವಿಚಾರ ವಿನಿಮಯ ಮಾಡಿದ್ದರು. ಈ ಸಮಯದಲ್ಲಿ ಪ್ರವಾಸಿಯಾಗಿಯೂ ಅವರು ಸಂದರ್ಶಿಸಿದ ದೇಶಗಳಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟಿದ್ದರು.

ಈ ಪ್ರವಾಸದ ಸಮಯದಲ್ಲಿ ಅವರು ಒಂದು ಪುಸ್ತಕದಲ್ಲಿ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡಿದ್ದರು. ಮತ್ತು ಸಂಸಾರದವರೊಡನೆ, ಸ್ನೇಹಿತರು ಮತ್ತು ಸಂಗಾತಿಗಳೊಡನೆ ಸಾಕಷ್ಟು ಪತ್ರ ವ್ಯವಹಾರ ಮಾಡಿ, ತಮ್ಮ ಅಲ್ಲಿಯ ಕೆಲಸ ಮತ್ತು ಪ್ರವಾಸದ ಬಗ್ಗೆ ಸಾಕಷ್ಟು ಬರೆದಿದ್ದರು. ಮತ್ತು ಅವರಿಗೂ ಸಾಕಷ್ಟು ಪತ್ರಗಳು ಬಂದಿದ್ದವು.

ತೀ.ನಂ.ಶ್ರೀ.ಅವರು ತಮ್ಮ ಪ್ರವಾಸದಿಂದ ಹಿಂತಿರುಗಿ ಬಂದನಂತರ ಅವರ ವಿದ್ವತ್ತು ಮತ್ತು ಲಲಿತ ಪ್ರಬಂಧ ಸಾಹಿತ್ಯಗಳ ಸಮ್ಮಿಳನವಾಗಿ ಕನ್ನಡ ನಾಡಿನ ಸ್ನೇಹಿತರು, ಸಾಹಿತಿಗಳು ಸಂಸಾರವರ್ಗದವರೂ ಅವರಿಂದ ಅವರ ವಿದೇಶ ಅನುಭವಗಳ ಬಗ್ಗೆ ಒಂದು ಉತ್ತಮ ಪುಸ್ತಕವನ್ನು ನಿರೀಕ್ಷಿಸುತ್ತಿದ್ದರು. ತೀ.ನಂ.ಶ್ರೀ.ಯವರು ಇದರ ಬಗ್ಗೆ ತುಂಬಾ ಉತ್ಸಾಹವಾಗಿದ್ದು 'ಪಶ್ಚಿಮಾಯನ' ಎಂಬ ಪುಸ್ತಕವನ್ನೂ ಯೋಚನೆ ಮಾಡಿದ್ದರು. ಆದರೆ ಅವರಿಂದ ಇನ್ನೂ ಬರಬೇಕಾಗಿದ್ದ ಲೇಖನಗಳು ಮತ್ತು ಗ್ರಂಥಗಳ ಬಾಕಿ ಪಟ್ಟಿಯಲ್ಲಿ ಇದೂ ಸೇರಿ ಹೋಯಿತು.

ಆದರೆ ತೀ.ನಂ.ಶ್ರೀ.ಅವರು ತಮ್ಮ 'ನಂಟರು' ಲಲಿತ ಪ್ರಬಂಧಗಳ ಸಂಕಲನವನ್ನು ಯೋಚಿಸಿದಾಗ ಇದರಲ್ಲಿ ಸೇರಿಸಲು 'ಹಿಮದರ್ಶನ', 'ಪ್ರವಾಸಿಯ ಪೆಟ್ಟಿಗೆಗಳು' ಮತ್ತು 'ಪ್ರವಾಸಿ' ಪ್ರಬಂಧಗಳನ್ನು ಬರೆದು ಅದರಲ್ಲಿ ತಮ್ಮ ಪಶ್ಚಿಮ ಪ್ರವಾಸದ ಅನುಭವಗಳನ್ನು ಸೇರಿಸಿದ್ದರು. ಅವರು ಇದ್ದ ಕಾಲದಲ್ಲಿಯೇ ಕೆಲವು ಪತ್ರಿಕೆಗಳ ದೀಪಾವಳಿ ವಿಶೇಷ ಸಂಚಿಕೆಗಳಿಗಾಗಿ ತಾವು ವಿದೇಶದಿಂದ ಬರೆದ ಕೆಲವು ಪತ್ರಗಳು ಮತ್ತು ಟಿಪ್ಪಣಿಯ ಭಾಗಗಳನ್ನೂ ಸಂಕಲಿಸಿ ಕೊಟ್ಟಿದ್ದರು. ಈ ಭಾಗಗಳನ್ನು ತೀ.ನಂ.ಶ್ರೀ. ಅವರ ನಿಧನದ ನಂತರ 'ನಂಟರು'

ಪುನರ್ಮುದ್ರಣದಲ್ಲಿ 'ಪ್ರವಾಸಿಯ ಪತ್ರಗಳಿಂದ ಕೆಲವು ತುಣುಕುಗಳು' ಮತ್ತು 'ಪ್ರವಾಸಿಯ ಪತ್ರ-ದಿನಚರಿಗಳಿಂದ' ಶೀರ್ಷಿಕೆಗಳಡಿಯಲ್ಲಿ ಸೇರಿಸಲಾಗಿದೆ.

ಈಗ ತೀ.ನಂ.ಶ್ರೀ.ಯವರ ಟಿಪ್ಪಣಿಗಳು ಮತ್ತು ಪತ್ರವ್ಯವಹಾರದ ಆಯ್ದ ಭಾಗಗಳನ್ನು ಇಲ್ಲಿ ಸಂಕಲಿಸಲಾಗದೆ. (ಈಗಾಗಲೇ ಪ್ರಕಟವಾಗಿರುವ ಮೇಲಿನ ಭಾಗಗಳನ್ನು ಪುನರಾವರ್ತನೆ ಮಾಡಿಲ್ಲ.) ಇದರಿಂದ ತೀ.ನಂ.ಶ್ರೀ.ಯವರ ಭಾಷಾಶಾಸ್ತ್ರದ ವಿದ್ವತ್ತಿನ ಹರಹಿನೊಡನೆ ಅವರ ಉತ್ತಮ ಪ್ರವಾಸಿಯ ಮನೋಭಾವವೂ ವ್ಯಕ್ತವಾಗುತ್ತದೆ. ಮತ್ತು ಅವರಲ್ಲಿ ಸದಾ ಜಾಗ್ರತವಾಗಿದ್ದ ಕವಿ ಪ್ರತಿಭೆ ಇಣಕು ಹಾಕುತ್ತಿರುತ್ತದೆ. ತೀ.ನಂ.ಶ್ರೀ.ಯವರ ಪ್ರವಾಸದ ವಿವರಗಳು ಅವರು ಮನೆಯವರಿಗೆ ಬರೆಯುತ್ತಿದ್ದ ಕಾಗದಗಳಿಂದ ದೊರಕುತ್ತದೆ. ಇಲ್ಲಿ ಉಲ್ಲೇಖವಾಗಿರುವುದು ಬಹುಭಾಗ ಆ ಪತ್ರಗಳೇ. ಈ ಪತ್ರಗಳಲ್ಲಿ ಅವರ ಪ್ರವಾಸದ ವಿವರಗಳೊಡನೆ ಅವರು ಭೇಟಿ ಮಾಡುತ್ತಿದ್ದ ವಿದ್ವಾಂಸರುಗಳು, ಭಾರತೀಯರು ಮತ್ತು ಸ್ನೇಹಿತರುಗಳೆಲ್ಲರ ವಿವರಗಳೂ ಬರುತ್ತವೆ. ಇದೂ ಅಲ್ಲದೆ ಅವರು ಅನುಭವಿಸುತ್ತಿದ್ದ ಒಂಟಿತನ, ಮತ್ತು ಸಂಸಾರ ಮತ್ತು ಸ್ನೇಹಿತರುಗಳ ಅಗಲಿಕೆಯಿಂದ ಆಗುತ್ತಿದ್ದ ಪರಿತಾಪಗಳೂ ವ್ಯಕ್ತವಾಗುತ್ತಿವೆ. ಅವರು ಹೋಗಿದ್ದ ಕಾಲದಲ್ಲಿ ನಮ್ಮ ಮನೆಯಲ್ಲಿ ದೂರವಾಣಿ ಇರಲಿಲ್ಲ. "ನಂಟರು"ವಿನಲ್ಲಿ ಪ್ರಕಟವಾಗಿರುವ ಒಂದು ಪತ್ರದಲ್ಲಿ ಅವರ ಸ್ನೇಹಿತರಾದ ಡಾ॥ ಭ. ಕೃಷ್ಣಮೂರ್ತಿ ಅವರು ಭಾರತಕ್ಕೆ ಒಂದು ಕರೆ ಮಾಡಲು ಪಡಬೇಕಾದ ಕಷ್ಟ, ಸುಮಾರು ಎರಡು ದಿನಗಳ ನಿರೀಕ್ಷಣೆಯ ಆತಂಕ ಎಲ್ಲವೂ ಗೊತ್ತಾಗುತ್ತದೆ. ಅವರ ಹತ್ತು ತಿಂಗಳು ಕಾಲದ ಪ್ರವಾಸದಲ್ಲಿ ನಮಗೆ ಅವರೊಡನೆ ಯಾವ ನೇರ ಸಂಪರ್ಕವೂ ಇರಲಿಲ್ಲ. ಕೇವಲ ಪತ್ರಗಳ ಮೂಲಕ ನಮ್ಮ ವ್ಯವಹಾರ ನಡೆಯುತ್ತಿದ್ದುದರಿಂದ ಈ ಪತ್ರ ಮಾಧ್ಯಮಕ್ಕೆ ಎಷ್ಟು ಪ್ರಾಮುಖ್ಯವಿತ್ತೆಂದು ಒತ್ತಿ ಹೇಳುವ ಅವಶ್ಯಕತೆಯಿಲ್ಲ.

ಈ ಸಂದರ್ಭದಲ್ಲೇ ಅವರ ಸ್ನೇಹಿತರುಗಳಾದ ಪು.ತಿ.ನ., ಎ.ಎನ್. ಮೂರ್ತಿರಾವ್ ಅವರಿಗೆ ಬರೆದ ಪತ್ರಗಳೂ ಇವೆ. ನಾವು ಮತ್ತು ಅವರ ಸ್ನೇಹಿತರುಗಳು ತೀ.ನಂ.ಶ್ರೀ. ಅವರಿಗೆ ಬರೆದ ಪತ್ರಗಳ ಭಾಗಗಳನ್ನೂ ಸಾಂದರ್ಭಿಕವಾಗಿ ಸೇರಿಸಲಾಗಿದೆ.

ಪ್ರವಾಸಕ್ಕೆ ಶುಭಕೋರಿಕೆ

●

ತೀ.ನಂ.ಶ್ರೀಯವರು ವಿದೇಶ ಪ್ರವಾಸಕ್ಕೆ ಹೊರಟಾಗ ಅವರ ಸ್ನೇಹಿತರು, ಸಾಹಿತಿಗಳು. ಬಂಧುಗಳು ಮತ್ತು ಅವರ ಶಿಷ್ಯರುಗಳು ತುಂಬಾ ಸಂತೋಷಪಟ್ಟರು. ಆ ಸಮಯದಲ್ಲಿ ಧಾರವಾಡದಲ್ಲಿದ್ದ ಸ್ಥಳೀಯರಲ್ಲದೆ, ಹೊರಗಿನಿಂದ ಪುತಿನ, ಗೊರೂರು, ಎಸ್. ಅನಂತ ನಾರಾಯಣ ಮತ್ತು ಹಲವರು ಧಾರವಾಡಕ್ಕೆ ಬಂದು ಅವರಿಗೆ ಸುಖಪ್ರವಾಸ ಕೋರಿ ಬೀಳ್ಕೊಟ್ಟರು. ಅಂದು ಧಾರವಾಡ ಬಿಡುವ ಮೊದಲು ತೀನಂಶ್ರೀ, ಪುತಿನ, ಗೊರೂರು ಅವರು ಊಟ ಮಾಡುತ್ತ ಕುಳಿತಿದ್ದಾಗ ತೀನಂಶ್ರೀಯವರು "ಅಯ್ಯಾ, ನರಸಿಂಹಾಚಾರಿ, ಇನ್ನೂ ಒಂದು ವರ್ಷಕಾಲ ಈ 'ಸಾರು' ಬಿಟ್ಟು ಇರಬೇಕಲ್ಲ, ಹೇಗೆ ಇರುವುದು. ಹೇಳಯ್ಯಾ!" ಎಂದಾಗ, ಪುತಿನ "ಅಯ್ಯಾ ಶ್ರೀಕಂಠಯ್ಯ, ನಿನ್ನ ವಿಷಯ ಇರಲಿ ಆ ಅಮೆರಿಕ ದೇಶದವರು ಸಾರನ್ನೇ ಕಾಣದೇ ಅದು ಹೇಗೆ ಬದುಕಿದ್ದಾರಯ್ಯಾ!" ಎಂದು ನಗೆಯ ಅಲೆಯನ್ನು ಎಬ್ಬಿಸಿದ್ದು ಇಂದೂ ನನಗೆ ನೆನಪಿದೆ.

ಆ ಸಮಯದಲ್ಲಿ ಹಲವು ಶುಭಕೋರಿಕೆಯ ಪತ್ರಗಳೂ ಬಂದಿದ್ದವು. ಈಗಲೂ ದೊರಕಿರುವ ಕೆಲವು ಪತ್ರಗಳನ್ನು ಇಲ್ಲಿ ಕೊಡಲಾಗಿದೆ.

* * *

ಪ್ರೊ|| ಎ.ಎನ್. ಮೂರ್ತಿರಾವ್ Bangalore, 9.6.55

Got your letter just as I was wondering why you were so silent. I am glad to hear all the worry about visa and passport are over. And so you will be in the land of the millionaires shortly. Well, the best of luck, the best of health and may the spirit of that land find its way into your purse! And may your letters from the States be less infrequent, less staccato and less short. Why not follow Gokak's example and make a book?

I am leaving for Mysore almost immediately and so am writing in a hurry–and I am hating all about the Parishat, the immediate

cause being the problem whether I may wear my usual dress when H.H inaugurates the Sammelan. These formal occasions are the devil particularly to one who has steered clear of them all his life.

No time for other gossip and you will not be interested in them either on the eve of your journey. So Bon Voyage. Conjure up a picture of me waving my hand at the aerodrome. But I suppose you will have more agreeable pictures occupying you. Bon Voyage once again, and affectionate greetings.

* * *

ಹೈದರಾಬಾದ್ ಪ್ರದೇಶ ಕನ್ನಡ ಸಾಹಿತ್ಯ ಪರಿಷತ್

ಹೈದರಾಬಾದ್, ೧೨-೫-೧೯೫೫

ತಾವು ಭಾಷಾಶಾಸ್ತ್ರದ ವ್ಯಾಸಂಗಕ್ಕಾಗಿ ಅಮೇರಿಕೆಗೆ ದಯಮಾಡಿಸುವಿರೆಂಬ ಸುದ್ದಿ ತಿಳಿದು ನಮ್ಮೆಲ್ಲರಿಗೆ ಪರಮಾನಂದವಾಗಿದೆ. ಇದಾಗಲೇ ಅಪರಿಮಿತವಾದ ಪಾಂಡಿತ್ಯದಿಂದಲೂ ಅನನ್ಯಸಾಧಾರಣವಾದ ಸದ್ಗುಣಗಳಿಂದಲೂ ಕನ್ನಡ ನಾಡು ನುಡಿಗಳಿಗೆ ಭೂಷಣಪ್ರಾಯರಾಗಿರುವ ತಮ್ಮ ಈ ವಿದೇಶ ಯಾತ್ರೆಯು ವಿಜಯ ಯಾತ್ರೆಯಾಗಿಯೇ ಪರಿಣಮಿಸುವುದೆಂಬುದರಲ್ಲಿ ಸಂದೇಹವಿಲ್ಲ. ತಮ್ಮ ಪ್ರಯಾಣ ಸುಖಕರವಾಗಿ ಜರುಗಿ ತಮ್ಮ ವಿದೇಶಾನುಭವವು ಕನ್ನಡದ ಮುನ್ನಡೆಗೆ ಸಹಾಯಕವಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ನರಸಿಂಗರಾವ್ ಮಾನ್ವಿ ಅಧ್ಯಕ್ಷ	ಸಿದ್ಧಯ್ಯ ಪುರಾಣಿಕ ಕಾರ್ಯದರ್ಶಿ

* * *

M.P.L. Sastry Bangalore, 13-6-55

Your kind letter,

I am extremely happy to hear that you have accepted the fellowship offered by the Rockefeller Foundation & have arranged to leave for U.S.A. Please accept my heartiest congratulations. The entire state and especially the academic men are proud of you; and you are sure to enhance the prestige of the university and the state, wherever you be.

May I sincerely wish you a very nice stay at the States & early happy return.

Please be writing to me to your welfare and other interesting things.

* * *

ಕುವೆಂಪು ಮೈಸೂರು, ೦೩-೦೫-೧೯೫೫

ಕನ್ನಡ ಸಾಹಿತ್ಯ ಚರಿತ್ರೆಗೆ ಒಂದು ಲೇಖನ ಬರೆದುಕೊಡಬೇಕೆಂದು ನನ್ನನ್ನು ಕೇಳಿರುವ ಪತ್ರ ತಲುಪಿದೆ. ೧೮೫೦ ರಿಂದ ೧೯೫೦ರವರೆಗೆ ಕನ್ನಡ ಸಾಹಿತ್ಯವನ್ನು ರೂಪಿಸಿದ 'ಭಾರತೀಯ ಹಿನ್ನೆಲೆ'ಯನ್ನು ಕುರಿತು ಬರೆಯಬೇಕೆಂದಿದೆ. ಅದನ್ನು ಬರೆದು ಕೊಡಲು ನನ್ನ ಒಪ್ಪಿಗೆ ಇದೆ.

ನಿಮಗೆ ರಾಕ್‌ಫೆಲ್ಲರ್ ಫೌಂಡೇಷನ್ ಫೆಲೋಷಿಪ್ ವೇತನ ದೊರೆತು ನೀವು ಅಮೇರಿಕಾಕ್ಕೆ ಹೋಗುತ್ತೀರಿ ಎನ್ನುವುದನ್ನು ಕೇಳಿ ತುಂಬಾ ಸಂತೋಷವಾಯಿತು. ನಿಮ್ಮ ಪಯಣ ಸುಖವಾಗಲಿ, ಜಯಶೀಲರಾಗಿ ಹಿಂತಿರುಗಿ ಬನ್ನಿ. ನಮಸ್ಕಾರ.

* * *

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬೆಂಗಳೂರು, ೧೦-೬-೧೯೫೫

ನಿಮ್ಮ ಪತ್ರ ಮುಟ್ಟಿದೆ. ನಿಮ್ಮ ಎಲ್ಲ ಮಾತಿನಿಂದಲೂ ನನಗೆ ತುಂಬ ಸಂತೋಷವಾಗಿದೆ.

ನಿಮಗೆ ಈ ಅಭ್ಯಾಸಿವೇತನ ದೊರೆತದ್ದು ಒಳ್ಳೆಯದಾಯಿತು. ಸುದ್ದಿಯನ್ನು ನಾನು ಪತ್ರಿಕೆಯಲ್ಲಿ ನೋಡಲಿಲ್ಲ. ಅಲ್ಲಿಗೇ ಹೋಗಿ ಕಲಿಯಬೇಕಾದ ವಿಷಯ ಏನಾದರೂ ಇದೆ ಎಂದಲ್ಲ. ಆದರೆ ಅಲ್ಲಿಯ ಹಿರಿಯರು ಬಹು ಹಿರಿಯದೊಂದು ಸಂಪ್ರದಾಯವನ್ನು ಬೆಳಸಿ ಕೊಂಡು ಬಂದಿದಾರೆ. ಅದರ ಮಹಿಮೆ ಹತ್ತಿರದಿಂದ ನಮ್ಮ ಜೀವನವನ್ನು ಮುಟ್ಟುವುದು ಬಹು ಒಳ್ಳಿತು. ನಿಮಗೆ ಇದಕ್ಕೆ ಒಂದು ಅವಕಾಶದೊರೆತಿದೆ. ಇದೇ ಸಂಭ್ರಮಕ್ಕೆ ಕಾರಣ.

ಮೇಲಾಗಿ ಇಂಥ ಹಿರಿಯರ ದರ್ಶನದಿಂದ ನಮಗೆ ಭಾರತೀಯ ವ್ಯಕ್ತಿತ್ವವನ್ನು ಬೆಳಸುವುದು ಎಷ್ಟು ಅಗತ್ಯವೆನ್ನುವುದೂ ಮನಮುಟ್ಟಬೇಕು. ನಮ್ಮಲ್ಲಿ ಹಿರಿಯರಾದವರೆಲ್ಲ ಇನ್ನೂ ಪಾಶ್ಚಾತ್ಯ ಪುಣ್ಯಪುರುಷರ ಹೆಸರುಗಳನ್ನು ಹೇಳುತ್ತಿದೇವೆ. ನಮ್ಮ ಹಿರಿಯರು ಹಿಂದೆ ಏನನ್ನಾದರೂ ಮಾಡಿದರು ಎಂಬುದೇ ನಮ್ಮಲ್ಲಿ ಮರೆತಿದೆ. ಸಾಹಿತ್ಯಮಿೂಮಾಂಸೆಯಲ್ಲಿ ಹೇಗೊ ಹಾಗೆ ಭಾಷಾಶಾಸ್ತ್ರದಲ್ಲೂ ಒಂದು ಕಾಲದಲ್ಲಿ ಕೆಲವು ಅಂಶಗಳಲ್ಲಾದರೂ ನಮ್ಮ ಜನ ತಕ್ಕಷ್ಟು ಮುಂದುವರಿದಿದ್ದಾರೆಂಬುದನ್ನು ನೀವು ನಮಗೆಲ್ಲ ತಿಳಿಸಿ ಕೊಡಬೇಕಾಗಿದೆ. ಆ ಕಾರ್ಯವನ್ನು ಸಾಧಿಸಲು ಈ ನಿಮ್ಮ ಹೊಸ ಅಭ್ಯಾಸದಿಂದ ನಿಮಗೆ ಅಧಿಕಾರ ಪ್ರಾಪ್ತವಾಗುತ್ತದೆ. ಈಗಲೂ ನಿಮಗೆ ಆ ಅಧಿಕಾರ ಇರಬಹುದು. ಆದರೆ ಅದನ್ನು ಜನ ಗುರುತಿಸಲಾರರು. ಹೊರಗೂ ಅಭ್ಯಾಸ ಮಾಡಿ ಹಿಂದಿರುಗಿ ಬಂದರೆ ಆಗ ಅದನ್ನು ನಮ್ಮಲ್ಲಿ ಎಲ್ಲರೂ ಒಪ್ಪುವರು.

ಸ್ವಂತದ ದೃಷ್ಟಿಯಿಂದಲೂ ಇದು ನಿಮಗೆ ಮುಂದೆ ಹೆಚ್ಚಿನ ಸ್ಥಾನಮಾನಗಳನ್ನು ಸಂಬಳ ಸಾರ್ಕೆಗಳನ್ನು ತಂದೀತೆಂದು ನನಗೆ ಆಸೆ. ನೀವು ಇದನ್ನು ಬಹಳವಾಗಿ ಬಯಸದಿರಬಹುದು. ನನಗೆ ನಿಮ್ಮೆಲ್ಲರ ಪರವಾಗಿ ಈ ಆಸೆ ಬಹಳ. ಅದು ಸಂದರೆ ನನಗೆ ಬಹು ತೃಪ್ತಿ.

ಹೋಗಿಬನ್ನಿರಿ, ಗೆದ್ದು ಬನ್ನಿರಿ, ಕೀರ್ತಿ ತನ್ನಿರಿ. ಸುಖವಾಗಿ ಹಿಂದಿರುಗಿ ಬಂದು ನೂರು ಕಾಲ ನಾಡುನುಡಿಗಳ ಸೇವೆಯನ್ನು ಸಲ್ಲಿಸಿರಿ.

ಇಲ್ಲಿ ಎಲ್ಲ ಕ್ಷೇಮ, ನಿಮ್ಮ ಸೌಭಾಗ್ಯವತಿಯವರು ಚಿರಂಜೀವಿಗಳು ಎಲ್ಲ ಸುಖವಾಗಿದೀರಿ ಎಂದು ತಿಳಿದಿದ್ದೇನೆ.

ಹೊರದೇಶದಿಂದಲೂ ಸಾಧ್ಯವಾದರೆ ಕೆಲವೊಮ್ಮೆ ಕ್ಷೇಮಸಮಾಚಾರ ತಿಳಿಸಿರಿ.

* * *

ಎಂ. ಗೋವಿಂದ ಪೈ ಮಂಜೇಶ್ವರ, ೧೧-೬-೧೯೫೫

ತಮ್ಮ ೯ನೆಯ ತಾರೀಕಿನ ಪತ್ರ ಇವತ್ತು ಕೈ ಸೇರಿತು. ತುಂಬ ಧನ್ಯವಾದಗಳು ಹೊರಗಡೆ ತಮ್ಮ ಹೆಸರನ್ನು ನೋಡುತ್ತಲೆ ಒಳಗಡೆ ಏನೋ ನಮ್ಮೊಳಗಣ ಯಾವಂದಿನ ಹರದಿನ ಮಾತುಕಥೆ (talking shop) ಇರಬಹುದು ನೋಡೋಣ ಎಂದು ಕುತೂಹಲದಿಂದ ಅದನ್ನು ತೆರೆದೆ. ಆದರೆ ಅದಲ್ಲ, ಅದಕ್ಕಿಂತ ಮೇಲಾದ ಕಥೆ. ಅದನ್ನು ಓದುತ್ತಲೇ, ತಾವು ಸಮುದ್ರದಾಚೆ ಪಯಣಿಸುತ್ತೀರಿ ಎಂಬುದನ್ನು ಅಷ್ಟು ಪ್ರೀತಿಯಿಂದ ನನಗೂ ತಿಳುಹಿಸಿರುವಿರಲ್ಲ! ಎಂಬ ಸಂತೋಷದಿಂದ ಕಣ್ಣು ನೆನೆಯಿತು.....

'ಕನ್ನಡ ನುಡಿ' ಯ ಕಳೆದ ತಿಂಗಳ ಸಂಚಿಕೆಯಲ್ಲಿ ಕಂಡಿದ್ದೆ. ತಮಗೆ ಅಮೇರಿಕದಿಂದ ಒಂದು 'ಫೆಲೋಶಿಪ್' ಬಂದಿದೆ ಎಂದು. ಅದರಲ್ಲಿಯ ಬರವಣಿಗೆಯಿಂದಲೋ ಅಥವಾ ಮನಸ್ಸಿನ ತಾತ್ಕಾಲಿಕ ಜಾಡ್ಯದಿಂದಲೊ ನಾನು ಗ್ರಹಿಸಿದೆ, ತಾವು ಆಗಲೇ ಅಮೆರಿಕಕ್ಕೆ ಹೊರಟು ಹೋಗಿರುತ್ತೀರಿ ಎಂದು. ಆ ಕಾರಣ ತಾನೆ ನಾನಾಗಿ ತಮಗೆ ಸುಖಪ್ರಯಾಣವನ್ನೂ ಸುಖಾಗಮನವನ್ನೂ ಬಯಸಿ ಬರೆಯಬೇಕೆಂದಿದ್ದ ಸುಸಂಧಿ ಕಳೆದು ಹೋಯಿತೆಂದು ಮನನೊಂದೆ.......

ಹೋಗಿ ಶ್ರೀಕಂಠಯ್ಯ, ಹೋಗಿ ಬನ್ನಿ! ತಮ್ಮ ಹೋಹ ಬಾಹ ಪ್ರಯಾಣಗಳಲ್ಲೂ ತಮ್ಮ ಅಮೇರಿಕದ ಪ್ರವಾಸದಲ್ಲೂ, ತಮ್ಮಲ್ಲಿಯ ವಿದ್ಯಾಭ್ಯಾಸದಲ್ಲೂ ಶ್ರೀದೇವರು ತಮ್ಮ ಜತೆಯಲ್ಲಿದ್ದು ಅವನ್ನು ತನು ಸುಖಕರವೂ ಹಿತಕರವೂ ಆಗಿಸಲಿ! ತಮ್ಮ ಕೂದಲು ಬಾಡದಂತೆ ಆತನು ಕಾಯಲಿ! ಅಲ್ಲಿಯ ವಿದ್ಯಾಭ್ಯಾಸದಲ್ಲಿ ತಮಗೆ ತುಂಬ ಕೀರ್ತಿಯನ್ನು ಆತನು ದೊರಕೊಳಿಸಲಿ! ಆ ವ್ಯಾಸಂಗ ಮುಗಿವುದೆ ತಮ್ಮನ್ನಾತನು ನಮ್ಮ ದೇಶಕ್ಕೆ ತಮ್ಮ ಊರಿಗೆ ತಮ್ಮ ಮನೆಗೆ ತಮ್ಮ ಕುಟುಂಬದ ಬಳಿಗೆ ಮರಳಿ ಬರಮಾಡಿಸಿಕೊಳ್ಳಲಿ! ಮತ್ತೆ ಇಲ್ಲಿ ತಮಗೆ ಉತ್ತರೋತ್ತರ ಅಭಿವೃದ್ಧಿ ಮಾಡಿ ತಮಗೂ ತಮ್ಮವರಿಗೂ ದೀರ್ಘಾಯುರಾರೋಗ್ಯಾದಿ ಸಮಸ್ತ ಸೌಭಾಗ್ಯವಿತ್ತು ಸದಾ ಕಾಪಾಡುತ್ತಿರಲಿ! ಎಂದು ಆತನಲ್ಲಿ ಪ್ರಾರ್ಥಿಸುತ್ತೇನೆ. ಇದೇ ಆತನ ಹೆಸರಿನಲ್ಲಿ ನನ್ನ ಅತ್ಯಂತ ಅಕ್ಕರೆಯ ಹರಕೆ.

"ಪಶ್ಚಿಮಾಯನ"

●

ಟಿಪ್ಪಣಿಗಳು

'ಸಂಚಿಂತ್ಯಮಾನಾನಿ ಸುಖಾನಿ'

ಜೂನ್ ೨೯, ೫೫

ಹೊಸದಾಗಿ ಅಡಿಗೆಯ ಅಭ್ಯಾಸ; ಇಷ್ಟೊಂದು ಸಲಕರಣೆ ಇದ್ದರೆ, "ಸಿದ್ಧ", ಪೂರ್ವಪಕ್ವ ಪದಾರ್ಥಗಳು ಹೀಗೆ ದೊರೆತರೆ – ಅಡಿಗೆ ಮಾಡುವುದು ಅಷ್ಟೇನೂ ಕಷ್ಟವಲ್ಲ. ಆದರೆ ಪಾತ್ರೆ ತೊಳೆಯುವುದು ಮಾತ್ರ ಬೇಸರದ ಕೆಲಸ. ಮನೆಯಲ್ಲಿ ಕುಡಿದ ಪಾತ್ರೆಯನ್ನೂ ಎತ್ತಿ ಆಕಡೆ ಇಡದ ನಾನು ಇಲ್ಲಿ ಹೀಗೆ ಕಸಮುಸುರೆ ಮಾಡಿಕೊಂಡು ಓದುತ್ತಿರುವುದು ವಿಚಿತ್ರ. "ದೈವೀ ವಿಚಿತ್ರಾಗತಿಃ" ಇದು "ಕರ್ಮಪರಿಪಾಕ"ವೇ ಸರಿ. ಆದರೆ ಹೊಸ ಅನುಭವ ಬೇಡ ಎನ್ನಿಸಿಲ್ಲ.

ಅಮೆರಿಕದಲ್ಲಿ ಶಾಕಾಹಾರಿಯಾಗಿರುವುದು ಸಾಧ್ಯ. ಆದರೆ "ಸ್ಪರ್ಶದೋಷೋ ನ ವಿದ್ಯತೇ" ಎಂಬ ಸೂತ್ರವನ್ನು ಮಾತ್ರ ಅವಲಂಬಿಸಬೇಕು. ಬಾಣಂತಿತನ ಮುಗಿಯುವ ವೇಳೆಗೆ ತಾಯ ಹೊಟ್ಟೆಗೆ ಒಂದು ನಿಂಬೆಕಾಯ ಗಾತ್ರದಷ್ಟಾದರೂ ಮಗುವಿನ ಅಮೇಧ್ಯ ಸೇರಿರುತ್ತದೆ ಎನ್ನುತ್ತಾರೆ. ಅದರಂತೆಯೇ ನನ್ನ ಹೊಟ್ಟೆಗೂ "ಮಾಂಸಾಹಾರ" ಈ ಒಂಬತ್ತು ಹತ್ತು ತಿಂಗಳವಾಸದಲ್ಲಿ ಒಂದು ನಿಂಬೆಕಾಯಷ್ಟಾದರೂ ಸೇರಿರುತ್ತದೆ.

ಇಷ್ಟೆಲ್ಲ ಸೌಕರ್ಯ ಇಲ್ಲಿದ್ದರೂ, ಬಟ್ಟೆ ಒಗೆಯಲು ಅನುಕೂಲತೆ ಅಗಾಧವಾಗಿದ್ದರೂ, ಅದನ್ನು ಇಸ್ತ್ರಿಮಾಡಲು ಸೌಲಭ್ಯವಿಲ್ಲದಿರುವುದು ಆಶ್ಚರ್ಯ.

* * *

ಜೂನ್ ೩೦

Iced Tea at the International Centre

ಇದೇ ಮೊದಲಬಾರಿ ಇಂಥ ಟೀಯನ್ನು ನಾನು ಕುಡಿದದ್ದು. ಮೊದಲು ಬಣ್ಣದ ನೀರಿನಂತೆ ತೋರಿತು, ಯಾವ ರುಚಿಯೂ ಇರಲಿಲ್ಲ. ಸಕ್ಕರೆ, ನಿಂಬೆಹುಳಿ – ಸೇರಿಸಿದರೆ ಸಹನೀಯ (tolerable) ಆಗುತ್ತದೆ.

'ರಮೇಶ್' ಎಂಬ ಕಾಶ್ಮೀರಿ ತರುಣ ಸಂಜೆ ಸಿಕ್ಕಿದ್ದ. ಅವನ ಮೂಲಸ್ಥಳ ಪಂಜಾಬ್. ಆತ ಶಾಕಾಹಾರಿ. Dormitaryಯಲ್ಲಿ ಊಟದ ತೊಂದರೆ-ಶಾಕಾಹಾರಿಗಳಿಗೆ-ಎಂಥದೆಂದು ಆತ ವರ್ಣಿಸಿದ. ನಾನು ಅಲ್ಲಿಗೆ ಹೋಗದೆ ಇದ್ದದ್ದು ಒಳ್ಳೆಯದಾಯಿತು. ಆದರೆ ಈ ಅಡಿಗೆ-ಅದಕ್ಕಿಂತ ಪಾತ್ರೆ ತೊಳೆಯುವ ತೊಂದರೆ!.... ಹುಳಿಯನ್ನು ಮಾಡುವುದನ್ನಾದರೂ ಕೃಷ್ಣಮೂರ್ತಿಯಿಂದ ಕಲಿತುಕೊಳ್ಳಬೇಕು.

ರಾತ್ರಿ Hoijer ಉಪನ್ಯಾಸ: ಬಳಿಕ Cohen ನಾನು ಇಬ್ಬರೂ Sweetಅನ್ನು ಸಂದರ್ಶಿಸಿದೆವು. Sweet ಒಳ್ಳೆಯ ಮನುಷ್ಯ. ನೋಡಿದಾಗ ಗೊತ್ತಾಗದಿದ್ದರೂ ವಾಚಾಳಿ. ಆತನ ಜೊತೆಗೆ ಮಾತಾಡಲು Beer house ಗೆ (ಇದು ಅದರ ಹೆಸರಲ್ಲ; ಆದರೆ ಅಲ್ಲಿ ಅನೇಕರು ರಾತ್ರಿ ಹೊತ್ತು ಸೇರಲು Beer ಕುಡಿಯುವುದ್ಕಾಗಿ) ಹೋದೆವು. ಅಲ್ಲಿ ನಾನು ಧೈರ್ಯಮಾಡಿ beer ಕುಡಿಯುವುದಿಲ್ಲ ಎಂದು ಹೇಳಿದೆ ಸೋಡ ತರಿಸಿ ಕೊಟ್ಟರು (Seven up!). ಈ ಧೈರ್ಯ ಒಳ್ಳೆಯದೆಂದು ನನಗೆ ಅನ್ನಿಸುತ್ತದೆ. ಅವರೆಲ್ಲರೂ ಮತ್ತೆ ಮತ್ತೆ ದೊಡ್ಡ ಹೂಜಿಯಿಂದ ಬಗ್ಗಿಸಿಕೊಂಡು ಕುಡಿಯುತ್ತಿದ್ದರೂ ನನಗೇನೂ ಕುಡಿಯಬೇಕು ಅನ್ನಿಸಲಿಲ್ಲ.

ಮಾತನ್ನೆಲ್ಲ ಆ ಮೇಜಿನ ಬಳಿ ಮೊದಲೇ ಕುಳಿತಿದ್ದ ಜರ್ಮನ್ ಉಪಾಧ್ಯಾಯ-Marchand?- ಆಕ್ರಮಿಸಿದ. I could't get in a word edgeways. Sweet ಕೂಡ ನಮ್ಮನ್ನು ಮರೆತಂತೆ ತೋರಿತು. ಹನ್ನೊಂದೂವರೆಯಾದರೂ ಯಾರೂ ಏಳುವಂತೆ ಕಾಣಲಿಲ್ಲ. Cohenಗೆ ಮನೆಯಲ್ಲಿ ಹೆಂಡತಿಯ ಭಯ ತಕ್ಕಮಟ್ಟಿಗೆ ಇರುವಂತೆ ತೋರುತ್ತದೆ! ಆದರೆ ಆತ ಎಲ್ಲರ ಬಳಿಯೂ ಬಹು ವಿನೀತ (polite). ಕಡೆಗೆ ಧೈರ್ಯಮಾಡಿ ಎದ್ದ. ತಕ್ಕಡಿಯಲ್ಲಿ ಹೆಂಡತಿಯ ನೆನಪು ಆಗ ಹೆಚ್ಚಾಗಿ ತೂಗಿರಬೇಕು!

ಅಮೇರಿಕ, ಯೂರೋಪ್, ಇಂಗ್ಲೆಂಡ್-ಇಲ್ಲಿಯ ವಿದ್ಯಾಭ್ಯಾಸಕ್ರಮದ ವಿವೇಚನೆ ಕೆಲವು ಮಟ್ಟಿಗೆ ಅಲ್ಲಿ ನಡೆಯಿತು. ಅಮೇರಿಕದಲ್ಲಿ ವಿದ್ಯಾರ್ಥಿಯ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಓದು ಎನ್ನುತ್ತಾರೆ, ಓದಿಸುತ್ತಾರೆ, ಅಭ್ಯಾಸಗಳನ್ನು ಕೊಡುತ್ತಾರೆ. ಕೊನೆಗೆ ತೇರ್ಗಡೆ ಹೊಂದುವುದು ಖಂಡಿತ.

ಯುರೋಪಿನ continental ಭಾಗದಲ್ಲಿ ವಿದ್ಯಾರ್ಥಿಯನ್ನು ಬಲುಮಟ್ಟಿಗೆ ಅವರವರ ಸ್ವತಂತ್ರಕ್ಕೇ ಬಿಡುತ್ತಾರಂತೆ. ಅನೇಕವೇಳೆ ಪ್ರೊಫೆಸರ್ ತನ್ನ ಟಿಪ್ಪಣಿಯನ್ನು ಅಥವಾ ಪುಸ್ತಕಗಳನ್ನು ತಂದು ವಿದ್ಯಾರ್ಥಿಗಳ ಮುಂದೆ ಪಾಠ ಒಪ್ಪಿಸಿ ಹೊರಟು ಹೋಗುತ್ತಾನಂತೆ.-ಆದರೆ ಶಕ್ತನಾದ ವಿದ್ಯಾರ್ಥಿಗೆ ತನ್ನ ದಾರಿಯನ್ನು ಕಂಡುಕೊಳ್ಳಲು ಸ್ವಾವಲಂಬಿಯಾಗಲು ಹೆಚ್ಚು ಅವಕಾಶವಿರುತ್ತದೆ.

ಹಾಲೆಂಡಿನ ಪರೀಕ್ಷಾ ಪದ್ಧತಿ ಯೂನಿವರ್ಸಿಟಿಯಲ್ಲಿ ವಿದ್ಯಾರ್ಥಿ ಓದಿಕೊಂಡು ನಾನು ಸಿದ್ಧನಾಗಿದ್ದೇನೆ ಎಂದು ಉಪಾಧ್ಯಾಯರಿಗೆ ತಿಳಿಸಬೇಕು. ಆಗ ವಾಚಾಪರೀಕ್ಷೆ. ಪ್ರಶ್ನೆಪತ್ರಿಕೆಗಳು ಬಲುಮಟ್ಟಿಗೆ ಇಲ್ಲವೇ ಇಲ್ಲವಂತೆ!

* * *

ಜುಲೈ ೧, ೫೫

ಇಲ್ಲಿಯೂ ಸೆಕೆ ಜೋರಾಗಿಯೇ ಇದೆ! ಈದಿನ ಕೋಟು, ಟೈ ಎರಡನ್ನೂ ಬದಿಗಿಟ್ಟು ಬುಷ್‌ಷರ್ಟ್ ಮಾತ್ರ ಹಾಕಿಕೊಂಡು ಪಾಠಕ್ಕೆ ಹೋಗುವ ಸಾಹಸ ಮಾಡಿದ್ದೇನೆ. ಹೇಗೆ ಬಟ್ಟೆ ಹಾಕಿಕೊಂಡರೂ ವಿದ್ಯಾರ್ಥಿವರ್ಗದಲ್ಲಿ ನಡೆಯುತ್ತದೆ. ಉಪಾಧ್ಯಾಯರು ಮಾತ್ರ ಕೋಟ್ ಹಾಕಿಕೊಂಡೇ ಬರುತ್ತಾರೆ. ಕನಿಷ್ಠ ಪಕ್ಷ, ತರಗತಿಯಲ್ಲಿ ಅದನ್ನು ಬಿಚ್ಚಿಡುತ್ತಾರೆ.

ಇಲ್ಲಿಯ ಬಣ್ಣಬಣ್ಣದ ಚಿತ್ರವಿಚಿತ್ರದ ಬುಷ್‌ಷರ್ಟ್‌ಗಳೋ!

ಹೆಂಗಸರು ಉಡುಪಿನಲ್ಲಂತೂ ಪರಮ ವೈವಿಧ್ಯ. ಕೊರಳುಮುಚ್ಚುವಂತೆ ತೊಡುವವರು ಕೆಲವರು, ಬೆನ್ನಿನ ಬಹುಭಾಗ, ಎದೆಯಲ್ಲಿ ಸ್ತನಪ್ರದೇಶ ಸ್ವಲ್ಪ ಇಣುಕಿನೋಡುವಷ್ಟು ಮೇಲ್ಭಾಗ ಇಷ್ಟನ್ನೂ ತೆರೆದಿಡುವಂತೆ 'ಕುಪ್ಪಸ' ಅಥವಾ ಗೌನ್ ಧರಿಸುವವರು ಕೆಲವರು. ಲಂಗ ಹಾಕುವವರು ಕೆಲವರು, ಅರೆಮೊಳಕಾಲುದ್ದದ ಷರಾಯಿ ಹಾಕುವವರು ಕೆಲವರು, ಬರಿಯ ಚಡ್ಡಿ (ಅರ್ಧೋರುಕ ಕೂಡ ಅಲ್ಲ, ಪಾದೋರುಕ ಎನ್ನಬಹುದೋ ಏನೊ) ಹಾಕುವವರು ಮತ್ತೆ ಕೆಲವರು. ಹುಡುಗಿಯರಿಗೆ ಈ ಅಧಿಕಾರ ಉಂಟಂತೆ. ನಮ್ಮ ತರಗತಿಯಲ್ಲಿ ಯಾರೂ ಚಡ್ಡಿ ಹಾಕಿಕೊಂಡು ಬರುತ್ತಿಲ್ಲ.

* * *

ಜುಲೈ ೭

ಈ ಪುಸ್ತಕವನ್ನು ಕೈಯಲ್ಲಿ ಹಿಡಿದು ಈಗಾಗಲೆ ಐದಾರು ದಿನವಾಯಿತು. ಹೀಗಾದರೆ, ಟಿಪ್ಪಣಿಗಳನ್ನು ಸಂಗ್ರಹಿಸಿದ ಹಾಗೆಯೇ!

ನಿನ್ನೆ ಊರಿನ ಮೊದಲ ಕಾಗದ ಕೈಗೆ ಸೇರಿತು. ಎಷ್ಟೊಂದು ಸಂತೋಷವಾಯಿತು. ಕಳೆದ ಮೂರುನಾಲ್ಕು ದಿನಗಳನ್ನು ಅದರ ನಿರೀಕ್ಷೆಯಲ್ಲೇ ಕಳೆದಿದ್ದೆ. ಇಷ್ಟು ಬೇಗ ಉತ್ತರ ಬರಲಾರದೆಂದು ತಿಳಿದಿದ್ದರೂ ಮನಸ್ಸು ಅತ್ತ ಕಡೆಗೇ ಎಳೆಯುತ್ತಿತ್ತು. ಅಂತೂ ಕಾಗದ ಬಂತು. ಎರಡು ಮೂರುಬಾರಿ ಓದಿದೆ. Michigan Leagueನಲ್ಲಿ 'ಲಂಚ್' ವೇಳೆಯಲ್ಲಿ ಕೈಗೆ ಬಂತು, ಆಗಲೇ ಅಲ್ಲಿಯೇ ಓದಿದ್ದಲ್ಲದೆ ಕಂಡ ಒಬ್ಬಿಬ್ಬರಿಗೆ ಕೂಡ ಇದು ನಮ್ಮ ಮನೆಯಿಂದ ಬಂದ ಕಾಗದವೆಂದು ಹೇಳಿಕೊಂಡೆ! ಸ್ವಕೀಯಾಭಿಮಾನ ಹೀಗೆ ತಾನೆ. (ಅವರು ಏನು ತಿಳಿದುಕೊಂಡರೋ, ಆದರೆ ಪ್ರವಾಸಿಯ ಮನಸ್ಸನ್ನು ಅರ್ಥಮಾಡಿಕೊಂಡಿರಬೇಕೆಂದು ಊಹಿಸುತ್ತೇನೆ.)

ಈ ಸಂಜೆ Prof Kaplan ಭಾಷಣ ಮಾಡಿದರು: 'A Philosohper looks at the Whorf Thesis. It was a brilliant, scintillating performance. ಕ್ಯಾಪ್ಲನ್ ಹೊಸದಾಗಿ ಗಡ್ಡ ಬೆಳೆಸುತ್ತಿದ್ದಾನೆ. ತೆಳ್ಳನೆಯ ಮನಷ್ಯ. ಸ್ವಭಾವತಃ ಹಿಂಜರಿಕೆಯ (retiring) ಮನುಷ್ಯ. ಆದರೆ ಭಾಷಣದ ಕಾಲದಲ್ಲಿ ಆತನಿಗೆ ಒಳ್ಳೆಯ ಆವೇಶ ಬಂದಿತ್ತು. ಉತ್ಕೃಷ್ಟವಾದ

ಉಪನ್ಯಾಸ. A healthy European breeze blew over the cobwebs of the closed American Hall. Aristotle, Kant-ಈ ಮೊದಲಾದವರ ನಾಮೋಚ್ಚಾರಣೆಯಿಂದ ಅಮೆರಿಕನರ ಆತ್ಮಸಂತೃಪ್ತಿ (self-satisfaction) ಸ್ವಲ್ಪಮಟ್ಟಿಗಾದರೂ ಉಚ್ಚಾಲನೆಯಾಗಿರಬೇಕು. And he was very fair to Whorf's position, I believe.

He examined the thesis from the logical, the scientific, the metaphysicial and anthropological points of view.

I wish someone had taken down the entire lecture in shorthand. It was such a pleasure to hear Kaplan managing with nonchalant ease his complicated sentences.

ಈ ಯೂರೋಪಿಯ ಉಡುಪಿನಲ್ಲಿ ನನ್ನ ಗುರುತು ನನಗೇ ಎಷ್ಟೋ ಸಲ ಸಿಕ್ಕುವುದಿಲ್ಲ. Mason Hallನ–ಇನ್ನೂ ಬೇರೆಕಡೆಯ–ಬಾಗಿಲುಗಳ ಗಾಜಿನಲ್ಲಿ ನನ್ನ ಛಾಯೆಯನ್ನು ಕಂಡಾಗ ಹೊರಗಿನವರನ್ನು ನೋಡಿದಂತೆ ಒಮ್ಮೊಮ್ಮೆ ಭಾಸವಾಗುತ್ತದೆ. I think I look less stout & a little less stooping in this dress.

ಇಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು: ಎಲ್ಲ ವಯಸ್ಸಿನವರೂ ಇದ್ದಾರೆ. ಕೆಲಸದಿಂದ ನಿವೃತ್ತರಾದವರು ಹುಡುಗರಂತೆ ಉತ್ಸಾಹದಿಂದ credit ಗಾಗಿ ಓದುತ್ತಾರೆ; ಅಭ್ಯಾಸಗಳನ್ನು ಮಾಡಿಕೊಂಡು ಬರುತ್ತಾರೆ. ಗಂಡಸರ ಸಂಖ್ಯೆಯೇ ಹೆಂಗಸರದಕ್ಕಿಂತ ಸ್ವಲ್ಪ ಹೆಚ್ಚು. ಇಬ್ಬರೂ ಯಾವ ಸಂಕೋಚವೂ ಇಲ್ಲದೆ ತರಗತಿಯಲ್ಲೇ ಸಿಗರೇಟ್ ಹಚ್ಚಿ ಸೇದುತ್ತಿರುತ್ತಾರೆ, 'No Smoking' ಎಂದು ಬರೆದಿರುವ ಕೊಠಡಿಯಲ್ಲಿ ಕೂಡ.

ಇಲ್ಲಿಯ ಯಂತ್ರಗಳು. Adding machine ಇಲ್ಲದ ಅಂಗಡಿಯನ್ನೇ ಇನ್ನೂ ನೋಡಲಿಲ್ಲ. ಕೆಲವು ದೊಡ್ಡ ಅಂಗಡಿಗಳಲ್ಲಿ ಮೂರುನಾಲ್ಕು ಇರುತ್ತವೆ. ಮದರಾಸಿನಲ್ಲೂ ಇವು ಬಂದಿವೆಯಂತೆ.

House-moving Company ಯವರು ಒಂದು ಮನೆಯನ್ನು ಅದರ ತಳಹದಿಯಿಂದ ಬೇರ್ಪಡಿಸಿ ಬೇರೆ ಕಡೆಗೆ ಸಾಗಿಸುವುದು ಪಕ್ಕದ ರಸ್ತೆಯೊಂದರಲ್ಲಿ ನಡೆಯುತ್ತಿದೆ. ಆದರೆ ಮನೆಯನ್ನು ಕಟ್ಟಿರುವುದು ಬಲುಮಟ್ಟಿಗೆ ಮರದಿಂದ. ಚೌಕಟ್ಟು ಮಾತ್ರ ಉಕ್ಕಿನದೆಂದು ತೋರುತ್ತದೆ.

* * *

ಜುಲೈ ೮

ನಿನ್ನೆಯ ಸಂಜೆ Cohen ದಂಪತಿಗಳ ಮನೆಗೆ ಊಟಕ್ಕೆ ಹೋಗಿದ್ದಾಗ 'ನಡುವೆ'ಯಲ್ಲಿ ಮೇಜಿನ ಮೇಲೆ ಎರಡು 'ಕಾಗದ'ಗಳನ್ನು ನೋಡಿದೆನು; ಇಳಿಹೊತ್ತಾದರೂ ಇವನ್ನು ಮಾಲೀಕರು ತೆಗೆದುಕೊಂಡೇ ಇಲ್ಲವಲ್ಲ ಎನ್ನಿಸಿತು. ಊಟ ಮುಗಿಸಿಕೊಂಡು ಹಿಂದಿರುಗುವಾಗಲೂ ಅವು

ಅಲ್ಲಿಯೇ ಇದ್ದುವು. ಇಷ್ಟೊಂದು ತಾತ್ಸಾರವೇ? ಅಯ್ಯೋ ಎನ್ನಿಸಿತು. 'ಕಾಗದ'ಗಳನ್ನು ಕುರಿತು ಪ್ರವಾಸಿಯಾದ ನನಗಿರುವ ತವಕದಲ್ಲಿ ನಾನೇ ಎತ್ತಿಕೊಳ್ಳಲೇ ಎನ್ನಿಸಿತು!

ಅಮೆರಿಕದ ಡಾಲರ್‌ಬಿಲ್‌ಗಳು ಇನ್ನಷ್ಟು ಶುಭ್ರವಾಗಿದ್ದರೆ, ಇಲ್ಲಿಯ ನಾಣ್ಯಗಳು ಇನ್ನಷ್ಟು ಹೊಳಪಾಗಿ, ಹೊಸವಾಗಿ ಅಕ್ಷರಗಳು ಎದ್ದುಕಾಣಿಸುವಂತಿದ್ದರೆ–ಎಂದರೆ ಬಿಲ್‌ಗಳು ಇಷ್ಟು ಮಾಸಲಾಗದೆ, ನಾಣ್ಯಗಳು ಇಷ್ಟು ಸವಕಲಾಗದೆ ಇದ್ದಿದ್ದರೆ ಚೆನ್ನಾಗಿತ್ತು.

* * *

ಜುಲೈ ೧೭

ನನ್ನ ಜನಿವಾರದ ಎಳೆಗಳು ಕಿತ್ತುಹೋಗಿ ಕೆಲವು ವಾರವಾಗಿತ್ತು. ಜೊತೆಗೆ ಇನ್ನೊಂದು ಹೊಸಜೊತೆಯನ್ನು ಮಾತ್ರ ತಂದಿದ್ದೆ. ಆದಷ್ಟು ದಿನ ಹಳೆಯದನ್ನೇ ಕೊರಳಿಗೆ ತಗುಲು ಹಾಕಿ ಕೊಂಡಿರಬೇಕೆನ್ನಿಸಿತು; ಹಾಗೆಯೇ ಮಾಡಿದೆ. ಕಡೆಗೆ ಒಂದು ದಿನ ಬೇಸರವಾಗಿ ಹಳೆಯದನ್ನು ಕಿತ್ತುಹಾಕಿದೆ. ಹೊಸದನ್ನು ಉಪಾಕರ್ಮದ ದಿನ (ಶ್ರಾವಣ ಶು ॥೧೪, ೧೫?) ಧರಿಸೋಣವೆಂದು ಪೆಟ್ಟಿಗೆಯಲ್ಲೇ ಇಟ್ಟಿದ್ದೇನೆ. ಈಗ ಬರಿಯ ಕೊರಳಿನಲ್ಲಿರುವುದು ಇನ್ನೂ ಹೇಗೆ ಹೇಗೋ ಅನ್ನಿಸುತ್ತಿದೆ, ಮೈಮೇಲಿನ ಷರಟನ್ನು ಬಿಚ್ಚಿಹಾಕಿದಾಗ, ಪೂರ್ತಿ ಬೆತ್ತಲೆ ನಿಂತಂತೆ ಭಾಸವಾಗುತ್ತದೆ. ಗಾಂಧೀಜಿಯ ನಿರ್ಧಾರ ನನಗೆ ಬರಲಿಲ್ಲ; ಹೇಗೆ ತಾನೆ ಸಾಧ್ಯ! ಜನಿವಾರದ ವಿಷಯದಲ್ಲಿ ಅದು ಬರಲೂಬೇಡ.

* * *

ಜುಲೈ ೨೧

ನಿನ್ನೆ Linguistic Lunch ಸಮಯದಲ್ಲಿ ನನ್ನ ಉಪನ್ಯಾಸವಿತ್ತು; "Meaning in Poetry-An Indian view".

It was well received, I hope the expressions of appreciation were genuine & not actuated by mere politeness.

Dr Marchand, the insufferable "German" Professor ಬಂದಿರಲಿಲ್ಲ. ಪ್ರತಿಯೊಂದು ಉಪನ್ಯಾಸಕ್ಕೂ ಆತ ಬರುತ್ತಾನೆ. ಉಪನ್ಯಾಸ ಮುಗಿಯುತ್ತಿದ್ದ ಹಾಗೆಯೇ–ಇನ್ನೂ ಮುಗಿಯುತ್ತಿರುವಾಗಲೇ–ಪ್ರಶ್ನೆಗಳನ್ನು ಕೇಳುತ್ತಾನೆ. ಪ್ರಶ್ನೆ ಕೇಳುವುದಕ್ಕೇ ಬರುತ್ತಾನೆಯೋ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. Cohen ನಾನು ಇಬ್ಬರೂ ಇದನ್ನು ಹಲವು ಬಾರಿ ಗಮನಿಸಿದ್ದೇವೆ. ನಿನ್ನೆ ಮಧ್ಯಾಹ್ನ ಆತ ಬಂದಿರಲಿಲ್ಲ. ನನಗೆ ಸ್ವಲ್ಪ ಆಶ್ಚರ್ಯವೂ ಆಯಿತು. ಈ ಭಾರತೀಯನನ್ನು ಏನು ಗಮನಕ್ಕೆ ತಂದುಕೊಳ್ಳುವುದು ಎಂಬ ತಾತ್ಸಾರದಿಂದ ಬಂದಿರಲಾರ ಎಂದುಕೊಂಡೆ. ಆದರೆ Cohen ಹೇಳಿದ "He had no questions to ask; that is why he did not come"!

* * *

ಜುಲೈ ೨೩

Let me put this on paper before I forget again. Prof. Moulton quoted these at the close of my talk on july 21 wherein I had mentioned when a lady says no she may mean yes.

"If a lady says 'no' she means 'may be'; if a lady says 'may be' she means 'yes'; if a lady says 'yes' she is no lady."

(Cp. also If a diplomat says 'yes' he means 'may be'; If a diplomat says 'may be' he means 'no'; If a diplomant says 'no' he is no diplomat.

* * *

ಆಗಸ್ಟ್ ೨೦

ಬರ್ಕ್ಲಿ ನಗರದ ಸೌಂದರ್ಯವನ್ನು ಯಾರಾದರೂ ವರ್ಣಿಸಬಾರದೆ?

I have fallen in love with it. ಬೆಟ್ಟಸಾಲಿಗೆ ಹತ್ತಿಕೊಂಡಿದೆ ಊರು. ಬೆಟ್ಟದಲ್ಲಿಯೇ ದಾರಿಗಳನ್ನು ಮಾಡಿದ್ದಾರೆ, ಮನೆ ಕಟ್ಟಿದ್ದಾರೆ. ಏರಿ, ಬಳಸಿ, ಹರಿದು ಹೋಗುವ ರಸ್ತೆಗಳಲ್ಲಿ ಕಾರಿನಲ್ಲಿ ಕುಳಿತು ಹೋಗುವುದು ಬಲು ಸೊಗಸು. ಎರಡು ಮೂರು ಕಡೆಗೆ ಬೆಟ್ಟದ ಪಂಕ್ತಿ, ಪಂಕ್ತಿ. ಮನೆಗಳು ಒಂದು ಮನೆಯಂತೆ ಇನ್ನೊಂದು ಇಲ್ಲ. ತಮ್ಮ ತಮ್ಮ ಇಚ್ಚೆಗೆ ಅನುಕೂಲಕ್ಕೆ ತಕ್ಕಂತೆ ಕಟ್ಟಿಕೊಂಡಿದ್ದಾರೆ ಎನ್ನುತ್ತಾರೆ.

(International House ಇರುವ ಭಾಗವಂತೂ ರಮ್ಯವಾಗಿದೆ. ದೂರದಲ್ಲಿ ಬಸ್ಸುಗಳ ಕಾರುಗಳ ಸದ್ದು ಕೇಳುತ್ತದೆ.) ಎದುರಿಗೆ ಕೊಲ್ಲಿ (Bay of San Francisco). The Bay has many moods.

ಹಗಲು ಸಂಜೆ Fog, ಮಂಜು, ಸುರುಳಿಸುರುಳಿಯಾಗಿ ಹರಿದು ಎದ್ದು ನೋಟವನ್ನು ಕವಿಯುತ್ತದೆ. ಅದೂ ಸೊಗಸು!

ಯೂಕಲಿಪ್ಟಸ್ ಗಿಡಗಳು ('ನೀಲಗಿರಿ'.)

ಹವಾ ಬಲುಹಿತವಾಗಿದೆ. ಆಗಸ್ಟ್ ತಿಂಗಳಲ್ಲಿ ೬೦°, ೫೦° – ಕೊರೆಯುತ್ತದೆ. ಸ್ವೆಟರನ್ನು ಕೊಳ್ಳಬೇಕಾಯಿತು.

ನಾಲ್ಕು ಹೆಜ್ಜೆ ಪೂರ್ವಕ್ಕೆ ಹತ್ತಿದರೆ ಬೆಟ್ಟದ ದಾರಿಗಳು ಕಣಿವೆ Canyon, ಈ ಬೆಳಗ್ಗೆ ಸ್ವಲ್ಪ ಸುತ್ತಿಬಂದೆ. ಅಂದವನ್ನು ಸವಿದೆ. ನಾಡು ಹೆಂಚನ್ನು ಇಲ್ಲಿ ಇನ್ನೂ ಉಪಯೋಗಿಸುತ್ತಾರೆ. (ಇದು ಸ್ಪೆಯಿನ್ನಿನ ಪ್ರಭಾವವಂತೆ.) ಮರದ ಹೆಂಚೂ ಉಂಟು.

ನಮ್ಮ ಊರುಗಳ ನೆನಪು ಬರುತ್ತದೆ-ನೀಲಗಿರಿ, ಧಾರವಾಡ, ಮೈಸೂರು.

ಎಮಿನೋ ದಂಪತಿಗಳ ಜೊತೆಗೆ ಅವರ ಕಾರಿನಲ್ಲಿ ಬೆಟ್ಟಗಳನ್ನು ಸುತ್ತಿದಾಗ ಇಲ್ಲಿ ತೋಡವರು ಮಾತ್ರ ಇಲ್ಲ ಎಂದೆ. ಆದರೆ ನಾನೇ ತೋಡವನೊ ಏನೋ!

The Univ Campus-

ಇದರ ಮುಂದೆ ಮಿಕ್ಕ ಪ್ರದೇಶಗಳನ್ನು ನಿವಾಳಿಸಬೇಕು. Ann Arbor ಚೆನ್ನ ಎನ್ನುತ್ತಿದ್ದೆ. ಆ ಅಭಿಮಾನ ಬಿಟ್ಟು ಹೋಯಿತು. ಶಿಥಿಲವಾಯಿತು.

ಕಟ್ಟಡಗಳು, ಸನ್ನಿವೇಶ, ವನ್ಯಚ್ಛಾಯೆ: ಸಣ್ಣಹಳ್ಳ

ಎಲ್ಲ ಇಲ್ಲಿ ಹದವಾಗಿ ಮಿಳಿತವಾಗಿವೆ. ಇಲ್ಲಿಯೇ ನಾನು ನಾಲ್ಕಾರು ತಿಂಗಳು ನಿಲ್ಲಬೇಕಾಗಿತ್ತು. ಲಭ್ಯವಿಲ್ಲ.

If I should have to live in any place in America for a long time, for years-heaven forbid!-I should like to choose Berkeley.

(ಎಮಿನೋ ಹೇಳಿದ್ದು.) Madison, Wisconsin-ಕ್ಯಾಂಪಸ್ ಸುಂದರ ಎನ್ನುತ್ತಾರೆ, ಸರೋವರದ ತೀರದಲ್ಲಿದೆಯಂತೆ, ನೋಡಬೇಕು.

ನಾಡಹೆಂಚು, ಎರಡುವರಸೆ (Spanish ಪ್ರಭಾವ ಎನ್ನುತ್ತಾರೆ)

ತಾಳೆಮರ (ಹನೆ ಮರ?) ಸಮುದ್ರತೀರದಲ್ಲಿ. ಈಚೆಗೆ ಇಂಡಿಯದಿಂದ ಇಲ್ಲಿಗೆ ಬಂದದ್ದು?

ಅಂತೂ ಸ್ವದೇಶದ ನೆನಪು.

* * *

ಆಗಸ್ಟ್ ೨೬

The labor "problem" in America

"ಮಜೂರಿ" ಎಲ್ಲಕ್ಕೂ ಹೆಚ್ಚು, "ಕೂಲಿ" ಎಂಬ ದ್ರಾವಿಡ (?) ಪದವನ್ನು ಉಪಯೋಗಿಸಿದರೆ ಅಪಮಾನವೆನಿಸಬಹುದು.

ಇಷ್ಟಾದರೂ ಸಿಕ್ಕುವುದಿಲ್ಲ; ದುಬಾರಿಯಾಗಿ ಕೊಡಬೇಕು.

ಆ್ಯನ್ ಆರ್ಬರ್‌ನಲ್ಲಿ ರೈಲು ಹತ್ತುವಾಗ ಬಲು ತಾಪತ್ರಯವಾಯಿತು ಸೋಮವಾರ ಪೋರ್ಟರ್ ಸ್ಟೇಷನ್ನಿಗೆ ಬರುವುದಿಲ್ಲವಂತೆ. ಪೆಟ್ಟಿಗೆ, ಗಂಟು ಮೂಟೆ ಚೀಲ ಎಲ್ಲವನ್ನೂ ನಾನೇ ಹೊತ್ತೆ. ರಟ್ಟೆ ಬಿದ್ದು ಹೋಯಿತು. ಒಂದು ದಿನವೆಲ್ಲ ಅದರ ನೋವು ಇತ್ತು.

The working man's self-respect

ಆ ವಿಷಯವಾಗಿ ಇಲ್ಲಿ ನಿಜವಾದ Democracy ಇದೆ.

* * *

ಆಗಸ್ಟ್ ೨೭

ಮನಸ್ಸು ನಿನ್ನೆ ಮಧ್ಯಾಹ್ನದಿಂದಲೂ ಕಳವಳಪಡುತ್ತಿದೆ. ಊರಿನ ಕಾಗದ ಬಂದಿಲ್ಲ.

ಗುರುವಾರ, ಶುಕ್ರವಾರ ; ಈ ಎರಡರಲ್ಲಿ ಒಂದು ದಿನ ಅದು ಸಾಮಾನ್ಯವಾಗಿ ಬರಲೇಬೇಕು. ಇನ್ನೂ ಏಕೆ ಬರಲಿಲ್ಲ. ಯೋಸೆಮಿಟಿಗೆ ನಾಳೆ ಹೋಗಬೇಕು. ಆದರೆ ಮನಸ್ಸಿನ ಉತ್ಸಾಹ ಅರ್ಧ ಕುಗ್ಗಿದೆ.

ನನ್ನ ಮನಸ್ಸು ಇಷ್ಟು ತಳಮಳಿಸೀತೆಂದು ನಾನು ಭಾವಿಸಿರಲಿಲ್ಲ.

ನನ್ನ ಅವೇಕ್ಷಣ, ಪರಿವೀಕ್ಷಣ ಸಾಲದು. Remember Hoijer's remark in the class:

Set down everything in writing. you will be thousands of miles away from your "field" when you analyse the write up.

Then you cannot check & supplement.

* * *

ಆಗಸ್ಟ್ ೨೭

My memory

ಮರೆತೇ ಹೋಗುತ್ತದೆ. ವಿಷಯಗಳು ಕಳಿಯಲಿ ಎಂದು ಬಿಡುವಹಾಗಿಲ್ಲ.

ತಳಕ್ಕೆ ಇಳಿದ ಮೇಲೆ ಪಾತಾಳಗರಡಿ ಹಾಕಿದರೂ ಸಿಕ್ಕುವುದಿಲ್ಲ.

ತತ್‌ಕ್ಷಣಮೇವ ಗ್ರಾಹ್ಯಾ:

* * *

ನವೆಂಬರ್ ೩

ಶಿವರಾಮಶಾಸ್ತ್ರಿಗಳು ಕಡೆಗೂ ಸಂಸ್ಕೃತದ ಪ್ರೊಫೆಸರ್ ಆಗಿಯೇ ಬಿಟ್ಟರೆಂದು ಚಿದಂಬರಂ ಕಾಗದದಿಂದ ತಿಳಿದು ಮನಸ್ಸಿಗೆ ಸಂತೋಷವಾಗಿದೆ, ಸಂತೋಷ ಎನ್ನುವುದಕ್ಕಿಂತ ಸಮಾಧಾನವಾಗಿದೆ. ಅಬ್ಬ! ಇದಕ್ಕಾಗಿ ಎಷ್ಟೊಂದು ತಳಮಳ, ವಿರೋಧಿಗಳ ಸ್ಪರ್ಧಿಗಳ ತಂತ್ರ, ಕುತಂತ್ರ!

ಈ ಸಮಾಧಾನದಲ್ಲಿ, ಇಂದು ಅದೇ ಟಪಾಲಿನಲ್ಲಿ ಬರಬೇಕಾಗಿದ್ದ ಧಾರವಾಡದ ಕಾಗದ ಬಾರದಿದ್ದರೂ ಮನಸ್ಸು ಅಷ್ಟೇನೂ ಕಳವಳಿಸುತ್ತಿಲ್ಲ.

* * *

ನವೆಂಬರ್ ೨೬,

America is an "astonishing'' country.

Indians look darker to me in contrast with the prevailing"white" faces. "White" appears normal.

Often when I look into the miror, my own 'darky" face surprises me. In India I am not considered particularly dark!

The lip-sticky women smoking cigarattes in the class room, with a dirty ash-tray in front, into which they periodically tip the ashes of the cigaratte. And the stump finally lies huddled with others on the ash-tray besmeared at the unburnt end with the red stuff it aquired in contact with woman's lips. Even a good looking and attractive girl looks pretty ugly and unseemly with the remnants of her cigaratte with its messy look.

ನಮ್ಮ ದೇಶದಲ್ಲಿ ಎಲೆ ಅಡಕೆ ಅಗಿದು ಸ್ವಲ್ಪ ಜೊಲ್ಲನ್ನು ಸೋರಿಸುವ ಹೆಂಗಸಿನ ಮುಖವನ್ನು ಎಷ್ಟರಮಟ್ಟಿಗೆ ಹೋಲಿಸಬಹುದು?

* * *

ಜನವರಿ ೯, ೧೯೫೬

Last night Philadelphia gave me a cold send off
& this morning Cambridge Mass gave me even colder reception
except for the human warmth in both places.

The Mammels at Philadelphia

& Sarada Prasad here.

(What a sweet & affectionate & really warm couple Dorothy & Kenneth are.)

* * *

ಜನವರಿ ೧೧. ೫೬

I think the Americans gave up all good tea when they threw overboared the tea chest at at Boston.–

I am sure that many travellers from other countries have made this remark before. But it is original with me too! Whenever I have commented on the present concoction made with the paper bag, the Americans look surprised & admit the truth of the criticism.

* * *

ಜನವರಿ ೧೪, ೫೬

From old notes;

ಇಥಕದಲ್ಲಿ ಹಿಮದ ಹರವನ್ನು ನೋಡಿದಾಗ
Powdered moonlight
Even junk, Scrap iron-looked beautiful.

ಚಿಕಾಗೋದಲ್ಲಿ ಡಿಸೆಂಬರ್ ೩೧ ರಂದು
Ice-pond: children skating red & blue & green dress

ಚಿಕಾಗೋದಿಂದ ಫಿಲಡೆಲ್ಫಿಯಕ್ಕೆ ಬರುವ ದಾರಿಯಲ್ಲಿ:
The ever greens near Lancaster after miles and miles of bare tree braches along the rail road.
what a contrast!

Regarding lack of invitations to lecture:
Feel like a woman who cannot propose herself, & waits in vain for proposal to come.

ಶಾರದಾ ಪ್ರಸಾದ್ ಹೇಳಿದ್ದು:
ಹೊಳೆಬಾಳೆಕಾಯಿ; ಮೀನು
ಬಾಟೆ, ಬಾಳೆ: ಜ್ಞಾಪಿಸಿಕೊಳ್ಳಬಹುದು!

* * *

ಜನವರಿ ೧೬

A Crowded day: good day

I.A Richards : Recording ಗಾಗಿ ಪೂರ್ವಸಿದ್ಧತೆ.

Ingalls:discussed some Sanskrit stanzas

ಕಾಗದಗಳು:

ಧಾರವಾಡ
ಮೂರ್ತಿರಾವ್
Cohen

ಇತರ:

ಸಂಜೆ: Long distance call form Miami
Bert & Gary.
wasn't Bert very good!

ನಿನ್ನೆ Ingalls ಮನೆಯಲ್ಲಿ ಊಟ
Prof & Mrs. Hightower (Chairman)
ದಿಘೇ ದಂಪತಿಗಳು ಬಂದಿದ್ದರು

ಈ ದೇಶದ ದೊಡ್ಡ ಅನನುಕೂಲ ಬೇಕೆಂದಾಗ ಕಾಲು ತೊಳೆದುಕೊಳ್ಳಲು ಅವಕಾಶವಿಲ್ಲ
ಸ್ನಾನ ಮಾಡುವಾಗ ಮಾತ್ರ ಅದು ಸಾಧ್ಯ.

ವೆನಿಸ್ ಹೊರಗೆ ನೋಡು
ಫ್ಲಾರೆನ್ಸ್ ಒಳಗೆ ನೋಡು
ರೋಮ್ ಸುತ್ತಿಸುತ್ತಿ ನೋಡು

ತೀ.ನಂ.ಶ್ರೀ. ಅವರ ಪತ್ರಗಳಿಂದ

●

ಕುಶಲ ಶ್ರೀ ಆ್ಯನ್ ಆರ್ಬರ್

ಜುಲೈ ೮, ೧೯೫೫

ಚಿ॥ ನಾಗಭೂಷಣನಿಗೆ – ಪ್ರೀತಿಯ ಆಶೀರ್ವಾದಗಳು ಉ॥ ಕು॥ ಸಾಂ॥

ಪ್ರಯಾಣದ ವಿವರಗಳನ್ನು ಬರೆಯಲಿಲ್ಲವೆಂದು ನಿಮ್ಮ ತಾಯ ಕಾಗದದಲ್ಲಿ ಆಕ್ಷೇಪಣೆಯ ಧ್ವನಿ ಸ್ವಲ್ಪ ಇತ್ತು. ನಿನಗೆ ಬರೆಯುವಾಗ ಅದರ ವರ್ಣನೆ ಮಾಡೋಣವೆಂದುಕೊಂಡೆ. ಆದರೆ ಈದಿನ ಏಕೋ ಬುದ್ಧಿ ಆಕಡೆ ಓಡುತ್ತಿಲ್ಲ. ಟಪಾಲಿಗೆ ಬೇರೆ ಹೊತ್ತಾಯಿತು.

ಲಂಡನ್ನಿನಲ್ಲಿ ಬೆಡ್‌ಫರ್ಡ್‌ಕಾರ್ನರ್ ಎಂಬ ಹೋಟಲಿನಲ್ಲಿ ಇಳಿದುಕೊಂಡಿದ್ದೆನಷ್ಟೆ. ಆ ಬೆಳಗ್ಗೆಯೆಲ್ಲ ಟೆಲಿಫೋನ್ ಮಾಡುವುದರಲ್ಲಿ, ಮಿಡುಕಾಡುವುದರಲ್ಲಿ ಕಳೆದುಹೋಯಿತು. ಮಧ್ಯಾಹ್ನ ಮೂರು ಘಂಟೆಯ ವೇಳೆಗೆ, ನನ್ನ ಸಾಮಾನು ಕ್ಯಾಸಬ್ಲಾಂಕಾಕ್ಕೆ ಪ್ರಯಾಣ ಬೆಳೆಸಿದೆ; ಲಂಡನ್ನಿಗಲ್ಲದಿದ್ದರೆ ನ್ಯೂಯಾರ್ಕಿಗಾದರೂ ಒಂದಲ್ಲ ಒಂದು ದಿನ ಬರುತ್ತದೆ ಎಂದು ತಿಳಿದು ಮನಸ್ಸಿಗೆ ಸ್ವಲ್ಪ ಸಮಾಧಾನವಾಯಿತು. ಸಂಜೆಯವರೆಗೆ ಏನು ಮಾಡುವುದು ಎಂದು ಯೋಚಿಸಿ ಹತ್ತಿರದಲ್ಲಿ ನೋಡತಕ್ಕ ಜಾಗ ಯಾವುದಾದರೂ ಇದೆಯೆ ಎಂದು ಅಲ್ಲಿಯವರಲ್ಲಿ ಕೇಳಿದೆ. 'ಬ್ರಿಟಿಷ್ ಮ್ಯೂಸಿಯಮ್ಮಿ'ಗೆ ಇಲ್ಲಿಂದ ಎರಡೇನಿಮಿಷ ನಡಗೆಯ ದೂರ ಎಂದರು. ಅಯ್ಯೋ ಇಷ್ಟು ಕಾಲ ವ್ಯರ್ಥವಾಯಿತಲ್ಲ ಎಂದು ಚಿಂತಿಸಿ, ಕೂಡಲೆ ಅಲ್ಲಿಗೆ ನಡೆದೆ. ಎರಡು ಘಂಟೆಯ ಕಾಲ ಅದರ ಅನೇಕ ಭಾಗಗಳಲ್ಲಿ ಸುತ್ತಾಡಿ, ಹಲವು ವಸ್ತುಗಳನ್ನು ನೋಡಿ ಅಮಿತವಾದ ತೃಪ್ತಿಯನ್ನು ಪಡೆದೆ. ಬ್ರಿಟಿಷ್ ಮ್ಯೂಸಿಯಮ್ಮಿನ ವರ್ಣನೆಯನ್ನು ನಾನು ಇಲ್ಲಿ ಮಾಡುವುದಿಲ್ಲ; ಅಷ್ಟು ವಿವರವಾಗಿ ಅದರ ಎಲ್ಲ ಭಾಗಗಳನ್ನೂ ನಾನು ನೋಡಲೂ ಇಲ್ಲ. ನಾನು ಮುಖ್ಯವಾಗಿ ನೋಡಿದ್ದು ಹಳೆಯ ಪುಸ್ತಕಗಳ ಕಾಗದ ಪತ್ರಗಳ ಭಾಗ. ಅಲ್ಲಿ ಒಂದು ಹಳೆಯ ಗ್ರೀಕ್ ಭಾಷೆಯ ಪತ್ರ (ಎಂದರೆ 'letter') ಇದೆ. ತಂದೆಗೆ ಮಗ ಕ್ರಿ.ಶ ಮೂರನೆಯ ಶತಮಾನದಲ್ಲಿ ಬರೆದದ್ದು; ಅದರ ಭಾಷಾಂತರವನ್ನು ಕೆಳಗೆ ಕೊಟ್ಟಿದ್ದಾರೆ. "ನೀನು ಊರನ್ನು ಬಿಟ್ಟುಹೋಗಿ ಬಲುದಿನವಾಯಿತು. ನೋಡಬೇಕೆಂದು ಆಸೆಯಾಗಿದೆ" ಇತ್ಯಾದಿಯಾಗಿ ಒಕ್ಕಣೆಯನ್ನು ಆ ಸಣ್ಣ ಹುಡುಗ ತಂದೆಗೆ ಬರೆದಿದ್ದಾನೆ. ಈ ೧೬೦೦ ವರ್ಷಕಾಲ ಆ ಕಾಗದ ಹೇಗೋ ಉಳಿದು ನಿಂತಿದೆ. ಆ ಕಾಗದದ ಭಾಷಾಂತರವನ್ನು ಹಿಂದೆ ನಾನು ಓದಿದ್ದೆ. ಬಹುಶಃ "Limits of Art' ಎಂಬ ಪುಸ್ತಕದಲ್ಲಿ ಇರಬೇಕು. (ಇದು

ಕರ್ನಾಟಕ ವಿಶ್ವವಿದ್ಯಾಲಯದ ಲೈಬ್ರರಿಯಲ್ಲಿ ಇದೆ. ಬೇಕಾದರೆ ಹುಡುಕಿನೋಡು.) ಅದರ ಮೂಲ ಪ್ರತಿಯನ್ನು ನೋಡಿದಾಗ ಕರುಳು ಹಿಂಡಿದಂತಾಯಿತು. ನಿನ್ನ ಜ್ಞಾಪಕ ಬಂತು. ಧಾರವಾಡದ ಸ್ಟೇಷನ್ನಿನಲ್ಲಿ ಇನ್ನೇನು ರೈಲು ಹೊರಡುತ್ತದೆ ಎನ್ನುವಾಗ ನೀನು "ಅಣ್ಣ, ಈ ಸಲ ನೀನು ನಮ್ಮ ಜೊತೆ ಹೆಚ್ಚುದಿನ ಇರಲೇ ಇಲ್ಲ" ಎಂದು ಹೇಳಿದ್ದು ಜ್ಞಾಪಕವಿದೆಯೆ? ಅದು ನೆನಪಿಗೆ ಬಂದಿತು! – ಆಗಲಿ, ದಿನಗಳು ದೀರ್ಘವೆನಿಸಿದರೂ ಕಳೆಯುತ್ತವೆ. ಮತ್ತೆ ಒಬ್ಬರನ್ನೊಬ್ಬರು ನೋಡೋಣ.

ಬ್ರಿಟಿಷ್ ಮ್ಯೂಸಿಯಮ್ಮಿನಲ್ಲಿ ಸ್ಟಾಂಪುಗಳ ಒಂದು ಲೈಬ್ರೆರಿಯೇ ಇದೆ. ಎಲ್ಲ ದೇಶಗಳ ಎಲ್ಲ ಬಗೆಗಳ ಸ್ಟಾಂಪುಗಳನ್ನೂ ಕೂಡಿಸಿ, ಜೋಡಿಸಿ ಅಂಟಿಸಿ ಇಟ್ಟಿದ್ದಾರೆ. ಅದನ್ನು ಒಂದಲ್ಲ ಒಂದು ದಿನ ನೀನು ನೋಡಿದರೆ (ಆ ಕಾಲವೂ ಬರಲಿ) ಆನಂದ ಪಡುತ್ತೀಯೆ. – ನಿನಗೆ ಸ್ಟಾಂಪಿನ ಆಸೆ ಉಂಟು ಎಂದು ಗೊತ್ತು.

* * *

ಕುಶಲ ಶ್ರೀ ಆ್ಯನ್ ಆರ್ಬರ್
ಜುಲೈ ೧೬, ೧೯೫೫

ಚಿ॥ಸೌ॥ವತಿಗೆ – ಪ್ರೀತಿಯ ಆಶೀರ್ವಾದಗಳು. ಉ॥ಕು॥ಸಾಂ॥

ನಮ್ಮ ದೇಶದಲ್ಲಿ ಇರುವಾಗ ಒಂದು ಕಾಗದ ಇನ್ನೊಬ್ಬರಿಗೆ ತಲಪುವುದಕ್ಕೆ ಎರಡು ದಿನದ ಮೇಲೆ ಸಾಮಾನ್ಯವಾಗಿ ಹಿಡಿಯುವುದಿಲ್ಲ. ವಿಮಾನದ ಅಂಚೆಯ ಸೌಕರ್ಯವಿರುವುದರಿಂದ ದೆಹಲಿಯಂಥ ದೂರದ ಊರಿನಿಂದ ಕೂಡ ಕಾಗದ ಎರಡು ಮೂರು ದಿನದಲ್ಲಿ ಬಂದು ಬಿಡುತ್ತದೆ. ಈಗಲಾದರೆ, ವಿಮಾನದ ವೇಗದಲ್ಲಿ ಕಾಗದ ಪ್ರಯಾಣ ಮಾಡಿದರೂ ನನ್ನ ಕಾಗದ ನಿಮಗೆ ತಲುಪುವುದಕ್ಕೆ ಒಂದುವಾರ, ಅದಕ್ಕೆ ನೀವು ಮರುದಿನವೇ ಬರೆದ ಉತ್ತರ ನನ್ನ ಕೈಸೇರುವುದಕ್ಕೆ ಒಂದು ವಾರ – ಹೀಗೆ ಸುಮಾರು ಹದಿನೈದು ದಿನ ಹಿಡಿಯುತ್ತದೆ. ಆದರೆ ವಾರಕ್ಕೆ ಒಂದಾದರೂ ಕಾಗದವನ್ನು ನೀವು ನಾನೂ ತಪ್ಪದೆ ಬರೆಯುತ್ತಿರುವುದರಿಂದ, ಉತ್ತರಪ್ರತ್ಯುತ್ತರಗಳು ದಾರಿಯಲ್ಲಿ ಸಂಧಿಸುತ್ತವೆ ಎಂದು ಸಮಾಧಾನ ಮಾಡಿಕೊಳ್ಳಬಹುದು; ಕಳೆದವಾರ ಬರೆದ ಕಾಗದಕ್ಕೆ ಅಲ್ಲವಾದರೂ, ಅದರ ಹಿಂದಿನ ವಾರದ ಕಾಗದಕ್ಕೆ ಉತ್ತರ ಬಂದಿತೆಂದು ಸಮಾಧಾನ ಮಾಡಿಕೊಳ್ಳಬಹುದು. ರೈಲೇನೋ ಕ್ಲುಪ್ತವಾಗಿ ಬಂದುಹೋಗುತ್ತಿದೆ; ಈ ದಿವಸ ಬಂದದ್ದು ಇಂದಿನದಲ್ಲ, ನಿನ್ನೆಯದು ಎಂದ ಹಾಗೆ! – ಅಂತೂ ಈ ಆಧುನಿಕ ಕಾಲದಲ್ಲಿ ಇಷ್ಟೊಂದು ಅನುಕೂಲತೆಯಿದ್ದರೂ ಅಲ್ಲಿಂದ ಇಲ್ಲಿಗೆ ದಾರಿ, ವೇಳೆ ಎಷ್ಟೊಂದು ದೂರ! ಆದರೆ "ಮೇಘದೂತ"ದ ಯಕ್ಷನ ಕಥೆಗಿಂತ ಇದು ಉತ್ತಮವಲ್ಲವೆ: ಅದು ನಿನಗೆ ಗೊತ್ತಿರಬೇಕು. ಆದರೂ ಎರಡುಮಾತು ಬರೆಯುತ್ತೇನೆ. ಕುಬೇರನ ಹತ್ತಿರ ಕೆಲಸದಲ್ಲಿದ್ದ ಒಬ್ಬ ಯಕ್ಷನು ಏನೋ ಅಪರಾಧ ಮಾಡಿದ್ದಕ್ಕಾಗಿ ಅವನ ಮೇಲೆ ಕೋಪಗೊಂಡು ಕುಬೇರನು ಅವನನ್ನು ಉತ್ತರದಿಕ್ಕಿನ ಅಲಕಾವತಿಯಿಂದ ರಾಮಗಿರಿಯೆಂಬ ಮಧ್ಯಭಾರತದ ಒಂದುಕಡೆಗೆ ಒಂದು ವರ್ಷಕಾಲ ಗಡಿಪಾರು ಮಾಡಿದನಂತೆ. ಮನೆಯಲ್ಲಿ ಹೆಂಡತಿಯನ್ನು ಬಿಟ್ಟು (ಮಕ್ಕಳಿದ್ದಂತೆ

ಸೂಚನೆಯಿಲ್ಲ; ಹೆಂಡತಿಯೂ ಇನ್ನೂ ಎಳೆಯ ಪ್ರಾಯದವಳೆಂದು ತೋರುತ್ತದೆ!) ಯಕ್ಷನು ಈ ದೂರ ಪ್ರದೇಶದಲ್ಲಿ ಹಾಗೂ ಹೀಗೂ ಎಂಟು ತಿಂಗಳನ್ನು ಕಳೆದನು. ಮಳೆಗಾಲ ಬಂದಿತು. ಮೋಡ ಬೆಟ್ಟದ ಮೇಲೆ ಆಡುತ್ತಿರುವುದನ್ನು ಕಂಡನು. ಊರಿನ ನೆನಪು ಹೆಚ್ಚಿತು. (ಮೋಡವನ್ನು ಕಂಡರೆ ಸುಖವಾಗಿರುವವರ ಮನಸ್ಸೂ ಹೇಗೆ ಹೇಗೋ ಆಗುತ್ತದೆ, ಇನ್ನು ಪ್ರಿಯರು ದೂರದಲ್ಲಿರುವಾಗ ಕೇಳಬೇಕೆ ಎನ್ನುತ್ತಾನೆ ಕಾಳಿದಾಸ!) ಆಗ, ತನ್ನ ಯೋಗಕ್ಷೇಮವನ್ನು ಮಡದಿಗೆ ಹೋಗಿ ತಿಳಿಸು ಎಂದು ಮೋಡವನ್ನೇ ಯಕ್ಷನು ಬೇಡಿಕೊಳ್ಳುತ್ತಾನೆ. ಅದು ಅಚೇತನವಾದ ವಸ್ತು. ಈ ಹಬೆ ಹೊಗೆ ಗಾಳಿ ಬಿಸಿಲಿನ ಕೂಟಕ್ಕೆ ಸಂದೇಶವನ್ನು ಒಬ್ಬರಿಂದ ಮತ್ತೊಬ್ಬರಿಗೆ ಮುಟ್ಟಿಸುವ ಸಾಮರ್ಥ್ಯ ಹೇಗೆ ಬರಬೇಕು ಎಂಬುದನ್ನೂ ಆಲೋಚಿಸದೆ, ಆ ಮೇಘ ಯಾವ ಯಾವ ದಾರಿಯಲ್ಲಿ ಹೋಗಬೇಕು, ಯಾವ ಯಾವ ಊರುಗಳನ್ನು ನೋಡಬೇಕು, ಅಲಕಾವತಿಯಲ್ಲಿ ತನ್ನ ಮನೆ ಎಲ್ಲಿದೆ, ಹೇಗಿದೆ, ಮಡದಿ ಹೇಗೆ ಏನು ಮಾಡುತ್ತಿರುತ್ತಾಳೆ; ಅವಳಿಗೆ ಏನು ಹೇಳಬೇಕು – ಇದನ್ನೆಲ್ಲ ಸುಂದರವಾಗಿ ವರ್ಣಿಸಿದ್ದಾನೆ. ಕಾಳಿದಾಸನಿಗೂ ಇಂಥದೇ ಪ್ರಸಂಗವೇನಾದರೂ ಜೀವಮಾನದಲ್ಲಿ ಬಂದಿತ್ತೋ; ನನಗೆ ತಿಳಿಯದು. ಅವನ ಕಾವ್ಯದ ರುಚಿ ಮಾತ್ರ ಈ ದಿನಕ್ಕೂ ಅತಿಶಯವಾಗಿದೆ. ಇದನ್ನು ಕನ್ನಡಕ್ಕೆ ಅನೇಕರು ಭಾಷಾಂತರ ಮಾಡಿದ್ದಾರೆ. ಶ್ರೀ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ, ಪರಮೇಶ್ವರ ಭಟ್ಟ, ಬೇಂದ್ರೆ – ಇವರ ಭಾಷಾಂತರಗಳು ನಮ್ಮ ಮನೆಯಲ್ಲಿವೆ. ಬೇಂದ್ರೆಯವರದು ಬಲು ಸೊಗಸಾಗಿದೆ; ಭಾಷಾಂತರ ಎಂದೇ ತೋರುವುದಿಲ್ಲ. ಅದನ್ನು ಬಿಡುವಾದಾಗ ಓದಿನೋಡು. ಹಾಗೆಯೇ ಮಾಸ್ತಿಯವರ ಮೇಘದೂತದ ಮೇಲೆ ಬರೆದಿರುವ ವಿಮರ್ಶೆಯನ್ನೂ ಓದಬಹುದು. (ಇದು ವಿಮರ್ಶೆ – ೪ ಎಂಬ ಪುಸ್ತಕದಲ್ಲಿರಬೇಕು) – ಮಾತು ಎಲ್ಲಿಗೋ ಹೋಯಿತು. ಆ ಯಕ್ಷನ ಸ್ಥಿತಿಗಿಂತ ನಮ್ಮದು ಎಷ್ಟೋ ಉತ್ತಮವಲ್ಲವೆ; ವಾರಕ್ಕೊಂದು ಕಾಗದ ಬಂದು ಹೋಗುತ್ತದೆ, ಮನೆಯಲ್ಲಿ ಸಮಾಧಾನ ಹೇಳುವುದಕ್ಕೆ ಮಕ್ಕಳಿದ್ದಾರೆ. ಹಿರಿಯರು ಬಂದಿರುತ್ತಾರೆ. ಮಿತ್ರರು ಬಂದು ಹೋಗುತ್ತಾರೆ.

* * *

ಆ್ಯನ್ ಆರ್ಬರ್, ಜುಲೈ ೨೩, ೧೯೫೩

ಚಿ॥ ಸೌ॥ ವತಿಗೆ ಸಪ್ರೇಮ ಆಶೀರ್ವಾದಗಳು. ಉ॥ ಕು॥ ಸಾಂ

ನಿನ್ನೆಯ ದಿನ ಧಾರವಾಡದ ಕಾಗದ ಬರುವುದನ್ನೇ ನಿರೀಕ್ಷಿಸುತ್ತಿದ್ದೆನು. ಅದು ಬಂದ ಬಳಿಕ ಒಡೆದು ನೋಡಿದಾಗ ತೀ॥ ಸೂರಣ್ಣಯ್ಯನವರ ಮತ್ತು ಚಿ॥ ನಾಗಭೂಷಣನ ಕಾಗದದಿಂದ ಅಲ್ಲಿಯ ಯೋಗಕ್ಷೇಮವೆಲ್ಲ ತಿಳಿಯಿತು. ಕಾಗದದ ಮೇಲೆ "S. Jayalakshmamma" ಎಂದಿದ್ದರೂ (ಅದು ಚಿ॥ ನಾಗಭೂಷಣನ ಅಕ್ಷರದಲ್ಲಿ) ಒಳಗೆ ನಿನ್ನ ಅಕ್ಷರ ಒಂದು ಕೂಡ ಇರಲಿಲ್ಲ. ಮಿಕ್ಕ ವಿಷಯಗಳನ್ನು ಮನೆಯಲ್ಲಿ ಹಿರಿಯರೂ ಕಿರಿಯರೂ ಬರೆಯುತ್ತಾರೆ. ಜೊತೆಗೆ ನಿನ್ನ ಎರಡೂ ಮಾತಾದರೂ ಇದ್ದರೆ ನನಗೆ ಇಲ್ಲಿ ಎಷ್ಟೋ ಸಮಾಧಾನವಾಗುತ್ತದೆ.

(ವಿದೇಶದಿಂದ ನಮ್ಮ ತಂದೆಯವರು ನಮ್ಮ ತಾಯಿಯವರಿಗೆ ಸಂಬೋಧಿಸಿ ಬರೆದ ಕಾಗದಗಳನ್ನು ಎಲ್ಲರೂ ಓದಲೆಂದು ಉದ್ದೇಶಿಸಿ ಬರೆಯುತ್ತಿದ್ದರು. ಆದರೆ ಈ ಪತ್ರವನ್ನು ಮಾತ್ರ ನಮ್ಮ ತಾಯಿಯವರ ಹೆಸರನ್ನು ಪ್ರತ್ಯೇಕವಾಗಿ ಬರೆದು ಅಂಟಿಸಿ ಕವರಿನಲ್ಲಿ ಕಳಿಸಿದ್ದರು. ಈ ಪತ್ರ ನಾನು ಮೊದಲ ಬಾರಿ ಓದಿದ್ದು ನಮ್ಮ ತಾಯಿಯವರ ನಿಧನದ ಸಂತರವೇ! – ತೀ.ಶ್ರೀ.ನಾ.)

* * *

ಕುಶಲ ಶ್ರೀ Ann Arbor

ಜುಲೈ ೨೯, ೧೯೫೫

ಚಿ.ಸೌ॥ ನಾಗರತ್ನಳಿಗೆ ಪ್ರೀತಿಯ ಆಶೀರ್ವಾದಗಳು. ಉ॥ಕು॥ಸಾಂ

ಕಾಗದವೆಲ್ಲ ನೀರಸವಾದ ವಿಷಯದಿಂದಲೇ ತುಂಬಿ ಹೋಯಿತು. ಒಂದು ಸಣ್ಣ ಸಂಗತಿಯನ್ನು ಹೇಳಿ ಮುಗಿಸುತ್ತೇನೆ. ಮೊನ್ನೆ ಬೆಳಗ್ಗೆ ಸುಮಾರು ಒಂಬತ್ತು ಗಂಟೆಯ ವೇಳೆಯಲ್ಲಿ ಯೂನಿವರ್ಸಿಟಿಯ ಕಡೆ ಹೋಗುತ್ತಿದ್ದೆ. ಎದುರಿಗೆ ಒಬ್ಬ ಮುದುಕ (ಬಿಳಿಯ ಮನುಷ್ಯ, ನೀಗ್ರೋ ಅಲ್ಲ) ಬರುತ್ತಿದ್ದು, ನನ್ನನ್ನು ಕಂಡವನೇ "Can you give me a couple of pennies for coffee" ಎಂದು ಕೇಳಿದ. ನನಗೆ ಮರುಕ ಉಂಟಾಯಿತು. "All right. Take them" ಎಂದು ಹೇಳಿ ಮೂರು ಸೆಂಟ್‌ಗಳನ್ನು ಕೊಟ್ಟೆ. (ಇಲ್ಲಿ ಸೆಂಟ್ ಅನ್ನು ಪೆನ್ನಿ ಎಂದು ಕರೆಯುವುದೂ ಉಂಟು.) ಅಮೆರಿಕದ ಉತ್ತರ ಭಾಗ ಶ್ರೀಮಂತರ ದೇಶ. ಅದರಲ್ಲೂ Ann Arbor ನೆಮ್ಮದಿವಂತರ ಊರು ಎಂದುಕೊಂಡಿದ್ದೆ. ಇಲ್ಲಿ ನೀಗ್ರೋ ಜನ ಕೂಡ ಅನುಕೂಲಸ್ಥರಂತೆ ಕಾಣುತ್ತಾರೆ. ಅಲ್ಲದೆ ಇಲ್ಲಿ ಭಿಕ್ಷಾವೃತ್ತಿ ಕಾನೂನಿಗೆ ವಿರೋಧ. ಕಡೆಯ ಪಕ್ಷ ಬೆಂಕಿಯ ಕಡ್ಡಿಯನ್ನೋ ಸೀಸದ ಕಡ್ಡಿಯನ್ನೋ ಮಾರುವಂತೆ ತೋರ್ಪಡಿಸಿ ಕೊಳ್ಳಬೇಕು. ಹೀಗಿರುವಲ್ಲಿ ಬಿಳಿಯ ಮನುಷ್ಯನೊಬ್ಬ ಭಿಕ್ಷುಕನಾಗಿರುವುದು ನನಗೆ ಆಶ್ಚರ್ಯವೆನಿಸಿತು. ನಾನು ಈ ದೇಶದವನಲ್ಲವೆಂದು ತಿಳಿದು ಹೀಗೆ ನೇರವಾಗಿ ಅವನು ಬೇಡಿದನೆಂದು ತೋರುತ್ತದೆ. (ಅವನ ಕೈಯಲ್ಲಿ ಸೀಸದ ಕಡ್ಡಿಗಳ ಪಟ್ಟಣವೇ ಇತ್ತು. ನನಗೆ ಕೊಡಲಿಲ್ಲ ಅಷ್ಟೆ.) ಅಂತೂ ಅಮೆರಿಕದಲ್ಲೂ ಬಡತನವಿದೆ!

* * *

ಲಾಸ್ ಏಂಜಲಿಸ್, ಸೆಪ್ಟೆಂಬರ್ ೩, ೫೫

ಚಿ॥ಸೌ॥ ವತಿಗೆ

ನಾನು ಕಳೆದ ಶನಿವಾರ ಬರ್‌ಕ್ಲಿಯಿಂದ ಬರೆದ ಕಾಗದ ನಿಮಗೆ ತಲುಪಿದೆಯೆಂದು ನಂಬುತ್ತೇನೆ. ಅದರಲ್ಲಿ ಬರೆದಿದ್ದಂತೆ ಯೊಸೆಮಿಟಿಯಿಂದ ಮಂಗಳವಾರ ರಾತ್ರಿ ಬರ್‌ಕ್ಲಿಗೆ

ತಲುಪಿದೆ. ಧಾರವಾಡದ ಕಾಗದ ಯಾವುದೂ ಬಂದಿರಲಿಲ್ಲ. ಮನಸ್ಸಿಗೆ ತುಂಬ ನೋವಾಯಿತು. ಬುಧವಾರ (ಆಗಸ್ಟ್ ೩೧) ಅಲ್ಲಿಂದ ಹೋರಟು ಅದೇ ಸಂಜೆ ಇಲ್ಲಿಗೆ ತಲಪಿದೆ. ಬರ್‌ಕ್ಲಿಗೆ ಬಂದ ಕಾಗದಗಳನ್ನು ಇಲ್ಲಿಗೆ ಕಳಿಸಬೇಕೆಂದು ಸೂಚನೆ ಕೊಟ್ಟಿದ್ದೆ. ಆ ಪ್ರಕಾರ ನಿನ್ನೆ ಅಲ್ಲಿಂದ ಕಳಿಸಿದ ಬೇರೊಂದು ಈ ದೇಶದ ಕಾಗದ ಇಲ್ಲಿಗೆ ಈ ಬೆಳಗ್ಗೆ ಬಂತು. ಧಾರವಾಡದ ಕಾಗದವಿಲ್ಲ. ಅಂದರೆ ಸೆಪ್ಟೆಂಬರ್ ೨ನೆಯ ಬೆಳಗ್ಗೆಯವರೆಗೂ ನಿಮ್ಮ ಕಾಗದ ಯಾವುದೂ ಬರಲಿಲ್ಲ ಎಂದಾಯಿತು. ಹೀಗೆ ಎರಡುವಾರ ಊರಿನ ಕಾಗದದ ಮುಖವನ್ನೇ ಕಾಣದೆ ಕಾಲ ಕಳೆದು ಹೋಯಿತು. ಇದರಿಂದ ನನ್ನ ಮನಸ್ಸಿಗೆ ಎಷ್ಟೊಂದು ನೋವಾಗಿದೆಯೆಂಬುದನ್ನು ಕಾಗದದಲ್ಲಿ ಬರೆದು ತಿಳಿಸಲು ಸಾಧ್ಯವಿಲ್ಲ. ಹಲಹಲವು ಆಲೋಚನೆಗಳು ಮೂಡುತ್ತಿವೆ. ನಿರ್ಧರವಾಗಿ ಯಾವುದೂ ತಿಳಿಯದು.

ನೀವು ವಿಳಾಸ ಬರೆಯುವುದು ತಪ್ಪಾಯಿತೆ? ಹಾಗಾದರೆ ಎರಡು ವಾರದ ಹಿಂದೆ ಬರ್‌ಕ್ಲಿಗೆ ಕಾಗದ ಬಂತಲ್ಲ! ಮನೆಯಲ್ಲಿ ಯಾರಿಗಾದರೂ ಆರೋಗ್ಯವಿಲ್ಲವೆ? ಹಾಗಿದ್ದರೆ ಕಾಗದ ಬರಲೇ ಬೇಕಾಗಿತ್ತಲ್ಲ. ಏನನ್ನೂ ನಾನು ಊಹೆ ಮಾಡಲಾರೆ! ಕಳವಳ ಮಾತ್ರ ಪಡಬಲ್ಲೆ ಅಷ್ಟೆ.

ನನ್ನ ಪ್ರಯಾಣದ ಸುಖದುಃಖಗಳ ವಿಷಯವಾಗಿ ಏನೇನೋ ಬರೆಯಬೇಕೆಂದಿದ್ದೆ. ಒಂದಕ್ಕೂ ಮನಸ್ಸಿಲ್ಲ. ನಿಮ್ಮ ಕಾಗದವನ್ನು ಕಂಡಹೊರತು ಲೇಖನಿ ಓಡಲಾರದು.

* * *

ಸ್ಯಾಂಟಾಫೇ, ಸೆಪ್ಟೆಂಬರ್ ೮, ೧೯೫೫

ಚಿ||ಸೌ|| ವತಿಗೆ

ನಾನು ಲಾಸ್ ಏನ್‌ಜೆಲಿಸ್ ಪಟ್ಟಣದಿಂದ ಗ್ರ್ಯಾಂಡ್‌ಕಾನ್ಯನ್ ಮಾರ್ಗವಾಗಿ ಈ ಊರಿಗೆ ಈ ಬೆಳಗ್ಗೆ ಬಂದೆ. ಬರ್‌ಕ್ಲಿಯಿಂದಲೂ ಲಾಸ್ ಏನ್‌ಜೆಲಿಸ್ಸಿನಿಂದಲೂ ನಾನು ಬರೆದ ಕಾಗದಗಳೂ ಡಿಸ್ನಿಲ್ಯಾಂಡಿನಿಂದ ಚಿ|| ನಾಗಭೂಷಣನ ಹೆಸರಿಗೆ ಕಳಿಸಿದ ಒಂದು ಚಿತ್ರದ ಕಾರ್ಡೂ ನಿಮಗೆ ತಲಪಿವೆಯೆಂದು ನಂಬುತ್ತೇನೆ. ಲಾಸ್‌ಏನ್‌ಜೆಲಿಸ್ ನಗರವನ್ನು ನಾನು ೬ನೆಯ ತಾರೀಖು ಬಿಟ್ಟೆ. ಆ ಬೆಳಗಿನ ಟಪಾಲಿನಲ್ಲಿ ಕೂಡ ಬರ್‌ಕ್ಲಿಯಿಂದ ಯಾವ ಕಾಗದವೂ ಬಂದಿರಲಿಲ್ಲ. ಅದರಿಂದ ಮನಸ್ಸಿಗೆ ತುಂಬ ಕಳವಳವಾಯಿತು. ಏನು ಮಾಡಬೇಕೆಂದು ತೋಚದ ಹಾಗಾಯಿತು. ಏನೇನೋ ಆಲೋಚನೆಗಳು ಹುಟ್ಟಿದವು. ಆಗ ಬರ್‌ಕ್ಲಿಗೆ Long distance Telephone ಮೂಲಕ ಮಾತಾಡಿದೆ. ಅಲ್ಲಿ Linguistics ಶಾಖೆಯಲ್ಲಿ ಶ್ರೀಮತಿ ಬೆನ್‌ಸನ್ ಎಂಬಾಕೆ ಇದ್ದಾಳೆ; ದಕ್ಷೆ, ಒಳ್ಳೆಯವಳು. ಆ ದಿನ ಬೆಳಗಿನ ಟಪಾಲಿನಲ್ಲಿ ಧಾರವಾಡದ ಎರಡು ಕಾಗದಗಳು ಬಂದಿವೆಯೆಂದು ಆಕೆ ಉತ್ತರ ಕೊಟ್ಟಳು. ಕೇಳಿ ಮನಸ್ಸು ಎಷ್ಟೋ ಹಗುರವಾಯಿತು. ಆ ಕಾಗದಗಳನ್ನು ಕೂಡಲೆ ಸ್ಯಾನ್‌ಟಾಫೇ ಪಟ್ಟಣಕ್ಕೆ ಕಳಿಸಬೇಕೆಂದು ಆಕೆಗೆ ಫೋನ್ ಮೂಲಕವೇ ತಿಳಿಸಿ ಮುಂದಿನ ಪ್ರಯಾಣವನ್ನು ಕೈಕೊಂಡೆ. (ಈ ಫೋನ್

ಮಾತಿಗೆ ಎರಡು ಡಾಲರ್ ಇಪ್ಪತ್ತು ಸೆಂಟ್ ಕೊಡಬೇಕಾಯಿತು. ಆದರೆ ಊರಿನಿಂದ ಕಾಗದ ಬಂದಿದೆಯೆಂದು ತಿಳಿದಿದ್ದರಿಂದ ಆ ವೆಚ್ಚ ಸಾರ್ಥಕವಾಯಿತು!) ಅದುವರೆಗೂ ಎರಡು ವಾರ ಮನಸ್ಸು ಎಷ್ಟೊಂದು ತಳಮಳದಲ್ಲಿತ್ತೆಂದು ವರ್ಣಿಸಲಾರೆ; ದುಃಖ ಕೂಡ ಪಟ್ಟಿದ್ದೇನೆ. ನೋಡಿದ ನೋಟಗಳು ರುಚಿಸಲಿಲ್ಲ. ಇಲ್ಲಿಗೆ ಈ ಬೆಳಗ್ಗೆ ಬಂದ ಕೂಡಲೆ ನಿಮ್ಮ ಎರಡು ಕಾಗದಗಳೂ ಕೈಗೆ ಸಿಕ್ಕಿದವು ಓದಿಕೊಂಡೆ. ಮಾ॥ಸೌ॥ ಚಿಕ್ಕತ್ತಿಗೆಯವರಿಗೂ ನಿನಗೂ ತುಂಬ ದೇಹಾಲಸ್ಯವಾಗಿತ್ತೆಂದು ತಿಳಿದು ವ್ಯಥೆಯಾಯಿತು. ಆದರೆ ಗುಣವಾಗಿದೆಯೆಂದು ಕೇಳಿ ಸಮಾಧಾನವಾಯಿತು.

ನನ್ನ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದೇನೆ. ಅದಕ್ಕಾಗಿ ನೀವು ಚಿಂತಿಸಬೇಡಿ. ಇಲ್ಲಿಗೆ ಬಂದ ಮೇಲೆ ನನಗೂ ಮನೆಯ ಆಲೋಚನೆ ಪ್ರಬಲವಾಗಿಯೇ ಇದೆ. ನಿಮ್ಮನ್ನೆಲ್ಲ ಬಿಟ್ಟು ಬಂದು ಎಷ್ಟೋ ದಿನವಾಯಿತು ಎನ್ನಿಸುತ್ತಿದೆ. ಆದರೂ ಹೀಗೆಯೇ ಇನ್ನೂ ಕೆಲವು ತಿಂಗಳುಗಳನ್ನು ತಳ್ಳಬೇಕು.

ಯೋಸೇಮಿಟಿ, ಗ್ರ್ಯಾಂಡ್‌ಕಾನ್ಯನ್ ಎರಡು ತುಂಬಾ ಚೆನ್ನಾಗಿದ್ದವು. ಅಲ್ಲಿಯ ದೃಶ್ಯಗಳು ಅದ್ಭುತ, ಅಪೂರ್ವ, ಅವುಗಳ ವರ್ಣನೆಯನ್ನು ಸಾವಕಾಶವಾಗಿ ಮಾಡುತ್ತೇನೆ. ನಿಮ್ಮ ಕಾಗದ ಗಳನ್ನು ಕಣ್ಣುಗಳಿಂದ ಈ ದಿನ ನೋಡಿದೆ ಎಂದು ತಿಳಿಸುವುದಕ್ಕಾಗಿ ಮಾತ್ರ ಈ ಕಾಗದ ಬರೆದಿದ್ದೇನೆ.

ನೀವು ಅಲ್ಲಿ ಕಳವಳ ಪಡುವ ಹಾಗೆಯೇ ನಾನೂ ಇಲ್ಲಿ ಕಳವಳ ಪಡುತ್ತೇನೆ ಇಷ್ಟೇ ಸಮಾಧಾನ!

* * *

ಫಿಲಡೆಲ್ಫಿಯ, ಸೆಪ್ಟೆಂಬರ್ ೨೨, ೧೯೫೫

ಚಿ॥ ಸೌಭಾಗ್ಯವತಿಗೆ

ಇಂಗ್ಲಿಷಿನಲ್ಲಿ ಒಂದು ಗಾದೆಯಿದೆ. "It never rains but pours" ಎಂದು. "ಮಳೆ ಬಂದಿತೆಂದರೆ ಧಾರಾಕಾರವಾಗಿಯೇ ಸುರಿಯುತ್ತದೆ" ಎಂದು ಭಾಷಾಂತರ ಮಾಡಬಹುದು. ಧಾರವಾಡದ ಕಾಗದಗಳೂ ಹಾಗೆಯೇ. ಸ್ಯಾಂಟಾಫೆಯಲ್ಲಿ ನಿಮ್ಮ ಎರಡು ಕಾಗದಗಳನ್ನು ನೋಡಿದೀಚೆಗೆ ಹತ್ತು ದಿನವಾಯಿತು ಮತ್ತೆ ಅವನ್ನು ಕಾಣಬೇಕಾದರೆ. ೧೭ನೆಯ ಶನಿವಾರ ಬೆಳಗ್ಗೆ ಈ ಊರಿಗೆ ನಾನು ಬಂದಾಗ ಚಿ॥ ನಂಜುಂಡ, ಚಿ॥ಸೌ॥ ನಾಗರತ್ನ ಬರೆದ ಕಾಗದ ಬಂದಿತ್ತು. ೨೦ ನೆಯ ಮಂಗಳವಾರ ಚಿ॥ ಸೌ॥ ನಾಗರತ್ನನ ಇನ್ನೊಂದು ಕಾಗದ ಬಂದಿತು. ನಿನ್ನೆ ಬುಧವಾರ, ನಿನ್ನ ಕಾಗದ, ಜೊತೆಗೆ ಚಿ॥ ನಾಗಭೂಷಣನ ದೊಡ್ಡ ಕಾಗದ. ಈ ದಿನ ಬೆಳಗ್ಗೆ ಒಂದೂವರೆ ತಿಂಗಳ ಹಿಂದೆ ಧಾರವಾಡವನ್ನು ಬಿಟ್ಟ ಎರಡು ಪುಸ್ತಕಗಳ ಗಂಟುಗಳು! "It never rains but pours" ಎಂಬುದು ಆಗಾಗ ನಿಜವಾಗುತ್ತದೆ. ಈ ಕಾಗದಗಳನ್ನೆಲ್ಲ ನೋಡಿ ನನಗೆ ತುಂಬಾ ಸಮಾಧಾನವಾಗಿದೆ ಸಂತೋಷವಾಗಿದೆ.

* * *

ಫಿಲಡೆಲ್ಫಿಯ, ಸೆಪ್ಟೆಂಬರ್ ೨೮, ೧೯೫೫

ಚಿ॥ ನಾಗಭೂಷಣನಿಗೆ

ನಾನು ಕಳೆದ ತಿಂಗಳು ೨೦ನೆಯ ತಾರೀಖು ಬರ್ಕ್ಲಿಯಿಂದ ಬರೆದ ಕಾಗದ ತಲಪಲೇ ಇಲ್ಲವೆಂದು ಬರೆದಿರುತ್ತೀರಿ. ಅದು ಸ್ವಲ್ಪ ಮಟ್ಟಿಗೆ ದೀರ್ಘವಾಗಿಯೇ ಇತ್ತು. ನಯಾಗರ ಜಲಪಾತವನ್ನು ನೋಡಿದ ಅನುಭವವನ್ನು ಅದರಲ್ಲಿ ಪ್ರಸ್ತಾಪಿಸಿದ್ದೆನು. ಈಗ ಮತ್ತೆ ಅದನ್ನು ಬರೆಯಬೇಕೆಂದರೆ ಬೇಸರವಾಗುತ್ತದೆ. ಅಲ್ಲದೆ, ಅಲ್ಲಿಂದೀಚೆಗೆ ಒಂದು ತಿಂಗಳು ಉದ್ದವಾದ ಕಾಗದವನ್ನೇ ಬರೆಯದೆ ಬೆರಳುಗಳು ಮುಂದಕ್ಕೆ ಓಡುವುದಿಲ್ಲ ಎಂದು ಹಠ ಮಾಡುತ್ತವೆ. ಇದರ ಮೇಲೆ ಒಂದು ತಿಂಗಳ ಪ್ರವಾಸದಲ್ಲಿ ನೋಟ, ಅನುಭವ ಹೆಚ್ಚಾಗಿಯೇ ಇತ್ತು. ಅದನ್ನೆಲ್ಲ ವಿಸ್ತಾರವಾಗಿ ವರ್ಣಿಸಲು ಬಹುಕಾಲ ಬೇಕಾಗುತ್ತದೆ. ಒಂದೊಂದನ್ನೂ ಕುರಿತು ಕೆಲವು ಮಾತನ್ನು ಹೇಳಿ ಮುಂದೆ ಸಾಗುತ್ತೇನೆ. ಈ ಅನುಭವವನ್ನೆಲ್ಲ ಪುಸ್ತಕ ರೂಪದಲ್ಲಿ ಬರೆಯಬೇಕೆಂಬ ಆಸೆಯಿದೆ; ಕೆಲವಂತೂ ವಿಲಕ್ಷಣವಾದವು. ನನ್ನ ಆಲಸ್ಯವನ್ನು ತಳ್ಳಿಹಾಕಿ ಬರೆಯಲೇಬೇಕು. ನೋಡೋಣ!

ನಿಜವಾಗಿ ನಯಾಗರ ಪ್ರಕಟನೆಗಳಲ್ಲಿ ಹೊಗಳಿಸಿಕೊಂಡಿರುವಷ್ಟು ಅದ್ಭುತವೇನೂ ಅಲ್ಲ. ಆ್ಯನ್ ಆರ್ಬರ್ ಪಟ್ಟಣದಲ್ಲಿ ನಾನು ಇದ್ದಾಗಲೇ ಒಬ್ಬಿಬ್ಬರ ಬಾಯಲ್ಲಿ ಈ ಮಾತನ್ನು ಕೇಳಿದ್ದೆ. ಆದರೆ ಭೂವಿವರಣೆಯ ಪುಸ್ತಕದಲ್ಲಿ ಇದರ ವಿಷಯವನ್ನು ಓದಿ ನೀವು ಬಾಯಿ ತೆರೆದುಕೊಂಡಿರುತ್ತೀರಿ. ಅಲ್ಲದೆ ಅಮೆರಿಕಕ್ಕೆ ಹೋಗಿ ಕೂಡ ಇವನು ನಯಾಗರವನ್ನು ನೋಡದೆ ಹಾಗೆಯೇ ಬಂದ ಎಂದು ನನ್ನನ್ನು ಹಾಸ್ಯ ಮಾಡುತ್ತೀರಿ ಎನ್ನುವ ಪೇಚಾಟಕ್ಕೆ ಸಿಕ್ಕಿ ನಾನು ನನ್ನ ಜೊತೆಗಾರ ಶ್ರೀ ಕೃಷ್ಣಮೂರ್ತಿಯವರ ಜೊತೆಯಲ್ಲಿ ಅಲ್ಲಿಗೆ ಹೋಗಿ ಬಂದೆ. ರೈಲು ಪ್ರಯಾಣವೇ ಬಲು ಹೊತ್ತು ಹಿಡಿಯಿತು. ಅಲ್ಲಿ ಕಳೆದದ್ದೆಲ್ಲ ಕೆಲವು ಘಂಟೆ ಮಾತ್ರ. ಜಲಪಾತ ಎರಡು ಭಾಗದಲ್ಲಿದೆ. ಒಂದು ಸಂಯುಕ್ತ ಸಂಸ್ಥಾನದ ಭಾಗ, ಇನ್ನೊಂದು ಕೆನಡಾ ದೇಶದ ಭಾಗ. ನಾವು ಕೆನಡಾ ಪ್ರದೇಶಕ್ಕೆ ಹೋಗುವ ಹಾಗಿರಲಿಲ್ಲ. ಹಾಗಲ್ಲ! ಹೋಗಬಹುದಾಗಿತ್ತು. ಹೋಗಿದ್ದರೆ ಮತ್ತೆ ಸಂಯುಕ್ತ ಸಂಸ್ಥಾನದ ಭಾಗಕ್ಕೆ ಹೆಜ್ಜೆ ಇಡುವ ಹಾಗಿರಲಿಲ್ಲ! ಅದು ವೀಸಾ ಗಲಾಟೆ. ಆದರೆ ಕೆನಡಾ ದೇಶದ ಭಾಗದ ಜಲಪಾತವೇ ಹೆಚ್ಚು ವಿಶಾಲ, ಸುಂದರ ಎನ್ನುತ್ತಾರೆ. ಇದು "ದೂರದ ಬೆಟ್ಟ ನುಣ್ಣಗೆ" ಎಂಬ ರೀತಿಯದೇನೂ ಅಲ್ಲ! ಜಲಪಾತ ಅಗಲವಾಗಿದೆ, ಎತ್ತರ ಬಲುಕಡಿಮೆ, ನೂರುನೂರಿಪ್ಪತ್ತು ಅಡಿ ಮಾತ್ರ. ಜೋಗದ ಜಲಪಾತಕ್ಕೂ ಇದಕ್ಕೂ ಹೋಲಿಕೆಯೇ ಇಲ್ಲ. ಅದು ಇದಕ್ಕಿಂತ ಎಷ್ಟೊಂದು ಸುಂದರ, ಭವ್ಯ. ನೀವು ಕ್ಷಿಪ್ರದಲ್ಲಿಯೇ ಜೋಗದ ಜಲಪಾತವನ್ನು ನೋಡಲೇಬೇಕು; ಅದಕ್ಕೆ ಏರ್ಪಾಡನ್ನೂ ಮಾಡಬೇಕು.

(ಈ ಪತ್ರದಲ್ಲಿಯೇ ತೀನಂಶ್ರೀಯವರು ಯೋಸೇಮಿಟಿ ಪ್ರವಾಸದ ವಿವರಗಳನ್ನು ಕೊಟ್ಟಿತುತ್ತಾರೆ. ಆದರೆ ಈ ಭಾಗವನ್ನು 'ನಂಟರು' ಪುಸ್ತಕದ 'ಪ್ರವಾಸಿ' ಪ್ರಬಂಧದಲ್ಲಿ ಸೇರಿಸುವುದರಿಂದ ಇಲ್ಲಿ ಮತ್ತೆ ಕೊಟ್ಟಿಲ್ಲ... ಆದರೆ ಅವರ ಏಕಾಂಗಿತನದ ವಿಷಯವನ್ನು ಮುಂದುವರಿಸುತ್ತಾ.......)

ಹಿಂದೆ ತಾಜ್‌ಮಹಲ್‌ನ್ನು ನೋಡಿದಾಗ ಈ ಅನುಭವ ಬಂದಿತ್ತು. ಮತ್ತೆ ಈ ದೇಶದಲ್ಲಿ ಯೋಸೇಮಿಟ ಗ್ರ್ಯಾಂಡ್‌ಕ್ಯಾನ್ಯನ್ ಇವನ್ನು ನೋಡಿದಾಗ ಬಂದಿತು. ಆದರೆ ನಮ್ಮ ಮನೆಯವರೆಲ್ಲರನ್ನೂ ಕರೆದುಕೊಂಡು ಇಲ್ಲಿಗೆ ಬರುವುದು ಹೇಗೆ ಸಾಧ್ಯ. ಅದಕ್ಕೆ ಹಣಬೇಕು ಸೌಕರ್ಯಬೇಕು!! – ನಮ್ಮ ದೇಶದಲ್ಲಿ ಇರುವ ಅನೇಕ ಸುಂದರ ಪ್ರದೇಶಗಳಿಗಾದರೂ ಜೊತೆಗೂಡಿ ಹೋಗಿ ಕೆಲವುಕಾಲ ಕಳೆಯುವುದೊಂದೇ ಮಾರ್ಗ.

ನಮ್ಮಲ್ಲಿ ಸುಂದರವಾದ ಜಾಗಗಳು ಬೇಕಾದಷ್ಟಿವೆ. ಆದರೆ ಪ್ರವಾಸಿಗಳಿಗೆ ಇಲ್ಲಿರುವಂತೆ ಸೌಕರ್ಯಗಳನ್ನು ಏರ್ಪಡಿಸಿರುವುದಿಲ್ಲ. ಪ್ರಯಾಣದ ಕಷ್ಟ, ವಸತಿಯ ಕಷ್ಟ, ಊಟ, ತಿಂಡಿಯ ಕಷ್ಟ – ಸಾಕುಸಾಕಾಗಿ ಹೋಗುತ್ತದೆ: ಯಾಕಾದರೂ ಇಲ್ಲಿಗೆ ಬಂದೆವೋ ಎನ್ನಿಸುತ್ತದೆ. ಇಲ್ಲಿ ದುಡ್ಡೊಂದು ಇದ್ದರೆ ಸಾಕು, ಮರುಭೂಮಿಯಲ್ಲೂ ಸುಪ್ಪತ್ತಿಗೆಯ ಮೇಲೆ ಮಲಗಬಹುದು. ರಾಜಭೋಗವನ್ನು ಪಡೆಯಬಹುದು. ನಮ್ಮ ದೇಶದಲ್ಲಿ ದುಡ್ಡಿದ್ದವರಿಗೆ ಕೂಡ ಇದು ದೊರೆಯುವುದು ಕಷ್ಟ! – ಈ ಏರ್ಪಾಡನ್ನು ಮುಂದಾದರೂ ನಮ್ಮವರು ಮಾಡಿ ಪ್ರೇಕ್ಷಕರನ್ನು ಆಕರ್ಷಿಸಬೇಕು.

ಈ ವರ್ಣನೆಯ ಭಾಗವನ್ನು ಇಲ್ಲಿಗೆ ನಿಲ್ಲಿಸಬೇಕು. ಗ್ರ್ಯಾಂಡ್‌ಕಾನ್ಯನ್ ಕುರಿತು ಇನ್ನೊಂದು ಬಾರಿ ಬರೆಯುತ್ತೇನೆ.

ಎಲ್ಲ ಸರಿ, ಹಾಲಿವುಡ್ ವಿಚಾರವೇ ಬರಲಿಲ್ಲ – ಎಂದು ಅದರ ಕನಸನ್ನೇ ಕಾಣುತ್ತಿರುವ ಚಿ॥ ಚಂದ್ರಶೇಖರನೂ ನೀವೂ ಕೇಳಬಹುದು. ಲಾಸ್ ಏಂಜೆಲಿಸ್‌ಗೆ ನಾನು ಹೋಗಿ ಅಲ್ಲಿದ್ದುದ್ದು ನಿಜ. ಹಾಲಿವುಡ್ ಆ ಮಹಾ ನಗರದ ಭಾಗವೆಂಬುದೂ ನಿಜ. ಅಲ್ಲಿ ನಡೆದದ್ದೇ ಒಂದು ದೊಡ್ಡ ಕಥೆ, "ತಾರಾದರ್ಶನ" ಎಂಬ ಒಂದು ಪ್ರಬಂಧವನ್ನೇ ಬರೆಯಬೇಕೆಂದಿದ್ದೇನೆ – ಇಷ್ಟರಲ್ಲೇ ಬರೆಯಬೇಕಾಗಿತ್ತು, ಆದರೆ ನನ್ನ ಆಲಸ್ಯ ನಿಮಗೆ ತಿಳಿದೇ ಇದೆಯಲ್ಲ. "ವೀಸಾ", "ಸೂಟ್‌ಕೇಸ್" ಇವುಗಳಂತೆ ಇದು ಕೂಡ ನನ್ನ ವಿಚಿತ್ರ ಅನುಭವಗಳಲ್ಲಿ ಒಂದು – ಅದನ್ನು ಓದಿದಾಗ ಮಾತ್ರ ನಿಮಗೆ ನನ್ನ ಮಾತಿನ ಪೂರ್ಣ ಅರ್ಥ ತಿಳಿಯುತ್ತದೆ, ಸದ್ಯಕ್ಕೆ ಇಷ್ಟು ಮಾತ್ರ ಹೇಳುತ್ತೇನೆ. ನಾನು ಯಾವ "ತಾರೆ"ಯನ್ನೂ ನೋಡಲಿಲ್ಲ. ಯಾವ 'ಸ್ಟುಡಿಯೋ'ವಿಗೂ ಹೋಗಲಿಲ್ಲ. "ತಾರೆ"ಯರು ("ತಾರ"ರು ಎನ್ನಬೇಕೋ ಗಂಡಸರಿಗೆ?) ವಾಸಮಾಡುವ ಬಗೆಬಗೆಯ ಮನೆಗಳನ್ನು ಬಸ್ಸಿನಲ್ಲಿ ಕುಳಿತು ಹೋಗುತ್ತಾ ನೋಡಿದೆವು. ಅವರ ಹೆಸರು ಕೂಡ ನನಗೆ ನೆನಪಿಲ್ಲ. Ambassador Hotel ಎಂಬ ಕಡೆ ತಾರಿಕೆಯರು (Starlets) ಇಳಿಹೊತ್ತಿನಲ್ಲಿ ಬಂದು ಈಜಾಡಿ, ಫೋಟೋ ತೆಗೆಸಿಕೊಳ್ಳುವ ಈಜುವ ಕೊಳವನ್ನು ಬೆಳಗ್ಗೆ ಸುಮಾರು ಒಂಬತ್ತು ಘಂಟೆಗೆ ನೋಡಿದೆನು. ಆಗ ಯಾವ ತಾರೆಯಾಗಲಿ, ತಾರಿಕೆಯಾಗಲಿ ನೆಲ, ನೀರು, ಆಕಾಶ ಒಂದು ಕಡೆಯೂ ಇರಲಿಲ್ಲ!

ಹೀಗೆ ನಯಾಗರ, ಹಾಲಿವುಡ್ ಎರಡು ಕಡೆಯೂ ನನಗಿಂತ ಹೆಚ್ಚಾಗಿ ನಿಮಗೆ ಆಶಾಭಂಗವಾಗಿದೆ. ಲೋಕ ಹೀಗೆಯೇ!

Palomar Mountain Observatory, Santa Fe ಎಂಬ ಪಟ್ಟಣ, ಅಮೇರಿಕದ "ಇಂಡಿಯನ್"ರ ವಸತಿಗಳು, ನೃತ್ಯಗಳು, Rocky Mountainನ ಕೆಲವು ಭಾಗ, Columbus ನಗರ – ಇವನ್ನೆಲ್ಲ ನೋಡಿಕೊಂಡು – ನೂರಾರು ಡಾಲರುಗಳನ್ನು ವೆಚ್ಚಮಾಡಿ ಸಾವಿರಾರು ಮೈಲಿಗಳನ್ನು ಸುತ್ತಿ, ಹಲವು ರೀತಿಯ ಹಲವು ಅಭಿಪ್ರಾಯದ ಜನರನ್ನು ನೋಡಿ, ಅವರೊಂದಿಗೆ ಮಾತಾಡಿ – ಕಡೆಗೆ ಫಿಲಡೆಲ್ಫಿಯಾಕ್ಕೆ ೧೭ನೆಯ ತಾರೀಖು ಬಂದೆ.

ಕೊಲಂಬಸ್ ನಗರವನ್ನು ಕುರಿತು ಎರಡು ಮಾತು ಬರೆಯಬೇಕು. ಅಲ್ಲಿ ಪ್ರೊ॥ ಹಿರಿಯಣ್ಣನವರ ಮೊಮ್ಮಗ ಶ್ರೀ ಜಯರಾಮ್ (ಈತನ ವಿಷಯವನ್ನು ನಿಮ್ಮ ತಾಯಿಗೆ ನಾನು ಹಿಂದೆ ಹೇಳಿದ್ದ ಜ್ಞಾಪಕ. ಡೆಲ್ಲಿಯಲ್ಲಿ ಈತನನ್ನು ಮೊದಲ ಬಾರಿ ನಾನು ಕಂಡದ್ದು, ಒಳ್ಳೆಯ ಹುಡುಗ), ಶ್ರೀ ಮೂರ್ತಿರಾಯರ ಜ್ಞಾತಿಗಳಾದ ರಿಟೈರ್ಡ್ ಅಮಲ್ದಾರ್ ಶಾಮಣ್ಣನವರ ಮಗ ಡಾ॥ ನರಸಿಂಹ ಮೂರ್ತಿ ಅವರು ಇದ್ದಾರೆ. ಅವರು ಅಲ್ಲಿ ನನಗೆ ಮಸಾಲೆ ದೋಸೆ ಮಾಡಿಕೊಟ್ಟರು.

* * *

ಫಿಲಡೆಲ್ಫಿಯ, ಅಕ್ಟೋಬರ್ ೮, ೧೯೫೫

ಚಿ॥ ಸೌ॥ ವತಿಗೆ

ಈಗ ನಾನು ತೆಗೆದುಕೊಂಡಿರುವ apartment ಒಟ್ಟಿನ ಮೇಲೆ ಅನುಕೂಲವಾಗಿದೆ. ಅಡಿಗೆಯ ಕೋಣೆ ಆ್ಯನ್ ಆರ್ಬರಿನಲ್ಲಿ ಇದ್ದದ್ದಕ್ಕಿಂತ ದೊಡ್ಡದು. ಗ್ಯಾಸ್ ಒಲೆಯಿದೆ. ಇಷ್ಟ ಬಂದರೆ, ಅಭ್ಯಾಸವಿದ್ದರೆ ಒಂದೇ ಸಲಕ್ಕೆ ನಾಲ್ಕು ಪಾತ್ರೆಗಳಲ್ಲಿ ಪಾಕ ಮಾಡಬಹುದು. ಪಕ್ಕದಲ್ಲೇ sink ಎಂದರೆ ತೊಳೆಯುವ "ಬಚ್ಚಲು" (ಎತ್ತರದಲ್ಲಿ), ಬೀಸಿನೀರಿನ ತಣ್ಣೀರಿನ ನಲ್ಲಿಗಳೊಡನೆ ಇದೆ. ರೆಫ್ರಿಜಿರೇಟರ್ ಅಂತೂ ಇದ್ದೇ ಇದೆ. ಹಾಲು ಮೊಸರು (yoghurt) ಮಜ್ಜಿಗೆ, ಬೆಣ್ಣೆ, ಕಿತ್ತಳೆ ರಸ, ಕಾಯಿಪಲ್ಯ, ಹಣ್ಣುಗಳು, ಬ್ರೆಡ್‌ಕೂಡ ಎಲ್ಲವನ್ನೂ ಇದರಲ್ಲಿ ಮೂರುನಾಲ್ಕು ದಿನವಾದರೂ ಕೆಡದಂತೆ ಇಡಬಹುದು. ಮನೆಗೆಲಸಕ್ಕೆ ಅಮೇರಿಕ ಸ್ವರ್ಗ. ಅನೇಕ ಅಡಿಗೆಯ ಸಾಮಗ್ರಿಗಳನ್ನು ಅರ್ಧ ಸಿದ್ಧಪಡಿಸಿ ಡಬ್ಬಿಗಳಲ್ಲಿ ಭದ್ರಪಡಿಸಿ ಮಾರುತ್ತಾರೆ. ಇದರಿಂದ ಅಡಿಗೆಯನ್ನು ಬೇಗ ಮಾಡಿ ಮುಗಿಸಬಹುದು. ನನಗೂ ಅಡಿಗೆಯ ವಿಧಾನವನ್ನು ನೀನು ಸ್ವಲ್ಪ ಬಲಾತ್ಕಾರಮಾಡಿ ಹೇಳಿಕೊಟ್ಟಿದ್ದರೆ ಇಲ್ಲಿ ನಾನು ರುಚಿರುಚಿಯಾದ ತಿಂಡಿಗಳನ್ನು ಮಾಡಿಕೊಳ್ಳಬಹುದಾಗಿತ್ತು! ಈಗ ಅನ್ನ, "ಸಾರು-ಹುಳಿ" ಉಪ್ಪಿಟ್ಟು, ಇವುಗಳಿಂದಲೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಒಂದು ದಿನ ರವೆ ದೋಸೆ ಮಾಡುವುದಕ್ಕೆ ಹೋದೆ; ಕೆಟ್ಟು ಒಂದು ಬಗೆಯ ಸೀದ ಉಪ್ಪಿಟ್ಟಾಯಿತು! ಅಂದಹಾಗೆ ಕೆಲವು ದಿನಗಳ ಕೆಳಗೆ ಒಂದು ಭಾರಿ ಬದನೆಕಾಯನ್ನು ಕೊಂಡು ತಂದೆ; ಅದರ ಬೆಲೆ ಹತ್ತು ಸೆಂಟು (ಎಂಟಾಣೆ). ಒಂದು ಬದನೆಕಾಯಿ ಒಂದು ತೆಂಗಿನಕಾಯಿನ ಗಾತ್ರವಿತ್ತು. ಅದರಲ್ಲಿ ಒಂದು ದಿನ ಪಲ್ಯ, ಒಂದು ದಿನ ರವೆಯವಾಂಗೀಭಾತು ಇಷ್ಟನ್ನೂ ಮಾಡಿದೆ. ಇದನ್ನು ಮುಗಿಸುವುದು ಹೇಗೆ ಎನ್ನುವಷ್ಟು ದೊಡ್ಡದಾಗಿತ್ತು ಆ ಬದನೆಕಾಯಿ. ಹಿಂದಿನಂತೆಯೇ

ಬೆಳಗಿನ ಉಪಾಹಾರ ಒಪ್ಪೊತ್ತಿನ ಊಟ ಇಷ್ಟನ್ನೂ ಮನೆಯಲ್ಲಿ ಮಾಡಿಕೊಳ್ಳುತ್ತೇನೆ. ಒಂದು ಹೊತ್ತು ಹೊರಗೆ ರೆಸ್ಟೋರೆಂಟ್ ಅಥವಾ ಕ್ಯಾಫಿಟೇರಿಯಾದಲ್ಲಿ ಊಟ ಮಾಡುತ್ತೇನೆ. ಹೆಚ್ಚು ತೊಂದರೆ ಪಟ್ಟುಕೊಳ್ಳದೆ ನನ್ನ ಆಹಾರವನ್ನು ಒದಗಿಸಿಕೊಳ್ಳುತ್ತಿದ್ದೇನೆ. ನನ್ನ ಊಟ ಉಪಚಾರದ ವಿಚಾರವಾಗಿ ನೀವು ಯಾವ ಚಿಂತೆಯನ್ನು ಹತ್ತಿಸಿಕೊಳ್ಳಬೇಡಿ. ನೀವು ಅಲ್ಲಿ ಬಗೆಬಗೆಯಾದ ಊಟತಿಂಡಿಗಳನ್ನು ಹಬ್ಬದ ದಿನ ಮಾಡಿದರೆ ನಾನು ಇಲ್ಲಿ ಹಾಲು ಬೆಣ್ಣೆ ಕ್ರೀಮ್ ಹಣ್ಣುಗಳನ್ನು ಯಥೇಚ್ಛವಾಗಿ ತೆಗೆದುಕೊಳ್ಳುತ್ತೇನೆ. ಇಲ್ಲಿಗೆ ಬಂದಮೇಲೆ ನಾನು ತಿಂದಿರುವಷ್ಟು ಸೇಬಿನ ಹಣ್ಣು, ಸೀ ದ್ರಾಕ್ಷಿಯನ್ನು ಜೀವಾವಧಿ ತಿಂದಿರಲಿಲ್ಲ. – ಆದಕಾರಣ ಚಿಂತೆಗೆ ಕಾರಣವಿಲ್ಲ.

* * *

ಫಿಲಡೆಲ್ಫಿಯ, ಅಕ್ಟೋಬರ್ ೨೯, ೧೯೫೫

ಚಿ॥ ಸೌಭಾಗ್ಯವತಿಗೆ

ಅಲ್ಲಿ ಈ ವೇಳೆಗೆ ನವರಾತ್ರಿಯ ಹಬ್ಬ ಮುಗಿದು ಇನ್ನು ದೀಪಾವಳಿಯನ್ನು ನೀವು ಎದುರು ನೋಡುತ್ತಿರಬೇಕು. ಇಲ್ಲಿಯವರಿಗೆ ಆ ಹಬ್ಬ ಯಾವುದೂ ಇಲ್ಲ. ದೀಪಾವಳಿಯ ಹೆಸರನ್ನು ಕೆಲವರು ಕೇಳಿದ್ದಾರೆ, ಅಷ್ಟೆ. ಆದರೆ ನಮ್ಮ ದೇಶದ ಅನೇಕ ಮಂದಿ (ಮುಖ್ಯವಾಗಿ ವಿದ್ಯಾರ್ಥಿಗಳು) ಇಲ್ಲಿದ್ದಾರೆ. ಕೆಲವರು ಕುಟುಂಬ ಸಮೇತ ಬಂದಿದ್ದಾರೆ. ಇನ್ನು ಒಬ್ಬಿಬ್ಬರು ಇಲ್ಲಿಯೇ ಕುಟುಂಬವನ್ನು ಸಂಪಾದನೆ ಮಾಡಿದ್ದಾರೆ. ಎಂದರೆ ಅಮೇರಿಕದ ಹುಡುಗಿಯನ್ನೋ ಅಪರೂಪವಾಗಿ ಅಮೇರಿಕದ ಹುಡುಗನನ್ನೋ ಮದುವೆಯಾಗಿದ್ದಾರೆ! ಇವರೆಲ್ಲ ಸೇರಿ ನವೆಂಬರ್ ೧೮ರಂದು ದೀಪಾವಳಿಯನ್ನು ಆಚರಿಸಬೇಕೆಂದು ಆಲೋಚಿಸುತ್ತಿದ್ದಾರೆ. ಇಲ್ಲಿ Indian Students Association ಎಂಬ ಸಂಸ್ಥೆ ಇದೆ. ಅದರ ಮೊದಲನೆಯ ಸಭೆ ಮೂರು ವಾರದ ಕೆಳಗೆ ಸೇರಿತ್ತು, ನಾನೂ ಹೋಗಿದ್ದೆ. ಕಳೆದ ವರ್ಷ ಈ ಸಂಸ್ಥೆಯವರು ದೀಪಾವಳಿಯನ್ನು ಜೋರಾಗಿ ನಡೆಸಿದರಂತೆ; ಈ ಸಲವೂ ನಡೆಯುವಂತೆ ತೋರುತ್ತದೆ! ಊಟ ತಿಂಡಿ ಇತ್ಯಾದಿ. ಆ ದಿನ ನಮ್ಮ ದೇಶದ ಅನೇಕರನ್ನು ನೋಡಲು ಸಾಧ್ಯವಾಗಬಹುದು. ಆದರೆ ಅದು ಇನ್ನೂ ಮೂರು ವಾರಕ್ಕೆ.

ಈ ನಡುವೆ ನಾನು ಒಂದು ಬಾರಿ ನ್ಯೂಯಾರ್ಕಿಗೆ, ಒಂದು ಬಾರಿ ಹಾರ್ವರ್ಡ್ ವಿಶ್ವವಿದ್ಯಾಲಯವಿರುವ ಕೇಂಬ್ರಿಜ್ ಎಂಬ ಸ್ಥಳಕ್ಕೆ ಎರಡೆರಡು ದಿನದ ಮಟ್ಟಿಗೆ ಹೋಗಿ ಬರಬೇಕಾಗಿದೆ. ಈ ಕೇಂಬ್ರಿಜ್ ಇರುವುದು ಮಸಾಚುಸೆಟ್ಸ್ ಎಂಬ ಇಲ್ಲಿಯ ಸಂಸ್ಥಾನದಲ್ಲಿ. ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವ ಬಾಸ್ಟನ್ ನಗರದ ಹತ್ತಿರ. ಇಂಗ್ಲೆಂಡಿನ ಕೇಂಬ್ರಿಜ್ ಅಲ್ಲ! ಯುರೋಪಿನ ಜನ ಈ ದೇಶಕ್ಕೆ ಹೊಸದಾಗಿ ಬಂದಾಗ ಅಲ್ಲಿಯ ಹೆಸರುಗಳನ್ನು ಇಲ್ಲಿ ತಾವು ಕಟ್ಟಿದ ಊರುಗಳಿಗೆ ಅನೇಕ ಬಾರಿ ಇಟ್ಟರು. ಕೇಂಬ್ರಿಜ್ ಎಂಬ ಹೆಸರು ಹಾಗೆ ಇಲ್ಲಿಯೂ ಬಂದಂತೆ ಕಾಣುತ್ತದೆ. ಅಂತೂ ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದಂತೆಯೇ ಇಲ್ಲಿಯ ಕೇಂಬ್ರಿಜ್‌ನಗರದ ಹಾರ್ವರ್ಡ್ ವಿಶ್ವವಿದ್ಯಾಲಯವೂ ಅತ್ಯಂತ ಪ್ರಸಿದ್ಧವಾಗಿದೆ.

ಈ ದೇಶದಲ್ಲಿ ಪ್ಯಾರಿಸ್, ಲಂಡನ್ ಈ ಊರುಗಳೆಲ್ಲ ಉಂಟು! ಇವು ಯಾವುವೂ ಕೇಂಬ್ರಿಡ್ಜಿನ ಹಾಗೆ ಪ್ರಖ್ಯಾತವಾಗಿಲ್ಲ. ಕ್ಯಾಲಿಫೋರ್ನಿಯ ಸಂಸ್ಥಾನದಲ್ಲಿ ಡೆಲ್ಲಿ (Delhi) ಎಂಬ ಒಂದು ಊರು ಕೂಡ ಇದೆ. ಬರ್ಕ್ಲಿಯಿಂದ ಯೋಸೆಮಿಟಿಗೆ ಹೋಗುವಾಗ ಮರ್ಸೇಡ್ ಎಂಬ ಊರಿನ ಹತ್ತಿರ ಹತ್ತಿರ ಅದು ಉಂಟೆಂದು ರೈಲ್ವೆ ವೇಳಾಪತ್ರಿಕೆಯಿಂದ ತಿಳಿಯಿತು. ನಮ್ಮ ರೈಲು ಅಲ್ಲಿ ನಿಲ್ಲಲಿಲ್ಲ. ಆದಕಾರಣ ಆ ಸ್ಟೇಷನನ್ನು ನೋಡಿ ಗುರುತಿಸಲು ಆಗಲಿಲ್ಲ. ಕ್ಯಾಲಿಫೋರ್ನಿಯಕ್ಕೆ ಕಳೆದ ಶತಮಾನದಲ್ಲಿ ಕೆಲವು ಮಂದಿ ಸಿಕ್ಕರು ಬಂದು ನೆಲಸಿದರಂತೆ. ಈಗಲೂ ಅವರು ಬೇಸಾಯ ಮಾಡಿಕೊಂಡು ಜೀವಿಸುತ್ತಿದ್ದಾರೆ. ಅವರೇನಾದರೂ ಈ "ಡೆಲ್ಲಿ" ನಗರವನ್ನು ಸ್ಥಾಪಿಸಿದರೋ ಹೇಗೋ ತಿಳಿಯದು? ಯಾರನ್ನಾದರೂ ಸರಿಯಾಗಿ ವಿಚಾರಿಸಿ ತಿಳಿದುಕೊಳ್ಳಬೇಕು.

ವಿಷಯ ಎಲ್ಲಿಗೋ ಹೋಯಿತು ಆದರೆ ಕಾಗದ ತುಂಬಲು ಏನಾದರೂ ಬೇಕಲ್ಲ, ಈ ಬೆಳಗ್ಗೆ ಏನೂ ಅಷ್ಟಾಗಿ ಹೊಳೆಯುತ್ತಿಲ್ಲ. ಆದಕಾರಣ ಮುಖ್ಯವಾದ ವಿಷಯಗಳಿಗೆ ಬರುತ್ತೇನೆ.

ನನ್ನಿಂದ ಇಲ್ಲಿಯ ಅಡಿಗೆಯ ವಿಷಯ ತಿಳಿದುಕೊಳ್ಳುವುದಾಗಿ ನೀನು ಹೆಚ್ಚು ಆಸೆ ಪಟ್ಟುಕೊಳ್ಳಬೇಡ. ನಾನು ಯಾವ ಅಡಿಗೆಯನ್ನೂ ಕಲಿತಿಲ್ಲ. ಕಲಿಯುವ ಸಂಭವವೂ ಕಡಿಮೆ. ನಾನು ವಿಮರ್ಶಕ, ಕವಿ ಅಥವಾ ಕಥೆಗಾರನಲ್ಲ ಎಂಬುದು ನಿಮಗೆ ಗೊತ್ತಿಲ್ಲವೆ? ಅಡಿಗೆಯ ರುಚಿಯನ್ನು ಸವಿದು ಟೀಕೆ ಮಾಡಬಲ್ಲೆ; ಅಷ್ಟೇ ಹೊರತು ನಾನೇ ಅಡಿಗೆ ಮಾಡಲಾರೆ. (ನಿನ್ನೆ ಬೆಂಡೆಕಾಯಿ ಹುಳಿ ಮಾಡಿದ್ದೆ. ಪಾತ್ರೆಯ ತಳವೆಲ್ಲ ಸೀದು ಹೋಗಿತ್ತು!)

* * *

ಫಿಲಡೆಲ್ಫಿಯ, ನವೆಂಬರ್ ೪, ೧೯೫೫

ಚಿ॥ ಸೌ॥ ನಾಗರತ್ನಳಿಗೆ

ಶ್ರೀ ಹನಿಗ್ಸ್‌ವಾಲ್ಡ್ ತುಂಬ ಒಳ್ಳೆಯವರು. ನಾನು ಈ ಊರಿಗೆ ಬಂದ ಕೂಡಲೆ ಅವರ ಮನೆಯಲ್ಲಿ ಮೂರು ದಿನ ಹಾಯಾಗಿದ್ದ ವಿಷಯವನ್ನು ನಿಮಗೆ ತಿಳಿಸಿದ್ದೆನಲ್ಲವೆ. ಎರಡು ವಾರಗಳ ಹಿಂದೆ ಮತ್ತೆ ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು. ಶನಿವಾರ ರಾತ್ರಿ ಅಲ್ಲಿಯೇ ಇದ್ದು ಭಾನುವಾರ ಕೆಲವು ರಮ್ಯವಾದ ಪ್ರದೇಶಗಳನ್ನು ಅವರ ಕಾರಿನಲ್ಲಿ ಕುಳಿತು ನೋಡಿದೆನು. ಸಂಜೆ ಕಾರಿನಲ್ಲಿ ಮನೆಗೆ ತಂದು ಬಿಟ್ಟರು. (ಶರದೃತುವಿನಲ್ಲಿ ಈ ದೇಶದ ಮರಗಳ ಎಲೆಗಳು ಹಸುರಿನಿಂದ ಹೊಂಬಣ್ಣಕ್ಕೆ ಕೆಂಪಿಗೆ ತಿರುಗುವುದನ್ನು ನೋಡಲು ಅಂದವಾಗಿರುತ್ತದೆ. ಉದುರುವ ಮೊದಲು ಮರಗಳು ಬಣ್ಣ ತುಂಬುತ್ತವೆ. ದೊಡ್ಡ ಕಾಡಿನಲ್ಲಿ, ಮರಗಳ ರಾಶಿಯಲ್ಲಿ ಇಂಥ ವರ್ಣವೈಖರಿಯನ್ನು ಕಣ್ಣು ನೋಡಿ ಮೆಚ್ಚುತ್ತದೆ)– ಮತ್ತೆ ನಾಳೆ ಸಂಜೆ ತಮ್ಮ ಮನೆಗೆ ಶ್ರೀ ಹನಿಗ್ಸ್‌ವಾಲ್ಡ್ ಊಟಕ್ಕೆ ಕರೆದಿದ್ದಾರೆ. ಆದರೆ ಅದನ್ನು ಮುಗಿಸಿಕೊಂಡು ರಾತ್ರಿಯೇ ಸ್ವನಿವಾಸಕ್ಕೆ ಹಿಂತಿರುಗುತ್ತೇನೆ. ಹನಿಗ್ಸ್‌ವಾಲ್ಡ್ ಅವರ ಹೆಂಡತಿಯೂ

ಒಳ್ಳೆಯಾಕೆ. ದಂಪತಿಗಳಿಬ್ಬರೂ ಉದಾರ ಹೃದಯರು. ಈ ದೇಶದಲ್ಲಿ ಹೆಂಡತಿ ಒಪ್ಪದೆ ಗಂಡ ಯಾರನ್ನೂ ಮನೆಗೆ ಕರೆಯುವುದಿಲ್ಲ – ಕರೆಯುವ ಹಾಗೂ ಇಲ್ಲ. ಎಷ್ಟೋ ಸೇವೆಯನ್ನು ಗಂಡನೇ ಹೆಂಡತಿಗೂ ಸಲ್ಲಿಸುತ್ತಾನೆ. ಹೆಂಡತಿ ಕಸೂತಿ ಹಾಕುತ್ತಾ ಕುಳಿತಿರುವಾಗ ಗಂಡ ಆಕೆಗೆ ಕಾಫಿ ತಂದುಕೊಟ್ಟಿದ್ದನ್ನು ನಾನು ನೋಡಿದ್ದೇನೆ. ಅಡಿಗೆ ಊಟದ ಪಾತ್ರೆ ತೊಳೆಯಲು ಗಂಡ ಸಹಾಯ ಮಾಡುವುದೂ ಉಂಟು! ಅಮೇರಿಕದಲ್ಲಿ ಹೆಂಗಸರಿಗೆ ಸೌಖ್ಯ ಸೌಕರ್ಯ ಹೆಚ್ಚು!

ಹನಿಗ್ಸ್‌ವಾಲ್ಡ್ ದಂಪತಿಗಳಿಗೆ ಇಬ್ಬರು ಮಕ್ಕಳಿದ್ದಾರೆ. Francs, Ann ಎಂದು ಆ ಹುಡುಗಿಯರ ಹೆಸರು. ಮೊದಲನೆಯವಳಿಗೆ ಏಳು ವರ್ಷ, ಕಿರಿಯವಳಿಗೆ ಐದು ವರ್ಷ. ಇಬ್ಬರೂ ಚುರುಕು. ಮೊದಲನೆಯವಳು ಮಾತನ್ನು ವಯಸ್ಕರಂತೆ ಆಡುತ್ತಾಳೆ. ವಾಕ್ಯಗಳನ್ನು ಸೊಗಸಾಗಿ ಕಟ್ಟುತ್ತಾಳೆ. ನನ್ನನ್ನು ಕಂಡರೆ ಇಬ್ಬರಿಗೂ ಅದರಲ್ಲೂ ಮೊದಲನೆಯವಳಿಗೆ ವಿಶ್ವಾಸ. ಆದರೆ ಹುಡುಗಿಯರ ಹಠ ಹೆಚ್ಚು.

* * *

ಫಿಲಡೆಲ್ಫಿಯ, ನವೆಂಬರ್ ೧೨, ೧೯೫೫

ತೀ॥ ಸೂರಣ್ಣಯ್ಯನವರ ಸ॥ಕ್ಕೆ

ಚೈತ್ರ ಬಹುಳ ಪಂಚಮಿ ೧೯೫೬ರ ಏಪ್ರಿಲ್ ತಿಂಗಳಲ್ಲಿ ಯಾವಾಗ ಬರುತ್ತದೆಂಬುದನ್ನು ತಿಳಿದು ಬರೆಯಬೇಕೆಂದು ಹಿಂದಿನ ಒಂದು ಕಾಗದದಲ್ಲಿ ಸೂಚಿಸಿದ್ದೆ. ಅದನ್ನು ಆದಷ್ಟು ಬೇಗ ನನಗೆ ತಿಳಿಸಿದರೆ ಅನುಕೂಲ. ಆ ವೇಳೆಯೊಳಗಾಗಿ ನಾನು ಧಾರವಾಡದಲ್ಲಿ ಇರಲು ಆಗುವಂತೆ, ಪ್ರಯಾಣದ ಏರ್ಪಾಡು ಮಾಡಬೇಕಾಗುತ್ತದೆ. ಅದರ ವ್ಯವಸ್ಥೆಯನ್ನು ಈಗಿನಿಂದ ಆಲೋಚಿಸಿ ರಾಕ್‌ಫಲರ್ ಸಂಸ್ಥೆಯವರಿಗೆ ನಾನು ಹೇಳಬೇಕು – ಆದಕಾರಣ ದಯವಿಟ್ಟು ಬೇಗ ತಿಳಿಸಿ.

(ತೀ.ನಂ.ಶ್ರೀಯವರು ಮೇಲೆ ಸೂಚಿಸಿರುವ ದಿನ ಅವರ ತಾಯಿಯವರ–ನಮ್ಮ ಅಜ್ಜಿಯ, ವಾರ್ಷಿಕ ಶ್ರಾದ್ಧದ ದಿನ. ನಮ್ಮ ತಂದೆ ಅವರ ತಂದೆ ಮತ್ತು ತಾಯಿಯವರ ವಾರ್ಷಿಕ ಶ್ರಾದ್ಧ ಆಚರಣೆಯನ್ನು ಪ್ರತಿವರ್ಷವೂ ಕ್ಲುಪ್ತವಾಗಿ ಮಾಡುತ್ತಿದ್ದರು. ಒಂದು ಸಾರಿಯೂ ತಪ್ಪಿಸಿದವರಲ್ಲ. ತಮ್ಮ ತಂದೆಯವರ ಶ್ರಾದ್ಧವನ್ನು ೧೯೫೫ರ ಜೂನ್ ತಿಂಗಳಲ್ಲಿ ಮುಗಿಸಿಕೊಂಡು ಅಮೆರಿಕಕ್ಕೆ ಪ್ರಯಾಣ ಮಾಡಿ ೧೯೫೬ರ ಏಪ್ರಿಲ್ ತಿಂಗಳಿನಲ್ಲಿ ಅವರ ತಾಯಿಯವರ ಶ್ರಾದ್ಧದ ಸಮಯಕ್ಕೆ ಮೊದಲು ಧಾರವಾಡಕ್ಕೆ ಹಿಂತಿರುಗಿದರು. –ತೀ.ಶ್ರೀ.ನಾ.)

* * *

ಫಿಲಡಲ್ಫಿಯ, ಡಿಸೆಂಬರ್ ೨, ೧೯೫೫

ಚಿ॥ ಸೌಭಾಗ್ಯವತಿಗೆ

ನಿಮ್ಮ ೧೯ನೆಯ ತಾರೀಖಿನ ಕಾಗದ ಇಲ್ಲಿಗೆ ನನಗೆ ೨೯ನೆಯ ಮಂಗಳವಾರ ಸಂಜೆ ಕೈ ಸೇರಿತು. ಹತ್ತುದಿನದ ಅಂತರ! ಶನಿವಾರ, ಸೋಮವಾರ ಟಪಾಲನ್ನು ನೋಡಿನೋಡಿ ಮನಸ್ಸಿಗೆ ತುಂಬ ವ್ಯಸನವಾಗಿತ್ತು. ಅಲ್ಲಿ ನಿಮಗೆ ಆಗುವಂತೆಯೇ ಇಲ್ಲಿ ನನಗೆ ಕೂಡ ಟಪಾಲು ತಡವಾಯಿತೆಂದರೆ ಮನಸ್ಸು ಹೇಗೆಹೇಗೋ ಆಗುತ್ತದೆ. ಆದರೆ, ದೂರದೇಶದ ಪ್ರವಾಸದಲ್ಲಿ ಇದೊಂದು ಅನಿವಾರ್ಯವಾದ ಭಾಗವೆಂದು ಸಮಾಧಾನ ತಂದುಕೊಳ್ಳಬೇಕಾಗಿದೆ. ಮತ್ತೆ ೨೬ನೆಯ ತಾರೀಖಿನ ಕಾಗದ ನಿನ್ನೆ ಎಂದರೆ ಐದೇ (ಅಥವಾ ಐದೂವರೆ ದಿನದಲ್ಲಿ) ಕೈಸೇರಿತು. ನಿನ್ನೆಯ ಸಂಜೆ ಡಾ. ಸ್ವಾಡೆಷ್ ಎಂಬ ಡೆನ್ವರ್‌ನಗರದ ಸ್ನೇಹಿತರೊಂದಿಗೆ ಮನೆಗೆ ಬಂದಾಗ ನಿನ್ನ ಕಾಗದ ಅನಿರೀಕ್ಷಿತವಾಗಿ ಮುಂಚೆಯೇ ಬಂದು ಕಾದಿತ್ತು! (ಡಾ॥ ಸ್ವಾಡೆಷ್ ಅವರ ಮನೆಯಲ್ಲಿ ಎರಡು ದಿನಗಳನ್ನು ನಾನು ಸೆಪ್ಟೆಂಬರಿನಲ್ಲಿ ಇಲ್ಲಿಗೆ ಬರುವ ಮೊದಲು ಕಳೆದೆ ಎಂಬ ವಿಷಯವನ್ನು ನಿನಗೆ ಆಗಲೆ ತಿಳಿಸಿದ್ದೇನೆ ಎಂದು ನಂಬುತ್ತೇನೆ. ತುಂಬ ವಿಶ್ವಾಸವಾಗಿ ಆಗ ನೋಡಿಕೊಂಡಿದ್ದರು. ಸ್ವಂತ ಕಾರಿನಲ್ಲಿ ರಾಕಿ ಪರ್ವತ ಕೆಲವು ಭಾಗಗಳನ್ನು ತೋರಿಸಿ ಸುತ್ತಾಡಿಸಿದ್ದರು. ಅವರ ಎಳೆಯಮಗು–ಜೋಜೋ (JoJo) ಎಂದು ಕರೆಯುತ್ತಾರೆ– ಮುದ್ದಾಗಿದೆ. ಅದಕ್ಕಿನ್ನೂ ಎರಡು ವರ್ಷ ತುಂಬಿಲ್ಲ. ಅದು ಹೇಗೆ ಮಾತು ಕಲಿಯುತ್ತಿದೆ ಎಂಬುದನ್ನು ಡಾ॥ ಸ್ವಾಡೆಷ್ ನಿನ್ನೆ ವರ್ಣನೆ ಮಾಡಿದರು. ಈತ ದೊಡ್ಡ ವಿದ್ವಾಂಸ; ಭಾಷಾಶಾಸ್ತ್ರದಲ್ಲಿ ಬೇಕಾದಷ್ಟು ಕೆಲಸ ಮಾಡಿದ್ದಾರೆ. ಹೊಸ ಹೊಸ ದಾರಿಗಳನ್ನು ಶೋಧಿಸಿದ್ದಾರೆ. ಕಾರಣಾಂತರದಿಂದ ಕೆಲಸವಿಲ್ಲದೆ ಸದ್ಯಕ್ಕೆ ಮನೆಯಲ್ಲಿ ಕುಳಿತಿದ್ದಾರೆ; ಹೀಗಿದ್ದರೂ ಕೂಡ ಬಿಡುವಿಲ್ಲದ ಹಾಗೆ ಭಾಷಾಶಾಸ್ತ್ರದ ಶೋಧನೆಗಳನ್ನು ಮಾಡುತ್ತಿದ್ದಾರೆ.) ನಿನ್ನೆಯ ಸಂಜೆ ಅವರನ್ನು ಇಲ್ಲಿಯ ಒಂದು ಇಟಾಲಿಯನ್ ರೆಸ್ಟೋರಾಂಟಿಗೆ ಕರೆದುಕೊಂಡು ಹೋಗಿ, ಪ್ರಸಿದ್ಧವಾದ ಪೀಟ್ಸ (pizza) ಎಂಬ ಒಂದು ಬಗೆಯ ರೊಟ್ಟಿಯನ್ನು ಅವರೊಂದಿಗೆ ತಿಂದೆ. ಈ ಪೀಟ್ಸ ಬಲು ರುಚಿ. ಅದನ್ನು ತಿನ್ನುತ್ತಿರುವಾಗ ಈ ಅಡಿಗೆಯನ್ನು ನಮ್ಮಲ್ಲೂ ರೂಢಿಗೆ ತರಬೇಕು ಎಂಬ ಮಾತು ತೆಗೆದೆ. ಹಾಗಾದರೆ ಇಲ್ಲಿಯವರನ್ನು ವಿಚಾರಿಸಿ, ಮಾಡುವ ವಿಧಾನವನ್ನು ತಿಳಿದುಕೊಳ್ಳೋಣ ಎಂದು ಸ್ವಾಡೆಷ್ ಬಡಿಸುವವರನ್ನು ಕರೆದು ಕೇಳಿದರು. ಆಕೆ ಅಡಿಗೆ ಮಾಡುವ ಹುಡುಗನನ್ನು ಕರೆತಂದು ನಮ್ಮ ಬಳಿ ಬಿಟ್ಟಳು. (ನಾನೊಬ್ಬನೇ ಆಗಿದ್ದರೆ ಇಷ್ಟೆಲ್ಲ ಕೇಳುವ ಧೈರ್ಯ ಬರುತ್ತಿರಲಿಲ್ಲ) – ಪೀಟ್ಸ ಮಾಡುವುದು ಅಷ್ಟೇನೂ ಸುಲಭವಲ್ಲ. ಅದಕ್ಕೆ ಬೇಕಾದ ಬ್ರೆಡ್‌ಹಿಟ್ಟನ್ನು ಹೇಗೋ ಒದಗಿಸಿಕೊಳ್ಳಬಹುದು, ಟೊಮ್ಯಾಟೋ ಗೊಜ್ಜನ್ನೂ ಮಾಡಬಹುದು. ಆದರೆ ಚೀಸ್ ಎಂಬ ಬೆಣ್ಣೆಜಾತಿಯ ವಸ್ತು ಬೇಕೇ ಬೇಕು. ಇನ್ನೂ ಕೆಲವು ಮಸಾಲೆ ಸಾಮಾನುಗಳೂ ಬೇಕು. ಮಾಡುವ ರೀತಿಯೂ ತೊಡಕು, ಹೆಚ್ಚುಕಾಲ ಹಿಡಿಯುತ್ತದೆ. ಕೌಶಲ್ಯ ಬೇಕಾಗುತ್ತದೆ. ಅಡಿಗೆ ಮನೆಗೆ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿಯ ಉಪಕರಣಗಳ ಯಂತ್ರಗಳು (ಕುಟ್ಟುವ ಬೀಸುವ ಕಲಸುವ ಯಂತ್ರಗಳು!) ಎಲ್ಲವನ್ನು ಪಾಪ, ರೆಸ್ಟೋರೆಂಟಿನವರು ನಮಗೆ ತೋರಿಸಿದರು. ನೋಡಿ, ಸದ್ಯಕ್ಕೆ ಈ ವಸ್ತು ಅಮೇರಿಕ, ಯೂರೋಪ್–ಇಲ್ಲಿ ಮಾತ್ರ

ಲಭ್ಯವೆಂದುಕೊಂಡು ಬಂದೆ. ಇನ್ನು ಮೇಲೆ ನಾನು ಪೀಟ್ಸ ತಿನ್ನಾವಾಗಲೆಲ್ಲ ನಿಮ್ಮನ್ನು ಜ್ಞಾಪಿಸಿಕೊಂಡು ತಿನ್ನುತ್ತೇನೆ. ನೀವು ಅಲ್ಲಿ ಮಾಡುವ ಭಕ್ಷ್ಯಗಳು ನನಗೆ ಇಲ್ಲವಾದರೆ, ಇಲ್ಲಿಯ ಪೀಟ್ಸ ನಿಮಗೆ ಇಲ್ಲ! ಮುಯ್ಯಿಗೆ ಮುಯ್ಯಿ! – ಈ ಪೀಟ್ಸಕ್ಕೆ "ಅಣಬೆ"ಯನ್ನು ಒಂದು ಕಾಯಿಪಲ್ಯವಾಗಿ ಉಪಯೋಗಿಸುವುದುಂಟು. ನಮ್ಮ ದೇಶದಲ್ಲಿ ಇದನ್ನು ಅಸಡ್ಡೆ ಮಾಡಿದ್ದೇವೆ. ಅಲ್ಲದೆ ಅದರ ಕೆಲವು ಬಗೆಗಳು ವಿಷ. ಯಾವುದು ವಿಷವಲ್ಲ ಎಂಬುದನ್ನು ತಿಳಿದುಕೊಂಡು, ವಿಷವಿಲ್ಲದ, ಹೇಸಿಗೆ ಜಾಗದಲ್ಲಿ ಬೆಳೆಯದ ಜಾತಿಯನ್ನು ಉಪಯೋಗಿಸಿದರೆ ರುಚಿಯಾಗಿರುತ್ತದೆ. ಅಂತೂ "ಅಣಬೆ"ಯ (mushroom) ರುಚಿಯನ್ನು ನಾನು ಇಲ್ಲಿಯೇ ಕಂಡದ್ದು.

ಮಾತು ಎಲ್ಲಿಗೋ ಹೋಯಿತು! – ಊಟ ತಿಂಡಿಯ ಮಾತು ಬಂದರೆ ನಾನು ಹಾಗೆ ಎಂದು ತೋರುತ್ತದೆ.

ಚಿ॥ ಸೌ॥ ನಾಗರತ್ನಳಿಗಾಗಿ ಕೆಲವು ಹಾಸ್ಯದ ಚುಟಿಕೆಗಳನ್ನು ಸಂಗ್ರಹಿಸುತ್ತೇನೆ ಎಂದು ಅವಳಿಗೆ ತಿಳಿಸು.

* * *

ಫಿಲಡೆಲ್ಫಿಯ, ಡಿಸೆಂಬರ್ ೧೫, ೧೯೫೫

ಚಿ॥ ಸೌಭಾಗ್ಯವತಿಗೆ

ನ್ಯೂಯಾರ್ಕಿನಲ್ಲಿ ಸೋಮವಾರ ರಾತ್ರಿ ಶ್ರೀ ಗಿಲ್‌ಪ್ಯಾಟ್ರಿಕ್ ಅವರ ಮನೆಗೆ ಊಟಕ್ಕೆ ಹೋಗಿದ್ದೆ. ಅವರ ಪತ್ನಿ ಅವರು ಇಬ್ಬರೂ ವಿಶ್ವಾಸದಿಂದ ಬರಮಾಡಿಕೊಂಡರು. ಆಕೆ ನನಗಾಗಿ ಶಾಕಾಹಾರವನ್ನು ಸಿದ್ಧಪಡಿಸಿದ್ದರು. ಅನ್ನ, ಬ್ರಾಕೋಲಿ ಎಂಬ ಸೊಪ್ಪಿನ ರುಚಿಯಾದ ಗೊಜ್ಜು, ಸೌತೆಕಾಯಿ ಕ್ರೀಮ್ – ಇವುಗಳ ಕೋಸುಂಬರಿ, ಚಟ್ನಿ, ಸ್ಯಾಲಡ್ ಇತ್ಯಾದಿ. ಅಡಿಗೆ ರುಚಿಯಾಗಿತ್ತು. ನನಗೆ ಈ ಊಟದಲ್ಲಿ ಏನು ಸೇರುತ್ತದೋ ಬಿಡುತ್ತದೋ ಎಂದು ಆಕೆಗೆ ಆತಂಕ. ಹೊಟ್ಟೆ ತುಂಬ ಭೋಜನ ಮಾಡಿದ್ದನ್ನು ನೋಡಿ, ಗೊಜ್ಜನ್ನು ಎರಡೆರಡು ಸಲ ಕೇಳಿ ಬಡಿಸಿಕೊಂಡದ್ದನ್ನು ನೋಡಿ ಆಕೆಗೆ ಸಮಾಧಾನವಾಗಿರಬೇಕೆಂದು ನಂಬುತ್ತೇನೆ. ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಮಗ, ಮಗಳು. ಇನ್ನೂ ಚಿಕ್ಕವಯಸ್ಸಿನವರು, ಶಾಲೆಗೆ ಹೋಗುತ್ತಾರೆ.

ಶ್ರೀ ಗಿಲ್‌ಪ್ಯಾಟ್ರಿಕ್ ಜನವರಿ, ಫೆಬ್ರುವರಿ ತಿಂಗಳುಗಳಲ್ಲಿ ಭಾರತದ ಪ್ರವಾಸ ಮಾಡುತ್ತಾರೆ. ಫೆಬ್ರುವರಿ ೯ನೆಯ ಬೆಳಗ್ಗೆ ಧಾರವಾಡಕ್ಕೆ (ಪುಣೆಯಿಂದ; ಬಹುಶಃ ಎಕ್ಸ್‌ಪ್ರೆಸ್ಸಿನಲ್ಲಿ) ಸೇರುತ್ತಾರೆ. ಅಲ್ಲಿ ಆದಿನವೆಲ್ಲ ಇದ್ದು ೧೦ನೆಯ ಮಧ್ಯಾಹ್ನ ಮೇಲಿನಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡುತ್ತಾರೆ. ಧಾರವಾಡಕ್ಕೆ ಹೋದಾಗ ನಮ್ಮ ಮನೆಗೂ ಹೋಗಿ ಬನ್ನಿ ಎಂದು ಅವರಿಗೆ ಹೇಳಿದೆ. ಒಪ್ಪಿಕೊಂಡಿದ್ದಾರೆ. ನಾನು ಇನ್ನೂ ವಿದೇಶದಲ್ಲಿರುವಾಗಲೇ, ನನ್ನ ಈ ಪ್ರವಾಸಕ್ಕೆ ಮುಖ್ಯ ಕಾರಣವಾದ ಇಬ್ಬರಲ್ಲಿ ಒಬ್ಬರಾದ ಶ್ರೀ ಗಿಲ್‌ಪ್ಯಾಟ್ರಿಕ್ ಧಾರವಾಡದಲ್ಲಿ ನಮ್ಮ ಮನೆಗೆ ಬಂದು ನಿಮ್ಮನ್ನೆಲ್ಲ ಸಂಧಿಸಿ, ನನ್ನ ಸಮಾಚಾರವನ್ನು ತಿಳಿಸುವುದು ನನಗೆ ತುಂಬ ಸಂತೋಷದ ವಿಷಯ. (ನಾನೂ ಅಲ್ಲಿ ಆಗ ಇರಲು ಸಾಧ್ಯವಿಲ್ಲ! – ಇದೊಂದೇ ಕೊರತೆ: ಆದರೆ ನಾನೂ

ಇದ್ದಿದ್ದರೆ ನನ್ನ ವಿಚಾರವನ್ನು ಅವರ ಬಾಯಿಂದ ಕೇಳಿ ಸಮಾಧಾನಪಡುವ ಅವಕಾಶ ನಿಮಗೆ ಇರುತ್ತಿರಲಿಲ್ಲ!). ಈ ವಿಷಯವಾಗಿ ಅವರ ಹೆಂಡತಿಯ ಸಂಗಡ ಮಾತಾಡುವಾಗ "I hope to get good coffee there" ಎಂದರು; "I can assure you about coffee; I hope it will be good " ಎಂಬ ಅರ್ಥದ ಮಾತನ್ನು ನಾನು ಆಡಿದೆ. ಒಳ್ಳೆಯ ಕಾಫಿಯನ್ನು ಸ್ವಲ್ಪ ಉಪಾಹರವನ್ನು ನೀವು ಮಾಡಿಕೊಡುತ್ತೀರಿ, ಎಂದು ನಾನು ಬಲ್ಲೆ.

ಮಾರ್ಗಶಿರದಲ್ಲಿ ಮನೆಯಲ್ಲಿ ಹುಟ್ಟಿದ ಹಬ್ಬಗಳ ಸಾಲಲ್ಲವೆ? ಎಲ್ಲರಿಗೂ ಒಳ್ಳೆಯದಾಗಲಿ.

*

ಉತ್ತರ ಕರ್ನಾಟಕದ ದೀಪಾವಳಿಗೆ ಮಾಡುವಂತೆಯೇ ಇಲ್ಲಿಯೂ ಕ್ರಿಸ್‌ಮಸ್ ಹಬ್ಬದ ಸಮಯದಲ್ಲಿ ವಾರಗಳ ಹಿಂದಿನಿಂದ ಕರಿದ ತಿಂಡಿಗಳನ್ನು (Cookies) ಮಾಡುತ್ತಾರೆ. ಮನೆಗೆ ಬಂದವರಿಗೆ ಕೊಡುತ್ತಾರೆ. ಹಬ್ಬದ ಊಟಕ್ಕೆ ಕರೆಯುತ್ತಾರೆ. ಕಳೆದ ಭಾನುವಾರ ಇಲ್ಲಿಯ ಒಂದು Baptist Church ನವರು ವಿದೇಶೀಯ ವಿದ್ಯಾರ್ಥಿಗಳಿಗೆ ಕ್ರಿಸ್‌ಮಸ್ ಭೋಜನ ಏರ್ಪಡಿಸಿದ್ದರು. ನನಗಾಗಿ ಶಾಕಾಹಾರ ಏರ್ಪಾಡನ್ನೂ ಮಾಡಿದ್ದರು. ಬಳಿಕ ಹಾಡುಗಳು, ಯೇಸುಕ್ರಿಸ್ತನ ಜನ್ಮವೃತ್ತಾಂತ ಫಿಲ್ಮ್ ತೋರಿಸಿದರು, ಚೆನ್ನಾಗಿತ್ತು.

* * *.

ಫಿಲಡೆಲ್ಫಿಯ, ಡಿಸೆಂಬರ್ ೨೪, ೧೯೫೫

ಚಿ॥ ಸೌ॥ ನಾಗರತ್ನಳಿಗೆ

ಧಾರವಾಡದಲ್ಲಿ ಚಳಿ ಹೆಚ್ಚಾಗಿದೆಯೆಂದು ನಿಮ್ಮ ತಾಯಿ ಬರೆದಿದ್ದಳು. ಇಲ್ಲಿಯ ಚಳಿಯ ರೀತಿಯನ್ನು ವರ್ಣಿಸುವ ಹಾಗಿಲ್ಲ. ಮನೆಯ ಒಳಗಡೆ Central Heating ಇರುವುದರಿಂದ ತಕ್ಕಮಟ್ಟಿಗೆ ಬೆಚ್ಚಗಿರುತ್ತದೆ. (ಆದರೂ ರಾತ್ರಿ ರಗ್ಗುಗಳನ್ನು ಜೋಡಿಸಿಕೊಂಡು ಹೊದೆದು ಕೊಳ್ಳಲೇಬೇಕು.) ಹೊರ ಬಾಗಿಲನ್ನು ತೆಗೆದೊಡನೆ ಥಣ್ಣನೆ ಕೊರೆಯುವ ಗಾಳಿ ನುಗ್ಗುತ್ತದೆ. ಮೇಲಂಗಿ ಇಲ್ಲದೆ ಹೆಜ್ಜೆ ಇಡುವಂತಿಲ್ಲ. ಅಷ್ಟೇ ಸಾಲದು, ಕೊರಳಿಗೆ ಮಫ್ಲರ್, ಕೈಗೆ ತುಪ್ಪಟದ ಕೈಚೀಲ (ಕೆಲವರು ಚರ್ಮದ ಚೀಲಗಳನ್ನು ಧರಿಸುವುದೂ ಉಂಟು). ತಲೆಗೆ ಟೊಪ್ಪಿಗೆ (ನಾನು ಇನ್ನೂ ಹ್ಯಾಟ್ ಕೊಂಡಿಲ್ಲ. ಒಂದು ಬಗೆಯ ತುಪ್ಪಟದ ಟೋಪಿಯನ್ನು ಹಾಕಿ ಕೊಳ್ಳುತ್ತೇನೆ: ಇದನ್ನು ಬೇಕಾದಾಗ ಮಡಿಸಿ ನಿಲುವಂಗಿಯ ಜೇಬಿನಲ್ಲಿ ಅಡಗಿಸಬಹುದು) – ಇಷ್ಟೇ ಸಾಲದೆಂದು ಸುಮಾರು ಅರ್ಧಡಾಲರ್‌ಕೊಟ್ಟು ಇಯರ್‌ಮಫ್ ಕೊಂಡಿದ್ದೇನೆ! – ಇದನ್ನೂ ಕೆಲವು ವೇಳೆ, ಮುಖ್ಯವಾಗಿ ರಾತ್ರಿಯಲ್ಲಿ ಓಡಾಡುವಾಗ ಧರಿಸಬೇಕಾಗುತ್ತದೆ. ಇಷ್ಟಾದರೂ ಕೊರೆಯುವ ಗಾಳಿ ಅಲೆದಾಡಿದಾಗ, ಹಿಮದ ಮಳೆ ಬೀಳುವಾಗ ಇನ್ನಷ್ಟು ಶಾಖ ಬೇಕೆನ್ನಿಸುತ್ತದೆ. ಇಥಕದಲ್ಲಿ (ಇದು ಕಾರ್ನೆಲ್ ವಿಶ್ವವಿದ್ಯಾಲಯ ಇರುವ ಊರು) ಮಂಗಳವಾರ ರಾತ್ರಿ ಬಸ್ಸಿಗಾಗಿ ಹದಿನೈದು ನಿಮಿಷ ಕಾದಿರಬೇಕಾಯಿತು. ಆ ಕೊರತವನ್ನು

ಅನುಭವಿಸಬೇಕು! – ಮುಖ ಕೊರೆಯುತ್ತಿತ್ತು ಎನ್ನುವುದಕ್ಕಿಂತ ಉರಿಯುತ್ತಿತ್ತು ಎಂದರೆ ಸಮಂಜಸವಾಗುತ್ತದೆ. ಶಾಖ ಹೊರಗಿನಿಂದ ಒಳಕ್ಕೆ ಬಂದರೂ ಸರಿಯೆ, ಒಳಗಿನಿಂದ ಹೊರಕ್ಕೆ ಹೋದರೂ ಸರಿಯೆ – ಚರ್ಮ ಸುಡುತ್ತದೆ ಎನ್ನುವುದು ಭೌತಶಾಸ್ತ್ರ ಪ್ರವೀಣೆಯಾದ ನಿನಗೆ ತಿಳಿದೇ ಇದೆ! – ಫಿಲಡೆಲ್ಫಿಯದಲ್ಲೂ ಚಳಿ ಪ್ರಬಲವಾಗಿಯೇ ಇದೆ!

ಈಗ ಇಲ್ಲಿ ಕ್ರಿಸ್‌ಮಸ್ ಹಬ್ಬದ ಕಾಲ. ಜನರೆಲ್ಲ ಬಲುಸಂಭ್ರಮದಿಂದ ಓಡಾಡುತ್ತಾರೆ. ಮನೆಯ ಬಾಗಿಲುಗಳಲ್ಲಿ ತೋರಣ ಕಟ್ಟಿದಂತೆ Holly ಎಂಬ ಮರದ ಕೊಂಬೆಗಳ ಸುರುಳಿಗಳನ್ನು ನೇತುಹಾಕುತ್ತಾರೆ. ಬಣ್ಣಬಣ್ಣದ ಸರಗಳನ್ನು ಅಳವಡಿಸುತ್ತಾರೆ. Christmas ಕಾರ್ಡುಗಳಂತೂ ಸೂರೆ! (ನಾನೂ ಕೆಲವನ್ನು ಕಳಿಸಿದ್ದೇನೆ). ಹಬ್ಬಕ್ಕಾಗಿ ತಿಂಡಿಗಳನ್ನು ಮಾಡುತ್ತಾರೆ. ಇಲ್ಲಿ ನಮ್ಮ ಮನೆಯ ಎದುರುಸಾಲಿನಲ್ಲಿರುವ Mr & Mrs Mammel ಎಂಬ ತರುಣದಂಪತಿಗಳು ಒಂದು ವಾರದ ಹಿಂದೆ ನನ್ನನ್ನು ರಾತ್ರಿ ಊಟಕ್ಕೆ ಕರೆದು ಹಿಂದಿರುಗುವಾಗ Cookie ಗಳನ್ನು ಸುಂದರವಾದ ರಟ್ಟಿನ ಪೆಟ್ಟಿಗೆಯಲ್ಲಿ ಕೊಟ್ಟರು. ನಾನೂ ನಾಲ್ಕೈದು ದಿನ ತಿಂದೆ, ರುಚಿಯಾಗಿತ್ತು: ನಮ್ಮ ಮಿಠಾಯಿ, ಗಾರಿಗೆ – ಇತ್ಯಾದಿಗಳ ಹಾಗೆ ಇರುತ್ತವೆ.–ಇದಲ್ಲದೆ ಕ್ರಿಸ್‌ಮಸ್ ಉಡುಗೆರೆಗಳು. ಅಂಗಡಿಗಳಲ್ಲೆಲ್ಲಾ ಬಂಧುಗಳು, ಮಿತ್ರರು, ಪ್ರಿಯರು, ಪ್ರೇಯಸಿಯರು – ಈ ಉಡುಗೆರೆಗಳನ್ನು ಕೊಳ್ಳಲು ಕಿಕ್ಕಿರಿದಿರುತ್ತಾರೆ. ಪ್ರೊ॥ ಹನಿಗ್ಸ್‌ವಾಲ್ಡರ ಇಬ್ಬರು ಮಕ್ಕಳಿಗೆ ಏನನ್ನಾದರೂ ಕೊಡಬೇಕೆನ್ನಿಸಿತು. ಆಯ್ಕೆ ಮಾಡುವುದು ಬಲು ಕಷ್ಟವಾಯಿತು. ಕಡೆಗೆ ಒಂದು ಸಣ್ಣ ಕೊರಳಸರ, ಕೈಸರ ಇವನ್ನು ಒಬ್ಬೊಬ್ಬರಿಗೂ ಕೊಂಡೆ – ಒಟ್ಟು ನಾಲ್ಕು ಡಾಲರ್ ಬೆಲೆ (ಗಿಲೀಟಿನ ಸಾಮಾನು!): ಇವನ್ನು ಅಂದವಾದ ಪೆಟ್ಟಿಗೆಗಳಲ್ಲಿ ಇಟ್ಟು ಕಟ್ಟಿಕೊಡಲು ಮತ್ತೆ ಅರ್ಧಡಾಲರು (ಮಾರಾಟದ ತೆರಿಗೆಯನ್ನು ಮರೆತಿದ್ದೆ: ಅದು ನಲವತ್ತು ಸೆಂಟ್ ಎಂದು ಜ್ಞಾಪಕ) – ಇದನ್ನು ಹನಿಗ್ಸ್‌ವಾಲ್ಡರಿಗೆ ಮೊನ್ನೆ ಕೊಟ್ಟೆ. ಈ ದಿನ ಸಂಜೆ ಮನೆಯಲ್ಲಿ Christmas Tree ಯ ಕೆಳಗೆ ಇಡುತ್ತಾರಂತೆ! – ಮಕ್ಕಳಿಗೆ ಅವು ಇಷ್ಟವಾಗಲೆಂದು ನನ್ನ ಹಾರೈಕೆ. ನಾಳೆಯ ದಿನ ಸಂಜೆ ಅವರಲ್ಲಿಗೆ ನನ್ನನ್ನು ಊಟಕ್ಕೆ ಕರೆದಿದ್ದಾರೆ. ನಾನು ಸ್ವಲ್ಪ ಸಂಕೋಚಪಟ್ಟೆ. ಹಬ್ಬದ ದಿನ ನನಗಾಗಿ ಅವರು ಬೇರೆ ಅಡಿಗೆ ಮಾಡಬೇಕಲ್ಲ ಎಂದು. ಆದರೆ ಅವರು ಒಳ್ಳೆಯ ಜನ. ಅದರಿಂದ ಏನೂ ತೊಂದರೆಯಿಲ್ಲ ವೆಂದು ಅವರು ಹೇಳಿದ ಬಳಿಕ ಸಂತೋಷವಾಗಿ ಒಪ್ಪಿಕೊಂಡೆ. ಹಾಗೆಯೇ ಮೊನ್ನೆ ಸಂಜೆ Prof. Norman Brown ಎಂಬ ಇನ್ನೊಬ್ಬ ವಿದ್ವಾಂಸರ ಮನೆಗೆ ಊಟಕ್ಕೆ ಹೋಗಿದ್ದೆ – ಅಂತೂ ದಿನಗಳು ಕಳೆಯುತ್ತಿವೆ.

ಸುಮಾರು ಮೂರು ವಾರದ ಹಿಂದೆ ನಡೆದ ಒಂದು ಸಂಗತಿಯನ್ನು ನಿಮಗೆ ತಿಳಿಸಲು ಮರೆತುಹೋಯಿತು. ಶನಿವಾರ ಮಧ್ಯಾಹ್ನ ತರಗತಿ ಮುಗಿಸಿಕೊಂಡು ದಾರಿಯಲ್ಲೇ ಒಂದು ರೆಸ್ಟೋರಾಂಟಿನಲ್ಲಿ ಊಟ ಮುಗಿಸಿ, ಮನೆಗೆ ಬಂದೆ. ಅಗಸರ ಅಂಗಡಿಯಿಂದ (Laundry) ಬಟ್ಟೆ ತರಬೇಕಾಗಿತ್ತು. ಮತ್ತೆ ಇಳಿದು ಹೋಗಿ ಹತ್ತು ನಿಮಿಷದಲ್ಲಿ ಹಿಂದಕ್ಕೆ ಬಂದೆ. ಬಾಗಿಲನ್ನು ನಾನೇ ಹಾಕಿಕೊಂಡು ಹೋಗಿದ್ದೆ. ಮತ್ತೆ ತೆರೆಯಬೇಕೆಂದರೆ ಬೀಗದ ಕೈ ಇಲ್ಲ! ಒಳಗೆ ಮೇಜಿನ ಮೇಲೆ ಮರೆತುಬಿಟ್ಟಿದ್ದೇನೆ! (ಯೇಲ್ ಬೀಗಗಳ ಸಮಾಚಾರ ನಿನಗೆ ಗೊತ್ತಷ್ಟೆ.

ಕದವನ್ನು ಎಳೆದರೆ ಸಾಕು ಹಾಕಿಕೊಳ್ಳುತ್ತದೆ. ಒಳಗಿನಿಂದ ಹಾಗೆಯೇ ತೆರೆಯಬಹುದು. ಹೊರಗಿನಿಂದ ತೆರೆಯಲು ಬೀಗದಕ್ಕೈ ಬೇಕೇಬೇಕು.) ಬಾಗಿಲ ಪಕ್ಕದ ಗುಂಡಿಯನ್ನು ಒತ್ತಿದೆ. ಒಳಗೆ ನಾಯಿ ಮಾತ್ರ ಕೂಗಿಕೊಂಡಿತು. ನಮ್ಮ Land lady ಮನೆಯಲ್ಲಿ ಇಲ್ಲ! – ಏನು ಮಾಡುವುದು? ಆಕೆ ಮಧ್ಯಾಹ್ನ ಕೆಲಸಕ್ಕೆ ಹೋದರೆ ರಾತ್ರಿ ಹಿಂದಿರುಗುವುದು ಹನ್ನೊಂದು ಘಂಟೆಗೆ ! – ಯಾವ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಾಳೆ ಎನ್ನುವುದೂ ನನಗೆ ಸರಿಯಾಗಿ ತಿಳಿಯದು. ಮತಿಹೀನ ವೃದ್ಧರ ಚಿಕಿತ್ಸೆಯ ಶಾಖೆಯಲ್ಲಿ ನರ್ಸ್ ಆಗಿ ಇದ್ದೇನೆ ಎಂದು ಆಕೆ ಹೇಳಿದ್ದಳು ಅಷ್ಟೆ. ಆಕೆಯ ಮಗಳ ಮನೆ ಇಲ್ಲಿಗೆ ಸ್ವಲ್ಪ ದೂರದಲ್ಲಿ Spring Field ಎಂಬ ಶಾಖಾ ನಗರದಲ್ಲಿದೆ. ಅಲ್ಲಿಗೆ ಫೋನ್ ಮಾಡೋಣವೆಂದರೆ ಹೆಸರು, ಸಂಖ್ಯೆ ಎರಡೂ ತಿಳಿಯದು. ಮನಸ್ಸಿಗೆ ಬಲು ಬೇಸರವಾಯಿತು. ಸದ್ಯ ಚಳಿಗೆ ಅಡ್ಡಿಯಾಗಿ ನಿಲುವಂಗಿ ಧರಿಸಿದ್ದೆ, ಅಷ್ಟೇ ಪುಣ್ಯ. ಆಮೇಲೆ ಧೈರ್ಯ ಮಾಡಿ ಪಕ್ಕದ ಮನೆಯವರನ್ನು ವಿಚಾರಿಸಿದೆ. ಅಲ್ಲಿ ಒಬ್ಬ ತರುಣಿ (ಸರ್ಕಾರದ ಯಾವುದೋ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದಾಳಂತೆ) ಆಕೆಯ ತಾಯಿ(?) ವೃದ್ಧೆ, ಇನ್ನೂ ಒಬ್ಬಿಬ್ಬರು ವಾಸ ಮಾಡುತ್ತಾರೆ. ಇದು ಆ ದಿನ ನನಗೆ ತಿಳಿಯಿತು! ಆ ತರುಣಿ ಮೊದಲು ಸ್ವಲ್ಪ ಅನುಮಾನಿಸಿ, ಬಳಿಕ ನನ್ನ ಮೇಲೆ ಕನಿಕರಿಸಿ, ಆಸ್ಪತ್ರೆಗೆ ಫೋನ್ ಮಾಡಿದಳು. Mrs Fiandrino (ನಮ್ಮ Land lady) ಹೆಸರು ಅಲ್ಲಿಯವರಿಗೆ ತಿಳಿಯದು (ಏನು ವ್ಯವಸ್ಥೆಯೋ!)–ಬಳಿಕ, ಮನೆಯ ವೃದ್ಧೆ ಒಂದು ಸೂಚನೆ ಕೊಟ್ಟಳು. ಇಲ್ಲಿಯ ಮನೆಗಳಲ್ಲಿ (ಪಟ್ಟಣದಲ್ಲಿ) ಒಂದಕ್ಕೊಂದು ಹತ್ತಿಕೊಂಡಿರುತ್ತವೆ–ಎರಡನೆಯ, ಮೂರನೆಯ ಅಂತಸ್ತಿನಲ್ಲಿ ಹಿಂದಿನ ಚಾವಣಿಯ ಮೇಲೆ ಓಡಾಡಬಹುದು–ಅನೇಕ ಮನೆಗಳ ಕಿಟಕಿಯ ಗಾಜಿನ ಕದವನ್ನು ಎತ್ತಬಹುದು, ಯಾವುದಕ್ಕೂ ಕಂಬಿ ಇರುವುದಿಲ್ಲ. ಆದರೆ ಕೆಲವು ಕದಗಳಿಗೆ Storm Shutters ಹಾಕಿ ಭದ್ರಮಾಡಿರುತ್ತಾರೆ–ನಮ್ಮ ಮಗ್ಗಲು ಮನೆಯ ಕಿಟಕಗಳನ್ನು ಹಾಕಿ ಭದ್ರ ಮಾಡಿದ್ದಾರೆ; ಅಲ್ಲಿಂದ ಹೊರಕ್ಕೆ ಹೋಗುವ ಹಾಗಿರಲಿಲ್ಲ. ಕಡೆಗೆ ಒಂದು ಮುರುಕಲು ಏಣಿಯನ್ನು ಗೋಡೆಗೆ ಹಾಕಿ ಅದರ ಮೇಲೆ ಹತ್ತಿ ನಮ್ಮ ಮನೆಯ ಎರಡನೆಯ ಅಂತಸ್ತಿಗೆ ಬಂದೆ (ಹಿಂದುಗಡೆಯಿಂದ). ಅಲ್ಲಿ ಕೊಠಡಿಯ ಕಿಟಕಿ ಎತ್ತರ! ಪಕ್ಕದ ಮನೆಯವರಿಂದಲೇ ಒಂದು ಕುರ್ಚಿಯನ್ನು ತೆಗೆದುಕೊಂಡು ಅದರ ಮೇಲೆ ನಿಂತು ಕಿಟಕಿಯ ಗಾಜನ್ನು ಎತ್ತಿ ಒಳಗೆ ಇಳಿದೆ. ಕುರ್ಚಿಯನ್ನು ಎಳೆದು ಕೊಂಡೆ, ಆ ಕೊಠಡಿ ಸದ್ಯದಲ್ಲಿ ಉಪಯೋಗದಲ್ಲಿಲ್ಲ! ಅದರ ಬಾಗಿಲಿಗೂ ಬೀಗ ಹಾಕಿರಲಿಲ್ಲ, ಅಲ್ಲಿಂದ ಮೆಟ್ಟಲು ಹತ್ತಿ ನನ್ನ ಕೋಣೆಗೆ ಬಂದೆ. ಬದುಕಿದೆಯಾ ಬಡಜೀವವೇ ಎಂದುಕೊಂಡೆ – ಆ ಬಳಿಕ ಬೀಗದ ಕೈಯನ್ನು ಭದ್ರವಾಗಿ ಜೇಬಿಗೆ ಹಾಕಿಕೊಂಡು, ಕುರ್ಚಿಯನ್ನು ಹಿಂದಕ್ಕೆ ಕೊಟ್ಟು ವಂದನೆಗಳನ್ನು ಹೇಳಿ ಬಂದೆ. (ಹಿಂದೆ ಒಬ್ಬ ಬಾಡಿಗೆದಾರರಿಗೆ ಹೀಗೆಯೇ ಆಗಿತ್ತಂತೆ!). ನಾನು ಕಳ್ಳನಂತೆ ಮಧ್ಯಾಹ್ನ ಕಿಟಕಿ ಇಳಿಯುತ್ತಿದ್ದಾಗ ಯಾರೂ ಫೋಟೋ ತೆಗೆದುಕೊಳ್ಳುವವರು ಇರಲಿಲ್ಲ – ಇಲ್ಲವಾದರೆ ಪತ್ರಿಕೆಯಲ್ಲಿ ನನ್ನ ಬೆನ್ನು, ಹೆಸರು ಕಾಣಿಸಿಕೊಳ್ಳುತ್ತಿತ್ತು! – ನಮ್ಮ Land lady ಏನೂ ಅನ್ನಲಿಲ್ಲ – ಮಗಳ ವಿಳಾಸವನ್ನು ಈಗ ನನಗೆ ಕೊಟ್ಟಿದ್ದಾಳೆ.

* * *

ಫಿಲಿಡೆಲ್ಫಿಯ, ಜನವರಿ ೩, ೧೯೫೬

ಚಿ॥ಸೌ॥ ವತಿಗೆ

ನಾನು ಮೂರುವಾರದ ಹಿಂದೆ ಬರೆದ ಕಾಗದದ ಒಂದು ಅಂಶವನ್ನು ನೀವು ಸ್ವಲ್ಪ ತಪ್ಪಾಗಿ ಗ್ರಹಿಸಿದಂತೆ ತೋರುತ್ತದೆ. ಅದು ಇನ್ನೇನೂ ಅಲ್ಲ. ಶ್ರೀ ಗಿಲ್‌ಪಾಟ್ರಿಕ್ ಒಬ್ಬರೇ ಭಾರತಕ್ಕೆ ಹೋಗುತ್ತಾರೆ. ಅವರ ಮನೆಯವರು ಇಲ್ಲಿಯೇ ಇರುತ್ತಾರೆ. ಶ್ರೀ ಗಿಲ್‌ಪಾಟ್ರಿಕ್ ಧಾರವಾಡಕ್ಕೆ ಬಂದಾಗ, ನಮ್ಮ ಮನೆಗೂ ಭೇಟಿ ಕೊಟ್ಟಾಗ ಯಥೋಚಿತವಾಗಿ ಕಾಫಿ ಉಪಾಹಾರ ಕೊಟ್ಟು ಕಳಿಸಿಕೊಡಿ. ಹೆಚ್ಚಿನ ಆಡಂಬರ ಬೇಕಿಲ್ಲ; ನೀವು ಗಾಬರಿ ಪಟ್ಟುಕೊಳ್ಳ ಬೇಕಾಗಿಯೂ ಇಲ್ಲ! ಧೈರ್ಯವಾಗಿ ಸಹಜವಾಗಿ ನಡೆದುಕೊಂಡರೆ ಸರಿ ಹೋಗುತ್ತದೆ.

ಸಂಕ್ರಾಂತಿಯ ಎಳ್ಳಿನ ವಿಷಯವನ್ನು ಬರೆದಿದ್ದೀಯ. ಅದನ್ನು ಡಬ್ಬಿ ಭರಣಿ ಇದರಲ್ಲಿ ಹಾಕಿ ಪಾರ್ಸೆಲ್ ಮಾಡಿ ಕಳಿಸಿದರೆ ನನಗೆ ತಲಪುವುದಕ್ಕೆ ತಿಂಗಳುಗಟ್ಟಳೆ ಆಗುತ್ತದೆ. ಏರ್‌ಮೇಲ್ ಮೇಲೆ ಕಳಿಸಿದರೂ ಕೆಲವು ದಿನ ಆಗುತ್ತದೆ. ಅಲ್ಲದೆ ದುಬಾರಿ ಖರ್ಚು ಬೀಳುತ್ತದೆ. ಅಲ್ಲದೆ, ನಾನು ಊರಿಂದ ಊರಿಗೆ ಪ್ರಯಾಣ ಮಾಡುವುದರಿಂದ ಕೈಗೆ ಬೇಗ ಸಿಕ್ಕದೆ ಹೋಗಬಹುದು. ಸಂಕ್ರಾಂತಿ ಹಬ್ಬವಾದ ಕೂಡಲೆ ಅಲ್ಲಿಂದ ಬರೆಯುವ ಕಾಗದದ ಕವರಿನೊಳಗೆ ಎರಡೇ ಎರಡು ಕಾಳನ್ನು ಹಾಕಿ ಕಳಿಸಿದರೆ ಸಾಕು ಅದರ ರುಚಿಯನ್ನು ನೋಡಿ ನಿಮ್ಮನ್ನೆಲ್ಲ ಮತ್ತೆ ಜ್ಞಾಪಿಸಿಕೊಳ್ಳುತ್ತೇನೆ. ಎಣ್ಣೆನೀರಿನ ವಿಷಯ ಬರೆದಿದ್ದೀಯ. ಪ್ರತಿದಿನವೂ ನಾನು ತಲೆಗೆ ಸ್ನಾನ ಮಾಡುವುದರಿಂದ ಏನೂ ತೊಂದರೆ ಕಾಣಿಸುವುದಿಲ್ಲ. ಅಲ್ಲದೆ ಕೂದಲಿಗೆ (ಉಳಿದಿರುವ ಎರಡು ಎಸಳಿಗೆ!) ಜಿಡ್ಡು ಇರುವ ಕ್ರೀಮ್ ಹಚ್ಚುತ್ತೇನೆ. ಕಣ್ಣಿಗೇನೂ ಬಾಧೆ ತೋರಿಲ್ಲ. ನೀನು ಧೈರ್ಯವಾಗಿ, ಸಮಾಧಾನವಾಗಿ ಇರಬಹುದು!

ಫಿಲಡೆಲ್ಫಿಯ ನಗರವನ್ನು ನಾನು ಬಿಡುವ ದಿನ ತುಂಬ ಸಮೀಪಿಸಿತು. ಒಂದೆರಡು ಕಡೆ ಊಟಕ್ಕೂ ಹೋಗಿದ್ದೆ. (ಇನ್ನೂ ಒಂದು ನಮ್ಮ ದೇಶದ ಶ್ರೀ ನರಸಿಂಹಲು ಎಂಬುವರ ಮನೆಯಲ್ಲಿ–ಕಾದಿದೆ.) ಇಲ್ಲಿ ಶ್ರೀ ಕೆನೆತ್ ಮತ್ತು ಡರತಿ ಮ್ಯಾಮೆಲ್ ಎಂಬ ತರುಣ ದಂಪತಿಗಳು ನಮ್ಮ ಮನೆಯ ಎದುರಿಗೆ ಇದ್ದಾರೆ. ಅವರ ಪರಿಚಯ ಒಂದು ಸಮಾರಂಭದಲ್ಲಿ ಕೇವಲ ಮೂರು ವಾರದ ಕೆಳಗೆ ನನಗೆ ಆಯಿತು. ಇಬ್ಬರೂ ಒಳ್ಳೆಯ ಜನ, ವಿಶ್ವಾಸಿಗಳು. ಅವರ ಮನೆಗೆ ಈಗಾಗಲೆ ಎರಡು ಬಾರಿ ಹೋಗಿ ಊಟ ಮಾಡಿದ್ದೇನೆ. ನನ್ನ ಕೊಠಡಿಗೂ ಒಂದು ಬಾರಿ ಬಂದು ಕಾಫಿ, ಉಪ್ಪೇರಿ, ಹಲ್ವಾ ("ಚಿಗಳಿ") ಸ್ವೀಕರಿಸಿದ್ದಾರೆ. ಅವರನ್ನು ನೋಡಿದರೆ ನನಗೆ ನಮ್ಮ ಅಪ್ಪಪುತ್ರ, ಶಾಸ್ತ್ರಿ, ಮೂರ್ತಿ – ಈ ಮೊದಲಾದ ತರುಣ ದಂಪತಿಗಳ ಜ್ಞಾಪಕ ಬರುತ್ತದೆ. ನನ್ನೊಂದಿಗೆ ಅವರೂ, ಅವರೊಂದಿಗೆ ನಾನೂ ಧಾರಾಳವಾಗಿ ಮಾತುಕಥೆ ನಡೆಸುತ್ತೇವೆ. ನಮ್ಮದೇಶದ ನಡೆನುಡಿ ತಿಳಿದುಕೊಳ್ಳಲು ಅವರಿಗೆ ತುಂಬ ಕುತೂಹಲ. ಸೌ॥ ಡರತಿಯ ಕಂಠ ಚೆನ್ನಾಗಿದೆ. ನಿನ್ನೆ ರಾತ್ರಿ ಅವರ ಮನೆಗೆ ಹೋಗಿದ್ದಾಗ ಒಂದೆರಡು ಹಾಡುಗಳನ್ನು ಹಾಡಿಸಿ ಕೇಳಿದೆನು. ಶ್ರೀ ಕೆನೆತ್ ಸ್ಟಾಂಪುಗಳನ್ನು ಕೂಡಿಸುತ್ತಾರೆ. ಅದರಲ್ಲಿ ಆತ ನುರಿತ ಮನುಷ್ಯ. ಚಿ॥ ನಾಗಭೂಷಣನಿಗಾಗಿ ಸ್ಟಾಂಪುಗಳನ್ನು ಕೊಟ್ಟಿದ್ದಾರೆ. ಸಾವಕಾಶವಾಗಿ

ಊರಿಗೆ ಕಳಿಸುತ್ತೇನೆ. ಚಿ|| ನಾಗಭೂಷಣನೂ – ನಾನೂ ಈ ಊರನ್ನು ಬಿಟ್ಟ ಮೇಲೆ ಕೂಡ ಅವರಿಗೆ ಭಾರತದ ಸ್ಟಾಂಪುಗಳನ್ನು ಕಳಿಸಬಹುದು. ಕೆನತ್ ಹೈಸ್ಕೂಲ್ ಉಪಾಧ್ಯಾಯ; ಈಗ ರಜ ತೆಗೆದುಕೊಂಡು Temple University ಯಲ್ಲಿ ಎಂ.ಎ.ಗೆ (ಅಥವಾ ಪಿಎಚ್.ಡಿ.) ಓದುತ್ತಿದ್ದಾರೆ. ಡರತಿ Blue Cross ಎಂಬ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ. ದಂಪತಿಗಳನ್ನು ನೋಡಿದರೆ ಸಂತೋಷವಾಗುತ್ತದೆ. ಇನ್ನೂ ಮಕ್ಕಳಿಲ್ಲ ಅವರಿಗೆ ಎಂಬುದೇ ಚಿಕ್ಕ ಕೊರತೆ. ಇಬ್ಬರೂ ನಮ್ಮ ಮನೆಗೆ ಇಲ್ಲಿ ಬಂದಿದ್ದಾಗ ಚಿ||ಸೌ ನಾಗರತ್ನ ನಾಗಭೂಷಣ ಇವರ ಚಿತ್ರಗಳನ್ನು ನೋಡಿ ಮೆಚ್ಚಿದರು. ನಾಗಭೂಷಣನನ್ನು Isn't he cute! ಎಂದರು 'cute' ಎಂದರೆ ಚುರುಕು, ಸುಟಿ (=smart), ನಾಗರತ್ನಳ ವಿಷಯಕ್ಕೆ "lovely" ಎಂದ ಹಾಗೆ ಜ್ಞಾಪಕ, ಆದರೆ ಅವರು ಉಪಯೋಗಿಸಿದ ಶಬ್ದ ಸರಿಯಾಗಿ ನೆನಪಿಲ್ಲ. ಅಂತೂ ಹೀಗೆ ಇಲ್ಲಿ ದಿನಗಳು ಸಾಗುತ್ತಿವೆ. ಈ ದೇಶದಲ್ಲಿ ನಾನು ಕೆಲವು ಮಂದಿ ಮಿತ್ರರನ್ನು ಸಂಪಾದಿಸಿದ್ದೇನೆ ಎನ್ನಬಹುದು. ಇಲ್ಲಿಗೆ ಸಾವಿರ ಮೈಲಿ ದೂರದಲ್ಲಿರುವ ಮಯಾಮಿ (Miami) ಎಂಬಲ್ಲಿ Salzman ದಂಪತಿಗಳಿದ್ದಾರೆ. ಅವರಲ್ಲಿ ಗಂಡನನ್ನು ಮಾತ್ರ ನೋಡಿದ್ದೇನೆ, Grand Canyan ನಲ್ಲಿ. ಹೆಂಡತಿಯನ್ನು ನೋಡಿಲ್ಲ – ಆದರೂ ಈ ದಂಪತಿಗಳೂ ವಿಶ್ವಾಸವಾಗಿ ಪತ್ರವ್ಯವಹಾರ ನಡೆಸುತ್ತಿದ್ದಾರೆ. ಅವರ ಮಕ್ಕಳ ಹೆಸರು, ಮಾಡುವ ಚೇಷ್ಟೆ ಎಲ್ಲ ನನಗೆ – ಅವರನ್ನು ನೋಡದಿದ್ದರೂ ಗೊತ್ತಾಗಿದೆ. ಹಾಗೆಯೇ ನಿನ್ನ ಮತ್ತು ಮಕ್ಕಳ ಹೆಸರುಗಳು ಅವರಿಗೆ ಗೊತ್ತಿವೆ!.....ಇತ್ಯಾದಿ.–

* * *

ಕೇಂಬ್ರಿಜ್, ಮೆಸಚುಸೆಟ್ಸ್
ಜನವರಿ ೧೪, ೧೯೫೬

ಚಿ|| ಸೌ|| ವತಿಗೆ,

ಇಲ್ಲಿ ಅಂಬ್ಯಾಸಡರ್ ಹೋಟಲ್ ಎಂಬಲ್ಲಿ ಇಳಿದುಕೊಂಡಿದ್ದೇನೆ. ನನ್ನ ಮೈಸೂರಿನ ಮಿತ್ರರಾದ ಶ್ರೀ ಶಾರದಾಪ್ರಸಾದ್ ಪ್ರತಿದಿನವೂ ಸಿಕ್ಕುತ್ತಾರೆ. ಇವರ ವಿಷಯವನ್ನು ನಿಮಗೆ ಹಿಂದೆ ತಿಳಿಸಿದ್ದೆನೋ ಇಲ್ಲವೋ ನೆನಪಿಲ್ಲ. ಹಿಂದೆ ಮೈಸೂರು ಸಂಸ್ಕೃತ ಕಾಲೇಜಿನ ಪ್ರಿನ್ಸಿಪಲ್ ಆಗಿದ್ದ ಶ್ರೀ ಯೋಗಾನರಸಿಂಹನ್ ಅವರ ಮಗ ಇವರು. ೧೯೪೨ರಲ್ಲಿ ಮೈಸೂರಿನಲ್ಲಿ ನನ್ನ ವಿದ್ಯಾರ್ಥಿಯಾಗಿದ್ದರು. ಮೈಸೂರಿನಲ್ಲಿ ಜೈಲಿಗೆ ಹೋಗಿ ಸ್ವಾತಂತ್ರ್ಯಸಂಗ್ರಾಮದಲ್ಲಿ ತುಂಬ ಭಾಗವಹಿಸಿದರು. ಶ್ರೀ ಎನ್. ಗೋವಿಂದರಾವ್–ಈಗ ಬೊಂಬಾಯಿಯಲ್ಲಿ ಇದ್ದಾರಲ್ಲ– ಅವರೂ ಇವರೂ ಸ್ನೇಹಿತರು. ಶ್ರೀ ಶಾರದಾ ಪ್ರಸಾದ್ ಮುಂದೆ ಬೊಂಬಾಯಲ್ಲಿ ಪತ್ರಿಕೋದ್ಯಮದಲ್ಲಿ ನಿಂತು ಒಳ್ಳೆಯ ಹೆಸರನ್ನು ಪಡೆದಿದ್ದಾರೆ. Nieman Fellowship for Journalism ಎಂಬ ಅಪೂರ್ವವಾದ ಫೆಲೋಷಿಪ್ ಪಡೆದು ಈ ದೇಶಕ್ಕೆ ಕೆಲವು ತಿಂಗಳ ಕೆಳಗೆ ಬಂದು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. (ಬೊಂಬಾಯಿಂದ ನಾನು ಹೊರಟ ದಿನ ಇವರು ಕೆಲವು ಮಿತ್ರರೊಡನೆ ನನ್ನನ್ನು ಟೀಗೆ ಕರೆದಿದ್ದರು.

ಚಿ॥ ಚಂದ್ರಶೇಖರನಿಗೆ ಜ್ಞಾಪಕವಿರಬಹುದು.) ಅಂತೂ ಶ್ರೀ ಶಾರದಾ ಪ್ರಸಾದ್ ಇಲ್ಲಿರುವುದರಿಂದ ನನಗೆ ಅನುಕೂಲವಾಗಿದೆ. ದಿನವೂ ಒಂದು ಊಟವನ್ನಾದರೂ ಒಟ್ಟಿಗೆ ಮಾಡುತ್ತೇವೆ. ಕನ್ನಡದಲ್ಲಿ ಬೇಕಾದಷ್ಟು ಮಾತಾಡುತ್ತೇವೆ. ಸ್ವದೇಶದ ವಿಚಾರಗಳನ್ನು ಚರ್ಚಿಸುತ್ತೇವೆ. ಊರನ್ನು ಜನರನ್ನು ಜ್ಞಾಪಿಸಿಕೊಳ್ಳುತ್ತೇವೆ. ಇದಲ್ಲದೆ, ಇಲ್ಲಿಯ ಕೆಲವು ಮಂದಿ ವಿದ್ವಾಂಸರ ಪರಿಚಯ ಗಳನ್ನೂ ಮಾಡಿಕೊಳ್ಳುತ್ತಿದ್ದೇನೆ. ಒಂದೆರಡು ಕಡೆಗೆ ಊಟದ 'ಆಹ್ವಾನ' (ಮೈಸೂರಿನ ಅರ್ಥದಲ್ಲಿ) ಕೂಡ ಬಂದಿದೆ.

ಈ ರಾತ್ರಿ ಬೊಂಬಾಯಿನ ಡಾ॥ ದಿಘೇ ಎಂಬವರ ಮನೆಗೆ ಊಟಕ್ಕೆ ಹೋಗುತ್ತೇನೆ. ಇಂದು ಸಂಕ್ರಾಂತಿಯ ಹಬ್ಬ ಅಲ್ಲವೆ. ನಮ್ಮ "ಹಲ್ವಾ" (ಇದರ ವರ್ಣನೆಯನ್ನು ಹಿಂದೆಯೇ ಮಾಡಿದ್ದೇನಷ್ಟೆ:=ನಮ್ಮ ಚಿಗಳಿ) ಸ್ವಲ್ಪ ತಿಂದು ಹಬ್ಬದ ಸವಿಯನ್ನು ಅನುಭವಿಸುತ್ತೇನೆ.

* * *

Cambridge, Mass
ಜನವರಿ ೧೯, ೧೯೫೭

ಚಿ॥ ಸೌ॥ವತಿಗೆ

ಈ ಊರಿನಲ್ಲಿ ದಿನಗಳು ಎಂದಿನಂತೆ ಕಳೆಯುತ್ತಿವೆ. ವಿದ್ವಾಂಸರ ಪರಿಚಯ, ಅಲ್ಲಿ ಇಲ್ಲಿ ಊಟ ಉಪಾಹಾರ – ಇತ್ಯಾದಿ. ಶ್ರೀ ಶಾರದಾ ಪ್ರಸಾದ್ ಪ್ರತಿದಿನವೂ ಜೊತೆಗೆ ಸಿಕ್ಕುತ್ತಿರುವುದರಿಂದ ಮನಸ್ಸಿಗೆ ಹಾಯಾಗಿದೆ. ನಾನು ಇಲ್ಲಿಗೆ ಬಂದಂದಿನಿಂದಲೂ ಮಳೆ ಹಿಡಿದಿತ್ತು. ಏಳೆಂಟು ದಿನ ಬಿಸಿಲಿನ ಮುಖವೇ ಇರಲಿಲ್ಲ. ಧಾರವಾಡದ 'ಜಡಿ ಮಳೆ' ಜ್ಞಾಪಕಕ್ಕೆ ಬರುತ್ತಿತ್ತು. ಮೊನ್ನೆಯ ದಿನ ಹನಿಮಳೆ ಹೋಗಿ ಹಿಮದ ಮಳೆ ಸುರಿಯಿತು. ಅದರ ಅನುಭವ ಹಿಂದೆ ಒಂದೆರಡು ಬಾರಿ ನನಗೆ ಈ ದೇಶದಲ್ಲಿ ಆಗಿತ್ತು. ಈ ಬಾರಿ ಅದ್ಭುತವಾಗಿತ್ತು. ಎಲ್ಲೆಲ್ಲೂ ಬಿಳಿಯ ಸಕ್ಕರೆಯನ್ನು ಒಂದು ಅಡಿ ಎತ್ತರ ಸುರಿದಂತೆ ಹಿಮದ ರಾಶಿ ಗಿಡಗಳ ಮೇಲೆ, ಮನೆಗಳಮೇಲೆ, ಕಾರುಗಳ ಮೇಲೆ ಎಲ್ಲೆಲ್ಲೂ. ಗಿಡಗಳಂತೂ ಬೆಳ್ಳಿಯಿಂದ, ಕರ್ಪೂರದಿಂದ ಮಾಡಿದಂತೆ ಕಾಣಿಸುತ್ತಿದ್ದವು. ಮಕ್ಕಳ ಕೈಯಲ್ಲಿ ಗಟ್ಟಿ ಬೆಣ್ಣೆಯ ಮುದ್ದೆಯಂತೆ snow-ball. ಇನ್ನು ಕೆಲವು ಕಡೆ ತಿಂಡಿಯ ಮೇಲೆ ಐಸ್‌ಕ್ರೀಮ್ ಇಟ್ಟಂತೆ ಹಿಮದ ನೋಟ ಬೆರಗು ತರುತ್ತಿತ್ತು.–ಇದರ ಜೊತೆಗೆ ನೆಲದ ಮೇಲೆ ಹಿಮ ಗಟ್ಟಿಯಾದಾಗ ಜಾರಿಕೆ. ನಿನ್ನೆಯಿಂದ ಬಿಸಿಲು ಬಂದಿದೆ–ಕೊರೆತವೂ ಹೆಚ್ಚಾಗಿದೆ.

ನಿನ್ನೆಯ ದಿನ ಬೆಂಗಳೂರಿನಿಂದ ಮೈಸೂರಿನಿಂದ ಕಾಗದಗಳು ಬಂದವು. ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡದ ಇನ್ನೊಂದು ಪ್ರೊಫೆಸರ್ ಜಾಗವನ್ನು ಏರ್ಪಡಿಸಿ ಅದನ್ನು ಭರ್ತಿ ಮಾಡುವುದಕ್ಕಾಗಿ ದರಖಾಸ್ತು (application) ಗಳನ್ನು ಕರೆದಿದ್ದಾರೆ. ಫೆಬ್ರುವರಿ ೧ ರೊಳಗೆ ಎಂದರೆ ಇನ್ನು ಹನ್ನೆರಡು ದಿನದೊಳಗೆ ದರಖಾಸ್ತು ಮೈಸೂರಿಗೆ ತಲುಪಬೇಕು. ಶ್ರೀ ಡಿ.ಎಲ್. ನರಸಿಂಹಾಚಾರ್, ಶಿವರಾಮಶಾಸ್ತ್ರಿ, ಚಿದಂಬರಂ–ಈ ಮೂರು ಮಂದಿಯೂ ನನಗೆ ಕಾಗದಗಳನ್ನು ಬರೆದು–ನೀನು ದರಖಾಸ್ತು ಹಾಕಲೇಬೇಕು, ಹೊರಗಡೆ ಇದ್ದರೂ

ಮೈಸೂರಿನ ಸ್ಥಾನವನ್ನು ದೃಢಮಾಡಿಕೊಂಡಿರಬೇಕು ಎಂದು ಸೂಚಿಸಿ, ದರಖಾಸ್ತು ಫಾರಂಗಳನ್ನು ಕಳಿಸಿದ್ದಾರೆ. ಆ ಆಪ್ತಮಿತ್ರರ ಹಿತೈಷಿತ್ವಕ್ಕಾಗಿ ತುಂಬ ನನ್ನ ಮನಸ್ಸು ಕರಗಿದೆ. ಅರ್ಜಿ ಕಳಿಸುವ ವಿಷಯವಾಗಿ ಧಾರವಾಡದ ಮಿತ್ರರ ಸಂಗಡ ಮಾತಾಡಿ, ಅಥವಾ ಕಾಗದ ಬರೆದು ಸಲಹೆ ಪಡೆಯಲು ಅವಕಾಶವೇ ಇಲ್ಲ. ಇನ್ನು ಒಂದೆರಡು ದಿನದಲ್ಲಿ ದರಖಾಸ್ತನ್ನು ಮೈಸೂರಿಗೆ ಕಳಿಸುತ್ತೇನೆ. ಈ ವಿಷಯವನ್ನು ನೀವು ಸದ್ಯದಲ್ಲಿ **ಗೋಪ್ಯವಾಗಿ** ಇರಿಸಿರಿ, ಯಾರ ಸಂಗಡವೂ ಪ್ರಸ್ತಾಪಿಸಬೇಡಿ. ನಾನು ಪ್ರತ್ಯೇಕವಾಗಿ ಧಾರವಾಡದ ಒಬ್ಬಿಬ್ಬರು ಮಿತ್ರರಿಗೆ (ಮುಖ್ಯವಾಗಿ ಶ್ರೀ ಎನ್.ಕೆ. ದೀಕ್ಷಿತರಿಗೆ) ಕಾಗದ ಬರೆಯುತ್ತೇನೆ – ಅಂತೂ ಈ ಅಪ್ಲಿಕೇಷನ್‌ಗಳ ಗಲಾಟೆಯಲ್ಲಿ ಮನಸ್ಸಿನ ನೆಮ್ಮದಿಗೆ ಮಾರ್ಗವಿಲ್ಲ!

* * *

ನ್ಯೂಹೇವನ್, ಕನೆಕ್ಟಿಕಟ್
ಜನವರಿ ೨೪, ೧೯೫೬

ಚಿ॥ ಸೌ॥ವತಿಗೆ

ನಾನು ಹಾರ್ವರ್ಡಿನಿಂದ ಕಳೆದ ವಾರ ಬರೆದ ಕಾಗದ ನಿಮಗೆ ತಲುಪಿರಬೇಕು. ಆ ಕಾಗದವನ್ನು ಅಂಟುಹಾಕಿ ಟಪಾಲಿಗೆ ಹಾಕಬೇಕೆಂದು ಇಟ್ಟುಕೊಂಡಿದ್ದೆ. ಅಷ್ಟರಲ್ಲಿ ಶ್ರೀ ಶಾರದಾ ಪ್ರಸಾದ್ ಅವರು ಸಂಕ್ರಾಂತಿ ಎಳ್ಳಿನ ಕಾಗದವನ್ನು ತಂದುಕೊಟ್ಟರು. ಅದರಲ್ಲಿ ಒಂದು ಭಾಗವನ್ನು ಅವರಿಗೆ ಕೊಟ್ಟು ಇನ್ನೊಂದು ಭಾಗವನ್ನು ನಾನು ತೆಗೆದುಕೊಂಡೆ. ಊರಿನ ಎಳ್ಳು ಬೆಲ್ಲ ಹನ್ನೊಂದು ಸಾವಿರ ಮೈಲಿ ದಾಟಿ ಸುರಕ್ಷಿತವಾಗಿ ನಮ್ಮ ಕೈಗೆ ಬಂದು ಗಂಟಲನ್ನು ಪ್ರವೇಶ ಮಾಡಿದವು. ರುಚಿಯಾಗಿದ್ದವು ಎಂದು ಬೇರೆ ಬರೆಯಬೇಕಾಗಿಲ್ಲ. ಮನಸ್ಸಿಗೆ ತುಂಬ ಗೆಲುವಾಯಿತು. ಅದನ್ನು ಸೂಚಿಸುವುದಕ್ಕಾಗಿ ಅಂಟಿಸಿದ್ದ ಕಾಗದವನ್ನು ಒಡೆಯದೆ ಎರಡು ಅಕ್ಷರವನ್ನು ಒಳಗೆ ಸೇರಿಸಿದೆ. – ಈ ದಿನ ಇನ್ನೊಂದು ಕಾಗದವನ್ನು ಇಲ್ಲಿಂದ ಬರೆಯ ಬೇಕೆಂದಿದ್ದೆ. ಅಷ್ಟರಲ್ಲಿ ಹಾರ್ವರ್ಡಿಗೆ ನೀನು ಬರೆದಿದ್ದ ೧೬–೧–೫೬ರ ಕಾಗದ ಈ ಮಧ್ಯಾಹ್ನ ನನ್ನ ಕೈಸೇರಿತು. ಈ ದಿನವೇ ಉತ್ತರ ಬರೆಯಬೇಕೆಂದು ಎರಡು ಪಂಕ್ತಿ ಬರೆಯುತ್ತಿದ್ದೇನೆ, ಹೆಚ್ಚಾಗಿ ಬರೆಯಲು ನನ್ನ ಬಳಿಯಲ್ಲೂ ಸಾಮಗ್ರಿ ಇಲ್ಲ. ಮತ್ತೆ ಆ ಊಟ ಮಾಡಿದೆ, ಈ ಊಟ ಮಾಡಿದೆ ಎಂದು ಬರೆಯಬೇಕು. ಆದರೆ ಹಾರ್ವರ್ಡಿಗೆ ಬಂದೀಚೆಗೆ ನಮ್ಮ ಕಡೆಯ ಊಟವನ್ನು ಹೆಚ್ಚಾಗಿ ಮಾಡಿದ್ದೇನೆ. ಅದರ ಕೊಂಚ ವರ್ಣನೆಯನ್ನು ನನ್ನ ಹಿಂದಿನ ಕಾಗದದಲ್ಲಿ ನಾನು ಮಾಡಿದ್ದೆನಲ್ಲವೆ? ಸಂಕ್ರಾಂತಿಯ ಹಬ್ಬದ ದಿನ ಡಾ॥ ದಿಘೇ ಅವರ ಮನೆಯಲ್ಲಿ ಪೂರಿ ಶ್ರೀಖಂಡ; ಆ ಬಳಿಕ ಡಾ॥ ನಾರಾಯಣರಾವ್ ಎಂಬ ಮೈಸೂರಿನವರ ಮನೆಯಲ್ಲಿ ಬೋಂಡಾ ಕಲಸನ್ನ–ಇದರ ಊಟ. ಅಲ್ಲಿಂದೀಚೆಗೆ ನಾನು ಹಾರ್ವರ್ಡನ್ನು ಬಿಡುವ ಹಿಂದಿನ ರಾತ್ರಿ ನಮ್ಮ ದೇಶದ ಕೆಲವು ಮಿತ್ರರು (ಎಲ್ಲರೂ ಗಂಡಸರು– ಹೆಂಗಸರ ಕೈವಾಡವೇ ಇರಲಿಲ್ಲ!) ಒಂದು ಊಟವನ್ನು ಏರ್ಪಡಿಸಿದ್ದರು. ಶ್ರೀ ಶಾರದಾ ಪ್ರಸಾದ್ ಅವರಿಗೆ ಅಡಿಗೆಯೂ ಚೆನ್ನಾಗಿ ಬರುತ್ತದೆ ಎಂದು ನನಗೆ ತಿಳಿದಿರಲಿಲ್ಲ: ಕಲಸನ್ನ, ಟೊಮ್ಯಾಟೋ ಸಾರು ಇವನ್ನು ರುಚಿಯಾಗಿ ಮಾಡಿದ್ದರು. ಆದರೆ ಅಂದಿನ ಅಡಿಗೆಯಲ್ಲಿ ಮೇಲುಗೈ ಎಂದರೆ ಬದನೆಕಾಯಿ

ಬಜ್ಜಿ. ಶ್ರೀ ಜೋಶಿ ಎಂಬವರು ಎಲೆಕ್ಟ್ರಿಕ್ ಸ್ಟವ್ ಮೇಲೆ ದೊಡ್ಡ ಬದನೆಕಾಯನ್ನು ಸುಟ್ಟು ಬಲುಹದವಾಗಿ ಬಜ್ಜಿ ಮಾಡಿದ್ದರು. ಎಲ್ಲರೂ ಅದನ್ನು ಮೆಚ್ಚಿದರು. ಇಲ್ಲಿಗೆ ಬಂದಮೇಲೆ ನಿನ್ನೆ ರಾತ್ರಿ ಡಾ. ಪಿ.ಬಿ ಪಂಡಿತ್ ಅವರ ಮನೆಯಲ್ಲಿ (ಅವರ ಹೆಂಡತಿಯೂ ಬಂದು ಎಂ.ಎ.ಗೆ ಓದುತ್ತಿದ್ದಾರೆ) ಹುಳಿ, ಅನ್ನ, ಪೂರಿ, ಶ್ರೀಖಂಡ; ಶ್ರೀಖಂಡ ಬಲು ಸೊಗಸಾಗಿತ್ತು. ಊಟಕ್ಕೆ ಶ್ರೀ ಡಿ.ಎಲ್. ನರಸಿಂಹಾಚಾರ್ಯರ ಹೆಂಡತಿಯ ಅಕ್ಕನ ಮಗಳು ಶ್ರೀಮತಿ ಶಾಂತಾ ಕಡಾಂಬಿ ಬಂದಿದ್ದರು. ಈಕೆ ಇಲ್ಲಿ ಎಂ.ಎ.ಗೆ ಓದುತ್ತಿದ್ದಾರೆ–ತುಂಬ ಬುದ್ಧಿವಂತೆ. ಲ್ಯಾಬೊರೇಟರಿ ಒಂದರಲ್ಲಿ ಕೆಲಸ ಮಾಡಿಕೊಂಡು ಅದರ ಹಣದಲ್ಲಿ ಬಹು ಮಿತವ್ಯಯದಿಂದ ಊಟ ವಸತಿಯ ವೆಚ್ಚವನ್ನು ತೂಗಿಸಿಕೊಂಡು ಅಭ್ಯಾಸ ನಡೆಸುತ್ತಿದ್ದಾರೆ. ವಿಶ್ವವಿದ್ಯಾಲಯದವರು ಆಕೆಗೆ ಫೀ ಮಾಫಿ ಮಾಡಿದ್ದಾರೆ. ಆಕೆ ಶ್ರಮಪಟ್ಟು ಇಷ್ಟೊಂದು ಚೆನ್ನಾಗಿ ಅಭ್ಯಾಸ ಮಾಡುತ್ತಿರುವುದನ್ನು ನೋಡಿ ನನ್ನ ಮನಸ್ಸಿನಲ್ಲಿ ಕನಿಕರ ಅಭಿಮಾನ ಎರಡೂ ಉಕ್ಕಿದವು.

ಸಂಕ್ರಾಂತಿಯ ದಿನ ಮಿತ್ರರೆಲ್ಲರು ಮನೆಗೆ ಬಂದಿದ್ದರೆಂದು ಬರೆದಿದ್ದೀಯ. ತುಂಬಾ ಸಂತೋಷ. ನಾನೂ ಎಲ್ಲರನ್ನು ಆಗಾಗ್ಗೆ ಜ್ಞಾಪಿಸಿಕೊಳ್ಳುತ್ತಿರುತ್ತೇನೆ. ಇವರ ಅಭಿಮಾನ ವಿಶ್ವಾಸ ಗಳನ್ನು ಕೇಳಿ ಮನಸ್ಸು ಮತ್ತೆ ಊರಕಡೆಯ ನೆನಪನ್ನೆಲ್ಲ ತಂದುಕೊಳ್ಳುತ್ತಿದೆ. ಅವರಿಗೆ ನನ್ನ ವಿಶೇಷ ಆಶೀರ್ವಾದಗಳನ್ನು ತಿಳಿಸು. ಧಾರವಾಡದಲ್ಲಿ ಹೀಗೆ ನನಗೆ nephews ಮತ್ತು nieces (ಈ ಶಬ್ದಗಳಿಗೆ ಭಾಷಾಂತರ ಕಷ್ಟ. ಸೋದರಳಿಯ ಸೋದರ ಸೊಸೆ ಎನ್ನಬಹುದು) ಬಹಳ ಮಂದಿ ಇದ್ದಾರೆ ಎಂದು ಇಲ್ಲಿಯ ಮಿತ್ರರಿಗೆ ಆಗಾಗ್ಗೆ ಹೇಳುತ್ತಿರುತ್ತೇನೆ. ಇಲ್ಲಿಯ ಅಂಥ nephew ಮತ್ತು niece ನನಗೆ ಫಿಲಡೆಲ್ಫಿಯದಲ್ಲಿ ದೊರೆತರು. ಅವರೇ Kenneth ಮತ್ತು Dorothy Mammel. ಅವರನ್ನು ಈಗ ನಾನು Ken, Dottie ಎಂದು ಕರೆಯುವಷ್ಟು ಸಲಿಗೆಯಾಗಿದೆ. ಫಿಲಡೆಲ್ಫಿಯವನ್ನು ನಾನು ಬಿಟ್ಟುಬಂದಮೇಲೆ ವಿಶ್ವಾಸತುಂಬಿದ ಕಾಗದವನ್ನು ಹಾರ್ವರ್ಡಿಗೆ ಬರೆದಿದ್ದರು. (ಈ ದೇಶದಲ್ಲಿ ಹೆಂಗಸರೂ ಹೀಗೆ ಕಾಗದಗಳನ್ನು ಸಂಕೋಚಪಡದೆ ಬರೆಯುತ್ತಾರೆ). ನ್ಯೂಯಾರ್ಕನ್ನು ನಾನು ಬಿಡುವುದರೊಳಗೆ ಇಬ್ಬರೂ ಅಲ್ಲಿಗೆ ನನ್ನನ್ನು ಬೀಳ್ಕೊಳ್ಳುವ ಸಲುವಾಗಿ ಬರುವುದಾಗಿ ತಿಳಿಸಿದ್ದಾರೆ. ಪ್ರಪಂಚದಲ್ಲಿ ಸ್ನೇಹ, ಪ್ರೀತಿ ಇದಕ್ಕಿಂತ ದೊಡ್ಡ ವಸ್ತುಗಳಿಲ್ಲ!

* * *

London w.c.2, ಫೆಬ್ರುವರಿ ೮, ೧೯೫೬

ಚಿ॥ ಸೌ॥ ನಾಗರತ್ನಗಳಿಗೆ

ನಿಜ. ನಿನ್ನ ಆಕ್ಷೇಪಣೆಯನ್ನು ಒಪ್ಪಿಕೊಳ್ಳುತ್ತೇನೆ. ನಿನ್ನ ಹೆಸರಿಗೇ ನೇರವಾಗಿ ನಾನು ಕಳೆದ ಕೆಲವು ವಾರಗಳಿಂದ ಬರೆಯದೆ ಇದ್ದದ್ದಕ್ಕೆ ಕಾರಣ ಪ್ರೀತಿಯ ಅಭಾವವಾಗಲಿ ಉಪೇಕ್ಷೆ ಯಾಗಲಿ ಅಲ್ಲವೆಂದು ನಿನಗೆ ತಿಳಿದೇ ಇದೆಯಷ್ಟೆ. ನಾನು ಯಾರ ಹೆಸರಿಗೆ ಕಾಗದ ಬರೆದರೂ ಅದನ್ನು ನೀವೆಲ್ಲರೂ ಓದಿ ನೋಡಿಕೊಳ್ಳುತ್ತೀರೆಂದು ನನಗೆ ಗೊತ್ತು. ಅಲ್ಲದೆ ಹಿಂದೆಲ್ಲ

ಮುಖ್ಯವಾಗಿ ನಿನ್ನ ಹೆಸರಿಗೇ ನಾನು ಬರೆಯುತ್ತಿದ್ದೆ. ಈಗ ಸ್ವಲ್ಪ ಬದಲಾಯಿಸೋಣವೆಂದು ನಿಮ್ಮ ತಾಯ ಹೆಸರಿಗೆ ಬರೆದೆ. ಇಗೋ ಈಗ ನಿನ್ನ ಹೆಸರಿಗೇ ಬರೆಯುತ್ತಿದ್ದೇನೆ!

ನಾನು ಇಲ್ಲಿಗೆ ಕಳೆದ ಶನಿವಾರ ೪ನೆಯ ತಾರೀಖು Pan American Airways ವಿಮಾನದಲ್ಲಿ ಸುಖವಾಗಿ ಬಂದು ತಲಪಿದೆ. ನ್ಯೂಯಾರ್ಕಿನಿಂದ ಹೊರಡುವ ಮೊದಲು, ಶುಕ್ರವಾರ ನಿಮ್ಮ ತಾಯ ಹೆಸರಿಗೆ ಒಂದು ಕಾಗದ ಬರೆದು ಅದರಲ್ಲಿ ಒಂದು Insurance Policy ಯನ್ನು ಕಳಿಸಿದ್ದೆ. ಅದು ಕೇವಲ ಮುಂಜಾಗರೂಕತೆಯ ಏರ್ಪಾಡೆಂದೂ ತಿಳಿಸಿದ್ದೆ. ಆ ಕಾಗದ ಈ ವೇಳೆಗೆ ನಿಮಗೆ ಕೈ ಸೇರಿರಬಹುದು, ಅಥವಾ ಇಲ್ಲವೋ. ಅಂತೂ ಇಲ್ಲಿಗೆ ತಲಪಿದ ಕೂಡಲೆ ನಿಮ್ಮ ಮನಸ್ಸಿಗೆ ಸಮಾಧಾನಕೊಡುವುದಕ್ಕಾಗಿ, ಒಂದು ಕೇಬಲನ್ನು ಕಳಿಸಿಕೊಟ್ಟೆ. ಅದು ಬಹುಶಃ ನಿಮಗೆ ಸೋಮವಾರ ತಲಪಿರಬೇಕು. ಧಾರವಾಡದ ಕಾಗದವನ್ನು ನೋಡಿ ಕೊಂಡು ಉತ್ತರ ಬರೆಯೋಣವೆಂದು ಸ್ವಲ್ಪ ತಡಮಾಡಿದೆ, ಈ ಕಾಗದ ಬರೆಯುವುದಕ್ಕೆ. ನೀನು ಫೆಬ್ರುವರಿ ೧ನೆಯ ತಾರೀಖು ಬರೆದ ಕಾಗದ ಈ ಊರಿಗೆ ನಿನ್ನೆಯ ದಿನ (ಎಂದರೆ ೭ನೆಯ ತಾ॥) ತಲುಪಿದೆ. ಇಂಗ್ಲೆಂಡಿಗೆ ತಲಪುವುದಕ್ಕೆ ಇಷ್ಟೇಕೆ ನಿಧಾನವೋ ಕಾಣೆ. ಅಂತೂ ನಿನ್ನೆ ನಿಮ್ಮ ಯೋಗಕ್ಷೇಮದ ವಿಷಯ ತಿಳಿದು ನನ್ನ ಮನಸ್ಸಿಗೆ ಸಮಾಧಾನವಾಯಿತು. ಕಾಗದದ ಧ್ವನಿಯನ್ನು ನೋಡಿದರೆ ನಿನ್ನ ಆರೋಗ್ಯ ಇನ್ನೂ ಉತ್ತಮವಾಗಿಲ್ಲವೆಂದು ತೋರುತ್ತದೆ. ಮನೆಯ ಚಿಂತೆ, ಪರೀಕ್ಷೆಯ ಚಿಂತೆ, ನಾನು ನಿನಗೆ ನೇರವಾಗಿ ಕಾಗದ ಬರೆಯಲಿಲ್ಲವೆಂಬ ಚಿಂತೆ (!) ಇದನ್ನೆಲ್ಲ ಅದಷ್ಟು ಮಟ್ಟಿಗೆ ಮರೆತು – ನಿನ್ನ ವ್ಯಾಸಂಗವನ್ನು ಯಥಾಶಕ್ತಿ (ಎಂದರೆ ದೇಹಕ್ಕೆ ಹೆಚ್ಚು ಆಲಸ್ಯ ಮಾಡಿಕೊಳ್ಳದೆ) ಮುಂದುವರಿಸು. ಡಾ॥ ಕಮಲಾಪೂರ ಅವರು ಹೇಳುವುದರಲ್ಲಿಯೂ ಕೆಲವು ಮಟ್ಟಿಗೆ ಸತ್ಯಾಂಶವಿದೆಯೆಂದು ತೋರುತ್ತದೆ.

ನಾನು ಹಿಂದಿನ ಕಾಗದವೊಂದರಲ್ಲಿ ಸೂಚಿಸಿದಂತೆ Ken ಮತ್ತು Dottiee ನ್ಯೂಯಾರ್ಕಿಗೆ ೧ನೆಯ ತಾ॥ ಬುಧವಾರ ಬಂದಿದ್ದರು. ಏಳೆಂಟು ಘಂಟೆಯ ಕಾಲವನ್ನು ಒಟ್ಟಿಗೆ ವಿಶ್ವಾಸವಾಗಿ ಕಳೆದೆವು. ಚಿ॥ ನಾಗಭೂಷಣ ಬರೆದಿದ್ದ ಕಾಗದವನ್ನು Ken ನನಗೆ ತೋರಿಸಿದನು; ಚೆನ್ನಾಗಿತ್ತು, ತಪ್ಪುಗಳೂ ಇರಲಿಲ್ಲ. Dottie ನಿನಗೆ ಕಾಗದ ಬರೆಯುವುದಾಗಿ ಹೇಳಿದ್ದಾಳೆ.

Florida ಎಂಬ U.S.A ಸಂಸ್ಥಾನದ Miami ಎಂಬ ಊರಿನಲ್ಲಿ Gary Salzman ಎಂಬ ಇನ್ನೊಬ್ಬ ಸ್ನೇಹಿತ ಇದ್ದಾನೆ. ಅತನ ಹೆಂಡತಿ Bertha (Bert ಎಂಬುದು ಸಂಕ್ಷಿಪ್ತರೂಪ). ಇವರ ವಿಷಯವನ್ನು ನಿಮಗೆ ಬರೆದಿದ್ದೇನೆ! ಇವರ ಸಂಗಡ ಇದುವರೆಗೆ ಒಟ್ಟು ಮೂರು ಬಾರಿ Long Distance Telephone ಮೂಲಕ ಸಂಭಾಷಣೆ ನಡೆಸಿದೆನು: (ನಾನು ಒಂದು ಬಾರಿ ಅವರು ಎರಡು ಬಾರಿ.) ಕಳೆದ ಗುರುವಾರ ರಾತ್ರಿ ಎಂಟು ಘಂಟೆಗೆ ನ್ಯೂಯಾರ್ಕಿನ Hotel Abbayಯಲ್ಲಿ ನಾನು, ಮಯಾಮಿಯ ಸ್ವಂತ ಮನೆಯಲ್ಲಿ ಅವರು ಸುಮಾರು ಐದಾರು ನಿಮಿಷ ಮಾತಾಡಿ, ಯೋಗಕ್ಷೇಮ ವಿಚಾರಿಸಿ ಮನೆಮಕ್ಕಳ ಸಂಗತಿಯನ್ನೆಲ್ಲ ಆಡಿ, ಬೀಳ್ಕೊಂಡದ್ದಾಯಿತು. Bert ಎಂಬಾಕೆಯನ್ನು ನಾನು ಇದುವರೆಗೂ ಮುಖತಃ ನೋಡಿಯೇ ಇಲ್ಲ. ಆದರೆ ಸ್ವಂತ ತಂಗಿಯಂತೆ ಆಕೆ ನನ್ನೊಂದಿಗೆ ಮಾತು, ಪತ್ರವ್ಯವಹಾರ ನಡೆಸಿದ್ದಾಳೆ.

ಇದೊಂದು ವಿಚಿತ್ರ ಅನುಭವ ನನಗೆ. ನಿಮ್ಮೆಲ್ಲರ ಹೆಸರುಗಳೇನು ಉಚ್ಚಾರಣೆ ಹೇಗೆ, ನೀವೂ ನಾನು ಇಷ್ಟು ದೀರ್ಘಕಾಲ ಒಬ್ಬರನ್ನೊಬ್ಬರು ಅಗಲಿ ಹೇಗೆ ಇದ್ದೇವೆ ಇದನ್ನೆಲ್ಲ ಕುತೂಹಲದಿಂದ ಕೇಳಿ ತಿಳಿದುಕೊಂಡಿದ್ದಾಳೆ. ಭಾರತಕ್ಕೆ ಗಂಡ ಹೆಂಡತಿ ಬನ್ನಿ ಎಂದು ಅವರಿಗೆ "ಆಹ್ವಾನ" ಕೊಟ್ಟಿದ್ದೇನೆ. – ಬೀಳ್ಕೊಳ್ಳುವ ಸಂಬಂಧದ ಇನ್ನೊಂದು ಪ್ರಸಂಗ: ಶುಕ್ರವಾರ ಸುಮಾರು ಮೂರೂವರೆ ಘಂಟೆಗೆ ನಾನು ಹೋಟೆಲು ಬಿಡಬೇಕಾಗಿತ್ತು. ಸಾಮಾನು ಕಟ್ಟಿ ಸಿದ್ಧವಾಗಿತ್ತು. (ಒಂದೆರಡು ಪದಾರ್ಥಗಳನ್ನು ಮರೆತು, ಕೈಬಿಟ್ಟಿದ್ದೂ ಆಗಿತ್ತು: ಅದರ ವಿಷಯ ಬೇರೆ!).* ಆಗ ರಾಕ್‌ಫೆಲರ್ ಸಂಸ್ಥೆಯಿಂದ ಫೋನ್ ಕರೆ ಬಂತು. ನಿಮಗೊಂದು Special Delivery ಕಾಗದ ಬಂದಿದೆ ಎಂದು. ಏರ್‌ಪೋರ್ಟ್‌ಗೆ ಹೋಗುತ್ತಾ ಅದನ್ನು ತೆಗೆದುಕೊಂಡೆ; ಕಾಗದ ಫಿಲಡೆಲ್ಫಿಯದ್ದು; ಒಂದು Greeting Card: ತೆರೆದು ನೋಡಿದರೆ ಪ್ರೊ. ಹನಿಗ್ಸ್‌ವಾಲ್ಡ್‌ರ ಮಕ್ಕಳು Francs ಮತ್ತು Ann ಇಬ್ಬರೂ ನನಗೆ ಅದನ್ನು ಕಳಿಸಿದ್ದಾರೆ. ಒಬ್ಬಳ ವಯಸ್ಸು ಏಳು ಮತ್ತು ಇನ್ನೊಬ್ಬಳು ಐದು. ಅದರ ಒಕ್ಕಣೆ; ''It is just not right to say 'good-bye''..... Let us only say so long!"–ಬಹುಶಃ ತಂದೆ ತಾಯಿ ಇಬ್ಬರೂ ಮಕ್ಕಳಿಗೆ ಇದನ್ನು ಕಳಿಸುವುದರಲ್ಲಿ ಸಹಾಯ ಮಾಡಿರಬೇಕು. ವಿಳಾಸವೇನೋ ಪ್ರೊ॥ ಹನಿಗ್ಸ್‌ವಾಲ್ಡ್‌ರ ಅಕ್ಷರದಲ್ಲೇ ಇತ್ತು. ಅಂತೂ ಈ ಕಾಗದವನ್ನು ನೋಡಿದಾಗ ಮಿತ್ರರೇ ನನ್ನನ್ನು ಬೀಳ್ಕೊಡಲು ಏರ್‌ಪೋರ್ಟ್‌ಗೆ ಬಂದಿದ್ದಾರೆ! ಅನ್ನಿಸಿತು. ಅಮೇರಿಕದಲ್ಲಿ ನನ್ನ ಪ್ರವಾಸ ಅಷ್ಟೇನೂ ಏಕಾಕಿಯಾಗಿರಲಿಲ್ಲ.

ಸ್ನೇಹದ ಇನ್ನೊಂದು ಮಾತು. ಇಲ್ಲಿಯ London School of Oriental and African studies ನಲ್ಲಿ Mrs Whitley ಎಂಬಾಕೆ ಇದ್ದಾರೆ. ಈಕೆ ಬೆಂಗಳೂರಿನಲ್ಲಿ ನನ್ನೊಂದಿಗೆ ಕನ್ನಡ ಧ್ವನಿಶಾಸ್ತ್ರದ ಮೇಲೆ ಕೆಲಸ ಮಾಡಿದ, ನಮ್ಮ ಮನೆಗೆ ಉಪಾಹಾರಕ್ಕೆ ಬಂದಿದ್ದ Miss E.M Evans. ಎವನ್ಸ್ ಎಂದರೆ ನಿಮ್ಮ ತಾಯಿಗಾದರೂ ಜ್ಞಾಪಕಕ್ಕೆ ಬರುತ್ತದೆ! ನಿಮಗೆ ಆಕೆ ಚಾಕೊಲೇಟ್ ತಂದುಕೊಟ್ಟಿದ್ದರು. ಆ ಡಬ್ಬಿ ಇನ್ನೂ ಮನೆಯಲ್ಲಿ ಇರಬೇಕು, ಆಕೆ ಇಲ್ಲಿ ನನ್ನನ್ನು ತುಂಬಾ ಆದರದಿಂದ ಕಂಡರು. ಈಚೆಗೆ ಮದುವೆಯಾಗಿದ್ದಾರೆ. ಒಂದು ಮಗುವಿದೆ. ಅವರ ಮನೆಗೆ ನಾನು ಈ ವಾರಾಂತ್ಯದಲ್ಲಿ (ಅದು ಲಂಡನ್ನಿನ ಹೊರಗೆ ಇದೆ) ಹೋಗಬೇಕೆಂದು ದಂಪತಿಗಳಿಂದ ಆಹ್ವಾನ ಬಂದಿದೆ. Mrs. Whitley ನಿಮ್ಮ ತಾಯಿ ವಿಷಯ, ನಿಮ್ಮ ವಿಷಯ ಎಲ್ಲ ಕೇಳಿದರು. ನಿಮ್ಮ ತಾಯನ್ನು ಹೊಗಳಿದರು. ನಾನೂ ನಾಲ್ಕು ಜನರ ಎದುರಿಗೆ ಎಳ್ಳಷ್ಟೂ ಸಂಕೋಚವಿಲ್ಲದೆ, ನನ್ನ ಹೆಂಡತಿ ತುಂಬಾ ಒಳ್ಳೆಯ ಹೆಂಗಸು ಎಂದು ಹೊಗಳಿದೆ!

---

* ಇನ್ನೇನೂ ಅಲ್ಲ. ನ್ಯೂಯಾರ್ಕಿನಲ್ಲಿ ಪ್ರೊ॥ ಬಿ.ಎಂ. ಶ್ರೀಕಂಠಯ್ಯನವರ ಮಗಳ ಮಗ ಡಾ॥ ಎಸ್.ಜಿ. ಶ್ರೀಕಂಠಯ್ಯ ಒಂದು ಆಸ್ಪತ್ರೆಯಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ಅವರ ಹೆಂಡತಿಯೂ ಅಲ್ಲಿಗೆ ಬಂದಿದ್ದಾರೆ. ಗುರುವಾರ ರಾತ್ರಿ ಅವರ ಮನೆಗೆ ಊಟಕ್ಕೆ ಹೋಗಿ ಹಿಂದಕ್ಕೆ ಬರುವಾಗ ನನ್ನ cap, gloves ಎರಡನ್ನೂ ಅಲ್ಲಿ ಮರೆತು ಬಂದೆ. ಮತ್ತೆ ಅಲ್ಲಿಗೆ ಹೋಗಿ ತರಲು ಆಗಲಿಲ್ಲ. ಹೀಗೆಯೇ.

* * *

ಲಂಡನ್, ಫೆಬ್ರುವರಿ ೧೬, ೧೯೫೬

ಚಿ॥ಸೌ॥ ನಾಗರತ್ನಳಿಗೆ

ನಿಮ್ಮ ೭ನೆಯ ತಾರೀಖಿನ ಕಾಗದ ನನ್ನ ಕೈಗೆ ಮೊನ್ನೆಯ ಸಂಜೆ ತಲುಪಿತು. ಅಮೆರಿಕದಿಂದ ಸ್ವದೇಶದ ದಾರಿಯಲ್ಲಿ ಸುಮಾರು ಅರ್ಧದೂರ ಬಂದಿದ್ದೇನೆಂದು ನನಗೂ ನಿಮ್ಮಂತೆಯೇ ಸಂತೋಷವಾಗಿದೆ. ಅಮೆರಿಕದಲ್ಲಿ ಒಟ್ಟಿನ ಮೇಲೆ ನನ್ನ ಪ್ರವಾಸ ಸ್ವಾರಸ್ಯವಾಗಿತ್ತು, ನಿಜ. ಆದರೆ ದಿನಕಳೆದಂತೆಲ್ಲ ಊರ ಕಡೆಯ ಗೀಳು–ಅದರಲ್ಲೂ ನನ್ನಂಥವರಿಗೆ ಹೆಚ್ಚುವುದು ಅನಿವಾರ್ಯ. ಇನ್ನೂ ನೋಡತಕ್ಕ ಜಾಗಗಳಿವೆ, ಕಳೆಯಬೇಕಾದ ದಿನಗಳಿವೆ. ಆದರೆ ಏಪ್ರಿಲ್ ಮಧ್ಯಭಾಗದಲ್ಲಿ ಊರನ್ನು ಮುಟ್ಟುವ ಆಕಾಂಕ್ಷೆಯೂ ಪ್ರಬಲವಾಗುತ್ತಿದೆ.

ನಾನು ಲಂಡನ್ನಿನಿಂದ ಕಳೆದ ವಾರ ಬರೆದ ಕಾಗದ ನಿಮಗೆ ತಲಪಿರಬೇಕು. ಅಲ್ಲಿಯ ಸ್ನೇಹಗಳ ಕೆಲವು ವಿವರಗಳನ್ನು ಅದರಲ್ಲಿ ತಿಳಿಸಿದ್ದೆ. ಕೆನ್ ಮತ್ತು ಡಾಟಿ (Dottie; Dhotie ಎಂಬುದು ತಪ್ಪು ಕಾಗುಣಿತ ಎಂದು ಚಿ॥ ನಾಗಭೂಷಣನಿಗೆ ತಿಳಿಸು!) ತುಂಬ ವಿಶ್ವಾಸಿಗಳು. ಚಿ॥ ನಾಗಭೂಷಣನಿಗೆ ಸ್ಟಾಂಪ್ ಕಳಿಸಿ ಕಾಗದ ಬರೆದಿರುವುದಾಗಿ ಕೆನ್ ನನಗೆ ನ್ಯೂಯಾರ್ಕಿನಲ್ಲಿ ತಿಳಿಸಿದ್ದನು. ಸೌ॥ ಡಾಟಿಯಿಂದ ನಿನಗೆ ಕಾಗದ ಬರಬಹುದು.

ಇಲ್ಲಿ ಕಳೆದ ವಾರಾಂತ್ಯದಲ್ಲಿ ಶ್ರೀಮತಿ ವಿಟ್ಲೆಯವರ ಮನೆಗೆ ಹೋಗಿ ಅಲ್ಲಿ ಎರಡು ರಾತ್ರಿ ಕಳೆದೆನು. ಶ್ರೀಮಾನ್ ವಿಟ್ಲೆ ಬಲು ಒಳ್ಳೆಯ ಮನುಷ್ಯನೆಂದು ತೋರುತ್ತದೆ. ತನ್ನ ಹೆಂಡತಿಯ ಪರಿಚಯಸ್ಥನೆಂದು ನನ್ನನ್ನು ತುಂಬ ವಿಶ್ವಾಸದಿಂದ ಕಂಡರು. ದಂಪತಿಗಳು ಶುಕ್ರವಾರ ರಾತ್ರಿ ಲಂಡನ್ನಿನ ಒಂದು ಭೋಜನಶಾಲೆಯಲ್ಲಿ–ಕೋಹಿನೂರ್ ಎಂದು ಅದರ ಹೆಸರು; ನಮ್ಮ ಕಡೆಯ ಊಟವೂ ಸಿಕ್ಕುತ್ತದೆ – ಊಟಮಾಡಿಸಿ, ಲಂಡನ್ನಿನ ಹಲವು ರಸ್ತೆಗಳಲ್ಲಿ ಮೋಟಾರಿನಲ್ಲಿ ಸುತ್ತಿಸಿ, ರಾತ್ರಿ ಇಲ್ಲಿಗೆ ಹದಿನೇಳು ಮೈಲಿ ದೂರದಲ್ಲಿದ್ದರೂ, ಲಂಡನ್ನಿನ ಅಂಚಿಗೇ ಸೇರಿರುವ Radlett ಎಂಬಲ್ಲಿಯ ತಮ್ಮ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಯಥೋಚಿತವಾದ ಆತಿಥ್ಯ. ಶ್ರೀಮತಿ ವಿಟ್ಲೆಯೇ ಅಡಿಗೆಮಾಡಿ ಬಡಿಸುತ್ತಿದ್ದರು. ಅವರಿಗೆ ಕೇರಿ ಎಂಬ ಮೂರೂವರೆ ವರ್ಷದ ಮಗಳಿದ್ದಾಳೆ. ಹಳೆಯ ಯೋಗಕ್ಷೇಮಗಳನ್ನು ಪ್ರಸ್ತಾಪಿಸಿದೆನು. ನಿಮ್ಮ ತಾಯ ಅಡಿಗೆಯ ರುಚಿಯನ್ನು ಆಕೆ ಜ್ಞಾಪಿಸಿಕೊಂಡಳು. (ನನಗೂ ಅದರ ಜ್ಞಾಪಕ ಸತತವಾಗಿ ಬರುತ್ತದೆ. ಊರುಬಿಟ್ಟ ಮೇಲೆ ನಾಲಗೆಗೆ ಸಾರಿನ ರುಚಿಯೇ ಸಿಕ್ಕಿಲ್ಲ!). ಮರುದಿನ ಶ್ರೀಮಾನ್ ವಿಟ್ಲೆ ಕಾರಿನಲ್ಲಿ ತಮ್ಮ ಕೆಲಸದ ಜಾಗಕ್ಕೆ ಕರೆದುಕೊಂಡು ಹೋದರು. ಆತ ಮರಳು, ಗ್ರಾವೆಲ್ ಇವನ್ನು ಅಗೆದು ಒದಗಿಸುವ ಕಂಪನಿಯಲ್ಲಿದ್ದಾರೆ. ಅಲ್ಲಿ ನನ್ನ ಪಾದರಕ್ಷೆಗಳು ಕೆಸರಾದವು. (ಅವನ್ನು ನಾನು ಬೇಡ ಬೇಡ ಎಂದರೂ ಮನೆಗೆ ಬಂದಬಳಿಕ ತಾವೇ ಒರಸಿ ಹೊಳಪು ಕೊಟ್ಟರು! ಈ ಅತಿಥಿ ಸೇವೆಯನ್ನು ನಾನು ಯಾವ ಸ್ನೇಹಿತರಿಗೂ ಇದುವರೆಗೆ ಮಾಡಿಲ್ಲ!) – ಹೀಗೆಯೇ ಬರೆಯುತ್ತಾ ಹೋಗಬಹುದು. ಅಂತೂ ಮಿಸ್ ಎವನ್ಸ್ ತಡಮಾಡಿದ್ದಕ್ಕೂ ಒಳ್ಳೆಯ ಗಂಡನನ್ನೇ ಪಡೆದಿದ್ದಾರೆ. ದಂಪತಿಗಳು ಅನ್ಯೋನ್ಯವಾಗಿದ್ದಾರೆ (ಇಬ್ಬರಿಗೂ ವಯಸ್ಸಾಗಿದೆ.) – ನೋಡಿ ನನಗೆ ಸಂತೋಷವಾಯಿತು.

ಲಂಡನ್ನಿನಲ್ಲಿ ನೋಡಬೇಕಾದ ಜಾಗ ಹಲವು ಇವೆ. ಸಾಧ್ಯವಾದ ಕೆಲವನ್ನು ಮಾತ್ರ ನೋಡುತ್ತಿದ್ದೇನೆ. ವಿದ್ವಾಂಸರ ಪರಿಚಯವೂ ಸಾವಕಾಶವಾಗಿ ನಡೆಯುತ್ತಿದೆ. ಮೊನ್ನೆ ಮಂಗಳವಾರ ಕೇಂಬ್ರಿಜ್ಜಿಗೆ ಹೋಗಿ ಬಂದೆ. ಇನ್ನೂ ಆಕ್ಸ್‌ಫರ್ಡ್, ಎಡಿನ್‌ಬರೋ, ಸ್ಟ್ರಾಟ್‌ಫರ್ಡ್ ಆನ್ ಆ್ಯವನ್ ಇಲ್ಲಿಗೆಲ್ಲ ಹೋಗಿ ಬರಬೇಕು. – ಇಲ್ಲಿಂದ ಫೆಬ್ರುವರಿ ೨೯ನೆಯ ತಾರೀಖು ಹಾಲೆಂಡಿಗೆ ಹೊರಡಬೇಕೆಂದು ಮಾಡಿದ್ದೇನೆ.

ನನ್ನ "ಉಪನ್ಯಾಸ"ಗಳ ವಿಷಯವನ್ನು ನೀನು ಕೇಳಿದ್ದೀಯೆ. ಅಮೆರಿಕದಲ್ಲೆಲ್ಲಾ ನಾನು ಕೊಟ್ಟದ್ದು ಒಂದೇ ಉಪನ್ಯಾಸ: ಅದು ಆ್ಯನ್ ಆರ್ಬರ್‌ರಿನಲ್ಲಿದ್ದಾಗ. ಅದನ್ನು ಕೇಳಿದ ವಿದ್ವಾಂಸರು ಮೆಚ್ಚಿದರೆಂದು ಹೇಳಬಹುದು. ಅಲ್ಲಿಂದೀಚೆಗೆ ಯಾರೂ ನನ್ನನ್ನು ಕೇಳಲಿಲ್ಲ. ನಾನಾಗಿಯೇ ಮೇಲೆಬಿದ್ದು ಎಲ್ಲಿಯೂ ಭಾಷಣ ಮಾಡಲು ಹೋಗಲೂ ಇಲ್ಲ. ಪಾಶ್ಚಾತ್ಯರಲ್ಲಿ ಹೆಣ್ಣು, ಮದುವೆಗೆ ಒಪ್ಪುವವಳಾಗಿದ್ದರೂ ಯಾರಾದರೂ ಗಂಡು ಅವಳನ್ನು ಕೇಳಬೇಕು, ಆಗ ಅವಳು "ಉಹು", "ಹು" ಎನ್ನಬೇಕು. ತಾನಾಗಿಯೇ ಮದುವೆ ಮಾಡಿಕೊಳ್ಳುತ್ತೇನೆ ಎನ್ನುವ ಹಾಗಿಲ್ಲ. ಈ ಪಾಶ್ಚಾತ್ಯ ಭಾಷಣಗಳ ವಿಷಯದಲ್ಲಿ ನನ್ನ ಪರಿಸ್ಥಿತಿಯೂ ಹಾಗೆಯೇ ಎನ್ನಬೇಕು! ೧೯೫೬ನೆಯ ಇಸವಿ "Leap year". ಈ ಕುಪ್ಪಳಿಸುವ ವರ್ಷದಲ್ಲಿ ಹೆಣ್ಣು ಮುಂದುವರಿದು ಗಂಡಿಗೆ ತನ್ನ ಮನೋಗತವನ್ನು ಸೂಚಿಸಬಹುದಂತೆ. ಆದರೆ ನನಗೆ ಯಾವ "ಗಂಡೂ" ಕಾಣುತ್ತಿಲ್ಲ.

ಆದರೆ – ಈ ದೇಶದಲ್ಲೂ ಒಂದು ಉಪನ್ಯಾಸ ಏರ್ಪಾಡಾಗಿದೆ. ಇಲ್ಲಿಯ ರಾಮಕೃಷ್ಣಾಶ್ರಮ Ramakrishna Vedanta Centre-ಇದರ ವಿಷಯವನ್ನು ನೀನು ಬಲ್ಲೆಯಷ್ಟೆ. ಇವರು ನನ್ನ "Akka Mahadevi'' ಲೇಖನವನ್ನು 'Women Saints of the World' ಎಂಬ ಗ್ರಂಥದಲ್ಲಿ ಪ್ರಕಟಿಸಿರುವವರು. (ಪುಸ್ತಕ ಈಗತಾನೆ ಹೊರಬಿದ್ದಿದೆ.) ಈ ಮಠದ ಸ್ವಾಮಿ ಶ್ರೀ ಘನಾನಂದರನ್ನು ಇಲ್ಲಿಗೆ ಬಂದಕೂಡಲೆ ಸಂಧಿಸಿದ್ದೆ. ಅವರ ಅಪೇಕ್ಷೆಯ ಮೇರೆಗೆ 'Religious Poetry in Kannada' ಎಂಬ ವಿಷಯವಾಗಿ ಈ ಸಂಜೆ Kingsway Hall ಎಂಬಲ್ಲಿ ಭಾಷಣ ಮಾಡಬೇಕಾಗಿದೆ. ಭಾಷಣಕ್ಕೆ ಇನ್ನೂ ಸರಿಯಾದ ಸಿದ್ಧತೆ ಆಗಿಲ್ಲ. ಕಾಲ ಸ್ವಲ್ಪವೇ ಉಳಿಯಿತು. ಆದರೆ ಈ ಕಾಗದವನ್ನು ಬರೆದು ಮುಗಿಸಲೇಬೇಕೆಂದು ಕುಳಿತು, ಇಲ್ಲಿಗೆ ಮುಟ್ಟಿಸಿದ್ದೇನೆ.

ಶ್ರಿ ಗಿಲ್‌ಪ್ಯಾಟ್ರಿಕ್ ಅಲ್ಲಿಗೆ ಬಂದ ವಿಷಯಕ್ಕೆ ನಿಮ್ಮ ಕಾಗದದ ನಿರೀಕ್ಷೆಯಲ್ಲೇ ಇದ್ದೇನೆ.

ಮೈಸೂರು ವಿಶ್ವವಿದ್ಯಾನಿಲಯದಿಂದ ಕಾಗದವೇನಾದರೂ ಬಂದಿತ್ತೇ? ನಾನು ಅಲ್ಲಿಗೆ ದರಖಾಸ್ತು ಕಳಿಸಿದ ವಿಷಯವಾಗಿ ಶ್ರೀ ಪಾವಟೆ–ವೈಸ್ ಛಾನ್‌ಸೆಲರ್–ಅವರಿಗೆ ಬರೆದಿದ್ದೆ. ನಾನು ಮೈಸೂರಿಗೆ ಹೋಗಲು ಇಷ್ಟಪಡುವುದಾದರೆ, ತಮ್ಮ ಅಡ್ಡಿಯೇನೂ ಇಲ್ಲವೆಂದು ತಿಳಿಸಿ ಅವರು ಬರೆದ ಕಾಗದ ನನಗೆ ಮೊನ್ನೆಯ ದಿನ ನಿನ್ನ ಕಾಗದದ ಜೊತೆಗೆ ಬಂದಿತು.

* * *

ಎಡಿನ್‌ಬರೋ, ಫೆಬ್ರುವರಿ ೨೩, ೧೯೫೬

ಚಿ॥ ನಾಗಭೂಷಣನಿಗೆ

ಈಚೆಗೆ ನಿನ್ನ ಹೆಸರಿಗೆ ನಾನು ಕಾಗದ ಬರೆದಿಲ್ಲ. ಅದಕ್ಕಾಗಿ ನೀನು ಅಸಮಾಧಾನ ಪಡಬಾರದೆಂದು ಈ ಕಾಗದವನ್ನು ಬರೆಯುತ್ತಿದ್ದೇನೆ. ಇನ್ನೊಂದು ವಿಷಯದಲ್ಲೂ ನಾನು ಸಮಾಧಾನ ಹೇಳಬೇಕೆಂದು ತೋರುತ್ತದೆ. ಇಂಗ್ಲೆಂಡಿಗೆ ನಾನು ಬಂದ ಮೇಲೆ ಚಿತ್ರದ ಕಾರ್ಡುಗಳನ್ನು ನಿಮಗೆ ಕಳಿಸಿಲ್ಲ. ಅದಕ್ಕೆ ಕಾರಣ ಇಷ್ಟೆ: ಚಿತ್ರದ ಕಾರ್ಡಿಗೆ ಕವರಿನಷ್ಟೇ ಸ್ಟಾಂಪನ್ನು ಅಂಟಿಸಬೇಕಂತೆ. ಆ ಪಕ್ಷಕ್ಕೆ ಉದ್ದವಾದ ಕಾಗದವನ್ನೇ ಬರೆಯಬಹುದಲ್ಲ. ಅಮೆರಿಕದಲ್ಲಿ ಸಂಗ್ರಹಿಸಿದಷ್ಟು ಅಲ್ಲದಿದ್ದರೂ, ಇಲ್ಲಿಯೂ ಕೆಲವು ಕಾರ್ಡುಗಳನ್ನು ಕೊಂಡಿದ್ದೇನೆ. ಅವನ್ನು ನನ್ನ ಜೊತೆಯಲ್ಲೇ ತರಬೇಕು. ಆದರೂ ಸಾಧ್ಯವಾದರೆ, ನಾನು ಲಂಡನ್ನನ್ನು ಬಿಡುವ ಮೊದಲು ಒಂದಾದರೂ ಚಿತ್ರದ ಕಾರ್ಡನ್ನು ಊರಿಗೆ ಕಳಿಸುತ್ತೇನೆ.

ಎಡಿನ್‌ಬರೋ ನಗರಕ್ಕೆ ನಾನು ನಿನ್ನೆಯ ಬೆಳಗ್ಗೆ ಬಂದೆ. ಈ ಮಧ್ಯಾಹ್ನ ಇಲ್ಲಿಂದ ಹೊರಟು ರಾತ್ರಿ ಲಂಡನ್ನಿಗೆ ಹಿಂದಿರುಗುತ್ತೇನೆ. ಮುಂದಿನ ಸೋಮವಾರ ಆಕ್ಸ್‌ಫರ್ಡಿಗೆ ಹೋಗಿ ಬರಬೇಕು. ಬುಧವಾರ (೨೯ನೆಯ ತಾ॥) ರಾತ್ರಿ ಹಾಲೆಂಡಿಗೆ ಪ್ರಯಾಣ. ಅಲ್ಲಿಂದ ಮಾರ್ಚಿ ೫ಕ್ಕೆ ಪ್ಯಾರಿಸ್ಸನ್ನು ಮುಟ್ಟುವ ನಿರೀಕ್ಷೆ ಇದೆ – ಬಳಿಕ ಮತ್ತೆ ಸುತ್ತಾಟ.

ಎಡಿನ್‌ಬರೋ ಸುಂದರವಾದ ನಗರ. ಆದರೆ ಅದರ ದೃಶ್ಯಗಳನ್ನು ಇನ್ನೂ ನಾನು ನೋಡಿಲ್ಲ. ನಿನ್ನೆಯೆಲ್ಲ ಇಲ್ಲಿಯ ವಿಶ್ವವಿದ್ಯಾನಿಲಯದ Phonetics Laboratory ಯಲ್ಲೇ ವೇಳೆ ಕಳೆದು ಹೋಯಿತು. ಕೆಲವು ಅಪೂರ್ವವಾದ ಉಪಕರಣಗಳನ್ನು ಇಲ್ಲಿಯ ವಿದ್ವಾಂಸರು ಸಿದ್ಧಪಡಿಸಿದ್ದಾರೆ. ಅವುಗಳ ವಿವರಗಳನ್ನು ಈ ಕಾಗದದಲ್ಲಿ ಬರೆಯುವುದಿಲ್ಲ. ಆದರೆ ಕೆಲವು ವ್ಯಂಜನಗಳನ್ನು (ಉದಾಹರಣೆಗೆ ಟ್, ಷ್, ಶ್, ಚ್– ಇಂಥವನ್ನು) ಉಚ್ಚಾರ ಮಾಡುವಾಗ ಬಾಯ ಮೇಲ್ಭಾಗದ ಯಾವ ಕಡೆಗಳನ್ನು ನಾಲಗೆ ಸವರುತ್ತದೆ ಎನ್ನುವುದನ್ನು ನಿದರ್ಶಿಸುವುದಕ್ಕೆ ಇಲ್ಲಿ ಹೊಸರೀತಿಯ ಒಂದು ಸಲಕರಣೆಯನ್ನು ಸಿದ್ಧಗೊಳಿಸಿದ್ದಾರೆ. (ಹಿಂದೆ artificial palate ಎಂಬುದನ್ನು ಉಪಯೋಗಿಸುತ್ತಿದ್ದರು. ಆದರೆ ಅದರ ತೊಡಕುಗಳು ಹಲವಿದ್ದವು.) ಇದ್ದಿಲಪುಡಿಗೆ ಚಾಕೊಲೆಟ್ ಬೆರಸಿ (ಈ ಚಾಕೊಲೆಟ್ ರುಚಿಕೊಡುವುದಕ್ಕೆ!) ಅದನ್ನು ಅಂಗಳಿನ ಎಲ್ಲ ಭಾಗಕ್ಕೂ ತೂರುತ್ತಾರೆ. ಬಳಿಕ ಹಲವು ಕನ್ನಡಿಗಳನ್ನು ಬಗೆ ಬಗೆಯ ಸ್ಥಳಗಳಲ್ಲಿ ಅಳವಡಿಸಿದ ಯಂತ್ರದಲ್ಲಿ ಒಂದು ಕನ್ನಡಿಯನ್ನು ಬಾಯೊಳಕ್ಕೆ ಆದಷ್ಟು ದೂರ ತೂರಿಸಿಕೊಂಡು ಬೆಳಕು ಬಿಟ್ಟರೆ, ಬಾಯ ಮೇಲ್ಭಾಗದ ಫೋಟೋ ಒಂದು ಕ್ಷಣದಲ್ಲಿ ಸಿದ್ಧವಾಗುತ್ತದೆ. ನಾನೂ ನಿನ್ನೆ ಈ ಇದ್ದಲು ಚಾಕೊಲೆಟ್ ಮಿಶ್ರಣದ ರುಚಿಯನ್ನು ನೋಡಿ ಅಂಗಳು ನಾಲಗೆಗಳಿಗೆ ಮಸಿ ಹತ್ತಿಸಿಕೊಂಡೆ. ಫೋಟೋಗಳನ್ನು ಕೊಡುವುದಾಗಿ ಹೇಳಿದ್ದಾರೆ. ಸದ್ಯಕ್ಕೆ ಬೇರೆ ಯಾವ ಫೋಟೋಗಳೂ ನನ್ನ ಕೈಗೆ ಬಂದಿಲ್ಲ. (ಫಿಲಡೆಲ್ಫಿಯದಲ್ಲಿ ಕೆನ್ ಡಾಟಿ ಇವರ ಸ್ನೇಹಿತೆ ಕೆರಲ್ ಎಂಬಾಕೆ, ಹಾರ್ವರ್ಡಿನಲ್ಲಿ ಶಾರದಾ ಪ್ರಸಾದ್ –ಇವರು ಕೆಲವು ಫೋಟೋ ತೆಗೆದಿದ್ದರು. ಅವುಗಳ ಪ್ರತಿ ಯಾವುದೂ ಇನ್ನೂ ದೊರೆತಿಲ್ಲ.)

ಶ್ರೀ ಗಿಲ್‌ಪ್ಯಾಟ್ರಿಕ್ ನಮ್ಮ ಮನೆಗೆ ಬಂದು ನಿಮ್ಮೆಲ್ಲರನ್ನೂ ಸಂತೋಷಪಡಿಸಿದರೆಂದು ತಿಳಿದು ನನಗೂ ಸಂತೋಷವಾಯಿತು. ಅವರನ್ನು ನಾನು ಇಂಗ್ಲೆಂಡಿನಲ್ಲಿ ನೋಡುವ ಸಂಭವ ಇಲ್ಲ. ಅವರು ಇಲ್ಲಿಗೆ ಬರುವ ವೇಳೆಗೆ ನಾನು ಈ ದೇಶವನ್ನು ಬಿಟ್ಟು ಬಹುಶಃ ಪ್ಯಾರಿಸ್ಸಿನಲ್ಲಿ ಸುತ್ತಾಡುತ್ತಿರುತ್ತೇನೆ.

ಫೆಬ್ರುವರಿ ೨೯ರಂದು ಬೆಂಗಳೂರಿನಲ್ಲಿ ನಡೆಯುವ ಭೇಟಿಗೆ ನಾನು ಬರಲು ಸಾಧ್ಯವಿಲ್ಲ. ಕ್ಷಮಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರಿಗೆ ಬರೆದಿದ್ದೇನೆ. ಮುಂದೇನು ಮಾಡುತ್ತಾರೋ ನೋಡಬೇಕು.

ಹೆಚ್ಚಾಗಿ ಏನನ್ನು ಬರೆಯಲು ತೋರುತ್ತಿಲ್ಲ London Tower–ಇದನ್ನು ಕೆಲವು ದಿನಗಳ ಕೆಳಗೆ ನೋಡಿದೆ. ಒಂದು ಕಡೆ ಹಿಂದಿನ ಕಾಲದಲ್ಲಿ ಪ್ರಮುಖರಾದ ಕೆಲವು ಮಂದಿ "ದ್ರೋಹಿ"ಗಳನ್ನು ಕೊಲ್ಲಲು ಉಪಯೋಗಿಸುತ್ತಿದ್ದ ಮರದ ದಿಮ್ಮಿ ಮತ್ತು ಕೊಡಲಿ: ಇನ್ನೊಂದು ಕಡೆ, ವಜ್ರಖಚಿತವಾದ ರಾಜರಾಣಿಯರ ಕಿರೀಟಗಳು–ಎರಡನ್ನೂ ಈ ಕಟ್ಟಡದಲ್ಲಿ ನೋಡಬಹುದು.

* * *

ಪ್ಯಾರಿಸ್, ಮಾರ್ಚ್ ೧೦, ೧೯೫೭

ಚಿ॥ ಸೌ॥ ವತಿಗೆ

ಲಂಡನ್ನಿನಲ್ಲಿದ್ದಾಗ ಇಬ್ಬರು ಹಳೆಯ ಮಿತ್ರರನ್ನು ಭೇಟಿಮಾಡಿದೆ. ಒಬ್ಬರು ಬಿ.ಎಸ್. ಕೇಶವನ್, ಅವರು ಪ್ಯಾರಿಸ್ಸಿಗೆ ಯಾವುದೋ ಮೀಟಿಂಗಿಗಾಗಿ ಬಂದವರು ಲಂಡನ್ನಿಗೂ ಭೇಟಿ ಕೊಟ್ಟರು. ನಾನು ಇಳಿದಿದ್ದ ಹೋಟಲಿನಲ್ಲೇ ಇಳಿದಿದ್ದರು. ಮಿಸೆಸ್ ವಿಟ್ಲೆಯವರ ಮನೆಯಿಂದ ನಾನು ಹಿಂದಕ್ಕೆ ಬಂದ ಭಾನುವಾರದ ರಾತ್ರಿ ನಾಲ್ಕೈದು ಘಂಟೆಗಳ ಕಾಲ ಕೇಶವನ್ ಅವರೊಡನೆ ಮಾತುಕಥೆಯಲ್ಲಿ ಕಾಲ ಹಾಯಾಗಿ ಕಳೆಯಿತು. ಆ ಬಳಿಕ ಕೇಶವನ್ ಪ್ಯಾರಿಸ್ಸಿಗೆ – ಪ್ಯಾರಿಸ್ಸಿನಿಂದ ಭಾರತಕ್ಕೆ ಹಿಂದಿರುಗಿದ್ದೇ ಅಲ್ಲದೆ, ಕಲ್ಕತ್ತಾದಿಂದ ಕೊಯಮತ್ತೂರಿಗೆ ಹೋಗುವ ದಾರಿಯಲ್ಲಿ ವಿಮಾನದ ಎಂಜಿನ್ನಿನ ತೊಂದರೆಯಿಂದ ಬೆಂಗಳೂರಿನಲ್ಲಿ ಸ್ವಲ್ಪ ಹೊತ್ತು ತಂಗಬೇಕಾಯಿತಂತೆ. ಆಗ ಮೂರ್ತಿರಾವ್, ಡಿ.ಎಲ್ ನರಸಿಂಹಾಚಾರ್ ಇವರೊಡನೆ ಫೋನ್ ಮೂಲಕ ಮಾತಾಡಿದರಂತೆ. ನನ್ನನ್ನು ಕಂಡಿದ್ದ ವಿಷಯವನ್ನು ಹೇಳಿದರಂತೆ. ಈ ಬೆಂಗಳೂರಿನ ಭೇಟಿಯ ವಿಷಯ ಡಿ.ಎಲ್.ನ, ಪಿ.ಟಿ.ನ ಇವರಿಬ್ಬರ ಕಾಗದದಿಂದಲೂ ನನಗೆ ತಿಳಿಯಬಂತು. ಅಂತೂ ಈ ಆಧುನಿಕ ಕಾಲದಲ್ಲಿ "ದೂರ–ಹತ್ತಿರ" ಎಂಬ ಭೇದವೇ ಬಲು ಮಟ್ಟಿಗೆ ಬಿಟ್ಟುಹೋಯಿತು!

ಇನ್ನೊಬ್ಬ ಮಿತ್ರರು ಟಿ.ಎಲ್ ಕಸ್ತೂರಿರಂಗಾಚಾರ್. ಬೆಂಗಳೂರಿನಲ್ಲಿ ನಾವು ಇದ್ದಾಗ ನಮ್ಮ ಮನೆಗೆ ಒಂದೊಂದು ಸಲ ಬರುತ್ತಿರಲಿಲ್ಲವೆ, ಸಿಗರೇಟ್ ಸೇದುವ ಮನುಷ್ಯ. ನಾನೂ

ಆತನೂ ಹುಟ್ಟಿದ್ದು ಒಂದೇ ವರ್ಷ, ಒಂದೇ ದಿನ. ನಮ್ಮಿಬ್ಬರ ಹುಟ್ಟಿದ ಹಬ್ಬವನ್ನು ಪು.ತಿ.ನ ನರಸಿಂಹಾಚಾರ್ಯರು ನಡೆಸಿ ಅದೇ ದಿನ ಗೋಕುಲ ನಿರ್ಗಮನವನ್ನು ನನಗೆ 'ಅರ್ಪಣೆ' ಮಾಡಿದರು. ಈಚೆಗೆ ಟಿ.ಎಲ್. ಕಸ್ತೂರಿರಂಗಾಚಾರ್ ಲೈಬೀರಿಯದಲ್ಲಿದ್ದರು. – ಇಷ್ಟೆಲ್ಲ ಬರೆದ ಮೇಲೆ ನಿನಗೆ ಜ್ಞಾಪಕ ಬರಲೇಬೇಕು. ನಾನು ಕಸ್ತೂರಿರಂಗಾಚಾರ್ಯರನ್ನು ಕಂಡದ್ದೂ ಆಶ್ಚರ್ಯದ ವಿಷಯವೇ. ಲಂಡನ್ನಿನಲ್ಲಿ ಒಂದು ಬೆಳಗ್ಗೆ ಹೊರಗಡೆ ಎಲ್ಲೋ ಹೋಗಿದ್ದವನು ಮಧ್ಯಾಹ್ನ ಎರಡು ನಿಮಿಷ ಕಾಲ ಹೋಟಲಿನ ರೂಮಿಗೆ ಹಿಂದಿರುಗಿದಾಗ ಆ ಕ್ಷಣವೇ ಒಂದು ಫ್ಲೋನ್ ಕರೆ ಬಂತು. ಲಂಡನ್ನಿನಲ್ಲಿ ಮೈಸೂರಿನ ಟ್ರೇಡ್ ಏಜೆಂಟ್ ಆಗಿರುವ – ನನಗೆ ಹಿಂದಿನಿಂದ ಪರಿಚಿತರಾದ – ವಿಜಯರಾಘವರೆಡ್ಡಿ ಎಂಬುವರು ಮಾತಾಡಿ ಕಸ್ತೂರಿರಂಗಾಚಾರ್ ಲಂಡನ್ನಿಗೆ ಬಂದಿರುವ ವಿಷಯವನ್ನು ತಿಳಿಸಿದರು. ಸರಿ ಒಟ್ಟಿಗೆ ಕಲೆತೆವು, ಊಟಮಾಡಿದೆವು. ಎರಡುಮೂರು ದಿನ ಜೊತೆಗೆ ಅಲೆದಾಡಿದೆವು. ಕಸ್ತೂರಿರಂಗಾಚಾರ್ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಸುಮಾರು ಒಂದು ವರ್ಷಕಾಲ ಇದ್ದರಂತೆ. ಕೆಲವು ವಾರಗಳ ಹಿಂದೆ ತಾನೆ ಅಲ್ಲಿಂದ ಹಿಂದಿರುಗಿ ಲಂಡನ್ನಿಗೆ ಬಂದರು. ಅವರು ಅಮೆರಿಕಕ್ಕೆ ಬಂದಿದ್ದ ವಿಷಯ ನನಗೆ ಗೊತ್ತಿಲ್ಲ. ನಾನು ಅಲ್ಲಿಗೆ ಬಂದಿದ್ದ ವಿಷಯ ಅವರಿಗೆ ಗೊತ್ತಿಲ್ಲ. ಅಂತೂ ಅಕಸ್ಮಾತ್ತಾಗಿ ಲಂಡನ್ನಿನಲ್ಲಿ ಸಂಧಿಸಿದೆವು. ನನ್ನ ವಿಷಯಕ್ಕೆ ಲಂಡನ್ ಜಗತ್ತಿನ ಸಂಧಿಸ್ಥಾನವಾಯಿತು. ಕಸ್ತೂರಿರಂಗಾಚಾರ್ ನಾನು ಲಂಡನ್ ಬಿಟ್ಟಮೇಲೆ ಅಲ್ಲಿಂದ ಹೊರಟು, ನಾನು ಪ್ಯಾರಿಸ್ಸಿಗೆ ಬರುವ ಮೊದಲೇ ಅಲ್ಲಿಗೆ ಬಂದಿದ್ದರು. ಇಲ್ಲಿಯೂ ಅವರ ಜೊತೆಗೆ ಎರಡುದಿನ ಕಳೆಯಿತು. ಅಕ್ಕಪಕ್ಕದ ಹೋಟಲುಗಳಲ್ಲೇ ಇದ್ದೆವು. ಅವರು ಇಲ್ಲಿಂದ ಬುಧವಾರ ವಿಮಾನದಲ್ಲಿ ಇಂಡಿಯಕ್ಕೆ ಪ್ರಯಾಣ ಮಾಡಿದರು. ಈ ವೇಳೆಗಾಗಲೆ ಅವರು ಮದರಾಸಿನಲ್ಲಿ ಹಳಬರಾಗಿರಬೇಕು. ಸದ್ಯದಲ್ಲೇ ಬೆಂಗಳೂರಿಗೂ ಹೋಗುವುದಾಗಿ ಹೇಳಿದರು. ಅವರಿಗೆ ಸೈರ ಲಿಯೋನ್ Sierra Leonne (?) ಎಂಬ ಆಫ್ರಿಕದ ಒಂದು ಪ್ರದೇಶದಲ್ಲಿ ಬೇರೆ ಒಂದು ಕೆಲಸ ಸಿಕ್ಕಿದೆ. ಅದಕ್ಕಾಗಿ ಅವರು ಭಾರತದಿಂದ ಮತ್ತೆ ಹಿಂದಿರುಗುತ್ತಾರೆ. ಏಪ್ರಿಲ್ ೨ ರಂದು ಪ್ಯಾರಿಸ್ಸಿನಲ್ಲಿರುತ್ತಾರೆ : ಆದರೆ ನಾನು ಇಲ್ಲಿರುವುದಿಲ್ಲ.

ಹೀಗೆಯೇ ಇಲ್ಲಿ ಪ್ರೊ. ಈಗಲ್‌ಟನ್ ಇದ್ದಾರೆ–ದಿನವೂ ಜೊತೆಗೆ ಸಿಕ್ಕುತ್ತಾರೆ–ಆದರೆ ಕಾಗದ ಮುಗಿಯುತ್ತ ಬಂತು. ಈ ವಿಷಯವನ್ನು ಬೆಳಸುವುದಿಲ್ಲ. ಪ್ಯಾರಿಸ್ ತುಂಬ ಸುಂದರವಾದ ನಗರ ಅದರ ವಿಚಾರವನ್ನೂ ಇಲ್ಲಿ ಬೆಳೆಸುವುದಿಲ್ಲ. ಇದರ ರಮ್ಯವಾದ ಜಾಗಗಳಲ್ಲಿ ಸುತ್ತುವಾಗ, ಕಟ್ಟಡಗಳ ಉದ್ಯಾನಗಳ ವಿಶಾಲವಾದ ರಸ್ತೆಗಳು ಇವನ್ನು ನೋಡುವಾಗ ಜೊತೆಗೆ ಇಷ್ಟರಾದವರು ಇಲ್ಲದೆ ನಾನೊಬ್ಬನೇ ನೋಡುತ್ತಿದ್ದೇನಲ್ಲ ಎಂಬುದೇ ಕೊರತೆ. ಸುಂದರವಾದ ಪ್ರದೇಶಗಳನ್ನು ಒಬ್ಬನೇ ನೋಡುವುದರಲ್ಲಿ ಹರ್ಷ ಕಡಿಮೆ. ಈ ವಿಷಯವನ್ನು ಹಿಂದೆಯೇ ಬರೆದಿದ್ದೇನಲ್ಲವೆ.

* * *

M.V. "ASIA" ಹಡಗಿನ ಮೇಲೆ
ಏಡನ್ ದಾರಿಯಲ್ಲಿ, ಏಪ್ರಿಲ್ ೭, ೧೯೫೬

ಚಿ|| ಸೌ|| ವತಿಗೆ

ನಾನು ಹಡಗು ಹತ್ತಿ ಒಂದು ವಾರವಾಯಿತು. ಕಳೆದ ಏಳೆಂಟುವಾರದ ಅಲೆದಾಟದ ನಂತರ ಇದು ಹಿತವಾದ ವಿಶ್ರಾಂತಿ. ಈ ಹಡಗೇ ನಮ್ಮ ಪ್ರಪಂಚ. ಇದೊಂದು ಚಲಿಸುವ ಹೋಟಲಿನಂತೆ ಇದೆ. ನಮ್ಮದು First class, ಇದರ ಜೊತೆಗೆ Tourist class ಎಂದು ಬೇರೆ ಇದೆ. ಇವೆರಡಕ್ಕೂ ಸಂಪರ್ಕ ಬಲು ಕಡಿಮೆ: ಊಟದ ಮನೆ, ವಾಸದ ಕೋಣೆಗಳು ವಿಶ್ರಾಂತಿಯ "ಡೆಕ್"ಗಳು ಈಜುವಕೊಳ, ಆಟದ (ಪಿಂಗ್‌ಪಾಂಗ್ ಇತ್ಯಾದಿ) ಜಾಗ. ಎಲ್ಲಾ ಎರಡಕ್ಕೂ ಪ್ರತ್ಯೇಕ! ನನಗೇನೋ ಇದು ವಿಚಿತ್ರವಾಗಿ ತೋರಿತು. ಆ ವಿಷಯವಿರಲಿ. ಯಾವುದಕ್ಕೂ ಈಗ ತ್ವರೆ ಇಲ್ಲ. ಮನಸ್ಸು ಬಂದಾಗ ಹಾಸಿಗೆಯಿಂದ ಏಳಬಹುದು (ಆದರೂ ನನಗೆ ಬೇಗ ಎಚ್ಚರವಾಗುತ್ತದೆ). ಹೊತ್ತು ಬೇಗ ಹೋಗುವುದಿಲ್ಲ. ಮಧ್ಯಾಹ್ನದ ಊಟ, ರಾತ್ರಿಯ ಊಟ ಇವುಗಳ ಘಂಟೆಗೆ ಕಾದಿರುತ್ತೇವೆ. ಒಂದು ಬಗೆಯ ಸಂಗೀತಧ್ವನಿ ನಮಗೆ ಆಹ್ವಾನ ಕೊಡುತ್ತದೆ.

ಮಾಡುವ ಕೆಲಸವೂ ಇಲ್ಲ. (ನಾನು ಮಾಡಬೇಕಾದ ಕೆಲಸವೇನೋ ಇದೆ. ಓದು, ಬರವಣಿಗೆ ಇತ್ಯಾದಿ. ಆದರೆ ಅದನ್ನು ದೂರ ಇರಿಸಿದ್ದೇನೆ.) ಡೆಕ್ ಮೇಲೆ ಅಲ್ಲಿಂದಿಲ್ಲಿಗೆ ಸುಳಿದಾಡುವುದು, ಸಮುದ್ರದ ಮೇಲೆ ಇನ್ನೊಂದು ಹಡಗು ಕಾಣಿಸಿಕೊಂಡರೆ ಅದರ ಗಮನವನ್ನೇ ನೋಡುತ್ತಾ ನಿಲ್ಲುವುದು, ಸೂರ್ಯ ಮುಳುಗುವುದನ್ನು ದಿಟ್ಟಿಸುವುದು, ರಾತ್ರಿ ನಕ್ಷತ್ರ ಗ್ರಹ ಇವು ಎಲ್ಲೆಲ್ಲಿ ಕಾಣಿಸುತ್ತವೆ ಎನ್ನುವುದನ್ನು ಅವೇಕ್ಷಿಸುವುದು. ಅಪೂರ್ವವಾಗಿ ಒಂದೊಂದುಕಡೆ ಭೂಮಿಯ ಅಂಚು, ನಡುಗಡ್ಡೆಗಳು ತಲೆಯೆತ್ತಿದರೆ ಅದನ್ನು ಮತ್ತೆ ಮತ್ತೆ ನೋಡುವುದು, ನಿನ್ನೆ ಮಧ್ಯಾಹ್ನದಿಂದ ಈ ಮಧ್ಯಾಹ್ನದ ತನಕ ಹಡಗು ಎಷ್ಟು ದೂರ ಬಂದಿದೆ ಯಾವ ಮಾರ್ಗವಾಗಿ ಬಂದಿದೆ ಎನ್ನುವುದನ್ನು ಭೂಪಟ, ನಕ್ಷೆ ಇವುಗಳಲ್ಲಿ ನೋಡುವುದು– ಇದರಲ್ಲಿ ಕಾಲ ಕಳೆಯುತ್ತಿದೆ. ಜೊತೆಗೆ ಹಡಗಿನಲ್ಲಿ ದೊರೆತ ಕೆಲವು ಮಂದಿ ಜೊತೆಗಾರರ ಸಂಗಡ ಸ್ವಲ್ಪ ಮಾತುಕಥೆ.

ನಿನ್ನೆಯ ಸಂಜೆ ಪಶ್ಚಿಮ ದಿಕ್ಕನ್ನು ನೋಡುತ್ತಿರುವಾಗ ಶುಕ್ರ ಗ್ರಹದ ಹೊಳಪು ಸಮುದ್ರದ ತೆರೆಗಳ ಮೇಲೆ ಉದ್ದಕ್ಕೂ (ಚೌತಿಯ ಚಂದ್ರನ ಹೊಳಪಿನಷ್ಟು) ಪ್ರತಿಬಿಂಬಿಸಿದ್ದನ್ನು ನೋಡಿ ಎಷ್ಟೋ ಉಲ್ಲಾಸವಾಯಿತು. ಹಾಗೆಯೇ ಎರಡು ದಿನದ ಹಿಂದೆ, ನಮ್ಮ ಹಡಗಿನ ಸಂಚಾರದಿಂದ ಭ್ರಮೆಗೊಂಡ ಕೆಲವು ದೊಡ್ಡ ಮೀನುಗಳು ಅಲೆಗಳ ಮೇಲೆ ನೆಗೆದಾಡಿದ್ದನ್ನು ನೋಡುವುದಕ್ಕೂ ಸಂತೋಷವಾಯಿತು. –ಹೀಗೆ ಸುಲಭವಾದ ಕೆಲವು ವಿಷಯಗಳಲ್ಲೇ ಮನಸ್ಸು ತೃಪ್ತಿಗೊಳ್ಳುತ್ತಿದೆ; ಕಳೆದವಾರಗಳ ನೋಟ ಸುತ್ತಾಟಗಳಿಗೂ ಇದಕ್ಕೂ ಎಷ್ಟೊಂದು ಅಂತರ!

ಹಡಗಿನ ಮೇಲೆ ಪಾಶ್ಚಾತ್ಯ ಪದ್ಧತಿಯ ನೃತ್ಯಗಳೂ ("balls") ಆಗಾಗ ನಡೆಯುತ್ತದೆ. ನಾನು ನನ್ನ ಜೀವಮಾನದಲ್ಲಿಯೇ ಈ ಬಗೆಯ ಕುಣಿತದಲ್ಲಿ ಭಾಗವಹಿಸಲಿಲ್ಲ. ಈಗಲೂ ಸ್ವಲ್ಪ ಹೊತ್ತು ಕುಳಿತು ನೋಡಿ ಎದ್ದು ಬರುತ್ತೇನೆ.

ನಮ್ಮ ಹಡಗು ಬೊಂಬಾಯಿಗೆ ೧೩ನೇ ತಾರೀಖು ಸೇರುತ್ತದೆ.

ಸುಯೆಸ್‌ನಲ್ಲಿ ಟಪಾಲನ್ನು ಹಡಗು ತೆಗೆದುಕೊಳ್ಳುವುದಿಲ್ಲವೆಂದು ಈಗ ತಾನೆ ಗೊತ್ತಾಯಿತು. ಆದ ಕಾರಣ ನಿಮ್ಮ ಕಾಗದ ಅಲ್ಲಿಗೆ ಮುಟ್ಟಿದ್ದರೂ ನನ್ನ ಕೈಗೆ ಬರುವುದು ಅಶಕ್ಯವಾಯಿತು.

ಈ ದಿನ ಇಲ್ಲಿಗೆ ಬರಬಹುದಾದ ಟಪಾಲು ಕೂಡ, ಈ ಕಾಗದವನ್ನು ನಾನು ಟಪಾಲಿಗೆ ಹಾಕಿದ ಬಳಿಕವೇ ನನ್ನ ಕೈ ಸೇರುವಂತೆ ತೋರುತ್ತದೆ.

* * *

ಧಾರವಾಡ, ಆಗಸ್ಟ್ ೫

ತೀ॥ ತಂದೆಯವರಿಗೆ ನಾಗರತ್ನಳ ಸಾಷ್ಟಾಂಗ ನಮಸ್ಕಾರಗಳು. ಅದಾಗಿ ಈ ವರೆಗೆ ಉ॥ಕು॥ಸಾಂ॥

ನೀವು ಈ ಸಲ ನಿಮ್ಮ ಕಾಗದದಲ್ಲಿ ಅಲ್ಲಿನ ವಿಚಾರವನ್ನು ಅಷ್ಟು ಹೆಚ್ಚಾಗಿ ಬರೆದಿಲ್ಲ. ಅದಕ್ಕೆ ಕಾರಣಗಳನ್ನೇನೊ ಬಹಳ ಕೊಟ್ಟಿದ್ದೀರಿ. ಅದರಲ್ಲಿ ಎಲ್ಲದಕ್ಕಿಂತ ಹೆಚ್ಚಾಗಿ ಊಟದ ತಟ್ಟೆ, ಬಟ್ಟಲುಗಳನ್ನು ತೊಳೆದು ಒರಸಿ ಇಡಬೇಕೆನ್ನುವುದನ್ನು ನೋಡಿ ನನಗೆ ತುಂಬ ನಗುಬಂತು. ಅಂತೂ ಮನೆಯಲ್ಲಿ ಮಾಡದೇ ಇದ್ದ ಕೆಲಸಗಳನ್ನು ಪರದೇಶಕ್ಕೆ ಹೋದ ಮೇಲೆ ಮಾಡಬೇಕಾಯಿತು. ಹೀಗೆಯೇ ಅಲ್ಲಿಯ ಅಡಿಗೆಗಳನ್ನು ಕೂಡ ಮಾಡುವುದನ್ನು ಕಲಿತುಕೊಂಡಿದ್ದೀರೆಂದು ನಂಬುತ್ತೇನೆ. ಆದ್ದರಿಂದ ಮುಂದಿನ ಸಲ ಊರಿಗೆ ಬರುವ ಹೊತ್ತಿಗೆ ಬರಿ ಅಡಿಗೆಯ ರುಚಿಯಷ್ಟನ್ನೇ ಅಲ್ಲದೆ ಮಾಡುವ ವಿಧಾನಗಳನ್ನು ಸಹ ವರ್ಣಿಸುತ್ತೀರೆಂದು ತಿಳಿದಿದ್ದೇವೆ.

ನಮ್ಮ ಕಾಲೇಜಿನಲ್ಲಿ ಪಾಠಗಳು ಜೋರಾಗಿ ನಡೆಯುತ್ತಿವೆ. ಈ ವರ್ಷ Tutorials ಶುರು ಮಾಡಿರುವುದರಿಂದ ಪುಸ್ತಕವನ್ನು ಸ್ವಲ್ಪ ಮಟ್ಟಿಗಾದರೂ ಹಿಡಿಯಬೇಕಾಗುತ್ತದೆ. ಹೋದ ವರ್ಷ Practicals ತುಂಬ ಕಷ್ಟ, ಬೇಜಾರು ಅನ್ನುತ್ತಿದ್ದೆ. ಆದರೆ ಈಗ Practicals ಇದ್ದಿದ್ದರೇ ಚೆನ್ನಾಗಿತ್ತು ಅನ್ನಿಸುತ್ತಿದೆ. ನೀವು ಆಗಾಗ್ಗೆ ಹೇಳುತ್ತಿದ್ದಂತೆ. "ಕಳೆದು ಹೋದದ್ದು ಯಾವಾಗಲೂ ನೆನೆಸಿಕೊಳ್ಳುವುದಕ್ಕೆ ಚೆನ್ನ" ಎನ್ನುವುದು ನೆನಪಿಗೆ ಬರುತ್ತಿದೆ.

* * *

ಧಾರವಾಡ, ೧೯-೧೧-೧೯೫೫

ಈ ಸಲ "ಪ್ರಪಂಚ"ದ ಸಂಚಿಕೆಯಲ್ಲಿ ನಿಮ್ಮ ಫೋಟೋವನ್ನು ಕೊಟ್ಟು ಸಾಹಿತಿಗಳು ಏಕೀಕರಣದ ವಿಚಾರವಾಗಿ ಯಾವ ಅಭಿಪ್ರಾಯ ಉಳ್ಳವರಾಗಿದ್ದರು ಎಂಬುದನ್ನು ಬರೆದಿದ್ದರು. ಶ್ರೀ॥ ಬಿ.ಎಂ.ಶ್ರೀಕಂಠಯ್ಯ, ವಿ.ಕೃ. ಗೋಕಾಕ್, ಮಾಸ್ತಿ, ಮುಗಳಿ, ಕುವೆಂಪು ಇವರುಗಳ ಫೋಟೋವನ್ನು ಕೊಟ್ಟಿದ್ದರು. ನಿಮ್ಮ ಅಭಿಪ್ರಾಯವನ್ನು ಸೂಚಿಸುವಾಗ "ತಂದಿದಿರಿ ನೀವಿಂದು

ಹೊಸದೊಂದು ಭಾಗ್ಯವನು ಕಾಯುತಿರುವೀ ನಮ್ಮ ಮೈಸೂರಿಗೆ" ಎನ್ನುವ ಪದ್ಯವನ್ನು ಮತ್ತು "ಕನ್ನಡಿಗನ ಕೊರಗು" ಅನ್ನು ಉಲ್ಲೇಖಿಸಿದ್ದರು. "ಯಾವ ಮಂಕೋ..... ಹುದುಗಿರುವುದಲ್ಲ ಎಂದು ಅಂದು ಕೊರಗಿದ ತೀ.ನಂ.ಶ್ರೀ.ಯವರಿಗೆ ಇಂದು ರಚಿತವಾಗಲಿರುವ ಕರ್ನಾಟಕ ಪ್ರಾಂತ್ಯದ ಸುದ್ದಿಯಿಂದ ಆನಂದವೂ ಆದೀತು, ಸಂಕುಚಿತ ಮನೋಭಾವ ತಾಳಿದ ತನ್ನವರೇ ಆದ ಮೈಸೂರಿಗರ ಬಗ್ಗೆ ಕನಿಕರವೂ ಹುಟ್ಟೀತು" ಎಂದು ಬರೆದಿದ್ದರು.

(ನಾಗರತ್ನ)

* * *

ಧಾರವಾಡ, ೩೦-೧೧-೫೫

ನೀವು ಬರೆದಿರುವ ಬೀಗದ ಕೈನ ವಿಚಾರ ತುಂಬಾ ಸ್ವಾರಸ್ಯವಾಗಿದೆ. ಇಂಥ ವಿಚಾರಗಳನ್ನೆಲ್ಲ ಸೇರಿಸಿ ಅಮೇರಿಕದ ಅನುಭವ ಎನ್ನುವ ಒಂದು ಪುಸ್ತಕವನ್ನೇ ಬರೆಯಬಹುದು!

(ನಾಗರತ್ನ)

* * *

ಧಾರವಾಡ, ೧೩-೨-೧೯೫೬

ಈ ತಿಂಗಳು ೧೦ ನೆಯ ತಾರೀಖಿನ ದಿನ ಶ್ರೀ ಗಿಲ್‌ಪ್ಯಾಟ್ರಿಕ್ ಅವರು ಮನೆಯ ಕಡೆ ಬಂದಿದ್ದರು. ನಾವು ಅದರ ಹಿಂದಿನ ದಿನ ಅವರ ನಿರೀಕ್ಷೆ ಮಾಡುತ್ತಿದ್ದೆವು. ಆದರೆ ಶ್ರೀ॥ ಗಿಲ್‌ಪ್ಯಾಟ್ರಿಕ್ ಅವರಿಗೆ ಆ ದಿನ ಸ್ವಲ್ಪ ಕೆಲಸವಿದ್ದುದರಿಂದ ಮಾರನೆಯ ದಿನ ಬೆಳಗ್ಗೆ ೧೦ ಘಂಟೆಯ ಹೊತ್ತಿನಲ್ಲಿ ಬಂದು ಅರ್ಧ ಘಂಟೆಯ ಕಾಲ ಇದ್ದರು. ಎಲ್ಲರೊಡನೆಯೂ ಬಹಳ ಸಲಿಗೆಯಾಗಿ, ಹಾಸ್ಯವಾಗಿ ಮಾತನಾಡಿದರು. ಅನೇಕ ಕಥೆಗಳನ್ನೂ, jokes ಗಳನ್ನೂ ಹೇಳಿದರು. ಮತ್ತು ಕಾಫಿಯನ್ನು ಕುಡಿದು ತುಂಬಾ ಚೆನ್ನಾಗಿತ್ತೆಂದು ಹೇಳಿದರು! ಮಾ॥ ಸೌ॥ ಅಮ್ಮನಿಗೆ "ಮುಂದಿನ ಸಲ ನೀವು ನಿಮ್ಮ ಯಜಮಾನರ ಜೊತೆಯಲ್ಲಿ ಅಮೇರಿಕಕ್ಕೆ ಹೋಗಬೇಕಾಗಬಹುದೆಂದು ಆ ವೇಳೆಗೆ ಇಂಗ್ಲಿಷನ್ನು ಕಲಿಯಬೇಕು" ಎಂದು ಹೇಳಿದರು ಮತ್ತು ಅಷ್ಟರಲ್ಲಿ ತಾವು ಕನ್ನಡ ಕಲಿಯುತ್ತೇನೆಂದು ಹೇಳಿದರು. ಅವರನ್ನು ಹೇಗೆ ಭೇಟಿ ಮಾಡುವುದು, ಅವರನ್ನು ಹೇಗೆ ಮಾತಾಡಿಸುವುದು ಎಂಬ ನಮ್ಮ ಆತಂಕಗಳೆಲ್ಲ ಅವರನ್ನು ನೋಡಿದ ಕೂಡಲೆ ಹಾರಿಹೋದವು. ಅಂತೂ ಅವರ ಭೇಟಿ ಸ್ವಲ್ಪ ಕಾಲವಾದರೂ ಬಹಳ ಚೆನ್ನಾಗಿತ್ತು.

(ನಾಗರತ್ನ)

* * *

ತೀ.ನಂ.ಶ್ರೀಕಂಠಯ್ಯ ಫಿಲಡೆಲ್ಫಿಯ, ಡಿಸೆಂಬರ್ ೧೧, ೧೯೫೫

ಪ್ರಿಯ (ಪು.ತಿ.) ನರಸಿಂಹಾಚಾರ್

ನಿಮ್ಮ ಕಾಗದ ನನ್ನ ಕೈಸೇರಿ ಒಂದು ತಿಂಗಳಾಯಿತು. ಕಾಗದಗಳಿಗೆ ಉತ್ತರ ಬರೆಯುವುದರೊಳಗೆ ಕಾಲ ಎಷ್ಟುಬೇಗ ಹಾರುತ್ತದೆ! ಆದರೆ ದೂರದಿಂದಲೇ ಪ್ರವಾಸ ಮಾಡುತ್ತಿರುವ ನಾನು ಊರಿನ ಕಡೆ, ಮಿತ್ರರ ಕಡೆ, ಮನೆಯವರಕಡೆ ಆಲೋಚನೆಯನ್ನು ಹರಿಸಿದಾಗಲೆಲ್ಲ– ಪ್ರತಿನಿತ್ಯವೂ ಇದು ನಡೆಯುತ್ತದೆ–ಹಿಂದಿರುಗುವ ದಿನ ಇನ್ನೂ ಎಷ್ಟು ದೂರದಲ್ಲಿದೆ ಎನ್ನಿಸುತ್ತದೆ. ವಯಸ್ಸು ಬೆಳದ ಮೇಲೆ ಬಹುಕಾಲ ಸ್ವದೇಶವನ್ನು ಸ್ವಕೀಯರನ್ನು ಬಿಟ್ಟಿರುವುದು ಕಠಿನ. ಮನಸ್ಸಿನ ಆತಂಕ ಕಳವಳಗಳು ಬೆಳೆಯುತ್ತವೆ. ಅಮೆರಿಕ ಸಮೃದ್ಧಿಯ ದೇಶ, ಸೌಕರ್ಯದ ದೇಶ. ಇಲ್ಲಿ ನೋಡಿ ನಲಿಯುವ, ನೋಡಿ ಕಲಿಯುವ ವಿಷಯಗಳು, ಸಂಗತಿಗಳು ಬಹಳ ಇವೆ. ನಾನೂ ದೇಶದ ಹಲವು ಭಾಗಗಳಲ್ಲಿ ಸುತ್ತಿದ್ದೇನೆ. ಬಗೆಬಗೆಯ ಜನರನ್ನು ಸಂಧಿಸಿದ್ದೇನೆ. ಒಬ್ಬಿಬ್ಬರೊಡನೆ ವಿಶ್ವಾಸವನ್ನೂ ಬೆಳಸಿದ್ದೇನೆ. ಆದರೆ ಪರದೇಶದೊಂದಿಗೆ ಆತ್ಮೀಯತೆ ಹಬ್ಬುವುದು ಅಶಕ್ಯ, ಇಲ್ಲಿಯ ನಡೆ ನುಡಿ ರೀತಿಗಳೆಲ್ಲ ಒಗ್ಗುವುದು ಕಠಿನ. ಆದ ಕಾರಣ, ಮನಸ್ಸು ಊರಿನ ಕಡೆಗೆ ಹಂಬಲಿಸುತ್ತದೆ. ಇದರ ಜೊತೆಗೆ ಊಟದ ತೊಡಕು ಬೇರೆ! – ಆದರೆ, ನಾನು ಈ ದೇಶಕ್ಕೆ ಬಂದು ಇಲ್ಲಿ ವಿಚಾರಗಳನ್ನು ತಿಳಿಯಲು ಅವಕಾಶ ದೊರೆತದ್ದು ದೊಡ್ಡ ಸುಯೋಗ. ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಹಲವು ವಿಚಾರಗಳಲ್ಲಿ ನನ್ನ ಕಣ್ಣು ತೆರೆಯಿತು. ಕೆಲವು ಮಂದಿ ದೊಡ್ಡ ವಿದ್ವಾಂಸರ ಪರಿಚಯವೂ ಆಯಿತು.–ಇದರ ಉಪಯೋಗ ನನಗೂ ನಮ್ಮ ಜನಕ್ಕೂ ಆಗುವಂತೆ ನನ್ನಿಂದ ಎಷ್ಟರಮಟ್ಟಿನ ಕೆಲಸ ಮುಂದೆ ನಡೆಯುತ್ತದೋ ನೋಡಬೇಕು.

ಈಗಿನ ನಿರೀಕ್ಷೆಯಂತೆ ಭಾರತಕ್ಕೆ ಏಪ್ರಿಲ್ ಮಧ್ಯದ ವೇಳೆಗೆ ಸೇರಬೇಕೆಂದಿದ್ದೇನೆ.– (ವಿವರಗಳು ಇನ್ನೂ ನಿರ್ಧಾರವಾಗಿಲ್ಲ)–ಅಷ್ಟರೊಳಗೆ ಸ್ವದೇಶದಲ್ಲಿ ಏನೇನು ಬದಲಾವಣೆ ನಡೆದಿರುತ್ತದೋ!– ಕರ್ಣಾ(ರ್ನಾ)ಟಕ ರಾಜ್ಯದ ನಿರ್ಮಾಣ ದೃಢಪಟ್ಟಿತಲ್ಲವೆ. ನನಗಂತೂ ಅದರಿಂದ ದೊಡ್ಡ ಸಮಾಧಾನ. ಧೇಬರ್ ಸಮಿತಿ ಕೂಡ. "ಏಕೀಕರಣ"ವನ್ನು ಒಪ್ಪಿದೆಯೆಂದು ಪತ್ರಿಕೆಯಲ್ಲಿ ಓದಿದೆ ಇದು ನಿಜವಷ್ಟೆ.

"ಮಲೆದೇಗುಲ" ಬರುವುದನ್ನೇ ಎದುರು ನೋಡುತ್ತಿದ್ದೇನೆ; ಅದರೊಂದಿಗೆ 'ಭಾರತೀಯ ಕಾವ್ಯಮೀಮಾಂಸೆ'ಯ ಮೇಲಿನ ವಿ.ಸೀ ವಿಮರ್ಶೆಯನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇನೆ.

ಈ ದೇಶದಲ್ಲಿ ಕವಿಗಳು ಕಾವ್ಯದ ಪರಿಚಯ ಮಾಡಿಕೊಳ್ಳಲು ಅವಕಾಶವಾಗಲಿಲ್ಲ. ಕಾವ್ಯದಲ್ಲಿ ದೊಡ್ಡ ಹೆಸರು ಯಾವುದೂ ಕೇಳಬರಲಿಲ್ಲ – ಅಂದಹಾಗೆ ಕಳೆದ ವಾರ ವಾಷಿಂಗ್‌ಟನ್ನಿಗೆ ಹೋಗಿದ್ದೆ. ಅಲ್ಲಿ ಶ್ರೀ ಗಂಗಾಧರ ಚಿತ್ತಾಲ ಎಂಬ ಕನ್ನಡಿಗರು–ಮನೆಮಾತು ಕೊಂಕಣಿ, ಮಡದಿಗೆ ಕನ್ನಡ ಬಾರದು; ಆಕೆ ಬೊಂಬಾಯಿಯವರು–Deputy Audit Officer ಆಗಿದ್ದಾರೆ. ನನ್ನ ವಿಷಯದಲ್ಲಿ ವಿಶ್ವಾಸವನ್ನು ತೋರಿಸಿ ಕಾಗದ ಬರೆದಿದ್ದರು. ವಿಶ್ವಾಸವಾಗಿಯೂ ಕಂಡರು. ಅವರ ಮನೆಯಲ್ಲಿ ಬುಧವಾರ ರಾತ್ರಿ ಊಟ: ಶ್ರೀಮತಿ ತಾರಾ

ರಾವ್, ಶ್ರೀಮತಿ ಮೀರಾರಾವ್ ಎಂಬ ಸೋದರಿಯಬ್ಬರು ಭಾರತ ರಾಯಭಾರದ ಕಚೇರಿಯಲ್ಲಿ ಕೆಲಸದಲ್ಲಿದ್ದಾರೆ–ಅವರು ಮೈಸೂರಿನವರು, ಕನ್ನಡದ ಅಭಿಮಾನಿಗಳು (ಕೊಂಕಣಿಮಾತು ಆಡುತ್ತಾರೆ)–ಇವರೂ ಊಟಕ್ಕೆ ಬಂದಿದ್ದರು. ಅನ್ನ ಹುಳಿ, ಪಲ್ಯ, ಉಪ್ಪಿನಕಾಯಿ, ಮಜ್ಜಿಗೆ, ಹಪ್ಪಳ; ಕನ್ನಡ ಮಾತು, ಮೈಸೂರಿನ, ಕರ್ನಾಟಕದ ಸುದ್ದಿ, ಕೊನೆಯಲ್ಲಿ ಶ್ರೀ ಚಿತ್ತಾಲರ ಕೆಲವು ಕಾವ್ಯಗಳ ಶ್ರವಣ; ಸ್ವದೇಶದಲ್ಲಿ ಇದ್ದೇನೆಂದೇ ತೋರಿತು!–ಶ್ರೀ ಚಿತ್ತಾಲರ ಪದ್ಯಗಳನ್ನು ನೀವು ಓದಿರಬೇಕಲ್ಲವೆ. ಆತ ಶ್ರೀ ಗೋಕಾಕರ ಶಿಷ್ಯ. ಆ ನೆರಳು ಇನ್ನೂ ಪೂರ್ತಿ ಹರಿದಿಲ್ಲ. ವಾಚನದ ಧಾಟಿಯಲ್ಲೂ ಕಾಣಬಂತು. ಆದರೆ ಕೆಲವಾದರೂ ಒಳ್ಳೆಯ ಕವನಗಳನ್ನು ಬರೆಯಬಲ್ಲ. (ಕೆಲವನ್ನು ಬರೆದೂ ಇರಬಹುದು. ಆತನ ಕಾವ್ಯದ ಹೆಚ್ಚು ಪರಿಚಯವನ್ನು ಮಾಡಿಕೊಳ್ಳಲು ನನಗೆ ಆಗಿಲ್ಲ.) ಒಂದು ತಿಂಗಳ ಕೆಳಗೆ ಹಾರ್ವರ್ಡಿಗೆ ಹೋಗಿದ್ದೆ. ಆಗ Prof. I.A. Richards ಅವರನ್ನು ಕಂಡೆ. ಮುದುಕ ಎಂಥ ಉತ್ಸಾಹಿ! ಕನ್ನಡದಲ್ಲಿ ಹೊಸ ಕಾವ್ಯದ ಬೆಳವಣಿಗೆಯನ್ನೇ ಕುರಿತು ಒಂದು ಸಣ್ಣ ಉಪನ್ಯಾಸವನ್ನೇ ಆತನಿಗೆ ಶ್ರವಣ ಮಾಡಿಸಿದೆ. ಆತನೂ ಆಸಕ್ತಿಯಿಂದಲೇ ಕೇಳಿದ. ಮತ್ತೆ ಹಾರ್ವರ್ಡಿಗೆ ಹೋದಾಗ ಹೆಚ್ಚು ಕಾಲವನ್ನು ಆತನ ಸಂಗಡ ಕಳೆಯಲಾಗಬಹುದು. ಆತನಿಗೆ "Translation" ಸಮಸ್ಯೆಗಳಲ್ಲಿ ಆಸಕ್ತಿ.

ಹೋದ ಭಾನುವಾರ ಇಲ್ಲಿಯ ಭಾರತೀಯ ವಿದ್ಯಾರ್ಥಿಸಂಘದವರು ಶ್ರೀ ವಿ.ಕೆ. ಕೃಷ್ಣ ಮೆನನ್ ಅವರ ಗೌರವಾರ್ಥ ಒಂದು "ಭೋಜನ"ವನ್ನು ಏರ್ಪಡಿಸಿದ್ದರು. ತುಂಬ ಜನ–ಅನೇಕ ಅಮೆರಿಕನ್ನರು–ಬಂದಿದ್ದರು. ನಾನು ನನ್ನ ಇಬ್ಬರು ಅಧ್ಯಾಪಕರನ್ನು ಅತಿಥಿಗಳಾಗಿ ಜೊತೆಗೆ ಕರೆದುಕೊಂಡು ಹೋಗಿದ್ದೆ. ಊಟಕ್ಕೆ ಪ್ರಾರಂಭಿಸಬೇಕು. ಕಾರ್ಯಕರ್ತರಲ್ಲಿ ಒಬ್ಬಾತ ಬಂದು, "ಏನಾದರೂ ಸಂಸ್ಕೃತದಿಂದ ವಾಚಿಸುತ್ತೀರಾ, ಊಟದ ಮೊದಲಲ್ಲಿ" ಎಂದ. ಆಗಲಿ ಎಂದು ಒಪ್ಪಿ, "ಸಹನಾವವತು...." ಹೇಳಿದೆ. (ಕಾಂಗ್ರೆಸಿಗರು ಇದನ್ನು ಊಟದ "Grace" ಆಗಿ ಮಾಡಿಕೊಂಡಿದ್ದಾರೆ. ನಮ್ಮಲ್ಲೂ ಹೇಳುವುದಿಲ್ಲವೆ.) ನನ್ನ "ಸ್ವರ" ತಪ್ಪಾಗಿರಬೇಕು; ಆದರೆ ಧಾಟಿ ಸರಿಯಾಗಿತ್ತು! – ಮೊನ್ನೆ ಗುರುವಾರ Prof. Norman Brown ಅವರ ಅಪೇಕ್ಷೆಯಂತೆ, ಅವರ ಸಂಸ್ಕೃತ ವಿದ್ಯಾರ್ಥಿಗಳ ಮುಂದೆ ಋಗ್ವೇದ ಕೆಲವು "ಹನಸು"ಗಳನ್ನು ಹೇಳಿದೆ. "ಸ್ವರ"ಗಳು ತಪ್ಪಾಗಿರಬೇಕು; ಆದರೆ ಉದಾತ್ತಾನುದಾತ್ತ ಸ್ವರಿತಗಳ ರೀತಿ ತಪ್ಪಾಗಲಿಲ್ಲವೆಂದು ತೋರುತ್ತದೆ. ಅಂತೂ ವೇದಾಭ್ಯಾಸ ಮಾಡದ ಈ ಜನ್ಮಬ್ರಾಹ್ಮಣ ಭಾರತದಿಂದ ಸುಮಾರು ೧೨೦೦೦ ಮೈಲಿ ದೂರದ ಊರಿನಲ್ಲಿ ಬೂಟು ಷರಾಯಿ ಟೈ ಧರಿಸಿ ವೇದವನ್ನು ಅಧ್ಯಯನ ಮಾಡಿದ್ದು ನನಗೆ "ಮೋಜೆನ್ನಿಸಿತು". ಜನಿವಾರ ಇನ್ನೂ ಇದೆ ! ನಾಲ್ಕಾದರೂ ಸೂಕ್ತಗಳನ್ನು ಕ್ರಮವಾಗಿ ಕಲಿತಿರಬೇಕಾಗಿತ್ತು! ಅವಕಾಶ ದೊರೆಯಿತೆಂದು ಶಿವರಾಮಶಾಸ್ತ್ರಿಗಳ "Vedic Circumflex" ಪ್ರಸ್ತಾಪವನ್ನು ಎತ್ತಿದೆ. ಅಂದಹಾಗೆ ಶಾಸ್ತ್ರಿ ಪ್ರೊಫೆಸರ್ ಆದದ್ದನ್ನು ಕೇಳಿ ಸಂತೋಷವಾಯಿತು, ಅವರಿಗೂ ಕಾಗದ ಬರೆದು ಅಭಿನಂದನೆ ಸಲ್ಲಿಸಿದ್ದೇನೆ.

* * *

ಲಂಡನ್, ಫೆಬ್ರುವರಿ ೧೭, ೧೯೫೬

ಪ್ರಿಯ ನರಸಿಂಹಾಚಾರ್,

ನೀವು ಫಿಲಡೆಲ್ಫಿಯಕ್ಕೆ ಬರೆದ ಕಾಗದ, ನನ್ನ ಹುಟ್ಟಿದ ದಿನವನ್ನು ನೆನಪಿಟ್ಟುಕೊಂಡು ಅಂದಿನ ದಿನ ಪ್ರೀತಿಯಿಂದ ಕಳಿಸಿದ ನಿಮ್ಮ 'ಮಲೆದೇಗುಲ'ದ ಪ್ರತಿ ಇವು ಫಿಲಡೆಲ್ಫಿಯವನ್ನು ನಾನು ಬಿಡುವ ಮೊದಲೇ ಸುಮಾರು ಐದು ವಾರಕ್ಕೆ ಹಿಂದೆ ನನ್ನ ಕೈಸೇರಿದವು. ಆಗಿನಿಂದಲೂ, ಉತ್ತರ ಬರೆಯಬೇಕು ಎಂದುಕೊಂಡೇ ಕಾಲ ತಳ್ಳುತ್ತಿದ್ದೇನೆ. ಆದರೆ ಈ ವಿಳಂಬಕ್ಕೆ ಕೇವಲ ನನ್ನ ಆಲಸ್ಯವೇ ಕಾರಣವಲ್ಲ! ಹಾರ್ವರ್ಡ್‌ವಿಶ್ವವಿದ್ಯಾಲಯ, ಯೇಲ್ ವಿಶ್ವವಿದ್ಯಾಲಯ, ನ್ಯೂಯಾರ್ಕ್ –ಇಲ್ಲೆಲ್ಲಾ ಸುತ್ತಾಡಿ ದಿನಗಳನ್ನು ಕಳೆದು ಎರಡುವಾರದ ಕೆಳಗೆ ಫೆಬ್ರುವರಿ ೪ರಂದು ಲಂಡನ್ನಿಗೆ ಮುಟ್ಟಿದೆನು. ಇಲ್ಲಿಯೂ ಅಲೆದಾಡುತ್ತಿದ್ದೇನೆ. ಕೇಂಬ್ರಿಡ್ಜನ್ನು ನೋಡಿಕೊಂಡು ಬಂದಾಯಿತು. ಇನ್ನು ಆಕ್ಸ್‌ಫರ್ಡ್, ಎಡಿನ್‌ಬರೋ, ಷೇಕ್ಸ್‌ಪಿಯರಿನ ಜನ್ಮಸ್ಥಳ ಇಲ್ಲಿಗೆಲ್ಲ ಹೋಗಬೇಕು. ಬಳಿಕ ಇದೇ ೨೯ ರಂದು ಲಂಡನ್ನನ್ನು ಬಿಟ್ಟು ಹಾಲೆಂಡ್, ಫ್ರಾನ್ಸ್ (ಮುಖ್ಯವಾಗಿ ಪ್ಯಾರಿಸ್) ಸ್ವಿಟ್ಸರ್‌ಲೆಂಡ್, ಇಟಲಿ ಈ ಮೂಲಕ ಸಂಚಾರಮಾಡಿ ಮಾರ್ಚಿ ೩೧ ರಂದು ನೇಪಲ್ಸಿನಲ್ಲಿ ಹಡಗು ಹತ್ತಿ ಏಪ್ರಿಲ್ ಮಧ್ಯಕ್ಕೆ ಧಾರವಾಡವನ್ನು ಸೇರಬೇಕು. ಅಂತೂ ತುಂಬ ಓಡಾಟ ಇನ್ನೂ ಇದೆ. ಬಿಡುವಾಗಿ ಕುಳಿ–

ಫೆಬ್ರುವರಿ, ೧೯ ೧೯೫೬

ಈ ಕಾಗದವನ್ನು ನಾನು ಬರೆಯಲು ಕುಳಿತದ್ದು ಈ ನಗರದ ರಾಮಕೃಷ್ಣ ವೇದಾಂತ ಕೇಂದ್ರದಲ್ಲಿ, ಮೊನ್ನೆಯ ಮಧ್ಯಾಹ್ನದ ಊಟಕ್ಕೆ ಅಲ್ಲಿಗೆ ಹೋಗಿದ್ದಾಗ. "ಬಿಡುವಾಗಿ ಕುಳಿ" ಎಂದು ಬರೆಯುವಷ್ಟರಲ್ಲಿ ಊಟದ ಕರೆ ಬಂತು. ಊಟ ಮುಗಿಸಿಕೊಂಡು ಹಿಂದಿರುಗಿದ ಬಳಿಕ ಈ ಬೆಳಗಿನ ತನಕ "ಬಿಡುವಾಗಿ ಕುಳಿತು" ಮುಂದುವರಿಸಲು ಆಗಲೇ ಇಲ್ಲ! – ಈ ದಿನ ನಾಲ್ಕು ಪಂಕ್ತಿ ಬರೆದು ಈ ಕಾಗದವನ್ನು ಟಪಾಲಿಗೆ ಹಾಕಬೇಕೆಂದು ಮನಸ್ಸು ಮಾಡಿದ್ದೇನೆ. ಹೋಟಲಿನಲ್ಲಿ ಕುಳಿತು ಬರೆಯುತ್ತಿದ್ದೇನೆ. ಆದರೆ ಇನ್ನು ಸ್ವಲ್ಪ ವೇಳೆಯಲ್ಲೇ ಶ್ರೀ ಮರಿಯಪ್ಪ ಭಟ್ಟರ ಬಿಡಾರಕ್ಕೆ ಈ ಮಧ್ಯಾಹ್ನದ ಊಟಕ್ಕೆ ಹೋಗಬೇಕು! (ಮದರಾಸು ವಿಶ್ವವಿದ್ಯಾಲಯದ ಮರಿಯಪ್ಪ ಭಟ್ಟರು ಇಲ್ಲಿ ವ್ಯಾಸಂಗಕ್ಕಾಗಿ ಬಂದಿರುವ ವಿಷಯ ನಿಮಗೆ ತಿಳಿದಿತ್ತೋ ಇಲ್ಲವೋ ಕಾಣೆ.) ಈ ವಿದೇಶ ಪ್ರವಾಸದಲ್ಲಿ ಯಾರಾದರೂ–ಅದರಲ್ಲೂ ನಮ್ಮವರು – ಊಟಕ್ಕೆ ಕರೆದರೆ ಹೆಚ್ಚು ಕೊಸರಾಡದೆ ಒಪ್ಪಿಕೊಂಡು ಬಿಡುತ್ತೇನೆ. ನಮ್ಮ ಕಡೆಯ ಊಟದ ರುಚಿ ಹಾಗೆ ಸೆಳೆಯುತ್ತದೆ.

ಹಾರ್ವರ್ಡ್ ವಿಶ್ವವಿದ್ಯಾಲಯದ ಸಮೀಪದಲ್ಲಿ ನಾನು ಇದ್ದಾಗ ಪ್ರೊ. ಐ.ಎ ರಿಚರ್ಡ್ಸ್ ಅವರ ಸಮೀಪ ಪರಿಚಯ ನನಗೆ ಒದಗಿತು. ಅವರ ಕೋರಿಕೆಯಂತೆ ಕೆಲವು ಕನ್ನಡ ಪದ್ಯಗಳನ್ನು ಅವರ ಟೇಪ್‌ರೆಕಾರ್ಡ್‌ಗೋಸ್ಕರ ವಾಚನ ಮಾಡಿದೆ. ನನ್ನ ಬಳಿ ಇದ್ದ ಅತಿ ಪರಿಮಿತ ಸಾಮಗ್ರಿಯಿಂದ ನಾನು ಆರಿಸಿಕೊಂಡ ಕವನಗಳು ಇವು: ನಿಮ್ಮ 'ನೆರಳು',

ಮಲೆದೇಗುಲದ 'ಹುಲ್ಗರಿಯ ಬಳವಿಗೆಯ.....' ಎಂಬ ನುಡಿ, ಗೋಲ್ಗೊಥದಿಂದ ಒಂದು ಭಾಗ, ಗದಾಯುದ್ಧದಿಂದ ಎರಡು ಪದ್ಯಗಳು, ನನ್ನ 'ಸಖಿ-ದೂತಿ' ಮತ್ತು 'ಹೆಸರು' (ಕೋಲ್‌ರಿಜ್ ಅನುವಾದ); ಬೇಂದ್ರೆಯವರ 'ಕುರುಡು ಕಾಂಚಾಣ'ವನ್ನು ಶ್ರೀ ಶಾರದಾ ಪ್ರಸಾದ್ (ಅವರು ಈಗ ಹಾರ್ವರ್ಡಿನಲ್ಲಿದ್ದಾರೆ) ಹಾಡಿದರು. ಇವಕ್ಕೆ ಅಕ್ಷರಶಃ ಅನುವಾದವನ್ನೂ ಶ್ರೀ ರಿಚರ್ಡ್ಸ್ ಅವರಿಗೆ ಒದಗಿಸಿದ್ದೇನೆ. ಕನ್ನಡ ಕವಿತೆಯ ರೀತಿಯನ್ನು ಆತ ಮೆಚ್ಚಿದಂತೆ ತೋರಿತು. ಈ ಕವನಗಳನ್ನು ವಿದ್ಯಾರ್ಥಿಗಳಿಗೆ ಶ್ರವಣ ಮಾಡಿಸಿ, ಅವರು ಅರಿಯದ ಭಾಷೆಯ ಕವಿತೆ ಅವರ ಮನಸ್ಸಿನ ಮೇಲೆ ಕೇವಲ ಶ್ರವಣದಿಂದ ಯಾವ ಪರಿಣಾಮವನ್ನು ಉಂಟುಮಾಡುತ್ತದೆ ಎಂಬುದನ್ನು ಆತ ಪರೀಕ್ಷಿಸಬೇಕೆಂದು ಇದ್ದಾನಂತೆ. ಆಮೇಲೆ ಅರ್ಥಗ್ರಹಣಕ್ಕೆ ನನ್ನ 'pedestrian' ಅನುವಾದದ ಸಹಾಯ ಇರುತ್ತದೆ!-ರಿಚರ್ಡ್ಸ್ ಅವರದು ತುಂಬ ಲವಲವಿಕೆಯ ಮನಸ್ಸು. ಈ ವಯಸ್ಸಿನಲ್ಲೂ ಆತ ಹೊಸ ಸಂಗತಿ, ಹೊಸದಾರಿ-ಇವನ್ನು ಆಲೋಚಿಸುತ್ತಿರುತ್ತಾರೆ. ಅವರ ಮನೆಗೆ ಊಟಕ್ಕೂ ಹೋಗಿದ್ದೆನು.

ಇಲ್ಲಿಯ ರಾಮಕೃಷ್ಣಾಶ್ರಮದ ಆಶ್ರಯದಲ್ಲಿ ಕಳೆದ ಗುರುವಾರ Religious (Mystic) Poetry in Kannada' ಎಂಬ ವಿಷಯವನ್ನು ಕುರಿತು ಭಾಷಣ ಮಾಡುವ ಪ್ರಸಂಗ ಬಂದಿತು. ಸಭೆ ಅಷ್ಟೇನೂ ದೊಡ್ಡದಾಗಿರಲಿಲ್ಲ. ಮುಖ್ಯವಾಗಿ ಅಲ್ಲಿಗೆ ಬಂದಿದ್ದವರು ಮಠದ ಅಭಿಮಾನಿಗಳು. ಅಲ್ಲಿಯೂ ನಿಮ್ಮ 'ಹುಲ್ಗರಿಯ...' ಮತ್ತು ಪೈ ಅವರ ಗೊಲ್ಗೊಥದ ಭಾಗ ಇವನ್ನು ಉದಾಹರಿಸಿದೆನು.-ಅಂತೂ ಯಥಾಶಕ್ತಿ (ಯಥಾಶಕ್ತಿ ಎನ್ನುವುದಕ್ಕಿಂತ ಯಥಾವಕಾಶ ಎಂದರೆ ಉತ್ತಮ; ಏಕೆಂದರೆ ಹೆಚ್ಚು ಅವಕಾಶ ದೊರೆತಿದ್ದರೆ, ಹೆಚ್ಚು ಕೆಲಸ ಮಾಡಬಹುದಾಗಿತ್ತು!)-ಕನ್ನಡದ, ಅದರಲ್ಲಿ ನಿಮ್ಮ ಒಂದೆರಡು ಕವನಗಳ ಪ್ರಸಾರ ನಡೆಸಿದ್ದೇನೆ. 'ಮಲೆದೇಗುಲ' ನಿಜವಾಗಿಯೂ ಹೃದಯ ಬುದ್ಧಿ ಎರಡನ್ನೂ ಸ್ಪರ್ಶಿಸುತ್ತದೆ. ಅದನ್ನು ನೀವು ಏರ್‌ಮೇಲ್ ಮೂಲಕ ಕಳಿಸಿ ನನ್ನ ಕೈಗೆ ಬಲುಬೇಗ ಮುಟ್ಟಿಸಿದಿರಿ. ಅದು ಕೈಗೆ ಬಂದಾಗ ನನಗೆ ಎಷ್ಟು ಹರ್ಷವಾಯಿತೆಂಬುದನ್ನು ಹೇಳಲಾರೆ. ಕ್ಷಣಕಾಲದ ಮಟ್ಟಿಗಾದರೂ ಹನ್ನೆರಡು ಸಾವಿರ ಮೈಲಿಯ ದೂರದ ಅಂತರ ಮಾಯವಾಯಿತು!

ಅಮೆರಿಕದ ಸೊಗಡನ್ನು ಕಾಗದದಲ್ಲಿ ತೋರಿಸು ಎಂದು ಬರೆದಿದ್ದೀರಿ. ಆದರೆ ನೀವೇ ಹೇಳುವ ಹಾಗೆ ವಾಸನೆಯ ಘಾಟನ್ನು ಹಿಡಿದು ಕಳಿಸಲು ಇನ್ನೂ ಸುಲಭೋಪಾಯ ಇಲ್ಲ. ಧೀರ್ಘವಾದ ಕಾಗದ ಬರೆಯಲು ನನಗೆ ಅವಕಾಶ ಕಡಮೆಯಾಗಿದೆ. ಆಗಾಗ ಅನುಭವಕ್ಕೆ ಬಂದ ಕೆಲವು ಸಂಗತಿಗಳನ್ನು ಧಾರವಾಡಕ್ಕೆ ಬರೆದ ಕಾಗದಗಳಲ್ಲಿ ಸೂಚಿಸಿದ್ದೇನೆ. ಅವನ್ನು ಪುನರಾವರ್ತನೆ ಮಾಡುವುದರಲ್ಲಿ ಸುಖವಿಲ್ಲ. ಈ ಕಾಗದಗಳ ಸಂಗತಿಗಳನ್ನು ಇನ್ನು ಕೆಲವು ವಿಷಯಗಳನ್ನು ಕೂಡಿಸಿ ಒಂದು ಪುಸ್ತಕವನ್ನು ಕಟ್ಟಬೇಕೆಂದಿದ್ದೇನೆ ನೋಡಬೇಕು.

ಇಂಗ್ಲೆಂಡಿನಲ್ಲಿ ಚಳಿಯ ಕೊರೆತ ಹೆಚ್ಚು ಅಭ್ಯಾಸವಾಗುತ್ತಿದೆ. ಹಿಮದ ಮಳೆಯನ್ನು ಹರಹನ್ನೂ ಅನೇಕ ಕಡೆಗಳಲ್ಲಿ ಅನೇಕಬಾರಿ ನೋಡಿದೆ. ಇದೊಂದು ನಿಜವಾಗಿಯೂ ಅಪೂರ್ವವಾದ ಅನುಭವ.

ಶಿವರಾಮ ಶಾಸ್ತ್ರಿಗಳಿಂದ ಈವರೆಗೆ ನನಗೆ ಮೂರು ಕಾಗದ ಬಂದಿದೆಯೆಂದು ತಿಳಿದು ನಿಮಗೆ ಆಶ್ಚರ್ಯವಾಗಬಹುದು. ಮುಖ್ಯವಾಗಿ ಮೈಸೂರು ವಿಶ್ವವಿದ್ಯಾಲಯ ಕನ್ನಡ ಪ್ರೊಫೆಸರ್ ಕೆಲಸದ ಜಾಹಿರಾತು ಆತನನ್ನು ಚುರುಕುಗೊಳಿಸಿತು. ಶಾಸ್ತ್ರಿ, ಚಿದಂಬರಂ, ಡಿ.ಎಲ್. ಇವರ ಪ್ರೇರಣೆ ಸಹಾಯಗಳಿಂದ ಅರ್ಜಿಯನ್ನು ಕಳಿಸಿದ್ದಾಯಿತು. ಇದೇ ೨೯ಕ್ಕೆ "ಸಂದರ್ಶನ" ಇದೆಯಂತೆ. ನಾನಂತೂ ಹೋಗುವ ಹಾಗಿಲ್ಲ. ನೋಡಬೇಕು.

* * *

ಪು.ತಿ.ನರಸಿಂಹಾಚಾರ್ ಬೆಂಗಳೂರು, ೧೫-೭-೧೯೫೫

ಪ್ರಿಯ ಶ್ರೀಕಂಠಯ್ಯ

ನಿಮ್ಮ ಕಾಗದ ತಲುಪಿದಾಗ ನಾನು ಮೇಲುಕೋಟೆಗೆ ಹೋಗುವುದಕ್ಕಾಗಿ ರೈಲಿನಲ್ಲಿ ಕುಳಿತಿದ್ದೆ-ಹೋದ ಶನಿವಾರ. ಆಗ ೧ ಗಂಟೆಯ ಸಮಯ. ಮನೆಯಿಂದ ನಿಮ್ಮ ಕಾಗದವನ್ನು ಮಣಿ ಕಳಿಸಿಕೊಟ್ಟಳು. ಪರಮ ಸಂತೋಷವಾಯಿತು. ನೀವು ಸುಖವಾಗಿ N.Y. ತಲುಪಿದ್ದಕ್ಕೆ ನಿಮ್ಮ ಮನೆಗೆ ತಂತಿ ಕಳಿಸಿದ ಸಮಾಚಾರವೂ ಡಿ.ಎಲ್.ಎನ್. ಮೂಲಕ ತಿಳಿದಿತ್ತು. ಆತಂಕ ಕಡಿಮೆಯಾಗಿತ್ತು. ನಿಮ್ಮ ಡ್ರೆಸ್ ನಿಮ್ಮ ಕೈಗೆ ಕೊನೆಗೂ ತಲುಪಿತಲ್ಲ. ಆಕಾಶ ಮತ್ತು ಸಮುದ್ರ ನಿಮಗೆ ಒಂದೇ ಸಮನಾಗಿ ಕಂಡಿದ್ದನ್ನು ಊಹಿಸಿ ಆನಂದಿಸುತ್ತಿದ್ದೇನೆ. ಸಮಸ್ಯಾಪೂರಕ ಪದ್ಯ ಈ ರೀತಿ ಇದೆ. ನನ್ನ ಸಂಸ್ಕೃತಕ್ಕೆ ಬೆಂಕಿ ಹಾಕಬೇಕು. ಆದುದರಿಂದ ಒಣಬಣಕಲಾಗಿದೆ. "ವಿಯಚ್ಛಾರ ತಲೇ ಭಾರೆ ನೀರದಾಂಕಿತ ನೀಲಿಮಃ! ನಿಸ್ಸೀಮ ಜಲವಿಸ್ತಾರ ಸ್ಸಾಗರೋಗ ಗನೋಪಮ:" ಅಂತೂ ನೀವು ಕಂಡ ದೃಶ್ಯವನ್ನು ನಾನು ಅರ್ಥ ಮಾಡಿಕೊಂಡಿದ್ದೇನಷ್ಟೆ. ನೀವೇ ಅಡಿಗೆ ಮಾಡಿಕೊಳ್ಳುತ್ತಿರುವುದರಿಂದ ಆಹಾರದಲ್ಲಿ ಹೆಚ್ಚು ಬದಲಾವಣೆಯಾಗದೆ ಅಮೇರಿಕವೂ ಭಾರತದಂತೆಯೇ ತೋರುತ್ತಿರಬೇಕಲ್ಲವೇ. ನಾವು ಇಲ್ಲಿ ನಡೆಯುವುದನ್ನು ಹೆಚ್ಚಾಗಿ ಹೇಳುವಂತಿಲ್ಲ-ಅದೆಲ್ಲ ನಿಮಗೆ ಗೊತ್ತಿರತಕ್ಕ ವಿಷಯವೇ. ಸಾಹಿತ್ಯ ಪರಿಷತ್ ಸಮ್ಮೇಳನಕ್ಕೆ ಮೈಸೂರಿಗೆ ಕೊನೆಯ ದಿನದ ಮಟ್ಟಿಗೆ ಹೋಗಿ ಕವಿಸಮ್ಮೇಳನದಲ್ಲಿ ಭಾಗವಹಿಸಿ ವಿಭೂತಿ ಪೂಜೆಯನ್ನು ಸಲ್ಲಿಸಿದೆ. ಬಹಳ ಚೆನ್ನಾಗಿ ನಡೆಯಿತು. ಹೊಸ ಮಿತ್ರರ ಪರಿಚಯವಾಗಲಿಲ್ಲ. ಅದಕ್ಕೂ ಒಂದು ತರದ ಅದೃಷ್ಟ ಬೇಕು. ಅಹುದು ಅಲ್ಲಿಂದಲ್ಲವೇ ನಿಮ್ಮ ಊರಿಗೆ ಬಂದದ್ದು? ಇದೇನು ಹೇಳಿದ್ದನ್ನೇ ಹೇಳುವಂತಾಯಿತಲ್ಲ. ನನ್ನ ಮರವಿಗೆ ಏನು ಹೇಳಲಿ. ನಂಶಿಯನ್ನು ಎರಡು ಸಲ ನೋಡಿದ್ದೆ. ಸಂಸ್ಕೃತ ಪ್ರಾಧ್ಯಾಪಕ ಪದವಿ ಸಿಕ್ಕುವವರೆಗೂ ಅಥವಾ ಇತ್ಯರ್ಥವಾಗುವವರೆಗೂ ಆತನಿಗೆ ಶಾಂತಿಯಿಲ್ಲ. ಯೋಗ್ಯತೆ ಇದ್ದರೂ ದೈವ ಒಲಿಯಬೇಕಲ್ಲ. ತಿರುಗಿ ಕೌನ್ಸಿಲ್ಲಿಗೆ ಹಾಕಿದ್ದರಂತೆ ನೋಡಬೇಕು. ಡಿಎಲ್‌ಎನ್, ರೋಲನ ಅವರನ್ನು ನಿಮ್ಮ ಕಾಗದ ಬಂದ ಮೇಲೆ ಕಾಣಲಾಗಲಿಲ್ಲ. ಈ ಶನಿವಾರ ಭಾನುವಾರ ಕಂಡು ಕಾಗದ ತೋರಿಸುತ್ತೇನೆ. ನಿಮ್ಮ ದಿನಚರಿ ನೀವು ಕಂಡ ದೃಶ್ಯಗಳು ಮತ್ತು ಮನುಷ್ಯರು, ನಿಮ್ಮ ಪಾಠ ಪ್ರವಚನಗಳ ರೀತಿ-ಅಲ್ಲಿನ ಜೀವನ ಕ್ರಮ- ಅದರ ಧ್ಯೇಯವೇನು? ಹೊಸ ಸ್ನೇಹಿತರು, ನಿಮ್ಮ ದಿಗ್ವಿಜಯಗಳು ಇತ್ಯಾದಿಗಳ ಮೇಲೆ ದೀರ್ಘ- ಆದರೆ ಕಾಗದದ ಮಿತಿ ಇದೆಯಲ್ಲ-

ಏನು ಮಾಡೋಣ ಅದನ್ನೆಲ್ಲಾ ಒಂದೇ ಕಣ್ಣೋಟಕ್ಕೆ ಓದಿ ಮುಗಿಸಿಬಿಡಬಹುದು- ಅಕ್ಷರ ಮಿತಿಯಲ್ಲಾದರೂ ಸಾಕಷ್ಟು ವಿವರದೊಡನೆ ಬರೆಯಿರಿ.

ಬೆಂಗಳೂರಿನಲ್ಲೇ ತಿರುಗಿ ಬಂದು ನೆಲಸಬೇಕೆಂದು ಹೆಂಡತಿ ಹೇಳಿದಳು. ನೋಡೋಣ.... ಈ ಕಾಗದದ ಬಗೆಯನ್ನು ಈ ಕನ್ನಡದ ಬರವಣಿಗೆಯನ್ನು ನೋಡಿ ನನಗೆ ನೀವು ಎಲ್ಲೋ ಇಲ್ಲೇ ಪಕ್ಕದಲ್ಲೇ ಇರುವಂತೆ ತೋರುತ್ತದೆ. ಈ ಭ್ರಾಂತಿಯನ್ನು ಏನು ಮಾಡಿದರೂ ನಿವಾರಿಸಲಾಗುವುದಿಲ್ಲ. ಮೊನ್ನೆ ಒಂದು ಹದದಲ್ಲಿ ಹಗಲಿನ ಉಷ್ಣಾಂಶವಿತ್ತು. ಅದು ಸೋಕಿದ ತಕ್ಷಣ ೨೫ ವರುಷಗಳ ಹಿಂದಿನ ಯಾವುದೋ ಒಂದು ಹಬ್ಬದ ದಿನ ಮೇಲುಕೋಟೆಯ ನೆನಪು, ನೆನಪಲ್ಲ ಪ್ರತ್ಯಕ್ಷಾನುಭವವಾದ ಹಾಗೆ ಆಯಿತು. ವಾಸನೆಗೆ ಈ ತರಹದ ಶಕ್ತಿಯುಂಟೆಂದು ಹೇಳುತ್ತಾರೆ. ಆದರೆ ದಿನದ ಉಷ್ಣಾಂಶಕ್ಕೂ ಈ ರೀತಿ ಅದಕ್ಕಿಂತ ಹೆಚ್ಚಿನ ಶಕ್ತಿ ಇರುತ್ತದೆಯೆಂದು ನನಗೆ ತಿಳಿದು ಬಂದು ಆಶ್ಚರ್ಯವಾಯಿತು. ಅಲ್ಲಿನ ಹವ ನಿಮಗೆ ಈ ನಾಡಿನ ನೆನಪನ್ನು ತರುತ್ತದೆಯೇ ವಿವರಿಸಿ ತಿಳಿಸಿ. ಇನ್ನು ಏನೂ ವಿಶೇಷ ಕಾಣೆ. ಕೃಷ್ಣ ಚರಿತೆಯನ್ನು ಹೊಸ ತರದಲ್ಲಿ ಬರೆಯಬೇಕೆಂದಿರುತ್ತೇನೆ. ಸಂಗೀತದಲ್ಲಿ ಆಲಾಪನೆಯಾದ ಮೇಲೆ ತಾನಂತರದಲ್ಲಿ ಬರೆಯಬೇಕೆಂದು ಹಾಡಿಕೊಂಡು ಬರೆಯುತ್ತೇನೆ. ಆದುದರಿಂದ ಅದು ನಿರ್ದಿಷ್ಟವಾದ ಮಾತ್ರಾಗಣನೆಗೆ ಸಿಲುಕದೆ ನಿಮ್ಮ ಆಶಯದಂತೆ ಗಣಗಳಲ್ಲಿ ನಿಲ್ಲುತ್ತವೆ ಸಾಲುಗಳು. ಅಲ್ಲಿ ಬರುವ ವಿಷಮಗಣಗಳು ತಾನಂ ಕ್ರಮದಲ್ಲಿ ಬಹುವಾಗಿ ಬರತಕ್ಕ ಪ್ರಕಾರಗಳು. ನೀವು ಗಾಬರಿ ಪಡಬೇಕಾಗಿಲ್ಲ. ಸದ್ಯಕ್ಕೆ ಕಾವ್ಯಮುಖವಾಗಿಲ್ಲ ಪ್ರಜ್ಞೆ.

ನಿನ್ನೆಯೆಲ್ಲ Fortunes of Nigel ಎಂಬ novel ಅನ್ನು ಓದಿ ಕಳೆದೆ. ಬಹಳ ಚೆನ್ನಾಗಿದೆ.

* * *

ಪು.ತಿ.ನರಸಿಂಹಾಚಾರ್ ಬೆಂಗಳೂರು, ೪-೧೨-೫೫

ಪ್ರಿಯ ಶ್ರೀಕಂಠಯ್ಯ

ನಿಮ್ಮ ಚಿತ್ರದ ಕಾರ್ಡು ತಲುಪಿತು. ಬಹಳ ಚೆನ್ನಾಗಿದೆ ದೃಶ್ಯ. ಅಲ್ಲಿ ನಮ್ಮನ್ನೆಲ್ಲ ನೆನೆದುಕೊಂಡದ್ದರಿಂದ ನಾವೂ ಅಲ್ಲೇ ಇದ್ದಂತಾಗಿ ನನಗಂತೂ ಬಹಳ ಸಂತೋಷವಾಯಿತು. ಅದರಲ್ಲೂ ನಿಮ್ಮಲ್ಲಿ ನನ್ನೊಂದು ಜೀವಂಡ ಅಂಶ ಅಗಲಿಸಲಾರದಷ್ಟು (ನಿಮ್ಮ ಕುಟುಂಬ ದಷ್ಟಲ್ಲವಾದರೂ ಅದರಂಶದಷ್ಟು) ಬೆರೆದುಕೊಂಡಿದೆಯಲ್ಲವೆ? ನಾನಂತೂ ಸ್ನೇಹದ ಬಯಕೆ ಬಂದಾಗಲೆಲ್ಲ ನಿಮ್ಮನ್ನು ತೀವ್ರವಾಗಿ ನೆನೆಯುತ್ತಿರುತ್ತೇನೆ. ನೆನೆಯದ ದಿನವೇ ಇಲ್ಲ. ಚಂದ್ರೇ ದೃಷ್ಟಿ ಸಮಾಗಮಃ ಎನ್ನುವಂತೆ ಆಕಾಶದ ಯಾವುದೋ ಒಂದು ಬಿಂದುವನ್ನು ಕುರಿತು ದೃಷ್ಟಿಸಿ ಅ ರೇಖೆಯನ್ನು ಜ್ಯಾಮಿತಿಕ ನಿಯಮದಂತೆ ತಿರುಗಿಸಿ ಭೂಮಿಗಿಳಿದು ಅದು ಮುಟ್ಟುವ ಆ ಪಕ್ಕದ ಭಾಗದಲ್ಲಿ (ಭೂಮಿ ಗುಂಡಗಿರುವುದರಿಂದ) ನೀವು ಇರಬಹುದೇನೋ ಎಂದು ಕೊಳ್ಳುತ್ತೇನೆ. ಕಾಲಡಿಯಲ್ಲಿ ನಿಮ್ಮ ಕಾಲೂ ನನ್ನ ಕಾಲೂ ಒಂದಕ್ಕೊಂದಕ್ಕೆ ಜಂಟಿಯಾದಂತೆ ಇರಬಹುದು-ಆದರೆ ಎಷ್ಟೋ ಮೈಲಿಗಳ ಭೂಮಿ ಮಾತ್ರ ನಡುವೆ ಇದೆ. ಕೆಲವು ಸಂತೋಷದ

ಸಮಾಚಾರಗಳಿವೆ. ಶಾಸ್ತ್ರಿ ಸಂಸ್ಕೃತದ ಪ್ರೊಫೆಸರಾದ. ಆದರೆ ಪ್ರೊಬೇಷನ್ ಎಂದು ಮಾಡಿ ಹರ್ಷಕ್ಕೆ ಸ್ವಲ್ಪ ಹುಳಿ ಹಿಂಡಿದ್ದಾರೆ. ಅಂತು ಅವನ ಬವಣೆ ತೀರಿತಲ್ಲ, ಬಹಳ ಸಂತೋಷ. ಈಗ ನನ್ನ ಆ ಪಕ್ಕಕ್ಕೆ ಒಬ್ಬ Professor ಈ ಪಕ್ಕಕ್ಕೆ ಒಬ್ಬ Professor- ದೇಹಕ್ಕಿಂತ ರೆಕ್ಕೆಗಳೇ ದೊಡ್ಡವು. ಎಲ್ಲಿಗೊಯ್ದು ಎಲ್ಲಿ ಕೆಡವುತ್ತವೋ ಕಾಣೆ! ನನ್ನ ಮಲದೇಗುಲ ಅಚ್ಚಾಗಿ ರಟ್ಟು ಹಾಕುವ ಘಟ್ಟದಲ್ಲಿದೆ. ಇಂದೋ ನಾಳೆಯೋ ಹೊರಹೊರಡಬಹುದು. ನಿಮಗೆ ಅಚ್ಚಾದ ಪ್ರತಿಯನ್ನು ಕಳುಹಿಸುತ್ತೇನೆ. ಕೆಲವು ಕೊಂಕುಗಳನ್ನು ಬೇಕೆಂದೇ ಉಳಿಸಿಕೊಂಡು ನಿಮ್ಮ ಸಲಹೆಗಳೇನಿರಬಹುದೆಂದು ಊಹಿಸಿ ಅದನ್ನು ತಿದ್ದಿ ಮುದ್ರಿಸಿದ್ದೇನೆ. ನೋಡಿ ನಿಮ್ಮ ಪ್ರತಿಕ್ರಿಯೆಗಳನ್ನು ಬರೆಯಿರಿ. ಇದನ್ನು ಚಿದಂಬರಂ ಅಚ್ಚು ಹಾಕಿದ್ದಾರೆ. ಹರಿಣಾಭಿಸರಣ (ಸಂಗೀತದೊಂದಿಗೆ) ಶಂಕರನಾರಾಯಣ ಅಚ್ಚು ಹಾಕುತ್ತಾರೆ.

ಇಲ್ಲಿ ನನ್ನ Proof reading and Editing ಕೆಲಸ ಅವಿಚ್ಛಿನ್ನವಾಗಿ ನಡೆಯುತ್ತಿದೆ. ನನ್ನ ಹರ್ಷದ ಎಷ್ಟೋ ಕಳೆಗಳನ್ನು ಅದು ಹೀರಿಕೊಂಡು ನನ್ನನ್ನು ಮುಖಹೇಡಿಯಾಗಿ ಮಾಡಿದೆ. ಈ ಕೆಲಸ ಮತ್ತು ನಾನಿರುವ ಹುದ್ದೆಯ ಆಫೀಸಿನ ವಾತಾವರಣ ನನಗೆ ನನ್ನಲ್ಲೇ ಒಂದು ತರದ ಜಿಗುಪ್ಸೆ ಹುಟ್ಟಿಸಿರುವುದರಿಂದ ಮಿಕ್ಕ ಲೋಕ ನನ್ನನ್ನು ಅನುಸರಿಸುವುದರಲ್ಲಿ ನನಗೆ ಆಶ್ಚರ್ಯವೇನೇನೂ ಕಂಡುಬರುವುದಿಲ್ಲ. ಇನ್ನು ನಾಲ್ಕೂವರೆ ವರ್ಷ ಹೀಗೆ ಕಳೆಯಬೇಕು! ಅದೃಷ್ಟದಲ್ಲೂ ದೈವದಲ್ಲೂ ನಂಬಿಕೆಯಿರುವುದರಿಂದ ಮನಸ್ಸಿಗೆ ಎಷ್ಟೋ ಸಮಾಧಾನವಾಗಿದೆ.

ನಾನು ಇನ್ನೂ ಬೆಂಗಳೂರಿನಲ್ಲಿ ಸಂಸಾರ ಹೂಡಿಲ್ಲ. ಮಣಿಯ ಮನೆಯಲ್ಲೇ ಇದ್ದೇನೆ. ಸಾಲ ೨/೩ ಭಾಗ ತೀರಿತು. ಇನ್ನು ೧/೩ ಭಾಗ ಹತ್ತು ತಿಂಗಳ ದುಡಿಮೆಯಷ್ಟು ಉಳಿದಿದೆ. ಭಗವಂತನ ದಯೆಯಿಂದ ಅದೂ ತೀರಬಹುದು. ಈ ೧/೩ ಭಾಗದಲ್ಲಿ ತಮ್ಮ ನಾನೂರು ಸೇರಿಕೊಂಡಿದೆ. ಆದರೆ ಇದು ಹೊರೆಯಂತೆ ಕಾಣುತ್ತಿಲ್ಲ. ವಾತ್ಸಲ್ಯದ ಚಿಹ್ನೆಯಂತಿದೆ.

ಬೆಂಗಳೂರಿನಲ್ಲಿ ೨ನೇ ತಾರೀಖು ಆಕಾಶವಾಣಿ ಆರಂಭವಾಯಿತು. ಅಮೇರಿಕಕ್ಕೆ ಕೇಳುತ್ತದೆಯೇ? ೪೯೧. ೮ ಮೀಟರುಗಳಿಗೆ ಮೊನೆ ತಿರುಗಿಸಿ ನೋಡಿ.

ಶ್ರೀ. ಆರ್. ಎಲ್. ನರಸಿಂಹಯ್ಯನವರು ಮಾತ್ರ ಪದೇಪದೇ ಭೇಟಿಯಾಗುತ್ತಿದ್ದಾರೆ. ಮಿಕ್ಕ ಮಿತ್ರರ ಭೇಟಿ ಅಪೂರ್ವ. ಸಾಹಿತ್ಯ ಪರಿಷತ್ತಿನ ಸಂಪರ್ಕ ಕಡಿದು ಹೋದಂತಿದೆ. ಶ್ರೀ ಟಿ.ಪಿ.ಕೆ. ಅವರು ನೂತನ ಮಂತ್ರಿಗಳ ಕೈಯಲ್ಲಿ ಬವಣೆ ಪಡುತ್ತಿರುವಂತಿದೆ. ಶ್ರೀ ಚಿದಂಬರಂ ಅವರ ಮೂರು ವರ್ಷದ ಮಗಳು ತೀರಿಹೋಯಿತು. ಬಹಳ ದಿನದಿಂದಲೂ ಖಾಯಿಲೆಯಾಗಿದ್ದ ಮಗುವಂತೆ. ಆಗ ನಾನು ಮೈಸೂರಿನಲ್ಲಿ ಸಭೆಯ ಪ್ರಯುಕ್ತ ಇದ್ದೆ. ಸಮಾಧಾನ ಹೇಳಿದೆ.

Prof. Puttappa ಅವರನ್ನು ಒಂದು ದಿನ ಭೇಟಿ ಮಾಡಿದೆ. "ರಸ," "ಧ್ವನಿ", ಅಲಂಕಾರ ಇತ್ಯಾದಿ ವಿಚಾರಗಳಲ್ಲಿ ಸ್ವಲ್ಪ ಕಾಲ ಸಂಭಾಷಣೆ ನಡೆಸಿದೆ. ಈ ವಿಚಾರದಲ್ಲಿ ಅವರ ಭಾವನೆಗಳು ತೀರ ಅಸ್ಪಷ್ಟವಾದಂತೆ ಕಂಡುಬಂದಿತು. ಮನುಷ್ಯ ಬಹಳ ಸರಳ. ನೋಡಿದರೆ ಸಂತೋಷ ವಾಗುತ್ತದೆ. ಆದರೆ ಬುದ್ಧಿಯ ಪ್ರಖರತೆಯ ವಿಚಾರದಲ್ಲಿ ಅಷ್ಟು ಪ್ರತ್ಯಯ ಹುಟ್ಟಲಿಲ್ಲ. ಆದರೆ ತೆರೆದ ಮನಸ್ಸಿನವನಾದದ್ದರಿಂದ ಮಿಕ್ಕ ವಿ.ಸೀ., ನರಸಿಂಹಸ್ವಾಮಿ, ಮಾಸ್ತಿ ಇತ್ಯಾದಿಗಳನ್ನು

ನುಡಿಸಿದಾಗ ನಮಗೆ ಬರುವ ಒಂದು ತರಹದ ಕಣ್‌ಕಾವಳ ಇಲ್ಲಿ ಬಾರದೆ ಮನಸ್ಸು ಪ್ರಫುಲ್ಲವಾಗಿಯೇ ಇರುತ್ತದೆ.

ಕನ್ನಡಕ್ಕೆ ಮತ್ತೊಂದು Professor ಜಾಗವನ್ನು ನಿರ್ಮಿಸಿದ್ದಾರೆ. ಅದನ್ನು ತುಂಬುವಾಗ ನಿಮ್ಮ ಹಕ್ಕನ್ನು ಮರೆಯದ ಹಾಗೆ ನೋಡಿಕೊಳ್ಳಿ. ಅದನ್ನು advertise ಮಾಡಿದ ಹಾಗೆ ಕಾಣಲಿಲ್ಲ. ನಿಮ್ಮ ಭಾವಮೈದುನ ನಾಗರಾಜನನ್ನು ನೋಡುತ್ತಿರುತ್ತೇನೆ. ಧಾರವಾಡದ ಸಮಾಚಾರ ಅವನಿಂದ ತಿಳಿಯುತ್ತಿರುತ್ತದೆ.

ಅಮೇರಿಕ ತೀರ ಜಾಗೃತ ಲೋಕವಲ್ಲವೆ? ಸುಪ್ತಭಾರತದಿಂದ ಹೋಗಿರುವ ನೀವು ಅಲ್ಲಿ ಬೆರಗು ಪಡುತ್ತಿರಬಹುದು. ಅದರ ವಿಚಾರ ವಿವರವಾಗಿ ಬರೆಯಿರಿ.

ಕರ್ನಾಟಕ ರೂಪುಗೊಳ್ಳಬೇಕೆಂದು SRC ವರದಿ ಹೊರಟಿದೆ. ಆ ವರದಿ ರಾಜ ಪ್ರಮುಖರೆಲ್ಲ ಹೋಗಬೇಕೆಂದು ABC states ಎಂಬ ವ್ಯತ್ಯಾಸಗಳು ನಂದಬೇಕೆಂದೂ ಹೇಳಿದೆ. ವೀರಶೈವರಿಗೆ ಗೆಲವು. ಗೌಡರಿಗೆ ಕಳವಳ. ಇಲ್ಲಿನ ಪ್ರತಿಕ್ರಿಯೆ ತೀವ್ರವಾಗಿದೆ. ಮುಖ್ಯಮಂತ್ರಿ ಅತ್ತ ಇತ್ತ ಓಡಾಡುತ್ತಿದ್ದಾರೆ. AGR, Manjappa ಮತ್ತು T. Chennaiah ಮಂತ್ರಿಗಳು ಮೈಸೂರು ಮೈಸೂರಾಗಿಯೇ ಇರಬೇಕೆಂದು ಮನವಿ ಹೊರಡಿಸಿದ್ದಾರೆ. ಡಿ.ವಿ.ಜಿ., ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಅವರುಗಳೂ ಈ ಪಕ್ಷ ಹಿಡಿದಿದ್ದಾರೆ. MPL Sastry ಈಚೀಚೆಗೆ ಮುಖಂಡನಾಗಬೇಕೆಂಬ ಹವಣಿಕೆಯಲ್ಲಿ ಈ ಪಕ್ಷವನ್ನೇ ಹಿಡಿದಿದ್ದಾರೆ. ನಿಯೋಗ ಬೇಗ ಡೆಲ್ಲಿಗೆ ಹೊರಟಿದೆ. ನಮ್ಮ ದುರದೃಷ್ಟ. SRC Report ನಲ್ಲಿ ಕಾಸರಗೋಡು ಕೇರಳಕ್ಕೆ! ಬಳ್ಳಾರಿ ಆಂಧ್ರಕ್ಕೆ! ಕೋಲಾರ ಮೈಸೂರಿಗೆ, ನೀಲಗಿರಿ ನಮಗಿಲ್ಲ. ಇವು ಎಲ್ಲೋ ಕೊನೆ ತುದಿಯ ಚೂರುಪಾರಗಳಲ್ಲಿನ ವ್ಯತ್ಯಾಸಗಳೂ, ಅಂತೂ ಪರಿಷತ್ತಿನ ಭೂಪಟದಂತೆಯೇ ಮುಕ್ಕಾಲು ಮೂರು ವೀಸೆ ಪಾಲು SRC ಭೂಪಟವಿದೆ. ಇನ್ನು ಎರಡು ಮೂರು ತಿಂಗಳಲ್ಲೇ ಇವೆಲ್ಲ ಇತ್ಯರ್ಥವಾಗಬಹುದು. ನೀವು ಬರುವ ವೇಳೆಗೆ ಮೈಸೂರು ಇಲ್ಲವಾಗುವ ಸಂಭವವಿದೆ. ನೀವು ಧಾರವಾಡಕ್ಕೆ ಹೋದುದು ಸಾರ್ಥಕವಾಯಿತು.

ವಿ.ಸೀ.ಯಿಂದ ನಿಮ್ಮ ಭಾರತೀಯ ಕಾವ್ಯಮೀಮಾಂಸೆಯ ಮೇಲೆ ವಿಸ್ತಾರವಾದ ಪರಿಶೀಲನೆ ಹಿಂದೂವಿನಲ್ಲಿ ಬಂದಿತ್ತು. ಓದಿದೆ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಯಾವ ಪಟ್ಟಿಗೂ ಸಿಕ್ಕದೆ ಜುಜುಟ್ಟು ತರದಾಟದಂತಿದೆ Review. ಅದರ ಕಾಪಿಯೊಂದನ್ನು ತೆಗೆದಿಟ್ಟು ಮಲೆದೇಗುಲ ದೊಂದಿಗೆ ಕಳುಹಿಸುತ್ತೇನೆ.

ಇನ್ನೇನು ವಿಶೇಷವಿಲ್ಲ. ಕೆಲವು ದಿನಗಳ ಹಿಂದೆ ಒಂದು ವಿಶೇಷ ದೃಶ್ಯವನ್ನು ಕಂಡೆ. ದಾರಿಯ ಕೊನೆಯೆ ದಿಗಂತ. ಅದು ಮಹಾಭೂತವೊಂದು ತೆರೆದ ಬಾಯಂತೆ ಕಂಡಿತ್ತು. ನೀಲಾಕಾಶ ಅದರ ಮೇಲ್ದುಟಿಯಂತೆ ನೆಲ ಅದರ ಕೆಳದುಟಿಯಂತೆ. ದಾರಿ ನಾಲಗೆಯಂತೆ. "ಅಶ್ವಿಸೌವ್ಯಾತ್ತಂ" ಪುರುಷಸೂಕ್ತದ ಮಾತು ನೆನಪಿಗೆ ಬಂದು ರೋಮಾಂಚವಾಯಿತು. ಅದೊಂದು ಅದ್ಭುತ ದರ್ಶನ.

* * *

ಪು.ತಿ. ನರಸಿಂಹಾಚಾರ್ ಬೆಂಗಳೂರು, ೨೩-೧೨-೫೫

ಪ್ರಿಯ ಶ್ರೀಕಂಠಯ್ಯ

ನಾಳಿದ್ದು ಮಾರ್ಗಶಿರ ಶುದ್ಧ ಏಕಾದಶಿ. ನಿಮ್ಮ ಜನ್ಮದಿನ. ಆ ಹೊತ್ತಿಗೆ ಈ ಕಾಗದ ಕೈಸೇರಿದ್ದರೆ ಚೆನ್ನಾಗಿತ್ತು. ಪುಸ್ತಕ ಮತ್ತು ವಿಮರ್ಶೆಯ ಪ್ರತಿ ಇವುಗಳನ್ನು ಕಳಿಸಬೇಕೆಂದಿದ್ದೆ. Press Cutting ಕೈಗೆ ಸಿಕ್ಕದೆ ತಡಕಾಡುತ್ತಿದ್ದೇನೆ. ಇನ್ನೆರಡು ಮೂರು ದಿನಗಳಲ್ಲಿ ಅವನ್ನು ರವಾನಿಸುತ್ತೇನೆ. ತಡವಾಯಿತು ಕ್ಷಮಿಸಿ. ನಿಮ್ಮ ಹುಟ್ಟಿದ ಹಬ್ಬದ ದಿವಸವೇ ನಮ್ಮ ಮಲ್ಲೇಶ್ವರದ ಸಹೃದಯ ಗೋಷ್ಠಿ ಹುಟ್ಟಿತು. ಆದುದರಿಂದ ಹುಟ್ಟಿದ ಹಬ್ಬವನ್ನು ಅಲ್ಲೂ ಆಚರಿಸುತ್ತೇವೆ. ಮೊನ್ನೆ ರಾತ್ರಿ ನಿಮ್ಮ ಧ್ವನಿಮುದ್ರಿಕೆಯನ್ನು ಬೆಂಗಳೂರಿನ ಆಕಾಶವಾಣಿ ಮೂಲಕ ಕೇಳಿ ಬಹಳ ಆನಂದವಾಯಿತು. ನಿಮ್ಮ ಸ್ವಂತ ಧ್ವನಿ. ಒಲವೋ ಹಗೆಯೋ, ನೇತ್ರನಟಿಯರು, ವೈಯಾಕರಣನ ಶಯ್ಯೆಯ ಬಳಿ, ನಿನ್ನ ಹೆಸರು ಇತ್ಯಾದಿ ಪದ್ಯಗಳು ನೀವು ಕುಳಿತು ಓದುತ್ತಿರುವಂತೆಯೇ ಸುಸ್ಪಷ್ಟವಾಗಿ ನೈಜವಾಗಿ ನನ್ನ ರೇಡಿಯೋ ಮೂಲಕ ಕೇಳಿಸಿತು. ಹತ್ತು ಸಾವಿರ ಮೈಲಿಗಳಾಚೆ ಇರುವ ನೀವೆಲ್ಲಿ, ಇಲ್ಲೇ ಹತ್ತಿರದಲ್ಲೇ ಮಾತನಾಡುವಂತಿರುವ ನಿಮ್ಮ ಧ್ವನಿಯ ಭ್ರಮೆಯೆಲ್ಲಿ-ಅತ್ಯಾಶ್ಚರ್ಯಕರ ಹಾಗೂ ಖೇದವನ್ನುಂಟು ಮಾಡತಕ್ಕ ಸನ್ನಿವೇಶ. ಇನ್ನೊಂದೆರಡು ಸಂತೋಷದ ಸುದ್ದಿಯೇನೆಂದರೆ, ಶಿವರಾಮಶಾಸ್ತ್ರಿಗೆ ಬಹು ಸಂಭ್ರಮದಿಂದ ಮೈಸೂರಿನ ಕಾಲೇಜಿನ ವಿದ್ಯಾರ್ಥಿಗಳೂ, ಉಪಾಧ್ಯಾಯರು ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಪ್ರೊಫೆಸರಾದದಕ್ಕೆ ಅಭಿನಂದನೆಯನ್ನು ಸಲ್ಲಿಸಿದರು. ಅದರ ವಿಷಯವನ್ನು ತಾಯಿನಾಡುವಿನಲ್ಲಿ ಓದಿ ನಿಮಗೆ cutting ಇಟ್ಟಿದ್ದೇನೆ. ಅದನ್ನು ರವಾನಿಸುತ್ತೇನೆ. ಶ್ರೀ. ಎ.ಎನ್. ಮೂರ್ತಿರಾಯರಿಗೆ Director of Culture ಎಂಬ ಹುದ್ದೆ ಸಿಕ್ಕಿದೆ. ಸಂಬಳ ೮೦೦/- ಎಂದು ಕಾಣುತ್ತದೆ. ಅಭಿನಂದನೆಗಳನ್ನು ಕಳಿಸಿ.

ನೀವು ಬರೆದ ಕಾಗದದಲ್ಲಿ ಅಮೆರಿಕಾದ ಸೊಗಡೇ ಇಲ್ಲವಲ್ಲ ಏಕೆ? ಅಲ್ಲಿ ನೀವು ಕಂಡ ವಿಷಯಗಳನ್ನು ಕುರಿತು ಸುಖೋಷ್ಣವಾದ ಶೈಲಿಯಲ್ಲಿ ಆದರೂ ಬರೆಯಬೇಡವೆ? ಪುರಸತ್ತಿಲ್ಲದಷ್ಟು ಕೆಲಸವೆಂದರೆ ಬರಿಯ ವ್ಯಾಸಂಗವೆ? ರಿಚರ್ಡ್ಸ್ ನೋಡಿದ್ದು ಬಹು ಚೆನ್ನಾಯಿತು. ಚಿತ್ತಾಲರ ಕವಿತೆ ಹೇಗೆ? ನನಗೆ ಪರಿಚಯವಿದ್ದಂತೆ ಕಾಣಲಿಲ್ಲ. ನೀವೇ ಅಡಿಗೆ ಮಾಡಿ ಕೊಳ್ಳುತ್ತಿರುವುದರಿಂದ ಸ್ವದೇಶಿ ಆಹಾರವೇ ಅಲ್ಲೂ ತಮಗಲ್ಲವೆ? ಮಜ್ಜಿಗೆ ಪಳಿದ್ಯದ ವಿಶೇಷವೇನು- ನಮ್ಮ ಮನೆಯಲ್ಲಿ ಪುಳಿಯೋಗರೆಯನ್ನು ನಮ್ಮ ಮಣಿ ಅತಿಶಯ ರುಚಿಯಿಂದ ಮಾಡಿದ್ದಳು. ನಿಮ್ಮ ನೆನಪು ಬಂದಿತು. ರುಚಿಯವನ್ನು ಅಮೇರಿಕಾಕ್ಕೆ ಕಳಿಸುವುದು ಹೇಗೆ? ರೂಪ ಮತ್ತು ಧ್ವನಿ ಇವುಗಳನ್ನು ತತ್ತದ್ವಿಷಯದಿಂದ ಬೇರ್ಪಡಿಸಿದಂತೆ ರುಚಿ ಮತ್ತು ಸ್ಪರ್ಶಗಳನ್ನೂ ಬೇರ್ಪಡಿಸಲು ಸಾಧ್ಯವೇ? ಅಮೇರಿಕಾದಲ್ಲಿ ಈ ಭಾಗದಲ್ಲಿ ವಿಮರ್ಶೆ ಪರಾಮರ್ಶೆಗಳು ನಡೆಯುತ್ತಿವೆಯೆ? ಬರೆಯಿರಿ. ಈಚೆಗೆ ಡಿ.ಎಲ್.ಎನ್ ಕಂಡಿದ್ದೆ. ಮಲೆದೇಗುಲದ ವಿಷಯದಲ್ಲಿ ಒಂದೆರಡು ಮಾತನಾಡಿ ಹರ್ಷಗೊಳಿಸಿದರು. ದೇಶಿಕಾಚಾರ್ಯನಂಥ ನಿಷ್ಠರಿಗೂ ಅದು ಪ್ರಿಯವಾಗಿರುವುದು ಬಹಳ ಸಮಾಧಾನವಾಗಿದೆ. ಆರ್.ಎಲ್.ಎನ್. ಸಂಪೂರ್ಣವಾಗಿ ಅರ್ಥವಾಗಲಿಲ್ಲ ಎಂದರು. ವಕ್ರದೃಷ್ಟಿಯಲ್ಲಿ ನಾನು ಕಾಣುವ ವೈಚಿತ್ರ್ಯಗಳು ನಿಜವಾಗಿ ವೈಚಿತ್ರಗಳೇ.

ಅವುಗಳು ಪ್ರಶಂಸಿತವಾಗಿರುವುದೇ ಅತ್ಯಾಶ್ಚರ್ಯ. ಶಾಸ್ತ್ರಿ ಚಿದಂಬರಕ್ಕೆ ಈ ದಿನ ಹೊರಡುತ್ತಾನೆ. Oriental Confrence ಗಾಗಿ. ರಷ್ಯಾ ನಾಯಕರು ಬಂದು ಹೋದರು. ಅದರ ಫಲವಾಗಿ ಲಾಲ್‌ಬಾಗ್ ಮನೋಹರವಾದ ದೀಪೋತ್ಸವವನ್ನು ಪಡೆಯಿತು. ಕರ್ಪೂರ ಗಿಡದಂತಿರುವ ಉದ್ದನೆಯ ಮೊನಚೆಲೆಯ ೧೫೦ ಅಡಿಗಳ ಮರಗಳು, ಉದ್ದಕ್ಕೂ ಅವುಗಳು ರೇಪೆ ಕೊಡದಂತೆ ಬಣ್ಣಬಣ್ಣದ ಬೆಳಕನ್ನು ಹಾಕಿ ಆ ಅಂದ ಮತ್ತು ಸಾಹಸ ಜನರನ್ನು ಮರಳು ಮಾಡಿತು. ನಾನೂ ಭಲೆ ಎಂದೆ. ಅರೇಬಿಯಾ ದೊರೆ ಬಂದು ಹೋದ. ಅಲ್ಲಾ ಹೋ ಅಕ್ಬರ್ ಎಂಬ ಘೋಷಣೆ ಯಾವ ಉದ್ರೇಕಕ್ಕೂ ಎಡಗೊಡದೆ ಉಲ್ಲಾಸಕ್ಕೆ ಎಡೆಗೊಟ್ಟಿತು. ಇದೂ ಸಂತೋಷದ ಸಂಗತಿ. ಕರ್ಣಾಟಕವಾಗುವುದರಲ್ಲಿ ಅಡ್ಡಿತಡೆಗಳು ಕಾಣೆ, ಏನೋ ಜನವರಿಯಲ್ಲಿ ಮಂಡ್ಯದಲ್ಲಿ ಎರಡು ಕರ್ನಾಟಕರ ಕೂಗಿನ ಸಮ್ಮೇಳನವೇರ್ಪಡಲಿದೆಯಂತೆ. ಏನಾಗುತ್ತದೋ ನೋಡಬೇಕು. ಇಲ್ಲಿ ನನ್ನ ಕೆಲಸ ಯಥಾಪ್ರಕಾರವಾಗಿ ನಡೆಯುತ್ತಿದೆ. ಹತ್ತು ಹದಿನೈದು ದಿವಸಗಳ ಕಾಲ ಮೇಲುಕೋಟೆಗೆ ಹೋಗಬೇಕೆಂದಿದ್ದೇನೆ, ರಜ ದೊರೆತರೆ. ಆಕಾಶವಾಣಿಯವರು ಇನ್ನೊಂದು ೬೦ ನಿಮಿಷಗಳ ಗೀತರೂಪಕವನ್ನು ಕೇಳಿದ್ದಾರೆ. ಅದರಲ್ಲಿ ತೊಡಗಿರುವುದರಿಂದ ಮನಸ್ಸಿಗೆ ಎಷ್ಟೋ ಹರ್ಷವಾಗಿದೆ. ಹಂಸ ದಮಯಂತಿ ಎಂಬುದು. ಈಗ ತಾನೆ ಪ್ರಾರಂಭವಾಗಿ ಮುಂದೆ ಹೇಗೆ ಮುಗಿಯುತ್ತದೋ ಕಾಣೆ.... ನಿಮ್ಮ ಹುಟ್ಟಿದ ಹಬ್ಬಕ್ಕೆ ಶುಭಾಶಯವನ್ನು ಕಳಿಸಿದರೆ ಔಪಚಾರಿಕವೆಂದೆನಿಸುವುದಿಲ್ಲವಷ್ಟೆ. ನಿಜವಾಗಿ ನೀವು ಸ್ಮರಣೆಗೆ ಬಾರದ ದಿನ ಇಲ್ಲ. ಹಾಗೂ ಭಾಸನ ಈ ಶ್ಲೋಕ ಪದೇ ಪದೇ ನೆನಪಗೆ ಬರುತ್ತಿದೆ. "ವಿಭಾವಾನುವಶಾಭಾರ್ಯಾ ಸಮದುಃಖ ಸುಖೀಭವಾನ್." ಇನ್ನು ಕಾಗದವನ್ನು ಬೆಳಸದೆ ನಿಮ್ಮ ಉತ್ತರದ ನಿರೀಕ್ಷೆಯಲ್ಲಿರೋಣ.

* * *

ಪು.ತಿ. ನರಸಿಂಹಾಚಾರ್ — ಬೆಂಗಳೂರು, ೨೫-೨-೫೬

ಪ್ರಿಯ ಶ್ರೀಕಂಠಯ್ಯ

ನಿಮ್ಮ ಕಾಗದ ತಲುಪಿ ಪರಮ ಸಂತೋಷವಾಯಿತು. ನಿಮಗೆ ಬಿಡುವಿಲ್ಲವೆಂಬುದು ನನಗೆ ಗೊತ್ತು, ನೀವು ಇಂಗ್ಲೆಂಡಿನಲ್ಲಿರುವ ಸುದ್ದಿ ನಮಗಿಲ್ಲಿ ತಿಳಿದಿತ್ತು. ಶ್ರೀ ಕೇಶವನ್ ನಿಮ್ಮನ್ನು ಸಂಧಿಸಿದ್ದರಂತೆ. ....ಬೆಂಗಳೂರಿನಲ್ಲಿ ಹವಾಜಹಜ್ ನೆಲದಿಂದ ANM ಮತ್ತು DLN ಅವರಿಗೆ telephone ಮಾಡಿ ತಿಳಿಸಿದರು. ನೀವು ಬಹಳ ದಪ್ಪವಾಗಿಬಿಟ್ಟಿದ್ದೀರಂತೆ. ರಕ್ತ ಒತ್ತಡದ ಅಳುಕಿದೆಯೇನೋ ಎಂಬ ಸಂಶಯವಿದೆ ಎಂದರು. ಇದನ್ನು ಕೇಳಿದ ಕ್ಷಣ ನಾನು ಚಿಂತೆಗೀಡಾದೆ. ಚಿಂತೆಗವಕಾಶವಿಲ್ಲವೆಂದು ನೀವು ತಿಳಿಸುವವರೆಗೂ ಈ ಆತಂಕ ಒಂದು ಮೂಲೆಯಲ್ಲಿ ಇದ್ದೇ ಇದೆ. ಎಲ್ಲಿ ಹೋದರೂ ನಿಮಗೆ ಒಳ್ಳೊಳ್ಳೆಯ ಊಟ ಸಿಕ್ಕುತ್ತಿರುವುದು ಆಶ್ಚರ್ಯ. ವಿದೇಶಗಳಲ್ಲಿ ನೀವಿರುವಿರುವುದರಿಂದ ಅವು ಧಾರವಾಡದಂತೆಯೇ ಪರಿಚಿತ ಸ್ಥಳಗಳಂತೇ ನನಗೆ ತೋರುತ್ತಿವೆ. ಇದೂ ಆಶ್ಚರ್ಯ. ನೆಲವೆಲ್ಲ ಒಂದೇ ಎನಿಸುತ್ತದೆ. ನಿಮಗೂ ಹಾಗೆಯೇ ಎನಿಸುತ್ತದೆಯೇ? ಆ ಎಚ್ಚತ್ತ ಜನರ ಸಂಸರ್ಗದಲ್ಲಿ ಈ ಬಡದೇಶದ

ವಿಷಯದಲ್ಲಿ ತಾತ್ಸಾರ ಹುಟ್ಟಿಲ್ಲ ತಾನೆ. ನೀವು ಹಿಂತಿರುಗುವುದನ್ನೇ ನಿರೀಕ್ಷಿಸುತ್ತಿದ್ದೇನೆ. ಜಹಜಿನ ಪ್ರಯಾಣ ನೂತನಾನುಭವವನ್ನು ಕೊಡಬಹುದು. ನಿಮ್ಮ ಪುಸ್ತಕವನ್ನು ದಿನಚರಿಯ ರೂಪದಲ್ಲಿ ಬರೆಯುತ್ತೀರಾ? ಇಲ್ಲಿನ ಆಲಸ್ಯಕ್ಕೆ ಬಲಿ ಬಿದ್ದು ಈ ಉದ್ಯಮವನ್ನು ಮರೆಯಬೇಡಿ. ಜಹಜಿನಲ್ಲಿ ಹದಿನೈದು ದಿನಗಳು ಇರುತ್ತೀರಲ್ಲ. ಆಂದೋಲಿತ ರಾಗವಿದ್ದರೆ ಅಲ್ಲೇ ಪ್ರಾರಂಭಿಸಿ. ಒಂದು rough draft ಅನ್ನಾದರೂ ಸಿದ್ಧಗೊಳಿಸಿ.

'ಮಲೆದೇಗುಲ' ನಿಮ್ಮ ಬುದ್ಧಿ ಹೃದಯಗಳನ್ನು ಸ್ಪರ್ಶಿಸಿದ್ದು ನನಗೆ ಬಹಳ ಸಂತೋಷವನ್ನುಂಟು ಮಾಡಿತು. ಅದರ ಮೇಲಿನ ವ್ಯಾಮೋಹ ಇನ್ನು ನನ್ನನ್ನು ಬಿಟ್ಟಿತು. ಹೌದು ಮೇಲುಕೋಟೆಗೆ ಹೋಗಿದ್ದೆ. ಒಂದು ತಿಂಗಳೂ ಅಲ್ಲೇ ಇದ್ದೆ..... ಆದರೆ ಒಂದು ಪಂಕ್ತಿಯನ್ನು ಬರೆಯಲಿಲ್ಲ...... ಊರು ಕಳೆಗುಂದುತ್ತಿದೆ. ವ್ಯಾಮೋಹವೂ ಅಳಿಯುತ್ತಿರುವುದರಿಂದ ನಾನು ನಿಜವಾಗಿ ನೆಲೆಯಿಲ್ಲದವನಾಗಿದ್ದೇನೆ. ಇದು ವೃದ್ಧಾಪ್ಯದಲ್ಲಿ ಬರಬೇಕಾದ ಭಾವವಾಗಿರಕೂಡದು. ಆಗ ನೆಲೆ ಬೇಕು, ಮನೆ ಬೇಕು, ಒಲುಮೆ ಬೇಕು. ಅದಕ್ಕೇ.... ಅಂತೂ ವಿಚಿತ್ರವಾಗಿದೆ ಪರಿಸ್ಥಿತಿ. ನೀವು ಕಡಲಾಚೆಗೆ ಹೋದ ಮೇಲೆ 'ವಸಂತ ಚಂದನ' ಎಂಬ ಗೀತ ರೂಪಕವನ್ನು ಬರೆದೆ. (ಮರೆತೆ ಆಗ ನೀವು ಪೂನಾದಲ್ಲಿದ್ದಿರಲ್ಲವೇ?) ಈಗ ಹಂಸದಮಯಂತಿ ಎಂಬ ರೂಪಕವನ್ನು ಬರೆದು ದೊರೆಸ್ವಾಮಿ ಅಯ್ಯಂಗಾರ್ ಹತ್ತಿರ ಮೂರು ದಿನಕಳೆದು ಅದರ ಸಂಗೀತಕ್ಕೆ ಪ್ರಸ್ತಾರ ಹಾಕಿಸಿದೆ. ಇಂಥ ತಾಳ್ಮೆಯುಳ್ಳವನೂ, ವಿನೀತನೂ, ಶಕ್ತನಾದ ಸಂಗೀತಗಾರ ನನಗೆ ಸುಲಭನಾಗಿದ್ದರೆ, ಸಂಗೀತದ ವಿಷಯದಲ್ಲಿ (Musical ideas) ನನಗೆ ಯಾವುದು ತಾನೆ ಅಸಾಧ್ಯ ಎನ್ನಿಸಿತು – ನನ್ನ ಸಾಹಿತ್ಯಕ್ಕೆ ನೀವು ಸಿಕ್ಕಿದಂತೆ. ಆಕಾಶವಾಣಿಯ ಕಲಾವಿದರು ಇದರ ಸಂಗೀತವನ್ನು ಬಲು ಮೆಚ್ಚಿಕೊಂಡು ಉತ್ಸಾಹದಿಂದ practice ಮಾಡುತ್ತಿದ್ದಾರೆ. ಮಾರ್ಚಿ ೭ನೆಯ ತಾರೀಖು ರಾತ್ರಿ ೮ ರಿಂದ ೯ ರವರೆಗೆ ಪ್ರಸಾರ. ನೀವು ಕೇಳುವಂತಿಲ್ಲ. ವಸಂತಚಂದನ ಸಂಗೀತದೊಡನೆ ಅಚ್ಚಾಗುತ್ತಿದೆ. ನೀವು ಬರುವ ಹೊತ್ತಿಗೆ ನಿಮ್ಮ ಕೈಸೇರಬಹುದು. ಗೀತಗಳನ್ನು ಬರೆಯುವ ಚಟ ನನ್ನನ್ನು ಬಿಟ್ಟರೆ ನಾನೆಷ್ಟು ಸುಖಿಯಾಗಿರಬಲ್ಲೆ–ಆದರೆ ಆ ಹುಚ್ಚು ಮೆತ್ತಿಕೊಂಡಿದೆ ಏನು ಮಾಡಲಿ. ಪದ್ಯದ ಹುಚ್ಚು ಬಿಟ್ಟುಹೋಯಿತು. ಇಲ್ಲಿ ಯಥಾಪ್ರಕಾರ ನನ್ನ ಮನಸ್ಸುಪ್ತ. ಪರಿಷ್ಕರಣ ಅಚ್ಚೋದುವಿಕೆ ಅವಿರತವಾಗಿ ಸಾಗುತ್ತಿದೆ. ನನ್ನ ಬುದ್ಧಿ ಬಡವಾಗದಿರುವುದು ದೈವಕೃಪೆ. ANM ಪ್ರೇರಣೆಯ ಮೇರೆಗೆ Govt subvention ಕೊಡಲೆಂದು ರಸಸರಸ್ವತಿ ಇತ್ಯಾದಿಗಳನ್ನು ಕಳುಹಿಸಿದ್ದೇನೆ. ಮನಸ್ಸೇಕೋ ಕಾರ್ಯದಿಂದ ತೀರ ಖಿನ್ನವಾಗಿದೆ. ಯಾವುದೋ ಅಕಾರ್ಯ ಮಾಡಿದಂತೆ. ಆದರೆ ಸ್ನೇಹಿತರ ಮಾತನ್ನು ತೆಗೆದು ಹಾಕುವಂತಿಲ್ಲ. ಇನ್ನೂ ಅನೇಕ ತುಯ್ತಗಳು – ಹೀಗೆ. ಇದನ್ನು ನಿಮಗೆ ಹೇಳಿದರೆ ನೀವು ಅರ್ಥ ಮಾಡಿಕೊಳ್ಳುತ್ತೀರಿ ಎಂದು ಹೇಳಿದೆ ಅಷ್ಟೆ.

ದೇಶದ ರಾಜಕೀಯವೂ ಅಷ್ಟು ಚೆನ್ನಾಗಿಲ್ಲ. ಬೊಂಬಾಯಿಯನ್ನು ಮರಾಠಿಗರಿಗೆ ಕೊಡದೆ ಬಹಳ ಗೊಂದಲಕ್ಕಿಟ್ಟುಕೊಂಡಿದೆ. ಎರಡು, ಮೂರು ಅಲ್ಲ ನಾಲ್ಕು ಭಾಷೆಗಳ ಪ್ರಾಂತಗಳನ್ನು ಮಾಡಬೇಕಂತೆ! ಏನಿದು ಹುಚ್ಚು. ಏಕ ಭಾಷ ಪ್ರಾಂತದಿಂದ ಯಾರಿಗೆ ಭಯ–ಜನರನ್ನು ಕುರಿಯಂತೆ ಆಳಬೇಕೆಂಬುವರಿಗೆ ಮಾತ್ರ ಭಯ. ಅವರಿಗೆ ಯಾವ ಭಾಷೆಯೂ ಬೇಡ,

ಯುವ ದೇಶವೂ ಬೇಡ–ತಮ್ಮ ಹಿಡಿತ ಜನಗಳ ಮೇಲಿರಬೇಕು ತಮ್ಮ ಭೋಗಕ್ಕೆ–ರಾಜಕೀಯ ಹೋಗಿದೆ. ಇದರ ಬಿಸಿ ನಿಮಗೆ ಧಾರವಾಡದಲ್ಲಿ ತಗಲುದಿರುತ್ತದೆಯೇ. ಪ್ರೊಫೆಸರ್‌ಗಿರಿ ನಿಮಗೆ ಇಲ್ಲಿ ಹೇಗೆ ತಪ್ಪುತ್ತದೆ? ತಪ್ಪಿಸಬಲ್ಲವರಾರು? ಗೊರೂರು ಇಲ್ಲಿದ್ದಾರೆ. ನೀವು ಕಾಗದ ಬರೆಯಲಿಲ್ಲ ಎಂದರು..... ಶಾಸ್ತ್ರಿಯನ್ನು probation ಎಂದು ಮಾಡಿರುವುದರಿಂದ ಅವನ ತಾಪತ್ರಯ ತೀರಿಲ್ಲ. ಅಲ್ಲದೆ ಆತಂಕ ಸಂಚುಗಾರ ಕಿರುಕುಳಪಿದ್ದೇ ಇದೆ.

* * *

ತೀ.ನಂ.ಶ್ರೀಕಂಠಯ್ಯ ಫಿಲಡೆಲ್ಫಿಯ, ಡಿಸೆಂಬರ್ ೧೧, ೧೯೫೫

ಪ್ರಿಯ (ಎ.ಎನ್.) ಮೂರ್ತಿರಾವ್,

ಕೊನೆಗೂ ನೀವೇ ಗೆದ್ದಿರಿ! ನಾನು ಒಪ್ಪಿಕೊಂಡುಬಿಡುತ್ತೇನೆ. – "ಪ್ರಣಯ ಕುಪಿತಯೋಃ ಅಲೀಕಸುಪ್ತಯೋ........ ನಿಶ್ಚಲನಿರುದ್ಧ ನಿಶ್ವಾಸದತ್ತಕರ್ಣಯೋಃ ಕೋ ಮಲ್ಲಃ" (ಛಾಯಾ: ತಪ್ಪುಗಳೂ ಇರಬಹುದು) ಎಂಬ ಗಾಥೆ ನೆನಪಿಗೆ ಬಂತು; ಆದರೆ ಈ ಸಂದರ್ಭದಲ್ಲಿ, ಅಲ್ಲಿಯಂತೆ "draw"ಆಗಲಿಲ್ಲ! – ನಾನೇ ಮೊದಲು ಕಾಗದ ಬರೆದಿದ್ದೇನೆ. "But, aren't you mean?" –

ಈಗ ಒಂದು ತಿಂಗಳಿಂದಲೂ ಈ ಕಾಗದ ಬರೆಯುವ ಪ್ರಯತ್ನ. ಆದರೆ ಏನಾದರೂ ಅಡ್ಡಿ; ನನ್ನ ಆಲಸ್ಯವೇ ಮುಖ್ಯವಾದ ಅಡ್ಡಿ! ಅಂತೂ ಈ ಊರನ್ನ ಬಿಡುವುದರೊಳಗಾಗಿ ನಿಮಗೆ ಎರಡು ಪಂಕ್ತಿ ಬರೆಯಬೇಕೆಂದು ನಿರ್ಧಾರಮಾಡಿ, ಹಠ ತೊಟ್ಟು ಈ ಬೆಳಗ್ಗೆ ಕುಳಿತಿದ್ದೇನೆ. ಇಲ್ಲಿ ನೋಡಿದ ಕೇಳಿದ ಸಂಗತಿಗಳಲ್ಲಿ ಸ್ವಾರಸ್ಯವುಳ್ಳವು ಸಹಜವಾಗಿ ಹಲವು ಇವೆ. ಆಗೊಂದು ಈಗೊಂದು ಆಲೋಚನೆ ಸುಳಿಯುತ್ತದೆ. ಇಲ್ಲಿ ಈಗ ಎರಡು ದಿನದ ಹಿಂದೆ ಉದುರಿದ ಹಿಮದ ಎಸಳೆಗಳಂತೆ ಮನಸ್ಸಿನ ಕಣ್ಣಮುಂದೆ ಅಲ್ಲೊಂದು ಇಲ್ಲೊಂದು ಭಾವ ತೇಲುತ್ತದೆ; ಅವುಗಳನ್ನು ಹಿಡಿದಿರಿಸಬೇಕಾದರೆ, ಕೈಯಲ್ಲಿ ಸಂತತವಾಗಿ ಲೇಖನಿ ಕಾಗದ ಇರಬೇಕು. "ನೆನಪು" ಇವಕ್ಕೆ ಭದ್ರವಾದ ಕೋಶವಾಗಿರುವ ಕಾಲ– ವಯಸ್ಸು– ಮೀರಿ ಹೋಯಿತು. ಸಂಜೆಯ ಕತ್ತಲೆಯಂತೆ ಮರೆವು ಕವಿದುಕೊಂಡು ಬರುತ್ತಿದೆ. ಹಿಂದಿರುಗಿ ಆ ಭೂತವನ್ನು ನೋಡಲು ಭಯವಾಗುತ್ತದೆ. ಅದರ ಬಾಯಿಂದ ಎಷ್ಟು ತುತ್ತುಗಳನ್ನು ಕಸಿದುಕೊಳ್ಳಲು ಸಾಧ್ಯವಾಗುವುದೋ! ಅದು ಆದಷ್ಟು ನನ್ನ ಅದೃಷ್ಟ ಎನ್ನಬೇಕು. ಅಂತೂ ಹೊಳೆದ ಆಲೋಚನೆಗಳು, ಭಾವನೆಗಳು ಎಲ್ಲವೂ ಉಳಿಯುತ್ತವೆ ಎಂಬ ನಂಬಿಕೆ ಬಲು ದೂರವಾಯಿತು – ಹೀಗಾಗಿ, ಕಾಗದ ಬರೆಯಲು ಕುಳಿತುಕೊಂಡರೆ ಮುಖ್ಯವಾದ ಅಂಶಗಳೂ ಬೇಗ ನೆನಪಾಗುವುದಿಲ್ಲ. ಈ "ಪಾತಾಳಗರಡಿ" ತನ್ನ ಹದವನ್ನು ಕಳೆದು ಕೊಂಡಿತು!

ಮಾತು ಎಲ್ಲಿಗೋ ಹೋಯಿತು! – ಇಲ್ಲಿಯ ಅನುಭವಗಳನ್ನು ಕಾಗದದಲ್ಲಿ ಒಕ್ಕಣೆ ಮಾಡುವುದಕ್ಕಿಂತ ಬಾಯಲ್ಲಿ ಹೇಳುವುದು ಸುಲಭ. ಆಗಲೇ ಮನಸ್ಸು ಊರಿಗೆ ಹಿಂದಿರುಗುವ ವೇಳೆಯನ್ನು ಎದುರು ನೋಡುತ್ತಿದೆ. ವಾರಗಳನ್ನು, ದಿನಗಳನ್ನು ಎಣಿಸುತ್ತಿದೆ. ನನ್ನ ಈಗಿನ

ಲೆಕ್ಕದಂತೆ, ಜನವರಿ ಮೊದಲ ವಾರದ ಕೊನೆಯಲ್ಲಿ ಈ ನಗರವನ್ನು ಬಿಟ್ಟು ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಹೋಗುತ್ತೇನೆ. ಅಲ್ಲಿ ಎರಡುವಾರ; ಯೇಲ್ ವಿಶ್ವವಿದ್ಯಾಲಯದಲ್ಲಿ ಒಂದುವಾರ. ಬಳಿಕ ಫೆಬ್ರುವರಿ ತಿಂಗಳೆಲ್ಲ ಇಂಗ್ಲೆಂಡ್, ಆ ಮುಂದೆ ಫ್ರಾನ್ಸ್, ಹಾಲೆಂಡ್, ಸ್ವಿಟ್ಸರ್‌ಲೆಂಡ್, ಇಟಲಿ – ಇವುಗಳ ಮೂಲಕ ಭಾರತಕ್ಕೆ ಪ್ರಯಾಣ. ಏಪ್ರಿಲ್ ಮಧ್ಯಕ್ಕೆ ಊರನ್ನು ಸೇರಬೇಕೆಂದು ಉದ್ದೇಶ. (ವಿವರಗಳು ಇನ್ನೂ ನಿರ್ಧಾರವಾಗಬೇಕು.)

ಕಳೆದ ತಿಂಗಳು ನಾನು ಹಾರ್ವರ್ಡ್‌ವಿಶ್ವವಿದ್ಯಾಲಯಕ್ಕೆ ಎರಡು ದಿನದ ಮಟ್ಟಿಗೆ ಹೋಗಿದ್ದೆ. ಅಲ್ಲಿಯ Widener Library ನನ್ನನ್ನು ಬೆರಗುಪಡಿಸಿತು. ಇಲ್ಲಿ ನಾನು ನೋಡಿರುವ ವಿಶ್ವವಿದ್ಯಾಲಯಗಳ ಪುಸ್ತಕ ಭಂಡಾರಗಳಲ್ಲೆಲ್ಲ ಅದು ಅತ್ಯಂತ ಭವ್ಯ, ಸುಂದರ. ಮುವತ್ತು ಲಕ್ಷ ಪುಸ್ತಕಗಳು, ಐದಾರುಸಾವಿರ ಪತ್ರಿಕೆಗಳು, ದೊಡ್ಡದೊಡ್ಡ ವಾಚನಾಲಯಗಳು, ನೂರಾರು ಮಂದಿ ಸಂಶೋಧಕರು ಪ್ರತ್ಯೇಕವಾಗಿ ಕುಳಿತು ವ್ಯಾಸಂಗ ಮಾಡಲು ಅನುಕೂಲವಾದ "Booth" ಗಳು!– ಅಮೆರಿಕ "ಬೃಹತ್ತಿ"ನ ದೇಶ. (Country of big things.) ಆದರೆ "ಬೃಹತ್ತು" ಒಂದಕ್ಕೇ ಬೆರಗಾಗುವ ವಯಸ್ಸು ನನಗೆ ಮೀರಿತು. Empire State Building ಮುಂದೆ ನಿಂತು, ಕತ್ತು ಮುರಿಯುವಂತೆ ಕಣ್ಣೆತ್ತಿ ನೋಡಿದಾಗಲೂ ಚಿತ್ತ ಕ್ಷಣಕಾಲಮಾತ್ರ ಭ್ರಮೆಗೊಳ್ಳುತ್ತದೆ; ಆಮೇಲೆ ಮುಂದುವರಿಯುತ್ತದೆ. ಆದರೆ Widener Library, ವಾಷಿಂಗ್‌ಟನ್ನಿನ Library of Congress ಇಂಥ ಕಡೆ "ಬೃಹತ್ತು" "ಮಹತ್ತೂ" ಆಗಿದೆ ಯೆಂದು ನನಗೆ ಅನ್ನಿಸುತ್ತದೆ. ಅಂತೂ ಅಮೆರಿಕದ ವಿಷಯದಲ್ಲಿ ನನಗೆ ಗೌರವವೂ ಹುಟ್ಟಿದ್ದು Widener Library ಯನ್ನು ನೋಡಿದಾಗ. ಶ್ರೀ ಶಾರದಾ ಪ್ರಸಾದ್ ಈಗ ಹಾರ್ವರ್ಡಿ ನಲ್ಲಿದ್ದಾರೆ. ಈ ಪುಸ್ತಕ ಭಂಡಾರದ ವಿಷಯವಾಗಿ ಒಂದೆರಡು ಪ್ರಶಂಸೆಯ ವಾಕ್ಯಗಳನ್ನು ಅವರು ನನಗೆ ಮೊದಲೇ ಬರೆದಿದ್ದರು. ಅದರ ಸತ್ಯವನ್ನು ನಾನೂ ಮನಗಂಡೆ. ನಿಜವಾಗಿಯೂ ವ್ಯಾಸಂಗ ಮಾಡಬೇಕೆನ್ನುವವನಿಗೆ ಈ ದೇಶದ ಕೆಲವು ಪುಸ್ತಕ ಭಂಡಾರಗಳು ಶಾರದಾ ಮಂದಿರಗಳೇ ಸರಿ.

ಬೃಹತ್ತು ಮಹತ್ತಾಗುವ ಇನ್ನೊಂದು ಸನ್ನಿವೇಶ ಅಮೆರಿಕದ "Grand Canyon". ಯೋಸೇಮಿಟಿಗೆ ಹೃದಯವನ್ನು ತೆತ್ತು, ಲಾಸ್ ಏನ್‌ಜೆಲಿಸಿನಲ್ಲಿ ಅದಕ್ಕೆ ಪ್ರತಿಯಾಗಿ Smog ಕುಡಿದು (=Smoke+fog), ಬಿಸಿಲಿನ ತಾಪದಲ್ಲಿ ಬೆವರಿ ಬೆಂಡಾಗಿ, ಇನ್ನೂ ಹಲವು ರೀತಿಯ ಕ್ಲೇಶಪಟ್ಟು ಗ್ರ್ಯಾಂಡ್‌ಕ್ಯಾನನ್ನಿಗೆ ನಾನು ಬಂದೆ. ವರ್ಣನೆಗಳನ್ನು ಓದಿದ್ದೆ. "It beggars description", ''It is unbelievable'' ''It is stupendous''-ಇಂಥ ವಾಕ್ಯಗಳನ್ನೆಲ್ಲ ಕೇಳಿದ್ದೆ–ಆ ಜಾಗದಲ್ಲಿ ನಿಂತಾಗ, ಅದರ ಅಂಚಿನ ಅಂಶಮಾತ್ರವನ್ನು ಬಸ್ಸಿನಲ್ಲಿ ಕುಳಿತು ದಿನವೆಲ್ಲ ಸುತ್ತಿದಾಗ, ಮೇಲಿನಿಂದ ಒಂದು ಮೈಲಿ ಕೆಳಗೆ ಬಗ್ಗಿ ನೋಡಿ ವೇಗವಾದ ನದಿ ಕೆಸರಿನ ಮುದ್ದೆಯಂತೆ ಕುಂಟುವಂತಿದ್ದುದನ್ನು ಕಂಡಾಗ, ಬಿಸಿಲು ಮಾಲಿದಂತೆಲ್ಲ ಆ ಕಣಿವೆಯೊಳಗಿನ ದೇವಸ್ಥಾನದ ಆಕಾರದ ಬೆಟ್ಟಗಳ ಬಣ್ಣ ಬಣ್ಣಗಳನ್ನು ಬದಲಾಯಿಸಿ "ನವೋನವ"ವಾಗುವುದನ್ನು ನೋಡಿದಾಗ, – ಇದು ಸೃಷ್ಟಿಯ ಅದ್ಭುತಗಳಲ್ಲಿ ಒಂದು, ಜನ ಹೇಳುವುದೆಲ್ಲ ನಿಜ ಎನ್ನಿಸಿತು. ಪ್ರಪಂಚದಲ್ಲಿ ಇದೇ ರೀತಿಯ ಇನ್ನೊಂದು ದೃಶ್ಯ ಇದೆಯೇ

ಹೇಗೆ ಎಂಬುದು ಸಂದೇಹ! ಒಂದು ಸಣ್ಣ ಕಥೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ Texas ಅತ್ಯಂತ ವಿಸ್ತಾರವಾದ ಸಂಸ್ಥಾನ, ಅಲ್ಲಿಯ ಜನರು ದೊಡ್ಡ ಕೆಲಸಗಳನ್ನು ಮಾಡುತ್ತಾರೆ. ಎಲ್ಲ ದೊಡ್ಡದೂ ತಮ್ಮಲ್ಲಿದೆ ಎಂದು ಜಂಬ ಕೊಚ್ಚುತ್ತಾರೆ. ಅಂತೂ ಈ ದೇಶದ ಮಿಕ್ಕ ಮಂದಿ Texanರನ್ನು ಇದಕ್ಕೂ ಹಾಸ್ಯಮಾಡುತ್ತಾರೆ; ಕಥೆ ಕಟ್ಟುತ್ತಾರೆ; Scotchರ ಜಿಪುಣ ತನವನ್ನು ಹಾಸ್ಯ ಮಾಡುವುದಿಲ್ಲದೆ, ಹಾಗೆ! – ನಮ್ಮ ಪ್ರೇಕ್ಷಕರ ಗುಂಪಿಗೆ ಗ್ರ್ಯಾಂಡ್ ಕ್ಯಾನ್ಯನ್ ಪರಿಚಯ ಮಾಡಿಕೊಡಲು ನಿಂತಿದ್ದ ಅಧಿಕಾರಿ ಒಂದು ಕಥೆ ಹೇಳಿದ. ಈ ದೃಶ್ಯವನ್ನು ನೋಡಲು ಬಂದಿದ್ದವರಲ್ಲಿ ಒಬ್ಬ ಟೆಕ್ಸನ್ ಇದ್ದನಂತೆ. ಆತನನ್ನು ಸಹಜವಾಗಿ ಕೇಳಿದರು; "ನಿಮ್ಮ ಸಂಸ್ಥಾನದಲ್ಲಿ ಇಂಥ ಅಗಾಧ ಪ್ರಮಾಣದ ಕಣಿವೆ ಇದೆಯೆ?" (Grand Canyon Arizonaದಲ್ಲಿದೆ) ಆ ಟೆಕ್ಸನ್ ಅರ್ಧಕ್ಷಣ ಸುಮ್ಮನಿದ್ದು "ಇಲ್ಲ; ಆದರೆ ಇಂಥದನ್ನು ಅಗೆದು ರಚಿಸುವ ಸಲಕರಣೆಗಳು ನಮ್ಮಲ್ಲಿವೆ" ಎಂದು ಉತ್ತರ ಕೊಟ್ಟನಂತೆ. (ಗ್ರ್ಯಾಂಡ್ ಕ್ಯಾನ್ಯನ್ನಿನ ದಕ್ಷಿಣದ ಅಂಚಿನಿಂದ ಉತ್ತರದ ಅಂಚಿಗೆ ನೇರವಾಗಿ ಹಾರಲು ಎಂಬತ್ತು ಮೈಲಿ, ಸುತ್ತಳತೆ ಇನ್ನೂರೆಪ್ಪತ್ತುಮೈಲಿ; ಅಂಕೆಗಳು ಸ್ವಲ್ಪ ತಪ್ಪಿರಬಹುದು!)

ಮಹತ್ತಿನಿಂದ ದಿನದಿನದ ಜಗತ್ತಿಗೆ ಇಳಿಯೋಣ. ಇಲ್ಲಿ ನನ್ನ ಅಭ್ಯಾಸ ತಕ್ಕಮಟ್ಟಿಗೆ ನಡೆಯುತ್ತಿದೆ. ಯಾವ ಪರೀಕ್ಷೆಗೂ ಓದಬೇಕಾಗಿಲ್ಲ! ಅದು ದೊಡ್ಡ ಪುಣ್ಯ. ಉಪನ್ಯಾಸಗಳನ್ನು ಕೇಳುತ್ತೇನೆ. ಇಷ್ಟಬಂದ ಪುಸ್ತಕ, ಲೇಖನ ಇವನ್ನು ಓದುತ್ತೇನೆ. ಒಂದೆರಡು ಚಿಕ್ಕ ಶೋಧನೆಗಳನ್ನು ನಡೆಸುತ್ತೇನೆ. ಆಗಾಗ ಬೇರೆ ಊರುಗಳಿಗೆ ಹೋಗಿಬರುತ್ತೇನೆ – ಆದರೆ ನನಗೆ ಇಲ್ಲಿ ಜೊತೆ ಇಲ್ಲ. ಒಂಟಿತನದ ಭಾವನೆ ಪ್ರಬಲವಾಗಿಯೇ ಇದೆ. – ವಯಸ್ಸು ಬೆಳದ ಮೇಲೆ ಹೀಗೆ ತಿಂಗಳುಗಟ್ಟಳೆ ಸ್ವದೇಶವನ್ನು ಸ್ವಕೀಯರನ್ನು ಬಿಟ್ಟು ಇರುವುದು ಕಷ್ಟ. ಆದರೆ ಇಲ್ಲಿಗೆ ನಾನು ಬಂದದ್ದು ನನ್ನ ತಿಳಿವಳಿಕೆಯ ದೃಷ್ಟಿಯಿಂದ ತುಂಬ ಫಲಕಾರಿಯಾಯಿತು.

ಇಲ್ಲಿಯ ವೃತ್ತಪತ್ರಿಕೆಗಳ ವಿಷಯ ನಿಮಗೆ ಗೊತ್ತಿದೆ. "Sensation" ಅವುಗಳ ಮುಖ್ಯವಸ್ತು. ಪರದೇಶಗಳ ವಿಚಾರ ಅವುಗಳಲ್ಲಿ ಬರುವುದು ಬಲು ಕಡಿಮೆ ('New York Times' 'Christian Science Monitor' ಇವು ಇದಕ್ಕೆ ಅಪವಾದಗಳು.) ಈಚೆಗೆ ಭಾರತ ಇಲ್ಲಿಯ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿತು. ಏಕೆ ಎಂಬುದು ನಿಮಗೆ ಗೊತ್ತೇ ಇದೆ. ರಷ್ಯದ ಮುಖಂಡರ ಭೇಟಿಯ ವಿಚಾರವಾಗಿ ಪತ್ರಿಕೆಗಳಲ್ಲಿ ಟೀಕೆಗಳೂ ಬಂದವು.

ಭಾರತದ ರಾಜ್ಯ ಪುನರ್ರಚನೆಯ ವ್ಯವಸ್ಥೆ ಕೊನೆಯ ಘಟ್ಟಕ್ಕೆ ಬರುತ್ತಿದೆಯಲ್ಲವೆ? ಧೇಬರ್ ಸಮಿತಿಯೂ ಕರ್ನಾ(ರ್ಣಾ)ಟಕ ರಾಜ್ಯವನ್ನು ಒಪ್ಪಿತೆಂದು ಪತ್ರಿಕೆಯಲ್ಲಿ ಓದಿದೆ. (ಇಲ್ಲಿಯ South Asia Studies ಶಾಖೆಗೆ ಭಾರತ, ಪಾಕಿಸ್ತಾನ, ಸಿಂಹಳ, ಬರ್ಮ ಇತ್ಯಾದಿಗಳ ಅನೇಕ ಪತ್ರಿಕೆಗಳು ಬರುತ್ತವೆ. Hindu, Hindustan Times, Statesman - ಇವುಗಳ ವಾರಸಂಚಿಕೆಗಳು–ವಿಮಾನ ಟಪಾಲಿನ–ಮುದ್ರಣ ಬರುತ್ತವೆ. ಅವುಗಳಿಂದ ಭಾರತದ ಕೆಲವು ಸಂಗತಿಗಳು ಗೊತ್ತಾಗುತ್ತವೆ.) ಮೈಸೂರಿನಲ್ಲಿ ದೊಡ್ಡ ಕೋಲಾಹಲ ಎದ್ದಿರಬೇಕಲ್ಲವೆ? – ಮುಂದಿನ ಪರಿಣಾಮಗಳು ಮೈಸೂರಿನಲ್ಲಿ, ಉತ್ತರ ಕರ್ನಾಟಕದಲ್ಲಿ ಹೈದರಾಬಾದಿನಲ್ಲಿ ಹೇಗೆ

ಹೇಗೆ! ಬಳ್ಳಾರಿ ನಗರ, ಹಂಪೆ – ಇವನ್ನು ಕರ್ಣಾಟಕದಲ್ಲಿ ಉಳಿಸಿಕೊಳ್ಳಲು ಪ್ರಯತ್ನ ಏನಾದರೂ ನಡೆದಿದೆಯೆ? – ಎಲ್ಲ ವಿಚಾರಕ್ಕೂ ಬರೆಯಿರಿ.

ಪರಿಷತ್ತಿನ ಸುದ್ದಿ ಏನು? ಡಿ.ಎಲ್. ಈಚೆಗೆ ಕಾಗದ ಬರೆದಿದ್ದರು. ಕೋಶದ ಕೆಲಸ ಮುಂದೆ ಸಾಗುತ್ತಿದೆಯೆಂದು ತಿಳಿದು ಸಂತೋಷವಾಯಿತು. ನಿಮ್ಮ ಭೇಟಿ "ಅಪರೂಪ"ವೆಂದೂ ಬರೆದಿದ್ದರು. ಅದೇಕೆ! ಈಗ ನೀವು ಏನು ಮಾಡುತ್ತಿದ್ದೀರಿ? ಮುಂದಿನ ಆಲೋಚನೆ ಏನು? – ಇದನ್ನೆಲ್ಲ ತಿಳಿಸಿ. ನಿಮಗೆ ಮೊಮ್ಮಗ ಹುಟ್ಟಿದನೆಂದು ಡಿ.ಎಲ್. ಕಾಗದದಿಂದ ತಿಳಿದು ಸಂತೋಷವಾಯಿತು. ಅಭಿನಂದನೆಗಳು, ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ.

ಶ್ರೀ ವಿ.ಸೀ. ಈಗ ಏನು ಮಾಡುತ್ತಿದ್ದಾರೆ!

ಡಾ॥ ಗೊವಿಂದ ಸ್ವಾಮಿ ಅವರಿಗೆ ನನ್ನ ನೆನಪು ಕೊಡಿ, ನಮಸ್ಕಾರ ತಿಳಿಸಿ. ಅವರಿಗೆ ಪ್ರತ್ಯೇಕವಾಗಿ ಈ ದೇಶವನ್ನು ಬಿಡುವುದರೊಳಗೆ ಬರೆಯುತ್ತೇನೆ.

ನಿಮ್ಮ ಉತ್ತರದ ನಿರೀಕ್ಷೆಯಲ್ಲೇ ಇದ್ದೇನೆ. ಕೂಡಲೆ ಬರೆಯಿರಿ, ಇಲ್ಲವಾದರೆ ನಿಮ್ಮ ಕಾಗದ ನನ್ನ ಬೆನ್ನು ಹಿಡಿದು ಅಲೆಯಬೇಕಾದೀತು.

ವಿ.ಸೂ. ಶ್ರೀ ಗಿಲ್‌ಪ್ಯಾಟ್ರಿಕ್ ಜನವರಿಯಲ್ಲಿ ಭಾರತಕ್ಕೆ ಬರುತ್ತಾರೆ–"ಹೋಗುತ್ತಾರೆ" ಎನ್ನಬೇಕಾಗಿತ್ತಲ್ಲವೆ! ಬೆಂಗಳೂರಿಗೂ ಬರಬಹುದು.

* * *

ಜೂರಿಕ್, ಮಾರ್ಚಿ ೧೫, ೧೯೫೬

ಪ್ರಿಯ ಮೂರ್ತಿರಾವ್,

ನಿಮ್ಮ ಕಾಗದ ಫಿಲಡೆಲ್ಫಿಯದಿಂದ ನನ್ನ ಬೆನ್ನು ಹತ್ತಿ ಬಂದು ಅಮೆರಿಕದ ಕೇಂಬ್ರಿಜ್ಜಿನಲ್ಲಿಯೇ ನನ್ನ ಕೈ ಸೇರಿತು – ಎರಡು ತಿಂಗಳ ಹಿಂದೆ! ಅಂದಿನಿಂದಲೂ ಉತ್ತರ ಬರೆಯಬೇಕೆಂಬ ಉದ್ದೇಶ, ಕೆಲವು ವಾರಗಳ ಕೆಳಗಿನಿಂದ ಸಂಕಲ್ಪ, ಕೆಲವು ದಿನಗಳಿಂದ ಪ್ರಯತ್ನ! ಅಟ್ಲಾಂಟಿಕ್ ಮೇಲೆ ಹಾರಿ ಬಂದಾಯಿತು, ಬ್ರಿಟನ್ನಿನಲ್ಲಿ, ಮುಖ್ಯವಾಗಿ ಲಂಡನ್ನಿನಲ್ಲಿ ಕೊರೆತದ ವಾರಗಳನ್ನು ಕಳೆದಾಯಿತು, ಹಾಲೆಂಡ್, ಫ್ರಾನ್ಸ್ (ಪ್ಯಾರಿಸ್), ಜಿನಿವ, ಎಲ್ಲ ನೋಡಿ ಆಯಿತು. ಸ್ವಿಟ್ಸರ್‌ಲೆಂಡನ್ನು ಬಿಡುವ ಹಿಂದಿನ ರಾತ್ರಿ ಇದನ್ನು ಬರೆಯುತ್ತಿದ್ದೇನೆ. ಬಹುಶಃ ಇಟಲಿಯಲ್ಲಿ ವೆನಿಸ್ ನಗರದಲ್ಲಿ ಟಪಾಲಿಗೆ ಹಾಕಬೇಕೋ ಏನೋ. ಮುಕ್ಕಾಲು ಸ್ವಿಸ್ ಫ್ರಾಂಕ್ ಬದಲು ನೂರಾರು ಲೀರಗಳ ಸ್ಟಾಂಪನ್ನು ಅಂಟಿಸಬೇಕೋ. ಏನೋ!

ಈ ನಡುವೆ ನನ್ನ ವೃತ್ತಾಂತ ನಿಮಗೆ ತಿಳಿಯದೆ ಇಲ್ಲ. ಹಿಂದೊಮ್ಮೆ, ಮೂರು ತಿಂಗಳ ಕೆಳಗೆ (?) ಧಾರವಾಡಕ್ಕೆ ಹೋಗಿದ್ದಾಗ ನಮ್ಮ ಮನೆಯ ಕಡೆ ಹೋಗಲು ಅವಕಾಶ ಮಾಡಿಕೊಳ್ಳದೆ ಹಿಂದಿರುಗಿದ್ದಿರಿ. ಕಳೆದವಾರ ಅಲ್ಲಿಗೆ ಮತ್ತೆ ಹೋಗಿದ್ದಾಗ, ಬಹುಶಃ ಆ ತಪ್ಪನ್ನು ಪುನರಾವೃತ್ತಿ

ಮಾಡಿರಲಾರಿರಿ; ಆಗ ಹಿಂದಿನ ಬಾರಿ ಬರಲಿಲ್ಲವೆಂದು ನನ್ನ ಹೆಂಡತಿಯ ಕೈಯಲ್ಲಿ ಬಹುಶಃ ಹಂಗಣಿಯ ಮಾತನ್ನು ಕೇಳಿರಬೇಕು. ಅಥವಾ ಈ ಬಾರಿಯೂ ಹೋಗಲೇ ಇಲ್ಲವೋ. ಅದರ ವರದಿಗಾಗಿ ಇನ್ನು ಒಂದು ವಾರವಾದರೂ ನಾನು ಕಾದಿರಬೇಕು. – ಈ ವಿಷಯ ಹಾಗಿರಲಿ. ಕೇಶವನ್ ಬೆಂಗಳೂರಿನ ವಿಮಾನದ "ನಿಲ್ದಾಣ"ದಿಂದ ಫೋನ್ ಮೂಲಕ ನನ್ನ ವಿಷಯವಾಗಿ ಅತಿರೇಕದ ಸುದ್ದಿಗಳನ್ನು ಹರಡಿದ್ದಾನಲ್ಲವೆ. ಈಚೆಗೆ ಬಹುಶಃ ಈ ಕಾಗದವನ್ನು ನೀವು ನೋಡುತ್ತಿರುವಾಗಲೆ ಕಸ್ತೂರಿರಂಗಾಚಾರ್ ನಾಲ್ಕಾರು ದಿನ ಲಂಡನ್ನಿನಲ್ಲಿ ಪ್ಯಾರಿಸ್ಸಿನಲ್ಲಿ ನಾವು ಜೊತೆಗೂಡಿ ಕಳೆದ ದಿನಗಳ ಸಮಾಚಾರವನ್ನು ನಿಮಗೆ ಹೇಳಿರಬೇಕು. ಅಂತೂ ಸಾವಿರಾರು ಮೈಲಿಗಳ ಅಂತರ ಇನ್ನೂ ಉಳಿದಿದ್ದರೂ ಮನೆಯ, ಮಿತ್ರರ ಸಂಪರ್ಕ ತಪ್ಪಿದಂತೇನೂ ಆಗಿಲ್ಲ.

ಈಚೆಗೆ ನಾನು ನೋಡಿದ ನೋಟಗಳ ವಿಷಯವಾಗಿ ಹೆಚ್ಚಾಗಿ ಏನನ್ನೂ ಈಗ ಬರೆಯಲಾರೆ. ಅದಕ್ಕೆ ಮುಖ್ಯವಾಗಿ ವ್ಯವಧಾನವಿಲ್ಲ. "ನಾಯಿಗೆ ಕೆಲಸವಿಲ್ಲ, ನಿಲ್ಲುವುದಕ್ಕೆ ಹೊತ್ತಿಲ್ಲ" ಎಂಬ ಗಾದೆಯನ್ನು ನಾನೇ ಮೊದಲು ಹೇಳಿಕೊಂಡುಬಿಡುತ್ತೇನೆ. ಆದರೆ ಸ್ವಿಟ್ಸರ್‌ಲೆಂಡಿನಲ್ಲಿ ನಾನು ಈಗ ಇರುವುದರಿಂದ ಅದರ ಸೊಗಸನ್ನು ಕುರಿತು ಎರಡು ಮಾತನ್ನು ಬರೆಯದೆ ಇರಲಾರೆ. ಇದು ಬೆಟ್ಟಗಳ, ಸರೋವರಗಳ ದೇಶ ಎಂದು ಭೂ ವಿವರಣೆಯಲ್ಲಿ ಓದಿದ್ದು ನಿಮಗೆ ನೆನಪಿರಬಹುದು. ಅದು ಅಕ್ಷರಶಃ ನಿಜ.

(ಇಲ್ಲಿ ಮುಂದೆ ತೀ.ನಂ.ಶ್ರೀಯವರು ತಾವು ಸ್ವಿಟ್ಸರ್‌ಲೆಂಡಿನಲ್ಲಿ ನೋಡಿದ "ಯುಂಗ್ ಫ್ರೌ" ವರ್ಣನೆಯನ್ನು ಕೊಟ್ಟಿದ್ದಾರೆ. ಇದರ ವಿವರಗಳು ಅವರ "ಹಿಮದರ್ಶನ" ಪ್ರಬಂಧದಲ್ಲಿ ಸೇರಿದೆ)

......ಅಂತೂ, ಹಿಮದ ನೋಟದ ನನ್ನ ಕಣ್ಣಿನ ಬರ ಇಂಗಿತು ಎನ್ನಬಹುದು, ಬಿಸಿಲು ಕನ್ನಡಕವನ್ನು ಆಗ ಇನ್ನೂ ಕೊಂಡಿರಲಿಲ್ಲ; ಆದಕಾರಣ ಹಿಮದ ಹೊಳಪನ್ನು ನನ್ನ ಜೊತೆಯ ಯಾತ್ರಿಕರಿಗಿಂತ ಹೆಚ್ಚಾಗಿಯೇ ನಾನು ಅನುಭವಿಸಿದೆ.

ನನ್ನ ಪ್ರವಾಸದ ವೇಳಾಪಟ್ಟಿಯಂತೆ ಆ ಔನ್ನತ್ಯದಲ್ಲಿ ಹೆಚ್ಚು ಹೊತ್ತು ನಾನು ಇರುವ ಹಾಗಿರಲಿಲ್ಲ. ಬೆಟ್ಟ ಇಳಿದು ಇಂಟರ್‌ಲಾಕನ್‌ನಲ್ಲಿ ಬೇರೊಂದು ರೈಲು ಹತ್ತಿ ಅದೇ ರಾತ್ರಿ (ನಿನ್ನೆ) ಸೂರಿಕ್‌ಗೆ ಬಂದೆ. ಇಲ್ಲಿಯೂ ದೊಡ್ಡ ಸರೋವರವಿದೆ, ಜೊತೆಗೆ ದೊಡ್ಡ ಅಂಗಡಿಗಳಿವೆ, ಹೋಟಲುಗಳಿವೆ – ಹಣ ವೆಚ್ಚವಾಗುವುದಕ್ಕೆ ಅನುಕೂಲವಾದ ಸ್ಥಳ! ನನ್ನ ಪರಿಮಿತವಾದ "ಹಮ್ಮಿಣಿ"ಯಿಂದಲೂ ಡಾಲರುಗಳು ಉದುರಿಹೋದುವು.

ನಾನು ನೇಪಲ್ಸ್‌ನಲ್ಲಿ ಮಾರ್ಚಿ ೩೧ಕ್ಕೆ ಹಡಗು ಹತ್ತಬೇಕು. ಏಪ್ರಿಲ್ ೧೩ಕ್ಕೆ ಬೊಂಬಾಯಿ. ೧೫ಕ್ಕೆ ಧಾರವಾಡ ಸೇರುವ ನಿರೀಕ್ಷೆ, ಪ್ರತೀಕ್ಷೆ.

ನಿಮ್ಮ ಹೊಸ ಹುದ್ದೆಗಾಗಿ ನಿಮ್ಮನ್ನು "ಔಪಚಾರಿಕ"ವಾಗಿ ನಾನು ಇದುವರೆಗೆ ಅಭಿನಂದಿಸಲಿಲ್ಲ. ಅದನ್ನು ನೀವು ತಪ್ಪಾಗಿ ಭಾವಿಸಿಲ್ಲವಷ್ಟೆ–ಸಂಸ್ಕೃತಿ ಪ್ರಸಾರದ ಕಾಲಿನಲ್ಲಿ

ನೀವು ತುಂಬ ಓಡಾಡುತ್ತಿರಬೇಕು. ಆದರೂ, ಸಾಧ್ಯವಾದರೆ ರೋಮ್ ಅಥವಾ ನೇಪಲ್ಸಿಗೆ ಒಂದು ಕಾಗದ ಬರೆಯಿರಿ.

* * *

ಎ.ಎನ್.ಮೂರ್ತಿರಾವ್ ಬೆಂಗಳೂರು, ಮಾರ್ಚಿ ೨೧, ೧೯೫೬

ಪ್ರಿಯ ಶ್ರೀಕಂಠಯ್ಯ

ನಿಮ್ಮ ಕಾಗದ ಈಗ ತಾನೆ – ಸಂಜೆ ೫.೩೦ ಘಂಟೆ – ಕೈಸೇರಿತು. ಸ್ವಲ್ಪ ಆಶ್ಚರ್ಯವೇ ಆಯಿತು. ಇವೊತ್ತು ಬೆಳಗ್ಗೆ ತಾನೆ ನಾನೂ ಕೃಷ್ಣಾಚಾರ್ಯರೂ ನಿಮ್ಮಿಂದ ಕಾಗದವೇನೂ ಬರುವುದಿಲ್ಲವೆಂದು ಒಮ್ಮತದ ನಿರ್ಧಾರಕ್ಕೆ ಬಂದಿದ್ದೆವು. ನಿಮ್ಮ ವೃತ್ತಾಂತ ಕೇಶವನ್ ಮೂಲಕ ಸ್ವಲ್ಪ ತಿಳಿಯಿತು. ಇಂಗ್ಲೆಂಡಿನ weighing machines ವಿಷಯದಲ್ಲಿ ಕೇಶವನ್ ಬಹಳ ಮರುಕಗೊಂಡಂತೆ ತೋರಿತು – ಅದರಲ್ಲಿ ನಾನೇನೂ ಭಾಗಿಯಾಗಲಿಲ್ಲ. ಅಲ್ಲಿಯ ಯಂತ್ರಗಳು ಮುರಿದರೆ ನನ್ನ ಗಂಟೇನು ಹೋಯಿತು! "ನನಗೆ ಆ ವಿಷಯ ತಿಳಿಯದು" ಎಂದು ಹೇಳುವುದರ ಮೂಲಕವೇ ಅಮೆರಿಕದಲ್ಲಿ ಕೀರ್ತಿಗಳಿಸಿದಿರಂತೆ, ನಮಗೆಲ್ಲಾ ಕಾಗದಗಳನ್ನು ಬರೆಯುತ್ತಲೇ ಇರುವುದಾಗಿ ಹೇಳಿದಿರಂತೆ – a monstrous exaggeration of a slender truth.

ಕಸ್ತೂರಿರಂಗಾಚಾರ್ಯರು ಇಲ್ಲಿಗೆ ಬಂದಿದ್ದಾರೆಂದು ನನಗೆ ಗೊತ್ತಿರಲಿಲ್ಲ, ನಿಮ್ಮ ಕಾಗದದಿಂದ ತಿಳಿಯಿತು. ಅವರು ಅಮೆರಿಕದಿಂದ ಬರುವುದೇ ಇಲ್ಲವೆಂದು ಸುದ್ದಿ ಇಲ್ಲಿ ಹರಡಿತ್ತು.

ನಿಮ್ಮ ಯೂರೋಪ್ ಪ್ರವಾಸದ, ಮುಖ್ಯವಾಗಿ ಯುಂಗ್‌ಫ್ರೌ ನೋಡಿದ ವೃತ್ತಾಂತ ಹೊಟ್ಟೆ ಉರಿಯನ್ನು ಕೆರಳಿಸಬೇಕು, ನ್ಯಾಯವಾಗಿ. ಆದರೆ ನನ್ನದು ಎಷ್ಟಾದರೂ ಪರಿಪಕ್ವವಾದ ಮನಸ್ಸು! ನಾನು ನೋಡದಿರುವ ಸಾವಿರ ವಸ್ತುಗಳ ಪಟ್ಟಿಯ ಕೊನೆಯಲ್ಲಿ ಯುಂಗ್ ಫ್ರೌ ಒಂದನ್ನು ಸೇರಿಸಿಬಿಟ್ಟೆ – ಮುಗಿಯಿತು.

ಹೊಸ ಹುದ್ದೆಗಾಗಿ ಔಪಚಾರಿಕವಾದ ಅಭಿನಂದನೆಯೇನೂ ಬೇಕಿಲ್ಲ. ಕನ್ನಡ ಪ್ರೊಫೆಸರ್ ಕೆಲಸಕ್ಕೆ ನಿಮ್ಮನ್ನು ನೇಮಿಸಿ ಡಿ.ಎಲ್.ಎನ್ ಅವರನ್ನು 'ಸೆಕಂಡ್' ಮಾಡಿದ್ದಾರಂತೆ. ನಿಮಗೆ ೬೫೦ ರೂ. ಕೊಡಬೇಕೆಂದು ಶಿಫಾರಸು ಮಾಡಿದ್ದಾರಂತೆ – ಇದು ನನ್ನ ಕಿವಿಗೆ ಬಿದ್ದಿರುವ ವರ್ತಮಾನ.

'ಹಮ್ಮಿಣಿ' ಎಂದರೇನು?

ನಾನು ಎರಡು ತಿಂಗಳ ಕೆಳಗೆ ಧಾರವಾಡಕ್ಕೆ ಹೋಗಿದ್ದಾಗ ನಿಮ್ಮ ಮನೆಗೆ ಹೋಗಬೇಕೆಂದು ಗಾಡಿಯಲ್ಲಿ ಕುಳಿತೆ. ನನಗೆ ಮನೆ ತೋರಿಸಲು ಬಂದ ಮಹನೀಯರು – ವಿನೀತರಾಮ ಚಂದ್ರರಾವ್ ಉರುಫ್ ಬೆಳಗಾಂವಿ ರಾಮಚಂದ್ರ – ತಮ್ಮ ಮನೆಯಲ್ಲಿ ಹೊತ್ತುಮಾಡಿಬಿಟ್ಟರು;

ಸ್ಟೇಷನ್ನಿಗೆ ಹೋಗುವಷ್ಟು ಕಾಲ ಮಾತ್ರ ಉಳಿಯಿತು. ಎರಡನೆ ಬಾರಿ ಧಾರವಾಡಕ್ಕೆ ಹೋಗಲೇ ಇಲ್ಲ. ಇಲ್ಲಿ ಏನೋ ಕೆಲಸ ಬಿತ್ತು. ಆದ್ದರಿಂದ ನಿಮ್ಮ ಮನೆಗೆ ಹೋಗಲಿಲ್ಲವೆನ್ನುವುದು ನಿಜವಾದರೂ ಅಪರಾಧ ನನ್ನದಲ್ಲ. ಈ ವಿಷಯವನ್ನು ನೀವು ಸ್ಪಷ್ಟಪಡಿಸಬೇಕು – ನೀವು ನ್ಯಾಯ ಪಕ್ಷಪಾತಿಗಳಾದರೆ.

೧೩ನೇ ತಾ॥ ಧಾರವಾಡಕ್ಕೆ ಬಂದ ಮೇಲೆ ಬೆಂಗಳೂರು ಕಡೆ ಬರುವುದೇನಾದರೂ ಉಂಟೋ ಅಥವಾ ನಾವೇ ಮಹಮ್ಮದರಾಗಿ ಧಾರವಾಡಕ್ಕೆ ಬರಬೇಕೋ? ಗಾದೆಗಳಲ್ಲಿ ಕೆಲವು ವೇಳೆ ಅದೆಷ್ಟು ಔಚಿತ್ಯ!

ನೀವು ಯೂರೋಪನ್ನು ಬಿಡುವ ಮುನ್ನ ನಿಮಗೆ ತಲಪಲೆಂದು ಆತುರದಲ್ಲಿ ನಾಲ್ಕು ಸಾಲು ಬರೆಯುತ್ತಿದ್ದೇನೆ. ಆರ್.ಎಲ್.ಎನ್ ಅವರಿಗೆ ನೀವು ಕಾಗದ ಬರೆಯುತ್ತೀರೆಂದು ಹೇಳುವುದಿಲ್ಲ. ನಿರೀಕ್ಷಿಸಿ ವಿಫಲರಾಗುವುದಕ್ಕಿಂತ ನಿರೀಕ್ಷಿಸದಿರುವುದೇ ಒಳ್ಳೆಯದಲ್ಲವೆ?

* * *

ಡಾ॥ ಸುನೀತಿ ಕುಮಾರ್ ಛಟರ್ಜಿಯವರಲ್ಲಿ ನಮ್ಮ ತಂದೆಯವರಿಗೆ ಅಪಾರ ಭಕ್ತಿ ಮತ್ತು ಗೌರವ. ಅವರನ್ನು ತಮ್ಮ ಗುರುಗಳೆಂದೇ ಭಾವಿಸಿದ್ದರು. ಡಾ॥ ಛಟರ್ಜಿಯವರಿಗೂ ನಮ್ಮ ತಂದೆಯವರ ಬಗ್ಗೆ ತುಂಬಾ ಪ್ರೀತಿ ಮತ್ತು ವಿಶ್ವಾಸ. ಡಾ॥ ಛಟರ್ಜಿಯವರಿಗೆ ತೀ.ನಂ.ಶ್ರೀಯವರು ಅಮೆರಿಕದಿಂದ ಬರೆದ ಒಂದು ಕಾಗದದ ಅಪೂರ್ಣ ಕರಡು ಪ್ರತಿ ದೊರಕಿದ್ದು ಇಲ್ಲಿ ಅದನ್ನು ಕೊಡಲಾಗಿದೆ. (ಡಾ॥ ಛಟರ್ಜಿ ಮತ್ತು ತೀ.ನಂ.ಶ್ರೀ. ಇಬ್ಬರ ಜನ್ಮದಿನವೂ ನವೆಂಬರ್ ೨೬ ಎನ್ನುವುದನ್ನು ಇಲ್ಲಿ ಸ್ಮರಿಸಬಹುದು.)

Philadelphia

Dear Sir,

May I convey my warm and respectful greetings to you on your 65th birthday? I hope this letter will reach you about the 26th November, and recall to your mind this unofficial but ardent **sisya** of yours now spending some months in this far off land.

Philadelphia as you know, is a dull city; but the lingusitic studies I am pursuing here are quite interesting and I dare to hope will be fruitful in my own later work in India. I have done a modest bit of travel too, visiting interesting cities like San Francisco and Santa Fe, and the stupendous creations of nature like the Yosemite Valley and the Grand Canyon. I shall be leaving Philadelphia in the first week of January and expect to spend about two weeks at Harvard and about

a week at Yale before leaving this country for England and eventually for India. I hope to be back home about the midddle of April next.

I remember with pleasure and gratitude the kind words you spoke at the Tea organized by some friends at Summer School to wish me a pleasant travel. They have been a source of inspiration and sustenance to me.

To my very deep regret I could not manage to send a paper for inclusion in the Volume of Studies that is to be presented to you in a few weeks. It will not be missed, but I felt that I had to express this personal apology .

(ಕರಡು ಪ್ರತಿ ಇಲ್ಲಿಗೆ ನಿಂತು ಹೋಗಿದೆ)

* * *

Ann Arbor, June 23 1955

Dear Mr. Gilpatric,

It is with a full and grateful heart that I am writing these lines; and the heart has remaind full all these hours from about 6 p.m. on the 21st, departure from New York, when a gentleman suddenly burst into my roomette on the pullman, parting for breath, accompanied by suitcase. It took me quite a few seconds to realise that he was the good gentleman of your Foundation who had undertaken to find out my lost baggage for me. I never dreamt that they would be with me before I left for Ann Arbor taking into consideration the delay and disappointments of "Air Chance." I could not believe my eyes when I saw those belongings of mine, including the small hand bag. I cannot sufficiently praise the promptness, efficiency and solicitude of your Foundation. Please convey my very deep appreciation and gratitude to the gentleman who recovered and brought to me my bags. Alas, I did not take sufficient care to find out even his name. There was no time for it. (Please let me know his name in your next letter to me.) It has been again and again demonstrated to me in connection with this Fellowship that human kindness is abundant and unrestricted,

even if human negligence (I shall not call it by a harsher name) shows up sometimes. Should I thank you & your efficient secretary also for your sympathy, hospitality. No. I shall not formally thank you, since it is not mere sympathy, but abiding affection that you have been showering upon me.

You have called mine a ''Special'' Fellowship, and a special one it has been! I had already spent the emergency allowance on a suit, shirts, underwear etc. etc, before I sighted the bags. Again it must have cost your people a good bit of money (let alone the trouble) to secure for me my straying baggage. Please let me know what payment I have to make towards it.

The day of my arrival was a busy one for me. (In fact I could not find leisure to write this letter.) I met Prof Marckward and have selected the courses. Infact I attended one of them by Prof. Hoijer already. I have also met Mr. Krishnamurthy my fellow – ''Fellow''. I shall see Prof. Kaplan today.

ತೀ.ನಂ.ಶ್ರೀ. ಅವರಿಗೆ ಬಂದ ಪತ್ರಗಳು

ಹೆಚ್.ಎಂ. ಶಂಕರನಾರಾಯಣರಾವ್ ಮೈಸೂರು, ಜುಲೈ ೮, ೧೯೫೫

ನೀವು ಅಮೆರಿಕೆಗೆ ಹೊರಡುವ ಮುನ್ನ ಧಾರವಾಡದಿಂದ ಬರೆದ ಕಾಗದ ತಲುಪಿ ಅದಕ್ಕೆ ಈಗ ಉತ್ತರ ಬರೆಯುತ್ತಿದ್ದೇನೆ. ಕ್ಷಮಿಸಬೇಕು.

'ಶ್ರೇಯಾಂಸಿ ಬಹು ವಿಘ್ನಾನಿ' 'ಎಲ್ಲದಕ್ಕೂ ಕಾಲ ಕೂಡಿ ಬರಬೇಕು' ಎಂದಲ್ಲವೇ ಆರ್ಯೋಕ್ತಿ? ನಿಮ್ಮನ್ನು ಹೊರಡುವ ಮುನ್ನ ಕಾಣಬೇಕೆಂದಿತ್ತು. ಆದರೆ ನೀವು ಜೂನ್ ಕೊನೆಯ ವಾರದಲ್ಲಿ ಹೊರಡುತ್ತೀರಿ, ಪುಣೆಯ ತರಗತಿಗಳು ಮುಗಿಯುವುದು ತಿಂಗಳ ಕೊನೆಗೆ ಎಂಬ ಸುದ್ದಿ ಬಂದ ಕಾರಣದಿಂದಲೂ, ಮಕ್ಕಳನ್ನು ಶಾಲೆಗೆ ಸೇರಿಸಬೇಕಾಗಿದ್ದುದ್ದರಿಂದಲೂ – ಪರಿಷತ್ತಿನ ಸಮ್ಮೇಳನಕ್ಕಲ್ಲ. ಅಲ್ಲಿ ಯಾರು ನಮ್ಮನ್ನು ಕೇಳಿದರು? ಅಂಬಲಿಯಲ್ಲಿ ಕಂಡಿರೇ ನೊರಜನಾಯಕನನ್ನು ಎಂಬ ಗಾದೆ ಕೇಳಿಲ್ಲವೇ ನೀವು?–ಇಲ್ಲಿಗೆ ಬರಬೇಕಾಯಿತು. ಮೈಸೂರಿಗೆ ಬಂದ ಮೇಲೆ ತಾವು ಧಾರವಾಡಕ್ಕೆ ಬೇಗ ಬಂದಿರೆಂದೂ, ಹದಿನೈದಕ್ಕೆ ಹೊರಡುವಿರೆಂದೂ ಶ್ರೀ ಕಣವಿಯವರಿಂಲೂ ಶ್ರೀ ಜಿ.ಎಸ್. ದೀಕ್ಷಿತರಿಂದಲೂ ತಿಳಿದು ಬಂತು. ನಿಮ್ಮ ಕಾಗದ ನೋಡಿ, ಈ ವಿಷಯ ಕೇಳಿ ಮನಸ್ಸಿಗೆ ವ್ಯಥೆಯಾಯಿತು. ಆದರೆ ಕಾಲ ಮೀರಿತ್ತು.

ಹಿಂದೆ 'ಕುಮಾರ ಸಂಭವ'ದ ಪ್ರಕಾಶನಕ್ಕೆ Express Delivery ಯಿಂದ ತಾವು ಹರಕೆಯನ್ನು ಕಳುಹಿಸಿದ್ದೀರಿ. ಇಂದು ಕಾಲದೂರದ ದೃಷ್ಟಿಗಳಿಂದ ಅದು ಅಸಾಧ್ಯವೆನಿಸಿದ್ದರೂ, ನಮ್ಮಿಬ್ಬರ ವಿಷಯದಲ್ಲಿ ನಿಮ್ಮ ಹರಕೆ ನಿರಂತರವಾಗಿರುವುದೆಂದು ನಂಬಿದ್ದೇನೆ. ಈ ಶುಭ ಸಮಾಚಾರದಿಂದ ನಿಮಗೆ ಕಾಗದ ಬರೆಯುತ್ತಿರುವುದು ನನಗೆಷ್ಟೋ ಸಮಾಧಾನ. ಅಲ್ಲದೆ ಯಾವುದಕ್ಕೂ ಒಪ್ಪದ ಪ್ರೊ. ಎ.ಆರ್.ಕೃ ಅವರು ಇದಕ್ಕೆ ಮುನ್ನುಡಿಯನ್ನು ಅನುಗ್ರಹಿಸಿದ್ದಾರೆ. ಗ್ರಂಥ ಶ್ರೀ ವೆಂಕಣ್ಣಯ್ಯನವರಿಗೆ ಅರ್ಪಿತವಾಗಿದೆ. ಇದಕ್ಕೆ ಮೀರಿದ ಸಮಾಧಾನ, ತೃಪ್ತಿ ಬೇರೆ ನನಗೆ ಕಾಣಲಿಲ್ಲ.

ಈ ವೇಳೆ ನೀವು ನ್ಯೂಯಾರ್ಕ್ ನಗರದಲ್ಲಿ ಭದ್ರವಾಗಿ ತಳವೂರಿರುವಿರೆಂದು ಭಾವಿಸುತ್ತೇನೆ. ನೀವು ಓದಿದ ಓದು, ನೋಡಿದ ಸ್ಥಳಗಳು, ಜನರ ಆಚಾರ ವಿಚಾರಗಳು ನಡೆನುಡಿಗಳು ಇವೆಲ್ಲ ನಿಮ್ಮಿಂದ ನಮಗೆ ದೊರಕುವಂತಾಗುವುದೆಂದು ನಾನು ಭಾವಿಸುತ್ತೇನೆ. ಹಿಂದೆ

ಪ್ರೊ. ಗೋಕಾಕರು ಈ ಕೆಲಸ ಮಾಡಿದರು. ಮೈಸೂರಿನವರಾದ ನಾವು ನಿಮ್ಮಿಂದ ಅದನ್ನು ನಿರೀಕ್ಷಿಸಿದರೆ ತಪ್ಪಾಗುವುದಿಲ್ಲವಷ್ಟೆ!

ಈ ಊರಿನಲ್ಲಿ ನಿಮ್ಮ ಮಿತ್ರರೂ ಶಿಷ್ಯರೂ ಕ್ಷೇಮದಿಂದಿದ್ದಾರೆ. ಆದರೆ ನಾನು ಇಲ್ಲಿಗೆ ಓದಲು ಬಂದಾಗಿಗೂ ಈಗಿಗೂ ಎಷ್ಟು ಅಂತರ! ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡಿರುವವರ ಸಂಖ್ಯೆ ಐವತ್ತಕ್ಕೂ ಮೀರಿದೆ! ಆನರ್ಸ್ ತರಗತಿಗೆ ಮೂವತ್ತೇಳು ಜನ ಅರ್ಜಿ ಹಾಕಿದ್ದರೆ ಇಪ್ಪತ್ತು ಮೂರು ಜನರಿಗೆ ಸ್ಥಳ ಕಲ್ಪಿಸಿದ್ದಾರೆ! ಆದರೆ ಪಾಠ ಪ್ರವಚನಗಳ ವಿಷಯದಲ್ಲಿ what a fall there was my Country men! ಎಂದು ಉದ್ಗಾರ ತೆಗೆಯಬೇಕಾಗಿದೆ. ನಿಮ್ಮನ್ನು ಧಾರವಾಡಕ್ಕೆ ದತ್ತು ಕೊಟ್ಟರು. ಶ್ರೀ ಡಿ.ಎಲ್.ಎನ್ ನಿಘಂಟಿಗೆ ಮೀಸಲಾದರು. ಶ್ರೀ ಕೆ.ವಿ.ಆರ್ ಭಾಷಾಶಾಸ್ತ್ರಕ್ಕೆ ನುಣುಚಿಕೊಂಡರು. ಶ್ರೀ ಶರ್ಮರೊಡನೆ ರಸಿಕತೆ ಮಾಯವಾಯಿತು. ಕಾಲಾಯ ತಸ್ಮೈ ನಮಃ।

ಏನೋ ಬರೆಯುವುದಕ್ಕೆ ಹೊರಟು ಏನೋ ಬರೆದದ್ದಾಯಿತು. 'ಅಭಿವಂದನೆ' ಕುಂಟಿಕೊಂಡು ನಡೆಯುತ್ತಿದೆ. ಶ್ರೀ ರಾಮರಾಯರ ಪ್ರೆಸ್ಸು! ಶ್ರೀ ಹನುಮಂತರಾಯರೂ ನಿಸ್ಸಹಾಯರಾಗಿದ್ದಾರೆ. ನೀವು ಅಮೆರಿಕೆಯಿಂದ ಹಿಂದಿರುಗಿ ಬರುವವರೆಗೂ ಗ್ರಂಥ ಕಾಯುವುದೇನೋ! ಲೇಖನ ಬಾರದಿರುವುದಕ್ಕೆ ನಿಮ್ಮ ಮೇಲೆ ಕೋಪವಿಲ್ಲ. ನಿಮ್ಮದಿಲ್ಲವಾದರೆ ಮನಸ್ಸಿಗೆ ತುಂಬ ನೋವಾಗುತ್ತದೆ. ಆದರೆ ಮಾಡುವುದೇನು? ನಾನು ಪಡುತ್ತಿರುವ ಪರದಾಟ ನೋಡಿ ನಿಮ್ಮದನ್ನು ಊಹಿಸಿಕೊಳ್ಳಬಲ್ಲೆ.

ಶ್ರೀ ಪರಮೇಶ್ವರ ಭಟ್ಟರು ನಿಮಗೆ ನಮಸ್ಕಾರ ತಿಳಿಸಲು ಹೇಳಿದ್ದಾರೆ.

* * *

ಹೆಚ್.ಎಂ. ಶಂಕರ್‌ನಾರಾಯಣರಾವ್ ಮೈಸೂರು, ೨೨-೭-೫೫

ಪ್ರಿಯ ಗುರುಗಳಲ್ಲಿ ನಮಸ್ಕಾರಗಳು

ನಿಮ್ಮ ಲೇಖನದಿಂದ ನನಗೆ ಮೊದಲು ಸಮಾಧಾನ ಆ ಬಳಿಕ ಆಶ್ಚರ್ಯವೂ ಆಗಿದೆ. ಈ ವಾಕ್ಯ ಓದಿ ನಿಮಗೆ ನಗು ಬರಬಹುದು – ಪ್ರೊ.ತೀ.ನಂ.ಶ್ರೀಗಳಿಂದ ಲೇಖನ ಬಂದಿದೆ ಎಂದು ಒಬ್ಬಿಬ್ಬರಿಗೆ ನುಡಿದಾಗ ಮಂದಹಾಸ ಬೀರಿ, ತಲೆದೂಗಿ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಇಷ್ಟು ಬೇಗ ಸಾಧ್ಯವೇ, ಬರಿ ಸುಳ್ಳು, ಕನಸಿನ ಗಂಟು ಎಂದರು. ಲೇಖನ ತೋರಿಸಿದಾಗ ನಂಬಿದರು – ಇದು ನಿಮ್ಮ ಲೇಖನ ಇಲ್ಲಿಗೆ ಮುಟ್ಟಿದಾಗ ನಡೆದ ಕಥೆ.

ಲೇಖನ ತಂಗಳಾಗಿಲ್ಲ. ದಕಾರದಲ್ಲಿದ್ದೇವೆ. ನಾನು ತಿರುಪತಿಗೆ ಹೋಗಿಲ್ಲ. ಶ್ರೀ ರಾಮರಾಯರಲ್ಲಿ ಅಚ್ಚಿಗೆ ಹೋದರೆ ಅಲ್ಲಿಗೆ ಹೋಗುವುದು ಬೇಡ ಎನಿಸುತ್ತದೆ. ಈಗ ಪಟ್ಟೆ ಎಳೆದು ಕೂಡಿಸಿದ್ದಾರೆ. ಮಾಡುವುದೇನು. ಒಮ್ಮೊಮ್ಮೆ ಪ್ರೆಸ್ಸಿಗೆ ಹೋದಾಗ ಕೆಲಸವಾಗದಿದ್ದಾಗ ಕೋಪ,

ರೋಷ, ನಿರುತ್ಸಾಹ, ದುಃಖವುಂಟಾಗುತ್ತದೆ. ಆದರೆ ಮಾಡುವುದೇನು? ಶ್ರೀ ಎ.ಅರ್.ಕೃ, ಶ್ರೀ ಜಿ. ಹನುಮಂತರಾಯರಿಗಾಗಿ ತಾಳ್ಮೆ ಹೊಂದಬೇಕಾಗಿದೆ.

ಇಲ್ಲಿಯ ನಿರುತ್ಸಾಹದ ಆವರಣವನ್ನು ಕುರಿತು ಬರೆದು ನಿಮ್ಮನ್ನು ಬೇಸರಗೊಳಿಸುತ್ತಿದ್ದೇನೆ. ಹೋಗಲಿ; ಕ್ಷಮಿಸಿ, ನಾನು ತಮಗೆ New York ವಿಳಾಸಕ್ಕೆ ೮ನೆಯ ತಾರೀಖು ಕಾಗದ ಬರೆದಿದ್ದೆ. ತಲುಪಿತೋ ಇಲ್ಲವೋ ತಿಳಿಯದು. ೧೦ನೆಯ ತಾರೀಖು ಶ್ರೀ ಭಟ್ಟರ 'ರಘುವಂಶ'ದ ಪ್ರಕಟನೆ ನಡೆಯಿತು. ಅಂದು ಊಟಕ್ಕೆ ಬಂದಾಗ ಶ್ರೀ ಶಿವರಾಮ ಶಾಸ್ತ್ರಿಗಳು ಲಂಡನ್ನಿನಲ್ಲಿ ನಿಮ್ಮ ಫೋಟರ್ ಕಥೆ ಹೇಳಿದರು. ಶ್ರೀ ಚಿದಂಬರಂ ಗಂಭೀರ. ಇವರು ನಿಮ್ಮ ಮಿತ್ರರು. ಅದ್ದರಿಂದ ನಿಮಗೆ ಬಿಡುವಾದಾಗ ಕೃಪೆಯಿಟ್ಟು ನಿಮ್ಮ ಒಂದೆರಡು ಅನುಭವಗಳಿಂದ ಕೂಡಿದ ಕಾಗದವನ್ನು ಶಿಷ್ಯರಿಗೆ ಬರೆಯಿರಿ. ನಿಮ್ಮಿಂದ 'ಅಪೂರ್ವ ಅಮೆರಿಕ' ಬರುವುದೆಂದು ನಮ್ಮ ನಿರೀಕ್ಷೆ.

ಲೇಖನದ ವಿಷಯದಲ್ಲಿ ಆತಂಕ ಬೇಡ. ಶ್ರೀ ಡಿ.ಎಲ್.ಎನ್‌ರವರಿಗೆ ತೋರಿಸುತ್ತೇನೆ.

* * *

ಆರ್.ಎಲ್. ನರಸಿಂಹಯ್ಯ ಬೆಂಗಳೂರು, ಆಗಸ್ಟ್ ೨, ೧೯೫೫

ಪ್ರಿಯ ಶ್ರೀಕಂಠಯ್ಯ

ನಿಮ್ಮ ಕಾಗದ ನಿನ್ನೆ ಸಂಜೆ ನನ್ನ ಕೈ ಸೇರಿತು. ಇದಕ್ಕಿಂತ ಜಾಗ್ರತೆ ಉತ್ತರ ಬರೆಯುವುದು ಸಾಧ್ಯವಿಲ್ಲವೆಂದು ನೀವೂ ಒಪ್ಪಲೇ ಬೇಕು. ನಮ್ಮ 'ಮಿತ್ರಮಂಡಲಿ'ಯವರಿಗೆ ನೀವೇನೋ 'Spacing Theory' ಅನುಸರಿಸಿ ಕಾಗದಗಳನ್ನು ಬರೆದಿದ್ದರೂ, ನೀವು ಕಾಗದಗಳನ್ನು ಬರೆದಿದ್ದೀರೆಂದು ನನಗೆ ತಿಳಿದದ್ದು ಒಟ್ಟಿಗೇನೇ ಮೂರು ದಿನಗಳ ಕೆಳಗೆ. ಆಗ ವಿಚಾರಿಸಿದ್ದರಲ್ಲಿ, ಡಿ.ಎಲ್.ಎನ್ ಮತ್ತು ಟಿ.ಪಿ.ಕೃ. ಅವರೂ ನಿಮಗಾಗಲೆ ಉತ್ತರ ಕಳಿಸಿದ್ದೇವೆಂದು ತಿಳಿಸಿದರು. ಇದುವರೆಗೆ ನಿಮ್ಮ ಕೈಗೆ ಸೇರಿರಬೇಕೆಂದು ನಂಬಿದ್ದೇನೆ. ನಿಮ್ಮ ಜೀವನದ ರೀತಿಯ ಅಂಶಗಳನ್ನು ಅವರೇನೂ ಹೇಳಿದಂತೆ ನನಗೆ ನೆನಪಿಲ್ಲ. ನೀವು ಅಡಿಗೆ–ಒಂದು ವಿಧದಲ್ಲಿ–ಮಾಡಿಕೊಳ್ಳುತ್ತಿದ್ದೀರೆಂದು ಗೊತ್ತಾಯಿತು. ನನ್ನ ಭಾವಮೈದುನ–ಡಾ.ಎಸ್.ವಿ. ರಾಮರಾವ್ ಅಲ್ಲಿ ಅಡಿಗೆ ಮಾಡಿಕೊಳ್ಳುವುದರ ವೈಖರಿ ಹಿಂದೆ ನನಗೆ ತಿಳಿಸಿದ್ದಾನೆ. ನೀವು ಹೆಚ್ಚು ಕಡಮೆ ಹಾಗೇ ಅಂತ ನಾನಂದುಕೊಂಡಿದ್ದೇನೆ.

ನನ್ನ ಹಿಂದಿನ ಕಾಗದದಲ್ಲಿ – ಧಾರವಾಡಕ್ಕೆ ಬರೆದದ್ದರಲ್ಲಿ–ಸೂಟ್ ಧರಿಸಿ ಕನ್ನಡ ಪ್ರೊಫೆಸರ್ ಫೋಟೋ ಅಮೆರಿಕದ ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗಿಯೇ ಆಗುತ್ತದೆ, ಅದರ ಒಂದು ಪ್ರತಿ ಕಳಿಸುವುದನ್ನು ಮರೆಯಬೇಡಿ ಎಂದು ಕೇಳಿಕೊಂಡಿದ್ದೆ. Ann Arbor Reporter ಅಥವಾ Michigan Chronicle ಇತ್ಯಾದಿ ಪತ್ರಿಕೆಗಳಲ್ಲಿ ಇದುವರೆಗೂ ನಿಮ್ಮ ಪ್ರತಿಬಿಂಬವನ್ನು ಯಾರೂ ಪ್ರಕಟಗೊಳಿಸಿಲ್ಲವೇ? ಅಮೆರಿಕದ ಜನ ಇಷ್ಟು ಕೀಳಾಗಿದ್ದಾರೆಯೇ? ಅಥವಾ ನೀವು ಕಳಿಸಲು ನಾಚಿಕೊಂಡಿದ್ದೀರಾ?

ವ್ಯಾಸಂಗ ನಡೆಯುತ್ತಿದೆ ಎಂದದ್ದನ್ನು ಕೇಳಿ ಬಹಳ ಸಂತೋಷವಾಯಿತು. ಹಾಗೆಯೇ ಸಿನಿಮಾ, ಡಾನ್ಸ್‌ಹಾಲ್, Night club(?) ಭೇಟಿಗಳೂ ಆಗುತ್ತಿವೆಯೇ? Sample ಗಾದರೂ ಒಂದೊಂದು ಅನುಭವ ಅವಶ್ಯವಲ್ಲವೇ? Pullman Car ಪ್ರಯಾಣ ಅಮೆರಿಕದ ವೈಶಿಷ್ಟ್ಯ ಎಂದು ಕೇಳಿದ್ದೇನೆ. ನಿಮ್ಮ ಅಭಿಪ್ರಾಯ ಹೇಗೆ?

ನಿಮ್ಮ ಭಾಷಣವನ್ನು ಮೆಚ್ಚಿಕೊಂಡದ್ದರಲ್ಲಿ ನನಗೆ ಏನು ಆಶ್ಚರ್ಯವೂ ಕಾಣುವುದಿಲ್ಲ.. ಹೋದ ಕಡೆಯಲ್ಲೆಲ್ಲ ಒಂದೊಂದು ಭಾಷಣವನ್ನಾದರೂ ಕೊಡಲೇ ಬೇಕಾಗಿ ಬರಲಿ ಎಂದು ನಾನು ಬಯಸುತ್ತಿದ್ದೇನೆ.

ನಿಮ್ಮ ಕಾಗದದಲ್ಲಿ ಬರೆಯಬಹುದಾಗಿದ್ದ ಜಾಗದಲ್ಲಿ ಮೂರರಲ್ಲೊಂದು ಭಾಗ ಖಾಲಿ ಇರುವುದನ್ನು ನೋಡಿ ನನಗೆ ಬಹಳ ವ್ಯಥೆಯಾಗಿದೆ. ಇದು ಅಮೆರಿಕದ 'ದಕ್ಷತಾ ವಿಧಾನ'ಕ್ಕೆ ನಿದರ್ಶನವೋ? ಬಹುಶಃ ಕಾಗದಗಳನ್ನು ಬರೆದು ಬರೆದು ಬೇಜಾರಾಗಿರಬೇಕು ನಿಮಗೆ.

ಇಲ್ಲಿ ವಿಷಯ ಏನು ತಿಳಿಸುವಂಥದ್ದಿರುವಹಾಗೆ ಕಾಣುವುದಿಲ್ಲ. ಪೋರ್ಚುಗೀಸ್-ಬ್ರಿಟಿಷ್ ಕರಾರುಗಳ ವಿಷಯವಾಗಿ ನೆಹ್ರು ಕಟವಾಗಿ ಟೀಕಿಸಿದ್ದಾರೆ. ಕರಾರು ಪ್ರಕಾರ ಪೋರ್ಚುಗಲ್‌ನವರು ಇಂಗ್ಲೆಂಡಿನಲ್ಲಿ ಬೇಕಾದ ಹಾಗೆ ಸೈನಿಕರನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಳ್ಳಬಹುದು ಎಂದಿದೆಯಂತೆ! ಈ ಕರಾರನ್ನು ಇಂದಿನ ಬ್ರಿಟಿಷ್ ಸರಕಾರ ಮನ್ನಿಸಿದರೆ ತಾನೆ ಪುರಾತನಗಳ ಪವಿತ್ರತೆ ಸಿದ್ಧವಾಗುವುದು-ಈ ರೀತಿಯಾಗಿ ಕಾಶ್ಮೀರದ ಗೊಂದಲವೂ ಬಗೆಹರಿಯುವಂತೆ ಕಾಣುವುದಿಲ್ಲ. ರಷ್ಯದ MIG Fighter ಗಳನ್ನು ಭಾರತದ ಸರ್ಕಾರ ಕೊಳ್ಳುವ ಯೋಚನೆಯಲ್ಲಿದೆಯಂತೆ!

* * *

DECCAN COLLEGE
POSTGRADUATE & RESEARCH INSTITUTE
POONA 6

S.M. KATRE 18th August, 1955
Director

You will be glad to learn from first hand that the Union Government is very serious about establishing the new Linguistic Survey of India. We had our meeting on the 29th of July to finalise the draft as originally prepared by the Ministry. The rough plan is to have a permanent central office of the LSI in Delhi consisting of the Director - General, assisted by three Deputy DG's (two technical : preliminary or purposive and ethno- linguistic and one administrative)

and five regional Directors. These five regions are subdivided into eleven circles under one Suptd. and two Asst. Suptds with attached parafernalia. Universities and institutes of research would be inducted into the survey, and each circle hopes to enlist at least 200 workers in the field. Besides a central training unit there will be peripatetic units moving from circle to circle for giving the required training. The total estimates when the Survey is functioning in all the circles will be of the order of about Rupees 40 lacs per annum. My Suggestion that the facilities created at the DG should be utilised to the fullest has been accepted but how far this is maintained will be left entirely to the DG and his staff. The difficulty will be about personnel. If the DG is to be a scholar the only choice is of Chatterji, but it is doubtful if he is prepared to leave his present position. The alternative position will be that one of the Joint or Deputy Secretaries might conceivably be appointed as DG with real scholars under him as Dep. DGs. At this stage it is difficult for me to say anything further. Once the LSI is established there may be a scramble for loaves and fishes of office. But at last we may be satisfied (as also the RF) that the joint work inaugurated by us will now result in some solid achievement in the establishment of a million dollar department. If the right steps are taken much can be achieved. I would therefore request you and Pandit to get yourselves acquainted with similar work carried out in the USA, and if you have alrelady not met Voegelein in Indiana University you should visit him and see the wonderful archives of Amercian Indian languages.

I am wondering whether this letter will reach you in time. I hope it does before you go to Los Angeles, and I also hope you will have a wonderfully bracing holiday to fit you for the strenuous work lying ahead of you. I am most anxious to learn from you your reactions re. organisation of the summer courses and administrative details which may be of help to us. And in particular I should like to get the different applicaton and other blanks that are in use there.

This Sunday I am going to Dharwar to attend a meeting of the Board of Studies. You may have heard that I have been nominated to the Senate of your University and I am attending my first one on 24th August. I shall be missing you very much this time.

Mrs. Katre joins me in wishing you a very profitable stay there and freedom from worry re. those you have left behind. With kindest regards from all of us.

* * *

ಕೂಡಲ ಚಿದಂಬರಂ ಮೈಸೂರು, ೨೩-೯-೫೫

ಪ್ರಿಯ ಶ್ರೀಕಂಠಯ್ಯ

ಶ್ರೀ ಗಿಲ್‌ಪ್ರಾಟ್ರಿಕ್ ನಿಮ್ಮ ವಿಷಯವಾಗಿ ಬಹು ಉತ್ಸಾಹದಿಂದ ಕಾಗದ ಬರೆದಿದ್ದಾರೆ: 'As you can imagine Profesor Sreekantaiya is making a real "hit" with all the American Scholars who meet him!' ಇದು ತುಂಬ ಸಂತೋಷ ತರುವ ವಿಷಯ. ಅಲ್ಲಿನ ವಿದ್ವಾಂಸರೊಡನೆ ಭುಜ ಉಜ್ಜಿ ನಿಂತು - ಕರ್ಣಾಟಕಕ್ಕೂ ಇಂಡಿಯಾ ದೇಶಕ್ಕೂ ನಿಮ್ಮಿಂದ ಕೀರ್ತಿ ಬರುವಂತಾಗಲೆಂಬುದೇ ನಮ್ಮೆಲ್ಲರ ಹಾರೈಕೆ. ಅಲ್ಲಿ ಹಲವು ಕಡೆಗಳಲ್ಲಿ ನೀವು ಉಪನ್ಯಾಸ ಮಾಡುವಿರೆಂದು ನಂಬುತ್ತೇನೆ.

ಅಲ್ಲಿನ ಊಟ ತಿಂಡಿ ವಸತಿ ಉಪಚಾರ ಇತ್ಯಾದಿ ಎಲ್ಲ ವಿಚಾರಗಳಿಗೆ ಬರೆಸಿ. Yale University ಇರುವುದು ಎಲ್ಲಿ?

ಮೈಸೂರು ಸರಕಾರದವರು ಕನ್ನಡಕ್ಕೆ ಇನ್ನೊಂದು ಪ್ರೊಫೆಸರ ಸ್ಥಾನವನ್ನು ಮಂಜೂರು ಮಾಡಿರುತ್ತಾರಂತೆ. ಶಿವರಾಮ ಶಾಸ್ತ್ರಿಗಳು ಈ ವಿಷಯ ಕುರಿತು ಈಗಾಗಲೇ ನಿಮಗೆ ಬರೆದಿರಬೇಕು. ಮೈಸೂರು ವಿಶ್ವವಿದ್ಯಾಲಯದಲ್ಲಿ ನಿಮ್ಮ ಸ್ಥಾನವನ್ನು ಕಾಯ್ದುಕೊಳ್ಳಲು ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೊ ಅದನ್ನು ಯೋಚನೆ ಮಾಡಿ-ಮಾಡಿ.

* * *

ಎಚ್.ವೈ. ಶಾರದಾ ಪ್ರಸಾದ್ ಕೇಂಬ್ರಿಜ್ ೩೮, ಮೆಸಚೂಸೆಟ್ಸ್
ಸೆ. ೨೯, ೫೫

ಮಾನ್ಯ ತೀ.ನಂ.ಶ್ರೀ ಅವರಿಗೆ ನಮಸ್ಕಾರಗಳು,

ಒಂದೇ ನೆಲಗಡ್ಡೆಯ ಎರಡೂ ತೀರಗಳಲ್ಲಿ ಇದ್ದೀವೋ ಏನೋ ನಾವು! ಕಳೆದವಾರ ನಾನು ಮೈಸೂರಿನಲ್ಲಿದ್ದಾಗ ಸಂಪತ್ ಹೇಳಿದ್ದರ ಪ್ರಕಾರ ನೀವು ಕ್ಯಾಲಿಫೋರ್ನಿಯಾದಲ್ಲಿರಬೇಕು.

ಮತ್ತೆ ಯಾರೋ ಅಲ್ಲಿ ಹೇಳಿದರು ನೀವು ಫಿಲಡೆಲ್ಫಿಯದಲ್ಲಿದ್ದೀರಿ ಎಂದು. ಯಾವುದನ್ನೂ ತಿಳಿದುಕೊಳ್ಳಲು ಬರೆಯುವುದೇ ಉತ್ತಮ ಮಾರ್ಗ ಎಂದು ಬರೆಯುತ್ತಿದ್ದೇನೆ.

ನಾನು ಕಳೆದವಾರ ಬಂದೆ. ಅಥವಾ ಬಂದು ಇನ್ನೂ ಒಂದು ವಾರ ಕಳೆಯಲಿಲ್ಲ ಎನ್ನಬಹುದು. ಬುಧವಾರ ಬೊಂಬಾಯಿ ಬಿಟ್ಟು ಶುಕ್ರವಾರ ನ್ಯೂಯಾರ್ಕ್ ತಲಪಿ ಶನಿವಾರ ಇಲ್ಲಿ ಸೇರಿಕೊಂಡೆ. ವಿಶ್ವವಿದ್ಯಾಲಯದ ಹತ್ತಾರು ವಿದ್ಯಾರ್ಥಿನಿಲಯಗಳಲ್ಲಿ ಒಂದರಲ್ಲಿ ನನ್ನ ಕೋಣೆ. ಈ ಐದು ದಿನದಲ್ಲಿ ಈ ದೊಡ್ಡ ವಿದ್ಯಾಪೀಠದ ಹೊರಮುಖದ ಪರಿಚಯವೇ ಇನ್ನೂ ಆಗಿಲ್ಲ. ಅನೇಕ ತರಗತಿಗಳನ್ನ ಈಗಾಗಲೇ ಹೊಕ್ಕಿದ್ದೇನೆ. ಪಾಂಡಿತ್ಯ ಪ್ರತಿಭೆಗಳಲ್ಲಿ ಅಧ್ಯಾಪಕರು ಒಬ್ಬರನ್ನು ಇನ್ನೊಬ್ಬರು ಮೀರಿಸುತ್ತಾರೆ. ಇಂತಹ ಜಾಗದಲ್ಲಿ ಆ ರೀತಿಯ ವಿದ್ವತ್ತು ಬೆಳೆಯುವುದರಲ್ಲಿ ಆಶ್ಚರ್ಯವಾದರೂ ಏನು? ವೈಡನರ್ ಲೈಬ್ರರಿ ಒಂದನ್ನು ನೋಡಿದರೇಯೇ ಸಾಕು.

ಇನ್ನು ಆರು ತಿಂಗಳಾದರೂ ನಾನು ಈ ಸ್ಥಳದಲ್ಲೇ ಇರುತ್ತೇನೆ. ದೇಶ ಸುತ್ತುವುದು ಆಮೇಲೆ.

* * *

ಎಚ್.ವೈ. ಶಾರದಾ ಪ್ರಸಾದ್ ಕೇಂಬ್ರಿಜ್, ಅಕ್ಟೋಬರ್ ೧೫, ೧೯೫೫

ಕಾಗದಕ್ಕಾಗಿ ವಂದನೆಗಳು. ಮುಂದಿನ ತಿಂಗಳು ಇಲ್ಲಿ ಬರುವುದಾಗಿ ತಿಳಿದು ಬಹಳ ಸಂತೋಷವಾಯಿತು. ಈ ಭೇಟಿಯಿಂದ ನಿಮ್ಮಷ್ಟೇ ಇಲ್ಲಿಯ ವಿದ್ವಾಂಸರಿಗೂ ಲಾಭವಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಇಲ್ಲಿಯ ಗ್ರಂಥ ಭಂಡಾರದ ಬಗ್ಗೆ ನಾನೇನೂ ಹೆಚ್ಚಿಗೆ ಬರೆಯಬೇಕಾದ್ದಿಲ್ಲವಲ್ಲ?

ಫಿಲಡೆಲ್ಫಿಯಾದಲ್ಲಿ ಭಾರತೀಯರೆಷ್ಟು ಜನ ಇದ್ದಾರೋ ಕಾಣೆ, ಹಾರ್ವರ್ಡ್ ಮತ್ತು ಬಾಸ್ಟನ್‌ನಲ್ಲಿ ದೊಡ್ಡ ತಂಡವೇ ಇದೆ. ಕಲ್ಕತ್ತ ವಿಶ್ವವಿದ್ಯಾಲಯದ ಡಾ. ದಾಸ್‌ರವರು ಇಲ್ಲಿಗೆ Visiting Professor ಆಗಿ ಬಂದಿದ್ದಾರೆ. ಅವರಿಗೆ ನಮ್ಮ ಯಾಮುನಾಚಾರ್ಯರು, ಹನುಮಂತರಾಯರು ಮೊದಲಾದವರ ಪರಿಚಯವಿದೆ. ಸಣ್ಣ ಆಕಾರದ ಸೌಮ್ಯ ಮೂರ್ತಿ. ನಾಚಿನಾಚಿ ಬೆಳೆದಿರುವ ಗಡ್ಡ. ಕಳೆದ ಭಾನುವಾರ ಇಲ್ಲಿ ಏರ್ಪಡಿಸಿದ್ದ ಭಾರತೀಯ ಭೋಜನದಲ್ಲಿ ಅವರ ಪರಿಚಯವಾಯಿತು. ಅಲ್ಲಿ ಕಂಡ ಇನ್ನೊಬ್ಬರೆಂದರೆ ಡಾ. ಅನಿಲಾಯ ಚಕ್ರವರ್ತಿಯವರು. ಈಗ ಬಾಸ್ಟನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ನೂರಕ್ಕಿಂತ ಹೆಚ್ಚು ಜನ ಸೇರಿದ್ದ ಆ ಭೋಜನದಲ್ಲಿ ಕನ್ನಡಕ್ಕೆ ಕೊರತೆಯಿರಲಿಲ್ಲ. ಇಲ್ಲಿನ ಮೆಸಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಚ್.ಜಿ. ವೆಂಕಟೇಶ್ ಮತ್ತು ಉಡುಪಿಯ ರಾವ್ ಎಂಬಾತ ಇದ್ದಾರೆ. ಹಾರ್ವರ್ಡ್‌ನ ವೈದ್ಯವಿದ್ಯಾಲಯದಲ್ಲಿ ಡಾ. ವಿ. ನಾರಾಯಣರಾವ್ ಎಂಬುವವರಿದ್ದಾರೆ. ಯಾದವಗಿರಿಯ ಡಾ. ವೆಂಕಟಸುಬ್ಬರಾಯರ ಮಗ ಆತ. ಪತ್ನೀ ಸಮೇತ ಇಲ್ಲಿಗೆ ಬಂದಿದ್ದಾರೆ.

ನಿಮ್ಮ ಕಾಗದ ಬಂದ ದಿನವೇ ಕರ್ನಾಟಕ ರಾಜ್ಯ ಆಗತಕ್ಕದ್ದೆಂದು ಫಜಲ್ ಅಲಿ ಮಂಡಲಿಯವರು ಸೂಚಿಸಿರುವರೆಂಬ ಸುದ್ದಿಯೂ ಬಂತು. ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಬಂದಿದ್ದ ಸಾರಾಂಶದ ಹೊರತು ವಿವರಗಳು ತಿಳಿದಿಲ್ಲ. ಹಿಂದೂಸ್ತಾನ್ ಟೈಂಸ್‌ನ ವಾರ ಸಂಚಿಕೆ ಬಂದರೆ ತಿಳಿಯುತ್ತದೆ. ಬಳ್ಳಾರಿ ಆಂಧ್ರಕ್ಕೆ ಹೋಯಿತೋ ಗೊತ್ತಿಲ್ಲ. ಕೊಳ್ಳೇಗಾಲ ಮಾತ್ರ ಕರ್ನಾಟಕಕ್ಕೇ ಬಂದಿದೆಯೆಂದು ಒಬ್ಬ ತಮಿಳ ಸ್ನೇಹಿತ ತಿಳಿಸಿದ.

ಇತಿಹಾಸ ಸಾಹಿತ್ಯಗಳ ಬಗ್ಗೆ ಗೌರವವಿರುವವರಿಗೆ ಈ ನಗರದ ಸುತ್ತ ಕಾಲಿಟ್ಟ ಕಡೆಯಲ್ಲ ಕ್ಷೇತ್ರದ ಭಾವನೆ ಬರುತ್ತದೆ. ಎಮರ್ಸನ್, ಲಾಂಗ್‌ಫೆಲೋ, ಥೋರೋ, ಲೋವೆಲ್, ಹಾಥಾರ್ನ್ ಇವರ ಮನೆಗಳು, ಜನ್ಮಸ್ಥಳಗಳು, ವಾಷಿಂಗ್‌ಟನ್, ಆ್ಯಡಮ್ಸ್ ಇವರಿದ್ದ ಪ್ರದೇಶಗಳು, ಅಮೆರಿಕದ ಸ್ವಾತಂತ್ರ್ಯ ಯುದ್ಧಕ್ಕೆ ಸಂಬಂಧಿಸಿದ ಕೇಂದ್ರಗಳು ಇವುಗಳನ್ನು ನೋಡುತ್ತ ದಿನಗಟ್ಟಲೆ ಕಳೆಯಬಹುದು. ಹತ್ತಿರವೇ ರಾಮಕೃಷ್ಣ ಮಠವಿದೆಯಂತೆ. ಇನ್ನೂ ಹೋಗಿಲ್ಲ. (ದೈವದಲ್ಲಿ ಶ್ರದ್ಧೆಯಿಲ್ಲದಿದ್ದರೂ ಶ್ರದ್ಧೆಯಿರುವವರ ಬಗ್ಗೆ ಶ್ರದ್ಧೆಯಿರುವುದರಿಂದ ಸ್ವಾಮಿ ಅಖಿಲಾನಂದರನ್ನು ಕಂಡುಬರುವ ಆಸೆ.)

ಬರುವ ದಿನ ತಿಳಿಸುವ ಪತ್ರಕ್ಕಾಗಿ ಎದುರು ನೋಡುತ್ತೇನೆ.

* * *

ಎಚ್.ವೈ. ಶಾರದಾ ಪ್ರಸಾದ್ ಕೇಂಬ್ರಿಜ್, ಜನವರಿ ೨೪, ೧೯೫೬

ನೀವು ಹೊರಟಾಗ ಊರನ್ನೂ ಬಂಧುಗಳನ್ನು ಎರಡನೆ ಸಲ ಬಿಟ್ಟು ಬಂದೆನೇನೋ ಎನಿಸಿತು. ಎರಡುವಾರ ಬಹಳ ಬೇಗ ಕಳೆದುಹೋದವು. ನೋಡಬೇಕಾದ್ದು ಮಾಡಬೇಕಾದ್ದು ತುಂಬ ಉಳಿಯಿತು. ಆದರೆ ನೋಡುವುದನ್ನೆಲ್ಲ ಯಾರು ತಾನೇ ನೋಡಿ ಮುಗಿಸಿದ್ದಾರೆ?

ನಿನ್ನೆ ಧಾರವಾಡದಿಂದ ನಿಮಗೆ ಪತ್ರ ಬಂದಿತ್ತು. ಯೇಲ್ ವಿಳಾಸಕ್ಕೆ ಕಳಿಸಿದ್ದೇನೆ. ಇವತ್ತು ಏನು ಟಪಾಲೂ ನಿಮಗೆ ಬರಲಿಲ್ಲ.

ಚಿದಂಬರಂರಿಂದ ನಿನ್ನೆ ಒಂದು ಕಾಗದ ಬಂತು. (ನಾನು ಆರ್.ಕೆ. ನಾರಾಯಣರ ಇನ್ನೊಂದು ಪುಸ್ತಕ ಕನ್ನಡಿಸಿದ್ದೆ. ಅದರ ಬಗ್ಗೆ ಪತ್ರ ವ್ಯವಹಾರ.) ಪ್ರೊಫೆಸರ್‌ಗಿರಿಯ ಅರ್ಜಿಗಳ ವಿಷಯ ಬರೆದಿದ್ದಾರೆ. ಫೆಬ್ರವರಿ ೧ ರೊಳಗೆ ನಿಮ್ಮ ಪತ್ರ ರಿಜಿಸ್ಟ್ರಾರರಿಗೆ ತಲಪಿರಬೇಕು, ಈ ದೂರದ ಫಜೀತಿಯಿಂದ ಆದೀತೋ ಇಲ್ಲವೋ ಎಂಬ ಚಿಂತೆಯ ನೆರಳು ಅವರ ಕಾಗದದಲ್ಲಿ ಕಾಣುತ್ತಿದೆ. ನೀವೇನೋ ೨೧ನೆಯ ತಾರೀಖಿನ ದಿನವೇ ಕಳಿಸಿದ್ದೀರಿ. ಆದರೆ ಎಣಿಸದ ತಡಗಳು ಒದುಗುವುದು ಇಂಥ ಸಂದರ್ಭಗಳಲ್ಲೇ. ೨೭–೨೮ಕ್ಕೆ ರಿಜಿಸ್ಟ್ರಾರರಿಗೆ ಒಂದು ಕೇಬ್ಲ್ ಕಳಿಸಿ ಅರ್ಜಿಯನ್ನು ರವಾನಿಸಿರುವ ಸಂಗತಿ ತಿಳಿಸುವುದು ಒಳ್ಳೆಯದಲ್ಲವೆ? ಚಿದಂಬರಂ ಅವರಿಗೆ ಬರೆದಿದ್ದೀರೆಂದು ನಂಬುತ್ತೇನೆ.

ಅಂದ ಹಾಗೆ, ಆರ್.ಕೆ. ನಾರಾಯಣ್ ಮಗಳು ಹೇಮಾವತಿಗೆ ಫೆಬ್ರವರಿ ೩ಕ್ಕೆ ಮದುವೆಯಂತೆ.

ನ್ಯೂಯಾರ್ಕಿನಲ್ಲಿ ಕಾಣುವ ಆಲೋಚನೆ ಕೈಗೂಡುತ್ತದೋ ಇಲ್ಲವೋ.

ನಿಮ್ಮ ಮಯಾಮಿ ನಂತರ ಹೆಸರು, ಪತ್ತೆ ಕೊಡಲಿಲ್ಲ.

* * *

ಎಚ್.ವೈ. ಶಾರದಾ ಪ್ರಸಾದ್ ಕೇಂಬ್ರಿಜ್, ಫೆಬ್ರವರಿ ೧೭, ೧೯೫೬

ಈ ತಿಂಗಳೇ ಬರೆಯದೆ ಹೋದ್ದಕ್ಕೆ ಕ್ಷಮೆಯಿರಬೇಕು. ಲಂಡನ್ ಅಡ್ರೆಸು ತಿಳಿದಿರಲಿಲ್ಲ. ರಾಕ್‌ಫೆಲರ್ ಕಚೇರಿಯವರಿಗೆ ೫ನೆಯ ತಾರೀಖೇ ಬರೆದಿದ್ದೆ. ಅವರಿಂದ ಉತ್ತರ ಈವತ್ತು ಬಂತು.

ಫೋಟೋಗಳು ಅಷ್ಟು ಚೆನ್ನಾಗಿ ಬಂದಿವೆ ಎನ್ನಲಾರೆ. ಕೈಚಳಕ ಕಡಿಮೆ. ಯಂತ್ರ ಹೊಸದಾಗಿದ್ದರಿಂದ ಅದರ ರಹಸ್ಯಗಳೂ ತಿಳಿದಿಲ್ಲ. ಆದರೂ ತೆಗೆದ ಚಿತ್ರಗಳ ಕೆಲವು ಪ್ರತಿ ಇದರೊಡನೆ ಇಟ್ಟಿದ್ದೇನೆ. ಎರಡು ಮೂರು ನಾನು ಉಳಿಸಿಕೊಂಡಿದ್ದೇನೆ. ಒಂದನ್ನು ನಿಮ್ಮ ಮಯಾಮಿ ಬಂಧುಗಳಿಗೆ ಕಳಿಸುವ ಇಚ್ಛೆ. ಇನ್ನೊಂದನ್ನು ನೇರವಾಗಿ ನಿಮ್ಮ ಮನೆಗೆ ಕಳಿಸೋಣವೇ ಎಂದಿದ್ದೇನೆ. ಈ ಪ್ರತಿಗಳು ತಲಪದೆ ಹೋದರೂ ಅದು ತಲಪುವ ಖಾತರಿ ಇರುತ್ತೆ.

ರಿಚರ್ಡ್ಸ್‌ರ ತರಗತಿಗೆ ಹೋಗುತ್ತಿದ್ದೇನೆ. ಅದೊಂದು ಅನುಭವ. ಅನುಭವವೆನ್ನುವುದಕ್ಕಿಂತ ಅಡ್ವೆಂಚರ್ ಎಂದರೆ ಚೆನ್ನಾಗಿರುತ್ತದೆ. ತಿದ್ದುಪಡಿಯ ವಿಷಯ ಆತನ ಕಾರ್ಯದರ್ಶಿಗೆ ತಿಳಿಸಿದೆ. ಅವರು ಕಳಿಸಬೇಕಾಗಿದ್ದ ಸಾಮಗ್ರಿಯ ವಿಷಯ ಕೇಳುವುದು ಮರೆತೆ. ಮುಂದಿನ ವಾರ ವಿಚಾರಿಸುತ್ತೇನೆ.

ಅಮೆರಿಕವಾದ ಮೇಲೆ ಇಂಗ್ಲೆಂಡು ಹೇಗೆನಿಸುತ್ತದೆ?

ಉತ್ತರ ಬಂದಮೇಲೆ ಇನ್ನಷ್ಟು ವಿಷಯಗಳು ಬರೆಯುತ್ತೇನೆ.

* * *

ಎಚ್.ವೈ. ಶಾರದಾ ಪ್ರಸಾದ್ ಕೇಂಬ್ರಿಜ್, ಏಪ್ರಿಲ್ ೧೩, ೧೯೫೬

ಈ ದಿನ ನೀವು ಬೊಂಬಾಯಿ ತಲಪಿರುತ್ತೀರೋ ಏನೋ? ಹದಿನೈದಕ್ಕೆ ಧಾರವಾಡದಲ್ಲಿರುವುದಾಗಿ ಬರೆದ್ದೀರಿ. ರೋಮ್ ನಗರದಿಂದ ಬರೆದ ಪತ್ರಕ್ಕಾಗಿ ವಂದನೆ.

ಸಮುದ್ರಯಾನ ಹೇಗಿತ್ತು? ಕೆಂಪು ಸಮುದ್ರದ ಪ್ರಯಾಣ ದುಸ್ಸಹವೆಂದು ಹೇಳುತ್ತಾರಲ್ಲ, ಅದೇ ಅನುಭವವಾಯಿತೋ? ಇಲ್ಲ ಶಾಖ ಹತೋಟಿಯಿರುವ ಹಡಗಿನಲ್ಲಿ ಪ್ರಯಾಣ ಮಾಡಿದಿರೋ?

ಮಯಾಮಿಗೆ ಚಿತ್ರ ಕಳಿಸಿದೆ. ಅದೂ ನಿಮ್ಮ ಪತ್ರ ತಲುಪಿದ ಮೇಲೆ. ಉತ್ತರ ಬಂದಿಲ್ಲ. ಧಾರವಾಡಕ್ಕೆ ಕಳಿಸುತ್ತೇನೆ ಎಂದುಕೊಳ್ಳುತ್ತ ಮುಂದಕ್ಕೆ ತಳ್ಳಿದೆ. ಈಗಲಾದರೂ ಇದರೊಡನೆ ಇಟ್ಟರೆ ತಪ್ಪಿಲ್ಲವಲ್ಲ?

ನಿನ್ನೆ ಯುಗಾದಿ. ಯುಗಾದಿಗೆ ನನಗೊಂದು ಅಪರೂಪದ ಅನುಭವವಾಯಿತು. ಪ್ರೊ. ಐ.ಎ. ರಿಚರ್ಡ್ಸ್‌ರು ತಮ್ಮ ತರಗತಿಯಲ್ಲಿ ಒಂದು ಕನ್ನಡ ಪದ್ಯ ಓದು ಎಂದರು. "ಕುರುಡು ಕಾಂಚಾಣಾ"ದ ಅನುವಾದವನ್ನು ನೀವು ಅವರಿಗೆ ಕೊಟ್ಟಿದ್ದಿರಷ್ಟೆ. ಅದನ್ನು ಸೈಕ್ಲೋಸ್ಟೈಲ್ ಮಾಡಿಸಿ ತಂದು ತರಗತಿಯಲ್ಲಿನ ನೂರಿಪ್ಪತ್ತು ಹುಡುಗ ಹುಡುಗಿಯರಿಗೆ ಹಂಚಿದರು. ಕನ್ನಡದ ಅರ್ಥವೇ ಆಗದ ಅಷ್ಟು ಜನರ ಮುಂದೆ ಕನ್ನಡ ಪದ್ಯ ಓದುವ ಅವಕಾಶ ದಿನವೂ ಬರುವಂಥದಲ್ಲ ಅಲ್ಲವೆ?....... ಆತನ ಪ್ರತಿ ತರಗತಿಗೂ ಆತನ ಪತ್ನಿ ಸಹ ಬರುತ್ತಾರೆ. ತರಗತಿ ಆದ ಮೇಲೆ ಆಕೆಯೊಡನೆ ಒಂದೆರಡು ನಿಮಿಷ ಮಾತಾಡಿದೆ. ನಿಮ್ಮ ನೆನಪು ಮಾಡಿಕೊಂಡರು.

ನಾಟಕ ವ್ಯಾಸಂಗದ ವಿಶೇಷ ಸೌಲಭ್ಯಗಳ ಬಗ್ಗೆ ರಂಗನಾಥ್ ವಿಚಾರ ಮಾಡಬಹುದು. ಯೇಲ್‌ಗೆ ನೀವು ಹೋಗಿದ್ದಾಗ ಈ ಮಾತು ಯಾರಾದರೂ ಹೇಳಿದ್ದರೋ ಇಲ್ಲವೋ, ಈ ಸೀಮೆಯಲ್ಲಿ ಎಲ್ಲಕ್ಕಿಂತ ಚೆನ್ನಾದ ನಾಟಕ ಸಂಶೋಧನಾ ಇಲಾಖೆ ಯೇಲ್‌ನಲ್ಲಿ ಇದೆಯಂತೆ. ವಿಶ್ವವಿದ್ಯಾಲಯದ ಕಚೇರಿಗೆ ಬರೆದರೆ ಎಲ್ಲ ವಿವರ ಕಳಿಸುತ್ತಾರೆ. ಅರ್ಜಿ ಕಳಿಸುವಾಗ ವೇತನಕ್ಕೂ ಪ್ರಯತ್ನಿಸಬಹುದು. ಈಗಿಂದ ಆತ ಆರಂಭಿಸಿದರೆ ಮುಂದಿನ ವರ್ಷದ ವೇಳೆಗೆ ಸಿಕ್ಕರೂ ಸಿಗಬಹುದು.

ನಾನೂ ಯೇಲ್‌ಗೆ ಹೋಗಿದ್ದೆ. ಕಳೆದ ಗುರುವಾರ ಒಬ್ಬ ಸ್ನೇಹಿತನೂ ನಾನೂ ಆತನ ಕಾರ್‌ನಲ್ಲಿ ಹಗಲು ಹೋಗಿ ಸಂಜೆಗೆ ಹಿಂದಿರುಗಿದೆವು. ಒಳ್ಳೇ ಬೆಳಕಿದ್ದ ದಿನ. ಇಲ್ಲಿ ಇನ್ನು ಚೈತ್ರ ಚಿಗುರು ಇಲ್ಲ. ಆ ಸುಂದರ ಕಟ್ಟಡಗಳನ್ನು ಬೋಳುಮರಗಳ ಮೂಲಕ ನೋಡುವುದು ಸರಿಯಲ್ಲ. ಹಚ್ಚನೆ ಎಲೆ ಬಂದಮೇಲೆ ಮತ್ತೆ ಹೋಗುತ್ತೇನೋ ಇಲ್ಲವೋ. ಆ ಆಡಂಬರದ ಕಟ್ಟಡಗಳನ್ನು ಮೆಚ್ಚುವುದೋ, ಹಾರ್ವರ್ಡ್‌ನ ಸೌಮ್ಯವಾದ ಕಟ್ಟಡಗಳು ಚೆನ್ನ ಎನ್ನುವುದೋ ತಿಳಿಯದೆ ಹೋಗುತ್ತದೆ.

ಯೇಲ್‌ಗೆ ಹೋದರೂ ಪಂಡಿತ್ ದಂಪತಿಗಳನ್ನು ಕಾಣಲಿಲ್ಲ. ಟೆಲಿಫೋನ್ ಡೈರೆಕ್ಟರಿಯಲ್ಲಿ ಅವರ ಹೆಸರಿರಲಿಲ್ಲ. ಆದ್ದರಿಂದ ಸುಲಭವಾದ ದಾರಿ ಮುಚ್ಚಿತು. ಮನೆ ಹುಡುಕಿಕೊಂಡು ಹೋಗೋಣವೆಂದರೆ ಸ್ನೇಹಿತ ಅಷ್ಟು ಉತ್ಸಾಹ ತೋರಿಸಲಿಲ್ಲ.

ಚೆಸ್ಟರ್ ಬೋಲ್ಸ್‌ರೊಡನೆ ಮಾತಾಡುವ ಅವಕಾಶ ದೊರೆಯಿತು. ಆತ ಇಲ್ಲಿಯ ರಾಜ್ಯಶಾಸ್ತ್ರದ ಆಶ್ರಯದಲ್ಲಿ ಮೂರು ಭಾಷಣವಿತ್ತರು. ಅಲ್ಲದೆ ಈ ಬೆಳಿಗ್ಗೆ ನಮ್ಮ ನೀಮನ್ ಗುಂಪಿನೊಡನೆ "ನಾಶ್ತ"ಕ್ಕೆ ಬಂದರು. ನಮಗಿಂತ ಭಾರತೀಯ! ಆತನ ಹೆಂಡತಿ ಖಾದಿ ಟೋಪಿ ತೊಡುತ್ತಾರೆ. ಅದರ ಮೇಲೆ ನಾಗರೀ ಲಿಪಿಯಲ್ಲಿ ಆಕೆಯ ಹೆಸರು ಬಿಡಿಸಿದಂಥ ಒಂದು ಬ್ರೋಚ್‌ಅನ್ನು

ಸಿಕ್ಕಿಸಿಕೊಂಡಿರುತ್ತಾರೆ! "ಇಜಿಪ್ಟಿಗೆ ಶಸ್ತ್ರ ಕೊಟ್ಟು ಇಸ್ರಾಯಿಲ್–ಅರಬ್ಬೀಗಳ ನಡುವಿನ ಸಮತೂಕವನ್ನು ಕೆಡಿಸಿದರೆಂದು ರಷ್ಯನರನ್ನು ದೂರುತ್ತೇವೆ. ನಾವು ಪಾಕೀಸ್ತಾನಕ್ಕೆ ಶಸ್ತ್ರಕೊಟ್ಟು ಭಾರತ–ಪಾಕೀಸ್ತಾನ ನಡುವಿನ ಸಮತೂಕ ಕೆಡಿಸುವುದು ನ್ಯಾಯವೇ?" ಎಂದು ಆತ ನೇರವಾಗಿ ಕೇಳಿದ್ದು ಕೆಲವು ಅಮೆರಿಕನರಿಗೆ ಸಿಟ್ಟು ಬಂತು.

ಟ್ರೂಮನ್, ಡ್ಯೂಯಿ, ವಾಲಾಸ್ ಇವರುಗಳನ್ನು ಕಾಣುವ–ಕೇಳುವ ಅವಕಾಶ ಸಿಕ್ಕಿತ್ತು.

ಈ ಪಟ್ಟಿ ಹಾಗಿರಲಿ. ಮೈಸೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಪಟ್ಟದ ವಿಷಯ ವೇನಾದರೂ ತಿಳಿಯಿತೇ? ಅಥವಾ ಇನ್ನೂ ಕೆಲವು ತಿಂಗಳು ಹಿಡಿದೀತೋ......

ಮೈಸೂರು, ಕರ್ನಾಟಕ ಇವುಗಳ ನಡುವಿನ ಹೆಸರಿನ ಚರ್ಚೆಯೇನೋ ತೀರ್ಮಾನವಾಯಿತು. ಆದರೆ ಕನ್ನಡ ಸೀಮೆ ಕನ್ನಡ ಸೀಮೆಯಾಗಿಯೇ ಉಳಿದೀತೋ, ಅಥವಾ ಅಷ್ಟರೊಳಗೆ ದಕ್ಷಿಣಪ್ರದೇಶ ತಲೆಯೆತ್ತುತ್ತದೋ? ಬಿಲ್‌ನಲ್ಲಿ ದಕ್ಷಿಣ ಪ್ರದೇಶದ ಸೊಲ್ಲಿಲ್ಲ. ಆದರೆ ಅದನ್ನು ಮಂಡಿಸುತ್ತ ಹನುಮಂತಯ್ಯ ದಕ್ಷಿಣಪ್ರದೇಶದ ಮಾತು ತಂದರು ಎಂದು ಸ್ನೇಹಿತರೊಬ್ಬರು ಬರೆದಿದ್ದರು. ನಾನು ಹಿಂದಿರುಗುವ ಹೊತ್ತಿಗೆ ಕುಂತೀಮಕ್ಕಳಿಗೆ ರಾಜ್ಯ ಸಿಕ್ಕಿರುತ್ತೋ?

ಅಕ್ಟೋಬರ್ ೧ ಕ್ಕೆ ನೇಪಲ್ಸ್ ಬಿಡುವುದು ಎಂದು ಸದ್ಯದ ಯೋಚನೆ. ಇಲ್ಲಿ ಇನ್ನು ಮೂರು ವಾರಗಳ ವಾಸ ಮಾತ್ರ. ಅನಂತರ ಎಲ್ಲೆಲ್ಲಿ ಎಂಬುದನ್ನು ಕುಳಿತು ಇನ್ನೂ ಲೆಕ್ಕ ಹಾಕಿಲ್ಲ. ಎಲ್ಲ ಕಡೆಯ ನಿಮಿಷದಲ್ಲಿ ಸರಿಗಟ್ಟಿಕೊಂಡು ಬರುತ್ತೆ ಎಂಬ ಒಂದು ಧೈರ್ಯ. ಅದು ಸುಳ್ಳು ಧೈರ್ಯ ಎನ್ನಬಹುದೇನು? ನ್ಯೂಯಾರ್ಕಿನಲ್ಲಿ, ವಾಷಿಂಗ್‌ಟನ್ನಿನಲ್ಲಿ ಏನೇನು ನೋಡುವುದು ಮಾಡುವುದು ಪಟ್ಟಿ ಹಾಕಿಕೊಂಡಿದ್ದೇನೆ. ಪಂಡಿತ ನೆಹರೂ ಜುಲೈಯಲ್ಲಿ ಬರುತ್ತಾರಲ್ಲವೆ? ಆಗ ಇಲ್ಲಿದ್ದು ವರದಿ ಕಳಿಸುವುದಕ್ಕೆ ಸಾಧ್ಯವೇ ಎಂದು ಪ್ರಯತ್ನಿಸುತ್ತಿದ್ದೇನೆ. ಬರೆದ ಕಾಗದಗಳಿಗೆ ಉತ್ತರ ಬಂದಮೇಲೆ ಕಾರ್ಯಕ್ರಮದ ಆಖೈರು ನಿಷ್ಕರ್ಷೆ.

ಮುಗಳಿಯವರಿಂದ ಕಾಗದ ಬಂದಿತ್ತು. ಅವರಿಗೆ ಸನ್ಮಾನ ಬಂದ ಸುದ್ದಿ ಸಾಧ್ಯವಾದರೆ ನಿಮಗೆ ತಿಳಿಸುವುದು ಎಂದು ಬರೆದಿದ್ದರು. ಆದರೆ ನಿಮ್ಮ ಇಟಲಿ ವಿಳಾಸ ತಿಳಿದಿರಲಿಲ್ಲ ಸುಮ್ಮನಾದೆ. ಪುಣೆಯವರು ಕನ್ನಡದವರಿಗೆ ಈ ರೀತಿಯ ಗೌರವ ತೋರಿಸಿದ್ದು ಸಂತೋಷದ ವಿಚಾರವಲ್ಲವೆ?

ಮಾರ್ಚಿಯಲ್ಲಿ ಒಟ್ಟು ೩೦ ಅಂಗುಲ ಸ್ನೋ ಸುರಿಯಿತು. ಅರವತ್ತು ವರ್ಷಗಳಿಂದ ಇಷ್ಟು ಅವಾಂತರವಾಗಿರಲಿಲ್ಲವಂತೆ. ಕಳೆದ ವಾರ ಸಹ ಒಂದು ಮಂಜಿನಗಾಳಿ ಝಾಡಿಸಿತು. ಅದರ ಹೊಡೆತದಿಂದ ಹತ್ತು ಲಕ್ಷ ಜನಕ್ಕೆ ದೀಪ ಶಾಖ ಹೋದುವು ಇಡೀ ದಿನ. ಕೇಂಬ್ರಿಜ್‌ನಲ್ಲಿ ಯಾವ ತೊಂದರೆಯೂ ಆಗಲಿಲ್ಲ, ಸದ್ಯ.

* * *

ಎನ್.ಕೆ. ದೀಕ್ಷಿತ್ ಧಾರವಾಡ, ೨೨-೧೦-೧೯೫೫

ನಿಮ್ಮ ಸ್ನೇಹಭರಿತವಾದ ೧೬ನೇ ತಾರೀಖಿನ ಪತ್ರ ನಿನ್ನೆ ಸಂಜೆಗೆ ಕೈ ಸೇರಿತು. ಓದಿ ನಾವೆಲ್ಲರೂ ತುಂಬಾ ಸಂತೋಷಪಟ್ಟೆವು. ಸಣ್ಣಪತ್ರದಲ್ಲಿ ಎಷ್ಟೊಂದು ಸೂಕ್ಷ್ಮ ಸಮಸ್ಯೆಗಳನ್ನು ಅಚ್ಚುಕಟ್ಟಾಗಿ ಚರ್ಚಿಸಿರುವಿರಿ. ನಿಮ್ಮದೇ ಆದ ಸೌಜನ್ಯಕ್ಕನುಸರಿಸಿ "ಇದೆಲ್ಲ ನಿಮಗೆ ತಿಳಿದಿರುವ ವಿಷಯವೇ" ಎಂದು ಬರೆದಿರುವಿರಿ!

ನಿಮ್ಮ ಮನೆಯ ಕಡೆಗೆ ನಾನೇ ಹೋಗದಿದ್ದರೂ ಅವರ ಕ್ಷೇಮ ಸಮಾಚಾರವನ್ನು ಆಗಿಂದಾಗ್ಗೆ ತಿಳಕೊಳ್ಳುತ್ತಿರುತ್ತೇನೆ. ನಮ್ಮ ಚಿ॥ ಶಂಕರನಿಗೆ ನಿಮ್ಮ ಚಿ॥ ನಾಗರತ್ನಳ ಭೆಟ್ಟಿಯು ಆಗಾಗ್ಗೆ ಆಗುತ್ತಿರುವುದರಿಂದ ತೊಂದರೆಯಿಲ್ಲದೆ ಈ ಕೆಲಸ ನಡೀತಾ ಇದೆ.

ಇಲ್ಲಿ ಎಲ್ಲ ಮಿತ್ರರೂ ನಿಮ್ಮ ನೆನಪು ಆಗಾಗ್ಗೆ ತೆಗೆಯುತ್ತಾರೆ. ಅದರಲ್ಲಿಯೂ ಯುನಿವರ್ಸಿಟಿಯಲ್ಲಿ ಹಾಗೂ ನಾಡಹಬ್ಬದಂಥ ಕಾರ್ಯಕ್ರಮಗಳಲ್ಲಿ ನಿಮ್ಮ ನೆನಪು ಎಲ್ಲರಿಗೂ ಹೆಚ್ಚಾಗಿ ಆಗುತ್ತದೆ. ನಿನ್ನೆ ಸಂಜೆ ನಾಡಹಬ್ಬದ ಕಾರ್ಯಕ್ರಮದಲ್ಲಿ ಕಣವಿ, ಕರ್ಕಿ, ನಾನು ಇನ್ನೂ ಕೆಲವರು ಕೂಡಿದ್ದೆವು. ನೀವು ಇದ್ದರೆ ಹೆಚ್ಚು ಕಳೆ ಬರುತ್ತಿತ್ತೆಂದು ಮಾತಾಡಿದೆವು. ಆದರೆ, ಇನ್ನು ಕೆಲವೇ ತಿಂಗಳಲ್ಲಿ ಮತ್ತಿಷ್ಟು ಜ್ಞಾನಾರ್ಜನೆ ಅನುಭವ ಪಡೆದುಕೊಂಡು ಬರುವಿರೆಂದು ಖಾತ್ರಿ ಇದ್ದದರಿಂದ, ಸಂತೋಷದಲ್ಲೇ ಇದ್ದೇವೆ. ನೀವಾದರೂ ಇದೇ ಮುಂಬರುವ ಶುಭೋದಯವನ್ನು ಮುಂದಿಟ್ಟುಕೊಂಡು, ಇತ್ತ ಕಡೆಯ ನೆನಪಿಗೆ ವಿಶೇಷ ಅವಕಾಶ ಕೊಡದೇ ಅಲ್ಲಿಯ ಅಭ್ಯಾಸ ಮುಂದೆ ಸಾಗಿಸಿರಿ.

ನಿಮ್ಮ ಮುಂದಿನ ಪತ್ರದಲ್ಲಿ ನೀವು ಅಲ್ಲಿ ಹೋದದ್ದರಿಂದ ಅಲ್ಲಿಯ ಜನರಿಗೆ ಆದ ಉಪಯೋಗದ ವಿಷಯವಾಗಿ ಬರೆಯಿರಿ. ಅಲ್ಲಿ ನಿಮ್ಮ ವ್ಯಾಖ್ಯಾನಗಳಾಗಿದ್ದರೆ ಆ ವಿಷಯ ಬರೆಯಿರಿ. ನಿಮ್ಮ ಸಹವಾಸದಿಂದ ನಿಮ್ಮ ಸ್ನೇಹಿತರಿಗೆ, ನಿಮ್ಮ ಸಹಧ್ಯಾಯಿಗಳಿಗೆ, ನಿಮ್ಮ ಅಧ್ಯಾಪಕರಿಗೆ, ನಿಮ್ಮ ಸಹೋದ್ಯೋಗಿಗಳಿಗೆ, ಏನೇನು ಹಿತವಾಗಿರುತ್ತದೆಂಬುದನ್ನು ಬರೆಯಿರಿ. ಈ ವಿಷಯಗಳನ್ನು ಬರೆಯುವುದು ನಿಮಗೆ ವಗ್ಗದಿದ್ದರೂ, ನಮಗೆ ತಿಳಕೊಳ್ಳುವ ಮನಸ್ಸಿದೆ. ಆದ್ದರಿಂದ ದಯವಿಟ್ಟು ಬರೆಯಿರಿ.

ಸಿಂಡಿಕೇಟಿನ ಕೆಲಸ ಚೆನ್ನಾಗಿ ನಡೆದಿದೆ. ಗೋಕಾಕರ ಇಚ್ಛೆಯ ಮೇರೆಗೆ ಅವರ ಸಹಾಯದಿಂದಲೇ ಆರಿಸಿ ಬಂದಿದ್ದೇನೆ. ಕರ್ನಾಟಕ ಪ್ರಾಂತದ ವಿಷಯಕ್ಕೆ ಈಗ ರಾಜಕೀಯ ಸ್ವರೂಪ ಬಂದದ್ದರಿಂದ ನನಗೆ ವಿಶೇಷ ಸಂಬಂಧ ಬರುವುದಿಲ್ಲ. ರಿಪೋರ್ಟಿನಲ್ಲಿ ಎಲ್ಲವೂ ಸರಿಯಾಗಿರುವದೆಂದು ಹೇಳಲು ಬರುವಂತಿಲ್ಲ.

* * *

UNIVERSITY OF CALIFORNIA

Prof . Murray Emeneau November 9, 1955

Many Thanks for your letter of Oct 10th and for the book by Prof. Hiriyanna, which I am very glad to possess. I should have written long ago-I can only make the normal plea of an American Professor and scholar that I am overburdened with teaching and committee work.

It was a great pleasure to have the opportunity of seeing something of you this summer. My wife enjoyed it as much as I did. We were especially pleased that your visit coincided with a dinner party so that we could give you adequate hospitality. It would be grand if you can come again.

Krishnamurthy (who has now acquired the name Chris, short for Christopher) is, I think, doing very well. He is working hard. His plans for future in detail keep changing, and I do not really know what they are at the moment. We have a seminar together in comparitive Dravidian with interesting results on various points.

All best greetings.

* * *

HARVARD UNIVERSITY

Depeartment of Sanskrit and Indian Studies

Daniel H.H. Ingals Dec 5, 1955

Chairman

Many thanks for the copy of Hiriyanna's Art Experience, and for the two off prints of articles from your own pen.

I have read perhaps half of the articles contained in the Hiriyanna's volume. Those that are new to me delight me as much as those which I already know.

Your own articles interest me greatly. The translations are very good. This type of translation-with simple prose-is always the safest, and I think almost always, the best. One loses, something of the original, but at least one does not add false jewelry that the original did not possess.

Alas, the Subhasitaratnakosa furnishes no more of your Asvaghosa. The only verse ascribed to him is the one which you already know from Thomas : आबाहूद्वत मण्डलाग्ररुचयः and unless we have made a slip, none of the verses of Asvaghosa which are preserved in the Sankrit have been entered in the anthology anonymously. For those which exist only in the Tibetan and Chinese I haven't checked.

With best regards and once more with many thanks.

* * *

Bh . Krishnamurthy Berkeley, Dec 4, 1955

I'm extremely sorry for writing to you so long after getting your letter. I sincerely apologize to you for that. I attempted to do your work and started it two or three times. The class-work and course work are so exacting here that I could not do any progress in writing up your lists. I was never so much overworked in my life as at present. Recently I took the exam in French sent here from Penn. Prof. Emeneau administered the exam. I have to pass German exam before long. As you know I have my whole thesis to be revised and typed before May. Under these circumstances I am sorry to say that I cannot do the whole work you assigned to me. May I suggest you an alternative. Please take up Sankara Narayana's Engl-Tel Dictionary which Dr. Lisker has. It is quite reliable both for Ancient & Modern Telugu and complete the lists. I shall then check your list and make the necessary corrections and return the sheets to you immediately.

I hope you will appreciate my problems and difficulties. May you not mistake that I'm not cooperating with you in your work. I

will do all that I can without prejudice to my work. I have to write 3 term papers during the Christmas.

What are your further plans for the next semester? How do you find Philadelphia?

* * *

Bert Salzman Miami, December 4, 1955

Dear Sree

Your letters brought much enjoyment..... we have read and re-read them..... smiled....chuckled..... grinned..... dragged out the "Book of Knowledge" to check-up on your country— located Dharwar on the map— couldn't find anything about Karnatak University....

I Know you meant it "seriously", but I really had to laugh at the thought of taking weeks to get up the "courage" to address Bert, as such. No, I did not laugh at you-it just seemed so funny and dear— so don't you take offense, now.

Your explanation of your name is very sensible and understandable and if I were in your country, I would not run the risk of offending anyone, but would address them as is the custom. I can see that our attempts to be friendly and make people feel "at home" could easily be interpreted as rudeness— or at least lacking in polite formality..... but it is not so. We are (if you can generalize for so many people)— usually eager to "know" people— and to "nickname" them— that is, to give them a "short" name— usually in fun, or friendliness.

I can only give you one piece of advice regarding "American ladies"— you can't go "wrong" if you address them the way you are introduced, and if they prefer the more formal "Miss....." or "Mrs...." they won't "correct" you, but if they are like Bert, they will say..... "please call me Bert..... or Mary..... or whatever their 'first' name

happens to be"..... and that is that..... and it will never be thought of as "too sudden'' or "too familiar".

I think the "cutest"custom is that of children..... they can never remember tne complicated "last names" and will usually address you by your child's name— for example— **''Kenny's Mommy,** can Kenny come over to my house to play?'' Mommy being the "nick-name'' for Mother. Or— **"Gerald's Daddy,** please tell Gerald I'll see him tomorrow...." Daddy being the "nickname" for Father. (I told you this is a country of nicknames, didn't I.)

.......I was so impressed by that very neat precise hand writing belonging to Sreekantaiya.

* * *

Bert Salzman Miami, Jan 30, 1956

As I told you, Edy Glickstein wrote a lovely letter, immediately following your visit, and I will quote from her letter so that you may know all the lovely comments for yourself....."Now - to thank you for an experience I wouldn't have missed for the worlds! I did hear from Gary's Indian Professor friend... he is only a Wonderful person. Completely warm, friendly, thrilled with the children, interesting to listen and talk to, and completely gracious.... when he said good-bye, he placed both hands on my shoulders and said 'I do hope I have not become too familiar or intruded in any way... but I do want you to know there is an elder 'venerable' in India who will be wishing you all the happiness and joy you so richly deserve.' Needless to say- I gulped more than once - this type of fatherly exhibition of kindnesss, intelligence is one I never had and it completely bowled me over. I gained a most wonderful acquaintance and experience. Life is truly strange.... The children got much pleasure from his visit.... and he spent much time talking to them and holding them on his lap. A most demonstrative - yet I can see, reticent person - if the circumstances

required reticence..... Well...... such an experience comes once in a lifetime.... I know in my heart I was lucky to have met such a person and shared my home and family circle with him...."

So goodnite, Sree, and take good care of yourself, and as I said-- we will call you THURSDAY evening. Keeep well, and be happy, and have a lovely journey home, and take our good wishes with you, for you and all your family. I have been concerned over news reports of political trouble in Bombay-- and hope that it has not touched your friends and family in any way. Love from us all...

* * *

ಹೆಚ್.ಕೆ. ರಂಗನಾಥ್ ಧಾರವಾಡ, ೮-೧೨-೫೫

ಅಂದಿನಿಂದ ಇಂದಿನವರೆಗೂ ನಿಮ್ಮ ಮನೆಯ ಕಡೆಗೆ, ಒಂದು ಬಾರಿ ಬಿಟ್ಟು ಹೋಗುವುದಾಗಲಿಲ್ಲ. ಮಧ್ಯೆ ಎರಡು ತಿಂಗಳು training ಎಂದು Delhi ಗೆ ಹೋಗಿದ್ದೆ. ಬಂದ ನಂತರ ಮೂರುವಾರ ಕಾಲ ಅಂಕೋಲೆಗೆ ಪತ್ನಿ ಪುತ್ರಿ ಸಹಿತ ಹೋಗಿ ಬಂದೆ. ಕಣವಿ, ಅನಂತ ಮೂರ್ತಿಯವರಿಂದ ನಿಮ್ಮ ಮನೆಯ ಕ್ಷೇಮ ಸಮಾಚಾರ regular ಆಗಿ ತಿಳಿದು ಬರುತ್ತಿದೆ. ಹೋದವಾರ ಎರಡು ಸಲ ಚಿ॥ ನಾಗಭೂಷಣ ನಮ್ಮ ಮನೆಗೆ ಬಂದಿದ್ದ. ಇಲ್ಲಿ Karnatak Collegeನ ಕ್ರೀಡಾಂಗಣದಲ್ಲಿ Regional Sports meet ಆಗುವಾಗ ನೋಡಲು ಬಂದಿದ್ದ. ಅವನು ತನ್ನ cycle ಇಡುವ ಸಲುವಾಗಿ ನಮ್ಮ ಮೆಟ್ಟಿಲು ಹತ್ತಲೇ ಬೇಕಾಯಿತು. ಅಷ್ಟಾದರೂ ಬಿಡುವಿನಲ್ಲಿ ಹರಟೆ ಕೊಚ್ಚಿದೆವು. ಮನೆಯ ಹಾಗೂ ನಿಮ್ಮ ಕ್ಷೇಮ ಸಮಾಚಾರಗಳನ್ನೆಲ್ಲ ತಿಳಿಸಿದ. ಕೇಳಿದೊಡನೆ ಬಾಯಿಪಾಠ ಮಾಡಿದವರಂತೆ ಸುರುಳಿ ಸುರುಳಿಯಾಗಿ ನಿಮ್ಮ ವಿಳಾಸವನ್ನು ಒಂದೇ ಉಸುರಿಗೆ ಊದಿದ. ಅಂತೆಯೇ ಅವನ ನೆರವಿನಿಂದ ಸ್ವಾರ್ಥಕ್ಕಾಗಿ ಬರೆಯುತ್ತಿದ್ದೇನೆ-ಸಾಧ್ಯವಾದರೆ ಸ್ವಲ್ಪ ಸಹಾಯ ಮಾಡಿ ಎಂದು ಕೇಳುವುದಕ್ಕಾಗಿ.

ನಾನು ಡೆಲ್ಲಿಯಲ್ಲಿದ್ದಾಗ American Foundation in India ದ ಕಾರ್ಯದರ್ಶಿ ಡಾ॥ ಥೋಬರ್ನ್ ಅವರನ್ನು ಕಂಡಿದ್ದೆ. ಅವರಿಂದ Introduction ತೆಗೆದುಕೊಂಡು ಬೊಂಬಾಯಿನ USISನ CAO ಆದ ಮಿಸ್ Parseghian ಅವರೆಗೆ ಪತ್ರ ಬರೆದೆ-ನನ್ನ ಕಥೆಯನ್ನೆಲ್ಲ ತಿಳಿಸಿ. ನಾಟಕ ರಂಗದಲ್ಲಿ ನನ್ನ ಅನುಭವವನ್ನೂ, ಬರೆದ ನಾಟಕಗಳ ವಿಷಯವಾಗಿಯೂ, ನಮ್ಮ ರಂಗಭೂಮಿಯ ಬಗೆಗೆ ಬರೆದ thesis ವಿಷಯವನ್ನು ಬರೆದಿದ್ದೆ. Thoburn ಅವರಿಗೆ ನನ್ನ thesis ತೋರಿಸಿದ್ದೆ. ಅವರು ನನ್ನ ಅರ್ಹತೆಯನ್ನು ಒಪ್ಪಿಕೊಂಡಂತೆ ಕಂಡುಬಂತು. ಅಮೆರಿಕಾದಲ್ಲಿ ನಾಟಕಕಲೆ-ರಂಗಭೂಮಿ ವ್ಯಾಸಂಗಕ್ಕೆ ಅವಕಾಶವನ್ನು ಕುರಿತು ವಿಚಾರಿಸಿದಾಗ

ಈಗ ಸಧ್ಯಕ್ಕೆ scholarship ಗಳನ್ನು ಅಮೆರಿಕನ್ ಸಂಸ್ಥೆಗಳು ಹಾಗೂ ಸರಕಾರ ನಿಲ್ಲಿಸಿರುವುದಾಗಿ ಹೇಳಿ ಜನವರಿಯಲ್ಲಿ ತಮಗೆ ಮತ್ತೆ ಬರೆಯುವಂತೆ ತಿಳಿಸಿದರು-ಏನಾದರೂ travel-grant ದೊರಕಿಸುವ ಸಲುವಾಗಿ. ಮತ್ತೆ ಮುಂದೆ ಬರೆದ ಮೂರು ಸಂಸ್ಥೆಗಳ ವಿಳಾಸಕೊಟ್ಟು ಅಲ್ಲಿಂದ ಮಾಹಿತಿ, ಸಹಾಯಗಳನ್ನು ಅಪೇಕ್ಷಿಸಬೇಕೆಂದು ತಿಳಿಸಿದರು. ನೇರವಾಗಿಯೂ ನಾನು ಈ ಸಂಸ್ಥೆಗಳಿಗೆ ಬರೆಯುತ್ತಿದ್ದೇನೆ – ಮತ್ತೆ ತಮಗೆ ಸಾಧ್ಯವಾದರೆ, ತೊಂದರೆಯಾಗದಿದ್ದರೆ ನಮ್ಮಂತಹವರಿಗೆ ಯವುದಾದರೂ scholarship ಅಥವಾ ಸಿಗುವ travel-grant ಬಗೆಗೆ ವಿಚಾರಸಲು ಸಾಧ್ಯವೇ ಎಂದು ತಿಳಿದುಕೊಳ್ಳಲು ಬಯಕೆ. ....ಇಷ್ಟೆಲ್ಲಾ ಆದಮೇಲೆ, ಈ ತಿಂಗಳುಗಳಲ್ಲಿ ನೀವು ಸಂಪಾದಿಸಿರುವ ಅಮೇರಿಕನ್ ಮಿತ್ರರ ನೆರವಿನಿಂದ ನನಗೆ ಏನಾದರೂ ಸಹಾಯ ದೊರಕಿಸಲು ಸಾಧ್ಯವೇ?

ಈ ನನ್ನ ಪತ್ರ ಓದಿದ ಮೇಲೆ, 'ಹಾಯ್! ಯಾಕಾದರೂ ಅಮೆರಿಕೆಗೆ ಬಂದೆನಪ್ಪಾ-ಇಂತಹ ಕಾಟ ಸಹಿಸುವುದಕ್ಕೆ' ಎಂದು ನಿಮಗೆ ಅನಿಸುತ್ತದೆ. ಅನ್ನಿಸುವುದೇ ಸಹಜ, ಅದಕ್ಕೇ 'ಸಾಧ್ಯವಾದರೆ', 'ನಿಮಗೆ ತೊಂದರೆಯಾಗದಿದ್ದರೆ' ಎಂದು ಬರೆದಿದ್ದೇನೆ. ನಿಮ್ಮ ಕಾಲ ಇದರಿಂದ ತುಂಬಾ ವ್ಯಯವಾಗುದಾದರೆ ಅಥವಾ ತೊಂದರೆಯಾದರೆ ದಯವಿಟ್ಟು ನನ್ನ ಈ ಪತ್ರವನ್ನು ಮರೆತುಬಿಡಿ ಎಂದು ಬೇಡುವೆ.

ಇಲ್ಲಿ ನಮಗೆ ರಂಗಾಚಾರಿ ಎಂಬ ಹೊಸ ASD ಬಂದಿದ್ದಾರೆ. ಶಂಕರ್, ಕೃಷ್ಣಮೂರ್ತಿ ಎಲ್ಲ ಚೆನ್ನಾಗಿದಾರೆ. ಬೆಂಗಳೂರು station ಪ್ರಾರಂಭವಾಗಿದೆ. University ಯಲ್ಲಿ ಎಲ್ಲ ಎಂದಿನಂತೆ. ತಾವು ಹೇಗಿದ್ದೀರಿ? ದಿನಚರಿ ಹೇಗೆ? ಇನ್ನು ಸಿಗರೇಟು, ಮದ್ಯ-ಮಾಂ-ಮುಟ್ಟಿಲ್ಲವೆ? ಊಟ, ರುಚಿ, ನೀತಿ ಹೇಗೆ? ನಿಮಗೆ ಒಗ್ಗಿದೆಯೆ? ಬಿಡುವಾದಾಗ ಒಮ್ಮೆ ನಮಗೂ ಒಂದು ಪತ್ರ ಬರೆಯಿರಿ. ನಮ್ಮ ಮನೆಯಲ್ಲಿ ಎಲ್ಲ ಆರೋಗ್ಯ. ಶಾಂತಿ ನಿಮಗೆ ನಮಸ್ಕಾರ ತಿಳಿಸಿದಾಳೆ. ನಿಮ್ಮ ಮನೆಗೆ ಈ ವಾರ ಹೋಗಿ ಬರುವ plan ಮಾಡುತ್ತಿದ್ದೇವೆ.

* * *

UNIVERSITY OF PENNSYLVANIA
PHILADELPHIA 4

Department of Linguistics February 1, 1956

Of course, I am much obliged for your notes on Southworth and Levine. I have had a letter from Southworth directly; and so far as Levine is concerned, a decision is due any day now.

I am glad that you were able to see most of the people at Harvard and Yale. Mr. Stephens was in Washington that day; he will regret not having met you.

It is too bad that parting time is here. If only circumstances had allowed you to put in a whole year. However, even so, I hope you have enjoyed your stay.

The very best wishes to you from all of us, and please give my regards to Katre and his colleagues when you see them. And I do hope to see you again in a not too distant future.

Always yours,

H.M. Hoenigswald

* * *

UNIVERSITY OF EDINBURGH

Phonetics Department Edindurgh, 1st March 1956

First, may we say how good it was to see you in Edinburgh.

Here are the photographs which you took in the Laboratory. The number on them is our reference number, and if you want any further copies or enlargements of any particular photographs would you please write to us, quoting this number?

It is always difficult to interpret photographs without the aid of a cast of the subject's mouth, because the two dimensional representation gives one no idea of the depth of the palate. However, if you have a cast made, so that you can see for yourself that, e.g. the curve of your alveolar ridge is on a line with two specified teeth, I am sure that you will find it easier to describe the articulations you made in saying these words. Even without doing this one can see that some of the articulations are markedly different from others in that they are made much further back in the mouth.

Yours sincerely,
Peter Ladefoyed

ತೀ.ನಂ.ಶ್ರೀ. ನಿಧನ

ತೀ.ನಂ.ಶ್ರೀ.ಯವರು ಸೆಪ್ಟೆಂಬರ್ ೭, ೧೯೬೬ರಂದು ದೂರದ ಕಲ್ಕತ್ತ ನಗರದಲ್ಲಿ ಹೃದಯಾಘಾತದಿಂದ ಬೆಳಿಗ್ಗೆ ೮.೧೫ರಂದು ನಮ್ಮ ಸ್ನೇಹಿತರಾದ, ಆಗ ಅಲ್ಲಿ ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳಾಗಿದ್ದ ಶ್ರೀ ಜಿ.ಎಸ್. ಸಂಪತ್ ಅವರ ಮನೆಯಲ್ಲಿ ನಿಧನರಾದರು. ಅವರ ನಿಧನದ ಸಮಯದಲ್ಲಿ ನಾನು ಮತ್ತು ನಮ್ಮ ತಾಯಿ ಅವರ ಸನ್ನಿಧಿಯಲ್ಲೇ ಇದ್ದೆವು. ಹಿಂದಿನ ದಿನ ಬೆಳಗ್ಗೆಯೇ–ರಾಂಚಿಯಲ್ಲಿ ನನ್ನ ಅಕ್ಕನ ಮನೆಯಲ್ಲಿ ಮಗಳು ಅಳಿಯ ಮತ್ತು ಮೊಮ್ಮಗಳೊಡನೆ ನಮ್ಮ ತಾಯಿಯ ಜೊತೆಯಲ್ಲಿ ಸಂತೋಷವಾಗಿ ಒಂದು ವಾರ ಕಳೆದು–ಕಲ್ಕತ್ತೆಗೆ ನನ್ನನ್ನು ನೋಡಲು ಬಂದಿದ್ದರು. ನಾನು ಆಗ ಕಲ್ಕತ್ತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದೆ.

ಈ ನಿಧನದ ಸುದ್ದಿ ತಂತಿಯ ಮೂಲಕ ಮಧ್ಯಾಹ್ನದ ಸಮಯಕ್ಕೆ ಮೈಸೂರನ್ನು ತಲುಪಿದಾಗ, ಈ ಆಘಾತ ಸುದ್ದಿಯನ್ನು ಕೇಳಲು ಕನ್ನಡ ನಾಡು ಯಾವ ರೀತಿಯಲ್ಲೂ ಮಾನಸಿಕವಾಗಿ ಸಿದ್ಧವಾಗಿರಲಿಲ್ಲ. ಅವರೆಲ್ಲರೂ ಇನ್ನು ಮೂರು ದಿನಗಳಲ್ಲಿ ನಮ್ಮ ತಂದೆಯವರು ನಮ್ಮ ತಾಯಿಯ ಜೊತೆಯಲ್ಲಿ ಮೈಸೂರಿಗೆ ಹಿಂತಿರುಗುವುದನ್ನು ನಿರೀಕ್ಷಿಸುತ್ತಿದ್ದರು. ಅವರ ಸ್ನೇಹಿತರು, ಬಂಧುಗಳು, ಸಹೋದ್ಯೋಗಿಗಳು, ಶಿಷ್ಯರು ಮತ್ತು ಅಪಾರ ಅಭಿಮಾನಿಗಳಿಗೆ ಈ ಸುದ್ದಿ ಅಂದು ರಾತ್ರಿಯೇ ಆಕಾಶವಾಣಿಯಲ್ಲಿ ಪ್ರಸಾರವಾಗಿ ಮಾರನೆಯ ಬೆಳಗ್ಗೆ ವರ್ತಮಾನ ಪತ್ರಗಳಲ್ಲಿ ಪ್ರಕಟವಾಗಿ ಕನ್ನಡ ನಾಡಿನಾದ್ಯಂತ ಮತ್ತು ದೇಶದ ಎಲ್ಲೆಡೆ ಪ್ರಚಾರವಾದಾಗ ದುಃಖ ಮತ್ತು ಸಂತಾಪಗಳ ಮಹಾಪೂರವೇ ಬರಲು ಪ್ರಾರಂಭವಾಯಿತು. ಆದರೆ ತೀ.ನಂ.ಶ್ರೀ. ಅವರ ಅಂತ್ಯಸಂಸ್ಕಾರ ೭ನೆಯ ತಾರೀಖು ಮಧ್ಯಾಹ್ನವೇ ಕಲ್ಕತ್ತೆಯ ಹೂಗ್ಲಿನದಿಯ ತೀರದಲ್ಲಿ ವಿದ್ಯುತ್ ಚಿತಾಗಾರದಲ್ಲಿ ನಡೆದು, ಅವರ ಅಸ್ತಿಯ ವಿಸರ್ಜನೆ ಕೂಡಲೇ ಆ ನದಿಯಲ್ಲೇ ಮುಗಿದುಹೋಗಿತ್ತು. ಆದ್ದರಿಂದ ಅವರ ಅಂತ್ಯದರ್ಶನವು ಯಾರಿಗೂ ಕನ್ನಡನಾಡಿನಲ್ಲಿ ಆಗಲಿಲ್ಲ. ಈ ಕೊರಗು ಇಂದಿಗೂ ಅನೇಕರಲ್ಲಿ ಶಮನವಾಗಿಲ್ಲ.

ತೀ.ನಂ.ಶ್ರೀ.ಯವರು ತೀರಿಹೋದ ಅನೇಕ ದಿನಗಳವರೆಗೆ ಅವರ ಬಗ್ಗೆ ಪತ್ರಿಕೆಗಳಲ್ಲಿ ಲೇಖನಗಳು, ಕವಿತೆಗಳು ಮತ್ತು ನಾಡಿನಾದ್ಯಂತ ಮತ್ತು ಹೊರನಾಡಿನಲ್ಲಿ ನಡೆದ ಸಂತಾಪಸೂಚಕ ಸಭೆಯ ವಿವರಗಳು, ಶ್ರದ್ಧಾಂಜಲಿ ಸಂದೇಶಗಳು ಎಲ್ಲವೂ ಪ್ರಕಟವಾದವು. ಕನ್ನಡ ಸಾಹಿತ್ಯ ಪರಿಷತ್ತಿನ ೧೯೬೬ನೆ ಇಸವಿಯ ಅಕ್ಟೋಬರ್ ತಿಂಗಳ 'ಕನ್ನಡ ನುಡಿ', ದಿವಂಗತ ತೀ.ನಂ.ಶ್ರೀ. ವಿಶೇಷ ಸಂಚಿಕೆಯಾಗಿ ಪ್ರಕಟವಾಯಿತು. ಕೆಲವು ಲೇಖನಗಳು ನವೆಂಬರ್ ಸಂಚಿಕೆಯಲ್ಲೂ

ಬಂದವು. ತೀ.ನಂ.ಶ್ರೀ.ಯವರ ಶಿಷ್ಯ ಪ್ರೊ॥ ದೇ. ಜವರೇಗೌಡರು ಕೇವಲ ಎರಡು ತಿಂಗಳುಗಳ ಕಾಲದಲ್ಲಿಯೇ ತೀ.ನಂ.ಶ್ರೀ. ಯವರ ಬಗ್ಗೆ ಒಂದು ಪುಸ್ತಕ ಬರೆದು ಪ್ರಕಟಿಸಿದರು. ನಮಗೆ ಮನೆಯವರಿಗೆ ಅನೇಕ ಸಂತಾಪಸೂಚಕ ಪತ್ರಗಳು ಬಂದವು. ಸ್ಥಳಿಯರೂ ಮತ್ತು ಬೇರೆ ಊರುಗಳಿಂದ ಅನೇಕ ಮಿತ್ರರು, ಬಂಧುಗಳು, ಹಿತೈಷಿಗಳು ಬಂದು ನಮ್ಮನ್ನು ಭೇಟಿಮಾಡಿ ಸಂತೈಸಿ ಹಿಂತಿರುಗಿದರು.

ಈ ಸಂದರ್ಭದಲ್ಲಿ ಬಂದ ಪ್ರಕಟಣೆಗಳಲ್ಲಿ ಮತ್ತು ಪತ್ರಗಳಲ್ಲಿ ಕೆಲವನ್ನು ಆಯ್ಕೆ ಮಾಡಿ ಇಲ್ಲಿ ಕೊಡಲಾಗಿದೆ. ಲೇಖನಗಳಲ್ಲಿ ಬಂದ ಅವರ ಜೀವನ ಚರಿತ್ರೆ ಮತ್ತು ಗ್ರಂಥ ವಿವರಣೆ ಭಾಗಗಳನ್ನು ಪುನರಾವರ್ತನೆಯಾಗಬಾರದೆಂದು ಕೈಬಿಡಲಾಗಿದೆ. ಪ್ರತ್ಯೇಕ ಸೂಚನೆ ಕೊಡದಿರುವ ಲೇಖನಗಳನ್ನು 'ಕನ್ನಡ ನುಡಿ' ಸಂಚಿಕೆಗಳಿಂದ ತೆಗೆದುಕೊಳ್ಳಲಾಗಿದೆ. ಈ ಕವಿತೆಗಳು 'ಕನ್ನಡ ನುಡಿ' ಮತ್ತು ಇತರ ಪತ್ರಿಕೆಗಳಲ್ಲಿ ಹಾಗೂ ಪುಸ್ತಕಗಳಲ್ಲಿ ಪ್ರಕಟವಾಗಿದೆ.

ಕನ್ನಡ ನಾಡಿಗೆ ತೀ.ನಂ.ಶ್ರೀ.ಯವರ ಮೇಲಿದ್ದ ಅಪಾರ ಪ್ರೀತಿ, ಅಭಿಮಾನ, ಗೌರವ ಮತ್ತು ಅವರ ಆಕಸ್ಮಿಕ ನಿಧನವನ್ನು ಸಹಿಸಲಾರದ ದುಃಖ ಮತ್ತು ವಿದ್ವತ್ ಪ್ರಪಂಚಕ್ಕೆ ಆದ ಅಪಾರವಾದ ನಷ್ಟ ಈ ನುಡಿಗಳಲ್ಲಿ ವ್ಯಕ್ತವಾಗುತ್ತದೆ.

ಪತ್ರಿಕಾ ವರದಿಗಳು

●

ಹೃದಯಾಘಾತದಿಂದ ತೀ.ನಂ.ಶ್ರೀ ನಿಧನ

ಮೈಸೂರು ಸೆ. ೭: ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರೂ, ಖ್ಯಾತ ಕನ್ನಡ ವಿದ್ವಾಂಸರೂ ಆದ ಪ್ರೊ|| ತೀ.ನಂ. ಶ್ರೀಕಂಠಯ್ಯನವರು ಕಲ್ಕತ್ತದಲ್ಲಿ ಇಂದು ಬೆಳಿಗ್ಗೆ ನಿಧನರಾದ ಖೇದಕರ ಸುದ್ದಿ ಇಲ್ಲಿಗೆ ತಲುಪಿ, ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಮತ್ತು ಶೈಕ್ಷಣಿಕರಂಗದ ಮತ್ತಿತರರನ್ನು ದಿಗ್ಭ್ರಾಂತಗೊಳಿಸಿತು.

ಪ್ರೊ|| ತೀ.ನಂ. ಶ್ರೀಕಂಠಯ್ಯನವರು ತಮ್ಮ ಪುತ್ರಿಯನ್ನು ನೋಡಲು ರಾಂಚಿಗೆ ತೆರಳಿದ್ದು, ಅಲ್ಲಿಂದ ಮೈಸೂರಿಗೆ ವಾಪಸಾಗಲಿದ್ದರು.

ದಿವಂಗತರಿಗೆ ೫೯ ವರ್ಷ ವಯಸ್ಸಾಗಿತ್ತು. ಅವರಿಗೆ ಪತ್ನಿ, ಪುತ್ರ ಮತ್ತು ಓರ್ವ ಪುತ್ರಿ ಇದ್ದಾರೆ.

ಅಂತ್ಯಕ್ರಿಯೆ

ದಿವಂಗತ ಪ್ರೊ|| ತೀ.ನಂ. ಶ್ರೀಕಂಠಯ್ಯ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯು ಇಂದು ಮಧ್ಯಾಹ್ನವೇ ಕಲ್ಕತ್ತದಲ್ಲಿ ನಡೆಯಿತೆಂದು ಇಲ್ಲಿಗೆ ಬಂದ ಸುದ್ದಿಯೊಂದು ತಿಳಿಸಿದೆ. ಕಲ್ಕತ್ತೆಯಲ್ಲಿ ದಿವಂಗತರ ಪುತ್ರರು ಉದ್ಯೋಗದಲ್ಲಿದ್ದಾರೆ.

(ಇದರೊಡನೆ ತೀನಂಶ್ರೀಯವರ ಛಾಯಾಚಿತ್ರ ಮತ್ತು ಸಂಕ್ಷಿಪ್ತ ಜೀವನ ಪರಿಚಯವನ್ನು ಕೊಡಲಾಗಿತ್ತು)

(ಪ್ರಜಾವಾಣಿ)

* * *

T.N. Srikantaiah Dead

Mysore, Sept 7 : The news of the death in Calcutta today of Prof. T.N. Srikantaiah (59) a renowned Kannada Scholar and retired Kannada Professor of the Mysore University, has been received with profound shock here.

The late Professor was on his way back home from Ranchi where he had been to see his daughter.

Prof. Srikantaiah was a UGC Professor of the Mysore University. He was the Editor - in - chief of the Kannada Dictionary. He leaves his wife, a daughter and a son.

A state award was announced recently for Prof. Srikantaiah for his signal service to Kannada Literature.

Prof. Srikantaiah had also served as Professor of Kannada, Karnatak University for five years.

Great Loss

In a message Vice Chancellor K.L. Shrimali said that in the death of Prof. Srikantaiah the Mysore University & state had lost an eminent scholar.

(Deccan Herald)

ಶ್ರದ್ಧಾಂಜಲಿಗಳು

●

ಪತ್ರಿಕಾ ವರದಿಗಳು

(ವಿವಿಧ ವರ್ತಮಾನ ಪತ್ರಿಕೆಗಳು ಮತ್ತು 'ಕನ್ನಡನುಡಿ'ಯಲ್ಲಿ ಪ್ರಕಟವಾಗಿದ್ದವು)

ಕೆ.ಎಲ್. ಶ್ರೀಮಾಲಿ

ತೀ.ನಂ. ಶ್ರೀಕಂಠಯ್ಯ ಅವರ ನಿಧನದಿಂದ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ರಾಜ್ಯಕ್ಕೆ ಭಾರಿ ನಷ್ಟ ಉಂಟಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ॥ ಕೆ.ಎಲ್. ಶ್ರೀಮಾಲಿ ಅವರು ದುಃಖ ವ್ಯಕ್ತಪಡಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯವು ಸದ್ಯದಲ್ಲೇ ಸ್ಥಾಪಿಸಲಿರುವ ದಕ್ಷಿಣ ಭಾಷಾಧ್ಯಯನ ಸಂಸ್ಥೆಗೆ ಅವರು ತುಂಬಾ ನೆರವಾಗಿದ್ದರೆಂದೂ ಅವರು ತಿಳಿಸಿದ್ದಾರೆ.

ಅವರ ಮಾನವೀಯ ಗುಣಗಳು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ತುಂಬಾ ಪ್ರಭಾವ ಬೀರಿತ್ತೆಂದೂ ಅವರು ತಿಳಿಸಿದ್ದಾರೆ.

ತೀ.ನಂ. ಶ್ರೀಕಂಠಯ್ಯನವರು ವಿಶ್ವವಿದ್ಯಾನಿಲಯದಿಂದ ನಿವೃತ್ತಿ ಹೊಂದಿದ್ದರೂ ಕನ್ನಡದ ಬೆಳವಣಿಗೆಯ ಬಗ್ಗೆ ಅವರ ಸಲಹೆ, ಮಾರ್ಗದರ್ಶನಗಳು ಯಾವಾಗಲೂ ದೊರೆಯುತ್ತಿದ್ದವು. ಅವರ ನಿಧನದಿಂದ ಶ್ರೇಷ್ಠ ಪ್ರಾಧ್ಯಾಪಕರೊಬ್ಬರು ಇಲ್ಲವಾದಂತಾಗಿದೆ. ಅದಕ್ಕೂ ಹೆಚ್ಚಾಗಿ ಮಾರ್ಗದರ್ಶಕ ಮಿತ್ರನೊಬ್ಬನನ್ನು ಕಳೆದುಕೊಂಡಂತಾಗಿ ನಾನು ದಿಗ್ಭ್ರಾಂತನಾಗಿದ್ದೇನೆ.

* * *

ದೇ. ಜವರೇಗೌಡ

ಪ್ರೊ॥ ತೀ.ನಂ. ಶ್ರೀಕಂಠಯ್ಯ ಅವರ ನಿಧನದ ಬಗ್ಗೆ ಅತೀವ ದುಃಖ ವ್ಯಕ್ತಪಡಿಸಿದ ದಿವಂಗತರ ಶಿಷ್ಯರೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರೂ ಆದ ಶ್ರೀ. ಜವರೇಗೌಡ ಅವರು ಪ್ರೊ॥ ತೀ.ನಂ.ಶ್ರೀ. ಅವರ ನಿಧನದಿಂದ ಕನ್ನಡ ಸಾಹಿತ್ಯಕ್ಕೂ, ಸಾರಸ್ವತ ಲೋಕಕ್ಕೂ ತುಂಬಲಾರದ ನಷ್ಟ ಉಂಟಾಗಿದೆ ಎಂದೂ ತಿಳಿಸಿದ್ದಾರೆ.

ದಿವಂಗತರು ಬಿಟ್ಟು ಹೋಗಿರುವ ಟಿಪ್ಪಣಿಗಳನ್ನು ಮುದ್ರಿಸುವುದರಿಂದ ಕನ್ನಡ ವಿದ್ಯಾರ್ಥಿಗಳಿಗೆ ಮಹದುಪಕಾರವಾಗುತ್ತದೆಂದೂ ಹೇಳಿದ್ದಾರೆ.

* * *

ಜಿ. ವೆಂಕಟಸುಬ್ಬಯ್ಯ

ಕನ್ನಡ ನಾಡಿನ ಬಹು ಪ್ರಮುಖ ವಿದ್ವನ್ಮಣಿಗಳಾದ ತೀ.ನಂ. ಶ್ರೀಕಂಠಯ್ಯ ಅವರು ಹೃದಯಾಘಾತದಿಂದ ಇಂದು ಬೆಳಿಗ್ಗೆ ಕಲ್ಕತ್ತೆಯಲ್ಲಿ ದೈವಾಧೀನರಾದರೆಂಬ ಸುದ್ದಿ ಕೇಳಿ ನನಗೆ ದಿಕ್ಕು ತೋಚದಾಗಿದೆ. ಅವರ ಬೋಧನದ ಬೆಳಕಿನಲ್ಲಿ ಬೆಳೆದ ನನ್ನಂಥ ಶಿಷ್ಯರಿಗೆಲ್ಲ ಅವರ ಅಪಾರ ವಿದ್ವತ್ತು, ಶಿಷ್ಯ ಪ್ರೇಮ ಮತ್ತು ಸಮೀಪದ ಬಾಂಧವ್ಯಗಳು ತೀರಾ ಪರಿಚಿತ ವಾಗಿದ್ದವು. ಕನ್ನಡದ ವಿದ್ವತ್ತಿಗೆ ಕಳಸವಿಟ್ಟು, ಕನ್ನಡದ ಸಂಶೋಧನೆಗೆ ಮಾರ್ಗವನ್ನು ಸಮೆದು, ಕನ್ನಡ ವಿಮರ್ಶೆಗೆ ದಾರಿ ಹಾಕಿ, ಕನ್ನಡ ಭಾಷಾ ಶಾಸ್ತ್ರಕ್ಕೆ ಅಡಿಪಾಯವನ್ನು ಕಟ್ಟಿದ ಅವರಿಗೆ ನಾಡು ಎಷ್ಟು ಕೃತಜ್ಞವಾಗಿದ್ದರೂ ಸಾಲದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ॥ ಜಿ. ವೆಂಕಟಸುಬ್ಬಯ್ಯನವರು ಶ್ರೀಕಂಠಯ್ಯನವರ ನಿಧನಕ್ಕೆ ತಮ್ಮ ಸಂತಾಪ ಸೂಚಿಸಿದ್ದಾರೆ.

"ಕನ್ನಡ–ಕನ್ನಡ ನಿಘಂಟಿನ ರೂಪುರೇಷೆಗಳನ್ನು ನಿಷ್ಕರ್ಷಿಸಿ ಅದರ ಪ್ರಕಟಣೆಗೆ ಅವರು ತಮ್ಮ ಹೊತ್ತನ್ನೆಲ್ಲಾ ಧಾರೆ ಎರೆಯುತ್ತಿದ್ದರು. ಈಚೆಗೆ ಅದು ಅವರ ಹೃದಯದ ಅತ್ಯಂತ ಸಮೀಪದ ವಿಷಯವಾಗಿತ್ತು." ಹೋದ ಸಲ ನಾನು ಅವರನ್ನು ಮನೆಯಲ್ಲಿ ಕಂಡಾಗ, "ನಿಘಂಟು ನನ್ನ ಜೀವಿತದಲ್ಲಿ ಹೊರಬರುತ್ತದೋ ಇಲ್ಲವೋ" ಎಂದು ಹೇಳಿ ನನಗೆ ದಿಗ್ಭ್ರಮೆ ಯನ್ನುಂಟು ಮಾಡಿದ್ದರು. ಹಾಗೆಯೇ ಆಗುತ್ತದೆ ಎಂದು ಯಾರು ನಂಬಿದ್ದರು. ಈ ಸಲದ ಸಾಹಿತ್ಯ ಸಮ್ಮೇಳನಕ್ಕೆ ಅವರೇ ಅಧ್ಯಕ್ಷರಾಗುವ ನಿರೀಕ್ಷೆಯಿತ್ತು. ಎಲ್ಲ ಆಸೆ ಕಮರಿ ಹೋಯಿತು. ಕನ್ನಡ ವಿದ್ವತ್ತಿನ ಲೋಕ ಬಡವಾಗಿಹೋಯಿತು. ಅವರ ಟಿಪ್ಪಣಿಗಳಲ್ಲಿ ೨೦ ಡಾಕ್ಟರೇಟುಗಳಿಗೆ ಆಗುವಷ್ಟು ವಸ್ತು ಸಂಗ್ರಹವಿದೆ. ಇದನ್ನೆಲ್ಲ ಯಾರು ಮುಂದುವರಿಸುವರೋ ಕಾಣೆ ಎಂದರು.

* * *

ಡಿ.ಎಲ್. ನರಸಿಂಹಚಾರ್ಯ

"ನನಗೆ ದಿಗ್ಭ್ರಮೆಯಾಗಿದೆ. ಏನು ಮಾಡಬೇಕೋ ಗೊತ್ತಿಲ್ಲ. ಅವರು ಬಹು ಸಮರ್ಥ, ಪ್ರತಿಭಾಪೂರ್ಣರಾದ ಅಧ್ಯಾಪಕರಾಗಿದ್ದರು." ಎಂದು ಪ್ರೊ॥ 'ತೀ.ನಂ.ಶ್ರೀ. ಅವರ ನಿಕಟವರ್ತಿಗಳಾಗಿದ್ದ ಪ್ರೊ॥ ಡಿ.ಎಲ್. ನರಸಿಂಹಾಚಾರ್ಯರು ದುಃಖಿಸಿದರು.

"ಇವರಷ್ಟು ನಿಷ್ಕೃಷ್ಟವಾಗಿ ಇತರರಿಗೆ ತಿಳಿಸುವವರು ಬೇರೆ ಯಾರೂ ಇಲ್ಲ. ಅಲ್ಲದೆ, ಶ್ರೀಕಂಠಯ್ಯನವರು ಸಮರ್ಥರೂ, ಶ್ರೇಷ್ಠ ರಸಜ್ಞರೂ ಆದ ಸಾಹಿತಿ ವಿಮರ್ಶಕರಾಗಿದ್ದರು. ಇವರಷ್ಟು ಸಹೃದಯರು ಬೇರೊಬ್ಬರು ಸಿಕ್ಕುವುದು ಕಷ್ಟ. ಭಾಷಾಶಾಸ್ತ್ರದಲ್ಲಿ ಇವರಷ್ಟು ಪ್ರಗಲ್ಭತೆಯನ್ನು ಸಂಪಾದಿಸಿದವರು ಬೇರೆ ಯಾರೂ ಇಲ್ಲ. ಕನ್ನಡದ ವಿದ್ವಾಂಸರಲ್ಲಿ ಪ್ರಥಮ ವರ್ಗಕ್ಕೆ ಸೇರಿದ ತೀ.ನಂ.ಶ್ರೀ. ಅವರು ತೆರವು ಮಾಡಿರುವ ಜಾಗ ತುಂಬಲು ಅಷ್ಟೇ ಸಮರ್ಥರು ಇಲ್ಲವಾಗಿದ್ದಾರೆ. ವಿದ್ವತ್ತು, ಸೌಜನ್ಯ, ಅದರಾತಿಥ್ಯಗಳು, ಮೈತ್ರಿ, ವಿಶಾಲ ಹೃದಯ ಇವೇ ಮುಂತಾದ ಮಾನವ ಗುಣಗಳಿಗೆ ಗಣಿಯಾಗಿದ್ದವರು ಅವರು" ಎಂದೂ ಪ್ರೊ॥ ಡಿ.ಎಲ್. ದಿವಂಗತರನ್ನು ಕೊಂಡಾಡಿದ್ದಾರೆ.

* * *

ಎಸ್.ವಿ. ರಂಗಣ್ಣ

"ನನ್ನ ಅತ್ಯಂತ ಆತ್ಮೀಯ ಸ್ನೇಹಿತ ತೀ.ನಂ. ಶ್ರೀಕಂಠಯ್ಯನವರ ನಿಧನದ ವಾರ್ತೆ ನನಗೆ ಆಘಾತವನ್ನುಂಟುಮಾಡಿದೆಯಲ್ಲದೆ, ನಿಧನದ ವಾರ್ತೆಯನ್ನು ನಂಬುವುದೇ ಕಷ್ಟವಾಗಿದೆ" ಎಂದು ಪ್ರೊ॥ ಎಸ್.ವಿ. ರಂಗಣ್ಣನವರು ಸಂಯುಕ್ತ ಕರ್ನಾಟಕ ಪ್ರತಿನಿಧಿಯೊಡನೆ ಮಾತಾಡುತ್ತ ತಮ್ಮ ಅತೀವ ದುಃಖ ವ್ಯಕ್ತಪಡಿಸಿದರು.

"ನನ್ನನ್ನು ಸನ್ಮಾನಿಸಲು ಇತ್ತೀಚೆಗೆ ತಾನೇ ಏರ್ಪಟ್ಟಿದ್ದ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು. ಆಗ ಅವರು ಹಸನ್ಮುಖಿಗಳಾಗಿ ಚಟುವಟಿಕೆಯಿಂದ ಇದ್ದರು. ಈಗ ಅವರು ನಿಧನರಾದರೆಂಬುದನ್ನು ನಂಬುವುದೇ ಕಷ್ಟ. ಈ ದಾರುಣ ಆಘಾತವನ್ನು ಭರಿಸಲು ಭಗವಂತ ಮೃತರ ಕುಟುಂಬಕ್ಕೆ ಶಕ್ತಿಯನ್ನು ನೀಡಲಿ" ಎಂದು ಶ್ರೀ ಎಸ್.ವಿ. ರಂಗಣ್ಣನವರು ನುಡಿದರು.

* * *

ಅ.ನ. ಕೃಷ್ಣರಾವ್

"ನಾನೇನು ಹೇಳಲಿ. ಸುದ್ದಿ ಕೇಳಿ ಆಘಾತಗೊಂಡೆ. ನಮಗಂತೂ ಭಾರೀ ನಷ್ಟ. ಇನ್ನೂ ಮೂರು ನಾಲ್ಕು ವರ್ಷಗಳಲ್ಲಿ ತೀ.ನಂ.ಶ್ರೀ. ವಹಿಸಿಕೊಂಡಿದ್ದ ಕನ್ನಡ-ಕನ್ನಡ ನಿಘಂಟನ್ನು ಪೂರ್ತಿಮಾಡಿದ್ದರೆ ಚೆನ್ನಾಗಿತ್ತು. ಆ ಗುರುತರವಾದ ಕೆಲಸದ ಹೊರೆ ಹೊರಲು ಮತ್ತಾರು ಯೋಗ್ಯರು?" ಎಂದು ಶ್ರೀ ಅ.ನ. ಕೃಷ್ಣರಾಯರು ತಮ್ಮ ದುಃಖವನ್ನು ತೋಡಿಕೊಂಡರು.

ಶ್ರೀಕಂಠಯ್ಯನವರು ವಿದ್ವತ್ತಿನಲ್ಲಿ ಅಕ್ಷಯ ನಿಧಿಯಾಗಿದ್ದರು. ಎಂ. ಹಿರಿಯಣ್ಣ, ಟಿ.ಎಸ್. ವೆಂಕಣ್ಣಯ್ಯ, ಬಿ.ಎಂ. ಶ್ರೀಕಂಠಯ್ಯ – ಅಂಥವರ ಗರಡಿಯಲ್ಲಿ ಸಿದ್ಧರಾಗಿ, ಆದರ್ಶ ಶಿಕ್ಷಕರ ಪರಂಪರೆಯನ್ನು ಅವರು ಬೆಳೆಸಿಕೊಂಡು ಬಂದರು. 'ಗುರು ಶ್ರೀಕಂಠಯ್ಯ'ನವರು ವಿಶ್ವವಿದ್ಯಾಲಯಗಳ ಪ್ರಾಕಾರಗಳಲ್ಲಿ ಮಾತ್ರ ತಮ್ಮ ವ್ಯಕ್ತಿತ್ವದಿಂದ ಬೆಳಗಿದ್ದರೆ, ಮಿತ್ರವತ್ಸಲರಾಗಿ, ಪಂಡಿತ ಪ್ರಕಾಂಡರಾಗಿ, ಕಾವ್ಯಪ್ರೇಮಿಯಾಗಿ ನಾಡಿನ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಉಳಿಸಿ ಹೋಗಿದ್ದಾರೆ. ದುಡಿತಕ್ಕಾಗಿಯೇ ಮೀಸಲಾಗಿದ್ದರೋ ಎನ್ನುವಂತೆ ತಮ್ಮ ಸೇವಾನಿವೃತ್ತ ಅವಧಿಯನ್ನೆಲ್ಲ ಕನ್ನಡ ನಿಘಂಟನ್ನು ಸಿದ್ಧಗೊಳಿಸುವುದರಲ್ಲಿ ಮಾತ್ರ ತೊಡಗಿಸಿ ಗ್ರಂಥರಚನೆಯನ್ನು ಅವರು ಅಲಕ್ಷಿಸಿದರೆಂದೇ ಹೇಳಬೇಕು. ಅವರು ಬಿಟ್ಟು ಹೋದ ಕೆಲಸವನ್ನು ಯಾರು ಪೂರ್ತಿಗೊಳಿಸಬಲ್ಲರು ಎಂಬುದೇ ಇಂದಿನ ಸಮಸ್ಯೆ. ಅವರು ರೂಪಿಸಿಕೊಂಡಿದ್ದ ಕಾರ್ಯಯೋಜನೆಗಳನ್ನು ನಿಷ್ಠೆಯಿಂದ ದುಡಿದು ಫಲಪ್ರದಗೊಳಿಸುವುದೇ, ಶ್ರೀಕಂಠಯ್ಯನವರ ಅಸಂಖ್ಯ ಶಿಷ್ಯರು ಸಲ್ಲಿಸಬೇಕಾದ 'ಗುರುದಕ್ಷಿಣೆ'ಯಾಗಿದೆ.

* * *

ಬಿ. ಶಿವಮೂರ್ತಿ ಶಾಸ್ತ್ರಿ

"ಕನ್ನಡ ನಾಡಿನ ಹಿರಿಯ ಸಾಹಿತಿಗಳೂ, ಸದ್ಗುಣ ಸಂಪನ್ನರೂ, ಪಂಡಿತೋತ್ತಮರೂ ಆಗಿದ್ದ ಪ್ರೊ॥ ತೀ.ನಂ. ಶ್ರೀಕಂಠಯ್ಯನವರು ಈ ದಿನ ಬೆಳಿಗ್ಗೆ ಕಲ್ಕತ್ತೆಯಲ್ಲಿ ದಿವಂಗತರಾದರೆಂಬ ಸುದ್ದಿ ಕೇಳಿ ನನಗೆ ಸಿಡಿಲು ಬಡಿದಂತಾಗಿದೆ. ಸುಮಾರು ೩೦ ವರ್ಷಗಳಿಗೂ ಮೇಲ್ಪಟ್ಟು ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕನ್ನಡ ಭಾಷೆಯ ಸಾಹಿತ್ಯ ಸಂಸ್ಕೃತಿಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಪಾಠ ಬೋಧೆ ಮಾಡಿ ಕನ್ನಡ ಜನರನ್ನು ಉದ್ಧರಿಸಿದ ಆ ಮಹಾನುಭಾವರ ವಿಯೋಗವು ನಿಜಕ್ಕೂ, ಕನ್ನಡನಾಡಿಗೆ ಅಪಾರ ನಷ್ಟವನ್ನುಂಟು ಮಾಡಿದೆ. ಸಜೀವ ಸಾಹಿತ್ಯ ಭಂಡಾರ ಮಾಯವಾಯಿತು" ಎಂದು ಶ್ರೀ ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಕಂಬನಿ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನವರು ಸಿದ್ಧಗೊಳಿಸುತ್ತಿರುವ ಕನ್ನಡ–ಕನ್ನಡ ಕೋಶದ ಸಂಪಾದಕ ಮಂಡಲಿ ಅಧ್ಯಕ್ಷರಾಗಿದ್ದು ಅವರು ಸಲ್ಲಿಸಿದ ಸೇವೆಯು ಅನುಪಮ.

ಈ ವರ್ಷ ನವೆಂಬರ್ ೨ರಂದು ರಾಜ್ಯ ಸರ್ಕಾರ ಅವರಿಗೆ ರಾಜ್ಯಮಟ್ಟದ ಸಾಹಿತ್ಯ ಪ್ರಶಸ್ತಿ ನೀಡಲು ನಿರ್ಧರಿಸಿತ್ತು. ಅದನ್ನು ಪಡೆಯುವುದಕ್ಕೆ ಮುಂಚೆಯೇ ಅವರು ನಮ್ಮನ್ನಗಲಿದರು. ದೈವೇಚ್ಛೆಯನ್ನು ಬಲ್ಲವರಾರು.

"ಕರ್ನಾಟಕ ಏಕೀಕರಣದ ಹಿರಿಯ ಅಭಿಮಾನಿ, ಸರ್ವಾಂಗ ಸುಂದರ ಕರ್ನಾಟಕದ ಬಯಕೆ ಹೊತ್ತಿದ್ದ ಕನ್ನಡ ಮಾತೆಯ ನಿಜವಾದ ಸುಪುತ್ರ ತೀ.ನಂ. ಶ್ರೀಕಂಠಯ್ಯನವರಿಗೆ ಪರಿಷತ್ತು ಹಾಗೂ ಮೈಸೂರು–ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಉಚಿತ ಸ್ಮಾರಕ ನಿರ್ಮಾಣ ಅಗತ್ಯ." ಎಂದೂ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

* * *

ಕೊಣಂದೂರು ಲಿಂಗಪ್ಪ

ಗುರುಗಳಾದ ಶ್ರೀ ತೀ.ನಂ. ಶ್ರೀಕಂಠಯ್ಯನವರ ನಿಧನದಿಂದ ಅವರ ಶಿಷ್ಯವೃಂದಕ್ಕೆ ತಮ್ಮ ಹತ್ತಿರದ ರಕ್ತ ಸಂಬಂಧದ ಒಬ್ಬರನ್ನು ಕಳೆದುಕೊಂಡಂತಾಗಿದೆ. ಅವರನ್ನು ಗುರುಗಳನ್ನಾಗಿ ಪಡೆದಿದ್ದ ನಾವು ಧನ್ಯರು. ಅವರ ಹಿರಿತನ ನಮಗೆ ಮಾರ್ಗದರ್ಶನವಾಗಲಿ ಎಂದು ಶ್ರೀ ಕೊಣಂದರು ಲಿಂಗಪ್ಪನವರು ತಿಳಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಿಘಂಟನ್ನು ತೀ.ನಂ.ಶ್ರೀ.ಯವರ ಹೆಸರಿಗೆ ಅರ್ಪಣೆ ಮಾಡಲು ಸೂಚಿಸಿದ್ದಾರೆ.

* * *

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಶ್ರೀಕಂಠಯ್ಯ ನನ್ನ ಕಣ್ಣ ಮುಂದೆ ಬೆಳೆದವರು. ಆ ತುಂಬು ಗಲ್ಲಗಳೋ, ಕೆಂದನ್ನ ತುಟಿಗಳೋ, ಮಿಂಚಿನ ಎಳೆನಗೆಯೋ, ನೋಡುವುದಕ್ಕೆ ಎಷ್ಟು ಸೊಗಸು! ಅಷ್ಟೇ ಸೊಗಸು

ಅವರ ಮಾತು, ನಡತೆ. ನಮ್ಮ ಜನತೆ ಹೇಗೆ ಇರಬೇಕು ಎಂದರೆ ತೀ.ನಂ. ಶ್ರೀಕಂಠಯ್ಯ ಅವರ ಹಾಗೆ ಎಂದು ಹೇಳಬೇಕು ಎಂದು ನನಗೆ ಅನೇಕ ಸಲ ಅನ್ನಿಸುತ್ತಿತ್ತು. ಅದು ದೊಡ್ಡ ಜೀವ. ಅವರ ಬರವಣಿಗೆ ಅಪರಂಜಿ. ಹೊಸಗನ್ನಡ ಕಾವ್ಯವು ಇನ್ನೂ ರೂಪುಗೊಳ್ಳುತ್ತಿರುವ ತರುಣದಲ್ಲಿ ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ Modern Trends in Kannada Poetry ಎಂಬ ವಿಷಯವಾಗಿ ನಾನು ಮಾತನಾಡಿದ್ದೆ. ಭಾಷಣದಲ್ಲಿ ಎರಡು ಹೊಸ ಕವಿತೆಗಳನ್ನು ನಾನು ಹೆಸರಿಸಿದ್ದೆ; ಒಂದು ಬೇಂದ್ರೆಯವರದು. ಇನ್ನೊಂದು ಆಗತಾನೆ 'ಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ತೀ.ನಂ.ಶ್ರೀ. ಅವರ ಪದ್ಯ. 'ಇವರೇ ತೀ.ನಂ.ಶ್ರೀ.' ಎಂದು, ಸಭೆಯ ನಂತರ ಅವರ ಪರಿಚಯವನ್ನು ಗೆಳೆಯರೊಬ್ಬರು ಮಾಡಿಕೊಟ್ಟರು. ಅಂದಿನ ಎಳೆಯ, ಬೆಳೆದು ದೊಡ್ಡವನಾಗಿ, ಕನ್ನಡದ ಶ್ರೀಕಂಠ ಎನಿಸಿಕೊಂಡರು. ವಿದೇಶದ ವಿದ್ವಾಂಸರೊಬ್ಬರು ಇಲ್ಲಿ ಬಂದಾಗ, ಇಲ್ಲಿ ಸಮರ್ಥರಾದ ಪ್ರಾಧ್ಯಾಪಕರೇ ಇಲ್ಲವೇ? ಅಂಥವರು ಯಾಕೆ ನಮ್ಮ ದೇಶಕ್ಕೆ ಬಂದು ಸಾಂಸ್ಕೃತಿಕ ರಾಯಭಾರ ಕೈಕೊಳ್ಳಬಾರದು? ಎಂದು ಕೇಳಿದರು. ನಮ್ಮ ಶ್ರೀಕಂಠಯ್ಯನವರನ್ನು ಕರೆಸಿಕೊಳ್ಳಿರಿ, ನಮ್ಮ ಪ್ರಾಧ್ಯಾಪಕರು ಎಂಥವರು ಎಂಬ ಮಾತು ವೇದ್ಯವಾಗುತ್ತದೆ ಎಂದೆ ನಾನು. ಶ್ರೀಕಂಠಯ್ಯನವರು ಅಮೆರಿಕೆಗೆ ಹೋದರು. ಎಂಟು ತಿಂಗಳ ವಾಸ್ತವ್ಯದಲ್ಲಿ ಭಾರತೀಯ ಪ್ರಾಧ್ಯಾಪಕರ ದಕ್ಷತೆಯನ್ನು ಆ ಜನಕ್ಕೆ ಅವರು ತೋರಿಸಿಕೊಟ್ಟರು. ಮೇಲೆ ಹೇಳಿದ ಆ ವಿದ್ವಾಂಸರೇ ಮತ್ತೊಮ್ಮೆ ನನಗೆ ಭೆಟ್ಟಿಯಾದಾಗ ಶ್ರೀಕಂಠಯ್ಯನವರ ವ್ಯಕ್ತಿತ್ವವನ್ನು, ವಿದ್ವತ್ತನ್ನು ತುಂಬ ಹೊಗಳಿ ಮಾತನಾಡಿದರು.

ಶ್ರೀಕಂಠಯ್ಯ ತಮ್ಮ ಪಾಲಿನ ಆಟವನ್ನು ಚೆನ್ನಾಗಿ ಆಡಿ ನಮ್ಮನ್ನು ಅಗಲಿದರು. ತನ್ನ ಪ್ರೀತಿಯ ಮಗನನ್ನು ಕಳೆದುಕೊಂಡ ಕನ್ನಡ ತಾಯಿ ಇಂದು ಶೋಕಸಾಗರದಲ್ಲಿ ಮುಳುಗಿದ್ದಾಳೆ.

* * *

ಶಿವರಾಮ ಕಾರಂತ

ಶ್ರೀಮಾನ್ ತೀ.ನಂ. ಶ್ರೀಕಂಠಯ್ಯನವರು ಈ ಶತಮಾನದ ಎರಡನೆಯ ದಶಕದಲ್ಲಿಯೇ ನಾಡುನುಡಿಯ ಸೇವೆಗಾಗಿ ಕಾಲಿರಿಸಿದವರು. ಅವರು ಕನ್ನಡದ ಪುನರುಜ್ಜೀವನದ ಕಾಲದಲ್ಲಿ ಕವಿಗಳೆನಿಸಿ ನಮಗೆ ಪರಿಚಿತರಾದರು. ನಾನು ಅವರ ನಿಕಟವರ್ತಿಯಾಗಿ ಬೆಳೆದವನಲ್ಲವಾದರೂ ಪರಿಚಯವಾದಂದಿನಿಂದ ಮೊನ್ನೆಮೊನ್ನೆಯ ತನಕ ಅಲ್ಲೊಮ್ಮೆ, ಇಲ್ಲೊಮ್ಮೆ, ಕಂಡು ಮಾತನಾಡಿಸಿದವನು. ಅವರ ನಡೆನುಡಿ ಗಂಭೀರವಾದದ್ದು; ಅನಾವಶ್ಯಕದ ಮಾತುಗಳನ್ನು ಅವರು ಆಡಿದವರಲ್ಲ. ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಅನವರತ ದುಡಿದ ಅವರ ಯೋಗ್ಯತೆ, ವಿದ್ವತ್ತು ಹೆಚ್ಚಿನದು. ವಿದ್ವತ್ತಿಗೆ ಕಡಿಮೆಯಿಲ್ಲದ ಶುಚಿಯಾದ ಜೀವನವನ್ನು ನಡೆಯಿಸಿಕೊಂಡು ಬಂದ ಅವರನ್ನು, ಅಷ್ಟು ಬೇಗನೆ, ಒಮ್ಮಿಂದೊಮ್ಮೆ ಕಳೆದುಕೊಳ್ಳುತ್ತಿದ್ದೆವು – ಎಂಬ ಭಾವವೆ ನನಗಂತು ಬರಲಿಲ್ಲ. ಕಳೆದ ತಿಂಗಳ ಕೊನೆಯಲ್ಲಷ್ಟೆ ಮೈಸೂರಿನಲ್ಲಿ ಅವರ ಭೇಟಿಯಾಗಿತ್ತು. ಆ ವಿದ್ವಾಂಸರನ್ನು, ವ್ಯಕ್ತಿಯನ್ನು, ಕಳೆದುಕೊಂಡ ನಾಡಿನ ನಷ್ಟ ಸ್ವಲ್ಪವಲ್ಲ. ಕಾಲನ ಕರೆ ಯಾರಿಗೂ

ತಪ್ಪಿದ್ದಲ್ಲ ಎಂಬುದೇ ಸಮಾಧಾನ. ಆದರೆ ಅವರ ನಿಧನದಿಂದ ಅವರನ್ನು ಕುರಿತು ಗೌರವ ಆದರಗಳುಳ್ಳ ನನಗಾದ ವ್ಯಥೆಯೂ ಸುಲಭದಲ್ಲಿ ಮರೆಯಲಾಗದ್ದು ಎಂಬುದನ್ನು ಹೇಳಲೇಬೇಕು.

ಅವರು ಅಗಲಿದುದರಿಂದ ನಮ್ಮ ನುಡಿಗಾದ ನಷ್ಟವನ್ನು ತುಂಬಿಸುವ ಹೊಣೆ ನಮ್ಮದೆಂಬುದನ್ನು ತಿಳಿದು, ನಮ್ಮ ವ್ಯಥೆಯನ್ನು ಕರ್ತವ್ಯದಲ್ಲಿ ಕಳೆಯುವುದೊಂದೇ ದಾರಿ.

* * *

ಓ.ಎಸ್. ಲಿಂಗಣ್ಣಯ್ಯ

ದಿವಂಗತ ಶ್ರೀ ತೀ.ನಂ. ಶ್ರೀಕಂಠಯ್ಯನವರ ನಿಧನದ ವಾರ್ತೆಯನ್ನು ಕೇಳಿ ನಾನು ದಿಗ್ಭ್ರಾಂತನಾದೆ. ಅವರು ಕಾಲೇಜಿನಲ್ಲಿ ನನ್ನ ವಿದ್ಯಾಗುರುವಾಗಿದ್ದರು. ಅವರು ತುಂಬ ವಿದ್ಯಾವಂತರೇ ಅಲ್ಲದೆ ಪರಮ ಗುಣಾಢ್ಯರೂ ಆಗಿದ್ದರು. ನಾನು ೧೯೫೪ನೆಯ ಇಸವಿಯಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರ್ ಆಗಿದ್ದಾಗ, ಅವರು ತಮ್ಮ ಸ್ವಂತ ಗ್ರಾಮವಾದ ತೀರ್ಥಪುರಕ್ಕೆ ಒಮ್ಮೆ ಬಂದಿದ್ದಾಗ ನನ್ನನ್ನು ನೋಡಲು ಶಿಷ್ಯವಾತ್ಸಲ್ಯದಿಂದ ತಾಲ್ಲೂಕು ಕಚೇರಿಗೆ ಬಂದಿದ್ದರು. ನನಗೆ ಅವರ ಅನಿರೀಕ್ಷಿತ ಸಂದರ್ಶನದಿಂದ ಆಶ್ಚರ್ಯವಾಯಿತು. ಅವರನ್ನು ಪ್ರೀತಿಯಿಂದ ಸ್ವಾಗತಿಸಿ ಗೌರವಿಸಿದೆ. ಕನ್ನಡ ಆನರ್ಸ್ ಪಾಸ್ ಮಾಡಿದವರು ಅಮಲ್ದಾರ್ ಹುದ್ದೆಯಲ್ಲಿರುವುದೇ ತಮಗೆ ಹೆಮ್ಮೆಯೆಂದೂ ಅದು ತಮ್ಮ ತಾಲ್ಲೂಕಿನಲ್ಲಿಯೇ ತಮ್ಮ ಶಿಷ್ಯರೊಬ್ಬರು ಅಮಲ್ದಾರ್ ಆಗಿರುವುದನ್ನು ನೋಡಲು ತುಂಬ ಸಂತೋಷವೆಂದೂ ಹೇಳಿ ಹರಸಿದರು. ಅದು ಈಗ ನಡೆದಂತಿದೆ. ಪೂರ್ಣ ವಿದ್ವಾಂಸರೂ, ಸಂಭಾವಿತರೂ ಆದ ಶ್ರೀಕಂಠಯ್ಯನವರ ನಿಧನದಿಂದ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅಪಾರ ನಷ್ಟವಾಗಿದೆ. ಅವರು ಮತ್ತೊಮ್ಮೆ ಕನ್ನಡ ನಾಡಿನಲ್ಲಿ ಹುಟ್ಟಿಬರಲಿ ಎಂದು ಹಾರೈಸುತ್ತೇನೆ. ದೇವರು ದಿವಂಗತರ ಕುಟುಂಬ ವರ್ಗದವರಿಗೆ ವಿಯೋಗ ದುಃಖವನ್ನು ಭರಿಸಲು ಶಕ್ತಿಯನ್ನು ದಯಪಾಲಿಸಲಿ ಎಂದು ಬೇಡುತ್ತೇನೆ.

ಸಂತಾಪ ಸೂಚಕ ಸಭೆಗಳು

●

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರದ್ಧಾಂಜಲಿ

ಬೆಂಗಳೂರಿನಲ್ಲಿ ಸೆಪ್ಟೆಂಬರ್ ೧೦ ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಂತಾಪ ಸೂಚಕ ಸಭೆಯ ವಿವರಗಳನ್ನು ಮಾರನೆಯ ದಿನ (೧೧.೯.೬೬) ಪ್ರಜಾವಾಣಿ, ತಾಯಿನಾಡು ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಇಲ್ಲಿ ಕೊಡಲಾಗಿದೆ.

*

ಆದರ್ಶ ಆಚಾರ್ಯ ದಿವಂಗತ ತೀ.ನಂ.ಶ್ರೀ.ಗೆ ಕೃತಜ್ಞತೆ

ಪ್ರಸಿದ್ಧ ಭಾಷಾಶಾಸ್ತ್ರಜ್ಞ, ಆದರ್ಶ ಅಧ್ಯಾಪಕ, ದಿವಂಗತ ಶ್ರೀ ತೀ.ನಂ. ಶ್ರೀಕಂಠಯ್ಯ ಅವರು ಕನ್ನಡಕ್ಕಾಗಿ ಮಾಡಿದ "ಆತ್ಮಯಜ್ಞ"ವನ್ನು ಸಂಜೆ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಭೆಯಲ್ಲಿ ಕಣ್ಣೀರು–ಕೃತಜ್ಞತೆಯಿಂದ ನೆನೆಯಲಾಯಿತು.

ಸಂತಾಪಸೂಚಕ ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು "ಆಡಬೇಕಾದ ಆಟವನ್ನು ಚೆನ್ನಾಗಿ ಆಡಿ ಅಗಲಿದ" ತೀ.ನಂ.ಶ್ರೀ. ಅವರ ನಾಡು–ನುಡಿಯ ಸೇವೆಯನ್ನು ಸ್ಮರಿಸಿ "ಕನ್ನಡಿಗರು ಹೇಗಿರಬೇಕು? ತೀ.ನಂ.ಶ್ರೀ. ಯಂತಿರಬೇಕು". ಎಂದು ತಮ್ಮ ಶ್ರದ್ಧಾಂಜಲಿಯನ್ನು ದುಃಖದಿಂದ ಅರ್ಪಿಸಿದರು.

ದಿವಂಗತರ ಹಿರಿಯ–ಕಿರಿಯ ಸಾಹಿತಿ ಸಂಗಾತಿಗಳು ಹಾಗು ಶಿಷ್ಯರು ಶೋಕ ವ್ಯಕ್ತಪಡಿಸಿದ ದುಃಖಭರಿತವಾದ ಕಾರ್ಯಕ್ರಮ ಶ್ರೀ ಶ್ರೀನಿವಾಸಶರ್ಮ ಅವರ ಕವನದ ಕಣ್ಣೀರಿನೊಡನೆ ಆರಂಭವಾಯಿತು.

ಸಾಹಿತಿ ಶ್ರೀ ಪು.ತಿ. ನರಸಿಂಹಾಚಾರ್ ಅವರು ತೀ.ನಂ.ಶ್ರೀ. ಅವರಿಗಿಂತ ೧೮ ತಿಂಗಳು ಮೊದಲು ಹುಟ್ಟಿದವರು. ಇಂದು ನಗರದ ರೈಲ್ವೆ ನಿಲ್ದಾಣದಲ್ಲಿ ಅವರು ತೀ.ನಂ.ಶ್ರೀ. ಅವರನ್ನು ಭೇಟಿ ಮಾಡಬೇಕಾಗಿತ್ತು, ಆದರೆ ಅವರಿಲ್ಲದ ಅವರ ಕುಟುಂಬ ಹಾಗೂ ಮಕ್ಕಳನ್ನು ಕಂಡರು. "ನಾನು ಮೊದಲು ಹೋಗಿದ್ದು ಅನಂತರ ತೀ.ನಂ.ಶ್ರೀ. ನನ್ನನ್ನು ಹಿಂಬಾಲಿಸಿದ್ದರೆ ಚೆನ್ನಾಗಿತ್ತು" ಎಂದು ಹೇಳಿ ಪು.ತಿ.ನ. ಅತ್ತರು. ಸಭೆಯ ಹೃದಯ ಮೀಟಿತು. "ನನ್ನ ಕವಿ ಜೀವನದ ಸಾಕುತಾಯಿ" ತೀ.ನಂ.ಶ್ರೀ. ಅವರ ಗುಣಗಾನ ಮಾಡಿ "ಕನ್ನಡ ಬೆಳೆದರೆ ತೀ.ನಂ.ಶ್ರೀ.ಯ ಆತ್ಮಕ್ಕೆ ಶಾಂತಿ" ಎಂದು ಪ್ರಾರ್ಥಿಸಿದರು.

*

ತೀ.ನಂ.ಶ್ರೀ. ದರ್ಶನ

"ವಿಷಯಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡುವ ವಿದ್ವತ್ತನ್ನು ಪಡೆದಿದ್ದ ವಿರಳ ವರ್ಗದ ವಿದ್ವಾಂಸರಾಗಿದ್ದ, ಗುರು ಶ್ರೀಕಂಠಯ್ಯ, ಮಿತ್ರ ಶ್ರೀಕಂಠಯ್ಯ ಹಾಗೂ ಪಂಡಿತ (ಕವಿ) ಶ್ರೀಕಂಠಯ್ಯ" ಅವರ ದರ್ಶನವನ್ನು ಶ್ರೀ ಅ.ನ.ಕೃ. ಅವರು ಮಾಡಿಸಿದರು. ಕನ್ನಡ ನಿಘಂಟಿನ ಗತಿಯೇನು? ಎಂದು ಮತ್ತೊಮ್ಮೆ ದುಃಖದಿಂದ ಕೇಳಿ "ನಿಘಂಟು ಮುಗಿಸಿಕೊಟ್ಟು ಅಗಲಿದ್ದರೆ.....?" ಎಂದು ಹಂಬಲಿಸಿದರು.

ಅಪಾರ ಶಿಷ್ಯಕೋಟಿಯಲ್ಲಿ ಒಬ್ಬರಾದ ಶ್ರೀ ಅ.ರಾ. ಮಿತ್ರ ಅವರು, ಬರೆದದ್ದು ಅಲ್ಪವಾದರೂ ತಮ್ಮ ಗುರು ಭಾರಿ ಅಣೆಕಟ್ಟಿನ ತೂಬಿನಂತೆ ಎಂದು ಪ್ರಣಾಮ ಮಾಡಿದರು. ಕನ್ನಡದಲ್ಲಿ ಮುಂದೆ ಬರುವ ದೊಡ್ಡ ಗ್ರಂಥಗಳು ತೀ.ನಂ.ಶ್ರೀ. ಅವರ ಋಣ ಭಾರದಿಂದ ಜಗ್ಗಿರುತ್ತವೆ ಎಂದು ಗುರುವಿನ ಸಾಹಿತ್ಯ ಸೇವೆಯನ್ನು ಸ್ಮರಿಸಿದರು.

ತೀ.ನಂ.ಶ್ರೀ. ಅವರ ಮನೆಯಲ್ಲಿ ವಾರದ ಊಟಮಾಡಿದ ಶ್ರೀ. ಲಕ್ಷ್ಮೀನಾರಾಯಣ ಭಟ್ಟ ಅವರು ಆದರ್ಶಗುರುವಿಗೆ ಗೌರವ ಸಲ್ಲಿಸಿದರು.

"ಬರೆದದ್ದೆಲ್ಲ ಬಂಗಾರವಾದ" ತೀ.ನಂ.ಶ್ರೀ. ಅವರನ್ನು ನಾವು ಆದರ್ಶವಾಗಿಟ್ಟು ಕೊಳ್ಳಬೇಕೆಂದು ಶ್ರೀ ಹಂ.ಪ. ನಾಗರಾಜಯ್ಯ ಅವರು ಆಚಾರ್ಯರ ಆಶೀರ್ವಾದವನ್ನು ಬೇಡಿದರು.

ಧಾರವಾಡ ಕಾಲೇಜಿನಲ್ಲಿ ಎಂ.ಎ. ವ್ಯಾಸಂಗಕ್ಕೆಂದು ದೃಢ ನಿರ್ಧಾರದಿಂದ ಹೋದ ಕಾದಂಬರಿಕಾರ ಶ್ರೀ ಶ್ರೀನಿವಾಸರಾವ್ ಕೊರಟಿ ಅವರು ಆ ಬಯಕೆಯ ಸಾಧನೆಗೆ ನೆರವಾದ ಅಗಲಿರುವ ಗುರುವಿನ ಸ್ಮರಣೆ ಮಾಡಿದರು.

*

ಪರಂಪರೆ ಬೆಳೆಸಬೇಕು

ಸಾಹಿತಿ ಶ್ರೀ ಆರ್.ಎಸ್. ಮುಗಳಿ ಅವರು ತೀ.ನಂ.ಶ್ರೀ. ಅವರು ಹಾಕಿಕೊಟ್ಟಿರುವ ವಿದ್ವತ್ತಿನ ಪರಂಪರೆಯನ್ನು ಬೆಳೆಸಿಕೊಂಡು ಬರಬೇಕೆಂದು ಹಾರೈಸಿದರು.

ಶ್ರೀ ಎನ್.ಎಸ್. ರಾಮಚಂದ್ರಯ್ಯ ಅವರು 'ದಿವಂಗತ ಬಿ.ಎಂ.ಶ್ರೀ. ಅವರ ಜ್ಞಾನಜ್ಯೋತಿಯ ಪರಂಪರೆಯನ್ನು ಉಳಿಸಿದ' ತೀ.ನಂ.ಶ್ರೀ ಅವರು ಕಾವ್ಯಗಳನ್ನು ಕುರಿತು ಬರೆದಿಟ್ಟಿರುವ ಟಿಪ್ಪಣಿಗಳನ್ನು ಪ್ರಕಟಿಸಿದರೆ ವಿದ್ಯಾರ್ಥಿಗಳಿಗೆ ಉಪಕಾರವಾಗುವುದೆಂದು ಆಶಿಸಿದರು.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ವೆಂಕಟಸುಬ್ಬಯ್ಯ ಅವರು ಮಂಡಿಸಿದ ಕೆಳಕಂಡ ನಿರ್ಣಯವನ್ನು ಸಭೆ ಎರಡು ನಿಮಿಷಕಾಲ ಮೌನದಿಂದ ಎದ್ದು ನಿಂತಿದ್ದು ಅಂಗೀಕರಿಸಿ ತೀ.ನಂ.ಶ್ರೀ. ಅವರಿಗೆ ಕನ್ನಡಿಗರ ಪರವಾಗಿ ಗೌರವವನ್ನು ಅರ್ಪಿಸಿತು.

*

(ಸಂತಾಪಸೂಚಕ ನಿರ್ಣಯ)

ನಿಘಂಟಿನ ರಚನೆಗೆ ಸರ್ವಸ್ವವೂ ಅರ್ಪಣೆ

"ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಮೂವತ್ತು ವರ್ಷಗಳ ಕಾಲ ಶಿಷ್ಯಕೋಟಿಗೆ ತಮ್ಮ ತುಂಬು ಪಾಂಡಿತ್ಯವನ್ನು ಧಾರೆಯೆರೆದು ಭಾಷಾ ಶಾಸ್ತ್ರಜ್ಞರೆಂದು, ಸಾಹಿತಿ ಶ್ರೇಷ್ಠರೆಂದು ದೇಶವಿದೇಶಗಳಲ್ಲಿ ಖ್ಯಾತರಾದ ತೀ.ನಂ. ಶ್ರೀಕಂಠಯ್ಯನವರು ಕಳೆದ ೭ರಂದು ಕಲಕತ್ತೆಯಲ್ಲಿ ಆಕಸ್ಮಿಕವಾಗಿ ದೈವಾಧೀನರಾದುದು ಕನ್ನಡ ಜನಕೋಟಿಗೆ ದಿಗ್ಭ್ರಾಂತಿಯನ್ನುಂಟುಮಾಡಿದೆ.

ಭಾರತೀಯ ಕಾವ್ಯಮೀಮಾಂಸೆ, ಆಧುನಿಕ ಭಾಷಾ ಶಾಸ್ತ್ರ, ಗ್ರಂಥ ಸಂಪಾದನೆ ಮೊದಲಾದ ಸಾಹಿತ್ಯದ ಪ್ರಮುಖ ಶಾಖೆಗಳಲ್ಲಿ ಶ್ರೀ ತೀ.ನಂ. ಶ್ರೀಕಂಠಯ್ಯನವರು ನಿಷ್ಕೃಷ್ಟವಾದ ಜ್ಞಾನ ಸಂಪಾದಿಸಿದ್ದರು. ಅಲ್ಲದೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನದ ವ್ಯಾಸಂಗಕ್ಕೆ ಭದ್ರವಾದ ಅಡಿಪಾಯ ಹಾಕಿದ ಕೀರ್ತಿ ಅವರದಾಗಿದೆ.

ಪ್ರಾಮಾಣಿಕತೆ, ಖಚಿತತೆ, ಸತ್ಯ ನಿಷ್ಠುರತೆ ಇವೇ ಮೊದಲಾದ ಗುಣಗಳು ಅವರ ಬರವಣಿಗೆಯಲ್ಲಿ ಮಾತ್ರವಲ್ಲದೆ ನಿತ್ಯಜೀವನದಲ್ಲಿಯೂ ಎದ್ದು ಕಾಣುತ್ತಿದ್ದವು.

ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಿರುವ ಕನ್ನಡ ನಿಘಂಟಿನ ಕೆಲಸ ಪ್ರಾರಂಭವಾದಂದಿನಿಂದ ಅದರ ಮುಖ್ಯ ಕಾರ್ಯದರ್ಶಿಗಾಗಿ, ಸಂಪಾದಕರಾಗಿ, ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ದುಡಿದ ಶ್ರೀ ತೀ.ನಂ.ಶ್ರೀ. ಅವರು ಕನ್ನಡ ನಿಘಂಟಿನ ರಚನೆಗೆ ತಮ್ಮ ಸರ್ವಸ್ವವನ್ನೂ ಅರ್ಪಿಸಿದ್ದರು.

ಅವರ ನಿಧನದಿಂದ ಕನ್ನಡ ಸಾಹಿತ್ಯ ಪರಿಷತ್ತಿಗೂ ವಿದ್ವತ್ಪ್ರಪಂಚಕ್ಕೂ ತುಂಬಿಬಾರದ ಹಾನಿಯಾಗಿದೆ. ದಿವಂಗತ ಶ್ರೀಕಂಠಯ್ಯನವರ ಆತ್ಮಕ್ಕೆ ಸದ್ಗತಿಯನ್ನೂ ದಿವಂಗತರ ಕುಟುಂಬದವರಿಗೆ ದುಃಖ ಸಹಿಸುವ ಸ್ಥೈರ್ಯವನ್ನೂ ದಯಪಾಲಿಸಲಿ ಎಂದು ಸಭೆಯು ಭಗವಂತನನ್ನು ಪ್ರಾರ್ಥಿಸುತ್ತದೆ.

(ಪ್ರಜಾವಾಣಿ)

* * *

ತೀ.ನಂ.ಶ್ರೀ. ಅವರಿಗೆ ಶ್ರದ್ಧಾಂಜಲಿ

ಕನ್ನಡನಾಡು ನುಡಿಗಳಿಗೆ ಅಪಾರ ಸೇವೆ ಸಲ್ಲಿಸಿ, ಶಿಷ್ಯಕೋಟಿಗೆ ತುಂಬು ಪಾಂಡಿತ್ಯವನ್ನು ಧಾರೆ ಎರೆದು, ದೇಶವಿದೇಶಗಳಲ್ಲಿ ಭಾಷಶಾಸ್ತ್ರಜ್ಞರೆಂದು ಕೀರ್ತಿ ಗಳಿಸಿ, ಅನಿರೀಕ್ಷಿತವಾಗಿ ನಿಧನರಾದ ಪ್ರೊ॥ ತೀ.ನಂ. ಶ್ರೀಕಂಠಯ್ಯನವರಿಗೆ, ಶನಿವಾರ ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ತುಂಬಿದ ಪಾಂಡಿತ್ಯದಿಂದ ಕೂಡಿದ ಗಂಭೀರ ಮುಖಮುದ್ರೆಯ, ಸಂಸ್ಕೃತಿಯೇ ಮೂರ್ತಿವೆತ್ತು ಬಂದಂತಿದ್ದ ತೀ.ನಂ.ಶ್ರೀ.ಯವರ ವ್ಯಕ್ತಿಚಿತ್ರವನ್ನು ಮನೋಮಂದಿರದಲ್ಲಿ ಮೂಡಿಸಿ ಕೊಂಡ ಸಭಿಕರು, "ಅವರು ಇನ್ನಿಲ್ಲ" ಎಂದು ನೆನೆದುಕೊಂಡ ಕೂಡಲೆ ತಮಗರಿಯದಂತೆಯೇ ಕಂಬನಿಗರೆದರು. ಸಂತಾಪವನ್ನು ವ್ಯಕ್ತಪಡಿಸಿದರು.

ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಂತಾಪಸೂಚಕ ಸಭೆಯಲ್ಲಿ ಮಾತನಾಡಿದ ಪ್ರತಿಯೊಬ್ಬರೂ ದಿವಂಗತ ತೀ.ನಂ.ಶ್ರೀ ಯವರ ಗುಣಾಧಿಕ್ಯಗಳನ್ನು ಹೃತ್ಪೂರ್ವಕವಾಗಿ ಕೊಂಡಾಡಿ, ಅವರು ಕನ್ನಡ ಭಾಷೆಗಾಗಿ ಮಾಡಿದ ಮಹೋಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡರು. ಕನ್ನಡ ನಿಘಂಟಿಗಾಗಿ ಸಲ್ಲಿಸಿದ ಅವಿಶ್ರಾಂತ ಸೇವೆಯನ್ನು ಕೊಂಡಾಡಿದರು.

ಶ್ರೀ ಪು.ತಿ. ನರಸಿಂಹಾಚಾರ್, ಶ್ರೀ ಅ.ನ. ಕೃಷ್ಣರಾವ್, ಶ್ರೀ ರಂ.ಶ್ರೀ. ಮುಗಳಿ, ಶ್ರೀ ಎನ್.ಎಸ್. ರಾಮಚಂದ್ರಯ್ಯ, ಶ್ರೀ ಲಕ್ಷ್ಮೀನಾರಾಯಣ ಭಟ್ಟ, ಶ್ರೀ ಹಂಪ ನಾಗರಾಜಯ್ಯ, ಶ್ರೀ ಕೊರಟಿ ಶ್ರೀನಿವಾಸರಾವ್ ಇವರುಗಳು ಮಾತನಾಡಿದರು.

ಬಿ.ಎಂ.ಶ್ರೀ, ವೆಂಕಣ್ಣಯ್ಯ ಮೊದಲಾದವರ ಪರಂಪರೆಯನ್ನು ಬೆಳೆಸಿಕೊಂಡು ಬಂದು ತುಂಬು ಪಾಂಡಿತ್ಯವನ್ನು ಸಂಪಾದಿಸಿ, ಸರ್ವ ಜನಪ್ರಿಯರಾಗಿದ್ದ ಶ್ರೀ ತೀ.ನಂ.ಶ್ರೀ.ಯವರು ಹಾಕಿದ ಮಾರ್ಗದಲ್ಲಿ ಅವರಿಂದ ಜ್ಞಾನದೀವಿಗೆ ಪಡೆದಿರುವ ಶಿಷ್ಯ ವರ್ಗದವರು ಕನ್ನಡದ ಬೆಳವಣಿಗೆಗೆ ದುಡಿಮೆಯನ್ನು ಸಾಗಿಸಬೇಕೆಂಬ ಬಯಕೆಯನ್ನು ಎಲ್ಲರೂ ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ಶ್ರೀ ಶ್ರೀನಿವಾಸ ಶರ್ಮರವರು ಸ್ವಂತ ಕವನವನ್ನು ಓದಿದರು.

ಶ್ರೀ ಪು.ತಿ. ನರಸಿಂಹಾಚಾರ್ಯರು ಮಾತನಾಡಿ, ತಮ್ಮ ಹಾಗೂ ತೀ.ನಂ.ಶ್ರೀ.ಯವರ ನಡುವೆ ಇದ್ದ ಅಪಾರವಾದ ಕಾವ್ಯ ಸಂಪರ್ಕವನ್ನು ಸ್ಮರಿಸಿಕೊಂಡರು. ತೀ.ನಂ.ಶ್ರೀ.ಯವರಲ್ಲಿ ಪಾಂಡಿತ್ಯರಸ, ಮೈತ್ರಿಯ ಮಾಧುರ್ಯ ತುಂಬಿದ್ದಿತೆಂದು ಹೇಳಿದರಲ್ಲದೆ, ದೊಡ್ಡ ಪರ್ವತ ದಂತಿದ್ದು ಹಿರಿಯ ಜೀವಿಗಳಾಗಿದ್ದರೆಂದು ಹೊಗಳಿದರು. ಅನೇಕ ಶಾಸ್ತ್ರಗಳನ್ನು ಅಭ್ಯಾಸ ಮಾಡಿ, ಭಾಷೆಗಳನ್ನು ಕಲಿತು ಕನ್ನಡದ ಸಂಪತ್ತನ್ನು ಬೆಳೆಸಿದರೆಂದು ಹೇಳಿದರು. ಪ್ರತಿಯೊಂದು ಶಬ್ದವನ್ನು ತೂಕಮಾಡಿ, ಬರೆಯುವ ಹಾಗೂ ಆಡುವ ಮನೋವೃತ್ತಿ ಅವರದಾಗಿದ್ದಿತೆಂದು ತಿಳಿಸಿದರು. ಕನ್ನಡ ಜನ, ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ದುಡಿದರೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದಂತಾಗುತ್ತದೆಂದು ಹೇಳಿದರು.

ಶ್ರೀ ಅ.ನ. ಕೃಷ್ಣರಾಯರು ಮಾತನಾಡಿ, ೪೦ ವರ್ಷಗಳ ಸಂಪರ್ಕವನ್ನು ಸ್ಮರಿಸಿಕೊಂಡು, ತೀ.ನಂ.ಶ್ರೀ.ಯವರ ಪಾಂಡಿತ್ಯ ಆಳದಷ್ಟೇ ವಿಶಾಲವಾಗಿದ್ದಿತೆಂದು ತಿಳಿಸಿದರು. ಮಾರ್ಗದರ್ಶಕ ಗುರುವಾಗಿ, ಪ್ರೀತಿಯ ಮಿತ್ರರಾಗಿ, ಘನವಾದ ಪಂಡಿತರಾಗಿ ಬೆಳಗಿ ಹೋದರೆಂದು ಹೇಳಿದರು. ತೀ.ನಂ.ಶ್ರೀ.ಯವರ ಬರವಣಿಗೆಗಳ ಬಗ್ಗೆ ತುಂಬಾ ಗೌರವದ ಮಾತುಗಳನ್ನಾಡಿದ ಶ್ರೀ ಅ.ನ.ಕೃ ರವರು, "ಅವರ ಲೇಖನಗಳನ್ನೆಲ್ಲ ಸಂಗ್ರಹಿಸಿ ಪ್ರಕಟಿಸುವುದು ಸೂಕ್ತ" ಎಂದು

ಸಲಹೆ ಮಾಡಿದರು. ತೀ.ನಂ.ಶ್ರೀ ಯವರ ಅತ್ಯಂತ ಪ್ರೀತಿಯ ಕೆಲಸವಾಗಿದ್ದ ಕನ್ನಡ ನಿಘಂಟಿನ ಕಾರ್ಯವನ್ನು ತೃಪ್ತಿಕರವಾಗಿ ಪೂರೈಸಿದರೆ, ಅವರ ಆತ್ಮಕ್ಕೆ ಶಾಂತಿ ದೊರೆಯುತ್ತದೆಂದು ಹೇಳಿದರು.

ಶ್ರೀ. ಎಸ್.ಎಸ್. ರಾಮಚಂದ್ರಯ್ಯನವರು ಮಾತನಾಡಿ, ತೀ.ನಂ.ಶ್ರೀ.ಯವರ ನಯನ ಮನೋಹರ ರೂಪವನ್ನು ಸ್ಮರಿಸಿಕೊಂಡರಲ್ಲದೆ ಅವರು ಬರೆದಿರುವ ಎಲ್ಲ ಟಿಪ್ಪಣಿಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ವಿದ್ಯಾರ್ಥಿಗಳಿಗೆ ತುಂಬಾ ಉಪಕಾರವಾಗುತ್ತದೆ ಎಂದು ಸಲಹೆ ಮಾಡಿದರು.

ಶ್ರೀ ಅ.ರಾ. ಮಿತ್ರರವರು ಮಾತನಾಡಿ ತೀ.ನಂ.ಶ್ರೀ.ಯವರು ಕನ್ನಡಕ್ಕಾಗಿ ಅಗಾಧವಾದ ಕೆಲಸ ಮಾಡಿದ್ದರೆಂದೂ ಭಾಷಾಶಾಸ್ತ್ರ ವ್ಯವಸ್ಥಿತ ರೀತಿಯ ಬೆಳವಣಿಗೆಗೆ ಅಡಿಪಾಯ ಹಾಕಿದ್ದರೆಂದೂ ತಿಳಿಸಿದರು. ಮುಂದೆ ಬರಬಹುದಾದ ಭಾಷಾ ಕೃತಿಗಳೆಲ್ಲವೂ ತೀ.ನಂ.ಶ್ರೀ. ಯವರ ಋಣ ಭಾರವನ್ನು ಹೊತ್ತಿರುತ್ತದೆಂದು ಹೇಳಿದರು. ಅವರಲ್ಲಿ ಶ್ರೇಷ್ಠ ವಾಗ್ಮಿಯ ಸರ್ವ ಲಕ್ಷಣಗಳೂ ಇದ್ದವೆಂದೂ ತಿಳಿಸಿದರು.

ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಮಾತನಾಡಿ, ತೀ.ನಂ.ಶ್ರೀ.ಯವರ ತೇಜಃಪುಂಜವಾದ ಮುಖಮುದ್ರೆಯನ್ನು ಸ್ಮರಿಸಿಕೊಂಡ ಅವರು ಕವಿ ಜನರನ್ನು ಕಾಣುತ್ತಿದ್ದ ಗೌರವಪೂರ್ಣ ರೀತಿಯನ್ನು ಕೊಂಡಾಡಿದರು.

ಶ್ರೀ ಹಂಪ ನಾಗರಾಜಯ್ಯನವರು ಮಾತನಾಡಿ, ತೀ.ನಂ.ಶ್ರೀ.ಯವರಂತಹ ಗುರುಗಳನ್ನು ಪಡೆದ ಶಿಷ್ಯರೇ ಪುಣ್ಯಶಾಲಿಗಳೆಂದು ಹೇಳಿದರಲ್ಲದೆ ಅವರ ನಾಲಗೆ ಮೇಲೆ ವಾಗ್ದೇವಿ ನರ್ತನ ಮಾಡಿದಂತೆ ಭಾಸವಾಗುತ್ತಿದ್ದಿತೆಂದು ಹೇಳಿದರು. ಅವರು ಬರೆದದ್ದೆಲ್ಲ ಬಂಗಾರವೆಂದೂ, ಅಚ್ಚುಕಟ್ಟಾದುದೆಂದೂ ಹೇಳಿ ಅವರ ಜೀವನವು ಕೂಡ ಬರಹದಷ್ಟೇ ಶುದ್ಧದಾಗಿದ್ದಿತೆಂದು ತಿಳಿಸಿದರು. ಅವರು ಬರೆದಿರುವ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವುದರ ಜೊತೆಗೆ ಅವರು ತೋರಿಸಿರುವ ದಾರಿಯಲ್ಲಿ ಅವರಿಂದ ಪಡೆದ ಜ್ಞಾನದೀವಿಗೆಯನ್ನು ಹಿಡಿದು ಮುಂದೆ ಸಾಗಬೇಕಾದುದು ಅವರ ಶಿಷ್ಯರ ಪರಿಪಾಲನೆ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಡಾ॥ ರಂ.ಶ್ರೀ. ಮುಗಳಿಯವರು ಭಾಷಣ ಮಾಡಿ ನಾಡು–ನುಡಿ–ಜನಕ್ಕಾಗಿ ಜೀವನ ಪರ್ಯಂತ ದುಡಿದು ಹೋದವರಿಗೆ ಕೃತಜ್ಞತೆ ಸಲ್ಲಿಸಬೇಕಾದುದು ಎಲ್ಲರ ಕರ್ತವ್ಯವಾಗಿದೆಯೆಂದು ತಿಳಿಸಿದರು. ತೀ.ನಂ.ಶ್ರೀ. ಅವರು ತಮ್ಮ ಶಿಷ್ಯಕೋಟಿಗಷ್ಟೇ ಅಲ್ಲದೆ ಕನ್ನಡ ಜನಕ್ಕೆ ತಮ್ಮ ವಿದ್ವತ್ತನ್ನು ಪಾಂಡಿತ್ಯವನ್ನು ಧಾರೆ ಎರೆದಿದ್ದಾರೆಂದು ಹೇಳಿದರು. ಕನ್ನಡ ನಿಘಂಟಿನ ಬಗ್ಗೆ ಅವರಿಗಿದ್ದ ಕೇವಲ ನಿಷ್ಠೆಯನ್ನು ಸ್ಮರಿಸಿಕೊಂಡು ಅದರ ದುಡಿತದಲ್ಲಿ ದಣಿದುಹೋದರೆಂದು ಹೇಳಿದರಲ್ಲದೆ ಅವರ ಸ್ಥಾನವನ್ನು ತುಂಬುವವರಾರು ಎಂಬುದೇ ಮುಖ್ಯ ಪ್ರಶ್ನೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಖಚಿತವಾದ ಭಾಷಾಜ್ಞಾನ ವಿದ್ವತ್ತಿನ ಪರಿಪಾಕ ಅವರಲ್ಲಿದ್ದಿತೆಂದು ಹೃದಯ ತುಂಬಿ ಮಾತನಾಡಿದರು. ಅವರ ವಿದ್ವತ್ತಿನ ಪರಂಪರೆಯನ್ನು ಬೆಳೆಸಿಕೊಂಡು ಬರಬೇಕೆಂದು ಸಲಹೆ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಡಾ॥ ಮಾಸ್ತಿಯವರು ತೀ.ನಂ. ಶ್ರೀಕಂಠಯ್ಯ ನನ್ನ ಕಣ್ಣು ಮುಂದೆ ಇನ್ನೂ ಹುಡುಗನಾಗಿಯೇ ಅಡ್ಡಾಡಿದಂತೆ ಕಾಣುತ್ತಲಿದೆ ಎಂದು ಹೇಳಿ ಚಿಕ್ಕಜೀವಿಗಳನ್ನು ಕಳೆದುಕೊಂಡಾಗ ನನ್ನಂತಹ ಹಿರಿಯರಿಗೆ ತುಂಬಾ ಬೇಸರ ಭಯ ಆಗುತ್ತದೆ ಎಂದು ನುಡಿದರು. ತೀ.ನಂ.ಶ್ರೀ.ಯವರ ಕಿರುವಯಸ್ಸಿನಿಂದ ಬೆಳೆದು ಬಂದ ಬಗೆಯನ್ನು ಡಾ॥ ಮಾಸ್ತಿಯವರು ತಮ್ಮದೇ ಆದ ಭಾಷೆಯಲ್ಲಿ ವರ್ಣಿಸಿ ಅವರ ಬರವಣಿಗೆ ಅಪರಂಜಿ ಯೆಂದೂ ಮುತ್ತುಮಣಿಗಳನ್ನು ಪೋಣಿಸಿದಂತಿರುತ್ತಿದ್ದಿತೆಂದೂ ಪಾಂಡಿತ್ಯದ ನಿಷ್ಕರ್ಷೆಯಿಂದ ಕೂಡಿರುತ್ತಿದ್ದಿತೆಂದೂ ಹೇಳಿದರು. ಪಾಂಡಿತ್ಯದ ಜೊತೆಗೆ ಅನ್ವೇಷಣಾ ಬುದ್ಧಿ ಅಪಾರವಾಗಿದ್ದಿ ತೆಂದೂ ತಿಳಿಸಿದರು. ಅಮೆರಿಕದಲ್ಲಿ ಸಂಚಾರ ಮಾಡಿ ಅಲ್ಲಿನ ಭಾಷಾ ಪಂಡಿತರ ಮೆಚ್ಚಿಗೆ ಪಡೆದ ಅಂಶವನ್ನು ಪ್ರಸ್ತಾಪಿಸಿದರು. ಭಾಷಾ ಪಾಂಡಿತ್ಯದಲ್ಲಿ ಎಷ್ಟು ಗಟ್ಟಿಗರಾಗಿದ್ದರೋ ಅಷ್ಟೆ ವಿನಯಶೀಲರೂ, ಸಹಿಷ್ಣು ಸ್ವಭಾವದವರೂ ಆಗಿದ್ದರೆಂದೂ ಹೇಳಿದ್ದರು. "ಆದದ್ದಾಯಿತು" – ಎಂದು ಹೇಳಿ ದೀರ್ಘ ಉಸಿರನ್ನು ಬಿಟ್ಟ ಡಾ॥ ಮಾಸ್ತಿಯವರು ಕನ್ನಡಿಗನಾದವನು ತೀ.ನಂ.ಶ್ರೀ. ಬಾಳಿದ ಹಾಗೆ ಬಾಳಬೇಕು ಎಂದು ಹೇಳಿದರು. ಅವರ ಆದರ್ಶವನ್ನು ಕನ್ನಡಜನ ಉಳಿಸಿಕೊಂಡು, ಬೆಳೆಸಿಕೊಂಡು ಬರಬೇಕೆಂದು ಸಲಹೆ ಮಾಡಿದರು.

ಸಂತಾಪಸೂಚಕ ನಿರ್ಣಯವನ್ನು ಪರಿಷತ್ತಿನ ಅಧ್ಯಕ್ಷ ಜಿ. ವೆಂಕಟಸುಬ್ಬಯ್ಯನವರು ಓದಿದ ಮೇಲೆ ಸಭೆ ಎರಡು ನಿಮಿಷ ಮೌನವನ್ನಾಚರಿಸಿ ಸಂತಾಪವನ್ನು ವ್ಯಕ್ತಪಡಿಸಿತು.

(ತಾಯಿನಾಡು)

* * *

ಸಾಹಿತ್ಯ ಲೋಕದ ಹಿರಿಯ ತೀ.ನಂ.ಶ್ರೀ. ನಿಧನಕ್ಕೆ ಶೋಕ

ಮೂವತ್ತು ವರ್ಷಗಳ ಕಾಲ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಶಿಷ್ಯಕೋಟಿಗೆ ತಮ್ಮ ತುಂಬು ಪಾಂಡಿತ್ಯವನ್ನು ಧಾರೆಯೆರೆದು, ಭಾಷಾಶಾಸ್ತ್ರಜ್ಞರೆಂದು, ಸಾಹಿತಿ ಶ್ರೇಷ್ಠರೆಂದು ದೇಶ ವಿದೇಶಗಳಲ್ಲಿ ಖ್ಯಾತರಾದ ಪ್ರೊ॥ ತೀ.ನಂ. ಶ್ರೀಕಂಠಯ್ಯನವರ ಹಠಾತ್ ನಿಧನದಿಂದ ಕನ್ನಡ ಸಾಹಿತ್ಯ ಪರಿಷತ್ತಿಗೂ ವಿದ್ವತ್ಪ್ರಪಂಚಕ್ಕೂ ತುಂಬಿಬಾರದ ಹಾನಿಯುಂಟಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇರಿದ್ದ ಸಭೆ ಅಭಿಪ್ರಾಯಪಟ್ಟಿತು.

ಹಿರಿಯ ಸಾಹಿತಿ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಈ ಸಭೆ "ನಾಡಿನ ಶ್ರೇಷ್ಠ ಸಾಹಿತಿ"ಯ ಅಗಲಿಕೆ ನೆನೆದು ಭಕ್ತಿಭಾವದಿಂದ ತನ್ನ ಅಶ್ರುತರ್ಪಣ ಅರ್ಪಿಸಿತು.

ಕವಿತಾ ಗುಣದ ಸಾಕುತಾಯಿ

"ಮಬ್ಬು ಹರಿಯುವಾ ಮುನ್ನ ಬರ ಸಿಡಿಯುವಾ ವಾರ್ತೆ" ಎಂಬ ಕಂಬನಿಯ ನಿವೇದನೆ ಶ್ರೀ ಶ್ರೀನಿವಾಸಶರ್ಮರಿಂದ ಪ್ರಾರಂಭದಲ್ಲಿ ಆದನಂತರ ಕಂಠತುಂಬಿದ ಧ್ವನಿಯಿಂದ ಭಾಷಣ

ಆರಂಭಿಸಿ ತೀ.ನಂ.ಶ್ರೀ.ಯವರ ಪರಮಾಪ್ತ ಶ್ರೀ ಪು.ತಿ. ನರಸಿಂಹಾಚಾರ್, "ಇವತ್ತು ಮೂರುವರೆ ಗಂಟೆಗೆ ತೀ.ನಂ.ಶ್ರೀ.ಯವರನ್ನು ಕಾಣಬೇಕಾಗಿತ್ತು. ಆದರೆ ಅವರಿಲ್ಲದ ಕುಟುಂಬ ಮಾತ್ರ ಕಾಣಬೇಕಾಯಿತು" ಎಂದು ಹೇಳಿದರಲ್ಲದೆ, ದೊಡ್ಡ ಹಿರಿಯ ಜೀವ ಪ್ರಕೃತಿಗೋ ನಿರ್ಲಕ್ಷ್ಯ. ೬೦ ವರ್ಷದ ತುಂಬುಜೀವನವನ್ನು ಒಂದು ಕ್ಷಣದಲ್ಲಿ ಹಾರಿಸಿಕೊಂಡುಬಿಟ್ಟಿತು. ನನ್ನ ಕವಿತಾ ಗುಣಕ್ಕೆ ತೀ.ನಂ.ಶ್ರೀ. ಸಾಕುತಾಯಿ. ಕನ್ನಡಕ್ಕೋಸ್ಕರ 'ಸುಖಯಜ್ಞ' ಮಾಡಿದವರು. ಇವರ ನಿಧನದಿಂದ ನನಗಂತೂ ವೈಯಕ್ತಿಕವಾಗಿ ಅಪಾರ ದುಃಖವಾಗಿದೆ ಎಂದರು.

ಅಧಿಕಾರವಾಣಿಯಿಂದ ಮಾತನಾಡುವ ಶಕ್ತಿಹೊಂದಿದ್ದ ತೀ.ನಂ.ಶ್ರೀ. ಭಾರತೀಯ ಅನೇಕ ಭಾಷೆಗಳಿಗೆ ಅನುವಾದ ಮಾಡುವಂತಹ ಗ್ರಂಥಗಳನ್ನು ಬರೆದಿದ್ದಾರೆ ಎಂದು ಹೇಳಿದ ಶ್ರೀ ಅ.ನ. ಕೃಷ್ಣರಾಯರು, ಇವರು ಕನ್ನಡ ತಪಸ್ವಿ, ಇವರ ಸಾಹಿತ್ಯ ಅಚ್ಚ ಬಂಗಾರ. ನಿಜವಾಗಿಯೂ ಇವರಿಗೆ ಸ್ಮಾರಕ ಮಾಡಬೇಕೆಂದಿದ್ದರೆ ನಮ್ಮ ವಿದ್ವಾಂಸರು ನಿಜವಾದ ವಿದ್ವಾಂಸರುಗಳಾಗಬೇಕು. ವಿದ್ಯಾರ್ಥಿಗಳು ಕನ್ನಡದ ಬಗ್ಗೆ ತಾತ್ಸಾರ ಬಿಡಬೇಕು ಎಂದರು. ನಾಡಿಗೆ, ಮಿತ್ರರಿಗೆ, ವಿದ್ಯಾರ್ಥಿಗಳಿಗೆ ಬೇಕಾಗಿದ್ದ ವ್ಯಕ್ತಿ ಇನ್ನಿಲ್ಲ ಎಂದು ದುಃಖಿಸಿದ ಅವರು, ನಿಘಂಟು ಕೆಲಸ ಮುಗಿದರೆ ಅವರ ಆತ್ಮಕ್ಕೆ ಶಾಂತಿ ಎಂದರು.

ತೀ.ನಂ.ಶ್ರೀ. ತಮ್ಮ ಬಾಂಧವ್ಯದ ಅನೇಕ ನೆನಪುಗಳನ್ನು ಶ್ರೀ ಎಸ್.ಎಸ್. ರಾಮಚಂದ್ರಯ್ಯನವರು ಸಭೆಯಲ್ಲಿ ಮಾಡಿಕೊಂಡರು.

*

ಋಣ ಭಾರ

ಕನ್ನಡದಲ್ಲಿ ಮುಂದೆ ಬರುವ ಅನೇಕ ಗ್ರಂಥಗಳು ತೀ.ನಂ.ಶ್ರೀ.ಯವರ ಋಣಭಾರದಿಂದ ಜಗ್ಗಿ ಹೋಗಿರುತ್ತವೆ ಎಂದು ಹೇಳಿದ ಶ್ರೀ ಅ.ರಾ. ಮಿತ್ರರವರು ಪರ್ವತದಷ್ಟು ಕೆಲಸ ಮಾಡಿದ್ದಾರೆ. ಅವರ ಉಪಕಾರ ನೆನೆಯುವುದು ನಮ್ಮ ಕರ್ತವ್ಯ ಎಂದರು.

ರಾಜಸ್ಯ ಗುಣದ ಅಧ್ಯಾಪಕ ಶ್ರೀ ತೀ.ನಂ.ಶ್ರೀ. ಎಂದು ಹೇಳಿದ ಅವರ ನಿಕಟ ಶಿಷ್ಯ ಶ್ರೀ ಲಕ್ಷ್ಮೀನಾರಾಯಣ ಭಟ್ಟ, ಅನ್ನವಿಟ್ಟ ಶ್ರೀಮತಿ ತೀ.ನಂ.ಶ್ರೀ.ಯವರಿಗೆ ಬಂದ ದುಃಖ ನೆನೆದು ಕಂಬನಿಗರೆದರು.

ಬರೆದದ್ದೆಲ್ಲ ಬಂಗಾರದ ಬರೆಹ, ವಾಕ್‌ಕೋವಿದ, ವಾಕ್ ವೈಭವಿಗಳು ಎಂದು ತಮ್ಮ ಅಧ್ಯಾಪಕರ ವಿದ್ವತ್ತನ್ನು ಸ್ಮರಿಸಿಕೊಂಡು ಮಾತನಾಡಿದ ಶ್ರೀ ಹಂಪ ನಾಗರಾಜಯ್ಯ ಜೀವನದ ಅಚ್ಚುಕಟ್ಟು ಬರಹದಲ್ಲೂ ಇತ್ತು. ನಮ್ಮ ಜೀವನದಲ್ಲಿ ಅವರ ಆದರ್ಶವಿರಬೇಕು ಎಂದು ಹೇಳಿದರು.

ಕನ್ನಡ ನಾಡಿಗೆ ಯಾವ ಮುಖ ಹೊತ್ತುಕೊಂಡು ಬರುತ್ತಾರೆ ಶ್ರೀಮತಿ ತೀ.ನಂ.ಶ್ರೀ.ಯವರು ಎಂದು ನೆನೆದು ಶೋಕತಪ್ತರಾದ ಶ್ರೀ ಶ್ರೀನಿವಾಸ ಕೊರಟಿಯವರು ಶ್ರೀ ತೀ.ನಂ.ಶ್ರೀ. ಉಜ್ವಲ ಪರಂಪರೆ ಹಾಕಿಕೊಟ್ಟಿದ್ದಾರೆ ಎಂದೂ ತಿಳಿಸಿದರು.

*

ಇನ್ನೂ ಇದ್ದಾರೆ

'ಅವರಿನ್ನೂ ಕಣ್ಣ ಮುಂದೆ ಇದ್ದಾರೆ' ಎಂದು ತಿಳಿಸಿದ ಡಾ॥ ರಂ.ಶ್ರೀ. ಮುಗಳಿ ತೀ.ನಂ.ಶ್ರೀ.ಯವರ ನಿಧನದಿಂದ ಇಡೀ ಕನ್ನಡ ನಾಡಿಗೇ ಆಘಾತವಾಗಿದೆ. 'ಮನೆಯ ಕೆಲಸ' ಎಂದು ಭಾವಿಸಿದ್ದರು ನಿಘಂಟಿನ ಕೆಲಸವನ್ನು ಎಂದು ಹೇಳಿ, ಈ ಕೆಲಸ ಹೇಗೆ ಮುಂದುವರಿಯುವುದು ಎಂಬುದೇ ಆಲೋಚನೆ ಎಂದರು. ಕನ್ನಡದ ವ್ಯಾಸಂಗ ಮಾಡುತ್ತಿರುವವರು, ಪಾಠ ಹೇಳಿಕೊಡುತ್ತಿರುವವರು ತೀ.ನಂ.ಶ್ರೀ.ಯವರ ದಾರಿ ಹಿಡಿಯಬೇಕು ಎಂದರು.

ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಾ. ಮಾಸ್ತಿಯವರು, ಇನ್ನೂ ಹುಡುಗನಂತೆಯೇ ಇದ್ದ ತೀ.ನಂ.ಶ್ರೀ.ಯವರನ್ನು ತಮ್ಮ ಸ್ಮೃತಿಪಟಲದಲ್ಲಿ ತಂದುಕೊಂಡು ಜಯ ಕರ್ನಾಟಕ ಪತ್ರಿಕೆಯಲ್ಲಿ ಚುಟುಕ ಪದ್ಯ ಬರೆದ ಅಂದಿನ ಪ್ರತಿಭೆ ಇಂದಿನ ಅಗಾಧ ಪ್ರತಿಭೆಯ ನಾಂದಿಯಾಗಿತ್ತು ಎಂದರು. ಖಚಿತವಾಗಿ ಮಾತನಾಡಬಲ್ಲಂಥ ವ್ಯಕ್ತಿ ಎಂದು ಅವರು ಹೇಳಿದರಲ್ಲದೆ, ಸ್ನೇಹಿತನಿಗೆ ನಿಜ ಸ್ನೇಹಿತ, ಶಿಷ್ಯರಿಗೆ ಇಂತಹ ಉಪಾಧ್ಯಾಯರೇ ಬೇಕು ಎನಿಸುವ ವ್ಯಕ್ತಿತ್ವ ಹೊಂದಿದ್ದರು. ವಿನಯದಲ್ಲಿ ಸಂತೋಷಗೊಂಡ ವ್ಯಕ್ತಿ ಎಂಬ ಬಗ್ಗೆ ಸ್ವಾನುಭವವನ್ನು ಉದಾಹರಣೆಯಾಗಿ ನೀಡಿದರು. ಕೊನೆಯಲ್ಲಿ ಆದರ್ಶಮೂರ್ತಿ ಈ ನನ್ನ ಎಳೆಯ ಎಂದರು.

ನಂತರ ಸಭೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ವೆಂಕಟಸುಬ್ಬಯ್ಯನವರು ಮಂಡಿಸಿದ ಸಂತಾಪಸೂಚಕ ನಿರ್ಣಯ ಸ್ವೀಕರಿಸಿತು. ಮೃತರ ಗೌರವಾರ್ಥ ಎರಡು ನಿಮಿಷ ಮೌನ ವಾಚರಿಸಿತು ಹಾಗೂ ಮೃತರ ಆತ್ಮಕ್ಕೆ ಶಾಂತಿ ಕೋರಿತು.

(ಸಂಯುಕ್ತ ಕರ್ನಾಟಕ)

* * *

ದಿ॥ ತೀ.ನಂ.ಶ್ರೀ. ಅವರಿಗೆ ಮೈಸೂರಿನಲ್ಲಿ ಶ್ರದ್ಧಾಂಜಲಿ

ಕನ್ನಡ ನಾಡು ನುಡಿ ಹಿರಿಮೆಯನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ಷೇತ್ರಗಳಲ್ಲಿ ಹರಡಿದ ದಿ॥ ತೀ.ನಂ. ಶ್ರೀಕಂಠಯ್ಯನವರಿಗೆ ಅವರ ಸಾಹಿತ್ಯ ಪ್ರಪಂಚದ ಬಂಧುಗಳು, ಶಿಷ್ಯ ವೃಂದದವರು ಹಾಗೂ ಇಷ್ಟಮಿತ್ರರು ದಿ. ೧೧ರಂದು ಪುರಭವನದಲ್ಲಿ ನಡೆದ ಸಾರ್ವಜನಿಕ ಶೋಕಸಭೆಯಲ್ಲಿ ತಮ್ಮ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು. ಸಭೆಯ ಅಧ್ಯಕ್ಷತೆಯನ್ನು ಪುರಸಭಾಧ್ಯಕ್ಷ ಶ್ರೀ ಡಿ. ಲಿಂಗಯ್ಯನವರು ವಹಿಸಿದ್ದರು.

ಸಂಘ ಸಂಸ್ಥೆಗಳ ಪರವಾಗಿ ಪುಷ್ಪಹಾರಗಳನ್ನು ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯನವರ ಭಾವಚಿತ್ರಕ್ಕೆ ಅರ್ಪಿಸಿದ ನಂತರ ಶ್ರೀ ಎಸ್.ವಿ. ರಂಗಣ್ಣ, ಲೋಕಸಭೆಯ ಉಪಾಧ್ಯಕ್ಷ ಶ್ರೀ ಎಸ್.ವಿ. ಕೃಷ್ಣಮೂರ್ತಿರಾಯರು, ಶ್ರೀ ಎಲ್. ಶ್ರೀಕಂಠಯ್ಯ, ಶ್ರೀ ಶಿವರಾಮಶಾಸ್ತ್ರಿ, ಶ್ರೀ ದೇ. ಜವರೇಗೌಡರು ದಿವಂಗತರ ಅಮೂಲ್ಯ ಸೇವೆಯ ಗುಣಗಾನ ಮಾಡಿದರು. ಅನಂತರ ಪ್ರೊ॥ ಯಾಮುನಾಚಾರ್ಯರು ಸಂತಾಪಸೂಚಕ ನಿರ್ಣಯವನ್ನು ಓದಿದರು. ಸಭೆ ಎದ್ದುನಿಂತು ಒಂದು ನಿಮಿಷ ಮೌನ ಆಚರಿಸಿ ನಿರ್ಣಯವನ್ನು ಅನುಮೋದಿಸಿತು.

ದಿವಂಗತ ಪ್ರೊ॥ ತೀ.ನಂ. ಶ್ರೀಕಂಠಯ್ಯ ಅವರ ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಮಟ್ಟದಲ್ಲಿ ಎರಡು ವಿದ್ಯಾರ್ಥಿ ವೇತನಗಳನ್ನು ನೀಡಲು ನಿರ್ಧರಿಸಲಾಗಿದೆ ಎಂದು ಪ್ರೊ॥ ಡಿ. ಜವರೇಗೌಡ ಅವರು ಇಂದು ಇಲ್ಲಿ ನುಡಿದರು. ಎಂ.ಎ. ಪದವಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಪ್ರಥಮ ರ್‍ಯಾಂಕ್ ಗಳಿಸುವ ವಿದ್ಯಾರ್ಥಿಗೆ ಸುವರ್ಣ ಪದಕವನ್ನು ನೀಡಲಾಗುವುದೆಂದೂ ದಿವಂಗತ ತೀ.ನಂ.ಶ್ರೀ. ಅವರ ಹೆಸರಿನಲ್ಲಿ ಅಖಿಲ ಕರ್ನಾಟಕ ಕನ್ನಡ ಚರ್ಚಾ ಸ್ಪರ್ಧೆಯೊಂದನ್ನು ಏರ್ಪಡಿಸಲಾಗುವುದೆಂದೂ ಅವರು ತಿಳಿಸಿದರು.

(ಪ್ರಜಾವಾಣಿ : ೧೫-೯-೧೯೬೬)

* * *

ತೀ.ನಂ.ಶ್ರೀ. ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಶ್ರದ್ಧಾಂಜಲಿ ಅರ್ಪಣೆ

ಶ್ರೇಷ್ಠದರ್ಜೆಯ ವಿದ್ವನ್ಮಣಿ, ಅಪೂರ್ವ ಸಂಶೋಧಕ ಹಾಗೂ ಕನ್ನಡ ಸಾರಸ್ವತ ಲೋಕದ ನೇತಾರರಾಗಿದ್ದ ದಿವಂಗತ ಆಚಾರ್ಯ ತೀ.ನಂ. ಶ್ರೀಕಂಠಯ್ಯ ಅವರಿಗೆ ಇಂದು ಇಲ್ಲಿನ ಮಾನಸಗಂಗೋತ್ರಿಯಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ॥ ಕೆ.ಎಲ್. ಶ್ರೀಮಾಲಿ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಅಧ್ಯಾಪಕ, ಪ್ರಾಧ್ಯಾಪಕ ಹಾಗೂ ವಿದ್ಯಾರ್ಥಿಗಳ ಸಭೆಯು "ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಹಾಗೂ ಆ ಅಧಿಕಾರಗಳ ನಿಮಿತ್ತ ಅನೇಕ ಸಮಿತಿಗಳಲ್ಲಿದ್ದುಕೊಂಡು ೩೦ ವರ್ಷಕ್ಕೂ ಮಿಗಿಲಾಗಿ ಕನ್ನಡಕ್ಕಾಗಿ ತಮ್ಮ ತನುಮನ ಧನಗಳನ್ನು ಅರ್ಪಿಸಿದ" ದಿವಂಗತ ಶ್ರೀಕಂಠಯ್ಯನವರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿಯನ್ನೂ ನೀಡುವಂತೆ ಮೌನ ಪ್ರಾರ್ಥನೆ ಸಲ್ಲಿಸಿತು.

"ಏನನ್ನು ಮಾಡಿದರೂ ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ" ಮಾಡುತ್ತಿದ್ದ ಮೇಲ್ಮಟ್ಟದ ಆಚಾರ್ಯರೊಬ್ಬರ ಸಾವಿನಿಂದ ಮೈಸೂರು ವಿಶ್ವವಿದ್ಯಾನಿಲಯ ಬಡವಾಯಿತೆಂದು ಹೇಳಿದ ಡಾ॥ ಶ್ರೀಮಾಲಿ ಅವರು ಕೈಗೊಂಡಿದ್ದ ದಕ್ಷಿಣ ಭಾರತ ಅಧ್ಯಯನ ಸಂಸ್ಥೆಯ ಕೆಲಸವನ್ನು ಆದಷ್ಟು ಶೀಘ್ರ ಪೂರೈಸುವ ಮೂಲಕ ನಾವು ಅವರಿಗೆ ನಮ್ಮ ಶ್ರದ್ಧಾಂಜಲಿ ಸಲ್ಲಿಸಬಹುದೆಂದರು.

ಕನ್ನಡ, ಸಂಸ್ಕೃತ ಹಾಗೂ ಭಾಷಾಶಾಸ್ತ್ರದಲ್ಲಿ ಅಪೂರ್ವ ಪಾಂಡಿತ್ಯ ಬೆಳೆಸಿಕೊಂಡಿದ್ದ 'ಹಿರಿಯ ಆಚಾರ್ಯ' ಎಂದು ಗುಣಗಾನ ಮಾಡಿದ ದಿವಂಗತರ ಶಿಷ್ಯ ಪ್ರೊ॥ ಸಿ.ಡಿ. ನರಸಿಂಹಯ್ಯ ಅವರು ಬಿ.ಎ. ತರಗತಿಯಲ್ಲಿ ಕಾಳಿದಾಸ ಕಾವ್ಯವನ್ನು ತೀ.ನಂ.ಶ್ರೀ. ಅವರು ಹೇಳಿಕೊಟ್ಟ ರೀತಿಯನ್ನು ನೆನಪಿಗೆ ತಂದುಕೊಂಡರು.

ಪ್ರೊ॥ ಶ್ರೀಕಂಠಯ್ಯ ಅವರು ಕೊನೆಯ ಉಸಿರಿರುವವರೆಗೂ ಒಂದಲ್ಲ ಒಂದು ರೀತಿಯಲ್ಲಿ ಕನ್ನಡ ಕೈಂಕರ್ಯವನ್ನು ಕೈಗೊಂಡರೆಂದೂ ಅವರು ಬಿಟ್ಟುಹೋಗಿರುವ ಕೆಲಸವನ್ನು

ಮುನ್ನಡೆಸುವ ಮೂಲಕ ಅವರ ಋಣ ತೀರಿಸಬೇಕೆಂದೂ ಪ್ರೊ॥ ಕೆ. ವೆಂಕಟರಾಮಪ್ಪ ಅವರು ನುಡಿದರು.

ಪ್ರೊ. ಎಸ್.ವಿ. ಪರಮೇಶ್ವರಭಟ್ಟರು ಸಂತಾಪಸೂಚಕ ನಿರ್ಣಯವನ್ನು ಮಂಡಿಸಿದ ನಂತರ ಸಭೆಯು ಎರಡು ನಿಮಿಷ ಮೌನ ಆಚರಿಸಿ ದಿವಂಗತರಿಗೆ ತಮ್ಮ ಭಕ್ತಿ ಪ್ರಣಾಮವನ್ನು ಅರ್ಪಿಸಿತು.

ದಿವಂಗತ ತೀ.ನಂ.ಶ್ರೀ. ಅವರ ಗೌರವಾರ್ಥ ಇಂದು ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗ, ಮಹಾರಾಜಾ ಕಾಲೇಜು ಮತ್ತು ಯುವರಾಜಾ ಕಾಲೇಜುಗಳು ಮುಚ್ಚಿದ್ದವು.

(ಪ್ರಜಾವಾಣಿ : ೯-೯-೧೯೬೬)

* * *

ಧಾರವಾಡದಲ್ಲಿ ತೀ.ನಂ.ಶ್ರೀ. ಅವರಿಗೆ ಶ್ರದ್ಧಾಂಜಲಿ

ಧಾರವಾಡದ ನಾಗರಿಕರು ಸೆ. ೧೦ರಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ, ದಿವಂಗತ ಪ್ರಾಧ್ಯಾಪಕ ಶ್ರೀ ತೀ.ನಂ. ಶ್ರೀಕಂಠಯ್ಯ ಅವರು ಕನ್ನಡ ನಾಡು ನುಡಿಗಳಿಗೆ ಸಲ್ಲಿಸಿದ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಅಧ್ಯಕ್ಷತೆ ವಹಿಸಿದ್ದ ವರಕವಿ ಶ್ರೀ ಬೇಂದ್ರೆಯವರು ಮಾತನಾಡುತ್ತಾ ದಿ॥ ತೀ.ನಂ.ಶ್ರೀ. ಅವರು ಮೃದು ಹೃದಯದ ವಿಮರ್ಶಕರಾಗಿದ್ದರೆಂದೂ, ಅವರು ಎಂದೂ ಯಾರಿಗೂ ಮನ ನೋಯುವಂತೆ ಮಾಡಲಿಲ್ಲವೆಂದೂ ತಿಳಿಸಿದರು. ಪಂಡಿತ ರಸಿಕನಾಗಿರುವುದು ಬಹಳ ಕಷ್ಟ. ಎರಡೂ ಇದ್ದು ಕವಿಯಾಗಿರುವುದಂತೂ ತೀರಕಷ್ಟ. ಆದರೆ ತೀ.ನಂ.ಶ್ರೀ. ಹಾಗೆ ಇದ್ದರು ಎಂದೂ ಶ್ರೀ ಬೇಂದ್ರೆಯವರು ನುಡಿದರು.

ಸರ್ವಶ್ರೀ ಸ.ಸ. ಮಾಳವಾಡ, ವಿ.ಜಿ. ಕುಲಕರ್ಣಿ, ಎನ್.ಎ. ಹೊಸಕೇರಿ ಹಾಗೂ ಚೆನ್ನವೀರ ಕಣವಿ ಅವರು ದಿವಂಗತ ತೀ.ನಂ.ಶ್ರೀ.ಯವರ ಗುಣಗಾನ ಮಾಡಿದರು. ಸಭೆಯು ಶ್ರೀ ತೀ.ನಂ.ಶ್ರೀ.ಯವರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವನ್ನು ಅಂಗೀಕರಿಸಿತು.

(ಪ್ರಜಾವಾಣಿ : ೧೭-೯-೧೯೬೬)

* * *

ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ್

ಕನ್ನಡ ಸಾಹಿತ್ಯಾಕಾಶದಲ್ಲಿ ಧ್ರುವತಾರೆಯಂತೆ ರಾರಾಜಿಸುತ್ತಿದ್ದ ಆಚಾರ್ಯ ತೀ.ನಂ. ಶ್ರೀಕಂಠಯ್ಯನವರು ಹೃದಯಾಘಾತದಿಂದ ಇನ್ನಿಲ್ಲವಾದುದು ಇಡೀ ಕನ್ನಡ ನಾಡನ್ನು

ಚಿರಂತರ ದುಃಖದಲ್ಲಿ ನೂಕಿದೆ. ಮಂದಿರದಲ್ಲಿ ಇಂದು ೧೦-೬-೧೯೬೬ರ ಸಂಜೆ ಸೇರಿದ ಸಭೆ ಶೋಕಮಯವಾಗಿತ್ತು. ಶ್ರೀಯುತ ಡಿ.ಕೆ. ಭೀಮಸೇನರಾಯರು ಅಧ್ಯಕ್ಷತೆ ವಹಿಸಿದ್ದ ಈ ಶೋಕ ಸಭೆಯಲ್ಲಿ ಶ್ರೀ ಮಾನ್ವಿ ನರಸಿಂಗರಾಯರು, ಪ್ರೊ. ಗೋಕಾಕರು ಮತ್ತು ಅಧ್ಯಕ್ಷರು ದಿವಂಗತರ ಗುಣಗಾನ ಮಾಡಿದರು. ಶ್ರೀಯುತರ ನಿಧನದಿಂದ ದುಃಖತಪ್ತರಾಗಿದ್ದ ಹೈದರಾಬಾದಿನ ಕನ್ನಡಿಗರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬದವರಿಗೆ ದುಃಖ ಶಮನ ಶಕ್ತಿಯನ್ನೀಯಲೆಂದು ಭಗವಂತನಲ್ಲಿ ಪ್ರಾರ್ಥಿಸಿದರು.

"ಕನ್ನಡ ಸಾಹಿತ್ಯ, ಭಾಷೆಗಳಲ್ಲಿ ಘನ ವಿದ್ವಾಂಸರೂ, ಕನ್ನಡ ಕಾವ್ಯಮೀಮಾಂಸೆ, ವಿಮರ್ಶೆ, ಕಾವ್ಯಸಮೀಕ್ಷೆ, ಛಂದಸ್ಸು, ಅಲಂಕಾರ, ವ್ಯಾಕರಣ, ಭಾಷಾಶಾಸ್ತ್ರ ಮುಂತಾದ ಸಾಹಿತ್ಯದ ಪ್ರಮುಖಾಂಗಗಳಲ್ಲಿ ಅದ್ವಿತೀಯ ಪರಿಣತಿಯುಳ್ಳವರೂ ಆಗಿದ್ದ ಆಚಾರ್ಯ ತೀ.ನಂ. ಶ್ರೀಕಂಠಯ್ಯನವರು ಅಕಸ್ಮಾತ್ ಹೃದಯಾಘಾತದಿಂದ ದೈವಾಧೀನರಾದುದು ಇಡಿಯ ಕನ್ನಡನಾಡಿಗೆ ಅತ್ಯಂತ ದುಃಖಕರವಾದ ಸಂಗತಿಯಾಗಿದೆ. ಸುಮಾರು ೩೪ ವರ್ಷಗಳವರೆಗೆ ಕನ್ನಡ ಸಾರಸ್ವತದ ಸೇವೆಯನ್ನು ಅವಿಚ್ಛಿನ್ನವಾಗಿ ನಡೆಸಿ, ಕನ್ನಡ ಅಂತಸ್ತನ್ನು ಮೇಲಕ್ಕೆತ್ತಿದವರಲ್ಲಿ ಆಚಾರ್ಯ ಶ್ರೀಕಂಠಯ್ಯನವರು ಅಗ್ರಗಣ್ಯರಾಗಿದ್ದಾರೆ. ಪರಿಶುದ್ಧವಾದ ಆಚರಣೆ, ಅಚ್ಚುಕಟ್ಟಾದ ನಡೆವಳಿಕೆ ಯಿಂದ ಸ್ನೇಹಿತರಿಗೂ, ಶಿಷ್ಯವರ್ಗಕ್ಕೂ ಪ್ರೀತ್ಯಾಸ್ಪದರಾಗಿದ್ದರು ಆಚಾರ್ಯ ಶ್ರೀಕಂಠಯ್ಯನವರು. ಧಾರವಾಡ, ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಆಚಾರ್ಯ ಸ್ಥಾನವನ್ನಲಂಕರಿಸಿ ಕನ್ನಡ ಸಾಹಿತ್ಯದ ಸೇವೆ ಸಲ್ಲಿಸಿ ಶಾಶ್ವತವಾದ ಕೀರ್ತಿಯನ್ನು ಗಳಿಸಿದರು. ಅವರ ನಿಧನದಿಂದ ಇಡಿಯ ಕನ್ನಡನಾಡು ಬರಿದಾಗಿದೆ. ಅವರ ಸ್ಥಾನವನ್ನು ತುಂಬುವುದು ಅಸಾಧ್ಯವಾಗಿದೆ. ಪ್ರೊ॥ ತೀ.ನಂ. ಶ್ರೀಕಂಠಯ್ಯನವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೂ ಅವರ ಕುಟುಂಬ ವರ್ಗಕ್ಕೆ ದುಃಖಸಂತನ ಶಕ್ತಿಯನ್ನೂ ದಯಪಾಲಿಸಲೆಂದು ಹೈದರಾಬಾದಿನ ಕರ್ನಾಟಕ ಸಾಹಿತ್ಯ ಮಂದಿರದ ಸಕಲ ಸದಸ್ಯರು ಪ್ರಾರ್ಥಿಸುತ್ತಾರೆ."

(ಕನ್ನಡ ನುಡಿ)

* * *

ದೆಹಲಿ ಕನ್ನಡಿಗರ ಸಂತಾಪ

ದೆಹಲಿಯ ಮೈಸೂರು ವಾರ್ತಾ ಕೇಂದ್ರದಲ್ಲಿ ನೆರೆದ ಸಂತಾಪಸೂಚಕ ಸಭೆಯ ಅಧ್ಯಕ್ಷತೆ ಯನ್ನು ಕೇಂದ್ರ ಜಾಗೃತ ಆಯೋಗದ ಕಮಿಷನರ್ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರು ವಹಿಸಿದ್ದರು.

ದೆಹಲಿ ವಿಶ್ವವಿದ್ಯಾಲಯದ ಶ್ರೀ ಕೆ.ವಿ. ರಾಘವಾಚಾರ್ ಮತ್ತು ರಾಷ್ಟ್ರೀಯ ವೈಜ್ಞಾನಿಕ ಡಾಕ್ಯುಮೆಂಟೇಷನ್ ಕೇಂದ್ರದ ಡೈರೆಕ್ಟರ್ ಶ್ರೀ. ಬಿ.ಎಸ್. ಕೇಶವನ್ ಅವರು ಮಾತನಾಡಿ ದಿವಂಗತರ ಗುಣಗಾನ ಮಾಡಿದರು. ಶ್ರೀ. ಎಚ್.ವೈ. ಶಾರದಾ ಪ್ರಸಾದ್ ಅವರು ಅಧ್ಯಾಪನ

ಕಾರ್ಯವನ್ನು ಕುರಿತು ಮಾತನಾಡಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಶ್ರೀ ಬಾಲೂರಾವ್ ಅವರು ತೀ.ನಂ.ಶ್ರೀ. ಅವರ ಕೆಲವು ಕವಿತೆಗಳನ್ನು ಹಾಡಿದರು.

ಸಭೆಯಲ್ಲಿ ಅಂಗೀಕೃತವಾದ ಸಂತಾಪಸೂಚಕ ನಿರ್ಣಯದಲ್ಲಿ ಕನ್ನಡ ಸಾಹಿತ್ಯ ಪ್ರಪಂಚವು ಶ್ರೇಷ್ಠ ವಿದ್ವಾಂಸ ಹಾಗೂ ದಕ್ಷ ಪ್ರಾಧ್ಯಾಪಕನೊಬ್ಬನನ್ನು ಕಳೆದುಕೊಂಡಿತು ಎಂದು ಹೇಳಿದೆ.

(ಕನ್ನಡ ನುಡಿ)

* * *

ಶಂಕರ ಕಾಲೇಜ್ ಮತ್ತು ನ್ಯೂ ಕನ್ನಡ ಹೈಸ್ಕೂಲು, ಯಾದಗಿರಿ

ಇದೇ ೭ರಂದು ಕಲ್ಕತ್ತೆಯಲ್ಲಿ ಉಂಟಾದ ಆಚಾರ್ಯ ಶ್ರೀ ತೀ.ನಂ.ಶ್ರೀ. ಅವರ ನಿಧನವು ಅವರ ಕುಟುಂಬ ಮತ್ತು ಬಂಧುವರ್ಗವನ್ನು ಮಾತ್ರವಲ್ಲ ಇಡೀ ಕನ್ನಡ ಸಾರಸ್ವತ ಪ್ರಪಂಚವನ್ನೇ ದುಃಖಸಾಗರದಲ್ಲಿ ಕೆಡವಿದೆ. ಸಾಹಿತ್ಯ ಪರಿಷತ್ತಿನ ವಿವಿಧ ಚಟುವಟಿಕೆಗಳಲ್ಲಿ ಭಕ್ತಿ ಪೂರ್ವಕವಾಗಿ ಯುಕ್ತರೀತಿಯಲ್ಲಿ ಸಹಕಾರ ನೀಡುತ್ತಿದ್ದ ಆಚಾರ್ಯರ ಕಣ್ಮರೆಯು ಸಾಹಿತ್ಯ ಪರಿಷತ್ತನ್ನು ಪರದೇಶಿ ಯನ್ನಾಗಿ ಮಾಡಿದೆ. ಇದು ನೀವು ಮಾರನೆಯ ದಿನವೇ ಆಕಾಶವಾಣಿ ಮೂಲಕ ವ್ಯಕ್ತಪಡಿಸಿದ ಸಂತಾಪ ನುಡಿಗಳಿಂದ ವ್ಯಕ್ತವಾಯಿತು. ಸಾಮಾನ್ಯವಾಗಿ ಸಂತಾಪದ ನಿರ್ಣಯವನ್ನು ಮೃತರ ಕುಟುಂಬದವರಿಗೆ ಕಳಿಸುವುದು ರೂಢಿಯಾದರೂ ಕುಟುಂಬಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಾನಿಗೊಳಗಾದ ಸಾಹಿತ್ಯ ಪರಿಷತ್ತಿಗೆ ನಮ್ಮ ತೀವ್ರವಾದ ಸಂತಾಪವನ್ನು ಕಳುಹಿಸಿ ತೀ.ನಂ.ಶ್ರೀ. ಅವರ ನಿಧನದಿಂದುಂಟಾದ ಶೋಕವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕನ್ನಡ ಸರಸ್ವತಿಯು ನಿಮಗಿತ್ತು ಅಂಥದೇ ವಿದ್ವನ್ಮಣಿಯೊಂದನ್ನು ಸಾಹಿತ್ಯ ಸೇವೆಗಾಗಿ ಕರುಣಿಸಲಿ ಎಂದು ಹಾರೈಸುತ್ತೇವೆ.

ಆಚಾರ್ಯ ತೀ.ನಂ. ಶ್ರೀಕಂಠಯ್ಯ ಅವರ ಆತ್ಮ ಚಿರಶಾಂತಿಯಲ್ಲಿ ನೆಲೆಸಲಿ.

(ಕನ್ನಡ ನುಡಿ)

ಪತ್ರಿಕೆಗಳಲ್ಲಿ ಸಂಪಾದಕೀಯಗಳು

●

ಆಚಾರ್ಯ ತೀನಂಶ್ರೀ

ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತಿ ಪ್ರಾಧ್ಯಾಪಕರೂ ಕನ್ನಡ ಸಾರಸ್ವತ ಲೋಕಕ್ಕೆ ಆಚಾರ್ಯ ಸಮಾನರೂ ಆಗಿದ್ದ ಪ್ರೊ॥ ತೀ.ನಂ. ಶ್ರೀಕಂಠಯ್ಯನವರ ನಿಧನ ಇಡೀ ಕನ್ನಡ ನಾಡಿಗೆ ಒಂದು ದುರ್ಭರವಾದ ನಷ್ಟ. ತೀ.ನಂ.ಶ್ರೀ.ಯವರು ಎಷ್ಟು ದೊಡ್ಡ ವಿದ್ವಾಂಸರೊ ಅಷ್ಟೇ ದೊಡ್ಡ ಶಿಕ್ಷಕರೂ ಆಗಿದ್ದರು. ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತಗಳಲ್ಲಿ ನಿಷ್ಕೃಷ್ಟವೂ, ನಿರ್ದುಷ್ಟವೂ ಆದ ಪಾಂಡಿತ್ಯವನ್ನು ಪಡೆದಿದ್ದ ಅವರ ಬೋಧನಾಕ್ರಮ ಅದ್ವಿತೀಯ, ಅನನುಕರಣೀಯ. ಕಾವ್ಯ, ನಾಟಕಾದಿ ವಿಷಯಗಳನ್ನು ಕಿಕ್ಕಿರಿದು ತುಂಬಿದ ತರಗತಿಗಳಿಗೆ ಸ್ವಾರಸ್ಯವಾಗಿ ಬೋಧಿಸುವುದಿರಲಿ, ವ್ಯಾಕರಣ ಮತ್ತು ಛಂದಸ್ ಶಾಸ್ತ್ರಗಳನ್ನು ಕೂಡಾ ಅಷ್ಟೇ ಸ್ವಾರಸ್ಯವಾಗಿ, ಕೇಳುತ್ತಿರುವವರಿಗೆ ಕಾಲದ ಪರಿವೆಯೇ ಇಲ್ಲದಂತೆ ಗಂಟೆಗಟ್ಟಲೆ ಪಾಠ ಮಾಡುತ್ತಿದ್ದ ಆಚಾರ್ಯ ಪುರುಷರೊಬ್ಬರು ಇದ್ದರು ಎಂದರೆ ಮುಂದಿನ ಪೀಳಿಗೆ ನಂಬೀತೊ ಇಲ್ಲವೋ? ತೀ.ನಂ.ಶ್ರೀ. ಯವರ ವಿದ್ವತ್‌ಪೂರ್ಣ ವಾಗ್ವೈಖರಿ ಅಂಥದು.

ಶ್ರೀಕಂಠಯ್ಯನವರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ಪಾಸು ಮಾಡಿ ಅಮಲ್ದಾರರಾಗಿ ಸರಕಾರಿ ನೌಕರಿ ಸೇರಿದರೂ ಕನ್ನಡವನ್ನು ಕುರಿತ ಅವರ ಒಲವು ಅವರನ್ನು ವಿಶ್ವವಿದ್ಯಾಲಯಕ್ಕೆ ಸೆಳೆತಂದಿತು. ಅವರು ಸೇವೆ ಸಲ್ಲಿಸಿದ ವಿಶ್ವವಿದ್ಯಾಲಯಗಳ ಪಾಲಿಗೆ ಅವರು ಕೇವಲ ಪ್ರಾಧ್ಯಾಪಕರಾಗಿರಲಿಲ್ಲ. ಪ್ರಾಚೀನ ಗುರುಕುಲಗಳ ಆಚಾರ್ಯ ಪಂಕ್ತಿಗೆ ಸೇರಿದವರಾಗಿದ್ದರು. ತೀ.ನಂ.ಶ್ರೀ.ಯವರ ವಿದ್ವತ್ತಿನ ವ್ಯಾಪ್ತಿ ವೈವಿಧ್ಯಗಳ ದೃಷ್ಟಿಯಿಂದ ನೋಡಿದಾಗ ಅವರು ರಚಿಸಿದ ಕೃತಿಗಳ ಸಂಖ್ಯೆ ಕಡಿಮೆ ಎನಿಸುವುದು ಸಹಜ. ಆದರೆ ಅವರು ಬರೆದ ಅಥವಾ ಸಂಪಾದಿಸಿದ ಒಂದೊಂದು ಕೃತಿಯೂ ಆಯಾ ಪ್ರಕಾರಕ್ಕೆ ಭೂಷಣ ಪ್ರಾಯವಾಗಿದೆ. ಎರಡು ದಶಕಗಳಿಗೂ ಹೆಚ್ಚು ಕಾಲದ ಪರಿಶ್ರಮದಿಂದ ಅವರು ರಚಿಸಿದ 'ಭಾರತೀಯ ಕಾವ್ಯಮೀಮಾಂಸೆ' ಎಲ್ಲ ರೀತಿಯಲ್ಲೂ ಆಚಾರ್ಯ ಕೃತಿಯೇ ಹೌದು. ತೀ.ನಂ.ಶ್ರೀ.ಯವರು ಪ್ರಕಟಿಸಿರುವ ಗ್ರಂಥಗಳಿಗಿಂತ ಪ್ರಕಟವಾಗಲಿದ್ದ ಗ್ರಂಥಗಳ ಸಂಖ್ಯೆಯೇ ಹೆಚ್ಚು. ಇಂಥ ಘನಪಂಡಿತರ ಸೇವೆಯನ್ನು ಇನ್ನಷ್ಟು ಕಾಲ ಪಡೆಯುವ ಭಾಗ್ಯ ಕನ್ನಡ ನಾಡಿಗಿಲ್ಲದೆ ಹೋದುದು ನಮ್ಮ ದೌರ್ಭಾಗ್ಯ.

(ಪ್ರಜಾವಾಣಿ : ೯-೯-೧೯೬೬)

* * *

ಶ್ರದ್ಧಾಂಜಲಿ

ಕನ್ನಡ ನಾಡಿನ ಹಿರಿಯ ವಿದ್ವಾಂಸರೂ, ವಿಮರ್ಶಕರೂ ಆಗಿದ್ದ ಪ್ರೊ॥ ತೀ.ನಂ. ಶ್ರೀಕಂಠಯ್ಯನವರು ಮೊನ್ನೆ ಬೆಳಿಗ್ಗೆ ಕಲ್ಕತ್ತದಲ್ಲಿ ತಮ್ಮ ಪುತ್ರನ ಮನೆಯಲ್ಲಿ ಹಠಾತ್ತಾಗಿ ವಿಧಿವಶರಾದರು ಎಂಬ ವಾರ್ತೆ ಕೇಳಿ ಕನ್ನಡಿಗರಿಗೆ ವಜ್ರಾಘಾತವಾಗಿದೆಯೆಂದೇ ಹೇಳಬೇಕು. ಅವರಿಗೇನೂ ಅಷ್ಟೊಂದು ವಯಸ್ಸಾಗಿರಲಿಲ್ಲ. ಕೇವಲ ೫೯ ವರುಷ. ಆದರೆ ತಾನೊಂದು ಬಗೆದರೆ ದೈವ ವೊಂದು ಬಗೆಯಿತಂತೆ! ಮಕ್ಕಳ ಕೊನೆಯ ಭೇಟಿಗಾಗಿಯೆ ಅವರು ಈ ಸಂಚಾರ ಕೈಕೊಂಡಂತಾಯಿತು.

ಶ್ರೀ ಶ್ರೀಕಂಠಯ್ಯನವರು ಇಂಗ್ಲಿಷ್ ಮತ್ತು ಕನ್ನಡ ಎರಡೂ ವಿಷಯಗಳಲ್ಲಿ ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದರು. ಆನಂತರ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕಟ್ಟಿ ಅದರಲ್ಲಿಯೂ ಉತ್ತೀರ್ಣರಾಗಿ ಮೈಸೂರು ಸರ್ಕಾರದ ನೌಕರಿಗೆ ಸೇರಿ ಶ್ರೀರಂಗಪಟ್ಟಣದಲ್ಲಿ ಅಮಲ್ದಾರರಾದರು. ಆದರೆ ಜ್ಞಾನಾರ್ಜನೆ ಜ್ಞಾನದಾನಗಳಿಗಾಗಿಯೇ ಜನ್ಮವೆತ್ತಂತಿದ್ದ ಶ್ರೀ ಶ್ರೀಕಂಠಯ್ಯನವರಿಗೆ ಅಲ್ಪಕಾಲಾವಧಿಯಲ್ಲಿಯೇ ಅಮಲ್ದಾರಿಕೆ ಬೇಜಾರು ಹುಟ್ಟಿಸಿದ್ದರಿಂದ ನೌಕರಿಗೆ ಶರಣು ಹೊಡೆದು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು. ಮೀನು ಪುನಃ ಕೊಳವನ್ನು ಸೇರಿದಂತಾಯಿತು. ಚತುರ ಪ್ರಾಧ್ಯಾಪಕರೆಂದು ಹೆಸರು ಗಳಿಸುವುದರ ಜೊತೆಗೆ ಇವರು ಲೇಖನ ಕಾರ್ಯದತ್ತ ಕೂಡ ಗಮನ ಹರಿಸಿ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತ ವಾದ ಗ್ರಂಥ ರಚನೆ ಮಾಡಿದರು. ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಪ್ರಕಾರವನ್ನು ಆಸಕ್ತಿಯಿಂದ ಬೆಳೆಸಿಕೊಂಡು ಬಂದವರಲ್ಲಿ ಅವರು ಪ್ರಮುಖರು. "ಭಾರತೀಯ ಕಾವ್ಯಮೀಮಾಂಸೆ" ಹಾಗೂ "ಕಾವ್ಯ ಸಮೀಕ್ಷೆ" ಇವರ ಚಿರನೂತನ ಕೃತಿಗಳಾಗಿವೆ.

ಶ್ರೀ ಶ್ರೀಕಂಠಯ್ಯನವರು ಕರ್ಣಾಟಕ ವಿಶ್ವವಿದ್ಯಾಲಯದಲ್ಲಿ ೧೯೫೭ರಿಂದ ಐದು ವರ್ಷ ಕಾಲ ಕನ್ನಡ ಪ್ರಾಧ್ಯಾಪಕರಾಗಿದ್ದರು. ಆ ಕಾಲದಲ್ಲಿ ಅವರು ತಮ್ಮ ಪಾಂಡಿತ್ಯದಿಂದ ನಯ ವಿನಯಾದಿ ಸದ್ಗುಣಗಳಿಂದ ಉತ್ತರ ಕರ್ಣಾಟಕದ ಜನಮನವನ್ನು ಗೆದ್ದಿದ್ದರು. ಅನಂತರ ಅವರು ಅಮೆರಿಕ ಸಂಚಾರ ಪೂರೈಸಿಕೊಂಡು ಬಂದು ಮೈಸೂರು ವಿಶ್ವವಿದ್ಯಾಲಯದಲ್ಲಿ ಐದು ವರ್ಷ ಕಾಲ ಪ್ರಾಧ್ಯಾಪಕರಾಗಿದ್ದರು. ನಿವೃತ್ತಿಯ ನಂತರ ಸದ್ಯಕ್ಕೆ ಅವರು ಕನ್ನಡ-ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿದ್ದರು. ಈ ಬೃಹತ್ ಕಾರ್ಯಕ್ಕೆ ಅವರ ಬಹು ಶ್ರುತಜ್ಞತೆಯ ಅವಶ್ಯಕತೆ ಅತ್ಯಂತವಾಗಿದ್ದ ಸಮಯದಲ್ಲಿ ಕಾಲನು ಇವರನ್ನು ಸೆಳೆದೊಯ್ದುದರಿಂದ ಕರ್ಣಾಟಕಕ್ಕೆ ಅಪಾರ ಹಾನಿಯಾಗಿದೆ. ದಿವಂಗತ ಪ್ರೊ॥ ಟಿ.ಎಸ್. ವೆಂಕಣ್ಣಯ್ಯನವರ ಅಚ್ಚುಮೆಚ್ಚಿನ ಶಿಷ್ಯರಾಗಿ ಅವರ ಸ್ಫೂರ್ತಿಯಿಂದ ಪ್ರತಿಭಾವಂತ ಅಧ್ಯಾಪಕರಾಗಿ ಬೆಳಗಿ ಆ ಭವ್ಯ ಪರಂಪರೆ ಯನ್ನು ಎತ್ತಿ ಹಿಡಿದ ಶ್ರೀ ತೀ.ನಂ.ಶ್ರೀ.ಯವರು ಸ್ನೇಹಪೂರ್ಣ ರಸಿಕತೆ, ವಿದ್ವತ್ತು, ಸೌಜನ್ಯ, ಕನ್ನಡ ನಾಡು ನುಡಿಗಳ ಅಸೀಮ ಪ್ರೇಮಗಳಿಗೆ ಮೂರ್ತ ಸ್ವರೂಪರಾಗಿದ್ದರು; ಕಾವ್ಯಶಾಸ್ತ್ರ-ಭಾಷಾಶಾಸ್ತ್ರಗಳಲ್ಲಿ ಮೇಲುಗೈಯಾಗಿದ್ದರು. ಸದಾ ಹಸನ್ಮುಖಿಗಳಾಗಿ ಚಟುವಟಿಕೆಯಿಂದಿದ್ದ ಅವರು ಮಾನವ ಗುಣಗಳಿಗೆ ಗಣಿಯಾಗಿದ್ದರು. ಕನ್ನಡ ಮಾತೆಯ ಈ ಸುಪುತ್ರನಿಗೆ ಸಾಹಿತ್ಯ

ಪರಿಷತ್ತು, ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳೂ ಉಚಿತ ಸ್ಮಾರಕ ನಿರ್ಮಾಣ ಮಾಡಬೇಕು, ಅವರ ಟಿಪ್ಪಣಿಗಳಲ್ಲಿ ಅಡಗಿರುವ ಸಾರಸ್ವತ ಸಂಪತ್ತು ಬೆಳಕಿಗೆ ಬರುವಂತಾಗಬೇಕು. ಕನ್ನಡ–ಕನ್ನಡ ನಿಘಂಟು ಹಾಗೂ ಕನ್ನಡ ವಿಶ್ವಕೋಶ ಬೇಗನೆ ಪೂರೈಸಿದಷ್ಟೂ ಅವರ ಆತ್ಮಕ್ಕೆ ಅಧಿಕ ಶಾಂತಿ ದೊರೆಯಬಲ್ಲದು ಎಂದು ನಾವು ನಂಬಿದ್ದೇವೆ. ಅವರ ಕುಟುಂಬದವರಿಗಾದ ದುಃಖದಲ್ಲಿ ನಾವು ಸಮಭಾಗಿಗಳು.

(ಸಂಯುಕ್ತ ಕರ್ನಾಟಕ : ೯–೯–೧೯೬೬)

* * *

ಅಗಲಿದ ಆಚಾರ್ಯರಿಗೆ ನಾವು ಸಲ್ಲಿಸುವ ಕಾಣಿಕೆ

ಸಮಸ್ತ ಕನ್ನಡಿಗರ ಕಣ್ಣಿನಲ್ಲಿ ಒಂದೇ ಮಟ್ಟದ ಹಿರಿಯಗೌರವ, ಪ್ರೀತ್ಯಾಭಿಮಾನಗಳನ್ನು ಗಳಿಸಿಕೊಂಡಿದ್ದ ಆಚಾರ್ಯ ತೀ.ನಂ. ಶ್ರೀಕಂಠಯ್ಯನವರು ಕಳೆದ ವಾರ (೭–೯–೬೬) ತೀರಿಕೊಂಡರು. ಕನ್ನಡದೇಶಕ್ಕೆ ಅತ್ಯಂತ ದೂರದ ಕಲ್ಕತ್ತದಲ್ಲಿ ಅವರ ಹಠಾತ್ತನೆ ಸಾವು ಸಂಭವಿಸಿತು. ತಮ್ಮ ಪ್ರಗಲ್ಭ ಪಾಂಡಿತ್ಯ, ವಿದ್ಯಾವಿನಯ ಸಂಪನ್ನತೆ, ಸತ್ಯವಿತ್ವವುಳ್ಳ ವಾಕ್ಕು– ಇವುಗಳಿಂದ ಅವರು ಕನ್ನಡಜನಕ್ಕೆ ಅತ್ಯಂತ ಪ್ರೀತಿಯ ವ್ಯಕ್ತಿಗಳಾದರು. ಪ್ರಾಮಾಣಿಕತೆಯೇ ಅವರ ಜೀವನ ಸೊಬಗು. ಆಡುವ ಮಾತಿನಲ್ಲಿ, ಬರೆಯುವ ಮಾತಿನಲ್ಲಿ, ನಡವಳಿಕೆಯಲ್ಲಿ ಪ್ರಥಮವಾಗಿ ಫಳಕ್ಕನೆ ಹೊಳೆದು ತೋರುತ್ತಿದ್ದುದೇ ಈ ಪ್ರಾಮಾಣಿಕತೆ. ಅಂತೆಯೇ ಅವರು ಬರೆದದ್ದು ಕಮ್ಮಿಯಾದರೂ, ಬರದೆದ್ದಲ್ಲವೂ ಶುದ್ಧ ಬಂಗಾರವಾಗಿದೆ. ವಿದ್ವಾಂಸರ ಕಣ್ಣುಗಳೆಲ್ಲ ತಾವು ಬರೆದ ಒಂದೊಂದು ಪದಗಳ ಮೇಲೆಯೂ ಸೂಕ್ಷ್ಮವಾಗಿ ಆಡುತ್ತಿವೆಯೋ ಎನ್ನುವಷ್ಟು ಎಚ್ಚರಿಕೆಯಿಂದ ಅವರು ತಮ್ಮ ಲೇಖನ ಕಲೆಯನ್ನು ಸಾಗಿಸಿದ್ದಾರೆ. ಅವರ ಆಯುಷ್ಯವಿನ್ನೂ ಇದ್ದಿದ್ದರೆ, ಇನ್ನಷ್ಟು ಪರಿಪಕ್ವವಾದ ಕೃತಿಗಳು ಅವರಿಂದ ಹೊರಬಿದ್ದು ಕನ್ನಡನುಡಿ ಮತ್ತಷ್ಟು ಕಳೆಯೇರುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಆದರೆ, ದೈವ ಅವರನ್ನು ನಮ್ಮಿಂದ ಕಿತ್ತುಕೊಂಡಿತು.

ಆದರೂ ತೀ.ನಂ.ಶ್ರೀ. ಅವರ ನಿಧನದಿಂದ ಕನ್ನಡ ನಿಘಂಟಿನ ಕೆಲಸಕ್ಕೆ ಉಂಟಾದ ಹಾನಿ ಅಷ್ಟಿಷ್ಟಲ್ಲ. ನಿಘಂಟಿನ ಮುಖ್ಯ ಸಂಪಾದಕರಾಗಿ, ಸಂಪಾದಕ ಮಂಡಲಿಯ ಅಧ್ಯಕ್ಷರಾಗಿ – ಅವರು ದುಡಿಯುತ್ತಿದ್ದರು. ಅದಕ್ಕಾಗಿ ಅವರು ದಿನಕ್ಕೆ ೧೦–೧೨ ಗಂಟೆಗಳು ಕೆಲಸಮಾಡಿದ್ದೂ ಉಂಟು. ದುಡಿಮೆಯೊಂದೇ ಅಲ್ಲ, ಕನ್ನಡಪದಗಳ ಹುಟ್ಟು, ಬೆಳವಣಿಗೆಗಳನ್ನು ಕುರಿತಾದ ಭಾಷಾವಿಜ್ಞಾನದಲ್ಲಿ ಅವರಷ್ಟು ಖಚಿತ ಜ್ಞಾನ ಪಡೆದವರು ಅತಿ ವಿರಳ. ಅಂತೆಯೇ ಅವರ ಮೇಲ್ವಿಚಾರಣೆಯಲ್ಲಿದ್ದ ಕನ್ನಡ–ಕನ್ನಡ ನಿಘಂಟು ಪರಿಪೂರ್ಣವಾಗಬಹುದೆನ್ನುವ ಶ್ರದ್ಧಾಸಕ್ತಿಗಳು ಕನ್ನಡಿಗರಲ್ಲಿದ್ದವು. ಈ ಸ್ಥಾನವನ್ನು ಇನ್ನಾರು ತುಂಬುವರೊ? ಆದರೂ ತೀ.ನಂ.ಶ್ರೀ. ಅವರ ನಿಧನದಿಂದ ಒಂದೆಚ್ಚರಿಕೆ ನಮಗುಂಟು. ಹಿರಿಯ ವಿದ್ವನ್ಮಣಿಗಳು ಮಿಂಚಿ ಹೋಗುವ ಮೊದಲೇ ಜಾಗ್ರತರಾಗಿ ಕನ್ನಡ ಕಾರ್ಯಗಳನ್ನು ಕೈಗೂಡಿಸಿಕೊಳ್ಳುವಂತಹ ಎಚ್ಚರ, ವಿವೇಕವನ್ನು ನಾವು ತಾಳಬೇಕಾಗಿದೆ.

ಭಾಷಾವಿಜ್ಞಾನವನ್ನು (Linguistics) ಮೈಸೂರು ವಿಶ್ವವಿದ್ಯಾಲಯಕ್ಕೆ ಒಂದು ಬೋಧಕ ವಿಷಯವಾಗಿ ಅಳವಡಿಸಿದ ಕೀರ್ತಿ ದಿವಂಗತ ತೀ.ನಂ.ಶ್ರೀ. ಅವರಿಗೆ ಸಲ್ಲುತ್ತದೆ. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯದಿಂದ ಅದೆಷ್ಟು ಮಂದಿ ಕನ್ನಡ ವಿದ್ಯಾರ್ಥಿಗಳು ಅವರ ಪ್ರಭಾವ, ಸ್ಫೂರ್ತಿಗಳಿಂದ ಹೊರಕ್ಕೆ ಬಂದಿರುವರೋ. "ತಸ್ಯಮೇ ಸರ್ವಶಿಷ್ಯಸ್ಯನೋಪದೇಶ ದರಿದ್ರತಾ" – ಎನ್ನುವ ಮಹಾದರ್ಶ ಅವರದು. ವ್ಯಕ್ತಿತ್ವವನ್ನು ಕೊಟ್ಟು ವಿದ್ಯಾರ್ಥಿಗಳನ್ನು ಎರಕ ಹೊಯ್ಯುತ್ತಿದ್ದ ಶಕ್ತಿ ತೀ.ನಂ.ಶ್ರೀ. ಅವರದು.

ಮೂವತ್ತು ವರ್ಷಗಳು ಪ್ರಾಧ್ಯಾಪಕರಾಗಿ, ನುಡಿಸೇವಕರಾಗಿ, ಅಪಾರ ಶಿಷ್ಯವಾತ್ಸಲ್ಯವುಳ್ಳ ತೀ.ನಂ. ಶ್ರೀಕಂಠಯ್ಯನವರ ಹೆಸರು ಚಿರಕಾಲ ನಿಲ್ಲುವಂತೆ, ಅವರಿಂದ ಉಪಕರಿಸಲ್ಪಟ್ಟ ಈ ನಾಡು ಕಾಣಿಕೆಯನ್ನು ಸಲ್ಲಿಸಬೇಕಾಗಿದೆ. ಭಾಷಾಧ್ಯಾಯಿಗಳಿಗೆ ಹಾಗೂ ಸಂಶೋಧಕ ವಿದ್ಯಾರ್ಥಿಗಳಿಗೆ ಅವರಿಂದ ನೆರವಾಗುವಂತೆ ಒಂದು ದತ್ತಿ ನಿಧಿಯನ್ನು ಏರ್ಪಡಿಸುವುದು ತುಂಬ ಉಚಿತವಾಗಿದೆ. ಅದು ಆದಷ್ಟು ಜಾಗ್ರತೆ ಏರ್ಪಟ್ಟು, ವಿದ್ಯಾರ್ಥಿಗಳಿಗೆ ಅದರಿಂದ ದೊರೆಯುವ ಪ್ರಯೋಜನದಿಂದ ದಿವಂಗತ ತೀ.ನಂ. ಶ್ರೀಕಂಠಯ್ಯನವರ ಆತ್ಮಕ್ಕೆ ಶಾಂತಿ ದೊರಕಲೆಂದು ಹಾರೈಸುತ್ತೇವೆ.

(ಪ್ರಜಾಮತ)

* * *

ಎರಡು ಹನಿ ಕಣ್ಣೀರು.....

ಅವರ ದಿವ್ಯ ಸ್ಮೃತಿಗೆ ತರ್ಪಣ ಎರಡು ಹನಿ ಕಣ್ಣೀರು. ಆ ಎರಡು ಹನಿ ನೆಲದ ಮೇಲೆ ಬಿದ್ದು ಇಂಗಿ ಹೋಗಬಹುದು. ಆದರೆ ಅವರ ಸ್ಮೃತಿ ಅಳಿಸಲಾಗದ ನೆನಪು.

ಅರುವತ್ತು ತುಂಬುವ ಮೊದಲೇ ವಿಧಿಯ ಕರೆಗೆ ಓಗೊಟ್ಟ ತೀ.ನಂ. ಶ್ರೀಕಂಠಯ್ಯನವರನ್ನು ನೆನೆದರೆ ತಲೆ ತಂತಾನೆ ಬಾಗುವುದು, ತನಗರಿವಿಲ್ಲದಂತೆಯೇ ಮನಸ್ಸು ಕೈ ಮುಗಿಯುವುದು.

'ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ' – ಆಕಾಶದ ಆಕಾರ ಆಕಾಶದ್ದೆ, ಸಾಗರಕ್ಕೆ ಸಾಗರದ್ದೇ ಹೋಲಿಕೆ. ಅಂತೆಯೇ ತೀ.ನಂ.ಶ್ರೀ. ಕೂಡ. ಅವರನ್ನು ಅವರೊಂದಿಗೆ ಮಾತ್ರ ಹೋಲಿಸಬಹುದೇ ಹೊರತು ಮತ್ತಾರೊಂದಿಗೆ ಹೋಲಿಸಲು ಸಾಧ್ಯ? ಸರಸ್ವತಿ ವರಪ್ರಸಾದವೇ ಎಂಬಂತಿದ್ದ ಅವರು ಕನ್ನಡಕ್ಕಾಗಿ ಬಿಟ್ಟುಹೋದ ಸಿರಿಯ ಹಿರಿಮೆಯನ್ನು ನೆನೆದರೆ ಮೈ ಪುಳಕಿತವಾಗುವುದು.

ಕನ್ನಡ ತನ್ನತನವನ್ನೇ ಮರೆತುಬಿಟ್ಟಿದ್ದಾಗ ಕನ್ನಡತನದ ದೀಕ್ಷೆ ತೊಟ್ಟ ಆಚಾರ್ಯ ಬಿ.ಎಂ.ಶ್ರೀ. ಹೊಸಗನ್ನಡದ ಗೊತ್ತುಗುರಿಗಳನ್ನು ರೂಪಿಸಿದರಾದರೆ ಅವರ ಮಹಾಪರಂಪರೆಯಲ್ಲೇ ನಡೆದು ಬಂದ ತೀ.ನಂ.ಶ್ರೀ. ಭಾಷೆಗೆ ಶಾಸ್ತ್ರದ ಉಡುಗೆಯನ್ನೇ ತೊಡಿಸಿ ಅದರ ಘನತೆ ಗಾಂಭೀರ್ಯಗಳನ್ನು ಹಿಗ್ಗಿಸಿದರು. ಅಧ್ಯಯನ, ಅಧ್ಯಾಪನಗಳೊಂದಿಗೆಯೆ ಸಾಹಿತ್ಯ ಕೃಷಿಯನ್ನೂ ಗೈದ

ಅವರ ಲೇಖನಿಯ ಮೂಲಕ ಹರಿದು ಬಂದ ಕೃತಿಗಳು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯೆನಿಸಿದರೂ ಮೌಲ್ಯದ ದೃಷ್ಟಿಯಿಂದ ಅಳೆಯಲಾಗದಷ್ಟಿವೆ. ಕನ್ನಡ ಸಾರಸ್ವತ ಪ್ರಪಂಚದಲ್ಲಿ ಅವರ ಹೆಸರನ್ನು ಅಜರಾಮರವಾಗಿಸಲು ಅವರ 'ಭಾರತೀಯ ಕಾವ್ಯಮೀಮಾಂಸೆ'ಯೊಂದೇ ಸಾಕು.

ತೀ.ನಂ.ಶ್ರೀ. ಅವರು ಬರೆದಿರುವುದಕ್ಕಿಂತ ಬರೆಯಬೇಕೆಂದಿಟ್ಟುಕೊಂಡುದೇ ಬಹಳವಾಗಿತ್ತು. ಕನ್ನಡದಂತೆಯೆ ಸಂಸ್ಕೃತ, ಇಂಗ್ಲಿಷುಗಳ ಮೇಲೂ ಅಗಾಧ ಪ್ರಭುತ್ವ ಸಂಪಾದಿಸಿದ್ದ ಅವರ ವಿದ್ವತ್ತು ಆಳವರಿಯದಷ್ಟು ಗಾಢವಾಗಿದ್ದರೆ ಅವರ ಜ್ಞಾನಸಂಪತ್ತು ವಿಶ್ವಕೋಶವನ್ನೇ ಹೋಲುತ್ತಿತ್ತು. ತಮ್ಮ ಜ್ಞಾನನಿಧಿಯ ಅಮೃತವರ್ಷವನ್ನು ತಮ್ಮ ಶಿಷ್ಯರ ಮೇಲೆ ಕರೆಯುವುದಕ್ಕೆ ಮಾತ್ರ ಅವರೆಂದೂ ಪರಿಮಿತಗೊಳಿಸಲಿಲ್ಲ. ಅವರ ಪರಿಪಕ್ವ ಪಾಂಡಿತ್ಯ, ಸೂಕ್ಷ್ಮ ವಿಮರ್ಶನ ಬುದ್ಧಿಗಳ ಪರಿಣಾಮವಾಗಿ ಆಣಿಮುತ್ತುಗಳಂತಹ ಕೃತಿಗಳು ಮೂಡಿಬಂದವಾದರೆ ಭಾಷಾಶಾಸ್ತ್ರದ ಬಗೆಗೆ ಅವರು ರಚಿಸುತ್ತಿದ್ದ ಗ್ರಂಥ ಅಪೂರ್ಣವಾಗಿಯೇ ಉಳಿದುಹೋಯಿತು. ಕನ್ನಡ ನಿಘಂಟು ಮತ್ತು ವಿಶ್ವಕೋಶಗಳು ಅವರ ಈ ಜ್ಞಾನನಿಧಿಗೆ ಅಂಟಿಕೊಂಡ ಬಳ್ಳಿಗಳಂತೆ ಬೆಳೆಯುತ್ತಲಿದ್ದವು. ಅವಕ್ಕಿನ್ನು ಅನ್ನ ನೀರುಗಳನ್ನಿತ್ತು ಪೋಷಿಸುವರಾರು?

ಪ್ರತಿಭೆ, ವಿದ್ವತ್ತುಗಳಿಗೆ ತವರೆನಿಸಿದ್ದ ತೀ.ನಂ.ಶ್ರೀ. ಸಜ್ಜನಿಕೆಯ ಸಾಕಾರಮೂರ್ತಿಯೇ ಆಗಿದ್ದರು. ಸದಾ ಹಸನ್ಮುಖಿಯಾಗಿದ್ದ ಅವರು ಆತ್ಮೀಯತೆಗೆ ಇನ್ನೊಂದು ಹೆಸರೆನಿಸಿದ್ದರು. ಸೃಜನಾತ್ಮಕ ಪ್ರತಿಭೆಯೊಂದಿಗೆಯೆ ಭಾಷಾಭ್ಯಾಸದ, ಪಾಂಡಿತ್ಯದ ಬಲವನ್ನು ಗಳಿಸಿಕೊಂಡು ಆಧುನಿಕ ಕನ್ನಡವನ್ನು ಶ್ರೀಮಂತವಾಗಿಸಿದ ಒಂದು ಪೀಳಿಗೆಯ ಪ್ರತಿನಿಧಿಯಂತೆಯೇ ಇದ್ದ ಆಚಾರ್ಯ ತೀ.ನಂ.ಶ್ರೀ. ಅವರ ನಿಧನದಿಂದ ಕನ್ನಡ ಸಾರಸ್ವತ ಬಡವಾಗಿದೆ. ಅವರ ಪಾರ್ಥಿವ ಶರೀರ ಕಣ್ಮರೆಯಾಗಿರುವುದಾದರೂ ಚೇತನ ಸ್ವರೂಪಿಯಾಗಿರುವ ಅವರ ಕಾರ್ಯ ನಮಗೆಲ್ಲ ಚಿರಂತನ ಸ್ಫೂರ್ತಿಯ ಸೆಲೆಯಾಗಿರಲಿ.

(ಕರ್ಮವೀರ : ೧೮-೯-೧೯೬೬)

* * *

ನಾಡಿನ ವಿದ್ವಜ್ಜನರ ದುಃಖ – ಸ್ಮಾರಕದ ಅಪೇಕ್ಷೆ

"ಕಃ ಕಂ ಶಕ್ತೋ ರಕ್ಷಿತುಂ ಮೃತ್ಯು ಕಾಲೇ?
ರಜ್ಜುಚ್ಛೇದೇ ಕೇ ಘಟಂ ಧಾರಯಂತಿ?"

ಎಂದೂ ಬತ್ತದ ರಸದ ಬಾವಿಯಿಂದ ಪಾಂಡಿತ್ಯದ ಅಮೃತ ರಸವನ್ನು ತಮ್ಮ ಶಕ್ತ್ಯಾನುಸಾರ ಸೆಳೆದುಕೊಳ್ಳುತ್ತಿದ್ದ ನಾಡಿನ ಯುವಕರಿಗೆಲ್ಲ ಈ ಮಾತಿನ ಅರ್ಥ ಇಂದು ಸ್ಫುಟವಾಗುತ್ತ ಇದೆ. ಕೈಮೀರಿಹೋದ ಮೇಲೆ ಮಾಡಬೇಕಾಗಿದ್ದ ಕರ್ತವ್ಯ ಬೃಹದಾಕಾರವಾಗಿ ಕಣ್ಣೆದುರು ಕಾಣುತ್ತಿದೆ. ತೀ.ನಂ.ಶ್ರೀ.ಯವರ ಅಕಾಲ ನಿಧನದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ಕೋಶಕ್ಕೆ ಆಗಿರುವ ಆಘಾತವನ್ನು ಮಾತಿನಲ್ಲಿ ವರ್ಣಿಸಲಾಗುವುದಿಲ್ಲ. ಮುಂದಿನ

ಕಾರ್ಯನಿರ್ವಹಣೆ ಮಾಡುವುದಕ್ಕೆ ಈ ಹಿರಿಯ ವಿದ್ವಾಂಸರ ಪವಿತ್ರ ಜೀವನವು ಮಾರ್ಗದರ್ಶನ ಮಾಡಲೆಂದು 'ನುಡಿ' ಹಾರೈಸುತ್ತದೆ.

ಶ್ರೀಯುತರು ಪರಿಷತ್ತಿನೊಡನೆ ಹೊಂದಿದ್ದ ನಿಕಟವಾದ ಸಂಬಂಧವನ್ನು ಶಾಶ್ವತಪಡಿಸುವುದಕ್ಕಾಗಿ ಒಂದು ಸ್ಮಾರಕ ನಿಧಿಯನ್ನು ಸ್ಥಾಪಿಸಿ ಪ್ರತಿ ವರ್ಷವೂ ಒಂದು ಉತ್ತಮ ಸಾಹಿತ್ಯ ವಿಮರ್ಶೆಯ ಗ್ರಂಥದ ಪ್ರಕಟಣೆಗೆ ಏರ್ಪಾಟು ಮಾಡಬೇಕೆಂದು ಪರಿಷತ್ತು ಯೋಚಿಸಿದೆ.

ಈ ವಿಶೇಷ ಸಂಚಿಕೆಯು ನಮ್ಮ ಈ ಕಾರ್ಯಕ್ಕೆ ಮಾರ್ಗವನ್ನು ಸಮೆಯಲೆಂದೂ, ಈ ಮೂಲಕ ನಮ್ಮ ಉದ್ದೇಶ ಸಫಲವಾಗಲೆಂದೂ ಪರಿಷತ್ತು ನಿರೀಕ್ಷಿಸುತ್ತದೆ.

(ಕನ್ನಡ ನುಡಿ : ಅಕ್ಟೋಬರ್ ೧೯೬೬)

* * *

ಛೂಬಾಣ

ಕನ್ನಡದ ಸಾರಸ್ವತ ಲೋಕ, "ಶ್ರೀ" ಅವರ ಶಿಷ್ಯವರ್ಗದಲ್ಲಿ ಅಗ್ರಗಣ್ಯರಾಗಿದ್ದು, ಆನಂತರದ ಪೀಳಿಗೆಯ ಶಿಷ್ಯವರ್ಗಕ್ಕೆ ತಮ್ಮದೇ ಆದ ಚೊಕ್ಕವಾದ, ಶಿಷ್ಟವಾದ ರೀತಿಯ ಗುರುವೆನಿಸಿದ ತೀ.ನಂ.ಶ್ರೀ. ಅವರನ್ನು ಕಳೆದುಕೊಂಡು ತಬ್ಬಿಬ್ಬಾಗಿದೆ; ಒಂದು ಪ್ರಕಾರದಲ್ಲಿ ತಬ್ಬಲಿಯೂ ಆಗಿದೆ. ನಮ್ಮ ಈ ತಬ್ಬಲಿತನವನ್ನು ತುಂಬುವ ಮಾರ್ಗ ತಿಳಿಯದು; ಸುಮ್ಮನೆ ಅವ್ಯಾಹತವಾಗಿ ಹೂಬಾಣ ಸಮರ್ಪಿಸುತ್ತ ಗುರುಸ್ಮರಣೆ ಮಾಡಬೇಕಾಗಿದೆಯಷ್ಟೆ.....

'ಗುರು ಸ್ಸಾಕ್ಷಾತ್ ಪರಬ್ರಹ್ಮ' ಅನ್ನುತ್ತೇವೆ. ಅದನ್ನೀಗ ಸಾವಿರ ಬಾರಿ ಪಠಿಸಬೇಕು.... ಪಠಿಸಿ..... ಬಿ.ಎಂ.ಶ್ರೀ.ಗೆ ದ್ವಿತೀಯರಾದ ತೀ.ನಂ.ಶ್ರೀ.ಯಂಥ ಠಾಕೋ ಠಾಕ್ ಶಿಸ್ತಿನದಿರುಸಿನ ನುಡಿಯ ನಡೆಯ, ವ್ಯಕ್ತಿ ಇನ್ನೊಬ್ಬರು ಸಿಕ್ಕಿಯಾರೆ?... ಹುಡುಕಲು ಕಾವ್ಯಾರಣ್ಯಕ್ಕೆ ಹೋಗಿ !.... ಅಮರವಿರಲಿ ತೀ.ನಂ.ಶ್ರೀ. ಸ್ಮರಣೆ.

(ಪ್ರಜಾವಾಣಿ : ೧೦-೯-೧೯೬೬)

ಸಂತಾಪಸೂಚಕ ಪತ್ರಗಳು

●

B.S. Kesavan, New Delhi
National Librarian (Retired) 15th September

My dear Nagabhushana,

I do not know what to say! I have deliberately not written to you or your dear mother all these days. My wife and I have not as yet reconciled ourselves to the fact that one of the most lovable of friends who was only the other day talking to us with such affection is no longer there. The world will mourn a great scholar. But we mourn someone who was most dear to us as a member of an intimate family, whose presence we always took for granted & whose sudden disappearance leaves as disconsolate. To your dear mother my wife and I convey our deepest sympathies and we will take the earliest opportunity to come and share our grief with her in person. All of us sensed the great joy he felt in bringing his Jayalakshmi along with him on this tour. It was most fitting though ineffably tragic, that she should have been with him at Culcutta on the fateful morning of the 7th September. Forty glorious years of comradeship climaxed itself in this trip of Tinamsree and Jayalakshmi & has given her memories - undying memories. Her heart break is bound to be tempered by recollection of Agra, Delhi & Ranchi. His talk at the Kannada school on Pampa was remembered by the many who had listened to it and who had come to the meeting at the Mysore Information Centre where we had all gathered to mourn - his loss. Nittoor Sreenivasa Rao

presided, Balu Rao read out your dear father's poems, Sharada Prasad, K. Raghavachar & I also spoke.

Please tell Nagarathna that it was her proud previlege to give her father a glorious few days of happiness in the company of his grandchild before he was swept away from us. I know nothing will console her. But you & she have to pull yourselves up if only for the sake of your precious mother.

Before I close I want to tell you not to be in a hurry if anybody approaches you for your dear father's fine collection of books & MSS. Please do not do anything without letting me know. If your mother & yourself decide to part with the collection to anyone I shall see to it that the greatest advantage remines to the family by the transactions. I hate even to speak of it, but already I have received a few letters in that connection & I felt it my friendly duty to warn you.

With my love to everyone in the family.

I am dear boy, yours affly
Kesavan

Please do not hesitate to write to me at any time about anything in which you feel I can be helpful to you.

* * *

A.G. Ramachandra Rao Bangalore
Ex Minister for Education 15-9-1966

My dear young friend,

I add my heartfelt condolences to you, your sister & your beloved mother. I know your father since he took his B.A. degree with a number of medals. Since them his progress was uniformly good. I have read in the press all the encomia showered on him. He deserves every one of them. His demise is loss to the nation & the community, much more than to your family.

I pray to the Almighty to give him perfect Peace of Soul, & to you all - strength & courage to bear the heavy Loss.

My best wishes for you all is always there.

* * *

ಶಂ.ಬಾ. ಜೋಶಿ ಧಾರವಾಡ, ೯-೯-೧೯೬೬

ಮಾನ್ಯ ಡಿ.ಎಲ್.ಎನ್.

ಇದೀಗ ಸಂ.ಕ. ಪತ್ರಿಕೆಯಲ್ಲಿ ಸನ್ಮಾನ್ಯ ಮಿತ್ರರಾದ ಪ್ರೊ. ತೀ.ನಂ. ಶ್ರೀಕಂಠಯ್ಯನವರು ತೀರಿದ ಸುದ್ದಿ ಓದಿ ಅತೀವ ದುಃಖವಾಯಿತು. ಅವರನ್ನು ಅಗಲಿದ ನಮ್ಮೆಲ್ಲರಿಗೆ ಸಾಹಿತ್ಯ ಕ್ಷೇತ್ರ ಬರಿದೊ ಬರಿದು ಎಂದು ಎನಿಸದಿರದು. ಅವರ ನಯವಿನಯ ಸಂಪನ್ನ ವಿದ್ವತ್ತಿನ ಲಾಭ ನಾಡಿಗೆ ಇನ್ನೂ ಸಲ್ಲಬೇಕಾಗಿತ್ತು. ಪರಿಪಕ್ವ ಭಾವಬುದ್ಧಿಯ ಈ ಹಂತದ ಸಾಹಿತ್ಯ ಕೃತಿ ನಾವೆಲ್ಲ ಎದುರು ನೋಡುತ್ತಿದ್ದೆವು-ನಿಮ್ಮೆಲ್ಲರ ದುಃಖದಲ್ಲಿ ಸಹ ಭಾಗಿಯಾಗಿರುವೆ.

* * *

ಪ್ರೊ॥ ವಿ.ಜಿ. ಕುಲಕರ್ಣಿ ಧಾರವಾಡ, ೯-೯-೧೯೬೬

ಪ್ರಿಯ ಚಿ॥ ನಾಗಭೂಷಣ್,

ನನ್ನ ಸನ್ಮಾನ್ಯ ಮಿತ್ರರೂ ಪಂಡಿತ ಶ್ರೇಷ್ಠರೂ ಆದ ನಿಮ್ಮ ತೀರ್ಥರೂಪರವರ ನಿಧನದ ವಾರ್ತೆ ನನ್ನನ್ನೂ, ನಮ್ಮ ಮನೆಯವರನ್ನೂ ಅಪಾರ ದುಃಖದಲ್ಲಿ ಮುಳುಗಿಸಿದೆ. ನನಗೇ ಇಷ್ಟು ಸಹಿಸಲಸಾಧ್ಯವಾದ ದುಃಖವುಂಟಾದಾಗ ನಿಮ್ಮೆಲ್ಲರ ದುಃಖವು ಎಷ್ಟು ತೀವ್ರತರವಾಗಿರ ಬಹುದು ಎಂಬುದು ಊಹೆಗೆ ಮೀರಿದೆ. ಕನ್ನಡ ಸಾರಸ್ವತ ಪ್ರಪಂಚಕ್ಕೆ ಅವರ ನಿಧನವು ತುಂಬಿಬರಲಶಕ್ಯವಾದ ಹಾನಿಯನ್ನುಂಟುಮಾಡಿದೆ. ಆದರೆ ನನಗೂ ನನ್ನಂಥವರ ಅನೇಕ ಮಿತ್ರರಿಗೂ ಉಂಟಾದ ವೈಯಕ್ತಿಕ ಹಾನಿ ಅಳತೆಗೆ ಮೀರಿದ್ದು. ಮೂವತ್ತು ವರ್ಷಗಳ ಹಿಂದೆಯೇ ಅವರ ಪರಿಚಯದ ಸುಯೋಗವು ನನಗೆ ಆಯಿತು. ಅದು ಕ್ರಮೇಣ ಸ್ನೇಹದಲ್ಲಿ ಪರ್ಯಾವಸಾನ ಹೊಂದಿತು. ಅವರು ಧಾರವಾಡಕ್ಕೆ ಬಂದ ಮೇಲೆ ನಮ್ಮ ಸಂಬಂಧವು ತೀರ ನಿಕಟವಾಯಿತು. ನಿಮ್ಮ ತಾಯಿಯವರ ಮತ್ತು ನಿಮ್ಮಿಬ್ಬರ – ಸೌ॥ ನಾಗರತ್ನಳ ಸಂಪರ್ಕವು ನನಗೂ, ನಮ್ಮ ಮನೆಯವರಿಗೂ ವಿಶೇಷ ರೀತಿಯಲ್ಲುಂಟಾಗಿ ನಿಮ್ಮೆಲ್ಲರ ವಿಷಯಕ್ಕೆ ಪ್ರೀತ್ಯಾದರಗಳು ಹೆಚ್ಚುತ್ತಲೇ ಹೋದವು. ಒಂದು ದೃಷ್ಟಿಯಿಂದ ಅವರು ಧಾರವಾಡಕ್ಕೆ ನಮ್ಮ ವಿಶ್ವವಿದ್ಯಾಲಯಕ್ಕೆ ಅಧ್ಯಾಪಕರಾಗಿ ಬರುವುದಕ್ಕೆ ನಾನು ಕಾರಣನಾದೆ. ಅವರು ಸ್ವಲ್ಪ ಅನುಮಾನಪಡುತ್ತಿರುವಾಗ ನಾನೇ ಅವರನ್ನು ಒತ್ತಾಯ ಪಡಿಸಿ ಇಲ್ಲಿಗೆ ಬರಲು ಒಪ್ಪಿಸಿದೆ. ಅದು – ಅವರು ಬಂದದ್ದು – ಎಲ್ಲ ರೀತಿ ಯಿಂದಲೂ ಎಲ್ಲರಿಗೂ ಒಳ್ಳೆಯದೇ ಆಯಿತು. ಹೀಗೆ ಬರೆಯುತ್ತಿದ್ದಂತೆ ಅವರ ಸಂಬಂಧ ವಾದ ಅನೇಕ ನೆನಪುಗಳನ್ನು ನನ್ನ ಮನಸ್ಸಿನಲ್ಲಿ ಉದ್ಭೂತವಾಗಿ ನನ್ನ ದುಃಖವನ್ನು ಹೆಚ್ಚಿಸುತ್ತ

ಹಬ್ಬುತ್ತಿವೆ. ಆ ಪಾಂಡಿತ್ಯ, ಆ ರಸಿಕತೆ, ಆ ಸೌಜನ್ಯ, ಆ ಸ್ನೇಹಪರತೆ – ಇವನ್ನೆಲ್ಲ ಇನ್ನೆಲ್ಲಿ ಕಂಡೇನು?

ಅವರನ್ನು ಮೂರು ನಾಲ್ಕು ವರ್ಷಗಳಿಂದ ಕಾಣುವ ಯೋಗ ನನಗೆ ಉಂಟಾಗಿರಲಿಲ್ಲ. ಆದ್ದರಿಂದ ಇನ್ನೊಂದೆರಡು ತಿಂಗಳಲ್ಲಿ ಅವರನ್ನು ಕಾಣಲಿಕ್ಕೆಂದೇ ಮೈಸೂರಿಗೆ ಹೋಗಬೇಕೆಂದು ಸಂಕಲ್ಪ ಮಾಡಿಕೊಂಡಿದ್ದೆ. ಆದರೆ ವಿಧಿಯ ಸಂಕಲ್ಪವೇ ಬೇರೆಯಾಗಿತ್ತು.

ನಿನಗೂ, ನಿಮ್ಮ ಪೂಜ್ಯರಾದ ತಾಯಿಯವರಿಗೂ, ಸೌ॥ ನಾಗರತ್ನಳಿಗೂ ಏನೆಂದು ಈ ದುರ್ಧರ ಪ್ರಸಂಗದಲ್ಲಿ ಸಾಂತ್ವನದ ಮಾತನ್ನು ಹೇಳಲಿ? ಏನು ಹೇಳಿದರೂ ಅದೆಲ್ಲ ನಿರರ್ಥಕ. ಹಾಗೆ ನೋಡಿದರೆ ನನ್ನನ್ನೇ ಸಾಂತ್ವನಪಡಿಸಲಿಕ್ಕೆ ಯಾರಾದರೂ ಬೇಕಾಗಿದೆ. ಎಲ್ಲ ಜೀವನವೇ ಹೀಗೆ ಅನಿರೀಕ್ಷಿತವೂ ಅನಿಷ್ಟವೂ ಆಗ ಘಟನೆಗಳಿಂದ ಕೂಡಿದೆಯೆಂಬುದನ್ನು ಲಕ್ಷಿಸಿ ಧೈರ್ಯವನ್ನು ತಂದುಕೊಳ್ಳಬೇಕು. ಇಂಥ ದುಃಖವನ್ನು ಎದುರಿಸುವ, ಸೈರಿಸುವ ಧೈರ್ಯಸ್ಥೈರ್ಯಗಳು ನಿಮಗೆಲ್ಲ ಉಂಟಾಗಲಿ ಎಂದು ಹಾರೈಸುತ್ತೇನೆ. ವಿಶೇಷವಾಗಿ ನಿಮ್ಮ ತಾಯಿಯವರ ದುಃಖವು ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗಬೇಕಾದರೆ ನೀನು ಧೈರ್ಯವನ್ನು ತಳೆಯಬೇಕು.

ಹೆಚ್ಚಿಗಿನ್ನೇನು ಬರೆಯಲಿ? ಏನು ಪ್ರಯೋಜನ?
ನಿಮ್ಮ ಮಹದ್ದುಃಖದಲ್ಲಿ ಸಮಭಾಗಿಯಾದ

* * *

ವಿ. ಸೀತಾರಾಮಯ್ಯ ಹೊನ್ನಾವರ, ೨೦–೯–೧೯೬೬

ಶ್ರೀಮತಿ ತೀ.ನಂ.ಶ್ರೀ ಅವರ ಸಕ್ಕೆ ವಂದನೆಗಳು

ಇಷ್ಟು ದಿನಗಳ ತರುವಾಯ ನಾನು ಇಲ್ಲಿಂದ ಈ ಸಂತಾಪ ಸೂಚಕ ನಿರ್ಣಯವನ್ನು ಕಳಿಸುತ್ತಿದ್ದೇನೆ. ತಡವಾಗಿದ್ದಕ್ಕೆ ಮನಸ್ಸಿಗೆ ಬೇಸರವಾಗುತ್ತದೆ. ದಯಮಾಡಿ ಸ್ವೀಕರಿಸಬೇಕು.

ತುಂಬಾ ದೂರದ ಒಂದು ಊರಲ್ಲಿ ನಾನಿದ್ದೇನೆ. ಆದರೆ ಯಾರೂ ಮನಸ್ಸುಗಳನ್ನು ದೂರ ಮಾಡಲಾರರು.

ನಿಮ್ಮ ದುಃಖ ದೊಡ್ಡದು; ನಿಮ್ಮ ನಷ್ಟದಲ್ಲಿ ನಾಡೆಲ್ಲ ಭಾಗಿಯಾಗಿದೆ. ಆ ಸಂಗತಿ ನಿಮಗೆ ಸ್ವಲ್ಪ ಸಾಂತ್ವನವನ್ನು ಕೊಡಬೇಕು. ಅದು ಮತ್ತಷ್ಟು ಭಾರವನ್ನು ಉಂಟುಮಾಡಬಲ್ಲದೆಂಬುದೂ ನಿಜವೇ. ಆದರೂ ಅವರೊಡನೆ ಬಾಳಿ ಅವರ ನಿತ್ಯ ಜೀವನಕ್ಕೆ ಸಂತೋಷವನ್ನು ಸ್ಥೈರ್ಯವನ್ನು ತಂದುಕೊಟ್ಟವರು ನೀವು. ನೀವು ಮೈಸೂರು ಆಸ್ಪತ್ರೆಯಲ್ಲಿ ಇರುವಾಗ ಅವರು ಹೇಗೆ ಅಧೀರರಾಗಿ ಕಾತರರಾಗಿ ಇದ್ದರೆಂಬುದನ್ನು ನೋಡಿದ್ದೇನೆ. ಆ ಪ್ರೀತಿಯ ಬಂಧ ಅಸಾಧಾರಣವಾದದ್ದು. ನನ್ನ ಅವರ ಸಹವಾಸ ಸ್ವಲ್ಪವೇ ಆಗಿದ್ದರೂ ಆ ಜೀವದ ಹದ ಇಂಥದೆಂಬುದು ನನಗೆ ಗೊತ್ತು.

ನಮ್ಮ ನಾಡಿನ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಮಾದರಿಯಾಗಬಲ್ಲ ವಿದ್ವತ್ತು, ಸಜ್ಜನಿಕೆ ಅವರದು; ಅವರ ವಿದ್ಯಾನಿಷ್ಠೆ ಅಪಾರವಾದದ್ದು. ಲೋಕವೆಲ್ಲ ಅವರಿಗೆ ತನ್ನ ಪ್ರೀತಿ ಭಕ್ತಿಗಳನ್ನು ಅರ್ಪಿಸಿದೆ.

ನನ್ನವನ್ನೂ ತಾವು ಸ್ವೀಕರಿಸಬೇಕು.

ನಿಮ್ಮನ್ನು ನೆಮ್ಮದಿಗೊಳಿಸಬಲ್ಲದ್ದು ಆ ನೆನಪು. ಆ ಒಡನಾಡಿಯೇ ಅವುಗಳ ಸವಿ, ಹಿರಿಮೆ ಮಾತ್ರ. ನಿಮಗೂ, ಮಕ್ಕಳಿಗೂ ದೇವರು ಧೈರ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ನನ್ನ ಮಗಳು ಹೆಂಡತಿ ಇಬ್ಬರೂ ಇದರ ನೋವಿನಲ್ಲಿ–ಸಾಂತ್ವನಿಸುತ್ತಿದ್ದು ಭಾಗಿಗಳಾಗಿದ್ದಾರೆ.

* * *

Bishwa Nath Prasad
Vice-Chairman, Government of India
Standing Commissioner for Scientific &
Technical Terminology

New Delhi
21-09-1966

Dear Madam,

Your husband's sad and sudden demise has given a rude shock to me. I feel extremely distressed to miss him and I share your bereavement deeply. Only a few days before his passing away, he was here in Delhi at my invitation and he took part in our meetings with lively interest and his usual candour. Although he looked slightly emaciated and weak, he appeared to be quite cheerful and we could never imagine that he would leave us so soon. We are still anxious to know the circumstances in which this unfortunate event took place. Was it in Calcutta or Bangalore? The news in the papers were not quite clear. I send my hearty condolences to you in your suffering. All my colleagues here join me in the feelings of sympathy that I am conveying to you. May Professor Sreekantaiya's soul rest in peace and may God give you strength enough to bear this separation.

If there is any service that I can render to you, please let me know without any hesitation.

With hearty sympathies and pangs.

* * *

S.V. Krishnamoorthy Rao New Delhi, Sept. 24, 1966

My dear Shri Nagabhushana,

When I visited your house in Mysore on the 10th instant. You had gone to Paschimavahini to commence the ceremonies connected with your late father. I had written a letter to the Chief Minister of Mysore to give you some financial help so that you may be able to continue your studies and also some help to your mother. I am glad to inform you that he has written me a letter that your mother will be paid Rs. 500/- and also a sum of Rs. 100/- a month for a period of one year. I am herewith enclosing a copy of that letter for your information. I hope and trust this will enable you to continue your studies and be of some solace to your mother.

*

Letter No. CM-I 738/16 dated Sept. 15, 1966 from Shri S. Nijalingappa, Chief Minister of Mysore, Bangalore to Shri S.V. Krishnamoorthy Rao, Deputy Speaker, Lok Sabha, New Delhi.

I have received your letter requesting that the widow of Shri T.N. Sreekantiah may be helped. We were already thinking that help since we got the news of the death. Orders have been passed that his widow may be paid Rs. 500/- and another sum of Rs. 100/- per month for a period of one year. It is hoped that will help Srikantiah's family to ward off troubles immediately.

* * *

Mrs. Gary I. Salzman Miami, Florida
Friday, October 7, 1966

Our dear, dear "Bhushan"

We shared your tears..... and as I was reading your letter to Gary, a sudden whispering shower of rain, as though your Father, our dear

"Sree" was asking us not to grieve. When I saw your return-address on the letter, I said, "Something has happened to Sree". We did not expect to read of his death, but knowing Sree always answered almost by return mail, we thought only that he was ill and had asked you to answer for him.

We know how difficult it was for you to be the bearer of the sad news, and we appreciate your courage. Death came quickly and softly, after a joyous trip and visits with dear ones-Sree would not have asked for more. We must accept that death comes to us all, and yet is never expected. There is never time to prepare ourselves to accept it, even when we know it is inevitable. When I learned that my Father was dying of lung cancer, and then only a few short months later my Mother was dying of throat cancer, I prayed. I could not pray just for "life" - because the War with Cancer left no hope of "victory" - but I prayed only that whatever time they had left to them, they would not be bedridden, and they should not be in pain. My prayers were answered.

When you are going through the time of death of a loved one, God is again merciful - you are so numb and so closed-up inside, that you are truly unaware of what is going on around you. The numbness wears off, perhaps six months later, and the grief and the shock which you think you have already weathered, sets in. By then you have reorganized your life, and you are able to accumulate a little more strength to bear it. I found that there is only one way in the world that anyone can be spared the grief of losing a loved one and that is not to love, or be loved.

You, "Bhushan", would not choose if you had the power, that in order to be spared your present grief, not to have known the love of your Father - just because one day it would be taken away from you. It is as simple as that. As much as the suddenness of your Father's death has given almost a physical blow to his family, your **Father** has been spared the grief that **you** must now endure.

Your tears are a healthy outlet, and you must give in to them, now. Then you will find the use of a second gift that has been given us - laughter. Recall the joyous time together, the dear good times. One day you will be able to speak of your Father without pain, and then the healing is complete.

"Bhushan", I have saved all of your Father's letters - they were too dear to just read and throw away - my first letter to Sree was written November 7, 1955. I will have photo-copies made for myself, and send you every one of Sree's dear letters - a gift of his love for you all, that you will cherish and be comforted. You may know your Father better, perhaps, after reading his letters, and it will give you back a part of your loss.

December 1963, I wrote.... "I have loads of information for you in regard to your inquiry about son, T.S. Nagabhushana - whom his sister calls "Bhushan" when she wants to show her fondness for her brother - (from a letter carefully saved of December 23, 1955!). Now, I shall have to call upon my 'powers' as a former 'Cohan' (the priestly tribe in the Hebrews) - and think of a real American name for your son...... We shall call him 'Ben' which in Hebrew denotes 'son of' and his entire American name shall be 'Benjamin' which means 'son of the right hand' - The original Benjamin was a favourite of his father........ However, in this letter, I will show my fondness for Sree's 'son of the right hand' and call him 'Bhushan'.

Sree's reply was:

"You have chosen an appropriate Hebrew name for my son. He is indeed the right hand of his father; I hope the word 'Benjamin' will bear this slight twist in meaning."

"A friend of mine once remarked that 'children are one's moving limbs'. Yes. They move about and do your work while you sit and rest! My Benjamin runs on my errands cheerfully."

We send our love to you and your family. Your Father left your Mother in good hands, and she will be comforted. Your sister has her own dear family and will be able to cling to them and to recover from the shock of this death with less pain; because of the daily demands on her time. My first mail to Sree was on a Novemeber 7th. We are reading your letter on an October 7th, telling us Sree died on September 7th. We said our first greetings, and Sree said his earthly farewells, on the same day of the month.

If you prefer that I send your Father's letters to you in Calcutta, please send me that address. We hope that sharing in your sorrow has lightened your burden, "Bhushan", and we send love to you all - from Gary and myself, and from Kenneth, Gerald, Cindy, Lora, and Brian.

Love-Bert.

(ಆದರೆ ಅನಂತರ ಅವರಿಂದ ನಮ್ಮ ತಂದೆಯವರ ಪತ್ರಗಳು ಬರಲಿಲ್ಲ, ನಮ್ಮ ದುರಾದೃಷ್ಟ: ಅವು ಅಂಚೆಯಲ್ಲಿ ಕಳೆದು ಹೋಗಿರಬೇಕು. –ತೀ.ಶ್ರೀ.ನಾ.)

ಸಂತಾಪಸೂಚಕ ಸಂದೇಶಗಳನ್ನು ಕಳಿಸಿದ ಸಂಘ ಸಂಸ್ಥೆಗಳು

●

೧. English Association, National College, Bangalore.
೨. ಹೊಯ್ಸಳ ಕರ್ನಾಟಕ ಸಂಘ, ಮೈಸೂರು.
೩. ಕನ್ನಡ ಪ್ರಕಟಣ ಸಮಿತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
೪. Department. of P.G. Studies in Hindi, Mysore University.
೫. ಇಂಗ್ಲಿಷ್–ಕನ್ನಡ ನಿಘಂಟು ಸಮಿತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
೬. Board of Studies in Kannada, Sri. Venkateshwara University, Tirupati.
೭. ಕನ್ನಡ ನಿಘಂಟು ಕಚೇರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೮. ಬಳುವನೇರಲು ಸೇವಾ ಸಹಕಾರ ಸಂಘ, ಬಳುವನೇರಲು, ತಿಪಟೂರು ತಾಲ್ಲೂಕು.
೯. Public Relations Officer, Southern Railway, Madras.
೧೦. ಕರ್ನಾಟಕ ಸಂಘ, ಉಡುಪಿ.
೧೧. Department of Publicity and Information, Govt. of Mysore.
೧೨. ಸಾಹಿತ್ಯ ಸಂಘ, ಸರಕಾರಿ ಕಾಲೇಜು, ಮಡಕೇರಿ.
೧೩. ಗೌರ್ನಮೆಂಟ್ ಕಾಲೇಜ್ ಆಫ್ ಎಜುಕೇಷನ್, ಬೆಳಗಾಂ.
೧೪. ಕರ್ನಾಟಕ ಕಾಲೇಜು ಯೂನಿಯನ್, ಧಾರವಾಡ.
೧೫. ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿ.
೧೬. ನಾಗರಿಕರ ಸಭೆ, ಚಿಕ್ಕನಾಯಕನಹಳ್ಳಿ
೧೭. ಕರ್ನಾಟಕ ಸಂಘ, ರಾಯಚೂರು.
೧೮. ಕಾವ್ಯಪ್ರಚಾರ ಮಂಡಳಿ, ಅಣ್ಣಯ್ಯಪ್ಪ ಬ್ಲಾಕ್, ಬೆಂಗಳೂರು.
೧೯. ಕರ್ನಾಟಕ ಸಂಘ, ಕೋಲಾರದ ಚಿನ್ನದ ಗಣಿ, ರಾಬರ್ಟ್‌ಸನ್ ಪೇಟೆ.
೨೦. ದೇಶೀಯ ವಿದ್ಯಾಪೀಠ ಹೈಯರ್ ಸೆಕೆಂಡರಿ ಶಾಲೆ, ಚಿಕ್ಕನಾಯಕನಹಳ್ಳಿ.
೨೧. Centre for Advanced Study in Dravidian Linguistics, Annamalai University.
೨೨. ಜಗದ್ಗುರು ಗಂಗಾಧರ ವಾಣಿಜ್ಯ ಕಾಲೇಜು, ಹುಬ್ಬಳ್ಳಿ.
೨೩. ಕೆ.ಎಲ್.ಇ. ಸೊಸೈಟಿಯ ಕಲೆ ಮತ್ತು ವಿಜ್ಞಾನ ಕಾಲೇಜು, ರಾಜಾಜಿನಗರ, ಬೆಂಗಳೂರು.

೨೪. ಕರ್ನಾಟಕ ಸಂಘ, ರಾಮಚಂದ್ರಪುರ, ಬೆಂಗಳೂರು.
೨೫. ರಾಣಿ ಪಾರ್ವತೀ ದೇವಿ ಕಾಲೇಜು ಮತ್ತು ಸಕ್ಸರಿಯಾ ಸೈನ್ಸ್ ಇನ್‌ಸ್ಟಿಟ್ಯೂಟ್, ಬೆಳಗಾಂ.
೨೬. ಭಂಡಾರ್ಕರ್ಸ್ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಕುಂದಾಪುರ.
೨೭. ಶ್ರೀ ಸಿದ್ಧಗಂಗಾ ಕಾಲೇಜ್ ಆಫ್ ಸೈನ್ಸ್ ಸ್ಟೂಡೆಂಟ್ಸ್ ಯೂನಿಯನ್, ತುಮಕೂರು.
೨೮. ಜಗದ್ಗುರು ತೋಂಟದಾರ್ಯ ಕಾಲೇಜು, ಗದಗ.
೨೯. ಸಹ್ಯಾದ್ರಿ ಕಾಲೇಜು, ಶಿವಮೊಗ್ಗ.
೩೦. Modern Education Society's Arts and Science College, Sirsi.
೩೧. Regional College of Education, Mysore.
೩೨. Language Division, Office of the Registrar General of India, Calcutta.
೩೩. ಸರ್ಕಾರಿ ಕಾಲೇಜು, ತುಮಕೂರು.
೩೪. ಮಹಾರಾಜ ಕಾಲೇಜು, ಮೈಸೂರು.
೩೫. ಸೆಂಟ್ರಲ್ ಕಾಲೇಜು, ಬೆಂಗಳೂರು.
೩೬. ಕನ್ನಡಿಗರ ಕೂಟ, ಬಸವನಗುಡಿ, ಬೆಂಗಳೂರು.
೩೭. ಶಾರದಾ ವಿಲಾಸ ಕಾಲೇಜು, ಮೈಸೂರು.
೩೮. ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ್.
೩೯. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೪೦. ಕನ್ನಡ ನಿಘಂಟು ಕಚೇರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೪೧. Department of Post Graduate Studies and Research in Kannada, University of Mysore.
೪೨. M.P.E. Society's Arts and Science College, Honavar.
೪೩. ಸರ್ಕಾರಿ ಕಾಲೇಜು, ಬೆಂಗಳೂರು.
೪೪. ಕನ್ನಡ ಸಾಹಿತ್ಯ ಸಂಗೀತ ಕಲಾಕ್ಷೇತ್ರ, ಮುಂಬಯಿ.
೪೫. ಸಾಹಿತ್ಯ ಅಕಾಡೆಮಿ, ನವದೆಹಲಿ.
೪೬. ಸ್ಥಳೀಯ ಪ್ರೌಢಶಾಲೆ, ಹಾರನಹಳ್ಳಿ.

ಸಾರ್ವಜನಿಕ ಸಮಾರಂಭಗಳು

(ಪತ್ರಿಕೆಗಳಲ್ಲಿ ಪ್ರಕಟವಾದಂತೆ)

●

೧.	ಮೈಸೂರು	ನಾಗರಿಕ ಸಮಿತಿ
೨.	ಧಾರವಾಡ	೧) ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳ, ಪ್ರಾಧ್ಯಾಪಕರ, ವಿದ್ಯಾರ್ಥಿಗಳ ಸಭೆ
		೨) ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ಸಂಘ.
		೩) ಜಿ.ಟಿ.ಟಿ. ಕಾಲೇಜು
		೪) ಕರ್ನಾಟಕ ವಿದ್ಯಾವರ್ಧಕ ಸಂಘ
		೫) ನಾಗರಿಕ ಸಮಿತಿ
೩.	ಹೊಸದುರ್ಗ	ಮೂಲ ಶಿಕ್ಷಕರ ತರಬೇತಿ ಸಂಸ್ಥೆ.
೪.	ಹಾಸನ	ಸರ್ಕಾರಿ ಕಾಲೇಜಿನ ಕನ್ನಡ ಸಂಘ.
೫.	ಮೇಲುಕೋಟೆ	ಗೆಳೆಯರ ಬಳಗ
೬.	ಮಂಡ್ಯ	ನಾಗರಿಕ ಸಮಿತಿ
೭.	ನವದೆಹಲಿ	೧) ದೆಹಲಿ ಕನ್ನಡಿಗರು
		೨) ಮೈಸೂರು ವಾರ್ತಾ ಕೇಂದ್ರ.
೮.	ದೊಡ್ಡಬಳ್ಳಾಪುರ	ಎನ್.ಜಿ.ಆರ್. ನಾಯ್ಡು.
೯.	ತುಮಕೂರು	ಯುವಕ ಸಂಘ
೧೦.	ಕೋಲಾರ	೧) ಕನ್ನಡ ಸಂಘ
		೨) ಸರ್ಕಾರಿ ಕಾಲೇಜು.
೧೧.	ಗುಡಿಬಂಡೆ	ಪ್ರೌಢಶಾಲೆ
೧೨.	ಇಬ್ಬೀಡು ಯಲಹಂಕ	ಶಿವನಂಜುಂಡೇಶ್ವರ ಪ್ರೌಢಶಾಲೆ
೧೩.	ಯಳನಡು	ಭೀಮನಬಂಡೆ ಗ್ರಾಮಾಂತರ ಪ್ರೌಢಶಾಲೆ
೧೪.	ದೇವನಹಳ್ಳಿ	ಕನ್ನಡ ಸಂಘ

೧೫. ಆವತಿ	ಕನ್ನಡ ಸಹೃದಯ ಸಂಘ
೧೬. ಹೈದರಾಬಾದ್	ಕರ್ನಾಟಕ ಸಾಹಿತ್ಯ ಮಂದಿರ
೧೭. ಪರಶುರಾಂಪುರ	ಸ್ಥಳೀಯ ಪ್ರೌಢಶಾಲೆ
೧೮. ಯಾದಗಿರಿ	ನ್ಯೂ ಕಾಲೇಜು ಮತ್ತು ನ್ಯೂ ಕನ್ನಡ ಹೈಸ್ಕೂಲು
೧೯. ಹಾರನಹಳ್ಳಿ	ಸ್ಥಳೀಯ ಪ್ರೌಢಶಾಲೆ.
೨೦. ಬೆಂಗಳೂರು	೧) ಕನ್ನಡ ಸಾಹಿತ್ಯ ಪರಿಷತ್ತು ೨) ಕನ್ನಡ ಸಾಹಿತ್ಯ ಕುಟೀರ, ಗವೀಪುರ ಗುಟ್ಟಹಳ್ಳಿ. ೩) ಕನ್ನಡ ಸಾಹಿತ್ಯ ಕೂಟ, ಜಾಲಹಳ್ಳಿ. ೪) ಅರಳೇಪೇಟೆ ನಟನ ಕಲಾಸಂಘ ೫) ಬಸವನಗುಡಿಯ ಕನ್ನಡಿಗರ ಕೂಟ ೬) ಅರಳೇಪೇಟೆ ಶ್ರೀ ನಟರಾಜ ಕಲಾನಿಕೇತನ ೭) ವೈಯಾಲಿಕಾವಲ್ ಕನ್ನಡ ಸಂಘ

* * *

ನಿಧನದ ಸುದ್ದಿ ವರದಿ ಮಾಡಿದ ಪತ್ರಿಕೆಗಳು

●

೧. The Hindu, Madras
೨. The Times of India, Bombay
೩. The Indian Express, Bombay
೪. Deccan Herald, Bangalore
೫. ತಾಯಿನಾಡು, ಬೆಂಗಳೂರು
೬. ಪ್ರಜಾವಾಣಿ, ಬೆಂಗಳೂರು
೭. ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ
೮. ಸಾಧ್ವಿ, ಮೈಸೂರು
೯. ಆಕಾಶವಾಣಿ ರಾಷ್ಟ್ರೀಯ ಸುದ್ದಿ

ಲೇಖನಗಳು

ಶ್ರೀ ಟಿ.ಎನ್. ಶ್ರೀಕಂಠಯ್ಯ

ಡಿ.ವಿ. ಗುಂಡಪ್ಪ

●

ಟಿ.ಎನ್. ಶ್ರೀಕಂಠಯ್ಯನವರಿಗೂ ನನಗೂ ಸಂಪರ್ಕ ಹೆಚ್ಚಾಗಿ ಬೆಳೆಯಲು ಅವಕಾಶ ಬರಲಿಲ್ಲ. ನಾನು ಅವರನ್ನು ಮೊದಲ ಬಾರಿ ಕಂಡದ್ದು ವೆಂಕಣ್ಣಯ್ಯನವರ ಮನೆಯಲ್ಲಿ. ಆಗ ವೆಂಕಣ್ಣಯ್ಯ ಹರಿಹರನ ರಗಳೆಯನ್ನೋ ಇನ್ನಾವ ಪ್ರಾಚೀನ ಗ್ರಂಥವನ್ನೋ ಶೋಧಿಸಿ, ಅದರ ನಾನಾ ಪಾಠಗಳನ್ನು ಪರಾಮರ್ಶಿಸಿ, ಉತ್ತಮವೆನಿಸುವ ಪಾಠವನ್ನು ಗೊತ್ತುಮಾಡುವ ಗ್ರಂಥಸಂಪಾದನದ (ಎಡಿಟ್ ಮಾಡುವ) ಕಾರ್ಯದಲ್ಲಿದ್ದರು; ಅದರಲ್ಲಿ ತಮ್ಮ ಆ ಶಿಷ್ಯರಿಬ್ಬರಿಂದಲೂ ಎಷ್ಟು ವಿಶೇಷ ಸಹಾಯವಾಗುತ್ತಿದೆ, ಅವರೊಡನೆ ಕೆಲಸಮಾಡುವುದು ಎಂಥ ಸಂತೋಷ – ಇದನ್ನು ನನಗೆ ವಿಸ್ತಾರವಾಗಿ ಹೇಳಿದರು.

ಯಾರು ಬಿ.ಎಂ. ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ – ಈ ಮೂವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರೋ ಅವರು ವಿದ್ವಾಂಸರು, ಸಾಹಿತ್ಯ ಕುಶಲಿಗಳು ಮತ್ತು ಭಾಷಾಭಿಮಾನಿಗಳು ಎಂಬುದಕ್ಕೆ ನನಗೆ ಬೇರೆ ರುಜುವಾತು ಬೇಕಿರಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಮತ್ತು ಮೈಸೂರು ಬೆಂಗಳೂರು ಕಾಲೇಜು ಕರ್ಣಾಟಕ ಸಂಘಗಳ ಉಪನ್ಯಾಸಾದಿ ಕಾರ್ಯಗಳಲ್ಲಿ ಭಾಗವಹಿಸಲು ಟಿ.ಎನ್. ಶ್ರೀಕಂಠಯ್ಯನವರು ಬಂದಾಗ ನಾನು ಅವರ ಮಾತುಕತೆಗಳನ್ನು ನೋಡಿ ಅವರು ಎಲ್ಲ ಪ್ರಸಂಗಗಳಲ್ಲೂ ವಿಮರ್ಶನಶೀಲರೆಂದೂ ಹಾಗೂ ಸರಸಿಗಳೆಂದೂ ಕಂಡುಕೊಂಡೆ.

ಒಂದಾನೊಂದು ಸಂದರ್ಭದಲ್ಲಿ ಟಿ.ಎನ್. ಶ್ರೀಕಂಠಯ್ಯನವರು ವಿಶ್ವವಿದ್ಯಾಪೀಠದ ಪರೀಕ್ಷೆಗಳಲ್ಲಿ ಎಂಥ ಮೇಲ್ಮಟ್ಟದ ಪ್ರಶಸ್ತಿ ಸಂಪಾದಿಸಿದ್ದರೆಂಬುದನ್ನು ರಿಜಿಸ್ಟರುಗಳಿಂದ ನೇರವಾಗಿ ತಿಳಿದುಕೊಳ್ಳುವ ಅವಕಾಶ ನನಗೆ ದೊರೆಯಿತು. ಆ ಪ್ರಶಸ್ತಿಗಳ ವಿಶೇಷ ಗುಣದ ಆಧಾರದ ಮೇಲೆ, ಸರ್ಕಾರದವರು ಟಿ.ಎನ್.ಶ್ರೀ.ಗೆ ಆಡಳಿತದ ಇಲಾಖೆಯಲ್ಲಿ ಒಳ್ಳೆಯ ಹುದ್ದೆ ಕೊಡತಕ್ಕೆಂದು ನಿಶ್ಚಯಿಸಿದರು. ಆದರೆ ಟಿ.ಎನ್.ಶ್ರೀ. ಅವರ ಪಾಲಿಗೆ ಸರ್ಕಾರದ ಪ್ರೊಬೇಷನರ್ ಹುದ್ದೆಗಿಂತ ವಿಶ್ವವಿದ್ಯಾಪೀಠದ ಅಧ್ಯಾಪಕ ಪದವಿಯೇ ಹೆಚ್ಚು ಆಕರ್ಷಕವೆನಿಸಿತು. ಇದು ಅವರ ಅಂತರಂಗದ ಒಲವನ್ನು ತೋರಿಸುತ್ತದೆ.

ಟಿ.ಎನ್. ಶ್ರೀಕಂಠಯ್ಯನವರ ವಿದ್ವತ್ತು ಬಹುಮುಖವಾದದ್ದು. ಅವರ ಕನ್ನಡ ಸಾಹಿತ್ಯದ ದೃಷ್ಟಿಯು ಇಂಗ್ಲಿಷ್ ಸಂಸ್ಕೃತ ಸಾಹಿತ್ಯಗಳ ಆಲೋಚನೆಯಿಂದ ಪರಿಷ್ಕಾರ ಪಡೆದಿತ್ತು. ಅವರ ಲೇಖನಗಳಲ್ಲಿ ಬಹುಭಾಗವನ್ನು ನಾನು ಓದಿದ್ದೇನೆಂದು ತೋರುತ್ತದೆ. ಅವರ ಬರವಣಿಗೆಯ ಶೈಲಿಯು ಪಾಂಡಿತ್ಯದಿಂದ ಗಡುಸಾಗದೆ, ಪ್ರೌಢತೆಯಿಂದ ಸ್ವಾಭಾವಿಕತೆಯನ್ನು ಕಳೆದುಕೊಳ್ಳದೆ, ಆದರೆ ಬಜಾರು ಮಾತಿನ ಅಗ್ಗದ ಮಟ್ಟಕ್ಕೆ ಇಳಿಯದೆ, ಸರಳತೆ ಗಂಭೀರತೆಗಳನ್ನು ಸಮನ್ವಯ ಮಾಡಿಕೊಂಡಿದೆ. ಶಾಸ್ತ್ರ ವಿಷಯಗಳನ್ನು ಪ್ರತಿಪಾದಿಸುವಲ್ಲಿ ಪ್ರಮಾಣವತ್ತಾಗಿಯೂ ನಿಷ್ಕರ್ಷೆಯುಳ್ಳದ್ದಾಗಿಯೂ ಇದೆ. ಕಥಾ ಪ್ರಸಂಗಗಳಲ್ಲಿ ಸಾರಗ್ರಾಹಿಯಾಗಿ ರಸವತ್ತಾಗಿದೆ. ಅವರ ಕವಿತ್ವವು ಗಾತ್ರದಲ್ಲಿ ದೊಡ್ಡದಲ್ಲದಿದ್ದರೂ ಭಾವಸಂಪತ್ತಿನಿಂದ ಗಣ್ಯವಾಗಿದೆ.

ಅಧ್ಯಾಪಕರಾಗಿ ಅವರು ತೋರಿದ ಬೋಧನೋತ್ಸಾಹವೂ ಪ್ರವಚನಪಟುತ್ವವೂ ನೂರಾರು ಮಂದಿ ಶಿಷ್ಯರ ಮನಃಪೂರ್ವಕವಾದ ಕೃತಜ್ಞತೆ ಗೌರವಗಳನ್ನು ಸಂಪಾದಿಸಿದೆ.

ವಿಶ್ವವಿದ್ಯಾಪೀಠದ ಉದ್ಯೋಗದಿಂದ ವಿಶ್ರಾಂತರಾದ ಬಳಿಕ ಟಿ.ಎನ್.ಶ್ರೀ. ಅವರು ಇನ್ನೂ ಹೆಚ್ಚಿನ ಸಾಹಿತ್ಯಸೇವೆ ಮಾಡಿಯಾರೆಂಬ ನಿರೀಕ್ಷಣೆಯಿತ್ತು. ಈಗ ಅವರ ಒಳ್ಳೆಯ ನೆನಪು ಮಾತ್ರ ಉಳಿದಿದೆ. ಅವರೊಡನೆ ಒಂದೆರೆಡು ಸಾರಿಯಾದರೂ ಮಾತನಾಡಿದ್ದವರು ಆ ನೆನಪನ್ನು ಅಕ್ಕರೆಯಿಂದ ಕಾಪಾಡಿಕೊಳ್ಳುವರು.

ಮಾತು–ವಿದ್ವತ್ತು ಲೇಖನ ಕಲೆಯ ಸಮಷ್ಟಿ ಸ್ವರೂಪ

ಕಣ್ಮರೆಯಾದ ಸಾಹಿತ್ಯ ಶ್ರೀ ತೀ.ನಂ.ಶ್ರೀ.

ಜಿ. ವೆಂಕಟಸುಬ್ಬಯ್ಯ

●

ಬುಧವಾರ ತೀ.ನಂ.ಶ್ರೀ.ಯವರ ಸಾವಿನ ಸುದ್ದಿ ನಗರದಲ್ಲಿ ಹಬ್ಬಿದಾಗ ಕತ್ತಲಾಗಿಹೋಗಿತ್ತು, ನಾಡಿನ ವಿದ್ವತ್ ಪ್ರಪಂಚದಲ್ಲಿ ನಡೆದ ಘಟನೆಯನ್ನು ಪ್ರತಿಮಿಸುವಂತೆ. ಸುದ್ದಿ ಕೇಳಿ ದಿಙ್ಮೂಢನಾಗಿ ಬಹುಕಾಲ ಕುಳಿತ ಮೇಲೆ ನನ್ನ ಮನಸ್ಸು ನನ್ನ ವಿದ್ಯಾರ್ಥಿ ದೆಸೆಗೆ ಹಿಂದಕ್ಕೋಡಿತು. ೧೯೩೩ಕ್ಕೆ ಇನ್ನೂ ಆಗತಾನೇ ಕೆಲಸಕ್ಕೆ ಸೇರಿದಂತಿದ್ದರೂ ತಲೆಯ ಮೇಲಿಟ್ಟ ಜರಿಯ ಪೇಟದಿಂದಲೂ ಮಾತಿನ ಗಾಂಭೀರ್ಯದಿಂದಲೂ ಹಿರಿತನವನ್ನು ಅಪ್ರಯಾಸವಾಗಿ ಅವರ ವ್ಯಕ್ತಿತ್ವ ಸಂಪಾದಿಸಿ ಕೊಂಡುಬಿಟ್ಟಿತ್ತು.

ಮೊದಲ ದಿನ ನಮಗೆ ಅವರು 'ಶಬ್ದಮಣಿದರ್ಪಣ'ದ ಪಾಠವನ್ನು ಪ್ರಾರಂಭಮಾಡಿದರು. ಪದ್ಯವೊಂದನ್ನು ನಾನು ಓದಬೇಕಾಗಿ ಬಂದು "ಧೀರರಿನಕ್ಷರ ಸಂಜ್ಞಾಕಾರಂ" ಎಂಬುದನ್ನು ಬಿಡಿಸಿ ಹೇಳಲಾರದೆ ಪರದಾಡಿದ್ದನ್ನೂ ಅವರು ಅದನ್ನು ಮುಗುಳ್ನಗೆಯಿಂದ ಪರಿಹರಿಸಿದುದನ್ನೂ ನಾನೆಂದೂ ಮರೆಯಲಾರೆ. ಅಂದಿನಿಂದ ವ್ಯಾಕರಣದ ಪಾಠ, ಕಾವ್ಯಪಾಠಕ್ಕಿಂತ ರಸವತ್ತಾಗಿರು ವಂತೆ ನಮಗೆ ಭಾಸವಾಯಿತು. ಆ ಬಳಿಕ 'ಕಾವ್ಯಮೀಮಾಂಸೆ' ಮುಂತಾದ ವಿಷಯಗಳ ಬೋಧನೆ ನಮಗೆ ದೊರಕಿತು. ಅದೊಂದು ರಸಪ್ರಪಂಚ. ಈ ಗುರುಶಿಷ್ಯ ಸಂಬಂಧದಲ್ಲಿ ಈಗ ನೆನಪಿರುವುದೊಂದೇ! ಎರಡೇ! ತೀ.ನಂ.ಶ್ರೀ.ಯವರ ನಗುಮುಖ, ರಸವತ್ತಾದ ಪಾಠ, ಸರಸಾಲಾಪದಿಂದ ಕೂಡಿದ ಚರ್ಚೆ, ಎಲ್ಲೋ ಯಾವುದೋ ಲೋಕಕ್ಕೆ ವಿದ್ಯಾರ್ಥಿಗಳನ್ನು ಕೊಂಡೊಯ್ಯುವ ಪದ್ಯವಾಚನದ ಇಂದ್ರಜಾಲ, ಇದ್ದಕ್ಕಿದ್ದಂತೆ ಸಮಸ್ಯೆಯನ್ನು ಮುಂದೊಡ್ಡಿ ವಿದ್ಯಾರ್ಥಿಗಳ ಜಾಣತನವನ್ನು ಪರೀಕ್ಷಿಸುವ ಉಪಾಧ್ಯಾಯ ಕೌಶಲ್ಯ, ಕಿರಿಯರಿಗೆ ಹರಿಯದೆ ಹೋದಾಗ, ನಾಟಕದ ತೆರೆ ಸರಿಸುವಂತೆ ಕ್ಲಿಷ್ಟತೆಯನ್ನು ಪರಿಹರಿಸುವ ಅಧಿಕಾರವಾಣಿ, ಹಲಗೆಯ ಮೇಲೆ ವಿಷಯ ವಿವರಣಕ್ಕಾಗಿ ಬರೆಯುತ್ತಿದ್ದ ಮುತ್ತಿನಂತಹ ಅಕ್ಷರ, ಗಂಟೆಯ ಶಬ್ದವಾದೊಡನೆಯೆ ವಿದ್ಯಾರ್ಥಿಗಳಂತೆಯೇ ತಾವೂ 'ಒಂದು ಗಂಟೆ ಆಗಿಹೋಯಿತೆ?' ಎಂದು ಆಶ್ಚರ್ಯದಿಂದ, ಕಳೆದ ಆನಂದದ ಸಮಯವನ್ನು ನೆನೆಸಿಕೊಳ್ಳುತ್ತಿದ್ದ ರೀತಿ–ಇನ್ನೆಷ್ಟೋ! ಅವರ ಅಚ್ಚುಕಟ್ಟಾದ ಉಡುಪನ್ನು ನೆನೆಯೋಣವೇ? ಕಟ್ಟುನಿಟ್ಟಾದ ರೀತಿನೀತಿಯನ್ನು ವಿವರಿಸೋಣವೇ? ಅವೆಲ್ಲದರ ಐಕ್ಯವಾಗಿದ್ದ ಆ ಸ್ವರೂಪ, ಪಾರ್ಥಿವ ಸ್ವರೂಪ, ಎರಡರ್ಥದಲ್ಲೂ

ಇಂದು ಇಲ್ಲವಾಗಿದೆ. ಆದರೆ ನಮಗೆ ಅವರ ಚೈತನ್ಯದ ಸ್ವರೂಪ ಮರೆಯಲಾರದ ಆಕಾರದಲ್ಲೇ ಕಣ್ಣಿಗೆ ಕಟ್ಟಿದೆ.

ವೃತ್ತಿಯ ನಾಯಕಮಣಿ

೧೯೦೬ರಲ್ಲಿ ಚಿಕ್ಕನಾಯಕನಹಳ್ಳಿಯ ತಾಲ್ಲೂಕಿನ ತೀರ್ಥಪುರವೆಂಬ ಊರಿನಲ್ಲಿ ಹುಟ್ಟಿ, ತುಮಕೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿ, ಸಿಕ್ಕಿದ ಅಮಲ್ದಾರ್‌ಗಿರಿಯನ್ನು, ಉಪಾಧ್ಯಾಯ ಜೀವನಕ್ಕಾಗಿ ಬಿಟ್ಟುಕೊಟ್ಟು, ಮೂವತ್ತುಮೂರು ವರ್ಷಗಳವರೆಗೆ ಆ ವೃತ್ತಿಯ ನಾಯಕಮಣಿಯಾಗಿ ಕಂಗೊಳಿಸಿದ ಶ್ರೀ ತೀ.ನಂ. ಶ್ರೀಕಂಠಯ್ಯನವರು ನಿವೃತ್ತರಾದ ಮೇಲೂ ಉಪಾಧ್ಯಾಯ ವೃತ್ತಿಯನ್ನು ಮುಂದುವರಿಸುತ್ತಲೇ ಇದ್ದರು, ಮನೆಗೆ ಬರುತ್ತಿದ್ದ ಯುವಕ ಸಾಹಿತಿಗಳ ಒಳಿತಿಗಾಗಿ.

ಅವರ ವಿದ್ವತ್ತು ಸಾಹಿತ್ಯದ ಅನೇಕ ಶಾಖೆಗಳನ್ನು ಆವರಿಸಿಕೊಂಡಿತ್ತು. ಪ್ರಾಚೀನ ಸಾಹಿತ್ಯ ಗ್ರಂಥಗಳು, ಆಧುನಿಕ ಸಾಹಿತ್ಯ ಪ್ರಕಾರಗಳು, ಅಲಂಕಾರಶಾಸ್ತ್ರ, ಛಂದಸ್ಸು, ವ್ಯಾಕರಣ, ಗ್ರಂಥ ಸಂಪಾದನೆ, ಭಾಷಾಶಾಸ್ತ್ರ, ಆಧುನಿಕ ಸಂಶೋಧನಾ ಮಾರ್ಗ ಇವೆಲ್ಲ ಕ್ಷೇತ್ರಗಳಲ್ಲಿ ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಹಿರಿಯ ವಿದ್ವಾಂಸರು ಮತ್ತೊಬ್ಬರಿಲ್ಲ. ಇದರ ಜೊತೆಗೆ ಇಂಗ್ಲಿಷ್ ಸಂಸ್ಕೃತಗಳ ಗಾಢವಾದ ಪಾಂಡಿತ್ಯವೂ ಸೇರಿಬಿಟ್ಟಿತ್ತು. ಅವರ ವಿಶ್ವಕೋಶ ಸಾದೃಶವಾದ ಜ್ಞಾನ ಸಂಪತ್ತನ್ನು ತಿಳಿಸುವ ಉದ್ದೇಶದಿಂದ ಕೆಲವರು ಅವರನ್ನು Dr. Johnsonಗೆ ಹೋಲಿಸುತ್ತಿದ್ದರು. ಈ ಹೋಲಿಕೆ ವಿದ್ವತ್ತಿನ ಸೀಮೆಗೆ ಮಾತ್ರ ಪರಿಮಿತಗೊಂಡರೆ ಸರಿಯೇ. ಇಲ್ಲದಿದ್ದರೆ ಈ ಎರಡು ವ್ಯಕ್ತಿಗಳಿಗೂ ಅಜಗಜಾಂತರದಷ್ಟು ಭೇದವಿತ್ತು.

ಭಾಷಾಶಾಸ್ತ್ರ ಪ್ರೇಮಿ

ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಮಾಡುತ್ತಿರುವ ನಿಘಂಟಿನ ವಿಚಾರದಲ್ಲಿ ತೀ.ನಂ.ಶ್ರೀ.ಯವರ ಪಾತ್ರ ಬಹು ಪ್ರಧಾನವಾದುದು. ೧೯೪೩ರಿಂದಲೂ ಅವರು ಅದರೊಡನೆ ಸಂಪರ್ಕ ಹೊಂದಿದ್ದರು. ನಿಘಂಟಿಗೆ ಒಂದು ನಿಷ್ಕೃಷ್ಟ ಸ್ವರೂಪವನ್ನು ಕೊಟ್ಟವರು ಅವರು. ಈಗ ಪ್ರಕಟವಾಗಿರುವ ಎರಡು ಸಂಚಿಕೆಗಳಲ್ಲಿ ಅವರ ವಿದ್ಯಾ ವೈದುಷ್ಯದ, ನಿಷ್ಕೃಷ್ಟ ಸ್ವರೂಪ ಪರಿಚಯವಾಗುತ್ತದೆ. ಅವರ ಸಾನ್ನಿಧ್ಯ ಅಗ್ನಿ ಸಾನ್ನಿಧ್ಯವಾಗಿತ್ತು. ದೂರವಿದ್ದರೆ ಬೆಳಗಿ ಹತ್ತಿರವಿದ್ದರೆ ಪುಟವಿಟ್ಟು, ಯುವಕ ಚೈತನ್ಯವನ್ನು ಅವರು ಅಪರಂಜಿಯನ್ನಾಗಿ ಮಾಡುತ್ತಿದ್ದರು.

ಮನ ಬೆಳಗಿಸುವ ಅಂತಶ್ಚೈತನ್ಯ

ಅವರು ಬರೆದಿರುವುದು ಸಂಖ್ಯೆಯ ದೃಷ್ಟಿಯಿಂದ ಕಡಮೆ. ಆದರೆ ಬೆಲೆಯ ದೃಷ್ಟಿಯಿಂದ ಅಮೌಲ್ಯ. ಒಂದೊಂದು ಮಾತನ್ನೂ, ಒಂದೊಂದು ವಿರಾಮ ಚಿಹ್ನೆಯನ್ನೂ ತೂಗಿ ತೂಗಿ ನೋಡುತ್ತಿದ್ದ ಅಂಥ ನಿರ್ದುಷ್ಟ ಲೇಖಕರು ಹೆಚ್ಚಿಗೆ ಬರೆಯುವುದು ಅಸಾಧ್ಯ. ಆದರೆ ಬರೆದುದು ಶಾಶ್ವತವಾಗಿ ನಿಲ್ಲುತ್ತವೆ. ವಾಕ್ಯದ ನಡುವೆ ಬರುವ ಅಲ್ಪ ವಿರಾಮಕ್ಕೆ ಇಂಗ್ಲಿಷಿನಲ್ಲಿ ''Comma'' ಕಾಮ ಎಂಬ ಹೆಸರಿದೆ ತಾನೆ. ಇದನ್ನು ಕುರಿತು ಅವರು ಹೇಳುತ್ತಿದ್ದರು. 'ನಾನು ಕಾಮಗಳಿಗಾಗಿ ಬದುಕುವವನು' ಎಂದು. ಅವರ ಈ ಕಾಮದ ಪರಿಣಾಮವಾಗಿ ನಿಘಂಟಿನ ಎರಡು ಸಂಚಿಕೆಗಳು 'ರತಿ'ಗಳಾಗಿವೆ.

ವೇದಿಕೆಯ ಮೇಲೆ ನಿಂತಾಗ ತೀ.ನಂ.ಶ್ರೀ.ಯವರ ರೀತಿ ಬೇರೆಯ ತೆರನಾಗಿತ್ತು. ನಗು ಮುಖದಿಂದ ಅವರು ಎಂಥ ಸಭೆಯನ್ನು ಬೇಕಾದರೂ ಒಲಿಸಿಕೊಳ್ಳುತ್ತಿದ್ದರು. ಈ ಅಭಿಮುಖೀಕರಣವಾದ ಮೇಲೆ ಅವರ ವಿಷಯ ನಿರೂಪಣೆ, ಸರಸವಾಗಿ, ಸುರಸವಾಗಿ, ಸಿದ್ಧಸ್ವರೂಪದಲ್ಲಿ ನಡೆಯುತ್ತಿತ್ತು. ಯಾವೊಂದು ವಿಷಯವನ್ನೂ ಸಿದ್ಧಪಡಿಸದೆ ಅವರು ವೇದಿಕೆಗೆ ಬರುತ್ತಿರಲಿಲ್ಲ. ಅಂಥ ಭಾಷಣಗಳಲ್ಲಿ ಸೂತ್ರರೂಪವಾದ ವಾಕ್ಯಗಳು ಬರುತ್ತಿದ್ದವು. ಅವರದೇ ಮಾತುಗಳನ್ನು ಉಪಯೋಗಿಸಿದರೆ ತಾರಾಮಂಡಲದಂತೆ ಎರಡು ಕ್ಷಣ ಬಾನೆಲ್ಲವನ್ನೂ ಬೆಳಗಿ ಬಳಿಕ ಮೊದಲಿನ ಕತ್ತಲೆಗೆ ತರುವ ಮಾತಿನ ಮೋಡಿಯಲ್ಲ ಅವರದು. ಮನವನ್ನು ಬೆಳಗಿಸುವ ಅಂತಶ್ಚೈತನ್ಯ ಅಲ್ಲಿತ್ತು.

ಇಂಥ ಮಾತು, ಇಂಥ ವಿದ್ವತ್ತು, ಇಂಥ ಶಿಕ್ಷಣ ಚಾತುರ್ಯ, ಇಂಥ ಲೇಖನ ಕಲೆ– ಇವೆಲ್ಲದರ ಸಮಷ್ಟಿ ಸ್ವರೂಪ ಮರೆಯಾಗಿ ಹೋಗಿದೆ. ಮತ್ತೆ ಅವತರಿಸಿ ಬರಲೆಂದು ನಾಡಿನ ಹಾರೈಕೆ.

ನಾ ಕಂಡ ತೀ.ನಂ.ಶ್ರೀ.

ಟಿ.ಪಿ. ಕೃಷ್ಣಾಚಾರ್

●

ಈ ವರ್ಷದ ಸೆಪ್ಟೆಂಬರ್ ಎಂಟನೆಯ ತಾರೀಖಿನ ಬೆಳಿಗ್ಗೆ ನಾನು ದೇವರ ಪೂಜೆಯಲ್ಲಿದ್ದೆ. ಮನೆಯಲ್ಲಿ ನನ್ನ ಹೆಂಡತಿ ಮತ್ತು ಮಗ ಗುಸುಗುಸು ಮಾತನಾಡುತ್ತಾ ಮುಖ ಕೆಳಗೆ ಮಾಡಿಕೊಂಡು ಓಡಾಡುತ್ತಿದ್ದರು. ಏನನ್ನಾದರೂ ಕೇಳಿದಾಗ ಮೆಲ್ಲಗೆ ಒಂದೆರಡು ಮಾತುಗಳಲ್ಲಿ ಉತ್ತರಕೊಟ್ಟು ಸುಮ್ಮನಾಗುತ್ತಿದ್ದರು. ದೇವರ ಪೂಜೆಯನ್ನು ಮುಗಿಸಿಕೊಂಡು ಎಂಟು ಗಂಟೆಯ ಹೊತ್ತಿಗೆ ಹೊರಕ್ಕೆ ಬಂದೆ. ಆಗ ನನ್ನ ಹೆಂಡತಿಯು "ಶ್ರೀಕಂಠಯ್ಯನವರು ಕಲ್ಕತ್ತಾದಲ್ಲಿ ಹೋಗಿಬಿಟ್ಟರಂತೆ" ಎಂದು ಹೇಳಿದಳು. ತತ್‌ಕ್ಷಣ ದಿಗ್ಭ್ರಮೆ ಹಿಡಿದು ನಿಂತಲ್ಲಿಯೆ ಕುಸಿದು ಕುಳಿತುಕೊಂಡೆ. ಇದು ನಿಜವಿರಲಾರದು, ಹೇಗೆ ಸಾಧ್ಯ ಎಂದುಕೊಳ್ಳುತ್ತಿದ್ದೆ. ದಿನದ ಬೆಳಗಿನ 'ಪ್ರಜಾವಾಣಿ' ಪತ್ರಿಕೆಯನ್ನು ತಂದುಕೊಟ್ಟರು. ಪತ್ರಿಕೆಯಲ್ಲಿ ಶ್ರೀಕಂಠಯ್ಯನವರ ಚಿತ್ರವನ್ನೊಳಗೊಂಡ ಅವರ ನಿಧನದ ವಿವರಗಳನ್ನು ಓದಿದ ಮೇಲೆ ಈ ದಿನ ದುರ್ದಿನ, ಬಂಧುಗಳಿಗೆ, ಸ್ನೇಹಿತರಿಗೆ ಮತ್ತು ಇಡೀ ಸಾಹಿತ್ಯ ಪ್ರಪಂಚಕ್ಕೆ ಸಹಿಸಲಾಗದ ಮತ್ತು ತುಂಬಲಾರದ ನಷ್ಟವೆಂದು ಮನವರಿಕೆ ಯಾಯಿತು. ಆ ನಷ್ಟದಿಂದಾದ ಮಾನಸಿಕ ಆಘಾತವಿನ್ನೂ ಕಡಿಮೆಯಾಗಿಲ್ಲ. ಅದರಿಂದೀಚೆಗೆ ಮೈಸೂರಿನಲ್ಲಿ ಅವರ ಮನೆಗೆ ಹೋಗಿ ಅವರ ಕುಟುಂಬದವರನ್ನು ನೋಡಿಕೊಂಡು ಬಂದ ಮೇಲೆ ಆಗಿರುವ ಪರಿಸ್ಥಿತಿಯನ್ನು ಬರೆಯಲು ಸಾಧ್ಯವಿಲ್ಲ. ಆದರೂ ಅವರ ವಿಚಾರವಾಗಿ ಕೆಲವು ಸಂಗತಿಗಳನ್ನು ಬರೆಯಲು ಪ್ರಯತ್ನಿಸಿದ್ದೇನೆ.

ದಿವಂಗತ ತೀ.ನಂ. ಶ್ರೀಕಂಠಯ್ಯನವರ ಮತ್ತು ನನ್ನ ಪರಿಚಯ, ಸ್ನೇಹ ೧೯೧೯ನೆಯ ಜೂನ್ ತಿಂಗಳಿಂದ ಪ್ರಾರಂಭವಾಯಿತೆನ್ನಬಹುದು. ಅಂದರೆ ಸುಮಾರು ೪೭ ವರ್ಷಗಳ ಕಾಲದ್ದು. ಅವರು ಆಗ ಚಿಕ್ಕನಾಯ್ಕನಹಳ್ಳಿ ಸರ್ಕಾರಿ ಎ.ವಿ. ಸ್ಕೂಲಿನಿಂದ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ತುಮಕೂರು ಕೊಲಿಜಿಯೇಟ್ ಹೈಸ್ಕೂಲಿಗೆ ಸೇರಲು ಬಂದರು. ಹೈಸ್ಕೂಲು ಮೊದಲನೆಯ ತರಗತಿಗೆ (IV Form) ಸೇರಿ ಅದೇ ಸ್ಕೂಲಿನಲ್ಲಿ S.S.L.C. ಮತ್ತು University Entrance ಪರೀಕ್ಷೆಗಳಿಗಾಗಿ ನಾಲ್ಕು ವರ್ಷಗಳು ವ್ಯಾಸಂಗ ಮಾಡಿದರು. ೧೯೨೩ರಲ್ಲಿ University Entrance ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮೈಸೂರಿಗೆ ಕಾಲೇಜಿನ ಶಿಕ್ಷಣಕ್ಕಾಗಿ ಹೋದರು.

ಹೈಸ್ಕೂಲಿನ ನಾಲ್ಕು ವರ್ಷಗಳ ಕಾಲದಲ್ಲಿ ಅವರಿಗೆ ಸಂಸ್ಕೃತ ದ್ವಿತೀಯ ಭಾಷೆಯಾಗಿಯೂ, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ ಐಚ್ಛಿಕ ವಿಷಯಗಳಾಗಿಯೂ ಇದ್ದವು. ಹೈಸ್ಕೂಲಿನ

ತರಗತಿಗಳಲ್ಲಿ ಅವರದು ಯಾವಾಗಲೂ ಮೊದಲ ೫ ಅಥವಾ ೧೦ ಸ್ಥಾನಗಳೊಳಗಿದ್ದಿತು. ಅವರ ನಡೆ ನುಡಿಗಳಲ್ಲಿ ಆಗಲೂ ಎದ್ದು ಕಾಣುತ್ತಿದ್ದ ವಿಷಯವೆಂದರೆ ಸ್ವಚ್ಛತೆ ಮತ್ತು ಶಿಸ್ತು. ಶುಭ್ರವಾದ ಬಟ್ಟೆಗಳನ್ನುಟ್ಟು ಓರಣವಾಗಿ ಪುಸ್ತಕಗಳನ್ನು ತೆಗೆದುಕೊಂಡು ತರಗತಿಗಳಲ್ಲಿ ಅಷ್ಟು ಮುಂದು ಅಥವಾ ಹಿಂದುಗಡೆಗೆ ಸೇರದ ಭಾಗದಲ್ಲಿ ಬೆಂಚಿನ ತುದಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ಬಹುಕಾಲ ಅದರಲ್ಲೂ Entrance ತರಗತಿಯಲ್ಲಿ ನಾನು ಅವರ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದೆನೆಂದು ಜ್ಞಾಪಕ. ಆಗ ಅವರ ಉಡುಪು ಹಿಮ್ಮಡಿಯಿಂದ ಮೇಲೆ ಮುಚ್ಚುವ ಉಟ್ಟಿದ್ದ ದಟ್ಟಿಪಂಚೆ, ಕೊರಳು ಮುಚ್ಚುವ ಕಾಲರಿನ ಕೋಟು, ಕೆಂಪು ಬಣ್ಣದ ಹಾಸನದ ಮಾದರಿಯ ಟೋಪಿ (ಜುಟ್ಟಿನ ಗಂಟು ಹಿಂದೆ ಕಾಣುತ್ತಿತ್ತು). ಹಣೆಯಲ್ಲಿ ಗಂಧ ಮತ್ತು ಅಕ್ಷತೆ, ಬೆಳಗಿನ ತರಗತಿ ಮಾತ್ರವಿದ್ದಾಗ ವಿಭೂತಿ ಮಾತ್ರ, ಸ್ಕೂಲಿಗೆ ಬಂದನಂತರ ಅವರು ಪಠ್ಯ ವಿಷಯಗಳನ್ನು ತನ್ಮಯರಾಗಿ ಕುಳಿತು ಕೇಳುತ್ತಿದ್ದರು. ಇತರ ಅನೇಕ ವಿದ್ಯಾರ್ಥಿಗಳಂತೆ ಅವರು ಕಾಡು ಅಥವಾ ಗೊಡ್ಡು ಹರಟೆಗಳಲ್ಲಿ ಯಾವಾಗಲೂ ಆಸಕ್ತಿಯುಳ್ಳವರಾಗಿರಲಿಲ್ಲ. ಅವರ ಶಿಸ್ತು, ಅಚ್ಚುಕಟ್ಟು ಎಷ್ಟರ ಮಟ್ಟಿಗಿದ್ದಿತೆಂದರೆ ಉಪಯೋಗಿಸುತ್ತಿದ್ದ ಉದ್ದವಾದ ಸೀಸದಕಡ್ಡಿ (ಈಗಿನ ಕಾಲದ ಹಾಗೆ ಹುಡುಗರಿಗೆ ಫೌಂಟನ್‌ಪೆನ್ ಆ ಕಾಲದಲ್ಲಿ ಬಳಕೆಯಲ್ಲಿರಲ್ಲಿಲ್ಲ) ಯಾವಾಗಲೂ ಚೂಪಾಗಿರಬೇಕು. ಇದನ್ನು ಆ ರೀತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಅವರು ಒಂದು ಚೂರು ಉಪ್ಪು ಕಾಗದವನ್ನು (Sand Paper) ಕವರಿನಲ್ಲಿಟ್ಟುಕೊಂಡು ಪುಸ್ತಕಗಳೊಂದಿಗೆ ತರುತ್ತಿದ್ದರು. ಈ ಉಪ್ಪುಕಾಗದದ ಉಪಯೋಗವನ್ನು ನಾವೂ ಆಗಾಗ್ಗೆ ಪಡೆಯುತ್ತಿದ್ದೆವು.

ಓದುತ್ತಿದ್ದಾಗ ಅವರಿಗಿದ್ದ ಸ್ನೇಹಿತರ ಗುಂಪು ಕಡಮೆ. ಇದ್ದ ಸ್ನೇಹಿತರೊಂದಿಗೆ ಅವರು ಆತ್ಮೀಯ ನಡೆವಳಿಕೆ. ಆಟಪಾಟಗಳಲ್ಲಿ ಹೆಚ್ಚಾಗಿ ಆಸಕ್ತಿ ಇರಲಿಲ್ಲ. ಬ್ಯಾಡ್‌ಮಿಂಟನ್ ಆಟ ಆಡುತ್ತಿದ್ದುದಾಗಿ ಜ್ಞಾಪಕ. ಇತರ ಯಾವ ಆಟಗಳಿಗೂ ಅವರು ಬರುತ್ತಿರಲಿಲ್ಲ.

ವ್ಯಾಸಂಗದ ವಿಷಯದಲ್ಲಿ ಅವರದು ಅತಿಯಾದ ನಿಯಮ ಮತ್ತು ಅಚ್ಚುಕಟ್ಟು. ಈ ಸಂದರ್ಭದಲ್ಲಿ ಒಂದು ವಿಷಯ ನೆನಪಿಗೆ ಬರುತ್ತದೆ. ಆ ಕಾಲದಲ್ಲಿ ಸ್ಕೂಲು ಬಿಟ್ಟ ಮೇಲೆ ಡ್ರಿಲ್ ಮಾಡಿಸುತ್ತಿದ್ದರು. ಅದರ ಉಪಾಧ್ಯಾಯರು ಮಾಡಿಸಿದ ಡ್ರಿಲ್ ವಿಷಯದಲ್ಲಿ ನೋಟ್ಸ್ ಅಥವಾ ಟಿಪ್ಪಣಿ ಬರೆಯಬೇಕೆಂದು ಹುಡುಗರಿಗೆ ಹೇಳುತ್ತಿದ್ದರು. ಡ್ರಿಲ್ಲನ್ನು ಮಾಡುವಾಗ, ಕೈಕಾಲು ತಿರುಗಿಸುವುದು, ನಡೆಯುವುದು ಮುಂತಾದವಲ್ಲದೆ ಆ ಕ್ರಿಯೆಯನ್ನು ಟಿಪ್ಪಣಿ ರೂಪದಲ್ಲಿ ಬರೆಯುವುದು ಹೇಗೆಂದು ನಮ್ಮಲ್ಲಿ ಅನೇಕರಿಗೆ ಗೊತ್ತಿರಲಿಲ್ಲ. (ಈಗಿನವರಿಗೂ ಪ್ರಾಯಶಃ ಗೊತ್ತಿಲ್ಲದಿರಬಹುದು). ಆದರೆ ಉಪಾಧ್ಯಾಯರು ಶಿಕ್ಷಿಸುವ ಬೆದರಿಕೆ ಹಾಕಿ ಒತ್ತಾಯ ಮಾಡಿದ ಮೇಲೆ ಮೊಟ್ಟಮೊದಲು ಟಿಪ್ಪಣಿ ಬರೆದು ಡ್ರಿಲ್ ಉಪಾಧ್ಯಾಯರ ಮೆಚ್ಚುಗೆಗೆ ಪಾತ್ರರಾದ ಕೆಲವೇ ಹುಡುಗರಲ್ಲಿ ಶ್ರೀಕಂಠಯ್ಯನವರು ಒಬ್ಬರಾಗಿದ್ದರು. ಅವರು ಏನು ಬರೆದು ಕೊಟ್ಟರೆಂಬುದು ಅದರಲ್ಲಿ ಆಸಕ್ತಿಯಿಲ್ಲದೆ ಇದ್ದ ನಮ್ಮಂತಹವರಿಗೆ ಗೊತ್ತಾಗಲಿಲ್ಲ. ಇದರಿಂದ ಹೇಳಿದ ಕೆಲಸವನ್ನು ಅದು ಎಂತಹುದೆ ಆಗಲಿ ಮಾಡಲೇಬೇಕೆಂಬ ದೀಕ್ಷೆ ಅವರಲ್ಲಿದ್ದುದು ಗೊತ್ತಾಗುತ್ತದೆ.

ಆ ಕಾಲದಲ್ಲಿ ಸ್ಕೂಲಿನಲ್ಲಿ ಪ್ರಕಟವಾಗುತ್ತಿದ್ದ "School Folk" ಎಂಬ ಮಾಸಪತ್ರಿಕೆಗೆ ಲೇಖನವನ್ನು ಬರೆಯುತ್ತಿದ್ದರು. ಹೈಸ್ಕೂಲಿನ ಅನೇಕ ಉಪಾಧ್ಯಾಯರುಗಳು ಶ್ರೀಕಂಠಯ್ಯನವರ ಸ್ವಾಭಾವಿಕ ಬುದ್ಧಿವಂತಿಕೆಯನ್ನು ಕಂಡುಕೊಂಡಿದ್ದರಲ್ಲದೆ ಅನೇಕ ವೇಳೆ ಮೆಚ್ಚುಗೆಯನ್ನೂ ವ್ಯಕ್ತಪಡಿಸುತ್ತಿದ್ದರು.

೧೯೨೩ರ Entrance ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂದಿನ ವ್ಯಾಸಂಗದ ಸಲುವಾಗಿ ಮೈಸೂರು ಮಹಾರಾಜಾ ಕಾಲೇಜಿಗೆ ಸೇರಲು ಇಷ್ಟಪಟ್ಟು ಹೋದರು. ಹಿಂದೆ ತಿಳಿಸಿರುವಂತೆ ಅವರು ಗಣಿತ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳನ್ನು ಐಚ್ಛಿಕವಾಗಿ ತೆಗೆದುಕೊಂಡಿದ್ದು, ಆಗಿನ ಕಾಲದ ವಿದ್ಯಾರ್ಥಿಗಳೆಲ್ಲರೂ ಮಾಡಿದಂತೆ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಹೋಗದೆ, ಭಾಷಾ ಮತ್ತು ಇತರ ಶಾಸ್ತ್ರಗಳನ್ನು ಹೊಸದಾಗಿ ಅಧ್ಯಯನಕ್ಕೆ ತೆಗೆದುಕೊಂಡು ಮೈಸೂರಿಗೆ ಹೋದದ್ದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು. ಆ ವರ್ಷ ಉತ್ತೀರ್ಣರಾದ ವಿಜ್ಞಾನ ಮತ್ತು ಗಣಿತ ಭಾಗದ ವಿದ್ಯಾರ್ಥಿಗಳೆಲ್ಲರಿಗೂ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಪ್ರವೇಶ ದೊರೆಯದೆ ನನ್ನಂತೆ ಕೆಲವರು ಪರದಾಡುತ್ತಿದ್ದಾಗ, ಪ್ರವೇಶ ಸಿಕ್ಕಿದರೂ ಅದರ ಉಪಯೋಗ ಪಡೆಯದೆ ಶ್ರೀಕಂಠಯ್ಯನವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಬೇರೆ ಬೇರೆ ಭಾಗಗಳನ್ನು ಹೊಸದಾಗಿ ತೆಗೆದುಕೊಂಡು ಓದಲು ತೀರ್ಮಾನಿಸಿದ್ದು ಅವರ ಒಲುಮೆ ಭಾಷಾಶಾಸ್ತ್ರಗಳ ಕಡೆ ಎಷ್ಟರಮಟ್ಟಿಗಿತ್ತೆಂಬುದನ್ನು ತೋರಿಸುತ್ತದೆ. ಅಲ್ಲಿಯವರೆಗೆ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆ ವಿನಾಯಿಸಿ ಓದದೆ ಇದ್ದ ಕನ್ನಡವನ್ನು ದ್ವಿತೀಯ ಭಾಷೆಯನ್ನಾಗಿ ಕಾಲೇಜು ಶಿಕ್ಷಣದಲ್ಲಿ ತೆಗೆದುಕೊಂಡರು. ವಿಜ್ಞಾನ ಮತ್ತು ಗಣಿತಗಳ ಬದಲಾಗಿ, ಸಂಸ್ಕೃತ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ಆರಿಸಿಕೊಂಡು ವ್ಯಾಸಂಗ ಮುಂದುವರೆಸಿದರು. ಮೊದಲನೆಯ ವರ್ಷದ ನಂತರ ರಾಜ್ಯಶಾಸ್ತ್ರವನ್ನು ಕೈಬಿಟ್ಟು ಸಂಸ್ಕೃತ ಮತ್ತು ಅರ್ಥಶಾಸ್ತ್ರಗಳನ್ನು ಬಿ.ಎ. ಪರೀಕ್ಷೆಯ ಎರಡನೆ ಭಾಗಕ್ಕೆ ತೆಗೆದುಕೊಂಡರು. ೧೯೨೬ರ ಬಿ.ಎ. ಡಿಗ್ರಿ ಪರೀಕ್ಷೆಯಲ್ಲಿ ಮೊದಲನೆಯ ಭಾಷಾ ಭಾಗದಲ್ಲಿ II ಕ್ಲಾಸಿನಲ್ಲಿಯೂ ಮತ್ತು ಎರಡನೆಯ ಭಾಗದಲ್ಲಿ I ಕ್ಲಾಸಿನಲ್ಲಿಯೂ ಉತ್ತೀರ್ಣರಾದುದಲ್ಲದೆ ಹಲವು ಭಾಗಗಳಲ್ಲಿ ಮೊದಲನೆಯ ಸ್ಥಾನವನ್ನು ಗಳಿಸಿದರು.

ಅವರು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿದುದರ ಫಲ ಅವರು ಅತ್ಯುತ್ತಮ ರೀತಿಯಲ್ಲಿ ಬಿ.ಎ. ಡಿಗ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾದದ್ದು. ಆ ವರ್ಷದ ಪದವೀದಾನ ಮಹೋತ್ಸವದಲ್ಲಿ (convocation) ಅವರಿಗೆ ಚಿನ್ನದ ಪದಕಗಳೂ, ಬಹುಮಾಗಳೂ ಹೆಚ್ಚಿಗೆ ಬಂದವು. ಆಗಿನ ಕುಲಪತಿಗಳು ದಿವಂಗತ ಶ್ರೀಮಾನ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್‌ರವರು – ಈ ಬಹುಮಾನಗಳನ್ನು ಪದಕಗಳನ್ನೂ ಕೊಡುವಾಗ ಅವರ ಅತಿ ಮೆಚ್ಚುಗೆಯನ್ನು ಮುಗುಳ್ನಗೆಯ ರೂಪದಲ್ಲಿ ವ್ಯಕ್ತಪಡಿಸಿ ಅವುಗಳನ್ನು ದಯಪಾಲಿಸಿದರು. ಬಲ್ಲವರು ಶ್ರೀಮನ್ಮಹಾರಾಜರವರ ಮೆಚ್ಚುಗೆ ಸಾಧಾರಣವಾಗಿ ಹೊರ ಹೊಮ್ಮುತ್ತಿರಲಿಲ್ಲವೆಂದು ಹೇಳುತ್ತಾರೆ. ಅಂತಹ ಗಾಂಭೀರ್ಯವಂತ ಮಹಾಸ್ವಾಮಿಗಳವರನ್ನು ಶ್ರೀಕಂಠಯ್ಯನವರ ಪದಕಗಳ ಮತ್ತು ಬಹುಮಾನಗಳ ಗಳಿಕೆ ಪರವಶರನ್ನಾಗಿ ಮಾಡಿತ್ತು. ಆ ಚಿತ್ರವು ಆ

ಸಮಾರಂಭದಲ್ಲಿ ಇತರ ನೂರಾರು ಸಾಧಾರಣ ಪದವೀಧರ ಪೈಕಿ ಇದ್ದ ನನಗೆ ಇಂದಿಗೂ ಕಣ್ಣು ಕಟ್ಟಿದಂತಿದೆ.

ಬಿ.ಎ. ಆದ ನಂತರ ಶ್ರೀಕಂಠಯ್ಯನವರು ಇಂಗ್ಲಿಷು ಮತ್ತು ಕನ್ನಡ ಭಾಗಗಳನ್ನು ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಪ್ರತ್ಯೇಕ ವರ್ಷಗಳಲ್ಲಿ ತೆಗೆದುಕೊಂಡು ಎರಡು ಪರೀಕ್ಷೆಗಳಲ್ಲಿಯೂ ಪ್ರಥಮ ದರ್ಜೆ ಮತ್ತು ಪ್ರಥಮ ಸ್ಥಾನಗಳನ್ನು ಪಡೆದರು. ಆ ಹೊತ್ತಿಗೆ ಅವರೊಂದಿಗೆ ಆತ್ಮೀಯರಾಗಿದ್ದ ನಾವುಗಳು ಅವರನ್ನು "ಇದೇನು ಪದಕಗಳು ಬಹುಮಾನಗಳನ್ನು ಪಡೆಯುವುದನ್ನು ನೀವು ವೃತ್ತಿಯಾಗಿ ಅವಲಂಬಿಸಿದಂತಿದೆ" ಎಂದು ಹೇಳಿದ್ದುಂಟು. ಶ್ರೀಕಂಠಯ್ಯ ನವರಂತೆ ಆ ಕಾಲದಲ್ಲಿ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಅತ್ಯಂತ ಹೆಚ್ಚಿಗೆ ಪ್ರಶಸ್ತಿ ಗಳಿಸಿದವರು ಇಬ್ಬರು ಮೂವರಿದ್ದಿರಬಹುದು.

ಇಂಗ್ಲಿಷು ಎಂ.ಎ. ಪರೀಕ್ಷೆಗೆ ಓದುತ್ತಿದ್ದಾಗಲೆ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತುಕೊಂಡರು. ಆ ಪರೀಕ್ಷೆಯಲ್ಲಿ ನನಗೆ ತಿಳಿದಿರುವಂತೆ ಮೂರನೆಯ ಸ್ಥಾನವನ್ನು ಪಡೆದರು. ಆದರೆ ಸಂಪ್ರದಾಯದಂತೆ ಸರ್ಕಾರದವರು ಮೊದಲ ಇಬ್ಬರನ್ನು Probationary Assistant Commissioner ಹುದ್ದೆಗೆ ನೇಮಕ ಮಾಡಿ, ಶ್ರೀಕಂಠಯ್ಯನವರಿಗೆ ೧೯೨೮ನೆಯ ವರ್ಷದಲ್ಲಿ ತೆಗೆದುಕೊಂಡ Revenue Probationerಗಳ ಪಟ್ಟಿಯಲ್ಲಿ ಪ್ರಥಮಸ್ಥಾನ ಕೊಟ್ಟರು. ಇವರ ಜೊತೆಯಲ್ಲಿ Revenue Probationer ಗಳಾಗಿ ಸೇರಿದವರಲ್ಲಿ ಕೆಲವರು ಅದೇ ಇಲಾಖೆಯಲ್ಲಿ ಮುಂದುವರಿದು ಇತ್ತೀಚೆಗೆ Divisional Commissioner ಗಳಾಗಿದ್ದು ನಿವೃತ್ತರಾಗಿದ್ದಾರೆ. ಶ್ರೀಕಂಠಯ್ಯನವರೂ ಅವರಂತೆ ಅದೇ ಇಲಾಖೆಯಲ್ಲಿ ಮುಂದುವರಿದಿದ್ದರೆ ಅಷ್ಟೇ ಸ್ಥಾನಮಾನ ಗಳನ್ನು ಗಳಿಸುತ್ತಿದ್ದುದರಲ್ಲಿ ಸಂದೇಹವಿರುತ್ತಿರಲಿಲ್ಲ. ಆದರೆ ಅವರ ದಾರಿಯೇ ಬೇರೆಯಾಯಿತು. ಆ ಬೇರೆ ದಾರಿ ಅವರಿಗೆ ಬೇರೊಂದು ರೀತಿಯ ಉನ್ನತ ಸ್ಥಾನಕ್ಕೆ ದಾರಿಮಾಡಿಕೊಟ್ಟಿತು.

Revenue Probationer ಆಗಿ ನೇಮಕಗೊಂಡು ಕೆಲಸ ಕಲಿಯಲು ಶ್ರೀರಂಗಪಟ್ಟಣ ತಾಲ್ಲೂಕಿಗೆ ವರ್ಗವಾಗಿ ಹೋದರು. ಅಲ್ಲಿ ಕೆಲಸದಲ್ಲಿದ್ದ ೨-೩ ತಿಂಗಳುಗಳಲ್ಲಿ ಅಲ್ಲಿಯ ಕಚೇರಿಯ ಕೆಲಸದ ವಿಧಾನ, ರೀತಿನೀತಿಗಳು ಇವರ ಮನಸ್ಸಿಗೆ ಹಿತಕರವಾಗಿ ಕಂಡುಬರಲಿಲ್ಲ. ಅದೇ ಕಾಲದಲ್ಲಿ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಸ್ಥಾಪಿತವಾದ ಇಂಟರ್‌ಮೀಡಿಯೆಟ್ ಕಾಲೇಜಿನ ಕನ್ನಡ ಅಧ್ಯಾಪಕ ಸ್ಥಾನವನ್ನು ಗುರುಗಳಾಗಿದ್ದ ದಿ॥ ಬಿ.ಎಂ. ಶ್ರೀಕಂಠಯ್ಯನವರು ಇವರಿಗೆ ವಹಿಸಿಕೊಳ್ಳಲು ಸಲಹೆ ಮಾಡಿದರು. ಮನಸ್ಸಿಗೆ ಹಿತಕರವಾದ ವಾತಾವರಣ ರೆವಿನ್ಯೂ ಇಲಾಖೆಯಲ್ಲಿ ಇಲ್ಲದುದರ ಪ್ರಯುಕ್ತ ಈ ಹೊಸ ಸೂಚನೆಯನ್ನು ಕೂಡಲೆ ಅಂಗೀಕರಿಸಿ ವಿಶ್ವವಿದ್ಯಾಲಯದ ಕೆಲಸಕ್ಕೆ ತೀ.ನಂ.ಶ್ರೀ. ಸೇರಿದರು. ಹೀಗೆ ಸರ್ಕಾರದ ಆಡಳಿತ ಭಾಗಗಳಲ್ಲಿ ಉನ್ನತಸ್ಥಾನಗಳು ಮುಂದೆ ಕಾರ್ಯಗತವಾಗಬಹುದಾಗಿದ್ದಾಲೂ ಅವುಗಳನ್ನು ನಿರಾಕರಿಸಿ ಸಾಮಾನ್ಯವಾದ ಅಧ್ಯಾಪಕವೃತ್ತಿಗೆ ಮನಸೋತು ಬಂದವರು ಪ್ರಾಯಶಃ ಇಲ್ಲವೆಂದೇ ಹೇಳಬೇಕು ಅಥವಾ ಇದ್ದರೂ ಅಂತಹವರಲ್ಲಿ ಶ್ರೀಕಂಠಯ್ಯನವರೂ ಒಬ್ಬರು.

ಮೈಸೂರಿನ ಇಂಟರ್‌ಮೀಡಿಯೇಟ್ ಕಾಲೇಜು, ಮಹಾರಾಜಾ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇರಿದ ಮೇಲೆ ಶ್ರೀಕಂಠಯ್ಯನವರ ಕಾರ್ಯರಂಗವೇ ಬೇರೆಯಾಯಿತು. ಅದುವರೆಗೆ ಅವರಲ್ಲಿ ಸುಪ್ತವಾಗಿದ್ದ ವಿದ್ವತ್ತು ಮತ್ತು ಪ್ರತಿಭೆ ಹೊರಹೊಮ್ಮಿತು. ಆ ಕಾಲದಲ್ಲಿ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದಿ॥ ಟಿ.ಎಸ್. ವೆಂಕಣ್ಣಯ್ಯನವರ ಸಹವಾಸದಿಂದಲೂ ಮತ್ತು ಅವರ ಗುರುಗಳಾಗಿದ್ದ ದಿ॥ ಬಿ.ಎಂ. ಶ್ರೀಕಂಠಯ್ಯ ಮತ್ತು ಎಂ. ಹಿರಿಯಣ್ಣನವರ ಸಂಪರ್ಕ ಮತ್ತು ಮಾರ್ಗದರ್ಶನದಿಂದಲೂ ಅವರ ಜೀವನದಲ್ಲಿ ಸಾಹಿತ್ಯಾಭ್ಯಾಸದ ದೀಕ್ಷೆ ಆಳವಾಗಿ ಬೇರುಬಿಟ್ಟು ಕಾಲಕ್ರಮದಲ್ಲಿ ಹೆಮ್ಮರವಾಯಿತು. ಅವರೊಂದಿಗೆ ಅಧ್ಯಾಪಕರಾಗಿ ಕೆಲಸಮಾಡುತ್ತಿದ್ದವರಿಗೆ ಮತ್ತು ಅವರ ವಿದ್ಯಾರ್ಥಿಗಳಾಗಿದ್ದವರಿಗೆ ಶ್ರೀಕಂಠಯ್ಯನವರ ಪಾಂಡಿತ್ಯದ ಆಳ ಗೊತ್ತಾಗುತ್ತಿತ್ತು. ಸಾಹಿತ್ಯಾಭ್ಯಾಸವನ್ನು ವಿವಿಧ ಮಾರ್ಗಗಳಲ್ಲಿ ಹೊಸ ವಿಧಾನಗಳಿಂದ ರೂಪಿಸಿ, ರೂಢಿಸಿ ಕೀರ್ತಿವಂತರಾದರು. ಅವರ ಶ್ರದ್ಧಾವಂತ ನಿಷ್ಠೆ, ದಾಕ್ಷಿಣ್ಯಕ್ಕೆ ಮಣಿಯದ ಮನಸ್ಸು ಮತ್ತು ಚಿತ್ತವೃತ್ತಿ, ಸರಳವಾದ ನಿಯಮಗಳು, ಯಾವಾಗಲೂ ನಗುತ್ತಿರುವ ಮುಖಭಾವ, ಜನರಲ್ಲಿ ಬೆರೆಯುವ ಸರಳಸ್ವಭಾವ, ಮಾಡುವ ಎಲ್ಲ ಕೆಲಸಗಳಲ್ಲೂ ಸ್ವಚ್ಛತೆ, ಓರಣ, ಶಿಸ್ತು ಮುಂತಾದ ಗುಣಗಳು ಹಿರಿಯರ ಮತ್ತು ಕಿರಿಯರ ಆದರಕ್ಕೆ ಪಾತ್ರವಾದುವು. ಸುಲಭವಾಗಿ ಆರ್ಜಿಸುವ ಕೀರ್ತಿಗೆ ಅವರೆಂದೂ ಮಾರುಹೋದವರಲ್ಲ. ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ, ಇಂಟರ್‌ಮೀಡಿಯೇಟ್ ಕಾಲೇಜು ಆಡಳಿತಾಧಿಕಾರಿಗಳಾಗಿ ಎರಡು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕೆಲಸಮಾಡಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನಮಾಡಿ, ಹಲವು ತಮ್ಮ ಭಾಗದ ಅಧ್ಯಾಪಕರಿಗೆ ಮಾರ್ಗದರ್ಶನ ನೀಡಿ ಅಪಾರ ಕೀರ್ತಿ ಪಡೆದು ಸರ್ಕಾರಿ ಉದ್ಯೋಗದಿಂದ ನಿವೃತ್ತರಾದರು. ನಿವೃತ್ತರಾದ ಮೇಲೂ ಅವರನ್ನು ಕೆಲಸ ಬಿಡಲಿಲ್ಲ. ಒಂದಲ್ಲ ಒಂದು ಸಂಸ್ಥೆಗಳ ಅಧ್ಯಕ್ಷರಾಗಿ ಸದಸ್ಯರಾಗಿ ಸ್ನಾತಕೋತ್ತರ ಭಾಗದ ಕೆಲಸದಲ್ಲಿ ಬಹುಮುಖವಾದ ಸೇವೆ ಸಲ್ಲಿಸಿದರು. ಹಲವು ಗ್ರಂಥಗಳನ್ನು ಬರೆದು ಖ್ಯಾತಿವಂತರಾದರು. ಕಟ್ಟಕಡೆಯ ಅವರ ಮುಖ್ಯವಾದ ಸಂಶೋಧನೆ ಕೆಲಸ ಮುಕ್ತಾಯ ಘಟ್ಟಕ್ಕೆ ಬಂದಿದ್ದು ಅವರಿಂದ ಲಿಖಿತವಾಗಿ ಬರಬೇಕಾದ ಬೃಹದ್ಗ್ರಂಥ ರೂಪುಗೊಳ್ಳುವುದರೊಳಗೆ ವಿಧಿ ಅವರನ್ನು ಕೊಂಡೊಯ್ಯಿತು. ಸಾಹಿತ್ಯಲೋಕಕ್ಕೆ ಇದು ತುಂಬಲಾಗದ ನಷ್ಟ.

ಈಚಿನ ಮೂವತ್ತೈದು ವರ್ಷಗಳಲ್ಲಿ ಅವರೊಂದಿಗಿದ್ದ ನನ್ನ ಸಂಪರ್ಕ ವಿಶಿಷ್ಟ ರೀತಿಯದಾಗಿತ್ತು. ಅವರ ಸ್ನೇಹದೊಂದಿಗೆ ನನಗೆ ದೊರೆತದ್ದು ಅವರ ಅನೇಕ ಮಿತ್ರರ ಸ್ನೇಹ ಮತ್ತು ಪರಿಚಯ. ನಮ್ಮ ವೃತ್ತಿಗಳಲ್ಲಿ ವ್ಯತ್ಯಾಸವಿದ್ದರೂ ಅವರ ಗಾಢವಾದ ಮೈತ್ರಿ, ಕುಂದದ ವಾತ್ಸಲ್ಯ, ಅಭಿಮಾನ ಕೊನೆಯವರೆಗೂ ನನ್ನದಾಗಿತ್ತು.

ನಾನು ಕೆಲಸಮಾಡುತ್ತಿದ್ದ ಇಲಾಖೆಯ ಹೊರಗಣ ಕೆಲಸ ಸಾಮಾನ್ಯವಾಗಿ ಅವರ ಬೇಸಿಗೆ ರಜಕಾಲಕ್ಕೂ ಮತ್ತು ಇತರ ಮಧ್ಯಾಂತರದ ಬಿಡುವಿಗೂ ಹೊಂದಿಕೊಳ್ಳುತ್ತಿತ್ತು. ಆ ಕಾಲಗಳಲ್ಲಿ ಅನೇಕ ವೇಳೆ ನನ್ನ ಕೋರಿಕೆಯನ್ನು ಮನ್ನಿಸಿ ಅವರು ನಾನು ಕೆಲಸಮಾಡುತ್ತಿದ್ದ ಬೆಟ್ಟಗುಡ್ಡಗಳ ಕ್ಯಾಂಪುಗಳಿಗೂ ಬಂದು ನನ್ನೊಂದಿಗೆ ಕಾಲಕಳೆದಿದ್ದರು. ಕೆಲವು ವೇಳೆ ಮಿತ್ರರೊಂದಿಗೂ ಬಂದು ನನ್ನ ಬೇಸರವನ್ನು ಕಳೆದಿದ್ದರು. ಈಗ ನನಗೆ ಚಿಂತಿಸಲು ಆ

ರಸಗಳಿಗೆಗಳು ಮಾತ್ರವೇ ಉಳಿದಿರುವುದು. ಇವುಗಳ ಪೈಕಿ ಒಂದಂತೂ ಎಲ್ಲವನ್ನೂ ಮೀರಿ ಎದ್ದು ನಿಲ್ಲುತ್ತದೆ. ನಾನು ಬೆಳ್ಳಾರ ಚಿನ್ನದ ಗಣಿಯಲ್ಲಿದ್ದಾಗ ಅವರು ತಮ್ಮ ಕೆಲವು ಸಾಹಿತ್ಯ ಮಿತ್ರರೊಂದಿಗೆ ಬಂದು ೨-೩ ದಿನಗಳು ಒಂದಿಗಿದ್ದರು. ಅವರುಗಳೊಂದಿಗೆ ಬೋರನ ಕಣಿವೆ ಕೆರೆಯ ಏರಿಯ ಮೇಲೆ ಕುಳಿತು ಕವಿವರ್ಯ ಪು.ತಿ. ನರಸಿಂಹಾಚಾರ್ಯರ "ಗೋಕುಲ ನಿರ್ಗಮನ" ಕಾವ್ಯದ ವಾಚನವನ್ನು ಕವಿವರ್ಯರ ವಾಣಿಯಲ್ಲಿಯೇ ಕೇಳಿದ್ದನ್ನು ನನ್ನ ಜೀವಿತದಲ್ಲಿಯ ಒಂದು ಸುಯೋಗವೆಂದು ತಿಳಿದಿದ್ದೇನೆ.

ಶ್ರೀಕಂಠಯ್ಯನವರ ಹಲವು ಗುಣಗಳಲ್ಲಿ ಅವರ ಆದರಾತಿಥ್ಯಗಳು ಎಲ್ಲವನ್ನೂ ಮೀರಿಸುವಂತಿದ್ದುವು. ಅವರ ಮಿತ್ರರಿಗೂ, ಸಹೋದ್ಯೋಗಿಗಳಿಗೂ ಇವುಗಳ ಪರಿಚಯವಿರುತ್ತದೆ. ಅವರ ಮನೆಯಲ್ಲಿ ಅವರ ನೇತೃತ್ವದಲ್ಲಿ ವಿದ್ಯಾವ್ಯಾಸಂಗ ಮಾಡಿದ ಅವರ ಬಂಧುವರ್ಗದವರ ನೇಕರಿರುತ್ತಾರೆ. ಅವರುಗಳಿಗೂ, ನನ್ನಂತಹ ಅವರ ಸಮೀಪ ಸ್ನೇಹಿತರಿಗೂ, ಸಾವಿರಾರು ಮಂದಿ ವಿದ್ಯಾರ್ಥಿಗಳಿಗೂ ಅವರ ನಿಧನದಿಂದ ಅಪಾರ ನಷ್ಟವಾಗಿದೆ.

ಶ್ರೀಕಂಠಯ್ಯನವರು ೬-೮-೧೯೬೬ರಲ್ಲಿ ದೆಹಲಿ, ರಾಂಚಿ ಮುಂತಾದ ಸ್ಥಳಗಳಿಗೆ ಪ್ರವಾಸ ಹೋಗುವ ಮುಂಚೆ ನನಗೆ ಒಂದು ಕಾಗದ ಬರೆದಿದ್ದರು. ಅದೇ ನನಗೆ ಅವರ ಕೊನೆಯ ಪತ್ರ ಆ ಪತ್ರದಲ್ಲಿ ಒಂದು ವಾಕ್ಯ ಮುಂಬರುವ ವಿಧಿಯನ್ನು ಸೂಚಿಸುವಂತೆ ಈಗ ಭಾಸವಾಗುತ್ತೆ. ಆ ಪಂಕ್ತಿಗಳನ್ನು ಕೆಳಗೆ ಕೊಟ್ಟಿದ್ದೇನೆ.

"ನಾನು ಇದೇ ೧೨-೧೩ರಂದು ಬೆಂಗಳೂರಲ್ಲಿ ನಿಘಂಟು ಸಭೆಯ ಸಲುವಾಗಿ ಇರಬೇಕು. ಅಲ್ಲಿಂದ ಹಿಂತಿರುಗಿದ ಬಳಿಕ ಒಂದು ದೊಡ್ಡ ಪ್ರಯಾಣವೇ ಕಾದಿದೆ! ...... ೧೭ನೆಯ ರಾತ್ರಿ ಹೊರಟರೆ ಮೈಸೂರಿಗೆ ಹಿಂತಿರುಗುವುದು ಸೆಪ್ಟೆಂಬರು ೧೦-೧೧ರ ಸುಮಾರಿಗೆ. ಪ್ರಯಾಣ ದೊಡ್ಡದಾಯಿತು....... ನೀವು ಇಲ್ಲಿಗೆ ಎಂದು ಬರುತ್ತೀರಿ. ದಯವಿಟ್ಟು ತಿಳಿಸಿ....."

ಇದರೀಚಿನ ಘಟನೆಗಳನ್ನು ನೋಡಿದರೆ ಅವರ ಪ್ರಯಾಣ ಅವರು ಮತ್ತು ನಾವಾರೂ ಯೋಚಿಸದಿದ್ದಂತೆಯೆ ಅತಿ ದೊಡ್ಡದಾಯಿತು. ಅತಿ ದೊಡ್ಡದಾಗಿ ಹಿಂತಿರುಗದಂತೆಯೆ ಅವರು ಈ ಲೋಕವನ್ನಗಲಿ ಹೋದದ್ದು ನಮ್ಮೆಲ್ಲರ ಮತ್ತು ನಾಡಿನ ದೌರ್ಭಾಗ್ಯ. ಅವರ ಆತ್ಮಕ್ಕೆ ಶಾಂತಿ ದೊರಕಲಿ.

ಪ್ರೊ. ತೀ.ನಂ.ಶ್ರೀ. ಅವರು

ಎಚ್.ಎಸ್. ಬಿಳಿಗಿರಿ

●

ಪ್ರೊಫೆಸರ್ ತೀ.ನಂ.ಶ್ರೀ. ಅವರ ಪರಿಚಯ ನನಗಾದದ್ದು ಸುಮಾರು ಇಪ್ಪತ್ತು ವರ್ಷಗಳ ಹಿಂದೆ. ಆದರೂ ನಾನು ಅವರೊಡನೆ ಕಾಲಕಳೆದ ಸಂದರ್ಭಗಳು ಬೆರಳ ಮೇಲೆಣಿಸುವಷ್ಟು. ಇದಕ್ಕೆ ಕಾರಣಗಳು ಹಲವಾರು. ಮುಖ್ಯವಾದ ಕಾರಣವೆಂದರೆ ನನಗೆ ಅವರನ್ನು ತರಗತಿಗಳಲ್ಲಿ ಗುರುವಾಗಿ ಪಡೆಯುವ ಭಾಗ್ಯವಿಲ್ಲದೇ ಹೋದದ್ದೇ.

ಅವರ ಪರಿಚಯ ಮೊದಲಾದದ್ದು ಶ್ರೀಮಾನ್ ಪು.ತಿ.ನ. ಅವರ ಮೂಲಕ, ನನ್ನ ಕೆಲವು ಕವನಗಳನ್ನು ಅವರಿಗೆ ಓದಿ ತೋರಿಸಿ ಅವರ ಅಭಿಪ್ರಾಯವನ್ನು (ಅರ್ಥಾತ್ ಪ್ರಶಂಸೆಯನ್ನು) ಪಡೆಯಬೇಕೆಂಬ ಬಯಕೆಯ ಫಲವಾಗಿ. ಆಗಿನ್ನೂ (ಆಗೇನು, ಯಾವಾಗಲೂ ಅಷ್ಟೇ) ಅಪಕ್ವ ಕವಿಯಾಗಿದ್ದ ನನಗೆ ಅವರು ನೀಡಿದ ಪ್ರೋತ್ಸಾಹದಿಂದ ಆದ ಸಹಾಯ ಅಷ್ಟಿಷ್ಟಲ್ಲ. ಕವನದಲ್ಲೇನಾದರೂ ಅಪ್ಪಿ ತಪ್ಪಿ ಸುಳಿದು ಬಂದಿರಬಹುದಾದ ಒಂದೆರಡು ಒಳ್ಳೆಯ ಸಾಲುಗಳನ್ನು "ಎಲ್ಲಿ, ಇನ್ನೊಂದು ಸಲ ಓದಿ!" ಎಂದು ಅವರು ಓದಿಸಿ ಕೇಳುತ್ತಿದ್ದಾಗ ನನಗಾಗುತ್ತಿದ್ದ ಆನಂದವನ್ನು ಎಂದೆಂದಿಗೂ ಮರೆಯಲಾರೆ. ಅವರ ಮನಸ್ಸಿಗೆ ಒಪ್ಪಿಗೆಯಾಗದ ಕವನಗಳ ಬಗ್ಗೆ ಅವರು ಸಾಧಾರಣವಾಗಿ ಮೌನತಾಳುತ್ತಿದ್ದರು. ಅಷ್ಟರಲ್ಲೇ ತಿಳಿದುಕೊಳ್ಳುತ್ತಿದ್ದೆ. ಆದರೂ ಅಂಥ ಸಂದರ್ಭಗಳಲ್ಲಿ ಒಂದೊಂದು ಸಲ ಹುಡುಗತನದ ಉತ್ಸಾಹದಲ್ಲಿ ಅವರ ಅಭಿಪ್ರಾಯವನ್ನು ಬಾಯಿಬಿಟ್ಟು ಕೇಳುತ್ತಿದ್ದೆ. "ಪದ್ಯ ಚೆನ್ನಾಗಿಲ್ಲ" ಎಂದೇ ಅವರ ಅಭಿಪ್ರಾಯವಾದರೂ, ಅದನ್ನು ಎಷ್ಟು ನವಿರಾಗಿ ಮನಸ್ಸಿಗೆ ನೋವಾಗದಂತೆ ಒಪ್ಪಿಗೆಯಾಗುವಂತೆ ತಿಳಿಸುತ್ತಿದ್ದರು! ಅವರು ನನ್ನ ಕಾವ್ಯಪ್ರಗತಿಯಲ್ಲಿ ಬಹಳ ಆಸೆಯಿಟ್ಟುಕೊಂಡಿದ್ದರು ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಆದರೇನು, ಕಾವ್ಯ ಕೈಬಿಟ್ಟಿತು. ಶಾಸ್ತ್ರ ತಗುಲಿಕೊಂಡಿತು.

ಅದೇನು ವಿಚಿತ್ರ ಸಂಘಟನೆಯೋ, ನನಗೆ ಶಾಸ್ತ್ರದ ಹುಚ್ಚನ್ನು ಹಿಡಿಸುವುದರಲ್ಲಿ ಮುಖ್ಯವಾದ ಪಾತ್ರ ವಹಿಸಿದವರಲ್ಲಿ ಅವರೂ ಒಬ್ಬರು. ಭಾಷಾವಿಜ್ಞಾನದ ಗ್ರೀಷ್ಮಶಾಲೆಗಳ ವಿಚಾರ ನನಗೆ ತಿಳಿದದ್ದು ಅವರ ಮೂಲಕವೇ. ಮೊದಲ ಗ್ರೀಷ್ಮಶಾಲೆಯ ಪ್ರಸಿದ್ಧ ಪತ್ರಿಕೆಯ ಮೇಲೆ "ಖಂಡಿತ ಸೇರಿ. ಅವಕಾಶ ತಪ್ಪಿಸಿಕೊಳ್ಳಬೇಡಿ" ಎಂಬರ್ಥ ಬರುವಂತೆ ಇಂಗ್ಲಿಷಿನಲ್ಲಿ ಬರೆದು ಕಳಿಸಿದ್ದರು. ಅಂದಿನಿಂದ ಇಂದಿನವರೆಗೂ ಅನೇಕ ರೀತಿಗಳಲ್ಲಿ ಪ್ರೋತ್ಸಾಹ ಕೊಡುತ್ತಾ, ಬುದ್ಧಿವಾದ ನೀಡುತ್ತಾ ಬಂದಿದ್ದರು. ಈಗ ನಾನು ಅನುಭವಿಸುತ್ತಿರುವ ಲೌಕಿಕ ಸ್ಥಾನಮಾನ ಗೌರವಗಳಿಗೆ ಕಾರಣರಾದವರಲ್ಲಿ ಅವರೂ ಒಬ್ಬರು.

ನನ್ನ ಬಗ್ಗೆ ಅವರು ತೋರಿಸುತ್ತಿದ್ದ ವಿಶ್ವಾಸ, ಅಭಿಮಾನಗಳನ್ನು ನೆನೆಸಿಕೊಂಡರೆ ನನಗೆ ಒಂದು ರೀತಿಯ ಸಂಕೋಚವಾಗುತ್ತದೆ. ಅವರ ಮನೆಗೆ ಹೋದಾಗ ಒಳಗಿದ್ದ ಅವರಿಗೆ ಮನೆಯವರು ನಾನು ಬಂದಿರುವ ಸಮಾಚಾರ ತಿಳಿಸಿದ ಕೂಡಲೇ "ಓಹೋ, ಬಿಳಿಗಿರಿ ಬಂದಿದ್ದಾರಾ?" ಎಂದು ಓಡಿಬರುತ್ತಿದ್ದ ರೀತಿ ಇನ್ನೂ ಕಣ್ಣಿಗೆ ಕಟ್ಟಿದೆ. ಅವರ ಮುಖ, ನಗೆ ಇಷ್ಟನ್ನು ನೋಡಿದರೆ ಸಾಕಾಗುತ್ತಿತ್ತು, ಮತ್ತೇನೂ ಉಪಚಾರಗಳು ಬೇಕಿರಲಿಲ್ಲ.

ಮೈಸೂರಿಗೆ ಹೋಗಿ ಅವರನ್ನೇನಾದರೂ ನೋಡದೆ ಬಂದರೆ ಅವರಿಗೆ ಅದೆಷ್ಟು ನೋವಾಗುತ್ತಿತ್ತು! ನನಗಿನ್ನೂ ಚೆನ್ನಾಗಿ ನೆನಪಿನಲ್ಲಿದೆ: ಅವರಿಗೆ ಹರ್ನಿಯಾ ಶಸ್ತ್ರಚಿಕಿತ್ಸೆಯಾಗಿ ಅವರನ್ನು ಆಸ್ಪತ್ರೆಯಲ್ಲಿ ನೋಡಲು ಹೋದಾಗ ಅವರೆಂದ ಮಾತಿದು: "ಏನು, ಬಿಳಿಗಿರಿ! ಹೋದಸಲ ಬಂದವರು ಮುಖ ತೋರಿಸಿದೆ ಹೊರಟು ಹೋದಿರಲ್ಲ!" "ಏನೋ... ಸಾರ್....." ಎಂದು ತಡವರಿಸಿದಾಗ, "ಹಾಗೆಲ್ಲ ಮಾಡಬೇಡೀಪ್ಪ ನನಗೆ ಬಹಳ ದುಃಖವಾಗುತ್ತೆ" ಎಂದರು. ಮೈಸೂರಿಗೆ ನನ್ನ ಹೆಂಡತಿ ಮಗಳು ಹೋದಾಗಲೂ ಅಷ್ಟೆ. ಅವರ ಮನೆಗೆ ಒಂದು ಸಲ ಹೋಗಿ ಬಂದೇ ತೀರಬೇಕು. ಯಾವ ರೀತಿಯಲ್ಲೂ ದೊಡ್ಡವನಲ್ಲದ ನನ್ನಂತಹವನನ್ನು ಇಷ್ಟು ಚೆನ್ನಾಗಿ ನಡೆಸಿಕೊಳ್ಳುವವರನ್ನು ಮತ್ತೆಲ್ಲಿ ಕಾಣುವುದು?

ಅವರನ್ನು ಕಡೆಯಬಾರಿಗೆ ನೋಡಿದ್ದೆಂದರೆ ಸುಮಾರು ಒಂದು ವರ್ಷದ ಹಿಂದೆ, ಮೈಸೂರಿನಲ್ಲಿ ನಡೆದ ಕನ್ನಡ ವ್ಯಾಕರಣಗೋಷ್ಠಿಯ ಸಂದರ್ಭದಲ್ಲಿ. ಆ ಬಾರಿ ಅವರು ನನ್ನನ್ನು ಊಟಕ್ಕೆ ಕರೆದಾಗ, ಕಾರಣಾಂತರಗಳಿಂದ ಬರಲು ಆಗುವುದಿಲ್ಲ ಎಂದು ನಾನು ಉತ್ತರ ಕೊಟ್ಟೆ. ಆಗ ಅವರು "ಏನು ಬಿಳಿಗಿರಿ! ನಿಮ್ಮೊಡನೆ ಒಟ್ಟಿಗೇ ಊಟಮಾಡಬಹುದು ಒಂದು ದಿವಸ ಎಂದಿದ್ದೆನಲ್ಲ." ಎಂದು ಅವರ ಆಹ್ವಾನವನ್ನು ಅಂಗೀಕರಿಸಿದ್ದರೆ ನಾನೇ ಏನೋ ಉಪಕಾರ ಮಾಡುತ್ತಿದ್ದ ಹಾಗಾಗುತ್ತಿತ್ತೇನೋ ಎಂಬ ಧ್ವನಿಬರುವಂತೆ ಮಾತನಾಡಿದ್ದು ಇನ್ನೂ ನೆನಪಿನಲ್ಲಿದೆ. ಆಗ, ನಾನು "ಊಟಕ್ಕೆ ಬರ್ದಿದ್ರೇನ್ ಸಾರ್? ಕಾಫಿಗೆ ಬರುತ್ತೇನೆ" ಎಂದಾಗಲೂ ಅವರಿಗೆ ಅಷ್ಟು ಸಮಾಧಾನವಿಲ್ಲ. ಅಂದು ಕಾಫಿ ಕುಡಿಯುವಾಗ "ಬಿಳಿಗಿರಿ! ಕನ್ನಡವರಾಗಿದ್ದು, ತಿಳಿದ ವಿಷಯಗಳನ್ನು ಕನ್ನಡದಲ್ಲಿ ಬರೆಯದೇ ಇರುವುದು ಕನ್ನಡಕ್ಕೆ ದ್ರೋಹಮಾಡಿದ ಹಾಗೆ" ಎಂದ ಮಾತು ಇನ್ನೂ ನನ್ನ ಮನಸ್ಸನ್ನು ಚುಚ್ಚುತ್ತಿದೆ. ಕಾವ್ಯದಲ್ಲಂತೂ ಅವರು ನನ್ನಲ್ಲಿಟ್ಟುಕೊಂಡಿದ್ದ ಆಸೆಗಳನ್ನು ಪೂರೈಸಲು ನನಗೆ ಆಗಲಿಲ್ಲ. ಭಾಷಾಶಾಸ್ತ್ರದಲ್ಲಿ ಅವರು ನನ್ನಲ್ಲಿಟ್ಟುಕೊಂಡಿದ್ದ ಆಸೆಗಳನ್ನು ಪೂರೈಸುವಂತಾಗಲಿ ಎಂಬುದೇ ನನ್ನ ಬೇಡಿಕೆ. ಅಲ್ಲಿಯವರೆಗೂ ಪ್ರೊ. ತೀ.ನಂ. ಶ್ರೀಕಂಠಯ್ಯನವರಿಗೂ ನನಗೂ ಇದ್ದ ಪರಿಚಯದ ನೆನಪು ನನ್ನ ಮನಸ್ಸನ್ನು ಅಸ್ವಸ್ಥವಾಗಿಯೇ ಇಟ್ಟಿರುತ್ತದೆ.

ಮಬ್ಬು ಕರಗಿತ್ತು

ಮ.ಸು. ಕೃಷ್ಣಮೂರ್ತಿ

●

ಅದೊಂದು ದಿನ ಪ್ರಾತಃಕಾಲ. ಶಿಶಿರಋತುವಿದ್ದಿರಬೇಕು. ಮಾಗಿಯ ಚಳಿಗೆ ಪ್ರಕೃತಿಯೆಲ್ಲಾ ಸುರುಟಿಕೊಂಡಿತ್ತು. ಸೂರ್ಯ ಉದಯಗಿರಿಯತ್ತ ಇಣುಕಿ ನೋಡುತ್ತಿದ್ದ. ಮಂಜುಮಬ್ಬು ಇನ್ನೂ ಹರಿದಿರಲಿಲ್ಲ. ಚಳಿಯಲ್ಲೇ ನಡುಗುತ್ತ ಪ್ರಾಧ್ಯಾಪಕ ನಿವಾಸದತ್ತ ಹೊರಟೆ. ಹೂಗಿಡಗಳ ಸುಗಂಧ ಎಲ್ಲೆಡೆಯೂ ಹಬ್ಬಿತ್ತು. ಪಕ್ಷಿಗಳ ಚಿಲಿಪಿಲಿ ಗಾನದ ಹಿಮ್ಮೇಳದಲ್ಲಿ ನೆಳಲು ಬೆಳಕುಗಳ ಚೆಲ್ಲಾಟ ನಡೆದಿತ್ತು. ಅವರು ಇನ್ನೂ ಎದ್ದಿರುವರೋ ಇಲ್ಲವೋ ಕೂಗಲೋ ಬೇಡವೋ ಎಂದು ಯೋಚಿಸುತ್ತ ಬಾಗಿಲ ಮುಂದೆ ಕ್ಷಣಕಾಲ ನಿಂತೆ. ಬಾನುಲಿ ನುಡಿಯುತ್ತಿತ್ತು – 'ಏಳು ನಾರಾಯಣ....' ಆ ಹಾಡಿನ ಗುನುಗಿನಲ್ಲಿ ಮುಳುಗಿ ಕ್ಷಣಕಾಲ ಮೈಮರೆತೆ. ಅಷ್ಟರಲ್ಲಿ ನಾನು ಹೊರಗೆ ನಿಂತಿರುವುದು ಮನೆಯವರಿಗೆ ಕಂಡಿರಬೇಕು. ಬಾಗಿಲು ತೆರೆದು 'ಬನ್ನಿ ಕುಳಿತುಕೊಳ್ಳಿ' ಎಂದು ಕರೆದರು.

'ಪ್ರೊಫೆಸರ್ ಇದ್ದಾರೆಯೆ?' ಎಂದೆ.

ಆದರೆ ಅವರು ಉತ್ತರ ಹೇಳುವ ಮುನ್ನವೇ ಎದುರಿಗೆ ಅವರ ಶ್ರೀಮೂರ್ತಿ ಕಂಡುಬಂದಿತು. ಅವರ ದಿವಾನಖಾನೆಗೆ ಹೋದೆವು. ಓ! ಅದೊಂದು ಸರಸ್ವತಿಯ ಭಂಡಾರ: ಎಲ್ಲಿ ನೋಡಿದರೂ ಪುಸ್ತಕ! ಆದರೆ ಅವುಗಳನ್ನು ಎಷ್ಟು ಓರಣವಾಗಿ ಜೋಡಿಸಿದ್ದಾರೆ! ಎಲ್ಲೆಡೆಯೂ ಅಚ್ಚುಕಟ್ಟು, ಶುಭ್ರತೆ ತಾನೇ ತಾನಾಗಿದೆ! ಒಮ್ಮೆ ಕಣ್ಣು ಹಾಯಿಸಿದೆ! ಕನ್ನಡ, ಸಂಸ್ಕೃತ, ಇಂಗ್ಲಿಷ್ ಕೊನೆಗೆ ಹಿಂದಿಯ ಛಂದಸ್ಸಿನ ಮೇಲೆ ಪ್ರಕಟವಾದ ಅತ್ಯಾಧುನಿಕ ಪುಸ್ತಕ. ಈ ರೀತಿ ಬೆರಗುಗಣ್ಣಿನಿಂದ ನೋಡುತ್ತ ಕುಳಿತಿದ್ದೆ. ಎದುರಿಗೆ ಬಿ.ಎಂ.ಶ್ರೀ., ಟಿ.ಎಸ್.ವೆಂ., ಎಂ. ಹಿರಿಯಣ್ಣ ಅವರ ಭಾವಚಿತ್ರಗಳು.

ಬಾಗಿಲು ಕಿರ್ರೆಂದಿತು. ಅವರ ಮಗ ತಟ್ಟೆಯಲ್ಲಿ ದೋಸೆ ತಂದುಕೊಟ್ಟ. ದೋಸೆ ತಿನ್ನುತ್ತ ಮಾತಿಗೆ ಮೊದಲು ಮಾಡಿದೆವು. ಎರಡು ದೋಸೆ ಮುಗಿದುವು. ಮತ್ತೆರಡು.

'ಸಾರ್, ಬೇಡಿ, ಜಾಸ್ತಿಯಾಗುತ್ತದೆ'

'ಏನ್ರೀ, ಈ ವಯಸ್ಸಿನಲ್ಲಿ ಹೀಗೆನ್ನುತ್ತೀರಿ'

'ನಿಮ್ಮ ಜೀರ್ಣಶಕ್ತಿ ನನಗೆಲ್ಲಿ ಸಾರ್'

'ಜೀರ್ಣಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು' ಅವರು ನಕ್ಕು ನುಡಿದರು.

ಈ ರೀತಿ ಅವರ ಒಲುಮೆ ಜುಲುಮೆ ನಡೆಯುತ್ತಿತ್ತು, (ಅದು ಅವರ ಮನೆಯಲ್ಲಿ ಮಾತ್ರವಲ್ಲ. ಅವರ ತರಗತಿ ಸಾಮಾನ್ಯವಾಗಿ ನಮಗೆ ಎರಡು ಗಂಟೆಗೆ ಶುರುವಾಗುತ್ತಿತ್ತು. ಮೊದಲು ತಿಂಡಿ ಕಾಫಿ, ಅನಂತರ ಎರಡು ಎರಡೂವರೆ ಗಂಟೆಯ ಪಾಠ, ಹೋಗುವಾಗ ಮತ್ತೆ ಕಾಫಿ, ಎಂಥ ಕ್ಲಾಸು!).

ತಿಂಡಿಯ ಜೊತೆಗೆ ಮಾತು ಮುಂದೆ ಸಾಗಿತು. ನಾನು ಬಂಗಾಳಿಯಲ್ಲಿ ಕೆಲವು ಕನ್ನಡ ಶಬ್ದಗಳನ್ನು ಕಂಡು ಅದನ್ನು ಅವರಲ್ಲಿ ಚರ್ಚಿಸೋಣವೆಂದು ಹೋಗಿದ್ದೆ.

'ಸಾರ್, ಬೇಯಿಗ (ಬೀಗ), ಜೊಲ್, ಕರು ಮೊದಲಾದ ಶಬ್ದಗಳು ಬಂಗಾಳಿಯಲ್ಲೂ ಕನ್ನಡದ ಅರ್ಥದಲ್ಲಿ ಬರುತ್ತವಲ್ಲ, ಅವು ಕನ್ನಡದಿಂದ ಬಂಗಾಳಿಗೆ ಹೋಗಿವೆ ಎನ್ನಬಹುದೇ?'

'ಆ ಶಬ್ದಗಳು ಮೊತ್ತ ಮೊದಲು ದೊರೆಯುವ ಕಾಲ ಏನು?'

ನನ್ನ ಉತ್ಸಾಹ ಜೊರ‍್ರನೆ ಇಳಿದುಹೋಯಿತು, 'ನೋಡುತ್ತೇನೆ, ಸಾರ್'

'ಬಂಗಾಳಿ ಕೋಶವನ್ನೇ ಅಲ್ಲ, ಎಮಿನೋರವರ ದ್ರಾವಿಡ ಶಬ್ದಗಳ ವ್ಯುತ್ಪತ್ತಿಕೋಶ, ಮೋನಿಯರ್ ವಿಲಿಯಮ್ಸ್ ಡಿಕ್ಷನರಿ ಮೊದಲಾದುವನ್ನೂ ನೋಡಿ.'

'ಬೇಯಿಗ' ಎನ್ನುವುದಕ್ಕೂ ಕನ್ನಡದ 'ಬೀಗ'ಕ್ಕೂ ಸಂಬಂಧವಿದೆಯೇ?'

'ಬೇಯಿಗ' ಎನ್ನುವುದು 'ವೈವಾಹಿಕ' ಎಂಬ ಸಂಸ್ಕೃತ ಶಬ್ದದಿಂದ ಬಂದಿದೆ ಎಂದು ಡಾ. ಸುನೀತಿಕುಮಾರ ಚಟರ್ಜಿಯವರು ತಮ್ಮ 'Origin and Development of Bengali Language and Literature' ಎಂಬ ಪುಸ್ತಕದಲ್ಲಿ ಹೇಳಿದ್ದಾರೆ. ಅದನ್ನು ಒಮ್ಮೆ ನೋಡಿ. 'ಜೊಲ್' ಎಂಬ ಪದವೇನೋ ದ್ರಾವಿಡ ಪದವಿರಬೇಕು.

ಈ ರೀತಿ ಅವರನ್ನು ಅಲ್ಲಾಡಿಸ ಹೋಗಿ ನಾನೇ ಅಲ್ಲಾಡಿಹೋದೆ.

ಕೊನೆಗೆ ಛಂದಸ್ಸಿನ ವಿಷಯ ಬಂದಿತು. " 'ಧವಳ' ಮೂಲದಲ್ಲಿ ಅಂಶ ಗಣದ್ದಾಗಿರಬೇಕು ಎಂದು ಶ್ರೀ ಡಿ.ಎಲ್.ಎನ್. ಅವರು ಹೇಳಿದ್ದಾರೆ. ಅದು ಹಿಂದಿಯಲ್ಲೂ ದೊರೆಯುತ್ತದೆ. ಹಾಗಾದರೆ ಅದು ದ್ರಾವಿಡ ಭಾಷೆಯದೇ?"

'ಧವಳ' ಮರಾಠಿಯಲ್ಲೂ ಇದೆ. ಅದರ ವಿಷಯವಾಗಿ ನಾನು ವಿಷಯ ಸಂಗ್ರಹ ಮಾಡುತ್ತಿದ್ದೇನೆ. ಅಪಭ್ರಂಶದಲ್ಲಿ ಹುಡುಕದೆ ವಿಷಯ ಸಂಗ್ರಹ ಮಾಡದೆ ಏನನ್ನೂ ಹೇಳುವಂತಿಲ್ಲ.

'ಸರಳ ರಗಳೆ' ಎಂಬ ಹೆಸರನ್ನು ಆ ಛಂಧಸ್ಸಿಗೆ ಇಟ್ಟವರು ನೀವಂತೆ, ನಿಜವೇ ಸಾರ್'

'ಯಾರು ಹೇಳಿದರು?'

'ಯಾರೋ ಸ್ನೇಹಿತರು'

ಅವರು ವಿಷಯಾಂತರ ಮಾಡಿದರು. ತಮ್ಮ ಸ್ತುತಿ ಎಲ್ಲಿ ಬಂದೀತೋ ಎಂಬ ಭಯದಿಂದ.

"ಭಾಮಹ, ದಂಡಿ, ಮೊದಲಾದವರಲ್ಲೆಲ್ಲ ಧ್ವನಿ ಇತ್ತು ಎಂದು ಕೆಲವರು ಸಾಧಿಸುತ್ತಾರಲ್ಲ, ನೀವು ಏನು ಹೇಳುತ್ತೀರಿ?

'ನ ಸರ್ವತ್ರ ಧ್ವನಿರಾಗಿಣಾ ಭವಿತವ್ಯಂ'

'ಹಿಂದಿಯಲ್ಲಿ ವಾತ್ಸಲ್ಯವನ್ನೂ ಒಂದು ರಸವಾಗಿ ಪರಿಗಣಿಸಿದ್ದಾರೆ. ನೀವೇನೆನ್ನುವಿರಿ ಸಾರ್'

'ವಾತ್ಸಲ್ಯ, ರತಿಯ ರೂಪಾಂತರವೇ. ಇರಲಿ ಯಾವುದು ಆ ಹಿಂದಿಯ ಪುಸ್ತಕ? ಕೊಂಚ ತಂದುಕೊಡಿ ನೋಡೋಣ?' ಎಂದರು.

ಹೀಗೆಯೇ ರಸದ ಚರ್ಚೆ ಬಂದಾಗ 'ಭೀಭತ್ಸ' ರಸವಲ್ಲ. ಏಕೆಂದರೆ ಜುಗುಪ್ಸಾಭಾವ ಎಷ್ಟೊಂದು ತೀವ್ರವಾಗಿರುತ್ತದೆಂದರೆ ಅದು ರಸತ್ವಕ್ಕೆ ಏರಲೇ ಆರದು. ರಸಾನುಭವವಾಗುವ ಬದಲು ಭಾವಾನುಭವವಾಗುತ್ತದೆ. ಭೀಭತ್ಸದ ಸನ್ನಿವೇಶಗಳನ್ನು ಊಹಿಸಿಕೊಂಡರೆ ಸಾಕು ಮೈ ಜುಂ ಎನ್ನುತ್ತದೆ. ಆದ್ದರಿಂದ ಅದು ರಸವಾಗಿರಲಾರದು ಎಂದು ಹೇಳಿದರು.

ಅದನ್ನೆ ಏಕೆ ಬರೆಯಬಾರದೆಂದು ಕೇಳಿದೆ.

'ವಿಷಯ ಪರಿಷ್ಕಾರವಾಗದೇ ಯಾವುದನ್ನೂ ಬರೆಯುವುದಕ್ಕೆ ಆತುರ ಪಡಬಾರದು. ನನ್ನ ಮನಸ್ಸಿಗೆ ಸಮಾಧಾನವಾಗುವವರೆಗೂ ನಾನು ಬರೆಯುವುದಿಲ್ಲ.'

ಆಗ ತಿಳಿಯಿತು ತೀ.ನಂ.ಶ್ರೀ. ಅವರು ಏತಕ್ಕೆ ಹೆಚ್ಚಿಗೆ ಬರೆಯಲಿಲ್ಲವೆಂದು. "ಭಾಷಾ ಶಾಸ್ತ್ರದ ಮೇಲೆ ನಿಮ್ಮಂಥ ಅಧಿಕಾರೀ ವಿದ್ವಾಂಸರು ಬರೆಯಬೇಕು. ಇಲ್ಲವಾದರೆ ನನ್ನಂಥ ಸಾಮಾನ್ಯ ವ್ಯಕ್ತಿ ಬರೆದದ್ದೇ ಪ್ರಮಾಣವಾಗುತ್ತದೆ" ಎಂದೆ.

ಅದಕ್ಕೆ ಅವರು ಮುಗುಳ್ನಗೆ ಬೀರುತ್ತ ಹೇಳಿದರು.

'ಸತ್ಯಂ ಜ್ಞಾನಮನಂತಂ ಬ್ರಹ್ಮ ಏಕಮೇವಾ ದ್ವಿತೀಯಂ'

ವ್ಯಾಕರಣದ ವಿಷಯ ಬಂದಾಗ " 'ದ್ವಂದ್ವಃ ಸಾಮಾಸಿಕಸ್ಯ' ಎಂದು ಭಗವದ್ಗೀತೆಯಲ್ಲಿ ಹೇಳಿದೆಯಲ್ಲ ಇದರ ಅರ್ಥವೇನು?" ಎಂದು ಕೇಳಿದೆ.

"ಎರಡು ಪದಗಳೂ ಸಮಾನ ಮಹತ್ವವುಳ್ಳವು ಆದ್ದರಿಂದ ಅದು ಸಮಾಸಗಳಲ್ಲಿ ಶ್ರೇಷ್ಠ ಎಂದಿರಬೇಕು."

"ಕೂಡಲಸಂಗಮ, ಗುಂಡುಗೋವಿ, ಹಣ್ಣು ಹಂಪಲು, ಅವಳಿ ಜವಳಿ ಮೊದಲಾದ ಶಬ್ದಗಳಲ್ಲಿ ಒಂದು ಕನ್ನಡಪದ ಮತ್ತೊಂದು ಎರವು ತಂದ ಪದ. ಇಂಥ ಸಮಾಸಗಳನ್ನು 'Translation Compound' ಎನ್ನುತ್ತಾರೆ. ಪರಭಾಷಾ ಶಬ್ದಗಳನ್ನು ಹೇಗೆ ತಮ್ಮದನ್ನಾಗಿ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಇಂಥ ಶಬ್ದಗಳು ಸಂಸ್ಕೃತದಲ್ಲೂ ಇವೆ. ಇಂಥ ದ್ವಂದ್ವ ಸಮಾಸಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಭಗವದ್ಗೀತಾಕಾರ ಮೇಲಿನ ಮಾತನ್ನು ಹೇಳಿದನೆ"

"ಹಾಗೆ ಹೇಳುವುದು ತುಂಬ Farfetched ಎಂದು ಕಾಣುತ್ತದೆ" ಎಂದರು.

ಛಂದಸ್ಸಿನ ಮಾತು ಬಂದಾಗ "ಪ್ರಾಸ ಸಂಸ್ಕೃತದಲ್ಲಿರಲಿಲ್ಲ. ಅದು ಅಲ್ಲಿ ಅಷ್ಟು ಪ್ರಧಾನವೂ ಅಲ್ಲ. ಅಪಭ್ರಂಶವೇ ಮೊದಲಾದ ದೇಶ ಭಾಷೆಗಳಲ್ಲಿ ಅದು ಹೆಚ್ಚು ಪ್ರಚುರವಾಯಿತು. ಕೆಲವು ಜನ ಔತ್ತರೇಯ ವಿದ್ವಾಂಸರು 'ಪ್ರಾಸ' ಅನಾರ್ಯರಿಂದ ಬಂದದ್ದು ಎನ್ನುತ್ತಾರೆ.

ಪ್ರಾಸ, ಕನ್ನಡಕ್ಕೆ ನಿಯತ ಎಂದು ನೃಪತುಂಗ ಹೇಳುತ್ತಾನೆ. ಆದ್ದರಿಂದ ಪ್ರಾಸ ಕನ್ನಡದ ಇಲ್ಲವೆ ದ್ರಾವಿಡರ ಕೊಡುಗೆ ಎನ್ನಬಹುದೆ?" ನನ್ನ ಪ್ರಶ್ನೆ.

"ತಮಿಳಿನಲ್ಲಿ ಹೇಗಿದೆ ನೋಡಬೇಕು. ಅದಕ್ಕೇ ನನಗೆ ಆಗಾಗ ಅನ್ನಿಸುತ್ತದೆ. ದ್ರಾವಿಡ ಭಾಷಾ ವಿದ್ವಾಂಸರು ಆಗಾಗ್ಗೆ ಸೇರಿ ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸಿಕೊಳ್ಳಬಹುದು ಎಂದು. ಉದಾಹರಣೆಗೆ ಹರಿಹರ ಕನ್ನಡಕ್ಕೆ ಹೇಗೆ ಸಮಸ್ಯೆಯಾಗಿದ್ದಾನೋ ತಮಿಳಿಗೂ ಹಾಗೆಯೇ. ಅವನ ಕೃತಿಗಳ ಅವಲೋಕನದಿಂದ ತಮಿಳರ ಅನೇಕ ತೊಡಕುಗಳು ಬಗೆಹರಿಯುತ್ತವೆ".

"ಈ ದೃಷ್ಟಿಯಿಂದ ವರ್ಷಕ್ಕೊಮ್ಮೆ ದ್ರಾವಿಡ ಭಾಷಾ ವಿದ್ವಾಂಸರ ಸಮ್ಮೇಳನವನ್ನೇಕೆ ಏರ್ಪಡಿಸಬಾರದು?"

"ನನಗೂ ಹಾಗೆ ಹಲವು ಸಾರಿ ಅನ್ನಿಸಿದೆ. ಯಾವಾಗ ಮಾಡುವೆನೋ ಕಾಣೆ. Separatist Tendency ಎಂದು ಎಲ್ಲಿ ಜನ ಅನ್ನುವರೋ ಎಂದು ಭಯ".

"ಇದೇನು ರಾಜಕೀಯ ಸಮ್ಮೇಳನ ಅಲ್ಲವಲ್ಲ!"

"ಇರಬಹುದು ಆದರೂ ಎಚ್ಚರಿಕೆಯಿಂದಿರಬೇಕು."

"ಹಾಲ ದಕ್ಷಿಣದವನು. ಅವನು ಗಾಥಾ ಸಪ್ತಶತಿಯನ್ನು ಬರೆಯುವಾಗ ತನ್ನ ನಾಡಿನ ಜಾನಪದ ಗೀತೆಗಳನ್ನು ಆಯ್ದುಕೊಂಡನಂತೆ. ಇಷ್ಟಾದರೂ ಕನ್ನಡದಲ್ಲಿ ಶೃಂಗಾರ ಮುಕ್ತಕಗಳೇ ಇಲ್ಲವಲ್ಲ ಕಾರಣವೇನು? 'ಎನಿತ್ತೆನಿತ್ತಂಬುಜಪತ್ರನೇತ್ರೆಯಾ...' ಎಂಬ ಪದ್ಯ ಗಾಥಾ ಸಪ್ತಶತಿಯ ಅನುವಾದವೆಂದು ಹೇಳುವ ಬದಲು ಕನ್ನಡದಿಂದ ಅಲ್ಲಿಗೆ ಹೋಗಿದೆಯೆಂದು ಊಹಿಸ ಬಹುದೆ?"

" 'ಗಾಥಾ ಸಪ್ತಶತಿ' ರಚನಾ ಕಾಲದಲ್ಲಿ ಕನ್ನಡ ಅಷ್ಟೊಂದು ಬೆಳೆದಿತ್ತೆಂದು ಹೇಳಲಾಗುವುದಿಲ್ಲ. ತಮಿಳಿನಲ್ಲೇನೋ ಶೃಂಗಾರ ಮುಕ್ತಕಗಳಿವೆ. ತೌಲನಿಕ ಅಧ್ಯಯನ ಹೆಚ್ಚಬೇಕು. ಆಗ ಅನೇಕ ನಿಗೂಢ ಸಮಸ್ಯೆಗಳ ಮೇಲೆ ಬೆಳಕು ಬಿದ್ದೀತು."

"ಕನ್ನಡದಲ್ಲಿ ಔತ್ತರೇಯ ಭಾಷೆಗಳ ಛಂದೋ ವೈವಿಧ್ಯವಿಲ್ಲ. 'ಭರತೇಶ ವೈಭವ'ವನ್ನು ಕೇಳಿದ ನನ್ನ ಔತ್ತರೇಯ ಮಿತ್ರರೊಬ್ಬರು ಅದೇಕೆ ಅಷ್ಟೊಂದು ಏಕತಾನವಾಗಿದೆ ಎಂದು ನನ್ನನ್ನು ಕೇಳಿದ್ದಾರೆ. ಇದಕ್ಕೆ ಕಾರಣವೇನು?"

"ಛಂದೋವೈವಿಧ್ಯ ಚಂಪೂವಿನಲ್ಲಿದೆ. ಆದರೆ ಆ ಬಳಿಕ ಷಟ್ಪದಿ ಸಾಂಗತ್ಯ ಯುಗದಲ್ಲಿ ಅದು ತಪ್ಪಿತು. ಆದರೆ ಕುಮಾರವ್ಯಾಸ ಮೊದಲಾದ ಮಹಾಕವಿಗಳು ಒಂದೇ ಛಂದಸ್ಸಿನಲ್ಲಿ ಅದ್ಭುತ ವೈವಿಧ್ಯವನ್ನು ಸಾಧಿಸಿದ್ದಾರೆ."

"ಹರಿಹರ ಸಾಮರಸ್ಯದ ಭಾಗವತ ಸಂಪ್ರದಾಯ ಕನ್ನಡ ನಾಡಿನ ಸಂಪ್ರದಾಯ ಎಂದು ಹೇಳುತ್ತಾರೆ. ನಿಮ್ಮ ಅಭಿಪ್ರಾಯವೇನು?"

"ಹರಿಹರಾದ್ವೈತ ಪುರಾಣಗಳಲ್ಲೇ ದೊರೆಯುತ್ತದೆ. ಆದರೆ ಅದೊಂದು ಪಂಥವಾಗಿ ಭಾಗವತದ ಸಂಪ್ರದಾಯವಾಗಿ ಮೂಡಿರುವುದು ಇಲ್ಲೇ. ತಲಕಾಡಿನಲ್ಲಿ ಭಾಗವತ ಸಂಪ್ರದಾಯದ ಮತವೊಂದಿತ್ತು. ಈಗ ಏನೋ ಕಾಣೆ, ಅಲ್ಲಿ ವಿಚಾರಿಸಿ."

ಅನಂತರ ನಾನು "ನೀವು ಕವಿತೆ ಬರೆಯುವುದನ್ನು ನಿಲ್ಲಿಸುದುದು ತುಂಬ ಅನ್ಯಾಯವಾಯಿತು. ಕವಿತಾ ಕ್ಷೇತ್ರದಲ್ಲೇ ಮುಂದುವರಿದಿದ್ದರೆ ಇಂದು ನೀವು ಕನ್ನಡದ ಮೂರ್ಧನ್ಯ ಕವಿಗಳಲ್ಲಿ ಒಬ್ಬರಾಗುತ್ತಿದ್ದೀರಿ" ಎಂದೆ.

ಅದನ್ನು ಅವರು ಒಪ್ಪದೆ ಹೀಗೆ ಹೇಳಿದರು : "ದೊಡ್ಡ ಕವಿಯಾಗುತ್ತಿದ್ದೆನೊ ಇಲ್ಲವೊ ಗೊತ್ತಿಲ್ಲ. ಆದರೆ ಕವಿತೆ ಬರೆಯುವುದನ್ನು ನಿಲ್ಲಿಸಿದುದಕ್ಕಾಗಿ ಖೇದವೇನೋ ಇದೆ" ಎಂದರು.

"ಕನ್ನಡಕ್ಕಾಗಿ ಇತ್ತೀಚೆಗೆ ಏನು ಮಾಡುತ್ತಿದ್ದೀರಿ? ನಿಮ್ಮ ಯೋಜನೆಗಳೇನು?"

"ಕನ್ನಡದ ಕ್ಷುಲ್ಲಕ ಭಾಷೆಗಳ ಸರ್ವೇಕ್ಷಣ (Dialectical Survey of Kannada) ದ ಯೋಜನೆ ಇದೆ. ಕನ್ನಡದ ವಿವರಣಾತ್ಮಕ ವ್ಯಾಕರಣ (Descriptive Grammar) ಬರೆಯಬೇಕೆಂಬ ಸಂಕಲ್ಪವೂ ಇದೆ. ಯಾವಾಗ ಆಗುತ್ತದೋ ನೋಡಬೇಕು."

ಅಷ್ಟು ಹೊತ್ತಿಗಾಗಲೇ ಸಾಕಷ್ಟು ಹೊತ್ತಾಗಿತ್ತು ಎದ್ದುನಿಂತು ಹೇಳಿದೆ: "ಹೋಗಿಬರುತ್ತೇನೆ ಸಾರ್, ಕ್ಷಮಿಸಿ. ಕೆಲಸಕ್ಕೆ ಬಾರದ ಪ್ರಶ್ನೆಗಳಿಂದ ನಿಮಗೆ ತೊಂದರೆ ಕೊಟ್ಟೆ".

"ಹಾಗೆನ್ನಬೇಡಿ. ಶಂಕೆ ಪ್ರತಿಶಂಕೆಯಿಂದಲೇ ವಿದ್ವಾಂಸರ ಅಂಗಡಿ ನಡೆಯುವುದು. ಕೆಲವು ವೇಳೆ ವಿದ್ಯಾರ್ಥಿಯೊಬ್ಬನ ಪ್ರಶ್ನೆಯೊಂದು ನಮ್ಮ ಹಲವು ಪ್ರಶ್ನೆಗಳಿಗೆ ಉತ್ತರವಾಗಬಲ್ಲದು ಎಂಬುದನ್ನು ಅಧ್ಯಾಪಕರಾದ ನೀವು ಇಷ್ಟುಹೊತ್ತಿಗಾಗಲೇ ಮನಗಂಡಿರಬೇಕು" ಎಂದರು.

ಆಗ ನನಗೆ ಅವರ ಮಾತು ನೆನಪಿಗೆ ಬಂದಿತು. "ಪ್ರತಿಭಾ ವ್ಯಾಪಾರವು ದೃಷ್ಟಿಯೂ ಹೌದು, ಸೃಷ್ಟಿಯೂ ಹೌದು."

ಹೋಗುವಾಗ ಅವರು ಹೇಳಿದರು: "ಕನ್ನಡದ ಮೇಲೆ ನಿಮ್ಮ ಅಭಿಮಾನ ಮೆಚ್ಚತಕ್ಕದ್ದು. ಆದರೆ ಬಿ.ಎಂ.ಶ್ರೀ. ಅವರ ಈ ಮಾತು ನೆನಪಿರಲಿ. 'ಕೊನೆಗೆ ಉಳಿಯುವುದು ಅಭಿಮಾನವಲ್ಲ, ಸತ್ಯ'. ಸಂಸ್ಕೃತದಲ್ಲಿ ಇಂಥದೇ ಮಾತು ಬರುತ್ತದೆ: "ದೀರ್ಘಂ ಪಶ್ಯತ ಮಾ ಹ್ರಸ್ವಂ" ಅಪ್ಪಣೆ ಬೇಡಿ ಹೊರಟೆ. ಕಿವಿಯಲ್ಲಿ ಅವರ ಮಾತು ಅನುರಣಿತವಾಗುತ್ತಿತ್ತು. "ದೀರ್ಘಂ ಪಶ್ಯತ ಮಾ ಹ್ರಸ್ವಂ." ಆ ಬಳಿಕ ತೀ.ನಂ.ಶ್ರೀ. ಅವರನ್ನು ಹಲವು ಸಾರಿ ಕಂಡಿದ್ದೆ. ಆದರೆ ಈ ಮಾತು ಉದಯರವಿಭವಿಯಲ್ಲಿ ಕುಳಿತ ಆ ತೇಜಃಪುಂಜ ಮುಖ ಮಾತ್ರ ಮರೆಯದು, ಮಾಸದು. ಅವರ ಮನೆಯಿಂದ ಹೊರಟಾಗ ಕಣ್ಣು ಕೋರೈಸುವಂತೆ ಬಿಸಿಲು ಏರಿತ್ತು, ಮಬ್ಬು ಕರಗಿತ್ತು!

ನನಗೆ ಕಾಣುತ್ತಿರುವ ಶ್ರೀಕಂಠಯ್ಯನವರು

ಆರ್.ಎಲ್. ನರಸಿಂಹಯ್ಯ

●

ನಾನು ಇದುವರೆಗೆ ಮಾಡಿರುವ ಅಲ್ಪ ಸ್ವಲ್ಪ ವಾಚನ ಲೇಖನಗಳೆಲ್ಲ ನಿರ್ಜೀವ ವಿಷಯಗಳನ್ನು ಕುರಿತಿರುವವೇ ಆಗಿರುವುದರಿಂದ ಯಾವ ರೀತಿಯಲ್ಲಿಯೂ ನಾನು ಯೋಗ್ಯತೆ ಸಂಪಾದಿಸಿಕೊಂಡಿರದ ಇಂಥ ಕೆಲಸಕ್ಕೆ ಕೈಹಾಕುವುದು ಅನುಚಿತವೆಂದು ನನ್ನ ಮನಸ್ಸು ಸಂಕಟದಿಂದ ನನಗುಸಿರುತ್ತಿದೆ. ಆದರೆ ಯಾವ ಸುಕೃತದಿಂದಲೋ ಏನೋ ಶ್ರೀಕಂಠಯ್ಯನವರ ಸ್ನೇಹ ಭಾಗ್ಯ ನನಗೆ ದೊರಕಿತಾದ್ದರಿಂದ ಆ ವಿಷಯ ಸಂಕ್ಷೇಪವಾಗಿಯಾದರೂ ನನ್ನ ಯೋಗ್ಯತೆಯಿರುವ ಮಟ್ಟಿಗೆ ಈ ಸಮಯದಲ್ಲಿ ಹೇಳದಿದ್ದರೆ ನನ್ನ ಭಾಗ್ಯದಾತನಿಗೆ ಕೃತಜ್ಞತೆ ತೋರಿಸಿದಂತಾದೀತೆಂಬ ಇನ್ನೊಂದು ಸಂಕಟಕ್ಕೂ ನಾನು ಸಿಕ್ಕಿದ್ದೇನೆ.

ನನಗೆ ಶ್ರೀಕಂಠಯ್ಯನವರ ಮೊದಲ ಮುಖಪರಿಚಯವಾದದ್ದು ಅವರು ಬೆಂಗಳೂರಿನ ಇಂಟರ್ ಮೀಡಿಯೇಟ್ ಕಾಲೇಜಿಗೆ ಅಸಿಸ್ಟೆಂಟ್ ಪ್ರೊಫೆಸರಾಗಿ ಬಂದಾಗ, ೧೯೪೬ರಲ್ಲಿ. ಬಂದ ಕೆಲವೇ ದಿವಸಗಳಲ್ಲಿ ಅವರು ಅಲ್ಲಿ ಹದಿನೈದು ದಿವಸಗಳಿಗೊಂದು ಸಲವೋ ತಿಂಗಳಿಗೊಂದು ಸಲವೋ ಸೇರುವಂತೆ ಒಂದು ಸಹೃದಯ ಗೋಷ್ಠಿಯನ್ನೇರ್ಪಡಿಸಿದರು. ಅವರ ಸಾಹಿತ್ಯ ಶ್ರದ್ಧೆಗೆ ಇದೂ ಒಂದು ಸಾಕ್ಷಿಯಲ್ಲವೆ, ಸಾಕ್ಷಿ ಬೇಕಾಗಿದ್ದರೆ. ಅಂತೂ ಅದರಲ್ಲಿ ಭಾಗವಹಿಸಬೇಕೆಂದು ನನಗೊಂದು ಆಹ್ವಾನ ಬಂತು. ಸಹೃದಯ ಗೋಷ್ಠಿಯ ಕೆಲಸದಲ್ಲಿ ಆಗ ನನಗೆ ಉತ್ಸಾಹವಷ್ಟೇನೂ ಇರದಿದ್ದರೂ ಶ್ರೀಕಂಠಯ್ಯನವರ ಪರಿಚಯಕ್ಕೆ ಸಿಕ್ಕಿರುವ ಈ ಅವಕಾಶವನ್ನು ಬಿಡಬಾರದೆಂದು ಕೂಡಲೆ ಒಪ್ಪಿಕೊಂಡೆ. ಈ ಬಯಕೆಗೆ ಕಾರಣ ಕೆಲವರಿಗೆ ವಿಚಿತ್ರವಾಗಿ ತೋರಬಹುದು. ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ ಬರೆದಿದ್ದ ಅವರ ಕನ್ನಡ ವ್ಯಾಕರಣ ನನಗೆ ಮನಮೋಹಕವಾಗಿ ಕಂಡಿತ್ತು; ಬರಡು ವ್ಯಾಕರಣ ಸೂತ್ರಗಳಿಗೆ ಅವರು ಕೊಟ್ಟಿರುವ ಉದಾಹರಣೆಗಳೊಂದೊಂದರಲ್ಲಿಯೂ ಮಿಂಚುವ ನವಿರು ಹಾಸ್ಯ, ಒಂದೊಂದರದೂ ಔಚಿತ್ಯ, ಒಂದೊಂದರಿಂದಲೂ ಹೊರಹೊಮ್ಮುವ ರಸಿಕತೆ ಇವನ್ನು ಇನ್ನಾವ ವ್ಯಾಕರಣ ಪುಸ್ತಕದಲ್ಲಿಯೂ ಅದು ಇಂಗ್ಲಿಷಿನದಾಗಲಿ, ಕನ್ನಡದ್ದಾಗಲಿ ಯಾವುದರಲ್ಲಿಯೂ – ನಾನು ನೋಡಿಲ್ಲ. ಇಂಥ ರಸಿಕರನ್ನು ನೋಡಬೇಕೆಂದು ತವಕಿಸುತ್ತಿದ್ದೆ.

ಮೊದಲ ಪರಿಚಯವಾದ ಮೇಲೆ ನಮ್ಮ ಗೆಳೆತನ ಬಹುಬೇಗ ಬೆಳೆಯುತ್ತ ಬಂದಿತು. ನನ್ನ ಸ್ನೇಹಿತರಲ್ಲಿ ಇನ್ನೊಬ್ಬರನ್ನು ಬಿಟ್ಟರೆ ನನಗೆ ಇನ್ನಾರೊಂದಿಗೂ ಮೈತ್ರಿ ಇಷ್ಟು ಬೇಗ

ಬೆಳೆದು ಬಂದಿಲ್ಲ. ಅದಿರಲಿ, ನನಗೇನೋ ರಸಿಕ ವೈಯಾಕರಣರನ್ನು ನೋಡಬೇಕೆಂದಿದ್ದ ನನ್ನ ಕುತೂಹಲ ಸಹಜವಾದದ್ದಾಗಿದ್ದರೂ ಸಾಹಿತಿ ಶ್ರೀಕಂಠಯ್ಯನವರು ಸಹೃದಯ ಗೋಷ್ಠಿಗೆ ಸಾಹಿತಿಯಲ್ಲದ, ಪರಿಚಿತನಲ್ಲದ ನನ್ನನ್ನೇಕೆ ಕರೆಯಲಿಚ್ಛಿಸಿದರೆಂಬುದರ ಅರ್ಥ ನನಗೆ ಸಮಸ್ಯೆಯಾಗಿತ್ತು. ಕೆಲವು ತಿಂಗಳಾದ ಮೇಲೆ, ಅವರೊಂದಿಗೆ ಮುಚ್ಚುಮರೆಯಿಲ್ಲದೆ ಮಾತನಾಡುವುದು ಅಭ್ಯಾಸವಾಗಿಬಿಟ್ಟ ಮೇಲೆ, ನಾನು ಈ ಪ್ರಶ್ನೆಯನ್ನು ಅವರಿಗೇ ಹಾಕಿದೆ. ಅವರ ಉತ್ತರ ನನಗೆ ಸೋಜಿಗವಾಗಿ ಕಂಡಿತು. ಅವರು ಪ್ರಬುದ್ಧ ಕರ್ಣಾಟಕದಲ್ಲಿ ಆಗತಾನೇ ಅಚ್ಚಾಗಿದ್ದ ನನ್ನ 'ರೇಡಾರ್' ಲೇಖನವನ್ನೋದಿದ್ದರಂತೆ, ಅದನ್ನು ಬರೆದ ವ್ಯಕ್ತಿಯನ್ನು ನೋಡಬೇಕೆಂದಿನಿಸಿತ್ತಂತೆ. ಆಗ ಮಾಧ್ಯಮಿಕ ವ್ಯಾಕರಣದ ನನ್ನ ವ್ಯಾಮೋಹವನ್ನವರಿಗೆ ನಾನು ತಿಳಿಸಿದೆ.

ಈ ವ್ಯಾಕರಣ ಪ್ರಸಂಗದಿಂದ ನಮ್ಮ ಸರ್ಕಾರ, ನಮ್ಮ ವಿದ್ಯಾಖಾತೆಯವರು ಕಲಿಯಬೇಕಾದ ಪಾಠ ಬಹುಮುಖ್ಯವಾದದ್ದೆಂದು ನನಗೆ ತೋರುತ್ತದೆ. ಆದ್ದರಿಂದ ಕೆಲವರಿಗೆ ಇಲ್ಲಿ ಅದು ಅಪ್ರಕೃತವೆಂದು ಕಂಡುಬಂದರೂ, ನಾನದನ್ನು ಬಿಚ್ಚಿ ಹೇಳಲು ಹಿಂಜರಿಯಲಾರೆ. ಘನ ಸರ್ಕಾರದವರು ಶ್ರೀಕಂಠಯ್ಯನವರಿಗೆ ಈ ಪುಸ್ತಕಕ್ಕಾಗಿ ಅರ್ಪಿಸಿದ ಪ್ರತಿಫಲ ಎರಡು ಮೂರು ನೂರು ರೂಪಾಯಿಗಳೊಳಗೆಂದು ತಿಳಿದುಬಂದಿದೆ. ಅದೂ ಅದರ ಹಲವು ಮುದ್ರಣಗಳಿಂದ ಅರ್ಧ ಲಕ್ಷಕ್ಕಿಂತ ಹೆಚ್ಚು ಪ್ರತಿಗಳನ್ನು ಮಾರಾಟ ಮಾಡಿದ್ದರೂ ಕೂಡ. ಇಷ್ಟರ ಜೊತೆಗೆ, ಆ ಪುನರ್ಮುದ್ರಣಗಳಾದಾಗ "ಪುನರ್ಮುದ್ರಣವಾಗಬೇಕಾಗಿದೆ. ತಿದ್ದುಪಡಿಗಳ ಅವಶ್ಯವಿದೆಯೇ" ಎಂದು ಅವರನ್ನು ಒಂದು ಮಾತು ಕೇಳುವ ಸೌಜನ್ಯವೂ ಅಧಿಕಾರಿಗಳಿಗೆ ತೋಚಲಿಲ್ಲ. ಪ್ರಶಂಸೆಯ ಒಂದು ವಾಕ್ಯವನ್ನೂ ಅವರಿಗೆ ಬರೆಯುವ ಅವಶ್ಯ ಕಾಣಲಿಲ್ಲ. ಅವರಿಂದ ಯಾವ ಒಪ್ಪಂದಕ್ಕಾಗಲಿ ಸರ್ಕಾರ ಸಹಿ ಹಾಕಿಸಿಕೊಂಡಿರಲಿ, ಅವರು ಅಂಥ ಒಪ್ಪಂದದ ಪುನರ್ವಿಮರ್ಶನೆಗೆ ಅರ್ಜಿ ಗುಜರಾಯಿಸಿಕೊಳ್ಳದಿದ್ದರೂ ಸರಿ, ಈ ವರ್ತನೆ ಅಕ್ಷಮ್ಯ, ಇದು ಅನೀತಿಯ ಪರಮಾವಧಿ ಎಂದು ನನಗನ್ನಿಸುತ್ತದೆ. ಆಳುವ ಅಧಿಕಾರಿಗಳು ಇಂಥ ಅನೀತಿಗಳಿಗೆ ಮೇಲ್ಪಂಕ್ತಿ ಹಾಕಿಕೊಡುತ್ತಿರುವಾಗ ಜನಸಾಮಾನ್ಯರಿಂದ, ವರ್ತಕವರ್ಗದಿಂದ ನಾವು ಹೆಚ್ಚಿನದನ್ನು ನಿರೀಕ್ಷಿಸುವುದಾದರೂ ಹೇಗೆ?

ವಿದ್ವತ್ತಿಗೆ ಹೆಸರಾಗಿದ್ದ, ಸ್ನಾತಕ–ಸ್ನಾತಕೋತ್ತರ ತರಗತಿಗಳಿಗೆ ಶಿಕ್ಷಕರಾಗಿದ್ದ, ಪ್ರತಿಭಾವಂತ ಶ್ರೀಕಂಠಯ್ಯನವರು ಪ್ರೇಮದಿಂದ ಮಕ್ಕಳ ವ್ಯಾಕರಣವನ್ನು ರಚಿಸಿದ್ದರ ಪರಿಣಾಮ ನನ್ನ ಬಾಹ್ಯಪ್ರಜ್ಞೆಗೆ ಅರಿವಿಲ್ಲದೆಯೆ ನನ್ನ ಮನಸ್ಸಿನಲ್ಲಿ ಮನೆಮಾಡಿಕೊಂಡಿದ್ದಿತೆಂದು ಕಾಣುತ್ತದೆ. ಏಕೆಂದರೆ ಹದಿನೈದಿಪ್ಪತ್ತು ವರ್ಷಗಳಾದ ಮೇಲೆ ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ಸಾಮಾನ್ಯ ವಿಜ್ಞಾನವನ್ನು ಕುರಿತ ಒಂದೆರಡು ಪುಸ್ತಕಗಳನ್ನು ಬರೆಯುವಂತೆ ಇವರ ಕೃತಿ ನನ್ನನ್ನು ಪ್ರೇರೇಪಿಸಿತು. ಸತ್ಸಹವಾಸದಿಂದ ಲಭಿಸುವ ಪರಿಣಾಮಗಳಿಗೆ ಇದೊಂದು ದೃಷ್ಟಾಂತವೆಂದು ನನ್ನೆಣಿಕೆ.

ವ್ಯಾಕರಣವನ್ನು ರಸಭರಿತವನ್ನಾಗಿ ಮಾಡಬಹುದೆಂದು ಸಾಧಿಸಿರುವ ಇವರ ಲೇಖನಗಳು ಇನ್ನೂ ಎಷ್ಟೋ ಇವೆ, ಅವುಗಳಲ್ಲಿ ನಾನೆಂದಿಗೂ ಮರೆಯಲಾರದ ಎರಡು "ಏನಿ–ಗಡಿಂ–

ರೀ" ಮತ್ತು "ಎನಿತ್ತೆನಿತ್ತಂಬುಜಪತ್ರನೇತ್ರೆಯಾ...." ಶ್ರೀಕಂಠಯ್ಯನವರೊಂದಿಗೆ, ಅವರ ಮನೆಯಲ್ಲಿ, ನಮ್ಮ ಮನೆಯಲ್ಲಿ ಎಷ್ಟೋ ಸಲ ನಾನು ಈ ಲೇಖನಗಳ ರಸವನ್ನು ಚಪ್ಪರಿಸಿದ್ದೇನೆ.

ಶ್ರೀಕಂಠಯ್ಯನವರು "ಗುರುಸ್ಮರಣೆ" ಎಂಬ ಪ್ರಬಂಧದಲ್ಲಿ ಅವರ ಗುರುಗಳು ಬಿ.ಎಂ. ಶ್ರೀಕಂಠಯ್ಯನವರನ್ನು ಕುರಿತು ಹೀಗೆ ಬರೆದಿದ್ದಾರೆ, "ಶ್ರೀಕಂಠಯ್ಯನವರ ಇಂಗ್ಲಿಷ್ ಪಾಂಡಿತ್ಯವನ್ನು ಅನೇಕರು ಬಲ್ಲರು, ಆದರೆ ಅವರ ಕನ್ನಡ ಪಾಂಡಿತ್ಯ ಎಷ್ಟು ಆಳವಾಗಿತ್ತೆಂಬುದನ್ನು ತಿಳಿಯುವ ಅವಕಾಶ ದೊರೆತದ್ದು ಕನ್ನಡ ಎಂ.ಎ. ತರಗತಿಯ ಶಿಷ್ಯರಿಗೆ ಮಾತ್ರ." ಇದನ್ನು ಸ್ವಲ್ಪ ಬದಲಾಯಿಸಿ "ಶ್ರೀಕಂಠಯ್ಯನವರ ಕನ್ನಡ ಪಾಂಡಿತ್ಯವನ್ನು ಅನೇಕರು ಬಲ್ಲರು. ಆದರೆ ಅವರ ಇಂಗ್ಲಿಷ್ ಪಾಂಡಿತ್ಯ ಎಷ್ಟು ಆಳವಾಗಿತ್ತೆಂಬುದನ್ನು ತಿಳಿಯುವ ಅವಕಾಶ ದೊರೆತದ್ದು ಬೆಂಗಳೂರಿನ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್‌ನ ಡಿಪ್ಲೋಮಾ ಆಫ್ ಮೆಡಿಕಲ್ ಸೈಕಾಲಜಿ ಮತ್ತು ಡಿಪ್ಲೋಮಾ ಆಫ್ ಸೈಕಾಲಜಿಕಲ್ ಮೆಡಿಸಿನ್ ತರಗತಿಗಳ ಶಿಷ್ಯರಿಗೆ ಮಾತ್ರ" ಎಂದು ತಿದ್ದಿದರೆ ಅದು ಅಕ್ಷರಶಃ ತೀ.ನಂ.ಶ್ರೀ. ಅವರಿಗೆ ಒಪ್ಪುತ್ತದೆ. ಇನ್‌ಸ್ಟಿಟ್ಯೂಟ್ "ಸೆಮಾಂಟಿಕ್ಸ್ ಅಂಡ್ ಸೈಕಾಲಜಿ"ಯನ್ನು ಕುರಿತು ದಿನಕ್ಕೊಂದು ಗಂಟೆಯಂತೆ ಹತ್ತು ದಿನಗಳು ಪ್ರವಚನ ನಡೆಸಿಕೊಡಬೇಕೆಂದು ಇವರಿಗಿತ್ತ ಆಹ್ವಾನವನ್ನು ಮನ್ನಿಸಿ ತೀ.ನಂ.ಶ್ರೀ. ಯವರು ಅವರಿಗೆ ಸಹಜವಾದ ನಿರರ್ಗಳ ಆದರೂ ಅವಸರ ತೋರದ, ಅಧಿಕೃತ ಆದರೂ ಸಲಿಗೆಯಿಂದ ಕೂಡಿದ, ಗಂಭೀರವಾದರೂ ಹಗುರವಾಗಿ ಕಾಣುವ ಶೈಲಿಯಿಂದ ವಿದ್ಯಾರ್ಥಿ ವೃಂದದ ಮನ ತಣಿಸಿದರು. ವಿಷಯ ಪ್ರತಿಪಾದನೆಗೆ, ಪ್ರಮೇಯಗಳ ಸಮರ್ಥನೆಗೆ ಅವರು ಕನ್ನಡ, ಸಂಸ್ಕೃತ ಸಾಹಿತ್ಯ ಪುರಾಣಗಳಿಂದ ಉದಾಹರಣೆಗಳನ್ನು ಎಷ್ಟು ಲೀಲಾಜಾಲವಾಗಿ ಆರಿಸಿಕೊಳ್ಳುತ್ತಿದ್ದರೋ ಅಷ್ಟೇ ಲೀಲಾಜಾಲವಾಗಿ ಇಂಗ್ಲಿಷ್, ಗ್ರೀಕ್ ಸಾಹಿತ್ಯ ಪುರಾಣಗಳಿಂದಲೂ ಆರಿಸಿ ನಮ್ಮ ಮುಂದಿಡುತ್ತಿದ್ದರು. ಡಿ.ಎಂ.ಪಿ ಅಥವಾ ಡಿ.ಪಿ.ಎಂ. ತರಗತಿಗೆ ಸೇರಿರದಿದ್ದರೂ ತೀ.ನಂ.ಶ್ರೀ.ಯವರ ಉಪನ್ಯಾಸ ದಶಕವನ್ನು ತಪ್ಪದೆ ಕೇಳಿದವರಿಬ್ಬರಿದ್ದೆವು. ನಾನೂ ಇನ್‌ಸ್ಟಿಟ್ಯೂಟಿನ ಡೈರೆಕ್ಟರಾಗಿದ್ದ ದಿವಂಗತ ಎಂ.ವಿ. ಗೋವಿಂದಸ್ವಾಮಿಯವರು. ಅವನ್ನೆಲ್ಲ ಒಟ್ಟುಗೂಡಿಸಿ ಮುದ್ರಿಸಬೇಕೆಂಬ ಅಭಿಲಾಷೆ ಡೈರೆಕ್ಟರಿಗಿತ್ತು, ಅನೇಕ ಕಾರಣಗಳಿಂದ ಅದು ಕೈಗೂಡಲಿಲ್ಲ.

ಶ್ರೀಕಂಠಯ್ಯನವರದು ಒಂದು ಅಸಾಧಾರಣ ರೀತಿಯ ಸಂಕೋಚ ಪ್ರವೃತ್ತಿ. ಅವರ ಆಪ್ತ ಸ್ನೇಹಿತರಲ್ಲಿ ಅವರಿಟ್ಟಿದ್ದ ವಾತ್ಸಲ್ಯ ಪ್ರೇಮಗಳಿಗೆ ಮಾತುಗಳ ಉಡಿಗೆ ತೊಡಿಸುವುದು ಈ ಅಪ್ರತಿಮ ಭಾಷಾ ವಿಜ್ಞಾನಿಗೆ ತುಂಬ ಕಷ್ಟವಾಗುತ್ತಿತ್ತು. ನಾನೊಂದು ಸಲ ಮೈಸೂರಿನಲ್ಲಿ ಅವರ ಮನೆಗೆ ಹೋಗಿದ್ದಾಗ ನನ್ನನ್ನು ಪಕ್ಕದ ಮಂಚದ ಮೇಲೆ ಕೂಡಿಸಿಕೊಂಡು ನನ್ನ ತೊಡೆಯ ಮೇಲೆ ಕೈಯಿಟ್ಟು ಅರ್ಧ ನಡುಗುವ ಧ್ವನಿಯಿಂದ ಹೇಳಿದರು, "ಮೊನ್ನೆ ಎಂಥ ಅನಾಹುತವಾಗಿ ಹೋಗುತ್ತಿತ್ತು ಗೊತ್ತೇ ನರಸಿಂಹಯ್ಯ, ನನ್ನ ಹೆಂಡತಿ ಮಕ್ಕಳು ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್ ನೋಡೋಕೆ ಹೋಗಿದ್ದರು. ಅಲ್ಲಿನ ಡೀಪ್ ಫ್ರೀಝ್ ರೂಮಿನಲ್ಲಿದ್ದಾಗ ಜೊತೇಲಿ ಎಲ್ಲ ವಿವರಿಸಿ ಹೇಳುತ್ತಿದ್ದ ಆಫೀಸರ್ – ಆತ ನನ್ನ ಸ್ನೇಹಿತ – ಏನೋ ಕೆಲಸದ ಮೇಲೆ ಸ್ವಲ್ಪ ಹೊರಗೆ ಹೊರಟ. ಬಾಗಿಲಲ್ಲಿ ನಿಂತಿದ್ದ ಅಟೆಂಡರ್ ಅವರು

ಹೊರಟಿದ್ದು ನೋಡಿ ಒಳಗೆ ಯಾರೂ ಇಲ್ಲ ಅಂದುಕೊಂಡು ಬಾಗಿಲು ಹಾಕಿಕೊಂಡು ಹೊರಟುಬಿಟ್ಟ. ಆಫೀಸರ್ ಕೆಲಸದ ಅವಸರದಲ್ಲಿ ಒಳಗಿದ್ದವರನ್ನು ಮರೆತುಬಿಟ್ಟ, ಸರಿ ನನ್ನ ಹೆಂಡತಿ ಮಕ್ಕಳು ಕಾದು ನೋಡಿದರು. ಮೈ ಕೈ ಕಾಲುಗಳ ಕೊರೆತ ಆರಂಭವಾಯಿತು, ಯಾರೂ ಬರಲಿಲ್ಲ, ಕೂಗಿ ಕಿರುಚಿಕೊಂಡರೂ ಬಾಗಿಲನ್ನೆಷ್ಟು ಚಚ್ಚಿ ಹೊಡೆದರೂ, ಆ ಸೌಂಡ್ ಪ್ರೂಫ್ ರೂಮಿನಿಂದ ಸದ್ದು ಹೊರಗೆ ಹೋಗೋದಿಲ್ಲಾಂತ ಅವರಿಗೆ ಗೊತ್ತು. ಸಾಯುವುದಕ್ಕೆ ಸಿದ್ಧರಾದರು ಅಂತ ಕಾಣುತ್ತೆ. ಅಷ್ಟು ಹೊತ್ತಿಗೆ ಆಫೀಸರ್‌ಗೆ ನನ್ನ ಪುಣ್ಯದಿಂದ ಇವರ ನೆನಪಾಯಿತು. ಹೋಗಿ ಬಾಗಿಲು ತೆರೆದ. ಆತನೇ ಹೇಳಿದ, ಇನ್ನೆರಡು ನಿಮಿಷ ತಡವಾಗಿದ್ದರೆ ಎಲ್ಲ ಮುಗಿದುಬಿಡುತ್ತಿತ್ತು ಅಂತ. ಹೆಂಡತಿ ಮಕ್ಕಳು ಹೋದ ಮೇಲೆ ನಾನು ಏಕೆ, ಹೇಗೆ ಬದುಕಬೇಕು, ಯಾರಿಗಾಗಿ ಬದುಕಬೇಕು ನರಸಿಂಹಯ್ಯ?" ಎಂದುಸಿರಿ ಸುಮ್ಮನಾದರು. ಅವರ ಮುಖಭಾವವನ್ನು, ಧ್ವನಿ ಮಾರ್ದವತೆಯನ್ನು ನಾನು ವರ್ಣಿಸಲಾರೆ, ನನ್ನ ತೊಡೆಯ ಮೇಲಿದ್ದ ಅವರ ಕೈ ಬೆವರಿತ್ತು.

ಸಿದ್ಧವಾಗಿದ್ದರೂ ಪ್ರಕಟವಾಗದಿರುವ ಶ್ರೀಕಂಠಯ್ಯನವರ ಹಲವು ಕೃತಿಗಳಲ್ಲಿ "ಬಿಡಿಮುತ್ತು" ಗಳು ನನಗೆ ತುಂಬ ಮೆಚ್ಚುಗೆಯದು. ಅದರ ಮುತ್ತುಗಳಲ್ಲಿ ಅಲ್ಲೊಂದು ಇಲ್ಲೊಂದನ್ನು ನಾನು ಅವರ ಬಾಯಿಂದಲೇ ಕೇಳಿ ಆನಂದಿಸಿರುವುದೇ ಇದಕ್ಕೆ ಮುಖ್ಯ ಕಾರಣ. ಇದು ಸಿದ್ಧವಾಗಿ ಹತ್ತು ಹದಿನೈದು ವರ್ಷಗಳು ಕಳೆದಿದ್ದರೂ ಇದಕ್ಕೆ ತಕ್ಕ ಮುನ್ನುಡಿ ತಾನು ಬರೆದುಕೊಟ್ಟ ಮೇಲೇ ಇದು ಹೊರಬೀಳಬೇಕೆಂಬುದು ತೀ.ನಂ.ಶ್ರೀ.ಯವರ ಭಾನಸವಾಗಿತ್ತು. ಲೆಕ್ಕವಿಲ್ಲದಷ್ಟು ಸಲ ನಾನವರನ್ನು ಮುನ್ನುಡಿ ಬರೆದು ಪ್ರಕಟಣೆಗೆ ಅನುಮತಿ ಕೊಡಿ ಎಂದು ಕೇಳಿಕೊಂಡಿದ್ದೇನೆ, ಸಿಟ್ಟು ಮಾಡಿಕೊಂಡದ್ದೂ ಆಗಿದೆ. ಇಲ್ಲಿ ಇದನ್ನು ಹೇಳುತ್ತಿರುವ ಉದ್ದೇಶವಿಷ್ಟೆ; ಈಗಲಾದರೂ 'ಬಿಡಿಮುತ್ತು'ಗಳನ್ನು ತೀ.ನಂ.ಶ್ರೀ.ಯವರಿಗಿಂತ ವಯಸ್ಸಿನಲ್ಲಿ ಹಿರಿಯರಾಗಿ ಉಳಿದುಕೊಂಡಿರುವವರೂ ಓದಿ ಆನಂದ ಪಡುವುದಕ್ಕೆ ಸಾಧ್ಯವಾಗುವಷ್ಟು ಶೀಘ್ರವಾಗಿ ಪ್ರಕಟಿಸುವ ಕೆಲಸಕ್ಕೆ ಪರಿಷತ್ತು ಕೈ ಹಾಕಲಿ ಎಂದು.

ಈ ಲೇಖನ ನಾನೆಂದುಕೊಂಡದ್ದಕ್ಕಿಂತ ಉದ್ದವಾಗಿ ಬೆಳೆದಿದೆ. ಆದ್ದರಿಂದ ಹೇಳಬೇಕಾದದ್ದು ಇನ್ನೂ ಸ್ವಲ್ಪವಿದ್ದರೂ ಇದನ್ನು ಶ್ರೀಕಂಠಯ್ಯನವರದೇ ಆದ ಮೂರು ವಾಕ್ಯಗಳಿಂದ ಮುಗಿಸುತ್ತೇನೆ. ವಾಕ್ಯಗಳನ್ನು ಅವರ 'ನಂಟರು' ಸಂಕಲನದ ಅರಿಕೆಯಿಂದ ಎತ್ತಿಕೊಂಡಿದ್ದೇನೆ.

"ಪ್ರಬಂಧಕಾರನ ಬರಹದಲ್ಲಿ 'ನಾನು' ಎಂಬ ಮಾತು ಮತ್ತೆ ಮತ್ತೆ ಬರುತ್ತದೆ. ಅದು 'ಅಹಂಕಾರ'ದ ಉಕ್ತಿಯೆಂದು ಯಾರೂ ಭಾವಿಸಬಾರದು; ಅದು ಕೇವಲ ಆತ್ಮೀಯತೆಯನ್ನು ಗಳಿಸುವ ಸಾಧನ. ಅದನ್ನು ಸಂಕೋಚವಿಲ್ಲದೆ ಉಪಯೋಗಿಸಲು ಲೇಖಕನು ಹೆದರಿದರೆ ಕೆಲಸ ಕೆಡುತ್ತದೆ."

ವಿದ್ವನ್ಮಣಿ ತೀ.ನಂ.ಶ್ರೀ. ಅವರು

ಎಂ. ಮರಿಯಪ್ಪ ಭಟ್ಟ

ತೀ.ನಂ.ಶ್ರೀಕಂಠಯ್ಯನವರು ೭–೯–೬೬ರಂದು ನಮ್ಮನ್ನಗಲಿದರು. ಯಾವ ಮುನ್ಸೂಚನೆಯು ಇಲ್ಲದೆ ಈ ವಿದ್ಯಾಭಾಸ್ಕರ ಅಸ್ತಂಗತರಾದರು. ಆದರೆ ಅವರು ಇಲ್ಲಿ ಇನ್ನಿಲ್ಲ ಎಂಬುದು ನಮಗೆ ನಂಬಲಾರದ ಮಾತಾಗಿದೆ. ಅವರ ಎತ್ತರದ ನಿಲುವು, ಗಂಭೀರ ಮುಖಮುದ್ರೆ, ವಿಶಾಲವಾದ ಹಣೆ, ಟೊಮೆಟೊ ಕೆಂಪಗಿನ ಕಪೋಲಗಳು, ಬೇಕೊ ಬೇಡವೊ ಎಂಬ ನಸು ನಗೆ ಮತ್ತೆ ಮತ್ತೆ ಮುಂದೆ ಇಣುಕುತ್ತವೆ. ಕನ್ನಡಕೋಶ ಸಭೆಯಲ್ಲಿ ಅಧ್ಯಕ್ಷರಾಗಿ ಕುಳಿತುಕೊಂಡು ತಮ್ಮ ಅಮೂಲ್ಯವಾದ ವಿಚಾರ ಲಹರಿಯನ್ನು ಹರಿಸುತ್ತಿರುವಂತೆ ಭಾಸವಾಗುತ್ತದೆ.

ನನಗೆ ತೀ.ನಂ.ಶ್ರೀ.ಯವರು ಕೆಲವು ವರ್ಷಗಳಿಂದ ಗೊತ್ತಿದ್ದರೂ ಅವರನ್ನು ಸಮೀಪದಿಂದ ಕಂಡುಕೊಳ್ಳುತ್ತಾ ಬಂದದ್ದು ೧೯೫೬ರಿಂದ. ಅವರು ಅಮೇರಿಕದ ಪ್ರವಾಸ ಮುಗಿಸಿ ಭಾರತಕ್ಕೆ ಹಿಂತೆರಳುವಾಗ ೧೯೫೬ರ ಮಾರ್ಚಿಯಲ್ಲಿ ಲಂಡನಿಗೆ ಬಂದರು. ಆಗ ನಾನಲ್ಲಿದ್ದೆ. ಕನ್ನಡಿಗ ಮಿತ್ರನೊಬ್ಬನನ್ನು ಅಲ್ಲಿ ಸಂಧಿಸಿದಾಗ ಅವರಿಗೆ ಉಂಟಾದ ಆನಂದಪರವಶತೆ ಅಷ್ಟಿಷ್ಟಲ್ಲ. ಆತ್ಮೀಯತೆಯ ಕುಶಲ ಪ್ರಶ್ನೆಗಳಾದ ಮೇಲೆ ಲಂಡನಿನ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದೆವು. ಜತೆಯಲ್ಲಿ ಎರಡು ದಿನಗಳನ್ನು ಕಳೆದೆವು. ಲಂಡನಿನ ವಿಶ್ವವಿದ್ಯಾಲಯದ ಓರಿಯಂಟಲ್ ಮತ್ತು ಆಫ್ರಿಕನ್ ಸಂಸ್ಥೆಯಲ್ಲಿ ಭಾಷಾಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಫರ್ತ್ ಎಂಬ ಘನವಿದ್ವಾಂಸರಲ್ಲಿಗೆ ಹೋದೆವು. ಅಲ್ಲಿ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಕುರಿತು ವಿಚಾರ ವಿನಿಮಯವಾಯಿತು. ಫರ್ತ್ ಸಾಹೇಬರು ತೀ.ನಂ.ಶ್ರೀ.ಯವರ ಭಾಷಾಶಾಸ್ತ್ರ ಜ್ಞಾನವನ್ನು ಕೊಂಡಾಡಿದರು. ತದನಂತರ ಅವರು ಕೇಂಬ್ರಿಡ್ಜ್, ಆಕ್ಸ್‌ಫರ್ಡ್, ಎಡಿನ್‌ಬರೋ ಮೊದಲಾದ ವಿದ್ಯಾಕೇಂದ್ರಗಳನ್ನು ಸಂದರ್ಶಿಸಿ ಅಲ್ಲಲ್ಲಿನ ಭಾಷಾಶಾಸ್ತ್ರ ಪ್ರಾಧ್ಯಾಪಕರುಗಳನ್ನೂ ಭಾರತೀಯ ಮೀಮಾಂಸಕರನ್ನೂ (Indologists) ಭೆಟ್ಟಿಯಾಗಿ ಯೂರೋಪಿನಲ್ಲಿನ ಪ್ರಧಾನ ಕೇಂದ್ರಗಳಲ್ಲಿ ಸಂಚರಿಸಿ ಮನೆಗೆ ಬಂದರು.

ವಿದೇಶ ಸಂಚಾರದಿಂದ ಮರಳಿದವರು ಕೆಲವು ಸಮಯ ಕರ್ಣಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದು, ಮತ್ತೆ ಮೈಸೂರು ವಿಶ್ವವಿದ್ಯಾಲಯಕ್ಕೆ ಬಂದು ೧೯೬೨ರಲ್ಲಿ ನಿವೃತ್ತರಾಗುವ ತನಕ ಕನ್ನಡ ಶಾಖೆಯ ತಲೆಯವರಾಗಿ ದುಡಿದರು. ಅವರು 'ಉದ್ಯೋಗ'ದಿಂದ ನಿವೃತ್ತರಾದರೂ ಕೆಲಸದಿಂದ ನಿವೃತ್ತರಾಗಿರಲಿಲ್ಲ. ಕೊನೆಯ ಉಸಿರಿನವರೆಗೂ ಅವರು ದುಡಿದರು.

ದಿಲ್ಲಿಯ ಪಾರಿಭಾಷಿಕ ಶಬ್ದ ನಿರ್ಣಾಯಕ ಸಮಿತಿಯೊಂದರ ಸಭೆಗೆ ಹೋದವರು ಕಲ್ಕತ್ತದಲ್ಲಿ ತಮ್ಮ ಚಿರಂಜೀವಿಯ ಬಳಿಯಲ್ಲಿ ಸ್ವರ್ಗಸ್ಥರಾದರು.

ತೀ.ನಂ.ಶ್ರೀ.ಯವರು ಬೆಂಗಳೂರಿನಲ್ಲಿ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಸರಕಾರದ ಪೋಷಣೆಯಿಂದ ರಚಿತವಾಗಲಿರುವ ಕನ್ನಡ ನಿಘಂಟುವಿನ ಅಧ್ಯಕ್ಷರಾಗಿ ಅಮೂಲ್ಯ ಸೇವೆ ಸಲ್ಲಿಸಿರುವುದು ಸರ್ವವಿದಿತ. ನಿಘಂಟು ಕಾರ್ಯ ಪ್ರಾರಂಭವಾದಂದಿನಿಂದ ಆ ಮಹಾಕಾರ್ಯಕ್ಕೆ ಅವರ ಸಂಬಂಧ ನಿಕಟವಾಗಿತ್ತು. ಅದನ್ನು ಪ್ರಸ್ತುತದ ರೂಪಕ್ಕೆ ತರುವುದರಲ್ಲಿ ಅವರದೂ, ಅವರ ಮಿತ್ರರೂ, ಸಹೋದ್ಯೋಗಿಗಳೂ ಆಗಿರುವ ಪ್ರೊ॥ ಡಿ.ಎಲ್. ನರಸಿಂಹಾಚಾರ್ಯರದೂ ಪ್ರಮುಖ ಪಾತ್ರಗಳೆಂದರೆ ತಪ್ಪಾಗದು. ಅವರ ಆಳವಾದ ಅಭ್ಯಾಸ, ಅಗಾಧವಾದ ಭಾಷಾ ಪಾಂಡಿತ್ಯ, ಅನುಪಮ ಸಾಹಿತ್ಯ ಪರಿಚಯ, ವಿಶಿಷ್ಟವಾದ ಸಹೃದಯತೆ ಅವರ ನಿರ್ಣಯಗಳಿಗೆ ಒಂದು ಅಪೂರ್ವ ನಿಷ್ಪಕ್ಷತೆಯನ್ನು ಕೊಡುತ್ತಿದ್ದವು.

ತೀ.ನಂ.ಶ್ರೀ.ಯವರು ಅದೆಷ್ಟೊ ತಿಳಿದುಕೊಂಡಿದ್ದರು. ಅದೆಷ್ಟನ್ನೊ ಲೇಖಿಸಬೇಕೆಂಬುದಾಗಿ ಯೋಜನೆ ಮಾಡಿಕೊಂಡಿದ್ದರು. ಆದರೆ ಅವರ ದೃಷ್ಟಿ ಪರಿಪೂರ್ಣತೆಯ ಕಡೆಗೆ. ಒಂದು ಕೃತಿಯನ್ನು ಎಷ್ಟೆಷ್ಟು ತಿದ್ದಿ ಉತ್ತಮ ಪಡಿಸಿದರೂ ಅವರಿಗೆ ತೃಪ್ತಿಯಿಲ್ಲ. ಅವರ ಪ್ರಬಂಧ ಸಂಕಲನ (ಸಮಾಲೋಕನ)ದ 'ಅರಿಕೆ'ಯಲ್ಲಿ ಅವರೇ ಹೇಳಿದ ಮಾತನ್ನು ಇಲ್ಲಿ ಸ್ಮರಿಸಬಹುದು : "ಇಂಥ ಇನ್ನೂ ಕೆಲವು ಹಳೆಯ ಲೇಖನಗಳು ಇಲ್ಲಿ ನ್ಯಾಯವಾಗಿ ಸೇರಬೇಕಾಗಿತ್ತು. ಆದರೆ ಅವುಗಳಲ್ಲಿ ಹೆಚ್ಚಿನ ಮಾರ್ಪಾಡು ಆವಶ್ಯಕವೆಂದು ತೋರಿ, ಸದ್ಯಕ್ಕೆ ಅವನ್ನು ಕೈ ಬಿಡಲಾಯಿತು." ಹೀಗೆ ಕೃತಿಗಳನ್ನು ಉತ್ತಮಗೊಳಿಸಬೇಕೆಂಬ ಹಂಬಲದಿಂದ ಎಷ್ಟೋ ಲೇಖನಗಳನ್ನು ಅವರು ಕೈಬಿಟ್ಟರು; ಅವಿನ್ನು ನಮಗಿಲ್ಲವಾದುದು ಅತ್ಯಂತ ನಷ್ಟಕರವೆಂಬುದನ್ನು ಹೇಳಬೇಕೆ? 'ಶಬ್ದಮಣಿ ದರ್ಪಣ'ಕ್ಕೆ ಬಹಳ ಉಪಯುಕ್ತವಾದ ವ್ಯಾಖ್ಯಾನ ಒಂದನ್ನು ಬರೆಯುತ್ತಿದ್ದರು; ಅದು ಎಲ್ಲಿಯವರೆಗೆ ಪೂರ್ತಿಗೊಂಡಿತ್ತೊ ತಿಳಿಯದು. ಅದರಲ್ಲಿ ಅವರ ಮೂರು ನಾಲ್ಕು ದಶಕಗಳ ಆಳವಾದ ಅಭ್ಯಾಸ ಹಾಗೂ ಬೋಧನಾನುಭವಗಳ ಸಾರಸರ್ವಸ್ವವನ್ನು ಪಡೆಯಬಹುದಾಗಿತ್ತು; ಆಧುನಿಕ ಭಾಷಾ ವಿಜ್ಞಾನದ ದೃಷ್ಟಿಕೋನದಿಂದ ಅನೇಕ ಮಹತ್ವದ ವಿವರಣಾತ್ಮಕ ಅಂಶಗಳಿಗೆ ಬೆಳಕನ್ನು ಹರಿಸುತ್ತಿದ್ದರೊ ಏನೊ? ಇದೊಂದು ತುಂಬಲಾರದ ನಷ್ಟ.

ಅವರ 'ಭಾರತೀಯ ಕಾವ್ಯಮೀಮಾಂಸೆ'ಯಂಥ ಕೃತಿ ಕನ್ನಡದಲ್ಲಿ ಇನ್ನೊಂದಿಲ್ಲ. ಸಂಸ್ಕೃತ ಲಾಕ್ಷಣಿಕರನ್ನು ಆಳವಾಗಿ ಅಭ್ಯಾಸಮಾಡಿ ಅವರುಗಳ ಅಮೂಲ್ಯ ರತ್ನಗಳನ್ನು ಕನ್ನಡಕ್ಕೆ ತಮ್ಮದೇ ಆದ ಶೈಲಿಯಲ್ಲಿ ತಂದು ಕನ್ನಡದೇವಿಗೆ ತೊಡಿಸಿ ಅಲಂಕರಿಸಿದರು. ಅವರಿಗೆ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿದ್ದ ಅಭಿಜ್ಞತೆಯೂ ಈ ಮಹಾಕೃತಿಯ ವೈಭವಕ್ಕೆ ಮೆರುಗು ಕೊಟ್ಟಿರುತ್ತದೆ. 'ಕಾವ್ಯಸಮೀಕ್ಷೆ', 'ಸಮಾಲೋಕನ'ಗಳಲ್ಲಿ ಎಷ್ಟು ಉನ್ನತಮಟ್ಟದ ಸಾಹಿತ್ಯ ವಿಮರ್ಶೆಯನ್ನು ತೀ.ನಂ.ಶ್ರೀ.ಯವರು ಕನ್ನಡ ಸಾರಸ್ವತಲೋಕಕ್ಕೆ ದಯಪಾಲಿಸಿರುತ್ತಾರೆ! ಅವರ ಗುರುಗಳಾದ ಬಿ.ಎಂ.ಶ್ರೀ.ಯವರ 'ಇಂಗ್ಲಿಷ್ ಗೀತಗಳು' ಎಂಬ ಅಂದಿನ ಕ್ರಾಂತಿಕಾರಕ ಕವಿತಾ ಸಂಕಲನದ ಎರಡನೇ ಆವೃತ್ತಿಗೆ – ಅವರು ಬರೆದ ಸುದೀರ್ಘವಾದ ಮುನ್ನುಡಿ ಹೊಸ ಕವಿತೆಯ ಬೆಲೆವೆತ್ತ ಇತಿಹಾಸದಂತಿದೆ. ಪ್ರಾಯಶಃ ಬಿ.ಎಂ.ಶ್ರೀ.ಯವರಿಗೇ ಅದಕ್ಕೆ

ಮತ್ತೇನನ್ನೂ ಸೇರಿಸುವುದು ಸಾಧ್ಯವಿರುತ್ತಿರಲಿಲ್ಲ. ತೀ.ನಂ.ಶ್ರೀ.ಯವರು ಸಂಪಾದಿಸಿದ 'ಗದಾಯುದ್ಧ ಸಂಗ್ರಹ'ವು ಗ್ರಂಥ ಸಂಪಾದನೆಗೊಂದು ಆದರ್ಶ ಪ್ರಯೋಗ. ಅತಿ ಶಿಥಿಲವಾದ ಒಂದೇ ಒಂದು ಹಸ್ತ ಲಿಖಿತ ಮಾತೃಕೆಯಿಂದ ಶಾಸ್ತ್ರೀಯವಾಗಿ ಪಾಠಗಳ ಸ್ವೀಕಾರವನ್ನು ಮಾಡಿಕೊಂಡಿದ್ದಾರೆ. ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಿಗಳು ಅಮೂಲ್ಯವಾದ ರತ್ನಗಳು. ಈ ಗ್ರಂಥಕ್ಕೂ ಮತ್ತೊಂದು ವಿಶಿಷ್ಟವಾದ ಪೀಠಿಕೆ ಕೊಡಬೇಕೆಂದಿದ್ದುದು ಈಡೇರಲಿಲ್ಲ; ಇದು ಖೇದದ ವಿಷಯ.

ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಉತ್ತಮ ಲೇಖನಗಳನ್ನು ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಿಸಿ ದ್ರಾವಿಡ ಭಾಷಾಶಾಸ್ತ್ರ ವಿಜ್ಞಾನಿಗಳ ಪ್ರಶಂಸನೆಗೆ ಪಾತ್ರರಾಗಿದ್ದಾರೆ; ಅವಲ್ಲಿ ಕೆಲವು ಆ ಶಾಸ್ತ್ರಕ್ಕೆ ಹೊಸ ಕೊಡುಗೆಗಳು : ಇಲ್ಲಿಯೂ ಅವರಿಂದ ಒಂದು ಉದ್ಗ್ರಂಥವನ್ನು ಪಂಡಿತ ಲೋಕ ಎದುರು ನೋಡುತ್ತಿತ್ತು. ಆದರೆ ಅವರ ಶಿಷ್ಯರುಗಳಾದ ಡಾ॥ ಚಿದಾನಂದ ಮೂರ್ತಿಯವರ 'ಭಾಷಾಶಾಸ್ತ್ರದ ಮೂಲ ತತ್ವಗಳು' ಮತ್ತು ಹಂ.ಪ. ನಾಗರಾಜಯ್ಯನವರ 'ದ್ರಾವಿಡ ಭಾಷಾವಿಜ್ಞಾನ' ಅವರ ಸ್ಫೂರ್ತಿಯ ಕುಸುಮಗಳು. ಪೂನಾದ ಡೆಕ್ಕನ್ ಕಾಲೇಜು, ಲಿಂಗ್ವಿಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಮತ್ತು ಯು.ಜಿ.ಸಿ. ಅವರ ನೇತೃತ್ವಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ ನಿಯತವಾಗಿ ನಡೆದು ಬರುತ್ತಿದ್ದ ಭಾಷಾ ವಿಜ್ಞಾನದ ಬೇಸಿಗೆ ಶಿಬಿರಗಳಲ್ಲಿ ಓರ್ವ ಮಹೋಪಾಧ್ಯಾಯರಾಗಿ ಭಾರತದಲ್ಲೆಲ್ಲ ತಮ್ಮ ವಿದ್ವತ್ತಿನ ವರ್ಚಸ್ಸನ್ನು ಬೀರಿದರು.

'ಭಾರತ ಸಂವಿಧಾನ'ವನ್ನು ಕನ್ನಡಕ್ಕೆ ಇಳಿಸಿದರು. ವಿಶ್ವವಿದ್ಯಾನಿಲಯಗಳಾಗಲೀ, ಸ್ಥಳೀಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ – ಭಾಷಾಶಾಸ್ತ್ರ ಮತ್ತು ಕನ್ನಡ ಎಂದರೆ – ಆಚಾರ್ಯ ತೀ.ನಂ.ಶ್ರೀ.ಯವರ ಸಲಹೆಯನ್ನು ಬೇಡುತ್ತಿದ್ದವು. ಸಂಬಂಧಪಟ್ಟ ಸಮಿತಿಗಳಲ್ಲಿ ಅವರ ಮಾರ್ಗದರ್ಶನವು ಫಲಪ್ರದವಾಗಿತ್ತು. ಅಣ್ಣಾಮಲೆ ವಿಶ್ವವಿದ್ಯಾಲಯದಲ್ಲಿ ದಕ್ಷಿಣ ಭಾರತಕ್ಕೆ ಮೀಸಲಾದ "ಅಡ್ವಾನ್ಸ್‌ಡ್ ಸೆಂಟರ್ ಫಾರ್ ಲಿಂಗ್ವಿಸ್ಟಿಕ್ಸ್" ಎಂಬ ಪ್ರಮುಖ ಭಾಷಾ ವಿಜ್ಞಾನ ಶಾಖೆಯನ್ನು ಸ್ಥಾಪಿಸುವಲ್ಲಿ ತೀ.ನಂ.ಶ್ರೀ.ಯವರು ನೀಡಿದ ಸಲಹೆಗಳನ್ನು ಅಧಿಕಾರಿಗಳು ಕೃತಜ್ಞತೆಯಿಂದ ನೆನೆಯುತ್ತಾರೆ.

ಕನ್ನಡ ನಿಘಂಟುವಿಗಾಗಿ ಕಳೆದ ಹತ್ತು ವರ್ಷಗಳಿಂದ ತೀ.ನಂ.ಶ್ರೀ.ಯವರ ದುಡಿಮೆ ಅಪರಿಮಿತವಾಗಿತ್ತು. ಎಚ್ಚರವಾದಾಗ ಎಲ್ಲ ಅದೇ ವಿಚಾರ; ನಿದ್ದೆಯಲ್ಲೂ ಅದನ್ನೇ ಕನವರಿಸುತ್ತಿದ್ದರೊ ಏನೋ. ಅದೇ ಅವರ ದೀಕ್ಷೆಯಾಗಿ ಹೋಯಿತು; ಈ ಮಹಾಕೃತಿ ಲೋಪದೋಷಗಳಿಲ್ಲದೆ, ನ್ಯೂನಾತಿರೇಕಗಳಿಲ್ಲದೆ ಪ್ರಮಾಣಕೋಶವಾಗಬೇಕೆಂಬುದಾಗಿ ಅನವರತ ಸಹೋದ್ಯೋಗಗಳೊಡನೆ ತೊಳಲಿ ಬಳಲುತ್ತಿದ್ದರು. ಈ ದೀಕ್ಷೆಯಿಂದಲೇ ಇರಬೇಕು, ಅವರ ಸಮಯ ಅವರ ಇತರ ಸ್ವಂತ ಕೃತಿರಚನೆಗೆ ಕೊನೆಕೊನೆಗೆ ದೊರೆಯದೆ ಹೋಯಿತು. ಇನ್ನು ಈ ಬೃಹತ್ಕೋಶವನ್ನು ಸಮರ್ಪಕವಾಗಿ ತ್ವರೆಯಿಂದ ಪೂರೈಸುವುದು ನಾವು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿ.

ಇವೆಲ್ಲ ಅವರ ವಿದ್ವತ್ತು ಪ್ರತಿಭೆಗಳ ವಿಚಾರವಾದರೆ, ಅವರ ಜೀವನವೂ ಅಷ್ಟೇ ಗಂಭೀರವಾದ ಪಾಠವಾಗಿದೆ. ಎಂದೂ ಶಿಸ್ತನ್ನು ಬಿಟ್ಟು ಇದ್ದವರಲ್ಲ; ನಿತ್ಯಜೀವನವೇ ಶಿಸ್ತಿನಿಂದ ಕೂಡಿದುದು;

ಬೆಳಗ್ಗೆ ಎದ್ದಲ್ಲಿಂದ ರಾತ್ರಿ ನಿದ್ದೆಯ ತನಕವೂ ಅದೊಂದು ವೇಳಾಪಟ್ಟಿಯ ಪ್ರಕಾರ ಕಾರ್ಯಕ್ರಮವನ್ನು ಪೂರೈಸುತ್ತಿದ್ದರು; ತುಂಬ ಓದುವವರು; ಕಂಡ ಉತ್ತಮ ಗ್ರಂಥಗಳನ್ನು ಕೊಂಡುಕೊಳ್ಳುವವರು; ಅವರ ಸ್ವಂತ ಗ್ರಂಥ ಭಂಡಾರ ಬಹಳ ಬೆಲೆಯುಳ್ಳುದು. ಅದನ್ನು ಅಡಕಿಲಾಗಿ ಇಟ್ಟಿರುವ ಕ್ರಮ – ಅವರ ಅಭ್ಯಾಸಕ್ಕಾಗಿರುವ ಕೋಣೆ, – ಅಲ್ಲಿನ ಸೌಕರ್ಯ – ಅಚ್ಚುಕಟ್ಟಾದ ವ್ಯವಸ್ಥೆ – ಲೇಖನಕ್ಕೆ ಬೇಕಾದ ಉಪಕರಣಗಳು – ವಿವಿಧ ವರ್ಣದ 'ಇಂಕ್ ಪೆನ್ಸಿಲು'ಗಳು ಸಮೇತವಾಗಿ – ತರತರದ ಬರೆಯುವ ಕಾಗದಗಳು – ಇತ್ಯಾದಿ ಚೊಕ್ಕಟವಾದ ಬಾಹ್ಯ ಸನ್ನಿವೇಶ ರಚನೆ ಅವರ ಆಂತರಿಕ ಕ್ರಮಬದ್ಧತೆಯನ್ನು ಒಂದಿಷ್ಟಾದರೂ ಪ್ರತಿಫಲಸದೆ ಇರದು. ಅವರು ಮನೆಯಿಂದ ಪ್ರವಾಸಕ್ಕೆ ಹೊರಡುವುದಾದರೂ ಅಷ್ಟೆ; ಮರಳಿ ಬರುವತನಕ ಬೇಕಾಗುವ ಬಟ್ಟೆಬರೆಗಳಲ್ಲದೆ, ಮನೆಯಲ್ಲಿ ಸ್ವಂತಕ್ಕಾಗಿ ಬಳಸುವ ಇತರ ಸಣ್ಣ ಪುಟ್ಟ ವಸ್ತುಗಳನ್ನು ಏನೊಂದನ್ನೂ ಬಿಡದೆ ತಮ್ಮ ಪೆಟ್ಟಿಗೆ ಮತ್ತು 'ಹೋಲ್ಡ್ ಆಲ್'ಗಳಲ್ಲಿ ತುಂಬುತ್ತಿದ್ದರು. ಮೈಸೂರಿನಿಂದ ಬೆಂಗಳೂರಿಗೆ ಎರಡು ದಿನದ ಮಟ್ಟಿಗೆ ಹೋಗುವುದಾದರೂ ಒಂದು ತಲೆಹೊರೆ ಲಗ್ಗೇಜು ಇಲ್ಲದೆ ಅವರಿಂದ ಹೊರಡಲು ಸಾಧ್ಯವಿರುತ್ತಿರಲಿಲ್ಲ. ಅಂದರೆ, ಮುಂದೆ ಕಷ್ಟವಾಗಬಾರದು, ಇತರರಿಗೆ ತನ್ನಿಂದ ತೊಂದರೆಯಾಗಬಾರದು ಎಂಬ ದಾಕ್ಷಿಣ್ಯ ಪ್ರವೃತ್ತಿಯನ್ನು ಇದರ ಹಿನ್ನೆಲೆಯಲ್ಲಿ ಕಾಣಬಹುದು. ಅವರ ಮತ್ತು ಅವರ ಸಹಧರ್ಮಿಣಿಯವರ ಆದರಾತಿಥ್ಯಗಳಲ್ಲಿ ಹೊರಹೊಮ್ಮುವ ಆತ್ಮೀಯತೆಯನ್ನು ಅವರ ಮನೆಗೆ ಹೋದವರೆಲ್ಲರೂ ಕಂಡುಕೊಂಡಿದ್ದೇವೆ.

ತೀ.ನಂ.ಶ್ರೀ.ಯವರು ಮಿತಭಾಷಿಗಳು. ಶಬ್ದಗಳನ್ನು ತೂಕಮಾಡಿ ಮಾತನಾಡುತ್ತಿದ್ದರು. ಎಂದೂ ಆಕ್ರೋಶ ಆವೇಶಗಳಿಗೆ ಒಳಗಾಗರು. ಸುಮ್ಮಸುಮ್ಮನೆ ಉದ್ದುದ್ದವಾಗಿ ಯಾರನ್ನೂ ಹೊಗಳುವವರಲ್ಲ. ಹಾಗೆಯೇ ಯಾರನ್ನೂ ತೆಗಳುವವರೂ ಅಲ್ಲ. "ಪದನರಿದು ನುಡಿಯಲುಂ, ನುಡಿದುದನರಿದು ಆರಯಲುಂ ಆರ್ಪರಾ ನಾಡವರ್ಗಳ್" ಎಂಬ ಮಾತಿನ ಉತ್ತಮ ಉದಾಹರಣೆಗೆ ಅವರು ಮೀಸಲು. ಯಾವ ವಿಷಯದ ಮೇಲೂ ಹೃದಯಂಗಮವಾಗಿ ಮಾತನಾಡಬಲ್ಲ ಸುರಸವಾಗ್ಮಿ. ಯಾವ ವಿದ್ವಜ್ಜನ ಗೋಷ್ಠಿಯಲ್ಲೂ ಕನ್ನಡದ ಕೀರ್ತಿಯನ್ನು ದಾಂಗುಡಿಯಿಡಿಸಬಲ್ಲ ವೀರಯೋಧ.

ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ವಿಶಿಷ್ಟವಾದ ಪ್ರಭುತ್ವವಿದ್ದ ಈ ಪ್ರತಿಭಾವಂತ ವಿದ್ವಾಂಸರು ಅಂದಿನ ಸರಕಾರ ಮೈಸೂರಿನ ಸಿವಿಲ್ ಸರ್ವಿಸ್ ಅಧಿಕಾರಿಗಳಾಗಿರೆಂದು ಅವರನ್ನು ಆಹ್ವಾನಿಸಿದರೂ, ಅದನ್ನೊಲ್ಲದೆ ಕನ್ನಡ ತಾಯಿಯ ಮಡಿಲಿಗೆ ಬಿದ್ದರು; ಕನ್ನಡ ಅಧ್ಯಯನಗಳ ಅಧ್ಯಾಪನಗಳ ದೀಕ್ಷಾವ್ರತವನ್ನು ಕೈಕೊಂಡರು; ಸರಕಾರದ ಸಿವಿಲ್ ಸರ್ವಿಸಿಗೆ ಹೋಗಿರುತ್ತಿದ್ದರೆ, ಪ್ರಾಯಶಃ ಅವರು ಸರಕಾರದ ಮುಖ್ಯಕಾರ್ಯದರ್ಶಿಗಳಾಗಿ ನಿವೃತ್ತರಾಗಿ ಆರ್ಥಿಕ ದೃಷ್ಟಿಯಿಂದ, ಸ್ಥಾನದೃಷ್ಟಿಯಿಂದ ಅದೆಷ್ಟೊ ಮೇಲಿರಬಹುದಾಗಿತ್ತು. ಆದರೆ ಏನಂತೆ, ಸಾಹಿತ್ಯ ಲೋಕದಲ್ಲಿ ವಿದ್ವತ್ಪ್ರಪಂಚದಲ್ಲಿ ಅವರು ನೀಡಿರುವ ಕೊಡುಗೆಗಳು ಅಮರವಾದವು. ಆಧುನಿಕ ಕನ್ನಡ ಸಾಹಿತ್ಯ ನಿರ್ಮಾಪಕರ ಅಗ್ರಪಂಕ್ತಿಯಲ್ಲಿ ಈ ಜ್ವಲಂತ ವಿದ್ವನ್ಮಣಿಯು ಚಿರಸ್ಥಾಯಿಯಲ್ಲವೆ!

ಕನ್ನಡ ಸಾರಸ್ವತ ಲೋಕದ ದಿನಮಣಿ ಶ್ರೀ ತೀ.ನಂ.ಶ್ರೀ.

ಕೆ.ಎಸ್. ಧರಣೇಂದ್ರಯ್ಯ

●

ಕನ್ನಡ ನಾಡಿನ ಆಚಾರ್ಯಪುರುಷ ಶ್ರೀ ತೀ.ನಂ.ಶ್ರೀ. ಅವರ ಆಕಸ್ಮಿಕ ನಿಧನದಿಂದ ಕನ್ನಡ ಸಾರಸ್ವತ ಲೋಕದ ದಿನಮಣಿಯು ಅಸ್ತಂಗತವಾದಂತಿದೆ. ಕನ್ನಡಿಗರ ಹೃದಯದಲ್ಲಿ ಕತ್ತಲೆಯು ಕವಿದುಕೊಂಡಿದೆ. ಕನ್ನಡ ಚೇತನದ ನಾಡಿಗಳ ಮಿಡಿತವು ಕುಂಠಿತವಾಗಿದೆ. ಪರಿಪೂರ್ಣ ಮತ್ತು ಪರಿಪಕ್ವ ಪಾಂಡಿತ್ಯದ ಪ್ರತೀಕವಾಗಿದ್ದ ತೀ.ನಂ.ಶ್ರೀ. ಅವರು ಕನ್ನಡ ಸಾಹಿತ್ಯ ದೇವಿಯ ಜೀವಂತ ರತ್ನಾಭರಣದಂತಿದ್ದರು. ಇಂಗ್ಲಿಷು, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಆಳವೂ ಅಗಾಧವೂ ಆದ ಪಾಂಡಿತ್ಯವನ್ನು ತೀ.ನಂ.ಶ್ರೀ. ಅವರು ಸಂಪಾದಿಸಿದ್ದರು. ಕನ್ನಡ ನಿಘಂಟಿನ ಸಂಪಾದಕ ಮಂಡಲಿಯ ಗೌರವ ಅಧ್ಯಕ್ಷರಾಗಿದ್ದ ತೀ.ನಂ.ಶ್ರೀ. ಅವರು ಯಾವುದಾದರೂ ಶಬ್ದ ನಿಷ್ಪತ್ತಿಯ ವಿಚಾರವಾಗಿ ಸಮಾಲೋಚನೆ ಮಾಡುವಾಗ ದಕ್ಷಿಣದ ಮಲಯಾಳಿಯಿಂದ ಉತ್ತರದ ನೇಪಾಳಿ ಭಾಷೆಗಳವರೆಗಿನ ಎಲ್ಲ ಭಾರತೀಯ ಭಾಷೆಗಳ ಪರ್ಯಾಯ ಶಬ್ದಗಳನ್ನು ಹೇಳುತ್ತಿದ್ದುದು ಅವರ ಪಾಂಡಿತ್ಯದ ವೈವಿಧ್ಯವನ್ನು ಹೊರ ಸೂಸುತ್ತಿದ್ದಿತು.

ಅವರ ಗ್ರಂಥಗಳ ಪೈಕಿ 'ಭಾರತೀಯ ಕಾವ್ಯಮೀಮಾಂಸೆ'ಯು ಮೇರುಕೃತಿ. ಅವರು ಯಾವಾಗಲೂ ತಮ್ಮ ಕಾರ್ಯಗಳಿಗಾಗಿ ಇತರರನ್ನು ಆಶ್ರಯಿಸುತ್ತಿರಲಿಲ್ಲ. ತಮ್ಮ ಕಾಲಮೇಲೆ ತಾವು ನಿಂತು ಕೆಲಸ ಮಾಡುತ್ತಿದ್ದುದ್ದೇ ಅವರ ಜನ್ಮಗುಣವಾಗಿದ್ದಿತು. ಅವರ ವಿಮರ್ಶನ ಶಕ್ತಿಗೆ ಅವರ ಕೃತಿ 'ಸಮಾಲೋಕನ'ವು ಜೀವಂತ ಸಾಕ್ಷಿಯಾಗಿದೆ. ಅವರು ಕವಿಗಳೂ, ವೈಯಾಕರಣರೂ, ಸಂಶೋಧಕರೂ ಆಗಿದ್ದು ಕನ್ನಡ ತಾಯಿಯ ಸಿರಿಮುಡಿಗೆ ಗ್ರಂಥಸೌರಭ್ಯಮಾಲೆಯನ್ನು ತೊಡಿಸಿದ್ದರು. ಅವರ ಭಾಷಣ ವೈಖರಿ ಅಸದೃಶವಾಗಿತ್ತು. ಹಿತವಾಗಿ, ಮಿತವಾಗಿ, ಮೃದುವಾಗಿ ಅವರು ಮಾತನಾಡಿಸುತ್ತಿದ್ದರು. ಧರ್ಮಸ್ಥಳದಲ್ಲಿ ೧೯೬೪ನೆಯ ಇಸವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ, ೧೯೫೧ರಲ್ಲಿ ನಡೆದ ಮಹಾನಡಾವಳಿ ಮಹೋತ್ಸವದ ಭಾಷಣಕಾರರಾಗಿಯೂ ಅವರು ಮಾಡಿದ ಭಾಷಣಗಳು ಲೋಕೋತ್ತರವಾಗಿದ್ದವು. ಅವರು ಉಪಾಧ್ಯಾಯರಾಗಿದ್ದು ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ಕನ್ನಡ ಚೇತನಕೊಟ್ಟು ಕನ್ನಡದ ಸೇವೆಗೆ ಅಣುಮಾಡಿ ಹೋಗಿದ್ದಾರೆ.

ಅವರ ಗುಣಗಳು ಆದರ್ಶವಾಗಿದ್ದವು. ರತ್ನಾಕರ ಮಹಾಕವಿಯು ಹೇಳಿರುವ ಆದರ್ಶ ವಿದ್ವಾಂಸನ ಗುಣಗಳಾದ, "ಶಾಸ್ತ್ರಂ ಬಂದೊಡೆ ಶಾಂತಿ, ಸ್ಯೆರಣೆ, ನಿಗರ್ವಂ, ನೀತಿ, ಮೆಲ್ವಾತು, ಮುಕ್ತಿ ಸ್ತ್ರೀಚಿಂತೆ, ನಿಜಾತ್ಮಚಿಂತೆ ನಿಲವೇಳ್ಕುಂ". ಈ ಉದಾತ್ತ ಗುಣಗಳೆಲ್ಲವೂ ಅವರಲ್ಲಿ ಮನೆ ಮಾಡಿಕೊಂಡಿದ್ದವು. ನನ್ನ ಸಹಪಾಠಿಯಾಗಿದ್ದ ಅವರು ಕೋಪಮಾಡಿಕೊಂಡಿದ್ದನ್ನು ನಾನೆಂದೂ ಕಾಣೆನು. "ಸರಳ ಜೀವನ, ಉದಾತ್ತಭಾವನ" ಅವರ ಧ್ಯೇಯವಾಗಿದ್ದಿತು. ಅವರು ನಿರಾಡಂಬರ ಮೂರ್ತಿ. ಪ್ರಕಟಣೆಗೂ ಪ್ರಚಾರಕ್ಕೂ ಯಾವಾಗಲೂ ಒಪ್ಪಿದವರಲ್ಲ.

ವಿದ್ಯಾರ್ಥಿಗಳಾಗಿದ್ದಾಗ ಆಚಾರ್ಯ ದಿವಂಗತ ಶ್ರೀ ಬಿ.ಎಂ.ಶ್ರೀ. ಅವರು ತೀ.ನಂ.ಶ್ರೀ. ಅವರು ಅವರ (ಬಿ.ಎಂ.ಶ್ರೀ ಅವರ) ತರಗತಿಗೆ ಪ್ರವೇಶ ಮಾಡಿಗ ಕೂಡಲೆ "ನಿಮ್ಮಂತಹ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು ನನ್ನ ಮಹಾಭಾಗ್ಯ" ಎಂದು ಹೇಳುತ್ತಿದ್ದರೆಂದರೆ ತೀ.ನಂ.ಶ್ರೀ. ಅವರ ಔನ್ನತ್ಯಕ್ಕೆ ಇನ್ನೂ ಹೆಚ್ಚಿನ ನಿದರ್ಶನವೇತಕ್ಕೆ?

ತೀ.ನಂ.ಶ್ರೀ. ಅವರು ಶ್ರೀ ಬಸವ ಸಮಿತಿಯ ಆಶ್ರಯದಲ್ಲಿ ಮಾಡಿದ "ಬಸವೇಶ್ವರರ ವಚನಗಳಲ್ಲಿ ಕಾವ್ಯ ಸೌಂದರ್ಯ" ಎಂಬ ಭಾಷಣವು ಅದ್ಭುತವಾಗಿದ್ದಿತು. ಅದರ "ಟೇಪ್‌ರೆಕಾರ್ಡ್"ನ್ನೂ ಮಾಡಿಸಿ ಇಟ್ಟುಕೊಳ್ಳಲಾಗಿದೆ. ಅದನ್ನು ಬಸವ ಸಮಿತಿಯವರು ಬಸವಣ್ಣನವರ ಪ್ರಶಸ್ತಿ ಗ್ರಂಥದಲ್ಲಿ ಪ್ರಕಟಮಾಡುತ್ತಾರೆಂದು ಆಶಿಸೋಣ.

ಕೆಲವು ನೆನಪುಗಳು

ಡಿ.ಕೆ. ಭೀಮಸೇನರಾವ್

●

೧೯೨೭ರ ಜೂನ್ ತಿಂಗಳಲ್ಲಿ ನಾನು ಕನ್ನಡ ಎಂ.ಎ. ತರಗತಿಯಲ್ಲಿ ಸೇರಲು ಹೈದರಾಬಾದಿನಿಂದ ಮೈಸೂರಿಗೆ ಹೋದೆ. ಅದೇ ವರ್ಷ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ತರಗತಿ ಆರಂಭವಾದದ್ದು. ಕನ್ನಡ ಎಂ.ಎ. ತರಗತಿಗೆ ಸೇರುವ ಉತ್ಸಾಹ ವಿದ್ಯಾರ್ಥಿಗಳಲ್ಲಿ ಅತಿಶಯವಾಗಿದ್ದಂತೆ ಕಂಡುಬರುತ್ತಿತ್ತು. ಅದುವರೆಗೆ ಮೈಸೂರು ವಿಶ್ವವಿದ್ಯಾಲಯವು ಕನ್ನಡದಲ್ಲಿ ಎಂ.ಎ. ತರಗತಿ ಆರಂಭಿಸದೆ ಇದ್ದುದರಿಂದ ಕನ್ನಡದಲ್ಲಿ ಉನ್ನತ ವ್ಯಾಸಂಗ ಪಡೆಯಬೇಕೆನ್ನುವ ವಿದ್ಯಾರ್ಥಿಗಳಿಗೆ ಆ ವಿಶ್ವವಿದ್ಯಾಲಯದಲ್ಲಿ ಅವಕಾಶವಿರಲಿಲ್ಲ. ವಿದ್ಯಾರ್ಥಿಗಳಲ್ಲಿ ಕನ್ನಡದ ವಿಚಾರವಾಗಿ ಉತ್ಸಾಹ ಹೆಚ್ಚಾಗಿರಲು ಇದೂ ಒಂದು ಕಾರಣವಾಗಿದ್ದಿತು. ನಾನು ಹೋಗುವುದಕ್ಕೆ ಮುಂಚೆ ಎಂಟು ಜನ ವಿದ್ಯಾರ್ಥಿಗಳು ಆಗಲೇ ಸೇರಿದ್ದರು. ಪಾಠಗಳು ಆರಂಭವಾಗಿಬಿಟ್ಟಿದ್ದವು. ಪ್ರೊ. ಬಿ.ಎಂ. ಶ್ರೀಕಂಠಯ್ಯನವರು ಕನ್ನಡದ ಗೌರವ ಆಚಾರ್ಯರಾಗಿ ಕನ್ನಡದಲ್ಲಿ ಪಾಠವನ್ನು ಹೇಳುತ್ತಿದ್ದುದು ವಿದ್ಯಾರ್ಥಿಗಳಲ್ಲಿ ಒಂದು ಬಗೆಯ ಹೆಮ್ಮೆಯನ್ನುಂಟುಮಾಡಿತ್ತು. ವಿಶ್ವಪ್ರಯತ್ನ ಮಾಡಿದ ಮೇಲೆ ಮೈಸೂರು ವಿಶ್ವವಿದ್ಯಾಲಯವು ಕನ್ನಡ ಎಂ.ಎ. ತರಗತಿಯಲ್ಲಿ ಸೇರಲು ನನಗೆ ಅನುಮತಿಯನ್ನಿತ್ತಿತು. ನಾನು ಸೇರಿದ್ದು ಈ ಸನ್ನಿವೇಶದಲ್ಲಿ. ಮೊದಲ ದಿನ ಪ್ರೊ. ಬಿ.ಎಂ. ಶ್ರೀಕಂಠಯ್ಯನವರು ತರಗತಿಯಲ್ಲಿ ಬಂದೊಡನೆಯೇ ನನ್ನ ಕಡೆ ನೋಡಿ ವಿದ್ಯಾರ್ಥಿಗಳ ಸಂಖ್ಯೆ ಎಂಟರಿಂದ ಒಂಬತ್ತಕ್ಕೇರಿದುದನ್ನು ಗಮನಿಸಿ ಇದುವರೆಗೆ ಅಷ್ಟದಿಗ್ಗಜಗಳಿದ್ದ ಕ್ಲಾಸು ಈಗ ನವರತ್ನ ಭರಿತವಾಯಿತೆಂದು ಅವರದೇ ಆದ ಹಸನ್ಮುಖದಿಂದ ಹಿಗ್ಗಿ ನುಡಿದುದು ಈಗಲೂ ನನ್ನ ಕಿವಿಯಲ್ಲಿ ನಿನದಿಸುತ್ತಿದೆ. ಇನ್ನು ಅವರ ಪಾಠ ಆರಂಭವಾಗಬೇಕು. ಅಷ್ಟರಲ್ಲಿ ಮತ್ತೊಬ್ಬ ವಿದ್ಯಾರ್ಥಿ ಬಂದು ನಮ್ಮ ವರ್ಗದಲ್ಲಿ ಕುಳಿತುಕೊಂಡರು. ಈಗ ಬಂದವರು ತೀ.ನಂ. ಶ್ರೀಕಂಠಯ್ಯನವರು. ಅಂದಿನ ಆ ಚಿತ್ರ ನನ್ನ ಕಣ್ಣಿದಿರಿನಲ್ಲಿ ಕಟ್ಟಿದಂತಿದೆ. ಆ ತೀ.ನಂ.ಶ್ರೀ. ಈಗ ಕಣ್ಮರೆಯಾದರೂ, ಚಿತ್ರ ಮಾತ್ರ ಅಚ್ಚಳಿಯದೆ ಕಣ್ಣೆದುರಿನಲ್ಲಿದೆ. ಆಗ ಆದ ಅವರ ಪರಿಚಯ ಸ್ನೇಹಲತೆಯಾಗಿ ಪರಿಣಮಿಸಿ ಈ ನಲ್ವತ್ತು ವರ್ಷಗಳಲ್ಲಿ ದಾಂಗುಡಿಯಿಟ್ಟು ಮುಂದೆ ಸಾಗಿತು.

ತೀ.ನಂ.ಶ್ರೀ.ಯವರು ಆ ವರ್ಷ ಕನ್ನಡದ ಎಂ.ಎ. ವರ್ಗದ ನಿಯತ ವಿದ್ಯಾರ್ಥಿಯಾಗಿರಲಿಲ್ಲ. ಅವರು ಇಂಗ್ಲಿಷ್ ಎಂ.ಎ. ವರ್ಗದಲ್ಲಿದ್ದರೂ ಕನ್ನಡದ ಮೇಲಣ ಮಮತೆಯಿಂದ

ಕನ್ನಡದ ಪಾಠಗಳಿಗೆ ಬರುತ್ತಿದ್ದರು. ೧೯೨೯ರಲ್ಲಿ ಮೊದಲ ಸಲ ನಡೆದ ಕನ್ನಡ ಎಂ.ಎ. ಪರೀಕ್ಷೆಗೆ ನಮ್ಮ ಜೊತೆಯಲ್ಲಿ ಕುಳಿತುಕೊಳ್ಳದೆ ಇಂಗ್ಲಿಷ್ ಎಂ.ಎ. ಪರೀಕ್ಷೆಗೆ ಕುಳಿತು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಮಾರನೆಯ ವರ್ಷ ಕನ್ನಡದ ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಪಡೆದರು.

೧೯೨೮, ೨೯ನೆಯ ವರ್ಷಗಳು ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಸ್ಮರಣೀಯವಾದ ವರ್ಷಗಳೆಂದು ಹೇಳಬಹುದು. ಈ ವರ್ಷಗಳಲ್ಲಿ ಕಿರಿಯ ಕಾಣಿಕೆ, ಯಮನ ಸೋಲು, ರನ್ನ ಕವಿಯ ಪ್ರಶಸ್ತಿ, ಅಶ್ವತ್ಥಾಮನ್ ಈ ನಾಲ್ಕು ಕೃತಿಗಳು ಜನ್ಮತಾಳಿದವು. ಇವುಗಳಲ್ಲಿ ಒಂದೊಂದೂ ವಿಶಿಷ್ಟ ಗುಣದಿಂದ ಕೂಡಿದುದು, ಮುಂದಿನ ಸಾಹಿತ್ಯ ರಚನೆಗೆ ಪ್ರಚೋದನೆಯನ್ನುಂಟು ಮಾಡುವ ಶಕ್ತಿಯಿಂದ ಕೂಡಿದುದು. 'ಕಿರಿಯ ಕಾಣಿಕೆ' ಪ್ರಕಟವಾಗುವುದಕ್ಕೆ ತೀ.ನಂ.ಶ್ರೀ. ಮುಖ್ಯ ಕಾರಣ. ಅದರಲ್ಲಿನ ತೀ.ನಂ.ಶ್ರೀ.ಯವರ 'ಕನ್ನಡಿಗನ ಕೊರಗು' ಎಂಬ ಕವನವು ಆ ವಯಸ್ಸಿನಲ್ಲಿಯೇ ಕನ್ನಡದ ಮೇಲಿನ ಅವರ ಅಭಿಮಾನವೆಷ್ಟೆಂಬುದನ್ನು ವ್ಯಕ್ತಗೊಳಿಸುತ್ತದೆ. ರನ್ನಕವಿ ಪ್ರಶಸ್ತಿಯಲ್ಲಿನ ಅವರ 'ಗದಾಯುದ್ಧವೂ ಸ್ವೀಕರಣ ವಿಚಾರವೂ' ಎಂಬ ವಿಮರ್ಶಾತ್ಮಕವಾದ ಲೇಖನವು ಅವರ ವಿಮರ್ಶನ ಶಕ್ತಿ ಆಗಲೇ ಎಷ್ಟು ಚುರುಕಾಗಿದ್ದಿತೆಂಬುದನ್ನು ತಿಳಿಸುತ್ತದೆ. ಆಮೇಲಿನ ಅವರ ಕವನಗಳೂ, ಲೇಖನಗಳೂ ಅವರ ಪ್ರತಿಭೆ, ಆಳವಾದ ಪಾಂಡಿತ್ಯ, ವ್ಯಾಸಂಗದ ದ್ಯೋತಕವಾಗಿದೆ. ಅವರು ಕವಿ, ವಿಮರ್ಶಕ, ಭಾಷಾಶಾಸ್ತ್ರಜ್ಞ–ಹೀಗೆ ಅವರ ವ್ಯಾಸಂಗ ವೈಖರಿ ಬಹುಮುಖವಾಗಿ ಪ್ರಕಟವಾಗಿತ್ತು. ತೀ.ನಂ.ಶ್ರೀ. ಯವರು ಯಾವ ವಿಷಯಕ್ಕೆ ಕೈಹಾಕಿದರೂ ಕೂಲಂಕಷವಾಗಿ ಮಥನಮಾಡಿ ಅದನ್ನು ಕರಗತ ಮಾಡಿಕೊಳ್ಳುತ್ತಿದ್ದರು. ಗ್ರಂಥ ಸಂಪಾದನೆ, ಗ್ರಂಥ ವಿಮರ್ಶೆ, ಛಂದಸ್ಸು, ವ್ಯಾಕರಣ, ಭಾಷಾಶಾಸ್ತ್ರ ಮುಂತಾದ ಲೇಖನಗಳನ್ನು ಕುರಿತು ಬರೆದ ಅವರ ಲೇಖನಗಳು ಅವರ ತುಂಬು ಪಾಂಡಿತ್ಯವನ್ನೂ ಆಳವಾದ ವ್ಯಾಸಂಗವನ್ನೂ ಅಭಿವ್ಯಕ್ತಗೊಳಿಸುತ್ತಿವೆ. 'ಭಾರತೀಯ ಕಾವ್ಯಮೀಮಾಂಸೆ'ಯಂತೂ ಅವರ ಸುದೀರ್ಘವಾದ ಅಧ್ಯಯನದ ಫಲಸ್ವರೂಪವಾಗಿದೆ. ನಾಗವರ್ಮನ ಛಂದೋಂಬುಧಿಯನ್ನು ಪರಿಷ್ಕರಿಸಿ ಪರಿಶುದ್ಧವಾದ ಪಾಠಗಳಿಂದ ಪ್ರಕಟಿಸಬೇಕೆಂಬುದು ಅವರ ಹಿರಿಯ ಹಂಬಲವಾಗಿದ್ದಿತು. ಶಬ್ದಮಣಿದರ್ಪಣವನ್ನು ವಿವರವಾದ ವ್ಯಾಖ್ಯಾನದೊಡನೆ ಎಲ್ಲರ ಉಪಯೋಗಕ್ಕಾಗಿ ಬರೆಯುವ ಕಾರ್ಯವನ್ನು ಆಗಲೇ ಆರಂಭಿಸಿದ್ದರು. ಇಷ್ಟೆಲ್ಲಕ್ಕೂ ಹೆಚ್ಚಾಗಿ ಅವರು ಕನ್ನಡ ನಿಘಂಟಿನ ವಿಚಾರವಾಗಿ ಮಾಡಬೇಕಾಗಿದ್ದ ಕೆಲಸ ಬೇಕಾದಷ್ಟು ಇದ್ದಿತು. ಪ್ರೌಢವಾದ ಮುನ್ನುಡಿಯನ್ನು ಅವರೇ ಬರೆಯಬೇಕಾಗಿದ್ದಿತು. ಅದಕ್ಕೆ ಬೇಕಾಗಿದ್ದ ಎಷ್ಟೋ ಸಾಮಗ್ರಿಯನ್ನು ಅವರು ಟಿಪ್ಪಣಿರೂಪದಲ್ಲಿ ಬರೆದಿಟ್ಟಿದ್ದರು. ಅದಕ್ಕೆ ಸಂಬಂಧಿಸಿದ ಎಷ್ಟೋ ಅಂಶಗಳು ಅವರ ಮನಸ್ಸಿನಲ್ಲಿದ್ದವು. ಪಾಂಡಿತ್ಯ, ಪ್ರತಿಭೆಗಳು ವ್ಯಕ್ತಿಗತವಾದವುಗಳು. ಗ್ರಂಥ ರೂಪದಲ್ಲಿ ಮೈತಾಳಿದರೆ ಮಾತ್ರ ಅವು ಉಳಿಯತಕ್ಕವುಗಳು. ಇಲ್ಲವಾದರೆ ವ್ಯಕ್ತಿಯ ಜೊತೆಗೆ ಅವೂ ಹೋಗುತ್ತವೆ. ಇಲ್ಲಿಯೂ ಹೀಗೆಯೇ. ಅವೆಲ್ಲ ತೀ.ನಂ.ಶ್ರೀ. ಅವರೊಡನೆ ನಮ್ಮ ಕೈಗೆ ಬಾರದಂತೆ ಅಸ್ತಂಗತವಾಗಿ ಹೋಗಿವೆ. ಈ ದೃಷ್ಟಿಯಿಂದ ತೀ.ನಂ.ಶ್ರೀ. ಯವರು ಅಕಾಲದಲ್ಲಿ ಕಣ್ಮರೆಯಾದುದರಿಂದ ಕನ್ನಡ ಸಾಹಿತ್ಯ ಭಾಷೆಗಳಿಗೆ ಎಷ್ಟು ನಷ್ಟವಾಗಿದೆ ಎಂಬುದು ಅವರ ಜೊತೆಯಲ್ಲಿ ನಿಕಟ ಸಂಬಂಧವಿಟ್ಟುಕೊಂಡಿದ್ದವರಿಗೆ ಮಾತ್ರ ಚೆನ್ನಾಗಿ ಗೊತ್ತು.

ಕನ್ನಡವಿರುವ ಎಲ್ಲ ವಿಶ್ವವಿದ್ಯಾಲಯಗಳ ಜೊತೆಯಲ್ಲಿ ತೀ.ನಂ.ಶ್ರೀ.ಯವರ ಸಂಬಂಧ ವಿದ್ದಿತು. ಹೈದರಾಬಾದಿಗೆ ಬಂದಾಗಲೆಲ್ಲ ಕೆಲವು ವಿಶಿಷ್ಟ ಸಂದರ್ಭಗಳ ಹೊರತು ಅವರು ನಮ್ಮಲ್ಲಿಯೇ ಉಳಿದುಕೊಳ್ಳುತ್ತಿದ್ದರು. ಅವರು ಬಂದಿದ್ದಾರೆಂಬ ಸಮಾಚಾರ ತಿಳಿದು ವಿದ್ಯಾರ್ಥಿಗಳೂ ಕನ್ನಡ ಸಂಘ ಸಂಸ್ಥೆಗಳ ಕಾರ್ಯಕರ್ತರೂ ಅವರ ಸುತ್ತು ಗುಂಪುಗೂಡುತ್ತಿದ್ದರು. ಉಪನ್ಯಾಸಗಳ ಪರಂಪರೆ, ಸಂಸ್ಥೆಗಳಿಗೆ ಸಂದರ್ಶನ, ಭೋಜನ ಸಮಾರಂಭ – ಇವುಗಳಿಂದ ಅವರಿಗೆ ಹಗಲೆಲ್ಲ, ರಾತ್ರಿ ಸುಮಾರು ಹೊತ್ತಿನವರಿಗೆ ಮೈ ತುಂಬ ಕಾರ್ಯಕ್ರಮವಿರುತ್ತಿದ್ದಿತು. ಅವರದು ತುಂಬ ಸ್ನೇಹಪರ ಹೃದಯವಾದುದರಿಂದ ಯಾರಿಗೂ ಇಲ್ಲವೆಂದು ಹೇಳುತ್ತಿರಲಿಲ್ಲ. ಇದರಿಂದ ಒಮ್ಮೊಮ್ಮೆ ಸುಸ್ತಾಗಿಬಿಡುತ್ತಿದ್ದರು. ಆದರೂ ಅದು ತಾವು ಮಾಡಬೇಕಾದ ಕಾರ್ಯವೆಂದು ಮಾಡುತ್ತಿದ್ದರು.

ಅವರು ಕನ್ನಡದ ವಿದ್ಯಾರ್ಥಿಯಾಗಿ ಉಳಿಯದೆ ಮೈಸೂರ್ ಸಿವಿಲ್ ಸರ್ವಿಸ್ ಅಧಿಕಾರ ಸ್ವೀಕರಿಸಿದ್ದರೆ ಮೈಸೂರು ಸರ್ಕಾರದ ಉನ್ನತಮಟ್ಟದ ಅಧಿಕಾರಿಗಳಾಗುತ್ತಿದ್ದರು, ಖಂಡಿತ. ಆದರೆ ಕನ್ನಡವು 'ಭಾರತೀಯ ಕಾವ್ಯಮೀಮಾಂಸೆ'ಯಂಥ ಉತ್ಕೃಷ್ಟ ಕೃತಿಯಿಂದ ವಂಚಿತವಾಗುತ್ತಿದ್ದಿತು. ಕನ್ನಡದ ತಾಯಿ ಇವರನ್ನು ತನ್ನತ್ತ ಕರೆದುಕೊಂಡು ಇವರಿಂದ ಶಾಶ್ವತವಾದ ಸೇವೆಯನ್ನು ಪಡೆದಿದ್ದಾಳೆ. ಈ ಕೀರ್ತಿ ಅವರು ಸಿವಿಲ್ ಸರ್ವಿಸ್ ಉನ್ನತಾಧಿಕಾರಿಯಾಗಿ ಸಂಪಾದಿಸುತ್ತಿದ್ದ ಖ್ಯಾತಿಗಿಂತ ಮಿಗಿಲಾದುದೂ ಚಿರಸ್ಥಾಯಿಯಾದುದೂ ಎಂಬುದರಲ್ಲಿ ಸಂದೇಹವಿಲ್ಲ.

ಇತ್ತೀಚೆಗೆ ಅವರು ಕೊಂಡ ಮನೆ ಇರುವ ಮನೆ ಮಾತ್ರವಲ್ಲ, ಅದೊಂದು ಗ್ರಂಥಾಲಯ, ಯಾವ ಕೋಣೆಯಲ್ಲಿ ನೋಡಿದರೂ ಪುಸ್ತಕಗಳ ಸಂಗ್ರಹ. "ಏನು ಶ್ರೀಕಂಠಯ್ಯನವರೆ, ಮನೆಯನ್ನು ಗ್ರಂಥಾಲಯವನ್ನಾಗಿ ಮಾಡಿಬಿಟ್ಟೀರಲ್ಲ?" ಎಂದು ಕೇಳಿದರೆ "ಏನು ಮಾಡುವುದು ಪುಸ್ತಕಗಳಿಗಾಗಿ ಬೇರೆಲ್ಲಿಗೆ ಹೋಗುವುದು, ಅವುಗಳನ್ನೇ ತರಿಸಿಬಿಡುತ್ತೇನೆ" ಎಂದು ಹೇಳುತ್ತಿದ್ದರು. ಮೈಸೂರಿಗೆ ಹೋದಾಗ ಅವರ ಮನೆಯಲ್ಲಿ ಆದರಾತಿಥ್ಯ ಕಾದಿರುತ್ತಿದ್ದಿತು. ವಿವಿಧ ಪಕ್ವಾನ್ನಗಳನ್ನು ಮಾಡಿಸಿ ದಂಪತಿಗಳು ಅತಿಥಿಗಳ ಆದರೋಪಚಾರ ಮಾಡುತ್ತಿದ್ದರು. ಹೊಟ್ಟೆ ತುಂಬಿದರೂ ಮೇಲೆ ಮೇಲೆ ಪಕ್ವಾನ್ನಗಳು ಬರುತ್ತಿದ್ದುವು. "ದಮ್ಮಯ್ಯ, ಶ್ರೀಕಂಠಯ್ಯನವರೇ, ಸಾಕುಮಾಡಿ" ಎಂದರೆ, "ನಾನು ಇವರ ಮನೆಗೆ ಹೋದರೆ ಹಬ್ಬ ಮಾಡುತ್ತಾರೆ. ನಾವು ಮಾಡಿದ್ದೇನು?" ಎಂದು ತಾವು ಮಾಡಿದುದು ಕಡಮೆ ಎನ್ನುವಂತೆ ತಮ್ಮ ಮನೆಯವರಿಗೆ ಹೇಳುತ್ತಿದ್ದರು. ಮೈಸೂರಿಗೆ ಹೋದರೆ ಇನ್ನೆಲ್ಲಿ ತೀ.ನಂ.ಶ್ರೀ.ಯವರ ಆದರಾತಿಥ್ಯ.

ಅವರದು ಬರಿಯ ಆಡಂಬರದ, ತೋರಿಕೆಯ ಪಾಂಡಿತ್ಯವಲ್ಲ; ಪರಿಷ್ಕಾರವಾದ ಜ್ಞಾನ. ಗೊತ್ತಿಲ್ಲದುದನ್ನು ಗೊತ್ತಿರುವಂತೆ ನಟಿಸುತ್ತಿರಲಿಲ್ಲ. ತಾ ೧೩–೮–೬೬ ಅವರು ಭಾಗವಹಿಸಿದ ನಿಘಂಟು ಸಭೆಯ ಕೊನೆಯ ದಿನ. ಅಂದು ३, ४ ಘಂಟೆಯವರೆಗೆ ಸಭೆ ನಡೆಸಿದರು. "ಮುಂದೆ ನೀವು ಸಭೆ ನಡೆಸಿ" ಎಂದು ನನಗೆ ಹೇಳಿ ತಾವು ಮಿತ್ರ ಬಸವಾರಾಧ್ಯರ ಜೊತೆಗೆ ಅವರ ಕೋಣೆಯಲ್ಲಿ ನಿಘಂಟಿನ ಕರಡನ್ನು ನೋಡುತ್ತ ಕುಳಿತರು.

ಪಂಪ ಭಾರತದ ಒಂದು ಪ್ರಯೋಗ. "ಉಡಮೊಗಮೆಂಬ ತಾವರೆ..." ಎಂಬಲ್ಲಿಯ 'ಉಡ' ಎಂಬುದರ ಅರ್ಥ ಏನೆಂಬುದು ಚರ್ಚೆಗೆ ಬಂದಿತು. ಎಷ್ಟು ವಿಚಾರ ಮಾಡಿದರೂ ಸಮರ್ಪಕವಾದ ಅರ್ಥ ಹೊಳೆಯಲಿಲ್ಲ. ಅಷ್ಟರಲ್ಲಿ ಶ್ರೀಕಂಠಯ್ಯನವರು ಹೊರಗೆ ಬಂದರು. ಆಗ ನಾನು ಕೇಳಿದೆ, "ಶ್ರೀಕಂಠಯ್ಯನವರೇ!, 'ಉಡಮೊಗ' ಎಂಬುದರ ಅರ್ಥ ಏನು?' ಎಂದು. ತತ್‌ಕ್ಷಣ ಉತ್ತರ ಬಂದಿತು "ಗೊತ್ತಿಲ್ಲ" ಎಂದು. ಇಂಥ ಸ್ಪಷ್ಟೋಕ್ತಿ ಅವರದು.

ಅಂದೇ ಸಾಯಂಕಾಲ ಅವರು ಮೈಸೂರಿಗೆ ಹೊರಟರು. ಅಲ್ಲಿಂದ ಅವರು ಕುಟುಂಬ ಸಮೇತ ದಿಲ್ಲಿಯಲ್ಲಿ ಕೆಲಸ ಮುಗಿಸಿಕೊಂಡು ರಾಂಚಿಗೆ ತಮ್ಮ ಮಗಳು ಅಳಿಯಂದಿರನ್ನು ಕಾಣಲು ಹೋಗಬೇಕಾಗಿತ್ತು. ಸುಮಾರು ಆರೆಂಟು ತಿಂಗಳಿಂದ ಬಲಗೈ ಪೂರ್ತಿ ಮೇಲೆ ಎತ್ತಲು ಆಗುತ್ತಿರಲಿಲ್ಲ. ತುಂಬ ನೋವೆಂದು ಒದ್ದಾಡುತ್ತಿದ್ದರು. ಎಷ್ಟು ಚಿಕಿತ್ಸೆ ಮಾಡಿದರೂ ಗುಣ ತೋರಲಿಲ್ಲ. "ಶ್ರೀಕಂಠಯ್ಯನವರೇ! ದೂರದ ಪ್ರಯಾಣ. ದಾರಿಯಲ್ಲಿ ಜಾಗ್ರತೆಯಿಂದ ಇರಿ. ಕೈಯನ್ನು ಸರಿಯಾಗಿ ನೋಡಿಕೊಳ್ಳಿ" ಎಂದು ಬೀಳ್ಕೊಟ್ಟೆ – "ಅದೇನು ಮಾಡುತ್ತದೆ ಬಿಡಿ" ಎಂದು ನಗುತ್ತ ಹೇಳಿ ಹೊರಟರು. ಅದೇ ಅವರು ನನ್ನೊಡನೆ ಮಾತನಾಡಿದ ಕೊನೆಯ ದಿನ. ಮೈಸೂರಿನಿಂದ ಹೊರಟ ತೀ.ನಂ.ಶ್ರೀ.ಯವರನ್ನು ಭಗವಂತನು ಪುನಃ ಮೈಸೂರಿಗೆ ಕಳಿಸಿಕೊಡಲಿಲ್ಲ. ಭಗವದಿಚ್ಛೆಯನ್ನು ಅರಿಯಬಲ್ಲವರಾರು?

ಗುರುಚರಣ ಸನ್ನಿಧಿಯಲ್ಲಿ

ವಿ. ನಾಗರಾಜ ಶಾಸ್ತ್ರೀ

●

ಪೂಜ್ಯ ಗುರುಗಳಾದ ತೀ.ನಂ.ಶ್ರೀ.ಯವರ ಪದತಲದಲ್ಲಿ ಕುಳಿತು ಅವರಿಂದ ಕನ್ನಡವನ್ನು ಕಲಿಯುವ ಸುಯೋಗ ಮೊದಲು ಲಭಿಸಿದುದು ೧೯೩೨ನೆಯ ಜುಲೈ ತಿಂಗಳಲ್ಲಿ. ಆ ವೇಳೆಗೆ ಅವರು ಅಧ್ಯಾಪಕ ವೃತ್ತಿಯನ್ನು ಅವಲಂಬಿಸಿ ಕೇವಲ ಮೂರು ನಾಲ್ಕು ವರ್ಷಗಳೇ ಆಗಿದ್ದರೂ, ಆಗಲೇ ಅವರು ತಮ್ಮ ಪಾಂಡಿತ್ಯ ಬೋಧನಾ ಸಾಮರ್ಥ್ಯಗಳಿಂದ ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ವೃಂದದ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ಬಿ.ಎ. ತರಗತಿಗಳಲ್ಲಿ ಅವರು ನಮಗೆ ಬೋಧಿಸಿದ ಪಠ್ಯಪುಸ್ತಕಗಳು ಎರಡು. ಲಾರೆನ್ಸ್ ಹೌಸ್‌ಮನ್ನನ 'ಡೆತ್ ಆಫ್ ಸಾಕ್ರಟೀಸ್' ಎಂಬ ಗ್ರಂಥ, ಹಾಗೂ ಕೀ. ಶೇ॥ ಎಸ್.ಜಿ. ಶಾಸ್ತ್ರಿಗಳವರು ಕನ್ನಡಿಸಿರುವ 'ಸಾಕ್ರಟೀಸನ ಮರಣ' ಎಂಬುದೊಂದು. ಎರಡನೆಯದು ದಿ. ಬಸಪ್ಪಶಾಸ್ತ್ರಿಗಳು ಕನ್ನಡಕ್ಕೆ ಅನುವಾದ ಮಾಡಿರುವ ಕಾಳಿದಾಸನ 'ಅಭಿಜ್ಞಾನ ಶಾಕುಂತಲ'. ಇವೆರಡು ಗ್ರಂಥಗಳನ್ನು ಪಾಠ ಹೇಳುವಾಗಲೂ ಅವರ ಬೋಧನಾ ಕ್ರಮದ ವೈಶಿಷ್ಟ್ಯ ಎದ್ದು ಕಾಣುತ್ತಿದ್ದಿತು. ಮೂಲ ಗ್ರಂಥಗಳನ್ನು ಜತೆಯಲ್ಲಿ ಇಟ್ಟುಕೊಂಡು ಅನುವಾದಗಳನ್ನು ಅಡಿಗಡಿಗೆ ಹೋಲಿಸಿ, ವಿಮರ್ಶಿಸಿ ಅನುವಾದಕರು ಎಲ್ಲಿ ಹೇಗೆ ಮೂಲದ ಆಶಯವನ್ನು ಸಮರ್ಪಕವಾಗಿ ತಂದಿದ್ದಾರೆ ಅಥವಾ ಇಲ್ಲ ಎಂಬುದನ್ನು ಆಯಾ ವಾಕ್ಯಗಳ ವಾಚ್ಯಾರ್ಥ, ಸೂಚ್ಯಾರ್ಥಗಳನ್ನು ವಿಮರ್ಶೆ ಮಾಡುವುದರ ಮೂಲಕ ಸ್ಪಷ್ಟವಾಗಿ ವಿವೇಚಿಸುತ್ತಿದ್ದರು. ಇಂಗ್ಲಿಷ್ ಅಥವಾ ಸಂಸ್ಕೃತ ಮೂಲ ಗ್ರಂಥದ ಪದಪ್ರಯೋಗಗಳನ್ನೂ ಅವುಗಳ ವ್ಯುತ್ಪತ್ತಿ, ಧ್ವನಿಗಳನ್ನೂ ವಿವರಿಸುತ್ತಿರುವಾಗ ನಮಗೆ ಗಂಟೆ ಕಳೆದ ಅರಿವೇ ಇರುತ್ತಿರಲಿಲ್ಲ. ನಂಜನಗೂಡಿನ ರೈಲು ಹಾದುಹೋದಾಗ ಅಥವಾ ಕಾಲೇಜಿನ ಗಂಟೆ ಬಾರಿಸಿದಾಗಲೇ ನಮಗೆ ಬಾಹ್ಯ ಪ್ರಪಂಚದ ಅರಿವು. ನಾನು ಸಂಸ್ಕೃತವನ್ನು ಐಚ್ಛಿಕ ವಿಷಯಗಳಲ್ಲಿ ಒಂದಾಗಿ ತೆಗೆದುಕೊಂಡಿದ್ದೆನಾದುದರಿಂದ ಇದೇ ಸಮಯದಲ್ಲಿ ಶಾಕುಂತಲವನ್ನು ಸಂಸ್ಕೃತ ಮೂಲದಲ್ಲಿಯೂ ಅಧ್ಯಯನ ಮಾಡಬೇಕಾಗಿತ್ತು. ಈ ಸಂದರ್ಭದಲ್ಲಿ ಸಂಸ್ಕೃತ ತರಗತಿಗಳಿಗಿಂತಲೂ, ಕನ್ನಡ ತರಗತಿಗಳಲ್ಲಿ ತೀ.ನಂ.ಶ್ರೀ. ಯವರು ಮಾಡುತ್ತಿದ್ದ ವ್ಯಾಖ್ಯಾನಗಳಿಂದ ನನಗೆ ಕಾಳಿದಾಸನ ಪ್ರತಿಭೆಯ ಅರಿವು ಹೆಚ್ಚಾಗಿ ಆಯಿತೆಂದು ಹೇಳಿದರೆ ಆ ಮಾತು ತೀ.ನಂ.ಶ್ರೀ.ಯವರ ಬೋಧನಾ ಸಾಮರ್ಥ್ಯ, ಅನನ್ಯ ಸಾಧಾರಣವಾದ ವ್ಯಾಖ್ಯಾನ ಕ್ರಮವನ್ನು ಸೂಚಿಸುವುದಕ್ಕಲ್ಲದೆ, ನನಗೆ ಸಂಸ್ಕೃತವನ್ನು ಬೋಧಿಸುತ್ತಿದ್ದ ಅಧ್ಯಾಪಕರ ದಕ್ಷತೆಯನ್ನು ನಿರಾಕರಿಸುವುದಕ್ಕಲ್ಲ.

ಹೀಗೆ ಕನ್ನಡ ತರಗತಿಗಳಲ್ಲಿ ನೂರಾರು ವಿದ್ಯಾರ್ಥಿಗಳಲ್ಲಿ ಒಬ್ಬನಾಗಿ ಅವರ ಪಾಂಡಿತ್ಯ ಬೋಧನಾ ಸಾಮರ್ಥ್ಯಗಳಿಂದ ಪ್ರಭಾವಿತನಾದುದು ಮಾತ್ರವಲ್ಲದೆ, ಅವರೊಡನೆ ನಿಕಟವಾದ ಸಂಪರ್ಕವನ್ನು ಬೆಳೆಸಿಕೊಂಡು ಬರುವ ಸೌಭಾಗ್ಯವೂ ನನಗೆ ಲಭಿಸಿತು. ಆಗ ಕೆಲವು ಉತ್ಸಾಹಿಗಳಾದ ತರುಣರೂ, ವಿದ್ಯಾರ್ಥಿಗಳೂ ಮತ್ತು ಇತರರೂ ಸೇರಿ – **'ತರುಣರ ದಂಡು'** ಎಂಬ ಒಂದು ಕನ್ನಡ ಸಂಘವನ್ನು ಏರ್ಪಡಿಸಿದ್ದರು. ಶ್ರೀಗಳಾದ ಮಾಸ್ತಿ ನರಸಿಂಗರಾಯರು, ಎಚ್.ಎಂ. ಶಂಕರನಾರಾಯಣರು, ಪರಮೇಶ್ವರಭಟ್ಟರು, ತ.ಸು. ಶಾಮರಾಯರು, ಜಿ. ವೆಂಕಟಸುಬ್ಬಯ್ಯನವರು, ಬಿ. ಸುಂದರೇಶ್ವರ ಮೊದಲಾದವರು ಪ್ರಮುಖ ಸದಸ್ಯರಾಗಿದ್ದರು. ಆಗ ತೀ.ನಂ.ಶ್ರೀ. ಯವರು ಆ ಸಂಘದ ಅಧ್ಯಕ್ಷರು. ಶ್ರೀ ಮಾಸ್ತಿ ನರಸಿಂಗರಾಯರ ಹಾಗೂ ಸುಂದರೇಶ್ವರ ಅವರ ಪ್ರೇರಣೆಯ ಮೇರೆಗೆ ನಾನೂ ಸಂಘದ ಸದಸ್ಯನಾಗಲು ಅವಕಾಶ ಲಭಿಸಿತು. ಪುಟ್ಟಪ್ಪನವರು, ಡಿ.ಎಲ್. ನರಸಿಂಹಾಚಾರ್ಯರು, ಎ.ಎನ್. ಮೂರ್ತಿರಾಯರು ಮೊದಲಾದವರು ಕೂಡ ಇದರ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ತರುಣ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರಬಹುದಾದ ಲೇಖನಾ ಸಾಮರ್ಥ್ಯವನ್ನು ಜಾಗ್ರತಗೊಳಿಸುವಂತೆ ಅವರನ್ನು ಪ್ರಚೋದಿಸಿ ಅವರನ್ನು ಕನ್ನಡ ಸಾಹಿತ್ಯ ಸೇವೆಗೆ ಪ್ರೇರೇಪಿಸುವುದೇ ಈ ತರುಣರ ದಂಡಿನ ಮುಖ್ಯ ಉದ್ದೇಶ. ತರುಣ ಸದಸ್ಯರು ಬರೆದ ಕವಿತೆ, ಕತೆ, ಹರಟೆ, ನಾಟಕ ಮೊದಲಾದುವನ್ನು ವಾಚನ ಮಾಡಿಸಿ, ಅನಂತರ ಅವುಗಳ ಗುಣಾವಗುಣಗಳನ್ನು ಚರ್ಚಿಸಿ ಮಾರ್ಗದರ್ಶನ ಮಾಡುವುದೇ ಅಧ್ಯಕ್ಷರ ಕೆಲಸ. ತೀ.ನಂ.ಶ್ರೀ. ಅವರು ಸದಸ್ಯರು ಬರೆದ ಲೇಖನಗಳನ್ನು ತಾಳ್ಮೆಯಿಂದ ಕೇಳಿ, ಕೆಲವು ವೇಳೆ ತಾವೂ ಮತ್ತೆ ಓದಿ ಅಮೂಲ್ಯವಾದ ಸಲಹೆಗಳನ್ನು ನೀಡುತ್ತಿದ್ದರಲ್ಲದೆ, ಉತ್ತೇಜನಕರವಾದ ಮಾತುಗಳನ್ನಾಡಿ ತರುಣರನ್ನು ಹುರಿದುಂಬಿಸುತ್ತಿದ್ದರು. ತಮಗೆ ಮೆಚ್ಚಿಗೆಯಾದ ಲೇಖನಗಳನ್ನು 'ಯೂನಿಯನ್ ಪತ್ರಿಕೆ' ಮೊದಲಾದವುಗಳಲ್ಲಿ ಪ್ರಕಟಪಡಿಸುವುದಕ್ಕೂ ಅವಕಾಶ ಮಾಡಿಕೊಡುತ್ತಿದ್ದರು.

'ತರುಣರ ದಂಡಿನ' ವಿಷಯವನ್ನು ಹೇಳುವಾಗ ಬಹಳ ಸ್ವಾರಸ್ಯವಾದ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ೧೯೩೭ನೇ ಫೆಬ್ರವರಿ ತಿಂಗಳಲ್ಲಿ ಒಂದು ದಿನ ತರುಣರ ದಂಡಿನ ವಾರ್ಷಿಕೋತ್ಸವವನ್ನು ನಡೆಸಲು ಸಿದ್ಧತೆಗಳಾಗಿದ್ದವು. ಆ ದಿನದ ಮುಖ್ಯ ಅತಿಥಿಗಳು ಶ್ರೀ ದ.ರಾ. ಬೇಂದ್ರೆಯವರು. ಸಮಾರಂಭದ ಅಧ್ಯಕ್ಷರು ಕನ್ನಡ ಪಿತಾಮಹ ಬಿ.ಎಂ. ಶ್ರೀಕಂಠಯ್ಯನವರು. ತೀ.ನಂ.ಶ್ರೀ ಯವರು ಸಂಘದ ಅಧ್ಯಕ್ಷರಷ್ಟೆ. ಇವರಲ್ಲದೆ 'ಆನಂದ' (ಅಜ್ಜಂಪುರ ಸೀತಾರಾಂ), ಎ.ಎನ್. ಮೂರ್ತಿರಾಯರು, ಎನ್.ಎಸ್. ನಾರಾಯಣಶಾಸ್ತ್ರಿಗಳು, ವರದಾಚಾರ್ಯರು ಮೊದಲಾದವರು ಆಹ್ವಾನಿತರಾಗಿ ಬಂದಿದ್ದರು. ಸಮಾರಂಭಕ್ಕೆ ಮೊದಲು ಗ್ರೂಪ್‌ಫೋಟೋ ತೆಗೆಯುವ ಕಾರ್ಯಕ್ರಮವಿತ್ತು. ಕುರ್ಚಿಗಳಲ್ಲಿ ಪ್ರಮುಖ ಅತಿಥಿಗಳೂ ಆಹ್ವಾನಿತರೂ ಕೂಡುವುದು ಸಂಪ್ರದಾಯವಷ್ಟೆ. ತೀ.ನಂ.ಶ್ರೀ.ಯವರು ತಮ್ಮ ಗುರುಗಳು ಕುಳಿತಮೇಲೆ ತಾವು ಕುಳಿತುಕೊಳ್ಳುವುದಕ್ಕಾಗಿ ನಿರೀಕ್ಷಿಸುತ್ತಿದ್ದರು. ಇವರ ಇಂಗಿತವನ್ನು ಅರಿತ ಬಿ.ಎಂ.ಶ್ರೀ.ಯವರು ತೀ.ನಂ.ಶ್ರೀ.ಯವರನ್ನು ಕುರಿತು "ನನಗೆ ಫೋಟೋಗಳಿಗಾಗಿ ಕುಳಿತು ಬೇಸರವಾಗಿದೆ. ಇಂದು ನಾನು ನಿಂತುಕೊಳ್ಳುತ್ತೇನೆ" ಎನ್ನುತ್ತ ಅವರನ್ನು ಹಿಡಿದೆಳೆದು ಕುರ್ಚಿಯಲ್ಲಿ ಬಲಾತ್ಕಾರವಾಗಿ ಕೂಡಿಸಿ ತಾವು ಅವರ ಹಿಂದೆ ನಿಂತುಬಿಟ್ಟರು. ತೀ.ನಂ.ಶ್ರೀ. ಗತ್ಯಂತರವಿಲ್ಲದೆ

ಬಹಳ ಸಂಕೋಚದಿಂದ ಕುರ್ಚಿಯಲ್ಲಿ ಕುಳಿತರು. ಈ ಸಮಯದಲ್ಲಿ ಬಿ.ಎಂ.ಶ್ರೀ.ಯವರ ಅಂಗಿಯ ತುದಿಯು ತೀ.ನಂ.ಶ್ರೀ.ಯವರ ಹೆಗಲ ಮೇಲೆ ಬಿದ್ದಿತು. ಬಿ.ಎಂ.ಶ್ರೀ.ಯವರು ತಮ್ಮ ಶಿಷ್ಯನ ಸಂಕೋಚವನ್ನು ಕಂಡು "ನೀವೇನೂ ಸಂಕೋಚಪಡಬೇಕಾಗಿಲ್ಲ. ನೀವು ಕುಳಿತರೂ ಒಂದೇ, ನಾನು ಕುಳಿತರೂ ಒಂದೇ. You see my mantle is already falling on you" ಎಂದರು. ಸಂಕೋಚದಿಂದ ಮೊದಲೇ ಬಾಗಿಸಿದ್ದ ತೀ.ನಂ.ಶ್ರೀ.ಯವರ ತಲೆ ಮತ್ತಷ್ಟು ಬಾಗಿ, ಮುಖ ಕೆಂಪೇರಿತು. ಹೀಗೆ, ಬಿ.ಎಂ.ಶ್ರೀ.ಯವರು ತಮ್ಮ ಪಟ್ಟಶಿಷ್ಯನನ್ನು ತಮ್ಮ ಉತ್ತರಾಧಿಕಾರಿಯಾಗಿ ಆ ಗಳಿಗೆಯಲ್ಲಿ ಪ್ರಕಟವಾಗಿ ನಾಮಕರಣ ಮಾಡಿದರು! (ಈ ಫೋಟೋವನ್ನು ಈಗಲೂ ಜೋಪಾನವಾಗಿ ಇಟ್ಟಿದ್ದೇನೆ).

ಮತ್ತೆ ೧೯೪೨ರಲ್ಲಿ ತೀ.ನಂ.ಶ್ರೀ.ಯವರೊಡನೆ ಕಳೆದ ಕೆಲವು ರಸನಿಮಿಷಗಳನ್ನು ನಾನು ಎಂದಿಗೂ ಮರೆಯಲಾರೆ. ಆಗ ಶಿವಮೊಗ್ಗೆಯಲ್ಲಿ ಇದ್ದ ಶ್ರೀ ಮೂರ್ತಿರಾಯರು ಬೆಂಗಳೂರಿಗೆ ಬಂದಿದ್ದರು. ತೀ.ನಂ.ಶ್ರೀ.ಯವರು ಸರ್ವೇಯರ್ ರಸ್ತೆಯಲ್ಲಿ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳ ಮನೆಯಲ್ಲಿ ವಾಸವಾಗಿದ್ದರು. ಒಂದು ಸಂಜೆ ಅವರ ಮನೆಯಲ್ಲಿ ಅವರ ಆಪ್ತ ಸ್ನೇಹಿತರ ತಂಡ ಸೇರಿದ್ದಿತು. ಮೂರ್ತಿರಾಯರಲ್ಲದೆ, ಶ್ರೀ ಪು.ತಿ. ನರಸಿಂಹಾಚಾರ್ಯರು ಮತ್ತು ಡಾ॥ ಕೆ. ರಾಮರಾಯರೂ ಅಲ್ಲಿ ಸೇರಿದ್ದರು. ಮೂರ್ತಿರಾಯರನ್ನು ಕಾಣುವ ಉದ್ದೇಶದಿಂದ ಅಲ್ಲಿಗೆ ಹೋದ ನನಗೆ ಅನಿರೀಕ್ಷಿತವಾಗಿ ಇವರೆಲ್ಲರ ಸಂದರ್ಶನವನ್ನು ಪಡೆಯುವ ಅಪೂರ್ವ ಯೋಗ ಲಭಿಸಿತು. ಉಪಾಹಾರ ಸ್ವೀಕಾರವಾದ ಮೇಲೆ ಮಿತ್ರವೃಂದವು ಲಾಲ್‌ಬಾಗ್ ಕಡೆ ನಡೆಯಿತು. ನಾನೂ ಅತ್ಯಂತ ಉತ್ಸಾಹದಿಂದ ಅವರೊಡನೆ ಹೋದೆ. ಲಾಲ್‌ಬಾಗಿನಲ್ಲಿ ಹಸಿರು ಹುಲ್ಲಿನ ಮೇಲೆ ಕುಳಿತು ಸುಮಾರು ಮೂರುಗಂಟೆಗಳ ಕಾಲ ಆ ಮಿತ್ರವೃಂದದ ರಸಮಯವಾದ ವಾಗ್ವಿಲಾಸವನ್ನು ಆಲಿಸುವ ಪುಣ್ಯ ನನ್ನ ಪಾಲಿಗೆ ಬಂದಿದ್ದಿತು. ಅದನ್ನು ನೆನೆದಾಗಲೆಲ್ಲಾ ಹ್ಯಾಸ್‌ಲಿಟ್ಟಿನ My first acquintance with poets ಎಂಬ ಪ್ರಬಂಧವು ನೆನಪಿಗೆ ಬರುವುದಾದರೂ ಅವನಂತೆ ತನಗಾದ ಆನಂದಾನುಭವವನ್ನು ಬರೆದಿಡುವ ಶಕ್ತಿ ನನಗಿಲ್ಲವೆಂಬ ಕೊರತೆ ಮಾತ್ರ ಉಳಿದಿದೆ.

ಇದೇ ಸಮಯದಲ್ಲಿ ಬೆಂಗಳೂರಿನ ವಿಶ್ವೇಶ್ವರಪುರದಲ್ಲಿರುವ ಅಶಕ್ತ ಪೋಷಕ ಸಭೆಯ ಅನಾಥಾಲಯಕ್ಕೆ ನಾನು Honorary Warden ಆಗಿದ್ದೆ. ಒಂದು ದಿನ ತೀ.ನಂ.ಶ್ರೀ. ಯವರಿಂದ ಈ ಸಂಸ್ಥೆಗೆ ೧೦ ರೂ. ಮನಿ ಆರ್ಡರು ಬಂದಿತು. ಅದರೊಡನೆ ಬಂದ ಪತ್ರದಲ್ಲಿ "ನಮ್ಮ ಮುದ್ದು ವಿಶಾಲಾಕ್ಷಿಯ ನೆನಪಿಗಾಗಿ ಅನಾಥ ಮಕ್ಕಳಿಗೆ ಸಿಹಿ ತಿಂಡಿ ಹಂಚುವುದು" ಎಂದು ಬರೆದಿದ್ದರು. ಅವರ ಅಭೀಷ್ಟದಂತೆ ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಿಸಿದೆವು. ನಾನು ಅಲ್ಲಿ ಇದ್ದ ಏಳು ವರ್ಷಗಳ ಕಾಲವೂ ಇದು ನಡೆಯುತ್ತಿತ್ತು.

ಧಾರವಾಡದಲ್ಲಿ ಕನ್ನಡ ಪ್ರಾಧ್ಯಾಪಕರಾಗಲು ತೀ.ನಂ.ಶ್ರೀ. ಅವರಿಗೆ ಆಹ್ವಾನ ಬಂದ ತರುಣದಲ್ಲಿ ಅವರ ಸಲಹೆಯನ್ನು ಪಡೆದು ನಾನೂ ಹುಬ್ಬಳ್ಳಿಯ ಕಾಲೇಜೊಂದರಲ್ಲಿ ಕೆಲಸಕ್ಕೆ ಸೇರಿದೆ. ಈಗ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿರುವ ಹೆಚ್.ಕೆ. ರಾಮಚಂದ್ರ ಮೂರ್ತಿಯವರು ನನ್ನ ಸಹೋದ್ಯೋಗಿಗಳಾಗಿದ್ದರು. ನಾವು ಹುಬ್ಬಳ್ಳಿಯಲ್ಲಿ ಇದ್ದುದನ್ನು

ಬಲ್ಲ ತೀ.ನಂ.ಶ್ರೀ. ಅವರು ಧಾರವಾಡಕ್ಕೆ ಬರಬೇಕೆಂದು ನಮಗೆ ಪದೇ ಪದೇ ಹೇಳಿ ಕಳುಹಿಸುತ್ತಿದ್ದರು. ಧಾರವಾಡದಿಂದ ಮೈಸೂರಿಗಾಗಲೀ, ಬೆಂಗಳೂರಿಗಾಗಲೀ ಪ್ರಯಾಣಮಾಡುವಾಗ ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ತಮ್ಮನ್ನು ಭೇಟಿಮಾಡುವಂತೆ ಪತ್ರಮುಖೇನ ಆಹ್ವಾನಿಸುತ್ತಿದ್ದರು. ಹುಬ್ಬಳ್ಳಿಯಲ್ಲಿ ರೈಲು ಸುಮಾರು ಮೂರು ಗಂಟೆಗಳ ಕಾಲ ನಿಲ್ಲುತ್ತಿದ್ದಿತು. ಅವರಿಗೂ ಬೇಸರ ಕಳೆದ ಹಾಗಾಗುವುದಲ್ಲದೆ ನಮಗೆ ಗುರುಸಾನ್ನಿಧ್ಯದಲ್ಲಿ ಸ್ವಲ್ಪ ಕಾಲವನ್ನು ಕಳೆದಂತಾಗುವುದೆಂದು ನಾವು ಅಂತಹ ಅವಕಾಶವನ್ನು ಕಳೆದುಕೊಳ್ಳುತ್ತಿರಲಿಲ್ಲ. ಅದೇ ವರ್ಷ (೧೯೫೩-೫೪) ನವರಾತ್ರಿಯಲ್ಲಿ ಸರಸ್ವತಿ ಹಬ್ಬದ ದಿನ ನಾನು ನನ್ನ ಮಗಳೊಡನೆ ಕಾರಣಾಂತರದಿಂದ ಧಾರವಾಡಕ್ಕೆ ಹೋಗಬೇಕಾಯಿತು. ಧಾರವಾಡಕ್ಕೆ ಹೋದಮೇಲೆ ಗುರುಗಳ ದರ್ಶನವಿಲ್ಲದೆ ಹಿಂದಕ್ಕೆ ಬರುವುದುಂಟೇ? ಸರಿ! ಅವರ ಮನೆಯನ್ನು ಸೇರಿದೆವು. ಸುಮಾರು ೧೧ ಘಂಟೆ ಸಮಯ. ಕೋಸಂಬರಿ ಪಾನಕ ರಸಾಯನ ಹಂಚಿದರು. ಅವನ್ನು ತಿನ್ನುತ್ತಿರುವಾಗ ಹೊರಗಡೆ ಬೀದಿಯಲ್ಲಿ ವಿಪರೀತ ಗದ್ದಲ. ಹೆಂಗಸರ ಬಿರುಸು ಮಾತುಗಳು ಬಿಂದಿಗೆಗಳ ಬಡಿತ ಶಬ್ದ ಕೇಳಬಂದಿತು. ಕುತೂಹಲದಿಂದ ಕೂಡಿದ ನಮ್ಮ ಮುಖಗಳನ್ನು ಕಂಡ ತೀ.ನಂ.ಶ್ರೀ. ಅವರು ನಗುತ್ತ "ನೋಡಿ! ಒಬ್ಬ ದಮಯಂತಿಗಾಗಿ ಅನೇಕ ನಳರು ಬಂದುದನ್ನು ಕೇಳಿದ್ದೀರಿ. ಆದರೆ ಒಂದು 'ನಳ'ಕ್ಕಾಗಿ ಅನೇಕ ದಮಯಂತಿಯರು ಬಂದುದನ್ನು ಎಲ್ಲಾದರೂ ನೋಡಿದ್ದೀರಾ?" ಎಂದರು. ಆಗ ನಮಗೆ ತಿಳಿಯಿತು. ನಲ್ಲಿ ನೀರಿಗಾಗಿ ಪರದಾಡುತ್ತಿರುವ ಹೆಣ್ಣು ಮಕ್ಕಳ ಕೋಲಾಹಲದ ಶಬ್ದ ಅದು ಎಂದು. ಆ ಕಡೆ 'ನಳ' ಎಂದು ನೀರಿನ ನಲ್ಲಿಗೆ ಹೆಸರು. ಊಟಕ್ಕೆ ಅಲ್ಲಿಯೇ ಉಳಿಯಬೇಕೆಂದು ಅವರಿಂದಲೂ ಅವರ ಶ್ರೀಮತಿಯವರಿಂದಲೂ ನಿರ್ಬಂಧ ಹೆಚ್ಚಾದುದರಿಂದ ಊಟಕ್ಕೆ ಅಲ್ಲಿಯೇ ನಿಂತೆವು. ಒಳ್ಳೆಯ ಹಬ್ಬದಡಿಗೆಯ ಔತಣವೇ ಆಯಿತು. ಸುಮಾರು ೨ ಗಂಟೆ ವೇಳೆಗೆ ಹುಬ್ಬಳ್ಳಿಗೆ ಹಿಂತಿರುಗಲು ಸಜ್ಜಾಗುತ್ತಿರುವಾಗಲೇ ಬಹಳ ಬಿರುಸಾದ ಮಳೆ ಪ್ರಾರಂಭವಾಗಿ ಧಾರಾಕಾರವಾಗಿ ಒಂದೇ ಸಮನೆ ಸುರಿಯತೊಡಗಿತು. ಸಂಜೆ ೭ ಗಂಟೆಯಾದರೂ ನಿಲ್ಲುವ ಸೂಚನೆಯೇ ಕಂಡುಬರಲಿಲ್ಲ. ಮನೆಯವರೆಲ್ಲಾ ರಾತ್ರಿಯೂ ನಾವು ಅಲ್ಲಿಯೇ ನಿಲ್ಲಬೇಕೆಂದು ನಿರ್ಬಂಧಪಡಿಸಿದರು. ಆದರೆ ಅನಿವಾರ್ಯವಾಗಿ ನಾವು ಅಂದೇ ಹುಬ್ಬಳ್ಳಿಗೆ ಹಿಂದಿರುಗಲೇಬೇಕಾಗಿದ್ದುದರಿಂದ ನಮಗೆ ಕೊಡೆ, ಮಳೆಯಂಗಿಗಳನ್ನು ಒದಗಿಸಿ ನಮ್ಮನ್ನು ರೈಲ್ವೆ ನಿಲ್ದಾಣದಲ್ಲಿ ಬಿಟ್ಟುಬರಲು ಚಿರಂಜೀವಿಯನ್ನು ಕಳುಹಿಸಿ ನಮ್ಮನ್ನು ಬೀಳ್ಕೊಟ್ಟರು. ಅಂತಹ ಶಿಷ್ಯವಾತ್ಸಲ್ಯ ಅವರದು.

ತೀ.ನಂ.ಶ್ರೀ.ಯವರು ಅಮೆರಿಕ ಪ್ರವಾಸವನ್ನು ಕೈಗೊಳ್ಳುವರೆಂದು ತಿಳಿದ ಕೂಡಲೆ ಅವರ ಸುಖಪ್ರಯಾಣವನ್ನು ಬಯಸಿ ಒಂದು ಪತ್ರವನ್ನು ಬರೆದೆ. ಅದಕ್ಕೆ ಉತ್ತರ ಬರೆದು ಕೃತಜ್ಞತೆಯನ್ನು ಸೂಚಿಸಿದ್ದರು. ಆ ಪತ್ರವನ್ನು ಜೋಪಾನವಾಗಿ ಇಟ್ಟಿದ್ದೇನೆ. ಹೀಗೆ ಗುರುವಾಗಿ ವಿದ್ಯೆಯನ್ನು ಕಲಿಸಿ, ತಂದೆಯಂತೆ ವಾತ್ಸಲ್ಯವನ್ನು ಹರಿಸಿ, ಮಿತ್ರನಂತೆ ಮನಸ್ಸನ್ನು ರಂಜಿಸಿ, ಬಂಧುವಿನಂತೆ ಸತ್ಕಾರದಿಂದ ತಣಿಸುತ್ತಿದ್ದ ತೀ.ನಂ.ಶ್ರೀ. ಯವರು ಇನ್ನಿಲ್ಲವೆಂದರೆ ನಂಬುವುದೆಂತು? ಅವರ ವಿದ್ವತ್ತು ಹೆಚ್ಚು ಗಾಢವಾದುದೋ ಅವರ ಪ್ರೀತಿ ಸ್ನೇಹಗಳು ಹೆಚ್ಚು ಗಾಢವಾದವೋ ಹೇಳಲು ಅಸಾಧ್ಯ. ಅವರು ರಚಿಸಿರುವ ಕೃತಿಗಳಲ್ಲಿ ಅವರು ನೀಡಿರುವ ಸ್ಫೂರ್ತಿಯಲ್ಲಿ ಅವರು ನಮ್ಮೊಡನೆ ಸದಾ ಇದ್ದೇ ಇರುವರೆಂದು ಸಮಾಧಾನವನ್ನು ತಂದುಕೊಳ್ಳೋಣ.

ಉದಯೋನ್ಮುಖ ಕನ್ನಡ ಕವಿ ತೀ.ನಂ.ಶ್ರೀ.

ಟಿ.ಎನ್. ಶ್ಯಾಮರಾವ್

●

ತೀ.ನಂ.ಶ್ರೀ. ಅವರನ್ನು ನಾನು ಮೊದಲು ನೋಡಿದ್ದು ನಲವತ್ತುನಾಲ್ಕು ವರ್ಷಗಳ ಹಿಂದೆ, ತುಮಕೂರಿನಲ್ಲಿ. ಆಗ ನಾವು ಒಂದೇ ಶಾಲೆಯ ವಿದ್ಯಾರ್ಥಿಗಳು ; ಆದರೂ ಪರಸ್ಪರ ಪರಿಚಯವಿಲ್ಲದವರು. ಅದಕ್ಕೆ ಕಾರಣವಿಷ್ಟೆ : ಅವರದು ತುತ್ತತುದಿಯ ತರಗತಿ, ನನ್ನದು ಕೊಟ್ಟ ಕೊನೆ; ವರ್ಷಗಳಿಂದ ಆ ಶಾಲೆಯಲ್ಲಿ ಪಳಗಿದ ಕದೀಮರು ಅವರು, ನಾನು ವರ್ಷದ ಕಡೆಯಲ್ಲಿ ಹೊಸದಾಗಿ ಸೇರಿಕೊಂಡಿದ್ದ 'ಮೈಸೂರು ಮಾಣಿ'. ಇನ್ನೂ ವಿಶೇಷವೆಂದರೆ, ನನ್ನ ಚಟುವಟಿಕೆಯೆಲ್ಲ ಅವರು ಸುಳಿದಾಡದಿದ್ದ ಆಟದ ಬಯಲಲ್ಲಿ, ಸ್ಕೌಟ್ ದಳದಲ್ಲಿ.

ಶಾಲೆಯದೊಂದು ಮಾಸಪತ್ರಿಕೆ : ಹೆಸರು School Folk. ಹೆಚ್ಚು ಭಾಗ ಇಂಗ್ಲಿಷಿಗೆ ಮೀಸಲು, ಕನ್ನಡಕ್ಕೆ ಕಡೆಯಲ್ಲಿ ನಾಲ್ಕಾರು ಪುಟ. (ಆ ಕಾಲದಲ್ಲಿ ಕನ್ನಡದ ಹಕ್ಕಿಗಾಗಿ ಹೋರಾಡುವವರು ಯಾರಿದ್ದರು?) ಪತ್ರಿಕೆ ಜನ್ಮತಾಳಿದ್ದು ೧೯೧೯ರಲ್ಲಿ, – ತೀ.ನಂ.ಶ್ರೀ. ಹೈಸ್ಕೂಲಿಗೆ ಸೇರಿದ ವರ್ಷ. ಅದರ ಪ್ರೇರಕಶಕ್ತಿ, ರಕ್ಷಾಮಣಿ ಶಾಲೆಯ ಮುಖ್ಯೋಪಾಧ್ಯಾಯ ರಾಗಿದ್ದ (ಜೂನ್ ೧೯೨೨ರಲ್ಲಿ ಹುದ್ದೆಯಿಂದ ನಿವೃತ್ತರಾದ) K.A.K. ಅವರು ವೇದಾಂತಿ, ಮೇಧಾವಿ, ಸಂಸ್ಕೃತ ವಿದ್ವಾಂಸರು, ರಸಿಕ ಬೋಧಕರು. "Begin, be bold and venture - to be wise" ಎಂಬುದು ಪತ್ರಿಕೆಗೆ ಅವರು ಕೊಟ್ಟ ಆದರ್ಶಸೂಕ್ತಿ. ಪ್ರಥಮ ಸಂಚಿಕೆಗೆ ಮುನ್ನುಡಿ ಬರೆಯುತ್ತ, "..... Youthful expression possesses a charm of its own..... I conceive it to be a part of the duty of those who hold the responsible position of educating the Indian youth to... direct boys' activities in the channel of innocent utility and wise moderation," ಎಂದು ತಿಳಿಸಿದ್ದರು. ಅವರ ವಿಚಾರಾತ್ಮಕ ಇಂಗ್ಲಿಷ್ ಲೇಖನಗಳು, ಕವನಗಳು ಪತ್ರಿಕೆಯಲ್ಲಿ ಆಗಾಗ ಪ್ರಕಟವಾಗುತ್ತಿದ್ದವು. ಇಂಥವರ ಸಾನ್ನಿಧ್ಯದಲ್ಲಿ ಮೂರು ವರ್ಷಕಾಲ ಬೆಳೆದ ತೀ.ನಂ.ಶ್ರೀ. ಸಂಪ್ರದಾಯಶೀಲರೂ, ಸರಳಸಂಪನ್ನರೂ, ಸೌಜನ್ಯಪರರೂ, ಅತಿರೇಕವಿದೂರರೂ, ಹಿತ-ಮಿತ ಭಾಷಿಗಳೂ ಆದುದು ಆಶ್ಚರ್ಯವಲ್ಲ.

ನಾನು ಶಾಲೆಗೆ ಸೇರುವ ಮೊದಲೇ School Folk ಪತ್ರಿಕೆಯ ಹಿಂದಿನ ಮೂರು ಸಂಚಿಕೆಗಳಲ್ಲಿ "ತೀ.ನಂ. ಶ್ರೀಕಂಠಯ್ಯ" ಎಂಬ ಹೆಸರು ಎಡೆಬಿಡದೆ ಕಾಣಿಸಿಕೊಂಡು ವಿದ್ಯಾರ್ಥಿ

ಮಂಡಲದಲ್ಲಿ 'ಪ್ರಸಿದ್ಧ'ವಾಗಿತ್ತು. ಅನಂತರ ಡಿಸೆಂಬರ್ ಸಂಚಿಕೆಯಲ್ಲಿ My Mother ಎಂಬ ಶಿರೋನಾಮೆಯ ಇಂಗ್ಲಿಷ್ ಲೇಖನ ಪ್ರಕಟವಾಯಿತು. ಹೀಗೆ ದ್ವಿಭಾಷೆಯಲ್ಲಿ ಬರೆಯಬಲ್ಲ ವಿದ್ಯಾರ್ಥಿಯ ಸಾಹಿತ್ಯಾಭಿರುಚಿ ಲೇಖನ ಸಾಮರ್ಥ್ಯವನ್ನು ಮೆಚ್ಚಿಕೊಂಡ ಅಧ್ಯಾಪಕರಲ್ಲಿ ನನ್ನ ಸೋದರಮಾವ A.S.B. ಒಬ್ಬರು. ತೀ.ನಂ.ಶ್ರೀ. ಆರಿಸಿಕೊಂಡಿದ್ದ ಐಚ್ಛಿಕ ವ್ಯಾಸಂಗ ವಿಷಯಗಳು ಗಣಿತ ಮತ್ತು ವಿಜ್ಞಾನ; ದ್ವಿತೀಯ ಭಾಷೆ ಸಂಸ್ಕೃತ. Logic Lecturer ಸ್ಥಾನಕ್ಕೆ ನಿಯಮಿತರಾಗಿ ಬಂದಿದ್ದ A.S.B., ಸಂಸ್ಕೃತ M.A. ಆದ್ದರಿಂದ University Entrance ವಿದ್ಯಾರ್ಥಿಗಳಿಗೆ ಸಂಸ್ಕೃತ (ಇಂಗ್ಲಿಷ್) ಭಾಷಾಂತರ ತರಗತಿಯನ್ನು ತೆಗೆದು ಕೊಳ್ಳುತ್ತಿದ್ದರು. ಗೀರ್ವಾಣ ಭಾಷೆಯಲ್ಲಿ ತೀವ್ರ ಆಸಕ್ತಿಯನ್ನು ತೋರಿದ ತೀ.ನಂ.ಶ್ರೀ. ಗೆ ಅವರಿಂದ ಉತ್ತೇಜನ ಲಭಿಸಿತು. ಮುಂದೆ ತಾನೂ M.A. ಪದವಿಗೆ ಸಂಸ್ಕೃತವನ್ನು ತೆಗೆದು ಕೊಳ್ಳುವ ಅಭಿಲಾಷೆಯನ್ನು ವ್ಯಕ್ತಪಡಿಸಿ ಸಲಹೆ ಕೇಳಲು, ಲೌಕಿಕ ದೃಷ್ಟಿಯಿಂದ ಲಾಭದಾಯಕವಲ್ಲ ವೆಂದು ತಮ್ಮದೇ ನಿದರ್ಶನದಿಂದ ಸಮರ್ಥಿಸಿದರಂತೆ A.S.B. ಮೈಸೂರು ಸ್ಥಳ-ಮನೆಯವರೂ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗಮಾಡಿದವರೂ ಆದ ಅವರು ತಮ್ಮ ಗುರುಗಳಾಗಿದ್ದ ಹಿರಿಯಣ್ಣ, ಬಿ.ಎಂ.ಶ್ರೀ., ರಾಲೊ ಅವರ ಗುಣಕಥನಮಾಡಿ, ವ್ಯಾಸಂಗಕ್ಕೆ ಮೈಸೂರಿನ ಶಾಂತ ವಾತಾವರಣ ಹೆಚ್ಚು ಹಿತಕರವೆಂದು ಹೇಳಿ, ತರುಣ ಶಿಷ್ಯನ ವ್ಯಾಸಂಗ ಕ್ಷೇತ್ರವನ್ನು ಬೆಂಗಳೂರಿ ನಿಂದ ಮೈಸೂರಿಗೆ ಬದಲಿಸಲು ಕಾರಣರಾದರಂತೆ. ೧೯೩೬ರಲ್ಲಿ A.S.B. ಅಕಾಲ ಮೃತ್ಯುವಿಗೆ ತುತ್ತಾಗಲು ತಮ್ಮ ಸಂತಾಪವನ್ನು ಸೂಚಿಸುತ್ತ ತೀ.ನಂ.ಶ್ರೀ. ಈ ಸಂಗತಿಯನ್ನು ತಿಳಿಸಿದರು.

ಸೆಪ್ಟೆಂಬರ್ ೧೯೨೨ರ School Folk ಸಂಚಿಕೆಯಲ್ಲಿ ಪ್ರಕಟವಾದ 'ಮಿತ್ರವಿಲಾಪಂ' ತೀ.ನಂ.ಶ್ರೀ.ಯ ಹೃದಯಾಂತರಾಳದಿಂದ ಬಂದ ಆರ್ತವಾಣಿ. ಅದು ಅವರ ಪ್ರಥಮ ಸ್ವತಂತ್ರ ಕವನವೆಂದಲ್ಲದೆ ಇನ್ನೂ ಹಲವಾರು ದೃಷ್ಟಿಯಿಂದ ಇಂದು ಮಹತ್ವಪೂರ್ಣವಾಗಿದೆ.

ಮೈಸೂರು ಮಹಾರಾಜ ಕಾಲೇಜ್ ವಿದ್ಯಾರ್ಥಿಯಾದ ಮೇಲೆ School Folk ಪತ್ರಿಕೆಗೆ ತೀ.ನಂ.ಶ್ರೀ. ಕಳುಹಿಸಿದ ಬರೆಹಗಳು ಕೇವಲ ಮೂರು: ೧೯೨೩ನೆಯ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಇಂಗ್ಲಿಷ್ ಲೇಖನ, Happy Reflections; ಮುಂದಿನ ಸಂಚಿಕೆಯಲ್ಲಿ ಅಚ್ಚಾದ ಸರೋಜಿನಿ ನಾಯ್ಡು ಅವರ The Golden Threshold ಸಂಕಲನದಿಂದ ಒಂದು ಕವನದ ಕನ್ನಡ ಅನುವಾದ; ಮೂರನೆಯ ವರ್ಷ – ೧೯೨೪ – ಸೆಪ್ಟೆಂಬರ್ ಸಂಚಿಕೆಯಲ್ಲಿ ಬೆಳಕು ಕಂಡ J.R. Lowellರ The Fountain ಎಂಬ ಪದ್ಯದ ಕನ್ನಡ ಭಾವಾನುವಾದ. ಅಂದು ತೀ.ನಂ.ಶ್ರೀ. ಅವರ ಭಾಷಾಂತರ ಕೌಶಲ ಯಾವ ಮಾದರಿಯಾಗಿತ್ತು, ಮುಂದೆ ಹೇಗೆ ಮಾರ್ಪಟ್ಟಿತು, ಎಂದು ತಿಳಿಯಲು ಆ ಎರಡು ಅನುವಾದಗಳು ಕೈಗಂಬಗಳಂತೆ ನೆರವಾಗುತ್ತವೆ.

(ಈ ಲೇಖನದಲ್ಲಿ ಕೊಟ್ಟಿರುವ ಕವನಗಳು "ತೀ.ನಂ.ಶ್ರೀ.ಯವರ ಸಮಗ್ರ ಕವಿತೆಗಳು" ಪುಸ್ತಕದಲ್ಲಿ ಸೇರ್ಪಡೆಯಾಗಿದೆ –ಸಂಪಾದಕ)

ಪ್ರಾತಃಸ್ಮರಣೀಯರು

ಎಲ್.ಎಸ್. ಶೇಷಗಿರಿರಾವ್

●

ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು. ನಾನು ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ (ಈಗಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು) ಇಂಗ್ಲಿಷ್ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ ಮೂರನೆ ದಿನ. ನಾನು ತರಗತಿಯೊಂದನ್ನು ಮುಗಿಸಿಕೊಂಡು ಅಧ್ಯಾಪಕರ ಕೊಠಡಿಗೆ ಕಾಲಿಟ್ಟೆ. ಜವಾನ, "ಶ್ರೀಕಂಠಯ್ಯನವರು ನಿಮ್ಮನ್ನು ನೋಡಬೇಕಂತೆ, ನಿಮಗೆ ಬಿಡುವಿದ್ದರೆ ಈಗ ಬರುತ್ತಾರಂತೆ" ಎಂದು ಹೇಳಿದ. ನಾನೇ ಅವರ ಕೊಠಡಿಗೆ ಹೋದೆ. "ಬನ್ನಿ ಬನ್ನಿ" ಎಂದು ನಗುನಗುತ್ತ ಸ್ವಾಗತಿಸಿದರು ತೀ.ನಂ.ಶ್ರೀ. ನನಗೆ ಕುತೂಹಲ – ಅವರೆಗೆ ನನ್ನ ಪರಿಚಯವೇ ಇಲ್ಲದ ತೀ.ನಂ.ಶ್ರೀ. ನನಗೆ ಹೇಳಿ ಕಳುಹಿಸಲು ಕಾರಣವೇನಿರಬಹುದು ಎಂದು. "ನಿಮಗೆ ಆಶ್ಚರ್ಯವಾಗಬಹುದು ಈತ ಏತಕ್ಕೆ ಹೇಳಿ ಕಳುಹಿಸಿದ ಅಂತ. ನೋಡಿ ಕಳೆದಗಂಟೆ ಒಂದು ವಿಶೇಷಸಂಗತಿ ನಡೆಯಿತು. ನಾನೇ ನಿಮಗೆ ಹೇಳಿ ನಿಮ್ಮ ಪರಿಚಯ ಮಾಡಿಕೊಳ್ಳೋಣ ಅಂತ ಹೇಳಿಕಳುಹಿಸಿದೆ. ಜವಾನ ನೀವು ಬರಬೇಕು ಎಂದು ಹೇಳಿದನೊ ಏನೊ," ಎಂದರು. "ಇಲ್ಲ ಸಾರ್, ಅವನು ನೀವು ಹೇಳಿಕಳುಹಿಸಿದಂತೆಯೆ ಹೇಳಿದ, ನಾನೇ ಬಂದೆ", ಎಂದು ಹೇಳಿದೆ. ಅನಂತರ ಶ್ರೀಕಂಠಯ್ಯನವರು ಹಿಂದಿನ ಗಂಟೆಯ ಕತೆ ಹೇಳಿದರು. ಅವರು ಕಾಲೇಜಿನ ಮೊಗಸಾಲೆಯಲ್ಲಿ ಹೋಗುತ್ತಿದ್ದಾಗ ಒಂದು ಕೊಠಡಿಯಲ್ಲಿ ಒಂದು ಕುತೂಹಲಕಾರಿ ನೋಟ ಕಂಡರಂತೆ. ಒಂದು ತರಗತಿ, ಪುಟ್ಟ ಹುಡುಗನೊಬ್ಬ ವೇದಿಕೆಯ ಮೇಲೆ ನಿಂತು ಏನೋ ಹೇಳುತ್ತಿದ್ದಾನೆ. ಹುಡುಗರೆಲ್ಲ ಕುಳಿತು ಕೇಳುತ್ತಿದ್ದಾರೆ. ನಿಶ್ಶಬ್ದವಾಗಿ ಹಾಗೆಯೆ ಅರ್ಧ ನಿಮಿಷ ಆಲಿಸಿದರಂತೆ ತೀ.ನಂ.ಶ್ರೀ. ಹುಡುಗ ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಿದ್ದ. ಸಂತೋಷವು ಆಯಿತಂತೆ, ಜೊತೆಗೆ ಹುಡುಗನೊಬ್ಬ ಉಪಾಧ್ಯಾಯರು ಬರುವ ಮೊದಲೆ ಹೀಗೆ ವೇದಿಕೆ ಹತ್ತಿ ಮಾತನಾಡುವುದೆ ಎಂದು ಅಸಮಾಧಾನವೂ ಆಯಿತಂತೆ. ತಮ್ಮ ಕೊಠಡಿಗೆ ಹೋಗುವಾಗ ದಾರಿಯಲ್ಲಿದ್ದ ಇಂಗ್ಲಿಷ್ ಅಧ್ಯಾಪಕರ ಕೊಠಡಿಗೆ ಹೋಗಿ ತಾವು ಕಂಡುದನ್ನು ಹೇಳಿ, ತಮ್ಮ ಸಂತೋಷವನ್ನೂ ಅಸಮಾಧಾನವನ್ನೂ ಸೂಚಿಸಿದರಂತೆ. "ಯಾವ ಕೊಠಡಿಯಲ್ಲಿ ನೀವು ಇದನ್ನು ನೋಡಿದ್ದು?" ಎಂದು ಯಾರೋ ಕೇಳಿದರು. ತೀ.ನಂ.ಶ್ರೀ. ಕೊಠಡಿಯ ಸಂಖ್ಯೆ ಹೇಳಿದರು. ಅಲ್ಲಿದ್ದ ಇಂಗ್ಲಿಷ್ ಅಧ್ಯಾಪಕರೆಲ್ಲ ಗೊಳ್ಳನೆ ನಕ್ಕುಬಿಟ್ಟರಂತೆ. ತೀ.ನಂ.ಶ್ರೀ. ಅವರಿಗೆ ಆಶ್ಚರ್ಯವಾಯಿತು. ಆಮೇಲೆ ಒಬ್ಬರು ವಿವರಿಸಿದರು: "ನೀವು ನೋಡಿದಾತ ವಿದ್ಯಾರ್ಥಿಯಲ್ಲ. ಈಗ ತಾನೆ ನಮ್ಮ

ಇಲಾಖೆಗೆ ಬಂದಿರುವ ಅಧ್ಯಾಪಕ – ಶೇಷಗಿರಿ ರಾವ್" ಎಂದು. ಈ ಕತೆ ಹೇಳಿ ತೀ.ನಂ.ಶ್ರೀ. ಎಂದರು : "ಅದು ಕೇಳಿದ ಮೇಲೂ ನನಗೆ ಸಂತೋಷವೇ ಆಯಿತು. ಈಗತಾನೆ ಕೆಲಸಕ್ಕೆ ಸೇರಿದರೂ ನೀವು ಚಳಿ ಬಿಟ್ಟು ಹಾಗೆ ಮಾತನಾಡುತ್ತಿದ್ದಿರಲ್ಲ ಅಂತ." "ನಿಮ್ಮ ವಯಸ್ಸೆಷ್ಟು?" ಎಂದರು. "ಹತ್ತೊಂಬತ್ತು", ಎಂದು ಹೇಳಿದೆ. "ಸರಿ, ನೀವು ವಿದ್ಯಾರ್ಥಿಯಲ್ಲದಿದ್ದರೂ ಅದೇ ವಯಸ್ಸು. ನಾನು ಆಡಿದ ಮಾತನ್ನು ನಿಮಗೆ ಯಾರಾದರೂ ಹೇಳಿದರೆ ನೊಂದುಕೊಳ್ಳ ಬಹುದು. ಅದಕ್ಕಾಗಿ ನಾನೇ ನಿಮಗೆ ತಿಳಿಸಿ, ನಿಮ್ಮ ಮನಸ್ಸು ನೋಯಿಸುವುದು ನನ್ನ ಉದ್ದೇಶವಾಗಿರಲಿಲ್ಲ ಅಂತ ಹೇಳಬೇಕು ಎನ್ನಿಸಿತು" ಎಂದರು. ಇಬ್ಬರೂ ನಡೆದುದನ್ನು ನೆನೆಸಿಕೊಂಡು ನಕ್ಕೆವು. ಹೀಗೆ ಪ್ರಾರಂಭವಾಯಿತು ಇಪ್ಪತ್ತು ಇಪ್ಪತ್ತೆರಡು ವರ್ಷ ಕಾಲ ನಾನು ಹೆಮ್ಮೆಪಟ್ಟುಕೊಳ್ಳುವಂತಹ ಸ್ನೇಹ ಸಂಬಂಧ.

ತೀ.ನಂ.ಶ್ರೀ. ಸ್ವಲ್ಪಕಾಲ ಅದೇ ಕಾಲೇಜಿನ ಮುಖ್ಯಾಧಿಕಾರಿಯಾಗಿದ್ದರು. ಒಮ್ಮೆ ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಅವರು ಮುಖ್ಯಾಧಿಕಾರಿಗಳು. ಹತ್ತು ಗಂಟೆಗೆ ಪರೀಕ್ಷೆ ಪ್ರಾರಂಭ. ನನಗೆ ಒಂದು ಕೊಠಡಿಯಲ್ಲಿ ಮೇಲ್ವಿಚಾರಣೆಯ ಕೆಲಸ. ಚಾಮರಾಜಪೇಟೆಯಲ್ಲಿರುವ ಮನೆಯನ್ನು ಒಂಬತ್ತೂವರೆಗೇ ಬಿಟ್ಟೆ. ಸೈಕಲ್‌ಮೇಲೆ ಹೋಗಲು ಕಾಲು ಗಂಟೆ, ಅಲ್ಲಿಂದ ಐದು ನಿಮಿಷ ಹೆಚ್ಚಿನ ಅವಕಾಶವೂ ಉಂಟಲ್ಲ – ೯.೫೦ಕ್ಕೆ ಕೊಠಡಿಯಲ್ಲಿರಬೇಕು ಎಂದು ನನ್ನ ಲೆಖ್ಖ. ದುರದೃಷ್ಟವಶಾತ್ ಅರ್ಧದಾರಿ ನಡೆದು ಕಣ್ಣಾಸ್ಪತ್ರೆ ದಾಟಿ ಸರ್ಕಲ್‌ಗೆ ಬಂದಾಗ, ಹೆದ್ದಾರಿಯಿಂದ ಬಂದ ಲಾರಿಯೊಂದರಿಂದ ಪಾರಾಗಲು ನಾನು ಫುಟ್‌ಪಾತ್ ಏರಿ, ಸೈಕಲ್‌ನಿಂದ ಬಿದ್ದು, ಬಟ್ಟೆಯೆಲ್ಲ ಧೂಳಾಯಿತು. ಆ ವೈಭವದಲ್ಲಿ ಕಾಲೇಜಿಗೆ ಹೋಗಿ ದಿನವೆಲ್ಲ ಇರಲು ಸಾಧ್ಯವೇ ಇಲ್ಲ ಎನ್ನಿಸಿತು. ಮನೆಗೆ ಹೋಗಿ, ಬಟ್ಟೆ ಬದಲಾಯಿಸಿ, ಕಾಲೇಜಿಗೆ ಹೋದೆ. ನಾನು ಕಾಂಪೌಂಡು ಪ್ರವೇಶಿಸುವ ಹೊತ್ತಿಗೆ ತೀ.ನಂ.ಶ್ರೀ. ಅವರು ಇನ್ನೂ ನಾಲ್ಕೈದು ಮಂದಿ ಅಧ್ಯಾಪಕರೊಂದಿಗೆ ನನ್ನ ಕೊಠಡಿಯಲ್ಲಿ ಬೇರೊಬ್ಬರನ್ನು ನಿಲ್ಲಿಸಿ ಪತ್ರಿಕೆಗಳನ್ನು ಕೊಟ್ಟು ಬರುತ್ತಿದ್ದರು. ನನ್ನನ್ನು ಕಾಣುತ್ತಲೇ ಮೊದಲೇ ಕೆಂಪಗಿದ್ದ ಮುಖ ಇನ್ನೂ ಕೆಂಪಾಯಿತು "I never expected you to be late'' ಎಂದು "you" ಎನ್ನುವ ಪದವನ್ನು ಒತ್ತಿ ಹೇಳಿ, ವಾಗ್ಬಾಣವನ್ನು ಎಸೆದು ಮುನ್ನಡೆದರು. ತುಂಬ ಬೇಸರಿಸಿಕೊಂಡು ಕೊಠಡಿಗೆ ನಡೆದೆ. ಪರೀಕ್ಷೆ ನಡೆಯುತ್ತಿದ್ದಾಗಲೂ, "ತೀ.ನಂ.ಶ್ರೀ. ನನ್ನನ್ನು ಏಕೆ ತಡವಾಯಿತು?" ಎಂದು ವಿವರಣೆ ಕೇಳದೆ ಎಲ್ಲರೆದುರಿಗೆ ಹೀಗೆಂದರಲ್ಲ! ಎಂದು ನನ್ನ ಮನಸ್ಸು ಚಿಂತಿಸುತ್ತಿತ್ತು. ಮಧ್ಯಾಹ್ನ ಮೂರು ಮೂರೂವರೆಗೆ ನನ್ನ ತರಗತಿಯ ಕೆಲಸವೂ ಮುಗಿಯಿತು. ಆಗ ಅವರಿಗೆ ಅಂದಿಗೆ "ಕ್ಯಾಷುಯಲ್ ಲೀವ್" ಬೇಕೆಂದು ಕಾಗದ ಕಳುಹಿಸಿದೆ. ತಕ್ಷಣ ಆಳಿನ ಮೂಲಕ ಕರೆ ಬಂದಿತು, ಹೋದೆ. "ಏನಿದು ಶೇಷಗಿರಿರಾವ್? ದಿನವೆಲ್ಲ ಕೆಲಸ ಮಾಡಿ ರಜಕ್ಕೆ ಬರೆದಿದ್ದೀರಿ? ಅರ್ಜೆಂಟ್ ಕೆಲಸವಿದ್ದು ಹೋಗಬೇಕಾಗಿದ್ದರೆ ಹೋಗಿ, ಕೆಲಸಮಾಡಿ ಒಂದುದಿನ ರಜೆ ಏಕೆ ಕಳೆದುಕೊಳ್ಳುತ್ತೀರಿ?" ಎಂದರು. ಬೆಳಗಿನ ಪ್ರಸಂಗ ಅವರಿಗೆ ಮರೆತೇ ಹೋಗಿದ್ದಂತೆ ತೋರಿತು. "ಇವತ್ತು ಪೂರ್ತಿ ಕೆಲಸ ಮಾಡಿಲ್ಲ, ಸಾರ್. ಬೆಳಗ್ಗೆ ತಡವಾಗಿ ಬಂದೆ" ಎಂದು ಹೇಳಿದೆ. "ಓ, ಕೆಲವು ನಿಮಿಷ ತಾನೇ? ಪ್ರಶ್ನೆ ಪತ್ರಿಕೆ ಹಂಚುವ ಹೊತ್ತಿಗೆ ಬಂದುಬಿಟ್ಟಿರಲ್ಲ" ಎಂದರು.

ನನಗೆ ಏನು ಹೇಳಬೇಕೆಂದು ತೋರಲಿಲ್ಲ. ಅವರ ಮಾತಿನಿಂದ ನನಗೆ ಅಸಮಾಧಾನವಾಗಿತ್ತು ಎಂದು ತೋರಿಸಿಕೊಳ್ಳದೆ ನನಗೆ ತೃಪ್ತಿಯಿಲ್ಲ. "ನಾನು ಹಾಗೆ ಮಾಡುತ್ತೇನೆ ಎಂದು ಭಾವಿಸಿರಲಿಲ್ಲ ಅಂತ ಎಲ್ಲರ ಎದುರಿಗೆ ಹೇಳಿದಿರಿ, ಸಾರ್. you ಅನ್ನುವುದನ್ನು ಒತ್ತಿಯೂ ಹೇಳಿದಿರಿ ಆದ್ದರಿಂದ ಇವತ್ತು ನಾನು ಕೆಲಸ ಮಾಡಿದಂತಾಗಲಿಲ್ಲ", ಎಂದೆ. ಅವರು ಸ್ವಲ್ಪ ಆಶ್ಚರ್ಯಪಟ್ಟಂತೆ ತೋರಿತು. "ಅದನ್ನು ಅಷ್ಟು ಮನಸ್ಸಿಗೆ ತೆಗೆದುಕೊಂಡಿರ? ಸಾಮಾನ್ಯವಾಗಿ ತಡವಾಗಿ ಬಾರದವರು ಹಾಗೆ ಮಾಡಿದರಲ್ಲ ಎಂದು ಹೇಳಿದೆ. ಅಲ್ಲದೆ ನೋಡಿ, ಪರೀಕ್ಷೆಯ ಕಾಲದಲ್ಲಿ ಅಧ್ಯಾಪಕರು ತಡವಾಗಿ ಬಂದರೆ ಛೀಫ್ ಸೂಪರಿಂಟೆಂಡೆಂಟ್‌ಗೆ ಎಷ್ಟು ತೊಂದರೆ ಯೋಚಿಸಿ," ಎಂದರು. ನನ್ನ ಅಸಮಾಧಾನ ಸ್ಫೋಟಿಸಿತು. "ನೀವು ನಾನು ತಡವಾಗಿ ಬಂದೆ ಎಂದು ಆ ಮಾತನಾಡಿದಿರಿ. ಏಕೆ ತಡವಾಯಿತು ಎಂದೂ ಕೇಳಲಿಲ್ಲ," ಎಂದೆ. "ಕಾರಣ ಏನೇ ಆಗಲಿ, ಪರೀಕ್ಷೆ ಕೆಲಸಕ್ಕೆ ತೊಂದರೆ ತಾನೆ?" ಎಂದರು. "Then perhaps, even I were dead you would expect my dead body in the room assigned to me, so as to avoid inconvenience to the Chief Superintendent" ಎಂದೆ. ಅವರು ಚಕಿತರಾದರು. "ಏಕೆ ತುಂಬ ಉದ್ವೇಗದಿಂದ ಮಾತನಾಡುತ್ತಿದ್ದೀರಿ? ಏನಾಯಿತು?" ಎಂದು ಕೇಳಿದರು. ಬೆಳಗ್ಗೆ ನಡೆದುದನ್ನೂ ನಾನು ಹೆಚ್ಚು ಗಾಯವಿಲ್ಲದೆ ಪಾರಾದುದೇ ಆಶ್ಚರ್ಯಕರ ಎನ್ನುವುದನ್ನೂ ಹೇಳಿ, ಕಾಲು ಕೈ ತರಚಿ ರಕ್ತ ಬಂದುದನ್ನು ತೋರಿಸಿದೆ. "I am Sorry" ಎಂದರು. ಎದ್ದು ಬಂದೆ. ಮರುದಿನ ಕಾಲೇಜಿಗೆ ಹೋಗುವ ಹೊತ್ತಿಗೆ ಮತ್ತೆ ಕರೆಬಂದಿತು. ಹೋದೆ. "ನಿನ್ನೆ ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ ಶೇಷಗಿರಿರಾವ್. I am really sorry, believe me. ಯೋಚನೆ ಮಾಡದೆ ಮಾತನಾಡಿ ನಿಮ್ಮ ಮನಸ್ಸು ನೋಯಿಸಿದೆ. ಪರೀಕ್ಷೆಯ ಕೆಲಸ ಮನಸ್ಸಿನ ಸಮತೂಕವನ್ನು ತಪ್ಪಿಸಿತೇನೋ," ಎಂದರು. ಅಂತಹ ಹಿರಿಯರ ಬಾಯಿಂದ ಆ ಮಾತುಗಳು ಬಂದಾಗ, ಅವರ ಮನಸ್ಸಿನ ಬೇಸರ ಮುಖದಲ್ಲಿ ಪ್ರತಿಬಿಂಬಿತವಾಗಿದ್ದುದನ್ನು ಕಂಡಾಗ ನನಗೇ ಬೇಸರವಾಯಿತು. "ಅಂತಹ ಪ್ರಮಾದವೇನೂ ಆಗಲಿಲ್ಲ ಸಾರ್. ಇದಕ್ಕೆ ನೀವೇಕೆ ಯೋಚಿಸಬೇಕು?" ಎಂದೆ. "ಹಾಗಲ್ಲ, ನೋಡಿ. ಶ್ರೀಕಂಠಯ್ಯ ಆ ಕುರ್ಚಿಯಲ್ಲಿ ಕುಳಿತರೆ ಬೇರೆ ಮನುಷ್ಯನಾದ ಎಂದು ನಿಮಗೆ ತೋರಬಹುದು, ನಾನೂ – ನೀವು ಇಬ್ಬರೂ ಸಾಹಿತ್ಯ ಪಾಠ ಹೇಳುವವರೇ. ಇವನ ಸಾಹಿತ್ಯ ಬರಿಯ ಪಾಠಕ್ಕೆ ಎನ್ನಿಸಬಹುದು ನಿಮಗೆ. ನನ್ನ ಸಾಹಿತ್ಯ ಪಾಠಕ್ಕೆ ಮಾತ್ರವೇ? ಎಂದು ನಾನೇ ಎಂದುಕೊಂಡೆ," ಎಂದರು.

*

ನಾನು ಅವರು ಇಬ್ಬರೂ ಬೆಂಗಳೂರಿನಲ್ಲಿದ್ದಾಗ ಇಬ್ಬರೂ ಚಾಮರಾಜಪೇಟೆಯಲ್ಲಿದ್ದೆವು. ಅವರಲ್ಲಿಗೆ ಸಲಿಗೆಯಿಂದ ಹೋಗಿ ಬರುವ ಭಾಗ್ಯ ನನಗಿದ್ದಿತು. ಯಾವಾಗ ಯಾವ ಸಮಸ್ಯೆ ಬಂದರೂ ಅವರ ಬಳಿ ಹೋಗಿ ಚರ್ಚಿಸಬಹುದಾಗಿತ್ತು. ಆಗ ಸೆಂಟ್ರಲ್ ಕಾಲೇಜಿನಲ್ಲಿ ಮೂರನೆ ಆನರ್ಸ್ ತರಗತಿಗೆ "ಶಾಕುಂತಲಾ" ಪಾಠ ಹೇಳುವ ಹೊಣೆ ಹೊತ್ತವನು ನಾನು. ನನ್ನ ಸಮಸ್ಯೆಗಳನ್ನೆಲ್ಲ ಅವರ ಮುಂದಿಡುತ್ತಿದ್ದೆ. ಶಕುಂತಳೆಯ ವಿರಹವನ್ನು ಕಾಳಿದಾಸ ಚಿತ್ರಿಸಿರುವ ರೀತಿ ಅವಾಸ್ತವಿಕ ಅಲ್ಲವೆ, ಒಡವೆ ಜಾರುವಷ್ಟು ಕೃಶಳಾದಳು, ಸಖಿಯರು ಗಾಳಿ

ಹಾಕಿದುದೇ ತಿಳಿಯಲಿಲ್ಲ ಇವೆಲ್ಲ ಹಾಸ್ಯಾಸ್ಪದವಾಗಲಿಲ್ಲವೆ? ವಿದೂಷಕನ ಪಾತ್ರ ಹಲವು ರೀತಿಗಳಲ್ಲಿ ಅಸಮರ್ಪಕ, ಅವನು ನಿಜವಾಗಿ ನಾಟಕದ ಕ್ರಿಯೆಯ ವೃತ್ತದಲ್ಲಿ ಬಂದಿಲ್ಲ ಎನ್ನಿಸುವುದಿಲ್ಲವೆ? ಇಂತಹ ನನ್ನ ಪ್ರಶ್ನೆಗಳಿಗೆಲ್ಲ ಸಮಾಧಾನದಿಂದ ಉತ್ತರ ಕೊಡುವರು. ಒಮ್ಮೆ "ತ್ರಿವೇಣಿ"ಯಲ್ಲಿ 'ಶಾಕುಂತಳಾ' ನಾಟಕದ ಮೇಲೆ ನನ್ನದೊಂದು ಲೇಖನ ಪ್ರಕಟವಾಯಿತು. ಅದು ಸೃಷ್ಟಿಯಾದುದೇ ಒಂದು ವಿಶೇಷ ರೀತಿಯಲ್ಲಿ. ಆಗ ಬೆಂಗಳೂರಿನಲ್ಲಿ "ಸಹೃದಯ ಸಂಘ" ಎಂಬ ಎಂದು ಸಂಘ ಪ್ರತಿ ಬುಧವಾರ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ (ಅನಂತರದ ವರ್ಷಗಳಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ) ಸೇರುತ್ತಿತ್ತು. ಶ್ರೀಗಳಾದ ತೀ.ನಂ.ಶ್ರೀ., ಎ.ಎನ್. ಮೂರ್ತಿರಾವ್, ಪು.ತಿ. ನರಸಿಂಹಾಚಾರ್ಯರು, ಡಿ.ಎಲ್. ನರಸಿಂಹಾಚಾರ್ಯರು, ಪರ್ವತವಾಣಿ, ರಾಜರತ್ನಂ. ಜಿ. ವೆಂಕಟಸುಬ್ಬಯ್ಯ, ಕೆ. ನರಸಿಂಹಮೂರ್ತಿ, ನಂ. ಶಿವರಾಮ ಶಾಸ್ತ್ರಿಗಳು, ಆರ್. ಗುರುರಾಜರಾವ್ ಎಲ್ಲ ಅದರ ಸದಸ್ಯರು. ಒಮ್ಮೆ ರಾಮ ಕೋಟೀಶ್ವರರಾಯರು ಬಂದಿದ್ದಾಗ 'ಶಾಕುಂತಳ' ದ ಮಾತು ಬಂದು ನಾನು ನಾಲ್ಕು ಮಾತುಗಳನ್ನಾಡಿದೆ. ಶ್ರೀ ರಾಯರು "ಇದನ್ನೇ 'ತ್ರಿವೇಣಿ' ಗೆ ಲೇಖನ ಬರೆದು ಕೊಡಿ" ಎಂದರು. ಬರೆದೆ. ಲೇಖನದಲ್ಲಿ 'ಶಾಕುಂತಳಾ ನಾಟಕ ನಿಜವಾಗಿ ರುದ್ರನಾಟಕವೆ?' ಎಂದು ಪ್ರತಿಪಾದಿಸಿದ್ದೆ. ಅದು ಪ್ರಕಟವಾದ ಐದಾರು ದಿನಗಳ ನಂತರ ತೀ.ನಂ.ಶ್ರೀ. ಅವರು ನಾನು ಒಟ್ಟಿಗೆ ಸಾಹಿತ್ಯ ಪರಿಷತ್ತಿನಿಂದ ಹೊರಟೆವು. "ನಿಮ್ಮ ಲೇಖನ ನೋಡಿದೆ ಚೆನ್ನಾಗಿದೆ" ಎಂದರು. 'ಚೆನ್ನಾಗಿದೆ' ಎಂದ ರೀತಿಯಲ್ಲಿ ಮುಂದೇನೊ ಬರಲಿದೆ ಎಂದುಕೊಂಡೆ. ನನ್ನ ನಿರೀಕ್ಷಣೆ ತಪ್ಪಾಗಲಿಲ್ಲ, "ಆದರೆ" – ಎಂದರು. "ನೀವು ಗ್ರೀಕ್ ರುದ್ರ ನಾಟಕ, ಇಂಗ್ಲಿಷ್ ರುದ್ರನಾಟಕ ಇವೆಲ್ಲ ಓದಿ ಅದೇ ದೃಷ್ಟಿಯಿಂದ ಇದನ್ನೂ ಕಾಣುತ್ತೀರಿ. ಸಂಸ್ಕೃತ ಸಾಹಿತ್ಯದ ಚರಿತ್ರೆ, 'ಶಾಕುಂತಳ'ದ ಸಂಸ್ಕೃತಿಯ ಹಿನ್ನೆಲೆ ಮರೆತುಬಿಡುತ್ತೀರಿ. ನಮ್ಮ ಜಾಣರು ಪಾಶ್ಚಾತ್ಯ ಸಾಹಿತ್ಯ ಓದುವುದರಿಂದ ಅನುಕೂಲವೂ ಇದೆ, ಅನನುಕೂಲವೂ ಇದೆ" ಎಂದರು. "ಜೀವನದ ಅನುಭವ, ಒಂದು ಚೇತನದ ಪ್ರತಿಕ್ರಿಯೆ ಇವನ್ನು ಪ್ರತಿಬಿಂಬಿಸುವ ಸಾಹಿತ್ಯಕ್ಕೆ ಪೂರ್ವ ಪಶ್ಚಿಮ ಉಂಟೆ ಸಾರ್?" ಎಂದೆ ನಾನು. ಅಲ್ಲಿಂದ ಅವರ ಮನೆಯವರೆಗೆ ಅದೇ ಚರ್ಚೆ, ಮತ್ತೆ ಅವರ ಮನೆಯಲ್ಲಿ ಒಂದು ಗಂಟೆ 'ಶಾಕುಂತಳ' ದ ಚರ್ಚೆ. ನಾನು ಅವರ ತರಗತಿಯಲ್ಲಿ ಕೂಡದಿದ್ದರೂ ಅವರ ವಿದ್ಯಾರ್ಥಿ.

*

ನಾನು ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದಾಗ ಅವರೊಡನೆ ಕೆಲಸ ಮಾಡುವ ಭಾಗ್ಯ ದೊರೆಯಿತು. ಸ್ವಲ್ಪ ಕಾಲ ಅವರು ಕನ್ನಡ-ಕನ್ನಡ ಕೋಶದ ಮೇಲ್ವಿಚಾರಕರಾಗಿದ್ದರು. ನಾನು ಅವರಿಗಿಂತ ವಯಸ್ಸಿನಲ್ಲಿ, ಅನುಭವದಲ್ಲಿ, ವಿವೇಕದಲ್ಲಿ ಬಹು ಕಿರಿಯ. ಆದರೆ ಎಂದೂ ಅವರು ಪರಿಷತ್ತಿನ ಕೆಲಸದ ವಿಷಯದಲ್ಲಿ ಸ್ವಲ್ಪವೂ ಕ್ರಮ ಮರೆತವರಲ್ಲ. ಒಮ್ಮೆ ಅವರು ನನ್ನ ಕೊಠಡಿಗೆ ಏನೋ ಮಾತನಾಡುವ ಸಲುವಾಗಿ ಬಂದರು. ಆಗಲೇ ಉಡುಪಿ, ಮಂಗಳೂರಿನಿಂದ ಪರಿಷತ್ತಿಗೆ ಬಂದ ಕೆಲವರು ಸ್ನೇಹಿತರಿದ್ದರು. ಸುಮಾರು ಅರ್ಧ ಗಂಟೆ ತೀ.ನಂ.ಶ್ರೀ. ಅವರೊಂದಿಗೆ ಮಾತನಾಡಲು ಅವಕಾಶವಾಗಲಿಲ್ಲ. ಅನಂತರ ಅವರಿಗೆ ಹೇಳಿದೆ: "ಇನ್ನು ಮೇಲೆ ಕೆಲಸವಿದ್ದರೆ ದಯವಿಟ್ಟು ಚೀಟಿ ಕಳುಹಿಸಿ. ನಾನೇ

ಬರುತ್ತೇನೆ. ತಾವು ಹೀಗೆ ಬಂದು ಸಮಯ ಹಾಳುಮಾಡಿಕೊಳ್ಳುವುದು ಬೇಡ" ಎಂದು. ನಗುತ್ತ ಅವರು ಉತ್ತರಿಸಿದರು : "ನಿಮಗಿನ್ನೂ ಕಚೇರಿ ನಡೆಸಿ ಅಭ್ಯಾಸವಿಲ್ಲ. ಕಚೇರಿಯ ಕೆಲಸದಲ್ಲಿ ಸ್ವಂತದ ದಾಕ್ಷಿಣ್ಯ ಬೆರೆಸಬೇಡಿ. ನಾನು ಪರಿಷತ್ತಿನ ಕಾರ್ಯದರ್ಶಿಗಳನ್ನು ನೋಡಬೇಕಾದಾಗ ನಿಮ್ಮ ಕೊಠಡಿಗೆ ಬರುತ್ತೇನೆ. ನೀವು ಸಂಕೋಚಪಡಬೇಡಿ."

*

ಹಿರಿಯ ಸಾಹಿತಿ ಮಾತ್ರವಲ್ಲ, ಪ್ರಥಮ ಪಂಕ್ತಿಯ ವಿಮರ್ಶಕರಾದರೂ ಕಿರಿಯರಲ್ಲಿ ಅವರಿಗಿದ್ದ ವಿಶ್ವಾಸ ಅಪಾರ. ಒಮ್ಮೆ ನಾನು ಬ್ರೌನಿಂಗ್‌ನ ಪ್ರೇಮಗೀತೆಗಳನ್ನು ಕುರಿತು ಒಂದು ಲೇಖನ ಬರೆದೆ. ಅದನ್ನು ಎಲ್ಲಿ ಓದಿದರೋ, ಒಂದು ಭಾನುವಾರ ಅವರ ಮನೆಗೆ ಹೋದಾಗ, ಅದನ್ನು ಪ್ರಸ್ತಾಪಿಸಿ ಮೆಚ್ಚಿಕೊಂಡರು. ಹಾಗೆಯೇ ಪ್ರೇಮಗೀತೆಗಳತ್ತ ಮಾತು ಹೊರಳಿತು. "ಇಂಗ್ಲಿಷ್‌ನಲ್ಲಿರುವ ಸೊಗಸಾದ ಪ್ರೇಮಗೀತೆಗಳನ್ನು ಸೇರಿಸಿ ಸಂಕಲನ ಮಾಡಬಹುದು" ಎಂದರು. ಒಂದು ನಿಮಿಷ ಬಿಟ್ಟು, "ನೀವೇ ಏಕೆ ಆ ಕೆಲಸ ಮಾಡಬಾರದು? ಅದಕ್ಕೆ ದೀರ್ಘವಾದ ಮುನ್ನುಡಿ ಬರೆದು ಎಲ್ಲ ಗೀತೆಗಳ ಪರಿಚಯ ಮಾಡಬೇಕು" ಎಂದರು. ನಾನೆಂದೆ: "ಆ ಕಾರ್ಯಕ್ಕೆ ನಿಮ್ಮನ್ನು ಬಿಟ್ಟರೆ ಬೇರೆ ಯಾರಿಂದಲೂ ಆಗದು, ನೀವೇ ಮಾಡಿಬಿಡಿ, ಸಾರ್" ಎಂದು. "ಈಗ ನಾನು ಒಪ್ಪಿಕೊಂಡಿರುವ ಕೆಲಸವೇ ವರ್ಷಗಟ್ಟಲೆ ಹಿಡಿಯುತ್ತದೆ. ಸಂಸ್ಕೃತದಿಂದ ಕೆಲವು ಪದ್ಯಗಳನ್ನು ಅನುವಾದ ಮಾಡುವ ಯೋಚನೆಯೂ ಇದೆ. ಈ ಕೆಲಸ ಅಷ್ಟು ವರ್ಷ ಕಾಯಬಾರದು. ನೀವೇ ಮಾಡಿ" ಎಂದರು. ತಾವೇ ಯಾರಾದರೂ ಪ್ರಕಾಶಕರನ್ನೂ ಒಪ್ಪಿಸುವುದಾಗಿ ಹೇಳಿದರು. ಅದನ್ನೇ ಯೋಚಿಸುತ್ತ ಮನೆಗೆ ಬಂದೆ. ಮುನ್ನುಡಿಯಲ್ಲಿ ಇದನ್ನು ಹೇಳಬೇಕು, ಅದನ್ನು ಹೇಳಬೇಕು ಎಂದು ಲೆಕ್ಕಹಾಕುತ್ತಿದ್ದೆ. ಮಧ್ಯಾಹ್ನ ಎರಡೂವರೆ ಗಂಟೆಗೆ ಹೊಸದಾಗಿ ಯಾವುದೋ ಯೋಚನೆ ಸ್ಫುರಿಸಿತು. ನೇರವಾಗಿ ಅವರ ಮನೆಗೆ ಹೋದೆ. ಆಗ ಅವರು ಮಲಗಿದ್ದರು. ಅವರ ಪತ್ನಿ ಅವರನ್ನು ಎಬ್ಬಿಸಿದರು. ಆಗಲೇ ನನಗೆ ಜ್ಞಾನೋದಯ: ಇದೇನು, ಇಂತಹ ಹೊತ್ತಿನಲ್ಲಿ ಇವರನ್ನು ಎಬ್ಬಿಸುವ ಅಗತ್ಯ ಏನಿತ್ತು ನನಗೆ ಎಂದು. ಕಾಫಿ ಕೊಟ್ಟು ಹೋದ ಕಾರಣ ಕೇಳಿದರು. ನಾನು ಬಹು ಸಂಕೋಚದಿಂದ ಹೇಳಿದೆ. ಸ್ವಲ್ಪವೂ ಅಸಮಾಧಾನ ಪಡಲಿಲ್ಲ. ನಾನು ಮುಂದಿಟ್ಟ ಯೋಚನೆಯನ್ನು ವಿಮರ್ಶಿಸಿದರು, ಸಂಸ್ಕೃತದಿಂದ ಕೆಲವು ಪಂಕ್ತಿಗಳನ್ನು ಉದ್ಧರಿಸಿ ವಿವರಿಸಿದರು. ಒಂದು ಗಂಟೆ ವಿಮರ್ಶೆಯ ರಸದೂಟ – ಅವರ ಮನೆಯ ರುಚಿಯಾದ ತಿಂಡಿ ಕಾಫಿಗಳಲ್ಲದೆ.

೧೯೫೦ರಲ್ಲಿ ಮಡಿಕೇರಿಗೆ ಕಾರ್ಯಾರ್ಥವಾಗಿ ಬಂದರು. ಅವತ್ತು ರಾತ್ರಿ, "ನೀವು ಮಾಸ್ತಿಯವರ ಮೇಲೆ ಸಣ್ಣ ಪುಸ್ತಕ ಬರೆದಿದ್ದೀರಂತೆ. ನಾನು ಪ್ರತಿಗಾಗಿ ಹುಡುಕಿದೆ. ಸಿಕ್ಕಲಿಲ್ಲ. ಎಲ್ಲಿ ಸಿಕ್ಕುತ್ತದೆ, ವಿಳಾಸ ಕೊಡಿ" ಎಂದರು. ನನ್ನ ಬಳಿಯೂ ಆಗ ಪ್ರತಿ ಇರಲಿಲ್ಲ. "ಪ್ರತಿಯನ್ನು ತಮಗೆ ಕಳುಹಿಸುತ್ತೇನೆ, ಸಾರ್. ಆದರೆ ನೀವು ಮನಸ್ಸು ಮಾಡಿದರೆ ಉದ್ಗ್ರಂಥವನ್ನೇ ಬರೆಯಬಹುದು. ಮಾಸ್ತಿಯವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಕುರಿತು" ಎಂದೆ. "ಅವಕಾಶವಾದರೆ ಅದನ್ನೂ ಮಾಡೋಣ, ಆದರೆ ನೀವು ಬರೆಯಬಾರದು ಎಂದು ಹೇಳಿದೆಯೇ?" ಎಂದರು.

ಅವರಿಗೆ ಪ್ರತಿ ಕಳುಹಿಸಿದೆ. ಮತ್ತೆ ಮೈಸೂರಿನಲ್ಲಿ ಅವರ ಮನೆಗೆ ಹೋದಾಗ ಉದಾರವಾಗಿ ಮೆಚ್ಚಿಕೆಯ ಮಾತನ್ನಾಡಿದರು, ಒಂದೆರಡು ಅಂಶಗಳನ್ನೆತ್ತಿಕೊಂಡು ನನ್ನ ಅಭಿಪ್ರಾಯವನ್ನು ಚರ್ಚೆಮಾಡಿದರು. ನಿಜವಾದ ವಿದ್ವತ್ತಿನ ಹೃದಯ ವೈಶಾಲ್ಯ, ಔದಾರ್ಯ ಅವರಲ್ಲಿ ಮನೆ ಮಾಡಿದ್ದಿತು.

*

(ಈ ಮುಂದಿನ ಭಾಗವನ್ನು ಎಲ್.ಎಸ್.ಎಸ್. ಅವರ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ)

ತೀ.ನಂ.ಶ್ರೀ. ಒಬ್ಬ ಅಸಾಧಾರಣ ವಿದ್ವಾಂಸರು, ವಿದ್ವತ್ತಿಗೆ ಮುಡಿಪಾದವರು. ಬಿ.ಎ. ಪರೀಕ್ಷೆಗೆ ಕುಳಿತು ಪ್ರಥಮ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದು ಆರು ಚಿನ್ನದ ಪದಕಗಳನ್ನು ಗಳಿಸಿದರು. ಆಗ ಕನ್ನಡದಲ್ಲಿ ಎಂ.ಎ. ತರಗತಿಗಳಿರಲಿಲ್ಲ. ಇಂಗ್ಲಿಷ್ ಎಂ.ಎ. ತರಗತಿ ಸೇರಿದರು. ಮತ್ತೆ ಪ್ರಥಮ ದರ್ಜೆ, ಪ್ರಥಮ ಸ್ಥಾನ. ಕನ್ನಡ ಎಂ.ಎ. ತರಗತಿ ಪ್ರಾರಂಭವಾದಾಗ ಆ ತರಗತಿಯನ್ನು ಸೇರಿದರು. ಪ್ರಥಮ ದರ್ಜೆ ಪ್ರಥಮ ಸ್ಥಾನ, ಮೂರು ಚಿನ್ನದ ಪದಕಗಳು. ಆಗಿನ ದಿನಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆ ನಡೆಯುತ್ತಿತ್ತು. ಮೊದಲ ಎರಡು ಸ್ಥಾನಗಳನ್ನು ಪಡೆದವರಿಗೆ ಅಸಿಸ್ಟೆಂಟ್ ಕಮಿಷನರ್ ಸ್ಥಾನಗಳು. (ಮಾಸ್ತಿಯವರು ಈ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ಸಿವಿಲ್ ಸರ್ವಿಸ್ ಸೇರಿದರು.) ಉನ್ನತ ಸ್ಥಾನಗಳನ್ನು ಪಡೆದ ಇತರರಿಗೆ ಉನ್ನತ ಹುದ್ದೆಗಳು. ತೀ.ನಂ.ಶ್ರೀ. ಅವರು ಎಂ.ಸಿ.ಎಸ್. ಪರೀಕ್ಷೆಗೆ ಕುಳಿತರು, ಮೂರನೆಯ ಸ್ಥಾನ ಪಡೆದರು. ರೆವಿನ್ಯೂ ಪ್ರೊಬೇಷನರ್ ಆಗಿ ಶ್ರೀರಂಗಪಟ್ಟಣಕ್ಕೆ ಹೋದರು. ಆದರೆ ಆ ಸಾಹಿತ್ಯ ಭಕ್ತನಿಗೆ ಆ ಕೆಲಸ ಹಿಡಿಸಲಿಲ್ಲ. ಬಿ.ಎಂ. ಶ್ರೀಕಂಠಯ್ಯನವರು, 'ನೀವು ವಿಶ್ವವಿದ್ಯಾನಿಲಯಕ್ಕೆ ಬರಬೇಕು' ಎಂದರು. ರೆವಿನ್ಯೂ ಪ್ರೊಬೇಷನರ್ ಆಗಿ ಮುಂದುವರೆದಿದ್ದರೆ ಅಧಿಕಾರ, ಬೇಗ ಬೇಗ ಬಡ್ತಿ ಎಲ್ಲ ಅವರಿಗೆ ಲಭ್ಯವಾಗಿರುತ್ತಿದ್ದವು. ಎಲ್ಲವನ್ನು ಬಿಟ್ಟು ಬಂದರು. ಕನ್ನಡ ಎಂ.ಎ. ತರಗತಿಗೆ ಸೇರಿ ಅತ್ಯಂತ ಯಶಸ್ವಿಯಾಗಿ ಪದವಿ ಗೆದ್ದು ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಸೇರಿದರು.

ತೀ.ನಂ.ಶ್ರೀ. ಯವರ ವಿದ್ವತ್ತು ಚಿನ್ನದ ಬಂಡೆಗೆ ಪರಿಮಳ ಬಂದಂತೆ ಗಟ್ಟಿಯಾದ ವಿದ್ವತ್ತು ಆದರೆ ಬರಡಲ್ಲ. ಅವರು ಪಂಪನನ್ನೊ ರನ್ನನನ್ನೊ ಕುರಿತು ಮಾತನಾಡುತ್ತಿದ್ದರೆ, ಮಾತಿನಲ್ಲಿ ವಿದ್ವತ್ತು ತುಂಬಿರುತ್ತಿತ್ತು; ಪಾಠಾಂತರಗಳ ಸಮಸ್ಯೆ, ವ್ಯಾಕರಣ ಛಂದಸ್ಸುಗಳ ಪದಗಳ ಅನ್ವಯಗಳ ಸಮಸ್ಯೆ, ಬೇರೆ ಬೇರೆ ವಿದ್ವಾಂಸರ ವ್ಯಾಖ್ಯಾನಗಳು ಎಲ್ಲವನ್ನು ತಿಳಿದ ವಿದ್ವಾಂಸರ ಮಾತು ಅದು. ಆದರೆ ಮುಖ್ಯವಾಗಿ ಕಾವ್ಯವನ್ನು ಕಾವ್ಯವಾಗಿ ಸವಿದ ಹೃದಯ ವಂತಿಕೆಯ ಸದಭಿರುಚಿಯ ಚಿಂತನಶೀಲ ಮನಸ್ಸಿನ ಮಾತು. ಅವರು ಎತ್ತಿಕೊಂಡ ಕೃತಿ ತಮಗೆ ಕೊಟ್ಟ ಸಂತೋಷವನ್ನು ತೀ.ನಂ.ಶ್ರೀ. ಕೇಳುವವರ ಅಥವಾ ಓದುವವರ ಮನಸ್ಸಿನಲ್ಲಿ ಮೂಡಿಸುತ್ತಿದ್ದವರು. ಅವರ ಲೇಖನವನ್ನು ಓದುವುದೆಂದರೆ ಅಥವಾ ಮಾತು ಕೇಳುವುದೆಂದರೆ ಕೃತಿಯ ಒಳಹೊಗುವ ಒಂದು ಸಂತೋಷದ ರಸಯಾತ್ರೆ. ಅವರು ಮಾತನಾಡುತ್ತಿದ್ದರೆ ಅವರ ಪ್ರಯತ್ನವೇ ಇಲ್ಲ, ಅತ್ಯಂತ ಉಚಿತವಾದ ಶಬ್ದಗಳು ತಾವೇ ತಮ್ಮ ತಮ್ಮ ಸ್ಥಾನಗಳಲ್ಲಿ

ಬಂದು ಕುಳಿತುಕೊಳ್ಳುತ್ತಿವೆ ಎನ್ನುವಂತೆ ಲೀಲಾಜಾಲವಾಗಿ, ಮನಸ್ಸಿಗೆ ಹರ್ಷ – ಬೆಳಕು ಎರಡೂ ಲಭ್ಯವಾಗುವಂತೆ ಮಾತನಾಡುತ್ತಿದ್ದರು. ನಮ್ಮ ಕಣ್ಣ ಮುಂದೆಯೇ ಮಲ್ಲಿಗೆ, ಗುಲಾಬಿ, ಸಂಪಿಗೆ ಎಲ್ಲ ಸೇರಿಸಿ ಹಾರ ಕಟ್ಟುವುದನ್ನು ಕಂಡಷ್ಟು ಸಂತೋಷವಾಗುತ್ತಿತ್ತು. ರನ್ನನ ಸಹಸ್ರವರ್ಷ ಉತ್ಸವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತೀ.ನಂ.ಶ್ರೀ. ಮಾಡಿದ ಭಾಷಣ ಇಂದೂ ನನ್ನ ಮನಸ್ಸಿನಲ್ಲಿ ನಿಂತಿದೆ. ಅಂದು ಅವರು ಅಧ್ಯಕ್ಷ ಭಾಷಣಕ್ಕೆ ಎದ್ದಾಗ ರಾತ್ರಿ ಎಂಟೂವರೆ, ಒಂಬತ್ತು. ಸುಮಾರು ಒಂದು ಗಂಟೆ ಅವರು ಮಾತನಾಡಿದರು. ನಾವು ಈ ಜಗತ್ತನ್ನು ಮರೆತಿದ್ದೆವು. ದುರ್ಯೋಧನನು ಕೊಳದಿಂದ ಎದ್ದು ಬರುವುದನ್ನು ಚಿತ್ರಿಸುವ

> ರಸೆಯಿಂ ಕಾಲಾಗ್ನಿ ರುದ್ರಂ ಪೊರಮಡುವವೊಲಂತಾ ಸರೋವರ ಮಧ್ಯದಿಂ ಸಾ
> ಹಸ ಗರ್ವಾಲಂಕೃತಂ ತೊಟ್ಟನೆ ಕೊಳೆ ಪೊರಮಟ್ಟೆಲ್ಲಿದಂ ಭೀಮನೆಂದೆ
> ಣ್ದೆಸೆಯಂ ನೋಡುತ್ತೆ ಮತ್ತದ್ಭುತ ನಟ ನಿಟಲಾಲೋಲಕೀಲಾಕ್ಷಿ ವೋಲ್ ದ
> ಳ್ಪಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ

ಎನ್ನುವ ಪದ್ಯವನ್ನು ಹೇಳುವಾಗ ಕಡೆಯ ಎರಡು ಪಂಕ್ತಿಗಳನ್ನು ಕೇಳಿದಾಗ, ಅಶ್ವತ್ಥಾಮನು ತಂದ ತಲೆಗಳು ಪಾಂಡವರದೆಂದು ನಂಬಿ ದುರ್ಯೋಧನನು ನೋಡಿ, 'ಇದು ಭೀಮನ ತಲೆಯಲ್ಲ. ಅವನ ತಲೆಯಾಗಿದ್ದರೆ, ಅವನು ಸತ್ತಿದ್ದರೂ ಕಣ್ಣುಗಳು ಹೀಗೆ ಸುಮ್ಮನೆ ನನ್ನನ್ನು ನೋಡುತ್ತಿರಲಿಲ್ಲ', (ಅಂದು ತೀ.ನಂ.ಶ್ರೀ. ಹೇಳಿದ ಮಾತುಗಳಲ್ಲಿ ಹೇಳುವುದಾದರೆ, 'ಸತ್ತು ತುಂಡರಿಸಿದ ಭೀಮನ ತಲೆಯೂ ನನ್ನನ್ನು ನೋಡುತ್ತಲೇ ಅವುಡು ಕಚ್ಚಿ ಕಣ್ಣುಗಳಿಂದ ಉರಿ ಕಾರುತ್ತ ನನ್ನ ಕೈಯಿಂದ ಮೇಲಕ್ಕೆ ಚಿಮ್ಮಿ ಬಿಡುತ್ತಿತ್ತು') ಎಂದು ಹೇಳುವ ಪದ್ಯ :

> ಪವನಜನಾಸ್ಯಮಲ್ತಿದವನಾನನಮಪ್ಪೊಡೆ ಮಟ್ಟ ಮಿರ್ದುನೋ
> ಡುವುದೇ ಮದೀಯ ವಕ್ತ್ರಮನೆ ಕೆಮ್ಮನೆ ಪೋಯ್ತರಿವಿಲ್ಲದಾಯ್ತು ಪಾಂ
> ಡವರ ಶಿರಂಗಳಲ್ಲವಿವು ಪಾಂಡವ ಸೂನುಗಳಪ್ಪ ಪಂಚ ಪಾಂ
> ಡವರ ಶಿರಂಗಳ್

ಎನ್ನುವುದನ್ನು ಅವರು ಹೇಳುವುದನ್ನು ಕೇಳಿದಾಗ ರೋಮಾಂಚನವಾದದ್ದು ನನಗೆ ನೆನಪಿದೆ. 'ಕಾವ್ಯದಲ್ಲಿ ಬೆಳದಿಂಗಳು' ಎನ್ನುವ ಅವರ ಭಾಷಣವನ್ನು ಕೇಳಿದಾಗ, 'ರನ್ನನ ಗದಾಯುದ್ಧದ ಪಂಕ್ತಿಗಳ ರೋಷಭೀಷಣತೆಯನ್ನು ನಮ್ಮ ಮನಸ್ಸಿಗೆ ತಟ್ಟಿಸಿದ ಮನುಷ್ಯ ಇವರೆಯೇ ಬೇರೆಯೋ?' ಎನ್ನಿಸುತ್ತಿತ್ತು. ಕಾವ್ಯದಲ್ಲಿ ಬೆಳದಿಂಗಳ ರಮಣೀಯತೆ, ಶಾಂತಿ, ಮನಸ್ಸಿನ ಮೇಲೆ ಅದು ಮಾಡುವ ಪರಿಣಾಮ ಎಲ್ಲವನ್ನು ಕವನಗಳಿಂದ ಪಂಕ್ತಿಗಳನ್ನು ಉದ್ಧರಿಸಿ ಅವರು ವಿವರಿಸುತ್ತಿದ್ದುದನ್ನು ಸವಿಯುವುದೇ ಒಂದು ಅನುಭವ, ಹುಣ್ಣಿಮೆಯ ಪ್ರಶಾಂತ ಬೆಳದಿಂಗಳಲ್ಲಿ ನಿಂತಂತಹ ಅನುಭವ. (ಭಾಷಣದಲ್ಲಿ ಅವರು ಒಮ್ಮೆ ಹೇಳಿದ ಮಾತು: "ಮದುವೆಯಾಗಿ ಬಹು ವರ್ಷ ಕಳೆದ ದಂಪತಿಗಳಲ್ಲಿ ಯಾವಾಗಲಾದರೊಮ್ಮೆ ಒಬ್ಬರಿಗೆ ಇನ್ನೊಬ್ಬರ ವಿಷಯದಲ್ಲಿ ಸ್ವಲ್ಪ ಬೇಸರ ಮೂಡೀತು. ವರ್ಷಗಟ್ಟಲೆ ಅವರನ್ನು ನೋಡಿ ಆಕರ್ಷಣೆ ಸ್ವಲ್ಪ ಕಡಿಮೆಯಾದೀತು. ಹಾಗಾದರೆ, ನಿಮ್ಮ ಸಂಗಾತಿಯನ್ನು ಹುಣ್ಣಿಮೆಯ ಬೆಳದಿಂಗಳಲ್ಲಿ ನಿಲ್ಲಿಸಿ ನೋಡಿ ಅವರಿಗೇ ಹೊಸ ಚೆಲುವು ಬಂದಂತೆ ಅನುಭವವಾಗುತ್ತದೆ"!) ರಾಷ್ಟ್ರಮಟ್ಟದ ವಿದ್ವತ್ಸಭೆಗಳಲ್ಲಿ ಭಾಷಾವಿಜ್ಞಾನ, ಸಾಹಿತ್ಯಗಳ ತಜ್ಞರು ಆಸಕ್ತಿಯಿಂದ ಮೆಚ್ಚಿಕೆಯಿಂದ ಕೇಳುವಂತೆ ಮಾತನಾಡವಲ್ಲವರಾಗಿದ್ದ

ತೀ.ನಂ.ಶ್ರೀ. ಇಂಟರ್‌ಮೀಡಿಯೆಟ್ ತರಗತಿ ವಿದ್ಯಾರ್ಥಿಗಳು ಅತ್ತಿತ್ತ ನೋಡದೆ ಖುಷಿಯಾಗಿ ಕೇಳುವಂತೆ ಮಾತನಾಡಬಲ್ಲವರು. ವಿಷಯದ ಮೇಲೆ ಸಂಪೂರ್ಣ ಪ್ರಭುತ್ವ, ಸೂಕ್ಷ್ಮವೂ ಶುದ್ಧವೂ ಆದ ಅಭಿರುಚಿ, ಅಸಾಧಾರಣ ವಾಗ್ಮಿತೆ ಇವುಗಳ ಸಂಗಮ ಇದಕ್ಕೆ ಕಾರಣ. ತೀ.ನಂ.ಶ್ರೀ. ಅವರು ಮಾಡಿದ ಒಂದು ಉಪನ್ಯಾಸ ಅದರ ವಿಶೇಷ ಸಂದರ್ಭ, ಸಾಧನೆಗಳಿಗಾಗಿ ನನ್ನ ನೆನಪಿನಲ್ಲಿ ನಿಂತಿದೆ. ೧೯೪೭ರಲ್ಲಿ ನಾವು ಕೆಲವರು ಯುವಕರು 'ಕನ್ನಡ ಯುವಜನ ಪರಿಷತ್ತು' ಎನ್ನುವ ಸಂಸ್ಥೆಯೊಂದನ್ನು ಸ್ಥಾಪಿಸಿದೆವು. ಅದಕ್ಕೆ ನಾನು ಅಧ್ಯಕ್ಷ. ಅದೇ ವರ್ಷ ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಜವಹರಲಾಲರು ಆಗ ಯುವಜನತೆಯ ಕಣ್ಮಣಿ. ೧೯೪೭ರ ನವೆಂಬರ್ ೧೪ರಂದು ಕನ್ನಡ ಯುವಜನ ಪರಿಷತ್, ನೆಹರೂ ಜನ್ಮದಿನಾಚರಣೆಯನ್ನು ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಏರ್ಪಡಿಸಿತು. ಅಧ್ಯಕ್ಷರು ಡಿ.ವಿ.ಗುಂಡಪ್ಪನವರು. ಸಭಾ ಮಂದಿರ ಕಿಕ್ಕಿರಿದಿತ್ತು. ತೀ.ನಂ.ಶ್ರೀ. ಮೊದಲ ಪಂಕ್ತಿಯಲ್ಲಿ ಕುಳಿತಿದ್ದರು. ನಾವು ಆಹ್ವಾನಿಸಿದ್ದ ಭಾಷಣಕಾರರೆಲ್ಲ ಮಾತನಾಡಿದ ಮೇಲೆ ಡಿ.ವಿ.ಜಿ. "ಶ್ರೀಕಂಠಯ್ಯ, ಬರಹಗಾರರಾಗಿ ಜವಹರಲಾಲ್ ನೆಹರು ಅಂತ ನಾಲ್ಕು ಮಾತು ಹೇಳಿ" ಎಂದರು. ತೀ.ನಂ.ಶ್ರೀ. "ಇಲ್ಲ ಸಾರ್, ನಾನು ಭಾಷಣಗಳನ್ನು ಕೇಳುವುದಕ್ಕೆ ಸಿದ್ಧವಾಗಿ ಬಂದೆನೇ ಹೊರತು ಭಾಷಣ ಮಾಡುವುದಕ್ಕಲ್ಲ" ಎಂದರು. ಡಿ.ವಿ.ಜಿ. "ಪರವಾಯಿಲ್ಲ, ನಾಲ್ಕು ಮಾತು ಹೇಳಿ" ಎಂದರು, ತೀ.ನಂ.ಶ್ರೀ. ಒಪ್ಪಲಿಲ್ಲ. ಡಿ.ವಿ.ಜಿ. ಬಿಡಲೊಲ್ಲರು. ಅವರ ಮಾತನ್ನು ತೆಗೆದುಹಾಕಲು ತೀ.ನಂ.ಶ್ರೀ. ಅವರಿಗೆ ಸಾಧ್ಯವಾಗಲಿಲ್ಲ, ಅಷ್ಟು ಗೌರವ ಅವರಿಗೆ. ವೇದಿಕೆಗೆ ಬಂದು ಸುಮಾರು ಇಪ್ಪತ್ತು ನಿಮಿಷ ಮಾತನಾಡಿದರು. ವಿಷಯ, ಅವರು ಪಾಠ ಹೇಳುತ್ತಿದ್ದ ಕನ್ನಡ ಸಾಹಿತ್ಯವಲ್ಲ, ಅಭ್ಯಾಸ ಮಾಡಿದ್ದ ಹಿಂದಿನ ಸಂಸ್ಕೃತ ಅಥವಾ ಇಂಗ್ಲಿಷ್ ಸಾಹಿತ್ಯವಲ್ಲ. ಆದರೆ ಎಷ್ಟು ಖಚಿತವಾಗಿ, ಆಧಾರಪೂರ್ವಕವಾಗಿ, ಸೊಗಸಾಗಿ ಮಾತನಾಡಿದರು ಎಂದರೆ, ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದ್ದ ನಾವು, "ಇವರನ್ನೇಕೆ ನಾವು ಆಹ್ವಾನಿಸಲಿಲ್ಲ?" ಎಂದು ಬೆರಳು ಕಚ್ಚಿಕೊಳ್ಳುವಂತಾಯಿತು.

ಕರ್ನಾಟಕದಲ್ಲಿ ಇಂದು ಯಾವುದೇ ಕನ್ನಡ ಕೃತಿಗೆ ಸಲ್ಲಿಸಬಹುದಾದ ಅತ್ಯುನ್ನತ ಗೌರವ ಪಂಪ ಪ್ರಶಸ್ತಿ. ೧೯೯೦ರಲ್ಲಿ ತೀ.ನಂ.ಶ್ರೀ. ಅವರ 'ಭಾರತೀಯ ಕಾವ್ಯಮೀಮಾಂಸೆ'ಗೆ ಈ ಗೌರವ ಸಂದಿತು. ಅದು ಪ್ರಕಟವಾದಾಗ (೧೯೫೩) ಮುನ್ನುಡಿ ಬರೆಯುತ್ತ ಕುವೆಂಪು "ಮುಂಬರಲಿರುವ ಕನ್ನಡದ ಕಾವ್ಯಮೀಮಾಂಸೆಯ ಮತ್ತು ಸಾಹಿತ್ಯ ವಿಮರ್ಶೆಯ ಸಾಹಸಕ್ಕೆ ಶ್ರೀಮಾನ್ ಶ್ರೀಕಂಠಯ್ಯನವರು ಸುಸಮರ್ಥವೂ ಮಾರ್ಗದರ್ಶಕವೂ ಆದ ಆಚಾರ್ಯಕೃತಿಯನ್ನು ಒದಗಿಸಿದ್ದಾರೆ, ಈ 'ಭಾರತೀಯ ಕಾವ್ಯಮೀಮಾಂಸೆ'ಯಲ್ಲಿ" ಎಂದರು.

ವಿದ್ವತ್ತಿನ ಶಿರಸ್ಸು, ಕವಿಯ ಹೃದಯ ಎರಡು ಸೇರಿ ಸೃಷ್ಟಿಸಿದ ಅಪೂರ್ವ ಕೃತಿ 'ಭಾರತೀಯ ಕಾವ್ಯಮೀಮಾಂಸೆ.' ಎಂ. ಹಿರಿಯಣ್ಣ, ಬಿ.ಎಂ.ಶ್ರೀ., ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿಗಳ ತರಗತಿಯಲ್ಲಿ ಕುಳಿತು ಸಾಹಿತ್ಯ ಮೀಮಾಂಸೆಯನ್ನು ಅಭ್ಯಾಸ ಮಾಡಿದವರು. ತೀ.ನಂ.ಶ್ರೀ.

ಈ ಅಸಾಧಾರಣವಾದ, ಖಚಿತವಾದ, ಫಲದಾಯಕ ವಿದ್ವತ್ತು, ಈ ಕವಿ ಹೃದಯ – ರಸಿಕತೆ, ಈ ಭಾಷೆಯ ಭಾಗ್ಯ ಮೂರರ ಸಂಗಮ 'ಭಾರತೀಯ ಕಾವ್ಯಮೀಮಾಂಸೆ.'

ಭಾರತದಲ್ಲಿ ಅನ್ವಯ ವಿಮರ್ಶೆ (ಒಂದು ಕೃತಿಯನ್ನು ಆರಿಸಿಕೊಂಡು ವಿಸ್ತಾರವಾಗಿ ವಿಶ್ಲೇಷಿಸಿ ವ್ಯಾಖ್ಯಾನಿಸಿ ವಿಮರ್ಶಿಸುವುದು) ಬೆಳೆಯಲಿಲ್ಲ. ಆದರೆ ಕಾವ್ಯಮೀಮಾಂಸೆ – ಕಾವ್ಯವನ್ನು ಕುರಿತ ಶಾಸ್ತ್ರೀಯ ಚಿಂತನೆ – ಸುಮಾರು ಒಂದು ಸಾವಿರದ ಎಂಟು ನೂರು ವರ್ಷಗಳಿಂದ ಬೆಳೆದು ಬಂದಿದೆ. ಸಂಸ್ಕೃತದಲ್ಲಿ ಬೆಳೆದು ಬಂದ ಕಾವ್ಯಮೀಮಾಂಸೆಯೆ ಕನ್ನಡದಲ್ಲಿ ಕಾವ್ಯವನ್ನು ಕುರಿತು ಚಿಂತಿಸಿದವರಿಗೆ, ಬರೆದವರಿಗೆ ಆಧಾರವಾಯಿತು. ನವೋದಯ ಕಾಲದಲ್ಲಿ, ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪ್ರಭಾವ ವಿಶೇಷವಾಗಿ ಆದರೂ ಬಿ.ಎಂ.ಶ್ರೀ., ಮಾಸ್ತಿ, ಬೇಂದ್ರೆ, ಕುವೆಂಪು, ಎ.ಆರ್. ಕೃಷ್ಣಶಾಸ್ತ್ರಿ, ಡಿ.ವಿ.ಜಿ. ಎಲ್ಲರೂ ಭಾರತೀಯ ಕಾವ್ಯಮೀಮಾಂಸೆಯೊಂದಿಗೆ ಅದನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದರು. ತೀ.ನಂ.ಶ್ರೀ. ಅವರೇ 'ಭಾರತೀಯ ಕಾವ್ಯಮೀಮಾಂಸೆ' ಪುಸ್ತಕದಲ್ಲಿ ಹೇಳುವಂತೆ ಈ ಕಾವ್ಯಮೀಮಾಂಸೆಯನ್ನು "ಪ್ರತಿಭಾಶಾಲಿಗಳೂ ತೀಕ್ಷ್ಣಮತಿಗಳೂ ಆದ ವಿದ್ವಾಂಸರು ಬೆಳೆಸಿದರು; ಎಲ್ಲ ಕಾಲಕ್ಕೂ ಎಲ್ಲ ಸಾಹಿತ್ಯಕ್ಕೂ ಅನ್ವಯಿಸುವ ಹಲವು ರಹಸ್ಯಗಳನ್ನು ಹೊರಗೆಡಹಿದರು."

ಸಾಹಿತ್ಯದ ಅಧ್ಯಯನದಲ್ಲಿ ನಮಗೆ ಪೂರ್ವಾರ್ಜಿತವಾಗಿ ಬಂದ ಭಾಗ್ಯವನ್ನೆಲ್ಲ ಆಧುನಿಕ ಪೀಳಿಗೆಗಳಿಗೆ ಉಳಿಸಿಡುವ ಭಂಡಾರ 'ಭಾರತೀಯ ಕಾವ್ಯಮೀಮಾಂಸೆ'.

ಐದು ನೂರು ಪುಟಗಳ ಈ ಪುಸ್ತಕದಲ್ಲಿ ಮೂರು ಭಾಗಗಳಿವೆ, "ಶಾಸ್ತ್ರದ ಬೆಳವಳಿಗೆ", "ಕವಿ–ಕಾವ್ಯ–ಸಹೃದಯ", "ರಸಧ್ವನಿ". ಈ ಭಾಗಗಳನ್ನು ತೀ.ನಂ.ಶ್ರೀ. ಅವರೇ "ಅರಿಕೆ'ಯಲ್ಲಿ ಹೀಗೆ ಪರಿಚಯ ಮಾಡಿಕೊಟ್ಟಿದ್ದಾರೆ: "ಮುಖ್ಯೋದ್ದೇಶವು ಧ್ವನಿ ರಸ ತತ್ವಗಳ ನಿರೂಪಣೆ, ಸೂಕ್ಷ್ಮವೂ ನಮ್ಮ ಕಾಲದ ದೃಷ್ಟಿಯಿಂದ ಅನುಪಯುಕ್ತವೂ ಆದ ಪ್ರಭೇದ ವಿಭೇದಗಳಿಗೆ ಹೆಚ್ಚು ಲಕ್ಷ್ಯಕೊಡದೆ, ಈ ತತ್ವಗಳ ತಿರುಳನ್ನು ನನ್ನ ತಿಳಿವಿಗೆ ನಿಲುಕಿದ ಮಟ್ಟಿಗೆ ವಿಷದ ಪಡಿಸಲು ಈ ಗ್ರಂಥದ ಮೂರನೆಯ ಭಾಗದಲ್ಲಿ ಪ್ರಯತ್ನ ಮಾಡಿದ್ದೇನೆ. ಇದರ ಮೊದಲನೆಯ ಭಾಗದಲ್ಲಿ ಸಂಸ್ಕೃತದ ಪ್ರಸಿದ್ಧ ಕಾವ್ಯ ಮೀಮಾಂಸಕರು, ಅವರ ಕೃತಿಗಳು, ಅವರ ಕೈಯಲ್ಲಿ ಈ ಶಾಸ್ತ್ರ ಬೆಳೆದು ರೂಪುಗೊಂಡ ಬಗೆ, ಇದರ ವಿಶೇಷ ಲಕ್ಷಣಗಳು – ಇದನ್ನೆಲ್ಲ ಸಂಗ್ರಹವಾಗಿ, ಆದರೂ ಮುಖ್ಯಾಂಶಗಳನ್ನು ಬಿಡದೆ, ತಿಳಿಸಿದ್ದೇನೆ........ "ಕವಿ – ಕಾವ್ಯ – ಸಹೃದಯ" ಎಂಬುದು ಗ್ರಂಥದ ಎರಡನೆಯ ಭಾಗ. ಕಾವ್ಯ ಸೃಷ್ಟಿ, ಕಾವ್ಯ ಜಗತ್ತು, ಕಾವ್ಯ ಪ್ರಯೋಜನ – ಈ ಮೊದಲಾದ ವಿಷಯಗಳನ್ನು ನಮ್ಮ ಲಕ್ಷಣ ಗ್ರಂಥಗಳಲ್ಲಿ ಒಂದೆರಡು ವಾಕ್ಯಗಳಲ್ಲಿ ಸೂಚಿಸಿ ದಾಟಿಸಿಬಿಡುವುದೇ ಸಾಮಾನ್ಯ. ಇವನ್ನು ಕುರಿತು ಅಲ್ಲಲ್ಲಿ ದೊರೆಯುವ ಉಕ್ತಿಗಳನ್ನೂ ಸೂಚನೆಗಳನ್ನೂ ಒಂದುಗೂಡಿಸಿ ಈ ಭಾಗದಲ್ಲಿ ತಕ್ಕಮಟ್ಟಿಗೆ ವಿಸ್ತಾರವಾಗಿ ಪ್ರತಿಪಾದನೆ ಮಾಡಿದ್ದೇನೆ."

ತೀ.ನಂ.ಶ್ರೀ. "ರಸ – ಧ್ವನಿ – ಔಚಿತ್ಯ ಇದೇ ಕಾವ್ಯ ಗಾಯತ್ರಿ" ಎಂದಿದ್ದಾರೆ. ಈ ಪರಿಕಲ್ಪನೆಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಜಗತ್ತಿನ ಕಾವ್ಯ ಮೀಮಾಂಸೆಗೆ ಭಾರತೀಯ

ಕಾವ್ಯಮೀಮಾಂಸೆಯ ಪ್ರಮುಖ ಕೊಡುಗೆಗಳು ಇವು. ತೀ.ನಂ.ಶ್ರೀ. ಇವನ್ನು ಸ್ಪಷ್ಟವಾಗಿ, ವಿಸ್ತಾರವಾಗಿ, ಅಗತ್ಯವಾದ ಇತರ ಪಾರಿಭಾಷಿಕ ಶಬ್ದಗಳ ವಿವರಣೆಗಳೊಂದಿಗೆ, ಅಗತ್ಯವಾದಷ್ಟು ನಿದರ್ಶನಗಳೊಂದಿಗೆ, ವಿವರಿಸುತ್ತಾರೆ. ಪ್ರತಿ ಹೆಜ್ಜೆಯಲ್ಲೂ ಈಗಾಗಲೆ ಆ ಪರಿಕಲ್ಪನೆಯನ್ನು ಕುರಿತು ಬಂದಿರುವ ಹಲವಾರು ಅಭಿಪ್ರಾಯಗಳನ್ನು ಗಮನಿಸುತ್ತಾರೆ ಎನ್ನುವುದು ಮುಖ್ಯವಾದ ಸಂಗತಿ. ಕಾವ್ಯಮೀಮಾಂಸೆ ಜಟಿಲವೂ ಶಾಸ್ತ್ರೀಯವೂ ಆದ ವಿಷಯ. ವಿಷಯವನ್ನು ಸರಳಗೊಳಿಸದೆ ನಿರೂಪಣೆಯನ್ನು ಹೇಗೆ ಸರಳಗೊಳಿಸುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆ, "ರಸ"ವನ್ನು ಕುರಿತ ವಿವರಣೆ. "ರಸತತ್ತ್ವವೇ ಭಾರತೀಯ ಕಾವ್ಯಮೀಮಾಂಸೆಯ ಒಳತಿರುಳು; ಕಾವ್ಯಸಾಗರವನ್ನು ಆಲೋಡನೆ ಮಾಡಿ ಮಾಡಿ ನಮ್ಮ ಶಾಸ್ತ್ರಕಾರರು ಸಾಧಿಸಿರುವ ಅಮೃತವೇ ಅದು" ಎಂದು ರಸತತ್ತ್ವದ ಪ್ರಾಧಾನ್ಯವನ್ನು ಹೇಳಿ, ಅದರ ವಿವರಣೆಯನ್ನು ಒಂದು ನಿದರ್ಶನದಿಂದ ಪ್ರಾರಂಭಿಸುತ್ತಾರೆ. ಪಂಪನ 'ಆದಿಪುರಾಣ'ದಲ್ಲಿ ಮಗಳನ್ನು ಗಂಡನ ಮನೆಗೆ ಮೊದಲ ಬಾರಿಗೆ ಕಳುಹಿಸಿಕೊಡುವ ಸನ್ನಿವೇಶದ ವರ್ಣನೆಯನ್ನು ಆರಿಸಿಕೊಳ್ಳುತ್ತಾರೆ. ತಂದೆ, ತಾಯಿ, ಮಗಳು, ಬಂಧುಗಳು ಎಲ್ಲರ ಶೋಕದ ವರ್ಣನೆಯ ವಿವರಗಳಿಗೆ ಗಮನ ಸೆಳೆದು, "ಈ ಪದ್ಯವನ್ನು ನಾವು ಓದುವಾಗ, ಇವರೇನು ಮಾಡಿದರು, ಅವರೇನು ಹೇಳಿದರು ಎಂದು ತಿಳಿದುಕೊಂಡಷ್ಟಕ್ಕೇ ತಟಸ್ಥರಾಗಿ ನಿಲ್ಲದೆ, ಈ ಅಗಲಿಕೆಯಿಂದ ಉದ್ಭವಿಸಿದ ಶೋಕವೆಂಬ ಚಿತ್ತವೃತ್ತಿಯನ್ನೇ ಒಂದು ವಿಶೇಷ ತನ್ಮಯತೆಯಿಂದ ಅನುಭವಿಸುತ್ತೇವೆ; ಇದರಲ್ಲೆ ಅನಿರ್ವಚನೀಯವಾದ ಆಸ್ವಾದವನ್ನು ಪಡೆಯುತ್ತೇವೆ. ಹೀಗೆ ನಮಗೆ ಇಲ್ಲಿ ಉಂಟಾಗುವ ಅನುಭವ ವಿಶೇಷಕ್ಕೆ "ರಸ" ಎಂದು ಹೆಸರು" ಎನ್ನುತ್ತಾರೆ. "ಭಾವವನ್ನು ಉದ್ಬೋಧಗೊಳಿಸುವ ಕಾರಣ ಸಾಮಗ್ರಿಗೆ "ವಿಭಾವ" ಎಂದೂ, ಭಾವದ ಕಾರ್ಯ ಸಮುದಾಯಕ್ಕೆ "ಅನುಭಾವ" ಎಂದೂ ಸಂಜ್ಞೆ. ಈ ವಿಭಾವಾನುಭಾವಗಳನ್ನು ಅರಿಯುತ್ತಿದ್ದ ಹಾಗೆಯೇ ವಾಚಕಸಾಮಾಜಿಕರಿಗೆ ರಸಾನುಭವವುಂಟಾಗುತ್ತದೆ. ಮೇಲಿನ ಉದಾಹರಣೆಯಲ್ಲಿ, ಒದಗಿ ಬಂದಿರುವ ಅಗಲಿಕೆಯೇ ವಿಭಾವ; ನಮಸ್ಕರಿಸುವುದು, ಅಪ್ಪಿಕೊಳ್ಳುವುದು, ಹರಸುವುದು, ಕಣ್ಣೀರು ಮಿಡಿಯುವುದು ಈ ಮೊದಲಾದ ಸಮಸ್ತ ಕ್ರಿಯೆಗಳೂ ಅನುಭಾವಗಳು. ಈ ವಿಭಾವಾನುಭಾವಗಳನ್ನು ಕವಿ ಸಮುಚಿತವಾಗಿ ವರ್ಣಿಸಿರುವುದರಿಂದ ಅವುಗಳನ್ನು ಪರಿಭಾವಿಸಿದ ಮಾತ್ರಕ್ಕೆ ನಾವು ಕರುಣರಸವನ್ನು ಆಸ್ವಾದಿಸುತ್ತೇವೆ." ರಸ, ಭಾವ, ಅನುಭಾವ, ವಿಭಾವ ಎಲ್ಲ ಪರಿಕಲ್ಪನೆಗಳನ್ನೂ ಪರಿಚಯ ಮಾಡಿಕೊಟ್ಟು ಅಡಿ ಟಿಪ್ಪಣಿಯಲ್ಲಿ ತೀ.ನಂ.ಶ್ರೀ. ಹೇಳುತ್ತಾರೆ : "ಭರತನ ಸೂತ್ರದಲ್ಲಿ ವಿಭಾವ ಅನುಭಾವಗಳಲ್ಲದೆ "ವ್ಯಭಿಚಾರಿ" ಭಾವದ ಹೆಸರೂ ಬಂದಿದೆ; ಇದಕ್ಕೆ "ಸಂಚಾರಿಭಾವ" ಎಂಬ ಇನ್ನೊಂದು ಹೆಸರೂ ಉಂಟು...." ಭರತ, ದಂಡಿ, ಭಾಮಹ, ವಾಮನ, ಆನಂದವರ್ಧನ ಪ್ರತಿಯೊಬ್ಬರೂ ಈ ಶಾಸ್ತ್ರಕ್ಕೆ ನೀಡಿದ ಕೊಡುಗೆಯನ್ನು ತೀ.ನಂ.ಶ್ರೀ. ವಿಶ್ಲೇಷಿಸುತ್ತಾರೆ. ಸ್ಪಷ್ಟವಾಗಿ ಪ್ರತಿಯೊಬ್ಬರ ಕೊಡುಗೆಗೆ ಬೆಲೆ ಕಟ್ಟುತ್ತಾರೆ. ಕ್ಷೇಮೇಂದ್ರನ "ಔಚಿತ್ಯವಿಚಾರ ಚರ್ಚೆ ಓದಲು ರಮ್ಯವಾಗಿದೆ, ಆದರೆ ಕಾವ್ಯತತ್ತ್ವವನ್ನು ಕುರಿತು 'ಧ್ವನ್ಯಾಲೋಕ'ಕ್ಕಿಂತ ಇದು ಮುಂದುವರೆದಿಲ್ಲ"; "ಅಲಂಕಾರ ಪ್ರಸ್ಥಾನದವರು ಕಾವ್ಯ ಸಾಗರದ ತಡಿಯಲ್ಲಿ ಚಿಪ್ಪುಗಳನ್ನು ಆಯ್ದಂತಾಯಿತೇ ಹೊರತು, ಅದರ ತಳವನ್ನು ಶೋಧಿಸಿದಂತಾಗಲಿಲ್ಲ"; "ನಿಜವಾಗಿಯೂ ಕುಂತಕನು ಕಾವ್ಯದ ಚಿನ್ನಕ್ಕೆ ಒರೆಗಲ್ಲು".

ಶ್ರೀಕಂಠಯ್ಯನವರಿಗೆ ಅಸಾಧಾರಣ ಪಾಂಡಿತ್ಯ ಮಾತ್ರವಲ್ಲ, ಅಪೂರ್ವ ಅಭಿರುಚಿಯೂ ಇತ್ತು. ಅವರು ನಿದರ್ಶನಗಳಿಗಾಗಿ ಆರಿಸಿಕೊಳ್ಳುವ ಕವನ ಭಾಗಗಳು ಸೊಗಸಾದವು; ಓದುಗನಿಗೆ ಕಾವ್ಯಾಸ್ವಾದನೆಯನ್ನು ಕಲಿಸುವಂತಹವು. ಪಂಪ, ರನ್ನ, ಕುಮಾರವ್ಯಾಸ, ವಾಲ್ಮೀಕಿ, ಕಾಳಿದಾಸ ಮೊದಲಾದ ಮಹಾಕವಿಗಳಿಂದ ಭಾಗಗಳನ್ನು ಆರಿಸುವಂತೆಯೇ ಬೇಂದ್ರೆ, ಕುವೆಂಪು ಅವರ ಕವನಗಳಿಂದ ಪಂಕ್ತಿಗಳನ್ನು ಆರಿಸುತ್ತಾರೆ; ಜನಪದ ಕವನವಾದ 'ಕೆರೆಗೆ ಹಾರ'ದ ಭಾಗಗಳ ಸೊಗಸನ್ನು ನಿರೂಪಿಸುತ್ತಾರೆ; ಹಳ್ಳಿಯ ಹಾಡುಗಳಿಂದ "ತೊಟ್ಟಿಲ ಹೊತ್ತುಕೊಂಡು ತೌರು ಬಣ್ಣ ಉಟ್ಟುಕೊಂಡು । ಅಪ್ಪ ಕೊಟ್ಟೆಮ್ಮೆ ಹೊಡಕೊಂಡು – ತಂಗ್ಯಮ್ಮ । ತಿಟ್ಹತ್ತಿ ತಿರುಗಿ ನೋಡ್ಯಾಳು" "ಒಕ್ಕಲಗೇರ್‍ಯಾಗ, ಮಳೆರಾಜ – ಅವರು । ಮಕ್ಕಳ ಮಾರ್‍ಯಾರು, ಮಳೆರಾಜ; । ಮಕ್ಕಳ ಮಾರಿ ರೊಕ್ಕ ತಕ್ಕೊಂಡು । ಭತ್ತಂsತೆ ತಿರುಗ್ಯಾರು ಮಳೆರಾಜ" ಇಂತಹ ಪಂಕ್ತಿಗಳನ್ನು ಉದ್ಧರಿಸುತ್ತಾರೆ. ವಿಸ್ತಾರವಾದ ವಿದ್ವತ್ತಿನ ಸಾರ್ಥಕ ಬಳಕೆ ಇದು.

ಕನ್ನಡದ ಸಾಹಿತ್ಯ ವಿದ್ಯಾರ್ಥಿಗೆ ಭಾರತೀಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯ ಮೀಮಾಂಸೆ ಎರಡೂ ಲಭ್ಯವಾದದ್ದು ಸುಯೋಗ. ಆದರೆ ಎರಡು ಮೂಲಗಳಿಂದ ಬರುವ ಪಾರಿಭಾಷಿಕ ಶಬ್ದಗಳ ಅರ್ಥವ್ಯಾಪ್ತಿಯನ್ನೂ ಸಮಾನಾರ್ಥ ಶಬ್ದಗಳನ್ನೂ ಸ್ಪಷ್ಟಮಾಡಿಕೊಳ್ಳುವುದು ಅಗತ್ಯ. 'ಪ್ರತಿಭೆ', 'ಜೀನಿಯಸ್'ಗೆ ಸಮಾನವೆ, 'ಕಲ್ಪನೆ' 'ಇಮ್ಯಾಜಿನೇಷನ್'ಗೆ ಸಮಾನವೇ? 'ಫ್ಯಾನ್ಸಿ' ಎನ್ನುವುದಕ್ಕೆ ನಮ್ಮಲ್ಲಿ ಸಮಾನ ಶಬ್ದ ಉಂಟೆ? ಈ ದಿಸೆಯಲ್ಲಿ ತೀ.ನಂ.ಶ್ರೀ. ಅವರು ಇಲ್ಲಿ ಮೌಲಿಕವಾದ ಕೆಲಸ ಮಾಡಿದರು.

ವ್ಯಾಕರಣ, ಗ್ರಂಥಸಂಪಾದನ ಶಾಸ್ತ್ರ, ಭಾಷಾ ಶಾಸ್ತ್ರ ಇವೆಲ್ಲ ನೀರಸ ಅಧ್ಯಯನಗಳು ಎಂದು ಸಾಮಾನ್ಯ ಭಾವನೆ, ಈ ಭಾವನೆ ಬಹುಮಟ್ಟಿಗೆ ಸರಿಯೂ ಹೌದು. ತೀ.ನಂ.ಶ್ರೀ. ಕಾವ್ಯ ಪ್ರೇಮಿಗಳು ಮಾತ್ರವಲ್ಲ, ಕವಿಮನೋಧರ್ಮದವರು. ಹತ್ತಿರಹತ್ತಿರ ಐವತ್ತು ವರ್ಷ ವಯಸ್ಸಾದಾಗ ಭಾಷಾಶಾಸ್ತ್ರವನ್ನು ವಿಶೇಷವಾಗಿ ಅಧ್ಯಯನ ಮಾಡಲು ತೊಡಗಿದರು. ಅದರಲ್ಲಿ ಎಂತಹ ಪ್ರಭುತ್ವ ಪಡೆದರೆಂದರೆ ಭಾರತದ ಪ್ರಸಿದ್ಧ ಭಾಷಾ ಶಾಸ್ತ್ರ ಪ್ರಭು ಡಾ. ಸುನೀತಿ ಕುಮಾರ ಚಟರ್ಜಿ, ಅಂತರರಾಷ್ಟ್ರೀಯ ಖ್ಯಾತಿಯ (ಅಮೆರಿಕದ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ) ಡಾ. ಎಂ.ಬಿ ಎಮಿನೋ ಇಂತಹವರು ಅವರ ಸಾಧನೆಯನ್ನು ಮೆಚ್ಚಿ ಕೊಂಡರು. ಪೂನಾದಲ್ಲಿ ಅವರ ಉಪನ್ಯಾಸಗಳನ್ನು ಕೇಳಿದ ಅಮೆರಿಕನ್ ವಿದ್ವಾಂಸರು, ಅವರು ಅಮೆರಿಕಕ್ಕೆ ಭೇಟಿ ಕೊಡುವುದಾದರೆ ಎಲ್ಲ ವ್ಯವಸ್ಥೆ ಮಾಡುವುದಾಗಿ ಅಲ್ಲಿಯೇ ಹೇಳಿದರು. ರಾಕ್‌ಫೆಲ್ಲರ್ ಪ್ರತಿಷ್ಠಾನದ ಗೌರವ ವೇತನ ಪಡೆದು ತೀ.ನಂ.ಶ್ರೀ. ಅಮೆರಿಕಕ್ಕೆ ಹೋಗಿ ಬಂದರು.

ತಮ್ಮ ಅನುಭವಗಳನ್ನು ನಿರೂಪಿಸುತ್ತ ತೀ.ನಂ.ಶ್ರೀ. ಮೈಕಲ್ ಆಂಗೆಲೋ ಎಂಬ ಬಹುಶ್ರೇಷ್ಠ ಕಲಾವಿದನು ಮಾಡಿದ, ಬೈಬಲಿನ ಹಳೆಯ ಒಡಂಬಡಿಕೆಯಲ್ಲಿ ಕಾಣುವ, ಯಹೂದ್ಯರ ಉದ್ಧಾರಕ ಮೋಸೆಸ್‌ನ ವಿಗ್ರಹವನ್ನು ಕಂಡು ಬರೆದಿರುವ ಮಾತುಗಳು ಅವರ ಮನೋಧರ್ಮ, ಶೈಲಿ ಎರಡಕ್ಕೂ ಕನ್ನಡಿ:

"ಮೈಕೆಲ್ ಆಂಗೆಲೋ ಎಂಬ ಕಲಾಸಾರ್ವಭೌಮನು ಅಮೃತಶಿಲೆಯಲ್ಲಿ ಬೆಣ್ಣೆಯಲ್ಲಿ ಹೇಗೋ ಹಾಗೆ ಲೀಲಾಜಾಲವಾಗಿ ಕೈಯಾಡಿಸಿ ಕಂಡರಿಸಿರುವ ಧೀರೋದಾತ್ತ ಮೂರ್ತಿ ಅದು. ಮೋಸೆಸ್ ಮಹಾಪ್ರವಾದಿ ಪೀಠಾಸೀನನಾಗಿರುವ ನಿಲವಿನ ದಿಟ್ಟತನ, ಅವನ ಅಂಗೋಪಾಂಗಗಳ ದಾರ್ಢ್ಯ, ತುಟಿಗಳ ಸುತ್ತಿನಿಂದ ಋಷಿಯೋಗ್ಯವಾಗಿ ಹೊಮ್ಮಿ ಇಳಿದು ಬಂದಿರುವ ಕೇಶರಾಶಿಯ ಹೊನಲು. ಇದೆಲ್ಲ ಹಾಗಿರಲಿ, ನೇತ್ರಗಳ ವೀರದೃಷ್ಟಿ, ವದನದ ನಿಷ್ಠುರಮುದ್ರೆ – ಇವೇ ಸಾಕು ಯಾರನ್ನಾದರೂ ತಡೆದು ನಿಲ್ಲಿಸುವುದಕ್ಕೆ. "ನೀವು ಪಾಲಿಸುವ ಸಲುವಾಗಿ ಭಗವಂತನ ಸಮ್ಮುಖದಿಂದ ನಾನು ದಶ ಶಾಸನಗಳನ್ನು (ದಿ ಟೆನ್ ಕಮ್ಯಾಂಡ್ ಮೆಂಟ್ಸ್) ತಂದು ಸಾರಿದೆನಲ್ಲ. ಅವನ್ನೆಲ್ಲ ಉಲ್ಲಂಘಿಸಿದ ನೀವು ನನಗೆ ಹೇಗೆ ತಕ್ಕ ಶಿಷ್ಯರಾದೀರಿ?" ಎಂದು ಈ ಗುರುವರೇಣ್ಯನು ತನ್ನವರನ್ನು ಅಧಿಕ್ಷೇಪಿಸುತ್ತಿರುವಂತೆ ನನಗೆ ತೋರಿತು. ಏಕೆ ಮರೆಮಾಚಲಿ! – ನಮ್ಮ ವೇದವ್ಯಾಸರ ನೆನಪು ನನಗೆ ಅನಿವಾರ್ಯವಾಗಿ ಉಂಟಾಯಿತು:

"ಊರ್ಧ್ವ ಬಾಹುರ್ವಿರೌಮ್ಯೇಷ ನ ಚ ಕಶ್ಚಿತ್ ಶೃಣೋತಿ ಮಾಂ ।
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೆ॥"

"(ಇದೋ ತೋಳುಗಳನ್ನು ಎತ್ತಿಕೊಂಡು ಕೂಗಿಕೊಳ್ಳುತ್ತಿದ್ದೇನೆ. ಯಾರೊಬ್ಬರೂ ನನ್ನನ್ನು ಆಲಿಸುವುದಿಲ್ಲವಲ್ಲ! ಧರ್ಮದಿಂದಲೇ ಅರ್ಥ, ಧರ್ಮದಿಂದಲೇ ಕಾಮ, ಏಕೆ ಅದನ್ನು ಸೇವಿಸುವುದಿಲ್ಲ?") – ಎಂಬ ಅನೇಕ ಸಾವಿರ ವರ್ಷಗಳ ಹಿಂದಿನ ವ್ಯಾಸವಾಣಿ ನನ್ನ ಕಿವಿಗಳಲ್ಲಿ ಮೊರೆಯುತ್ತಿರುವಂತೆ ಭಾಸವಾಯಿತು!... ಮೋಸೆಸ್ಸನ ವಿಗ್ರಹದ ಭವ್ಯತೆಯನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತಾ ಅದರ ಪರಿಭಾವನೆಯಲ್ಲಿ ನಾನು ಮುಳುಗಿರುವಾಗಲೇ ಮಾರ್ಗದರ್ಶಿಯ ಅನುಲ್ಲಂಘನೀಯವಾದ ಕರೆ ಕಿವಿಯನ್ನು ಕೊರೆಯಿತು. ತೃಷಿತನೇತ್ರನಾಗಿ, ಅತೃಪ್ತಹೃದಯನಾಗಿ ನಾನು ಹೆಜ್ಜೆಗಳನ್ನು ಇತ್ತಕಡೆ ತಿರುಗಿಸಬೇಕಾಯಿತು".

ತೀ.ನಂ.ಶ್ರೀ. ಅವರ ತರಗತಿಯಲ್ಲಿ ಕೂಡುವ ಭಾಗ್ಯ ನನಗೆ ದೊರಕಲಿಲ್ಲ. ಆದರೆ ಕಾಲೇಜಿನಲ್ಲಿ ಅವರ ಸಹೋದ್ಯೋಗಿಯಾಗಿ, ಅವರ ಮನೆಗೆ ಹೋಗಿ ಚರ್ಚೆನಡೆಸಿ, ಸಹೃದಯ ಗೋಷ್ಠಿ, ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತಿಗಳಸಂಘ ಮುಂತಾದೆಡೆಗಳಲ್ಲಿ ಅವರಿದ ಸಾಹಿತ್ಯದ ವಿಷಯವನ್ನು ಕಲಿತೆ, ಬಾಳು ಹಸನಾಗಲು ಅಗತ್ಯವಾದ ಸಂಗತಿಗಳನ್ನೂ ಕಲಿತೆ. ನನ್ನ ಮದುವೆಯಾದಾಗ ಅವರು ಬರೆದ ಪತ್ರ ಶುಭಾಶಯದ ಪತ್ರವಷ್ಟೇ ಆಗಿರಲಿಲ್ಲ, ಜೀವನಕ್ಕೆ ದಾರಿದೀಪವಾಗಿತ್ತು. ನನ್ನ ತಂದೆಯವರು ತೀರಿಕೊಂಡಾಗ ರುದ್ರಭೂಮಿಗೆ ಬಂದು ಸಂತೈಸಿದರು. ಸಾವಿರಾರು ಮಂದಿ ಇತರರಿಗೆ ಹೇಗೊ ಹಾಗೆಯೇ ನನಗೂ ಅವರು ಪ್ರಾತಃಸ್ಮರಣೀಯರು.

(ಈ ಲೇಖನ ಲೇಖಕರ 'ಸಿರಿಸಂಪದ' ಪುಸ್ತಕದಲ್ಲಿ ಸೇರ್ಪಡೆಯಾಗಿದೆ)

ತೀ.ನಂ.ಶ್ರೀ.

ಸ.ಸ. ಮಾಳವಾಡ

●

೧೯೩೪-೩೫ರಲ್ಲಿ ಎಂ.ಎ. ವರ್ಗದ ಪಾಠಗಳ ನಿಯಮಾವಳಿ ಪೂರೈಸಲೆಂದು ನಾನು ರಾಜಾರಾಮ ಕಾಲೇಜಿಗೆ ಹೋಗಬೇಕಾದ ಸಂದರ್ಭವೊದಗಿತು. ವಾರಕ್ಕೆ ಒಂದೆರೆಡು ಸಲ ನಡೆಯುತ್ತಿದ್ದ ಉಪನ್ಯಾಸಗಳಿಗೆ ಹೋಗಬೇಕಾಗಿದ್ದ ನನಗೆ ಕಾಲೇಜಿನ ಇಲ್ಲವೆ ಪ್ರಿನ್ಸಿಪಾಲರ ಸಂಪರ್ಕ ಬರುತ್ತಿರಲಿಲ್ಲ. ಆಗ ನಾನು ಕೊಲ್ಲಾಪುರದಲ್ಲಿ ಕನ್ನಡ ಚಟುವಟಿಕೆಗಳಲ್ಲಿ ತೊಡಗಿದ್ದೆ. ಆ ಮೂಲಕ ನಾನು ಅಲ್ಲಿಯ ಕನ್ನಡ ಎಂ.ಎ. ವಿದ್ಯಾರ್ಥಿ ಎಂಬ ಸಮಾಚಾರ ದೂರದ ಮೈಸೂರಿನ ಕನ್ನಡ ಇಲಾಖೆಯವರಿಗೆ ಗೊತ್ತಾಗುವ ಸನ್ನಿವೇಶವುಂಟಾಗಿತ್ತು. ಬಿ.ಎಂ.ಶ್ರೀ. ನನ್ನ ಬಗೆಗೆ ಅಲ್ಲಿ ಮಾತನಾಡಿದಂತಿತ್ತು. ನಾನು 'ಪ್ರಬುದ್ಧ ಕರ್ಣಾಟಕ' ಪತ್ರಿಕೆಗೆ ಚಂದಾದಾರನಾಗ ಬೇಕೆಂದು ಅಪೇಕ್ಷಿಸಿ ಆ ಕಚೇರಿಗೆ ಕಾಗದ ಬರೆದೆ. ವಿದ್ಯಾರ್ಥಿಗಳಿಗೆ ದೊರೆಯುವ ರಿಯಾಯಿತಿ ಹಣದಲ್ಲಿ ಪತ್ರಿಕೆ ಕಳಿಸಬೇಕಾಗಿ ಕೇಳಿದೆ. ನಾನು ವಿದ್ಯಾರ್ಥಿಯಾಗಿರುವ ಬಗೆಗೆ ರುಜುವಾತು ಪಡಿಸಲು ಪ್ರಿನ್ಸಿಪಾಲರ ಸರ್ಟಿಫಿಕೇಟ್ ಅವಶ್ಯಕವೆಂದು ಆ ಕಚೇರಿಯಿಂದ ತಿಳಿಸಲಾಯಿತು. ವಿದ್ಯಾರ್ಥಿಯಾಗಿದ್ದೇನೆಂದು ನಾನು ಹೇಳುತ್ತಿರುವಾಗ ನನ್ನ ಹೇಳಿಕೆಯ ಬಗೆಗೆ ಅವಿಶ್ವಾಸ ತಳೆಯುವುದು ಏಕೆ? ನಾನು ವಿದ್ಯಾರ್ಥಿಯೆಂದು ರುಜುವಾತು ಪಡಿಸಬೇಕಾದ ಅವಶ್ಯಕತೆ ಏನು? ಇತ್ಯಾದಿ ಭಾವನೆಗಳಿಂದ ಕೂಡಿದ ದೀರ್ಘವಾದ ಕಾಗದವೊಂದನ್ನು ನಾನು ಬರೆದೆ. ಅಷ್ಟೇ ದೀರ್ಘವಾದ ಮಾರೋಲೆ ಬಂದಿತು. ನಿಯಮಾವಳಿಯನ್ನು ಖಂಡಿತ ಪಾಲಿಸಲೇ ಬೇಕು. ನಿಮ್ಮ ಅಭಿಪ್ರಾಯ ಅರ್ಥವಾಯಿತು. ನಿಮ್ಮ ನಿಲುಮೆ ಸರಿಯಾಗಿರಬಹುದಾದರೂ ಅದನ್ನು ಒಪ್ಪಿಕೊಳ್ಳಲು ಸುತಾರಾಂ ಆಗುವುದಿಲ್ಲ. ಪತ್ರಿಕೆ ಬೇಕಿದ್ದರೆ ರುಜುವಾತು ಕಳಿಸಿ, ಇಲ್ಲವಾದರೆ ಬಿಟ್ಟುಬಿಡಿ – ಈ ಬಗೆಯ ಧೋರಣೆಯ ಕಾಗದ ನನಗೆ ಅಪ್ರಿಯವೆನಿಸಿತು. ಆದರೆ ಆ ಕಾಗದದಲ್ಲಿಯ 'ಏನು ಮಾಡೋಕೆ ಸಾಧ್ಯ?' ಎಂಬರ್ಥವಿರುವ ಸೂತ್ರ ನನ್ನ ಗಮನವನ್ನು ಎಳೆಯಿತು. ಹಾಗೆ ಕಾಗದ ಬರೆದವರು ಆಗ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಲೆಕ್ಚರರ್ ಆಗಿದ್ದ ತೀ.ನಂ.ಶ್ರೀ. ಅವರು. ಹೀಗೆ ಬಿಸಿಬಿಸಿಯಾದ ಮಾತು ಗಳಿಂದ ಪರಸ್ಪರರನ್ನು ಅರ್ಥಮಾಡಿಕೊಂಡು ಆರಂಭವಾಯಿತು ನಮ್ಮ ಪರಿಚಯ. ಮುಂದೆ ಕೆಲದಿನಗಳ ನಂತರ ನಾನು ಹರಿಹರ ಕವಿಯ ಕೈಬರಹದ ಗ್ರಂಥಗಳ ಬಗೆಗೆ ವಿಷಯ ಸಂಗ್ರಹ ಮಾಡುವ ಕಾರ್ಯ ಕೈಗೊಂಡೆ. ಆಗ ಮೈಸೂರಿನ ಭಂಡಾರದಲ್ಲಿ ದೊರೆಯುವ

ಮಾಹಿತಿಯನ್ನು ಒದಗಿಸಲು ನಾನು ತೀ.ನಂ.ಶ್ರೀ. ಅವರಿಗೇ ಬರೆದೆ. ಅವರು ವಿಶ್ವಾಸದಿಂದ ಪರಿಶ್ರಮ ವಹಿಸಿ ಒಂದು ದೀರ್ಘವಾದ ಪಟ್ಟಿಯನ್ನೂ, ಕೆಲವು ಟಿಪ್ಪಣಿಗಳನ್ನೂ ತಮ್ಮ ಮುದ್ದಾದ ಅಕ್ಷರಗಳಲ್ಲಿ ಬರೆದು ನನಗಾಗಿ ಕಳುಹಿಸಿಕೊಟ್ಟರು. ಆ ಕಾಗದ ನನ್ನ ಸಂಗ್ರಹದಲ್ಲಿ ಇನ್ನೂ ಇರಬೇಕು.

ಹೀಗೆ ನಮ್ಮ ಪರಿಚಯ ಮುಂದೆ ಹತ್ತಿರದ ಸಂಬಂಧವಾಗಿ ಮುಂದುವರೆಯಿತು. ಮೈಸೂರು ವಿದ್ಯಾಪೀಠದ ಕನ್ನಡ ಅಭ್ಯಾಸ ನಿಯಾಮಕ ಮಂಡಲಿಯ ಸಭೆಗಳಲ್ಲಿ ನಾವು ಸೇರುತ್ತಿದ್ದೆವು. ಬಿ.ಎಂ.ಶ್ರೀ., ಎ.ಆರ್.ಕೃ. ಅವರು ತೀ.ನಂ.ಶ್ರೀ. ಅವರ ಬಗೆಗೆ ತೋರುತ್ತಿದ್ದ ವಿಶ್ವಾಸವನ್ನು ಕಂಡುಕೊಳ್ಳುವ ಅವಕಾಶ ನನಗೆ ದೊರಕಿತ್ತು. ಅವರ ಖಚಿತವಾದ ಜ್ಞಾನ, ಸ್ಪಷ್ಟವಾದ ಅಭಿಪ್ರಾಯ, ಸಭೆಗಳನ್ನು ಅಚ್ಚುಕಟ್ಟಾಗಿ ನಡೆಸುವುದರಲ್ಲಿ (ಇದರಲ್ಲಿ ಸೊಗಸಾದ ತಿಂಡಿಯ ವ್ಯವಸ್ಥೆಯೂ ಸೇರಿತ್ತು) ಅವರು ವಹಿಸುತ್ತಿದ್ದ ಶ್ರದ್ಧೆ – ಇವುಗಳ ಬಗೆಗೆ ಹಿರಿಯರು ಯಾವಾಗಲೂ ಮೆಚ್ಚುಗೆ ಸೂಚಿಸುತ್ತಿದ್ದರು. "ಆಗಬಹುದೇನಪ್ಪ, ಶ್ರೀಕಂಠಯ್ಯ" ಎಂದು ಎ.ಆರ್.ಕೃ. ಕೇಳುತ್ತಿದ್ದರು! "ಅದು ಹೇಗೆ ಆಗುತ್ತೆ ಸಾರ್" ಎಂದು ತೀ.ನಂ.ಶ್ರೀ. ದನಿಯೆತ್ತುತ್ತಿದ್ದರು. "ದೂರದ ಧಾರವಾಡದಿಂದ ಬಂದವರ ಅಭಿಪ್ರಾಯ?" ಮತ್ತೊಂದು ಪ್ರಶ್ನೆ. ಕೊನೆಗೆ ವಿವಿಧ ದೃಷ್ಟಿಕೋನಗಳನ್ನು ಸಮನ್ವಯಿಸುವ ನಿರ್ಣಯ. ಹೀಗೆ ಸಾಗುತ್ತಿದ್ದವು, ಅಂದಿನ ಅಭ್ಯಾಸ ನಿಯಾಮಕ ಮಂಡಲಿಯ ಕಾರ್ಯಕಲಾಪಗಳು.

ಕನ್ನಡದ ಬೇರೆ ಚಟುವಟಿಕೆಗಳಲ್ಲಿಯೂ ನಾವು ಭಾಗಿಯಾಗುತ್ತಿದ್ದೆವು. ತೀ.ನಂ.ಶ್ರೀ. ಅವರ ರಸಿಕತೆ, ಹಾಸ್ಯ, ನಗೆ ಇವುಗಳಿಂದಾಗಿ ಅವರ ಸಂಪರ್ಕವಿರುವ ಪರಿಸರವು ಹರುಷದಾಯಕವಾಗಿ ಪರಿಣಮಿಸುತ್ತಿತ್ತು. ಮುಂದೆ ಅವರು ಕನ್ನಡದ ಪ್ರೊಫೆಸರಾಗಿ ಕರ್ನಾಟಕ ವಿದ್ಯಾಪೀಠವನ್ನು ಸೇರಿದರು. ಆಗ ನಾವು ಜೊತೆಯಾಗಿ ಕೆಲಸ ಮಾಡುತ್ತಿದ್ದೆವು. ನಮ್ಮ ಪರಸ್ಪರ ಸಂಬಂಧವು ಇನ್ನೂ ಹತ್ತಿರದ್ದಾಗಿ ಪರಿಣಮಿಸಿತು. ಅವರ ಆತ್ಮೀಯವಾದ, ನಿರರ್ಗಳವಾದ ಸ್ನೇಹವನ್ನು ನಾನು ಮೆಚ್ಚಿಕೊಂಡೆ. ಅವರು ಕುಟುಂಬವತ್ಸಲರಾಗಿರುವುದನ್ನು ಕಂಡುಕೊಂಡೆ. ನಾಗರತ್ನ–ನಾಗಭೂಷಣರೂ ನಮಗೆ ಅತಿ ಸನಿಹದ ಬಾಲಕರಾಗಿ ಪರಿಣಮಿಸಿದರು. ಧಾರವಾಡದ ವಾತಾವರಣವನ್ನು ಅವರೆಲ್ಲ ಮೆಚ್ಚಿಕೊಂಡರೆಂದು ತೋರುತ್ತದೆ. ಧಾರವಾಡವನ್ನು ಬಿಟ್ಟ ಮೇಲೆಯೂ ಅಲ್ಲಿಯ ಪರಿಸರದ ಬಗೆಗೆ ಅವರಿಗೆ ಹೆಚ್ಚಿನ ಆಸಕ್ತಿ. ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸೇವಕರ ಯೋಗಕ್ಷೇಮದ ಬಗೆಗೂ ಅವರು ಯಾವಾಗಲೂ ವಿಚಾರಿಸುತ್ತಿದ್ದರು. ಕನ್ನಡ ಕೋಶ ಸಮಿತಿಯ ಸಭೆಗಳಲ್ಲಿ ನಾವು ವಿಪುಲವಾಗಿ ಸಂಧಿಸುತ್ತಿದ್ದೆವು. ೧೯೩೪–೩೫ರಲ್ಲಿ ಆರಂಭವಾದ ನಮ್ಮ ಪರಿಚಯವು ನಿಕಟ ಸಂಬಂಧವಾಗಿ ಮಾರ್ಪಟ್ಟು ೧೯೬೬ರ ವರೆಗೂ ಸಾಗಿತು. ಆಗಸ್ಟ್ ತಿಂಗಳು ಸೇರಿದ ಕೋಶಸಮಿತಿಯ ಸಭೆಯಲ್ಲಿ ಅವರು ಲವಲವಿಕೆಯಿಂದ ಕಾರ್ಯತತ್ಪರರಾಗಿದ್ದುಕೊಂಡು ಸೆಪ್ಟೆಂಬರ್ ತಿಂಗಳ ಸಭೆಯ ದಿನಾಂಕಗಳನ್ನೂ ನಿರ್ಧರಿಸಿದರು. ಆಗ ನಗುಮುಖದಿಂದ ಬೀಳ್ಕೊಂಡು ಮುಂದಿನ ತಿಂಗಳು ಸಂಧಿಸುವೆವು ಎಂದುಕೊಂಡೆವು. ತೀ.ನಂ.ಶ್ರೀ. ಈಗ ನಮ್ಮನ್ನು ಅಗಲಿದರೆಂದರೆ ನಂಬುವುದೂ ಕಠಿಣ.

ಧಾರವಾಡದಲ್ಲಿರುವಾಗ ಅವರು ಪುಣೆಯ ಡೆಕ್ಕನ್ ಸಂಶೋಧನ ಸಂಸ್ಥೆಯೊಂದಿಗೆ ಸಂಪರ್ಕವನ್ನು ಬೆಳೆಸಿಕೊಂಡು ಭಾಷಾಶಾಸ್ತ್ರದ ಬಗೆಗೆ ತಮ್ಮ ಒಲವನ್ನು ಬಲಿಸಿಕೊಂಡರು. ಮುಂದೆ ಆ ವಿಷಯವನ್ನು ಕುರಿತ ಪ್ರೌಢ ವ್ಯಾಸಂಗಕ್ಕೆಂದು ಅಮೆರಿಕೆಗೆ ತೆರಳಿದರು. ಕನ್ನಡದ ಪ್ರಾಧ್ಯಾಪಕರೊಬ್ಬರು ವಿದೇಶದ ಪಯಣ ಕೈಕೊಂಡುದು ಆಗ ಅನೇಕರಿಗೆ ಅಚ್ಚರಿಯ ಸಂಗತಿ ಯೆನಿಸಿತು. ಆದರೆ ಅದರ ಫಲವಾಗಿ ಇಂದು ಕರ್ನಾಟಕದಲ್ಲಿ ಭಾಷಾವಿಜ್ಞಾನದ ವ್ಯಾಸಂಗವು ವ್ಯಾಪಕವಾಗಿ ಸಾಗಿದೆ. ತೀ.ನಂ.ಶ್ರೀ. ಅವರ ಬಗೆಗೆ ನನ್ನಲ್ಲಿ ವೈಯಕ್ತಿಕ ಮೆಚ್ಚುಗೆ ಹೆಚ್ಚುವುದಕ್ಕೆ ಅವರು ಕನ್ನಡ ಪ್ರಾಧ್ಯಾಪಕ ವೃತ್ತಿಗೆ ತಂದುಕೊಟ್ಟ ಗೌರವದ ಸ್ಥಾನವೆಂದು ಹೇಳಬಹುದು. ಕನ್ನಡ ಪಂಡಿತರನ್ನು ಕಾಲೇಜುಗಳಲ್ಲಿ ಅಸಡ್ಡೆಯಿಂದ ಕಾಣುತ್ತಿದ್ದ ಕಾಲವನ್ನು ನಾನು ಕಂಡಿದ್ದೇನೆ. ಬಿ.ಎಂ.ಶ್ರೀ. ಅವರ ಸ್ಫೂರ್ತಿಯಿಂದ, ತೀ.ನಂ.ಶ್ರೀ. ಅವರ ಸಾಧನೆಯಿಂದ ಕನ್ನಡದ ಪ್ರಾಧ್ಯಾಪಕ ವೃತ್ತಿಗೆ ಗೌರವ ಕಂಡುಬಂದ ಕಾಲವನ್ನು ನಾನು ಈಗ ಕಾಣುತ್ತಿದ್ದೇನೆ. ಆಳವೂ ವಿಶಾಲವೂ ಆದ ವ್ಯಾಸಂಗವನ್ನು ಕೈಕೊಳ್ಳುವಲ್ಲಿ, ವಿಶಾಲ ಸಂಪರ್ಕ ಬೆಳೆಸುವಲ್ಲಿ ತೀ.ನಂ.ಶ್ರೀ. ಅವರ ಆದರ್ಶ ಈಗ ಕನ್ನಡ ಪ್ರಾಧ್ಯಾಪಕರ ಮುಂದೆಯಿದೆ.

ಬಾಳಿನಲ್ಲಿ ಪ್ರಿಯವಾದವುಗಳಂತೆ ಅಪ್ರಿಯ ಸನ್ನಿವೇಶಗಳೂ ಸಾಕಷ್ಟಿವೆ. ಅವುಗಳ ಬಗೆಗೆ ಸದಾ ಗೊಣಗಾಟ ನಡೆಸುವವರೂ ಇದ್ದಾರೆ. ಅಪ್ರಿಯವಾದ, ಅನ್ಯಾಯದ ಸನ್ನಿವೇಶಗಳನ್ನು ಪ್ರತಿಭಟಿಸಿ ಅವುಗಳ ಬಗೆಗೆ ಹೋರಾಟ ನಡೆಸಿ ಗಾಸಿಗೊಳ್ಳುವ ಉತ್ಸಾಹ ನನಗೆ ಹೆಚ್ಚಾಗಿದ್ದ ಕಾಲದಲ್ಲಿ ತೀ.ನಂ.ಶ್ರೀ. ಧಾರವಾಡದಲ್ಲಿ ನೆಲಸಿದ್ದರು. ನಮ್ಮಲ್ಲಿ ಆ ಬಗೆಗೆ ವಿಚಾರವಿನಿಮಯ ನಡೆಯುತ್ತಿತ್ತು. ಆಗ ತೀ.ನಂ.ಶ್ರೀ. ತಮ್ಮ 'ಏನು ಮಾಡೋಕೆ ಸಾಧ್ಯ?' ಎಂಬ ಸೂತ್ರವನ್ನು ನನ್ನೆದುರು ಮಂಡಿಸುತ್ತಿದ್ದರು. "ಅಪ್ರಿಯವಾದ ಸಂಗತಿಗಳೆಷ್ಟೋ ಇವೆ. ಆದರೆ ನಾವು ಅವುಗಳನ್ನು ಮರೆತು ಪ್ರಿಯವಾದವುಗಳನ್ನು ಗಮನಿಸಿ ಬಾಳಿನಲ್ಲಿ ಸೌಹಾರ್ದದ ಭಾವನೆಯನ್ನು ರೂಢಿಸಿಕೊಳ್ಳಬೇಕು" ಎಂಬುದು ಅವರ ವಾದವಾಗಿತ್ತು. ಈ ನಿಲುಮೆಯನ್ನು ರೂಢಿಸಿಕೊಳ್ಳುವಲ್ಲಿ ತೀ.ನಂ.ಶ್ರೀ. ಯಶಸ್ವಿಯಾದರು.

ಅಖಿಲ ಭಾರತದ, ಅಂತರ್‌ರಾಷ್ಟ್ರೀಯ ಮನ್ನಣೆಯನ್ನು ಗಳಿಸಿದ ಕನ್ನಡ ಪ್ರಾಧ್ಯಾಪಕರು ಅವರಾಗಿದ್ದರೆಂಬುದು ನಮಗೆ ಹೆಮ್ಮೆಯ ಮಾತಾಗಿದೆ. ಕನ್ನಡದ ಬಗೆಗೆ ಅವರಲ್ಲಿ ಉತ್ಕಟವಾದ ಅಭಿಮಾನವಿತ್ತು. ಅವರ ದಿನಬಳಕೆಯ ಸಾರ್ವಜನಿಕ ವ್ಯವಹಾರಗಳಲ್ಲಿ ಅಚ್ಚುಕಟ್ಟುತನವಿತ್ತು. ಖಚಿತವಾದ ನಿಲುಮೆಯನ್ನು ತಾಳಿದರೂ ವಿರಸಕ್ಕೆ ಅವರು ಎಡೆಗೊಡುತ್ತಿರಲಿಲ್ಲ. ಮೌಲಿಕ ವಾದುದರ ಬಗೆಗೆ ಅವರ ಆದರವಿತ್ತು.

ಕಣ್ಣು ತುಂಬುವ ಆಕೃತಿ; ಮನ ತುಂಬುವ ಮುಖದ ಕಳೆ; ಸದಾಸ್ಮಿತವದನ; ತುಂಬು ಪಾಂಡಿತ್ಯ; ವಿಶುದ್ಧ ಅಭಿರುಚಿ; ರಸಿಕತೆ; ಗಾಂಭೀರ್ಯ; ಸ್ನೇಹಪರತೆ; ಖಂಡಿತ ವಿಚಾರ ಸರಣಿ; ನಯವಾದ ಮಾತುಗಾರಿಕೆ; ಕಂಠಶ್ರೀ – ಇವುಗಳ ಮೂರ್ತಿಯಂತಿದ್ದರು, ತೀ.ನಂ.ಶ್ರೀ.

ತೀ.ನಂ.ಶ್ರೀ. ಅವರ ಅಂತ್ಯ

ಸಿ.ಎಚ್. ಪ್ರಹ್ಲಾದರಾವ್

●

ತೀ.ನಂ.ಶ್ರೀ. ಕಲ್ಕತ್ತೆಯಲ್ಲಿ ನಿಧನಹೊಂದಿದರು.

ಯಾಕೆ? ವಿಧಿ ಅವರಿಗೆ ಅಲ್ಲಿ ಕಾದಿತ್ತು ಎನ್ನುವುದು ನಾವು ಆಡುವ ಮಾತಿನ ಬಗೆ. ದೂರದ ಪರ ಊರಿನಲ್ಲಿಯೇ ಏಕೆ ವಿಧಿ ಅವರಿಗಾಗಿ ಕಾಯಬೇಕಿತ್ತು? ಇದಕ್ಕೆ ಉತ್ತರ ಸಿಕ್ಕಲಾರದು. ನಡೆದುದಕ್ಕೆ ವಿಧಿಯ ಅಧಿಕಾರ ಮುದ್ರೆ ಒತ್ತುವುದು ನಮ್ಮ ಕೆಲಸ ಅಷ್ಟೆ. ಆದರೂ ತೀ.ನಂ.ಶ್ರೀ. ಅವರ ವಿಚಾರದಲ್ಲಿ ವಿಧಿಯ ನಡೆವಳಿಕೆ ಅಷ್ಟು ಅರ್ಥರಹಿತ ಎನಿಸುವುದಿಲ್ಲ. ದೂರ, ಪ್ರೀತಿಯ ಸ್ನೇಹಿತರ, ಶಿಷ್ಯರ, ಬಂಧುಗಳಿಂದ ಸಹಸ್ರಾರು ಮೈಲಿಗಳಾಚೆ, ಪರಕೀಯರ ನಡುವೆ ಅವರ ಅಂತಿಮಯಾತ್ರೆ ನಡೆದುದರಲ್ಲಿ ವಿಧಿ ಔಚಿತ್ಯದ ಧ್ವನಿಯನ್ನು ಉದ್ದೇಶಿಸಲಿಲ್ಲ ಅನ್ನೋಣವೆ? ವಿಧಿ ಕುರುಡು ಅನ್ನುತ್ತೇವೆ. ಆದರೆ ತೀ.ನಂ.ಶ್ರೀ. ಅಂತ್ಯದಲ್ಲಿ ಅಡಗಿರುವ ಸೂಕ್ಷ್ಮವನ್ನು ಗ್ರಹಿಸುವವರು ಆ ಮಾತನ್ನು ಒಪ್ಪಲಾರರು.

ಸರಸ್ವತಿ ತೀ.ನಂ.ಶ್ರೀ. ಅವರ ವಿಷಯದಲ್ಲಿ ಬಹು ಉದಾರಿಯಾಗಿದ್ದಳು. ಅವರು ಬರೆಯಬಹುದಾದುದಕ್ಕಿಂತ ಬರೆದುದು ತೀರ ಕಡಮೆ. ಇನ್ನೂ ಹೆಚ್ಚು ಬರೆಯಬಹುದಾಗಿತ್ತು. ಆದರೆ ಹಾಗೆ ಮಾಡುವುದು ಸ್ವಾರ್ಥವಾಗುತ್ತಿತ್ತು. ಸರಸ್ವತಿ ನೀಡಿದ ವರಗಳಿಗೆ ಸಲ್ಲಿಸಬೇಕಾದ ಕಾಣಿಕೆಯಾಗಿ ಅವರು ಕೆಲವು ಕೃತಿಗಳನ್ನು ರಚಿಸಿ, ಬೇರೆ ಕಾರ್ಯಕ್ಷೇತ್ರವನ್ನು ಆರಿಸಿಕೊಂಡರು. ವಿದ್ವತ್ ಸಂಪಾದನೆ, ವಿದ್ವಾಂಸರ ಪಡೆಯ ನಿರ್ಮಾಣ, ಸಾಹಿತಿಗಳಿಗೆ ಪ್ರೋತ್ಸಾಹ, ಅವರು ದುಡಿದುದು ತೆರೆಮರೆಯ ಈ ಹಿನ್ನೆಲೆಯಲ್ಲಿ. ರಂಗಭೂಮಿಯ ಬೆಳಕಿನಲ್ಲಿ ಕಾಣಿಸಿಕೊಳ್ಳುವ ಪಾತ್ರಗಳನ್ನು ಸಜ್ಜುಮಾಡುವ ವರ್ಣಾಲಂಕಾರ, ವಸ್ತ್ರಾಲಂಕಾರದ ಕೆಲಸದಲ್ಲಿ ತೃಪ್ತಿಯನ್ನು ಕಂಡರು.

ತಾವು ತುಳಿದ ಹಾದಿಯನ್ನು ಅರವತ್ತರ ಗಡಿಯಲ್ಲಿ ಹಿಂದಿರುಗಿ ನೋಡಿದಾಗ, ಅವರ ಮನಸ್ಸಿನಲ್ಲಿ ತಮ್ಮ ನಡೆಯ ಬಗ್ಗೆ ಸಂದೇಹದ ನೆರಳೂ ಇರಲಿಲ್ಲ. ಜೀವನವನ್ನು ಪುನಃ ಆರಂಭಿಸುವುದು ಸಾಧ್ಯವಿದ್ದಲ್ಲಿ, ಅದೇ ಮಾರ್ಗವನ್ನು ಅವರು ಅನುಸರಿಸುತ್ತಿದ್ದರು. ಕಾರಣ ಇಷ್ಟೇ: ಅವರನ್ನು ಕೀರ್ತಿಶನಿ ಹಿಂಬಾಲಿಸಲಿಲ್ಲ. ಅವರು ಮಾಡಿದ ಕೆಲಸದಲ್ಲಿ ಫಲಾಪೇಕ್ಷೆ ಇರಲಿಲ್ಲ.

ಸಾಹಿತ್ಯ ಪರಿಷತ್ತು ಈ ಸಲದ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಅವರಿಗೆ ಕಾದಿರಿಸಿತ್ತು. ರಾಜ್ಯ ಸಾಹಿತ್ಯ ಅಕಾಡೆಮಿ ತೀ.ನಂ.ಶ್ರೀ. ಅವರನ್ನು ಪುರಸ್ಕರಿಸಲಿತ್ತು. ಅಷ್ಟರಲ್ಲಿ ವಿಧಿಯ ಆಟ ನಡೆದು ಹೋಯಿತು. ಕೀರ್ತಿ, ಪದವಿಗಳಿಂದ ದೂರ ಇರಲು ಬಯಸಿದ ತೀ.ನಂ.ಶ್ರೀ. ಅವರ ಬಳಿ ಇವು ಸುಳಿಯುವ ಮೊದಲೇ ವಿಧಿ ಅವರನ್ನು ಆಹ್ವಾನಿಸಿತು. ಅದೂ ಎಲ್ಲಿ? ಅಂತಿಮ ಯಾತ್ರೆಯ ವೈಭವವೂ ದಕ್ಕಬಾರದಂಥ ದೂರದ ಕಲ್ಕತ್ತೆಯಲ್ಲಿ! ಕೀರ್ತಿ ಪದವಿಗಳ ಆಶೆಯಿಂದ ಮುಕ್ತರಾದ ಹಿರಿಯ ಜೀವದ ಇಡೀ ಆಯುಷ್ಯದ ನಿಸ್ವಾರ್ಥ ಸಾಹಿತ್ಯ ಸೇವೆಯ ಚಿತ್ರವನ್ನು ವಿಧಿ ಪೂರ್ಣಗೊಳಿಸಿತೇನೋ, ಅನ್ನಿಸುತ್ತದೆ.

ತೀ.ನಂ.ಶ್ರೀ. – ಒಂದು ನೆನಕೆ

ರಂ.ಶ್ರೀ. ಮುಗಳಿ

●

ಮರಣವೆಂಬ ರಣಹದ್ದು ಬಿರುಬೇಗದಿಂದ ಮುಗಿಬಿದ್ದು ಕನ್ನಡದ ಒಂದು ವಿದ್ವತ್‌ರತ್ನವನ್ನು ಕಚ್ಚಿಕೊಂಡುಹೋಯಿತು! ಕನ್ನಡ ಜನಕ್ಕೆ ಆಗಿರುವ ಮರುಕವನ್ನು ಇಷ್ಟೆಂದು ಹೇಳ ಸಲ್ಲ, ಮರಣಕ್ಕೆ ಕರುಣೆಯೆಂಬುದಿದ್ದರೆ ಕನ್ನಡದ ಈ ರತ್ನವನ್ನು ಅದು ಮರಳಿ ಕೊಡಬೇಕು! ಆದರೆ ಕರುಣೆಯಿದ್ದುದು ಮರಣ ಹೇಗಾದೀತು?

ತೀ.ನಂ.ಶ್ರೀ.ಯವರನ್ನು ನಾವು ಕಳೆದುಕೊಂಡಿದ್ದರೂ ಅವರ ನೆನಪನ್ನು ಕಳೆದುಕೊಳ್ಳು ವಂತಿಲ್ಲ. ಇಷ್ಟು ಮಾತ್ರವಲ್ಲ, ಅವರ ಸದ್ಗುಣಗಳನ್ನು, ಕನ್ನಡಕ್ಕೆ ಅವರು ನೀಡಿದ ಕೊಡುಗೆಯನ್ನು ನೆನಸುವುದು ನಮ್ಮ ಕರ್ತವ್ಯವಾಗಿದೆ. ನಾನು ಅನೇಕ ವರ್ಷಗಳಿಂದ ಅವರ ಸ್ನೇಹ ಸೌಹಾರ್ದದ ಮತ್ತು ಆದರಾತಿಥ್ಯದ ಸವಿಯನ್ನು ಪಡೆದವರಲ್ಲಿ ಒಬ್ಬನಾಗಿದ್ದೇನೆ. ಹಲವಾರು ನೆನಪಿನ ಸಂದರ್ಭಗಳು ಮನಸ್ಸಿನಲ್ಲಿ ತೇಲಿ ಬರುತ್ತವೆ. ನಾನು 'ಕನ್ನಡ ಸಾಹಿತ್ಯ ಚರಿತ್ರೆ' ಯನ್ನು ಬರೆಯುವ ದೃಷ್ಟಿಯಿಂದ ಸಾಮಗ್ರಿಯನ್ನು ಸಂಗ್ರಹಿಸುತ್ತಿದ್ದಾಗ ಸುಮಾರು ಮೂವತ್ತು ವರ್ಷಗಳ ಹಿಂದೆ ಬೇಸಗೆ ಬಿಡುವಿನಲ್ಲಿ ಮೈಸೂರಿಗೆ ಬಂದು ತೀ.ನಂ.ಶ್ರೀ. ಯವರ ಮನೆಯಲ್ಲಿಯೆ ಒಂದು ತಿಂಗಳವರೆಗೆ ವಾಸವಾಗಿದ್ದೆ. ಆಗ ನಾನು ಬರೀ ಒಬ್ಬ ಅತಿಥಿಯಾಗಿರಲಿಲ್ಲ. ಅವರ ಮನೆಯ ಜನದಲ್ಲಿ ನಾನೊಬ್ಬನಾಗಿದ್ದೆ. ದಿನಾಲು ನಾನು ಮಧ್ಯಾಹ್ನ ಪ್ರಾಚ್ಯ ಸಂಶೋಧನ ಸಂಸ್ಥೆಗೆ ಹೋಗಿ ಅಚ್ಚಾಗದೆ ಇದ್ದ ಕನ್ನಡ ಗ್ರಂಥಗಳ ಹಸ್ತಪ್ರತಿಗಳನ್ನು ಓದಿ ಟಿಪ್ಪಣಿ ಮಾಡಿ ಕೊಳ್ಳುತ್ತಿದ್ದೆ. ಬೆಳಗ್ಗೆ ಮತ್ತು ಸಂಜೆ ಸಮಯದೊರೆತಾಗೆಲ್ಲ ನಾನು ಬರೆಯುತ್ತಿದ್ದ 'ಕಾರಣ ಪುರುಷ' ಕಾದಂಬರಿಯನ್ನು ಮುಂದುವರೆಸುತ್ತಿದ್ದೆ. ಅದರ ಕೆಲವು ಪ್ರಕರಣಗಳನ್ನು ನಾನು ಅವರ ಮನೆಯಲ್ಲಿ ನನಗಾಗಿ ಬಿಟ್ಟುಕೊಟ್ಟ ಕೋಣೆಯಲ್ಲಿ ಕುಳಿತು ಬರೆದಿದ್ದೇನೆ. ನಾನು ದುಡಿಯುವ ನಿಯಮಿತ ರೀತಿಯನ್ನು ಕಂಡು ತೀ.ನಂ.ಶ್ರೀ. ಯವರೂ ಅವರ ಮಿತ್ರರೂ ಅಚ್ಚರಿಯನ್ನೂ ಮೆಚ್ಚುಗೆಯನ್ನೂ ವ್ಯಕ್ತಮಾಡುತ್ತಿದ್ದರು. ಅದು ನನಗೆ ಆ ಗ್ರಂಥ ರಚನೆಯ ಕಾರ್ಯದಲ್ಲಿ ಉತ್ತೇಜಕವಾಗಿ ಪರಿಣಮಿಸಿತು. ಹತ್ತಿಪ್ಪತ್ತು ವರ್ಷಗಳವರೆಗೆ ಮುಂದೆ ಸಾಮಗ್ರಿ ಸಂಕಲನ, ಗ್ರಂಥವಾಚನ – ಮನನ ಸಾಗಿಯೇ ಇತ್ತು. ಆಮೇಲೆ ಹಲವು ವರ್ಷಗಳಲ್ಲಿ ಅದನ್ನು ಬರೆದು ಮುಗಿಸಿದ್ದಾಯಿತು. ಅಚ್ಚಿಗೆ ಕೊಡುವ ಮೊದಲು ಅದನ್ನು ಕೆಲವು ಮಿತ್ರರಿಗೆ ತೋರಿಸಿದೆ. ಅಚ್ಚಿನಲ್ಲಿರುವಾಗ ಕೆಲವರು ನೋಡಿದರು. ಅದನ್ನು ಆದ್ಯಂತವಾಗಿ ಅತ್ಯಂತ ಲಕ್ಷ್ಯಪೂರ್ವಕವಾಗಿ ಓದಿ, ತಪ್ಪು ಸಂಗತಿಗಳು ಇಂಥ ಗ್ರಂಥದಲ್ಲಿ ಬರಕೂಡದೆಂಬ ದೃಷ್ಟಿಯಿಂದ

ಅವರು ಹಲವಾರು ಬೆಲೆಯುಳ್ಳ ಸೂಚನೆಗಳನ್ನು ಮಾಡಿದರು. ಇದಕ್ಕಾಗಿ ನಾನು ಅವರನ್ನು ಕೃತಜ್ಞತೆಯಿಂದ ಎಷ್ಟು ಸ್ಮರಿಸಿದರೂ ಕಡಿಮೆಯೆ. ಸೂಚನೆಗಳನ್ನು ಮಾಡುವಾಗ ಅವರು ಅಭಿಪ್ರಾಯಗಳ ವಿಷಯದಲ್ಲಿ ಸಾಮಾನ್ಯವಾದ ತಮ್ಮ ಪ್ರತಿಕ್ರಿಯೆಯನ್ನು ತಿಳಿಸಿದರೇ ಹೊರತು ಬೇರೇನನ್ನೂ ಹೇಳಲಿಲ್ಲ. ಯಾಕೆಂದರೆ ಸಾಹಿತ್ಯ ವಿಮರ್ಶೆಯಲ್ಲಿ ಪ್ರಾಮಾಣಿಕವಾದ ಮತಭೇದಕ್ಕೆ ಅವಕಾಶವಿದೆಯೆಂಬುದನ್ನು ಅವರು ಬಲ್ಲವರಾಗಿದ್ದರು. ಅನೇಕ ವಿಷಯಗಳಲ್ಲಿ ನನ್ನ ಮತ್ತು ಅವರ ದೃಷ್ಟಿ ಬೇರೆಯಾಗಿತ್ತು, ಅಭಿಪ್ರಾಯಗಳೂ ಬೇರೆ ಬೇರೆಯಾಗಿದ್ದವು. ಆದರೆ ಅವನ್ನು ಬಿಚ್ಚು ಮನಸ್ಸಿನಿಂದ ನಾವು ಮಾತನಾಡುತ್ತಿದ್ದೆವು. ಸ್ವಂತ ಅಭಿಪ್ರಾಯವನ್ನು ವ್ಯಾಸಂಗ ಮತ್ತು ಆಲೋಚನೆಯಿಂದ ಖಚಿತ ಮಾಡಿಕೊಳ್ಳುವುದು, ಅದನ್ನು ಸಾಧಾರವಾಗಿ ಮಂಡಿಸುವುದು, ಮಂಡನೆಯಲ್ಲಿ ಸ್ಪಷ್ಟತೆ ಮತ್ತು ಖಚಿತತೆ ಇರುವಂತೆ ಸೌಜನ್ಯವೂ ತುಂಬಿರುವುದು, ಇತರರ ಅಭಿಪ್ರಾಯಗಳು ಒಪ್ಪಿಗೆಯಾಗದಿದ್ದರೂ ಅವುಗಳ ವಿಷಯದಲ್ಲಿ ಸಹನೆ ಮತ್ತು ಉತ್ಸುಕತೆಯಿರುವುದು – ಇವು ತೀ.ನಂ.ಶ್ರೀ. ಯವರ ವ್ಯಕ್ತಿತ್ವದ ಜೀವಾಳವನ್ನು ಎತ್ತಿ ತೋರಿಸುತ್ತಿದ್ದುವು. ಕೆಲವು ಸಲ ತಾವು ಮಾಡಿಕೊಂಡ ಅಭಿಪ್ರಾಯಗಳನ್ನು ಅವರು ಹೇಳದೆ ಹೋಗಿರಬಹುದು, ಅದರಲ್ಲಿ ಪ್ರಿಯವಾದ ಭಾಗಗಳನ್ನೇ ಹೇಳಿರಬಹುದು. ಆದರೆ ಅವರೆಂದಿಗೂ ಅಭಿಪ್ರಾಯಕಥನದಲ್ಲಿ ಉನ್ನತಮಟ್ಟವನ್ನು ತೊರೆಯಲಿಲ್ಲ, ಪ್ರಾಮಾಣಿಕ ಅಭಿಪ್ರಾಯಗಳನ್ನು ಕೈ ಬಿಡಲಿಲ್ಲ.

ಕನ್ನಡ–ಕನ್ನಡ ನಿಘಂಟುವಿನ ಪ್ರಚಂಡ ಕಾರ್ಯಕ್ಕೆ ಶಾಸ್ತ್ರೀಯ ತಳಹದಿಯನ್ನು ತೀ.ನಂ.ಶ್ರೀ. ಯವರು ಹಾಕಿಕೊಟ್ಟರು. ತಮ್ಮ ಭಾಷಾಶಾಸ್ತ್ರಜ್ಞಾನದ ಬಲದಿಂದ ಅದು ನಿರ್ದುಷ್ಟವಾಗಿಯೂ ಸರ್ವ ಸಂಗ್ರಹವಾಗಿಯೂ ಆಗಬೇಕೆಂದು ಅವರು ನಿಸ್ವಾರ್ಥ ಮನೋಭಾವದಿಂದ ಅಹರ್ನಿಶಿ ಪರಿಶ್ರಮಿಸಿದರು. ಈ ಪರಿಶ್ರಮದಿಂದ ತಮ್ಮ ಆರೋಗ್ಯದ ಮೇಲೆ ಪರಿಣಾಮವಾಗುತ್ತಿದ್ದರೂ ಅವರು ಲೆಕ್ಕಿಸಲಿಲ್ಲ. ಇದನ್ನೆಲ್ಲ ಅವರ ನಿಕಟ ಸಹಕಾರಿಯಾಗಿ ಹಲವಾರು ವರ್ಷ ನೋಡಿ ನಾನು ಅವರ ಕನ್ನಡ ಭಕ್ತಿಗೆ ಮತ್ತು ಸೇವಾಭಾವಕ್ಕೆ ಮಾರು ಹೋಗಿದ್ದೇನೆ.

ಈ ವರ್ಷದ ರಾಜ್ಯದ ಸಾಹಿತ್ಯ ಅಕಾಡಮಿಯ ಗೌರವಕ್ಕೆ ಪಾತ್ರರಾದ ಮಹನೀಯರಲ್ಲಿ ಅವರೊಬ್ಬರೆಂದು ನನಗೆ ಅತ್ಯಾನಂದವಾಗಿತ್ತು. ಈ ಸಂಸ್ಥೆಯ ಕಾರ್ಯದರ್ಶಿಯಾಗಿ ನಾನು ಅವರಿಗೆ ಈ ಸಂದರ್ಭದಲ್ಲಿ ಕಾಗದ ಬರೆದು ಗೌರವಕ್ಕೆ ಒಪ್ಪಲು ಕೇಳಿದೆ. ಅವರು ಒಪ್ಪಿ ಬರೆದ ಕಾಗದದಲ್ಲಿ ಸಮಾರಂಭದ ದಿನವೆಂದು ಎಂಬುದನ್ನು ಮರುಟಪಾಲಿಗೆ ತಿಳಿಸಲು ಕೇಳಿದ್ದರು. ಯಾಕೆಂದರೆ ಅವರು ಒಂದು ತಿಂಗಳು ಉತ್ತರಕ್ಕೆ ಪ್ರಯಾಣಮಾಡಬೇಕಾಗಿತ್ತು. ನಮ್ಮ ದುರ್ದೈವದಿಂದ ಆ ಪ್ರಯಾಣದಿಂದ ಅವರು ಕನ್ನಡ ನಾಡಿಗೆ ಮರಳಿ ಬರಲೇ ಇಲ್ಲ; ಅದು ಅವರ ನಿರ್ಯಾಣವಾಗಿ ಬಿಟ್ಟಿತು!

ನನ್ನ ಅರವತ್ತು ವರ್ಷಗಳ ಪೂರ್ತಿಯ ಸಂದರ್ಭದಲ್ಲಿ ಅವರು ನನಗೆ ಹಾರ್ದಿಕ ಶುಭಾಶಯಗಳನ್ನು ಕಳಿಸಿದರು. ಅವರ ಅರುವತ್ತರ ತುಂಬಿಕೆಗೆ ನಾನು ನನ್ನ ಶುಭಾಶಯಗಳನ್ನು ಒಂದೆರಡು ತಿಂಗಳಲ್ಲಿ ಕಳುಹಿಸಬೇಕೆಂದು ಇರುವಾಗ, ನಿಯತಿ ತನ್ನ ಬರಸಿಡಿಲನ್ನು ನಮ್ಮೆಲ್ಲರ ಹೃದಯಗಳ ಮೇಲೆ ಎರಗಿಸಿತು!

ಆ ಸಂಜೆ ಈ ಬೆಳಗು

ಶೇಷನಾರಾಯಣ

●

ನಾಲ್ಕು ವರ್ಷಗಳ ಹಿಂದಿನ ಮಾತು.

ಡಾ. ಎಂ. ಚಿದಾನಂದ ಮೂರ್ತಿಗಳ ಒಂದು ಪುಸ್ತಕ ಪ್ರಕಟವಾಯಿತು. ಅದು ಅವರ ಮೊದಲನೆಯ ಪುಸ್ತಕ. ಅದರ ಬಿಡುಗಡೆಗೆ ಸರಳವಾಗಿ, ಅಚ್ಚುಕಟ್ಟಾದ ಒಂದು ಸಮಾರಂಭ. ಡಾ. ಜಿ.ಎಸ್. ಶಿವರುದ್ರಪ್ಪನವರು ಮುಂತಾದ ಹಲವರು ಆ ಸಮಾರಂಭದಲ್ಲಿ ಭಾಗವಹಿಸಿದ್ದವರು. ಅಧ್ಯಕ್ಷತೆ ತೀ.ನಂ.ಶ್ರೀ. ಅವರದು.

ಸಮಾರಂಭ ನಡೆದದ್ದು ನಗರದ ಒಂದು ಹೋಟಲಿನಲ್ಲಿ. ಅದು ಸರಳವಾದ ಸಮಾರಂಭ ವಾದರೂ ಊಟದ ಏರ್ಪಾಡು ಭರ್ಜರಿಯಾಗಿತ್ತು.

ತೀ.ನಂ.ಶ್ರೀ. ಅವರನ್ನು ನಾನು ಹಲವು ಸಭೆ, ಸಮ್ಮೇಳನಗಳಲ್ಲಿ ಕಂಡಿದ್ದೆ. ಅವರ ಭಾಷಣಗಳನ್ನು ಕೇಳಿದ್ದೆ. ಆದರೆ ಅವರ ಸಾಮೀಪ್ಯ ನನಗೆ ದೊರಕಿದ್ದು, ಅಲ್ಲಿ, ಹಾಗೆ.

ಊಟ ಮುಗಿದ ಮೇಲೆ ಮೂರ್ತಿಗಳು ನೆರೆದಿದ್ದ ಕೆಲವರಲ್ಲಿ ಅವರಿಗೆ ಅಪರಿಚಿತರಾದ ವರನ್ನು ಪರಿಚಯ ಮಾಡಿಕೊಟ್ಟರು. ನನ್ನ ಸರದಿಯೂ ಬಂತು. "ಇವರು ಇಂಥಾವರು" ಎಂದರು ಮೂರ್ತಿಗಳು. "ಭೇಷ್ ಭೇಷ್, ಮೂರ್ತಿ ನಿಮ್ಮ ವಿಚಾರವಾಗಿ ತುಂಬ ಹೇಳ್ತಾರೆ" ಎಂದರು. ಅವರ ಪುಸ್ತಕದ ವಿಚಾರದಲ್ಲಿ ನಾನು ತುಂಬ ಶ್ರದ್ಧೆಯನ್ನು ವಹಿಸಿದ್ದೆ ಎನ್ನುವುದು ಅದರ ಅರ್ಥ.

ಪರಿಚಯ ಮುಗಿದ ಮೇಲೆ ತೀ.ನಂ.ಶ್ರೀ. ಎದ್ದು ನಿಂತು ಆ ಪುಸ್ತಕದ ವಿಚಾರವಾಗಿ ನಾಲ್ಕು ಮಾತುಗಳನ್ನಾಡಿದರು. "ಹುಂ, ಚಿದಾನಂದ ಮೂರ್ತಿ ಗಟ್ಟಿಗ. ಕೊನೆಗೂ ನನ್ನಿಂದ ಮುನ್ನುಡಿ ಬರೆಯಿಸದೆ ಬಿಡಲಿಲ್ಲ" ಎಂದರು. ತೀ.ನಂ.ಶ್ರೀ. ಅವರು ಸಾಮಾನ್ಯವಾಗಿ ಪುಸ್ತಕಗಳಿಗೆ ಮುನ್ನುಡಿ ಬರೆಯುವುದಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ಆದರೆ ಚಿದಾನಂದ ಮೂರ್ತಿಗಳು ಪಟ್ಟು ಹಿಡಿದು ಮುದ್ರಣ ಮುಗಿದು ಹತ್ತಾರು ದಿನಗಳು ಕಳೆದರೂ ಬಿಡದೆ ಅವರಿಂದ ಮುನ್ನುಡಿ ಬರೆಯಿಸಿದ್ದರು. ಅದಕ್ಕೇ ಅವರು ಹಾಗೆ ಹೇಳಿದ್ದು. (ಆ ಬಳಿಕ ಆ 'ಮುನ್ನುಡಿಯ' ವಿಚಾರವಾಗಿಯೆ ಸುಂಟರಗಾಳಿ ಎದ್ದದ್ದು, ಟೀಕೆ ಕೇಳಿಬಂದಿದ್ದು, ಅದಕ್ಕಾಗಿ ತೀ.ನಂ.ಶ್ರೀ. ಅವರು ಬಹಳವಾಗಿ ನೊಂದುಕೊಂಡದ್ದು – ಎಲ್ಲ ಬೇರೆ ಸಮಾಚಾರ. ಆ ಪ್ರಸ್ತಾಪ ಈಗ ಬೇಡ).

ಆ ನಂತರ ತೀ.ನಂ.ಶ್ರೀ. ಯವರ ಮನೆಗೆ ಆಗಾಗ್ಗೆ ಹೋಗಿ ಬರುವ ಸಂದರ್ಭ ನನಗೆ ಒದಗಿ ಬಂದಿತ್ತು. ಒಂದು ಸಂದರ್ಭದಲ್ಲಿ ಪು.ತಿ.ನ. ಅವರ ಕವನ ಸಂಕಲನವೊಂದು ಅಚ್ಚಾಗುವಾಗ ಏನೋ ಸಂದೇಹ ಬಂದು ಪು.ತಿ.ನ. ಅವರನ್ನು ನೋಡಲು ನಾನು ಹೋಗಿದ್ದೆ. ಅವರು ತೀ.ನಂ.ಶ್ರೀ. ಅವರ ಮನೆಯಲ್ಲಿಯೇ ಇದ್ದರು. ಅಲ್ಲಿಯೆ ಉಳಿದುಕೊಂಡಿದ್ದರು ಎಂದು ಕಾಣುತ್ತದೆ. ಈಗಾಗಲೇ ತೀ.ನಂ.ಶ್ರೀ. ಅವರಿಗೆ ನನ್ನ ಮೇಲೆ ಆತ್ಮೀಯಭಾವನೆ ಉಂಟಾಗಿತ್ತು. "ಪರವಾಗಿಲ್ಲ, ಶ್ರದ್ಧೆಯಿಂದಿದಾನೆ. ಇದನ್ನು ಕೇಳಲು ಇಲ್ಲಿಗೇ ಬಂದನಲ್ಲ" ಎಂದರು, ಪು.ತಿ.ನ. ಅವರೊಂದಿಗೆ ಹೇಳಿಕೊಂಡು.

ಆಗ ಮಟಮಟ ಮಧ್ಯಾಹ್ನ. ಒಳ್ಳೆಯ ಬಿಸಿಲು. ನಾನು ಸೈಕಲ್ ತುಳಿದು ಬೆವರು ಹರಿಯಿಸಿಕೊಂಡು ಅವರ ಮನೆಗೆ ಹೋಗಿದ್ದೆ. ಅಂದು ಅವರ ಮನೆಯಲ್ಲಿ ಹಬ್ಬವೊ ಏನೊ ವಿಶೇಷವೋ ಎಂದು ಕಾಣುತ್ತದೆ. ತೀ.ನಂ.ಶ್ರೀ. ತಾವೇ ಒಳಗೆ ನಡೆದು ಒಂದು ತಟ್ಟೆಯಲ್ಲಿ ಬಗೆಬಗೆಯ ತಿಂಡಿ, ಕಿತ್ತಳೆಹಣ್ಣು ಎಲ್ಲ ತಂದರು. ನಾನು ಎರಡು ತೊಳೆ ಕಿತ್ತಳೆಹಣ್ಣನ್ನು ಬಿಡಿಸಿ ಉಳಿದುದನ್ನು ತಟ್ಟೆಯಲ್ಲಿ ಹಾಗೆಯೆ ಇಟ್ಟಿದ್ದುದನ್ನು ಕಂಡು "ನೀವು ಕಣ್ಣಿನಲ್ಲಿ ಕಣ್ಣಿಟ್ಟು ಕೆಲಸಮಾಡುವ ಜನ; ಕೆಲಸ ಮಾಡಬೇಕು. ಹಣ್ಣು ಹಂಪಲು ಜಾಸ್ತಿ ತೆಗೆದುಕೊಳ್ಳಬೇಕು. ಕಣ್ಣಿಗೆ ಒಳ್ಳೆಯದು. ತಗೊಳ್ಳಿ" ಎಂದರು.

*

ನಾನು ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬರುವುದು ಎನ್ನುವುದು ತೀರ್ಮಾನವಾದ ಮೇಲೆ ಅವರನ್ನು ನೋಡಿ ಬರಲು ಎಂದು ಹೋಗಿದ್ದೆ. ಆದರೆ ತೀ.ನಂ.ಶ್ರೀ. ಅವರು ಮನೆಯಲ್ಲಿರಲಿಲ್ಲ; ಊರಲ್ಲಿರಲಿಲ್ಲ; ಸಿಗಲಿಲ್ಲ.

ಪರಿಷತ್ತಿಗೆ ಸೇರಿಕೊಂಡ ಮೇಲೆ, ಒಂದು ದಿನ ಕರಡನ್ನು ತಿದ್ದುತ್ತ ನಾನು ಅಚ್ಚುಕೂಟದಲ್ಲಿ ಕುಳಿತಿದ್ದೆ. ಆಗ ಬೆಳಗಿನ ಎಂಟೂವರೆ ಘಂಟೆಯ ಸಮಯ. "ಏನ್ರಿ, ಚೆನ್ನಾಗಿದ್ದೀರೇನ್ರೀ!" ಎನ್ನುವ ಕರೆ ಕೇಳಿ ನಾನು ತಲೆಯೆತ್ತಿ ನೋಡಿದೆ. ಎದುರಿಗೆ ತೀ.ನಂ.ಶ್ರೀ.

ಚತ್ರಿಯನ್ನು ಹೀಗೆ ಭುಜದ ಮೇಲೆ ಅಡ್ಡಲಾಗಿ ಹಾಕಿ ಈ ಕೈ ಆ ಕೈ ಎರಡರಿಂದಲೂ ಚತ್ರಿಯನ್ನು ಹಿಡಿದು ಅವರು ಅಚ್ಚುಕೂಟದ ಬಾಗಿಲಿನಲ್ಲಿ ನಿಂತಿದ್ದರು.

ನಾನು ಎದ್ದವನೆ "ಬನ್ನಿ" ಎಂದೆ. ಒಳಗೆ ಬಂದರು; ಕುಳಿತುಕೊಂಡರು. ಪ್ರತಿ ತಿಂಗಳೂ ಕನ್ನಡ-ಕನ್ನಡ ನಿಘಂಟು ಸಮಿತಿಯು ಸಭೆ ಸೇರುವುದು ವಾಡಿಕೆ. ನಾನು ಕಂಡಂತೆ ತೀ.ನಂ.ಶ್ರೀ. ಅವರು ಯಾವ ತಿಂಗಳಿನಲ್ಲಿಯೂ ಗೈರುಹಾಜರಿಯಾಗಿದ್ದುದನ್ನು ಕಾಣೆ. ಎಲ್ಲೋ ಒಂದೆರಡು ಸಲ ಬಂದಿರಲಿಲ್ಲವೊ ಏನೊ! ಎಲ್ಲರೂ ಬರುವುದಕ್ಕೆ ಮೊದಲೆ ಅವರು ಹಾಜರಾಗುತ್ತಿದ್ದರು. ಅಂದೂ ಸಹ ಹಾಗೆ ಬಂದಿದ್ದು ಕೋಶ ಕಚೇರಿಯ ಬಾಗಿಲು ತೆರೆಯದಿದ್ದುದರಿಂದ ಅಚ್ಚು ಕೂಟದಲ್ಲಿ ಅರ್ಧ ಗಂಟೆ ನನ್ನೊಡನೆ ಮಾತನಾಡುತ್ತ ಕುಳಿತರು. ಯೋಗಕ್ಷೇಮ ವಿಚಾರಿಸಿ ಕೊಂಡರು. "ನಿಘಂಟಿನ ಕೆಲಸ ಶ್ರದ್ಧೆಯಿಂದ ಮಾಡಿ" ಎಂದರು.

ಆ ಬಳಿಕ ತೀ.ನಂ.ಶ್ರೀ. ಅವರು ಪ್ರತಿ ತಿಂಗಳೂ ಬರುತ್ತಿದ್ದರು. ಅವರೊಡನೆ ಮಾತನಾಡುವ ಸುಯೋಗ ನಮಗೆ ಒದಗಿಬರುತ್ತಿತ್ತು. ಕಳೆದ ತಿಂಗಳು ನಿಘಂಟು ಸಮಿತಿಯ ಸಭೆಗೆ ಮೊದಲ ದಿನ ಹಾಜರಿದ್ದರು. ಅನಂತರ ಇಲ್ಲಿಂದ ಅವರು ಮೈಸೂರಿಗೆ ಹಿಂದಿರುಗಿ ಡೆಲ್ಲಿಗೆ ಹೋದರು; ಕಲ್ಕತ್ತಾಕ್ಕೆ ಪ್ರಯಾಣ ಮಾಡಿದರು.

ತೀ.ನಂ.ಶ್ರೀ. ಅವರು ನಮ್ಮನ್ನು ಭೆಟ್ಟಿಯಾದಾಗಲೆಲ್ಲ ಹೇಳುತ್ತಿದ್ದ ಮಾತು ಹೀಗೆ:

"ದುಡ್ಡು ಬರುತ್ತೇಂತ ಬೇರೆ ಕೆಲಸಗಳನ್ನು ತೆಗೆದುಕೊಂಡು ನಿಘಂಟುವಿನ ಕೆಲಸ ನಿಧಾನ ಮಾಡಬೇಡಿ....."

*

ಏಳುವ ಮೊದಲೇ ಪತ್ರಿಕೆಯವನು ಕಿಟಕಿಯಿಂದ ಪತ್ರಿಕೆಯನ್ನು ತೂರಿಹೋಗಿದ್ದ. ಹಾಸಿಗೆಯನ್ನು ಸುತ್ತಿಟ್ಟು ಪತ್ರಿಕೆಯನ್ನು ಕೈಗೆತ್ತಿಕೊಂಡರೆ ಎಂಥ ಕಠೋರ ಸುದ್ದಿ! ನಂಬಲೂ ಸಾಧ್ಯವಿಲ್ಲದ ಸುದ್ದಿ.

ತೀ.ನಂ.ಶ್ರೀ. ಅವರ ಭಾವಚಿತ್ರ, ನಿಧನ ಹೊಂದಿದ ಸುದ್ದಿ – ಪತ್ರಿಕೆಯಲ್ಲಿ.

ನಾಣ್ಯ ಒಂದೇ ನಿಜ. ಆದರೆ ಅದಕ್ಕೆ ಎರಡು ಮುಖ.

ಒಂದು, ಆ ಸಂಜೆ. ಅವರೊಂದಿಗೆ ಕುಳಿತು ಊಟ ಮುಗಿಸಿದ ರಸಸನ್ನಿವೇಶ; ರಸದೌತಣ. ಮತ್ತೊಂದು ಭಾವಚಿತ್ರ ನೋಡಿ ಕಣ್ಣೀರು ಮಿಡಿದ ದುರ್ಭರ ಪ್ರಸಂಗ; ಕಹಿ ಗುಳಿಗೆ.

ಅಂದು ಅಮೃತಪಾನ; ಇಂದು ವಿಷಸೇಚನೆ.

ಆ ಸಂಜೆ ಈ ಬೆಳಗು; ವ್ಯತ್ಯಾಸ ಇಷ್ಟೇ.

ನಾನು ಕಂಡ ತೀ.ನಂ.ಶ್ರೀ.

ಎಂ.ವಿ. ಸೀತಾರಾಮಯ್ಯ

●

ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದೆ. ಓದನ್ನು ಮುಂದುವರಿಸಬೇಕೆ, ಇಲ್ಲವೆ ಚಿತ್ರಕಲಾ ವ್ಯಾಸಂಗವನ್ನು ಕೈಗೊಳ್ಳಬೇಕೆ?

ನಾನು ಬರೆದ ಚಿತ್ರ ಹೇಗಿದೆ? ಅದಕ್ಕೆ ಏನೆಂದು ಹೆಸರಿಡಬೇಕು?

ನನ್ನ ಚಿತ್ರಗಳನ್ನು ಮೈಸೂರಿನ ದಸರಾ ವಸ್ತು ಪ್ರದರ್ಶನಕ್ಕೆ ಕಳಿಸಬಹುದೇ? (೧೯೨೭)

ನಾನು ಬರೆದ ಪದ್ಯ ಹೇಗಿದೆ, ಕಥೆ ಹೇಗಿದೆ, ಪ್ರಬಂಧ ಹೇಗಿದೆ?

ನನಗಿನ್ನೂ ಹದಿನೇಳು ವರ್ಷ. ನಮ್ಮ ತಂದೆ ನನಗೊಂದು ಹೆಣ್ಣು ನೋಡಿಕೊಂಡು ಬಂದುಬಿಟ್ಟಿದ್ದಾರೆ, ಹೆಣ್ಣಿನ ತಂದೆಗೆ ಮಾತನ್ನೂ ಕೊಟ್ಟುಬಿಟ್ಟಿದ್ದಾರೆ. ಮದುವೆಗೆ ಒಪ್ಪಿಕೊಳ್ಳಲೆ? ಬೇಡವೆ? (೧೯೨೯)

ಈ ಬರಹವನ್ನು ಪ್ರಕಟಿಸಲೆ ಬೇಡವೆ?

ಬಿ.ಎ. ಪರೀಕ್ಷೆಗೆ ಐಚ್ಛಿಕ ವಿಷಯ ಯಾವವನ್ನು ಆಯ್ದುಕೊಳ್ಳಲಿ?

ಬಿ.ಎ. ಪಾಸಾಯಿತು. ಚಿತ್ರಕಲೆ ಕಲಿಯಲು ಬೊಂಬಾಯಿಗೋ ಕಲ್ಕತ್ತೆಗೋ ಹೋಗಲೆ? ವೆಂಕಣ್ಣಯ್ಯನವರು ಕನ್ನಡ ಎಂ.ಎ. ತರಗತಿಗೆ ಸೇರು ಎಂದು ಬಲಾತ್ಕರಿಸುತ್ತಿದ್ದಾರೆ. ಏನು ಮಾಡಲಿ? (೧೯೩೧)

ರಜತಮಹೋತ್ಸವ ಸ್ವರ್ಣಪದಕದ ಸ್ಪರ್ಧೆಗೆ ಕಳಿಸಲು ಈ ಕವನ ಯೋಗ್ಯವಾಗಿದೆಯೆ?

ಎಂ.ಎ. ಪಾಸಾಯಿತು. ಏನು ಮಾಡಲಿ? ಈಗಲಾದರೂ ಕಲ್ಕತ್ತೆಗೆ ಹೋಗಲೆ? (೧೯೩೩)

ಪರಿಷತ್ತಿನ ಸಹಾಯಕ ಕಾರ್ಯದರ್ಶಿಯ ಸ್ಥಾನಕ್ಕೆ ಅಪೇಕ್ಷಾ ಪತ್ರಗಳನ್ನು ಕೋರಿದ್ದಾರೆ, ವೆಂಕಣ್ಣಯ್ಯನವರು ಅರ್ಜಿ ಹಾಕು ಎನ್ನುತ್ತಾರೆ. ನಿಮ್ಮ ಸಲಹೆ ಏನು ? (೧೯೩೩)

ಪಠ್ಯಪುಸ್ತಕ 'ಭಾಗಲಕ್ಷ್ಮಿ'ಯಿಂದ ನಾಲ್ಕೈದು ಸಾವಿರ ರೂಪಾಯಿ ದೊರಕಿವೆ. ಅಷ್ಟೇ ಪಿತ್ರಾರ್ಜಿತ ಸಾಲ ಇದೆ. ಆ ಋಣ ಭಾರಕ್ಕೆ ನಾವು ಸೋದರರು ನಾಲ್ವರು ಬಾಧ್ಯರು. ಅಷ್ಟನ್ನೂ ತೀರಿಸಲೆ? ನನ್ನ ಪಾಲು ಮಾತ್ರ ತೀರಿಸಲೆ? (ಅರ್ಧದಷ್ಟನ್ನು ತೀರಿಸು – ಇದು ತೀ.ನಂ.ಶ್ರೀ.ಯವರ ಸಲಹೆ) (೧೯೪೪).

"ಮೈಸೂರಿನಲ್ಲಿ ನಡೆಯಲಿರುವ, ಹಳೆಗನ್ನಡ ವ್ಯಾಕರಣ ವಿಷಯಕ ವಿಚಾರ ಗೋಷ್ಠಿಯಲ್ಲಿ ನಿಬಂಧ ಓದಲು ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಆಹ್ವಾನ ಬಂದಿದೆ. ನಿಮ್ಮ ನೆರವಿನ ಭರವಸೆಯ ಮೇಲೆ ಆಹ್ವಾನ ಒಪ್ಪಿಕೊಂಡಿದ್ದೇನೆ. ಆಧುನಿಕ ಭಾಷಾ ವಿಜ್ಞಾನ (Linguistics) ದೃಷ್ಟಿಯಿಂದ ನಿಬಂಧ ಸಿದ್ಧಗೊಳಿಸಬೇಕಂತೆ ನನಗೆ ಅದರ ಗಂಧವೂ ಇಲ್ಲ...." – ತೀ.ನಂ.ಶ್ರೀ. ಯವರಲ್ಲಿ ನನ್ನ ಬಿನ್ನಹ. ಅವರು ಧೈರ್ಯ ಕೊಟ್ಟರು; ಸಲಹೆ ಸೂಚನೆಗಳನ್ನು ನೀಡಿದರು; ಪರಿಷತ್ತಿನ ನಿಘಂಟು ಕಚೇರಿಯಿಂದ ಅವಶ್ಯಗ್ರಂಥಗಳನ್ನು ಎರವಲು ಕೊಡಿಸಿದರು. (೧೯೬೪)

ನಾನು ತೀ.ನಂ.ಶ್ರೀ. ಅವರ ಮುಂದೆ ಮಾರ್ಗದರ್ಶನಕ್ಕಾಗಿ ಇಡುತ್ತಿದ್ದ ನೂರಾರು ಪ್ರಶ್ನೆಗಳಲ್ಲಿ ಕೆಲವು, ಪ್ರಾತಿನಿಧಿಕ ಸ್ವರೂಪದವು, ಮೇಲ್ಕಂಡಂತಿವೆ. ಅವುಗಳ ವಿಷಯ ವ್ಯಾಪ್ತಿ, ಸಾಹಿತ್ಯ ಚಿತ್ರಕಲೆಗಳಿಂದ ತೊಡಗಿ ಸಂಸಾರ ತಾಪತ್ರಯದವರೆಗೆ ಹರಡಿತ್ತು; ಕಾಲವ್ಯಾಪ್ತಿ ೧೯೨೭ರಿಂದ ಅವರು ದಿವಂಗತರಾಗುವುದಕ್ಕೆ ಕೆಲವು ದಿನ ಮುಂಚಿನವರೆಗೆ. (ನನ್ನ ಅವರ ಬಹುಮುಖವಾದ ಸಂಬಂಧ ತೊಡಗಿದ್ದಕ್ಕೆ ಲಿಖಿತ ದಾಖಲೆ ೬-೧-೧೯೨೭; ಆಗ ನಾನು ಎಸ್.ಎಸ್.ಎಲ್.ಸಿ. ತರಗತಿಯಲ್ಲಿದ್ದೆ. ಅವರಿಗೆ ಆಗ ಇಪ್ಪತ್ತು ವರ್ಷ ತುಂಬಿತ್ತು; ಬಿ.ಎ. ಪಾಸಾಗಿತ್ತು; ಇಂಗ್ಲಿಷ್ ಭಾಷೆ ಸಾಹಿತ್ಯಗಳ ಎಂ.ಎ. ತರಗತಿಯಲ್ಲಿ ಓದುತ್ತಿದ್ದರು. ಆಗ ನನಗೆ ೧೬ ವರ್ಷ:)

ಈ ರೀತಿ, ನನ್ನ ಸಮಸ್ಯೆಗಳನ್ನು ಅವರ ಮುಂದೆ ಅಂತಿಮ ಪರಿಹಾರಕ್ಕೆ ಒಪ್ಪಿಸುತ್ತಿದ್ದುದಕ್ಕೆ ಕಾರಣ – ಅವರು ನನ್ನ ಭಾಗದ 'ಸುಪ್ರೀಂ ಕೋರ್ಟು'.

ಇದಕ್ಕೆ ಕಾರಣ – ಅವರು ನನ್ನ ಮೇಲೆ ಬೀರಿದ್ದ ಅನ್ಯಾದೃಶ ಪ್ರಭಾವ. ವಿದ್ಯೆಯೆ? ರೂಪವೆ? ಸೌಶೀಲ್ಯವೆ? ಸೌಲಭ್ಯವೆ? ಸ್ನೇಹದ ಸಲುಗೆಯೆ? ಭ್ರಾತೃಕಲ್ಪ ಪ್ರೇಮವೆ? ಅನುಭವ ಸಂಪತ್ತೆ? ಕಲಾಭಿರುಚಿಯೆ? ರಸಿಕತೆಯೆ? ಒಂದಲ್ಲ, ಎರಡಲ್ಲ, ಹತ್ತಾರು ಸುಗುಣಗಳಿಂದ ಅವರು ನನ್ನ ಮನಸ್ಸನ್ನು ಸೂರೆಗೊಂಡುಬಿಟ್ಟಿದ್ದರು. ಕಾಲಕಳೆದಂತೆ, ಅವರು ನನ್ನ ಹಿರಿಯ ಗೆಳೆಯ, ಹಿರಿಯಣ್ಣ, ಹಿತೈಷಿ, ಗುರು, ಬಂಧು ಎಲ್ಲವೂ ಆಗಿದ್ದರು.

ಇಂತಹ ಬಹುಮುಖವಾದ ಸಂಬಂಧ ಅವರೊಂದಿಗೆ ಬೆಳೆದದ್ದು, ಮೇಲೆ ಸೂಚಿಸಿರುವಂತೆ, ೧೯೨೭ರಲ್ಲಿ. ಆಗ ಅವರು ನನ್ನ ಚಿಕ್ಕಮ್ಮನ ಮಗ ಶ್ರೀ ಬಿ. ನಂಜುಂಡಯ್ಯನವರೊಂದಿಗೆ ಆಗಾಗ್ಗೆ ನಮ್ಮ ಮನೆಗೆ ಬರುತ್ತಿದ್ದರು. ಅವರಿಬ್ಬರೂ ಸಹಪಾಠಿಗಳು. ನಮ್ಮ ಮನೆಯಲ್ಲಿ ಸುಮಾರು ಒಂದು ವರ್ಷಕಾಲ ನೆಲೆಸಿದ್ದ ನಂಜುಂಡಯ್ಯ ಮೈಸೂರಿನ ಸುಬ್ಬರಾಯನ ಕೆರೆಯ ಏರಿಯ ಮೇಲೆ ಒಂದು ಕೋಣೆಯನ್ನು ಗೊತ್ತುಮಾಡಿಕೊಂಡು ಅಲ್ಲಿ ತೀ.ನಂ.ಶ್ರೀ. ಯವರೊಂದಿಗೆ ವಾಸಮಾಡತೊಡಗಿದರು. ಆಗಲೂ, ಆಗೊಮ್ಮೆ ಈಗೊಮ್ಮೆ ನಮ್ಮ ಮನೆಗೆ ಬರುತ್ತಿದ್ದ ನಂಜುಂಡಯ್ಯನವರೊಂದಿಗೆ ತೀ.ನಂ.ಶ್ರೀ. ಬರುತ್ತಿದ್ದರು. ಇಂಗ್ಲಿಷು ಕನ್ನಡಗಳಲ್ಲಿ ಅವರು ಬಹು ಬುದ್ಧಿವಂತರೆಂದು ನಂಜುಂಡಯ್ಯ ಹೇಳಿದ್ದರು. ನನಗೆ ಬಹು ಕಷ್ಟವೆಂದು ಕಂಡುಬರುತ್ತಿದ್ದ ಇಂಗ್ಲಿಷು ಕನ್ನಡ ಪದ್ಯಗಳನ್ನು ಅವರ ಮುಂದಿಟ್ಟು, ಅರ್ಥವಿವರಣೆ ಮಾಡಬೇಕೆಂದು ಕುಚೋದ್ಯದ ಧ್ವನಿಯಲ್ಲಿ ಅವರಿಗೆ ಸವಾಲು ಹಾಕುತ್ತಿದ್ದೆ. ಅವರೂ ನಗು

ನಗುತ್ತಲೇ ಅರ್ಥವಿವರಣೆ ಮಾಡುತ್ತಿದ್ದರು, ಸ್ವಲ್ಪವೂ ಬೇಸರಗೊಳ್ಳದೆ. ಅದು ನನಗೆ ಒಪ್ಪಿತವಾಗಿ ಮೆಚ್ಚಿಗೆಯಾದರೂ, "ನಮ್ಮ ಮೇಷ್ಟರ ಹಾಗೆ ನಿಮಗೆ ವಿವರಿಸುವುದಕ್ಕೆ ಬರುವುದಿಲ್ಲ. ಪದ್ಯ ನಿಮಗೆ ಅರ್ಥವೇ ಆಗಿಲ್ಲ. ನಮ್ಮ ಮೇಷ್ಟರು ಅರ್ಥ ಹೇಳಿರುವುದು ಹೀಗೆ" ಎಂದು ಅಸಂಬದ್ಧವಾದ ವಿವರಣೆಯನ್ನು ಗತ್ತಿನಿಂದ ಅವರ ಮುಂದೆ ಉಪನ್ಯಾಸದ ಧಾಟಿಯಲ್ಲಿ ಹೇಳುತ್ತಿದ್ದೆ. "ಓ ಹಾಗೋ ಈ ಪದ್ಯದ ಅರ್ಥ! ನನಗೆ ಗೊತ್ತೇ ಇರಲಿಲ್ಲ. ನಿನ್ನಿಂದ ಕೇಳಿ ತಿಳಿದುಕೊಂಡ ಹಾಗಾಯಿತು!" ಎಂದು ಅವರು ನಕ್ಕು ಸುಮ್ಮನಾಗಿಬಿಡುತ್ತಿದ್ದರು. ಈ ಸಂಗತಿಯನ್ನು ತಮ್ಮ ಮಗ ನಂಜುಂಡಯ್ಯನಿಂದ ಕೇಳಿ ತಿಳಿದುಕೊಂಡಿದ್ದ ನಮ್ಮ ಚಿಕ್ಕಪ್ಪ ಬಹು ವರ್ಷಗಳವರೆಗೆ ನನ್ನನ್ನು ಕುರಿತು "ಶ್ರೀಕಂಠಯ್ಯನ ಮೇಷ್ಟ್ರು" ಎಂದು ನನ್ನ ತಾಯಿಯೊಂದಿಗೆ ವಿನೋದವಾಗಿ ಹೇಳುತ್ತಿದ್ದರು.

ಪರಿಹಾಸಯುಕ್ತವಾಗಿ ಪ್ರಾರಂಭವಾದ ಈ ಸಲಿಗೆ ನಿಜವಾದ ಪ್ರೀತಿಪರವಾದ ಸಲಿಗೆಯಾಗಿ ಮಾರ್ಪಡಲು ಬಹಳಕಾಲ ಹಿಡಿಯಲಿಲ್ಲ. ಮೊತ್ತಮೊದಲು ತೀ.ನಂ.ಶ್ರೀ. ಯವರ ಗಮನಕ್ಕೆ ಬಂದದ್ದು ನನ್ನ ಚಿತ್ರಕಲಾಭಿನಿವೇಶ; ಅದಕ್ಕವರು ಹೊಯ್ನೀರೆರೆಯುತ್ತಾ ಬಂದರು. ನಾನು ಗೀಚತೊಡಗಿದ್ದ ಇಂಗ್ಲಿಷು ಹಾಗೂ ಕನ್ನಡ (ಷಟ್ಪದಿ) ಪದ್ಯ ಪಂಕ್ತಿಗಳನ್ನು ಅವರ ಅವಗಾಹನೆಗೆ ತಂದೆ. ಆ ಬಗೆಗೆ ಅವರು ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ನನ್ನ ಹುಟ್ಟಿದ ಹಬ್ಬದ ದಿನದಂದು ತಮ್ಮ ಮನೆಗೆ ತಪ್ಪದೆ ಬರಬೇಕೆಂದು ನನಗೆ ಕರೆಕೊಟ್ಟಿದ್ದರು. (ನನ್ನ ಹುಟ್ಟಿದ ದಿನವನ್ನು ಅದು ಹೇಗೋ ತಿಳಿದುಕೊಂಡಿದ್ದರು. ಹುಟ್ಟಿದ ಹಬ್ಬ ಎಂಬ ನಿಮಿತ್ತವಾಗಿ ಅಲ್ಲ; ಅವರು ಭೇಟಿಗೆ ಗೊತ್ತು ಮಾಡಿದ್ದ ದಿನ ನಾನು ಹುಟ್ಟಿದ ದಿನವಾಗಿತ್ತು, ಅಷ್ಟೆ.) ನಾನೂ ಬಹಳ ಕುತೂಹಲಿಯಾಗಿಯೆ ಅವರ ಮನೆಗೆ ಹೋದೆ. (ಆಗ ಅವರು ಜಗನ್ಮೋಹನ ಬಂಗಲೆಯ ಬಲಪಕ್ಕದ ಸೀತಾವಿಲಾಸ ಅಗ್ರಹಾರದಲ್ಲಿ ಬಾಡಿಗೆಯ ಮನೆಯಲ್ಲಿದ್ದರು. ಮನೆಯಲ್ಲಿ ಅವರ ಸೋದರತ್ತೆ, ಮತ್ತು ತಂಗಿ ಜೊತೆಗಿದ್ದರು.) ಹೋದ ಕೂಡಲೆ ತಿಂಡಿ ತೀರ್ಥದ ಉಪಚಾರ ಆಯಿತು. ಆ ಬಳಿಕ, "ಇವೊತ್ತು ನಿನ್ನ ಹುಟ್ಟಿದ ಹಬ್ಬ ಅಲ್ಲವೆ?" ಎಂದು ಕೇಳಿದರು. "ನಿಮಗೆ ಹೇಗೆ ಗೊತ್ತಾಯಿತು?" ಎಂದು ಬೆರಗಾಗಿ ಕೇಳಿದೆ. "ಹೇಗೋ ಗೊತ್ತಾಯಿತು, ಇರಲಿ. ಇದೋ, ಹುಟ್ಟಿದ ಹಬ್ಬದ ಉಡುಗೊರೆ" ಎಂದು, ಕಾಗದ ಸುತ್ತಿ ದಾರಕಟ್ಟಿದ್ದ ಒಂದು ಪುಸ್ತಕವನ್ನು ಕೈಗಿತ್ತರು; "ಮನೆಗೆ ಹೋಗಿ ಬಿಚ್ಚಿ ನೋಡು. ನಿಧಾನವಾಗಿ ಸವಿಯಬೇಕಾದ ಸಿಹಿ ಭಕ್ಷ್ಯ" ಎಂದು ಮುಗುಳ್ನಗೆ ನಗುತ್ತ ಸೂಚಿಸಿದರು.

ಮನೆಗೆ ಹಿಂದಿರುಗುವ ಮೊದಲೆ ದಾರಿಯಲ್ಲಿ ಪುಸ್ತಕದ ಪ್ಯಾಕೆಟ್ಟನ್ನು ಬಿಚ್ಚಿ ನೋಡಿದೆ. ನನ್ನ ಕಣ್ಣಿಗೆ ಬಿದ್ದದ್ದು, 'ಇಂಗ್ಲಿಷ್ ಗೀತಗಳು' ಎಂಬ ಪುಸ್ತಕ. ಒಳಗಡೆ ಮೊದಲ ಪುಟದಲ್ಲಿ "ಚಿ. ಸೀತಾರಾಮುವಿಗೆ. ಪ್ರೀತಿಯ ಆಶೀರ್ವಾದಗಳೊಡನೆ. ಹುಟ್ಟಿದ ಹಬ್ಬದ ಉಡುಗೊರೆ. ತೀ.ನಂ.ಶ್ರೀ." – ಎಂದು ಮುದ್ದಾದ ಗುಂಡಾದ ಮುತ್ತಿನಂತಹ ಅಕ್ಷರಗಳಲ್ಲಿ ಅಂಕಿತ ಮೂಡಿತ್ತು. ('ಒಲುಮೆ'ಯಿಂದ ತೊಡಗಿ 'ನಂಟರು' ವಿನವರೆಗೆ ಅವರು ನನಗೆ ಕೊಟ್ಟಿರುವ ಎಲ್ಲ ಪುಸ್ತಕಗಳಲ್ಲಿಯೂ ಈ ಪ್ರೀತಿಯ ಆಶೀರ್ವಾದದ ರಕ್ಷಾ ಕವಚ ಸಾಗಿಬಂತು.) ಈ ಉಡುಗೊರೆಯ ಮೂಲಕ ಅವರು ನನಗೆ ಸೂಚ್ಯವಾಗಿ ಉಪದೇಶ ಮಾಡಿದ್ದರು : ಅಸ್ತವ್ಯಸ್ತ ಬಂಧದ

ಇಂಗ್ಲಿಷು ಪದ್ಯಗಳನ್ನೂ ವಸ್ತುವಿಗೆ ಹೊಂದದ ಷಟ್ಪದಿಗಳನ್ನೂ ಹೊಸೆಯುವುದನ್ನು ಬಿಟ್ಟು, ಇಂಗ್ಲಿಷು ಗೀತಗಳ ಮಾದರಿಯಲ್ಲಿ ಪದ್ಯರಚನೆ ಮಾಡು ಎಂದು. ಯಾವ ಒಂದು ಕವಿತಾ ಗ್ರಂಥವನ್ನು ತಮ್ಮ ಮಾರ್ಗದರ್ಶಕವಾಗಿ ಮಾಡಿಕೊಂಡಿದ್ದರೋ ಅದನ್ನು ನನಗೂ ಮಾರ್ಗ ದರ್ಶಕವಾಗಿ ಮುಂದಿಟ್ಟರು. ಅವರ ಉಡುಗೊರೆ ಪರಿಣಾಮಕಾರಿಯಾಯಿತು, ಅಂದು ಒಬ್ಬ ಕವಿಯ ಜನನವಾಯಿತು.

ನನಗೆ ಕೊಟ್ಟ 'ಇಂಗ್ಲಿಷ್ ಗೀತಗಳು' ಪ್ರತಿಯ ವೈಶಿಷ್ಟ್ಯವನ್ನು ಇಲ್ಲಿ ನೆನೆಯಬೇಕು. ಆಗತಾನೆ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿದ್ದ ಬಿ.ಎಂ.ಶ್ರೀ. ಯವರು ತಮ್ಮ ಆಪ್ತ ಶಿಷ್ಯರ ಗೋಷ್ಠಿಯೊಂದನ್ನು ಸೇರಿಸಿ, ಅಲ್ಲಿ ತಮ್ಮ ಇಂಗ್ಲಿಷ್ ಗೀತಗಳ ವಾಚನ ಮಾಡಿ, ಅವುಗಳ ರಚನಾ ವಿಧಾನಗಳನ್ನೂ ಅನುವಾದ ಕ್ರಮವನ್ನೂ ವಿವರಿಸಿದ್ದರಂತೆ; ಆ ಗೋಷ್ಠಿಗೆ ಹೋಗುವ ಭಾಗ್ಯ ತೀ.ನಂ.ಶ್ರೀ. ಯವರದಾಗಿತ್ತು. ತಮ್ಮ ಗುರು ತಿಳಿಸಿದ್ದ ವಿಶೇಷ ವಿಷಯಗಳನ್ನು ಅವರು ತಮ್ಮ ಪ್ರತಿಯಲ್ಲಿ ಸಂಬಂಧಪಟ್ಟ ಕವನದ ಪಕ್ಕದ ಅಂಚಿನಲ್ಲಿ, ಗುರುತುಹಾಕಿಕೊಂಡಿದ್ದರು. ಆ ಟಿಪ್ಪಣಿಗಳನ್ನೆಲ್ಲಾ ಅವರು ನನಗೆ ಕೊಟ್ಟ ಪ್ರತಿಯಲ್ಲಿ ವರ್ಗಾವಣೆ ಮಾಡಿದ್ದರು. (ಟಿಪ್ಪಣಿಗಳಿದ್ದ ಈ ಅಮೂಲ್ಯ ಪ್ರತಿ ಕೆಲವು ವರ್ಷಗಳ ಹಿಂದೆ ಪರಹಸ್ತಗತವಾಗಿ ಕಳೆದುಹೋದದ್ದಕ್ಕಾಗಿ ನಾನು ಈಗಲೂ ವಿಷಾದಪಡುತ್ತಿದ್ದೇನೆ.) ಅವುಗಳಿಂದ ನಾನು ತುಂಬ ಪ್ರಯೋಜನ ಪಡೆದಿದ್ದೇನೆ. Free rendering (ಸರಳಾನುವಾದ); First attempt; ಬೇಟ (ಬೇಡು, ಧಾತು) = Wooing; Not quite satisfactory; 'ಚೋಳ ಕನ್ನೆಯರು;' ಇಲ್ಲಿ ೩+೫ ಮಾತ್ರೆಗಳ ಗಣಗಳು ಬಳಕೆಯಾಗಿವೆ; ಕಾಳಗದ ಪದ : After seeing a coorgie dance; ಅನಾಥೆ (Bridge of Sighs) : 'ಅನಾಥೆಯಿವಳಿನ್ನೊಬ್ಬಳೀ ಜನ್ಮ ರೋಸಿ' : Extra syllable permitted in the beginning; ಸಾಂಗತ್ಯದ ಧಾಟಿ, ಅಂಶಗಣ ಉಪಯೋಗಿಸದೆ, ಇತ್ಯಾದಿ ಇತ್ಯಾದಿಯಾಗಿ ಅನೇಕಾನೇಕ ಬೆಲೆಯುಳ್ಳ ಟಿಪ್ಪಣಿಗಳಿದ್ದವು. (ನೆನಪಿಗೆ ಬಂದ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಿದ್ದೇನೆ.) ಇಂಗ್ಲಿಷ್ ಗೀತಗಳಿಂದ ನಾನು ಪ್ರಭಾವಿತನಾದದ್ದು ಹಾಗಿರಲಿ, ಇಂಗ್ಲಿಷ್ ಗೀತಗಳು ತೀ.ನಂ.ಶ್ರೀ. ಯವರ ಮೇಲೆ ಎಂತಹ ಪ್ರಭಾವ ಬೀರಿದ್ದಿತು ಎಂಬುದಕ್ಕೆ ಈ ಟಿಪ್ಪಣಿಗಳು ನಿದರ್ಶನ. ಬಿ.ಎಂ.ಶ್ರೀ. ಯವರು ಉಪಯೋಗಿಸುವ ಛಂದಃ ಪ್ರಕಾರಗಳು, ಅಚ್ಚಗನ್ನಡ ನುಡಿಗಟ್ಟು, ಲಯವಿನ್ಯಾಸ ಇವೇ ಮುಂತಾದ ಪದ್ಯ ರಚನಾ ವೈಶಿಷ್ಟ್ಯಗಳನ್ನು ತೀ.ನಂ.ಶ್ರೀ.ಯವರ ಕವನಗಳಲ್ಲಿ ಗುರುತಿಸಬಹುದು.

ಇಂಗ್ಲಿಷ್ ಗೀತಗಳ ಮಾದರಿಯಲ್ಲಿ – ತೀ.ನಂ.ಶ್ರೀ.ಯವರ ಸಲಹೆಯಂತೆ – ಆಗಿನ ದಿನಗಳ ರೀಡರುಗಳಲ್ಲಿ ಪ್ರಚಲಿತವಾಗಿದ್ದ ಕೆಲವು ಇಂಗ್ಲಿಷ್ ಪದ್ಯಗಳ ಅನುವಾದ ಕಾರ್ಯದಿಂದ ನನ್ನ ಹೊಸಬಗೆಯ ಪದ್ಯರಚನಾ ಪ್ರಯತ್ನಗಳನ್ನು ಮೊದಲು ಮಾಡಿದೆ; ಸ್ವತಂತ್ರ ಪದ್ಯಗಳನ್ನೂ ಒಂದೊಂದನ್ನು ರಚಿಸಿದಾಗಲೂ ಅದನ್ನು ಅವರ ಅವಗಾಹನೆಗೆ ಒಪ್ಪಿಸುತ್ತಿದ್ದೆ. ಅವರು ಮೊತ್ತಮೊದಲು ನನಗೆ ತಮ್ಮ ಸೋದರತ್ತೆಯಿಂದ ತಿಂಡಿ ತರಿಸಿಕೊಟ್ಟು ತೃಪ್ತಿಪಡಿಸಿ, ಅನಂತರ ನನ್ನ ಅಭ್ಯಾಸ ಪ್ರಯತ್ನಗಳ ತಿದ್ದಾಣಿಕೆಗೆ ತೊಡಗುತ್ತಿದ್ದರು. ಹಾಗೆ ತಿದ್ದುವಾಗ, ಮಂಚದ ಮೇಲೆ ಸುತ್ತಿ ಇಟ್ಟಿರುತ್ತಿದ್ದ ಹಾಸಿಗೆ ಸುರುಳಿಯನ್ನು ಒರಗಿಕೊಂಡು, ನನ್ನನ್ನೂ ಪಕ್ಕದಲ್ಲಿ

ಕೂರಿಸಿಕೊಂಡು, ನನ್ನ ರಚನೆಗಳನ್ನು ತಾವೇ ಗಟ್ಟಿಯಾಗಿ ಓದುತ್ತ, ವಿಮರ್ಶೆಮಾಡಿ ಮಾರ್ಗ ದರ್ಶನ ಮಾಡುತ್ತಿದ್ದರು. ಕೆಲವು ನಿಮಿಷ ಹಿಡಿಯುವ ಪದ್ಯ ಮಾತ್ರವಲ್ಲ, ಕತೆ ಪ್ರಬಂಧ ನಾಟಕ ಮುಂತಾದ ದೀರ್ಘ ಲೇಖನಗಳನ್ನೂ ಹೀಗೆಯೇ ಬೇಸರ ಪಡದೆ ತಾವೇ ರಚಿಸಿದ್ದೋ ಎಂಬಂತೆ ಓದುತ್ತಿದ್ದರು. ಮೆಚ್ಚುವ ಕಡೆ ಮೆಚ್ಚುತ್ತಿದ್ದರು (ಬಾಯಿ ತುಂಬ); ಕೊಚ್ಚುವ ಕಡೆ ಕೊಚ್ಚುತ್ತಿದ್ದರು (ಕೈ ತುಂಬ)! ಕಟೂಕ್ತಿಯನ್ನು ಬಾಯಿಂದ ಆಡಲು ಹಿಂಜರಿಯುತ್ತಿದ್ದರು – ಮನಸ್ಸು ನೊಂದೀತೆಂದು. ಛಂದೋ ದೋಷವೆ ಆಗಲಿ, ವ್ಯಾಕರಣ ದೋಷವಾಗಲಿ, ವಾಕ್ಯ ರಚನೆಯ ಮತ್ತು ಶೈಲಿಯ ಓರೆಕೋರೆಗಳೆ ಆಗಲಿ – ಚೂಪಾದ ಸೀಸದ ಕಡ್ಡಿಯಿಂದ ಅದನ್ನು ತಿದ್ದಿ, ಸರಿಯಾದ ರೂಪವನ್ನು ತೋರಿಸಿಕೊಡುತ್ತಿದ್ದರು. ೧೯೩೯ ರಿಂದ ೧೯೪೩ರ ವರೆಗೆ ಬಿ.ಎ. ಮತ್ತು ಎಂ.ಎ. ತರಗತಿಗಳಲ್ಲಿ ಕಲಿತುದಕ್ಕಿಂತ ಅವರ ಮನೆಯಲ್ಲಿ ಅವರ ಬಳಿ ಕುಳಿತು ನಾನು ಕಲಿತುದೇ ಹೆಚ್ಚು. ವಾರಕ್ಕೆ ಎರಡು ದಿನ ಮೂರು ದಿನ, ರಜಾ ಬಂತೆಂದರೆ ಬಹುಮಟ್ಟಿಗೆ ಪ್ರತಿದಿನ, ಅವರ ಮನೆಗೆ – ಕೆಲಸವಿರಲಿ ಇಲ್ಲದಿರಲಿ – ಹೋಗಿ ಬರದಿದ್ದರೆ ನನಗೆ ಮನಸ್ಸಿಗೆ ಸಮಾಧಾನವಿರುತ್ತಿರಲಿಲ್ಲ. ಎಷ್ಟೋ ದಿನ ಅವರ ಮನೆಯಲ್ಲೆ ಊಟವೂ ನಡೆದುಹೋಗುತ್ತಿತ್ತು. ಎಂದಾದರೂ ಮನೆಯಲ್ಲಿ "ನನಗೆ ಹಸಿವಿಲ್ಲ, ಊಟ ಮಾಡುವುದಿಲ್ಲ" ಎಂದರೆ, "ಓಹೋ! ಶ್ರೀಕಂಠಯ್ಯನವರ ಮನೆಯಲ್ಲಿ ಊಟಮಾಡಿಕೊಂಡು ಬಂದೆಯೋ?" ಎಂದು ನಮ್ಮ ತಾಯಿ ನನ್ನನ್ನು ಪರಿಹಾಸಮಾಡುವುದು ಸರ್ವಸಾಮಾನ್ಯವಾಗಿ ಹೋಗಿತ್ತು. ಒಂದು ಮಾತಿನಲ್ಲಿ, ಅಂದಿನ ದಿನಗಳಲ್ಲಿ, ನಾನು ಅವರ ಕಿರಿಯ ಗೆಳೆಯ ಅಥವಾ ಶಿಷ್ಯ ಎನ್ನುವುದಕ್ಕಿಂತ ಹೆಚ್ಚಾಗಿ ಅವರ ಕುಟುಂಬ ವರ್ಗಕ್ಕೇ ಸೇರಿಹೋಗಿದ್ದೆ.

ನಮ್ಮಿಬ್ಬರ ನಡುವೆ ಬೆಳೆದು ಬಂದ ಈ ಸಲಿಗೆಯ ವಿಷಯವನ್ನು ಇಷ್ಟು ದೀರ್ಘವಾಗಿ ಬೆಳೆಸಿ ನಿರೂಪಿಸಿದ್ದರ ಉದ್ದೇಶ, ನಾನು ಅವರನ್ನು ಎಷ್ಟು ಹತ್ತಿರದಿಂದ ಕಂಡಿದ್ದೆ ಎಂಬುದನ್ನು ತಿಳಿಸುವುದಕ್ಕಾಗಿ; ಅವರನ್ನು ಕಂಡಿದ್ದೆ, ಅಷ್ಟೇ; ಬಲ್ಲೆ ಎಂದು ಹೇಳುವ ಧೈರ್ಯ ನನಗಿಲ್ಲ. ಇನ್ನು, ಕಂಡಷ್ಟನ್ನು ಸಂಕ್ಷೇಪವಾಗಿ ತಿಳಿಸಲು ಪ್ರಯತ್ನಿಸುತ್ತೇನೆ.

ಅವರ ರೂಪು ನಾನು ಅವರನ್ನು ಮೊದಲು ಕಂಡ ದಿನಗಳಲ್ಲಿ ಹೇಗೆ ಇದ್ದಿತೋ ಅವರ ಕಡೆಯ ದಿನಗಳಲ್ಲಿಯೂ ಬಲುಮಟ್ಟಿಗೆ ಹಾಗೆಯೆ ಇದ್ದಿತು. ಆಗಿನ ಕಾಲದ ಎಲ್ಲ ವಿದ್ಯಾರ್ಥಿ ಗಳಂತೆ ಅವರೂ ಜುಟ್ಟು ಇಟ್ಟುಕೊಂಡಿದ್ದರು; ಶಾಸ್ತ್ರದ ಮಟ್ಟಿಗೆ ಶಿಖೆಯಲ್ಲ; ನೀಳವಾದ ಹೊರವಾದ ಕೇಶರಾಶಿ; ಅಧ್ಯಾಪಕರಾದ ಮೇಲೆ ಅದು ಕ್ರಾಪಿಗೆ ದಾರಿ ಬಿಟ್ಟಿತು; ಈಚೆಗೆ ತಾನೆ ಅವರ ತಲೆ ಬಕ್ಕ ತಲೆಯಾದದ್ದು. ಅಂದೂ ಎಂದೂ ಅವೇ ಬಟ್ಟಲುಗಣ್ಣು, ತುಂಬುಗೆನ್ನೆ, ನಸು ಗುಳಿಬಿದ್ದ ತುಂಬುಗಲ್ಲ, ಎತ್ತರವಾದ ಹಣೆ, ತುರುಗು ಹುಬ್ಬು; ಹೆಣ್ಣಿನ ತುಟಿಯನ್ನು ನಾಚಿಸುವಂಥ ಚೆಂದುಟಿ. ಈಚಿನ ಪಾರ್ಥಸದೃಶವಾದ ಅವರ ಗಂಡುಗಾಡಿಗೆ ಅಂದು ಹೆಣ್ಣಿನ ಕೋಮಲತೆಯೂ, ಹಳ್ಳಿಗಾಡಿನ ಮುಗ್ಧತೆಯೂ ಬೆರೆತಿದ್ದುವು. ಚಿನ್ನದ ಮೆರುಗಿನ ಗುಂಡು ಕನ್ನಡಕ ಅವರ ತೇಜಸ್ವೀ ಮುಖಕ್ಕೆ ಹೆಚ್ಚಿನ ಕಳೆಕೊಟ್ಟಿತ್ತು. ವಿದ್ಯಾರ್ಥಿ ದೆಶೆಯಲ್ಲಿ ಅವರು ಉಡುತ್ತಿದ್ದ ಮೇಲುಕೋಟೆಯ ರೇಷ್ಮೆ ಗುಂಡಂಚಿನ ವೇಷ್ಟಿ (ದಟ್ಟಿ) ಪಂಚೆ; ಅಧ್ಯಾಪಕರಾದ ಮೇಲೆ, ಕಾಲೇಜಿಗೆ ಹೋಗುವಾಗ ಕಚ್ಚೆ ಪಂಚೆ. ಉಡುಪಿನ ವಿಷಯದಲ್ಲಿ

ಅವರು ಗುರು ಬಿ.ಎಂ.ಶ್ರೀ. ಯವರನ್ನು ಅನುಸರಿಸದೆ, ವೆಂಕಣ್ಣಯ್ಯನವರ ಮೇಲುಪಂಕ್ತಿಯನ್ನು ಅನುಸರಿಸಿದರು. ಪ್ರಾಧ್ಯಾಪಕರಾದ ಮೇಲೂ ಪಾಶ್ಚಾತ್ಯ ರೀತಿಯ ಉಡುಪಿಗೆ ಮನ ಸೋಲಲಿಲ್ಲ. 'ಓಪನ್ ಕಾಲರ್' ಕೋಟನ್ನು ಕೂಡ ಎಂದೂ ತೊಡಲಿಲ್ಲ.

ಭಾರತೀಯ ಸಂಸ್ಕೃತಿಯ ದ್ಯೋತಕವಾಗಿದ್ದ ಅವರ ಉಡುಪು ಅವರ ಮನೋಧರ್ಮಕ್ಕೂ ಕನ್ನಡಿಯಾಗಿತ್ತು. ಅವರಿಗೆ ಎಲ್ಲದರಲ್ಲಿಯೂ ಅಚ್ಚುಕಟ್ಟು, ಒಪ್ಪ ಓರಣ, ಹಿತಮಿತಗಳು ಪ್ರಿಯವಾಗಿದ್ದುವು. ಮನೆಯಲ್ಲಿ ಎಷ್ಟು ಅಗತ್ಯವೋ ಅಷ್ಟೇ ಪೀಠೋಪಸ್ಕರ. ಯಾವುದರಲ್ಲಿಯೂ ಆಡಂಬರವಿಲ್ಲ. ಪುಸ್ತಕಗಳನ್ನು ಎಂದೂ ಚೆಲ್ಲಾಪಿಲ್ಲಿಯಾಗಿ ಇಟ್ಟಾಡುತ್ತಿರಲಿಲ್ಲ. ಯಾವ ಪುಸ್ತಕಕ್ಕೂ ರಟ್ಟು (ಮೇಲು ಹೊದಿಕೆ) ಹಾಕದೆ ಇರುತ್ತಿರಲಿಲ್ಲ. ಮೊದಲಿನಿಂದಲೂ ಅಗತ್ಯವಾದ ಪುಸ್ತಕಗಳನ್ನು ಕೊಂಡು ಪುಸ್ತಕ ಭಂಡಾರವನ್ನು ಬೆಳೆಸಿಕೊಳ್ಳುವುದರಲ್ಲಿ ಆಸಕ್ತಿ; ಕೊಂಡ ಪುಸ್ತಕವನ್ನು ಷೆಲ್ಫಿನಲ್ಲಿ ಅಲಂಕಾರವಾಗಿ ಮಾತ್ರ ಇರಿಸದೆ, ಹೇಗಾದರೂ ಬಿಡುವು ಮಾಡಿಕೊಂಡು ಓದುವುದರಲ್ಲಿ ಇಮ್ಮಡಿಯ ಆಸಕ್ತಿ. ಒಟ್ಟಿನಲ್ಲಿ, ಆದರ್ಶ ಪುಸ್ತಕ ಪ್ರೇಮಿ. ನನ್ನಂತೆಯೇ ಅನೇಕ ಆಪ್ತಮಿತ್ರರಿಗೆ ಅವರು ತಮ್ಮ ಬಿಡುವು ಹೊತ್ತಿನ ಬಹುಕಾಲವನ್ನು ಹಂಚಿ ಕೊಟ್ಟುಬಿಟ್ಟಿದ್ದರು. ನಮ್ಮ ನಂಜುಂಡಯ್ಯನಂತೂ ಅವರ ಆಪ್ತರಲ್ಲಿ ಆಪ್ತ. ಅವರಿಬ್ಬರ ಸ್ನೇಹವನ್ನು ನೆನೆದಾಗಲೆಲ್ಲ ಕರ್ಣ ದುರ್ಯೋಧನರ ಮೈತ್ರಿ ನೆನಪಾಗುತ್ತದೆ; ಪಂಪನ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ...' ಎಂಬ ಪದ್ಯದ ನೆನಪಾಗುತ್ತದೆ. ಅವರಿಬ್ಬರೂ ಅಂತರಂಗ ಮಿತ್ರರು, ಹೃದಯ ಮಿತ್ರರು. ಇತರರೆಲ್ಲ ಸಹೃದಯ ಮಿತ್ರರು. ಕವಿ ಪು.ತಿ. ನರಸಿಂಹಾಚಾರ್, ಪಾಂಡಿತ್ಯದಲ್ಲಿ ತೀ.ನಂ.ಶ್ರೀ. ಯವರಿಗೆ ಹೆಗಲೆಣೆಯಾದ ಡಿ.ಎಲ್. ನರಸಿಂಹಾಚಾರ್ (ಅವರ ಪಾಂಡಿತ್ಯದ ಸೊಬಗೇ ಬೇರೆ, ಇವರ ಪಾಂಡಿತ್ಯದ ಬನಿಯೇ ಬೇರೆ), ರಸಿಕ ಮನೋಧರ್ಮದ ಎ.ಎನ್. ಮೂರ್ತಿರಾಯರು, ಬಹುಮುಖ ಪಾಂಡಿತ್ಯದ ಜಿ. ಹನುಮಂತರಾಯರು, ಸದಭಿರುಚಿಯ ಸಂಸ್ಕೃತ ವಿದ್ವಾಂಸ ನಂ. ಶಿವರಾಮಶಾಸ್ತ್ರಿಗಳು, ಭೂ ವಿಜ್ಞಾನ ಶಾಖೆಯ ಟಿ.ಪಿ. ಕೃಷ್ಣಾಚಾರ್, ಸಾಂಪ್ರದಾಯಿಕ ರೀತಿಯಲ್ಲಿ ವೇದಶಾಸ್ತ್ರಗಳ ಅಧ್ಯಯನ ಮಾಡಿದ ಎಚ್.ಸಿ. ಕಪನೀಪತಿ ಭಟ್ಟರು – ಈ ಮಿತ್ರವೃಂದಕ್ಕೆ ಈ ಅಷ್ಟದಿಗ್ಗಜಗಳಿಗೆ – ಕೇಂದ್ರ ಬಿಂದುವಾಗಿದ್ದರು ತೀ.ನಂ.ಶ್ರೀ. ಅವರ ಮನೆಗೆ ನಾನು ಹೋದಾಗಲೆಲ್ಲ ಇವರಲ್ಲಿ ಒಬ್ಬರೋ ಇಬ್ಬರೋ ಸಾಧಾರಣವಾಗಿ ಇರುತ್ತಿದ್ದರು. ಎಲ್ಲರೂ ಈ ಸ್ನೇಹ ಮೂರ್ತಿಯನ್ನು ಹುಡುಕಿಕೊಂಡು ಬರುವವರೆ! ಆ ಅಪೂರ್ವ ಕಾಂತಶಕ್ತಿಯಿತ್ತು ತೀ.ನಂ.ಶ್ರೀ. ಯವರ ವ್ಯಕ್ತಿತ್ವದಲ್ಲಿ. ಮಕರಂದವಿರುವಲ್ಲಿ ತಾನೆ ದುಂಬಿವಿಂಡು! (ನಾನೊಂದು ಮರಿ ದುಂಬಿ.) ಒಂದೊಂದು ವೇಳೆ ಎಲ್ಲರೂ ಒಟ್ಟಿಗೆ ಸೇರಿರುತ್ತಿದ್ದುದೂ ಉಂಟು. ಅವೆಲ್ಲ ಸರಸ ಸಲ್ಲಾಪಗೋಷ್ಠಿಗಳೇ ಆದರೂ, 'ಅಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗಳ್ಗಾಗರ' ವಾಗಿಯೂ ಪರಿಣಮಿಸುತ್ತಿದ್ದವು ಕೆಲವೊಮ್ಮೆ. ತೀ.ನಂ.ಶ್ರೀ. ಬೆಂಗಳೂರಿಗೆ ಇಂಟರ್‌ಮೀಡಿಯೆಟ್ ಕಾಲೇಜಿನ (ಈಗಿನ ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು) ಉಪ ಪ್ರಾಧ್ಯಾಪಕರಾಗಿ ನೇಮಕಗೊಂಡು (೧೯೪೩) ಬಂದಮೇಲೆ, ಬಹುವರ್ಷಗಳ ಹಿಂದೆಯೆ (೧೯೩೩) ಅವರನ್ನು ಅಗಲಿ ಬಂದ ನಾನು ಮತ್ತೆ ಸಂಪರ್ಕ ಪಡೆಯುವ ಸೌಭಾಗ್ಯವನ್ನು ಪಡೆದೆ. ಹತ್ತು ವರ್ಷದ ಅಗಲಿಕೆಯಿಂದ ನಮ್ಮಿಬ್ಬರ ಆತ್ಮೀಯ ಸಂಬಂಧಕ್ಕೆ

ಒಂದು ಬಗೆಯ ಗೌರವಭಾವ, ಪಾವಿತ್ರ್ಯ ಬೆರೆತು ಬಂದುವೆಂದು ನನಗೆ ಈಗ ತೋರುತ್ತಿದೆ. ಅವರು ಬೆಂಗಳೂರಿಗೆ ಬಂದಮೇಲೂ ನನ್ನ ಬರಹಗಳನ್ನು ಅವರಿಗೆ ತೋರಿಸುವ ಹವ್ಯಾಸವನ್ನು ಬಿಡಲಿಲ್ಲ. ನನ್ನಂತೆಯೇ ತಮ್ಮ ಬರಹಗಳಿಗೆ ಅವರ ಅನುಮೋದನ ಮುದ್ರೆಯನ್ನು ನಿರೀಕ್ಷಿಸುತ್ತಿದ್ದವರೆಂದರೆ, ಪು.ತಿ.ನ. ಅವರು. ತೀ.ನಂ.ಶ್ರೀ. ಮೈಸೂರಿನಲ್ಲಿದ್ದಾಗ ಪು.ತಿ.ನ. ಅವರ ರಚನೆಗಳ ವಿಷಯವಾಗಿ ಅವರು ಪತ್ರಮುಖೇನ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಅವುಗಳಲ್ಲಿ ಕೆಲವಾದರೂ ಬೆಳಕಿಗೆ ಬಂದರೆ (ಈ ಉಪಕಾರ ಪು.ತಿ.ನ. ಅವರಿಂದಲೇ ಆಗಬೇಕು) ತೀ.ನಂ.ಶ್ರೀ. ಯವರ ಆಪ್ತ ವಿಮರ್ಶ ದೃಷ್ಟಿಯ ಮುಖವೊಂದು ಸಾಹಿತ್ಯ ಲೋಕಕ್ಕೆ ಪರಿಚಯವಾಗುತ್ತದೆ. ಈ ರೀತಿ ಅವರು ನನಗೆ ಬರೆದಿದ್ದ ಕೆಲವೇ ಕೆಲವು ಪತ್ರಗಳಲ್ಲಿ ಒಂದರ (ತಾ॥ ೨೬–೯–೧೯೩೪) ಕೆಲವು ವಾಕ್ಯಗಳು ಇವು :–

> "..... ನಾನು ನಾಟಕವನ್ನು ಓದಿದೆನು. ನನ್ನಿಂದ ನೀನು ಯಾವಾಗಲೂ ಸ್ಪಷ್ಟೋಕ್ತಿಯನ್ನೇ ನಿರೀಕ್ಷಿಸುವಿಯಷ್ಟೆ. ನಾಟಕದ **ಭಾಗಗಳು** ಚೆನ್ನಾಗಿವೆ; ಒಂದೆರಡು ಹಾಡುಗಳೂ ಚೆನ್ನಾಗಿವೆ. ಆದರೆ ನಾಟಕದಲ್ಲಿ ಗದ್ಯ ಪದ್ಯಗಳ ಮಿಶ್ರಣ ಹೊಂದಿಕೆ ಯಾಗುವುದಿಲ್ಲವೆಂದು ನನ್ನ ಭಾವನೆ. ಗದ್ಯದಲ್ಲಿ ಮಾತುಕತೆ ಉದ್ದಕ್ಕೂ ನಡೆಯುತ್ತಿರುವಾಗ ಸರಳ ರಗಳೆ ತಲೆ ಹಾಕಿದರೆ ಕೃತಕವಾಗುವುದಿಲ್ಲವೆ? (**ಆದರೂ ಅಲ್ಲಲ್ಲಿ** ಬರವಣಿಗೆ ಕಾವ್ಯಮಯವಾಗಿದೆ.)... ಇದಕ್ಕಿಂತ ದೊಡ್ಡ ಆಕ್ಷೇಪಣೆಯೆಂದರೆ ಪಾತ್ರಗಳಲ್ಲಿ ಹುರುಳು ಸಾಲದೆನ್ನಿಸುತ್ತದೆ.... ಈ ವಿಷಯವನ್ನೆಲ್ಲಾ ಎದುರಿಗೆ ಕುಳಿತು ಮಾತಾಡುವುದು ಉತ್ತಮ....."

('ತಿರುಕಿಯ ಕನಸು' ಎಂಬುದೇ ಆ ನಾಟಕ. ಅವರ ಪತ್ರ ಬಂದ ಮೇಲೆ, ನಾಟಕವನ್ನು ಬಹುಕಾಲ ಕೊಳೆಹಾಕಿದೆ. ಅವರ ಸಲಹೆಗಳನ್ನು ಗಮನದಲ್ಲಿರಿಸಿಕೊಂಡು, ಕೆಲ ವರ್ಷಗಳ ಹಿಂದೆ ಅದನ್ನು ಮಾರ್ಪಡಿಸಿ ಬರೆದದ್ದಾಗಿದೆ. ರಂಗದ ಮೇಲೆ ಬರುವ ಅಥವಾ ಅಚ್ಚಾಗುವ ಯೋಗ ಅದಕ್ಕೆ ಇದ್ದ ಹಾಗೆ ಕಾಣುವುದಿಲ್ಲ.

ಮೇಲಿನ ವಾಕ್ಯಗಳನ್ನು ಉದ್ಧರಿಸಿರುವುದರ ಉದ್ದೇಶ, ತೀ.ನಂ.ಶ್ರೀ. ಯವರ ಸಹೃದಯತೆ ಎಂದೂ ಅಂಧ ಅಭಿಮಾನಕ್ಕೆ ಒಳಗಾಗಿರಲಿಲ್ಲ ಎಂಬ ಅನರ್ಘ್ಯಗುಣವನ್ನು ತೋರಿಸುವುದು.)

ತೀ.ನಂ.ಶ್ರೀ. ಯವರು ಬೆಂಗಳೂರಿನಲ್ಲಿದ್ದಾಗ, ಅವರ ಸಹೃದಯತೆ ಒಂದು 'ಸಹೃದಯ ಗೋಷ್ಠಿ'ಯನ್ನೇ ಕಟ್ಟಿತು; ಅವರು ಮೈಸೂರಿನಲ್ಲಿ ಮಹಾರಾಜಾರವರ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಂದು ಅವರ ಕನ್ನಡದ ಅಭಿಮಾನ 'ಕಾಸಿನ ಸಂಘ'ವನ್ನು ಕಟ್ಟಿದಂತೆ. (ನಾನೂ ಅದರ ಸದಸ್ಯನಾಗಿದ್ದುಕೊಂಡು, ಕಾಸಿನ ದಂಡ ತೆತ್ತಿದ್ದೇನೆ!) ಅವರು ಆಗ ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯರು; ನಾನು, ರಾಜರತ್ನಂ, ಅವರ ಸಹಾಧ್ಯಾಪಕರು. ಸಾಹಿತ್ಯದಲ್ಲಿ ಒಲವುಳ್ಳ ಮಿತ್ರರೆಲ್ಲ ಒಂದು ಕಡೆ ಕಲೆಯಬೇಕು; ತಾವು ಓದಿ ಮೆಚ್ಚಿಕೊಂಡ ಯಾವುದೇ ಭಾಷೆಯ ಗ್ರಂಥದ ಪರಿಚಯ ಮಾಡಿಕೊಟ್ಟು, ಅದರಿಂದ ರಸವತ್ತಾದ ಒಂದು ಪ್ರಕರಣವನ್ನು ವಾಚನ ಮಾಡಬೇಕು.

ಕಾವ್ಯ ರಸಾಸ್ವಾದನಕ್ಕೆ ಪೂರ್ವಭಾವಿಯಾಗಿ ರುಚಿಕರವಾದ ಉಪಾಹಾರದ ಸೇವನೆಗೆ ಏರ್ಪಾಡಾಗಬೇಕು. ತೀ.ನಂ.ಶ್ರೀ.ಯವರ ಕಲ್ಪನೆಯ ಈ ಬಗೆಯ ಸಹೃದಯ ಗೋಷ್ಠಿಯ ಸಂಚಾಲಕರಾಗಿರಲು ಗೆಳೆಯ ಎನ್.ಎಸ್. ರಾಮಚಂದ್ರಯ್ಯ ಒಪ್ಪಿಕೊಂಡರು. ಈ ಗೋಷ್ಠಿಗೆ ಸೆಂಟ್ರಲ್ ಕಾಲೇಜಿನಿಂದಲೂ ಅಧ್ಯಾಪಕ ಮಿತ್ರರು ಬರುತ್ತಿದ್ದರು. ವಾಲ್ಮೀಕಿ ರಾಮಾಯಣ, ಅಶ್ವಘೋಷನ ಬುದ್ಧಚರಿತ, ಹಿಂದಿಯ ಕಾಮಾಯನಿ, ರತ್ನಾಕರನ ಭರತೇಶ ವೈಭವ ಇಂತಹ ಉದ್ಗ್ರಂಥಗಳಿಂದ ಆಯಾ ಭಾಗಗಳ ವಾಚನದ ಶ್ರವಣ ಶ್ರೋತೃಗಳ ಸಹೃದಯತೆಗೆ ಪುಟ ಕೊಡುತ್ತಿತ್ತು. ಸ್ನೇಹಿತರನ್ನು ಸುತ್ತಮುತ್ತ ಕಟ್ಟಿಕೊಂಡು, ಯಾರ ಮನಸ್ಸನ್ನೂ ನೋಯಿಸದೆ, ತೆರೆಯ ಮರೆಯ ಹಿಂದಿದ್ದು ಸಾಹಿತ್ಯ ಸಮಾರಂಭಗಳ ವ್ಯವಸ್ಥೆ ಮಾಡುವುದು, ಗ್ರಂಥ ಪ್ರಕಟನೆ ಮುಂತಾದ ಸಾಹಿತ್ಯ ಚಟುವಟಿಕೆಗಳಿಗೆ ಅವಶ್ಯವಾದ ವ್ಯವಸ್ಥಾಪನ ಶಕ್ತಿ ತೀ.ನಂ.ಶ್ರೀ. ಯವರ ಹುಟ್ಟುಗುಣವೆಂಬಂತೆ ಕಾಣುತ್ತದೆ. ಮೈಸೂರು ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ನಡೆದ ಸಾಹಿತ್ಯ ಸಮ್ಮೇಳನ, ಕುಮಾರವ್ಯಾಸ ಜಯಂತಿ; ಅದೇ ಸಂಘ ಹೊರತಂದ 'ಕಿರಿಯ ಕಾಣಿಕೆ', 'ತಳಿರು', 'ಆಷಾಡಭೂತಿ', 'ಸಾವಿನ ಸಮಸ್ಯೆ', – ಈ ಗ್ರಂಥಗಳು, ಇವೆಲ್ಲದರ ಚಾಲಕ ಶಕ್ತಿಯಾಗಿದ್ದರು ತೀ.ನಂ.ಶ್ರೀ. ದಿವಂಗತ ವೆಂಕಣ್ಣಯ್ಯನವರು 'ಪ್ರಬುದ್ಧ ಕರ್ಣಾಟಕ'ದ ಸಂಪಾದಕರಾಗಿದ್ದಷ್ಟು ಕಾಲವೂ ಸಂಪಾದನ ಕಾರ್ಯದಲ್ಲಿ ತೀ.ನಂ.ಶ್ರೀ. ಯವರದ್ದೇ ಪ್ರಧಾನ ಪಾತ್ರ. ವೆಂಕಣ್ಣಯ್ಯನವರು ಕೈಕೊಂಡು ನಡೆಸಿದ ಎಲ್ಲ ಸಾಹಿತ್ಯ ಕಾರ್ಯಗಳಲ್ಲಿಯೂ ಅವರ ಬಲಗೈ, ತೀ.ನಂ.ಶ್ರೀ. ಅವರು ಎಸಗಿದ ಈ ಎಲ್ಲ ಸಾಹಿತ್ಯ ಸೇವೆ ಇಂದಿನ ಪೀಳಿಗೆಯವರಿಗೆ ಅನುಕರಣೀಯವಾಗಬೇಕಾದ ನಿಷ್ಕಾಮಕರ್ಮ.

ತೀ.ನಂ.ಶ್ರೀ. ಬಹು ಸರಳ ಜೀವಿ. ಸರಳ ಎಂದು ನೀರಸವಲ್ಲ. ಅವರ ರಸಿಕತೆ ಬಹುಮುಖವಾದದ್ದು. ಚಿತ್ರಕಲೆ, ಸಂಗೀತ – ಇವುಗಳಲ್ಲಿ ತುಂಬ ಆಸಕ್ತಿ. ಚಿತ್ರಕಾರ ವೆಂಕಟಪ್ಪ ನವರನ್ನು ತುಂಬ ಮೆಚ್ಚಿಕೊಂಡಿದ್ದರು ಅವರು. ವೀಣಾವಾದನ ಕೇಳುವುದರಲ್ಲಿ ಅವರಿಗೆ ತುಂಬ ಪ್ರೀತಿ. ಸಾಹಿತ್ಯ ಸಂಗೀತಾದಿ ಕಲೆಗಳಲ್ಲಿ, ಆಹಾರ ವಿಹಾರಗಳಲ್ಲಿ, ಉಡುಪುತೊಡುಪುಗಳಲ್ಲಿ – ಒಂದು ಮಾತಿನಲ್ಲಿ ಹೇಳುವುದಾದರೆ, ಬದುಕಿನ ಎಲ್ಲ ಅಂತರಂಗ ಬಹಿರಂಗ ವ್ಯಾಪಾರಗಳಲ್ಲಿ – ಅವರದ್ದು ಕಟ್ಟುನಿಟ್ಟಿನ ಶುಚಿರುಚಿ. ಯಾವುದರಲ್ಲೂ ಆಡಂಬರವಿಲ್ಲ, ಅಬ್ಬರವಿಲ್ಲ, ಮನೆ ಚೊಕ್ಕಟವಾಗಿರಬೇಕು, ಅಚ್ಚುಕಟ್ಟಾಗಿರಬೇಕು ಅಷ್ಟೆ; ಆದಾಯಕ್ಕೆ ಒಳಪಟ್ಟ ಚೌಕಟ್ಟಿನಲ್ಲಿ ಶುಚಿರುಚಿಗಳ ಸಮಕಟ್ಟು. ಸಾಲ ಮಾಡಿಯಾದರೂ ಸೋಫಾ ಕೊಂಡು ಸಜ್ಜುಗೊಳಿಸಬೇಕೆಂಬ ಹಟವಿಲ್ಲ. ಆದರೂ ಸುಖ ಜೀವನಕ್ಕೆ ಅಗತ್ಯವಾದ ಖರ್ಚುವೆಚ್ಚ ಮಾಡುವಲ್ಲಿ ಕಾರ್ಪಣ್ಯವಿಲ್ಲ. ಧಾರಾಳಿಗಳಾದರೂ ದುಂದು ವೆಚ್ಚವಿಲ್ಲ. ಮನಸ್ಸು ಮಾಡಿದ್ದರೆ, ಬರುವ ಆದಾಯದಲ್ಲೆ ಉಳಿತಾಯಮಾಡಿ ಬಹುಮುಂಚೆಯೇ ಆಸ್ತಿಪಾಸ್ತಿ ಮಾಡಬಹುದಾಗಿತ್ತು. ಆದರೆ ಅವರ ಉದಾರಹಸ್ತ ಆಪ್ತೇಷ್ಟರ, ಬಂಧುಬಳಗದವರ ಕಡೆಗೆ ತೆರೆದು ಚಾಚಿತ್ತು. ಅವರ ಮನೆಯಲ್ಲಿ ಯಾವಾಗಲೂ ಸಂಬಂಧಿಗಳ ಅನುಬಂಧಿಗಳ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಆಶ್ರಿತರಾಗಿರುತ್ತಿದ್ದರು. ಅತಿಥಿಗಳ ಜೊತೆಗೆ ನನ್ನಂತಹ ಅಭ್ಯಾಗತರು ಬೇರೆ. ತ್ಯಾಗಭೋಗಗಳ ಜೀವನ ಕಲೆಯನ್ನು ಸಾಧಿಸಿ ಬಹುಮಟ್ಟಿಗೆ ಸಿದ್ಧಿಯನ್ನೂ ಪಡೆದು ಸದಾ ತೃಪ್ತರಂತೆ, ಸುಖಿಗಳಂತೆ, ಕಾಣುತ್ತಿದ್ದುದು

ದಿಟ. ಅವರ ನಿತ್ಯದ ನಗುಮುಖ, ಸೊಂಪಾದ ಸೊಬಗುವಡೆದ ಮೈಕಟ್ಟುಗಳೆ ಆ ಕಾಣ್ಕೆಗೆ ಸಾಕ್ಷಿ ನುಡಿಯುತ್ತಿದ್ದವು. ಆದರೆ ಅವರು ಬಾಳಿನ ನೋವು ನಿರಾಶೆಗಳನ್ನು ಕಾಣದವರಲ್ಲ. ಬಾಣಂತಿತನದ ಉನ್ಮಾದಕ್ಕೆ ಬಲಿಯಾದ ಪ್ರೀತಿಯ ತಂಗಿಯನ್ನು ತಮ್ಮ ಮನೆಯಲ್ಲೆ ಇಟ್ಟುಕೊಂಡು ಎಷ್ಟೋಕಾಲ ಚಿಕಿತ್ಸೆ ಮಾಡಿಸಿದರು, ಉಪಚರಿಸಿದರು. ಬೆಂಗಳೂರಿನಲ್ಲಿ ನಾನು ವಾಸವಾಗಿದ್ದ ಮನೆಯ ಬಳಿಯಲ್ಲಿ ಅವರೂ ಬಾಡಿಗೆಯ ಮನೆಯಲ್ಲಿ ಇದ್ದಾಗ, ಹಿರಿಯ ಮಗಳು – ಚೆಲುವಿನ ಪುತ್ಥಳಿ – ವಿಶಾಲಾಕ್ಷಿ – ಹನ್ನೊಂದು ಹನ್ನೆರಡರ ಹೊಂಗುಡಿ – ಹೂ ಬಿಡುವ ಮುನ್ನ ಕ್ರೂರ ವಿಧಿಯ ಕೂರ್ವಾಳ ಬಾಯಿಗೆ ಸಿಲುಕಿ ಉಡಿದುಹೋಯಿತು. ಆ ಮುಗ್ಧ ಮಗುವಿನ ಪಾರ್ಥಿವ ಶರೀರಕ್ಕೆ ಅಗ್ನಿ ಸ್ಪರ್ಶ ಮಾಡುವ ಕಾರ್ಯದಲ್ಲಿ ಪಾಲುಗೊಳ್ಳುವ ದೌರ್ಭಾಗ್ಯ ಈ ಲೇಖನಿ ಹಿಡಿದ ಕೈಗೆ ಕಟ್ಟಿ ಬಂದಿತ್ತು. ವೃತ್ತಿ ಜೀವನದ ನಡುಗಾಲದಲ್ಲಿ ಅವರು ನಿರಾಶೆಗಳನ್ನು ಉಂಡಿದ್ದರೂ ಕಡೆಗಾಲದಲ್ಲಿ ಅವು ನೇರ್ಪಟ್ಟುವು, ದಿಟ; ಆದರೆ, ಗಾಯ ಮಾದರೂ ಕಲೆ ಉಳಿಯುವುದಿಲ್ಲವೆ? ಇಂತು ಅವರ ಸುಖದುಃಖಗಳಲ್ಲಿ ಸ್ವಲ್ಪಮಟ್ಟಿಗಾದರೂ – ಸಾಕ್ಷೀಭೂತನಾಗಿಯಾದರೂ – ಪಾಲುಗೊಂಡ ನಾನು, ತಮ್ಮ ದುಃಖವನ್ನು ಅವರು ತೋಡಿಕೊಂಡದ್ದನ್ನು ಎಂದೂ ಕಾಣೆ; ಕರ್ತವ್ಯ ಪರಾಙ್ಮುಖರಾದದ್ದನ್ನು ಅರಿಯೆ. ಕೋಪದಿಂದ, ಅಸಮಾಧಾನದಿಂದ, ಮುಖ ಸಿಂಡರಿಸಿಕೊಂಡದ್ದನ್ನೂ ಎಂದು ಕಂಡರಿಯೆ. ಅಂಥ ಸಂಯಮಿಯಾಗಿದ್ದರು ಅವರು. ಆದರೆ, ನಗುವಿನ ವಿಚಾರದಲ್ಲಿ ಅವರು ಸಂಯಮ ನಿಯಮವನ್ನು ಮುರಿದು ಬಿಟ್ಟಿದ್ದರು. ತುಂಬಾ ವಿನೋದಪ್ರಿಯರು; 'ನಕ್ಕುನಗಿಸುವ ನುಡಿ ಲೇಸು' ಎಂಬ ಉಕ್ತಿ ಅವರ ಮಾತುಕತೆಯಲ್ಲಿ ಜೀವಂತ ನಿದರ್ಶನಕ್ಕೆ ಬರುತ್ತಿತ್ತು. ಸಂಭಾಷಣ ಚತುರರಾದ ಅವರು ಸಂಭಾಷಣೆಯ ಗೋಷ್ಠಿಗಳಲ್ಲಿ ಯಾವಾಗಲೂ ಅನಧಿಕೃತ ಅಧ್ಯಕ್ಷರು. ಅಂಥಲ್ಲಿ ಅವರದ್ದು dominating personality ಆದರೂ ಎಂದೂ domineering ಅಲ್ಲ.

ಅವರು ಎಂದೂ ಸತ್ಯನಿಷ್ಠುರರಾಗಿದ್ದರು. ಅಪ್ರಿಯವಾದ ಸತ್ಯವನ್ನು ನುಡಿಯಬೇಕಾದಲ್ಲಿ ಮೌನವೇ ಅವರ ವ್ರತ. ತಮಗೆ ಮೆಚ್ಚುಗೆಯಾಗದ ಸಾಹಿತ್ಯ ರಚನೆಯ ಬಗೆಗೆ ಅನಿವಾರ್ಯವಾಗಿ ಅಭಿಪ್ರಾಯ ವ್ಯಕ್ತಪಡಿಸಬೇಕಾಗಿ ಬಂದಾಗಲೂ, ಒಂದೇ ಮಾತಿನಲ್ಲಿ ಧ್ವನಿಪೂರ್ಣವಾಗಿ ತೇಲಿಸಿ ನುಡಿದುಬಿಡುತ್ತಿದ್ದರು; ಮೆಚ್ಚುಗೆಯಾದ ಕೃತಿಯ ಬಗೆಯೂ ವಾಗಾಡಂಬರದ ಪ್ರಶಂಸೆಗೆ ಅವರ ವಿಮರ್ಶಾಬುದ್ಧಿ ಸೋಲುತ್ತಿರಲಿಲ್ಲ. 'ಸಮಾಲೋಕನ' ದಲ್ಲಿ ಅಚ್ಚಾಗಿರುವ ವಿಮರ್ಶೆಗಳನ್ನು ಓದಿದರೆ ಈ ಅಂಶ ಮನವರಿಕೆಯಾಗುತ್ತದೆ. ೧೯೩೨ರಲ್ಲಿ, ರಜತೋತ್ಸವ ಸುವರ್ಣ ಪದಕದ ಸ್ಪರ್ಧೆಗೆಂದು ಸರಳರಗಳೆಯಲ್ಲಿ ಸುಮಾರು ೧೫೦ ಸಾಲುಗಳ ಒಂದು ಕವನ ರಚಿಸಿ, ಅವರ ಅವಲೋಕನಕ್ಕೆ ಕೊಟ್ಟೆ. 'ಗದ್ಯದ ವಾಕ್ಯಗಳನ್ನು ಪಾದಗಳಾಗಿ ವಿಂಗಡಿಸಿ ಬರೆದರೆ 'ಸರಳ ರಗಳೆ' ಆಗುತ್ತದೆಯೆ? ಇದನ್ನು ಸ್ಪರ್ಧೆಗೆ ಕಳುಹಿಸಬೇಡ' ಎಂದು ಬಿಟ್ಟರು. ನನಗೆ ನಿರಾಶೆಯೇನೋ ಆಯಿತು; ಅದೇ ನಿರಾಶೆ ಪುನಃ ಪ್ರಯತ್ನಕ್ಕೆ ಪ್ರಚೋದನೆಯೂ ಆಯಿತು ಯಾರೂ ನಂಬಲಾಗದ ಒಂದು ಕೆಲಸ ಮಾಡಿದೆ : ಸರಳರಗಳೆಯ ಸಾಲುಗಳನ್ನು ಹೆಚ್ಚು ಕಡಮೆ ಅರ್ಧ ಅರ್ಧವಾಗಿ ಕತ್ತರಿಸಿ, ಅಲ್ಲಲ್ಲೆ ಅಂತ್ಯಪ್ರಾಸದ ಅಲಂಕಾರ ಮಾಡಿ, ಸುಮಾರು ೩೦೦

ಸಾಲುಗಳ ಪದ್ಯವನ್ನು ಮತ್ತೆ ಅವರ ಮುಂದಿಟ್ಟೆ. ಈ ಪದ್ಯ ಕಳುಹಿಸಬಹುದು ಎಂದು ಅನುಮೋದಿಸಿದರು. 'ಅದೇ ಪದ್ಯ ಇದು' ಎಂದಾಗ ಅವರೂ ಅಚ್ಚರಿಪಟ್ಟರು. (ಪದ್ಯಕ್ಕೆ ಸ್ವರ್ಣಪದಕವೂ ಲಭಿಸಿತು) 'ಕಳಿಸಬೇಡ' – 'ಕಳಿಸು' ಈ ಎರಡು ಮಾತುಗಳಲ್ಲಿ ಅಡಗಿತ್ತು, ಅವರ ಕವಿತಾ ವಿಮರ್ಶೆ.

ಅಂಥ ಅಭಿಮಾನಕ್ಕೆ ಅವರು ಎಂದೂ ಬಲಿಯಾದವರಲ್ಲ. ಬಿ.ಎಂ.ಶ್ರೀ. ಯವರ ಸುಧಾರಿತ ಲಿಪಿಯ ಬಗೆಗೆ ಅವರಿಗೆ ಅಷ್ಟೇನೂ ಉತ್ಸಾಹವಿರಲಿಲ್ಲ. ಭಾರತಕ್ಕೆಲ್ಲಾ ಒಂದು ಲಿಪಿ ಇರಬೇಕೆಂಬ ಬಗೆಗೆ, ದೇವನಾಗರಿ ಲಿಪಿಗಿಂತ (ನೆಹರೂರವರು ಅಭಿಪ್ರಾಯಪಟ್ಟಂತೆ) ರೋಮನ್‌ಲಿಪಿಯೆ (ಅದು ಅಶಾಸ್ತ್ರೀಯವಾದರೂ) ಅನುಕೂಲವೆಂದು ಅವರ ನಿಲುವು. ಅವರು ಬೆಂಗಳೂರಿನಲ್ಲಿದ್ದಾಗ, ಕನ್ನಡ ಟೈಪ್‌ರೈಟರ್ ನಿರ್ಮಾಣಕ್ಕೆಂದು ತಿ.ತಾ. ಶರ್ಮರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಏರ್ಪಾಟಾಗಿತ್ತು. ಆ ಸಮಿತಿಯವರು ಎರಡು ಸುಧಾರಣೆಗಳನ್ನು ಮಾತ್ರ ಸಲಹೆ ಮಾಡಿದ್ದರು. ಅವುಗಳ ವಿರುದ್ಧ ತಜ್ಞರೂ ಅಜ್ಞರೂ ಏಕ ಪ್ರಕಾರವಾಗಿ ಪತ್ರಿಕೆಗಳಲ್ಲಿ ಪ್ರತಿಭಟಿಸತೊಡಗಿದ್ದರು. 'ಶ್ರೀ'ಯವರ ಲಿಪಿ ಸುಧಾರಣೆಯ ಆಧಾರದ ಮೇಲೆ ನಾನು ಯೋಜನೆ ಮಾಡಿದ್ದ ಕೀ ಬೋರ್ಡನ್ನು ತೀ.ನಂ.ಶ್ರೀ.ಯವರಿಗೆ ವಿವರಿಸಿದೆ. ಅವರೂ ಕೂಡ ಲಿಪಿ ಸುಧಾರಣೆಗೆ ವಿರುದ್ಧವಲ್ಲದಿದ್ದರೂ ಬೆಂಬಲವಾಗಿರಲಿಲ್ಲ. ಟೈಪ್‌ರೈಟರ್‌ಗೆ ಅಗತ್ಯವಾದ ವೇಗಲಾಭದ ದೃಷ್ಟಿಯಿಂದ ಶರ್ಮ ಸಮಿತಿಯ ಕೀ ಬೋರ್ಡಿಗಿಂತ ನನ್ನದು ಮೇಲೆಂದು ಅವರಿಗೆ ಅದರ ರಚನಾ ವಿಧಾನಗಳನ್ನೆಲ್ಲಾ ವಿವರಿಸಿದ ಮೇಲೆ, 'ಕನ್ನಡ ಒತ್ತಕ್ಷರಗಳು ಹೋದರೆ ಹೋಗಲಿ. ನಮಗೆ ಬೇಕಾದ್ದು ರೋಮನ್‌ಲಿಪಿಯ ಸೌಕರ್ಯ, ವೇಗ' ಎಂದು ನನ್ನ ಕೀಬೋರ್ಡ್ ಪದ್ಧತಿಯನ್ನು ಅನುಮೋದಿಸಿದರು. ಮಾತ್ರವಲ್ಲ, ಈ ಬಗೆಗೆ ಪರಿಷತ್ತಿನಲ್ಲಿ ಕರೆದಿದ್ದ ವಿಚಾರ ಗೋಷ್ಠಿಯಲ್ಲಿ, ಅನಾರೋಗ್ಯದ ಪ್ರಯುಕ್ತ ಹೆಚ್ಚು ಮಾತನಾಡಲಾರದವನಾಗಿದ್ದ ನನ್ನ ಪರವಾಗಿ ಎದ್ದು ನಿಂತು, ನನ್ನ ಕೀಬೋರ್ಡಿನ ಸಾಧಕ ಬಾಧಕಗಳನ್ನು ಕಪ್ಪು ಹಲಗೆಯ ನೆರವಿನಿಂದ ನೆರೆದಿದ್ದವರಿಗೆ ವಿವರಿಸಿ ತಿಳಿಸಿದರು. 'ಈ ಕೀಬೋರ್ಡಿಗೆ ನಿಮ್ಮ ಬೆಂಬಲ ಇದೆಯೆ?' ಎಂದು ಯಾರೋ ಕೇಳಿದಾಗ, 'ಸಾಧಕಬಾಧಕಗಳನ್ನು ವಿವರಿಸಿದ್ದೇನೆ. ಅಂಗೀಕರಿಸಬೇಕಾದವರು ನೀವು, ನಾನಲ್ಲ' ಎಂದು ಮುಗುಳ್ನಗೆ ಬೀರುತ್ತ ನುಡಿದರು. ನನ್ನ ಮೇಲೆ ತುಂಬ ಅಭಿಮಾನ ಅವರಿಗೆ; ಹಾಗೆಂದು, ತಾವು ಸಂಪೂರ್ಣವಾಗಿ ಒಪ್ಪದ ವಿಷಯದಲ್ಲಿ ಪ್ರಕಟವಾಗಿ, ಅಂತಿಮವಾಗಿ, ಬೆಂಬಲವನ್ನು ವ್ಯಕ್ತಪಡಿಸಲು ಅವರು ಸಿದ್ಧರಾಗಿರಲಿಲ್ಲ. 'ಯಾವ ಸುಧಾರಣೆಯೂ ಇಲ್ಲದೆ ವೇಗವನ್ನು ನೀಡುವ ಕೀಬೋರ್ಡು ಬೇಕು. ಅದು ಸಾಧ್ಯವಿಲ್ಲವೋ, ರೋಮನ್ ಲಿಪಿ ಅಂಗೀಕರಿಸೋಣ' – ಇದು ಅವರ ನಿಲುವು.

ಮೊದಲಿನಿಂದಲೂ ತೀ.ನಂ.ಶ್ರೀ. ಅವರಿಗೆ ವ್ಯಾಕರಣದಲ್ಲಿ ಒಲವು, ಅಭಿಮಾನ ; ವ್ಯಾಕರಣದ ಸೂತ್ರಗಳನ್ನು ಅನುಸರಿಸಿಯೂ ಭಾಷಾಶೈಲಿಗಳಲ್ಲಿ ಸೊಗಸನ್ನು ಸಾಧಿಸಬೇಕೆಂಬುದೇ ಅವರ ಆದರ್ಶ. ಅದು ಅವರ ಬರವಣಿಗೆಗಳಲ್ಲಿ ಸಿದ್ಧಿಪಡೆದಿರುವುದನ್ನು ಸಹೃದಯರೆಲ್ಲ ಕಾಣಬಹುದು. ವ್ಯಾಕರಣಕ್ಕಾಗಿ ಜೀವವನ್ನು ತೆಯ್ದವರು ದಿವಂಗತ ಕಾನಕಾನಹಳ್ಳಿ ವರದಾಚಾರ್ಯರು; ಭಟ್ಟಾಕಲಂಕನ 'ಶಬ್ದಾನುಶಾಸನ'ದ ಮೇಲೆ ವ್ಯಾಖ್ಯಾನ ಗ್ರಂಥ ಬರೆಯಬೇಕೆಂಬ ಹೇರಾಸೆ

ಇಟ್ಟುಕೊಂಡಿದ್ದರು ಅವರು. ವರದಾಚಾರ್ಯರು ಅವರ ಗುರುಗಳು (ಒಂದುವರ್ಷ ಮಾತ್ರ ನನ್ನ ಗುರುಗಳೂ ಆಗಿದ್ದರು; ನನ್ನ ಪುಣ್ಯ); ಅವರ ವ್ಯಾಕರಣ ನಿಷ್ಠೆಯಲ್ಲಿ ತೀ.ನಂ.ಶ್ರೀ. ಅವರಿಗೆ ತುಂಬ ಗೌರವ; ಗುರು ಒಮ್ಮೆ ರುಗ್ಣಶಯ್ಯೆಯಲ್ಲಿ ಮಲಗಿದ್ದಾಗ ತೀ.ನಂ.ಶ್ರೀ. ಅವರ ಯೋಗಕ್ಷೇಮ ಆರೈದು ಬರಲು ಅವರನ್ನು ಸಂದರ್ಶಿಸಿದ್ದರು. ಆ ಸಂದರ್ಶನದ ಪರಿಣಾಮ ಫಲವೇ ತೀ.ನಂ.ಶ್ರೀ. ಅವರ 'ವೈಯಾಕರಣನ ಶಯ್ಯೆಯ ಬಳಿ' ಎಂಬ ಹೃದಯವನ್ನು ಮಿಡಿಯುವ ಕವನ. ತೀ.ನಂ.ಶ್ರೀ. ಯವರ ವ್ಯಾಕರಣ ಪ್ರೇಮದ ಇನ್ನೊಂದು ಫಲ, ಅವರ 'ಕನ್ನಡ ಮಧ್ಯಮ ವ್ಯಾಕರಣ.' ಇದು ಹೆಸರಿಗೆ ಮಧ್ಯಮ ವ್ಯಾಕರಣ; ಪ್ರೌಢ ವಿದ್ಯಾರ್ಥಿಗಳಿಗೂ ಉಪಯುಕ್ತವಾದ, ವ್ಯಾಕರಣ ವಿಷಯ ನಿಬಿಡವಾದ, ಸ್ವಂತವಾಗಿ ಕಲ್ಪಿಸಿದ ಸ್ವಾರಸ್ಯವಾದ ಉದಾಹರಣೆಗಳಿಂದ ಇಡಿಕಿರಿದಿರುವ, ಸಾರವತ್ತಾದ ಪಠ್ಯಗ್ರಂಥ. ತೀ.ನಂ.ಶ್ರೀ. ಯವರ ವ್ಯಾಕರಣ ಪ್ರೇಮವೇ ಅವರನ್ನು 'ಧ್ವನಿವಿಜ್ಞಾನ' (Phonetics) ಮತ್ತು 'ಭಾಷಾವಿಜ್ಞಾನ' (Linguistics) ಕ್ಷೇತ್ರಗಳಿಗೆ ಕೊಂಡೊಯ್ದದ್ದು. ಅವರು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರಾಗಿದ್ದಾಗ ಅಲ್ಲಿನ ಪುಸ್ತಕ ಭಂಡಾರಕ್ಕೆ ಹಲವು ಭಾಷಾವಿಜ್ಞಾನದ ಪುಸ್ತಕಗಳನ್ನು ತರಿಸಬೇಕೆಂದು ಯೋಚಿಸಿದ್ದರು; ಹಣ ಸಾಲದೆ, ಯೋಚನೆ ಕಾರ್ಯಗತವಾಗಲಿಲ್ಲ. ಆದರೂ, ಈ ಕ್ಷೇತ್ರಗಳಲ್ಲಿ ಅವರು ಈ ಹೊತ್ತಿಗೆ ಸಾಕಷ್ಟು ಸ್ವತಂತ್ರ ವ್ಯಾಸಂಗ ನಡೆಸಿದ್ದರು. ಅದೇ ಕಾಲದಲ್ಲಿ, ದ್ರಾವಿಡ ಭಾಷೆಗಳಿಗೆ ಸಂಬಂಧಪಟ್ಟಂತೆ ಭಾಷಾವಿಜ್ಞಾನ ವಿಷಯಗಳಲ್ಲಿ ಪ್ರತ್ಯಕ್ಷ ಪರಿಶೀಲನೆಗಾಗಿ ಲಂಡನ್ನಿನಿಂದ ಬಂದಿದ್ದ Miss Evans ಎಂಬಾಕೆಗೆ ಕನ್ನಡ ಭಾಷೆಯ ಧ್ವನಿಶಾಸ್ತ್ರದ ಶಿಕ್ಷಕರಾಗಿದ್ದುಕೊಂಡು, ನನ್ನನ್ನು ಆಕೆಗೆ ಒಬ್ಬ 'Informant' ಆಗಿ (ತಿಳಿವಳಿಕೆ ನೀಡುವವನು) ನಿಯೋಜಿಸಿ ಕೊಟ್ಟಿದ್ದರು. ಈ ಹೊತ್ತಿಗಾಗಲೇ ತೀ.ನಂ.ಶ್ರೀ. ಯವರು ಭಾಷಾ ವಿಜ್ಞಾನದ ಬೆಳಕಿನಲ್ಲಿ ಕನ್ನಡ ವ್ಯಾಕರಣದ ಕೆಲವು ವಿಚಾರಗಳ ಮೇಲೆ ಇಂಗ್ಲಿಷಿನಲ್ಲಿ ಲೇಖನ ಗಳನ್ನು ಬರೆದು, ದಕ್ಷಿಣ ಭಾರತದ ಭಾಷಾವಿಜ್ಞಾನ ವ್ಯಾಸಂಗ ಕೇಂದ್ರಗಳಲ್ಲಿ ಸುಪರಿಚಿತರಾಗಿದ್ದರು. ಭಾಷಾವಿಜ್ಞಾನದಲ್ಲಿ ಅವರು ಪಡೆದಿದ್ದ ಪಾಂಡಿತ್ಯದ ಬಗೆಗೆ ಬರೆಯಲು ನಾನು ಅಷ್ಟಾಗಿ ಅಧಿಕಾರಿಯಲ್ಲ. ಭಾಷಾವಿಜ್ಞಾನದ ಮೇಲೆ ಅವರಿಗಿದ್ದ ಅಭಿಮಾನ ಮಾತ್ರ – ಈಚೆಗಂತೂ – ಅಪಾರವಾಗಿತ್ತು. ಆದರೆ, ಆ ಅಭಿಮಾನ ಅವರ ಯಥಾರ್ಥ ದೃಷ್ಟಿಯನ್ನು ಮಸುಕು ಮಾಡಲಿಲ್ಲವೆಂಬುದನ್ನು ಒತ್ತಿಹೇಳಲು ಈ ಸಂಗತಿಯನ್ನು ಇಷ್ಟು ಲಂಬಿಸಬೇಕಾಯಿತು. ಮೊನ್ನೆ ಮೈಸೂರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಅಣ್ಣಾಮಲೈ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ನಡೆದ ಕನ್ನಡ ವ್ಯಾಕರಣ ವಿಷಯಕವಾದ ವಿಚಾರ ಗೋಷ್ಠಿಯಲ್ಲಿ ಕಡೆಯ ದಿನ ಅವರು ಸಮಾರೋಪ ಭಾಷಣದಲ್ಲಿ ಪಾಲ್ಗೊಳ್ಳುತ್ತ, "ಪಾಶ್ಚಾತ್ಯ ದೇಶಗಳಲ್ಲಿ ಭಾಷಾವಿಜ್ಞಾನ ಭಾಷಾಪಂಡಿತರಿಗೆ ಕೂಡ ಅರ್ಥವಾಗದ ಪ್ರೌಢತಮ ಗಣಿತ ಶಾಸ್ತ್ರದಂತಾಗುತ್ತಿದೆ. ಇದು ಯಾವ ದೇವರಿಗೆ ಪ್ರೀತಿ? ಕನ್ನಡ ಭಾಷೆಯ ಸ್ವರೂಪವನ್ನು ಐತಿಹಾಸಿಕವಾಗಿ ವಿವರಣಾತ್ಮಕವಾಗಿ ಅರಿಯಲು ಎಷ್ಟು ಅವಶ್ಯವೋ ಅಷ್ಟನ್ನು ನಾವು ರೂಢಿಸಿಕೊಂಡರೆ ಸಾಕು" ಎಂಬ ಅರ್ಥಬರುವಂತೆ ಮಾತಾಡಿದರು. ಹೊಸ ಹುರುಪಿನ ಭಾಷಾವಿಜ್ಞಾನದ ವಿದ್ಯಾರ್ಥಿಗಳು ಈ ಅಭಿಪ್ರಾಯವನ್ನು ಒಪ್ಪದಿರಬಹುದು. ಲಿಪಿ ಸುಧಾರಣೆಯೇ

ಆಗಲಿ, ಭಾಷಾವಿಜ್ಞಾನವೇ ಆಗಲಿ, ಯಾವ ವಿಷಯವೇ ಆಗಲಿ, ಆ ಬಗೆಗೆ ತೀ.ನಂ.ಶ್ರೀ.ಯವರ ಅರ್ಥನಿಷ್ಠ ದೃಷ್ಟಿ (Pragmatism) ಯನ್ನು ಎತ್ತಿ ತೋರಿಸುವುದಕ್ಕಾಗಿ ಈ ಪ್ರಸ್ತಾಪ.

ತೀ.ನಂ.ಶ್ರೀ.ಯವರ ವ್ಯಕ್ತಿತ್ವವನ್ನು ನನ್ನ ಕೆಲವು ದೃಷ್ಟಿಕೋನಗಳಿಂದ ಪರಿಚಯಮಾಡಿಕೊಡುವುದಷ್ಟೆ ಈ ಲೇಖನದ ಉದ್ದೇಶ; ಅವರ ಅಮೂಲ್ಯವಾದ ಸಾರಸ್ವತ ಸೇವೆಯನ್ನು ಪರಿಚಯ ಮಾಡಿಕೊಡುವುದಲ್ಲ, ಅದಕ್ಕೆ ಪ್ರತ್ಯೇಕವಾದ ಅವಕಾಶಮಾಡಿಕೊಳ್ಳಬೇಕು. ಅವರ ಅಕಾಲಿಕ ನಿಧನದಿಂದ ಕನ್ನಡ ಸಾಹಿತ್ಯ ಲೋಕಕ್ಕೆ ಆಗಿರುವ ನಷ್ಟವನ್ನು ಹೇಗಾದರೂ ಅಳೆಯಬಹುದೇನೊ; ಆದರೆ, ಅವರ ಕುಟುಂಬ ವರ್ಗಕ್ಕೂ ಆಪ್ತ ವೃಂದಕ್ಕೂ ಆಗಿರುವ ನಷ್ಟವನ್ನು, ಶೋಕವನ್ನು ಅಳೆಯಲು ಸಾಧ್ಯವಿಲ್ಲ.

(ಈ ಲೇಖನ ಲೇಖಕರ 'ಪ್ರತಿಮಾಗೃಹ' ಪುಸ್ತಕದಲ್ಲಿ ಸೇರ್ಪಡೆಯಾಗಿದೆ)

ನಮ್ಮ ತೀ.ನಂ.ಶ್ರೀ.

ಟಿ. ಪಾರ್ವತಿ, ಬಿ.ಎ. (ಮೂರನೇ ವರ್ಷ)

ಈ ಲೇಖನದ ಶೀರ್ಷಿಕೆಯನ್ನು ನೋಡಿದೊಡನೆಯೇ ಓದುಗರಿಗೆ ಆಶ್ಚರ್ಯವಾಗಬಹುದು, "ನಮ್ಮ ತೀ.ನಂ.ಶ್ರೀ." ಎಂದು ಹೇಳಿಕೊಂಡವರಾರೆಂದು. ಅಂದರೆ ನಾನು ತೀ.ನಂ.ಶ್ರೀ. ನಮ್ಮ ಸೋದರ ಮಾವನವರೆಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ. ಈಗ ಅವರ ಹೆಸರಿನ ಹಿಂದೆ ದಿವಂಗತ ಎಂದು ಸೇರಿಸಲು ಸಂಕಟವಾಗುತ್ತದೆ. ಇದು ನಂಬಲಸಾಧ್ಯವಾದ ಸುದ್ದಿಯಾದರೂ ನಂಬಲೇ ಬೇಕಾಗಿದೆ. ನನಗೆ ತೀ.ನಂ.ಶ್ರೀ. ಯವರ ಈಚಿನ ಜೀವನದ ಪರಿಚಯವಿರುವುದೇ ವಿನಾ ಹಿಂದೆ ನಾನು ಹುಟ್ಟುವ ಮುಂಚಿನ ಅವರ ವಿಚಾರ ತಿಳಿದಿರಲಿಲ್ಲ. ಆದರೂ ನಮ್ಮ ತಂದೆ ಮತ್ತು ಇತರ ಹಿರಿಯರಿಂದ ಮಾವಯ್ಯನವರ ವಿಚಾರವನ್ನು ಸಂಗ್ರಹಿಸಿ ನನಗೆ ತಿಳಿದ ರೀತಿಯಲ್ಲಿ ಇದನ್ನು ಓದುಗರ ಮುಂದಿಡಲು ಅಪೇಕ್ಷಿಸುತ್ತೇನೆ.

ನಮಗೆ ಶ್ರೀಕಂಠ ಮಾವಯ್ಯ ಮನೆಗೆ ಬರುವರೆಂದು ತಿಳಿದರೆ ಏನೋ ಒಂದು ಹೆಮ್ಮೆ, ಒಂದು ಸಡಗರ. ನಮಗೆಲ್ಲಾ ಅದು ಬಲು ಸಂತೋಷದ ದಿನ. ನಾವು ಅವರಲ್ಲಿಗೆ ಹೊರಟರೆ ಅಲ್ಲಿ ನಮಗೆ ಸಿಗುವ ಹಾಸ್ಯದಿಂದ ಕೂಡಿದ ಸಂತೋಷ ಬಲು ರುಚಿ, ಹಿತ.

ನಮ್ಮ ತೀ.ನಂ.ಶ್ರೀ. ೧೯೦೬ರಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ತೀರ್ಥಪುರ ಎಂಬ ಗ್ರಾಮದಲ್ಲಿ ಜನಿಸಿದರು. ಶ್ಯಾನುಭೋಗ ನಂಜುಂಡಯ್ಯನವರ ಏಕಮಾತ್ರ ಪುತ್ರರು. ಇವರು ಚಿಕ್ಕ ಹುಡುಗನಾಗಿದ್ದಾಗ ಬಹಳ ತುಂಟತನ ಮಾಡುತ್ತಿದ್ದರಂತೆ. ತಮ್ಮ ಆರನೆ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ ಇವರನ್ನು ಸೋದರತ್ತೆಯವರು ಪ್ರೀತಿಯಿಂದ ಸಾಕಿದರು.

*

ನಮ್ಮನ್ನಾಳುತ್ತಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ತೀ.ನಂ.ಶ್ರೀ. ಯವರ ವಿದ್ವತ್ತು, ಪ್ರತಿಭೆ, ಜಾಣ್ಮೆ, ಪಾಠಹೇಳುವ ಕ್ರಮ ಇವುಗಳಿಗೆ ಮಾರುಹೋಗಿ, ಇವರಿಂದಲೇ ತಮಗೆ ಕನ್ನಡ ಪಾಠ ಪ್ರವಚನವಾಗಬೇಕೆಂದು ಸಂಕಲ್ಪಿಸಿ ಸುಮಾರು ಮೂರು ವರ್ಷಗಳ ಪರ್ಯಂತ ವಿದ್ಯಾದಾನ ಪಡೆದರೆಂದು ತಿಳಿಯಬರುತ್ತದೆ.

ತೀ.ನಂ.ಶ್ರೀ. ಯವರನ್ನು ನಾವು 'ಪ್ರೀತಿಯ ಮೂರ್ತಿ' ಎಂದು ಕರೆಯಬಹುದು. ಅವರಿಗೆ ತಮ್ಮ ಹುಟ್ಟೂರಾದ ತೀರ್ಥಪುರದ ಮೇಲೆ ಬಲು ಪ್ರೀತಿ. ಒಮ್ಮೆ ತಮ್ಮ ಸ್ನೇಹಿತರ ಜೊತೆಯಲ್ಲಿ ಹೂ ಕುಯ್ಯಲು ತಮ್ಮ ತೋಟಕ್ಕೆ ಹೋಗಿದ್ದಾಗ ಅಲ್ಲಿನ ಪಾರಿಜಾತ ಗಿಡವನ್ನು ಕಂಡು

ಮನಸ್ಸಿಗೇ ಏನೋ ಹೊಳೆದು ಅಲ್ಲೇ ಕುಳಿತು "ಪಾರಿಜಾತ" ಕವನವನ್ನು ಬರೆದರಂತೆ. ತೀ.ನಂ.ಶ್ರೀ. ಗೆ ಸರ್ವರಲ್ಲೂ ಪ್ರೀತಿ. ಸ್ನೇಹಿತರಿಗಾಗಿ ತಮ್ಮ ಪ್ರಾಣವನ್ನೇ ಪಣವನ್ನಾಗಿಡುತ್ತಿದ್ದರು. ಮಕ್ಕಳನ್ನು ಕಂಡರೆ ಅವರಿಗೆ ಪಂಚಪ್ರಾಣ. "ಕೂಸಿದ್ದ ಮನೆಗೆ ಬೀಸಣಿಗೆ ಯಾತಕ್ಕೆ?" ಎಂಬ ಕವನ ಅವರಿಗೆ ಮಕ್ಕಳ ಮೇಲಿದ್ದ ಮಮತೆಯನ್ನು ಎತ್ತಿ ತೋರಿಸುತ್ತದೆ. ಯಾವಾಗಲೂ ಮಕ್ಕಳನ್ನೇ ಆಗಲಿ ಯಾರನ್ನೇ ಆಗಲಿ ನಗುನಗುತ್ತ ಮಾತನಾಡಿಸುವುದು ಅವರ ಹುಟ್ಟುಗುಣ ವೆನ್ನಬಹುದು. ಒಂದು ಸಾರಿ ನಾನು ಅವರ ಮಗಳ ಮದುವೆಗೆ ಹೋಗಿದ್ದಾಗ ನನ್ನನ್ನು ಅವರು ಕರೆದು ಕುಳಿತುಕೊಳ್ಳಲು ಹೇಳಿದರು. ನಾನು ಅವರ ಕುರ್ಚಿಯ ಪಕ್ಕಕ್ಕೆ ಒಂದು ಕುರ್ಚಿಯನ್ನೆಳೆದುಕೊಂಡು ಕುಳಿತರೆ ತಕ್ಷಣ ನನ್ನನ್ನು ಎತ್ತಿ ತಮ್ಮ ತೊಡೆಯ ಮೇಲೆ ಕುಳ್ಳಿರಿಸಿ ಕೊಂಡು ಪ್ರೀತಿಯಿಂದ ತಲೆ ನೇವರಿಸಿದ್ದನ್ನು ನನ್ನ ಈ ಜನ್ಮದಲ್ಲಿ ಮರೆಯಲಾರೆ. ಮಾತಿನಲ್ಲಿ ಬಲು ಹಾಸ್ಯ, ಮೃದು, ಮಧುರ. ತೀ.ನಂ.ಶ್ರೀ. ತಮ್ಮ ಪತ್ನಿಯ ಮನಸ್ಸಿಗೆ ಕೊಂಚವೂ ನೋವಾಗದಂತೆ ನೋಡಿಕೊಳ್ಳುತ್ತಿದ್ದರು.

ತೀ.ನಂ.ಶ್ರೀ. ಒಬ್ಬ ದೊಡ್ಡ ತ್ಯಾಗಿ ಎಂಬುದರಲ್ಲಿ ಕೊಂಚವೂ ಸಂಶಯವಿಲ್ಲ. ತೀ.ನಂ.ಶ್ರೀ. ಮತ್ತು ಅವರ ತಂಗಿ ಇಬ್ಬರೇ ಒಟಹುಟ್ಟಿದವರು. ತಮ್ಮ ತಂಗಿಗಾಗಿ ಅವರು ತಮ್ಮ ಜೀವನ ಪರ್ಯಂತ ಮಾಡಿದ ತ್ಯಾಗ ಅಸೀಮವಾದದ್ದು. ತಮ್ಮ ತಂಗಿಯ ಮೇಲಿನ ಪ್ರೀತಿಗಾಗಿ ಅವರು "ದಂತದ ಬಾಚಣಿಗೆ" ಕವನವನ್ನು ರಚಿಸಿದ್ದಾರೆ. ತಮ್ಮ ಒಬ್ಬಳೇ ತಂಗಿಯನ್ನು ಬಹಳ ಅದ್ದೂರಿಯಿಂದ ಮದುವೆ ಮಾಡಿಕೊಟ್ಟರು. ಕೆಲವು ಕಾಲ ತಂಗಿಯ ಸುಖದ ಸಂಸಾರವನ್ನು ನೋಡಿ ಆನಂದಿಸಿದರು. ಆದರೆ ಆ ಪರಮಾತ್ಮನಿಗೆ ಈ ಸಂತೋಷವನ್ನು ನೋಡಿ ಸಹಿಸಲಾಗಲಿಲ್ಲವೋ ಏನೋ? ಆಕೆಗೆ ಒಂದು ಗಂಡು ಮಗು ಹುಟ್ಟಿತು. ಅದು ಬಹು ಮುದ್ದಾಗಿದ್ದಿತು. ವಯಸ್ಸಿಗೆ ಮೀರಿದ ಬೆಳವಣಿಗೆ, ಆಟ, ಪಾಠ. ಇಂತಹ ಸಂಸಾರಕ್ಕೆ ಇದ್ದಕ್ಕಿದ್ದಂತೆ ಒಂದು ಸಿಡಿಲು ಬಡಿಯಿತು. ಮಗುವಿಗೆ ಬಹಳ ಕಾಯಿಲೆಯಾಯಿತು. ತಕ್ಷಣ ಮೈಸೂರಿನಿಂದ ಓಡಿ ಬಂದ ತೀ.ನಂ.ಶ್ರೀ. ತಂಗಿಯನ್ನೂ ಮಗುವನ್ನೂ ಕರೆದುಕೊಂಡು ಹೋಗಿ ಮಾಡಬಹುದಾದಷ್ಟನ್ನೂ ಮಾಡಿದರು. ಆದರೆ ಆ ಮಗು ಉಳಿಯುವುದು ದೇವರ ಇಚ್ಛೆಯಲ್ಲಿರಲಿಲ್ಲ. ಆ ಹೂವು ದೇವರ ಪಾದದಲ್ಲಿ ಹೋಗಿ ಸೇರಿಬಿಟ್ಟಿತು. ಆ ಮಗುವನ್ನೇ ನೆನೆಯುತ್ತಾ ತಾಯಿಗೆ ಬುದ್ಧಿಭ್ರಮಣೆಯಾಯಿತು. ಇದರಿಂದ ಶ್ರೀಕಂಠ ಮಾವನ ಹೃದಯಕ್ಕೆ ಸಹಿಸಲಾರದ ಪೆಟ್ಟು ಬಿದ್ದಿತು. ತಂಗಿಗಾಗಿ ಅವರು ಮಾಡಿದ ತ್ಯಾಗ ಅಷ್ಟಿಷ್ಟಲ್ಲ. ಹಣವನ್ನು ನೀರಿನಂತೆ ಸುರಿದು ಚಿಕಿತ್ಸೆ ಮಾಡಿಸಿದರು. ಆದರೆ ದೇವರ ಕೃಪೆ ಆಕೆಯನ್ನು ಅದೇ ರೀತಿ ಇಟ್ಟುಬಿಟ್ಟಿದೆ.

*

ತೀ.ನಂ.ಶ್ರೀ. ಯವರು ತಾವು ತಮ್ಮ ಪಿತ್ರಾರ್ಜಿತ ಆಸ್ತಿಗೆ ಹಕ್ಕುದಾರರಾಗಿದ್ದರೂ ತಮ್ಮ ಅಣ್ಣಂದಿರಿಗೆ ಹೆಚ್ಚು ಜನ ಮಕ್ಕಳಿರುವುದರಿಂದ ಅಲ್ಪ ಸ್ವಲ್ಪ ಆಸ್ತಿಯನ್ನು ತಾವು ತೆಗೆದುಕೊಂಡು ಎಲ್ಲವನ್ನೂ ಅಣ್ಣಂದಿರಿಗೆ ಬಿಟ್ಟುಬಿಟ್ಟಿದ್ದಾರೆ. ತಮ್ಮ ಅಷ್ಟು ಸ್ವಲ್ಪ ಆಸ್ತಿಯಲ್ಲಿಯೇ ತಮ್ಮ ಪ್ರೀತಿಯ ತಂಗಿಯ ದುರ್ಲಭ ಜೀವನಕ್ಕಾಗಿ ಸ್ವಲ್ಪ ಭಾಗವನ್ನು ಬಿಟ್ಟುಕೊಟ್ಟಿದ್ದಾರೆ!

ತೀ.ನಂ.ಶ್ರೀ. ಎಲ್ಲರೊಡನೆಯೂ ಬಹಳ ಸ್ನೇಹದಿಂದ ವರ್ತಿಸುತ್ತಿದ್ದರು. ತಮ್ಮ ಇಬ್ಬರೇ ಮಕ್ಕಳಾದ (ಕೀರುತಿಗೊಬ್ಬ ಮಗ, ಆರತಿಗೊಬ್ಬ ಮಗಳೆಂಬಂತೆ) ನಾಗರತ್ನ ಮತ್ತು ನಾಗಭೂಷಣ ರನ್ನು ಎರಡು ಕಣ್ಣುಗಳಂತೆ ನೋಡಿಕೊಂಡರು. ಮಗಳ ಮದುವೆಯಲ್ಲಿ ತಾವೇ ಸ್ವತಃ ನಿಂತು ಎಲ್ಲರಿಗೂ ಉಪಚಾರ ಮಾಡಿ ಬಂದವರ ಮನಸ್ಸಿಗೆಲ್ಲಾ ಸಂತೋಷವಾಗುವಂತೆ ನಡೆದುಕೊಂಡರು. ಮಗನ ಮುಂಜಿಯನ್ನು ಮಾಡಿ ಆನಂದಿಸಿದರು. ಮನೆಯಲ್ಲಿ ಅನೇಕ ಹುಡುಗರನ್ನು ಇರಿಸಿಕೊಂಡು ವಿದ್ಯಾದಾನ ಮಾಡಿದರು. ಈಗಲೂ ಕೆಲ ಹುಡುಗರು ಅವರ ಮನೆಯಲ್ಲಿಯೇ ವ್ಯಾಸಂಗ ಮಾಡಿಕೊಂಡಿದ್ದಾರೆ.

ತೀ.ನಂ.ಶ್ರೀ. ಬಹಳ ಸಾಧು ಸ್ವಭಾವದ ಮಾವಯ್ಯ. ಇದನ್ನು ತೋರಿಸಿಕೊಡಲು ಒಂದೇ ಘಟನೆ ಸಾಕು. ಒಂದು ಬಾರಿ ತೀ.ನಂ.ಶ್ರೀ. ತಮ್ಮ ಸ್ನೇಹಿತರಾದ ಟಿ.ಪಿ. ಕೃಷ್ಣಾಚಾರ್ಯರೊಂದಿಗೆ ತೀರ್ಥಪುರಕ್ಕೆ ಹೋಗಿದ್ದಾಗ ಯಾಚಕ ಬ್ರಾಹ್ಮಣರು ಇವರಲ್ಲಿಗೆ ಬಂದಿದ್ದವರು ತಮ್ಮ ಹಣವನ್ನು ಕಳೆದುಕೊಂಡು ಬಿಟ್ಟರು. ಅಲ್ಲಿ ಇದ್ದವರೆಲ್ಲಾ ಸುತ್ತಲಿದ್ದ ಆಳು ಕಾಳುಗಳನ್ನು ನಿಂದಿಸಲು ಪ್ರಾರಂಭಿಸಿದರು. ತಕ್ಷಣ ನಮ್ಮ ಮಾವಯ್ಯ ಅಲ್ಲಿಗೆ ಧಾವಿಸಿ ಬಂದು ಯಾರ ಮನಸ್ಸೂ ನೋಯದಂತೆ ಎಲ್ಲರಿಗೂ ಸಮಾಧಾನ ಹೇಳಿ ತಮ್ಮ ಜೇಬಿನಿಂದ ಆ ಬ್ರಾಹ್ಮಣರು ಕಳೆದು ಕೊಂಡಿದ್ದ ಮೊತ್ತವನ್ನು ಕೊಟ್ಟುಬಿಟ್ಟರು. ಅನಂತರ ಹಣವನ್ನು ಕದ್ದಿದ್ದ ವ್ಯಕ್ತಿ ಯಾರೆಂದು ತಿಳಿದರೂ ಅವರನ್ನು ಶಿಕ್ಷಿಸಲಿಲ್ಲ.

ನಮ್ಮ ಮಾವಯ್ಯನ ಜೀವನದಲ್ಲಿ ಬೇಕಾದಷ್ಟು ಕಷ್ಟಗಳೂ ಬಂದು ಹೋದವು. ಒಂದು ಬಾರಿ ಅಪರೂಪಕ್ಕೆ ಹುಟ್ಟಿದ್ದ ಅನುಪಮ ಸುಂದರಿಯಾದ ಮಗು ವಿಶಾಲಾಕ್ಷಿ ಹದಿನೆರಡು ವರ್ಷಗಳ ಕಾಲ ಉಳಿದಿದ್ದು ತೀರಿಕೊಂಡು ಬಿಟ್ಟಿತು. ಆಗ ಮಗುವಿನ ತಾಯಿ ಸಂಕಟಪಟ್ಟು ಅಳುತ್ತಿರಲು ತೀ.ನಂ.ಶ್ರೀ. ಆಕೆಯನ್ನು ಪಕ್ಕಕ್ಕೆ ಕರೆದು ಕುಳ್ಳಿರಿಸಿಕೊಂಡು ವಿಶ್ವವಿಖ್ಯಾತವಾದ "ಕಿಸಾಗೌತಮಿ" ಕಥೆಯನ್ನು ಹೇಳಿ, ಎಲ್ಲರಿಗೂ ಬಂದದ್ದು ತಮಗೂ ಬಂದಿದೆಯೆಂದು ಸಮಾಧಾನ ಹೇಳುತ್ತಿದ್ದರಂತೆ!

ತೀ.ನಂ.ಶ್ರೀ. ಆದರ್ಶ ಅಧ್ಯಾಪಕರೂ ಆಗಿದ್ದರು. ವ್ಯಾಕರಣ ಪಾಠಮಾಡುವಾಗ ವಿದ್ಯಾರ್ಥಿ ಬೇಜಾರೆಂದು ಕಂಡುಬಂದರೆ ಅವರೆಲ್ಲರಿಗೂ ಕಾಫಿಯನ್ನು ತರಿಸಿಕೊಟ್ಟು ಕೊಂಚ ಹಾಸ್ಯದ ಚಟಾಕಿಗಳನ್ನು ಹಾರಿಸಿ ನಂತರ ಪಾಠವನ್ನು ಮುಂದುವರಿಸುತ್ತಿದ್ದರಂತೆ. ಅವರ ಪಾಠಗಳನ್ನು ಕೇಳುವಾಗ ವಿದ್ಯಾರ್ಥಿಗಳು ತಮ್ಮನ್ನು ತಾವೇ ಮರೆತುಬಿಡುತ್ತಿದ್ದರಂತೆ.

ಮಾವಯ್ಯ ಬಹು ಸರಳ ಜೀವಿ. ಅವರ ಶುಭ್ರವಾದ ಬಟ್ಟೆ ಅವರ ವ್ಯಕ್ತಿತ್ವಕ್ಕೆ ಪ್ರತಿಭೆಯನ್ನು ನೀಡುತ್ತಿತ್ತು. ಶುಭ್ರವಾದ ಬಿಳಿಯ ಕಚ್ಚೆ ಪಂಚೆ, ಒಂದು ಜುಬ್ಬದ ಮೇಲೆ ಮುಚ್ಚು ಕಾಲರಿನ ಕೋಟು. ಕಾಲಿನಲ್ಲಿ ಒಂದು ಜೊತೆ ಚಪ್ಪಲಿ. ಕೈಯಲ್ಲಿ ಕೊಡೆ.

ತೀ.ನಂ.ಶ್ರೀ. ನಿಗರ್ವಿ. ಅಕ್ಕಿಯ ಪದಾರ್ಥಗಳು ಅವರ ಆರೋಗ್ಯಕ್ಕೆ ಹೊಂದಿದ್ದುದರಿಂದ ಅವರು ಚಪಾತಿಯನ್ನು ಉಪಯೋಗಿಸುತ್ತಿದ್ದರು. ಅವರಿಗೆ ರಾಗಿಯ ಮುದ್ದೆಮಾಡಿ ಕೊಂಚ ಬಡಿಸಿದರೆ ಬಹಳ ಸಂತೋಷ.

ನಮ್ಮ ಮಾವಯ್ಯನ ವಿಚಾರವನ್ನು ಇಷ್ಟೆಲ್ಲಾ ಹೇಳಿ ಮುಂದೆ ಅವರ ಅಂತ್ಯವನ್ನು ನುಡಿಯಲು ಕೊರಳು ಕಿವುಚಿದಂತಾಗುತ್ತದೆ. ಆದರೆ ಪ್ರಾರಂಭಿಸಿದ ಮೇಲೆ ಅಂತ್ಯ ಮಾಡಲೇ ಬೇಕು. ತಮ್ಮ ಪತ್ನೀ ಸಮೇತ ಸಂತೋಷದಿಂದ ದೆಹಲಿಗೆ ಹೋಗಿ ಅಲ್ಲಿಂದ ತಮ್ಮ ಪುತ್ರಿಯಿರುವ ರಾಂಚಿಗೆ ಹೋಗಿ ಅಲ್ಲಿ ತಮ್ಮ ಪುತ್ರಿ, ಅಳಿಯ ಮತ್ತು ಮೊಮ್ಮಗಳ ಸುಖ ಸಂತೋಷಗಳಿಂದ ಕೂಡಿದ್ದ ಸಂಸಾರವನ್ನು ಕಂಡು ಆನಂದಿಸಿ, ಎರಡು ದಿನ ಅನುಭವಿಸಿ, ಅನಂತರ ಮಗನನ್ನು ನೋಡಲು ಕಲ್ಕತ್ತೆಗೆ ತೆರಳಿ, ಸ್ನೇಹಿತರ ಮನೆಯಲ್ಲಿ ಮಗ ಮತ್ತು ಪತ್ನಿಯ ಮುಂದೆ ಕುರ್ಚಿಯಲ್ಲಿ ಮಾತನಾಡುತ್ತಾ ಕುಳಿತು ದೈವಾಧೀನರಾದರೆಂದರೆ ಏನೆಂದು ಹೇಳಲಿ? ವಾಪಸು ಬರಲು ಟಿಕೇಟು ಗೊತ್ತುಪಡಿಸಿ ಸ್ನೇಹಿತರಿಗೆ (ಶ್ರೀ ಪು.ತಿ.ನ. ರವರಿಗೆ) ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಸಂಧಿಸಬೇಕೆಂದು ಪತ್ರ ಬರೆದ ಮಾವಯ್ಯ ಮತ್ತೆ ಬಾರದಂತೆ ಕಣ್ಮರೆಯಾದರೆಂದು ಹೇಗೆ ಹೇಳಲಿ? ಅವರು ಬರುವ ಮೊದಲು ಅವರ ಮಗನಿಂದ ಅಸಂಭವವಾದ ಮೃತ್ಯುವಾರ್ತೆ ತಂತಿ ಮೂಲಕ ಗೋಕುಲಾಷ್ಟಮಿಯ ಸಂಜೆ ಬಂದು ತಲುಪಿದಾಗ ನಮಗಾದ ದಿಗ್ಭ್ರಮೆಯನ್ನು ಏನೆಂದು, ಯಾವ ಬಾಯಿಂದ ನುಡಿಯಲಿ?

ಹಾಗಲವಾಡಿ ಪಾಳೆಯಗಾರರಲ್ಲಿ ತೀ.ನಂ.ಶ್ರೀ. ಪೂರ್ವಿಕರು ಮಂತ್ರಿಗಳಾಗಿದ್ದರೆಂದು ತಿಳಿದು ಬರುತ್ತದೆ. ಇವರ ಊರಾದ ತೀರ್ಥಪುರವು ಕಾಡಿನ ಮಧ್ಯೆ ಇದ್ದು ಅಲ್ಲಿಗೆ ಸುಮಾರು ಎರಡು ಮೈಲಿಗಳ ದೂರದಲ್ಲಿ ರಾಮೇಶ್ವರ ವಜ್ರವೆಂಬಲ್ಲಿ ಪಾಳೆಯಗಾರರಿಂದ ಸ್ಥಾಪಿತವಾದ ಒಂದು ಶಿವ ದೇವಸ್ಥಾನವಿದೆ. ಆ ದೇವಸ್ಥಾನದ ಬಳಿ ಒಂದು ಗುಪ್ತಗಾಮಿನಿಯಾದ ಝರಿ ಇದೆ. ಪಾಳೆಯಗಾರರು ಈ ದೇವರ ಸೇವೆಗೆ ಬಂದಾಗ ಇಳಿದುಕೊಳ್ಳಲು ನಿರ್ಮಿಸಲಾಗಿದ್ದ ಸೌಧಗಳ ಕುರುಹುಗಳು ಈಗಲೂ ಇವೆ. ಈ ಗ್ರಾಮದಿಂದ ಈಶಾನ್ಯಕ್ಕೆ ಎರಡು ಮೈಲಿಗಳ ದೂರದಲ್ಲಿ ಸಪ್ತ ಮಾತೃಕೆಯರ ದೇವಸ್ಥಾನವಿದೆ. ಈ ಪುಣ್ಯ ಸ್ಥಳಗಳಿಗೆ ಯಾವಾಗಲೂ ಭಕ್ತಾದಿಗಳು ಬಂದು ಹೋಗುತ್ತಿರುತ್ತಾರೆ. ಇವರದು ಅಲ್ಲಿ ಒಂದೇ ಒಂದು ಬ್ರಾಹ್ಮಣರ ಮನೆ. ಮೇಲ್ಕಂಡ ಪುಣ್ಯ ಸ್ಥಳಗಳ ದರ್ಶನಾಕಾಂಕ್ಷಿಗಳಾಗಿ ಬಂದವರನ್ನು ಇವರ ಮನೆಯಲ್ಲಿ ಊಟೋಪಚಾರ ಮಾಡದೆ ಕಳುಹಿಸುತ್ತಿರಲಿಲ್ಲ.

ಮಾಸ್ತಿ ವಿರಚಿತ "ಮದನಿಂಗನಕಣಿವೆ ಮತ್ತು ...." ತೀರ್ಥಪುರದ ಸಮೀಪದಲ್ಲಿವೆ.

ನಮ್ಮ ದುರದೃಷ್ಟವಶಾತ್ ನಮಗೆ ಮಾವಯ್ಯನ ಅಂತ್ಯದರ್ಶನವೂ ಇಲ್ಲದಂತಾಯಿತು. ಎಲ್ಲ ಬಂಧು ಮಿತ್ರರೂ ತಮ್ಮ ಸ್ವಂತ ಮನೆಯೂ ಇರುವ ಪ್ರೀತಿಯ ನಾಡಾದ ಮೈಸೂರನ್ನು ಬಿಟ್ಟು ದೂರದ ಕಲ್ಕತ್ತೆಗೆ ಹೋಗಿ ಅಲ್ಲಿ ದೇವರ ಕರೆಗೆ ಓಗೊಟ್ಟರು. ಅಷ್ಟು ದೂರಕ್ಕೆ ಹೋಗಿದ್ದರೂ ಅಲ್ಲೂ ಬಹು ಸಂಖ್ಯೆಯಲ್ಲಿ ಸ್ನೇಹಿತರು ಬಂದು ಅವರ ಆತ್ಮಕ್ಕೆ ಶಾಂತಿ ಸಿಗುವಂತೆ ವರ್ತಿಸಿದರು. ಅವರು ಸ್ವಚ್ಛತೆಯನ್ನು ಎಷ್ಟರ ಮಟ್ಟಿಗೆ ಇಚ್ಛಿಸುತ್ತಿದ್ದರೋ ಅದೇ ರೀತಿ ಅವರ ಅಂತ್ಯಕ್ರಿಯೆಗಳೂ ಸ್ವಚ್ಛತೆಯಿಂದಲೇ ಸಾಗಿದುವು. ಅವರ ಪಾರ್ಥಿವ ಶರೀರವು ಒಂದು ದೊಡ್ಡ ಕೋಣೆಯಲ್ಲಿ ವಿದ್ಯುಚ್ಛಕ್ತಿಯಿಂದ ಸಂಪೂರ್ಣಗೊಂಡಿತು.

ಪ್ರೀತಿಯ ಮಾವಯ್ಯ ತೀ.ನಂ.ಶ್ರೀ. ಯವರ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಬೇಡಿಕೆ.

ನಾ ಕಂಡ ತೀ.ನಂ.ಶ್ರೀ.

ಆರಯ್ಯ

●

"The wheel has come full circle"

ನಾನು ತೀ.ನಂ.ಶ್ರೀ. ಯವರನ್ನು ಮೊದಲು ಕರಿಡದ್ದು ಬೆಂಗಳೂರಲ್ಲಿ. ಅದು ಕನ್ನಡದ ನವೋದಯದ ಕಾಲ. "Bliss was it in that dawn to be alive; but to be young was very Heaven!". ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ನಾನೂ ಬಿ.ಎಸ್. ಕೇಶವನ್‌ರವರೂ ಸದಸ್ಯರಾಗಿದ್ದೆವು. ಆಗ ತಾನೇ ಕುವೆಂಪುರವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ಕವಿಗಳ ಪ್ರಥಮ ಸಮ್ಮೇಲನವನ್ನು ನಡೆಸಿದ್ದ ಹಾಗೆ ಜ್ಞಾಪಕ. ಶ್ರೀ ಡಿ.ಆರ್. ರಾಮಯ್ಯ ಮತ್ತು ಶ್ರೀ ದಿನಕರ ದೇಸಾಯಿ ಇವರು ನಮ್ಮ ಪ್ರತಿನಿಧಿಗಳಾಗಿದ್ದರು. ಪೂಜ್ಯ ಗುರುಗಳಾದ ಎ.ಆರ್.ಕೃ. ಅವರು ಸಂತೋಷಕೂಟ ಒಂದರಲ್ಲಿ ಪ್ರತಿಭಾನ್ವಿತ ಕನ್ನಡ ವೀರ ತರುಣರೆಂದು ತೀ.ನಂ.ಶ್ರೀ. ಯವರನ್ನು ನಮಗೆ ಪರಿಚಯ ಮಾಡಿಕೊಟ್ಟರು. ತೀ.ನಂ.ಶ್ರೀ. ಯವರ ಕೊನೆಯ ದರ್ಶನವನ್ನು ಮಾಡಿದ್ದು ಬೆಂಗಳೂರಿನಲ್ಲೇ. ಇಲ್ಲಿಂದ ಡಿಲ್ಲಿಗೆ ಹೋಗಿ ಅಲ್ಲಿ ಶ್ರೀ ಕೇಶವನ್‌ರವರ ಆದರದ ಆತಿಥ್ಯವನ್ನು ಪಡೆದು ಮುಂದಿನ ಯಾತ್ರೆಯನ್ನು ಕೈಗೊಂಡ ರಂತೆ. ನನ್ನ ಮಾನ್ಯ ಮಿತ್ರರಿಬ್ಬರೂ ಸಹೃದಯರು, ಅಂತ್ಯಾಕ್ಷರೀ ಮುಂತಾದ ಕಾವ್ಯಾಮೃತ ರಸಾಸ್ವಾದನೆಯಲ್ಲಿ ಇಬ್ಬರಿಗೂ ಸಮಾನವಾದ ಅಭಿರುಚಿ. ಇಬ್ಬರಲ್ಲೂ ಕಾಡುಹರಟೆ, ಅಶ್ಲೀಲದ ಸೆರಗನ್ನು ಸೋಕುವ ಮನುಷ್ಯ ವ್ಯಾಪಾರಗಳ ಚಿಂತೆ, ಪರರ ನಿಂದೆ, ಆತ್ಮಶ್ಲಾಘನೆ – ಈ ದುರ್ಗುಣಗಳು ಸುಳಿದಾಡುವುದಕ್ಕೂ ಸಾಧ್ಯವಿಲ್ಲ. ಇಬ್ಬರೂ ಮಡಿ ಸ್ವಭಾವದವರು. ತೀ.ನಂ.ಶ್ರೀ. ಯವರು ಶ್ರೀಮದ್ಗಾಂಭೀರ್ಯವನ್ನು ಅತಿಯಾಗಿ ಬೆಳೆಸುತ್ತಿದ್ದಾರೆ ಎಂಬ ನನ್ನ ದೂರಿಗೆ ಶ್ರೀ ಎ.ಎನ್. ಮೂರ್ತಿರಾಯರು ಓಗೊಟ್ಟಿದ್ದರು. ಉನ್ನತ ಪದವಿಗೆ ಏರಿದವರೂ, ಭಾಷಾಶಾಸ್ತ್ರ ದಲ್ಲಿ ಸಮಾನವಾದ ಅಭಿರುಚಿ ಉಳ್ಳವರೂ, ಚಿರಪರಿಚಿತರೂ ಆದವರಾದ್ದರಿಂದ ತೀ.ನಂ.ಶ್ರೀ. ಯವರ ವ್ಯಕ್ತಿತ್ವದ ವಿಚಾರದಲ್ಲಿ ತಮಗೆ ತಿಳಿದ ಅಂಶಗಳನ್ನು ಬರೆದು ಕಳುಹಿಸಬೇಕೆಂದು ನಾನು ಶ್ರೀ ಕೇಶವನ್‌ರವರಿಗೆ ಬರೆದ ಪತ್ರಕ್ಕೆ ಈ ರೀತಿ ಉತ್ತರ ಬಂದಿದೆ: "About the Thinamshree tragedy. I am dumb with shock!". ಆ ಸಿಡಿಲಿನ ಆಘಾತದಿಂದ ಎಚ್ಚರಗೊಳ್ಳಲು ಅವರ ಸ್ನೇಹಿತರಿಗೆ ಹೆಚ್ಚು ಕಾಲಾವಕಾಶ ಬೇಕು. ನನ್ನ ಅನುಭವಕ್ಕೆ ಬಂದ ಕೆಲವು ಘಟನೆಗಳನ್ನು ಮಾತ್ರ ಇಲ್ಲಿ ವಿವರಿಸಲು ಸಾಧ್ಯ.

ತೀ.ನಂ.ಶ್ರೀ.ಯವರು ನಾ ಕಂಡ ಕರ್ಣಾಟಕದಲ್ಲಿ ಮೊದಲನೆಯ ಸಿಂಹ. ಬಾಸ್ವೆಲ್‌ನ ಪರಿಚಯ ಮಾಡಿಕೊಳ್ಳುವುದಕ್ಕೆ ಬಹುವರ್ಷಗಳ ಮುಂಚೆಯೇ ಹೀಗೆ ಸಿಂಹಗಳನ್ನು ಪಳಗಿಸುವುದರಲ್ಲಿ ನನಗೆ ವಿಶೇಷವಾದ ಅಭಿರುಚಿ. ಇದು ನನಗೆ ಸುಲಭಸಾಧ್ಯವಾಗಿರುವುದು ನನ್ನ ಜೀವನದ ಸೌಭಾಗ್ಯ. ಆಂಗ್ಲ ಸಾಹಿತ್ಯ ವಿಶಾರದನಾಗುವ ಭ್ರಾಂತಿಯಿಂದ ಮಹಾರಾಜಾ ಕಾಲೇಜಿಗೆ ಹೋಗಿ ಸೇರಿದರೂ ಕರ್ಣಾಟಕ ಸಂಘಕ್ಕೂ ನನಗೂ ನಂಟಸ್ತನ ತಪ್ಪಲಿಲ್ಲ. ಡಿ.ಎಲ್.ಎನ್.ರವರೊಂದಿಗೆ ಸಹಪಂಕ್ತಿ ಭೋಜನ, ಕಾಲೇಜು ಹಾಸ್ಟೆಲಿನಲ್ಲಿ, ನಮ್ಮಿಬ್ಬರ ಮೈತ್ರಿಗೆ ಬಹುಬೇಗ ಏಕವಚನ ಫಲಪ್ರಾಪ್ತಿಯಾಯ್ತು. ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಇವರೀರ್ವರ ತ್ರಿಕರಣಪೂರ್ವಕವಾದ ಸಹಕಾರವನ್ನು ಪಡೆದಿದ್ದ ಪೂಜ್ಯ ಗುರುಗಳಾದ ವೆಂಕಣ್ಣಯ್ಯನವರು ಚತುರ್ಭುಜರಂತೆ ಕಂಗೊಳಿಸುತ್ತಿದ್ದುದರಲ್ಲಿ ಆಶ್ಚರ್ಯವೇನು? ಶ್ರೀಯವರು ಆಗ್ಗೆ ರಿಜಿಸ್ಟ್ರಾರ್ ಆಗಿದ್ದುದಲ್ಲದೆ ಕನ್ನಡದ ಮಾನ್ಯ ಪ್ರಾಧ್ಯಾಪಕರೂ ಆಗಿದ್ದರು. ತೀ.ನಂ.ಶ್ರೀ. ಯವರು ಆಗ ಆಜನ್ಮಸಿದ್ಧವಾದ ಹಕ್ಕನ್ನು ಒಮ್ಮೆಲೇ ಚಲಾಯಿಸುತ್ತಿದ್ದರು – ಅಧ್ಯಯನ ಮತ್ತು ಅಧ್ಯಾಪನ. ರಸ್ತೆ ದಾಟಿದರೆ ನವರಸದೌತಣ, ಸಜ್ಜನರೊಂದಿಗೆ ಸರಸ ಸಲ್ಲಾಪ. ನನ್ನ ಒಳಗುಟ್ಟನ್ನು ಶ್ರೀಯವರಿಗೆ ತಿಳಿಯಪಡಿಸದೆ ಅವರ ಅನುಗ್ರಹಕ್ಕೆ ಹೇಗೊ ಪಾತ್ರನಾಗಿ ಅವರ ಕೊಠಡಿಯಲ್ಲಿ ತೀ.ನಂ.ಶ್ರೀ.ಯವರ ಸಹಪಾಠಿಯಾಗಿ ಕೂಡುವ ಸೌಭಾಗ್ಯ ದೊರೆಯಿತು. ಹೀಗೆ ದೊರೆತ ಮೈತ್ರೀ ರಸವು ನನ್ನ ಜೀವನದ ಸಿಹಿ ನೆನಪಾಗಿದೆ.

ಇಂಗ್ಲಿಷ್, ಕನ್ನಡ, ಸಂಸ್ಕೃತ – ಈ ಮೂರು ಭಾಷೆಗಳ ತ್ರಿವೇಣೀಸಂಗಮ ಎನಿಸಿಕೊಂಡವರು ತೀ.ನಂ.ಶ್ರೀ.ಯವರು. ಕವಿಕುಲ ಗುರುವಾಗಿದ್ದ ಶ್ರೀಯವರಿಗೆ ತಕ್ಕ ಶಿಷ್ಯ. ಪ್ರತಿಯೊಂದು ಪರೀಕ್ಷೆಯಲ್ಲೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಎಲ್ಲರಿಗಿಂತಲೂ ಹೆಚ್ಚಾಗಿ ಸ್ವರ್ಣ ಪದಕಗಳನ್ನು ಗಿಟ್ಟಿಸಿದವರು, ತೀ.ನಂ.ಶ್ರೀ. ಯವರು. ಅವರು ತಯಾರಿಸಿದ ಟಿಪ್ಪಣಿಗಳನ್ನು ಉಪಯೋಗಿಸಿಕೊಂಡು, ಅವರಿಂದ ಎರವಲಾಗಿ ತಂದ ಪುಸ್ತಕಾವಲೋಕನದಿಂದ ಇಂಗ್ಲಿಷ್ ಭಾಷಾಶಾಸ್ತ್ರವನ್ನು ಕರಗತಮಾಡಿಕೊಳ್ಳಬೇಕೆಂದು ನಾನು ಮಾಡಿದ ಪ್ರಯತ್ನ ವಿಫಲವಾಯ್ತು. ಯೆಸ್‌ಪರ್‌ಸನ್, ಬ್ರಾಡ್ಲೆ; ಒಂದಕ್ಕಿಂತ ಒಂದು ಕಬ್ಬಿಣದ ಕಡ್ಲೆ. "ಸ್ವಾಮಿ, ಈ ಉದ್ಗ್ರಂಥಗಳು ತಮ್ಮಲ್ಲೇ ಇರಲು ಯೋಗ್ಯ, ಇವನ್ನು ಜೀರ್ಣಿಸಿಕೊಳ್ಳತಕ್ಕ ಶಕ್ತಿ ಭಗವಂತ ನನಗೆ ಕೊಟ್ಟಿಲ್ಲ. ನಮಸ್ತೆ" ಎಂದು ಹೇಳಿ ರಮಾವಿಲಾಸ ಅಗ್ರಹಾರದಿಂದ ರಾಮಯ್ಯರ್ ಉಪಹಾರ ಗೃಹದತ್ತ ಧಾವಿಸಿದ್ದಾಯ್ತು. "Let us make up in the tavern for the time we have lost in the temple!"

ಇದಾಗಿ ಬಹಳ ವರ್ಷಗಳ ನಂತರ ಶ್ರೀ ಕೇಶವನ್‌ರವರ ಮತ್ತು ತೀ.ನಂ.ಶ್ರೀ. ಯವರ ಮೈತ್ರಿ ಉಂಟಾಯಿತು. ಸಹೋದ್ಯೋಗಿಗಳಲ್ಲದೆ ಶಬ್ದಶಾಸ್ತ್ರ (Phonetics) ದಲ್ಲಿ ಇಬ್ಬರಿಗೂ ತೀವ್ರವಾದ ಆಸಕ್ತಿ. ಪ್ರೊ. ಈಗಲ್‌ಟನ್ ಎಂಬ ಘನ ವಿದ್ವಾಂಸರು – ನ ಭೂತೋ ನ ಭವಿಷ್ಯತಿ – ಆಗ್ಗೆ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಈ ವಿದ್ವಾಂಸರ ಉತ್ತೇಜನದ ಫಲವಾಗಿ ತೀ.ನಂ.ಶ್ರೀ. ಯವರ ಭಾಷಾ ಪಾಂಡಿತ್ಯ ಪರಿಪಕ್ವವಾಯ್ತು. ಮುಂದೆ ಅವರು ಬೆಂಗಳೂರಿನಲ್ಲಿದ್ದಾಗ ಈ ಶಾಸ್ತ್ರದಲ್ಲಿ ಪರಿಣತಳಾದ ಓರ್ವ ಆಂಗ್ಲ ಮಹಿಳೆಯ ಪರಿಚಯವಾಗಿ ಪ್ರಪಂಚದಲ್ಲಿ ಈ ವಿಷಯವಾಗಿ ಏನೇನು ಕಾರ್ಯಸಾಧನೆಯಾಗಿದೆ ಎಂಬುದರ

ಅರಿವು ತೀ.ನಂ.ಶ್ರೀ. ಯವರಿಗೆ ಉಂಟಾಯ್ತು : ಪೂನಾದಲ್ಲಿ ಒಂದು ಸಂಶೋಧನಾ ಕೇಂದ್ರ ತೆರೆದಾಗ ಅಲ್ಲಿಗೆ ಹೋಗಿ ಭಾಷಾಶಾಸ್ತ್ರ ವಿಷಯವಾಗಿ ಭರತಖಂಡದಲ್ಲಿ ಏನೇನು ತಿಳಿಯ ಬಹುದೊ ಅದನ್ನೆಲ್ಲಾ ಮನಗಂಡರು. ಕೊನೆಯದಾಗಿ ಅಮೆರಿಕ ದೇಶದ ಪ್ರವಾಸವನ್ನು ಕೈಕೊಂಡು ಭಾಷಾ ಶಾಸ್ತ್ರ ಪರಿಣತ ಎನಿಸಿಕೊಂಡರು.

ತೀ.ನಂ.ಶ್ರೀ.ಯವರಿಗೂ ನನಗೂ ನಿಕಟಸಂಬಂಧ ಬೇರೊಂದು ಸಂದರ್ಭದಲ್ಲಿ ಉಂಟಾಗಿತ್ತು. ಅವರು ಬೆಂಗಳೂರಿನಲ್ಲಿ ಉಪ ಪ್ರಾಧ್ಯಾಪಕರಾಗಿದ್ದಾಗ ಸಹೃದಯ ಗೋಷ್ಠಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿದ್ದರು. ಇದರಲ್ಲೇ ಪು.ತಿ.ನ.ರವರ "ವಿಕಟಕವಿ ವಿಜಯ", ಶ್ರೀ ರಾಜರತ್ನಂರವರ "ಕೀಚಕ", ಶ್ರೀ ನಾ. ಕಸ್ತೂರಿಯವರ "ಶಂಖವಾದ್ಯ" ಮುಂತಾದ ನೂತನ ಕೃತಿಗಳು ಪ್ರಕಟನೆಗೊಂಡದ್ದು.

ಮೈಸೂರು, ಬೆಂಗಳೂರು ಕಥೆಗಳನ್ನು ಹ್ರಸ್ವ ಮಾಡಿ ಬೆಳಗಾಂ, ಧಾರವಾಡಗಳಲ್ಲಿ ನಡೆದ ಕೆಲವು ಘಟನೆಗಳನ್ನು ವಿವರಿಸಿ ಈ ಲಘು ಪರಿಚಯವನ್ನು ಮುಕ್ತಾಯಗೊಳಿಸುತ್ತೇನೆ. ನಾನು ಲಿಂಗರಾಜ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ (೧೯೩೭) ಕರ್ಣಾಟಕ ಸಂಘದ ಮುಖ್ಯ ಅತಿಥಿಗಳಾಗಿ ಶ್ರೀಯವರನ್ನೂ ತೀ.ನಂ.ಶ್ರೀ.ಯವರನ್ನೂ ಪ್ರಿನ್ಸಿಪಾಲ್ ಡಾ. ನಂದೀಮಠ ರವರು ಆಹ್ವಾನಿಸಿದ್ದರು. ಕನ್ನಡದ ಬಾವುಟವನ್ನು ಎತ್ತಿಹಿಡಿದು ಶ್ರೀಯವರು ಶ್ರೀಕಂಠದಿಂದ ಭಾಷಣ ಮಾಡಿ ಸಾರ್ವಜನಿಕರಿಗೆ ಕನ್ನಡದ ವಿಷಯದಲ್ಲಿದ್ದ ಅಭಿಮಾನಕ್ಕೆ ಮೆರುಗುಕೊಟ್ಟರು. ಮಾರನೆಯದಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಶ್ರೀಯವರು ಮಾತನಾಡಬೇಕಾಗಿತ್ತು. ಆದರೆ ಅವರು ತಮ್ಮ ಪಟ್ಟ ಶಿಷ್ಯರಿಗೆ ಅನುಗ್ರಹ ಮಾಡಬೇಕೆಂಬ ಉದ್ದೇಶದಿಂದ "ಗದಾಯುದ್ಧದ ವಿಷಯದಲ್ಲಿ ನಾನು ಹೇಳಬಹುದಾದ್ದನ್ನೆಲ್ಲಾ ಹೇಳಿದ್ದಾಗಿದೆ. ಆ ರಸಘಟ್ಟೆಯನ್ನು ಕುರಿತು ತೀ.ನಂ.ಶ್ರೀ. ಯವರು ಏನು ಹೇಳುತ್ತಾರೊ ಕೇಳಬೇಕೆಂದು ನನಗೆ ಆಸೆ ಪ್ರಬಲವಾಗುತ್ತಿದೆ. ಏಕೆಂದರೆ ನನ್ನಿಂದ ಸಾಧ್ಯವಾಗದೆ ಇರುವ ಕೆಲಸವನ್ನು ತೀ.ನಂ.ಶ್ರೀ. ಯವರು ಸಾಧಿಸುತ್ತಾರೆ" ಎಂದು ಹೇಳಿ ಅಧ್ಯಕ್ಷ ಪೀಠವನ್ನಲಂಕರಿಸಿದರು. ಈ ಸಂದರ್ಭದಲ್ಲಿ ತೀ.ನಂ.ಶ್ರೀ. ಯವರು, "ರಸೆಯಿಂಕಾಲಾಗ್ನಿ ರುದ್ರಂಪೊರಮಡುವವೊಲ್... ಕೋಪಾರಕ್ತ ನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ," ಎಂಬ ಪದ್ಯದ ಅರ್ಥವನ್ನು ವಿವರಿಸಿ ಅದು ಹೇಗೆ ಕವಿರತ್ನನ ಪದ್ಯಗಳಲ್ಲಿ ರತ್ನಪ್ರಾಯವಾಗಿದೆ ಎಂಬ ಅಂಶವನ್ನು ಖಚಿತಪಡಿಸಿದ್ದು ಈಗಲೂ ನನ್ನ ಸ್ಮೃತಿಪಥದಲ್ಲಿದೆ. ತೀ.ನಂ.ಶ್ರೀ. ಯವರು ವಾಗ್ದೇವಿಯ ಭಂಡಾರದ ಮುದ್ರೆಯನ್ನು ಒಡೆದ ಮೋಡಿ, ಅವರ ನಿಲುವಿನ ಗಾಡಿ, ಅವರ ಹಿತಮಿತ ವಚನ, ಅವರ ಸರಸ ಸಜ್ಜನಿಕೆ – ಇವುಗಳನ್ನೆಲ್ಲಾ ಮೆಚ್ಚಿ ಪ್ರೊ. ಬಸವನಾಳ್‌ರವರು ತಲೆದೂಗಿದರು.

ಡಿ.ಎಲ್.ಎನ್. ಮತ್ತು ತೀ.ನಂ.ಶ್ರೀ.ಯವರೊಂದಿಗೆ ನಾನು ಕರ್ಣಾಟಕ ಗಡಿನಾಡುಗಳ ಪ್ರವಾಸವನ್ನು ಅನೇಕಸಲ ಕೈಗೊಂಡದ್ದುಂಟು. ತೀ.ನಂ.ಶ್ರೀ.ಯವರು ಧಾರವಾಡದಲ್ಲಿ ಪ್ರಾಧ್ಯಾಪಕರಾಗಿದ್ದಾಗ ಅವರ ಮನೆಯಲ್ಲಿ ಶ್ರೀ ಚನ್ನವೀರ ಕಣವಿ ಮುಂತಾದ ಪ್ರಸಿದ್ಧ ಲೇಖಕರ ಪರಿಚಯ ಆಯ್ತು. ಹೀಗೆಯೇ ಅವರ ಸ್ನೇಹದ ಫಲವಾಗಿ ಮೈಸೂರು, ಬೆಂಗಳೂರು ನಗರಗಳಲ್ಲಿ ಅನೇಕ ಗಣ್ಯಪುರುಷರ ಮೈತ್ರಿ ದೊರಕಿತು. ಈ ಮೈತ್ರಿರಸವನ್ನು ವರ್ಣಿಸಲು ಪು.ತಿ.ನ. ಅವರಿಗೆ ಮಾತ್ರ ಸಾಧ್ಯ.

ಕಣ್ಣೀರು

ಹೆಚ್.ಎಂ. ಶಂಕರನಾರಾಯಣರಾವ್

●

"ವಾಗ್ಬಲ್ಮೆಯಂ ತನ್ನ ಶಿಷ್ಯರ ಮೆಯ್ಯೊಳ್ ನಿಜಕೀರ್ತಿಯಂ ನಿಖಿಳದಿಕ್ಚಕ್ರಂಗೊಳ್... ನಿಟಿಲಜಸಿದಂ ಭಾಷಾಗಮಾಚಾರ್ಯರೊಳ್ ದೊರೆಯಾರೆಂಬಿನ್..."

"ಭಟ್ಟರೆ, ಶಂಕರನಾರಾಯಣರಾಯರನ್ನು ನೋಡಿ ಬಹಳ ದಿನವಾಯಿತು. ಅವರು ಈ ಕಡೆ ಬರಲೇ ಇಲ್ಲ. ದೆಹಲಿಗೆ ಹೋಗುವ ಮುನ್ನ ಅವರನ್ನು ನಾನು ನೋಡಲೇಬೇಕು. ಕಂಡರೆ ಬರಹೇಳಿ. ಖಂಡಿತ ಮರೆಯಬೇಡಿ."

"ಈ ವಿಷಯವನ್ನು ಅವರಿಗೆ ತಿಳಿಸಬೇಕಾಗಿಯೇ ಇಲ್ಲ, ಇನ್ನು ಐದು ನಿಮಿಷಗಳಲ್ಲಿ ಅವರೇ ಇಲ್ಲಿಗೆ ಬರುತ್ತಾರೆ. ಯೋಚನೆ ಬೇಡ."

"ಬನ್ನಿ, ಬನ್ನಿ, ಈಗತಾನೆ ನಿಮ್ಮ ವಿಷಯವನ್ನು ಹೇಳುತ್ತಿದ್ದೆ. ಕುಳಿತುಕೊಳ್ಳಿ. ಇದೇನು ಇಷ್ಟು ಅಪರೂಪ? ಪ್ರೆಸ್ಸಿನ ವಿಚಾರವೇನು?"

"ಪ್ರೆಸ್ಸಿನ ವಿಚಾರ ಯೋಚಿಸಬೇಡಿ. 'ಉಪಾಯನ' ದ ಉಳಿದ ಪುಟಗಳು ಅಚ್ಚಾಗಿವೆ. ಹಸ್ತಪ್ರತಿಯನ್ನು ಪ್ರೆಸ್ಸಿಗೆ ತಲುಪಿಸಿದ್ದೇನೆ."

"ಸರಿ, ಒಳ್ಳೆಯದಾಯಿತು. ನಾನು ಬರುವ ವೇಳೆಗೆ ಒಂದು ಸಾರಿ ಕರಡನ್ನು ನೋಡಿಟ್ಟಿರಿ. ಬಂದಮೇಲೆ ಅದನ್ನು ಅಚ್ಚಿಡಿಸುತ್ತೇನೆ. ಹರಿಹರದಿಂದ ನೀವು ಯಾವಾಗ ಬರುತ್ತೀರಿ? ನಾನಂತೂ ಸೆಪ್ಟೆಂಬರ್ ಹತ್ತರವೇಳೆಗೆ ಇಲ್ಲಿ ಖಂಡಿತ ಇರುತ್ತೇನೆ."

"ನೀವು ಹೇಳಿದಂತೆ ಆಗಲಿ. ಊರಿನಲ್ಲಿ ನಾನು ಹೆಚ್ಚು ದಿನಗಳಿರುವುದಿಲ್ಲ. ಮೂರು ನಾಲ್ಕು ದಿನಗಳಲ್ಲಿ ಹಿಂದಿರುಗಿ ಬಂದುಬಿಡುತ್ತೇನೆ. ದೆಹಲಿಯಿಂದ ಬಂದ ಮೇಲಂತೂ ನೀವು ಶಬ್ದಮಣಿದರ್ಪಣದ ಕಡೆ ಗಮನಕೊಡಬೇಕು. ನೀವು ಹೇಳಿದ ದಿನ ನಾನೇ ಬಂದು ಬರೆದುಕೊಳ್ಳುತ್ತೇನೆ. ಏನಯ್ಯಾ ಶಂಕರ, ನಾನಂತೂ ಸೋತೆ. ನೀನೂ ಸೋತೆಯಾ?"

"ಚೆನ್ನಾಯಿತು! ನೀವು ಸೋಲುವುದೆಂದರೇನು? ತಪ್ಪು ನನ್ನದು; ಅವನದಲ್ಲ. ಇದಕ್ಕಾಗಿಯೇ ನೀವು ಮನೆಯವರೆಗೆ ಬರುವುದು ಬೇಡ. ಬಂದ ಕೂಡಲೇ ನನ್ನ ಗಮನ ಅದರ ಕಡೆಗೆ!"

ನನಗೂ ನನ್ನ ಪ್ರಿಯ ಗುರುಗಳಾದ ಪ್ರೊ॥ ತೀ.ನಂ. ಶ್ರೀಕಂಠಯ್ಯನವರಿಗೂ ಈ ಸಂಭಾಷಣೆ ನಡೆದದ್ದು ಆಗಸ್ಟ್ ೧೪ನೆಯ ತಾರೀಖು ಭಾನುವಾರ ಸಂಜೆ. ಇದಲ್ಲದೆ ಅನೇಕ ವಿಷಯಗಳ

ಮೇಲೆ ಮಾತುಕತೆಗಳಾದವು. ತಿಂಡಿ ತೀರ್ಥವಾಯಿತು. ಅವರ ಮಾತಿನ ಸರಣಿ, ಲವಲವಿಕೆ, ಉತ್ಸಾಹ ಇವುಗಳನ್ನು ಕಂಡು, ಗುರುಗಳು ಕಳೆದುಕೊಂಡಿದ್ದ ಆರೋಗ್ಯಭಾಗ್ಯವನ್ನು ಮರಳಿ ಪಡೆದುಕೊಂಡಿದ್ದಾರೆಂದು ನನಗೆ ಭಾಸವಾಯಿತು. ಮನೆಗೆ ಹೋಗಲು ಹೊತ್ತಾಯಿತೆಂದು ಎದ್ದಾಗ, ನಗು ಮುಖದ, ತುಂಬು ಗಾಂಭೀರ್ಯದ ಆ ಸುದೀರ್ಘ ವ್ಯಕ್ತಿ ಬೀದಿಯವರೆಗೆ ಬಂದು ವಾತ್ಸಲ್ಯದಿಂದ ನನ್ನನ್ನು ಕಳುಹಿಸಿಕೊಟ್ಟರು. ಆದರೆ ಅದೇ ಅವರ ಕೊನೆಯ ದರ್ಶನ ವೆಂದು ನನಗೆ ಹೇಗೆ ತಾನೆ ಭಾಸವಾಗಬೇಕು?

*

'ಪ್ರೊಫೆಸರ್, ರಾಂಚಿಯಿಂದ ಕಾಗದ ಬಂದಿದೆ. ನಿಮ್ಮ ಗುರುಗಳು ಮಗಳ ಮನೆಯಲ್ಲಿ, ಅಳಿಯ ಮೊಮ್ಮಗಳೊಂದಿಗೆ ಸುಖವಾಗಿದ್ದಾರಂತೆ. ಕಲಕತ್ತೆಗೆ ಹೋಗಿ ಮಗನನ್ನು ನೋಡಿಕೊಂಡು ೧೧ನೇ ತಾರೀಖು ಇಲ್ಲಿಗೆ ಬರುತ್ತಾರೆ.'

ಸೆಪ್ಟೆಂಬರ್ ಮೂರನೆಯ ತಾರೀಖು ಶನಿವಾರ ಮಧ್ಯಾಹ್ನ ಪು.ತಿ.ನ. ಅವರು ಹೇಳಿದ ಈ ಮಾತುಗಳನ್ನು ಕೇಳಿ ನನಗೂ ಪ್ರೊ. ಜವರೇಗೌಡರಿಗೂ ತುಂಬ ಸಂತೋಷ ಸಮಾಧಾನ ಗಳಾದವು. ಕೊನೆಗಾದರೂ ಗುರುಗಳಿಗೆ ಒಂದೆರೆಡು ದಿನ ವಿಶ್ರಾಂತಿ ದೊರಕಿತಲ್ಲ ಎಂಬ ಪ್ರತಿಕ್ರಿಯೆ ನಮ್ಮೆಲ್ಲರಲ್ಲಿ ಮೂಡಿತು. ಕಾರ್ಗತ್ತಲೆಗೆ ಮುಂಚೆ ಬರುವ ಸಂಜೆಗೆಂಪಿನಂತೆ ಆ ಸಮಾಧಾನ ನಮ್ಮಲ್ಲಿದ್ದುದು ಒಂದೆರಡು ದಿನ ಮಾತ್ರ. ಸೆಪ್ಟೆಂಬರ್ ೧೧ನೆಯ ತಾರೀಖು ಸಂಜೆ ಬಂತು; ರೈಲೂ ಬಂತು; ಆದರೆ ತೀ.ನಂ.ಶ್ರೀ. ಯವರು ಹಿಂದಿರುಗಿ ಬರಲಿಲ್ಲ; ಅವರ ಪಾರ್ಥಿವ ಶರೀರವನ್ನು ನೋಡುವ ಅದೃಷ್ಟವೂ ನಮ್ಮದಾಗಲಿಲ್ಲ. ಕಲಕತ್ತೆಯ ಗಂಗೆ ಧನ್ಯೆ!

ಇದಕ್ಕೆ ಪ್ರತಿಯಾಗಿ ಅಮೂಲ್ಯ ನಿಧಿಯನ್ನು ಕಳೆದುಕೊಂಡು, ದುಃಖತಪ್ತರಾದ ಕುಟುಂಬ ಬಂಧುವರ್ಗದವರನ್ನು ಕಾಣುವ ದುರ್ದೈವ ನಮ್ಮದಾಗಿತ್ತು!

*

ಸೆಪ್ಟೆಂಬರ್ ಏಳನೆಯ ತಾರೀಖು ಬುಧವಾರ ಮಧ್ಯಾಹ್ನ ನಾನು ತರಗತಿಯಲ್ಲಿದ್ದಾಗ ಅನಿರೀಕ್ಷಿತವೂ ಆಕಸ್ಮಿಕವೂ ಆದ ಶ್ರೀಕಂಠಯ್ಯನವರ ನಿಧನವಾರ್ತೆ ನನಗೆ ತಿಳಿದಾಗ, ಪುಸ್ತಕ ನನಗೆ ತಿಳಿಯದಂತೆಯೇ ಕೈಯಿಂದ ಜಾರಿಬಿತ್ತು. ನಂಬಲಾಗದ ವಾರ್ತೆ; ಆದರೆ ನಂಬಲೇ ಬೇಕಾದ ಸತ್ಯವಾರ್ತೆ! ಮನಸ್ಸು ಕ್ಷಣಕಾಲ ಸ್ತಬ್ಧಗೊಂಡಿತು; ಮರವಟ್ಟಂತಾಯಿತು. ಎಚ್ಚೆತ್ತು, ಅದನ್ನು ಸಂವರಿಸಿಕೊಂಡ ಮೇಲೆ ಮನಸ್ಸಿಗೆ ಬಂದ ಮೊದಲ ಯೋಚನೆ – ಮೈಸೂರಿನಿಂದ ಧಾರವಾಡಕ್ಕೆ ಹೋಗಿ ಅಲ್ಲಿ ಶ್ರೀಯವರು ತಲೆಕೊಟ್ಟರು; ಇವರು ಕಲ್ಕತ್ತೆಯಲ್ಲಿ ತಲೆ ಕೊಡಬೇಕಾಯಿತೆ ಎಂಬುದು. ಆದರೆ ಒಂದು ಕ್ಷಣಿಕ ಸಮಾಧಾನ – ಸಾಯುವಾಗ ಅವರ ಹೆಂಡತಿ ಮತ್ತು ಅವರ ಒಬ್ಬನೇ ಮಗ ಹತ್ತಿರದಲ್ಲಿದ್ದರು ಎಂಬುದು. ಕೂಡಲೇ ನನ್ನ ಮತ್ತು ಅವರ ಮೂವತ್ತು ಮೂರು ವರ್ಷದ ಬಾಂಧವ್ಯ ಎದುರಿಗೆ ಬಂದು ನಿಂತಿತು. ಅವರ ಮೂರ್ತಿ ಕಣ್ಣಿಗೆ ಕಟ್ಟಿತು; ಮಾತು ಕಿವಿ ತುಂಬಿತು; ಹಾಗೆಯೇ ಕತ್ತು ಬಿಗಿದು ಕಣ್ಣು ಹನಿಗೂಡಿತು;

ಮನಸ್ಸು ಅವರು ನನ್ನಲ್ಲಿಟ್ಟಿದ್ದ ಅವ್ಯಾಜ ಪ್ರೇಮವನ್ನು ನೆನೆಯಿತು. ಮತ್ತೊಂದು ಯೋಚನೆ ಹಾಗೆಯೇ ಮನಸ್ಸಿನಲ್ಲಿ ಮೂಡಿತು. ದೊಡ್ಡದೊಂದು ಮರ ಹತ್ತು ದಿಕ್ಕಿಗೂ ರೆಂಬೆಗಳನ್ನು ಬೀಸಿ, ನೂರಾರು ಹಕ್ಕಿಗಳಿಗೆ ನೆಲೆಯಾಗಿ, ಬಿರುಗಾಳಿಗೆ ಸಿಕ್ಕು ತಾಯ್ನೆಲವನ್ನು ಸೇರಿತು! ಈ ಹೋಲಿಕೆ ಎರಡು ದೃಷ್ಟಿಗಳಿಂದ ಸತ್ಯವಾದದ್ದು. ಕನ್ನಡವನ್ನೇ ವಿಶೇಷ ವ್ಯಾಸಂಗದ ವಿಷಯ ವನ್ನಾಗಿ ತೆಗೆದುಕೊಂಡವರ ಮಾತು ಹಾಗಿರಲಿ; ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡಿದ್ದ ಎಷ್ಟು ಸಾವಿರ ವಿದ್ಯಾರ್ಥಿಗಳು ಅವರ ಪ್ರವಚನವನ್ನು ಕೇಳಿ ಪುಳಕಿತರಾಗಿಲ್ಲ! ಹಿಂದಿನ ಆಚಾರ್ಯರು ಹೊತ್ತಿಸಿ ತಮ್ಮ ಕೈಗೆ ಕೊಟ್ಟಿದ್ದ ಪಂಜನ್ನು ಇನ್ನೂ ಉಜ್ವಲವಾಗಿ ಇವರು ಬೆಳಗಿದ್ದರು. ಇನ್ನು ಅವರ ಮನೆಯೋ, ಒಂದು ಛತ್ರ! ಅವರ ಮನೆಯಲ್ಲಿ ಆಶ್ರಯಪಡೆದ ಬಂಧುವರ್ಗ, ವಿದ್ಯಾರ್ಥಿಗಳು ಎಷ್ಟು ಮಂದಿಯೋ! ಶ್ರೀಕಂಠಯ್ಯನವರ ಸರಸಸಜ್ಜನಿಕೆ, ಅವರ ಗೃಹಿಣಿಯ ತಾಳ್ಮೆ ಔದಾರ್ಯಗಳನ್ನು ನೆನೆದರೆ ಆಶ್ಚರ್ಯವೆನಿಸುತ್ತದೆ. ತಾವು ದೊಡ್ಡವರೆಂಬ ಅಹಂಕಾರವಾಗಲಿ, ಇತರರಿಂದ ತಮಗೆ ತೊಂದರೆಯೆಂಬ ಕಿಂಕೃತಿಯಾಗಲೀ ಅವರ ಕುಟುಂಬಕ್ಕೆ ಎಂದೂ ಬಂದುದಿಲ್ಲ. 'ಗೃಹಿಣೀ ಗೃಹಮುಚ್ಯತೇ' ಎಂಬ ಮಾತು ನೂರಕ್ಕೆ ನೂರು ಭಾಗ ಅವರ ವಿಷಯದಲ್ಲಿ ಸತ್ಯ. ಯಾವ ಹೊತ್ತಿನಲ್ಲಿ ಯಾರೇ ಹೋಗಲಿ, ಗುರುಗಳ ಸವಿ ಮಾತು, ಅವರ ಗೃಹಿಣಿಯ ಶುಚಿರುಚಿಯಾದ ತಿಂಡಿ ತೀರ್ಥಗಳಿಂದ ಊಟ ಉಪಚಾರಗಳಿಂದ ಹೋದವರು ವಂಚಿತರಾಗುತ್ತಿರಲಿಲ್ಲ. ಅವರ ಈ ತ್ಯಾಗ ಔದಾರ್ಯ ಗಳು ಅವರ ಬದುಕನ್ನು ಕೊನೆಯವರೆಗೂ ನಡೆಸಿದವೆಂದು ನನ್ನ ಅಚಲವಾದ ನಂಬಿಕೆ.

ಪ್ರೊ॥ ಶ್ರೀಕಂಠಯ್ಯನವರು ಹುಟ್ಟಿದ್ದು ಶ್ರೀಮಂತ ಕುಟುಂಬದಲ್ಲಿಯೇನಲ್ಲ. ಆದರೂ ಅವರು ದೈವದತ್ತವಾದ ಪ್ರತಿಭೆಯೊಂದಿಗೆ ಶ್ರದ್ಧೆಯನ್ನು ಮೈಗೂಡಿಸಿಕೊಂಡು, ವಿದ್ವತ್ತನ್ನು ಗಳಿಸಿದರು. ವಿಶ್ವವಿದ್ಯಾನಿಲಯದಲ್ಲಿ ಪದವಿಗಳನ್ನೂ ಪದಕಗಳನ್ನೂ ಸೂರೆಗೊಂಡರು. ತಮ್ಮ ಹಿರಿಯರ ಕೋಪಕ್ಕೆ ಪಾತ್ರರಾದರೂ, ಮನೆಯ ಬಾಗಿಲಿಗೆ ಬಂದ ಅಧಿಕಾರವನ್ನು ತ್ಯಾಗಮಾಡಿ, ಅಧ್ಯಾಪಕ ವೃತ್ತಿಯನ್ನು ಒಲಿದರು. (ಅಧಿಕಾರದಲ್ಲಿದ್ದರೂ ಅವರು ಸಾಹಿತ್ಯ ಸೇವೆಯನ್ನು ಮಾಡಬಹುದಾಗಿತ್ತೆಂಬ ವಾದವನ್ನು ನಾನು ಒಪ್ಪುವುದಿಲ್ಲ.) ಅಧ್ಯಾಪಕ ವೃತ್ತಿಯನ್ನು ಕೈಕೊಂಡ ಮೇಲೆ ಮೂರು ದಶಕಗಳಿಗೂ ಮಿಕ್ಕು ಗಂಟೆಗೆ ಅರವತ್ತು ನಿಮಿಷಗಳಂತೆ ಕೊನೆಯವರೆಗೂ ಉತ್ಸಾಹ ಕುಗ್ಗದೆ ಶ್ರದ್ಧೆಯಿಂದ ನಿರ್ವಂಚನೆಯಿಂದ ವಿದ್ಯಾರ್ಥಿಗಳಿಗೆ ಪಾಠ ಹೇಳಿದರು.

ಈ ಸಂದರ್ಭದಲ್ಲಿ ಎರಡು ವಿಷಯಗಳು ನನ್ನ ನೆನಪಿಗೆ ಬರುತ್ತವೆ. ರನ್ನನ ಅಜಿತಪುರಾಣದ ಕೊನೆಯಲ್ಲಿ ಬರುವ ನೆಗೆಟ್ದಿವರಿರ್ವರ ಪೆಸರ್ಗಂ ನೆಗೆಟ್ಟುವು ತನ್ನೆರೆಡು ಮುಗ್ಧ ಕೃತಿಗಳ್ ರಾಯಂವಗ ನತ್ತಿಮಬ್ಬೆ ಮಗಳೆನೆ ನೆಗೆಟ್ದಂ ಸಂತಾನವೃದ್ಧಿಯಿಂ ಕವಿರತ್ನಂ' ಎಂಬ ಪದ್ಯವನ್ನು ವ್ಯಾಖ್ಯಾನಿಸುತ್ತ, ಶ್ರೀಯುತರು ಸಂತಾನವನ್ನು ಪಡೆದ ರನ್ನನ ಬದುಕು ಪೂರ್ಣವಾಯಿತೆಂದು ಹೇಳಿದ್ದು ನನಗೆ ನೆನಪುಂಟು. ಇವರಿಗೆ ಬೆಂಗಳೂರಿಗೆ ವರ್ಗವಾದಾಗ, ಮೈಸೂರಿನ ಮಹಾರಾಜ ರವರ ಕಾಲೇಜಿನ ಕರ್ಣಾಟಕ ಸಂಘದವರು ಏರ್ಪಡಿಸಿದ್ದ ಬೀಳ್ಕೊಡುಗೆಯ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು ಮಾತನಾಡುತ್ತ "ಶ್ರೀಕಂಠಯ್ಯನವರು ಎಲ್ಲ ವಿಧದಲ್ಲಿಯೂ ಪುಣ್ಯವಂತರು. ಕೌತ್ಸನು ರಘುವಿಗೆ ಪುತ್ರವಂತನಾಗುವಂತೆ ಹರಸಿದನು.

ಇವರು ಪುತ್ರವಂತರಾಗಿದ್ದಾರೆ. ಇನ್ನು ನಾನು ಹೇಳತಕ್ಕದ್ದೇನಿದೆ? ದೇವರು ಇವರಿಗೆ ಉದಯಪರಂಪರೆಯನ್ನು ಕೊಡಲಿ" ಎಂದು ಹರಸಿದರು. ಹಿರಿಯರ ಮಾತು ಹೇಗೆ ತಾನೆ ಸುಳ್ಳಾದೀತು? ಶ್ರೀಕಂಠಯ್ಯನವರು ಮೈಸೂರು, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಪ್ರಾಧ್ಯಾಪಕ ಪದವಿಯನ್ನು ದಕ್ಷತೆಯಿಂದ ಅಲಂಕರಿಸಿದರು. ಆ ಸ್ಥಾನಕ್ಕೆ ಕೀರ್ತಿಯನ್ನು ತಂದರು. ಕರ್ಣನಿಗೆ ಕವಚಕುಂಡಲಗಳಿದ್ದಂತೆ ಇವರಿಗೆ ಕಾವ್ಯ ಮೀಮಾಂಸೆ ಮತ್ತು ಭಾಷಾ ಶಾಸ್ತ್ರಗಳು. ಭಾಷಾಶಾಸ್ತ್ರದ ಪಾಂಡಿತ್ಯ ಪ್ರವಚನಗಳಿಂದ ಕನ್ನಡ ನಾಡಿನಲ್ಲಿಯೂ ಹೊರದೇಶ ಗಳಲ್ಲಿಯೂ ಸುಹೃನ್ಮಿತ್ರರನ್ನು ಪಡೆದರು. ಸ್ವಾರ್ಥತ್ಯಾಗ, ಸೌಜನ್ಯ, ಔದಾರ್ಯಗಳಿಗೆ ಪ್ರತೀಕದಂತಿದ್ದ ಪತ್ನಿ, ವಿದ್ಯಾವಂತನಾದ ಏಕೈಕ ಪುತ್ರ, ವಿದ್ಯಾವತಿಯಾದ ಒಬ್ಬಳೇ ಮಗಳು, ವಿದ್ಯಾವಂತನೂ ವಿನಯಶೀಲನೂ ಆದ ಅಳಿಯ – ಇವರಿಂದ ಕೂಡಿದ ಸಂಸಾರ ಯಾವ ಕೊರೆಯೂ ಇಲ್ಲದೆ ಸರ್ವಾಂಗ ಸಂಪೂರ್ಣವಾಗಿತ್ತು. ಅವರ ಪುಣ್ಯವನ್ನು ನೋಡಿ, ವಿಧಿ ಕರುಬಿ, ಮುಪ್ಪಿನ ಮುನ್ನವೇ ಅವರನ್ನು ತನ್ನೆಡೆಗೆ ಸೆಳೆದುಕೊಂಡಿತು!

ಶ್ರೀಕಂಠಯ್ಯನವರು ಆನರ್ಸ್ ತರಗತಿಯಲ್ಲಿ ನಮಗೆ ಭಾಷಾಶಾಸ್ತ್ರವನ್ನೂ, ಎಂ.ಎ. ತರಗತಿ ಯಲ್ಲಿ ಕಾವ್ಯಮೀಮಾಂಸೆಯನ್ನೂ ಪಾಠ ಹೇಳಿ ಅವುಗಳಲ್ಲಿ ಅಕ್ಕರೆಯನ್ನು ಉಕ್ಕಿಸಿದರು. ನನ್ನ ಮಾಲೆಯಲ್ಲಿ ಪ್ರಕಟವಾದ ಭಾಮಹನ 'ಕಾವ್ಯಾಲಂಕಾರ'ದ ಅನುವಾದವನ್ನು ಅವರಿಗೆ ಕಳುಹಿಸಿಕೊಟ್ಟು 'ಈ ಪ್ರಕಟನೆ ನಿಮ್ಮ ಪಾಠದ ಪ್ರೇರಣೆಯ ಫಲ' ಎಂದು ತಿಳಿಸಿದಾಗ ಅವರಿಗಾದ ಸಂತೋಷವೆಷ್ಟು! 'ಶಬ್ದಮಣಿದರ್ಪಣ' ವನ್ನು ಪ್ರೊ. ಡಿ.ಎಲ್. ನರಸಿಂಹಾಚಾರ್ಯರು ಸಂಪಾದಿಸಿ, ನಾನು ಅದನ್ನು ಪ್ರಕಟಿಸಿದ್ದು ಅವರ ವಿಶ್ವಾಸದ ಒತ್ತಾಯದಿಂದಲೇ. ನನ್ನ ಪ್ರಕಟಣೆಗಳನ್ನು ಮೆಚ್ಚಿ, ಅವುಗಳ ವಿಷಯದಲ್ಲಿ ತುಂಬ ಆಸ್ಥೆ ವಹಿಸಿ, ತಮ್ಮ ಕೆಲವು ಗ್ರಂಥಗಳನ್ನು ಪ್ರಕಟಣೆಗಾಗಿ ಕೊಡುವಂತೆ ಹೇಳಿದ್ದರು. ಅವರು ಬರೆಯಲು ಉದ್ದೇಶಿಸಿದ್ದ ಒಂದೆರೆಡು ಗ್ರಂಥಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ. ನಮಗೆ ಅವರು 'ಶಬ್ದಮಣಿದರ್ಪಣ'ವನ್ನು ಪಾಠ ಹೇಳಿದಾಗ ಆಗ ಅವರಲ್ಲಿ ಉತ್ಸಾಹವಿತ್ತು. ಈಗ ಅವರ ವಿದ್ವತ್ತು ಅನುಭವದಿಂದ ಪಕ್ವವಾಗಿತ್ತು. ಅದರ ಫಲವನ್ನು ವ್ಯಾಖ್ಯಾನದ ಮೂಲಕ ಪ್ರೊ. ನರಸಿಂಹಾಚಾರ್ಯರ ಗ್ರಂಥಕ್ಕೆ ಪೂರಕವಾಗಿ ಕೊಡಲು ಕಾರ್ಯೋನ್ಮುಖರಾಗಿದ್ದರು. ಶೂದ್ರಕ ಕವಿಯ 'ಮೃಚ್ಛಕಟಿಕ'ವನ್ನು ಬಗೆಬಗೆಯ ಛಂದಸ್ಸಿನಲ್ಲಿ ಕನ್ನಡಿಸಲು ಬಗೆದು, ನನ್ನಿಂದ ಆ ನಾಟಕದ ಒಂದೆರಡು ಸಂಸ್ಕರಣಗಳನ್ನು ಎರವಲು ಪಡೆದಿದ್ದರು. ಕಾಳಿದಾಸನ ಶಾಕುಂತಳವನ್ನು ಕನ್ನಡಿಸ ಬಯಸಿ, ಅದರ ಐದನೆಯ ಅಂಕವನ್ನು ಕೃತಿಗಿಳಿಸಿದ್ದರು. 'ಬೇಸಿಗೆಯ ರಜೆಯಲ್ಲಿ ಪ್ರತಿಸಂಜೆ ಬಂದು ನೀವು 'ಛಂದೋಂಬುಧಿ'ಯ ಹಸ್ತಪ್ರತಿಗಳನ್ನು ಓದಿದರೆ, ನಾನು ಪಾಠಾಂತರಗಳನ್ನು ಗುರುತು ಹಾಕಿಕೊಳ್ಳುತ್ತೇನೆ. ಗ್ರಂಥ ಸಂಪಾದನೆ ಮಾಡಿ, ಪೀಠಿಕೆ ಟಿಪ್ಪಣಿಗಳನ್ನು ಬರೆದು ಪ್ರಕಟಣೆಗೆ ಕೊಡುತ್ತೇನೆ' ಎಂದು ಹೇಳಿ, ಮೂಲ ಪಾಠವನ್ನು ಬರೆದ ಹಾಳೆಗಳನ್ನು ನನಗೆ ತೋರಿಸಿದ್ದರು. 'ಗದಾಯುದ್ಧ ಸಂಗ್ರಹ', 'ನಂಬಿಯಣ್ಣನ ರಗಳೆ'ಯ ಅವರ ಸಂಪಾದನ ಕಾರ್ಯವನ್ನು ಕಂಡವರಿಗೆ, ಎಂಥ ನಷ್ಟ ಈಗ ಸಂಭವಿಸಿದೆಯೆಂಬುದನ್ನು ನಾವು ಊಹಿಸಿಕೊಳ್ಳಬಹುದು. ರಾಜಶೇಖರನ 'ಕಾವ್ಯಮೀಮಾಂಸೆ' ಯನ್ನು ಕನ್ನಡಿಸುವುದೂ ಅವರ ಉದ್ದೇಶವಾಗಿತ್ತು.

ಈಗ ಅವರ ನಿಧನದಿಂದ, ವಿದ್ವತ್‌ಪೂರ್ಣವಾದ ಅಕ್ಲಿಷ್ಟಪ್ರಸನ್ನ ಶೈಲಿಯ ಅವರ ಬರವಣಿಗೆಯಿಂದ ಕನ್ನಡ ಸಾರಸ್ವತ ಪ್ರಪಂಚ ವಂಚಿತವಾಗಿ ಬಡವಾಯಿತು!

ಪ್ರೊ॥ ತೀ.ನಂ. ಶ್ರೀಕಂಠಯ್ಯನವರ ವಿದ್ವತ್ತನ್ನೂ, ಗುಣಾತಿಶಯಗಳನ್ನೂ ಎಷ್ಟು ಬಣ್ಣಿಸಿದರೂ ಸ್ವಲ್ಪವೇ. ವೈಯಕ್ತಿಕವಾಗಿ ಅವರು ನನಗೆ ಪಾಠ ಹೇಳಿದ ಗುರು, ಅನ್ನವಿಟ್ಟು ವಾತ್ಸಲ್ಯ ಅಭಿಮಾನಗಳನ್ನು ತೋರಿದ ತಂದೆ. ಶಿಷ್ಯವಾತ್ಸಲ್ಯ ಪ್ರಪೂರ್ಣರೂ ಪ್ರಿಯಗುರುಗಳೂ ಆದ ಅವರ ಅಕಾಲ ನಿಧನದಿಂದಾದ ನಷ್ಟಕ್ಕೆ ಕಣ್ಣೀರಿಡುತ್ತ, ಅವರ ಕುಟುಂಬ, ಬಂಧುವರ್ಗದವರ ದುಃಖದಲ್ಲಿ ಸಹಭಾಗಿಯಾಗುತ್ತ, ಮೃತರ ಆತ್ಮಕ್ಕೆ ಶಾಂತಿದೊರಕಲೆಂದು ಹರಿಹರದ ಹರಿಹರೇಶ್ವರನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ನನ್ನ ಪೂಜ್ಯಗುರು

ಎನ್. ಬಸವಾರಾಧ್ಯ

●

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಸಾರಸರ್ವಸ್ವದಂತಿದ್ದ ಆಚಾರ್ಯ ತೀ.ನಂ. ಶ್ರೀಕಂಠಯ್ಯನವರು ಇನ್ನಿಲ್ಲವಾದರು. ಪ್ರಾಚೀನ ಅರ್ವಾಚೀನ ಸಾಹಿತ್ಯದ ಸಮನ್ವಯ ಮೂರ್ತಿ ಕಣ್ಮರೆಯಾಯಿತು. ಲೌಕಿಕಾಲೌಕಿಕಗಳ ಸಮ್ಮಿಳನದ ರಸಸಿಂಧು ಅದೃಶ್ಯವಾಯಿತು.

ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು. ನಾನು ಬೆಂಗಳೂರಿನ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆಗ ತೀ.ನಂ. ಶ್ರೀಕಂಠಯ್ಯನವರು ಆ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ನಮಗೆ ಪಾಠಮಾಡುತ್ತಿದ್ದರು. ಒಂದು ದಿನ ಆ ಪಾಠ ಮಾಡುತ್ತಿದ್ದಾಗ ಆ ಕಾವ್ಯದಲ್ಲಿ ಬಂದ ಒಂದು ಶಬ್ದಕ್ಕೆ ಸರಿಯಾದ ಅರ್ಥಗೊತ್ತಿಲ್ಲವೆಂದರು. ಕೂಡಲೆ ಆ ಶಬ್ದಕ್ಕೆ ನನಗೆ ತಿಳಿದಿದ್ದ ನಮ್ಮ ಕಡೆಯ ಅರ್ಥವನ್ನು ಹೇಳಿದೆ. ಅವರು ನಾನು ಹೇಳಿದ ಅರ್ಥವನ್ನು ಗುರುತು ಮಾಡಿಕೊಂಡರು. ಅಲ್ಲಿಗೆ ನನ್ನ ಅವರ ಗುರುಶಿಷ್ಯ ಸಂಬಂಧ ತಾತ್ಕಾಲಿಕವಾಗಿ ತಪ್ಪಿಹೋಯಿತು. ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಹೊರಟು ಹೋದರು. ನಾನು ಇತ್ತ ಮೈಸೂರು ಮಹಾರಾಜಾ ಕಾಲೇಜನ್ನು ಸೇರಿ ಕನ್ನಡ ಎಂ.ಎ. ಪದವಿಯನ್ನು ಮುಗಿಸಿದೆನು. ಮತ್ತೆ ಈ ಎಂ.ಎ. ಪದವಿಯ 'viva-voce' ಪರೀಕ್ಷೆಯಲ್ಲಿ ನನ್ನ ಗುರುಗಳ ಸಂದರ್ಶನವಾಯಿತು. ಆ ವೇಳೆಗೆ ಅವರು ನಾನು ಅವರ ವಿದ್ಯಾರ್ಥಿಯಾಗಿದ್ದೆನೆಂಬುದನ್ನೇ ಮರೆತು ಬಿಟ್ಟಂತೆ ಕಂಡಿತು. ಪರೀಕ್ಷೆಯಲ್ಲಿ ನನ್ನನ್ನು ಹಿಗ್ಗಿಸಿ ಜಗ್ಗಿಸಿ ನೋಡಿದರು.

ಕಾಲಕಳೆಯಿತು. ನನ್ನ ವ್ಯಾಸಂಗ ಮುಗಿದಮೇಲೆ ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಉದ್ಯೋಗವನ್ನು ಕೈಕೊಂಡೆ. ಆಗ ನಾನು ಸಂಪಾದಿಸಿ ಪ್ರಕಟಿಸಿದ್ದ ಎರಡು ಸಾಂಗತ್ಯ ಗ್ರಂಥಗಳನ್ನು ಧಾರವಾಡಕ್ಕೆ ಅವರಿಗೆ ಕಳಿಸಿಕೊಟ್ಟೆ. ಅದಕ್ಕೆ ಅವರಿಂದ ಬಂದ ಉತ್ತರ ಹೀಗಿತ್ತು. "ನೀವು ಅಪ್ರಕಟಿತವಾದ ಈ ಸಾಂಗತ್ಯ ಗ್ರಂಥಗಳನ್ನು ಶುದ್ಧವಾಗಿಯೂ, ಸುಂದರವಾಗಿಯೂ ಪ್ರಕಟಿಸುತ್ತಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ನಿಮ್ಮ ಉತ್ಸಾಹ ಇದೇ ರೀತಿ ಮುಂದುವರೆಯಲಿ. ನಿಮಗೆ ನನ್ನ ಆಶೀರ್ವಾದಗಳು."

ಇದಾದ ಕೆಲವು ವರ್ಷಗಳ ಮೇಲೆ ನನ್ನ ಮತ್ತೊಬ್ಬ ಪೂಜ್ಯ ಗುರುಗಳಾದ ಪ್ರೊ. ಡಿ.ಎಲ್. ನರಸಿಂಹಚಾರ್ಯರು ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ ಕನ್ನಡ

ನಿಘಂಟಿನ ಕೆಲಸಕ್ಕೆ ನನ್ನನ್ನು ಬರಮಾಡಿಕೊಂಡರು. ನಿಘಂಟಿನ ಕೆಲಸದಲ್ಲಿ ಕೆಲವು ವರ್ಷಗಳು ಕಳೆದ ಮೇಲೆ ಪ್ರೊ॥ ಡಿ.ಎಲ್. ನರಸಿಂಹಾಚಾರ್ಯರು ಮೈಸೂರಿಗೆ ಹಿಂತಿರುಗಿದರು. ಅದಾದ ಮೇಲೆ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಎ.ಆರ್. ಕೃಷ್ಣಶಾಸ್ತ್ರಿಗಳವರು ಆ ಕೆಲಸವನ್ನು ಬಿಟ್ಟುಕೊಟ್ಟಮೇಲೆ ಶ್ರೀ ತೀ.ನಂ.ಶ್ರೀ. ಅವರು ಸಮಿತಿಯ ಅಧ್ಯಕ್ಷರಾದರು. ಕೆಲವು ವರ್ಷಗಳಾದ ಮೇಲೆ ನಾನು ಸಂಪಾದಕನಾದೆ. ಸಂಪಾದಕನಾದ ಮೇಲೆ ನನ್ನ ಅವರ ಸಂಪರ್ಕ ನಿಕಟವಾಯಿತು.

ನಿಘಂಟಿನ ರೂಪರೇಖೆಗಳನ್ನು ನಿರ್ಧರಿಸುವಲ್ಲಿ ನನಗೂ ಅವರಿಗೂ ಹಲವಾರು ಸಲ ಜಿಜ್ಞಾಸೆ ನಡೆಯುತ್ತಿತ್ತು. ಒಮ್ಮೊಮ್ಮೆ ನಿಯಮಗಳನ್ನು ಬಲವಾಗಿ ಹಿಡಿದುಕೊಂಡು ನಾನು ವಾದಮಾಡುತ್ತಿದ್ದೆ. ಆಗ ಅವರು "ನಿನಗೆ ಗಾಂಪರೊಡೆಯರ ಕತೆ ಗೊತ್ತೇನಯ್ಯಾ?" ಎನ್ನುತ್ತಿದ್ದರು. "ಇಲ್ಲ ಅದೇನು ಸಾರ್" ಎಂದೆನ್ನುತ್ತಿದ್ದೆ. ಅದಕ್ಕೆ ಅವರು "ಒಬ್ಬ ಗುರು ಇದ್ದನಂತೆ. ಆತನಿಗೆ ಕೆಲವರು ಶಿಷ್ಯರಿದ್ದರಂತೆ. ಅವರು ಗುರುಗಳು ಹೇಳಿದ ಕೆಲಸಗಳನ್ನು ನಿಯಮದಂತೆ ಮಾಡುತ್ತಿದ್ದರಂತೆ. ಒಮ್ಮೆ ಗುರುಗಳು ಕೆಳಗೆ ಬಿದ್ದುಹೋದರಂತೆ. ಆದರೆ ಗುರುಗಳು ಕೆಳಗೆ ಬಿದ್ದಾಗ ಮೇಲಕ್ಕೆ ಎತ್ತಬೇಕೆಂದು ಅವರು ಶಿಷ್ಯರಿಗೆ ಹೇಳಿಕೊಟ್ಟಿರಲಿಲ್ಲವಂತೆ. ಕೆಳಗೆ ಬಿದ್ದಿದ್ದ ಗುರುಗಳು ಎಷ್ಟು ಕೇಳಿಕೊಂಡರೂ ಶಿಷ್ಯರು ಅವರನ್ನು ಮೇಲಕ್ಕೆ ಎತ್ತಲಿಲ್ಲವಂತೆ. ನೀವು ಕೆಳಗೆ ಬಿದ್ದಾಗ ನಿಮ್ಮನ್ನು ಎತ್ತಬೇಕು ಎಂದು ನಮಗೆ ಹೇಳಿಕೊಟ್ಟಿಲ್ಲ ಗುರುಗಳೇ ಎಂದರಂತೆ." ಈ ಕತೆಯನ್ನು ಆಗಾಗ ನಮಗೆ ಹೇಳುತ್ತಿದ್ದರು. ಇಬ್ಬರೂ ನಕ್ಕು ಸಮಾಧಾನವನ್ನು ತಂದುಕೊಳ್ಳುತ್ತಿದ್ದೆವು.

ಶ್ರೀ ತೀ.ನಂ.ಶ್ರೀ. ಅವರ ಕಾರ್ಯಕ್ರಮಗಳು ಬಹುಮಟ್ಟಿಗೆ ನನ್ನ ಮೂಲಕವೇ ನೆರವೇರುತ್ತಿದ್ದುವು. ಒಮ್ಮೆ ಅವರು ದೆಹಲಿಗೆ ಪ್ರಯಾಣ ಮಾಡಬೇಕಾಗಿತ್ತು. ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆಯನ್ನು ಮಾಡಿದ್ದೆ. ಅವರು ಸಂಪಾದಕ ಸಮಿತಿಯ ಸಭೆಗೆ ಬರುವಾಗ ರಾಮಮೋಹನ್ ಕಂಪನಿಗೆ ಹೋಗಿ ತಮ್ಮ ಪ್ರಯಾಣದ ವ್ಯವಸ್ಥೆ ಬಗ್ಗೆ ವಿಚಾರಿಸಿದರಂತೆ. ಅದಕ್ಕೆ ಅವರು 'ನಿಮ್ಮ ಅಳಿಯ ಆಗಲೇ ಟಿಕೆಟ್ ತರಿಸಿಕೊಂಡು ಬಿಟ್ಟರು' ಎಂದರಂತೆ. ಅಲ್ಲಿಂದ ನೇರವಾಗಿ ಕಚೇರಿಗೆ ಬಂದರು. ನನ್ನನ್ನು ಕಂಡ ಕೂಡಲೇ "ಏನಪ್ಪಾ ನಿನ್ನನ್ನು ನನ್ನ ಅಳಿಯ ಮಾಡಿಕೊಂಡು ಬಿಟ್ಟಿದ್ದಾರಲ್ಲ. ಹೌದು ಒಂದು ರೀತಿಯಲ್ಲಿ ನೀನು ಅಳಿಯನೇ. ನಿಘಂಟನ್ನು ನಿನಗೆ ಮದುವೆ ಮಾಡಿದ್ದೇನೆ" ಎಂದು ವಿನೋದವಾಗಿ ನುಡಿದರು. ಈ ರೀತಿ ನನ್ನನ್ನು ನಕ್ಕು ನಲಿಸಿದ ಪ್ರಸಂಗಗಳು ಹಲವಾರು.

ಶ್ರೀ ತೀ.ನಂ.ಶ್ರೀ. ಅವರ ಬರವಣಿಗೆ ನಿಷ್ಕೃಷ್ಟವಾದದ್ದು, ಸಂದೇಹಕ್ಕೆ ಎಡೆಯಿಲ್ಲದಂತಹುದು. ಯಾವ ಅಂಶವನ್ನೇ ಆಗಲಿ ಸ್ಪಷ್ಟವಾಗಿ, ಖಚಿತವಾಗಿ, ನಿರ್ದುಷ್ಟವಾಗಿ ನಿರೂಪಿಸಬೇಕೆಂಬುದು ಅವರ ದೃಷ್ಟಿ. ಸಾಮಾನ್ಯವಾದ ಬಡಪೆಟ್ಟಿಗೆ ಒಪ್ಪುವಂತಹ ಸ್ವಭಾವ ಅವರದಲ್ಲ. ಈ ಅಚ್ಚುಕಟ್ಟುತನ, ನಿಷ್ಕೃಷ್ಟತೆ, ಪ್ರಾಮಾಣಿಕತೆ ಇವು ಅವರಲ್ಲಿ ಸಾಹಿತ್ಯದಲ್ಲಿ ಮಾತ್ರವಲ್ಲದೆ ಅವರ ಜೀವನದ ಪ್ರತಿಯೊಂದು ಅಂಶದಲ್ಲಿಯೂ ಕಂಡುಬರುತ್ತಿದ್ದವು.

ಕನ್ನಡ ಸಾರಸ್ವತ ಪ್ರಪಂಚದ ಪ್ರಥಮ ಶ್ರೇಣಿಯ ಮೇಧಾವಿಗಳೂ, ವಿದ್ವನ್ಮಣಿಗಳೂ, ಉದ್ದಾಮ ಸಾಹಿತಿಗಳೂ, ಉತ್ತಮ ಸಂಶೋಧಕರು, ಭಾಷಾಶಾಸ್ತ್ರಜ್ಞರೂ, ಆಗಿದ್ದ ಪ್ರೊ॥ ತೀ.ನಂ.ಶ್ರೀ. ಅವರು ಇನ್ನಿಲ್ಲವಾದರು. ಆದರೆ ಅವರ ಚಿರಂತನ ಚೇತನ ನನ್ನ ಅಂತರಂಗ ದಲ್ಲಿ ಸದಾ ಸಂಚರಿಸುತ್ತಿದೆ. ಅವರ ಮಾರ್ಗದರ್ಶನದಲ್ಲಿ ಸದಾ ಮುಂದುವರಿಯುವಂತೆ ಪ್ರೇರೇಪಿಸುತ್ತಿದೆ. ಅವರು ನಡೆದ ದಾರಿಯಲ್ಲಿ ನಡೆದು ಅವರು ಮಾಡಬೇಕೆಂದಿದ್ದ ಕಾರ್ಯಗಳನ್ನು ಮುಂದುವರಿಸಿ ಮುಗಿಸಿದಲ್ಲಿ ನಾವು ಕೃತಕೃತ್ಯರಾಗುತ್ತೇವೆ; ಅವರ ಆತ್ಮಕ್ಕೆ ಶಾಂತಿ ಲಭಿಸುತ್ತದೆ.

ನನ್ನ ಮೆಚ್ಚಿನ ಪೂಜ್ಯಗುರುಗಳ ನಿಧನದಿಂದ ವೈಯಕ್ತಿಕವಾಗಿ ನನಗೆ ಅಪಾರವಾದ ನಷ್ಟವಾಗಿದೆ. ನಮ್ಮ ಕೋಶದ ಶ್ವಾಸವೇ ಹೋದಂತಾಗಿದೆ. ನಾನು ಅವರ ವಿದ್ಯಾರ್ಥಿಯಾಗಿ ಅವರಿಂದ ಕಲಿತದ್ದು ಸ್ವಲ್ಪ; ಆದರೆ ನಿಘಂಟಿನ ಸಂಪಾದಕನಾಗಿ ಕಲಿತದ್ದು ಅಪಾರ. ನನ್ನ ಕೆಲಸಕಾರ್ಯಗಳನ್ನು ಮನಸಾರೆ ಮೆಚ್ಚಿಕೊಂಡು ನನ್ನನ್ನು ಸದಾ ಸನ್ಮಾರ್ಗದತ್ತ ಪ್ರವೃತ್ತಗೊಳಿಸುತ್ತಿದ್ದ ನನ್ನ ಗುರುವಿಗೆ ಮನದಲ್ಲಿಯೇ ಮಣಿದು ಮೌನವಾಗಿರುವುದೇ ಮಹಾಮಂಗಲ. ಹಿಂತಿಲ್ಲದ ಗುರು ಮುಂಬಾರದ ಗುರು ಎಂದೆಂದಿಗೂ ನೀನೇ ನನ್ನ ಗುರು. ಇದೋ ನಿನಗೆ ನನ್ನ ಅನಂತ ಪ್ರಣಾಮ.

ಸಹೃದಯಿ-ವಾಗ್ಮಿ ತೀ.ನಂ.ಶ್ರೀ.

ಅ.ರಾ. ಮಿತ್ರ

●

ಕೆಲವು ದಿವಸಗಳ ಹಿಂದೆ ತೀ.ನಂ.ಶ್ರೀ. ಅವರ ಅರವತ್ತನೆಯ ಹುಟ್ಟುಹಬ್ಬವನ್ನು ಹೇಗೆ ಆಚರಿಸಬೇಕೆಂಬ ಬಗ್ಗೆ ನಾವು ಕೆಲವರು ಗೆಳೆಯರು ಸಮಾಲೋಚನೆ ನಡೆಸಿದ್ದೆವು. ಅಲ್ಲದೆ ಅವರ ಹುಟ್ಟುಹಬ್ಬದ ಸವಿನೆನಪಿಗೆ 'ಕನ್ನಡನುಡಿ'ಯ ಕೆಲವು ಪುಟಗಳನ್ನು ಮೀಸಲಿರಿಸಿ ಲೇಖನಗಳಿಗಾಗಿ ಹಲವರನ್ನು ಪ್ರಾರ್ಥಿಸುವ ವಿಚಾರವಾಗಿ ಸಂಪಾದಕ ಮಿತ್ರರಾದ ವೆಂಕಟೇಶ ಸಾಂಗಲಿಯವರೊಂದಿಗೆ ನಾನು ಮಾತುಕತೆ ನಡೆಸಿದ್ದೆ. ಆದರೆ ಹಾಗೆಂದುಕೊಂಡ ಕೆಲವೇ ದಿನಗಳೊಳಗೆ ಮತ್ತೆ ಸಭೆ ಸೇರಿ ತೀ.ನಂ.ಶ್ರೀ. ಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಈ ಸಂಚಿಕೆಯ ವಿಷಯವಾಗಿ ಮಾತುಕತೆ ನಡೆಸಬೇಕಾಗಿ ಬಂದದ್ದು ನಮ್ಮೆಲ್ಲರ ದುರದೃಷ್ಟ. ತೀ.ನಂ.ಶ್ರೀ. ತೀರಿಕೊಂಡ ವಾರ್ತೆ ಕೇಳಿ ಕನ್ನಡಲೋಕ ತತ್ತರಿಸಿತು. ಅವರ ಗೆಳೆಯರು ಹಾಗೂ ಶಿಷ್ಯರುಗಳಂತೂ ನೆಲೆ ತಪ್ಪಿದ ಹಕ್ಕಿಗಳಂತೆ ಒಬ್ಬರು ಇನ್ನೊಬ್ಬರ ಬಳಿಗೋಡಿ ಚೀರಾಡಿದರು. ನಮಗಂತೂ ಈಗಲೂ ಆ ವಾರ್ತೆಯನ್ನು ನಂಬಲು ಕಷ್ಟವಾಗುತ್ತಿದೆ. ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ಅವರ ವ್ಯಕ್ತಿತ್ವ, ಮಾತು, ನಡಿಗೆಗಳು ಜೀವಂತವಾಗಿ ಉಳಿದುಕೊಂಡಿರುವಂತೆ ಭಾಸವಾಗುತ್ತಿದೆ. ತೀ.ನಂ.ಶ್ರೀ. ಇನ್ನಿಲ್ಲ. ಮಾತಿನಲ್ಲಿ ರಮ್ಯ ನಗೆಗಂಧವನ್ನು ಬೀರುತ್ತಿದ್ದ ಆ ಕಂಠಶ್ರೀ ಇನ್ನಿಲ್ಲ. ಕಿತ್ತಳೆಯಂತೆ ರಕ್ತತುಂಬಿ ಪುಟಿಯುತ್ತಿದ್ದ ಆ ಮುಖಶ್ರೀ ಇನ್ನಿಲ್ಲ. ಆದರೆ ಆ ದಪ್ಪತುಟಿಯ ಮಂದಹಾಸದ ಮುಖವನ್ನು ನೆನೆಸಿಕೊಂಡರೆ ಹಾಗೆನ್ನಿಸುವುದೇ ಇಲ್ಲ. ಕನ್ನಡಕ್ಕೆ ಎಂಥ ದುರ್ದೆಸೆ! ಯಾವ ಪುಣ್ಯನಾಮರ ಅರವತ್ತನೆಯ ಹುಟ್ಟುಹಬ್ಬದ ಸವಿನೆನಪಿನಿಂದ ಹಲವಾರು ಸಂಘಸಂಸ್ಥೆಗಳು ಪುನೀತವಾಗಬೇಕಿತ್ತೋ, ಯಾರ ಅಧಿಕಾರವಾಣಿಯ ಸಮೃದ್ಧ ಸಂಪತ್ಪೂರ್ಣ ಉಕ್ತಿಮುಕ್ತಾಫಲಗಳಿಂದ ಕನ್ನಡ ಸಾಹಿತ್ಯ ಸಮ್ಮೇಳನದ ಒಂದು ಅಧ್ಯಕ್ಷ ಭಾಷಣ ಮೈತುಂಬಿಕೊಳ್ಳಬೇಕಾಗಿತ್ತೋ, ಯಾರ ಸಮರ್ಥ ಶ್ರದ್ಧಾಪೂರ್ಣ ನೇತೃತ್ವದಲ್ಲಿ ಕನ್ನಡ-ಕನ್ನಡ ನಿಘಂಟಿನ ಶಿಲ್ಪ ರೂಪುಗೊಳ್ಳಬೇಕಾಗಿತ್ತೋ, ಯಾರ ವಿಚಾರ ದೋಹಳದಿಂದ ಕನ್ನಡ ಭಾಷಾಶಾಸ್ತ್ರ, ಛಂದಶ್ಶಾಸ್ತ್ರ, ಸಂಪಾದನಶಾಸ್ತ್ರವೇ ಮೊದಲಾದ ಹಲವು ವೃಕ್ಷಗಳು ಪುಷ್ಪಫಲ ಸಮೃದ್ಧಿ ಪಡೆಯಬೇಕಿತ್ತೋ, ಯಾರ ಇರುವಿಕೆಯಿಂದ ಕನ್ನಡ ಸಹೃದಯ ಲೋಕ ಹೆಮ್ಮೆಯಿಂದ ತಲೆಯೆತ್ತಿ ನಿಲ್ಲಬಹುದಾಗಿತ್ತೋ.... ಆ ಕಲಾರಾಧಕ ತೀ.ನಂ.ಶ್ರೀ. ತೀರಿಕೊಂಡರು.

ನಾನು ಮೊದಲು ತೀ.ನಂ.ಶ್ರೀ. ಯವರನ್ನು ನೋಡಿದ್ದು ಒಂಬತ್ತು ವರ್ಷಗಳ ಹಿಂದೆ. ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ, ಆಗ ಧಾರವಾಡದಲ್ಲಿದ್ದ ತೀ.ನಂ.ಶ್ರೀ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಭಾಷಾವಿಜ್ಞಾನವನ್ನು ಕುರಿತು ಮೂರು ಉಪನ್ಯಾಸಗಳನ್ನು ಕೊಡಲು ಬಂದ ಸಂದರ್ಭ ಅದು. ಆನಂತರ ಅವರು ನಮ್ಮ ಪುಣ್ಯದಿಂದ ಮಹಾರಾಜಾ ಕಾಲೇಜಿಗೇ ಪ್ರಾಧ್ಯಾಪಕರಾಗಿ ಬಂದರು. ಎರಡು ವರ್ಷ ನಮಗೆ ಭಾಷಾಶಾಸ್ತ್ರ, ಕಾವ್ಯಮೀಮಾಂಸೆ ಈ ವಿಷಯಗಳನ್ನಾರಿಸಿಕೊಂಡು ಪ್ರವಚನ ಮಾಡಿದರು. ತೀ.ನಂ.ಶ್ರೀ. ಅವರ ಧೀರೋನ್ನತ ವ್ಯಕ್ತಿತ್ವವನ್ನು ನೋಡಿದಾಗಲೆಲ್ಲಾ ನಮಗೆ ಪಂಪನ "ಸಾಲಪ್ರಾಂಶುವಿಶಾಲ ಲೋಲ ನಯನಂ ಪ್ರೋದ್ಯದ್ವೃಷಸ್ಕಂಧನ್..." ಎಂಬ ಚಿತ್ರ ನೆನಪಾಗುತ್ತದೆ. ಸ್ವಚ್ಛತೆಗೆ ಕೈ ಕಾಲು ಮೂಡಿಸಿ ಬಟ್ಟೆ ತೊಡಿಸಿದಂತೆ ಅವರ ವ್ಯಕ್ತಿತ್ವ, ಮುಚ್ಚುಗೊರಳಿನ ಕೋಟು, ಚೆನ್ನಾಗಿ ನಿರಿಗೆ ತಿದ್ದಿದ ಪಂಚೆ, ಕೆಂಬಣ್ಣದ ವಿಶಾಲ ಫಾಲದಲ್ಲಿ ಮಿಂಚುವ ಕಾಂತಿ, ಕಿವಿಯಿಂದ ಕಣ್ಣಿನ ಹೊರವಳ್ಳದವರೆಗೆ ಒತ್ತಿರುವ ಕನ್ನಡಕದ ಗೆರೆ, ಸಂಭಾಷಣೆಗೆ ತೊಡಗಿ ನಗೆ ಮಿಂಚಿನಿಂದ ಶಾಖ ಪಡೆದಾಗ, ಕಾಯಿಸಿದ ತಮಟೆಯಂತೆ ಕೆಂಪಗಾಗುವ ಮುಖ, ಆಗತಾನೇ ಕ್ಷೌರ ಮಾಡಿಸಿಕೊಂಡ ಮತ್ತ ಹೂಣನ ಚಿಬುಕದೊಂದಿಗೆ ಸ್ಪರ್ಧಿಸಬಲ್ಲ ಕಿತ್ತಳೆಯಂತಹ ಕೆನ್ನೆ, ಕೈಯ ಲೇಖನಿಯನ್ನು ಆಗಾಗ ಮೈಸವರುತ್ತ, ತೊಡೆಗಳನ್ನು ತೂಗುತ್ತ, ತೋಳನ್ನು ಆಗಾಗ ಮೇಲೆತ್ತಿ, ಕನ್ನಡಕದ ಕಟ್ಟನ್ನು ಸರಿಪಡಿಸಿಕೊಳ್ಳುತ್ತ ಉಚ್ಚಕಂಠದಲ್ಲಿ ಸಾಗುವ ಅವರ ಉಪನ್ಯಾಸ ಕ್ರಮ – ಇವೆಲ್ಲಾ ಈಗಲೂ ನಮ್ಮ ಬಗೆಗಣ್ಣಿನಲ್ಲಿ ನಿಚ್ಚಳವಾಗಿ ಮೂಡಿವೆ.

ಶಾಲೆಯಲ್ಲಿ ಮತ್ತು ಹೊರಗೆ ನಾನು ತೀ.ನಂ.ಶ್ರೀ. ಅವರ ಉಪನ್ಯಾಸಗಳನ್ನು ಕೇಳಿದ್ದೇನೆ. ಎಲ್ಲ ದೃಷ್ಟಿಗಳಿಂದಲೂ ಅವರು ಒಬ್ಬ ಆದರ್ಶ ವಾಗ್ಮಿಯಾಗಿದ್ದರು. ಒಂದು ಮಾತಿನಲ್ಲಿ ಹೇಳುವುದಾದರೆ ಅವರ ಉಪನ್ಯಾಸವನ್ನು ಒಂದು ಹದವಾದ ಸಕಾಲಿಕ ಮಳೆ ಎನ್ನಬಹುದು. ಸುರಿದ ನೆಲದಲ್ಲಿ ಮೆಚ್ಚಿಕೆಯ ಮಣ್ಣನ್ನು ಪರಿಮಳಿಸಿ, ವಿಚಾರದ ಹಸಿರನ್ನು ಮೊಳೆಸಿ ಸತ್ವವನ್ನು ಬೆಳೆಸುವಂಥದಾಗಿತ್ತು ಅವರ ಉಪನ್ಯಾಸ. ರಸಗಳನ್ನು ಸವಿಗೊಳಿಸುವ ಕುಶಲ ಕರ್ಮದಲ್ಲಿ ನಿರತವಾದ ಕವಿದೃಷ್ಟಿ, – ವಿಷಯಗಳನ್ನು ಇರುವ ತೆರದಲ್ಲಿಯೇ ತೆರೆದು ಕಾಣಿಸುವ ದೃಢವಾದ ಪಂಡಿತ ದೃಷ್ಟಿ ಇವೆರಡೂ ಶ್ರೀ ತೀ.ನಂ.ಶ್ರೀ. ಯವರಲ್ಲಿ ಸಂಗಮಿಸಿದ್ದುವು. ನಿಘಂಟಿನ ಮೊದಲ ಸಂಚಿಕೆಯ ಬಿಡುಗಡೆಯ ಸಮಾರಂಭದಲ್ಲಿ ಅವರು ಮಾಡಿದ ಉಜ್ವಲ ಭಾಷಣವನ್ನು (೧೯೫೮ರಲ್ಲಿ ಕನ್ನಡ ಆನರ್ಸ್ ವಿದ್ಯಾರ್ಥಿಗಳ ವ್ಯಾಸಂಗ ಗೋಷ್ಠಿಯಲ್ಲಿ ಅವರು ಮಾಡಿದ ಭಾಷಣವೂ ಇಷ್ಟೇ ಉಜ್ವಲವಾಗಿತ್ತು) ಕೇಳಿದವರಾರೂ ಮರೆತಿಲ್ಲ. ಕೆರೆಕಟ್ಟೆ ಬಾವಿಗಳು ಮೈತೆಗೆದರೆ ಬರಿಯ ಗುಳ್ಳೆಗೊರಜೆಗಳು ಕಾಣಿಸುತ್ತವೆ. ಆದರೆ ವಾರಿಧಿ ಮೈತೆಗೆದರೆ...! ಎಂದು ಬಸವಣ್ಣನವರು ಒಂದು ಕಡೆ ಊಹಿಸಿ ಶಿವಶರಣರು ಮನತೆಗೆದು ಮಾತನಾಡಿದರೆ 'ಲಿಂಗ'ವೆ ಕಾಣಬಹುದು ಎಂದಿದ್ದಾರೆ. ತೀ.ನಂ.ಶ್ರೀ. ಯವರಂತಹ ಸಾಹಿತ್ಯಶರಣರ ಪ್ರಸ್ಫುಟ ವಾಣಿಯೂ ಅದೇ ಬಗೆಯದು. ಅವರ ಒಂದೊಂದು ಉಪನ್ಯಾಸ ಕೇಳಿದಾಗಲೂ ನಮಗೆ ಭಾವ ಪ್ರಪಂಚದ ಹೊಸ ದ್ವೀಪಗಳ ರಸಯಾತ್ರೆ ಮಾಡಿದ ಅನುಭವವಾಗಿದೆ.

ತೀ.ನಂ.ಶ್ರೀ. ಅಧ್ಯಾಪನ ವೃತ್ತಿಯನ್ನು ಒಂದು ಪವಿತ್ರ ಕಾಯಕವೆಂದು ನಂಬಿ ಬಂದವರು. ಜನಪ್ರಿಯ ಅಧ್ಯಾಪಕನಿಗೆ ನಿರಂತರವಾದ ಗ್ರಂಥಾಭ್ಯಾಸದಿಂದ ಒದಗುವ ಆತ್ಮತೃಪ್ತಿಯನ್ನು ಅರಿತವರು. ಶ್ರೇಷ್ಠಮಟ್ಟದ ಸಹೃದಯತೆಯಿಂದ ಗೆಳೆಯ ಸಾಹಿತಿಗಳ ಬರೆವಣಿಗೆಗೆ ಜೀವ ತುಂಬಿದವರು. ಕನ್ನಡ ಭಾಷೆ, ಸಾಹಿತ್ಯ, ಛಂದಸ್ಸು ಮೊದಲಾದ ಎಲ್ಲ ಬುದ್ಧಿ ಶಾಖೆಗಳಲ್ಲೂ ತುಂಬಿಕೊಂಡಿದ್ದ ಮಂಜನ್ನು ಕರಗಿಸಲು ನೆರವಾದವರು. ಇಂಥ ಮೊದಲಿಗರ ಸಾಧನೆ, ತೇಲುಗಣ್ಣಿಗೆ ಅಲ್ಪವೆಂದು ಕಂಡೀತು, ಆದರೆ ಇಷ್ಟು ಮಾತ್ರ ನಿಜ; ಮುಂದೆ ಬರಲಿರುವ ಜ್ಞಾನ ಶಾಖೆಯ ಕನ್ನಡ ಉದ್ಗ್ರಂಥಗಳು ತೀ.ನಂ.ಶ್ರೀ. ಯವರ ಋಣಭಾರದಿಂದ ಜಗ್ಗಿಹೋಗಿರುತ್ತವೆ.

'ಪರಿಷ್ಕಾರ ಪ್ರಿಯತೆ' ತೀ.ನಂ.ಶ್ರೀ.ಯವರಲ್ಲಿ ಮರೆಯಲಾಗದ ಒಂದು ಗುಣವಾಗಿದೆ. ಒಂದು ಗ್ರಂಥವನ್ನು ಟೇಬಲ್‌ಮೇಲೆ ಇಡುವಾಗ ಅದನ್ನು ಇಂಥ ಕಡೆ ಇಡಬೇಕೆಂದು ಯೋಚಿಸಿ ಇಡುತ್ತಿದ್ದರು. ಲೇಖನ ವ್ಯವಸಾಯದಲ್ಲೂ ಇದೇ ಗುಣ ಅವರದು. ಸಾಮಾನ್ಯವಾಗಿ ಬಳಸುವ ಶಬ್ದಗಳಿಗೂ ಕೂಡ ತಮ್ಮ ಪರಿಷ್ಕರಣದ ಕವಾಯತು ಶಿಸ್ತುಗಳನ್ನು ಕಲಿಸುತ್ತಿದ್ದರು. ನೆಂಟರು, ಶಥಪಥ, ತಿಗಣೆ ಎಂಬ ಶಬ್ದಗಳನ್ನು ನಾವು ಎಷ್ಟು ಸುಲಭವಾಗಿ ಬಳಸುತ್ತೇವೆ. ಆದರೆ ತೀ.ನಂ.ಶ್ರೀ. ಯವರು ನಂಟರು, ಶತಪಥ, ತಗುಣೆ ಎಂದೇ ತಿದ್ದಿ ಬರೆದರು. ಕರಡಚ್ಚು ತಿದ್ದುವುದರಿಂದ ಹಿಡಿದು ಮುದ್ರಿತ ಪುಸ್ತಕದ ರಟ್ಟು, ಕಾಗದ, ಬೆಲೆಗಳ ನಿರ್ಧಾರದ ವಿಷಯದವರೆಗೆ ಎಲ್ಲ ಹಂತಗಳಲ್ಲೂ ಸಮಾನ ಆಸಕ್ತಿ ಅವರಿಗೆ. ಗ್ರಂಥಗಳಲ್ಲಿ ಅಚ್ಚಿನ ದೋಷಗಳಾಗಿದ್ದರೆ ಅವರು ಸಹಿಸುತ್ತಿರಲಿಲ್ಲ. ಅದಕ್ಕೆ ಒಂದು ನಿದರ್ಶನ ಕೊಡುವುದಾದರೆ ಅವರ 'ಭಾರತೀಯ ಕಾವ್ಯಮೀಮಾಂಸೆ' (ಮೊದಲ ಮುದ್ರಣ) ಯ ೧೫೦–೧೫೧ನೆಯ ಪುಟಗಳಲ್ಲಿ 'ಪ್ರಶಂಸೆ' ಎಂಬುದಕ್ಕೆ 'ಪ್ರಶಂಷೆ' ಎಂದು ತಪ್ಪಾಗಿ ಮುದ್ರಿತವಾಗಿದೆ. ಅದನ್ನು ಕ್ಲಾಸಿನಲ್ಲಿ ಒಂದು ಸಲ ಪ್ರಸ್ತಾಪಿಸುತ್ತಾ ತೀ.ನಂ.ಶ್ರೀ. ಹೇಳಿದರು : "ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಆ ಶಬ್ದ ನೋಡಿದಾಗ ನನಗಂತೂ ಇಡೀ ದಿನ ಊಟ ಸೇರಲಿಲ್ಲ."

ಇಂಥ ಪರಿಷ್ಕಾರ ಪ್ರಿಯತೆ, ಅಧ್ಯಯನ ಪಟುತ್ವ, ಹಿತವಾದ ಸಾರವತ್ತಾದ ವಾಗ್ಮಿತೆ, ಸಹೃದಯತೆ – ಇವುಗಳನ್ನು ರೂಢಿಸಿಕೊಂಡಿದ್ದ ಆಚಾರ್ಯ ತೀ.ನಂ.ಶ್ರೀ.ಯವರನ್ನು ಕನ್ನಡಲೋಕ ಎಂದಿಗಾದರೂ ಮರೆತೀತೆ? ಸತ್ಕಾವ್ಯದಂತೆ ಅವರ ವ್ಯಕ್ತಿತ್ವ. ತೀ.ನಂ.ಶ್ರೀ. ಯವರೇ ಒಂದು ಕಡೆ ಕಾವ್ಯವನ್ನು ಪರಿಮಳದಲ್ಲಿ ಅದ್ದಿದ ಕರವಸ್ತ್ರಕ್ಕೆ ಹೋಲಿಸಿ ವಸ್ತ್ರ ಒಣಗಿದ ಮೇಲೂ ಅದರ ಪರಿಮಳ ಉಳಿಯುತ್ತದೆ ಎಂದಿದ್ದಾರೆ. ತೀ.ನಂ.ಶ್ರೀ.ಯವರ ಪಾರ್ಥಿವ ಶರೀರ ಇಂದು ನಮ್ಮೆದುರಿಗಿಲ್ಲದಿದ್ದರೂ ಅವರ ಚೇತನ ಕನ್ನಡ ಸಹೃದಯರ ಚಿತ್ತದಲ್ಲಿ ವಾಸನಾತ್ಮಕವಾಗಿ ಸುಳಿದಾಡುತ್ತದೆ ಎಂದು ನಂಬಿರುವವರಲ್ಲಿ ನಾನೊಬ್ಬ.

ಕಣ್ಮರೆಯಾದ ಶ್ರೀ ತೀ.ನಂ. ಶ್ರೀಕಂಠಯ್ಯನವರು

ಸಿ.ಕೆ. ವೆಂಕಟರಾಮಯ್ಯ

●

ನಮ್ಮ ನಾಡಿನ ವಿದ್ವನ್ಮಣಿಗಳಲ್ಲಿ ಶ್ರೇಷ್ಠರಲ್ಲೊಬ್ಬರೆಂದು ಪ್ರಖ್ಯಾತರಾಗಿದ್ದ ಶ್ರೀ ತೀ.ನಂ. ಶ್ರೀಕಂಠಯ್ಯ ನವರು ಕಣ್ಮರೆಯಾದುದು ಅತ್ಯಂತ ದುಃಖಕರವಾದ ಸಂಗತಿ. ಅವರ ಅಕಾಲ ನಿಧನದಿಂದ ಕನ್ನಡ ನಾಡುನುಡಿಗಳಿಗೆ ಅಪಾರ ನಷ್ಟವುಂಟಾಗಿದೆ. ಅವರು ಕಣ್ಮರೆಯಾದರೆಂಬು ದನ್ನು ನಂಬುವುದೇ ಕಷ್ಟವಾಗಿದೆ. ಹಿರಿಯ ವಯಸ್ಸಿನ ಬಂಧು ಮಿತ್ರರಿಗಂತೂ, ಕಿರಿಯ ವಯಸ್ಸಿನವರನ್ನು ಕಳೆದುಕೊಳ್ಳುವುದು ವಿಶೇಷ ದುಃಖಕರ. ಶ್ರೀ ತೀ.ನಂ. ಶ್ರೀಕಂಠಯ್ಯನವರು ನಮ್ಮನ್ನಗಲಿ ಹೋದುದರಿಂದ ಸಾಹಿತ್ಯಾಕಾಶದಲ್ಲಿ ಬೆಳಗುತ್ತಿದ್ದ ದೊಡ್ಡದೊಂದು ನಕ್ಷತ್ರವೇ ಕಳಚಿಬಿದ್ದು ತುಂಬಲಾಗದ ತೆರಪನ್ನುಂಟುಮಾಡಿದಂತಾಗಿದೆ. ಅವರ ಕುಟುಂಬದವರ ದುಃಕಕ್ಕೆ ಪಾರವೇ ಇಲ್ಲ.

ಶ್ರೀ ತೀ.ನಂ. ಶ್ರೀಕಂಠಯ್ಯನವರನ್ನು ಮೊಟ್ಟಮೊದಲು ನೋಡಿದುದೂ, ಅವರ ಪರಿಚಯ ವನ್ನು ಪಡೆದುದೂ, ಅವರು ಪ್ರೊಬೇಷನರಿ ಅಮಲ್ದಾರಿ ಹುದ್ದೆಯನ್ನು ತ್ಯಜಿಸಿ ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಶಾಖೆಯಲ್ಲಿ ಬೋಧಕರಾಗಿ ("ಲೆಕ್ಚರರ್" ಹುದ್ದೆಗೆ) ಸೇರಿದ ಬಳಿಕ ಸ್ವಲ್ಪ ಕಾಲದ ಮೇಲೆ ; ೧೯೨೯ನೆಯ ಅಥವಾ ೧೯೩೦ನೆಯ ಸಂವತ್ಸರದಲ್ಲಿ ಮೈಸೂರು ನಗರದಲ್ಲಿ ನಡೆಯುತ್ತಿದ್ದ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನ ಕಾಲದಲ್ಲಿ; ಅವರು ಅಗಿಂದಲೂ ನನ್ನ ಮಿತ್ರರಾಗಿದ್ದರು. ಅವರ ಪರಿಚಯ ಲಾಭವನ್ನು ಪಡೆದಾಗ ವಂದನೆ ಪ್ರತಿವಂದನೆಗಳಾದ ಮೇಲೆ ನಾನು ಮೌನದಿಂದಿದ್ದುದನ್ನು ಕಂಡು, ಅವರನ್ನು ಪರಿಚಯ ಮಾಡಿಕೊಟ್ಟ ಮಿತ್ರರು, "ಇದೇಕೆ ಹೀಗೆ ಮಾತೇ ಆಡದೆ ನಿಂತಿದ್ದೀರಿ?" ಎಂದು ಕೇಳಿದರು. ನಾನು "ಇವರ ಪರಿಚಯವನ್ನು ಪಡೆಯಬೇಕೆಂದಿದ್ದ ನನ್ನ ಅಭಿಲಾಷೆಯೇನೊ ನಿಮ್ಮಿಂದ ನೆರವೇರಿತು. ಆದರೆ ಇವರನ್ನು ನೋಡಿದಾಗ ನನ್ನ ಮನಸ್ಸಿನಲ್ಲಿ ಹೊಳೆದುದನ್ನು ಹೇಳಲೋ ಬೇಡವೋ–ಎಂತ ಅನುಮಾನ ಬಂತು. ಅದರಿಂದ ಸುಮ್ಮನಿದ್ದೆ" ಎಂದು ಉತ್ತರ ಹೇಳಿದೆ. ಶ್ರೀ ಶ್ರೀಕಂಠಯ್ಯನವರು ತಮ್ಮದೇ ಆದೊಂದು ಉತ್ಸಾಹದಿಂದ "ಹೇಳಿ, ಹೇಳಿ" ಎಂದರು. ನಾನು "ನಿಮ್ಮ ಆಕಾರವನ್ನೂ, ದೇಹದಾರ್ಢ್ಯವನ್ನೂ, ದೇಹದ ಬಣ್ಣವನ್ನೂ, ಸುಂದರ ರೂಪವನ್ನೂ ನೋಡಿ ಸಂತೋಷವಾಯಿತು. ನೀವು ಬಣ್ಣ, ಗ್ಲಿಜರೀನ್ ಇಲ್ಲದೆಯೇ ಭರ್ಜರಿಯಾಗಿ ನಾಟಕದಲ್ಲಿ ಪಾತ್ರ–ದೊಡ್ಡಪಾತ್ರವಹಿಸೋ ಹಾಗಿದ್ದೀರಿ ಎಂದು ತೋರಿತು"

ಎಂದೆ. ಅವರು ಗಹಗಹಿಸಿ ನಕ್ಕು "ಈ 'ಕಾಂಪ್ಲಿಮೆಂಟ್' ಸರಿಯೋ ಅಲ್ಲವೋ ಹೇಳಲಾರೆ. ಆದರೆ, ನೀವು ಹೇಳಿದಷ್ಟೇ ಸಾಲದಲ್ಲಾ! ಅಭಿನಯ ಕೌಶಲ್ಯವೂ ಬೇಕಲ್ಲಾ! 'ಆಕ್ಟಿಂಗ್' ಗಂಧವೇ ಇಲ್ಲದೆ ಸ್ಟೇಜ್ ಮೇಲೆ ಬಂದು ನಿಂತರೆ ಮುಂದಿನ ಪರಿಣಾಮ...." ಎಂದು ಅರ್ಥೋಕ್ತಿಯಲ್ಲೇ ನಕ್ಕರು; ನಾನೂ ನಗುತ್ತ "ಮೇಧಾವಿಗಳಾದ ನೀವು 'ಸ್ಟೇಜ್' ಮೇಲೆ ನಿಂತರೆ 'ಆಕ್ಟಿಂಗ್' ಕೊರತೆಯೆ?" ಎಂದೆ. ಅವರು ಕೂಡಲೆ, "ನಾನು ರೆವೆನ್ಯೂ ಡಿಪಾರ್ಟ್‌ಮೆಂಟ್ ಬಿಟ್ಟು ಯೂನಿವರ್ಸಿಟೀಗೆ ಬಂದದ್ದಕ್ಕೇ ಅನೇಕರ ಆಕ್ಷೇಪಣೆಗಳನ್ನ ಕೇಳಬೇಕಾಗಿದೆ. ನೀವು ನನ್ನನ್ನು 'ಸ್ಟೇಜ್' ಮೇಲಕ್ಕೆ ಸಾಗಹಾಕಬೇಕೆಂದಿದ್ದೀರಿ. ಆಕ್ಷೇಪಣೆಗಳ ಸುರಿಮಳೆಗೇ ದಾರಿ ಮಾಡಿಕೊಡ್ತಾ ಇದ್ದೀರಿ" ಎಂದುಹೇಳಿ ಮತ್ತೆ ನಕ್ಕರು; ನಾವಿಬ್ಬರೂ ಬಹುಕಾಲದ ಮಿತ್ರರೆಂಬ ಭಾವನೆಯನ್ನುಂಟು ಮಾಡಿದ ಚಿತ್ತಾಕರ್ಷವಾದ ನಗು. ನಾನು "ಶ್ರೀಕಂಠಯ್ಯನೋರೆ! ನಿಮ್ಮನ್ನ ಆಕ್ಷೇಪಿಸಿದರೆ ಆಕ್ಷೇಪಿಸಲಿ! ನಿಮಗಿರುವ ಕನ್ನಡದ ಮೇಲಿನ ಅಭಿಮಾನ, ಹೆಚ್ಚಿನ ಸಂಬಳಗಳ ಭಾರಿ ಹುದ್ದೆಗಳಿಗೇರುವ ಅವಕಾಶವನ್ನು ಬಿಟ್ಟು ಬಂದ ನಿಮ್ಮ ತ್ಯಾಗ ಬುದ್ಧಿ ಇವನ್ನು ಗ್ರಹಿಸಿದವರು ನಿಮ್ಮನ್ನು ಶ್ಲಾಘಿಸಿಯೇ ಶ್ಲಾಘಿಸುತ್ತಾರೆ. ಪ್ರತಿಯೊಬ್ಬರೂ ತಮಗೆ ಯುಕ್ತವೆಂತ ತೋರಿದ ಮಾರ್ಗವನ್ನೇ ಹಿಡಿಯಲು ಸ್ವತಂತ್ರರು. ನಾನಂತೂ ನಿಮ್ಮ ಪರಿಚಯ ಪಡೆಯೋಕೆ ಬಹಳ ಆಶೆ ಪಡ್ತಾಇದ್ದೆ. ಇವೊತ್ತು ಅದಕ್ಕೆ ಅವಕಾಶ ಒದಗಿತು. ಈ ನಮ್ಮ ಮಿತ್ರರಿಂದ" ಎಂದುದನ್ನು ಕೇಳಿ ಅವರ ಮುಖವು ಸಂತೋಷದಿಂದ ಅರಳಿತು.

ಅವರು ಕೂಡಲೆ, "ಇಷ್ಟಕ್ಕೆಲ್ಲಾ ನಾನು ಅರ್ಹನಲ್ಲ. ನಾನು ಮಾಡಿದ್ದು ಸರಿಯೆಂತ ಹಿರಿಯರು ಮೆಚ್ಚಿಕೆ ಸೂಚಿಸಿದರೆ ನನಗೆ ಸಂತೋಷ. ಮೆಚ್ಚಿಕೆ ಸೂಚಿಸಿದಿರಿ. ನನ್ನ ಗುರುಗಳೂ ಮೆಚ್ಚಿಕೆ ಸೂಚಿಸಿದ್ದರು. ನನಗೆ ಅತ್ಯಂತ ಸಂತೋಷವಾಗಿತ್ತು" ಎಂದು ಹೇಳಿದರು. ಆ ಬಳಿಕ ಅವರಿಗೂ ನನಗೂ, ಅವರನ್ನು ಪರಿಚಯ ಮಾಡಿಕೊಟ್ಟ ನಮ್ಮಿಬ್ಬರ ಮಿತ್ರರಿಗೂ ಪರಸ್ಪರವಾಗಿ ನಡೆದ ಮಾತುಗಳಿಂದ ಅವರ ವಿನಯವೂ, ಅವರಿಗೆ ಕನ್ನಡ ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯಗಳ ಮೇಲಿದ್ದ ಪ್ರೀತಿಯೂ, ತಮ್ಮ ಗುರುಗಳಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರ, ಶ್ರೀ ಟಿ.ಎಸ್. ವೆಂಕಣ್ಣಯ್ಯನವರ ಮತ್ತು ಶ್ರೀ ಎಂ.ಹಿರಿಯಣ್ಣನವರ ಮೇಲೆ ಅವರಿಗಿದ್ದ ಭಕ್ತಿ ಗೌರವಗಳೂ ವ್ಯಕ್ತವಾಗಿ ನನ್ನ ಮನಸ್ಸಿಗೆ ಬಹಳ ಹರ್ಷವಾಯಿತು. ನನ್ನ ಪೂಜ್ಯ ಗುರುಗಳಾದ ಡಾಕ್ಟರ್ ಎ.ಆರ್. ಕೃಷ್ಣಶಾಸ್ತ್ರಿಗಳವರ ನೇತೃತ್ವದಲ್ಲಿ ಸ್ಥಾಪಿತವಾಗಿದ್ದ ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಕಾರ್ಯಕಲಾಪಗಳು ವಿಚಕ್ಷಣೆಯಿಂದ ನಡೆಯುತ್ತಿದ್ದುದರ ಸಂಬಂಧವಾದ ವಿಚಾರ ವಿನಿಮಯದಿಂದಲೂ ಕನ್ನಡದ ಮೇಲೆ ಶ್ರೀ ತೀ.ನಂ. ಶ್ರೀಕಂಠಯ್ಯನವರಿಗಿದ್ದ ಪ್ರೀತಿ ಮಮತೆಗಳು ವ್ಯಕ್ತವಾದುವು. ಅನಂತರ ಅವರು "ಎರಡು ಮೂರು ದಿನಗಳ ಹಿಂದೆ ಪ್ರಜಾಪ್ರತಿನಿಧಿ ಸಭೆಯ ವಿರಾಮಕಾಲದಲ್ಲಿ 'ಟೀ ಟೇಬಲ್' ಮುಂದೆ ನಿಮಗೂ ಕೆಲವರು ಸೀನಿಯರ್ ಆಫೀಸರುಗಳಿಗೂ ಬಿರುಸಿನ ಚರ್ಚೆಯಾಯಿತಂತೆ. ನೀವು 'ಟಿಕೆಟ್, ಟಿಕೆಟ್' ಅಂತಿದ್ದಿರಂತೆ ಕನ್ನಡದ ಪರವಾಗಿ ಮಾತನಾಡಿದಿರಂತೆ. ಅದೇನು ಸಂಗತಿ?" ಎಂದು ಕೇಳಿದರು. ನಾನು ನಗುತ್ತ "ಚರ್ಚೆಯೇನೋ ನಡೆಯಿತು. ಬಿರುಸಿನ ಚರ್ಚೆಯೇನೂ ಅಲ್ಲ" ಎಂದು ಉತ್ತರ ಹೇಳಿ ಸುಮ್ಮನಾದೆ. ನಡೆದಿದ್ದುದನ್ನು ತಿಳಿಸಲೇಬೇಕೆಂದು ಅವರು ಆದರದಿಂದ

ಒತ್ತಾಯ ಮಾಡಿದರು. ನಾನು, "ಹೆಚ್ಚೇನೂ ನಡೆಯಲಿಲ್ಲ. ಒಬ್ಬರು ನನ್ನನ್ನು ಕುರಿತು 'ಟಿಕೆಟ್' ಎಂಬ ಪದಕ್ಕೆ ಸರಿಯಾದ ಕನ್ನಡ ಪದವನ್ನು ಹೇಳಬೇಕೆಂದರು. ನಾನು 'ಟಿಕೆಟ್' ಎಂಬ ಇಂಗ್ಲಿಷ್ ಪದಕ್ಕೆ ಅದರ ಪಡಿಯಚ್ಚಿನಂತಿರುವ ಕನ್ನಡ ಪದವಿಲ್ಲ" ಎಂದೆ. ಇನ್ನೊಬ್ಬರು 'ಕನ್ನಡದಲ್ಲಿ ಯಾವುದೂ ಇಲ್ಲವೆ?' ಎಂದು ಪ್ರಶ್ನಿಸಿದರು. ನಾನು 'ಇದೆ. ಅದರೆ ಸರಿಯಾದ ಪದವಿಲ್ಲ' ಎಂದುದನ್ನು ಕೇಳಿ ಮತ್ತೊಬ್ಬರು 'ಈ ಬಳಸು ಮಾತೇಕ್ರಿ, ನಿಮ್ಮ ದರಿದ್ರ ಕನ್ನಡ ಭಾಷೆಯಲ್ಲಿ ಅದಕ್ಕೆ ಪ್ರಾಪರ್ ಇಕ್ವಿವಲೆಂಟ್ ಇಲ್ಲವೆಂತ ಒಪ್ಪಿಕೊಳ್ಳಿ' ಎಂದರು. ಮಗದೊಬ್ಬರು 'ನಿಮ್ಮ ಸಲ್ಯೂರ್ಷ ಏನು ಹಾಗಾದ್ರೆ?' ಎಂದು ಕೇಳಿದರು'. ನಾನು, 'ಕನ್ನಡ ಕೊಂಬಿನ ಭಾಷೆ. ಒಂದು ಕೊಂಬು ಸೇರಿಸಿ, ಟಿಕೆಟ್ಟು- ಎಂದು ರೂಪಾಂತರಗೊಳಿಸಿದರಾಯಿತು' ಎಂದು ಅವರಿಗೆ ಉತ್ತರ ಹೇಳಿದೆ; ಅವರು ಪ್ರಶ್ನೆ ಹಾಕಿದುದಕ್ಕೆ ಮುಂಚೆ ಮಾತನಾಡಿದ್ದವರು ಕನ್ನಡದ ವಿಚಾರವಾಗಿ ತಮ್ಮದೇ ಆದೊಂದು ಕುತ್ಸಿತ ಭಾವನೆಯಿಂದ 'ಅದಕ್ಕೇ ನಾನು ಹೇಳಿದ್ದು ನಿಮ್ಮ ದರಿದ್ರ ಕನ್ನಡ ಭಾಷೆಯೆಂತ' ಎಂದರು. ನಾನು 'ಹೇಗೇ ಇರಲಿ, ಕನ್ನಡ ನನ್ನ ತಾಯಿನುಡಿ, ನನಗೆ ಪವಿತ್ರ. ದರಿದ್ರ ಕನ್ನಡ ಭಾಷೆಯೆಂಬ ಮಾತು ನನಗೇನೋ ಕರ್ಣಕಠೋರ. ಕನ್ನಡ ತಾಯಿನುಡಿಯಲ್ಲದ ಹಲವರು ಮಹನೀಯರು ಕೂಡ ಕನ್ನಡದ ಮೇಲೆ ಅಭಿಮಾನ ತೋರಿಸುತ್ತಿದ್ದಾರೆ. ಇಷ್ಟಕ್ಕೂ ನಿಮ್ಮ ತಾಯಿನುಡಿಯೂ ಕನ್ನಡ. ಹೀಗಿದ್ದೂ ನೀವು ಅದನ್ನ ದರಿದ್ರ ಕನ್ನಡ ಭಾಷೆಯೆನ್ನಬಹುದೆ?' ಎಂದೆ. ಅವರು 'ನ್ಯಾಯವೆಂದರೆ ನ್ಯಾಯ. ನಾನು ಹೇಳಿದ್ದನ್ನ ಒಪ್ಪಿಕೊಳ್ರಿ, ಇಲ್ದೇ ಇದ್ರೆ ಟಿಕೆಟ್ ಅಂಬೋದಕ್ಕೆ ಕನ್ನಡ ವರ್ಡ್ ಹೇಳ್ರಿ' ಎಂದರು. ನಾನು 'ಆಗಲಿ. ಸರಿಯಾದ ಪದ ಹೇಳ್ತೀನಿ' ಎಂದೆ. ಅವರು ಉತ್ಸಾಹದಿಂದ 'ಯಾವಾಗ?' ಎಂದು ಕೇಳಿದರು. ನಾನು 'ನನ್ನ ದರಿದ್ರ ಕನ್ನಡ ಭಾಷೆಯ ಒಬ್ಬಟ್ಟು ಎಂಬುದಕ್ಕೆ ನಿಮ್ಮ ಆಢ್ಯತೆಯ ಇಂಗ್ಲಿಷ್ ಭಾಷೆಯಲ್ಲಿರುವ ಪದವನ್ನು ನೀವು ತಿಳಿಸಿದ ಉತ್ತರ ಕ್ಷಣದಲ್ಲಿ' ಎಂದೆ. ಅವರೊಬ್ಬರು ಹೊರತು ಉಳಿದವರೆಲ್ಲರೂ ನಕ್ಕರು" ಎಂದು ಹೇಳಿದೆ. ಶ್ರೀ ತೀ.ನಂ. ಶ್ರೀಕಂಠಯ್ಯನವರು ಗೊಳ್ಳನೆ ನಕ್ಕು, "ಚೆನ್ನಾಗಿ ಕೊಟ್ಟಿರಿ, ಮುಟ್ಟಿಕೊಳ್ಳುವಂತೆ ಕೊಟ್ಟಿರಿ" ಎಂದರು. ಅದು, ಕನ್ನಡ ಭಾಷೆಯ ಮೇಲಣ ಪ್ರೀತಿ ಮಮತೆಗಳು ಕನ್ನಡಿಗರಲ್ಲೇ ಬಹುಮಂದಿಗಳಲ್ಲಿ ಅಭಾವವಾಗಿದ್ದ ಕಾಲ; ಕನ್ನಡದ ಪುರೋಭಿವೃದ್ಧಿಯಲ್ಲಿ ಆಸಕ್ತಿಯಿದ್ದವರನ್ನು ಅನೇಕ ಕನ್ನಡಿಗರೇ ಅಪಹಾಸ್ಯ ಮಾಡುತ್ತಿದ್ದ ಕಾಲ. ಆ ಕಾಲದಲ್ಲಿ ಶ್ರೀ ತೀ.ನಂ. ಶ್ರೀಕಂಠಯ್ಯನವರಿಗೆ ಕನ್ನಡದ ಮೇಲಿದ್ದ ಪ್ರೀತಿ ಮಮತೆಗಳು ಶ್ಲಾಘಾರ್ಹ.

ಆ ಬಳಿಕ ಕೆಲವು ವರ್ಷಗಳ ಮೇಲೆ ನಡೆದ ಒಂದು ಸಂಗತಿಯನ್ನೂ ಸೂಚಿಸಬಹುದಾಗಿದೆ. ಮೈಸೂರು ದಸರಾ ವಸ್ತು ಪ್ರದರ್ಶನವನ್ನು ನೋಡುವುದಕ್ಕೆ ನಾನು ಹೋಗಿದ್ದಾಗ ಶ್ರೀ ತೀ.ನಂ. ಶ್ರೀಕಂಠಯ್ಯನವರನ್ನು ಕಂಡೆ. ನಾವಿಬ್ಬರೂ ಮಾತನಾಡುತ್ತ ನಿಂತೆವು. ಡಾಕ್ಟರ್ ಎಸ್. ಸುಬ್ಬರಾಯರು ಮುಂದೆ ಹೋಗುತ್ತಿದ್ದರು. ಶ್ರೀ ಶ್ರೀಕಂಠಯ್ಯನವರು ಅವರ ಕಡೆಗೆ ಬೆರಳನ್ನು ತೋರಿಸಿ "ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಯಾರೋ ಒಬ್ಬರು ಇವರ ಬಳಿಗೆ ಹೋಗಿ 'ಸಾರ್, ನನ್ನ ವೈಫ್‌ಗೆ ಫೀವರ್, ಮೊನ್ನೆ ನೈಟ್ ಬಂತು. ನಿನ್ನೆ ಈ ಹಾಸ್ಪಿಟಲ್ನಿಂದ ಮೆಡ್ಸಿನ್ ತೊಗೊಂಡು ಹೋಗಿದ್ದೆ. ತುಂಬ ಸಫರ್ ಮಾಡ್ತಿದಾಳೆ; ಮೆಡ್ಸಿನ್

ಕೊಡಬೇಕು' ಎಂದು ಕೇಳಿದರಂತೆ. ಇವರು 'ಬಾಟ್ಲ್‌ಬ್ರಿಂಗ್ ಮಾಡ್ಬೋಣಾಗಿದೆಯೆ? ಮೆಡ್ಸಿನ್ ಗಿವ್ಸ್ತೀನಿ' ಅಂದರು. ಆತ 'ಗಿವ್ಸ್ತೀನಿ ಅಂದರೇನು ಸಾರ್?' ಎಂದು ಕೇಳಿದರಂತೆ. ಇವರು 'ಕೊಡಿಸ್ತೀನಿ, ಔಷಧ ಕೊಡಿಸ್ತೀನಿ, ಅಂತ ಅರ್ಥ. ಶುದ್ಧವಾಗಿ ಇಂಗ್ಲಿಷಿನಲ್ಲಿ ಮಾತನಾಡಿ ಅಥವಾ ಶುದ್ಧವಾಗಿ ಕನ್ನಡದಲ್ಲಿ ಮಾತನಾಡಿ, ಎರಡು ಭಾಷೆಯ ಪದಗಳನ್ನೂ ಸೇರಿಸಿ ಮಾತನಾಡಬೇಡಿ' ಎಂದು ಬುದ್ಧಿವಾದ ಹೇಳಿದರಂತೆ" ಎಂದರು. ನಾವಿಬ್ಬರೂ ನಕ್ಕೆವು. ಅನಂತರ ಅವರು "ನಾನೂ ಇದರಿಂದ ದೊಡ್ಡ ಪಾಠವನ್ನು ಕಲಿತೆ. ಕನ್ನಡದಲ್ಲಿ ಮಾತನಾಡುವಾಗ ಅನವಶ್ಯಕವಾಗಿ ಇಂಗ್ಲಿಷ್ ಭಾಷೆಯ ಪದಗಳನ್ನು ಸೇರಿಸುತ್ತಿದ್ದ ಚಾಳಿಯನ್ನು ಬಿಡಬೇಕೆಂದು ನಿರ್ಧರಿಸಿದೆ. ನಾನೂ ನನ್ನ ಜೊತೆಯಲ್ಲಿರುವ ಸಹೋದ್ಯೋಗಿಗಳೂ ಕನ್ನಡದಲ್ಲಿ ಮಾತನಾಡು ವಾಗ, ನಾನಾಗಲಿ ಅವರಲ್ಲಿ ಯಾರೇ ಆಗಲಿ ಇಂಗ್ಲಿಷ್ ಭಾಷೆಯ ಪದವನ್ನು ಸೇರಿಸಿದರೆ, ಹಾಗೆ ಸೇರಿಸಿದ ಪ್ರತಿಯೊಂದು ಪದಕ್ಕೂ ಒಂದೊಂದು ಕಾಸಿನಂತೆ ದಂಡವನ್ನು ತೆರಬೇಕೆಂದು ಕಟ್ಟುಪಾಡುಮಾಡಿಕೊಂಡು ನಾವೆಲ್ಲರೂ ಅದನ್ನು ಆಚರಣೆಗೆ ತಂದಿದ್ದೇವೆ. ಈಗಲೂ ಅದನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದೇವೆ. ದಂಡವನ್ನು ತೆರದೆ ಯಾರೂ ತಪ್ಪುವಂತೆಯೇ ಇಲ್ಲ. ಶೇಖರವಾದ ದಂಡದ ಮೊಬಲಗನ್ನು ಬಹುಮತದ ತೀರ್ಮಾನುಕ್ಕನುಸಾರವಾಗಿ ವೆಚ್ಚ ಮಾಡುತ್ತೇವೆ" ಎಂದು ಹೇಳಿದರು. ಶಿಸ್ತಿನ ಮೇಲೆ ಅವರಿಗಿದ್ದ ಪ್ರೀತಿಯನ್ನು ತೋರಿಸುವ ಮಾತುಗಳವು. ವಸ್ತುಪ್ರದರ್ಶನದ ಭವ್ಯಮಂದಿರದಿಂದ ಹೊರಬಿದ್ದು ನಾವಿಬ್ಬರೂ ಒಟ್ಟಿಗೆ ಮುಂದೆ ಸಾಗಿದೆವು. ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ, ಮಾರು ಮಾರಿಗೂ (ವಸ್ತು ಪ್ರದರ್ಶನವನ್ನು ನೋಡಲು ಉತ್ಸಾಹದಿಂದ ಬರುತ್ತಿದ್ದ) ಅವರ ಶಿಷ್ಯರ "ನಮಸ್ಕಾರ ಸಾರ್," "ನಮಸ್ಕಾರ ಸಾರ್" ಎಂಬ ಸವಿನುಡಿಗಳು! ಆ ಶಿಷ್ಯರಲ್ಲಿ ಪ್ರತಿಯೊಬ್ಬರೊಡನೆಯೂ ಅವರ ಅಕ್ಕರೆಯ ಒಂದೆರಡು ಮಾತುಗಳು; ಪ್ರೀತಿ ತುಂಬಿದ ಮುಗುಳು ನಗೆ! ಅಂದು ಶ್ರೀ ತೀ.ನಂ. ಶ್ರೀಕಂಠಯ್ಯ ನವರ ಶಿಷ್ಯಪ್ರೇಮವೆಷ್ಟೆಂಬುದನ್ನು ಮನವಾರೆ ಕಂಡು ನಾನು ವಿಸ್ಮಿತನಾದೆ. ಅದನ್ನು ಅವರಿಗೆ ತಿಳಿಸಿ, "ನಿಮ್ಮ ಹೆಸರು ಶ್ರೀಕಂಠಯ್ಯನವರಲ್ಲವೆ?" ಎಂದು ಕೇಳಿದೆ. ಅವರು ಆಶ್ಚರ್ಯಚಕಿತರಾಗಿ, "ಇದೇನು ಹೀಗೆ ಕೇಳುತ್ತೀರಿ? ಇಷ್ಟು ದೀರ್ಘಕಾಲದ ಸ್ನೇಹವಿದ್ದೂ ಈ ಪ್ರಶ್ನೆಯೆ?" ಎಂದರು. ನಾನು "ಈಚೆಗೆ ನಿಮ್ಮ ಹೆಸರು 'ನಮಸ್ಕಾರ ಸಾರ್' ಎಂದು ಮಾರ್ಪಟ್ಟಿತೇನೋ–ಎಂಬ ಸಂದೇಹ ಬಂದು ಹಾಗೆ ಕೇಳಿದೆ" ಎಂದೆ. ಅವರು ಘೊಳ್ಳನೆ ನಕ್ಕರು. ಇನ್ನೆಲ್ಲಿ ಆ ನಗೆ? ಅವರ ವಿಯೋಗದ ದೆಸೆಯಿಂದ ಆ ನಗೆಯ ನೆನಪೂ ಈಗ ದುಃಖಕರವಾಗಿದೆ.

ಶ್ರೀ ತೀ.ನಂ. ಶ್ರೀಕಂಠಯ್ಯನವರು ಶ್ರದ್ಧೆಯಿಂದ ಶ್ರಮಿಸಿ ಅಗಾಧ ವಿದ್ವತ್ತನ್ನು ಗಳಿಸಿ, ಕ್ರಮ ಕ್ರಮವಾಗಿ ಮೇಲಕ್ಕೇರಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕ ಸ್ಥಾನವನ್ನ ಲಂಕರಿಸಿದರು; ಕೆಲವು ವರ್ಷಗಳ ಕಾಲ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದು ಖ್ಯಾತಿಯನ್ನು ಗಳಿಸಿದರು. ೧೯೫೫ನೆಯ ಸಂವತ್ಸರದಲ್ಲಿ ಅಮೆರಿಕಾಕ್ಕೆ ತೆರಳಿ ಭಾಷಾಶಾಸ್ತ್ರ ವ್ಯಾಸಂಗ ಮಾಡಿ ಯಶಸ್ವಿಯಾಗಿ ಭಾರತಕ್ಕೆ ಹಿಂತಿರುಗಿದರು. ಅವರ ಬಹುಮುಖವಾದ ವಿದ್ವತ್ತಿನ ಪರಿಣಾಮವಾಗಿ ಅವರು ವಿದ್ವಾಂಸರೆಲ್ಲರ ಪ್ರೀತಿ ಗೌರವಗಳಿಗೂ ಪಾತ್ರರಾಗಿ ತಮ್ಮ ಗುರುಗಳಾದ ರಾಜಸೇವಾಸಕ್ತ ಶ್ರೀ ಬಿ.ಎಂ. ಶ್ರೀಕಂಠಯ್ಯನವರಂತೆಯೇ

ಕನ್ನಡದ ಆಚಾರ್ಯರೆನಿಸಿದ್ದರು. ಅವರ ಪಾಠಪ್ರವಚನಗಳು ಪ್ರೌಢವಾಗಿಯೂ ಸ್ವಾರಸ್ಯವಾಗಿಯೂ ಇರುತ್ತಿದ್ದುವೆಂಬುದೂ, ವ್ಯಾಕರಣಶಾಸ್ತ್ರ ಭಾಷಾಶಾಸ್ತ್ರಗಳಿಂದ ಹಿಡಿದು ಕಾವ್ಯ ನಾಟಕಗಳವರೆಗೆ ಅವರು ಯಾವುದೇ ವಿಷಯವನ್ನು ಬೋಧಿಸಿದರೂ ಶಿಷ್ಯರು ಉಲ್ಲಾಸದಿಂದ ಮೈಮರೆಯುತ್ತಿದ್ದ ರೆಂಬುದೂ, ಸುಪ್ರಸಿದ್ಧವಾದ ಸಂಗತಿಗಳು; ಅವರ ಶಿಷ್ಯರನೇಕರು ಇವುಗಳನ್ನು ಹೃದಯಂಗಮ ವಾಗಿ ವರ್ಣಿಸಿದ್ದಾರೆ. ಅವರು ಬರೆದ ಗ್ರಂಥಗಳು ಸಂಖ್ಯೆಯಲ್ಲಿ ಕಡಮೆಯಾದರೂ, ಉದ್ದಾಮ ಕೃತಿಗಳು; ಅವರಿಂದ ಸಂಪಾದಿತವಾದ "ನಂಬಿಯಣ್ಣನ ರಗಳೆ" ಯಿಂದ ಅವರ ಸಂಶೋಧನ ಸಾಮರ್ಥ್ಯವು ಸುವ್ಯಕ್ತ. "ಒಲುಮೆ", "ನಂಟರು", "ರಾಕ್ಷಸನ ಮುದ್ರಿಕೆ", "ಕಾವ್ಯ ಸಮೀಕ್ಷೆ" ಮುಂತಾದ ಕೃತಿಗಳಲ್ಲಿ ಪ್ರತಿಯೊಂದೂ ತನ್ನದೇ ಆದ ವೈಶಿಷ್ಟ್ಯದಿಂದ ಕಂಗೊಳಿಸುತ್ತಿದೆ; ಅವರಿಂದ ರಚಿತವಾಗಿರುವ "ಭಾರತೀಯ ಕಾವ್ಯ ಮೀಮಾಂಸೆ" ಯಂತೂ, ಕನ್ನಡ ಸಾಹಿತ್ಯ ಭಂಡಾರದಲ್ಲಿ ಶಾಶ್ವತವಾಗಿ ಬೆಳಗುವ ಶ್ರೇಷ್ಠತಮ ಕೃತಿಗಳಲ್ಲೊಂದಾಗಿದೆ. ಅವರು ಶ್ರೇಷ್ಠ ವಾಗ್ಮಿಗಳಲ್ಲೊಬ್ಬರಾಗಿಯೂ ಇದ್ದರು. ಸ್ನೇಹ ಸೌಹಾರ್ದಗಳ ವಿಚಾರದಲ್ಲಂತೂ, ಅವರಿಗೆ ಸರಿದೂಗಬಲ್ಲವರ ಸಂಖ್ಯೆಯು ತೀರ ಕಡಮೆಯೆಂದು ಧಾರಾಳವಾಗಿ ಹೇಳಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಚಿತವಾಗುತ್ತಿರುವ ಕನ್ನಡ-ಕನ್ನಡ ನಿಘಂಟಿನ ಸಮಿತಿಯ ಅಧ್ಯಕ್ಷರಾಗಿ ಅವರು ಸಲ್ಲಿಸುತ್ತಿದ್ದ ಸೇವೆಯನ್ನೂ, ಅದರಲ್ಲಿ ಕಂಡುಬರುತ್ತಿದ್ದ ಅವರ ಅಗಾಧ ಪಾಂಡಿತ್ಯವನ್ನೂ ಎಷ್ಟು ಕೊಂಡಾಡಿದರೂ ಸಾಲದು. ಕನ್ನಡ-ಕನ್ನಡ ನಿಘಂಟು ಒಂದು ಮೇರು ಕೃತಿ. ಅದರ ಕೆಲಸವು ಪೂರೈಸುವುದಕ್ಕೆ ಮುಂಚಿತವಾಗಿ ಅವರು ಮೃತರಾದುದು ನಾಡಿನ ದುರ್ದೈವ. ಯಾವ ನಾಡಿನವರಾದರೂ ಹೆಮ್ಮೆ ಪಡಬಹುದಾದಷ್ಟು ಘನತರವಾದ ಸೇವೆಯನ್ನು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿ ಶಾಶ್ವತ ಕೀರ್ತಿಯನ್ನು ಗಳಿಸಿದ್ದಾರೆ, ಶ್ರೀ ತೀ.ನಂ. ಶ್ರೀಕಂಠಯ್ಯನವರು.

ನನ್ನ ಬಾಂಧವ್ಯ

ತಿರುಮಲೆ ಕಸ್ತೂರಿರಂಗಾಚಾರ್ಯ

•

ನಾನು ವಿದ್ವಾಂಸನೂ ಅಲ್ಲ, ಸಾಹಿತಿಯೂ ಅಲ್ಲ. ವಿಮರ್ಶಕನೂ ಅಲ್ಲ, ಆದರೂ ನಮ್ಮ ನಾಡಿನ ಹಲವು ಹಿರಿಯ ವಿದ್ವಾಂಸರ ಮತ್ತು ಸಾಹಿತಿಗಳ ಮೈತ್ರಿಯ ಸುಯೋಗ ನನಗೆ ಲಭಿಸಿದೆ. ಇವರಲ್ಲಿ ಶ್ರೀಕಂಠಯ್ಯನೊಂದಿಗೆ ನನಗೆ ಬಹುಕಾಲ ನಿಕಟವಾದ ಬಾಂಧವ್ಯವಿತ್ತು. ನಲವತ್ತು ನಾಲ್ಕು ವರ್ಷಗಳ ಹಿಂದೆ ನಾನೂ ಅವರೂ ತುಮಕೂರಿನಲ್ಲಿ ವಿಶ್ವವಿದ್ಯಾಲಯ ಪ್ರಾವೇಶಿಕ ತರಗತಿಯಲ್ಲಿ ಸಹಪಾಠಿಗಳಾಗಿದ್ದೆವು. ಅಲ್ಲಿಂದಾಚಾಗೆ ಅವರು ಮೈಸೂರಿನಲ್ಲಿ ಸಾಹಿತ್ಯಾಭ್ಯಾಸವನ್ನು ಮುಂದುವರಿಸಿದರು. ನಾನು ವಿಜ್ಞಾನವನ್ನು ಆರಿಸಿಕೊಂಡು ಬೆಂಗಳೂರಿನಲ್ಲಿ ನಿಂತೆ. ಮತ್ತೆ ೧೯೩೩ನೇ ವರ್ಷದಲ್ಲಿ ಇಬ್ಬರೂ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇರಿದೆವು. ಕೆಲವು ಕಾಲ ಇಬ್ಬರೂ ಒಟ್ಟಿಗೆ ಬೆಂಗಳೂರಿನಲ್ಲಿ ಕೆಲಸಮಾಡುತ್ತಿದ್ದೆವು. ಚಿಕ್ಕ ವಯಸ್ಸಿನ ಮೈತ್ರಿ ಬೆಳೆಯಿತು.

ಶ್ರೀಕಂಠಯ್ಯನ ಕೃತಿಗಳಲ್ಲಿ ನನಗೆ ಅತ್ಯಂತ ಪ್ರಿಯವಾದದದ್ದು ಅವರ 'ಭಾರತೀಯ ಕಾವ್ಯಮೀಮಾಂಸೆ.' ಅವರ ಪರಿಣತ ಪಾಂಡಿತ್ಯ, ಪಕ್ವವಾದ ವಿಮರ್ಶಾತ್ಮಕ ದೃಷ್ಟಿ ಮತ್ತು ಗಹನವಾದ ವಿಷಯಗಳನ್ನು ಸರಳ ಶೈಲಿಯಲ್ಲಿ ವಿವರಿಸುವ ಶಕ್ತಿ ಈ ಗ್ರಂಥದಲ್ಲಿ ಎದ್ದು ಕಾಣುತ್ತದೆ. ಇದನ್ನು ಅವರು ರಚಿಸಿ ಮುಗಿಸಿದ ಮೇಲೆ ಪುಸ್ತಕ ಯಾವಾಗ ಹೊರಬೀಳುತ್ತೆಂದು ಆಗಿಂದಾಗ್ಗೆ ಅವರನ್ನು ವಿಚಾರಿಸುತ್ತಿದ್ದೆ. ಗಜಗರ್ಭವಾಗಿ ಕಡೆಗೆ ಅದು ಪ್ರಸವಹೊಂದಿದ ವೇಳೆಗೆ ನಾನು ವಿದೇಶದಲ್ಲಿದ್ದೆ. ನನ್ನ ಆಸಕ್ತಿಯನ್ನು ನೆನಪಿಟ್ಟುಕೊಂಡು ಅಲ್ಲಿಗೆ ಒಂದು ಪ್ರತಿಯನ್ನು ಕಳಿಸಿಕೊಟ್ಟರು. ಇಂದಿಗೂ ಅದು ನನ್ನ ಪುಸ್ತಕಸಂಗ್ರಹದಲ್ಲಿ ಅಮೂಲ್ಯರತ್ನವಾಗಿದೆ. ಅವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಮೇಲೆ ಈ ಗ್ರಂಥವನ್ನು ವಿಸ್ತರಿಸಿ ಮತ್ತೆ ಬರೆಯಬೇಕೆಂದು ಆಗ್ಗಿಂದಾಗ್ಗೆ ಅವರನ್ನು ಒತ್ತಾಯಪಡಿಸುತ್ತಿದ್ದೆ. ಆ ಉದ್ದೇಶವೂ ಅವರಿಗಿತ್ತೆಂದು ತೋರುತ್ತದೆ. ವಿಧಿ ಅದಕ್ಕೆ ಅವಕಾಶವಿಲ್ಲದಂತೆ ಮಾಡಿಬಿಟ್ಟಿತು.

ಶ್ರೀಕಂಠಯ್ಯನೂ ನಾನೂ ಒಂದೇ ದಿವಸ ಹುಟ್ಟಿದ್ದು. ಇದನ್ನು 'My only claim to fame' ಎಂದು ನಾನು ಹೇಳಿಕೊಳ್ಳುತ್ತಿದ್ದೆ. ಅನೇಕ ವರ್ಷಗಳ ಹಿಂದೆ ನಮ್ಮಿಬ್ಬರಿಗೂ ಆಪ್ತರಾದ ಮಿತ್ರರೊಬ್ಬರು ನನ್ನನ್ನೂ ಶ್ರೀಕಂಠಯ್ಯನನ್ನೂ ಜನ್ಮದಿನ ಕರೆದು ಆದರಿಸಿದ್ದರು. ಇಷ್ಟರಲ್ಲಿಯೇ ಬರಲಿರುವ ನಮ್ಮ ಷಷ್ಠ್ಯಬ್ಧಿಪೂರ್ತಿಗೆ ನಮ್ಮಿಬ್ಬರನ್ನೂ ಕರೆದು ಅಭಿನಂದಿಸಬೇಕೆಂದಿದ್ದರಂತೆ. ಆ ಸಂತೋಷ ನನಗಿಲ್ಲದಾಯಿತು.

ಸವಿನೆನಪು

ಎಚ್.ವಿ. ಶ್ರೀನಿವಾಸಶರ್ಮ

●

ನಡುಹಗಲಿನಲ್ಲಿ ಸೂರ್ಯ ಮುಳುಗಿದೆನೆಂಬ ಸುದ್ದಿ ಭ್ರಮೆಗೆ ಕಾರಣ ನಿಜ. ಆದರೆ ನಡುಹರೆಯದಲ್ಲಿ ವ್ಯಕ್ತಿ ಮುಳುಗಿದನೆಂಬ ಸುದ್ದಿ ಭ್ರಮೆಗೆ ಕಾರಣವಾದರೂ, ಭ್ರಮೆಯ ತೆರೆ ಸರಿದಾಗ, ಮನವು ನಿಶ್ಚಲತೆಗೆ ಬಂದಾಗ ಸತ್ಯದ ಕೂರಂಬಿನೇಟು ನಾಟುವುದು ಸಹಜ. ಇದು ನಿಜವೇ. ಹೀಗಾಯಿತೆ, ಹೇಗಾಯಿತು, ಏಕಾಯಿತು–ಹೀಗೆ ನಾನಾ ಪ್ರಶ್ನೆಗಳ ಉದ್ಭವ. ಎಲ್ಲವೂ ಭ್ರಮೆಯ ಬೇರೆ ಬೇರೆ ರೂಪಗಳು. ಒಬ್ಬ ಅವತಾರ ಪುರುಷ, ಮಹಾವ್ಯಕ್ತಿ, ಮುಗಿಲೆತ್ತರಕ್ಕೆ ಬಿತ್ತರಕ್ಕೆ ತಲೆ ಎತ್ತಿ ಬೆಳೆದುನಿಂತ ಧೀಮಂತನ ಅಕಾಲಿಕ ಮರಣ ವಾರ್ತೆ, ಮನದಮೇಲೆರಗಿದ ಬರಸಿಡಿಲ ಪೆಟ್ಟು. ಯಾವುದೋ ವಿಶೇಷ ಉಪನ್ಯಾಸವಿತ್ತಾಗ, ಉಚ್ಚ ಶಿಕ್ಷಣಕ್ಕೆಂದು ವಿದೇಶಯಾತ್ರೆ ಕೈಗೊಂಡಾಗ, ಸಾಹಿತ್ಯ ರಂಗದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಹೇಳಿಕೆಯೊಂದನ್ನಿತ್ತಾಗ, ಪ್ರಧಾನ ಪುಟದಲ್ಲಿ ಅಗ್ರಲೇಖನ ಬರೆದಾಗ, ವೃತ್ತ ಪತ್ರಿಕೆಯ ಮುಖ ಪುಟದಲ್ಲಿ ಶೋಭಿಸಬೇಕಾದ ನನ್ನ ಆಚಾರ್ಯರ ಮುಖ ಚಿತ್ರ, ಅನಿರೀಕ್ಷಿತ ಮರಣವಾರ್ತೆಯೊಡನೆ ಕಂಡಾಗ ನನಗೆ ಆದದ್ದು ದಿಗ್ಭ್ರಮೆ, ಮೂಕ ಶೋಕ, ಮಿಡಿದ ಕಂಬನಿ, ಮೌನ. ಸ್ಮೃತಿ ಪಟಲದಮೇಲೆ ತೆರೆತೆರೆಯಾದ ಬಾಂಧವ್ಯ, ಸಜೀವ ಚಿತ್ರ.

ಆಗ, ಮಹಾರಾಜ ಕಾಲೇಜು ಜ್ಞಾನದೇಗುಲ; ಕಲಾ ದೇಗುಲ. ಅಲ್ಲಿ ನಾನು ಕನ್ನಡ ಆನರ್ಸ್ ವಿದ್ಯಾರ್ಥಿ. ಕನ್ನಡ ಕಲಿಯುವ ಹುಚ್ಚು ಎಲ್ಲರಂತೆ ನನಗೂ ಬಂದಿದ್ದ ಅಂಟುಜಾಡ್ಯ. ಕನ್ನಡದ ಪ್ರಾಧ್ಯಾಪಕರು 'ಕುವೆಂಪು.' ಕಾಲೇಜಿನ ಪ್ರಿನ್ಸಿಪಾಲರು ಎಸ್.ವಿ. ರಂಗಣ್ಣ. ಆದರೆ ನಾನು ಸೇರಿದ ಘಳಿಗೆ ಎಂಥಹುದೋ! ಅದೇ ತಾನೇ ರಂಗಣ್ಣನವರಿಗೆ ನಿವೃತ್ತಿ. ಆ ಜಾಗವನ್ನು ಭರಿಸುವ ಮಹಾವ್ಯಕ್ತಿ ಕನ್ನಡ ಕುವೆಂಪು. ಇಡೀ ವಾರದಲ್ಲಿ ಒಮ್ಮೆಯಾದರೂ ಕಾಣಬಹುದೆಂಬ ಇದ್ದ ಒಂದು ಆಶಾಕಿರಣವೂ ಕನ್ನಡ ವಿದ್ಯಾರ್ಥಿಗಳಾದ ನಮಗೆ ಆರುವ ಸಮಯ ಒದಗಿ ಬಂದಿತ್ತು. ಇದರ ಮೇಲೆ ನಮ್ಮಸ್ಥಿತಿ ಇನ್ನೂ ಚಿಂತಾಜನಕವಾಗಿತ್ತು. ಅದೊಂದು 'ಅವಸರ್ಪಣಿ ಕಾಲ.' ಕನ್ನಡದ ಸಮಷ್ಟಿ ಕುಟುಂಬದಿಂದ ಬೇರೆಯಾಗಿ, ಅವರವರ ಕಾರ್ಯಗೌರವದಮೇಲೆ ದೂರಸರಿದಿದ್ದ ಕಾಲ. ಕನ್ನಡದ ಕುವೆಂಪು ವಿಶ್ವವಿದ್ಯಾನಿಲಯದ ಹಿರಿಯ ವ್ಯಕ್ತಿಯಾಗಿ ಹೋಗಬೇಕಾಗಿತ್ತು. ಅವರು ಉಪಕುಲಪತಿಗಳಾಗಿ ತೌರುಮನೆ ಕಾಲೇಜು ಬಿಡಬೇಕಾಯಿತು. ಶ್ರೀಯುತ ಆಚಾರ್ಯ ದೇ. ಜವರೇಗೌಡರು ಅಂದೇ ಪರೀಕ್ಷಾಧಿಕಾರಿಗಳಾಗಿ ಕ್ರಾಫರ್ಡ್ ಭವನವನ್ನೇರಿದ್ದರು.

ಶ್ರೀ ಗುರು ತ.ಸು. ಶಾಮರಾಯರು ಪ್ರಸಾರಾಂಗದ ನಿರ್ದೇಶಕರಾಗಿ ದೂರಸರಿದಿದ್ದರು. ಕನ್ನಡದ ಹಿರಿಯ ಗುರುಕುಲವೇ ನಮ್ಮನ್ನು ಬಿಟ್ಟು ದೂರ ಸರಿದಿದ್ದ ಕಾಲ. ಕನ್ನಡದ ಭವ್ಯಾಗಾರಕ್ಕೆ ಯಜಮಾನನಿಲ್ಲವೇ ಎಂಬ ಶಂಕೆ ನಮಗೆ. ದಿನಗಳುರುಳಿದಂತೆಲ್ಲಾ ನಮಗೆ ನಿರಾಸೆ, ನಿರುತ್ಸಾಹ. 'ಸೊಕ್ಕಿನಲಿ ತಲೆ ಎತ್ತಿ ಜೊತೆಯವರ ಕೂಟದಲಿ ನಾವು ಸಮ ನಿಮಗೆಂದು' ನಡೆವ ಧೈರ್ಯವಾದರೂ ಹೇಗೆ? ಅದೂ ಮಹಾರಾಜ ಕಾಲೇಜಿನಲ್ಲಿ. ಅಂದು ನಿಜಕ್ಕೂ ನಾವು ತಬ್ಬಲಿಗಳು.

ಇಂತಹ ಸಂದಿಗ್ಧ ಮುಹೂರ್ತದಲ್ಲಿ ಬೆಳಕು ಮೂಡಿದ್ದ ರವಿ; ಗೂಡಿನ ಬಾಗಿಲಿಗೆ ಗುಟುಕು ತಂದ ತಾಯಿ ಹಕ್ಕಿ; ದೇಗುಲದ ಹೊಸಿಲ ಬಳಿಗೆ ಕಿರು ಹಣತೆಯ ಬೆಳಕು ಹರಿಸಿದ ತಂದೆ 'ತೀ.ನಂ.ಶ್ರೀ.'. ಅಸುಂಗೊಳೆ, ಮನಂಗೊಳೆ, ತೊಳತೊಳಗಿಬಂದ ಭಾಗ್ಯನಿಧಿ ಕನ್ನಡದ ಸಿರಿಕಂಠ ನಮ್ಮ ಶ್ರೀಕಂಠ. ಹೊರನಾಡಿನ ಕರ್ತವ್ಯ ಮುಗಿಸಿ ತೌರೂರಿನ ಮನೆಯ ಹೊಸಿಲ ಮೆಟ್ಟಿನಿಂತರು ತೀ.ನಂ.ಶ್ರೀ.

ನಮಗಾದ ಅಂದಿನ ಆನಂದ ಇನ್ನೂ ಆರಿಲ್ಲ. ಕನ್ನಡಾಂಬೆಯ ರಥಕ್ಕೆ ಹೂಡಿದ್ದ ಜೋಡಿ ಎತ್ತು, ಒಂದು 'ಡಿ.ಎಲ್.ಎನ್.' ಮತ್ತೊಂದು 'ತೀ.ನಂ.ಶ್ರೀ.' ಅದೊಂದು ಹೆಮ್ಮೆ ನಮಗೆ. ತಗ್ಗಿದ ತಲೆ ಮೇಲೆದ್ದಿತ್ತು. ಮಹಾರಾಜಾ ಕಾಲೇಜಿನ ನಾಲ್ಕನೆಯ ನಂಬರ್ ಕೊಠಡಿ 'ತೀ.ನಂ.ಶ್ರೀ.' ನಿವಾಸ. ಕಾಲೇಜು ಲೈಬ್ರರಿಯ ಮೇಲ್ಮಹಡಿಯಲ್ಲೇ 'ಡಿ.ಎಲ್.ಎನ್.' ರವರ ಕೊಠಡಿ.

ಕನ್ನಡದ ದಿಗ್ಗಜಗಳೆರಡೆಂದೇ ನಾವು ಇಟ್ಟಿದ್ದ ನಾಮಧೇಯ ಅವರಿಗೆ. ಅಲ್ಲಿಗೆ ಕನ್ನಡದ ಮನೆ, ಅಂಗಳವೆಲ್ಲಾ ನರುಗಂಪು ತುಂಬಿ ಚಂಪಕ ಅರಳಿದಂತಾಗಿತ್ತು.

ಮೊದಮೊದಲಿಗೆ ಆಚಾರ್ಯ ತೀ.ನಂ.ಶ್ರೀ.ಯವರನ್ನು ಕಂಡಾಗ ತುಸು ಬೇಸರವೇ ಎನ್ನಿಸಿತ್ತು. ಕಾರಣ, ಮಿಕ್ಕೆಲ್ಲ ಪ್ರಾಧ್ಯಾಪಕರ ರೇಖೆಯಳಿಸದ ಪ್ಯಾಂಟು, ಕೋಟು, ಷೂ, ಟೈಗಳು ಕಣ್ಣು ಕೋರೈಸುವಾಗ, ನಮ್ಮ ಈ ದಿಗ್ಗಜ ಪ್ರಾಧ್ಯಾಪಕರ ಪಂಚೆ, ತುಂಬುಕೋಟು, ಕೈಯ ಚತ್ರಿ, ಮಸಕಾಯಿತೇನೋ ಎನ್ನಿಸುತ್ತಲೂ ಇತ್ತು. ಆದರೆ ದಿನಗಳು ಕಳೆದಂತೆಲ್ಲಾ, ಅದಾವುದೋ ದಿವ್ಯಜ್ಯೋತಿಯನ್ನು ನಾನು ಕಂಡೆ. ಬಿಳಿ ಗರಿಯ ಪಂಚೆ, ಎದೆ ಮುಚ್ಚುವ ಕೊರಳಪಟ್ಟಿಯ ತುಂಬುಕೋಟಿನ ಒಳಪರೆಯಲ್ಲಿ ಅದೆಂತಹ ಅದ್ಭುತ ರಹಸ್ಯ. ಪ್ರಜ್ವಲಿಸುವ ಜ್ಞಾನ ಸಂಪತ್ತು, ಹಿರಿಯ ಕಿರಿಯರೆಂಬ ಭೇದಭಾವವಿಲ್ಲದೆ ಮಕ್ಕಳ ಮೇಲಿನ ತಂದೆಯ ಅಪಾರ ವಾತ್ಸಲ್ಯ, ಮನೆಯ ಕಂದರೊಡನೆ ಬೆಳಸು ಸಲಿಗೆ, ಕೊಠಡಿಯನ್ನೇ ಸೂಸುವ ನಗೆಮಲ್ಲಿಗೆ, ನಕ್ಕುನಲಿಸುವ ನಗೆ ಮುಖದ ನಸು ಹಾಸ್ಯ; ಇಂದಿಗೂ ಅವು ನನ್ನ ಕಣ್ಣಿಂದ ದೂರವಾಗಿಲ್ಲ. ಮೇಜಿನ ಮೇಲೆ ಎಡಕ್ಕೆ ಸಂಸ್ಕೃತದ ಆನಂದವರ್ಧನನ ಕಾವ್ಯಮಿೂಮಾಸೆ; ಬಲಕ್ಕೆ ಹಡ್ಸನ್, ರಿಚರ್ಡ್ಸ್; ಎರಡರ ನಡುವೆ ತಮ್ಮದೇ ಕನ್ನಡದ ಕಾವ್ಯಮಿೂಮಾಂಸೆ– ಮೂರರ ಮೇಲೂ ಕಣ್ಣಾಡಿಸುತ್ತಾ, ತುಲನೆ ಮಾಡುತ್ತಾ, ಒಮ್ಮೊಮ್ಮೆ ಎಡಗೈಯಿಂದ ಕನ್ನಡಕವನ್ನು ಮುಟ್ಟಿ ಮೇಲೇರಿಸಿಕೊಳ್ಳುತ್ತಾ, ನಡುನಡುವೆ ಮುಂದಲೆಯಿಂದ ನಡುತಲೆಯವರೆಗೆ ಎಡಗೈಯಿಂದ ಇದ್ದ ನಾಲ್ಕೆರಡು ಕೂದಲನ್ನೇ ತಿದ್ದಿ ಕೊಳ್ಳುತ್ತಾ, ಮಧ್ಯೆ ಮಧ್ಯೆ ಗುಂಡುತುಟಿಯ ಮೇಲೆ

ನಾಲಗೆಯನ್ನು ಮೃದುವಾಗಿ ಸವರುತ್ತಾ, ತಲೆಯನ್ನೊಮ್ಮೊಮ್ಮೆ ಹಿಂದೆ ಮುಂದೆ ಜಗ್ಗುತ್ತಾ, ಎಂದೂ ಹಸನ್ಮುಖಿಗಳಾಗಿ ಪಾಠ ಪ್ರವಚನ ನಡೆಸುವ ಅವರ ವೈಖರಿಯನ್ನು ಇನ್ನೆಂದಿಗೂ ಕಾಣಲಾರೆವು. ಅದು ಅಚ್ಚಳಿಯದ ಅಪರೂಪ ದೃಶ್ಯ. ಒಂದೊಂದು ದಿನ ನಾಲ್ಕು ಗಂಟೆಗಳ ಸತತವಾದ ಪಾಠ ಪ್ರವಚನ. ಅದು ನಮಗೆ ನಾಲ್ಕು ನಿಮಿಷಗಳಂತೆ ಭಾಸ.

ಎರಡು ವರ್ಷಗಳಾದರೂ, ಅವರೊಡನೆ ನಾನು ಒಂಟಿಯಾಗಿ ನಿಂತು ಮಾತನಾಡಿದವನೇ ಅಲ್ಲ. ಏನೋ ಭಯ. ಪ್ರಾಧ್ಯಾಪಕರು, ತುಂಬಿ ತುಳುಕುವ ಭಂಡಾರ. ಮಾತನಾಡುವುದು ಹೇಗೆ, ಎಂಬ ಸಂಕೋಚ. ಆದರೂ ಒಮ್ಮೆ ಮಾತನಾಡುವ, ಕಾಣುವ ಸಾಹಸಮಾಡಿದ್ದೆ. ಸಾಮಾನ್ಯವಾಗಿ ರೂಮಿನ ಬಾಗಿಲುಮುಚ್ಚಿ, ಕಬ್ಬಿಣದಕೊಂಡಿಯಿಂದ ಭದ್ರಪಡಿಸಿರುವುದೇ ರೂಢಿ. ಸುಮಾರು ಅರ್ಧ ಅಡಿಯಷ್ಟು ಅಂತರ ಬಾಗಿಲು ತೆರೆದಿರುತ್ತಲೇ ಇತ್ತು. ಮೆಲ್ಲಗೆ ಕೊಂಡಿ ಚಿಲಕವನ್ನು ತೆಗೆವ ಧೈರ್ಯಮಾಡಿದ್ದೆ. ತಕ್ಷಣವೇ ಮಾತಾಡಿದ ಶಬ್ದ ಹೊರಬಂತು:

"Yes, come in."

ಒಳಗೆ ಹೋದೆ, ದೂರದಲ್ಲೇ ನಿಂತೆ.

"ಯಾಕೆ ಹತ್ತಿರಕ್ಕೆ ಬನ್ನಿ, ಕುಳಿತುಕೊಳ್ಳಿ" ಗುರುವಿನ ಆಜ್ಞೆ; ಆಜ್ಞೆಯಲ್ಲ ಮಕ್ಕಳ ಮೇಲಿನ ವಾತ್ಸಲ್ಯ.

"ಏನು ಬಂದಿರಿ?"

"ನನಗೆ ಈ ಸಲ ಫ್ರೀಷಿಪ್ ಆಗಿಲ್ಲ. ಅದಕ್ಕೆ ನಿಮ್ಮನ್ನು...." ಧೈರ್ಯವಾಗಿಯೇ ಮಾತಾಡಿದೆ.

"ಹಣ ಬೇಕೇನು? ಫೀಜಿಗೆ ಸಾಲದೇನು?"

"ಇಷ್ಟು ಸಲ ನನಗೆ ಬರುತ್ತಿತ್ತು. ಈ ಸಲ ತಪ್ಪಿಹೋಗಿದೆ."

"ಓಹ್, ಸರಿಸರಿ, ನಿಮ್ಮ ತಂದೆಗೆ ಏನು ಕೆಲಸ. ನಿಮ್ಮ income ಹೇಗೆ.... ಎಲ್ಲಿ ಇದ್ದೀರಿ.... ಊಟ...." ಒಂದೇ ಸಮನೆ ಪ್ರಶ್ನೆಗಳನ್ನು ಕೇಳಿ ತಿಳಿಯುವ ಕುತೂಹಲವನ್ನು ಕಂಡೆ. ಉದ್ದಕ್ಕೆ ಉತ್ತರವಿತ್ತೆ. ಕೊನೆಗೆ ರೂಮಿನಲ್ಲಿ ಅಡಿಗೆಮಾಡಿಕೊಂಡು ಓದಬೇಕಾದ ಅಸಹಾಯಕ ಸ್ಥಿತಿಯನ್ನು ಕೇಳಿ ಕೆಲವು ನಿಮಿಷ ಮೌನತಾಳಿ ಪೆನ್ನಿನ ತುದಿಯನ್ನೇ ದಿಟ್ಟಿಸಿ ಕುಳಿತ ಆಚಾರ್ಯರ ಅಂತಃಕರಣವನ್ನು ಇನ್ನೂ ನೆನೆಯುತ್ತಿದ್ದೇನೆ.

"ನೀವೇ ಅಡಿಗೆ ಮಾಡುತ್ತೀರಾ?"

"ಹೌದು ಸಾರ್"

"ಕಷ್ಟವಾಗುತ್ತಲ್ವೆ?"

"ಹೇಗೋ...."

"ಸರಿ, ಏನೂ ಯೋಚನೆ ಮಾಡ್ಬೇಡಿ. ನಾನು ಮಾತಾಡಿ ನೋಡ್ತೇನೆ."

"ಆಗ್ಲಿ ಸಾರ್."

"ಅಷ್ಟೇ ತಾನೆ, ಇನ್ನು ನೀವು ಹೊರಡಿ...." ನಾನು ಹೊರಬಂದು ನಾಲ್ಕು ಹೆಜ್ಜೆ ಇಡುವಷ್ಟರಲ್ಲಿ ಬಾಗಿಲಲ್ಲಿದ್ದ ಜವಾನ ಒಳಹೊಕ್ಕು ಮತ್ತೆ ನನ್ನನ್ನೇ ಹಿಂಬಾಲಿಸಿ ಬಂದು ಕರೆದ. ನಾನು ಮತ್ತೆ ಕೊಠಡಿಗೆ ಹೊಕ್ಕೆ. ಆಚಾರ್ಯರು ಸ್ವಲ್ಪ ಹೊತ್ತು ಮುಖವನ್ನೇ ದಿಟ್ಟಿಸಿ ನೋಡಿದರು. ಅನಂತರ ಮುಗುಳುನಕ್ಕು "ಈಗ ಹಣದ ಅವಶ್ಯಕತೆ ಇದ್ದರೆ ಕೇಳಿ, ಸಂಕೋಚಪಡಬೇಡಿ." ಈ ಪುತ್ರವಾತ್ಸಲ್ಯದ ಅಭಿಮಾನವನ್ನು ನಾನು ಎಂದೆಂದಿಗೂ ಮರೆಯಲಾಗದು. ಅಂದಿನಿಂದ ನಾನು ಅವರ ಮನದಲ್ಲಿ ಬೇರೂರಿದಂತೆ ಕಾಣುತ್ತಿತ್ತು. ಕಂಡಕಂಡಾಗಲೆಲ್ಲ ಅವರ ಕುಶಲ ಪ್ರಶ್ನೆಗಳು ಕಿವಿಯಲ್ಲಿ ಮೊಳಗುತ್ತಿವೆ. "ಅಡಿಗೆ ಮಾಡಿದ್ದಿರಾ.... ಊಟವಾಯಿತೆ.... ಹಣ ಏನಾದರೂ ಬೇಕೆ.... ಹಿಂಜರಿಯಬೇಡಿ.... ಮಧ್ಯಾಹ್ನದ ತಿಂಡಿಗೆ ಏನು ಮಾಡುತ್ತೀರಿ?" ವಿಚಾರಣೆ ಸತತವಾಗಿ ನಡೆದುಬರುತ್ತಲೇ ಇತ್ತು.

ತೀ.ನಂ.ಶ್ರೀ. ಎಷ್ಟು, ಗಂಭೀರ, ಅದೆಷ್ಟು ಬಿಗುಮಾನ, ಎಂದು ದೂರದೃಷ್ಟಿಯಿಂದ ಕಂಡವರಿಗೆ ಮಾತ್ರ ಎನ್ನಿಸಿದರೂ, ಸನ್ನಿವೇಶ, ವಾತಾವರಣಕ್ಕೆ ಹೊಂದಿಕೊಂಡು ಮಕ್ಕಳೊಡನೆ ಎಳೆಯರಂತೆ, ಹಿರಿಯರಲ್ಲಿ ವಿದ್ವಾಂಸರಂತೆ ಇದ್ದುದನ್ನು ನಾನು ಕಂಡೆ. ಅದಕ್ಕೆ ಈ ಮೂರು ಸಂದರ್ಭಗಳನ್ನು ನನ್ನ ಅನುಭವಗಳನ್ನು ತಿಳಿಸಿದರೆ ಸಾಕೆನ್ನಿಸುತ್ತದೆ. ಒಂದು ಅವರ ಮನೆಯಲ್ಲೇ ಕನ್ನಡದ ಬಳಗಕ್ಕೆ ಏರ್ಪಡಿಸಿದ್ದ ಉಪಾಹಾರ ಸಮಾರಂಭ; ಮತ್ತೊಂದು ಗುಂಡ್ಲುಪೇಟೆಯ ಬಳಿಯ ಹಿಮವದ್ಗೋಪಾಲಸ್ವಾಮಿಯ ಬೆಟ್ಟಕ್ಕೆ ಇಟ್ಟಿದ್ದ ಪ್ರವಾಸ, ಮೂರನೆಯದು ಅವರ ಅಚ್ಚುಮೆಚ್ಚಿನ ಪುತ್ರಿ ನಾಗರತ್ನನ ವಿವಾಹ ಸಂಭ್ರಮದ ಉತ್ಸವ. ಇವು ಮೂರೂ ಅವರ ಕನ್ನಡದ ಬಳಗವೇ ಪಂಚಪ್ರಾಣವೆಂಬುದಕ್ಕೆ ಸಾಕ್ಷಿಭೂತ.

ಅಂದು ಪ್ರೊಫೆಸರ್ ಕ್ವಾರ್ಟರ್ಸಿನಲ್ಲಿ ಅವರ ವಾಸ. ಮೇಲುಮಹಡಿಯ ವಿಶಾಲ ಅಂಗಳದಲ್ಲಿ ಉಪಾಹಾರ ಸಮಾರಂಭ. ಸಂಜೆ ನಾಲ್ಕರ ಸಮಯ. ಮೈಸೂರು ನಗರದ ಎಲ್ಲ ಕಾಲೇಜಿನ ಕನ್ನಡ ಉಪಾಧ್ಯಾಯ, ಪ್ರಾಧ್ಯಾಪಕರೊಡನೆ ನಾವು ಸೇರಿ ಅತಿಥಿ ಅಭ್ಯಾಗತರು ಗೋಡೆಒರಗಿ, ಕಂಬ ಒರಗಿ ಕುಳಿತ ಮುದುಕರನ್ನು ಬಿಟ್ಟರೆ ಅಂಗಳದಲ್ಲಿ ಸಾಲು ಸಾಲಾಗಿ ಕುಳಿತ ಕನ್ನಡ ಬಳಗ. ಮನೆಯಲ್ಲಿ ಮಾಮೂಲು ಉಡುಪಿನಲ್ಲಿದ್ದ ತೀ.ನಂ.ಶ್ರೀ. ಯವರು ಮನೆಯ ಹಿರಿಯ ತಂದೆಯ ನೆನಪು ತರುವಂತಿದ್ದರು. ಅವರೇ ನಿಂತು, ಒಬ್ಬೊಬ್ಬರನ್ನು ವಿಚಾರಿಸಿ, ತಮ್ಮ ಪತ್ನಿ, ಮಕ್ಕಳು, ಅಣ್ಣ ಇವರೊಡನೆ ಬೆರೆತು, ಹಾಸ್ಯ ಪರಿಹಾಸ್ಯಗಳ ಮಳೆ ಸುರಿಸುತ್ತಾ ಉಪಾಹಾರ ನೀಡುತ್ತಿದ್ದ ಅವರ ವಿಶಾಲ ಮನೋಭಾವ, ಐಕ್ಯಭಾವ ಅಷ್ಟಿಷ್ಟಲ್ಲ. ಒಬ್ಬೊಬ್ಬರನ್ನೂ ನೋಡಿ ಮಾತಾಡಿಸಿ, ಇವಳು ನನ್ನ ಧರ್ಮಪತ್ನಿ, ಇವಳು ನನ್ನ ಮಗಳು, ಇವನೇ ನನ್ನ ಕುಮಾರ ಎಂದು ಪರಿಚಯ ಮಾಡುತ್ತಾ ತೆರೆದ ಹೃದಯದಿಂದ ಕಾಣುತ್ತಿದ್ದ ವಾತ್ಸಲ್ಯಮೂರ್ತಿಯ ಬಿಗುಮಾನವೆಲ್ಲಿ ಹೋಯಿತು ಎನ್ನಿಸುತ್ತಿತ್ತು. ತಿಂಡಿ ಮುಗಿಯಿತು. ಮುಂದೆ ಪ್ರತಿಯೊಬ್ಬರೂ ಒಂದೊಂದು ಹಾಡನ್ನು ಹೇಳಲೇಬೇಕೆಂಬ ನಿಯಮ. ನಿಯಮಕ್ಕೆ ಕಟ್ಟುಬಿದ್ದ ತೀ.ನಂ.ಶ್ರೀ. 'ನನಗೆ ಹಾಡೋಕೆ ಬರೋಲ್ಲಪ್ಪ. ಬೇಕಿದ್ದರೆ ಒಂದು ಪದ್ಯ ಹೇಳ್ತೇನೆ' ಎಂದು ಒಂದು ವೃತ್ತ ಪದ್ಯವನ್ನು ಗಟ್ಟಿಯಾಗಿ ಹೇಳಿ ಸಭೆಯನ್ನು ಹರ್ಷಗೊಳಿಸಿ ಚಪ್ಪಾಳೆ ತಟ್ಟುವಂತೆ ಮಾಡಿದ ಸರಸ ಸುಂದರ ಸಮಯವನ್ನು ನಾನು ಮರೆಯಲಾರೆ. ಅದೆಷ್ಟು ನಿರಹಂಕಾರಿ, ನಿಗರ್ವಿ, ವಿಶಾಲ ಹೃದಯಿ.

ಮತ್ತೊಂದು ಪ್ರವಾಸ. ಬೆಟ್ಟದ ಪ್ರವಾಸ. ಎಂದಿನಂತೆಯೇ ಕನ್ನಡದ ವಿದ್ಯಾರ್ಥಿಗಳು ಕನ್ನಡದ ಉಪಾಧ್ಯಾಯರ ತಂಡ ಬೆಳಗ್ಗೆ ಎಂಟಕ್ಕೆ ಸೇರಿದುದಾಯ್ತು. ಮಹಾರಾಜ ಕಾಲೇಜಿನ ಮುಂಭಾಗದಿಂದ ಹೊರಡುವ ವೇಳೆ. ಗೌರ್ನಮೆಂಟ್ ಬಸ್ಸೆರಡು ಬಾಡಿಗೆಗೆ. ಈ ಎರಡು ದಿಗ್ಗಜಗಳು ಏರಿದ ಗಾಡಿಯನ್ನೂ ಬಿಟ್ಟು, ಬೇರೆ ಗಾಡಿಯನ್ನು ಹತ್ತುವ ಚಪಲ ನಮ್ಮ ಕೆಲವರಿಗೆ. ಕಾರಣ ಅಲ್ಲಿ ಅಷ್ಟು ಸಲಿಗೆ, ತಮಾಷೆ ನಡೆಸುವುದು ಅಸಾಧ್ಯವೆಂದು. ಆದರೆ ಸ್ವಲ್ಪ ದೂರ ಹೋದಮೇಲೆ ನಾವೇ ಅಲ್ಲಿ ಕೂರಬೇಕೆನ್ನಿಸಿತ್ತು. ಎಂಥ ಸುಯೋಗ ಸಿಕ್ಕಿತು ಎನ್ನಿಸಿತ್ತು. ದಾರಿಯುದ್ದಕ್ಕೂ ಬಸ್ಸು ಹೋಗುವಾಗ ಅದೇನು ಲಲ್ಲೆ, ಒಗಟು, ಹಾಡು, ತಮಾಷೆ ಚುಟುಕಗಳು. ಹಿಂದೆ ನೋಡಿದ ತೀ.ನಂ.ಶ್ರೀ. ಇವರಲ್ಲ ಎನ್ನಿಸಿಬಿಟ್ಟಿತ್ತೆಂದರೆ ಆಶ್ಚರ್ಯವಿಲ್ಲ. ಇದರ ಪರಿಣಾಮ ಹಿಂದಿರುಗುವಾಗ ಬಸ್ಸಿಗೇರಲು ಹೋರಾಟ ನಡೆಯಿತೆಂದು ಹೇಳಬೇಕಾಗಿಲ್ಲ. ಸರಿ, ಬೆಟ್ಟವನ್ನೇನೋ ತಲುಪಿಯಾಯ್ತು. ಮೇಲಕ್ಕೆ ಬಸ್ಸು ಏರಲಾರದೆ ನಿಂತಲ್ಲೇ ಸತ್ಯಾಗ್ರಹ ಹೂಡಿತು. ಎಲ್ಲರೂ ಕೆಳಗಿಳಿದೆವು. ತರುಣರಿಗೇನೋ ಮೇಲೇರುವ ಉತ್ಸಾಹ. ಇವರಿಗೆ? ಹಾಗೆಯೇ ಯೋಚಿಸುತ್ತಿರುವಾಗಲೇ ಮೇಲೆ ಮೇಲೆ ಮುಂದಾಳಾಗಿ ಹೊರಟರು ನಮ್ಮ ಶ್ರೀಕಂಠಯ್ಯ. ಹಿಂದೆ ಡಿ.ಎಲ್.ಎನ್. ಉದ್ದಕ್ಕೂ ಹರಟೆ. ಸುತ್ತ ಮುತ್ತಲ ನೀಲಗಿರಿ ಬೆಟ್ಟಗಳ ಸಾಲು ಸಾಲು ನೋಟದ ಔತಣ. ದೂರ ದೂರ ಮಂಜಿನ ರಾಶಿಯ ಸವಿ. ನೀಲಪರ್ವತದ ಊಟ. ನಡು ನಡುವೆ ಚುಟಕಗಳ ಉಪ್ಪಿನಕಾಯಿ. ಪುಂಡು ಬಿಸಿರಕ್ತದ ತರುಣರನ್ನು ಹಿಡಿಯುವುದೇ ಹಿರಿಯರ ಸಾಹಸವೆನಿಸಿತ್ತು. ಅಂದು ಮಧ್ಯಾಹ್ನ ಹೊಟ್ಟೆಬಿರಿಯುವ ಊಟ, ಸ್ವಲ್ಪ ನಿದ್ದೆ. ಸಂಜೆ ನಾಲ್ಕಕ್ಕೆ ಅಲ್ಲಿ ಒಂದು ಸಂತೋಷಕೂಟ, ಡಿ.ಎಲ್.ಎನ್. ಅಧ್ಯಕ್ಷರು. ಹಾಡುವವರ ಹಾಡಾಟ, ಒಗಟು ಒಡೆಯುವ ವೈಖರಿ, ವಿನೋದ ಗಣಿತದ ತಿಣಿಕಾಟ, ವಿವಿಧ ವೇಷಗಳ ಮೆರೆದಾಟ ಇವುಗಳಿಗಿಂತ ಅಂತ್ಯಾಕ್ಷರೀ ಸ್ಪರ್ಧೆಯ ಸ್ಫೂರ್ತಿ ಎಂದೂ ನೆನಪಿನಿಂದ ಮಾಸದು. ಒಬ್ಬರು ಹೇಳಿ ಮುಗಿಸಿದ ಪದ್ಯದ ಕೊನೆ ಅಕ್ಷರದಿಂದ ಪ್ರಾರಂಭವಾಗುವ ಪದ್ಯವನ್ನು ಎದುರಾಳಿ ಹೇಳಿ ಗೆಲ್ಲಬೇಕು. ಈ ಸ್ಪರ್ಧೆಯ ವಿಜೇತ ಕೊನೆಗೂ ತೀ.ನಂ.ಶ್ರೀ. ಪದ್ಯಗಳ ಸಾಲು ಸಾಲು ತಡೆ ಎಡೆಯಿಲ್ಲದೆಯೆ, ನಿಲ್ಲಿಸಿದ ಅಂತ್ಯಕ್ಷರದಿಂದ ಒಂದರ ಹಿಂದೆ ಒಂದು ಬಾಣ ಬಂದಂತೆ ವೃತ್ತವೋ, ಶ್ಲೋಕವೋ, ಕಂದವೋ ಒಂದು ರೂಪದಲ್ಲಿ ಹೊರಬೀಳುತ್ತಲೇ ಇತ್ತು. ಅದು ಅವರ ಪ್ರತಿಭೆ. ಜ್ಞಾಪಕ ಸಾಮರ್ಥ್ಯ, ಅವರ ಓದಿನ ಆಳ.

ಕೊನೆಯದು ಅವರ ಪ್ರೇಮದ ಪುತ್ರಿಯ ವಿವಾಹ ವೈಭವ. ಅಂದು ಕನ್ನಡ ಬಾಂಧವರ ಓಡಾಟ. ಅವರೇ ಅವರಿಗೆ ಪರಮನಂಟರು. ನಾವು ಪಡುವ ತೊಂದರೆ ಅವರಿಗೆ ಇಷ್ಟವಿಲ್ಲ. ಮೇಲಾಗಿ ಸಂಕೋಚ. ಆದರೂ ಬಿಡದ ನಂಟರು ನಾವು. ಒಬ್ಬೊಬ್ಬರನ್ನೂ ಅವರು ಕಾಣಬೇಕು. ಕೈ ಕುಲುಕಬೇಕು, ಆದರಿಸಬೇಕು, ಉಪಚರಿಸಬೇಕು. ಬೀಳ್ಕೊಡಬೇಕು. ಆ ವಯಸ್ಸಿನಲ್ಲೂ ಅದೇನು ಉತ್ಸಾಹದ ಓಡಾಟ. ಹನ್ನೆರಡಾದರೂ ಬಿಡುವಿಲ್ಲ. ಅವರಿಗೆ ಅಂದು ಆದ ಆನಂದ ಸಂತೋಷ, ಹಿಗ್ಗು ಅಷ್ಟಿಷ್ಟಲ್ಲ.

ಅವರು ಇಟ್ಟಿದ್ದ ಆಸೆ, ಪ್ರೀತಿ, ವಿಶ್ವಾಸ ಅಷ್ಟಿಷ್ಟಲ್ಲ. ಪೇಟೆಯಲ್ಲಿ, ಪುಸ್ತಕದ ಅಂಗಡಿಯಲ್ಲಿ, ಲೈಬ್ರರಿಯಲ್ಲಿ ಕೊನೆಗೆ ತುರ್ತು ಕೆಲಸಕ್ಕಾಗಿ ಹೋಗುತ್ತಿದ್ದಾಗ ರಸ್ತೆಯಲ್ಲಿ ಕಂಡೊಡನೆ ತಾನೇ

ನಿಂತು ಕ್ಷೇಮ ಸಮಾಚಾರ ವಿಚಾರಿಸದೆ ಮುಂದೆ ಹೆಜ್ಜೆ ಇಡುವ ಗುಣ ಅವರದಲ್ಲ. ಅವರು ವಿಚಾರಿಸುವ ವೈಖರಿ ಹೀಗೆ:

"ಆರೋಗ್ಯ ತಾನೆ..... ಈಗ ಎಲ್ಲಿದ್ದೀರಿ... ಅಲ್ಲೇ ತಾನೆ.... ಹೇಗಿದ್ದೀರಿ....ಮನೆಯಲ್ಲಿ ಎಲ್ಲಾ ಸೌಖ್ಯತಾನೆ.... ನಿಮ್ಮ ಮಗುವಿಗೆ ಖಾಯಿಲೆ ಎಂದಿದ್ದಿರಿ.... ಈಗ ಹೇಗಿದೆ.... ಒಳ್ಳೆಯಕಡೆ ಔಷಧ ಕೊಡಿಸಿ...." ತುಂಬು ಹೃದಯದ ತುಂಬು ವಾತ್ಸಲ್ಯದ, ಪ್ರೇಮಮಯಿ ಆಚಾರ್ಯ ತೀ.ನಂ.ಶ್ರೀ. ಇನ್ನಿಲ್ಲವೆಂದರೆ ಯಾರಿಗೆ ತಾನೆ ಕರುಳು ಕಿತ್ತು ಬರದು?

ಅಂತ್ಯದಲ್ಲಿ ಅವರು ಇತ್ತ ಆಶೀರ್ವಾದ ಉತ್ತಮ ಶ್ರೇಷ್ಠ ಸವಿ ನೆನಪು.

ಎಂ.ಎ. ಮುಗಿಸಿದಂದು ನನಗೆ ಕಾಲೇಜು ಕೆಲಸ ಸಿಗದೆ ಹೈಸ್ಕೂಲಿನಲ್ಲಿ ಸೇರಿದಾಗ ಒಮ್ಮೆ ರಜದ ದಿನ ಅವರನ್ನು ಮನೆಯಲ್ಲಿ ಕಂಡೆ. ಮಾಮೂಲಿನಂತೆ ಕತೆ.

"ನಮಸ್ಕಾರ ಸಾರ್. ಆರೋಗ್ಯವಾಗಿದ್ದೀರಾ?"

"ಬನ್ನಿ ನೀವು ಹೇಗಿದ್ದೀರಿ.... ಹೀಗೆ ಮಾತು ಕತೆ ಪ್ರಾರಂಭವಾಯಿತು. ಮಾತಿನ ಮಧ್ಯೆ ಒಂದು ಲೋಟ ಪಾನಕವನ್ನು ಸವಿದುದಾಯ್ತು. ನಡುವೆ ನಾನು ಕೇಳಿದೆ: "ಕನ್ನಡ ಓದಿದ್ದಕ್ಕೆ ಪ್ರಯೋಜನವೇನು? ಸಾರ್. ಸುಮ್ಮನೆ ಆನರ್ಸ್ ಎಂ.ಎ. ಮಾಡಬೇಕಾಯಿತು." ಎಂದೆ. ನನಗೆ ಕೆಲಸ ಸಿಗದ ಬೇಸರದಲ್ಲಿ ಆ ಮಾತು ಹೊರಬಂತು. ತೀ.ನಂ.ಶ್ರೀ.ಯವರ ನಗೆ ತುಸು ಆರಿ ಮುಖ ಗಂಟಾಯಿತು. ಅವರು ಥಟ್ಟನೆ ಎಂದರು:

"ಕೆಲಸ ಕೊಡಿಸುವ ಭರವಸೆಯಲ್ಲಿ ನಿಮ್ಮನ್ನೆಲ್ಲಾ ಕನ್ನಡ ಕಲಿಯಿರಿ ಎಂದು ಸೇರಿಸಿ ಕೊಂಡೆವೆ?" ಅವರು ಎಂದೂ ಹಾಗೆ ಆಡಿರುವುದನ್ನು ಕಂಡಿರಲಿಲ್ಲ. ಅವರ ಮನಸ್ಸಿನ ಮೇಲೆ ನನ್ನಂತೆಯೇ ಅದೆಷ್ಟು ಜನ ಬೇಸರ ತಂದಿದ್ದರೋ ಎಂದುಕೊಂಡೆ. ನಾನು ಮೌನವಾದೆ. ಕಣ್ಣೀರು ತೊಟ್ಟಿಕ್ಕಿತು..... ತೀ.ನಂ.ಶ್ರೀ ತಂದೆಯ ಹೃದಯ ಕರಗಿ ನೀರಾಯಿತು. ನನ್ನನ್ನೇ ದಿಟ್ಟಿಸಿ ನೋಡಿ ಮುಗುಳ್ನಕ್ಕರು: "ನನ್ನ ಮಾತಿನಿಂದ ಬೇಸರವಾಯ್ತೆ? ಜೀವನದಲ್ಲಿ ಬೇಸರಪಡ ಬೇಡಿ, ನೀವು ಇರುವ ಕಡೆಯೇ ಸದ್ಯಕ್ಕೆ ಇರಿ. ಕಷ್ಟ ಪಟ್ಟಿದ್ದೀರಿ, ನನಗೆ ಗೊತ್ತು. ಅದರ ಫಲ ಒಂದಲ್ಲ ಒಂದು ದಿನ ಬರುತ್ತೆ. ಬಂದಷ್ಟರಲ್ಲಿ ತೃಪ್ತಿ ಪಡೆಯಿರಿ. ಬೇಸರಪಟ್ಟರೆ ಪ್ರಯೋಜನವಿಲ್ಲ. ಕಾಲ ಪರಿಸ್ಥಿತಿ ಸರಿಯಾದ ಮೇಲೆ ಎಲ್ಲವೂ ಸರಿಯಾಗುತ್ತದೆ." ಎಂದು ಸಮಾಧಾನಪಡಿಸಿದ ಪಿತೃವಾತ್ಸಲ್ಯ ಇನ್ನು ಇಲ್ಲ. ತಮ್ಮ ಕಷ್ಟವನ್ನೆಲ್ಲಾ ಹೊರಜಗತ್ತಿನಿಂದ ಬೈತಿಟ್ಟು, ಮತ್ತೊಬ್ಬರ ಸುಖದುಃಖಗಳಲ್ಲಿ ಭಾಗಿಯಾಗಿ ಅದರ ಕೊರಗನ್ನು ಹಚ್ಚಿಕೊಳ್ಳುವ ಮಹಾವ್ಯಕ್ತಿ ಇನ್ನಿಲ್ಲ. ಕನ್ನಡದ ಏಳಿಗೆಗೆ, ಕನ್ನಡದ ಪರಿಣತರ ಹೊರತರುವುದಕ್ಕೆ, ಕನ್ನಡ ಸ್ಥಾನದ ಭದ್ರತೆಗೆ ಶ್ರಮಿಸಿದ ಆಚಾರ್ಯ ಇನ್ನಿಲ್ಲ. ಆದರೂ ಉಳಿದಿರುವುದಿಷ್ಟೆ ಅವರು ಬಿಟ್ಟು ನಡೆದುದಿಷ್ಟೆ, ಸವಿನೆನಪುಗಳು ಮಾತ್ರ.

ಸ್ಮೃತಿನಿಧಿ

ಪು.ತಿ. ನರಸಿಂಹಾಚಾರ್

●

ತೀ.ನಂ.ಶ್ರೀ.ಯವರು ಇದ್ದಕ್ಕಿದ್ದ ಹಾಗೆಯೇ ಕಣ್ಮರೆಯಾಗಿ ಬಂಧುಮಿತ್ರ ವರ್ಗವನ್ನೂ ಕನ್ನಡನಾಡಿನ ಜನವನ್ನೂ ವಿಷಾದದಲ್ಲಿ ಮುಳುಗಿಸಿದ್ದಾರೆ. ಅಂಥ ವ್ಯಕ್ತಿಗಳು ದುರ್ಲಭ. ಯಾವುದೋ ಒಂದು ಧ್ಯೇಯಕ್ಕಾಗಿ ಸ್ವಾರ್ಥವನ್ನು ದಮಿಸುವುದೊಂದು ದೊಡ್ಡ ಗುಣ. ಪ್ರೀತಿಸಂಪನ್ನರಿಗೆ ಮಾತ್ರ ಈ ಸಾಮರ್ಥ್ಯವಿರುತ್ತದೆ; ಮಮತೆಗಲ್ಲದೆ ಮಿಕ್ಕಾವುದಕ್ಕೂ ಸ್ವಾರ್ಥ ಬಗ್ಗದು, ಅದನ್ನು ಶ್ರೀಕಂಠಯ್ಯನವರು ಪಡೆದಿದ್ದರು. ನಾಡಿನ ಎಲ್ಲ ಸುಸಂಸ್ಕೃತರೂ ಮೇಧಾವಿಗಳೂ ಅವರ ಹಾಗೆ ನಾಡು ನುಡಿಗಳ ವಿಷಯದಲ್ಲಿ ಮಮತೆಯನ್ನು ತಾಳಿದರೆ ಈ ನಾಡು ಮತ್ತು ಅದರ ದಿವ್ಯವಾದ ನುಡಿ ಉದ್ಧಾರವಾದೀತು; ಇಲ್ಲದಿದ್ದರೆ ಕಳೆಗುಂದಿ ಹೀನೈಸೀತು ಎನ್ನಿಸುತ್ತದೆ ಅವರನ್ನು ನೆನೆದರೆ. ಅವರ ವೈಯಕ್ತಿಕ ಗುಣಗಳ ವಿಚಾರವಾಗಿ ನಾನು ಹೆಚ್ಚು ಹೇಳಬಯಸುವುದಿಲ್ಲ. ಈಗೊಂದು ಇಂಗ್ಲಿಷ್ ಸುಭಾಷಿತ, ಕವಿ ಕೋಲ್‌ರಿಡ್ಜನದು, ನೆನಪಿಗೆ ಬರುತ್ತದೆ: "The more we love our friends the less we flatter them". ಇದರ ಜತೆಗೊಂದು ಕನ್ನಡದ ಗಾದೆಯೂ ಇದೆ: "ಬಲ್ಲವನೇ ಬಲ್ಲ ಬೆಲ್ಲದ ಸವಿಯ". ತೀ.ನಂ.ಶ್ರೀ. ಅನೇಕ ರುಚಿಗಳ ಮಾಧುರ್ಯಮೂರ್ತಿ.

ತೀ.ನಂ.ಶ್ರೀ. ಅವರಂತೆ ಶಾಸ್ತ್ರರಸವನ್ನೂ ಕಾವ್ಯರಸವನ್ನೂ ಸವಿದು ತಣಿದವರು ತುಂಬ ವಿರಳ. "ಕಾವ್ಯಶಾಸ್ತ್ರವಿನೋದೇನ ಕಾಲೋಗಚ್ಛತಿ ಧೀಮತಾಂ" ಎಂಬ ಸೂಕ್ತಿ ಅವರಿಗೆ ಪದಶಃ ಅನ್ವಯಿಸುತ್ತಿತ್ತು. ಅವರಿಗೆ ಅಭಿನವಗುಪ್ತಾಚಾರ್ಯರನ್ನು ಕಂಡರೆ ತುಂಬ ಪ್ರೀತಿ ಮತ್ತು ಮರ್ಯಾದೆ; ಈ ಆಚಾರ್ಯರ ಬಹುಪಾಲು ಗುಣವನ್ನು ತೀನಂ.ಶ್ರೀ.ಯವರು ಪಡೆದಿದ್ದರು. ನಿಜವಾಗಿ ತೀ.ನಂ.ಶ್ರೀ. ಬಹುಶ್ರುತರು; ಅವರೊಡನೆ ಸಂಬಾಷಿಸುತ್ತಿದ್ದರೆ ಅನೇಕ ಉದ್ಗ್ರಂಥಗಳ ಸಾರ ನಮಗೆ ಅನಾಯಾಸವಾಗಿ ದೊರೆಯುತ್ತಿತ್ತು. ಈ ರಸಿಕ ಉದ್ದಾಮ ಪಂಡಿತರನ್ನು ಕಳೆದುಕೊಂಡು ನಾಡು ವ್ಯಥೆಪಡುವುದರಲ್ಲಿ ಏನೂ ಆಶ್ಚರ್ಯವಿಲ್ಲ.

ಕನ್ನಡನಾಡಿನಲ್ಲಿ ಪಾಂಡಿತ್ಯಕ್ಕಾಗಿ ಪರಿಶ್ರಮಿಸುವವರು ತುಂಬ ಕಡಮೆ. ನಿಜವಾಗಿ ವಿದ್ವಾಂಸರಾಗಿದ್ದವರು ಗತಿಸಿದುದಕ್ಕಾಗಿ ನಾಡು ಶೋಕವನ್ನು ವ್ಯಕ್ತಪಡಿಸುವುದು ಅದರ ಶ್ರೇಯೋಭಿಲಾಷೆಯನ್ನು ಸೂಚಿಸುತ್ತದೆ. ವಿದ್ವಾಂಸರು ಆಯಾ ದೇಶದ ಸ್ಮೃತಿನಿಧಿಗಳು. ಈ ನಿಧಿಗಳು ನಷ್ಟವಾದರೆ ನಾಡು ಕೃಪಣವಾಗುವುದು ಸಹಜ. ಎಲ್ಲ ವಿದ್ಯೆಗಳೂ ಸಹ ನಮ್ಮ ಸ್ಮೃತಿವಿಸ್ತರಣದಲ್ಲಿ

ಕೊನೆಗೊಳ್ಳುತ್ತವೆ ಎಂದು ಹೇಳಬೇಕು. ನಮ್ಮ ಭಾಷೆ ತುಂಬ ಪರಿಷ್ಕೃತವಾದ ಭಾಷೆ. ಅನೇಕ ಮೇಧಾವಿಗಳೂ ಭಾವುಕರೂ ಇದನ್ನು ಅನೇಕ ಶತಮಾನಗಳಿಂದಲೂ ಬೆಳಸಿಕೊಂಡು ಬಂದಿದ್ದಾರೆ ಎಂಬ ನೆನವು ಕೂಡ ನಮಗಾಗುವುದೆಂತು? ವಿದ್ವಾಂಸರಿಂದಲ್ಲವೆ? ಇಂಥ ನೆನವಿಲ್ಲದ ಜನ ಲೋಕದ ತಿರಸ್ಕಾರಕ್ಕೆ ಪಾತ್ರರಾಗುತ್ತಾರೆ. ಶ್ರೇಷ್ಠ ವಿದ್ವಾಂಸರ ನಷ್ಟಕ್ಕಾಗಿ ನಾಡು ಪರಿತಪಿಸುವುದನ್ನು ನೋಡಿದರೆ, ಅದಕ್ಕೆ ವಿದ್ವತ್ ಪ್ರೀತಿ ಇದೆಯೆಂದೂ ಈ ಪ್ರೀತಿ ಅದನ್ನು ಸ್ಮೃತಿಭ್ರಂಶದಿಂದ ಕಾಪಾಡುತ್ತದೆ ಎಂದೂ ನಮಗನಿಸುತ್ತದೆ.

ತೀ.ನಂ.ಶ್ರೀ.ಯವರು ನಮ್ಮ ನಾಡಿಗೆ ಮಾಡಿದ ಮಹದುಪಕಾರ ಯಾವುದೆಂದರೆ ಬಹು ಮಂದಿ ಉತ್ತಮ ವಿದ್ವಾಂಸರಾಗಬಲ್ಲ ಶಿಷ್ಯವರ್ಗವನ್ನು ತಯಾರುಮಾಡಿರುವುದು. ತಮ್ಮ ಅಮೋಘವಾದ ಪಾಂಡಿತ್ಯವನ್ನು ನಿಷ್ಕಲ್ಮಷ ಹೃದಯದಿಂದ, ನಿರರ್ಗಳವಾಗಿ ವಾತ್ಸಲ್ಯಭಾವದಿಂದ ತಮ್ಮ ಶಿಷ್ಯರಿಗೆ ಎರೆದರವರು. ಅವರು ತಾವೇ ಬರೆಯಬೇಕಾಗಿದ್ದ ಗ್ರಂಥಗಳು ಬಹಳವಾಗಿದ್ದವು. ಆದರೆ ಲೇಖನಿ ಹಿಡಿಯುವುದೆಂದರೆ ಅವರಿಗೆ ಬೇಸರ. 'ಓದು ಬರಹಕ್ಕೆ ಶತ್ರು' ಎಂಬುದು ಅವರು ಹಿಂದೆ ಬಿಟ್ಟು ಹೋಗಿರುವ ಗಾದೆ ಮಾತಾಗಿದೆ. ಅವರಾಡುತ್ತಿದ್ದ ಮಾತುಗಳನ್ನೂ ಮಾಡುತ್ತಿದ್ದ ಭಾಷಣಗಳನ್ನೂ ಗುರುತು ಹಾಕಿಕೊಂಡಿದ್ದು ಅವರಿಂದ ತಿದ್ದಿಸಿ ಪ್ರಕಟಿಸಿದ್ದರೆಯೇ ಬಹು ಅಮೂಲ್ಯವಾದ ಬರಹಗಳು ನಮಗೆ ದೊರೆಯುತ್ತಿದ್ದುವು. ಅವರ ಸ್ನೇಹದ ಸ್ಮರಣೆಗಳು ಪುಂಖಾನುಪುಂಖವಾಗಿ ಈಗ ನನ್ನ ಮನಸ್ಸಿನಲ್ಲಿ ಎದ್ದು ಅದನ್ನು ತೋಯಿಸುತ್ತಿವೆ. ಅವುಗಳ ವಿವರಣೆಗೆ ಈಗ ಸಮಯವಲ್ಲ. ತೀ.ನಂ.ಶ್ರೀ. ಅವರು ಆದರ್ಶ ಜೀವನವನ್ನು ನಡೆಸಿ ಮುಕ್ತರಾದರು. ಅವರ ಅಗಲಿಕೆಗಾಗಿ ಮರುಗುವ ಪಾಡು ನಮಗೆ ಬಂದಿರುವುದು ದೈವದ ವಿಲಾಸ.

Professor T.N. Sreekantaiya

N. Lakshminarayan Rao
(Retired Chief Epigraphist, Government of India)

●

In the year 1938 I was staying as a guest in the house of the late *Profeesor* T.S. Venkannayya of hallowed memory, whom I regarded as an elder member of our family. It was in this sacred spot that Mr. Venkannayya introduced *Prof.* T.N. Sreekantaiya to me as a budding and brilliant Kannada scholar. Our acquaintance developed into friendship and I kept up close, though not frequent contacts with him, especially in connection with the preparation of the *Kannada Dictionary,* His versatality and depth of learning both in literature and linguistics impressed me very much, whether it was in casual conversation or the discussion of particular topics.

His burning love for Kannada and his ardent desire that the language should develop on sound lines, maintain high standards and occupy an honoured place among all the languages not only of India but of the entire world were evident in each sentence that he spoke. When I met him last in the second week of June 1966 at Mysore, I had least suspected that the cruel hand of death would snatch him away so soon ! The news of his death over the radio came to me as a rude shock. It stunned me for a while. Need I say that the Kannada Country and the Kannada Language have indeed suffered an irreparable loss by his death?

Professor T.N.S

S.M. Katre
(Director, Deccan College, Poona)

•

It was in 1953 that I first came into contact with Professor T.N. Sreekantaiya in connection with organising a conference of educationists and linguists for the purpose of reorganising linguistic studies in India with a view to contributing scientifically to the studies of intercommunication in the field of Indian languages which assumed their birth-right as regional languages of communication in all fields of activities. This conference was held in Poona during May 1953 under the chairmanship of Sir Ralph Turner, then Director of the School of Oriental and African Studies in the University of London. Prof. T.N.S. as he became known to his colleagues at this conference contributed a great deal to the success of this conference which led to the establishment of what has since been called the Language project, at the Deccan College, with the full financial support of the Rockefeller Foundation between 1954 and 1960. The conference appointed an Advisory Committee consisiting of Sir Ralph Turner as Chairman, Dr. Suniti Kumar Chatterji, Dr. Baburam Saksena, Prof. Sreekantaiya and the Director of the Deccan College as Convener, to advise the Director on the organisation and conduct of this project. What struck the members of this Committee most was lovable Prof. T.N.S's personality which charmed everybody and under which he bore the weight of his learning. Always firm in his principles, he was prepared to compromise on small matters which did not involve these principles, and he was a tower of strength to me during the years when I had to

administer this project, with little experience of conducting such summer and winter schools on a big scale. The Advisory Committee provided the bed rock of support, and Prof T.N.S. was nearest to me in the physical sense, for he was then Professor of Kannada in the Karnataka University at Dharwar.

This first contact in 1953 led to many further meetings here in Poona and elsewhere, and many were the occasions when either T.N.S. came and stayed in Poona as my guest or I spent some time with him at Dharwar and later in Mysore when he went back to his parent university. The animated discussions on linguistics and other problems which led to many plans successfully executed and the influence which he wielded with his colleagues and students are memories which each of his friends and students will carry with him to the end.

T.N.S. was a stalwart on whom I could rely on all our activities. From 1954 when the Language project was inaugurated until recently, he participated as a full member of the faculty of the summer schools of linguistics year in and the year out, never wearying, but enthusing others in the pursuit of knowledge and our common objectives. One of the first results of his close association with the Language project at Deccan College was his deputation to Philadelphia for one year under an arrangement with the Rockefeller Foundation in order to renew his contact with modern developments in linguistics in USA. On his return it was presumed that the Karnataka University would develop a new department of linguistics. Unfortunately, however, T.N.S. decided to revert to his parent university for certain personal considerations, even at loss of pay, but his energies were directed towards the development of linguistic studies there. He was the first to get a unit for dialect studies sanctioned in the Mysore University with the creations of a Readership in the Dialect Survey Project. Later, he adorned the chair of Professor in the University on deputation from the Maharaja's College. It was while he was at the Maharaja's

College that he organised the Summer School in Linguistics in 1958. It was the second one to be held outside Poona and the first in South India. In organising it he displayed all the finesse and administrative qualities which marked him off as a unique personality. With that radiant smile on his face and that soft sympathetic twinkle in his eye he could charm anyone and solve difficult stituations.

During his regime as Professor of Kannada in the Mysore University he organised the Linguistic Circle of Mysore and arranged a number of extension lectures in which outside scholars participted. His love of phonetics which began in the early days when the Mysore University had established a small reasearch group, gave him the required impetus to carry on linguistic studies. Essentially he was a poet and literateur, with equal felicity in Kannada, Sanskrit and English: like the early Vedic seers he was ever in search for the perfect understanding and expression. It was during his regime as President of the Linguistic Society of India that the society undertook many new obligations designed towards the strengthening of linguistic studies. As a member of the Blue Print Committee he made signal contributions to the decisions and recommendations which were subsequently accepted by the University Grants Commission.

One of the most significant activities in which T.N.S. participated was the Dictionary of Kannada on historical principles. This undertaking, one of the first in India for a modern language (along with the project for Malayalam undertaken later by the Kerala University), occupied much of his time towards the close of his career in the Mysore University and subsequently when he worked there as Emeritus Professor. I remember this vividly when we discussed problems of the format and Typography when the first form was in the press. This was yet another bond which brought us nearer. It was during the session of the International Congress of Orientalists which met in Delhi in 1965 that I first mooted the question of his taking up responsibilities in organising the department of Linguistics at Delhi

University. He was most reluctant to take up new responsibilities at that stages when he felt that with diabetes, blood pressure and consequent heart trouble, he would not be equal to the challenges this would involve. But his love for the subject was strong enough for me to break through his reluctancy, but he insisted that he should be free to discharge his duties towards the Kannada Dictionary project by continuing to be Chairman and visiting Bangalore at least twice a year. However, at the last minute he decided not to accept the invitation, and continued to work as Emeritus Professor in Mysore.

As a member of the Expert Advisory Committee for Linguistics under the Commission for Scientific and Technical Terminology he always enlivened the meetings, and insisted on proper recognition being given to usages current in the south, particularly with reference to Sanskrit words taken as loans. He generally carried others with him when decisions had to he taken. In spite of his diabetes he kept active interest in his work and continued to travel and attend meetings where his presence was always welcome as creating a cheerful atmosphere.

One of the last things I remember was an accident. The two Centres of Advanced Study in Linguistics at Poona and Annamalai had decided to co-sponsor the publication of a special volume of studies in Indian Linguistics to honour *Professor* M.B. Emeneau of Berkeley University of California; though he was a member of the organising Committee, this committee had set up an editorial board on which neither T.N.S nor I wished to be active members. However, T.N.S. sent his contribution directly to me and my office sent it to the press instead of to the *Editor-in-Chief*. The press composed this immediately although it was not the turn of letters at that time (the contributions were arranged alphabetically under the names of the contributors) and T.N.S. corrected them himself and at my personal request posted them to the *Editor-in-Chief*. But for this accident T.N.S. would not have seen his contribution set in type. This consequently, has a

poignant interest to members of the editorial board and the organising committee.

During his last visit to me, *Prof.* Sreekantaiya had mentioned the possibility of his completing the historical grammar of Kannada, for the series projected by the Linguistic Society of India within one year. This will constitute another great loss to Indian Linguistics: he had the ability of presenting his material in a manner which could interest even the uninitiated.

Professor Sreekantaiya was such a fine man, even apart from his scholarship, both of which made an indelible impression on his fellow beings. His loss is a great blow to Indian scholarship, and particularly so to Linguistics and comes heavily in the wake of such personalities as the late *Professor* Alf Sommerfelt of Oslo and *Professor* Louis Renou of Paris.

Professor T.N. Sreekantaiya

T.P. Meenakshisundaran
(Vice-Chancellor, Madurai University)

●

I was very much grieved to learn the sudden death of my friend *Prof.* T.N. Sreekantaiya. Ever since he returned from the States I have been intimately connected with him in connection with the linguistic project, first of the Rockfeller Foundaion and later of the University Grants Commission. We used to meet often as members of the faculty of the summer and winter schools in linguistics held in turn at the various Universities of India. He organised a very successful and popular summer school in linguistics at Mysore and the linguists enjoyed the great hospitality of the Mysore University, thanks to him. Being a Dravidian scholar I came into greater contact with him. His services to the Kannada Dictionary of the Kannada Sahitya Parishat can never be forgotten. He put his heart and soul into that project. As a Chairman of the Malayalam Lexicon Adivisory Committee wherein he was a member I was very much impressed with his deep knowledge of lexicography and with the meticulous care with which he approached every problem therein. He visited as a member of the University Grants Commission sub-committee of experts the advanced centre for Dravidian Linguisitics at the Annamalai University before I laid down my directorship of that centre. He was kind enough to give me valuable advice encouraging me with the other experts to continue the successful work taken up by that centre. We also worked on the committee on the linguistic terms set up by the Hindi commission and I recall with a mixed feeling

of sorrow and joy the interesting discussions initiated by him at those meetings about the translation of those English terms into Hindi and of the necessity or otherwise for accepting certain terms as techinique. Along with others like myself he was interested in the Linguistic Society of India of which he was the President for sometime. All of us used to meet along with him at the Deccan College, Poona which is as it were the home of all the Linguists, thanks to the kindness of Dr. Katre, who must be feeling the sudden death of our friend.

What appeals to me more than anything else was his proficiency in language and literature-Sanskrit, Kannada and English. It was indeed a feast to listen to him explaining the beauties in these literatures. Because of this even his lectures on linguistics seemed to be as attractive as a discourse on literary beauties. He had also a knowledge of Tamil. He was kind enough to give me his Kannada works which make the Kannada students, as compared to Tamil students, at home in the field of literary criticism and language studies.

He helped me to organise the U.G.C. Seminar on the grammatical theories in Kannada at the Mysore University on behalf of the Annamalai University Centre last year. I enjoyed his hospitality and friendship when we met there and he made me feel almost a member of the family of Kannada scholars who attended the seminar. These memories crowd into my mind and make me very miserable indeed; for no longer am I going to enjoy the spark of his intelligence, the joy of his hospitality, the smiling humour of the kindness and the impulse for perfection which I always got from him. May his memory live long guiding the students and the scholars who had come into contact with him!

ಕನ್ನಡ ನಾಡಿನ ಹಿರಿಯ ಜೀವ–ತೀ.ನಂ.ಶ್ರೀ.;
ಅವರಿಲ್ಲದ ನಾಡು ಈಗ ಬಡವಾಯಿತು

ನಿರಂಜನ

●

ಅಧ್ಯಾಪಕರು ಪ್ರಾಧ್ಯಾಪಕರು ಹಲವರು ಸಿಗುತ್ತಾರೆ. ಅವರಲ್ಲಿ ಆಚಾರ್ಯರೆನ್ನಿಸಿಕೊಳ್ಳುವವರು ಕೆಲವರೇ. ಊರೆಲ್ಲಾ ಕವಿಗಳು ಸಾಹಿತಿಗಳು. ಆದರೆ ಅವರಲ್ಲಿ ಪ್ರಾತಃಸ್ಮರಣೀಯರಾಗುವ ಯೋಗ್ಯತೆ ಉಳ್ಳವರೆಷ್ಟು ಜನ?

ಆ ಸಂಖ್ಯೆ ಚಿಕ್ಕದು, ಬಹಳ ಚಿಕ್ಕದು.

ಅಂಥ ಅಲ್ಪಸಂಖ್ಯಾತರ ಗುಂಪಿನವರು ತೀ.ನಂ.ಶ್ರೀ. ಯಂತಹವರು ಅದನ್ನು ಬಳಸಿದಾಗ.

ಅವರು ಇಂಗ್ಲಿಷನ್ನೂ ಅದೇ ಪರಿಷ್ಕಾರದಿಂದ ಉಪಯೋಗಿಸುತ್ತಿದ್ದರು. ಇತರ ಭಾಷೆಗಳನ್ನು ಅವರು ಕಲಿತಿದ್ದರೆ, ಅಂಥದೇ ಅದೃಷ್ಟ ಅವುಗಳಿಗೂ ಲಭ್ಯವಾಗುತ್ತಿತ್ತು. ಆದರೆ ಕನ್ನಡಕ್ಕೆ ಆ ಮಹಾನುಭಾವನ ತಾಯಿನುಡಿ ತಾನು ಎಂದು ವಿಶೇಷ ಹೆಮ್ಮೆ.

ಈಗ ಕನ್ನಡಕ್ಕೆ ಅತ್ಯಂತ ದುಃಖ ಆ ಸುಪುತ್ರ ಕಾಲವಾದರು ಎಂದು.

೫೯ ಸಾಯುವ ವಯಸ್ಸೆ? ಆದರೆ ಹೃದಯ ಹೇಳದೆ ಕೇಳದೆ ಕುಸಿಯಿತು. ತಮ್ಮ ಮಗನನ್ನು ಕಾಣಲು ಕಲ್ಕತ್ತೆಗೆ ಹೋದವರು ಇಲ್ಲಿಗಾಯಿತು ಎಂದರು.

ಪಾರ್ಥಿವ ಶರೀರವನ್ನು ಕೊಳ್ಳಿಗಳು ಸುಟ್ಟುವು. ಕನ್ನಡದ ಒಡವೆ ಬೂದಿಯಾಯಿತು. ತೀ.ನಂ.ಶ್ರೀ.ಯವರು ಹೋದುದು ದಿಲ್ಲಿಗೆ, ಕಾರ್ಯಾರ್ಥ. ಜೊತೆಯಲ್ಲಿ ಪತ್ನಿಯೂ ಇದ್ದರು. ಮಗ ಕಲ್ಕತ್ತೆಯಲ್ಲಿ, ಅಳಿಯ ಮಗಳು ರಾಂಚಿಯಲ್ಲಿ. ಒಂದೊಂದು ಹೊತ್ತು ಚಿಕ್ಕವರೊಡನೆ ಇದ್ದು ವಾರಾಂತ್ಯದಲ್ಲಿ ಮೈಸೂರಿಗೆ ವಾಪಸಾಗುವ ಕಾರ್ಯಕ್ರಮ.

ಮಗನ ಮನೆಯಲ್ಲೊ? ಮಗಳ ಮನೆಯಲ್ಲೊ?

ಸಂಸ್ಕಾರದ ಸೆಳೆತ. ಉಸಿರು ಕಲಕತ್ತದಲ್ಲೇ ನಿಂತಿತು.

ಬಂಗಾಳದ ಸಾರಸ್ವತ ಸಮಾಜಕ್ಕೆ ಪ್ರಾಯಶಃ ತಿಳಿದಿರಲಾರದು. ರಾಜಮರ್ಯಾದೆಯೊಡನೆ ಅಂತಿಮಯಾತ್ರೆ ನಡೆಯಬೇಕಾಗಿದ್ದ ಕನ್ನಡನೆಲದ ಬದಲು, ದೂರದ ಕಲಕತ್ತದಲ್ಲಿ ಸಾವು ಅವರನ್ನು ಬರಮಾಡಿಕೊಂಡಿತು.

*

ಸುದ್ದಿ ಕೇಳಿದ ಎಲ್ಲರಿಗೂ ದಿಗ್ಭ್ರಮೆ.

'ಹೀಗಾಯಿತಲ್ಲ!'

ತಮ್ಮನ್ನು ತಾವೇ ಸಂತೈಸಿಕೊಳ್ಳಬೇಕು: 'ಬಪ್ಪುದು, ತಪ್ಪದು.'

ಈ ಮೂರುನಾಲ್ಕು ವರ್ಷಗಳಿಂದ ಅವರ ಆರೋಗ್ಯ ಮುಂಚಿನಂತಿರಲಿಲ್ಲ. ಸಿಹಿಮೂತ್ರಕ್ಕಂತೂ ಹೃದಯದ ನಂಟು.

ಅಸ್ವಾಸ್ಥ್ಯವೆಂದು ದುಡಿಮೆ ಕಡಿಮೆಯಾದದ್ದಿಲ್ಲ. ಕನ್ನಡ ನಿಘಂಟು ನಿರ್ಮಾಣದ ಬಗೆಹರಿಯದ ಸಮಸ್ಯೆಯೇ ಸಾಕು, ತಲೆತಿನ್ನಲು. ಜೊತೆಗೆ ಬೇರೆಯೂ ಕೆಲಸಗಳು.

ನಿಘಂಟಿನ ರಚನೆ ತಡವಾಗುತ್ತಿದೆಯೆಂದು ಅವರಿಗೆ ಅಸಮಾಧಾನವಾಗಿತ್ತು. ಬಲ್ಲವರು ಬಲ್ಲರು: ಪ್ರಧಾನ ಸಂಪಾದಕ ತೀ.ನಂ.ಶ್ರೀಯವರು ಮಾತ್ರ ಶಕ್ತಿಗೆ ಮೀರಿ ದುಡಿಯುತ್ತಿದ್ದರು. ಸಂಭಾವನೆ ಇಲ್ಲದ ಸೇವೆಯೆಂದು ಎಂದೂ ಉಪೇಕ್ಷೆಮಾಡಿದವರಲ್ಲ.

ತಮ್ಮ ಬದುಕಿನ ಯಾವ ಹಂತದಲ್ಲಿಯೇ ಆಗಲಿ ಸಂಭಾವನೆಯ ಪ್ರಶ್ನೆಗೆ ಪ್ರಾಶಸ್ತ್ಯವನ್ನು ಅವರು ನೀಡಿದವರೇ ಅಲ್ಲ.

ಮೇಧಾವಿ ವಿದ್ಯಾರ್ಥಿ ಎಂ.ಎ. ಪದವೀಧರರಾದ ಮೇಲೆ ಸರಕಾರದ ನೌಕರಿ ಹಿಡಿದರು ಕಂದಾಯ ಖಾತೆಯಲ್ಲಿ. ಆದರೆ ಭಾಷೆ ಸಾಹಿತ್ಯಗಳ ಬಗೆಗೆ ಅವರಿಗಿದ್ದ ಒಲವು, ವೃತ್ತಿ ಬದಲಾವಣೆಗೆ ಕಾರಣವಾಯಿತು. ಮೈಸೂರಿನಲ್ಲಿ ಇಂಟರ್‌ಮೀಡಿಯೆಟ್ ಕಾಲೇಜ್ ಆರಂಭವಾದಾಗ ಕನ್ನಡ ಉಪನ್ಯಾಸಕರಾಗಿ ಅವರು ಅದನ್ನು ಸೇರಿಕೊಂಡರು.

ಹಿರಿಯ ಜೀವಗಳ ಸಂಪರ್ಕದಲ್ಲಿ ಈ ಜೀವವೂ ಹಿರಿದಾಯಿತು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದವರು, ಮತ್ತೆ ಮೈಸೂರಿಗೆ ಮರಳಿದರು. ಅವರ ಪಾಲಿಗೆ ಕಲಿಸುವ ಕೆಲಸ ಒಂದು ತಪಸ್ಸು. ಆ ಪ್ರಭೆಯಲ್ಲಿ ಮೈ ಕಾಯಿಸಿಕೊಂಡವರ ಸಂಖ್ಯೆ ದೊಡ್ಡದು, ಬಹಳ ದೊಡ್ಡದು.

*

ತಲೆಯ ಮೇಲಿನ ಕೂದಲು ತೆಳ್ಳಗಾದರೂ ತೀ.ನಂ.ಶ್ರೀ. ನಿತ್ಯಮಂದಸ್ಮಿತನಾದ ಸ್ಫುರದ್ರೂಪಿ. ನಡೆ ನುಡಿ ಎರಡರಲ್ಲೂ ಒಪ್ಪ ಓರಣ.

ಅವರೆಂಥ ಸ್ನೇಹಜೀವಿಯೆಂಬುದನ್ನು ಆ ಓರಗೆಯವರೆಲ್ಲ ಬಲ್ಲರು. ಅವರ ಎದುರಲ್ಲಿ ಅಸಹನೆ ದೋಷಗಳು ಕರಗಿ ಮಾಯವಾಗುತ್ತಿದ್ದುವು. ಚಿಲ್ಲರೆ ಮಾತು ಬಿಲಸೇರಿ, ಸಂಭಾಷಣೆ ಬಂಗಾರವಾಗುತ್ತಿತ್ತು.

ಭಾಷಾಶಾಸ್ತ್ರದ ಅಧ್ಯಯನ ಅಧ್ಯಾಪನಗಳಿಗಾಗಿ ತೀ.ನಂ.ಶ್ರೀ. ಅಮೆರಿಕಕ್ಕೆ ಹೋಗಿದ್ದರು. ಅಲ್ಲಿಂದ ಅವರು ಬರೆದ ಪತ್ರಗಳ ಸೊಗಸು ಅನಾದೃಶ್ಯ.

ಗದ್ಯವೂ ಅಷ್ಟೆ, ಪದ್ಯವೂ ಅಷ್ಟೆ. ವಿವಿಧ ಪ್ರಕಾರಗಳಿಗೆ ಅವರು ಪೂಜೆ ಸಲ್ಲಿಸುತ್ತಿದ್ದರು. ಪ್ರಥಮ ಕವನ ಸಂಕಲನವಾದ ಒಲುಮೆ ವಿಮರ್ಶಾಗ್ರಂಥಗಳಾದ ಪಂಪ, ಕಾವ್ಯ ಸಮೀಕ್ಷೆ, ಇನ್ನೂ ಕೆಲವು, ಕಾಲದ ಪರೀಕ್ಷೆಯಲ್ಲಿ ಉತ್ತೀರ್ಣವಾಗುವ ಸಮರ್ಥ ಕೃತಿ ಭಾರತೀಯ ಕಾವ್ಯಮೀಮಾಂಸೆ.

ಟಿಪ್ಪಣಿಗಳು? ಹಲವು ಡಾಕ್ಟರೇಟ್ ನಿಬಂಧಗಳಿಗಾಗುವಷ್ಟು ಅವರ ಕಡತಗಳಲ್ಲಿವೆ. ಯಾರಾದರೂ ಮುದ್ರಿಸಿದರೆ ಬಹಳ ಕಾಲಕ್ಕೆ ಅದು ದಾರಿದೀಪವಾದೀತು.

ತೀ.ನಂ.ಶ್ರೀ ಪ್ರೊಫೆಸರಾಗಿ ನಿವೃತ್ತರಾದರು. ನಿವೃತ್ತಿ ಎಂಬ ಪದಕ್ಕೆ ಅರ್ಥವಿಲ್ಲ. ದಣಿವರಿಯದ ಜೀವಕ್ಕೆ ಯಾವಾಗಲೂ ದುಡಿಮೆಯೇ.

ಸರಸ್ವತಿ ಆರಾಧಕರು. ಲಕ್ಷ್ಮೀ ಉಳಿದದ್ದು ದೂರವೇ. ಕನ್ನಡ ಅಧ್ಯಯನ ಮಂಡಲದ ಅಧ್ಯಕ್ಷರಾಗಿದ್ದಾಗ ತೀನಂಶ್ರೀ ಎಷ್ಟೋ ಜನರ ಬರವಣಿಗೆ ವಿಶ್ವವಿದ್ಯಾನಿಲಯದಲ್ಲಿ, ಪಠ್ಯವಾಗುವಂತೆ ಮಾಡಿದರು. ಅವರ ಪುಸ್ತಕ? 'ನಾನು ಅಧ್ಯಕ್ಷನಾಗಿರುವವರೆಗೂ ನನ್ನ ಪುಸ್ತಕ ಕೂಡದು', ನಿವೃತ್ತಿಯ ಅನಂತರವಷ್ಟೇ ಪ್ರಬಂಧ ಸಂಗ್ರಹ 'ನಂಟರು' ವಿದ್ಯಾರ್ಥಿಗಳ ವಶವಾಯಿತು.

ಪುರಸ್ಕಾರ ಪಾರಿತೋಷಕಗಳು? ಸಮ್ಮೇಳನಾಧ್ಯಕ್ಷತೆ? ಯಾರಾದರೂ ಮನಸ್ಸು ಮಾಡಿದ್ದರೆ ಈ ಮೊದಲೇ ಬರಬಹುದಾಗಿತ್ತು. ಅವರಿಗಿನ್ನೂ ಚಿಕ್ಕವಯಸ್ಸು; ಇನ್ನೂ ಅರುವತ್ತಾಗಿಲ್ಲ, ಎಂದು ಸಂಬಂಧಪಟ್ಟವರು ಭಾವಿಸಿದರೇನೊ.

ರಾಜ್ಯದ ಸಾಹಿತ್ಯ ಅಕಾಡೆಮಿ ಸದ್ಯದಲ್ಲೇ ಅವರನ್ನು ಸತ್ಕರಿಸಲು ನಿರ್ಧರಿಸಿತ್ತು. ಈಗ ಅವರಿಲ್ಲ. ಸ್ವತಃ ಅವರು ಬಂದು ಸಮಾರಂಭಕ್ಕೆ ಶೋಭೆ ನೀಡಿ ಅದರಿಂದ ಸಂತೋಷ ಪಡುವ ಭಾಗ್ಯ ಅಕಾಡೆಮಿಗಿಲ್ಲ.

(ಪ್ರಪಂಚ : ೧೮-೯-೧೯೬೬)

ಕೈ ಬಿಟ್ಟು ಹೋದ ಕನ್ನಡದ 'ಶ್ರೀ'

ಸಿ.ಪಿ. ಕೃಷ್ಣಕುಮಾರ್

ಕನ್ನಡ 'ಶ್ರೀ'ಗಳಿಬ್ಬರು: ಒಬ್ಬರು ಆಚಾರ್ಯ ಬಿ.ಎಂ.ಶ್ರೀ; ಮತ್ತೊಬ್ಬರು ಆಚಾರ್ಯ ತೀ.ನಂ.ಶ್ರೀ. ಇಬ್ಬರಿಗೂ ನಿಕಟವಾದ ಹೋಲಿಕೆಯುಂಟು; ಇವರಿಬ್ಬರೂ ಗುರುಶಿಷ್ಯರು; ಕನ್ನಡಕ್ಕಾಗಿ ತನುಮನಗಳನ್ನು ಸವೆಸಿದ ಕಲಿಗಳು; "ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ ನಾವು ಸಮ ನಿಮಗೆಂದು ನುಡಿವ ಬಲವಿಲ್ಲ" ಎನ್ನುವಂತಹ ದೈನ್ಯಾವಸ್ಥೆಯಲ್ಲಿ ಕನ್ನಡ ನಿಂತಿದ್ದಾಗ ಅದನ್ನು ಕೈಹಿಡಿದು ಇಂದಿನ ಉಚ್ಚ ಸ್ಥಾನಕ್ಕೇರಿಸಲು ಅಹರ್ನಿಶಿ ದುಡಿದು ಮಡಿದ ಮಹನೀಯರಲ್ಲಿ ಅಗ್ರಗಣ್ಯರು. ಒಂದು 'ಶ್ರೀ'ಯಂತೂ ಹಿಂದೆಯೇ ಕಣ್ಮರೆ ಆಯಿತು; ಇದೀಗ ಮತ್ತೊಂದು 'ಶ್ರೀ' ಕೂಡ ಕೈಬಿಟ್ಟು ಕನ್ನಡಿಗರ ಮತಿಗೆ ಮಂಕು ಹಿಡಿಸಿದೆ.

ಕಳೆದವಾರ ಪ್ರಾಚಾರ್ಯ ತೀ.ನಂ.ಶ್ರೀಕಂಠಯ್ಯನವರ ಮರಣದ ವಾರ್ತೆ ನೀಲಾಕಾಶದಿಂದ ಸಿಡಿಲೆರಗಿದಂತೆ ಅನಿರೀಕ್ಷಿತವಾಗಿ ಬಂತು. ಯಾರು ತಾನೆ ಅದನ್ನು ನಂಬಬಹುದು? ಆ ಎತ್ತರವಾದ ದೃಢವಾದ ನಿಲುವು, ತೇಜೋನ್ವಿತವಾದ ಮುಖ ಮಂಡಲ, ಕನ್ನಡಕದ ಹಿಂದೆ ಹೊಳೆವ ಬಟ್ಟಲುಗಣ್ಣುಗಳು, ಮೋಹಕವಾದ ನಗು ಇವನ್ನೆಲ್ಲ ಮರೆಯುವದು ಹೇಗೆ? ಅವರನ್ನು ಮೃತ್ಯು ಮುಟ್ಟಿತೆಂದರೆ ನಂಬಿಕೆಯೆ ಹುಟ್ಟುತ್ತಿಲ್ಲವಲ್ಲ! ದೂರದ ಕಲ್ಕತ್ತದಲ್ಲಿ ಅವರು ಕಾಲವಶರಾದುದರಿಂದ, ಅವರ ಅಂತ್ಯದರ್ಶನದ ಭಾಗ್ಯವೂ ನಮಗೆ ಸಿಕ್ಕಲಿಲ್ಲ. ಅವರು ತೀರಿಕೊಂಡಿಲ್ಲ, ಎಲ್ಲೋ ದೂರ ಹೋಗಿದ್ದಾರೆ, ಮತ್ತೆ ಬರುತ್ತಾರೆ ಎಂದೇ ಹೃದಯ ಭ್ರಮಿಸುತ್ತಿದೆ. ಆದರೆ ಅವರು ಮತ್ತೆ ಪಾರ್ಥಿವ ರೂಪದಲ್ಲಿ ಬರುವುದಿಲ್ಲ; ಕನ್ನಡದ ಪಾಲಿಗೆ ಆ ವಿದ್ಯಾಸಾಗರ ಇನ್ನಿಲ್ಲ ಎಂದು ನಂಬಲೇ ಬೇಕಾಗಿದೆ. ಕನ್ನಡದ ಬಾನಿನ ಜ್ವಲಂತ ನಕ್ಷತ್ರವೊಂದು ಅಸ್ತಂಗತವಾಯಿತು; ಮತ್ತೊಂದು ಕಳಸ ಕಳಚಿ ಬಿತ್ತು; ಪ್ರತಿಮಾಗೃಹಕ್ಕೆ ಮತ್ತೊಂದು ಪ್ರವೇಶವಾಯಿತು.

ತೀ.ನಂ.ಶ್ರೀ. ಯವರ ಮರಣ ಒಂದು ವ್ಯಕ್ತಿಯ ಮರಣವಲ್ಲ; ಶಕ್ತಿಯ ಮರಣ, ಒಂದು ಪೀಳಿಗೆಯ ಕಣ್ಮರೆ. ಹಳತು–ಹೊಸತರ ನಡುವಣ ಕೊಂಡಿಯೊಂದು ಅವರ ಸಾವಿನಿಂದ ಕಳಚಿಕೊಂಡಿತು; ಕನ್ನಡ ಸಾರಸ್ವತ ಪ್ರಪಂಚ ಅದರಿಂದ ಬಹಳ ರಿಕ್ತವಾಯಿತು.

ಕನ್ನಡದ ಸೇವಕರಲ್ಲಿ ಹಲವಾರು ವರ್ಗಗಳುಂಟು; ಅವುಗಳಲ್ಲಿ ಅತ್ಯಂತ ಉದಾತ್ತವಾದ ವರ್ಗಕ್ಕೆ ಸೇರಿದವರು, ತೀ.ನಂ.ಶ್ರೀ. ಅವರು ಜೀವನೋಪಾಯಕ್ಕಾಗಿ ಕನ್ನಡವನ್ನು ಆಶ್ರಯಿಸಲಿಲ್ಲ.

ಭಾಗ್ಯದ ಬಾಗಿಲು ಅವರಿಗೆ ಬೇರೆ ಕಡೆ ತೆರೆದಿತ್ತು; ಆದರೆ ಅವರು ಅದಕ್ಕೆ ಬೆನ್ನು ತಿರುಗಿಸುವಂತೆ ಮಾಡಿದ ಅವರ ಕನ್ನಡದ ಮೇಲಿನ ಉತ್ಕಟವಾದ ಪ್ರೀತಿ, ನಿಷ್ಠೆ, ಗೌರವ, ಕಡೆಯ ತನಕ ಕನ್ನಡ ಅವರ ಉಸಿರಾಗಿತ್ತು. ಅದಕ್ಕಾಗಿ ಅವರು ಮಾಡಿದ ತ್ಯಾಗ ಚಿರಸ್ಮರಣೀಯವಾದುದು. ಉನ್ನತಾಧಿಕಾರದಲ್ಲಿ ವಿಜೃಂಭಿಸುವ ಅವಕಾಶವನ್ನು ತುಚ್ಛೀಕರಿಸಿ, ಕನ್ನಡದ ಕರೆಗೆ ಓಗೊಟ್ಟು ಬಂದ ಅವರ ತ್ಯಾಗ ಕನ್ನಡದ ಪಾಲಿಗೆ ಭೋಗವಾಯಿತು. ಅದು ಕನ್ನಡಿಗರ ಸುದೈವ.

.........೧೯೬೦ರಲ್ಲಿ ನಿವೃತ್ತರಾದರು. ವೃತ್ತಿಯಿಂದ ನಿವೃತ್ತರಾದರು, ಅಷ್ಟೇ :– ಪ್ರವೃತ್ತಿಯಿಂದ ನಿವೃತ್ತರಾಗಲಿಲ್ಲ; ಕನ್ನಡದ ಸೇವೆಯಿಂದ ನಿವೃತ್ತರಾಗಿಲಿಲ್ಲ, ಇಹ ಜೀವನದಿಂದ ಬಿಡುಗಡೆ ಗೊಂಡಾಗಲೇ ಅವರು ಕನ್ನಡದ ಉಪಾಸನೆ ನಿಲ್ಲಿಸಿದ್ದು.

ಬಹುಮುಖ ವಿದ್ವತ್ತು

ತೀ.ನಂ.ಶ್ರೀ.ಯವರದು ಸುಮಾರು ನಾಲ್ಕು ದಶಕಗಳ ಅವಿಶ್ರಾಂತವಾದ ಸಾರಸ್ವತ ತಪಸ್ಸು; ಅದರ ಫಲವನ್ನೆಲ್ಲ ಅವರು ಕನ್ನಡದ ಏಳ್ಗೆಗಾಗಿ ನಿರ್ವಂಚನೆಯಿಂದ ಧಾರೆಯೆರೆದರು. ಆ ಜಾಜ್ವಲ್ಯಮಾನವಾದ ಮಹಾಜ್ಯೋತಿಯಿಂದ ತಮ್ಮ ಹಣತೆಗಳನ್ನು ಹಚ್ಚಿಕೊಂಡವರು ಅಸಂಖ್ಯ ಮಂದಿ. ಅಧ್ಯಾಪಕರಾಗಿ, ಲೇಖಕರಾಗಿ 'ಶ್ರೀ' ಯವರು ನಾಡಿಗಿತ್ತ ಕಾಣಿಕೆ ಅಮೋಘವಾದುದು; ಎಣೆಯಿಲ್ಲದ್ದು.

ವಿದ್ವತ್ತಿಗೆ ಮತ್ತೊಂದು ಹೆಸರು ತೀ.ನಂ.ಶ್ರೀ; ಅವರೊಂದು ಜಂಗಮ ಜ್ಞಾನಕೋಶವಾಗಿದ್ದ ರೆಂದರೂ ತಪ್ಪಾಗದು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಈ ತ್ರಿಭಾಷಾ ಸಾಹಿತ್ಯಗಳ ಮೇಲೂ ಅವರಿಗೆ ಪೂರ್ಣ ಪ್ರಭುತ್ವವಿತ್ತು. ಎಷ್ಟು ಮುಖಗಳು ಅವರ ಪಾಂಡಿತ್ಯಕ್ಕೆ! ಕಾವ್ಯ. ಅಲಂಕಾರ, ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ಭಾಷಾಶಾಸ್ತ್ರ ಎಲ್ಲ ಶಾಖೆಗಳಲ್ಲೂ ಅವರದು ಸಮಾನವಾದ ನೈಪುಣ್ಯ. ಒಂದೊಂದು ಕ್ಷೇತ್ರದಲ್ಲಿ ಮಾತ್ರ ಪರಿಣತರಾದವರು ಬಹಳ ಮಂದಿ ಇದ್ದಾರೆ; ಆದರೆ 'ಶ್ರೀ' ಯವರಂತೆ ಸರ್ವಕ್ಷೇತ್ರಗಳಲ್ಲೂ ಆಳವಾದ ವಿದ್ವತ್ತನ್ನು ಆರ್ಜಿಸಿದ ಧೀಮಂತರು ಬಹು ವಿರಳ–ಇಲ್ಲವೇ ಇಲ್ಲವೆನ್ನಬಹುದು. ಅವರು ಕವಿ, ವಿಮರ್ಶಕ, ಸಂಶೋಧಕ ಎಲ್ಲವೂ ಆಗಿದ್ದ ವಿರಳ ಚೇತನ.

ವಿದ್ವಾಂಸರು ಶುಷ್ಕಹೃದಯರಾಗಿರುವುದು ಲೋಕದಲ್ಲಿ ಸಾಮಾನ್ಯ. ಆದರೆ ತೀ.ನಂ.ಶ್ರೀ. ಶುಷ್ಕಪಂಡಿತರಲ್ಲ, ಅತ್ಯುತ್ತಮ ರಸಜ್ಞರು. ಎಂತಹ ಕ್ಲಿಷ್ಟ ನೀರಸ ವಸ್ತುವಿನಲ್ಲೂ ರಸವನ್ನು ಹಿಂಡಿ ತೆಗೆಯಬಲ್ಲ ಮೋಡಿಗಾರರು. ಕಾವ್ಯಮೀಮಾಂಸೆ ಮತ್ತು ಭಾಷಾಶಾಸ್ತ್ರ ತೋರಿಕೆಗೆ ಪರಸ್ಪರ ವಿರುದ್ಧವಾದ ವಿಷಯಗಳು. ಆದರೆ ಅವೆರಡನ್ನೂ 'ಶ್ರೀ'ಯವರು ತನ್ಮಯತೆಯಿಂದ ಪಾಠ ಹೇಳುತ್ತಿದ್ದ ರೀತಿ ಅವರ ವಿದ್ಯಾರ್ಥಿಗಳಿಗೆಲ್ಲ ಗೊತ್ತು. ಈ ಕಾವ್ಯ–ಶಾಸ್ತ್ರ ಸಮನ್ವಯ ಅವರ ಮಹಾ ವೈಶಿಷ್ಟ್ಯ; ಅವೆರಡೂ ತಮ್ಮ ಎರಡು ಕಣ್ಣುಗಳೆಂದು ಅವರು ಹೇಳುತ್ತಿದ್ದರು.

ವಿಶಿಷ್ಟ ವಾಗ್ಮಿತೆ

ಯಾವ ವಿಷಯವನ್ನೇ ತೆಗೆದುಕೊಳ್ಳಲಿ ತೀ.ನಂ.ಶ್ರೀಯವರು ಅದನ್ನು ಹೃದಯಂಗಮವಾಗಿ ನಿರೂಪಿಸುತ್ತಿದ್ದರು. ಅವರ ಬೋಧನವಿಧಾನ ಅವರದೇ; ಅವರೊಬ್ಬ ವಿಶಿಷ್ಟ ರೀತಿಯ

ವಾಗ್ಮಿಯಾಗಿದ್ದರು. ಮುಖ್ಯ ವಿಷಯದ ನೆಲೆ ತಪ್ಪದಂತೆ ಹಲವಾರು ವಿಷಯಗಳಲ್ಲಿ ತುಳಿಯುತ್ತ, ನಾನಾ ದಿಕ್ಕುಗಳಿಂದ ಸಂಗ್ರಹಿಸಿದ ಸಾಮಗ್ರಿಯನ್ನು ಉದಹರಿಸುತ್ತ ಕೇಳುವವರ ಹೃನ್ಮನಗಳನ್ನು ಅವರು ಅಪಹರಿಸಿಬಿಡುತ್ತಿದ್ದರು. ಆದರೆ ಮಾತು ಹುಚ್ಚು ಹೊಳೆಯಂತಲ್ಲ, ಮುತ್ತಿನ ಮಳೆಯಂತೆ. ಒಂದೊಂದು ನುಡಿಯೂ ತೂಕಮಾಡಿ ಆಡಿದ್ದು; ಆಲೋಚನೆಯ ಆಳದಿಂದ ಮೂಡಿದ್ದು. ಅದಕ್ಕೆ ತಕ್ಕಂತೆ ಕ್ರಮಬದ್ಧವಾದ, ಹವಣರಿತ ವಿಷಯ ನಿರೂಪಣೆ, ಪದ್ಯಗಳನ್ನು ಅವರು ಭಾವಪೂರ್ಣವಾಗಿ ಓದುತ್ತಿದ್ದುದೇ ಒಂದು ಚಂದ; ಅವರ ಪಾಠವನ್ನಾಗಲಿ ಭಾಷಣವನ್ನಾಗಲಿ ಕೇಳುತ್ತ ಕುಳಿತರೆ ವೇಳೆ ಕಳೆದುದೇ ಅರಿವಾಗುತ್ತಿರಲಿಲ್ಲ. ಸಾಹಿತ್ಯವಿರಲಿ, ಒಮ್ಮೆ ಪತ್ರಿಕೋದ್ಯಮವನ್ನು ಕುರಿತು ಅವರು ಮಾಡಿದ ಭಾಷಣವೊಂದನ್ನು ಕೇಳಿ ನಾನು ಬೆರಗಾದುದುಂಟು; ಆ ವಿಷಯದ ಮೇಲೆ ಅಷ್ಟೊಂದು ಸ್ವಾರಸ್ಯಪೂರ್ಣವಾಗಿ ಮಾತನಾಡಬಹುದೆಂಬ ಕಲ್ಪನೆ ನನಗಿರಲಿಲ್ಲ.

'ಶ್ರೀ'ಯವರ ಮಾತಿನಂತೆಯೇ ಅವರ ಬರಹ ಕೂಡ. ಅದಕ್ಕೆ ಹಿತ-ಮಿತ ಸ್ವರೂಪ. ಅದರಲ್ಲಿ ಯಾವೊಂದು ಮಾತನ್ನೂ ತೆಗೆದು ಹಾಕುವಂತಿಲ್ಲ; ಬದಲಿಸುವಂತೆಯೂ ಇಲ್ಲ. ಎಲ್ಲವೂ ನಿರ್ಣಾಯಕ. "ನನ್ನ ಲೇಖನ ವ್ಯವಸಾಯ ಅಷ್ಟೇನೂ ಹುಲುಸಲ್ಲ" ಎಂದು ಅವರೇ ಒಂದೆಡೆ ಹೇಳಿಕೊಂಡಿದ್ದಾರೆ. ಹುಲುಸಲ್ಲ ದಿಟ. ಆದರೆ ಅವರು ಬರೆದಿರುವಷ್ಟು ಮಾತ್ರ ಚೊಕ್ಕ ಬಂಗಾರ. ಅವರ ವಿಶಾಲ ವ್ಯುತ್ಪತ್ತಿ, ಸರಸ ದೃಷ್ಟಿ, ಸುಸಂಸ್ಕೃತ ಅಭಿರುಚಿ, ಓರೆಕೋರೆಗಳಿಲ್ಲದ ಪರಿಷ್ಕೃತ ಶೈಲಿ ಅವರ ಬರಹಗಳನ್ನು ಅನನ್ಯವಾಗಿಸಿವೆ.

ಪರಿಪೂರ್ಣತೆ

ಶ್ರೀಕಂಠಯ್ಯನವರು ಪರಿಪೂರ್ಣತೆಯ ಸಾಧಕರಾಗಿದ್ದರು. ಆರಾಧಕರಾಗಿದ್ದರು. ಮಾಡಿದ್ದೆಲ್ಲ ಪರಿಪೂರ್ಣ ಆಗಬೇಕೆಂಬುದೆ ಅವರ ದೊಡ್ಡ ಹಂಬಲ. ಈ ಕಾರಣದಿಂದಲೆ ಅವರ ವೈದುಷ್ಯ ತಲಸ್ಪರ್ಶಿಯಾಗಿತ್ತು; ಯಾವೊಂದು ವಿಷಯವನ್ನೆ ಆಗಲಿ ಸಂಪೂರ್ಣವಾಗಿ ಕರತಲಾಮಲಕ ಮಾಡಿಕೊಳ್ಳದೆ ಅವರು ವಿರಮಿಸುತ್ತಿರಲಿಲ್ಲ; ಪೂರ್ವ ಸಿದ್ಧತೆ ಇಲ್ಲದೆ ಏನನ್ನೂ ಹೇಳುತ್ತಿರಲಿಲ್ಲ. ನಿರ್ದುಷ್ಟವಾದ, ನಿಖರವಾದ ಜ್ಞಾನವೆ ಅವರ ಪರಮಧ್ಯೇಯವಾಗಿತ್ತು; ಅಂತಹ ಜ್ಞಾನವನ್ನು ಮಾತ್ರ ಅವರು ಲೇಖನ ರೂಪಕ್ಕಿಳಿಸುತ್ತಿದ್ದರು. ಅವರ ಪಾಲಿಗೆ ಬರೆಯುವುದು ಮುಖ್ಯವಾಗಿರ ಲಿಲ್ಲ, ಅರಿಯುವುದು ಮುಖ್ಯವಾಗಿತ್ತು. ಮೊದಲು ಅರಿವು ಸರಿಯಾಗಿರಲಿ; ಆಮೇಲೆ ಬರವಣಿಗೆ – ಅದೂ ಸರಿಯಾಗಿರಬೇಕು. ಈ ಪರಿಪೂರ್ಣತೆಯ ಆಕಾಂಕ್ಷೆಯಿಂದಲೆ ಅವರಲ್ಲಿ ಸದಾ ಅತೃಪ್ತಿ ನೆಲೆಗೊಂಡಿತ್ತು. ಯಾವುದನ್ನೂ ಬೇಗ ಬರೆಯುತ್ತಿರಲಿಲ್ಲ; ಬರೆದ ಮೇಲೂ ಬಹಳ ಸಲ ತಿದ್ದುತ್ತಿದ್ದರು; "ಪದವಿಟ್ಟಳುಪದೊಂದಗ್ಗಳಿಕೆ" ಅವರದಲ್ಲ. "ಒತ್ತು ಸೇವೆಯ ಹಾಗೆ ನನ್ನ ಬರವಣಿಗೆ" ಎಂದು ಅವರು ಒಂದು ಕಡೆ ತಿಳಿಸಿದ್ದಾರೆ. ಯಾರಾದರೂ ಪ್ರೀತಿಯಿಂದ ಒತ್ತಾಯ ಮಾಡಿದಾಗ ಮಾತ್ರ ಲೇಖಣಿ ಹಿಡಿಯುತ್ತಿದ್ದರು.

ತೀ.ನಂ.ಶ್ರೀ. ಬರೆಯಬೇಕಾದಷ್ಟು ಬರೆಯಲಿಲ್ಲ ಎಂಬ ಆಕ್ಷೇಪವೊಂದುಂಟು. ಅವರೇ ವಿನೋದಪೂರ್ವಕವಾಗಿ ರಚಿಸಿದ್ದ "ಓದು ಬರಹಕ್ಕೆ ಶತ್ರು" ಎಂಬ ಸೂತ್ರವನ್ನು ಇದಕ್ಕೆ ಸಮಾಧಾನವಾಗಿ ಒಡ್ಡಬಹುದೇನೊ! ಅಧ್ಯಯನ, ಮನನ ಅವರಿಗೆ ಪ್ರಧಾನವಾಗಿದ್ದುವು; ಬರವಣಿಗೆ ದ್ವಿತೀಯವಾಗಿತ್ತು. ಬರೆದರೆ 'ಹತ್ತು ಕಟ್ಟುವ ಕಡೆಗೆ ಮುತ್ತು ಕಟ್ಟು' ಎನ್ನುವಂತೆ

ಬರೆಯಬೇಕೆಂಬುದು ಅವರ ಆದರ್ಶ; ಅದಕ್ಕನುಗುಣವಾಗಿಯೆ ಇವೆ ಅವರ ಉಪಲಬ್ಧ ಕೃತಿಗಳು. 'ಶ್ರೀ' ಅವರು ಕೂಲಂಕಷವಾಗಿ ಒಂದೊಂದು ವಿಷಯದ ಮೇಲೂ ಸಿದ್ಧಪಡಿ ಇಟ್ಟಿರುವ ಟಿಪ್ಪಣಿಗಳ ರಾಶಿಯನ್ನು ಯಥಾವತ್ತಾಗಿ ಮುದ್ರಿಸಿದರೂ ಸಾಕು, ಉದ್ಗ್ರಂಥಗಳಾಗುತ್ತವೆ. ಇನ್ನು ಅವರ ಮಾರ್ಗದರ್ಶನದಲ್ಲಿ ಅವರ ಬೋಧನೆ ಸಂಶೋಧನಗಳಿಂದ ದೀಪ್ತರಾದ ಶಿಷ್ಯರು ಬರೆದಿರುವ ಎಷ್ಟೋ ಹೊತ್ತಗೆಗಳು ಈ ಆಚಾರ್ಯವರ್ಯರ ವಿಚಾರ ಸಾಮಗ್ರಿಯಿಂದ ಪುಷ್ಟವಾಗಿರುವುದನ್ನೂ ನೆನೆಯಬೇಕು. ತೀ.ನಂ.ಶ್ರೀ. ಅವರು ಮುಖ್ಯವಾಗಿ ಬರೆಯುವ ಜಾತಿಯಲ್ಲ, ಬರೆಯಿಸುವ ಜಾತಿ.

ವ್ಯಕ್ತಿಯಾಗಿ

ಶ್ರೀಕಂಠಯ್ಯನವರ ಮಾತು–ಬರವಣಿಗೆಯಂತೆಯೆ ಅವರ ವೈಯಕ್ತಿಕ ಜೀವನದಲ್ಲಿ ಕೂಡ ಅಚ್ಚುಕಟ್ಟು, ಶಿಸ್ತು, ಓರಣ ಮೇಳವಿಸಿದ್ದುವು. ಸಣ್ಣ ಸಣ್ಣ ವಿಷಯಗಳಲ್ಲೂ ಅವರ ಶ್ರದ್ಧೆ, ಪರಿಷ್ಕಾರ ಬುದ್ಧಿ ಎದ್ದು ಕಾಣುತ್ತಿತ್ತು. ಎಲ್ಲವನ್ನೂ ಸಮರ್ಪಕವಾಗಿ ಮಾಡುವುದು ಅವರ ಜಾಯಮಾನವಾಗಿತ್ತು.

ವೈಯಕ್ತಿಕವಾಗಿ ಶ್ರೀಕಂಠಯ್ಯನವರು ಸೌಜನ್ಯಪರರು, ವಿನಯಶಾಲಿಗಳು, ಸರಳ ಮನಸ್ಕರು, ಸರಸ ಪ್ರವೃತ್ತಿಯವರು. ಆದರೆ ಎಂದೂ ಅತಿರೇಕಕ್ಕೆ ಹೋದವರಲ್ಲ; ಸಂಯಮ, ಔಚಿತ್ಯ ಪ್ರಜ್ಞೆ ಎಲ್ಲ ಗುಣಗಳ ಹಿಂದೆ ಮನೆ ಮಾಡಿದ್ದುವು. ವಿದ್ವತ್ತಿಗೆ ಅನುರೂಪವಾದ ವಿನಯ ಅವರಿಗೆ ಮೈಗೂಡಿತ್ತು. ('ಒಲುಮೆ' ಸಂಕಲನದ ಎರಡನೆಯ ಆವೃತ್ತಿಯ ಅರಿಕೆಯನ್ನು ಕುತೂಹಲಕ್ಕಾಗಿ ನೋಡಬಹುದು.) ಅವರು ಯಾರನ್ನೂ ಎಂದೂ ದೂಷಿಸಿದವರಲ್ಲ; ಅಸಮಾಧಾನವಾದಾಗ ಮುಖಭಂಗಿಯಿಂದಷ್ಟೆ ಅದನ್ನು ಅರಿತುಕೊಳ್ಳಬಹುದಿತ್ತು. ಅವರ ಮುಂದೆ ಯಾರನ್ನಾದರೂ ನಾವು ಟೀಕಿಸಿದರೆ, ಆ ಟೀಕೆ ಅವರಿಗೂ ಸಮ್ಮತವಾಗಿದ್ದರೆ ವಾಚ್ಯವಾಗಿ ಏನೂ ಹೇಳದೆ ಆಕರ್ಷಕವಾಗಿ ಒಮ್ಮೆ ನಕ್ಕುಬಿಡುತ್ತಿದ್ದರು, ಅಷ್ಟೆ.

ಸಂಪ್ರದಾಯಾತೀತವಾದ ಉದಾರ ಮನೋಧರ್ಮ 'ಶ್ರೀ'ಯವರದು. ಅವರು ಧಾರ್ಮಿಕ ವಿಧಿಗಳಲ್ಲಿ ನಂಬಿಕೆ ಇಟ್ಟವರಲ್ಲವೆಂದು ಕೇಳಿದ್ದೇವೆ. ಆದರೆ ಅವರು ಮಾನವಧರ್ಮದ ಉಪಾಸಕರಾಗಿದ್ದರು; ಅಥವಾ ಅವರದು ಕವಿ ಧರ್ಮವೆಂದರೆ ಸರಿಹೋಗಬಹುದು. ಸಂಪ್ರದಾಯವನ್ನು ಅವರು ಹೇಗೆ ಖಂಡಿಸಬಲ್ಲರೆಂಬುದನ್ನು ತಿಳಿಯಬೇಕಾದರೆ 'ತಳಿರು' ಸಂಕಲನದಲ್ಲಿರುವ ಅವರದೊಂದು ಅಷ್ಟಷಟ್ಪದಿಯನ್ನು ನೋಡಬೇಕು. ಸಂಕುಚಿತತೆಗೆ ಅವರಲ್ಲಿ ಎಡೆ ಇರಲಿಲ್ಲ; ಪ್ರಾಚೀನ–ಅರ್ವಾಚೀನ, ಪ್ರಾಚ್ಯ–ಪಾಶ್ಚಾತ್ಯ ಸಂಸ್ಕೃತಿ ವಿಚಾರ ಮನೋಭಾವಗಳ ಮಧುರ ಸಂಗಮ ಅವರ ವ್ಯಕ್ತಿತ್ವದಲ್ಲಿ ಘಟಿಸಿತ್ತು.

ಕೃತಿರತ್ನಗಳು

ಇದುವರೆಗೆ ಅಚ್ಚಾಗಿರುವ ತೀ.ನಂ.ಶ್ರೀ. ಅವರ ಕೃತಿಗಳ ಸಂಖ್ಯೆ ಹೆಚ್ಚಲ್ಲವಾದರೂ, ಅವುಗಳ ಸತ್ವ ಮೌಲ್ಯಗಳು ಅಸಾಧಾರಣ. ವಿದ್ಯೆಯ ನಾನಾ ಮುಖಗಳನ್ನವು ಗಾಢವಾಗಿ ಆಲಿಂಗಿಸುತ್ತವೆ; ಪ್ರಮಾಣಭೂತವಾಗಿ ನಿಲ್ಲುತ್ತವೆ.

ಇತ್ತೀಚೆಗೆ ಭಾಷಾಶಾಸ್ತ್ರದಲ್ಲಿ ಬಹಳ ಮಗ್ನರಾಗಿದ್ದ ಶ್ರೀಕಂಠಯ್ಯನವರು ಒಂದು ಕಾಲದಲ್ಲಿ ಕವನಗಳನ್ನು ಬರೆದರೆಂದರೆ ನಂಬುವುದು ಸ್ವಲ್ಪ ಕಷ್ಟವಾಗಬಹುದು. ಆದರೆ ಅವರ ವಿದಗ್ಧತೆಯ ಹಿಂದೆ ಕಾವ್ಯದ ಸೆಲೆ ಸದಾ ಜೀವಂತವಾಗಿತ್ತೆಂಬುದನ್ನು ಮರೆಯಬಾರದು; ಒಂದು ಕಾಲದಲ್ಲಿ ಅದೇ ಪ್ರಧಾನವಾಗಿತ್ತು. ಆ ಕವಿತಾ ಪ್ರತಿಭೆಯ ಉಜ್ವಲ ನಿದರ್ಶನವೆಂದರೆ ಅವರ 'ಒಲುಮೆ'. ಇದು ಹೊಸಗನ್ನಡ ಕವಿತೆಗೆ ತೀ.ನಂ.ಶ್ರೀಯವರ ಅನರ್ಘ್ಯವಾದ ಕೊಡುಗೆ; ಹೊಸಗನ್ನಡ ಸಾಹಿತ್ಯದಲ್ಲಿ ಪ್ರೇಮಗೀತೆಗಳ ಯುಗವನ್ನು ಉದ್ಘಾಟಿಸಿದ ಕೀರ್ತಿ ಈ ಕೃತಿಯದು. ಇದು ೧೯೩೨ರಷ್ಟು ಹಿಂದೆಯೆ ಪ್ರಕಟವಾಯಿತು. ಇದರಲ್ಲಿ ಬರುವ ಪ್ರಣಯದ ನವುರಾದ, ಶುಚಿ ರುಚಿಯಾದ ಚಿತ್ರಗಳು ಕನ್ನಡಕ್ಕೊಂದು ಹೊಸ ಅನುಭವವನ್ನೆ ತಂದುಕೊಟ್ಟುವು.

'ಕಾವ್ಯ ಸಮೀಕ್ಷೆ' ಸರಸವಾದ ವಿಮರ್ಶನ ಪ್ರಬಂಧಗಳ ಸಂಕಲನ. 'ಸಮಾಲೋಕನ'ದಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದ ಸಂಕೀರ್ಣ ಬರಹಗಳಿವೆ; ಆಳವಾದ ವಿಚಾರ, ವಿಮರ್ಶೆ, ಸಂಶೋಧನೆಗಳನ್ನಿಲ್ಲಿ ಕಾಣುತ್ತೇವೆ. 'ಪಂಪ' ಎಂಬ ಅಂಗೈಯಗಲದ ಅರವತ್ತುನಾಲ್ಕು ಪುಟದ ಪುಸ್ತಿಕೆಯಲ್ಲಿ 'ಶ್ರೀ'ಯವರು ಪಂಪನ ರಸಸ್ಥಾನಗಳನ್ನೆಲ್ಲ ವಿವೇಚಿಸಿ, ಅಲ್ಪದಲ್ಲಿ ಕಲ್ಪವನ್ನು ಸೆರೆಹಿಡಿದಿರುವ ಸೋಜಿಗವಿದೆ. 'ನಂಟರು' ಉತ್ಕೃಷ್ಟವಾದ ಪ್ರಬಂಧಗಳ ಸಂಗ್ರಹ; ಅಲ್ಲಿ ಗೋಚರಿಸುವ ಬಹುಮುಖ ಲೋಕಾನುಭವ, ತಿಳಿಯಾದ ಹಾಸ್ಯ, ಶೈಲಿಯ ಬಿಗಿ ಮತ್ತು ಶುದ್ಧಿ ಆಹ್ಲಾದಕಾರಿಯಾಗಿದೆ. 'ರಾಕ್ಷಸನ ಮುದ್ರಿಕೆ'ಯು ಸಂಸ್ಕೃತ ನಾಟಕವೊಂದನ್ನು ಆಧರಿಸಿದ ಸೊಗಸಾದ ನಾಟಕ. ಅವರು ಸಂಪಾದಿಸಿರುವ 'ನಂಬಿಯಣ್ಣನ ರಗಳೆ' ಮತ್ತು 'ಗದಾಯುದ್ಧ ಸಂಗ್ರಹ' ಗ್ರಂಥಸಂಪಾದನ ಕಾರ್ಯಕ್ಕೆ ಮಾದರಿಗಳಂತಿವೆ. 'ಕನ್ನಡ ಮಧ್ಯಮ ವ್ಯಾಕರಣ' ಇಂದಿಗೂ ಮಾಧ್ಯಮಿಕ ಶಾಲೆಗಳಲ್ಲಿ ಪಠ್ಯ ಗ್ರಂಥವಾಗಿದೆ. ("ನನ್ನ ಗಮನಕ್ಕೇ ಬರದೆ ಆ ವ್ಯಾಕರಣ ಗ್ರಂಥ ಮತ್ತೆ ಮತ್ತೆ ಅಚ್ಚಾಗುತ್ತಲೆ ಇದೆ; ಎಷ್ಟು ಅಚ್ಚಿನ ತಪ್ಪುಗಳಿವೆಯೊ ದೇವರೇ ಬಲ್ಲ!" ಎಂದು ಅವರೊಮ್ಮೆ ನಗುತ್ತ ನುಡಿದುದುಂಟು.) ಪುಸ್ತಕ ರೂಪದಲ್ಲಿ ಬರೆದ ಎಷ್ಟೋ ಕನ್ನಡ ಮತ್ತು ಇಂಗ್ಲಿಷ್ ಲೇಖನಗಳು ಕೂಡ 'ಶ್ರೀ'ಯವರ ವಿಸ್ತಾರವಾದ ಅರಿವಿಗೆ ಕನ್ನಡಿಯಾಗಿವೆ.

ಆಚಾರ್ಯ ಕೃತಿ

ಶ್ರೀಕಂಠಯ್ಯನವರ ಕೃತಿಗಳಿಗೆಲ್ಲ ಕಿರೀಟಪ್ರಾಯವಾದುದು ಅವರ 'ಭಾರತೀಯ ಕಾವ್ಯ ಮೀಮಾಂಸೆ'. ಕುವೆಂಪು ಹೇಳಿದಂತೆ ಅದೊಂದು 'ಆಚಾರ್ಯ ಕೃತಿ'. ಉಳಿದವರ ಕೈಯಲ್ಲಿ ಶುಷ್ಕ ಅಲಂಕಾರ ಶಾಸ್ತ್ರವಾಗುವ ವಸ್ತು ತೀ.ನಂ.ಶ್ರೀಯವರ ಕೈಯಲ್ಲಿ ನಿಜವಾದ ಕಾವ್ಯ ಮೀಮಾಂಸೆಯಾಗಿದೆ; ರಸವತ್ಕೃತಿ ಆಗಿದೆ. ಅವರ ಪ್ರಗಲ್ಭವೈದುಷ್ಯದ ಆಳ ಅಗಲಗಳು, ನೂತನ ದೃಷ್ಟಿ, ಪ್ರಾಚೀನ – ಅರ್ವಾಚೀನ ತತ್ತ್ವಗಳ ಸಮನ್ವಯ ಸಾಹಸ, ಸದಭಿರುಚಿ ಈ ಗ್ರಂಥದಲ್ಲಿ ಹೆಜ್ಜೆಹೆಜ್ಜೆಗೂ ಎದ್ದು ಕಾಣುತ್ತಿವೆ. ಅಲಂಕಾರ ಶಾಸ್ತ್ರವನ್ನು ಇಷ್ಟು ಮನೋಜ್ಞವಾಗಿ, ಸರ್ವ ಗ್ರಾಹಿಯಾಗಿ ಪ್ರತಿಪಾದಿಸುವ ಗ್ರಂಥ ಮತ್ತಾವ ಭಾಷೆಯಲ್ಲೂ ಬಂದಿಲ್ಲವೆಂಬುದು ನಮಗೆ ಹೆಮ್ಮೆಯ ವಿಷಯ. ಇದು ಇಂಗ್ಲಿಷಿಗೆ ಭಾಷಾಂತರಗೊಳ್ಳಬೇಕಾದ ಮೇರುಕೃತಿ.

ಅರಕೆ

ಈಚೀಚೆಗೆ ಶ್ರೀಕಂಠಯ್ಯನವರ ಹೃದಯವನ್ನು ಭಾಷಾಶಾಸ್ತ್ರವೆ ಹೆಚ್ಚಾಗಿ ಆಕ್ರಮಿಸಿಕೊಂಡಿತ್ತು. ವಾಸ್ತವವಾಗಿ, ಕನ್ನಡದಲ್ಲಿ ಭಾಷಾಶಾಸ್ತ್ರದ ತಳಹದಿಯನ್ನು ಹಾಕಿದವರೆ ಅವರು; ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅವರು ಪ್ರಾಧ್ಯಾಪಕರಾಗಿ ಬರುವ ಮುನ್ನ ಇಲ್ಲಿ ಭಾಷಾಶಾಸ್ತ್ರಕ್ಕೆ ಗಣ್ಯವಾದ ಸ್ಥಾನಮಾನಗಳಿರಲಿಲ್ಲ; ಅದಕ್ಕೊಂದು ಗೌರವಾನ್ವಿತ ಪೀಠ ಕಲ್ಪಿಸಿಕೊಟ್ಟವರು ತೀ.ನಂ.ಶ್ರೀ. ಅವರು ನಿವೃತ್ತರಾದ ಮೇಲೆ, ಭಾಷಾಶಾಸ್ತ್ರದಲ್ಲಿ ಉನ್ನತ ಸಂಶೋಧನೆಗೆಂದು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಅವರಿಗೆ ವೇತನವನ್ನು ಕೊಟ್ಟಿತ್ತು. ಆ ಮಹತ್ಕಾರ್ಯದಲ್ಲಿ ಅವರು ತೊಡಗಿದ್ದರು. ಈಗ ಅದು ಅರೆಯಾಗಿ ನಿಂತಿದೆ.

ಹೀಗೆಯೆ ಅವರು ಮಾಡಬೇಕಾಗಿದ್ದ ಕೆಲಸ ಅಗಾಧವಾಗಿತ್ತು. ಎಲ್ಲಕ್ಕಿಂತ ಪ್ರಮುಖವಾದುದು ಕನ್ನಡ ಶಬ್ದ ಕೋಶದ ನಿರ್ಮಾಣ. ಅವರು ಕೋಶ ಸಮಿತಿಯ ಅಧ್ಯಕ್ಷರಾಗಿದ್ದುಕೊಂಡು ತಮ್ಮ ಲಕ್ಷ್ಯವನ್ನೆಲ್ಲ ಬಹುಮಟ್ಟಿಗೆ ಅದರಲ್ಲಿ ಕೇಂದ್ರೀಕರಿಸಿದ್ದರು. ಆ ಕಾರ್ಯ ಪೂರ್ಣಗೊಳ್ಳುವವರೆಗೆ ಅವರನ್ನುಳಿಸಿಕೊಳ್ಳುವ ಭಾಗ್ಯ ಕನ್ನಡಿಗರಿಗಿರಲಿಲ್ಲ; ಇದುವರೆಗೆ ಬಂದಿರುವ ಶಬ್ದಕೋಶದ ಎರಡು ಸಂಚಿಕೆಗಳು 'ಶ್ರೀ'ಯವರ ದಕ್ಷತೆ, ಎಚ್ಚರ, ಸಮರ್ಥ ಮಾರ್ಗದರ್ಶನ, ಪರಿಷ್ಕರಣಗಳಿಗೆ ಸುಂದರ ಸಾಕ್ಷಿಯಾಗಿ, ಸ್ಮಾರಕವಾಗಿ ನಿಂತಿವೆ.

ಅವರ 'ಬಿಡಿಮುತ್ತು' ಎಂಬ ಪದ್ಯ ಸಂಗ್ರಹವೊಂದು ಅಚ್ಚಿಗೆ ಸಿದ್ಧವಾಗಿದೆ. (ಅದು ಬರಲಿದೆಯೆಂದು ೧೯೫೩ರಲ್ಲಿಯೆ ಅವರು ತಿಳಿಸಿದ್ದರೂ ಇದುವರೆಗೆ ಅದನ್ನು ಮುದ್ರಣಾಲಯಕ್ಕೆ ಕಳಿಸಿರಲಿಲ್ಲವೆಂದು ತೋರುತ್ತದೆ. ಎಷ್ಟು ಸಲ ತಿದ್ದಿದರೊ!) ಅದನ್ನು ಹೇಗೆ ಅಚ್ಚುಹಾಕಬೇಕೆಂಬು ದನ್ನೆಲ್ಲ ಸೂಚಿಸಿ ಮುದ್ರಣ ಕಾರ್ಯವನ್ನು ಪ್ರಾರಂಭಿಸುವಂತೆ ಅವರು ಪತ್ರ ಬರೆದಿದ್ದರಂತೆ. ಅಷ್ಟರಲ್ಲಿ ಕಾಲನ ಕರೆ ಬಂತು; ಹೋಗಿಬಿಟ್ಟರು. 'ಶಬ್ದಮಣಿದರ್ಪಣ ದೀಪಿಕೆ'ಯೊಂದು ಅವರಿಂದ ಬರುವ ನಿರೀಕ್ಷೆಯಿತ್ತು, ಅದೂ ಬರುವಂತಿಲ್ಲ. ಅವರ ಶಿಷ್ಯರು ತರಗತಿಯಲ್ಲಿ ಗುರುತು ಹಾಕಿಕೊಂಡ ಟಿಪ್ಪಣಿಗಳೇ ಮುಂದಿನ ಪೀಳಿಗೆಗೆ ಗತಿಯೇನೊ. ಛಂದಸ್ಸು, ಭಾಷಾಶಾಸ್ತ್ರ ಮುಂತಾದ ವಿಷಯಗಳಲ್ಲೂ ಅಷ್ಟೆ.

ಸೇವೆಯಲ್ಲಿ ಸಾವು

ಕನ್ನಡದ ಕೆಲಸದಲ್ಲಿ ಜೀವ ತೇದು ದಿವಂಗತರಾದವರು ತೀ.ನಂ.ಶ್ರೀ. ಆ ಜೀವಕ್ಕೆ ಎಂದೂ ಪುರಸೊತ್ತಿರಲಿಲ್ಲ; ಅದಕ್ಕವರು ಇಷ್ಟಪಡಲೂ ಇಲ್ಲ. ಸದಾ ಚುಟುವಟಿಕೆ, ಕಾರ್ಯಕ್ರಮಗಳು, ನಾನಾ ಅಧಿವೇಶನಗಳು, ಸಮಿತಿಗಳು, ಸಭೆಗಳು–ಅವುಗಳಲ್ಲೆಲ್ಲ ಭಾಗವಹಿಸುತ್ತಿದ್ದರು. ಕನ್ನಡದ ಉದ್ಧಾರ, ನಾಡಿನ ಹಿತ ಅವರ ಕಣ್ಣ ಮುಂದಿದ್ದುವು. ಶಬ್ದಕೋಶದ ಕೆಲಸವಂತೂ ಹಗಲಿರುಳು ಅವರ ಕೈಕಚ್ಚಿಕೊಂಡಿತ್ತು; ಮೈಸೂರಿನಲ್ಲಿ ಅವರು ನೆಲಸಿದ್ದರೂ, ಕೋಶ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳಲು ತಿಂಗಳಿಗೊಮ್ಮೆ ನಿಯತವಾಗಿ ಬೆಂಗಳೂರಿಗೆ ತೆರಳುತ್ತಿದ್ದರು. ಈ ಅವಿರತವಾದ ದುಡಿಮೆಯಿಂದ 'ಶ್ರೀ'ಯವರ ದೇಹ ಹಣ್ಣಾಗಿತ್ತು; ಮೇಲುನೋಟಕ್ಕೆ ಅದು ದೃಢವಾಗಿದ್ದರೂ ಒಳಗೊಳಗೇ ಕುಸಿದು ಹೋಗಿತ್ತು. ಕಡೆಗೊಮ್ಮೆ ಅದು ನಿಷ್ಕ್ರಿಯವಾಯಿತು. ಅದೂ ಎಂತಹ

ಸಂದರ್ಭದಲ್ಲಿ! ಅವರು ಉತ್ತರಕ್ಕೆ ಹೋಗಿದ್ದುದು ಯಾವುದೇ ಸ್ವಂತ ಕಾರ್ಯಕ್ಕಲ್ಲ–ದೆಹಲಿಯಲ್ಲಿ, ಪಾರಿಭಾಷಿಕ ಶಬ್ದಗಳ ಸಮಿತಿಯಲ್ಲಿ ಭಾಗವಹಿಸಲೋಸುಗ. ಅಲ್ಲಿಂದ ಮರಳುವಾಗ ಕಲ್ಕತ್ತದಲ್ಲಿ ಅವರು ವಿಧಿವಶರಾದರು; ನಾಡುನುಡಿಗಳ ಸೇವೆ ಮಾಡುತ್ತಲೆ ದೇಹಬಿಟ್ಟರು.

ತೀ.ನಂ.ಶ್ರೀಯವರ ಖ್ಯಾತಿ ಕರ್ಣಾಟಕಕ್ಕಷ್ಟೆ ಸೀಮಿತವಾಗಿರಲಿಲ್ಲ; ಭಾಷಾಶಾಸ್ತ್ರರಂಗದಲ್ಲಿ ಅವರು ರಾಷ್ಟ್ರ ಮಟ್ಟದ ವಿದ್ವಾಂಸರಾಗಿದ್ದರು; ಅಂತರ ರಾಷ್ಟ್ರೀಯ ಕೀರ್ತಿಯನ್ನೂ ಗಳಿಸಿದ್ದರು. ೧೯೫೭ರಲ್ಲಿ ದೆಹಲಿಯಲ್ಲಿ ನಡೆದ ಪ್ರಾಚ್ಯವಿದ್ವತ್ಸಮೇಳನದ ದ್ರಾವಿಡಸಂಸ್ಕೃತಿ ವಿಭಾಗದ ಅಧ್ಯಕ್ಷರಾಗಿದ್ದರು; ೧೯೬೦ರಲ್ಲಿ ಅಖಿಲ ಭಾರತ ಭಾಷಾವಿಜ್ಞಾನಿಗಳ ಸಂಘದ ಅಧ್ಯಕ್ಷರಾಗಿದ್ದರು. ಅವರ ಸಾವು ರಾಷ್ಟ್ರೀಯ ನಷ್ಟ.

ಶ್ರದ್ಧಾಂಜಲಿ

ತೀ.ನಂ.ಶ್ರೀಯವರಿಗೆ ಅರವತ್ತು ವರ್ಷಗಳು ಕೂಡ ತುಂಬಿರಲಿಲ್ಲ; ಸಲ್ಲಬೇಕಾದ ಸನ್ಮಾನವೆಲ್ಲ ಸಂದಿರಲಿಲ್ಲ. ಸಾಹಿತ್ಯ ಅಕಾಡೆಮಿಯ ಪಾರಿತೋಷಕ ಅವರಿಗೆ ಲಭಿಸಬೇಕಾಗಿತ್ತು; ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠವನ್ನು ಅವರು ಅಲಂಕರಿಸಬೇಕಾಗಿತ್ತು. ಇದೆಲ್ಲ ಬಯಕೆ ಅವರಿಗೆ ಖಂಡಿತ ಇರಲಿಲ್ಲ. ಆದರೆ ಈ ಸನ್ಮಾನಗಳ ಮೂಲಕ ತನ್ನ ಕೃತಜ್ಞತೆಯನ್ನು ತೋರಿಸುವುದು ನಾಡಿನ ಕರ್ತವ್ಯವಾಗಿತ್ತು. ಆ ಅವಕಾಶವನ್ನು ವಿಧಿತಪ್ಪಿಸಿತು.

'ಒಲುಮೆ'ಯ ಪದ್ಯಗಳ ಮೇಲೆ ದುಗುಡದಿಂದ ಕಣ್ಣಾಡಿಸುತ್ತಿದ್ದಾಗ ಗೋಚರಿಸಿದ ಈ ಉಕ್ತಿಗಳು ಈ ಸಂದರ್ಭದಲ್ಲಿ ಅರ್ಥಪೂರ್ಣವಾಗಿ ತೋರಿದುವು:

ನನ್ನಿಷ್ಟರುಚಿಯ ಬಗೆಯನು ನೀನು ಬಲ್ಲೆ:
ನೀಡು ಪಾಥೇಯವನು, ಕಾಲವನು ಗೆಲ್ಲೆ;
ಬಲುದಿನದ ಪಯಣಕ್ಕೆ ಹೊರಟಿರುವೆ ನಲ್ಲೆ!

ಹೌದು, ಅವರು ಬಹುದಿನದ ಬಹು ದೂರದ ಪಯಣಕ್ಕೆ ಹೊರಟು ಹೋದರು. ಕಾಲವನ್ನು ಗೆಲ್ಲುತ್ತೇನೆಂದು ಹೇಳಿದರು. ನಿಜ, ಇಂತಹ ದೊಡ್ಡವರು ಕಾಲನನ್ನು ಗೆಲ್ಲಲಾರದಿದ್ದರೂ ಕಾಲವನ್ನು ಗೆದ್ದೆ ಗೆಲ್ಲುತ್ತಾರೆ: 'ಅವರು ಪಡೆದ ಹೆಸರು, ಮಾಡಿದ ಕೆಲಸ' ಹುಡಿಗೂಡದೆ ಶಾಶ್ವತವಾಗಿ ನಿಲ್ಲುತ್ತವೆ.

(ಸುಧಾ : ೧೮–೦೯–೧೯೬೬)

ತೀ.ನಂ.ಶ್ರೀ. – ಒಂದು ಸ್ಮರಣೆ

ಹಾ.ಮಾ. ನಾಯಕ

●

೧

ನವದೆಹಲಿಯಲ್ಲಿ ಭಾಷಾಶಾಸ್ತ್ರ ಸಂಬಂಧದ ಸಮಿತಿಯ ಸಭೆಯೊಂದರಲ್ಲಿ ಭಾಗವಹಿಸಿ, ರಾಂಚಿಯಲ್ಲಿರುವ ತಮ್ಮ ಮಗಳ ಮನೆಯಲ್ಲಿ ಕೆಲದಿನಗಳನ್ನು ಕಳೆದು, ಕಲ್ಕತ್ತೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಗನನ್ನು ನೋಡಿಕೊಂಡು ಬರುವ ಸಲುವಾಗಿ, ಆಗಸ್ಟ್ ಮೂರನೆಯ ವಾರದಲ್ಲಿ ತಮ್ಮ ಶ್ರೀಮತಿಯವರೊಡನೆ ಮೈಸೂರಿನಿಂದ ಹೊರಟ ಆಚಾರ್ಯ ತೀ.ನಂ. ಶ್ರೀಕಂಠಯ್ಯನವರು ದಿನಾಂಕ ೭-೯-೧೯೬೬ನೇ ಬುಧವಾರ ಬೆಳಗ್ಗೆ ಕಲ್ಕತ್ತೆಯಲ್ಲಿ ಹೃದಯಸ್ತಂಭನದಿಂದ ನಿಧನರಾದ ವಾರ್ತೆ ಕನ್ನಡಿಗರನ್ನು ದಿಗ್ಭ್ರಾಂತಗೊಳಿಸಿತು. ಶ್ರೀಕಂಠಯ್ಯನವರ ಮರಣದಿಂದ ಖಚಿತತೆ ಹಾಗೂ ರಸಿಕತೆಯಿಂದ ಕೂಡಿದ ಕನ್ನಡ ಪಾಂಡಿತ್ಯದ ಸ್ತಂಭವೊಂದು ಕುಸಿಯಿತು.

೨

ಅಖಿಲಭಾರತ ಭಾಷಾವಿಜ್ಞಾನಿಗಳ ಸಂಘದ ನೆರವಿನಲ್ಲಿ ದೇಶದ ನಾನಾ ಭಾಗಗಳಲ್ಲಿ ನಡೆದ ಅನೇಕ ಭಾಷಾವಿಜ್ಞಾನದ ಬೇಸಿಗೆ ಶಿಬಿರಗಳಲ್ಲಿ ಅವರು ಗೌರವ ಪ್ರಾಧ್ಯಾಪಕರಾಗಿ ಭಾಗವಹಿಸಿದ್ದರು. ಮೈಸೂರಿನಲ್ಲಿ ೧೯೫೮ರಲ್ಲಿ ಕೂಡಿದ ಭಾಷಾವಿಜ್ಞಾನದ ಶಿಬಿರಕ್ಕೆ ಅವರೇ ನಿರ್ದೇಶಕರಾಗಿದ್ದು ಅದನ್ನು ಯಶಸ್ವಿಗೊಳಿಸಿದ್ದರು. ಅಮೆರಿಕೆಯಲ್ಲಿ ನಡೆಯುತ್ತಿರುವ ಭಾಷಾವಿಜ್ಞಾನದ ಅಧ್ಯಯನ ಸಂಶೋಧನಗಳನ್ನು ಪರಿಚಯಮಾಡಿಕೊಳ್ಳುವ ಸಲುವಾಗಿ ಶ್ರೀಕಂಠಯ್ಯನವರು ರಾಕ್‌ಫೆಲರ್ ಪ್ರತಿಷ್ಠಾನದ ವೇತನವೊಂದರ ಮೇಲೆ ೧೯೫೫ರಲ್ಲಿ ಅಮೆರಿಕಾಕ್ಕೆ ಎಂಟು ತಿಂಗಳ ಕಾಲ ಭೇಟಿಕೊಟ್ಟು ಅಲ್ಲಿನ ಪ್ರಮುಖ ವಿಶ್ವವಿದ್ಯಾನಿಲಯಗಳನ್ನು ಸಂದರ್ಶಿಸಿದರು. ಅಲ್ಲಿನ ಹಲವು ಖ್ಯಾತ ಭಾಷಾವಿಜ್ಞಾನಿಗಳೊಂದಿಗೆ ಚರ್ಚೆ ನಡೆಸಿದರು. ತಮ್ಮ ಆಳವಾದ ಪಾಂಡಿತ್ಯದಿಂದ ಅವರಮೇಲೆ ಒಳ್ಳೆಯ ಪ್ರಭಾವವನ್ನು ಬೀರಿದರು. ಮೆಕ್ಸಿಕೋ ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಈಗ ಪ್ರಾಧ್ಯಾಪಕರಾಗಿರುವ ಮಾರಿಸ್ ಸ್ವಾಡಿಷ್ ಎಂಬ ವಿದ್ವಾಂಸರನ್ನು ೧೯೬೩ರಲ್ಲಿ ನಾನು ಭೇಟಿಯಾಗಿದ್ದಾಗ ಅವರು ನನ್ನನ್ನು ಮೊದಲು ಕೇಳಿದ ಪ್ರಶ್ನೆ: "ನಿಮಗೆ ಶ್ರೀಕಂಠಯ್ಯನವರು ಗೊತ್ತೆ?" ನಾನು "ಬಹುಚೆನ್ನಾಗಿ ಗೊತ್ತು" ಎಂದಾಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ಶ್ರೀಕಂಠಯ್ಯನವರ ಯೋಗಕ್ಷೇಮವನ್ನು ಅವರು ವಿಚಾರಿಸಿ, ತಾವು ತಮ್ಮ ಭಾಷಾ ಕಾಲಕ್ರಮ ವಿಜ್ಞಾನ (Glottochronology)ದ ಸಂಶೋಧನೆಯಲ್ಲಿ ದ್ರಾವಿಡ

ಭಾಷೆಗಳಿಗೆ ಸಂಬಂಧಿಸಿದಂತೆ ಶ್ರೀಕಂಠಯ್ಯನವರಿಂದ ಪಡೆದ ನೆರವನ್ನು ಸ್ಮರಿಸಿದರು. ಅವರ ಪಾಂಡಿತ್ಯವನ್ನು ಸ್ವಾಡಿಷ್ ಬಹುವಾಗಿ ಪ್ರಶಂಸಿಸಿದರು. ಕೊನೆಗೆ "ಶ್ರೀಕಂಠಯ್ಯನವರನ್ನು ನಾನು ಇನ್ನು ಯಾವಾಗ ನೋಡುತ್ತೇನೆಯೋ. ಅಂತೂ ನನಗಿಂತ ಮೊದಲು ನೀವು ಅವರನ್ನು ನೋಡುವುದು ಖಂಡಿತ. ದಯವಿಟ್ಟು ನನ್ನ ವಿಶ್ವಾಸವನ್ನು ಅವರಿಗೆ ತಿಳಿಸಿ" ಎಂದು ಹೇಳಿದರು. ಅಮೆರಿಕೆಗೆ ಹೋದ ಸಂದರ್ಭದಲ್ಲಿಯೇ ಶ್ರೀಕಂಠಯ್ಯನವರು ಯೂರೋಪಿನ ಹಲವು ದೇಶಗಳಿಗೂ ಹೋಗಿ ಬಂದರು. ಅವರು ಸ್ವದೇಶಕ್ಕೆ ಮರಳಿದೊಡನೆಯೇ ತಮ್ಮ ಅನುಭವಗಳನ್ನು ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕೆಲವು ವಿಶೇಷ ಉಪನ್ಯಾಸಗಳನ್ನು ಕೊಟ್ಟರು.

ಪ್ರೊಫೆಸರ್ ಶ್ರೀಕಂಠಯ್ಯನವರು ಹಲವಾರು ಸಭೆ ಸಮ್ಮೇಳನಗಳಿಗೆ, ವಿದ್ವದ್ಗೋಷ್ಠಿಗಳಿಗೆ ಅಧ್ಯಕ್ಷರಾಗಿದ್ದರು. ಅವರು ೧೯೫೭ರಲ್ಲಿ ಓರಿಯಂಟಲ್ ಕಾನ್ಫರೆನ್ಸಿನ ದೆಹಲಿ ಸಮ್ಮೇಳನದ ದ್ರಾವಿಡ ವಿಭಾಗಕ್ಕೂ, ೧೯೬೦ರಲ್ಲಿ ಅಖಿಲ ಭಾರತ ಭಾಷಾವಿಜ್ಞಾನಿಗಳ ಸಂಘಕ್ಕೂ ಅಧ್ಯಕ್ಷರಾಗಿದ್ದರು. ಈಚಿನ ವರ್ಷಗಳಲ್ಲಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡಕೋಶದ ಸಂಪಾದಕ ಮಂಡಳಿಯ ಅಧ್ಯಕ್ಷರಾಗಿ, ಮೈಸೂರು ಸರ್ಕಾರದ ವಿಶ್ವಕೋಶದ ಭಾಷಾವಿಜ್ಞಾನ ವಿಭಾಗದ ಮುಖ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಮೈಸೂರು ಸರ್ಕಾರ ಹಾಗೂ ಭಾರತ ಸರ್ಕಾರದ ವಿವಿಧ ಸಲಹಾ ಸಮಿತಿಗಳಲ್ಲಿ ಅವರು ಸದಸ್ಯರಾಗಿದ್ದರು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ಆಕಾಶವಾಣಿ, ಮಲಯಾಳಂ ನಿಘಂಟು ಸಮಿತಿ, ಪೂನಾದ ಡೆಕ್ಕನ್ ಕಾಲೇಜು ಮೊದಲಾದವು ಗಳೊಡನೆ ಅವರು ಸಂಪರ್ಕ ಪಡೆದಿದ್ದರು. ಈ ವರ್ಷ ಮೈಸೂರಿನ ಸಾಹಿತ್ಯ ಅಕಾಡೆಮಿ ಸನ್ಮಾನಿಸಬೇಕೆಂದಿದ್ದ ವಿದ್ವಾಂಸರಲ್ಲಿ ಶ್ರೀಕಂಠಯ್ಯನವರ ಹೆಸರು ಮೊದಲಿನದಾಗಿತ್ತು. ವಾಸ್ತವವಾಗಿ ಶ್ರೀಕಂಠಯ್ಯನವರು ಹಿಂದೆಯೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸ ಬೇಕಾಗಿತ್ತು. ಆದರೆ, ವ್ಯಕ್ತಿ ತೀರಿಹೋದಮೇಲೆ ಕೊಡುವ ಗೌರವವನ್ನು ಅವನು ಜೀವಂತನಿದ್ದಾಗ ಕೊಡಲು ನಮ್ಮವರು ಅಷ್ಟಾಗಿ ಅಪೇಕ್ಷೆ ಪಡುವುದಿಲ್ಲ! ಒಂದು ವೇಳೆ ಆ ವ್ಯಕ್ತಿ ಗೌರವವನ್ನು ಪಡೆದರೂ ಈ ಜನ ಅದನ್ನು ಇಷ್ಟಪಡುವುದಿಲ್ಲ!

೩

ಅವರ ಓದು ಪಾರವಿಲ್ಲದ್ದು; ಅವರ ಆಸಕ್ತಿ ಹಲವಾರು ವಿಷಯಗಳಲ್ಲಿ. ಎಷ್ಟೋ ಸಲ ಅವರನ್ನು ನೋಡಲು ಹೋದವರು, ಅವರು ಪುಸ್ತಕಗಳ ರಾಶಿಯಲ್ಲಿ ಹುದುಗಿರುತ್ತಿದ್ದುದನ್ನು ಕಾಣಬಹುದಾಗಿತ್ತು. ಹೊಸ ಪುಸ್ತಕಗಳೆಂದರೆ ಅವರ ಕಿವಿ ನಿಮಿರುತ್ತಿತ್ತು. ಪಂಡಿತ ಪತ್ರಿಕೆಗಳ ಈಚಿನ ಸಂಚಿಕೆಗಳಿಗಾಗಿ ಅವರು ಸದಾ ಕುತೂಹಲಿಗಳಾಗಿರುತ್ತಿದ್ದರು. ಯಾವುದಾದರೂ ಪುಸ್ತಕ ದೊರೆಯುವುದು ತಡವಾಗುವಂತಿದ್ದರೆ ಅದರ ಮೈಕ್ರೋಫಿಲ್ಮ್ ಪ್ರತಿಯನ್ನಾದರೂ ತರಿಸಿಕೊಳ್ಳಲು ಅವರು ತವಕಿಸುತ್ತಿದ್ದರು. ಅವರ ಜೇಬಿನಲ್ಲಿ, ಕೈಚೀಲದಲ್ಲಿ ಚಿಕ್ಕ ಚಿಕ್ಕ ಚೀಟಿಗಳು, ಬಣ್ಣಬಣ್ಣದ ಕಾರ್ಡುಗಳು ಸದಾ ಸಿದ್ಧ. ವಿಷಯ ಎಲ್ಲಿ ಸಿಕ್ಕಿದರೆ ಅಲ್ಲಿ ಅದು ಅವರ ಟಿಪ್ಪಣಿಗಳಿಗೆ ಸೇರಬೇಕು. ವಿಷಯಸಂಗ್ರಹಣೆ ಅವರಿಗೆ ಆರದ ದಾಹ. ಓದಿನಲ್ಲಿ ಅವರಿಗಿದ್ದ ಉತ್ಸಾಹ

ಯುವಕರನ್ನೂ ನಾಚಿಸುವಂಥದು. ಆದರೂ ಅವರು "ಇನ್ನೂ ನಾನು ಪಾಂಡಿತ್ಯಸಾಗರದ ದಡದಲ್ಲೇ ಇದ್ದೇನೆ. ಓದುವುದು ಹೆಚ್ಚಾದರೆ ಬರಹದ ಕಡೆ ಗೀಳು ಕಡಮೆಯಾಗುತ್ತದೆ" ಎಂದು ಹೇಳುತ್ತಿದ್ದರು. "ಓದು ಬರಹಕ್ಕೆ ಶತ್ರು" ಎಂಬುದು ಅವರದೇ ಗಾದೆ. "ಶ್ರೀಕಂಠಯ್ಯ ನವರು ರಾತ್ರಿಯೆಲ್ಲಾ ಬರೆಯುತ್ತಾರೆ. ಬೆಳಗ್ಗೆ ಎದ್ದು ಬರೆದುದನ್ನೆಲ್ಲ ಹೊಡದು ಹಾಕುತ್ತಾರೆ" ಎಂಬುದು ಅವರ ಬಳಗಕ್ಕೆ ಪರಿಚಯವಾಗಿದ್ದ ಹೇಳಿಕೆ. ಎಲ್ಲದರಲ್ಲಿಯೂ ಸರ್ವಪೂರ್ಣತೆಯನ್ನು ಬಯಸುತ್ತಿದ್ದ ಪರಿಷ್ಕಾರಪ್ರಿಯ ಜೀವ ಅದು.

ಶ್ರೀಕಂಠಯ್ಯನವರು ವಿವಿಧ ಪತ್ರಿಕೆಗಳಲ್ಲಿಯೂ, ಸಂಕಲನ ಗ್ರಂಥಗಳಲ್ಲಿಯೂ, ಭಾಷಾಶಾಸ್ತ್ರ, ಕಾವ್ಯಮಿಮಾಂಸೆ, ಕನ್ನಡ ಸಾಹಿತ್ಯಗಳನ್ನು ಕುರಿತು ಇಂಗ್ಲಿಷಿನಲ್ಲಿ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ ತೀರ ಈಚೆಗೆ ಅಚ್ಚಿಗೆ ಅಣಿಗೊಳಿಸಿದ್ದಾಗಿದೆ. "Studies in Literature and Linguistics" ಎಂಬ ಹೆಸರಿನಲ್ಲಿ ಪ್ರಕಟವಾಗಬೇಕಾಗಿರುವ ಆ ಪುಸ್ತಕ ಇದೀಗ ಪ್ರಕಾಶಕರ ಕೈಲಿದೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲ ಭಾಗದಲ್ಲಿ ಮೈಸೂರಿನವರು ಉಚ್ಚರಿಸುವ ಇಂಗ್ಲಿಷ್, ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆ, ಕನ್ನಡ ಬರವಣಿಗೆಯ ಭಾಷೆ ಮತ್ತು ಆಡುನುಡಿ, ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ 'ಹೊಸಗನ್ನಡ ನುಡಿಗನ್ನಡಿ' ಮೊದಲಾದ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳಿವೆ. ಎರಡನೆಯ ಭಾಗದಲ್ಲಿ ಕಾವ್ಯಮಿಮಾಂಸೆಗಳಿಗೆ ಸಂಬಂಧಿಸಿದ ಲೇಖನಗಳಿವೆ. ಈ ಸಂಗ್ರಹದಲ್ಲಿ ಬರುವ ಹದಿನಾರು ಲೇಖನಗಳನ್ನು ಅಚ್ಚಿಗೆ ಸಿದ್ಧಗೊಳಿಸಿದ್ದೇ ಶ್ರೀಕಂಠಯ್ಯನವರು ಮರಣಕ್ಕೆ ಕೆಲವು ದಿನಗಳ ಮೊದಲು ಮಾಡಿದ ದೊಡ್ಡ ಕೆಲಸವಾಗಿದೆ. ಇದನ್ನು ಸಿದ್ಧಗೊಳಿಸುವುದರಲ್ಲಿ ನಾನೂ ಭಾಗಿಯಾಗಿದ್ದೆನೆಂಬುದು ನನಗೆ ಸಂತೋಷ ದುಃಖಗಳೆರಡಕ್ಕೂ ಕಾರಣವಾಗಿದೆ. ಈ ಕೃತಿಯನ್ನು ಭಾರತದ ಭಾಷಾವಿಜ್ಞಾನದ ದಿಗ್ಗಜ ಡಾ. ಸುನೀತಿ ಕುಮಾರ ಚಟರ್ಜಿಯವರಿಗೆ ಅರ್ಪಿಸ ಬೇಕೆಂಬುದು ಶ್ರೀಕಂಠಯ್ಯನವರ ಇಚ್ಛೆಯಾಗಿತ್ತು. ನಮ್ಮ ಯೋಜನೆಯಂತೆ ಈ ಪುಸ್ತಕ ೧೯೬೬ರ ನವಂಬರ್‌ನಲ್ಲಿ ಅವರ ಅರವತ್ತನೆಯ ಹುಟ್ಟುಹಬ್ಬದಂದು ಪ್ರಕಟವಾಗಬೇಕಾಗಿತ್ತು.

ಅವರು ಬರೆಯಲು ಯೋಜಿಸಿಕೊಂಡಿದ್ದು ಬಹಳವಾಗಿತ್ತು. ಅವರು ಸಂಗ್ರಹಿಸಿ ಅನುವಾದಿಸಿ ರುವ ಸಂಸ್ಕೃತ ಮುಕ್ತಕಗಳ ಸಂಕಲನ "ಬಿಡಿಮುತ್ತು" ಇಷ್ಟರಲ್ಲಿಯೇ ಪ್ರಕಟವಾಗಬೇಕಾಗಿದೆ. ಆಧುನಿಕ ಭಾಷಾಶಾಸ್ತ್ರದ ಬೆಳಕಿನಲ್ಲಿ ಕೇಶಿರಾಜನ "ಶಬ್ದಮಣಿದರ್ಪಣ"ಕ್ಕೆ ಒಂದು ವ್ಯಾಖ್ಯಾನವನ್ನು ಬರೆಯಲು ಸಿದ್ಧಗೊಳಿಸಿ ಅದರ ಹೆಸರನ್ನೂ ಪ್ರಕಟಿಸಿದ್ದರು. ಪೂನಾ ಡೆಕ್ಕನ್ ಕಾಲೇಜ್ ಹಾಗೂ ಭಾರತೀಯ ಭಾಷಾವಿಜ್ಞಾನ ಪರಿಷತ್ತುಗಳಿಗಾಗಿ ಅವರು ಕನ್ನಡ ಭಾಷೆಯ ಇತಿಹಾಸ ವನ್ನು ಬರೆಯಬೇಕಾಗಿತ್ತು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಸಂಶೋಧಕರಾಗಿ ಅವರು ಕೆಲಸಮಾಡುತ್ತಿದ್ದು ತೌಲನಿಕ ದ್ರಾವಿಡ ಭಾಷಾವಿಜ್ಞಾನವನ್ನು ಕುರಿತ ಬರವಣಿಗೆಯಲ್ಲಿ ತೊಡಗಿದ್ದರು. "ಗದಾಯುದ್ಧ"ಕ್ಕೆ ಪೀಠಿಕೆ, ಕನ್ನಡ ಛಂದಸ್ಸಿನ ಸಮಸ್ಯೆಗಳು–ಹೀಗೆ ಅವರ ಹಲವಾರು ಯೋಜನೆಗಳು ಅವರ ಟಿಪ್ಪಣಿಯ ಕಟ್ಟಿನಲ್ಲಿಯೇ ಮರೆಯಾಗಿ ಹೋಗುತ್ತವೆ. ಈಗ ಯೋಜಿಸಿರುವಂತೆ ಚದರಿಹೋದ ಅವರ ಲಲಿತ ಬರಹಗಳೆಲ್ಲ "ನಂಟರು" ಗ್ರಂಥಕ್ಕೆ ಸೇರಿಕೊಳ್ಳುತ್ತವೆ; ಸಂಶೋಧನ ಬರಹಗಳೆಲ್ಲ "ಸಮಾಲೋಕನ"ದಲ್ಲಿ ಸಮಾವೇಶಗೊಳ್ಳುತ್ತವೆ. ಕವಿತೆಗಳ ಸಂಕಲನವೊಂದು ಮಾತ್ರ ಬೇರೆಯಾಗಿಯೇ ಪ್ರಕಟವಾಗಬೇಕು.

"ಸೊಕ್ಕಿನಲ್ಲಿ ತಲೆಯೆತ್ತಿ ಜತೆಯವರ ಕೂಟದಲಿ
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ!
ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆಬಿದ್ದು
ಯಾವ ಮಂಕೋ ಕವಿದು, ಹುದುಗಿರುವೆವಲ್ಲ!"

ಎಂದು ಶ್ರೀಕಂಠಯ್ಯನವರು ಕೊರಗಿ ನಿಟ್ಟುಸಿರು ಬಿಟ್ಟಿದ್ದರು. ಆದರೆ ಈ ಮೂವತ್ತು ವರ್ಷಗಳಲ್ಲಿ ಕನ್ನಡಿಗರು ನಾನಾ ಕ್ಷೇತ್ರಗಳಲ್ಲಿ ನಾವು ಸಮ ನಿಮಗೆಂದು ಜತೆಯವರ ಕೂಟದಲ್ಲಿ ಸೊಕ್ಕಿನಲಿ ತಲೆಯೆತ್ತಿ ನುಡಿವ ಬಲವನ್ನು ಗಳಿಸಿಕೊಂಡಿರುವುದು ಹೆಮ್ಮೆಯ ವಿಚಾರ. ಈ ಸಾಧನೆಗೆ ಶ್ರೀಕಂಠಯ್ಯನವರ ಸೇವೆಯೂ ಅತ್ಯಂತ ಗಮನಾರ್ಹವಾದುದೆಂಬುದನ್ನು ನಾವು ಮರೆಯುವ ಹಾಗಿಲ್ಲ.

ಶ್ರೀಕಂಠಯ್ಯನವರ "ಪಾಂಡಿತ್ಯದ ಪೂರ್ಣಫಲ ಇನ್ನೂ ಕನ್ನಡಿಗರಿಗೆ ಸಾಕಷ್ಟು ಒದಗಿಲ್ಲವೆಂದೇ ಹೇಳಬಹುದು. ಅವರು ಈಗಾಗಲೇ ಮಾಡಿರುವ ಕೆಲಸ ಅತ್ಯಮೂಲ್ಯವಾದುದಾದರೂ ಅವರ ಪಾಂಡಿತ್ಯದ ಆಳ ಅಗಲ ಬೀಸುಗಳನ್ನು ನೋಡಿದವರಿಗೆ ಅವರು ಮಾಡಬೇಕಾದ ಕೆಲಸ ಇನ್ನೂ ಅಗಾಧವಾಗಿದೆ ಎನಿಸದಿರಲಾರದು. ಅವರು ಮಾಡಬೇಕು, ನಿಜ; ಏಕೆಂದರೆ ಅವರು ಮಾಡಬಹುದಾದ ಕೆಲಸ ಇತರರಿಂದ ಸಾಧ್ಯವಿಲ್ಲ. ಆದರೆ ಆ ಕೆಲಸವನ್ನು ಮಾಡಿಸಿಕೊಳ್ಳುವ ಪುಣ್ಯ ಕನ್ನಡಿಗರಿಗಿದೆಯೆ?" ಎಂಬುದಾಗಿ ಪ್ರೊ. ಜವರೇಗೌಡರು ಕೆಲವು ಕಾಲದ ಕೆಳಗೆ ಕೇಳಿದ್ದರು. ಆ ಪುಣ್ಯ ನಿಜಕ್ಕೂ ಕನ್ನಡಿಗರಿಗೆ ಪ್ರಾಪ್ತವಾಗದೆ ಹೋದದ್ದು ಅತ್ಯಂತ ದುರ್ದೈವದ ಸಂಗತಿಯಾಗಿದೆ.

೪

ತೀ.ನಂ.ಶ್ರೀಯವರ ಹೆಸರನ್ನು ನಾನು ಮೊದಲು ಕೇಳಿದ್ದು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗ–ಮೂವತ್ತು ವರ್ಷಗಳ ಕೆಳಗೆ, "ಕನ್ನಡಿಗನ ಕೊರಗು" ಎಂಬ ಅವರ ಕವಿತೆಯಿಂದಾಗಿ. ಅವರನ್ನು ನಾನು ಮೊದಲಬಾರಿಗೆ ನೋಡಿದ್ದು ಇಪ್ಪತ್ತು ವರ್ಷಗಳ ಕೆಳಗೆ ಕಾಸರಗೋಡಿನ ಸಾಹಿತ್ಯ ಸಮ್ಮೇಳನದಲ್ಲಿ ಎಂಬ ನೆನಪು. ನಾನು ಆಗ ಪ್ರೌಢಶಾಲೆಯ ವಿದ್ಯಾರ್ಥಿ. ಅವರ ಗುಂಡು ಮೊಗ, ಆಕರ್ಷಣೀಯ ನಗೆ, ಹೆಗಲಮೇಲೆ ಶಲ್ಯ ಹಾಕಿಕೊಂಡು, ಕೈಲಿ ಛತ್ರಿ ಹಿಡಿದುಕೊಂಡಿದ್ದ ಅವರ ಮೋಹಕ ವ್ಯಕ್ತಿತ್ವ–ನನ್ನ ಎಳೆಯ ಮನಸ್ಸಿನಲ್ಲಿ ಬಲವಾಗಿ ಉಳಿದುಕೊಂಡವು. ಆಗ ಅವರಿಗೆ ಕಿವಿಯ ನೋವಿತ್ತೆಂದು ಕಾಣುತ್ತದೆ. ಕಿವಿಯಲ್ಲಿ ಹತ್ತಿ ತುಂಬಿಕೊಂಡಿದ್ದರು. ಇಪ್ಪತ್ತು ವರ್ಷಗಳ ನಂತರವೂ ಈಗ ನನಗೆ ಅವರ ಅಂದಿನ ಚಿತ್ರ ಕಣ್ಣೆದುರು ಬಂದು ನಿಲ್ಲುತ್ತದೆ. ಮುಂದೆ ಇಂಟರ್ಮೀಡಿಯೆಟ್ ಕಳೆದು ನಾನು ಕನ್ನಡ ಆನರ್ಸ್ ತರಗತಿಗೆ ಓದಲು ಮೈಸೂರಿಗೆ ಬಂದಾಗ ಶ್ರೀಕಂಠಯ್ಯನವರು ಧಾರವಾಡದಲ್ಲಿದ್ದರು. ಆದರೆ ಮೊದಲ ವರ್ಷದ ಆನರ್ಸ್ ತರಗತಿಯಲ್ಲಿ ನಾನು ಮಾಡಿದ ಕೆಲಸವೆಂದರೆ ಹಿಂದಿನ ವಿದ್ಯಾರ್ಥಿಗಳಿಗೆ ಶ್ರೀಕಂಠಯ್ಯನವರು ಹೇಳಿ ಬರೆಸಿದ್ದ ಶಬ್ದಮಣಿದರ್ಪಣದ ಟಿಪ್ಪಣಿಗಳನ್ನು ನಕಲು ಮಾಡಿಕೊಂಡದ್ದು. ಮುಂದಿನ ಒಂದೆರಡು ವರ್ಷಗಳಲ್ಲಿ ನಾನು ಬೇರೆ ಬೇರೆ ಸಂದರ್ಭಗಳಲ್ಲಿ ಅವರಿಗೆ ಕಾಗದ ಬರೆದಿದ್ದೆ; ಅವಕ್ಕೆ ಅವರಿಂದ ಉತ್ತರವೂ ಬಂದಿತ್ತು.

೧೯೫೬ರಲ್ಲಿ ನಾನು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿವೇತನ ಪಡೆದು ಭಾಷಾಶಾಸ್ತ್ರದ ಅಭ್ಯಾಸಕ್ಕೆಂದು ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಹೋಗುವ ಮುನ್ನ, ನನ್ನ ವಿಷಯವಾಗಿ ಆಗ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರ ವಿಭಾಗದ ಮುಖ್ಯ ಪ್ರಾಧ್ಯಾಪಕರಾಗಿದ್ದ ಡಾ. ಸುಕುಮಾರ ಸೇನ್ ಅವರಿಗೆ ಒಂದೆರಡು ಪರಿಚಯದ ಮಾತುಗಳನ್ನು ಬರೆಯಬೇಕೆಂದು ನಾನು, ಪರಿಚಯವಿಲ್ಲದಿದ್ದರೂ, ಶ್ರೀಕಂಠಯ್ಯನವರನ್ನು ಕೇಳಿಕೊಂಡಿದ್ದೆ. ಶ್ರೀಕಂಠಯ್ಯನವರಿಂದ ನನಗೆ ಕೂಡಲೆ ತುಂಬು ಪ್ರೋತ್ಸಾಹದಾಯಕವಾದ ಒಂದು ಕಾಗದ ಬಂತು. ಅದರಲ್ಲಿ ಅವರು ನನ್ನನ್ನು ಭಾಷಾಶಾಸ್ತ್ರದ ಅಧ್ಯಯನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರೋತ್ಸಾಹವನ್ನು ಪಡೆದು ಕಲ್ಕತ್ತೆಗೆ ಹೋಗುತ್ತಿರುವುದಕ್ಕೆ ಹೃತ್ಪೂರ್ವಕವಾಗಿ ಅಭಿನಂದಿಸಿದ್ದರು. ನನ್ನ ವ್ಯಾಸಂಗವನ್ನು ಹೇಗೆ ನಡೆಸಬೇಕೆಂದೂ ಸಲಹೆ ಸೂಚನೆಗಳನ್ನು ಕೊಟ್ಟಿದ್ದರು. ಜೊತೆಗೆ ಹೀಗೆ ಬರೆದಿದ್ದರು: "ಪ್ರೊ.ಸೇನ್ ಅವರು ದೊಡ್ಡ ವಿದ್ವಾಂಸರು. ಅಂಥ ಸಮರ್ಥರ ಕೈಕೆಳಗೆ ಶಿಕ್ಷಣ ಪಡೆಯುವುದು ಒಂದು ಭಾಗ್ಯ. ಪ್ರೊ. ಸೇನ್ ಅವರಿಗೆ ಈ ದಿನ ನಿಮ್ಮ ವಿಷಯವಾಗಿ ಬರೆದಿದ್ದೇನೆ. ನನ್ನ ಎರಡು ಮಾತಿನಿಂದ ನಿಮಗೆ ಅಲ್ಪ ಸ್ವಲ್ಪ ಪ್ರಯೋಜನವಾದರೆ ನನಗೂ ಸಂತೋಷವಾಗುತ್ತದೆ" (೭-೮-೫೬). ಮಾತ್ರವಲ್ಲದೆ, ನಾನು ಕಲ್ಕತ್ತ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾಗಿದ್ದ ಡಾ.ಸುನೀತಿ ಕುಮಾರ ಚಟರ್ಜಿಯವರನ್ನೂ, ನ್ಯಾಷನಲ್ ಲೈಬ್ರೆರಿಯ ಮುಖ್ಯರಾಗಿದ್ದ ಶ್ರೀ.ಬಿ.ಎಸ್. ಕೇಶವನ್ ಅವರನ್ನೂ ನೋಡಬೇಕೆಂದೂ, ಅವರಿಗೂ ನನ್ನ ಪರಿಚಯವನ್ನು ಸೂಚಿಸುವುದಾಗಿಯೂ ತಿಳಿಸಿದ್ದರು. ಇದೆಲ್ಲದರ ಫಲವಾಗಿ ನಾನು ಮೈಸೂರಿನಲ್ಲಿ ಶ್ರೀಕಂಠಯ್ಯನವರ ವಿದ್ಯಾರ್ಥಿಯಾಗಿರದಿದ್ದರೂ, ಕಲ್ಕತ್ತೆಯಲ್ಲಿ ಶ್ರೀಕಂಠಯ್ಯನವರ ಶಿಷ್ಯನೆನಿಸಿ ಕೊಂಡು ನಿರೀಕ್ಷೆಗೂ ಮೀರಿದ ವಿಶ್ವಾಸ, ಸಹಕಾರ, ಅನುಕೂಲಗಳನ್ನು ಸಂಪಾದಿಸಿಕೊಂಡೆನು. ನಾನು ಪ್ರೊ. ಸೇನ್ ಅವರನ್ನು ಕಂಡಾಗ ಮೊದಲು ಅವರು ನನ್ನನ್ನು ಕೇಳಿದ್ದು : "ನೀವು ಪ್ರೊ. ಶ್ರೀಕಂಠಯ್ಯನವರ ವಿದ್ಯಾರ್ಥಿಯೆ?" ನಾನು "ಇಲ್ಲ" ಎಂದಾಗ ಅವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. "ಮತ್ತೆ ನಿಮ್ಮ ವಿಚಾರವಾಗಿ ಅವರು ಅಷ್ಟು ಒಳ್ಳೆಯ ಮಾತುಗಳನ್ನು ಬರೆದಿದ್ದಾರಲ್ಲ!" ಎಂದು ಅವರು ಹೇಳಿದಾಗ ಏನು ಉತ್ತರಿಸಬೇಕೆಂದು ನನಗೆ ತೋರದೆ ಪೇಚಾಡಿದೆ. ಆ ಜೀವಕ್ಕೆ ಪುಣ್ಯವಿರಲಿ.

ಅದೇ ವರ್ಷದ ಕೊನೆಯ ವೇಳೆಗೆ ನಾನು ಶ್ರೀಕಂಠಯ್ಯನವರಿಗೆ ನನ್ನ ಪ್ರಬಂಧಗಳ ಸಂಕಲನದ ಪ್ರತಿಯೊಂದನ್ನು ಕಳಿಸಿಕೊಟ್ಟೆ. ಅದಕ್ಕೆ ಅವರಿಂದ ಯಾವ ಬಗೆಯ ಉತ್ತರವೂ ಬರಲಿಲ್ಲ. ಅದರಿಂದ ನನಗೆ ಸ್ವಲ್ಪ ನಿರಾಶೆಯೇ ಆಯಿತು. ಆದರೆ ಕೆಲವು ದಿನಗಳಲ್ಲಿಯೇ, ನನ್ನ ಆ ಪುಸ್ತಕಕ್ಕೆ ಮುನ್ನುಡಿ ಬರೆದಿದ್ದ ಶ್ರೀ. ಪು.ತಿ. ನರಸಿಂಹಾಚಾರ್ಯರಿಂದ ನನಗೆ ಒಂದು ಕಾಗದ ಬಂತು (೧೮-೧೨-೫೬). ಅದರಲ್ಲಿ ಅವರು ತಮಗೆ ಶ್ರೀಕಂಠಯ್ಯನವರು ಸಿಕ್ಕಿದ್ದರೆಂದೂ ಅವರು ನನ್ನ ಪ್ರಬಂಧಗಳನ್ನು ಬಹುವಾಗಿ ಮೆಚ್ಚಿಕೊಂಡರೆಂದೂ, ಜೊತೆಗೆ ಮುನ್ನುಡಿಯನ್ನೂ ತುಂಬ ಇಷ್ಟಪಟ್ಟರೆಂದೂ ಬರೆದಿದ್ದರು. ಇದರಿಂದ ನನಗೆ ಸ್ವಲ್ಪ ಸಂತೋಷವಾಯಿತಾದರೂ ಶ್ರೀಕಂಠಯ್ಯನವರು ನನಗೇ ಏಕೆ ಬರೆಯಲಿಲ್ಲ ಎಂಬ ಕೊರಗು ಬಾಧಿಸುತ್ತಿತ್ತು. ೧೯೫೭ರ ಬೇಸಿಗೆಯಲ್ಲಿ ಭಾಷಾಶಾಸ್ತ್ರದ ಶಿಬಿರಕ್ಕೆಂದು ನಾನು ಡೆಹರಾಡೂನಿಗೆ ಹೋಗಿದ್ದೆ. ಅಲ್ಲಿಗೆ

ಶ್ರೀಕಂಠಯ್ಯನವರೂ ಬಂದರು. ಮೊದಲು ನಮ್ಮ ಭೇಟಿಯಾದಾಗ ಅವರು ಕೈಕುಲುಕಿ ನನ್ನ ಪ್ರಬಂಧಗಳಿಗಾಗಿ ಹೃತ್ಪೂರ್ವಕವಾಗಿ ಅಭಿನಂದಿಸಿದರು. "ನಿಮ್ಮನ್ನು ಮುಖತಃ ನೋಡಿಯೇ ನಾನು ನನ್ನ ಸಂತೋಷವನ್ನು ವ್ಯಕ್ತಪಡಿಸಬೇಕೆಂದು ಉದ್ದೇಶಿಸಿ ನಾನು ನಿಮಗೆ ಕಾಗದ ಬರೆಯಲಿಲ್ಲ" ಎಂದು ಅವರು ಹೇಳಿದರು. ನನ್ನನ್ನು ಅವರು ಬೇರೆ ಕೆಲವು ಪ್ರಾಧ್ಯಾಪಕರುಗಳಿಗೆ ಪರಿಚಯಮಾಡಿಕೊಡುವಾಗ ನನ್ನ ಬರವಣಿಗೆಯ ಬಗೆಗೆ ಆಡುತ್ತಿದ್ದ ವಿಶ್ವಾಸಪೂರ್ವಕವಾದ ಮಾತುಗಳನ್ನು ಕೇಳಿ ನಾನು ನಾಚಿಕೊಳ್ಳುವಂತಾಗುತ್ತಿತ್ತು. ಅಷ್ಟೇ ಅಲ್ಲದೆ ತೀರ ಈಚೆಗೆ ನನ್ನ ವಿಷಯದಲ್ಲಿ ಅವರು ಬರೆದ ಒಂದು ಶಿಫಾರಸ್ ಪತ್ರದಲ್ಲಿಯೂ "He has written some delightful prose in Kannada" ಎಂದು ಸೇರಿಸಿದ್ದರು.

ಡೆಹರಾಡೂನ್ ಶಿಬಿರದಲ್ಲಿ ಅವರು ಹೆಚ್ಚುದಿನ ಇರುವುದು ಆಗದಿದ್ದರೂ, ಇದ್ದ ಅವಧಿಯಲ್ಲಿ ನಮ್ಮ ಪರಿಚಯ ನಿಕಟವಾಯಿತು. ಕನ್ನಡ ಭಾಷೆಯನ್ನು ಕುರಿತ ಅವರ ಉಪನ್ಯಾಸಗಳ ತರಗತಿಯಲ್ಲಿ ನಾನು ಕುಳಿತಾಗ ಅವರು ಆ ಉಪನ್ಯಾಸಗಳಿಂದ ನನಗೆ ಹೆಚ್ಚಿನ ಉಪಯೋಗ ವಾಗುವುದಿಲ್ಲವೆಂದೂ, ಪಕ್ಕದ ಕೊಠಡಿಯಲ್ಲಿದ್ದ ಪ್ರೊ. ಟಿ.ಪಿ. ಮೀನಾಕ್ಷಿಸುಂದರನ್ ಅವರ ತಮಿಳು ಭಾಷೆಯನ್ನು ಕುರಿತ ಉಪನ್ಯಾಸಗಳಿಗೆ ಹೋಗಬೇಕೆಂದೂ ಸೂಚಿಸಿದರು. ತರಗತಿ ಮುಗಿದನಂತರ ಅವರೇ ಪ್ರೊ. ಮೀನಾಕ್ಷಿಸುಂದರನ್ ಅವರ ಬಳಿಗೆ ಬಂದು ನನ್ನ ಪರಿಚಯ ಮಾಡಿಕೊಟ್ಟರು.

ಮುಂದೆ ಮೈಸೂರಿನ ಮಹಾರಾಜರವರ ಕಾಲೇಜಿನಲ್ಲಿಯೂ, ಮಾನಸ ಗಂಗೋತ್ರಿಯಲ್ಲಿಯೂ ಅವರ ಜತೆ ಕೆಲಸಮಾಡುವ, ಭಾಷಾಶಾಸ್ತ್ರದ ಬೇಸಿಗೆ ಶಿಬಿರಗಳಲ್ಲಿ ಒಡನಾಡುವ, ಹಲವು ಸಮಿತಿಗಳಲ್ಲಿ ಅವರೊಡನೆ ಸಹಕರಿಸುವ ಸಂದರ್ಭಗಳು ನನಗೆ ಒದಗಿದವು. ಅನೇಕ ವಿಚಾರಗಳಲ್ಲಿ ನನ್ನ ಅವರ ದೃಷ್ಟಿಗಳು ಒಂದಾಗಿರಲಿಲ್ಲ; ಆದರೆ ನನ್ನ ಬಗೆಗೆ ಅವರ ಒಲವೂ ವಿಶ್ವಾಸವೂ ಕೊರೆಯಾಗಲಿಲ್ಲ. ೧೯೬೦ರಲ್ಲಿ ನಾನೂ ಅವರೂ, ಭಾರತದ ಭಾಷಾವಿಜ್ಞಾನಿಗಳ ಸಮ್ಮೇಳನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳಾಗಿ ಹೋಗಿದ್ದೆವು. ನಮ್ಮ ಪ್ರವಾಸದ ಉದ್ದಕ್ಕೂ ನನ್ನ ಊಟ ನಿದ್ರೆಗಳಲ್ಲಿ ಅವರು ವಹಿಸುತ್ತಿದ್ದ ಎಚ್ಚರವನ್ನು ನೆನಸಿಕೊಂಡರೆ ಈಗಲೂ ನನಗೆ ಸಂಕೋಚವಾಗುತ್ತದೆ, ಮನಸ್ಸು ಭಾರವಾಗುತ್ತದೆ. ೧೯೬೮ರಲ್ಲಿ ನಾನು ಅಮೆರಿಕೆಗೆ ಹೊರಡುವ ಮುನ್ನ ಅವರಿಗೆ ಹೇಳಿಬರಲು ಹೋದಾಗ ನನ್ನನ್ನು ಕೂರಿಸಿಕೊಂಡು ಅವರು ತಮ್ಮ ಅನುಭವಗಳನ್ನೂ, ನನ್ನ ಉಪಯೋಗಕ್ಕೆಂದು ಹಲವು ಹಿತನುಡಿಗಳನ್ನೂ ಹೇಳಿದ 'ಆ ಸಂಜೆ' ಇನ್ನೂ ನನ್ನ ಕಣ್ಣೆದುರಿಗಿದೆ. ನಾನು ಅಮೆರಿಕೆಯಿಂದ ಮರಳಿ ಬಂದಮೇಲೆ ಎಷ್ಟೋಸಲ ನಮ್ಮ ಅನುಭವಗಳನ್ನು ತಾಳೆ ನೋಡುತ್ತಿದ್ದೆವು. ನನಗಿನ್ನೂ ನೆನಪಿದೆ: ನಾನು ಮಾರಿಸ್ ಸ್ವಾಡಿಷ್‌ರನ್ನು ಭೇಟಿಯಾದ ವಿಚಾರ ತಿಳಿಸಿದಾಗ ಅವರಿಗಾದ ಸಂತೋಷ ಅದ್ಭುತವಾದದ್ದು "ನಿಜಕ್ಕೂ?" ಎಂದು ಭುಜಕುಣಿಸಿ, ತಮ್ಮ ಪತ್ನಿಯವರನ್ನು ಕೂಗಿ ಕರೆದು ಹೇಳಿದರು–"ನೋಡೆ, ನಾಯಕ್‌ಗೆ ಅಮೆರಿಕಾದಲ್ಲಿ ಸ್ವಾಡಿಷ್ ಸಿಕ್ಕಿದ್ದರಂತೆ, ನನ್ನನ್ನು ಬಹಳವಾಗಿ ವಿಚಾರಿಸಿದರಂತೆ."

ಶ್ರೀಕಂಠಯ್ಯನವರದು ತುಂಬ ಒಪ್ಪವಾದ, ಓರಣವಾದ, ವ್ಯವಸ್ಥಿತವಾದ ಜೀವನ. ಪೆನ್ಸಿಲ್ ಕೆತ್ತುವುದರಿಂದ, ತಲೆಬಾಚಿಕೊಳ್ಳುವವರೆಗೆ ಅವರದು ಒಂದೇ ವಿಧಾನ. ಅಲ್ಲಿ ಆವೇಗ ಉದ್ವೇಗಗಳಿಗೆ ಆಸ್ಪದವಿಲ್ಲ. ತಮ್ಮ ವೇಷಭೂಷಣಗಳಲ್ಲಿ ತೋರುತ್ತಿದ್ದ ಕಲೆಗಾರಿಕೆಯನ್ನೇ ಪುಸ್ತಕಕ್ಕೆ ರಟ್ಟು ಹಾಕುವುದರಲ್ಲಿಯೂ ಅವರು ತೋರುತ್ತಿದ್ದರು. ತಮ್ಮ ಪಾಲಿನ ಕೆಲಸ ನಡೆಸುವುದರಲ್ಲಿ ಅವರು ಸ್ವಲ್ಪವೂ ಅತ್ತಿತ್ತ ನಡೆದವರಲ್ಲ. ನಿವೃತ್ತರಾಗಿ ಅಧಿಕಾರವನ್ನು ವಹಿಸಿಕೊಟ್ಟು ಕಛೇರಿಯಿಂದ ಹೊರಗೆ ಬಂದಾಗ ತಮ್ಮ ಹೆಸರಿನ ಹಲಗೆಯನ್ನೂ ತೆಗೆಸಿ ಇಡಲು ಅವರು ಮರೆಯದಿದ್ದ ಸಂಗತಿಯನ್ನು ಆ ಹೊತ್ತಿನಲ್ಲಿ ಅಲ್ಲಿದ್ದವರಾರೂ ಮರೆಯುವಂತಿಲ್ಲ!

ಅವರದು ಪ್ರೀತಿಯ, ತೃಪ್ತಿಯ ಕುಟುಂಬಜೀವನ. ಅವರು ತಮ್ಮ ಪತ್ನಿಯೊಡನೆ ಆಗಾಗ ಹಾರಿಸುತ್ತಿದ್ದ ಹಾಸ್ಯದ ಚಟಾಕಿಗಳು ತರುಣರನ್ನೂ ನಾಚಿಸುತ್ತಿದ್ದವು. ತಮ್ಮ ಮಗನೊಡನೆ ನಡೆದುಕೊಳ್ಳುತ್ತಿದ್ದುದನ್ನು ನೋಡಿದರೆ, ಸ್ನೇಹಿತರೊಡನೆ ವರ್ತಿಸುತ್ತಿರುವಂತೆ ತೋರುತ್ತಿತ್ತು. ಅವರು ತುಂಬ ಸ್ನೇಹಪರರು; ಸರಸಿಗಳು. ಕಪಟ ಅವರಿಗೆ ತಿಳಿಯದು. ಉಪಚಾರ ಸತ್ಕಾರಗಳಲ್ಲಿ ಧಾರಾಳ; ಮನೆಯಲ್ಲಿಯೂ ಸಭೆ ಸಮಿತಿಗಳಲ್ಲಿಯೂ ಅವರು ತಿಂಡಿತೀರ್ಥಗಳನ್ನು ಸಾಕೆನಿಸುವಷ್ಟು ನೀಡುತ್ತಿದ್ದರು. ಖರ್ಚಿನಲ್ಲಿ ಅವರು ಕೈಹಿಡಿದವರಲ್ಲ. ಒಟ್ಟಿನಲ್ಲಿ ಶ್ರೀಕಂಠಯ್ಯನವರ ಬದುಕು ಋಜು ಜೀವನದ ಒಂದು ಸುಂದರವಾದ ಅಧ್ಯಾಯ.

ಕೆಲವು ಸಲ ಅವರು ಶೀಘ್ರವಾಗಿ ಕೋಪಗೊಳ್ಳುತ್ತಿದ್ದರು; ತೀಕ್ಷ್ಣವಾಗಿ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಅವರು ಸಿಡುಕುತ್ತಿದ್ದುದನ್ನೂ ನಾನು ನೋಡಿದ್ದೇನೆ. ತಮಗೆ ಅನ್ನಿಸಿದ್ದನ್ನು ಒಡನೆಯೇ ಹೇಳಿ ಎಷ್ಟೋಸಲ ತಪ್ಪು ತಿಳಿವಳಿಕೆಗೆ ಕಾರಣರಾಗುತಿದ್ದರು. ವ್ಯಕ್ತಿಗಳ ನಿಜಗುಣವನ್ನು ಅವರು ತಪ್ಪಾಗಿ ಗುರುತಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರಲ್ಲಿ ವ್ಯವಹಾರಚತುರತೆ ಅಷ್ಟಾಗಿ ಕಾಣಿಸುತ್ತಿರಲಿಲ್ಲ. ಅವರ ಅನೇಕ ನಿರ್ಣಯಗಳಲ್ಲಿ ದೂರದೃಷ್ಟಿ ತೋರುತ್ತಿರಲಿಲ್ಲ. ಸಭೆ, ಸಮಿತಿಗಳಲ್ಲಿ ತಮ್ಮ ಅಭಿಪ್ರಾಯಗಳಿಗೆ ವಿರೋಧ ಬಂದಾಗ ಅದರಿಂದ ಅವರು ಖಿನ್ನರಾಗುತ್ತಿದ್ದರು; ಉದ್ರೇಕಗೊಳ್ಳುತ್ತಿದ್ದರು. ಇದೆಲ್ಲವೂ ಆ ಕ್ಷಣದಲ್ಲಿ ಮಾತ್ರ. ಅವರ ಬಹುದೊಡ್ಡ ಕೊರತೆಯೆಂದರೆ ಅವರಿಗೆ ಪ್ರಬಲವಾದ ಇಷ್ಟಾನಿಷ್ಟಗಳಿದ್ದವು. ಆದರೆ ಈ ಕೊರತೆಗಳನ್ನೆಲ್ಲ ಮರೆಸುವ ಸೌಜನ್ಯ ಸಜ್ಜನಿಕೆಗಳು ಅವರಿಗಿದ್ದವು.

ಪ್ರೊಫೆಸರ್ ಶ್ರೀಕಂಠಯ್ಯನವರು 'ಉಡಾಫೆ' ವಿದ್ವಾಂಸರಾಗಿರಲಿಲ್ಲ. ಅವರು ಯಾವುದೇ ಅನುಮಾನಕ್ಕೂ ಅವಕಾಶ ಕೊಡುತ್ತಿರಲಿಲ್ಲ. ನಿಷ್ಕೃಷ್ಟತೆ ಅವರ ವಿದ್ವತ್ತಿನ ಪ್ರಮುಖ ಲಕ್ಷಣ. ಒಂದುಸಲ ನಾನು ಅವರನ್ನು ಒಂದು ಶಿಫಾರಸ್ ಪತ್ರ ಕೇಳಿದೆ. ಆ ಚಿಕ್ಕ ಪತ್ರ ಬರೆದು ಮುಗಿಸುವಷ್ಟರಲ್ಲಿಯೇ ಅವರು ನಾಲ್ಕಾರು ಸಲ ಒಂದೆರಡು ಅರ್ಥಕೋಶಗಳನ್ನು ತಿರುವಿ ಹಾಕಿದರು! ಹಿಂದಿನಿಂದ ಪತ್ರವನ್ನು ನಾನು ನೋಡಿಕೊಂಡಾಗ ಅದರಲ್ಲಿ ಅವರು ಯಾವ ಪದವನ್ನೂ ಹೊಡೆದು ಬರೆದಿರಲಿಲ್ಲ. ಮಾತ್ರವಲ್ಲ ಅರ್ಥಕೋಶ ನೋಡಬೇಕಾದ ಯಾವ ಪದವೂ ನನಗೆ ಅಲ್ಲಿ ಕಾಣಿಸಲಿಲ್ಲ!

ಕನ್ನಡ ಸಂಸ್ಕೃತ ಇಂಗ್ಲಿಷ್ ಭಾಷೆಗಳಲ್ಲಿ ಶ್ರೀಕಂಠಯ್ಯನವರದು ಖಚಿತವಾದ ವಿದ್ವತ್ತು. ಅವರು ಆದರ್ಶ ಅಧ್ಯಾಪಕರಾಗಿದ್ದರು; ಉತ್ತಮ ವಾಗ್ಮಿಗಳಾಗಿದ್ದರು. ಇಂಗ್ಲಿಷ್ ಕನ್ನಡ ಎರಡರಲ್ಲಿಯೂ ಅವರು ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು. ಕಾವ್ಯಮೀಮಾಂಸೆ, ಭಾಷಾವಿಜ್ಞಾನ ಎರಡರಲ್ಲಿಯೂ ಅವರಿಗೆ ಒಂದೇ ವಿಧವಾದ ಆಸಕ್ತಿ; ಒಂದೇ ಬಗೆಯ ವಿದ್ವತ್ತು. ಭಾಷಾನಾಣ್ಯದ ಈ ಎರಡೂ ನಿಮಗೆ ಯಾವುದು ಹೆಚ್ಚು ಮೆಚ್ಚು ಎಂದು ಕೇಳಿದರೆ ಶ್ರೀಕಂಠಯ್ಯನವರ ಉತ್ತರ: (ದೇಜಗೌ ಅವರ ತೀ.ನಂ.ಶ್ರೀ. ಸಂದರ್ಶನದ ಕೊನೆಯ ಭಾಗವನ್ನು ಇಲ್ಲಿ ಕೊಡಲಾಗಿದೆ). ಶ್ರೀಕಂಠಯ್ಯನವರ ಈ ಮಾತುಗಳನ್ನು ಕೇಳುತ್ತಿರುವಾಗ ಮಲಾರ್ಮೆಯ "Poetry is not written with ideas but with words" ಎಂಬ ಪ್ರಖ್ಯಾತವಾದ ಹೇಳಿಕೆಯ ನೆನಪಾಗುತ್ತದೆ.

ಖಂಡಿತವಾಗಿಯೂ ಪ್ರೊಫೆಸರ್ ಶ್ರೀಕಂಠಯ್ಯನವರು ಈ ಶತಮಾನದ ಕನ್ನಡ ಪಾಂಡಿತ್ಯದ ಒಂದು ಶ್ರೇಷ್ಠ ಉದಾಹರಣೆಯಾಗಿದ್ದರು.

೬

ಈಚಿನ ಒಂದೆರಡು ವರ್ಷಗಳಲ್ಲಿ ಶ್ರೀಕಂಠಯ್ಯನವರ ಆರೋಗ್ಯ ಕುಸಿಯುತ್ತಾ ಬಂದಿತ್ತು. ಕೆಲಸ, ಪ್ರವಾಸಗಳಲ್ಲಿ ಅವರು ತಮ್ಮ ಆರೋಗ್ಯಕ್ಕೆ ಕೊಡಬೇಕಾದ ಗಮನಕೊಡಲಿಲ್ಲ. ಅವರ ಉತ್ಸಾಹ, ಚಟುವಟಿಕೆ, ಎಂದಿಗೂ ಮರೆಯಲಾಗದ ಅವರ ಮೋಹಕ ನಗು–ಇವು ಅವರ ಸುತ್ತಲಿನವರನ್ನೂ ಮೋಸಗೊಳಿಸಿದವು. ದೆಹಲಿ, ಅಣ್ಣಾಮಲೈ ವಿಶ್ವವಿದ್ಯಾನಿಲಯಗಳಿಂದ ಅವರಿಗೆ ಪ್ರಾಧ್ಯಾಪಕರಾಗಿ ಬರುವಂತೆ ಆಹ್ವಾನಗಳು ಬಂದಿದ್ದು ಅನಾರೋಗ್ಯದ ಕಾರಣಗಳಿಂದಲೇ ಅವನ್ನು ಒಪ್ಪಿಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ.

ಆಚಾರ್ಯ ಶ್ರೀಕಂಠಯ್ಯನವರು ಬದುಕಿದ್ದಿದ್ದರೆ ನಾಳೆ ನವೆಂಬರ್ ತಿಂಗಳಿಗೆ ಅವರಿಗೆ ಅರವತ್ತು ವರ್ಷಗಳು ತುಂಬುತ್ತಿದ್ದುವು. ಆ ಸಂದರ್ಭದಲ್ಲಿ ಅವರಿಗೆ "ಶ್ರೀಕಂಠಿಕೆ" ಎಂಬ ಒಂದು ಅಭಿನಂದನ ಗ್ರಂಥವನ್ನು ಒಪ್ಪಿಸಬೇಕೆಂದು ಮೈಸೂರಿನ ಅವರ ಕೆಲವು ಶಿಷ್ಯಮಿತ್ರರು ಇಚ್ಛಿಸಿ ಆ ಕುರಿತ ಸುತ್ತೋಲೆ ಇನ್ನೂ ಅಚ್ಚಿನ ಮನೆಯಲ್ಲಿಯೇ ಇದೆ. ಸೆಪ್ಟಂಬರ್ ಹತ್ತನೆಯ ತಾರೀಖು ಅವರು ಕಲ್ಕತ್ತೆಯಿಂದ ಮೈಸೂರಿಗೆ ಮರಳಬೇಕಾಗಿತ್ತು. ನಮ್ಮಲ್ಲಿ ಎಷ್ಟೋ ಜನ ಅವರನ್ನು ಅಂದೇ ರಾತ್ರಿಯೋ, ಮಾರನೆದಿನ ಬೆಳಗ್ಗೆಯೋ ನೋಡುವ ಕಾರ್ಯಕ್ರಮವಿತ್ತು. ಅದಕ್ಕಾಗಿ ಅವರು ಕಲ್ಕತ್ತೆಯಿಂದಲೇ ಕಾಗದ ಬರೆದಿದ್ದರು.....

ಆದರೇನು? ಶ್ರೀಕಂಠಯ್ಯನವರು ಇನ್ನು ಬರುವುದಿಲ್ಲ. ಅವರ ಆ ನಗೆಯನ್ನು ಮತ್ತೆ ನಾವು ನೋಡುವುದಿಲ್ಲ.

(ಪ್ರಬುದ್ಧ ಕರ್ನಾಟಕ)

ಕಣ್ಮರೆಯಾದ ಗುರುವರ್ಯನ ನೆನಹು

ಆಚಾರ್ಯ ತೀನಂಶ್ರೀ

ಎಸ್. ಪಾರುಮನೆ

●

ಘನವಾದ ವಿದ್ವತ್ತು ಮತ್ತು ವಿನಯಶೀಲತೆ ಇವೆರಡೂ ಒಂದೆಡೆ ಸೇರಿರುವುದು ಬಲು ಅಪರೂಪ. ತೀ.ನಂ.ಶ್ರೀಕಂಠಯ್ಯನವರು ಅಂಥ ವಿರಳ ವ್ಯಕ್ತಿಗಳಲ್ಲಿ ಒಬ್ಬರು. ಪಂಡಿತರಿಂದ ಹಿಡಿದು ಸಾಮಾನ್ಯರವರೆಗೆ ಪ್ರತಿಯೊಬ್ಬರಿಗೆ ತೀ.ನಂ.ಶ್ರೀ. ನಸುನಗೆಯ ಸ್ವಾಗತವಿತ್ತು. ನಮ್ಮ ಎರಡೂ ವಿಶ್ವವಿದ್ಯಾಲಯಗಳಲ್ಲಿ ಅವರು ದುಡಿದು ಕನ್ನಡ ನಾಡಿಗೆ ಸೇವೆ ಸಲ್ಲಿಸಿದರು. ಕನ್ನಡಿಗರಿಗೆ ಈ ಶತಮಾನದಲ್ಲಿ ಇಬ್ಬರು 'ಶ್ರೀ'ಗಳು ದೊರಕಿದ್ದರು- ಆಚಾರ್ಯ ಬಿ.ಎಂ.ಶ್ರೀ. ಮತ್ತು ಆಚಾರ್ಯ ತೀ.ನಂ.ಶ್ರೀ. ಬಿ.ಎಂ.ಶ್ರೀ.ಯನ್ನು ಕಳೆದು ಕೊಂಡಾಗ ನಾಡು ಕನ್ನಡಿಗರ ನವೋದಯದ ಹರಿಕಾರನನ್ನು ಕಳೆದುಕೊಂಡಿತು. ಈಗ ತೀ.ನಂ.ಶ್ರೀಯನ್ನು ನಾವು ಕಳೆದು ಕೊಂಡಿದ್ದೇವೆ. ಸರಸ್ವತಿಯ ಅರಾಧನೆಯನ್ನು ಒಂದು ತಪಸ್ಸಾಗಿ, ಯಜ್ಞವಾಗಿ ಮಾಡಿಕೊಂಡ ವ್ಯಕ್ತಿಯೊಂದು ನಮ್ಮ ನಡುವಿನಿಂದ ಮಾಯವಾದಂತಾಗಿದೆ.

ತುಮಕೂರು ಜಿಲ್ಲೆಯ ತೀರ್ಥಪುರದ ನಂಜುಂಡಯ್ಯನವರ ಸುಪುತ್ರ ಶ್ರೀಕಂಠಯ್ಯನವರು ೧೯೦೬ರ ನವಂಬರ್ ೨೬ ರಂದು ಜನಿಸಿದರು. ಬಾಲ್ಯದಿಂದಲೂ ಕುಶಾಗ್ರಮತಿಗಳಾದ ಅವರು ವಿದ್ಯಾರ್ಥಿಯಾಗಿರುವಾಗಲೇ ಆ ಭಾಗದಲ್ಲೆಲ್ಲ ತಾಯಿ-ತಂದೆಗಳು ತಮ್ಮ ಮಕ್ಕಳಿಗೆ, ಇವರ ಹೆಸರೆತ್ತಿಹೇಳಿ, 'ಇದ್ದರೆ ಅಂಥ ಮಕ್ಕಳಿರಬೇಕು' ಎನ್ನುತ್ತಿದ್ದರಂತೆ. ಹೆಸರಾಂತ ಪ್ರಾಧ್ಯಾಪಕ ರಾದ ಬಿ.ಎಂ.ಶ್ರೀ., ಎಂ. ಹಿರಿಯಣ್ಣ, ಟಿ.ಎಸ್. ವೆಂಕಣ್ಣಯ್ಯವರಂಥ ಗುರುಗಳ ಅಚ್ಚುಮೆಚ್ಚಿನ ಶಿಷ್ಯರಾಗಿ ತೀ.ನಂ.ಶ್ರೀ. ಇಂಗ್ಲಿಷ್ ಮತ್ತು ಕನ್ನಡ ಎರಡೂ ವಿಷಯಗಳಲ್ಲಿಯೂ ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದರು. ಆ ಕಾಲದಲ್ಲಿ ತುಂಬ ದೊಡ್ಡ ಪರೀಕ್ಷೆಯೆಂದು ತಿಳಿಯಲಾಗಿದ್ದ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿಯೂ ಶ್ರೇಯಸ್ಸು ಗಳಿಸಿ ಮೈಸೂರು ಸರಕಾರದ ಕಂದಾಯ ಶಾಖೆಯಲ್ಲಿ ಸೇವೆಗೆ ಸೇರಿದರು. ಆದರೆ ಗುರು-ಶಿಷ್ಯರಾಗಿಯೇ ಬಾಳಬೇಕಾಗಿದ್ದ ಶ್ರೀಕಂಠಯ್ಯನವರಿಗೆ ಅಮಲ್ದಾರಿಕೆಯ ಹುದ್ದೆ ಹಿಡಿಸದೆ, ಅದನ್ನು ಬಿಟ್ಟು ಕೊಟ್ಟು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಬಂದು ಸ್ವಕ್ಷೇತ್ರ ಪ್ರವೇಶ ಮಾಡಿದರು. ಅಲ್ಲಿಂದೀಚೆಗಿನ ಮೂವತ್ತೈದು ವರ್ಷಗಳ ಜೀವನದುದ್ದಕ್ಕೂ ಅವರು ಶಿಷ್ಯರಾಗಿ ವಿದ್ಯಾರ್ಜನೆ ಮಾಡುತ್ತ ಗುರುಗಳಾಗಿ ಜ್ಞಾನದಾನ ಮಾಡಿದರು. ತಮ್ಮ

ಗುರುಗಳ ಹೆಮ್ಮೆಯ ಶಿಷ್ಯರಾಗಿದ್ದವರು, ಶಿಷ್ಯರಿಗೆ ಹೆಮ್ಮೆಯ ಗುರುಗಳಾಗಿ ಒಂದು ದೊಡ್ಡ ಆದರ್ಶವನ್ನು ಅಸ್ಖಲಿತವಾಗಿ, ಅವಿಚ್ಛಿನ್ನವಾಗಿ ಮುಂದುವರಿಸಿದರು.

ವಿದ್ಯಾರ್ಥಿಗಳಿಗೆ ಪಾಠ ಹೇಳುವುದರಲ್ಲಾಗಲಿ, ಸಾರ್ವಜನಿಕ ಉಪನ್ಯಾಸದಲ್ಲಾಗಲಿ, ಸರಸ ಸಂಭಾಷಣೆಯಲ್ಲಾಗಲಿ, ಸಾಹಿತ್ಯಕ ಚರ್ಚೆಯಲ್ಲಾಗಲಿ– ಶ್ರೀಕಂಠಯ್ಯನವರನ್ನು ಮೆಚ್ಚಿಕೊಳ್ಳದಿದ್ದ ವರೇ ಇಲ್ಲ. ಕವಿ ಹೃದಯದ ಅವರಲ್ಲಿ ಪಾಂಡಿತ್ಯ–ರಸಿಕತೆಗಳು ಅಪೂರ್ವವಾಗಿ ಮೇಳವಿಸಿದ್ದವು. ವಿದ್ಯಾರ್ಥಿಗಳಲ್ಲಿ ವಿಷಯದ ಬಗ್ಗೆ ಆಸಕ್ತಿ ಕೆರಳಿಸುವಲ್ಲಿ ಅವರು ನಿಸ್ಸೀಮರು. ಅವರು ಎಂ.ಎ. ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದಾಗ ಆಸಕ್ತಿಯುಳ್ಳ ಇತರ ಪ್ರಾಧ್ಯಾಪಕರು ಎಷ್ಟೋ ಸಲ ಕ್ಲಾಸಿನಲ್ಲಿ ಬಂದು ಕುಳಿತು ಆಲಿಸುತ್ತಿದ್ದುದುಂಟು. ಯಾವೊಂದು ಸಣ್ಣ ವಿಷಯದ ಬಗ್ಗೆ ಸಂಶಯ ಬಂದರೂ ಅದರ ವಿಷಯ ಖಚಿತಪಡಿಸಿಕೊಂಡಲ್ಲದೆ ಎಂದೂ ಹಾರಿಸಿಬಿಡುವವರಲ್ಲ ಶ್ರೀಕಂಠಯ್ಯನವರು. "ಈ ವಿಷಯದ ಬಗ್ಗೆ ಖಚಿತಪಡಿಸಿಕೊಂಡು ನಾಳೆ ಹೇಳುವೆ" ಎಂದು ಹೇಳಲು ಅವರೆಂದೂ ಹಿಂದೆಗೆದವರಲ್ಲ. ಅದರಿಂದಾಗಿಯೇ ಅವರ ತುಂಬು ಪಾಂಡಿತ್ಯ ಖಚಿತಜ್ಞಾನವನ್ನು ಆಧರಿಸಿತ್ತು.

ಸಂಶೋಧಕ ಬುದ್ಧಿ ಮತ್ತು ವಿಮರ್ಶಾತ್ಮಕ ದೃಷ್ಟಿಯುಳ್ಳ ಶ್ರೀಕಂಠಯ್ಯನವರು ತಮ್ಮ ವಿದ್ಯಾರ್ಥಿದೆಸೆಯಿಂದಲೇ ಲೇಖನ ವ್ಯವಸಾಯ ಆರಂಭಿಸಿದ್ದರು. 'ಪ್ರಬುದ್ಧ ಕರ್ಣಾಟಕ'ದಂಥ ಶ್ರೇಷ್ಠ ಪತ್ರಿಕೆಗಳಲ್ಲಿ ಅವರ ಲೇಖನಗಳೂ ಕವಿತೆಗಳೂ ಪ್ರಕಟವಾಗುತ್ತಿದ್ದವು. ಮುಂದೆ ಅವರ ಜ್ಞಾನದ ಆಳ–ಅಗಲಗಳ ವ್ಯಾಪ್ತಿ ವಿಶಾಲಗೊಂಡು ಅವರು ಹತ್ತು ಹನ್ನೆರಡು ಉತ್ತಮ ಗ್ರಂಥ ಗಳನ್ನು ಕನ್ನಡಕ್ಕೆ ನೀಡಿದರು. ಕನ್ನಡ ಇಂಗ್ಲಿಷ್ ಸಂಸ್ಕೃತ ಮೂರರಲ್ಲೂ ಅವರಿಗೆ ಸಮಾನ ಪ್ರಭುತ್ವ. ಅವರು ಕವಿ ಹೃದಯದ ವಿಮರ್ಶಕ, ವಿಮರ್ಶಕ ಹೃದಯದ ಕವಿಯಾಗಿದ್ದರು. ಕನ್ನಡದ ಶ್ರೇಷ್ಠ ವಿಮರ್ಶಗ್ರಂಥಗಳಲ್ಲೊಂದೆಂದು ಗಣಿಸಲ್ಪಟ್ಟಿರುವ 'ಭಾರತೀಯ ಕಾವ್ಯಮೀಮಾಂಸೆ' ಗ್ರಂಥ ಅವರ ಈ ಉಭಯವ್ಯಾಪಿ ಶಕ್ತಿಗೆ ಉದಾಹರಣೆಯಾಗಿದೆ. ಅವರ ಒಂದೇ ಒಂದು ಕವನ ಸಂಗ್ರಹ 'ಒಲುಮೆ' ಕೂಡ ಚೊಕ್ಕ ಚಿನ್ನವಾಗಿದೆ. 'ರನ್ನನ ಗದಾಯುದ್ಧ', ಹರಿಹರನ 'ನಂಬಿಯಣ್ಣನ ರಗಳೆ'ಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಗ್ರಂಥಸಂಪಾದನೆಯ ಆದರ್ಶವನ್ನು ನೀಡಿದರು. ಅವರ 'ಪಂಪ', 'ಕಾವ್ಯಸಮೀಕ್ಷೆ', 'ಸಮಾಲೋಕನ', 'ನಂಟರು' ಮೊದಲಾದ ಗ್ರಂಥಗಳು ಕೂಡ ತಂತಮ್ಮ ವರ್ಗದ ಶ್ರೇಷ್ಠ ಕೃತಿಗಳೇ ಆಗಿವೆ. ಅವರು ಸಾಹಿತ್ಯ 'ರಾಶಿ'ಯನ್ನು ನಿರ್ಮಿಸಲಿಲ್ಲ. ಅದಕ್ಕೆ ಕಾರಣ ಅವರು ಪರಿಪೂರ್ಣತಾವಾದಿಗಳಾಗಿದ್ದರು. ಅರೆಬೆಂದ ಕೃತಿಗಳನ್ನು ಹುಮ್ಮಸ್ಸಿನಲ್ಲಿ ಹೊರತರುವವರು ಅವರಲ್ಲ.

ಶ್ರೀಕಂಠಯ್ಯನವರು ಎಷ್ಟೋ ವಿಷಯಗಳ ಬಗೆಗೆ ಚಿಂತನ ಮಾಡಿ ಸಾಮಗ್ರಿ ಸಂಗ್ರಹಿಸಿ ಗ್ರಂಥ ರಚನೆಗೆ ಪೂರ್ವಸಿದ್ಧತೆ ಮಾಡಿದ್ದರು. ಅವು ಗ್ರಂಥ ರೂಪದಲ್ಲಿ ಹೊರಬಂದಿರದಿದ್ದರೆ ತಮ್ಮ ವಿಷಯಸಂಗ್ರಹ ಇನ್ನೂ ಸಾಲದೆಂದು ಅವರು ಬಗೆದಿದ್ದುದು ಕಾರಣವಾಗಿತ್ತು. ಯಾವೊಂದು ಹೊಸ ವಿಷಯದ ಸಂಬಂಧದಲ್ಲಿ ಅವರ ಸಲಹೆ ಕೇಳಲೋ, ಚರ್ಚಿಸಲೋ ಹೋದವರಿಗೆ ಶ್ರೀಕಂಠಯ್ಯನವರು ಆ ವಿಷಯದ ಬಗೆಗೆ ಆದಾಗಲೇ ಎಷ್ಟೊಂದು ಆಳವಾಗಿ, ಸಮಗ್ರವಾಗಿ ಅಭ್ಯಸಿಸಿರುವರೆಂಬುದನ್ನು ಮನಗಂಡು ಆಶ್ಚರ್ಯವಾಗುತ್ತಿತ್ತು ಎಂದು ಅವರನ್ನು

ಬಲ್ಲ ಅನೇಕರು ಹೇಳುತ್ತಾರೆ. ಸ್ವತಃ ಸಾಹಿತ್ಯನಿರ್ಮಾಣ ಮಾಡಿದ್ದಲ್ಲದೆ ಶ್ರೀಕಂಠಯ್ಯನವರು ಅನೇಕರ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಕರೂ ಆಗಿದ್ದರು. ಅಂಥವರ ಕೃತಿಗಳು ತಮ್ಮ ಓರೆಕೋರೆ ಗಳನ್ನು ತಿದ್ದಿಕೊಂಡು ಉತ್ತಮ ಕೃತಿಗಳಾಗಿ ಹೊರಬರುವಲ್ಲಿ ತುಂಬ ಆಸಕ್ತಿ ವಹಿಸುತ್ತಿದ್ದರು – ಎಂದು ಡಾ. ಕೆ.ಕೃಷ್ಣಮೂರ್ತಿಯವರಂಥ ಸಂಸ್ಕೃತ ಪಂಡಿತರು ತಮ್ಮ ಸ್ವಾನುಭವವನ್ನೇ ವಿವರಿಸುತ್ತ ಹೇಳಿದ್ದುಂಟು.

ಅದೇ ತಾನೇ ಹೊಸದಾಗಿ ಪ್ರಾರಂಭವಾದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕ ಸ್ಥಾನಕ್ಕೆ ತಕ್ಕವರನ್ನು ತರುವ ವಿಚಾರ ಬಂದಾಗ, ಪ್ರತಿಭಾನ್ವಿತ ಪ್ರಾಧ್ಯಾಪಕರೆಂದು ಪ್ರಖ್ಯಾತರಾಗಿದ್ದ ತೀನಂ.ಶ್ರೀ.ಅವರ ಹೆಸರು ಸಹಜವಾಗಿಯೇ ಮುಂದೆ ಬಂದಿತು. ಕರ್ನಾಟಕ ವಿಶ್ವವಿದ್ಯಾಲಯವು ಮೈಸೂರು ವಿಶ್ವವಿದ್ಯಾನಿಲಯದಿಂದ ಶ್ರೀಕಂಠಯ್ಯನವರ ಸೇವೆಯನ್ನು ಎರವಲಾಗಿ ಪಡೆದು ೧೯೫೨ರಲ್ಲಿ ಪ್ರಪ್ರಥಮ ಕನ್ನಡ ಪ್ರಾಧ್ಯಾಪಕರೆಂದು ಅವರನ್ನು ಬರಮಾಡಿ ಕೊಂಡಿತು. ಐದು ವರ್ಷಗಳ ಕಾಲ ಅವರು ಇಲ್ಲಿ ಸೇವೆ ಸಲ್ಲಿಸಿದರು. ಇನ್ನೂ ಹೆಚ್ಚು ಕಾಲ ಅವರ ಪ್ರಯೋಜನವನ್ನು ಪಡೆಯಬಯಸಿದರೂ ಮೈಸೂರು ವಿಶ್ವವಿದ್ಯಾನಿಲಯವು ಕೂಡ ತನಗೆ ಅವರ ಅವಶ್ಯಕತೆಯ ಬಗ್ಗೆ ಒತ್ತಾಯಿಸಿದುದರಿಂದ ೧೯೫೭ರಲ್ಲಿ ಅವರು ಪುನಃ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿದರು.

ತೀ.ನಂ.ಶ್ರೀ ಇಲ್ಲಿಗೆ (ಕರ್ನಾಟಕ ವಿಶ್ವವಿದ್ಯಾಲಯಕ್ಕೆ) ಬಂದ ಪ್ರಾರಂಭದಲ್ಲಿ ಕನ್ನಡ ವಿಭಾಗಕ್ಕೆ ಸೇರಿದ ವಿದ್ಯಾರ್ಥಿಗಳು ಒಬ್ಬರೊ, ಇಬ್ಬರೋ ಮಾತ್ರ. ಆದರೆ ಸಂಖ್ಯೆಗೆ ಅವರೆಂದೂ ಮಹತ್ವ ನೀಡಲಿಲ್ಲ. ಮುಂದೆ ಎರಡು ವರ್ಷಗಳಲ್ಲಿ ನಾಲ್ವರು ವಿದ್ಯಾರ್ಥಿಗಳು (ಅವರಲ್ಲಿ ಮೂವರು ಮೈಸೂರು ವಿಶ್ವವಿದ್ಯಾನಿಲಯದಿಂದ ಬಂದವರು) ಶಿಷ್ಯರಾಗಿ ಸಿಕ್ಕಾಗ ತೀ.ನಂ.ಶ್ರೀ. ಅವರು ಆನಂದವನ್ನೇ ವ್ಯಕ್ತಪಡಿಸಿದರು. ಮುಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಹೆಚ್ಚಾಯಿತು. ಪರೀಕ್ಷೆ ಪಾಸಾದ ಮಾತ್ರಕ್ಕೆ ಹೆಸರಿನ ಮುಂದೆ ಎಂ.ಎ. ಪದವಿ ಹೆಚ್ಚಿಕೊಳ್ಳುವುದರಲ್ಲಿ ತೃಪ್ತಿಪಡದೆ, ಪದವಿಗೆ ತಕ್ಕ ಪ್ರಭುತ್ವ ಸಂಪಾದಿಸಿರುವ ಆತ್ಮ ವಿಶ್ವಾಸ ಬರುವಂತೆ ಪರಿಶ್ರಮ ಮಾಡಿ ವಿಷಯ ಜ್ಞಾನ ಸಂಪಾದಿಸಬೇಕೆಂಬುದು ವಿದ್ಯಾರ್ಥಿಗಳಿಗೆ ಅವರ ನಿರಂತರ ಉಪದೇಶವಾಗಿತ್ತು. ಅವರ ಪಾಂಡಿತ್ಯ, ಅವರ ವ್ಯಕ್ತಿತ್ವ, ಅವರ ಉಪನ್ಯಾಸದ ರೀತಿ– ಸೊಗಸು–ಇವೆಲ್ಲವುಗಳ ಒಟ್ಟು ಪರಿಣಾಮವಾಗಿ ಅವರು ಗುರುಗಳಾಗಿ ದೊರೆತದ್ದು ತಮ್ಮ ಪುಣ್ಯವೆಂಬ ತೃಪ್ತಿಯಿಂದ ವಿದ್ಯಾರ್ಥಿಗಳು ಅವರಲ್ಲಿ ಕಲಿಯುತ್ತಿದ್ದರು. ಬಿಡುವಿನ ದಿನಗಳಲ್ಲಿ ತಮ್ಮ ಮನೆಯಲ್ಲೇ, ತಿಂಡಿ–ತೀರ್ಥದೊಡನೆ, ಪಾಠ ನಡೆಸುತ್ತಿದ್ದರು.

ವಿಶ್ವವಿದ್ಯಾಲಯದ 'ವ್ಯಾಸಂಗ ವಿಸ್ತರಣ ಸಮಿತಿ' ಮತ್ತು 'ಪ್ರಕಟನ ಸಮಿತಿ'ಗಳಲ್ಲಿ ಪ್ರಮುಖ ಸದಸ್ಯರಾಗಿದ್ದು ಕೊಂಡು ಅವುಗಳ ಕಾರ್ಯನಿರ್ವಹಣೆಯಲ್ಲಿ ತೀ.ನಂ.ಶ್ರೀ. ನೆರವಾದರು. ಇದೀಗ ೧೦೦ ಉಪನ್ಯಾಸ ಶಿಬಿರಗಳನ್ನು ಮುಗಿಸಿರುವ ವ್ಯಾಸಂಗ ವಿಸ್ತರಣ ಉಪನ್ಯಾಸ ಮಾಲೆಯ ಪ್ರಥಮ ಶಿಬಿರವು ೧೯೫೨ರ ನವಂಬರ್ ೮ ರಂದು ಗದಗಿನಲ್ಲಿ ಪ್ರಾರಂಭವಾದಾಗ ಅದರ ಪ್ರಥಮ ಉಪನ್ಯಾಸ ('ಕುಮಾರವ್ಯಾಸನ ಭಾರತ') ಮಾಡಿದವರು ಶ್ರೀಕಂಠಯ್ಯನವರು. ಅಲ್ಪಾವಧಿ ಯಲ್ಲಿಯೇ ಅರವತ್ತು ಪುಸ್ತಿಕೆಗಳನ್ನು ಪ್ರಕಟಿಸಿರುವ ಉಪನ್ಯಾಸ ಗ್ರಂಥಮಾಲೆಯು ೧೯೫೪ರಲ್ಲಿ

ಪ್ರಾರಂಭವಾದಾಗ ಅದರ ಪ್ರಧಾನ ಸಂಪಾದಕರಾಗಿಯೂ ಅವರು ಕೆಲಸ ಮಾಡಿದರು. ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ಬರೆಯಿಸಿ ವಿಶ್ವವಿದ್ಯಾಲಯದಿಂದ ಪ್ರಕಟಿಸುವ ಯೋಜನೆಯನ್ನು ಅವರು ಹಾಕಿದ್ದರು.

ಕನ್ನಡಕ್ಕಾಗಲಿ, ಕನ್ನಡ ಪ್ರಾಧ್ಯಾಪಕರಿಗಾಗಲಿ ಗೌರವವಿಲ್ಲದ ಕಾಲವೊಂದಿತ್ತು. ಕನ್ನಡ ಪ್ರಾಧ್ಯಾಪಕರಿಗೆ ಕನ್ನಡವನ್ನು ಬಿಟ್ಟರೆ ಗತಿಯೇ ಇಲ್ಲ ಎನ್ನುವಂತೆ ಸ್ವಲ್ಪ ಉಪೇಕ್ಷಾದೃಷ್ಟಿಯಿಂದಲೇ ನೋಡಲಾಗುತ್ತಿತ್ತು. ತೀ.ನಂ.ಶ್ರೀ. ಅವರು ಕನ್ನಡ ಪ್ರಾಧ್ಯಾಪಕ ಸ್ಥಾನವನ್ನು ಇನ್ನಾವ ಪ್ರಾಧ್ಯಾಪಕ ಸ್ಥಾನಕ್ಕೂ ಸರಿಮಿಗಿಲೆನಿಸುವ ಎತ್ತರಕ್ಕೆ ಏರಿಸಿದರು–ತಮ್ಮ ಬಹುಶ್ರುತ ಪಾಂಡಿತ್ಯದಿಂದ, ತಮ್ಮ ಕಾರ್ಯಗಳಿಂದ. ಯಾವುದೇ ವಿದೇಶೀಯ ಸಾಹಿತಿಗಳು, ವಿಮರ್ಶಕರು ಧಾರವಾಡಕ್ಕೆ ಬಂದಾಗ ಅಧ್ಯಕ್ಷರಾಗಿ ಕಾರ್ಯಕ್ರಮ ನಡೆಸಿಕೊಡಲು ಶ್ರೀಕಂಠಯ್ಯನವರು ಇದ್ದೇ ಇದ್ದರು. ಈ ಕನ್ನಡ ಪ್ರಾಧ್ಯಾಪಕರು ಮೊದಲಿಗರಾಗಿ ವಿದೇಶಕ್ಕೆ ಹೋಗಿಬಂದು ಕನ್ನಡದ ಎಲ್ಲೆಯನ್ನು ವಿಸ್ತರಿಸಿದರು. ರಾಕ್‌ಫೆಲರ್ ಪ್ರತಿಷ್ಠಾನದ ನೆರವಿನಿಂದ ಅಮೆರಿಕದಲ್ಲಿ ಭಾಷಾಶಾಸ್ತ್ರ ವಿಶೇಷಾಭ್ಯಾಸ ಮಾಡಿಬಂದು ಸ್ವದೇಶದಲ್ಲಿ ಭಾಷಾಶಾಸ್ತ್ರಾಧ್ಯಯನಕ್ಕೆ ಅವರು ಹೊಸ ತಳಹದಿ ಹಾಕಿ ಕೊಟ್ಟರು.

ತೀ.ನಂ.ಶ್ರೀ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಂದ ತರುವಾಯ ಭಾಷಾಶಾಸ್ತ್ರದ ಕಡೆಗೆ ಅವರ ಹೆಚ್ಚಿನ ಒಲವು ಹರಿಯಿತು ಭಾರತೀಯ ಲಿಂಗ್ವಿಸ್ಟಿಕ್ ಸೊಸೈಟಿಯ ಕೂಡ ಪ್ರಾರಂಭ ದಿಂದಲೂ ಅವರ ಸಂಬಂಧವಿದ್ದಿತು. ಬಂಗಾಲದ ಡಾ. ಸುನೀತಿ ಕುಮಾರ ಚಟರ್ಜಿ, ಪುಣೆಯ ಡಾ.ಎಸ್.ಎಂ. ಕತ್ರೆ ಅವರೊಂದಿಗೆ ಕರ್ನಾಟಕದ ತೀ.ನಂ.ಶ್ರೀ. ಅವರೂ ಭಾಷಾ–ಶಾಸ್ತ್ರದ ಅಧ್ವರ್ಯುಗಳಾಗಿ ಈ ನಾಡು–ದೇಶಗಳಲ್ಲದೆ ಪರದೇಶಗಳಲ್ಲಿಯೂ ಹೆಸರಾಗಿದ್ದರು. ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಭಾಷಾಶಾಸ್ತ್ರದ ಅಧ್ಯಯನಕ್ಕೆ ಪ್ರಾಮುಖ್ಯ ಬರುವಂತೆ ಕೆಲಸ ಮಾಡಿದ ಮೊದಲಿಗರಲ್ಲಿ ಶ್ರೀಕಂಠಯ್ಯನವರೂ ಒಬ್ಬರು. ಕರ್ನಾಟಕ ವಿಶ್ವವಿದ್ಯಾಲಯ ದಲ್ಲಿಯೂ ಭಾಷಾಶಾಸ್ತ್ರದ ಅಧ್ಯಯನಕ್ಕೆ ಅವಕಾಶ ಮಾಡಿಕೊಡಬೇಕೆಂದು ಶ್ರೀಕಂಠಯ್ಯನವರು ಈಗ ಹತ್ತು ವರ್ಷಗಳ ಪೂರ್ವದಲ್ಲಿಯೇ ಸೂಚಿಸಿದ್ದರು. ಇಂದು ಡಾ. ಆರ್.ಸಿ. ಹಿರೇಮಠ ಅವರ ನೇತೃತ್ವದಲ್ಲಿ ಅದು ಕಾರ್ಯಕಾರಿಯಾಗುತ್ತಿದೆ. ಕನ್ನಡದಲ್ಲಿಯ ಕೆಲವೊಂದು ಆಡುನುಡಿಗಳ ವೈಶಿಷ್ಟ್ಯವನ್ನು ಕಂಡುಕೊಂಡ ತೀ.ನಂ.ಶ್ರೀ ಅವರು ಭಾಷಾಶಾಸ್ತ್ರದ ದೃಷ್ಟಿಯಿಂದ ಅವುಗಳ ಅಭ್ಯಾಸ ಮಾಡಬೇಕೆಂದು ಎಷ್ಟೋ ಸಲ ಹೇಳಿದ್ದರು. ('Morpho-Phonemic Analysis of Kannada Language' ಬಗೆಗೆ ಕಾರ್ಯಕೈಗೊಳ್ಳಲು ಪ್ರಸ್ತುತ ಲೇಖಕನಿಗೆ ಕೇಂದ್ರ ಸರಕಾರದ ಸಂಶೋಧನ ಶಿಷ್ಯ ವೃತ್ತಿಯನ್ನು ತಾವಾಗಿಯೇ ದೊರಕಿಸಿಕೊಟ್ಟಿದ್ದರು.) ಅವರ ಪ್ರೋತ್ಸಾಹದಿಂದಲೇ ಡಾ.ಕೆ.ಜಿ. ಶಾಸ್ತ್ರಿಯವರು 'ಹವ್ಯಕರ ಆಡುನುಡಿ' ಎಂಬ ವಿಷಯದ ಮೇಲೆ ಸಂಶೋಧನ ಪ್ರಬಂಧವನ್ನು ಬರೆದು ಸಾದರಪಡಿಸಿ ಕರ್ನಾಟಕ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿ ಪಡೆದರು. ಡಾ.ಎಚ್.ಪಿ. ನಾಗರಾಜಯ್ಯನವರು ಭಾಷಾವಿಜ್ಞಾನದ ಕುರಿತು ಮಹತ್ವಪೂರ್ಣ ಗ್ರಂಥವನ್ನು ಇತ್ತೀಚೆಗೆ ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನದ ಅಧ್ಯಯನಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿದ ಶ್ರೇಯಸ್ಸು ಶ್ರೀಕಂಠಯ್ಯ ನವರದು. ಪುಣೆ ಮೊದಲುಗೊಂಡು ಅನೇಕ ಕಡೆಗಳಲ್ಲಿ ನಡೆದ ಭಾಷಾಶಾಸ್ತ್ರದ ಅಭ್ಯಾಸ

ಶಿಬಿರಗಳಲ್ಲಿ ಅವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಪಾಠ ಹೇಳಿದ್ದರು. ಭಾಷಾಶಾಸ್ತ್ರದ ವಿಷಯವಾಗಿ ಅನೇಕ ಲೇಖನಗಳನ್ನು ಬರೆದು ದೇಶವಿದೇಶಗಳ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿದ್ದರು. ಈ ವಿಷಯದಲ್ಲಿಯ ತಮ್ಮ ಆಳವಾದ ಪರಿಶ್ರಮವನ್ನು ಗ್ರಂಥರೂಪದಲ್ಲಿ ಕೊಡುವ ಕಾರ್ಯದಲ್ಲಿ ತೊಡಗಿಸಿದ್ದರು. ಡಾ. ಎಮಿನೊ ಮೊದಲಾದ ಪ್ರಖ್ಯಾತವಿದೇಶೀಯ ಭಾಷಾವಿಜ್ಞಾನಿಗಳ ಕೂಡ ಅವರ ಸಂಪರ್ಕವಿದ್ದಿತು. ಈ ವರ್ಷ ಅವರು ಭಾರತೀಯ ಲಿಂಗ್ವಿಸ್ಟಿಕ್ ಸೊಸೈಟಿಯ ಅಧ್ಯಕ್ಷರಾಗಿದ್ದರು. ಅವರ ಪಾಂಡಿತ್ಯದ ಪ್ರಯೋಜನ ಪಡೆಯಲು ದಿಲ್ಲಿ ವಿಶ್ವವಿದ್ಯಾಲಯವು ಯೋಜಿಸಿತ್ತಾದರೂ ಕನ್ನಡ ನಾಡಿನಲ್ಲಿಯೇ ಮಹತ್ವದ ಕಾರ್ಯಭಾರವನ್ನು ಹೊತ್ತ ಅವರು ದಿಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸ್ಥಾನವನ್ನು ಸ್ವೀಕರಿಸಿರಲಿಲ್ಲ.

ಮೈಸೂರು ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತರಾದ ಮೇಲೆ ಅವರು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಂಶೋಧನಾ ನೆರವಿನಿಂದ ತಮ್ಮ ಕಾರ್ಯವನ್ನು ಮುಂದುವರಿಸಿದರು. ಶ್ರೀಕಂಠಯ್ಯನವರ ಅಗಾಧವಾದ ಬಹುಮುಖ ವಿದ್ವತ್ತಿನಿಂದಾಗಿ ಅವರೇ ನಿರ್ವಹಿಸಬಲ್ಲ ಕೆಲವೊಂದು ಕಾರ್ಯಗಳಿದ್ದವು. ಅವುಗಳಲ್ಲಿ ಕನ್ನಡ-ಕನ್ನಡ ನಿಘಂಟಿನ ಕೆಲಸವೂ ಒಂದು. ಮೊದಲಿನಿಂದಲೂ ನಿಘಂಟಿನ ಕಾರ್ಯದಲ್ಲಿ ಆಸಕ್ತಿಯಿಂದ ನಿಕಟ ಸಂಬಂಧವನ್ನಿರಿಸಿಕೊಂಡು ಬಂದ ಅವರು ಅದರ ಕಾರ್ಯದರ್ಶಿಯಾಗಿ, ಸಂಪಾದಕರಾಗಿ ಕೆಲಸಮಾಡಿ ಈಗ ಅದರ ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮುಂದುವರೆಸಿದರು. ಕನ್ನಡದ ಬಹುಮಹತ್ವದ ಕೃತಿಯಾಗಲಿರುವ ನಿಘಂಟು ಸಮಗ್ರವೂ ಅತ್ಯಂತ ನಿರ್ದುಷ್ಟವೂ ಆಗಬೇಕೆಂಬ ಉತ್ಕಟ ಇಚ್ಛೆಯಿಂದ ಶ್ರೀಕಂಠಯ್ಯನವರು ತಮ್ಮ ಜೀವನವನ್ನೇ ಅದಕ್ಕಾಗಿ ಮುಡುಪಿಟ್ಟು ಕೆಲಸಮಾಡುತ್ತಿದ್ದರು.

ತೀ.ನಂ.ಶ್ರೀ. ವಿಷಯವಾಗಿ ಹೇಳುವಾಗ ನೆನಸದೆಯೆ ಬರುವ ಇನ್ನೊಂದು ಹೆಸರು ಬಿ.ಎಂ.ಶ್ರೀ. ನಾವು ಕನ್ನಡತನವನ್ನೇ ಮರೆತು ಮಲಗಿದ್ದಾಗ ಇಂಗ್ಲಿಷ್ ಪ್ರಾಧ್ಯಾಪಕ ಬಿ.ಎಂ. ಶ್ರೀಕಂಠಯ್ಯನವರು ಕನ್ನಡತನದ ದೀಕ್ಷೆಕೊಟ್ಟು ಹೊಸಗನ್ನಡದ ಗೊತ್ತುಗುರಿಗಳನ್ನು ರೂಪಿಸುವ ಕೆಲಸ ಮಾಡಿದರು. ಬಹುಮಟ್ಟಿಗೆ ಅವರಿಂದಾಗಿಯೇ ಕಂದಾಯ ಶಾಖೆಯ ಅಮಲ್ದಾರಿಕೆ ಬಿಟ್ಟುಕೊಟ್ಟು ಕನ್ನಡ ಪ್ರಾಧ್ಯಾಪಕರಾಗಿ ಬಂದ ತೀ.ನಂ.ಶ್ರೀ. ಕಡೆತನಕ ಬಾಳುವ ಕೆಲಸವನ್ನು ಕನ್ನಡಕ್ಕಾಗಿ ಮಾಡಿದರು. ಇದರಿಂದ ಕನ್ನಡದ ಗೌರವ ಹೆಚ್ಚಿತು.

ತೀ.ನಂ.ಶ್ರೀ. ವೈಯಕ್ತಿಕ ಜೀವನ ಶಾಂತ ಸುರಸವಾಗಿತ್ತು. ಪತ್ನಿ, ಮಗಳು ನಾಗರತ್ನ, ಮಗ ನಾಗಭೂಷಣರಿಂದೊಡಗೂಡಿದ ಅವರ ಪುಟ್ಟ ಸಂಸಾರ ಈ ಮೃದುಮಧುರ ಭಾವದ ಸಂಗಮದಂತಿದ್ದಿತು. ಶ್ರೀಕಂಠಯ್ಯನವರು ಯಾರಿಗೂ ಎಂದೂ ಮನನೋಯುವಂತೆ ಆಡಿದವರಲ್ಲ. ಮಾಡಿದವರಲ್ಲ. ಬಹುಶಃ ಆದರ್ಶವಾದಿ ಜೀವನ ದೃಷ್ಟಿ ಮತ್ತು ಅದಕ್ಕೆ ಪೋಷಕವಾದ ಸಾಂಸಾರಿಕ ಸುಖ ಶಾಂತಿ ಇವುಗಳಿಂದಲೇ ತೀ.ನಂ.ಶ್ರೀ ಮರೆಯಲಾರದ ವ್ಯಕ್ತಿತ್ವ ರೂಪುಗೊಂಡಿತ್ತು.

(ಕಸ್ತೂರಿ : ನವೆಂಬರ್ ೧೯೬೬)

ತೀ.ನಂ.ಶ್ರೀ.

ದೇ ಜವರೇಗೌಡ

ಮೊಟ್ಟಮೊದಲಸಾರಿ ತೀ.ನಂ.ಶ್ರೀ ಅವರನ್ನು ನಾನು ಕಂಡದ್ದು ಮಹಾರಾಜ ಕಾಲೇಜಿನ ಪುಸ್ತಕ ಭಂಡಾರದ ಬಳಿಯ ಹಜಾರದಲ್ಲಿ. ಅವರು ತೆಂಕಣ ಬಾಗಿಲ ಕಡೆಯಿಂದ ಬಡಗಣ ಕಡೆಗೆ ಬರುತ್ತಿದ್ದರು. ಮೊದಲು ಅವರನ್ನು ಫೋಟೋ ರೂಪದಲ್ಲಿಯೂ ಕಂಡಿರಲಿಲ್ಲ. ಅವರನ್ನು ಕಂಡುದೆ ತಡ ನಿರ್ವ್ಯಾಜ ಭಕ್ತಿ ಗೌರವಗಳು ಮೂಡಿ ಮನಸ್ಸಿನಲ್ಲಿಯೆ ಸಾಷ್ಟಾಂಗ ಪ್ರಣಾಮವನ್ನರ್ಪಿಸಿದೆ. ಯಾರೋ ಹತ್ತಿರ ಇದ್ದವರು ಇವರೇ ತೀ.ನಂ.ಶ್ರೀ ಎಂದರು. ಆ ಹೆಸರನ್ನು ಕೇಳುತ್ತಿದ್ದಂತೆ ಮನಸ್ಸಿನಲ್ಲಿ ಹರ್ಷ ತುಂಬಿತುಳುಕಿತು. ಅದೆ ತಾನೆ ಇಸ್ತ್ರಿಮಾಡಿಸಿ ಸೋರೆಯ ಹೂವಿನಂತೆ ಮಿರುಗುತ್ತಿದ್ದ ಮೈಸೂರು ಪೇಟ, ಸ್ಫಟಿಕ ನಿರ್ಮಲವಾದ ಕಚ್ಚೆಪಂಚೆ, ಕಾಲಿಗೆ ತೆಳ್ಳನೆಯ ಜೋಡು; ಸರಳವೂ ಸುನಿರ್ಮಲವೂ ಆದ ಉಡುಗೆ ತೊಡಿಗೆಯ, ದುಂಡು ಮೊಗದ, ಕನ್ನಡಕದ ಮೂಲಕ ತೂರಿ ಬರುತ್ತಿದ್ದ ಸೂಕ್ಷ್ಮ ದೃಷ್ಟಿಯ ಆ ರಸಿಕ ಮೂರ್ತಿಯನ್ನು ನೋಡಿದಾಗ ಯಾರಿಗೆ ತಾನೆ ಗೌರವ ಮೂಡದು? ಅವರ ಆ ನಿರ್ಮಲವಾದ ನೋಟದಲ್ಲಿ ಅಪಾರ ಪಾಂಡಿತ್ಯದೊಡಗೂಡಿದ ವಿನಯ ಸೌಜನ್ಯಗಳೂ, ಅವರ ಗಂಭೀರವಾದ ನಡೆಯಲ್ಲಿ ಅಹಂಭಾವ ಶೂನ್ಯತೆಯೂ, ಒಟ್ಟಿನ ಆ ವ್ಯಕ್ತಿಯಲ್ಲಿ ಹಿರಿಯ ಸಂಸ್ಕೃತಿಯೂ ವ್ಯಕ್ತವಾಗುತ್ತಿದ್ದುವು. ವ್ಯಕ್ತಿಯ ಹೊರಗು ಒಳಗಿನ ಪ್ರತಿಬಿಂಬ ತಾನೆ!

ಜುಲೈ ತಿಂಗಳ ಪ್ರಾರಂಭದಲ್ಲಿ ಪಾಠ ಪ್ರಾರಂಭವಾದುವು. ನಮ್ಮ ತರಗತಿಯಲ್ಲಿ ಇದ್ದುದು ಇಬ್ಬರೇ ವಿದ್ಯಾರ್ಥಿಗಳು, ನಾನೂ ಸೇರಿ. ಕನ್ನಡ ಎಂದರೆ ಯಾರಿಗೂ ಆಗದ ಆ ಕಾಲದಲ್ಲಿ ಆ ಸಂಖ್ಯೆಯೇ ಹೆಚ್ಚು. ನಮ್ಮಿಬ್ಬರಿಗೇ ಪಾಠ! ಅದೊಂದು ಹೊಸ ಅನುಭವ! ಅದೂ ಇರಲಿ, ಬೋಧನ ವಿಧಾನವೂ ಹೊಸದಾಗಿ ಕಂಡಿತು. ಕನ್ನಡದಲ್ಲಿಯೂ ಕಲಿಯುವುದಿದೆ, ಕನ್ನಡ ಕಲಿಯಲೂ ಗುರುವಿನ ನೆರವು ಬೇಕೆಂಬ ಅನುಭವ ನಮ್ಮ ಜೀವನದಲ್ಲಿ ಮೊದಲಸಾರಿ ಆಗ ಹೊಳೆಯಿತು! ತೀ.ನಂ.ಶ್ರೀ. ಅವರು ನಮಗೆ ದ್ರೋಣಪರ್ವವನ್ನಾರಂಭಿಸಿದರು. ಅನಂತರ ಮುಂದಿನ ತರಗತಿಗಳಲ್ಲಿ ಶಬ್ದಮಣಿದರ್ಪಣ, ಛಂದಸ್ಸು, ಅಲಂಕಾರಗಳನ್ನು ಹೇಳಿಕೊಟ್ಟರು. ದ್ರೋಣಪರ್ವವೇನೊ ಕಾವ್ಯ; ಅದರ ಬೋಧನೆ ಆಕರ್ಷಕವಾಗುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ವ್ಯಾಕರಣ ಛಂದಸ್ಸುಗಳನ್ನು ಸಹ ವಿದ್ಯಾರ್ಥಿಗಳು ಮೈಮರೆಯುವಷ್ಟು ಆಕರ್ಷಕವಾಗಿ ಹೇಳುತ್ತಿದ್ದರು. ಒಂದು ದಿನವಾಗಲಿ ಬೇಸರಗೊಂಡ, ಆಯಾಸಗೊಂಡ, ಮೈಮುರಿದ, ಆಕಳಿಸಿದ, ಆಕಡೆ ಈ ಕಡೆ ಕಣ್ಣು ಹೊರಳಿಸಿದ ನೆನಪಿಲ್ಲ. ಸಾಮತಿಗಳ ಮೂಲಕ, ದೃಷ್ಟಾಂತಗಳ

ಮೂಲಕ ರೂಪಕಗಳ ಮೂಲಕ ವ್ಯಾಕರಣ ಸೂತ್ರಗಳನ್ನು ಬಿಡಿಸಿ ಬಿಡಿಸಿ ವಿವರಿಸುತ್ತಿದ್ದರು. ಯಾವುದಾದರೂ ಜಟಿಲ ಸಮಸ್ಯೆ ಕಣೆಗೆದರಿ ಪ್ರತಿಭಟಿಸಿತೆಂದರೆ ಅದನ್ನು ಕೊನೆಯತನಕ ಎದುರಿಸುವ ಸಾಧಿಸುವ ಅವರ ಸಹನೆ ಸೂಕ್ಷ್ಮಗ್ರಹಣಶಕ್ತಿ ವಿಚಿಕಿತ್ಸಕ ದೃಷ್ಟಿ ಆದರ್ಶಪ್ರಾಯ ವಾದುವು. ಸಮಸ್ಯೆ ಅಪರಿಹಾರ್ಯವಾಗಿ ಕಂಡುಬಂದರೆ "ಅದು ನನಗೆ ಅರ್ಥವಾಗಿಲ್ಲ, ಇನ್ನೂ ಯೋಚಿಸುತ್ತೇನೆ. ಅರ್ಥವಾದ ಕೂಡಲೆ ತಿಳಿಸುತ್ತೇನೆ; ಈ ನಡುವೆ ನೀವೂ ಯೋಚಿಸಿ; ನಿಮಗೆ ಅರ್ಥವಾದರೆ ನನಗೆ ತಿಳಿಸಿ" ಎಂದು ಮುಚ್ಚುಮರೆಯಿಲ್ಲದೆ ಹೇಳಿ ಬಿಡುತ್ತಿದ್ದರು. ಇದರಿಂದ ಅವರ ಸತ್ಯನಿಷ್ಠೆ ಮತ್ತು ಬೌದ್ಧಿಕ ಪ್ರಾಮಾಣಿಕತೆಗಳು ವ್ಯಕ್ತವಾಗುತ್ತವೆ. ಕಾವ್ಯಮೀಮಾಂಸೆ ಯನ್ನು, ಅದರಲ್ಲಿಯೂ ರಸ ಮತ್ತು ಧ್ವನಿ ಪ್ರಕರಣಗಳನ್ನು ಅವರ ಬಾಯಿಂದ ಕೇಳಿ ಆನಂದಿಸಬೇಕು. ಇನ್ನೂರು–ಇನ್ನೂರೈವತ್ತು ವಿದ್ಯಾರ್ಥಿಗಳಿದ್ದ ದೊಡ್ಡ ತರಗತಿಯಲ್ಲಿ ಶಾಕುಂತಳ ನಾಟಕವನ್ನು ಹೇಳುತ್ತಿದ್ದಾಗ ಸೂಜಿ ಬಿದ್ದರೂ ಕೇಳಿಸುವಷ್ಟು ಮೌನ ತಾಂಡವವಾಡುತ್ತಿತ್ತು. ಇಡೀ ತರಗತಿ ರಸ ಸಮಾಧಿಯಲ್ಲಿ ಮುಳುಗಿದ್ದಂತೆ ಭಾಸವಾಗುತ್ತಿತ್ತು. ಅವರ ಸಹಾನುಭೂತಿಯೆ ಮಾತಿನ ಮುತ್ತಾಗಿ ಹರಿಯುತ್ತಿದ್ದಂತೆ ಗೋಚರಿಸುತ್ತಿತ್ತು.

ವರ್ಷದ ಕೊನೆಕೊನೆಗೆ ಪಾಠ ಮುಗಿಯದಿದ್ದರೆ ಸ್ಪೆಷಲ್ ಕ್ಲಾಸ್ ತೆಗೆದುಕೊಳ್ಳುವುದುಂಟಷ್ಟೆ. ಸ್ಪೆಷಲ್ ಕ್ಲಾಸಿನ ವಿಷಯ ಬಂದಾಗ ಹಿಂದು ಮುಂದೆ ಆಲೋಚಿಸದೆ ಮನೆಯಲ್ಲಿಯೆ ತೆಗೆದುಕೊಳ್ಳಿ ಎಂದು ಬಿಡುತ್ತಿದ್ದೆವು. ಕಾರಣ ನಮಗಂತು ಸ್ಪಷ್ಟಗೋಚರವಾಗಿತ್ತು. ಅವರ ಮನೆಗೆ ಹೋದರೆ ಎಂದೂ ನಾಲಗೆಯನ್ನು ತೃಪ್ತಿಪಡಿಸದೆ ಬರಿಯ ಹೊಟ್ಟೆಯಲ್ಲಿ ಬರುತ್ತಿರಲಿಲ್ಲ. ಫೆಬ್ರವರಿ ತಿಂಗಳಲ್ಲಿ ಬಿಸಿಲೇರುತ್ತಿದ್ದ ಕಾಲವೆ ಸ್ಪೆಷಲ್ ತರಗತಿಗಳ ಕಾಲ. ಹೊರಗಣ ಮತ್ತು ಒಳಗಣ ಸಿಪ್ಪೆಯನ್ನು ಬಿಡಿಸಿದ ಕಿತ್ತಳೆತೊಳೆ ನಮಗಾಗಿ ಕಾದಿರುತ್ತಿತ್ತು. ಆಮೇಲೆ ದೋಸೆಯ ಉಪಾಹಾರ; ನಡುನಡುವೆ ಮಾತು; ಕೊನೆಗೆ ಪಾಠ. ಒಂದಕ್ಕಿಂತ ಮತ್ತೊಂದು ರುಚಿಕರವಾಗಿ ರುತ್ತಿತ್ತು. "ಹತ್ತಿರ ಇಲ್ಲಿ ಬನ್ನಿ; ಕುಳಿತುಕೊಳ್ಳಿ; ತೆಗೆದುಕೊಳ್ಳಿ – ಸಂಕೋಚವೇಕೆ?" ಎಂದವರು ಹೇಳುತ್ತಿದ್ದುದನ್ನು ಈಗ ನೆನೆದರೆ 'ಬೆರಳ್‌ಗೆ ಕೊರಳ್' ನಾಟಕದ ದ್ರೋಣಾಚಾರ್ಯರ ಚಿತ್ರ ಕಣ್ಮುಂದೆ ಕಟ್ಟುತ್ತದೆ.

*

ವಾಗ್ವೈಖರಿ ಅವರ ಸಾಮರ್ಥ್ಯ ವಿಶೇಷಗಳಲ್ಲೊಂದು. ವೇದಿಕೆಯ ಮೇಲೆ ನಿಂತು, ತಮ್ಮ ಬಟ್ಟಗಣ್ಣುಗಳನ್ನೊಮ್ಮೆ ಸುತ್ತ ಸುಳಿಸಿದ ಕೂಡಲೇ ಸಭಿಕರು ಮುಗ್ಧರಾಗುತ್ತಿದ್ದರು; ಅವರ ಬಾಯಿಂದ ಮಾತಿನ ಲಹರಿ ಹರಿಯಿತೆಂದರೆ, ಅದರಲ್ಲಿ ಮುಳುಗಿ ಹೋಗುತ್ತಿದ್ದರು. ಅವರ ಒಂದೊಂದು ಮಾತೂ ಆಣಿಮುತ್ತು. ನಡುನಡುವೆ ಆ್ಞ ಹ್ಞೂ ಮತ್ತೆ ಅದು ಇದು ಮೊದಲಾದ ಯಾವ ತರಹದ ಅಡ್ಡನುಡಿಗಳು ಅಪ್ಪಿತಪ್ಪಿಯೂ ನುಸುಳುತ್ತಿರಲಿಲ್ಲ. ಭಾವಗಳ ಏರಿಳಿತಕ್ಕೆ ತಕ್ಕಂತೆ ಮಾತಿನ ಗತಿ, ಆಲೋಚನೆಗೆ ತಕ್ಕಂತೆ ಪದ–ಪದಪುಂಜಗಳ ಪ್ರಯೋಗ, ಕನ್ನಡ–ಸಂಸ್ಕೃತ ಪದಗಳ ಮೃದು ಮಧುರ ಸಂಯೋಗ ಮತ್ತು ಆ ಪದಗಳ ಅಸ್ಖಲಿತವಾದ ಸ್ಪಷ್ಟೋಚ್ಚಾರಣೆ, ಒಟ್ಟಿನಲ್ಲಿ ಅವರ ಭಾಷಣದುದ್ದಕ್ಕೂ ಛಂದೋವಿನ್ಯಾಸದ ಲಯ ಮಾಧುರ್ಯ

ಎದ್ದು ಕಾಣುತ್ತಿದ್ದವು. ವಿಷಯವನ್ನು ಮೊದಲೇ ಆಲೋಚಿಸಿ, ವಿಭಜಿಸಿ, ವಿಂಗಡಿಸಿಕೊಂಡಿದ್ದು, ಯಾವುದು ಹೇಳಬೇಕು ಯಾವುದು ಬಿಡಬೇಕು, ಯಾವುದನ್ನು ಲಂಬಿಸಬೇಕೆಂಬುದನ್ನು ನಿರ್ಣಯಿಸಿಕೊಂಡು ಬರುತ್ತಿದ್ದಂತೆ ತೋರುತ್ತಿತ್ತು, ಅವರ ಭಾಷಣದ ವೈಖರಿ. ಆದರೆ ಯಾವಾಗಲೂ ಪೂರ್ವಸಿದ್ಧತೆ ಮಾಡಿಕೊಂಡೇ ಬರುತ್ತಿದ್ದರೆಂದು ಹೇಳುವಂತಿಲ್ಲ. ಏನೇ ಆಗಲಿ ವೇದಿಕೆಯಮೇಲೆ ನಿಂತು ಯೋಚಿಸುತ್ತಿರಲಿಲ್ಲ. ಮರೆತುದನ್ನು ನೆನೆಸಿಕೊಳ್ಳುತ್ತಿದ್ದಾಗ ಅವರ ಹುಡುಕು ನೋಟದ ಭಂಗಿಯನ್ನು ನೋಡುವುದೊಂದು ಚೆಂದ; ಹಾಸ್ಯದ ಸನ್ನಿವೇಶವನ್ನು ವಿವರಿಸುತ್ತಿದ್ದಾಗ ಎರಡು ಕಣ್ಣುಗಳನ್ನು ಮುಚ್ಚಿಕೊಂಡು, ತಲೆಯನ್ನೊಲೆಯುತ್ತ, ಬಾಯಿ ತುಂಬ ನಗುತ್ತಿದ್ದ ಚಿತ್ರವನ್ನು ನೋಡಿ ಅನುಭವಿಸುವುದೊಂದು ಅಂದ.

ತೀನಂಶ್ರೀಯವರು ಹುಟ್ಟು ಬೋಧಕರು. ಇಬ್ಬರು ಮೂವರ ಸಣ್ಣ ತರಗತಿಯಾಗಲಿ. ನೂರು–ನೂರಿಪ್ಪತ್ತು ವಿದ್ಯಾರ್ಥಿಗಳ ದೊಡ್ಡ ತರಗತಿಯಾಗಲೀ, ಅರವತ್ತು ನಿಮಿಷ ಸ್ವಾರಸ್ಯವಾಗಿ ವಿದ್ಯಾರ್ಥಿಗಳಿಗೆ ಬೇಸರವಾಗದಂತೆ ಪಾಠ ಬೋಧಿಸುತ್ತಿದ್ದರು. ಸಣ್ಣ ತರಗತಿಯಲ್ಲಿ ಕುಳಿತು ಕೊಂಡು, ದೊಡ್ಡ ತರಗತಿಯಲ್ಲಿ ನಿಂತುಕೊಂಡು ಪಾಠ ಹೇಳುತ್ತಿದ್ದರು. ಮೂಲಕವಿಯ ಮರ್ಜಿಯನ್ನರಿತು, ಪದಪ್ರಯೋಗಗಳನ್ನು ವಿವರಿಸುವುದರಲ್ಲಿ, ರಸಧ್ವನಿಗಳನ್ನು ಕೇಳುಗರ ಮನವೊಗುವಂತೆ ನಿರೂಪಿಸುವುದರಲ್ಲಿ ಅವರು ಗಟ್ಟಿಗರು. ನಾಲ್ಕುದಿನ ನಿದ್ದೆಗೆಟ್ಟಿದ್ದರೂ ಅವರ ತರಗತಿಯಲ್ಲಿ ತೂಕಡಿಸುತ್ತಿರಲಿಲ್ಲ; ದೇಹ ಬಳಲಿದ್ದರೂ ಆಕಳಿಕೆ ಸುಳಿಯುತ್ತಿರಲಿಲ್ಲ. ಒಂದು ಗಂಟೆ ಕೆಲವು ನಿಮಿಷಗಳಂತೆ ಕಳೆಯುತ್ತಿತ್ತು. ಅವರ ಉಪನ್ಯಾಸವನ್ನು ಕೇಳುವಾಗ ಬಾಹ್ಯಪ್ರಪಂಚ ಮರೆತುಹೋಗುತ್ತಿತ್ತು. ಕನ್ನಡದ ತರಗತಿಯಲ್ಲಿ ಅವರ ಪಾಠ ಕೇಳಲು ಸಂಸ್ಕೃತ ಇಂಗ್ಲಿಷ್ ಮೊದಲಾದ ವಿಷಯಗಳ ವಿದ್ಯಾರ್ಥಿಗಳೂ ತಮ್ಮ ಪಾಠಗಳಿಗೆ ಚಕ್ಕರ್ ಹೊಡೆದು ಬರುತ್ತಿದ್ದರು. ವಿದ್ಯಾರ್ಥಿಗಳಿರಲಿ, ಹಿರಿಯ ಪ್ರಾಧ್ಯಾಪಕರೂ ಅವರ ಉಪನ್ಯಾಸವನ್ನು ಕದ್ದು ಕೇಳುತ್ತಿದ್ದುದುಂಟು. "ತೀ.ನಂ.ಶ್ರೀ.ಯವರ ಪಾಠ ನಡೆಯುತ್ತಿದ್ದ ರೂಮಿನ ಬಳಿ ಹೋಗುತ್ತಿದ್ದರೆ ಹೆಜ್ಜೆ ಕುಂಟುತ್ತದೆ, ಕಿವಿ ನೆಟ್ಟಗಾಗುತ್ತದೆ, ಆನಂದ ಉಕ್ಕುತ್ತದೆ" ಎಂದು ಡಾ.ಎಂ.ಎಚ್. ಕೃಷ್ಣ ಅವರು ಆಗಾಗ್ಗೆ ಅವರ ಉಪನ್ಯಾಸದ ಸವಿಯನ್ನು ನೆನೆಸಿಕೊಳ್ಳುತ್ತಿದ್ದರು.

ಯಾವುದಾದರೂ ಸಮಸ್ಯೆ ತಲೆದೋರಿದಾಗ ಅವರ ಮತಿ ಚುರುಕಾಗುತ್ತಿತ್ತು. ತಟ್ಟನೆ ಅವರು ಪರಿಹಾರ ಸೂಚಿಸುತ್ತಿದ್ದರು. 'ಕರ್ಣಾಟಕ'ದ ಶಬ್ದ ಸ್ವರೂಪ ಮತ್ತು ನಿಷ್ಪತ್ತಿಯ (ಇಪ್ಪತ್ತೈದು ವರ್ಷಗಳ ಹಿಂದೆ) ಬಗೆಗೆ ಸಾಕಷ್ಟು ಚರ್ಚೆ ನಡೆದು ವಿದ್ವಾಂಸರೆಲ್ಲ ತಲೆ ಕೆಡಿಸಿ ಕೊಂಡಿದ್ದರು. ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಆ ವಿಷಯ ಚರ್ಚೆಯಾಗಿ, ಬಿ.ಎಂ.ಶ್ರೀ., ವೆಂಕಣ್ಣಯ್ಯ ಮೊದಲಾದ ಧೀಮಂತರು ಸಹ ನಿರ್ಧಾರಕ್ಕೆ ಬರದಿದ್ದಾಗ, ತೀ.ನಂ.ಶ್ರೀ. ಅವರು 'ಕರ್ಣಾಟಕ' ಮತ್ತು 'ಕರ್ನಾಟಕ' ಎರಡು ಪದಗಳ ಸಾಧುತ್ವವನ್ನು ಕುರಿತು ಚರ್ಚಿಸಿ, ಅವೆರಡರ ಬಗ್ಗೆ ಒಮ್ಮತಾಭಿಪ್ರಾಯವಿಲ್ಲದ್ದರಿಂದ, ಅದಕ್ಕೆ ಬದಲಾಗಿ 'ಕನ್ನಡ' ಎಂಬ ಪದವನ್ನೇಕೆ ಬಳಸಬಾರ ದೆಂದು ಸಲಹೆಮಾಡಿದರು. ಅವರ ವಾದ ಸರ್ವಸಮ್ಮತಿಯನ್ನು ಪಡೆಯಿತು. ಅಂದಿನಿಂದ "ಕನ್ನಡ ಸಾಹಿತ್ಯ ಪರಿಷತ್ತು" ಎಂಬ ಹೆಸರು ಆ ಸಂಸ್ಥೆಗೆ ಉಳಿದು ಬಂದಿದೆ.

ತೀ.ನಂ.ಶ್ರೀ.ಯವರ ಜೊತೆಯಲ್ಲಿ ಹುಟ್ಟಿದವರು ಅವರ ತಂಗಿಯೊಬ್ಬರೇ. ತಮ್ಮ ತಂಗಿಗಾಗಿ ಅವರು ಸಾಕಷ್ಟು ತ್ಯಾಗಮಾಡಿದ್ದಾರೆ; ತಮ್ಮ ಪ್ರೀತಿಯ ಕುರುಹಾಗಿ 'ದಂತದ ಬಾಚಣಿಗೆ' ಎಂಬ ಕವನವನ್ನು ರಚಿಸಿದ್ದಾರೆ. ತಾಯಿಯಿಲ್ಲದ ಆ ತಂಗಿಯನ್ನು ವೈಭವಪೂರ್ಣವಾಗಿ ಮದುವೆ ಮಾಡಿಕೊಟ್ಟರು. ಸಂಸಾರದ ಸುಖವನ್ನನುಭವಿಸುವ ಭಾಗ್ಯವನ್ನು ಆ ತಂಗಿ ಪಡೆದು ಬಂದಿರಲಿಲ್ಲ. ಚೊಚ್ಚಲ ಮಗು ಜನಿಸಿದ್ದೇ ತಡ ಅವರ ದೈಹಿಕ ಮಾನಸಿಕ ಆರೋಗ್ಯ ಕೆಟ್ಟಿತು. ರೋಗಪೀಡಿತವಾದ ಮಗುವನ್ನು ತಾಯಿಯೊಡನೆ ಮೈಸೂರಿಗೆ ಕರೆದುತಂದು ತೀ.ನಂ.ಶ್ರೀ. ಶಕ್ತಿಮೀರಿ ಉಪಚರಿಸಿದರು; ವೈದ್ಯಮಾಡಿಸಿದರು. ಮಗು ಉಳಿಯಲಿಲ್ಲ. ಅದೇ ಸರಿ, ತಾಯಿಗೆ ಬುದ್ಧಿ ಕೆಟ್ಟಿತು. ಕೇಳಿದಲ್ಲೆಲ್ಲ ಕಂಡಲ್ಲೆಲ್ಲ ಚಿಕಿತ್ಸೆ ಮಾಡಿಸಿದರು. ಎಂಥ ಚಿಕಿತ್ಸೆಗೂ ಆ ರೋಗ ಗುಣವಾಗಲಿಲ್ಲ. ಅದು ಅವರ ಬದುಕಿನ ಶಾಶ್ವತಾಂಶವಾಗಿ ಉಳಿಯುತ್ತದೆಂದು ಮನಗಂಡಾಗ ಅಣ್ಣನಿಗಾದ ಸಂಕಟ ಹೇಳತೀರದು.

ಆದರೂ ತಮ್ಮ ಸ್ವಭಾವಕ್ಕನುಗುಣವಾಗಿ ಅವರು ಆ ಸಂಕಟವನ್ನೆಲ್ಲ ನುಂಗಿಕೊಂಡು ತಂಗಿಯನ್ನು ಸಾಕಿದರು. ತಂಗಿಯ ರಕ್ಷಣೆಯ ಭಾರವನ್ನು ತಾವೇ ಸಂಪೂರ್ಣವಾಗಿ ವಹಿಸಿ ಕೊಂಡರು.

ತೀನಂಶ್ರೀಯವರು ನಿರ್ವ್ಯಾಜ ಸ್ನೇಹಕ್ಕೆ ಹೆಸರಾಗಿರುವಂತೆ ಉದಾರ ರೀತಿಯ ಬಾಂಧವ್ಯಕ್ಕೂ ಹೆಸರಾಗಿದ್ದಾರೆ. ತಮ್ಮ ತಂದೆಯ ಆಸ್ತಿಗೆ ಅವರೊಬ್ಬರೇ ಹಕ್ಕುದಾರರಾಗಿದ್ದರೂ, ಉಂಡೆಭಾಗ ಅವರಿಗೆ ಸಿಗುವಂತಿದ್ದರೂ, ಅದರ ಬಹ್ವಂಶವನ್ನು ತಮ್ಮ ದೊಡ್ಡಪ್ಪನವರ ಮಕ್ಕಳಿಗೆ ಬಿಟ್ಟುಕೊಟ್ಟು, ಸ್ವಲ್ಪದರಲ್ಲಿಯೇ ತೃಪ್ತರಾದರು. ತಮ್ಮ ಆಸ್ತಿಯಲ್ಲೊಂದು ಪಾಲನ್ನು ತಮ್ಮ ತಂಗಿಯ ಹೆಸರಿಗೆ ಬರೆದುಕೊಟ್ಟರು.

*

ಅವರು ವಾತ್ಸಲ್ಯದ ತಂದೆಯಾಗಿದ್ದಂತೆ, ಉದಾರ ಹೃದಯದ ಬಂಧುವಾಗಿದ್ದಂತೆ ನಿಶ್ಚಲಪ್ರೀತಿಯ ಪತಿಯೂ ಆಗಿದ್ದರು. ಅವರ ಮನೆಯಲ್ಲಿ ಆಗಾಗ್ಗೆ ಭೋಜನಕೂಟ ಉಪಾಹಾರ ಕೂಟಗಳು ನಡೆಯುತ್ತಿದ್ದುವಷ್ಟೆ. ಆ ಸಂದರ್ಭದಲ್ಲಿ "ಏನು ಸಾರ್, ಆಗಾಗ್ಗೆ ಇಂಥ ಕೂಟಗಳನ್ನು ನಡೆಸುತ್ತಿದ್ದರೆ ಮನೆಯವರಿಗೆ ತೊಂದರೆಯಾಗುವುದಿಲ್ಲವೇ?" ಎಂದು ಕೇಳಿದಾಗ "ಏನೂ ತೊಂದರೆಯಿಲ್ಲ; ಬಂಧುಮಿತ್ರರು ಮನೆಗೆ ಬರುತ್ತಾರೆಂದರೆ ಅವರಿಗೆ ತುಂಬ ಹಿಗ್ಗು" ಎಂದು ತುಂಬ ಹೆಮ್ಮೆಯಿಂದ ನುಡಿಯುತ್ತಿದ್ದರು. ಅವರ ಪತ್ನಿನಿಷ್ಠೆಯನ್ನು ಪ್ರಕಟಗೊಳಿಸುವ ಸಂಗತಿ ಯೊಂದನ್ನು ಸುಜನಾ ಅವರು ಆಗಾಗ್ಗೆ ಹೇಳುತ್ತಿರುತ್ತಾರೆ. ಆ ಸಂಗತಿಯನ್ನು ತೀ.ನಂ.ಶ್ರೀ. ಅವರೇ ತಿಳಿಸಿದ್ದರಂತೆ:

ಬೆಂಗಳೂರಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರಾಗಿದ್ದಾಗ ಒಮ್ಮೆ ಸಂಜೆ ಕಾಲೇಜಿನಿಂದ ಚಾಮರಾಜ ಪೇಟೆಯಲ್ಲಿದ್ದ ತಮ್ಮ ಮನೆಗೆ ಬರುತ್ತಿದ್ದರು. ಮನೆಗೆ ಹತ್ತಿರವಾದಾಗ ತಮ್ಮ ಹೆಂಡತಿ ಅಂಗಡಿಗೆ ಹೋಗುವ ಸಲುವಾಗಿಯೊ ಏನೊ ಎದುರಾಗಿ ಬರುತ್ತಿದ್ದರು. ಅವರು ಪಕ್ಕಕ್ಕೆ ಬಂದಾಗಲೂ ಆಕಡೆ ನೋಡದೆ, ಸೀರೆಯಷ್ಟನ್ನೇ ಕಂಡು ಯಾರೋ ಹೆಂಗಸರಿರಬಹುದೆಂದು ದೂರ ಸರಿದು

ಹೊರಟೇ ಹೋದರು. ಅನಂತರ ಅವರ ಪತ್ನಿಯವರು ಮನೆಗೆ ಬಂದು 'ನಿಮಗೆ ನನ್ನ ಗುರುತು ಸಿಗುವುದಿಲ್ಲವೆ ದಾರಿಯಲ್ಲಿ ಹೋಗುವಾಗ' ಎಂದು ಹಾಸ್ಯಮಾಡಿದರಂತೆ. ಅನ್ಯಸ್ತ್ರೀಯರ ಬಗ್ಗೆ ಅವರಿಗಿದ್ದ ಮನೋಭಾವ ಈ ಸಂಗತಿಯಿಂದ ಗೊತ್ತಾಗುತ್ತದೆ.

ಹೀಗೆಯೇ ಅವರ ಶಿಷ್ಯಪ್ರೇಮ ಅಪಾರವಾದದ್ದು, ಸ್ವಾರ್ಥರಹಿತವಾದದ್ದು. ಅವರು ಯಾವ ಕೋಮಿನವರೇ ಆಗಲೀ ಪ್ರೀತಿಯಿಂದ ಕಾಣುತ್ತಿದ್ದರು, ನಿರ್ವಂಚನೆಯಿಂದ ಪಾಠ ಹೇಳಿಕೊಡುತ್ತಿದ್ದರು. ಎಂಥ ವೇಳೆಯಲ್ಲಾದರೂ ಅವರ ಬಳಿ ಹೋಗಿ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಬಹುದಿತ್ತು. ತಮ್ಮ ಶಿಷ್ಯರ ಅಭ್ಯುದಯವನ್ನು ನೋಡಿ ಸಂತೋಷಪಡುತ್ತಿದ್ದರು. ಕೊನೆಗೆ ತಮ್ಮ ಸ್ಥಾನವನ್ನು ಶಿಷ್ಯರಿಗೆ ಬಿಟ್ಟು ಕೊಡುವಾಗಲೂ ಅವರ ಮುಖ ಪ್ರಸನ್ನತೆಯಿಂದ ಮಿನುಗುತ್ತಿತ್ತು. ಅಂಥ ಸಂದರ್ಭದಲ್ಲಿಯೂ ಅತ್ಯದ್ಭುತ ಸಂಯಮ ಸಂತೋಷದಿಂದ ನಡೆದು ಕೊಂಡ ತೀ.ನಂ.ಶ್ರೀ ಅವರನ್ನು ಎಂದೆಂದಿಗೂ ಮರೆಯಲಾಗದು.

೧೯೬೦ರ ಮಾರ್ಚಿ ಮೂವತ್ತೊಂದರಂದು ಅವರು ತಮ್ಮ ಸ್ಥಾನವನ್ನು ತಮ್ಮ ಶಿಷ್ಯನಿಗೊಪ್ಪಿಸಿ ಕೊಡಬೇಕಾಗಿತ್ತು. ಆ ದಿನ ಅವರು ಎಂದಿಗಿಂತ ಮುಂಚೆಯೇ ಇಲಾಖೆಗೆ ಬಂದರು. ಕಾಗದ ಪತ್ರಗಳನ್ನೆಲ್ಲಾ ಕ್ರಮವಾಗಿ ಜೋಡಿಸಿದರು. ಶಿಲ್ಕು ಕಾಗದಗಳಿಗೆ ಉತ್ತರ ಬರೆದರು. ಮಧ್ಯಾಹ್ನ ನಾಲ್ಕು ಗಂಟೆಯತನಕ ಒಂದೇ ಸಮನೆ ಕೆಲಸಮಾಡಿ ನನಗೆ ಹೇಳಿ ಕಳಿಸಿದರು. ಪ್ರತಿಯೊಂದು ಫೈಲನ್ನು ತೆಗೆದು ಅದರಲ್ಲಿ ಏನೇನಿದೆಯೆಂದು ತೋರಿಸಿದರು. ಯಾವ ಕಾಗದ ಎಲ್ಲಿದೆಯೆಂಬುದನ್ನು ನಿಗವಾಗಿ ಸಾವಕಾಶವಾಗಿ ತಿಳಿಸಿದರು. ಚಾರ್ಜು ರಿಪೋರ್ಟಿಗೆ ಸಹಿ ಹಾಕಿದರು, ನನ್ನಿಂದಲೂ ಹಾಕಿಸಿದರು. ಸಹಿ ಹಾಕುವಾಗ ನನ್ನ ಕೈ ನಡುಗುತ್ತಿತ್ತು; ಕಣ್ಣು ನೀರಿನಿಂದ ಮಂಜಾಗಿತ್ತು. ಕಷ್ಟಪಟ್ಟು ಸಹಿ ಹಾಕಿದೆ. ಇನ್ನೂ ಐದು ಗಂಟೆ ಆಗಿರಲಿಲ್ಲ. "ಈಗ ನಿಮ್ಮ ಸರದಿ. ಕಾಫಿ ತರಿಸುತ್ತೀರಾ?" ಎಂದರು. ಕಾಫಿ ತರಿಸುವಲ್ಲಿ ತಿಂಡಿ ಕೊಡಿಸುವಲ್ಲಿ ಯಾವಾಗಲೂ ಅವರದೇ ಮೇಲುಗೈಯಾಗಿರುತ್ತಿತ್ತು. ಆ ದಿನ ಅವರ ವರ್ತನೆಯನ್ನು ಕಂಡು ನಾನು ಸಂಭ್ರಮಾಶ್ಚರ್ಯಗಳಿಂದ ಹಿಗ್ಗಿದೆ. ಕಾಫಿ ಬರುವಷ್ಟರಲ್ಲಿ ಅವರು ತಮ್ಮ ಆಸನವನ್ನು ಬಿಟ್ಟೆದ್ದು ನನ್ನನ್ನು ಬಳಿಗೆ ಕರೆದರು. ಯಾಕೆಂಬುದು ತಿಳಿಯದೆ ಬಳಿಗೆ ಹೋದೆ. 'ಈಗ ಇದು ನಿಮ್ಮ ಸ್ಥಾನ. ಇಲ್ಲಿ ಕುಳಿತುಕೊಳ್ಳಿ' ಎಂದರು. "ಇದೆಲ್ಲ ಈಗ ಬೇಡಿ, ಸಾರ್. ನನಗೆ ತುಂಬ ಸಂಕಟವಾಗುತ್ತಿದೆ." ಎಂದೆ. ನನ್ನ ಕಣ್ಣಿನಲ್ಲಿ ನೀರುಕ್ಕಿತು, ಕೊರಳು ಬಿಗಿಯಿತು, ತುಟಿಯದುರಿತು. "ಇದೇನಿದು, ಜವರೇಗೌಡ. ನೀವು ಈ ಕುರ್ಚಿಯಲ್ಲಿ ಕೂತಿದ್ದನ್ನು ನೋಡಿ ಹೋಗಬೇಕು; ಸಂತೋಷಪಟ್ಟು ಹೋಗಬೇಕು. ಇದೆಲ್ಲ ಪ್ರಕೃತಿನಿಯಮ. ಹಳಬರು ಹೋಗುತ್ತಿರಬೇಕು. ಹೊಸಬರು ಬರುತ್ತಿರಬೇಕು. ಕೂತುಕೊಳ್ಳಿ." "ಕುವೆಂಪು, ನೀವು ಕುಳಿತ ಕುರ್ಚಿಯಲ್ಲಿ ಕುಳಿತು ಕೊಳ್ಳಲು ಹೆದರಿಕೆಯಾಗುತ್ತಿದೆ." "ಏಕೆ ಹೆದರಿಕೆ. ನೀವು ಈ ಜವಾಬ್ದಾರಿಯನ್ನು ಹೊರಬಲ್ಲಿರಿ. ಜೊತೆಗೆ ನಾನು ಇಲ್ಲಿಗೆ ಆಗಾಗ್ಗೆ ಬರುತ್ತಿರುತ್ತೇನೆ. ಚಿಂತೆ ಬೇಡ" ಎಂದು ಕೈ ಹಿಡಿದು ನನ್ನನ್ನು ತಮ್ಮ ಕುರ್ಚಿಯ ಮೇಲೆ ಕೂರಿಸಿ, ಅವರು ಬೇರೊಂದು ಕುರ್ಚಿಯ ಮೇಲೆ ಕುಳಿತರು.

ಅಷ್ಟರಲ್ಲಿ ಕಾಫಿ ಬಂತು. ನಿಧಾನವಾಗಿ ಕುಡಿದರು. ನಗುನಗುತ್ತ ನಡು ನಡುವೆ ಮಾತಾಡುತ್ತ ಸವಿದರು. ನನಗಂತು ಕಾಫಿ ರುಚಿಸಲಿಲ್ಲ. ಕಾಫಿಯ ಬಟ್ಟಲು ಯಾಂತ್ರಿಕವಾಗಿ ತುಟಿಯ ಬಳಿ ಸಾಗುತ್ತಿತ್ತು. ಕಾಫಿ ಮುಗಿದನಂತರ ಅವರು ಮತ್ತೆ ನನ್ನ ಬಳಿ ಬಂದು ಬೆನ್ನುತಟ್ಟಿ 'ಈ ಸ್ಥಾನ ನಿಮಗೆ ಖಾಯಮ್ಮಾಗಲಿ' ಎಂದು ಹರಸಿದರು. ಆ ಹರಕೆಯಲ್ಲಿ ನಿಷ್ಠೆಯಿತ್ತು, ಸಂತೋಷವಿತ್ತು. ಅವರನ್ನು ಬೀಳ್ಕೊಡಲು ಅವರ ಹಿಂದೆ ಹೊರಬಾಗಿಲಿನತನಕ ಹೋದೆ. ಅವರು ಹೊಸ್ತಿಲನ್ನು ದಾಟಿ, ಪಡಸಾಲೆಯಲ್ಲಿ ನಿಂತು ತಮ್ಮ ಕೊಠಡಿಯ ಕಡೆಗೆ ಕಣ್ಣು ಹಾಯಿಸಿದರು. ಜವಾನನನ್ನು ಕರೆದು ಗೋಡೆಯ ಮೇಲಿದ್ದ ತಮ್ಮ ನಾಮಫಲಕವನ್ನು ತೆಗೆಯುವಂತೆ ಆಜ್ಞಾಪಿಸಿದರು. ನಾನು ಬೇಡವೆಂದೆ. 'ಅದು ಅಲ್ಲಿರಕೂಡದು' ಎಂದವರು ನುಡಿದರು. 'ಇನ್ನೂ ನಮ್ಮನ್ನು ಪೇಚಾಡಿಸಬೇಡಿ, ಸಂಕಟಕ್ಕೀಡುಮಾಡಬೇಡಿ. ಅದನ್ನು ನಮಗೆ ಬಿಡಿ.' ಎಂದು ಪ್ರಾರ್ಥಿಸಿದ್ದಾಯಿತು.

ಅಂಥದೇ ಸಂದರ್ಭದಲ್ಲಿ ಹಲವು ಜನ ಹಾಗೆ ನಡೆದುಕೊಂಡಾರೆಂಬ ಸಂಗತಿ ನನ್ನ ಅನುಭವಕ್ಕೆ ಬಂದಿಲ್ಲ!

*

ತೀನಂಶ್ರೀಯವರ ಲೇಖನದಿಂದ ಕನ್ನಡ ಜಗತ್ತು ನಿರೀಕ್ಷಿಸಿದ್ದ ಸಾಹಿತ್ಯೋತ್ಪನ್ನ ಅಗಾಧವಾಗಿತ್ತು. ಅವರ ಪಾಂಡಿತ್ಯದಲ್ಲಿ ನೂರನೆಯ ಒಂದು ಭಾಗ ಸಹ ಕನ್ನಡಿಗರಿಗೆ ಒದಗಿಲ್ಲವೆಂಬುದು ಬಹುಮಂದಿಯ ಭಾವನೆಯಾಗಿದೆ. ತಮ್ಮಲ್ಲಿದ್ದುದನ್ನೆಲ್ಲಾ ನಿರ್ವಂಚನೆಯಿಂದ ತಮ್ಮ ಶಿಷ್ಯಕೋಟಿಗೆ ಅವರು ಧಾರೆಯೆರೆದದ್ದುಂಟು. ಆದರೆ ಅದು ಕೃತಿ ರೂಪದಲ್ಲಿ ಜನ್ಮಧಾರಣೆ ಮಾಡಿದ್ದರೆ ಕನ್ನಡ ಸಾಹಿತ್ಯ ಇನ್ನೂ ಶ್ರೀಮಂತವಾಗುತಿದ್ದುದಲ್ಲದೆ ಕನ್ನಡ ಸಂಶೋಧನ ಕ್ಷೇತ್ರ ವಿಶಾಲಗೊಳ್ಳುತ್ತಿತ್ತು. ತಾವು ಏನೇನು ಬರೆಯಬೇಕೆಂಬುದರ ವೇಳಾಪಟ್ಟಿಯೊಂದನ್ನು ತಯಾರಿಸಿಕೊಂಡು ಯಾವಾಗಲೂ ತಮ್ಮ ಕಣ್ಮುಂದಿಟ್ಟುಕೊಂಡಿದ್ದರು. ಕನ್ನಡ ಭಾಷಾಚರಿತ್ರೆ, ರಗಳೆಯ ಇತಿಹಾಸ, ರನ್ನನ ಕವಿ ಕಾಲ ವಿಷಯ, ಶಬ್ದಮಣಿದರ್ಪಣ ದೀಪಿಕಾ ಇವು ಅವರು ಬರೆಯಬೇಕೆಂದಿದ್ದ ಗ್ರಂಥಗಳಲ್ಲಿ ಕೆಲವು. ಅನಾರೋಗ್ಯದ ನಿಮಿತ್ತದಿಂದ ಇವನ್ನು ಬರೆಯಲಾಗಲಿಲ್ಲವಲ್ಲಾ ಎಂದು ಅವರು ಆಗಾಗ್ಗೆ ಚಡಪಡಿಸುತ್ತಿದ್ದುದುಂಟು.

*

ಕನ್ನಡ ನಾಡಿನ ಶ್ರೇಷ್ಠ ವಿದ್ವಾಂಸರಲ್ಲೊಬ್ಬರೆಂದು ಹೆಸರುಗೊಂಡ ಶ್ರೀಯರಿಗೆ ಯಾವ ಸನ್ಮಾನ ಸಮಾರಂಭಗಳೂ ಒದಗಿ ಬರಲಿಲ್ಲ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠ ಅವರಿಗೆ ಲಭಿಸಲಿಲ್ಲ. ವೈಭವಾಡಂಬರಗಳ ಕಡೆಗೆ ಕಣ್ಣುಹಾಕದೆ ಅವರು ಎರಡು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡದ ಸ್ನಾತಕೋತ್ತರ ಶಿಕ್ಷಣವನ್ನು ಊರ್ಜಿತಗೊಳಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಸಂಸ್ಥಾಪನೆಗೊಂಡ ಮೊದಲ ಐದು ವರ್ಷಗಳ ಅವಧಿಯಲ್ಲಿ ಕನಿಷ್ಠ ಸೌಕರ್ಯಗಳ ಅಭಾವವಿದ್ದರೂ ಸ್ನಾತಕೋತ್ತರ ಬೋಧನ ಮತ್ತು ಸಂಶೋಧನ ಇಲಾಖೆಯನ್ನು ಪ್ರಾರಂಭಗೊಳಿಸಿ ಬಲಪಡಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ

ಮಾನಸ ಗಂಗೋತ್ರಿ ಯೋಜನೆ ಸಿದ್ಧವಾಗಿ, ಆ ಯೋಜನೆಯ ಯಶಸ್ಸಿನ ಬಗ್ಗೆ ಕೆಲವು ಪ್ರಾಧ್ಯಾಪಕರು ಸಂದೇಹಗ್ರಸ್ತರಾಗಿ, ಮತ್ತೆ ಕೆಲವರು ವಾಮನೀತಿಯ ಮೂಲಕ ಅದನ್ನು ಪ್ರತಿಭಟಿಸುತ್ತಿದ್ದಾಗ ತೀನಂಶ್ರೀಯವರು ಮಹಾರಾಜಾ ಕಾಲೇಜಿನಲ್ಲಿದ್ದ ಬೆಂಚು ಕುರ್ಚಿಗಳನ್ನು ಸಾಗಿಸಿಕೊಂಡು ಜಯಲಕ್ಷ್ಮೀ ವಿಲಾಸದಲ್ಲಿ ಒಬ್ಬರೇ ಮೊಟ್ಟ ಮೊದಲು ತಳವೂರಿದರು. ಆಗಿನ್ನೂ ಗಂಗೋತ್ರಿ ಕ್ಷೇತ್ರವಾಗಿರದೆ ಕಾಡಾಗಿತ್ತು. ಅಲ್ಲಿ ರಸ್ತೆಯಿರಲಿಲ್ಲ. ಕುಡಿಯಲು ನೀರಿರಲಿಲ್ಲ. ಎಲ್ಲಿ ನೋಡಿದರೂ ಹಾವು ಹಕ್ಕಿ ಮಂಗಗಳಕಾಟ. ಪಾಠದ ವೇಳೆ ತಂಡ ತಂಡವಾಗಿ ಮಂಗಗಳು ತರಗತಿಯೊಳಗೆ ಬಂದುಬಿಡುತ್ತಿದ್ದುವು. ಗಂಗೋತ್ರಿ ಯೋಜನೆಯನ್ನು ಊರ್ಜಿತ ಗೊಳಿಸಬೇಕೆಂಬ ಮಹದಾಕಾಂಕ್ಷೆಯಿಂದ ಎಲ್ಲ ಕಷ್ಟ ನಿಷ್ಠುರಗಳನ್ನು ಸಂತೋಷದಿಂದ ಸಹಿಸಿದರು. ತೀನಂಶ್ರೀಯವರ ಬಾಳಿನಲ್ಲಿ ಇಂತಹ ಕೆಲವು ಅರೆಕೊರೆಗಳಿದ್ದುವು ನಿಜ. ಆದರೆ ಅವನ್ನೆಲ್ಲಿಯೂ ಅವರು ನಡೆನುಡಿಗಳಲ್ಲಿ ಮರೆತೂ ವ್ಯಕ್ತಪಡಿಸುತ್ತಿರಲಿಲ್ಲ. ಅವುಗಳನ್ನು ನೆನದು ಅವರು ಕೊರಗಿದಂತೆಯೂ ಕಾಣುವುದಿಲ್ಲ.

ಒಂದು ದುರ್ದೈವದ ಸಂಗತಿಯೆಂದರೆ ಶ್ರೀಕಂಠಯ್ಯನವರನ್ನು ಜನ ಸರಿಯಾಗಿ ಅರ್ಥ ಮಾಡಿಕೊಂಡಿರಲಿಲ್ಲ. ಅವರು ಸಹಜವಾಗಿಯೇ ಸ್ನೇಹಪರರು, ಸೌಜನ್ಯವನ್ನರಿತವರು. ಆದರೆ ಅಪ್ರಿಯವಾದರೂ ಸತ್ಯವನ್ನೇ ಹೇಳುವ ಛಲ ಅವರದು. ಯಾವುದಾದರೂ ಹೊಸ ಸಾಹಿತ್ಯ ಕೃತಿಯನ್ನು ಓದಿದಾಗ ಅದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ನಿರ್ಭಯವಾಗಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದರು. ಮತ್ತೊಬ್ಬರ ತೃಪ್ತಿಗಾಗಿ ಅವರೆಂದೂ ಕಣ್ಣು ಮುಚ್ಚಾಲೆಯಾಟವಾಡಿದವರಲ್ಲ. ತಮಗೆ ಸರಿಯೆಂದು ತೋರಿದುದನ್ನು ಖಚಿತವಾಗಿ ಸ್ಪಷ್ಟಪಡಿಸಿ ತಮಗೆ ಸರಿಯಲ್ಲವೆಂದು ತೋರಿದ್ದನ್ನು ಖಂಡಿತವಾಗಿ ನಿಸ್ಸಂಕೋಚವಾಗಿ ಒದರಿಬಿಡುತ್ತಿದ್ದರು. ಯಾರಲ್ಲಿಯಾದರೂ ಒಳ್ಳೆಯ ಗುಣ ಇದೆಯೆಂದು ತೋರಿದರೆ ಅವರನ್ನು ಎದುರಿಗೆ ಹೊಗಳದೆ, ಇತರರ ಮುಂದೆ ಅವರ ಬಗ್ಗೆ ಮೆಚ್ಚಿಕೆಯ ಮಾತು ಬಳಸುತ್ತಿದ್ದರು. ಇದರಿಂದ ಸ್ತುತಿಲಾಲಸರಾದ ಜನರಿಗೆ ಮತ್ತು ಯುವಕರಿಗೆ ಸ್ವಲ್ಪ ನಿರಾಶೆಯಾಗುತ್ತಿದ್ದುದುಂಟು. ಯಾರ ಬಗ್ಗೆಯಾದರೂ ದ್ವೇಷವಾಗಲೀ ಕಹಿಯಾಗಲೀ ಅವರಲ್ಲಿ ಬಹಳ ಕಾಲ ಉಳಿಯುತ್ತಿರಲಿಲ್ಲ. ಮನಸ್ಸಿನಲ್ಲೇನಾದರೂ ಕಹಿ ತೋರಿದ್ದಾದರೆ ಅದು ಕೂಡಲೇ ವಮನವಾಗಿ ಸ್ವಾಸ್ಥ್ಯ ಬೇರೂರುತ್ತಿತ್ತು.

ತೀನಂಶ್ರೀಯವರಲ್ಲಿ ವಿನಯ ಸೌಜನ್ಯಗಳ ಜೊತೆಗೆ ಆತ್ಮ ಪ್ರತ್ಯಯವೂ ಪೂರ್ಣವಾಗಿತ್ತು. ಆ ಆತ್ಮಪ್ರತ್ಯಯ ಎಂದೂ ಅಹಂಕಾರದ ಗಡಿಯನ್ನು ಮುಟ್ಟಿರಲಿಲ್ಲ. ಅಪಾರವಾದ ವಿದ್ವತ್ತೂ ತೀಕ್ಷ್ಣವಾದ ಪ್ರತಿಭೆಯೂ ವಿಶಾಲವಾದ ಲೋಕಾನುಭವವೂ ಇರುವೆಡೆ ಈ ಆತ್ಮಪ್ರತ್ಯಯ ಸಹಜವಾದದ್ದೆ. ಬುದ್ಧಿ ಅಥವಾ ವಿಚಾರಪ್ರಧಾನವಾದ ವಿಷಯಗಳನ್ನು ಚರ್ಚಿಸುವಾಗ ಅವರು ಒಮ್ಮೊಮ್ಮೆ ಸರ್ವಾಧಿಕಾರಿಯಂತೆಯೂ ವರ್ತಿಸುತ್ತಿದ್ದರು. ತಮಗೆ ಅಧಿಕಾರವಿಲ್ಲದ ವಿಚಾರ ವಲಯದಲ್ಲಿ ಅವರು ಎಂದಿಗೂ ಪ್ರವೇಶಿಸಿದವರಲ್ಲ. ಸ್ವಕ್ಷೇತ್ರದಲ್ಲಂತೂ ಯಾರಿಗೂ ಅವರು ಒಂದು ಹೆಜ್ಜೆ ಬಿಟ್ಟುಕೊಟ್ಟವರಲ್ಲ. ತಮ್ಮ ವಾದವೇ ಗೆಲ್ಲಬೇಕೆಂಬ ಭಾವನೆಯೂ ಆಗಾಗ್ಗೆ ಗೋಚರವಾಗುತ್ತಿತ್ತು. ಆದರೆ ತಮ್ಮ ಅಭಿಪ್ರಾಯ ಸರಿಯಲ್ಲವೆಂದು ತೋರಿದಾಗ ಸಂತೋಷವಾಗಿ ಅದನ್ನು ತಿದ್ದಿಕೊಳ್ಳುತ್ತಿದ್ದರು. ಯಾವುದಾದರೂ ವಿಷಯ ತಮ್ಮ ಮನಸ್ಸಿಗೆ ಖಚಿತವಾಗದಿದ್ದಾಗ ಅವರು ಅದರ ಗೋಜಿಗೆ ಹೋಗದೆ ತೆಪ್ಪಗಿರುತ್ತಿದ್ದರು.

ಇಷ್ಟಾದರೂ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ಮನೋಭಾವ ಅವರಲ್ಲಿ ಸಂಸ್ಕಾರರೂಪವಾಗಿ ಕೂಡಿಬಂದಿತ್ತು. ಅವರ ಸರ್ವಾಧಿಕಾರ ಮನೋಭಾವ ಎಂದೂ ಹಠಮಾರಿತನವಾಗಿ ಪರಿಣಮಿಸುತ್ತಿರಲಿಲ್ಲ. ತಾವು ಯೋಚಿಸಿದ್ದು ಅಥವಾ ಬಯಸಿದ್ದು ಕೈಗೂಡದಿದ್ದಾಗ ಯಾರನ್ನೂ ಬೈಯದೆ ಸಮಾಧಾನದಿಂದ ವರ್ತಿಸುತ್ತಿದ್ದರು. ಅವರು ನಿವೃತ್ತರಾದ ಸಮಯದಲ್ಲಿ ಅವರ ಆರ್ಥಿಕ ಪರಿಸ್ಥಿತಿ ಅಷ್ಟು ಉತ್ತಮವಾಗಿಲ್ಲದಿದ್ದರೂ ತಮ್ಮ ಅಧಿಕಾರಾವಧಿಯ ವಿಸ್ತರಣೆಗಾಗಿ ಹಂಬಲಿಸಲಿಲ್ಲ. ಸಂತೋಷವಾಗಿ ಅಧಿಕಾರವನ್ನು ಬಿಟ್ಟುಕೊಟ್ಟು ಸಂಶೋಧನ ಕ್ಷೇತ್ರದಲ್ಲಿ ಪೂರ್ವಯೋಜಿತ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಉತ್ಸಾಹದಿಂದ ಸನ್ನದ್ಧರಾದರು. ಅಷ್ಟರಲ್ಲಿ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದ ನೆರವು ದೊರಕಿದ್ದರಿಂದ ಅವರ ಸಂಶೋಧನ ಕಾರ್ಯ ಸುಗಮವಾಗಿ ಮುಂದುವರಿಯಲನುಕೂಲವಾಯಿತು. ಸಂಪ್ರದಾಯ ಶೀಲವಾದ ಮನೆತನದಲ್ಲಿ ತೀನಂಶ್ರೀಯವರು ಹುಟ್ಟಿ ಬೆಳೆದಿದ್ದರೂ ಅವರು ಸಂಪ್ರದಾಯಕ್ಕೆ ದಾಸರಾಗಿರಲಿಲ್ಲ. ಎಂತಹ ಸನ್ನಿವೇಶಕ್ಕಾದರೂ ಹೊಂದಿಕೊಳ್ಳುವಂತಹ ವ್ಯಕ್ತಿಯಾಗಿದ್ದರು. ಆದ್ದರಿಂದಲೇ ಅವರು ಯಾವ ತೊಂದರೆಯೂ ಇಲ್ಲದೆ ವಿದೇಶ ಪ್ರವಾಸವನ್ನು ಮುಗಿಸಿಬಂದರು. ಅವರು ಜನ್ಮತಃ ನಿಷ್ಠುರ ಶಾಖಾಹಾರಿಗಳು. ಅಮೆರಿಕೆಗೆ ಹೋದಾಗ ಕೋಳಿಮೊಟ್ಟೆಯನ್ನು ಸವಿದದ್ದುಂಟು. ಮಿತ್ರ ಮನಃಸಂತೋಷಕ್ಕಾಗಿ ಅವರು ಒಮ್ಮೊಮ್ಮೆ ಮಿಲಿಟರಿ ಹೋಟೆಲಿಗೂ ಹೋಗಿ ತಮ್ಮ ಮಿತ್ರರಿಗೆ ತಿಂಡಿ ಕೊಡಿಸಿದ್ದುಂಟು. ತಮ್ಮ ಮಿತ್ರರು ತಿಂಡಿ ಮುಗಿಸುವತನಕ ಮೂಗು ಮುರಿಯದೆ, ಮುಖ ಸಿಂಡರಿಸಿಕೊಳ್ಳದೆ ಕುಳಿತಿರುತ್ತಿದ್ದರು. ಶಾಖಾಹಾರದ ಪದಾರ್ಥಗಳು ದೊರಕಿದ್ದಾದರೆ ಬೇಸರಗೊಳ್ಳದೆ ಧಾರಾಳವಾಗಿ ಉಪಯೋಗಿಸಿದ್ದುಂಟು. ಹೀಗೆ ನಂಟು ಗಂಟುಗಳೆರಡನ್ನೂ ಉಳಿಸಿಕೊಂಡು ಯಾವ ಅತಿರೇಕಕ್ಕೂ ಹೋಗದೆ ಮಧ್ಯವರ್ತಿಯಾಗಿ ಅವರು ವ್ಯವಹರಿಸುತ್ತಿದ್ದರು.

ತೀ.ನಂ.ಶ್ರೀ.ಯವರು ನಿವೃತ್ತರಾದ ನಂತರ ಕನ್ನಡ ಕೋಶದ ಚಟುವಟಿಕೆಗಳು ಅವರ ಗಮನವನ್ನು ಸೆಳೆದುವು. ಆದಷ್ಟು ಶೀಘ್ರವಾಗಿ ಕನ್ನಡಿಗರ ಹೇರಾಸೆಯನ್ನು ಕೈಗೂಡಿಸಿ ಕನ್ನಡ ನಾಡಿನ ಹೆಗ್ಗೊರತೆಯನ್ನು ಹೋಗಲಾಡಿಸಬೇಕೆಂದು ಅವರು ಪಣತೊಟ್ಟರು. ತಿಂಗಳಿಗೊಮ್ಮೆ ಕೋಶ ಸಮಿತಿಯ ಸಭೆಗಾಗಿ ಬೆಂಗಳೂರಿಗೆ ಹೋಗಿಬರುತ್ತಿದ್ದರು. ಉಳಿದ ದಿನ ಮೈಸೂರಿನಲ್ಲಿದ್ದು ಕೊಂಡೇ ಕೋಶದ ಕೆಲಸವನ್ನು ನಿರ್ವಹಿಸುತ್ತಿದ್ದರು. ಅವರ ಭೌತಿಕ ದೇಹ ಮೈಸೂರಿನಲ್ಲಿದ್ದರೂ ಅವರ ಮನಸ್ಸು ಮಾತ್ರ ಸದಾ ಕೋಶದಲ್ಲಿ ಮಗ್ನವಾಗಿರುತ್ತಿತ್ತು. ನಿಂತೆಡೆ ಕುಳಿತೆಡೆ ಕೊನೆಗೆ ಸ್ನಾನ ಮಾಡುವಾಗಲೂ ಕೋಶ ಸಂಬಂಧವಾದ ಸಮಸ್ಯೆಗಳ ಪರಿಹಾರದಲ್ಲಿಯೇ ಅವರ ಮನಸ್ಸು ಮಗ್ನವಾಗಿರುತ್ತಿತ್ತು. ಸಮಿತಿಯ ಸಾಮೂಹಿಕ ಪ್ರತಿಭೆಗೆ ಜಗ್ಗದ ಸಮಸ್ಯೆಗಳು ಪ್ರಧಾನ ಸಂಪಾದಕರನ್ನು ಹಿಂಬಾಲಿಸುತ್ತಿದ್ದುವು. ಅವುಗಳ ಜವಾಬ್ದಾರಿಯನ್ನು ಸದಸ್ಯರು ಪ್ರಧಾನ ಸಂಪಾದಕರ ತಲೆಗೆ ಕಟ್ಟಿ ಮೆಲ್ಲನೆ ಜಾರಿಕೊಳ್ಳುತ್ತಿದ್ದುದುಂಟು. ತಿಂಗಳಿಗೆ ಹದಿನೈದು ದಿವಸವಾದರೂ ಕೋಶದ ಕೆಲಸದಲ್ಲಿ ತಲ್ಲೀನವಾಗಿರುತ್ತಿದ್ದರು. ಸಂಪಾದಕರನ್ನು ಮೈಸೂರಿಗೆ ಕರೆಸಿಕೊಂಡು ಅಚ್ಚಿಗೆ ಕೊನೆಯ ಕರಡುಪ್ರತಿಯನ್ನು ಸಿದ್ಧಪಡಿಸುವಾಗ ಅವರು ಪಡುತ್ತಿದ್ದ ಶ್ರಮ ಅಷ್ಟಿಷ್ಟಲ್ಲ. ಬೆಳಗ್ಗೆ ಎಂಟು ಗಂಟೆಗೆ ತಿಂಡಿ ತಿಂದು ಕುಳಿತರೆ ಹನ್ನೆರಡು ಗಂಟೆಗೆ ಮೇಲೇಳುತ್ತಿದ್ದರು.

ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಕುಳಿತರೆ ಸಂಜೆ ಆರರ ತನಕ ಅವಿಚ್ಛಿನ್ನವಾಗಿ ಕೆಲಸ ಸಾಗುತ್ತಿತ್ತು. ಅಚ್ಚಿಗೆ ಪ್ರತಿಯನ್ನು ಸಿದ್ಧಪಡಿಸುವಾಗ ಹತ್ತಾರು ಗ್ರಂಥಗಳನ್ನು ಮುಂದೊಡ್ಡಿಕೊಂಡು ಆಕಡೆ ಈಕಡೆ ಕಣ್ಣುಹಾಯಿಸುತ್ತಾ ಚರ್ಚಿಸುತ್ತಾ ಆಲೋಚಿಸುತ್ತಾ ಅವರು ಪಡುತ್ತಿದ್ದ ಶ್ರಮ ಅವರ ದೇಹ ತಡೆಯುವಂತಹುದಾಗಿರಲಿಲ್ಲ. ಪ್ರೂಫು ನೋಡುವಾಗಲಂತೂ ಅವರ ದೇಹದ ಕಣಕಣವೂ ನೊಂದಿರಬೇಕು. ಮೊದಲನೆಯ ಫಾರಂ ಅಂತಿಮ ರೂಪವನ್ನು ತಾಳುವ ಹೊತ್ತಿಗೆ ಮೂವತ್ತು ಮೂವತ್ತೈದು ಸಾರಿಯಾದರೂ ಪ್ರೂಫು ತಿದ್ದಿರಬೇಕು. ಪದ ತಪ್ಪಿದಾಗ, ಒಂದು ವಿರಾಮವೋ ಅಡ್ಡಗೀಟೋ ಬಿಟ್ಟು ಹೋದಾಗ ರಾತ್ರಿಯೆಲ್ಲ ನಿದ್ದೆ ಮಾಡುತ್ತಿರಲಿಲ್ಲ.

ಕೋಶ ಸಮಿತಿಯ ಸಭೆಯಲ್ಲಿ ಅವರೊಡನೆ ಭಾಗವಹಿಸುವುದೊಂದು ಪುಣ್ಯವೆಂದೇ ಹೇಳಬೇಕು. ಸಮಸ್ಯಾತ್ಮಕವಾದ ಶಬ್ದಗಳನ್ನು ಕುರಿತು ಚರ್ಚಿಸುವಾಗ ಅವರ ಜ್ಞಾನಸಮೃದ್ಧಿಯನ್ನೂ ವಿದ್ವದೈಶ್ವರ್ಯವನ್ನೂ ಸ್ಮೃತಿ ಶಕ್ತಿಯನ್ನೂ ಭಾಷಾಶಾಸ್ತ್ರದ ಪಾಂಡಿತ್ಯವನ್ನೂ ವಿಶ್ಲೇಷಣ ಸಾಮರ್ಥ್ಯವನ್ನೂ ನೋಡಬೇಕು; ನೋಡಿದವರು ಬೆರಗಾಗುತ್ತಿದ್ದುದುಂಟು. ಡಿ.ಎಲ್.ಎನ್., ಮುಗಳಿ, ರಾಘವಾಚಾರ್ ಮತ್ತು ತೀ.ನಂ.ಶ್ರೀ.ಯವರ ವಾದ ವಿವಾದಗಳನ್ನು ಕೇಳುವಾಗ ರಸದೌತಣದ ಅನುಭವವಾಗುತ್ತಿತ್ತು. ಬಹುಗ್ರಂಥ ವ್ಯಾಸಂಗದಿಂದ ದೊರೆಯಲಾರದ ಜ್ಞಾನ ಆ ಕೆಲವು ಗಂಟೆಗಳಲ್ಲಿ ಸುಲಭವಾಗಿ ದೊರೆಯುತ್ತಿತ್ತು. ಅನೇಕ ಸಾರಿ ತೀ.ನಂ.ಶ್ರೀ.ಯವರ ನಿರ್ಣಯವೇ ಕೊನೆಯದಾಗಿ ನಿಲ್ಲುತ್ತಿತ್ತು. ಸಮಸ್ಯೆ ಬಗೆಹರಿಯದಿದ್ದಾಗಲಂತೂ "ಅದನ್ನು ನನಗೂ ಮತ್ತು ಡಿ.ಎಲ್.ಎನ್. ಅವರಿಗೂ ಬಿಟ್ಟುಬಿಡಿ. ನಾವದನ್ನು ವಿಚಾರಿಸಿಕೊಳ್ಳುತ್ತೇವೆ" ಎಂದು ಹೇಳಿಬಿಡುತ್ತಿದ್ದರು.

ಕೋಶದಲ್ಲಿ ಬರುವ ಅನೇಕ ಸಂಕೇತಗಳ ಸೃಷ್ಟಿಗೆ ಅವರೇ ಮೂಲ ಕಾರಣರೆನ್ನಬಹುದು. ಅಲ್ಲಿ ಬರುವ ಗೆರೆ, ಅಡ್ಡಗೀಟು, ಆವರಣ ಚಿಹ್ನೆ, ಅರ್ಧವಿರಾಮ ಮೊದಲಾದ ಪ್ರತಿಯೊಂದು ಸಂಕೇತಕ್ಕೂ ವಿಶೇಷಾರ್ಥವುಂಟು. ಅವುಗಳಲ್ಲೇನಾದರೂ ಅಲ್ಪ ಸ್ವಲ್ಪ ವ್ಯತ್ಯಾಸವಾಗುವುದಾದರೆ ಮೈಮೇಲೆ ಚೇಳು ಬಿದ್ದಂತೆ ಒದರಾಡುತ್ತಿದ್ದರು. ಆದಷ್ಟು ಪರಿಪೂರ್ಣತೆಯನ್ನು ಸಾಧಿಸಬೇಕೆನ್ನುವುದು ಅವರ ಮನೋಧರ್ಮವಾಗಿತ್ತು. ಈ ಕಾರಣದಿಂದ ಕೋಶದ ರಚನೆ ತುಸು ನಿಧಾನವಾಗಿ ಸಾಗುತ್ತಿತ್ತೆಂದು ಹೇಳಬಹುದು. ತಡವಾದರೂ ಸರಿಯೆ ದೋಷರಹಿತವಾಗಿರಬೇಕೆಂಬುದು ಅವರ ಹುಟ್ಟುಗುಣವಾಗಿತ್ತು. ಹಾಗೆ ನಿಧಾನವಾಗುತ್ತಿದ್ದುದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲದಿದ್ದುದೂ ಕಾರಣವಾಗಿತ್ತು. "ಏನು ಮಾಡುವುದು, ಸಾಕಷ್ಟು ಸಿಬ್ಬಂದಿ ಇಲ್ಲ. ಬಂದ ಜನ ಸ್ಥಾನಭದ್ರತೆ ಇಲ್ಲದ್ದರಿಂದ ನಡುವೆ ಬಿಟ್ಟುಹೋಗುತ್ತಾರೆ. ನಮ್ಮ ಅಹವಾಲನ್ನು ಕೇಳುವವರಿಲ್ಲ. ನಾನು ಬದುಕಿರುವಾಗ ಮಾತ್ರ ಈ ಕೋಶ ಮುಗಿಯುವುದಿಲ್ಲ. ಕೆಲವು ಸಂಚಿಕೆಗಳು ಹೊರಬಂದರೆ ಅಷ್ಟೇ ಸಾಕು." ಎಂದು ಅವರು ಆಗಾಗ್ಗೆ ಮರುಗುತ್ತಿದ್ದುದುಂಟು.

ಈ ಮಧ್ಯೆ ಅವರ ಬಲತೋಳ ಮೂಳೆಯಲ್ಲಿ ನೋವು ಕಾಣಿಸಿಕೊಂಡಿತು. ಮೊದಲೇ ಕೆಲವು ವ್ಯಾಧಿಗಳಿಂದ ಹಣ್ಣಾಗಿದ್ದ ದೇಹ ಮತ್ತೊಂದು ನೋವಿನಿಂದ ಜರ್ಝರಿತವಾಯಿತು. ಪರಿಣತರಾದ ವೈದ್ಯರು ಕೊಟ್ಟ ಚುಚ್ಚುಮದ್ದು, ಬಾಯಿ ಮದ್ದುಗಳಿಗೂ ಅದು ಜಗ್ಗಲಿಲ್ಲ. ಕೋಟು ಧರಿಸುವಾಗಲಂತೂ ತುಂಬಾ ಶ್ರಮವಾಗುತ್ತಿತ್ತು. ಬರೆಯುವುದು ಕಷ್ಟವಾಗುತ್ತಿತ್ತು.

ಕೋಶದ ಕೆಲಸ ಕೈಗೆತ್ತಿಕೊಂಡಾಗ ಅಥವಾ ತರಗತಿಯಲ್ಲೊ ಸಾರ್ವಜನಿಕ ಸಭೆಗಳಲ್ಲೊ ಭಾಷಣಮಾಡುವಾಗ ಆ ನೋವು ಮರೆಯಾಗುತ್ತಿತ್ತು. ಮೇಲುನೋಟಕ್ಕೆ ಅವರು ದೃಢಕಾಯರಂತೆ ಕಾಣುತ್ತಿದ್ದರು. ಆದರೆ ಒಂದೆರಡು ಫರ್ಲಾಂಗು ನಡೆದರೂ ಅವರಿಗೆ ಏದು ಬರುತ್ತಿತ್ತು. "ನಿಮ್ಮ ದೇಹದಲ್ಲಿ ಯಾವ ಖಾಯಿಲೆಯೂ ಇದ್ದಂತೆ ಕಾಣುವುದಿಲ್ಲ ಏನಾದರೂ ಸ್ವಲ್ಪವಿದ್ದರೆ ಅದನ್ನು ದೊಡ್ಡದು ಮಾಡುತ್ತೀರಿ. ದೈಹಿಕ ರೋಗಕ್ಕಿಂತ ಮನೋರೋಗವೇ ನಿಮ್ಮನ್ನು ದುರ್ಬಲಗೊಳಿಸುವಂತಿದೆ. ಸರಿಯಾಗಿ ಓಡಾಡಿಕೊಂಡಿದ್ದರೆ ಎಲ್ಲವೂ ಸರಿಹೋಗುತ್ತದೆ" ಎಂದು ಯಾರಾದರೂ ಹೇಳಿದರೆ, "ನಿಮಗೇನಪ್ಪ ಗೊತ್ತು ನನ್ನ ಕಷ್ಟ. ಬಂಜೆಗೆ ಹೆರಿಗೆಯ ಬೇನೆ ಗೊತ್ತೆ?" ಎಂದು ನುಡಿಯುತ್ತಿದ್ದರು. ಆ ನುಡಿಯೊಡನೆ ನಗು ಹೊರ ಹೊಮ್ಮುತ್ತಿತ್ತು. ಆದರೆ ಯಾರಿಗೂ ತಮ್ಮ ನೋವು ಅರಿವಾಗದಿರಲೆಂದು ಹಾಗೆ ನಗುತ್ತಿದ್ದರೆಂದು ಕಾಣುತ್ತದೆ.

ಅವರು ಹೊರಗಡೆ ಎಲ್ಲಿ ಹೋದರೂ ರೈಲಿನಲ್ಲಿಯೇ ಪ್ರಯಾಣ ಮಾಡುತ್ತಿದ್ದುದುಂಟು. ಶಾರೀರಿಕ ಕ್ಲೇಶಕಾರಣವಾಗಿ ಅವರು ಇತರ ವಾಹನಾದಿಗಳಲ್ಲಿ ಸಂಚಾರ ಮಾಡುತ್ತಿರಲಿಲ್ಲ. ಉತ್ತರ ಭಾರತದ ಪ್ರವಾಸಕ್ಕೆ ಸಿದ್ಧವಾಗುವ ಸಲುವಾಗಿ ಕೆಲವು ದಿನಗಳಿಂದ ಬಸ್ಸಿನಲ್ಲಿಯೂ ಪ್ರಯಾಣ ಮಾಡುತ್ತಿದ್ದರು. ಬಸ್ಸಿನಲ್ಲಿ ಪ್ರಯಾಣಮಾಡುವಾಗ ಮಿತ್ರರ ಸಂಗವನ್ನು ನಿರೀಕ್ಷಿಸುತ್ತಿದ್ದರು. ಭಾಷೆ ಸಾಹಿತ್ಯಗಳಿಗೆ ಸಂಬಂಧಪಟ್ಟ ಚರ್ಚೆಯಲ್ಲಿ ಹೆಚ್ಚು ಆಯಾಸವಿಲ್ಲದೆ ಎರಡೂವರೆ ಗಂಟೆಕಾಲವನ್ನು ಕಳೆಯುತ್ತಿದ್ದರು. ಬಸ್ಸಿಳಿದಾಗ ಒಮ್ಮೆ ಅಸಾಧ್ಯವಾದದ್ದನ್ನು ಸಾಧಿಸುತ್ತಿದ್ದಂತೆ ಹರ್ಷಪಡುತ್ತಿದ್ದರು. ಅವರ ಆಗಿನ ದೈಹಿಕ ಪರಿಸ್ಥಿತಿಗೆ ಇಂತಹ ಸಂದರ್ಭಗಳು ನಿದರ್ಶನವಾಗಿವೆ.

ಭಾಷಣವೆಂದರೆ ತೀ.ನಂ.ಶ್ರೀ.ಯವರಿಗೆ ಉತ್ಸಾಹ ಗರಿಗಟ್ಟುತ್ತಿತ್ತು; ಶಾರೀರಿಕ ಯಾತನೆ ಮಾಯವಾಗುತ್ತಿತ್ತು. ದೂರದ ಪ್ರಯಾಣ ಕೈಗೊಳ್ಳುವುದಕ್ಕೆ ಮುಂಚೆ ಮೈಸೂರು ನಗರದ ಸಂಗೀತ ಕಾಲೇಜಿನ ವಿದ್ಯಾರ್ಥಿ ಸಂಘದಲ್ಲಿ ಭಾಷಣಮಾಡಿ ಆ ಸಂಸ್ಥೆಯ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರರಾದರು. ಬನುಮಯ್ಯ ವಿದ್ಯಾಸಂಸ್ಥೆಯಲ್ಲಿ ಅವರು ಮಾಡಿದ ಭಾಷಣವೇ ತಾಯಿನಾಡಿನ ಅವರ ಕೊನೆಯ ಭಾಷಣ. ತಮ್ಮ ಕೊನೆಯ ಆಸೆಯನ್ನು ಈಡೇರಿಸಿಕೊಂಡರೆಂಬಂತೆ ಪ್ರವಾಸಕ್ಕೆ ಹೊರಡುವ ಮುನ್ನ 'ಸುಬ್ಬಾಶಾಸ್ತ್ರಿ' ಕನ್ನಡ ಚಿತ್ರವನ್ನು ಪತ್ನೀಸಮೇತರಾಗಿ ನೋಡಿ ಬಂದರು. ನೋಡಿ ಹಿಂದಿರುಗುವಾಗ "ನಾವು ಮರಳಿ ಊರಿಗೆ ಬರುವತನಕ ಈ ಚಿತ್ರ ನಡೆಯಲಾರದೆಂಬ ಶಂಕೆಯಿಂದ ಈ ಅವಸರದಲ್ಲಿ ಬಂದದ್ದಾಯಿತು. ಮೊದಲನೆಯ ಭಾಗ ತುಸು ಬೇಸರಿಕೆಯುಂಟುಮಾಡುತ್ತದೆ. ಕೊನೆಯರ್ಧವಂತೂ ತುಂಬಾ ಚೆನ್ನಾಗಿದೆ. ಇದನ್ನು ನೋಡದಿದ್ದರೆ ಒಂದು ಕೊರತೆ ಉಳಿಯುತ್ತಿತ್ತು" ಎಂದು ಸಂಗಡಿಗರಿಗೆ ತಿಳಿಸಿದರು.

ಮಾರನೆಯ ದಿನ ಬೆಳಿಗ್ಗೆ ಕೋಶಸಮಿತಿಯ ಸಭೆಗೆಂದು ಬೆಂಗಳೂರಿಗೆ ಹೋದರು. ತಾವೇ ಖುದ್ದಾಗಿ ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮವನ್ನು ನಿರ್ಧರಿಸಿದರು. ಪರಿಷತ್ತು ಮತ್ತು ಕೋಶಸಮಿತಿಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಸ್ಫೋಟಗೊಂಡ ಸಮಸ್ಯೆಯನ್ನು ಚರ್ಚಿಸುವಾಗ ಅವರು ಅತ್ಯಂತ ಉದ್ವಿಗ್ನರಾದರು; ಕೋಪದಿಂದ ಕಿಡಿಕಿಡಿಯಾದರು. "ಇಂತಹ ಪರಿಸ್ಥಿತಿಯಲ್ಲಿ

ನಾನು ಈ ಹುದ್ದೆಗೆ ರಾಜೀನಾಮೆ ಕೊಡಲೂ ಸಿದ್ಧ" ಎಂದು ಗದ್ಗದ ಕಂಠರಾಗಿ ನುಡಿದರು. ಅಂತಹ ಕೋಪ ಹಿಂದೆಂದೂ ಅವರಲ್ಲಿ ಕಂಡಿರಲಿಲ್ಲ. ಕೋಪದ ತಾಪದಿಂದ ಕಣ್ಣು ಕೆಂಪಗಾಗಿದ್ದುವು. ತುಟಿ ಅದುರುತ್ತಿತ್ತು. ಮೈ ಕಂಪಿಸುತ್ತಿತ್ತು, ಮುಖ ಕಪ್ಪಾಗಿತ್ತು. ಅವರ ದೈಹಿಕ ಪರಿಸ್ಥಿತಿಯನ್ನು ಬಲ್ಲವರಿಗೆ ತೀರಾ ಸಂಕಟವಾಗುತ್ತಿತ್ತು. ಅವರನ್ನು ಮೆಲ್ಲನೆ ಪಕ್ಕದ ಕೋಣೆಗೊಯ್ದು ಸಮಾಧಾನಮಾಡಲಾಯಿತು. ಒಂದು ದಿನ ಮುಂಚಿತವಾಗಿಯೇ ಅವರು ಮೈಸೂರಿಗೆ ಹಿಂದಿರುಗಿದರು.

ಆಚೆಗೆ ಒಂದೆರಡು ದಿನಗಳಲ್ಲಿ ಅವರು ದೆಹಲಿಗೆ ಹೊರಡಲು ಅಣಿಗೊಳ್ಳಬೇಕಾಗಿತ್ತು. ಗಂಗೋತ್ರಿಗೆ ಹೋಗಿ ಮಿತ್ರರಿಗೆ ತಮ್ಮ ಪ್ರವಾಸದ ವಿಷಯವನ್ನು ತಿಳಿಸಿದರು. ವೈದ್ಯರಿಂದ ತಮ್ಮ ದೇಹವನ್ನು ಪರೀಕ್ಷೆಮಾಡಿಸಿಕೊಂಡು ಒಂದು ಪೆಟ್ಟಿಗೆಯಲ್ಲಿ ಸಾಕಷ್ಟು ಔಷಧಿಗಳನ್ನು ತುಂಬಿಕೊಂಡರು. ಅವರನ್ನು ನೋಡಲು ಬಂದ ಮಿತ್ರರು ಅವರ ಆರೋಗ್ಯದ ಬಗ್ಗೆ ಕುತೂಹಲ ವ್ಯಕ್ತಪಡಿಸಿದಾಗ, "ಇದೇ ತಾನೆ ದೊಡ್ಡ ವೈದ್ಯರಿಂದ ಪರೀಕ್ಷೆ ಮಾಡಿಸಿಕೊಂಡಿದ್ದೇನೆ. ಏನೂ ಚಿಂತೆಯಿಲ್ಲ. ಇದ್ದಕ್ಕಿದ್ದಂತೆ ನನ್ನ ಆರೋಗ್ಯ ತುಂಬಾ ಸುಧಾರಿಸಿಕೊಂಡಂತೆ ಕಾಣುತ್ತದೆ. ದೆಹಲಿಗೆ ಹೋಗುವುದು ಒಂದು ನೆಪ. ಮಕ್ಕಳನ್ನು ನೋಡಿಕೊಂಡು ಬರುವುದಕ್ಕೆ ಇದೊಂದು ಅವಕಾಶ. ಪ್ರಾಸ್ಟೇಟ್ ಗ್ರಂಥಿ ಸ್ವಲ್ಪ ಊದಿಕೊಂಡಿದೆಯೆಂದು ಡಾಕ್ಟರು ಹೇಳುತ್ತಾರೆ. ಆದರೆ ಸದ್ಯಕ್ಕೇನೂ ತೊಂದರೆಯಿಲ್ಲವಂತೆ. ಇದೊಂದು ಸಾರಿ ಹೋಗಿ ಬಂದರೆ ಆಮೇಲೆ ಇನ್ನೆಲ್ಲಿಯೂ ಹೋಗಬಾರದೆಂದು ನಿಶ್ಚಯಿಸಿದ್ದೇನೆ. ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ. ಬಂದಮೇಲೆ ಬಿಗಿಯಾಗಿ ಕೂತು ಅದನ್ನೆಲ್ಲಾ ಮುಗಿಸುತ್ತೇನೆ" ಎಂದು ನಗುನಗುತ್ತಲೇ ಹೇಳುತ್ತಿದ್ದರು. ಹೊಸ ಹುರುಪು ಅವರ ಮೈಯಲ್ಲಿ ಸಂಚರಿಸುತ್ತಿದ್ದಂತೆ ತೋರುತ್ತಿತ್ತು. ಊರಿಗೆ ಹಿಂದಿರುಗುವ ತನಕ ಬೇಕಾಗಿದ್ದ ಮನೆಬಳಕೆಯ ಸಾಮಾನುಗಳನ್ನೆಲ್ಲಾ ಕೂಡಿಟ್ಟರು. ಪ್ರಯಾಣಕ್ಕೆ ಬೇಕಾದ ಸಲಕರಣೆಗಳನ್ನೆಲ್ಲಾ ಸಂಗ್ರಹಿಸಿಕೊಂಡರು. ತಮ್ಮ ಪ್ರಯಾಣದ ವೇಳಾಪಟ್ಟಿಯೊಂದನ್ನು ತಯಾರಿಸಿ, ತಾವು ಪ್ರಯಾಣಕಾಲದಲ್ಲಿ ತಂಗಲಿದ್ದ ಮನೆಗಳ ವಿಳಾಸ ಮತ್ತು ಟೆಲಿಫೋನ್ ನಂಬರುಗಳನ್ನು ಬರೆದಿಟ್ಟರು. ಆಗಸ್ಟ್ ಹದಿನೇಳರ ರಾತ್ರಿ ಹತ್ತು ಗಂಟೆಯ ರೈಲಿಗೆ ಮೈಸೂರು ನಗರವನ್ನು ಬಿಟ್ಟು ಅವರು ಪತ್ನೀಸಮೇತರಾಗಿ ಬೆಂಗಳೂರು ಮದ್ರಾಸುಗಳ ಮೂಲಕ ದೆಹಲಿಗೆ ಪ್ರಯಾಣ ಬೆಳೆಸಿದರು. ದೆಹಲಿಯಲ್ಲಿದ್ದಷ್ಟು ದಿನವೂ ಅವರು ಲೋಕಸಭೆಯ ಉಪಾಧ್ಯಕ್ಷರಾದ ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾಯರ ಮನೆಯಲ್ಲಿಳಿದುಕೊಂಡಿದ್ದರು. ಶ್ರೀಮಾನ್ ಕೃಷ್ಣಮೂರ್ತಿ ರಾಯರು ಅವರಿಗೆ ಸಕಲ ಸೌಕರ್ಯಗಳನ್ನೊದಗಿಸಿದ್ದರು. ತೀನಂಶ್ರೀಯವರು ತಮ್ಮ ಪತ್ನಿಗೆ ಇತಿಹಾಸಪ್ರಸಿದ್ಧವಾದ ಕ್ಷೇತ್ರಗಳನ್ನೆಲ್ಲಾ ತೋರಿಸಿದರು. ಕೆಂಪುಕೋಟೆ, ರಾಜಘಾಟ್, ಪಾರ್ಲಿಮೆಂಟ್ ಭವನ, ರಾಷ್ಟ್ರಪತಿ ಭವನ ಮೊದಲಾದುವನ್ನು ನೋಡಿಬಂದರು. ಆಗ್ರಾ ನಗರಕ್ಕೆ ಹೋಗಿ ತಾಜ್‌ಮಹಲ್‌ಅನ್ನು ದರ್ಶಿಸಿದರು. ಹೊಸ ಹರೆಯದ ಮದವಣಿಗನಂತೆ ತಮ್ಮ ಹೆಂಡತಿಯೊಡನೆ ನಗೆಯಾಡುತ್ತಾ ಐತಿಹಾಸಿಕ ಕ್ಷೇತ್ರಗಳ ವೈಶಿಷ್ಟ್ಯವನ್ನು ವಿವರಿಸುತ್ತಾ, ಹುಮ್ಮಸ್ಸಿನಿಂದ ತಿರುಗಾಡಿದರು. ಆ ದಂಪತಿಗಳು ತಾಜಮಹಲಿನ ಮುಂದೆ ನಿಂತಾಗ ಅವರ ಫೋಟೋ ತೆಗೆಯುವ ಸಲುವಾಗಿ ಬಿಂಬಗ್ರಾಹಕರು ಓಡಿಬಂದರಂತೆ. "ಈ ಸೌಂದರ್ಯನಿಧಿಯ

ಬಳಿ ನಿಂತು ನಾವು ಫೋಟೊ ತೆಗೆಸಿಕೊಂಡರೆ ಅದಕ್ಕೆ ಅಪಚಾರವಾಗುತ್ತದೆ. ಖಂಡಿತ ಫೋಟೋ ತೆಗೆಯುವುದು ಬೇಡ" ಎಂದು ಅವರು ಬಿಂಬಗ್ರಾಹಕರನ್ನು ನಿವಾರಿಸಿದರಂತೆ. ದೆಹಲಿಯಲ್ಲಿದ್ದಾಗ ಕನ್ನಡ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಪಂಪನ ಕರ್ಣನ ವಿಷಯವಾಗಿ ಉಪನ್ಯಾಸ ಮಾಡಿ ಶ್ರೋತೃವೃಂದವನ್ನು ತಣಿಸಿದರು. ವಿಶ್ವವಿದ್ಯಾನಿಲಯದ ಭಾಷಾವಿಜ್ಞಾನ ಶಾಖೆಯ ಆಶ್ರಯದಲ್ಲಿ ಭಾಷಾಶಾಸ್ತ್ರದ ಅಧ್ಯಯನದ ಬಗ್ಗೆ ಮಾತಾಡಿದರು. ಹಳೆಯ ಮಿತ್ರರನ್ನು ಭೇಟಿಮಾಡಿದಂತೆಲ್ಲಾ ಹೊಸ ಕ್ಷೇತ್ರಗಳನ್ನು ಸಂದರ್ಶಿದಂತೆಲ್ಲಾ ಅವರ ಉತ್ಸಾಹ ಇಮ್ಮಡಿಸುತ್ತಿತ್ತು.

ಈ ಉತ್ಸಾಹವೊಂದು ಕಡೆ. ಮಕ್ಕಳನ್ನು ನೋಡುವ ಸಂಭ್ರಮ ಮತ್ತೊಂದು ಕಡೆ–ಹೀಗೆ ಸಂತೋಷದಲ್ಲಿ ತೇಲುತ್ತಾ ಅವರು ದೆಹಲಿಯಿಂದ ರಾಂಚಿಗೆ ಹೋದರು. ರಾಂಚಿಯಲ್ಲಿ ಮಗಳು ಮತ್ತು ಅಳಿಯಂದಿರ ಕುಟುಂಬದ ಸುಮಧುರ ವಾತಾವರಣದಲ್ಲಿ ಸುಮಾರು ಒಂದು ವಾರದ ಕಾಲ ನೆಮ್ಮದಿಯಿಂದಿದ್ದರು. ಆಗಾಗ್ಗೆ ಕೆಲವು ಮೈಸೂರಿನ ಮಿತ್ರರ ಮನೆಗೆ ಹೋಗಿ ಮಾತುಕತೆಯಾಡಿಕೊಂಡು ಬರುತ್ತಿದ್ದರು. ತಾವು ಸುಖ ಸಂತೋಷಗಳಿಂದ ಕಾಲ ಕಳೆಯುತ್ತಿದ್ದುದಾಗಿ ತಮ್ಮ ಕವಿಮಿತ್ರರಾದ ಶ್ರೀ ಪುತಿನರವರಿಗೆ ಕಾಗದ ಬರೆದಿದ್ದರು. ಆದರೂ ಕೆಲಸವಿಲ್ಲದೆ ಹೊತ್ತು ಹೋಗದಿದ್ದುದರಿಂದ ಅವರಿಗೆ ತುಸು ಬೇಸರವೂ ಆಗಿರಬೇಕು. ಕೆಲಸವಿಲ್ಲದ ಬಾಳು ಬರಡೆಂದು ಅವರು ಆಗಾಗ್ಗೆ ಹೇಳುತ್ತಿದ್ದರಂತೆ. ಹೀಗಿರುವಾಗ ಒಂದು ದಿನ ರಾತ್ರಿ ಮೂತ್ರ ಕಟ್ಟಿಕೊಂಡು ಒಂದೆರಡು ಗಂಟೆ ಕಾಲ ಪೇಚಾಡಿದರು. ಕೂಡಲೇ ವೈದ್ಯರು ಪರೀಕ್ಷಿಸಿ ಔಷಧಿ ಕೊಟ್ಟರು. ಮತ್ತೆ ಅವರು ಎಂದಿನಂತೆ ಗುಣಮುಖರಾದರು.

ಅವರ ಅಸ್ವಸ್ಥತೆಯಿಂದ ಮನೆಯವರಿಗೆ ಕಳವಳವುಂಟಾದರೂ ಅವರು ತಮ್ಮ ಕಾರ್ಯಕ್ರಮದ ಪ್ರಕಾರ ಗೊತ್ತಾದ ದಿನದಂದು ಕಲ್ಕತ್ತೆಗೆ ಪ್ರಯಾಣ ಬೆಳೆಸಿದರು. ಅಲ್ಲಿ ಶ್ರೀಮಾನ್ ಸಂಪತ್ ಎಂಬ ತಮ್ಮ ಸ್ನೇಹಿತರ ಮನೆಯಲ್ಲಿ ಉಳಿದುಕೊಂಡರು. ಅವರ ಚಿರಂಜೀವಿ ನಾಗಭೂಷಣ ಸಹ ಅವರಲ್ಲಿಗೆ ಬಂದರು. ಹೋದ ದಿನ ತುಸು ಹೊತ್ತು ಅಲ್ಲಿ ಇಲ್ಲಿ ಅಡ್ಡಾಡಿದರು. ಮಧ್ಯಾಹ್ನದ ನಂತರ ಸ್ವಲ್ಪ ಆಯಾಸವಾದಂತಾಗಿ ಚಳಿ ಕಾಣಿಸಿಕೊಂಡು ಹಾಸಿಗೆ ಹಿಡಿದರು. ಜ್ವರವಿದ್ದರೂ ಅದು ನೂರು ಡಿಗ್ರಿಯನ್ನು ಮೀರಿರಲಿಲ್ಲ. ಶರೀರದಲ್ಲಿ ಇನ್ನಾವ ಬೇನೆಯೂ ಇರಲಿಲ್ಲ. ವೈದ್ಯತಜ್ಞರೊಬ್ಬರು ಅವರನ್ನು ಸಂಪೂರ್ಣವಾಗಿ ಪರೀಕ್ಷಿಸಿ, ಪ್ರಾಸ್ಟೇಟ್ ಗ್ರಂಥಿಗೆ ಶಸ್ತ್ರಚಿಕಿತ್ಸೆ ನಡೆಯಲೇಬೇಕೆಂದು, ತಡವಾದಷ್ಟೂ ಅದು ಅಪಾಯಕಾರಿ ಯಾಗುವುದೆಂದು ಎಚ್ಚರಿಕೆ ನೀಡಿದರು. ಮೈಸೂರಿಗೆ ಹಿಂದಿರುಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳು ವುದಾಗಿಯೂ ಅದು ಸಾಧ್ಯವಾಗುವಂತೆ ತಾತ್ಕಾಲಿಕ ಚಿಕಿತ್ಸೆ ನಡೆದರೆ ಸಾಕೆಂದೂ ಅವರು ತಿಳಿಸಿದರು. ರೈಲಿನಲ್ಲಿ ಪ್ರಯಾಣ ಮಾಡಕೂಡದೆಂದೂ ಪ್ರಯಾಣ ಅನಿವಾರ್ಯವಾಗುವುದಾದರೆ ವಿಮಾನದಲ್ಲಿ ತೆರಳಬೇಕೆಂದೂ ವೈದ್ಯರು ಹೇಳಿದರು. ಆ ರಾತ್ರಿ ಬಹಳ ಹೊತ್ತಿನ ತನಕ ಅವರು ಎಚ್ಚರವಾಗಿದ್ದರು. ಮಗನೊಡನೆಯೂ ಹೆಂಡತಿಯೊಡನೆಯೂ ಮಾತುಕತೆಯಾಡು ತ್ತಿದ್ದರು. ವಿವಾಹದ ನಲವತ್ತು ವರ್ಷಗಳ ನಂತರ ತಾವು 'ಹನೀಮೂನಿ'ಗೆ ಹೊರಟಿದ್ದುದಾಗಿ ನಗೆಯಾಡುತ್ತಿದ್ದರು. ಕೊನೆಯಲ್ಲಿ ತಮ್ಮ ಹೆಂಡತಿಗೂ ವಿಮಾನಯಾನದ ಪುಣ್ಯದೊರಕಿದ್ದರಿಂದ ಅವರು ಹರ್ಷಗೊಂಡಿದ್ದರು. ಮಾರನೆಯ ದಿನವೇ ಸಾಧ್ಯವಾದರೆ ಟಿಕೆಟ್ ದೊರಕಿಸಿಕೊಂಡು ಮೈಸೂರಿಗೆ ಹೊರಡುವುದೆಂದು ನಿಶ್ಚಯಿಸಿಕೊಂಡರು.

ಆದಷ್ಟು ಶೀಘ್ರವಾಗಿ ಊರು ತಲುಪಬೇಕೆಂಬ ಹಂಬಲದಲ್ಲಿ ರಾತ್ರಿಯನ್ನು ಕಳೆದರು. ಮುಂಜಾನೆಯೇ ಹಾಸಿಗೆಯಿಂದೆದ್ದು ತಾವೇ ಮುಖಮಾರ್ಜನಾದಿಗಳನ್ನು ಮುಗಿಸಿದರು. ಸುಮಾರು ಎಂಟುಗಂಟೆಯ ಸಮಯದಲ್ಲಿ ಚಳಿಜ್ವರ ಮತ್ತೆ ಕಾಣಿಸಿಕೊಂಡು ಹಾಸಿಗೆಯ ಮೇಲೊರಗಿದರು. ನಾಲ್ಕಾರು ಕಂಬಳಿ ಹೊದಿಸಿದರೂ ಚಳಿ ಅವರನ್ನು ಗಡಗಡನೆ ನಡುಗಿಸುತ್ತಿತ್ತು. ಮೂರ್‍ನಾಲ್ಕು ನಿಮಿಷಗಳ ನಂತರ ಬಾಯಾರಿಕೆಯಾಗಿ ಕುಡಿಯುವುದಕ್ಕೆ ಕೇಳಿದರು. ಶ್ರೀಮತಿ ಶ್ರೀಕಂಠಯ್ಯ ಅವರು ಕೂಡಲೇ ಬೌರ್ನ್‌ವೀಟಾ ತಂದು ಅವರು ಮಲಗಿದ್ದಂತೆಯೇ ಬಾಯಿಗೆ ಸ್ವಲ್ಪ ಬಿಟ್ಟರು. ಆದರೆ ಅದು ಗಂಟಲ ಕೆಳಗೆ ಇಳಿಯಲಿಲ್ಲ. ಸ್ವಲ್ಪವೂ ನೋವಿಲ್ಲದೆ ಸಮಾಧನದಿಂದ ಅವರು ಕೊನೆಯುಸಿರೆಳೆದರು. ನಿಜವಾಗಿಯೂ ಒಳ್ಳೆಯ ಜೀವಕ್ಕೆ ತಕ್ಕುದಾದ ಸಾವು! ಭಾರತದ ಪುಣ್ಯ ಭೂಮಿಯನ್ನೆಲ್ಲ ಪರ್ಯಟನೆ ಮಾಡಿ, ತಮ್ಮ ಆತ್ಮೀಯರನ್ನೆಲ್ಲ ನೋಡಿ, ಕೊನೆಗೆ ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾಂದ ಮತ್ತು ರವೀಂದ್ರನಾಥ ಠಾಕೂರರ ಭೂಮಿಯಲ್ಲಿ ಅನಂತವನ್ನು ಸೇರುವ ಭಾಗ್ಯ ಅವರದಾಯಿತು!

ಲಾಲ್ ಬಹಾದ್ದೂರ್ ಶಾಸ್ತ್ರಿಗಳು ತೀರಿಕೊಂಡಾಗ ಅವರು ತಮ್ಮ ಬಂಧು ಮಿತ್ರರೊಡನೆ ಹೀಗೆ ಆಗಾಗ್ಗೆ ಹೇಳುತ್ತಿದ್ದುದುಂಟು: 'ಅವರು ನಿಜಕ್ಕೂ ಪುಣ್ಯಶಾಲಿಗಳು. ದೇಶಸೇವೆ ಮಾಡುತ್ತ ಕರ್ತವ್ಯನಿರತರಾಗಿರುತ್ತ, ಕೀರ್ತಿ ಶಿಖರವನ್ನೇರುತ್ತ ಸಾವನ್ನಪ್ಪಿದರು. ಕೇವಲ ಕೆಲವೇ ನಿಮಿಷಗಳಲ್ಲಿ ಹೆಚ್ಚು ನರಳದೆ ಮೃತಿ ಹೊಂದಿದರು. ನನಗೂ ಅಂಥ ಸಾವೇ ಬಂದರೊಳ್ಳೆಯದು.' ತೀ.ನಂ.ಶ್ರೀ. ಅವರ ಸಾವೂ ಅವರ ಮಟ್ಟಿಗೆ ಹೇಳಬಹುದಾದರೆ ಹಿರಿಯ ಸಾವೆಂದೇ ಹೇಳಬಹುದು.

*

ಅವರು ತಾವಾಗಿಯೇ ಪದವಿ ಸನ್ಮಾನಗಳಿಗೆ ಆಶಿಸಲಿಲ್ಲ. ಆಶಿಸಿದ್ದರೆ ಕೆಲವು ವರ್ಷಗಳ ಹಿಂದೆಯೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬಹುದಿತ್ತು. ಆಕಸ್ಮಿಕವಾಗಿ ಅಧ್ಯಕ್ಷ ಪದವಿಯ ಪ್ರಸ್ತಾಪ ಬಂದಾಗ ಆ ಈ ನೆಪವೆತ್ತಿ ತಮ್ಮನ್ನು ಹಿಂದಕ್ಕೆ ಬಿಟ್ಟುಕೊಂಡು ತಮ್ಮ ಮಿತ್ರರ ಹೆಸರನ್ನು ಸೂಚಿಸುತ್ತಿದ್ದರು. ಅವರು ಕನ್ನಡ ಭಾಷಾ ಸಾಹಿತ್ಯಗಳಿಗೆ ಸಲ್ಲಿಸಿದ ಸೇವೆಗಾಗಿ ಮೈಸೂರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪತ್ರ ನೀಡುವುದರ ಮೂಲಕ ಅವರಿಗೆ ಗೌರವ ಸಲ್ಲಿಸಬೇಕೆಂದು ನಿರ್ಧರಿಸಿತ್ತು. ಈ ನಿರ್ಧಾರ ತೀನಂಶ್ರೀ ಅವರಿಗೂ ತಿಳಿದಿತ್ತು; ಅಷ್ಟೇ ಅಲ್ಲ ಸನ್ಮಾನ ಸ್ವೀಕರಿಸುವುದಾಗಿ ಒಪ್ಪಿಕೊಂಡಿದ್ದರು. ಆದರೆ ಅವರು ಆ ಸನ್ಮಾನ ಸ್ವೀಕರಿಸದಂತೆ ಕಾಲರಾಯ ಅಡ್ಡಿಯಾದ. ತಂದೆಯ ಪರವಾಗಿ ಮಗ ಅದನ್ನು ಸ್ವೀಕರಿಸಬೇಕಾಯಿತು.

ತೀನಂಶ್ರೀಯವರು ಕೆಲವು ದಿನಗಳ ಹಿಂದೆಯೇ ತಮ್ಮ ದಿನಚರಿಯ ಪುಟವೊಂದರಲ್ಲಿ ಸಣ್ಣದೊಂದು ಚರಮಗೀತೆಯನ್ನು ರಚಿಸಿಕೊಂಡಿದ್ದಾರೆ. ಅವರ ಮಗ ಶ್ರೀ ನಾಗಭೂಷಣ್ ಅದರ ಕಡೆಗೆ ನನ್ನ ಗಮನ ಸೆಳೆದಿದ್ದಾರೆ. ಆ ಗೀತೆಯ ಕೊನೆಯಲ್ಲಿ 'This is my epitaph' ಎಂದು ಮೊದಲು ಬರೆದು ಅನಂತರ 'This will be my epitaph' ಎಂದು ಅವರೇ ತಿದ್ದಿದ್ದಾರೆ. ಇದು ನಿಜವಾಗಿಯೂ ಸೋಜಿಗದ ವಿಷಯ. ಅವರಿಗೇನಾದರೂ ತಮ್ಮ ಮರಣದ ಬಗ್ಗೆ ಭವಿಷ್ಯ ಸೂಚನೆ ಹೊಳೆದಿತ್ತೆ? ಅದನ್ನೋದಿದಾಗ ಅನುಕಂಪ ವೇದನೆಗಳು ಅನೈಚ್ಛಿಕವಾಗಿ ಸಂಭವಿಸದಿರಲಾರವು.

ಪದ್ಯ ಹೋಯ್ತು ಗದ್ಯ ಬಂತು ಡುಂಡುಂ
ಗದ್ಯ ಹೋಯ್ತು ಮಾತು ಬಂತು ಡುಂಡುಂ
ಮಾತು ಹೋಯ್ತು ಮೌನ ಬಂತು ಡುಂಡುಂ

* *

(೧೯೬೩ರ ನವಂಬರ್ ತಿಂಗಳಲ್ಲೊಂದು ದಿನ ದೇಜಗೌ ಅವರು ತೀ.ನಂ.ಶ್ರೀ, ಅವರನ್ನು ಸಂದರ್ಶಿಸಿದಾಗ ನಡೆದ ಸಂಭಾಷಣೆಯನ್ನಿಲ್ಲಿ ಕೊಟ್ಟಿದೆ. ಇದು ಆಕಾಶವಾಣಿಯಲ್ಲಿ ಪ್ರಸಾರವಾಯಿತು.)

ಪ್ರಶ್ನೆ : ಕನ್ನಡದಲ್ಲಿ ವಿಮರ್ಶನ ಸಾಹಿತ್ಯ ಸಾಕಷ್ಟು ಬೆಳೆಯದಿರಲು ಕಾರಣವೇನು?

ನನಗೆ ತೋರುವಂತೆ ಇದಕ್ಕೆ ಕೆಲವು ಕಾರಣಗಳಿವೆ. ಒಂದು ವಿಮರ್ಶಕನಿಗೆ ಸಂಬಂಧಪಟ್ಟದ್ದು, ಇನ್ನೊಂದು ಕೃತಿಕಾರನಿಗೆ ಸಂಬಂಧಪಟ್ಟದ್ದು. ವಿಮರ್ಶಕನಿಗೂ ಕವಿಯ ಹೃದಯದೊಂದಿಗೆ ಸಮತಾನವಾಗಿ ಮಿಡಿಯಬಲ್ಲ ಪ್ರತಿಭೆ ಬೇಕು. ಕಾವ್ಯತತ್ತ್ವದ ವಿಶಾಲವಾದ ಪರಿಚಯಬೇಕು, ಹಲವು ಸಾಹಿತ್ಯಗಳ ಆಳವಾದ ಅಭ್ಯಾಸ ಬೇಕು. ಇದಿಷ್ಟು ಒಂದುಕಡೆ ಕೂಡುವುದು ವಿರಳವೇ ಸರಿ. ಆದಕಾರಣ ವಿಮರ್ಶೆ ಎಂಬ ಹೆಸರಿನಲ್ಲಿ ಬರುವ ಅನೇಕ ಲೇಖನಗಳು ಕೃತಿಯ ಸ್ಥೂಲ ಪರಿಚಯದಲ್ಲಿಯೇ ನಿಂತುಬಿಡುತ್ತವೆ. ಜೊತೆಗೆ ವಿಮರ್ಶಕನ ಪೂರ್ವಗ್ರಹಗಳೂ ಅವನ ರಸಾಸ್ವಾದಕ್ಕೆ ಅಡ್ಡಿಯಾಗಬಹುದು. ಇತ್ತಕಡೆ ಗ್ರಂಥಕಾರರಿಗೂ ಹೊಗಳಿಸಿಕೊಳ್ಳಬೇಕೆಂಬ ಚಪಲ ಬಲುಮಟ್ಟಿಗೆ ಇರುತ್ತದೆ. ನಿರ್ದಾಕ್ಷಿಣ್ಯವಾಗಿ ವಿಮರ್ಶೆಮಾಡಿ ಎಂದು ಹೇಳುವವರಲ್ಲನೇಕರು ಅಂತರಂಗದಲ್ಲಿ ಪ್ರಶಂಸೆಯ ನೀರೀಕ್ಷೆಯನ್ನಿಟ್ಟುಕೊಂಡಿರುತ್ತಾರೆ. ಒಮ್ಮೊಮ್ಮೆ ನಿಷ್ಪಕ್ಷಪಾತವಾದ ವಿಮರ್ಶೆಯಿಂದ ಸ್ನೇಹಗಳನ್ನು ಕಳೆದುಕೊಂಡು ನಿಷ್ಠೂರವನ್ನು ಗಳಿಸಿಕೊಳ್ಳುವ ಸಂಭವವೂ ಉಂಟು. ಇದೆಲ್ಲ ತಪ್ಪಿ, ನಮ್ಮ ವಿಮರ್ಶೆ ಸರಿಯಾದ ದಾರಿಯಲ್ಲಿ ಬೆಳೆಯಬೇಕಾದರೆ ಈಗಿರುವುದಕ್ಕಿಂತ ಇನ್ನಷ್ಟು ಉತ್ತಮವಾದ ವಾತಾವರಣ ಬೆಳೆಯಬೇಕೆಂದು ತೋರುತ್ತದೆ.

ಪ್ರಶ್ನೆ : ಈ ದೃಷ್ಟಿಯಿಂದ ಇಂಗ್ಲಿಷ್ ಸಾಹಿತ್ಯ ಪ್ರಪಂಚದಲ್ಲಿ ಪರಿಸ್ಥಿತಿ ಹೇಗಿದೆ?

ಅಲ್ಲಿಯೂ ಪರಿಮಿತಿಗಳುಂಟು, ಅತಿರೇಕಗಳುಂಟು. ಆದರೆ ಅಲ್ಲಿಯ ವಾತಾವರಣ ಉತ್ತಮವಾದ ವಿಮರ್ಶೆಗೆ ಇಲ್ಲಿಗಿಂತ ಎಷ್ಟೋ ಹದವಾಗಿದೆ ಎಂದು ನನಗೆ ತೋರುತ್ತದೆ. ಇದರ ಮೇಲೆ ಅಲ್ಲಿ ಸಾಹಿತ್ಯ ವಿಮರ್ಶೆ. ಶತಮಾನಗಳ ಹಿಂದೆಯೇ ಪ್ರಾರಂಭವಾಯಿತು. ಅದರ ಉದ್ರೇಕಗಳು ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗಕ್ಕೆ ಬಲುಮಟ್ಟಿಗೆ ಕೊನೆಗೊಂಡವು. ಅಲ್ಲಿಯ ಲೇಖಕರು ಕೂಡ ನಮ್ಮ ಜನದಷ್ಟು ಕಟುಟೀಕೆಗೆ ಹೆದರುವಂತೆ ಕಾಣುವುದಿಲ್ಲ.

ಪ್ರಶ್ನೆ : ನವ್ಯ ಕಾವ್ಯದ ಬಗೆಗೆ ನಿಮ್ಮ ಅಭಿಪ್ರಾಯವೇನು? ಅದು ಎಷ್ಟರಮಟ್ಟಿಗೆ ಜನಪ್ರಿಯವಾದೀತು?

ನೀವು ನವ್ಯ ಎಂದಿರಾ? ನವ ಎಂದಿರಾ?

ಪ್ರಶ್ನೆ : 'ನವ್ಯ' ಪದವನ್ನು ಉದ್ದೇಶಪೂರ್ವಕವಾಗಿ ಬಳಸಿದ್ದೇನೆ.

ಹಾಗೋ. ಹಾಗಿದ್ದರೆ ಉತ್ತರ ಹೇಳುವುದು ಸ್ವಲ್ಪ ಕಷ್ಟ. ಇಂಗ್ಲಿಷಿನಲ್ಲಿ ಟಿ.ಎಸ್. ಇಲಿಯಟ್, ಡಿಲಾನ್ ಥಾಮಸ್, ಈ ಪ್ರಸಿದ್ಧ ಕವಿಗಳ ನವ್ಯ ಕವಿತೆಯ ಮೇಲ್ಪಂಕ್ತಿಯಿಂದ ಬಲುಮಟ್ಟಿಗೆ ಪ್ರೇರಣೆಹೊಂದಿ ನಮ್ಮಲ್ಲೂ ಆ ರೀತಿಯ ಕವಿತೆಗಳು ಆಗಲೇ ಬಂದಿವೆ, ಬರುತ್ತಿವೆ. ಆದರೆ ಅವನ್ನು ರಚಿಸುತ್ತಿರುವವರಲ್ಲೆ ಈ ಹೊಚ್ಚಹೊಸ ಕವಿತೆಯ ಗುರಿ, ದಾರಿ ಇವನ್ನು ಕುರಿತು ಮತಭೇದವಿರುವಂತೆ ಕಾಣಬರುತ್ತದೆ. ಈ ವಿವರವನ್ನೆಲ್ಲ ಕುರಿತು ಒಂದು ಒಂದೂವರೆ ನಿಮಿಷದಲ್ಲಿ ಪ್ರಸಂಗಿಸುವುದು ಸಾಧ್ಯವಿಲ್ಲ. ಒಟ್ಟಿನ ಮೇಲೆ ಇಷ್ಟನ್ನು ಹೇಳಬಹುದು: ನವ್ಯ ಕವನಗಳಲ್ಲೂ ನಾನು ಕೆಲವನ್ನು ಮೆಚ್ಚಿದ್ದೇನೆ; ನವ್ಯ ದೃಷ್ಟಿಯಿಂದಲ್ಲ; ರಸಮಯ ಎಂಬ ಕಾರಣದಿಂದ. ನೂತನವಾದ ಕಾವ್ಯ ಪ್ರತಿಮೆ (Poetic Images) ಗಳನ್ನು ಹುಡುಕಿತರುವುದು, ಅವನ್ನು ಆದಷ್ಟು ಸಾಂದ್ರವಾಗಿ ಸಂಕ್ಷಿಪ್ತವಾಗಿ ಒಟ್ಟುಗೂಡಿಸುವುದು, ಹೊಸ ವಸ್ತುವನ್ನು ಅವಲಂಬಿಸಿ ಬರೆಯುವುದು, ಬಳಕೆಯ ಮಾತನ್ನು–ಒಮ್ಮೊಮ್ಮೆ ಗ್ರಾಮ್ಯವೆಂದು ತೋರುವ ಮಾತನ್ನು ಕೂಡ–ಸಂಕೋಚವಿಲ್ಲದೆ ಉಪಯೋಗಿಸುವುದು, ಇವೆಲ್ಲ ಈ ಬಗೆಯ ಬರವಣಿಗೆಯಲ್ಲಿ ವಿಶೇಷವಾಗಿ ಕಾಣಬರುತ್ತವೆ. ಇವುಗಳಲ್ಲಿ ಅನೇಕ ಅಂಶಗಳು ಸರಿಯಾಗಿ ನಿರ್ವಾಹವಾದರೆ, ಸಹೃದಯರ ಮೆಚ್ಚುಗೆಯನ್ನು ಗಳಿಸಬೇಕಾದುವೆ. ಆದರೆ ನನ್ನಂಥವರಿಗೆ ದೊಡ್ಡ ಕಷ್ಟವೇನೆಂದರೆ ಈ ಬಗೆಯ ಅನೇಕ ಕವನಗಳಲ್ಲಿ ವಾಚ್ಯಾರ್ಥವೇ ಮೊದಲು ಹಿಡಿತಕ್ಕೆ ಸಿಕ್ಕುವುದಿಲ್ಲ. ಈ ಮೊದಲನೆಯ ಮೆಟ್ಟಲೇ ಇಲ್ಲದೆ ಮೇಲಕ್ಕೆ ಏರುವುದು ಹೇಗೆ? ಪ್ರತಿಮೆಗಳಿಗೆ ಕೊಂಡಿಗಳು ಎಷ್ಟೋ ವೇಳೆ ಕೂಡಿಕೊಂಡಿರುವುದಿಲ್ಲ. ಕೆಲವು ಕಡೆಗಳಲ್ಲಿ ಲೌಕಿಕಭಾವ ರಸವಾಗಿ ಪಾಕಹೊಂದದೆ ಹಸಿಯಾಗಿ ನಿಲ್ಲುವಂತೆ ತೋರುತ್ತದೆ. ತಂತ್ರಕ್ಕಿಂತ ಸಹಜ ಸ್ಫೂರ್ತಿಯ ಕಡೆಗೆ ನವ್ಯಕವಿಗಳ ಗಮನ ಹೆಚ್ಚಾಗಿ ಹರಿದರೆ, ಅವರ ಕೃತಿಗಳು ಹೆಚ್ಚು ಜನಪ್ರಿಯವಾಗಬಹುದು.

ಪ್ರಶ್ನೆ : ನಿಮ್ಮ 'ಒಲುಮೆ' ಸಂಗ್ರಹವನ್ನೊಮ್ಮೆ ಓದಿದಾಗ, ನೀವು ಕವನ ರಚನೆಯನ್ನು ಮುಂದುವರಿಸಿದಿದ್ದರೆ ಕನ್ನಡ ಸಾಹಿತ್ಯ ಕ್ಷೇತ್ರದ ಆ ವಿಭಾಗ ಮತ್ತಷ್ಟು ಶ್ರೀಮಂತವಾಗುತ್ತಿತ್ತೆಂಬ ಅಭಿಪ್ರಾಯ ಮೂಡುವುದುಂಟು. ಹಾಗೆ ಮುಂದುವರಿಸದಿರಲು ಕಾರಣವೇನು? ಇದಕ್ಕೂ ನಿಮ್ಮ ಅಪಾರ ಪಾಂಡಿತ್ಯಕ್ಕೂ ಏನಾದರೂ ಸಂಬಂಧವಿದೆಯೆ?

ನನ್ನ ಕವಿತೆಯ ವಿಷಯದಲ್ಲಿ ನಿಮಗಿರುವ ಹಿರಿಯಭಾವನೆ ನನಗೆ ದಿಟವಾಗಿ ಇಲ್ಲ. ಆದಕಾರಣ ನಾನು ಹೆಚ್ಚು ಸಂಖ್ಯೆಯ ಕವನಗಳನ್ನು ರಚಿಸದೆ ಹೋದದ್ದರಿಂದ ನಮ್ಮ ಸಾಹಿತ್ಯಕ್ಕೆ ಅಂಥ ನಷ್ಟವೇನೂ ಆಗಿಲ್ಲವೆಂದು ನನ್ನ ಭಾವನೆ. ಭಾವ ತೀವ್ರವಾದಾಗ, ಅದಕ್ಕೆ ರೂಪುಕೊಡಲು ಮಾತು ಹದವಾಗಿ ಬಂದಾಗ ಪ್ರತಿಭೆ ಅಷ್ಟೇನೂ ಉನ್ನತವಾಗಿಲ್ಲದವನ ಹೃದಯದಿಂದಲೂ ಕವನ ಆಗಾಗ ಹೊಮ್ಮುತ್ತದೆ. ಅಂಥ ನಾಲ್ಕಾರು ಕವನಗಳನ್ನಾದರೂ ಬರೆದು ಅವು ತಕ್ಕಮಟ್ಟಿಗೆ ನಮ್ಮ ಜನರ ಪ್ರೀತಿಯನ್ನು ಗಳಿಸಿವೆ ಎಂಬುದೇ ನನಗೆ ಒಂದು ಸಮಾಧಾನ. ನನಗೆ ಒಗ್ಗುವ ಹಾದಿ ಪದ್ಯಕ್ಕಿಂತ ಹೆಚ್ಚಾಗಿ ಗದ್ಯ, ಎರಡಕ್ಕಿಂತ ಹೆಚ್ಚಾಗಿ ಮೌನ. ಪದ್ಯರೂಪದಲ್ಲಿ ಕೆಲವು ಅನುವಾದಗಳನ್ನು ಮಾತ್ರ ಸುಮಾರಾಗಿ ಮಾಡಬಲ್ಲೆನೆಂದು ನನಗೆ ತೋರುತ್ತದೆ. ಸಂಸ್ಕೃತದಿಂದ ನಾನು ಕೆಲವು ಬಿಡಿಮುತ್ತುಗಳನ್ನು ಕನ್ನಡಕ್ಕೆ ತಂದಿರುವುದು

ನಿಮಗೆ ಗೊತ್ತಿದೆ. ಅಷ್ಟು ನನಗೆ ಸಾಕು. ಗದ್ಯದಲ್ಲಿಯೂ ಕವಿ ಮನೋಭಾವವನ್ನು ಕೆಲವುಮಟ್ಟಿಗೆ ಬಿಂಬಿಸುವುದು ಸಾಧ್ಯ–ಪ್ರಬಂಧಗಳಲ್ಲಿ: ಪ್ರಬಂಧವೆನ್ನುವುದು ಎಷ್ಟೋ ವೇಳೆ ಮಂದ್ರಸ್ಥಾಯಿಯ ಭಾವಗೀತೆಯಾಗಬಲ್ಲುದು.

ನೀವು ಪಾಂಡಿತ್ಯದ ವಿಷಯವನ್ನು ಬೇರೆ ಎತ್ತಿದ್ದೀರಿ. "ಅಪಾರ" ಎನ್ನುವ ವಿಶೇಷಣ ನನ್ನ ಸಾಧನೆಗೆ ತುಂಬ ಮಿಾರಿದ್ದು. ಇನ್ನೂ ನಾನು ಪಾಂಡಿತ್ಯ ಸಾಗರದ ದಡದಲ್ಲೇ ಇದ್ದೇನೆ. ಒಂದು ಮಾತೇನೋ ನಿಜ, ಓದುವುದು ಹೆಚ್ಚಾದರೆ, ಬರಹದ ಕಡೆ ಗೀಳು ಕಡಿಮೆಯಾಗುತ್ತದೆ. "ಓದು ಬರಹಕ್ಕೆ ಶತ್ರು" ಎಂಬ ಗಾದೆ ಇದೆ. ಇದು ನಾನೇ ಕಟ್ಟಿದ್ದು–ನಿಮ್ಮ ಕಿವಿಗೆ ಬಿದ್ದಿಲ್ಲವೇ?

ಪ್ರಶ್ನೆ : ಕಾವ್ಯಮಿಾಮಾಂಸೆ ಮತ್ತು ಭಾಷಾವಿಜ್ಞಾನ–ಇವೆರಡೂ ಪರಸ್ಪರ ಸ್ಪರ್ಧೆಹೂಡಿ, ನಿಮ್ಮನ್ನು ಮರಳುಮಾಡಿ ಗೆಲ್ಲಬೇಕೆಂದು ಹವಣಿಸಿರುವಂತಿದೆ. ಇವೆರಡರಲ್ಲಿ ನಿಮಗೆ ಯಾವುದು ಹೆಚ್ಚು ಮೆಚ್ಚು?

ನಿನಗೆ ಬಲಗಣ್ಣು ಹೆಚ್ಚೋ ಎಡಗಣ್ಣು ಹೆಚ್ಚೋ ಎಂದು ಕೇಳಿದರೆ ಏನು ಉತ್ತರ ಹೇಳುವುದು? ನಾನು ಕಾಲೇಜಿನಲ್ಲಿ ಓದುವಾಗ ನನ್ನ ಪೂಜ್ಯ ಗುರುಗಳಾದ ಪ್ರೊ. ಹಿರಿಯಣ್ಣನವರ ಕೃಪೆಯಿಂದ ಕಾವ್ಯ ಮಿಾಮಾಂಸೆ, ಭಾಷಾವಿಜ್ಞಾನ, ಈ ಎರಡರಲ್ಲೂ ಪ್ರವೇಶ ದೊರೆಯಿತು; ಎರಡೂ ನನ್ನ ಮನಸ್ಸನ್ನು ಸೆಳೆದುವು. ಒಂದೊಂದು ಕಾಲದಲ್ಲಿ ಒಂದೊಂದರ ಸೆಳೆತ ಕಾರಣಾಂತರಗಳಿಂದ ಹೆಚ್ಚಾಗಿರಬಹುದು. ಆದರೆ ಎರಡೂ ಪಕ್ಕ ಪಕ್ಕದಲ್ಲಿಯೇ ಇರುತ್ತವೆ. ನಾನು ಕಾವ್ಯವನ್ನು ಓದುವಾಗ ಕೂಡ ಅದರ ಶಬ್ದರೂಪಗಳ ಕಡೆಗೆ ಗಮನದ ಒಂದು ಭಾಗ ಹೋಗಿರುತ್ತದೆ. ಕೇವಲ ರಸಿಕರು ಇದಕ್ಕಾಗಿ ನನ್ನನ್ನು ಹಾಸ್ಯಮಾಡಿದರೂ ಚಿಂತೆ ಇಲ್ಲ. ಭಾಷಾರೂಪಗಳ ಅನ್ವೇಷಣ ವಿಶ್ಲೇಷಣಗಳಲ್ಲಿಯೂ ಅವುಗಳ ರೂಪಸೌಂದರ್ಯವೂ ನಿಷ್ಪತ್ತಿ ಸ್ವಾರಸ್ಯವೂ ಹೃದಯವನ್ನು ಉಕ್ಕಿಸುತ್ತವೆ. ಇದು ಸರಿಯೆಂದೇ ನನ್ನ ಎಣಿಕೆ. ಆಚಾರ್ಯ ಅಭಿನವಗುಪ್ತ ಬಹಳ ಹಿಂದೆಯೇ ಹೇಳಿದ: ಒಂದು ಕಣ್ಣಿನ ನೋಟ ಸಾಲದು; ಸರಿಯಾಗಿ ಕಾಣಬೇಕಾದರೆ ಎರಡು ಕಣ್ಣೂ ಬೇಕು ಎಂದು. "ನಹಿ ಏಕಯಾ ದೃಷ್ಟ್ಯಾ ಸಮ್ಯಜ್ಞರ್ವರ್ಣನಂ ಭವತಿ". ಇದರ ಮೇಲೆ ಈ ಎರಡಕ್ಕೂ ಅಂಥ ವೈಷಮ್ಯವೂ ಇಲ್ಲ. ಭಾಷೆಯೆಲ್ಲ ಕವಿತೆ ಎಂದು ಕ್ರೋಚೆ ಹೇಳಿದ್ದಾನೆ. ಇದನ್ನು ಆಧುನಿಕರನೇಕರು ಒಪ್ಪುತ್ತಾರೆಂದು ತೋರುತ್ತದೆ. ಭಾಷೆ ಕವಿತೆಯಾದರೆ ಭಾಷಾವಿಜ್ಞಾನ ಕಾವ್ಯಮಿಾಮಾಂಸೆಯೂ ಆಗಬಹುದು, ಎಂದು ಹೇಳಿದರೆ ಏನು ತಪ್ಪು?

('ತೀ.ನಂ.ಶ್ರೀ : ಜೀವನ' ಪುಸ್ತಕದಿಂದ)

ಕವಿತೆಗಳು

॥ ಸ್ವರ್ಗತಾಧ್ಯಾಪಕ – ಶ್ರೀ ಶ್ರೀಕಂಠಾರ್ಯ – ಪ್ರಶಸ್ತಿ – ಶ್ಲೋಕಾಷ್ಟಕಮ್ ॥

ಸುನೀತಿ ಕುಮಾರ ಛಟರ್ಜಿ

ಕರ್ಣಾಟದೇಶಜಾತಾಯ ಕರ್ಣಾಟಭೂಷಣಾಯ ವೈ
ವಿದುಷೇ ಕವಯೇ ಚೈವ ಜ್ಞಾನಿನೇ ತತ್ವದರ್ಶಿನೇ ॥ ೧ ॥

ಕರ್ಣಾಟೇ ದ್ರಾಮಿಲೇ ಚಾಂಧ್ರೇ ಸಂಸ್ಕೃತೇ ಪ್ರಾಕೃತೇ ತಥಾ
ಆಂಗ್ಲೇ ಚ ವಾಕ್ಷು ಯಸ್ಯಾಸೀತ್ ನಿಷ್ಠಾ ಜ್ಞಾನಂ ತಥಾ ರುಚಿಃ ॥ ೨ ॥

ಪಾರಂಗತಾಯ ವಾಕ್ ತತ್ವೇ ಸರ್ವೇಷಾಂ ಚ ಪ್ರಿಯಾಯ ವೈ
ಶ್ರೀಕಂಠಪದನೀತಾಯ ಆರ್ಯ ಶ್ರೀಕಂಠಶರ್ಮಣೇ ॥ ೩ ॥

ಮಿತ್ರವರಾಯ ಸೌಹಾರ್ದ ಸುದ್ಗುಣನಿಲಯಾಯ ಚ
ಶೋಕಸಂತಪ್ತಚಿತ್ತಸ್ಯ ಸುಹೃದಸ್ಸಹಕರ್ಮಣಃ ॥ ೪ ॥

ಕಾಶ್ಯಪಾನ್ವಯಜಾತಸ್ಯ ಗೌಡಸುನೀತಿಶರ್ಮಣಃ
ಪ್ರೀತಿಸ್ನಿಗ್ಧಾಃ ಶ್ರದ್ಧಾಭೂತಾ ಬಹ್ವೀಃ ಸಂತು ನಮಸ್ಕ್ರಿಯಾಃ ॥ ೫ ॥

ಅಕಾಲೇ ನಿಧನಂ ತಸ್ಯ ಸದಾಸುಸ್ಮಿತಭಾಷಿಣಃ
ಬಂಧುಮಿತ್ರ ಸತೀರ್ಥೇಷ್ವಪಾರ ದುಃಖಪ್ರದಾಯಕಮ್ ॥ ೬ ॥

ಕರ್ಣಾಟೇ ಭಾರತೇಽನ್ಯತ್ರ ಯೇ ಚ ಸಂತಿ ಸುಪಂಡಿತಾಃ
ಸರ್ವೇಷಾಂ ಹೃದಯೇ ತೇಷಾಂ ಖೇದಶಲ್ಯಂ ಸ್ಥಿತಂ ಸದಾ ॥ ೭ ॥

ದಿವ್ಯಂ ಧಾಮಗತಃ ಸೋಽಸೌ ಬ್ರಹ್ಮಸನ್ನಿಧಿಮಾಪ್ತವಾನ್
ಪುಣ್ಯವಾನ್ ಸುಕೃತೇನಾಸೌ ಶಾಂತಿಂ ಪ್ರಾಪ್ನೋತು ಶಾಶ್ವತೀಮ್ ॥ ೮ ॥

॥ ಚಲಿತೇಯಂ ಕಾಲೀಕ್ಷೇತ್ರನಗರಾತ್ ಶಕಾಬ್ದಾಃ ೧೮೯೭ ಫಾಲ್ಗುನಸ್ಯ ೧೭ ದಿವಸೇ
ವಿಕ್ರಮಸಂವತ್ ೨೦೩೨ ವರ್ಷೇ ಖ್ರಿಸ್ತಾಬ್ದಾಃ ೧೯೭೬ ಮಾರ್ಚಸ್ಯ ೭ ದಿವಸೇ ॥

(ಶ್ರೀಕಂಠತೀರ್ಥ : ೧೯೭೬)

ತೀ.ನಂ.ಶ್ರೀ.ಯವರನ್ನು ನೆನೆದು

ಪು.ತಿ.ನ.

●

ಕನ್ನಡದ ಪಾಂಡಿತ್ಯದೆಲ್ಲೆಗೆರೆಯಿವನೆಂಬ
ಸನ್ನುತಿಯ ಪಡೆದವನೆ ಸಹೃದಯನೆ ಕವಿಯೇ
ಮನ್ನಣೆಯ ವೇಳೆಯೊಳು ನಗುಮೊಗದ ಕಳೆಚೆಲ್ಲಿ
ಎನ್ನ ಸಂಗಡವಿರದೆ ನೀನೆಲ್ಲಿಗಾದೆ?
ಸಂತಸದಿ ಹಿಗ್ಗುತ್ತ ಕೊರಗಿನೊಳು ಕುಗ್ಗುತ್ತ
ಇಂಥವನ ಕೆಳೆತನವೆ ಸುಕೃತವೆನಗೆನಿಸಿ
ಅಂತರಂಗವ ತೆರೆದು ಸಂಭಾವಿಸಿದ ಮಿತ್ರ,
ಎಂತೆನ್ನನೊಂಟಿಯೊಳೆ ಬಿಡುವ ಮನ ನಿನಗೆ?
ಎಂದಿಗೂ ಪ್ರಿಯವನೇ ಬಯಸಿದವನೇ ಸಖನೆ, ಎಲ್ಲಿ ಸಂದೆ?
ನನಗು ಆ ತಾಣವನು ಹಸಗೈಯೆ ಹೊರಟೆಯಾ, ನೀನು ಮುಂದೆ?
ಇಂದು ಬರಿ ನೆನವಾದೆ, ಬರಿ ದುಗುಡವಾದೆ.
ಕವಿತೆ ಕನವರಿಸುತಿದೆ:
ನೀ ಸಂಜೆಯಧಿದೇವಿ ಸರಸತಿಯ ನೆಲೆಗೆ ಹೋದೆ
ಸಲ್ಲುತಿದೆ ಆ ದಿವ್ಯಸಭೆಯೊಳಗೆ ನಿನಗೆ ಮರ್ಯಾದೆ.

(ಇರುಳ ಮೆರಗು : ೧೯೭೮)

ತೀ.ನಂ.ಶ್ರೀ.

ಅಂಬಿಕಾತನಯದತ್ತ

●

ಔರಸ ಶ್ರೀಕಂಠ! ನೀನು ಸಾಹಿತಿ ನಂಟ.
ನಿನ್ನ ಮತಿಗಾವ ಸಾಮತಿ ಕೊಡಲಿ? ಸ್ಮೃತಿ ರುಚಿರ!
ಮಿಟುಕುಗಣ್ ಸಂನ್ನೆಯಲೆ ನಚ್ಚಮುಚ್ಚುವ ಬಂಟ
ಭಾವ ಆ ಕಂಠ, ಶುಚಿ ಜಿಹ್ವೆ ಚರ್ವಣ ಪ್ರಚುರ.

ಗುಣಪಕ್ಷಪಾತಿ ನಿನಗೇಕೆ ನಟನೆಯ ನೀತಿ?
ಕನ್ನಡಕ್ಕೆ ಕಸುವ ಕುದುರಿಸುವ ನಿನ್ನಾ ಶೀಲ,
ಹಿತಮಿತಕ್ಕೆ ಗೌರವದ ಬಣ್ಣ ತರುವಾ ರೀತಿ,
ನಾ ನೆನೆದು ಹಿಗ್ಗುತಿರುತಿದ್ದೆ- ಕಳಚಿತೆ ಕೀಲ?

ಕಾಲನೋ ಎಲ್ಲೊ ತೇಲ್ಗಣ್ಣ ತೂಕಡಿಕೆಯಲಿ
ಕಡಿದ ಛಾಯಾವೃಕ್ಷ! ಚಿಂತೆ ಹಂದರ ಹಾಕಿ
ಪಾಂಥರನು ಕೆಣಕುವದೋ ಅಣಕು ನೀರಡಿಕೆಯಲಿ
ಅರವಟಿಕೆ ಕೈಗಂಬ ಹಿಂದೆ ಉಳಿದಿವೆ ಬಾಕಿ,

ವಿಷಕಂಠದಿಂದೂ ಬರುವದುಂಟು ಠಕಟೀಕೆ
ಅವಿವೇಕ ದುಡುಕೆ ಸವಿಮರ್ಶೆ ಕುಶಲತೆ ಬೇಕೆ?

* *

ತೀ.ನಂ.ಶ್ರೀ.

ಶ್ರೀಕಂಠದಾ ಗಂಟೆ ಪೂಜೆ ನಡೆಸಿರುವಾಗ
ಆ ನಿನಾದವು ಹಬ್ಬಿ, ಆ ಭಾಗ ಈ ಭಾಗ
ಒಂದೆಂಬ ತೆರದಲಿ ತಾನೆ ಕಂಪನಗೊಂಡು
ರೂಪಿಸಿತು ಝುಗ್ಗನೇ ತನ ತಾನೇ ಕಂಡು

ಮೊದಲ ನೋಟಕೆ ಮೂಡಿ ನೆಲೆನಿಂತ ಆ ಮೋಡಿ
ಯಾವ ಬಲೆಗೂ ಸಿಗದ ಬಯಲಲ್ಲೆ ಹಾರಾಡಿ
ಕ್ರೀಡಿಸುತ್ತಿದೆ, ಸೆಲೆಯು ಯಾವ ನದಿಗೂ ತಾಯಿ
ಆ ಜಾವ, ಆ ಭಾವ, ಜನ್ಮಾಂತರಸ್ಥಾಯಿ

ಕಾವ್ಯದಲಿ ಕಾವ್ಯವಾ ರಸಿಕಹೃದಯದ ತುಂಬ
ಕಂಡವನ ಕಂಗಳೇ ಕಡಲ ದೀಪಸ್ತಂಭ
ನಿಸ್ತರಂಗದ ಮೇಲೆ ನಿದ್ರೆ ಮಾಡುತ್ತಿತ್ತು
ಕನ್ನಡದ ಹುತ್ತವೋ ಅಂದು ಮಾತಿನ ಸುತ್ತು

ಆ ಚೆಂದ ಹೂ–ನಗೆಯ ಬಿಂಬ ಬಣ್ಣಿಸಲಳವೆ?
ನೀರ ನೆರಳಲ್ಲರಲಿ ಕಮಲವಾಯಿತು ಕೊಳವೆ

(ಶ್ರೀಕಂಠತೀರ್ಥ : ೧೯೭೬)

ತೀ.ನಂ.ಶ್ರೀ.ಯವರ ಪಯಣ

ಚೆನ್ನವೀರ ಕಣವಿ

●

ಮೈಸೂರು–ಧಾರವಾಡದ ಉತ್ತರೋತ್ತರಕೆ
ಸಂದಿತು ಹರಕೆ. ದಿಲ್ಲಿಯನು ದಾಟಿ ಕಲಕತ್ತೆ:
ಕನ್ನಡದ ಕಲಶ ತುಳುಕಿತ್ತೆ? ಕೈಯ ಹೊತ್ತಗೆ
ಜಾರಿ, ಸರಸತಿಯ ವಜ್ರದ ಓಲೆ ಕಳಚಿತ್ತೆ?

ಕಲ್ಪವೃಕ್ಷದೆಳನೀರು, ಬಾಗಿರುವ ಗೊನೆವಾಳೆ,
ವಸಂತದ ಚಂದನ ಗಂಧ, ಒಲುಮೆ ಹೂಮಾಲೆ,
ಸ್ನೇಹದೂದುಬತ್ತಿಯ ನವುರು, ನರುದಂಬುಲದ,
ರುಚಿ–ಶುಚಿಗೊಳಿಸಿ, ನಸುನಗೆಯ ರೇಶಿಮೆ ವಸ್ತ್ರ
ಹೊದಿಸಿ, ನುಡಿಯ ಕನ್ನಡಿ ನೋಡಿ, ತಿದ್ದಿ ತೀಡಿ,
ಜನಪದ ಭಾವ–ಬುದ್ಧಿಯ ಬೃಹತ್ ಕೋಶದಲಿ
ಪ್ರೀತಿ ಪಾಥೇಯವನು ಕೈಕೊಂಡು, ಬಲುದಿನದ
ಪಯಣಕ್ಕೆ ಹೊರಟು ಬಿಟ್ಟರು: ನಮ್ಮ ತೀ.ನಂ.ಶ್ರೀ.

ಇಂದಿಲ್ಲ ನಾಳೆ ಬಂದು, 'ಎಲ್ಲಿಗೆ ಬಂತು ಕೆಲಸ?'
ಎಂದಾರು; ಈ ಗುಡಿಗೆ ಯಾರಿಡಬೇಕು ಕಳಸ?

ತೀ.ನಂ.ಶ್ರೀ.

ಜಿ.ಎಸ್. ಶಿವರುದ್ರಪ್ಪ

●

ನೋಡಿದರೆ, ನೋಡಿದಷ್ಟೂ ಇಷ್ಟ
ಮಾತೂ ಮಿತ, ಖಚಿತ, ನಿಷ್ಕೃಷ್ಟ

ಅಚ್ಚುಕಟ್ಟಿನ, ಸ್ವಚ್ಛತೆಯ ಸಂಕೇತ
ಮೂಡಿದೊಂದೊಂದು ಕೃತಿಯೂ ಕೃತಾರ್ಥ

ಪರಿಪೂರ್ಣತೆಯ ಅತೃಪ್ತ ಅನ್ವೇಷಕ
ಪ್ರತಿಭೆ ಪಾಂಡಿತ್ಯಗಳ ಹದವಾದ ಪಾಕ

ಸಂಶಯದ ಕಡಲಲ್ಲಿ ಗೋಪುರದ ದೀಪ
ಸದ್ದಿರದ ಸಾಧನೆಗೆ ಜೀವಂತ ರೂಪ

ಇನ್ನಾರು ಬೆಳೆದಾರು ನಿಮ್ಮ ಎತ್ತರಕೆ?
ಕನ್ನಡದ ಕೊರಳಲ್ಲಿ ಶ್ರೀಕಂಠಿಕೆ

ಗುರುಸ್ಮರಣೆ

ಸಾಕ್ಷಿ

●

ಧಾರವಾಡದ ಮಾಳಮರಡಿಯ
ಮರಳುಮಾಡುವ ಮರಗಳು
ಮುಡಿದ ಹೂಗಳ ಸ್ಪರ್ಶಮಾಡಿರೆ
ಸಂಜೆಗೆಂಪಿನ ಕರಗಳು

ತಂಪು ನೆರಳಲಿ ಹಕ್ಕಿ ಇಂಚರ
ತುಂಬಿ ಕಂಪಿತವಾಗಿರೆ
ಕೆಂಪು ಮರಡಿಯ ಮೇಲೆ ನೀಲಿಯ
ಮುಗಿಲು ಛತ್ತರಿ ಹಿಡಿದಿರೆ

ಅಲ್ಲಿ "ಒಲುಮೆ"ಯ ಮನೆಯು ನಿಮ್ಮದು
ನಿಮ್ಮ ಹಾಗೆಯೆ ಭವ್ಯವು!
ಕಣ್ಗೆ ಇನ್ನೂ ಕಟ್ಟಿದಂತಿದೆ
ಕನಸಿನಂದದಿ ರಮ್ಯವು

ಅಲ್ಲಿ ನೆಲ ಜಲ ಶುದ್ಧಪಾವನ
ಬುದ್ಧಿ ಭಾವನ ಸ್ಫಟಿಕವು
ಶಾರದಾಂಬೆಯ ನವಿಲ ಕುಣಿಸುವ
ನಲಿವು ತುಂಬಿದ ಹೃದಯವು!

ಒಳಗು ಹೊರಗೂ ನಿಮ್ಮ ಪರಿಸರ
ಸೌಮ್ಯ ಶಾಂತಲ ನಿರ್ಮಲ
ಬುದ್ಧಿ ಬೆಳಕೂ ಚಂದ್ರಶೀತಲ
ಮಾತು ಪ್ರೇಮಲ ಕೋಮಲ

ಅಚ್ಚ ಕನ್ನಡ ಪ್ರಜ್ಞೆ ಸಾಣೆಯ
ಹಿಡಿದು ಹೊಳೆದಿದೆ ನಿಮ್ಮೊಳು

ಭಾವಮಂಗಲ ಮಿಂದು ಸಂಸ್ಕೃತ
ಕಾವ್ಯಗಂಗಾ ಜಲದೊಳು

ಪೂರ್ವ ಪಶ್ಚಿಮ ಕೈಯಹಿಡಿದರು
ಚಿರಸನಾತನ ಮಾಟವು
ನಿಮ್ಮ ಮೈಯೊಳು ಮೂರ್ತಗೊಂಡಿದೆ!
ಮರೆಯಲಾಗದ ನೋಟವು!!

ಕೋಟು ಪಂಚೆಯನುಟ್ಟು ನಿಂತಿಹ
ತುಂಬು ದೇಹದ ಹಿಮಗಿರಿ
ತುಂಟ ಶಿವಮುಖವೆತ್ತಿ ಚಲಿಸುತ
ಲಿತ್ತು ಎಂದರೆ ನಂಬಿರಿ!

ಸ್ಮರಿಸಿ ಆ ಮುಖ ಶಿರವು ಬಾಗಿದೆ
ಸ್ಮರಣೆ ಪ್ರೇರಣೆ ನೀಡಲಿ
ನಿಮ್ಮ ಪದನಖ ಹೃದಯ ಧ್ಯಾನಿಸೆ
ರಸ ಸರಸ್ವತಿ ಹಾಡಲಿ

ಬಹುದಿನದ ಪಯಣಕ್ಕೆ

ಕ. ವೆಂ. ರಾಜಗೋಪಾಲ

●

ಸಾವೇ, ನಿನ್ನ ನಡತೆಗೆ ನಗಬೇಕೊ ಅಳಬೇಕೊ
ಅರಿಯೆ:
ಆ ಮುಗುಳುನಗೆಯರಳಿ ಮೈಕುಲುಕಿದಂತೆ ಮುಖದ
ರಂಗೇರಿದಾಗ ತಡೆದುಕೊಂಡಿರಬಲ್ಲ ಮೌನವನ್ನೇ ಅರಿಯೆ.
ನೀನು ಬಹು ಘಾಟಿ, ನನ್ನ ಗುರುವಿನ ಪಾದಗಳ ಮುಟ್ಟಿ
ಕೈ ಹಿಡಿದಂತೆ ಮಾಡಿ ಆರಾಮ ಕುರ್ಚಿಯಲ್ಲಿ ಕುಳಿತಂತೆಯೇ
ನಿನ್ನ ಕೆಲಸವನ್ನು ಮಾಡಿಬಿಟ್ಟೆ.

ಸಾವೇ, ನಿನ್ನ ನಡೆಗೆ ನಗಬೇಕೊ ಅಳಬೇಕೊ
ಅರಿಯೆ:
ಆ ಸರಳ ಮಲ್ಲಿನ ಪಂಚೆ, ಅಂಗಿಯ ಹೆಗಲಲ್ಲಿ ಚೌಕ;
ಕುಳಿತಂತೆ ಕಾಲನಲುಗಿಸುತ ಒಳಿತೆಲ್ಲ ಸವಿವ ಬಗೆ ಹಿರಿದೆಂದು
ಕಂಡರೂ ನೀನು ಘಾಟಿ, ನನ್ನ ಗುರುವಿನ ಹೃದಯವ ಮುಟ್ಟಿ
ಗೆಳೆತನದ ಉಪಚಾರವಾಗಿ ಕುಳಿತ ಬಟ್ಟಲಿನ ಸಾಕ್ಷಿಯಲ್ಲೇ
ನಿನ್ನ ಕೆಲಸವನು ಮಾಡಿಬಿಟ್ಟೆ.

ಸಾವೇ, ನಿನ್ನ ನಡತೆಗೆ ನಗಬೇಕೊ ಅಳಬೇಕೊ
ಅರಿಯೆ:
ಆ ಮೆದುಳು ಕನ್ನಡದ ಶ್ರೀಕರದ ಹರಕೆಯನು ಹೊತ್ತು
ಬೆಚ್ಚನೆಯ ಹೃದಯ ದುಡಿಮೆಯಲ್ಲಿದ್ದುದ ನಾನು ಮರೆಯೆ.
ನೀನು ಬಹು ಘಾಟಿ, ನನ್ನ ಗುರುವಿನ ಹೃದಯವನ್ನರಿತು ಮುಟ್ಟಿ
ಹತ್ತಿರದ ಮಗನ ಅರಿವಿಗೆ ಕೂಡ ತಿಳಿಯದಂತೆಯೆ ಮಾಡಿ
ನಿನ್ನ ಕೆಲಸವನು ಮಾಡಿಬಿಟ್ಟೆ.

ಸಾವೇ, ನಿನ್ನ ನಡೆತೆಗೆ ನಗಬೇಕೊ ಅಳಬೇಕೊ
ಅರಿಯೆ:

ರುಚಿಯ ಗಣಿಯಲ್ಲಿ ಗುಣವನರಸಲು ಹೋದವರಿಗೆಲ್ಲ
ಶಿಷ್ಯತನ ಬಂದರೂ ಮೆಚ್ಚಿಕೊಳ್ಳದ ಹೃದಯ ನಿನಗಿಂತ ತಣ್ಣಗೆ.
ನೀನು ಬಹು ಘಾಟಿ, ನನ್ನ ಗುರುವಿನ ಪಯಣದಲಿ ಉತ್ತರದ ಎಲ್ಲೆ ಮುಟ್ಟಿ
ಹಾದಿಗುಂಟಾ ನಡೆದು ರೈಲಿನಲ್ಲೂ ಹೊಂಚಿ ಲೌಕಿಕದ ಹಿರಿಮೆಯಲಿ
ನಿನ್ನ ಕೆಲಸವನು ಮಾಡಿಬಿಟ್ಟೆ.

ಸಾವೇ, ನಿನ್ನ ನಡೆತೆಗೆ ನಗಬೇಕೊ ಅಳಬೇಕೊ
ಅರಿಯೆ:
ಜ್ಞಾನದ ಹಣತೆ ಹೊತ್ತಿದ್ದ ವೇಳೆ ಬಿರುಗಾಳಿ ಬೀಸಲಿಲ್ಲ
ಹಣತೆಯಲ್ಲಿ ಎಣ್ಣೆ ತೀರಿರಲಿಲ್ಲ ಬತ್ತಿ ಉರಿದಿರಲಿಲ್ಲ ಪೂರ್ತಿ.
ನೀನು ಬಹು ಘಾಟಿ, ನನ್ನ ಗುರುವಿನ ಎದಯ ಬೆಳಕನು ಮುಟ್ಟಿ
ಅದು ಮೊದಲೆ ಹೊತ್ತಿಸಿದ ಹಣತೆಗಳು ನೂರಾರೆಂದು ತಿಳಿದಿದ್ದರೂ
ನಿನ್ನ ಕೆಲಸವನು ಮಾಡಿಬಿಟ್ಟೆ.

* *

ಬೆಳೆದ ಮರ ಬಿತ್ತು

ಕೆಂಪುತೋಟದ ನಡುವೆ ನಿಂತಿದ್ದ ಮರಗಳ ರಾಜ
ಬೆಳಯುತ್ತಲೇ ಇದ್ದ ಮುಗಿಲಿನತ್ತ
ಸುತ್ತುಮುತ್ತಲ ಸೊಬಗು ತಲೆಯೆತ್ತಿ ನೋಡಿತ್ತು
ನೆಲದ ಹಿರಿಮೆಯ ಬೆಳಸು ಮೈಗೊಂಡಿರುವ ಹಸಿರುತೇಜ

ಮುಗುಳುನಗೆ ಚೆಲ್ಲಿ ನಗದವರ ನಗಿಸಿ ಚೆಲುವ ಬಾಗಿಸಿ
ಬೆಳೆಯುತ್ತಲೇ ಇದ್ದ ಮುಗಿಲಿನತ್ತ
ಸುತ್ತುಮುತ್ತಲ ಸೊಬಗು ತಲೆಯೆತ್ತಿ ನೋಡಿತ್ತು
ಗಂಭೀರತೆಗೆ ಸೋತು ಒಳಗಿನೊಳಪೊಳ್ಳಿನಲಿ ಬಾತು ನಮಿಸಿ

ತಂಗಾಳಿಯೊಡನಾಡಿ ಮುಗಿಲಮಳೆಯಲ್ಲಿ ತೊಯ್ದು ನಗೆಯಾಡಿ
ಬೆಳೆಯುತ್ತಲೇ ಇದ್ದ ಮುಗಿಲಿನತ್ತ
ಸುತ್ತುಮುತ್ತಲ ಸೊಬಗು ತಲೆಯೆತ್ತಿ ನೋಡಿತ್ತು
ರೋಮಾಂಚಗೊಂಡು ಮೈಮುರಿದ ಮರಗಿಡವನೆಚ್ಚರಿಸುವಾ ಮೋಡಿ

ಮೊನ್ನೆ ಬಿತ್ತಾಮರವು ದಿಗ್ಭ್ರಮೆಗೊಳಿಸಿ ಕನ್ನಡದ ಕೆಂಪುತೋಟದಲ್ಲಿ
ಹೃದಯಸ್ಥಂಭನವಾಯ್ತೆ ಇಂಥ ಗುರುವಿಗೆ ನಮ್ಮ ಮುಂಜಾನೆ ಬೆಳಕಿನಲ್ಲಿ

ತೀ.ನಂ.ಶ್ರೀ.

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

●

ಕತ್ತೆತ್ತಿ ನೋಡಿದಲ್ಲದೆ ಕಾಣರೆಂಬಷ್ಟು
ಎತ್ತರಕೆ ಬೆಳೆದಂಥ ಸತ್ಯಕಾಮರು ನೀವು.
ನೀವೆತ್ತಿದರೆ ನಿಮ್ಮ ಬುದ್ಧಿಭುಜದಲಿ ನಿಂತು
ಹೆದ್ದಲೆಯ ನೆಮ್ಮಿ ಏನೆಲ್ಲ ನೋಡಿದೆವು!
ಹಳೆಮಾತಿನೊಡಲಲ್ಲಿ ಕುದಿ ಜೀವನರಸದ
ಕಡಲ ಚಿತ್ರವನು ಕಣ್ಣಾಗಿ ಈಜಿದೆವು.

ಪ್ರಕ್ಷೇಪ ಲೋಪ ಲಿಪಿಕಾರನಕ್ಷರಪಾಪ
ಕೋಪಗತ್ತರಿ ಬಾಯ್ಗೆ ಕೈಕಾಲುಗಳ ತೆತ್ತು
ಮುಖಸತ್ತು ನರಳುವೆಷ್ಟೋ ಮಾತ ಎಡೆಹಿಡಿದು
ಹೆಕ್ಕಿ ಕರುಣೆಯಲಿ, ಮುಖ ಮೈ ಸವರಿ ನೇಹದಲಿ,
ಗತಜೀವನದ ಶೋಕ ಕಥೆಗೆ ಕಿವಿಗೊಟ್ಟಿರಿ;
ಮೈ ತಿದ್ದಿ ಮತ್ತೆ ಮುನ್ನಿನ ಬಾಳನಿತ್ತಿರಿ.

ಮಾಸಿದ ಮಹಾ ಚಿತ್ರಗಳ ಗೆರೆಗಳನು ತಿದ್ದಿ
ಮತ್ತೆ ಮೆರುಗಿತ್ತ ನುಡಿ ಚಿತ್ರಕಾರರು ನೀವು;
ಬಿತ್ತದಲಿ ಮರಕಂಡ ಬುದ್ಧಿಭೀಮರು, ನಮ್ಮ
ನುಡಿಗಂಟನೆಷ್ಟೊ ಬಿಚ್ಚಿದಿರಿ, ಮೆಚ್ಚಲಿ ನೇಯ್ದು
ಹೊಚ್ಚಿದಿರಿ ಶಾಸ್ತ್ರವಸ್ತ್ರವನು ಕಾವ್ಯದ ಮೈಗೆ

ಮುಖದೆಲ್ಲ ಚೆಲುವು, ಮಡಿ ಗೆಲುವು ಎತ್ತರ ನಿಲುವೆ
ಗೆರೆಗೊಂಡಿತೆಂಬಂತೆ ಸ್ವಲ್ಪ ಬರೆದಿರಿ, ಏಕೆ,
ಹತ್ತು ತಲೆ ಬೇಕೆ ಚೆಲುವನು ಮೆರೆಸೆ? ರಾಮರುಚಿ;
ಎಲ್ಲ ಬಳಸಲೆ ಬೇಕು ನಿತ್ಯ ಪಾರಾಯಣಕೆ.

ಕಂಬನಿ

ಎಸ್. ದಿವಾಕರ್

●

ಹೆಜ್ಜೆ ಗುರುತುಗಳಿಲ್ಲ ಮಾಸಿಹೋಗಿವೆ. ನಿನ್ನೆ
ಬಿದ್ದದ್ದು ಭಾರಿ ಮಳೆ, ಗುಡುಗಿಲ್ಲ ಸಿಡಿಲಿಲ್ಲ.
ನೆಲವೆಲ್ಲ ಸೊದೆಯುಂಡು ಮುಗಿಲುದ್ದ ನಿಂತ ಮರ
ಇಂದು ಕಾಣದು, ಕಣ್ಣ ಮುಂದೆ ಮಂಜಿನ ಪರದೆ.
ಜಂಪಲಿಕ್ಕಿದ ಸೌಧ ನಮ್ಮದಿದು; ನಟ್ಟಿರುಳ
ಮೌನ ಮಿಡುಕಲು ಗಾಳಿ ಹುಯಿಲಿಡುತ ಯಾವುದೋ
ತೇಲಿ ಬಂದಿತು, ನಮಗೆ ಈ ಬೆಳಗು ನಿಬ್ಬರಗು!

ಚಿತ್ರಮಯ ಲಿಪಿಯಾದ ಚೈನಿ ಭಾಷೆಯ ಕಲಿತ
ಜನರೆಲ್ಲ ಕಲೆಗಾರರೆನಿಸುವರೆ? ಜ್ಞಾನನಿಧಿ–
ಯಾಗಿ ಬೋಧಕರಾಗಿ ಎಳೆಯರನು ಸಲುಹುವರೆ?
ಹೊಸತು ಹಳತಿನ ನಡುವೆ ಹಸೆಯಾಗಿ, ಕಾಲದೆದೆ
ಯಲ್ಲಿ ಹೆಸರನು ಕೊರೆದು ಹೋದಿರಾ ತೀ.ನಂ.ಶ್ರೀ.
ಕನ್ನಡದ ಪುಣ್ಯಗುಡಿ ನಿಮ್ಮಿಂದ ನಿತ್ಯಶ್ರೀ

ಬಾಷ್ಪಾಂಜಲಿ

ಎನ್. ಪ್ರಭಾಕರ

●

ಜಗಕೆಲ್ಲ ಸುಪ್ರಭಾತ
ರವಿ ಮೂಡಿರೆ
ಎಮಗೆಲ್ಲಾ ಚರಮ ಶೋಕ
ನಿನ್ನನಗಲಿರೆ.
ಸಿರಿಗನ್ನಡದೊಳು ನೀ
ಸಾರ್ವಭೌಮ
ಸಾರಸ್ವತ ಲೋಕದೊಳ್ನಿನ್ನಯ
ಜನ್ಮಧಾಮ.
ತನು-ಮನಧನವೆಲ್ಲಾ
ಈ ನಾಡ ಸೇವೆಗಾಗಿ
ಋಣ ಕಣ ಓರಣ
ಕನ್ನಡಿಗರೇಳ್ಗೆಗಾಗಿ
ಜನತೆಗಿತ್ತ ಸಂದೇಶ
ಜ್ಞಾನ ಕೈದೀವಿಗೆ
ಜನ್ಮ ಜನ್ಮದ ಭಾಗ್ಯ
ನಿನ್ನ ಹೆತ್ತ ಈ ಭುವಿಗೆ
ಕನ್ನಡಿಗರೆಲ್ಲರ ಬಾಷ್ಪಾಂಜಲಿ
ಕಬ್ಬಿಗ ತೀನಂಶ್ರೀ
ಧರೆಯೊಳು ಅವತರಿಸಿ ಸಾಫಲ್ಯವು
ನಿನ್ನಯ ಇತಿಶ್ರೀ

ತೀ.ನಂ.ಶ್ರೀಯವರಿಗೆ ಶ್ರದ್ಧಾಂಜಲಿ

ರಾ. ಅನಂತರಾಮು

●

ತೀರ್ಥಪುರ ನಂಜಪ್ಪ ಶ್ರೀಕಂಠರಿನ್ನಿಲ್ಲವೆಂಬ ವಿಷಮ ವಾರ್ತೆ,
ಕೂರಸಿಯ ತೆರನಂತೆಯೆಲ್ಲರನು ನೆರೆಯುರ್ಚಿ ತಿವಿಯುರೆದೆ,
ಕನ್ನಡದ ಸಿರಿಗಳಶ ಉರುಳಿತೇ ಹಾಯೆಂದು ಮಿಡುಕುತಲಿ,
ಕನ್ನಡದ ನುಡಿಬಳಗ ಕಂಬನಿಯ ಮಿಡಿಯುರೆದೆ

ಮೃದು ಕುಟಿಲ ಮುಂಗುರುಳ ಹಿಂಬದಿಗೆ ಸರಸಿ,
ಬೆಟ್ಟದಾವರೆ ಗೆಂಪ ಬಟ್ಟಮೊಗದಲಿ ಹರಿಸಿ,
ಸರಸ ನುಡಿ ಸವಿಜೇನ ಕಾವ್ಯದಲಿ ಬೆರಸಿ,
ಕರೆದು ನೀಡುತಲಿದ್ದ ಸ್ಮಿತವದನವಿನ್ನಿಲ್ಲ.

ಚಿಣ್ಣರಿಗೆ ಹಿರಿಯಣ್ಣ ನೀವಾಗಿ,
ಹಿರಿಯರಿಗೆ ಕಣ್ಮಣಿಯು ತಾವಾಗಿ,
ಕನ್ನಡಂಬೆಯ ಮುದ್ದುಗುವರರಾಗಿ,
ನಾಡನುಡಿ ಸಿರಿಮುಡಿಗೆ ಹೂವಾದಿರಿ.

"ಕಿರಿಯ ಕಾಣಿಕೆ" ಯಿಂದ ಮೈದೋರಿ 'ಒಲುಮೆ' ಬೀರಿ,
"ಪಂಪ–ನಂಬಿಯರ" ಕೃತಿಯೆಂಬ ಕಿಸಲಯದಿ ತೀವಿ,
"ಕಾವ್ಯಸಮೀಕ್ಷೆ"ಯಿಂದೌನ್ನತ್ಯಕ್ಕೇರಿ,
"ಭಾರತೀಯ ಕಾವ್ಯಮೀಮಾಂಸೆ"ಯಿಂ ಧವಳಗಿರಿಯನು ಸೇರಿ,
ಶೋಭಿಸಿದೆ ನಿಮ್ಮ ಕಾವ್ಯಲತೆಯು; ಅಳಿವಿಲ್ಲವದಕೆ.
ಕಾವ್ಯ ಕನ್ನಿಕೆಯ ಕರಿಮಣಿಯ ಕುರುಳಿನಲಿ
ಚೆಂಗುಲಾಬಿಯದೊಂದು ನಿಮ್ಮದಾಗಿಹುದೆಂದೂ

"ಕನ್ನಡದ ಸಿರಿಕಂಠ ಇನ್ನಿಲ್ಲ"

ತುಂಗಾತನಯ

ಅಂದು ಕನ್ನಡದ,
ಶ್ರೀಕಾರ ವೆನಿಸಿದ್ದ
"ಶ್ರೀ"ಯವರ, ತೆರವಿದ್ದ ತಾಣವನ್ನು.
ತೀ.ನಂ.ಶ್ರೀಯರೆ,
ತೀವಿದರು, ಇದಕಿಲ್ಲ
ಅನುಮಾನ ತಿಲದಷ್ಟು ಬಾಳಿ ಇನ್ನು,
ಎಂದು ನುಡಿದ ಜವ
ಇಂದು ಅವರನು ಮರೆಸಿ
ಕಬಳಿಸಿತು, ಇದಕಿಲ್ಲ ಕರುಣೆ ಎಳ್ಳಷ್ಟು.
ಇವರಿಗಾದ ಸಾವೂ,
"ಹಿಮಕೆ ಸಿಕ್ಕಿದ ಹೂವು"
ಇದರಿಂದ ಕನ್ನಡಕೆ ನಷ್ಟ ಬಹಳಷ್ಟು.
ಇನ್ನಿಲ್ಲವಾಯಿತು
ಕನ್ನಡದ ಸಿರಿಕಂಠ
ಮತ್ತೆ ದೊರಕವು ಅಂಥ ಮೆತ್ತಗಿನ ಮಾತು.
ಅವರೆ, ಆಗಿದ್ದರು
ಕನ್ನಡದ ಕೋಶವು,
ಅವರಿಂದ ಆ ಕಾರ್ಯ ಮುಂದೊರೆಯಿತು.
ಅವರ ಆಶಯಗಳ
ಪೂರೈಸುವ ಭಾರ
ನಮ್ಮ ಹೆಗಲಿನ ಮೇಲೆ ತಾನುಳಿಯಿತು.
ಶಾಂತಿಯನು ನೀಡಲಿ
ದೇವರವರಾತುಮಕೆ
ಇಷ್ಟನ್ನೆ ಕೇಳುವದು ನಮ್ಮ ಕಜ್ಜಾಯ್ತು,

ಪಿ.ಟಿ.ಓ

ಎಂ.ಎಚ್. ಹರಿದಾಸ

●

ಕೇವಲ ಸಿಹಿಕಾವ್ಯಗಳ ಜಿಲೇಬಿ ಸುರಳಿಗಳ
ಕೊಟ್ಟವನು ನೀನಲ್ಲ; ಹುಳಿ ಕಳತು
ರುಚಿಯಾದ ವಿಮರ್ಶಾ ತೊಕ್ಕು ಕೊಟ್ಟವನು ನೀನು
ಶುಚಿಯೂಟ ಕಾಣಿಕೆಯು ಕನ್ನಡಕೆ ಇದು ಒಂದು

'ಪಂಪ' ವಿಮರ್ಶೆಯಲ್ಲಿಯೇ ಹರಿದಿದೆ
ನಿನ್ನ ಪ್ರತಿಭೆಯ ಅರಬೀಸಮುದ್ರ, ದೊಡ್ಡ
ಹಡಗೇ ಬೇಕು ದಾಟಿಹೋಗಲು ಅದನು
ಹರಿಗೋಲು ನಾವೆಗಳ ಲೆಕ್ಕವೇಕೆ?

ಸ್ವಿಚ್ಚು ಹಾಕಿದರೇ ಬಲ್ಬು ದೀಪಿಸುವ
ಪಂಪನನು ಕೂಡ ತಿಳಿದುಕೊಂಡು ಶರಾವತಿಯೇ
ನೀನಾಗಿದ್ದಿ; ಒಲುಮೆಯಲಿ ತಂತಾನೆ
ತಿರುಗುತಿದೆ ನಿನ್ನನುರಾಗದಾಶೆಯ ಫ್ಯಾನು;
ವೇಗವನು ಕಾಣೆನಾದರೂ ತಂಪತರುತಿದೆ ಮೈಗೆ

ಇನ್ನೊಂದು ಮಾತು ಈ ಜಗದ ಜೀವನದಿಂದ
ಬಲುವೇಗ ಪಿ.ಟಿ.ಓ ಕೇಳಿಕೊಂಡು
ಓ.ಕೆ. ಅಂದವನು ನೀನು! ತೀರ್ಥಪುರದವನು!!
'ಒಲುಮೆ'ಯು ಹಾಡಿರುವ ನಿನ್ನ ಹೃದಯದ
ಟೆಲಿಫೋನು ಸ್ವರ ಕೇಳುತಿದೆ
ನನ್ನೀರಿಸೀವ್ಹರಿಗಿನ್ನೂ!

ಕನ್ನಡದ ಕಾವ್ಯ ನಲ್ಲಿಯೊಳು
ನವ್ಯ ನೀರಿಳಿವಾಗ ಬಾರಿಸಿತೋ
ನಿನ್ನ ವಾಚಿನಲಿ ಮೃತ್ಯು ಗಂಟೆ!

ಶ್ರದ್ಧಾಂಜಲಿ

ಬಿ.ಎಚ್.ಶ್ರೀಧರ

●

ಭವ ಭೂತಿಯಾಗಿದ್ದ ಶ್ರೀಕಂಠ
ಕಾರುಣ್ಯ ಸಾಗರದ ತೆರೆಗಳೆಬ್ಬಿಸಿ ಬಿಟ್ಟ
ರಾಮಚರಿತವ ಬರೆದು.
ಕನ್ನಡ ಶ್ರೀಕಂಠ ತೀರ್ಥಪುರ ಸಂಜಾತ
ಶಿಷ್ಯಕೋಟಿಯ ಹೃದಯ ಸಾಗರದಿ ಹಬ್ಬಿಸಿದ
ದುಃಖದುರಿಯನ್ನೀಗ ತನುವತೊರೆದು.

ವೈದರ್ಭಿ ಶೈಲಿಗುಣ ಕಾಳಿದಾಸನದಾಯ್ತು,
ಜೀವನದ ಕರ್ಣಾಟ ಶೈಲಿಗುಣ ಗುರುಗಾಯ್ತು.
ವಜ್ರ ನಿಷ್ಕೃಷ್ಟತೆಯ ಪಾಂಡಿತ್ಯದೊಂದು ಮುಖ
ಕುಸುಮಾಭ ಶಿಷ್ಯವಾತ್ಸಲ್ಯದಿನ್ನೊಂದು ಮುಖ-
ಶ್ರೀಕಂಠ ಮಾನಸ ಮಹಾಹಂಸಕೆ.

ಕನ್ನಡದ ಸಂಸ್ಕೃತಿಯ ರಾಜರಸ ಸಮ ಕಂದ
ಉನ್ಮೇಷವನು ಪಡೆದ ಗೌರವಗಿರೀಂದ್ರಾತ್ಮನ
ಎದೆಯ ತುಂಬಿತ್ತು ಹರಿದಿತ್ತು ಕಂಠವ ಮೀರಿ
ಎದೆ ನೆಲದ ಮೇಲೆ ಕಣ್ದೆರೆದೆಲ್ಲ ಕನ್ನಡರ!

ಗುರು ಅಸ್ತನಾಗಿಲ್ಲ. ಪಾಂಚ ಭೌತಿಕ ಕಾಯ
ಮರೆಯಾಯ್ತು ತೊಗಲುಗಣ್ಣಿಂದ ನಮ್ಮ.
ಭಾರತದ ಪ್ರತ್ಯಭಿಜ್ಞಾತ ರಸವಂತಿಕೆಯ
ಧೀರ ಗಂಭೀರ ಪ್ರವಾಹವೆಂದೆನಿಸಿದ್ದ.
ಸೌಹಾರ್ದ ಪದ್ಮಭವ ಸಾರಸ್ವತ ಶ್ರೀಗೆ ಶ್ರದ್ಧಾಂಜಲಿ
ಔಚಿತ್ಯ ಮಾಪಕ ಮಹಾಮಾನದಂಡನಿಗೆ
ಬದ್ಧಾಂಜಲಿ!

ತೀ.ನಂ.ಶ್ರೀ ಕನ್ನಡದ ವಚಶ್ರೀ !

ಸೇತುರಾಮ ಮಳಗಿ

●

ತೀನಂಶ್ರೀ ಕನ್ನಡದ ವಚಶ್ರೀ
ಎಂತು ಮರೆವುದವರ!
ಇನ್ನೆಂತು ಕಾಂಬುದವರ!॥ ಪ ॥

*

ದುಂಡು ಮೊಗದ ಬಗೆ, ಬಿರುಮಲ್ಲಿಗೆ ನಗೆ
ಇನ್ನು ಕಾಣದಾಯ್ತೇ!
ನಂದನವ ಸೇರಿಹೋಯ್ತೇ!

ಲೀನವಾಯಿತೇ ಕನ್ನಡ ದೀಧಿತಿ
ರವೀಂದ್ರ ಮಂಡಲದೆ,
ಆ ವಂಗ ರಸ-ಸ್ಥಲದೆ!

ಆ ರುಚಿಅಭಿರುಚಿ, ಆ ಮಾನಸ ಶುಚಿ
'ಮಾನಸ' ವರಸಿತ್ತೇ?
ಜಾಹ್ನವಿಯ ಜತೆಗೂಡಿತೇ!

ಕಣ್ಮರೆಯಾಯಿತೆ, ಬತ್ತಿ ಹೋಯಿತೇ
ವಿನಯ ಗಭೀರ ನಿಧಿ!
ವೈದಗ್ಧ್ಯದೊಂದು ಜಲಧಿ!

ಕಳೆದ ದಿನಗಳಾನೆನಹಿನ ನನೆಗಳ
ಸ್ಮೃತಿ ಶೋಧಿಸುತಿಹುದು,
ಕಂಬನಿಯ ಕೋಯುತಿಹುದು!

ದುಗುಡ ಧಗೆಗೆ ಬೆಂದಿರುವ ಬಗೆಗೆ ಸವಿ–
ನೆನಹೆ ಭ್ರಮಣಹಾರೀ!
ಭಾಷ್ಪಾಂಬು ಶಮನಕಾರೀ!

ತೀನಂಶ್ರೀ ಹೆಸರಾದುದೆಂದು? ಓ!
'ಗರಿ'ಯನೆತ್ತಿ ಹಿಡಿದು,
ಮಾಯೆಯನು ಬೀಸಿದಂದು!

ಹಕ್ಕಿ ಹಾರಿ ಕಣ್‌ಕುಕ್ಕಿತೇರಿ ಬಾನ್–
ಬಯಲ ಭೇದಿಸಿರಲು
ಚಿತ್‌ಚಮತ್ಕೃತಿಯ ಸರಲು!

ಗಗನಭೇರಿ ತನ್ಮಾತ್ರವೇಧಿ ಬಹು
ಲಾಗುವೇಗದಿಂದೆ–
ಚಿನ್ಮಯಕ್ಕೇರಿತಂದೇ!

ಬಣ್ಣ ಬಣ್ಣಗಳ ಗರಿಗಳುದುರುತಿರೆ
ಗರಿಗೆ ಗಾಳಿಯಾಡೆ
ಗಾಳಿಗೂ ಗರಿಯು ಮೂಡೆ!

ಏನು ವರ್ಣ! ಹೊಂಗರಿಯ ಚಿತ್ರ! ತು–
ಪ್ಪುಳವ ಸೋಂಕಿ ನೋಡಿ
ಬಾನಾಡಿ ಎಂಥ ಮೋಡಿ

ಇದುವೆ ಬಣ್ಣ ಈಯಿದುವೆ ಚಿತ್ರ! ಇ–
ನ್ನಾವುದಿದಕೆ ಸರಿಯು?
ಹಕ್ಕಿಯೇ 'ಗರಿ'ಗೆ ಗುರಿಯು!

ಹರೆಯ ಸುಗ್ಗಿ ಬಂದಿರಲು ಹಿಗ್ಗಿ ಕೈ–
ಸಾರ್ದಲಂಪುಗಳಲಿ
ಸವಿಯುಂಡು ಸೊಂಪುಗಳಲಿ!

ಎದೆಯ ಹಕ್ಕಿ ನಲ್‌ಸುಳಿಗೆ ಸಿಕ್ಕಿ ಸಂ–
ದೊಲುಮೆಯೊಂದ ಹಾಡಿ,
ಕಿನ್ನರರ ಜತೆಯ ಲಾಡಿ!

ಇಳೆಯ ಸಾರಿ ನಂಟರನು ಸೇರಿ ತಾ
ತಂದ ಸವಿಯ ಹಂಚಿ,
ಬದುಕಿತ್ತು ಏನೊ ಹೊಂಚಿ!

ಸಂಸ್ಕೃತಾಂಗ್ಲ ಕನ್ನಡದ ಹೊನ್ನ ಚೆ-
ನ್ನುಡಿಯ ಚೆಲುವನರಸಿ,
ಭಾರತಿಯ ಮನವನೊಲಿಸಿ,-

ಕವನತತ್ವ, ನುಡಿಯಂದ-ಛಂದ ಜಡಿ-
ಗರೆದು ತಾನತಾನ
ಮೆರೆದಿತ್ತು ಧೀವಿತಾನ!

'ಸಮಾಲೋಕನ'ದ ಕಾವ್ಯಸಮೀಕ್ಷೆಯ
ಸಮದರ್ಶನದೊದವು
ಇನ್ನೆಲ್ಲಿ ಅಂಥ ಹದವು!

ವಾಗ್ ವಿಲಾಸಝುರಿ ಆ ಭಾವದ ಪರಿ
ನಟೇಶಪದಲಾಸ್ಯ
ಶಿವ-ಸತೀ ಸಾಮರಸ್ಯ!

ಆ ತೂಕದ ನುಡಿ, ಆ ಜೋಕೆಯ ನಡೆ
ಸಮನ್ವಯದ ಒಲವು
ಇನ್ನಿಲ್ಲವಾಯ್ತೆ ಚೆಲುವು!

ಒಳಬೆಳಕಿನ ಕಿಡಿ ಅವರಾಡಿದ ನುಡಿ
ಹೋಯ್ತು ಇರುಳ ಕಾಳು
ಹಗುರಾಯ್ತು ಹೊತ್ತ ಬಾಳು!

ಮೃದುಮಧುರ ಭಾವ ಅದೆ ಬೆಳೆದ ಜೀವ
ಸಾವಿಗಾಯ್ತೆ ಜೇನು!
ಕಾಲನಿಗಕಾಲವೇನು!

ಕನ್ನಡದ ಭಕ್ತಿ ರೂಪಿಸಿದ ವ್ಯಕ್ತಿ
ಮೃತ್ಯುಗೊಂದು ತುತ್ತೇ?
ಪುಡಿಯಾಯ್ತೆ ಆಣಿಮುತ್ತೇ!

ತೀನಂಶ್ರೀ ಕನ್ನಡದ ಯಶಶ್ರೀ
ಅಳಿಯದಂಥ ಹೆಸರು!
ಎಂದಿಗೂ ಹಚ್ಚ ಹಸುರು

(ಬಾಳ ದಾರಿಯಲಿ ೨೦೦೫)

ತೀ.ನಂ.ಶ್ರೀ. ಸ್ಮಾರಕಗ್ರಂಥ

"ಶ್ರೀಕಂಠತೀರ್ಥ"

●

ದಿವಂಗತ ತೀ.ನಂ.ಶ್ರೀಕಂಠಯ್ಯನವರ ನೆನಪಿಗೆ ಅವರ ಹಿರಿಯರು, ಮಿತ್ರರು, ಅಭಿಮಾನಿಗಳು ಮತ್ತು ವಿದ್ಯಾರ್ಥಿಗಳು ಅರ್ಪಿಸಿದ ಸ್ಮಾರಕ ಸಂಪುಟ–"ಶ್ರೀಕಂಠತೀರ್ಥ." ಈ ಗ್ರಂಥದ ಸಂಪಾದಕರುಗಳು : ಎಂ. ಚಿದಾನಂದ ಮೂರ್ತಿ, ತೀ.ಶ್ರೀ. ನಾಗಭೂಷಣ, ಮತ್ತು ತೀ.ನಂ.ಶಂಕರನಾರಾಯಣ. ಈ ಗ್ರಂಥದ ಪ್ರಕಾಶಕರು: ತೀ.ನಂ.ಶ್ರೀ. ಅವರ ಸಂಸಾರ ವರ್ಗದವರು.

ಈ ಗ್ರಂಥದ ಮೊದಲ ಆವೃತ್ತಿ ೧೯೭೬ರಲ್ಲಿ ಪ್ರಕಟವಾಯಿತು. ಈ ಗ್ರಂಥದಲ್ಲಿ xxxii+೯೪೪ ಪುಟಗಳಿದ್ದು, ಅದರೊಡನೆ ೧೭ ಪ್ಲೇಟುಗಳಲ್ಲಿ ತೀ.ನಂ.ಶ್ರೀ. ಅವರ ಜೀವನಕ್ಕೆ ಸಂಬಂಧಪಟ್ಟ ೩೦ ಛಾಯಾಚಿತ್ರಗಳಿವೆ. ೧೯೮೦ರಲ್ಲಿ ಇದು ಮತ್ತೆ ಪುನಮುದ್ರಣವಾಗಿದೆ. ಈ ಒಂದು ಸಾವಿರ ಪುಟಗಳ ಕ್ಯಾಲಿಕೊ ಕವಚದ ಗ್ರಂಥಕ್ಕೆ ೭೫ ರೂಪಾಯಿಗಳ ಬೆಲೆ ನಿಗದಿಯಾಗಿದ್ದು, ಇದನ್ನು ಸಾರ್ವಜನಿಕರಿಗೆ ೫೦ ರೂಪಾಯಿಗಳ ರಿಯಾಯಿತಿ ಬೆಲೆಯಲ್ಲಿ ಮಾರಾಟ ಮಾಡಲಾಯಿತು.

ತೀನಂಶ್ರೀಯವರ ಜೀವಿತ ಕಾಲದಲ್ಲಿಯೇ ಅವರ ಶಿಷ್ಯರು ಮತ್ತು ಅಭಿಮಾನಿಗಳು ಯೋಜಿಸಿದ್ದ ಗೌರವ ಗ್ರಂಥವನ್ನು ಅವರ ಅಕಾಲ ನಿಧನದಿಂದ ಕಾರ್ಯಗತ ಮಾಡಲಾಗಲಿಲ್ಲ. ನಮ್ಮ ತಂದೆಯವರು ದೆಹಲಿಗೆ ತಮ್ಮ ಕೊನೆಯ ಪ್ರಯಾಣ ಬೆಳೆಸುವ ಮೊದಲು ಅವರ ಶಿಷ್ಯರುಗಳು ಅಭಿನಂದನ ಗ್ರಂಥ ಸಮರ್ಪಣೆಗೆ ತೀನಂಶ್ರೀಯವರ ಒಪ್ಪಿಗೆಯನ್ನು ಪಡೆದಿದ್ದರು. ಆದರೆ ಉಳಿದಿದ್ದೆಲ್ಲಾ ಈಗ ಇತಿಹಾಸ.

ನಾನು ನಮ್ಮ ಸಂಸಾರದೊಡನೆ ಬೆಂಗಳೂರಿಗೆ ೧೯೭೩ರಲ್ಲಿ ಬಂದು ನೆಲಸಿದ ನಂತರ ತೀನಂಶ್ರೀಯವರ ಪ್ರಿಯಶಿಷ್ಯರಾದ ಡಾ.ಎಂ. ಚಿದಾನಂದ ಮೂರ್ತಿಯವರ ನೇತೃತ್ವದಲ್ಲಿ ನಮ್ಮ ಸಂಸಾರದಿಂದಲೇ ಈ ಕೆಲಸವನ್ನು ಮಾಡಬೇಕೆಂದು ನಿರ್ಧರಿಸಿದೆವು. ೧೯೭೪ ಜೂನ್ ೧ರಂದು ಈ ಕೆಲಸ ಪ್ರಾರಂಭಿಸಿ ಆಲೋಚಿಸಿದಂತೆ ಸರಿಯಾಗಿ ಎರಡು ವರ್ಷಗಳಲ್ಲಿ ೧೯೭೬ನೆಯ ಮೇ ೩೦ ರಂದು '**ಶ್ರೀಕಂಠತೀರ್ಥ**'ವನ್ನು ಬಿಡುಗಡೆ ಮಾಡಲಾಯಿತು. ಇದಕ್ಕೆ

ಕನ್ನಡ ಮತ್ತು ಹೊರನಾಡಿನ ವಿದ್ವಾಂಸರುಗಳು ಮತ್ತು ಸಹೃದಯರು ಮೌಲಿಕವಾದ ಲೇಖನಗಳನ್ನು ಕಳುಹಿಸಿ ಗ್ರಂಥದ ಉನ್ನತ ಮೌಲ್ಯಕ್ಕೆ ಕಾರಣರಾದರು. ಪ್ರಕಟಣೆಯ ನಂತರ ಸರ್ಕಾರ, ವಿದ್ಯಾಸಂಸ್ಥೆಗಳು ಗ್ರಂಥಾಲಯಗಳು ಮತ್ತು ಅನೇಕ ಅಭಿಮಾನಿಗಳು ಪುಸ್ತಕವನ್ನು ಕೊಂಡು ಮೊದಲನೆಯ ಪ್ರಕಟಣೆ ಬಹುಬೇಗನೆ ಮುಗಿದುಹೋಗಿ ೧೯೮೦ರಲ್ಲಿ ಮತ್ತೆ ಮರುಮುದ್ರಣವಾಗಿ ಅದರ ಪ್ರತಿಗಳೂ ಮುಗಿದು ಹೋದವು. ಒಂದು ಸಂಭಾವನ ಗ್ರಂಥ ಇಷ್ಟು ಬೇಗನೆ ಮರುಮುದ್ರಣವಾದ ಮತ್ತೊಂದು ಉದಾಹರಣೆಯಿಲ್ಲ ಎಂದು ಬಲ್ಲವರೆಲ್ಲರ ಅಭಿಪ್ರಾಯವಾಗಿದೆ. ಇದು ಗ್ರಂಥದ ಮೌಲ್ಯವನ್ನು ಎತ್ತಿ ತೋರಿಸುತ್ತದೆ.

'ಶ್ರೀಕಂಠತೀರ್ಥ' ಗ್ರಂಥ ಪ್ರಕಟಣೆಯ ಉದ್ದೇಶ, ಬಿಡುಗಡೆಯ ಸಮಾರಂಭದ ವರದಿಗಳು, ಪ್ರಕಟಣೆಯ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಬಂದ ಕೆಲವು ಲೇಖನಗಳು ಸಮಾರಂಭಕ್ಕೆ ಬಂದ ಸಂದೇಶಗಳು ಮತ್ತು ಗ್ರಂಥದ ಬಗ್ಗೆ ಬಂದ ವಿಮರ್ಶೆಗಳು ಎಲ್ಲವನ್ನೂ ಇಲ್ಲಿ ಕೊಡಲಾಗಿದೆ.

ಗ್ರಂಥದ ಉದ್ದೇಶ

●

ನಾವು ಲೇಖಕರುಗಳಿಗೆ ಅವರ ಲೇಖನವನ್ನು ಕೋರಿ ಬರೆದ ಕೆಳಗಿನ ಪತ್ರದಿಂದ ಈ ಗ್ರಂಥದ ಉದ್ದೇಶ ತಿಳಿದುಬರುತ್ತದೆ.

ಬೆಂಗಳೂರು
೧-೬-೧೯೭೪

ಮಾನ್ಯರೆ,

ಪ್ರೊಫೆಸರ್ ತೀ.ನಂ.ಶ್ರೀಕಂಠಯ್ಯನವರು ದಿವಂಗತರಾಗಿ ಎಂಟು ವರ್ಷಗಳಾಗುತ್ತ ಬಂದುವು. ಅವರು ಇಂದು ಕೇವಲ ಒಬ್ಬ ವ್ಯಕ್ತಿಯ ಹೆಸರಾಗಿ ಮಾತ್ರವಲ್ಲದೆ, ಒಂದು ದೊಡ್ಡ ಪರಂಪರೆಯ ಸಂಕೇತವಾಗಿಯೂ ಪರಿಣಮಿಸಿದ್ದಾರೆ. ಆ ಪರಂಪರೆ ಉಳಿದೀತೆ, ಬೆಳೆದೀತೆ ಎಂಬ ಆಸೆಯನ್ನಿಟ್ಟುಕೊಂಡಿರುವ ಈ ಕಾಲದಲ್ಲಿ ಅವರ ಸ್ಮರಣೆ ನಮಗೆಲ್ಲ ಸ್ಫೂರ್ತಿದಾಯಕವಾಗಿದೆ.

ತೀ.ನಂ.ಶ್ರೀಕಂಠಯ್ಯನವರು ಮಹಾ ವಿದ್ವಾಂಸರು, ಮೇಧಾವಿಗಳು, ಆದರ್ಶ ಪ್ರಾಧ್ಯಾಪಕರು, ತುಂಬು ಜೀವನವನ್ನು ಬಾಳಿದವರು. ಸೃಜನಾತ್ಮಕ ಸಾಹಿತ್ಯದಲ್ಲಿ ಕೃಷಿಮಾಡಿ ಕವಿತೆ ಪ್ರಬಂಧಗಳ ಕ್ಷೇತ್ರಕ್ಕೆ ತಮ್ಮದೇ ಕೊಡುಗೆಗಳನ್ನು ಕೊಟ್ಟಿದ್ದಾರೆ. ವಿಮರ್ಶೆ, ಕಾವ್ಯ ಮೀಮಾಂಸೆ ಕ್ಷೇತ್ರಗಳಲ್ಲಿ ಅವರು ಮಾಡಿರುವ ಕಾರ್ಯ ಮೌಲಿಕವಾದುದು. ಭಾಷಾವಿಜ್ಞಾನ, ಛಂದಸ್ಸು, ಗ್ರಂಥಸಂಪಾದನೆ, ಶಾಸನ ಶಾಸ್ತ್ರ, ಜನಪದ ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಅವರು ಮಾಡಿರುವ ಸಂಶೋಧನೆಗಳು ಇಂದಿಗೂ ಮಾದರಿಯಾಗಿವೆ. ಪಾಂಡಿತ್ಯ, ರಸಿಕತೆಗಳ ಅಪೂರ್ವ ಸಂಗಮವಾಗಿದ್ದ ಅವರೊಡನೆ ಇನ್ನೊಬ್ಬರನ್ನು ಹೋಲಿಸಲು ಕಷ್ಟವಾದೀತು. ಬೇರೆ ಆಕರ್ಷಣೆಗಳನ್ನು ತೊರೆದು ಉಪಾಧ್ಯಾಯ ಜೀವನವನ್ನೇ ಆರಿಸಿಕೊಂಡ ಅವರು ಮೈಸೂರು, ಕರ್ನಾಟಕ, ಪುಣೆ ವಿಶ್ವವಿದ್ಯಾನಿಲಯಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಜ್ಯೋತಿಯನ್ನು ನೀಡಿದರು. ಕರ್ನಾಟಕದಲ್ಲಿ ಮಾತ್ರವಲ್ಲದೆ ಕರ್ನಾಟಕದಾಚೆಗೂ ಖ್ಯಾತರಾಗಿ ಕನ್ನಡದ ವಿದ್ವತ್ತಿಗೂ ಗೌರವವನ್ನು ತಂದರು.

ಅವರು ಬದುಕಿದ್ದಾಗಲೇ ಅಭಿನಂದನ ಗ್ರಂಥವೊಂದನ್ನು ಅರ್ಪಿಸಬೇಕೆಂದಿದ್ದ ಕೆಲವರ ಆಸೆ ಕೈಗೂಡದಾಯಿತು. ಈಗ ಸ್ಮಾರಕ ಗ್ರಂಥವನ್ನಾದರೂ ತಂದು ಅವರ ಬಗ್ಗೆ ಅವರ ಬಂಧುವರ್ಗ, ಮಿತ್ರವರ್ಗ, ಶಿಷ್ಯವರ್ಗದವರು ಇಟ್ಟಿರುವ ಗೌರವಕ್ಕೆ ಅಭಿವ್ಯಕ್ತಿ ನೀಡಬೇಕೆಂದು ನಾವು ಯೋಚಿಸಿದ್ದೇವೆ. ನಿಮ್ಮ ಸಮ್ಮತಿ, ಸಹಕಾರ ಇವೆಯೆಂದು ನಂಬಿದ್ದೇವೆ.

ಇಲ್ಲಿಯೇ ನಾವು ಒಂದು ವಿಷಯವನ್ನು ಹೇಳಲು ಬಯಸುತ್ತೇವೆ. ಇಡೀ ಗ್ರಂಥದ ಮುದ್ರಣ ವೆಚ್ಚವನ್ನು ಅವರ ಸಂಸಾರ ವರ್ಗದವರು ಭರಿಸಲು ಒಪ್ಪಿದ್ದಾರೆ.

ಸಂಪುಟದ ಯೋಜನೆ

ಈ ಸಂಪುಟದಲ್ಲಿ ನಾಲ್ಕು ಭಾಗಗಳಿರುತ್ತವೆ.

ಭಾಗ ೧ : (ಅ) ತೀ.ನಂ.ಶ್ರೀಯವರ ಹಿರಿಯರು, ಬಂಧುಗಳು, ಆತ್ಮೀಯ ಮಿತ್ರರು ಇವರಲ್ಲಿ ಕೆಲವರನ್ನು ಮಾತ್ರ ವಿಶೇಷವಾಗಿ ಕೇಳಿಕೊಂಡು ಅವರ ಜೀವನ ಮತ್ತು ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಬರೆಯಿಸಿದ ಲೇಖನಗಳು ಇಲ್ಲಿರುತ್ತವೆ. (ಆ) ಬೇರೆ ಬೇರೆ ಕ್ಷೇತ್ರಗಳಿಗೆ ತೀ.ನಂ.ಶ್ರೀ. ಅವರ ಕೊಡುಗೆ ಏನೆಂಬುದರ ಬಗ್ಗೆ ವಿದ್ವಾಂಸರುಗಳಿಂದ ಬರೆಯಿಸಿ ಈ ಭಾಗದಲ್ಲಿ ಸೇರಿಸುತ್ತೇವೆ.

ಭಾಗ ೨ : ಈ ಭಾಗದಲ್ಲಿ ನಾಡಿನ ವಿದ್ವಾಂಸರು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬರೆದ ಮೌಲಿಕ ವಿಮರ್ಶನ, ಸಂಶೋಧನ ಲೇಖನಗಳಿರುತ್ತವೆ. ನಮ್ಮ ದೃಷ್ಟಿಯಲ್ಲಿ ಇದು ಗ್ರಂಥದ ಬಹು ಮುಖ್ಯವಾದ ಭಾಗ. ಇದಕ್ಕೆ ಕಾರಣವನ್ನು ಹೀಗೆ ಕೊಡಬಹುದು: ತೀ.ನಂ.ಶ್ರೀ. ಮೆಚ್ಚುಗೆಗಾಗಿ ಬದುಕಿದವರಲ್ಲ, ಜ್ಞಾನಕ್ಕಾಗಿ ಬದುಕಿದವರು. ಅವರು ಬರೆದದ್ದು ವಾಸ್ತವವಾಗಿ ಕಡಿಮೆ. ಇದಕ್ಕೆ ಕಾರಣ ಪ್ರತಿಯೊಂದರಲ್ಲೂ ಪರಿಪೂರ್ಣತೆಯನ್ನು ನಿರೀಕ್ಷಿಸಿದ್ದು. (ಅವರ ಅನಿರೀಕ್ಷಿತ ನಿಧನ ನಿವೃತ್ತಿಯ ನಂತರ ಕೈಗೊಳ್ಳಬೇಕೆಂದಿದ್ದ ಅವರ ಅನೇಕ ಯೋಜನೆಗಳಿಗೆ ತಡೆಯನ್ನು ತಂದಿತು.) ಆದರೆ ಅವರು ಬರೆದದ್ದೆಲ್ಲಾ ಬೆಲೆಯುಳ್ಳದ್ದು. ಇದನ್ನು ನೆನಪಿನಲ್ಲಿಟ್ಟುಕೊಂಡು, ಅವರ ಘನತೆಗೆ ತಕ್ಕ ಲೇಖನಗಳ ಸಂಪುಟವನ್ನು ಅವರ ಹೆಸರಿನಲ್ಲಿ ಹೊರತರುವ ದೊಡ್ಡ ಉದ್ದೇಶ ನಮ್ಮದಾಗಿದೆ. ಅಂತಹ ಲೇಖನವನ್ನು ನೀವು ಕೊಡಬಲ್ಲಿರಿ ಎಂಬ ಸಂಪೂರ್ಣ ವಿಶ್ವಾಸವಿರುವುದರಿಂದ ನಿಮ್ಮನ್ನ ಈ ಪತ್ರದ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನಿಮ್ಮ ಕ್ಷೇತ್ರ ಯಾವುದೇ ಆಗಿರಲಿ–ಆಧುನಿಕ ಅಥವಾ ಪ್ರಾಚೀನ ಸಾಹಿತ್ಯ ವಿಮರ್ಶೆ, ಕಾವ್ಯಮೀಮಾಂಸೆ, ಭಾಷಾ ವಿಜ್ಞಾನ, ಛಂದಸ್ಸು, ಇತಿಹಾಸ, ಮಾನವಶಾಸ್ತ್ರ, ಜಾನಪದ, ಶಿಕ್ಷಣ ಇತ್ಯಾದಿ ಮಾನವಿಕ ವಿಷಯಗಳಲ್ಲಿ (Humanities) ನೀವು ದುಡಿದಿದ್ದೀರಿ. ನಿಮ್ಮ ಇಷ್ಟಕ್ಕೆ ಬಂದ ಸ್ವತಂತ್ರ ವಿಚಾರದ, ಸಂಶೋಧನಾತ್ಮಕ ಲೇಖನವನ್ನು ನಮಗೆ ಈ ಪತ್ರ ತಲುಪಿದ ಮೂರು ತಿಂಗಳೊಳಗಾಗಿ ಕಳಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಭಾಗ ೩ : ಇದರಲ್ಲಿ ತೀ.ನಂ.ಶ್ರೀ. ಯವರ ಅಪ್ರಕಟಿತ ಲೇಖನಗಳಿರುತ್ತವೆ. ಎಷ್ಟು, ಎಂಥವು ಎಂಬ ಬಗ್ಗೆ ನಮಗಿನ್ನೂ ಸ್ಪಷ್ಟ ಕಲ್ಪನೆಯಿಲ್ಲವಾದುದರಿಂದ ಆ ಬಗ್ಗೆ ಹೆಚ್ಚಿಗೆ ಏನೂ ಹೇಳಲಾರೆವು.

ಭಾಗ ೪ : ಇದರಲ್ಲಿ ಅವರ ಪತ್ರವ್ಯವಹಾರದ ಒಂದು ಭಾಗವಿರುತ್ತದೆ. ಅವರ ಜೀವನದ ಮಹತ್ವದ ಘಟನೆಗಳು, ಕೃತಿಗಳ ಸಮಗ್ರ ಪಟ್ಟಿ ಇತ್ಯಾದಿ ಸಂಗತಿಗಳಿರುತ್ತವೆ.

ಮತ್ತೆ ನಿಮ್ಮನ್ನು ಒತ್ತಾಯಮಾಡಿ ಪ್ರಾರ್ಥಿಸುತ್ತಿದ್ದೇವೆ. ನೀವು ಲೇಖನವನ್ನು ತಪ್ಪದೆ ಬರೆಯಬೇಕು. ನಿಗದಿಯಾದ ಕಾಲದಲ್ಲಿ ಕಳಿಸಿಕೊಡಬೇಕು. (ತೀ.ನಂ.ಶ್ರೀ.ಯವರ ಬಗ್ಗೆ ನಿಮಗೂ ನಮಗೂ ಎಲ್ಲರಿಗೂ ಇರುವ ಸದ್ಭಾವನೆಯೇ ಹೀಗೆ ಒತ್ತಾಯಪಡಿಸಲು ಬೆಂಬಲ ವಾಗಿದೆ.) ಈ ಪತ್ರ ತಲುಪಿದೊಡನೆ ಲೇಖನ ಬರೆಯಲು ಒಪ್ಪಿದ್ದಕ್ಕೆ ದಯಮಾಡಿ ತಿಳಿಸಿ. ಸಾಧ್ಯವಾದರೆ ಲೇಖನದ ವಿಷಯವನ್ನೂ ತಿಳಿಸಿ.

ಈ ಸ್ಮಾರಕ ಗ್ರಂಥವು ತೀ.ನಂ.ಶ್ರೀ. ಅವರ ಜೀವನ ಹಾಗೂ ಸಾಧನೆಗಳನ್ನು ತಿಳಿಸುವ ಗ್ರಂಥವಾಗಿರುವುದು ಮಾತ್ರವಲ್ಲದೆ ಒಂದು ಅತ್ಯುತ್ಕೃಷ್ಟ ಪರಾಮರ್ಶನ ಗ್ರಂಥವೂ (Reference book) ಆಗಬೇಕೆಂಬುದು ನಮ್ಮ ಬಯಕೆ. ಅಂತಹ ಗ್ರಂಥ ಮಾತ್ರ ದಿವಂಗತರ ಆತ್ಮಕ್ಕೆ ಪ್ರಿಯವಾದೀತು.

ಇತಿ ತಮ್ಮ ವಿಶ್ವಾಸಿಗಳು.
ಸಂಪಾದಕರು

* * *

ಈ ಗ್ರಂಥ ೧೯೭೬ರ ಮೇ ತಿಂಗಳು ೩೦ ರಂದು ಪ್ರೊ. ವಿ.ಕೃ.ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ, ಹಿರಿಯರಾದ ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಂದ ಬೆಂಗಳೂರಿನಲ್ಲಿ ಬಿಡುಗಡೆಯಾಯಿತು. ಡಾ.ಜಿ.ಎಸ್. ಶಿವರುದ್ರಪ್ಪನವರು ತೀ.ನಂ.ಶ್ರೀ.ಯವರ ವಿಷಯವಾಗಿ ಉಪನ್ಯಾಸ ಮಾಡಿದರು.

ಈ ಗ್ರಂಥ ಒಂದು ಕವಿತೆ, ಐದು ಜನ ಹಿರಿಯರ ಸಂದೇಶಗಳು, 'ತೀನಂಶ್ರೀ : ವ್ಯಕ್ತಿಯಾಗಿ ಮತ್ತು ಕೃತಿಕಾರರಾಗಿ' ಭಾಗದಲ್ಲಿ ೧೫ ಲೇಖನಗಳು ಮತ್ತು 'ಪ್ರಬಂಧಾಂಜಲಿ' ಭಾಗದಲ್ಲಿ ಸಾಹಿತ್ಯ, ಕಾವ್ಯಮೀಮಾಂಸೆ, ಛಂದಸ್ಸು, ಭಾಷಾವಿಜ್ಞಾನ, ಇತಿಹಾಸ, ಕಲೆ ಮತ್ತು ಜಾನಪದ ಮತ್ತು ಸಂಕೀರ್ಣ ವಿಭಾಗಗಳಲ್ಲಿ ಒಟ್ಟು ೬೬ ಲೇಖನಗಳನ್ನೊಳಗೊಂಡಿದೆ. ಇದಲ್ಲದೆ ತೀನಂಶ್ರೀ ಮತ್ತು ಸಂಸಾರದವರ, ಸ್ನೇಹಿತರ ಮತ್ತು ತೀನಂಶ್ರೀಯವರ ಸೇವಾ ಜೀವನಕ್ಕೆ ಸಂಬಂಧಪಟ್ಟ ಸುಮಾರು ೩೦ ಛಾಯಾಚಿತ್ರಗಳನ್ನೊಳಗೊಂಡಿದೆ. ಈ ಬೃಹದ್ಗ್ರಂಥದಲ್ಲಿ ಸುಮಾರು ಒಂದು ಸಾವಿರ ಪುಟಗಳಿವೆ.

ಈ ಗ್ರಂಥದ ಮೊದಲ '**ಸಂಪಾದಕರ ಮಾತು**'ವಿನಲ್ಲಿ ಬರೆದಿರುವ ಈ ವಾಕ್ಯಗಳಿಂದ ಗ್ರಂಥದ ಉದ್ದೇಶ ಸಫಲವಾದ ವಿಷಯ ಗೊತ್ತಾಗುತ್ತದೆ.

"..... (ಲೇಖನಗಳ ಬಗ್ಗೆ) ನಮ್ಮ ಕೋರಿಕೆಯನ್ನು ಮನ್ನಿಸಿದ ಕನ್ನಡ ಲೇಖಕ ಬಳಗ ನಮ್ಮ ನಿರೀಕ್ಷೆ ಮೀರಿ ಸಹಕರಿಸಿತು. ಅದರ ಫಲವೇ "ಶ್ರೀಕಂಠತೀರ್ಥ'. ಇದು "ಪರಾಮರ್ಶನ ಗ್ರಂಥ" ವಾಗಿದೆಯೆಂದು ನಮ್ಮ ನಂಬಿಕೆ. ಓದುಗರೂ ಅದನ್ನು ಒಪ್ಪುವರೆಂದು ನಂಬಿದ್ದೇವೆ.

"ಶ್ರೀಕಂಠ ತೀರ್ಥ" ಎಂಬ ಹೆಸರನ್ನು ಈ ಗ್ರಂಥಕ್ಕೆ ಇಡಲು ಕಾರಣಗಳಿವೆ. "ತೀರ್ಥ" ಎಂಬ ಮಾತಿಗೆ ಪವಿತ್ರ ಜಲ, ಬೋಧೆ, ಪೂಜ್ಯವ್ಯಕ್ತಿ, ಮಾರ್ಗ, ಜ್ಞಾನ ಮುಂತಾದ ಅರ್ಥ ಸಾಹಚರ್ಯಗಳಿವೆ. (ಶ್ರೀಕಂಠಯ್ಯನವರ ಊರು ತೀರ್ಥಪುರ.) ಉಳಿದ ಭಾಗವನ್ನು ವಿವರಿಸುವ ಅಗತ್ಯವಿಲ್ಲ. ಶ್ರೀಕಂಠಯ್ಯನವರ ಕಂಠಶ್ರೀಯಿಂದ ಹೊರಟ ವಾಣಿಯಲ್ಲಿ ಮತ್ತು ಜ್ಞಾನದಲ್ಲಿ ಮಿಂದವರೆಷ್ಟು, ಅದರಿಂದ ಪ್ರಚೋದಿತರಾದವರೆಷ್ಟು! ಉಪಾಧ್ಯಾಯರಾಗಿ, ಸಂಶೋಧಕರಾಗಿ, ಮಾನವ ಪ್ರೇಮಿಯಾಗಿ, ಅವರು ಬದುಕಿದ ಬಗೆಯನ್ನು ನೆನೆದರೆ ಮನಸ್ಸಿಗೆ ಎಷ್ಟೋ ತಂಪಾಗುತ್ತದೆ. 'ಶ್ರೀಕಂಠ' ನಾದ ಶಿವನಂತೆ ಅವರು ಜ್ಞಾನಕ್ಷೇತ್ರದ ತಪಸ್ವಿ, ಜ್ಞಾನದ ಅನೇಕ ಕ್ಷೇತ್ರಗಳಲ್ಲಿ ಹೊಸ ಗವಾಕ್ಷಿಗಳನ್ನು ತೆರದಂತಿರುವ ಲೇಖನಗಳ ಈ ಸಂಪುಟಕ್ಕೆ 'ಶ್ರೀಕಂಠತೀರ್ಥ' ಎಂಬ ಹೆಸರು ಅನ್ವರ್ಥವಾಗಿದೆಯೆಂದು ಭಾವಿಸಿದ್ದೇವೆ.

ನಾವು ಮೊದಲು ಈ ಸಂಪುಟದಲ್ಲಿ ನಾಲ್ಕು ಭಾಗಗಳಿರಬೇಕೆಂದು ಯೋಜಸಿದ್ದೆವು. (ಕೋರಿಕೆಯ ಪತ್ರದಲ್ಲಿ ತಿಳಿಸಿದಂತೆ) ...... ಆದರೆ ಮೊದಲ ಎರಡು ಭಾಗಗಳೇ ಒಂಬಯ್ನೂರು ಪುಟಗಳನ್ನು ಮಿಕ್ಕಿದ್ದರಿಂದ ಕೊನೆಯ ಎರಡು ಭಾಗಗಳನ್ನು ಬಿಡಬೇಕಾಯ್ತು......"

ತೀನಂಶ್ರೀಯವರಂಥವರಿಗೆ ನಿಜವಾದ ಗೌರವ ಸಲ್ಲುವುದು ಹೊಗಳಿಕೆಯಿಂದಲ್ಲ, ಅವರಂತೆಯೇ ಕೆಲಸಮಾಡಿ ತೋರುವುದರಿಂದ ಮೌಲಿಕ ಸ್ವತಂತ್ರ ಲೇಖನಗಳಿರುವ ಎರಡನೆಯ ಭಾಗವನ್ನು 'ಪ್ರಬಂಧಾಂಜಲಿ' ಎಂದು ನಾವು ಕರೆದಿರುವುದು ಆ ಕಾರಣಕ್ಕಾಗಿಯೇ.

ಗ್ರಂಥ ಬಿಡುಗಡೆ ಸಮಾರಂಭದ ಪತ್ರಿಕಾ ವರದಿಗಳು

●

'ಡಾಕ್ಟರ್‌ಗಳ ಡಾಕ್ಟರ್' ತೀನಂಶ್ರೀಗೆ ಮಾಸ್ತಿ ಪ್ರಶಸ್ತಿ

ಬೆಂಗಳೂರು, ಮೇ ೩೦ : ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲಿಲ್ಲ. ಅಕಾಡೆಮಿ ಪುರಸ್ಕಾರವಿಲ್ಲ, ಡಾಕ್ಟರೇಟ್ ಸಿಗಲಿಲ್ಲ. ಕಣ್ಮರೆಯಾಗಿ ಹತ್ತು ವರ್ಷಗಳ ನಂತರ ಇಂದು ತೀ.ನಂ.ಶ್ರೀ ಅವರಿಗೆ "ಡಾಕ್ಟರ್‌ಗಳ ಡಾಕ್ಟರ್" ಪ್ರಶಸ್ತಿ ಲಭ್ಯ.

"ಅವರು ಡಾಕ್ಟರೇಟ್ ಪಡೆಯ ಬೇಕಾದವರಲ್ಲ, ಕೊಡಬೇಕಾದ ಮನುಷ್ಯ" ಎಂದು ಹೇಳಿದ "ಕನ್ನಡದ ಹಿರಿಯಣ್ಣ" ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಡಾಕ್ಟರ್‌ಗಳ ಡಾಕ್ಟರ್ ಒಳ್ಳೆಯ ಕನ್ನಡಿಗ, ವಿಶ್ವಕುಟುಂಬಿ ಎಂದು ತೀ.ನಂ.ಶ್ರೀ ಅವರನ್ನು ವರ್ಣಿಸಿದಾಗ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಅವರ ಶಿಷ್ಯಂದಿರು ಮತ್ತು ಅಭಿಮಾನಿಗಳು ಕರತಾಡನ ಮಾಡಿ ಅನುಮೋದಿಸಿದರು.

ಕವನದಿಂದ ಆರಂಭಿಸಿ ವಿಮರ್ಶೆ, ಸಂಶೋಧನ, ಭಾಷಾ ಸಾಹಿತ್ಯ, ಛಂದಸ್ಸು ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃಷಿ ಮಾಡಿದ ವಿದ್ವಾಂಸ, ಮೇಧಾವಿ ಹಾಗೂ ಆದರ್ಶ ಪ್ರಾಧ್ಯಾಪಕ ತೀ.ನಂ.ಶ್ರೀಕಂಠಯ್ಯ ಅವರ ಸ್ಮಾರಕಗ್ರಂಥ "**ಶ್ರೀಕಂಠತೀರ್ಥ**"ವನ್ನು ಬಿಡುಗಡೆ ಮಾಡಿದ ಮಾಸ್ತಿ ಅವರು, ಪ್ರಶಸ್ತಿ, ಸನ್ಮಾನದ ವಿಚಾರವನ್ನು ಪ್ರಸ್ತಾಪಿಸಿದಾಗ "ದೈವ ಅವರ ವಿಷಯಕ್ಕೆ ಕರುಣೆ ತೋರಲಿಲ್ಲ" ಎಂದರು.

"ತೀ.ನಂ.ಶ್ರೀ ಅವರ ಮೂರ್ತಿ ಬಹಳ ಆಕರ್ಷಕವಾಗಿತ್ತು, ಮಾತು ಯಾವಾಗಲೂ ನಯ. ಮುಖದ ಮೇಲೆ ಮಂದಸ್ಮಿತ. ಅವರು ಎಲ್ಲಿ ಹೋದರೂ ಜನ ಅವರನ್ನು ಮುತ್ತಿ ಕೊಳ್ಳುತ್ತಿದ್ದರು. ಒಟ್ಟು ಜನತೆಯ ಪ್ರೀತಿಗೆ ಪಾತ್ರರಾಗಿದ್ದರು. ನಮ್ಮ ತೀ.ನಂ.ಶ್ರೀ" ಎಂದರು.

ಅತೃಪ್ತ ಅನ್ವೇಷಕ

"ಸನ್ಮಾನ, ಪ್ರಶಸ್ತಿ ಅವರಿಗೆ ಲಭಿಸದಿರಬಹುದು. ಅವರು ಮುತ್ತಿನಂಥಾ ಹತ್ತು ಪುಸ್ತಕ ಬರೆದಿದ್ದಾರೆ. ಬರೆದಿದ್ದೆಲ್ಲಾ ಗಟ್ಟಿಕಾಳು" ಎಂದು ತಿಳಿಸಿದ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಜಿ.ಎಸ್. ಶಿವರುದ್ರಪ್ಪ ಅವರು, "ತೀ.ನಂ.ಶ್ರೀ ಅವರು ಬರೆದ ಭಾರತೀಯ ಕಾವ್ಯಮೀಮಾಂಸೆ ಆಚಾರ್ಯ ಕೃತಿ. ವಿದ್ವಾಂಸರಾದರೂ ಅವರು

ವಿದ್ವತ್ತಿನ ದುರ್ಗದಲ್ಲಿ ಹುದಗಿಕೊಳ್ಳಲಿಲ್ಲ. ಅವರೊಬ್ಬ ಪರಿಪೂರ್ಣತೆಯ ಅತೃಪ್ತ ಅನ್ವೇಷಕ" ಎಂದರು.

ಸೃಜನಶೀಲತೆಯೇ ತೀ.ನಂ.ಶ್ರೀ ಅವರ ವ್ಯಕ್ತಿತ್ವದ ಕೇಂದ್ರ ಪ್ರತಿಭಾ ಬಿಂದು ಎಂದು ಅಧ್ಯಕ್ಷತೆ ವಹಿಸಿದ್ದ ವಿ.ಕೃ. ಗೋಕಾಕ್ ಹೇಳಿದರು.

ಕಳೆದ ಎಂಟು, ಹತ್ತು ವರ್ಷಗಳಲ್ಲಿ ಹಿರಿಯ ನವೋದಯ ಸಾಹಿತಿಗಳನ್ನು ಕಳೆದುಕೊಂಡಿರವ ನಾವು ಸಂಧ್ಯಾ ವಾತಾವರಣದಲ್ಲಿ ಬಾಳುತ್ತಿದ್ದೇವೆ ಎಂದು ನುಡಿದ ಅವರು, "ತೀ.ನಂ.ಶ್ರೀ ಅವರ ಭಾರತೀಯ ಕಾವ್ಯಮೀಮಾಂಸೆ ಕೃತಿಯನ್ನು ಇಂಗ್ಲಿಷಿನಲ್ಲಿ ಪ್ರಕಟಪಡಿಸಬೇಕು" ಎಂದರು.

ಸ್ಮರಣೀಯ ಸಮಾರಂಭ

ತೀ.ನಂ.ಶ್ರೀ ಅವರ ಸಂಸಾರ ವರ್ಗ ಏರ್ಪಡಿಸಿದ್ದ ಸ್ಮರಣೀಯ ಸಮಾರಂಭದ ಆರಂಭದಲ್ಲಿ ಪುತ್ರ ತೀ.ಶ್ರೀ ನಾಗಭೂಷಣ ಸ್ವಾಗತಿಸಿದರು. ಬೇಂದ್ರೆ, ಕುವೆಂಪು, ಪು.ತಿ.ನ ಮುಂತಾದ ಹಿರಿಯ ಸಾಹಿತಿಗಳಿಂದ ಬಂದ ಸಂದೇಶಗಳನ್ನು ಪುತ್ರಿ ನಾಗರತ್ನ ಚಂದ್ರಶೇಖರಯ್ಯ ಓದಿ ಹೇಳಿದರು. "ಶಿಷ್ಯ ವರ್ಗ ನಡೆಸಬೇಕಾಗಿದ್ದ ಸಮಾರಂಭವನ್ನು ಅವರ ಆತ್ಮೀಯ ಬಂಧುವರ್ಗದವರು ಏರ್ಪಡಿಸಿದ್ದಾರೆ" ಎಂದು ದೇಜಗೌ ಕಳಿಸಿದ ಸಂದೇಶದಲ್ಲಿ ತಿಳಿಸಿದ್ದರು.

ಗ್ರಂಥದ ಸಂಪಾದಕರ ಪರವಾಗಿ ಮಾತನಾಡಿದ ಎಂ. ಚಿದಾನಂದ ಮೂರ್ತಿ ಅವರು, ಪಾಂಡಿತ್ಯ – ರಸಿಕತೆಗಳ ಅಪೂರ್ವ ಸಂಗಮವಾಗಿದ್ದ ತೀ.ನಂ.ಶ್ರೀ ಅವರ ಕುರಿತಾದ ಗ್ರಂಥ ರಚನೆಗೆ ೧೯೭೪ ರಿಂದ ನಡೆದ ಪ್ರಯತ್ನಗಳನ್ನು ವಿವರಿಸಿದರು. ತೀ.ನಂ. ಶಂಕರನಾರಾಯಣ ವಂದನೆ ಸಲ್ಲಿಸಿದರು.

*

"ರೂಪವಂತ ಕನ್ನಡಿಗ"

"ರೂಪವಂತ ಕನ್ನಡಿಗ" ತೀ.ನಂ.ಶ್ರೀ ಅವರ ಬಗ್ಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಮೋಹಗೊಂಡಿದ್ದರು.

"ಆಕರ್ಷಕ ಮೂರ್ತಿ, ಮಾತಿನಲ್ಲಿ ನಯ, ಮಂದಸ್ಮಿತ ವದನ ಎಂಥ ಚೆಲುವಾದ ಹುಡುಗ! ನಾನು ಹುಡುಗಿಯಾಗಿದ್ದರೆ ಅವನನ್ನು ಮದುವೆ ಆಗುತ್ತಿದ್ದೆ."

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇಂದು "ಶ್ರೀಕಂಠತೀರ್ಥ" ಸ್ಮಾರಕ ಗ್ರಂಥ ಬಿಡುಗಡೆ ಮಾಡಿದ ಮಾಸ್ತಿ ಅವರೇ ಈ ಮಾತನ್ನು ಹೇಳಿದಾಗ ಸಭೆಯಲ್ಲಿ ನಗು ಉಕ್ಕಿತು. ತೀ.ನಂ.ಶ್ರೀ. ಯವರ ಧರ್ಮಪತ್ನಿ ಸಮಾರಂಭದಲ್ಲಿ ಹಾಜರಿದ್ದರು.

(ಪ್ರಜಾವಾಣಿ, ೩೧-೫-೧೯೭೬)

* * *

ಆಚಾರ್ಯ ಸ್ಮರಣೆ: "ಶ್ರೀಕಂಠತೀರ್ಥ"ದ ಬಿಡುಗಡೆ

ಬೆಂಗಳೂರು, ಮೇ ೩೦: ಆಧುನಿಕ ಕನ್ನಡದ ಆಧಾರಸ್ತಂಭಗಳಲ್ಲಿ ಒಬ್ಬರೆನಿಸಿದ ಪ್ರಾತಃ ಸ್ಮರಣೀಯ, ಆದರ್ಶ ಅಧ್ಯಾಪಕ– ಆಚಾರ್ಯ ತೀ.ನಂ.ಶ್ರೀ.ಯವರ ಸ್ಮರಣೆಯ ಶ್ರೀಕಂಠತೀರ್ಥದಲ್ಲಿ ಮಿಂದು, ಮುಳುಗಿದ್ದ ಸಭೆಯಲ್ಲಿ ಇಂದು ಹಿರಿಯರಾದ ಡಾ. ಮಾಸ್ತಿಯವರು "ಶ್ರೀಕಂಠತೀರ್ಥ" – ಸ್ಮಾರಕ– ಸಂಭಾವನಾ ಗ್ರಂಥವನ್ನು ಓದುಗರಿಗೆ ಬಿಡುಗಡೆ ಮಾಡಿಕೊಟ್ಟರು.

ದಿವಂಗತ ಆಚಾರ್ಯರ ಸಾಹಿತಿ ಮಿತ್ರರು, ಶಿಷ್ಯ ಅಭಿಮಾನಿಗಳು ತುಂಬಿದ್ದ ಸಭೆಯಲ್ಲಿ ತೀ.ನಂ.ಶ್ರೀ.ಯವರ ಹಿರಿಯ ಗೆಳೆಯರಲ್ಲಿ ಒಬ್ಬರಾದ ಡಾ. ವಿ.ಕೃ.ಗೋಕಾಕರ ಅಧ್ಯಕ್ಷತೆಯಲ್ಲಿ ಗ್ರಂಥ ಬಿಡುಗಡೆ ಮಾಡಿದ ಡಾ. ಮಾಸ್ತಿ "ಒಳ್ಳೆಯ ಕನ್ನಡಿಗನಾಗಿ ಒಳ್ಳೆಯ ಭಾರತೀಯನಾಗಿ, ಒಳ್ಳೆಯ ವಿಶ್ವಪ್ರಜೆಯಾಗಿ ಬಾಳಿದ ಅವರ ನೆನಪು ನಮ್ಮನ್ನೂ ಒಳ್ಳೆಯ ದಾರಿಯಲ್ಲಿ ನಡೆಸಲಿ" ಎಂದು ಹಾರೈಸಿದರು.

ತಮಗೆ ಸಹಜವಾದ ಆತ್ಮೀಯತೆಯಿಂದ ಮಾತನಾಡಿದ ಡಾ. ಮಾಸ್ತಿ "ಅವರಲ್ಲಿದ್ದ ದೊಡ್ಡ ಸಂಗತಿಯೆಂದರೆ ಆ ಆಕರ್ಷಕ ಮುಖ, ನಯವಾದ ಮಾತು, ಎಲ್ಲಿ ಹೋದ್ರೂ ಅವರ ಸುತ್ತ ಜನ ಸೇರುತ್ತಿದ್ದರು. ಎಂಥ ಚೆಲುವಾದ ಹುಡುಗ. ನಾನು ಹುಡುಗಿಯಾಗಿದ್ರೆ ಅವನನ್ನ ಮದುವೆ ಆಗ್ತಿದ್ದೆ" ಎಂದು ಹೇಳಿ ಸಭೆಯನ್ನು ಆವರಿಸಿದ್ದ ಗಂಭೀರ ಮೌನದ ವಾತಾವರಣಕ್ಕೆ ನಗೆ ಲೇಪನ ಮಾಡಿದರು.

"ಜಯಕರ್ನಾಟಕ" ಅಂದಿನ ಉದಯೋನ್ಮುಖ ಲೇಖರನ್ನು ಬೆಳಕಿಗೆ ತರುತ್ತಿದ್ದ ದಿನಗಳಲ್ಲಿ ತೀ.ನಂ.ಶ್ರೀ.ಯವರ ಸದಭಿರುಚಿಯಿಂದ ಕೂಡಿದ ಪ್ರೇಮಗೀತೆ ಪ್ರಕಟಗೊಂಡ ಸಂದರ್ಭವನ್ನು ನೆನಪಿನ ಉಗ್ರಾಣದಿಂದ ಹೊರತೆಗೆದ ಡಾ॥ ಮಾಸ್ತಿಯವರು "ಎಂಥ ಒಳ್ಳೆಯ ಹುಡುಗ, ಎಂಥ ಸದ್ಗುಣಶಾಲಿ ಎಂಥ ಗುಣಗ್ರಹಣ" ಎಂದು ಉದ್ಗರಿಸಿದ್ದಲ್ಲದೆ ದಿವಂಗತ ತೀ.ನಂ.ಶ್ರೀ. ಯವರಿಂದ ತಮ್ಮ ಗೌರವ ಹೆಚ್ಚಾಯಿತೆಂದು ಹೇಳಿದರು.

"ಅವರಿಗೆ ಡಾಕ್ಟರೇಟ್ ಬರಲಿಲ್ಲ ಅಂತಾರೆ. ಆದರೆ, ಅವರು ಡಾಕ್ಟರೇಟ್ ಪಡೆಯುವವ ರಾಗಿರಲಿಲ್ಲ, ಕೊಡುವವರಾಗಿದ್ರು. ಅವರ ಯೋಗ್ಯತೆ ಅಂಥಾದ್ದು. ಅವರಿಗೆ ಡಾಕ್ಟರೇಟ್ ಸಿಗದಿದ್ರೆ ಅದು ಕೊಡದಿದ್ದವರ ದುರ್ದೈವ. ಅವರು ಡಾಕ್ಟರ್‌ಗಳ ಡಾಕ್ಟರ್ ಆಗಿದ್ರು" ಎಂದು ಮಾಸ್ತಿಯವರು ಹೇಳಿದಾಗ ಸಭೆ ಹಾರ್ದಿಕವಾಗಿ ಅದನ್ನು ಅನುಮೋದಿಸಿತು.

"ದಿವಂಗತ ತೀ.ನಂ.ಶ್ರೀ.ಯವರ ಶಿಷ್ಯನಾಗುವ ಯೋಗವನ್ನು ಗಿಟ್ಟಿಸಿಕೊಂಡ ಡಾ॥ ಜಿ.ಎಸ್. ಶಿವರುದ್ರಪ್ಪನವರು ತೀ.ನಂ.ಶ್ರೀ. ನಿಧನರಾದಾಗ, "ಕನ್ನಡ ನುಡಿ"ಯಲ್ಲಿ– "ನೋಡಿದರೆ ನೋಡಿದಷ್ಟೂ ಇಷ್ಟ. ಮಾತು ಮಿತ, ಖಚಿತ, ನಿಷ್ಕೃಷ್ಟ"ವೆಂದು ಬರೆದ ಒಂದು ಪಂಕ್ತಿ ಸಾಕು ಎಂದರು.

ಸಮಾರಂಭದ ಔಚಿತ್ಯವನ್ನು ಮೆಚ್ಚಿದ ಡಾ॥ ಶಿವರುದ್ರಪ್ಪನವರು ತಮ್ಮ ನೆನಪಿನ ಭಂಡಾರದಿಂದ ೩೫ ವರ್ಷ ಹಿಂದಿನದೊಂದು ಘಟನೆಯನ್ನು ಹೊರತೆಗೆದು ಸಭೆಗೆ ನೀಡಿದರು.

ಅಂದು–ಇಂದು

ಅಂದು ೩೫ ವರ್ಷಗಳ ಹಿಂದೆ ೧೯೪೧ನೇ ಸೆಪ್ಟೆಂಬರ್ ಭಾನುವಾರ ಆಚಾರ್ಯ ಬಿ.ಎಂ.ಶ್ರೀ. ಯವರಿಗೆ ಡಾ॥ ಮಾಸ್ತಿಯವರ ಮುಂದಾಳುತನದಲ್ಲಿ "ಸಂಭಾವನೆ" ಗೌರವ ಗ್ರಂಥ; ಅಪರೂಪ ವೆನಿಸಿದ ಆ ಸಮಾರಂಭದಲ್ಲಿ ಬಿ.ಎಂ.ಶ್ರೀ. ಭಾಗವಹಿಸಿದ್ದರು. ಇಂದು ೧೯೭೬ರ ಮೇ ಭಾನುವಾರ ಮಾಸ್ತಿಯವರದೇ ಮುಂದಾಳುತನ. ಆಚಾರ್ಯ ತೀ.ನಂ.ಶ್ರೀ.ಯವರಿಗೆ ಸಂಭಾವನಾ ಗ್ರಂಥ ಸಮರ್ಪಣೆ. ಆದರೆ ಇಂದು ಅವರು ನಮ್ಮೊಡನಿಲ್ಲ. ೧೯೪೧ರ ಸಂಭಾವನಾ ಗ್ರಂಥ ಆ ಪ್ರಕಾರದ ಸಾಹಿತ್ಯಕ್ಕೆ ನಾಂದಿಯಾಯಿತು. ಇಂದಿನ ಸಂಭಾವನಾ ಗ್ರಂಥ ಆ ಪ್ರಕಾರದಲ್ಲಿ ಒಂದು ಮೈಲಿಗಲ್ಲಾಗಿದೆ. ೨ ವರ್ಷಗಳ ಅವಧಿಯಲ್ಲಿ ಶ್ರಮವಹಿಸಿ ಸಿದ್ಧಪಡಿಸಿರುವ ಗ್ರಂಥ ವ್ಯಕ್ತಿಯ ಔನ್ನತ್ಯಕ್ಕೆ ಸಮರ್ಪಕ ಕಾಣಿಕೆಯೆನಿಸಲಿದೆ. ಇದು ಡಾ॥ ಜಿ.ಎಸ್. ಶಿವರುದ್ರಪ್ಪ ನವರಿಗೆ ಮೂಡಿದ ನಂಬಿಕೆ.

"ಮಂದಹಾಸದ ನಂದಾದೀಪ"ದಂತಿದ್ದ ತೀ.ನಂ.ಶ್ರೀ. ಹೆಚ್ಚು ಬರೆಯಲಿಲ್ಲ. ಆದರೆ, ಬರೆದದ್ದು ಮುತ್ತಿನಂತಹ ೧೦ ಘಟ್ಟಿಕಾಳು. ಎಲ್ಲ ಕಾಲಕ್ಕೂ ಸಲ್ಲುವ ಕೃತಿಗಳು. ಕವಿಯಾಗಿ ಬೆಳೆದು ವಿಮರ್ಶೆ, ಸಂಶೋಧನೆ, ಭಾಷಾಶಾಸ್ತ್ರ, ಛಂದಸ್ಸುಗಳಲ್ಲಿ ತಲಸ್ಪರ್ಶಿ ಪಾಂಡಿತ್ಯ ಪಡೆದರೂ – ಪರಿಪೂರ್ಣತೆಯ ಈ ಅತೃಪ್ತ ಅನ್ವೇಷಕ ತನ್ನ ಒಳಗಿನ ಕವಿಚೇತನವನ್ನು ಕಳೆದುಕೊಳ್ಳಲಿಲ್ಲ" ಎಂದರು ಡಾ॥ ಶಿವರುದ್ರಪ್ಪ.

ಉಳಿದೆಲ್ಲ ಭಾಷೆಗಳಿಗೆ

ಪಾಂಡಿತ್ಯದ ದುರ್ಗದಲ್ಲಿ ಅಡಗದೆ ಸಮಕಾಲೀನ ಸಾಹಿತ್ಯದ ಎಲ್ಲ ಪ್ರಕಾರಗಳೊಡನೆ ಸಂಬಂಧ ಹೊಂದಿದ್ದ ಈ ಸಹೃದಯಿ, ತಮ್ಮ ಆಚಾರ್ಯ ಕೃತಿಯಾದ ಭಾರತೀಯ ಕಾವ್ಯ ಮೀಮಾಂಸೆಯ ಮೂಲಕ ವಿಮರ್ಶೆಯ ಮೊದಲ ಮಾದರಿಯನ್ನು ತೋರಿಸಿದರು. ಈ ಉದ್ಗ್ರಂಥ ಎಲ್ಲ ಭಾರತೀಯ ಭಾಷೆಗಳಿಗೂ ಹೋಗಬೇಕೆಂಬುದು ಡಾ॥ ಶಿವರುದ್ರಪ್ಪನವರ ಆಸೆ. ಇದಕ್ಕೆ ಡಾ॥ ವಿ.ಕೃ. ಗೋಕಾಕರ ಪ್ರಬಲ ಸಮರ್ಥನೆ – ಜಗತ್ತಿಗೇ ಕಾಣಿಕೆ ಆಗಬಲ್ಲ ಈ ಕೃತಿ ಎಲ್ಲರ ಕಣ್ಣಿಗೆ ಕಿವಿಗೆ ಹೋಗಬೇಕು.

"ಸಂಭಾವನಾ ಗ್ರಂಥ" ಸಮರ್ಪಣೆಯ ಪರಿಪಾಠ–ಆವರಣ ವಾಙ್ಮಯ ಎಲ್ಲ ಸಾಹಿತ್ಯದಲ್ಲೂ ಉಂಟೆಂದು ಹೇಳಿದರು ವಿ.ಕೃ. ಗೋಕಾಕ್.

ನಾನಾಮುಖವಾಗಿ ಹರಿದ ತೀ.ನಂ.ಶ್ರೀ.ಯವರ ಕೇಂದ್ರ ಪ್ರತಿಭಾ ಬಿಂದು–ಸೃಜನ ಶೀಲತೆ, ಅವರ ಪಾಂಡಿತ್ಯ, ವಿದ್ವತ್ತುಗಳು ಆಂಶಿಕ. ಅವರು ಬರೆದ ವಿಮರ್ಶೆ ಶಾಸ್ತ್ರಬದ್ಧವಾದ ಶುಷ್ಕ ವಿಮರ್ಶೆ ಅಲ್ಲ. ತಾವು ಕಾವ್ಯಾಲೋಕನದಿಂದ ಪಡೆದ ರಸಾನುಭವವನ್ನು ಹಂಚಿಕೊಳ್ಳುವ ವಿಧಾನವೆಂದು ಡಾ॥ ಗೋಕಾಕ್ ಹೇಳಿದರು.

ಸೃಜನಶೀಲತೆ, ಹೊಸತನ್ನು ಸ್ವಾಗತಿಸುವ ಸಾಮರ್ಥ್ಯ, ಸೌಂದರ್ಯೋಪಾಸನೆ, ವಿಷಮ ಸಂಸ್ಕೃತಿಗಳಲ್ಲಿ ಐಕ್ಯವನ್ನು ಕಾಣುವ ದೃಷ್ಟಿ–ಔದಾರ್ಯ, ಹಾಸ್ಯಕ್ಕೆ ಒಲಿದ ಮನಸ್ಸು, ಇವೆಲ್ಲ ಒಟ್ಟು ಗೂಡಿದ ಅವರ ಕೆಚ್ಚು ಗಂಗಾಪ್ರವಾಹದಂತೆ ನಾನಾ ಮುಖವಾಗಿ ಅಭಿವ್ಯಕ್ತಗೊಂಡಿತು ಎಂದು ಡಾ॥ ಗೋಕಾಕ್ ವಿಶ್ಲೇಷಿಸಿದರು.

ಒಂದು ದಶಕದ ಮೊದಲೇ ಕಣ್ಮುಚ್ಚಿದ ತೀ.ನಂ.ಶ್ರೀ ತಮ್ಮ ಜೀವಿತ ಕಾಲದಲ್ಲೇ "ಪದ್ಯ ಹೋಯ್ತು ಗದ್ಯ ಬಂತು ಡುಂಡುಂ, ಗದ್ಯ ಹೋಯ್ತು ಮಾತು ಬಂತು ಡುಂಡುಂ, ಮಾತು ಹೋಯ್ತು ಮೌನಬಂತು ಡುಂಡುಂ" ಎಂಬ ಮೂರೇ ಸಾಲುಗಳಲ್ಲಿ ತಮ್ಮ ಸಾಹಿತ್ಯ ಸೇವೆಯ ಅವಸ್ಥಾಂತರಗಳನ್ನು ಹುದುಗಿಸಿದ ಚರಮ ಗೀತೆಯನ್ನೂ ಬರೆದಿಟ್ಟರು – ಇದನ್ನು ಹೇಳಿದವರೂ ಡಾ॥ ಗೋಕಾಕರೇ.

ಆಮಂತ್ರಿತರಿಗೆ ಶ್ರೀಗಂಧ, ಮೈಸೂರು ಮಲ್ಲಿಗೆ (ಮಹಿಳೆಯರಿಗೆ) ಮತ್ತು ಕಲ್ಲುಸಕ್ಕರೆ ನೀಡಿ ಬರಮಾಡಿಕೊಂಡವರು ತೀ.ನಂ.ಶ್ರೀಯವರ ಕುಟುಂಬದ ಸದಸ್ಯರು.

ತೀ.ನಂ.ಶ್ರೀಯವರ ಪತ್ನಿ ಶ್ರೀಮತಿ ಜಯಲಕ್ಷ್ಮಮ್ಮನವರೂ ಭಾಗವಹಿಸಿದ್ದ ಸಭೆಯಲ್ಲಿ ಸ್ವಾಗತ ಬಯಸಿದವರು ಪುತ್ರ ಶ್ರೀ ತೀ.ಶ್ರೀ ನಾಗಭೂಷಣ.

ಹಿರಿಯರಾದ ದ.ರಾ. ಬೇಂದ್ರೆ, ಪು.ತಿ.ನ, ಎ.ಎನ್. ಮೂರ್ತಿರಾವ್, ಎಸ್.ವಿ. ರಂಗಣ್ಣ, ದೇಜಗೌ, ಹಾ.ಮಾ. ನಾಯಕ ಮತ್ತಿತರ ನೂರಾರು ಜನರು ಕಳುಹಿಸಿದ್ದ ಸಂದೇಶಗಳನ್ನು ಓದಿದವರು ಮಗಳು ಶ್ರೀಮತಿ ನಾಗರತ್ನ ಚಂದ್ರಶೇಖರಯ್ಯ.

ಶುದ್ಧ ವಿಮರ್ಶೆ

ದಿವಂಗತರ "ಸಹಾಧ್ಯಾಯಿ, ಸಹೋದ್ಯೋಗಿ"ಯಾದ ವರಕವಿ ಡಾ॥ ಕುವೆಂಪು ಕಳುಹಿಸಿದ್ದ ಸಂದೇಶದಲ್ಲಿ ತೀ.ನಂ.ಶ್ರೀಯವರ ಪಾಂಡಿತ್ಯ, ಸಜ್ಜನಿಕೆ, ಪರಿಶುದ್ಧ ವಿಮರ್ಶೆಯನ್ನು ಸ್ಮರಿಸಿದ್ದರು.

ತೀ.ನಂ.ಶ್ರೀಯವರ ಪತ್ನಿ ಶ್ರೀಮತಿ ಜಯಲಕ್ಷ್ಮಮ್ಮನವರ ಆಶೀರ್ವಾದ ಮತ್ತು ಪ್ರೇರಣೆಯಿಂದ "ಶ್ರೀಕಂಠತೀರ್ಥ" ಸಂಪಾದನೆ ಕಾರ್ಯವನ್ನು ಎರಡು ವರ್ಷಗಳ ಮೊದಲು ಆರಂಭಿಸಿದ್ದನ್ನು ನಿವೇದಿಸಿದರು ಸಂಪಾದಕರಲ್ಲಿ ಒಬ್ಬರಾದ ಡಾ॥ ಚಿದಾನಂದ ಮೂರ್ತಿ. ನಿರೀಕ್ಷೆಗೂ ಮೀರಿ ಲೇಖಕರ ಸಹಕಾರ ತಮಗೆ ದೊರಕಿತೆಂದು ಅವರು ಹೇಳಿದರು.

ತೀ.ನಂ.ಶ್ರೀ ಯವರ ಮತ್ತೊಬ್ಬ ಬಂಧು ಶ್ರೀ ತೀ.ನಂ. ಶಂಕರನಾರಾಯಣ ವಂದನೆ ಸಲ್ಲಿಸಿದರು.

(ಕನ್ನಡ ಪ್ರಭ : ೩೧-೫-೧೯೭೬)

* * *

Tributes paid to Srikantaiah

Bangalore, May 30 : A large number of students, admirers and contemporaries of the late Prof. T.N. Srikantaiah, well-known Kannada author and popular teacher, paid grateful tributes to him at a function here today.

The occeasion was the release of “Srikanathateertha” a commemorative volume in memory of Prof. Srikantaiah.

The volume has articles on the personality and achievements of Prof. Srikantaiah and on literary research and criticism.

Releasing the volume, elderly literateur Dr. Masti Venkatesha Iyengar recalled the pleasing and powerful personality of Prof. Srikantaiah-gentle nature, ever present smile and sweet tongue. Prof. Srikantaiah was a popular flgure, who lived a full life earning the respect from all who came into contact with him, he said.

Dr. G.S. Shivarudrappa recalled how Prof. Srikanataiah encouraged a number of deserving people showering affection on them. Though he produced only 10 books, they were a great contribution to the Kannada literature. One of his outstanding achievements was the fostering of Linguistics in the universities of the state, he said.

Dr. Shivarudrappa described the commomerative volume as a milestone in the Kannada literature. Such works themselves were a major part of the literature, he added.

Dr. V.K. Gokak, who presided, said creativity was the central point of the writings of Prof. Srikantaiah. His literary criticism was not just a professional output, but it was an endeavour to share with others his enjoyment of a work. A major trait traced by Dr. Gokak in Prof. Srikantaiah was his ready appreciation of any thing new, be it a new poem, a new idea or a new culture.

Earlier, Mr. T.S. Nagabhushana welcomed the gathering. Dr.M. Chidananda Murthy spoke about the commemorative volume on behalf of the editors. Mr. T.N. Shankaranarayana proposed a vote of thanks.

(**Deccan Herald** : 31-5-1976)

* * *

Srikantiah's services lauded

Bangalore, May 30 : Tributes were paid to the services of the late Prof, T.N. Srikantiah to Kannada literature by the speakers at a function held to release his commemorative volume "Sreekanthateertha" at Kannada Sahitya Parishat here today.

Releasing the volume, Dr. Masti Venkatesha Iyenger, spoke of the qualities of head and heart of Prof. Srikantiah and said he was very popular among the public. Though he was not awarded doctorate by any university, he was a "doctor of doctors". he said.

Paying his tributes. Dr. G.S. Shivarudrappa said Prof. Srikantiah had the generosity of encouraging budding writers. He was a scholar not only in Kannada but in English and Sanskrit also. Dr. Shivarudrappa said "Bharatiya Kavyameemamse'' was Prof. Srikantaiah's greatest contribution to Kannada and suggested its translation to other languages.

Dr. V.K. Gokak, who presided, said, Prof. Srikantiah's reviews were those of a professional critic. ''Bharatiya Kavyameemamse" must be translated into English, he said.

Dr. M. Chidanandamurthy, who spoke on behalf of the editorial committee of the volume, said the volume contained 81 articles on the personality of Prof. Srikantiah and review of his works by eminent writers and critics of the state. He said the editorial committee proposes to bring out another volume on Prof. Srikantiah.

Mr T.S. Nagabhushana welcomed the gathering. Mrs. Nagaratna read the messages. Mr. T.N. Shankaranarayana proposed a vote of thanks.

(**Indian Express** : 31-5-1976)

ಲೇಖನಗಳು

‘ತೀನಂಶ್ರೀ’ಗೊಂದು ಸ್ಮಾರಕ ಕೃತಿ

ಚಿರಂಜೀವಿ

●

ಮೇ ಮೂವತ್ತನೆಯ ತಾರೀಖು (೧೯೭೬) ಬೆಂಗಳೂರಿನಲ್ಲಿ ಕನ್ನಡದ ದಿಗ್ಗಜಗಳಲ್ಲೊಬ್ಬರಾದ ದಿವಂಗತ ತೀ.ನಂ.ಶ್ರೀಕಂಠಯ್ಯ ಅವರ ನೆನಪು ಸ್ಮಾರಕರೂಪ ತಾಳಲಿದೆ. ಸಾವಿರ ಪುಟಗಳ ಬೃಹತ್‌ಗ್ರಂಥ "ಶ್ರೀಕಂಠತೀರ್ಥ" ಮೈಲಿಗಲ್ಲೊಂದನ್ನು ನೆಡಲಿದೆ.

ಅಮಲ್ದಾರರಾಗಿ ಪ್ರಾರಂಭಿಸಿ, ದೊಡ್ಡ ದೊಡ್ಡ ಸ್ಥಾನಮಾನಗಳಿಗೇರಿ, ಆಳು–ಕಾಳು ಗೌರವ, ಅನುಭವಿಸುವುದನ್ನು ಬಿಟ್ಟು ಪಾಠ ಹೇಳುವ ಕೆಲಸವನ್ನೇ ಆರಿಸಿಕೊಂಡು, ಬದುಕೆಲ್ಲಾ ಅದಕ್ಕಾಗಿ ಕನ್ನಡ ಭಾಷಾ ಪ್ರಗತಿಗಾಗಿ ಶ್ರಮಿಸಿದವರು ತೀ.ನಂ.ಶ್ರೀ. ಬೋಧಕರಾಗಿ, ಕಳಕಳಿಯಿಂದ ಪಾಠ ಹೇಳಿದವರು. ಪಾಠದ ನಡುವೆ ಏನಾದರೂ ಸಮಸ್ಯೆ ಕಂಡರೆ, "ಅದು ನನಗೆ ಅರ್ಥವಾಗಿಲ್ಲ. ಇನ್ನೂ ಯೋಚಿಸುತ್ತೇನೆ; ಅರ್ಥವಾದ ಕೂಡಲೇ ತಿಳಿಸುತ್ತೇನೆ. ಈ ನಡುವೆ ನೀವೂ ಯೋಚಿಸಿ ನಿಮಗೆ ಅರ್ಥವಾದರೆ ನನಗೆ ತಿಳಿಸಿ" ಎನ್ನುವ ದೊಡ್ಡತನ.

ಅವರು ಬರೆದಿದ್ದಕ್ಕಿಂತಲೂ ಓದಿದ್ದೆ ಹೆಚ್ಚು. ಹುಡುಗರಿಗೆ ಪಾಠ ಹೇಳುವುದಕ್ಕಾಗಿ, ಕನ್ನಡ ಸಾಹಿತ್ಯದ ಹೊಸಹೊಸ ಕೃತಿಗಳ ಪರಿಚಯಕ್ಕಾಗಿ ಸ್ನೇಹಿತರಿಗಾಗಿ, ಹಳೇ–ಹೊಸ ಲೇಖಕರಿಗಾಗಿ ಬೇಕಾದಷ್ಟು ಓದುತ್ತಿದ್ದರು. ತಮಗಾಗಿ ಬರೆದುಕೊಳ್ಳಲು ಅವರಿಗೆ ಬಿಡುವೇ ಸಿಗಲಿಲ್ಲ. ಹೀಗಾಗಿ ಅವರು ಬರೆದು ಪ್ರಕಟಿಸಿದ ಸಾಹಿತ್ಯ ಅವರ ಪಾಂಡಿತ್ಯವನ್ನು ಗಮನಿಸಿದಾಗ ಬಹಳ ಕಡಿಮೆ. "ಪಾಂಡಿತ್ಯ–ಅಪಾರ ಎನ್ನುವ ವಿಶೇಷಣ ನನ್ನ ಸಾಧನೆಗೆ ತುಂಬ ಮೀರಿದ್ದು. ಇನ್ನೂ ನಾನು ಪಾಂಡಿತ್ಯ ಸಾಗರದ ದಡದಲ್ಲೇ ಇದ್ದೇನೆ" ಎನ್ನುವ ಹಿರಿತನ.

ತೀನಂಶ್ರೀ ಅವರ ಬದುಕು ಪಾಂಡಿತ್ಯ ತೆರೆಮರೆಯಲ್ಲೇ ಉಳಿದು ಬಿಟ್ಟಿದೆ. ಅವರ ಸೂಕ್ಷ್ಮ ವಿಮರ್ಶಾಶಕ್ತಿ ಬರೀ ಮಾತಿನಲ್ಲಿ–ಚರ್ಚೆಯಲ್ಲಿ ಕಳೆದುಹೋಯಿತು. ಇದನ್ನೆಲ್ಲಾ ಒಂದೆಡೆ ಕಾಣಿಸುವ ಪ್ರಯತ್ನ ಈ ಸ್ಮಾರಕಗ್ರಂಥದ್ದು. ಕನ್ನಡ ಜನತೆ ಕೃತಜ್ಞತಾಪೂರ್ವಕವಾಗಿ ಮಾಡಬೇಕಾದ ಕೆಲಸವನ್ನು ಅವರ ಸಂಸಾರವರ್ಗದವರು ಸಾವಿರಾರು ರೂಪಾಯಿ ಖರ್ಚು ಮಾಡಿ ಮಾಡುತ್ತಿದ್ದಾರೆ. ಈ ಕೆಲಸದಲ್ಲಿ ಕನ್ನಡ ಜನತೆ ಭಾಗಿಯಾಗಿ ಪ್ರಕಾಶಕರ ಒತ್ತಡವನ್ನು ಆದಷ್ಟು ಕಡಮೆ ಮಾಡಬೇಕು.

(ಕರ್ಮವೀರ : ೬–೬–೧೯೭೬)

ಕಾವ್ಯಮೀಮಾಂಸಕ, ಆಚಾರ್ಯ ತೀ.ನಂ.ಶ್ರೀ

ಬಿ.ವಿ. ವೈಕುಂಠರಾಜು

●

ಆಚಾರ್ಯ ಬಿ.ಎಂ.ಶ್ರೀ ಅವರಿಂದ ಕನ್ನಡದೀಕ್ಷೆ ಪಡೆದ ತೀ.ನಂ.ಶ್ರೀ ಇಡೀ ಬದುಕನ್ನು ನುಡಿಸೇವೆಗೆ ಧಾರೆಯೆರದರು. ಕರ್ನಾಟಕದ ಹೊರಗೂ ಹೆಸರಾಗಿದ್ದ ತೀನಂ.ಶ್ರೀ ಅವರಿಗೆ ಯಾವುದೇ ಪ್ರಶಸ್ತಿ ದೊರೆಯಲಿಲ್ಲ. ಅದರಿಂದ ಕನ್ನಡ ಕಲಿತ ನೂರಾರು ಜನ ಇಂದು ಕನ್ನಡದ ಕೆಲಸ ಮುಂದುವರಿಸುತ್ತಿರುವುದೇ ತೀ.ನಂ.ಶ್ರೀಗೆ ದೊಡ್ಡ ಪ್ರಶಸ್ತಿ. ಇಂದು ಬಿಡುಗಡೆಯಾಗುವ 'ಶ್ರೀಕಂಠತೀರ್ಥ' ಅವರಿಗೆ ಎಂದೋ ಸಲ್ಲಬೇಕಾಗಿದ್ದ ಮರ್ಯಾದೆ.

ಆಚಾರ್ಯ ಬಿ.ಎಂ.ಶ್ರೀ. ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಕುವೆಂಪು, ತೀನಂಶ್ರೀ ಡಿ.ಎಲ್.ಎನ್ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪರಂಪರೆ ಇದು. ಆದರೆ ವಿಶ್ವವಿದ್ಯಾನಿಲಯದ ಇತರ ವಿಭಾಗಗಳ ಮುಖ್ಯಸ್ಥರಂತೆ ಇವರು ಕೇವಲ ಪ್ರೊಫೆಸರುಗಳಾಗಿಯೇ ಉಳಿಯಲಿಲ್ಲ. ಆಚಾರ್ಯರಾದರು. ಸೃಜನಾತ್ಮಕ ಬರವಣಿಗೆ, ಸಂಶೋಧನೆ ಹೀಗೆ ಹಲವು ದಿಸೆಗಳಲ್ಲಿ ಕನ್ನಡ ಭಾಷೆ ಪರಿಪುಷ್ಟವಾಗಿ ಬೆಳೆಯುವಂತೆ ಮಾಡಬಲ್ಲ ಅನೇಕ ತರುಣರನ್ನು ಕಂಡುಹಿಡಿದು, ಅವರಿಗೆ ವಾತ್ಸಲ್ಯದ ಧಾರೆಯೆರೆದು ಅವರು ಬರೆಯುವಂತೆ ಮಾಡಿದರು.

ಬಿ.ಎಂ.ಶ್ರೀಕಂಠಯ್ಯನವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯ ದಲ್ಲಿ ಕನ್ನಡ ಎಂ.ಎ. ತರಗತಿಗಳನ್ನು ಪ್ರಾರಂಭಿಸುವಂತೆ ಮಾಡಿ ಆ ವಿಭಾಗದ ಪ್ರಥಮ ಗೌರವ ಪ್ರಾಧ್ಯಾಪಕರಾದರು. ಅವರ ವ್ಯಕ್ತಿತ್ವ ಮೋಡಿಯಂತೆ ಕೆಲಸಮಾಡಿ ಅನೇಕ ಪ್ರತಿಭಾವಂತ ತರುಣರು ಕನ್ನಡ ಎಂ.ಎ. ತರಗತಿಗಳಿಗೆ ಸೇರಿಕೊಂಡರು. ಕನ್ನಡದಲ್ಲಿ ಹೊಸರೀತಿ ಬರೆಯಬಹು ದೆಂದು ತೋರಿಸಿಕೊಟ್ಟ ಶ್ರೀಯುತರು ತಾವು ಬರೆಯುವುದಕ್ಕಿಂತ ಹೆಚ್ಚಾಗಿ ಬರೆಯಬಲ್ಲವರಿಂದ ಬರೆಸಿದರು. ಪ್ರಚಾರ ಮಾಡಬಲ್ಲವರಿಂದ ಆ ಕೆಲಸ ಮಾಡಿಸಿದರು. ಅವರು ಬರೆದುದು ಸ್ವಲ್ಪವಾದರೂ, ಅನೇಕರ ಬರವಣಿಗೆಯ ಹಿಂದೆ ಅವರ ಚೈತನ್ಯವಿದೆ. ಆದ್ದರಿಂದಲೇ ಅವರ ಸಾಧನೆಯನ್ನು ಅವರ ಬರವಣಿಗೆಯಿಂದಲೇ ಗುರುತಿಸುವಂತಿಲ್ಲ. ಈಗ ಕ್ಲಿಷೆಯಾಗಿರುವ, ಬಹುಮಟ್ಟಿಗೆ ಅರ್ಥ ಕಳೆದುಕೊಂಡಿರುವ "ಕನ್ನಡ ದೀಕ್ಷೆ" ಎನ್ನುವ ಎರಡು ಶಬ್ದಗಳು ರೋಮಾಂಚನವುಂಟು ಮಾಡುತ್ತಿದ್ದ ಕಾಲ. ಅವರಿಂದ ಮನಃಪೂರ್ವಕವಾಗಿ ಈ ದೀಕ್ಷೆಯನ್ನು ಸ್ವೀಕರಿಸಿದವರು ಅನೇಕರು. ಅವರಲ್ಲಿ ತೀ.ನಂ.ಶ್ರೀ ಕೂಡ ಒಬ್ಬರು. ಬಿ.ಎಂ. ಶ್ರೀಯವರ ನಂತರ ಆ ಸ್ಥಾನಕ್ಕೆ ಬಂದವರು ಅವರ ಕೆಲಸವನ್ನೇ ಮುಂದುವರಿಸಿದರು. ಆದ್ದರಿಂದಲೇ

ಕುವೆಂಪು ಅವರು ಹೊರತಾಗಿ ಇತರರು ಹೆಚ್ಚು ಬರೆಯಲು ಸಾಧ್ಯವಾಗಲಿಲ್ಲ. ಆದರೆ ಅವರ ಪ್ರಭಾವಶಾಲಿ ವ್ಯಕ್ತಿತ್ವ ಕನ್ನಡದ ಬೆಳವಣಿಗೆಯಲ್ಲೂ ಮಹತ್ತರವಾದ ಪಾತ್ರವಹಿಸಿದೆ ಎನ್ನುವುದನ್ನು ಈಗಿನವರು ಗಮನಿಸಬೇಕು.

*

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕನ ಸ್ಥಾನ ದೊರಕಿದ ತಕ್ಷಣ ಹಿಂದೆಮುಂದೆ ನೋಡದೆ ಅನೇಕರಿಗೆ ಕನಸಾಗಿದ್ದ ತಮಗೆ ದೊರಕಿದ್ದ ಅಮಲ್ದಾರ್ ಕೆಲಸಕ್ಕೆ ರಾಜೀನಾಮೆಯಿತ್ತು ಬಂದರು. (ಅನೇಕರು "ಇದೆಂಥಾ ಹುಚ್ಚು" ಎಂದು ಶ್ರೀಕಂಠಯ್ಯನವರನ್ನು ಪ್ರಶ್ನಿಸಿದರಂತೆ. ಆ ಹುಚ್ಚು ಕನ್ನಡಕ್ಕೆ ಮದ್ದಾಗಬಲ್ಲದು ಎನ್ನುವುದು ಅವರಿಗೇನು ಗೊತ್ತು?) ಇದು ಎಲ್ಲರ ದೃಷ್ಟಿಯಲ್ಲಿಯೂ ತೀನಂಶ್ರೀಯವರದ್ದು ಒಂದು ದೊಡ್ಡ ತ್ಯಾಗ. ಆದರೆ ಅವರು ಮಾತ್ರ ಹಾಗೆಂದೂ ಭಾವಿಸಿದವರಲ್ಲ. ಕುತೂಹಲದಿಂದ ವಿದ್ಯಾರ್ಥಿಗಳು ಆ ವಿಷಯವನ್ನು ಪ್ರಸ್ತಾಪಿಸಿದರೆ, ಅದಕ್ಕೆ ಉತ್ತರ ಹೇಳದೆ ಹೇಗೋ ತಪ್ಪಿಸಿಕೊಂಡು ಬಿಡುತ್ತಿದ್ದರು.

ಕನ್ನಡದ ಆಗಿನ ಸ್ಥಿತಿಯನ್ನು ಕುರಿತು ತೀನಂಶ್ರೀಯವರೇ ತಮ್ಮ ಒಂದು ಕವನದಲ್ಲಿ ಹೇಳಿರುವ ರೀತಿ–

"ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ
ಮಿಕ್ಕವರು ಕಡಗಣಿಸಿ ನೂಕಿದಾ ಕಡೆ ಬಿದ್ದು
ಯಾವ ಮಂಕೋ ಕವಿದು ಹುದುಗಿರುವೆವಲ್ಲ
ರೊಕ್ಕ ಕೈಯೊಳಗಿಲ್ಲ ಹುರುಡು ಮೈಯೊಳಗಿಲ್ಲ
ಹೆಮ್ಮೆಯೊಂದನೆ ನೆಚ್ಚಿ ದೆಸೆಗೆಟ್ಟೆವಲ್ಲ"

ಶ್ರೇಷ್ಠ ಅಧ್ಯಾಪಕರು

ಈ ಪರಿಸ್ಥಿತಿ ಈಗ ಸಂಪೂರ್ಣವಾಗಿ ಬದಲಾಗಿದೆ. ಆದರೆ ಈ ಸ್ಥಿತಿಗೆ ಕಾರಣರಾದವರು ಅನೇಕರು. ಅವರಲ್ಲಿ ತೀನಂಶ್ರೀ ನಿಸ್ಸಂದೇಹವಾಗಿ ಒಬ್ಬರು. ವಿಮರ್ಶೆ, ಸಂಶೋಧನೆ, ಅಧ್ಯಾಪನ, ಮಾರ್ಗದರ್ಶನ, ಇವುಗಳಿಗಾಗಿ ಬದುಕಿರುವವರೆಗೂ ತಮ್ಮ ಸಂಪೂರ್ಣ ಕಾಲವನ್ನು ವಿನಿಯೋಗಿಸಿದರು ಅವರು.

ತೀ.ನಂ.ಶ್ರೀ ಶ್ರೇಷ್ಠ ಅಧ್ಯಾಪಕರು. ಅವರ ಬಳಿ ಕುಳಿತು ಪಾಠ ಕೇಳಿದ ವಿದ್ಯಾರ್ಥಿಗಳಿಗೆ ಈ ಮಾತು ಎಷ್ಟು ನಿಜ ಎನ್ನುವುದು ಗೊತ್ತು. ಕಾಳಿದಾಸನ ಶಾಕುಂತಲೆಯಿರಲಿ, ಕಾವ್ಯಮೀಮಾಂಸೆಯಿರಲಿ ಕೊನೆಗೆ ನಮಗೆಲ್ಲಾ ನೀರಸವೆನಿಸಿದ್ದ ಭಾಷಾಶಾಸ್ತ್ರವಿರಲಿ ಅವರು ಪಾಠ ಹೇಳುತ್ತಿದ್ದರೆ ತೆರೆಯಮೇಲೆ ಒಳ್ಳೆಯ ಚಿತ್ರ ನೋಡಿದಂತಾಗುತ್ತಿತ್ತು. ಬೆರಳು ಮಡಿಚಿಕೊಂಡು ಅಂಗೈಯಲ್ಲಿ ದೃಷ್ಟಿನೆಟ್ಟು ಪಾಠ ಹೇಳುತ್ತಿದ್ದರೆ, ಆ ಅಂಗೈಯಿಂದ ಶಬ್ದಗಳು ಪುಟಿದು ಬರುತ್ತಿವೆಯೇನೋ ಎನ್ನುವಂತೆ ನಿಧಾನವಾಗಿ, ಸ್ಪಷ್ಟವಾಗಿ, ನಿಖರವಾಗಿ ಅವರ ಮಾತಿನ ಪ್ರವಾಹ ಹರಿದು ಬರುತ್ತಿತ್ತು. ಅವರ ತರಗತಿಗಳಿಗೆ ವಿದ್ಯಾರ್ಥಿಗಳು ಚಕ್ಕರ್ ಹೊಡೆಯದೆ ಹಾಜರಾಗುವುದಿರಲಿ, ನಮಗೆ ಪಾಠ ಹೇಳುತ್ತಿದ್ದ ಅಧ್ಯಾಪಕರೂ ನಮ್ಮ ಜೊತೆಯಲ್ಲಿ ಬಂದು ಕುಳಿತುಕೊಳ್ಳುತ್ತಿದ್ದರು.

ಭಾಷಾಶಾಸ್ತ್ರಕ್ಕೆ ವಿಶ್ವವಿದ್ಯಾನಿಲಯದಲ್ಲಿ ಸರಿಯಾದ ತಳಪಾಯ ಹಾಕಿದವರು ಅವರೇ. ಕೆಲವು ಕಾಲ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದ ಅವರು ಅಲ್ಲಿ ಕನ್ನಡದ ವಿದ್ಯಾರ್ಥಿಗಳು ಭಾಷಾಶಾಸ್ತ್ರವನ್ನು ಹೆಚ್ಚಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಿದರು. ಅಲ್ಲಿದ್ದಾಗಲೇ ಒಂದು ವರ್ಷ ಅಮೆರಿಕಕ್ಕೆ ಹೋಗಿ ಬಂದರು. ಕುವೆಂಪುರವರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಮೇಲೆ ಇಲ್ಲಿಯ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಬಂದರು. (೧೯೫೭ರಲ್ಲಿ ಅವರು ಮಹಾರಾಜಾ ಕಾಲೇಜಿಗೆ ಬಂದಾಗ ಅವರನ್ನು ಸ್ವಾಗತಿಸಲು ಏರ್ಪಟ್ಟಿದ್ದ ಹೃದಯಸ್ಪರ್ಶಿ ಸಮಾರಂಭ ಈಗಲೂ ಅನೇಕರ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ.) ಇಲ್ಲಿಗೆ ಬಂದಮೇಲೆ ಇಲ್ಲಿಯೂ ಭಾಷಾಶಾಸ್ತ್ರಕ್ಕೆ ಪ್ರಾಶಸ್ತ್ಯಕೊಟ್ಟರು. “ನಾವು ಬಂದದ್ದು ಸಾಹಿತ್ಯವನ್ನು ಓದಲು, ನಮಗೇಕೆ ಈ ನೀರಸ ಭಾಷಾಶಾಸ್ತ್ರ?” ಎನ್ನುವುದು ವಿದ್ಯಾರ್ಥಿಗಳಾದ ನಮ್ಮ ನಿಲುವು. “ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕಾದರೆ ಆ ಭಾಷೆಯ ಸ್ವರೂಪ ತಿಳಿದಿರಬೇಕು. ಭಾಷೆಯನ್ನು ಚೆನ್ನಾಗಿ ತಿಳಿದುಕೊಂಡಷ್ಟೂ ಸಾಹಿತ್ಯ ಕೃತಿಗಳು ಚೆನ್ನಾಗಿ ಅರ್ಥವಾಗುತ್ತವೆ. ಭಾಷಾ ಶಾಸ್ತ್ರ ವೈಜ್ಞಾನಿಕ ತಳಹದಿಯ ಮೇಲೆ ನಿಂತಿರುವುದರಿಂದ ವೈಜ್ಞಾನಿಕ ದೃಷ್ಟಿ ಮತ್ತು ಶಿಸ್ತು ಸಾಹಿತ್ಯದ ವಿದ್ಯಾರ್ಥಿಗಳಿಗೆ ಬರುತ್ತದೆ” ಎನ್ನುವುದು ಅವರ ತರ್ಕ. ಅವರ ಜೀವನದಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ಶಿಸ್ತನ್ನು ರೂಢಿಸಿಕೊಂಡು ನುಡಿದಂತೆ ನಡೆದು ತೋರಿಸಿದ್ದರು. ಕನ್ನಡದ ಬಗೆಗೆ ಅಭಿಮಾನವನ್ನು ಮೂಡಿಸಬೇಕಾಗಿದ್ದ ಆ ಕಾಲದಲ್ಲಿ ಅವರು ಯಾವುದೇ ಕವಿಯ ಬಗೆಗೆ ಮಿತಿಮೀರಿದ ಅಭಿಮಾನದಿಂದ ಮಾತನಾಡಿದವರಲ್ಲ. ಹಿಂದಿನ ಕವಿಗಳನ್ನು ತೀಕ್ಷ್ಣವಾದ ವಿಮರ್ಶೆಯ ಒರೆಗಲ್ಲಿಗೆ ಹಚ್ಚಿದ ಹಿಂದಿನ ವಿದ್ವಾಂಸರಲ್ಲಿ ಅವರೂ ಮತ್ತು ಡಿ.ಎಲ್.ಎನ್. ಮುಖ್ಯರು. ಪಂಪ ರನ್ನರ ಬಗೆಗಿನ ಅವರ ಬರಹಗಳು ಈ ಮಾತಿಗೆ ಒಳ್ಳೆಯ ಉದಾಹರಣೆ.

ಅವರ ಬಳಿಯಿದ್ದ ಪುಸ್ತಕಗಳೇ ಒಂದು ದೊಡ್ಡ ಗ್ರಂಥ ಭಂಡಾರದಂತಿದ್ದು, ಯಾವುದೇ ಪುಸ್ತಕವನ್ನು ಕೇಳಿದರೂ ಕ್ಷಣಾರ್ಧದಲ್ಲಿ ತೆಗೆದು ಕೊಡುತ್ತಿದ್ದರು. ಅಭ್ಯಾಸ ಮಾಡುವಾಗ ಗುರುತು ಹಾಕುತ್ತಿದ್ದ ಟಿಪ್ಪಣಿಗಳನ್ನು ಚೀಟಿಗಳಲ್ಲಿ ಬರೆದು ವಿಷಯಾನುಕ್ರಮವಾಗಿ ವಿಂಗಡಿಸಿ ಜೋಡಿಸಿಡುತ್ತಿದ್ದರು. ಯಾವುದು ಬೇಕಾದರೂ ತಕ್ಷಣ ಕೈಗೆ ಸಿಕ್ಕುತ್ತಿತ್ತು. ವಿದ್ವಾಂಸರು ಈ ಅಭ್ಯಾಸವನ್ನು ಬೆಳೆಸಿಕೊಂಡರೆ ಸಮಯ ಪೋಲಾಗುವುದಿಲ್ಲವೆನ್ನುವುದು ಅವರ ಭಾವನೆ. ಕಾಲದ ಬಗೆಗಂತೂ ಅವರು ಕಟ್ಟುನಿಟ್ಟು, ಒಂದು ಕ್ಷಣ ತಡವಾದರೂ ಅವರು ಸಹಿಸುತ್ತಿರಲಿಲ್ಲ. (ಉಡಿಗೆ ತೊಡಿಗೆಯಲ್ಲಿ ಕೂಡ ಶಿಸ್ತು, ಅಚ್ಚುಕಟ್ಟುತನ ಎದ್ದು ಕಾಣುತ್ತಿತ್ತು. ಗರಿಗರಿಯಾದ ಬಿಳಿಪಂಚೆ, ಷರಟು, ಕ್ಲೋಸ್ ಕಾಲರ್ ಕೋಟು ಅವರ ಮಾಮೂಲು ಉಡಿಗೆ. ಒಂದೇ ಒಂದು ದಿನ ಮುಖ ಕ್ಷೌರ ಮಾಡಿಕೊಳ್ಳದೆ ಇದ್ದವರಲ್ಲ. ಮಾಸ್ತಿ ಅವರನ್ನು “ಮದುವಣಿಗ” ಎಂದೇ ಕರೆಯುತ್ತಿದ್ದರಂತೆ). ಆದರೆ, ಬರವಣಿಗೆಯಲ್ಲಿ ಮಾತ್ರ ಅವರ ಶಿಸ್ತು ಕೈಕೊಡುತ್ತಿತ್ತು ಎಂದು ಕಾಣುತ್ತದೆ. ಬರೆಯಬೇಕೆನಿಸಿದ್ದನ್ನು ಬರೆಯಲೇಬೇಕು ಎಂದು ಹಟದಿಂದ ಕುಳಿತು ಬರೆದವರಲ್ಲ. ಹೇಳಬೇಕೆನಿಸಿದುದನ್ನು ಪಾಠ ಮಾಡುವಾಗ, ಭಾಷಣ ಮಾಡುವಾಗ ಹೇಳಿ ಆ ತೀವ್ರತೆ ಹೊರಟು ಹೋಗುತ್ತಿತ್ತೇನೋ. ಅಲ್ಲದೆ ಮಿತಿ ಮೀರಿದ ಪ್ರಾಮಾಣಿಕತೆಯೂ

ಒಂದು ರೀತಿಯಲ್ಲಿ ಅವರ ಬರವಣಿಗೆಗೆ ಅಡ್ಡಿ ಮಾಡಿತು. ಯಾವುದಾದರೂ ವಿಷಯವನ್ನು ಚರ್ಚಿಸುವಾಗ ತಾವು ಹೇಳುತ್ತಿದ್ದುದರ ಜೊತೆಗೆ ಜೊತೆಯಲ್ಲಿರುವವರು ಒಂದುಹೊಸ ಅಂಶ ವನ್ನು ಹೇಳಿದರೆ ಸಾಕು "ನೀವೇ ಇದನ್ನು ಬರೆಯಿರಿ" ಎಂದು ಬಿಡುತ್ತಿದ್ದರು. ಹೀಗಾಗಿ ಎಷ್ಟೋ ವಿಷಯಗಳ ಮೇಲೆ ಡಿ.ಎಲ್.ಎನ್. ಬರೆಯಲೆಂದು ತೀ.ನಂ.ಶ್ರೀ, ತೀ.ನಂ.ಶ್ರೀ. ಬರೆಯಲೆಂದು ಡಿ.ಎಲ್.ಎನ್. ಸುಮ್ಮನಾಗಿಬಿಡುತ್ತಿದ್ದರು. (ಅವರ ಕೆಲವು ವಿದ್ಯಾರ್ಥಿಗಳು ಮಾತ್ರ ಈ ವಿಷಯಗಳನ್ನು ತಮ್ಮ ಸ್ವಂತದ್ದೆನ್ನುವಂತೆ ಬರೆದು ಹಾಕಿದರು. ಕೊನೆಗೆ ಅವರು ತರಗತಿಗಳಲ್ಲಿ ಪಾಠ ಹೇಳುವಾಗ ಮಾಡಿಕೊಂಡ ನೋಟ್ಸ್‌ಗಳನ್ನು ಕೂಡ ಕೆಲವರು ತಮ್ಮ ಹೆಸರಿನಲ್ಲಿ ಪ್ರಕಟಿಸಿಬಿಟ್ಟರು.) ಅವರ ಬರವಣಿಗೆ ಕಡಿಮೆಯಾಗಲು ಕಾರಣವಾದ ಇನ್ನೊಂದು ಅಂಶವೆಂದರೆ ಅವರು ಬರೆಯುವುದಕ್ಕಿಂತ ಹೆಚ್ಚಾಗಿ ಓದಿನಲ್ಲಿಯೇ ತೃಪ್ತಿ ಪಡೆಯುತ್ತಿದ್ದರು. "ಓದು ಬರಹಕ್ಕೆ ಶತ್ರು" ಎನ್ನುವ ಅವರ ಮಾತು ಜನಪ್ರಿಯವಾಗಿ ಹೋಗಿತ್ತು. ಇಷ್ಟಾದರೂ ಅವರು ಬರೆದು ಪ್ರಕಟಿಸಿರುವುದು ತೃಪ್ತಿ ಕೊಡುವಂಥದೇ. ಅವರ "ಭಾರತೀಯ ಕಾವ್ಯಮೀಮಾಂಸೆ" ಯಂತಹ ಗ್ರಂಥ ಭಾರತದ ಯಾವ ಭಾಷೆಯಲ್ಲಿಯೂ ಇಲ್ಲ ಎಂದು ವಿ.ಸೀ. ಹೇಳಿರುವುದರಲ್ಲಿ ಸತ್ಯವಿದೆ. ಎಂತಹವರು ಬೇಕಾದರೂ ಭಾರತೀಯ ಕಾವ್ಯಮೀಮಾಂಸಕರ ಅಭಿಪ್ರಾಯಗಳನ್ನು, ಸಿದ್ಧಾಂತಗಳನ್ನು ತಿಳಿದುಕೊಳ್ಳಬಹುದಾದಷ್ಟು ಸರಳವಾಗಿ ಹೇಳಿದ್ದಾರೆ. ಕನ್ನಡದ ಅತ್ಯುತ್ತಮ ಗದ್ಯ ಲೇಖಕರಲ್ಲಿ ಒಬ್ಬರಾದ ತೀ.ನಂ.ಶ್ರೀಯವರ ಶೈಲಿ ಅನುಕರಣೀಯವಾದುದು. ಶಬ್ದಾಡಂಬರ ಅವರಿಗೆ ಗಾವುದ ದೂರ. ಹೇಳುವುದನ್ನು ಸ್ಪಷ್ಟವಾಗಿ, ಸರಳವಾಗಿ ಹೇಳುವ ಗುಣ ಅವರ ರಕ್ತದಲ್ಲಿಯೇ ಸೇರಿ ಹೋಗಿತ್ತು. ಅವರ ವಿಮರ್ಶನಾ ರೀತಿಗೆ, ಒಳ್ಳೆಯ ಶೈಲಿಗೆ "ಕಾವ್ಯ ಸಮೀಕ್ಷೆ" ಮತ್ತು "ಸಮಾಲೋಕನ" ಗ್ರಂಥಗಳನ್ನು ನೋಡಬಹುದು. ಅವರ "ಕನ್ನಡ ಮಧ್ಯಮ ವ್ಯಾಕರಣ" ಇಂದಿಗೂ ಕನ್ನಡದ ಅತ್ಯುತ್ತಮ ವ್ಯಾಕರಣ.

ಸಾಕುತಾಯಿ

"ಒಲುಮೆ" ಕವನ ಸಂಕಲನವನ್ನು ನೋಡಿದಾಗ ಅವರು ಹಲವು ಉತ್ತಮ ಕವನಗಳನ್ನು ಬರಯಬಹುದಿತ್ತು ಎನಿಸುತ್ತದೆ. ಆದರೆ ಏಕೋ ಅವರು ಆ ಕ್ಷೇತ್ರದಲ್ಲಿ ಮುಂದುವರಿಯಲಿಲ್ಲ. ಇತರರಿಗೆ ಮಾರ್ಗದರ್ಶಕರಾದರು. ಪು.ತಿ.ನ. ಅವರಂತೂ ತೀನಂಶ್ರೀಯವರನ್ನು "ನನ್ನ ಕಾವ್ಯದ ಸಾಕುತಾಯಿ" ಎಂದು ಕರೆದಿದ್ದಾರೆ.

ತೀನಂಶ್ರೀ ಮೇಲುನೋಟಕ್ಕೆ ಗಂಭೀರವಾಗಿ ಕಾಣುತ್ತಿದ್ದರೂ, ಸರಸಿಗಳು, ಒಳ್ಳೆ ಮಾತುಗಾರರು, ಸಂಪ್ರದಾಯಕ್ಕ ಅಂಟಿಯೂ ಅಂಟದಂತಿದ್ದರು. ಅವರು ಅಧ್ಯಾಪಕರಾದ ಮೇಲೂ ಕ್ರಾಪಿನಲ್ಲಿಯೇ ಅಡಕವಾಗುವಂತೆ ಜುಟ್ಟು ಬಿಟ್ಟಿದ್ದರಂತೆ; ಒಮ್ಮೆ ಅವರು ಎ.ಎನ್. ಮೂರ್ತಿರಾಯರು ಮತ್ತಿತರರ ಜೊತೆಯಲ್ಲಿ ಉದಕಮಂಡಲಕ್ಕೆ ಹೋಗಿದ್ದಾಗ ಸ್ನೇಹಿತರು ಅವರ ಜುಟ್ಟನ್ನು ಕತ್ತರಿಸಿದರಂತೆ. ಕ್ರಿಯೆ ನಡೆಯುತ್ತಿದ್ದಾಗ ನಗುತ್ತಲೇ ಇದ್ದ ತೀ.ನಂ.ಶ್ರೀ. ಜುಟ್ಟು ಕತ್ತರಿಸಿದವರನ್ನು ಕುರಿತು "ಇವನು ತನಗೆ ಒಗ್ಗಿ ಬಂದ ವೃತ್ತಿಯನ್ನು ಬಿಟ್ಟು ಕಾಲೇಜಿನ ಅಧ್ಯಾಪಕ ವೃತ್ತಿಗೇಕೆ ಬಂದ? ಇವನಿಂದ ಕಾಲೇಜಿಗೆ ಲಾಭವಿಲ್ಲ. ಕ್ಷೌರಕ ವೃತ್ತಿಗೆ ನಷ್ಟ" ಎಂದರಂತೆ.

ತೀ.ನಂ.ಶ್ರೀ. ಧಾರವಾಡದಲ್ಲಿದ್ದಾಗ ಪು.ತಿ.ನ. ಒಮ್ಮೆ ಅವರ ಮನೆಗೆ ಹೋದರಂತೆ. ಅಂದು ಅಮಾವಾಸ್ಯೆ. ಪುತಿನ ಅವರು ತರ್ಪಣ ಬಿಡಬೇಕು. ಅದಕ್ಕೆ ಬಾವಿಯ ನೀರೇ ಆಗಬೇಕು. ನಲ್ಲಿಯ ನೀರು ಉಪಯೋಗಿಸುವಂತಿಲ್ಲ. ಆದರೆ ಶ್ರೀಕಂಠಯ್ಯನವರ ಮನೆಯಿದ್ದುದು ದಿಣ್ಣೆಯ ಮೇಲೆ. ಎಲ್ಲೋ ದೂರ ಹೋಗಿ ಬಾವಿಯ ನೀರು ತರುವುದೆ? ಕೊನೆಗೆ ಪು.ತಿ.ನ ಅವರಿಗೆ "ಭೂಮಿಯಲ್ಲಿ ಒಂದು ಗುಂಡಿ ತೋಡಿ ಅದಕ್ಕೆ ನಲ್ಲಿಯ ನೀರು ಹಾಕಿ, ಭೂ ಸ್ಪರ್ಶದಿಂದ ನೀರು ಶುದ್ಧವಾಗುತ್ತದೆ. ಅನಂತರ ನೀವು ಅದನ್ನು ಉಪಯೋಗಿಸಬಹುದು" ಎಂದು ಸಲಹೆ ಕೊಟ್ಟರಂತೆ.

ಆರೋಗ್ಯವಿರಲಿ, ಅನಾರೋಗ್ಯವಿರಲಿ ಅವರು ಒಂದೇ ರೀತಿ. ಆರೋಗ್ಯವಿಲ್ಲ ಎಂದು ಯಾರ ಹತ್ತಿರವೂ ಹೇಳುತ್ತಿರಲಿಲ್ಲ. ಒಮ್ಮೆ ನಾವು ಕನ್ನಡ ವಿದ್ಯಾರ್ಥಿಗಳು ಶ್ರವಣಬೆಳಗೊಳಕ್ಕೆ ಟ್ರಿಪ್ ಹಾಕಲು ಯೋಚಿಸಿದವು. ತೀ.ನಂ.ಶ್ರೀ. ಕರೆದು "ಅಲ್ಲಿಗೆ ಬೇಡ, ಬೇರೆ ಎಲ್ಲಿಯಾದರೂ ಹೋಗೋಣ" ಎಂದರು. ಆದರೆ ನಮಗೆ ಕಾರ್ಯಕ್ರಮವನ್ನು ಬದಲಿಸಲು ಇಷ್ಟವಿಲ್ಲ. "ನಿಮಗೆ ಅರ್ಥವಾಗೋಲ್ಲ. ನಮ್ಮಲ್ಲಿ ಕೆಲವರಿಗೆ ಬ್ಲಡ್‌ಪ್ರೆಷರ್ ಇದೆ. ಬೆಟ್ಟ ಹತ್ತೋದಕ್ಕೆ ಆಗುತ್ತಾ?" ಎಂದರು. (ಕೋಪ ಬಂದರೆ ಅವರ ಕೆಂಪು ಮುಖ ಇನ್ನಷ್ಟು ಕೆಂಪಾಗುತ್ತಿತ್ತು.) ಆಗಲೇ ನಮಗೆ ಅವರಿಗೆ ರಕ್ತದ ಒತ್ತಡ ಇರುವುದು ಅರಿವಾದದ್ದು. ಆದರೂ ಭಾಷಾಶಾಸ್ತ್ರ ಮತ್ತಿತರ ಸೆಮಿನಾರುಗಳಿಗೆ ಭಾರತದ ಎಲ್ಲ ಕಡೆಯೂ ಹೋಗಿ ಬರುತ್ತಿದ್ದರು. ಈ ಪ್ರವಾಸವೇ ಅವರಿಗೆ ಹೊರೆಯಾಗಿರಬೇಕು. ೧೯೬೨ರಲ್ಲಿ ನಿವೃತ್ತಿಯಾದ ಮೇಲೂ ಅವರ ಸಂಚಾರ ಕಡಿಮೆಯಾಗ ಲಿಲ್ಲ. ೧೯೬೬ರಲ್ಲಿ ದೆಹಲಿಗೆ ಯಾವುದೋ ಕೆಲಸಕ್ಕಾಗಿ ಹೋಗಿದ್ದಾಗ ಅಲ್ಲಿಯೇ ನಿಧನರಾದರು.

ಕರ್ನಾಟಕದಲ್ಲಿ ಮಾತ್ರವಲ್ಲದೆ, ಹೊರಗೂ ಹೆಸರು ಪಡೆದಿದ್ದ ತೀನಂಶ್ರೀಯವರಿಗೆ ಯಾವ ಪ್ರಶಸ್ತಿಗಳೂ ಬರಲಿಲ್ಲ. ಅವರ ಗ್ರಂಥಗಳಿಗೆ ಅಕಾಡೆಮಿಯ ಪ್ರಶಸ್ತಿ ಬರಲಿಲ್ಲ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲಿಲ್ಲ. ಇದರಿಂದ ಅವರ ವ್ಯಕ್ತಿತ್ವ ಘನತೆ ಮತ್ತಷ್ಟು ಹೆಚ್ಚಿತು. ಅವರಿಂದ ಕನ್ನಡ ಕಲಿತ ನೂರಾರು ಜನ ಇಂದು ಅವರ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿರುವುದೇ ಅವರಿಗೆ ಪ್ರಶಸ್ತಿ ನೀಡಿದಂತಾಗಿದೆ.

ತೀ.ನಂ.ಶ್ರೀ ನಿಧನರಾದ ಹತ್ತು ವರ್ಷಗಳ ನಂತರ ಅವರ ಸ್ಮಾರಕ ಗ್ರಂಥ "ಶ್ರೀಕಂಠತೀರ್ಥ" ಇಂದು ಬಿಡುಗಡೆಯಾಗಲಿದೆ.

(ಪ್ರಜಾವಾಣಿ : ೩೦-೫-೧೯೭೬)

ತೀ.ನಂ.ಶ್ರೀ.

ಸಿ.ಕೆ. ಪರಶುರಾಮಯ್ಯ

ಒಟ್ಟಿನಲ್ಲಿ ಕನ್ನಡಕ್ಕೆ ಸಂಬಂಧಿಸಿದ ಯಾವ ವಿದ್ವತ್ ಸಭೆಯೂ, ವಿಚಾರಗೋಷ್ಠಿಯೂ ತೀನಂಶ್ರೀ ಅವರಿಂದ ಹೊರತಾಗಿರಲಿಲ್ಲ.

ತೀ.ನಂ.ಶ್ರೀಕಂಠಯ್ಯನವರಿಗೆ ಕನ್ನಡ, ಸಂಸ್ಕೃತ, ಇಂಗ್ಲಿಷ್ ಈ ಮೂರೂ ಭಾಷೆಗಳ ಮೇಲೆ ಒಂದೇ ಮಟ್ಟದ ಪ್ರಭುತ್ವವಿತ್ತು. ಆ ಭಾಷೆಗಳ ಸಾಹಿತ್ಯ ಕೃತಿಗಳ ವಿಸ್ತಾರವಾದ ಪರಿಚಯವಿತ್ತು. ಕಾವ್ಯ, ಅಲಂಕಾರ, ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ಭಾಷಾಶಾಸ್ತ್ರ ಇವುಗಳಲ್ಲಿ ಒಂದೊಂದು ವಿಷಯವನ್ನೂ ಹೃದ್ಗತ ಮಾಡಿಕೊಳ್ಳುವುದೇ ಕಷ್ಟ. ಇದಕ್ಕೆ ಅಪವಾದ ವೆಂಬಂತೆ, ಈ ಎಲ್ಲ ವಿಷಯಗಳಲ್ಲೂ ಸಮಾನವಾದ ಆದರೆ ಸಮರ್ಥವಾದ ವಿದ್ವತ್ತು ಶ್ರಿಕಂಠಯ್ಯನವರಿಗೆ ಸಿದ್ಧಿಸಿತ್ತು.

ತೀನಂಶ್ರೀಯವರದು ಶುಷ್ಕ ಪಾಂಡಿತ್ಯವಲ್ಲ. ಸಂಶೋಧನೆಯ ಅಡಿಪಾಯದ ಮೇಲೆ ಮೂಡಿದ, ಸಮತೂಕದ ವಿಮರ್ಶೆಯಿಂದ ಕೂಡಿದ ರಸಪೂರ್ಣ ಪಾಂಡಿತ್ಯ. ಕಾವ್ಯಮೀಮಾಂಸೆ ಯಂತಹ ಭಾವಸ್ಪರ್ಶಿಯಾದ ವಿಷಯವನ್ನೂ, ಭಾಷಾಶಾಸ್ತ್ರದಂತಹ ಬುದ್ಧಿಪ್ರಧಾನವಾದ ವಿಷಯವನ್ನೂ ಒಂದೇ ಬಗೆಯ ಆಕರ್ಷಣೆಯೊಂದಿಗೆ ವಿವರಿಸಿ ಹೇಳುತ್ತಿದ್ದ ರಸಜ್ಞರು ತೀ.ನಂ.ಶ್ರೀ. ಅವರ ವಿದ್ಯಾರ್ಥಿಯಾಗಿದ್ದ ಯಾರಿಗಾದರೂ ಇದರ ಪರಿಚಯವಾಗದಿರದು.

ತೀನಂಶ್ರೀಯವರ ಬೋಧನಕ್ರಮ ಅವರಿಗೇ ವಿಶಿಷ್ಟವಾದುದು. ಸಾರ್ವಜನಿಕ ಭಾಷಣವಿರಲಿ ಕಾಲೇಜಿನ ಪಠ್ಯ ವಿಷಯದ ಉಪನ್ಯಾಸವಿರಲಿ ವೇದಿಕೆಯ ಮೇಲೆ ಬರುತ್ತಿದ್ದಂತೆಯೇ ಸಭಿಕರನ್ನು ಮುಗ್ಧರನ್ನಾಗಿಸುವ ಮೋಡಿ ಅವರಲ್ಲಿತ್ತು. ಪಾಠ ಮಾಡುವಾಗ ಅವರು ಎಂದೂ ತಡವರಿಸಿ ದವರಲ್ಲ. ಅಥವಾ ವಿಷಯಗಳಿಗಾಗಿ ಹುಡುಕಾಡಿದವರಲ್ಲ. ಯಾವುದನ್ನು ಹೇಗೆ, ಎಲ್ಲಿ ಎಷ್ಟು ಹೇಳಬೇಕೆಂಬುದನ್ನು ಸ್ಪಷ್ಟವಾಗಿ ನಿಷ್ಕೃಷ್ಟವಾಗಿ ಆದರೆ ರಸವತ್ತಾಗಿ ಹೇಳುವ ಕಲೆ ಅವರಿಗೆ ಸಿದ್ಧಿಸಿತ್ತು. ಅವರ ಬೋಧನರೀತಿಯನ್ನು ಒಬ್ಬ ಶ್ರೇಷ್ಠ ದರ್ಜೆಯ ಗಾಯಕನಿಗೆ ಹೋಲಿಸಬಹುದು. ಸಂಗೀತದ ರಸಪಾಕವನ್ನು ಬಲ್ಲ ಗಾಯಕ, ಹೇಗೆ ಪಕ್ಕವಾದ್ಯಗಳೆಲ್ಲ ಒಂದು ಹದಕ್ಕೆ ಬಂದು ತಾಳ – ಲಯಗಳು ಸರಿಹೋದಮೇಲೆ ಹಾಡಲುಪಕ್ರಮಿಸಿ ಸಭಿಕರನ್ನು ರಸಸ್ಥಿತಿಗೆ ಕೊಂಡೊಯ್ಯುತ್ತಾನೆಯೋ ಹಾಗೆಯೇ ತೀನಂಶ್ರೀಯವರು ಪೂರ್ವ ಸಿದ್ಧತೆಗಳನ್ನು

ಎಚ್ಚರಿಕೆಯಿಂದ, ಪರಿಪೂರ್ಣವಾಗಿ ಮಾಡಿಕೊಂಡು ಹೇಳುವ ವಿಷಯಕ್ಕೆ ಹತ್ತು ಕಡೆಗಳಿಂದ ನಿದರ್ಶನಗಳನ್ನು ಕೊಡುತ್ತ ಆದರೆ ವಿಷಯದ ಅಂಚನ್ನು ಮೀರದೆ ಕೇಳುವವರ ಹೃದಯವನ್ನು ಅಪಹರಿಸಿಬಿಡುತ್ತಿದ್ದರು. ಆದ್ದರಿಂದಲೇ ಅವರ ಭಾಷಣವನ್ನಾಗಲಿ, ಪಾಠವನ್ನಾಗಲಿ ಕೇಳುತ್ತ ಕುಳಿತರೆ ಕಾಲ ಹೋದದ್ದೇ ತಿಳಿಯುತ್ತಿರಲಿಲ್ಲ.

ವಿಶಿಷ್ಟ ಬರವಣಿಗೆ

ತೀನಂಶ್ರೀಯವರ ಬರವಣಿಗೆಯೂ ಸಹ ಅಷ್ಟೇ ವಿಶಿಷ್ಟವಾದುದು. ಪ್ರತಿಯೊಂದು ಪದವೂ ತೂಕ ಮಾಡಿ ಇಟ್ಟಂತೆ, ವಿಷಯಕ್ಕೆ ಅಗತ್ಯವೆಂಬಂತೆ ಹೊಂದಿಕೊಂಡ ಸಮತೂಕದ ಬರವಣಿಗೆ. “ನನ್ನ ಲೇಖನ ವ್ಯವಸಾಯ ಅಷ್ಟೇನೂ ಹುಲುಸಿಲ್ಲ” ಎಂದು ಅವರೇ ಹೇಳಿಕೊಂಡಿದ್ದರೂ ಅವರು ಬರೆದಿರುವಷ್ಟು ಸಾಹಿತ್ಯ ಸರಸ ಅಭಿವ್ಯಕ್ತಿಗೆ, ಸುಸಂಸ್ಕೃತ ಅಭಿರುಚಿಗೆ, ಪರಿಷ್ಕೃತ ಶೈಲಿಗೆ ಹೆಸರಾಗಿದೆ. ಸಂದೇಹಗಳು ಪರಿಹಾರವಾಗಿ ವಿಷಯವು ಪೂರ್ಣವಾಗಿ ಸ್ಪಷ್ಟವಾದ ಮೇಲೆಯೇ ಅವರು ಬರವಣಿಗೆಗೆ ಕೈಹಾಕುತ್ತಿದ್ದುದು. ಬರೆದ ಮೇಲೆ ಅದನ್ನು ಪ್ರಕಟಣೆಗೆ ಕೊಡುವಾಗಲಂತೂ ಇನ್ನೂ ಹಿಡಿತ. ಬರೆದದ್ದೆಲ್ಲ ಬೆಳಕಿಗೆ ಬರಬೇಕೆಂಬ ಹಂಬಲ ತೀನಂಶ್ರೀ ಅವರಿಗಿರಲಿಲ್ಲ.

ವೈಯಕ್ತಿಕವಾಗಿ ತೀನಂಶ್ರೀಯವರು ವಿನಯ ಸಂಪನ್ನರು, ಸರಸಪ್ರವೃತ್ತಿಯವರು. “ವಿದ್ಯೆಗೆ ವಿನಯವೇ ಭೂಷಣ” ಎಂಬ ಮಾತು ಅವರಿಗೆ ಸಂಪೂರ್ಣವಾಗಿ ಅನ್ವಯಿಸಿತ್ತು. ವಿದ್ಯಾರ್ಥಿಗಳನ್ನಾಗಲಿ, ಸಹೋದ್ಯೋಗಿಗಳನ್ನಾಗಲಿ, ಸಂದರ್ಶಕರನ್ನಾಗಲಿ ಅವರು ಸಂಬೋಧಿಸುತ್ತಿದ್ದ ಕ್ರಮ ತುಂಬ ಅಪರೂಪವಾದುದು. ಅವರ ಜೊತೆ ಸಂಭಾಷಿಸುವುದೇ ಒಂದು ಪುಣ್ಯವಾಗಿತ್ತು. ಅವರ ಸಾನ್ನಿಧ್ಯದಲ್ಲಿ ಅದನ್ನನುಭವಿಸಿದವರಿಗೇ ಗೊತ್ತು ಅದರ ಸೊಗಸು.

(ಕನ್ನಡ ಪ್ರಭ : ೨೩-೫-೧೯೭೬)

ಕನ್ನಡದ ಶ್ರೀಮುಖ ತೀ.ನಂ.ಶ್ರೀ

ವಿಚಾರಪ್ರಿಯ

●

ಶ್ರೀನಾಮಾಂಕಿತ ಅಸಾಮಾನ್ಯ ಶ್ರೀಗಳು ಕನ್ನಡದಲ್ಲಿರುವವರು ಇಬ್ಬರು. ಒಬ್ಬರು ಬಿ.ಎಂ.ಶ್ರೀ. ಯವರಾದರೆ ಇನ್ನೊಬ್ಬರು ತೀ.ನಂ.ಶ್ರೀ.ಯವರು.

ಬಿ.ಎಂ.ಶ್ರೀ. ಅವರು ಕನ್ನಡದ ಕಣ್ವರು. ಶಕುಂತಲೆಯನ್ನು ಕಣ್ವಋಷಿಗಳು ಸಾಕಿದಂತೆ ನವೋದಯ ಸಾಹಿತ್ಯವನ್ನು ಬೆಳಸಿ ಕನ್ನಡಿಗರಿಗೆ ಕೊಟ್ಟರು.

ಬಿ.ಎಂ.ಶ್ರೀ.ಯವರ ಅತಿರಥ ಮಹಾರಥ ಶಿಷ್ಯರ ಪೈಕಿ ತೀ.ನಂ.ಶ್ರೀ.ಯವರೂ ಒಬ್ಬರು. ಅವರ ಹಾಗೆ ಇವರೂ ಸರಸಿಗಳು, ಗಂಭೀರರು, ವಿದ್ವಾಂಸರು, ಬಹುಶ್ರುತರು, ಇಂಗ್ಲಿಷ್ ಸಂಸ್ಕೃತ ಕನ್ನಡ ಬಲ್ಲ ಭಾಷಾವಿದರು. ಕನ್ನಡಕ್ಕಾಗಿಯೇ ಬಾಳು ತೆತ್ತುಕೊಂಡವರು.

ತೀನಂಶ್ರೀ ಇನ್ನೂ ತರುಣರಾಗಿದ್ದಾಗಲೇ ಬಿಎಂಶ್ರೀ ಪ್ರಭಾವ ಇವರ ಮೇಲೆ ಬಿತ್ತಂತೆ. ತಮ್ಮ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬಲ್ಲ ಛಾತಿ ಇವರಿಗೆ ಇದೆಯೆಂದು ಸಮಾಧಾನ ತಳೆದರಂತೆ.

ಅಂತೂ ಆ 'ಶ್ರೀ' ತಯಾರಿಸಿದ ಕನ್ನಡ ದಂಡಿನ ಮುಂಚೂಣಿಯಲ್ಲಿದ್ದಂಥವರು ಈ 'ಶ್ರೀ'. ಇದು ಕನ್ನಡದ ಕಂಠ 'ಶ್ರೀ', ಮೇಲಾಗಿ ಜ್ಞಾನ 'ಶ್ರೀ'.

ಆ 'ಶ್ರೀ'ಯವರಂತೆ ಈ 'ಶ್ರೀ'ಯವರೂ ಕನ್ನಡದ ರೂಪ 'ಶ್ರೀ'. ಅಜಾನುಬಾಹು, ಮಾಗಿದ ಕಿತ್ತಳೆಯಂತೆ ರಂಗಿನ ಮುಖ. ಚಿನ್ನದ ಬಣ್ಣದ ಸೇತುದಂಡಯುಕ್ತ ಕಪ್ಪಂಚಿನ ದುಂಡು ಕನ್ನಡಕ. ಸೀಸರನ ನೆನಪು ತರುವಂತೆ ಬಕ್ಕ ಮುಂದಲೆಯಲ್ಲಿ ಕುರುಚಲು ಕೂದಲ ತೆಳುಗುಚ್ಛ.

ಸೀಸರನಂತೆಯೇ ಸ್ವಭಾವ. ಎಲ್ಲವೂ ದೊಡ್ಡ ತರಹ. ಇವರು ಬಹು ಧಾರಾಳ. ಸರ್ವಾಧಿಕಾರಿಯೆಂಬಂತೆಯೇ ಕಾಣುವ ವರ್ತನೆ ಕೂಡ.

ಆದರೆ ಅದೆಲ್ಲ ಕೇವಲ ಸಾತ್ವಿಕ ಕ್ರೋಧದ ಪ್ರಭಾವ. ತಮಗೆ ಸರಿಯೆನಿಸಿದ್ದನ್ನು ಹೇಳುವಾಗ ಮುಚ್ಚುಮರೆ ಇಲ್ಲದ ಮಾತಿನ ಓಘ. ಕೆನ್ನೆ ಕಿವಿಗಳಲ್ಲಿ ಚಿಮ್ಮಿದ ಆರಕ್ತವರ್ಣ. ಹಣೆಯ ಮೇಲೆ ಸಾಲಿಟ್ಟ ಬೆವರುಹನಿ – ಮುತ್ತಿನ ತರಹ.

ಆದರೆ ಕ್ಷಣಾರ್ಧದಲ್ಲಿ ಕೋಪವೆಲ್ಲ ಅಂತರ್ಧಾನ. ಮಳೆ ನಿಂತು ಬಿಸಿಲು ಹೊದಿಸಿದ ಹಾಗೆ ನಿಚ್ಚಳ. ಕೊಂಕು, ಕುಹಕ ಇಂತಿಷ್ಟೂ ಇಲ್ಲದ ಗುಣ.

ಮೂರು ಬಾರಿ ಸೀಸರನಿಗೆ ಕಿರೀಟವನ್ನೊಪ್ಪಿಸಿದರೂ ಮೂರು ಬಾರಿಯೂ ಅವನು ಅದನ್ನು ನಿರಾಕರಿಸಿದನಂತೆ. ಸೀಸರ್ ಸರ್ವಾಧಿಕಾರಿಯಲ್ಲ, ಆಗಬಯಸಲಿಲ್ಲ. ಇದು ಷೇಕ್ಸ್‌ಪಿಯರನ ಮಾರ್ಕ್ ಆಂಟೋನಿ ಮಾಡಿರುವ ಸೀಸರ್ ಗುಣಗಾನ.

ಸರಳತೆ, ಸೌಜನ್ಯ

ಆದರೆ ತೀನಂಶ್ರೀ ಸಮರ್ಥನೆಗೆ ಯಾವ ಆಂಟೋನಿಯೂ ಬೇಕಿಲ್ಲ. ಖಂಡಿತವಾಗೂ ತೀನಂಶ್ರೀ ಯಾವ ಅಧಿಕಾರಕ್ಕೂ ಆಸೆ ಪಟ್ಟವರಲ್ಲ. ಕೈಗೆ ಬಂದ ಅಮಲ್ದಾರ್ ಹುದ್ದೆಯನ್ನೇ (ಆಗಿನ ಅಮಲ್ದಾರ ತಾಲೂಕಿನ ದೊರೆ) ಕಡೆಗಣಿಸಿ ಕಾಲೇಜು ಸೇರಿದ ಕನ್ನಡ ಉಪಾಧ್ಯಾಯ. ಇದು ಮಹತ್ವಾಕಾಂಕ್ಷೆ ಎನ್ನುತ್ತೀರಾ?

ಖಂಡಿತಾ ಅಲ್ಲ. ಆಂಟೋನಿಯ 'ಧ್ವನಿ' ಇಲ್ಲದ ನೇರ ಸರಳ ಸತ್ಯ.

ಕೀರ್ತಿ, ಪೂಜೆ, ಪ್ರಶಸ್ತಿ, ಸನ್ಮಾನ ಯಾವುದನ್ನೂ ತೀನಂಶ್ರೀ ಬಯಸಿದವರಲ್ಲ. ವರ್ಷೇ ವರ್ಷೇ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದ ಮೂರು ದಿನಗಳ ಜಾತ್ರೆಯ ಉತ್ಸವಮೂರ್ತಿ ಯಾಗೂ ಮೆರೆಯಲಿಲ್ಲ. ತಮ್ಮ ಹೆಸರು ಸೂಚಿತವಾದಾಗಲೆಲ್ಲ ಉಪಾಯವಾಗಿ ಅದನ್ನೊತ್ತರಿಸಿ ಬೇರೆಯವರ ಹೆಸರು ಸೂಚಿಸುವ ಮಟ್ಟಿಗೆ ತೀನಂಶ್ರೀ ಸೌಜನ್ಯ.

ಬರಹದ ನವೆಯಿಂದ ಹಗಲು-ರಾತ್ರಿ ಪರಿತಪಿಸಿದವರೂ ಅಲ್ಲ. ಹೆಚ್ಚು ಬರೆಯಲಿಲ್ಲವೆಂಬ ಕೊರಗು ಇವರಿಗಿದ್ದರೂ ಬರಹ ಇವರಿಗೆ ಗೀಳಾಗಲಿಲ್ಲ. 'ಪದ್ಯ ಹೋಯ್ತು ಗದ್ಯ ಬಂತು ಡುಂಡುಂ! ಗದ್ಯ ಹೋಯ್ತು ಮಾತು ಬಂತು ಡುಂಡುಂ! ಮಾತು ಹೋಯ್ತು ಮೌನ ಬಂತು ಡುಂಡುಂ!' ಇದು ತೀನಂಶ್ರೀ ತಮ್ಮ ಬಗ್ಗೆ ತಾವೇ ಬರೆದುಕೊಂಡ ಚರಮವಾಕ್ಯ. ಒಂದು ದೃಷ್ಟಿಯಲ್ಲಿ ಇದು ತೀನಂಶ್ರೀ ಸಾಹಿತ್ಯ ಜೀವನ ಸಾರಾಂಶ.

ಪ್ರೇಮಕಾವ್ಯ

ತೀನಂಶ್ರೀ ಬರೆಯಬೇಕಾದಷ್ಟು ಬರೆಯಲಿಲ್ಲವೆಂಬುದು ಇವರನ್ನು ಬಲ್ಲವರೆಲ್ಲರ ಶುಕವಾಕ್ಯ ಆದರೆ ತೀನಂಶ್ರೀ ಬರೆದದ್ದು 'ಅಲ್ಪ'ವಲ್ಲ. ಅದೇನೂ ಸ್ವಚ್ಛಂದ ಪ್ರವಾಹವಲ್ಲ. ಬೆಟ್ಟದ ಬುಡದಲ್ಲಿ ಅಲ್ಲಲ್ಲಿ ಹರಿದು ಪುಟ್ಟ ಪುಟ್ಟ ಮಡುಗಟ್ಟಿದ ಒರತೆ. ತೀನಂಶ್ರೀಯವರ 'ಒಲುಮೆ' ಆಧುನಿಕ ಕನ್ನಡದ ಪ್ರೇಮಕಾವ್ಯ ಸಾಹಿತ್ಯದ ಚೊಚ್ಚಲ ಕೃತಿ. ಅನಂತರ ಈ ಕ್ಷೇತ್ರದಲ್ಲಿ ಇವರನ್ನೇ ಮೀರಿಸಿದ 'ಉಸ್ತಾದ'ರು ಅನೇಕರಿರಬಹುದು. ಆದರೆ ಅವರಿಗೆಲ್ಲ ಇವರೇ ಭರತಮುನಿ. 'ಹಿರಿಯರಿರುವರೆಂದು, ನಾಚಿ ನುಡಿಯಲಾರದವಳ ಕೊರಗು, ತೆರೆದ ತುಟಿಯ ನಡುಕ, ಇನಿಸು ಬೆವತು ಕೆಂಪಗಾದ ಕೆನ್ನೆ, ನೀರ ತೆರೆಯ ಹಿಂದೆ ಕಣ್ಣು ಬೀರುತಿರುವ ಬಯಕೆ ನೋಟ; ಊರಿಗಿದನು ನೋಡಿ ನೋಡಿ ಹೊರಡಲಾರೆ, ನಿಲ್ಲಲಾರೆ!' ಎಂಬುದು ಕೇವಲ ಇವರ ಅನುಭವವಲ್ಲ. ಇವರ ಹಿಂದೆ ಆಗಿಹೋದ ಎಲ್ಲರದು. ಮುಂದಣ ಎಲ್ಲ ತರುಣ

ಪೀಳಿಗೆಗಳ ಪ್ರಥಮ ಅನುಭವವದು. ತೀನಂಶ್ರೀಯವರ, 'ಒಲುಮೆ'ಯಲ್ಲಿ ಸ್ವಂತದ್ದೆಷ್ಟು, ಅನ್ಯರಿಂದ ಎರವಲು ತಂದದ್ದೆಷ್ಟು, ಎಂಬುದು ಇಲ್ಲಿ ಮುಖ್ಯವಲ್ಲ. ಇವರು ಬರೆದದ್ದೆಲ್ಲ ಇವರದಾಗಿಯೇ ಬಂದದ್ದು. ಅದರಿಂದಲೇ ಇವರ 'ಒಲುಮೆ'ಗೆ ನವೋನವತನ ಬಂದಿರತಕ್ಕದ್ದು.

ಬಿಡಿಮುತ್ತು

ಸಂಸ್ಕೃತ ಸಾಹಿತ್ಯ ಸೊಬಗಿನ ದ್ರಾಕ್ಷಾಪಾಕ ರುಚಿಕಟ್ಟಾಗಿ ಹರಿದಿರುವುದು ಸುಭಾಷಿತಗಳಲ್ಲಿ. ಈ ಬಿಡಿಮುತ್ತುಗಳನ್ನು ಆಯ್ದು ಕನ್ನಡದಲ್ಲಿ ಕೋದದ್ದು ತೀನಂಶ್ರೀಯವರ ಇನ್ನೊಂದು ಮಹತಿ. ಇದು ಇವರ ಬಾಳಿನ ಉದ್ದಕ್ಕೂ ಧಾರಾವಾಹಿ. ಮಕ್ಕಳ ಜಗಳದ ಮೂಲವನ್ನರಿಯ ಲಾರದೆ ಅಸಹಾಯಕತೆಯಿಂದ ನಸುನಕ್ಕ ಪಾರ್ವತಿಯನ್ನು ಕುರಿತ ಸಂಭಾಷಣಾರೂಪದ ಈ ಪದ್ಯ ನೋಡಿ (ಇದನ್ನು ರಾಜರತ್ನಂ ಅವರೂ ಅನುವಾದಿಸಿದ್ದಾರೆ):

'ಹೇ ರಂಬ!'
'ಏನಮ್ಮ?'
'ಅಳುವೆಯೇತಕೆ?'
'ಗುಹನು ಕಿವಿಗಳ ಹಿಂಡುತಿಹನು!'
'ಸ್ಕಂದ, ಏನಿದು ಚೇಷ್ಟೆ?'
'ಅವನೆನ್ನ ಕಣ್ಣುಗಳನೆಣಿಕೆ ಮಾಡಿದನು ಮೊದಲು.'
'ಸರಿಯಲ್ಲ ನೀಗೈದುದೆಲೆ ವಿನಾಯಕ!'
'ನನ್ನ ಮೂಗನೇ ಅಳೆದನಮ್ಮ!'–
ಇಂತು ಮಕ್ಕಳು ಗೈದ ವಾದದಲಿ ಮುದವಾಂತ
ಗೌರಿ ಪೊರೆಯಲಿ ನಮ್ಮನು.

(ಸುಧಾ, ೬–೧೨–೧೯೭೬)

A Symbol of Genius Uncommon

L.S. Seshagiri Rao

●

Not buildings or libraries or laboratories make a University; the teachers make university what it is. **Professor T.N. Sreekantaiya was a teacher of whom Oxford or Cambridge would have been proud.**

Nature endowed him with a firstrate mind and an exceptionally retentive memory. He added to the gifts of nature, an unfaltering devotion to knowledge and a passion for precision. His learning was like oil that constantly fed his perception, with the result that he was the ideal reader and the ideal critic. He used to say, 'Reading is the enemy of writing', and was himself an example. How many ideas he held suspended in his mind, to let them crystallize slowly! So much that he could have written he did not write, because of his singular and splendidly scholar like-passion for precision.

Any interpretation or explanation, even if it was one suggested by himself, was subjected to a rigorous examination. And when, at last, he did find a solution to a problem, how thrilled he was! Quite a number of his papers and articles were on questions of interpretation that had long teased scholars. In one stanza in the popular Kannada classic, the Jaimini Bharata of Lakshmisha, occurs a word 'muntaagi' in the phrase 'munneeru muntagi'. What does the word mean? There is an interesting note by him on the word. He himself had tentatively suggested that the reading ought to be, 'munnirumamtaagi', but was not quite satisfied. In the note he rejects his earlier suggestion. He

narrates how a friend from Hassan used the expression 'mundagi', to mean 'towards', and how he pricked his ears at the use of the expression. He settles the interpretation on the basis of this use of the term 'mundagi', still current in some parts of the land, and the use of 'muntagi' and 'mundagi' as synonyms in edicts.

There is another interesting note on 'chattana' and 'bedande'. These are two forms of poetry to which there are references in 'Kavirajamarga' composed in the eleventh century. But no works which belong to these categories are extant. What could have been their features? T.N.S examines all the available references to these forms, and scrupulously quotes textual variations he has come across. He exactitudes the various references, interprets with imagination and makes at every step the qualifications that the available body of knowledge makes necessary, and precisely sets forth his conclusions. His note on a single stanza of four lines beginning with the line 'enittenittambujapatranetreya' and that entitled 'Eni-gadim-ree' are models of radiant scholarship

Few have wirtten so illuminatingly on prosody as Prof.•T.N.S. At a time when pundits were still hostile to the metrical innovations of the Renaissance poets, and nostalgic about the metres of pre-Renaissance poetry, he affirmed the need for experiments. One of the earliest and most helpful articles on the metres of modern Kannada poetry was his contribution to the volume 'Sambhavane' (1941). He could grasp metre as an organic part of the verbal embodiment of experience in poetry.

That T.N.S. was drawn to Linguistics fairly early is clear from the paper 'The Mutation of, i,u,e and o in Kannada' presented at the Oriental Conference in 1935. This, I beleve, was his first essay in Linguistics. I have never ceased to wonder at the achievement of Prof. T.N.S. in this field. That he, one of the ideal 'rasikas' and 'sahridayas' that I have been privileged to meet, a man who seemed

born for the most enlightened enjoyment of literature and to promote the elucidation of works of literature and the correction of taste, should have immersed himself in the study of Linguistics for a decade, filled me and quite a few like me with wonder not unmixed with regret. But he soon won an all-India reputation in the field. And when he lectured at the Deccan College in Poona scholars from the USA were so deeply impressed that they immediately invited him to visit the States. His article 'Affricates in Kannada Speech' (1954) is still considered a signal contribution to the study of the phonemes of Kannada. He directed the project for the Phonemic and Morphophonemic Frequency Count for Kannada.

His study of language and of prosody, his passion for precision, his Sherlock Holmes-like instinct for clues and his critical intuition made him one of the best editors of ancient works. His 'Gadayuddha Sangraha' set new standards for editors of classics. Ranna was his favourite poet among the classics. And this work is a labour of love. One of the sources he had to rely very much on was a very old, almost indecipharable manuscript ready to crumble to pieces. And this he put to splendid use.

T.N.S was a critic of rare literary ocumen. To his masterly knowledge of the mechanics and formal features of literature he added what T.S. Eliot calls literary tact. He could speak with authority on diction and structure, on metre and figures of speech. But he could go to the very soul of a work of literature. Contemporary literature is both a challenge to and the touchstone of literary perception and judgment. His review of Bendre's 'Gari' in 1933 (when the poet was 37 and the reviewer 27) and his introduction to P.T. Narasimhachar's 'Ahalye' reveal what manifold gifts T.N.S. brought to literary criticism-not the least of them, a superbly trained taste. One of the loveliest folksongs, 'Kerege Hara', had been lying neglected for 15 years after its publication in an anthology until T.N.S. wrote a perceptive article on it.

Prof. Sreekanataiya's 'magnum opus' was, of course, 'Bharatiya Kavya Meemamse'. He devoted several years to the composition of this work. It is a work which should have been translated into other Indian languages and English long ago. It would have been difficult to think of another scholar so splendidly gifted: T.N.S. seemed born to wirte this work. His academic attainments were breath-taking. At the age of 20, he had graduated with six gold medals to his credit. He was First among the First classes in the Master's Degree Examination twice-once when he specialized in English and the next year when he chose Kannada for his special subject. He had devoted decades to the study of Kannada, Sanskrit and English literatures as well as to the works of poetics and aesthetics in those languages. His mastery of the mechanics and formal features of forms of literature, and his critical perception and his critical intuition had made him one of the most reliable critics of his generation. This was the man Kannada had been waiting for to undertake the formidable task of both interpreting to the modern reader the concepts of poetry advanced by the titans of the past and to survey the history of Indian poetics. T.N.S was writing for a generation of readers brought up on literary works produced in an age when the world had begun to shrink, and Homer and Shakespeare and Goethe and Ibsen and Tolstoy and Eliot were the contemporaries of the serious students of literature in Karnataka.

The work is divided into three sections – the first devoted to a survey of the development of this branch of study; the second, bearing the title, 'Kavi-Kavya-Sahridaya', seeks to explain the answers of the Indian students of poetry to the questions. "Who is a poet. What are the characteristics of poetry? And who is the ideal reader?." The last section - the cream of the work - is devoted to the exposition and examination of three theories which constitute the most valuable contribution of Indian scholars to Comparitive Poetics – the theories of Rasa, Dhwani and Ouchitya.

The work is a classic example of incandescent scholarship. The learning heat that has gone into this work is formidable. But it is

never ostentatious, and never mere piling up of information. He is greateful and appreciative without being adulatory; he expounds without abdicating judgment; and he applies ancient theories with singular felicity to modern poetry to vindicate their contemporary validity. In his other critical writings T.N.S. seems close to the critics of the Ranaissance Age, who wrote largely to share their enjoyment of a literary work with the reader. This work shows him surprisingly close to the school of a later day which relied on the explication of a text. Here is a work for which the scholar and the young student might feel equally grateful.

TNS was poet and an essayist who unfortunately wrote too little. His Kannada rendering of love poems from several languages and the love poems he himself composed show a rare delicacy of feeling and felicity of expression. He had a refined sense of humour probably without it he would not have become the excellent teacher and critic that he was. An essay like 'Kasina Sangha' is not easily forgotten. In his collection of essays and letters, 'Nantaru', there is a rare zest for living. Here is a soul unashamedly in love with life, gladly and gratefully responding to all that is good in life. The very writing seems to quiver with grateful pleasure when he speaks of friendship or love.

There are so many aspects of the man and his work that I have not touched upon here – such as his influence on his students, what he meant to young teachers who were his colleagues and to young writers and his mangificient contribution to the Kannada-Kannada Dictionary. The limits I have set to the length of the article do not permit me to expatiate on these themes. But I wish to recall what a student of his has written in a tribute and also on experience of my own, to illustrate how effortelessly he carried his learning and how meaningul it was.

The student once wanted to impress his professor went to TNS to discuss some words common to Kannada and Bengali. The student

had carefully amassed information in an area to which he was sure, the teacher would not have as yet given much time. He asked, "Are the words 'beyiga' and 'beega' related?." Pat came the reply: "Dr. Sunithi Kumar Chatterji has said in his 'Origin and Development of Bengali Language and Literature' that the word 'beyiga' comes from the Sanskrit word 'vaivahika'. Please look up what he says."

About 25 years ago I was the president of an association which organised a function to celebrate the brithday of Jawaharial Nehru. Sri. D.V Gundppa was in the chair and TNS in the auditorium. After the guest speakers had spoken, DVG said "I request Sri T.N. Sreekantaiya to speak on Nehru the Writer." TNS was taken by surprise. He protested but could not really disobey the patriarch. Without any prepartion he spoke on a subject which was strictly speaking, beyond the pale of his regular studies. But what a brilliant speech he made. I have often regretted that the speech was not taped.

It is difficult to avoid superlatives in speaking of Prof. T.N. Sreekantaiya. One tends to speak with an enthusiasm which TNS himself would have dispproved of as a scholar, but would have understood. Some men become symbols. TNS was one such man. He has become the symbol of incandescent scholarship and truly humanized intellectual brillance.

(Indian Express : 28-5-1976)

"ಶ್ರೀಕಂಠತೀರ್ಥ"ದಲ್ಲಿರುವ ಸಂದೇಶಗಳು

●

ರಾಳ್ಳಪಲ್ಲಿ ಅನಂತಕೃಷ್ಣಶರ್ಮ

ತೀ.ನಂ.ಶ್ರೀ.ಯವರೊಡನೆ ನನ್ನ ಪರಿಚಯ ಹಲವು ವರ್ಷಗಳ ಹಿಂದೆಯೇ ಮೊದಲಾಗಿರಬೇಕು. ಮೈಸೂರು ಮಹಾರಾಜರ ಕಾಲೇಜಿನಲ್ಲಿ ಆಗ ನಾನು ಉಪಾಧ್ಯಾಯ (ತೆಲುಗು ಪಂಡಿತ)ನಾಗಿ ಕೆಲಸದಲ್ಲಿದ್ದೆ. ಅಂದಿನಿಂದ ಅವರ ಅಕಾಲಿಕ ಕಾಲಧರ್ಮದವರೆಗೂ ನಮ್ಮಿಬ್ಬರ ಪರಸ್ಪರ ಸೌಹಾರ್ದ ಬೆಳೆಯಿತು. ಆದರೆ ಅದು ಇನ್ನೂ ಘನೀಭೂತವಾಗಿ ಆಂತರಂಗಿಕವಾಗಿ ಬೆಳೆಯಬೇಕಾಗಿ, ಬೆಳೆಯಬಹುದಾಗಿ ಇತ್ತು. ಬೆಳೆದಿದ್ದರೆ ನನ್ನ ಜೀವನ ಹೆಚ್ಚಾಗಿ ತುಂಬುತ್ತಿತ್ತು. ನಮ್ಮ ನಮ್ಮ ಶಿಕ್ಷಣ, ಸಂಸ್ಕಾರ, ಆಶೆ, ಆಶಂಸೆ, ತಕ್ಕಮಟ್ಟಿಗೆ ಬೇರೆ ಬೇರೆಯಾಗಿದ್ದು ಅದು ಹಾಗೆ ಸಾಗಲಿಲ್ಲ. ಅಲ್ಲದೆ ನನಗಿಂತ ವಯಸ್ಸಿನಲ್ಲಿ ಅವರು ಸುಮಾರಾಗಿ ಚಿಕ್ಕವರು. ವಯೋವೃದ್ಧರನ್ನು ಸ್ವಲ್ಪವಾದರೂ ದೂರದಲ್ಲಿರಿಸಿಕೊಂಡಿರುವುದು ಆಗಿನ ಕಾಲದ ಪದ್ಧತಿ. ವೃದ್ಧರ ಕಣ್ಣಿಗೆ ಕುಮಾರನಾಗಿ, ಕುಮಾರರ ಕಣ್ಣಿಗೆ ವೃದ್ಧನಾಗಿ ತೋರುವ ವಿಶಿಷ್ಟ ವಿಚಿತ್ರ ಸ್ಥಿತಿ ಆಗ–ಈಗಲೂ ಅಷ್ಟೆ–ನನ್ನದು. ಆದರೆ ನನಗೆ ತಿಳಿದಮಟ್ಟಿಗೆ ನನ್ನ ನಡತೆ ಅದಕ್ಕೆ ಕಾರಣವಲ್ಲ ಎಂದು ನಂಬುತ್ತೇನೆ!

ಕಪಟ, ಆಡಂಬರ, ಆರೋಪಣೆಗಳನ್ನರಿಯದ, ಮಗುವಿನಂತೆ ಪ್ರಶಾಂತವಾದ ಮಧುರ ಮನಸ್ಸು ತೀನಂ.ಶ್ರೀ.ಗೆ ಭಗವದ್ದತ್ತವಾದ ವರಪ್ರಸಾದ. ಈರ್ಷ್ಯೆ ಅಸೂಯೆಗಳಿಗೆ ಒಳಗಾಗದ ಉದಾರ ಹೃದಯ ಅವರದು. ವಿಶಾಲವಾದ ಆಳವಾದ ಬಹುಮುಖವಾದ ವ್ಯಾಸಂಗ. ಗುಣಾನುಭವದಲ್ಲಿ ತನ್ನದು ಇತರರದು ಎಂಬ ಅಭಿಮಾನಲೇಪವಿಲ್ಲ. ಅವರು ಗ್ರೀಸು, ರೋಮು ಮುಂತಾದ ಪಾಶ್ಚಾತ್ಯದೇಶಗಳಲ್ಲಿ ಸಂಚಾರಮಾಡಿ ನೋಡಿಕೊಂಡು ಹಿಂದಿರುಗಿದ ಮೇಲೆ ನಾನವರನ್ನೊಮ್ಮೆ ಕಂಡಾಗ 'ಅಲ್ಲಿನ ಪ್ರಾಚೀನ ಶಿಲ್ಪ–ವಿಗ್ರಹಗಳನ್ನು ಕಂಡಮೇಲೆ ನನಗೆ ನಮ್ಮವುಗಳಲ್ಲಿ ಆದರಾಭಿಮಾನಗಳು ಸಡಿಲವಾದವು' ಎಂದು ಹೇಳಿದರು.

ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ವಾರಕ್ಕೋ ಪಕ್ಷಕ್ಕೋ ಒಮ್ಮೆ ಅವರ ಮಿತ್ರಗೋಷ್ಠಿ ಸೇರುತ್ತಿತ್ತು. ವಿವಿಧ ಸಾಹಿತ್ಯ ವಿಷಯಗಳ ಚರ್ಚೆಯಿಂದ ಅಲ್ಲಿ ಮಧುರವಾದ ಕಾಲಕ್ಷೇಪ. ಒಂದು ದಿನ ಆಕಸ್ಮಿಕವಾಗಿ ನಾನು ಬಂದಿದ್ದಾಗ 'ಶರ್ಮಾ! ಇವತ್ತೇನೂ ಕಾಲಕ್ಷೇಪ ವಿಷಯವಿಲ್ಲ. ನೀವೇನಾದರೂ ಸಹಾಯಕ್ಕೆ ಬರುತ್ತೀರಾ?' ಎಂದು ಕೇಳಿದರು. 'ತೆಲುಗು ಮಹಾಭಾರತದಿಂದ ಕೆಲವು ಸಂದರ್ಭಗಳನ್ನು ಓದುತ್ತೇನೆ' ಎಂದು ನಾನಂದೆ. ಹಾಗೇ ನಡೆಯಿತು. ತೆಲುಗಿನಲ್ಲಿ

ಅಂದಿನಿಂದ ಇಂದಿನವರೆಗೂ ಆದರ್ಶ ಮಹಾಕವಿಯಾದ ತಿಕ್ಕನ ಸೋಮಯಾಜಿ ರಚಿಸಿದ ಉದ್ಯೋಗಪರ್ವದ ಶ್ರೀಕೃಷ್ಣರಾಯಭಾರದಲ್ಲಿ ಕೌರವಸಭೆಯಲ್ಲಿ ಆತನು ಮಾಡಿದ ಮಹೋಪನ್ಯಾಸ ಘಟ್ಟವನ್ನು ಸುಮಾರು ಒಂದು ಘಂಟೆ ಕಾಲ ಓದಿದೆ–ಸೂಕ್ಷ್ಮವಾದ ಕನ್ನಡ ವಿವರಣೆಯೊಡನೆ. ಅದನ್ನು ಅವಧಾನದಿಂದ ಕೇಳಿದ ತೀ.ನಂ.ಶ್ರೀ. 'ನಮ್ಮ ಭಾರತಗಳು ಯಾವವೂ ಈ ಉದಾತ್ತ ಗಂಭೀರದ ಅಂತಸ್ತಿಗೆ ಬಂದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದರು! ಈ ಅಭಿಪ್ರಾಯಗಳನ್ನು ಒಪ್ಪದವರು ಕೆಲವರಿರಬಹುದು. ಆದರೆ ಅವುಗಳನ್ನು ನಿಸ್ಸಂಕೋಚವಾಗಿ ಹೇಳಿದ ವ್ಯಕ್ತಿಯ ನಿಷ್ಕಲ್ಮಷ ಹೃದಯವನ್ನು ಅಲ್ಲಗಳೆಯುವವರು ಯಾರೂ ಇರಲಾರರು. ಕನ್ನಡದಲ್ಲಿ ಅವರಿಗಿದ್ದ ಅಪಾರವಾದ ಅಭಿಮಾನ, ಪ್ರೇಮ, ಭಕ್ತಿ, ಸ್ವಾರ್ಥತ್ಯಾಗ, ಸೇವೆ–ಯಾವದೂ ಆ ಕನ್ನಡಿಯಂಥಾ ಹೃದಯವನ್ನು ಕದಡಲಿಲ್ಲ!

"ಯಸ್ಮೈ ಜನಃ ಸ್ಪೃಹಯತೇ ನರಪುಂಗವಾಯ।
ಕಾಲೋಽಪಿ ಕರ್ಷತಿ ತಮೇವ ನಿಜಂ ನಿಕಾಯ್ಯಂ॥"

ಎಂಬ ಅಪ್ಪಾಶರ್ಮ ವಿದ್ಯಾವಾಚಸ್ಪತಿಯ ಸೂಕ್ತಿ ತೀ.ನಂ.ಶ್ರೀಕಂಠಯ್ಯನ ವಿಷಯದಲ್ಲಿ ಸತ್ಯವಾಯಿತು. ದೈವಲೀಲೆ! ಆ ನಂಬಿಕೆಯೊಂದೇ ಮಾನವ ಜಾತಿಗೆ ಅನೂಚಾನವಾಗಿ ಬಂದ ಸಮಾಧಾನ, ಹೃದಯವೇದನೆಗೆ.

ಕನ್ನಡ ತಿಳಿದವರೆಲ್ಲಾ ಈ 'ಶ್ರೀಕಂಠತೀರ್ಥ' ಮಹಾಗ್ರಂಥವನ್ನು ಸಾವಧಾನವಾಗಿ ಪರಿಶೀಲಿಸಿ, ಹೃದಯ ಸಂಸ್ಕಾರವನ್ನು ಪಡೆದು, ಸಂಪಾದಕ ಮಹಾಶಯರ ಭಕ್ತಿ ಶ್ರದ್ಧೆ ಶ್ರಮಗಳನ್ನು ಸಫಲಗೊಳಿಲಿ–ಎಂದು ನನ್ನ ಆಶಂಸೆ; ಸಂದೇಶ.

* * *

ವಿ.ಕೃ. ಗೋಕಾಕ್

ಕನ್ನಡದ ಉಪನ್ಯಾಸಕರಾದ ತೀ.ನಂ.ಶ್ರೀಯವರು ಸುಮಾರು ೧೯೩೦ರಲ್ಲಿ ಉತ್ತರ ಕರ್ನಾಟಕದ ಸಾಹಿತ್ಯ ಯಾತ್ರೆಗಾಗಿ ಕೆಲವು ಸಾಹಿತ್ಯದ ವಿದ್ಯಾರ್ಥಿಗಳನ್ನು ಕರೆದುಕೊಂಡು ಧಾರವಾಡಕ್ಕೆ ಬಂದಿದ್ದರು. ಇವರ ಜೊತೆ ಕೆ.ವಿ. ರಾಘವಾಚಾರ್ ಅವರು ಬಂದಿದ್ದಂತೆ ನನಗೆ ಜ್ಞಾಪಕವಿದೆ. ರೆವಿನ್ಯೂ ಇಲಾಖೆಯಲ್ಲಿಯ ಧನ ಅಧಿಕಾರಗಳಿರುವ ಹುದ್ದೆಯನ್ನು ಬಿಟ್ಟು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರ ಉದ್ಯೋಗವನ್ನು ಅವಲಂಬಿಸಿ ನಿಲ್ಲುವುದರಲ್ಲಿಯೇ ತೀ.ನಂ.ಶ್ರೀ. ಯವರ ಶುದ್ಧ ಸಾಹಿತ್ಯದ ಪ್ರೇರಣೆ ಸ್ಪಷ್ಟವಾಗಿ ಒಡಮೂಡಿತ್ತು. ಲಕ್ಷ್ಮೇಶ್ವರ, ಬಾಗೇವಾಡಿ, ಗದಗ ಮೊದಲಾದ ಸಾಹಿತ್ಯ ಕ್ಷೇತ್ರಗಳನ್ನು ನೋಡಿ ಹೋಗಲು ಈ ಮೇಳ ಬಂದಿತ್ತು. ಮುಗಳಿಯವರೂ ನಾನೂ ಆಗ ಕರ್ನಾಟಕ ಕಾಲೇಜಿನಲ್ಲಿ "Fellow" ಆಗಿ ವಸತಿಗೃಹದ ಮೇಲ್ವಿಚಾರಣೆಯಲ್ಲಿದ್ದೆವು. ಈ ಎಲ್ಲ ಸ್ನೇಹಿತರನ್ನು ವಸತಿಗೃಹದಲ್ಲಿಯೇ ಇಳಿಸಿಕೊಳ್ಳಲಾಯಿತೆಂದು ಕಾಣುತ್ತದೆ. ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಇವರಿಗಾಗಿ ಒಂದು ಕಾರ್ಯಕ್ರಮವನ್ನು ಬೇಂದ್ರೆಯವರು ಏರ್ಪಾಟು ಮಾಡಿದ್ದರು. ಈ ಸ್ನೇಹಿತರ ಯಾತ್ರೆ ಸಾಹಿತ್ಯಯಾತ್ರೆಯ ಮೊದಲನೆಯ ಉದಾಹರಣೆಯೆಂದು ಅವರು ಹೇಳಿದ್ದೂ ನನಗೆ

ನೆನಪಿದೆ. ಇದೇ ಸಭೆಯಲ್ಲಿ ಕೆ.ವಿ. ರಾಘುವಾಚಾರ್ಯರು "ಭಕ್ಕರಿ" ಎಂಬ ಆಹಾರ ಪದಾರ್ಥವನ್ನು ಮೊದಲನೆಯ ಸಲ ಸಂಶೋಧಿಸಿರುವುದಾಗಿ ತಿಳಿಸಿದ್ದರು.

ಕನ್ನಡ ಪ್ರಾಧ್ಯಾಪಕರೊಳಗೆಲ್ಲ ತೀ.ನಂ.ಶ್ರೀ.ಯವರ ಸ್ಥಾನ ಅದ್ವಿತೀಯವಾದುದು. ಬಿ.ಎಂ.ಶ್ರೀ. ಯವರು ಆಂಗ್ಲ ಸಾಹಿತ್ಯದ ಪ್ರಾಧ್ಯಾಪಕರೆಂದು ಕೀರ್ತಿವಂತರಾಗಿ ಆಮೇಲೆ ಕನ್ನಡಕ್ಕೆ ತಿರುಗಿದರು. ತೀ.ನಂ.ಶ್ರೀಯವರು ಕನ್ನಡದಲ್ಲಿಯಂತೆ ಇಂಗ್ಲೀಷು ಎಂ.ಎ. ಯಲ್ಲಿಯೂ ಉತ್ತಮ ಪದವಿಯನ್ನು ಸಂಪಾದಿಸಿದ್ದಲ್ಲದೆ ಈ ಎರಡೂ ಸಂಪಾದನೆಗಳನ್ನು ಪ್ರಾರಂಭದಿಂದಲೇ ಕನ್ನಡದ ಸೇವೆಗೆ ಮೀಸಲಾಗಿಟ್ಟರು. ಅದ್ಭುತ ವಿಮರ್ಶಾಶಕ್ತಿ ಇದ್ದಂತೆ ಅವರಲ್ಲಿ ಕಾವ್ಯ ಸಾಹಿತ್ಯ ನಿರ್ಮಾಣ ಶಕ್ತಿಯೂ ಇದ್ದಿತು. ಸಾಹಿತ್ಯವನ್ನು ಅರಗಿಸಿಕೊಂಡಂತೆಯೇ ಭಾಷಾಶಾಸ್ತ್ರವನ್ನು ಅವರು ಆತ್ಮಸಾತ್ ಮಾಡಿಕೊಂಡರು. ದ್ರಾವಿಡ ವರ್ಗಕ್ಕೆ ಸೇರಿದ ಭಾಷೆಗಳ ಪರಿಚಯವನ್ನು ಬೆಳಸಿಕೊಂಡರು. ಸಂಸ್ಕೃತವಂತೂ ಸರಿಯೇ ಸರಿ. ಅವರ ಶ್ರೇಷ್ಠ ಕೃತಿಯಾದ "ಭಾರತೀಯ ಕಾವ್ಯಮೀಮಾಂಸೆ" ಈ ಎಲ್ಲ ಸಾಧನ ಸಿದ್ಧಿಗಳನ್ನು ಪ್ರತಿಬಿಂಬಿಸಿ ಮಹೋನ್ನತ ಕೃತಿಯಾಗಿ ತಲೆ ಎತ್ತಿ ನಿಂತಿದೆ. ವಿಮರ್ಶೆಯೇ ಇರಲಿ, ಪ್ರಬಂಧವೇ ಇರಲಿ, ಪ್ರವಾಸ ವರ್ಣನೆಯೇ ಇರಲಿ–ಈ ಶಕ್ತಿ ಸಂಚಯ ವನ್ನೆಲ್ಲ ಅಲ್ಲಿ ಹಿನ್ನೆಲೆಯಲ್ಲಾಗಲಿ, ಮುನ್ನೆಲೆಯಲ್ಲಾಗಲಿ ಕಂಡುಕೊಳ್ಳುತ್ತೇವೆ. ವಿದ್ವತ್ತಿನೊಡನೆ ಇಲ್ಲಿ ವಿನಯವೂ, ಸರಸ ವಿನೋದವೂ ಅವರಲ್ಲಿ ಮನೆಮಾಡಿಕೊಂಡಿದ್ದುವು.

ತೀ.ನಂ.ಶ್ರೀ. ಯವರೊಡನೆ ನಾನು ಕಳೆದ ಸುರಮ್ಯ ದಿನಗಳೆಂದರೆ ಅವರು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಬಂದು ಧಾರವಾಡದಲ್ಲಿದ್ದಾಗಿನ ದಿನಗಳು. ಆಗ ನಾನೂ ಇಪ್ಪತ್ತೊಂದು ವರ್ಷಗಳನಂತರ ಧಾರವಾಢಕ್ಕೆ ಬಂದಿದ್ದೆ. ವಿಶ್ವವಿದ್ಯಾನಿಲಯದ ಪ್ರಾರಂಭ ಕಾರ್ಯಗಳು ಆಗ ಭರದಿಂದ ಸಾಗಿದ್ದವು. ವಿಶ್ವವಿದ್ಯಾನಿಲಯದ ಸೆನೇಟ್ ಸಭೆಯಲ್ಲಿ, ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಹಾಗೂ ಇನ್ನುಳಿದ ಅನೇಕ ಸಮಿತಿಗಳಲ್ಲಿ ನಾವು ಜೊತೆಯಲ್ಲಿಯೇ ಇರುತ್ತಿದ್ದೆವು. ಅಲ್ಲದೆ ಆಗೀಗ ಒಬ್ಬರ ಮನೆಯಲ್ಲೊಬ್ಬರು ಊಟಕ್ಕೆ ಹೋಗಿ ಕಾವ್ಯ ಶಾಸ್ತ್ರ ವಿನೋದದಲ್ಲಿ ವಿರಮಿಸುತ್ತಿದ್ದೆವು.

ವಿದ್ಯಾವರ್ಧಕ ಸಂಘದ ಒಂದು ಮಹೋತ್ಸವದಲ್ಲಿ ಅವರು ಭಾಗವಹಿಸಿದ್ದು ನನಗೆ ನೆನಪಿದೆ. ಗೋಪಾಲಗಿರಿ ಸಭಾಮಂದಿರದಲ್ಲಿ ಸಭೆ ಸೇರಿತ್ತು. ಆಧುನಿಕ ಕನ್ನಡ ಕಾವ್ಯದ ಇತಿಹಾಸದ ಬಗ್ಗೆ ಮಾತನಾಡುತ್ತ, ಅದರ ಮೈಲಿಗಲ್ಲುಗಳನ್ನು ಕುರಿತು ತೀ.ನಂ.ಶ್ರೀ. ಯವರು ವಿವರಿಸುತ್ತಿದ್ದರು. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿಯೇ ಮೊದಲ ಸಲ "ಸಮುದ್ರ ಗೀತೆ"ಗಳನ್ನು ಹೆಸರಿಸಿದವರು ತೀ.ನಂ.ಶ್ರೀ. ಯವರು. ಆಗ ಅಲ್ಲಿ ಕುಳಿತ ಜನವೆಲ್ಲ ನನ್ನೆಡೆಗೆ ದೃಷ್ಟಿ ಹೊರಳಿಸಿತು. ತೀ.ನಂ.ಶ್ರೀ.ಯವರು ಹೇಳಿದ ಮೇಲೆ ಎರಡನೆಯ ಮಾತೇ ಇಲ್ಲವಲ್ಲ!

ಹೀಗೆ ಈ ಪ್ರಪಂಚದಲ್ಲಿ ಸನ್ಮಿತ್ರರು ಕಳೆದುಹೋಗುತ್ತಾರೆ. ಒಂದು ದಿನ ನಾವೂ ಕಳೆದು ಹೋಗುತ್ತೇವೆ. ಆದರೆ ಸ್ನೇಹ, ರಸಗ್ರಾಹಕತೆ, ರಸವಂತಿಕೆ–ಇವಾದರೂ ಶಾಶ್ವತವಾಗಿ ಜಗತ್ತಿನಲ್ಲಿ ಉಳಿದುಕೊಂಡಿರುತ್ತವೆ.

ಶ್ರೀಕಂಠ ಪ್ರಸಾದವೆಂದಿರಬಹುದಾದ ಈ ಕೃತಿಯನ್ನು, ಇದನ್ನು ಸಿದ್ಧಗೊಳಿಸಿದ ಸ್ನೇಹಿತರು 'ಶ್ರೀಕಂಠತೀರ್ಥ" ಎಂದು ಕರೆದಿದ್ದಾರೆ. ತೀ.ನಂ.ಶ್ರೀ. ಯವರ ಪ್ರತಿಭೆಯ ಪ್ರಸಾದಗುಣ ಇಲ್ಲಿದೆಯೆಂದೇ ಅದನ್ನು ಅನುಭವಿಸಲು ಇಚ್ಛಿಸುವ ರಸಿಕರಿಗೆ ಈ ಗ್ರಂಥವು ಶ್ರೀಕಂಠ ತೀರ್ಥ ಕ್ಷೇತ್ರವಾಗಿ ಉಳಿಯುತ್ತದೆ.

* * *

ದೇ. ಜವರೇಗೌಡ

ಗುರುವಂದನೆ

ಕನ್ನಡ ಜನತೆ ಮೇಲಿಂದ ಮೇಲೆ ನಾಡಿನ ಶ್ರೇಷ್ಠ ಸಾಹಿತಿಗಳನ್ನು, ಹಿರಿಯ ಕಲಾವಿದರನ್ನು, ಗಣ್ಯ ವಿದ್ವಾಂಸರನ್ನು ಗುರುತಿಸಿ, ಅವರ ಜೀವಿತ ಕಾಲದಲ್ಲಿಯೇ ಅವರವರಿಗೆ ತಗುವಂತೆ ಗೌರವಿಸುತ್ತ ಬಂದಿದೆ. ಮಹಾಪ್ರತಿಭಾವಂತರೂ, ಧೀಮಂತರೂ, ಅದ್ವಿತೀಯ ವಿದ್ವಾಂಸರೂ, ಬಹುಭಾಷಾ ಪಂಡಿತರೂ, ಗುರು ಎಂಬ ಪದದ ಗೌರವವನ್ನು ಕಾಪಾಡಿದ ಆಚಾರ್ಯರೂ, ಗಣ್ಯ ಭಾಷಾವಿಜ್ಞಾನಿಗಳೂ, ಕಾವ್ಯತತ್ತ್ವಪ್ರವರ್ತಕರೂ, ಸುಪ್ರಸಿದ್ಧ ವಾಗ್ಮಿಗಳೂ, ಖ್ಯಾತ ಸಾಹಿತಿಗಳೂ ಆದ ಶ್ರೀ ತೀ.ನಂ.ಶ್ರೀ.ಯವರನ್ನು ಅವರು ಬದುಕಿದ್ದಾಗ ಸನ್ಮಾನ ಪ್ರಶಸ್ತಿಗಳಿಂದ ಗೌರವಿಸ ದಿದ್ದುದು ದುರ್ದೈವವೇ ಸರಿ. ಅವರೇನೂ ಅವುಗಳಿಗಾಗಿ ಅಂಗಲಾಚಿದವರಲ್ಲ, ಡೊಗ್ಗುಸಲಾಮು ಹೊಡೆದವರಲ್ಲ, ಆತ್ಮಗೌರವವನ್ನೆಂದೂ ಮಾರಿದವರಲ್ಲ; ಅವು ಸಿಗದಿದ್ದುದರಿಂದ ಅವರಿಗೇನೂ ನಷ್ಟವಾಗಿಲ್ಲ; ಅವರು ಬಿಟ್ಟು ಹೋಗಿರುವ ಸಾರಸ್ವತ ಸಂಪತ್ತಿಗೆ ರಾಹುತಟ್ಟಿಲ್ಲ. ಅವರು ತೀರಿಕೊಂಡಮೇಲೆ ಸುಮಾರು ಹತ್ತುವರ್ಷಗಳು ಉರುಳಿ ಹೋಗುತ್ತಿರುವಾಗ, ಕನ್ನಡ ಜನತೆ ಎಸಗಬೇಕಾದ ಪವಿತ್ರ ಕಾರ್ಯವನ್ನು ಅವರ ಪುತ್ರರಾದ ಶ್ರೀ ನಾಗಭೂಷಣ ಅವರು ಈ ಸ್ಮಾರಕ ಗ್ರಂಥ ಪ್ರಕಟನೆಯ ಮೂಲಕ ನೆರವೇರಿಸುತ್ತಿರುವುದು ಹರ್ಷಪ್ರದವಾದ ಸಂಗತಿ. ಅವರೊಂದಿಗೆ ತೀ.ನಂ.ಶ್ರೀ.ಯವರ ಆಪ್ತಶಿಷ್ಯರಲ್ಲೊಬ್ಬರೂ ಪ್ರಸಿದ್ಧ ವಿದ್ವಾಂಸರೂ ಆದ ಡಾ॥ ಚಿದಾನಂದ ಮೂರ್ತಿಯವರು ಈ ಗ್ರಂಥದ ಸಂಪಾದನಾ ಕಾರ್ಯದಲ್ಲಿ ಕೈಹಾಕಿರುವುದು ಶ್ಲಾಘನೀಯವಾಗಿದೆ. ಈ ಇಬ್ಬರು ಮಿತ್ರರು ಈ ರೀತಿಯಾಗಿ ಪಿತೃಋಣ ಮತ್ತು ಗುರುಋಣ ಗಳನ್ನು ತೀರಿಸಲು ಅವಕಾಶ ಕಲ್ಪಿಸಿಕೊಂಡದ್ದು ಅಭಿನಂದನೀಯವಾದ ವಿಚಾರವಾಗಿದೆ. ಈ ಗ್ರಂಥ ಗಾತ್ರದಿಂದ ಮಾತ್ರವಲ್ಲ, ಗುಣದಿಂದಲೂ ಮಹತ್ವಪೂರ್ಣವಾಗಿದ್ದು ವಿದ್ವನ್ಮಾನ್ಯವಾಗು ವುದರಲ್ಲಿ ಸಂದೇಹವಿಲ್ಲ.

* * *

Dr. M.B. Emeneau
Professor Emeritus of Sanskrit
and General Linguistics
Department of Linguistics
University of California
Berkeley CA 94720, USA.

The untimely death of the late Professor T.N. Sreekantaiya has removed from our midst one who made large contributions to Kannada Linguistic Studies and whom we expected to make many more. We may grieve for this, but, even more, those who were privileged to know him grieve for the loss of a warm friend, a genial host, and a sensitive, cultured person. My wife and I in 1959 enjoyed the hospitality of him and his family; we look back to that with much pleasure, and regret that we shall not know it again. This volume will be a fitting memorial to a man of great spirit who will be much missed.

ಸಮಾರಂಭಕ್ಕೆ ಬಂದ ಸಂದೇಶಗಳು ಮತ್ತು ಪತ್ರಗಳು

●

ದ.ರಾ. ಬೇಂದ್ರೆ ಧಾರವಾಡ, ೨೮–೫–೧೯೭೬

ಆಶೀರ್ವಾದಗಳು,

ನಿಮ್ಮ ಕಾಗದ ಓದಿ ಅತ್ಯಾನಂದವಾಯಿತು. ಶ್ರೀ.ಮಾಸ್ತಿ, ಶ್ರೀ.ಗೋಕಾಕ, ಶ್ರೀ.ಶಿವರುದ್ರಪ್ಪ ಈ ಧುರೀಣರ ನೇತೃತ್ವದಲ್ಲಿ ಗ್ರಂಥ ಬಿಡುಗಡೆಯ ಸಮಾರಂಭವಾಗುವುದು ತೀರ ಯೋಗ್ಯ. ಇದು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

* * *

ಎ.ಎನ್. ಮೂರ್ತಿರಾವ್ ನವದೆಹಲಿ, ೨೫–೫–೧೯೭೬

'ಶ್ರೀಕಂಠತೀರ್ಥ'ವನ್ನು ಡಾ.ಮಾಸ್ತಿ ವೆಂಕಟೇಶ್ ಅಯ್ಯಂಗಾರ್ಯರು ಡಾ.ಗೋಕಾಕರ ಅಧ್ಯಕ್ಷತೆಯಲ್ಲಿ ಬಿಡುಗಡೆ ಮಾಡಲಿರುವರೆಂದು ಕೇಳಿ ಬಹಳ ಸಂತೋಷವಾಯಿತು. ಈ ಸಂದರ್ಭದಲ್ಲಿ ನನ್ನ ಮತ್ತು ತೀ.ನಂ.ಶ್ರೀಯವರ ದೀರ್ಘಕಾಲದ ಸ್ನೇಹದ ರಸನಿಮಿಷಗಳನ್ನು ನೆನೆಯುತ್ತಿದ್ದೇನೆ.

ಸಮಾರಂಭ ಎಲ್ಲ ವಿಧದಲ್ಲೂ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

* * *

ಪು.ತಿ. ನರಸಿಂಹಾಚಾರ್ ಮೈಸೂರು, ೨೭–೫–೧೯೭೬

ಚಿ॥ ನಾಗಭೂಷಣನಿಗೆ ಆಶೀಷ,

ನೀನು ಪ್ರೀತಿಯಿಂದ ಕಳಿಸಿದ ಆಹ್ವಾನಪತ್ರಿಕೆ ತಲುಪಿ ಸಂತೋಷವಾಯಿತು. ದೇಹಾಲಸ್ಯದಿಂದ ಸಭೆಗೆ ಬರಲು ಅಶಕ್ತನಾಗಿದ್ದೇನೆ. ಮನೆಯವರು ತಮ್ಮ ಹಿರಿಯರನ್ನು ನೆನೆದು ಸಂತೋಷಪಡುವುದು ಸಹಜ. ಅವರ ಜತೆಯಲ್ಲಿ ನಾಡೂ ಸಂತೋಷ ಪಡುವುದು ಅತಿಶಯದ ವಿಷಯ. ಸನ್ಮಿತ್ರ ತೀ.ನಂ.ಶ್ರೀಯವರು ಒಳ್ಳೆ ಕುಟುಂಬವರ್ಗವನ್ನೂ, ಸನ್ಮಿತ್ರರನ್ನೂ, ಸಚ್ಛಿಷ್ಯರನ್ನೂ, ವಿದ್ವಾಂಸರನ್ನೂ, ಸಹೃದಯರನ್ನೂ ಪಡೆದ ಭಾಗ್ಯಶಾಲಿಗಳು. ಅವರನ್ನು ಕೊಂಡಾಡುವುದು ನಮ್ಮೆಲ್ಲರಿಗೂ ಶ್ರೇಯಸ್ಕರ. ಪೂಜ್ಯರಾದ ಮಾಸ್ತಿಯವರು ಪುಸ್ತಕ

ಬಿಡುಗಡೆಮಾಡುವುದು ತಿಳಿದು ಹರ್ಷವಾಯಿತು. ಪೂಜ್ಯರು ಈಗ ತಾನೆ PEN ಅಧ್ಯಕ್ಷರಾಗಿ ಆಯ್ಕೆಯಾದುದು ತಿಳಿದು ಈ ಉತ್ಸವದಲ್ಲಿ ಅವರು ಭಾಗಿಯಾಗಿರುವುದು ಸಭೆಗೆ ಅತಿಶಯ ಕಾಂತಿ ತರುತ್ತದೆ. ಸನ್ಮಿತ್ರ ಡಾ. ಗೋಕಾಕರು ಅಧ್ಯಕ್ಷರು, ಸಚ್ಛಿಷ್ಯ ಶಿವರುದ್ರಪ್ಪನವರು ಗುರುಂ ಪ್ರಕಾಶಯೇತ್ ಧೀಮಾನ್ ಎಂಬ ಸೂಕ್ತಿಗನುಸಾರವಾಗಿ ಭಾಷಣಮಾಡುವವರಿದ್ದಾರೆ. ಡಾ. ಚಿದಾನಂದ ಮೂರ್ತಿಯವರು ಮತ್ತು ಶಂಕರನಾರಾಯಣ ಮತ್ತು ನೀನು ಸಂಪಾದಿಸಿರುವ ಪುಸ್ತಕ ತೀನಂಶ್ರೀಯವರ ಘನತೆಗೆ ಸರಿ ತೂಗುತ್ತದೆ. ಸಭೆಗೆ ನನ್ನ ಹಾರ್ದಿಕ ವಂದನೆ ಮತ್ತು ಅಭಿನಂದನೆಗಳು.

ನಿನ್ನ ತಾಯಿಯವರಿಗೆ ನಮಸ್ಕಾರ ತಿಳಿಸು.

* * *

ಕುವೆಂಪು ಮೈಸೂರು, ೨೪-೫-೧೯೭೬

‘ಶ್ರೀಕಂಠತೀರ್ಥ’ದ ಬಿಡುಗಡೆಯ ಸಂದರ್ಭದಲ್ಲಿ ನೀವು ಕಳುಹಿಸಿದ ಆಹ್ವಾನಪತ್ರಿಕೆ ತಲುಪಿತು. ವಂದನೆಗಳು.

ನಾನೂ ಶ್ರೀಕಂಠಯ್ಯನವರೂ ಸಹಾಧ್ಯಾಯಿಗಳು, ಕೆಲ ಕಾಲ ಸಹೋದ್ಯೋಗಿಗಳೂ ಆಗಿದ್ದೆವು. ಅವರ ವಿದ್ವತ್ತು, ಸಜ್ಜನಿಕೆಗಳನ್ನು ನಾನು ಸದಾ ನೆನೆಯುತ್ತೇನೆ. ಕನ್ನಡ, ಸಂಸ್ಕೃತ ಭಾಷೆ-ಸಾಹಿತ್ಯಗಳಲ್ಲಿ ಅವರಿಗಿದ್ದ ನಿರ್ದಿಷ್ಟವಾದ ಪಾಂಡಿತ್ಯ, ಸೊಗಸಾದ ಅಭಿರುಚಿ ಮತ್ತು ಪರಿಶುದ್ಧವಾದ ವಿಮರ್ಶನ ಶಕ್ತಿ ಇವು ಯಾವ ಕಾಲಕ್ಕೂ ಮಾದರಿಯಾಗಬಲ್ಲಂಥವು. ಅವರ ನೆನಪಿಗೆ ತಕ್ಕುದಾದ ರೀತಿಯಲ್ಲಿ ನೀವು ‘ಶ್ರೀಕಂಠತೀರ್ಥ’ವನ್ನು ಪ್ರಕಟಿಸುತ್ತಿರುವುದು ಅತ್ಯಂತ ವಿಹಿತವೂ ಸ್ತುತ್ಯವೂ ಆದ ಕಾರ್ಯ. ಅದಕ್ಕಾಗಿ ನಿಮ್ಮನ್ನೂ ಸಂಪಾದಕರನ್ನೂ ನಾನು ಅಭಿನಂದಿಸುತ್ತೇನೆ.

ಸಮಾರಂಭಕ್ಕೆ ಹೃತ್ಪೂರ್ವಕವಾಗಿ ಯಶಸ್ಸು ಕೋರುತ್ತೇನೆ.

* * *

ಎಸ್.ವಿ. ರಂಗಣ್ಣ ಮೈಸೂರು, ೨೬-೫-೧೯೭೬

ಶ್ರೀಮಾನ್ ತೀ.ನಂ.ಶ್ರೀಕಂಠಯ್ಯನವರನ್ನು ದಿವಂಗತರೆಂದು ಕರೆಯಬೇಕಾಗಿರುವುದು ನಮ್ಮೆಲ್ಲರ ದೌರ್ಭಾಗ್ಯ. ಇನ್ನೂ ಹೆಚ್ಚು ಕಾಲ ಅವರು ಜೀವಂತರಾಗಿದ್ದು ಶಕ್ತಿ, ಆರೋಗ್ಯ ಸಮಾಧಾನ ಕೂಡಿಕೊಂಡಿದ್ದು, ಅವರಿಂದಲೇ ಆಗಬೇಕಾಗಿದ್ದ ಹಲವು ಸಾಹಿತ್ಯಕ ಮಹತ್ಕಾರ್ಯಗಳನ್ನು ನೆರವೇರಿಸಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಭಗವಂತನಿಗೆ ಯಾವ ಅವಸರವಿತ್ತೊ ಅವರನ್ನು ತನ್ನ ಬಳಿಗೆ ಮುಂಚೆಯೇ ಕರೆಯಿಸಿಕೊಂಡ! ಅವರ ಅಗಲಿಕೆಯಿಂದ ನಮಗೆ ಉಂಟಾಗಿರುವ ಘನ ವಿಷಾದಕ್ಕೆ ಅವರ ಸ್ನೇಹದ ಸವಿನೆನಪುಗಳು ತುಸು ಪರಿಹಾರ.

ತೀ.ನಂ.ಶ್ರೀಕಂಠಯ್ಯನವರು ಸಾಮಾನ್ಯವಾಗಿ ತಮ್ಮದೇ ಆದ ಗಂಭೀರ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತಿದ್ದರೂ ಅನೇಕ ವೇಳೆ ಮಿತ್ರಗೋಷ್ಠಿಗಳಲ್ಲಿ ಸರಸ ನಡೆನುಡಿಯ ತೀನಂಶ್ರೀ ಆಗಿ ಬಿಡುತ್ತಿದ್ದರು. ಲಲಿತ ಸಂತೋಷವನ್ನು ಅಧಿಕಗೊಳಿಸುತ್ತಿದ್ದರು. ಅವರೀಗ ಯಶಶರೀರಿಗಳಾಗಿ ಪರಮ ಸೌಖ್ಯದಲ್ಲಿದ್ದಾರೆ; ಅವರ ಪ್ರೀತಿಯೂ ಹರಕೆಯೂ ನಮ್ಮ ಮೇಲೆ ಇರಲೆಂದು ಪ್ರಾರ್ಥಿಸೋಣ!

* * *

ಕೂಡಲಿ ಚಿದಂಬರಂ ಮೈಸೂರು, ೨೮-೫-೧೯೭೬

ಪ್ರೊ॥ ತೀ.ನಂ.ಶ್ರೀಕಂಠಯ್ಯನವರನ್ನು ಕುರಿತ ಸ್ಮಾರಕಗ್ರಂಥದ ಬಿಡುಗಡೆಯ ಸಮಾರಂಭದ ಸಮಯದಲ್ಲಿ ಅವರನ್ನೂ ಅವರ ಕೃತಿಗಳನ್ನೂ ನೆನೆದು ಒಂದೆರಡು ಮಾತು ಹೇಳುವುದು ಸಂತೋಷದ ವಿಷಯವಾಗಿದೆ. ನನ್ನ ಮಾನ್ಯಮಿತ್ರರಾದ ದಿವಂಗತ ಪ್ರೊಫೆಸರ್ ತೀ.ನಂ.ಶ್ರೀಕಂಠಯ್ಯನವರು ಯಾವ ದೃಷ್ಟಿಯಿಂದ ನೋಡಿದರೂ ಸನ್ಮಾನ್ಯರೇ ಸರಿ. ಅವರ ವಿದ್ವತ್ತು ನಿರ್ದುಷ್ಟವಾದದ್ದು, ನಿರ್ಮತ್ಸರಯುತವಾದದ್ದು; ಗುಣಗ್ರಾಹಿಯಾದ ಸ್ವಭಾವದಿಂದ ಕೂಡಿದ್ದು. ಇಂಥವರನ್ನು ವಿಧಿ ಚಿಕ್ಕವಯಸ್ಸಿನಲ್ಲಿಯೇ ಕೊಂಡೊಯ್ದುದು ನಮ್ಮ ದುರ್ದೈವ.

ಅವರು ನಮಗಾಗಿ ಹೆಚ್ಚು ಕೃತಿಗಳನ್ನು ಬಿಟ್ಟುಹೋಗಲಿಲ್ಲ. ಆದರೆ ಬಿಟ್ಟುಹೋಗಿರುವ ಕೃತಿಗಳೆಲ್ಲ ಗಣ್ಯವಾಗಿವೆ. ಅವರು ಸಂಪಾದಿಸಿರುವ 'ನಂಬಿಯಣ್ಣನ ರಗಳೆ', 'ಗದಾಯುದ್ಧ ಸಂಗ್ರಹ'–ಇವೆರಡೂ ಅವರ ಸಂಪಾದನ ಕಾರ್ಯದ ದಕ್ಷತೆಗೆ ಸಾಕ್ಷಿಯಾಗಿವೆ. ಆದರೆ ಈ ಎರಡು ಕೃತಿಗಳಿಗೇ ಅವರ ಸಂಪಾದನ ಕಾರ್ಯ ಸೀಮಿತವಾದದ್ದು ವಿಷಾದಕರ. 'ರಾಕ್ಷಸನ ಮುದ್ರಿಕೆ', 'ಭಾರತೀಯ ಕಾವ್ಯಮೀಮಾಂಸೆ', 'ಬಿಡಿಮುತ್ತು' ಇವು ಸಂಸ್ಕೃತದಲ್ಲಿ ಅವರಿಗಿದ್ದ ಪರಿಶ್ರಮವನ್ನು ಕನ್ನಡದ ಪರಿಣತಿಯನ್ನೂ ಪ್ರದರ್ಶಿಸುತ್ತವೆ. 'ಕಾವ್ಯ ಸಮೀಕ್ಷೆ', 'ಸಮಾಲೋಕನ' ಈ ಎರಡು ಪ್ರಬಂಧ ಸಂಗ್ರಹಗಳು ಅವರ ರಸಜ್ಞತೆಯನ್ನು ಹರಿತವಾದ ಅವರ ವಿಮರ್ಶನ ದೃಷ್ಟಿಯನ್ನು ತೋರಿಸುತ್ತವೆ. 'ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ' ಎಂಬ ಪ್ರಬಂಧ ಕನ್ನಡ ಕಾವ್ಯ ಕ್ಷೇತ್ರದ ಮುಗಿಲು ಮುಟ್ಟುತ್ತದೆ. 'ಎನಿತ್ತನಿತ್ತಂಬುಜಪತ್ರನೇತ್ರೆಯಾ...' ಕನ್ನಡ ಚಿಕ್ಕಪ್ರಬಂಧವನ್ನೇ ತೆಗೆದುಕೊಳ್ಳಿ–ಶಾಸ್ತ್ರ ವಿಷಯವನ್ನು ಅವರು ಎಷ್ಟು ರಸವತ್ತಾಗಿ ಬರೆಯಬಲ್ಲರೆಂಬುದಕ್ಕೆ ಸಾಕ್ಷಿಯಾಗಿದೆ. 'ನಂಬಿಯಣ್ಣನ ರಗಳೆ', 'ಗದಾಯುದ್ಧ ಸಂಗ್ರಹ'ಗಳಿಗೆ ಕವಿ ಕಾವ್ಯವಿಚಾರಗಳನ್ನೊಳಗೊಂಡ ಪೀಠಿಕೆಗಳನ್ನು ಬರೆಯಲಿಲ್ಲವಲ್ಲ– ಎಂಬುದು ನನ್ನ ತೀರದ ಕೊರಗುಗಳಲ್ಲೊಂದಾಗಿದೆ. ಕಡೆಕಡೆಯ ವರ್ಷಗಳಲ್ಲಿ ಅವರ ಒಲವು ಭಾಷಾಶಾಸ್ತ್ರದ ಕಡೆಗೆ ತಿರುಗಿತು. ಇದರಿಂದ ಕನ್ನಡ ಕಾವ್ಯವಿಮರ್ಶೆಗೆ ಇವರಿಂದ ಸಲ್ಲಬೇಕಾದ ಸೇವೆ ಮೊಟಕಾಯಿತು ಅಥವಾ ನಿಂತೇ ಹೋಯಿತು. ಅವರ ಕೃತಿಗಳನ್ನು ಕುರಿತು ಹೆಚ್ಚಾಗಿ ಮಾತಾಡುವುದಿಲ್ಲ. ದಕ್ಷರಾದ ಹಲವು ವಿದ್ವಾಂಸರು ಅವರ ಕೃತಿಗಳ ಉತ್ಕೃಷ್ಟತೆಯನ್ನು ವಿವರಿಸಿದ್ದಾರೆ.

ಶ್ರೀಕಂಠಯ್ಯನವರ ವ್ಯಕ್ತಿತ್ವವೂ ಆಕರ್ಷಕವಾದದ್ದೇ. ಸ್ನೇಹಿತರೂ ವಿದ್ಯಾರ್ಥಿಗಳೂ, ಸದಾ ಎನ್ನುವಂತೆ ಅವರನ್ನು ಸುತ್ತುವರೆದಿರುತ್ತಿದ್ದರು, ಶ್ರೀಕಂಠಯ್ಯನವರು ಸ್ವಭಾವತಃ ಉದಾರಿಗಳು, ಸೌಜನ್ಯ ಶಾಲಿಗಳು, ವಿನಯ ಶೀಲರು, ಸ್ನೇಹ ಪರರು. ನನ್ನ ಅನುಭವಕ್ಕೆ ಬಂದ ಒಂದೆರಡು ಸಂಗತಿಗಳನ್ನು ವಿವರಿಸುತ್ತೇನೆ:

೧. ನಾವು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದ ಕಾಲ ಕನ್ನಡದ ನವೋದಯದ ಕಾಲ. ಆಗ ಕನ್ನಡ ಪುಸ್ತಕಗಳು ಈಗಿನಷ್ಟು ಶ್ರಮವಿಲ್ಲದೆ ದೊರೆಯುತ್ತಿರಲಿಲ್ಲ. ಕನ್ನಡದ ಹೊಸ ಪುಸ್ತಕಗಳಿಗಾಗಿ ಅಂಗಡಿಗಳಲ್ಲಿ ತಡಕಾಡುತ್ತಿದ್ದೆವು. ಹೀಗೆ ಒಂದು ಬಾರಿ ಪುಸ್ತಕಗಳನ್ನು ಹಳೆಯ ಅಂಗಡಿಯೊಂದರಲ್ಲಿ ಹುಡುಕುತ್ತಿದ್ದಾಗ ಶ್ರೀಮಾನ್ ಎಸ್.ಜಿ. ಶಾಸ್ತ್ರಿಗಳಿಂದ ರಚಿತವಾದ 'ಇದ್ದರೂ ಇರಬಹುದು' ಎಂಬ ಚಿಕ್ಕಹೊತ್ತಗೆಯೊಂದು ('ಹಾಗಲಕಾಯಿ ಮತ್ತು ತಾಳೆಹೂವು', 'ಕಿಟ್ಟು ಮತ್ತು ಲೀಲಾ' ಎಂಬ ಎರಡು ಕಥೆಗಳನ್ನು ಮಾತ್ರ ಒಳಗೊಂಡದ್ದು) ದೊರೆಯಿತು. ಕಾಲ ಕ್ರಮದಲ್ಲಿ ಈ ಪುಸ್ತಕವನ್ನು ಶ್ರೀಕಂಠಯ್ಯನವರು ನನ್ನಿಂದ ತೆಗೆದುಕೊಂಡರು–ಓದಲು. ಅದನ್ನು ವಾಪಸ್ ಮಾಡಬೇಕೆನ್ನುವ ಕಾಲಕ್ಕೆ ಅದರ ಪುಟಗಳಲ್ಲಿ ಒಂದರ ಮೇಲೆ ಕಿವಿ ಕೊಂಚ ಕತ್ತರಿಸಿ ಹೋಗಿದ್ದು ಕಣ್ಣಿಗೆ ಬಿತ್ತು. ಆಗ ಬೇರೆ ಸರಿಯಾದ ಪ್ರತಿಯನ್ನೇ ಹಿಂದಿರುಗಿಸಬೇಕೆಂಬ ಇಷ್ಟದಿಂದ ಮೈಸೂರಿನ ಪುಸ್ತಕದ ಅಂಗಡಿಗಳನ್ನೆಲ್ಲ ತಡಕಾಡಿ ವಿಫಲರಾದರು. ಬೇರೆ ಉಪಾಯಕಾಣದೆ ಆ ಪ್ರತಿಯನ್ನೇ ಕ್ಷಮಾಪಣೆಗಳೊಡನೆ ಹಿಂದಕ್ಕೆ ಕೊಟ್ಟರು. ಹೀಗೆ ಅಲ್ಪ ವಿಷಯಗಳಲ್ಲೂ ನಸಿನಸಿ (scrupulous).

೨. ಮಹಾರಾಜ ಕಾಲೇಜನ್ನು ಬಿಟ್ಟು ಕೆಲವು ವರ್ಷಗಳ ಮೇಲೆ ನಾನೊಂದು ಬಾರಿ ಮೈಸೂರಿಗೆ ಹೋದರೆ ಅಲ್ಲಿ ಹೋಟಲೊಂದರಲ್ಲಿ ತಂಗಿದೆ. ಶ್ರೀಕಂಠಯ್ಯನವರಿಗೆ ಇದು ತಿಳಿದದ್ದೇತಡ ನಾನು ತಂಗಿದ್ದ ಹೊಟೇಲಿಗೆ ಬಂದು, ನಾನು ಹೊಟೇಲಿನಲ್ಲಿ ತಂಗಿದ್ದಕ್ಕೆ ಆಕ್ಷೇಪಣೆ ಮಾಡಿ, ತಮ್ಮ ಮನೆಗೆ ಹೊರಡುವಂತೆ ಹೇಳಿದರು. ನಾನು ಚೌಕಾಶಿಮಾಡುತ್ತಿದ್ದ ಹಾಗೆಯೇ ರೂಮಿನಿಂದ ಹೊರಟು ಟಾಂಗಾ ತಂದು ನನ್ನ ಸಾಮಾನುಗಳನ್ನು ಟಾಂಗಾಕ್ಕೆ ಹಾಕಿಸಿ ಇನ್ನು ಹೊರಡಿ ಎಂದರು. ಅಂದಿನಿಂದ ಮೈಸೂರಿಗೆ ಬಂದಾಗಲೆಲ್ಲ ಶ್ರೀಕಂಠಯ್ಯನವರ ಮನೆಯೇ ನನಗೆ ಬಿಡಾರವಾಯಿತು.

೩. ಇನ್ನೊಮ್ಮೆ ನಾನು ಮೈಸೂರಿಗೆ ಹೋಗಲೇಬೇಕಾಯಿತು. ಹೋದವನು ಶ್ರೀಕಂಠಯ್ಯನವರಲ್ಲಿಯೇ ತಂಗಿದೆ. ಕಾರ್ಯನಿಮಿತ್ತ ನಂಜನಗೂಡಿಗೆ ಹೋಗಬೇಕಾಯಿತು. ಅದೇ ಸಂಜೆ ಹಿಂದಿರುಗಿ ಬರುವುದಾಗಿ ಹೇಳಿ ಹೊರಟೆ. ಆ ಸಂಜೆ ಬರಲಾಗಲಿಲ್ಲ. ಮರುದಿನ ಸಂಜೆಯೂ ಬರಲಾಗಲಿಲ್ಲ. ಅದರ ಮುಂದಿನ

ದಿವಸವೂ ಅದೇ ಕಥೆಯಾಯಿತು. ನಾನು ಬಾರದಿದ್ದನ್ನು ನೋಡಿ ಶ್ರೀಕಂಠಯ್ಯನವರು ತಮ್ಮ ಬಂಧುಗಳಲ್ಲಿ ಒಬ್ಬರನ್ನು – ನನ್ನನ್ನು ಹುಡುಕಲು ನಂಜನಗೂಡಿಗೇ ಕಳಿಸಿಕೊಟ್ಟರು. ಇಷ್ಟು ಸ್ನೇಹಪರರಾದ ಸ್ನೇಹಿತರನ್ನು ನಾನಿನ್ನೆಲ್ಲಿ ಕಾಣಬಲ್ಲೆ?

ವಿದ್ಯಾಪಾಂಡಿತ್ಯಗಳಿಂದ ಶೋಭಿತರಾಗಿ ತಮ್ಮ ನಡವಳಿಕೆಗಳಿಂದ ಸಾರ್ವಜನಿಕ ಪ್ರಿಯರಾಗಿ ಒಟ್ಟಿನಲ್ಲಿ ಸರ್ವಮಾನ್ಯರಾಗಿ ಬದುಕಿ ಬಾಳಿದ ಶ್ರೀ ತೀ.ನಂ.ಶ್ರೀಯವರ ಜೀವನ ವಿವರಗಳನ್ನು, ಲೇಖನಗಳ ಗಂಗೋತ್ಕರ್ಷಗಳನ್ನು ಜನಕ್ಕೆ ಪರಿಚಯಮಾಡಿಕೊಡಲು ಮನಸ್ಸುಮಾಡಿ ಅದಕ್ಕಾಗಿ 'ಶ್ರೀಕಂಠತೀರ್ಥ' ಎಂಬ ಸ್ಮರಣಸಂಪುಟದ ಯೋಚನೆ ಮಾಡಿ, ಅದನ್ನು ಕಾರ್ಯಗತಮಾಡಿ ಯಶಸ್ವಿಯಾಗಿ ಪೂರೈಸಿದ ತೀನಂಶ್ರೀ ಪುತ್ರರಾದ ನಾಗಭೂಷಣ, ಡಾ॥ ಚಿದಾನಂದಮೂರ್ತಿ ಮೊದಲಾದ ವಿದ್ವಾಂಸರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಸಂಪುಟದ ಬಿಡುಗಡೆಯ ಸಮಾರಂಭ ಹಿರಿಯ ಸಾಹಿತಿಗಳಾದ ಡಾ॥ ಮಾಸ್ತಿ ನೇತೃತ್ವದಲ್ಲಿ ನಡೆಯುತ್ತಿರುವುದು ಸೂಕ್ತವಾಗಿದೆ. ಸಮಾರಂಭವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

* * *

ತ.ಸು. ಶಾಮರಾಯ ಮೈಸೂರು

ಪ್ರಿಯ ನಾಗಭೂಷಣ ಅವರಲ್ಲಿ ಪ್ರೀತ್ಯಾದರಗಳ ಬಿನ್ನಹ,

ತಾರೀಖು ೩೦–೫–೭೭ ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನನ್ನ ಪೂಜ್ಯಗುರುಗಳಾದ ದಿ॥ ಪ್ರಾಚಾರ್ಯ ತೀ.ನಂ.ಶ್ರೀ ಸ್ಮಾರಕಗ್ರಂಥ 'ಶ್ರೀಕಂಠತೀರ್ಥ'ದ ಬಿಡುಗಡೆ ಸಮಾರಂಭಕ್ಕಾಗಿ ತಾವು ಕೃಪೆಯಿಟ್ಟು ಕಳುಹಿಸಿದ ಆಹ್ವಾನಪತ್ರಿಕೆ ಬಂದು ಸೇರಿತು. ಅದಕ್ಕಾಗಿ ನಾನು ನಿಮಗೆ ಚಿರಋಣಿ. ನನ್ನ ಅನಾರೋಗ್ಯ ನಿಮಿತ್ತ ಈ ಸಂಭ್ರಮದಲ್ಲಿ ಪಾಲುಗೊಳ್ಳುವ ಭಾಗ್ಯದಿಂದ ವಂಚಿತನಾಗುವುದು ಅನಿವಾರ್ಯವಾಗಿದೆ. ಅದಕ್ಕಾಗಿ ಕ್ಷಮೆಯನ್ನು ಯಾಚಿಸುತ್ತೇನೆ. ನನ್ನ ಚೇತನ ಅಲ್ಲಿನ ಸಮಾರಂಭದಲ್ಲಿಯೆ ಸಂಚರಿಸುತ್ತಿರುತ್ತದೆ.

'ಶ್ರೀಕಂಠತೀರ್ಥ'ದ ಬಿಡುಗಡೆಯನ್ನು ಕೇಳಿದಾಗ ನನಗೆ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ 'ಸವಿನೆನಪು'ನ ಬಿಡುಗಡೆಯ ಸಮಾರಂಭದ ಜ್ಞಾಪಕ ಬರುತ್ತದೆ. ವೆಂಕಣ್ಣಯ್ಯನವರನ್ನು ಮತ್ತು ಶ್ರೀಕಂಠಯ್ಯನವರನ್ನು ಲೋಕವೆಲ್ಲ ಮುಕ್ತಕಂಠವಾಗಿ ಹೊಗಳುತ್ತದೆ. ಆದರೆ ಅವರ ಸ್ಮಾರಕಗ್ರಂಥಗಳನ್ನು ಹೊರತರುವ ಹೊಣೆ ಹೊರೆಗಳು ಅವರ ಸಮೀಪ ಬಂಧುಗಳಾದ ನಮ್ಮ ಮೇಲೆ ಬೀಳಬೇಕೆ? ಇತರರು ಯಾರು ನಿಂತಿದ್ದರೂ ಈ ಕೆಲಸಗಳು ನಡೆದೇ ನಡೆಯುತ್ತಿದ್ದವು. ಆದರೆ, ಆಗ ಅವು ಹೆಚ್ಚು ಉಚಿತವೆನಿಸುತ್ತಿದ್ದವು. ಹೋಗಲಿ, ಇತರರನ್ನು ನಂಬಿ ನಾನು ಕಾಯ್ದಷ್ಟು ದಿನ ನೀವು ಕಾಲಹರಣ ಮಾಡದಿದ್ದುದು ಸ್ತೋತ್ರಾರ್ಹವಾದುದು. ನಾನು ನಿಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ದಿವಂಗತ ಪ್ರಾಚಾರ್ಯ ತೀ.ನಂ.ಶ್ರೀಯವರ ಮತ್ತು ನನ್ನ ಸಂಬಂಧ ಅತ್ಯಂತ ವಿಶಿಷ್ಟವಾದ್ದು. ಅವರು ಎಂ.ಎ ಓದುವಾಗ ನಾನವರ ಗೆಳೆಯ, ಅವರು ಕಾಲೇಜಿನಲ್ಲಿ ಉಪಾಧ್ಯಾಯರಾದಾಗ

ನಾನವರ ನೆಚ್ಚಿನ ಶಿಷ್ಯ, ನಾನು ಕಾಲೇಜಿನಲ್ಲಿ ಉಪಾಧ್ಯಾಯನಾದಾಗ ಸಹೋಪಾಧ್ಯಾಯ. ಅವರು ಪ್ರಾಧ್ಯಾಪಕರಾದಾಗ ನಾನು ಅವರ ಕೈಕೆಳಗಿನ ನೌಕರ. ಈ ಬೇರೆ ಬೇರೆ ಸನ್ನಿವೇಶಗಳಲ್ಲಿ ಎಂದೂ ಅವರ ನನ್ನ ಬಾಂಧವ್ಯ ಏರು ಪೇರಾಗಲಿಲ್ಲ. ಅವರು ಜ್ಞಾನದ ಅಕ್ಷಯ ನಿಧಿ. ನಮ್ಮ ಪ್ರಾಚೀನ ಕವಿಯೊಬ್ಬನು ಹೇಳುವಂತೆ ಶತಶತಮಾನಗಳಿಗೊಮ್ಮೆ ಭುವನದ ಭಾಗ್ಯದಿಂದ ಇಂತಹ ರತ್ನಗಳು ಉದಿರುತ್ತವೆ. ತರಗತಿಯಲ್ಲಾಗಲಿ, ಹೊರಗಾಗಲಿ ಅವರ ಮಾತು ಆಣಿ ಮುತ್ತಿನಂತೆ! ಅವರ ಸಾರ್ವಜನಿಕ ಭಾಷಣಗಳಂತೂ ಭಾವಪೂರ್ಣ ಅರ್ಥಪೂರ್ಣ. ಧ್ವನಿ ಪೂರ್ಣ. ಅವರು ಅಧ್ಯಾಪಕರಾಗಿ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ಅವರು ಪಾಠಹೇಳಿದ ಪಂಪಭಾರತ, ಗದಾಯುದ್ಧಗಳು ಮುಂದೆ ನಾನು ನನ್ನ ಶಿಷ್ಯರಿಗೆ ಪಾಠಹೇಳಿ 'ಸೈ' ಎನಿಸಿಕೊಳ್ಳಲು ಸಾಧನವಾದುವು; ಅವರು ಹೇಳಿಕೊಟ್ಟ ವ್ಯಾಕರಣ, ಅಲಂಕಾರಗಳು ಇಂದಿಗೂ ನನ್ನ ಕೈದೀವಿಗೆಗಳಾಗಿವೆ. ಅವರು ಹೆಚ್ಚು ಬರೆಯಲಿಲ್ಲ. ಒಮ್ಮೊಮ್ಮೆ ನಾವು ಅವರನ್ನು 'ರಸಿಕ ಮಹಾಪುರುಷ', 'ಸೋಮಾರಿ' ಎಂದು ಛೇಡಿಸಿದುದೂ ಉಂಟು. ಅದಕ್ಕೆ ಅವರ ಉತ್ತರ ಒಂದು ಮುಗುಳ್ನಗೆ. ಆದರೆ ಅವರು ಬರೆದುದೆಲ್ಲ ಬಂಗಾರ. ಅದು ಸಾಹಿತ್ಯ ವಿಷಯವಾಗಿರಲಿ, ಶಾಸ್ತ್ರ ವಿಷಯವಾಗಿರಲಿ – ತೀ.ನಂ.ಶ್ರೀ ಯವರ ಲೆಕ್ಕಣಿಕೆಯಿಂದ ಬಂದುದು ಸ್ವೋಪಜ್ಞವಾದುದು; ಅತ್ಯಂತ ಅಮೂಲ್ಯವಾದುದು; ಶಿಲಾ ನಿಕ್ಷಿಪ್ತಾಕ್ಷರದಂತೆ ಶಾಶ್ವತವಾದುದು. 'ಬಿ.ಎಂ.ಶ್ರೀ. ನಂತರ ತೀ.ನಂ.ಶ್ರೀ.'–ಎಂಬ ಹೇಳಿಕೆ ಕಾಲೇಜು ಉಪಾಧ್ಯಾಯರ ಒಮ್ಮತದ ನುಡಿಯಾಗಿತ್ತು.

ಅವರ ಉದಾರ ಹೃದಯ, ಅವರ ಅನ್ಯಾದೃಶ ಸ್ನೇಹಪರತೆ, ಅಸದೃಶವಾದ ಶಿಷ್ಯವಾತ್ಸಲ್ಯ ಈ ಮಾನವೀಯತೆಯ ಸದ್ಗುಣಗಳ ಜೊತೆಗೆ ಅಪಾರವಾದ, ಆದರೆ ನಿಷ್ಕೃಷ್ಟವಾದ ಪಾಂಡಿತ್ಯ, ವಿಮರ್ಶಾ ಸೂಕ್ಷ್ಮತೆ, ಆಧಾರಪೂರ್ವಕವಾದ ವಿಚಾರಸರಣಿ, ಸುಂದರವಾದರೂ ಸರಳವಾದ ಆ ತೂಕದ ಶೈಲಿ–ಇವುಗಳನ್ನು ಕಳೆದುಕೊಂಡು ಕನ್ನಡ ತಾಯಿ ಬಡವಾದಳು. ಅವರ ಆಪ್ತವರ್ಗಕ್ಕೆ ಸೇರಿದ ನಮ್ಮಂತಹರೂ ಅವರ ಬಂಧುವರ್ಗದವರೊಡನೆ ತಬ್ಬಲಿಗಳಾದೆವು.

ತೀ.ನಂ.ಶ್ರೀಯವರನ್ನು ನೆನೆದ ದಿನವೇ ಸುದಿನ. ಅವರ ನೆನಪಿನ 'ಶ್ರೀಕಂಠತೀರ್ಥ'ದ ಬಿಡುಗಡೆಯ ಸಮಾರಂಭವು ಯಶಸ್ವಿಯಾಗಿ ನೆರವೇರಲಿ! ಅವರು ಹೆಸರು ಕನ್ನಡಿಗರೆಲ್ಲರಿಗೂ ಚಿರಸ್ಮರಣೀಯವಾಗಲಿ! ಗ್ರಂಥದ ಬಿಡುಗಡೆಯನ್ನು ನೆರವೇರಿಸುವ ಕನ್ನಡಿಗರೆಲ್ಲರ ಹಿರಿಯಣ್ಣ ಪೂಜ್ಯ ಮಾಸ್ತಿಯವರಿಗೂ, ಅಧ್ಯಕ್ಷರಾದ ಪೂಜ್ಯ ಗೋಕಾಕರಿಗೂ ಬಿಡುಗಡೆಯ ಸಮಾರಂಭದಲ್ಲಿ ಭಾಗವಹಿಸುವ ಇತರ ಮಹನೀಯರಿಗೂ ನನ್ನ ನಮನಗಳು.

* * *

ಎಂ.ಮರಿಯಪ್ಪ ಭಟ್ಟ ಸುಳ್ಯ, ದ.ಕ, ೨೮–೫–೧೯೭೬

ನಿಮ್ಮ ಪೂಜ್ಯ ತೀರ್ಥರೂಪರ ಸ್ಮಾರಕ ಸಂಚಿಕೆಯನ್ನು ಪ್ರಕಾಶನ ಮಾಡುತ್ತಿರುವುದು ಅತ್ಯಂತ ಸಂತೋಷದ ವಾರ್ತೆ.

ತೀ.ನಂ.ಶ್ರೀಯವರ ವಿದ್ವತ್ತು, ಪ್ರತಿಭೆ, ಉದ್ಯಮಗಳು ಅನುಪಮ. ಜ್ಞಾನ ಸಂಪಾದನೆ, ಸತತಾಭ್ಯಾಸ, ಪಾಠಪ್ರವಚನಗಳಿಗಾಗಿ ಅಂದಿನ ಸರಕಾರದ ಉಚ್ಚ ಅಧಿಕಾರ ಸ್ಥಾನಗಳನ್ನು ಒಲ್ಲೆನೆಂದ ಮಹನೀಯರವರು. ಜೀವನದ ಒಂದು ನಿಮಿಷವನ್ನಾದರೂ ವ್ಯರ್ಥಮಾಡದ ಸಾಧಕರು.

ಇಷ್ಟುಮಾತ್ರವಲ್ಲ. ಉತ್ತಮ ಮಿತ್ರರವರು. ಅವರೂ ಮನೆಯವರೂ ಅತಿಥಿಗಳನ್ನು ಉಪಚರಿಸುವುದರಲ್ಲಿ ಒಂದು ವೈಶಿಷ್ಟ್ಯ. ಸರಳತೆಯ ತುಂಬುಜೀವನ ಅವರದು. ಅವರ ಮಾರ್ಗದರ್ಶನದಲ್ಲಿ ಮುಂದುವರಿಯೋಣ. ಅವರ "ಭಾರತೀಯ ಕಾವ್ಯಮೀಮಾಂಸೆ" ಮೂಲಕ ಅವರ ಹೆಸರು ಕನ್ನಡ ಲೋಕದಲ್ಲಿ ಅಮರವಾಗಲಿ!

ಇಂತಿ ಶುಭವನ್ನು ಕೋರುತ್ತೇನೆ.

* * *

ಕೆ. ವೆಂಕಟರಾಮಪ್ಪ ಮೈಸೂರು, ೨೨-೫-೧೯೭೬

'ಶ್ರೀಕಂಠತೀರ್ಥ'ದ ಬಿಡುಗಡೆಯ ಸಮಾರಂಭ ಅತ್ಯಂತ ಯಶಸ್ವಿಯಾಗಿ ನೆರವೇರಲೆಂದು ಹಾರೈಸುತ್ತೇನೆ. ಪರಮ ಪೂಜ್ಯರಾದ ಶ್ರೀ.ತೀ.ನಂ.ಶ್ರೀಯವರ ಸ್ಮರಣಾರ್ಥವಾಗಿ ಪ್ರಕಟವಾಗುತ್ತಿರುವ ಈ ಬೃಹದ್ಗ್ರಂಥವನ್ನು ಸಂಪಾದಿಸಿದ ಡಾ. ಚಿದಾನಂದ ಮೂರ್ತಿಗಳವರಿಗೆ ನನ್ನ ಹಾರ್ದಿಕ ಅಭಿನಂದನೆ.

ದಿ.ತೀ.ನಂ.ಶ್ರೀಕಂಠಯ್ಯನವರು ಅತ್ಯಂತ ಶಿಷ್ಯವಾತ್ಸಲ್ಯರಾದ ಪ್ರಾಧ್ಯಾಪಕರು, ಮಹಾ ವಿದ್ವಾಂಸರು. ಅವರ ಶಿಷ್ಯರೂ, ಅಭಿಮಾನಿಗಳೂ ನಿರಂತರವಾಗಿ ಅವರನ್ನು ಭಕ್ತಿ ಕೃತಜ್ಞತೆಗಳಿಂದ ಸ್ಮರಿಸಿಕೊಳ್ಳುತ್ತಾರೆ. ಅವರ ಸ್ಮಾರಕಗ್ರಂಥವಾದ ಈ ಬೃಹತ್ಸಂಪುಟ ಜನಪ್ರಿಯವಾಗುವುದರಲ್ಲಿ ಸಂಶಯವಿಲ್ಲ.

* * *

ಎನ್.ಲಕ್ಷ್ಮೀನಾರಾಯಣ ರಾವ್ ಕೊಲ್ಹಾಪುರ, ೨೭-೫-೧೯೭೬

ದಿವಂಗತ ತೀ.ನಂ.ಶ್ರೀಕಂಠಯ್ಯನವರ ಪರಿಚಯ ನನಗೆ ಆದದ್ದು ೧೯೩೮ರಲ್ಲಿ. ಕೀರ್ತಿಶೇಷರಾದ ಟಿ.ಎಸ್. ವೆಂಕಣ್ಣಯ್ಯನವರ ಮನೆಯಲ್ಲಿ ನಾನು ಅವರ ಅತಿಥಿಯಾಗಿದ್ದಾಗ. ವೆಂಕಣ್ಣಯ್ಯನವರು ತೀ.ನಂ.ಶ್ರೀ. ಯವರನ್ನು ಪ್ರತಿಭಾವಂತರಾದ ತರುಣ ಸಹೋದ್ಯೋಗಿಗಳೆಂದು ಪರಿಚಯ ಮಾಡಿಕೊಟ್ಟರು. ಆ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಸಂಪಾದಕ ಸಮಿತಿಯ ಸದಸ್ಯನಾಗಿ ನಾನು ಅವರೊಂದಿಗೆ ಕೆಲಸಮಾಡುವಾಗ ಅವರ ಸಂಪರ್ಕ ಹೆಚ್ಚು ಹೆಚ್ಚಾಗಿ ಬೆಳೆಯಿತು. ಆಗ ಅವರ ವಿದ್ವತ್ತಿನ ಔನ್ನತ್ಯ, ಪಾಂಡಿತ್ಯದ ಆಳ, ಭಾಷಾಪ್ರಾವೀಣ್ಯ, ವಿಮರ್ಶನ ಶಕ್ತಿ, ಸಂಶೋಧನ ಸಾಮರ್ಥ್ಯ ಇವುಗಳನ್ನು ಕಂಡು ನಾನು

ವಿಸ್ಮಿತನಾದೆ. ಕನ್ನಡ ಭಾಷೆಯ ವ್ಯಾಪ್ತಿ ಪ್ರಚಾರಗಳ ಬೆಳವಣಿಗೆಗೆ ಸತತವಾಗಿ ಅವರು ಪರಿಶ್ರಮ ವಹಿಸುತ್ತಿದ್ದರು. ಇವರು ಇನ್ನು ಕೆಲಕಾಲ ಬದುಕಿದ್ದರೆ ಎಷ್ಟೋ ಮಹತ್ಕಾರ್ಯಗಳನ್ನು ಸಾಧಿಸುತ್ತಿದ್ದರೆಂಬುದನ್ನು ನಾನು ಬಲ್ಲೆ. ಆದರೆ ಅವರಿಗೆ ಅಕಾಲ ಮೃತ್ಯುವು ಸಂಭವಿಸಿದ್ದು ಕನ್ನಡಿಗರ, ಕನ್ನಡನಾಡಿನ ದೌರ್ಭಾಗ್ಯ.

ಈ ವಿದ್ವನ್ಮಣಿಯ ಸ್ಮರಣಾರ್ಥವಾಗಿ ಸ್ಮಾರಕಸಂಚಿಕೆಯೊಂದನ್ನು ಪ್ರಕಟಿಸುವ ಕಾರ್ಯವನ್ನು ಕೈಕೊಂಡು ಅದನ್ನು ಯಶಸ್ವಿಯಾಗಿ ನಿರ್ವಹಿಸಿರುವ ಮಹನೀಯರೆಲ್ಲರೂ ವಂದನೀಯರು.

* * *

ದೇ. ಜವರೇಗೌಡ ಮೈಸೂರು, ೨೭-೫-೧೯೭೬

ಆತ್ಮೀಯರಾದ ಶ್ರೀ ನಾಗಭೂಷಣ ಅವರಲ್ಲಿ ವಿಜ್ಞಾಪನೆಗಳು,

'ಶ್ರೀಕಂಠತೀರ್ಥ' ಸಮಾರಂಭದ ಆಹ್ವಾನ ಪತ್ರಿಕೆ ತಲುಪಿದೆ. ನಾಡಿನ ಹಿರಿಯ ಸಾಹಿತಿಗಳಿಬ್ಬರ ನೇತೃತ್ವದಲ್ಲಿ ನಡೆಯುತ್ತಿರುವ ಸಮಾರಂಭದಲ್ಲಿ, ನನ್ನ ಪೂಜ್ಯಗುರುಗಳ ಹೆಸರಿನಲ್ಲಿ ಸಿದ್ಧವಾಗಿರುವ ಗ್ರಂಥವನ್ನು ಬಿಡುಗಡೆಮಾಡುವ ಸಂದರ್ಭದಲ್ಲಿ ಭಾಗವಹಿಸುವುದು ಪುಣ್ಯದ ವಿಷಯ. ಆದರೆ ಕಾರಣಾಂತರಗಳಿಂದ ಆ ಸಮಾರಂಭದಲ್ಲಿ ಪಾಲ್ಗೊಳ್ಳಲಾಗುತ್ತಿಲ್ಲ. ಅದಕ್ಕಾಗಿ ನಿಮ್ಮಲ್ಲಿ ಕ್ಷಮೆ ಯಾಚಿಸುತ್ತೇನೆ.

ಶ್ರೀ ತೀನಂಶ್ರೀಯವರ ಶಿಷ್ಯವರ್ಗ ನಡೆಸಬೇಕಾದ ಕರ್ತವ್ಯವನ್ನು ಅವರ ಆತ್ಮಬಂಧುವರ್ಗ ಪೂರೈಸುತ್ತಿದೆ. ಅದಕ್ಕಾಗಿ ಆ ಬಂಧುವರ್ಗವನ್ನು ಕನ್ನಡಿಗರೆಲ್ಲ ಹೃತ್ಪೂರ್ವಕವಾಗಿ ಅಭಿನಂದಿಸಬೇಕಾಗಿದೆ. ಅಂಥ ಬಂಧುಗಳನ್ನು ಪಡೆದ ಶ್ರೀ ತೀನಂಶ್ರೀ ಅವರೇ ಧನ್ಯರು! ಜ್ಯೋತಿಶ್ಶರೀರಿಯಾಗಿರುವ ತೀನಂಶ್ರೀ ಅವರು ಈ ಸಮಾರಂಭವನ್ನು ನೋಡಿ ಆನಂದತುಂದಿಲರಾಗುತ್ತಾರೆಂದು ನಂಬಿದ್ದೇನೆ.

ಅಮ್ಮ ಮೊದಲಗೊಂಡು ನಿಮ್ಮ ಮನೆಯ ಎಲ್ಲರಿಗೂ ನನ್ನ ನಮಸ್ಕಾರಗಳು

* * *

ಹೆಚ್.ಎಂ. ಶಂಕರನಾರಾಯಣರಾವ್ ಮೈಸೂರು, ೨೮-೫-೧೯೭೬

ಸನ್ಮಾನ್ಯ ಶ್ರೀ ನಾಗಭೂಷಣ ಅವರಲ್ಲಿ ವಿಜ್ಞಾಪನೆಗಳು,

ನನ್ನ ಪೂಜ್ಯ ಪ್ರಿಯಗುರುಗಳೂ ನಿಮ್ಮ ತೀರ್ಥರೂಪರವರೂ ಆದ ಪ್ರೊ. ತೀ.ನಂ.ಶ್ರೀಕಂಠಯ್ಯನವರ ಸವಿನೆನಪಿಗಾಗಿ ನೀವು ತುಂಬಶ್ರದ್ಧೆಯಿಂದ ಸಿದ್ಧಪಡಿಸಿರುವ 'ಶ್ರೀಕಂಠತೀರ್ಥ'ದ ಬಿಡುಗಡೆಯ ಸಮಾರಂಭದ ಆಹ್ವಾನ ತಲುಪಿ ಸಂತೋಷವಾಯಿತು.

ಈ ಗ್ರಂಥದ ಬಿಡುಗಡೆಯಿಂದ ತಮ್ಮ ಶಿಷ್ಯಕೋಟಿಯ ಹೃದಯದಲ್ಲಿ ಚಿರಸ್ಥಾಯಿಯಾಗಿದ್ದ ಅವರು ಕನ್ನಡಲೋಕದಲ್ಲಿ ಶಾಶ್ವತವಾದ ಮನೆ ಮಾಡಿದಂತಾಗಿದೆ.

ಪ್ರೊ. ತೀ.ನಂ.ಶ್ರೀಕಂಠಯ್ಯನವರು ಇಂಗ್ಲಿಷ್, ಸಂಸ್ಕೃತ, ಕನ್ನಡ ಸಂಸ್ಕೃತಗಳಲ್ಲಿ ಸಮಾನವಾದ ಪಾಂಡಿತ್ಯವುಳ್ಳವರು. ಬೇರೆಡೆಗೆ ಸುಲಭವಾಗಿ ಹರಿಯಬಹುದಾಗಿದ್ದ ಅವರ ಸಮಸ್ತ ಸತ್ವವನ್ನೂ ಕನ್ನಡದ ಬೋಧನೆಗಾಗಿ, ಪ್ರಚಾರಕ್ಕಾಗಿ, ಬೆಳವಣಿಗೆಗಾಗಿ ಮುಡಿಪಿಟ್ಟರು. ಅವರ ಬೋಧನೆ ಶಿಷ್ಯರಿಗೊಂದು ಜೇನುಣಿಸು. ಇಂಗ್ಲಿಷ್ ಸಂಸ್ಕೃತದಲ್ಲಿ ತಾವು ಸಂಪಾದಿಸಿದ ವಿದ್ವತ್ತನ್ನು ಕನ್ನಡದಲ್ಲಿ ಅಕ್ಲಿಷ್ಟ ಪ್ರಸನ್ನ ಶೈಲಿಯಲ್ಲಿ ಬಿಟ್ಟು ಹೋಗಿದ್ದಾರೆ. ಅವರು ರಚಿಸಿರುವ 'ಭಾರತೀಯ ಕಾವ್ಯ ಮೀಮಾಂಸೆ' ಒಂದು ಆಚಾರ್ಯಕೃತಿ. 'ನ ಭೂತೋ ನ ಭವಿಷ್ಯತಿ' ಎನ್ನುವ ರೀತಿಯಲ್ಲಿ ಅವರ 'ಗದಾಯುದ್ಧ ಸಂಗ್ರಹ'ವನ್ನು ಸಂಪಾದಿಸಿ ಇತರರಿಗೆ ಮಾರ್ಗದರ್ಶನ ಮಾಡಿದ್ದಾರೆ. ಕರ್ಣನಿಗೆ ಕವಚಕುಂಡಲಗಳಿದ್ದಂತೆ ತೀನಂಶ್ರೀಯರಿಗೆ ಕಾವ್ಯಮೀಮಾಂಸೆ ಮತ್ತು ಭಾಷಾಶಾಸ್ತ್ರಗಳು, ಎಲ್ಲಕ್ಕೂ ಮಿಗಿಲಾಗಿ ಅವರದು ಕವಿ ಹೃದಯ. ಅವರಿಂದ ರಚಿತವಾದ 'ಒಲುಮೆ' ಹೊಸಕನ್ನಡದಲ್ಲಿ ಪ್ರಣಯಕವನಗಳ ಯುಗವನ್ನೇ ಮೊದಲು ಮಾಡಿತು. ಹೀಗೆ ಬಹುಶ್ರುತರೂ ಶಿಷ್ಯವಾತ್ಸಲ್ಯ ಪ್ರಪೂರ್ಣರೂ, ಸಜ್ಜನರೂ ಆದ ಇವರ ಶಿಷ್ಯನಾಗಿದ್ದುದು ಒಂದು ಭಾಗ್ಯವೆಂದೆಣಿಸುತ್ತೇನೆ.

ಸಮಾರಂಭ ಯಶಸ್ವಿಯಾಗಲಿ ಎಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

* * *

ಹಾ.ಮಾ.ನಾಯಕ ಮೈಸೂರು, ೨೨-೫-೧೯೭೬

ಪ್ರಿಯ ಶ್ರೀನಾಗಭೂಷಣ,

ನೀವು ವಿಶ್ವಾಸವಿರಿಸಿ ಕಳಿಸಿದ 'ಶ್ರೀಕಂಠತೀರ್ಥ' ಗ್ರಂಥದ ಬಿಡುಗಡೆ ಸಮಾರಂಭದ ಆಹ್ವಾನ ತಲಪಿದೆ. ಇದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ತೀನಂಶ್ರೀ ಅವರು ಬದುಕಿದ್ದಾಗ ಸಮರ್ಪಿಸಬೇಕಿದ್ದ ಅಭಿನಂದನ ಗ್ರಂಥ, ಈಗ ಸ್ಮಾರಕ ಸಂಪುಟವಾಗಿ ಪ್ರಕಟವಾಗುತ್ತಿದೆ. ಇದರಲ್ಲಿ ದುಃಖ ಹರ್ಷಗಳೆರಡೂ ಬೆರೆತಿವೆ. ತೀನಂಶ್ರೀ ಅವರ ವಿದ್ವತ್ತು ವ್ಯಕ್ತಿತ್ವಗಳಿಗೆ ಸಮನಾದ ಈ ದೊಡ್ಡ ಹೊತ್ತಗೆಯನ್ನು ಹೊರತುರವಲ್ಲಿ ನಿಮ್ಮ, ನಿಮ್ಮ ಬಂಧುಗಳ, ಗೆಳೆಯರ ಶ್ರಮವನ್ನೆಲ್ಲ ನಾನು ಬಲ್ಲೆ. ಇದಕ್ಕಾಗಿ ಕನ್ನಡಿಗರೆಲ್ಲ ನಿಮಗೆ ಋಣಿಗಳಾಗಿದ್ದಾರೆ.

ತೀನಂಶ್ರೀ ಅವರನ್ನು ಹತ್ತಿರದಿಂದ ನೋಡಿದ್ದೆವು ಎನ್ನುವುದೇ ನಮಗೆ ಅಭಿಮಾನ, ಆನಂದ. ಅವರು ನಂಬಿದ್ದ, ಅನುಷ್ಠಾನಕ್ಕೆ ತಂದಿದ್ದ ಅನೇಕ ಮೌಲ್ಯಗಳು ಬಹುಶಃ ಇಂದಿನವರಿಗೆ ತೀರ ಅಪರಿಚಿತವಾಗಿ ಕಾಣಬಹುದು. ನಮಗೆ ಅವರ ನೆನಪೇ ಸ್ಫೂರ್ತಿಯನ್ನೂ ಶಕ್ತಿಯನ್ನೂ ಕೊಡುತ್ತದೆ.

ತೀನಂಶ್ರೀ ಅವರ ಕೃತಿಗಳೇ ನಮಗೆ ಅವರ ನೆನಪನ್ನು ಶಾಶ್ವತಗೊಳಿಸಿವೆ. ಈಗ ನೀವು ಪ್ರಕಟಿಸುತ್ತಿರುವ "ಶ್ರೀಕಂಠತೀರ್ಥ" ಅದನ್ನು ಮರುಕಳಿಸುತ್ತದೆ.

ನಿಮ್ಮ ಮನೆಯವರಿಗೆಲ್ಲ ನನ್ನ ನೆನಪು : ನಮಸ್ಕಾರ

* * *

ಜಿ. ವರದರಾಜರಾವ್ ಕೊಣಾಜೆ, ೨೬-೫-೧೯೭೬

ಶ್ರೀ ಟಿ.ಎಸ್. ನಾಗಭೂಷಣ ಅವರಿಗೆ ವಿಜ್ಞಾಪನೆಗಳು,

ವಿಶ್ವಾಸಪೂರ್ವಕವಾಗಿ ನೀವು ಕಳುಹಿಸಿಕೊಟ್ಟ 'ಶ್ರೀಕಂಠತೀರ್ಥ'ದ ಬಿಡುಗಡೆಯ ಸಮಾರಂಭದ ಆಹ್ವಾನ ಪತ್ರಿಕೆ ಬಂದು ತಲುಪಿತು. ಇದಕ್ಕಾಗಿ ವಂದನೆಗಳು.

ಈ ಹೆಬ್ಬೊತ್ತಿಗೆಯ ವಿಶಿಷ್ಟ ಹೊಣೆಯನ್ನು ನೀವು ಹೊತ್ತು ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ನಿಮ್ಮ ತಂದೆಯ ಋಣದ ಒಂದು ಅಂಶವನ್ನಾದರೂ ತೀರಿಸಲು ತೊಡಗಿರುವುದು ತುಂಬ ಅಸದೃಶವಾದುದೇ ಸರಿ. ಇನ್ನು ನನ್ನ ಪೂಜ್ಯಗುರುಗಳ ಅಸದೃಶವಾದ ಗುಣಗಳನ್ನು ನಾನು ಹೇಳಲೇಬೇಕಾಗಿಲ್ಲ. ಅವರ ಶಿಷ್ಯವೃಂದದವರು ಮತ್ತು ಸಮಸ್ತ ಕನ್ನಡ ವಿದ್ವಾಂಸರೂ ಅದನ್ನು ಬಲ್ಲರು. ಅವರ ಅಚ್ಚುಕಕಟ್ಟು, ಪ್ರಾಮಾಣಿಕ ಪಾಂಡಿತ್ಯ, ಉತ್ಸಾಹಪೂರ್ಣವೂ, ನಿತ್ಯ ನೂತನವೂ ಆದ ಬೋಧನಾಕ್ರಮ ವಿನಯ ಪೂರ್ಣವಾದ ವಿಚಾರ ವಿನಿಮಯದ ವಿಧಾನಗಳನ್ನು ಯಾರು ತಾನೆ ಮರೆಯಬಲ್ಲರು! ಈ ಬಗ್ಗೆ ಎಷ್ಟು ಹೇಳಿದರೂ ಸಾಲದು.

ಕನ್ನಡ ನವೋದಯ ಸಾಹಿತ್ಯದ 'ಶ್ರೀತ್ರಯ'ರಲ್ಲಿ (ಬಿ.ಎಂ.ಶ್ರೀ, ಎಂ.ಆರ್. ಶ್ರೀ, ತೀ.ನಂ.ಶ್ರೀ) ಒಬ್ಬರಾದ ಈ ಆಚಾರ್ಯರ ಆತ್ಮಕ್ಕೆ ಈ ಸ್ಮಾರಕಗ್ರಂಥ ಸಮರ್ಪಣೆಯ ಮೂಲಕ ಅಖಂಡ ಶಾಂತಿ ಲಭಿಸಲೆಂದು ಭಕ್ತಿ ಪೂರ್ವಕವಾಗಿ ಕೋರುತ್ತೇನೆ.

ಹಿರಿಯ ಸಾಹಿತಿಗಳ ನೇತೃತ್ವದಲ್ಲಿ ನೆರವೇರಲಿರುವ ಈ ಸಮಾರಂಭವು ಅತ್ಯಂತ ಯಶಸ್ವಿಯಾಗಲೆಂದು ಆಶಿಸುತ್ತೇನೆ.

* * *

ಎಚ್.ವೈ. ಶಾರದಾ ಪ್ರಸಾದ್ ನವದೆಹಲಿ, ೩೧-೫-೧೯೭೬

ಮಿತ್ರ ನಾಗಭೂಷಣರಲ್ಲಿ,

ನಿನ್ನೆ "ಶ್ರೀಕಂಠತೀರ್ಥ' ಪುಸ್ತಕದ ಪ್ರಕಾಶನ ಸಮಾರಂಭ ಜರುಗಿರುತ್ತದೆ. ಒಳ್ಳೆಯ ಆಲೋಚನೆ. ತೀನಂಶ್ರೀಯವರ ವ್ಯಕ್ತಿತ್ವ ಎಷ್ಟು ಹಸನಾಗಿತ್ತೋ ಅವರ ನೆನಪಿನಲ್ಲಿ ತಂದಿರುವ ಈ ಗ್ರಂಥವೂ ಅಷ್ಟೇ ಶುದ್ಧವಾಗಿಯೂ ಸವಿಯಾಗಿಯೂ ಇರುತ್ತೆಂದು ಆಶಿಸುತ್ತೇನೆ. ಮೊದಲು ಉಪಾಧ್ಯಾಯರಾಗಿ ಅನಂತರ ಹಿರಿಯ ಸ್ನೇಹಿತರ ರೂಪದಲ್ಲಿ ತೀನಂಶ್ರೀಯವರು ನನಗೆ ವಿಶ್ವಾಸ ನೀಡಿದರು. ಅವರ ಕೊಡುಗೆಗೆ ನಾನು ಋಣಿ.

* * *

ಕೆ.ಎಸ್. ದೇಶಪಾಂಡೆ, ಧಾರವಾಡ, ೨೪–೫–೧೯೭೬

'ಶ್ರೀಕಂಠತೀರ್ಥ' ಸ್ಮಾರಕ ಗ್ರಂಥದ ಬಿಡುಗಡೆಯ ಸಮಾರಂಭದ ಆಮಂತ್ರಣ ಪತ್ರಿಕೆ ಬಂದು ತಲುಪಿತು. ೧೯೫೨–೫೩ರ ಸುಮಾರಿಗೆ ನಮ್ಮ ಕರ್ನಾಟಕ ವಿಶ್ವವಿದ್ಯಾಲಯದ ಪ್ರಗತಿಯತ್ತ ಅಂಬೇಗಾಲಿಕ್ಕುತ್ತಲಿರುವಾಗ ಕನ್ನಡ ವಿಭಾಗಕ್ಕೆ ಶ್ರೀ ತೀ.ನಂ.ಶ್ರೀ ಯವರು ಬಂದು ಸೇರ್ಪಡೆಯಾದರು. ನಮ್ಮ ವಿಶ್ವವಿದ್ಯಾಲಯ ಆಗ ಒಂದು ಸಣ್ಣ ಆವರಣದಲ್ಲಿ ಕಾರ್ಯಪ್ರವೃತ್ತ ವಾಗಿತ್ತು. ಪ್ರತಿದಿನವೂ ಶ್ರೀಯವರು ನಮ್ಮ ಗ್ರಂಥಾಲಯಕ್ಕೆ ಬಂದು ಪುಸ್ತಕಗಳನ್ನು ಕೇಳಿ, ನೋಡಿ, ಓದಿ ಹೋಗುತ್ತಿದ್ದರು. ನಮ್ಮ ಗ್ರಂಥಾಲಯದ ಕನ್ನಡ ವಿಭಾಗದ ಸಂಗ್ರಹ ಶ್ರೀಮಂತಿಕೆ ಹೆಚ್ಚಬೇಕಾದರೆ ಅಂದು ಶ್ರೀಯವರ ಸಕಾಲಿಕ ಸೂಕ್ತ ಪುಸ್ತಕಗಳ ಆಯ್ಕೆಯೂ ಒಂದು ಮುಖ. ಅಂತೆಯೇ ಪುಸ್ತಕಗಳನ್ನು ಓದುವ ಅವರ ಅಪಾರವಾದ ಆಸಕ್ತಿಯೂ ಇನ್ನೊಂದು ಮುಖ. ಅವರ ಧೀರ ಗಾಂಭೀರ್ಯ, ಶುಚಿಯಾದ ವ್ಯಕ್ತಿತ್ವ, ಚೊಕ್ಕಟ ಚೆನ್ನದಂತಿದ್ದ ಅವರ ಅಭಿರುಚಿಗಳು ಯಾರನ್ನೂ ಮನಸೆಳೆಯುವಂತಹವು. ವೇದಿಕೆಯ ಮೇಲಿನ ಅವರ ಪಾಂಡಿತ್ಯ ಪೂರ್ಣ ಸಲಿಲ ಭಾಷಣತೀರ್ಥದಿಂದ ನಾನು ಅನೇಕ ಸಲ ಹರ್ಷಪುಲಕಿತನಾಗಿದ್ದೇನೆ. ನಮ್ಮ ಗ್ರಂಥಾಲಯಕ್ಕೆ ಅವರ ಬರುವಿಕೆ ಸದಾ ಉಪಯುಕ್ತವಾಗಿರುತ್ತಿತ್ತು. ಇಂಥ ಘನವ್ಯಕ್ತಿತ್ವಕ್ಕೆ ತಕ್ಕುದಾದ ಗೌರವ ಸಲ್ಲಿಸುವ ತಮ್ಮ ಕಾರ್ಯದ ಹಿರಿಮೆಗೆ ಶುಭಾಶಯಗಳು. ಇಂಥ ಬೃಹತ್ ಪ್ರಯತ್ನದಲ್ಲಿ ಡಾ.ಎಂ. ಚಿದಾನಂದಮೂರ್ತಿಯವರ ಕ್ರಿಯಾತ್ಮಕ ಸಹಕಾರ ಗ್ರಂಥಕ್ಕೆ ಹೆಚ್ಚಿನ ಮಹತ್ವವನ್ನು ತಂದುದರ ಬಗ್ಗೆ ತುಂಬ ಸಂತಸ.

ಕಾರ್ಯಕ್ರಮಪಟ್ಟಿಯಲ್ಲಿಯ ಹೆಸರುಗಳನ್ನೆಲ್ಲ ನೋಡಿದಾಗ ಹಿರಿದಾದ 'ಶ್ರೀಕಂಠತೀರ್ಥ'ದ ಬಿಡುಗಡೆಗೆ ಸರಿಯಾದ ಸಂಜೀವಿನಿ ಅಮೃತಹಸ್ತಗಳು ಸೇರಿವೆಯೆಂಬುದು ಮನವರಿಕೆಯಾಗಿ ಸಂತೋಷವಾಯ್ತು.

ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

* * *

ಚೆನ್ನವೀರ ಕಣವಿ ಧಾರವಾಡ, ೨೬–೫–೧೯೭೬

ಪ್ರಿಯ ಶ್ರೀ ನಾಗಭೂಷಣ,

"ಶ್ರೀಕಂಠತೀರ್ಥ" ಸ್ಮಾರಕ ಗ್ರಂಥದ ಬಿಡುಗಡೆ ಸಮಾರಂಭದ ಆಮಂತ್ರಣ ಪತ್ರ ತಲುಪಿ ಸಂತೋಷವಾಯಿತು. ನಿಮ್ಮ ವಿಶ್ವಾಸಕ್ಕಾಗಿ ಕೃತಜ್ಞತೆಗಳು.

ನಿಮ್ಮ ತೀರ್ಥರೂಪರ ಜ್ಞಾಪಕಾರ್ಥವಾಗಿ ಕನ್ನಡ ಸಾಹಿತ್ಯಕ್ಕೆ "ಶ್ರೀಕಂಠತೀರ್ಥ"ವನ್ನು ಒದಗಿಸಿ ಅತ್ಯಂತ ಯೋಗ್ಯವಾದ ಕಾರ್ಯವೊಂದನ್ನು ಮಾಡಿದ್ದೀರಿ. ಈ ಸಂದರ್ಭದಲ್ಲಿ ತೀ.ನಂ.ಶ್ರೀ ಸಂಸಾರವರ್ಗದವರೆಲ್ಲರಿಗೂ ನಾನು ನನ್ನ ಮನೆಯವರ ಜೊತೆಗೆ ಹೃತ್ಪೂರ್ವಕ ಅಭಿನಂದನೆ ಗಳನ್ನು ಸಲ್ಲಿಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ಧಾರವಾಡಕ್ಕೆ ಆಗಮಿಸಿದ ತೀನಂ.ಶ್ರೀಯವರ ಪ್ರಭಾವಶಾಲಿಯಾದ ವ್ಯಕ್ತಿತ್ವ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಖಚಿತತೆಯಿಂದ ಕೂಡಿದ ಅವರ ಆಳವಾದ ಪಾಂಡಿತ್ಯ, ರಸಿಕತೆಯಿಂದ ವಿಶೇಷ ಮೆರುಗನ್ನು ಪಡೆದಿದ್ದಿತು. ಕಾವ್ಯ, ವಿಮರ್ಶೆ, ಸಂಶೋಧನೆ, ಬೋಧನ, ಭಾಷಣ – ಎಲ್ಲದಕ್ಕೂ ಭೂಷಣ ಪ್ರಾಯರಾಗಿದ್ದ ಅವರು ಹತ್ತಿರದಿಂದ ದೂರದಿಂದ ಎಲ್ಲಿಂದ ನೋಡಿದರೂ ಎತ್ತರವಾಗಿಯೇ ಕಂಗೊಳಿಸುತ್ತಿದ್ದರು. ಇಂಥವರು ಇನ್ನಿಷ್ಟು ಬರೆಯಲಿಲ್ಲವಲ್ಲ ಎಂಬ ಕೊರಗು ನಮಗುಂಟಾದರೂ ಬರೆದಷ್ಟೂ ಬಂಗಾರದ ಗಟ್ಟಿಯಾಗಿರುವುದು ಕನ್ನಡದ ಭಾಗ್ಯವಿಶೇಷ.

ಸಮಾರಂಭ ಎಲ್ಲ ಬಗೆಯಿಂದಲೂ ಯಶಸ್ವಿಯಾಗಲಿ ಎಂದು ಪ್ರಾರ್ಥಿಸಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಎಲ್ಲ ಹಿರಿಯರಿಗೂ, ಮಿತ್ರರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

* * *

ಎಂ.ಎಂ. ಕಲಬುರ್ಗಿ ಧಾರವಾಡ, ೨೫–೫–೧೯೭೬

ಪ್ರಿಯ ನಾಗಭೂಷಣ ಅವರಿಗೆ ವಂದನೆಗಳು,

"ಶ್ರೀಕಂಠತೀರ್ಥ" ಬಿಡುಗಡೆ ಸಮಾರಂಭದ ಆಮಂತ್ರಣ ಪತ್ರ ತಲುಪಿದೆ. ಅಪಾರ ಶಿಷ್ಯಸಂತಾನವನ್ನು ಬೆಳಸಿದವರೂ, ಕನ್ನಡಿಗರ ಗೌರವಾದರಗಳಿಗೆ ಪಾತ್ರರಾದವರೂ ಆದ ದಿ. ತೀ.ನಂ. ಶ್ರೀಕಂಠಯ್ಯನವರ 'ಸ್ಮಾರಕಗ್ರಂಥ'ವನ್ನು ಅವರ ಸಂಸಾರವರ್ಗದವರಾದ ನೀವು ಪ್ರಕಟಿಸುತ್ತಿರುವುದು ನಮ್ಮ ಕೃತಘ್ನತೆಯನ್ನು ಎತ್ತಿತೋರಿಸುತ್ತದೆ.

ಸಮಾರಂಭ ಮಂಗಲಕರವಾಗಿ ಜರುಗಲಿ.

* * *

ಎಸ್.ನಾರಾಯಣ ಸೆಟ್ಟಿ ಮೈಸೂರು

ಪ್ರಿಯ ಮಿತ್ರ ಶ್ರೀ ನಾಗಭೂಷಣರಲ್ಲಿ ವಿನಂತಿ,

ನಿಮಗೆ ನಾನು ತಪ್ಪಿಸ್ಥ ಎಂದು ಒಪ್ಪಿಕೊಂಡರೆ ಮಾತ್ರವೆ ನನ್ನ ತಪ್ಪು ಕೊಂಚ ಕಡಿಮೆ ಚುಚ್ಚುತ್ತದೆ ನನ್ನನ್ನು. ನಿಮಗೆ ಹಿಂದೆ ತಪ್ಪಿ ನಾನು ದೀರ್ಘಪರಿತಾಪಕ್ಕೆ ಗುದಿಗೊಂಡಿದ್ದೂ ಮತ್ತೂ ತಪ್ಪುತ್ತಿರುವೆ. ಕ್ಷಮಿಸಿ. ನಾನು ಗುರುಗಳನ್ನು ಎಷ್ಟುಬಾರಿ – ನಿಮ್ಮನ್ನು – ಪ್ರಾಸಂಗಿಕವಾಗಿ ನೆನೆದುಕೊಳ್ಳುತ್ತಲೇ ಇರುವೆನೊ ತಿಳಿಯದು. ನನ್ನ ಬದುಕಿನಲ್ಲವರು ವಿದ್ಯಾಗುರುಗಳಿಗಿಂತ ಪಿತೃ ಸಮಾನರಾಗಿದ್ದರು. ನನ್ನ ಜೀವನದ ಭಾವಸಂದಿಗ್ಧ ಸಮಯದಲ್ಲಿ ಅತ್ಯಾದರ ಪ್ರೀತಿ ತೋರಿದರು. ಇದುಕೂಡ ಅವರ ಸಹಜ ಮಹಿಮೆಯನ್ನು ನನಗೆ ಮತ್ತೂ ಹೆಚ್ಚಿಸಿದೆ. ತಾಯಿಯ ವರನ್ನೂ, ಅವರ ವಾತ್ಸಲ್ಯಪೂರ್ಣ ಅಕುಟಿಲ ಮುಖವನ್ನೂ–ಕಾಗದ ಬರೆಯುತ್ತಿರುವಾಗಲೂ ಕಾಣುತ್ತಿರುವೆ. ಮೊನ್ನೆತಾನೆ, ಗುರುಗಳು ದಿವಂಗತರಾದಾಗ ಪರಿಷತ್ತಿನವರು ತಂದ ಸ್ಮರಣ

ಸಂಚಿಕೆಯನ್ನು-ಅದನ್ನು ಪೂಜ್ಯ ಶಿವರಾಮಶಾಸ್ತ್ರಿಗಳು ಕೊಟ್ಟಿದ್ದರು; ಜೋಪಾನ, ನನಗೇ ಕೊಡಬೇಕು ಎಂದು- ರಾತ್ರಿ ತುಂಬ ಹೊತ್ತಿನ ತನಕ ಓದುತ್ತ ಕಣ್ಣೀರು ತಂದುಕೊಂಡೆ. ಅವರನ್ನು ನೆನೆದುಕೊಂಡರೆ ಈಗ ಮನಸ್ಸಿಗೆ ಮೆತ್ತಿಕೊಳ್ಳುತ್ತಿರುವ-ಆವರಣ ತುಂಬಿರುವ-ಧೂಳಲ್ಲಿ ಎಷ್ಟೋ ತೊಳೆದುಹೋಗುತ್ತದೆ. ಅಂಥ Man of integrity ನಮ್ಮ ಪೀಳಿಗೆಯಲ್ಲೇಕೆ ವಿರಳವಾಗುತ್ತಿದ್ದಾರೆ? ಇಲ್ಲವಾಗುತ್ತಿದ್ದಾರೆ? ಬಾವಿ ಕೊಳ ಕೊರೆಗಳುಂಟು. ಆದರೆ ತಿಳಿನೀರಿನ ಸಿಹಿನೀರಿನ-ಬೆಲ್ಲದಚ್ಚಿನಂಥ ಸೋಪಾನಪಂಕ್ತಿಯ ಕೊಳ ಎಲ್ಲಿಯೂ ಕಾಣುತ್ತಲೆ ಇಲ್ಲವಲ್ಲಾ. ಮಲಿನವಾಗಿರದ ಗಂಗೆಯರೆ ಇಲ್ಲವೆ? ತಾಯಿಯವರಿಗೆ ನನ್ನ ಭಕ್ತಿ ಪೂರ್ವಕ ನಮಸ್ಕಾರ ತಿಳಿಸಿ.

ಶ್ರೀಕಂಠತೀರ್ಥ ಈಚೆಗೆ ಗ್ರಂಥಾಲಯಸೇರಿದೆ; ಎಂಥ ಉದ್ಧ ರೀತಿಯಲ್ಲಿ ಈ ಗ್ರಂಥ ಪ್ರತಿಮೆ ಕಡೆಸಿದ್ದೀರಿ. ನಿಧಾನದಲ್ಲಿ ಓದುತ್ತಿರುವೆ. ಸಾವಧಾನವಾಗಿ ಬರೆಯುವೆ.

* * *

M.B. Emeneau Bekeley, California, 23-11-1976

I am happy to be in receipt of the handsome volume published in memory of the late lamented Professor T.N. Sreekantaiya. I am sure his family must be proud of the honor done to his memory.

I wonder if you could send me a list of the contributors and the titles of their papers, in English. If you could, I might be able to send a short review of the volume, or rather a notice, to the editor of the Journal of the American Oriental Society. He would, I think, be glad to publish it.

All best wishes.

* * *

[ಈ ಮೇಲಿನ ಪತ್ರದಲ್ಲಿ ಸೂಚಿಸಿದಂತೆ ಈ ಕೆಳಗೆ ಕೊಟ್ಟಿರುವ ಟಿಪ್ಪಣಿಯನ್ನು ಪ್ರೊ. ಎಮಿನೋ ಅವರಿಗೆ ಕಳಿಸಿಕೊಡಲಾಯಿತು.]

<u>'SRIKANTHATIRTHA'</u>

'Srikanthatirtha' is a collection of papers by different authors to commemorate the momory of Late Prof, T.N. Sreekantaiya (1906-1966).

The volume consists of two parts:

(1) T.N.S. as a person and an author

(2) Prabandhanjali, an offering of essays or papers.

In the first part, there are fifteen articles. Five of them narrate the personal qualities of T.N.S., and all of them are written by people close to him. The other ten articles make a critical estimate of the contributions made by the professor in various fields-creative literature (like love songs, essays), poetics, translation, linguistics, lexicography, literary criticism, metres, textual criticism and folklore. Prof. Sreekantaiya has made his mark in all the fields mentioned above. His outstanding work was in two fields: in Poetics, for which his classic 'Bharatiya Kavyameemamse' is a clear example. The other field was Linguistics, for which his book on Kannada Grammar (in Kannada) and his papers, though a few, are clear examples.

Dr. G.S. Sivarudrappa and Dr.B.B. Rajapurohit have evaluated the work of T.N.S. in these two fields. His contriutions to folklore are reviewed by T.N. Shankaranarayana. Part two is named as 'Prabhandanjali' : it contains sixty four papers by scholars working in different fields. The fields covered are – literary criticism; poetics; prosody; textual criticism; linguistics; history; fine arts and folklore; religion and philosphy.

The paper 'Kavyajivala and Sadura' by G. Hanumantha Rao shows the resemblance between the 'Sadharanikarana tatva' and 'Psychical distance'. The same topic is discussed, from another angle, by Shri, K.V. Narayana in another paper entitled "Sadharanikarana". There are other papers dealing with 'aucitya' 'sabda' and 'artha' 'prastutalankara', the 'language of poetry' etc.

Papers on Linguistics include 'Measurement of meaning' ('Arthamapane') by Dr.B. Kuppuswamy, 'Vachana-pallata' by Dr. R.S. Mugali, 'Havyaka personal names' by M. Mariyappa Bhat, 'Some Sanskrit suffixes in Kannada' by Dr. H.S. Ananthanarayana, 'Reflexes

of proto-Dravidian past-tense suffixes in Soliga Kannada' by Dr.K.S. Gurubasavegowda, 'Nine Kinds of Linga' by Dr. K. Kushalappa gowda, 'Mutual borrowings in Kannada and Apabhramsa' by M.V. Chitralingayya.

Papers concerning history and art cover a wide range of topics: political history, inscriptions, Indian music, the 'historical sense' of the ancient Indians, the necessity of carefully studying Kannada literature for a proper understanding of Jaina sculptures. Dr. Chidambara Kulkarni forecefully argues that a time has come to give up writing Indian history on western models. H.K. Ramachandra murthy has written on Brecht's 'Epic Theatre'.

Papers concerning religion and philosphy include Dr. A.N. Upadhye's writing on 'Jivasambodhane', a Kannada classic. S.K. Ramachandra Rao has a paper on Tibetan tantricism. B. Govindacharya has elaborately discussed the concept of 'Nirvana' in Indian philosophy. Dr.M. Chidananda Murthy has shown that the Tamil word 'tevaram' is an Indo-Aryan word borrowed through Kannada.

In the final section 'Anubandha' (Appendix) T.S. Nagabhushana has given a life-sketch of his father. T.N.S. was a good correspondent and his correspondence has been reviewed by. Dr. S.V. Desikachar.

An exhaustive bibliography of all the books and papers by T.N.S. is given at the end.

The writings of T.N.S are a fraction of what he wanted to write; many of his writings are still in the form of notes. The editors of 'Srikanthatirtha' have plans to reconstruct the papers and publish them in a separate volume.

* * *

“ಶ್ರೀಕಂಠತೀರ್ಥ” ಗ್ರಂಥದ ಮೇಲಿನ ವಿಮರ್ಶೆಗಳು

●

ತೀ.ನಂ.ಶ್ರೀ ನೆನಪಿಗೆ ವಿದ್ವತ್ ಕಾಣಿಕೆ

ಸಂಶೋಧನೆ, ವಿಮರ್ಶೆ, ಅಧ್ಯಾಪನ – ಈ ಮೂರರಲ್ಲಿಯೂ ಬಹುದೊಡ್ಡ ಹೆಸರು ತೀ.ನಂ.ಶ್ರೀಕಂಠಯ್ಯನವರದು. ಅವರ “ಭಾರತೀಯ ಕಾವ್ಯಮೀಮಾಂಸೆ” ಭಾರತೀಯ ಭಾಷಗಳಲ್ಲಿಯೇ ಒಂದು ಅಪೂರ್ವಗ್ರಂಥ. ಭಾರತೀಯ ಕಾವ್ಯಮೀಮಾಂಸಕರ ವಿಚಾರಧಾರೆಯನ್ನು ಸಮಗ್ರವಾಗಿ, ನಿಖರವಾಗಿ ತಿಳಿಸುವ ಈ ಗ್ರಂಥ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ತುಂಬ ಉಪಯುಕ್ತವಾದುದು. ಛಂದಸ್ಸು, ಭಾಷಾವಿಜ್ಞಾನವನ್ನು ಕುರಿತ ಅವರ ಅನೇಕ ಲೇಖನಗಳೂ, ನಮ್ಮ ಹಿಂದಿನ ಕವಿ–ಕಾವ್ಯವನ್ನು ಕುರಿತ ವಿಮರ್ಶೆಗಳೂ ತೀ.ನಂ.ಶ್ರೀಯವರ ವೈದುಷ್ಯ ಒಳ್ಳೆಯ ಅಭಿರುಚಿಗೆ ಸಾಕ್ಷಿಗಳಾಗಿವೆ. ಇವೆಲ್ಲಕ್ಕೂ ಮಿಗಿಲಾಗಿ ಅವರು ಶ್ರೇಷ್ಠ ಅಧ್ಯಾಪಕರಾಗಿದ್ದರು. ಇಂತಹ ಹಿರಿಯರ ನೆನಪಿಗಾಗಿ “ಶ್ರೀಕಂಠತೀರ್ಥ” ಸ್ಮಾರಕ ಸಂಪುಟವನ್ನು ಪ್ರಕಟಿಸಿರುವುದು ಸ್ವಾಗತಾರ್ಹ.

ಕನ್ನಡದಲ್ಲಿ ಅಭಿನಂದನಾ ಗ್ರಂಥಗಳ ಒಂದು ಪರಂಪರೆಯೇ ನಿರ್ಮಾಣವಾಗಿದೆ. ನಾಡು, ನುಡಿಯ ಸೇವೆಗಾಗಿ ದುಡಿದ ಹಿರಿಯರಿಗೆ ಗೌರವಸೂಚಿಸುವುದು, ಅವರ ಕೆಲಸವನ್ನು ಗುರುತಿಸುವುದು ಇದರ ಉದ್ದೇಶ. ಬಿ.ಎಂ.ಶ್ರೀ ಅವರಿಗೆ “ಸಂಭಾವನೆ” ಗ್ರಂಥವನ್ನು ಅರ್ಪಿಸಿದ ಮೇಲೆ ಈ ಸಂಪ್ರದಾಯ ಪ್ರಾರಂಭವಾಯಿತೆಂದು ತೋರುತ್ತದೆ. ಅನಂತರ ಈ ರೀತಿಯ ಅನೇಕ ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲಿ ಸ್ಪಷ್ಟವಾಗಿ ಎರಡು ವಿಧ ಕಾಣಬಹುದು. ಮೊದಲನೆಯದು – ಒಂದು ನಿರ್ದಿಷ್ಟ ವಿಷಯವನ್ನು ಪ್ರಧಾನವಾಗಿಟ್ಟುಕೊಳ್ಳದೆ ಹಲವು ವಿಷಯಗಳ ಮೇಲೆ ಹಲವು ಲೇಖಕರಿಂದ ಲೇಖನಗಳನ್ನು ಬರೆಯಿಸಿ, ಅವುಗಳನ್ನು ಒಟ್ಟುಗೂಡಿಸಿ ಪ್ರಕಟಿಸುವುದು. ಎರಡನೆಯದು – ಅಭಿನಂದನಾ ಗ್ರಂಥವನ್ನು ಯಾರಿಗೆ ಅರ್ಪಿಸುತ್ತಾರೋ ಆ ಸಾಹಿತಿಯ ಸಾಧನೆ. ಸಿದ್ಧಿಗಳನ್ನು ಗುರುತಿಸುವ ವಿಮರ್ಶಾತ್ಮಕ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವುದು. ಮೊದಲನೆಯದರ ಉದಾಹರಣೆಗೆ “ಸಂಭಾವನೆ”, “ಅಭಿನಂದನೆ”, “ಉಪಾಯನ” ಇತ್ಯಾದಿ ಗ್ರಂಥಗಳನ್ನು ಹೆಸರಿಸಬಹುದು. ಎರಡನೆಯದರ ಉದಾಹರಣೆಗೆ ಶಿವರಾಮ ಕಾರಂತರನ್ನು ಮತ್ತು ಮಾಸ್ತಿಯವರನ್ನು ಕುರಿತ ಗ್ರಂಥಗಳು. ಮೊದಲನೆಯ ಬಗೆಯ ಗ್ರಂಥಗಳಿಂದ ಸ್ವಲ್ಪ ಉಪಯೋಗವಾಗಬಹುದಾದರೂ ಹೆಚ್ಚು ಉಪಯೋಗವಾಗುವುದು ಎರಡನೆಯ ಬಗೆಯ ಗ್ರಂಥಗಳಿಂದ. ಒಬ್ಬ ಲೇಖಕನ ಸಾಹಿತ್ಯವನ್ನು

ಅಭ್ಯಾಸಮಾಡಲು ಈ ಬಗೆಯ ಗ್ರಂಥಗಳು ಸಹಾಯಕವಾಗುತ್ತವೆ. ಆದ್ದರಿಂದಲೇ ಇವುಗಳ ಉಪಯೋಗ ಹೆಚ್ಚು. ಮೂರನೆಯ ಬಗೆಯ ಅಭಿನಂದನಾ ಗ್ರಂಥಗಳೂ ಉಂಟು. ಹಿರಿಯಣ್ಣನವರ ನೆನಪಿಗಾಗಿ ಇಂಗ್ಲೀಷಿನಲ್ಲಿ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಸಂಪಾದಕತ್ವದಲ್ಲಿ ಪ್ರಕಟವಾದ ಗ್ರಂಥ ಈ ಬಗೆಯದು. ಈ ಗ್ರಂಥದಲ್ಲಿ ಹಿರಿಯಣ್ಣನವರಿಗೆ ಪ್ರಿಯವಾದ ತತ್ವಶಾಸ್ತ್ರದ ಮೇಲೆ ಹಲವು ವಿದ್ವಾಂಸರು ಬರೆದ ಲೇಖನಗಳಿವೆ. ಒಂದೇ ವಿಷಯಕ್ಕೆ ಸಂಬಂಧಿಸಿದ ಲೇಖನಗಳಿದ್ದರೆ ಅಂತಹ ಗ್ರಂಥ ಅಭ್ಯಾಸಿಗಳಿಗೆ ಆಕರ ಗ್ರಂಥವಾಬಲ್ಲದು. "ಶ್ರೀಕಂಠತೀರ್ಥ" ಈ ಮೂರೂ ಬಗೆಗಳ ಮಿಶ್ರಣ.

ಮೊದಲ ಭಾಗದಲ್ಲಿ ತೀ.ನಂ.ಶ್ರೀಕಂಠಯ್ಯನವರನ್ನು ಪರಿಚಯ ಮಾಡಿಕೊಡುವ ಲೇಖನಗಳು ಮತ್ತು ಅವರ ಕೃತಿಗಳನ್ನು ಕುರಿತ ವಿಮರ್ಶಾತ್ಮಕ ಲೇಖನಗಳಿವೆ. ಈ ಗ್ರಂಥದಲ್ಲಿ ನಿಜಕ್ಕೂ ಉಪಯೋಗವಾಗುವ ಭಾಗವೆಂದರೆ ಇದೊಂದೇ. ತೀ.ನಂ.ಶ್ರೀಯವರ ಆತ್ಮೀಯರು ಅವರ ವಿಚಾರವಾಗಿ ಕುರಿತು ಬರೆದಿರುವ ಲೇಖನಗಳು ಸ್ವಾರಸ್ಯಪೂರ್ಣವಾಗಿವೆ. ಆದರೆ ಇವುಗಳಿಂದ ತೀನಂ.ಶ್ರೀಯವರ ಸಮಗ್ರ ವ್ಯಕ್ತಿತ್ವ ಪರಿಚಯವಾಗುವುದಿಲ್ಲ. ಅಲ್ಲದೆ ಅವರು ಆದರ್ಶ ಅಧ್ಯಾಪಕರಾಗಿದ್ದರು. ಅವರ ಈ ವ್ಯಕ್ತಿತ್ವವನ್ನು ಪರಿಚಯಮಾಡಿಕೊಡುವ ಒಂದು ಲೇಖನವೂ ಇಲ್ಲದಿರುವುದು ಆಶ್ಚರ್ಯಕರ. ಆದರೆ ಅವರ ಕೃತಿಗಳನ್ನು ಕುರಿತ ಲೇಖನಗಳು ವಿಚಾರಾತ್ಮಕವಾಗಿವೆ. ಕಾವ್ಯಮೀಮಾಂಸೆ, ಛಂದಸ್ಸು, ಭಾಷಾವಿಜ್ಞಾನ, ಸಂಶೋಧನೆ, ಅನುವಾದ– ಈ ಕ್ಷೇತ್ರಗಳಲ್ಲಿ ತೀ.ನಂ.ಶ್ರೀಯವರು ನೀಡಿರುವ ಕೊಡುಗೆಯನ್ನು ಈ ಲೇಖನಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಇವುಗಳನ್ನು ಓದಿದರೆ ಅವರ ಕೃತಿಗಳನ್ನು ಆಳವಾಗಿ ಅಭ್ಯಾಸಮಾಡಬೇಕೆನ್ನುವ ಆಸಕ್ತಿ ಮೂಡುತ್ತದೆ. ಈ ವಿಭಾಗದಲ್ಲಿ ಬರೆದಿರುವ ಲೇಖಕರು ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಗ್ರಂಥದ ಮೊದಲ ಇನ್ನೂರು ಪುಟಗಳಿಷ್ಟಿರುವ ಈ ಭಾಗವೇ ತೀ.ನಂ.ಶ್ರೀ. ಯವರಿಗೆ ನಿಜವಾದ ಸ್ಮಾರಕ.

ಗ್ರಂಥದ ಎರಡನೆಯ ಭಾಗದಲ್ಲಿ ಕಾವ್ಯಮೀಮಾಂಸೆ, ಛಂದಸ್ಸು, ಭಾಷಾವಿಜ್ಞಾನ, ಇತಿಹಾಸ, ಕಲೆ, ಜಾನಪದ, ಧರ್ಮ ಮೊದಲಾದ ವಿಷಯಗಳ ಮೇಲೆ ಅರವತ್ತಕ್ಕು ಹೆಚ್ಚು ಲೇಖನಗಳಿವೆ. ಇವೆಲ್ಲ ಬಿಡಿ ಲೇಖನಗಳು. ಹಲವು ಲೇಖಕರು ಎಷ್ಟೋ ಹೊಸ ಅಂಶಗಳನ್ನು ತಮ್ಮ ಲೇಖನಗಳಲ್ಲಿ ಹೇಳಿದ್ದಾರೆ. ಆದರೆ ಎಲ್ಲ ವಿಷಯಗಳೂ ಕಲಸುಮೇಲೋಗರವಾಗಿರುವುದರಿಂದ ಇವುಗಳ ಕಡೆ ಅನೇಕರು ಗಮನಕೊಡದೆ ಹೋಗಬಹುದು. ಸಂಪಾದಕರು ಒಂದೋ ಎರಡೋ ವಿಷಯಗಳನ್ನು ಆರಿಸಿಕೊಂಡು ಅವುಗಳ ಹಲವು ಮುಖಗಳನ್ನು ಕುರಿತು ಹಲವರಿಂದ ಲೇಖನಗಳನ್ನು ಬರೆಸಿದ್ದರೆ ಅವರ ಶ್ರಮ ಹೆಚ್ಚು ಸಾರ್ಥಕವಾಗುತ್ತಿತ್ತು. ಒಂದು ಒಳ್ಳೆಯ ಆಕರ ಗ್ರಂಥವಾದರೂ ದೊರಕುತ್ತಿತ್ತು. ಎಂದರೆ ಈ ಗ್ರಂಥದಿಂದ ಉಪಯೋಗವೇನೂ ಇಲ್ಲವೆಂದು ಅರ್ಥವಲ್ಲ. ಇಷ್ಟು ಶ್ರಮವಹಿಸಿ ಅಪಾರ ಹಣವೆಚ್ಚಮಾಡಿ ತಂದ ಗ್ರಂಥ ಇನ್ನೂ ಹೆಚ್ಚು ಉಪಯೋಗಕರವಾಗಬೇಕು ಎನ್ನುವುದೇ ನನ್ನ ಮಾತಿನ ಉದ್ದೇಶ. ಒಂದು ಗ್ರಂಥ ತಂದರೆ ಅದು ಪುನರ್ ಮುದ್ರಣವಾಗುವಂತಿರಬೇಕು. ಈ ಗ್ರಂಥವನ್ನು ಹಾಗೆ ಮಾಡಲು ಸಾಧ್ಯವೆ? ಆದ್ದರಿಂದಲೇ ಸಂಭಾವನೆಯಂತಹ ಗ್ರಂಥಗಳು ಜನರ ನೆನಪಿನಿಂದಲೇ ಮರೆಯಾಗುತ್ತಿವೆ.

ತೀ.ನಂ.ಶ್ರೀಯವರು ಬದುಕಿದ್ದಾಗಲೇ ಒಂದು ಅಭಿನಂದನಾ ಗ್ರಂಥ ಬರಬೇಕಿತ್ತು. ಅವರು ನಿಧನರಾದ ಮೇಲಾದರೂ ಇದು ಬಂದಿದೆಯಲ್ಲಾ ಎನ್ನುವುದೇ ಸಂತೋಷ. ಬೇಸರದ ಸಂಗತಿ ಎಂದರೆ ತೀ.ನಂ.ಶ್ರೀಯವರಿಗೆ ಅಸಂಖ್ಯಾತ ಶಿಷ್ಯರು. ಅಭಿಮಾನಿಗಳು ಇದ್ದರೂ ಅವರ ಸಂಸಾರ ವರ್ಗದವರೇ ಈ ಗ್ರಂಥವನ್ನು ಪ್ರಕಟಿಸಬೇಕಾಗಿ ಬಂದದ್ದು.

ತೀ.ನಂ.ಶ್ರೀಯವರು ಅಚ್ಚುಕಟ್ಟಿಗೆ ಹೆಸರಾದವರು. ಅವರ ಸ್ಮಾರಕಗ್ರಂಥವೂ ಅಷ್ಟೇ ಅಚ್ಚುಕಟ್ಟಾಗಿದೆ, ಆಕರ್ಷಕವಾಗಿದೆ. ಸಂಪಾದಕರ, ಪ್ರಕಾಶಕರ ಶ್ರಮವನ್ನು ಯಾರಾದರೂ ಮೆಚ್ಚಿಕೊಳ್ಳಲೇಬೇಕು.

ಬಿ.ವಿ. ವೈಕುಂಠರಾಜು

(ಪ್ರಜಾವಾಣಿ : ೨೬-೯-೧೯೭೬)

* * *

ಶ್ರೇಷ್ಠ ಸಾಹಿತಿಗೆ ಅರ್ಪಿಸಿದ ಸಾರ್ಥಕ ಸ್ಮಾರಕಗ್ರಂಥ; ಇದು ಎಲ್ಲರಿಗೂ ತೀರ್ಥ

ತೀ.ನಂ.ಶ್ರೀಯವರ ಪೂರ್ಣ ನಾಮಧೇಯ, ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯ. ಇವರ ಹೆಸರು ಕನ್ನಡ ಸಾಹಿತ್ಯಲೋಕದಲ್ಲಿ ಅಗ್ರಮಾನ್ಯ. ಅವರು ಕನ್ನಡದ ಸೇವೆ ಮಾಡಲು ಹೆಚ್ಚು ವೇತನದ, ಅಧಿಕಾರದ ಹುದ್ದೆಯನ್ನು ತ್ಯಜಿಸಿದ ತ್ಯಾಗಜೀವಿ. ಬಿ.ಎಂ.ಶ್ರೀಯವರ ಆದರ್ಶವನ್ನೇ ಅನುಸರಿಸಿ ಕನ್ನಡದ ಸೇವೆಗೆ ಬದ್ಧಕಂಕಣರಾದವರು. ಕನ್ನಡ, ಸಂಸ್ಕೃತ, ಮತ್ತು ಇಂಗ್ಲಿಷ್ ಸಾಹಿತ್ಯಗಳ ಆಳವಾದ ಅಧ್ಯಯನದಿಂದ ಮೂಡಿಬಂದ ಅದ್ವಿತೀಯ ವಿದ್ವತ್ತು ಇವರದು. ಆದರ್ಶ ಉಪಾಧ್ಯಾಯರೂ ಆಗಿದ್ದರು. ತೀ.ನಂ.ಶ್ರೀಯವರ ಶಿಷ್ಯರನೇಕರು ಕನ್ನಡ ಸಾಹಿತ್ಯದ ಖ್ಯಾತನಾಮ ವಿದ್ವಾಂಸರಾಗಿದ್ದಾರೆ. ಇಂತಹವರ ಗುರುಋಣವನ್ನು ತೀರಿಸಲು ಮೂಡಿಬಂದಿದೆ ಈ ಸದ್ಗ್ರಂಥ. ತೀ.ನಂ.ಶ್ರೀಯವರ ಔರಸಪುತ್ರರೂ ಮತ್ತು ಶಿಷ್ಯ ವೃತ್ತಿಯಿಂದ ಪುತ್ರ ಸಮಾನರೂ ಈ ಸ್ಮಾರಕಗ್ರಂಥ ಪ್ರಕಟಿಸಿರುವುದು ಉಚಿತವೇ. ಈ ಗ್ರಂಥದ ಸಾರ್ಥಕನಾಮ "ಶ್ರೀಕಂಠತೀರ್ಥ". ಇದರ ಸಾರ್ಥಕತೆಯನ್ನು ಸಂಪಾದಕರೇ XIIನೇ ಪುಟದಲ್ಲಿ ಮನೋಜ್ಞವಾಗಿ ವಿವರಿಸಿದ್ದಾರೆ.

ಈ ಸ್ಮಾರಕ ಗ್ರಂಥವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. **ಭಾಗ-೧ : ತೀ.ನಂ.ಶ್ರೀ ವ್ಯಕ್ತಿಯಾಗಿ ಮತ್ತು ಕೃತಿಕಾರರಾಗಿ. ಭಾಗ-೨ : ಪ್ರಬಂಧಾಂಜಲಿ.**

ಭಾಗ-೧ : ತೀ.ನಂ.ಶ್ರೀ ವ್ಯಕ್ತಿಯಾಗಿ

ಭಾಗ-೧ರಲ್ಲಿ ೧೫ ಲೇಖನಗಳಿವೆ ಇವುಗಳ ಲೇಖಕರು ತೀ.ನಂ.ಶ್ರೀ ಯವರ ಬಂಧುಗಳು, ವಿದ್ಯಾರ್ಥಿಗಳು ಮತ್ತು ಆಪ್ತಗೆಳೆಯರು.

ಶ್ರೀ ಮಾಸ್ತಿವೆಂಕಟೇಶ ಅಯ್ಯಂಗಾರ್ಯರು ತೀ.ನಂ.ಶ್ರೀಯವರ 'ನೆನಪು' ಮಾಡಿಕೊಟ್ಟು ಇವರ ಸವಿನೆನಪು ನಮ್ಮ ಜನರ ಮನಸ್ಸಿನಲ್ಲಿ ಎಂದೆಂದಿಗೂ ನಿಂತಿರಲಿ ಎಂದು ಶುಭಾಶಂಸನ ಮಾಡಿದ್ದಾರೆ.

ಶ್ರೀ.ಎ.ಎನ್. ಮೂರ್ತಿರಾಯರು "ತೀ.ನಂ.ಶ್ರೀ. ಆಪ್ತರೊಡನೆ" ಹೇಗೆ ಸದ್ವರ್ತನೆಯಿಂದ ಇರುತ್ತಿದ್ದರು ಎಂಬುದನ್ನು ತಿಳಿಸಿ, ತೀ.ನಂ.ಶ್ರೀಯವರ 'ಹಿಂಜುಟ್ಟು ತೊಲಗಲೇಬೇಕೆಂದು" ಅವರ ಜುಟ್ಟು ಕತ್ತರಿಸಿದ ವಿನೋದ ಪ್ರಸಂಗವನ್ನು ವಿವರಿಸಿದ್ದಾರೆ. ತೀ.ನಂ.ಶ್ರೀಯವರಿಗೂ ಡಿ.ಎಲ್.ಎನ್. ರವರಿಗೂ ಉಂಟಾದ ಮನಸ್ತಾಪವನ್ನು ಪ್ರಸ್ತಾಪಿಸಿ ಅದು ದುರದೃಷ್ಟಕರವೆಂದು ದುಃಖಿಸಿದ್ದಾರೆ. ಆದರೂ ಅವರಿಬ್ಬರೂ ಪರಸ್ಪರ ವಿದ್ವತ್ತನ್ನು ಶ್ಲಾಘಿಸುತ್ತಿದ್ದ ಸದ್ಗುಣಗಳನ್ನು ತಿಳಿಸಿ ಉಪಕರಿಸಿದ್ದಾರೆ. "ಸಂಸಾರದಲ್ಲಿ, ಸಖ್ಯದಲ್ಲಿ, ಸಮಾಜದಲ್ಲಿ, ಸಾಹಿತ್ಯದಲ್ಲಿ ಸೌಖ್ಯವನ್ನು ಕಂಡು ಆಸ್ವಾದಿಸಿದ ಮತ್ತು ಹರಡಿದ ಜೀವ ಶ್ರೀಕಂಠಯ್ಯನವರದ್ದು" ಎಂಬುದು ಸತ್ಯ ಸಂಗತಿ.

ಶ್ರೀ.ಪು.ತಿ.ನ.ರವರು ತೀ.ನಂ.ಶ್ರೀಯವರ ಆಪ್ತ ವರ್ಗದಲ್ಲೂ ಒಳವೃತ್ತಕ್ಕೆ ಸೇರಿದವರು. ಅವರು ತಮ್ಮ "ಸ್ನೇಹಸ್ಮರಣೆ" ಮಾಡಿಕೊಂಡಿದ್ದಾರೆ. ತಮ್ಮ ಮತ್ತು ತೀ.ನಂ.ಶ್ರೀಯವರ ಗೆಳೆತನ ಅವ್ಯಾಜವಾದದ್ದೆಂದು ತಿಳಿಸಲು "ವ್ಯತಿಷಜತಿ ಪದಾರ್ಥಾನಾಂತರಃ ಕೋಪಿ ಹೇತುಃ.... ಎಂಬ ಕಾಳಿದಾಸೋಕ್ತಿಗೆ ನಮ್ಮದೊಂದು ಸಮೀಚೀನ ಉದಾಹರಣೆ" ಎಂದಿದ್ದಾರೆ. ಈ ಶ್ಲೋಕ ಮಹಾಕವಿ ಭವಭೂತಿ ವಿರಚಿತವಾದುದು ಕಾಳಿದಾಸನದಲ್ಲ. ಶ್ರೀರಾಮ ಲವಕುಶರನ್ನ ಕಂಡಾಗ ಅವನಲ್ಲುಂಟಾದ ಭಾವನೆಯನ್ನು ಕವಿ ಈ ಶ್ಲೋಕದಲ್ಲಿ ತಿಳಿಸುತ್ತಾನೆ 'ಉತ್ತರ ರಾಮಚರಿತದಲ್ಲಿ'.

ತೀ.ನಂ.ಶ್ರೀಯವರ ರಸಿಕತೆ, ಸಹೃದಯತೆ, ಗುಣಗ್ರಹಣಗುಣಗಳನ್ನು ಶ್ರೀ ಪು.ತಿ.ನ. ತಿಳಿಸಿದ್ದಾರೆ. ಕೊನೆಯಲ್ಲಿ "ಈ ಸಾರಸ್ವತೇಜ್ಯೆಯಿಂದ ಗೀತಚಾರ್ಯನಿಗೆ ತೃಪ್ತಿಯಾಗುವುದರಲ್ಲಿ ಸಂದೇಹವಿಲ್ಲ" ಎಂದು ತಮ್ಮ ಸಂತೃಪ್ತಿಯನ್ನು ಸೂಚಿಸಿದ್ದಾರೆ.

ಶ್ರೀ ಜಿ.ಎಸ್. ಶಿವರುದ್ರಪ್ಪನವರು "ಭಾರತೀಯ ಕಾವ್ಯಮೀಮಾಂಸೆ ಒಂದು ಆಚಾರ್ಯಕೃತಿ" ಎಂಬ ಲೇಖನ ಈ ವಿಭಾಗದಲ್ಲಿ ಮಧ್ಯಮಣಿ ನ್ಯಾಯದಂತೆ ಕಂಗೊಳಿಸುತ್ತಿದೆ. ೧೬ ಪುಟಗಳ ಈ ಲೇಖನದಲ್ಲಿ ತೀ.ನಂ.ಶ್ರೀ ಯವರ "ಭಾರತೀಯ ಕಾವ್ಯಮೀಮಾಂಸೆ" ಗ್ರಂಥದ ಸಮಗ್ರ ಪರಾಮರ್ಶೆಯೊಡನೆ ವಿಮರ್ಶೆಮಾಡಿ, ಗುರುದಕ್ಷಿಣೆಯನ್ನು ಮೆಚ್ಚುಗೆಯರೂಪದಲ್ಲಿ ಅರ್ಪಿಸುತ್ತ ಪಾಂಡಿತ್ಯಕ್ಕೆ ಪರಿಮಳವನ್ನು ಕಟ್ಟುವ ರಸಿಕತೆ; ಅಕೃತಕವಾದ ನಿಷ್ಪಕ್ಷವಾದ ನಿರೂಪಣೆ ಇವೆಲ್ಲ ಗುಣಗಳಿಂದ 'ಭಾರತೀಯ ಕಾವ್ಯಮೀಮಾಂಸೆ' ಖಂಡಿತವಾಗಿಯೂ "ಒಂದು ಆಚಾರ್ಯಕೃತಿ ಎಂಬ ಪ್ರಶಂಸೆಗೆ ಅರ್ಹವಾಗಿದೆ" ಎಂಬ ಇವರ ಮಾತೂ ಮತ್ತು ಲೇಖನವೂ ಪ್ರಶಂಸೆಗೆ ಅರ್ಹವಾಗಿಯೇ ಇವೆ.

ಶ್ರೀ ಬಿ.ಬಿ. ರಾಜಪುರೋಹಿತ್‌ರವರು "ಕನ್ನಡ ಭಾಷಾಶಾಸ್ತ್ರಕ್ಕೆ ತೀ.ನಂ.ಶ್ರೀ. ಕೊಡುಗೆ" ಎಂಬ ಲೇಖನದಲ್ಲಿ ತೀ.ನಂ.ಶ್ರೀಯವರು ಕನ್ನಡ ಭಾಷಾಶಾಸ್ತ್ರದಲ್ಲಿ ಮೂಲಭೂತವಾದ ಕೆಲಸ ಹೆಚ್ಚು ಮಾಡಿಲ್ಲದಿದ್ದರೂ "ಹಾಕಿಕೊಟ್ಟ ಉದಾಹರಣೆ, ತೋರಿಕೊಟ್ಟ ಮಾರ್ಗ ಅದ್ವಿತೀಯವಾಗಿದೆ" ಎಂದು ಮೆಚ್ಚಿಗೆಯ ಮಾತನಾಡಿದ್ದಾರೆ.

ಭಾಗ–೨ ಪ್ರಬಂಧಾಂಜಲಿ

ಇದನ್ನು ೮ ಉಪವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯ ಉಪ ವಿಭಾಗ – **ಸಾಹಿತ್ಯ :**

ಇದರಲ್ಲಿ ೧೩ ಲೇಖನಗಳಿವೆ. ತೀ.ನಂ.ಶ್ರೀಯವರ ಗುರುಗಳಾಗಿದ್ದ ಪ್ರಾ. ಟಿ.ಎಸ್. ವೆಂಕಣ್ಣಯ್ಯನವರು ಕೊಡಗು ಕರ್ನಾಟಕ ಸಂಘದಲ್ಲಿ ಮಾಡಿದ ಉಪನ್ಯಾಸವನ್ನು ಶ್ರೀ ಅನಂತಪದ್ಮನಾಭರಾವ್ ಅವರು ಬರೆದುಕೊಂಡದ್ದು. ಇದರಲ್ಲಿ ಶ್ರೀ ವೆಂಕಣ್ಣಯ್ಯನವರು ಕನ್ನಡ ಸಾಹಿತ್ಯ ಬೆಳೆದಿದ್ದನ್ನು ತಿಳಿಸಿದ್ದಾರೆ.

ಶ್ರೀ ಉ.ಕಾ. ಸುಬ್ಬರಾಯಚಾರ್‌ರವರ 'ರಾಮಾಯಣ ಕಥಾ ವಸ್ತುವಿನ ಉಗಮ ಮತ್ತು ಬೆಳವಣಿಗೆ' ಎಂಬ ೩೦ ಪುಟಗಳ ಲೇಖನ ಬಹು ಶ್ಲಾಘನೀಯ ರೀತಿಯದು. ವಾಲ್ಮೀಕಿ ರಾಮಾಯಣದ ವಿಷಯ ವಿಮರ್ಶಿಸಿದ್ದಾರೆ. ಬಾಲಕಾಂಡದಲ್ಲಿ ಶ್ರೀರಾಮ ವಾಲ್ಮೀಕಿ ಮಹರ್ಷಿಗಳಿಗಿಂತ ಬಹಳ ಹಿಂದಿನ ಕಾಲದಲ್ಲಿ ಇದ್ದನೆಂದು ತಿಳಿಸಲಾಗಿದೆ. ಉತ್ತರ ಕಾಂಡದಲ್ಲಿ 'ಶ್ರೀ ರಾಮನನ್ನು ವಾಲ್ಮೀಕಿ ಮಹರ್ಷಿಗಳು ಸ್ವಾಗತಿಸಿದರು' ಎಂದರೆ ಇದು ಪೂರ್ವಾಪರ ವಿರೋಧ. ಈ ಭಾಗ ಪ್ರಕ್ಷಿಪ್ತವೆಂಬುದನ್ನು ಆಧಾರ ಸಹಿತ ಸಾಧಿಸಿ–ತೋರಿಸಿದ್ದಾರೆ. ರಾಮಾಯಣದ ಮಹಿಮೆ ಅಪಾರವೆಂಬುದನ್ನು ಒಪ್ಪಿದ್ದಾರೆ. ಓದುಗರೂ ತಮ್ಮ ಅಭಿಪ್ರಾಯ ಒಪ್ಪುವಂತೆ ಮಾಡಿದ್ದಾರೆ ಲೇಖಕರು. ಇದು ಇವರ ಸಂಶೋಧನೆಯ ಮನೋಭಾವಕ್ಕೂ, ಅಧ್ಯಯನಶೀಲತೆಗೂ ಹಿಡಿದ ಕನ್ನಡಿ. ಇವರು ನಿಜವಾಗಿ ಅಭಿನಂದನೀಯರು.

"ಪ್ರಬಂಧಾಂಜಲಿ"ಯಲ್ಲಿ–೨ನೆಯ ಉಪವಿಭಾಗ–**ಕಾವ್ಯಮೀಮಾಂಸೆ.** ಇದರಲ್ಲಿ ೬ ಲೇಖನಗಳಿವೆ. ಇವುಗಳ ಕರ್ತೃಗಳು ಪ್ರಸಿದ್ಧ ಸಾಹಿತ್ಯ ಸಂಶೋಧಕರೇ ಆಗಿದ್ದಾರೆ.

ಶ್ರೀ ಜಿ. ಹನುಮಂತರಾಯರ "ಕಾವ್ಯ ಜೀವಾಳ– ಸದೂರ" ಎಂಬುದು ೨೪ ಪುಟಗಳ ಸಂಶೋಧನಾತ್ಮಕ ಲೇಖನ. ಇದರಲ್ಲಿ ಎಡ್ವರ್ಡ್‌ಬುಲ್ ಅವರ ಸೈಕಿಕಲ್ ಡಿಸ್ಟೆನ್ಸ್ (ಮನೋದೂರ) ಮತ್ತು ಭಟ್ಟನಾಯಕನ "ಸಾಧಾರಣೀಕರಣ" ಇವುಗಳಿಗೆ ಇರುವ ಹೋಲಿಕೆಯನ್ನು ವಿವರಿಸಿದ್ದಾರೆ. ಶ್ರೀ ಪು.ತಿ.ನ. ವಿರಚಿತ "ಕಾವ್ಯ ಕುತೂಹಲ" ಗ್ರಂಥದಲ್ಲಿ "ಸದೂರದ" ವಿಷಯ ಚರ್ಚೆಯಾಗಿರುವುದನ್ನು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಪುತಿನರವರ "ಸದೂರ ಮುಂತಾದ ಮಾತುಗಳೂ ಸಾಧಾರಣೀ ಭಾವವನ್ನು ಹೋಲುತ್ತವೆ" ಎಂಬುದನ್ನು ಅಧ್ಯಯನಮಾಡಿ ತೋರಿಸಿಕೊಟ್ಟಿದ್ದಾರೆ. ಸದೂರ ಒಂದು ಸಮಭಾವ. ಇದು ಕವಿಯ ಮನಸ್ಸನ್ನು ಪ್ರಸನ್ನ ಮಾಡಿ ವಿಶ್ರಾಂತಿ ಕೊಡುತ್ತದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಕಾವ್ಯಮೀಮಾಂಸೆಗೆ ಈ ಲೇಖನ ಉತ್ತಮ ಕೊಡುಗೆ.

ಪ್ರಾಧ್ಯಾಪಕ ಕೆ. ಕೃಷ್ಣಮೂರ್ತಿಯವರು "ಕಾವ್ಯದಲ್ಲಿ ಶಬ್ದ ಮತ್ತು ಅರ್ಥ ಒಂದು ವಿವೇಚನೆ" ಎಂಬ ಲೇಖನದಲ್ಲಿ ಯಾವ ಕಾವ್ಯ ಬರೆದರೂ ಅದರ ಮೂಲವಸ್ತು ಪದ ಮತ್ತು ಅದರ ಅರ್ಥ. ಕಾವ್ಯದಲ್ಲಿ ಶಬ್ದದ ಅರ್ಥ 'ವಾಚ್ಯ'ವಾಗಿರುವುದಕ್ಕಿಂತ 'ವ್ಯಂಜಕ'ವಾಗಿರಬೇಕು. ಇದನ್ನೇ ಕಾವ್ಯದಲ್ಲಿ "ಧ್ವನಿ" ಎಂದು ಕರೆಯಬಹುದು. ಇದೇ ಕಾವ್ಯ ಪರಿಣಾಮಕಾರಿಯಾಗಲು ಬಹುಮುಖ್ಯವೆಂಬ ಅಂಶವನ್ನು ಬಹಳ ಸಮಗ್ರ ಮತ್ತು ಸಮರ್ಥರೀತಿಯಲ್ಲಿ

ಪ್ರತಿಪಾದಿಸಿದ್ದಾರೆ. ಧ್ವನ್ಯಾಲೋಕವನ್ನು ಮೊದಲು ಕನ್ನಡಕ್ಕೆ ಭಾಷಾಂತರಿಸಿ ಕನ್ನಡ ಕಾವ್ಯಗಳ ಲಕ್ಷಣ ಪದ್ಯಗಳನ್ನೇ ಉದಹರಿಸಿ ಶ್ರಮ ಸಾಧ್ಯವಾದ ಕಾರ್ಯ ಮಾಡಿದವರು ಶ್ರೀ ಕೆ. ಕೃಷ್ಣ ಮೂರ್ತಿಯವರು. ಈ ಲೇಖನದಲ್ಲೂ ಅವರು ಶ್ರಮವಹಿಸಿ ಸಂಶೋಧನೆ ನಡೆಸಿರುವ ಅಚ್ಚು ಮೂಡಿಬಂದಿದೆ.

ಪ್ರಾ. ಎಸ್.ಎಸ್. ರಾಘವಾಚಾರ್ಯರ ಲೇಖನ "ಕಾವ್ಯಮೀಮಾಂಸೆ ಮತ್ತು ವೇದಾಂತ." ಸೌಂದರ್ಯೋಪಾಸನೆ ಕವಿಯ ಮುಖ್ಯ ಕಾರ್ಯ. ಪ್ರಕೃತಿ, ಸೌಂದರ್ಯದ ಪ್ರತಿಕೃತಿ. ಇದು ಭಗವಂತನ ವಿಭೂತಿ. ಕವಿಯ ನಿಸರ್ಗೋಪಾಸನೆ ಭಗವಂತನಿಗೂ, ಕವಿಗೂ ಸಂಯೋಗವುಂಟು ಮಾಡುತ್ತದೆ. ಕವಿಯಲ್ಲಿ ಪ್ರತಿಭೆ ಬಹಳ ಮುಖ್ಯ. ಇದು ಜನ್ಮಾಂತರಗಳಿಂದ ಬಂದದ್ದು. ಇದನ್ನು ವೇದಾಂತ ನಿರೂಪಿಸುತ್ತದೆ. ಹಾಗೆಯೇ ಕಾವ್ಯಾನುಭವವೆಂದರೆ ಪ್ರತಿಭೆಯ ಫಲರೂಪ ವಾದದ್ದು. ಇದು ಬ್ರಹ್ಮ ಸಾಕ್ಷಾತ್ಕಾರಕ್ಕೆ ಸಹಾಯಕ. ಈ ಅರ್ಥದಲ್ಲಿ ಕವಿಯೂ ಸಾಧಕ, ವೇದಾಂತಿಯೂ ಸಾಧಕ. ಆದರೆ ಅವೆರಡರಲ್ಲೂ ವ್ಯತ್ಯಾಸವಿದೆ. ಈ ವ್ಯತ್ಯಾಸವಿದ್ದರೂ ಇಬ್ಬರ ಸಾಧನೆಯೂ ಪರಸ್ಪರ ಪೂರಕ. ಆದ್ದರಿಂದ ಎರಡರಿಂದಲೂ ಭಕ್ತಿಯ ವಿಪುಲತರವಾಗಿದೆ "ಇದರಿಂದ ಆತ್ಮನು ವಿಕಾಸ ಹೊಂದಿ ಹೆಚ್ಚು ಸುಖ ಗಳಿಸುತ್ತಾನೆಂದು" ದೂರಾನ್ವಯ ರೀತಿಯಲ್ಲಿ ಕಾವ್ಯಮೀಮಾಂಸೆಗೂ ವೇದಾಂತಕ್ಕೂ ಪರಸ್ಪರ ಸಂಬಂಧ ಕಲ್ಪಿಸಿರುವುದು ವಿಚಾರಣೀಯ ವಿಷಯ.

ಡಾ॥ ತಿಪ್ಪೇರುದ್ರಸ್ವಾಮಿ ಅವರ ಲೇಖನ "ವ್ಯಕ್ತಿತ್ವನಿರಸನ ತತ್ವ". ವ್ಯಕ್ತಿತ್ವನಿರಸನ ನಷ್ಟವಲ್ಲ ರಸಸಂಪಾದನೆ. "ಅದೊಂದು ನಿರಂತರ ಸಾಧನೆಯಿಂದ ಪಡೆಯಬೇಕಾದ ಸಿದ್ಧಿ"ಯೆಂಬುದು ಈ ಲೇಖಕರ ಸಮರ್ಥನೀಯ ಅಭಿಪ್ರಾಯ.

"ಅರ್ಥಮಾಪನೆ"– ಲೇಖಕರು ಪ್ರೊ. ಬಿ. ಕುಪ್ಪಸ್ವಾಮಿಯವರು. ಪ್ರತಿಯೊಂದು ಪದಕ್ಕೂ ಒಂದು ಅರ್ಥ ಇದ್ದೇ ಇದೆ. ಒಂದೇ ಪದಕ್ಕೆ ಎರಡು ರೀತಿಯ ಅರ್ಥವಾಗಬಹುದು (ವಸ್ತು ಸೂಚಕ ಮತ್ತು ಲಕ್ಷಣ ಸೂಚಕ). ಸಮಾಜಶಾಸ್ತ್ರಜ್ಞ, ಭಾಷಾಶಾಸ್ತ್ರಜ್ಞ ಮತ್ತು ಮನಶ್ಶಾಸ್ತ್ರಜ್ಞರಿಗೆ ಒಂದೇ ಪದ ಬೇರೆ ಬೇರೆ ರೀತಿಯ ಅರ್ಥ ಕೊಡಬಹುದು. ಇದಕ್ಕೆ ಉದಾಹರಣೆ ಕೊಟ್ಟಿದ್ದರೆ ಸ್ಪಷ್ಟವಾಗಿರುತ್ತಿತ್ತು.

ಐದನೆಯ ಉಪವಿಭಾಗದ **ಇತಿಹಾಸ**. ಇದರಲ್ಲಿ ೧೩ ಲೇಖನಗಳಿವೆ.

'ಚರಿತ್ರೆ ಮತ್ತು ನಾವು'– ಲೇಖಕರು ಶ್ರೀ ಶಿವರಾಮ ಕಾರಂತರು. ಭಾರತ ದೀರ್ಘಕಾಲದ ಚರಿತ್ರೆಯುಳ್ಳ ದೇಶ. ಆದರೆ ಭಾರತೀಯರಿಗೆ ಸರಿಯಾದ ಸಾಕ್ಷಿಬದ್ಧವಾದ ಇತಿಹಾಸ ಬರೆಯುವ ಅನುಭವ, ಅಭ್ಯಾಸ ಮತ್ತು ಮನಸ್ಸು ಇಲ್ಲ ಎಂದು ಇವರ ಅಭಿಪ್ರಾಯ. ನಮ್ಮ ಚರಿತ್ರಕಾರರ ದೃಷ್ಟಿ ಒಣ ಅಭಿಮಾನ ಜನ್ಯವಾದದ್ದು. ಶಾಸನಗಳೂ ಕವಿಸ್ತುತಿಗಳೂ ರಾಜರ ಹೊಗಳುಭಟರಿಂದ ಬರೆಯಲ್ಪಟ್ಟ ಉತ್ಪ್ರೇಕ್ಷಿತ ವಿಷಯಗಳಿಂದ ತುಂಬಿವೆ. ಚರಿತ್ರೆ ಒಂದು ದೇಶದ ಹಕ್ಕಲ್ಲ ಮಾನವಕುಲದ ಹಕ್ಕಿನ ವಸ್ತು. ನಿಷ್ಪಕ್ಷಪಾತವಾಗಿ, ನಮ್ಮ ದೋಷಗಳನ್ನು ಬರೆಯುವ ಇತಿಹಾಸ

ಕಾರರು ಬೇಕು. "ಸಾಧಾರಣೀಕರಣ" ಸಾಹಿತ್ಯದಲ್ಲಿರುವಂತೆಯೇ ಇತಿಹಾಸ ಬರೆಯುವಾಗಲೂ ಅವಶ್ಯಕವೆಂಬಂತಹ ಅಭಿಪ್ರಾಯವನ್ನು ತಿಳಿಸಿ ನಮ್ಮ ಕಣ್ಣು ತೆರೆಸಿದ್ದಾರೆ.

"ಕಲೆ ಮತ್ತು ಜಾನಪದ" ಉಪಭಾಗದಲ್ಲಿ ೬ ಲೇಖನಗಳಿವೆ.

"ಭಾರತೀಯ ಸಂಗೀತದ ಆತ್ಮ ಹಾಗೂ ಅಭಿವ್ಯಕ್ತಿ" ಲೇಖಕ ಶ್ರೀ ರಾ. ಸತ್ಯನಾರಾಯಣ. ಶ್ರೀ ರಾ. ಸತ್ಯನಾರಾಯಣರವರು ಸಂಗೀತ ಕ್ಷೇತ್ರದಲ್ಲಿ ಪ್ರಬುದ್ಧ ಸಂಶೋಧಕರೆಂದು ಖ್ಯಾತಿ ಪಡೆದಿದ್ದಾರೆ. ಸಂಗೀತ ಅಥವಾ ಇತರ ಕಲೆಗಳ ಗುರಿ ಇಂದ್ರಿಯ ಹಿತಸಾಧನೆ ಮಾತ್ರವಲ್ಲ ಆತ್ಮೋನ್ನತಿಗೂ ಅವು ಸಾಧಕವಾಗಬೇಕು ಎಂಬುದು ಇವರ ಖಚಿತ ಅಭಿಪ್ರಾಯ. ಇದನ್ನು ಸಮರ್ಥಿಸಲು ಭರತ ಮುನಿಗಳ ನಾಟ್ಯಶಾಸ್ತ್ರದ ಭಾಗವನ್ನು ಉದ್ಧರಿಸಿದ್ದಾರೆ. ಜನರನ್ನು ರಂಜನೆಯ ಮೂಲಕ ಉತ್ತಮ ಗುಣವಂತರನ್ನಾಗಿಮಾಡುವುದೇ ಕಲೆಯ ಅಂತಿಮ ಗುರಿ ಎಂಬ ವಿಷಯ ಈಗಿನ ಸಿನಿಮಾ ಮತ್ತು ಇತರ ಕಲಾವಿದರ ಕಣ್ತೆರೆಸಬೇಕು.

"ಬ್ರೆಕ್ಟ್‌ನ ಮುಕ್ತ ರಂಗ ಭೂಮಿ" (ಎಪಿಕ್ ಥಿಯೇಟರ್) ಲೇಖಕರು : ಶ್ರೀ ಎಚ್.ಕೆ. ರಾಮಚಂದ್ರ ಮೂರ್ತಿ. ಬರ್ಟ್‌ಹೋಲ್ ಬ್ರೆಕ್ಟ್ ಜರ್ಮನಿಯವನು. ಶ್ರೇಷ್ಠ ಕಲಾವಿದ, ಕವಿ ಮತ್ತು ಕ್ರಾಂತಿಕಾರೀ ನಾಟಕಕಾರ. ಯೂರೋಪಿನ ನಾಟಕಗಳನ್ನು ಪುರಾತನ ಸಂಪ್ರದಾಯದ ಸಂಕೋಲೆಯಿಂದ ಬಿಡುಗಡೆ ಮಾಡಿದ ಧೀರ. ತನ್ನ ಭಾವನೆಯ ರಂಗಭೂಮಿಗೆ 'ಎಪಿಕ್ ಥಿಯೇಟರ್' ಎಂದು ಹೆಸರಿಸಿದ. (ಇದಕ್ಕೆ ಮುಕ್ತ ರಂಗಭೂಮಿ ಅಥವಾ ವಿಶಾಲ ನಾಟಕ ಎಂದರ್ಥ). ನಾಟಕ ಪ್ರೇಕ್ಷಕನನ್ನು ಜಡತೆಯಲ್ಲಿ ಮುಳುಗಿಸಬಾರದು. ಚರ್ಚೆ, ವಿವೇಚನೆ ಮತ್ತು ವಿಶ್ಲೇಷಣೆ ಮಾಡುವ ಶಕ್ತಿಯನ್ನು ಪ್ರೇಕ್ಷಕನಿಗೆ ಕೊಡಬೇಕು. "ನಾಟಕವು, ಮನುಷ್ಯನ ಜೀವನವೇ ಒಂದು ಪ್ರಯೋಗಾತ್ಮಕ, ಸಾಮಾಜಿಕ ವ್ಯಾಪಾರ ಎಂದು ತೋರಿಸುತ್ತದೆ" ಎನ್ನುತ್ತಾನೆ. "ನಿರಂತರವಾಗಿ ಬದಲಾವಣೆಗೆ ಪಕ್ಕಾಗಿರುವ ಬದುಕನ್ನು ನೋಡುವಾಗ ಲಭಿಸುವ ಆನಂದವೇ ನಾಟಕದ ಗುರಿ" ಎಂಬುದು ಬ್ರೆಕ್ಟ್‌ನ ಖಚಿತ ಅಭಿಪ್ರಾಯ ಮತ್ತು ಈ ಉದ್ದೇಶ ಸಾಧನೆಗಾಗಿ ಕಾರ್ಯ ಪ್ರವೃತ್ತನಾಗಿ 'ಮಿಚಿಗನ್' ನಾಟಕವನ್ನೂ ನಾಟಕ ಕಲೆಯ ವಿಷಯದಲ್ಲಿ 'ಲಿಟ್ ಆರ್ಗನನ್ ಫಾರ್ ದಿ ಥಿಯೇಟರ್' ಗ್ರಂಥವನ್ನೂ ಬರೆದು ಕ್ರಾಂತಿಯುಂಟು ಮಾಡಿದ ಕವಿ ಇವನು. ಈ ವಿಷಯವನ್ನು ಸುಲಭ ಶೈಲಿಯಲ್ಲಿ ಪ್ರಶಂಸನೀಯವಾಗಿ ಲೇಖಕರು ವಿವರಿಸಿದ್ದಾರೆ.

೭ನೇ ಉಪವಿಭಾಗ **'ಧರ್ಮ ತತ್ವ ವಿಚಾರ'**. ಇದರಲ್ಲಿ ೭ ಲೇಖನಗಳಿವೆ.

"ಬಸವಾದಿಗಳ ಕಾಲದ ಮತಾಂತರ" ಲೇಖಕರು : ಶ್ರೀ ಪಿ.ವಿ. ನಾರಾಯಣ. ಬಸವಾದಿಗಳು ವೀರಶೈವವನ್ನು ಪ್ರಚಾರ ಮಾಡಿ ಸಾವಿರಾರು ಮಂದಿಯನ್ನು ಮತಾಂತರಗೊಳಿಸಿದರು. ಮತಾಂತರಗೊಂಡವರು ತಮ್ಮ ಹಿಂದಿನ ಧಾರ್ಮಿಕ ಆಚರಣೆಯನ್ನು ಬಿಡಲು ಕಷ್ಟವಾಯಿತು. ಹೊಸಮತದಲ್ಲಿ ತಮ್ಮ ಸ್ಥಾನದ ಬಗ್ಗೆ ಅನಿಶ್ಚಿತತೆ ಅವರಲ್ಲಿ ಉಂಟಾಯಿತು. ವೀರಶೈವರೆಲ್ಲ ಸಮಾನರೆಂದು ಬಸವಣ್ಣನವರು ತಮ್ಮ ವಚನದಲ್ಲಿ ಹೇಳಿದರೂ ಕೆಲವರು ಇದನ್ನು ವಿರೋಧಿಸಿರಬೇಕು. ಇತರರೊಡನೆ ಮದುವೆಯಂತಹ ಸಂಬಂಧವನ್ನು ಅವರು ಒಪ್ಪಲಿಲ್ಲ. ಲೇಖಕರ ಮಾತಿನಲ್ಲಿ "ವಚನಕಾರರು ಸೂಚಿಸಿ ಪ್ರಸಾರ ಮಾಡಿದ ಹಲವಾರು

ಸಾಮಾಜಿಕ ಮತಾಚಾರಗಳ ಸುಧಾರಣೆಗಳನ್ನು ಕೆಲವರು ಒಪ್ಪಿಕೊಳ್ಳದೆ ತಮ್ಮದೇ ಆದ ರೀತಿಯಲ್ಲಿ ವಿರೋಧವನ್ನು ವ್ಯಕ್ತಪಡಿಸಿದುದನ್ನು ಕಾಣುತ್ತೇವೆ." ಆದರೂ ಮತ ಪ್ರಚಾರದ ವಿಷಯದಲ್ಲಿ ಒಂದಾಗಿ ಈ ಭಿನ್ನಾಭಿಪ್ರಾಯ ಕಲಹಕ್ಕೆಡೆ ಕೊಡದಂತೆ ತಡೆದಿರಬೇಕು ಎಂದು ಲೇಖಕರು ಊಹಿಸುತ್ತಾರೆ.

೮ನೆಯ ಉಪ ವಿಭಾಗ **'ಸಂಕೀರ್ಣ'**. ಇದರಲ್ಲಿ ೪ ಲೇಖನಗಳಿವೆ.

"ಸಮಾನಾವಕಾಶ"ದ ಲೇಖಕರು : ಶ್ರೀ ಎಸ್.ಎಲ್ ಭೈರಪ್ಪನವರು. 'ಸಮಾನತೆ' ಎಂಬ ಪದವೂ ಇತರ ಪದಗಳಂತೆಯೇ ಸಂದರ್ಭಕ್ಕೆ ಅನುಗುಣವಾಗಿ ಅರ್ಥ ಬದಲಾಯಿಸುತ್ತ ಇರುತ್ತದೆ. ಸ್ತ್ರೀ ಸಮಾನತೆ : ವೇದಗಳ ಕಾಲದಲ್ಲಿ ಕೆಲವರು ಸ್ತ್ರೀಯರಿಗೆ ವಿದ್ಯಾಭ್ಯಾಸದ ಅವಕಾಶವಿತ್ತು. ಜಾತಿಯ ಕಟ್ಟಿನಿಂದ ಈ ಅವಕಾಶವೂ ಕಡಿಮೆಯಾಯಿತು. ಸ್ತ್ರೀ ವಿರೋಧಿ ಭಾವನೆ ಪಶ್ಚಿಮ ಸಂಸ್ಕೃತಿಯ ಆರಂಭದಿಂದಲೂ ಬೆಳೆದು ಬಂದಿದೆ. ಯೂರೋಪಿನಲ್ಲಿ ಸ್ತ್ರೀ ಸ್ವಾತಂತ್ರ್ಯ ಚಳವಳಿಯೂ ಆಯಿತು. ಭಾರತೀಯರು ಯೂರೋಪಿಯನ್ನರಿಗಿಂತ ಹೆಚ್ಚಾಗಿ ಸ್ತ್ರೀ ಸ್ವಾತಂತ್ರ್ಯ ಒಪ್ಪಿಕೊಂಡರು. ಆಧುನಿಕ ಆರ್ಥಿಕ ಒತ್ತಡವು ಹೆಂಗಸಿನ ಮೇಲೆ ಮಾತ್ರವಲ್ಲ ಗಂಡಸಿನ ಮೇಲೆಯೂ ಇದೆ ಅವನಿಗೆ ಇದೊಂದು ಸವಾಲು. (ಈ ಲೇಖನದಲ್ಲಿ ೮೯೦ನೆಯ ಪುಟದಲ್ಲಿ ೨೮ನೆಯ ಸಾಲಿನಲ್ಲಿ "ಮಕ್ಕಳುಗಳಾಗಿದ್ದಾರೆ" ಎಂಬ ಪ್ರಯೋಗವಿದೆ. ಮಕ್ಕಳು ಎನ್ನುವುದೇ ಮಗು ಎನ್ನುವುದರ ಬಹುವಚನ. ಇದಕ್ಕೆ 'ಗಳು' ಪ್ರತ್ಯಯ ಅವಶ್ಯಕವಿಲ್ಲ)

ಮುಂದಿನ ಭಾಗ **ಅನುಬಂಧ– ೩** ಲೇಖನಗಳಿವೆ.

ಇದರಲ್ಲಿ ಮೊದಲು, ತೀ.ನಂ.ಶ್ರೀಯವರ ಜೀವನ ಪರಿಚಯವಿದೆ. ಇದನ್ನು ತೀ.ನಂ.ಶ್ರೀ.ಯವರ ಚಿರಂಜೀವಿ ಶ್ರೀ ತೀ.ಶ್ರೀ ನಾಗಭೂಷಣ ಅವರು ವಿವರವಾಗಿ ಹೃದಯಂಗಮವಾಗಿ ಬರೆದಿದ್ದಾರೆ.

ಅನಂತರ ತೀ.ನಂ.ಶ್ರೀಯವರ ಜೀವನದ ಮಹತ್ವದ ಘಟನೆಗಳನ್ನು ೧೯೦೬ನೇ ನವೆಂಬರ್ ೨೬ರಂದು ತೀರ್ಥಪುರದಲ್ಲಿ ಜನನವಾದ ದಿನದಿಂದ ೧೯೬೬ನೇ ಸೆಪ್ಟೆಂಬರ್ ೭ರಂದು ಕಲ್ಕತ್ತೆಯಲ್ಲಿ ನಿಧನರಾದ ದಿನದವರೆಗೆ ಎಲ್ಲ ಬಹುಮುಖ್ಯ ಘಟನೆಗಳ ಪಟ್ಟಿಯೂ ಇದೆ.

ಕೊನೆಯಲ್ಲಿ ಎಸ್.ವಿ. ದೇಶಿಕಾಚಾರ್‌ರವರು ತೀ.ನಂ.ಶ್ರೀಯವರ ಪತ್ರ ವ್ಯವಹಾರದ ಸಮೀಕ್ಷೆ ನಡೆಸಿದ್ದಾರೆ.

ಇಲ್ಲಿಗೆ ಲೇಖನಗಳ ವಿಭಾಗ ಮುಕ್ತಾಯವಾಗುತ್ತದೆ. ಈ ಗ್ರಂಥವಾಚನದಿಂದ ನಮಗೆ ತೀ.ನಂ.ಶ್ರೀಯವರ ತುಂಬು ಜೀವನದ ಪರಿಚಯವಾಗುತ್ತದೆ. ದೇ. ಜವರೇಗೌಡರ ಮಾತಿನಲ್ಲಿ "ತೀ.ನಂ.ಶ್ರೀ. ಅವರು ಆಚಾರ್ಯರಾಗಿ, ವಿದ್ವಾಂಸರಾಗಿ, ಸಂಶೋಧಕರಾಗಿ, ಸಾಹಿತಿಯಾಗಿ ಗೃಹಸ್ವಾಮಿಯಾಗಿ, ತಂದೆಯಾಗಿ, ಆತಿಥೇಯರಾಗಿ, ಮಿತ್ರರಾಗಿ, ಬಂಧುವಾಗಿ ಆದರ್ಶ ವ್ಯಕ್ತಿಯಾಗಿದ್ದಾರೆ. ಅವರದು ತುಂಬುಬಾಳು, ಸಂಸ್ಕೃತಿ ಸಂಪನ್ನವಾದ ಸಮೃದ್ಧ ಜೀವನ"

ಈ ಗ್ರಂಥ ವಿ.ಕೃ. ಗೋಕಾಕರು ತಿಳಿಸಿರುವಂತೆ "ಶ್ರೀಕಂಠ ಪ್ರಸಾದವೆಂದಿರಬಹುದಾದ ಈ ಕೃತಿಯನ್ನು, ಇದನ್ನು ಸಿದ್ಧಗೊಳಿಸಿದ ಸ್ನೇಹಿತರು ಶ್ರೀಕಂಠತೀರ್ಥ ಎಂದು ಕರೆದಿದ್ದಾರೆ. ತೀ.ನಂ.ಶ್ರೀಯವರ ಪ್ರಸಾದಗುಣ ಇಲ್ಲಿದೆಯೆಂದೇ ಅದನ್ನು ಅನುಭವಿಸಲು ಇಚ್ಛಿಸುವ ರಸಿಕರಿಗೆ ಈ ಗ್ರಂಥವು ಶ್ರೀಕಂಠತೀರ್ಥ ಕ್ಷೇತ್ರವಾಗಿ ಉಳಿಯುತ್ತದೆ."

ಇಂತಹ ಗ್ರಂಥಗಳಲ್ಲಿ ಮುದ್ರಣದೋಷವಿರಲೇ ಕೂಡದು. ಈ ವಿಮರ್ಶಕನಿಗೆ ೮ ಮುದ್ರಣದೋಷಗಳು ಕಂಡಿವೆ. ಕೆಲವು ಮೂಲಪ್ರತಿಯ ದೋಷಗಳೇ ಆಗಿರಬಹುದು.

ಈ ಗ್ರಂಥ ಬಹಿರಂಗವಾಗಿ ಮತ್ತು ಅಂತರಂಗದಲ್ಲಿ ಸುಂದರವಾಗಿದೆ. ಬಾಹ್ಯಾಲಂಕಾರ ಆಕರ್ಷಣೀಯವಾಗಿದೆ. ಅಚ್ಚುಕಟ್ಟಾಗಿದೆ. ಇದು ಸಂಗ್ರಹಯೋಗ್ಯ ಗ್ರಂಥ. ಆದರೆ ಇದರ ಬೆಲೆ ಕನ್ನಡ ಸಾಹಿತ್ಯಪ್ರಿಯರ ಹಣದಚೀಲಕ್ಕೆ ಎಟುಕಲಾರದು ಎನ್ನಿಸುತ್ತದೆ.

ಈ ಗ್ರಂಥದಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ತೀ.ನಂ.ಶ್ರೀ ಯವರಿಗಿಂತ ವಯೋವೃದ್ಧರೂ ಜ್ಞಾನವೃದ್ಧರೂ ಆಗಿದ್ದ ದಿ. ಡಾ॥ ಡಿ.ವಿ.ಜಿ.ಯವರ ಮತ್ತು ತೀ.ನಂ.ಶ್ರೀಯವರೊಡನೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದು, ಕನ್ನಡದ ಖ್ಯಾತನಾಮರಾದ ಡಿ.ಎಲ್. ಎನ್., ಶ್ರೀ ವಿ.ಸೀ. ಮತ್ತು ಜಿ.ಪಿ. ರಾಜರತ್ನಂರವರ ಲೇಖನಗಳೂ ಇದ್ದಿದ್ದರೆ ಈ ಗ್ರಂಥ ಇನ್ನೂ ಹೆಚ್ಚು ಶೋಭಿಸುತ್ತಿತ್ತು.

ಈ ಸ್ಮಾರಕ ಗ್ರಂಥದಲ್ಲಿ ತೀ.ನಂ.ಶ್ರೀ ಯವರ ಪೂರ್ಣಮಟ್ಟದ ಆಕಾರದ ಭಾವಚಿತ್ರವೂ ಸೇರಿ ಒಟ್ಟು ೨೬ ಚಿತ್ರಗಳನ್ನು ಕೊಡಲಾಗಿದೆ. ತೀ.ನಂ.ಶ್ರೀಯವರನ್ನು ನೋಡಿ ಅವರ ವ್ಯಕ್ತಿತ್ವ ತಿಳಿಯಲು ಸಹಾಯಕವಾಗಿದೆ.

ಒಟ್ಟಿನಲ್ಲಿ ಈ ಗ್ರಂಥ ತೀ.ನಂ.ಶ್ರೀ.ಯವರಂತೆಯೇ ಅಚ್ಚುಕಟ್ಟಾಗಿ ಹೊರಬಂದಿದೆ. ಇದರ ಸಂಪಾದಕರೂ ಪ್ರಕಾಶಕರೂ ಕನ್ನಡಿಗರ ಅಭಿನಂದನೆಗೆ ಮತ್ತು ಕೃತಜ್ಞತೆಗೆ ಸರ್ವಥಾ ಅರ್ಹರಾಗಿರುತ್ತಾರೆ.

ಕೆ. ಶ್ರೀನಿವಾಸ ಅಯ್ಯಂಗಾರ್
(ಸಂಯುಕ್ತ ಕರ್ನಾಟಕ : ೨೨-೧೧-೧೯೭೬)

* * *

ಶಾಶ್ವತ ಮೌಲ್ಯದ ನೆನಪು ಕಾಣಿಕೆ

ಈ ಸಂಪುಟದಲ್ಲಿ ಮೊದಲಿನ ಕಾಲು ಭಾಗದಲ್ಲಿ ದಿವಂಗತ ಶ್ರೀ ತೀ.ನಂ.ಶ್ರೀ. ಅವರ ವ್ಯಕ್ತಿ ಪರಿಚಯ ಹಾಗೂ ಅವರ ಕೃತಿಪರಿಚಯವನ್ನು ಅನೇಕ ಲೇಖಕರು ಮಾಡಿಕೊಟ್ಟಿದ್ದಾರೆ. ಉಳಿದ ಮುಕ್ಕಾಲು ಭಾಗದಲ್ಲಿ ಬೇರೆ ಬೇರೆ ಲೇಖಕರಿಂದ ಬರೆಯಲ್ಪಟ್ಟ ಪ್ರಬಂಧಗಳನ್ನು ಒಟ್ಟುಮಾಡಿ "ಪ್ರಬಂಧಾಂಜಲಿ" ಎಂಬ ಪ್ರಧಾನ ಹೆಸರಿಟ್ಟು, ಆ ಪ್ರಬಂಧಗಳನ್ನು ಸಾಹಿತ್ಯ, ಕಾವ್ಯಮೀಮಾಂಸೆ, ಛಂದಸ್ಸು, ಭಾಷಾವಿಜ್ಞಾನ, ಇತಿಹಾಸ, ಕಲೆ ಮತ್ತು ಜಾನಪದ, ಧರ್ಮ-

ತತ್ವವಿಚಾರ ಎಂಬುದಾಗಿ ವರ್ಗೀಕರಿಸಿ, ಅದೇ ಅನುಕ್ರಮದಲ್ಲಿ ಪ್ರಕಟಿಸಲಾಗಿದೆ. ಮೇಲಿನ ಉಪವರ್ಗೀಕರಣಕ್ಕೆ ಒಗ್ಗಿಕೊಳ್ಳದ ಕೆಲವು ಪ್ರಬಂಧಗಳನ್ನು "ಸಂಕೀರ್ಣ" ಎಂದು ವರ್ಗೀಕರಿಸಿ ಅಚ್ಚು ಮಾಡಲಾಗಿದೆ. ಕಡೆಯಲ್ಲಿ ಇಪ್ಪತ್ತೈದು ಪುಟಗಳ ಅನುಬಂಧವನ್ನು ಸೇರಿಸಿ ಅದರಲ್ಲಿ ತೀ.ನಂ.ಶ್ರೀ ಅವರ ಜೀವನ ಪರಿಚಯ, ಅವರ ಜೀವನದ ಮಹತ್ವದ ಘಟನೆಗಳು, ಅವರ ಪತ್ರವ್ಯವಹಾರ ಹಾಗೂ ಅವರ ರಚನೆಗಳ ಪಟ್ಟಿ ಇದೆ. ದಿವಂಗತರ ಕಾರ್ಯ ಚಟುವಟಿಕೆ ಹಾಗೂ ತಮ್ಮ ಸಂಸಾರದವರೊಂದಿಗೆ ಅವರು ಇರುವ ಅನೇಕ ಚಿತ್ರಗಳನ್ನು ಸಹ ಇದರಲ್ಲಿ ಮುದ್ರಿಸಲಾಗಿದೆ. ಈ ಸಂಪುಟದ ಸಂಪಾದಕರು, "ಈ ಸ್ಮಾರಕ ಗ್ರಂಥವು ತೀನಂಶ್ರೀ ಅವರ ಜೀವನ ಹಾಗೂ ಸಾಧನೆಗಳನ್ನು ತಿಳಿಸುವ ಗ್ರಂಥವಾಗಿರುವುದು ಮಾತ್ರವಲ್ಲದೆ ಒಂದು ಅತ್ಯುತ್ಕೃಷ್ಟ ಪರಾಮರ್ಶನ ಗ್ರಂಥವೂ (ರೆಫೆರನ್ಸ್ ಬುಕ್) ಆಗಬೇಕೆಂಬುದನ್ನು ನಮ್ಮ ಬಯಕೆ" ಎಂಬ ಗ್ರಂಥದ ಗುರಿಯನ್ನು ತಿಳಿಸಿದ್ದಾರೆ. ಎಪ್ಪತ್ತೈದಕ್ಕೂ ಮೀರಿ ವಿದ್ವಾಂಸರು ರಚಿಸಿರುವ ಪ್ರಬಂಧಗಳು ಇದರಲ್ಲಿ ಇವೆ. ಅವರಲ್ಲಿ ಆರೆಂಟು ಜನ ಬಿಟ್ಟರೆ ಉಳಿದವರೆಲ್ಲ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿರುವವರೇ.

ಶ್ರೀಗಳಾದ ಎ.ಎನ್. ಮೂರ್ತಿರಾವ್, ಪು.ತಿ.ನ, ಗೊರೂರು, ಡಾ॥ ಮಾಸ್ತಿ, ತೀನಂಶ್ರೀ ಅವರ ಮಗಳು ಶ್ರೀಮತಿ ನಾಗರತ್ನ ಅವರುಗಳು ತೀನಂಶ್ರೀ ಅವರ ವ್ಯಕ್ತಿಪರಿಚಯ ಸ್ವಭಾವಗಳನ್ನು ನಿರೂಪಿಸಿದ್ದಾರೆ. ಯಾರ ಬಗೆಗೆ ಬರೆಯಲಾಗುತ್ತದೆಯೋ ಅವರ ಬಗೆಗಿಂತ ತಮ್ಮ ಬಗೆಗೇ ಲೇಖಕರು ಬರೆದು ಕೊಳ್ಳುವುದು ಸಾಮಾನ್ಯವಾಗಿ ಹೆಚ್ಚು-ಇಲ್ಲಿ ಅದಿಲ್ಲದಿಲ್ಲವಾದರೂ ವ್ಯಕ್ತಿ ಪರಿಚಯ ಓದುಗನಿಗಾಗುತ್ತದೆ. ಅವರ ಕೃತಿಗಳ ಬಗೆಗೆ ಆಳವಾಗಿ ಅಭ್ಯಾಸ ಮಾಡಿದ ಲೇಖನಗಳು ಇದರಲ್ಲಿ ಇವೆ. ಅವರು ಪ್ರತಿಭಾವಂತ ಕವಿಯಾಗಬಹುದಾಗಿದ್ದರೂ, ಅವರದು ಸೃಜನಶೀಲ ವ್ಯಕ್ತಿತ್ವವಾಗಿದ್ದರೂ, ಆಳವಾದ ಅಧ್ಯಯನದಿಂದ ಪಾಂಡಿತ್ಯವನ್ನು ಗಳಿಸುವತ್ತ ಅವರ ಒಲುಮೆ ಮೂಡಿದ್ದರಿಂದ ಕಾವ್ಯಮೀಮಾಂಸೆ, ಭಾಷಾಶಾಸ್ತ್ರ, ವಿಮರ್ಶೆ, ಗ್ರಂಥಸಂಪಾದನೆಗೆ ಅವರು ತೋರಿದ ಮಾರ್ಗದರ್ಶನ, ಮಾಡಿದ ಕೆಲಸ ಎಷ್ಟು ಶಾಶ್ವತವಾದುದೆಂಬುದು ಇಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ.

ಸಾಹಿತ್ಯದ ಬೆಳವಣಿಗೆ ಕುರಿತು ಬಹಳಹಿಂದೆ ಮಡಿಕೇರಿಯಲ್ಲಿ ಶ್ರೀ ಟಿ.ಎಸ್. ವೆಂಕಣ್ಣಯ್ಯನವರು ಮಾಡಿದ ಭಾಷಣದ ಸಾರಾಂಶ-ಶ್ರೀ ಅನಂತ ಪದ್ಮನಾಭರಾಯರು ಬರೆದುಕೊಂಡುದು-ಅಚ್ಚಾಗಿದೆ. ತೀನಂಶ್ರೀ ಅವರಲ್ಲಿ ಭಾಷಾಸಕ್ತಿ ಕೆರಳಿಸಿದ ಗುರುವಾಣಿ ಇದು ಎಂಬ ಕಾರಣದಿಂದ ಅದಕ್ಕೆ ಇಲ್ಲಿ ಸ್ಥಳವಿದೆ. ಮಾನವನಲ್ಲಿನ ಸೌಂದರ್ಯೋಪಾಸನ ಪ್ರವೃತ್ತಿ, ಶೃಂಗಾರಗಳ ಹಸನಿಗೆ ಕವಿಕಲ್ಪನೆಯೇ ಸಾಧನವೆಂಬ ಭಾವನೆಯನ್ನು ಶ್ರೀರಂಗರು "ಸಾಹಿತ್ಯ ಮತ್ತು ಶೃಂಗಾರ"ದಲ್ಲಿ ಮೂಡಿಸಿದ್ದಾರೆ. ರಾಮಾಯಣದ ಕಥಾವಸ್ತುವಿನ ಬಗೆಗೆ ವಿಚಾರದಿಂದ ತುಂಬಿದ ಸುಬ್ಬರಾಯಾಚಾರ್ಯರ ಲೇಖನ ಅಭ್ಯಾಸಿಗಳಿಗೆ ತುಂಬ ಉಪಯುಕ್ತವಾಗಿದೆ. ಶಿವಕೋಟ್ಯಾಚಾರ್ಯರ ಕಾಲ, ದೇಶಗಳ ಬಗೆಗೆ ದೇವೀರಪ್ಪನವರು ಬರೆಯುತ್ತಾ, ಅವನು ಏಳನೆಯ ಶತಮಾನದವನೆಂದು ಭಾವಿಸಬಹುದೆನ್ನುತ್ತಾರೆ. ಅಂದರೆ, ಇವರು ರಚಿಸಿರುವ ಗದ್ಯಗ್ರಂಥ 'ವಡ್ಡಾರಾಧನೆ'ಯೇ ಉಪಲಬ್ಧವಾದ ಆದಿಗ್ರಂಥವೂ, ಇವರೇ ಆದಿ ಲೇಖಕರೂ ಆಗುತ್ತಾರೆ. ಇದೇ ರೀತಿ, ಶಿವಣ್ಣ

ನವರು ತೋಂಟದ ಸಿದ್ಧಲಿಂಗಾರ್ಯರ ಕಾಲ ಹದಿನಾರನೆಯ ಶತಮಾನದ ನಡುವಿನ ಕಾಲವೆಂದು ಸೂಚಿಸಿ, ಇದಕ್ಕೆ ಮೊದಲು ಎಂ.ಆರ್.ಶ್ರೀ ಮತ್ತು ಎಲ್. ಬಸವರಾಜು ಅವರು ಸೂಚಿಸಿದ್ದ ಅಭಿಪ್ರಾಯಕ್ಕೆ ಬೆಲೆ ನೀಡಲು ನಂಜನಗೂಡಿನ ಎರಡು ಶಾಸನಗಳ ಆಧಾರವನ್ನೂ ಕೊಟ್ಟಿದ್ದಾರೆ. ಪ್ರಾಣಿಗಳನ್ನು ಕಥಾ ನಿರೂಪಣೆಯಲ್ಲಿ ಕವಿಗಳು ಉಪಯೋಗಿಸಿದ ಬಗೆಯನ್ನು "ಕಿಳಿಪಾಟ್ಟು"ವಿನಲ್ಲಿ ವಿವರಿಸಲಾಗಿದೆ. "ತಿರುಗಿ ಬಂದೆ"ಯಲ್ಲಿ ನವ್ಯಕಾವ್ಯದ ಸಾಲುಜೋಡಣಾ ವೈಚಿತ್ರ್ಯಕ್ಕೂ ರೂಪಧ್ವನಿಗಳ ಕಲ್ಪನೆಯೇ ಆಧಾರವೆಂಬ ಮೆಚ್ಚಿಗೆಯ ಮುಸುಕಿನಲ್ಲಿ ಪ್ರಾಚೀನಕ್ಕೆ ಕಟುಕಿ ಅಡಗಿದೆ. ನವ್ಯತೆಯ ಲೈಂಗಿಕ ವಿಷಯ ಪ್ರತಿಪಾದನಾ ರೀತಿಯೇ ಶ್ರೇಷ್ಠ, ಪ್ರಾಚೀನ ರೀತಿ "ಸೃಷ್ಟಿಶೀಲವಲ್ಲ" ಎಂದು "ಮಲೆಗಳಲ್ಲಿ ಮದುಮಗಳು" ಕೃತಿಯ ಬಗೆಗೆ ನವ್ಯರು ಮಾಡಿದ ವಿಮರ್ಶೆಗೆ ಉತ್ತರವೆಂಬಂತೆ ಇಲ್ಲಿ ಆ ವಿಮರ್ಶೆಯ ವಿಶ್ಲೇಷಣೆ, ಕೃತಿಯಿಂದ ಉದ್ಧರಿಸಿದ ಉದಾಹರಣೆಯ ಮೂಲಕ ಮಾಡಲಾಗಿದೆ. ಗಯನ ಕಥೆ ಕನ್ನಡ ಸಾಹಿತ್ಯದಲ್ಲಿ ಹೇಗೆ ಹೇಗೆ ರೂಪಧರಿಸಿ ನಿಂತಿದೆ ಎಂಬ ಪರಿಚಯಾತ್ಮಕ ಲೇಖನವು ಸಾಹಿತ್ಯ ಚರಿತ್ರೆಗೆ ಪೂರಕವಾದ ಲೇಖನ. "ಮನ್ಮಥ"ನು ಕನ್ನಡ ಸಾಹಿತ್ಯದಲ್ಲಿ ನಾಯಕನಾಗಿ, ಪ್ರಾಸಂಗಿಕ ಪಾತ್ರಧಾರಿಯಾಗಿ ಹೇಗೆ ಹೇಗೆ ಪ್ರಕಟಗೊಂಡಿದ್ದಾನೆಂಬುದರ ಚಿತ್ರಣವನ್ನು ಜಿ. ವರದರಾಜರಾಯರು ಚೊಕ್ಕವಾಗಿ ಮಾಡಿದ್ದಾರೆ.

ಕಾವ್ಯಮೀಮಾಂಸೆಯ ಬಗೆಗೆ ಅನಾದೃಶವಾದ ಕೃತಿಯನ್ನು ನಾಡಿಗೆ ಕೊಟ್ಟ ತೀನಂಶ್ರೀ ಅವರ ಸ್ಮರಣ ಗ್ರಂಥದಲ್ಲಿ ಕಾವ್ಯಮೀಮಾಂಸೆಗೆ ಮೀಸಲು ಸ್ಥಾನ ನೀಡುವುದು ಅವಶ್ಯಕ ಯೋಗ್ಯ. "ಸದೂರ" ಎಂಬುದನ್ನು ಜಿ. ಹನುಮಂತರಾಯರು ವಿಶ್ಲೇಷಿಸಿದ್ದಾರೆ. "ಸಾಧಾರಣೀಕಣ"ದ ಬಗೆಗೆ ಬರೆವಾಗ ಕೆ.ವಿ. ನಾರಾಯಣ ಅವರು ಸಹ ಸದೂರದ ಬಗೆಗೆ ಸೂಚಿಸಿದ್ದಾರೆ. ಶಬ್ದ, ಅರ್ಥಗಳು ವ್ಯಂಜಕ ಪೂರ್ಣವಾದಾಗ ಕಾವ್ಯ ಭಾಷೆಯಾಗುತ್ತದೆ ಎಂಬುದನ್ನು ಡಾ॥ ಕೆ. ಕೃಷ್ಣಮೂರ್ತಿ ಅವರೂ, ಔಚಿತ್ಯದ ಪರಿಜ್ಞಾನವೇ ಕವಿಯ ಜೀವಾಳ ಎಂಬುದನ್ನು ನರಹರಿಯವರೂ ನಿರೂಪಿಸಿದ್ದಾರೆ. ಎಷ್ಟೇ ನವ್ಯವಾದರೂ, ದಿನಬಳಕೆಯ ಭಾಷೆಯೇ ಕಾವ್ಯದ ಭಾಷೆಯಾಗಲಿ ಎಂಬ ಬಯಕೆ ಅಸಾಧುವಲ್ಲದಿದ್ದರೂ ಸಮಾನಾರ್ಥ ಪದಗಳು ಹಲವಿದ್ದರೂ ಕವಿ ಯಾವುದೋ ಒಂದು ಪದವನ್ನೇ ಆಯುತ್ತಾನೆ. ದಿನಬಳಕೆಯಲ್ಲಿ ಯಾವ ಪದವೂ ಬಯಸಿದ ಕೆಲಸವನ್ನು ಮಾಡಬಹುದಾದರೂ ಕವಿಗೆ ಮಾತ್ರ ಎಲ್ಲ ಪದಗಳೂ ಉಪಯೋಗಕ್ಕೆ ಬರುವುದಿಲ್ಲ. ಅವನಿಗೆ ಸಂವೇದನೆ ಅಭಿವ್ಯಕ್ತವಾಗುವ ಪದವೇ ಆಗಬೇಕು. ಅಷ್ಟರಮಟ್ಟಿಗೆ ಅದು ದಿನಬಳಕೆಯ ಭಾಷೆ ಆಗುವುದಿಲ್ಲ ಎಂದು ಗಿರಿಡ್ಡಿ ಗೋವಿಂದರಾಜರು ಹೇಳುತ್ತಾರೆ. "ವ್ಯಕ್ತಿತ್ವನಿರಸನ ತತ್ವ"ವನ್ನು ವಿವರಿಸುತ್ತ ತಿಪ್ಪೇರುದ್ರಸ್ವಾಮಿಗಳು, ಎಲಿಯಟ್ ಮಹಾಶಯನ ಅನೇಕ ಭಾವನೆಗಳು ಭಾರತೀಯ ಕಾವ್ಯ ಮೀಮಾಂಸಕರ ಅಭಿಪ್ರಾಯಗಳಿಗೆ ಸಂವಾದಿಯಾಗಿವೆ ಎಂಬುದನ್ನು ಪ್ರತಿಪಾದಿಸಿದ್ದಾರೆ. ಅಪ್ಪಯ್ಯ ದೀಕ್ಷಿತರು "ಪ್ರಸ್ತುತಾಂಕುರ" ಎಂಬುದು ಅಲಂಕಾರ ಎಂದು ಹೇಳಿರುವುದನ್ನು ಅಭಿನವಗುಪ್ತರು "ಧ್ವನಿ" ಎಂದು ಪರಿಗಣಿಸಿರುವ ವಿಚಾರವನ್ನು ಶಿವಕುಮಾರ ಸ್ವಾಮಿಗಳು ಚರ್ಚಿಸಿದ್ದಾರೆ. ಕೃಷ್ಣಪರಮೇಶ್ವರ ಭಟ್ಟರಿಂದ "ವಕ್ರೋಕ್ತಿ"ಯ ವಿಚಾರವಾಗಿ ಚರ್ಚೆಯೂ, ಕಾವ್ಯಮೀಮಾಂಸೆ ಮತ್ತು ವೇದಾಂತಗಳ

ಸಮನ್ವಯ ಪ್ರಯತ್ನ ರಾಘವಾಚಾರ್ಯರಿಂದಲೂ ನಡೆದಿದೆ. ಒಟ್ಟಿನ ಮೇಲೆ ಈ ವಿಭಾಗದಲ್ಲಿನ ಲೇಖನಗಳು ಆಳವಾದ ಹಾಗೂ ತುಲನಾತ್ಮಕ ಅಭ್ಯಾಸಗಳಿಂದ ಕೂಡಿ ಉಪಯುಕ್ತವಾಗಿವೆ.

ಅಂತ್ಯ ಪ್ರಾಸ ಸ್ಥಾನದಲ್ಲಿ ಶಬ್ದವಿಕಾರ ಕನ್ನಡದಲ್ಲಿ ಇಲ್ಲ, ಇಂಗ್ಲಿಷ್‌ನಲ್ಲಿ ಇದೆ–ಕನ್ನಡದಲ್ಲೂ ಪ್ರಯೋಗ ಮಾಡಬಹುದು ಎಂದು ಬಿಳಿಗಿರಿ ಸೂಚಿಸುತ್ತಾರೆ. ಚಿಟಗುಪ್ಪಿಯವರು ಛಂದೋಂಬುಧಿಯಲ್ಲಿನ ವೃತ್ತಗಳ ಸಂಖ್ಯಾವಿವರಣೆ ಇತ್ತಿದ್ದಾರೆ. ವ್ಯಾಕರಣ ನಿಯಮಮೀರಿದ ಆಡುಭಾಷೆಯಿಂದಾಗಿ ಆಗುವ ವಚನಪಲ್ಲಟ ಸಾಹಿತ್ಯದಲ್ಲಿಯೂ ನೆಲೆಗೊಂಡಿರಬಹುದಾದ ಬಗೆಯನ್ನು ಅರಿವು ಮಾಡಿಕೊಟ್ಟಿದ್ದಾರೆ, ರಂ.ಶ್ರೀ.ಮುಗಳಿಯವರು. ಹವ್ಯಕ ಜನಾಂಗ ನುಡಿವ ಕೆಲವು ಪದಗಳ ರೂಪ ನಿಷ್ಪತ್ತಿಯನ್ನು ಗುರುತಿಸುವ ಪ್ರಯತ್ನವನ್ನು ಮರಿಯಪ್ಪ ಭಟ್ಟರು ಮಾಡಿದ್ದಾರೆ. ಅವರು ಉದಾಹರಿಸಿರುವ ಅನೇಕ ಪದಪಲ್ಲಟಗಳಲ್ಲಿ ವ್ಯಂಜನಗಳನ್ನು ಉಚ್ಚರಿಸದೆ ಬರೀ ಸ್ವರ ಉಚ್ಚರಿಸುವುದೇ ಮುಖ್ಯ ಕಾರಣವೆಂದು, ಲೇಖನದಲ್ಲಿ ಆ ಮಾತು ಇಲ್ಲದಿದ್ದರೂ, ಓದುಗನಿಗೆ ಹೊಳೆಯುತ್ತದೆ. “ಲಿಂಗಮೊಂಬತ್ತು ತೆರಂ” ಎಂಬ ಕೇಶಿರಾಜನ ಉಕ್ತಿಯ ಬಗೆಗೆ ಸುದೀರ್ಘವಾಗಿ, ಸೋದಾಹರಣವಾಗಿ ಚರ್ಚಿಸಿ ಕೆ. ಕುಶಾಲಪ್ಪ ಗೌಡ ಅವರು, ಅದು ಒಂಬತ್ತು ತೆರವಷ್ಟೇ ಅಲ್ಲ “ಪಲತೆರಂ” ಎಂಬ ವಿಶಾಲಾರ್ಥಕ್ಕೆ ಕೊಂಡೊಯ್ದು ಚಿಂತನಕ್ಕೆ ಉಪಯೋಗವಾದ ಲೇಖನ ಬರೆದಿದ್ದಾರೆ. ಹವ್ಯಕರ ಭಾಷೆ, ಸೋಲಿಗರ ಭಾಷೆ, ಕನ್ನಡದಲ್ಲಿ ಸಂಸ್ಕೃತ ಪ್ರತ್ಯಯಗಳು, ಕನ್ನಡ ಅಪಭ್ರಂಶಗಳ ಕೊಳುಕೊಡುಗೆ ಮೊದಲಾದ ಲೇಖನಗಳು ಭಾಷಾಶಾಸ್ತ್ರದ ಅಧ್ಯಯನಕ್ಕೆ ತುಂಬ ನೆರವಾಗುತ್ತವೆ.

ದೊಡ್ಡೇರಿ ಕಾಳಗದ ವಿಷಯ ಬರೆಯುತ್ತ ಪ್ರಸಿದ್ಧ ಇತಿಹಾಸಜ್ಞರಾದ ಜಿ.ಎಸ್. ದೀಕ್ಷಿತ್ ಅವರು, ನಮ್ಮ ಜನರಿಗೆ, “ಇತಿಹಾಸ ಪ್ರಜ್ಞೆ ಇಲ್ಲವೆಂದು ಹೇಳುವುದು ಸರಿಯಲ್ಲ” ಎಂದು ಅಭಿಪ್ರಾಯಪಡುತ್ತಾರೆ. ಆದರೆ ಶಿವರಾಮ ಕಾರಂತರು “ಚರಿತ್ರೆ ಮತ್ತು ನಾವು” ಎಂಬ ಲೇಖನದಲ್ಲಿ “ನಮಗಿರುವ ಚಾರಿತ್ರಿಕ ದೃಷ್ಟಿ ದೇಶವನ್ನು ಕುರಿತ ಒಣ ಅಭಿಮಾನದ ದೃಷ್ಟಿಯೊಂದೇ” ಎಂದು ಘೋಷಿಸುತ್ತಾರೆ. ಇದೇ ಇತಿಹಾಸ ಪ್ರಜ್ಞೆಯ ಬಗೆಗೆ ಇನ್ನೊಬ್ಬ ಇತಿಹಾಸ ಪ್ರಾಧ್ಯಾಪಕರಾದ ಚಿದಂಬರ ಕುಲಕರ್ಣಿ ಅವರು “ಗ್ರೀಕ್–ರೋಮನ್ ನಾಗರಿಕರಲ್ಲಿದ್ದ ಇತಿಹಾಸ ಪ್ರಜ್ಞೆ ಭಾರತೀಯರಲ್ಲಿ ಇದ್ದಿಲ್ಲ. ಅವರಿಗೆ ಇತಿಹಾಸವೆಂಬುದೇ ಗೊತ್ತಿರಲಿಲ್ಲ ಎಂಬುದೊಂದು ವಾದವಿತ್ತು. ಈ ವಾದದಲ್ಲಿ ಹುರುಳಿಲ್ಲವೆಂಬುದು ಇತ್ತೀಚಿನ ಅಭ್ಯಾಸದಿಂದ ಸ್ಪಷ್ಟವಾಗಿದೆ” ಎನ್ನುತ್ತಾರೆ. “ಯಾವ ದಿನ ನಾವು ರಾಮಾಯಣ ಮಹಾಭಾರತಗಳನ್ನು ನಮ್ಮ ಇತಿಹಾಸವೆಂದು ಒಪ್ಪಿಕೊಂಡೆವೋ, ಅಂದೇ ನಾವು ಚಾರಿತ್ರಿಕ ಸತ್ಯವನ್ನು ಬಿಟ್ಟುಕೊಟ್ಟೆವು” ಎಂದು ಶಿವರಾಮ ಕಾರಂತರು ಹೇಳಿದರೆ, ಚಿದಂಬರ ಕುಲಕರ್ಣಿಯವರು “ಒಂದು ರೀತಿಯಲ್ಲಿ ಅದು ಇತಿಹಾಸಕ್ಕೆ ಮಾದರಿಯಾಯಿತು” ಎನ್ನುತ್ತಾರೆ. ಇಲ್ಲಿ ಅದು ಎಂದರೆ “ಮಹಾಭಾರತ”ವೆಂದೂ, “ರಾಮಾಯಣ”ವು ಸಹ ಅಂತೆಯೇ ಪರಿಗಣಿಸಬಹುದು ಎಂದು ಕುಲಕರ್ಣಿ ಅವರ ಅಭಿಪ್ರಾಯ. ಶ್ರೀ ಎನ್.ಲಕ್ಷ್ಮೀನಾರಾಯಣರಾಯರು” “ಪೊಲೆಕೇಶಿ” ಎಂಬುದೇ ಸರಿಯಾದ ಪದ ಎಂದು ರೂಢಿಯಲ್ಲಿರುವ “ಪುಲಿಕೇಶಿ”ಯ ಬಗೆಗೆ ವಿವೇಚಿಸಿದ್ದಾರೆ. ಹೊಸಬೆಟ್ಟು ಸೀತಾರಾಮಾಚಾರ್ಯರು ತೊರವೆ ರಾಮಾಯಣದಲ್ಲಿ ಇತಿಹಾಸದ ಸುಳಿವನ್ನು ಹುಡುಕ

ಹೊರಟು, ನಮ್ಮವರು ಇತಿಹಾಸದತ್ತ ಒಂದು ಕುಡಿನೋಟವನ್ನಾದರೂ ಇಟ್ಟಿದ್ದರು ಎಂಬ ಭಾವನೆಯನ್ನು ಮೂಡಿಸುತ್ತಾರೆ. ಬಾದಾಮಿ ಶಾಸನದ ಅರ್ಥವನ್ನು ಸಮಂಜಸವಾಗಿ ವೆಂಕಟಾಚಲ ಶಾಸ್ತ್ರಿಗಳು ಮಾಡಿದ್ದರೆ, ರಘುನಾಥ ಭಟ್ಟರು ರಾಷ್ಟ್ರಕೂಟ ವಂಶಾವಳಿಯಲ್ಲಿ ಕಳಚಿದ್ದ ಕೊಂಡಿಯನ್ನು ಕೂಡಿಸಲು ಆಧಾರ ಕೊಟ್ಟಿದ್ದಾರೆ. ವಾಸ್ತುಶಿಲ್ಪ, ಮೂರ್ತಿಶಿಲ್ಪಗಳ ನಿದರ್ಶಕ ಲೇಖವನ್ನು ಬಿ.ಕೆ. ಗುರುರಾಜರಾಯರು ಮತ್ತು ಎ. ಸುಂದರ ಬರೆದಿದ್ದಾರೆ. ಚಂಗಾಳ್ವರ ಬಗೆಗೆ ಬಾ.ರಾ. ಗೋಪಾಲ್ ಅವರೂ, ತುಳುವ ವಂಶದ ಮೂಲಸ್ಥಾನದ ಬಗೆಗೆ ಸೂರ್ಯನಾಥ ಕಾಮತ್ ಅವರೂ ಬರೆದಿದ್ದಾರೆ.

ಕಲೆ ಮತ್ತು ಜಾನಪದ ವಿಭಾಗದಲ್ಲಿ ಷ. ಶೆಟ್ಟರ್ ಅವರು ತೀರ್ಥಂಕರರನ್ನು ಗುರುತಿಸಲು ಯಕ್ಷಯಕ್ಷಿಯರ ಮೂರ್ತಿಗಳು ಪ್ರಧಾನ ಸಹಾಯಮೂರ್ತಿಗಳೆಂಬುದನ್ನು ತಿಳಿಸಿ ಕನ್ನಡ ಕವಿಗಳು ಅವುಗಳ ರೂಪರೇಖೆ ವಿನ್ಯಾಸಗಳನ್ನು ಹೇಗೆ ದರ್ಣಿಸಿದ್ದಾರೆ, ಅದಕ್ಕೆ ಹೊಂದುವ ಶಿಲ್ಪ ಹೇಗೆ ರೂಪಿತವಾಗಿದೆ ಎಂಬುದನ್ನು ತಿಳಿಸಿದ್ದಾರೆ. ರಂಗಭೂಮಿಯ ಚಟುವಟಿಕೆಗೆ ತಿರುವು ಕೊಟ್ಟ ಪ್ರಯೋಗಶೀಲ ಬ್ರೆಕ್ಟ್‌ನ ಮುಕ್ತ ರಂಗಭೂಮಿಯ ಬೆಳವಣಿಗೆಯನ್ನು ಎಚ್.ಕೆ. ರಾಮಚಂದ್ರ ಮೂರ್ತಿ ಅವರು ತಿಳಿಸಿದ್ದಾರೆ. ಜಾನಪದ ವಿಭಾಗದಲ್ಲಿ ಎಲ್.ಜಿ. ಸುಮಿತ್ರ ಅವರು ಸೌರಾಷ್ಟ್ರದ ಜಾನಪದ ಗೀತೆಗಳ ಪರಿಚಯ ಮಾಡಿಸಿ ಇಂದಿಗೂ ಅಲ್ಲಿನ ಜನಪದವಿಡೀ ಸಾಮೂಹಿಕ ನೃತ್ಯದಲ್ಲಿ ಪಾಲುಗೊಳ್ಳುವ ಅಂಶವನ್ನು ತಿಳಿಸಿದ್ದಾರೆ. ಆಣೀಪೀಣೀ ಜಾನಪದದ ಬಗೆಗೆ ನಿದರ್ಶನಾತ್ಮಕ ಗೀತ ಸಂಗ್ರಹವನ್ನು ಎಂ.ಎಂ. ಕಲಬುರ್ಗಿ ಅವರು ಕೊಟ್ಟಿದ್ದಾರೆ. ಒಗಟು ಎಂಬ ಪದ ಆರೂಪ ಹೇಗೆ ತಾಳಿರಬಹುದು ಅದಕ್ಕೆ ಪರ್ಯಾಯ ಪದಗಳಾವುವು ಎಂಬುದನ್ನು ಪಂಡಿತಾರಾಧ್ಯರು ವಿವೇಚಿಸಿದ್ದಾರೆ.

ತಿಬೆಟ್ ಸಂಪ್ರದಾಯಕ್ಕೆ ಭಾರತದ ಸಂಪರ್ಕ ಹೇಗೆ ಕಾರಣವಾಯಿತು, ಅದರ ಧರ್ಮಗುರು ಲಾಮನೇ ಹೇಗೆ ಆಡಳಿತಾಧ್ಯಕ್ಷನೂ ಆದನೆಂಬುದನ್ನು ಎಸ್.ಕೆ. ರಾಮಚಂದ್ರರಾಯರು ತಿಳಿಸಿದ್ದಾರೆ. ಪಿ.ವಿ. ನಾರಾಯಣ ಅವರು ವೀರಶೈವ ಪ್ರತಿಪಾದಕರಲ್ಲಿನ ಮೂಲ ಸರಿಸಮ ಭಾವನೆ ಉಳಿದು ಬರಲು ಸಾಧ್ಯವಾಗಲಿಲ್ಲವೆಂಬ ಭಾವನೆ ತಾಳಿ, ಅದಕ್ಕೆ ಶತಮಾನಗಳಿಂದ ಅಂಟಿನಿಂತ ಸಂಸ್ಕಾರ ಕಾರಣ ಇರಹುದೆಂದು ಶಂಕಿಸುತ್ತಾರೆ. ನಿರ್ವಾಣ ಪದದ ನಿಷ್ಪತ್ತಿಯನ್ನು ಮನ ನಾಟುವಂತೆ ಬನ್ನಂಜೆ ಗೋವಿಂದಾಚಾರ್ಯರು ವಿವರಿಸಿದ್ದಾರೆ. ತಮಿಳಿನ "ತೇವಾರ"ವು ಕನ್ನಡದಿಂದ ಪಡೆದುಕೊಂಡ ಮಾತು ಎಂದು ಎಂ. ಚಿದಾನಂದಮೂರ್ತಿಯವರು ವಿವೇಚಿಸಿದ್ದಾರೆ.

ಜೊತೆಗೆ ಕೆಲವು ಸಂಕೀರ್ಣ ಲೇಖನಗಳೂ ಇವೆ. ಇಲ್ಲಿ ಹಂಪನಾ ಅವರು ಸೂಚಿಸಿರುವ ತಿದ್ದುಪಡಿಗಳಷ್ಟೇ ಅಲ್ಲ. ಇನ್ನೂ ಅನೇಕ ತಿದ್ದುಪಡಿಗಳನ್ನು ಕವಿಚರಿತ್ರೆಯಲ್ಲಿ ಮಾಡಬೇಕಾಗುತ್ತದೆ. ಹಂಪನಾ ಅವರು ತಮ್ಮ ಅಧ್ಯಯನಕ್ಕೆ ನಿಲುಕಿದ ವಿಷಯಗಳಷ್ಟನ್ನು ಮಾತ್ರ ಸೂಚಿಸಿದ್ದಾರೆ. ನಾಡಿನ ಬೇರೆ ಬೇರೆ ವಿದ್ವಾಂಸರು ಕವಿಕಾಲ ವಿಚಾರದಲ್ಲಿ ಹೊಸ ಹೊಸ ಸಂಶೋಧಿತ ವಿಚಾರವನ್ನು ಮಂಡಿಸುತ್ತ ಬಂದಿದ್ದಾರೆ. ಅವೆಲ್ಲ ಕವಿಚರಿತ್ರೆಯಲ್ಲಿ ಸ್ಥಳ ಪಡೆಯಬೇಕು. ಸಮಾನಾವಕಾಶ ಕುರಿತ ಭೈರಪ್ಪನವರ ಲೇಖನ ವ್ಯಾಪಕವಾದ ದೃಷ್ಟಿಯಿಂದ ಕೂಡಿದೆ.

ತೀನಂಶ್ರೀ ಅವರ ಜೀವನ ಪರಿಚಯ ಹೆಚ್ಚು ವಿಸ್ತಾರವಾಗಿರಬಹುದಾಗಿತ್ತು. ತೀನಂಶ್ರೀ ಅವರ ಪತ್ರಗಳ ಬಗೆಗೆ ಶ್ರೀ ದೇಶಿಕಾಚಾರ್ಯರು ಬರೆದಿರುವ ಲೇಖನ ಕಣ್ಣುತೆರೆಸುವ ಲೇಖನ. ಇತಿಹಾಸ, ಕಲೆಗಳಿಗೆ ಸಂಬಂಧಪಟ್ಟ ಲೇಖನಗಳಿಗಿಂತ ಸಾಹಿತ್ಯ, ಕಾವ್ಯಮೀಮಾಂಸೆ, ಛಂದಸ್ಸು, ಭಾಷಾಶಾಸ್ತ್ರಗಳ ಸಂಬಂಧದ ಲೇಖನಗಳು ಹೆಚ್ಚು ಆಳವಾಗಿವೆ. ಸಂಪಾದಕರು ಸೂಚಿಸಿರುವಂತೆ ಇದು ಒಳ್ಳೆಯ ಪರಾಮರ್ಶನ ಗ್ರಂಥವೇ ನಿಜ. ಆದರೆ ಇಷ್ಟು ಬೆಲೆಯ ಈ ಉತ್ತಮ ನೆನಪುಕಾಣಿಕೆ ಗ್ರಂಥವನ್ನು ಕೊಂಡು ಓದಿ ಉಪಯೋಗ ಪಡೆಯುವವರೆಷ್ಟು ಮಂದಿ? ತೀನಂಶ್ರೀ ಅಂತಹ ಘನಪಂಡಿತರ ನೆನಪು ಕಾಣಿಕೆ ಅವರ ಸಂಸಾದವರ ಪ್ರಯತ್ನ ದಿಂದಲೇ ಬರುವಂತಾಯಿತು ಎಂದರೆ, ಅವರಿಂದ ಕಲಿತ ವಿದ್ಯಾರ್ಥಿವೃಂದ ತನ್ನ ಕರ್ತವ್ಯ ಮಾಡಲಿಲ್ಲ ಎನಿಸುತ್ತದೆ, ಲೇಖನ ಬರೆದು ಕೊಡುವುದಷ್ಟೇ ಕರ್ತವ್ಯ ಪಾಲನೆ ಆಗುವುದಿಲ್ಲ. ಕನ್ನಡಿಗರ ಅಭಿಮಾನ ಎಷ್ಟಿದೆ ಎಂಬುದಕ್ಕೆ ಇದು ಸಾಕ್ಷಿ. ಹಿರಿಯರ ಹೆಸರನ್ನು ಸ್ಮರಿಸಿದ ಇದರ ಪ್ರಕಾಶನದ ಹೊಣೆ ಹೊತ್ತವರು ಆರ್ಥಿಕವಾಗಿ ನಷ್ಟಕ್ಕೆ ಗುರಿಯಾಗಬಾರದು. ಅದೊಂದೇ ಕಾರಣವಲ್ಲ. ಅದಕ್ಕಿಂತ ಪ್ರಬಲವಾದ ಕಾರಣ ಈ ಗ್ರಂಥಕ್ಕಿರುವ ಶಾಶ್ವತ ಮೌಲ್ಯ. ಅದರಿಂದ ವಿಶ್ವವಿದ್ಯಾನಿಲಯಗಳು, ರಾಜ್ಯದ ಎಲ್ಲ ಸರ್ಕಾರಿ ಕಾಲೇಜುಗಳು, ಎಲ್ಲ ಪ್ರೌಢಶಾಲೆಗಳು ಈ ಗ್ರಂಥವನ್ನು ಕೊಂಡು ಪುಸ್ತಕ ಭಂಡಾರಲ್ಲಿ ಇಟ್ಟರೆ ಅದು ವಿದ್ಯಾರ್ಥಿಗಳಿಗೆ, ಸಾಹಿತ್ಯಾಸಕ್ತಿ ಉಳ್ಳವರಿಗೆ ಸಿಕ್ಕು ಪ್ರಕಾಶಕರ ಶ್ರಮ ಸಾರ್ಥಕವಾಗುತ್ತದೆ. ಜ್ಞಾನವರ್ಧನೆಗೆ ಸಹಾಯಕವಾಗುತ್ತದೆ.

ಹರಿತಸ್

(ಕನ್ನಡ ಪ್ರಭ : ೪-೧೦-೧೯೭೬)

ಪಂಪ ಪ್ರಶಸ್ತಿ

‘ಭಾರತೀಯ ಕಾವ್ಯಮೀಮಾಂಸೆ’ಗೆ

●

‘ಭಾರತೀಯ ಕಾವ್ಯಮೀಮಾಂಸೆ’ ೧೯೮೯ನೇ ಇಸವಿಯ (ಇದು ನಿಜವಾಗಿ ೧೯೮೮ನೆಯ ಇಸವಿಯ ಪ್ರಶಸ್ತಿ ಎಂದು ಅದರ ಮುಂದಿನ ವರ್ಷ ಪರಿಷ್ಕರಿಸಲಾಯಿತು) ‘ಪಂಪ ಪ್ರಶಸ್ತಿ’ಗೆ ತೀನಂಶ್ರೀಯವರ ನಿಧನದ ೨೩ ವರ್ಷಗಳ ನಂತರ ಸೃಜನೇತರ ಕೃತಿಗಳ ವಿಭಾಗದಲ್ಲಿ ಆಯ್ಕೆಯಾದಾಗ ಕನ್ನಡ ನಾಡಿನ ವಿದ್ವಾಂಸರುಗಳು, ತೀನಂಶ್ರೀಯವರ ಶಿಷ್ಯರು, ಸ್ನೇಹಿತರು, ಅಭಿಮಾನಿಗಳು, ಬಂಧುಗಳು ಎಲ್ಲರೂ ಬಹು ಸಂತೋಷದಿಂದ ಪ್ರಶಸ್ತಿಯನ್ನು ಮೆಚ್ಚಿದರು. ತೀನಂಶ್ರೀ ಅವರ ಜೀವಿತಕಾಲದಲ್ಲಿ ಯಾವ ಪ್ರಶಸ್ತಿ ಸನ್ಮಾನಗಳೂ ಬರದಿದ್ದರಿಂದ ದುಃಖಿತರಾಗಿದ್ದ ಎಲ್ಲರೂ ಇದರಿಂದ ಒಂದು ಕೋರೆ ಸ್ವಲ್ಪಮಟ್ಟಿಗೆ ನೀಗಿದಂತಾಗಿದೆಯೆಂದು ಸಮಾಧಾನ ಗೊಂಡರು. ಈ ಪ್ರಶಸ್ತಿ ಫೆಬ್ರುವರಿ ೧೯೯೦ರಲ್ಲಿ ಪ್ರಕಟವಾಗಿ ಮಾರ್ಚ್ ೨೯, ೧೯೯೦ರಂದು ಈ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಾಡಾಗಿತ್ತು.

ಅಂದು ಸಂಜೆ ರವೀಂದ್ರಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ನಮ್ಮ ತಾಯಿ ಶ್ರೀಮತಿ ಜಯಲಕ್ಷ್ಮಮ್ಮನವರಿಗೆ ಈ ಪ್ರಶಸ್ತಿ ಪ್ರದಾನ ಮಾಡಿದರು. ಜ್ಞಾನಪೀಠ ಪ್ರಶಸ್ತಿ ವಿಜೇತ ಪ್ರಸಿದ್ಧ ತೆಲುಗು ಸಾಹಿತಿ ಡಾ॥ ಸಿ. ನಾರಾಯಣರೆಡ್ಡಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ತೀನಂಶ್ರೀಯವರ ಪ್ರಿಯ ಸ್ನೇಹಿತರು ಮತ್ತು ಪ್ರಸಿದ್ಧ ಕನ್ನಡ ಸಾಹಿತಿಗಳಾದ ಪ್ರೊ.ಎ.ಎನ್. ಮೂರ್ತಿರಾಯರು ‘ಭಾರತೀಯ ಕಾವ್ಯಮೀಮಾಂಸೆ’ಯ ಬಗ್ಗೆ ಬಹು ಆಕರ್ಷಕ ಮತ್ತು ವಿದ್ವತ್ಪೂರ್ಣ ಭಾಷಣ ಮಾಡಿದರು. ತೀ.ನಂ.ಶ್ರೀ.ಯವರ ಆಪ್ತಸ್ನೇಹಿತ ಪು.ತಿ.ನ. ಅವರೂ ಸಮಾರಂಭದಲ್ಲಿ ಹಾಜರಿದ್ದರು. ಅಂದಿನ ಕನ್ನಡ ಮತ್ತು ಸಂಸ್ಕೃತಿ ಶಾಖೆಯ ಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೊಯಿಲಿಯವರ ನೇತೃತ್ವದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ಈ ಸಮಾರಂಭ, ಭಾಷಣಗಳ ಜೊತೆ ಪ್ರಸಿದ್ಧ ಸುಗಮ ಸಂಗೀತ ಗಾಯಕರುಗಳು ಹಾಡಿದ ತೀನಂಶ್ರೀಯವರ ಕವಿತೆಗಳ ಗಾಯನದೊಡನೆ, ಸಭಾಭವನದಲ್ಲಿ ಕಿಕ್ಕಿರಿದು ತುಂಬಿದ್ದ ಶ್ರೋತೃಗಳು ಮತ್ತು ಅಭಿಮಾನಿಗಳಿಂದ ತುಂಬಾ ಪ್ರಶಂಸೆಯನ್ನು ಪಡೆದು, ಅನೇಕ ದಿನಗಳವರೆಗೆ ತೀನಂಶ್ರೀಯವರ ಅಭಿಮಾನಿಗಳ ಪುಣ್ಯಸ್ಮರಣೆಗೆ ವಿಷಯವಾಗಿತ್ತು.

ಅಂದು ಬೆಳಗ್ಗೆ ಮತ್ತು ಮಧ್ಯಾಹ್ನ ಅದೇ ಭವನದ ಮೊಗಸಾಲೆಯಲ್ಲಿ 'ತೀನಂಶ್ರೀ ಅವರ ಸಾಹಿತ್ಯ : ಒಂದು ಸಮೀಕ್ಷೆ' ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಲಾಗಿತ್ತು. ಇದನ್ನು ಡಾ.ಜಿ.ಎಸ್. ಶಿವರುದ್ರಪ್ಪನವರು ಉದ್ಘಾಟಿಸಿದರು. ಅಂದು ಬೆಳಿಗ್ಗೆಯ ಮೊದಲನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ವಹಿಸಿದ್ದರು. ಡಾ.ಎಚ್.ಎಸ್. ವೆಂಕಟೇಶಮೂರ್ತಿ ಅವರು "ತೀನಂಶ್ರೀ ಅವರ ಸೃಜನಸಾಹಿತ್ಯ (ಕವಿತೆ ಲಲಿತ ಪ್ರಬಂಧಗಳು) ಬಗ್ಗೆ, ಪ್ರೊ.ಎಚ್.ಎಸ್. ರಾಘವೇಂದ್ರರಾವ್ ಅವರು "ತೀನಂಶ್ರೀ ಅವರ ಸಾಹಿತ್ಯ ವಿಮರ್ಶೆ" ಬಗ್ಗೆ ಮತ್ತು ಡಾ.ಸಿ.ಪಿ. ಕೃಷ್ಣಕುಮಾರ್ ಅವರು "ತೀನಂಶ್ರೀ ಅವರ ಅನುವಾದ ಸಾಹಿತ್ಯ" ಬಗ್ಗೆ ಪ್ರಬಂಧಗಳನ್ನು ಮಂಡಿಸಿದರು. ಅಂದು ಮಧ್ಯಾಹ್ನ ನಡೆದ ಎರಡನೆಯ ಗೋಷ್ಠಿಗೆ ಡಾ.ಎಂ. ಚಿದಾನಂದ ಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಡಾ.ಎಂ.ಎಂ. ಕಲಬುರ್ಗಿಯವರು "ತೀನಂಶ್ರೀ : ಛಂದಸ್ಸು ಮತ್ತು ಗ್ರಂಥ ಸಂಪಾದನೆ" ಬಗ್ಗೆ, ಡಾ. ಕಮಲಾ ಹಂಪನಾ "ತೀನಂಶ್ರೀ : ಭಾಷಾಶಾಸ್ತ್ರ ಮತ್ತು ವ್ಯಾಕರಣ" ಬಗ್ಗೆ ಮತ್ತು ಪ್ರೊ. ಸುಜನಾ "ಭಾರತೀಯ ಕಾವ್ಯಮೀಮಾಂಸೆ" ಬಗ್ಗೆ ಪ್ರಬಂಧಗಳನ್ನು ಮಂಡಿಸಿದರು.

ಈ ಪಂಪ ಪ್ರಶಸ್ತಿ ಪ್ರದಾನದ ಸಂದರ್ಭದಲ್ಲಿ ನಡೆದ ಸಮಾರಂಭದ ವಿವರಗಳು, ವರದಿಗಳು, ಆಯ್ದ ಪತ್ರಿಕಾ ಲೇಖನಗಳು ಮತ್ತು ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ. ತೀನಂಶ್ರೀಯವರ ಬಗ್ಗೆ ಕನ್ನಡ ನಾಡು ಸತತವಾಗಿ ತೋರುತ್ತಿರುವ ಅಭಿಮಾನ ಇದರಿಂದ ವ್ಯಕ್ತವಾಗುತ್ತದೆ.

ತೀನಂಶ್ರೀಯವರ ಭಾರತೀಯ ಕಾವ್ಯಮೀಮಾಂಸೆಯು ಅವರ ನಿಧನದ ನಂತರ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದವಾಗಿ ಪ್ರಕಟವಾಗಿದೆ. ಹಿಂದಿಗೆ 'भारतीय काव्य मीमांस' ಎಂದು ಪ್ರೊ. ಬಾಲಚಂದ್ರ ಜಯಶೆಟ್ಟಿ ಅವರಿಂದ ಅನುವಾದಿತವಾಗಿ ದೆಹಲಿಯ ಶಬ್ದಕಾರ ಪ್ರಕಾಶನದಿಂದ ೧೯೭೨ರಲ್ಲಿ ಪ್ರಕಟವಾಗಿದೆ. ಇದಕ್ಕೆ ಅನಂತರ ಪ್ರೊ. ಜಯಶೆಟ್ಟಿ ಅವರಿಗೆ ಉತ್ತಮ ಭಾಷಾಂತರಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಕೂಡ ದೊರಕಿದೆ. ಈ ಗ್ರಂಥದ ಇಂಗ್ಲಿಷ್ ಅನುವಾದವನ್ನು 'Indian Poetics' ಎನ್ನುವ ಶೀರ್ಷಿಕೆಯಲ್ಲಿ ಪ್ರೊ. ಎನ್ ಬಾಲಸುಬ್ರಹ್ಮಣ್ಯ ಅವರು ಮಾಡಿದ್ದಾರೆ. ಇದನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯು ೨೦೦೧ರಲ್ಲಿ ಪ್ರಕಟಿಸಿದೆ.

ದಿ। ತೀ.ನಂ.ಶ್ರೀ ಅವರ
'ಭಾರತೀಯ ಕಾವ್ಯಮೀಮಾಂಸೆ'ಗೆ ಪಂಪ ಪ್ರಶಸ್ತಿ

●

ಬೆಂಗಳೂರು, ಫೆ. ೬– ದಿವಂಗತ ತೀ.ನಂ.ಶ್ರೀಕಂಠಯ್ಯ ಅವರ 'ಭಾರತೀಯ ಕಾವ್ಯಮೀಮಾಂಸೆ' ಕೃತಿಯನ್ನು ೧೯೮೮–೮೯ರ ಸಾಲಿನ 'ಪಂಪ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

೧೯೫೩ರಲ್ಲಿ ಪ್ರಕಟವಾದ ಈ ಕೃತಿಯನ್ನು ೧೯೪೭ರ ಆಗಸ್ಟ್ ೧೫ ರಿಂದ ೧೯೬೭ರ ಡಿಸೆಂಬರ್ ೩೧ರ ಅವಧಿಯಲ್ಲಿ ಪ್ರಕಟವಾದ ಅತ್ಯುತ್ತಮ ಸೃಜನೇತರ ಕೃತಿಯೆಂದು ಪರಿಗಣಿಸಿ ಪ್ರಶಸ್ತಿ ನೀಡಲಾಗಿದೆ ಎಂದು ಪಂಪಪ್ರಶಸ್ತಿ ಆಯ್ಕೆಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕ ಐ.ಎಂ. ವಿಠಲಮೂರ್ತಿ ಅವರು ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

ಭಾರತ ಸ್ವಾತಂತ್ರ್ಯದ ೪೦ನೆಯ ವರ್ಷದ ನೆನಪಿಗಾಗಿ ಪ್ರತಿವರ್ಷವೂ ಕನ್ನಡದ ಒಂದು ಅತ್ಯುತ್ತಮ ಪುಸ್ತಕಕ್ಕೆ ಒಂದು ಲಕ್ಷ ರೂ.ಗಳ ಬಹುಮಾನವನ್ನು ಒಳಗೊಂಡ ಪಂಪ ಪ್ರಶಸ್ತಿಯನ್ನು ನೀಡಲಾಗುವುದು.

ಕಳೆದ ವರ್ಷ ಮೊದಲ ಬಾರಿಗೆ ನೀಡಲಾದ ಈ ಪ್ರಶಸ್ತಿ ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿಗೆ ಸೃಜನಶೀಲ ಪ್ರಕಾರದಲ್ಲಿ ಸಂದಿತ್ತು.

ಮುಂದಿನ ವರ್ಷದ ಪಂಪ ಪ್ರಶಸ್ತಿಯನ್ನು ೧೯೬೭–೧೯೮೭ರ ಅಂತ್ಯದವರೆಗಿನ ಅವಧಿಯಲ್ಲಿನ ಅತ್ಯುತ್ತಮ ಸೃಜನಶೀಲ ಕೃತಿಗೆ ನೀಡಲಾಗುವುದು.

೧೯೮೮–೮೯ರ ಸಾಲಿನ 'ಪಂಪ ಪ್ರಶಸ್ತಿ'ಯ ಆಯ್ಕೆ ಸಮಿತಿ: ವಿ.ಕೃ. ಗೋಕಾಕ್ (ಅಧ್ಯಕ್ಷರು), ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಜಿ.ಎಸ್. ಶಿವರುದ್ರಪ್ಪ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಿ.ಎಸ್. ಸಿದ್ಧಲಿಂಗಯ್ಯ, ಡಾ॥ ಹಾ.ಮಾ. ನಾಯಕ, ಡಾ॥ ಜಿ.ಎಸ್. ಆಮೂರ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರತಿನಿಧಿಯಾಗಿ ಡಾ॥ ಎಸ್.ಎಲ್. ಭೈರಪ್ಪ, ಸಿದ್ಧಯ್ಯ ಪುರಾಣಿಕ (ಸದಸ್ಯರು); ಐ.ಎಂ. ವಿಠ್ಠಲಮೂರ್ತಿ (ಸದಸ್ಯ ಕಾರ್ಯದರ್ಶಿ).

(ಕನ್ನಡಪ್ರಭ, ೭–೨–೧೯೯೦)

‘ಭಾರತೀಯ ಕಾವ್ಯಮೀಮಾಂಸೆ’ಗೆ ಪ್ರತಿಷ್ಠಿತ ಪಂಪ ಪ್ರಶಸ್ತಿ ಪ್ರದಾನ

●

ಬೆಂಗಳೂರು, ಮಾ. ೨೯– ಭಾರತೀಯ ಭಾಷೆಗಳಲ್ಲಿಯೇ ಅಪರೂಪವಾದ, ತೀ.ನಂ.ಶ್ರೀಕಂಠಯ್ಯನವರ “ಆಚಾರ್ಯ ಕೃತಿ” ಎನಿಸಿರುವ “ಭಾರತೀಯ ಕಾವ್ಯಮೀಮಾಂಸೆ”ಗೆ, ಬಿರು ಬೇಸಿಗೆಯಲ್ಲೂ ತುಸು ತಂಪೆನಿಸಿದ್ದ ಗುರುವಾರ ಸಂಜೆ, ಕನ್ನಡದ ಬಹುದೊಡ್ಡ ಗೌರವವಾದ “ಪಂಪ ಪ್ರಶಸ್ತಿ”ಯನ್ನು ಅರ್ಪಿಸಲಾಯಿತು.

ಆತ್ಮೀಯವಾದ ವಾತಾವರಣದಲ್ಲಿ ಸುಂದರವಾದ ವೇದಿಕೆಯ ಮೇಲೆ ತೀ.ನಂ.ಶ್ರೀ. ಅವರ ಜೀವನ ಸಂಗಾತಿ ಜಯಲಕ್ಷ್ಮಮ್ಮ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

“ಹಿತಮಿತ ಮೃದು ವಚನಂ” ಎಂದು ತನ್ನನ್ನು ತಾನೇ ಬಣ್ಣಿಸಿಕೊಂಡಿರುವ ಕನ್ನಡದ ಆದಿಕವಿ ಪಂಪನ ಹೆಸರಿನಲ್ಲಿ ಸ್ಥಾಪಿಸಲಾಗಿರುವ ಈ ಪ್ರಶಸ್ತಿಯನ್ನು ಅದೇ ಬಣ್ಣನೆಗೆ ಪಾತ್ರರಾಗ ಬಲ್ಲ ಏಕೈಕ ವ್ಯಕ್ತಿ ಎಂಬ ಹೆಗ್ಗಳಿಕೆಯ ತೀ.ನಂ.ಶ್ರೀ ಅವರಿಗೆ ಸಲ್ಲಿಸುವ ಮೂಲಕ ಕನ್ನಡ ನಾಡು ತನ್ನ ಹಿರಿಮೆಯ ಪುತ್ರನಿಗೆ ಗೌರವ ಸೂಚಿಸಿತು.

“ಕೃತಿಗೆ ತಕ್ಕ ಪ್ರಶಸ್ತಿ ಬೇಕು, ಪ್ರಶಸ್ತಿಗೆ ತಕ್ಕ ಕೃತಿ ಬೇಕು” ಎನ್ನುವ ಮಾತು ಈ ಕೃತಿಯ ಮಹತ್ವವನ್ನು ಸಾರುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಎಂ. ವೀರಪ್ಪ ಮೊಯಿಲಿ ಬಣ್ಣಿಸಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೊಯಿಲಿ ಅವರು, “ಭಾರತೀಯ ಕಾವ್ಯಮೀಮಾಂಸೆಯ ಉತ್ಕೃಷ್ಟತೆ ಸಾಬೀತಾಗಬೇಕೆಂದರೆ ಇತರ ಭಾಷೆಗಳ ಕಾವ್ಯಮೀಮಾಂಸೆಗಳೊಂದಿಗೆ ತುಲನಾತ್ಮಕ ಅಧ್ಯಯನವಾಗಬೇಕು. ಇದಕ್ಕಾಗಿ ತೀ.ನಂ.ಶ್ರೀ ಅವರ ಈ ಮೇರು ಕೃತಿಯನ್ನು ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಿಗೆ ಸರ್ಕಾರ ಅನುವಾದ ಮಾಡಿಸುತ್ತದೆ” ಎಂದು ಪ್ರಕಟಿಸಿದರು.

ಪ್ರಶಸ್ತಿಯನ್ನು ನೀಡಿ, ಜಯಲಕ್ಷ್ಮಮ್ಮ ಅವರನ್ನು ಗೌರವಿಸಿದ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು, ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ಸಂಯೋಜಿಸಿಬೇಕೆಂದು ನಾಡಿನ ಹಿರಿಯ ಸಾಹಿತಿಗಳು ಮಾರ್ಗದರ್ಶನ ಮಾಡಬೇಕೆಂದು ಮನವಿ ಮಾಡಿಕೊಂಡರು.

"ಕನ್ನಡ ಭಾಷೆ– ಸಾಹಿತ್ಯ ಅತ್ಯಂತ ಸಿರಿವಂತವಾಗಿದ್ದರೂ ಕನ್ನಡದ ಸಾಹಿತಿಗಳು ಇಂದು ವಿಚಿತ್ರ ಸನ್ನಿವೇಶದಲ್ಲಿ ಸಿಲುಕಿದ್ದಾರೆ. ಕೃತಿ ರಚನೆಗಿಂತಲೂ, ಪ್ರಕಟಣೆ ಹಾಗೂ ಮಾರಾಟವೇ ದೊಡ್ಡ ಸವಾಲಾಗಿದೆ. ಈ ದೊಡ್ಡ ಕಳಂಕವನ್ನು ತೊಡೆದು ಹಾಕಲು ಕೇವಲ ಸರ್ಕಾರ ಯೋಜನೆಗಳನ್ನು ರೂಪಿಸಿದರೆ ಸಾಲದು, ಕನ್ನಡಿಗರ ಹೃದಯವಂತಿಕೆ, ಅಭಿಮಾನ ಹಿರಿದಾಗ ಬೇಕು" ಎಂದೂ ವೀರೇಂದ್ರ ಪಾಟೀಲ್ ಅಭಿಪ್ರಾಯಪಟ್ಟರು.

ತೀ.ನಂ.ಶ್ರೀ. ಅವರ ಆಪ್ತ ಗೆಳೆಯರೂ, ಒಡನಾಡಿಯೂ ಆಗಿದ್ದ ಪ್ರೊ॥ ಎ.ಎನ್. ಮೂರ್ತಿ ರಾವ್ ಅವರು ತಮ್ಮ ನೆನಪುಗಳನ್ನು ಸಭಿಕರೊಂದಿಗೆ ಹಂಚಿಕೊಳ್ಳುವ ಮೂಲಕ ಹಾಗೂ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಇಂದು ಮತ್ತೊಮ್ಮೆ ಹೊಸದಾಗಿ ತೀನಂಶ್ರೀ ಅವರನ್ನು ಕಂಡುಕೊಳ್ಳುವ ಮೂಲಕ ಅಭಿನಂದನೆ ಸಲ್ಲಿಸಿದರು.

"ವಯಸ್ಸಾದಂತೆಲ್ಲ ಕೃತಿಗಳಿಗಿಂತ ಜನ ಹೆಚ್ಚು ಮುಖ್ಯರಾಗುತ್ತಾರೆ. ಅದರಲ್ಲೂ ಕೃತಿಕಾರನ ನಿಕಟ ಪರಿಚಯವಿದ್ದರೆ ಈ ಭಾವನೆ ಇನ್ನೂ ಹೆಚ್ಚು. ಕೆಲವು ಸಂದರ್ಭದಲ್ಲಿ ಕೃತಿಕಾರನ ನೆನಪು ಮಾಸಿ ಕೃತಿ ಚಿರಂತನವಾಗುತ್ತದೆ. ಆದರೆ ಇಂದು ಮಾತ್ರ ಭಾರತೀಯ ಕಾವ್ಯಮೀಮಾಂಸೆ ಮತ್ತು ತೀ.ನಂ.ಶ್ರೀ. ಎರಡೂ ಸಮಾನರಾಗಿ ಕಾಣುತ್ತಿದ್ದಾರೆ" ಎಂದು ಆತ್ಮೀಯವಾದ ಮೆಚ್ಚುಗೆ ವ್ಯಕ್ತಪಡಿಸಿದರು.

"ವಿಮರ್ಶೆ ಬುದ್ಧಿಗೆ ಸಂಬಂಧಿಸಿದ್ದು, ಸೃಜನಶೀಲತೆ ಹೃದಯಕ್ಕೆ ಸಂಬಂಧಿಸಿದ್ದು, ಇವೆರಡಕ್ಕೂ ಮಧುರ ಸೇತುವೆ ನಿರ್ಮಿಸಿದ ಹಿರಿಮೆ ತೀ.ನಂ.ಶ್ರೀ ಅವರದು" ಎಂದರು ಜ್ಞಾನಪೀಠ ಪ್ರಶಸ್ತಿ ವಿಜೇತ ತೆಲುಗು ಸಾಹಿತಿ ಡಾ॥ ಸಿ. ನಾರಾಯಣ ರೆಡ್ಡಿ.

ಕನ್ನಡದ ಕವಿ ಪಂಪನ ವಾಸ ಸ್ಥಾನದ ನಾಡಿನವನು ನಾನು ಎಂದು ಗುರುತಿಸಿಕೊಂಡು ಹರ್ಷಿಸಿದ ಅವರು. ಅಸಂಖ್ಯಾತ ಭಾಷೆಗಳು ಈ ರಾಷ್ಟ್ರಕ್ಕೆ ದೊರೆತಿರುವ ವರ ಎಂದು ಬಣ್ಣಿಸಿದರು. "ಭಾಷೆಯ ಬಗೆಗಿನ ಯಾವುದೇ ವಿವಾದವೂ ಪಟ್ಟಭದ್ರ ಹಿತಾಸಕ್ತಿಗಳ ಚಿತಾವಣೆ" ಎಂದೂ ನಾರಾಯಣ ರೆಡ್ಡಿ ಎಚ್ಚರಿಸಿದರು.

ಪ್ರಶಸ್ತಿ ಸ್ವೀಕರಣೆಗೆ ನಮನ ಸಲ್ಲಿಸಿದ ತೀ.ನಂ.ಶ್ರೀ. ಅವರ ಪುತ್ರ ನಾಗಭೂಷಣ ಅವರು, ಈ ಮೊತ್ತವನ್ನು ಸಾಹಿತ್ಯ ಕ್ಷೇತ್ರದ ಸೇವೆಗಾಗಿ ಒಂದು ನಿಧಿಯನ್ನಾಗಿ ಸ್ಥಾಪಿಸುವುದಾಗಿ ಪ್ರಕಟಿಸಿದರು. ಭಾರತದ ಸ್ವಾತಂತ್ರ್ಯದ ೪೦ನೆಯ ವರ್ಷದ ನೆನಪಿಗಾಗಿ ಸ್ಥಾಪಿಸಿರುವ ಈ ಪ್ರಶಸ್ತಿ ಒಂದು ಲಕ್ಷ ರೂಪಾಯಿ ಮೊತ್ತವನ್ನು ಹೊಂದಿದೆ. ಜೊತೆಗೆ ಪ್ರಶಸ್ತಿ ಫಲಕವನ್ನೂ ಹಾಗೂ ನಾಟ್ಯ ರಾಣಿ ಶಾಂತಲೆಯ ವಿಗ್ರವನ್ನೂ ಹೊಂದಿದೆ. ಕಳೆದ ವರ್ಷದಿಂದ ಆರಂಭವಾದ ಈ ಪ್ರಶಸ್ತಿಯನ್ನು ಒಮ್ಮೆ ಸೃಜನಶೀಲ ಕೃತಿಗೆ, ಮತ್ತೊಮ್ಮೆ ಸೃಜನೇತರ ಕೃತಿಗೆ ನೀಡಲಾಗುವುದು. ಭಾರತೀಯ ಕಾವ್ಯಮೀಮಾಂಸೆಗೆ ಸಂದಿದ್ದು ೧೯೮೯ನೇ ಸಾಲಿನ ಸೃಜನೇತರ ಕೃತಿಯ ಪ್ರಶಸ್ತಿ. ಸಮಾರಂಭದ ಆರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಐ.ಎಂ. ವಿಠ್ಠಲಮೂರ್ತಿ ಸ್ವಾಗತ ಬಯಸಿದರು.

(ಕನ್ನಡಪ್ರಭ, ೩೦–೩–೧೯೯೦)

ಪ್ರಶಸ್ತಿ ಪೀಠಿಕೆ

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಹಲವು ಮಹತ್ವದ ವ್ಯಕ್ತಿತ್ವಗಳ ನಡುವೆ, ತಮ್ಮ ಪ್ರಶಾಂತ ತೇಜಸ್ಸಿನಿಂದ ಸಾಹಿತ್ಯಾಸಕ್ತರ ಗೌರವಕ್ಕೆ ಪಾತ್ರರಾದವರು ಪ್ರೊ॥ ತೀ.ನಂ. ಶ್ರೀಕಂಠಯ್ಯನವರು. ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ತಾಲೂಕಿನ ತೀರ್ಥಪುರದಲ್ಲಿ ಹುಟ್ಟಿದ ಶ್ರೀಕಂಠಯ್ಯನವರು, "ಕಲ್ಪವೃಕ್ಷ"ವೆಂದು ಆಲಂಕಾರಿಕವಾಗಿ ವರ್ಣಿಸಲ್ಪಡುವ ತೆಂಗಿನ ಸೀಮೆಗೆ ಸೇರಿದವರು. ತೆಂಗಿನ ಮರ ನೆಲದೊಳಗೆ ಬೇರು ಚಾಚಿ, ಎತ್ತರದಲ್ಲಿ ಗರಿಬಿಚ್ಚಿ, ಗೊನೆಗೊನೆ ಕಾಯಿಗಳನ್ನು ಹೊತ್ತು ನೆಟ್ಟಗೆ ನಿಲ್ಲುವಂಥದು. ಪಾಂಡಿತ್ಯದ ಹಲವು ನೆಲೆಗಳಲ್ಲಿ ಬೇರೂರಿ ಪ್ರತಿಭೆಯ ಗರಿಬಿಚ್ಚಿ ನಿಂತ ಶ್ರೀಕಂಠಯ್ಯನವರ ವ್ಯಕ್ತಿತ್ವ ಈ ತೆಂಗಿನ ಮರಗಳಿಗೆ ತಕ್ಕ ಪ್ರತೀಕವಾಗಬಲ್ಲದು.

ವಿದ್ಯಾರ್ಥಿ ದೆಸೆಯಿಂದಲೂ ತುಂಬ ಪ್ರತಿಭಾವಂತರಾಗಿ, ಸುವರ್ಣ ಪದಕಗಳನ್ನು ಗೆದ್ದುಕೊಳ್ಳುತ್ತಾ, ಕನ್ನಡ ಹಾಗೂ ಇಂಗ್ಲಿಷ್ ಎಂ.ಎ. ಪದವಿಗಳನ್ನು ಪ್ರಥಮದರ್ಜೆಯಲ್ಲಿ ಸಂಪಾದಿಸಿ, ಸಂಸ್ಕೃತವನ್ನು ಸ್ವಯಂ ಅಧ್ಯಯನದಿಂದ ಮೈಗೂಡಿಸಿಕೊಂಡು, ತಾನಾಗಿಯೇ ಬಂದ ಸಿವಿಲ್ ಹುದ್ದೆಯನ್ನು ನಿರಾಕರಿಸಿ, ಅಧ್ಯಾಪಕ ವೃತ್ತಿಯನ್ನು ಅವರು ಹಿಡಿದಿದ್ದರಿಂದ ಬಹುಸಂಖ್ಯಾತ ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಾಪನದಿಂದ ದಾರಿದೀಪವಾದರು. ಕಾವ್ಯ, ಲಲಿತಪ್ರಬಂಧ, ಅನುವಾದ, ಸಾಹಿತ್ಯವಿಮರ್ಶೆ, ಸಂಶೋಧನೆ, ವ್ಯಾಕರಣ, ಗ್ರಂಥಸಂಪಾದನೆ ಹೀಗೆ ಹಲವು ಕ್ಷೇತ್ರಗಳಿಗೆ ಮೌಲಿಕವಾದ ಕೊಡುಗೆಗಳನ್ನು ನೀಡಿದರು.

ಸೃಜನ ಹಾಗೂ ಸೃಜನೇತರ ಸಾಹಿತ್ಯಗಳಲ್ಲಿ ಸಮಾನ ಆಸಕ್ತಿ ಮತ್ತು ಪರಿಣತಿಯನ್ನು ಗಳಿಸಿಕೊಂಡ ಶ್ರೀಕಂಠಯ್ಯನವರು, ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ್ದು, ಕವಿಯಾಗಿ – ಕನ್ನಡದಲ್ಲಿ ಮೊಟ್ಟಮೊದಲ ಪ್ರೇಮಗೀತೆಗಳ ಸಂಕಲನ 'ಒಲುಮೆ' ಎಂಬ ಕವನ ಸಂಗ್ರಹದ ಮೂಲಕ. ಆದರೆ ಮುಂದೆ ಮುಖ್ಯವಾಗಿ ಅವರು ಆರಿಸಿಕೊಂಡದ್ದು ಹಾಗೂ ಕೆಲಸ ಮಾಡಿದ್ದು ಸಾಹಿತ್ಯದ ಸೃಜನೇತರ ಪ್ರಕಾರಗಳಲ್ಲಿ. ಆದರೂ ಅವರು ತಮ್ಮೊಳಗಿನ ಕವಿಯನ್ನು ಎಂದೂ ಕಳೆದುಕೊಳ್ಳಲಿಲ್ಲ. ಈ ಕಾರಣದಿಂದ ಅವರ ಬರವಣಿಗೆ, ಎಲ್ಲೂ ಪೆಡಸಾಗಲಿಲ್ಲ; ನೀರಸವಾಗಲಿಲ್ಲ; ಶಾಸ್ತ್ರ ಜಡವಾಗಲಿಲ್ಲ. ಅದರ ಬದಲು ಅವರ ಬರವಣಿಗೆ ಮೂಲತಃ ಪ್ರತಿಭೆ ಪಾಂಡಿತ್ಯಗಳ ಹದವಾದ ಪಾಕವಾಗಿದೆ.

ತೀ.ನಂ.ಶ್ರೀ.ಯವರ ಆಸಕ್ತಿಯ ವಲಯಗಳು ಮುಖ್ಯವಾಗಿ ಸಂಶೋಧನೆ, ಸಾಹಿತ್ಯ ವಿಮರ್ಶೆ, ವ್ಯಾಕರಣ, ಛಂದಸ್ಸು ಮತ್ತು ಭಾಷಾಶಾಸ್ತ್ರಗಳು. ಈ ಕ್ಷೇತ್ರಗಳಿಗೆ ಅವರು ಕೊಟ್ಟ ಕೊಡುಗೆ ಗಾತ್ರದಲ್ಲಿ ಹೆಚ್ಚಿಲ್ಲವಾದರೂ, ಸತ್ವದಲ್ಲಿ ಮಾದರಿ ಹಾಗೂ ಮಾರ್ಗದರ್ಶಕವಾದದ್ದು.

ಇಂಗ್ಲಿಷ್, ಕನ್ನಡ ಹಾಗೂ ಸಂಸ್ಕೃತ ಈ ಮೂರು ಸಾಹಿತ್ಯಗಳ ಪರಿಣತಿಯ ಹಿನ್ನೆಲೆಯಿಂದ ಬರೆಯಬಲ್ಲ ಅವರ ಬರಹಗಳಲ್ಲಿ ಕಂಡುಬರುವ ವಿನಯಶೀಲ ವಿದಗ್ಧತೆ ಬೆರಗು ಹುಟ್ಟಿಸು ವಂಥದ್ದು. ಒಂದು ಬಗೆಯ ಪರಿಪೂರ್ಣತೆಯ ಅತೃಪ್ತ ಅನ್ವೇಷಣೆಯಿಂದಾಗಿ, ತೀ.ನಂ.ಶ್ರೀ. ಅವರ ವಿದ್ವತ್ತಿಗೆ ತಕ್ಕಷ್ಟು ಬರವಣಿಗೆ ಹೊರಬಲಿಲ್ಲ. ಆದರೂ ಬರೆದಷ್ಟು ಮಾತ್ರ ಗಟ್ಟಿಯಾದ ಹಾಗೂ ಸಮತೂಕದ ಬರಹ.

ಬಹುಶ್ರುತ ಪಾಂಡಿತ್ಯ, ಸೌಜನ್ಯಪೂರ್ಣ ಮನಸ್ಸು, ವಿಷಯಾಂತರಾಳಗಳನ್ನು ಒಳಹೊಕ್ಕು ರಸಗ್ರಹಣ ಹಾಗೂ ಸತ್ಯದರ್ಶನ ಮಾಡಬಲ್ಲ ಸಹೃದಯನ ವಿಮರ್ಶನ ಪ್ರಜ್ಞೆ, ಸಂಶೋಧಕನ ಸಮತೂಕ, ಅತ್ಯಂತ ಅಡಕವಾಗಿ, ಅಚ್ಚುಕಟ್ಟಾಗಿ ಮತ್ತು ನಿಷ್ಕೃಷ್ಟವಾಗಿ ವಿಷಯ ನಿರೂಪಣೆ ಮಾಡಬಲ್ಲ ಸಾಮರ್ಥ್ಯ – ಈ ಸಮಗ್ರ ಲಕ್ಷಣಗಳಿಂದ ಕೂಡಿದ ತೀ.ನಂ.ಶ್ರೀಕಂಠಯ್ಯನವರು ಮಾತಿನಲ್ಲಾಗಲಿ, ಬರಹದಲ್ಲಾಗಲಿ ಅಪೂರ್ವವಾದ ಸಂಯಮವನ್ನು ಸಾಧಿಸಿಕೊಂಡವರು. ಕನ್ನಡದ ಮೊದಲ ಮಹಾಕವಿಯಾದ ಪಂಪ ತನ್ನನ್ನು 'ಹಿತಮಿತ ಮೃದು ವಚನಂ' ಎಂದು ಕರೆದುಕೊಂಡಿದ್ದಾನೆ. ಪಂಪನ ಈ ಮಾತಿಗೆ ನವೋದಯ ಸಾಹಿತ್ಯ ಸಂದರ್ಭದಲ್ಲಿ ನಿದರ್ಶನವಾಗ ಬಲ್ಲವರು ಯಾರಾದರೂ ಇದ್ದಿದ್ದರೆ, ಅವರು ಬಹುಶಃ ಪ್ರೊ॥ ತೀ.ನಂ.ಶ್ರೀಕಂಠಯ್ಯನವರು ಮಾತ್ರವೇ ಎಂದು ಧಾರಾಳವಾಗಿ ಹೇಳಬಹುದು.

ಇದೀಗ ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿಯ ಗೌರವಕ್ಕೆ ಅರ್ಹವಾಗಿರುವ "ಭಾರತೀಯ ಕಾವ್ಯಮಿಮಾಂಸೆ", ತೀ.ನಂ. ಶ್ರೀಕಂಠಯ್ಯನವರ ಸಾಹಿತ್ಯ ಹಾಗೂ ವಿದ್ವತ್ತಿನ ಶಿಖರವಾಗಿದೆ.

"ಭಾರತೀಯ ಕಾವ್ಯಮೀಮಾಂಸೆ' ತೀ.ನಂ.ಶ್ರೀ ಅವರ ಅತ್ಯಂತ ಮಹತ್ವದ ಕೃತಿ. ಹಲವು ವರ್ಷಗಳ ದೀರ್ಘ ಅಧ್ಯಯನ, ಚಿಂತನೆಗಳ ಫಲವಾದ ಈ ಕೃತಿಯನ್ನು ಕುವೆಂಪು ಅವರು ಆಚಾರ್ಯಕೃತಿ ಎಂದು ಕರೆದಿದ್ದಾರೆ. ಸಂಸ್ಕೃತದ ಅನೇಕ ಕಾವ್ಯಮೀಮಾಂಸೆಯ ಕೃತಿಗಳ ತಳಹದಿಯ ಮೇಲೆ ತೀ.ನಂ.ಶ್ರೀ. ಅವರು ಇಲ್ಲಿ ಈ ವಿಷಯವನ್ನು ಕುರಿತು ಸಮಗ್ರವಾದ ವಿವೇಚನೆ ನಡೆಸಿದ್ದಾರೆ. ಭಾರತದ ಬೇರೆ ಯಾವ ಭಾಷೆಯಲ್ಲೂ ಇಂಥ ಕೃತಿ ಬಂದಿಲ್ಲ. ತೀ.ನಂ.ಶ್ರೀ. ಅವರ ಸಾಹಿತ್ಯೋಪಾಸನೆಯ ಪಕ್ವ ಫಲ, ಈ ಕೃತಿ 'ಪಂಪ ಪ್ರಶಸ್ತಿ'ಗೆ ಎಲ್ಲ ದೃಷ್ಟಿಯಿಂದಲೂ ಅರ್ಹ.

ಈ ಕೃತಿಯ ನಿರ್ಮಿತಿಯಲ್ಲಿ ತೀ.ನಂ.ಶ್ರೀ. ಅವರು ಹಲವು ಶತಮಾನಗಳ ಕಾಲ ವಿವಿಧ ಪ್ರಸ್ಥಾನಗಳ ಮೂಲಕ ಸಂಸ್ಕೃತ ಆಲಂಕಾರಿಕರು ನಡೆಯಿಸಿದ ಕೋಲಾಹಲಕರವಾದ ಚರ್ಚೆಗಳನ್ನೂ, ಮೌಲಿಕವಾದ ಸಿದ್ಧಾಂತಗಳನ್ನೂ ಕೇವಲ ಒಬ್ಬ ಶಾಸ್ತ್ರಕಾರನಂತೆ ನಿರೂಪಿಸಿ, ಈ ಕೃತಿಯನ್ನು "ವಿದ್ವದೌಷಧ"ವನ್ನಾಗಿ ಮಾಡಿಲ್ಲ; ಅದರ ಬದಲು ತಮಗಿರುವ ಬಹುಭಾಷಾ

ಸಾಹಿತ್ಯಗಳ ಹಾಗೂ ಶಾಸ್ತ್ರಗಳ ಪರಿಣತಿಯಿಂದ, ಭಾರತೀಯ ಕಾವ್ಯಮೀಮಾಂಸೆಯ ಸಾರಸರ್ವಸ್ವವನ್ನೂ ಚೇತೋಹಾರಿಯಾದ ರೀತಿಯಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಭಾರತೀಯ ಕಾವ್ಯಮೀಮಾಂಸೆಯ ಪರಂಪರೆಯೊಂದನ್ನು ಅತ್ಯಂತ ಸಮರ್ಥವಾಗಿ ಪರಿಚಯ ಮಾಡಿಕೊಡುವುದರ ಜೊತೆಗೆ, ಈ ಅರಿವಿನಿಂದ ಮುಂದೆ ಆಗಬೇಕಾದ ಕೆಲಸಗಳತ್ತ ನಿರ್ದೇಶನ ನೀಡುವ ಒಂದು 'ಆಚಾರ್ಯ ಕೃತಿ'ಯಾಗಿದೆ.

ಇಂಥ ಆಚಾರ್ಯ ಕೃತಿಯನ್ನು ಕನ್ನಡಕ್ಕೆ ನೀಡಿದ ಮಹಾವಿದ್ವಾಂಸ ತೀ.ನಂ.ಶ್ರೀಕಂಠಯ್ಯನವರಿಗೆ ಕರ್ನಾಟಕ ರಾಜ್ಯ ಸರ್ಕಾರವು ಅತ್ಯಂತ ಸಂತೋಷದಿಂದ ಹಾಗೂ ಹೆಮ್ಮೆಯಿಂದ ಈ "ಪಂಪ ಪ್ರಶಸ್ತಿ"ಯನ್ನು ಗೌರವಪೂರ್ವಕವಾಗಿ ಸಲ್ಲಿಸುತ್ತದೆ.

ಪಂಪ ಪ್ರಶಸ್ತಿ ಅಭಿನಂದನ ಭಾಷಣ

ಎ.ಎನ್. ಮೂರ್ತಿರಾವ್

●

ಕಾಲು ಶತಮಾನದ ಹಿಂದಿನ ಮಾತು: ನಾನು ಮೈಸೂರಿನಿಂದ ಭೋಪಾಲಿಗೆ ಹೊರಟಿದ್ದೆ. ಆಗ ಮದರಾಸಿನಲ್ಲಿ ಇಳಿದು ಬೇರೆ ರೈಲು ಹತ್ತಬೇಕಾಗಿತ್ತು. ಪ್ಲಾಟ್‌ಫಾರಮ್ಮಿನಲ್ಲಿ ಹೋಗುತ್ತಿದ್ದಾಗ – ತೀ.ನಂ.ಶ್ರೀಕಂಠಯ್ಯನವರ ಪತ್ನಿ ಮತ್ತು ಅವರ ಮಗ ನಾಗಭೂಷಣ ಕಲ್ಕತ್ತ ಕಡೆಯ ರೈಲಿನಿಂದ ಇಳಿದು ಬೆಂಗಳೂರಿನ ರೈಲು ಹತ್ತಲು ಬರುತ್ತಿದ್ದಾರೆ. ಅವರು ಶ್ರೀಕಂಠಯ್ಯನ ದಹನಕ್ರಿಯೆ ಮುಗಿಸಿಕೊಂಡು ಬರುತ್ತಿದ್ದರು. ಆ ಸಂಸಾರಕ್ಕೆ ಒದಗಿದ್ದ ವಿಪತ್ತಿನ ವಿಷಯ ರೇಡಿಯೋ ಮೂಲಕ ನನಗೂ ತಿಳಿದಿತ್ತು. ನನ್ನನ್ನು ಕಂಡೊಡನೆ ದುಃಖ ಮರುಕಳಿಸಿ ನಾಗಭೂಷಣನ ಕಣ್ಣಿಂದ ನೀರು ಧಾರಾಕಾರವಾಗಿ ಹರಿಯಿತು. ನಾನು ಏನು ಸಮಾಧಾನ ಹೇಳಿಯೇನು! ಸಾವಿರ ಜನ ಸಾವಿರಸಾರಿ ಹೇಳಿದ ಮಾತನ್ನೇ ಪುನರಾವರ್ತಿಸಬೇಕು! ನನಗೆ ನೆನಪಿರುವುದು ಒಂದೆರಡು ನಿಮಿಷಗಳ ಭಾರವಾದ ಮೌನ – ನನ್ನ ಸಹಾನುಭೂತಿಯನ್ನು ಅದೇ ಸೂಚಿಸಿತು.

ಕೆಲವು ವಾರಗಳ ಹಿಂದೆ, "ಭಾರತೀಯ ಕಾವ್ಯಮೀಮಾಂಸೆ'ಗೆ ಪಂಪಪ್ರಶಸ್ತಿ ಬಂತೆಂದು ಕೇಳಿದಾಗ ನನ್ನ ಮನಸ್ಸಿಗೆ ಮೊದಲು ಬಂದದ್ದು ಆ ಕೃತಿಯ ಹಿರಿಮೆಯಲ್ಲ – ಮೇಲೆ ಬಣ್ಣಿಸಿದ ದೃಶ್ಯ. ಅದೇಕೆ ಹಾಗಾಯಿತೋ ಕಾಣೆ. ಬಹುಶಃ ವಯಸ್ಸಾದ ಮೇಲೆ ಸಾಹಿತ್ಯಕ್ಕಿಂತ ಜನ ಮುಖ್ಯರಾಗುತ್ತಾರೆ. ಕೃತಿಗಿಂತ ಕೃತಿಕಾರ ಮುಖ್ಯನಾಗುತ್ತಾನೆ. ಇದು ಕೃತಿಯ ಮತ್ತು ಕೃತಿಕಾರರ ನಿಕಟ ಪರಿಚಯವುಳ್ಳವರ ಅನುಭವ ಮಾತ್ರ. ಇತರರಿಗೆ ಹಾಗಾಗದಿರಬಹುದು. ಒಂದು ದೃಷ್ಟಿಯಿಂದ ಕೃತಿಕಾರ ಅವನ ಕೃತಿಗಿಂತ ಮುಖ್ಯ. ಏಕೆಂದರೆ ಕೃತಿ ಅವನ ವ್ಯಕ್ತಿತ್ವದ ಒಂದೆರಡು ಮುಖಗಳನ್ನು ಮಾತ್ರ ಪ್ರತಿಬಿಂಬಿಸುತ್ತದೆ. ಕೃತಿಯಲ್ಲಿರುವುದಕ್ಕಿಂತ ಎಷ್ಟೋ ಪಟ್ಟು ಹೆಚ್ಚಿನ ಸರಕು ವ್ಯಕ್ತಿಯಲ್ಲಿರುತ್ತದೆ. ಮತ್ತೊಂದು ದೃಷ್ಟಿಯಿಂದ ನೋಡಿದರೆ ಕೃತಿಕಾರನಿಗಿಂತ ಕೃತಿಯೇ ಮುಖ್ಯ. ಒಂದಲ್ಲ ಒಂದು ದಿನ ಕೃತಿಕಾರ ವಿಸ್ಮೃತಿ ಪ್ರಪಂಚಕ್ಕೆ ಹೊರಟುಹೋಗುತ್ತಾನೆ. ಉಳಿಯುವುದು ಅವನ ಕೃತಿ.

ಕೆಲವು ತಿಂಗಳ ಕೆಳಗೆ ನಾನು ಭಾರತೀಯ ವಿದ್ಯಾಭವನದವತಿಯಿಂದ ಶ್ರೀಕಂಠಯ್ಯನನ್ನು ಕುರಿತು ಮಾತಾಡಬೇಕಾದ ಸಂದರ್ಭ ಬಂತು. ಅವತ್ತು ನಾನು ಮಾತಾಡಿದ್ದು ಅವರ ವೈಯಕ್ತಿಕ ಗುಣಗಳನ್ನು ಕುರಿತು. ಅವರ ಕೃತಿಗಳ ಮಾತು ಬಂದರೂ ಅದು ಮುಖ್ಯವಾಗಲಿಲ್ಲ.

ಮಾತು ಮುಗಿಸಿ ಮನೆಗೆ ಹೋದ ಮೇಲೆ ನನಗೆ ಒಂದು ವಿಷಯ ನೆನಪಿಗೆ ಬಂತು; ಶ್ರೀಕಂಠಯ್ಯ ತನ್ನ ಬದುಕಿನಲ್ಲಿ ಯಾವ ಪ್ರಶಸ್ತಿಯನ್ನೂ ಪಡೆಯಲಿಲ್ಲ. ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಲಿಲ್ಲ, ಕೇಂದ್ರ ಸಾಹಿತ್ಯ ಅಕಾಡೆಮಿಯ ಅವಾರ್ಡನ್ನೂ ಪಡೆಯಲಿಲ್ಲ– ಆ ವೇಳೆಗೆ 'ಭಾರತೀಯ ಕಾವ್ಯಮೀಮಾಂಸೆ' ಪ್ರಕಟವಾಗಿತ್ತಾದರೂ! ಪಂಪಪ್ರಶಸ್ತಿಯಂತೂ ಆಗ ಅಸ್ತಿತ್ವಕ್ಕೇ ಬಂದಿರಲಿಲ್ಲ. ಭಾರತೀಯ ವಿದ್ಯಾಭವನದಲ್ಲಿ ಮಾತಾಡಿದಾಗ ನನಗೆ ಇದರ ನೆನಪೇ ಬರಲಿಲ್ಲ. ನನ್ನ ಮರವಿಗೆ ಕಾರಣ, ಬಹುಶಃ– ಈ ಬಗೆಯ ಬಹುಮಾನ, ಪ್ರಶಸ್ತಿ, ಕೀರ್ತಿ, ಶ್ರೀಕಂಠಯ್ಯನ ದೃಷ್ಟಿಯಲ್ಲಾಗಲಿ ನನ್ನ ದೃಷ್ಟಿಯಲ್ಲಾಗಲಿ ಅಷ್ಟೇನೂ ಮುಖ್ಯವಲ್ಲ. ಅವು ಬಂದಿದ್ದರೆ ಅವರು ಸಂತೋಷ ಪಡುತ್ತಿರಲಿಲ್ಲವೆಂದಲ್ಲ; ಸಂತೋಷ ಪಡುತ್ತಿದ್ದರು, ನಿಜ; ಬರದಿದ್ದರೆ ಬರಲಿಲ್ಲವಲ್ಲ ಎಂದು ತಪಿಸುತ್ತಿರಲಿಲ್ಲ, ಅದೂ ನಿಜ. ಅವರ ವಿದ್ವತ್ತನ್ನೂ ಪ್ರವಚನಶಕ್ತಿಯನ್ನೂ ಎಲ್ಲರೂ ಮೆಚ್ಚಿದ್ದರು. ಆ ಸಂತೋಷ ಅವರಿಗೆ ಸಾಕಾಗುತ್ತಿತ್ತು. ಅವರಿಗೆ ಮುಖ್ಯವಾಗಿದ್ದದ್ದು; ತಮಗೆ ಪ್ರಿಯವಾದ ಕೆಲಸ. ಸ್ಥಾನಮಾನಗಳು ಗೌಣ.

ಈ ಬಗೆಯ ನಿರ್ಲಿಪ್ತತೆ ಅವರಲ್ಲಿತ್ತು ಎನ್ನುವುದಕ್ಕೆ – ಅವರು ಕರಗತವಾಗಿದ್ದ ಸಿವಿಲ್ ಸರ್ವಿಸ್ ಹುದ್ದೆಯನ್ನು ಸ್ವ–ಇಚ್ಛೆಯಿಂದ ಬಿಟ್ಟು ವಿಶ್ವವಿದ್ಯಾಲಯದ ಕನ್ನಡ ಇಲಾಖೆಗೆ ಸೇರಿದ್ದೇ ಸಾಕ್ಷಿ. ಅಧ್ಯಯನ, ಪ್ರವಚನ, ಬರವಣಿಗೆ. ಇವೆಲ್ಲ ಸ್ಥಾನಮಾನಗಳಿಗಿಂತ, ಸಂಬಳ ಅಧಿಕಾರಗಳನ್ನು ತರುವ ಹುದ್ದೆಗಿಂತ ಹೆಚ್ಚಾದವು. ಅವರು ಸಿವಿಲ್ ಸರ್ವಿಸ್ಸಿನಲ್ಲಿದ್ದಿದ್ದರೆ 'ಭಾರತೀಯ ಕಾವ್ಯಮೀಮಾಂಸೆ'ಯನ್ನು ಬರೆಯುತ್ತಿರಲಿಲ್ಲ ಎಂದು ಪ್ರಮಾಣಮಾಡಿ ಹೇಳಲಾಗುವುದಿಲ್ಲ. ಮಾಸ್ತಿಯವರು ಸಿವಿಲ್ ಸರ್ವಿಸ್ಸಿನಲ್ಲಿದ್ದೇ ಆ ಬಗೆಯ ಕೆಲಸ ಮಾಡಲಿಲ್ಲವೆ! ಶ್ರೀಕಂಠಯ್ಯ ಇತರ ಬಗೆಯ ಪುಸ್ತಕಗಳನ್ನು ಬರೆಯುತ್ತಿದ್ದರೋ ಏನೊ; 'ಭಾರತೀಯ ಕಾವ್ಯಮೀಮಾಂಸೆ'ಯನ್ನು ಬಹುಶಃ ಬರೆಯುತ್ತಿರಲಿಲ್ಲ. ಅದಕ್ಕೆ ಬೇಕಾದ ಅಧ್ಯಯನ, ಚಿಂತನೆ, ಕಾವ್ಯಾನುಭವ – ಅಲ್ಲಿ ಅಸಾಧ್ಯವಲ್ಲದಿದ್ದರೂ ಕಷ್ಟಸಾಧ್ಯವಾಗುತ್ತಿತ್ತು.

ಅಧ್ಯಯನ, ಚಿಂತನೆ, ಕಾವ್ಯಾನುಭವ – ಇವು ಮೂರರ ಫಲ, ಈಗ ಪಂಪ ಪ್ರಶಸ್ತಿ ಪಡೆದಿರುವ 'ಭಾರತೀಯ ಕಾವ್ಯಮೀಮಾಂಸೆ' ಎಂಬ ಕೃತಿ. ಈ ಮೂರರಲ್ಲಿ ಯಾವುದೊಂದು ಇಲ್ಲದಿದ್ದರೂ ಆ ಪುಸ್ತಕವನ್ನು ಬರೆಯುವುದು ಸಾಧ್ಯವಾಗುತ್ತಿರಲಿಲ್ಲ; ಬರೆದಿದ್ದರೂ ಅದು ಅಸಮರ್ಪಕವಾಗುತ್ತಿತ್ತು. ಈ ಮೂರರಲ್ಲಿ ನಾನು ಕಾವ್ಯಾಸ್ವಾದನೆಗೆ, ಕಾವ್ಯಾನುಭವಕ್ಕೆ ಪ್ರಾಮುಖ್ಯ ಕೊಟ್ಟೇನು. ಏಕೆಂದರೆ, ಮೊದಲು ಬರುವುದು ಕಾವ್ಯ; ಅದರ ಆಸ್ವಾದನೆಯಿಂದ ಮತ್ತು ಪರಿಶೀಲನೆಯಿಂದ ಬರುವ ಫಲ–ಕಾವ್ಯಮೀಮಾಂಸೆ. ನನಗೆ ಅನೇಕ ವೇಳೆ ಹೀಗನ್ನಿಸಿದೆ: ಕಾವ್ಯಮೀಮಾಂಸೆ, ಕಾವ್ಯ ವಿಮರ್ಶೆ– ಇವೆರಡೂ ಒಂದೇ ಅರ್ಥಕೊಡುವ ಪದಗಳಲ್ಲ. ಎರಡಕ್ಕೂ ವ್ಯತ್ಯಾಸವಿದೆ. ಅವೆರಡರಲ್ಲಿ ಯಾವುದೊಂದು ಇಲ್ಲದಿದ್ದರೂ ಇನ್ನೊಂದು ಅಸಮರ್ಪಕವಾಗುತ್ತದೆ, ಆದರೆ ಕಾವ್ಯಮೀಮಾಂಸೆಯಲ್ಲಿ ತತ್ವಕ್ಕೆ ಪ್ರಾಧಾನ್ಯ. ಕಾವ್ಯವಿಮರ್ಶೆಯಲ್ಲಿ ನಿರ್ದಿಷ್ಟ ಕೃತಿಯೊಂದಕ್ಕೆ ಪ್ರಾಧಾನ್ಯ. ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ 'Judging by the event' ಎಂಬ ಮಾತುಂಟು. ಅಂದರೆ; ಕವಿ ಮಾಡಿರುವ ಕೆಲಸವೇನು? ಅದನ್ನು ಆಧಾರವಾಗಿಟ್ಟುಕೊಂಡು ಕೃತಿಯನ್ನು ಪರಿಶೀಲಿಸಬೇಕು. 'ಕಾವ್ಯವೆಂದರೆ ಹೀಗಿರಬೇಕು' ಎಂದು ತತ್ವವೊಂದನ್ನು

ರೂಪಿಸಿಕೊಂಡು ಅದನ್ನು ಕೃತಿಗೆ ಅನ್ವಯಿಸಹೋಗುವುದು ಸರಿಯಾದ ದಾರಿಯಲ್ಲ. ಗ್ರೀಕರು ಕವಿಯನ್ನು 'Maker' (ಸೃಷ್ಟಿಸುವವನು) ಎಂದು ಕರೆಯುತ್ತಿದ್ದರು. ಆ ಸೃಷ್ಟಿ ಯಾವುದೊಂದು ತತ್ವವನ್ನೂ ಅನುಸರಿಸಿ ನಡೆಯಬೇಕಾದ್ದಿಲ್ಲ. ಆ ಕೃತಿಯ ಆಧಾರದ ಮೇಲೆ ತತ್ವವನ್ನು ಬದಲಾಯಿಸಿಕೊಳ್ಳಬೇಕಾಗಬಹುದು. ಕಾವ್ಯಮೀಮಾಂಸೆಯಲ್ಲಿ ತತ್ವಭಾಗಕ್ಕೆ ಇರುವ ಸ್ಥಾನ ಶ್ರೀಕಂಠಯ್ಯನಿಗೆ ತಿಳಿದಿತ್ತು. ಅವರು ಒಂದು ದಿನ "ನಾನು ಫಿಲಾಸಫಿ (Philosophy) ಓದಿದ್ದರೆ ಚೆನ್ನಾಗಿತ್ತು" ಎಂದದ್ದು ನೆನಪಿದೆ. ಅವರು ಮಾಡಹೊರಟ ಕೆಲಸಕ್ಕೆ – 'ಕಾವ್ಯಮೀಮಾಂಸೆ'ಯನ್ನು ಬರೆಯುವುದಕ್ಕೆ ಅವರಿಗಿದ್ದಷ್ಟು ತತ್ವವಿವೇಚನಾಶಕ್ತಿ ಸಾಕು ಎಂದೇ ನನ್ನ ಅಭಿಪ್ರಾಯ.

ಈ ಸಂದರ್ಭದಲ್ಲಿ ಡಿ.ವಿ.ಜಿ. ಆಡಿದ ಮಾತೊಂದು ನೆನಪಿಗೆ ಬರುತ್ತಿದೆ. ಐವತ್ತರ ದಶಕದಲ್ಲಿ ಮನಸಾಸ್ತ್ರತ್ರೆಯ ಮುಖ್ಯಸ್ಥರಾಗಿದ್ದ ಡಾಕ್ಟರ್ ಎಂ.ವಿ. ಗೋವಿಂದಸ್ವಾಮಿಯೂ ನಾನೂ ಕಾವ್ಯಪ್ರಕಾಶ, ಧ್ವನ್ಯಾಲೋಕ ಮುಂತಾದ ಕಾವ್ಯಮೀಮಾಂಸಾ ಗ್ರಂಥಗಳ ಅಧ್ಯಯನವನ್ನು ಕೈಗೊಂಡೆವು. ಆ ವೇಳೆಗೆ ಶ್ರೀಕಂಠಯ್ಯನ ಕೃತಿ ಪ್ರಕಟವಾಗಿತ್ತು. ಆದರೆ ನಮಗೆ ಮೂಲ ಗ್ರಂಥಗಳನ್ನೇ ಅಧ್ಯಯನ ಮಾಡುವ ಅಪೇಕ್ಷೆಯಿತ್ತು. ಶಂಕರಮಠದಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀ ರಾಮಚಂದ್ರಶಾಸ್ತ್ರಿಗಳು ನಮಗೆ ನೆರವು ಕೊಡುತ್ತಿದ್ದರು. ಒಂದೋ ಒಂದೂವರೆಯೋ ವರ್ಷ ಕಳೆಯುವುದರೊಳಗೆ ಅವರು ಬನಾರಸ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಹೊರಟು ಹೋದದ್ದರಿಂದ ನಮ್ಮ ಅಧ್ಯಯನ ಅಪೂರ್ಣವಾಯಿತು. ಅದು ಬೇರೆ ಮಾತು.

ಆ ಸಂದರ್ಭದಲ್ಲಿ ನಾನು ಯಾವುದೋ ಸಮಸ್ಯೆಯನ್ನು ಗುಂಡಪ್ಪನವರೊಡನೆ ಚರ್ಚಿಸುತ್ತಿದ್ದಾಗ ಅವರು ಒಂದು ಪ್ರಶ್ನೆಹಾಕಿದರು: "ನಮ್ಮ ಮೀಮಾಂಸಕರು ರಾಮಾಯಣ ಮಹಾಭಾರತ, ಕಾಳಿದಾಸನ ಕೃತಿಗಳು ಇಂಥ ಘನ ಸಾಹಿತ್ಯದಿಂದ ಶ್ಲೋಕಗಳನ್ನು ಅಷ್ಟಾಗಿ ಉದಾಹರಿಸವುದಿಲ್ಲ. ಇದನ್ನು ಗಮನಿಸಿದ್ದೀರಾ?"

ನಾನು ಗಮನಿಸಿದ್ದೆ, ಅದನ್ನು ರಾಮಚಂದ್ರಶಾಸ್ತ್ರಿಗಳೊಡನೆ ಚರ್ಚಿಸಿಯೂ ಇದ್ದೆ. ಡಿ.ವಿ.ಜಿ. ಯವರ ಮಾತಿನಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇರಬಹುದು. ಆದರೆ ಅದು ಸತ್ಯದ ಉತ್ಪ್ರೇಕ್ಷೆ. ನಮ್ಮ ಕಾವ್ಯಮೀಮಾಂಸೆಯಲ್ಲಿ ಘನಸಾಹಿತ್ಯದ ಮಾತು ಬರುತ್ತದೆ, ಉದಾಹೃತ ಶ್ಲೋಕಗಳೂ ಬರುತ್ತವೆ, ಆದರೆ ಅವುಗಳ ಪ್ರಮಾಣ ಕಡಿಮೆ ಎಂದು ನನಗೂ ಅನ್ನಿಸಿತ್ತು – ಡಿ.ವಿ.ಜಿಯವರಿಗೆ ಅನ್ನಿಸಿದ ಹಾಗೆ. ಇದೇಕೆ ಹೀಗಾಯಿತು? ಅಭಿನವಗುಪ್ತ, ಕುಂತಕ ಮೊದಲಾದವರು ತೀಕ್ಷ್ಣಮತಿಗಳು. ಕುಂತಕನ ಕಾವ್ಯಸ್ವಾದನ ಶಕ್ತಿ ಆಶ್ಚರ್ಯಕರವಾದದ್ದು. ಅವನು ಇತರ ಮೀಮಾಂಸಕರಿಗಿಂತ ಸಾಹಿತ್ಯಕ್ಕೆ ಹತ್ತಿರ ಇದ್ದಂತೆ ತೋರುತ್ತದೆ. ಆದರೂ ಒಟ್ಟಿನಲ್ಲಿ ನಮ್ಮವರ ಕಾವ್ಯಮೀಮಾಂಸೆ ಕಾವ್ಯವನ್ನು ಸ್ವಲ್ಪ ಹಿಂದಿಟ್ಟು ತತ್ವವನ್ನು ಸ್ವಲ್ಪ ಮುಂದುಮಾಡಿದಂತೆ ತೋರುತ್ತದೆ. ಆಗಿನ ಭೇದಪ್ರಭೇದಗಳು ಈಗ ನಮಗೆ ಮುಖ್ಯವಲ್ಲ ಎಂಬ ಮಾತನ್ನು ಶ್ರೀಕಂಠಯ್ಯನವರೇ ಆಡಿದ್ದಾರೆ. ಸಾಹಿತ್ಯ ತತ್ವ ತರ್ಕಬದ್ಧವಾಗಿರಬೇಕೆಂಬ ಆಸೆ, ಕ್ಯಾಟಗರಿ (categories)ಗಳನ್ನೂ ಗುರುತಿಸುವ ಚಟ ಇತ್ಯಾದಿಗಳು ಕಾವ್ಯಾನುಭವವನ್ನು – ಓಡಿಸಲಿಲ್ಲ – ಎರಡನೆಯ ಸ್ಥಾನಕ್ಕೆ

ತಳ್ಳಿದವು. ಕಾವ್ಯಮೀಮಾಂಸಕರು ತಮ್ಮ ತತ್ವಕ್ಕೆ ಘನಸಾಹಿತ್ಯದಲ್ಲಿ ಸಮರ್ಥನೆಯನ್ನು ಹುಡುಕುವ ಬದಲು ಕೆಲವು ವೇಳೆ 'ಯಥಾ ಮಮ' ಎಂದು ತಾವೇ ಶ್ಲೋಕವನ್ನು ರಚಿಸಿದ್ದುಂಟು. ಅಂದರೆ, ತತ್ವಪ್ರತಿಪಾದನೆಗಾಗಿ ಸಾಹಿತ್ಯ ಹುಟ್ಟಿತು, ಸಾಹಿತ್ಯದಿಂದ ತತ್ವ ಮೂಡಿ ಬರಲಿಲ್ಲ!

ಈ ಮನೋವೃತ್ತಿ ಇದ್ದದ್ದರಿಂದಲೇ ನಮ್ಮಲ್ಲಿ ರಾಮಾಯಣ, ಮಹಾಭಾರತಗಳ, ಕಾಳಿದಾಸನ ಕಾವ್ಯನಾಟಕಗಳ ಸಮಗ್ರ ವಿಮರ್ಶೆಬರಲಿಲ್ಲ. "ಕುಂತಕ ಇಂಥ ಪೂರ್ಣವಿಮರ್ಶೆ ಮಾಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಮಾಡಲಿಲ್ಲವಲ್ಲ!" ಎಂದು ಶ್ರೀಕಂಠಯ್ಯ ಕೊರಗನ್ನು ಹೇಳಿಕೊಂಡಿದ್ದಾರೆ. ನಮ್ಮಲ್ಲಿ ವ್ಯಾಖ್ಯಾನ ಬೇಕಾದಷ್ಟಿದೆ, ಸಮಗ್ರ ವಿಮರ್ಶೆಯಿಲ್ಲ. ಒಮ್ಮೆಕೊಟ್ಟ ಉದಾಹಣೆಗಳೇ ಮತ್ತೆ ಮತ್ತೆ ಬರುವುದುಂಟು. ಶ್ರೀಕಂಠಯ್ಯ ತಮ್ಮ ಪುಸ್ತಕವನ್ನು ಬರೆಯುತ್ತಿದ್ದಾಗ ನಾನು "ಏನು ಸ್ವಾಮಿ, 'ಗಂಗಾಯಾಂ ಘೋಷಃ' ಮುಂತಾದ ಉದಾಹರಣೆಗಳಿಗೆ ಪುನರ್ಜನ್ಮ ಕೊಡುತ್ತೀರೊ?" ಎಂದು ಹಾಸ್ಯಮಾಡಿದ್ದು ನೆನಪಿದೆ. ಶ್ರೀಕಂಠಯ್ಯ ಉದ್ದೇಶಪೂರ್ವಕವಾಗಿಯೇ ಹೊಸ ಉದಾಹರಣೆಗಳನ್ನು ಕೊಟ್ಟರು.

ಸ್ಥೂಲವಾಗಿ ಹೇಳಬಹುದಾದರೆ, ವಿಮರ್ಶಾತತ್ವಗಳನ್ನು ಕಾವ್ಯಕ್ಕೆ ಅನ್ವಯಿಸುವ ಬದಲು ಸಾಹಿತ್ಯದ ಆಧಾರದ ಮೇಲೆ ತತ್ವಗಳನ್ನು ರೂಪಿಸುವ ಕೆಲಸ ಪಾಶ್ಚಾತ್ಯರಲ್ಲಿ ಹೆಚ್ಚು ಸಮರ್ಪಕರಾಗಿ ನಡೆಯಿತು. ತತ್ವಗಳ ತರ್ಕಬದ್ಧತೆ, ಸಾಹಿತ್ಯದ ಹಿಂದಿರುವ ಮನೋವೃತ್ತಿಯ ವಿಶ್ಲೇಷಣೆ, ಪ್ರೇರಣೆ, ಸಾಹಿತಿಗೂ ಓದುಗನಿಗೂ, ಸಾಹಿತ್ಯಕ್ಕೂ ಓದುಗನಿಗೂ, ಇರುವ ಸಂಬಂಧ – ಒಟ್ಟಿನಲ್ಲಿ ಕಾವ್ಯಮೀಮಾಂಸೆ (the philosophy of literature) ನಮ್ಮಲ್ಲಿ ಚೆನ್ನಾಗಿ ಬೆಳೆಯಿತು. ಸಾಹಿತ್ಯ ವಿಮರ್ಶೆ ಪಾಶ್ಚಾತ್ಯರಲ್ಲಿ ಚೆನ್ನಾಗಿ ಬೆಳೆಯಿತು.

ಶ್ರೀಕಂಠಯ್ಯ ಜನ್ಮ ತಾಳಿದ್ದು ಒಳ್ಳೆಯ ಕಾಲದಲ್ಲಿ. ಅವರು ನೂರು ವರ್ಷ ಹಿಂದೆ ಹುಟ್ಟಿದ್ದರೆ ಈ ಪುಸ್ತಕವನ್ನು ಬರೆಯುವುದು ಸಾಧ್ಯವಾಗುತ್ತಿರಲಿಲ್ಲ. ಆ ಕಾಲದಲ್ಲಿ ಪಾಂಡಿತ್ಯ ವಿರಲಿಲ್ಲವೆಂದಲ್ಲ; ಇತ್ತು, ಅದು ನಿಷ್ಕೃಷ್ಟವಾಗಿಯೂ ಇತ್ತು. ತನ್ನ ಮಿತಿಯಲ್ಲಿ ಒಂದು ಬಗೆಯ ಪರಿಪೂರ್ಣತೆಯನ್ನೂ ಸಾಧಿಸಿತ್ತೇನೊ. ಆ ಪರಿಪೂರ್ಣತೆಯೇ ಅದಕ್ಕೆ ಮುಳುವಾಯಿತು. 'ಪರಿಪೂರ್ಣತೆ' ಎಂಬ ಪದದಲ್ಲಿ ವಿರೋಧಾಭಾಸ ಅಡಗಿದೆ. ಯಾವುದಕ್ಕೇ ಆಗಲಿ, ಬೆಳವಣಿಗೆ ಸಾಧ್ಯವಿಲ್ಲದಿದ್ದರೆ ಅದೊಂದು ಕೊರತೆ ತಾನೆ! ಆ ಕೊರತೆ ಇದ್ದರೆ ಅದು ಪರಿಪೂರ್ಣವಲ್ಲ; ಪರಿಪೂರ್ಣವಾದರೆ ಬೆಳವಣಿಗೆ ಎಲ್ಲಿ ಬಂತು!

ತತ್ವಶಾಸ್ತ್ರದಲ್ಲಿ ಹೇಗೋ ಹಾಗೇ ಸಾಹಿತ್ಯವನ್ನು ಕುರಿತ ಚಿಂತನೆಯಲ್ಲೂ ನಾವು ನಿಂತಲ್ಲಿ ನಿಲ್ಲುವ–ಪರಿಪೂರ್ಣತೆ ನಿಂತಲ್ಲಿ ನಿಲ್ಲಬೇಕು ತಾನೆ! – ಅಭ್ಯಾಸವನ್ನು ಬೆಳಸಿಕೊಂಡೆವೇನೋ. ಈ ಹಸಿರುಗಟ್ಟಿದ ಕೊಳದಿಂದ ನಮ್ಮನ್ನು ಪಾರುಮಾಡಲು ಸಂಸ್ಕೃತಿ ಸಂಘರ್ಷವೊಂದು ಬೇಕಾಗಿತ್ತು. ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸ ಆ ಸಂಘರ್ಷವನ್ನು ಒದಗಿಸಿತು. ರಾಜಕೀಯ ದಲ್ಲಿ ಗುಲಾಮರಾದಂತೆ ಸಂಸ್ಕೃತಿಯಲ್ಲೂ ಗುಲಾಮರಾದೇವು ಎಂಬ ಭಯದಿಂದ ನಾವು ಆಲೋಚನಾಪರರಾದೆವು. ನಮ್ಮ ಸಂಸ್ಕೃತಿಯನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡ ತೊಡಗಿದೆವು. ಅದರ ಜೊತೆಗೆ ಹೊಸ ಸಂಸ್ಕೃತಿಯಿಂದ ಏನನ್ನು ಶೇಖರಿಸಬಹುದೋ

ನೋಡೋಣ, ಕಲಿಯೋಣ ಎಂಬ ವಿಶಾಲದೃಷ್ಟಿಯನ್ನು ಬೆಳಸಿಕೊಂಡೆವು. ಈ ಸಂಘರ್ಷದ ಅತ್ಯುತ್ತಮ ಫಲವನ್ನು ಭಂಡಾರಕರ್, ಎಸ್.ಕೆ. ಚಟರ್ಜಿ, ನಮ್ಮ ಹಿರಿಯಣ್ಣನವರು, ಇಂಥ ವಿದ್ವಾಂಸರಲ್ಲಿ ಕಾಣಬಹುದು. ಹೀಗೆ ಸಂಸ್ಕೃತಿ ಹೊಸ ಜನ್ಮಪಡೆದು ನಳನಳಿಸುತ್ತಿದ್ದ ಕಾಲದಲ್ಲಿ-ಶ್ರೀಕಂಠಯ್ಯ ಬೆಳೆದದ್ದು. ಕಾವ್ಯಮೀಮಾಂಸೆಯಲ್ಲಿ ಅವರು ತರಬೇತಿ ಪಡೆದದ್ದು: ಒಂದು ಕಡೆ ಸಂಪ್ರದಾಯವನ್ನು ಲಘುವಾಗಿ ಕಂಡು ತಿರಸ್ಕರಿಸಲೊಲ್ಲದ, ಮತ್ತೊಂದು ಕಡೆ ಹೊಸದನ್ನು ಸ್ವಾಗತಿಸುವ ವಿಶಾಲದೃಷ್ಟಿಯುಳ್ಳ ಪ್ರೊ. ಹಿರಿಯಣ್ಣನವರಿಂದ. ಶ್ರೀಕಂಠಯ್ಯನಿಗೆ ಒಳ್ಳೆಯ ಗುರು ಸಿಕ್ಕಿದರು, ಹಿರಿಯಣ್ಣನವರಿಗೆ ಒಳ್ಳೆಯ ಶಿಷ್ಯ ಸಿಕ್ಕಿದ. ಒಳ್ಳೆಯ ಶಿಷ್ಯ ಅಗ್ಗದ ಸರಕೇನೂ ಅಲ್ಲ. ಉಪನಿಷತ್ಕಾಲದ ಗುರುಗಳು ಒಳ್ಳೆಯ ಶಿಷ್ಯರನ್ನು ತೋಳುಚಾಚಿ ಬರಮಾಡಿಕೊಳ್ಳುತ್ತಿದ್ದಿರ ಬೇಕು. ಇದಕ್ಕೆ ತೈತ್ತಿರೀಯೋಪನಿಷತ್ತಿನಲ್ಲಿ ಸಾಕ್ಷ್ಯವಿದೆ.

ಶ್ರೀಕಂಠಯ್ಯ ಹಿರಿಯಣ್ಣನವರ ಬಳಿಗೆ ಅಧ್ಯಯನಕ್ಕಾಗಿ ಹೋಗುತ್ತಿದ್ದ ಕಾಲ ನನಗೆ ಚೆನ್ನಾಗಿ ನೆನಪಿದೆ. ಅವರು ಪಾಠ ಮುಗಿಸಿಕೊಂಡ ಬಂದು ಅದೇ ಸಂಜೆ ಅವತ್ತಿನ ಅನುಭವವನ್ನು ಹೇಳುತ್ತಿದ್ದುದುಂಟು. ಒಂದು ಪ್ರಸಂಗ ನೆನಪಿನಲ್ಲಿ ನಿಂತಿದೆ : ಕಾಳಿದಾಸನನ್ನು ಕುರಿತು ಶ್ರೀಕಂಠಯ್ಯ ಹೇಳಿದ ಮಾತೊಂದು ಹಿರಿಯಣ್ಣನವರಿಗೆ ರುಚಿಸಲಿಲ್ಲ. ಆ ಕವಿಯನ್ನು ಲಘುವಾಗಿ ಕಾಣುವುದು ಸರಿಯಲ್ಲ ಎಂದು ಸೂಚಿಸಿದರು. ಮಾತು ಕಟುವಾಗಿದ್ದಂತೆ ತೋರಿತು. ಹಿರಿಯಣ್ಣನವರು ಪರಮ ಸಂಯಮಿಗಳು, ಮಿತಭಾಷಿಗಳು. ಅಂಥವರಲ್ಲಿ ಅಸಮಾಧಾನದ ನೆರಳೂ ಕಟುವಾಗಿ ಕಾಣುತ್ತದೆ! ಶ್ರೀಕಂಠಯ್ಯ ಅದನ್ನು ನೆನೆದು ಬಹಳ ನೊಂದುಕೊಂಡರು. ಅವರ ಕಣ್ಣಿಂದ ನೀರು ಇಳಿದದ್ದನ್ನು ನಾನು ನಮ್ಮ ಸ್ನೇಹಿತ ಜಿ. ಹನುಮಂತರಾಯರೂ ನೋಡಿದೆವು.

ಹಿರಿಯಣ್ಣನವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಆಳವಾದ ತಿಳುವಳಿಗೆ ಇತ್ತು ಎಂಬುದು ಬಹುಶಃ ಅನೇಕರಿಗೆ ತಿಳಿಯದು. ಅವರ ವಿದ್ವತ್ತು ಪ್ರದರ್ಶನಕ್ಕೆ ಮನಸೋತದ್ದಲ್ಲ. ಇತ್ತ ಶ್ರೀಕಂಠಯ್ಯ ಪ್ರಾಂಕ್ತವಾಗಿ ಇಂಗ್ಲಿಷ್ ಎಂ.ಎ. ಕ್ಲಾಸಿನಲ್ಲಿ ಅಧ್ಯಯನ ನಡೆಸಿ ಮೊದಲ ದರ್ಜೆಯ ಡಿಗ್ರಿ ಪಡೆದವರು. ಹೀಗಾಗಿ ಹಿಂದಿನ ಕಾಲದವರಿಗೆ ಇಲ್ಲದಿದ್ದ ಅನುಕೂಲ ಶ್ರೀಕಂಠಯ್ಯನವರಿಗೆ ಇತ್ತು. ನಮ್ಮ ಸಾಹಿತ್ಯ ಸಂಪ್ರದಾಯಕ್ಕೆ ಹೊರತಾದ ಬೇರೊಂದು ಸಾಹಿತ್ಯದ ಪರಿಚಯ ನಮಗೆ ಪುಷ್ಟಿ ಕೊಡುತ್ತದೆ. ಶ್ರೀಕಂಠಯ್ಯನವರಿಗೆ ಪುರಾತನ ಸಂಸ್ಕೃತ ಸಾಹಿತ್ಯ, ಹಳಗನ್ನಡ ಸಾಹಿತ್ಯ, ಇಂಗ್ಲಿಷ್ ಸಾಹಿತ್ಯ, ಮತ್ತು ಆಗ ತಾನೆ ಪ್ರಾಯಕ್ಕೆ ಬಂದು ಯೌವನದ ಹುಮ್ಮಸ್ಸಿನಿಂದ ನಲಿಯುತ್ತಿದ್ದ ಹೊಸಗನ್ನಡ ಸಾಹಿತ್ಯ, ಇವೆಲ್ಲದರ ಪರಿಚಯವೂ ಇತ್ತು. ಎಲ್ಲ ಕಣಗಳಿಂದಲೂ ಅವರು ಫಸಲು ಹೊತ್ತು ತಂದರು. ಅವರು ಕೊಟ್ಟಿರುವ ಉದಾಹರಣೆಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ.

ಅವರು ತ್ರಿವೇಣಿ ಸಂಗಮದಲ್ಲಿ ಸ್ನಾನಮಾಡಿ ಪುನೀತರಾದರು. ಒಂದು ಕಡೆ ಪ್ಲೇಟೋ-ಅರಿಸ್ಟಾಟಲ್-ಪರ್ವತಶಿಖರಗಳಿಂದ ಇಳಿದು ಬಂದ ಸಾಹಿತ್ಯ ಸಮಾಲೋಚನೆಯ ಸವಿ; ಮತ್ತೊಂದು ಕಡೆ ಅಭಿನವಗುಪ್ತ ಮೊದಲಾದ ಮೀಮಾಂಸಕರ ಆಲೋಚನಾ ಪ್ರವಾಹ; ಮೂರನೆಯ ಕಡೆ ನಮ್ಮ ಮತ್ತು ಪಾಶ್ಚಾತ್ಯರ ಸೃಜನಶೀಲಸಾಹಿತ್ಯವಾಹಿನಿ-ಇವೆಲ್ಲದರ ಸಂಗಮದಲ್ಲಿ

ಮಿಂದು ಪುಣ್ಯ ಕಟ್ಟಿಕೊಂಡರು. ಆ ಪುಣ್ಯವನ್ನು ತಮ್ಮ ಪುಸ್ತಕದ ಮೂಲಕ ನಮಗೆಲ್ಲ ಧಾರೆಯೆರೆದು ಕೊಟ್ಟರು. ಆ ಪುಸ್ತಕವೇ 'ಭಾರತೀಯ ಕಾವ್ಯಮೀಮಾಂಸೆ'.

ಅದನ್ನು ಬರೆಯುವುದಕ್ಕಾಗಿ ಅವರು ವರ್ಷಗಟ್ಟಲೆ ಅಧ್ಯಯನ ನಡೆಸಿದರು. ಲೇಖನಿ ಹಿಡಿದು ಬರೆಯುವುದಕ್ಕೂ ವರ್ಷಗಟ್ಟಲೆ ಕಾಲ ಹಿಡಿಯಿತು. ಅವರು ಯಾವ ಕೆಲಸವನ್ನೂ ಬೇಘಾಮಾಗಿ ಆತುರದಲ್ಲಿ ಮಾಡುವವರಲ್ಲ. ಅವರ ವ್ಯಕ್ತಿತ್ವ ದೊಡ್ಡದು; ಅವರ ಕೃತಿಯ ಹಿರಿಮೆಯೂ ದೊಡ್ಡದೇ. ಆ ವ್ಯಕ್ತಿ ಈಗ ನಮ್ಮೊಡನೆ ಇಲ್ಲ; ಅವರು ಕಾಲವಾಗಿ ಕಾಲುಶತಮಾನ ಕಳೆದಿದೆ; ಪುಸ್ತಕ ಪ್ರಕಟವಾಗಿ ಹತ್ತಹತ್ತಿರ ನಾಲ್ಕು ದಶಕಗಳು ಕಳೆದಿವೆ. ಆದರೂ ಅದರ ಕಳೆ ಮಸಕಾಗಿಲ್ಲ. ಜನ ಅದನ್ನು ಆಸಕ್ತಿಯಿಂದ ಓದಿ ಪ್ರಯೋಜನ ಪಡೆಯುತ್ತಿದ್ದಾರೆ. ಹಾಗಿಲ್ಲದಿದ್ದರೆ ಅದನ್ನು ನೆನಪಿಸಿಕೊಂಡು ಪಂಪ ಪ್ರಶಸ್ತಿಯನ್ನು ಕೊಡುವ ಪ್ರಮೇಯವೇ ಇರುತ್ತಿರಲಿಲ್ಲ. ಕೃತಿಕಾರ ಬದುಕಿಲ್ಲ, ಕೃತಿ ಬದುಕಿದೆ, ಅದಕ್ಕೆ ಈ ಪ್ರಶಸ್ತಿ ಕೊಡುತ್ತಿರುವುದು ಸರ್ವಥಾ ಪ್ರಶಂಸನೀಯ. ಶ್ರೀಕಂಠಯ್ಯನವರನ್ನೂ ಅವರ ಕೃತಿಯನ್ನೂ ನೆನಪಿಸಿಕೊಂಡು ಪ್ರಶಸ್ತಿ ಪ್ರದಾನಕ್ಕೆ ಕಾರಣರಾದವರನ್ನೂ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪತ್ರಿಕೆಗಳಲ್ಲಿ ಸಂಪಾದಕೀಯಗಳು

●

ಸೃಜನೇತರ ಕೃತಿಗಾಗಿ ಈ ಬಾರಿ ಪ್ರತಿಷ್ಠಿತ ಪಂಪ ಪ್ರಶಸ್ತಿಯನ್ನು ಪಡೆದ ತೀ.ನಂ. ಶ್ರೀಕಂಠಯ್ಯ ಈಗ ನಮ್ಮ ನಡುವೆ ಇಲ್ಲ. ಆದರೆ ಪ್ರಶಸ್ತಿಗೆ ಅರ್ಹವೆನಿಸಿದ ಕೃತಿ 'ಭಾರತೀಯ ಕಾವ್ಯಮೀಮಾಂಸೆ'. 'ಮೈಸೂರು ಮಲ್ಲಿಗೆ'ಯ ಪೂರ್ವದಲ್ಲೇ ಬಂದ ಮೃದು ಮಧುರ ಭಾವಗಳ ಪ್ರೇಮಗೀತೆಗಳ ಸಂಗ್ರಹ 'ಒಲುಮೆ', ಗದ್ಯ ಲೇಖನಗಳ ಸಂಕಲನ 'ಸಮಾಲೋಕನ' ನಮ್ಮ ನಡುವೆ ಇವೆ. ಹೊಸಗನ್ನಡದ ಉದಯಕಾಲದಲ್ಲಿ ಕನ್ನಡಕ್ಕಾಗಿ ಕೆಲಸ ಮಾಡಿದಂಥ ತುಂಬ ಮಂದಿ ಬರೆದದ್ದು ಕಡಿಮೆಯೇ. ಆ ಸಾಲಿನಲ್ಲಿ ತೀ.ನಂ.ಶ್ರೀ ಕೂಡಾ ಒಬ್ಬರು. ಆದರೆ ಅವರ ವಿದ್ವತ್ತು, ವಿವೇಚನಾಶಕ್ತಿ ಕನ್ನಡವನ್ನು ಬೆಳೆಯಿಸುವುದರಲ್ಲಿ ಅವರು ಮಾಡಿದಂಥ ಕೆಲಸ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂಥದು. ಅವರಿಂದ ಕನ್ನಡ ಕಲಿತವರು ಈಗ ನಿವೃತ್ತಿಯ ಹಂತ ತಲುಪಿದ್ದರೂ ಅಂದಿನ ತೀ.ನಂ.ಶ್ರೀಯವರ ಪಾಠಮಾಡುವ ವೈಖರಿಯನ್ನೂ. ಅದರ ಚುಂಬಕ ಶಕ್ತಿಯನ್ನೂ ನೆನಪಿಕೊಳ್ಳುತ್ತಾರೆ. ಕೇವಲ ಮಾತಿನ ಮೋಡಿಯಾಗಿದ್ದಿದ್ದರೆ ಇಷ್ಟು ದೀರ್ಘಕಾಲ ಅದರ ಪ್ರಭಾವ ಇರಬೇಕಾದ್ದಿರಲಿಲ್ಲ. ಮಾತಿನ ಮೋಡಿಯ ಜತೆ ತಾವು ಪಾಠ ಮಾಡುವ ವಿಷಯದಲ್ಲಿ ಇದ್ದಂಥ ಕಳಕಳಿ, ಪ್ರೀತಿ, ನಿಷ್ಠೆಯಿಂದಾಗಿ ಅವರ ಪ್ರಭಾವ ಇನ್ನೂ ಉಳಿದುಕೊಂಡು ಬಂದಿದೆ ಎನ್ನಲಡ್ಡಿಯಿಲ್ಲ. ತೀ.ನಂ.ಶ್ರೀ ಆದರ್ಶ ಅಧ್ಯಾಪಕರಾಗಿ, ಭಾಷಾ ವಿಜ್ಞಾನದ ಅಧ್ಯಯನಕ್ಕೆ ಒಂದು ಅಡಿಪಾಯ ಹಾಕಿದವರಾಗಿ ಹೆಸರು ಮಾಡಿದ್ದಾರೆ. 'ಪಂಪ ಪ್ರಶಸ್ತಿ' ಪಡೆದಂಥ 'ಭಾರತೀಯ ಕಾವ್ಯಮೀಮಾಂಸೆ' ಅವರ ಹಲವಾರು ವರ್ಷಗಳ ಚಿಂತನೆ, ಅಧ್ಯಯನದ ಫಲವಾದ ಕೃತಿ. ಯಾವುದೇ ಪ್ರಶಸ್ತಿ ಪ್ರಕಟವಾದಾಗಲೂ ಆ ಬಗ್ಗೆ ಕೆಲವು ಅನುಮಾನಗಳಿರುತ್ತವೆ, ಒಂದಿಷ್ಟು ವಿವಾದಗಳಾಗುತ್ತವೆ. ಆದರೆ ತೀ.ನಂ.ಶ್ರೀ ಅವರ ಕೃತಿಗೆ ಪಂಪ ಪ್ರಶಸ್ತಿ ದೊರೆತ ಬಗ್ಗೆ ಯಾರೂ ಆಕ್ಷೇಪ ಎತ್ತದೇ ಇರುವುದೇ ಆ ಕೃತಿಯ ಮತ್ತು ಆ ಕೃತಿಕಾರನ ಮಹತ್ವವನ್ನು ಸಾರುತ್ತದೆ.

(ಮಯೂರ : ಮಾರ್ಚ್ ೧೯೯೦)

* * *

ಪ್ರಶಸ್ತಿಗೇ ಹಿರಿಮೆ

ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ' ಕೃತಿಗೆ ೧೯೮೮-೮೯ರ ಸಾಲಿನ ಪಂಪ ಪ್ರಶಸ್ತಿ. ೧೯೪೭ ರಿಂದ ೧೯೬೭ರ ಅವಧಿಯಲ್ಲಿ ಪ್ರಕಟವಾದ

ಅತ್ಯುತ್ತಮ ಸೃಜನೇತರ ಕೃತಿಯೆಂಬ ಪರಿಗಣನೆ. ಕಳೆದ ವರ್ಷ, ಮೊದಲ ಬಾರಿಗೆ ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿಗೆ ಸೃಜನಶೀಲ ಪ್ರಕಾರದಲ್ಲಿ ಈ ಪ್ರಶಸ್ತಿ ಸಂದಿತ್ತು.

ತೀನಂಶ್ರೀ ಎಂದೇ ಹೆಸರಾದ ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯನವರಿಗೆ ಅವರು ನಿಧನರಾಗಿ ಎರಡು ದಶಕಗಳು ಉರುಳಿದ ಮೇಲೆ ಈ ಪ್ರಶಸ್ತಿ ಸಂದಿದೆ. ಈ ಪ್ರಶಸ್ತಿಯನ್ನು ತೀನಂಶ್ರೀ ಕೃತಿಗೆ ಆಯ್ಕೆ ಮಾಡಿದವರು ಪ್ರಶಸ್ತಿಗೇ ಮಾನ ಸನ್ಮಾನಗಳನ್ನು ದೊರಕಿಸಿ ಕೊಟ್ಟಿದ್ದಾರೆಂದರೆ ಅತಿಶಯವಲ್ಲ.

ಭಾರತೀಯ ಕಾವ್ಯಮೀಮಾಂಸೆಗೆ ಎರಡು ಸಾವಿರ ವರ್ಷಗಳಿಗೂ ಮಿಕ್ಕು ಇತಿಹಾಸ. ಕವಿ, ಕಾವ್ಯದ ಲಕ್ಷಣಗಳು. ಪ್ರಭೇದಗಳು ಮುಂತಾಗಿ ಕಾವ್ಯದ ನಿರ್ಮಿತಿಗೆ ಸಂಬಂಧಿಸಿದ ಮಹತ್ವದ ನಿರೂಪಣೆ ಕಾವ್ಯಮೀಮಾಂಸೆ. ಕಾವ್ಯಮೀಮಾಂಸಾ ಶಾಸ್ತ್ರವನ್ನು ಅಲಂಕಾರ ಶಾಸ್ತ್ರ ಎಂದೂ ಕರೆಯುವುದುಂಟು. ಈ ವಿಷಯ ಕುರಿತ ಆಕರ ಗ್ರಂಥಗಳು ಹಲವು. ಭರತನ ನಾಟ್ಯಶಾಸ್ತ್ರ, ಭಾಮಹನ ಕಾವ್ಯಾಲಂಕಾರ, ದಂಡಿಯ ಕಾವ್ಯಾದರ್ಶ, ಆನಂದವರ್ಧನನ ಧ್ವನ್ಯಾಲೋಕ ಮುಂತಾಗಿ. ತೀನಂಶ್ರೀ ಅವರ 'ಭಾರತೀಯ ಕಾವ್ಯಮೀಮಾಂಸೆ' ಈ ಎಲ್ಲ ಆಕರಗಳನ್ನು ಗ್ರಹಿಸಿ ಸಂಯೋಜಿಸಿದ ಅದ್ಭುತ ಕೃತಿ. ಭಾರತೀಯ ಭಾಷೆಗಳಲ್ಲಿ ಇದಕ್ಕೆ ಸರಿದೊರೆಯಾಗುವ ಗ್ರಂಥ ಇನ್ನೊಂದಿಲ್ಲ ಎಂಬ ಪ್ರಶಂಸೆಯೂ ೧೯೫೩ರಷ್ಟು ಹಿಂದೆ ಪ್ರಕಟವಾಗಿದ್ದ 'ಭಾರತೀಯ ಕಾವ್ಯಮೀಮಾಂಸೆ'ಗೆ ಸಂದಿತ್ತು. ಆ ಕೃತಿಯ ಆಳ ಹರವುಗಳು ಅಂಥವು. ತೀನಂಶ್ರೀಯವರ ಬದುಕಿನಷ್ಟೇ ಒಪ್ಪ, ಅಚ್ಚುಕಟ್ಟು, ಶಾಸ್ತ್ರೀಯ, ವೈಜ್ಞಾನಿಕ.

ತೀನಂಶ್ರೀಯವರದು ಬಹುಮುಖ ಆಸಕ್ತಿ. ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಜತೆಗೆ ಸಂಸ್ಕೃತ, ಕನ್ನಡ, ಇಂಗ್ಲಿಷ್ ವ್ಯಾಸಂಗ. ಭಾಷಾಶಾಸ್ತ್ರ, ವಿಮರ್ಶೆ, ಛಂದಸ್ಸು, ಕಾವ್ಯಮೀಮಾಂಸೆ ಪ್ರಿಯವಾದ ವಿಷಯಗಳು. ವಿದೇಶಗಳಿಗೂ ಭೇಟಿನೀಡಿ ಭಾಷಾವಿಜ್ಞಾನದ ಸಂಶೋಧನೆ ಬೋಧನೆಗಳ ವಿಧಾನಗಳನ್ನು ಅರಿತವರು. ಕನ್ನಡದಲ್ಲಿ ಭಾಷಾವಿಜ್ಞಾನದ ಅಧ್ಯಯನಕ್ಕೆ ಮತ್ತು ಬೆಳವಣಿಗೆಗೆ ಒಳ್ಳೆಯ ಅಡಿಪಾಯ ಹಾಕಿದವರು. ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಎನ್. ನರಸಿಂಹಯ್ಯ ಅವರೊಡಗೂಡಿ ತೀನಂಶ್ರೀಯವರು ವಿದ್ಯಾ ಇಲಾಖೆಗೆ ಸಿದ್ಧಪಡಿಸಿಕೊಟ್ಟ ಕನ್ನಡ ಮಧ್ಯಮ ವ್ಯಾಕರಣ ಇಂದಿಗೂ ಒಂದು ಅತ್ಯುತ್ತಮ ವ್ಯಾಕರಣ ಗ್ರಂಥ. ಕನ್ನಡ ಭಾಷೆಯ ರಚನಾತ್ಮಕ ಅಧ್ಯಯನದ ಜೊತೆಗೆ ಚಾರಿತ್ರಿಕ ಬೆಳವಣಿಗೆಯ ವಿವೇಚನೆ ಅಲ್ಲಿದೆ.

ಸಂಶೋಧನೆ, ಅಧ್ಯಯನಗಳಿಗೆ ಮಾತ್ರ ತೀನಂಶ್ರೀ ಪ್ರತಿಭೆ ಸೀಮಿತವಾದುದಲ್ಲ. ಒಲುಮೆ, ಬಿಡಿಮುತ್ತು, ನಂಟರು ಮುಂತಾದ ಕೃತಿಗಳು ಅವರ ಬಹುಮುಖ ಆಸಕ್ತಿಗೆ ಸಾಕ್ಷಿ. ಪಂಪ, ಸಮಾಲೋಕನ ಎಂಬ ಕೃತಿಯನ್ನು ಅವರು ೧೯೫೮ರಲ್ಲಿ ಬರೆದಿದ್ದರು. ಈಗ ಪಂಪ ಪ್ರಶಸ್ತಿಯನ್ನು ನೀಡಿ ಅವರನ್ನು ಗೌರವಿಸಲಾಗಿದೆ. ಪ್ರಶಸ್ತಿಗೇ ಹಿರಿಮೆ ಬಂದಿದೆ.

(ಕನ್ನಡಪ್ರಭ : ೮–೨–೧೯೯೦)

ಲೇಖನಗಳು

ತೀನಂಶ್ರೀ – ಒಂದು ನೆನಪು

ಕೆ.ಎಸ್. ನರಸಿಂಹಸ್ವಾಮಿ

●

ಭಾರತೀಯ ಕಾವ್ಯಮೀಮಾಂಸೆ ಗ್ರಂಥಕ್ಕೆ ಪಂಪ ಪ್ರಶಸ್ತಿ ಪಡೆದಿರುವ ದಿವಂಗತ ತೀ.ನಂ.ಶ್ರೀಕಂಠಯ್ಯನವರು ಕವಿ ಹೃದಯವುಳ್ಳ ಘನ ವಿದ್ವಾಂಸರಾಗಿದ್ದರು. ಕವಿಗಳಿಗೆ, ಲೇಖಕರಿಗೆ ಪ್ರೋತ್ಸಾಹದ ಸಿಂಚನಗೈಯ್ಯುವ ಸಹೃದಯಿಯಾಗಿದ್ದರು. ಕನ್ನಡದ ಖ್ಯಾತ ಕವಿ ಕೆ.ಎಸ್. ನರಸಿಂಹಸ್ವಾಮಿಯವರು ತೀನಂಶ್ರೀಯವರಿಂದ ತಮಗೆ ದೊರೆತ ಪ್ರೋತ್ಸಾಹವನ್ನು ಇಲ್ಲಿ ಸ್ಮರಿಸಿದ್ದಾರೆ.

೧೯೩೧–೩೨ರ ಅವಧಿಯಲ್ಲಿ ನನ್ನ ಎರಡು ಕವನಗಳು– 'ಕಬ್ಬಿಗನ ಕೂಗು', 'ಏನ ಬೇಡಲಿ' – ಪ್ರಬುದ್ಧ ಕರ್ನಾಟಕದಲ್ಲಿ ಅಚ್ಚಾಗಿದ್ದವು. ೧೯೩೬ ರಲ್ಲಿ ನನ್ನ ಮದುವೆಯಾಯಿತು. ನನಗೆ ಕೆಲಸ ಸಿಕ್ಕಿರಲಿಲ್ಲ; ಮಾವನ ಮನೆಯಲ್ಲಿದ್ದೆ; ತಿಪಟೂರಿನಲ್ಲಿ ಮತ್ತು ಬಳಿಕ ಮಧುಗಿರಿಯಲ್ಲಿ. ಪದ್ಯಗಳನ್ನು ಬರೆಯುವುದು, ತೀನಂಶ್ರೀ ಅವರಿಗೆ ಕಳಿಸುವುದು ನನ್ನ ರೂಢಿಯಾಗಿತ್ತು, ಅವು ಪ್ರಬುದ್ಧ ಕರ್ಣಾಟಕದಲ್ಲಿ ಒಂದಾದಮೇಲೆ ಒಂದು ಅಚ್ಚಾದವು. ೧೯೩೭ ರಲ್ಲಿ ಮೈಸೂರು ನಗರಸಭೆಯ ಕಚೇರಿಯಲ್ಲಿ ನನಗೆ ನೌಕರಿ ಸಿಕ್ಕಿತು; ಮೈಸೂರು ನಗರದಲ್ಲಿ ಸಂಸಾರ ಹೂಡಿದೆ. ೧೯೪೦ರಲ್ಲಿ ಮೈಸೂರು ತಾಲ್ಲೋಕು ಕಚೇರಿಗೆ ವರ್ಗವಾಯಿತು. ೧೯೪೧ರಲ್ಲಿ ಅಲ್ಲಿಂದ ಜಿಲ್ಲಾ ಕಚೇರಿಗೆ ವರ್ಗವಾಯಿತು. ನನ್ನ ಕವನಗಳು ಮುಂದುವರಿದವು.

೧೯೪೧ರಲ್ಲಿ ಒಂದು ದಿನ ಕೃಷ್ಣಶಾಸ್ತ್ರಿಗಳು ನಮ್ಮ ಮನೆಗೆ ಬಂದು ಮಹಾರಾಜ ಕಾಲೇಜ್ ಕರ್ನಾಟಕ ಸಂಘ ನನ್ನ ಕವನಗಳನ್ನು ಪುಸ್ತಕ ರೂಪದಲ್ಲಿ ತರಲು ನಿಶ್ಚಯಿಸಿದೆ ಎಂದೂ ನಾನು ಕೂಡಲೇ ತೀನಂಶ್ರೀ ಅವರನ್ನು ಕಾಣಬೇಕೆಂದೂ ಅಪ್ಪಣೆ ಕೊಡಿಸಿದರು. ಮರುದಿನ ನಾನು ಕೃಷ್ಣಮೂರ್ತಿಪುರದಲ್ಲಿದ್ದ ತೀನಂಶ್ರೀ ಅವರನ್ನು ಕಾಣಬೇಕೆಂದೂ ಅಪ್ಪಣೆ ಕೊಡಿಸಿದರು. ಮರುದಿನ ನಾನು ಕೃಷ್ಣಮೂರ್ತಿಪುರದಲ್ಲಿದ್ದ ತೀನಂಶ್ರೀ ಅವರ ಮನೆಗೆ ಹೋದೆ. ಅಷ್ಟು ಹೊತ್ತಿಗಾಗಲೇ ಅವರು ತಮ್ಮ ಮೇಜಿನ ಮೇಲೆ ನನ್ನ ಕವನಗಳನ್ನು ಜೋಡಿಸಿ ಇಟ್ಟುಕೊಂಡಿದ್ದರು. ಯಾವ ಕವನವಾದ ಮೇಲೆ ಯಾವ ಕವನ ಬರಬೇಕೆಂಬುದನ್ನೂ ಅವರು ಗೊತ್ತು ಮಾಡಿದ್ದರು. ಕವಿತೆಯೆಂದರೆ ಏನೆಂಬುದನ್ನು ಅರಿಯದ ತರುಣ ನಾನು. ಅವರಾದರೋ ಕವಿ ಹೃದಯವುಳ್ಳ

ಘನ ವಿದ್ವಾಂಸರು. ಅವರ ಏರ್ಪಾಡಿಗೆ ನಾನು ಒಪ್ಪಿಕೊಂಡೆ. ತಮ್ಮ ಕವನ ಸಂಗ್ರಹಕ್ಕೆ ಅವರು 'ಒಲುಮೆ' ಎಂದು ನಾಮಕರಣ ಮಾಡಿದ್ದರು. ಈ ಹೆಸರಿಡುವ್ಯ ಕೆಲಸ ದೀರ್ಘ ಚರ್ಚೆಗೆ ಕಾರಣವಾಯಿತು. ಕಡೆಗೆ 'ಈ ಬಗ್ಗೆ ಯೋಚನೆ ಮಾಡಿಕೊಂಡು ನಾಳೆ ಬನ್ನಿ' ಎಂದರು.

ಈ ವಿವರಗಳನ್ನು ನನ್ನ ಹೆಂಡತಿಗೆ ತಿಳಿಸಿದೆ. ಅದು ಮಲ್ಲಿಗೆ ಹೂಗಳ ಕಾಲ. ಕವನ ಸಂಗ್ರಹಕ್ಕೆ ಮೈಸೂರು ಮಲ್ಲಿಗೆ ಎಂದು ಹೆಸರಿಟ್ಟರೆ ಆಯಿತು ಎಂದು ನಿರ್ಧರಿಸಿದೆ. ಅವಳೂ ಸಂತೋಷದಿಂದ ಒಪ್ಪಿದಳು.

ಬೆಳಗಾಗುತ್ತಲೇ ನಾನು ತೀನಂಶ್ರೀಯವರ ಮನೆಗೆ ಹೋದೆ. ಕವನ ಸಂಗ್ರಹಕ್ಕೆ ಮೈಸೂರು ಮಲ್ಲಿಗೆ ಎಂದು ಹೆಸರಿಡೋಣ ಎಂದಾಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. 'ರಾಯರು ಬಂದರು' ಎಂಬ ಕವನವನ್ನು ಇದರಲ್ಲಿ ಸೇರಿಸಿದರೆ ಜನ ಏನಂದಾದರು ಎಂಬ ಭಯ ನನಗೆ. ಇದನ್ನು ಅವರಿಗೆ ತಿಳಿಸಿದೆ. ನನ್ನ ಭಯಕ್ಕೆ ಕಾರಣವಿಲ್ಲವೆಂದು ಅವರು ಭರವಸೆಯಿತ್ತರು. ಹಸ್ತಪ್ರತಿ ಪೂರ್ಣಗೊಂಡು ಕೃಷ್ಣಶಾಸ್ತ್ರಿಗಳಿಗೆ ತಲಪಿತು. ಅವರು ಸರಿಯಾಗಿದೆ ಎಂದು ಅದನ್ನು ವೆಸ್ಲಿ ಪ್ರೆಸ್ಸಿಗೆ ಕಳಿಸಿದರು. ಕರಡು ತಿದ್ದುವ ಕೆಲಸವನ್ನು ತೀನಂಶ್ರೀ ಅವರೇ ವಹಿಸಿಕೊಂಡರು.

ಮರುದಿನ ತೀನಂಶ್ರೀ ನನ್ನನ್ನು ಕರೆಸಿಕೊಂಡು 'ನೀವು ಬೆಂಗಳೂರಿಗೆ ಹೋಗಿ ಡಿವಿಜಿ ಅವರನ್ನು ಕಂಡು ಅವರಿಂದ ಮುನ್ನುಡಿ ತನ್ನಿ' ಎಂದರು. ಈ ಬಗ್ಗೆ ಕೃಷ್ಣಶಾಸ್ತ್ರಿಗಳು ಡಿವಿಜಿ ಅವರಿಗೆ ಬರೆದಿದ್ದರು ಎಂದು ತೋರುತ್ತದೆ. ಸರಿ, ನಾನು ಬೆಂಗಳೂರಿಗೆ ಹೋಗಿ ಡಿವಿಜಿಯವರನ್ನು ಕಂಡೆ. ಅವರು ನನ್ನನ್ನು ಆದರದಿಂದ ಬರಮಾಡಿಕೊಂಡು 'ನಿಮ್ಮ ಕವನಗಳನ್ನು ನಾನು ಪ್ರಬುದ್ಧ ಕರ್ಣಾಟಕದಲ್ಲಿ ಓದಿದ್ದೇನೆ; ಸುಂದರವಾಗಿವೆ. ಮುನ್ನುಡಿ ಬೇಕಾಗಿಲ್ಲ' ಎನ್ನುತ್ತ ನನಗೊಂದು ಪತ್ರವನ್ನು ಕೊಟ್ಟರು. ನಾನು ಮೈಸೂರಿಗೆ ಹಿಂತಿರುಗಿ ಆ ಪತ್ರವನ್ನು ತೀನಂಶ್ರೀಯವರಿಗೆ ಕೊಟ್ಟೆ, ಅವರು 'ಸೊಗಸಾಗಿದೆ. ಮುನ್ನುಡಿ ಬದಲು ಇದನ್ನೇ ಹಾಕಿಬಿಡೋಣ' ಎಂದರು. ಕೃಷ್ಣಶಾಸ್ತ್ರಿಗಳೂ ಅದಕ್ಕೆ ಒಪ್ಪಿದರು. ಪುಸ್ತಕ ಅಚ್ಚಾಯಿತು. ೧೯೪೨ರ ಜನವರಿಯಲ್ಲಿ 'ಮೈಸೂರು ಮಲ್ಲಿಗೆ' ಬೆಳಕಿಗೆ ಬಂತು.

ಈ ಕವನ ಸಂಗ್ರಹದ ನಿರ್ಮಾಣದಲ್ಲಿ– ಅದನ್ನು ಅಚ್ಚಿಗೆ ಕಳಿಸುವುದರಿಂದ ಹಿಡಿದು ಬಿಡುಗಡೆಯ ತನಕ– ಅವರು ಮಾಡಿದ ಉಪಕಾರ ಅನ್ಯಾದೃಶವಾದದ್ದು.

ತೀನಂಶ್ರೀ ನನಗೆ ಕೊಟ್ಟ ಪ್ರೋತ್ಸಾಹಕ್ಕೆ ನಾನು ಚಿರಕೃತಜ್ಞ.

(ಪ್ರಜಾವಾಣಿ : ೧೮-೨-೧೯೯೦)

ಕಾವ್ಯರಸ ಮೀಮಾಂಸಕ ತೀ.ನಂ.ಶ್ರೀ

●

ಪಾಂಡಿತ್ಯದ ರಸವಂತಿಕೆ, ಸಹೃದಯ ತಿಳಿವಳಿಕೆ, ಉಪಾಧ್ಯಾಯ ವೃತ್ತಿಯ ವಾತ್ಸಲ್ಯಗಳಿಂದ ತೀ.ನಂ.ಶ್ರೀಯವರು, ಕನ್ನಡ ಸಾಹಿತ್ಯ ವಿಮರ್ಶಾರಂಗಕ್ಕೆ ಇನ್ನೂ ಅತ್ಯುನ್ನತ ಕಾಣಿಕೆಗಳನ್ನು ಸಲ್ಲಿಸುವ ಸಾಧ್ಯತೆಗಳಿರುವಾಗಲೇ ಕಾಲವಶರಾದದ್ದು ಕನ್ನಡನಾಡಿನ ದುರ್ದೈವ. ಆದರೆ ತೀ.ನಂ.ಶ್ರೀಯವರ "ಭಾರತೀಯ ಕಾವ್ಯಮೀಮಾಂಸೆ" ಗ್ರಂಥಕ್ಕೆ ಇದೀಗ ೧೯೮೮-೮೯ರ ಸಾಲಿನ ಪಂಪ ಪ್ರಶಸ್ತಿ ದೊರಕುತ್ತಿರುವುದು ಆ ಪ್ರಶಸ್ತಿಗೇ ಸಂದ ಗೌರವವಾಗಿದೆ. ಒಂದು ಲಕ್ಷ ರೂಪಾಯಿಗಳ ಈ ಬಹುಮಾನದಿಂದ ಕನ್ನಡ ಕಾವ್ಯಪ್ರೇಮಿಗಳ ಗಮನವು ಈ ಅತ್ಯುತ್ತಮ ಕಾವ್ಯಮೀಮಾಂಸಾ ಗ್ರಂಥದತ್ತ ವಿಶೇಷವಾಗಿ ಆಕರ್ಷಿತವಾಗಬಹುದು.

ಆದರೆ ತೀ.ನಂ.ಶ್ರೀಯವರ "ಭಾರತೀಯ ಕಾವ್ಯಮೀಮಾಸೆ"ಯನ್ನು ಮೀರಿಸುವ ಗ್ರಂಥ ಇನ್ನೊಂದು ಕನ್ನಡದಲ್ಲಿ ಇನ್ನೂ ಬಂದಿಲ್ಲವೆಂಬುದು ಕೇವಲ ಆಶ್ಚರ್ಯದ ಸಂಗತಿಯಲ್ಲ, ಆ ಗ್ರಂಥದ ಆಂತರಿಕ ಮೌಲ್ಯಕ್ಕೆ ಸಾಕ್ಷಿಯಾಗಿದೆ.

ಮುಖ್ಯವಾಗಿ ಕಾವ್ಯಸ್ವರೂಪ, ರಸ, ಧ್ವನಿಗಳ ಬಗೆಗೆ ಭಾರತೀಯ ಸಂಸ್ಕೃತ ಕಾವ್ಯ ಮೀಮಾಂಸಕರು, ಕನ್ನಡ ಕವಿ ರಸಜ್ಞರು ಮಾಡಿದ ವಿವೇಚನೆಯ ತಿರುಳನ್ನೆಲ್ಲ ಖಚಿತ ಭಾಷೆಯಲ್ಲಿ, ಅಚ್ಚುಕಟ್ಟಾದ ರೀತಿಯಲ್ಲಿ ಐತಿಹಾಸಿಕವಾಗಿ ವಿವೇಚಿಸಿ, ಹೊಸಚಿಂತನೆಯ ಗತಿ ಎತ್ತ ಎಂಬುದನ್ನು ತೀ.ನಂ.ಶ್ರೀ. ಹಾಗೆ ತಿಳಿಸಿದವರಿಲ್ಲ. ಅವರು ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯನ್ನೂ ಇದೇರೀತಿ ಸಂಗ್ರಹಿಸಿ, ವಿಶ್ಲೇಷಿಸಿ ಕನ್ನಡಿಗರಿಗೆ ನೀಡುವ ಹೆಬ್ಬಯಕೆ ಹೊಂದಿದ್ದರು. ಕಾಲನ ಇಚ್ಛೆ ಬೇರೆಯಾಗಿತ್ತು. ಅವರ ದೃಷ್ಟಿಯೇ ಸಮಗ್ರವೂ ಖಚಿತವೂ ಆಗಿತ್ತು.

ಪಂಪ, ರನ್ನರನ್ನು ಕುರಿತು ತೀ.ನಂ.ಶ್ರೀಯವರು ಉಪನ್ಯಾಸ ನೀಡುತ್ತಿದ್ದರೆ ಪಾಂಡಿತ್ಯ ಹಾಗೂ ರಸವಂತಿಕೆಗಳ ಹೃದಯಂಗಮ ಸಂಗಮ ದರ್ಶನವಾಗುತ್ತಿತ್ತು. ಪ್ರಾಚೀನ ಕಾಲದಿಂದ ಇಂದಿಗೂ ಉಳಿದುಕೊಂಡು ಬಂದಿರುವ ವಿಶಿಷ್ಟ ಶಬ್ದಗಳನ್ನು ಕಂಡರೆ ಅವರೆಗೆಷ್ಟು ಆನಂದವಾಗುತ್ತಿತ್ತೋ ಅಷ್ಟೇ ಆನಂದ ಆ ಶಬ್ದಗಳ ಸ್ವಾರಸ್ಯವನ್ನು ಅವರು ಸಭೆಯಲ್ಲಿ ವಿವರಿಸುವಾಗ ಉಂಟಾಗುತ್ತಿತ್ತು.

ಕಾವ್ಯ ಸ್ವಾರಸ್ಯ ಕಂಡರೆ ತಕ್ಷಣ ಮೆಚ್ಚಿ ಬಾಯ್ತುಂಬ ಹೊಗಳುವ ಹೃದಯವಂತಿಕೆ ಆಶ್ಚರ್ಯಕರವಾಗಿತ್ತು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ತೀ.ನಂ.ಶ್ರೀ. ಅವರು

ಕನ್ನಡ ಪ್ರಾಧ್ಯಾಪಕರಾಗಿದ್ದಾಗ ಬೇಂದ್ರೆಯವರ 'ಜೋಗಿ' ಎಂಬ (ಈಗ ಬಹುಪ್ರಖ್ಯಾತವಾಗಿರುವ) ಕವನವನ್ನು ಬೀಡಿ ಎಂಬ ಎಂ.ಎ. ವಿದ್ಯಾರ್ಥಿ ಅದ್ಭುತವಾಗಿ ಹಾಡಿದ್ದನ್ನು ಕೇಳಿ "ಬೇಂದ್ರೆಯವರ ಯಾವ ಕವನದಲ್ಲಿ ಎಂಥ ಸೊಗಸುಂಟೊ! ಹೀಗೆ ಹಾಡಿದಾಗಲೇ ತಿಳಿಯಬೇಕು" ಎಂದು ಉದ್ಗರಿಸಿದರು. ಅದು ಬಹುಶಃ ೧೯೫೬ನೆಯ ವರುಷವಾಗಿರಬೇಕು. ಅದಾದ ನಂತರವೇ ಕನ್ನಡ ವಿಮರ್ಶಕರು 'ಜೋಗಿ' ಕವನದ ಬಗೆಗೆ ಮತ್ತೆ ಮತ್ತೆ ಮಾತನಾಡಲು ಪ್ರಾರಂಭಿಸಿದ್ದಾರೆ.

ನಿಜವಾಗಿ ತೀನಂಶ್ರೀ ಅವರಿಗೆ ಸಲ್ಲಿಸಬಹುದಾದ ಅತ್ಯುತ್ತಮ ಪ್ರಶಸ್ತಿಯೆಂದರೆ–ಪಾಶ್ಚಾತ್ಯ ಪೌರ್ವಾತ್ಯ ಕಾವ್ಯಮೀಮಾಂಸೆಯ ಆಳ ಅಧ್ಯಯನದಿಂದ ಕೂಡಿದ ಸಮನ್ವಯ ದರ್ಶನವು ಕನ್ನಡದಲ್ಲಿ ಪ್ರಕಟವಾಗಬೇಕು.

ರಾಜ್ಯ ಸರಕಾರ ಸ್ಥಾಪಿಸಿರುವ ಪಂಪ ಪ್ರಶಸ್ತಿಯನ್ನು ಪ್ರಥಮ ಬಾರಿಗೆ ಕುವೆಂಪು ಅವರ "ರಾಮಾಯಣ ದರ್ಶನಂ"ಗೆ ನೀಡಲಾಗಿತ್ತು. ೧೯೫೩ರಲ್ಲಿ ಪ್ರಕಟವಾದ "ಭಾರತೀಯ ಕಾವ್ಯಮೀಮಾಂಸೆ"ಗೆ ಈಗ ಇಂಥ ಬಹುಮಾನ ದೊರಕಿರುವುದನ್ನು ನೋಡಿದರೆ ಇಂದಿಲ್ಲ ನಾಳೆ ಕನ್ನಡದ ಎಲ್ಲ ಉತ್ಕೃಷ್ಟ ಕೃತಿಗೂ ಉತ್ತಮ ಗೌರವ ಸಲ್ಲಬಹುದೆಂಬ ನಂಬಿಗೆ ಯುಂಟಾಗುತ್ತದೆ.

(ಪ್ರಜಾಮತ : ೨೫-೨-೧೯೯೦)

(ನನ್ನ ಬಳಿ ಇರುವ ಈ ಲೇಖನದ ಪ್ರತಿಯಲ್ಲಿ ಲೇಖಕರು ಯಾರೆಂದು ಅಚ್ಚಾಗಿಲ್ಲ! ಆದ್ದರಿಂದ ಅದನ್ನು ಮೇಲೆ ತಿಳಿಸಲಾಗಿಲ್ಲ. ಇದನ್ನು 'ಪ್ರಜಾಮತ'ದಿಂದ ಪಡೆಯುವ ನನ್ನ ಪ್ರಯತ್ನ ವಿಫಲವಾಗಿದೆ. ಇದಕ್ಕಾಗಿ ವಿಷಾದಿಸುತ್ತೇನೆ ಮತ್ತು ಲೇಖಕರ ಕ್ಷಮೆ ಕೋರುತ್ತೇನೆ.–ಸಂಪಾದಕ)

ಆಚಾರ್ಯ ತೀನಂಶ್ರೀ

ಎಚ್ಚೆಸ್ಕೆ

●

ದುಂಡು ಮುಖ. ಕನ್ನಡಕ. ಬಟ್ಟಗಣ್ಣುಗಳಲ್ಲಿ ಸ್ನಿಗ್ಧ ಪ್ರಕಾಶ. ತುಟಿಯ ಮೇಲೆ ನಗೆಯ ತೆಳು ಲೇಪ. ಸೌಜನ್ಯ ರೂಪ.

ಗರಿಮುರಿಯಾದ ಉಡುಗೆ ತೊಡುಗೆ. ಭಾರತೀಯ ಸಂಸ್ಕೃತಿಯೇ ಸಮವಸ್ತ್ರ ತೊಟ್ಟು ಬಂದ ಹಾಗೆ.

ಅವರೊಬ್ಬ ಆದರ್ಶ ಪ್ರಾಧ್ಯಾಪಕ. ವಿದ್ಯಾರ್ಥಿಗಳಿಗೆ ಅವರಲ್ಲಿ ಪ್ರೀತಿ ಮಿಶ್ರಿತ ಭಯ, ಗೌರವ. ಸಾಹಿತ್ಯವಾಗಲಿ, ಮೀಮಾಂಸೆಯಾಗಲಿ, ಭಾಷಾವಿಜ್ಞಾನವಾಗಲಿ – ಎಲ್ಲ ಬೋಧನೆಯೂ ಅವರಿಗೆ ಒಂದೇ ಸಮ. ಸ್ವಾರಸ್ಯಕರ : 'ರಸಮೊಸರೆ. ಲಕ್ಕಣಂ ಮಿಕ್ಕಿರೆ. ನಲ್ನುಡಿ ಮೆರೆಯೆ.'

ವಿದ್ಯಾರ್ಥಿಗಳಲ್ಲಿ ಅಪಾರ ವಾತ್ಸಲ್ಯ. ತಮ್ಮಲ್ಲಿರುವುದೆಲ್ಲವನ್ನೂ ಕೊಟ್ಟುಬಿಡಬೇಕೆಂಬ ಧಾರಾಳತೆ. ಆದರೂ ಅಹಂತೆಯಿಲ್ಲ, ತಮ್ಮದೇ ಕೊನೆ ಮಾತೆಂಬ ಗರ್ವವಿಲ್ಲ. ತಮಗೇ ಸಂದೇಹವಿದ್ದಾಗ, ಅದನ್ನು ಹೇಳಿಕೊಳ್ಳುವ ಮಟ್ಟಿಗೆ ಅವರ ವಿನಯ, 'ಇನ್ನೂ ನನಗೆ ಅರ್ಥವಾಗಿಲ್ಲ. ಆದಮೇಲೆ ಹೇಳುತ್ತೇನೆ. ನಿಮಗೇನಾದರೂ ಹೊಳೆದರೆ ಹೇಳಿ' ಎಂದು ಮುಚ್ಚುಮರೆ ಇಲ್ಲದೆ ಒಪ್ಪಿಕೊಳ್ಳುವ ಸ್ವಭಾವ. ನಿಜವಾದ ವಿದ್ವಾಂಸನ, ಜಿಜ್ಞಾಸುವಿನ ಗುಣ.

ವರ್ಷದ ಕೊನೆಯಲ್ಲಿ ಅವರು ಪಾಠ ಮುಗಿಸಲು ತೆಗೆದುಕೊಳ್ಳುತ್ತಿದ್ದ ಸ್ಪೆಷಲ್ ಕ್ಲಾಸುಗಳನ್ನು ವಿದ್ಯಾರ್ಥಿಗಳು ಕಾತರದಿಂದ ಎದುರು ನೋಡುತ್ತಿದ್ದರು. ಆ ತರಗತಿಗಳು ನಡೆಯುತ್ತಿದ್ದುದು ಅವರ ಮನೆಯಲ್ಲೇ. ವಿದ್ಯಾರ್ಥಿಗಳಿಗೆ ಆಗ ದೊರೆಯುತ್ತಿದ್ದುದು ಬರೀ ಪಾಠವಲ್ಲ, ಜೊತೆ ಪಾನಕ, ಫಲಾಹಾರ. ಯಾವ ವಿದ್ಯಾರ್ಥಿ ತಾನೆ ಚಕ್ಕರ್ ಹೊಡೆದಾನು?

ಆಚಾರ್ಯ ತೀ.ನಂ.ಶ್ರೀಕಂಠಯ್ಯ ಅವರದು ತುಂಬು ಪಾಂಡಿತ್ಯ. ಕನ್ನಡ, ಸಂಸ್ಕೃತ. ಇಂಗ್ಲಿಷ್ ಸಾಹಿತ್ಯಗಳು ಅವರಿಗೆ ವಾಚೋವಿಧೇಯ. ಚಿಕ್ಕನಾಯಕನಹಳ್ಳಿಯ ತೀರ್ಥಪುರದಲ್ಲಿ ಹುಟ್ಟಿದ ಶ್ರೀಕಂಠಯ್ಯನವರು (೧೯೦೬–೧೯೬೬) ಶ್ಯಾನುಭೋಗರ ಹುಡುಗ. ಅವರ ತಂದೆ ನಂಜುಂಡಯ್ಯನವರದು ದೊಡ್ಡ ಅವಿಭಕ್ತ ಕುಟುಂಬ. ತೀರ್ಥಪುರ–ಚಿಕ್ಕನಾಯಕನಹಳ್ಳಿಯಲ್ಲಿ ಪ್ರಾಥಮಿಕ–ಮಾಧ್ಯಮಿಕ ವಿದ್ಯಾಭ್ಯಾಸ ಪಡೆದ ತೀ.ನಂ.ಶ್ರೀ. ತುಮಕೂರಿಗೆ ಪ್ರೌಢಶಾಲಾ ವ್ಯಾಸಂಗಕ್ಕಾಗಿ ಹೋಗುವ ವೇಳೆಗೆ ವೆಂಕಟಾಚಾರ್, ಗಳಗನಾಥ ಮೊದಲುಗೊಂಡು ಆಗ

ಲಭ್ಯವಿದ್ದ ಎಲ್ಲ ಒಳ್ಳೆಯ ಕನ್ನಡ ಪುಸ್ತಕಗಳನ್ನೂ ಓದಿ ಮುಗಿಸಿದ್ದರು. ಸಂಸ್ಕೃತದ ಕಾವ್ಯಗಳನ್ನೂ ಕಲಿತಿದ್ದರು.

ಅವರು ಪ್ರೌಢಶಾಲೆಯಲ್ಲಿ ತೆಗೆದುಕೊಂಡಿದ್ದು ಕನ್ನಡವನ್ನು. ಸಂಸ್ಕೃತ ತೆಗೆದುಕೊಳ್ಳದ್ದಕ್ಕಾಗಿ ತಂದೆ ಅಸಮಾಧಾನಗೊಂಡರಾದರೂ ಅವರು ಅದರ ಅಭ್ಯಾಸವನ್ನೂ ಬಿಡಲಿಲ್ಲ. ಇಂಗ್ಲಿಷೂ ಅವರಿಗೆ ತುಂಬ ಪ್ರಿಯ. ಹೀಗೆ ಅವರು ವಿದ್ಯೆಯ ಮುಕ್ಕಣ್ಣರೇ ಆದರು.

ಪ್ರೌಢಶಾಲೆಯಲ್ಲಿದ್ದಾಗಲೇ ಸ್ವತಂತ್ರ ಕವನಗಳನ್ನು ರಚಿಸುವುದರ ಜೊತೆಗೆ ಭಾಷಾಂತರವನ್ನೂ ಮಾಡತೊಗಿದರಾದರೂ ತೀ.ನಂ.ಶ್ರೀ. ಅವರು ಎಂದೂ ಬರವಣಿಗೆಯ ಚಟಕ್ಕೆ ಬಲಿಯಾಗಲಿಲ್ಲ. ಮಾತು ಬರಹದ ಶತ್ರು, ಬರಹ ಓದಿನ ಶತ್ರು ಎಂದೇ ಅವರು ಭಾವಿಸಿದ್ದರು. ಓದಿಗೆ. ಚಿಂತನೆಗೆ. ಜಿಜ್ಞಾಸೆಗೆ ಅವರು ನೀಡಿದಷ್ಟು ಪ್ರಾಶಸ್ತ್ಯವನ್ನು ಬರಹಕ್ಕೆ ಎಂದೂ ಕೊಡಲಿಲ್ಲ.

ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ತರಗತಿಗೆ ಸೇರಿದ ತೀ.ನಂ.ಶ್ರೀ ಅವರ ಗುರುಗಳು ರಾಲೋ, ಹಿರಿಯಣ್ಣ, ಬಿ.ಎಂ.ಶ್ರೀ. ಅವರಂಥವರು.

ಬಿ.ಎ. ಪದವಿ ಪರೀಕ್ಷೆಯಲ್ಲಿ ಉನ್ನತಸ್ಥಾನ ಪಡೆದು ಆರು ಪದಕಗಳನ್ನೂ ಬಹುಮಾನಗಳನ್ನೂ ಪಡೆದುಕೊಂಡ ತೀ.ನಂ.ಶ್ರೀ. ಮುಂದೆ ಇಂಗ್ಲಿಷ್ ಎಂ.ಎ.ಗೆ ಸೇರಿದರು. ಅದನ್ನು ಮುಗಿಸುವ ಮುನ್ನವೇ ಅಂದಿನ ಮೈಸೂರು ಸಂಸ್ಥಾನದ ಸಿವಿಲ್ ಸರ್ವೀಸ್ ಪರೀಕ್ಷೆ ಬಂತು. ಇಷ್ಟವಿಲ್ಲದೆಯೇ ಅದಕ್ಕೆ ಹೋದರು. ಅಮಲ್ದಾರ್ ಹುದ್ದೆಯೂ ದೊರಕಿತು.

ಅಧ್ಯಾಪಕರಾಗಬಯಸಿದ್ದ ತೀ.ನಂ.ಶ್ರೀ. ಅವರು, ಬಿ.ಎಂ.ಶ್ರೀ. ಅವರ ಸಲಹೆಯ ಮೇರೆಗೆ ತಾತ್ಕಾಲಿಕವಾಗಿ ಆ ಹುದ್ದೆಯಲ್ಲಿ ಮುಂದುವರಿದರು. ಮುಂದೆ ಅಧ್ಯಾಪಕರಾಗಿ ನೇಮಕಗೊಂಡಾಗ ಅಧಿಕಾರ, ಐಶ್ವರ್ಯಗಳ ಹುದ್ದೆಯನ್ನು ತೊರೆದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾದರು. ಎಂ.ಎ. ಪದವಿಯನ್ನೂ ಪಡೆದುಕೊಂಡರು. ಜೊತೆಗೆ ಪದಕವನ್ನು ಕೂಡ.

ಹಳಗನ್ನಡ– ನಡುಗನ್ನಡ– ಹೊಸಗನ್ನಡ ಸಾಹಿತ್ಯ, ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರ, ಕಾವ್ಯ ಮೀಮಾಂಸೆ, ಗ್ರಂಥಸಂಪಾದನೆ, ಭಾಷಾ ವಿಜ್ಞಾನ–ಹೀಗೆ ಹಲವು ಕ್ಷೇತ್ರಗಳಲ್ಲಿ ತೀ.ನಂ.ಶ್ರೀ. ಸಂಪಾದಿಸಿದ ಜ್ಞಾನ ಅಪಾರವಾದ್ದು. ಅಧ್ಯಾಪಕರಾಗಿ, ಕಾಲೇಜುಗಳ ಸೂಪರಿಂಟೆಂಡೆಂಟರಾಗಿ ಕಾರ್ಯನಿರ್ವಹಿಸುತ್ತ ಅವರು ಅಧ್ಯಯನ ಸಂಶೋಧನೆಗಳಲ್ಲೂ ಮುಂದುವರಿದರು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಐದು ವರ್ಷ ಕಾಲ (೧೯೫೨–೫೭) ಪ್ರಾಧ್ಯಾಪಕರಾಗಿದ್ದು, ಆ ಸಂದರ್ಭದಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಭಾಷಾ ವಿಜ್ಞಾನದ ಗೋಷ್ಠಿಗಳಲ್ಲೂ, ಸಮ್ಮೇಳನಗಳಲ್ಲೂ, ಬೇಸಗೆ ಶಾಲೆಗಳಲ್ಲೂ ಭಾಗವಹಿಸಿದರು. ಅನೇಕ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದರು. ಅಮೆರಿಕ ಯೂರೋಪುಗಳ ಅನೇಕ ವಿಶ್ವವಿದ್ಯಾನಿಲಯಗಳನ್ನು ಸಂದರ್ಶಿಸಿ ತಮ್ಮ ಜ್ಞಾನದ ಸೀಮೆಯನ್ನು ವಿಸ್ತರಿಸಿಕೊಂಡರು. ತಿಳಿವನ್ನು ಹಂಚಿಕೊಂಡರು. ೧೯೫೭ರಿಂದ ನಿವೃತ್ತಿಯಾಗುವವರೆಗೆ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದರು.

ತೀ.ನಂ.ಶ್ರೀ. ಅವರು ಗಳಿಸಿದ್ದ ವಿದ್ವತ್ತಿಗೆ ಹೋಲಿಸಿದರೆ ಅವರು ಬರೆದದ್ದು ಬಹಳ ಕಡಿಮೆ. 'ನನ್ನ ಲೇಖನ ವ್ಯವಸಾಯ ಅಷ್ಟೇನೂ ಹುಲುಸಲ್ಲ' ಎಂದು ಅವರೇ ಹೇಳಿಕೊಂಡಿದ್ದಾರೆ. ಆದರೆ ಮಿತ್ರರ, ಅಭಿಮಾನಿಗಳ ಒತ್ತಾಯಕ್ಕೆ ಕಟ್ಟುಬಿದ್ದು, ವಿಮರ್ಶೆ, ಪ್ರಸ್ತಾವನೆ. ಸಂಶೋಧನ ಲೇಖನ ಮುಂತಾದವನ್ನು ಆಗಾಗ ಬರೆದರು. ಅವುಗಳ ಸಂಕಲನವೇ 'ಸಮಾಲೋಕನ' (೧೯೫೪). 'ಇಂಗ್ಲಿಷ್ ಗೀತ'ಗಳಿಂದ ಹಿಡಿದು 'ಎಂಡ್ಕುಡ್ಕ ರತ್ನ'ದವರೆಗೆ, 'ಪಂಪ ಭಾರತದ ಕೃಷ್ಣ'ನಿಂದ ಹಿಡಿದು 'ಮಾತ್ರೆ ಮುಡಿ ಪದ್ಮಗಣ'ದವರೆಗೆ, 'ಕುದುರೆ' 'ಕರ್ನಾಟಕ'ಗಳಿಂದ ಹಿಡಿದು 'ಏನಿ–ಗಡಿಂ–ರೀ'ವರೆಗೆ ಈ ಲೇಖನಗಳು ವಿಸ್ತರಿಸಿವೆ. 'ಪಂಪ' (೧೯೩೬), 'ಕಾವ್ಯ ಸಮೀಕ್ಷೆ' (೧೯೪೭) ಇವು ಅವರ ಎರಡು ಪ್ರಮುಖ ವಿಮರ್ಶಾತ್ಮಕ ಕೃತಿಗಳು.

'ಭಾರತೀಯ ಕಾವ್ಯಮೀಮಾಂಸೆ' ಎಂಬುದು ತೀ.ನಂ.ಶ್ರೀ. ಅವರ ಅತ್ಯಂತ ಮಹತ್ವದ ಕೃತಿ. ಹಲವು ವರ್ಷಗಳ ದೀರ್ಘ ಅಧ್ಯಯನ, ಚಿಂತನಗಳ ಫಲವಾದ ಈ ಕೃತಿಯನ್ನು ಕುವೆಂಪು ಅವರು ಒಂದು ಆಚಾರ್ಯಕೃತಿ ಎಂದು ಕರೆದಿದ್ದಾರೆ. ಸಂಸ್ಕೃತದ ಅನೇಕ ಕಾವ್ಯ ಮೀಮಾಂಸೆಯ ಕೃತಿಗಳ ತಳಹದಿಯ ಮೇಲೆ ತೀ.ನಂ.ಶ್ರೀ. ಅವರು ಇಲ್ಲಿ ಈ ವಿಷಯವನ್ನು ಕುರಿತು ಸಮಗ್ರವಾದ ವಿವೇಚನೆ ನಡೆಸಿದ್ದಾರೆ. ಭಾರತದ ಬೇರೆ ಯಾವ ಭಾಷೆಯಲ್ಲೂ ಇಂಥ ಕೃತಿ ಬಂದಿಲ್ಲ. ತೀ.ನಂ.ಶ್ರೀ ಅವರ ಸಾಹಿತ್ಯೋಪಾಸನೆಯ ಪಕ್ವ ಫಲ. ಈ ಕೃತಿ 'ಪಂಪ ಪ್ರಶಸ್ತಿ'ಗೆ ಎಲ್ಲ ದೃಷ್ಟಿಯಿಂದಲೂ ಅರ್ಹ.

'ರಾಕ್ಷಸನ ಮುದ್ರಿಕೆ' ಎಂಬುದು ತೀ.ನಂ.ಶ್ರೀ ಅವರು ಬರೆದಿರುವ ಗದ್ಯ ನಾಟಕ. ಇದರ ಜೊತೆಗೆ ಹಲವಾರು ಕೃತಿಗಳನ್ನು ಸಂಪಾದಿಸಿರುವ ತೀ.ನಂ.ಶ್ರೀ ಅವರು ಸೃಜನಾತ್ಮಕ ಲೇಖಕರು ಕೂಡ. 'ಒಲುಮೆ' ಎಂಬುದು ಪ್ರೇಮಗೀತೆಗಳ ಸಂಕಲನ. ಇಲ್ಲಿ ಗಂಡು ಹೆಣ್ಣುಗಳ ಮೃದು ಮಧುರವಾದ ಮುಗ್ಧ ಪ್ರೇಮದ ನವುರಾದ ವರ್ಣನೆಯಿದೆ. ಸುಸಂಸ್ಕೃತರಾದ ರಸಿಕ ಜನರನ್ನು ತಣಿಸುವ ಕೃತಿಯಿದು. 'ನಂಟರು.' ಅತ್ಯಂತ ಸುಂದರವಾದ ಲಲಿತ ಪ್ರಬಂಧಗಳ ಸಂಕಲನ.

ಆದರ್ಶ ಪ್ರಾಧ್ಯಾಪಕರಾಗಿ ಭಾಷಾವಿಜ್ಞಾನದ ಅಧ್ಯಯನಕ್ಕೆ ಮೈಸೂರು, ವಿಶ್ವವಿದ್ಯಾನಿಲಯದಲ್ಲಿ ಒಳ್ಳೆಯ ತಳಹದಿ ಹಾಕಿದ ತೀ.ನಂ.ಶ್ರೀ ಅವರು ತಮ್ಮ ಜೀವಿತ ಕಾಲದಲ್ಲಿ ಅಜಾತ ಶತ್ರು ಎಂದೇ ಎನಿಸಿದ್ದರು.

(ಸುಧಾ : ೨೫–೦೨–೧೯೯೦)

ಕಾವ್ಯಮೀಮಾಂಸೆಯ ತೀ.ನಂ.ಶ್ರೀ

ಗೋಪಾಲಕೃಷ್ಣ ಅಡಿಗ

●

ಈ ಸಲದ ಪಂಪ ಪ್ರಶಸ್ತಿ– ದಿವಂಗತ ತೀ.ನಂ.ಶ್ರೀಕಂಠಯ್ಯನವರ 'ಭಾರತೀಯ ಕಾವ್ಯ ಮೀಮಾಂಸೆ'ಗೆ ಲಭಿಸಿದ ಸುದ್ದಿ ಕೇಳಿ ನನಗೆ ತುಂಬ ಸಂತೋಷವಾಯಿತು. ಇತ್ತೀಚೆಗೆ ಸರ್ವವ್ಯಾಪಿಯಾಗುತ್ತಿರುವ ದುಷ್ಟ ರಾಜಕೀಯದಿಂದ ಸಾಹಿತ್ಯದ ಎಲ್ಲ ಮೌಲ್ಯಗಳೂ ನಿರ್ನಾಮವಾಗುವಂತಹ ಸಂಗತಿಗಳನ್ನು ಕೇಳಿ ಕೇಳಿ ಮನಸ್ಸು ತುಂಬ ವ್ಯಗ್ರವಾಗಿತ್ತು. ಇಂಥ ಕಾಲದಲ್ಲಿ ಇಂಥ ಒಂದು ಸಂಗತಿಯೂ ನಡೆದದ್ದು ಸಾಹಿತ್ಯದ ಭವಿಷ್ಯದ ಬಗ್ಗೆ ಮನಸ್ಸಿನಲ್ಲಿ ಭರವಸೆಯನ್ನು ಹುಟ್ಟಿಸಿತು. ಶ್ರೀಯುತ ಶ್ರೀಕಂಠಯ್ಯನವರು ಈಗಿಲ್ಲವಾದರೂ ಅವರ ಸಾಹಿತ್ಯಾಸಕ್ತಿ, ಸಾಹಿತ್ಯಾಭ್ಯಾಸ, ಸಾಹಿತ್ಯ ಕೃತಿಗಳ ತೌಲನಿಕ ಸಮೀಕ್ಷೆ ಇವುಗಳಿಗೆ ಜೀವಂತ ದೃಷ್ಟಾಂತವಾಗಿರುವ ಅವರ ಭಾರತೀಯ ಕಾವ್ಯಮೀಮಾಂಸೆ ಇನ್ನೂ ಜೀವಂತವಾಗಿದೆ, ಇರುತ್ತದೆ. 'ಪಂಪ ಪ್ರಶಸ್ತಿ'ಗೇ ಇದು ಒಂದು ಭೂಷಣ ಎಂದು ನಿಸ್ಸಂದೇಹವಾಗಿ ಹೇಳಬಹುದು. ಏಕೆಂದರೆ ಸ್ವತಃ ರಾಜಕೀಯ ವನ್ನು ಎಂದೂ ಆಡದ ಶ್ರೀಕಂಠಯ್ಯನವರು ಈಗ ಇದ್ದರೂ ರಾಜಕೀಯದ ಆಟ ಆಡುತ್ತಿರಲಿಲ್ಲ. ಅವರ ಬಗ್ಗೆ ದಾಳ ಎಸೆಯುವಂಥವರೂ ಈಗ ಯಾರೂ ಇಲ್ಲ. ಆದರೂ ಅವರ ಗ್ರಂಥಕ್ಕೆ ಪ್ರಶಸ್ತಿ ದೊರೆತದ್ದು ಸಾಹಿತ್ಯದ ಉತ್ಕೃಷ್ಟತೆ, ಶ್ರೇಷ್ಠತೆ ಎಂಬ ಮೌಲ್ಯಕ್ಕೆ ಸಂದ ಗೌರವವೂ ಹೌದು. ಅದು ಸಮಾಧಾನತರುವ ಸಂಗತಿ.

ನನಗೆ ಶ್ರೀಯುತ ಶ್ರೀಕಂಠಯ್ಯನವರ ಪರಿಚಯ ಇತ್ತು, ಕೊಂಚ ದೂರದಿಂದಲೇ. ನಾನು ೧೯೩೬ ರಿಂದ ೧೯೪೨ರ ತನಕ ಮೈಸೂರು ಇಂಟರ್ ಮೀಡಿಯಟ್ ಕಾಲೇಜು ಮತ್ತು ಮಹಾರಾಜ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ತೀ.ನಂ.ಶ್ರೀ. ಅವರೂ ಅಲ್ಲಿ ಕನ್ನಡದ ಅಧ್ಯಾಪಕರಾಗಿದ್ದರು. ಆದರೆ ನನ್ನ ದ್ವಿತೀಯ ಭಾಷೆ ಸಂಸ್ಕೃತ. ನನ್ನ ವಿಶೇಷ ವ್ಯಾಸಂಗಕ್ಕೆ ಇಂಗ್ಲಿಷ್ ಸಾಹಿತ್ಯವನ್ನು ಆಯ್ಕೆ ಮಾಡಿಕೊಂಡಿದ್ದರಿಂದ ನನಗೆ ಶ್ರೀಯುತರ ಶಿಷ್ಯನಾಗುವ ಯೋಗ ಇರಲಿಲ್ಲ. ಅಲ್ಲದೆ ದೊಡ್ಡವರನ್ನು ಹೋಗಿ ನೋಡಿ ನನ್ನ ಕವನಗಳನ್ನು ಅವರಿಗೆ ತೋರಿಸಿ ಮೆಚ್ಚಿಗೆ ಗಳಿಸುವುದು ನನ್ನ ಸ್ವಭಾವಕ್ಕೆ ತೀರ ವಿರುದ್ಧವಾದುದು. ಆದ್ದರಿಂದ ಅವರ ಪಾಂಡಿತ್ಯ ಸೌಜನ್ಯಗಳ ಲಾಭ ನನಗೆ ದೊರೆಯದೆ ಇದ್ದರೂ ಆಗಲೇ ಅವರ ಬಗ್ಗೆ ತುಂಬ ಗೌರವ ಇತ್ತು. ತೀ.ನಂ.ಶ್ರೀ., ನಂ. ಶಿವರಾಮಶಾಸ್ತ್ರಿ, ಪು.ತಿ.ನರಸಿಂಹಾಚಾರ್ – ಈ ತ್ರಿಮೂರ್ತಿಗಳ ದರ್ಶನ, ಅವರ ಭಾಷಣಗಳ ಶ್ರವಣ, ಅವರು ನನ್ನ ಕಾವ್ಯವನ್ನು ಮೆಚ್ಚುತ್ತಾರೆ

ಎಂಬ ವಾರ್ತೆ ನನಗೆ ಆ ಕಾಲಕ್ಕೆ ತುಂಬ ಸಂತೋಷವನ್ನೂ ಉತ್ಸಾಹವನ್ನೂ ಹುಟ್ಟಿಸಿದ್ದುವು ಎನ್ನಬೇಕು. ಆದರೆ ಸ್ವತಃ ಹೋಗಿ ಅವರ ದರ್ಶನ ಪಡೆದು ಅವರ ವಿಶೇಷಾನುಗ್ರಹಕ್ಕೆ ಪಾತ್ರನಾಗಬೇಕೆನ್ನುವ ಆಶೆ ನನಗೆ ಹುಟ್ಟಲಿಲ್ಲ. ನಾನು ಆ ಕಾಲದಲ್ಲಿ ಹೋಗಿ ನೋಡಿ ಸಾಹಿತ್ಯದ ಬಗ್ಗೆ, ಕಾವ್ಯದ ಬಗ್ಗೆ ಮಾತಾಡುತ್ತಿದ್ದುದು ನನ್ನ ಸ್ನೇಹಿತರ ಜೊತೆಗೆ. ಮುಖ್ಯವಾಗಿ ಆಗ ವಿದ್ಯಾರ್ಥಿಯಾಗಿದ್ದ, ಆ ಮೇಲೆ ನನಗೆ ಮೇಷ್ಟರೂ ಆದ ಶ್ರೀಮಾನ್ ಕೆ. ನರಸಿಂಹಮೂರ್ತಿಗಳ ಜೊತೆಗೆ, ಅವರ ರೂಮಿನಲ್ಲಿ.

ತೀ.ನಂ.ಶ್ರೀ ವಿದ್ವತ್ತು ಕೇವಲ ಕನ್ನಡಕ್ಕೆ ಸೀಮಿತವಾಗಿರಲಿಲ್ಲ. ಇಡೀ ಸಾರಸ್ವತ ಲೋಕವೇ ಅವರ ಕ್ಷೇತ್ರವಾಗಿತ್ತು. ಅವರಿಗೆ ಇಂಗ್ಲಿಷ್, ಸಂಸ್ಕೃತ, ಕನ್ನಡ ಎಂಬ ಈ ಭಾಷಾತ್ರಯದಲ್ಲಿ ಸಮಾನ ಆಸಕ್ತಿ, ಅಧ್ಯಯನ, ಪಾಂಡಿತ್ಯ ಇತ್ತು. ಕೇವಲ ಸಂಸ್ಕೃತ ಮತ್ತು ಕನ್ನಡವನ್ನಷ್ಟೇ ಬಲ್ಲವರಾಗಿದ್ದರೆ ಈ 'ಕಾವ್ಯಮೀಮಾಂಸೆ' ಇಂಥ ಅಮೋಘ ಕೃತಿ ಆಗುತ್ತಿರಲಿಲ್ಲ. ಅಲ್ಲದೆ ಶ್ರೀಯುತರು ಸಾಹಿತಿಗಳೂ, ರಸಜ್ಞರೂ ಆಗಿದ್ದರು. ಆ ಕಾರಣದಿಂದ 'ಮೀಮಾಂಸೆ' ಕೇವಲ ಶುಷ್ಕ ಪಾಂಡಿತ್ಯ ಪ್ರದರ್ಶನವಾಗದೆ ಸಂತೋಷದಿಂದ ಓದಿ ಸವಿಯುವಂಥ ಕೃತಿಯೂ ಆಗಿದೆ. ಇಂಗ್ಲಿಷ್ ಸಾಹಿತ್ಯದ ಆಳವಾದ ಅಧ್ಯಯನದಿಂದ ಆಧುನಿಕ ಸಾಹಿತ್ಯ-ಕಾವ್ಯ ಮೀಮಾಂಸೆಯ ಅನುಭವವೂ ಅದರಲ್ಲಿ ಸೇರಿವೆ. ಹೀಗಾಗಿ ಅದು ಆದರ್ಶ 'ಕಾವ್ಯಮೀಮಾಂಸೆ' ಆಯಿತು. ಇನ್ನೂ ಹಾಗೆಯೇ ಇರುತ್ತದೆಂದು ನನ್ನ ನಂಬಿಕೆ.

ಸಾಹಿತಿಗಳೂ, ಸಾಹಿತ್ಯದ ಅಧ್ಯಾಪಕರೂ, ವಿದ್ಯಾರ್ಥಿಗಳು ಮಾತ್ರವೇ ಆ ಗ್ರಂಥದ ಲಾಭಪಡೆಯಬೇಕಾಗಿಲ್ಲ. ಸಾಹಿತ್ಯದ ಬಗ್ಗೆ ಪ್ರೀತಿಯಿರುವ ಎಲ್ಲರೂ ಈ ಗ್ರಂಥವನ್ನು ಓದುವುದರ ಮೂಲಕ ಸಾಹಿತ್ಯದ ಸಾರ್ವಕಾಲಿಕ ಮೌಲ್ಯಗಳ ತಕ್ಕ ಅರಿವು ಪಡೆದು ಕೃತಾರ್ಥರಾಗಬಹುದು. ತೀ.ನಂ.ಶ್ರೀ. ನಮ್ಮೆಲ್ಲರಿಗೂ ಗುರು, 'ಗುರವೇ ನಮಃ'.

(ಕನ್ನಡಪ್ರಭ : ೨೫-೩-೧೯೯೦)

* *

ಪ್ರಥಮ ಪ್ರಮುಖ ಪುರಸ್ಕಾರ

ಒಮ್ಮೆ ಕಾಲೇಜಿನ ನೋಟೀಸ್ ಬೋರ್ಡಿನಲ್ಲಿ ಶ್ರೀ ದೇವರಾಜ ಬಹುದ್ದೂರ್ ಹೆಸರಿನಲ್ಲಿ ಏರ್ಪಡಿಸುತ್ತಿದ್ದ ಕವಿತಾ ಸ್ಪರ್ಧೆಯ ವಿಚಾರವನ್ನು ನೋಡಿದೆ. ಅತ್ಯುತ್ತಮವಾದ ಕವನಕ್ಕೆ ಸುವರ್ಣ ಪದಕ ಬಹುಮಾನ ಎಂದಿತ್ತು.

– – – – –

ಈ (ಒಳತೋಟಿ) ಕವನ ಮನಸ್ಸಿನಲ್ಲಿ ರೂಪುಗೊಂಡು ಭಾಷೆಯಲ್ಲಿ ಮೂಡಿಬಂದು ಮತ್ತೆ ಮತ್ತೆ ವಿಮರ್ಶೆಯಲ್ಲಿ ಪ್ರತಿಕ್ರಿಯೆ ನಡೆಸಿ ತನ್ನ ಅಂತಿಮ ರೂಪ ಪಡೆಯಲು ತಕ್ಕಷ್ಟು

ಸಮಯ ಹಿಡಿಯಿತು. ಅದನ್ನು ಮುಗಿಸಿ 'ಪರವಾ ಇಲ್ಲ' ಎನಿಸಿದ ಮೇಲೆ ಅದನ್ನು ಶ್ರೀಮಾನ್ ಕೆ. ನರಸಿಂಹಮೂರ್ತಿ ಅವರಿಗೆ ತೋರಿಸಿ ಅನಂತರ ಸ್ಪರ್ಧೆಗೆ ಕಳಿಸಿದೆ ಎಂದು ನೆನಪು.

ಈ ಕವನಕ್ಕೆ ಸರಿಯಾದ ವಿಮರ್ಶಕರು ಇದ್ದರೆ ಛಂದಸ್ಸನ್ನು ಸರಿಯಾಗಿ ತಿಳಿಯಬಲ್ಲವರು ಇದ್ದರೆ ಬಹುಮಾನ ಬಂದೀತು, ಇಲ್ಲವಾದರೆ ಇಲ್ಲ; ಒಂದು ತಕ್ಕಮಟ್ಟಿನ ದೀರ್ಘಕವನ ಬರೆದ ಹಾಗೆ ಆಯಿತು ಎಂದುಕೊಂಡೆ.

ಯಾರು ಈ ಕವನಗಳ ಮೌಲ್ಯಮಾಪನ ಮಾಡುತ್ತಾರೆ ಎಂಬ ವಿಚಾರ ಏನೂ ತಿಳಿಯುತ್ತಿರಲಿಲ್ಲ. ತಿಳಿಯಬೇಕೆಂದು ಅನ್ನಿಸಲೂ ಇಲ್ಲ.

ನನ್ನ ಒಳತೋಟಿಗೆ ಬಹುಮಾನ ಬಂದು ತುಂಬ ಸಂತೋಷ ಆಯಿತು. ಆಮೇಲೆ ಯಾವಾಗಲೋ ತಿಳಿಯಿತು. ಮೌಲ್ಯಮಾಪಕರಲ್ಲಿ ಶ್ರೀ ತೀ.ನಂ.ಶ್ರೀಕಂಠಯ್ಯನವರು ಇದ್ದರು ಅಂತ. (ಪುಟ ೯೮–೯೯)

(ನೆನಪಿನ ಗಣಿಯಿಂದ : ೧೯೯೯)

ಪಾಂಡಿತ್ಯದ ಅಪರೂಪದ ಮಿಲನ

ಎಚ್.ಎಸ್. ವೆಂಕಟೇಶ ಮೂರ್ತಿ

●

ತೀನಂಶ್ರೀ ಅವರನ್ನು ನಾನು ಕಣ್ಣಾರೆ ನೋಡಿಲ್ಲ. ಆದರೆ ಅವರ ಒಡನಾಡಿಗಳಿಂದ ಅವರ ವ್ಯಕ್ತಿತ್ವದ ಬಗ್ಗೆ ಸಾಕಷ್ಟು ಕೇಳಿದ್ದೇನೆ. ಅವರ ಆಚಾರ್ಯ ಕೃತಿ 'ಭಾರತೀಯ ಕಾವ್ಯ ಮೀಮಾಂಸೆ'. 'ಸಮಾಲೋಕನ' ಎನ್ನುವ ಅವರ ವಿಮರ್ಶಾಕೃತಿ, ಅವರ ಕವಿತಾ ಸಂಗ್ರಹ 'ಒಲುಮೆ' ನನಗೆ ಅತ್ಯಂತ ಪ್ರಿಯವಾದ ಕೃತಿಗಳಿವೆ. ತೀನಂಶ್ರೀ ಅವರಿಗೆ ಪ್ರಿಯರಾದ ಪುತಿನ, ಕೆ.ಎಸ್.ನ, ಜಿ.ಎಸ್. ಶಿವರುದ್ರಪ್ಪ, ಲಕ್ಷ್ಮೀನಾರಾಯಣಭಟ್ಟ ಮೊದಲಾದವರು ತೀನಂಶ್ರೀ ಬಗ್ಗೆ ಮಾತಾಡುವಾಗ ತೋರುವ ಪ್ರೀತಿ, ಗೌರವ ನನಗೆ ಅವರ ಬಗ್ಗೆ ವಿಶೇಷ ಗೌರವ ಮೂಡಲು ಕಾರಣವಾಗಿವೆ. ಜೊತೆಗೆ ತೀನಂಶ್ರೀ ಅವರ ವ್ಯಕ್ತಿತ್ವದ ದಾಖಲೆಗಳಂತಿರುವ ಅವರ ಕೃತಿಗಳು ತೀನಂಶ್ರೀ ಅವರ ವಿಸ್ತಾರ ಮತ್ತು ಆಳವುಳ್ಳ ಪಾಂಡಿತ್ಯ ಹಾಗೂ ಕಾವ್ಯ ಸೂಕ್ಷ್ಮಜ್ಞತೆಗೆ ಗುರುತಾಗಿವೆ.

ನಮ್ಮಲ್ಲಿ ಶ್ರೇಷ್ಠರಾದ ಪಂಡಿತಪರಂಪರೆಯೊಂದಿದೆ. ಆದರೆ ಅವರಲ್ಲಿ ಪಾಂಡಿತ್ಯದ ಭಾರ ಕಾವ್ಯಸೂಕ್ಷ್ಮಜ್ಞತೆಯನ್ನು ಹೊಸಕಿ ಹಾಕಿಬಿಟ್ಟಿರುತ್ತದೆ. ಸಹೃದಯರಾದ ರಸಿಕರೂ ಇದ್ದಾರೆ. ಆದರೆ ಪಾಂಡಿತ್ಯ ಮತ್ತು ವಿಮರ್ಶಾವಿಚಕ್ಷಣತೆಯ ಲೋಪದಲ್ಲಿ ರಸಿಕತೆಗೆ ದೃಢತೆಯ ಸ್ನಾಯುಬಲ ದೊರಕುವುದಿಲ್ಲ. ತೀನಂಶ್ರೀ ಅವರ ವ್ಯಕ್ತಿತ್ವದ ವಿಶೇಷ ಲಕ್ಷಣವೆಂದು ನನಗೆ ತೋರುವುದು, ಅವರಲ್ಲಿ ಕಾಣುವ ಪಾಂಡಿತ್ಯ ಮತ್ತು ರಸಿಕತೆಯ ಅನ್ಯೋನ್ಯ ಭಾವ.

ತೀನಂಶ್ರೀ ಅವರ ಶಿಸ್ತು, ಚೊಕ್ಕತನ, ಕಾವ್ಯಪ್ರೀತಿ, ಯಾವುದೇ ವಿಷಯವನ್ನೂ ಆಮೂಲಾಗ್ರ ಶೋಧಿಸುವ ಶ್ರದ್ಧಾವಂತಿಕೆ ಇವು– ಅವರನ್ನು ಹತ್ತಿರದಿಂದ ಬಲ್ಲವರು ಮತ್ತೆ ಮತ್ತೆ ಪ್ರಸ್ತಾಪಿಸುವ ಅಂಶಗಳು. ಹಿರಿಯ ಕವಿ ಪುತಿನ ಅವರು, ತೀನಂಶ್ರೀ ಅವರನ್ನು ತಮ್ಮ ಕಾವ್ಯದ ಸಾಕುತಾಯಿ ಎಂದು ಕರೆದಿರುವುದನ್ನು ಇಲ್ಲಿ ನೆನೆಯಬಹುದು. ಕವಿ– ವಿಮರ್ಶಕರ ಅನ್ಯೋನ್ಯ ಭಾವಕ್ಕೆ ಈ ಇಬ್ಬರು ಹಿರಿಯರು ಒಂದು ಪ್ರತೀಕವಾಗಿದ್ದಾರೆ. ಕವಿ– ವಿಮರ್ಶಕ ವಿರೋಧಿ ಬಣಗಳಿಗೆ ಸೇರಿದವರಾಗಬೇಕಾಗಿಲ್ಲ! ಏಕೆಂದರೆ ಈ ಇಬ್ಬರ ಗುರಿಯೂ ಕಾವ್ಯದ ಉತ್ಕೃಷ್ಟತೆಯನ್ನು ಸಾಧಿಸುವುದೇ ಆಗಿದೆ.

ಕನ್ನಡದ ಒಲವಿನ ಕವಿ ಎಂದು ಪ್ರಸಿದ್ಧರಾಗಿರುವ, ಕೆ.ಎಸ್. ನರಸಿಂಹಸ್ವಾಮಿ ಅವರ 'ಮೈಸೂರು ಮಲ್ಲಿಗೆ'ಯ ಕವಿತೆಗಳನ್ನು ಓದಿ, ಪ್ರೋತ್ಸಾಹಕ ಮಾತುಗಳಾಡಿ, ಅವುಗಳು ಪ್ರಬುದ್ಧ

ಕರ್ನಾಟಕದಲ್ಲಿ ಬೆಳಕು ಕಾಣುವಂತೆ ಮಾಡಿ, ಕೊನೆಗೆ ಮೈಸೂರು ಮಲ್ಲಿಗೆ ಕವಿತೆಗಳನ್ನು ಮುದ್ರಣಾಲಯಕ್ಕೆ ಸಿದ್ಧಪಡಿಸಿಕೊಟ್ಟವರು ತೀನಂಶ್ರೀ ಅವರೇ ಎಂದು ಕೆ.ಎಸ್.ನ. ಪ್ರೀತಿಯಿಂದ ತೀನಂಶ್ರೀ ಅವರನ್ನು ನೆನೆದಿದ್ದಾರೆ. ಕೆ.ಎಸ್.ನ ಅವರ ಮಾತಿನಲ್ಲಿ ಹೇಳಬೇಕೆಂದರೆ, ಅವರ ಕವಿತೆ 'ಒಲುಮೆ'ಯ ಕವಿ ತೀನಂಶ್ರೀ ಅವರ ಆರೈಕೆಯಲ್ಲಿ ಬೆಳೆಯಿತು.

ಮಹಾ ವಿದ್ವಾಂಸ ಡಿ.ಎಲ್. ನರಸಿಂಹಾಚಾರ್ ಮತ್ತು ಕಾವ್ಯರಸಿಕ ಪಂಡಿತ ತೀನಂಶ್ರೀ ಅವರ ಸ್ನೇಹ ಕೂಡ ಕನ್ನಡದ ಸಾಹಿತ್ಯದ ಸಂದರ್ಭದಲ್ಲಿ ಒಂದು ಲೆಜೆಂಡ್ ಆಗಿಬಿಟ್ಟಿದೆ. ಇಬ್ಬರು ಮಹಾದಿಗ್ಗಜಗಳ ಪರಸ್ಪರ ನಿರ್ಮತ್ಸರ ನಮ್ಮ ಸಮಕಾಲೀನ ಸಾಹಿತ್ಯ ಬಂಧುಗಳಿಗೆ ಒಂದು ದೊಡ್ಡ ಆದರ್ಶವಾಗಬೇಕು.

ಸ್ವಭಾವತಃ ಗಂಭೀರ ಸ್ವಭಾವದವರಾದ ತೀನಂಶ್ರೀ ಒಳ್ಳೆಯ ಕವಿತೆ ಕಂಡಾಗ ಹೇಗೆ ಕರಗುತ್ತಿದ್ದರು ಎಂಬುದನ್ನು ಅವರ ಪ್ರಿಯ ಶಿಷ್ಯರಾದ ಜಿ.ಎಸ್. ಶಿವರುದ್ರಪ್ಪನವರು ಒಮ್ಮೆ ನನಗೆ ವಿವರಿಸಿದ್ದರು. ಆಗಿನ್ನೂ ಜಿ.ಎಸ್.ಎಸ್. ಕಾವ್ಯ ಬರೆಯಲು ಪ್ರಾರಂಭಿಸಿದ್ದ ಮೊದಲ ದಿನಗಳು. ಜಿ.ಎಸ್.ಎಸ್. ಅವರ 'ಕ್ರಾಂತಿಕಾರಿ' ಎಂಬ ಪದ್ಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತಂತೆ. ಜಿ.ಎಸ್.ಎಸ್. ಮೈಸೂರಿನ ರಸ್ತೆಯೊಂದರಲ್ಲಿ ಹೋಗುತ್ತಿದ್ದಾಗ ರಸ್ತೆಯ ಇನ್ನೊಂದು ದಿಕ್ಕಿನಲ್ಲಿ ಎದುರಿನಿಂದ ಬಂದ ತೀನಂಶ್ರೀ ಒಂದು ಕ್ಷಣ ತಮ್ಮ ಸಹಜ ಗಾಂಭೀರ್ಯವನ್ನೂ ಪ್ರೊಫೆಸರ್ ಗತ್ತನ್ನೂ ಮರೆತು, ತಮ್ಮ ಶಿಷ್ಯ ಜಿ.ಎಸ್.ಎಸ್. ಅವರ ಹೆಸರು ಹಿಡಿದು ಕೂಗುತ್ತಾ ರಸ್ತೆಯನ್ನು ದಾಟಿಕೊಂಡು ಇವರ ಸಮೀಪ ಬಂದು, ಪ್ರೀತಿಯಿಂದ ಹೆಗಲ ಮೇಲೆ ಕೈಯಿಟ್ಟು, ಕವಿತೆಯ ಸಾಲುಗಳನ್ನು ನೆನಪಿನಿಂದ ಹೇಳುತ್ತಾ 'ಸೊಗಸಾದ ಕವಿತೆ ಬರೆದಿದ್ದೀರಿ' ಎಂದು ಬೆನ್ನು ತಟ್ಟಿದರಂತೆ.

ತೀನಂಶ್ರೀ ಅವರ 'ಭಾರತೀಯ ಕಾವ್ಯಮೀಮಾಂಸೆ' ಆ ಪ್ರಕಾರದಲ್ಲಿ ಇವತ್ತಿಗೂ ಆಚಾರ್ಯ ಕೃತಿ. ಶಾಸ್ತ್ರ ಗ್ರಂಥವೊಂದು, ರಸಿಕ ವಿದ್ವಾಂಸನೊಬ್ಬ ರಚಿಸಿದಾಗ, ಎಷ್ಟು ರಸಾತ್ಮಕವಾಗಬಲ್ಲುದು ಎಂಬುದಕ್ಕೆ ಆ ಕೃತಿ ಉದಾಹರಣೆಯಾಗಿದೆ. ಸಮಾಲೋಕನದಲ್ಲಿ ತೀನಂಶ್ರೀ 'ಇಂಗ್ಲಿಷ್ ಗೀತಗಳ' ಬಗ್ಗೆ ಬರೆದ ಲೇಖನ, ಈವತ್ತಿಗೂ ಓದಬೇಕಾದ ಲೇಖನ. 'ಕೆರೆಗೆ ಹಾರ'ದಂಥ ಜಾನಪದ ಲಾವಣಿಯ ಕಡೆ ವಿದ್ವದ್ರಸಿಕರ ಗಮನ ಸೆಳೆದವರೂ ತೀನಂಶ್ರೀ. ರನ್ನನ ಗದಾಯುದ್ಧ ಸಂಗ್ರಹಕ್ಕೆ ತೀನಂಶ್ರೀ ಬರೆದಿರುವ ಅಭ್ಯಾಸದ ಟಿಪ್ಪಣಿಗಳ ನಿರ್ದುಷ್ಟತೆ ಆ ರೀತಿಯ ಕೆಲಸಕ್ಕೆ ಮಾದರಿಯೆನಿಸುತ್ತದೆ. ಇನ್ನು ಅವರ 'ಒಲುಮೆ' ಕವಿತಾ ಸಂಗ್ರಹ ಕನ್ನಡ ಪ್ರೇಮ ಕಾವ್ಯಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟ ಕೃತಿ ಎಂಬುದನ್ನು ಯಾರೂ ಮರೆಯುವಂತಿಲ್ಲ. ತೀನಂಶ್ರೀ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ ಬರೆದ "ಮಧ್ಯಮ ವ್ಯಾಕರಣ"ದಂಥ ವ್ಯಾಕರಣ ಹೊಸಗನ್ನಡದಲ್ಲಿ ವ್ಯಾಕರಣ ಗ್ರಂಥ ಲೇಖಕರಿಗೆ ಇವತ್ತಿಗೂ ಆದರ್ಶವಾಗಬೇಕು. ತೀನಂಶ್ರೀ ಅವರ ಪ್ರಬಂಧಗಳು, ಅದರಲ್ಲೂ 'ನೆಗಡಿ' ಮತ್ತು 'ಕಾಸಿನಸಂಘ' ನಮ್ಮ ವಿದ್ಯಾರ್ಥಿ ಮಿತ್ರರು ಓದಲೇಬೇಕು. ಸಾಹಿತ್ಯ ಪ್ರವೇಶ ಪ್ರಬಂಧ ರಚನೆಗಳ ಮೂಲಕವೇ ಪ್ರಾರಂಭವಾಗಬೇಕೆಂಬುದು ನನ್ನ ನಿಲುವು.

ಆದ್ದರಿಂದ, ವಿದ್ಯಾರ್ಥಿಗಳಿಗೆ 'ನಂಟರು' ಸಂಗ್ರಹದ ಪ್ರವೇಶವನ್ನು ಅಧ್ಯಾಪಕ ಮಿತ್ರರು ದೊರಕಿಸಿ ಕೊಡಲೇಬೇಕು.

ತೀನಂಶ್ರೀ ಅವರಿಗೆ 'ಪಂಪ ಪ್ರಶಸ್ತಿ' ದೊರೆತಿರುವುದು ನೆಪವಾಗಿ, ಅವರ ಕೃತಿಗಳ ಬಗ್ಗೆ ನಮ್ಮ ಯುವಜನಾಂಗದ ಗಮನ ವಿಶೇಷ ಹರಿಯುವಂತಾದರೆ, ಅದರಿಂದ ಆಗುವ ಲಾಭ ಬಹು ದೊಡ್ಡದು.

(ಕನ್ನಡಪ್ರಭ : ೨೫-೩-೧೯೯೦)

ಮುಗ್ಧ ಸೌಂದರ್ಯ; ಮೂಲ ಆಕರ

ಡಿ.ಆರ್. ನಾಗರಾಜ್

●

ತೀನಂಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ' ಒಂದು ಆಚಾರ್ಯ ಕೃತಿ. ಎಲ್ಲ ಆಚಾರ್ಯ ಕೃತಿಗಳ ಪ್ರಮುಖ ಲಕ್ಷಣವೆಂದರೆ ಚಿಂತನಾ ಕ್ರಮವೊಂದರ ಸಾಧನೆ ಮತ್ತು ಶಿಥಿಲತೆಯನ್ನು ಒಟ್ಟಿಗೇ ಹೊಳೆಸುವುದು. ಕಾವ್ಯಮೀಮಾಂಸೆಯ ಒಟ್ಟು ಇತಿಹಾಸದಲ್ಲೇ ತೀನಂಶ್ರೀ ಕೃತಿಗೆ ಗಣ್ಯ ಸ್ಥಾನವಿದೆ. ಹಾಗೆ ನೋಡಿದರೆ, ಕೆಲವು ಪ್ರಸ್ಥಾನ ಕರ್ತೃಗಳ ಕೃತಿಗಳನ್ನು ಬಿಟ್ಟರೆ ಉಳಿದವೆಲ್ಲವೂ ಪುನರ್‌ವ್ಯಾಖ್ಯಾನದ ಗ್ರಂಥಗಳೇ. ಚಿಂತನೆ, ಮರು ಚಿಂತನೆಯ ಮೂಲಕ ಕಾವ್ಯ ಮೀಮಾಂಸೆ ಬೆಳೆಯುತ್ತಾ ಹೋಯಿತು. ತೀನಂಶ್ರೀ ಕೃತಿಯ ಮುಖ್ಯ ಗುಣವೆಂದರೆ – ೨೦ನೆ ಶತಮಾನದಲ್ಲಿ ನಮಗೆ ಸಾಹಿತ್ಯದ ಬಗ್ಗೆ ಹೊಸಪ್ರಜ್ಞೆ ಬಂದದ್ದರ ನೆಲೆಯಲ್ಲಿ ಭಾರತೀಯ ಕಾವ್ಯಮೀಮಾಂಸೆಯನ್ನು ಒಟ್ಟಾರೆಯಾಗಿ ಒಂದು ಆಕಾರಕ್ಕೆ ತರಲು ಹವಣಿಸಿದ್ದು.

ಭಾರತೀಯ ಕಾವ್ಯಮೀಮಾಂಸೆಯ ಯಾವುದೇ ಪ್ರಮುಖ ಚರ್ಚೆಯ ಬಗೆಗೆ ಯೋಚನೆ ಮಾಡುವಾಗಲೂ ನಾನು ಮೊದಲು ಮರೆ ಹೋಗುವುದು ತೀನಂಶ್ರೀ ಕೃತಿಗೆ. ಸಾಹಿತ್ಯ ಕೃತಿ ಎನ್ನುವುದು ಒಂದು ಧ್ವನಿರಚನೆ ಎಂಬಂಥ ನಿಲುವುಗಳನ್ನು ತೀನಂಶ್ರೀ ವಿವರಿಸುವ ಔಚಿತ್ಯಕ್ಕೆ ಬೆರಗಾಗಿದ್ದೇನೆ. ಒಳ್ಳೆಯ ಉದಾಹರಣೆಗಳನ್ನು ಕೊಡಬಲ್ಲ ಅವರ ರಸಪ್ರಜ್ಞೆ ಕೃತಿಗೆ ಚೇತೋಹಾರಿ ಗುಣ ಒದಗಿಸಿದೆ.

ಆದರೆ, ಕಾವ್ಯಮೀಮಾಂಸೆ, ಸಾಹಿತ್ಯ ತತ್ವದ ಮೇಲಿನ ಕೃತಿಗಳಿಗೆ ಒಂದು ವಿಚಿತ್ರ ರೀತಿಯ ಅಸ್ತಿತ್ವವಿರುತ್ತದೆ. ಕಾವ್ಯದ ಶುದ್ಧ ಸಾಹತ್ಯಕ ಚರ್ಚೆ ಮಾತ್ರ ಎಂದು ಎಷ್ಟೇ ಹೇಳಿಕೊಂಡರೂ ಅವು ಅಂತಿಮವಾಗಿ ತಾತ್ವಿಕ ಪ್ರಶ್ನೆಗಳನ್ನು (ಫಿಲಾಸಫಿ ಎಂಬರ್ಥದಲ್ಲಿ) ಮುಖಾಮುಖಿ ಆಗಲೇಬೇಕಾಗುತ್ತದೆ. ಸಾಹಿತ್ಯತತ್ವ ಆಳಕ್ಕೆ ಹೋದಷ್ಟೂ ತಾತ್ವಿಕ ಪ್ರಶ್ನೆಗಳನ್ನು ತಪ್ಪಿಸಿಕೊಳ್ಳಲಾಗದ ಮುಜುಗರವನ್ನು ಎದುರಿಸುತ್ತದೆ. ಸಾಹಿತ್ಯ ವಿಮರ್ಶೆಗೆ, ಕೃತಿ ಪರೀಕ್ಷೆಗೆ ಆ ಬಗೆಯ ಅನಿವಾರ್ಯ ಮುಜುಗರ ಇರುವುದಿಲ್ಲ. ಹೀಗಾಗಿ, ಜಗತ್ತಿನ ಅನೇಕ ಸಂಸ್ಕೃತಿಗಳ ಕಾವ್ಯತತ್ವದ ಇತಿಹಾಸದಲ್ಲಿ ಕಾಣುವ ಬದಲಾವಣೆಗಳು ಹೊಸ ತಾತ್ವಿಕ ಪರಿಕಲ್ಪನೆಗಳ ಕಾರಣಕ್ಕಾಗಿ ಬಂದಂಥವು. ಆದರೆ, ಈ ಬಗೆಗೆ ತೀನಂಶ್ರೀ ಕೃತಿಯಲ್ಲಿ ಆಧುನಿಕ ವಿಮರ್ಶೆಯ ವಿದ್ಯಾರ್ಥಿ ಮೆಚ್ಚಲಾಗದ ಮುಗ್ಧತೆ ಇದೆ. ಮುಗ್ಧತೆ ಎಂಬ ಪದವನ್ನು ಇಲ್ಲಿ ವಿಶೇಷ ಎಚ್ಚರದಿಂದ ಬಳಸಿದ್ದೇನೆ. ಈ ರೀತಿಯ

ಪ್ರಶ್ನೆಗಳು ಬಂದಾಗ ಲೀವೀಸ್‌ನಂತಹ ವಿಮರ್ಶಕರಲ್ಲಿ ಕಾಣುವಂತಹ ಸಂಕಲ್ಪಿತ ನಿರ್ಲಕ್ಷ್ಯದ ಸ್ಥಿತಿ ಒಂದು ಮೂಲಭೂತ ತಾತ್ವಿಕ ನೆಲೆಯಿಂದ ಬಂದಂಥದ್ದು. ಸಾಹಿತ್ಯ ವಿಮರ್ಶೆ - ತತ್ವಜ್ಞಾನದ ಸಂಬಂಧವನ್ನು ಚರ್ಚಿಸುವಾಗ ಆತ ಪ್ರಜ್ಞಾಪೂರ್ವಕವಾಗಿಯೇ ತತ್ವಜ್ಞಾನದ ಪ್ರಶ್ನೆಯನ್ನು ಗೌಣವಾಗಿ ಕಾಣುತ್ತಾನೆ. ಆದರೆ, ತೀನಂಶ್ರೀ ಕೃತಿಯಲ್ಲಿ ಈ ರೀತಿಯ ಒಂದು ಸಮಸ್ಯೆ ಇದೆ ಎಂಬ ಉತ್ಕಟ ಅರಿವು ಇಲ್ಲ. ಹೀಗಾಗಿ, ಪ್ರತಿಭೆ, ರಸಸಿದ್ಧಾಂತಗಳ ಚರ್ಚೆಯಲ್ಲಿ ಅವುಗಳ ಹಿನ್ನೆಲೆಯ ತಾತ್ವಿಕ ಪ್ರಶ್ನೆಗಳ ಪ್ರಖರವಾದ, ಸೂಕ್ಷ್ಮವಾದ ಚರ್ಚೆ ಇಲ್ಲದೆ ಆ ಭಾಗಗಳು ವರ್ಣನಾತ್ಮಕವಾಗಿ ಮಾತ್ರ ಉಳಿದು ಬಿಡುತ್ತವೆ. ಭಾರತೀಯ ಸಾಹಿತ್ಯ ತತ್ವದಲ್ಲಿ ಅನೇಕ ಪರಿಕಲ್ಪನೆಗಳು ರೂಪುಗೊಂಡಿದ್ದೇ ತೀವ್ರ ತಾತ್ವಿಕ ಸಂಘರ್ಷದಿಂದ. ಆದರೆ, ಅವು ಅಂತಿಮವಾಗಿ ಒಂದು ಐಕ್ಯತೆ ಇರುವ ಸಾಹಿತ್ಯ ಚರ್ಚೆಯಾಗಿ ಮತ್ತೆ ವಾಪಸಾದದ್ದು ಒಂದು ರೋಮಾಂಚಕ ಪ್ರಕ್ರಿಯೆ. ತೀನಂಶ್ರೀ ಏಕೋ ಈ ಬಗೆಗೆ ಉದಾಸೀನವನ್ನು ತೋರುತ್ತಾರೆ.

ತೀನಂಶ್ರೀ ಕೃತಿ ಭಾರತೀಯ ಕಾವ್ಯಮೀಮಾಂಸೆಯ ಮಹತ್ವವನ್ನು ಸೊಗಸಾಗಿ ಎದ್ದು ತೋರುತ್ತದೆ, ನಿಜ. ಆದರೆ, ಅದರ ಜತೆಗೆ ಈ ಚಿಂತನೆ ನಮ್ಮ ವಿಮರ್ಶಾ ಪ್ರಜ್ಞೆಯ ಕೇಂದ್ರ ದಿಂದ ದೂರವಿರುವ ದುರಂತವನ್ನೂ ತೋರಿಸುತ್ತದೆ. 'ಭಾರತೀಯ ಕಾವ್ಯಮೀಮಾಂಸೆ' ಬರೀ ಅಕೆಡೆಮಿಕ್ ಆಸಕ್ತಿ ಮತ್ತು ಉಪಯುಕ್ತತೆಯ ಕೃತಿಯಾಗಿ ಮಾತ್ರ ಉಳಿದು ಬಿಟ್ಟಿರುವುದು ನಮ್ಮ ನಾಡಿನ ಸಂಸ್ಕೃತಿಯ ಮೂಲಭೂತ ಸಮಸ್ಯೆಯೊಂದನ್ನು ಎತ್ತಿ ತೋರುತ್ತದೆ. ನವೋದಯದ ವಿಮರ್ಶೆ ಭಾರತೀಯ ಸಾಹಿತ್ಯ ಚಿಂತನೆಯ ಪರಿಕಲ್ಪನೆಗಳನ್ನು ಸಾಕಷ್ಟು ಬಳಸಿಕೊಂಡಿತ್ತು. ಆದರೆ, ಕಳೆದ ೩೦ ವರ್ಷಗಳ ಕನ್ನಡ ವಿಮರ್ಶೆಯ ಕೇಂದ್ರದಲ್ಲಿ ಇದು ಬಹು ಮಟ್ಟಿಗೆ ಕಣ್ಮರೆಯಾಗಿದೆ. ನಾವು ಇನ್ನಷ್ಟು ತೀವ್ರವಾಗಿ ಪಶ್ಚಿಮ ಮುಖಿಯಾಗುತ್ತಿರುವ ಅಪಾಯವನ್ನು ಇದು ತೋರುತ್ತದೆ. ನಮ್ಮ ಸಮಕಾಲೀನ ಅನುಭವದ ಸ್ವರೂಪ, ದುರಂತ ಸಾಹಿತ್ಯ ಕೃತಿಗಳ ರೂಪದ ಸಮರ್ಥಗ್ರಹಿಕೆಗೆ ನಮ್ಮ ಹಳೆಯ ಪರಿಕಲ್ಪನೆಗಳು ಅಷ್ಟು ಸೂಕ್ತವಲ್ಲವೇನೊ ಎಂಬ ಅನುಮಾನ ಸಮಸ್ಯೆಯನ್ನು ಇನ್ನಷ್ಟು ಜಟಿಲವನ್ನಾಗಿ ಮಾಡಿದೆ. ಆಧುನಿಕ ಸಾಹಿತ್ಯಕ್ಕೆ ಅವರು ಹಳೆಯ ಪರಿಕಲ್ಪನೆಗಳನ್ನು ಅನ್ವಯಿಸಲು ಪ್ರಯತ್ನಿಸುವ ಮೂಲಕ ಅವರು ಈ ಸಮಸ್ಯೆಗೆ ಪ್ರತಿಸ್ಪಂದಿಸಿದರು. 'ಕಲ್ಕಿ' ಪದ್ಯದ ಮೇಲೆ ಅವರು ಬರೆದಿರುವ ರೀತಿ ಅವರ ಪ್ರಜ್ಞೆಯ ಜೀವಂತಿಕೆಯನ್ನೂ ತೋರುತ್ತದೆ. ಜತೆಗೆ, ಆ ಪರಿಕಲ್ಪನೆಗಳು ಸುಲಭದಲ್ಲಿ ಒಗ್ಗದೆ ಹೋಗುವುದನ್ನೂ ತೋರಿಸುತ್ತದೆ. ಇಂಥ ಅನೇಕ ಸಮಸ್ಯೆಗಳನ್ನು ಪ್ರಕಟಿಸುವುದರಿಂದಲೇ ಈ ಪುಸ್ತಕ ನನಗೆ ಮುಖ್ಯ. ಸಂಕೀರ್ಣಯುಗ ಪ್ರಜ್ಞೆಯಿದ್ದಾಗ ಮಾತ್ರ ಕಾವ್ಯ ಅಥವಾ ಸಾಹಿತ್ಯತತ್ವ ನಮ್ಮ ಚಿಂತನೆಯ ಕೇಂದ್ರದೊಳಕ್ಕೆ ಬರುತ್ತದೆ ಎಂಬ ಅಂತಿಮ ಸತ್ಯವನ್ನೂ ಈ ಕೃತಿ ಪ್ರಕಟಿಸುತ್ತದೆ. ಹೀಗಾಗಿ, ಅಂಥ ಪ್ರಯತ್ನ ಪ್ರಾರಂಭಿಸುವ ಮಂದಿಗೆ ಈ ಕೃತಿ ತುಂಬ ಉಪಯುಕ್ತ ಮೂಲ ಆಕರ.

(ಕನ್ನಡಪ್ರಭ : ೨೫-೩-೧೯೯೦)

ನೆನಪಿಗೆ ಗೌರವ

ಹಾ.ಮಾ. ನಾಯಕ

●

ನಾನು ಆಗ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ೧೯೫೩ರ ಆರಂಭಕಾಲದ ಒಂದು ದಿನ ಸಹಪಾಠಿಯೊಬ್ಬರು, ಒಂದು ಪುಸ್ತಕವನ್ನು ಎತ್ತಿ ತೋರಿಸುತ್ತ "ಶ್ರೀಕಂಠಯ್ಯನವರ ಪುಸ್ತಕ ಬಂದಿದೆ" ಎಂದು ಕೂಗಿದರು. "ಎಲ್ಲಿ, ನೋಡೋಣ" ಎನ್ನುತ್ತ ನಾನು ಅವರ ಕಡೆ ನಡೆದೆ. ಕಳೆದ ಕೆಲವು ವಾರಗಳಿಂದಲೂ ಆ ಪುಸ್ತಕವನ್ನು ಅನೇಕರು ನಿರೀಕ್ಷಿಸುತ್ತಿದ್ದರು. ಭಾರತೀಯ ಕಾವ್ಯಮೀಮಾಂಸೆಯನ್ನು ಸಮಗ್ರವಾಗಿ ನಿರೂಪಿಸುವ ಒಂದು ಪುಸ್ತಕವೂ ಆ ತನಕ ಪ್ರಕಟವಾಗಿರಲಿಲ್ಲ. 'ಕನ್ನಡ ಕೈಪಿಡಿ'ಯ ಅಲಂಕಾರ ಭಾಗವೊಂದೇ ಕನ್ನಡ ವಿದ್ಯಾರ್ಥಿಗಳಿಗೆ ಆಧಾರವಾಗಿತ್ತು. ಅಂಥ ಸಂದರ್ಭದಲ್ಲಿ ಆಗ ಧಾರವಾಡದಲ್ಲಿದ್ದ ತೀ.ನಂ.ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ' ಗ್ರಂಥವನ್ನು ಎಲ್ಲರೂ ಕುತೂಹಲ ಆಸಕ್ತಿಗಳಿಂದ ನಿರೀಕ್ಷಿಸುತ್ತಿದ್ದುದು ಸ್ವಾಭಾವಿಕವೇ ಆಗಿತ್ತು. ಪುಸ್ತಕದ ಮುದ್ರಣ ಆರೆಂಟು ತಿಂಗಳುಗಳ ಹಿಂದೆಯೇ ಮುಗಿದಿದ್ದು ಕುವೆಂಪು ಅವರ ಮುನ್ನುಡಿಗಾಗಿ ಕಾಯುತ್ತಿದೆಯೆಂಬ ಮಾತೂ ಪ್ರಚಲಿತವಾಗಿತ್ತು.

'ಭಾರತೀಯ ಕಾವ್ಯಮೀಮಾಂಸೆ'ಯ ಪ್ರಕಟಣೆ (೧೯೫೩) ಕನ್ನಡ ಸಾಹಿತ್ಯ ಲೋಕದ ಒಂದು ಘಟನೆಯಾಗಿತ್ತು. ನಾನು ಆ ಪುಸ್ತಕವನ್ನು ಮಗುಚುತ್ತಿದ್ದಾಗ ಇನ್ನೂ ನಾಲ್ಕಾರು ಜನ ಅಲ್ಲಿ ಸೇರಿದರು. ಎಲ್ಲರ ಕಣ್ಣುಗಳೂ ಅರಳಿದ್ದವು. ಪ್ರತಿಯೊಬ್ಬರಿಗೂ ಅದನ್ನು ಕೊಳ್ಳುವ ತವಕ. ಡೆಮ್ಮಿ ಆಕಾರದ ಐನೂರಕ್ಕೂ ಹೆಚ್ಚು ಪುಟಗಳ ಆ ಪುಸ್ತಕದ ಬೆಲೆ ಮೂರೂವರೆ ರೂಪಾಯಿ! ಇವತ್ತಿನ ದೃಷ್ಟಿಯಿಂದ ಏನೂ ಅಲ್ಲ, ಆದರೆ ಅವತ್ತು ಮೂರೂವರೆ ರೂಪಾಯಿಗೂ ಬೆಲೆ ಇತ್ತು! ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ಇಪ್ಪತ್ತಾರನೆಯ ಪ್ರಕಟಣೆಯಾಗಿ ಆ ಪುಸ್ತಕ ಪ್ರಕಟವಾಗಿತ್ತು. ಅದನ್ನು ಕೊಳ್ಳಲು ನಾವೆಲ್ಲರೂ ಪ್ರಕಟಣ ಇಲಾಖೆಯ ಕಾರ್ಯದರ್ಶಿಗಳ ಕಛೇರಿಗೆ ಧಾವಿಸಿದೆವು (ಆಗ ಇನ್ನೂ 'ಪ್ರಸಾರಾಂಗ' ರೂಪುಗೊಂಡಿರಲಿಲ್ಲ). ಕಡಮೆ ಬಿದ್ದ ಎಂಟಾಣೆಯನ್ನು ಗೆಳೆಯರೊಬ್ಬರಿಂದ ಪಡೆದುಕೊಂಡು, ಆ ಪುಸ್ತಕವನ್ನು ಖರೀದಿಸಿ ಎದೆಗವಚಿಕೊಂಡು ಕಾಲೇಜು ಹಾಸ್ಟಲ್‌ಗೆ ಹೋದ ಸಂದರ್ಭ, ನೆನ್ನೆ ಮೊನ್ನೆಯ ಘಟನೆಯಷ್ಟು ಹಸಿರಾಗಿದೆ. ಅದೇ ಪುಸ್ತಕವನ್ನು ಮೂರು ಪುಟಗಳ 'ಕೆಲವು ಅಚ್ಚಿನ ತಪ್ಪುಗಳೊ'ಡನೆ ಇಂದಿಗೂ ನಾನು ಬಳಸುತ್ತಿದ್ದೇನೆ.

ಮೂವತ್ತೇಳು ವರ್ಷಗಳ ನಂತರ ಈಗ ಆ ಪುಸ್ತಕ ಸುದ್ದಿ ಮಾಡಿದೆ. ಅದಕ್ಕೆ ಎರಡನೆಯ 'ಪಂಪ ಪ್ರಶಸ್ತಿ' ಲಭಿಸಿದೆ. ೧೯೪೭-೬೬ರ ಅವಧಿಯ ಶ್ರೇಷ್ಠ ಸೃಜನೇತರ ಕೃತಿಯೆಂದು ಅದು ಒಂದು ಲಕ್ಷ ರೂಪಾಯಿಗಳ ಬಹುಮಾನವನ್ನು ಪಡೆದಿದೆ. ಲೇಖಕರಾದ ತೀ.ನಂ.ಶ್ರೀಕಂಠಯ್ಯನವರು ತೀರಿಕೊಂಡೇ (ಸೆಪ್ಟೆಂಬರ್ ೭. ೧೯೬೬) ಹತ್ತಿರ ಹತ್ತಿರ ಕಾಲು ಶತಮಾನ ಕಳೆದಿದೆ. ಇಷ್ಟು ದೀರ್ಘಕಾಲದ ನಂತರ ಮರಣೋತ್ತರ ಪ್ರಶಸ್ತಿಯೊಂದನ್ನು ಪಡೆಯುತ್ತಿರುವವರಲ್ಲಿ ತೀನಂಶ್ರೀಯವರೇ ಮೊದಲಿಗರಿರಬಹುದು. ಈಗ ಅವರಿಲ್ಲ, ನಿಜ. ಬಹುಮಾನ ಅವರ ಕುಟುಂಬ ವರ್ಗಕ್ಕೆ ಸಲ್ಲುತ್ತದೆ. ಅವರ ಮಗ ಟಿ.ಎಸ್. ನಾಗಭೂಷಣ ತುಂಬ ಸುಸಂಸ್ಕೃತರು. ತಮ್ಮ ತಂದೆಯವರ ಸಾಹಿತ್ಯ ಪ್ರಸಾರ ಪೋಷಣೆಗಳಲ್ಲಿ ನಿಜವಾದ ಆಸಕ್ತಿ ಉಳ್ಳವರು. ಈ ಬಹುಮಾನದ ಹಣದಿಂದ ಅವರು ತಮ್ಮ ಅಪೇಕ್ಷೆಯ ಕೆಲವಾದರೂ ಕೆಲಸ ಮಾಡಲು ಸಾಧ್ಯವಾಗಬಹುದು. ತೀನಂಶ್ರೀಯವರ ಎಲ್ಲ ಪುಸ್ತಕಗಳೂ ಜನರ ಕೈಗೆ ಬರುವಂತಾಗಬಹುದು; ತೀನಂಶ್ರೀ ಅವರ ಆತ್ಮಕ್ಕೆ ಪ್ರಿಯವೆನ್ನಿಸುವ ಕೆಲಸ ನಡೆಯಬಹುದು. ಇದು ನಿಜಕ್ಕೂ ಸಂತೋಷವನ್ನುಂಟುಮಾಡುವ ಸಂಗತಿ.

ತೀ.ನಂ. ಶ್ರೀಕಂಠಯ್ಯ ಹೊಸಗನ್ನಡ ಆಚಾರ್ಯ ಪುರುಷರಲ್ಲಿ ಪ್ರಾತಃಸ್ಮರಣೀಯರಲ್ಲಿ ಒಬ್ಬರು. ತಮ್ಮ ಗುರುಗಳಾದ ಬಿ.ಎಂ.ಶ್ರೀಕಂಠಯ್ಯನವರಂತೆ ಅವರು ಬರೆದದ್ದು ಸ್ವಲ್ಪ. ಆದರೆ ಬರೆದದ್ದೆಲ್ಲವೂ ಅಪ್ಪಟ ಬಂಗಾರ. ಅವರ ಜೀವಿತ ಕಾಲದಲ್ಲಿ ಅವರಿಗೆ ಸಲ್ಲಬಹುದಾಗಿದ್ದ, ಸಲ್ಲಬೇಕಾಗಿದ್ದ ಗೌರವ ಒಂದೂ ಸಲ್ಲಲಿಲ್ಲ. ಅವರು ಗೌರವ ಡಾಕ್ಟರೇಟ್ ಪದವಿ ಪಡೆಯಲಿಲ್ಲ; ಪದ್ಮ ಪ್ರಶಸ್ತಿ ಗಳಿಸಲಿಲ್ಲ; ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲಿಲ್ಲ; ಸಾಹಿತ್ಯ ಅಕಾದೆಮಿಯ ಬಹುಮಾನಕ್ಕೆ ಪಾತ್ರರಾಗಲಿಲ್ಲ. ಅವರಿದ್ದ ಕಾಲದಲ್ಲಿ ಅವರಿಗೆ ಗೌರವ ಗ್ರಂಥದ ಬಾಗಿನವೂ ದೊರೆಯಲಿಲ್ಲ. ಅವರನ್ನು ಬಲ್ಲವರಿಗೆಲ್ಲ ಈ ಕೊರತೆಗಳು ಕಾಡುವಂಥವು. 'ಪಂಪ ಪ್ರಶಸ್ತಿ' ಸ್ವಲ್ಪ ಮಟ್ಟಿಗಾದರೂ ಈ ಋಣವನ್ನು ಸಂದಾಯ ಮಾಡುತ್ತಿದೆಯೆಂಬುದು ನೆಮ್ಮದಿಯ ವಿಚಾರ.

"ನಮ್ಮ ತಲೆಮಾರಿನವರಿಗೆ ಇಷ್ಟವಾಗಿದ್ದ ಒತ್ತು ಸೇವಗೆಯ ಹಾಗೆ ನನ್ನ ಬರವಣಿಗೆ; ಹಿಟ್ಟು ಬೇಕಾದಷ್ಟು ಇದ್ದರೂ. ಅದು ಹದವಾಗಿ ಬೆಂದಿದ್ದರೂ, ಒರಳಿನೊಳಕ್ಕೆ ಹಾಕಿದ ಮಾತ್ರಕ್ಕೆ ಇದರಿಂದ ಸೇವಗೆಯ ಎಳೆಗಳು ಇಳಿದುಬರುವುದಿಲ್ಲ; ಮೇಲಿನಿಂದ ಯಾರಾದರೂ ಗಟ್ಟಿಯಾಗಿ ಒತ್ತಬೇಕು" ಎಂದು ತೀನಂಶ್ರೀಯವರೇ ತಮ್ಮ ಬರವಣಿಗೆಯ ಬಗೆಗೆ ಹೇಳಿಕೊಂಡಿದ್ದಾರೆ. ವಿದ್ವತ್ತಿನಲ್ಲಿ ಅವರು ತುಂಬಿದ ಕೊಡವೆನ್ನಿಸಿದ್ದರು. ಆದರೆ "ಇನ್ನೂ ನಾನು ಪಾಂಡಿತ್ಯಸಾಗರದ ದಡದಲ್ಲೇ ಇದ್ದೇನೆ" ಎಂಬುದು ಅವರ ವಿನಯವಾಗಿತ್ತು. "ಓದು ಬರಹಕ್ಕೆ ಶತ್ರು" ಎನ್ನುವುದು ಅವರೇ ಕಟ್ಟಿದ ಗಾದೆಯ ಮಾತು. ಅವರೊಬ್ಬ ಪರಿಷ್ಕಾರ ಪ್ರಿಯರು. ಪರಿಪೂರ್ಣತೆಯೇ ಅವರ ಆದರ್ಶವಾಗಿತ್ತು. ಅದನ್ನು ಸಾಧಿಸುವುದು ಸಾಧ್ಯವಿಲ್ಲವೆಂದು ತಿಳಿದಿದ್ದರೂ ಅವರ ಯಾತ್ರೆ ಅದೇ ಮಾರ್ಗದ್ದಾಗಿತ್ತು, ಆದ್ದರಿಂದಲೇ "ಶ್ರೀಕಂಠಯ್ಯನವರು ರಾತ್ರಿಯೆಲ್ಲಾ ಬರೆಯುತ್ತಾರೆ; ಬೆಳಗ್ಗೆ ಎದ್ದು ಬರೆದುದನ್ನೆಲ್ಲ ಹೊಡೆದು ಹಾಕುತ್ತಾರೆ" ಎಂದು ಅವರ ಸಮೀಪದವರು ತಮಾಷೆಯಾಗಿ ಹೇಳುತ್ತಿದ್ದುದುಂಟು.

ತೀನಂಶ್ರೀ (ಜನನ : ನವೆಂಬರ್ ೨೬, ೧೯೦೬) ತಮ್ಮ ಹದಿಹರೆಯದಲ್ಲಿಯೇ ಬರವಣಿಗೆಗೆ ಇಳಿದರು. ಕಂದ, ವೃತ್ತಗಳ ಲೇಖನ ಕಲೆ ಆಗಲೇ ಕರಗತವಾಗಿತ್ತು; ಸರೋಜಿನಿ ನಾಯ್ಡು ಮೊದಲಾದವರನ್ನು ಅನುವಾದಿಸುತ್ತಿದ್ದರು. ಅದೆಲ್ಲ ಅವರ ಪ್ರೌಢಶಾಲಾ ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. ಪುಸ್ತಕರೂಪದಲ್ಲಿ ಅವರ ಪ್ರಥಮ ಪ್ರಕಟಣೆ 'ಒಲುಮೆ' (೧೯೩೨). ಇಪ್ಪತ್ತಾರರ ಹರಯದ ಯುವಕವಿಯ ಪ್ರೇಮಗೀತಗಳ ಸಂಕಲನ ಅದು. ಕನ್ನಡದಲ್ಲಿ ಮೊದಲನೆಯ ಅಂಥ ಸಂಕಲನ. ಇಪ್ಪತ್ತು ಸ್ವಂತ ರಚನೆಗಳ ಜೊತೆಗೆ ಕೆಲವು ಅನುವಾದಗಳೂ ಇದರಲ್ಲಿ ಸೇರಿವೆ. ಕನ್ನಡದಲ್ಲಿ ಪ್ರೇಮಗೀತೆಗಳ ಶೃಂಗಾರ ಗಾಂಭೀರ್ಯಕ್ಕೂ, ಧ್ವನಿಕೋಮಲತೆಗೂ ಶ್ರೀಕಂಠಯ್ಯನವರು ಒಳ್ಳೆಯ ದಾರಿ ಹಾಕಿಕೊಟ್ಟರು. ಲಲಿತ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ನಂಟರು' ಎಂಬ ಅವರ ಒಂದೇ ಒಂದು ಲಲಿತ ಪ್ರಬಂಧಗಳ ಸಂಕಲನ ಪ್ರಕಟಗೊಂಡಿದೆ. 'ಒಲುಮೆ' ಮತ್ತು 'ನಂಟರು' ಎರಡೂ ಅವರ ಸೃಜನಶೀಲ ಸಾಹಿತ್ಯದ ರುಚಿ ತೋರಿಸುತ್ತವೆ. ಆ ಕ್ಷೇತ್ರದಲ್ಲಿ ಅವರು ಹೆಚ್ಚಿನ ಕೆಲಸ ಮಾಡದೆ ಹೋದದ್ದು ಒಂದು ನಷ್ಟವೆಂದೇ ಹೇಳಬೇಕು. ಸ್ವತಃ ಶ್ರೀಕಂಠಯ್ಯನವರಿಗೇ ಇದರಲ್ಲಿ ನಂಬಿಕೆ ಇರಲಿಲ್ಲ. ತಾವು ಈ ಬಗೆಯ ಕೆಲಸ ಮಾಡದಿದ್ದುದರಿಂದ "ಸಾಹಿತ್ಯಕ್ಕೆ ಅಂಥ ನಷ್ಟವೇನೂ ಆಗಿಲ್ಲ"ವೆಂಬುದು ಅವರ ಅನ್ನಿಸಿಕೆ.

'ನಂಬಿಯಣ್ಣನ ರಗಳೆ' ಮತ್ತು 'ಗದಾಯುದ್ಧ ಸಂಗ್ರಹ'– ಎರಡನ್ನೂ ಗ್ರಂಥ ಸಂಪಾದನೆಯ ಅತ್ಯುತ್ತಮ ಮಾದರಿಯೆನ್ನುವಂತೆ ಶ್ರೀಕಂಠಯ್ಯನವರು ಸಂಪಾದಿಸಿಕೊಟ್ಟಿದ್ದಾರೆ. 'ಹೆಣ್ಣು ಮಕ್ಕಳ ಪದಗಳು' ಎಂಬ ಪುಟಾಣಿ ಪುಸ್ತಕದಲ್ಲಿಯೂ ಅವರು ಇದೇ ಮಾರ್ಗವನ್ನು ಅನುಸರಿಸಿದ್ದಾರೆ. 'ಕಾವ್ಯ ಸಮೀಕ್ಷೆ', 'ಸಮಾಲೋಕನ' ಮತ್ತು 'ಕಾವ್ಯಾನುಭವ' ಎಂಬ ಮೂರು ಸಂಕಲನಗಳಲ್ಲಿ ಅವರ ವಿಮರ್ಶೆಯ ಹಾಗೂ ಸಂಶೋಧನೆಯ ಲೇಖನಗಳು ಸಂಗ್ರಹಗೊಂಡಿದ್ದರೂ, ಇವುಗಳಲ್ಲಿ ಸೇರದ ಕೆಲವು ಬಿಡಿ ಬರಹಗಳೂ ಇವೆ. 'ಕನ್ನಡ ಮಧ್ಯಮ ವ್ಯಾಕರಣ' ಎನ್ನುವುದು ೧೯೩೯ರಷ್ಟು ಹಿಂದೆಯೇ ರಚಿತವಾದ ಶಾಲಾ ಮಕ್ಕಳ ವ್ಯಾಕರಣ. ಅದನ್ನು ಮೀರಿಸುವ ಅಂಥ ಮತ್ತೊಂದು ವ್ಯಾಕರಣ ಈ ಅರ್ಧ ಶತಮಾನದಲ್ಲಿ ಪ್ರಕಟವಾಗಲಿಲ್ಲ ಎನ್ನುವುದು ಶ್ರೀಕಂಠಯ್ಯನವರ ಹೆಗ್ಗಳಿಕೆ. 'ಪಂಪ' ಎಂಬ ಪುಟ್ಟ ಪುಸ್ತಕದಲ್ಲಿ ಆದಿಕವಿಯ ಸಾಧನೆ ಸಿದ್ಧಿಗಳನ್ನು ಮನೋಹರವಾಗಿ ಹಿಡಿದಿಡಲಾಗಿದೆ. 'ರಾಕ್ಷಸನ ಮುದ್ರಿಕೆ' ಮತ್ತು 'ಬಿಡಿಮುತ್ತು' ಎರಡೂ ಅನುವಾದ ಗ್ರಂಥಗಳು. ಅವರ ಇಂಗ್ಲಿಷ್ ಲೇಖನಗಳ ಸಂಕಲನವೂ ಒಂದು ಪ್ರಕಟವಾಗಿದೆ. ಶ್ರೀಕಂಠಯ್ಯನವರು ಇಂದಿನ ಸಂಕುಚಿತ ಅರ್ಥದಲ್ಲಿ ಸೃಜನಶೀಲ ಸಾಹಿತ್ಯವನ್ನು ಸೃಷ್ಟಿಸಲಿಲ್ಲ. ಆದರೆ ಅವರ ಎಲ್ಲ ಬರವಣಿಗೆಯೂ– ಸಂಶೋಧನೆಯೂ ಸೇರಿ– ಸೃಜನಶೀಲವೆಂದು ಧಾರಾಳವಾಗಿ ಹೇಳಬಹುದು. ಅವರ ಬರವಣಿಗೆಯ ಸೃಜನ ಸೌಂದರ್ಯವನ್ನು ಇನ್ನೊಬ್ಬರಲ್ಲಿ ಕಾಣುವುದು ಸುಲಭವಲ್ಲ. ಎಲ್ಲ ಸೊಗಸೂ ಅಲ್ಲಿ ಮಡುಗಟ್ಟಿದೆ.

'ಭಾರತೀಯ ಕಾವ್ಯಮೀಮಾಂಸೆ' ತೀನಂಶ್ರೀ ಅವರ ಮೇರುಕೃತಿ. ಮಾತ್ರವಲ್ಲ, ಆಧುನಿಕ ಕನ್ನಡದ ಒಂದು ಮಹತ್ವದ ಗ್ರಂಥ. ಕನ್ನಡದಲ್ಲಿ ಕಾವ್ಯಮೀಮಾಂಸೆಯ ಓದಿಗೆ ಅದು ಹೊಸ ದಿಗಂತಗಳನ್ನೇ ತೆರೆಯಿತು. ಅದಕ್ಕಿಂತ ಮೊದಲು ಆ ಕ್ಷೇತ್ರಕ್ಕೆ ಸಂಬಂಧಿಸಿದ ಗಮನಾರ್ಹ ಬರವಣಿಗೆ ಕನ್ನಡದಲ್ಲಿ ಏನಿತ್ತು? ಶ್ರೀಕಂಠಯ್ಯನವರೇ ತಮ್ಮ ಗ್ರಂಥದಲ್ಲಿ ಪಟ್ಟಿ ಮಾಡಿ

ಹೇಳಿದ್ದಾರೆ: ಅನುವಾದಗಳೂ ಸೇರಿ ಹನ್ನೆರಡು ಪುಸ್ತಕಗಳು; ಹದಿಮೂರು ಲೇಖನಗಳು! ಕಾವ್ಯಮೀಮಾಂಸೆಯ ವಿದ್ಯಾರ್ಥಿಗಳು ಡೇ, ಕಾಣೆ, ರಾಘವನ್, ಹಿರಿಯಣ್ಣ ಮೊದಲಾದವರನ್ನಷ್ಟೇ ಅವಲಂಬಿಸಿರಬೇಕಾಗಿತ್ತು, ಅನಿವಾರ್ಯವಾಗಿ ಓದಬೇಕಾದ ಕನ್ನಡ ಗ್ರಂಥವೇ ಇರಲಿಲ್ಲ. ತೀನಂಶ್ರೀ ಅವರ ಪುಸ್ತಕ ಬಂತು. ಅದನ್ನು ಬಿಟ್ಟು ಕಾವ್ಯಮೀಮಾಂಸೆಯ ಓದು ಇಲ್ಲ ಎನ್ನುವಂತಾಯಿತು! ಶ್ರೀಕಂಠಯ್ಯನವರು ಬದುಕಿದ್ದಾಗಲೆ ಪುಸ್ತಕದ ಪರಿಷ್ಕೃತ ಆವೃತ್ತಿ ಪ್ರಕಟವಾದದ್ದು ಒಂದು ಅದೃಷ್ಟ.

ಕುವೆಂಪು ಅವರು ತಮ್ಮ ಮುನ್ನುಡಿಯಲ್ಲಿ, 'ಭಾರತೀಯ ಕಾವ್ಯಮೀಮಾಂಸೆ'ಯನ್ನು "ಸುಸಮರ್ಥವೂ ಮಾರ್ಗದರ್ಶಕವೂ ಆಗಿರುವ ಒಂದು ಆಚಾರ್ಯಕೃತಿ" ಎಂದು ವರ್ಣಿಸಿದ್ದಾರೆ. ಈ ಪುಸ್ತಕವನ್ನು ಓದುವ ಯಾರಿಗಾದರೂ, ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲವೆಂಬುದು ಗೊತ್ತಾಗುತ್ತದೆ. ಶ್ರೀಕಂಠಯ್ಯನವರೇ ಹೇಳಿಕೊಂಡಿರುವ ಹಾಗೆ. ಗ್ರಂಥದ ಹೆಸರು 'ಭಾರತೀಯ ಕಾವ್ಯಮೀಮಾಂಸೆ' ಎಂದಿದ್ದರೂ "ಸಂಸ್ಕೃತ ಭಾಷೆಯಲ್ಲಿರುವ ಕಾವ್ಯಲಕ್ಷಣ ಗ್ರಂಥಗಳನ್ನೇ ಪ್ರಧಾನವಾಗಿ ಅವಲಂಬಿಸಿ" ಬರೆಯಲಾಗಿದೆ. ಕನ್ನಡದಲ್ಲಿ ಬಂದ ಲಕ್ಷಣ ಗ್ರಂಥಗಳನ್ನು ಕುರಿತ ಒಂದು ಅಧ್ಯಾಯ ಪ್ರತ್ಯೇಕವಾಗಿದೆ. ಸಂಸ್ಕೃತ ಕಾವ್ಯಮೀಮಾಂಸೆಯೇ ಹೇಗೆ ಭಾರತೀಯ ಕಾವ್ಯಮೀಮಾಂಸೆಯಾಗುತ್ತದೆಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. "ಸಂಸ್ಕೃತದಲ್ಲಿ ದೊರೆಯುವ ಸಾಮಗ್ರಿಯೆಲ್ಲವನ್ನೂ ಇಲ್ಲಿ ಸಂಗ್ರಹಿಸಿಲ್ಲ" ಎಂದು ಹೇಳಿಕೊಳ್ಳುವ ಶ್ರೀಕಂಠಯ್ಯನವರು ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ರಸ– ಧ್ವನಿ– ಔಚಿತ್ಯ ಎಂಬ ಕಾವ್ಯಮೀಮಾಂಸೆಯ ತಿರುಳಿನ ಪ್ರತಿಪಾದನೆಯೇ ಇದರಲ್ಲಿ ಪ್ರಧಾನವಾಗಿದೆ. ತೌಲನಿಕ ಕಾವ್ಯಮೀಮಾಂಸಾ ಶಾಸ್ತ್ರವನ್ನು ಬಲ್ಲವರಿಗೆ ಇದರ ಔಚಿತ್ಯ ತಿಳಿಯುತ್ತದೆ.

'ಭಾರತೀಯ ಕಾವ್ಯಮೀಮಾಂಸೆ'ಯಲ್ಲಿ ಮೂರು ಭಾಗಗಳಿವೆ: ಮೊದಲನೆಯದು ಶಾಸ್ತ್ರದ ಬೆಳವಣಿಗೆಯನ್ನು ನಿರೂಪಿಸುತ್ತದೆ; ಎರಡನೆಯದರಲ್ಲಿ ಕವಿ – ಕಾವ್ಯ – ಸಹೃದಯರನ್ನು ವರ್ಣಿಸಲಾಗಿದೆ; ಮೂರನೆಯ ಭಾಗದಲ್ಲಿ ರಸ – ಧ್ವನಿಗಳ ವಿವೇಚನೆಯಿದೆ. ಒಟ್ಟಿನಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಸಮರ್ಥ ಸ್ಥೂಲ ಪರಿಚಯ ಓದುಗರಿಗಾಗುತ್ತದೆ. ನಮ್ಮ ಕಾವ್ಯಮೀಮಾಂಸೆಯ ಮೂಲತತ್ವಗಳು ಇಲ್ಲಿ ಸಮಗ್ರವಾಗಿ ಒಂದೆಡೆ ಸೇರಿವೆ. ಅವನ್ನು ಆಧುನಿಕ ದೃಷ್ಟಿಯಿಂದ ನೋಡಲಾಗಿದೆ. ಇದೊಂದು ಆದರ್ಶಪ್ರಾಯವಾದ ಪಠ್ಯಪುಸ್ತಕವೆನ್ನ ಬಹುದು. ಇಂಥ ಪುಸ್ತಕಗಳನ್ನು ಓದುವ ವಿದ್ಯಾರ್ಥಿಗಳು ನಿಜವಾಗಿಯೂ ಪುಣ್ಯವಂತರು. ಇಂಥದೊಂದು ಪುಸ್ತಕ ಇಂಗ್ಲಿಷಿನಲ್ಲಿಯೂ ಇಲ್ಲವೆಂದು ಸಾಮಾನ್ಯವಾಗಿ ಪ್ರಶಂಸಿಸಲಾಗುತ್ತದೆ. ಗ್ರಂಥದ ಸ್ವರೂಪವನ್ನು ಮನಸ್ಸಿನಲ್ಲಿಟ್ಟುಕೊಂಡಾಗ ಇದು ಸರಿಯೆ. ಆದರೆ ಇದರಲ್ಲಿ ಲೇಖಕರ ಕೊಡುಗೆ ಏನು ಎಂದು ಕೇಳುವವರಿದ್ದಾರೆ. ಭಾರತೀಯ ಕಾವ್ಯಮೀಮಾಂಸೆಗೆ ಶ್ರೀಕಂಠಯ್ಯನವರ ಸ್ವೋಪಜ್ಞ ಕೊಡುಗೆ ಇಲ್ಲದಿರಬಹುದು. ಆದರೆ ಪುಸ್ತಕವನ್ನು ಈ ರೀತಿಯಾಗಿ ರಚಿಸಿರುವುದೇ ಅವರ ಕೊಡುಗೆ. ಜೊತೆಗೆ ಕನ್ನಡದ ಉದಾಹರಣೆಗಳನ್ನು ಕೊಟ್ಟು ವಿಷಯಗಳನ್ನು ವಿವರಿಸಿರು ವುದೂ ಮಹತ್ವದ ಕೆಲಸ. ಇಂಥ ಕಡೆಗಳಲ್ಲೆಲ್ಲ ಲೇಖಕರ ವಿದ್ವತ್ತು– ಪ್ರತಿಭೆ ಕೂಡ ಮಿಂಚುತ್ತವೆ.

ಕನ್ನಡದ ಅತ್ಯುತ್ತಮ ಬರವಣಿಗೆಯ ಮಾದರಿ 'ಭಾರತೀಯ ಕಾವ್ಯಮೀಮಾಂಸೆ'ಯಲ್ಲಿದೆ. ಇದನ್ನು ಓದುವುದೇ ಒಂದು ಅನುಭವ. 'ಓದಿನ ಸುಖ' ಎನ್ನುವುದಿದ್ದರೆ ಅದನ್ನು ಈ ಪುಸ್ತಕದ ಓದಿನಿಂದ ಪಡೆಯಬಹುದು. ಯಾವ ಸಂದಿಗ್ಧತೆಗೂ ಅವಕಾಶ ಕೊಡದ ಬರವಣಿಗೆ; ಕ್ಲಿಷ್ಟ ಕಲ್ಪನೆಗಳು ಸ್ಪಷ್ಟಗೊಳ್ಳುವಂತೆ ಮಾಡುವ ಉದಾಹರಣೆಗಳು; ಹೊಸ ಕಾಲಕ್ಕೆ ಅನುಗುಣವಾದ ನಿರೂಪಣೆ. ವಿಶ್ಲೇಷಣೆ– ಇವುಗಳಿಂದ ಪುಸ್ತಕದ ಮಹತ್ವ ಹೆಚ್ಚಿದೆ.

ಈ ಪುಸ್ತಕದ ಹಿರಿಮೆಯೆಲ್ಲ ಕನ್ನಡದ ಸಂದರ್ಭದಲ್ಲಿ ಎಂಬುದನ್ನು ನಾವು ಮರೆಯಬಾರದು. ಈ ಸ್ವರೂಪದ ಪುಸ್ತಕಗಳು ಹಿಂದಿ, ಮರಾಠಿ. ಬಂಗಾಳಿಯಂಥ ಭಾಷೆಗಳಲ್ಲಿ ಈಗ ಪ್ರಕಟವಾಗಿದೆ. ಆದರೂ ಸ್ನೇಹಿತರ ನೆರವಿನಿಂದ ಇದನ್ನು ಹಿಂದಿಯಲ್ಲಿ ಪ್ರಕಟಿಸುವ ಕೆಲಸ ನಡೆದಿದೆ. ಇನ್ನು ಒಂದೆರಡು ತಿಂಗಳುಗಳಲ್ಲಿ ಅದು ಅಚ್ಚಿಗೆ ಹೋಗುತ್ತದೆ. ಮೂಲದ ಮಹತ್ವ ಅಲ್ಲಿ ಎಷ್ಟರ ಮಟ್ಟಿಗೆ ಉಳಿಯುತ್ತದೆಂಬುದನ್ನು ಕಾಯ್ದು ನೋಡಬೇಕು. ಏಕೆಂದರೆ ಪುಸ್ತಕಗಳಿಗೂ ಒಂದು ಪರಿಸರವಿರುತ್ತದೆ. ಆ ಪರಿಸರದಲ್ಲಿ ಮಾತ್ರ ಅವು ಶೋಭಿಸುತ್ತವೆ. ಪರಿಸರವನ್ನು ಮೀರಿಯೂ ಕಂಗೊಳಿಸುವ ಪುಸ್ತಕಗಳು ತೀರ ಅಪರೂಪ.

ತೀನಂಶ್ರೀ ಮನಸ್ಸು ಮಾಡಿದ್ದಿದ್ದರೆ, ಅವರು ಈಗ ಮಾಡಿರುವ ಕೆಲಸಕ್ಕಿಂತ ಹತ್ತು ಪಟ್ಟು ಹೆಚ್ಚಿನ ಕೆಲಸ ಮಾಡಬಹುದಾಗಿತ್ತು. ಆದರೆ ಏನು ಮಾಡುವುದು? ಅವರೇ ಒಂದೆಡೆ ಹೇಳಿದ್ದಾರೆ : "ನನಗೆ ಒಗ್ಗುವ ಹಾದಿ ಪದ್ಯಕ್ಕಿಂತ ಹೆಚ್ಚಾಗಿ ಗದ್ಯ; ಗದ್ಯಕ್ಕಿಂತ ಹೆಚ್ಚಾಗಿ ಮೌನ". ಅವರು ಎಷ್ಟನ್ನು ಕೊಟ್ಟು ಹೋಗಿದ್ದಾರೊ ಅಷ್ಟು ನಮ್ಮ ಪುಣ್ಯ. ಅದಕ್ಕೇ ನಾವು ಕೃತಜ್ಞರಾಗಿರಬೇಕು. ಪಂಪ ಪ್ರಶಸ್ತಿ ಅವರ ಈ ನೆನಪಿಗೆ ಸಂದ ಗೌರವ.

(ಪ್ರಜಾವಾಣಿ : ೪–೩–೧೯೯೦)

ಪ್ರಶಸ್ತಿ ಲೋಕದ ಅನುರೂಪ ದಾಂಪತ್ಯ
ಪಂಪ ಪ್ರಶಸ್ತಿ – ಭಾರತೀಯ ಕಾವ್ಯಮೀಮಾಂಸೆ

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

●

ಈ ಸಲದ 'ಪಂಪ ಪ್ರಶಸ್ತಿ' ಗೌರವ ಪಡೆದ 'ಭಾರತೀಯ ಕಾವ್ಯಮೀಮಾಂಸೆ' ನಮ್ಮ ಸಾಹಿತ್ಯಲೋಕದ ಒಂದು ಆಚಾರ್ಯಕೃತಿ. ಇಂಥ ಅದ್ವಿತೀಯ ಕೃತಿಯನ್ನು ತೀನಂಶ್ರೀ ತಮ್ಮ ಮೂವತ್ತಾರನೆಯ ವಯಸ್ಸಿಗೇ ರಚಿಸಿದರು! ಕನ್ನಡದ ಮೊದಲ ಪ್ರೇಮಕವನಗಳ ಸಂಗ್ರಹವನ್ನು ರಚಿಸಿದ ಕೀರ್ತಿಯೂ ಅವರದೇ. ವಿದ್ವತ್ತು ರಸಜ್ಞತೆಗಳು ಹಾಲು ಸಕ್ಕರೆಯಂತೆ ಬೆರೆತ ವ್ಯಕ್ತಿತ್ವ ಅವರದು. ವ್ಯಕ್ತಿಯಾಗಿ ಕೂಡ ಅವರು ಸುತ್ತಲಿನವರ ಬಾಳಿನಲ್ಲಿ ಸ್ನೇಹದ ಸವಿ ಹರಿಸಿದವರು. ಅವರು ತೀರಿಕೊಂಡಾಗ ಕವಿ ಪುತಿನ ಹೇಳಿದರು: "ಶ್ರೀಕಂಠಯ್ಯನವರಿಲ್ಲದ ಪೃಥ್ವಿ ನನಗೆ ಗತಯೌವನೆಯಾಗಿ ಕಾಣುತ್ತಾಳೆ".

ನಿಷ್ಕಳಂಕವಾದ ವಿದ್ವತ್ತಿಗೆ ಮತ್ತೊಂದು ಹೆಸರು ಎಂಬಂತೆ ಬಾಳಿದ, ಬರೆದ ತೀನಂಶ್ರೀಯವರಿಗೆ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್, ಸಾಹಿತ್ಯ ಸಮ್ಮೇಳನಾಧ್ಯಕ್ಷತೆ ಇಂಥ ಯಾವ ಗೌರವವೂ ಪ್ರಾಪ್ತವಾಗಲಿಲ್ಲ. ಈಗ ಅವರಿಲ್ಲ; ಆದರೆ ಅವರ ಕೃತಿ ಕಾಲದ ಪರೀಕ್ಷೆಯಲ್ಲಿ ಗೆದ್ದು ಪಂಪ ಪ್ರಶಸ್ತಿಯನ್ನು ಗಳಿಸಿದೆ; "ಕಾಲೋಹ್ಯಯಂ ನಿರವಧಿಃ ವಿಪುಲಾಚ ಪೃಥ್ವೀಃ" ಎಂಬ ಭವಭೂತಿಯ ಮಾತಿನ ಸತ್ಯತೆಯನ್ನು ಎತ್ತಿ ಹಿಡಿದಿದೆ.

ಮಾರ್ಚಿ ಇಪ್ಪತ್ತೊಂಬತ್ತನೆಯ ತಾರೀಕು. ಅಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆ ಸಂಜೆಯನ್ನು ಅಮರವಾಗಿಸಿದ ಸಾಹಿತ್ಯೋತ್ಸವ. ದಿವಂಗತ ಪ್ರೊ॥ ತೀ.ನಂ.ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ'ಗೆ ನಾಡಿನ ಮಹೋನ್ನತ ಸಾಹಿತ್ಯ ಗೌರವವಾದ 'ಪಂಪ ಪ್ರಶಸ್ತಿ'ಯ ನೀಡಿಕೆ. ಸಾಹಿತಿಗಳು, ಸಾಹಿತ್ಯಪ್ರೇಮಿಗಳು ಕಿಕ್ಕಿರಿದ ಸಭೆ. ಕಿವಿಗಡಚಿಕ್ಕುವ ಚಪ್ಪಾಳೆ ಹರ್ಷೋದ್ಗಾರಗಳ ನಡುವೆ ತೀನಂಶ್ರೀಯವರ ಪತ್ನಿ ಶ್ರೀಮತಿ ಜಯಲಕ್ಷ್ಮಮ್ಮನವರಿಂದ ಪಂಪ ಪ್ರಶಸ್ತಿಯ ಸ್ವೀಕಾರ.

'ಭಾರತೀಯ ಕಾವ್ಯಮೀಮಾಂಸೆ' ಕನ್ನಡ ಸಾಹಿತ್ಯದ ಕ್ಷೇತ್ರದಲ್ಲಿ ಒಂದು ಶಾಶ್ವತ ಜ್ಯೋತಿಸ್ತಂಭ. ೧೯೫೩ರಷ್ಟು ಹಿಂದೆಯೇ ಇದಕ್ಕೆ ಮುನ್ನುಡಿ ಬರೆದ ಕುವೆಂಪು ಕೃತಿಯ ಘನತೆಯನ್ನು ಮನಸ್ಸು ತುಂಬಿ ಪ್ರಶಂಸಿಸುತ್ತ "ಇದು ಅಂಥಿಂಥ ಗ್ರಂಥವಲ್ಲ, ಒಂದು ಆಚಾರ್ಯಕೃತಿ" ಎಂದು ಕರೆದರು; "ಮುಂಬರಲಿರುವ ಕಾವ್ಯಮೀಮಾಂಸೆ ಸಾಹಿತ್ಯ ವಿಮರ್ಶೆಗಳಿಗೆ ಮಾರ್ಗ ದರ್ಶಕ ಕೃತಿ" ಎಂದು ಹೊಗಳಿದರು. ಆಧುನಿಕ ಕನ್ನಡ ಸಾಹಿತ್ಯದ ವಿಮರ್ಶನಾಚಾರ್ಯ ರೆನಿಸಿರುವ ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ತಮ್ಮ 'ನಡೆದು ಬಂದ ದಾರಿ'ಯ

ಬರೆಹದಲ್ಲಿ ಇದನ್ನು 'ತೀರ ಮಹತ್ವದ ಕೃತಿ' ಎಂದು ಬಣ್ಣಿಸಿದ್ದಲ್ಲದೆ 'ಇಷ್ಟು ಪ್ರಮಾಣಭೂತವಾದ ಮತ್ತು ಪರಿಪೂರ್ಣವಾದ ಗ್ರಂಥ ಇಂಗ್ಲಿಷ್‌ನಲ್ಲಿ ಕೂಡ ಇಲ್ಲ'ವೆಂದು ಕೈವಾರಿಸಿದರು.

ತೀ.ನಂ.ಶ್ರೀಕಂಠಯ್ಯನವರು ಪಂಪನನ್ನು ಮತ್ತು ಅವನ ಕೃತಿಗಳನ್ನು ಕುರಿತು ಒಂದು ಸೊಗಸಾದ ಚಿಕ್ಕ ಹೊತ್ತಗೆಯನ್ನು ಪ್ರಕಟಿಸಿದವರು. ಅವನ ಕಾವ್ಯಗಳ ರಸೋದ್ದೀಪಕತೆಯನ್ನು ಕುರಿತು ತರಗತಿಗಳಲ್ಲಿ ಶಿಷ್ಯರ ಮುಂದೆ ಇನ್ನಿಲ್ಲದಂತೆ ಮೆಚ್ಚಿ ಬಣ್ಣಿಸಿದವರು. ಪಂಪ ಅವರ ದೃಷ್ಟಿಯಲ್ಲಿ ಕವಿಗಳ ಕವಿ. ಇಂಥ ಆಚಾರ್ಯರ ಕೃತಿಗೆ 'ಪಂಪ ಪ್ರಶಸ್ತಿ' ಕೊಡಲಾಗಿದೆ ಎಂಬ ಸುದ್ದಿ ಕೇಳಿದಾಗ ನನಗೆ ಕೊರಳು ಬಿಗಿದು ಕಣ್ಣಿನಲ್ಲಿ ನೀರೂರಿತು. ನಾಡಿನಾದ್ಯಂತ ಇರುವ ಅವರ ಅನೇಕ ಮಂದಿ ಶಿಷ್ಯರಿಗೆ ಇಂಥದೇ ಆನಂದಾನುಭವ ಆಗಿದೆಯೆಂದು ನಾನು ಊಹಿಸಬಲ್ಲೆ. ಇದಕ್ಕೆ ಕಾರಣ ಅವರು ನಮಗೆ ಗುರುಗಳು ಎಂಬ ವ್ಯಾಜವಷ್ಟೆ ಅಲ್ಲ, ಮದುವೆ ಮಂಟಪದಲ್ಲಿ ಸುಂದರವಾದ, ಸಂಪನ್ನವಾದ ಜೋಡಿಯೊಂದನ್ನು ಕಂಡಾಗ ಆಗುವ ಸಂತೋಷದಂತೆ ಇದು. ಕೃತಿಗೂ ಅದನ್ನು ವರಿಸಿದ ಪ್ರಶಸ್ತಿಗೂ ಎಂಥ ಸಾಮ್ಯ! ಪ್ರಶಸ್ತಿ ಲೋಕದ ಅನುರೂಪ ದಾಂಪತ್ಯ ಎಂದರೆ ಇದೇ.

ಹುಚ್ಚು ತೀರ್ಮಾನ

ಶ್ರೀಕಂಠಯ್ಯನವರು ಜನಿಸಿದ್ದು ೧೯೦೬ರಲ್ಲಿ, ತುಮಕೂರು ಜಿಲ್ಲೆಯ ತೀರ್ಥಪುರದಲ್ಲಿ. ಅವರ ತಂದೆ ನಂಜುಂಡಯ್ಯ, ತಾಯಿ ಭಾಗೀರಥಮ್ಮ. ತೀರ್ಥಪುರ, ಚಿಕ್ಕನಾಯಕನ ಹಳ್ಳಿ ತುಮಕೂರುಗಳಲ್ಲಿ ಪ್ರೌಢಶಾಲೆಯವರೆಗೆ ಓದು ಮುಗಿಸಿದ ತೀನಂಶ್ರೀ ಬಿ.ಎ. ಓದಲು ಮೈಸೂರಿನ ಮಹಾರಾಜ ಕಾಲೇಜಿಗೆ ಬಂದರು. ಬಿ.ಎ. ತರಗತಿಯಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಮೂರು ಭಾಷೆಗಳನ್ನೂ ಅಧ್ಯಯನ ಮಾಡಿ ಚಿನ್ನದ ಪದಕಗಳನ್ನು ಗಿಟ್ಟಿಸಿದರು. ಉಳಿದಂತೆ ಪಡೆದ ಪದಕಗಳೂ ಸೇರಿ ಆ ಕಾಲಕ್ಕೆ ಆರೇಳು ಚಿನ್ನದ ಪದಕ ಗೆದ್ದವರು ಅವರೊಬ್ಬರೇ. ನಂತರ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂತು ಅದರಲ್ಲೂ ಮೂರನೇ ರ್‍ಯಾಂಕ್ ಪಡೆದರು. ಕೂಡಲೇ ಅಮಲ್ದಾರರಾಗಿ ಅವರ ನೇಮಕವಾಯಿತು.

ಆ ದಿನಗಳಲ್ಲಿ ಅಮಲ್ದಾರಿಕೆಯೆಂದರೆ ಭಾರೀ ಹುದ್ದೆ; ಮುಂದೆ ಇನ್ನೂ ದೊಡ್ಡ ದೊಡ್ಡ ಹುದ್ದೆಗಳ ಭಾಗ್ಯದ ಬಾಗಿಲು ತೆರೆಯುವ ಕೀಲಿ ಕೈ. ಅಂಥದು ಸಿಗುವುದು ಪೂರ್ವಪುಣ್ಯವೆಂದೇ ಜನರ ನಂಬಿಕೆ. ಆದರೆ ಶ್ರೀಕಂಠಯ್ಯನವರು ಬಂಧುಮಿತ್ರರನ್ನೆಲ್ಲ ಚಕಿತಗೊಳಿಸುವಂಥ ಒಂದು ತೀರ್ಮಾನ ತೆಗೆದುಕೊಂಡುಬಿಟ್ಟರು. ಗುರುಗಳಾಗಿದ್ದ ಕನ್ನಡ ಪ್ರೊಫೆಸರ್ ಟಿ.ಎಸ್. ವೆಂಕಣ್ಣಯ್ಯನವರ ಸಲಹೆಯ ಮೇರೆಗೆ ಅಮಲ್ದಾರ್ ಹುದ್ದೆಯನ್ನು ಬಿಟ್ಟು ಕಾಲೇಜು ಮೇಸ್ಟರ ಕೆಲಸಕ್ಕೆ ಸೇರಿಬಿಟ್ಟರು. ಅವರ ಈ ತೀರ್ಮಾನ ಬಹಳ ಜನಕ್ಕೆ ಆಗ ಹಾಸ್ಯಾಸ್ಪದ ನಿರ್ಣಯವಾಗಿ ಕಂಡಿರಬೇಕು. ಆದರೆ ವೆಂಕಣ್ಣಯ್ಯನವರ ವಿಚಾರವೇ ಬೇರೆಯಾಗಿತ್ತು. ಅಷ್ಟೊಂದು ಮೇಧಾವಿಯಾದ ವ್ಯಕ್ತಿ ವಿಶ್ವವಿದ್ಯಾನಿಲಯದಲ್ಲಿ ನಿಂತು ಸಾವಿರಾರು ಜ್ಞಾನದ ಹಣತೆ ಹಚ್ಚಬೇಕೇ ಹೊರತು ಬರೀ ಹಣ ಅಧಿಕಾರ ದರ್ಪ ದೌಲತ್ತುಗಳ ಅಬ್ಬರದ ಲೌಕಿಕದಲ್ಲಿ ತನ್ನನ್ನು ತಾನೇ ಕಳೆದುಕೊಂಡು ಬಿಡಬಾರದು. ಹಾಗೆ ಮಾಡುವುದೆಂದರ 'ಹೊಳೆಯಲ್ಲಿ ಹುಣಿಸೆ ತೊಳೆದಂತೆ

ಕಲಿತದ್ದೆಲ್ಲ' ಎಂದು ಅವರ ಮತ. ಗುರುವಿನ ಅಭಿಪ್ರಾಯ ಶಿಷ್ಯನಿಗೂ ಸರಿಯೆನ್ನಿಸಿತು. ಅಲ್ಲಿಗೆ ಎಲ್ಲ ಆಮಿಷ ಮುಗಿಯಿತು.

ಏನೂ ಗೊತ್ತಿಲ್ಲ

ತೀನಂಶ್ರೀ ಸಿವಿಲ್ ಸರ್ವೀಸ್ ಪರೀಕ್ಷೆಗೆ ಕೂತಿದ್ದರು. ಅದರ ಕೊನೆಯ ಅಂಗವಾಗಿ ವೈವಾ (ಮೌಖಿಕ) ಪರೀಕ್ಷೆ ಇತ್ತು. ಪರೀಕ್ಷೆ ಆರಂಭವಾಗಿತ್ತು. ತೀನಂಶ್ರೀ ಸರದಿ ಬಂತು. ಒಳಗೆ ಹೊರಗಿನ ಪರೀಕ್ಷಕರಾಗಿ ಉಳಿದ ಕೆಲವರ ಜೊತೆ ಆರ್. ನರಸಿಂಹಾ ಚಾರ್ಯರೂ ಕೂತಿದ್ದಾರೆ! ಆರ್. ನರಸಿಂಹಾಚಾರ್ಯರು ಹಳಗನ್ನಡ ಸಾಹಿತ್ಯಕ್ಕೆ ದೊಡ್ಡ ರೀತಿಯಲ್ಲಿ ಸೇವೆ ಸಲ್ಲಿಸಿದವರು; ಕನ್ನಡ ಕವಿಚರಿತೆಯ ಸಂಪುಟಗಳನ್ನು ಬರೆದವರು. ತೀನಂಶ್ರೀ ತಲೆಮಾರಿನವರಿಗೆ ಗುರುಪ್ರಾಯರಾದವರು.

ವೈವಾ ಶುರುವಾಯಿತು. ತೀನಂಶ್ರೀ ಎಲ್ಲ ಪ್ರಶ್ನೆಗಳಿಗೂ ತಪ್ಪದೆ ಸಮರ್ಥವಾಗಿ ಉತ್ತರಿಸಿಸುತ್ತಿದ್ದಾರೆ. ಸಮಯ ಮುಗಿಯಿತು. ಥಟ್ಟನೆ ನರಸಿಂಹಾಚಾರ್ಯರು ಒಬ್ಬ ಕವಿಯ ಹೆಸರನ್ನು ಹೇಳಿ "ಇವನ ಬಗ್ಗೆ ನಿಮಗೇನು ಗೊತ್ತಿದೆ?" ಎಂದು ಕೇಳಿದರು. ತೀನಂಶ್ರೀ ಅವಾಕ್ಕಾದರು. ಎಷ್ಟೆಲ್ಲ ಅಭ್ಯಾಸ ಮಾಡಿದ್ದಾಗಿದೆ. ಆದರೆ ಅವನ ಹೆಸರು ಬಿಟ್ಟು ಬೇರೇನೂ ನೆನಪಿನಲ್ಲಿ ಇಲ್ಲ. ಯತ್ನಿಸಿ ಸೋತ ತೀನಂಶ್ರೀ ವಿನಯವಾಗಿ ಹೇಳಿದರು: "ಸರ್ ಈ ಕವಿಯ ಬಗ್ಗೆ ನನಗೆ ಏನೂ ಗೊತ್ತಿಲ್ಲ."

ನಗುಮುಖ ಮಾಡಿಕೊಂಡ ನರಸಿಂಹಾಚಾರ್ಯರು "ಚಿಂತೆಯಿಲ್ಲ, ಹೋಗಿಬನ್ನಿ" ಎಂದರು. ವೈವಾ ಮುಗಿಯಿತು. ಶ್ರೀಕಂಠಯ್ಯನವರು ಮನೆಗೆ ಧಾವಿಸಿ ಬಂದರು. ಕವಿಚರಿತೆ ಬರೆದ ಮಹಾ ವಿದ್ವಾಂಸನ ಎದುರಿನಲ್ಲಿಯೇ ಕವಿಯೊಬ್ಬನ ಬಗ್ಗೆ ನನಗೆ ಏನೂ ಗೊತ್ತಿಲ್ಲ ಅನ್ನುವಂತಾಯಿತಲ್ಲ ಎಂಬ ಅಸಮಾಧಾನ ಮನಸ್ಸನ್ನು ಸುಡುತ್ತಿದೆ. ಮನೆಯಲ್ಲಿದ್ದ ಕವಿಚರಿತೆ ಎತ್ತಿಕೊಂಡು ಸಂಬಂಧಿಸಿದ ಪುಟ ತಿರುವಿ ನೋಡಿದರು. ಕವಿಯ ಹೆಸರಿನ ಕೆಳಗೆ ಹೀಗೆ ಅಚ್ಚಾಗಿತ್ತು. "ಈ ಕವಿಯ ಬಗ್ಗೆ ನಮಗೆ ಏನೂ ತಿಳಿದು ಬಂದಿಲ್ಲ".

ಗುರುಗಳ ಕಾರಸ್ಥಾನ

ಪ್ರೊ ವೆಂಕಣ್ಣಯ್ಯನವರು ಕನ್ನಡದ ಕೆಲಸಕ್ಕೆ ಅಮಲ್ದಾರನೊಬ್ಬನನ್ನು ಹೀಗೆ ಹಾರಿಸಿಕೊಂಡು ಬಂದ ಸಂಚು ಮೊದಲಿನದೇನೂ ಅಲ್ಲ. ಸ್ವಲ್ಪ ಮುಂಚೆ ಅವರ ಗೆಳೆಯ ಡಾ। ಎ.ಆರ್. ಕೃಷ್ಣ ಶಾಸ್ತ್ರಿಗಳು ಇಂಥದೇ ಒಂದು ಕಾರಸ್ಥಾನ ನಡೆಸಿ ಯಶಸ್ವಿಯಾಗಿದ್ದರು. ಬಿ.ಎ. ಮುಗಿಸಿ ತತ್ತ್ವ ಶಾಸ್ತ್ರದ ಎಂ.ಎ ಸೇರಲು ಹೊರಟಿದ್ದ ಕುವೆಂಪು ಅವರನ್ನು ಉಪಾಯವಾಗಿ ಕನ್ನಡ ಎಂ.ಎ.ಗೆ ಎಳೆದು ತಂದದ್ದು ಶಾಸ್ತ್ರಿಗಳೇ. ಗುರುಗಳು ಕನ್ನಡದ ಪರ ತಮ್ಮ ಮನಸ್ಸನ್ನು ಹಾಗೆ ಹೊರಳಿಸಿದ್ದ ಗಳಿಗೆಯನ್ನು ಕುವೆಂಪು 'ತಮ್ಮ ಜೀವನದ ಅಮೃತಗಳಿಗೆ' ಎಂದು ಕರೆದುಕೊಂಡಿದ್ದಾರೆ. ವೆಂಕಣ್ಣಯ್ಯನವರು ಶ್ರೀಕಂಠಯ್ಯನವರಂಥ ಮತ್ತೊಬ್ಬ ಮೇಧಾವಿಯನ್ನು ಮರುಳು ಮಾಡಿ ಸೆಳೆದದ್ದೂ ಇಂಥದೇ ಒಂದು ಅಮೃತ ಮುಹೂರ್ತ ಎನ್ನಬೇಕು. ಗುರುಗಳಿಬ್ಬರ ಈ ಎರಡು

ಕಾರಸ್ಥಾನಗಳ ಫಲವಾಗಿ ಅಸಾಮಾನ್ಯ ಸೃಜನಶೀಲನೊಬ್ಬ ಮತ್ತು ಅಸಾಧಾರಣ ಶಾಸ್ತ್ರಕಾರನೊಬ್ಬ ಆಧುನಿಕ ಕನ್ನಡ ಸಾಹಿತ್ಯಕ್ಕೆ ದಕ್ಕುವಂತಾಯಿತು. ಆ ಇಬ್ಬರೂ ಸಾಲಾಗಿ ಮೊದಲ ಎರಡು ಪಂಪ ಪ್ರಶಸ್ತಿಗಳನ್ನು ಗೆದ್ದದ್ದಂತೂ ಗುರುಗಳ ಸಂಚಿಗೆ ಎಂಥ ಪುರಸ್ಕಾರ!

ಅಧ್ಯಾಪಕ ವೃತ್ತಿಗೆ ಬಂದರೂ ತೀನಂಶ್ರೀ ತಮ್ಮ ಓದನ್ನು ಅಲ್ಲಿಗೆ ನಿಲ್ಲಿಸಲಿಲ್ಲ. ಮುಂದೆ ಇಂಗ್ಲಿಷ್ ಎಂ.ಎ. ಪರೀಕ್ಷೆಗೆ ಓದಿ ಪ್ರಥಮ ರ್‍ಯಾಂಕ್ ಪಡೆದರು. ಕನ್ನಡ ಎಂ.ಎ.ಗೆ ಕೂತು ಅದರಲ್ಲೂ ಪ್ರಥಮ ರ್‍ಯಾಂಕ್ ಗಳಿಸಿದರು. ಪ್ರೊ॥ ಎಂ. ಹಿರಿಯಣ್ಣನವರಂಥ ಗುರುಗಳ, ನಂ. ಶಿವರಾಮ ಶಾಸ್ತ್ರಿಗಳಂಥ ಗೆಳೆಯರ ಜೊತೆ ಗಾಢ ಸಂಪರ್ಕದಲ್ಲಿರುತ್ತ ತಮ್ಮ ಸಂಸ್ಕೃತ ಜ್ಞಾನವನ್ನೂ ವಿಶೇಷವಾಗಿ ಬೆಳೆಸಿಕೊಂಡರು. ಈ ಎಲ್ಲ ಓದು ವ್ಯಾಸಂಗ ನಡೆದದ್ದು ಬಿಡಿಬೀಸಾಗಿದ್ದಾಗಲಲ್ಲ, ಕುಟುಂಬ ಕಟ್ಟಿಕೊಂಡ ಮೇಲೆ. ಮದುವೆಯಾದಾಗ ಅವರಿಗೆ ಹತ್ತೊಂಬತ್ತು ವರ್ಷ ಅಷ್ಟೆ!

ತೀನಂಶ್ರೀ ಒಬ್ಬ ಶ್ರೇಷ್ಠ ಅಧ್ಯಾಪಕರು. ಮಾದರಿ ಎಂದರೂ ಸರಿಯೆ. ಪೂರ್ವ ಸಿದ್ಧತೆ ಇಲ್ಲದೆ ಅವರು ಎಂದೂ ತರಗತಿಗೆ ಬರುತ್ತಿರಲಿಲ್ಲ. ಅಧ್ಯಾಪಕ ಎಂಥ ಮೇಧಾವಿಯೇ ಇರಲಿ ಸಿದ್ಧತೆ ಮಾಡಿಕೊಳ್ಳದೆ ಪಾಠ ಹೇಳುವುದು ವಿದ್ಯಾರ್ಥಿಗಳನ್ನು ಅವಮಾನಿಸಿದಂತೆ. ಅದೊಂದು ಸರಸ್ವತೀದ್ರೋಹ ಎಂದು ಅವರ ಭಾವನೆ. "ಮುಂದೆ ನೀವೂ ಅಧ್ಯಾಪಕರಾಗಬಹುದು; ಈ ಮಾತು ನೆನಪಿರಲಿ" ಎಂದು ಅವರು ನಮಗೆಲ್ಲ ಹೇಳುತ್ತಿದ್ದುದುಂಟು. ಪಾಠದ ವಿಷಯವನ್ನು ಅದರ ಸ್ಥೂಲ ವಿವರಗಳ ಸಹಿತ ಅವರು ಮನಸ್ಸಿಗೆ ಖಚಿತಮಾಡಿಕೊಂಡಿರುತ್ತಿದ್ದರು. ಹಾಗೆಂದೇ ಅವರ ಉಪನ್ಯಾಸದಲ್ಲಿ ಎಂದೂ ಅರ್ಥ ಸಂದಿಗ್ಧತೆ ಇರುತ್ತಿರಲಿಲ್ಲ. ಹಾಗೆ ನೋಡಿದರೆ ಅರ್ಥವ್ಯಕ್ತಿ ಅವರ ವಾಗ್ಮಿತೆಯ ಒಂದು ಮುಖ್ಯ ಲಕ್ಷಣವಾಗಿತ್ತು. ಕಾವ್ಯಮೀಮಾಂಸೆ ಇರಲಿ, ಭಾಷಾಶಾಸ್ತ್ರ ಇರಲಿ, ಅವರ ತರಗತಿ ಎಂದೂ ನೀರಸವಾದದ್ದಿಲ್ಲ. ಮಾತನಾಡುವಾಗ ಪ್ರತಿ ವಿಷಯಕ್ಕೆ ಒಂದು ಸೊಗಸಾದ ನಿದರ್ಶನ, ಅದು ಅವರಿಗೆ ಅಲ್ಲಿಯೇ ಸ್ಫುರಿಸಿತೆಂಬಂಥ ಸಹಜತೆಯಲ್ಲಿ ಹಾಯುತ್ತಿತ್ತು. ಜಗತ್ತಿನ ಹಿರಿಯ ಲೇಖಕರಾದ ವಾಲ್ಮೀಕಿ, ಕಾಳಿದಾಸ, ಭಾಸ, ಅಶ್ವಘೋಷ, ಹಾಲರಾಜ, ಅಮರು, ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಕೀಟ್ಸ್, ಪಂಪ, ರನ್ನ, ಕುಮಾರವ್ಯಾಸ, ಕುವೆಂಪು, ಬೇಂದ್ರೆ, ಪುತಿನ – ಹೀಗೆ ಸಂಸ್ಕೃತ, ಇಂಗ್ಲಿಷ್, ಹಳಗನ್ನಡ, ಹೊಸಗನ್ನಡಗಳಿಂದ ಅವರು ರುಚಿಕಟ್ಟಾದ ಕಾವ್ಯಭಾಗಗಳನ್ನು ಮಂಡಿಸುತ್ತ ವಿದ್ಯಾರ್ಥಿಗಳ ಜ್ಞಾನವನ್ನು ರುಚಿಶುದ್ಧಿಯನ್ನು ಬೆಳೆಸುತ್ತಿದ್ದರು. ಅವರು ಹಾಯಬೇಕಾದ ಕ್ಷೇತ್ರಗಳನ್ನೂ ಗೆಲ್ಲಬೇಕಾದ ಶಿಖರಗಳನ್ನೂ ಸೂಚಿಸುತ್ತಿದ್ದರು. ಅವರ ಹಲವು ಉಪನ್ಯಾಸಗಳು ತುಂಬ ರಸಭರಿತವಾಗಿರುತ್ತಿದ್ದವು. ಹಾಲುಕೀರು ತನ್ನಷ್ಟಕ್ಕೆ ತಾನೇ ರುಚಿಯಾದದ್ದು; ಅಂಥದರಲ್ಲಿ ಗುಟುಕಿಗೊಮ್ಮೆ ಕರಿದ ಗೋಡಂಬಿ ದ್ರಾಕ್ಷಿಗಳು ಸಿಗುವಂತಿದ್ದರೆ ಹೇಗಿರಬೇಡ!

ಅಂತರಂಗ ಎಷ್ಟು ಶುಭ್ರವೋ ಅದಕ್ಕೆ ತಕ್ಕ ಭವ್ಯ ಆಕೃತಿ ತೀನಂಶ್ರೀ ಅವರದ್ದು. ಅವರು ಒಳ್ಳೇ ಆಜಾನುಬಾಹು. ಆರಡಿ ಎನಿಸುವ ಎತ್ತರ, ಸ್ಫುಟವಾಗಿ ಕಡೆದಿಟ್ಟಂತೆ ಕಾಣುವ ಮುಖ. ವಿಶಾಲವಾದ ಹಣೆ, ಬಿಳಿಗೆಂಪು ಬಣ್ಣ, ಕೊಕ್ಕರೆ ಬಿಳುಪಿನ ಕಚ್ಚೆ ಪಂಚೆ, ಕ್ಲೋಸ್‌ಕಾಲರ್

ಕೋಟ್. ತಲೆಯ ಮುನ್ನೆತ್ತಿಯಲ್ಲಿ ನಡುವೆ ಹೌದೋ ಅಲ್ಲವೋ ಎನ್ನುವಂತೆ ಇಷ್ಟು ಕೂದಲು, ಇರುವ ಹತ್ತೆಂಟು ಕೂದಲನ್ನು ನೀಟಾಗಿ ಬಾಚಿಕೊಳ್ಳಲು ಜೇಬಿನಲ್ಲಿ ಒಂದು ಪುಟ್ಟ ಬಾಚಣಿಗೆ! ಅವರು ತಮ್ಮ ಎಡಗೈಯನ್ನು ಅರ್ಧ ಎತ್ತಿ, ಅಂಗೈಯನ್ನು ನಮಗೆ ಎದುರು ಹಿಡಿದು ಅತ್ತ ಇತ್ತ ಆಡಿಸುತ್ತ ಬಲಗೈಯಿಂದ ಕನ್ನಡಕದ ಬಲಕಟ್ಟನ್ನು ಆಗಾಗ ಮುಟ್ಟುತ್ತ ಬಿಡುತ್ತ ಮಾತನಾಡುವರು. ಮಂತ್ರಶಕ್ತಿಗೆ ಒಳಗಾದವರಂತೆ ಅವರನ್ನು ನೋಡುತ್ತ ಕೂರುವ ನಮಗೆ ಅವರ ಈ ಕೈಚಲನೆ ಮಾತನ್ನು ಸಾಭಿನಯವಾಗಿ ನಿರೂಪಿಸುವಂತೆ ತೋರುವುದು. ಆ ವಿದ್ವತ್ತು, ಮಾತಿನ ವೈಖರಿ, ಧೀರ ನಿಲುವು ಕಂಡು ನಮಗೆ ಇನ್ನಿಲ್ಲದ ಹೆಮ್ಮೆ. ಅಭಿಮಾನ. ಭಾರತದ ಮಹಾ ಮೇಧಾವಿ ಪ್ರಾಧ್ಯಾಪಕರೊಬ್ಬರ ಪಾಠವನ್ನು ನಾವು ಕೇಳುತ್ತಿದ್ದೇವೆ ಎನ್ನುವುದು ನಮಗೆಲ್ಲ ಚೆನ್ನಾಗಿ ಗೊತ್ತಿತ್ತು. ಆ ದಿನಗಳಲ್ಲಿ (೧೯೫೬-೫೯) ಕನ್ನಡ ವಿಭಾಗದಲ್ಲಿ ಇದ್ದವರೆಲ್ಲ ಸೊಗಸಾಗಿ ಪಾಠ ಮಾಡಬಲ್ಲ ಅಧ್ಯಾಪಕರು. ಆದರೂ ತೀನಂಶ್ರೀಯವರನ್ನೂ ಕೊಂಚ ಮೀರಿಸುವಷ್ಟು ಆಕರ್ಷಕವಾಗಿ ಪಾಠ ಮಾಡುತ್ತಿದ್ದವರು ತ.ಸು. ಶಾಮರಾಯರೊಬ್ಬರೇ.

ತಲೆಯಲ್ಲಿ ಫ್ಯಾನು

ಒಮ್ಮೆ ತೀ.ನಂ.ಶ್ರೀ. ಎಂ.ಎ. ತರಗತಿಗೆ ಪಾಠ ಹೇಳುತ್ತಿದ್ದಾರೆ. ತಾವು ಮಾಡಿಕೊಂಡಿದ್ದ ಟಿಪ್ಪಣಿಗಳ ಕಡೆ ನೋಡಲು ಕೊಂಚ ತಲೆಬಾಗಿದ್ದಾರೆ. ಒಬ್ಬ ವಿದ್ಯಾರ್ಥಿ (ಶ್ರೀನಿವಾಸ ಶರ್ಮ) ಕಿಸಕ್ಕನೆ ನಕ್ಕ. ಪಕ್ಕದಲ್ಲಿ ಕೂತಿದ್ದ ಅ.ರಾ. ಮಿತ್ರನಿಗೆ ಏನೋ ತೋರಿಸಿದ. ಅದನ್ನು ಉಳಿದವರೂ ನೋಡಿದರು. ಎಲ್ಲರ ಮುಖದಲ್ಲೂ ನಗು. ತೀ.ನಂ.ಶ್ರೀ. ತಲೆ ಎತ್ತಿದಾಗ ಇಡೀ ತರಗತಿಯೇ ನಗುಮುಖವಾಗಿದೆ. ಅವರಿಗೆ ಆಶ್ಚರ್ಯ, ಕುತೂಹಲ. "ಯಾಕೆ ನಗುತ್ತಿದ್ದೀರಿ?" ಎಂದು ಕೇಳಿದರು. ಯಾರಿಗೂ ಹೇಳುವ ಧೈರ್ಯವಿಲ್ಲ. ಮತ್ತೆ ಕೇಳಿದರು. ಉತ್ತರವಿಲ್ಲ. "ಏನಿದು, ಏನೋ ಹಾಸ್ಯ ಪ್ರಸಂಗ ನಡೆದಿದೆ, ನೀವು ನಗಬಹುದು. ನನಗೆ ಹೇಳಬಾರದೆ? ನನಗೂ ನಗಲು ಅವಕಾಶ ಕೊಡಿ" ಎಂದರು. ಶರ್ಮ ಕೆಟ್ಟ ಧೈರ್ಯದಿಂದ "ಏನಿಲ್ಲ ಸಾರ್ ನೀವು ತಲೆತಗ್ಗಿಸಿದ್ದಿರಲ್ಲ. ಆಗ ಮೇಲೆ ತಿರುಗುತ್ತಿರೋ ಫ್ಯಾನಿನ ಚಿತ್ರ ನಿಮ್ಮ ತಲೆಯಲ್ಲಿ ತುಂಬ ಚೆನ್ನಾಗಿ ಕಾಣಿಸುತ್ತಿತ್ತು.* ತಮಾಷೆ ಎನಿಸಿತು. ನಗು ಬಂತು ಸಾರ್" ಎಂದ. ನಮಗೆಲ್ಲ ಗಾಬರಿ! ಈ ತಲೆಹರಟೆ ಶರ್ಮ ಹೇಳುತ್ತಿರುವುದೇನು? ನಿಮ್ಮ ತಲೆ ಬೋಳು ಅಂತ ತಾನೆ? ಭಾಷಾಶಾಸ್ತ್ರದ ತರಗತಿಯಲ್ಲಿ ಗಂಭೀರವಾಗಿ ಪಾಠ ಕೇಳೋದು ಬಿಟ್ಟು ಇಂಥ ಕಮಂಗಿ ಕೆಲಸ ಮಾಡುವುದೆ? ಈಗ ಇವನ ಕಪಿಚೇಷ್ಟೆಗೆ ತಕ್ಕ ಪೂಜೆ ಆಗುತ್ತೆ ಅನ್ನಿಸಿತು ನಮಗೆ. ಒಂದು ಸೆಕೆಂಡು ಎಲ್ಲರ ಮುಖ ಗಂಭೀರ. ಆದರೆ ಶರ್ಮನ ಮಾತಿನ ಅರ್ಥ ಹೊಳೆಯಿತೋ ಇಲ್ಲವೋ ತೀ.ನಂ.ಶ್ರೀ. ಹೋ ಅಂತ ಜೋರಾಗಿ ನಗಲು ಪ್ರಾರಂಭಿಸಿದರು. ತಲೆ ಮುಟ್ಟಿ ಮುಟ್ಟಿ ನೋಡಿಕೊಂಡು ನಕ್ಕರು. ಇಡೀ ತರಗತಿಯೇ ನಗುವಿನಲ್ಲಿ ಮುಳುಗಿ ಹೋಯಿತು.

---

* ಇದನ್ನು "ತೀ.ನಂ.ಶ್ರೀ.ಯವರ ಜ್ಞಾನಚಕ್ರ"ವೆಂದು ಕರೆಯುತ್ತಿದ್ದೆವೆಂದು ನನಗೆ ಇನ್ನೊಬ್ಬರು ತೀ.ನಂ.ಶ್ರೀ.ಯವರ ವಿದ್ಯಾರ್ಥಿ ತಿಳಿಸಿದ್ದಾರೆ. -ಸಂಪಾದಕ

ತೀನಂಶ್ರೀ ತುಂಬ ಗಂಭೀರ ಸ್ವಭಾವದವರು. ಆದರೆ ಸಂದರ್ಭಗಳಲ್ಲಿ ಅಷ್ಟೇ ವಿನೋದಶೀಲರು. ತಮ್ಮನ್ನೇ ಗೇಲಿಗೆ ಸಿಗಿಸಿಕೊಂಡು ನಗಬಲ್ಲ ಮುಳ್ಳಿಲ್ಲದ ವಿನೋದ ಅವರದ್ದು. ಒಮ್ಮೆ ಭಾಷಾಶಾಸ್ತ್ರದ ತರಗತಿ ನಡೆಯುತ್ತಿದೆ. ಒಂದು ಭಾಷೆ ಮಾತನಾಡುವ ಜನರ ಬೇರೆ ಭಾಷೆಯೊಂದನ್ನು ಕಲಿತು ಬಳಸುವಾಗ ಆ ಭಾಷೆಯ ಸ್ವರಗಳ ಉಚ್ಚಾರಣೆಯಲ್ಲಿ ಎಷ್ಟೊಂದು ತಪ್ಪಾಗುತ್ತದೆ ಎನ್ನುವುದನ್ನು ತೀನಂಶ್ರೀ ಹೇಳುತ್ತಿದ್ದಾರೆ. "ಇಂಗ್ಲಿಷಿನ V ಎಂಬ ಸ್ವರ ತೆಗೆದುಕೊಳ್ಳಿ. ನಾವು ಅದನ್ನು ನಮ್ಮ 'ವ'ಕಾರಕ್ಕೆ ಪೂರ್ತಿಸಮ ಎನ್ನುವಂತೆ ಉಚ್ಚರಿಸುತ್ತೇವೆ. ಅದು ತಪ್ಪು. ಅದನ್ನು ಹೇಳುವಾಗ ಮೇಲಿನ ಹಲ್ಲು ಕೆಳತುಟಿಗೆ ಕೊಂಚ ತಾಗಬೇಕು, F ಎಂಬ ಅಕ್ಷರ ಉಚ್ಚರಿಸುವಾಗ ಮಾಡುವ ರೀತಿಯಲ್ಲಿ. ನಿದರ್ಶನಕ್ಕೆ 'ಲವ್' ಎಂಬ ಪದ ನೋಡಿ. ಅದನ್ನು ಹೇಗೋ ಹೇಳುವುದಲ್ಲ, ತುಟಿ ಕಚ್ಚಿ ಹೇಳಬೇಕು" ಎಂದರು. ತರಗತಿಯಲ್ಲಿ 'ಆಹಾ' 'ಓಹೋ' ಎಂಬ ಉದ್ಗಾರ. ಗುಸುಗುಸು, ನಗು ಇತ್ಯಾದಿ. ತಮಗೆ ಗೊತ್ತಿಲ್ಲದೇ ತಮ್ಮ ಮಾತಿಗೆ ಮೂಡಿದ ಹೊಸ ಅರ್ಥ ಕೂಡಲೇ ತೀನಂಶ್ರೀ ಅವರಿಗೆ ಹೊಳೆದು ಹೋಯಿತು. ಅವರು ನಗುತ್ತಾ "ಚೆನ್ನಾಯಿತು ಚೆನ್ನಾಯಿತು. ಇದು ಭಾಷಾಶಾಸ್ತ್ರದ ತರಗತಿ, ಕಾವ್ಯ ಮೀಮಾಂಸೆಯದಲ್ಲ. ಇಲ್ಲಿ ಮಾತಿಗೆ ಧ್ವನಿ ಹುಡುಕುತ್ತಾರಾ? 'ನ ಸರ್ವತ್ರ ಧ್ವನಿರಾಗಿಣಾ ಭವಿತವ್ಯಂ' (ಎಲ್ಲ ಕಡೆ ಧ್ವನಿ ಹುಡುಕಬಾರದು) ಅಂತ ಅಭಿನವಗುಪ್ತ ಹೇಳಿಲ್ಲವೆ? ಎಲ್ಲ ಆಗಲೇ ಮರೆತುಹೋಯಿತೆ?" ಅಂತ ತಮಾಷೆಯಾಗಿ ತಮ್ಮನ್ನು ಸಮರ್ಥಿಸಿಕೊಂಡರು. ಆದರೂ ಶಿಷ್ಯರ ಧ್ವನಿಗ್ರಹಣ ಸಾಮರ್ಥ್ಯವನ್ನು ಅವರು ಮೆಚ್ಚಿಕೊಂಡದ್ದು ಅವರ ನಗುಮುಖದಲ್ಲಿ ಎದ್ದು ಕಾಣುತ್ತಿತ್ತು.

ಮದಿಸಿದ ಹೂಣನ ಕ್ಷೌರಿತ ಕೆನ್ನೆ

ಕಾವ್ಯಮೀಮಾಂಸೆಯ ಮತ್ತೊಂದು ತರಗತಿ. ಗುರುಗಳು ಮೀಮಾಂಸಕಾರ ಮಮ್ಮಟನ ಬಗ್ಗೆ ಹೇಳುತ್ತ 'ಸದ್ಯೋಮುಂಡಿತ ಮತ್ತಹೂಣ ಚಬುಕ ಪ್ರಸ್ಪರ್ಧಿ ನಾರಂಗಿತಂ' ಎಂಬ ಅವನ ವಾಕ್ಯವನ್ನು ಉದ್ಧರಿಸಿದರು. ಕೊಂಚ ಹಳದಿ ಕೆಂಪು ಮಿಶ್ರಿತವಾದ ಆ ಕಿತ್ತಳೆ ಹಣ್ಣು ಆಗತಾನೆ ಮುಖ ಕ್ಷೌರ ಮಾಡಿದ್ದ ಮದಿಸಿದ ಹೂಣನ ಕೆನ್ನೆಯೊಡನೆ ಸ್ಪರ್ಧಿಸುತ್ತಿತ್ತು ಎನ್ನುವುದು ಆ ಮಾತಿನ ಅರ್ಥ. ತೀನಂಶ್ರೀ ಅದನ್ನು ವಿವರಿಸಲು ಹೋದಾಗ ನಮಗೆಲ್ಲ ನಗು. ಅದಕ್ಕೆ ವಿವರಣೆ ಯಾಕೆ ಬೇಕು? ಮದಿಸಿದ ಹೂಣನ ಕೆನ್ನೆಯನ್ನು ನಾವು ಕಷ್ಟಪಟ್ಟು ಕಲ್ಪಿಸಿಕೊಳ್ಳಬೇಕಾದ ಅಗತ್ಯವೇ ಇರಲಿಲ್ಲ. ಗುರುಗಳೇ ಎದುರಿಗಿದ್ದರು! ವಸ್ತು ಎದುರಿಗೆ ಇರುತ್ತ ವ್ಯಾಖ್ಯಾನ ಯಾಕೆ ಬೇಕು? ಇಂಥ ಸಂದರ್ಭಗಳಲ್ಲಿ ನಾವು ನಕ್ಕಾಗ ತೀನಂಶ್ರೀ ಅನಪೇಕ್ಷಿತವಲ್ಲದ ಒಂದು ಬಗೆಯ ಮುಜುಗುರ ಪೇಚುಗಳಿಗೆ ಸಿಕ್ಕಂತೆ ತೋರುತ್ತಿದ್ದರು. ಶೃಂಗಾರ ರಸದ ಯಾವುದಾದರೊಂದು ಭಾಗವನ್ನು ಹೇಳಬೇಕಾಗಿ ಬಂದರೆ "ಇದು ಪ್ರೌಢವಾಥ ತರಗತಿ. ಏನನ್ನೂ ಗಂಭೀರವಾಗಿ ಸ್ವೀಕರಿಸಬಲ್ಲ ವಿದ್ಯಾರ್ಥಿಗಳು ನೀವು. ಇದನ್ನು ಇಲ್ಲಿ ಹೇಳಬಹುದು" ಅಂತೆಲ್ಲ ಮುನ್ನುಡಿ ಹಾಕಿ ಆ ಭಾಗವನ್ನು ವಿವರಿಸುತ್ತಿದ್ದರು. ಈ ಪೀಠಿಕೆ ಶುರುವಾದೊಡನೆ ನಮಗೆ ಗೊತ್ತು ಈಗ ಏನೋ ಸ್ವಾರಸ್ಯವಾದದ್ದು ಹೊರಡುತ್ತದೆ ಅಂತ. ನಾವೆಲ್ಲ ಸುಳ್ಳೇ ಮುಖವನ್ನು ಗಂಭೀರವಾಗಿಸಿಕೊಂಡು ಅರುವತ್ತುವರ್ಷದವರ ಮರ್ಯಾದೆಯ ಕಳೆಯನ್ನು ಮುಖದಲ್ಲಿ ಮೂಡಿಸಿಕೊಂಡು ಕೂರುತ್ತಿದ್ದೆವು. ಹಾಗೂ ನಮ್ಮ ನಟನೆ ಒಂದೊಂದು ಸಲ ಬಯಲಾಗಿ ಬಿಡುತ್ತಿತ್ತು.

ನಾನು ಹೇಳುತ್ತಿರುವ ದಿನಗಳಲ್ಲಿ (೧೯೫೮-೬೧) ತೀನಂಶ್ರೀ ಇದ್ದದ್ದು ಕುಕ್ಕರಹಳ್ಳಿ ಕೆರೆಯ ಪಕ್ಕದಲ್ಲಿದ್ದ ಪ್ರೊಫೆಸರರ ವಸತಿ ಗೃಹದಲ್ಲಿ. ಅದು ಭಾರಿ ಬಂಗಲೆ. ಮಹಡಿಯ ಮೇಲೆ ವಿಶಾಲವಾದ ಬಿಸಿಲಮಚ್ಚು. ಬೇಸಿಗೆ ಸಂಜೆಯ ಹಿತವಾದ ಗಾಳಿಯಲ್ಲಿ ತೀನಂಶ್ರೀ ಅಲ್ಲಿ ತಮ್ಮ ವಿದ್ಯಾರ್ಥಿಗಳನ್ನು, ಸಹೋದ್ಯೋಗಿಗಳನ್ನು ಕರೆದು ಹರಟೆ ಗೋಷ್ಠಿ ಏರ್ಪಡಿಸುತ್ತಿದ್ದರು. ಇಪ್ಪತ್ತೈದು ಮೂವತ್ತು ಜನ ಸೇರುತ್ತಿದ್ದರು. ಇಂಥ ಗೋಷ್ಠಿಗಳೆಂದರೆ ಅವರಿಗೆ ಪ್ರಿಯ, ಅವರೇನೂ ಶ್ರೀಮಂತರಲ್ಲ. (ನಿವೃತ್ತರಾದಾಗಲೂ ಅವರಿಗೆ ಸ್ವಂತ ಮನೆ ಇರಲಿಲ್ಲ). ಆದರೂ ಅದ್ದೂರಿಯಾದ, ಯಥೇಷ್ಟ ಪ್ರಮಾಣದ ಉಪಾಹಾರ, ಹಣ್ಣು ಕಾಫಿಗಳ ಏರ್ಪಾಟು ಮಾಡಿರುತ್ತಿದ್ದರು. ಅವರ ಪತ್ನಿ ಜಯಲಕ್ಷಮ್ಮ, ಮಗಳು ನಾಗರತ್ನ, ಮಗ ನಾಗಭೂಷಣ ಎಲ್ಲರೂ ಸಂಭ್ರಮದಿಂದ ಓಡಾಡುತ್ತ ಗೋಷ್ಠಿಯಲ್ಲಿ ಬೆರೆಯುತ್ತಿದ್ದರು. ನಮಗೆ ಪಾಠ ಹೇಳುತ್ತಿದ್ದ ಅಧ್ಯಾಪಕರೆಲ್ಲ ತಮ್ಮ ಎಂದಿನ ಗಾಂಭೀರ್ಯ ಬದಿಗಿಟ್ಟು ಯುವಕರ ಹಾಗೆ ವರ್ತಿಸುತ್ತಿದ್ದರು. ಅದನ್ನು ನೋಡಿ ನಮಗೆಲ್ಲ ಆಶ್ಚರ್ಯ, ಸಂತೋಷ. ಪರಮೇಶ್ವರ ಭಟ್ಟರು 'ಯಕ್ಷಗಾನದ ಅರ್ಥಧಾರಿಯ ಕೂಗು ಮಾತು', 'ಇಂಗ್ಲಿಷ್ ಮೇಸ್ಟರ ಕಾಂಪೊಸಿಷನ್ ಕ್ಲಾಸ್'ಗಳನ್ನು ಅಭಿನಯಿಸಿ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದರು. ಸುಜನಾ, ಪುತಿನ ಅವರ 'ಶರಣೆನುವೆಂ', 'ನಿಲ್ಲಿಸದಿರು ವನಮಾಲೀ' ಇತ್ಯಾದಿ ಕವಿತೆಗಳನ್ನು ಹಾಡುತ್ತಿದ್ದರು. ಬೆಳಕು ಇಂಗುತ್ತ, ಕತ್ತಲಿಳಿಯುತ್ತ ತಂಪಾದ ಗಾಳಿ ಹಬ್ಬುತ್ತಿರುವ ಆ ಹೊತ್ತಿನಲ್ಲಿ ಇವೆಲ್ಲ ತುಂಬ ಹಿತವಾಗಿರುತ್ತಿದ್ದವು. ಕವಿ ಪುತಿನ ಅವರ 'ಮಲದೇಗುಲ' ಕವನ ಸಂಗ್ರಹದ ಅನೇಕ ಕವಿತೆಗಳನ್ನು ಕವಿಯ ಮುಖದಿಂದಲೇ ವಾಚನ ಮಾಡಿಸುತ್ತ, ಅವುಗಳನ್ನು ಕುರಿತು ಚರ್ಚೆ ನಡೆಸುತ್ತ ಒಂದು ಕಾರ್ಯಕ್ರಮ ಸುಮಾರು ಎರಡೂವರೆ ಮೂರು ಗಂಟೆ ನಡೆದದ್ದು ನನಗೆ ನೆನಪಿದೆ. ಬರೆಯುವ ಕವಿಯನ್ನು ಮತ್ತು ಕೇಳುವ ಸಹೃದಯರನ್ನು ಹೀಗೆ ಒಟ್ಟುಗೂಡಿಸಿ ಸಂತೋಷದ ವಾತಾವರಣ ಕಟ್ಟುತ್ತಿದ್ದ ತೀನಂಶ್ರೀ ಬರೆಹದಲ್ಲಿ ಮಾತ್ರವಲ್ಲ ನಡವಳಿಕೆಯಲ್ಲೂ ಇಬ್ಬರ ನಡುವಿನ ಸೇತುವೆಯಾಗಿದ್ದರು. ನಿಜವಾದ ವಿಮರ್ಶಕ ಹೀಗೆ ಇರುತ್ತಾನಷ್ಟೆ? ಸಾಹಿತ್ಯವನ್ನು ಪೋಷಿಸಿ ಬೆಳೆಸುವ ಒಂದು ಪ್ರವೃತ್ತಿ ಅವನಲ್ಲಿ ಸಹಜವಾಗಿ ಇರುತ್ತದೆ. "ನನ್ನ ಕವಿತೆಗಳನ್ನು ಹೆತ್ತ ತಾಯಿ ನಾನಾದರೂ, ಅವುಗಳನ್ನು ಪೋಷಿಸಿ ಬೆಳೆಸಿದ ಸಾಕುತಾಯಿ ಶ್ರೀಕಂಠಯ್ಯನವರು" ಎಂದು ಪುತಿನ ಹೇಳಿರುವುದು ತೀನಂಶ್ರೀಯವರ ಈ ಗುಣಕ್ಕೆ ಸಾಕ್ಷಿ.

'ಭೂಮಿಗೀತ'ದ ಮುನ್ನುಡಿ

ಅದು ನವ್ಯ ಕಾವ್ಯದ ಹರೆಯದ ಕಾಲ. ಆಗಷ್ಟೇ ಅಡಿಗರ 'ಭೂಮಿಗೀತ' ಹೊರಬಂದಿತ್ತು. ವಿದ್ಯಾರ್ಥಿಗಳಾದ ನಾವೆಲ್ಲ ನವ್ಯದ ಪರವಾಗಿದ್ದರೆ, ಕನ್ನಡ ವಿಭಾಗದ ಅಧ್ಯಾಪಕವರ್ಗ ನವೋದಯದ ಪ್ರಶಂಸನಾಕಾರರಿಂದ ತುಂಬಿಹೋಗಿತ್ತು. ನವ್ಯರನ್ನು ಹೀಗಳೆದು ಮಾತನಾಡು ವುದು ಒಂದು ಪದ್ಧತಿಯಾಗಿತ್ತು. ಒಬ್ಬ ಅಧ್ಯಾಪಕರಂತೂ 'ಎಂಥ ಹುಚ್ಚು ಜನರು ಇವರು ಕೊಚ್ಚೆಯನ್ನೇ ಕಾಂಬರು' ಎಂದು ಅವರನ್ನು ನಿಂದಿಸಿ ಪದ್ಯ ಬರೆದದ್ದೂ ಉಂಟು. ಎಂ.ಎ. ತರಗತಿಯ ಸೆಮಿನಾರಿನಲ್ಲಿ ಕರುಣಾಕರನ್ ಎಂಬ ವಿದ್ಯಾರ್ಥಿ ನವ್ಯ ಕಾವ್ಯದ ಸಮರ್ಥನೆ

ಮಾಡಿ ಒಂದು ಪ್ರಬಂಧ ಓದಿದಾಗ ಮೂರು ಗಂಟೆ ಬಿಸಿಬಿಸಿ ಚರ್ಚೆ ನಡೆದು ಕಡೆಗೂ ಸಭೆ ಗೊಂದಲದಲ್ಲಿ ಕೊನೆಯಾಗಿತ್ತು. ತೀನಂಶ್ರೀ ಕೂಡ ಹೊಸ ಕಾವ್ಯಕ್ಕೆ ವಿರೋಧವಾದವರಿರಬಹುದು ಎಂಬ ಊಹೆ ನಮಗಿತ್ತಾದರೂ ಅವರ ಅಭಿಪ್ರಾಯ ತಿಳಿಯುವ ಅವಕಾಶವೇ ಒದಗಿರಲಿಲ್ಲ. ಒಂದು ಸಂಜೆ ಅವರ ಮನೆಯಲ್ಲಿ ನಾಲ್ಕೈದು ಜನ ಕನ್ನಡ ಅಧ್ಯಾಪಕರು ಕೂತು ಮಾತನಾಡುತ್ತಿರುವಾಗ ಒಬ್ಬರು ಭೂಮಿಗೀತ ಪುಸ್ತಕದ ಮಾತೆತ್ತಿದರು. ಆ ಪುಸ್ತಕಕ್ಕೆ ಅನಂತಮೂರ್ತಿ ಬರೆದ ಮುನ್ನುಡಿಯನ್ನು ಕುರಿತು ಬಹಳ ಲಘುವಾಗಿ ಮಾತನಾಡಿದರು. ಅದು ಸತ್ವಹೀನವಾದ ಬರೆಹದ ಪೊಳ್ಳು ಸಮರ್ಥನೆ ಎಂಬ ಅಭಿಪ್ರಾಯ ಅವರ ಮಾತಿನಿಂದ ಹೊರಡುವಂತಿತ್ತು. ಕೂಡಲೇ ತೀನಂಶ್ರೀ ಮುಖ ಕೆಂಪಾಗಿ ಹೋಯಿತು. ಅವರು ತೀರ ಗಂಭೀರವಾದ ದನಿಯಲ್ಲಿ "ನಿಮಗೆ ಹಾಗೆನ್ನಿಸಿತೇನೋ. ಆದರೆ ನನಗೆ ಅದು ಇಷ್ಟವಾಯಿತು. ಆತ ಬಹಳ ಸಮರ್ಥರಾಗಿ ಕಾಣುತ್ತಾರೆ. ಕಾವ್ಯದ ಸ್ವರೂಪ ಕುರಿತು ಅವರು ಬರೆದ ಮಾತು ನನಗೆ ಪೂರ ಒಪ್ಪಿಗೆ. ಆದರೆ ಅಡಿಗರದ್ದೇ ತೊಂದರೆ. ಅವರ ಕವಿತೆಯಲ್ಲಿ ಉದ್ದಕ್ಕೂ ಮಿಂಚುವ ಸಾಲುಗಳಿರುತ್ತವೆ. ಆದರೆ ಇಡೀ ಕವನಕ್ಕೆ ವಾಚ್ಯಾರ್ಥದ ಒಂದು ಪೂರ್ಣ ನೆಲೆಗಟ್ಟು ಇರುವುದಿಲ್ಲ. ಇಷ್ಟೇ ನನ್ನ ಆಕ್ಷೇಪ" ಎಂದರು. ಪುಸ್ತಕದ ಪ್ರಸ್ತಾಪ ಮಾಡಿದವರ ಮುಖ ಇಳಿದು ಹೋಯಿತು. ಅನಂತಮೂರ್ತಿ ಆಗಿನ್ನೂ ಅಷ್ಟು ದೊಡ್ಡ ಹೆಸರಾಗಿರಲಿಲ್ಲ. ತೀನಂಶ್ರೀಗೆ ಅವರ ನಿಕಟ ಪರಿಚಯ ಇರಲಿ, ಸಾಮಾನ್ಯ ಪರಿಚಯ ಕೂಡ ಇದ್ದಿರಲಾರದು. ಅಲ್ಲದೇ ತೀನಂಶ್ರೀಗಿಂತ ಅವರು ತುಂಬ ಚಿಕ್ಕ ವಯಸ್ಸಿನವರು. ಆದರೆ ಒಂದು ಬರೆಹ ಘನವಾದದ್ದು ಎನ್ನಿಸಿದರೆ ತೀನಂಶ್ರೀ ಕೂಡಲೆ ಅದರ ಪರವಾಗಿಬಿಡುತ್ತಿದ್ದರು. ಅಂಥದ್ದನ್ನು ಕುರಿತ ನಿಂದೆ ಅವರಿಗೆ ಸಹ್ಯವಾಗಿರಲಿಲ್ಲ.

ಒಮ್ಮೆ ತೀನಂಶ್ರೀ ಕನ್ನಡ ಶಬ್ದವೊಂದರ (ಬಹುಶಃ ವತ್ಸ, ಬಚ್ಚ ಇತ್ಯಾದಿ) ಬಗ್ಗೆ ಬೇಂದ್ರೆ ಮಾಡಿದ ಶಾಸ್ತ್ರ ಜಿಜ್ಞಾಸೆ ಪ್ರಸ್ತಾಪಿಸುತ್ತಾ "ಶಾಸ್ತ್ರವಿಷಯದ ಚರ್ಚೆಗೂ ತುಂಬ ಊಹೆ ಕಲ್ಪನೆ ಬಳಸುತ್ತಾರೆ, ಜೊತೆಗೆ ವಿಚಿತ್ರ ತರ್ಕ ಬೆಳೆಸುತ್ತಾರೆ. ಕೇಳುತ್ತ ಕೂತರೆ ನಿಮ್ಮನ್ನು ಒಪ್ಪಿಸಿಯೂ ಬಿಡುತ್ತಾರೆ. ಎಷ್ಟೇ ಆಗಲಿ ಅವರು ಕವಿ. ಕವಿಗಳು ಶಾಸ್ತ್ರಾಧೀನರೆ? ಶಾಸ್ತ್ರವನ್ನೇ ಸೃಷ್ಟಿಸುವವರು" ಎಂದು ವಿನೋದವಾಗಿ ನುಡಿದರು. ನಗು ನಗುತ್ತಲೇ ಅವರ ಬೇಂದ್ರೆಯವರ ವ್ಯಾಖ್ಯಾನವನ್ನು ಬದಿಗೆ ಸರಿಸಿದರು. ಆದರೆ ಅವರು ಬೇಂದ್ರೆ ಬಗ್ಗೆ ಹೇಳಿದ ಮಾತು ಒಂದು ವಿನೋದದ ಪ್ರಸಂಗದಲ್ಲೇ ಆದರೂ ನೂರಕ್ಕೆ ನೂರು ನನ್ನ ಅನುಭವಕ್ಕೆ ಬಂತು.

ಬೇಂದ್ರೆ ಮಹಾರಾಜ ಕಾಲೇಜಿಗೆ ವಿಶೇಷ ಉಪನ್ಯಾಸಗಳ ಸಲುವಾಗಿ ಬಂದಿದ್ದರು. ತೀನಂಶ್ರೀ ಮನೆಯಲ್ಲೇ ಅವರ ವಾಸ್ತವ್ಯ. ಹಿಂದಿನ ದಿನ ನಾನು ಅವರಲ್ಲಿಗೆ ಹೋಗಿದ್ದಾಗ ಶ್ರೀಕಂಠಯ್ಯನವರು "ಭಟ್ಟ, ನಾಳೆ ಬೇಂದ್ರೆ ಬರುತ್ತಾರೆ. ಎರಡು ದಿನ ಇರುತ್ತಾರೆ. ನೀವೂ ಬಂದು ಜೊತೆಗೆ ಸ್ವಲ್ಪ ಕಾಲ ಕಳೆಯಿರಿ. ಬೇಂದ್ರೆ ಅದ್ಭುತ ವ್ಯಕ್ತಿ. ಅವರನ್ನು ಹತ್ತಿರದಿಂದ ಕಾಣಬೇಕು" ಎಂದರು. ನಾನು ಬಹಳ ಖುಷಿಯಿಂದಲೇ "ಆಗಲೀ ಸಾರ್" ಅಂತ ಹೇಳಿ ಮಾರನೇ ದಿನ ಮಧ್ಯಾಹ್ನ ಅವರಲ್ಲಿಗೆ ಬಂದೆ.

ಕಚ್ಚೆ ಪಂಚೆ, ಕೊಳವಿ ಪಂಚೆ

ಮೂರ್ತಿರಾಯರು, ತೀನಂಶ್ರೀ, ನಂ. ಶಿವರಾಮ ಶಾಸ್ತ್ರಿ (?) ಕುಳಿತು ಬೇಂದ್ರೆ ಜೊತೆ ಹರಟೆ ಕೊಚ್ಚುತ್ತಿದ್ದರು. ನಾನೂ ಅವರ ಬಳಿ ಹೋಗಿ ಕೂತೆ. ಗುರುಗಳು ನನ್ನನ್ನು ಬೇಂದ್ರೆಗೆ ಪರಿಚಯಿಸಿದರು. 'ಈತನಿಗೆ ಕಾವ್ಯದಲ್ಲಿ ವಿಶೇಷ ಆಸಕ್ತಿ' ಎಂದೂ ಸೇರಿಸಿದರು. ಬೇಂದ್ರೆ ವಿನೋದವಾಗಿ "ಹುಡುಗಾ, ನಿನಗೆ ಕಾವ್ಯದಲ್ಲಿ ಆಸಕ್ತಿ ಈಗಲೂ ಉಳಿದಿದೆಯೋ ಅಥವಾ (ತೀನಂಶ್ರೀಯನ್ನು ತಮ್ಮ ಕೈಕೋಲಿನಿಂದ ತೋರಿಸುತ್ತ) ಈತನ ಭಾಷಾಶಾಸ್ತ್ರದ ಮಹಾಗ್ನಿಯಲ್ಲಿ ಎಲ್ಲ ದಗ್ಧವಾಗಿ ಹೋಯಿತೋ?" ಎಂದು ನಕ್ಕರು. ನಾನು "ಎಲ್ಲಾದರೂ ಉಂಟೆ. ಅವರು ಕಾವ್ಯಮೀಮಾಂಸೆ ಬರೆದವರು. ಕಾವ್ಯದಲ್ಲಿ ನನಗಿದ್ದ ರುಚಿಯನ್ನು ಬೆಳೆಸಿದವರು" ಎಂದು ಮಾತು ಜೋಡಿಸಿದೆ. ಬೇಂದ್ರೆ "ಏನೋಪ್ಪ ನನಗೆ ನಂಬಿಕೆಯಿಲ್ಲ. ಕಾವ್ಯ ಇರಲಿ, ಈತನ ಶಾಸ್ತ್ರಜ್ಞಾನ ಕೂಡ ನನಗೆ ಅನುಮಾನದ್ದಾಗಿ ಕಾಣುತ್ತದೆ. ಈಗ ನೋಡಿ, ಕನ್ನಡ ಒಂದು ದ್ರಾವಿಡ ಭಾಷೆ, ತಮಿಳಿಗಿಂತ ಕೊಂಚ ನಂತರ ಬಂದದ್ದು. ಹೀಗೆ ಏನೇನೋ ಈತನ ತರ್ಕ. ಅದು ಎಲ್ಲಾದರೂ ಸಾಧ್ಯವೆ? ಕನ್ನಡ ಎಲ್ಲ ಭಾಷೆಗಿಂತ ಮೊದಲು ಹುಟ್ಟಿದ್ದಲ್ಲವೆ? ಜಗತ್ತಿನ ಮೊದಲ ಭಾಷೆಯೇ ಕನ್ನಡ" ಎಂದರು! ನಾನು ಅವಾಕ್ಕಾಗಿ ಗುರುಗಳ ಕಡೆ ನೋಡಿದೆ. ಅವರು ನಗುತ್ತ "ಗಾಬರಿಯಾಗಬೇಡಿ. ಅದಕ್ಕೆ ಸಮರ್ಥನೆ ಕೊಡಿ ಅನ್ನಿ. ಅದನ್ನೂ ಕೊಡುತ್ತಾರೆ. ಆಗಲೇ ಆಕಾಶ ಮಿಂಚತೊಡಗಿದೆ!" ಎಂದರು. ಬೇಂದ್ರೆ "ಓಹೋ ಇಷ್ಟು ಸರಳ ಸತ್ಯಕ್ಕೆ ಸಮರ್ಥನೆ ಬೇರೆ ಬೇಕಾ? ಆಯಿತು. ಈಗ ನೋಡಿ. ಕನ್ನಡದ ಯಾವುದೇ ಮುಖ್ಯವಾದ ಪದ ತೆಗೆದುಕೊಳ್ಳಿ, ಅದು ಕಕಾರದಿಂದಲೇ ಆರಂಭವಾಗುತ್ತೆ. ಆರಂಭದ ಭಾಷೆ ಕನ್ನಡವೇ ಅನ್ನೋದಕ್ಕೆ ಬೇರೆ ಆಧಾರ ಯಾಕೆ ಬೇಕು?" ಅಂದುಬಿಟ್ಟರು! ಮೂರ್ತಿರಾಯರು ನಗುತ್ತ "ಎಲ್ಲಿ ಒಂದಿಷ್ಟು ಉದಾಹರಣೆ ಕೊಡಿಯಪ್ಪ" ಎಂದರು. ಬೇಂದ್ರೆ ಕೈಯಿಂದ ತಮ್ಮ ಮೈಯ ಒಂದೊಂದೂ ಅಂಗ ಮುಟ್ಟಿತೋರಿಸುತ್ತ "ನೋಡಿ, ಇದು ಕತ್ತು. ಹೌದೆ? ಇದು ಕಂಠ, ಇದು ಕಣ್ಣು, ಇದು ಕಿವಿ, ಇದು ಕೂದಲು, ಇಗೋ ಇದು ಕೈ, ಇದು ಕಾಲು, ಇದು ಕೆನ್ನೆ, ಸಾಕೇ?" ಎಂದರು. ಮೂರ್ತಿರಾಯರು ಬೇಂದ್ರೆಯವರ ಉಪಾಯ ತಿಳಿದು ಅವರನ್ನು ಕೆಡವಲು ತಮ್ಮ ಸೊಂಟದ ಕಡೆ ಬೆರಳು ಮಾಡಿ 'ಇದು?' ಅಂತ ಕೇಳಿದರು. ಬೇಂದ್ರೆ ಈಗ ಸಿಕ್ಕಿಬಿದ್ದರು ಅಂತ ನಾವು ಅಂದುಕೊಳ್ಳುತ್ತಿರುವಂತೆಯೇ ಅವರು ತಮ್ಮ ಕೈಕೋಲಿನ ತುದಿಯಿಂದ ಮೂರ್ತಿರಾಯರ ಸೊಂಟ ಚುಚ್ಚುತ್ತ "ಅದು ಕಟಿ ತಾನೆ" ಅಂದರು! ಕೂಡಲೆ ಮೂರ್ತಿರಾಯರು ಬೇಂದ್ರೆಯವರ ಪಂಚೆ ಕಡೆ ಬೆರಳು ಮಾಡಿದರು. "ಅದು ಕಚ್ಚೆ ಪಂಚೆ" ಎಂಬ ಉತ್ತರ ಬಂತು! ಮೂರ್ತಿರಾಯರು ತಮ್ಮ ಲುಂಗಿ ಕಡೆ ತೋರಿಸುತ್ತ "ಇದಕ್ಕೇನು ಹೇಳುತ್ತೀರಪ್ಪಾ?" ಎಂದರೆ ಬೇಂದ್ರೆ ಎಷ್ಟೂ ತಡವರಿಸದೆ "ಕೊಳವಿ ಪಂಚೆ" ಎಂದುಬಿಟ್ಟರು! ಅಷ್ಟು ಹೊತ್ತಿಗೆ ಕಾಫಿ ಬಂತು. ಬೇಂದ್ರೆ ಅದನ್ನು ತೆಗೆದುಕೊಳ್ಳುತ್ತ "ಇಗೋ ಇದು ಕಷ್ಟ. ಇದು ಕಾಫಿ, ಇದರ ರುಚಿ ಕಹಿ" ಎಂದರು. ನಮಗೆಲ್ಲ ಹಿಡಿಸಲಾರದ ನಗು. ತೀನಂಶ್ರೀ ಮೂರ್ತಿರಾಯರನ್ನು ತಡೆಯುತ್ತ "ಯಾಕಪ್ಪಾ ಸುಮ್ಮನೆ ಆಯಾಸ ಮಾಡಿಕೊಳ್ಳುತ್ತೀರಿ? ಅವರ ಹತ್ತಿರ ವಾದ ಮಾಡಿ ಸರಸ್ವತಿ ಗೆದ್ದಾಳೆ?" ಎಂದರು. ಕಾಫಿ ಕುಡಿದ ಬೇಂದ್ರೆ ಕೋಲು ಬೀಸುತ್ತ ಯಾಕೋ ಹೊರಕ್ಕೆ ಹೋದರು. ತೀನಂಶ್ರೀ ನನ್ನ ಕಡೆ ತಿರುಗಿ "ನೋಡಿದಿರಾ ಬೇಂದ್ರೆಯನ್ನು? ಶಾಸ್ತ್ರದ

ಭರ್ತ್ಸನೆ ಹೇಗಿದೆ? ಹೀಗೆ ವಿನೋದವಾಗಿ ಮಾತನಾಡುವಾಗಲೂ ಅವರು ಕವಿ ಎನ್ನುವುದು ಎಷ್ಟು ಚೆನ್ನಾಗಿ ವ್ಯಕ್ತವಾಗುತ್ತೆ! ಅವರು ಮಾತನ್ನು ಹೇಗೆ ಜಗಿಯುತ್ತಾರೆ, ಬಗೆಯುತ್ತಾರೆ, ತರ್ಕವನ್ನು ಹೇಗೆ ನೆಗೆಯುತ್ತಾರೆ–ಅದೂ ತರ್ಕದ ತೋರಿಕೆಯಲ್ಲೇ! ಈ ಬೇಂದ್ರೆ ನಮ್ಮ ಕಾಲದ ಒಂದು ಅದ್ಭುತ" ಎಂದರು.

ಕೊಡುಗೆಗಳು

ತೀನಂಶ್ರೀಯವರ ಬರವಣಿಗೆ ಪ್ರಮಾಣದಲ್ಲಿ ಮಿತವಾದದ್ದು. ಆದರೆ ದೊಡ್ಡ ಆಕಾಶದ ಪ್ರತಿಬಿಂಬ ಪುಟ್ಟ ಕೊಳದೆದೆಯಲ್ಲಿ ಪ್ರತಿಫಲಿಸುವಂತೆ ಅವರ ವಿದ್ವತ್ತು ಪ್ರತಿಭೆಗಳು ಅಷ್ಟರಲ್ಲೇ ಢಾಳವಾಗಿ ಕಾಣುತ್ತವೆ. ಅವರ ಬರಹಗಳಲ್ಲಿ ಮುಖ್ಯವಾದುವೆಂದರೆ ಭಾರತೀಯ ಕಾವ್ಯ ಮೀಮಾಂಸೆ, ಕಾವ್ಯ ಸಮೀಕ್ಷೆ, ಸಮಾಲೋಕನ, ಪಂಪ, ಒಲುಮೆ, ನಂಟರು, ರಾಕ್ಷಸನ ಮುದ್ರಿಕೆ ಮತ್ತು ಬಿಡಿಮುತ್ತು. ಗದಾಯುದ್ಧ ಮತ್ತು ನಂಬಿಯಣ್ಣನ ರಗಳೆ ಎಂಬ ಎರಡು ಪ್ರಾಚೀನ ಕಾವ್ಯಗಳನ್ನು ಅವರು ಅತ್ಯುತ್ಕೃಷ್ಟ ರೀತಿಯಲ್ಲಿ ಸಂಗ್ರಹಿಸಿ ಸಂಪಾದಿಸಿದ್ದಾರೆ. ಶಾಲಾ ಮಕ್ಕಳಿಗಾಗಿ ಅವರು ಬರೆದ 'ಕನ್ನಡ ಮಧ್ಯಮ ವ್ಯಾಕರಣ' ಕೂಡ ಹಲವಾರು ಬಾರಿ ಮುದ್ರಣಗೊಂಡ ಹೊಸಗನ್ನಡದ ಒಂದು ಸರಳ ಅಧಿಕೃತ ವ್ಯಾಕರಣ.

'ಒಲುಮೆ' ಕನ್ನಡದ ಮೊದಲ ಪ್ರೇಮ ಕವನಗಳ ಸಂಗ್ರಹ. ಅಷ್ಟಕ್ಕೇ ಅದಕ್ಕೆ ಒಂದು ಐತಿಹಾಸಿಕ ಮಹತ್ವವಿದೆ. ಅಮರುಶತಕ, ಗಾಥಾ ಸಪ್ತಶತಿಗಳಂಥ ಪ್ರಾಚೀನ ಭಾರತೀಯ ಶೃಂಗಾರ ಕೃತಿಗಳಿಂದ ಪ್ರೇರಣೆ ಪಡೆದು ಸೃಷ್ಟಿಯಾದ ಕೃತಿ ಅದು. ಈಗಲೂ ನಮ್ಮ ಮನಸ್ಸನ್ನು ಹಿಡಿದು ನಿಲ್ಲಿಸಬಲ್ಲ ಕೆಲವು ಉಜ್ವಲ ಶೃಂಗಾರ ಚಿತ್ರಗಳು ಅದರಲ್ಲಿವೆ. "ಒಲುಮೆಯದು ಶುಚಿಯಾದ ವಾಣಿ ಹಿತವಾದ ರೀತಿ" ಎಂದು ಪ್ರೇಮಕವನಗಳಿಗೆ ಹೆಸರಾದ ಕೆ.ಎಸ್. ನರಸಿಂಹಸ್ವಾಮಿಯವರೇ ಅದನ್ನು ಪ್ರಶಂಸಿಸಿದ್ದಾರೆ.

'ರಾಕ್ಷಸನ ಮುದ್ರಿಕೆ' ವಿಶಾಖದತ್ತ ಬರೆದ ಮುದ್ರಾರಾಕ್ಷಸ ಎಂಬ ಪ್ರಾಚೀನ ಸಂಸ್ಕೃತ ನಾಟಕದ ರೂಪಾಂತರ. ನಾಟಕದ ಆಶಯ ತುಂಬ ಚುರುಕಾಗಿ, ಮೊನೆಯಾಗಿ ಹೊಮ್ಮುವಂತೆ ಮಾಡಲು ತೀನಂಶ್ರೀ ಅಲ್ಲಲ್ಲಿ ಕೊಂಚ ಸ್ವಾತಂತ್ರ್ಯವಹಿಸಿದ್ದಾರೆ. 'ಬಿಡಿಮುತ್ತು' ಸಂಸ್ಕೃತದ ೨೧೫ ಮುಕ್ತಕಗಳ ನೇರ, ಅಪ್ಪಟ ಅನುವಾದ. ನಾಲ್ಕು ಅಥವಾ ಎಂಟು ಸಾಲುಗಳ ಒಂದೊಂದು ಮುಕ್ತಕವೂ ತನಗೆ ತಾನೆ ಒಂದು ಸ್ವತಂತ್ರ ಕವನದಂತಿದೆ. "ಎರಡಿಂಚಿನ ದಂತಖಂಡದ ಮೇಲೆ ಸೂಕ್ಷ್ಮಾಕಾರದಲ್ಲಿ ಸೊಗಸಾಗಿ ಚಿತ್ರಿಸಿದ ಒಂದು ವರ್ಣಚಿತ್ರದಂತಿದೆ." ಈ ಎರಡೂ ತೀನಂಶ್ರೀಯವರ ಭಾಷಾಂತರ ಶಕ್ತಿಗೆ ಪ್ರೋಜ್ವಲವಾದ ಸಾಕ್ಷಿಗಳು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

'ನಂಟರು' ವಿಶಿಷ್ಟ ಪ್ರಬಂಧಗಳ ಸಂಕಲನ. ಲಲಿತ ಪ್ರಬಂಧ, ಗಂಭೀರ ಪ್ರಬಂಧ, ಪ್ರವಾಸಿಗನ ಪತ್ರ–ಇಂಥ ಬಗೆ ಬಗೆ ಬರೆಹ ಇಲ್ಲಿವೆ. ಬಹುಶ್ರುತನೊಬ್ಬನ ವಿದ್ವತ್ತು ಸೃಜನಶೀಲ ಪ್ರತಿಭೆ ಎರಡೂ ಇಲ್ಲಿ ಸ್ನೇಹದಿಂದ ಕೈಕುಲುಕಿ ದುಡಿದಿವೆ. 'ಕಾವ್ಯ ಸಮೀಕ್ಷೆ' ಎಂಬ ಗ್ರಂಥ ಕಾಳಿದಾಸ, ಜನ್ನ, ಕುಮಾರವ್ಯಾಸರಂಥ ದೊಡ್ಡ ಲೇಖಕರ ಬರೆಹಗಳನ್ನು ಕುರಿತ ರಸಾತ್ಮಕ ವಿಮರ್ಶೆಗಳ ಸಂಗ್ರಹ. 'ಸಮಾಲೋಕನ'ದಲ್ಲಿ ಇಂಥ ವಿಮರ್ಶೆಗಳ ಜೊತೆಗೆ ಛಂದಸ್ಸು,

ಭಾಷಾಶಾಸ್ತ್ರಗಳಿಗೆ ಸಂಬಂಧಿಸುವ ತುಂಬ ಬೆಲೆಯುಳ್ಳ ಶಾಸ್ತ್ರ ಬರೆಹಗಳೂ ಇವೆ. ಪಂಪ ಎಂಬ ಚಿಕ್ಕ ಹೊತ್ತಗೆಯಂತೂ ಸಾಮಾನ್ಯರಿಗೆ ಬಲ್ಲಿದರಿಗೆ ಇಬ್ಬರಿಗೂ ಪ್ರಿಯವಾಗಬಲ್ಲ, ಪ್ರೌಢ ಕವಿಯೊಬ್ಬನ ವಿಮರ್ಶನ ಚಿತ್ರ

ಭಾರತೀಯ ಕಾವ್ಯಮೀಮಾಂಸೆ ತೀನಂಶ್ರೀಯವರ ಕೃತಿ ಸಮೂಹದಲ್ಲೇ ಅತ್ಯಂತ ಉನ್ನತವಾದದ್ದು. ಅವರ ವಿದ್ವತ್ ವ್ಯಕ್ತಿತ್ವದ ಮೇಲೆ ಸದಾ ಕಾಲ ಪ್ರಕಾಶ ಚೆಲ್ಲುತ್ತ ನಿಂತಿರುವ ನಂದಾದೀಪ. ಸಂಸ್ಕೃತ ಕಾವ್ಯಜಿಜ್ಞಾಸುಗಳು ಒಂದೂವರೆ ಸಹಸ್ರ ವರ್ಷಗಳಷ್ಟು ಹಿಂದಿನಿಂದ ಮಾಡಿಕೊಂಡು ಬಂದ ಕಾವ್ಯ ಚರ್ಚೆಯ ಸಾರಭೂತವಾದ ಚರಿತ್ರೆಯನ್ನು ಭಾರತೀಯ ಕಾವ್ಯಮೀಮಾಂಸೆ ನೀಡುತ್ತದೆ. ಅಲಂಕಾರ, ಗುಣ, ರೀತಿ, ಔಚಿತ್ಯ, ಧ್ವನಿ, ರಸ–ಹೀಗೆ ಸಂಸ್ಕೃತ ಕಾವ್ಯ ಚರ್ಚೆ ಹಾದುಬಂದ ಬೇರೆ ಬೇರೆ ಪ್ರಸ್ಥಾನಗಳನ್ನು ಇದು ಸೊಗಸಾಗಿ, ಸಂಗ್ರಹವಾಗಿ ಮಂಡಿಸುತ್ತದೆ. ಜೊತೆಗೆ ಕವಿ, ಸಹೃದಯ, ಪ್ರತಿಭೆ, ಕವಿಸೃಷ್ಟಿ, ಕಾವ್ಯ ಪ್ರಯೋಜನ, ಇಂಥ ವಿಷಯಗಳನ್ನು ಕುರಿತು ವಿಷಯಭರಿತವಾದ, ಹಾಗೆಯೇ ಬಹಳ ಹೃದ್ಯವಾದ ಚರ್ಚೆ ಇದೆ. ಕಡೆಯಲ್ಲಿ ಕನ್ನಡದಲ್ಲಿ ಹಿಂದಿನಿಂದ ಬೆಳೆದುಬಂದ ಕಾವ್ಯಚರ್ಚೆಗಳ ಬಗ್ಗೆಯೂ ಒಂದು ಅಧ್ಯಾಯವಿದೆ. ಸಾರರೂಪವಾದ ವಿಷಯಮಂಡನೆ, ಖಚಿತವಾದ ನಿರೂಪಣೆ, ರಸಾತ್ಮಕವಾದ ನಿದರ್ಶನ ವಿಧಾನ, ಸೃಜನಾತ್ಮಕವಾದ ವ್ಯಾಖ್ಯಾನ ಇವುಗಳಿಂದಾಗಿ ಈ ಕೃತಿ ಈವರೆಗಿನ ಇಂಥ ಶಾಸ್ತ್ರಗ್ರಂಥಗಳಲ್ಲೇ ಅನುಪಮವಾಗಿದೆ. ಈ ಕೃತಿ ಪ್ರಕಟವಾದದ್ದು ೧೯೫೩ರಲ್ಲಿಯಾದರೂ ಇದರ ಹಸ್ತಪ್ರತಿ ಸಿದ್ಧವಾದದ್ದು ೧೯೪೨ರಲ್ಲಿಯೇ. ಆಗ ತೀನಂಶ್ರೀಯವರ ವಯಸ್ಸು ಕೇವಲ ಮೂವತ್ತಾರು!

ಇದಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೆತ್ತಿಕೊಂಡ ಕನ್ನಡ ನಿಘಂಟಿನ ಕೆಲಸಕ್ಕೆ ತೀನಂಶ್ರೀ ತಮ್ಮ ಶಕ್ತಿಯನ್ನೆಲ್ಲ ಧಾರೆಯೆರೆದರು. ಅದು ಮೇಲುನೋಟಕ್ಕೆ ತಿಳಿಯದಂಥದು. ಅವರ ಜೀವನದ ಕಡೆಯ ದಶಕದ ಬಹುಭಾಗ ನಿಘಂಟು ಕೆಲಸಕ್ಕೆ ಸಂದಾಯವಾಯಿತು ಎಂದರೂ ತಪ್ಪಿಲ್ಲ. ಬೊಬ್ಬೆ ಹಾಕದೆ, ಅಬ್ಬರ ಮಾಡದೆ, ಯಾವ ಸದ್ದೂ ಇಲ್ಲದೆ ಅವರು ಕನ್ನಡಕ್ಕೆ ದುಡಿದರು. ತಮ್ಮ ದುಡಿಮೆ ತಮ್ಮ ಹೆಸರಿಗೇ ಬದ್ಧವಾಗಬೇಕು, ಅದು ಜನಕ್ಕೆಲ್ಲ ತಿಳಿಯಬೇಕು ಎಂಬ, ತಪ್ಪಲ್ಲದ ಸ್ವಾರ್ಥ ಸಹ ಅವರಿಗಿರಲಿಲ್ಲ.

ಇದು ಗೆಳೆಯನಿಗಿರಲಿ

ಬಹುಶಃ ಬೀದರ್ ಸಾಹಿತ್ಯ ಸಮ್ಮೇಳನದ ಸಂಬಂಧವಾಗಿ ಇರಬೇಕು; ತೀನಂಶ್ರೀ ಸಮ್ಮೇಳನಾಧ್ಯಕ್ಷರಾಗಬೇಕೆಂದು ತೀರ್ಮಾನವಾಯಿತು. ಆದರೆ ಅದಕ್ಕೆ ತೀನಂಶ್ರೀ ಒಪ್ಪಲಿಲ್ಲ. "ಛೇ ಛೇ, ಎಲ್ಲಾದರೂ ಉಂಟೆ? ಡಿ.ಎಲ್. ನರಸಿಂಹಾಚಾರ್ಯರಂಥ ವಿದ್ವಾಂಸರೇ ಇನ್ನೂ ಅಧ್ಯಕ್ಷರಾಗಿಲ್ಲದಿರುವಾಗ ನಾನು ಆಗುವುದೇ? ಖಂಡಿತ ಸಾಧ್ಯವಿಲ್ಲ" ಎಂದು ಹೇಳಿ ಅದನ್ನು ಸ್ನೇಹಿತನ ಕಡೆಗೆ ದಾಟಿಸಿಬಿಟ್ಟರು.

ತೀನಂಶ್ರೀ ಮತ್ತು ಡಿ.ಎಲ್.ಎನ್. ಇಬ್ಬರೂ ದೊಡ್ಡ ವಿದ್ವಾಂಸರು, ಆಪ್ತ ಸ್ನೇಹಿತರು. ಅವರಲ್ಲಿ ಒಬ್ಬರು ಹೆಚ್ಚು ಒಬ್ಬರು ಕಡಿಮೆ ಎನ್ನುವಂತೆ ಇರಲೇ ಇಲ್ಲ. ಆದರೆ

ಒಂದು ದೊಡ್ಡ ಮನ್ನಣೆ ತಮ್ಮ ಕಡೆ ತಾನಾಗಿ ಬಂದಾಗ ಅವರಿಗೆ ಅನ್ನಿಸಿದ್ದು – ಇದು ನನ್ನ ಗೆಳೆಯನಿಗಿರಲಿ. ನನ್ನ ವಿಷಯ ಆಮೇಲೆ ನೋಡಿಕೊಳ್ಳೋಣ ಅಂತ!

ತೀನಂಶ್ರೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲೇ ಇಲ್ಲ.

ತೀನಂಶ್ರೀ ಅಷ್ಟು ದೊಡ್ಡ ವಿದ್ವಾಂಸರಾಗಿಯೂ ಎಲ್ಲ ಬಗೆಯ ಪ್ರಶಸ್ತಿ ಮನ್ನಣೆಗಳಿಂದ ವಂಚಿತರಾದವರು. ಅಕಾಡೆಮಿ ಪ್ರಶಸ್ತಿ, ಸಮ್ಮೇಳನಾಧ್ಯಕ್ಷತೆ, ಗೌರವ ಡಾಕ್ಟರೇಟ್ ಇಂಥ ಯಾವುವೂ ಅವರಿಗೆ ಸಂದಾಯವಾಗಲಿಲ್ಲ. ಆದರೆ ಅವರು ಎಂದೂ ಅದರ ಬಗ್ಗೆ ಯೋಚಿಸಿದವರಲ್ಲ. ಅವರ ಸ್ನೇಹಿತರು, ಶಿಷ್ಯರು, ಇತರ ಸಾಹಿತಿಗಳು ಸೇರಿ ಸಿದ್ಧಪಡಿಸಿದ 'ಶ್ರೀಕಂಠತೀರ್ಥ' ಎಂಬ ಗೌರವಗ್ರಂಥ ಕೂಡ ಅವರ ಕಾಲಾನಂತರ ೧೯೭೩ರಲ್ಲಿ ಬಂದದ್ದು. ಈಗ ಗೋಕಾಕರ ನೇತೃತ್ವದ ಪ್ರಶಸ್ತಿ ಸಮಿತಿ ಅವರ ಗ್ರಂಥಕ್ಕೆ ಪಂಪ ಪ್ರಶಸ್ತಿ ನೀಡಿ ಆ ಕೊರತೆಯನ್ನೆಲ್ಲ ಪರಿಹರಿಸಿದೆ.

ತೀನಂಶ್ರೀಯವರ ಬಗ್ಗೆ ಮಾತನಾಡುತ್ತ ಒಮ್ಮೆ ಮಾಸ್ತಿ ಹೇಳಿದರು. "ಗುಣ, ವಿದ್ಯೆ, ಬುದ್ಧಿ, ತೇಜಸ್ಸು ಇರುವ ಸುಸಂಸ್ಕೃತ ಕನ್ನಡಿಗ ಹೇಗಿರುತ್ತಾನೆ ಎಂದು ಒಮ್ಮೊಮ್ಮೆ ನಾನು ಕಲ್ಪಿಸಿಕೊಳ್ಳತೊಡಗುತ್ತೇನೆ. ಆಗ ಥಟ್ಟನೆ ನನ್ನ ಮನಸ್ಸಿನೆದುರು ಬಂದು ನಿಲ್ಲುವ ವ್ಯಕ್ತಿ ತೀ.ನಂ.ಶ್ರೀಕಂಠಯ್ಯ."

(ತರಂಗ : ೩–೬–೧೯೯೦)

* *

ಸುಮಾರು ೧೯೫೭ ಇಸವಿ ಎಂದು ನೆನಪು. ನಮ್ಮ ಆನರ್ಸ್ ತರಗತಿಯಲ್ಲಿ ಪ್ರೊ॥ ತೀ.ನಂ.ಶ್ರೀ. ಅವರು ಉಪನ್ಯಾಸ ಮಾಡುತ್ತಿದ್ದಾರೆ. ಪರಿಶುದ್ಧ ವಿದ್ವತ್ತಿನ ಸ್ವರೂಪದ ಮಾತು ಬಂತು. 'ಕಿಂಪಾಡಿತ್ಯಂ? ಪರಿಚ್ಛೇದಃ' ಎಂಬ ಉಕ್ತಿಯೂ ಮಿಂಚಿಹೋಯಿತು. ತೀನಂಶ್ರೀ ಹೇಳಿದರು. "ನಿಷ್ಕಲಂಕವಾದ ಖಚಿತ ಪಾಂಡಿತ್ಯ ಎಂದಾಗ ನನ್ನ ಕಣ್ಣ ಮುಂದೆ ನಿಲ್ಲುವುದು ಎ.ಆರ್. ಕೃಷ್ಣಶಾಸ್ತ್ರಿಗಳ ಬರಹ. ಅವರ 'ಸಂಸ್ಕೃತ ನಾಟಕಗಳು' ಎಂಥ ಮಹೋನ್ನತ ಕೃತಿ! ನಿಷ್ಕೃಷ್ಟವಾದ ಜ್ಞಾನ, ನಿಸ್ಸಂದಿಗ್ಧ ನಿರೂಪಣೆ, ಆಧಾರ ಸಹಿತ ಪ್ರತಿಪಾದನೆ, ಮಿತಮಾತಿನ ನುಡಿಗಾರಿಕೆಗಳಿಗೆ ನೀವು ಅಂಥ ಗ್ರಂಥಕ್ಕೆ ಹೋಗಬೇಕು. ಆ ಒಂದೇ ಕೃತಿಗೆ ಮೂರು ನಾಲ್ಕು ಪಿಎಚ್.ಡಿಗಳನ್ನು ಅಡ್ಡಡ್ಡ ನುಂಗಿ ಬಿಡಬಲ್ಲ ಯೋಗ್ಯತೆ ಇದೆ ಗೊತ್ತೆ?"

ನಾವೆಲ್ಲ ಅವಾಕ್ಕಾದೆವು. ಇದನ್ನು ಹೇಳುತ್ತಿರುವವರು ಅಂಥಿಂಥವರಲ್ಲ, ಆಧುನಿಕ ಅಭಿನವ ಗುಪ್ತ ಎನ್ನಿಸಿಕೊಂಡವರು. ಅವರಿಂದ ಇಂಥ ಪ್ರಶಸ್ತಿ ಪಡೆದ ಆ ಕೃತಿ ಯಾವ ಮಟ್ಟದ್ದಾಗಿರಬೇಕು! ನಮ್ಮಲ್ಲಿ ಆ ಪುಸ್ತಕವನ್ನೂ ಇನ್ನೂ ನೋಡದ ಕೆಲವರು ಇದ್ದವು. ಅವರೆಲ್ಲ ಅಂದೇ ಲೈಬ್ರರಿಗೆ ನುಗ್ಗಿ ಆ ಪುಸ್ತಕ ನೋಡಿ ಗುರುಗಳ ಮಾತು ಎಷ್ಟು ಸತ್ಯ ಎಂದು ಮನವರಿಕೆ ಮಾಡಿಕೊಂಡೆವು.

(ಎ.ಆರ್. ಕೃಷ್ಣಶಾಸ್ತ್ರಿ ಅವರ ಬಗ್ಗೆ ಬರೆದ ಲೇಖನದಿಂದ)

(ಈ ಲೇಖನ ಲೇಖಕರ 'ಸಾಹಿತ್ಯರತ್ನ ಸಂಪುಟ' ಪುಸ್ತಕದಲ್ಲಿ ಸೇರ್ಪಡೆಯಾಗಿದೆ.)

ತೀ.ನಂ.ಶ್ರೀ ಒಂದು ನೆನಪು

ಹ.ವೆಂ. ನಾಗರಾಜರಾವ್

●

ಆಚಾರ್ಯ ತೀ.ನಂ.ಶ್ರೀಕಂಠಯ್ಯನವರನ್ನು ನೆನೆದಾಗಲೆಲ್ಲ ಕ್ರಿ.ಶ. ಹನ್ನೆರಡನೆಯ ಶತಮಾನಕ್ಕೆ ಸೇರಿದ ಕನ್ನಡ ಕವಿ ಬೊಪ್ಪಣಪಂಡಿತನ 'ಜಿನಸ್ತುತಿ'ಯ ಪದ್ಯವೊಂದು ಕಣ್ಣೆದುರು ಬಂದಂತಾಗುತ್ತಿತ್ತು. ಆ ಪದ್ಯದಲ್ಲಿ ಕವಿ ಬೊಪ್ಪಣ್ಣ ಹೇಳಿದ್ದ:

ಒಂದು ಕೃತಿ ಅತಿ ತುಂಗಾಕೃತಿಯೇ ಇರಬಹುದು; ಆದರೆ ಅದರಲ್ಲಿ ಸೌಂದರ್ಯದ ಔನ್ನತ್ಯವಿರಬೇಕು. ಉನ್ನತ ಸೌಂದರ್ಯ ಇರಬಹುದು; ಅದರಲ್ಲಿ ಅತಿಶಯದ ಔನ್ನತ್ಯವೂ ಇರಬೇಕು. ಹೀಗೆ ಆಕೃತಿಯ ಔನ್ನತ್ಯ, ಸೌಂದರ್ಯದ ಔನ್ನತ್ಯ, ಮತ್ತು ಊರ್ಜಿತಾತಿಶಯ– ಈ ಮೂರೂ ಮೇಳೈಸಿದಾಗಲೇ ಒಂದು ಉನ್ನತ ಕೃತಿ.

ತಮ್ಮ ವಿದ್ವತ್ತಿನಿಂದ ಎತ್ತರದ ಆಕೃತಿಯಾಗಿ ಕಣ್ಸೆಳೆಯುತ್ತಿದ್ದ ತೀ.ನಂ.ಶ್ರೀ ಅವರಲ್ಲಿ ವಿಷಯಸಂಪನ್ನತೆಯೆಂಬ ಸೌಂದರ್ಯ, ನೆಲೆನಿಂತ ಅಸಾಧಾರಣತೆ–ಈ ಮೂರೂ ಮೇಳೈಸಿ ಅವರ ಉನ್ನತ ವ್ಯಕ್ತಿತ್ವವನ್ನು ಬೆಸೆದಿದ್ದವು.

ಇದು ಕೇವಲ ಕಿರಿಯನೊಬ್ಬನ ಅತ್ಯುಕ್ತಿಯ ಅನುಭವವೋ ಹೇಗೆ?

ತೀ.ನಂ.ಶ್ರೀಕಂಠಯ್ಯನವರನ್ನು ಕಂಡ ನಾಡಿನ ಹಿರಿಯ ಮಾಸ್ತಿಯವರು ನುಡಿದ್ದರು: "ತರುಣ ಶ್ರೀಕಂಠಯ್ಯ ತುಂಬ ಚೆಲುವ, ತುಂಬ ವಿಷಯವಂತ, ನಗುಮುಖದ ಚೆಲುವ ತರುಣ."

ಗೆಳೆಯರು ಕಂಡಂತೆ

ತೀ.ನಂ.ಶ್ರೀ ಅವರನ್ನು ಸಹೋದ್ಯೋಗಿಯಾಗಿ ಹೆಚ್ಚು ಸಮೀಪದಿಂದ ಬಲ್ಲ ಹಿರಿಯ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ವರ್ಣಿಸಿದ್ದರು: "ಕಪಟ, ಆಡಂಬರ, ಆರೋಪಣೆಗಳನ್ನರಿಯದ, ಮಗುವಿನಂತೆ ಪ್ರಶಾಂತವಾದ ಮಧುರ ಮನಸ್ಸು ತೀ.ನಂ.ಶ್ರೀಗೆ ಭಗವದ್ದತ್ತವಾದ ವರಪ್ರಸಾದ. ಈರ್ಷ್ಯೆ, ಅಸೂಯೆಗಳಿಗೆ ಒಳಗಾಗದ ಉದಾರ ಹೃದಯ. ವಿಶಾಲವಾದ, ಆಳವಾದ, ಬಹುಮುಖವಾದ ವ್ಯಾಸಂಗ. ಗುಣಾನುಭವದಲ್ಲಿ ತನ್ನದು–ಇತರರದು ಎಂಬ ಅಭಿಮಾನ ಲೇಪವಿಲ್ಲ" –ಎಂದು. "ಸೌಮ್ಯತೆಯೇ ಅವರ ಸಾಮಾನ್ಯ ಸ್ವಭಾವ"–ಎಂದಿದ್ದಾರೆ ಅವರ ಮಿತ್ರ ಎ.ಎನ್.

ಮೂರ್ತಿರಾವ್. ಪ್ರೀತಿ-ಕೆಳೆಗಳಲ್ಲಿ ಅವರೊಡನೆ ಅವಳಿ - ಜವಳಿಯಂತಿದ್ದ ಕವಿ ಪು.ತಿ. ನರಸಿಂಹಾಚಾರ್ಯರಾದರೋ ತಮ್ಮ ಸಖನನ್ನು ಹೀಗೆ ವರ್ಣಿಸಿದ್ದಾರೆ:

"ತೀ.ನಂ.ಶ್ರೀಯವರದು ಒಳ್ಳೇ ಕಳೆಯುಳ್ಳ ಮುಖ, ಎತ್ತರದಾಳು, ಅಗಲಹಣೆ, ದುಂಡುಕೆನ್ನೆ, ರಸವತ್ತಾದ ತುಟಿ, ಎಸಳಾಗಿ ಮಾಟವಾಗಿದ್ದರೂ ಆ ಮುಖಕ್ಕೆ ಚಿಕ್ಕದೆನ್ನುವ ಮೂಗು, ಹೊಳಪಿನ ಕಣ್ಣು, ತುಂಬಿಕೊಂಡಿದ್ದ ಮೈ, ನಡಗೆಯಲ್ಲೂ ನಿಲುವಿನಲ್ಲೂ ಒಂದು ತರದ ಠೀವಿ. ಒಟ್ಟಿನಲ್ಲಿ ನೋಡಿದಾಕ್ಷಣ ಪ್ರೀತಿ ಗೌರವ ಹುಟ್ಟಿಸುವ ಗಂಭೀರವಾದ ಲಕ್ಷಣ. ಪುರುಷ ಪಾಂಡಿತ್ಯದ ಕೆಚ್ಚಿನೊಡನೆ ಸುಸಂಸ್ಕೃತ ಸಾತ್ತ್ವಿಕನ ವಿನಯ ಬಹು ಹಾಳತವಾಗಿ ಬೆರೆತಿತ್ತು ಆತನಲ್ಲಿ".

ಸಹೃದಯತೆ

ಗೊಮ್ಮಟಾಕೃತಿ ಉಕ್ಕಿಸುವ ಭಾವನೆಗಳೂ ಇವೇ ಅಲ್ಲವೆ? ಪ್ರಾಚಾರ್ಯ ತೀ.ನಂ.ಶ್ರೀ ಮತ್ತು ಕವಿ ಪು.ತಿ.ನ - ಇವರ ಮೈತ್ರಿ ಗಾಢವಾದದ್ದು. ಪು.ತಿ.ನ ಅವರ ಮನೆಯಲ್ಲಿ ಹಲವು ಬಾರಿ ತೀ.ನಂ.ಶ್ರೀ ಅವರನ್ನು ಕಾಣುವ ಸುಯೋಗ ನನ್ನದಾಗಿತ್ತು. ಒಮ್ಮೆ ಬೆಂಗಳೂರು ಬಸವನಗುಡಿ ಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಂಸ್ಥೆಯ ಆಶ್ರಯದಲ್ಲಿ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಭಾವಗೀತೆಗಳು' ಎಂಬ ವಿಷಯ ಕುರಿತು ನಾನು ಭಾಷಣ ಮಾಡುವುದೆಂಬ ಕಾರ್ಯಕ್ರಮ ಗೊತ್ತಾಗಿತ್ತು. ಮಾತಿನ ಜೊತೆಗೆ ಬೇಂದ್ರೆ, ಕುವೆಂಪು, ಪು.ತಿ.ನ. ಕವಿತೆಗಳನ್ನು ವಾಚಿಸಲೂ ಉದ್ದೇಶಿಸಲಾಗಿತ್ತು. ಇನ್ನೇನು ಕಾರ್ಯಕ್ರಮ ಪ್ರಾರಂಭವಾಗಬೇಕು ಎನ್ನುವ ಹೊತ್ತಿಗೆ ತಿ.ನಂ.ಶ್ರೀ ತಮ್ಮ ಪುತ್ರಿಯೊಡನೆ ಸಭಾಂಗಣ ಪ್ರವೇಶಿಸುತ್ತಿರುವುದನ್ನು ಕಂಡು, ನನ್ನ ಅರ್ಧ ಧೈರ್ಯವೇ ಉಡುಗಿಹೋದಂತಾಯಿತು. ಒಳಗೆ ಬಂದವರೇ ತೀ.ನಂ.ಶ್ರೀ. ಮುಂದಿನ ಸಾಲಿನಲ್ಲೇ ಕುಳಿತರು. ನಾನು ಬೇಂದ್ರೆ, ಪು.ತಿ.ನ. ರವರ ಕೆಲವು ಕವಿತೆಗಳನ್ನು ವಾಚಿಸಿದೆ. ಉಪನ್ಯಾಸ ಮುಗಿದ ನಂತರ ತೀ.ನಂ.ಶ್ರೀ ಬಳಿಗೆ ಬಂದು ಹೇಳಿದರು: "ನೀವು ಇನ್ನಷ್ಟು ಧೈರ್ಯವಾಗಿ ಮಾತನಾಡಬೇಕಿತ್ತು. ಕವನಗಳನ್ನು ಉದಾಹರಿಸಿದ್ದೂ, ವಿವರಿಸಿದ್ದೂ ಸಾಲದು."

'ಎದುರಿಗೆ ನೀವು ಕುಳಿತಿದ್ದರಿಂದ ನನ್ನ ಧೈರ್ಯವೇ ಕುಸಿದಂತಾಯಿತು' -ಎಂದು ವೃಥಾ ಅವರ ಮೇಲೆ ದೋಷ ಹೊರಿಸಲು ನನ್ನ ಮನಸ್ಸು ಒಡಂಬಡಲಿಲ್ಲ! ಯುವಕನೊಬ್ಬ ಹೊಸಗನ್ನಡ ಕವಿಗಳ ಕವನಗಳನ್ನು ಹಾಡಿತೋರಿಸುತ್ತಾನೆ-ಎಂಬ ಕಾರ್ಯಕ್ರಮ ಈ ದೊಡ್ಡವರನ್ನು ಸಭೆಗೆ ಕರೆತರುವಂತೆ ಮಾಡಿತ್ತು. ಅವರ ಕನ್ನಡ ಮಮತೆ, ಸಹೃದಯತೆ ಅಂತಹದಾಗಿತ್ತು.

'ಗೋಕುಲ ನಿರ್ಗಮನ'

ಅದು ಅರವತ್ತರ ದಶಕವಿರಬೇಕು. ಪು.ತಿ.ನ ಅವರ 'ಗೋಕುಲ ನಿರ್ಗಮನ' ಗೀತ ರೂಪಕವನ್ನು ಕವಿ ರಚಿಸಿದ್ದ ಮೂಲ ಸಂಗೀತದ ಧಾಟಿಯಲ್ಲಿಯೇ - ಚಾಚೂ ವ್ಯತ್ಯಾಸವಾಗ ದಂತೆ - ಇಡೀ ರೂಪಕವನ್ನು ವೇಷಭೂಷ ಪರಿಕರಗಳೊಡನೆ ರಂಗಭೂಮಿಯ ಮೇಲೆ ಪ್ರದರ್ಶಿಸುವುದು ಹೆಚ್ಚಿನ ಸಾಹಸದ ಕೆಲಸವಾದರೂ-ಹಾಡಿನ ರೂಪದಲ್ಲಿ ಸಾದರ ಪಡಿಸಿದರೆ

ರೂಪಕದ ಕಲ್ಪನೆ, ವೈಭವ ಕಣ್ಣಿಗೆ ಕಟ್ಟೀತು–ಎಂದು ಆಶಿಸುತ್ತಿದ್ದ ಸಂದರ್ಭದಲ್ಲಿ ಅನುಕೂಲವೊಂದು ಒದಗಿಬಂತು. ಕನ್ನಡದ ಹಿರಿಯ ಲೇಖಕಕರಾದ ಎಲ್. ಗುಂಡಪ್ಪನವರ ಹೆಣ್ಣುಮಕ್ಕಳು – ಆಗ ಕುಮಾರಿಯರಾಗಿದ್ದ ಎಲ್.ಜಿ. ಸುಮಿತ್ರ, ಎಲ್.ಜಿ. ವಿಮಲ ಇವರ ಕಂಠಶ್ರೀ ಅಚ್ಚ ಹೊಸತಾಗಿದ್ದು, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಪಳಗಿದ್ದರು. ಗುಂಡಪ್ಪನವರ ಮನೆಗೆ ಆಗಾಗ ಹೋಗಿಬರುತ್ತಿದ್ದ, ಮತ್ತು ಈ ಸೋದರಿಯರು ಕನ್ನಡ ಜಾನಪದ ಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದುದನ್ನು ಕೇಳುತ್ತಿದ್ದ ನನಗೆ ಪು.ತಿ.ನ. ಅವರ 'ಗೋಕುಲ ನಿರ್ಗಮನ' ಗೀತರೂಪಕವನ್ನು ಈ ಕುವರಿಯರು ಪೂರ್ಣವಾಗಿ ಪಾಠಮಾಡಿ ಆ ರೂಪಕವನ್ನು ಪ್ರದರ್ಶಿಸಲು ಸಾಧ್ಯವೇ ಎಂದು ಕೇಳುವ ಸ್ಫೂರ್ತಿಯನ್ನು ತಂದುಕೊಟ್ಟಿತು. ಹಿರಿಯ ಎಲ್. ಗುಂಡಪ್ಪನವರು ಸಂತಸದಿಂದ ಸಲಹೆಯನ್ನು ಸ್ವಾಗತಿಸಿದರು.

ಕವಿ ಪು.ತಿ.ನ. ಅವರಿಗೆ ಈ ಸುದ್ದಿಯನ್ನು ಕೊಂಡೊಯ್ದೆ. ಆಗ ಎಲ್. ಗುಂಡಪ್ಪನವರ ಕುಟುಂಬ ನರಸಿಂಹರಾಜ ಕಾಲೊನಿಯಲ್ಲಿತ್ತು; ಪು.ತಿ.ನ. ಅವರ ವಾಸ ಮಲ್ಲೇಶ್ವರದ ಈಸ್ಟ್‌ಪಾರ್ಕ್ ರಸ್ತೆಯಲ್ಲಿ. ಒಂದು ತುದಿಯಿಂದ ಇನ್ನೊಂದು ತುದಿ. ಪು.ತಿ.ನ. ಹೆಚ್ಚುಕಡಿಮೆ ನಿತ್ಯವೂ ಸಂಜೆ ಗುಂಡಪ್ಪನವರ ಮನೆಗೆ ಬಂದು 'ಗೋಕುಲ ನಿರ್ಗಮನ' ಗೀತರೂಪಕದ ಪಾಠವನ್ನು ನಡೆಸಿದರು. ಎಲ್.ಜಿ. ಸುಮಿತ್ರ ಸೋದರಿಯರು ಶ್ರದ್ಧೆಯಿಂದ ಇಡೀ ಗೀತರೂಪಕವನ್ನು ಕಲಿತರು. ಗೀತರೂಪಕದಲ್ಲಿ ಕವಿಯದೇ ವಿಶಿಷ್ಟ ಭಾವಗಳು; ಆ ಭಾವಗಳಿಗೆ ಅಭಿವ್ಯಕ್ತಿ ಕೊಡುವಂತೆ ಕವಿಯದೇ ವಿಶಿಷ್ಟವಾದ ಸಂಗೀತ ಜೋಡಣೆಗಳು. 'ಧಾತು' ಮತ್ತು 'ಮಾತು'ಗಳನ್ನು ಏಕಕಾಲಕ್ಕೆ ಪರಿಭಾವಿಸಿ ರೂಪಕದ ಪ್ರಭಾವವನ್ನು ಮೂಡಿಸಬೇಕು. ಒಂದು ರೂಪಕದ ನಿರೂಪಣೆ, ಕೇವಲ ಭಾವಗೀತೆಯಂತಲ್ಲದೆ, ಸ್ವತಂತ್ರ ನಡಿಗೆ, ಮನೋಭಾವವುಳ್ಳ ಎರಡು ಶಕ್ತಿಯುತ ಕಲೆಗಳನ್ನು ಏಕತ್ರ ಹೂಡಿ ನೇರ ಗುರಿಗೆ ಕೊಂಡೊಯ್ಯ ಬೇಕು. ಅದೊಂದು ಶ್ರಮಸಾಧ್ಯವಾದ ಕಲೆ; ಸಾಧನೆ.

ಔತಣ

ಇಲ್ಲಿ ಮುಖ್ಯವಾಗಿ ಸ್ಮರಿಸಬೇಕಾದ ಸಂಗತಿಯೆಂದರೆ – 'ಗೋಕುಲ ನಿರ್ಗಮನ' ಗೀತರೂಪಕವನ್ನು ಕವಿಮುಖೇನ ನೇರವಾಗಿ, ಅದರ ಭಾವಸಂಪತ್ತು, ಸಂಗೀತ ಸಂಪತ್ತುಗಳೊಡನೆ, ಎಲ್.ಜಿ. ಸುಮಿತ್ರ ಸೋದರಿಯರು ಅಭ್ಯಾಸ ಮಾಡಿರುವರೆಂದು ತೀ.ನಂ.ಶ್ರೀಯವರಿಗೆ ತಿಳಿದದ್ದು. ಆಗ ತೀ.ನಂ.ಶ್ರೀ ಬೆಂಗಳೂರಿನಲ್ಲಿಯೇ ಮಾಸ್ತಿಯವರ ಮನೆಯ ಎದುರು, ಗವೀಪುರದ ಬಡಾವಣೆಯಲ್ಲಿದ್ದರು. ಅವರ ಸಂಭ್ರಮ ಹೇಳತೀರದು. ಒಂದು ಸುಂದರ ಸಂಜೆ ತಮ್ಮ ಮನೆಯಲ್ಲಿ ದೊಡ್ಡ ಸಮಾರಂಭವನ್ನೇ ಏರ್ಪಡಿಸಿದರು. ತಿಂಡಿ–ತೀರ್ಥಗಳು ಏರ್ಪಟ್ಟವು. ಪೂಜ್ಯ ಮಾಸ್ತಿಯವರಾದಿಯಾಗಿ ತೀ.ನಂ.ಶ್ರೀ ಅವರ ಆಹ್ವಾನದ ಮೇಲೆ ಹಿರಿಕಿರಿಯ ಕವಿಗಣವೆಲ್ಲ ಅಲ್ಲಿ ಸೇರಿತು.

ತಂಬೂರಿ ಝೇಂಕರಿಸತೊಡಗಿತು. 'ಗೋಕುಲ ನಿರ್ಗಮನ'ದ ಭಾವಗರ್ಭಿತವಾದ ಸಂಗೀತ ರಚನೆಗಳು, ಸನ್ನಿವೇಶಗಳು ಒಂದಾದ ಮೇಲೊಂದರಂತೆ ಪ್ರವಹಿಸಲಾರಂಭಿಸಿದವು. ಅದು

ಮರೆಯಲಾರದ ಸಂಜೆ. ಕನ್ನಡದ ಗೀತರೂಪಕವೊಂದು ಕವಿಯೇ ಪರಿಭಾವಿಸಿದಂತೆ ನಿವೇದಿತವಾದದ್ದು, ಪ್ರಾಯಶಃ ಅದೇ ಮೊಟ್ಟ ಮೊದಲಿರಬೇಕು. ತೀ.ನಂ.ಶ್ರೀ ಪ್ರೇರಣೆಯಿಂದ ಈ ಗೀತರೂಪಕ ಮುಂದೆ ಹಲವೆಡೆ ಗೋಷ್ಠಿಗಳಲ್ಲಿ ನಿವೇದಿತವಾಯಿತು.

ಮೈತ್ರಿ ಎಂದರೇನು, ನೈಜವಾದ ಕವಿಯೊಬ್ಬನನ್ನು ಹೇಗೆ ಮನ್ನಿಸಬೇಕು, ಸತ್ಕರಿಸಬೇಕು– ಇವು ಪ್ರಾಚಾರ್ಯ ತೀ.ನಂ.ಶ್ರೀ ಅವರಲ್ಲಿ ಎದ್ದು ತೋರುತ್ತಿದ್ದ ಗುಣಗಳು. ಹಲವು ಕವಿಗಳು ಮತ್ತು ಕಾವ್ಯಗಳ ಸಾಕುತಾಯಾದ ತೀ.ನಂ.ಶ್ರೀ ಅವರ 'ಭೋಜಕತ್ವ'ವನ್ನು ಪು.ತಿ.ನ. ಮನಸಾರೆ ಸ್ಮರಿಸಿದ್ದಾರೆ; ನಮಿಸಿದ್ದಾರೆ.

ದಿವ್ಯ ಸಭೆ

ತೀ.ನಂ.ಶ್ರೀ ಅವರ ಮಮತೆ, ಮೈತ್ರಿ, ಕಾವ್ಯಪ್ರಿಯತೆ, ರಸಿಕತೆ, ವಿದ್ವತ್ಪೂರ್ಣತೆ– ಎಂದಿಗೂ ಆದರ್ಶಪೂರ್ಣ. ಕವಿ ಪು.ತಿ.ನ. ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ನೀಡಲ್ಪಟ್ಟ ವರ್ಷವೇ ತೀ.ನಂ.ಶ್ರೀ ಅವರಿಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಲ್ಲಲು ನಿರ್ಧರಿಸಲಾಗಿತ್ತು. "ನಾನು ಒಪ್ಪಿಕೊಳ್ಳುತ್ತಿದ್ದೇನೆ, ನೀವೂ ಒಪ್ಪಿಕೊಳ್ಳಿ, ನಿರಾಕರಿಸಬೇಡಿ"–ಎಂದು ತೀ.ನಂ.ಶ್ರೀರವರಿಗೆ ಮಿತ್ರ ಪು.ತಿ.ನ. ಅವರು ಪತ್ರ ಬರೆದಿದ್ದರು. ಆದರೆ ದುರದೃಷ್ಟ. ೧೯೬೬ರ ಸೆಪ್ಟೆಂಬರ್ ೭ ರಂದು ಆ ಆಚಾರ್ಯಪುರುಷ ಕಲ್ಕತ್ತದಲ್ಲಿ ನಿಧನ ಹೊಂದಿದರು. ಶುದ್ಧಮೈತ್ರಿ, ಶುದ್ಧ ಅಂತಃಕರಣದ ಈ ಎತ್ತರದ ವ್ಯಕ್ತಿ ಇನ್ನಿಲ್ಲವಾಗಿದ್ದರು. ಇದೊಂದು ಅನಿರೀಕ್ಷಿತ ಅಸ್ತಮಾನ. ಆ ಸಂಜೆ ತಮ್ಮೊಡನೆ ಸಲ್ಲಬೇಕಾಗಿದ್ದ 'ಸಾಹಿತ್ಯ ಮರ್ಯಾದೆ'ಗೆ ಮಿತ್ರ ನಿಲ್ಲದಿರುವುದನ್ನು ಬಗೆದು, ಅದೇ ಮರ್ಯಾದೆ ಸರಸತಿಯ ದಿವ್ಯಸಭೆಯೊಳಗೆ ಆ ಸಂಜೆ ಸಲ್ಲುತ್ತಿದೆಯೋ ಎಂದು ಕವಿ ಪು.ತಿ.ನ ದುಃಖಾಶ್ರುತಗಳಿಂದ ಉದ್ಗರಿಸಿದರು.

ಪಂಪ ಪ್ರಶಸ್ತಿ

ದಕ್ಷಿಣದ ಕಡೆಯಿಂದ ಗಾಳಿ ಬೀಸಿದರೂ ಸಾಕು, ಮೃದು ಮಧುರವಾದ ಒಂದು ಮಾತು ಕೇಳಿದರೂ ಸಾಕು, ಇಂಪಾದ ಸಂಗೀತ ಕಿವಿಗೆ ಬಿದ್ದರೂ ಸಾಕು, ಪ್ರಣಯಸುಖವನ್ನು ನೆನೆದರೂ ಸಾಕು, ಕೊನೆಗೆ ವಸಂತಮಾಸ ಬಂದರೂ ಸಾಕು, ಮನಸ್ಸು ಮದ್ದಾನೆಯಂತೆ ಬನವಾಸಿ ದೇಶದತ್ತ ನುಗ್ಗಿ ಹೋಗುತ್ತದೆ. ಯಾರು ಅಂಕುಶ ಇಟ್ಟೊಡೂ ಅದು ನಿಲ್ಲದು. ಹೀಗೆ ಬನವಾಸಿ ದೇಶವನ್ನು ತುಂಬು ಪ್ರೀತಿ, ಹೆಮ್ಮೆಯಿಂದ ನೆನೆದ ಆದಿಕವಿ ಪಂಪನಂತಹುದೇ ಮನಸ್ಸು ತೀ.ನಂ.ಶ್ರೀಕಂಠಯ್ಯನವರದು.

ಹಾಗಿಲ್ಲದಿದ್ದರೆ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆ ಹೊಂದಿ, ಹತ್ತಾರು ಉನ್ನತ ಪರೀಕ್ಷೆಗಳಲ್ಲಿ ಹತ್ತಾರು ಸುವರ್ಣಪದಕಗಳನ್ನು ಗೆದ್ದು, ರೆವಿನ್ಯೂ ಪ್ರೊಬೇಷನರ್ ಉದ್ಯೋಗಕ್ಕೆ ಆಯಲ್ಪಟ್ಟ ಈ ಮೇಧಾವಿ ಪುರುಷ ಕನ್ನಡ ಕಲಿಸುವ ಉಪಾಧ್ಯಾಯ ವೃತ್ತಿಗೆ ಬರವುದೆಂದರೆ? ಬನವಾಸಿ ದೇಶದ ನಂದನದಲ್ಲಿ ಮರಿದುಂಬಿಯಾಗಿ, ಕೋಗಿಲೆಯಾಗಿ ಹುಟ್ಟುವುದೂ ಹಾಡುವುದೂ ತೀ.ನಂ.ಶ್ರೀ.ಯವರ ಅಂತರಂಗದ ಆಶಯ. ಪಂಪ ತೀ.ನಂ.ಶ್ರೀ. ಯವರಿಗೆ ಪ್ರಿಯನಾದ ಕವಿ. ಆ ಕಾರಣಕ್ಕಾಗಿಯೇ ಇರಬೇಕು ೧೯೪೮ರ ಸಾಲಿನ ಪಂಪ

ಪ್ರಶಸ್ತಿ ತೀ.ನಂ.ಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ' ಗ್ರಂಥಕ್ಕೆ ಮೂವತ್ತಾರು ವರ್ಷಗಳ ಕಾಲವೇ ಸಾವಧಾನವಾಗಿ ಕಾದಿತ್ತು. ೧ ಲಕ್ಷರೂ.ಗಳ ಆ ಪ್ರಶಸ್ತಿ ವಿತರಿಸಲ್ಪಟ್ಟ ೧೯೯೦, ಮಾರ್ಚ್ ೨೯ರ ಸಂಜೆ, "ಸಂಜೆಯಧಿದೇವಿ ಸರಸತಿಯ ದಿವ್ಯಸಭೆ"ಯೇ ಆಗಿತ್ತು. ಅಷ್ಟೊಂದು ವ್ಯವಸ್ಥಿತವಾಗಿ, ಓರಣವಾಗಿ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಏರ್ಪಡಿಸಿತ್ತು. ಕವಿಗಳು ಹಾಗೂ ಕಾವ್ಯಾಭಿಮಾನಿಗಳು ಕಿಕ್ಕಿರಿದಿದ್ದರು.

"ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ"ಯಾದ, ಹತ್ತನೆಯ ಶತಮಾನಕ್ಕೆ ಸೇರಿದ ಪಂಪನಿಗೂ ಇದು ಮನಸ್ಸಮಾಧಾನವನ್ನು ತಂದಿರಬೇಕು. "ಕಾವ್ಯದ ಆತ್ಮ ರಸ; ಅದನ್ನು ಕಾವ್ಯಶರೀರವು ಅಭಿವ್ಯಕ್ತಪಡಿಸುವ ಮಾರ್ಗ ಧ್ವನಿ; ಆತ್ಮ-ಶರೀರಗಳ ಹೊಂದಿಕೆಯೇ ಔಚಿತ್ಯ. ರಸ-ಧ್ವನಿ-ಔಚಿತ್ಯ; ಇದೇ ಕಾವ್ಯ ಗಾಯತ್ರಿ" - ಎಂದಿದ್ದಾರೆ ತೀ.ನಂ.ಶ್ರೀ (ಭಾರತೀಯ ಕಾವ್ಯಮೀಮಾಂಸೆ, ಪುಟ ೫೫).

ರಸ-ಧ್ವನಿ-ಔಚಿತ್ಯಗಳ ಕಾವ್ಯಗಾಯತ್ರಿಯನ್ನು ನಿತ್ಯ ಜಪಿಸುತ್ತಾ, ಕನ್ನಡ ಭಾಷೆ, ಕನ್ನಡ ದೇಶದಲ್ಲಿ "ಅತಿ ತುಂಗಾಕೃತಿ"ಯಾಗಿ ಬಾಳಿ ಬದುಕಿದವರು, ಬದುಕಿಗೊಂದು ಅರ್ಥಕೊಟ್ಟವರು ಆಚಾರ್ಯ ತೀ.ನಂ.ಶ್ರೀಕಂಠಯ್ಯನವರು.

(ಉತ್ಥಾನ : ಜೂನ್ ೧೯೯೦)

ಅಭಿಪ್ರಾಯಗಳು

●

ಭಾವಗರ್ಭಿತ

ಎ.ಪಿ. ಶ್ರೀನಿವಾಸಮೂರ್ತಿ ಕನ್ನಡಪ್ರಭ : (ಜನನಾಡಿ), ೧೦-೨-೧೯೯೦

ಕವಿಯು ತನ್ನ ಕೃತಿಯಿಂದ ಅಪೇಕ್ಷಿಸುವ ಫಲಗಳನ್ನು ವಿವರಿಸುವ ಸಂದರ್ಭದಲ್ಲಿ ತೀ.ನಂ.ಶ್ರೀಯವರು ಹೀಗೆ ನುಡಿದಿದ್ದಾರೆ:

"ಧನಲಾಭವು ಅನಿಯತವೆಂದು ಕೈಬಿಟ್ಟ ಹೇಮಚಂದ್ರನು ಯಶಸ್ಸನ್ನು ಫಲಗಳ ಚಿಕ್ಕ ಗುಂಪಿನಲ್ಲಿ ಸೇರಿಸಿದನು. ಆದರೆ ಕೀರ್ತಿ ಕೂಡ ಕವಿಗಳ ಕೈಗಳಲಿಲ್ಲವೆಂಬುದು ಅನೇಕ ಸಾಹಿತ್ಯಗಳ ಚರಿತ್ರೆಯಲ್ಲಿ ವಿಶದವಾಗಿರುವ ಸಂಗತಿ. ಮರು ಮರೀಚಿಕೆಯಂತೆ ಎಷ್ಟೋ ಮಂದಿಯನ್ನು ಇದು ತೊಳಲಿಸಿ ಬಳಲಿಸಿದೆ. ಕೆಲವರಿಗೆ ಜೀವಿತ ಕಾಲದಲ್ಲಿ ಹತ್ತಿರವೂ ಸುಳಿಯದೆ ಮರಣಾನಂತರ ಒಲಿದು ಬಂದಿದೆ." (ನೋಡಿ, ಭಾರತೀಯ ಕಾವ್ಯಮೀಮಾಂಸೆ ಪುಟ ೨೧೯.)

ಮರಣಾನಂತರ ಈಚೆಗೆ ತೀ.ನಂ.ಶ್ರೀಯವರಿಗೆ ನೀಡಲಾದ ಪ್ರಶಸ್ತಿಯ ಬಗೆಗೆ ಅವರ ಮೇಲಿನ ನುಡಿ ಭಾವಗರ್ಭಿತವಾಗಿದೆಯಲ್ಲವೆ?

* * *

ಪ್ರಶಸ್ತಿ ಸಾರ್ಥಕ

ಎಂ. ಚಿದಾನಂದಮೂರ್ತಿ ಕನ್ನಡಪ್ರಭ : (ಜನನಾಡಿ), ೧೦-೨-೧೯೯೦

೧೯೫೩ರಲ್ಲಿ ಪ್ರಕಟವಾದ (ದಿ). ಪ್ರೊ ತೀ.ನಂ.ಶ್ರೀಕಂಠಯ್ಯನವರ "ಭಾರತೀಯ ಕಾವ್ಯ ಮೀಮಾಂಸೆ"ಗೆ ಸೃಜನೇತರ ಪ್ರಕಾರದ ಶ್ರೇಷ್ಠ ಕೃತಿಯೆಂದು ಈ ವರ್ಷದ ಪಂಪ ಪ್ರಶಸ್ತಿಯನ್ನು ಕೊಟ್ಟಿರುವುದು ಅತ್ಯಂತ ಹರ್ಷದ ಸಂಗತಿಯಾಗಿದೆ. ೧೯೬೬ರ ಸೆಪ್ಟೆಂಬರ್ ಏಳರಂದು ಅವರು ತಮ್ಮ ಅರವತ್ತರ ವಯಸ್ಸಿನಲ್ಲಿ ದೂರದ ಕಲ್ಕತ್ತೆಯಲ್ಲಿ ನಿಧನರಾದಾಗ ರಾಷ್ಟ್ರಮಟ್ಟದ ಒಬ್ಬ ಅದ್ವಿತೀಯ ವಿದ್ವಾಂಸನನ್ನು ತಾನು ಕಳೆದುಕೊಂಡುದಾಗಿ ಇಡೀ ಕರ್ನಾಟಕದ ಜನತೆ ಕಣ್ಣೀರಿಟ್ಟಿತು. ಸಾಹಿತ್ಯ, ಕಾವ್ಯಮೀಮಾಂಸೆ, ಭಾಷಾ ವಿಜ್ಞಾನ, ಛಂದಸ್ಸು ಹೀಗೆ ಹಲವು ಕ್ಷೇತ್ರಗಳಲ್ಲಿ ಅಸಾಮಾನ್ಯ ಪಾಂಡಿತ್ಯವನ್ನು ಪಡೆದಿದ್ದ ಅವರು ಸಂಶೋಧನ ಕ್ಷೇತ್ರ ಬಯಸುವ

ಖಚಿತ ಶಿಸ್ತಿನ ಸಾಕಾರ ಮೂರ್ತಿಯಾಗಿದ್ದರು. ಸೃಜನ ಸಾಹಿತ್ಯ ಪ್ರಕಾರದಲ್ಲೂ ಅವರ ಕೊಡುಗೆ ನಗಣ್ಯವಾದುದೇನೂ ಅಲ್ಲ.

ಅವರು ಬರೆದುದು ಕಡಮೆ, ಆದರೆ ಬರೆದುದೆಲ್ಲ ಅಪ್ಪಟ ಚಿನ್ನ. ಉತ್ಕೃಷ್ಟತೆ ಅವರ ತೀರದ ದಾಹವಾಗಿತ್ತು. ಪರಿಪೂರ್ಣತೆ ಅವರ ಆದರ್ಶವಾಗಿತ್ತು. ಅವರು ಪಾಂಡಿತ್ಯ ಸ್ನೇಹ, ಕಾವ್ಯಾಸ್ವಾದ, ರಸಿಕತೆ, ಕಲಾಪ್ರೇಮ, ನಿಷ್ಕಪಟ ಬದುಕುಗಳ ಅಪೂರ್ವ ಸಂಗಮವಾಗಿದ್ದರು. ಅವರನ್ನು ತೀರ ಹತ್ತಿರದಿಂದ ಬಲ್ಲ ನನಗೆ ಅವರೊಂದು ತೀರ ವಿರಳ ಮಾದರಿ.

ಅವರು ಬದುಕಿದ್ದಾಗ ಅವರಿಗೆ ಯಾವುದೇ ಗಮನಾರ್ಹ ಬಾಹ್ಯ ಗೌರವಗಳೂ ಲಭ್ಯವಾಗಲಿಲ್ಲ. ಅವರು ಸಾಹಿತ್ಯ ಸಮ್ಮೇಳನಧ್ಯಕ್ಷರಾಗಲಿಲ್ಲ. ಅವರ "ಭಾರತೀಯ ಕಾವ್ಯ ಮೀಮಾಂಸೆ"ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕುವುದು ಸ್ವಲ್ಪದರಲ್ಲಿ ತಪ್ಪಿತು. ಅವರಿಗೆ ಗೌರವ ಡಾಕ್ಟರೇಟ್ ದೊರಕಲಿಲ್ಲ. ಅವರು ಅಂತಹ ಗೌರವ ಪ್ರಶಸ್ತಿಗಳನ್ನು ಬಯಸಲಿಲ್ಲ. ಅದಕ್ಕಾಗಿ ಪ್ರಯತ್ನಿಸುವುದಂತೂ ತೀರ ದೂರವೇ ಉಳಿಯಿತು. ಈಗ ಅವರ ಕೃತಿಗೆ "ಪಂಪ ಪ್ರಶಸ್ತಿ" ದೊರಕಿರುವುದರಿಂದ ಅವರಿಗೇನೂ ಆಗಬೇಕಿಲ್ಲವಾದರೂ ಅಂತಹ ಶ್ರೇಷ್ಠ ವ್ಯಕ್ತಿಯೊಬ್ಬರ ಉತ್ಕೃಷ್ಟ ಕೃತಿಗೆ ಕರ್ನಾಟಕದ ಅತ್ಯುನ್ನತ ಸಾಹಿತ್ಯಕ ಪ್ರಶಸ್ತಿ ದೊರಕಿ, ಘಟಿಸಿಹೋದ ಅನ್ಯಾಯವೊಂದನ್ನು ತೀರ ತಡವಾಗಿಯಾದರೂ ಸರಿಪಡಿಸಿದಂತಾಯಿತು ಎಂಬ ಸಮಾಧಾನ ಅವರ ವಿದ್ಯಾರ್ಥಿಗಳಿಗೆ ಮತ್ತು ಅಭಿಮಾನಿಗಳಿಗೆ. "ಭಾರತೀಯ ಕಾವ್ಯಮೀಮಾಂಸೆ"ಯು ಆ ವಿಷಯಕ್ಕೆ ಸಂಬಂಧಿಸಿದಂತೆ ಇಂಗ್ಲಿಷೂ ಸೇರಿದಂತೆ ಯಾವುದೇ ಭಾಷೆಯಲ್ಲಿ ಬಂದಿರುವ ಕೃತಿಗಳಲ್ಲಿ ನಿಶ್ಚಯವಾಗಿಯೂ ಶ್ರೇಷ್ಠತಮವಾದುದೆಂದು ಹೇಳುತ್ತಾರೆ. ಪ್ರೊ॥ ಎಲ್.ಎಸ್. ಶೇಷಗಿರಿ ರಾಯರು ಈಗಾಗಲೇ ಮನವಿಮಾಡಿಕೊಂಡಿರುವಂತೆ ಅದರ ಸುಲಭ ಬೆಲೆಯ ಆವೃತ್ತಿಯು ಕನ್ನಡ ಜನತೆಗೆ ಲಭ್ಯವಾಗುವುದು ಅಗತ್ಯವಾಗಿದೆ; ಬೇರೆ ಭಾಷೆಗಳಿಗೆ ಅದು ಅನುವಾದವಾಗುವುದೂ ಅಷ್ಟೇ ಮುಖ್ಯವಾಗಿದೆ.

* * *

ಎನ್. ಬಸವಾರಾಧ್ಯ ಪತ್ರ : ೧೧-೪-೧೯೯೦

ಕರ್ನಾಟಕ ಸರ್ಕಾರ ಪಂಪ ಪ್ರಶಸ್ತಿಯನ್ನು ಪ್ರತಿಷ್ಠಾಪಿಸಿರುವುದು ಕನ್ನಡಿಗರೆಲ್ಲರೂ ಹೆಮ್ಮೆ ಪಡುವ ಸಂಗತಿಯಾಗಿದೆ. ಈ ಪ್ರಶಸ್ತಿ ಈ ಬಾರಿ ಕನ್ನಡದ ಶ್ರೇಷ್ಠ ವಿದ್ವನ್ಮಣಿ ಪ್ರಾ॥ ತೀ.ನಂ.ಶ್ರೀಕಂಠಯ್ಯನವರ ಆಚಾರ್ಯಕೃತಿ "ಭಾರತೀಯ ಕಾವ್ಯಮೀಮಾಂಸೆ"ಗೆ ಸಂದಿರುವುದು ಅತ್ಯಂತ ಸ್ತುತ್ಯರ್ಹವಾದುದು. ಈ ಸಂಬಂಧವಾಗಿ ತೀ.ನಂ.ಶ್ರೀ. ಅವರ ಕೃತಿಗಳ ಬಗೆಗೆ ಒಂದು ವಿಚಾರಸಂಕಿರಣವನ್ನು ಏರ್ಪಡಿಸಿ, ಅಂದೇ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ದೂರದರ್ಶನದಲ್ಲಿಯೂ ಒಂದು ಕಾರ್ಯಕ್ರಮವನ್ನು ಬಿತ್ತರಿಸಲಾಯಿತು. ಎಲ್ಲ ಕಾರ್ಯಕ್ರಮಗಳನ್ನೂ ಅತ್ಯಂತ ಶ್ರದ್ಧಾಸಕ್ತಿಗಳಿಂದ ವೀಕ್ಷಿಸಿದವರಲ್ಲಿ ನಾನೂ ಒಬ್ಬ. ದಿವಂಗತ ತೀ.ನಂ.ಶ್ರೀ. ಅವರು ನನ್ನ ಶಿಕ್ಷಣಗುರುಗಳು ಅಷ್ಟೇ ಅಲ್ಲ ನನ್ನ ರಕ್ಷಾಗುರುಗಳೂ ಆಗಿದ್ದರು. ಕೆಲವಾರು ವರ್ಷಗಳು ಶ್ರೀಯುತರ ನಿಕಟವರ್ತಿಯಾಗಿದ್ದ ನನಗೆ ಮೇಲಿನ

ಕಾರ್ಯಕ್ರಮಗಳಲ್ಲಿ ಕೆಲವು ಮುಖ್ಯವಿಷಯಗಳೇ ಪ್ರಸ್ತಾಪಿತವಾಗದಿದ್ದುದು ವ್ಯಥೆಯನ್ನುಂಟು ಮಾಡಿದೆ.

ತೀ.ನಂ.ಶ್ರೀ ಅವರ ಜೀವಿತದ ಪರಮೋದ್ದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಪ್ರಕಟಣೆ ಎಂಬುದು ಬಹುಶಃ ಅನೇಕರಿಗೆ ಗೊತ್ತಿಲ್ಲದಿರಬಹುದು. ಈ ನಿಘಂಟು ರಚನೆಯ ಪ್ರಾರಂಭಾವಸ್ಥೆಯಿಂದ ಪ್ರಥಮ ಸಂಪುಟ ಪ್ರಕಟಣೆಯವರೆಗೂ ಶ್ರೀಯುತರು ವಹಿಸಿದ ಪಾತ್ರ ಸುವರ್ಣಾಕ್ಷರಗಳಲ್ಲಿ ಬರೆಯುವಂತಹುದಾಗಿದೆ. ಕನ್ನಡ ನಿಘಂಟು ಸಂಪಾದಕ ಸಮಿತಿಯ ಸದಸ್ಯರಾಗಿ. ಕೆಲಕಾಲ ಅದರ ಸಂಪಾದಕರಾಗಿ, ಪ್ರಧಾನ ಸಂಪಾದಕರಾಗಿ, ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ತಮ್ಮ ಜೀವನದ ಅಂತ್ಯಕಾಲದಲ್ಲಿ ಬಹಳಷ್ಟು ದುಡಿದಿದ್ದಾರೆ. ತೀ.ನಂ.ಶ್ರೀ. ಅವರು ನಿವೃತ್ತರಾದ ಮೇಲೆ ತಮ್ಮ ಎಲ್ಲ ಸಮಯವನ್ನೂ ನಿಘಂಟಿಗಾಗಿ ಬಳಸಿದ್ದಾರೆ. ಕನ್ನಡ ನಿಘಂಟಿಗೆ ಶ್ರೀಯುತರು ಸಲ್ಲಿಸಿದ ಅಪಾರ ಸೇವೆಯನ್ನು ಮೇಲಿನ ಕಾರ್ಯಕ್ರಮಗಳಲ್ಲಿ ಗುರುತಿಸದೆ ಹೋದುದು ದುರ್ದೈವದ ಸಂಗತಿ. ಈಗಲಾದರೂ ಸಂಬಂಧಿಸಿದವರು ಮಾಡಬೇಕಾದುದು ಇಷ್ಟು : ಪಂಪ ಪ್ರಶಸ್ತಿ ವಿಜೇತರಾದ ತೀನಂಶ್ರೀ ಅವರನ್ನು ಕುರಿತ, ಒಂದು ಕಿರುಹೊತ್ತಗೆಯನ್ನು ಪ್ರಕಟಿಸಿ ಅತ್ಯಂತ ಸುಲಭಬೆಲೆಗೆ ಕನ್ನಡ ಜನತೆಗೆ ಕೊಟ್ಟಲ್ಲಿ ಅದರಿಂದ ತೀನಂಶ್ರೀ ಅವರ ಸಮಗ್ರ ಜೀವನ, ಸಾಹಿತ್ಯ ಪರಿಚಯವಾಗುವುದಲ್ಲದೆ ಪಂಪ ಪ್ರಶಸ್ತಿಗೂ ಸಾರ್ಥಕತೆ ಒದಗುತ್ತದೆ ಎಂದು ಭಾವಿಸಿದ್ದೇನೆ.

* * *

ಎಂ.ವಿ. ಶ್ರೀನಿವಾಸಮೂರ್ತಿ ಪತ್ರ : ೯-೨-೧೯೯೦

ಪ್ರಿಯ ನಾಗಭೂಷಣ ಅವರೆ,

ನನ್ನ ಸಂತಸವನ್ನು ಯಾವ ಮಾತುಗಳಿಂದ ಹೇಳಿಕೊಳ್ಳಲಿ? ಕಡೆಗೂ ನಮ್ಮ ಸುತ್ತ ಇರುವ ಜನಕ್ಕೆ ಇನ್ನೂ ಸ್ವಲ್ಪ ವಿದ್ವತ್ ಪಕ್ಷಪಾತ ಉಳಿದಿದೆಯಲ್ಲ ಎಂದು ಸಮಾಧಾನವಾಯಿತು. ನಮ್ಮ ಅತ್ಯಂತ ಗೌರವಾನ್ವಿತರೂ ಪ್ರಿಯ ಗುರುಗಳೂ ನಿಮ್ಮ ಪಿತೃಶ್ರೀಯವರೂ ಆದ ಪ್ರೊ॥ತೀ.ನಂ.ಶ್ರೀ ಅವರ 'ಭಾರತೀಯ ಕಾವ್ಯಮೀಮಾಂಸೆ'ಗೆ ಪಂಪ ಪ್ರಶಸ್ತಿ ಸೃಜನೇತರ ಎಂಬ ಬಿರುದನ್ನು ಹೊತ್ತಾದರೂ ಪಡೆಯಿತಲ್ಲ! ಅದು ಯಾವ ಸೃಜನಶೀಲಕ್ಕಿಂತ ಕಡಿಮೆ? ಸಹೃದಯ ವಿಮರ್ಶಕ ಕವಿಗಿಂತ ಎತ್ತರದವನು. ಕಾವ್ಯ ಸ್ವರೂಪ, ಹೃದಯಗಳನ್ನು ಬೇರೊಬ್ಬರಲ್ಲಿ ಮೂಡಿಸಿ ಪುನರ್‌ಸೃಷ್ಟಿಗೆ ಕಾರಣನಾದ ಅವನಿಗೆ ಈ ಎರಡನೆಯ ಸ್ಥಾನ ಕೊಡುವುದು ಅತ್ಯಂತ ನಾಚಿಕೆಗೇಡಿನ ವಿಷಯ. ಏನಾದರೂ ಆಗಲಿ ಪ್ರತಿಭೆ, ಪಾಂಡಿತ್ಯಗಳಿಗೆ ಗೌರವ ಕೊಡುವ ವಿವೇಕ ಉಳ್ಳವರು ಈ ಸಮಿತಿಯಲ್ಲಿ ಕೆಲವರಾದರೂ ಇದ್ದರಲ್ಲ ಎಂದು ತಿಳಿದು ಸಮಾಧಾನವಾಯಿತು. ಇದು ಕನ್ನಡಕ್ಕೂ, ಅವರ ಶಿಷ್ಯರು ಮತ್ತು ಅಭಿಮಾನಿಗಳಿಗೆ ಸಂದ ಗೌರವ. ನಮ್ಮೆಲ್ಲರಿಗೂ ತುಂಬಾ ಸಂತೋಷದಾಯಕವಾದ ದಿನ. ಈ ಪ್ರಶಸ್ತಿಯನ್ನು ಅವರಿದ್ದಾಗಲೇ ಪ್ರಕಟಿಸಿದ್ದರೆ ಎಷ್ಟು ಚೆನ್ನಾಗಿತ್ತು. ಯಾವ ಲೌಕಿಕ ಉಪಾಧಿಗಳನ್ನೂ ಅವರು ಹೊರಲಿಲ್ಲ. ಆ ಅಸಮಾಧಾನ ನಮಗೆಲ್ಲ ಇದ್ದೇ ಇದೆ......

ತೀ.ನಂ.ಶ್ರೀ. ಅವರ ಬಗ್ಗೆ

ಇತರ ಸಂದರ್ಭಗಳಲ್ಲಿ

●

ತೀನಂಶ್ರೀಯವರು ನಿಧನರಾದಾಗ, 'ಶ್ರೀಕಂಠತೀರ್ಥ' ಬಿಡುಗಡೆಯಾದಾಗ ಮತ್ತು ಅವರಿಗೆ ಪಂಪ ಪ್ರಶಸ್ತಿ ಪ್ರದಾನವಾದ ಸಂದರ್ಭಗಳಲ್ಲಿ ಅವರ ಬಗ್ಗೆ ಬಂದ ಪತ್ರಗಳು, ಲೇಖನಗಳು ಮತ್ತು ಇತ್ಯಾದಿ ಬರವಣಿಗೆಗಳನ್ನು ಆಗಲೇ ಕೊಡಲಾಗಿದೆ. ಆದರೆ ತೀನಂಶ್ರೀಯವರ ಬಗ್ಗೆ ಕನ್ನಡ ನಾಡಿನ ಅವರ ಅಭಿಮಾನಿಗಳ ಗೌರವ, ಪ್ರೀತಿ, ಮತ್ತು ವಿಶ್ವಾಸಗಳು ನಿರಂತರವಾಗಿ ವ್ಯಕ್ತವಾಗುತ್ತಿವೆ. ನಮ್ಮ ತಂದೆಯವರ ನಿಧನದ ನಂತರ ಬೇರೆ ಸಂದರ್ಭಗಳಲ್ಲಿ ಬಂದ ಕೆಲವು ನುಡಿಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇದು ತೀನಂಶ್ರೀಯವರ ಬಗ್ಗೆ ಬರೆದ ಪ್ರತ್ಯೇಕ ಲೇಖನಗಳು, ಅವರ ಬಗ್ಗೆ ಬರೆದ ಪುಸ್ತಕದ ಭಾಗಗಳು ಮತ್ತು ತೀನಂಶ್ರೀಯವರ ಬಗ್ಗೆ ಆಡಿರುವ ಮಾತುಗಳ ರೂಪದಲ್ಲಿವೆ. ತೀನಂಶ್ರೀ ಅವರ ಶಿಷ್ಯರಾದ ದಿವಂಗತ ಶ್ರೀ ಬಿ. ಸುಂದರೇಶ್ವರ ಬರೆದುಕೊಟ್ಟಿದ್ದ ಲೇಖನವನ್ನು ಇಲ್ಲಿ ಸೇರಿಸಲಾಗಿದೆ.

ನಮ್ಮ ತಂದಯವರ ಜೀವಿತ ಕಾಲದಲ್ಲಿಯೇ ಅನಕೃ ಅವರು 'ಕನ್ನಡ ಕುಲರಸಿಕರು' ಪುಸ್ತಕದಲ್ಲಿ ಬರೆದ ಲೇಖನ ಇಲ್ಲಿದೆ. ನಮ್ಮ ಮಾತೃಶ್ರೀಯವರ 'ಮಯೂರ' ಪತ್ರಿಕೆಯ ಸಂದರ್ಶನದ ಲೇಖನ, ನಮ್ಮ ತಾಯಿಯವರು 'ನನ್ನ ಪತಿ ತೀನಂಶ್ರೀ' ಎಂದು ಮತ್ತು ನಾನು 'ನಾನು ನನ್ನ ತಂದೆಯನ್ನು ಕಂಡಂತೆ' ಎಂದು ಬೆಂಗಳೂರು ಆಕಾಶವಾಣಿಯಲ್ಲಿ ಮಾಡಿದ ಭಾಷಣಗಳನ್ನು ಇಲ್ಲಿ ಸೇರಿಸಲಾಗಿದೆ. ನನ್ನ ಅಕ್ಕ ನಾಗರತ್ನ 'ಶ್ರೀಕಂಠತೀರ್ಥ'ದಲ್ಲಿ ಬರೆದಿದ್ದ "ನಮ್ಮ ತಂದೆ" ಲೇಖನವನ್ನೂ ಇಲ್ಲಿ ಸೇರಿಸಲಾಗಿದೆ.

ನನ್ನ ಪತಿ ತೀ.ನಂ.ಶ್ರೀ

ಜಯಲಕ್ಷ್ಮಮ್ಮ ತೀನಂಶ್ರೀ

●

ನಾನು ಜಯಲಕ್ಷ್ಮಮ್ಮ. ನನ್ನ ಪತಿ ಕನ್ನಡ ಸಾಹಿತ್ಯ ಮತ್ತು ವಿದ್ವತ್ಪ್ರಪಂಚದಲ್ಲಿ ತೀನಂಶ್ರೀ ಎಂದೇ ಚಿರಪರಿಚಿತರಾದ ದಿವಂಗತ ತೀ.ನಂ. ಶ್ರೀಕಂಠಯ್ಯನವರು.

ನಾನು ತೀ.ನಂ.ಶ್ರೀಯವರನ್ನು ೧೯೨೬ರಲ್ಲಿ ಮದುವೆಯಾದಾಗ ನನಗೆ ೧೨ ವರ್ಷ ಮತ್ತು ಅವರಿಗೆ ೧೯ ವರ್ಷ. ಮದುವೆಗೆ ಮುಂಚೆ ಅವರು ನನ್ನನ್ನು ನೋಡಲು ನಮ್ಮ ಹಳ್ಳಿಗೆ ಬಂದಾಗ ಹೊರಗೆ ಜಿಟಜಿಟಿ ಮಳೆ. ಹಿರಿಯರು ಕರೆದಾಗ ನಾನು ನಮ್ಮ ತಾಯಿಯ ೧೬ ಮೊಳದ ಸೀರೆಯನ್ನುಟ್ಟು ಒಳಗಿನಿಂದ ಬಂದು ನನ್ನ ಭಾವಿ ಮಾವನವರಿಗೆ ನಮಸ್ಕರಿಸುವುದಲ್ಲದೆ, ಅಂದಿನ ಪದ್ಧತಿಯಂತೆ ಅವರೊಡನೆ ಕುಳಿತಿದ್ದ ತೀ.ನಂ.ಶ್ರೀಯವರಿಗೂ ಕಾಲು ಮುಟ್ಟಿ ನಮಸ್ಕರಿಸಿದೆ. ಆಗ ಅಲ್ಲಿದ್ದವರೆಲ್ಲ ಆಗಲೇ ನಮಸ್ಕರಿಸುವುದಕ್ಕೆ ಪ್ರಾರಂಭಿಸಿದಳು ಎಂದು ನನ್ನನ್ನು ಹಾಸ್ಯಮಾಡಿದರು. ಆದರೆ ಅದು ತೀ.ನಂ.ಶ್ರೀಯವರಿಗೆ ಮಿಂಚಿನಂತೆ ಸುಳಿದು ಅವರ ಹೃದಯಕ್ಕೆ ನಾನೇ ಸಾಕು ಎಂದೆನಿಸಿತು. ನಮಗೆ ಮದುವೆಯಾದಾಗ ಅವರಿಗೆ ಬಿ.ಎ. ತರಗತಿಯ ಅಂತಿಮ ಪರೀಕ್ಷೆಗೆ ಕೇವಲ ೧೫ ದಿನಗಳು ಬಾಕಿ ಇದ್ದು, ಪ್ರತಿದಿನ ಉರುಟಣೆಯೊಂದಿಗೆ ಒಂದು ವಾರಕಾಲ ಮದುವೆ ನಡೆಯಿತು. ಆದರೂ ಅವರಿಗೆ ಪರೀಕ್ಷೆಯಲ್ಲಿ ಆರು ಸುವರ್ಣ ಪದಕಗಳು ದೊರಕಿ ಘಟಿಕೋತ್ಸವದಲ್ಲಿ ಅಂದಿನ ಮಹಾರಾಜರಾದ ಕೃಷ್ಣರಾಜ ಒಡೆಯರವರು ನಕ್ಕು ತೀ.ನಂ.ಶ್ರೀಯವರಿಗೆ ಅದನ್ನು ಪ್ರದಾನ ಮಾಡಿದಾಗ ಅಲ್ಲಿದ್ದವರಲ್ಲಿ ಅನೇಕರು ಕೇಳಿದ ಪ್ರಶ್ನೆ "ಈ ಹುಡುಗನಿಗೆ ಮದುವೆಯಾಗಿದೆಯೇ" ಎಂದು? ಅದೇ ಸಭೆಯಲ್ಲಿದ್ದ ನಮ್ಮ ಮಾವನವರೂ ಕೂಡ ತಮ್ಮಂತಹ ಹಳ್ಳಿಯವರ ಮಗ ತೀ.ನಂ.ಶ್ರೀ ಎಂದು ಹೇಳಿಕೊಳ್ಳಲು ಇಷ್ಟಪಡದೆ, ಇವರು ಯಾವ ಪುಣ್ಯವಂತರ ಮಗನೋ ಎಂದು ಎಲ್ಲರೊಡನೆ ದನಿಗೂಡಿಸಿದರಂತೆ.

ಮದುವೆಯಾದ ನಂತರ ನಾನು ತೀ.ನಂ.ಶ್ರೀಯವರ ಮನೆ ಸೇರಿದುದು ಮೂರು ವರ್ಷಗಳಾದ ಮೇಲೆ. ಆ ವೇಳೆಗಾಗಲೆ ಅವರು ಎಂ.ಎ ಪರೀಕ್ಷೆ ಮುಗಿಸಿ, ದೊರಕಿದ್ದ ಅಮಲ್ದಾರ್ ಹುದ್ದೆಯನ್ನು ತ್ಯಜಿಸಿ ಮೈಸೂರಿನ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕವಾಗಿದ್ದರು. ಈ ಮಧ್ಯದಲ್ಲಿ ಅವರು ನನ್ನನ್ನು ಭೇಟಿಮಾಡಲು ಬಂದಿದ್ದು ಒಂದೇ ಸಾರಿ. ಅದು ನಮ್ಮ ಮದುವೆಯಾದ ಎರಡು ತಿಂಗಳುಗಳ ನಂತರ. ಆ ಸಮಯದಲ್ಲಿ

ಒಂದೆರಡು ದಿನ ಹತ್ತಿರದಲ್ಲಿದ್ದ ನನ್ನ ಅಕ್ಕನ ಹಳ್ಳಿಗೆ ಹೋಗಿ ಬಂದುದನ್ನೇ ನಮ್ಮ ಮಧುಚಂದ್ರವೆಂದು ಕರೆಯಬಹುದು. ಆಗಾಗ್ಗೆ ತೀ.ನಂ.ಶ್ರೀ ಅವರಿಂದ ಬಂದ ಒಂದೆರಡು ಪತ್ರಗಳಿಗೆ ಪ್ರತಿಯಾಗಿ ನನ್ನ ಅಕ್ಕನ ಸಲಹೆಯಂತೆ "ಪ್ರಾಣಪ್ರಿಯ" ಎಂದು ಅವರನ್ನು ಸಂಬೋಧಿಸಿ ಬರೆದ ಒಂದೆರಡು ಪತ್ರಗಳ ನೆನಪಿದೆ. ನಮ್ಮ ಮದುವೆಯ ಒಂದು ವರ್ಷದ ನಂತರ ತೀ.ನಂ.ಶ್ರೀಯವರಿಗೆ ಒಂದು ಶಸ್ತ್ರ ಚಿಕಿತ್ಸೆಯಾಗಿ ದೇಹಸ್ಥಿತಿ ಸ್ವಲ್ಪ ಪ್ರಕೋಪಕ್ಕೆ ತಿರುಗಿ ಅವರು ನನ್ನನ್ನು ಭೇಟಿ ಮಾಡಬೇಕೆಂದು ತುಂಬಾ ಬಯಸಿದರೂ, ಹಿರಿಯರು ಅಂದಿನ ಸಾಮಾಜಿಕ ಕಟ್ಟಳೆಗಳ ಅರೆತಿಳಿವಳಿಕೆಯಿಂದ ನನ್ನನ್ನು ಭೇಟಿ ಮಾಡಿಸಿರಲಿಲ್ಲ. ಆ ವರ್ಷಗಳಲ್ಲಿನ ಆ ಅಗಲಿಕೆ, ಕಾತರ, ಸಹಜವಾದ ಸಂಕೋಚ ಮತ್ತು ಸಾಮಾಜಿಕ ಹೆದರಿಕೆಗಳೇ ಅವರ ಒಲುಮೆಯಲ್ಲಿನ ಅನೇಕ ಕವಿತೆಗಳಿಗೆ ಸ್ಫೂರ್ತಿಯಾಗಿವೆ.

ನಾನು ಮೈಸೂರಿನಲ್ಲಿ ತೀ.ನಂ.ಶ್ರೀಯವರ ಮನೆ ಸೇರಿದಾಗ ಅದು ಆಗಲೇ ಬಂಧುಬಳಗ ದವರಿಂದ ತುಂಬಿದ ಮನೆಯಾಗಿತ್ತು. ಈ ಸಮಯದಲ್ಲಿ ಒಂದೆರಡು ತಿಂಗಳು ಕಾಲ ನಮ್ಮ ದಾಂಪತ್ಯ ಜೀವನದಲ್ಲಿ ಸುಖಕರವಾಗಿ ಕಳೆದ ಕಾಲವಾಗಿತ್ತು. ಅನಂತರ ಒಬ್ಬಳೇ ನಾದಿನಿಯ ಮಾನಸಿಕ ಅಸ್ವಾಸ್ಥ್ಯ, ನನ್ನ ಮಾವನವರ ನಿಧನ, ನಮ್ಮ ಎರಡು ಗಂಡುಮಕ್ಕಳನ್ನು ಶೈಶವಾವಸ್ಥೆ ಯಲ್ಲಿಯೇ ಕಳೆದುಕೊಂಡುದು ಮತ್ತು ನಮ್ಮ ಜೊತೆಯಲ್ಲೇ ಇರುತ್ತಿದ್ದ ತೀ.ನಂ.ಶ್ರೀಯವರ ಮಾತೃಸಮಾನರಾಗಿದ್ದ ಅವರ ಸೋದರತ್ತೆಯ ನಿಧನ ಎಲ್ಲವೂ ಒಂದರ ನಂತರ ಒಂದು ಆಗಿಹೋಗಿ ನಮ್ಮ ದಾಂಪತ್ಯ ಜೀವನದ ಮೊದಲ ವರ್ಷಗಳಲ್ಲೇ ನಮಗೆ ಸಾಕಷ್ಟು ದುಗುಡ ಮತ್ತು ನೋವನ್ನು ತಂದುಕೊಟ್ಟಿತ್ತು. ೧೯೪೩ರಲ್ಲಿ ನಾವು ನಮ್ಮ ೧೨ ವರ್ಷದ ಮಗಳು ವಿಶಾಲಾಕ್ಷಿಯ ಅಕಾಲ ಮೃತ್ಯುವನ್ನು ನೋಡಬೇಕಾಯಿತು. ಆ ಸಮಯದಲ್ಲಿ ನನ್ನ ಅಪಾರ ದುಃಖವನ್ನು ತಡೆದುಕೊಳ್ಳಲು ಸಾಧ್ಯವಾಗದಿದ್ದಾಗ ತೀ.ನಂ.ಶ್ರೀಯವರು ತಮ್ಮ ದುಃಖವನ್ನು ನುಂಗಿಕೊಂಡು ನನಗೆ ಕಿಸಾ ಗೌತಮಿಯ ಕತೆಯನ್ನು ಹೇಳಿ, ನಮ್ಮ ೮ ತಿಂಗಳ ಮಗುವನ್ನು ನನ್ನ ತೊಡೆಯ ಮೇಲೆ ಮಲಗಿಸಿ, ನನ್ನನ್ನು ತಬ್ಬಿಕೊಂಡು ಮುಂದೆ ಬರುವುದನ್ನು ನೋಡುವಂತೆ ಸಂತೈಸಿ ಸಮಾಧಾನಪಡಿಸಿದ್ದು ನನಗೆ ಸದಾ ನೆನಪಿನಲ್ಲಿರುತ್ತದೆ.

ನಮ್ಮ ಹಳ್ಳಿ ತೀರ್ಥಪುರದಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲತೆ ಇಲ್ಲದುದರಿಂದ ತೀನಂಶ್ರೀಯವರ ಅಣ್ಣಂದಿರ ಮಕ್ಕಳು ಮತ್ತು ಇನ್ನೂ ಅನೇಕ ಬಂಧುಗಳು ವಿದ್ಯಾಭ್ಯಾಸ ಮತ್ತು ಇತರ ಕೆಲಸಗಳಿಗಾಗಿ ನಮ್ಮ ಮನೆಯಲ್ಲಿ ಇರುತ್ತಿದ್ದು ಅವರ ಪ್ರೀತಿ ವಿಶ್ವಾಸಗಳು ನಮಗೆ ಸದಾ ಲಭ್ಯವಾಗಿದ್ದವು. ತೀ.ನಂ.ಶ್ರೀಯವರ ಹೊರಗಿನ ಕೆಲಸ ಮತ್ತು ನನ್ನ ಮನೆಯ ಕೆಲಸಗಳಲ್ಲಿ ಹಗಲಿನ ಸಮಯದಲ್ಲಿ ನಮ್ಮಿಬ್ಬರಿಗೂ ಭೇಟಿಗೆ ಅವಕಾಶ ಕಡಿಮೆ. ಆದರೆ ಊಟ ತಿಂಡಿಯ ಸಮಯದಲ್ಲಿ ಅವರು ಎಲ್ಲರೊಡನೆ ಕುಳಿತು ತುಂಬಾ ಸ್ವಾರಸ್ಯವಾದ ಮಾತುಕತೆಗಳಲ್ಲಿ ತೊಡಗಿರುತ್ತಿದ್ದರು. ಪರೀಕ್ಷೆಗೆ ೧೫ ಮೈಲಿ ದೂರದಲ್ಲಿರುವ ಬೇರೆ ಊರಿಗೆ ಹೋಗಬೇಕಾಗುತ್ತದೆಂದು ಮದುವೆಯಿಂದಾಗಿ ನನ್ನ ವಿದ್ಯಾಭ್ಯಾಸ ಲೋಯರ್ ಸೆಕೆಂಡರಿ ಪರೀಕ್ಷೆಗೂ ಕೂರಲಾಗದೆ ನಿಂತುಹೋಗಿತ್ತು. ಆದ್ದರಿಂದ ಸ್ವಲ್ಪ ಕಾಲದ ನಂತರ ತೀ.ನಂ.ಶ್ರೀ. ಯವರು ನನಗೆ ಇಂಗ್ಲೀಷು ಕಲಿಸಬಯಸಿದರು. ಆದರೆ ಅದಕ್ಕೆ ರಾತ್ರಿಯ ವೇಳೆಯಲ್ಲಿ

ಮಾತ್ರ ಸಮಯವಿದ್ದು, ನನಗೆ ಹಗಲಿನ ಕೆಲಸಗಳಿಂದಾಗಿ ಆಗಲೇ ತೂಕಡಿಕೆ ಬರುತ್ತಿದ್ದುದರಿಂದ ಈ ಪ್ರಯತ್ನವನ್ನು ಅವರು ಕೈಬಿಡಬೇಕಾಗಿ ಬಂದುದು, ಎ.ಎನ್. ಮೂರ್ತಿರಾಯರ "ಲಲಿತೆಯ ವಿದ್ಯಾಭ್ಯಾಸ" ಪ್ರಬಂಧವನ್ನು ನೆನಪಿಗೆ ತರುತ್ತದೆ.

೧೯೪೩ರಲ್ಲಿ ನಾವು ಬೆಂಗಳೂರಿಗೆ ಬರುವ ವೇಳೆಗಾಗಲೇ ಮತ್ತು ಬಂದ ಕೂಡಲೇ ಜೀವನದಲ್ಲಿ ಸಾಕಷ್ಟು ದುಃಖವನ್ನು ಅನುಭವಿಸಿದ್ದರೂ ಮತ್ತು ಆರ್ಥಿಕವಾಗಿ ಪರಿಸ್ಥಿತಿ ಅನುಕೂಲ ವಾಗಿಲ್ಲದಿದ್ದರೂ ಅನಂತರದ ವರ್ಷಗಳಲ್ಲಿ ಬಂಧುಬಳಗದವರ ಅವಿರತ ಪ್ರೀತಿ ಮತ್ತು ಸಾಹಿತಿಗಳು ಮತ್ತು ಇತರ ಸ್ನೇಹಿತರುಗಳ ವಿಶ್ವಾಸ ನಮ್ಮ ಮಾನಸಿಕ ಲವಲವಿಕೆಯನ್ನು ಸ್ವಲ್ಪ ಸುಧಾರಿಸುತ್ತ ಬಂದವು. ೧೯೫೭ರಲ್ಲಿ ಧಾರವಾಡಕ್ಕೆ ಅವರು ಕರ್ನಾಟದ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಬದಲಾಯಿಸಿದನಂತರ ಹಳೆಯ ಸಾಲಗಳನ್ನು ಸ್ವಲ್ಪ ತೀರಿಸುವ ಸ್ಥಿತಿಗೂ ಬಂದಿತು. ಮತ್ತು ಅಲ್ಲಿಯ ಸ್ನೇಹಿತರುಗಳ ಪ್ರೀತಿ ವಿಶ್ವಾಸಗಳು ಹೊಸ ವಾತಾವರಣವನ್ನು ಸೃಷ್ಟಿಮಾಡಿದವು. ಆಗ ತೀನಂಶ್ರೀಯವರು ಒಂದು ವರ್ಷದ ಕಾಲ ವಿದೇಶಪ್ರವಾಸಕ್ಕೆ ಹೋಗಿ ಬರಬೇಕಾಯಿತು. ನಾವಿಬ್ಬರೂ ಒಟ್ಟಿಗೆ ನಮ್ಮ ಮಕ್ಕಳು ನಾಗರತ್ನ, ನಾಗಭೂಷಣ ಅವರನ್ನು ಅಷ್ಟು ದೀರ್ಘಕಾಲ ಬಿಟ್ಟಿರಲು ಮನಸ್ಸಿಲ್ಲದುದರಿಂದ ನಾನು ಅವರೊಡನೆ ಹೋಗಿಬರುವ ಅವಕಾಶವಿದ್ದರೂ ಹೋಗಲಿಲ್ಲ. ಆ ಸಮಯದಲ್ಲಿ ಅವರು ನನ್ನೊಡನೆ ಮಾಡಿದ ಪತ್ರ ವ್ಯವಹಾರವೇ ನಮ್ಮಿಬ್ಬರಲ್ಲಿ ನಡೆದ ದೀರ್ಘ ಪತ್ರವ್ಯವಹಾರ. ನನ್ನನ್ನು ಯಾವಾಗಲೂ ಹೆಸರಿನಿಂದ ಕರೆಯದಿದ್ದ ತೀನಂಶ್ರೀಯವರು ಈ ಪತ್ರಗಳಲ್ಲಿ ಮಾತ್ರ ಸಾಕಷ್ಟು ಸಂಬೋಧಿಸಿದ್ದಾರೆ.

೧೯೫೭ರಲ್ಲಿ ನಾವು ಮತ್ತೆ ಮೈಸೂರಿಗೆ ಹಿಂತಿರುಗಿದೆವು. ಅನಂತರ ನಾಗರತ್ನಳ ಮದುವೆ, ನಮ್ಮ ಸ್ವಂತ ಮನೆಯ ಗೃಹಪ್ರವೇಶ, ನಾಗಭೂಷಣನ ಉಪನಯನ ನಮಗೆ ಸಾಕಷ್ಟು ಸಂತೋಷವನ್ನುಂಟುಮಾಡಿತು. ೧೯೬೩ರಲ್ಲಿ ನಾಗರತ್ನಳಿಗೆ ಹೆಣ್ಣುಮಗುವಾದಾಗ ನಮ್ಮೆಲ್ಲರಿಗೂ ಅತೀವ ಸಂಭ್ರಮ. ಆಗ ತೀನಂಶ್ರೀಯವರು ತಮ್ಮ ಮೊಮ್ಮಗುವಿನೊಡನೆ ಕಳೆಯುತ್ತಿದ್ದ ಸಂತೋಷದ ಸಮಯವನ್ನು ನೋಡುವುದೇ ನಮಗೆ ಸಂತೋಷ.

ತೀ.ನಂ.ಶ್ರೀಯವರು ಸರಳಜೀವಿ ಮತ್ತು ಸದಾ ಹಸನ್ಮುಖಿ. ಅವರಿಗೆ ಸಿಟ್ಟುಕಡಿಮೆ. ಸಿಟ್ಟು ಬಂದರೂ ಅದು ವ್ಯಕ್ತವಾಗುತ್ತಿದ್ದುದು ಮೌನದ ರೂಪದಲ್ಲಿ. ತಮ್ಮ ಒಬ್ಬಳೇ ತಂಗಿಯ ಭಗ್ನಜೀವನದಿಂದ ತುಂಬಾ ನೊಂದ ಅವರಿಗೆ ಹೆಣ್ಣುಮಕ್ಕಳ ವಿಷಯದಲ್ಲಿ ಅಪಾರ ಗೌರವ, ಪ್ರೀತಿ ಮತ್ತು ವಿಶ್ವಾಸ. ಅವರ ಅನೇಕ ಶಿಷ್ಯೆಯರು ತಮ್ಮ ವೈಯಕ್ತಿಕ ಸಮಸ್ಯೆಗಳೊಡನೆ ಅವರಲ್ಲಿ ಬಂದಾಗ ತುಂಬಾ ಸಾವಧಾನದಿಂದ ಆಲಿಸಿ ಅವರಿಗೆ ಸಮಾಧಾನದ ಮಾತುಗಳನ್ನು ಹೇಳಿ ಕಳಿಸುತ್ತಿದ್ದರು. ಅವರು ತಮ್ಮ ಮಕ್ಕಳನ್ನು ಎಂದೂ ಹೊಡೆಯಲಿಲ್ಲ, ಅದನ್ನೆಲ್ಲ ನನಗೇ ಬಿಟ್ಟಿದ್ದರು!

ತೀ.ನಂ.ಶ್ರೀ ಮೀಟಿಂಗುಗಳಿಗೆ ಆಗಾಗ್ಗೆ ದೆಹಲಿಗೆ ಹೋಗುತ್ತಿದ್ದಾಗ ಎರಡು ಮೂರು ಸಾರಿ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂಬ ಪ್ರಯತ್ನ ಸಫಲವಾಗಿರಲಿಲ್ಲ. ೧೯೬೬ರ ಆಗಸ್ಟ್ ತಿಂಗಳಿನಲ್ಲಿ ದೆಹಲಿಯಿಂದ ಮತ್ತೊಂದು ಮೀಟಿಂಗ್‌ಗೆ ಕರೆ ಬಂದಿತು.

ಆ ವೇಳೆಗೆ ನಾಗರತ್ನ ಮತ್ತು ಅವಳ ಸಂಸಾರ ರಾಂಚಿಯಿಂದ ಈ ಕಡೆ ಬಂದು ಒಂದು ವರ್ಷದ ಮೇಲಾಗಿತ್ತು. ನಾಗಭೂಷಣ ಹೆಚ್ಚಿನ ವ್ಯಾಸಂಗಕ್ಕಾಗಿ ಕಲ್ಕತ್ತದಲ್ಲಿದ್ದ. ತೀ.ನಂ.ಶ್ರೀ. ಯವರಿಗೆ ಅನೇಕ ವರ್ಷಗಳಿಂದ ನನಗೆ ತಾಜ್‌ಮಹಲ್ ತೋರಿಸಬೇಕೆಂಬ ಆಸೆ. ಅದು ದಂಪತಿಗಳ ಅಪಾರ ಪ್ರೇಮದ ಸಂಕೇತವೆಂದು ಅವರ ಭಾವನೆ. ಆದ್ದರಿಂದ ಈ ಬಾರಿ ನನ್ನ ಜೊತೆಯಲ್ಲಿ ದೆಹಲಿ ಆಗ್ರಾ ರಾಂಚಿ ಮತ್ತು ಕಲ್ಕತ್ತಗಳಿಗೆ ಹೋಗಿಬರಬೇಕೆಂದು ಅವರ ಮಹದಾಸೆ. ಆದರೆ ಎರಡು ಮೂರು ತಿಂಗಳುಗಳ ಹಿಂದೆ ಅವರ ಆರೋಗ್ಯ ಅಷ್ಟು ಸರಿಯಿಲ್ಲದು ದರಿಂದ ಅವರ ಪ್ರಯಾಣದ ವಿಷಯದಲ್ಲಿ ನನಗೆ ಅಷ್ಟು ಉತ್ಸಾಹವಿಲ್ಲ. ಆದರೂ ಅವರ ಅಭಿಲಾಷೆಯಂತೆ ಪ್ರವಾಸ ನಡೆಯಿತು. ದೆಹಲಿಯ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸುವಾಗ ಅಲ್ಲಿ ಸಮಾಧಿಗಳೇ ಜಾಸ್ತಿ ಎಂದು ಒಂದು ಸಾರಿ ಹೇಳಿದರು. ತಾಜ್‌ಮಹಲ್ ತೋರಿಸಿದಾಗ ಲಂತೂ ಅವರ ಎಷ್ಟೋ ದಿನಗಳ ಬಯಕೆಯನ್ನು ತೀರಿಸಿದಂತಹ ಅಪಾರ ಖುಷಿ. ಅನಂತರ ರಾಂಚಿಯಲ್ಲಿ ಒಂದು ವಾರ ಮಗಳು ಅಳಿಯ ಮತ್ತು ಮೊಮ್ಮಗಳೊಡನೆ ತುಂಬಾ ಸಂತೋಷದಿಂದ ಕಾಲ ಕಳೆದುದಾಯಿತು. ಕಲ್ಕತ್ತಕ್ಕೆ ಬಂದು ನಮ್ಮ ಸ್ನೇಹಿತರು ಮತ್ತು ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳೂ ಆದ ಸಂಪತ್ ಅವರ ಮನೆಯಲ್ಲಿ ಉಳಿದು, ನಾಗಭೂಷಣ ನಿಂದ ನಮ್ಮ ತಡವಾದ ಮಧುಚಂದ್ರ ಹೇಗಿತ್ತು ಎಂದು ಹಾಸ್ಯಮಾಡಿಸಿಕೊಂಡಿದ್ದೂ ಆಯಿತು. ಈ ಸಂತೋಷದಲ್ಲಿ ಮೈಸೂರಿಗೆ ಹಿಂತಿರುಗಲು ಇನ್ನೆರಡು ದಿನಗಳಿರುವಾಗ ಅತಿ ಅನಿರೀಕ್ಷಿತ ವಾದ ಹೃದಯಾಘಾತದಿಂದ ಅವರು ನಮ್ಮನ್ನು ಸದಾಕಾಲಕ್ಕೆ ಬಿಟ್ಟು ಅಗಲಿದರು. ತೀ.ನಂ.ಶ್ರೀ. ಯವರು ಅವರ ಜೀವನದಲ್ಲಿ ತುಂಬಾ ಸತ್ಯನಿಷ್ಠರು. ಒಂದು ಕಾಸು ತೆರಿಗೆಯನ್ನೂ ಕಮ್ಮಿಕೊಟ್ಟವರಲ್ಲ ಮತ್ತು ಬಾಕಿ ಉಳಿಸಿಕೊಂಡವರಲ್ಲ. ಆದ್ದರಿಂದ ದೂರದ ಕಲ್ಕತ್ತದಲ್ಲಿ ಅಂದಿನ ಅವರ ಅಂತ್ಯಕ್ರಿಯೆಯಲ್ಲಿ ಅಂತಿಮ ಗೌರವವನ್ನು ಅರ್ಪಿಸಲು ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳ ಒಂದು ದೊಡ್ಡ ಗುಂಪೇ ಸೇರಿತ್ತು!

ತೀ.ನಂ.ಶ್ರೀಯವರ ಅಕಾಲ ನಿಧನದಿಂದ ನಮ್ಮ ಬಂಧುಬಳಗ ಮತ್ತು ಮಿತ್ರರಿಗೆಲ್ಲ ಆಧಾರಸ್ತಂಭವೇ ಕುಸಿದಂತೆ ಅನುಭವವಾಯಿತು. ಅವರು ತೀರಿಹೋದ ಎಷ್ಟೋ ತಿಂಗಳು ಗಳವರೆಗೂ ಸಂತಾಪ ಸೂಚಕ ಸಭೆಗಳು ನಾಡಿನಾದ್ಯಂತ ನಡೆಯುತ್ತಲೇ ಇದ್ದವು. ಅವರ ಮೇಲೆ ಲೇಖನಗಳು ಪತ್ರಿಕೆಗಳಲ್ಲಿ ಬರುತ್ತಲೇ ಇದ್ದವು. ಅಂತಹ ಪುಣ್ಯಜೀವಿ ತೀ.ನಂ.ಶ್ರೀಯವರು.

ತೀ.ನಂ.ಶ್ರೀಯವರು ನಿಧನರಾದ ೨೭ ವರ್ಷಗಳ ನಂತರ ಇಂದು ನಾನು ನನ್ನ ಮಗ ಸೊಸೆ ಮತ್ತು ಮೊಮ್ಮಕ್ಕಳ ಮಧ್ಯೆ ಇದ್ದೇನೆ. ಈಗ ೩ ವರ್ಷಗಳ ಹಿಂದೆ ಅವರ 'ಭಾರತೀಯ ಕಾವ್ಯಮೀಮಾಂಸೆ'ಗೆ ಬಂದ 'ಪಂಪ ಪ್ರಶಸ್ತಿ'ಯನ್ನು ನಾನೇ ಸ್ವೀಕರಿಸಬೇಕಾಯಿತು. ಇಂದಿಗೂ ನಮ್ಮ ಮನೆ ಎಲ್ಲರಿಗೂ ತೀ.ನಂ.ಶ್ರೀಯವರ ಮನೆ ಮತ್ತು ನಮ್ಮ ಬಂಧುಗಳು, ಮಿತ್ರರೂ, ತೀ.ನಂ.ಶ್ರೀಯವರ ಶಿಷ್ಯರೂ ಮತ್ತೆಲ್ಲರೂ ನಮ್ಮಲ್ಲಿಟ್ಟಿರುವ ಪ್ರೀತಿ ವಿಶ್ವಾಸಗಳು ತೀ.ನಂ.ಶ್ರೀಯವರು ನಮಗೆ ಬಿಟ್ಟು ಹೋಗಿರುವ ಒಂದು ದೊಡ್ಡ ಆಸ್ತಿ.

(೧೯೯೩ರಲ್ಲಿ ಬೆಂಗಳೂರು ಆಕಾಶವಾಣಿಯಲ್ಲಿ ಮಾಡಿದ ಭಾಷಣ)

ಪತ್ನಿಯರು ಕಂಡಂತೆ ಪ್ರಸಿದ್ಧರು

ತೀ.ನಂ.ಶ್ರೀಕಂಠಯ್ಯ : ಶಿಷ್ಯಕೋಟಿಯ ಪ್ರಾಧ್ಯಾಪಕ

ಜಯಲಕ್ಷ್ಮಮ್ಮ ತೀ.ನಂ.ಶ್ರೀ

ನಿರೂಪಣೆ : ಬಿ.ಎಸ್. ವೆಂಕಟಲಕ್ಷ್ಮಿ

●

ವೃತ್ತಿ ಜೀವನದ ತುಂಬ ತೀನಂಶ್ರೀಯವರು ಗಳಿಸಿದ್ದು ಹಣಕ್ಕಿಂತಲೂ ಹೆಚ್ಚಾಗಿ ಶಿಷ್ಯರನ್ನು. ಈಗ ಎಂಜಿನಿಯರ್, ವೈದ್ಯರು, ಪ್ರಾಧ್ಯಾಪಕರು, ಉನ್ನತಾಧಿಕಾರಿಗಳು ಎಲ್ಲ ಮಹತ್ವದ ಕ್ಷೇತ್ರಗಳಲ್ಲೂ ತೀನಂಶ್ರೀ ಶಿಷ್ಯರನ್ನು ಕಾಣಬಹುದು.

ಮಸುಕಾಗುತ್ತಿರುವ ನೆನಪುಗಳು. ದೇಹವನ್ನು ದುರ್ಬಲವಾಗಿಸುತ್ತಿರುವ ವಯಸ್ಸು. ಈಕೆ ತನ್ನ ಜತೆಗಾರರನ್ನು ಕಳೆದುಕೊಂಡು ಒಂಟಿಯಾಗಿ ನಡೆದಿರುವುದು ಅನೇಕ ವರ್ಷಗಳಿಂದ. ಗೋಡೆಯ ಮೇಲೆ ರಾರಾಜಿಸುತ್ತಿದ್ದ ಪತಿಯ ಭವ್ಯ ಭಾವಚಿತ್ರ. ಪತಿಯ ಪ್ರತಿಭೆಯನ್ನು ಪ್ರತಿದಿನವೂ ನೆನಪಿಸುವಂಥ ಪಂಪ ಪ್ರಶಸ್ತಿಯನ್ನು ಪ್ರತಿನಿಧಿಸುವ ಸುಂದರ ಮೂರ್ತಿ ಸನಿಹದಲ್ಲೇ. ಸುಮಾರು ೮೦ ವರ್ಷ ವಯಸ್ಸಿನ ಜಯಲಕ್ಷ್ಮಮ್ಮ ತಮ್ಮ ಸ್ಮರಣೆಯಿಂದ ಕಳಚಿಕೊಳ್ಳುತ್ತಿರುವ ಸಂಗತಿಗಳನ್ನು ಮತ್ತೆ ಹೆಕ್ಕಿ ಒಟ್ಟುಗೂಡಿಸಲು ಪ್ರಯತ್ನಿಸುತ್ತಾರೆ. ಪತಿಯ ಅಗಲಿಕೆಯೆಂದರೆ ನೆಚ್ಚಿಕೊಂಡಿದ್ದ ಆಧಾರಸ್ತಂಭವೇ ಕುಸಿದಂತೆ ಎಂಬ ಭಾವನೆಯಿದ್ದ ತಲೆಮಾರಿಗೆ ಸೇರಿದ್ದ ಜಯಲಕ್ಷ್ಮಮ್ಮ ಏಕಾಂಗಿಯಾಗಿ ಕೂತಾಗಲೆಲ್ಲ ತಮ್ಮನ್ನಗಲಿ ಹೋದ ಜೀವನ ಸಖನನ್ನು ಕುರಿತು ಅದೆಷ್ಟು ಬಾರಿ ಆಲೋಚಿಸಿದ್ದಾರೋ! ಈ ಇಳಿ ವಯಸ್ಸಿನಲ್ಲೂ ಅವರಿಗೆ ದಾಂಪತ್ಯ ಜೀವನದ ಸಿಹಿಕಹಿ ಸಂಗತಿಗಳು ದಟ್ಟವಾಗಿ ಕಾಡಲು ಶುರುವಾಗುತ್ತವೆ– ಗಂಡನ ಜತೆಗಿನ ತಮ್ಮ ಬಾಳ್ವೆಯ ಹಂದರದಲ್ಲಿನ ರಸ ನಿಮಿಷಗಳು, ಜೀವನೋತ್ಸಾಹವನ್ನೆಲ್ಲ ಬತ್ತಿಸುವಂತಿದ್ದ ದುಃಖಮಯ ಕ್ಷಣಗಳು. ಇವೆಲ್ಲ ಮೆರವಣಿಗೆಯಂತೆ ಕಣ್ಮುಂದೆ ಸಾಲಾಗಿ ಸಾಗಿ ಬರುತ್ತವೆ.

"ನಾವಿಬ್ಬರೂ ಸಂತೋಷವಾಗಿ ಸಂಸಾರ ಮಾಡಿದ್ದು ಸುಮಾರು ಒಂದೂವರೆ ತಿಂಗಳಷ್ಟೆ". ಜಯಲಕ್ಷ್ಮಮ್ಮ ಎಷ್ಟೋ ವರ್ಷಗಳ ಹಿಂದಿನ ತಮ್ಮ ಸರಿದುಹೋದ ಬದುಕಿನತ್ತ ನಿರ್ಲಿಪ್ತವಾಗಿ ಕಣ್ಣಾಡಿಸುತ್ತಾರೆ. "ಕಾಯಿಲೆ ಕಸಾಲೆಗಳು, ದುಡ್ಡಿನ ತಾಪತ್ರಯ, ಪುಟ್ಟ ಮಕ್ಕಳ ಸಾವು ಇವೆಲ್ಲ ನಮ್ಮಿಬ್ಬರನ್ನೂ ಎಡೆಬಿಡದೆ ಪೀಡಿಸಿದ ಪ್ರಸಂಗಗಳು. ನೆಮ್ಮದಿ ಜೀವನದಲ್ಲಿ ಇಣುಕಿ ಹಾಕುತ್ತಿದೆ ಅನ್ನೋಸಮಯಕ್ಕೆ ಇವರ ಬದುಕು ಮುಗಿದೇ ಹೋಯಿತು" ಎಂದು ಭಾರವಾದ ದನಿಯಲ್ಲಿ ನುಡಿಯುತ್ತಾರೆ.

ತಿಪಟೂರು ತಾಲ್ಲೂಕಿನ ತುರುವೇಕೆರೆಯಲ್ಲಿ ೧೯೨೬ ರಲ್ಲಿ ತೀ.ನಂ. ಶ್ರೀಕಂಠಯ್ಯನವರನ್ನು ವಿವಾಹವಾದಂದಿನಿಂದ, ಅವರು ಪ್ರಾಧ್ಯಾಪಕರಾಗಿ, ಭಾಷಾ ಶಾಸ್ತ್ರಜ್ಞರಾಗಿ ಎತ್ತರಕ್ಕೆ, ಬಹು ಎತ್ತರಕ್ಕೆ ಬೆಳೆದದ್ದನ್ನು, ನೂರಾರು ಶಿಷ್ಯರ ಕಣ್ಮಣಿಯೆನಿಸಿಕೊಂಡದ್ದನ್ನು, ಕನ್ನಡದ ಅಧ್ವರ್ಯುವೆನಿಸಿ ಕನ್ನಡಾಭಿಮಾನಿಗಳೆಲ್ಲರಿಂದ ಆರಾಧನೆಗೊಂಡದ್ದನ್ನು ಕಾಣುವುದರಲ್ಲೇ ಸಂತೃಪ್ತಿಯನ್ನು ಪಡೆದುಕೊಳ್ಳುತ್ತ ತಮ್ಮ ಸಮಸ್ಯೆಗಳೆಲ್ಲವನ್ನೂ ಮರೆಯಲು ಯತ್ನಿಸಿದ ಜಯಲಕ್ಷಮ್ಮ ಬಾಳಿನ ಸಂಜೆ ಹೊತ್ತಿನಲ್ಲಿ ತೀ.ನಂ. ಶ್ರೀಕಂಠಯ್ಯನವರೊಂದಿಗೆ ತಮ್ಮ ಬದುಕನ್ನು ವಿವರಿಸತೊಡಗುತ್ತಾರೆ.

"ಮೈನೆರೆಯೋಕ್ಕೆ ಮುಂಚೇನೇ ನಂಗೆ ಮದುವೆ ಮಾಡಿಬಿಟ್ಟರು ನೋಡಿ. ಇವರ ಕೈ ಹಿಡಿದು ಇನ್ನೂ ಒಂದು ವರ್ಷ ಆಗಿತ್ತಷ್ಟೆ, ಇವರಿಗೆ ಗಂಟಲು ಆಪರೇಷನ್ ಆಯ್ತು ಅಂತ ಸುದ್ದಿ ಬಂತು. ನನ್ನಪ್ಪನಿಗೆ ನಾನು ಆ ಸಮಯದಲ್ಲಿ ನನ್ನ ಗಂಡನ ಹತ್ತಿರ ಇದ್ದರೆ ಒಳ್ಳೇದು ಅಂತಲೇನೋ ಅನ್ನಿಸಿತ್ತು. ಯಾರು ಏನು ಆಡ್ಕೋತಾರೋ ಅಂತ ಭಯ. ತಾವೊಬ್ಬರೇ ಹೊರಟರು. ಅವರು ಮೈಸೂರು ತಲಪುತ್ತಿದ್ದ ಹಾಗೇ ಯಾರೋ "ಶ್ರೀಕಂಠಯ್ಯ! ಪಾಪ, ಆಪರೇಷನ್ ಆಗಿ ಹೋಗಿಯೇ ಬಿಟ್ಟರಂತೆ" ಅಂತ ಸುಳ್ಳು ವರ್ತಮಾನ ಕೊಟ್ಟು ಅಪ್ಪನ ಜಂಘಾಬಲವನ್ನೇ ಉಡುಗಿಸಿ ಬಿಟ್ಟಿದ್ದರಂತೆ. ನಂಗೆ ಇಂಥ ಆಪತ್ತಿನ ಬಗ್ಗೆ ಯೋಚಿಸುವಷ್ಟೂ ತಿಳಿವಳಿಕೆಯಿರದಿದ್ದ ಪುಟ್ಟ ವಯಸ್ಸು. ೧೨ ವರ್ಷ ಅಷ್ಟೆ. ಇವರು ಬಿ.ಎ. ಪರೀಕ್ಷೆಗೆ ಕಟ್ಟಿದ್ದರು ಅನ್ನೋದು ಕಿವಿಗೆ ಬಿದ್ದಿತ್ತೇ ಹೊರತು ಅದರ ಮಹತ್ವ ಗೊತ್ತಿರಲಿಲ್ಲ. ಒಂಬತ್ತನೇ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು ಅಪ್ಪನ ಜತೆ ಬೆಳೆದಿದ್ದ ಇವರು ಚಿಕ್ಕನಾಯಕನ ಹಳ್ಳೀಲಿ ಹೈಸ್ಕೂಲು ಓದಿದ್ರು. ಮದುವೆ ಒಂದು ವಾರ ನಡೆದದ್ದು ಮಾತ್ರ ಅಲ್ಪಸ್ವಲ್ಪ ನೆನಪಿದೆ. ೭-೮ ಗಾಡಿ ಕಟ್ಟಿಕೊಂಡು ನೆಂಟರಿಷ್ಟರು ಮದುವೆಗೇಂತ ಬಂದಿದ್ದರು. ಇವರಿಗೆ ೧೯ ವರ್ಷ ವಾಗಿದ್ದರಿಂದ ಗಂಡ ಹೆಂಡತಿಯರ ಸಂಬಂಧದ ಬಗ್ಗೆ ಸ್ವಲ್ಪ ಹೆಚ್ಚು ತಿಳಿವಳಿಕೆಯಿತ್ತೇನೋ.... ತೌರಲ್ಲಿದ್ದ ನನ್ನ ಜತೆ ಇವರು ಪತ್ರ ವ್ಯವಹಾರ ಮಾಡೋಣ ಅಂದ್ರೆ ನಂಗೆ ಕಾಗದ ಬರೆಯೋಕ್ಕೇ ಬಾರದು. ಎಲ್.ಎಸ್.ಗೆ ಕಟ್ಬೋ ಹೊತ್ತಿಗೇ ಮದುವೆಯಾಗಿತ್ತು. ಇವರು ಅಪ್ಪನಿಗೆ ಪತ್ರ ಬರೆದು ನಂಗೆ ಯಾರ ಹತ್ತಿರವಾದ್ರೂ ಇಂಗ್ಲಿಷ್ ಪಾಠ ಇಡಿಸಿ ಅಂತ ಬರೆದರು. ಅಳಿಯನ ಮಾತು ಕೇಳಬೇಕಾಗಿ ಬಂದ ಅಪ್ಪ ಒಬ್ಬ ಸಣ್ಣ ವಯಸ್ಸಿನ ಹುಡುಗನ್ನ ಮೇಷ್ಟರಾಗಿ ಗೊತ್ತು ಮಾಡಿದಾಗ ಊರಿನವರೆಲ್ಲ ಅದೆಷ್ಟು ಆಡ್ಕೊಂಡರು ಅಂತಾ. ಅಪ್ಪನ ಮನಸ್ಸಿಗೆ ಬೇಜಾರಾಗಿ ನನ್ನ ಪಾಠ ಪರಿಸಮಾಪ್ತಿಯಾಯಿತು. ನನ್ನ ಅಜ್ಜಿಗೆ ತುಂಬಾ ಕಾಯಿಲೆಯಾಗಿ ಅವರನ್ನು ನೋಡೋಕ್ಕೆಂತ ಇವರು ಬಂದಾಗಲೇ ನಾನಿವರನ್ನು ಸರಿಯಾಗಿ ನೋಡಿದ್ದು. ನಂಗೆ ಇಂಗ್ಲಿಷ್ ಕಲಿಸೋ ಇವರ ಆಸೆ ಆಮೇಲೂ ಸ್ವಲ್ಪ ಮುಂದುವರಿಯಿತು. ಇವರ ಮನೆಗೆ ಹೋದನಂತರ ರಾತ್ರಿ ಹೊತ್ತು ನಂಗೆ ಪಾಠ ಹೇಳ್ಕೊಡೋಕೆ ಪ್ರಯತ್ನ ಮಾಡ್ತಾ ಇದ್ದದ್ದು ಚೆನ್ನಾಗಿ ನೆನಪಿದೆ. ನಂಗೂ ಮನೆಗೆಲಸ ಮಾಡಿ ಸಾಕಾಗಿರ್ತಿತ್ತು. ಇವರಿಗೂ ಹಗಲೆಲ್ಲ ಓಡಾಡಿ ರಾತ್ರಿಯಾದೊಡನೆ ತೂಕಡಿಕೆ....

"ಮದುವೆಯಾದ ಮೇಲೆ ತೀ.ನಂ.ಶ್ರೀ. ಎಂ.ಎ ಕ್ಲಾಸಿಗೆ ಸೇರಿದ್ದು. ಪರೀಕ್ಷೇಲಿ ಇವರಿಗೆ ೭ ಚಿನ್ನದ ಪದಕಗಳು. ಆಗ ಮೈಸೂರು ದೊರೆಗಳಾಗಿದ್ದ ಕೃಷ್ಣರಾಜ ಒಡೆಯರ್ ಇವರಿಗೆ

ಒಂದಾದ ಮೇಲೊಂದರಂತೆ ಪದಕ ಪ್ರದಾನ ಮಾಡುವಾಗ ತಮ್ಮ ಸಂತೋಷ ತಡೀಲಾರದೆ ರಾಜಗಾಂಭೀರ್ಯವನ್ನೂ ಮರೆತು ಗಟ್ಟಿಯಾಗಿ ನಕ್ಕರಂತೆ. ಅಲ್ಲಿ ಸೇರಿದ್ದ ಜನರೆಲ್ಲ "ಯಾವ ಮಹಾತಾಯಿಯ ಮಗನೋ ಈತ...." ಅಂತ ಮಾತಾಡಿಕೊಂಡಾಗ ಘಟಿಕೋತ್ಸವಕ್ಕೆ ಹೋಗಿದ್ದ ಮಾವನ ಗಂಟಲು ಸಂತಸದಿಂದ ಭಾರವಾಯಿತಂತೆ. ಆಮೇಲೆ ಇವರು ಸ್ವಲ್ಪ ಕಾಲ ಅಮಲ್ದಾರರಾಗಿದ್ದರು. ನಂತರ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದರು.

"ಮದುವೆಯಾದ ಹೊಸದರಿಂದಲೂ ನಾವಿಬ್ಬರೇ ಸಂಸಾರ ಮಾಡೇ ಗೊತ್ತಿಲ್ಲ. ಮನೇಲಿ ಸದಾ ಓದೋ ಹುಡುಗರು, ಅವರ ಜತೆ ವಾರಾನ್ನಕ್ಕೆ ಬರುತ್ತಿದ್ದವರು. ಇವರಿಗೆ ವಿದ್ಯಾರ್ಥಿ ಜೀವನದಲ್ಲಿ ತಾವು ಪಟ್ಟಿದ್ದ ಕಷ್ಟ ನೆನಪಿದ್ದರಿಂದ ಸಾಧ್ಯವಾದಷ್ಟೂ ಬಡ ಹುಡುಗರಿಗೆ ನೆರವಾಗೋ ಆಸೆ. ಇವರಿಗೊಮ್ಮೆ, ಇನ್ನೂ ವ್ಯಾಸಂಗ ವೇತನ ಬರದಿದ್ದಾಗ ಕಾಲೇಜಿನ ಫೀಸು ಕಟ್ಟೋಕೂ ದುಡ್ಡಿಲ್ಲದೆ ತರಗತಿಯ ಹೊರಗಡೇನೇ ನಿಂತಿದ್ದರಂತೆ. ಪ್ರೊ. ಹಿರಿಯಣ್ಣನವರು ಇವರನ್ನು ಗಮನಿಸಿ "ಯಾಕಪ್ಪಾ, ಕ್ಲಾಸಿಗೆ ಬರೋಲ್ವೇ?" ಅಂತ ಕೇಳಿದಾಗ ಇವರು ಫೀಸ್ ಕಟ್ಟದೇ ಒಳಗೆ ಹೋಗೋಕ್ಕೆ ಹಿಂಜರಿಕೆ ಅಂದಾಗ ಆತ ತಕ್ಷಣ ಜೇಬಿನಿಂದ ೨೫ ರೂಪಾಯಿ ತೆಗೆದುಕೊಟ್ಟು "ಫೀಸ್ ಕಟ್ಟಿಬಿಟ್ಟು ಒಳಗೆ ಬಾ" ಅಂದು ಕಳಿಸಿದರಂತೆ. ಇವರು ತಮಗೆ ಕೆಲಸ ವಾದ ಮೇಲೆ ಅದನ್ನು ಅವರಿಗೆ ವಾಪಸ್ಸು ಮಾಡಲು ಮರೀಲಿಲ್ಲ. ೧೯೫೨ರವರೆಗೆ ತುಂಬಾನೇ ಹಣದ ತಾಪತ್ರಯ, ಸಾಲಸೋಲ. ಆದರೆ ಇವರೆಂದೂ ಅವರಿವರ ಹತ್ರ ಸಾಲ ಮಾಡಲಿಲ್ಲ. ಸೊಸೈಟಿಯಿಂದ ಕಡ ತಗೋಳೋದು, ಕಂತುಗಳಲ್ಲಿ ಕಟ್ತಾ ಹೋಗೋದು. ಪು.ತಿ.ನ., ನಂ. ಶಿವರಾಮಶಾಸ್ತ್ರಿ, ಕೂಡಲಿ ಚಿದಂಬರಂ ಇವರೆಲ್ಲ ಬಿ.ಎ.ಲಿ ಇವರ ಸಹಪಾಠಿಗಳೇ. ಜಿ.ಪಿ. ರಾಜರತ್ನಂ ಎಂ.ಎ.ಲಿ ಇವರ ಜತೆ. ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ ಇವನ್ನು ಆರಿಸಿ ಕೊಂಡಿದ್ದರೂ ಆಮೇಲೆ ಇವರು ಇಂಗ್ಲಿಷ್ ಹಾಗೂ ಕನ್ನಡ ಎರಡರಲ್ಲೂ ಎಂ.ಎ. ಮಾಡಿದರು. ಬಿ.ಎಂ.ಶ್ರೀ., ಹಿರಿಯಣ್ಣ, ಟಿ.ಎಸ್. ವೆಂಕಣ್ಣಯ್ಯ ಇವರೆಲ್ಲರನ್ನೂ ಕಂಡರೆ ನಿಕಟ ಸ್ನೇಹದ ಜತೆ ಅತ್ಯಂತ ಭಕ್ತಿ ಗೌರವ.

"ಇವರೆಂದೂ ಪ್ರೈವೇಟ್ ಟ್ಯೂಷನ್‌ಗಳನ್ನು ಇಟ್ಕೊಂಡವರೇ ಅಲ್ಲ. ಮೈಸೂರಿನಲ್ಲಿದ್ದಾಗ ಮಹಾರಾಜ ಕಾಲೇಜಿನಲ್ಲಿ ಬೋಧಿಸುತ್ತಿದ್ದಾಗ ಜಯಚಾರಾಜೇಂದ್ರ ಒಡೆಯರ್ ಇವರ ವಿದ್ಯಾರ್ಥಿ. ಮಹಾರಾಜರಿಗೆ ಮಾತ್ರ ಅರಮನೆಯಲ್ಲೂ ಕನ್ನಡ ಹೇಳಿಕೊಡೋಕ್ಕೆ ಇವರು ಪ್ರೈವೇಟ್ ಟ್ಯೂಟರ್ ಆಗಿ ನೇಮಕಗೊಂಡಿದ್ದರು. ಅರಮನೆಯಿಂದ ಕಾರು ಬರೋದು, ಗುರುಗಳನ್ನು ಕರೆಸಿಕೊಳ್ಳೋಕೆ. ಮಹಾರಾಜರು ಆಗ ಪ್ರಜೆಗಳಿಗೆಲ್ಲ ಒಡೆಯರು ಅನ್ನಿಸಿ ಕೊಂಡಿದ್ದರೂ ಇವರನ್ನು ಕಂಡರೆ ತುಂಬಾ ಗೌರವ. ತಮಗೆ ಪಾಠ ಹೇಳಿಕೊಟ್ಟವರು ಎಂಬ ಸಂಗತಿಯನ್ನು ಅವರು ಎಂದೂ ಮರೆಯಲೇ ಇಲ್ಲ. ಮೈಸೂರಿನ ಮಹಾರಾಜಾ ಕಾಲೇಜಿನ ಶತಮಾನೋತ್ಸವದ ಸಂದರ್ಭದಲ್ಲಿ, ಮತ್ತೊಮ್ಮೆ ಧಾರವಾಡದಲ್ಲಿ "ಚಾನ್ಸಲರ್" ಆಗಿ ವೇದಿಕೆಯ ಮೇಲೆ ಕೂತಿದ್ದ ಮಹಾರಾಜರು ಸಭೆ ಮುಗಿದ ಕೂಡಲೆ ಎಲ್ಲೋ ಕೂತಿದ್ದ ಇವರನ್ನು ಹುಡುಕಿಕೊಂಡು ಬಂದು ಮಾತನಾಡಿಸಿ ಹೋದದ್ದನ್ನು ಇವರು ನೆನೆಸಿಕೋತಾ ಇದ್ರು.

ಮರೆಯಲಾಗದ ಸ್ನೇಹ

"ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಮೊಟ್ಟಮೊದಲ ಪ್ರಾಧ್ಯಾಪಕರಾಗಿ ಕೆಲಸ ಸಿಕ್ಕಿದಾಗ ೧೯೫೦ ರಲ್ಲಿ ಮೈಸೂರಿನಿಂದ ಧಾರವಾಡಕ್ಕೆ ಹೊರಟೆವು. ಧಾರವಾಡದಲ್ಲಿನ ಐದು ವರ್ಷಗಳ ವಾಸ ನಮ್ಮ ಪಾಲಿಗೆ ತುಂಬಾ ನೆಮ್ಮದಿಯ ಕಾಲ. ವಾತಾವರಣ ತುಂಬಾಹಿತಕರ. ಮನಸ್ಸಿನ ಎಷ್ಟೋ ದುಃಖಗಳನ್ನು ಮರೆಯಿಸಿದ ಜಾಗ ಅದು. ಬೆಂಗಳೂರಿನಲ್ಲೂ ಒಂಬತ್ತು ವರ್ಷಗಳಿದ್ದೆವು, ಬಾಂದುನವರ ಬೀದಿಯಲ್ಲಿ. ಗವೀಪುರಂನಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಮನೆಯ ಎದುರಿನಲ್ಲೂ ಇದ್ದೆವು. ಆಮೇಲೆ ಮತ್ತೆ ಮೈಸೂರಿಗೆ. ಪೂನಾದ ಡೆಕ್ಕನ್ ಕಾಲೇಜಿಗೂ ಹೋಗಿಬಂದಿದ್ದರು. ರಾಕ್‌ಫೆಲ್ಲರ್ ಫೌಂಡೇಶನ್‌ನ ಗೌರವ ವೇತನದ ಮೇಲೆ ಒಂದು ವರ್ಷ ಅಮೆರಿಕಾಗೂ ಭೇಟಿ ನೀಡಿದ್ದರು. ನಿವೃತ್ತಿಯಾದ್ದು ಮೈಸೂರಿನಲ್ಲಿ ಏಪ್ರಿಲ್ ೧೯೬೬ರಲ್ಲಿ. ಇವರು ನೌಕರಿಯಲ್ಲಿ ಇದ್ದಷ್ಟು ಕಾಲ ವೃತ್ತಿ ಜೀವನದಲ್ಲಿ ಏನೇ ಅಡ್ಡಿ ಆತಂಕಗಳು ಬಂದರೂ ಅವನ್ನೆಲ್ಲ ಮನಸ್ಸಿಗೆ ತಗೊಂಡು ಚಿಂತೆ ಹತ್ತಿಸಿಕೊಂಡವರೇ ಅಲ್ಲ. ಒಂದೆರಡು ಸಲ ಇವರಿಗೆ ಸಿಗಬೇಕಾಗಿದ್ದ ಸ್ಥಾನ ಬೇರೆಯವರಿಗೆ ದಕ್ಕಿದ್ದೂ ಉಂಟು. ವಿಶ್ವವಿದ್ಯಾನಿಲಯದ ಚಾನ್ಸಲರ್ ಆಗಿದ್ದ ಮಹಾರಾಜರೂ ಸಹ ಇವರಿಗೊಮ್ಮೆ ಅನ್ಯಾಯವಾಗಿದೆಯೆಂಬ ವಿಷಯವನ್ನು ಗಮನಿಸಿದ್ದೂ ಉಂಟು. ಅದರೆ ಆಗಿನ ಕಾಲದ ವಾತಾವರಣ ಹೇಗಿತ್ತು ಅಂದ್ರೆ, ಶಿಕ್ಷಣ ಕ್ಷೇತ್ರದಲ್ಲಿ ಯಾರಿಗೂ ಒಬ್ಬರ ಮೇಲೆ ಮತ್ತೊಬ್ಬರಿಗೆ ಜಿದ್ದಿಲ್ಲ. ತಮ್ಮ ಸ್ಥಾನ ಮತ್ತೊಬ್ಬರಿಗೆ ಹೋಯಿತಲ್ಲ ಎಂಬ ವೈಷಮ್ಯವಿಲ್ಲ. ಇವರಿಗೆ ನ್ಯಾಯ ದೊರಕಿಸಿಕೊಡಲು ಕೆಲವೊಮ್ಮೆ ಹೊಸದಾಗಿ ಹುದ್ದೆಗಳನ್ನೇ ಪ್ರಾರಂಭಿಸಿದ್ದೂ ಉಂಟು. ಆದರೆ ಇವರದ್ದು ಒಂದೇ ಮಾತು "ನಾನು ಯಾರ ಜಾಗಾನೂ ಕಿತ್ಕೊಳೋನಲ್ಲ....". ಯಾವುದಾದರೂ ಹುದ್ದೆ ತೆರವಾದಾಗ ಇವರಿಗೆ ತಮ್ಮ ಜತೆಯವರು ಅದಕ್ಕೆ ಅರ್ಜಿ ಹಾಕಿಕೊಳ್ಳುತ್ತಿದ್ದಾರೆ ಎಂದು ತಿಳಿದರೆ, ಅವರಿಗೆ ಅಡ್ಡಗಾಲಿಟ್ಟು ತಾವೂ ಅದಕ್ಕಾಗಿ ಸ್ಪರ್ಧಿಸಲು ಹೋಗ್ತಾನೇ ಇರಲಿಲ್ಲ. "...ಇದೇ ಪೋಸ್ಟಿಗೆ ಪ್ರಯತ್ನಿಸ್ತಾ ಇದಾರೆ. ನಾನು ಅಡ್ಡಿಯಾಗೊಲ್ಲ" ಅಂತಂದು ಸುಮ್ಮನಾಗ್ತಿದ್ರು.

ಶಿಷ್ಯಕೋಟಿ

"ವೃತ್ತಿ ಜೀವನದ ತುಂಬಾ ಇವರು ಗಳಿಸಿದ್ದು ಹಣಕ್ಕಿಂತಲೂ ಹೆಚ್ಚಾಗಿ ಅಪಾರ ಶಿಷ್ಯಕೋಟಿ. ಪ್ರತಿ ವರ್ಷವೂ ಕನ್ನಡ ಎಂ.ಎ. ವಿದ್ಯಾರ್ಥಿಗಳಿಗಾಗಿ ಸಂತೋಷಕೂಟವನ್ನು ಏರ್ಪಡಿಸುತ್ತಿದ್ದಾಗ ಇವರ ಆನಂದಾನ ವರ್ಣಿಸೋಕ್ಕೂ ಸಾಧ್ಯವಿಲ್ಲ. ಪ್ರಾಧ್ಯಾಪಕರಾಗಿ ಇವರು ಪಡೆದ ಔನ್ನತ್ಯಾನೂ ಎಲ್ಲರೂ ಚೆನ್ನಾಗಿ ಬಲ್ಲರು. ಅಂತರರಾಷ್ಟ್ರಮಟ್ಟದ ಭಾಷಾತಜ್ಞರು ಎಂಬ ಗೌರವವಿತ್ತು. ರಾಕ್‌ಫೆಲ್ಲರ್ ಫೌಂಡೇಷನ್ನಿನ ಗಿಲ್‌ಪ್ಯಾಟ್ರಿಕ್, ಎಮಿನೋ ಅಂಥ ಶಿಕ್ಷಣವೇತ್ತರು, ಸುನೀತಿ ಕುಮಾರ್ ಛಟರ್ಜಿಯಂಥವರು ಅಮೆರಿಕಾದ ಸಭೆಗಳಲ್ಲಿ ಇವರು ತಮ್ಮ ಭಾಷಣಗಳಿಂದ ಸಭಿಕರ ಮೇಲೆ ಉಂಟು ಮಾಡಿದ ಮೋಡಿಯನ್ನು ಸದಾ ಸ್ಮರಿಸಿಕೊಳ್ಳುತ್ತಿದ್ದರು. ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ೧೯೪೩ ರಿಂದ ೧೯೫೦ ರ ವರೆಗೆ ಇವರ ಬಳಿ ಓದಿದ ಹುಡುಗರು ಅದೆಷ್ಟು ಜನರೋ..... ಈಗ ಎಲ್ಲೆಲ್ಲೂ ಎಂಜಿನಿಯರು, ವೈದ್ಯರು, ಉನ್ನತಾಧಿಕಾರಿಗಳು, ಪ್ರಾಧ್ಯಾಪಕರಾಗಿರೋ ಇವರ ಶಿಷ್ಯರು. ಈಗಲೂ ಎಲ್ಲೇ ಯಾವ ಜಾಗಕ್ಕೇ

ಹೋಗಲಿ ಇವರ ಶಿಷ್ಯರು ಸಿಕ್ಕೇ ಸಿಕ್ತಾರೆ. "ತೀ.ನಂ.ಶ್ರೀ.ಯವರ ಕುಟುಂಬದವರೇ. ಬನ್ನಿ, ಬನ್ನಿ, ಅವರು ನಮ್ಮ ಗುರುಗಳಾಗಿದ್ದರು" ಎಂದು ಕೃತಜ್ಞತೆಯಿಂದ ನುಡಿಯುತ್ತಾರೆ.

"ಆದರೆ ವೈಯಕ್ತಿಕ ಜೀವನದಲ್ಲಿ ನಾವು ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಸಹಿಸಲಾರದಷ್ಟು. ಇವರ ತಂಗಿ ಮಾನಸಿಕವಾಗಿ ಅಸ್ವಸ್ಥರಾಗಿ ಜೀವನವಿಡೀ ಸ್ಥಿಮಿತ ಕಳೆದುಕೊಂಡೇ ಬದುಕಿದಾಗ ಇವರು ಆಕೆಗಾಗಿ ಒದ್ದಾಡಿ ಹೋದರು. ತಂದೆಯನ್ನು ಕಳೆದುಕೊಂಡರು. ವಿಪರೀತ ಬಾಧೆಪಟ್ಟರು. ಇಷ್ಟು ಸಾಲದು ಎಂಬಂತೆ ನಾವು ಎಷ್ಟೋ ಮಕ್ಕಳನ್ನು ಒಂದಾದ ಮೇಲೊಂದರಂತೆ ಕಳೆದುಕೊಂಡಾಗ.... ಆ ಆಘಾತಗಳಿಂದ ನಮಗೆ ಬಿದ್ದ ಹೊಡೆತ ತಡೆದುಕೊಳ್ಳಲಾಗದೆ ಇದ್ದಂಥದ್ದು. ಸಣ್ಣಪುಟ್ಟ ಎರಡು ಮಕ್ಕಳು ಸತ್ತವು. ಒಮ್ಮೆಯಂತೂ ೧೨ ವರ್ಷದ ಮಗಳೊಬ್ಬಳು ಕಣ್ಮುಚ್ಚಿದಾಗ ನಾವು ಕುಸಿದೇ ಹೋದೆವು. ಕರುಳ ಕುಡಿಗಳನ್ನು ಒಂದೇ ಸಮನೆ ಕತ್ತರಿಸಿ ಅವನ್ನು ಸ್ಮಶಾನಕ್ಕೊಯ್ಯಬೇಕಾದಂಥ ಆ ಸಂದರ್ಭಗಳು..... ನಾನು ರೋದಿಸುತ್ತಾ ಕೂತಿದ್ದಾಗ ಹತ್ತಿರದಲ್ಲಿದ್ದ ಬಂಧುಗಳ್ಯಾರೋ 'ಗಟ್ಟಿಯಾಗಿ ಅಳಬೇಡ' ಅಂತ ಗದರಿಸಿಕೊಂಡರು. ಇವೆಲ್ಲ ನಿನ್ನೆ ಮೊನ್ನೆ ನಡೆದ ಹಾಗಿದೆ.... ಇವರು ಹತ್ತಿರ ಬಂದರು. ತಲೆನೇವರಿಸಿದರು.... "ಎಷ್ಟು ಬೇಕಾದರೂ ಅಳು.... ನೀನು ಹೀಗೆ ಅತ್ತೇ ಸಮಾಧಾನ ಮಾಡಿಕೋಬೇಕು..... ಅಳು ನಿಲ್ಲಿಸೂಂತ ಹೇಗೆ ಹೇಳಲಿ ಹೇಳು...." ಅಂತ ಜತೆಯಲ್ಲೇ ತಾವೂ ಕಣ್ಣೀರು ಹಾಕುತ್ತಾ ಕೂತರು. ಮನಸ್ಸು ಸ್ಥಿಮಿತಕ್ಕೆ ಬಂದಮೇಲೆ ಅವತ್ತು ಇವರು ನನಗೆ ನಿಧಾನವಾಗಿ ಹೇಳಿದ್ದು "ಕಿಸಾಗೌತಮಿ" ಕತೆಯನ್ನು. ಹೆಣ್ಣುಮಕ್ಕಳು ಅಂದರೆ ಪ್ರೀತಿ ಉಕ್ಕುತ್ತಿತ್ತು ಇವರಿಗೆ. ಮನೆಗೆ ಯಾವ ಹೆಣ್ಣುಮಕ್ಕಳು ಬಂದರೂ ಅವರ ಬಗ್ಗೆ ಅಕ್ಕರೆ. ಆ ವರ್ಷ ನಮ್ಮ ದುರ್ದೈವ ಎಷ್ಟು ಕ್ರೂರವಾಗಿತ್ತು ಅಂದರೆ ಯಾವಾಗಲೋ ಮಾಡಿಸಿಟ್ಟಿದ್ದ ಬಂಗಾರದ ಕಾಸಿನ ಸರ, ಉಂಗುರ ಎಲ್ಲವೂ ಹೇಗೋ ಕಳವಾಗಿ ಹೋಯಿತು. ಒಡವೆ ವಸ್ತ್ರ ಅಂತ ನಾನೆಂದೂ ಇವರನ್ನು ಕಾಡಿರಲಿಲ್ಲ. ಆದರೆ ಇವರಿಗೆ ಅದೇನನ್ನಿಸಿತೋ ತಮಗೆ ಬಂದಿದ್ದ ಬಂಗಾರದ ಮೆಡಲ್‌ಗಳನ್ನೆಲ್ಲ ಕರಗಿಸಿ ನಂಗೆ ಒಂದೆರಡು ಆಭರಣಗಳನ್ನು ಮಾಡಿಸಿ ಹಾಕಿದ್ದರು.

"ಯಾವ ಮಕ್ಕಳನ್ನೂ ಎಂದೂ ಗದರಿಸಿಕೊಂಡವರಲ್ಲ. ನಾನೇನಾದರೂ ಸಹನೆ ಕಳ್ಕೊಂಡರೆ ಸಿಟ್ಟು ಬಂದು ಮುಖ ಕೆಂಪಗಾಗೋದು. ದೇವರು ಒಬ್ಬ ಮಗಳನ್ನು ನಮ್ಮ ಪಾಲಿಗೆ ಉಳಿಸಿದಾಗ ಅವಳನ್ನು ನೋಡಿಕೊಂಡು ನಮ್ಮ ದುಃಖ ಮರೆಯೋಕ್ಕೆ ಪ್ರಯತ್ನ ಪಟ್ಟೆವು. ಇನ್ನು ನಾಲ್ಕೈದು ವರ್ಷ ಮಕ್ಕಳು ಬೇಡವೇ ಬೇಡ ಅಂದ್ಕೊಂಡೆವು. ನಂಗೆ ೨೯ ವರ್ಷವಾಗಿದ್ದಾಗ ಮೈಸೂರಿನಲ್ಲಿ ಮಗ ಹುಟ್ಟಿದ. ನಂಗೂ ಇವರಿಗೂ ವಯಸ್ಸಿನಲ್ಲಿ ೭ ವರ್ಷ ವ್ಯತ್ಯಾಸ. ಅಷ್ಟು ಹೊತ್ತಿಗಾಗಲೇ ನಾವು ಅನೇಕ ಮಕ್ಕಳನ್ನು ಕಳೆದುಕೊಂಡಿದ್ದ ದುರ್ದೈವಿಗಳಾಗಿ ಬಿಟ್ಟಿದ್ದೆವು.

"ಮನಸ್ಸನ್ನು ಎಂಥ ಭೀಕರ ಘಟನೆ ಬಾಧಿಸುತ್ತಲೇ ಇರಲಿ ಇವರು ಕನ್ನಡ ಸಾಹಿತ್ಯಕ್ಕೆ, ತಮ್ಮ ನೆಚ್ಚಿನ ಭಾಷೆಗಳಿಗೆ ಎಂದೂ ಅಪಚಾರ ಮಾಡಿದವರಲ್ಲ. ಬೆಳಗ್ಗೆಯೆಲ್ಲ ಪಾಠ ಹೇಳಿಬಂದು, ರಾತ್ರಿಯೆಲ್ಲ ಕೂತು ಬರೆಯೋದು. ಒಲುಮೆ, ಕಾವ್ಯಸಮೀಕ್ಷೆ, ನಂಟರು, ಸಮಾಲೋಕನ.... ಹೀಗೆ ಅನೇಕ ಪುಸ್ತಕಗಳು ಬಂದವಲ್ಲ. ಆದರೆ ಓದ್ತಾ ಇದ್ದದ್ದೇ ಹೆಚ್ಚು. ತಮಾಷೆ ಮಾಡೋರು:

"ಓದು ಬರಹಕ್ಕೆ ಶತ್ರು" ಅಂತ. ಬರೆದದ್ದನ್ನು ತೋರಿಸೋರು. ಆದರೆ ಬರೆದದ್ದಕ್ಕಿಂತಲೂ ಹೊಡೀತಿದ್ದದ್ದೇ ಹೆಚ್ಚು. ಮನೇಲಿ ನಾಲ್ಕೈದು ಸಾವಿರ ಪುಸ್ತಕಗಳಿದ್ದವು. ಸುತ್ತಲೂ ಯಾರೇ ಎಷ್ಟು ಗಟ್ಟಿಯಾಗಿ ಏನನ್ನೇ ಮಾತನಾಡ್ತಿರಲಿ, ಇವರು ತದೇಕಚಿತ್ತದಿಂದ ಓದಿಕೊಳ್ಳುತ್ತಾ ಕೂತಿರುತ್ತಿದ್ದರು. ಒಂದು ಸಲಿಯಂತೂ ಮಗೂನ ಒಳಗೆ ಮಲಗಿಸಿ ಇವರಿಗೆ ಅದು ಅತ್ತರೆ ಸ್ವಲ್ಪ ಸಮಾಧಾನ ಮಾಡಿ ಅಂತ ಹೇಳಿ ಎದುರು ಮನೆಗೆ ಅರಿಸಿನ ಕುಂಕುಮಕ್ಕೆ ಹೋಗಿದ್ದರೆ, ಅದು ಎದ್ದು ಚಂಡಿ ಹಿಡಿದು ಸೂರು ಕಿತ್ತು ಹೋಗೋ ಹಾಗೆ ಅಳುತ್ತಿದ್ದರೂ ಈ ಮಹಾರಾಯರು ತಾವು ಓದುತ್ತಿದ್ದ ಪುಸ್ತಕದಲ್ಲೇ ಗಮನಾನೆಲ್ಲ ಕೇಂದ್ರೀಕರಿಸಿ ಸ್ಥಿತಪ್ರಜ್ಞರ ಹಾಗೆ ಕೂತೇಬಿಟ್ಟಿದ್ದರು. 'ದೂರದಲ್ಲೆಲ್ಲೋ ಯಾವುದೋ ಮಗು ಅಳ್ತಿದೆ ಅಂತ ಮನಸ್ಸಿನ ಮೂಲೇಲೆಲ್ಲೋ ಅನ್ನಿಸಿತ್ತಂತೆ'. ಆದರೆ ಅದು ತಮ್ಮ ಮನೆಯೊಳಗೇ ಅನ್ನೋ ಪರಿವೆಯೂ ಇವರಿಗಿರಲಿಲ್ಲ. ಓದೋ ಸಂಭ್ರಮದಲ್ಲಿ! ಪುಸ್ತಕ ಒಂದಿದ್ರೆ ಸಾಕು, ಯಾವ ಆಸೆಗೂ ಅಕರಾಸ್ತೆಗೂ ಹೋಗ್ತಾನೇ ಇರಲಿಲ್ಲ. ಸೈಕಲ್‌ನಲ್ಲೇ ಓಡಾಟ. ಒಂದೊಂದು ಸಲಿ ಜಟಕಾಗಾಡಿಗೆ ಹೇಳಿ ಬಂದಿರುತ್ತಿದ್ದರು, ದೂರ ಹೋಗಬೇಕಾದಾಗ. ಒಂದಿವಸವೂ ಸಾಮಾನಿಗೆ ಅಂತ ಅಂಗಡಿ ಮುಂಗಟ್ಟಿಗೆ ತಿರುಗಾಡಿದವರಲ್ಲ. ಯಾವ ದುರಭ್ಯಾಸವೂ ಇರಲಿಲ್ಲ.

"ವ್ಯಾಲ್ಯುಯೇಷನ್‌ನಲ್ಲಿ ಇವರಿಗೆ ಅಷ್ಟಿಷ್ಟು ದುಡ್ಡು ಬಂದಿರೋದು. ಕೈಲಿ ದುಡ್ಡಿದ್ದಾಗ ಬೇರೆಯವರಿಗೆ ಅಷ್ಟಿಷ್ಟು ಕೊಡೋದು. ದುಡ್ಡಿನ ತಾಪತ್ರಯವಿದ್ದು ಅನೇಕ ಹುಡುಗರು ಇವರಿಂದ ಸಾಲ ತಗೊಂಡು ಆಮೇಲೆ ವರ್ಷಗಟ್ಟಲೆ ಅದನ್ನು ಕಂತುಗಳಲ್ಲಿ ತೀರಿಸಿದ್ದುಂಟು. ಶಿಷ್ಯರು ತಾವಾಗೇ ಆಸೆಯಿಂದ ಇವರಿಗೆ ಒಂದು ಸಾಧಾರಣ ಬಟ್ಟೆಯನ್ನೋ, ಕೈಚೀಲವನ್ನೋ ತಂದುಕೊಟ್ಟಾಗ ಅವರ ಪ್ರೀತಿಗೆ ಮಾರುಹೋಗಿ ಅದನ್ನು ತುಂಬಾ ಹೆಚ್ಚುಗಾರಿಕೆಯಿಂದ ಇಸ್ಕೋತಾ ಇದ್ದುದುಂಟು. ಯಾರ ಮನಸ್ಸೂ ನೋಯಬಾರದು. ಆಸ್ತಿಗೀಸ್ತಿ ಮಾಡಬೇಕು ಅಂತಲೇನೂ ಇರಲಿಲ್ಲ. ರಿಟೈರಾದ ಮೇಲೆ ನೆಲೆಯಿರಲಿ ಅಂತ ಸಹೋದ್ಯೋಗಿಗಳು ತುಂಬಾ ಬಲವಂತ ಮಾಡಿದ್ದಕ್ಕೆ ಮೈಸೂರಿನಲ್ಲೊಂದು ಮನೆ ಮಾಡಿದರು. ಆದರೆ ಮೈಸೂರಿನ ಸರಸ್ವತಿಪುರಂನಲ್ಲಿನ ಪ್ರೊಫೆಸರ್ ಕ್ವಾರ್ಟರ್ಸ್ ಅವರಿಗೆ ತುಂಬಾ ಪ್ರಿಯವಾಗಿದ್ದ ಜಾಗ, ದೊಡ್ಡ ಕಾಂಪೌಂಡು, ಮರಗಿಡಗಳು.....

"ನಂಜನಗೂಡಿಗೆ ಯಾವಾಗಲಾದರೂ ಹೋಗುತ್ತಾ ಇದ್ದದ್ದನ್ನು ಬಿಟ್ಟರೆ ದೇವರ ಪೂಜೆ ಅದು ಇದು ಅಂತ ಆರ್ಭಟ ಮಾಡಿದವರಲ್ಲ. ಆದರೆ ಇವರು ಸ್ನಾನ ಮಾಡಿ ಬರೋ ಹೊತ್ತಿಗೆ ಊಟಕ್ಕೆ ಮಣೆ ಹಾಕಿ ಪಕ್ಕದಲ್ಲಿ ನೀರು, ಕನ್ನಡಿ ಹಾಗೂ ಸಾದಿನ ಬಟ್ಟಲು ಇಟ್ಟಿರ ಬೇಕಾಗಿತ್ತು. ಗೌತಮಬುದ್ಧ, ಏಸುಕ್ರಿಸ್ತ ಇವರುಗಳನ್ನು ತುಂಬಾ.... ತುಂಬಾ..... ಭಕ್ತಿಯಿಂದ ಕಾಣುತ್ತಿದ್ದ ಇವರು ಆಮೇಲೆ ಆರಾಧಿಸ ತೊಡಗಿದ್ದು ಗಾಂಧಿಯನ್ನು. ಗಾಂಧಿ ಸತ್ತ ದಿನದಿಂದ ಮಣೆ ಮೇಲೆ ಕೂತು ಕನ್ನಡಿಯಲ್ಲಿ ಮುಖ ನೋಡಿಕೊಂಡು ಹಣೆಗೆ ಇಟ್ಕೊಳ್ಳೋ ಅಭ್ಯಾಸಾನೇ ತಪ್ಪಿಸಿ ಬಿಟ್ಟರು. ಗಾಂಧೀಜಿ ಸತ್ತದ್ದೇ ದೇಶಕ್ಕೆ ಖಾಯಂ ಸೂತಕ ಅನ್ನಿಸಿತೇನೂ ಗೊತ್ತಿಲ್ಲ.

"ನಾವು ಪಟ್ಟ ಕಷ್ಟಗಳೇನೇ ಇದ್ದರೂ ಇರೋ ಮಕ್ಕಳನ್ನು ನೋಡ್ಕೊಂಡು ನೆಲೆಯೂರಬೇಕು ಅನ್ನಿಸಿದ್ದು ಇವರು ರಿಟೈರಾಗೋ ಹೊತ್ತಿಗೆ. ಅಷ್ಟು ಹೊತ್ತಿಗೆ ಮಗ, ಈಗ ಐ.ಐ.ಎಂ.ನಲ್ಲಿ

ಪ್ರೊಫೆಸರಾಗಿರೋ ನಾಗಭೂಷಣ ಕಲ್ಕತ್ತಾಗೆ ಹೋಗಿದ್ದ. ಎಂ.ಎಸ್ಸಿ. ಸ್ಟ್ಯಾಟಿಸ್ಟಿಕ್ಸ್ ಮಾಡಿದ್ದ ಮಗಳು ನಾಗರತ್ನ ಗಂಡ ಮಕ್ಕಳ ಜತೆ ರಾಂಚಿಯಲ್ಲಿದ್ದಳು. ದೆಹಲಿಯಲ್ಲಿ ಅದ್ಯಾವುದೋ ಮೀಟಿಂಗ್, ಎಸ್.ವಿ. ಕೃಷ್ಣಮೂರ್ತಿರಾಯರು ಆಹ್ವಾನಿಸಿದ್ದರು. ನನ್ನನ್ನೂ ಕರ್ಕೊಂಡು ಹೋಗ ಬೇಕು ಅನ್ನೋ ಹಠ ಇವರಿಗೆ. ಆಗ ಇವರ ಆರೋಗ್ಯ ಅಷ್ಟೇನೂ ಚೆನ್ನಾಗಿರಲಿಲ್ಲ. "ಬೇಡ ಕಣ್ರೀ.... ಈಗ್ಯಾಕೆ ಆಯಾಸ...." ಅಂತ ನಾನು ಇನ್ನಿಲ್ಲದ ಹಾಗೆ ಹೇಳಿದೆ. ಇವರಿಗೆ ದೆಹಲಿಯ ಸಭೆಗಿಂತಲೂ ಹೆಚ್ಚಾಗಿ ನಂಗೆ ತಾಜ್‌ಮಹಲ್ ತೋರಿಸೋ ಆಸೆ. ತಾಜ್‌ಮಹಲ್ ಹೆಸರು ಕೇಳಿದರೆ ಇವರು ಅದೆಷ್ಟು ಭಾವುಕರಾಗುತ್ತಿದ್ದರು ಅಂತಾ.... ದಾಂಪತ್ಯ ಜೀವನದ ಉತ್ತುಂಗ ಅದು, ಅಮರಪ್ರೇಮದ ಅಭೂತಪೂರ್ವ ಸಾಕ್ಷಿ ಆ ಭವ್ಯ ಕಟ್ಟಡ ಅಂತೆಲ್ಲ ಮೈಮರೆತು ಅದನ್ನು ವರ್ಣಿಸೋರು. ಅಮೆರಿಕಾದಲ್ಲಿದ್ದಾಗ ಅಲ್ಲಿಂದ ಬರೆದಿದ್ದ ಪತ್ರದಲ್ಲಿ "ನಂಗೆ ಈ ಎಲ್ಲ ದೇಶಗಳನ್ನೂ ನಿಂಗೆ ತೋರಿಸೋದಕ್ಕಿಂತಲೂ ಆಗ್ರಾದ ತಾಜ್‌ಮಹಲ್ ತೋರಿಸುವ ಹಂಬಲ" ಎಂಬುದಾಗಿ ತಮ್ಮಾಸೆಯನ್ನು ತೋಡಿಕೊಂಡಿದ್ದರು. ನಾನು ಪ್ರಯಾಣ ಬೇಡ ಅಂದಿದ್ದಕ್ಕೆ ಎಂದೂ ನನ್ನ ಮೇಲೆ ಸಿಟ್ಟುಮಾಡ್ಕೋತಾನೇ ಇರದಿದ್ದ ಇವರಿಗೆ ಮನಸ್ಸಿಗೆ ಅದೆಂಥ ವ್ಯಾಕುಲ ಆಯ್ತು ಅಂತಾ. "ನೀನು ಬರೋಲ್ಲವಾ..... ಬಿಟ್ಬಿಡು.... ನಾನೂ ಹೋಗೋಲ್ಲ ತಾಜ್‌ಮಹಲ್ ತೋರಿಸೋಣ ಅಂತ ನಾನು ಒದ್ದಾಡ್ತೀದೀನಿ. ಬರೋಲ್ಲ ಅಂತಾಳೆ" ಅಂತ ಕೂಗಾಡಿ ಬಿಟ್ಟರು. ಎಂದೂ ಇಲ್ಲದೆ ಇವರಿಗೆ ಯಾಕಿಷ್ಟು ಹಠ ಅಂತ ನಂಗೂ ಅರ್ಥವಾಗಲಿಲ್ಲ. 'ಸರಿ, ಹೊರಡ್ತೀನಿ. ಅದಕ್ಯಾಕೆ ಇಷ್ಟು ಸಿಟ್ಕೋತೀರಿ....' ಅಂತಂದು ಹೊರಟೆ.

ಡೈರೆಕ್ಟರ್ ಆಫ್ ಆರ್ಕೈವ್ಸ್ ಆಗಿದ್ದ ದೇಶಿಕಾಚಾರ್ ಅವರ ಮನೇಲಿ ಇಳ್ಕೊಂಡಿದ್ದೆವು. ದೆಹಲಿಯಲ್ಲಿ ಒಂದು ವಾರ ಇದ್ದು, ಆಗ್ರಾಕ್ಕೂ ಭೇಟಿ ನೀಡಿ ರಾಂಚಿಯಲ್ಲಿ ಮಗಳ ಸಂಸಾರಾನೂ ನೋಡ್ಕೊಂಡು, ಸೆಪ್ಟೆಂಬರ್ ೬, ೧೯೬೬ ರಂದು ಕಲ್ಕತ್ತಾಗೆ ಬಂದೆವು. ಎರಡು ದಿನಗಳು ಅಲ್ಲಿದ್ದು ೮ನೇ ತಾರೀಖು ಬೆಂಗಳೂರಿಗೆ ಪ್ರಯಾಣ ಮಾಡೋದು ಅಂತಿತ್ತು. ಸೆಪ್ಟೆಂಬರ್ ೭ನೇ ತಾರೀಖು ಗೋಕುಲಾಷ್ಟಮಿ. ತಾಜ್‌ಮಹಲ್‌ನ ನಂಗೆ ತೋರಿಸಿದ ಖುಷಿ ಇವರ ಮುಖದ ಮೇಲೆ ಕುಣೀತಿತ್ತು. ಮಗನಿಗೆ ಸಂತೋಷದಿಂದ ಹೇಳಿದರು.: "ನೋಡೋ, ಈ ಸಲ ನಿಮ್ಮಮ್ಮನ್ನ ನನ್ನ ಜತೇಲೇ ಎಷ್ಟರಮಟ್ಟಿಗೆ ಅಂಟಿಸಿಕೊಂಡೇ ಓಡಾಡಿದೀನಿ ಅಂದರೆ, ಬಾತ್ ರೂಂ ಟಾಯ್ಲೆಟ್‌ಗೆ ಮಾತ್ರ ಅವಳು ನಂಜೊತೆ ಬಂದಿಲ್ಲ ಅಷ್ಟೇಪ್ಪಾ...." ಮಗ ಮೆಲ್ಗೆ ಹೇಳಿದ: "ಅಣ್ಣಾ, ನಿಮಗೆ ಮುಂದಿನ ವರ್ಷ ೬೦ನೇ ಹುಟ್ಟು ಹಬ್ಬ. ಸಂಭ್ರಮದಿಂದ ಮಾಡೋಣ." "ನಥಿಂಗ್ ಡೂಯಿಂಗ್, ಖಂಡಿತ ಬೇಡ. ಅವೆಲ್ಲ ಒಂದೂಬೇಡ" ಅಂತ ಖಡಾಖಂಡಿತವಾಗಿ ಹೇಳಿದರು. ಆ ಮಾತಾಡಿದ ಕೆಲವೇ ಗಂಟೆಗಳ ಮೇಲೆ.... ಇವರಿಗೆ ಎಂಥ ತೀವ್ರ ಹೃದಯಾಘಾತ ಆಯ್ತು ಅಂದ್ರೆ.... ಕುಸಿದು ಬಿದ್ದವರು ಮತ್ತೆ ಏಳಲೇ ಇಲ್ಲ.... ತಾಜ್‌ಮಹಲ್‌ನ್ನು ತೋರಿಸಿ ನನ್ನ ಮೇಲಿನ ತಮ್ಮ ಪ್ರೀತಿಯನ್ನು ಪರೋಕ್ಷವಾಗಿ ತೋಡಿಕೊಂಡಿದ್ದ ನನ್ನವರು ತಮ್ಮ ಹಂಬಲವನ್ನು ಪೂರೈಸಿಕೊಂಡು, ನನ್ನೊಬ್ಬಳನ್ನೇ ಒಂಟಿಯಾಗಿ ಬಿಟ್ಟು ಹಿಂತಿರುಗಿ ಬಾರದಂಥ ಊರಿಗೆ ಒಬ್ಬರೇ ನಡೆದೇ ಬಿಟ್ಟರು.

"ನಾನು ಆಗಲೇ ಹೇಳಿದೆನಲ್ಲ, ಇವರು ಸುಖಕ್ಕಿಂತಲೂ ಕಷ್ಟಪಟ್ಟದ್ದೇ ಹೆಚ್ಚೂಂತ. ಯಾವುದನ್ನೂ ಬಯಸಲಿಲ್ಲ, ಆದರೆ ಯಾವುದೂ ಇವರಿಗೆ ತಾನಾಗೇ ಸಿಗಲೂ ಇಲ್ಲ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲಿಲ್ಲ. ಪ್ರತಿಸಲ ಇವರ ಹೆಸರು ಬಂದಾಗಲೆಲ್ಲ "ನನಗಿಂತಲೂ ದೊಡ್ಡವರಿದ್ದಾರೆ. ಅವರಾಗಲಿ" ಅಂತ ಹೇಳಿಕೊಳ್ಳುತ್ತಿದ್ದರು. ಶ್ರವಣಬೆಳಗೊಳ ದಲ್ಲಾದ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಬಹುದು ಅಂತಿತ್ತು. ಆದರೆ ಮುಂಚೆಯೇ ಇವರು ಬದುಕಿನಿಂದ ನಿರ್ಗಮಿಸಿಬಿಟ್ಟರು. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬರಲಿಲ್ಲ. ೧೯೬೬ ರಲ್ಲಿ ರಾಜ್ಯಪ್ರಶಸ್ತಿ ಕೊಡ್ತೀವಿ ಅಂದಿದ್ದರೂ ಆ ಸಮಾರಂಭ ಇವರಿರುವಾಗಲೇ ನಡೀಲಿಲ್ಲ. ಅದು ಇವರಿಗೆ ಸಂದಿದ್ದು ಮರಣೋತ್ತರವಾಗಿ. 'ಪಂಪ ಪ್ರಶಸ್ತಿ'ಯನ್ನು ನಾನು ತಗೊಂಡೆ ಅಷ್ಟೆ. ನನ್ನ ಮಗ, ಚಿದಾನಂದ ಮೂರ್ತಿಗಳು ಹಾಗೂ ಇವರ ಕನ್ನಡಾಭಿಮಾನವನ್ನು ಮುಂದುವರಿಸಿ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರಾಗಿರೋ ಇವರ ಸೋದರನ ಮೊಮ್ಮಗ ತೀ.ನಂ. ಶಂಕರನಾರಾಯಣ ಇವರೆಲ್ಲ ಸೇರಿ ನನ್ನ ಪತಿಯ ಶಿಷ್ಯರು ಹಾಗೂ ಅಭಿಮಾನಿಗಳಿಂದ ಲೇಖನಗಳನ್ನು ಬರೆಸಿ "ಶ್ರೀಕಂಠತೀರ್ಥ" ಎಂಬ ಗ್ರಂಥವನ್ನು ಪ್ರಕಟಿಸಿ ಅವರ ಮೇಲಿನ ತಮ್ಮ ಶ್ರದ್ಧೆ ಗೌರವವನ್ನು ತೋರಿಸಿದರು.

(ಮಯೂರ : ಮಾರ್ಚ್, ೧೯೮೪)

ನಾನು ನನ್ನ ತಂದೆಯನ್ನು ಕಂಡಂತೆ

ತೀ.ಶ್ರೀ. ನಾಗಭೂಷಣ

●

ನಾನು ತೀ.ಶ್ರೀ. ನಾಗಭೂಷಣ. ನನ್ನ ತಂದೆ ದಿವಂಗತ ತೀ.ನಂ.ಶ್ರೀ. ನನಗೆ ೪-೫ ವರ್ಷಗಳಾಗಿದ್ದಾಗ ಸ್ವಲ್ಪ ತಿಳಿವಳಿಕೆಯಿಂದ ನನ್ನ ತಂದೆಯೊಡನೆ ಬಹುಶಃ ಮೊದಲನೆಯದಾಗಿ ವ್ಯವಹರಿಸಿದುದು ಮಸುಕಾಗಿ ಜ್ಞಾಪಕಕ್ಕೆ ಬರುತ್ತದೆ. ಅನಂತರ ಅವರ ಪುತ್ರನಾಗಿ, ಕಿರಿಯ ಮಿತ್ರನಾಗಿ ಮತ್ತು ಅವರು ನನಗೆ ಗುರುವಾಗಿ, ಮಾರ್ಗದರ್ಶಿಯಾಗಿ, ನನಗೆ ೨೩ ವರ್ಷವಾಗಿದ್ದಾಗ ತೀ.ನಂ.ಶ್ರೀಯವರು ದಿವಂಗತರಾಗುವತನಕ ಅವರೊಡನೆ ಕಳೆದ ಕಾಲ ಪದರ ಪದರವಾಗಿ ಹಂತ ಹಂತವಾಗಿ ನನ್ನ ಕಣ್ಣಮುಂದೆ ನಿಲ್ಲುತ್ತದೆ. ಅದರೊಡನೆಯೇ ಇನ್ನೂ ಅನೇಕ ವರ್ಷಗಳ ಕಾಲ ಅವರ ಸಹವಾಸಭಾಗ್ಯವನ್ನು ಪಡೆದಿರುವ ಅದೃಷ್ಟ ನನ್ನದಾಗಲಿಲ್ಲವಲ್ಲ ಎಂದು ದುಃಖವೂ ಆಗುತ್ತದೆ. ತೀನಂಶ್ರೀಯವರ ಆದರ್ಶಜೀವನ ಸಾಗರದಲ್ಲಿ ನನ್ನ ಬಲವಿರುವಷ್ಟು ನಾನು ಇಳಿದು ಅವರ ಪ್ರಭಾವಕ್ಕೆ ಒಳಗಾಗಿರಬಹುದೇ ಹೊರತು, ಇನ್ನೂ ಹೆಚ್ಚು ಸಾಧ್ಯವಿದ್ದಷ್ಟು ಪಡೆಯಲಿಲ್ಲವಲ್ಲ ಎನ್ನುವ ಕೊರಗು ಅವರು ದಿವಂಗತರಾದ ೨೦ ವರ್ಷಗಳ ನಂತರವೂ ನನ್ನನ್ನು ಇನ್ನೂ ಬಾಧಿಸುತ್ತಲೇ ಇದೆ. ಕವಿಯಾಗಿ, ಸಾಹಿತಿಯಾಗಿ, ವಿಮರ್ಶಕರಾಗಿ, ಪ್ರಸಿದ್ಧ ವಿದ್ವಾಂಸರಾಗಿ, ಆದರ್ಶಪತಿಯಾಗಿ, ತಂದೆಯಾಗಿ, ಹಿರಿಯ ಬಂಧುವಾಗಿ, ನಚ್ಚಿನ ಗುರುವಾಗಿ, ಶಿಷ್ಯನಾಗಿ, ಸ್ನೇಹಿತನಾಗಿ ವಿವಿಧ ಕ್ಷೇತ್ರಗಳಲ್ಲಿ ಮತ್ತು ಅನೇಕ ವ್ಯಕ್ತಿಗಳಲ್ಲಿ ಅವರು ಬೀರಿರುವ ಪ್ರಭಾವ ಅಪಾರ ಮತ್ತು ಅವಿಸ್ಮರಣೀಯ.

ತೀನಂಶ್ರೀಯವರ ವ್ಯಾಸಂಗ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆಯೇ ಅಲ್ಲಿಯ ಗೋಡೆಗಳ ಮೇಲೆ ಕಾಣುತ್ತಿದ್ದುದು ಅವರ ಮೇಲೆ ಅಗಾಧ ಪ್ರಭಾವ ಬೀರಿದ ಗುರುಗಳಾದ ಬಿಎಂಶ್ರೀ, ಎಂ. ಹಿರಿಯಣ್ಣ ಮತ್ತು ಟಿ.ಎಸ್. ವೆಂಕಣ್ಣಯ್ಯ ಅವರುಗಳ ಫೋಟೋಗಳು. ಅವರು ತಮ್ಮ ಗುರುಗಳ ಮೇಲೆ ಇಟ್ಟಿದ್ದ ಗೌರವ ಮತ್ತು ಪೂಜ್ಯ ಭಾವನೆಗಳು ಅನುಕರಣೀಯವಾದುವು. ವಿದ್ವತ್ತಿಗೆ ಸಂಬಂಧಪಟ್ಟ ವಿಷಯಗಳಿರಲಿ, ಬರೆದಿರುವ ಕಾಗದವನ್ನು ಲಕೋಟೆಯಲ್ಲಿ ಮಡಿಸಿಡುವ ರೀತಿಯನ್ನು ಕೂಡ ಹೇಗೆ ತಮ್ಮ ಗುರುಗಳಿಂದ ಕಲಿತೆ ಎಂದು ನನಗೆ ಹೇಳುತ್ತಿದ್ದರು. ವಿದ್ವತ್ತಿಗೆ ಸಂಬಂಧಪಟ್ಟ ವಿಷಯವನ್ನು ತಮ್ಮ ಗುರುಗಳಿಂದಾಗಲಿ, ಅಥವಾ ಸಹ ವಿದ್ವಾಂಸರು ಗಳಿಂದಾಗಲಿ ಅಥವಾ ತಮ್ಮ ಶಿಷ್ಯರಿಂದ ಕೂಡ ತಾವು ಉಪಯೋಗಿಸಿಕೊಂಡಿದ್ದರೆ ಅದಕ್ಕೆ ಅಧಿಕೃತವಾದ ಮನ್ನಣೆಯನ್ನು ಸಲ್ಲಿಸಲೇಬೇಕು. ಯಾರಿಂದಲಾದರೂ ಹಣವನ್ನೇನಾದರೂ

ತೆಗೆದುಕೊಳ್ಳಬೇಕಾಗಿ ಬಂದಿದ್ದರೆ ಅದನ್ನು ಹಿಂತಿರುಗಿಸುವವರೆಗೆ ಅವರಿಗೆ ಸಮಾಧಾನವೇ ಇಲ್ಲ. ಈ ತತ್ವದ ವಿಚಾರದಲ್ಲಿ ಅವರಿಗೆ ಯಾವ ಹೊಂದಾಣಿಕೆಯೂ ಸಮ್ಮತವಲ್ಲ.

ತೀ.ನಂ.ಶ್ರೀ ಒಬ್ಬ ಆದರ್ಶ ಮತ್ತು ಶ್ರೇಷ್ಠ ಅಧ್ಯಾಪಕ. ಅವರನ್ನು ತುಂಬಾ ಗೌರವಿಸುವ ಮತ್ತು ಅವರಲ್ಲಿ ಭಕ್ತಿಯನ್ನಿಟ್ಟಿರುವ ಸಹಸ್ರಾರು ವಿದ್ಯಾರ್ಥಿಗಳು ದೇಶವಿದೇಶಾದ್ಯಂತ ಇರುತ್ತಾರೆ. ತೀ.ನಂ.ಶ್ರೀಯವರು ತರಗತಿಯಲ್ಲಿ ಪಾಠ ಮಾಡುವುದಕ್ಕೇ ಆಗಲಿ ಅಥವಾ ಎಲ್ಲಿಗಾದರೂ ಭಾಷಣ ಮಾಡುವುದಕ್ಕೇ ಆಗಲಿ ಹೋಗಬೇಕಾದರೆ ಪೂರ್ವಸಿದ್ಧತೆ ಇಲ್ಲದೆ ಎಂದೂ ಹೋಗುವವರೇ ಅಲ್ಲ. ಕಾವ್ಯಗಳನ್ನಲ್ಲದೇ ಶಾಸ್ತ್ರೀಯ ವಿಷಯಗಳನ್ನೂ ಅಷ್ಟೇ ರಸವತ್ತಾಗಿ ಪಾಠ ಮಾಡಬಲ್ಲ ಗುರುಗಳೆಂದರೆ ತೀ.ನಂ.ಶ್ರೀಯವರೊಬ್ಬರೇ ಎಂದು ಪ್ರಖ್ಯಾತರಾಗಿದ್ದರು. “ನಾನು ಈ ಭಾಷಣಕ್ಕೆ ಸಾಕಷ್ಟು ಸಿದ್ಧತೆ ಮಾಡಿಕೊಂಡು ಬಂದಿಲ್ಲ” ಎಂದು ಭಾಷಣಕಾರ ಹೇಳಿದರೆ ಅದು ಪ್ರೇಕ್ಷಕರಿಗೆ ಅಗೌರವ ಸೂಚಿಸಿದಂತೆ ಎಂದು ಅವರ ಅಭಿಪ್ರಾಯ. ಪಂಪ, ರನ್ನ, ಕುಮಾರವ್ಯಾಸ, ಕಾಳಿದಾಸರ ಕಾವ್ಯಗಳ ಬಗ್ಗೆ ಭಾಷಣಮಾಡುವಾಗ ಅವರ ಉತ್ಸಾಹ ಅಧಿಕವಾಗುತ್ತಿತ್ತು. ಸುಮಾರು ೩೦ ವರ್ಷಗಳ ಹಿಂದೆ ಬಿಜಾಪುರದ ವಿಜಯ ಕಾಲೇಜಿನಲ್ಲಿ ಸುಮಾರು ಎರಡು ಸಹಸ್ರ ಪ್ರೇಕ್ಷಕರ ಮುಂದೆ, ನಿಶ್ಶಬ್ದ ವಾತಾವರಣದಲ್ಲಿ ಪಂಪನ ಬಗ್ಗೆ ಅವರು ಮಾತನಾಡುತ್ತಿದ್ದ ಸಮಯದಲ್ಲಿ ಒಂದು ನಿಮಿಷ ಮೈಕ್ ನಿಂತುಹೋದಾಗ, ಅಲ್ಲಿಯ ಪ್ರೇಕ್ಷಕರೆಲ್ಲ ‘ಅಯ್ಯೋ’ ಎಂದು ನಿಟ್ಟುಸಿರುಬಿಟ್ಟಿದ್ದು ನನಗೆ ಇನ್ನೂ ಜ್ಞಾಪಕವಿದೆ. ಅವರ ಶಿಷ್ಯರ ಮೇಲಿನ ವಿಶ್ವಾಸ ಪ್ರತಿವರ್ಷ ಕೊನೆಯಲ್ಲಿ ಅವರನ್ನು ಒಂದು ದಿನ ತಮ್ಮ ಮನೆಗೆ ಊತಣಕ್ಕೆ ಕರೆದು ಸರಸ ಸಂಜೆಯನ್ನು ಏರ್ಪಡಿಸುವುದರಲ್ಲಿ ವ್ಯಕ್ತವಾಗುತ್ತಿತ್ತು.

ನಿಷ್ಕಲ್ಮಷವಾದ ಗರಿಗೆದರದ ಬಿಳಿಯ ಕಚ್ಚೆ ಪಂಚೆ, ಕೊರಳು ಮುಚ್ಚುವ ಕೋಟು, ಕೆಲವು ಎಸಳು ಮಾತ್ರ ಕೂದಲಿದ್ದ ಬಕ್ಕತಲೆ, ಉತ್ಸಾಹ ಮತ್ತು ವಿದ್ವತ್ತನ್ನು ಬೀರುತ್ತಿದ್ದ ಆಕರ್ಷಕ ಮುಖವನ್ನುಳ್ಳ ತೀ.ನಂ.ಶ್ರೀಯವರನ್ನು ಯಾರು ನೋಡಿದರೂ ಅವರಲ್ಲಿ ಒಂದು ರೀತಿಯ ಪ್ರೀತಿ ಗೌರವಗಳನ್ನು ಬೆಳೆಸುತ್ತಿತ್ತು. ತಾವು ಹುಡುಗಿಯಾಗಿದ್ದರೆ ತೀನಂಶ್ರೀಯವರನ್ನು ಮದುವೆಯಾಗುತ್ತಿದ್ದೆ ಎಂದು ಮಾಸ್ತಿಯವರು ವಿನೋದಕ್ಕಾಗಿ ಹೇಳಿದ್ದರು. ಅವರ ಮನಸ್ಸು ಬಹು ನಿರ್ಮಲವಾದ ಮನಸ್ಸು. ಯಾವುದಾದರೂ ವಿಷಯದ ಮೇಲೆ ಅಥವಾ ಯಾರ ಮೇಲಾದರೂ ಅಸಮಾಧಾನವಾದರೆ ಅವರ ಮನಸ್ಸಿಗೆ ತುಂಬಾ ಬೇಜಾರಾಗುತ್ತಿತ್ತು. ಮುಖ ವಂತೂ ಒಳ್ಳೆ ಟೊಮ್ಯಟೋ ಹಣ್ಣಿನಂತೆ ಕೆಂಪೇರುತ್ತಿತ್ತು. ಈ ಒಂದು ಸಂದರ್ಭದಲ್ಲಿ ಮಾತು ಕಮ್ಮಿಯಾಗುತ್ತಿತ್ತು.

ತೀ.ನಂ.ಶ್ರೀಯವರಿಗೆ ಅಂತಃಶುದ್ಧಿ ಮತ್ತು ಬಹಿರ್ಶುದ್ಧಿಗಳು ತುಂಬಾ ಮುಖ್ಯ. ಯಾವ ರೀತಿಯ ಕಲ್ಮಷವನ್ನು ಕಂಡರೂ – ಅದು ಮಾತಿನಲ್ಲೇ ಇರಲಿ, ಧರಿಸಿರುವ ವಸ್ತ್ರಗಳಲ್ಲೇ ಇರಲಿ, ಆಹಾರ ಪದಾರ್ಥಗಳಲ್ಲೇ ಇರಲಿ, ಜಾಗಗಳಲ್ಲೇ ಇರಲಿ ಅಥವಾ ಯಾರಾದರೂ ಮಾಡುವ ಕಾರ್ಯಗಳಲ್ಲೇ ಇರಲಿ – ಅದು ತುಂಬಾ ಮುಜಗರವನ್ನುಂಟು ಮಾಡುತ್ತಿತ್ತು. ನಾನು ಅವರನ್ನು ಕಂಡಂತೆ ಅವರಿಗೆ ಈ ಶುದ್ಧಿ, ಶುಭ್ರತೆಗಳಲ್ಲಿ ಹೆಚ್ಚಿನ ಅಭಿಮಾನ ಮತ್ತು

ಗೌರವ. ಈ ಶುದ್ಧಿಯಿಲ್ಲದ ತನ್ನ ಸ್ವಜಾತೀಯನಿಗಿಂತ ಇದನ್ನು ಹೆಚ್ಚುಳ್ಳ ಬೇರೆ ಜಾತಿಯ ವ್ಯಕ್ತಿಯಲ್ಲಿ ಅವರಿಗೆ ಹೆಚ್ಚು ಗೌರವವಿರುತ್ತಿತ್ತು. ಮತ್ತು ಅದನ್ನು ತಮ್ಮ ನಡವಳಿಕೆಯಲ್ಲಿ ಮನದಟ್ಟುಮಾಡುತ್ತಿದ್ದರು. ಅವರು ತಮ್ಮ ಉಡಿಗೆ ತೊಡಿಗೆಗಳಲ್ಲಿ ತೋರುತ್ತಿದ್ದ ಶುಭ್ರತೆ ಮತ್ತು ಶಿಸ್ತನ್ನು ಕಂಡು ಅವರ ನೆಚ್ಚಿನ ಸ್ನೇಹಿತರುಗಳು "ಈ ಮನುಷ್ಯ ಒಳ್ಳೆ ಶೋಕಿ ಮನುಷ್ಯ" ಎಂದು ಹಾಸ್ಯಮಾಡುತ್ತಿದ್ದರು. ತೀ.ನಂ.ಶ್ರೀಯವರು ಇಂತಹ ಹಾಸ್ಯವನ್ನು ಮನಸಾರ ಮೆಚ್ಚಿ ಸಂತೋಷಪಡುತ್ತಿದ್ದರು.

ತೀ.ನಂ.ಶ್ರೀಯವರು ಶುಭ್ರತೆಯ ವಿಷಯಗಳಲ್ಲಿ ಒಳ್ಳೆಯ ರಸಿಕರೆಂದೇ ಹೇಳಬಹುದು. ನಾನು ಕಂಡಂತೆ ಅವರೆಂದೂ ತಮ್ಮ ಸೌಖ್ಯದ ವಿಷಯದಲ್ಲಿ ತಮ್ಮನ್ನು ಅನಗತ್ಯವಾಗಿ ಶಿಕ್ಷಿಸಿಕೊಂಡವರಲ್ಲ. He did not deny himself of good comforts & pleasures. ರೈಲಿನಲ್ಲಿ ಪ್ರಯಾಣ ಮಾಡುವಾಗ ಮನೆಯವರೊಡನೆ ಅನುಕೂಲವಾದ ಶ್ರೇಣಿಯಲ್ಲೇ ಪ್ರಯಾಣ ಮಾಡಬೇಕು. ತಮಗೆ ಸಂತೋಷ ತರುವಂತಹ ಮತ್ತು ಸೌಖ್ಯ ಕೊಡುವಂತಹ ಪದಾರ್ಥಗಳನ್ನು ಕೊಂಡುಕೊಳ್ಳಬೇಕು. ಆದರೆ ಹೀಗೆಂದು ದುಂದುವೆಚ್ಚ ಮಾಡಿದವರಲ್ಲ ಅಥವಾ ಸಾಲಮಾಡಿ ಸುಖಪಟ್ಟವರಲ್ಲ. ತಮ್ಮ ಸ್ಥಿತಿ ಮತ್ತು ಶಕ್ತಿಯಲ್ಲಿ ಎಷ್ಟು ಸಾಧ್ಯವೋ ಅದನ್ನು ಅನುಭವಿಸುವಲ್ಲಿ ಕಾರ್ಪಣ್ಯಪಟ್ಟವರಲ್ಲ. ನಮ್ಮ ಮನೆಯಲ್ಲಿ ಓದಿದ ಬಂಧುಗಳನೇಕರು ಅನಂತರ ಒಳ್ಳೆಯ ಹುದ್ದೆಯಲ್ಲಿದ್ದು ನಮ್ಮ ತಂದೆಯವರ ಉಪಯೋಗಕ್ಕೆಂದು ಪ್ರೀತಿಯಿಂದ ಏನಾದರೂ ಪದಾರ್ಥಗಳನ್ನು ಅಥವಾ ಉಡಿಗೆ ತೊಡಿಗೆಗಳನ್ನು ತಂದುಕೊಟ್ಟರೆ ಅವರ ಪ್ರೀತಿ ವಿಶ್ವಾಸಗಳನ್ನು ಮೆಚ್ಚಿ ಸಂತೋಷಪಡುತ್ತಿದ್ದರು. ಆದರೆ ಯಾವುದನ್ನೂ ಎಂದೂ ನಿರೀಕ್ಷಿಸಿದವರಲ್ಲ. ನಮ್ಮ ಕೈಲಾದರೆ ಯಾರಿಗಾದರೂ ಸಹಾಯ ಮಾಡಬೇಕು, ಆದರೆ ಯಾವುದಕ್ಕೂ ಏನನ್ನು ಹಿಂತಿರುಗಿ ನಿರೀಕ್ಷಿಸಬಾರದು ಎನ್ನುವುದು ಅವರ ತತ್ವ. ಈ ರೀತಿಯ ಸಹಾಯದಲ್ಲೇ ಅವರು ಜೀವನದಲ್ಲಿ ಎಷ್ಟೋ ಸಂತೋಷವನ್ನು ಕಂಡುಕೊಂಡರು.

ತೀ.ನಂ.ಶ್ರೀಯವರ ವಿದ್ವತ್ತು ಮತ್ತು ಸಾಧನೆಗೆ ಅವರ ಬರಹ ತುಂಬಾ ಕಡಿಮೆ ಎಂದು ಎಲ್ಲರ ಅಭಿಪ್ರಾಯ. ಆದರೆ ನಾನು ಕಂಡಂತೆ ಅವರು ಪಟ್ಟಾಗಿ ಕುಳಿತು ಹೆಚ್ಚು ಏನನ್ನು ಬರೆಯಲೇ ಇಲ್ಲ. ಅವರ ಹೆಚ್ಚಿನ ಕೃತಿಗಳೆಲ್ಲ ಅವರ ೩೫–೩೬ ವಯಸ್ಸಿನೊಳಗಾಗಿ, ನಾನು ಹುಟ್ಟುವ ಮೊದಲೇ ರಚಿತವಾದವು. ಅವರ ಮುಂದಿನ ಜೀವಿತ ಕಾಲದಲ್ಲಿ ಈ ಲೇಖನಗಳ ಸಂಕಲನ, ಕೃತಿಗಳ ಪುನರಾವೃತ್ತಿ ಪುನರ್ಮುದ್ರಣಗಳ ಜೊತೆ 'ನಂಟರು' ಮತ್ತು 'ಸಮಾಲೋಕನ' ಸಂಕಲನಗಳು ಪ್ರಕಟವಾದವು. ಈ ಸಂಕಲನಗಳಲ್ಲಿ ಸೇರಿದ ಹೆಚ್ಚಿನ ಪ್ರಬಂಧ ಲೇಖನಗಳೆಲ್ಲಾ ಮೊದಲೇ ಬೇರೆ ಕಡೆ ಪ್ರಕಟವಾಗಿದ್ದವು. ತೀ.ನಂ.ಶ್ರೀಯವರ ಗ್ರಂಥರಚನೆ ಕುಂಠಿತವಾಗುವುದಕ್ಕೆ ನನ್ನ ಆಗಮನವೇ ಕಾರಣವೆಂದು ನಮ್ಮ ಸಂಸಾರವರ್ಗದ ಮತ್ತು ತೀ.ನಂ.ಶ್ರೀಯವರ ವಿದ್ವಾಂಸ ಸ್ನೇಹಿತರುಗಳು ಹಾಸ್ಯಕ್ಕಾಗಿ ಹೇಳಿದರೂ ಕೂಡ ಅದರಲ್ಲಿ ಸ್ವಲ್ಪ ಸತ್ಯಾಂಶವಿದೆಯೆಂದು ನಾನು ಒಪ್ಪಲೇ ಬೇಕಾಗುತ್ತದೆ! ಇದೇನೇ ಇರಲಿ ಅವರ 'ಪರಿಪೂರ್ಣತೆ' ಅಂದರೆ perfection ನ ಗುರಿಯೇ ಅವರಿಂದ ಹೆಚ್ಚು ಬರವಣಿಗೆ ಬರದಿರುವುದಕ್ಕೆ ಕಾರಣ. ವಿದ್ವತ್ಪೂರ್ಣ ಲೇಖನವೇ ಆಗಲಿ, ಒಂದು ಲಘು ಪ್ರಬಂಧವೇ ಆಗಲಿ ಅಥವಾ ಒಂದು

ಕೆಲಸವನ್ನು ಮಾಡುವಾಗಲೇ ಆಗಲಿ ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಂಡ ಹೊರತು ಅವರು ಅದನ್ನು ಮುಂದುವರಿಸುತ್ತಿರಲಿಲ್ಲ. ಸತ್ಯಾನ್ವೇಷಣೆಯ ದಾರಿಯಲ್ಲಂತೂ ಎಷ್ಟುದೂರ ಸಾಗಿದರೂ ಅವರಿಗೆ ಸಮಾಧಾನವಿಲ್ಲ. ಮಧ್ಯದಲ್ಲಿ ಕೆಲವು ಸಮಸ್ಯೆಗಳ ಪರಿಹಾರ ವಾಗದೆ, ಕೆಲವು ಲೇಖನಗಳನ್ನು ಮುಗಿಸುವುದಕ್ಕೆ ಅವರು ಸುಮಾರು ೧೮-೨೦ ವರ್ಷ ತೆಗೆದುಕೊಂಡಿದ್ದರು. ತಮ್ಮ ಕೊನೆಯ ಯಾತ್ರೆಯಲ್ಲಿ ತಾಜ್‌ಮಹಲ್‌ಗೆ ನಮ್ಮ ತಾಯಿಯವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಮಾತನಾಡುತ್ತಿದ್ದಾಗ "ನಿಜವಾದ ಸಂಶೋಧನೆ ಎಂದರೆ ಏನು ಎಂದು ಈಗ ನನಗೆ ಸ್ವಲ್ಪ ಸ್ಪಷ್ಟವಾಗುತ್ತಿದೆ. ಈ ಸಾರಿ ಮೈಸೂರಿಗೆ ಹಿಂತಿರುಗಿದ ನಂತರ ಪಟ್ಟಾಗಿ ಕುಳಿತು ನಾನು ೨೦ ವರ್ಷಗಳಿಂದ ಯೋಚಿಸುತ್ತಿರುವ 'ಕನ್ನಡ ಭಾಷಾಚರಿತ್ರೆ' ಗ್ರಂಥ ರಚನೆಯವನ್ನು ಪ್ರಾರಂಭಮಾಡಬೇಕು" ಎಂದು ತಿಳಿಸಿದರಂತೆ. ಇದರಿಂದ ಸಂಶೋಧನೆಯ ಬಗ್ಗೆ ತೀನಂಶ್ರೀಯವರ ನಿಲುವು ಸ್ಪಷ್ಟವಾಗುತ್ತದೆ. ನಾನು ಕಂಡಂತೆ ತೀನಂಶ್ರೀ ಯವರ ಮೇಜಿನ ಮೇಲೆ ಬರೆಯಬೇಕಾದ ಲೇಖನ ಮತ್ತು ಗ್ರಂಥಗಳ ದೊಡ್ಡ ಬಾಕಿ ಪಟ್ಟಿಯೇ ಇತ್ತು. ಪರಿಪೂರ್ಣತೆಯ ಗುರಿಯಲ್ಲಿ ಈ ಪಟ್ಟಿ ಬೆಳೆಯುತ್ತ ಹೋಯಿತೇ ಹೊರತು ಚಿಕ್ಕದಾಗಲಿಲ್ಲ. "ನಾನು ಬರೆಯುವುದಕ್ಕಿಂತ ಹೊಡೆಯುವುದು ಹೆಚ್ಚು" ಎಂದು ಎಲ್ಲಾ ಬರವಣಿಗೆಯ ವಿಷಯದಲ್ಲಿ ಅವರು ಹೇಳುತ್ತಿದ್ದರೂ ಈ ಬಾಕಿ ಪಟ್ಟಿಯ ವಿಷಯದಲ್ಲಿ ಮಾತ್ರ ಅಪವಾದವೆಂಬಂತೆ ಹೊಡೆಯುವುದಕ್ಕಿಂತ ಬರೆಯುವುದೇ ಹೆಚ್ಚಾಯಿತು.

ಅವರ ಬರವಣಿಗೆಯ ಸೋಮಾರಿತನದ ವಿಷಯದಲ್ಲಿ ನಮ್ಮ ಅಸಮಾಧಾನಕ್ಕೆ ಉತ್ತರವಾಗಿ ಅವರ ಎರಡು ನುಡಿಗಳನ್ನು ಹೇಳುತ್ತಿದ್ದರು "ಓದು ಬರಹಕ್ಕೆ ಶತ್ರು" ಎಂದು ಒಂದು ಮತ್ತು "ಮಾತು ಕೃತಿಗೆ ಶತ್ರು" ಎಂದು ಇನ್ನೊಂದು. ತೀ.ನಂ.ಶ್ರೀ ಅಪಾರ ಪುಸ್ತಕ ಪ್ರೇಮಿ. ಅವರ ಸ್ವಂತ ಗ್ರಂಥಾಲಯದಲ್ಲೇ ಸುಮಾರು ೪-೫ ಸಹಸ್ರ ಗ್ರಂಥಗಳಿದ್ದವು. ಅವರಿಗೆ ತಿಂಗಳಿಗೆ ಸುಮಾರು ೫೦೦ ರೂಪಾಯಿ ಸಂಬಳ ಬರುತ್ತಿದ್ದ ಕಾಲದಲ್ಲಿಯೇ ಪುಸ್ತಕವನ್ನು ಕೊಳ್ಳುವುದಕ್ಕೆ ತಿಂಗಳಿಗೆ ಸುಮಾರು ೮೦ ರಿಂದ ೧೦೦ ರೂಪಾಯಿ ಖರ್ಚು ಮಾಡುತ್ತಿದ್ದರು. ಗ್ರಂಥಾಲಯ ದಿಂದ ತರುತ್ತಿದ್ದ ಪುಸ್ತಕಗಳಿಗಂತೂ ಲೆಕ್ಕವೇ ಇಲ್ಲ. ಮತ್ತು ಇವೆಲ್ಲವನ್ನೂ ತುಂಬಾ ಶ್ರದ್ಧೆಯಿಂದ ವ್ಯಾಸಂಗ ಮಾಡುತ್ತಿದ್ದರು. ನಾನು ನೋಡಿದಂತೆ ಅವರಿಗೆ ವ್ಯಾಸಂಗ ಮಾಡುವಾಗ, ಒಂದು ರೀತಿಯಲ್ಲಿ ಸಂಸಾರ, ಊಟ, ತಿಂಡಿ, ನಿದ್ರೆಗಳೂ ಗೌಣವಾಗುತ್ತಿದ್ದವು ಎಂದು ಹೇಳಬಹುದು. ಅನೇಕ ಪುಸ್ತಕಗಳನ್ನು ಓದುವುದರಲ್ಲಿ ತಾವು ಎಷ್ಟೋ ಸಾರಿ ಹೇಳಬೇಕೆಂದಿರುವ ವಿಷಯವನ್ನು ಬೇರೆ ಯಾರಾದರೂ ಆಗಲೇ ಒಂದು ರೀತಿಯಲ್ಲಿ ಹೇಳಿಬಿಟ್ಟಿದ್ದಾರೆ ಎನಿಸುತ್ತದೆ, ಆದ್ದರಿಂದ ಓದು ಬರಹಕ್ಕೆ ಶತ್ರುವಾಗುತ್ತದೆ ಎಂದು ಅವರ ಅಭಿಪ್ರಾಯ. ಇದಕ್ಕೆ ವಿರುದ್ಧವಾಗಿ ತುಂಬಾ ಬರೆಯುವವರು ಜಾಸ್ತಿ ಓದುವುದಿಲ್ಲ ಎಂದು ಚುಟುಕವನ್ನು ಹಾರಿಸುತ್ತಿದ್ದರು. ಇದೇ ರೀತಿ ಅಧ್ಯಾಪಕನಾದವನಿಗೆ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವಾಗ ಮತ್ತು ಅನೇಕ ಸಾರಿ ತರಗತಿಯಲ್ಲಿ ಪಾಠಮಾಡುವಾಗ ಕೂಡ ಎಷ್ಟೋ ಹೊಸ ವಿಷಯಗಳು ಹೊಳೆದು ಅದನ್ನು ತನ್ನ ಶಿಷ್ಯರಿಗೆ ಬೋಧಿಸಿದರೆ ಅದರಲ್ಲೇ ಸಂತೃಪ್ತಿದೊರಕಿ ಅದು ಕೃತಿಗೆ ಇಳಿಯುವುದೇ ಇಲ್ಲ ಎಂದು ಹೇಳುತ್ತಿದ್ದರು. ಇದರ ಅರ್ಥವೇನೇ ಇದ್ದರೂ ತೀ.ನಂ.ಶ್ರೀಯವರ ಈ ತತ್ವ ಅನುಸರಣೆಯಲ್ಲಿ

ಅವರಿಂದ ಮಾತ್ರ ಬರಬಹುದಾಗಿದ್ದ ಎಷ್ಟೋ ಉದ್ಗ್ರಂಥಗಳು ಕೃತಿಯ ಹಂತಕ್ಕೆ ಇಳಿಯದಿದ್ದುದು ನಮ್ಮ ದುರದೃಷ್ಟ. ಈ ತತ್ವದ ದುರುಪಯೋಗವೂ ಆಗಿ, ತೀ.ನಂ.ಶ್ರೀಯವರು ತರಗತಿಯಲ್ಲಿ ಮಾಡಿದ ಪಾಠದ ಟಿಪ್ಪಣಿಗಳನ್ನೇ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಅವರ ಶಿಷ್ಯರೊಬ್ಬರು ಬೃಹದ್ಗ್ರಂಥವನ್ನು ಬರೆದದ್ದೂ ಉಂಟು. ಆದ್ದರಿಂದ 'Publish or perish' ಎನ್ನುವ ಸೂಕ್ತಿಯ ಅನುಭವವೂ ಅವರಿಗೆ ದಟ್ಟವಾಗಿ ಆಗಿತ್ತು. ಅವರ ಯಾವ ಬರವಣಿಗೆಗೂ ಅವರೇ ತಿಳಿಸಿರುವಂತೆ ಒತ್ತು ಸೇವಿಗೆಯ ಹಾಗೆ ಒಂದು ವಿಧವಾದ ಬಲವಾದ ಪ್ರೇರಣೆ ಬರಬೇಕು.

ನಾನು ಕಂಡಂತೆ ತೀನಂಶ್ರೀಯವರು ಬಹು ಸರಸ ಸಂಭಾಷಣಕಾರರು. ಅವರ ಸ್ನೇಹಿತರ ಗುಂಪು ಮಿತವಾದರೂ ತುಂಬಾ ಹಿತವಾದುದು. ಪು.ತಿ.ನ., ಎ.ಎನ್. ಮೂರ್ತಿರಾವ್, ನಂ. ಶಿವರಾಮಶಾಸ್ತ್ರಿ, ಡಿ.ಎಲ್.ಎನ್., ಬಿ.ಎಸ್. ಕೇಶವನ್, ಗೊರೂರು, ಟಿ.ಪಿ. ಕೃಷ್ಣಾಚಾರ್, ಡಾ. ಕೆ. ರಾಮರಾವ್, ಡಾ. ಎಂ.ವಿ. ಗೋವಿಂದಸ್ವಾಮಿ, ಆರ್.ಎಲ್. ನರಸಿಂಹಯ್ಯ, ದ.ರಾ. ಬೇಂದ್ರೆ, ವಿ.ಕೃ. ಗೋಕಾಕ್, ರಂ.ಶ್ರೀ. ಮುಗಳಿ, ಭಾಷಾಶಾಸ್ತ್ರ ತಜ್ಞರುಗಳಾದ ಎಸ್.ಎಂ. ಕತ್ರೆ, ಭ. ಕೃಷ್ಣಮೂರ್ತಿ, ಎಮಿನೋ, ಗ್ಲೀಸನ್, ಲಿಸ್ಕರ್ ಮತ್ತು ಅವರ ಗುರುವಿನೋಪಾದಿಯಲ್ಲಿದ್ದ ಸುನೀತಿ ಕುಮಾರ್ ಛಟರ್ಜಿ ಮತ್ತು ಶಿಷ್ಯಮಿತ್ರರುಗಳಾದ ದೇಜಗೌ, ಎಚ್.ಎಂ. ಶಂಕರ ನಾರಾಯಣ ರಾವ್, ಎಂ. ಚಿದಾನಂದ ಮೂರ್ತಿ ಮತ್ತು ಇನ್ನು ಹಲವರು ತೀ.ನಂ.ಶ್ರೀ. ಯರಿಗಲ್ಲದೆ ನಮ್ಮ ಸಂಸಾರವರ್ಗದವರಿಗೆಲ್ಲ ಸ್ನೇಹಿತರು. ಈ ಸ್ನೇಹಿತರುಗಳೊಡನೆ ವಿದ್ವತ್ತಿನ ವಿಷಯಗಳನ್ನಾಗಲಿ ಅಥವಾ ಬೇರೆ ವಿಷಯಗಳನ್ನಾಗಲಿ ಮಾತನಾಡುವಾಗ ಅಲ್ಲಿ ಒಂದು ಸುಮಧುರವಾದ ಮತ್ತು ಸರಸವಾದ ವಾತಾವರಣ ಸೃಷ್ಟಿಯಾಗುತ್ತಿತ್ತು. ನಮ್ಮ ತಂದೆಯವರ ಇನ್ನೊಂದು ವಿಶೇಷಗುಣವೆಂದರೆ ಈ ಸರಸ ಸಂಭಾಷಣೆಯಲ್ಲಿ ಭಾಗವಹಿಸಲು ನಮ್ಮನ್ನು ಕರೆಯುತ್ತಿದ್ದುದು. ಅವರ ಚರ್ಚೆಗಳನ್ನು ಕೇಳುವುದಲ್ಲಿಯೇ ನಮ್ಮ ಜ್ಞಾನಭಂಡಾರ ಎಷ್ಟೋ ಬೆಳೆಯುತ್ತಿತ್ತು. ಇಷ್ಟೇ ಅಲ್ಲದೆ ನಮ್ಮ ಮನೆಯವರಿಗಾಗಿಯೇ ಆಗಾಗ ಅವರು ಎಷ್ಟೋ ಕಾವ್ಯಗಳನ್ನು ಓದಿ ಅದರ ವ್ಯಾಖ್ಯಾನ ಮಾಡುತ್ತಿದ್ದರು.

ಇದಲ್ಲದೆ ಸಮಾಜದ ಪ್ರಸಿದ್ಧ ವ್ಯಕ್ತಿಗಳಿಗೂ, ವಿದ್ವಾಂಸರುಗಳಿಗೂ, ಶಿಷ್ಯರಿಗೂ ಮತ್ತು ಬಂಧು ಬಳಗದವರಿಗೂ ತೀ.ನಂ.ಶ್ರೀ.ಯವರಲ್ಲಿ ಅಪಾರ ಗೌರವ, ಪ್ರೀತಿ ಮತ್ತು ವಿಶ್ವಾಸವಿತ್ತು. ಅವರ ವಿದ್ವತ್ತು ಮತ್ತು ಚಿಂತನೆಗಳಿಗೆ ತುಂಬಾ ಬೆಲೆ ಇತ್ತು. ಅವರು ಭಾರತದ ಸಂವಿಧಾನ ಪರಿಷತ್ತಿನ ಭಾಷಾವಿಜ್ಞಾನಿಗಳ ಸಭೆಯಲ್ಲಿ (೧೯೪೯) ಪ್ರತಿನಿಧಿಯಾಗಿ ಅವರು ದೇಶದ ಮುಖ್ಯಸ್ಥರಿಗೆ 'ರಾಷ್ಟ್ರಪತಿ' ಎನ್ನುವ ಶಬ್ದವನ್ನು ಸೂಚಿಸಿದಾಗ, ಅದು ಒಮ್ಮತದಿಂದ ಅಂಗೀಕಾರವಾಗಿ ಅವರಿಗೆ 'ರಾಷ್ಟ್ರಪತಿ'ಯೆಂದು ನಾಮಕರಣವಾಯಿತು.

ನಾನು ಕಂಡಂತೆ ನಮ್ಮ ತಂದೆತಾಯಿಯವರದು ಒಂದು ರೀತಿಯ ಆದರ್ಶ ದಾಂಪತ್ಯ. ಇಬ್ಬರೂ ತುಂಬಾ ಉದಾರ ಭಾವನೆಯುಳ್ಳವರು. ನಮ್ಮ ಮನೆಯಲ್ಲಿ ಬಂಧುಗಳನೇಕರು ಬೇರೆ ಬೇರೆ ಕಾಲದಲ್ಲಿ ಅವರ ವಿದ್ಯೆ ವ್ಯಾಸಂಗಕ್ಕಾಗಿ ಇರುತ್ತಿದ್ದರು. ಇವರೆಲ್ಲರಲ್ಲೂ ದಂಪತಿಗಳಿಗೆ

ತುಂಬಾ ಪ್ರೀತಿವಿಶ್ವಾಸ. ಬಂಧುಗಳಿಗೂ ಇವರಲ್ಲಿ ತುಂಬಾ ಪ್ರೀತಿ ಗೌರವ. ಇಂದಿಗೂ ಇವರೆಲ್ಲರಿಗೂ ನಮ್ಮ ಮನೆ ತೀನಂಶ್ರೀಯವರ ಮನೆಯೆಂದೇ ಭಾವನೆ. ಈಗಲೂ ನಮ್ಮ ಬಂಧುವರ್ಗದವರ, ಸ್ನೇಹಿತರ ಮತ್ತು ಅನೇಕ ವಿದ್ಯಾರ್ಥಿಗಳ ಮನೆಯಲ್ಲಿ ತೀನಂಶ್ರೀಯವರ ಫೋಟೋ ಇದ್ದು ಅದಕ್ಕೆ ಪೂಜೆ ಸಲ್ಲಿಸುವವರೂ ಇದ್ದಾರೆ. ತೀ.ನಂ.ಶ್ರೀಯವರಿಗೆ ಬೇರೆಯವರ ನಂಬಿಕೆ ಸಂಪ್ರದಾಯಗಳಲ್ಲೂ ಇದೇ ಉದಾರಭಾವನೆ. ತಾವು ಅಷ್ಟೊಂದು ದೈವಭಕ್ತಿಯನ್ನು ಪ್ರದರ್ಶಿಸುವವರಲ್ಲದಿದ್ದರೂ ಮನೆಯಲ್ಲಿ ಸಂಪ್ರದಾಯದಂತೆ ನಡೆಯಬೇಕಾಗಿದ್ದ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು ಮತ್ತು ಪೂರ್ಣ ಸಹಕಾರ ಕೊಡುತ್ತಿದ್ದರು. ದೇವರನ್ನು ಒಂದು ಮುಗ್ಧ ಹಸುಳೆಗೆ ಹೋಲಿಸುತ್ತಿದ್ದರು. ಗಾಂಧೀಜಿಯವರಲ್ಲಿ ಅವರಿಗೆ ಅಪಾರ ಪೂಜ್ಯ ಭಾವನೆ. ಗಾಂಧೀಜಿ ಅವರಿಗೆ ಬುದ್ಧ, ಏಸುಕ್ರಿಸ್ತರ ಸಾಲಿನಲ್ಲಿ ನಿಂತ ಮಹಾತ್ಮ. ಗಾಂಧೀಜಿಯ ಕೊಲೆಯಾದಾಗಲಂತೂ ಅದರ ಆಘಾತದಿಂದ ಅವರಿಗೆ ಚೇತರಿಸಿಕೊಳ್ಳಲು ಕೆಲವು ವರ್ಷಗಳೇ ಹಿಡಿಯಿತು.

ನಾನು ಕಂಡಂತೆ ತೀ.ನಂ.ಶ್ರೀಯವರು ಮೌಲಿಕವಾದ ಜೀವನದಲ್ಲಿ ನಂಬಿಕೆಯಿಟ್ಟು ಅದನ್ನು ನಡೆಸಿದ ವ್ಯಕ್ತಿ. ಅವರು ದೇಶ, ವಿದೇಶಗಳಲ್ಲಿ ಸಾಕಷ್ಟು ಪ್ರವಾಸ ಮಾಡಿದ್ದರು. ಮತ್ತು ವಿವಿಧ ಸಮಾಜಗಳನ್ನು ಕಂಡು ಅಲ್ಲಿಯ ಒಳ್ಳೆಯ ಅಂಶಗಳನ್ನು ಗ್ರಹಿಸಿದ್ದರು. ನನಗೆ ಎಷ್ಟೋ ಸಾರಿ ಹೇಳಿದ್ದರು, ಜೀವನದಲ್ಲಿ ಹಣಕ್ಕೆ ಎರಡನೆಯ ಸ್ಥಾನ ಉಚಿತವೇ ಹೊರತು ಮೊದಲನೆಯದಲ್ಲ. ಮೊಲನೆಯ ಸ್ಥಾನ ಹೆಚ್ಚಿನ ಮೌಲಿಕ ಸಾಧನೆಗೆ ಮೀಸಲಾಗಿರಬೇಕು ಎನ್ನುವುದು ಅವರ ದೃಢ ನಿರ್ಧಾರ. ಇದರಂತೆ ಹೆಚ್ಚಿನ ಹಣ ದೊರಕಬಹುದಾದ ಇತರ ಹುದ್ದೆ, ಸನ್ಮಾನ, ಬಹುಮಾನ, ಪಾರಿತೋಷಕಗಳು ಎಲ್ಲವಕ್ಕೂ ದಿಟ್ಟವಾಗಿ ಬೆನ್ನುತಿರುಗಿಸಿ ಅವರಿಗೆ ಪ್ರಿಯವಾದ ಅಧ್ಯಾಪಕವೃತ್ತಿ ಮತ್ತು ಮೌಲಿಕವಾದ ಜೀವನದ ಕಡೆ ಮನಸ್ಸು ಮಾಡಿದರು. ಈ ಮೌಲಿಕ ತತ್ವ ಪ್ರತಿಪಾದನೆಯಲ್ಲಿ ಯಾವ ಆಮಿಷಕ್ಕೂ ಒಳಗಾದವರಲ್ಲ. ಅಕಸ್ಮಾತ್ತಾಗಿ ಸ್ಥಳ ಸಿಗದೆ ಮೊದಲನೆಯ ಶ್ರೇಣಿಯಲ್ಲಿ ಪ್ರಯಾಣ ಮಾಡದೆ ಎರಡನೆಯ ಶ್ರೇಣಿಯಲ್ಲಿ ಪ್ರಯಾಣ ಮಾಡಿದ್ದರೆ ಅವರು ಎರಡನೆಯ ಶ್ರೇಣಿಯ ಪ್ರಯಾಣ ಭತ್ಯೆಯನ್ನು ಪಡೆಯುತ್ತಿದ್ದರೇ ಹೊರತು ಮೊದಲನೆಯದನ್ನಲ್ಲ. ಈ ಸಂದರ್ಭದಲ್ಲಿ ಈಚೆಗೆ ನನಗೆ ಗೊತ್ತಾದ ಒಂದು ವಿಷಯವನ್ನು ತಿಳಿಸಿದರೆ ಅಪ್ರಕೃತವಾಗಲಾರದು. ನಾನು ಪಿಯುಸಿ ಪರೀಕ್ಷೆಗೆ ಕುಳಿತ ವರ್ಷ ನಮ್ಮ ತಂದೆ ಪ್ರಾಧ್ಯಾಪಕ ಅಧಿಕಾರದ ಮೇಲೆ ಕನ್ನಡ ಪರೀಕ್ಷಕ ಮಂಡಲಿಯ ಅಧ್ಯಕ್ಷರಾಗಿದ್ದರೂ ಆ ಸಭೆಯಲ್ಲಿ ಭಾಗವಹಿಸಲಿಲ್ಲ. ನಾನು ಪರೀಕ್ಷೆಯನ್ನು ಮುಗಿಸಿಕೊಂಡು ಬಂದು ಅವರಿಗೆ ಪ್ರಶ್ನೆಪತ್ರಿಕೆಯನ್ನು ತೋರಿಸಿದಾಗಲೆ ಅವರು ಮೊದಲನೆಯ ಬಾರಿಗೆ ಅದನ್ನು ನೋಡಿದ್ದು. ಅದನ್ನು ಓದಿನೋಡಿ ಪ್ರಶ್ನೆ ಪತ್ರಿಕೆ ಚೆನ್ನಾಗಿದೆ ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದ್ದರು ಅಷ್ಟೆ. ಈಗ ೮–೧೦ ವರ್ಷಗಳ ಹಿಂದೆ ಶ್ರೀ ಜಿ.ಪಿ. ರಾಜರತ್ನಂ ಅವರು ನನ್ನೊಡನೆ ಹೇಳಿದರು : "ನಿನಗೆ ಗೊತ್ತಿಲ್ಲದಿರಬಹುದು. ನೀನು ಪಿಯುಸಿ ಪರೀಕ್ಷೆಗೆ ಕುಳಿತ ವರ್ಷ ನಾನು ಪ್ರಶ್ನೆ ಪತ್ರಿಕೆ ಕೊಟ್ಟಿದ್ದೆ. ನಾನು ಅದೇ ಮೊದಲಬಾರಿಗೆ ಪಿಯುಸಿ ಪ್ರಶ್ನೆಪತ್ರಿಕೆ ಮಾಡುತ್ತಿದ್ದುದರಿಂದ, ತೀನಂಶ್ರೀ ಸ್ನೇಹಿತರೆಂದು 'ನಿಮ್ಮ ಹತ್ತಿರ ಪ್ರಶ್ನೆಗಳನ್ನು ಹೇಳುವುದಿಲ್ಲ.

ಆದರೆ ಪ್ರಶ್ನೆ ಪತ್ರಿಕೆಯ ಸಾಮಾನ್ಯ ಸ್ವರೂಪ ಹೇಗಿರಬೇಕೆಂದು ತಿಳಿಸಿ' ಎಂದಾಗ ತೀನಂಶ್ರೀ ಹೇಳಿದರು, 'ರಾಜರತ್ನಂ ನಿಮಗೆ ಗೊತ್ತಿರುವಂತೆ ಈ ವರ್ಷ ನಾಗಭೂಷಣನೇ ಪಿಯುಸಿ ಪರೀಕ್ಷೆಗೆ ಕುಳಿತಿದ್ದಾನೆ. ಆದ್ದರಿಂದ ಅದರ ಸ್ಥೂಲಸ್ವರೂಪ ಹೇಗಿರಬೇಕೆಂದು ನಿಮ್ಮೊಡನೆ ಚರ್ಚಿಸಿದರೂ ಕೂಡ ಆ ಪ್ರಶ್ನೆಪತ್ರಿಕೆಯ ಬಗ್ಗೆ ನನಗೆ ಸ್ವಲ್ಪ ತಿಳಿವಳಿಕೆ ಬಂದಂತಾಗುತ್ತದೆ. ಅದು ಸರಿಯಲ್ಲ ನನ್ನನ್ನು ಕ್ಷಮಿಸಿ' ಎಂದು".

ತೀನಂಶ್ರೀಯವರಿಗೆ ವಿದ್ಯಾರ್ಥಿದೆಸೆಯ ಪಾರಿತೋಷಕಗಳನ್ನು ಸಂಪಾದಿಸಿದ್ದನ್ನು ಬಿಟ್ಟು ಉಳಿದ ಜೀವಿತಕಾಲದಲ್ಲಿ ಯಾವ ಪದವಿ ಸನ್ಮಾನಗಳೂ ಒದಗಿ ಬರಲಿಲ್ಲ. ಈ ವಿಷಯಕ್ಕಾಗಿ ಅವರು ಚಿಂತಿಸಿದ್ದನ್ನು ನಾನು ಒಮ್ಮೆಯೂ ನೋಡಲಿಲ್ಲ. ಜ್ಞಾನಾರ್ಜನೆ ಮತ್ತು ಜ್ಞಾನದಾನ ಅವರ ಜೀವನದ ಒಂದು ಯಾತ್ರೆಯಾಗಿತ್ತು. ದ.ರಾ. ಬೇಂದ್ರೆಯವರ "ರಸವೆ ಜನನ, ವಿರಸ ಮರಣ, ಸಮರಸವೆ ಜೀವನ" ಅವರಿಗೆ ಬಹಳ ಪ್ರಿಯವಾದ ಸಾಲುಗಳು. ಜೀವನದ ಎಲ್ಲ ವಿಷಯಗಳಲ್ಲೂ ಸಮರಸವನ್ನು ಸಂಪಾದಿಸುವುದೇ ಅವರ ಅಭಿಲಾಷೆ.

ನನಗೆ ತೀನಂಶ್ರೀ ಹಿರಿಯ ಸ್ನೇಹಿತರು. ಅವರು ತಂದೆಯ ಪ್ರೀತಿ ವಿಶ್ವಾಸಗಳನ್ನು ನನ್ನ ಮೇಲೆ ಸಾಕಷ್ಟು ತೋರಿದರೇ ಹೊರತು, ಅದರ ಅಧಿಕಾರದ ಸೋಂಕನ್ನು ನಾನು ಎಂದೂ ಕಾಣಲಿಲ್ಲ. 'ಬಾಳುವಷ್ಟು ಕಾಲವು ಕಲಿಯುತ್ತಲೇ ಇರಬೇಕು' ಎನ್ನುವ ಅವರ ಉಕ್ತಿಯಂತೆ ನನಗೆ ಮಾರ್ಗದರ್ಶನ ಕೊಡುವುದರ ಜೊತೆಗೆ ನನ್ನಿಂದ ಏನಾದರೂ ಕಲಿಯುವುದಿದೆಯೇ ಎನ್ನುವುದರ ಮೇಲೂ ಅವರ ಗಮನ ಸದಾ ಇರುತ್ತಿತ್ತು. ನಾನು ಅವರಿಗೆ ಬರೆದಿದ್ದ ಒಂದು ಪತ್ರದಲ್ಲಿ ಉಪಯೋಗಿಸಿದ್ದ 'ತಡೆತಡೆ'ಗಳಿಲ್ಲದೆ ಎನ್ನುವ ಪದ ಅವರ ಭಾಷಾಶಾಸ್ತ್ರಜ್ಞನ ದೃಷ್ಟಿಗೆ ಬಿದ್ದು ಅದನ್ನು ಮೆಚ್ಚಿ ಕಾಗದ ಬರೆದದ್ದು ಇನ್ನೂ ನೆನಪಿದೆ. ಈ ಸವಿನೆನಪುಗಳನ್ನು ಮೆಲುಕು ಹಾಕುತ್ತ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪಿತೃಭ್ಯೋ ನಮಃ ಗುರುಭ್ಯೋ ನಮಃ

(೧೯೮೬ರಲ್ಲಿ ಬೆಂಗಳೂರು ಆಕಾಶವಾಣಿಯಲ್ಲಿ ಮಾಡಿದ ಭಾಷಣ)

ನಮ್ಮ ತಂದೆ

ನಾಗರತ್ನ ಚಂದ್ರಶೇಖರಯ್ಯ

●

ನಮ್ಮ ತಂದೆಯವರ ವಿಷಯವಾಗಿ ಏನನ್ನಾದರೂ ಬರೆಯಬೇಕೆಂದು ಸಂಪಾದಕರು ಕೇಳಿದಾಗ ಎಲ್ಲಿಂದ ಪ್ರಾರಂಭಮಾಡಬೇಕೆಂಬುದೇ ಒಂದು ಸಮಸ್ಯೆಯಾಯಿತು. ಸಾಧಾರಣ ನಾನು ಆರು, ಏಳು ವರುಷಗಳ ಹುಡುಗಿಯಾಗಿದ್ದಾಗಿನಿಂದಲೂ ಅವರೊಡನೆ ಮಾತನಾಡು ತ್ತಿದ್ದುದು, ಕಾಲಕಳೆಯುತ್ತಿದ್ದುದೆಲ್ಲ ಹೆಚ್ಚು ಕಡಿಮೆ ಜ್ಞಾಪಕದಲ್ಲಿದೆ. ನಮಗೆಲ್ಲ ನಮ್ಮ ತಂದೆಯನ್ನು ಕಂಡರೆ ತುಂಬಾ ಪ್ರೀತಿ, ಗೌರವ. ಅದರ ಜೊತೆಯಲ್ಲೇ ಸ್ವಲ್ಪ ಭಯವೂ ಕೂಡ! ನಾವು ಏನಾದರೂ ಸಣ್ಣ ಪುಟ್ಟ ತಪ್ಪುಗಳನ್ನು ಮಾಡಿದಾಗ ಅವರು ಪ್ರತ್ಯಕ್ಷವಾಗಿ ದಂಡಿಸದಿದ್ದರೂ ನಮ್ಮ ವರ್ತನೆಯಿಂದ ಅವರು ಮನಸ್ಸಿಗೇನಾದರೂ ನೊಂದುಕೊಂಡರೋ ಏನೋ ಎಂದು ನಾವು ಪರಿತಪಿಸುತ್ತಿದ್ದು, ಕೊನೆಗೆ ನಮ್ಮ ತಪ್ಪುಗಳನ್ನು ನಾವೇ ಒಪ್ಪಿಕೊಂಡು ಅವರಿಂದ ಕ್ಷಮೆಯನ್ನು ಪಡೆದ ಮೇಲೇ ನಮ್ಮ ಮನಸ್ಸಿಗೆ ಸಮಾಧಾನ.

ನನಗೆ ನಮ್ಮ ತಂದೆಯವರನ್ನು ಜ್ಞಾಪಿಸಿಕೊಂಡಾಗಲೆಲ್ಲ ಮೊದಲು ಮನಸ್ಸಿಗೆ ಬರುವ ವಿಚಾರವೆಂದರೆ ಅವರ ಸಹೃದಯತೆ, ಅಂತಃಕರಣ. ಅದರಲ್ಲೂ ಹೆಣ್ಣು ಮಕ್ಕಳೆಂದರೆ ಅವರಿಗೆ ತುಂಬಾ ಸಹಾನುಭೂತಿ. ನಮ್ಮ ದೇಶದಲ್ಲಿ ಹಿಂದೆ ಹೆಂಗಸರನ್ನು ಸಾಕಷ್ಟು ಗೌರವದಿಂದ, ಸಮಾನತೆಯಿಂದ ನೋಡುತ್ತಿರಲಿಲ್ಲವಲ್ಲಾ ಎನ್ನುವುದೇ ಅವರ ಕೊರಗು. ಅದನ್ನು ತಮ್ಮ ಕೈಯಲ್ಲಿ ಸಾಧ್ಯವಾದಷ್ಟೂ ನಿವಾರಿಸಬೇಕೆನ್ನುವುದು ಅವರ ಹಟ. ಯಾವ ಹೆಣ್ಣು ಮಕ್ಕಳೇ ಆಗಲಿ, ಮನೆಯವರಾಗಲೀ, ಸ್ನೇಹಿತರಾಗಲೀ, ಶಿಷ್ಯೆಯರಾಗಲೀ ತಮ್ಮ ಹತ್ತಿರ ಬಂದರೆ ಅವರ ಕಷ್ಟಸುಖಗಳನ್ನೆಲ್ಲಾ ನಿಧಾನವಾಗಿ ಕೇಳಿ ಎಷ್ಟೋ ಸಮಾಧಾನದ ಮಾತುಗಳನ್ನಾಡಿ ಕಳುಹಿಸುತ್ತಿದ್ದರು. ಎಷ್ಟೋ ಜನ ಅವರ ಹತ್ತಿರ ಬಂದು ತಮ್ಮ ಸಂಕಟಗಳನ್ನೆಲ್ಲಾ ಹೇಳಿಕೊಂಡು ಅವರ ಪ್ರೀತಿಯ ಸಹಾನುಭೂತಿಯ ಮಾತುಗಳಿಂದ ತಮ್ಮ ಕಷ್ಟಗಳನ್ನು ಆ ವೇಳೆಗಾದರೂ ಮರೆತು ಹೋಗಿದ್ದು ನನಗೆ ನೆನಪಿದೆ. ಕೊನಗೆ ಹಾಲಿನವರು, ಕೆಲಸದವರುಗಳನ್ನು ಯಾರಾದರೂ ಸ್ವಲ್ಪ ಒರಟಾಗಿ 'ಏನೋ' ಎಂದರೂ ಅವರಿಗೆ ಸಿಟ್ಟು ಬರುತ್ತಿದ್ದಿತು. ಅವರುಗಳನ್ನೂ 'ಏನಮ್ಮಾ' ಎಂದೇ ನಿಧಾನವಾಗಿ ಮಾತನಾಡಿಸಬೇಕು ಎಂದು ಮನೆಯಲ್ಲಿ ಹೇಳುತ್ತಿದ್ದರು. ಎಂಥಾ ಪರಿಸ್ಥಿತಿಯಲ್ಲೂ ಅವರ ಬಾಯಿಂದ ಯಾರ ವಿಚಾರವಾಗೂ ಒಂದು ಕೆಟ್ಟ ಮಾತು ಬಂದಿದ್ದನ್ನು ನಾನು ನೋಡಲಿಲ್ಲ. ಏನಾದರೂ ಮನಸ್ಸಿಗೆ ತುಂಬಾ ನೋವಾದರೆ ತಾವೇ ಒಳಗೇ ಕೊರಗಿ ಕೊಳ್ಳುತ್ತಿದ್ದರೇ ಹೊರತು ಅದಕ್ಕೆ ಕಾರಣರಾದವರನ್ನು ಎಂದೂ ನಿಂದಿಸಲಿಲ್ಲ.

ಅವರ ಪಾಶ್ಚಾತ್ಯ ಪ್ರವಾಸದಲ್ಲೂ ಅವರಿಗೆ ತುಂಬಾ ಪ್ರಿಯವಾದ ವಿಷಯಗಳೆಂದರೆ ಅಲ್ಲಿನ ಅತಿಥಿ ಸತ್ಕಾರ, ಹೆಣ್ಣುಮಕ್ಕಳಿಗಿರುವ ಸ್ವಾತಂತ್ರ್ಯ, ಅಲ್ಲಿ ಮನೆಯನ್ನು ಇಟ್ಟುಕೊಳ್ಳುವ ಒಪ್ಪ, ಓರಣ ಮುಂತಾದವುಗಳು. ಅವರು ಇಂಗ್ಲೆಂಡ್‌ನಲ್ಲಿ ಹಳ್ಳಿಯೊಂದರಲ್ಲಿ ತಮ್ಮ ಸ್ನೇಹಿತ ರೊಬ್ಬರ ಮನೆಗೆ ಹೋಗಿದ್ದಾಗ ಮನೆಯ ಯಜಮಾನ ಹಿಮದಿಂದ (snow) ತುಂಬಿಕೊಂಡಿದ್ದ ಇವರ ಪಾದರಕ್ಷೆಗಳನ್ನು ಸಹ ತಾನೇ ಕೈಯಿಂದ ಒರೆಸಿ ಸ್ವಚ್ಛಮಾಡಿದುದನ್ನು ಹೇಳುತ್ತಿದ್ದರು. ಅಲ್ಲಿ (ಅಮೆರಿಕಾದಲ್ಲಿ) ಹೆಂಗಸರು ತಮ್ಮ ಗಂಡಂದಿರನ್ನು "Darling, will you please make us a cup of coffee?" ಎನ್ನುತ್ತಿದ್ದುದನ್ನು ಜ್ಞಾಪಿಸಿಕೊಂಡು ನಮ್ಮ ದೇಶದಲ್ಲೂ ಆ ರೀತಿಯ ಸ್ಥಿತಿ ಬಂದೀತೇ ಎನ್ನುತ್ತಿದ್ದರು. ಆದರೆ ಹಾಸ್ಯವಾಗಿ ಗಂಡಸರಾಗಿ ಹುಟ್ಟುವುದಕ್ಕೆ ಇಂಡಿಯಾ ದೇಶವೇ ಉತ್ತಮ ಎಂದೂ ಹೇಳುತ್ತಿದ್ದರು! ಆದರೆ ಅಲ್ಲಿ ವಯಸ್ಸಾದ ಮುದುಕರುಗಳ ಸಮಸ್ಯೆ ಮಾತ್ರ ಅವರನ್ನು ತುಂಬಾ ಕೊರೆಯುತ್ತಿತ್ತು. ನಮ್ಮ ದೇಶದಲ್ಲಾದರೆ ತಂದೆ, ತಾಯಿಯರು ವಯಸ್ಸಾದ ಮೇಲೆ ಅವರ ಮಕ್ಕಳ ಜೊತೆ ಇರುತ್ತಾರೆ. ಆದರೆ ಅಲ್ಲಿ ಮದುವೆಯಾದ ತಕ್ಷಣ ಗಂಡ, ಹೆಂಡತಿ ಬೇರೆ ಸಂಸಾರ ಪ್ರಾರಂಭಿಸಿಬಿಡುತ್ತಾರೆ. ವಯಸ್ಸಾಗುತ್ತಾ ಆಗುತ್ತಾ ತಂದೆ ತಾಯಿಯರಿಗೆ ಮಕ್ಕಳೊಡನೆ ಇರಬೇಕೆಂಬ ಹಂಬಲವೂ ಜಾಸ್ತಿ ಆಗುತ್ತದೆ, ಕೈಲಾಗದ ಕಾಲದಲ್ಲಿ ನೋಡಿಕೊಳ್ಳುವವರು ಯಾರೂ ಇರುವುದಿಲ್ಲ. ಒಂದು ದಿನ ಇವರು ನ್ಯೂಯಾರ್ಕ್‌ನ ಬೀದಿ ಯಲ್ಲಿ ಹೋಗುತ್ತಿದ್ದಾಗ, ಒಬ್ಬ ಮುದಕಿ ಅಂಗಡಿಗೆ ಹೋಗಿ ತಾನೇ ಸಾಮಾನುಗಳನ್ನು ತರುತ್ತಿದ್ದವಳು ದಾರಿಯಲ್ಲಿ ಸುಸ್ತಾಗಿ ಬಿದ್ದುಬಿಟ್ಟಿದ್ದಳಂತೆ. 'ಅದನ್ನು ನೋಡಿ ತುಂಬಾ ಸಂಕಟ ವಾಯಿತು, ನಾಗರಿಕತೆಯಲ್ಲಿ ಎಷ್ಟು ಮುಂದುವರೆದಿದ್ದರೂ ಈ ವಿಚಾರಗಳಲ್ಲಿ ನಮ್ಮ ದೇಶವೇ ವಾಸಿ' ಎಂದು ಹೇಳುತ್ತಿದ್ದರು. ಈಗೀಗ ಇಲ್ಲೂ ಈ ಸಮಸ್ಯೆ ಶುರುವಾಗುತ್ತಿದೆ, ಮುಂದಿನ ಜನಾಂಗಕ್ಕೆ ಇದರ ಕಷ್ಟ ತಪ್ಪಿದ್ದಲ್ಲಾ ಎನ್ನುವುದೇ ಅವರ ಯೋಚನೆ.

ಅವರ ಜೀವನದ philosophyಯೇ ಎಲ್ಲರೂ ಮೆಚ್ಚುವಂತಹದು. ಹೇಳಿದ್ದನ್ನು ಮಾಡಿ ತೋರಿಸುವಂತಹ ಗುಣ. ಬರೀ ಬಾಯಿಮಾತಿನ ಉಪದೇಶ ಎಂದೂ ಅವರ ಬಳಿ ಸುಳಿಯುತ್ತಿರ ಲಿಲ್ಲ. ಚಿಕ್ಕ ಮಕ್ಕಳ ಎದುರಿಗೂ ಎಂದೂ ಅವರು ತಮಾಷೆಗಾಗಿಯೂ ಸುಳ್ಳು ಹೇಳುತ್ತಿರಲಿಲ್ಲ. ನಾನು ಚಿಕ್ಕವಳಾಗಿದ್ದಾಗ ಒಂದು ಸಲ "ಅಣ್ಣ, ನನಗೆ ಒಂದು ರೇಷ್ಮೆಯ ಲಂಗ, ಜಂಪರ್ ಬೇಕು. ನನ್ನ ಸ್ನೇಹಿತೆಯರೆಲ್ಲಾ ಹಾಕಿಕೊಂಡಿದ್ದಾರೆ" ಎಂದು ಹೇಳಿದೆ. ಆಗ ಅವರು "ಈಗ ನನ್ನ ಹತ್ತಿರ ರೇಷ್ಮೆಯ ಲಂಗ ಹೊಲಿಸುವಷ್ಟು ಅನುಕೂಲ ಇಲ್ಲಮ್ಮ, ಬೇಕಾದರೆ ರೇಷ್ಮೆಯ ಜಂಪರ್ ಮಾತ್ರ ಹೊಲಿಸುತ್ತೇನೆ" ಎಂದು ಹೇಳಿ ಅದರಂತೆ ಜಂಪರ್ ಹೊಲಿಸಿಕೊಟ್ಟರು. ನಾವು ಮಕ್ಕಳೊಡನೆ ಎಷ್ಟೋ ಸಲ ಮಾಡುವಂತೆ ಆ ಘಳಿಗೆಯಲ್ಲಿ ಸಮಾಧಾನಮಾಡುವುದಕ್ಕಾಗಿ ಎರಡನ್ನೂ ಹೊಲಿಸಿಕೊಡುತ್ತೇನೆ ಎಂದು ಹೇಳಿ ನಂತರ ಅದನ್ನು ಮರೆತುಬಿಡುವುದು ಅವರ ಸ್ವಭಾವದಲ್ಲೇ ಬಂದಿರಲಿಲ್ಲ. ಮಹಾತ್ಮ ಗಾಂಧಿಯವರನ್ನು ಕಂಡರೆ ಅವರಿಗೆ ತುಂಬಾ ಅಚ್ಚುಮೆಚ್ಚು. ಗಾಂಧೀಜಿಯವರ ನಿಸ್ವಾರ್ಥ ಸೇವೆಯನ್ನು ನೆನೆಸಿಕೊಂಡು ಸಾವಿರ ವರ್ಷಗಳಿಗೊಬ್ಬ ಅಂತಹ ಮಹಾತ್ಮ ಹುಟ್ಟಿಬರುವುದೂ ಕಷ್ಟ ಎಂದು ಹೇಳುತ್ತಿದ್ದರು. ತಾವೂ ಅದೇ ರೀತಿ ಆದರ್ಶಗಳನ್ನು ಪಾಲಿಸುತ್ತಿದ್ದರು.

ಮಕ್ಕಳನ್ನೂ ಅವರು ತಮ್ಮ ಸ್ನೇಹಿತರಂತೇ ಕಾಣುತ್ತಿದ್ದರು. ನಮ್ಮ ಅಭಿಪ್ರಾಯಗಳಿಗೂ ತುಂಬಾ ಬೆಲೆ ಕೊಡುತ್ತಿದ್ದರು. ತಮ್ಮದು ಏನಾದರೂ ತಪ್ಪಿದ್ದರೆ ನಾವು ಅದನ್ನು ಹೇಳಿದರೆ ಅವರಿಗೆ ತುಂಬಾ ಸಂತೋಷ. ಆ ಕ್ಷಣವೇ ತಿದ್ದಿಕೊಳ್ಳುತ್ತಿದ್ದರು. ನಮ್ಮ ವಿದ್ಯಾಭ್ಯಾಸದ ವಿಷಯದಲ್ಲೂ ಪರೋಕ್ಷವಾಗಿ ತುಂಬಾ ಸಹಾಯ ಮಾಡುತ್ತಿದ್ದರು. ಏನಾದರೂ ಕ್ಲಿಷ್ಟ ಸಮಸ್ಯೆಗಳಿದ್ದರೆ ಅದನ್ನು ನಾವು ಕೇಳಿದರೆ ವಿವರಿಸಿ ಹೇಳುತ್ತಿದ್ದರು. ಕಾಲೇಜ್‌ನಲ್ಲಿ ಮೊದಲನೆಯ ತರಗತಿಯಲ್ಲಿದ್ದಾಗ ನನಗೆ ಒಂದು ಸಲ Algebra ದಲ್ಲಿ ಒಂದು ಭಾಗ ಅರ್ಥವಾಗದಿದ್ದಾಗ, ತಾವು ಆ ಭಾಗವನ್ನು ಓದಿ ಬಹಳ ದಿನಗಳಾಗಿ ಮರೆತುಹೋಗಿದ್ದರೂ ನನಗೋಸ್ಕರ ಒಂದೆರಡು ಘಂಟೆಗಳು ಕುಳಿತು ಅದನ್ನು ತಾವು ಮೊದಲು ಓದಿ ಅರ್ಥಮಾಡಿಕೊಂಡು ನಂತರ ನನಗೆ ಅರ್ಥವಾಗುವಂತೆ ಉದಾಹರಣೆಗಳ ಮೂಲಕ ತಿಳಿಸಿದರು. ಆದರೆ ಚಿಕ್ಕವಯಸ್ಸಿನಿಂದಲೂ ನಮ್ಮ ಪಾಠಗಳನ್ನು ನಾವೇ ಓದಿಕೊಂಡು, ಅರ್ಥ ಮಾಡಿಕೊಂಡು ತಿಳಿಯದಿದ್ದ ಭಾಗಗಳನ್ನು ಮಾತ್ರ ದೊಡ್ಡವರ ಹತ್ತಿರ ಹೇಳಿಸಿಕೊಳ್ಳಬೇಕೆನ್ನುವುದೇ ಅವರ ಅಭಿಮತ. ಮನೆಯಲ್ಲಿ ಮೇಷ್ಟರನ್ನಿಡುವ ಪದ್ಧತಿಯೇ ನಮ್ಮ ಮನೆಯಲ್ಲಿ ಇರಲಿಲ್ಲ. ಅದರಿಂದ ಮಕ್ಕಳು ತಾವೇ ಸ್ವತಃ ಕಷ್ಟಪಟ್ಟು ಓದುವ ಅಭ್ಯಾಸ ತಪ್ಪಿ ಹೋಗುತ್ತದೆ ಎಂದು ಅವರ ಭಾವನೆ. ನಮ್ಮ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವೂ ನಮಗೆ ಪೂರ್ತಿ ಇತ್ತು. ಅವರ ಮನಸ್ಸಿನಲ್ಲಿ ನಾನಾಗಲೀ ಅಥವಾ ನನ್ನ ತಮ್ಮನಾಗಲೀ ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಓದಬೇಕೆಂದು ಇತ್ತೆಂದು ಕಾಣುತ್ತದೆ. ಆದರೆ ನಮ್ಮಿಬ್ಬರ ಒಲವೂ ವಿಜ್ಞಾನದ ಕಡೆಗಿದ್ದುದರಿಂದ, ಎಂದೂ ಆ ವಿಚಾರವಾಗಿ ಒತ್ತಾಯ ಮಾಡಲಿಲ್ಲ. ಈಚೆಗೆ ನಮ್ಮ ದೊಡ್ಡಪ್ಪನ ಮೊಮ್ಮಗ ಚಿ॥ ಶಂಕರನಾರಾಯಣ ಕಾಲೇಜಿನಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ಆರಿಸಿಕೊಂಡಾಗ ಅವರಿಗೆ ತುಂಬಾ ಸಂತೋಷ. ಮನೆಯಲ್ಲಿ ಒಬ್ಬನಾದರೂ ನನ್ನ ದಾರಿಯನ್ನು ತುಳಿಯುತ್ತಿದ್ದಾನಲ್ಲಾ ಎಂದು!

ದೇವರು, ಜಾತಿ, ಮತಗಳು (Religion) ಮುಂತಾದ ವಿಷಯಗಳಲ್ಲೂ ಅವರಿಗೆ ಹೆಚ್ಚು ನಂಬಿಕೆ ಇರಲಿಲ್ಲ. ಆದರೆ ಇನ್ನೊಬ್ಬರ ನಂಬಿಕೆಗಳಿಗೆ ಎಂದೂ ಅಡ್ಡಿಪಡಿಸುತ್ತಿರಲಿಲ್ಲ. 'ಕೆಲವು ಸಲ ನಮ್ಮ ಅಭಿಪ್ರಾಯಗಳು ಭಿನ್ನವಾಗಿದ್ದರೂ ಇನ್ನೊಬ್ಬರ ಮನಸ್ಸಿಗೆ ನೋವಾಗದಿರಲೆಂದು ನಾವು ಅವುಗಳನ್ನು ಅನುಸರಿಸಬೇಕಾಗುತ್ತದೆ. ಉದಾಹರಣೆಗೆ ಹಬ್ಬದ ದಿನ ದೇವರ ಪೂಜೆ ಮಾಡುವುದು ಮುಂತಾದವು. ಅದರಿಂದ ನಮಗೆ ತೊಂದರೆಯೇನೂ ಇಲ್ಲ' ಎನ್ನುತ್ತಿದ್ದರು. ಆದರೆ ತಮ್ಮ ತಂದೆ, ತಾಯಿಯರ ಶ್ರಾದ್ಧವನ್ನು ತುಂಬಾ ಶ್ರದ್ಧೆಯಿಂದ ಮಾಡುತ್ತಿದ್ದರು. "ನನಗೆ ಅದರಲ್ಲಿ ನಂಬಿಕೆಯಿಲ್ಲದಿದ್ದರೂ ಅವರುಗಳಿಗೆ ಆ ವಿಚಾರದಲ್ಲಿ ತುಂಬಾ ನಂಬಿಕೆಯಿದ್ದುದರಿಂದ ಅದನ್ನು ಮಾಡುವುದರಿಂದ ನನ್ನ ಮನಸ್ಸಿಗೆ ಸಮಾಧಾನ" ಎಂದು ಹೇಳುತ್ತಿದ್ದರು.

ನಮ್ಮ ತಂದೆಯ ಸ್ನೇಹಿತರುಗಳು ಶ್ರೀ ಪು.ತಿ. ನರಸಿಂಹಾಚಾರ್, ಶ್ರೀ. ಎ.ಎನ್. ಮೂರ್ತಿರಾಯರು, ಶ್ರೀ.ದ.ರಾ. ಬೇಂದ್ರೆ ಮುಂತಾದವರು ಮನೆಗೆ ಬಂದಾಗ ನಮಗೆಲ್ಲಾ ತುಂಬಾ ಖುಷಿ. ಅವರುಗಳೊಡನೆ ನಾವೂ ಕುಳಿತುಕೊಂಡು ಆ ಸರಸ ಸಂಭಾಷಣೆಗಳನ್ನು ಕೇಳುತ್ತಿದ್ದರೆ ಹೊತ್ತು ಹೋಗುತ್ತಿದ್ದುದೇ ಗೊತ್ತಾಗುತ್ತಿರಲಿಲ್ಲ. ಆಗಿನ ಆ ರಸಮಯ ಸನ್ನಿವೇಶಗಳು ನಮ್ಮ

ಜೀವನದಲ್ಲೇ ಎಂದಿಗೂ ಮರೆಯಲಾರದಂತಹವು. ಆಗೆಲ್ಲಾ ಈ Tape Recorder ಅಷ್ಟು ಬಳಕೆಗೆ ಬಂದಿರಲಿಲ್ಲ. ನಮ್ಮ ತಂದೆಯವರೇ ಹೇಳುವಂತೆ ಅವರ ಎಷ್ಟೋ ಭಾಷಣಗಳನ್ನು, ಈ ರೀತಿಯ ಸರಸ ಸಂಭಾಷಣೆಗಳನ್ನು record ಮಾಡಿಕೊಂಡಿದ್ದರೆ ಎಷ್ಟೋ ಒಳ್ಳೆಯ ವಿಷಯಗಳು ಹೊರಬೀಳುತ್ತಿದ್ದುವು. ಅವರಿಗೆ ಬರವಣಿಗೆಗೆ ಕುಳಿತಾಗ ಅಷ್ಟು ಸರಾಗವಾಗಿ ಬರೆಯುವುದಕ್ಕೆ ಆಗುತ್ತಿರಲಿಲ್ಲ. 'ಬಾಯಿಯಲ್ಲಿ ಎಷ್ಟು ಬೇಕಾದರೂ ಹೇಳುತ್ತೇನೆ, ಆದರೆ ಬರವಣಿಗೆ ನನಗೆ ಕಷ್ಟ' ಎಂದು ಹೇಳುತ್ತಿದ್ದರು. ಅದರಂತೆ ಅವರ ವಿಚಾರಗಳನ್ನೆಲ್ಲ record ಮಾಡಿಕೊಳ್ಳದಿದ್ದುದು ನಮ್ಮ ಜನರ ದೌರ್ಭಾಗ್ಯ. ಅವರ ಜೀವನದಲ್ಲಿದ್ದ ಒಂದೇ ದೊಡ್ಡ ಕೊರಗೆಂದರೆ ಬರೆಯಬೇಕೆಂದಷ್ಟು ವಿಷಯಗಳನ್ನು ಬರೆಯಲಾಗುತ್ತಿಲ್ಲವಲ್ಲಾ ಎನ್ನುವುದೇ!

ಅವರ ಭಾಷಣಗಳ ವಿಚಾರ ಕುರಿತಾಗ ಒಂದು ಸಂದರ್ಭ ನೆನಪಿಗೆ ಬರುತ್ತದೆ. ನಾವು ಧಾರವಾಡದಲ್ಲಿದ್ದಾಗ ಒಂದು ಸಲ (ಸುಮಾರು ೧೯೫೫-೫೬ರಲ್ಲಿ) ಅಣ್ಣಿಗೇರಿ ಎನ್ನುವ ಊರಿನಲ್ಲಿ ಅವರ ಭಾಷಣ ಏರ್ಪಾಡಾಗಿದ್ದಿತು. ಸಮಾರಂಭ ಪುರಂದರದಾಸರ ಜಯಂತಿ ಯೆಂದು ನನ್ನ ನೆನಪು. ಸುಪ್ರಸಿದ್ಧ ಸಂಗೀತಗಾರ ಶ್ರೀ ಮಲ್ಲಿಕಾರ್ಜುನ ಮನಸೂರ್ ಅವರ ಗಾಯನವೂ ಏರ್ಪಾಡಾಗಿದ್ದಿತು. ನಮ್ಮ ತಂದೆಗೆ ಮಲ್ಲಿಕಾರ್ಜುನ ಮನಸೂರ್ ಅವರ ಸಂಗೀತವೆಂದರೆ ತುಂಬಾ ಮೆಚ್ಚಿಕೆ. ಅದರಲ್ಲೂ ಅವರು ತಾಳದ ಆಡಂಬರವಿಲ್ಲದೆ ಭಾವಪೂರಿತ ವಾಗಿ ಹಾಡುತ್ತಿದ್ದ ವಚನಗಳೆಂದರೆ ಬಹಳ ಇಷ್ಟ. ಆ ದಿನ ಸಮಾರಂಭ ಹಿಂದೂಸ್ತಾನಿ ಸಂಗೀತ ಪದ್ಧತಿಯಂತೆ ರಾತ್ರಿ ೯ ಘಂಟೆಗೆ ಪ್ರಾರಂಭವಾಗಿ ಬೆಳಗಿನ ಜಾವ ಮೂರು ಘಂಟೆಯವರೆಗೂ ನಡೆಯಿತು. ನದೀತೀರದಲ್ಲಿ ನಿರ್ಮಿಸಿದ ಮಂಟಪದಲ್ಲಿ ರಾತ್ರಿಯ ತಂಗಾಳಿ ಯಲ್ಲಿ ಸಮಾರಂಭ. ಒಳ್ಳೇ ಹಿತಕರವಾದ ಶಾಂತ ವಾತಾವರಣ. ಆ ದಿನ ಮನಸೂರ್ ಅವರ ಗಾಯನವೂ ಬಹಳ ಮಧುರವಾಗಿ ಹಿತವಾಗಿತ್ತಂತೆ. ಅವರು ಪುರಂದರದಾಸರ ಒಂದು ಗೀತೆ (ಈಗಲೋ, ಇನ್ನಾವಾಗಲೋ.... ಹರಿ ನಿನ್ನ ದರುಶನ)ಯನ್ನು ಹಾಡಿದ ಮೇಲೆ ಮಧ್ಯಂತರ ಕಾಲದಲ್ಲಿ ನಮ್ಮ ತಂದೆಯವರ ಭಾಷಣವಿತ್ತಂತೆ. ಇವರು ಭಾಷಣದಲ್ಲಿ ಅವರ ಸಂಗೀತಕ್ಕೆ ಮೆಚ್ಚುಕೆಯನ್ನು ಸೂಸುತ್ತ "ಈಗಲೊ, ಇನ್ನಾವಾಗಲೋ.... ಎಂದು ಮನಸೂರ್ ಅವರು ಹಾಡಿದ್ದಾರೆ. ಈಗೇನೋ ಈ ಸಂಗೀತಸುಧೆಯನ್ನು ಸವಿದಿದ್ದಾಯಿತು, ಆದರೆ ಶ್ರೀ ಮನಸೂರ್ ಅವರ ಈ ದಿವ್ಯ ಸಂಗೀತವನ್ನು ಕೇಳುವ ಯೋಗ ನಮಗೆ ಇನ್ನಾವಾಗ ಬರುತ್ತದೋ" ಎಂದು ಮುಂತಾಗಿ ಹೇಳಿದರಂತೆ. ಆ ದಿನ ಆ ಬೆಳಗಿನಜಾವ ೨ ಘಂಟೆಯಲ್ಲಿ ನದಿಯೊಳಕ್ಕೆ ತೇಲಿಬಿಟ್ಟ ತಮ್ಮ ಭಾಷಣವೂ ಅವರ ಮನಸ್ಸಿಗೆ ಬಹಳ ತೃಪ್ತಿ ಯಾಗುವಂತೆ ಬಂದಿತೆಂದು ನಮ್ಮ ತಂದೆಯವರೇ ಹೇಳುತ್ತಿದ್ದರು. ಇವರ ಭಾಷಣ ಮುಗಿದನಂತರ ಮತ್ತೆ ಮನಸೂರ್ ಅವರ ಗಾಯನ-ತಕ್ಷಣ ಅವರು ಬಸವಣ್ಣನವರ "ನುಡಿದರೆ ಮುತ್ತಿನ ಹಾರದಂತಿರಬೇಕು...." ಎಂದು ವಚನವನ್ನು ಹಾಡಿದರಂತೆ. ಅದು ಅವರ ಭಾಷಣವನ್ನೇ ಕುರಿತು ಹಾಡಿದ್ದೆಂದು ಮತ್ತೆ ಹೇಳಬೇಕಾಗಿಲ್ಲ. ವಾಗ್ಮಿಗಳು ತಮ್ಮ ವಾಕ್ಸುಧೆಯ ಮೂಲಕ ಮೆಚ್ಚುಗೆ ಸೂಸಿದರೆ ಸಂಗೀತಗಾರರು ತಮ್ಮ ಸಂಗೀತದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು. ಅಂತೂ ಅದು ಒಂದು ಮರೆಯಲಾರದ ಸಂದರ್ಭವೆಂದು ಹೇಳುತ್ತಿದ್ದರು.

ಕೊನೆಯಲ್ಲಿ ಅವರ ದಾಂಪ್ಯಜೀವನದ ವಿಷಯವಾಗಿ ಕೆಲವು ಮಾತುಗಳನ್ನು ಬರೆಯದೆ ಈ ಲೇಖನವನ್ನು ಮುಗಿಸುವುದು ತಪ್ಪಾಗುತ್ತದೆ. ನನ್ನ ದೃಷ್ಟಿಯಲ್ಲಿ ನಮ್ಮ ತಂದೆ, ತಾಯಿಯವರದು ಆದರ್ಶ ದಾಂಪತ್ಯ. ನಮ್ಮ ತಂದೆಯವರೇ ಅವರ ಕವನ ಸಂಗ್ರಹವಾದ "ಒಲುಮೆ"ಯಲ್ಲಿ ಒಂದು ಕಡೆ ಹೇಳಿರುವಂತೆ

ಚೆಲುವೆಯೆಂದು ನುಡಿಯಲಾರೆ;
ಚದುರೆಯೇನೊ ತಿಳಿಯದು.
ಒಲಿದು ನನ್ನ ಹೃದಯವಂತು
"ಇವಳೆ ಸಾಕು" ಎಂದಿತು!

ಅವರಿಬ್ಬರದೂ ಒಲವಿನಿಂದ ಕೂಡಿದ ಒಬ್ಬರನ್ನೊಬ್ಬರು ಪೂರ್ತಿ ಅರಿತುಕೊಂಡ ಸಮರಸ ದಾಂಪತ್ಯ. ಅನೇಕ ವಿಷಯಗಳಲ್ಲಿ ಇಬ್ಬರ ಅಭಿಪ್ರಾಯಗಳೂ ಒಂದೇ ಆಗಿದ್ದು ಸಾಧಾರಣವಾಗಿ ಸಂಸಾರದಲ್ಲಿ ಉದಯಿಸಬಹುದಾದ ಭಿನ್ನಾಭಿಪ್ರಾಯಗಳು, ಮನಃಕ್ಲೇಶಗಳು ಇರುತ್ತಲೇ ಇರಲಿಲ್ಲವೆಂದು ಹೇಳಬಹುದು. ಜೀವನದಲ್ಲಿ ನಮ್ಮ ತಂದೆಯವರೂ ಅನೇಕ ಕಷ್ಟಗಳನ್ನು ಕಂಡಿದ್ದರು. ಒಲವಿನ ತಂಗಿಯ ಮಾನಸಿಕ ಕಾಯಿಲೆ, ಹನ್ನೆರಡು ವರುಷ ಬೆಳೆದ ಮುದ್ದಿನ ಮಗಳ ಅಕಾಲಮೃತ್ಯು, ಶೈಶವದಲ್ಲೇ ತೀರಿಹೋದ ಇಬ್ಬರು ಗಂಡುಮಕ್ಕಳ ನೆನಪು, ವಿಶ್ವವಿದ್ಯಾಲಯದಲ್ಲಿ ರಾಜಕೀಯ ಮುಂತಾದ ಅನೇಕ ತೊಂದರೆಗಳಿದ್ದರೂ ಯಾವುದನ್ನೂ ಅತಿಯಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ ಇದ್ದುದರಲ್ಲಿ ತೃಪ್ತಜೀವನವನ್ನು ನಡೆಸಿದ ವ್ಯಕ್ತಿ ಅವರು. ತಮ್ಮ ಕಷ್ಟಗಳನ್ನು, ವೇದನೆಗಳನ್ನು ಮನಸ್ಸಿನಲ್ಲೇ ನುಂಗಿಕೊಂಡು, ಮಿಕ್ಕವರ ಹಿತಕ್ಕಾಗಿ ಅದರಲ್ಲೂ ಕನ್ನಡಕ್ಕಾಗಿ, ತಮ್ಮ ವಿದ್ಯಾರ್ಥಿಗಳಿಗಾಗಿ ತುಂಬಾ ಶ್ರಮಿಸಿದ ಜೀವ ಅವರದು. ಇಂತಹ ತಂದೆಯನ್ನು ಪಡೆದ ನಾವೇ ಧನ್ಯರು.

('ಶ್ರೀಕಂಠತೀರ್ಥ' : ೧೯೭೬)

ತೀ.ನಂ.ಶ್ರೀ

ಅ.ನ. ಕೃಷ್ಣರಾವ್

●

ಒಂದು ಸಂದರ್ಭದಲ್ಲಿ ನಾವು ಕೆಲವು ಸಾಹಿತಿಗಳು ಒಂದು ಭೋಜನಕೂಟದಲ್ಲಿ ಸೇರಿದ್ದೆವು. ತೀ.ನಂ.ಶ್ರೀಯವರೂ ಆಮಂತ್ರಿತರಲ್ಲಿ ಒಬ್ಬರು. ಹರಟೆ ನಾನಾಮುಖವಾಗಿ ಹರಿದು ಕೊನೆಗೆ ಕನ್ನಡದ ಪ್ರಾಚೀನತೆಗೆ ಬಂದು ನಿಂತಿತು. ಅದೇ ಕೆಲವು ದಿವಸಕ್ಕೆ ಮುಂಚೆ ಮುಂಬಯಿ ಸೇಂಟ್ ಕ್ಸೇವಿಯರ್ ಕಾಲೇಜಿನ ರೆ. ಫಾದರ್ ಹೆರಾಸ್‌ರವರು ಮಹೆಂಜೊದೋರೋ ಸಂಶೋಧನೆಗಳಲ್ಲಿ ದೊರೆತ ನಾಣ್ಯಗಳ ಮೇಲಣ ಭಾಷೆ ಕನ್ನಡವೆಂದು ಒಂದು ವಾದ ಹೂಡಿದ್ದರು. ಕನ್ನಡದ ಪ್ರಾಚೀನತೆ ಕ್ರಿ. ಪೂ. ನಾಲ್ಕೈದು ಸಾವಿರದ ಹಿಂದೆ ಹೋಗುವುದೆಂದು ನಾವೆಲ್ಲ ಹಿಗ್ಗಿದ್ದೆವು. ತೀ.ನಂ.ಶ್ರೀಯವರು ಕೇಳಿದರು, 'ಹೆರಾಸರವರ ಅಭಿಪ್ರಾಯ ವಿದ್ವತ್ ಸಮ್ಮತವಾಗಿದೆಯೇ?' ಎಂದು. ಹೆರಾಸ್‌ರವರ ವಾದವನ್ನು ಬಹು ಮಂದಿ ಒಪ್ಪಿಕೊಂಡಿರಲಿಲ್ಲ. ಆದರದು ನಮಗೆ ಗೌಣ ವಿಷಯವಾಗಿತ್ತು. ತೀ.ನಂ.ಶ್ರೀ ಹೇಳಿದರು 'ಅಭಿಮಾನ ಸತ್ಯದ ಕಣ್ಣು ಮುಚ್ಚಬಾರದು' ಎಂದು. ಈ ಸಣ್ಣ ದೃಷ್ಟಾಂತ ತೀ.ನಂ.ಶ್ರೀಯವರ ವಿದ್ವದ್ಗಾಂಭೀರ್ಯ ಹಾಗೂ ಸತ್ಯಪ್ರಿಯತೆಯ ಸಾಕ್ಷಿಯಾಗಿದೆ.

ತೀ.ನಂ.ಶ್ರೀಕಂಠಯ್ಯನವರು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಮೊದಲನೆಯ ವರ್ಗದಲ್ಲಿ ಎಂ.ಎ. ಡಿಗ್ರಿ ಪಡೆದರು. ಅವರ ಸಹಪಾಠಿಗಳು ಸಿವಿಲ್ ಸರ್ವಿಸ್ ಸೇರಿದ್ದರು. ಶ್ರೀಕಂಠಯ್ಯನವರೂ ಸಿವಿಲ್ ಸರ್ವಿಸ್ ಯೋಚನೆ ಮಾಡುತ್ತಿದ್ದರು. ಅವರ ವಿದ್ಯಾಗುರುಗಳಾದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು 'ನಿಮ್ಮಂಥ ಜನ ವಿಶ್ವವಿದ್ಯಾನಿಲಯದಲ್ಲಿರಬೇಕು. ಸಿವಿಲ್ ಸರ್ವಿಸಿಗೆ ನೀವು ಹೋಗಬಾರದು' ಎಂದು ಹೇಳಿದರು. ತೀ.ನಂ.ಶ್ರೀ ಗುರುನಿರೂಪವನ್ನು ಶಿರಸಾಧರಿಸಿ ಕಾಲೇಜಿನಲ್ಲಿ ಲೆಕ್ಚರರಾಗಿ ಸೇರಿದರು. ಅವರು ಅಂದು ಸಿವಿಲ್ ಸರ್ವೀಸಿಗೆ ಹೋಗಿದ್ದರೆ ಇಂದು ಯಾವದಾದರೂ ಜಿಲ್ಲೆಯ ಅಧಿಕಾರಿಗಳಾಗಿರುತ್ತಿದ್ದರು. ಶ್ರೀಕಂಠಯ್ಯನವರ ಸ್ಥಾನಮಾನ ಹೆಚ್ಚುತ್ತಿತ್ತು. ಆದರೆ ಕನ್ನಡದ ಸ್ಥಾನಮಾನ ಹೆಚ್ಚುತ್ತಿತ್ತೇ? ಕನ್ನಡಕ್ಕಾಗಿ ಅವರು ಮಾಡಿದ ತ್ಯಾಗ ಚಿರಸ್ಮರಣೀಯವಾಗಿದೆ; ಮಾಡುತ್ತಿರುವ ಸೇವೆ ಸ್ತುತ್ಯವಾಗಿದೆ.

ಮೈಸೂರು ಸರ್ಕಾರ ಕೆಲಕಾಲ ಅವರನ್ನು ಮೈಸೂರು ರಾಜ್ಯಘಟನೆಯ ಅನುವಾದಕ್ಕೆ ನಿಯಮಿಸಿತು. ಆ ಕೆಲಸ ನಿಂತು ಹೋದಮೇಲೆ ಭಾರತ ಸರ್ಕಾರ ಅವರನ್ನು ಭಾರತರಾಜ್ಯ ಘಟನೆಯನ್ನು ಕನ್ನಡೀಕರಿಸುವುದಕ್ಕೆ ಆಹ್ವಾನಿಸಿತು. ಆ ಕೆಲಸ ಮುಗಿಸಿಕೊಟ್ಟು ಶ್ರೀಕಂಠಯ್ಯನವರು ದಾವಣಗೆರೆಯ ಇಂಟರ್‌ಮೀಡಿಯಟ್ ಕಾಲೇಜಿನ ಸೂಪರಿಂಟೆಂಡೆಂಟರಾದರು.

ಶ್ರೀಕಂಠಯ್ಯನವರ ಸಾಹಿತ್ಯಸೇವೆ ಕಾವ್ಯಪ್ರಪಂಚದಿಂದ ಆರಂಭವಾಯಿತೆಂದು ಹೇಳಬಹುದು. ಮೈಸೂರು ಕಾಲೇಜಿನ ವಿದ್ಯಾರ್ಥಿಗಳ ಕಾವ್ಯಸಂಕಲನ 'ಕಿರಿಯ ಕಾಣಿಕೆ'ಯಲ್ಲಿ ಅವರ ಕೆಲವು ಪದ್ಯಗಳು ಪ್ರಕಟವಾದವು. ೧೯೩೨ರಲ್ಲಿ ತೀ.ನಂ.ಶ್ರೀ ತಮ್ಮ 'ಒಲುಮೆ' ಗ್ರಂಥವನ್ನು ಪ್ರಕಟಿಸಿದರು. ಹದಿನೆಂಟು ವರ್ಷಗಳ ಹಿಂದೆ ಆಧುನಿಕ ಕಾವ್ಯವೆಂದರೆ ಜನ ಮೂಗುಮುರಿಯುತ್ತಿದ್ದಾಗ ಶೃಂಗಾರರಸಪ್ರಧಾನವಾದ ಗೀತೆಗಳನ್ನು ಬರೆಯುವ ಕವಿ ಎದೆಗಾರರೆನ್ನುವುದರಲ್ಲಿ ಸಂದೇಹವಿಲ್ಲ. 'ಒಲುಮೆ'ಯಲ್ಲಿ ಸ್ವತಂತ್ರಗೀತೆಗಳನ್ನೂ, ಕೆಲವು ಅನುವಾದಗಳನ್ನೂ ಕೂಡಿಸಿ ಪ್ರಕಟಿಸಿದರು. ತಮ್ಮ ಅನುವಾದದ ಬಗ್ಗೆ ಶ್ರೀಕಂಠಯ್ಯನವರು ಆಡಿರುವ ಕೆಲವು ಮಾತುಗಳು ಗಮನಾರ್ಹ ವಾಗಿವೆ–'ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರ ರಸವು ಗಾಂಭೀರ್ಯವನ್ನು ಸಾಕಾದಷ್ಟು ಕಾಪಾಡಿ ಕೊಂಡಿಲ್ಲವೆಂದು ಕೆಲವರು ಆಡಿಕೊಳ್ಳುವುದುಂಟು. ಆದರೆ ಈಗ ನಾವು ಉಚ್ಚರಿಸಲು ನಾಚುವ ಹಲವು ಮಾತುಗಳಿಗೆ ಸಂಸ್ಕೃತದಲ್ಲಿ ಅಶ್ಲೀಲ ಧ್ವನಿಯಿಲ್ಲ. ಅಲ್ಲದೆ, ಪ್ರೇಮದ ಹೃದಯವನ್ನು ಶುಚಿಯಾದ ವಾಣಿಯಲ್ಲಿ ವಿಶ್ವಮನೋಹರವಾದ ರೀತಿಯಲ್ಲಿ ಸಂಸ್ಕೃತ ಕವಿಗಳು ನಿರೂಪಿಸ ಬಲ್ಲರೆನ್ನುವುದಕ್ಕೆ ಇಲ್ಲಿರುವ ಕೆಲವು ಪದ್ಯಗಳೇ ಸಾಕ್ಷಿಯಾಗಿ ನಿಲ್ಲಬಹುದು. ಈ 'ಬಿಡಿ' ಪದ್ಯಗಳಲ್ಲಿ, 'ಮುಕ್ತಕ'ಗಳಲ್ಲಿ ಒಂದೊಂದೂ ಪೂರ್ಣಕಾವ್ಯ. ಅವಕಾಶವು ಇಷ್ಟು ಕಿರಿದಾಗಿದ್ದರೂ ಅದು ಒಂದು ಸಮಗ್ರಭಾವವನ್ನು ಚಿತ್ರಿಸುತ್ತದೆ. ಅದರ ಸವಿಯನ್ನೆಲ್ಲಾ ಅಸ್ವಾದಿಸಬೇಕಾದರೆ, ಕವಿಯ ಕಲ್ಪನೆಯೊಂದಿಗೆ ನಮ್ಮ ಕಲ್ಪನೆಯನ್ನೂ ಹಾರಬಿಟ್ಟು, ಚಿತ್ರದ ಸುತ್ತಲೂ ಒಂದು ಉಚಿತವಾದ ಅವರಣವನ್ನು ರಚಿಸಿಕೊಂಡು, ಅದರ ಪ್ರಭೆಯನ್ನು ಕವಿಯ ಮಾತುಗಳ ಮೇಲೆ ಬೀರಬೇಕು. ಆಗ ನಮಗೆ ಈ 'ದಂತದ ಮೇಲಿನ ಚಿತ್ರಗೆಲಸದ ಅಪೂರ್ವಸತ್ತ್ವವು ಮಂದಟ್ಟಾಗುತ್ತದೆ; ಅಮರುಕನಂಥ ಕವಿಗೆ ಸಂಸ್ಕೃತ ಸಾಹಿತ್ಯದಲ್ಲಿರುವ ಪ್ರಶಸ್ತಿ ಅರ್ಥವಾಗುತ್ತದೆ.' ಮೂಲ ಸಂಸ್ಕೃತದ ರಸ, ಶಿಲ್ಪ ಕೆಡದಂತೆ ತೀ.ನಂ.ಶ್ರೀಯವರು ಮಾಡಿರುವ ಅನುವಾದ ಮೂಲಕೃತಿಯಂತೆ ಕಲಾಪ್ರಪೂರ್ಣವಾಗಿದೆ.

ಒಂದು ದೃಷ್ಟಾಂತ:

"ಏಕಿಂತು ಬಡವಾದೆ, ಬಡನಡುವಿನವಳೆ?"
"ಹೆರರ ಸುದ್ದಿಗಳೆಲ್ಲ ನಿನಗೇತಕೆ?"
"ಇರಲಿರಲಿ ಹೇಳದನು ನನ್ನ ಸಂತಸಕೆ"
"ದಾರಿಗನೆ, ಹೇಳುವಳು ನಿನ್ನ ಮಡದಿ"

ತೀ.ನಂ.ಶ್ರೀಯವರ ಸ್ವತಂತ್ರ ಪ್ರಣಯ ಗೀತೆಗಳೂ ಇಷ್ಟೇ ಸುಂದರವಾಗಿ ಶುಚಿಯಾಗಿವೆ. ಜೀವನದ ಲಲಿತ ಮಧುರ ಸನ್ನಿವೇಶಗಳಲ್ಲಿ ಮಿನುಗುವ ಪ್ರಣಯದ ಕುಡಿಮಿಂಚನ್ನು ಶ್ರೀಕಂಠಯ್ಯ ನವರು ತಮ್ಮ ರಸಿಕತೆಯ ಬಲೆಯಲ್ಲಿ ಸೆರೆ ಹಿಡಿದಿದ್ದಾರೆ.

"ಹಿರಿಯರಿರುವರೆಂದು ನಾಚಿ, ನುಡಿಯಲಾರದವಳ ಕೊರಗು,
ತೆರೆದ ತುಟಿಯ ನಡುಕ, ಇನಿಸು ಬೆವೆತು ಕೆಂಪಗಾದ ಕೆನ್ನೆ,
ನೀರ ತೆರೆಯ ಹಿಂದೆ ಕಣ್ಣು ಬೀರುತಿರುವ ಬಯಕೆನೋಟ;
ಊರಿಗಿದನು ನೋಡಿ ನೋಡಿ ಹೊರಡಲಾರೆ, ನಿಲ್ಲಲಾರೆ!'

ಈಚೆಗೆ ಪ್ರಕಟವಾಗಿ ಕನ್ನಡಿಗರ ಅಪೂರ್ವ ವಿಶ್ವಾಸಕ್ಕೆ ಪಾತ್ರವಾದ ಕೆ.ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ' ಶ್ರೀಕಂಠಯ್ಯನವರ 'ಒಲುಮೆ' ಗ್ರಂಥದಿಂದ ಸ್ಫೂರ್ತಿ ಪಡೆದಿದೆಯೆಂದು ಹೇಳಬಹುದು.

ತಾವು ಆರಂಭಿಸಿದ ಕಾವ್ಯರಚನೆಯನ್ನು ಶ್ರೀಕಂಠಯ್ಯನವರು ಮುಂದುವರಿಸಿದ್ದರೆ ಇಂದು ಕನ್ನಡ ಕಾವ್ಯ ಸರಸ್ವತಿ ಹಲವು ರತ್ನಾಭರಣಗಳಿಂದ ಅಲಂಕೃತಳಾಗುತ್ತಿದ್ದಳೆಂಬುದು ನಿರ್ವಿವಾದ. ಕಾವ್ಯವನ್ನು ಕೈಬಿಟ್ಟು ಶ್ರೀಕಂಠಯ್ಯನವರು ಹೆಚ್ಚು ಜನಪ್ರಿಯವಲ್ಲದ, ಆದರೆ ಹೆಚ್ಚು ಪ್ರಯೋಜನಕಾರಿಯಾದ ಸಂಶೋಧನೆ, ಸಂಪಾದನೆ, ಕಾವ್ಯವಿಮರ್ಶೆಗಳಿಗೆ ಕೈಹಾಕಿದರು. ಕನ್ನಡ ಭಾಷಾಚರಿತ್ರೆ ಮತ್ತು ಕಾವ್ಯಸಮೀಕ್ಷೆ ಎಂಬ ವಿಮರ್ಶಾ ಗ್ರಂಥಗಳು ಅವರ ಆಳವಾದ ಪಾಂಡಿತ್ಯ, ಪ್ರಭಾವಪೂರ್ಣ ನಿರೂಪಣೆಗಳಿಗೆ ಸಾಕ್ಷಿಗಳಾಗಿವೆ. 'ಪಂಪ'ನ ಮೇಲೆ ಶ್ರೀಕಂಠಯ್ಯನವರು ಬರೆದಿರುವ ಕಿರುಹೊತ್ತಿಗೆ ಅಭ್ಯಾಸಿಗಳಿಗೆ ನಂದಾದೀಪದಂತಿದೆ. ಅವರು ಪರಿಷ್ಕರಿಸಿ ಪ್ರಕಟಿಸಿರುವ 'ನಂಬಿಯಣ್ಣನ ರಗಳೆ', 'ಗದಾಯುದ್ಧ' ಕಾವ್ಯಗಳು ಕಾವ್ಯ ಪರಿಷ್ಕರಣಕ್ಕೆ ಮಾದರಿ ಹಾಕಿಕೊಟ್ಟಿವೆ.

ಯಾವ ಕೆಲಸ ಕೈಗೊಳ್ಳಲಿ ಶ್ರದ್ಧಾಭಕ್ತಿಯುತವಾಗಿ ಅಚ್ಚುಕಟ್ಟಾಗಿ ಮಾಡುವ ಮನೋಭಾವ. ತಿಳಿಯದಿದ್ದುದನ್ನು ಒಪ್ಪಿಕೊಳ್ಳುವ ಔದಾರ್ಯ. ಭಿನ್ನಾಭಿಪ್ರಾಯ ಬಂದೆಡೆ ಎದುರಾಳಿಯ ಶ್ರದ್ಧೆ, ನೀತಿಯನ್ನು ಶಂಕಿಸದ ಹೃದಯ ಪರಿಶುದ್ಧತೆ ಶ್ರೀಕಂಠಯ್ಯನವರ ಸಂಸ್ಕೃತಿಯ ಹೆಗ್ಗುರುತುಗಳಾಗಿವೆ. ರಸಸಾಹಿತ್ಯ ನಿರ್ಮಿಸಿ ಕನ್ನಡ ತಾಯಿಯಗುಡಿಗೆ ಅಂದ ಚೆಂದವಾದ ಕುಸುರಿ ಕೆಲಸ ಮಾಡುವ ರಸಿಕರ ಗುಂಪಿಗೆ ಶ್ರೀಕಂಠಯ್ಯನವರು ಸೇರಲು ಆಸೆಪಡಲಿಲ್ಲ. ಆದರೆ ಆ ಗುಡಿಯ ಅಸ್ತಿಭಾರ ಭದ್ರಪಡಿಸಿ, ಯಾವ ಕಾಲಕ್ಕೂ ಅದು ಅಚ್ಚಳಿಯದಂತೆ ಉಳಿಯಲು ಪ್ರಯತ್ನಿಸಿದ ರಾ. ನರಸಿಂಹಾಚಾರ್ಯರು, ಎ. ಆರ್. ಕೃಷ್ಣಶಾಸ್ತ್ರಿಗಳು, ಬಿ. ಎಂ. ಶ್ರೀಕಂಠಯ್ಯನವರು ಮೊದಲಾದ ಮಹನೀಯರ ಪಂಕ್ತಿಯಲ್ಲಿ ತೀ.ನಂ.ಶ್ರೀಕಂಠಯ್ಯನವರನ್ನು ನಾವು ಕೂಡಿಸಬೇಕು.

ಶ್ರೀಕಂಠಯ್ಯನವರ ಬರೆವಣಿಗೆ ಎಷ್ಟು ಗಂಭೀರವೋ ಅಷ್ಟೇ ಅವರ ಮಾತುಗಾರಿಕೆಯೂ ಗಂಭೀರ. ಶ್ರಾವಕರ ರಸವಂತಿಗಳನ್ನು ಉದ್ರೇಕಿಸಿ ಅವರನ್ನು ಭಾವನಾಪರವಶರನ್ನಾಗಿ ಮಾಡುವ ವಕ್ತೃತ್ವ ಶ್ರೀಕಂಠಯ್ಯನವರದಲ್ಲ. ಹಾಸ್ಯವಾಗಲಿ, ಧ್ವನಿವೈವಿಧ್ಯವಾಗಲಿ, ಶ್ರಾವಕನ ಯೋಗ್ಯತಾನುಸಾರವಾಗಿ ವಿಷಯವನ್ನು ನಿರೂಪಿಸಬಲ್ಲ ಹದನನ್ನಾಗಲಿ ಅವರು ಸಾಧಿಸಿಲ್ಲ. ಆದರೆ ತಾವು ತೆಗೆದುಕೊಂಡ ವಿಷಯಕ್ಕೆ ಸ್ವಲ್ಪವೂ ಅಪಚಾರವಾಗದಂತೆ ಗಂಭೀರವಾಗಿ, ಆಧಾರಸಹಿತವಾಗಿ ತಿಳಿಯಾಗಿ ನಿರೂಪಿಸಬಲ್ಲ ಋಜುಪಾಂಡಿತ್ಯ ಶ್ರೀಕಂಠಯ್ಯನವರ ಮಾತುಗಾರಿಕೆಯಲ್ಲಿ ಕಾಣಬಹುದು.

ವ್ಯಕ್ತಿಯಲ್ಲಿ ಸ್ವಲ್ಪವೂ ಆಡಂಬರವಿಲ್ಲ, ಪಾಂಡಿತ್ಯ ಪ್ರದರ್ಶನವಿಲ್ಲ. 'ತುಂಬಿದಕೊಡ ಸ್ವಲ್ಪವೂ ತುಳುಕುವುದಿಲ್ಲ.'

ಶ್ರೀಕಂಠಯ್ಯನವರು ಕೆಲವು ಕಾಲ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ಣಾಟಕ ಪತ್ರಿಕೆಗಳ ಸಂಪಾದಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ನಿಯೋಜಿಸಿರುವ ಕನ್ನಡ–

ಕನ್ನಡ ನಿಘಂಟಿನ ಸಂಪಾದಕತ್ವ ಈಗ ಅವರ ಹೆಗಲ ಮೇಲೆ ಬಿದ್ದಿದೆ. ಶ್ರೀಕಂಠಯ್ಯನವರ ಸಾಧನದ ಫಲವಾಗಿ ಕನ್ನಡಿಗರಿಗೆ ಅತ್ಯುತ್ತಮ ನಿಘಂಟು ಲಭಿಸುವುದರಲ್ಲಿ ಸಂದೇಹವಿಲ್ಲ.

ಅನೇಕ ಓರಿಯಂಟಲ್ ಕಾನ್‌ಫರೆನ್ಸ್‌ಗಳಲ್ಲಿ ಭಾಗವಹಿಸಿ ಶ್ರೀಕಂಠಯ್ಯನವರು ಕನ್ನಡಿಗರ ಪಾಂಡಿತ್ಯದ ಆಳವನ್ನು ಹೊರಗಿನವರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ.

ತೀ.ನಂ.ಶ್ರೀಯವರಂಥ ಪಂಡಿತಶ್ರೇಷ್ಠರಿರುವವರೆಗೆ ಕನ್ನಡಕ್ಕೆ ಭಯವಿಲ್ಲ. ಕನ್ನಡದ ಕೀರ್ತಿ ಮಾಸುವುದಿಲ್ಲ.

('ಕನ್ನಡ 'ಕುಲರಸಿಕರು' : ೧೯೫೦)

ತೀ.ನಂ.ಶ್ರೀ

ಸಿದ್ಧಯ್ಯ ಪುರಾಣಿಕ

●

ಆ ವರ್ಷ ಹೈದರಾಬಾದಿಗೆ ಆಗಮಿಸಿದವರಲ್ಲಿ ಮೂವರ ನೆನಪು ಹಸಿರಾಗಿ ಉಳಿದಿದೆ: ಇಷ್ಟೇ ಅಲ್ಲ, ಮೂವರೂ ನನ್ನ ಬಾಳಿನ ಮೇಲೆ ಮೂದೆರನಾದ ಪ್ರಭಾವವನ್ನು ಬೀರಿದ ಮಹನೀಯರು. (ಅವರಲ್ಲಿ) ಬಹುಭಾಷಾ ಪರಿಣತಿಯ, ಅಸೀಮ ಪಾಂಡಿತ್ಯದ, ಸರಸಸಜ್ಜನಿಕೆಯ ಸದಾ ಸ್ಮರಣೀಯ ತೀ.ನಂ.ಶ್ರೀ ಅವರು ಮುದ್ದಣನ ಬಗ್ಗೆ ಮಾತನಾಡಿದರು. ಒಂದೂವರೆ ಘಂಟೆಗಳವರೆಗೆ ನಾವು ರಸಲೋಕದಲ್ಲಿ ವಿಹರಿಸಿದ ಅನಿರ್ವಚನೀಯ ಅನುಭವವನ್ನು ಪಡೆದೆವು. ಮರುದಿನ ಪ್ರೊ. ಡಿ.ಕೆ. ಭೀಮಸೇನರಾಯರೊಡನೆ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಬಸ್ಸು ಹತ್ತಿದರು. ನಾನೂ ಹಿಂದಿನ ಸೀಟಿನಲ್ಲಿ ಕುಳಿತೆ. ಅಲ್ಲಿ ಕನ್ನಡದ ಪ್ರಾದೇಶಿಕ ವೈಲಕ್ಷಣ್ಯಗಳ ಪ್ರಸ್ತಾಪ ಬಂದಿತು. ತೀ.ನಂ.ಶ್ರೀ : "There is a richness in it: I am not for dull uniformity'' ಎಂದರು. ಆದರೂ ವ್ಯಾಕರಣಪ್ರಿಯರಾದ ಡಿ.ಕೆ.ಭೀ. ಸುಮ್ಮನಾಗಲಿಲ್ಲ. ''ಕನಿಷ್ಠ ಗ್ರಂಥಸ್ಥ ಭಾಷೆಯಾದರೂ ಏಕರೂಪ ಪಡೆಯಬೇಡವೆ?" ಎಂಬ ಪ್ರಶ್ನೆ ಎತ್ತಿದರು. ಉತ್ತರವಿತ್ತರು ತೀ.ನಂ.ಶ್ರೀ: "ಗ್ರಂಥಸ್ಥ ಕನ್ನಡ ಏಕರೂಪ ಪಡೆಯಬೇಕು; ಆದರೆ ಕರ್ನಾಟಕದ ಏಕೀಕರಣವಾದಾಗಲೇ ಇದು ಸುಲಭಸಾಧ್ಯವಾಗುವುದು." ನನಗೆ ಪ್ರಿಯವಾಗಿದ್ದ ವಿಷಯ ಬರುತ್ತಲೆ ನಡುವೆ ಧುಮುಕಿದೆ ನಾನು : "ಕರ್ನಾಟಕದ ಏಕೀಕರಣ ನಮ್ಮ ಜೀವಮಾನದಲ್ಲಿಯೇ ಆಗಬಹುದೆ, ಸರ್? ನಮ್ಮ ಕಣ್ಣುಗಳಿಗೆ ಅದನ್ನು ನೋಡುವ ಪುಣ್ಯವಿದೆಯೆ?" ಎಂದು ಕೇಳಿದೆ. ಯಾವ ಅನುಮಾನವೂ ಇಲ್ಲದೆ ಉತ್ತರವಿತ್ತರವರು: "ಏಕಿಲ್ಲ? ಮಂಗಳೂರಿನ ಮಣ್ಣ ಹಣತೆಯನು ಹದಗೊಳಿಸಿ, ಮೈಸೂರು ಸಿರಿಗಂಧದೆಣ್ಣೆಯೆರೆದು, ರಾಯಚೂರಿನ ಹತ್ತಿಯಲಿ ಬತ್ತಿಯಣಿಗೊಳಿಸಿ, ಧಾರವಾಡದ ಕೆಚ್ಚುಕಡ್ಡಿ ಕೊರೆದು, ಕನ್ನಡದ ಹೊಂದೀವಿಗೆಯ ಹಚ್ಚಲಿನ್ನೊಮ್ಮೆ ಬಸವ ವಿದ್ಯಾರಣ್ಯ ಹುಟ್ಟಿಬರಲಿ!" ಎಂದು ಹಾಡಿದ ಕವಿ ಹುಟ್ಟಿದ ಮೇಲೆ ಕನ್ನಡದ ದೀಪ ಹೊತ್ತದಿರುತ್ತದೆಯೇ? ನಾನು ಅವಾಕ್ಕಾದೆ–ನನ್ನ "ಕನ್ನಡದ ದೀಪ" ಎಂಬ ಕವಿತೆ 'ಜಯಂತಿ'ಯಲ್ಲಿ ಪ್ರಕಟವಾಗಿ 'ಮಿಂಚಿನ ಬಳ್ಳಿ'ಯ 'ನಾಡ ಹಾಡುಗಳು' ಎಂಬ ಸಂಕಲನದಲ್ಲಿ ಸೇರ್ಪಡೆಯಾಗಿ ಬಹಳ ದಿನಗಳಾಗಿರಲಿಲ್ಲ. ಆಗಲೇ ಅದನ್ನು ಓದಿದು ದಲ್ಲದೆ ಅದ್ಧರ ಒಂದು ಚರಣವನ್ನೂ ನೆನಪಿಟ್ಟುಕೊಂಡಿರುವರಲ್ಲ ಈ ಹಿರಿಯ ಸಾಹಿತಿಗಳು! ದೊಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸುಳ್ಳಲ್ಲ!

('ಕಾವ್ಯಾನಂದ' : ೧೯೮೧)

ತೀ.ನಂ.ಶ್ರೀ

ಬಿ. ಸುಂದರೇಶ್ವರ

●

ಸುಮಾರು ನಲವತ್ತೇಳು ವರ್ಷಗಳ ಹಿಂದೆ ಹೈಸ್ಕೂಲಿನಿಂದ SSLC ಪರೀಕ್ಷೆ ಮಾಡಿಕೊಂಡು ಜೂನಿಯರ್ ಇಂಟರ್ ತರಗತಿಗೆ ಸೇರಲು ಮೈಸೂರು ಇಂಟರ್‌ಮೀಡಿಯಟ್ ಕಾಲೇಜಿಗೆ ಹೋಗಿದ್ದೆ. ಇನ್ನೂ ವಿದ್ಯಾರ್ಥಿಗಳ ದಾಖಲಾತಿ ನಡೆಯುತ್ತಿದ್ದು ವೇಳಾಪತ್ರಿಕೆಯೂ ಸಿದ್ಧವಾಗಿಲ್ಲದ ಕಾಲ.

ಮಹಾರಾಜಾ ಕಾಲೇಜಿನ ಕೈಸಾಲೆಯಲ್ಲಿ ನಿಂತು ಸ್ವಲ್ಪಕಾಲ ಕಳೆಯಬೇಕಾಗಿತ್ತು. ಆಗ ಕಾಲೇಜಿನ ಎಡಭಾಗದಲ್ಲಿ "ಡ್ರಾಮಾಹಾಲ್" ಇತ್ತು. ಅಲ್ಲಿ ನಡೆಯುತ್ತಿದ್ದ ಒಂದುವರ್ಗದಲ್ಲಿ ತೀ.ನಂ.ಶ್ರೀ. ಪಾಠ ಹೇಳುತ್ತಿದ್ದರು. ಅದುವರೆವಿಗೂ ನಾವು ಯಾರೂ ಅವರನ್ನು ಕಂಡರಿಯೆವು. ಇಂಟರ್‌ಮಿಡಿಯೆಟ್ ಕಾಲೇಜಿನ ಹಿರಿಯ ಸ್ನೇಹಿತರೊಬ್ಬರು "ಅಗೋ! ಅಲ್ಲಿರುವವರೇ ತೀ.ನಂ.ಶ್ರೀ. ನಿನ್ನ ಸಮಸ್ಯೆಯನ್ನು ಅವರಿಗೆ ಹೇಳು ಸುಲಭವಾಗಿ ತೀರ್ಮಾನ ಮಾಡುತ್ತಾರೆ!" ಎಂದು ಗುರುಗಳನ್ನು ದೂರದಿಂದ ತೋರಿಸಿ ಹೊರಟುಹೋದರು. ಗಂಟೆಯಾಗುವುದನ್ನೇ ಕಾಯುತ್ತಿದ್ದು ಗುರುಗಳು ಹೊರಗೆ ಬರುತ್ತಲೆ ಹಿಂದಿನಿಂದ ಹೋಗಿ, "ಸರ್!" ಎಂದೆ, ನಮಸ್ಕಾರ ಮಾಡಿದೆ. "ಬನ್ನಿ, ಏನು ಸಮಾಚಾರ?" ಎಂದರು. ಅವರ ಕೀರ್ತಿ ನಮಗೆ ಹೈಸ್ಕೂಲಿನಲ್ಲಿದ್ದಾಗಲೇ ಬಹಳವಾಗಿ ಕೇಳಿದ್ದೆವು. ತೀ.ನಂ.ಶ್ರೀ ಎಂದರೆ ಎಷ್ಟು ದೊಡ್ಡ ಮನುಷ್ಯರೋ ಎಂತಹ ಮಹಾವಿದ್ವಾಂಸರೋ ಅತಿ ಗಂಭೀರ ಪ್ರಕೃತಿಯವರೋ ಅವರನ್ನೂ ಕಾಣುವುದೂ ಮಾತನಾಡುವುದೂ ಅದೆಷ್ಟು ಕಷ್ಟವೋ ಎಂದುಕೊಳ್ಳುತ್ತಿದ್ದ ನನಗೆ ಅವರ ಕಂಠದಿಂದ "ಬನ್ನಿ!" ಆಶ್ಚರ್ಯವನ್ನುಂಟುಮಾಡಿತು. ತೇಜಸ್ಸಿನಿಂದ ಕೂಡಿದ ದುಂಡಾದ ಮುಖ, ಚಿನ್ನದ ಕಟ್ಟಿನ ಕನ್ನಡಕದ ಹಿಂದೆ ಕಾಂತಿಯುತವಾಗಿ ಹೊಳೆಯುತ್ತಿದ್ದ ಕಣ್ಣುಗಳು ತಾಳ್ಮೆಯ ಛಾಯೆಯಲ್ಲಿ ಕಾಣುತ್ತಿದ್ದ ನಗು, ಮುದ್ದಾದ ಕೆಂದುಟಿಗಳು. ಇವೆಲ್ಲಕ್ಕಿಂತ ಚಿಕ್ಕವನಾದ ನನಗೆ ಅವರ "ಬನ್ನಿ! ಏನು ಸಮಾಚಾರ?" ಇವೆಲ್ಲವುಗಳಿಂದ ನನ್ನ ಸಂಕೋಚ ಭಯಗಳೆರಡೂ ಮಾಯವಾದವು. ನನ್ನ ಬಿನ್ನಹವನ್ನು ಹೇಳಿಕೊಂಡೆ. ನಾನು SSLC ವರೆಗೆ ಸಂಸ್ಕೃತ ಭಾಷೆ ತೆಗೆದುಕೊಂಡಿದ್ದವನು ಈಗ ಕನ್ನಡ ತೆಗೆದುಕೊಳ್ಳಬಹುದೆ? ನನ್ನಂತಹವನಿಗೆ ಸಾಧ್ಯವಾದೀತೆ? ಎಂದು ಕೇಳಿಕೊಂಡೆ. "ಸಾಧ್ಯವಾಗುವುದಿಲ್ಲವೆಂದು ನಿಮಗೆ ಯಾರು ಹೇಳಿದರು? ಕನ್ನಡ ದ್ವಿತೀಯ ಭಾಷೆಯಾಗಿ ಬೇಕೆಂದು ನಿಮ್ಮ ಸೂಪರಿಡೆಂಟರಿಗೆ ಒಂದು ಮನವಿ ಬರೆದುಕೊಂಡು, ಬಂದು ಸೇರಿ."

ಕನ್ನಡ ವಿದ್ಯಾರ್ಥಿಗಳು ಪುಣ್ಯಶಾಲಿಗಳು. ತೀ.ನಂ.ಶ್ರೀ ಶಿಷ್ಯರು ಎಂಬ ಮಾತು ನಾವು ಹೈಸ್ಕೂಲಿ ನಲ್ಲಿದ್ದಾಗಲೇ ಬಹಳ ಕೇಳುತ್ತಿದ್ದೆವು. ಕಲಿತರೆ ಕನ್ನಡವನ್ನು ತೀನಂಶ್ರೀಯವರಲ್ಲಿ ಕಲಿಯಬೇಕು ಎನ್ನುತ್ತಿದ್ದರು ಊರಲ್ಲೆಲ್ಲಾ.

ಮರುವಾರ ಕನ್ನಡ ವಿಭಾಗದ ರಿಜಿಸ್ಟರಿನಲ್ಲಿ ನನ್ನ ಹೆಸರೂ ಬಂತು. ತೀ.ನಂ.ಶ್ರೀಯವರ ವರ್ಗಕ್ಕೆ ಹೋದೆ. ಪ್ರೀತಿಯಿಂದ ಬರಮಾಡಿಕೊಂಡರು. ಒಂದು ಕೊನೆಯಲ್ಲಿ ಕುಳಿತು ಕೇಳುತ್ತಿದ್ದೆ. ನಮಗಿದ್ದುದು ಕೆಂಪು ನಾರಾಯಣ ಪಂಡಿತನ ಮುದ್ರಾಮಂಜೂಷದಲ್ಲಿ ಪ್ರಾರಂಭದ ಪಾಠಗಳಾಗುತ್ತಿದ್ದುವು. ಅದುವರೆಗೆ ಕನ್ನಡ ಮಾತಾಡುವುದನ್ನು ಯಾರ ಯಾರ ಬಾಯಲ್ಲಿಯೋ ಕೇಳಿದ್ದೆವು. ಆದರೆ ಕನ್ನಡ ಮಾತಾಡುವಾಗ ಆ ನಯ, ಆ ಸ್ಪಷ್ಟತೆ ಕೇಳಿಯೂ ಕಂಡೂ ಅರಿಯದ ನನಗೆ ಅಂತಹ ವಿದ್ವಾಂಸರ ಶಿಷ್ಯನಾಗುವ ಪುಣ್ಯ ಒದಗಿತಲ್ಲ ಎಂಬ ಅಪೂರ್ವ ಸಂತೋಷ ತೃಪ್ತಿಗಳೆಲ್ಲ ಏಕಕಾಲದಲ್ಲಾಗಿ ಹೆಮ್ಮೆಯೂ ಬಂದವು.

ಅವರ ಪಾಠದ ಅತಿಮುಖ್ಯ ವೈಶಿಷ್ಟ್ಯ : ಅವರ ಸಿದ್ಧತೆಯ ಸಂಪೂರ್ಣತೆ. ಪಠ್ಯ ವಿಷಯದಲ್ಲಿ ಯಾವುದೂ ಅದೆಷ್ಟೇ ಸಣ್ಣ ವಿವರವಾಗಲಿ ಅಲಕ್ಷಿಸುವಂತಹುದಲ್ಲ. ಅಪರಿಚಿತ ಸರಿ ಹೊಸಪದಗಳು ಬಂದರೆ ಆ ಪದಗಳ ಮೂಲ ಎಲ್ಲಿನದು ಕನ್ನಡದ್ದೆ ಸಂಸ್ಕೃತದ್ದೆ ತಮಿಳಿನದೆ ಎಲ್ಲವೂ ಕೂಲಂಕಷವಾಗಿ ವಿವರಣೆಯಾಗಿ ಆ ಪದ ಯಾವ ಯಾವ ಸಂದರ್ಭ ಗಳಲ್ಲಿ ಯಾವ ಯಾವ ರೂಪಾಂತರ ಹೊಂದುತ್ತದೆ, ಇತರ ಪರ್ಯಾಯ ಸಂದರ್ಭಗಳಲ್ಲಿ ಹೇಗೆ ಕಾಣಿಸಿಕೊಳ್ಳುತ್ತದೆ ಇಷ್ಟೆಲ್ಲವನ್ನೂ ಹೇಳಿ ಕಡೆಗೆ ಅದರ ಉಪಯೋಗ ಎಲ್ಲೆಲ್ಲಿ ಸಾಧು; ಎಲ್ಲಿ ಸಾಧುವಲ್ಲ ಎಲ್ಲವನ್ನೂ ತಿಳಿಸಿ ಮುಂದೆ ಹೊಗುತ್ತಿದ್ದರು. ಅವರ ಅರ್ಥವಿಶ್ಲೇಷಣೆ ಆಳವಾದ ತಿಳಿವಳಿಕೆ ನಮಗೆ ಆಶ್ಚರ್ಯವಾಗುತ್ತಿತ್ತು. ಇದರಿಂದ ಪಾಠ ಸೊಗಸಾಗಿ ನಡೆಯುತ್ತಿತ್ತು. ಬೋಧನೆ ನಡೆಯುತ್ತಿದ್ದರೆ ಅವರು ಹೇಳುವ ಸಂಭ್ರಮ ಉತ್ಸಾಹ ಸಡಗರಗಳಲ್ಲಿ ಮೈಮರೆ ತಂತಿದ್ದರೂ ಪ್ರಜ್ಞಾವಂತವಾಗಿ ಹೇಳುತ್ತಿದ್ದರು. ನಾವು ನೆಟ್ಟಕಣ್ಣು ಬಿಟ್ಟಬಾಯಿಗಳಿಂದ ಕೇಳಿ ಮೈಮರೆಯುತ್ತಿದ್ದೆವು. ಅವರ ಪಾಠಕ್ಕೆ ಪುನರಾವೃತ್ತಿ ಎಂಬುದೇ ಅನಗತ್ಯ. ನಮಗೆ ರಿವಿಜ಼ನ್ ಇಲ್ಲದೆಯೆ ಆಜೀವವೂ ನೆನಪಿರುತ್ತಿದ್ದವು.

ಅವರ ಪಾಠ "ಸಂತೆಯ ಹೊತ್ತಿಗೆ ಮೂರುಮೊಳ" ಎಂಬಂತೆ ಆತುರಾತುರವಾಗಿ ಕಲೆಹಾಕಿದ ಕೆಲವು ವಿಷಯಗಳ ಹರುಕು ಹರುಕು ದಾರವಾಗಿರಲಿಲ್ಲ. ಪ್ರತಿಯೊಂದು ಆಮೂಲಾಗ್ರ ವಾಗಿ ನಡೆಯಲೇಬೇಕು. ಹಾಗೆ ನಡೆದರೇ ಅವರಿಗೆ ತೃಪ್ತಿ. ಪ್ರತಿಪಾಠವೂ ಕಲಿಸುವವರ ಹೃದಯದಿಂದ ಕಲಿಯುವವರ ಹೃದಯಕ್ಕೆ ನೇರವಾಗಿ ಹೋಗಿ ಮುಟ್ಟುತ್ತಿದ್ದ ಅಂತಹ ಆಧ್ಯಾತ್ಮಿಕವಾದ ಚೇತನಾ ವ್ಯಾಪಾರವಾಗಿರುತ್ತಿತ್ತು.

ಅವರು ತಮ್ಮ ಸರ್ವಸ್ವವನ್ನೂ ಶಿಷ್ಯರಿಗೆ ಧಾರೆ ಎರೆಯುತ್ತಿದ್ದರೆ ಇನ್ನೂ ಕೇಳೋಣ ಇನ್ನೂ ಕೇಳೋಣ ಎಂಬ ಆತುರ ಶಿಷ್ಯರಿಗೆ. ಈ ನಡುವೆ ಹೊತ್ತೇ ಗೊತ್ತಾಗುತ್ತಿರಲಿಲ್ಲ. ಕಾಲೇಜಿನ ಗಂಟೆ ಬಾರಿಸಿದರೆ "ಥೂ ಇವನ ಏನು ಬಂತಿವನಿಗೆ ಇನ್ನೊಂದಷ್ಟು ನಿಮಿಷ ನಿಧಾನವಾಗಿ ಬಾರಿಸಿದ್ದರೆ ಏನಿವನಪ್ಪನ ಗಂಟು ಮುಳುಗಿ ಹೋಗುತ್ತಿತ್ತೇ?" ಎಂದು

ಕೊಂಡೇಳುತ್ತಿದ್ದವು. ಇದು, ಪಾಠವೆಂದರೆ. ಏನೋ ಆ ಹೊತ್ತಿಗಷ್ಟು ಹಸಿಯೋ ಬಿಸಿಯೋ ಗೀಚಿಕೊಂಡು "ತುಂಡೇ ಬಂಡವಾಳ! ತಿಳಿದವನಿಗೆ ತಿಳಿಯಲಿ, ತಿಳಿಯದವನಿನೇಗಾದರಾಗಲಿ" ಎಂದು ಊದೋ ಶಂಖ ಊದಿ ಬರುವುದು ಪಾಠವಲ್ಲ. ನಿಮಿಷಗಳನ್ನೂ ದಿನಗಳನ್ನೂ ಎಣಿಸಿ ತಿಂಗಳಾಗುತ್ತಲೂ ಅರ್ಹತೆ ಇದ್ದೋ ಇಲ್ಲದೆಯೋ ಅನ್ಯಾಯಾರ್ಜಿತವಾದ ಸಂಬಳ ವನ್ನೂ ಜೇಬಿಗೆ ತುಂಬಿಕೊಳ್ಳುವ ಶಿಕ್ಷಣದವ್ಯಾಪಾರದ ಮೋಸಗಳು ಪಾಠಗಳಲ್ಲ.

Jean Piaget ಎಂಬ ಪ್ರಸಿದ್ಧ ಶಿಕ್ಷಣತಜ್ಞ ಅತ್ಯಂತ ಯಶಸ್ವೀ, ಸರ್ವತೋಮುಖ ವಿಕಾಸಕ್ಕೆ ಶಿಕ್ಷಣ ನಡೆಯಬೇಕಾದರೆ ಅದೊಂದು ತೃಪ್ತಿ ತ್ರಿಕೋನದಂತೆ ನಡೆಯುತ್ತದೆ ಎಂಬುದೇ ಅವನ ಸಿದ್ಧಾಂತ. ಶಿಕ್ಷಕನಲ್ಲಿ ನಿಜವಾಗಿ ತಾನು ಬೋಧಿಸುವ ವಿಷಯದಲ್ಲಿ ಪ್ರೀತಿ, ತೃಪ್ತಿ, ಶಿಷ್ಯರಲ್ಲಿ ಅವನಿಗಿರುವ ನಿಜವಾದ ಪ್ರೀತಿ. ತೀ.ನಂ.ಶ್ರೀ ಯವರಿಗೆ ಕನ್ನಡದಲ್ಲಿ ನಿಜವಾದ, ಪ್ರಾಮಾಣಿಕವಾದ ಪ್ರೀತಿ ಅಪಾರವಾಗಿತ್ತು. ಅವರ ಶಿಷ್ಯರನ್ನು ಕಂಡರೆ ಅವರಿಗೆ ಅಷ್ಟೇ ಪ್ರಾಮಾಣಿಕವಾದ ಪ್ರೀತಿ ಇತ್ತು. ಕನ್ನಡವನ್ನು ಕಲಿಸಬೇಕೆಂಬ ಆಸಕ್ತಿ ಆಳವಾಗಿತ್ತು. ಶಿಷ್ಯರಿಗೆ ಕಲಿಯುವ ಆಸಕ್ತಿ ಇತ್ತು. ಕಲಿತಿದ್ದರಿಂದ ತೃಪ್ತಿ ಇತ್ತು. ಇವಿಷ್ಟೂ ಸೇರಿ ತೀ.ನಂ.ಶ್ರೀ ಕನ್ನಡ ಶಿಕ್ಷಕರಿಗೊಬ್ಬರಿಗೇ ಅಲ್ಲ. ಇಡೀ ಶಿಕ್ಷಕ ಲೋಕಕ್ಕೇ ಆದರ್ಶ ಪುರುಷರಾಗಿ ಸಾರ್ಥಕವಾದ ಶ್ರೀಮಂತವಾದ ಸಂಸ್ಕೃತಿ ಸಜ್ಜನಿಕೆಗಳ ನಿಧಿಯಾಗಿ ಬಾಳಿದವರು. ಅವರೊಬ್ಬರು ಶಿಕ್ಷಕ ಯೋಗಿ.

ಶ್ರೀ ತೀ.ನಂ.ಶ್ರೀಯವರ ಪಾಠ ಕಾಲೇಜಿಗೆ ಗೊತ್ತಾಗಿದ್ದ ಶುಷ್ಕವಾದ ಪಠ್ಯಪುಸ್ತಕಗಳ ಪಾಠಗಳಿಗೇ ಸೀಮಿತವಾಗಿರುತ್ತಿರಲಿಲ್ಲ. ಆ ಪಾಠಗಳೂ ಸಾಂಗೋಪಾಂಗವಾಗಿ ನೆರವೇರುತಿದ್ದಂತೆ ನಡುನಡುವೆ ಸಮಯೋಚಿತವಾಗಿ ಆಚಾರ್ಯ ಡಿವಿಜಿ, ಕಾಳಿದಾಸ, ಷೇಕ್ಸ್‌ಪಿಯರ್, ಭಾಸ ಇತ್ಯಾದಿ ಮಹಾಮಹಾ ದಿಗ್ಗಜಗಳ ಕೃತಿಗಳಿಂದ ಅವರಿಗೆ ನೆನಪಾಗುತಿದ್ದ ನಿದರ್ಶನಗಳಿಂದ ಉಲ್ಲೇಖನಗಳಿಂದ ಪಾಠ ಪುಷ್ಟಿಯನ್ನೂ ಪಡೆಯುತ್ತಿತ್ತು. ಇವಲ್ಲದೆ ಜೊತೆಗೆ ಸಂಸ್ಕೃತ ಇಂಗ್ಲಿಷ್ ಸಾಹಿತ್ಯಗಳಿಂದ ಕೂಡ ಸಣ್ಣ ಸಣ್ಣ ಝರಿಗಳೂ ಉಪನದಿಗಳೂ ಕೂಡಿ, ಪಾಠಪ್ರವಾಹವೊಂದು ತುಂಬಿ ಹರಿಯುತ್ತಿದ್ದ ಜ್ಞಾನಗಂಗೆಯೇ ಆಗುತ್ತಿತ್ತು. ಕಾಡುಮೇಡುಗಳನ್ನೆಲ್ಲ ದಿನವೆಲ್ಲ ಸುತ್ತಿ ಒಳ್ಳೆಯ ಹಸಿರುಗರಿಕೆಯನ್ನು ಮೇಡು ಕೆಚ್ಚಲಿನಲ್ಲಿ ಹಾಲನ್ನು ತುಂಬಿಕೊಂಡು ಮನೆಗೆ ಬಂದು ಹಸಿದ ಕರು ಹಾಲುಣ್ಣುತ್ತಿದ್ದರೆ ಹಾಲು ಕೊಡುತ್ತಿದ್ದ ತಾಯಿಗೆ ಅದರದೇ ತೃಪ್ತಿ, ಹಾಲನ್ನು ಚಪ್ಪರಿಸಿ ಚಪ್ಪರಿಸಿ ತೃಪ್ತಿಯಾಗಿ ಕುಡಿಯುತ್ತಿದ್ದ ಕರುವಿಗೆ ತನ್ನದೇ ತೃಪ್ತಿ. ಇದು ತೀ.ನಂ.ಶ್ರೀ ಪಾಠ. ಒಂದೊಂದು ಪಾಠವೂ ಒಂದೊಂದು ಹಬ್ಬದ ಮೃಷ್ಟಾನ್ನ ಊಟ.

ಕಾಲೇಜಿನೊಳಗೆ ನಡೆಯುತ್ತಿದ್ದ ಪಾಠಗಳು ಹಾಗಿರಲಿ, ಕಾಲೇಜಿನ ಹೊರಗೂ ಅವರ ಸಂಪರ್ಕದಿಂದ ನಮ್ಮ ಬಾಳು ಒಂದಲ್ಲ ಒಂದು ರೀತಿ ಪುನೀತವಾಗುತ್ತಿತ್ತು. ಅವರನ್ನು ಸಂಧಿಸಿದಾಗಲೆಲ್ಲ–ರಸ್ತೆಯಲ್ಲಿಯೇ ಆಗಲಿ ಮನೆಯಲ್ಲಿಯೇ ಆಗಲಿ–ಅವರ ದಿವ್ಯ ಸಂಪರ್ಕದಿಂದ ಶಿಷ್ಯರ ಜೀವನದ ಯಾವುದೋ ಭಾಗ ಯಾವುದೋ ಮುಖ ನಯವಾಗುತ್ತಿತ್ತು. ತೀ.ನಂ.ಶ್ರೀ ಆತ್ಮೀಯತೆ ಗುರುಶಿಷ್ಯ ಸಂಬಂಧದಲ್ಲಿದ್ದ ಅತ್ಯಂತ ಪ್ರಮುಖ ಲಕ್ಷಣ. ಶ್ರೀ ತೀ.ನಂ.ಶ್ರೀಯವರಿಗೆ

ಈ ಅನೇಕ ದಶಕಗಳಲ್ಲಿ ಸಾವಿರಾರು ಶಿಷ್ಯರೇ ಆಗಿ ಹೋದರಾದರೂ ಒಬ್ಬೊಬ್ಬರಿಗೂ "ನನ್ನನ್ನು ಕಂಡರೆ ಮೇಷ್ಟರಿಗೆಷ್ಟು ಪ್ರೀತಿ; ಅವರ ಹೃದಯದಲ್ಲಿ ನನಗೆಂತಹ ಸ್ಥಾನ!" ಎಂಬ ಹೆಮ್ಮೆ ಉಂಟಾಗುತ್ತಿತ್ತು. ಇದರಿಂದ ಶಿಷ್ಯರಿಗೆ ತಿಳೀದೋ ತಿಳಿಯದೆಯೋ ಅವರ ನಡೆನುಡಿಗಳಿಗೊಂದು ನಯ, ಸಂಸ್ಕಾರ, ಮೆರುಗೂ ಬರುತ್ತಿತ್ತು. ಪಠ್ಯವಿಷಯಗಳಲ್ಲಿ ಏನಾದರೂ ತಿಳಿಯದಿದ್ದರೆ ಒಂದಲ್ಲ ಹತ್ತು ಪುಸ್ತಕ ಹುಡುಕಿ ಬೇಟೆಯಾಡಿ ತರಬಹುದು. ಆದರೆ ಈ ನಡೆನುಡಿಗಳ ಸಂಸ್ಕಾರ? ಶ್ರೀ ತೀ.ನಂ.ಶ್ರೀ.ಯವರಂತಹ ಶಿಕ್ಷಕ ಯೋಗಿಗಳ ಸಂಪರ್ಕವಿದ್ದರೆ ಮಾತ್ರ ಸಾಧ್ಯ. ಆ ಪುಣ್ಯ ಬಹಳ ಕಡಿಮೆ ಜನ ಕೇಳಿಕೊಂಡು ಬಂದಂತಹುದು

ಶ್ರೀ ತೀ.ನಂ.ಶ್ರೀಯವರ ಆತ್ಮೀಯತೆಯಲ್ಲಿಯೂ ವೈಶಿಷ್ಟ್ಯವಿತ್ತು. ಆತ್ಮೀಯತೆ ಎಂದೂ ಹಗುರವಾದ ಸದರದ ಕೀಳು ಮಟ್ಟಕ್ಕಿಳಿಯುತ್ತಿರಲಿಲ್ಲ. ಈ ಆತ್ಮೀಯತೆ ಎಷ್ಟೇ ನಿಕಟ ಸಂಪರ್ಕವನ್ನು ತಂದರೂ ನಮ್ಮಲ್ಲಿ ಸಂಯಮವಿರಬೇಕಾಗಿತ್ತು. ಮಾತನಾಡುವಾಗ "ಯಾವ ಮಾತನ್ನು ಹೇಗೆ ಆಡಬೇಕು? ಎಷ್ಟು?" ಎಂಬುದರ ಪರಿವೆ ನಮ್ಮ ಮಾತುಗಳನ್ನು ಸದಾ ಕಾಯುತ್ತಿತ್ತು. ಯಾವ ಮಾತನ್ನಾಡಿದರೆ ಹೇಗೋ? ಇದು ಹೆಚ್ಚು ಮಾತಾಯಿತೋ ಏನೋ? ಎಂಬ ಎಚ್ಚರಿಕೆಯಲ್ಲಿಯೇ ಗುರುಗಳೊಡನೆ ನಮ್ಮ ಗೌರವ, ಶಿಷ್ಯರೊಡನೆ ಅವರ ವಿಶ್ವಾಸ ಬೆಳೆದು ಬರುತ್ತಿದ್ದುವು. ಇದೊಂದು ದೈವಿಕ ಶಕ್ತಿಯೋ ಏನೋ. ನಮ್ಮ ನಮ್ಮ ಮಾತುಗಳಲ್ಲಿಯೂ ಹಗುರತೆ, ಕೀಳು ಅಭಿರುಚಿ, ಸ್ಥೂಲ ಬಗೆಯ ಹಾಸ್ಯ ಅಗ್ಗವಾದ ಮಾತುಗಳ ಸುಳಿವೂ ಇರುತ್ತಿರಲಿಲ್ಲ. ಅವರಿದ್ದ ಕಡೆ ವಾತಾವರಣ ಪರಿಶುದ್ಧವಾಗಿರುತ್ತಿತ್ತು.

ಶ್ರೀಯುತರ ಮನೆಯೊಂದು ಗುರುಕುಲ. ಎಲ್ಲ ಶಿಷ್ಯರಿಗೂ ಯಾವಾಗಲೂ "ತೆರೆದ ಬಾಗಿಲೇ!". ಯಾವಾಗ ಹೋದರೂ ಅವರ ಸುತ್ತ ಮುತ್ತ ಶಿಷ್ಯರ ಗುಂಪೇ. ಅವರು ನಿಯುಕ್ತರಾಗಿ ಪಾಠ ಹೇಳುತ್ತಿದ್ದ ಕಾಲೇಜುಗಳ ಶಿಷ್ಯರ ಮಾತು ಹಾಗಿರಲಿ, ಬೇರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳೂ ಬೇರೆಯವರೂ ಸಕ್ಕರೆಗಿರುವೆಮುತ್ತಿದಂತೆ ಮುತ್ತುತಿದ್ದರು. ಒಂದು ಗುಂಪು ದಿವಂಗತ ಮೋಟಗಾನ ಹಳ್ಳಿ ರಾಮಶೇಷ ಶಾಸ್ತ್ರಿಗಳ "ರಾಕ್ಷಸನ ಮುದ್ರಿಕೆ" ಯಿಂದ ಒಂದು ಅನುಮಾನವನ್ನು ತಂದಿದ್ದರೆ, ಇಂಗ್ಲಿಷ್ ಸಂಸ್ಕೃತ ಸಾಹಿತ್ಯದ ಎಂ.ಎ ವಿದ್ಯಾರ್ಥಿಗಳ ಸಂದೇಹಗಳೂ ಪರಿಹಾರ ಆಗಬೇಕಾಗಿತ್ತು. ಮೈಸೂರಿನ ಸರಕಾರಿ ಟ್ರೈನಿಂಗ್ ಕಾಲೇಜಿನ ಪಂಡಿತವರ್ಗದವರೂ ಈ ಅಲಂಕಾರ ತಿಳಿಯಲಿಲ್ಲ, ಆ ಛಂದಸ್ಸು ಗೊತ್ತಾಗಲಿಲ್ಲ ಸ್ವಲ್ಪ ತಿಳಿಯಹೇಳುತ್ತೀರಾ ಎಂದು ಎಲ್ಲರೂ ಕಾಯುತ್ತಿದ್ದರು. ಯಾರು ಏನೇಕೇಳಲಿ ಎಲ್ಲರನ್ನೂ ನಗುಮುಖದಿಂದ ಬರಮಾಡಿಕೊಂಡು ತಾಳ್ಮೆಯಿಂದ ಕೇಳಿ ಸೆಡುಕು ಸಿಡುಕುಗಳಿಲ್ಲದೆ ಅವರವರ ಮನಸ್ಸಿಗೆ ಸಮಾಧಾನಸಿಗುವಂತೆ ಉತ್ತರಗಳನ್ನು ಕೊಡುತ್ತಿದ್ದರು. ಬಂದವರನ್ನು ಕೂಡಿಸಿ ಮರ್ಯಾದೆಯಿಂದ ನೋಡಿಕೊಳ್ಳುವ ಕೆಲಸ ಶ್ರೀ ಎ.ಆರ್. ನರಸಿಂಹಮೂರ್ತಿ, ಶ್ರೀ ಚಿ.ನ. ವಿಶ್ವನಾಥಶಾಸ್ತ್ರಿ ಅವರುಗಳದು. ಅವರ ಮನೆ ಹೊಸ್ತಿಲು ತುಳಿದು ಒಳಗೆ ಹೋದವರಲ್ಲಿ ತಿಂಡಿ ತೀರ್ಥಗಳಿಲ್ಲದೆ ಬಂದವರೇ ಇಲ್ಲ. ಅವರು ಪಾಠ ಹೇಳುತ್ತಿದ್ದರೆ ನಾನೂ ಹೀಗೆಯೇ ಶಿಕ್ಷಕನಾಗಬೇಕು ಎಂಬ ಆಸೆ ನನ್ನಲ್ಲಂಕುರಿಸಿ ಅವರನ್ನು ನನ್ನ ಆದರ್ಶವನ್ನಾಗಿ ಮಾಡಿಕೊಂಡೆ. ಬಾಳಿದರೆ ಬದುಕಿದರೆ ತೀ.ನಂ.ಶ್ರೀ ಹಾಗೆಯೇ ಬದುಕಬೇಕು ಹಾಗೆ ನಡೆಸಿದ ಬದುಕು ಅರ್ಥಪೂರ್ಣವಾದ ಬದುಕು

ಎಂದು ನಂಬಿದವರಲ್ಲಿ ನಾನೂ ಒಬ್ಬ. ಅವರನ್ನು ನೆನೆದ ದಿನ ನನ್ನ ಪಾಠ ಚೆನ್ನಾಗಿರುತ್ತಿತ್ತು. ಯಾವ ಜನ್ಮದ ಪುಣ್ಯವೋ ಅವರ ಸಂಪರ್ಕ ನನಗೆ ಬಂತು.

ಶ್ರೀ ತೀ.ನಂ.ಶ್ರೀ ಯವರ ಆತ್ಮೀಯತೆ ಒಂದೊಂದು ಸಲ ಬಹಳ ಕಷ್ಟಕರವೂ ಕ್ರೂರವೂ ಆಗುತ್ತಿತ್ತು. ಅವರ ಶಿಷ್ಯರಿಗೆ ಆಗಾಗ ಪಂಚಾಂಗದಲ್ಲಿ ಒಂದೊಂದು ದುರ್ದಿನ ಬರುತ್ತಿತ್ತು. ತೀ.ನಂ.ಶ್ರೀ ರಜಾ ತೆಗೆದುಕೊಳ್ಳುತ್ತಿದ್ದುದೇ ಅಪರೂಪ. ಆದರೂ ಯಾವುದಾದರೂ ಅನಿವಾರ್ಯದಿಂದ ರಜಾ ತೆಗೆದುಕೊಂಡಾಗ "Mr. T.N. Sreekantaiya will not take his classes" ಎಂಬ ನೋಟೀಸು ಕಾಲೇಜಿನ ನೋಟೀಸ್ ಬೋರ್ಡ್ ಮೇಲೆ ಬಿದ್ದಾಗ ಬಹಳ ಬೇಸರವಾಗುತ್ತಿತ್ತು. ಅದೊಂದು ಕ್ರೂರವಾದ ವಿರಹ ವೇದನೆ. ರಜಾ ಕಳೆದು ಮರುದಿನ ಅವರು ಕಾಲೇಜಿಗೆ ಬಂದದ್ದು ಯಾರಿಗಾದರೂ ಕಣ್ಣಿಗೆ ಬಿದ್ದರೆ, ಬೇರೆ ಕ್ಲಾಸಿನಲ್ಲಿ ಜೊತೆಗಾರರು "TNS ಲೈಬ್ರರಿಯಲ್ಲಿ ನಿಂತಿದ್ದರು ನೋಡಿದೆಯಾ?" ಎಂದು ಕೇಳಿದರೆ ನಮಗೇನೋ ಒಂದು ಸಾಮ್ರಾಜ್ಯವೇ ಸಿಕ್ಕಿದಷ್ಟು ಸಂತೋಷ!

ಧನ್ಯಜೀವಿ ಶ್ರೀ ತೀ.ನಂ.ಶ್ರೀ ಅವರ ಶಿಷ್ಯರಾಗಿ ನಮ್ಮ ಬಾಳು ಪುನೀತವಾಯಿತು.

ನಮೋ ನಮೋ ತೀ.ನಂ.ಶ್ರೀ.

(೧೯೭೬)

ತೀ.ನಂ. ಶ್ರೀಕಂಠಯ್ಯನವರು : ಕೆಲವು ನೆನಪುಗಳು

ಜಿ.ಎಸ್. ಶಿವರುದ್ರಪ್ಪ

●

ಅದು ಐವತ್ತರ ದಶಕದ ಕಾಲ. ನಾನು ಮೈಸೂರಿನ ನೂರಡಿ ರಸ್ತೆಯ ಒಂದು ಅಂಚಿನಲ್ಲಿ ಆ ಸಂಜೆ ನಡೆದು ಬರುತ್ತಾ ಇದ್ದೆ. ಇದ್ದಕ್ಕಿದ್ದ ಹಾಗೆ ರಸ್ತೆಯ ಇನ್ನೊಂದು ಬದಿಯಿಂದ ಯಾರೋ ನನ್ನ ಹೆಸರು ಹಿಡಿದು ಕೂಗಿದ ಹಾಗಾಯಿತು. ಕರೆದವರು ಯಾರೆಂದು ನೋಡುತ್ತೇನೆ – ಸಾಕ್ಷಾತ್ ತೀ.ನಂ.ಶ್ರೀಕಂಠಯ್ಯನವರು. ನನಗೆ ಆಶ್ಚರ್ಯವಾಯಿತು. ಗಾಬರಿಯೂ ಆಯಿತು. ನೋಡುತ್ತಿದ್ದ ಹಾಗೆ ಸರಸರನೆ ರಸ್ತೆಯನ್ನು ದಾಟಿ ಅವರೇ ನನ್ನ ಬಳಿಗೆ ಬಂದೇಬಿಟ್ಟರು. ಪ್ರೀತಿಯಿಂದ ಹೆಗಲಮೇಲೆ ಕೈ ಹಾಕಿದರು. "ಇವತ್ತು ಬೆಳಿಗ್ಗೆ 'ಜೀವನ' ಪತ್ರಿಕೆಯಲ್ಲಿ ನಿಮ್ಮ ಪದ್ಯ 'ಕ್ರಾಂತಿಕಾರಿ'–ಓದಿದೆ. ತುಂಬ ಚೆನ್ನಾಗಿದೆ. ಚೆನ್ನಾಗಿ ಬರೆಯುತ್ತೀರಿ" ಎಂದರು. ಆಗತಾನೇ ಕಾವ್ಯರಂಗಕ್ಕೆ ಕಾಲಿಟ್ಟ ನನಗೆ ಅವರ ಮಾತಿನಿಂದ ಎಂಥ ಆನಂದವಾಯಿತೆಂಬುದನ್ನು ಹೇಳಲಾರೆ.

ಇದು ನಾನು ತೀ.ನಂ.ಶ್ರೀಯವರನ್ನು ತೀರ ಹತ್ತಿರದಿಂದ ಕಂಡ, ಅಲ್ಲ, ತೀ.ನಂ.ಶ್ರೀಯವರು ತೀರಾ ಹತ್ತಿರದಿಂದ ಕಾಣಿಸಿಕೊಂಡ ಮೊದಲ ಪ್ರಸಂಗ. ಈ ಪ್ರಸಂಗವೊಂದರಿಂದ ತೀ.ನಂ.ಶ್ರೀ. ಯವರು ನನ್ನ ಮನಸ್ಸನ್ನು ಆಕ್ರಮಿಸಿಬಿಟ್ಟರು. ತೀ.ನಂ.ಶ್ರೀ.ಯವರ ಸರಳತೆ, ಉದಾರತೆ, ಎಲ್ಲಿ ಬೆಳೆಯುವ ಗುಣವಿದ್ದರೂ ತಟಕ್ಕನೆ ಅದನ್ನು ಗುರುತಿಸುವ ವಾತ್ಸಲ್ಯ ಇವುಗಳ ಪರಿಚಯ ವಾದದ್ದು ಅಷ್ಟೇ ಅಲ್ಲ, ಅವರು ನಾನು ಅದುವರೆಗೂ ತಿಳಿದುಕೊಂಡಂತೆ ಕೇವಲ ಘನ ವಿದ್ವಾಂಸರು ಮಾತ್ರವಲ್ಲ ಎಂಬ ಜ್ಞಾನೋದಯ ಕೂಡಾ ನನಗಾಯಿತು.

ತೀ.ನಂ.ಶ್ರೀಯವರದು ತುಂಬ ಆಕರ್ಷಕವಾದ ವ್ಯಕ್ತಿತ್ವ. ನೋಡಿದರೆ ನೋಡಿದಷ್ಟೂ ಇಷ್ಟವಾಗುವ, ನಿಷ್ಕೃಷ್ಟವಾದ ಆದರೆ ಮಿತವಾಗಿ ಮಾತನಾಡುವ ಉತ್ಸಾಹದ ಚಿಲುಮೆ. ಪುಟಿಯುವ, ಹಸನ್ಮುಖದ ವ್ಯಕ್ತಿತ್ವ ಅವರದು. ಎಂದೂ ಯಾವಾಗಲೂ ಅವರು ಹುಬ್ಬುಗಂಟು ಹಾಕಿದ್ದನ್ನು ನಾನು ಕಂಡ ನೆನಪಿಲ್ಲ. ಅವರೊಂದು ಮಂದಹಾಸದ ನಂದಾದೀಪ.

ಸಂಖ್ಯೆಯ ದೃಷ್ಟಿಯಿಂದ ಶ್ರೀಕಂಠಯ್ಯನವರು ಹೆಚ್ಚಾಗಿ ಬರೆಯಲಿಲ್ಲ. ಇಷ್ಟೊಂದು ವಿದ್ವಾಂಸ ರಾದ ಇವರು ಬರವಣಿಗೆಯ ವಿಚಾರದಲ್ಲಿ ಯಾಕಿಷ್ಟು ಜಿಪುಣರಾಗಿದ್ದಾರೆ ಎಂದು ನನ್ನಂಥ ಹಲವರ ಆಕ್ಷೇಪ. ಆದರೆ ಏನು ಬರೆದರೂ ಅದು ಮಾತ್ರ ಗಟ್ಟಿಯಾದದ್ದು ನಿಜ. ತೀ.ನಂ.ಶ್ರೀ. ಯವರು ತಿಪಟೂರಿನ ತೆಂಗಿನ ಸೀಮೆಯವರು. ತೀರ್ಥಪುರ ಅವರ ಊರು. ಬಹುಶಃ

ತೆಂಗಿನ ಮರ ಅವರಿಗೆ ಮೆಚ್ಚು. ಅಂದಂದಿನ ಉಚಿತಕ್ಕೆ ಸಲ್ಲುವ ತರಕಾರಿ ಸಾಹಿತ್ಯಕ್ಕಿಂತ, ತೆಂಗಿನ ಮರದಂಥ ಸಾಹಿತ್ಯ ನಿರ್ಮಿತಿಯ ಬಗೆಗೆ ಅವರಿಗೆ ಆಸಕ್ತಿ ಹೆಚ್ಚು. ನೆಟ್ಟದ್ದು ಬೇರೂರ ಬೇಕು. ನೆಟ್ಟನೆ ಬೆಳೆದು ಎಲ್ಲ ಕಾಲಕ್ಕೂ ಫಸಲು ಕೊಡುವಂತಾಗಬೇಕು ಅನ್ನುವುದರ ಕಡೆಗೆ ಅವರಿಗೆ ಗಮನ ಹೆಚ್ಚು. ಮಾಡುವ ಕೆಲಸ ಅಚ್ಚುಕಟ್ಟಾಗಬೇಕು. ಸಾಧ್ಯವಾದಷ್ಟು ನಿಷ್ಕೃಷ್ಟವಾಗಬೇಕು, ತೂಕದ್ದಾಗಬೇಕು-ಅನ್ನುವುದು ಅವರು ಬರವಣಿಗೆಯ ಬಗ್ಗೆ ಇಟ್ಟುಕೊಂಡ ಧೋರಣೆಯಾಗಿತ್ತು. ಹೀಗಾದದ್ದರಿಂದ ಅವರು ಹೆಚ್ಚು ಬರೆಯಲಿಲ್ಲ.

ತೀ.ನಂ. ಶ್ರೀಕಂಠಯ್ಯನವರು ಸಾಹಿತ್ಯಕ್ಕೆ ಪ್ರವೇಶ ಮಾಡಿದ್ದೇ ೧೯೩೨ರಲ್ಲಿ, 'ಒಲುಮೆ' ಎಂಬ ಕವನ ಸಂಗ್ರಹದ ಮೂಲಕ. ಅಂದರೆ ಅವರು ಕವಿಯಾಗಿ ಕನ್ನಡ ಸಾಹಿತ್ಯಕ್ಕೆ ಕಾಲಿಟ್ಟರು ಅನ್ನುವುದು ಗುರುತಿಸಿಕೊಳ್ಳಬೇಕಾದ ಸಂಗತಿ. ಕನ್ನಡದಲ್ಲಿ, ಹೊಸಗನ್ನಡದಲ್ಲಿ ಕೆ.ಎಸ್. ನರಸಿಂಹ ಸ್ವಾಮಿಯವರಿಗಿಂತ ಮೊದಲೇ ಪ್ರೇಮಗೀತೆಗಳ ಸಂಗ್ರಹವನ್ನು ಪ್ರಕಟಿಸಿದವರು ತೀ.ನಂ.ಶ್ರೀ. ಯವರು. ಮುಂದೆ 'ಪ್ರೇಮಕಾವ್ಯ' ಕೆ.ಎಸ್.ನ ಅವರಿಂದ ಸಮೃದ್ಧಿಯನ್ನು ಪಡೆಯಿತೆಂಬುದು ಬೇರೆಯ ಮಾತು. ಆದರೆ ತೀ.ನಂ.ಶ್ರೀಯವರ 'ಒಲುಮೆ' ತುಂಬ ಸೊಗಸಾದ ಪ್ರೇಮಗೀತೆಗಳನ್ನು ಕನ್ನಡಕ್ಕೆ ಮೊದಲು ಪರಿಚಯ ಮಾಡಿಕೊಟ್ಟಿತು. ಮುಂದೆ ಶ್ರೀಕಂಠಯ್ಯನವರು ಸಂಶೋಧನೆ, ವಿಮರ್ಶೆ, ಛಂದಸ್ಸು, ಭಾಷಾಶಾಸ್ತ್ರ ಮೊದಲಾದ ಹಲವು ಕ್ಷೇತ್ರಗಳಲ್ಲಿ ತಮ್ಮ ಕೃಷಿಯನ್ನು ಮುಂದುವರಿಸಿ, ಮುಖ್ಯವಾಗಿ ಬಹು ದೊಡ್ಡ ವಿದ್ವಾಂಸರೆಂದು ಹೆಸರುಗಳಿಸಿದರು. ಆದರೆ, ಎಂದೂ ಅವರು ತಮ್ಮೊಳಗಿನ 'ಕವಿ'ಯನ್ನು ಕಳೆದುಕೊಳ್ಳಲಿಲ್ಲ. ಇದು ಬಹಳ ವಿಶೇಷವಾದ ಸಂಗತಿ -ನನ್ನ ದೃಷ್ಟಿಯಲ್ಲಿ. 'ಒಲುಮೆ'ಯ ನಂತರ, ಸ್ವತಂತ್ರವಾದ ಯಾವ ಕವಿತೆಯನ್ನೂ ಬರೆಯದೆ ಇದ್ದರೂ ಅವರು ಸಮಕಾಲೀನ ಕವಿಗಳ ಕಾವ್ಯದ ಸಂಪರ್ಕವನ್ನು ಕಳೆದುಕೊಳ್ಳಲಿಲ್ಲ. ಸತ್ಕಾವ್ಯದ ಬಗೆಗಿನ ರುಚಿಯನ್ನು ಕಡಿಮೆ ಮಾಡಿಕೊಳ್ಳಲಿಲ್ಲ. ಸಮಕಾಲೀನವಾದ ಯಾವ ಸಾಹಿತ್ಯ ಪ್ರಕಾರದ ಕಡೆಗೂ ಕಣ್ಣು ಮುಚ್ಚಿಕೊಳ್ಳಲಿಲ್ಲ. ಅವರು ಸಂಸ್ಕೃತದಿಂದ ಅನೇಕ ಸುಭಾಷಿತ ಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ವಿಶಾಖದತ್ತನ 'ರಾಕ್ಷಸನ ಮುದ್ರಿಕೆ' ಎಂಬ ನಾಟಕವನ್ನು ಕನ್ನಡಕ್ಕೆ ತಂದರು. 'ನಂಟರು' ಎಂಬ ಹೆಸರಿನಿಂದ ಪ್ರಕಟವಾದ ಭಾವಪ್ರಬಂಧಗಳ ಸಂಕಲನವನ್ನು ತಂದರು. ಜತೆಗೆ ಅವರು ಸಂಪಾದಿಸಿ ಪ್ರಕಟಿಸಿದ್ದು ರನ್ನನ ಗದಾಯುದ್ಧ ಮತ್ತು ಹರಿಹರನ ನಂಬಿಯಣ್ಣನ ರಗಳೆ - ಇವೆರಡನ್ನೇ. ಆದರೆ ಈ ಎರಡೂ, ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ ಅತ್ಯಂತ ಅಚ್ಚುಕಟ್ಟಾದ ಮಾದರಿಯ ಕೆಲಸಗಳೆಂದು ಪರಿಗಣಿತವಾಗಿವೆ. ಅದರಲ್ಲೂ 'ಗದಾಯುದ್ಧ' ಸಂಗ್ರಹಕ್ಕೆ ಅವರು ಕೊನೆಯಲ್ಲಿ ಸಿದ್ಧಪಡಿಸಿರುವ ಟಿಪ್ಪಣಿಗಳಂತೂ, ವಿದ್ವತ್‌ಪೂರ್ಣವಾದ ಸಂಶೋಧನಾತ್ಮಕ ವಿಮರ್ಶೆಯ ಹೆಜ್ಜೆಗಳೆಂಬುದನ್ನು ಯಾರಾದರೂ ಗುರುತಿಸಬಹುದಾಗಿದೆ.

ತೀ.ನಂ. ಶ್ರೀಕಂಠಯ್ಯನವರು ಬಹು ಭಾಷಾ ಪರಿಣತರಾದ ವಿದ್ವಾಂಸರು. ಇಂಗ್ಲಿಷಿನಲ್ಲಿ ಅವರು ಬರೆದ ಲೇಖನಗಳು ಇಪ್ಪತ್ತರಷ್ಟಿವೆ. ಸಂಸ್ಕೃತದಿಂದ ಅವರು ಅನುವಾದ ಮಾಡಿದ ಬಿಡಿ ಮುಕ್ತಕಗಳ ಸಂಖ್ಯೆ ೨೧೫ರಷ್ಟು. ಕಾಳಿದಾಸನನ್ನು ಕುರಿತು, ಧನಂಜಯನನ್ನು ಕುರಿತು, ಭಾಸನನ್ನು ಕುರಿತು ಅವರು ವಿಮರ್ಶೆಗಳನ್ನು ಬರೆದಿದ್ದಾರೆ. ಕಾವ್ಯ ಮೀಮಾಂಸೆಯನ್ನು

ಕುರಿತು ಅವರು ಬರೆದಿರುವ 'ಭಾರತೀಯ ಕಾವ್ಯಮೀಮಾಂಸೆ'ಯನ್ನು ಕವಿ ಕುವೆಂಪು ಅವರು, ಅದೊಂದು ಆಚಾರ್ಯ ಕೃತಿ ಎಂದು ಪ್ರಶಂಸಿದ್ದಾರೆ. ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳನ್ನು ಕುರಿತು ಇಷ್ಟು ಪ್ರಮಾಣಭೂತವೂ ಸ್ವಾದುವೂ ಆದ ಕೃತಿ ಬಹುಶಃ ಇತರ ಯಾವ ಭಾರತೀಯ ಭಾಷೆಯಲ್ಲೂ ಇಲ್ಲ ಎಂಬುದಷ್ಟೇ ಅಲ್ಲ; ಇಂಗ್ಲಿಷ್ ಭಾಷೆಯಲ್ಲೂ ಕೂಡ ಈ ವಿಷಯವನ್ನು ಕುರಿತು ಇಂದಿಗೂ ಇಂಥ ಗ್ರಂಥ ಇಲ್ಲ ಎನ್ನುವುದನ್ನು ಗಮನಿಸಬೇಕು.

ಇಂಥ ಬಹು ಭಾಷೆಯ ಬಹು ವಿಷಯವಾದ ಅಪಾರವಾದ ವಿದ್ವತ್ತಿನ ಹಿನ್ನೆಲೆಯಿದ್ದರೂ, ತೀ.ನಂ.ಶ್ರೀಕಂಠಯ್ಯನವರು ಎಂದೂ ತಮ್ಮ ಸಮಕಾಲೀನತೆಯಿಂದ ತಾವು ದೂರ ಸರಿದು, ತಮ್ಮದೇ ಆದ ವಿದ್ವತ್ತಿನ ದುರ್ಗದಲ್ಲಿ ಹುದುಗಿಕೊಳ್ಳಲಿಲ್ಲ. ನನಗೆ ತೋರುವ ಮಟ್ಟಿಗೆ ಶ್ರೀಕಂಠಯ್ಯನವರದು ಸುರಂಗ ಮಾರ್ಗವಲ್ಲ, ತರಂಗ ಮಾರ್ಗ. ಕೆಲವರು ವಿದ್ವತ್ತಿನ ಹೆಸರಿನಲ್ಲಿ ಸಂಶೋಧನೆ ಮಾಡುತ್ತಾ ಗಣಿಯೊಳಕ್ಕೇ ಹೋಗಿ ಬಿಡುತ್ತಾರೆ. ಅವರಿಗೆ ಸಮಕಾಲೀನವಾದ ಹಾಗೂ ಜೀವಂತವಾದ ಸೃಜನ ಸಾಹಿತ್ಯದ ಕಡೆ ನೋಡಲು ವ್ಯವಧಾನವಾಗಲಿ, ಆಸಕ್ತಿಯಾಗಲಿ ಇರುವುದಿಲ್ಲ. ಅಂಥವರು ಅಗೆದು ತೆಗೆದು ತಂದದ್ದು ಚಿನ್ನವೇ ಇರಬಹುದು. ಆದರೆ ಅವರು ಸಮಕಾಲೀನತೆಯೊಂದಿಗೆ ಜೀವಂತ ಸಂಪರ್ಕವನ್ನೇ ಕಳೆದುಕೊಂಡು ಗತಕಾಲದ ಬೆಳಕಿನಲ್ಲೆ ಬದುಕುತ್ತಾರೆ. ಆದರೆ ನಿಜವಾದ ವ್ಯಕ್ತಿತ್ವದ ವಿಕಾಸಕ್ಕೆ ಗತಕಾಲದ ಅನುಭವದೊಂದಿಗೆ ವರ್ತಮಾನದ ಜೀವಂತಿಕೆಯ ಸ್ಪರ್ಶವೂ ಅಗತ್ಯ ಅನ್ನುವುದನ್ನು ತೀ.ನಂ.ಶ್ರೀಕಂಠಯ್ಯನವರಂಥವರು ಕಂಡುಕೊಳ್ಳುತ್ತಾರೆ. ಈ ಅರ್ಥದಲ್ಲೇ ನಾನು ಹೇಳಿದ್ದು, ಅವರದು ಸುರಂಗ ಮಾರ್ಗವಲ್ಲ, ತರಂಗ ಮಾರ್ಗ ಎಂದು. ಎಂದರೆ, ಅದೊಂದು ರೀತಿಯಲ್ಲಿ ವಿಸ್ತಾರವಾದ ಕಡಲಿನ ಮೇಲೆ ಪಟ ಬಿಚ್ಚಿಕೊಂಡ ದೋಣಿಯಲ್ಲಿ ಕುಳಿತು ಹೊಸ ದಿಗಂತಗಳನ್ನು ಕಾಣುವ ಹಂಬಲದಿಂದ ಹೊರಟ ನಾವಿಕನ ಮನೋಧರ್ಮಕ್ಕೆ ಸಂವಾದಿಯಾದದ್ದು. ಈ ಮನೋಧರ್ಮದಿಂದಾಗಿ ತೀ.ನಂ. ಶ್ರೀಕಂಠಯ್ಯನವರು ಉದ್ದಕ್ಕೂ ಹೊಸಗನ್ನಡ ಸಾಹಿತ್ಯದ ಬಗೆಗೆ ತಮ್ಮ ಪ್ರತಿಕ್ರಿಯೆಗಳನ್ನು ದಾಖಲು ಮಾಡುತ್ತಾ ನವೋದಯ ಸಾಹಿತ್ಯ ವಿಮರ್ಶೆಯ ರೂಪು-ರೇಖೆಗಳನ್ನು ಹಾಕಿಕೊಟ್ಟಿದ್ದಾರೆ. ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತೆಗಳು' ಕೃತಿಗೆ ೧೯೩೩ರಲ್ಲಿ ಅವರು ಬರೆದ ಪ್ರಸ್ತಾವನೆ ಇಂದಿಗೂ ಮಹತ್ವದ್ದಾಗಿದೆ. ಪು.ತಿ. ನರಸಿಂಹಾಚಾರ್ಯರ ಗೀತನಾಟಕ 'ಅಹಲ್ಯೆ'ಗೆ ಬರೆದ ವಿಸ್ತಾರವಾದ ಮುನ್ನುಡಿ, ಸೊಗಸಾದ ರಸವಿಮರ್ಶೆಯಾಗಿದೆ. ಬೇಂದ್ರೆಯವರ 'ಗರಿ' 'ಸಖೀಗೀತ', ಗೋಕಾಕರ 'ಸಮುದ್ರದಾಚೆಯಿಂದ', ರಾಜರತ್ನಂ ಅವರ 'ರತ್ನನ ಪದಗಳು' 'ಕಡಲೆಪುರಿ' 'ತುತ್ತೂರಿ', 'ಕೆರೆಗೆ ಹಾರ' ಎಂಬ ಜನಪದ ಗೀತೆಯನ್ನು ಕುರಿತು– ಇವರು ಬರೆದ ವಿಮರ್ಶೆ ಇವುಗಳನ್ನು ಗಮನಿಸಬೇಕು. ಅಷ್ಟೆ ಅಲ್ಲ 'ಭಾರತೀಯ ಕಾವ್ಯಮೀಮಾಂಸೆ'ಯಂಥ ಕೃತಿಯಲ್ಲಿ ಅವರು ಕಾವ್ಯಮೀಮಾಂಸೆಯ ತತ್ವಗಳಿಗೆ ನಿದರ್ಶನವಾಗಿ ಸಮಕಾಲೀನ ಸಾಹಿತ್ಯದ ಪದ್ಯಗಳನ್ನು ಆರಿಸಿಕೊಟ್ಟಿರುವುದು ಅವರ ಅಭಿರುಚಿಗೆ ದಾಖಲೆಯಾಗಿದೆ. ಅಷ್ಟೇ ಅಲ್ಲ, ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳು, ಎಂದೋ ಯಾವುದೋ ಕಾಲದ ಸಾಹಿತ್ಯವನ್ನು ಅನುಲಕ್ಷಿಸಿ ರೂಪಿತವಾದವುಗಳಲ್ಲ, ಅವುಗಳು ಎಲ್ಲ ಕಾಲದ ಸಾಹಿತ್ಯಕ್ಕೂ ಅನ್ವಯವಾಗುವ ಮೂಲ ಸಿದ್ಧಾಂತಗಳು ಎನ್ನುವುದನ್ನು ಎತ್ತಿ ಹಿಡಿದಿದ್ದಾರೆ. ಅವರ ಭಾರತೀಯ

ಕಾವ್ಯಮೀಮಾಂಸೆಯಲ್ಲಿ ಹಳಗನ್ನಡದ, ಹೊಸಗನ್ನಡದ, ಜಾನಪದದ ನಿದರ್ಶನಗಳನ್ನು ಕೊಟ್ಟು ಮಾಡಿರುವ ವಿಮರ್ಶೆ ಹೊಸಗನ್ನಡ ವಿಮರ್ಶೆಯ ಸಂದರ್ಭದಲ್ಲಿ ವಿಮರ್ಶೆಯ ಮೊದಲ ಮಾದರಿಗಳೂ ಆಗಿವೆ. ವರ್ಣನಾ ವಿಮರ್ಶೆ, ವ್ಯಾಖ್ಯಾನ ವಿಮರ್ಶೆ, ತೌಲನಿಕ ವಿಮರ್ಶೆ – ಇತ್ಯಾದಿ ವಿಮರ್ಶೆಯ ಹಲವು ಮಾದರಿಗಳನ್ನು ಅವರು 'ಭಾರತೀಯ ಕಾವ್ಯಮೀಮಾಂಸೆ'ಯಲ್ಲಿ, ಅವರ 'ಕಾವ್ಯ ಸಮೀಕ್ಷೆ' ಮತ್ತು 'ಸಮಾಲೋಕನ' ಈ ಕೃತಿಗಳಲ್ಲಿ ಕಾಣಬಹುದು. ಅವುಗಳೆಲ್ಲಕ್ಕೂ ನಿದರ್ಶನಗಳನ್ನು ಕೊಡುವುದು ಇಲ್ಲಿ ಸಾಧ್ಯವಾಗದ ಮಾತು.

ಕನ್ನಡ ವಿಮರ್ಶೆಯ ಆರಂಭ ಕಾಲದಲ್ಲಿ ಸಾಮಾನ್ಯವಾಗಿ ಅಂದಿನ ವಿಮರ್ಶಕರಲ್ಲಿ ಕಂಡುಬರುತ್ತಿದ್ದುದು ಸಾಹಿತ್ಯದ ಬಗ್ಗೆ ರುಚಿಹುಟ್ಟಿಸುವ, ಹೆಚ್ಚೆಂದರೆ ಓದುಗರಿಗೆ ಮೆಚ್ಚುವುದನ್ನು ಕಲಿಸುವ ಉದಾರವಾದೀ ಧೋರಣೆ. ಆದರೆ ತೀ.ನಂ.ಶ್ರೀಯವರಲ್ಲಿ ವಿಮರ್ಶನ ದೃಷ್ಟಿ ಇದನ್ನೂ ಮೀರಿದ, ಒಂದು ನಿರ್ಭಯ ನಿಷ್ಪಕ್ಷಪಾತ ನಿಲುವನ್ನು ನೆಲೆಗೊಳಿಸುವುದಾಗಿತ್ತು. ವಿಮರ್ಶೆಯ ಹೆಸರಿನಲ್ಲಿ ಮನಸ್ಸು ವ್ಯಗ್ರವಾಗಬೇಕಾಗಿಲ್ಲ. ಮಾತು ಅನಗತ್ಯವಾಗಿ ಕಟುವಾಗ ಬೇಕಾಗಿಲ್ಲ. ಆದರೆ ಮೆಚ್ಚಬೇಕಾದ್ದನ್ನು ತುಂಬು ಮನಸ್ಸಿನಿಂದ ಮೆಚ್ಚುವುದರ ಜತೆಗೆ, ಮೆಚ್ಚಲಾಗ ದ್ದನ್ನು ಮೆಚ್ಚಬಾರದ್ದನ್ನು ನಿರ್ಭಯವಾಗಿ ಎತ್ತಿ ಹೇಳುವುದೂ ವಿಮರ್ಶಕನ ಜವಾಬ್ದಾರಿಗಳಲ್ಲಿ ಒಂದು ಎಂಬುದನ್ನು ತೀ.ನಂ.ಶ್ರೀ ಎಂದೂ ಮರೆಯಲಿಲ್ಲ. ತಮ್ಮ ಗುರು ಸಮಾನರಾದ ಬಿ.ಎಂ.ಶ್ರೀಯವರ ಇಂಗ್ಲಿಷ್‌ಗೀತೆಗಳನ್ನು ಕುರಿತು 'ಇಂಗ್ಲಿಷ್ ಗೀತೆಗಳಲ್ಲಿ ಬಂದಿರುವ ಎಲ್ಲ ಮಾತೂ ರಸಮಯವೆಂದಾಗಲಿ, ಎಲ್ಲ ಅನುವಾದವೂ ಉತ್ಕೃಷ್ಟವೆಂದಾಗಲಿ ನನ್ನ ವಾದವಲ್ಲ' – ಎನ್ನುವುದನ್ನು ಹೇಳುತ್ತಲೇ 'ಆದರೆ ಪಕ್ಷಪಾತವಿಲ್ಲದ ಕಿವಿಗಳಿಗೆ ಈ ಕೃತಿಯಲ್ಲಿ ಹೊಸಗನ್ನಡ ವಿಜಯಘೋಷ ಸ್ಪಷ್ಟವಾಗಿ ಕೇಳಿಬರುತ್ತದೆ' ಎಂದು ಹೇಳುವುದನ್ನು ಮರೆಯುವುದಿಲ್ಲ. ಇದು ತೀ.ನಂ.ಶ್ರೀ.ಯವರ ವಿಮರ್ಶೆಯಲ್ಲಿನ ಸಮತೂಕ. 'ಬೇಂದ್ರೆಯವರ ಪದ್ಯಗಳು ಬೇಗ ಅರ್ಥ ವಾಗುವುದಿಲ್ಲ. ಒಂದೊಂದು ಸಲ ಅವರು ಏನನ್ನು ಹೇಳ ಹೊರಟಿರುವರೆಂಬುದೇ ತಿಳಿಯುವುದಿಲ್ಲ' ಎಂದು ತಮಗಾದ ಅನುಭವವನ್ನು ತೀ.ನಂ.ಶ್ರೀಯವರು ನಿಸ್ಸಂಕೋಚವಾಗಿ ಹೇಳಬಲ್ಲರು. ಒಮ್ಮೆ ಕಾಳಿದಾಸನನ್ನು ಕುರಿತು ತೀ.ನಂ.ಶ್ರೀಯವರು ಬರೆದ ವಿಮರ್ಶೆಯ ಲೇಖನವನ್ನು, ಅವರ ನೆಚ್ಚಿನ ಗುರುಗಳಾದ ಪ್ರೊ. ಹಿರಿಯಣ್ಣನವರು ನೋಡಿದರು. ಹಿರಿಯಣ್ಣನವರಿಗೆ ಕಾಳಿದಾಸನ ಬಗೆಗೆ ಅಪಾರ ಗೌರವ. ತನ್ನ ಶಿಷ್ಯ ಕಾಳಿದಾಸನ ಬಗೆಗೆ ಮಾಡಿದ ಟೀಕೆಯಿಂದ ಅವರು ತೀರಾ ಅಸಮಾಧಾನಗೊಂಡರಂತೆ. ಅದೇ ವೇಳೆಗೆ ಹಿರಿಯಣ್ಣನವರ ಮನೆಗೆ ಬಂದ ತೀ.ನಂ.ಶ್ರೀಯವರನ್ನು ಕುರಿತು ಹಿರಿಯಣ್ಣನವರು 'ಏನಪ್ಪ ಕಾಳಿದಾಸನಿಗಿಂತ ನೀನು ದೊಡ್ಡವನಾಗಿಬಿಟ್ಟೆಯೋ' –ಎಂದು ಗದರಿಕೊಂಡರಂತೆ. ಆಗ ಶ್ರೀಕಂಠಯ್ಯನವರು ಮರು ಮಾತಾಡದೆ ಹಿಂದಕ್ಕೆ ಬಂದರಂತೆ. ಆದರೆ ಕೆಲವು ದಿನಗಳ ನಂತರ ಮತ್ತೆ ಶ್ರೀಕಂಠಯ್ಯನವರು ಹಿರಿಯಣ್ಣನವರ ಮನೆಗೆ ಹೋದಾಗ, ಹಿರಿಯಣ್ಣನವರು 'ನೀನು ಕಾಳಿದಾಸನನ್ನು ಕುರಿತು ಬರೆದಿರುವುದು ಸರಿ; ಅವತ್ತು ನಾನು ಹಾಗೆಂದುಬಿಟ್ಟೆ' – ಎಂದು ತೀ.ನಂ.ಶ್ರೀಯವರನ್ನು ತಬ್ಬಿಕೊಂಡು ಅತ್ತುಬಿಟ್ಟರಂತೆ. ಈ ದಿನ ಇಂತಹ ಸಾಹಿತ್ಯಕ ವಾತಾವರಣವನ್ನು ಎಲ್ಲಿಂದ ತರೋಣ? ಅಭಿಪ್ರಾಯ ಭೇದಗಳನ್ನು ಪರಸ್ಪರ ಗೌರವಿಸುತ್ತಾ

ವ್ಯಕ್ತಿ ವ್ಯಕ್ತಿಗಳ ನಡುವಣ ಪ್ರೀತಿ ವಿಶ್ವಾಸಗಳು ಕದಡಾಗದೆ ಇರುವ ಹಾಗೆ ನೋಡಿಕೊಳ್ಳುವ ಆರೋಗ್ಯವಂತಿಕೆ ಎಲ್ಲಿದೆ ಈಗ?

ಇನ್ನೊಂದು ವಿಶೇಷವೆಂದರೆ ಶ್ರೀಕಂಠಯ್ಯನವರು ವಿದ್ವತ್ತಿನ ಹೆಸರಿನಲ್ಲಿ ತಮ್ಮ ಬರವಣಿಗೆಯನ್ನು ಗಣಿತಾತ್ಮಕವಾಗಿ, ಕ್ಲಿಷ್ಟವಾಗಿ ಅಥವಾ ಶುಷ್ಕವನ್ನಾಗಿ ಮಾಡಿಕೊಳ್ಳಲಿಲ್ಲ. ಎಂಥ ಬರವಣಿಗೆಗೂ ಒಂದು ರಸಸ್ಪರ್ಶವನ್ನು ಕೊಡುವ ಸಾಮರ್ಥ್ಯ ಅವರಿಗಿತ್ತು. ಒಂದೇ ಒಂದು ನಿದರ್ಶನವನ್ನು ನಾನು ಕೊಡುತ್ತೇನೆ. 'ಕುದುರೆ' ಎಂಬ ವಿಷಯವನ್ನು ಕುರಿತು ಒಂದು ಲೇಖನ ಇದೆ, ಅವರ 'ಸಮಾಲೋಕನ'ದಲ್ಲಿ. ಅದು ಭಾಷಾಶಾಸ್ತ್ರಕ್ಕೆ ಸಂಬಂಧಪಟ್ಟ ಲೇಖನ. ಈ 'ಕುದುರೆ' ಎಂಬ ಪದದ ನಿಷ್ಪತ್ತಿಯನ್ನು ಇತಿಹಾಸವನ್ನು ಕುರಿತು ಈ ಲೇಖನ ಆರಂಭವಾಗುವುದು ಹೀಗೆ : "ವಾಲ್ಮೀಕಿ ಮುನಿಯ ಆಶ್ರಮದ ವಟುಗಳು 'ಕುದುರೆ' ಎಂಬ ಪ್ರಾಣಿಯನ್ನು ನೋಡಿಯೇ ಇರಲಿಲ್ಲವಂತೆ. ಅದರ ಹೆಸರನ್ನು ಮಾತ್ರ ಜನರ ಬಾಯಿಂದ ಕೇಳಿದ್ದರು. ಪಶುಗಳ ಪಟ್ಟಿ, ಚತುರಂಗ ಬಲದ ಪಟ್ಟಿ ಇವುಗಳಲ್ಲಿ ಪಠಿಸಿದ್ದರು. ಶ್ರೀರಾಮನ ಯಾಗದ ಕುದುರೆ ಆಶ್ರಮಕ್ಕೆ ಬಂದಾಗ ಈ ಜಾತಿಯ ಪ್ರಾಣಿಯನ್ನು ವಟುಗಳು ಮೊಟ್ಟ ಮೊದಲನೆಯ ಸಲ ಕಂಡು ಸಡಗರದಲ್ಲಿ ಲವನ ಬಳಿ ಬಂದು : 'ಅದಕ್ಕೆ ಹಿಂದುಗಡೆ ತುಂಬು ಬಾಲ, ಅದನ್ನು ಸುಮ್ಮನೆ ಅಲ್ಲಾಡಿಸುತ್ತಿರುತ್ತದೆ. ಅದರ ಕತ್ತು ನೀಳ; ಗೊರಸುಗಳು ನಾಲ್ಕೇ ನಾಲ್ಕು; ಗರಿಕೆಯನ್ನು ಮೇಯುತ್ತದೆ. ಮಾವಿನಕಾಯಿ ಗಾತ್ರದ ಲದ್ದಿಯನ್ನು ಹಾಕುತ್ತದೆ. ವಿವರಿಸುವುದೇನು? ಅದು ದೂರ ಹೋಗಿಬಿಡುತ್ತದೆ, ಬಾಬಾ ನಾವೂ ಹೋಗುತ್ತೇವೆ'– ಎಂದು ಅದನ್ನು ನೋಡಲು ಅವನನ್ನು ಎಳೆದುಕೊಂಡು ಹೋದಂತೆ ಭವಭೂತಿ ಉತ್ತರ ರಾಮ ಚರಿತದಲ್ಲಿ ಚಿತ್ರಿಸಿದ್ದಾನೆ. ಹೀಗೆ ಆಶ್ರಮದ ವಟುಗಳಿಗೆ ಮಾತ್ರವಲ್ಲ, ಮಾನವ ಜಾತಿಗೇ ಹಿಂದೊಮ್ಮೆ – ಅಷ್ಟೇನೂ ದೂರವಲ್ಲದ ಕಾಲದಲ್ಲಿ – ಕುದುರೆ ಬೆರಗಿನ ವಸ್ತುವಾಗಿದ್ದಿತು. ಮನುಷ್ಯ ಕುದುರೆಯನ್ನು ಪಳಗಿಸಿದ್ದು ಇತ್ತೀಚೆಗೆ, ಹಸು ಕುರಿ ಆಡು ನಾಯಿ ಹಂದಿ ಮೊದಲಾದ ಪ್ರಾಣಿಗಳನ್ನು ಪಳಗಿಸಿ ಎಷ್ಟೋ ಕಾಲವಾದ ಮೇಲೆ. ಕುದುರೆಯ ಸವಾರಿಗೆ ಮನುಷ್ಯನು ಮೊದಲು ಮೊಟ್ಟಮೊದಲು ಪ್ರಾರಂಭಿಸಿದ್ದು ಬಹುಶಃ ಮಧ್ಯ ಏಷ್ಯಾದಲ್ಲೆಂದೂ, ಬೆಬಿಲೋನಿಯಾದಲ್ಲಿ ಅದು ಕಾಣಿಸಿಕೊಂಡಿದ್ದು ಕ್ರಿಪೂ. ಎರಡು ಸಾವಿರದ ಸುಮಾರಿನಲ್ಲೆಂದೂ ತಿಳಿದು ಬರುತ್ತದೆ. ಅಂತೂ ಈಜಿಪ್ಟ್ ಮೊದಲಾದ ದೇಶಗಳ ನಾಗರಿಕತೆ ಪ್ರಬಲಿಸಿ ಎಷ್ಟೋ ಕಾಲವಾಗಿದ್ದಾಲೂ ಈ ಪ್ರಾಣಿ ಮಾತ್ರ ಕಡಿವಾಣಕ್ಕೆ ಸಿಕ್ಕದೆ ಜೀನಿನ ಭಾರವನ್ನರಿಯದೆ ಕಾಡು ಮೇಡುಗಳಲ್ಲಿ ವಿಹರಿಸುತ್ತ ಆಕಸ್ಮಿಕವಾಗಿ ಜನರ ಕಣ್ಣಿಗೆ ಕಾಣಿಸಿಕೊಂಡು ಮಿಂಚಿನಂತೆ ಮಾಯವಾಗುತ್ತಿದ್ದಿರಬೇಕು. ಇದರ ಹೆಸರಂತೂ ಕುತೂಹಲಕರವಾಗಿದೆ" ಇತ್ಯಾದಿ ಪೀಠಿಕೆಯೊಂದಿಗೆ 'ಅಶ್ವ' ಎಂಬ ಮೂಲ ಪದವನ್ನು ಮೂಲೆಗೆ ಒತ್ತಿ ಅದರ ಸ್ಥಾನವನ್ನು ಆಕ್ರಮಿಸಿದ 'ಘೋಟ' ಎಂಬುದರ ಬಾಂಧವ್ಯವೇನು–ಹೀಗೆ, 'ಕುದುರೆ' ಪದದ ನಿಷ್ಪತ್ತಿಯ ಬಗೆಗೆ ವಿಚಾರ ಮಾಡುತ್ತಾರೆ. ಭಾಷಾಶಾಸ್ತ್ರದಂಥ ವಿಷಯವನ್ನು ಕುರಿತು ಬರೆಯುವಾಗಲೂ ತೀ.ನಂ.ಶ್ರೀಯವರಿಗೆ ಒಂದು ಜನಾಂಗದ ಇತಿಹಾಸ, ತತ್ಪರಿಣಾಮವಾದ ಸಾಹಿತ್ಯದ ಹಿನ್ನೆಲೆ ಮರೆಯಾಗುವುದಿಲ್ಲ. ಆದುದರಿಂದಲೇ ಅವರ ಬರವಣಿಗೆಗೆ ಒಂದು ಸಮಗ್ರತೆ ಆತ್ಮೀಯತೆ ಮತ್ತು ರಸಸ್ಪರ್ಶ ಪ್ರಾಪ್ತವಾಗುತ್ತದೆ.

ಬರವಣಿಗೆಯಲ್ಲಿ ಹೇಗೋ ಮಾತಿನಲ್ಲಿಯೂ ಶ್ರೀಕಂಠಯ್ಯನವರು ಅದೇ ರಸ ಸ್ಪರ್ಶವನ್ನು ತರಬಲ್ಲವರಾಗಿದ್ದರು. ಅವರು ಯಾವ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರೂ, ಅದಕ್ಕೆ ಒಂದು ಅಪೂರ್ವವಾದ ಶಿಲ್ಪವಿರುತ್ತಿತ್ತು. ಯಾವ ಒಂದು ಮಾತನ್ನೂ ವ್ಯರ್ಥ ಮಾಡದೆ, ಅತ್ಯಂತ ಅಚ್ಚುಕಟ್ಟಾಗಿ, ಆದರೆ ಅತ್ಯಂತ ಸ್ವಾರಸ್ಯವಾಗಿ ಮಾತನಾಡಬಲ್ಲವರಾಗಿದ್ದರು. ಅನೇಕ ವರ್ಷಗಳ ಕಾಲ ಪ್ರಾಧ್ಯಾಪಕರಾಗಿದ್ದ ಶ್ರೀಕಂಠಯ್ಯನವರ ತರಗತಿಯ ಬೋಧನೆ ವಿದ್ಯಾರ್ಥಿಗಳಿಗೆ ಒಂದು ರಸದೌತಣ. ಎಂತಹ ಶಾಸ್ತ್ರ ವಿಷಯವನ್ನೂ ಅತ್ಯಂತ ಸ್ವಾರಸ್ಯವನ್ನಾಗಿ ಮಾಡುವ ಕೌಶಲ ಅವರದು. ಇನ್ನು ಸಾಹಿತ್ಯದ ವಿಷಯಕ್ಕೆ ಬಂದಾಗ ಅವರು ಅದರಲ್ಲಿ ಕರಗಿಬಿಡುತ್ತಿದ್ದರು. ಪರಂಪರಾಗತವಾದ ವಿದ್ವತ್ತಿನ ಖಚಿತವಾದ ಹಿನ್ನೆಲೆ, ಆಧುನಿಕ ವೈಚಾರಿಕ ದೃಷ್ಟಿ, ಮತ್ತು ರಸವಂತಿಕೆ ಈ ಮೂರೂ ತೀ.ನಂ.ಶ್ರೀಕಂಠಯ್ಯನವರ ಬದುಕು ಬರೆಹಗಳಲ್ಲಿ ಸಂಗಮಿಸಿದ್ದವು.

ಬರವಣಿಗೆ ಎನ್ನುವುದು ತೀ.ನಂ.ಶ್ರೀಯವರ ಪಾಲಿಗೆ ಒಂದು ಹವ್ಯಾಸವಾಗಿರಲಿಲ್ಲ; ಅದೊಂದು ಶಿಸ್ತು ಆಗಿತ್ತು. ಪ್ರತಿಯೊಂದನ್ನು ತಲಸ್ಪರ್ಶಿಯಗಿ ನೋಡದೆ ಅವರು ಏನನ್ನೂ ಬರೆಯಲು ತೊಡಗುತ್ತಲೇ ಇರಲಿಲ್ಲ. ಅಲ್ಲದೆ ಅವರು ಕೇವಲ ಏನನ್ನಾದರೂ ಬರೆಯುವುದಕ್ಕೆಂದು ಮಾತ್ರ ಓದುತ್ತಿದ್ದವರಲ್ಲ, ತಾವು ಬೆಳೆಯುವುದಕ್ಕೆಂದು ಓದುತ್ತಿದ್ದವರು. ಹೀಗಾಗಿ ಬಹುಭಾಷೆಯ ಬಹುಪ್ರಕಾರದ ತಿಳಿವನ್ನು ಮೈಗೂಡಿಸಿಕೊಂಡ ಮುಕ್ತ ಪ್ರಜ್ಞೆಯ ವ್ಯಕ್ತಿತ್ವ ತೀ.ನಂ.ಶ್ರೀಕಂಠಯ್ಯನವರದು. ಈ ವ್ಯಕ್ತಿತ್ವ ತನ್ನ ಪ್ರಭಾವವನ್ನು ದಟ್ಟವಾಗಿ ಹರಡಿಕೊಂಡು ಹೊಸಗನ್ನಡ ಸಾಹಿತ್ಯ ಹಾಗೂ ಸಂಶೋಧನೆಯ ಚರಿತ್ರೆಯಲ್ಲಿ ಮರೆಯಲಾಗದ ಸ್ಥಾನವನ್ನುಗಳಿಸಿಕೊಂಡಿದೆ.

('ಚದುರಿದ ಚಿಂತನೆಗಳು')

ತೀ.ನಂ.ಶ್ರೀ : ಕೆಲವು ನೆನಪುಗಳು

ಚೆನ್ನವೀರ ಕಣವಿ

●

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ತೀ.ನಂ.ಶ್ರೀಕಂಠಯ್ಯನವರು ಬಂದಾಗ ನಾನು ಎಂ.ಎ. ಕೊನೆಯ ವರ್ಷದಲ್ಲಿದ್ದೆ. ಕನ್ನಡ ಸ್ನಾತಕೋತ್ತರ ವಿಭಾಗ ಇನ್ನೂ ಸ್ವಯಂಪೂರ್ಣವಾಗಿ ಬೆಳೆದಿರಲಿಲ್ಲ. ಸ್ಥಳೀಯ ಕಾಲೇಜುಗಳ ಕನ್ನಡ ಪ್ರಾಧ್ಯಾಪಕರೂ ನಮ್ಮ ಪಾಠಪ್ರವಚನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹೀಗಾಗಿ ಕೇವಲ ಮೂರು ನಾಲ್ಕು ತಿಂಗಳು ಮಾತ್ರ ತೀ.ನಂ.ಶ್ರೀಯವರ ಸಾನ್ನಿಧ್ಯ ನಮಗೆ ದೊರೆಯಿತು; ಆ ಸಂದರ್ಭದಲ್ಲಿ ಅವರು ನೀಡಿದ ಕೆಲವು ಉಪನ್ಯಾಸಗಳು ನೇರವಾಗಿ ಪಠ್ಯಕ್ಕೆ ಸಂಬಂಧಪಟ್ಟವುಗಳಾಗಿರಲಿಲ್ಲ. ಹೇಳುವ ವಿಷಯ ವನ್ನು ತಲಸ್ಪರ್ಶಿಯಾಗಿ ತಿಳಿಸಿಕೊಡುವುದು, ಆದಷ್ಟು ಶುಷ್ಕವೆನಿಸದಂತೆ ರಸವತ್ತಾಗಿ ನಿರೂಪಿಸು ವುದು ಅವರ ಬೋಧನಕ್ರಮವಾಗಿತ್ತೆಂದು ನನಗೆ ತೋರಿತು.

೧೯೫೨ರಲ್ಲಿ ನಾನು ಎಂ.ಎ. ಪದವಿ ಪಡೆದು, ಅದೇ ವರ್ಷ ಸಪ್ಟೆಂಬರ್‌ನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದಲ್ಲಿ (ಈಗಿನ ಪ್ರಸಾರಾಂಗ) ಅದರ ಪ್ರಥಮ ಕಾರ್ಯದರ್ಶಿಯಾಗಿ ನೇಮಕಗೊಂಡೆ. ಆ ವಿಭಾಗದ ಸಲಹಾಸಮಿತಿಯ ಸದಸ್ಯರಾಗಿ ತೀ.ನಂ. ಶ್ರೀಯವರು ನನಗೆ ನೀಡಿದ ಮಾರ್ಗದರ್ಶನವನ್ನು ನಾನು ಎಂದಿಗೂ ಮರೆಯಲಾರೆ. ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಹಾಗೂ ಪ್ರಕಟನೆಗಳ ತಮ್ಮ ಅನುಭವದಿಂದ ಇಲ್ಲಿಯ ಅವಶ್ಯಕತೆಗಳಿಗನುಸಾರವಾಗಿ ಅದನ್ನು ರೂಪುಗೊಳಿಸುವಲ್ಲಿ ಅವರು ಹೃತ್ಪೂರ್ವಕವಾಗಿ ನೆರವಾದರು.

ವಿಶ್ವವಿದ್ಯಾಲಯವನ್ನು ಸಾಮಾನ್ಯ ಜನತೆಯ ಬಳಿಗೆ ಕೊಂಡೊಯ್ಯುವ ನಮ್ಮ ಮೊಟ್ಟ ಮೊದಲನೆಯ ಉಪನ್ಯಾಸ ಶಿಬಿರ ೧೯೫೨ರ ಡಿಸೆಂಬರಿನಲ್ಲಿ ಗದಗಿನಲ್ಲಿ ನೆರವೇರಿತು. ಅಲ್ಲಿಯ ಮುನಿಸಿಪಲ್ ಹೈಸ್ಕೂಲಿನ ವಿಶಾಲವಾದ ಬಯಲಿನಲ್ಲಿ ಸಾವಿರಾರು ಜನರ ಮಧ್ಯೆ ನಡೆದ ಅಂದಿನ ಸಮಾರಂಭ ಒಂದು ಅಪೂರ್ವ ಅನುಭವ. ಆಗಿನ ಉಪಕುಲಪತಿ ಶ್ರೀ ಸಿ.ಸಿ. ಹುಲಕೋಟಿಯವರಿಂದ ಉದ್ಘಾಟನೆಯಾದ ನಂತರ ಶಿಬಿರದ ಮೊಟ್ಟ ಮೊದಲನೆಯ ಉಪನ್ಯಾಸವೇ ತೀ.ನಂ.ಶ್ರೀಯವರದು. ಕುಮಾರವ್ಯಾಸ ಕವಿಯನ್ನು ಕುರಿತು ಅವರ ಒಂದೂವರೆ ಗಂಟೆಯ ಉಪನ್ಯಾಸ ಕುತೂಹಲದಿಂದ ಕೂಡಿದ ಜನಸ್ತೋಮವನ್ನು ತಣಿಸಿತು. ಉತ್ತರ ಕುಮಾರನ ಪಾತ್ರವನ್ನು ಕುರಿತು ಅವರು ವಿವರಿಸುತ್ತಿರುವಾಗ ಸಭೆಯಲ್ಲೆಲ್ಲ ಹಾಸ್ಯದ ಹೊನಲು

ಹರಿಯುತ್ತಿದ್ದಂತೆ ಕುಲಪತಿ ಶ್ರೀಹುಲಕೋಟಿಯವರೂ ಹೊಟ್ಟೆ ಹುಣ್ಣಾಗುವಂತೆ ನಕ್ಕು ಸಂತೋಷ ಪಟ್ಟದ್ದು ಇನ್ನೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಎರಡು ದಿನ ನಡೆದ ಆ ಉಪನ್ಯಾಸ ಮಾಲೆಯಲ್ಲಿ ಆಗ ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿದ್ದ ವಿ.ಕೃ. ಗೋಕಾಕರು, ಪ್ರೊ. ಎಚ್.ಪಿ. ಕಾಶ್ಯಪ ಅವರು ಹಾಗೂ ಒಕ್ಕಲುತನ ಕಾಲೇಜಿನ ಡಾ॥ ಎಸ್.ಪಿ. ಪಾಟೀಲ ಅವರೂ ಅನುಕ್ರಮವಾಗಿ 'ಸರ್ವಜ್ಞಕವಿ', 'ಡಾರ್ವಿನ್‌ನ ವಿಕಾಸವಾದ', 'ಹತ್ತಿಯ ಬೆಳೆ' ವಿಷಯಗಳ ಬಗ್ಗೆ ಉಪನ್ಯಾಸವಿತ್ತರು. ವಿಶ್ವವಿದ್ಯಾಲಯದ ಈ ವಿನೂತನ ಕಾರ್ಯಕ್ರಮ ಪ್ರಾರಂಭದಲ್ಲಿಯೇ ಅಷ್ಟೊಂದು ಯಶಸ್ಸು ಪಡೆದದ್ದು ನನಗೆ ಹೆಚ್ಚಿನ ಧೈರ್ಯವನ್ನು ತಂದು ಕೊಟ್ಟಿತು.

ಉಪನ್ಯಾಸಕ್ಕಾಗಿ ವಿಷಯಗಳ ಆಯ್ಕೆ, ಶಿಬಿರಕ್ಕೆ ಅತಿಥಿಗಳನ್ನು ಕರೆದೊಯ್ಯುವುದು, ಅಲ್ಲಿ ಅವರಿಗೆ ಇಳಿದುಕೊಳ್ಳುವ ವ್ಯವಸ್ಥೆ, ಕಾರ್ಯಕ್ರಮದ ನಿರ್ವಹಣೆ, ಸ್ಥಳೀಯ ಸಂಘ ಸಂಸ್ಥೆಗಳ ಸಂಪರ್ಕ, ಮರುಪ್ರಯಾಣ – ಹೀಗೆ ಪ್ರತಿಯೊಂದು ವಿಷಯವನ್ನೂ ನಾನು ಲಕ್ಷ್ಯಗೊಟ್ಟು ನೋಡಿಕೊಳ್ಳುವಂತೆ ಅವರು ಮಾಡಿದರು. ಸಣ್ಣ ಸಣ್ಣ ವಿಷಯದಲ್ಲೂ ಅವರು ವಹಿಸುತ್ತಿದ್ದ ಜಾಗರೂಕತೆ, ಅವರ ಬಗ್ಗೆ ನನ್ನ ಗೌರವವನ್ನು ಹೆಚ್ಚಿಸಿದಂತೆಯೇ ಒಳಗೊಳಗೆ ಅಂಜಿಕೆಯನ್ನೂ ಹುಟ್ಟಿಸುತ್ತಿತ್ತು. ಈ ಉಪನ್ಯಾಸ ಮಾಲೆಗೆ ತೀ.ನಂ.ಶ್ರೀಯಂಥವರು ಶ್ರೀಕಾರ ಹಾಕಿದ್ದರಿಂದಲೋ ಏನೋ ಈ ಕಾರ್ಯಕ್ರಮ ಅಂದಿನಿಂದ ಇಂದಿನ ವರೆಗೂ ಎಡೆಬಿಡದೆ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ.

ಈ ಉಪನ್ಯಾಸಗಳನ್ನು ಕಿರುಹೊತ್ತಿಗೆಯಾಗಿ ಉಪನ್ಯಾಸ ಗ್ರಂಥಮಾಲೆಯಲ್ಲಿ ಪ್ರಕಟಿಸಲು ಪ್ರಾರಂಭಿಸಿದಾಗಲೂ ತೀ.ನಂ.ಶ್ರೀಯವರಿಂದ ಪಡೆದ ಪ್ರಯೋಜನ ಅಷ್ಟಿಷ್ಟಲ್ಲ. ಈ ಮಾಲೆಯಲ್ಲಿ ಪ್ರಕಟಗೊಂಡ ಮೊದಲನೆಯ ಪುಸ್ತಕ ಡಾ॥ ಕೆ. ಕೃಷ್ಣಮೂರ್ತಿಯವರ 'ಭವಭೂತಿ'. ಆಗ ಕುಮಟೆಯ ಕೆನರಾ ಕಾಲೇಜಿನಲ್ಲಿದ್ದ ಡಾ॥ ಕೃಷ್ಣಮೂರ್ತಿಯವರು ಧಾರವಾಡಕ್ಕೆ ಬಂದ ಸಂದರ್ಭದಲ್ಲಿ ಅವರ ಹಸ್ತಪ್ರತಿಯನ್ನು ಪರಿಶೀಲಿಸಿ, ಅವರೊಡನೆ ಚರ್ಚಿಸಿ, ಹಸ್ತಪ್ರತಿಯಲ್ಲಿ ಮಾಡಬೇಕಾಗಿದ್ದ ಸಣ್ಣಪುಟ್ಟ ಬದಲಾವಣೆಗಳನ್ನು ಅವರಿಂದ ಮಾಡಿಸಿದ್ದಲ್ಲದೆ, ಕರಡು ತಿದ್ದುವವರೆಗೂ ತೀ.ನಂ.ಶ್ರೀ ಅದರಲ್ಲಿ ಆಸ್ಥೆವಹಿಸಿ ಅಚ್ಚು-ಕಟ್ಟಿಗೆ ಮಾದರಿಯನ್ನೂ ಒದಗಿಸಿಕೊಟ್ಟರು, ಹೀಗೆ ತಾವು ವಹಿಸಿಕೊಂಡ ಎಂಥ ಕಾರ್ಯದಲ್ಲಿಯೂ ಯಾವ ದೋಷವೂ ಉಂಟಾಗದಂತೆ ಅವರು ವಹಿಸುತ್ತಿದ್ದ ಕಾಳಜಿ ಆಶ್ಚರ್ಯಕರವಾಗಿತ್ತು. ಚಿಕ್ಕ ಸಮಾರಂಭ ವೊಂದರಲ್ಲಿ ಆ ಪುಸ್ತಿಕೆಯನ್ನು ಅವರು ಬಿಡುಗಡೆಗೊಳಿಸುತ್ತ 'ಈ ಪುಸ್ತಕ ಹೊರಬರುವುದರಲ್ಲಿ ನಾನು ಮಾಡಿದ ಕೆಲಸವೇನಿದ್ದರೂ ಅದು ಸೂಲಗಿತ್ತಿಯ ಕೆಲಸವಿದ್ದಂತೆ, ಅಷ್ಟೆ' ಎಂದು ಹೇಳಿದ ಮಾತು ಇನ್ನೂ ನನ್ನ ನೆನಪಿನಲ್ಲಿದೆ. ಈ ಮಾಲೆಯ ಪ್ರಕಟನೆ ಇಂದಿಗೂ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ.

ತೀ.ನಂ.ಶ್ರೀ ಬರಹದಲ್ಲಿ ತೋರುತ್ತಿದ್ದ ನಿಖರತೆ, ನಿಷ್ಪಕ್ಷತೆ ಅನುಪಮವಾದದ್ದು. ಒಂದು ಸಂಗತಿ ನೆನಪಾಗುತ್ತದೆ. ೨೬-೧೦-೧೯೫೩ರಂದು ವಿಶ್ವವಿದ್ಯಾಲಯದ ನೂತನ ಆಡಳಿತ

ಕಚೇರಿ ಕಟ್ಟಡದ ಉದ್ಘಾಟನೆ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್ ಅವರಿಂದ ನೆರವೇರಲಿತ್ತು. ಕಟ್ಟಡದ ಮುಂಭಾಗದಲ್ಲಿ ಹಾಲುಗಲ್ಲಿನ ಮೇಲೆ ಅದನ್ನು ಕೆತ್ತಿಸಬೇಕಾದ ಸಂದರ್ಭದಲ್ಲಿ 'ಸರ್ವಪಲ್ಲಿ ರಾಧಾಕೃಷ್ಣನ್ ಅವರಿಂದ' ಎಂಬ ಮಾತಿತ್ತು, ಆಗ ತೀ.ನಂ.ಶ್ರೀ ಅದನ್ನು ತಡೆಹಿಡಿದು ತಮ್ಮ ಸಂಶಯವನ್ನು ನಿವಾರಿಸಿಕೊಂಡು ಮರುದಿನ ಅದು 'ಸರ್ವಪಲ್ಲಿ' ಅಲ್ಲ, 'ಸರ್ವೇಪಲ್ಲಿ' ಎಂದು ತಿದ್ದಿಸಿದರು.

"ಕನ್ನಡ ಸಾಹಿತ್ಯದ ಇತಿಹಾಸ" ರಚನೆಯ ಒಂದು ಹೊಸ ಯೋಜನೆಯನ್ನು ತೀ.ನಂ.ಶ್ರೀಯವರು ಕಷ್ಟಪಟ್ಟು ತಯಾರಿಸಿ ವಿಶ್ವವಿದ್ಯಾಲಯದ ಸಿಂಡಿಕೇಟಿನ ಅನುಮತಿಯನ್ನು ಪಡೆದು ೧೯೫೫ರಲ್ಲಿ ಕಾರ್ಯಾರಂಭ ಮಾಡಿದ್ದರು. ಅದರ ಸಾಮಾನ್ಯ ರೂಪರೇಖೆಯನ್ನು ಆಯ್ಕೆ ಮಾಡಿದ ಲೇಖಕರಿಗೆಲ್ಲ ಕಳಿಸಿಕೊಡಲಾಗಿತ್ತು. 'ಕನ್ನಡ ಸಾಹಿತ್ಯದ ಇತಿಹಾಸ'ವನ್ನು ಸವಿಸ್ತಾರವಾಗಿ ಸಪ್ರಮಾಣವಾಗಿ ಬರೆಸಬೇಕೆಂದೂ, ಈ ಇತಿಹಾಸದಲ್ಲಿ ಕನ್ನಡ ಸಾಹಿತ್ಯದ ಹಲವು ಶಾಖೆಗಳ ಬೆಳವಣಿಗೆಯನ್ನು ಮಾತ್ರವಲ್ಲದೆ ಆಯಾ ಕಾಲಾವಧಿಯ ಭಾಷಾ ಸ್ವರೂಪ, ರಾಜಕೀಯ ಚರಿತ್ರೆ, ಮತಧರ್ಮ ಪರಿಸ್ಥಿತಿ, ಜನಜೀವನ ರೀತಿ ಮೊದಲಾದವುಗಳ ಹಿನ್ನೆಲೆಯೂ ನಿರೂಪಿತವಾಗಬೇಕೆಂದೂ ಇದರ ರಚನೆಯಲ್ಲಿ ಕನ್ನಡನಾಡಿನ ಎಲ್ಲ ಭಾಗಗಳ ವಿದ್ವಾಂಸರ ಸಹಾಯ ಸಹಕಾರಗಳನ್ನು ಪಡೆಯಬೇಕೆಂದೂ ಅವರು ಇಚ್ಛಿಸಿದ್ದರು. ಮುಂದೆ ಎರಡು ವರ್ಷಗಳಲ್ಲಿ ಅವರು ಮಹಾರಾಜಾಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ಹಿಂತಿರುಗಿದ್ದರಿಂದ ಆ ಕೆಲಸ ಇಲ್ಲಿ ಮುಂದುವರಿಯದೆ ಹೋದದ್ದು ವಿಷಾದದ ಸಂಗತಿ. ಆ ಕಾರ್ಯ ಪೂರ್ತಿಗೊಂಡಿದ್ದರೆ ಒಂದು ಹೊಸ ಕನ್ನಡ ಸಾಹಿತ್ಯದ ಇತಿಹಾಸವನ್ನು ಪ್ರಕಟಿಸಿದ ಶ್ರೇಯಸ್ಸು ಕರ್ನಾಟಕ ವಿಶ್ವವಿದ್ಯಾಲಯದ್ದಾಗುತ್ತಿತ್ತು. ಈಚೆಗೆ ಬೆಂಗಳೂರು ವಿಶ್ವವಿದ್ಯಾಲಯ ರೂಪಿಸಿ ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ತೀ.ನಂ.ಶ್ರೀಯವರ ಈ ಯೋಜನೆಯ ಪ್ರಯೋಜನವನ್ನು ಕೆಲಮಟ್ಟಿಗೆ ಪಡೆದಿರುವಂತೆ ತೋರುತ್ತದೆ.

ಮೈಸೂರು, ಬೆಂಗಳೂರು ಕಡೆಗಳಿಂದ ಹಲವಾರು ವಿದ್ಯಾರ್ಥಿಗಳು ಎಂ.ಎ. ಅಭ್ಯಾಸಕ್ಕಾಗಿ ಆಗ ಧಾರವಾಡಕ್ಕೆ ಬಂದದ್ದುಂಟು. ಅವರಲ್ಲಿ ಕ.ವೆಂ. ರಾಜಗೋಪಾಲ, ಸಿಂಧುವಳ್ಳಿ ಅನಂತ ಮೂರ್ತಿ ಮೊದಲಾದವರು ನನಗೆ ಆಪ್ತಸ್ನೇಹಿತರಾಗಿದ್ದು ಅಂದಿನ ದಿನಗಳನ್ನು ನೆನಪಿಗೆ ತರುತ್ತಾರೆ. ಧಾರವಾಡದಲ್ಲಿದ್ದ ನಾಲ್ಕೈದು ವರುಷಗಳ ಅವಧಿಯಲ್ಲಿ ತೀ.ನಂ.ಶ್ರೀ ಅವರು ಈ ಭಾಗದ ಅನೇಕ ಕಡೆಯ ಸಭೆ ಸಮಾರಂಭಗಳಿಗೆ, ವಿದ್ಯಾಸಂಸ್ಥೆಗಳಿಗೆ ಅತಿಥಿಗಳಾಗಿ ಆಮಂತ್ರಿತ ರಾಗಿ ತಮ್ಮ ವಿದ್ವತ್‌ಪೂರ್ಣವಾದ ಭಾಷಣಗಳಿಂದ ಜನರ ಮನಸ್ಸನ್ನು ಸಂತೋಷ ಗೊಳಿಸಿದರು. ಅಬ್ಬರವಿಲ್ಲದೆ ಕನ್ನಡದ ಪ್ರೇಮವನ್ನು ಉಕ್ಕಿಸಿದರು. ಉತ್ತರ ಕರ್ನಾಟಕದಲ್ಲಿಯ ಪ್ರಾಚೀನ ಕವಿಗಳ ಸ್ಥಳಗಳನ್ನೆಲ್ಲ ಅವರು ಇದೇ ಸಂದರ್ಭದಲ್ಲಿ ಸಂದರ್ಶಿಸಿದರು. ಪಾಂಡಿತ್ಯ ಹಾಗೂ ವಿನಯ ಸಮನ್ವಯಗೊಂಡ ತಮ್ಮ ಸುಸಂಸ್ಕೃತ ವ್ಯಕ್ತಿತ್ವದ ಒಂದು ಸಾತ್ವಿಕ ಪ್ರಭಾವವನ್ನು ಅವರು ಹೋದಲ್ಲೆಲ್ಲ ಬೀರಿದರು.

ಅವರ ಉಪನ್ಯಾಸಗಳದೇ ಒಂದು ಸೊಗಸು. ಹೇಳುವ ವಿಷಯ ಮೊದಲೇ ಕರತಲಾಮಲಕ ವಾಗಿರುತ್ತಿತ್ತು. ತಾವು ಮೆಚ್ಚಿದ ಕವಿ–ಕಾವ್ಯದ ವಿಷಯವಾಗಿದ್ದರಂತೂ ತೀರಿಯೇ ಹೋಯಿತು,

ಅದರ ಸ್ವಾರಸ್ಯವೆಲ್ಲ ತಕ್ಕ ಹಾವಭಾವಗಳಿಂದ ಧ್ವನಿಯ ಸಾಂದರ್ಭಿಕ ಏರಿಳಿತಗಳಿಂದ ತುಂಬಿ ಹೊರಸೂಸುವಂತೆ ಮಾಡುತ್ತಿದ್ದರು. ವಿಮರ್ಶೆಯ ಗಾಂಭೀರ್ಯದೊಂದಿಗೆ ರಸಿಕತೆಯ ಮೆರುಗನ್ನು ಅದು ಪಡೆದಿರುತ್ತಿತ್ತು. ಉಪನ್ಯಾಸದ ಆರಂಭ, ಮಧ್ಯ ಹಾಗೂ ಕೊನೆ ಮೂರೂ ಕಲಾತ್ಮಕವಾಗಿ ಅಲ್ಲಿ ಸಂಯೋಜನೆ ಗೊಂಡಿರುತ್ತಿದ್ದವು. ಔಚಿತ್ಯ ತಾನೇತಾನಾಗಿರುತ್ತಿತ್ತು.

*

ಹತ್ತು ವರುಷಗಳ ಹಿಂದೆಯೇ ಅಚ್ಚಿಗೆ ಹೋಗಿದ್ದ ಅವರ 'ಭಾರತೀಯ ಕಾವ್ಯಮೀಮಾಂಸೆ' ಪ್ರಕಟವಾದದ್ದು ೧೯೫೩ರಲ್ಲಿ, ಅವರು ಧಾರವಾಡದಲ್ಲಿದ್ದಾಗ. ಅದರ ಹಿಂದಿನ ವರ್ಷ ನಾನು ಎಂ.ಎ.ದಲ್ಲಿದ್ದಾಗ ಅದರ ಅಚ್ಚಾದ ಫಾರ್ಮುಗಳನ್ನು ಅವರಿಂದ ಪಡೆದು, ಓದಿ ಹಿಂದಿರುಗಿಸಿದ್ದೆ. ಈಗ ಆ ಗ್ರಂಥದ ಪ್ರತಿಯನ್ನು ಅವರ ಮೂಲಕವೇ ತರಿಸಿಕೊಂಡೆ. ೧೯೩೨ರಲ್ಲಿ ಪ್ರಕಟವಾಗಿದ್ದ ಅವರ 'ಒಲುಮೆ' ಕವನ ಸಂಗ್ರಹದ ಎರಡನೆಯ ಮುದ್ರಣ 'ಭಾರತೀಯ ಕಾವ್ಯಮೀಮಾಂಸೆ' ಪ್ರಕಟವಾದ ವರುಷವೇ ಹೊರಬಂದದ್ದು ನನಗೆ ಔಚಿತ್ಯ ಪೂರ್ಣವಾಗಿ ತೋರುತ್ತದೆ. ಆಗ ಅವರು 'ವಿಶ್ವಾಸದೊಡನೆ' ಕೊಟ್ಟ 'ಒಲುಮೆ'ಯ ಕ್ಯಾಲಿಕೊ ಪ್ರತಿಯನ್ನು ನಾನು ಜೋಪಾನಾಗಿ ಕಾಯ್ದಿರಿಸಿದ್ದೇನೆ.

*

ಅವರು ಧಾರವಾಡದಲ್ಲಿದ್ದಾಗ ಬರೆದದ್ದು ಎರಡೇ ಕವಿತೆಗಳೆಂದು ತೋರುತ್ತದೆ. ಒಂದು ಆಕಾಶವಾಣಿಯ ಕವಿಸಮ್ಮೇಳನಕ್ಕಾಗಿ ಬರೆದ 'ಯುಗಾದಿ', ಇನ್ನೊಂದು ಅವರು ಅಮೇರಿಕಾಕ್ಕೆ ಹೋಗುವ ಮುಂಚೆ ಬರೆದ 'ನೀಡು ಪಾಥೇಯವನು'. ಎರಡೂ 'ಜಯಕರ್ನಾಟಕ'ದಲ್ಲಿ ಅಚ್ಚಾದವು. "ನನ್ನ ಕವಿತನದ ವಿಷಯದಲ್ಲಿ ನನಗೆ ಯಾವ ಭ್ರಮೆಯೂ ಉಳಿದಿಲ್ಲ' ಎಂದು ಅವರು ಪು.ತಿ.ನ. ಅವರಿಗೆ ಬರೆದ ಪತ್ರದಲ್ಲಿ (೪-೪-೧೯೫೩) ಕಾಣಿಸಿದ್ದುಂಟು. ಆದರೂ ಅವೆರಡೂ ಒಳ್ಳೆಯ ಕವನಗಳೇ. 'ಒಲುಮೆ' ಕನ್ನಡದ ಪ್ರೇಮಗೀತೆಗಳ ಮೊದಲನೆಯ ಸಂಗ್ರಹವಷ್ಟೇ ಅಲ್ಲ; ಅಲ್ಪ ಪ್ರಮಾಣದಲ್ಲಾದರೂ ಕನ್ನಡದ ಅತ್ಯಂತ ಚೆಲುವಾದ ಪ್ರೇಮಗೀತೆಗಳ ಸಾಲಿನಲ್ಲಿ ನಿಲ್ಲಬಲ್ಲ ಕವನಗಳನ್ನು ಒಳಗೊಂಡ ಸಂಗ್ರಹ.

ಧಾರವಾಡದಲ್ಲಿದ್ದಾಗ ತೀ.ನಂ.ಶ್ರೀಯವರು ಎರಡು ಸಲ ಮನೆ ಬದಲಿಸಬೇಕಾಯಿತು. ನಾನೂ ಬೇರೆ ಕಾರಣಗಳಿಂದ ಎರಡು ಸಲ ಮನೆ ಬದಲಿಸಿದೆ. ಆಶ್ಚರ್ಯದ ಹಾಗೂ ಸಂತೋಷದ ಸಂಗತಿಯೆಂದರೆ, ಎರಡು ಸಲವೂ ನನಗೆ ಅವರ ಮನೆಯ ಎದುರಿನ ಸಾಲಿನ ಮನೆಯಲ್ಲಿಯೇ ವಾಸಿಸುವ ಪ್ರಸಂಗ ಒದಗಿತು. ಮೊದಲು ಮಾಳಮರಡಿಯಲ್ಲಿ, ಆ ಮೇಲೆ ಸಾರಸ್ವತಪುರದಲ್ಲಿ, ಹೀಗಾಗಿ ಅವರ ಕುಟುಂಬದ ಸದಸ್ಯರೊಡನೆ ನಮಗೆ ಹೆಚ್ಚಿನ ಬಾಂಧವ್ಯ ಬೆಳೆಯಿತು. ಇನ್ನೂ ಚಿಕ್ಕವನಾಗಿದ್ದ ನಾಗಭೂಷಣ ಹೈಸ್ಕೂಲಿಗೆ ಹೋಗುತ್ತಿದ್ದ. ನಾಗರತ್ನ ಕಾಲೇಜಿಗೆ ಹೋಗುತ್ತಿದ್ದಳು. ಶ್ರೀಮತಿ ಜಯಲಕ್ಷ್ಮಮ್ಮ ಅವರು ಬೇಸರವೆನಿಸಿದಾಗಲೆಲ್ಲ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ಮನೆಯವರು ಬಿಸಿಬಿಸಿ ಜೋಳದ ರೊಟ್ಟಿ, ಪಲ್ಯ,

ಚಟ್ನಿಗಳ ತಾಟನ್ನು ಆಗೀಗ ಊಟದ ಹೊತ್ತಿಗೆ ಅವರ ಮನೆಗೆ ಕಳಿಸಿಕೊಡುತ್ತಿದ್ದರು. ಮರು ದಿನವೇ ತೀ.ನಂ.ಶ್ರೀಯವರು ಬಿಳಿಜೋಳದ ರೊಟ್ಟಿಯ ರುಚಿಯ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದು, ಇಷ್ಟು ತೆಳ್ಳಗೆ ರೊಟ್ಟಿ ಹೇಗೆ ಮಾಡುತ್ತೀರಿ ಎಂದು ಜಯಲಕ್ಷ್ಮಮ್ಮ ಅವರು ಕುತೂಹಲಗೊಳ್ಳುತ್ತಿದ್ದರು.

ಸ್ನೇಹಿತರನ್ನು ತಮ್ಮ ಮನೆಗೆ ಮೇಲಿಂದ ಮೇಲೆ ಬರಮಾಡಿಕೊಂಡು ಆತಿಥ್ಯ ನೀಡುವುದರಲ್ಲಿ ಅವರಿಬ್ಬರಿಗೂ ಎಲ್ಲಿಲ್ಲದ ಸಂತೋಷ. ಮೈಸೂರು ಬೆಂಗಳೂರು ಕಡೆಗಳಿಂದ ಅವರ ಮಿತ್ರರು, ಬಂಧುಗಳು ಯಾರು ಬಂದರೂ ಅವರಿಗೆ ತೀ.ನಂ.ಶ್ರೀಯವರ ಮನೆಯಲ್ಲಿಯೇ ಆತಿಥ್ಯ ಒದಗುತ್ತಿತ್ತು. ಅಂಥ ಸಂದರ್ಭದಲ್ಲಿ ನಮಗೂ ಆಮಂತ್ರಣ ಇದ್ದೇ ಇರುತ್ತಿತ್ತು. ಊಟವಾಗಲಿ, ಉಪಹಾರವಾಗಲಿ ಯಾವುದರಲ್ಲೂ ಅವರು ತುಂಬ ಧಾರಾಳ, ಅಷ್ಟೇ ಶುಚಿ-ರುಚಿ, ಶಿಸ್ತು. ಇಂಥ ಸಂದರ್ಭದಲ್ಲಿ ಹೆಚ್ಚು ಜನರಿದ್ದಷ್ಟೂ ಅವರಿಗೆ ಹೆಚ್ಚಿನ ಸಂತೋಷ. ಅಂಥ ಸಂತೋಷಕ್ಕೆ ಅವರು ಯಾವಾಗಲೂ ಕಾದುಕೊಂಡಿರುವಂತೆ ತೋರುತ್ತಿತ್ತು.

ಪು.ತಿ.ನ., ಎ.ಎನ್. ಮೂರ್ತಿರಾಯರು, ಎಲ್. ಗುಂಡಪ್ಪ ಹಾಗೂ ಅವರ ಮಕ್ಕಳು ಸುಮಿತ್ರ, ವಿಮಲ ಮೊದಲಾದವರ ನಿಕಟ ಪರಿಚಯ ನಮಗಾದದ್ದು ಅವರ ಮನೆಯಲ್ಲಿಯೇ. ಆ ಸಂದರ್ಭದಲ್ಲಿ ಕಾವ್ಯಶಾಸ್ತ್ರ ವಿನೋದಕ್ಕೆ ಪೂರ ಬಂದಂತಿರುತ್ತಿತ್ತು. ಆ ಸೊಗಸಿನ ಸಂಜೆಗಳನ್ನು ಈಗ ಮೆಲಕುಹಾಕುವುದೇ ಒಂದು ಸಂತೋಷ. ದಂಪತಿಗಳಿಗೆ ಅದರಲ್ಲಿ ವಿಶೇಷವಾದ ಆದರಾತಿಥ್ಯವಿರುತ್ತಿತ್ತು. ನೂತನ ದಂಪತಿಗಳಿಗೆ ಅದರ ಪ್ರಮಾಣ ಇನ್ನೂ ಹೆಚ್ಚುತ್ತಿತ್ತು. ಅಮೆರಿಕ, ಇಂಗ್ಲೆಂಡ್ ಪ್ರವಾಸದಿಂದ ಅವರು ಧಾರವಾಡಕ್ಕೆ ಮರಳಿದ ಮೇಲೆ ಒಂದು ದಿನ ಎಂಟು-ಹತ್ತು ಜೋಡಿ ದಂಪತಿಗಳನ್ನು ತಮ್ಮ ಮನೆಗೆ ಊಟಕ್ಕೆ ಕರೆದದ್ದು ನನಗೆ ನೆನಪಿದೆ.

*

ತೀ.ನಂ.ಶ್ರೀಯವರ ಸಹೃದಯತೆಗೆ ನಾನು ನಿಜಕ್ಕೂ ಮಾರು ಹೋಗಿದ್ದೆ. ಆಕಾಶವಾಣಿಯಲ್ಲಿ ನಾನು ಕಾವ್ಯವಾಚನ ಮಾಡಿದಾಗ ಅವರು ಮರೆಯದೆ ಕೇಳಿರುತ್ತಿದ್ದರು. 'ನೋಡಿ, ನಿನ್ನೆ ಓದಿದ ಆ ಮೂರು ಪದ್ಯಗಳು-ತುಂಬ ಚೆನ್ನಾಗಿದ್ದವು' ಎಂದು ಹೇಳುತ್ತಿದ್ದರಲ್ಲದೆ ಕೆಲವು ಸಾಲುಗಳನ್ನು ಕೂಡ ನೆನಪಿನಲ್ಲಿಟ್ಟುಕೊಂಡಿರುತ್ತಿದ್ದರು. 'ಜೀವನ'ದಲ್ಲಿ ನನ್ನ 'ಮಗುವಿಗೆ' ಎಂಬ ಕವಿತೆ ಪ್ರಕಟವಾದಾಗ ಅದರಲ್ಲಿ ಬರುವ ನೂತನ ಉಪಮೆ ರೂಪಕಗಳನ್ನು ಅವರು ಎತ್ತಿ ತೋರಿಸಿ ತಮ್ಮ ಸಂತೋಷವನ್ನು ಸೂಚಿಸಿದ್ದರು. ಅವರದು ತುಂಬ ಪರಿಶುದ್ಧವಾದ ಕಾವ್ಯಾಭಿರುಚಿ.

೧೯೫೩ರಲ್ಲಿ ಅವರು ಕುಮಟಾ ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಬಂದರು. ಮೊಟ್ಟ ಮೊದಲಿಗೆ ಅಲ್ಲಿ ನವ್ಯ ಕಾವ್ಯದ ಬಗ್ಗೆ ನಡೆದ ಗೋಷ್ಠಿ ಸ್ವಲ್ಪ ತುರುಸಿನದಾಗಿತ್ತೆಂದು ತೋರುತ್ತದೆ. ಆ ಗೋಷ್ಠಿಯಲ್ಲಿ ಭಾಗವಹಿಸಿದ ಕೆಲವು ಮಿತ್ರರು ಸಮ್ಮೇಳನ ಮುಗಿಸಿಕೊಂಡು ಹೋಗುವಾಗ ಧಾರವಾಡಕ್ಕೂ ಬಂದರು. ಆಗ ತೀ.ನಂ.ಶ್ರೀಯವರ ಮನೆಯಲ್ಲಿ ಮತ್ತೊಂದು ಗೋಷ್ಠಿಯೇ

ನಡೆಯಿತು. ಅಲ್ಲಿ ನಡೆದ ಚರ್ಚೆ ಇಲ್ಲಿ ಇನ್ನಿಷ್ಟು ಬಿಸಿಯಾಗಿ, ಆದರೆ ಆತ್ಮೀಯವಾಗಿ ಮುಂದುವರಿದಂತಿತ್ತು. ನವ್ಯಕಾವ್ಯದ ಕೆಲವು ಅಂಶಗಳನ್ನು ತೀ.ನಂ.ಶ್ರೀ ಮೆಚ್ಚಿಕೊಂಡಿದ್ದರಾದರೂ ಅದರ ಬಗ್ಗೆ ಹೆಚ್ಚಿನ ಒಲವನ್ನು ಅವರು ಮುಂದೆಯೂ ತೋರಿದಂತೆ ಕಂಡು ಬರಲಿಲ್ಲ.

*

ತೀ.ನಂ.ಶ್ರೀ ಮೈಸೂರಿಗೆ ಹಿಂತಿರುಗುವ ಮುನ್ನ ಒಂದು ದಿನ ನನ್ನನ್ನು ತಮ್ಮ ಮನೆಗೆ ಕರೆ ಕಳುಹಿಸಿದರು. ನಾನು ಉಪನ್ಯಾಸ ಶಿಬಿರಕ್ಕಾಗಿ ಯಾವುದೋ ಊರಿಗೆ ಹೋದವನು ಅದೇ ಬಂದಿದ್ದೆ. ಅವರ ಮನೆಗೆ ಹೋದಾಗ ಹೇಳಿದರು: "ನೀವಿಲ್ಲದಾಗ ನಿಮಗೆ ತಿಳಿಸದೆ ನಾನೊಂದು ತೀರ್ಮಾನ ತೆಗೆದುಕೊಂಡಿದ್ದೇನೆ" ಎಂದರು. ನಾನು, "ನಿಮ್ಮಲ್ಲಿ ನನಗೆ ತುಂಬ ವಿಶ್ವಾಸ ಎಂಬುದು ನಿಮಗೆ ಗೊತ್ತೇ ಇದೆ, ಹೇಳಿ" ಎಂದೆ ಕುತೂಹಲದಿಂದ. ಅವರು ಹೇಳಿದರು: "ನಾನು ಇಷ್ಟರಲ್ಲಿಯೇ ಮೈಸೂರಿಗೆ ಹಿಂತಿರುಗಲಿರುವುದರಿಂದ ಇಲ್ಲಿಯ ಕನ್ನಡ ವಿಭಾಗದ ಮುಂದಿನ ವ್ಯವಸ್ಥೆಯ ಬಗ್ಗೆ ನನ್ನ ಸೂಚನೆಗಳನ್ನು ಡಾ॥ ಪಾವಟೆಯವರು ಕೇಳಿದರು. ನಾನು ನಿಮ್ಮನ್ನು ಲೆಕ್ಚರರ್ ಎಂದು ತೆಗೆದುಕೊಳ್ಳುವುದು ತುಂಬ ಸೂಕ್ತ ಎಂಬ ಶಿಫಾರಸು ಬರೆದುಕೊಟ್ಟಿದ್ದೇನೆ. ಅವರೂ ಅದಕ್ಕೆ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು." ಈ ಅನಿರೀಕ್ಷಿತ ಘಟನೆ ನನ್ನನ್ನು ಅಚ್ಚರಿಗೊಳಿಸಿತು. ನಾನು ಅವರಿಗೆ ಕೃತಜ್ಞತೆ ಸೂಚಿಸಿ ಮನೆಗೆ ಬಂದೆ.

ಸ್ವಲ್ಪ ದಿನಗಳಲ್ಲಿ ಅವರು ಧಾರವಾಡವನ್ನು ಬಿಟ್ಟು ಮೈಸೂರಿಗೆ ತೆರಳಿದರು. ಮುಂದೆ ಇಲ್ಲಿ ಏನೇನೊ ಕಾರಣಗಳಿಂದಾಗಿ ಅವರು ನನ್ನ ಬಗ್ಗೆ ಮಾಡಿದ ಶಿಫಾರಸು ಕಾಗದದಲ್ಲಿಯೇ ಉಳಿಯಿತು. ತೀ.ನಂ.ಶ್ರೀ ಇದರಿಂದ ತುಂಬಾ ಬೇಸರಪಟ್ಟುಕೊಂಡರು. ಆದರೆ ಆ ಬಗ್ಗೆ ನಾನು ಹೆಚ್ಚು ಹಚ್ಚಿಕೊಂಡಿರಲಿಲ್ಲ. "ವ್ಯಾಸಂಗ ವಿಸ್ತರಣ, ಪ್ರಕಟನ ವಿಭಾಗಕ್ಕೆ ನನ್ನನ್ನು ಸಂಪೂರ್ಣ ಅರ್ಪಿಸಿಕೊಂಡು ಬಿಟ್ಟಿದ್ದೇನೆ. ನನಗೇನೂ ಚಿಂತೆಯಿಲ್ಲ" ಎಂದು ನಾನೇ ಅವರಿಗೆ ಸಮಾಧಾನ ಹೇಳಬೇಕಾಯಿತು.

ಮುಂದೆ ಇಪ್ಪತ್ತೈದು ವರ್ಷಗಳ ನಂತರ, ನಾನು ಪ್ರಸಾರಾಂಗದ ನಿರ್ದೇಶಕತ್ವದಿಂದ ನಿವೃತ್ತನಾಗುವ ಮುನ್ನ, ಕನ್ನಡ ಅಧ್ಯಯನ ಪೀಠದಲ್ಲಿ ಒಂದು ವರ್ಷ ಗೌರವ ಸಂದರ್ಶಕ ಪ್ರಾಧ್ಯಾಪಕನಾಗಿ ವಿದ್ಯಾರ್ಥಿಗಳಿಗೆ ಪಾಠ ಹೇಳುವ ಅವಕಾಶ ಅಯಾಚಿತವಾಗಿ ಒದಗಿತು. ಆ ಸಂದರ್ಭದಲ್ಲಿ ನನಗೆ ತೀ.ನಂ.ಶ್ರೀಯವರ ನೆನಪಾಗದೆ ಹೋಗಲಿಲ್ಲ.

*

೧೯೫೭ರ ದಸರಾ ಕವಿಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರಿಗೆ ಹೋದಾಗ ತೀ.ನಂ.ಶ್ರೀಯವರ ಮನೆಗೆ ನಾನು ಮನೆಯವರ ಜೊತೆಗೆ ಹೋಗಿದ್ದೆ. ಆಗ ಅವರ ಮನೆಮಂದಿ ಯೆಲ್ಲ ಧಾರವಾಡದ ಬಗ್ಗೆ ಕೇಳಿದ್ದೇ ಕೇಳಿದ್ದು. ನಾಲ್ಕೈದು ವರ್ಷಗಳಲ್ಲಿಯೇ ಅವರು ಇಲ್ಲಿ

ಪಡೆದಿದ್ದ ಸ್ನೇಹಿತರ ಬಳಗ ಅಷ್ಟು ದೊಡ್ಡದಾಗಿತ್ತು. ಅಂದು ನಮ್ಮಿಬ್ಬರ ಅತಿಥಿ ಸತ್ಕಾರದಲ್ಲಿ ಅವರು ಧಾರವಾಡದ ಮೇಲಿನ ಪ್ರೀತಿಯನ್ನೆಲ್ಲ ತೀರಿಸಿಕೊಳ್ಳುತ್ತಿರುವಂತೆ ತೋರಿತು. ತಮ್ಮ ಮನೆಯ ಅಂಗಳದಲ್ಲಿ ನನ್ನನ್ನೂ ನನ್ನ ಶ್ರೀಮತಿಯನ್ನೂ ಜೊತೆಯಾಗಿ ನಿಲ್ಲಿಸಿ, ಸ್ವತಃ ತೀ.ನಂ.ಶ್ರೀ. ಯವರೇ ಫೋಟೋ ತೆಗೆದುಕೊಂಡಿದ್ದನ್ನು ನಾವಿಬ್ಬರೂ ಮರೆಯುವಂತಿಲ್ಲ.

*

೧೯೬೧ರಲ್ಲಿ ಗದಗಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಾಬಾಂಧವ್ಯ ಗೋಷ್ಠಿಯ ಅಧ್ಯಕ್ಷರಾಗಿ ತೀ.ನಂ.ಶ್ರೀ ಬಂದಾಗ ಕೆಲವೇ ಕ್ಷಣಗಳನ್ನು ಅವರ ಜೊತೆಗೆ ಕಳೆಯಬೇಕಾಯಿತು. ಯಾಕೆಂದರೆ ಅಂದೇ ಅವರು ಯಾವುದೋ ತುರ್ತು ಕೆಲಸದ ನಿಮಿತ್ತ ಮೈಸೂರಿಗೆ ತೆರಳಬೇಕಾಗಿತ್ತು. ನಾನು ಕವಿಗೋಷ್ಠಿಯ ಅಧ್ಯಕ್ಷನಾದದ್ದಕ್ಕೆ ನನ್ನನ್ನು ಅಭಿನಂದಿಸಿ ನನ್ನ ಭಾಷಣದ ಎರಡು ಪ್ರತಿಗಳನ್ನು ಅವರು ನನ್ನಿಂದ ತೆಗೆದುಕೊಂಡರು. ಅವರು ಎರಡು ಪ್ರತಿಗಳನ್ನು ಪಡೆದುಕೊಂಡುದರ ಉದ್ದೇಶ ಮುಂದೆ ಪು.ತಿ.ನ. ಅವರು ೩೦-೧೨-೬೧ರಲ್ಲಿ ನನಗೆ ಬರೆದ ಪತ್ರದಿಂದ ಗೊತ್ತಾಯಿತು. ಪು.ತಿ.ನ. ಅವರ ಪತ್ರದಲ್ಲಿಯ ಮಾತುಗಳನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ.

"ತಾವು ಈ ಸಲದ ಕವಿಸಮ್ಮೇಳನಕ್ಕೆ ಅಧ್ಯಕ್ಷರಾದದ್ದು ತುಂಬ ಹರುಷದ ಸಂಗತಿ. ನನ್ನ ಅಭಿನಂದನೆಗಳು. ತಮ್ಮ ಭಾಷಣದ ಪ್ರತಿಯೊಂದನ್ನು ತೀ.ನಂ.ಶ್ರೀಯವರು ನನ್ನಲ್ಲಿ ಬಿಟ್ಟುಹೋದರು. ತುಂಬ ಕುತೂಹಲದಿಂದ ಓದಿದೆ. ನಿಜ. ತಾವು ನನ್ನ ಪುಸ್ತಕದ ವಿಚಾರವಾಗಿ ಹೇಳಿರುವ ಮಾತು. ಈಗೀಗ ಮನಸ್ಸು ಹಿಮ್ಮೊಗವಾಗಿ ತಿರುಗಹತ್ತಿದೆ. ಅಂತ್ಯಪ್ರಾಸವನ್ನು ಬಿಟ್ಟು ಆದಿಪ್ರಾಸಕ್ಕೂ ಕಂದವೃತ್ತಗಳಿಗೂ ಒಲಿಯುತ್ತಿದೆ. ನನ್ನ ಸೆಳವು ಮೊದಲಿನಿಂದಲೂ ಸಂಸ್ಕೃತದತ್ತ-ಈಗೀಗ ಇದು ತುಂಬ ಹೆಚ್ಚು. ಅವರವರ ಮಾಳ್ಕೆಯಂತೆ ಅವರವರ ಲೋಕ...... ಬಹು ಪ್ರಚೋದಕವಾಗಿದೆ ನಿಮ್ಮ ಭಾಷಣ, ಅಭಿನಂದನೆಗಳು."

*

ತೀ.ನಂ.ಶ್ರೀಯವರನ್ನು ನೆನೆದಾಗ ಹೊಳಪುಗಣ್ಣಿನ, ಮಂದಸ್ಮಿತದ ಸ್ನಿಗ್ಧ ನೋಟದ, ಅವರ ಪ್ರಶಾಂತಮುಖ ಕಣ್ಣೆದುರು ನಿಲ್ಲುತ್ತದೆ. ಯಾವುದರ ಬಗೆಗಾದರೂ ಅಸಮಾಧಾನ ವೆನಿಸಿದಾಗ ಸ್ವಲ್ಪ ಹುಬ್ಬುಗಂಟಿಕ್ಕಿ ಪುನಃ ಮೊದಲಿನ ಕಳೆಯನ್ನು ಅದು ಪಡೆಯುತ್ತಿತ್ತು. ಸಂಸಾರದ ಸೌಖ್ಯ, ಮಿತ್ರರ ಒಲವು, ಸಾಹಿತ್ಯದ ಸವಿ ಅವರ ವೈಯಕ್ತಿಕ ನೋವುಗಳನ್ನು ಮರೆಸಿ ಗೆಲುವನ್ನು ಸಾಧಿಸಿದ್ದವು.

ಧಾರವಾಡದಲ್ಲಿ ಆಗ ಸಿಟಿ ಬಸ್ಸುಗಳಿರಲಿಲ್ಲ. ಸಾರಸ್ವತಪುರದ ತಮ್ಮ ಮನೆಯಿಂದ ಟ್ರೈನಿಂಗ್ ಕಾಲೇಜಿನವರೆಗೆ (ವಿಶ್ವವಿದ್ಯಾಲಯದ ಕನ್ನಡ ವಿಭಾಗ ಆಗ ಅಲ್ಲಿಯೇ ಇತ್ತು) ಬಿಸಿಲಿನಲ್ಲಿ ಒಂದು ಮೈಲು ಅವರು ನಡೆದುಕೊಂಡೇ ಹೋಗುತ್ತಿದ್ದರು. ತೆಳ್ಳಗಿನ ಬೆಳ್ಳಗಿನ ನೀಟಾದ

ಪಂಚೆಯುಟ್ಟು ಕ್ಲೋಸ್‌ಕಾಲರ್ ಕೋಟು ತೊಟ್ಟು, ಇರುವಷ್ಟು ತಲೆಗೂದಲನ್ನು ಒಪ್ಪಾಗಿ ಬಾಚಿ, ಎಡಗೈಯಲ್ಲಿ ಪುಸ್ತಕಗಳನ್ನು, ಬಲಗೈಯಲ್ಲಿ ಕೊಡೆಯನ್ನೂ ಹಿಡಿದುಕೊಂಡು, ಮೈಯನ್ನು ಸ್ವಲ್ಪ ಓಲಾಡಿಸುತ್ತ, ಎತ್ತರದ ನಿಲುವಿನ ಸಹಜ ಸೌಮ್ಯ ಠೀವಿಯೊಂದಿಗೆ ಅವರು ನಡೆದು ಹೋಗುತ್ತಿದ್ದ ದೃಶ್ಯ ಇನ್ನೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ.

ಈಗ್ಗೆ ಕೆಲವರ್ಷಗಳ ಹಿಂದೆ ನಾಗಭೂಷಣ ತನ್ನ ಪತ್ನಿಯೊಂದಿಗೆ ಧಾರವಾಡದ ನಮ್ಮ ಮನೆಗೆ ಬಂದಾಗ ಅವನ ತುಂಬು ಮೊಗದಲ್ಲಿ ನಾನು ತೀ.ನಂ.ಶ್ರೀಯವರನ್ನೇ ಕಂಡಂತಾಯಿತು.

(ಸಮತೋಲನ : ೧೯೮೭)

ತೀ.ನಂ.ಶ್ರೀ

ಸಿ.ಪಿ. ಕೃಷ್ಣಕುಮಾರ್

●

ಆನರ್ಸ್ ಮತ್ತು ಎಂ.ಎ. ತರಗತಿಯಲ್ಲಿ ತೀ.ನಂ.ಶ್ರೀಕಂಠಯ್ಯನವರು ನನ್ನ ಪ್ರಾಚಾರ್ಯರು. ಅವರ ಮತ್ತು ನನ್ನ ಗುರು-ಶಿಷ್ಯ ಸಂಬಂಧದಲ್ಲಿ ಒಂದು ವಿಶೇಷವುಂಟು. (ಅವರು ಬದುಕಿದ್ದಾಗ ನಾನಿದನ್ನು ಅವರಿಗೆ ಹೇಳಲಿಲ್ಲ, ಹೇಳಿದ್ದರೆ ಸಂತೋಷಪಡುತ್ತಿದ್ದರೇನೊ.) ಅವರು ನನಗೆ ಮಾತ್ರವಲ್ಲ, ನನ್ನ ತಂದೆಯವರಿಗೂ ಮೆಚ್ಚಿನ ಗುರುಗಳಾಗಿದ್ದವರು ಎಂಬುದೇ ಆ ವಿಶೇಷ.[1]

ಇಲ್ಲಿ ನಾನು ಹೇಳಬೇಕೆಂದಿರುವುದು ಒಂದು ವಿಲಕ್ಷಣ ಸಂಗತಿಯನ್ನು; ಅದು ಏಕ ಕಾಲದಲ್ಲಿ ನನ್ನ ಸಣ್ಣತನದ ಮೇಲೂ ತೀ.ನಂ.ಶ್ರೀ. ಅವರ ದೊಡ್ಡತನದ ಮೇಲೂ ಬೆಳಕು ತೂರುತ್ತದೆ.

ನಾನು ಎಂ.ಎ. ಮುಗಿಸಿದ ಮೇಲೆ, ಅಧ್ಯಾಪಕ ಹುದ್ದೆ ಸಿಗದೆ, ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಶೊಧನ ಸಹಾಯಕನಾಗಿ ಸೇರಿದೆ. ("ವಿಶ್ವವಿದ್ಯಾನಿಲಯದವರು ಅಧ್ಯಾಪಕರ ನೇಮಕಾತಿಗಳನ್ನು ಮಾಡುವಾಗ ನಮ್ಮನ್ನು ಕೇಳುವುದೇ ಇಲ್ಲ. ಏನು ಮಾಡುವುದು?" ಎಂದು ತೀ.ನಂ.ಶ್ರೀ. ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದುಂಟು. ಆಗಿನ ಪರಿಸ್ಥಿತಿ ಹಾಗಿತ್ತು.) ಕೆಲದಿನಗಳ ಬಳಿಕ ಮದುವೆ ಮಾಡಿಕೊಂಡೆ. ಅದಕ್ಕಿಂತ ದೊಡ್ಡ ತಪ್ಪು ಎಂದರೆ, ತೀ.ನಂ.ಶ್ರೀ. ಅವರಿಗೆ ನಾನು ಮದುವೆಯ ಕರೆಯೋಲೆಯನ್ನು ಕೊಡದೆ ಹೋದದ್ದು. ಹಾಗೇಕೆ ಮಾಡಿದೆನೊ! ಬಹುಶಃ ಅವರ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವುದೋ

---

1. ನನ್ನ ತಂದೆಯವರು ಇಂಟರ್‌ಮೀಡಿಯಟ್ ತರಗತಿಯಲ್ಲಿದ್ದಾಗ-ಅಲ್ಲಿಗೇ ಅವರ ಶಿಕ್ಷಣ ಮೊಟಕಾಯಿತು-ಒಮ್ಮೆ 'ಗದಾಯುದ್ಧ'ದ ಮೇಲೊಂದು ಪ್ರಬಂಧ ಬರೆದು ತರುವಂತೆ ವಿದ್ಯಾರ್ಥಿಗಳಿಗೆಲ್ಲ ಹೇಳಿದರಂತೆ, ತೀ.ನಂ.ಶ್ರೀ. ಅವರು. ಆಮೇಲೆ ನನ್ನ ತಂದೆಯವರು ಬರೆದುಕೊಂಡುಬಂದ ಪ್ರಬಂಧವನ್ನು ಮೆಚ್ಚಿಕೊಂಡು ತರಗತಿಗೆಲ್ಲ ತೋರಿಸಿದರಂತೆ. (ಅದನ್ನು ನಮ್ಮ ತಂದೆಯವರ ಸಹಪಾಠಿಯಾಗಿದ್ದ ತ.ಸು. ಶಾಮರಾಯರು ನೋಡಿಕೊಡುತ್ತೇನೆಂದು ಈಸಿಕೊಂಡು ಹೋದರಂತೆ. ಕುವೆಂಪು ಅವರ ಪಾಠ ಪ್ರವಚನಗಳು ತಮಗೆ ಅಷ್ಟೇನೂ ಹಿಡಿಸುತ್ತಿರಲಿಲ್ಲವೆಂದು ನನ್ನ ತಂದೆಯವರು ಹೇಳಿದ್ದುಂಟು. ಈ ಬಗ್ಗೆ ತ.ಸು. ಶಾಮರಾಯರಲ್ಲಿ ನಾನು ಪ್ರಸ್ತಾಪಿಸಿದಾಗ, ಕುವೆಂಪು ಉಪನ್ಯಾಸಗಳ ಎತ್ತರ ಎಲ್ಲರಿಗೂ ಗ್ರಾಹ್ಯವಾಗುವಂತಿರಲಿಲ್ಲವೆಂದು ಅವರು ವಿವರಣೆಕೊಟ್ಟರು. ದುರದೃಷ್ಟವಶಾತ್ ನಾನು ಕುವೆಂಪು ಅವರ ವಿದ್ಯಾರ್ಥಿಯಾಗಿರಲಿಲ್ಲ). ಅಂತೂ ತೀ.ನಂ.ಶ್ರೀ. ಅವರು ನಿಸ್ಸಂದೇಹವಾಗಿ ಜನ ಪ್ರಿಯ-ಅಥವಾ ವಿದ್ಯಾರ್ಥಿ ಪ್ರಿಯ-ಅಧ್ಯಾಪಕರಾಗಿದ್ದರು.

ಅಸಮಾಧಾನದ ಕರೆ ಮೂಡಿತ್ತು. ಅದಕ್ಕೆ ಏನೇನೂ ಆಧಾರವಿರಲಿಲ್ಲವೆಂದು ಈಗ ಖಚಿತವಾಗಿದೆ. ಒಂದುವೇಳೆ ಅಸಮಾಧಾನಕ್ಕೆ ಪ್ರಬಲಕಾರಣವೆ ಇದ್ದರೂ, ಮದುವೆಯ ಆಹ್ವಾನ ಪತ್ರಿಕೆಯನ್ನು ಕೊಡದಿರುವುದಕ್ಕೆ ಅದು ಖಂಡಿತ ಸಮರ್ಥನೆಯಾಗಲಾರದು. ಅಂತೂ ಆಗಿನ ನನ್ನ ಬಿಸಿರಕ್ತದ ದುಡುಕು, ಅವಿವೇಕಗಳು ನನ್ನ ನೆಚ್ಚಿನ ಪ್ರಾಧ್ಯಾಪಕರಿಗೆ ಆಹ್ವಾನವನ್ನು ತಪ್ಪಿಸಿದ್ದು ಅತ್ಯಂತ ವಿಷಾದಕರ.

ಆಯಿತು, ಮುಂದೆ ನಾನು ತಂದೆಯೂ ಆದೆ. ಆಗ ಒಮ್ಮೆ ಸುಜನಾ ಅವರು ಏತಕ್ಕೊ ನನ್ನನ್ನು ತೀ.ನಂ.ಶ್ರೀ ಅವರ ಮನೆಗೆ ಕರೆದುಕೊಂಡು ಹೋದರು. ಲೋಕಾಭಿರಾಮವಾಗಿ ಮಾತನಾಡುವಾಗ, "ಈಗ ಸಿ.ಪಿ.ಕೆ. ತಂದೆಯಾಗಿದ್ದಾರೆ" ಎಂದು ತಿಳಿಸಿದರು. ತೀ.ನಂ.ಶ್ರೀ. ಅವರು 'ಸಂತೋಷ' ಎಂದು ನುಡಿದವರೆ ನೇರವಾಗಿ ನನ್ನ ಮುಖಕ್ಕೇ ಅಂದುಬಿಟ್ಟರು: "ಕೃಷ್ಣಕುಮಾರ್, ನನಗೆ ನೆನಪಿದೆ; ನೀವು ನಿಮ್ಮ ಮದುವೆಗೆ ನನ್ನನ್ನು ಕರೆಯಲಿಲ್ಲ!" ಆ ಮಾತಿನಲ್ಲಿ ನೋವಿತ್ತು; ಜೊತೆಗೆ ಹಸುಳೆಯ ಪ್ರಾಮಾಣಿಕತೆಯಿತ್ತು. ಆಗ ನನ್ನ ಅವಸ್ಥೆ, ಒಂದು ಮಾತಿನಲ್ಲಿ ಹೇಳುವುದಾದರೆ, "ವಸುಧೇ, ದೇಹಿ ಮೇ ವಿವರಂ!" ಎನ್ನುವಂತಾಯಿತು. ಉತ್ತರವಾಗಿ ಏನು ತೊದಲಿದೆನೋ ನೆನಪಿಲ್ಲ.

ಇಲ್ಲಿಗೇ ಕತೆ ನಿಲ್ಲುವುದಿಲ್ಲ. ಮುಂದೆ ವಿಶ್ವವಿದ್ಯಾನಿಲಯ ಕೆಲವು ಸ್ನಾತಕೋತ್ತರ ಅಧ್ಯಾಪಕ ಹುದ್ದೆಗಳಿಗೆ ಜಾಹಿರಾತು ಕೊಟ್ಟಿತು. ನಾನು ಅರ್ಜಿ ಹಾಕಬೇಕೆಂದುಕೊಂಡು, ಶಿಫಾರಸು ಪತ್ರಕ್ಕಾಗಿ ತೀ.ನಂ.ಶ್ರೀ. ಅವರ ಬಳಿಗೆ ಹೋದೆ. ಅವರು ಅಸಮಾಧಾನದ ಲವಲೇಶವನ್ನೂ ತೋರಿಸದೆ–ಇದ್ದರೆ ತಾನೆ ತೋರಿಸುವುದು– ಹೇಳಿದರು: "ಇವು ಸ್ನಾತಕೋತ್ತರ ಹುದ್ದೆಗಳು, ನಿಮಗೆ ಸಿಗಲಿಕ್ಕಿಲ್ಲ. ಆದರೆ ಸ್ನಾತಕಪೂರ್ವ ಹುದ್ದೆಗಳಿಗೆ ಅರ್ಜಿ ಕರೆದಾಗಲಾದರೂ ಬೇಕಾಗುತ್ತದೆ, ಆದ್ದರಿಂದ ಶಿಫಾರಸು ಪತ್ರ ಕೊಡುತ್ತೇನೆ. ನಾಳೆ ಬನ್ನಿ." (ಅದು ಅವರ ವಿಧಾನ. ಏನನ್ನೂ ಅವಸರದಲ್ಲಿ ಬರೆಯುವವರಲ್ಲ.)

ಮರುದಿವಸ ನಾನು ಹೋದಾಗ, ಚೊಕ್ಕವಾಗಿ ಬರೆದು ಲಕೋಟೆಯಲ್ಲಿಟ್ಟಿದ್ದ ಶಿಫಾರಸು ಪತ್ರವನ್ನು ಗುರುಗಳು ನನ್ನ ಕೈಗಿತ್ತರು. ಅದು ಈಗಲೂ ನನ್ನಲ್ಲಿ ಒಂದು ಅಮೂಲ್ಯ ನಿಧಿಯಂತಿದೆ. ನಾಲ್ಕಾರೇ ವಾಕ್ಯಗಳು; ಆದರೆ ಒಂದೊಂದು ಮಾತೂ ಮುತ್ತು. ಗಾಜು ಮತ್ತು ಕಟ್ಟು ಹಾಕಿಸಿ, ಗೋಡೆಗೆ ತೂಗುಹಾಕಿ, ಪೂಜಿಸಲು ತಕ್ಕುದಾಗಿದೆ ಆ ಶಿಫಾರಸು ಪತ್ರ! ನನ್ನ ಸ್ವಭಾವವನ್ನು ಸರಿಯಾಗಿ ಅದರಲ್ಲಿ ಗುರುತಿಸಿದ್ದಾರೆ ನನ್ನ ಗುರುವರ್ಯ: "Very modest, never seeking the limelight!". ಅದು ಎಂದೂ ನನ್ನ ಆದರ್ಶ.

ತೀ.ನಂ.ಶ್ರೀ. ನನ್ನ ಮೇಲೆ noble revenge ತೀರಿಸಿಕೊಂಡ ಪರಿಯಿದು! ಅವರ ಬಗ್ಗೆ ನಾನೆಸಗಿದ ಅಪರಾಧಕ್ಕಾಗಿ ನಾನು ಪಶ್ಚಾತ್ತಾಪ ಪಟ್ಟಿದ್ದೇನೆ. ಈಗ ಅದನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳುತ್ತಿದ್ದೇನೆ. ಇದೇ ಪ್ರಾಯಶ್ಚಿತ.

(ಹಿರಿಯರ ಗೆರೆಗಳು : ೧೯೮೩)

ತೀನಂಶ್ರೀ

ಎಚ್.ಕೆ. ರಂಗನಾಥ್

●

ಕೃಷ್ಣಮೂರ್ತಿಪುರದಲ್ಲಿನ ನನ್ನ ಮನೆಯ ಎದುರಿಗೆ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರ ಬಂಗಲೆ. ಅವರ ಪಕ್ಕದ ಮನೆಯಲ್ಲಿಯೇ ಮೊದಲು ಡಾ. ಎ.ಎನ್. ನರಸಿಂಹಯ್ಯನವರೂ ಅನಂತರ 'ಆದರೆ ಹೀಗಾಗಬೇಕು, ಇದ್ದರೆ ಹೀಗಿರಬೇಕು' ಎಂದು ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದ ತೀ.ನಂ.ಶ್ರೀ ಅವರೂ ಉಳಿದದ್ದು. (ಪುಟ ೩೬)

*

ಪ್ರೊ. ತೀ.ನಂ.ಶ್ರೀ ಅವರಂತೆ ಎಂ.ಎ. ಪಾಸು ಮಾಡಬೇಕು, ಕಾಲೇಜಿನಲ್ಲಿ ಪಾಠ ಹೇಳಬೇಕು. ಅನಂತರ ನಡೆ ನುಡಿಗಳಲ್ಲಿ ಸತ್ವ ಸೌಂದರ್ಯಗಳನ್ನು ತುಂಬಿಕೊಳ್ಳಬೇಕು ಎಂಬುದನ್ನು ಅವರನ್ನು ಕಂಡಂದಿನಿಂದ ನನ್ನನ್ನು ಕಾಡಿದ ಕನಸು. ಅದೊಂದು ಹಗಲುಗನಸು–ಬರಿಯ ಭ್ರಾಂತಿ ಎಂದು ಅನೇಕ ವೇಳೆ ಅಂದುಕೊಂಡಿದ್ದು ಉಂಟು. ಆದರೆ ಈಗ ಮೊದಲಿನ ಎರಡು ನನಸೇ ಆಯಿತಲ್ಲ! ಮೂರನೆಯದಕ್ಕೆ ತಪ ನಿಲ್ಲಬೇಕು. ಅದು ಸಾಧ್ಯವಾಗಲಿಲ್ಲ. ಮಹಾರಾಜ ಕಾಲೇಜಿನಲ್ಲಿ ತೀ.ನಂ.ಶ್ರೀಯವರೂ ಅವರಂತಹ ವಿದ್ವಾಂಸ ಸದ್ಗುಣಿಗಳೂ ಉಪಸ್ಥಿತರಿರುವಲ್ಲಿ ಕುಳ್ಳಿರುವ ಭಾಗ್ಯ ಸಣ್ಣದೆ? ಮುಂದಿನ ಮೂರು ವರುಷಗಳವರೆಗೆ ಈ ಭಾಗ್ಯ ನನ್ನದಾಗಿ ಜೀವನ ಸುಖದ ಸುಪ್ಪತ್ತಿಗೆಯಾಯಿತು. (ಪುಟ ೧೦೩–೧೦೪)

('ನೆನಪಿನ ನಂದನ' : ೧೯೯೯)

ತೀನಂಶ್ರೀ

ಹೆಚ್.ಜಿ. ಸಣ್ಣಗುಡ್ಡಯ್ಯ

●

ತೀ.ನಂ.ಶ್ರೀಯವರನ್ನು ನೆನೆಯುವವರಿಗೆ ಮೂರು ಕ್ಷೇತ್ರಗಳಲ್ಲಿ ಅವರು ಅದ್ವಿತೀಯರಾಗಿ ನಿಲ್ಲುತ್ತಾರೆ: ಮೊದಲನೆಯದು–ಅವರು ಕನ್ನಡದಲ್ಲಿ ಬರೆದು ಬಿಟ್ಟುಹೋದ ಭಾರತೀಯ ಕಾವ್ಯಮೀಮಾಂಸೆ ಎಂಬ ಉದ್ದಾಮ ಕೃತಿಯಲ್ಲಿ. ಆ ವಿಷಯದಲ್ಲಿ ಅದನ್ನು ಮೀರಿಸುವಂಥಾದ್ದು ಮುಂದೆ ಬಂದೀತೋ ಹೇಳಲಾಗುವುದಿಲ್ಲ. ಎರಡನೆಯದು– ಅವರು ಕನ್ನಡದ ಅಧ್ಯಯನ ಕೇಂದ್ರಗಳಲ್ಲಿ ಭಾಷಾವಿಜ್ಞಾನದ ಅಭ್ಯಾಸಕ್ಕೆ ಮಾಡಿದ ಪೂರ್ವಸಿದ್ಧತೆ ಮತ್ತು ಕನ್ನಡ ನಿಘಂಟಿಗೆ ಅವರು ಪಟ್ಟ ಪರಿಶ್ರಮ. ೧೯೩೦ರ ಸುಮಾರಿನಿಂದ ಪ್ರಾರಂಭಿಸಿ ಅವರು ಅಲ್ಲಿ ಇಲ್ಲಿ ಬರೆದು ಮಂಡಿಸಿದ ಏಳೆಂಟು ಇಂಗ್ಲಿಷ್ ಲೇಖನಗಳು ಎಂಟು–ಹತ್ತು ಕನ್ನಡ ಲೇಖನಗಳು ಮತ್ತು ಗ್ರಂಥರೂಪದಲ್ಲಿ ಬಂದ 'ಕನ್ನಡ ಮಧ್ಯಮ ವ್ಯಾಕರಣ' ಇವಿಷ್ಟರಿಂದಲೇ ಭಾಷಾಶಾಸ್ತ್ರದ ಅಭ್ಯಾಸಕ್ಕೆ ಅವರು ಒದಗಿಸಿದ ಪೂರ್ವ ಸಿದ್ಧತೆಯನ್ನು ನಿರ್ಣಯಿಸಬರುವುದಿಲ್ಲ. ಇದಲ್ಲದೆ ೧೯೩೮–೬೧ರಲ್ಲಿ ತೀ.ನಂ.ಶ್ರೀಯವರ ಮಾರ್ಗದರ್ಶನದಲ್ಲಿ ಶ್ರೀ ಎಂ.ಆರ್.ರಂಗನಾಥ ಎನ್ನುವವರು ಸಿದ್ಧಪಡಿಸಿದ ಕನ್ನಡದ ಧ್ವನಿಮಾ ಆಕೃತಿಮಾಗಳ ಆಗಮನ–ಸಂಖ್ಯಾ ಬಲಕ್ಕೆ ಸಂಬಂಧಿಸಿದ ಸಂಶೋಧನ ಕೃತಿ ತೀ.ನಂ.ಶ್ರೀಯವರ ಮಹತ್ವಾಕಾಂಕ್ಷೆಯ ಕನಸಿನ ಫಲ. 'Morphophonemic Analysis of the Kannada Language' ಎಂಬ ಹೆಸರಿನ ಸುಮಾರು ೩೫೦ ಪುಟಗಳ ಈ ಗ್ರಂಥವನ್ನು ಮೈಸೂರಿನಲ್ಲಿರುವ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯು ೧೯೮೨ರಲ್ಲಿ ಪ್ರಕಟಿಸಿದೆ. ಇದು ೯೬೦೦೦ಕ್ಕಿಂತಲೂ ಹೆಚ್ಚು ಕನ್ನಡ ಪದಗಳ ಆಧಾರದಿಂದ ಸಿದ್ಧವಾಗಿದ್ದು ಕನ್ನಡಕ್ಕಾಗಿ ಸಮರ್ಥವಾದ ಬೆರಳಚ್ಚುಮಣೆ ಮತ್ತು ಶೀಘ್ರಲಿಪಿಗಳ ಆವಿಷ್ಕಾರದ ಮೂಲಕ ವೇಗದ ಮುದ್ರಣ ವಿಧಾನಗಳ ವಿನ್ಯಾಸಕ್ಕೆ ಉಪಯೋಗ ವಾಗಲಿದೆ. ಪ್ರಾಥಮಿಕ ಮಟ್ಟದಲ್ಲಿ ಭಾಷೆಯ ಶಿಕ್ಷಣವನ್ನು ಸುಧಾರಿಸುವುದಕ್ಕೂ ಕನ್ನಡವನ್ನು ಕಲಿಯುವ ವಿದೇಶಿ ವಿದ್ಯಾರ್ಥಿಗಳ ಸೌಲಭ್ಯಕ್ಕೂ ಇದು ನೆರವಾಗುತ್ತದೆ. ಆಧುನಿಕ ಕನ್ನಡ ಮತ್ತು ಹಳಗನ್ನಡಗಳ ಶಬ್ದ ಸಂಪತ್ತಿನ ತೌಲನಿಕ ಅಧ್ಯಯನಕ್ಕೂ ಭಾಷೆ ಮತ್ತು ಸಂಸ್ಕೃತಿಗಳ ಸಾಮಾನ್ಯ ಚರಿತ್ರೆಯ ಅಭ್ಯಾಸಕ್ಕೂ ಸಹಾಯಕವಾಗಬಹುದಾದ ಈ ಗ್ರಂಥ ಕನ್ನಡ ಭಾಷಾವಿಜ್ಞಾನದ ಬೆಳವಣಿಗೆಯಲ್ಲಿ ಒಂದು ಪ್ರಮುಖ ಹೆಜ್ಜೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೀ.ನಂ.ಶ್ರೀ. ಪ್ರಾಧ್ಯಾಪಕರಾಗಿದ್ದಾಗ ಅವರ ಮಾರ್ಗದರ್ಶದಲ್ಲಿ ಸಿದ್ಧವಾಗಿ ಹೊರಬಂದ ಇನ್ನೆರಡು ಮಹತ್ವದ ಕನ್ನಡ ಪುಸ್ತಕಗಳನ್ನು

ಇಲ್ಲಿ ನೆನೆಯಬಹುದು. ಒಂದು, ಶ್ರೀ.ಎಸ್. ಅನಂತನಾರಾಯಣ ಅವರು ಬರೆದ 'ಹೊಸಗನ್ನಡ ಸಾಹಿತ್ಯದ ಮೇಲೆ ಪಾಶ್ಚಾತ್ಯ ಕಾವ್ಯದ ಪ್ರಭಾವ'. ಎರಡನೆಯದು, ಡಾ॥ಎಂ.ಚಿದಾನಂದ ಮೂರ್ತಿಯವರು ಬರೆದ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'. ಈ ಎರಡೂ ಕೃತಿಗಳು ತೀ.ನಂ.ಶ್ರೀಯವರ ಮಾರ್ಗದರ್ಶನದಲ್ಲಿ ರಚಿತವಾದ ಸಂಶೋಧನ ನಿಬಂಧಗಳು. ಮೊದಲನೆಯ ಪುಸ್ತಕದ ಲೇಖಕರಿಗೆ ಪರೀಕ್ಷಕರೊಬ್ಬರ ವೈಯಕ್ತಿಕ ಮರ್ಜಿಯ ಕಾರಣವಾಗಿ* ಡಾಕ್ಟರೇಟ್ ಪದವಿ ಸಿಕ್ಕದೆ ಹೋಗಿ ಅದೇ ಒಂದು ಇತಿಹಾಸವಾಯಿತಾದರೂ, ಪುಸ್ತಕವಂತೂ ಹೊಸಗನ್ನಡ ಸಾಹಿತ್ಯದ ಅಭ್ಯಾಸಿಗಳ ನಡುವೆ ವಿಶೇಷ ಜನಪ್ರಿಯತೆಯನ್ನು ಪಡೆಯಿತು.

ಡಾ॥ಚಿದಾನಂದ ಮೂರ್ತಿಗಳ ನಿಬಂಧ ಅಂಗೀಕೃತವಾಗಿ ಅವರಿಗೆ ಡಾಕ್ಟರೇಟ್ ಪದವಿಯ ಪ್ರದಾನವಾದಂದು ತೀ.ನಂ.ಶ್ರೀ ಯವರು 'ನಾನಿನ್ನು ಬಂಜೆ ಅಲ್ಲ' ಎಂದು ಹೇಳಿದರಂತೆ. ನಿಬಂಧ ಗ್ರಂಥರೂಪದಲ್ಲಿ ಅಚ್ಚಾಗಿ ಬಂದಾಗ ಅದನ್ನು ಓದಿದ ಪ್ರೊ॥ ಡಿ.ಎಲ್. ನರಸಿಂಹಾಚಾರ್ ಅವರು ಡಾ॥ಮೂರ್ತಿಯವರನ್ನು ಆಲಿಂಗಿಸಿ 'ಪಿಎಚ್.ಡಿ. ನಿಬಂಧವೆಂದರೆ ಹೀಗಿರಬೇಕು' ಎಂದು ಹರ್ಷವನ್ನು ವ್ಯಕ್ತಪಡಿಸಿದರಂತೆ. ಇಂತಹ ಕೆಲವು ಮಹತ್ವದ ಕೃತಿಗಳಿಗೆ ತೀ.ನಂ.ಶ್ರೀ. ಯವರು ಪ್ರೇರಕ ಶಕ್ತಿಯಾಗಿದ್ದರೆಂಬುದು ಸಾಮಾನ್ಯ ಸಂಗತಿಯಲ್ಲ.

ಅವರು ಮೈಸೂರು ಸಂವಿಧಾನ ಪರಿಷತ್ತಿನಲ್ಲಿ ಭಾಷಾಂತರಕಾರರಾಗಿ ಕೆಲಸ ಮಾಡಿದಾಗ ಕನ್ನಡವನ್ನು ಆಡಳಿತ ಭಾಷೆಯಾಗಿ ಅಣಿಗೊಳಿಸುವ ಸಾಹಸಕ್ಕೆ ಸಾಕಷ್ಟು ಅಮೂಲ್ಯವಾದ ಕೊಡುಗೆಗಳನ್ನು ಕೊಟ್ಟಿರಬೇಕು. ೧೯೪೯ರಲ್ಲಿ ಭಾರತದ ಸಂವಿಧಾನ ಪರಿಷತ್ತಿನ ಅಧ್ಯಕ್ಷರು ಕರೆದಿದ್ದ ಭಾಷಾ ವಿಜ್ಞಾನಿಗಳ ಸಭೆಯ ಪ್ರತಿನಿಧಿಯಾಗಿ ಇವರು ಭಾರತ ದೇಶದ ಮುಖ್ಯಸ್ಥರಿಗೆ ಸೂಚಿಸಿದ 'ರಾಷ್ಟ್ರಪತಿ' ಎಂಬ ಹೆಸರು ಅಂಗೀಕೃತವಾಯಿತು.** ೧೯೫೭ರಲ್ಲಿ ದೆಹಲಿಯಲ್ಲಿ ನಡೆದ ಪ್ರಾಚ್ಯ ವಿದ್ವತ್ ಸಮ್ಮೇಳನದ ದ್ರಾವಿಡ ಸಂಸ್ಕೃತಿ ಗೋಷ್ಠಿಯ ಅಧ್ಯಕ್ಷರಾಗಿ, ಗದಗಿನಲ್ಲಿ ನಡೆದ ನಲವತ್ಮೂರನೆಯ ಸಾಹಿತ್ಯ ಸಮ್ಮೇಳನದ ಭಾಷಾಬಾಂಧವ್ಯ ಗೋಷ್ಠಿಯ ಅಧ್ಯಕ್ಷರಾಗಿ, ೧೯೫೮ರಲ್ಲಿ ಮೈಸೂರಿನಲ್ಲಿ ನಡೆದ ಭಾಷಾಶಾಸ್ತ್ರದ ಬೇಸಗೆ ಶಾಲೆಯ ಸ್ಥಳೀಯ ನಿರ್ದೇಶಕರಾಗಿ, ೧೯೬೦ರಲ್ಲಿ ಅಖಿಲ ಭಾರತ ಭಾಷಾ ವಿಜ್ಞಾನಿಗಳ ಸಂಘದ ಅಧ್ಯಕ್ಷರಾಗಿ – ಅವರು ಭಾಷಾ ಶಾಸ್ತ್ರದ ಅಧ್ಯಯನ ಮತ್ತು ಬೆಳವಣಿಗೆಗೆ ಚಾಲನೆಯನ್ನು ಕೊಟ್ಟರು. ೧೯೬೫ರಲ್ಲಿ ದೆಹಲಿ ವಿಶ್ವವಿದ್ಯಾನಿಲಯದ ಭಾಷಾ ಶಾಸ್ತ್ರದ ಪ್ರಾಧ್ಯಾಪಕ ಸ್ಥಾನಕ್ಕೆ ಅವರಿಗೆ ಬಂದ ಆಹ್ವಾನ ಅವರ ವಿದ್ವತ್ತಿಗೆ ಸಂದ ಪುರಸ್ಕಾರವಾದರೂ ಅವರು ಅದನ್ನು ನಿರಾಕರಿಸಿದುದು ಕನ್ನಡಕ್ಕಾಗಿ ಅವರು ಮಾಡಬೇಕಾಗಿದ್ದ ಕೆಲಸಕ್ಕೆ ಕೊಟ್ಟ ಆದ್ಯತೆಯೇ ಸರಿ.

---

* ಈ ಪರೀಕ್ಷಕರು ಬೇರಾರೂ ಆಗಿರದೆ ದಿ. ಡಾ॥ ಕೆ.ವಿ.ಪುಟ್ಟಪ್ಪನವರು ಎಂದು ತಿಳಿದು ಬಂದಿತ್ತು.

** 'ಆಕಾಶವಾಣಿ' ಎಂಬ ಪದ ಕೂಡ ಕನ್ನಡಿಗರೊಬ್ಬರು ಸೂಚಿಸಿ ಕೇಂದ್ರ ಸರ್ಕಾರದಿಂದ ಅಂಗೀಕೃತ ವಾಯಿತು ಎಂಬುದು ಕುತೂಹಲದ ಸಂಗತಿ. ಇದನ್ನು ಸೂಚಿಸಿದವರು ದಿ.ನಾ. ಕಸ್ತೂರಿಯವರು. ಇದನ್ನು ನಮಗೆ ತಿಳಿಸಿದವರು ತೀ.ನಂ.ಶ್ರೀಯವರು. ಈಗ ಚಾಲತಿಗೆ ಬಂದಿರುವ 'ಶಿಶುವಿಹಾರ' ಎಂಬ ಪದವನ್ನು ಕೂಡ ಕಸ್ತೂರಿಯವರು ಸೂಚಿಸಿದ್ದರು. ಇಂಥ ಮಾತುಗಳ ಪ್ರಯೋಗದಲ್ಲಿ ಕಸ್ತೂರಿಯವರು ಜಾಣರೆಂದು ತೀ.ನಂ.ಶ್ರೀ. ಹೇಳುತ್ತಿದ್ದರು.

ಭಾಷೆಗಾಗಿ ಭಾಷಾಶಾಸ್ತ್ರಕ್ಕಾಗಿ ಅವರು ಮಾಡಿದ ದುಡಿಮೆಯನ್ನು ಕನ್ನಡದ ನಿಘಂಟಿಗಾಗಿ ಅವರು ಪಟ್ಟ ಪರಿಶ್ರಮದಿಂದ ಪ್ರತ್ಯೇಕಿಸುವಂತಿಲ್ಲ. ತಮ್ಮ ಕೊನೆಯ ವರ್ಷಗಳ ಬಹುಮಟ್ಟಿನ ಸಮಯವನ್ನು ಅವರು ನಿಘಂಟು ರಚನೆಯ ಸಿದ್ಧತೆಗಾಗಿ ಮೀಸಲಿರಿಸಿದರು. ಕನ್ನಡ ಭಾಷಾ ಶಾಸ್ತ್ರದ ಪರಿಭಾಷೆ, ನಿರೂಪಣಾ ವಿಧಾನಗಳಿಗೆ ಹೇಗೊ ಹಾಗೆಯೇ ನಿಘಂಟಿನ ರಚನಾ ವಿಧಾನ, ಅರ್ಥ ವಿವರಣೆ ಮತ್ತು ವಿವರಣ ಚಿಹ್ನೆಗಳು– ಇವುಗಳಿಗೆಲ್ಲ ತೀ.ನಂ.ಶ್ರೀ. ಯವರ ವಿದ್ವತ್ತು ವಿಪುಲವಾದ ಕೊಡುಗೆಯನ್ನು ಕೊಟ್ಟಿದೆ. ಭಾಷಾಶಾಸ್ತ್ರಕ್ಕೆ ಅವರು ತಮ್ಮನ್ನು ಎಷ್ಟೊಂದು ಅರ್ಪಿಸಿಕೊಂಡಿದ್ದರು ಎಂದರೆ, ಕಾವ್ಯಲಕ್ಷಣದ ಪ್ರಸ್ತಾಪದ ಸಂದರ್ಭದಲ್ಲಿ 'Language is poetry' ಎಂದು ಹೇಳುವುದಾದರೆ ಅದಕ್ಕೆ ಅನುವಾಕ್ಯವಾಗಿ 'Linguistics is poetics' ಎಂದು ಹೇಳಬಹುದು ಎನ್ನುತ್ತಿದ್ದರು.

ಮೂರನೆಯದು–ಅವರು ಪ್ರಾಧ್ಯಾಪಕರಾಗಿ, ಭಾಷಣಕಾರರಾಗಿ ಸಂಪಾದಿಸಿದ್ದ ಜನಾನುರಾಗ. ಜನಪ್ರಿಯತೆಗೆ ಸುಲಭವಾಗಿ ಅಂಟುವ ಪೊಳ್ಳುತನಕ್ಕೆ ಅವಕಾಶ ಮಾಡಿಕೊಡದೆ ಖ್ಯಾತರಾಗಿದ್ದವರು ಅವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವರು ಪ್ರಾಧ್ಯಾಪಕರಾಗಿದ್ದಾಗ ಛಂದಸ್ಸು, ಕಾವ್ಯಮೀಮಾಂಸೆ ಮತ್ತು ಭಾಷಾ ಶಾಸ್ತ್ರ– ಮೂರನ್ನೂ ಅವರ ಬಾಯಲ್ಲಿಯೇ ಕೇಳಬೇಕು ಎಂದು ವಿದ್ಯಾರ್ಥಿಗಳು ಆಸೆಪಡುವಂಥ ಸ್ಥಿತಿ ಇತ್ತು. ಮೂರು ವಿಷಯಗಳಲ್ಲೂ ಅವರ ವಿದ್ವತ್ತು ಅದ್ವಿತೀಯವಾಗಿತ್ತು. ಅವರ ಬೋಧನ ಕಲೆಯೂ ಇದಕ್ಕೆ ಕಾರಣವಾಗಿತ್ತು.

ಅವರ ಭಾಷಣಗಳ ಸೊಗಸನ್ನು ಅವರನ್ನು ಕಂಡವರೇ ಬಲ್ಲರು. ವಿಜಾಪುರದಲ್ಲಿ ಎರಡುಸಾವಿರ ಜನ ಕಿಕ್ಕಿರಿದಿದ್ದ ಸಭೆಯೊಂದರಲ್ಲಿ ಅವರು ಕನ್ನಡದ ಕವಿಯೊಬ್ಬನನ್ನು ಕುರಿತು ಮಾತನಾಡುತ್ತಿದ್ದಾಗ ಇದ್ದಕ್ಕಿದ್ದಂತೆ ವಿದ್ಯುಚ್ಛಕ್ತಿ ಕಡಿದು ಹೋಗಲು ಶ್ರೋತೃಗಳು ಒಟ್ಟಿಗೇ ಬಿಟ್ಟ ನಿಟ್ಟುಸಿರು ಧ್ವನಿವರ್ಧಕವಿಲ್ಲದೆಯೂ ಎಲ್ಲರಿಗೆ ಕೇಳಿಸಿತು. ಒಂದು ಸಲ ಅಣ್ಣಿಗೇರಿಯ ನದೀತೀರದಲ್ಲಿ ಪುರಂದರದಾಸರ ಜಯಂತಿ ನಡೆದಿತ್ತು. ರಾತ್ರಿ ಒಂಬತ್ತು ಗಂಟೆಯಿಂದ ಬೆಳಗಿನ ಜಾವ ಮೂರು ಗಂಟೆಯವರೆಗಿನ ಸಮಾರಂಭದಲ್ಲಿ ಮಲ್ಲಿಕಾರ್ಜುನ ಮನಸೂರ್ ಅವರ ಗಾಯನ ಕಛೇರಿ; ನಡುವೆ ತೀ.ನಂ.ಶ್ರೀಯವರ ಭಾಷಣದ ಏರ್ಪಾಡು. ಇವರ ಭಾಷಣವನ್ನು ಕೇಳಿದ ನಂತರ ತೀ.ನಂ.ಶ್ರೀಯವರ ಮಾತುಗಳಿಗೆ ಮಾರುಹೋದ ಮನಸೂರರು ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದು 'ನುಡಿದರೆ ಮುತ್ತಿನ ಹಾರದಂತಿರಬೇಕು.....' ಎಂಬ ವಚನವನ್ನು ಹಾಡಿ! ೧೯೫೭ರಲ್ಲಿ ಮಹಾರಾಜ ಕಾಲೇಜಿನ ಇಂಗ್ಲಿಷ್ ಸಾಹಿತ್ಯಸಂಘದ ಆಶ್ರಯದಲ್ಲಿ 'The Poetic World' ಎಂಬ ವಿಷಯವನ್ನು ಕುರಿತ ಅವರ ಇಂಗ್ಲಿಷ್ ಭಾಷಣವನ್ನು ಕೇಳಿ ಶ್ರೋತೃಗಳು ಕನ್ನಡ ಅಧ್ಯಾಪಕರನ್ನೂ, ವಿದ್ಯಾರ್ಥಿಗಳನ್ನೂ ಸುತ್ತುವರಿದು 'ನೀವು ಎಷ್ಟು ಅದೃಷ್ಟವಂತರು' ಎಂದು ಅಭಿನಂದಿಸಿದರು. ೧೯೫೮ರ ಒಂದು ದಿನ ಮಹಾರಾಜ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ 'ಕನ್ನಡದ ಅಭ್ಯಾಸ' ಎಂಬ ವಿಷಯವನ್ನು ಕುರಿತು ಅವರು ಮಾತನಾಡಿದಾಗ ಅಧ್ಯಕ್ಷತೆ ವಹಿಸಿದ್ದ ಪ್ರೊ॥ಡಿ.ಎಲ್. ನರಸಿಂಹಾಚಾರ್ ಅವರು ಗದ್ಗದಿತರಾಗಿ 'ಶ್ರೀಕಂಠಯ್ಯನವರು ಈ ಭಾಷಣವನ್ನು ಕರ್ನಾಟಕದ ಮೂಲೆಮೂಲೆಯಲ್ಲೂ ಮಾಡಬೇಕು' ಎಂದು ಹೇಳಿದರು.

ತೀ.ನಂ.ಶ್ರೀಯವರ ವಿದ್ವತ್ತು, ಬಹುಶ್ರುತತ್ವಗಳನ್ನು ಬಲ್ಲವರೆಲ್ಲರೂ ಅವರು ಹೆಚ್ಚು ಬರೆಯದೆ ಇದ್ದುದಕ್ಕೆ ವಿಷಾದಿಸುವವರೇ. ಆಗಿನ ಅಧ್ಯಾಪಕರಲ್ಲಿ ಬಹು ಜನರ ಪ್ರತಿಭೆ ಬರೆವಣಿಗೆಯಲ್ಲಿ ಹೊರ ಹೊಮ್ಮದೆ ಇದ್ದುದಕ್ಕೆ ಅಧೈರ್ಯ ಅಥವಾ ಆತ್ಮವಿಶ್ವಾಸದ ಅಭಾವ ಕಾರಣವಿರಬಹುದೇ ಎಂದು ಪ್ರೊ॥ ಮೂರ್ತಿರಾಯರು ಶಂಕೆಪಡುತ್ತಾರೆ. ತೀ.ನಂ.ಶ್ರೀಯವರಲ್ಲಿ ಕ್ರಮಶ್ರದ್ಧೆ ಕರ್ಮಶ್ರದ್ಧೆಗಳ ನಡುವೆ ಹೋರಾಟ ನಡೆದು ಕ್ರಮಶ್ರದ್ಧೆಯ ಕೈ ಸ್ವಲ್ಪ ಮೇಲಾಯಿತೇನೊ ಎಂದು ಅನುಮಾನ ಪಡುತ್ತಾರೆ. 'ಕಿಂ ಪಾಂಡಿತ್ಯಂ? ಪರಿಚ್ಛೇದಃ' ಎಂಬ ಸಂಸ್ಕೃತದ ಹೇಳಿಕೆಯನ್ನು ತೀ.ನಂ.ಶ್ರೀ. ಯವರು ಮತ್ತೆ ಮತ್ತೆ ನೆನಪಿಸುತ್ತಿದ್ದರು. ಪರಚ್ಛೇದ, ನಿಷ್ಕೃಷ್ಟತೆಗಳ ಶೋಧನೆಯಲ್ಲಿ ಸಂಶಯ ನಿವಾರಣೆಗಾಗಿ ಅವರು ಹಲವು ವರ್ಷಗಳವರೆಗೆ ಕಾಯ್ದದ್ದುಂಟು.

ತರಗತಿಗಳಿಗೆ ಸಿದ್ಧತೆಯಿಲ್ಲದೆ ಅವರು ಸಾಮಾನ್ಯವಾಗಿ ಹೋಗುತ್ತಿರಲಿಲ್ಲ. ಸಾರ್ವಜನಿಕ ಭಾಷಣಗಳಿಗೆ ತಯಾರಾಗದೆ ಹೋಗುವುದು ಶ್ರೋತೃಗಳಿಗೆ ಮಾಡಿದ ಅವಮಾನ ಎಂಬ ನಿಷ್ಠುರತೆ ಅವರದು. ಮನೆಯಲ್ಲಿದ್ದೂ ಇಲ್ಲಾ ಎನಿಸಿಕೊಳ್ಳುವ ಅಸೌಜನ್ಯ, ಅಸಾಮಾಜಿಕ ನಡವಳಿಕೆ ಅವರಲ್ಲಿ ಇರಲಿಲ್ಲ. ನಿರಂತರ ಓದು, ಸಹೃದಯ ಗೋಷ್ಠಿ, ನಡುನಡುವೆ ಒಪ್ಪಿಕೊಳ್ಳ ಬೇಕಾಗುತ್ತಿದ್ದ ಉಪನ್ಯಾಸ ಕಾರ್ಯಕ್ರಮಗಳು, ಅಧ್ಯಾಪಕ ವೃತ್ತಿಯಲ್ಲಿ ಅವರಿಗಿದ್ದ ಗೌರವಾದರ– ಇವೆಲ್ಲ ಸೇರಿ ಅವರು ಹೆಚ್ಚು ಬರೆಯದಂತಾಗಿರಬೇಕು. ಸಾರ್ವಜನಿಕ ಭಾಷಣ ಮತ್ತು ತರಗತಿಯ ಪಾಠಗಳಲ್ಲಿ ಅವರ ಅಭಿಪ್ರಾಯ, ಆಲೋಚನೆಗಳು ಅಭಿವ್ಯಕ್ತಿಪಡೆದು ಆ ಮೂಲಕವೂ ಅವರಿಗೆ ತೃಪ್ತಿ ಸಿಗುತ್ತಿದ್ದಿರಬಹುದು ಎಂದು ಅವರ ಮಗ ಪ್ರೊ॥ ತೀ.ಶ್ರೀ.ನಾಗಭೂಷಣ ಭಾವಿಸುತ್ತಾರೆ.

("ತೀ.ನಂ. ಶ್ರೀಕಂಠಯ್ಯ" : ೨೦೦೪)

ತೀ.ನಂ.ಶ್ರೀ. ಅವರ ಪಾಂಡಿತ್ಯದ ಕೆಲವು ಗುಣಲಕ್ಷಣಗಳು

ಟಿ.ವಿ.ವೆಂಕಟಾಚಲ ಶಾಸ್ತ್ರೀ

೧. ತೀ.ನಂ.ಶ್ರೀ. ಅವರದು ಸುಸಂಸ್ಕೃತವಾದ ಚೇತನ ; ರಸಾರ್ದ್ರವಾದ ಹೃದಯಗುಣ; ಪ್ರಖರವಾದ ಬುದ್ಧಿಮತ್ತೆ; ವ್ಯಾಪಕವಾದ ವ್ಯಾಸಂಗ; ಸಹಾನುಭೂತಿಪರವಾದ ವಿಮರ್ಶೆ; ತಲಸ್ಪರ್ಶಿಯಾದ ಶೋಧಕತ್ವ

೨. ಶಾಸ್ತ್ರಪ್ರಾಮಾಣ್ಯ, ತರ್ಕಬದ್ಧತೆ, ಭಾಷಾಪರಿಷ್ಕಾರ, ಹಿತಮಿತ ವಾಕ್ಯವಿನ್ಯಾಸ, ಸರಸತೆ ಮತ್ತು ಸೌಲಭ್ಯ ಇವು ಅವರ ಪ್ರಬಂಧಗಳ ಲಕ್ಷಣ.

೩. ತಮ್ಮ ಪ್ರಬಂಧಗಳನ್ನು ಹೊಸ ಶೋಧಗಳಿಗೆ ಅನುಗುಣವಾಗಿ ಕಾಲದಿಂದ ಕಾಲಕ್ಕೆ ಆಗಾಗ ಪರಿಷ್ಕರಿಸುವುದಕ್ಕೆ ಅವರು ಆಲಸ್ಯಪಡುವುದಿಲ್ಲ. ಆ ಪರಿಷ್ಕರಣವನ್ನು ತಮ್ಮ ಮೊದಲ ಬರಹದಲ್ಲಿ ಬೆರಸದೆ ಪ್ರತ್ಯೇಕವಾಗಿ ತೋರಿಸಿ ತಮ್ಮ ವಿಚಾರ ವಿಶ್ಲೇಷಣೆಗಳಲ್ಲಿ ಆಗಿರುವ ಮಾರ್ಪಾಡುಗಳು ಐತಿಹಾಸಿಕವಾಗಿ ಸ್ಪಷ್ಟಪಡುವಂತೆ ಮಾಡುತ್ತಾರೆ.

೪. ಹೆಚ್ಚಿನ ವಿಷಯಗಳು ತಿಳಿದುಬಂದಾಗ ಪರಿಷ್ಕರಣದ ವೇಳೆ ಅನುಬಂಧಗಳನ್ನು ಸೇರಿಸುತ್ತಾರೆ, ಪರಿಶಿಷ್ಟಗಳನ್ನು ಕೊಡುತ್ತಾರೆ.

೫. ಬೇರೆಯ ವಿದ್ವಾಂಸರ – ಅವರು ಹಿರಿಯರಿರಲಿ, ಕಿರಿಯರಿರಲಿ – ನಿಸ್ಸಂಕೋಚವಾಗಿ ಉದ್ಧರಿಸುತ್ತಾರೆ, ವಿನಯದಿಂದ ಭಿನ್ನಾಭಿಪ್ರಾಯಗಳನ್ನು ಚರ್ಚಿಸುತ್ತಾರೆ.

೬. ಒಂದು ವಿಷಯದ ಚರ್ಚೆಯಲ್ಲಿ ಎಲ್ಲ ಸೂಕ್ಷ್ಮ ವಿವರಗಳನ್ನೂ ಗಮನಿಸುತ್ತಾರೆ; ಅವನ್ನು ಶ್ರದ್ಧೆಯಿಂದ ಗುರುತಿಸುತ್ತಾರೆ. ಯಾವುದನ್ನೂ ಉದಾಸೀನದಿಂದ ತಳ್ಳಿಹಾಕುವುದಿಲ್ಲ. ಸಮಗ್ರತೆ ಸಮೀಚೀನತೆ ಅವರ ಅಪೇಕ್ಷೆ. ಬರೆವಣಿಗೆ ಕರೆಮರೆಗಳಿಲ್ಲದೆ ಪರಿಶುದ್ಧವಾಗಿಯೂ ಪರಿಷ್ಕೃತವಾಗಿಯೂ ಇದ್ದು ಅದು ಒಂದು ಕಲಾಕೃತಿಯಂತೆ ರೂಪಗೊಳ್ಳುವ ಹಾಗೆ ಮಾಡುತ್ತಾರೆ.

೭. ವಿವೇಚನೆಗೆ, ಶೋಧನೆಗೆ ವಿಸ್ತಾರವಾದ ವಿವರಣೆಯನ್ನು ಕೇಳುವ ವಸ್ತುವನ್ನು ಅವರು ಸಾಮಾನ್ಯವಾಗಿ ಆಯ್ದುಕೊಳ್ಳುವುದಿಲ್ಲ. ಅವರ ಮನೋಧರ್ಮಕ್ಕೆ ಅದು ಒಗ್ಗುವಂತೆ ತೋರದು. ವ್ಯಾಪ್ತಿ ಕಿರಿದಾದ ಸಮಸ್ಯೆಗಳನ್ನು ಆಯ್ದುಕೊಂಡು, ಅವನ್ನು ಎಲ್ಲ

ಮಗ್ಗುಲುಗಳಿಂದಲೂ ನೋಡಿ, ವಿವರ ವಿಶದವಾಗಿ ಚರ್ಚಿಸಿ, ಪರಿಹಾರದ ನೆಲೆಗೆ ಅವನ್ನು ಮುಟ್ಟಿಸುತ್ತಾರೆ.

೮. ಅವರ ಹೆಚ್ಚಿನ ಬರೆವಣಿಗೆ ಸ್ವಯಂಸ್ಫೂರ್ತಿಯಿಂದ ಸಿದ್ಧವಾದುದಲ್ಲ; ಅವರೇ ಹೇಳುವ ಹಾಗೆ "ಬಲುಮಟ್ಟಿಗೆ ಸಂಪಾದಕಮಿತ್ರರ ಒತ್ತಾಯಕ್ಕೆ ಕಟ್ಟುಬಿದ್ದು ವಿಮರ್ಶೆ, ಪ್ರಸ್ತಾವನೆ, ಸಂಶೋಧನಲೇಖನ ಮೊದಲಾದುವನ್ನು ಆಗಾಗ ಬರೆಯಬೇಕಾಯಿತು."

೯. ಅವರ ಎಲ್ಲ ಬರೆಹಗಳಲ್ಲಿಯೂ ಸೃಜನಶೀಲತೆ–ವಿದ್ವತ್ತು, ರಸಿಕತೆ–ಪಾಂಡಿತ್ಯ ಕೈಕೈಹಿಡಿದು ಸಾಗುತ್ತವೆ. ಅವರದು ಸೃಜನಶೀಲ ಪಾಂಡಿತ್ಯ (Creative-scholarship). ಅವರ ಬರೆಹಗಳನ್ನು ಓದುವಾಗ ವಿಷಯದ ತಿಳಿವಳಿಕೆಯೂ ವಾಚನದ ಸೌಖ್ಯವೂ ಏಕಕಾಲ ದಲ್ಲಿ ದೊರೆಯುತ್ತವೆ.

೧೦. ವಿಷಯಗಳನ್ನು ಕಣಕಣವಾಗಿ ಕೂಡಿಸುವಲ್ಲಿ ಅವರು ತೋರಿಸುವ ಶ್ರದ್ಧೆ, ಶ್ರಮ ಮತ್ತು ವಿಚಕ್ಷಣೆಗಳು ಅನನ್ಯವಾದವು. ಕೂಡಿಸಿದ ವಿಷಯಗಳನ್ನು ಕುಶಲರೀತಿಯಿಂದ ಸಂಯೋಜಿಸುವಲ್ಲಿ ಅವರು ಪ್ರಕಟಿಸುವ ಪ್ರತಿಭೆ ಅಸಾಧಾರಣವಾದುದು. ಉದಾಹರಣೆ ಗಳ ಬಲವಿಲ್ಲದೆ ಅವರು ಸೈದ್ಧಾಂತಿಕವಾಗಿ ಏನನ್ನೂ ಹೇಳಲು ಹೋಗುವುದಿಲ್ಲ.

೧೧. ವಿಷಯವಿವೇಚನೆ ಸಾರಗ್ರಾಹಿಯಾದುದು; ಸಂಕ್ಷಿಪ್ತವಾದುದು; ಸೂತ್ರಪ್ರಾಯವಾದುದು. ಯಾವುದೇ ವಿಷಯವನ್ನು ಅನಾವಶ್ಯಕವಾಗಿ ದೀರ್ಘವೂ ವಿಷಯೇತರವೂ ಆದ ವಿವರಣೆ ಚರ್ಚೆ ಪೀಠಿಕೆಗಳಿಂದ ತುಂಬಿ ದಾರಿ ತಪ್ಪುವಂತೆ ಮಾಡುವುದಿಲ್ಲ. ಉದ್ದೇಶಿತ ವಿಷಯಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಸಂಗತಿಗಳಿಗೆ ಪ್ರವೇಶ ಕೊಡುವುದಲ್ಲದೆ ತಿದ್ದಿ ತೀಡಿದಂತಹ ಭಾಷೆಯಲ್ಲಿ ಸರಸವಾಗಿ, ಸರಳವಾಗಿ, ಸುಲಭವಾಗಿ ಅವನ್ನು ನಿರೂಪಿಸುತ್ತಾರೆ.

೧೨. ಅವರ ಶೈಲಿ ಪ್ರೌಢ ಸಂಸ್ಕೃತ ಶಬ್ದಗಳ ಉಬ್ಬರವಿಲ್ಲದೆ, ಅಚ್ಚದೇಸಿಯ ಮಾತುಗಾರಿಕೆಯ ನಚ್ಚು ಇಲ್ಲದೆ, ಸಂಸ್ಕೃತ ಕನ್ನಡಗಳ ಸುಪರಿಚಿತ ಶಬ್ದಗಳಿಂದ ಕೂಡಿ ಸಹಜವಾಗಿ, ಲಲಿತವಾಗಿ ಸಾಗುವ ವ್ಯಾಕರಣನಿಷ್ಠವಾದ ಹೊಸಗನ್ನಡ ಶೈಲಿ.

*

೧. "ಪಾಂಡಿತ್ಯವೆನ್ನುವುದು ಕೇವಲ ಸಮಯಸ್ಫೂರ್ತಿಯಿಂದ ಮಿಂಚುವ ವಸ್ತುವಲ್ಲ; ನಿರಂತರವಾದ ವ್ಯಾಸಂಗವೇ ಅದನ್ನು ಸಾಧಿಸುವ ರಾಜಮಾರ್ಗ. ಕಣಕಣವಾಗಿ ವಿಷಯಸಂಗ್ರಹಮಾಡಿ, ಸಂಶೋಧನೆಮಾಡಿ, ತನ್ನ ಕಣಜವನ್ನು ತುಂಬಿಕೊಳ್ಳಬೇಕು. ಈ ತುಣುಕುಗಳು ಎಲ್ಲಿ ದೊರೆಯುತ್ತವೆ? ಯಾವ ನಿಘಂಟಿನಲ್ಲಿ, ಯಾವ ಓಲೆಯ ಗರಿಯ ಪ್ರತಿಯಲ್ಲಿ, ಯಾವ ಶಾಸನದಲ್ಲಿ, ಯಾವ ಶಾಸ್ತ್ರಗ್ರಂಥದಲ್ಲಿ, ಯಾವ ಭಾಷೆಯ ಯಾವ ಸಂಶೋಧನಪತ್ರಿಕೆಯಲ್ಲಿ, ಯಾವ ಪ್ರದೇಶದ ಮನೆಮಾತಿನಲ್ಲಿ ಎಂದು ಕಣ್ಣು ಕಿವಿಗಳನ್ನು ತೆರೆದುಕೊಂಡೇ ಗಮನವಿಡಬೇಕು."

೨. "ಪಾಂಡಿತ್ಯವೆಂದರೆ ಕೇವಲ ವಿಷಯರಾಶಿಯ ಸಂಗ್ರಹವಲ್ಲ. ಆ ರಾಶಿ ಬೇಕೇ ಬೇಕು. ಆದರೆ ಅಷ್ಟೇ ಸಾಲದು. ಆ ವಿವಿಧ ವಿಷಯಗಳಲ್ಲಿ ಮರೆಯಾಗಿರುವ ಸಂಬಂಧಗಳನ್ನು ಊಹಿಸಿ, ಗ್ರಹಿಸಿ, ಎಳೆಗಳ ತೊಡಕುಗಳನ್ನು ಬಿಡಿಸಿ, ಕೂಡಿಸಿ, ತತ್ತ್ವವನ್ನು ಬೆಳಗುವ ಸಂಯೋಜಕ ಪ್ರತಿಭೆಯೂ ಜೊತೆಗೆ ಅವಶ್ಯವಾಗಿ ಬೇಕು."

ಪಾಂಡಿತ್ಯದ ಈ ಪ್ರಸ್ತಾವವನ್ನು ತೀ.ನಂ.ಶ್ರೀಕಂಠಯ್ಯನವರು ಡಿ.ಎಲ್.ನರಸಿಂಹಾಚಾರ್ಯರ ಬಗೆಗೆ ಮಾತಾಡುತ್ತ ಮಾಡಿದ್ದಾಗಿದೆ. ಭಾಷೆಯ ರಹಸ್ಯ, ಸಾಹಿತ್ಯದ ಸ್ವಾರಸ್ಯ ಎರಡನ್ನೂ ಏಕರೀತಿಯ ಉತ್ಸಾಹದಿಂದ ಮನಮುಟ್ಟಿಸಬಲ್ಲ 'ಸವ್ಯಸಾಚಿಗಳು' ಈ ಇಬ್ಬರೂ. ಇಬ್ಬರದೂ ಘನವಾದ ಪಾಂಡಿತ್ಯ, ಅಪಾರವಾದ ಪರಿಶ್ರಮ. ಆದರ ಡಿ.ಎಲ್.ಎನ್. ಅವರಿಗೆ ಬರೆವಣಿಗೆಯಲ್ಲಿ ಇದ್ದ ಉತ್ಸುಕತೆ, ಧೈರ್ಯ, ವೇಗ ಅದೇ ಪ್ರಮಾಣದಲ್ಲಿ ತೀ.ನಂ.ಶ್ರೀ. ಅವರಲ್ಲಿ ಇರಲಿಲ್ಲ; ಅವರದು ಹಿಂಜರಿಕೆ, ಅಧೈರ್ಯ, ನಿಧಾನಗತಿ. ಡಿ.ಎಲ್.ಎನ್. ತಮ್ಮ ಬರೆಹವನ್ನು ಒಂದೇ ಸಲ ಬರೆದು ಪೂರೈಸುತ್ತಿದ್ದರು. ಬರೆಯುತ್ತಿದ್ದುದು ಒಂದೇ ಪ್ರತಿ. ತೀ.ನಂ.ಶ್ರೀ ಬರೆಹವನ್ನು ಒಂದಕ್ಕಿಂತ ಹೆಚ್ಚು ಸಲ ಬರೆದು, ತಿದ್ದಿ, ತೀಡಿ ಅಂತಿಮಪ್ರತಿಯನ್ನು ಸಿದ್ಧಪಡಿಸುತ್ತಿದ್ದರು. ಪಾಂಡಿತ್ಯದ ಪ್ರಮುಖ ಗುಣಲಕ್ಷಣಗಳು ಇಬ್ಬರಲ್ಲಿಯೂ ಸಮಾನವಾಗಿದ್ದರೂ, ಬರೆವಣಿಗೆಗೆ ಇಬ್ಬರೂ ಅನುಸರಿಸುತ್ತಿದ್ದ ವಿಧಾನಗಳ ಭೇದದಿಂದಾಗಿ ತೀ.ನಂ.ಶ್ರೀ ಅವರ ಬರೆಹದ ಭಾಷೆ ಶೈಲಿಗಳಲ್ಲಿ ವಿಶೇಷ ಪರಿಷ್ಕಾರ, ಭಾಷಾಪಾರಿಶುದ್ಧ್ಯ, ವಿವರಗಳ ಸೂಕ್ಷ್ಮತೆ, ಸಂವೇದನಶೀಲತೆ, ನಯರುಚಿ ಇವು ಪರಿಸ್ಫುಟ.

(ಮಾರ್ಗದರ್ಶಕ ಮಹನೀಯರು : ೨೦೦೨)

ಮಹಾನ್ ಗುರು

ಎಂ.ವಿ. ಶ್ರೀನಿವಾಸ ಮೂರ್ತಿ

●

ಆಚಾರ್ಯ, ಉಪಾಧ್ಯಾಯ, ಗುರು ಎಂಬ ಮಾತುಗಳಿಗೆ ನಿಘಂಟು ಮತ್ತು ನಿಘಂಟೇತರ ಸಾಹಿತ್ಯದಲ್ಲಿ ಎಷ್ಟೆಲ್ಲ ಅರ್ಥಗಳಿವೆಯೋ ಅಷ್ಟನ್ನೂ ಧ್ವನಿಸಬಲ್ಲ, ಆ ಎಲ್ಲ ಅರ್ಥಗಳಿಗೆ ಪ್ರತಿಮಾರೂಪವಾಗಿ ನಿಲ್ಲಬಲ್ಲ ಹೆಸರು ತೀ.ನಂ.ಶ್ರೀ. ನಮ್ಮ ಪಾಲಿಗೆ ತೀ.ನಂ.ಶ್ರೀ. ಒಬ್ಬ ವ್ಯಕ್ತಿಯಲ್ಲ; ಒಂದು ಮಂತ್ರ, ಒಂದು ಸಂಸ್ಥೆ, ಒಂದು ಆದರ್ಶ. ತೀ.ನಂ.ಶ್ರೀ.ಯವರ ಬದುಕನ್ನು ಕುರಿತ ಗ್ರಂಥಗಳು ಈಗಾಗಲೇ ಲಭ್ಯವಿವೆ. ನಾನು ಈಗ ನಿರೂಪಿಸ ಹೊರಟಿರುವುದು ಒಬ್ಬ ಶಿಷ್ಯ ತನ್ನ ಅತ್ಯಂತ ಮೆಚ್ಚಿನ ಮತ್ತು ಪ್ರೀತಿಯ ಗುರುವಿನ ಪಾದತಲದಲ್ಲಿ ಕುಳಿತು ಅವರ ಅಪಾರವಾದ ಮತ್ತು ಆಳವಾದ ವಿದ್ವತ್ತಿನ ರಸಪ್ರಜ್ಞೆಯಿಂದೊಡಗೂಡಿದ ಶಾಸ್ತ್ರ ಮತ್ತು ಸಾಹಿತ್ಯ ದರ್ಶನಗಳ ಅನುಭವ ವಿಶೇಷವನ್ನು. ನಾನು ಮತ್ತು ನನ್ನ ಸಹಪಾಠಿಗಳ ಪಾಲಿಗೆ ತೀ.ನಂ.ಶ್ರೀ, ಡಿ.ಎಲ್.ಎನ್ ಎಂದರೆ ಮೇರು ಮಂದಿರಗಳೆಂದೇ. ಅವರ ಬಗ್ಗೆ ನಮಗೆಲ್ಲ ಭಯಮಿಶ್ರಿತ ಗೌರವ. ಅದರಲ್ಲೂ ತೀ.ನಂ.ಶ್ರೀ. ಅವರ ವ್ಯಕ್ತಿತ್ವದ ಪ್ರಭಾವ ಮುದ್ರೆ ನಮ್ಮ ಮೇಲೆ ಅಪಾರ. ಅವರೊಬ್ಬ ಗೊಮ್ಮಟ ಸದೃಶವ್ಯಕ್ತಿ, ಆ ಪದದ ಎಲ್ಲ ಅರ್ಥಗಳಲ್ಲೂ.

ತೀನಂಶ್ರೀ ಅವರ ಬಗ್ಗೆ ನಾವೆಲ್ಲ ಓದಿ, ಕೇಳಿ, ಅವರ ಶಾಕುಂತಲ ನಾಟಕ ಪಾಠದ ರಸಾನುಭವವನ್ನು ಪಡೆದವರಿಂದ ಕೇಳಿ ತಿಳಿದು ಪುಳಕಿತಗೊಂಡು ಅಂಥ ಗುರುವರ್ಯರ ಪಾಠವನ್ನು ಕೇಳುವ ಭಾಗ್ಯ ಇನ್ನೂ ನಮ್ಮ ಪಾಲಿಗೆ ಬಂದಿಲ್ಲವಲ್ಲ ಎಂದು ಕೊರಗುತ್ತಿದ್ದ ಕಾಲ. ನಮ್ಮ ಆನರ್ಸ್ ತರಗತಿಯ ಮೊದಲವರ್ಷ, ೧೯೫೫ನೆ ಇಸವಿ. ೧೯೫೬-೫೭ನೆಯ ಶೈಕ್ಷಣಿಕವರ್ಷದಲ್ಲಿ ನಮಗೆ 'ಕಾವ್ಯಮೀಮಾಂಸೆ' ಪಾಠವನ್ನು ಮಾನ್ಯ ಶ್ರೀ ಉ..ಕಾ. ಸುಬ್ಬರಾಯಾಚಾರ್ಯರು ತೆಗೆದುಕೊಳ್ಳುತ್ತಿದ್ದರು. ಸ್ವಲ್ಪ ಕಾಲ ಪ್ರೊ. ಎಸ್.ವಿ. ಪರಮೇಶ್ವರಭಟ್ಟರೂ ತೆಗೆದುಕೊಳ್ಳುತ್ತಿದ್ದರು. ಮಹಾಕವಿ ಕುವೆಂಪು ಅವರು ನಾವು ಕಾಲೇಜು ಸೇರಿದಾಗ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕಗೊಂಡವರು, ಶೀಘ್ರದಲ್ಲೇ ಕುಲಪತಿಗಳಾಗಿ ನೇಮಕಗೊಂಡಿದ್ದರು. ಅವರ ಪಾಠವನ್ನು ಕೇಳುವ ಸುಯೋಗದಿಂದ ವಂಚಿತರಾದ ನಾವು ಜ್ಞಾನ ದಾಹದಿಂದ ಬಳಲುತ್ತಿದ್ದೆವು. ಶಬ್ದಮಣಿದರ್ಪಣ, ಭಾಷಾಚರಿತ್ರೆ, ಕಾವ್ಯಮೀಮಾಂಸೆ, ಛಂದಸ್ಸು ಮೊದಲಾದ ಶಾಸ್ತ್ರಗಳಲ್ಲಿ ತಲಸ್ಪರ್ಶಿಯಾದ ಜ್ಞಾನವನ್ನುಳ್ಳ ಮತ್ತು ನಮಗೆ ಅವನ್ನು ಕರಗತ ಮಾಡಿಕೊಡಬಲ್ಲ ಮಾರ್ಗದರ್ಶಿ ಪ್ರಾಧ್ಯಾಪಕರಿಗಾಗಿ ನಮ್ಮೆಲ್ಲರ ಹುಡುಕಾಟ, ಮಿಡುಕಾಟ

ನಡೆದೇ ಇತ್ತು. ಆಗ ನಮ್ಮೆಲ್ಲರ ಪುಣ್ಯೋದಯವಾದಂತೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಚೇರಿಯಿಂದ ಬಿಡುಗಡೆ ಹೊಂದಿ ಪ್ರಾಧ್ಯಾಪಕ ದೊ.ಲ.ನ ಅವರು ಬಂದರು. ಅನಂತರದಲ್ಲಿ ಜನವರಿ ೧೯೫೭ರಲ್ಲಿ ಧಾರವಾಡದಿಂದ ಪ್ರಾಧ್ಯಾಪಕ ತೀ.ನಂ.ಶ್ರೀ. ಯವರನ್ನು ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ಕರೆತಂದರು. ತೀ.ನಂ.ಶ್ರೀ ಅವರನ್ನು ಮಹಾರಾಜಾ ಕಾಲೇಜಿಗೆ ಬರಮಾಡಿಕೊಂಡ 'ಆದಿನ' ನಮ್ಮಲ್ಲಿ ಅನೇಕರ ನೆನಪಿನಲ್ಲಿ ಇನ್ನೂ ಹಸಿರಾಗಿದೆ. ಮಹಾರಾಜಾ ಕಾಲೇಜಿನ ಅಂಗಳದಲ್ಲಿ ಒಂದು ಹಲಗೆಯಲ್ಲಿ ದೊಡ್ಡದಾಗಿ "ಮರಳಿಮಣ್ಣಿಗೆ" ಎಂಬ ಬರಹ. ಸಂಜೆ ಜೂನಿಯರ್ ಬಿ.ಎ. ಹಾಲ್‌ನಲ್ಲಿ ಸ್ವಾಗತ ಸಮಾರಂಭ. ಆಗ ಮಹಾರಾಜಾ ಕಾಲೇಜಿನಲ್ಲಿ ಹೇಮಾ ಹೇಮಿಗಳಿದ್ದರು. ಅವರೆಲ್ಲ ಸಮಾರಂಭದಲ್ಲಿ ಹಾಜರಿದ್ದರು. ತೀನಂಶ್ರೀಯವರಿಗೆ ಅಂದು ಅದ್ದೂರಿಯ, ಮನಮುಟ್ಟುವ ಸ್ವಾಗತ. ಅಭಿಮಾನಿಗಳು, ಶಿಷ್ಯರು, ಸಹೋದ್ಯೋಗಿ ಮಿತ್ರರಿಂದ ಹೃತ್ಪೂರ್ವಕ ಸ್ವಾಗತ. ಅಂದು ಮಾತನಾಡಿದ ಪ್ರೊ. ಡಿ.ಎಲ್.ಎನ್. ಅವರು ಈ ಕನ್ನಡ ವಿಭಾಗದ ಭಾರವನ್ನು, ನೊಗವನ್ನು ಒಂಟಿತ್ತಾಗಿ ತಾನು ಹೊರಲು ಹೆಣಗಾಡುತ್ತಿದ್ದು, ಆ ನೊಗಕ್ಕೆ ಹೆಗಲು ಕೊಡಲು ಬಂದ ತೀನಂಶ್ರೀಯವರನ್ನು ಅತ್ಯಂತ ಆತ್ಮೀಯತೆಯಿಂದ ಬರಮಾಡಿಕೊಂಡರು. ಕನ್ನಡದ 'ಹಣತೆ' ಆರದಂತೆ ತಾವಿಬ್ಬರೂ ಕೈ ಜೋಡಿಸಿ ದುಡಿಯಲು ಕಂಕಣ ಬದ್ಧರೆಂದು ಪ್ರತಿಜ್ಞೆ ಮಾಡಿದರು. ಅದೊಂದು ಹೃದಯಸ್ಪರ್ಶಿ ಸಮಾರಂಭ. ಉತ್ತರವಾಗಿ ತೀನಂಶ್ರೀಯವರು ಮಾತನಾಡುತ್ತಾ ತನ್ನ ಸ್ವಸ್ಥಾನಕ್ಕೆ ತಾನು ಮರಳಿ ಬಂದದ್ದಕ್ಕೆ ಹರ್ಷವನ್ನು ವ್ಯಕ್ತಪಡಿಸುತ್ತಾ, ತಮ್ಮ ಗುರುಗಳಾದ ಬಿಎಂಶ್ರೀಯವರು ತಮಗೆ ಕೊಟ್ಟ ದೀಕ್ಷೆಯನ್ನು ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಗಳಿಂದ ನಿರ್ವಹಿಸುವುದಾಗಿ ಭರವಸೆ ನೀಡಿದರು.

ಅಲ್ಲಿಯವರೆಗೆ ನಮಗೆ ಕಾವ್ಯಮೀಮಾಂಸೆ ಪಾಠ ಮಾಡುತ್ತಿದ್ದ ಅಧ್ಯಾಪಕರು ತೀ.ನಂ.ಶ್ರೀ ಅವರು ಸುದ್ದಿಯನ್ನು ನಮಗೆ ಮೊದಲೇ ತಿಳಿಸಿದ್ದರು. ಅವರು ನಮಗೆ "ನನ್ನ ಕಾವ್ಯಮೀಮಾಂಸೆಯ ತರಗತಿ ಒಡ್ಡರ ಬಂಡಿಯಂತೆ. ನೀವು ಇನ್ನು ಮುಂದೆ ರೋಲ್ಸ್‌ರಾಯ್ಸ್ ಕಾರಿನಲ್ಲಿ ಓಡಾಡುತ್ತೀರಿ" ಎಂದರು. ಎಷ್ಟು ನಿಜ? ಅವರು ತಮಗೆ ಗುರುಗಳಾಗಿದ್ದ ಆಚಾರ್ಯ ತೀ.ನಂ.ಶ್ರೀ ಅವರ ಪಾಠವನ್ನು ಕೇಳಿದ್ದಿರಬೇಕು! ಆಗ ತೀ.ನಂ.ಶ್ರೀ ಅವರು ತೆಗೆದುಕೊಂಡ ಕಾವ್ಯಮೀಮಾಂಸೆಯ ತರಗತಿಗಳ ಪ್ರವಚನದ ಸುಖ ನಮಗೆ ಎಂ.ಎ. ತರಗತಿಗಳಲ್ಲೂ ಮುಂದುವರೆಯಿತು. ಭಾಮಹ, ದಂಡಿ, ವಾಮನ, ಕುಂತಕ, ಅಭಿನವಗುಪ್ತರ ಮೂಲ ಸಂಸ್ಕೃತ ಕೃತಿಗಳನ್ನೇ ನಮಗೆ ಧಾರೆ ಎರೆದರು. ಜೊತೆಜೊತೆಗೆ ತೌಲನಿಕವಾಗಿ ಪಾಶ್ಚಾತ್ಯ ಕಾವ್ಯ ಮೀಮಾಂಸಕರ ದರ್ಶನ ಬೇರೆ. 'ಮಾನಸಿಕದೂರ', ಕಾವ್ಯ ಸಮರ್ಥನೆ, ವಿಮರ್ಶೆಯ ಪರಿಭಾಷೆ ಹೀಗೆ ಅನೇಕ ಹಲವು ಹತ್ತು ವಿಷಯಗಳ ಪರಿಜ್ಞಾನ ನಮಗೆ ಉಂಟಾಯಿತು. ಆ ರೋಲ್ಸ್ ರಾಯ್ಸ್ ಕಾರಿನಲ್ಲಿ ಅವರು ಇಡೀ ವಿಶ್ವವನ್ನೆಲ್ಲಾ ತಮ್ಮೊಂದಿಗೆ ಪರ್ಯಟನ ಮಾಡಿಸಿದರು. ಜಾಗತಿಕ ಸಾಹಿತ್ಯದ ಸುಖ ಪ್ರಯಾಣದ ಅನುಭವ ನಮ್ಮೆಲ್ಲರಲ್ಲೂ ಹೊಸ ಹೊಸ ಉತ್ಸಾಹ ಮತ್ತು ಅನ್ವೇಷಣೆಗಳನ್ನು ಮೂಡಿಸುತ್ತಿದ್ದವು. ಅವರು ನಮಗೆ ಎರಡನೆಯ ಆನರ್ಸ್‌ನಿಂದ ಎಂ.ಎ.ವರೆಗೆ ಸುಮಾರು ಎರಡೂವರೆ ವರ್ಷಗಳ ಕಾಲ ಪಾಠ ಹೇಳಿದ್ದು ಕಾವ್ಯಮೀಮಾಂಸೆ

ಮತ್ತು ಭಾಷಾಚರಿತ್ರೆಗಳನ್ನೇ, ಎರಡೂ ಶಾಸ್ತ್ರ ವಿಷಯಗಳೇ. ಆದರೆ ರನ್ನನ 'ಸಿಂಹಾವಲೋಕನ ಕ್ರಮ'ದಂತೆ ಅವರು ಈ ಶಾಸ್ತ್ರ ವಿಷಯಗಳ ಮೂಲಕ ಸಾಹಿತ್ಯರಾಶಿಯ ಉದ್ದಗಲಗಳನ್ನು, ಆಳ ನಿರಾಳಗಳನ್ನು ನಮಗೆ ಪರಿಚಯ ಮಾಡಿಕೊಟ್ಟರು, ನಮ್ಮ ಮತಿಯನ್ನು ನಿಶಿತಗೊಳಿಸಿದರು, ಹೆಚ್ಚು ಹೆಚ್ಚು ಓದಬೇಕೆಂಬ, ಓದಿನಲ್ಲಿ ಸುಖವಿದೆಯೆಂಬ ಅನುಭವವನ್ನು ನಮಗೆ ತಂದುಕೊಟ್ಟರು. ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡ ಈ ಮೂರು ಸಾಹಿತ್ಯವಾಹಿನಿಗಳಲ್ಲಿ ನಮ್ಮನ್ನು ಮುಳುಗೇಳಿಸಿದರು, ದಡ ಮುಟ್ಟಿಸಿದರು. ಆ ಕಾಲದಲ್ಲಿ ನಾನು ತೆಗೆದುಕೊಂಡ ಅವರ ಟಿಪ್ಪಣಿಗಳನ್ನು ಆಧರಿಸಿ ಅವರ ಅಧ್ಯಾಪನ, ಬೋಧನಾಕ್ರಮ ಮತ್ತು ಬೀರಿದ ಪರಿಣಾಮಗಳನ್ನು ಮುಂದಿನ ಪೀಳಿಗೆಗಾಗಿ ದಾಖಲು ಮಾಡಬೇಕೆಂಬ ಹಂಬಲದಿಂದ ಇಲ್ಲಿ ಕೆಲವು ಭಾಗಗಳನ್ನು ಅವರ ಮಾತಿನಲ್ಲೇ ನಮೂದಿಸಿದ್ದೇನೆ. ಈ ಟಿಪ್ಪಣಿಗಳನ್ನು ನನ್ನ ಅಧ್ಯಾಪಕ ಜೀವನದಲ್ಲಿ ಹಲವು ಬಾರಿ ಮತ್ತೆ ಮತ್ತೆ ಓದಿದ್ದೇನೆ, ಮೆಲುಕು ಹಾಕಿದ್ದೇನೆ, ಸುಖ ಅನುಭವಿಸಿದ್ದೇನೆ. ಆ ಸುಖ ಇತರ ಪಾಲಿಗೂ ದೊರೆಯುವಂತಾಗಲಿ ಎಂದು ಈ ಪ್ರಯತ್ನ ಅಷ್ಟೇ.

'ಟಿಪ್ಪಣಿ'ಗಳಿಂದ

ತಾವು ಹೇಳುವ ಅನೇಕ ವಿಷಯಗಳು ಪುನರಾವರ್ತನೆಯಾಗುತ್ತಿವೆ ಎಂದು ಅವರಿಗೆ ಅನಿಸಿದಾಗ, ಆ ವಿಷಯಗಳು ವಿದ್ಯಾರ್ಥಿಗಳಿಗೆ ಈಗಾಗಲೇ ಮನವರಿಕೆಯಾಗಿದೆ ಎಂದು ಅವರಿಗೆ ಅನಿಸಿದಾಗ ಅವರು ಹೇಳುತ್ತಿದ್ದ ಮಾತು ಎಂದರೆ ರಾಮಾಯಣದ 'ಸ್ಮಾರಯೇ ನತುಶಿಕ್ಷಯೇ'. ರಾಮನಿಗೆ ಸೀತೆ ಈ ಮಾತನ್ನು ಹೇಳುತ್ತಾಳೆ 'ನಾನು ಜ್ಞಾಪಿಸುತ್ತಿದ್ದೇನೆ ಅಷ್ಟೆ, ಬೋಧಿಸುತ್ತಿಲ್ಲ.' ಎಂಥ ವಿನಯ ಪೂರ್ವಕವಾದ ಮಾತು! ಇದನ್ನು ಎಷ್ಟೋ ಬಾರಿ ಹೇಳಿದ್ದಾರೆ. ತುಂಬಿದ ಕೊಡ ತುಳುಕುವುದಿಲ್ಲ. ತಾವು ಒಬ್ಬ ಮಹಾನ್ ವಿದ್ವಾಂಸರಾದರೂ, ವಿಷಯಗಳೆಲ್ಲ ಕರತಲಾಮಲಕವಾಗಿದ್ದರೂ, ಅವರೆಂದೂ ಪ್ರವಚನಕ್ಕೆ ಸಿದ್ಧರಾಗದೆ ಬಂದದ್ದಿಲ್ಲ, ಟಿಪ್ಪಣಿ ಪುಸ್ತಕವಿಲ್ಲದೆ ಪಾಠ ಹೇಳಿದವರಲ್ಲ. ನಿಷ್ಕೃಷ್ಟತೆ, ನಿರ್ದಿಷ್ಟತೆ ಮತ್ತು ನಿರ್ದುಷ್ಟತೆಗಾಗಿ ಅವರು ಜೀವನವನ್ನೇ ಮುಡುಪಾಗಿಟ್ಟವರು. ಬಹುಶಃ ಹಾಗಾಗಿಯೇ ಅವರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಬರೆಯಲಾಗಲಿಲ್ಲವೇನೋ. ಅವರು ತರಗತಿಯಲ್ಲಿ ಸದಾ ಹೇಳುತ್ತಿದ್ದ ಮಾತುಗಳೆಂದರೆ Clarity of Thinking ಮತ್ತು Clarity of Expression ಎಂದರೆ ಆಲೋಚನಾ ಸ್ಪಷ್ಟತೆ ಮತ್ತು ಅಭಿವ್ಯಕ್ತಿಯ ಸ್ಪಷ್ಟತೆ. ಉಪಾಧ್ಯಾಯನಿಗೆ, ಭಾಷಣಕಾರನಿಗೆ, ವಿದ್ಯಾರ್ಥಿಗೆ ಇವು ತುಂಬಾ ಅಗತ್ಯ ಎಂದು ಹೇಳುತ್ತಿದ್ದರು. ಮಹಾರಾಜಾ ಕಾಲೇಜಿನ ಸೀನಿಯರ್ ಬಿ.ಎ. ಹಾಲ್‌ನಲ್ಲಿ 'ಕನ್ನಡ ಸಾಹಿತ್ಯದ ಕೆಲವು ಪ್ರಕಾರಗಳು' ಎಂಬ ವಿಷಯದ ಬಗ್ಗೆ ಉಪನ್ಯಾಸ ಕಾರ್ಯಕ್ರಮ ಇತ್ತು. ಅಂದು ಶ್ರೀ ಪ್ರಭುಶಂಕರ್ ಅವರು 'ಭಾವಗೀತೆ'ಯ ಬಗ್ಗೆ, ಶ್ರೀ ಗುರುರಾಜ ರಾಯರು 'ನಾಟಕ'ದ ಬಗ್ಗೆ, ಶ್ರೀ ಗೋಪಾಲ ಕೃಷ್ಣ ಅಡಿಗರು 'ಸಣ್ಣಕತೆ'ಯ ಬಗ್ಗೆ ಮಾತನಾಡಿದರು. ಅಂದು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತೀ.ನಂ.ಶ್ರೀ ಅವರು ಹೇಳಿದ ಮಾತುಗಳು ಇಂದಿಗೂ ಅಚ್ಚಳಿಯದೆ ನಿಂತಿವೆ :

"Each Critic's Criticism is Personal in one sense and Universal in the other sense''.

“A book is the flesh of a writer's flesh, spirit of a writer's spirit, blood of a writer's blood”.

ಕಾವ್ಯಮೀಮಾಂಸೆಯ ಟಿಪ್ಪಣಿಯಿಂದ

Bhamaha's book is more a Practical handbook than a theoritical discussion on the problems-

'ಅನುಭಾವ ವಿಭಾವಾನಾಂ ವರ್ಣನಾ ಕಾವ್ಯಮುಚ್ಯತೇ' ಎನ್ನುತ್ತಾನೆ ಭಟ್ಟತೌತ. This is a correct and a sound definition of Poetry I have hither to found. ಶಬ್ದ ಶಕ್ತಿ ಮೂಲದಲ್ಲಿ there's real genuine Poetry - ಶಬ್ದ ಶಕ್ತಿ ಮೂಲ ಬಂದು ಶ್ಲೇಷವನ್ನು ಕಾವ್ಯ ಮಾಡಿತು ಎಂದು ಹೇಳಬಹುದು. ಧ್ವನಿ, ಗುಣೀಭೂತವ್ಯಂಗ್ಯ ಇವುಗಳಿಗಿರುವ ವ್ಯತ್ಯಾಸವನ್ನು ತಿಳಿಯಲು ನನಗೆ ಎರಡು ವರ್ಷ ಬೇಕಾಯಿತು. This is a matter of self – experience. 'ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಂ' – ಕೈಲಾಸಂ ಕೀಚಕನ ಪಾತ್ರದಲ್ಲಿ ಒಳ್ಳೆಯತನ ಆರೋಪಿಸಿದ್ದು ಅಷ್ಟು ಸಮರ್ಪಕವಲ್ಲ. ಆತ ಕಾಮಿ, ಪಶು, ಬಲಿಷ್ಠ. ಭಾರತದ ಕೀಚಕನ ಪಾತ್ರದಲ್ಲಿ ಸದ್ಗುಣದ ಮೂಲನಿಧಿ ಇತ್ತು ಎನಿಸುವುದಿಲ್ಲ. ಯಾವ ಕವಿ ಪ್ರತಿಭೆಯೂ ಇವನ ಪಾತ್ರವನ್ನು ಮೇಲೆತ್ತಲಾರದು, ಮೇಲೆತ್ತಬಾರದು. ಅದು ದ್ರೌಪದಿಗೆ, ಭೀಮನಿಗೆ ಕಳಂಕ ತರುವಂಥದಾಗುತ್ತದೆ. ಅದೇ, ಭಾಸನ ಕೈಕೆ ಒಳ್ಳೆಯವಳಾಗುವುದಕ್ಕೆ ಕಾರಣಗಳಿವೆ. ಅದರಲ್ಲಿ ಅಸಂಭಾವ್ಯತೆಯ ಪ್ರಶ್ನೆ ಏಳುವುದಿಲ್ಲ.

ವಾಲಿಯ ವಧೆಯ ಬಗ್ಗೆ ತುಂಬಾ controversy ಇದೆ. ನಾನು ರಾಮನ ವರ್ತನೆಯನ್ನು ಈ ಸಂದರ್ಭದಲ್ಲಿ ಒಪ್ಪಲಾರೆ. ಅವನನ್ನು ಸಮರ್ಥಿಸುವುದು ಕಷ್ಟ. ರಾಮನಲ್ಲಿರುವ ಮಾನವೀಯತೆಯಲ್ಲಿನ ಒಂದು ದೋಷವನ್ನು ಒಪ್ಪಿಕೊಂಡೂ ನಾವು ಅವನನ್ನು ಗೌರವಿಸುವುದಿಲ್ಲವೆ? It is not an intellectual apprehension, but an emotional realisation.

ಕಾವ್ಯಕೋಶತ್ರಯವೆಂದರೆ ಧ್ವನಿಯ ಬೆಲೆ, ವಾಚಕತ್ವದ ಬೆಲೆ, ವ್ಯಂಜಕತ್ವದ ಬೆಲೆ. ವಾಚ್ಯಾರ್ಥ ಅಕ್ಲಿಷ್ಟವಾಗಿ ಗೋಚರಿಸಬೇಕು. ನವ್ಯಕಾವ್ಯಕ್ಕೂ ಹಿಂದಿನ ಕಾವ್ಯಕ್ಕೂ ಇರುವ ವ್ಯತ್ಯಾಸವೇ ಅದು. ವಾಚ್ಯಾರ್ಥ ಮೊದಲು ಗೋಚರಿಸಿದರೆ ನಂತರ ವ್ಯಂಗ್ಯಾರ್ಥ ಪರಿಭಾವನೆ ಸಾಧ್ಯ.

Fundamental Values: ಪುರುಷಾರ್ಥದ ದೃಷ್ಟಿಯಿಂದ ಯಾವುದು ಗ್ರಾಹ್ಯ ಎಂಬುದನ್ನು ಅಭಿನವಗುಪ್ತ ಹೇಳುತ್ತಾನೆ.Art is not for Art's sake, it is for life's sake. ಕಾವ್ಯಾನಂದ ಶತ್ರುವನ್ನು ಹೊಡೆದು ಹಾಕಿದಾಗಿನ ಆನಂದ, ಮದ್ಯಪಾನ ಮಾಡಿದಾಗಿನ ಆನಂದ,. ತುರಿ ಆನಂದದಿಂದ ತುರೀಯಾನಂದ–ದವರೆಗೂ ಆಗುವ ಆನಂದಾನುಭವ ಮೂಲತಃ ಒಂದೇ ಆದರೂ ಅದರ ಭೇದ ನಿರ್ಧಾರ, ಅದು ಎಷ್ಟು ಕಾಲ ನಿಲ್ಲುತ್ತದೆ, ಅದು ಯಾವ ಸನ್ನಿವೇಶದಲ್ಲಿ ಬರುತ್ತದೆ, ಅದರ ಪರಿಣಾಮವೇನು, ಅದು ಸಮಾಜದಲ್ಲಿ ಗಣ್ಯವೇ – ಎನ್ನುವುದರ ಮೇಲೆ ಆಗುತ್ತದೆ.

Poetry is emotion recollected in tranquility says Wordsworth. It is not completely true. It is recollection as well as re – creation. ರಸವೇ ಗುರಿ – ಧ್ವನಿಯೇ ಮಾರ್ಗ, As truth is the goal and non – violence the path.

ಲೋಕವನ್ನು ಕಲೆಯ ದೃಷ್ಟಿಯಿಂದ ನೋಡಬಹುದು. ಆದರೆ ಅದನ್ನು distinguish ಮಾಡುವುದನ್ನು ಕಲಿತಿರಬೇಕು. ಇದನ್ನು ಮಾಸ್ತಿಯವರ 'ಕಾಮನ ಹಬ್ಬದ ಒಂದು ಕತೆ'ಯಲ್ಲಿ ಕಾಣಬಹುದು. ಮರದ ಮಿಲ್ಲಿನ ಸಾಹುಕಾರ ತನ್ನ ನಾಟಾಗಳು ಯಜ್ಞೇಶ್ವರನಿಗೆ ಸಮರ್ಪಿತ ವಾದದ್ದನ್ನು ನೋಡಿ ಕೊರಗಿದರೂ, ಬಾಕಿಯವರೆಲ್ಲಾ ಸಂತೋಷದಿಂದ ಚಪ್ಪಾಳೆತಟ್ಟಿ ಕುಣಿಯುತ್ತಾ ಇರುವುದನ್ನು ನೋಡಿ, ತಾನೂ ಅದರಲ್ಲಿ ಭಾಗವಹಿಸಿ ನಕ್ಕು ನಲಿದನೆಂಬ ಚಿತ್ರಣ ಬರುತ್ತದೆ. ಇಲ್ಲಿ ಲೌಕಿಕ ದೃಷ್ಟಿ ಪ್ರಬಲವಾಗಿದ್ದಿದ್ದರೆ, ಅವನು ಕೋಪದಿಂದ ಹುಡುಗರನ್ನು ಹೊಡೆಯಬಹುದಿತ್ತು, ಅವರ ಸಂತೋಷವನ್ನು ಹಾಳುಮಾಡಬಹುದಿತ್ತು. ಆದರೆ ಆ ದೃಶ್ಯ, ಆ ಪರಿಸರ ಅವನ ಕಣ್ಣನ್ನು ತೆರೆಯಿಸಿತು. ಅಲ್ಲಿ ಅವನು ಅವರೊಂದಿಗೆ ನಕ್ಕು ನಲಿದದ್ದು ಆನಂದದ ದೃಷ್ಟಿ. ಅದೇ Aesthetic Pleasure.

Art is not a reflection of life. It is a mirror to life ಎನ್ನುವುದುಂಟು. ಆದರೆ ಕಲೆ ಒಂದು ಸಾಮಾನ್ಯ ಕನ್ನಡಿಯಲ್ಲ. ಅದೊಂದು ಭೂತಗನ್ನಡಿ. ಬ್ರಾಡ್ಲೆ ಈ ಸಂಬಂಧವನ್ನು Analogue ಎನ್ನುತ್ತಾನೆ. ಅವನ ದೃಷ್ಟಿಯಲ್ಲಿ Art is an Analogue of life.

The expression of your admiration of a poet's work is a reverberation of your original aesthetic experience. Art is not an escape from life, but it is a deeper realisation of it.

ಸ್ನೇಹ – non sexual - ಬಾಣನ ಕಾದಂಬರಿಯಲ್ಲಿ ಪ್ರೇಮದ ಕಥೆಗಿಂತ ಹೆಚ್ಚಾಗಿ ನನಗೆ ಹಿಡಿಸಿದ್ದು ಪ್ರೇಯಸಿ(?) ಕಥೆ, ಚಂದ್ರಾಪೀಡ – ಮಹಾಶ್ವೇತೆ ; ಪುಂಡರೀಕ – ಕಪಿಂಜಲ; ಚಂದ್ರಾಪೀಡ – ವೈಶಂಪಾಯನ, ಪುರುಷಾರ್ಥದ ದೃಷ್ಟಿಯಿಂದ ಇದಕ್ಕೆ ಬೆಲೆ ಇಲ್ಲವೆ? ಸ್ಥಾನ ಇಲ್ಲವೆ? ಭರತನ ಪಟ್ಟಿಯಲ್ಲಿ ಬೀಭತ್ಸಕ್ಕೆ ಸ್ಥಾನ ಇರುವುದಾದರೆ ಪ್ರೇಯೋರಸಕ್ಕೆ ಏಕಿಲ್ಲ ಎನಿಸುತ್ತದೆ. ನಾನು ಕಂಡ ಕಾವ್ಯಗಳಲ್ಲಿ ಭೀಭತ್ಸವೆಲ್ಲಾ ಜುಗುಪ್ಸೆಯಲ್ಲಿ ಪರ್ಯವ ಸಾನವಾಗುತ್ತದೆ. ಅಂತೇ ಭಕ್ತಿಗೆ ಸ್ಥಾನ ಬೇಡವೆ? ಅದನ್ನು ಭಾವ ಎಂದು ಕರೆದರು. I can't accept ಮಮ್ಮಟ here, of course he has worked well. ಹರಿಹರ, ಬಸವಣ್ಣನವರಲ್ಲಿ, ತೀರ್ಥಂಕರ ಪುರಾಣಗಳಲ್ಲಿ, ಪುರಂದರ ಕೀರ್ತನೆಗಳಲ್ಲಿ ಭಕ್ತಿ ರಸವಾಗಿಲ್ಲವೆ?

ನನಗೆ ಮೊದಲಿಗೆ ಶಾಂತರಸದ ಅಸ್ತಿತ್ವದಲ್ಲಿ ನಂಬಿಕೆ ಇರಲಿಲ್ಲ. ಇಪ್ಪತ್ತು ವರ್ಷದ ಕೆಳಗೆ (೧೯೫೮ರಲ್ಲಿ ಹೇಳಿದ್ದು) ಒಂದು ಸಾರಿ ಪಾಠ ಹೇಳುವಾಗ It is not impossible

ಎಂದು ಮನವರಿಕೆಯಾಯಿತು. ನಂತರ ಬುದ್ಧ ಚರಿತೆಯನ್ನು ಓದಿದಾಗ ಅದರಲ್ಲಿ ತಲ್ಲೀನತೆಯನ್ನು ಒಂದು ಗಂಟೆಯ ಕಾಲ ಅನುಭವಿಸಿದೆ.

ಔಚಿತ್ಯ – ಯಾವ ದೃಷ್ಟಿಯಿಂದ ಎಂಬುದು ಮುಖ್ಯ. ಉಡುಪಿನಲ್ಲಿ ವೈಲಕ್ಷಣ್ಯ ಕಾಣಬಹುದು. ಸ್ವಲ್ಪ ಒಗ್ಗಿದರೆ ಸರಿಯಾಗುತ್ತದೆ. ಔಚಿತ್ಯ ಗಣಿತದಂತಲ್ಲ, ತರ್ಕ ಪ್ರಪಂಚದಂತಲ್ಲ. ಅಮೇರಿಕಾದಲ್ಲಿ Bobbed Hair ಗಳನ್ನೇ ನೋಡಿ ನೋಡಿ ಜಡೆ ಹಾಕಿದವಳೊಬ್ಬಳನ್ನು ಕಂಡಾಗ ಹೀಗೇಕೆ? ಎಂದುಕೊಂಡೆ –

ಹಾಲಿಗೆ ಸಕ್ಕರೆ ಬೆರೆಸಿಕೊಡುವುದು ಕಾವ್ಯ. ಜೇನು ತುಪ್ಪಕ್ಕೆ ಔಷಧಿ ಬೆರೆಸಿದಂತೆ ಗುಣೀಭೂತ ವ್ಯಂಗ್ಯ.

ಪ್ರಾಸದ ವಿಷಯದಲ್ಲಿ ಬಹಳ ಅನ್ಯಾಯವಾಗಿದೆ ಲಕ್ಷ್ಮೀಶನಲ್ಲಿ. ಚಂದ್ರಹಾಸನನ್ನು ವಿಷಯೆ ನೋಡಿದಾಗ 'ಸರ್ವಾಂಗಮಂ ನೋಡಿದಳ್ ವಿಷಯೆ ವಿಷಯಾಸಕ್ತಿಯಾಗಿ' ಎಂದಿದೆ. hopeless indeed – But the most beautiful simile I have ever seen in here in ಲಕ್ಷ್ಮೀಶ, that is "ಪಾತಕಿಗಳೊಡಲೊಳಿಹ ಪರಮಾತ್ಮನಂತೆ" – The whole philosophy is condensed here.

S.K. De is a pioneer in Sanskrit Poetics. With him stand Kane and V. Raghavan. 'ಡೇ'ಯ ದೋಷವೆಂದರೆ ಆತ ಉದಾಹರಣೆಗಳನ್ನು ಕೊಡುವುದಿಲ್ಲ. Kane ಯಂತೂ ದೇವರೇ ಗತಿ. ರಾಘವನ್‌ರ ಲೇಖನಿಗಂತೂ ತಡೆಯೇ ಇಲ್ಲ. ಹೇಳಿದ್ದನ್ನೇ ಹೇಳುತ್ತಾರೆ. But his contribution to Sanskrit Poetics is really great.

Radhakrishnan – I call him an "illuminous mystic"-

ಬೆಳಕು ಬೆಳಕು ಕೂಡುತೊಂದೇ ಪ್ರಭೆಯಾಗುವ ತೆರದಿ (ಪು.ತಿ.ನ): Images ಇರಬೇಕು. ಅವು ಸಂಬಂಧವಿಲ್ಲದೆ ಒಡೆದರೆ ಅದು ಒಡೆದ ಕನ್ನಡಿಯಾಗುತ್ತದೆ.

ಸಾಮರ್ಸೆಟ್ ಮಾಮ್‌ನ 'Stranger in Paris'ನಲ್ಲಿ acute observation, but on level ground ಇದೆ. ಇದರಲ್ಲಿ ಎರಡು ಪುಟಗಳು ತುಂಬಾ passionate ಆಗಿವೆ. ಅವನ್ನು ಓದಿದಾಗ ನನಗಂತೂ ನೆಲದಿಂದ ವಿಮಾನದಲ್ಲಿ ಹಾರಿದಂತಾಯಿತು.

'ಭಾಷಾವಿಜ್ಞಾನದ' ಟಿಪ್ಪಣಿಯಿಂದ.

ಭಾಷೆಯನ್ನು ಕುರಿತು ಬ್ಲಾಕ್ ಮತ್ತು ಟ್ರೆಗರ್, ಸ್ಟುರ್ಟೆವಾಂಟ್, ಎಸ್ಪರ್ಸನ್ ಮೊದಲಾದ ಅನೇಕ ಭಾಷಾ ವಿಜ್ಞಾನಿಗಳು ತಮ್ಮದೇ ಆದ ಸೂತ್ರಗಳನ್ನು ಕೊಟ್ಟಿದ್ದಾರೆ. ಅವೆಲ್ಲವನ್ನೂ ಕ್ರೋಡೀಕರಿಸಿ ತೀ.ನಂ.ಶ್ರೀಯವರು ಸಮಗ್ರವೂ, ಸುಸಮರ್ಥವೂ ಆದ ಒಂದು ಸೂತ್ರವನ್ನು ನೀಡಿದ್ದಾರೆ. ಅದೆಂದರೆ

'Language may be defined as an arbitrary system of Vocal symbols, by means of which, human beings as members of a social group and participants in a culture, interact and communicate."

ಇದರ ಕನ್ನಡ ಅನುವಾದ.

"ಒಂದು ಸಾಮಾಜಿಕ ಗುಂಪಿನ ಸದಸ್ಯರುಗಳಾಗಿ ಮತ್ತು ಒಂದು ಸಂಸ್ಕೃತಿಯಲ್ಲಿ ಪಾಲುಗೊಳ್ಳುವವರಾಗಿ, ಮಾನವ ಜೀವಿಗಳು, ಪರಸ್ಪರ ಅನುವರ್ತನೆ ಮತ್ತು ಅಭಿವ್ಯಕ್ತಿ (ಸಂವಹನ)ಗಳಿಗಾಗಿ ಬಳಸುವ ಧ್ವನಿ ಸಂಕೇತಗಳ ಯಾದೃಚ್ಛಿಕ ವ್ಯವಸ್ಥೆಯನ್ನೇ ಭಾಷೆ ಎನ್ನಬಹುದು" – ಇದೊಂದು ಸಮಗ್ರ ಸೂತ್ರ

ತೀ.ನಂ.ಶ್ರೀಯವರ ಭಾಷಾ ವಿಜ್ಞಾನದ ತರಗತಿಗಳು ಕಾವ್ಯದ ತರಗತಿಗಳಂತೆ ಇರುತ್ತಿದ್ದವು. ಶಾಕುಂತಲ ನಾಟಕ, ಪಂಪಭಾರತಗಳ ತರಗತಿಗಳಂತೆ ಸ್ವಾರಸ್ಯಕರವಾಗಿರುತ್ತಿದ್ದವು. ಶಾಸ್ತ್ರ ವಿಷಯಗಳನ್ನು ಕೂಡ ಮನೋರಂಜಕವಾಗಿ, ಆದರೆ ಮನಸ್ಸಿನಲ್ಲಿ ನಾಟುವಂತೆ ಹೇಳಬಹುದು ಎಂಬುದಕ್ಕೆ ಶ್ರೇಷ್ಠ ನಿದರ್ಶನ ಅವರ ಭಾಷಾ ವಿಜ್ಞಾನದ ತರಗತಿಗಳು. ಅವರ ತರಗತಿಗಳಲ್ಲಿ ಕಾಳಿದಾಸನ ರಘುವಂಶದಲ್ಲಿ ಬರುವ 'ಪ್ರವರ್ತಿತೋದೀಪ ಇವ ಪ್ರದೀಪಾತ್', ಎಂದರೆ ಒಂದು ದೀಪದಿಂದ ಮತ್ತೊಂದು ದೀಪ ಬೆಳಗಿದಂತೆ ಎಂಬ ಉಪಮೆ ಸಾರ್ಥಕವಾಗುತ್ತಿತ್ತು. ನಮ್ಮ ಮನಸ್ಸನ್ನು ಕೆಣಕಿ, ಪ್ರಚೋದಿಸಿ, ಸವಾಲೊಡ್ಡಿ, ಆಲೋಚನೆಗೆ ಈಡುಮಾಡುತ್ತಿದ್ದ ತರಗತಿಗಳಾಗಿರುತ್ತಿದ್ದವು ಅವು.

ಆಡುಮಾತು, ಆ ಕಾಲದ ಭಾಷೆ ಕಾವ್ಯದೊಳಕ್ಕೆ ಹೇಗೆ ನುಸುಳಿ ಬರುತ್ತದೆ, ಅದರಿಂದ ಆ ಕಾಲದ ಭಾಷೆಯ ಸ್ವರೂಪ ನಿರ್ಣಯಕ್ಕೆ ಹೇಗೆ ಸಹಾಯಕವಾಗುತ್ತದೆ ಎಂಬ ಬಗ್ಗೆ ಹೇಳುತ್ತಾ ಜನ್ನನ 'ಕಿತ್ತ ಕರವಾಳ್ಗಮೆನಗಂ' ಎಂಬ ಪದ್ಯವನ್ನು ಉದಾಹರಿಸುತ್ತಿದ್ದರು. ಪ್ರಾಸಸ್ಥಾನ ದಲ್ಲಿ ನೆಗೆಟ್ಟ್, ಅಟ್ಟ್ ಇರುವಲ್ಲಿ ಒಂದು ಪಾದದಲ್ಲಿ 'ಕಿತ್ತ' ಇದೆ. ಒಂಬತ್ತನೆಯ ಶತಮಾನಕ್ಕಾಗಲೇ ಱಟಿ ಸಂಯುಕ್ತಾಕ್ಷರ ರೇಫ ಸಂಯುಕ್ತಾಕ್ಷರವಾಗಿತ್ತು (ಚುರ್ಚ್ಚಿದವೊಲ್ ಬಿಸಿಲಳುರೆಕಿಮುಚ್ಚಿದ ಲತೆಯಂತೆ ನೊಂದು ಗುಣನಂದಿ).

ಇಲ್ಲಿ ಪ್ರಾಸಸ್ಥಾನದಲ್ಲಿ ಕಿಟ್ತಿ ಅಥವಾ ಕಿರ್ತ ಇರಬೇಕಾಗಿತ್ತು. ಆದರೆ ಪ್ರತಿಕಾರ 'ಕಿತ್ತ' ಎಂದು ಪ್ರಯೋಗಿಸಿದ್ದಾನೆ. ಹಾಗೆಯೇ ಇನ್ನೊಂದೆಡೆ ಪ್ರಾಸಸ್ಥಾನದಲ್ಲಿ ಜನ್ನ 'ಮಿತ್ರರ್ಕಳ' ಎಂಬ ಪ್ರಯೋಗದ ಬದಲು 'ಮಿತ್ರರುಗಳ' ಎಂದು ಪ್ರಯೋಗಿಸಿದ್ದಾನೆ. ಇದರಿಂದ ಆ ರೂಪ ಆ ಕಾಲದಲ್ಲಿ ಬಹಳ ಪ್ರಚುರವಾಗಿದ್ದಿರಬೇಕೆಂದು ತಿಳಿಯುತ್ತದೆ. ಕವಿಯ ಅನವಧಾನದಿಂದ ಆ ಕಾಲದ ಭಾಷೆಯ, ಆಡುಮಾತಿನ ಸ್ವರೂಪ ತಿಳಿಯುವಂತಾಯಿತು.

ಕನ್ನಡದಲ್ಲಿ ಸಮಾಸದಲ್ಲಿ ಉತ್ತರ ಪದದ ಆದಿಯ 'ಕ' ಕಾರ 'ಗ'ಕಾರ ಆದಂತೆ, ತೆಲುಗು ಭಾಷೆಯಲ್ಲಿ ಸಂಧಿಯಲ್ಲಿ 'ಕ' 'ಗ' ಆಗುತ್ತದೆ. ಇದರ ಬಗ್ಗೆ ಅವರು ಒಂದು ಕತೆ ಇದೆ ಎಂದು ಹೇಳುತ್ತಿದ್ದರು. ತೆಲುಗಿನ ಮಹಾಕವಿ ನನ್ನಯ ಭಟ್ಟ ಲಿಪಿಕಾರನಾದ ಗುರುನಾಥನಿಗೆ

ಮಹಾಭಾರತವನ್ನು ಹೇಳಿ ಬರೆಸುತ್ತಿದ್ದನಂತೆ. ನನ್ನಯ ಭಟ್ಟನಿಗೆ ಒಮ್ಮೆ ಕವಿಯ ಭಾವ ತಟಸ್ಥವಾದಾಗ ಲಿಪಿಕಾರ 'ಏಮಿಚೆಪ್ಪಿತಿವಿ ಗುರುನಾಥ' ಎಂದನಂತೆ. ಆ ಸಂದರ್ಭಕ್ಕೆ ಆ ವಾಕ್ಯವೇ ಪದ್ಯಪೂರ್ತಿಗಾಗಿ ಸರಿಹೊಂದುತ್ತಿತ್ತಂತೆ. ನನ್ನಯ ಲಿಪಿಕಾರನಿಗೆ ಅದನ್ನೇ ಬರೆದುಕೋ ಎಂದನಂತೆ. 'ಕುರುನಾಥ' ಇಲ್ಲಿ 'ಗುರುನಾಥ' ಆಗಿದೆ. ಇಂತಹ ಎಂದೂ ಮರೆಯದ ಉದಾಹರಣೆಗಳಿಂದ ಅವರ ಭಾಷಾವಿಜ್ಞಾನದ ತರಗತಿಗಳು ಅವಿಸ್ಮರಣೀಯವಾಗುತ್ತಿದ್ದವು.

ಸಂಸ್ಕೃತ ಭಾಷೆಯೇ, ಭಾರತದ ಎಲ್ಲ ಭಾಷೆಗಳಿಗೂ ಮೂಲ ಎಂದು ಭಾವಿಸುವ ಮತ್ತು ವಾದಿಸುವ ಸಂಸ್ಕೃತ ಪಂಡಿತರ ಬಗ್ಗೆ ಅವರು ಕನಿಕರಿಸುತ್ತಿದ್ದರು ಮತ್ತು ಅವರ ಅಜ್ಞಾನದ ಬಗ್ಗೆ ಮಾರ್ಮಿಕವಾಗಿ ಕೆಲವು ಮಾತುಗಳನ್ನು ಹೇಳುತ್ತಿದ್ದರು. ಅವರ ಅಭಿಪ್ರಾಯ ಹೀಗಿದೆ:

ತಮಾಷೆಗಾಗಿ ಒಬ್ಬರು ಹೀಗೆ ಹೇಳಿದರಂತೆ: 'ಗೋವಿಂದ' ಎಂಬ ಸಂಸ್ಕೃತ ಪದದ ಮೊದಲನೆಯ ಅಕ್ಷರ 'ಗೋ'ದಿಂದ ಇಂಗ್ಲಿಷ್‌ನವರು 'God' ಅನ್ನು ಮಾಡಿಕೊಂಡರಂತೆ, ಉಳಿದೆರಡು ಅಕ್ಷರಗಳಾದ 'ವಿಂದ'ದಿಂದ ಮುಸ್ಲಿಮರು 'ಖುದಾ'ವನ್ನು ಮಾಡಿಕೊಂಡರಂತೆ. 'ಕುದುರೆ' ಪದ ಕನ್ನಡಕ್ಕೆ ಸಂಸ್ಕೃತದಿಂದ ಬಂದಿತೆಂದು ಸಾಧಿಸುವವರೂ ಇದ್ದಾರೆ. 'ಕುದ್ರ' ಎಂದರೆ ಸಂಸ್ಕೃತದಲ್ಲಿ 'ಅಸತ್ಯಭಾಷಣೇ' ಎಂದರೆ ಹುಸಿಮಾತು ಎಂದರ್ಥ. ಕುದುರೆ ಸುಮ್ಮನೆ ಬಾಯಿ ಅಲ್ಲಾಡಿಸುತ್ತದಲ್ಲ, ಯಾವ ಪದವೂ ಅದರ ಬಾಯಿಂದ ಹೊರಡುವುದಿಲ್ಲವಲ್ಲ ಅದಕ್ಕೇ ಅದಕ್ಕೆ 'ಕುದ್ರ' ಎಂಬ ನಿಷ್ಪತ್ತಿಯನ್ನು ಹೇಳುತ್ತಾರಂತೆ. ಇವುಗಳ ಬಗ್ಗೆ ಹೇಳುತ್ತಾ ತೀ.ನಂ.ಶ್ರೀಯವರು 'ಇವರಿಗೆಲ್ಲ ಭಾರತೀಯ ಭಾಷೆಗಳೆಲ್ಲಾ ಸಂಸ್ಕೃತದಿಂದಲೇ ಹುಟ್ಟಿದವು' ಎಂಬ ಪೂರ್ವಗ್ರಹ ಹಿಡಿದಿದೆ ಎನ್ನುತ್ತಾರೆ.

ಡಾ॥ ಸಿ. ನಾರಾಯಣರಾಯರು ತೆಲುಗು ಭಾಷಾಚರಿತ್ರೆ ಬರೆದಿದ್ದಾರೆ. ಅವರು ದ್ರಾವಿಡ ಭಾಷೆಗಳು ಪೈಶಾಚಿಯಿಂದ ಬಂದವು ಎನ್ನುತ್ತಾರೆ. ಇದೂ ಕೂಡ ಪೂರ್ವಗ್ರಹದಿಂದ ಕೂಡಿದ ಹೇಳಿಕೆಯೇ. ಹಾಗೆಯೇ ಅವರು 'ದ್ವಂದ್ವ' ಎಂಬ ಸಂಸ್ಕೃತ ಪದದಿಂದ ತೆಲುಗಿನ 'ರೆಂಡು' ಬಂದಿದೆ ಎನ್ನುತ್ತಾರೆ. 'ದ್ವಂದ್ವ' ಪದ ಮಕ್ಕಳಬಾಯಲ್ಲಿ 'ದೊಂದು' ಎಂದಾಗುತ್ತದಂತೆ. ಅದೇ ರೊಂದು>ರೊಂಡು>ರೆಂಡು ಆಗಿದೆಯೆಂದು ಹೇಳುತ್ತಾರೆ, without any base. It is too absurd even to laugh at.

ಕೆಲವು ತಮಿಳು ವಿದ್ವಾಂಸರು ಹೀಗೆಯೇ ಎಲ್ಲ ಭಾಷೆಗಳೂ ತಮಿಳಿನಿಂದಲೇ ಬಂದಿವೆ ಎನ್ನುತ್ತಾರೆ. ಇಂತಹ ದುರಾಗ್ರಹಿಗಳ ಕೈಗೆ ಸಿಕ್ಕು ಶಾಸ್ತ್ರವೇ ಹಾಳಾಗಿದೆ ಎಂಬುದು ತೀ.ನಂ.ಶ್ರೀ. ಯವರ ಖಚಿತವಾದ ಅಭಿಪ್ರಾಯ.

ಕರ್ಣಾಟ – ಕರ್ನಾಟ ರೂಪದ ಬಗ್ಗೆ : ಶಂಬಾ ಜೋಷಿಯವರು 'ಕನ್ನಾಡು' ಎಂಬುದೇ ಸಿದ್ಧಾಂತರೂಪ ಎನ್ನುತ್ತಾರೆ. ಅವರು ಬೇಕಾದ್ದಾಗಲಿ ಬೇರೆಯ ರೂಪವನ್ನು ಒಪ್ಪುವುದಿಲ್ಲ. 'ಮೌನಂ ದಾಕ್ಷಿಣ್ಯ ಲಕ್ಷಣಂ' ಎಂಬುದು ಕೆಲವರ ಅನಿಸಿಕೆಯಾದರೆ, 'ಮೌನಂ ಆಲಸ್ಯ

ಲಕ್ಷಣಂ' ಎಂಬುದು ನನ್ನ ಅನಿಸಿಕೆ. ಆದ್ದರಿಂದ ನಾನು ಜೋಷಿಯವರ ಈ ವಾದವನ್ನು ವಿಮರ್ಶಿಸುವ ಗೋಜಿಗೇ ಹೋಗುವುದಿಲ್ಲ.

ಕರ್+ನಾಡು=ಕರ್ನಾಡು – ಕಪ್ಪಗಿರುವ ಭೂಮಿ ಎಂದ ಕಾಲ್ಡ್‌ವೆಲ್. ನನ್ನ ಮತ್ತು ಗುರುಗಳಾದ ಬಿ.ಎಂ.ಶ್ರೀ ಇಬ್ಬರ ಒಪ್ಪಿಗೆಯೂ ಕಾಲ್ಡ್‌ವೆಲ್‌ನ ಈ ವಾದಕ್ಕೆ.

*

ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳು : ಇದರ ಬಗ್ಗೆ.

ಗ್ರೀಕ್ ಪ್ರಹಸನದಲ್ಲಿರುವ ಕನ್ನಡ ಮಾತುಗಳು ಗ್ರೀಕ್ ಭಾಷೆಯಲ್ಲಿ ಹೇಗೆ ನುಸಿದವು? ಅದನ್ನು ಅರ್ಥೈಸುವುದು ಹೇಗೆ? ಇದು ತುಂಬಾ ಕಠಿಣ. ಇದರ ಬಗ್ಗೆ ನನಗೆ ಒಂದು ವಿನೋದ ನೆನಪಿಗೆ ಬರುತ್ತದೆ. ಒಮ್ಮೆ ಒಬ್ಬ ಮರಾಠಿ ಮಿತ್ರನೊಬ್ಬನ ಮನೆಗೆ ಒಬ್ಬ ತಮಿಳ ಬಂದನಂತೆ. ಮರಾಠಿಗನ ಹೆಂಡತಿಗೆ ಮರಾಠಿ ಭಾಷೆಯೊಂದನ್ನುಳಿದು ಬೇರಾವ ಭಾಷೆಯೂ ಬಾರದು. ಇಬ್ಬರ ಊಟವೂ ಮುಗಿದ ಮೇಲೆ ಆ ಮಿತ್ರ ತನ್ನ ಹೆಂಡತಿಗೆ ಮರಾಠಿ ಭಾಷೆಯಲ್ಲಿ 'ವಿಡಾದೆ' ಎಂದನಂತೆ. ಎಂದರೆ ಊಟವಾದ ಮೇಲೆ ತಾಂಬೂಲವನ್ನು ಕೊಡು ಎಂದರ್ಥ. ತಮಿಳು ಮಿತ್ರನಿಗಾದರೂ ಮರಾಠಿಯ ಗಂಧವೇ ಇಲ್ಲ. ತಮಿಳಿನಲ್ಲಿ ಈ ಪದಕ್ಕೆ ಅರ್ಥ 'ಬಿಡಬೇಡ' ಎಂದು. ಕೂಡಲೇ ಅವನಿಗೆ ಹೊಳೆದದ್ದು ಈ ಅರ್ಥ. ವ್ಯಾಪಾರಕ್ಕೆ ಬಂದು ತುಂಬಾ ಹಣ ಇಟ್ಟುಕೊಂಡಿದ್ದ ಅವನಿಗೆ ತುಂಬಾ ಹೆದರಿಕೆಯಾಯಿತು. ತನ್ನನ್ನು ಏನಾದರೂ ಮಾಡಿಯಾರು ಎಂಬ ಭಯದಿಂದ ಅವನು ಓಡಿಹೋದನಂತೆ. ಇದ್ದಕ್ಕಿದ್ದಂತೆ ಅತಿಥಿ ಓಡಿ ಹೋದದ್ದನ್ನು ನೋಡಿ ಮರಾಠಿಗ ಅವನನ್ನು ಕರೆತರಲು ಅವನ ಹಿಂದೇ ಓಡಿದನಂತೆ. ಅವನು ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದಾನೆಂದು ಭಾವಿಸಿ ತಮಿಳ ಮತ್ತೂ ಜೋರಾಗಿ ಓಡಿದನಂತೆ. ಕೊನೆಗೆ ಅವನಿಗೆ ತಿಳಿಯ ಹೇಳಿದಾಗ ಸಮಾಧಾನವಾಯಿತಂತೆ. ಹೀಗೆ ಅನೇಕ ಸಲ ಸರಿಯಾಗಿ ಅರ್ಥೈಸದೆ, ಉಚ್ಚರಿಸದೆ ಅನಾಹುತಗಳಾಗುತ್ತವೆ. ಇದೇ ರೀತಿ ಗ್ರೀಕ್ ಪ್ರಹಸನದಲ್ಲಿರುವ ಕೆಲವು ಮಾತುಗಳನ್ನು ಕನ್ನಡ ಎಂಬಂತೆ ಓದಿದ್ದಾರೆ. 'ಬೇರೆ ಕೊಂಚ ಮಧು ಬೆರತ್ತುವೆಂ' ಎಂದು ಓದಿದ್ದಾರೆ. 'ಹಾಕು' ಎಂಬ ಪದ ಕೂಡ ಇದೆಯೆಂದು ಓದಿದ್ದಾರೆ. ಕ್ರಿ.ಶ. ಎರಡನೆಯ ಶತಮಾನದ ಕನ್ನಡದಲ್ಲಿ ಈ ಪದಗಳೆಲ್ಲ ಹೇಗೆ ಇರಲು ಸಾಧ್ಯ? ಈ ಪ್ರಹಸನವನ್ನು ಬರೆದಾತ ಈ ಭಾಷೆಯ ಧ್ವನಿಗಳನ್ನು ಯಥಾವತ್ತಾಗಿ ಉಲ್ಲೇಖಿಸಲು ಸಮರ್ಥನಾಗಿದ್ದನೆ? ಇಲ್ಲಿ ಪದಚ್ಛೇದ ಹೇಗೆ? ಕ್ರಿ.ಶ. ಎರಡನೆಯ ಶತಮಾನದಲ್ಲಿ ತುಳುನಾಡಿನ ಈ ಪ್ರದೇಶದಲ್ಲಿ ಯಾವ ಭಾಷೆಯನ್ನು ಆಡುತ್ತಿದ್ದರು? ಕನ್ನಡವೇ ಆಗಿದ್ದಲ್ಲಿ ಆ ಕಾಲದಲ್ಲಿ ಆ ಕನ್ನಡ ಇತ್ತೆನ್ನಲು ಬೇರೆ ಯಾವ ಆಧಾರಗಳಿವೆ? ಅರ್ಥೈಸುವಾಗ ಅನುಕೂಲಕ್ಕೆ ತಕ್ಕಂತೆ ಮಾಡಿದ್ದಾರೆಯೆ? ಅಥವಾ ಶಾಸ್ತ್ರೀಯವಾಗಿ ಮಾಡಿದ್ದಾರೆಯೇ? ಇದರ ಸ್ವರೂಪ ನಿರ್ಣಯ ಆಗುವವರೆಗೂ ಇದನ್ನು ಕನ್ನಡ ಎನ್ನಲಾಗುವುದಿಲ್ಲ. ನನಗೇನೋ ಇದು ಕನ್ನಡ ಎನ್ನುವುದರಲ್ಲಿ ನಂಬಿಕೆ ಸಾಲದು – ಹೀಗೆ ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ.

ಒಂದು ಭಾಷೆಯನ್ನಾಡುವ ಜನರ ಮನಸ್ಸು ಹೇಗೆ ಒಂದೇ ದಿಕ್ಕಿನಲ್ಲಿ ಕೆಲಸಮಾಡುತ್ತದೆ ಎಂಬುದರ ಬಗ್ಗೆ ಹೇಳುತ್ತಾ ಕರ್ನಾಟಕದ ಏಕೀಕರಣದ ವಿಷಯವನ್ನು ಎತ್ತಿಕೊಂಡು ಹೀಗೆ ಹೇಳಿದರು: ಆನೆಯ ಬಗ್ಗೆ ಒಂದು ಪ್ರಬಂಧ ಬರೆಯಲು ಒಮ್ಮೆ ಅನೇಕ ಭಾಷೆಗಳ ವಿದ್ವಾಂಸರನ್ನು ಕೇಳಲಾಯಿತು. ಇಂಗ್ಲಿಷ್‌ನವನು ಆನೆಯೊಂದನ್ನು ಶಿಕಾರಿ ಮಾಡಿ ಅದರ ಬಿಂಬದ ಹತ್ತಿರ ನಿಂತು ಫೋಟೋ ತೆಗೆಸಿಕೊಂಡು ಅದನ್ನೇ ಕಳಿಸಿದನಂತೆ. ಫ್ರೆಂಚ್‌ನವರು Love of Elephants ಎಂಬ ಪ್ರಬಂಧ ಬರೆದನಂತೆ. ಜರ್ಮನ್ ವಿದ್ವಾಂಸ ಆನೆಯ ಬಗ್ಗೆ ದೊರಕುವ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಸುಮಾರು ಐದುನೂರು ಪುಟಗಳ ಒಂದು ಸಂಪ್ರಬಂಧವನ್ನು ಬರೆದು ಕಳಿಸಿದನಂತೆ. ಪೋಲೆಂಡ್‌ನವನು ಆಗ ಪ್ರಚಲಿತವಿದ್ದ ಸಮಸ್ಯೆ ಒಂದಕ್ಕೆ ಹೊಂದಿಸಿ Elephant and the Polish question ಎಂಬ ಪ್ರಬಂಧ ಬರೆದನಂತೆ. ಹಾಗೆಯೇ ನಾವು ಏಕೀಕರಣಕ್ಕೆ ಮುಂಚೆ ಎಲ್ಲದಕ್ಕೂ That and the ಏಕೀಕರಣ Question ಎನ್ನುತ್ತಿದ್ದೆವು.

ವ್ಯಾಕರಣದ ತಪ್ಪು ಪ್ರಯೋಗಗಳು ಹೇಗೆ ವಿದ್ವಾಂಸರ ಕಿವಿಗೆ ಕರ್ಕಶವಾಗುತ್ತದೆ ಎಂಬುದಕ್ಕೆ ಅವರು ಕೊಟ್ಟ ಉದಾಹರಣೆ ಸ್ವಾರಸ್ಯಕವಾಗಿದೆ: ಒಬ್ಬ ಸಂಸ್ಕೃತ ವಿದ್ವಾಂಸನ ಬಳಿ ಅವನ ಮಿತ್ರ 'ಶೀತಂ ಬಾಧತಿ' ಎಂದುಬಿಟ್ಟನಂತೆ. ಅದರಿಂದ ಖೇದಗೊಂಡ ವಿದ್ವಾಂಸ ಹೀಗೆ ಹೇಳಿದನಂತೆ "ನತಥಾ ಬಾಧತೇ ಶೀತಂ ಯಥಾ ಬಾಧತಿ ಬಾಧತೇ." ಇಲ್ಲಿ ವಿದ್ವಾಂಸನ ಮಿತ್ರ ಬಳಸಿದ 'ಬಾಧತಿ' ಎಂಬ ಪರಸ್ಮೈಪದ ತಪ್ಪು. ಅಲ್ಲಿ 'ಬಾಧತೇ' ಎಂಬ ಆತ್ಮನೇ ಪದ ಇರಬೇಕಾಗಿತ್ತು. ಅದನ್ನು ಹೇಳುವ ಚಮತ್ಕಾರ ರೀತಿ ಇಲ್ಲಿದೆ.

ಗ್ರಂಥ ಸಂಪಾದನೆಯ ಬಗ್ಗೆ ತೀನಂಶ್ರೀ

ವಿ.ಎಸ್. ಸುಕ್ತಂಕರ್ ಅವರು International fame for Indian scholarship. Sukthankar Memorial Volume – Vol : II Mahabharatha Studies – It is a treasure of Textual Criticism.

Bowdlerizing ಎಂದರೆ ಗೃಹಸ್ಥರು ಮೊದಲಾದ ಸಭ್ಯಜನ ಓದುವಂತೆ ಸಂಸ್ಕರಣ ಮಾಡುವುದು. ಷೇಕ್ಸ್‌ಪಿಯರ್‌ನ ನಾಟಕಗಳನ್ನು Bowlder ಎಂಬ ವಿದ್ವಾಂಸ ಹೀಗೆ ಸಂಸ್ಕರಿಸಿದ. ಆ ಕಾರ್ಯಕ್ಕೆ ಅವನ ಹೆಸರನ್ನೇ ಇಡಲಾಗಿದೆ.

ಗ್ರಂಥ

ಗ್ರಂಥಪಾತ	ಗ್ರಂಥಪ್ರಕ್ಷೇಪ	ಗ್ರಂಥ ವಿಪರ್ಯಾಸ
(ಲೋಪ)	(ಆಗಮ)	(ಆದೇಶ)

ಇವನ್ನೆಲ್ಲಾ ಇಟ್ಟುಕೊಂಡು ಮೂಲಪಾಠವನ್ನು ನಿರ್ಣಯಿಸಬೇಕು. ಗ್ರಂಥ ಸಂಪಾದನೆಯ ಅವಶ್ಯಕತೆ ಇದೆಯೋ? ಎಂದರೆ ಇದೆ ಎಂದೇ ಉತ್ತರ. ಸರಿಯಾದ್ದನ್ನು (ಯಥಾವತ್ತಾದುದನ್ನು) ತಿಳಿದುಕೊಳ್ಳಬೇಕೆಂಬುದು (desire for accuracy) ಮನುಷ್ಯನಿಗೆ ಸಹಜವಾದ ಆಸಕ್ತಿ.

ಮೂಲಪಾಠ ಹೇಗಿತ್ತೆಂದು ತಿಳಿದುಕೊಳ್ಳುವುದರಲ್ಲೇ ಒಂದು ಬಗೆಯ ತೃಪ್ತಿ ಇದೆ. ಇದೊಂದು ವೈಜ್ಞಾನಿಕ ದೃಷ್ಟಿ.

೨. ಭಾಷೆಯ ರೂಪದ ಖಚಿತತೆ.

೩. ಕಾವ್ಯಭಿಮಾನಿಗಳಿಗೆ ಕೂಡ ಇದು ಅವಶ್ಯಕವಾಗಿದೆ.

ಗದಾಯುದ್ಧದಲ್ಲಿ ಬರುವ

> ಸಾಧಿಸುವೆಂ ಫಲ್ಗುಣ (ನಿಂ) – 'ನಂ' ಪಾಠಾಂತರ
> ಸಾಧಿಸುವೆಂ ಪವನ ಸುತನಬಸಿಟೆ ಹಾಕ
> ರ್ಣಾ ದುಶ್ಯಾಸನ ತೆಗೆವೆಂ
> ನಿರ್ದೋ೯ಷಿ ಬಟಿಕ್ಕೆ ಯಮಜನೊಳ್ ಪುದುವಾಟಿಪ್ಪೆಂ

ಗದಾಯುದ್ಧ ಸಂಗ್ರಹ ೪–೧೭

ಇದಕ್ಕೆ ಕೊನೆಯ ಪಾದದಲ್ಲಿ ರಾಮಾನುಜಯ್ಯಂಗಾರ್ಯರ ಪ್ರತಿಯಲ್ಲಿ 'ಸಾದಿಸಿ ನಿರ್ದೋ೯ಷಿ ಯಮಜನೊಳ್ ಪುದುವಾಟಿಂ' ಎಂದೂ, ರಂಶ್ರೀ ಮುಗಳಿಯವರ ರನ್ನನ ಕೃತಿರತ್ನದಲ್ಲಿ 'ಸಾದಿಸಿ ನಿರ್ದೋ೯ಷಿಗಳಿಕ್ಕೆ ಯಮಜನೊಳ್ ಪದುವಾಟಿಂ' ಎಂದೂ ಇದೆ. ಪಾತ್ರದ ಮನೋಧರ್ಮಕ್ಕೆ ಅನುಗುಣವಾಗಿ ಇಂಥ ಪಾಠ ನಿರ್ಣಯವಾಗಬೇಕು.

೪. ಸ್ವೀಪಾ (ಟ)

$ಅ_{೧}$
$ಆ_{೨}$
$ಅ_{೩}$

ಟ = ಗದಾಯುದ್ಧ ನಾಟಕ
ನ = ಓರಿಯಂಟಲ್ ಲೈಬ್ರರಿ ಪ್ರತಿ
ಅ = ರಾಮಾನುಜಯ್ಯಂಗಾರ್ಯರು ಹೊರತಂದ ಪ್ರತಿ

'ಬಸಿಟಿಂ' ಎಂಬ ಪದ 'ಫಲ್ಗುಣನಿಂ' ಎಂದೇ ಇರಬೇಕು ಎನ್ನುವುದನ್ನು ಸೂಚಿಸುತ್ತದೆ. 'ಬಸಿಟಿಂದಾಕರ್ಣಾ' ಎಂದಿದೆ 'ನ' ಪ್ರತಿಯಲ್ಲಿ. ಅದು 'ಹಾ ಕರ್ಣಾ' ಇರಬೇಕು.

೫. ಪಾಠಾಂತರಗಳು

ನಿರ್ದೋ೯ಷಿಗ ಬಳಿಕ್ಕೆ (ನ)
ನಿರ್ವಾ೯ದಿಗಳೊಳ್ ಬಳಿಕ (ಮ)
ನಿರ್ದೋ೯ಷಿಗಳಿಕ್ಕೆ (ಅ)
ಸಾಧಿಸಿ ನಿರ್ದೋ೯ಷಿ (ಟ)

೬. ಪುದುವಾಟ್ವಿಂ (ನ)

ಟ್ವೆಂ (ಅ೧)	'ಟ್ವೆಂ' ಎನ್ನುವುದೇ ಉಚಿತ. 'ನ' ಪ್ರತಿಯಲ್ಲಿ 'ಟ್ವೆಂ'
ಟ್ವೆಂ (ಅ೨)	ಇದೆ. 'ವ' ಕಾರಕ್ಕೆ 'ಪ' ಕಾರದ ಒತ್ತು ಬಿದ್ದು
ಟ್ವೆಂ (ಅ೩)	ಬಿಟ್ಟಿರುವಂತೆ ಕಾಣುತ್ತದೆ. ಜೊತೆಗೆ 'ಟ್ವೆಂ' ಎಂದು
ಪುದುವಾಳೆಂ (ಟ)	ಇದ್ದರೆ ಮಾತ್ರ ಅರ್ಥ ಹೆಚ್ಚು ಸಮಂಜಸವಾಗುತ್ತದೆ.
ಪುದುವಾಟ್ವೆಂ (ಟ)	

ಪಾಠಾಂತರಗಳಿಂದಾಗಿ ಏನೇನು ತಾಪತ್ರಯವಾಗುತ್ತದೆ ಎನ್ನುವುದನ್ನು ಈ ಉದಾಹರಣೆ ಹೇಳುತ್ತದೆ. ಶ್ರೀ ಮುಗಳಿಯವರು 'ಪುದುವಾಟ್ವಿಂ' ಎಂಬ ರೂಪ ಹಿಡಿದು ಭೀಮಪಾತ್ರವನ್ನು ಸಮರ್ಥಿಸಿದ್ದಾರೆ. ಆದರೆ ಪುದುವಾಟ್ವೆಂ' ಎಂಬ ಪಾಠ ದುರ್ಯೋಧನ ಪಾತ್ರಕ್ಕೆ ಪುಷ್ಟಿಕೊಡುತ್ತದೆ.

ಗ್ರಂಥ ಸಂಪಾದನೆ ಮೂಲ ಪಾಠದ ನಿರ್ಣಯವೇ ಹೊರತು ಕವಿತೆಯ ದೃಷ್ಟಿಯಿಂದ ಯಾವುದು ಉತ್ತಮ ಎನ್ನುವುದಲ್ಲ. ಆ ಪಾಠಕ್ಕಿಂತ ಈ ಪಾಠ ಚೆನ್ನಾಗಿದೆ ಎಂಬ ಚಾಪಲ್ಯ ಸಹಜವಾಗಿ ಬರುವುದುಂಟು. ಆಗ ಕವಿಯ ದೃಷ್ಟಿಯಿಂದ ವಿಚಾರಮಾಡಬೇಕಾದ್ದು ಯೋಗ್ಯ. ಇದಕ್ಕಿಂತ ಈ ಪಾಠ ಇಟ್ಟುಕೊಂಡಿದ್ದರೆ ಉತ್ತಮವಾಗಿರುತ್ತಿತ್ತು ಎನ್ನಿಸಬಹುದಾದರೂ ಅದು ಗ್ರಂಥ ಸಂಪಾದನಕಾರನ ಕೆಲಸವಲ್ಲ. ಹಾಗೆ ಮಾಡಿದರೆ ಕವಿಯನ್ನು ತಿದ್ದುವುದಕ್ಕೆ ಹೊರಟಂತಾಗುತ್ತದೆ. That will be an improvement of the text but it will not be textual criticism.

*

ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ನಾಟಕದ ಒಂದು ಪಾಠ ನಿರ್ಣಯ:

Hamlet : Oh, that this too solid flesh would melt, that
rersolve itself in to a dew

ಇದರಲ್ಲಿ Solid ಎಂಬುದು ಅಂಗೀಕೃತ ಪಾಠ, ಇದು ಫೋಲಿಯೋ ಪ್ರತಿಯ ಪಾಠ. ಇನ್ನೊಂದು ಪಾಠ ಕ್ವಾರ್ಟೋ ಪ್ರತಿಯಲ್ಲಿ Sallied ಎಂದಿದೆ. ಇದು Sullied ಇರಬೇಕು. ಅದು ತಪ್ಪಿ Sallied ಆಗಿದೆ. ಬೇರೆಡೆಯೂ ಹೀಗಾಗಿರುವುದುಂಟು. Sullied ಗೆ ಅರ್ಥ ಇದೆ. ಹಾಗೆಂದರೆ dishonourable ಎಂದು ಅರ್ಥ. Sallied ಗೆ ಅರ್ಥ ಇಲ್ಲ. ಆದ್ದರಿಂದ ಅದು Sallied ಬದಲು Solid ಆಗಿಬಿಟ್ಟಿತು.

ಆದಿಪುರಾಣದಲ್ಲಿ ಲಲಿತಾಂಗನಿಗೆ ಆಯುಷ್ಯಾವಸಾನವಾದಾಗ ಲೋಕಾಂತಿಕ ದೇವತೆಗಳು ಹೇಳುವ ಮಾತು "ನಿನಗೊರ್ವಂಗಲ್ಲವಸ್ಥಾಂತರಂ ಅಮರ ಜನಕ್ಕೆಲ್ಲಂ ಈ ಪಾಂಗೆ ಕಾರುಣ್ಯ ನಿನಾದಂ ನಿನ್ನಂ ಆದಂ ನಗಿಸುಗುಂ ಎಟೆದುಯ್ವ ಅಂತಕಂಗಿಲ್ಲ ದೇವಾಂಗನೆಯರ್ ಮಾಜೂಂಪರೇ"

"ನಿನ್ನನ್ನು ಎಳೆದುಕೊಂಡು ಹೋಗುವ ಯಮನಿಗೂ ಸಹ ನಿನ್ನನ್ನು ಬಿಡುವ ಅಧಿಕಾರವಿಲ್ಲ" ಎಂದು ಮೊದಲು ಅರ್ಥಮಾಡಿಕೊಂಡಿದ್ದೆ. ಈಗ ಹಾಗೆಂದುಕೊಂಡಿಲ್ಲ. ಕುಂದಣಗಾರರ ಮುದ್ರಣದಲ್ಲಿ 'ಎಣೆಯುರ್ಯ್ವಂತಕಂಗಿಲ್ಲಿ' ಎಂದಿದೆ. ಎಸ್.ಜಿ. ನರಸಿಂಹಾಚಾರ್ಯರ ಪ್ರತಿಯೊಂದ ನ್ನುಳಿದು ಬೇರೆಲ್ಲ ಪ್ರತಿಗಳಲ್ಲೂ 'ಇಲ್ಲಿ' ಎಂದೇ ಇದೆ. ಅಂದರೆ ಯಮನನ್ನು ಎದುರಿಸಿ ದೇವಾಂಗನೆಯರು ನಿನ್ನನ್ನು ಉಳಿಸಿಕೊಳ್ಳುವರೇ ಎಂಬ ಸಾಮಾನ್ಯವಾದ ಭಾವ. ಪಂಪ 'ಇಲ್ಲ' ಎದು ಬರೆದಿದ್ದರೆ ಅವನ ಪ್ರತಿಭೆಗೆ ಸಾಕ್ಷಿಯಾಗಿ ಇರುತ್ತಿತ್ತು. ಆದರೆ ಅದಕ್ಕಾಗಿ ಅಷ್ಟೊಂದು ಪ್ರತಿಗಳ ಪಾಠವನ್ನು ಅಲ್ಲಗಳೆಯಲಾಗುವುದಿಲ್ಲ. ಪಂಪ ಹದಿನಾಲ್ಕು ಆಶ್ವಾಸಗಳ ಉದ್ದಕ್ಕೂ ಪ್ರತಿಭಾನ್ವಿತನಾಗಿದ್ದಾನೆ ಎಂದು ಹೇಳುವುದು ಧಾರ್ಷ್ಟ್ಯವಾದೀತು. 'ಇಲ್ಲಿ' ಎಂಬ ಪಾಠವನ್ನೇ ನಾವು ಒಪ್ಪಿಕೊಳ್ಳಬೇಕು. ನಮ್ಮ ಕಾರ್ಯ ಕವಿ ಏನು ಬರೆದಿದ್ದಾನೆ ಎಂದು ನೋಡುವುದು. ಚೆನ್ನ ಚಾರದ ಪ್ರಶ್ನೆ ಕವಿ ವಿವಕ್ಷಿತವೇ ಎಂಬ ದೃಷ್ಟಿಯಿಂದಲೇ ಹೊರತು ವಿಮರ್ಶನ ದೃಷ್ಟಿಯಿಂದಲ್ಲ.

ತೀನಂಶ್ರೀಯವರ ಆತ್ಮೀಯತೆ

ನಾವು ವಿದ್ಯಾರ್ಥಿಗಳಾಗಿದ್ದಾಗ ಮತ್ತು ಅವರ ಕೈಕೆಳಗೆ ಸಂಶೋಧನ ವಿದ್ಯಾರ್ಥಿಗಳಾಗಿದ್ದಾಗ ಅನೇಕ ಸಂದರ್ಭಗಳಲ್ಲಿ ತೀನಂಶ್ರೀಯವರು ನಮ್ಮೊಂದಿಗೆ ತುಂಬಾ ಆತ್ಮೀಯವಾಗಿ ನಡೆದು ಕೊಂಡಿದ್ದಾರೆ. ಡಾ॥ ಪು.ತಿ.ನ ಅವರು 'ಮಲೆದೇಗುಲ' ಕಾವ್ಯವನ್ನು ಪ್ರಕಟನೆಗೆ ಮುಂಚೆ ತೀನಂಶ್ರೀಯವರ ಮನೆಯಲ್ಲಿ ಓದಿದ ಸಂದರ್ಭದಲ್ಲಿ ನಮ್ಮಲ್ಲಿ ಕೆಲವರಿಗೆ ಆಹ್ವಾನವಿತ್ತು. ಅಮೆರಿಕಾದ ಪ್ರಾಧ್ಯಾಪಕ 'ಎಮೆನೊ' ಅವರು ಮೈಸೂರಿಗೆ ಬಂದಿದ್ದಾಗ ಅವರ ಮನೆಯಲ್ಲಿ ಅವರನ್ನು ಭೇಟಿಯಾಗುವ ಸಂದರ್ಭ ಒದಗಿಬಂತು. ಅವರ ಮಗಳ ಮದುವೆ, ಮಗನ ಮುಂಜಿ ಇಂಥ ಸಂದರ್ಭಗಳಲ್ಲೆಲ್ಲ ನಾವೆಲ್ಲ ಅವರ ಮನೆಯ ಮಕ್ಕಳಂತೆ ಓಡಾಡಿದ್ದುಂಟು. ಅವರಿಗೆ ತಮ್ಮ ವಿದ್ಯಾರ್ಥಿಗಳ ಬಗ್ಗೆ ಅಪಾರ ವಿಶ್ವಾಸ ಮತ್ತು ಮೆಚ್ಚುಗೆ. ನಾನು ಎಂ.ಎ. ತರಗತಿಯಲ್ಲಿ ಪ್ರಥಮ ದರ್ಜೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದಾಗ ನನ್ನ ಅನೇಕ ಮಿತ್ರರಿಗೆ ಅಧ್ಯಾಪಕರ ಕೆಲಸ ಸಿಕ್ಕಿತು. ನನಗೆ ಸಿಕ್ಕಲಿಲ್ಲ. ಆಗ ಅವರು ನನ್ನೆದುರಿಗೇ ಆಗ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿದ್ದ ಶ್ರೀ ಪಿ. ಮಲ್ಲಿಕಾರ್ಜುನಪ್ಪನವರಿಗೆ ಫೋನ್ ಮಾಡಿ "ಮೊದಲನೆಯ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗೆ ವಿಶ್ವವಿದ್ಯಾಲಯದಲ್ಲಿ ಕೆಲಸ ಕೊಡದಿದ್ದರೆ ಹೇಗೆ" ಎಂದು ಹೇಳಿದ್ದನ್ನು ನಾನು ಬಲ್ಲೆ. ಅಧ್ಯಾಪಕನಾಗಿ ನೇಮಕ ಪತ್ರ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಸಂಶೋಧನಾ ವೇತನ ಎರಡೂ ಒಟ್ಟಿಗೇ ಬಂದಾಗ ಎರಡರಲ್ಲಿ ಯಾವುದನ್ನು ಆರಿಸಿಕೊಳ್ಳುವುದು ಎಂಬ ಸಮಸ್ಯೆ ಎದುರಾದಾಗ ಅವರ ಸಲಹೆಯನ್ನು ಕೇಳಲು ಹೋದೆ. ಆಗ ಅವರು ನನ್ನನ್ನು ಹುರಿದುಂಬಿಸುತ್ತಾ "ಈ ಚಿಕ್ಕ ವಯಸ್ಸಿನಲ್ಲೇ, ಹಿಡಿದ ಕೈಲೇ ಪಿಎಚ್.ಡಿ ಮುಗಿಸಿಬಿಡಿ' ಎಂದರು. ಅವರೇ ನಮಗೆ ಮಾರ್ಗದರ್ಶಕರೂ ಆದರು. ನನಗೆ ಮೊದಲು "ಮಹಾಪುರಾಣ ಮತ್ತು ಕನ್ನಡ ಜೈನ ಪುರಾಣಗಳು" ಎಂಬ ವಿಷಯವನ್ನು ಸೂಚಿಸಿದರು. ಅನಂತರ ವಿಷಯದ ವ್ಯಾಪ್ತಿ ದೊಡ್ಡದಾಯಿತೆಂದು "ಜಿನ ಸೇನಾಚಾರ್ಯರ ಪೂರ್ವ ಪುರಾಣ ಮತ್ತು ಅದರಿಂದ ಪ್ರಭಾವಿತವಾದ ಕನ್ನಡ ಆದಿಪುರಾಣ

ಗಳು" ಎಂಬ ವಿಷಯಕ್ಕೆ ಮಾರ್ಗದರ್ಶನ ಮಾಡಿದರು. ನಮ್ಮ ದುರದೃಷ್ಟದಿಂದಾಗಿ ಆ ಕಾರ್ಯ ನಾವು ಮಾಡಿ ಮುಗಿಸುವ ಮೊದಲೇ, ಮೊದಲ ಕೆಲವು ಪುಟಗಳನ್ನು ಅವರು ಓದಿ ಪರಿಷ್ಕರಿಸಿದ್ದಾಗ, ಅವರು ನಮ್ಮನ್ನು ಬಿಟ್ಟು ಹೋದರು. ಧಾರವಾಡದದಲ್ಲಿ 'Reader in Jain Literature' ಹುದ್ದೆಗೆ ನನಗೆ ಸಂದರ್ಶನಕ್ಕೆ ಬಂದಿತ್ತು. ಆಗ ನಾನು ಅವರನ್ನು ಭೇಟಿಯಾಗಿ ಅವರಿಂದ ಒಂದು ಅರ್ಹತಾ ಪತ್ರವನ್ನು ಬೇಡಿದೆ. ಆಗ ಅವರು ಹೇಳಿದರು "ನೋಡಿ ನಿಮಗೆ ಹೇಗೂ ಮೊದಲನೆಯ ಶ್ರೇಣಿ ಇದೆ. ಅಧ್ಯಾಪಕರಾಗಿ ಕೆಲವು ವರ್ಷಗಳ ಅನುಭವವೂ ಇದೆ. ಆ ವಿಷಯವನ್ನು ಕುರಿತು ಪಿಎಚ್.ಡಿಗಾಗಿ ವ್ಯಾಸಂಗ ಕೂಡ ಮಾಡಿದ್ದೀರಿ. ಇವೆಲ್ಲ ಇದ್ದೂ ನಿಮಗೆ ನನ್ನ ಸರ್ಟಿಫಿಕೇಟ್ ಯಾಕೆ? It may go against you. ಆದ್ದರಿಂದ ಹೋಗಿಬನ್ನಿ. ನಿಮಗೆ ಒಳ್ಳೆಯದಾಗಲಿ" ಎಂದು ಆಶೀರ್ವದಿಸಿದರು. ನಾನು ನನ್ನ ವಿವಾಹದ ಆಮಂತ್ರಣ ಪತ್ರಿಕೆಯನ್ನು ಕೊಡಲು ಅವರ ಬಳಿ ಹೋಗಿ ಅವರಿಂದ ಆಶೀರ್ವಾದ ಬೇಡಿದಾಗ, ಮದುವೆಯ ದಿನಾಂಕವನ್ನು ಕ್ಯಾಲೆಂಡರ್‌ನಲ್ಲಿ ಗುರುತು ಹಾಕಿಕೊಂಡು, ನೆನಪಿಟ್ಟುಕೊಂಡು ಅಂದು ಬಂದು ನಮ್ಮನ್ನು ಆಶೀರ್ವದಿಸಿದರು. ಹೀಗೆ ಅನೇಕ ಸಂದರ್ಭದಲ್ಲಿ ಅವರು ನನಗೆ ಹಿರಿಯರಾಗಿ ತಂದೆಯ ಸ್ಥಾನದಲ್ಲಿದ್ದು ನನ್ನ ಉತ್ಕರ್ಷಕ್ಕೆ ಕಾರಣರಾಗಿದ್ದಾರೆ. ಆ ಆತ್ಮೀಯತೆಯ ಸವಿಯನ್ನೂ ಇಂದಿಗೂ ಮೆಲುಕುಹಾಕುವುದು ನನ್ನ ಜೀವನದ ಬಹುದೊಡ್ಡ ಭಾಗ್ಯಗಳಲ್ಲಿ ಒಂದು ಎಂದು ಭಾವಿಸಿದ್ದೇನೆ.

ತೀನಂಶ್ರೀ – ಕೆಲವು ಮಧುರ ಸ್ಮೃತಿಗಳು

ಹಿಮವದ್ಗೋಪಾಲಸ್ವಾಮಿ ಬೆಟ್ಟಕ್ಕೆ ಕನ್ನಡ ವಿಭಾಗವೇ ಪ್ರವಾಸ ಹೊರಟಿತ್ತು. ಪ್ರಾಧ್ಯಾಪಕರುಗಳು ಮತ್ತು ವಿದ್ಯಾರ್ಥಿಗಳ ನಡುವಣ 'ಬಿಗಿ' ಒಮ್ಮೆಗೇ ಸಡಿಲವಾಗಿ ಬಿಟ್ಟಿತ್ತು. ಒಂದೇ ಕುಟುಂಬದವರಂತೆ ಪರಸ್ಪರ ವಿನೋದ, ವ್ಯಂಗ್ಯ, ಆತ್ಮೀಯತೆಯ ವಾತಾವರಣ ಉಂಟಾಗಿತ್ತು. ಬೆಟ್ಟದ ಮೇಲೆ ಒಂದು ತಂಗುದಾಣ. ಪೊಗದಸ್ತಾದ ಊಟ, ಉಪಚಾರ. ವಿಶ್ರಾಂತಿಯ ನಂತರ ಅಂತಾಕ್ಷರಿಯ ಅಂತ್ಯವಿಲ್ಲದ ಮೇಲಾಟ. ಎರಡು ದಿಗ್ಗಜಗಳ ಪರ ಪ್ರಾಧ್ಯಾಪಕರುಗಳ ಮತ್ತು ವಿದ್ಯಾರ್ಥಿಗಳ ಹಂಚಿಕೆ. ಆಚಾರ್ಯ ತೀನಂಶ್ರೀ ಮತ್ತು ಆಚಾರ್ಯ ಡಿ.ಎಲ್.ಎನ್. ಬಣಗಳ ನಡುವೆ ಸ್ಪರ್ಧೆ. ಸಂಸ್ಕೃತ ಮತ್ತು ಕನ್ನಡ ಕಾವ್ಯಗಳ ತುಣುಕುಗಳ ರಸದೌತಣ. ನಡುವೆ ನಡೆದ ಒಂದು ವಿನೋದ ಪ್ರಸಂಗ. ನನ್ನ ಬಳಿ ತೀನಂಶ್ರೀಯವರ 'ಸಮಾಲೋಕನ' ದ ಪ್ರತಿ ಇತ್ತು. ಅದಕ್ಕೆ ಮೇಲುಹೊದಿಕೆ ಹಾಕಿದ್ದೆ... ಒಳಪುಟವನ್ನು ತೆಗೆದು ನೋಡುತ್ತಿದ್ದೆ. ಅದರಲ್ಲಿ 'ಸಹಧರ್ಮಿಣಿಗೆ' ಎಂಬ ಅರ್ಪಣದ ಪುಟವನ್ನು ನೋಡಿದವರೇ ತೀನಂಶ್ರೀಯವರು 'ಇದೇನು! ಇತ್ತೀಚೆಗೆ ಎಲ್ಲರೂ ತಮ್ಮ ಸಹಧರ್ಮಿಣಿಯರಿಗೇ ತಮ್ಮ ಪುಸ್ತಕವನ್ನು ಅರ್ಪಿಸುತ್ತಿದ್ದಾರಲ್ಲ! ಅದು ಯಾವ ಪುಸ್ತಕ? ಇಲ್ಲಿ ಕೊಡಿ' ಎಂದರು. ನಾನು ಕೊಟ್ಟೆ. ಅದು ಅವರದೇ ಪುಸ್ತಕವೆಂದು ತಿಳಿದ ಮೇಲೆ ಮನಸಾರೆ ನಕ್ಕರು, ಅವರ ನಗುವಿನ ಹೊನಲಿನಲ್ಲಿ ನಾವೂ ತೇಲಿಹೋದೆವು.

ಎಂ.ಎ. ತರಗತಿಯಲ್ಲಿದ್ದಾಗ ಒಂದು ದಿನ ಪ್ರವಚನದ ನಡುವೆ ಅವರು ತಾವು ಹಿಂದೆ ರಚಿಸಿದ್ದ ಎರಡು ಸಾಲಿನ ಒಂದು ಕವಿತೆಯನ್ನು ಓದಿದರು. "ಶ್ರೇಷ್ಠಗಾನವನು ಕೇಳಿರೆ

ಸೊಗಸದು ಮಿಕ್ಕ ಹಾಡುಕಿವಿಗೆ। ಮತ್ತದಾವಳೂ ನೆನಪಿಗೆ ಬಾರಳು ನಿನ್ನನೊಲಿದ ನನಗೆ." ಅವರ ರಸಿಕತೆಗೆ ತರುಣರಾದ ನಾವೆಲ್ಲರೂ ಮಾರುಹೋದೆವು.

ನಮ್ಮೆಲ್ಲ ಸಹಪಾಠಿಗಳಿಗೂ ತುಂಬಾ ಮೆಚ್ಚಿನ ಪ್ರಸಂಗವೊಂದು ಎಂದರೆ ಅವರು 'ಸದ್ಯೋಮುಂಡಿತ ಮತ್ತ ಹೂಣ ಚಬುಕ ಪ್ರಸ್ಪರ್ಧಿನಾರಂಗಿತಂ' ಅನ್ನು ಹೇಳುವಾಗಿನದು. ಹಾಗೆಂದರೆ 'ಆಗ ತಾನೆ ಮುಂಡನ ಮಾಡಿಕೊಂಡ (ಶೇವ್) ಮತ್ತ ಹೂಣನ ಕೆನ್ನೆಯು ಕಿತ್ತಲೆಯೊಂದಿಗೆ ಸ್ಪರ್ಧಿಸುತ್ತಿತ್ತು' ಎಂದರ್ಥ. ಎಂದಿನಂತೆ ಅವರೂ ಕೂಡ ನುಣ್ಣಗೆ ಗಡ್ಡ ತೆಗೆದು ಕೆಂಪಗೆ ಮಿರಿ ಮಿರಿ ಮಿಂಚುವ ಕಪೋಲದೊಂದಿಗೆ ಈ ಮಾತನ್ನು ಹೇಳುವುದೇ ತಡ, ನಮ್ಮೆಲ್ಲರ ಕಣ್ಣುಗಳೂ ಅವರತ್ತಲೇ ತಿರುಗಿದುವು. ಮತ್ತೆ ಹೂಣನ ಚಿಬುಕವನ್ನು ಅವರಲ್ಲೇ ಕಾಣುತ್ತ ಅನುಭವಿಸುತ್ತಿದ್ದ ನಮ್ಮನ್ನು ಅವರು ಗಮನಿಸಿ, ನಮ್ಮ ಕಣ್ಣ ನೋಟದಲ್ಲೇ ಅರ್ಥಮಾಡಿಕೊಂಡು ಮನಸಾರೆ ನಗುತ್ತಾ, ತಲೆಯನ್ನು ಓಲಾಡಿಸುತ್ತಾ, ತಾವೂ ಅದರಲ್ಲಿ ಭಾಗಿಯಾಗಿ ಚೆಲುವಿನ ಬುಗ್ಗೆಯನ್ನು ಚಿಮ್ಮಿಸಿದ್ದನ್ನು ಹೇಗೆ ತಾನೆ ಮರೆಯಲಾದೀತು?

*

ತೀ.ನಂ.ಶ್ರೀಯವರು ಶ್ರೇಷ್ಠದರ್ಜೆಯ ಪ್ರಾಧ್ಯಾಪಕರು, ಶಿಷ್ಯ ವಾತ್ಸಲ್ಯ ಪ್ರಪೂರ್ಣರು, ಸತ್ಯನಿಷ್ಠುರರು, ಮೇಲಾಗಿ ತಮ್ಮ ಗುರುಗಳಾದ ಬಿ.ಎಂ.ಶ್ರೀಯವರ ಪರಂಪರೆಯನ್ನು ಮುಂದುವರಿಸಿಕೊಂಡು ಬಂದು, ಕನ್ನಡದ ಏಳಿಗೆಗಾಗಿ ಸದ್ದಿಲ್ಲದೆ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದವರು. ಇಂಥ ಗುರುಗಳ ಶಿಷ್ಯರು ನಾವು ಎಂಬ ಹೆಮ್ಮೆ ನಮ್ಮದು.

'ತಸ್ಯ ಮೇ ಸರ್ವ ಶಿಷ್ಯಸ್ಯ ನೋಪದೇಶದರಿದ್ರತಾ.' ಅಂತು ಸರ್ವರ ಶಿಷ್ಯರಾದ ನನಗೆ ಉಪದೇಶ ಭಾಗದಲ್ಲಿ ಇಲ್ಲ ಕೊರತೆ ಎಂಬ ಅವರದೇ ವಾಕ್ಯವನ್ನು ಪುನರುಚ್ಚರಿಸೋಣ.

*

ತೀ.ನಂ.ಶ್ರೀ ಸುಭಾಷಿತ

೧. ಸಂಯಮ ಬಾಳಿನ ಒಂದು ಅಂತರಿಕ ರೀತಿ. ಸಭ್ಯತೆ ಅದು ಹೊರಗೆ ವ್ಯಕ್ತವಾಗುವ ರೀತಿ.
೨. ಕಜ್ಜಿಯನ್ನು ಕೆರೆದುಕೊಂಡಾಗಿನ ಆನಂದ ನಿನಗಿರಲಿ ಅದರ ಪರಿಣಾಮ ನಿನ್ನ ಶತ್ರುವಿಗಿರಲಿ.
೩. ನೋಟಗಳು ಯೌವನದಲ್ಲಿ; ನೆನವರಿಕೆ ಮುಪ್ಪಿನಲ್ಲಿ.
೪. ಪ್ರವಾಸಿಯ ಪ್ರಪಂಚದಲ್ಲಿ ಗಡಿಯಾರದ್ದೇ ಪರಮ ಶಾಸನ.
೫. ಮಾನವನ ಕ್ಷುದ್ರ ಶತ್ರುಗಳ ಶ್ರೇಣಿಯಲ್ಲಿ ತಗುಣಿಗೇ ಅಗ್ರ ತಾಂಬೂಲ.
೬. ಹಂಬಲಿಸಿ ಒಂದು ಭೋಗವನ್ನು ಸಂಪಾದಿಸುವ ಹೊತ್ತಿಗೆ ಅದನ್ನು ಆಸ್ವಾದಿಸುವ ತ್ರಾಣವೇ ಕುಗ್ಗಿ ಹೋಗಿರುತ್ತದೆ.

೭. ರಾತ್ರಿಯಲ್ಲಿ ಆಕಾಶವನ್ನು ನಿರೀಕ್ಷಿಸುವುದು ಈಚೀಚೆಗೆ ಒಂದು ಅಪೂರ್ವ ಭೋಗವಾಗಿ ಪರಿಣಮಿಸುತ್ತಿದೆ.

೮. ಸ್ನೇಹದ ತಳಹದಿ ಪ್ರೇಮ, ಋಜುತ್ವ, ಬಾಂಧವ್ಯದ ತಳಹದಿ ಗೌರವ, ಬಿಗುಮಾನ.

೯. In Drama 'Rasa' is dynamic and in Lyric it is static.

೧೦. Thoroughy convincing and satisfying tragedy is ಕರ್ಣ ಪ್ರಕರಣ in Mahabharata.

೧೧. ನಾವೆಲ್ಲ ನಿಪಾತ ಕವಿಗಳು (Interjectional poets). ನಮ್ಮ ಕಾವ್ಯ ಆಹಾ, ಅಯ್ಯೋ ಇಷ್ಟಕ್ಕೇ ನಿಲ್ಲುತ್ತೆ.

೧೨. ಶಕ್ತಿ, ವ್ಯುತ್ಪತ್ತಿ, ಅಭ್ಯಾಸ ಈ ಮೂರು ಕವಿ ಸ್ವಭಾವಕ್ಕೆ ಅನುಗುಣವಾಗಿರುತ್ತದೆ.

೧೩. Criticism is a reasoned account of the response of a trained, objective reader to a work of art.

೧೪. ಶಬ್ದಮಣಿದರ್ಪಣ ಹಳಗನ್ನಡಕ್ಕೆ ವೀರಗಲ್ಲು

೧೫. ನಮ್ಮ ತಿಂಡಿಯನ್ನು ನಾವು ತಿನ್ನುತ್ತೇವೆ (ಮೈಸೂರು ಕನ್ನಡ), ಅವರ ತಿಂಡಿ (ಧಾರವಾಡ ಕನ್ನಡ) ಅವರನ್ನೇ ತಿನ್ನುತ್ತೆ.

೧೬. ಸಂಸ್ಕೃತದಿಂದ 'ಅನ್ನ' ತೆಗೆದುಕೊಂಡು ನಾವು ಅವರಿಗೆ 'ನೀರು' ಕುಡಿಸಿದೆವು.

೧೭. ಜಗತ್ತಿನಲ್ಲಿ ಯಾವ ವಿಷಯದಲ್ಲಿಯೂ ಕೊನೆಯ ಮಾತೆಂಬುದೇ ಇಲ್ಲ.

೧೮. ದೇಶ, ಕಾಲ, ಪರಿಸರಗಳು ಭಾಷಾ ಶಾಸ್ತ್ರದ ಅಡಿಗಲ್ಲು.

೧೯. ಕಿಂ ಪಾಂಡಿತ್ಯಂ? ಪರಿಚ್ಛೇದಃ, ತಿಳಿದು ಕೊಂಡಿರುವುದರಲ್ಲಿ ನಿಷ್ಕರ್ಷೆ ಇರಬೇಕು.

೨೦. ನಾವು ಕೆಲವು ವಿಷಯಗಳಲ್ಲಿ ನ್ಯಾಯಾಧೀಶರಾಗುವ ಬದಲು ವಕೀಲರಾಗಿ ಒಂದೇ ಪಕ್ಷ ಹಿಡಿಯುತ್ತೇವೆ.

೨೧. ಅನ್ಯದೇಶ್ಯಗಳು ಹೊರಗಡೆಯಿಂದ ಮನೆಗೆ ಬಂದ ಸೊಸೆ. ಸ್ವಲ್ಪ ಕಾಲಾನಂತರ ಅವಳೇ ಮಗಳಾಗುತ್ತಾಳೆ.

೨೨. ಹಳಗನ್ನಡಕ್ಕೆ ಚರಮಗೀತೆ ಶಬ್ದಮಣಿದರ್ಪಣ. ಅದಕ್ಕೆ ಚರಮ ಗೀತೆಯನ್ನು ಹಾಡಿದವನು ಕೇಶಿರಾಜ.

೨೩. 'ಪ್ರಯೋಗಶರಣಂ ವೈಯಾಕರಣಂ' ಎಂಬ ಮಾತು ಕೇಶಿರಾಜನಿಗೆ ನೂರಕ್ಕೆ ನೂರು ಒಪ್ಪುತ್ತದೆ.

೨೪. ಕೇಶಿರಾಜ ರೂಪಬದಲಾವಣೆಯನ್ನು ದೋಷ ಎನ್ನುತ್ತಿದ್ದ. ಅವನದು ಏಕ ಪಕ್ಷೀಯ ದೃಷ್ಟಿ.

೨೫. ಹಳೆಯ ವ್ಯಾಕರಣ – It is a museum.

*

ಇಂಗ್ಲೀಷ್ ಪದಗಳಿಗೆ ಸಂವಾದಿಯಾಗಿ
ತೀ.ನಂ.ಶ್ರೀಯವರು ಚಲಾವಣೆಗೆ ತಂದ ಹೊಸಪದ ಸೃಷ್ಟಿ

೧. Hold all = ಸರ್ವಗ್ರಾಹಿ
೨. Muffler = ಕಂಠವಸ್ತ್ರ
೩. Statelessness = ಅರಾಷ್ಟ್ರಿಕತೆ
೪. Press Button = ಒತ್ತುಗುಂಡಿ
೫. Space travel = ಆಕಾಶಯಾತ್ರೆ
೬. Red letter = ರಕ್ತಾಕ್ಷರ
೭. Respond = ಪ್ರತಿಸ್ಪಂದ
೮. Expression = ಪರಿಸ್ಪಂದ
೯. Inclusive = ಅಭಿವ್ಯಾಪಕ
೧೦. Exclusive = ವ್ಯಾವರ್ತಕ
೧೧. Originality = ಸ್ವೋಪಜ್ಞತೆ

ಶ್ರೀ ಗುರುವಿಗೆ ಭಕ್ತಿ ಪೂರ್ವಕ ನಮನ.

('ತೀ.ನಂ.ಶ್ರೀ : ಒಂದು ಅಧ್ಯಯನ' ಪುಸ್ತಕದಿಂದ)

ಪರಮ ಗುರುಭ್ಯೋ ನಮಃ

ಎಸ್.ರಾಘವೇಂದ್ರಭಟ್ಟ

●

ಆಚಾರ್ಯ ತೀ.ನಂ.ಶ್ರೀಕಂಠಯ್ಯನವರ ನೇರ ಶಿಷ್ಯರ ಪೈಕಿ ಒಬ್ಬನಾಗಿ ಅಂದಿನ ಅವರ ಬೋಧನಾ ವೈಖರಿಯನ್ನು ಕೇವಲ ಎರಡು ನಿದರ್ಶನಗಳೊಂದಿಗೆ (ಸ್ಥಾಲೀಪುಲಾಕ ನ್ಯಾಯ ವೆಂಬಂತೆ!) ನೀವೇದಿಸುತ್ತೇನೆ.

ಬಿ.ಎ ಆನರ್ಸ್ ಮತ್ತು ಎಂ.ಎ., ತರಗತಿಗಳಲ್ಲಿ ನಿರ್ದಿಷ್ಟ ಪಠ್ಯಗಳನ್ನು ಬೋಧಿಸುವಾಗ ಅವರು ನೀಡುತ್ತಿದ್ದ ವ್ಯಾಖ್ಯಾನ, ಸಾರಾಂಶಗಳು, ಸೂಚಿಸುತ್ತಿದ್ದ ಪಾಠಾಂತರಗಳು, ಒದಗಿಸುತ್ತಿದ್ದ ಪರಿಪೋಷಕ ಸಂಸ್ಕೃತ, ಆಂಗ್ಲ ಮುಂತಾದ ಸಾಹಿತ್ಯಗಳ ಸಾಮ್ಯಗಳು ಒಂದೇ ಎರಡೇ?! ತರಗತಿಯ ಟಿಪ್ಪಣಿಯನ್ನೇ ಹಲಬಗೆಯಿಂದ ವಿಸ್ತರಿಸಿ ಕಾವ್ಯ ಸಂಗ್ರಹವನ್ನೋ ಪಠ್ಯಗ್ರಂಥವನ್ನೋ ಹೆಣೆದು ಕೀರ್ತಿಶಾಲಿಗಳಾದ ಶಿಷ್ಯರಿಗೆ ಲೆಕ್ಕವಿಲ್ಲ. ತಾವು ಪಡೆದ ಪ್ರೇರಣೆಯನ್ನು ಕೃತಜ್ಞತೆಯಿಂದ ನೆನೆದಲ್ಲಿ ಅದು 'ಅಪಹರಣ'ವೆನ್ನಿಸದೆ 'ಸ್ವೀಕರಣ'ವೆಂಬ ಧನಾತ್ಮಕ ಗುಣವೆನ್ನಿಸುವುದೆಂಬ ಸಂಗತಿಯನ್ನು ಗುರುಗಳೇ ತಮ್ಮ ಲೇಖನದಲ್ಲಿ ("ಗದಾಯುದ್ಧವೂ ಸ್ವೀಕರಣ ವಿಚಾರವೂ") ಬಣ್ಣಿಸಿದ್ದನ್ನು ಪಾಲಿಸಿದ್ದಲ್ಲಿ ಎಷ್ಟು ಶೋಭಿಸುತ್ತಿತ್ತೋ! ಹಾಗಿತ್ತು ಅಂದಿನ ಬೋಧನಾ ವಿಲಾಸ, ವೈಶಿಷ್ಟ್ಯಗಳು!! ಎದುರಿಗೆ ಹರಡಿಕೊಂಡಿದ್ದ ಭರತನ 'ನಾಟ್ಯ ಶಾಸ್ತ್ರ'ವಾಗಲಿ, ಆನಂದವರ್ಧನನ 'ಧ್ವನ್ಯಾಲೋಕ'ದ ಜತೆಯಲ್ಲೆ ಅಭಿನವಗುಪ್ತನ 'ಲೋಚನ'ವಾಗಲಿ, ಕುಂತಕನ 'ವಕ್ರೋಕ್ತಿ ಜೀವಿತ'ವಾಗಲಿ ಭಾರತೀಯ ಕಾವ್ಯಮೀಮಾಂಸೆಯ ಪರಂಪರಾಗತ ವಿಕಾಸವನ್ನು ತಲಸ್ಪರ್ಶಿಯಾಗಿ ಕಣ್ಣಮುಂದೆ ಕಟ್ಟಿ ನಿಲ್ಲಿಸಿದ ಶುಭ್ರಚಾರಿತ್ರದ ಗುರುವಂದ್ಯರನ್ನು, ನೆನೆಯುವುದೇ ಮಹಾನವಮಿ ಎಂದರೆ ಅತಿಶಯೋಕ್ತಿಯಲ್ಲ. ಇಂಥ ಸಂದರ್ಭದಲ್ಲಿ ಆ ಹೊತ್ತಿಗೆ (೧೯೫೫) ಡಾ॥ ಕೆ. ಕೃಷ್ಣಮೂರ್ತಿಯವರ ಅನುವಾದ ಪ್ರಕಟವಾಗಿತ್ತು. ಆನಂದವರ್ಧನ – ಅಭಿನವ ಗುಪ್ತರಿಂದ ಸ್ಥಾಪಿತವಾದ ಧ್ವನಿಪ್ರಸ್ಥಾನವನ್ನು ಪರಿಚಯಿಸುತ್ತ ಅನುವಾದದ ಅರೆ–ಕೊರೆಗಳನ್ನು ಪ್ರಾಸಂಗಿಕವಾಗಿ ತಿಳಿಸುವಲ್ಲಿ ಸಹ ಪ್ರಕಟಗೊಂಡ ಆಚಾರ್ಯರ ಸುಸಂಸ್ಕೃತ ವಿದ್ವತ್ತೆಯನ್ನು ಹೇಗೆ ಬಣ್ಣಿಸಲಿ? ಒಂಬತ್ತು ರಸಗಳೇನೋ ಸಂಖ್ಯೆಯಲ್ಲಿದ್ದರೂ ಎಲ್ಲಕ್ಕೂ ಸಮಾನ ಮಹತ್ವವಿಲ್ಲವೆಂದೂ ಮಹಾಭಾರತದಲ್ಲಿ ಕಂಡುಬರುವ ಪ್ರಧಾನರಸ ಶಾಂತರಸದಲ್ಲಿ ಉಳಿದವೆಲ್ಲ ಕಿರುನದಿಗಳಂತೆ ಕರಗಿಹೋಗುವುದನ್ನು ಪ್ರತಿಪಾದಿಸಿದ ಬಗ್ಗೆ ಅನನ್ಯವೆಂಬಂತಿತ್ತು. ಆಗಂತೂ ನವ್ಯರ ಪ್ರಖರ ಪ್ರಭಾವಕ್ಕೆ ಪಕ್ಕಾದ ಒಬ್ಬಬ್ಬಿರು ಸಹಪಾಠಿಗಳೂ ನಮ್ಮಲ್ಲಿದ್ದರು. ಬೇಕೆಂದೇ

"ಸಾರ್ ಹಾಗಾದರೆ ನವ್ಯಕಾವ್ಯದಲ್ಲಿ ಪ್ರಧಾನರಸ ಯಾವುದು" ಎಂದೊಬ್ಬರು ಕೇಳಿದಾಗ, ಕ್ಷಣಕಾಲ ಯೋಚಿಸಿ "ಬೀಭತ್ಸರಸವೇ ಯಾಕೋ ಹೊಡೆದು ಕಾಣಿಸುತ್ತದಲ್ಲ!" ಎಂದು ಮೆಲುದನಿಯಲ್ಲಿ ಉಸುರಿಬಿಟ್ಟರು! (ನಮ್ಮಲ್ಲಿ ಕೆಲವರಿಗೆ ಹಾಲು ಹುಯ್ದುಕೊಂಡ ಹಾಗಾಯಿತೆಂದು ಹೇಳಿಬಿಡಲೆ?!) ಕಾವ್ಯಮೀಮಾಂಸೆಯ ತರಗತಿಗಳಿಗೆ ಶ್ರೀ ಯು.ಆರ್. ಅನಂತಮೂರ್ತಿಯವರೂ ಬಂದು ಕುಳಿತು ಕೇಳುತ್ತಿದ್ದರು. (ಆ ಹಿಂದಿನ ವರ್ಷಗಳಲ್ಲಿ ಪ್ರೊ॥ ಎನ್. ಬಾಲಸುಬ್ರಹ್ಮಣ್ಯ ಅವರೂ ಬರುತ್ತಿದ್ದರಂತೆ.) ಅಂತೂ ಆ ಗರಡಿಯ ಸಾಮನ್ನೂ ಪಟ್ಟುಗಳನ್ನೂ ನೋಡಿ ಅನುಭವಿಸಿದ ಈ ಶಿಕ್ಷಕವರ್ಗ ಅಂದಿನ ಮಹಾರಾಜ ಕಾಲೇಜಿನ ಗುರು ಪರಂಪರೆಗೆ ಒದಗಿಸಿದ ಘನತೆ ಗೌರವಗಳು ಇಂದು ಇತಿಹ್ಾಸವೆನಿಸಿದೆ.

*

ಆಚಾರ್ಯ ತೀ.ನಂ.ಶ್ರೀ.ಯವರು ಎಂಥ ನೀರಸ ಶಾಸ್ತ್ರವಿಷಯವನ್ನೂ ಎಷ್ಟು ಆಕರ್ಷಕವಾಗಿ ಆತ್ಮೀಯಗೊಳಿಸಿಬಿಡುವರೆಂಬುದಕ್ಕೆ ಅವರ 'ದ್ರಾವಿಡ ಭಾಷಾವಿಜ್ಞಾನದ' ಪಾಠದಿಂದ ಒಂದು ಉದಾಹರಣೆ.

ಕನ್ನಡ ವ್ಯಾಕರಣಗಳು ಲಿಂಗವಿವಕ್ಷೆಯನ್ನು ವಿವರಿಸುವಲ್ಲೆಲ್ಲ ಸಂಸ್ಕೃತ ವ್ಯಾಕರಣಗಳ ಜಾಡನ್ನು ಹಿಡಿಯುವುದು ವಾಡಿಕೆ. "ಲಿಂಗವೊಂಬತ್ತು ತೆಱಂ' ಎಂದ ಕೇಶಿರಾಜನೂ, 'ಪುರುಷರೆ ಪುಲ್ಲಿಂಗಂ ಸ್ತ್ರೀಯರೆ ತಾಂ ಸ್ತ್ರೀಲಿಂಗಂ + ಉೞಿದುವೆಲ್ಲಂ ನಪ್ಪು......' ಎಂದು ಪ್ರಸಿದ್ಧ ಮೂರು ಲಿಂಗಗಳನ್ನು ಹೆಸರಿಸಿದ್ದಾನೆ (ಶಬ್ದಮಣಿದರ್ಪಣ ಸೂತ್ರ ೧೦೧). ಇದು ವ್ಯಾಕರಣದ ಪರಂಪರಾಗತ ಪದ್ಧತಿಯಾದರೆ, ಆಧುನಿಕ ಭಾಷಾವಿಜ್ಞಾನದ ದೃಷ್ಟಿಯಿಂದ ವಿವೇಚಿಸುವಾಗ ಆಚಾರ್ಯ ತೀನಂಶ್ರೀಯವರು ತೆಲುಗಿನಲ್ಲಿ ಬಳಕೆಯಿರುವ 'ಮಹತ್' (rational), 'ಅಮಹತ್' (irrational) ಎಂಬ ಲಿಂಗ ಪದ್ಧತಿಯನ್ನು ಕೂಲಂಕಷವಾಗಿ ಬಣ್ಣಿಸಿದರು. ಅಲ್ಲೊಬ್ಬ ಗೆಳೆಯರು 'ಮಾ ಅದಿ ವಚ್ಚಿಂದಿ' ಎಂಬ (ನನ್ನ ಅದು=ಹೆಂಡತಿ ಬಂದಿದೆ!) 'ಸದಾರಮೆ' ನಾಟಕದ ಮಾತನ್ನು ನೆನೆದರೆ ಗುರುಗಳೇ ಹವ್ಯಕ ಭಾಷೆಯಲ್ಲಿಯೂ ಈ ವಿಧಾನವಿದೆಯೆಂದು ತಿಳಿಸಿದರು. ಎಂದರೆ, ಪ್ರಾಚೀನ ದ್ರಾವಿಡ ಭಾಷೆಯಲ್ಲಿ ರೂಢಿಯಲ್ಲಿದ್ದ ಈ ಪಳೆಯುಳಿಕೆಗಳು ಈಗಲೂ ತೆಲುಗು, ಹವ್ಯಕ ಭಾಷೆಗಳಲ್ಲಿದ್ದು ಕಂಡಂತೆ ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಕಾಲಕ್ರಮೇಣ ಬಿರುಸುಗೊಂಡದ್ದನ್ನು ಅರಿತುಕೊಳ್ಳಬಹುದು. ಆಗ ನಮ್ಮಲ್ಲಿ ಕೆಲವರಿಗೆ ಬಯಲುಸೀಮೆಯ ಸಾಮಾನ್ಯರ ಮಾತಿನಲ್ಲಿರುವ 'ಅವ್ವ ಎಲ್ಲೈತಿ?.... ಆಕಿ ಏನ್ ಮಾಡ್ತೈತಿ?' ಎಂಬ ಉದಾಹರಣೆಗಳು ನೆನಪಾದವು. ಇಂಥ ಕಣ್ಮರೆಯಾಗಬಹುದಾದ ಪಳೆಯುಳಿಕೆಗಳನ್ನು ಈಗಿನ ಶಿಕ್ಷಣಪದ್ಧತಿಯಲ್ಲಿ ವಿಚಾರ ವಿಮರ್ಶೆಗೆ ಒಡ್ಡಬಹುದಾದ ನೂರಾರು ಸಂಗತಿಗಳು ಅಂದಿನ ತರಗತಿಗಳಲ್ಲಿ ತೂರಾಡಿದ್ದುದುಂಟು.

ಧ್ವನಿವಿಜ್ಞಾನದ ದೃಷ್ಟಿಯಿಂದ ಉಚ್ಚಾರಣೆಯ ಸ್ಪಷ್ಟತೆಯನ್ನು ಪರಿಚಯಿಸುವ – ಹಳಗನ್ನಡದ ವಿಕಾರದಂಥವು – ಸಂದರ್ಭದಲ್ಲಿ ತಮಿಳು ಮುಂತಾದ ಸೋದರ ಭಾಷೆಗಳಿಂದ ಎಳೆದು

ತರುತ್ತಿದ್ದ ಸಂದರ್ಭಗಳಿಗೆ ಲೆಕ್ಕವಿರಲಿಲ್ಲ. ಬಹುಶ್ರುತನಾದ ವಿದ್ವಾಂಸನು ತನ್ನ ಬತ್ತಳಿಕೆಯಿಂದ ಪುಂಖಾನುಪುಂಖವಾಗಿ ಉಲ್ಲೇಖಗಳನ್ನೂ ಶಬ್ದಪುಂಜಗಳನ್ನು ಹೊರಸೆಳೆಯುತ್ತ ಕೇಳುಗರ ಕುತೂಹಲವನ್ನು ಉಕ್ಕೇರಿಸಿ ಬೋಧನಾ ವಿಷಯದಲ್ಲಿ ತನ್ಮಯತೆಯನ್ನು ಸಾಧಿಸುವ ಪರಿ ಶ್ಲಾಘನೀಯವಷ್ಟೇ ಅಲ್ಲ ಅನುಕರಣೀಯವೂ ಅನ್ನಿಸಿದ್ದು ದಿಟ. ಅದರ ಪೂರ್ಣಪ್ರಯೋಜನ ಹೇಗೆ ಪಡೆದೆವೆಂಬ ಮಾತು ಬೇರೆಯಾದರೂ ಅಂದಿನ ಆಚಾರ್ಯರ ಅಪೂರ್ವ ವ್ಯಕ್ತಿತ್ವದ ಪ್ರಭಾವಲಯದಲ್ಲಿ ಮಿಂದು ಪುನೀತರಾದೆವೆಂಬ ಹೆಮ್ಮೆಯಂತೂ ನಮ್ಮ ಪಾಲಿಗೆ ಬಂದಿತೆಂದು ಮನಸಾ ಸ್ಮರಿಸುತ್ತೇನೆ.

ಬೆಂಗಳೂರಿನಲ್ಲಿ ತೀ.ನಂ.ಶ್ರೀ. ಪ್ರತಿಮೆ

ತೀ.ನಂ.ಶ್ರೀ.ಯವರ ಶಿಷ್ಯರಾದ ಡಾ.ಎಂ. ಚಿದಾನಂದಮೂರ್ತಿಯವರಿಗೆ ಸದಾ ತೀ.ನಂ.ಶ್ರೀ.ಯವರದೇ ಚಿಂತೆ. ಬೆಂಗಳೂರಿನಲ್ಲಿ ಕುವೆಂಪು ಮತ್ತು ಬಿ.ಎಂ.ಶ್ರೀ.ಯವರ ಪ್ರತಿಮೆಗಳನ್ನು ಲಾಲ್‌ಬಾಗ್‌ನ ಪಶ್ಚಿಮಬಾಗಿಲು ಮತ್ತು ನ್ಯಾಷನಲ್ ಕಾಲೇಜು ವೃತ್ತದಲ್ಲಿ ಕನ್ನಡ ಗೆಳೆಯರ ಬಳಗದ ಮೂಲಕ ಸ್ಥಾಪಿಸಿದ ನಂತರ ತೀ.ನಂ.ಶ್ರೀ.ಯವರ ಒಂದು ಎದೆಮಟ್ಟದ (ಬಸ್ಟ್) ಕಂಚಿನ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು ಈ ಕೆಲಸಕ್ಕೆ ಚಾಲನೆ ಕೊಟ್ಟರು. ಇದಕ್ಕಾಗಿ "ತೀ.ನಂ.ಶ್ರೀ. ಪ್ರತಿಮಾ ಸಮಿತಿ"ಯನ್ನು ಮಾಡಿ ಅದಕ್ಕೆ ಚಿದಾನಂದಮೂರ್ತಿಯವರು ಮತ್ತು ನಾನು ಸಂಚಾಲಕರಾದೆವು. ಅದರಲ್ಲಿ ಹಿರಿಯ ಸಾಹಿತಿಗಳು ಮತ್ತು ಕಲಾವಿದರುಗಳು ಸದಸ್ಯರಾಗಿ ಸಲಹೆಗಳನ್ನು ನೀಡಿದರು.

ಆ ಸಮಯದಲ್ಲಿ ಎಲ್ಲರಿಗೂ ಕಳಿಸಿದ ಮನವಿ ಪತ್ರದಲ್ಲಿ ತೀ.ನಂ.ಶ್ರೀ.ಯವರ ಸಾಧನೆ ಮತ್ತು ಸವಿನೆನಪುಗಳ ಬಗ್ಗೆ ವಿವರಿಸಿ ಮತ್ತೆ ಈ ರೀತಿಯಾಗಿ ಬರೆಯಲಾಗಿತ್ತು. "ಅವರ ನೆನಪು ಇಂದಿನ ಮತ್ತು ಮುಂದಿನ ಪೀಳಿಗೆಗಳಿಗೆ ಒಂದು ಸ್ಫೂರ್ತಿಯಾಗಲಿ ಎಂಬ ಉದ್ದೇಶದಿಂದ ಬೆಂಗಳೂರಿನ ಒಂದು ಸೂಕ್ತ ಸಾರ್ವಜನಿಕ ಜಾಗದಲ್ಲಿ ಅವರ ಎದೆಮಟ್ಟದ (ಬಸ್ಟ್) ಕಂಚಿನ ಪ್ರತಿಮೆಯನ್ನು ಸ್ಥಾಪಿಸುವ ಯೋಜನೆ ಹಾಕಿಕೊಂಡು ಕಾರ್ಯಪ್ರವೃತ್ತರಾಗಿದ್ದೇವೆ. ಪ್ರತಿಮೆಗೆ ಸುಮಾರು ಒಂದು ಲಕ್ಷರೂಪಾಯಿ ಖರ್ಚಾಗುವ ನಿರೀಕ್ಷೆ ಇದೆ. ಅವರ ಅಭಿಮಾನಿಗಳಾದ ತಾವು ಉದಾರವಾಗಿ ತಮ್ಮ ಕಾಣಿಕೆಯನ್ನು ನೀಡಿ ಮೇಲ್ಕಂಡ ಪುಣ್ಯಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ದೇಶದಾದ್ಯಂತ ಅವರ ಶಿಷ್ಯ ಪ್ರಶಿಷ್ಯರು ಮಿತ್ರರು ಅಭಿಮಾನಿಗಳು ನೆಲೆಸಿದ್ದಾರೆ. ಅವರೆಲ್ಲ ಮನಸ್ಸುಮಾಡಿದರೆ ಮೇಲಿನ ಕೆಲಸ ಸುಲಭವಾಗುತ್ತದೆ........"

ಇದಕ್ಕೆ ಬಹು ಉದಾರವಾದ ದೇಣಿಗೆಗಳು ಬಂದು ಸುಮಾರು ೭೫ ಸಾವಿರ ರೂಪಾಯಿಗಳು ಸಂಗ್ರಹವಾಯಿತು. ಪ್ರಸಿದ್ಧ ಶಿಲ್ಪಿ, ರಾಷ್ಟ್ರೀಯ ಪ್ರಶಸ್ತಿ ಸನ್ಮಾನಿತ ಮತ್ತು ಇಂದಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾದ ಶ್ರೀ ವೆಂಕಟಾಚಲಪತಿಯವರು ಬಹು ಶ್ರಮ ಮತ್ತು ಶ್ರದ್ಧೆಯಿಂದ ಈ ಪ್ರತಿಮೆಯನ್ನು ಮಾಡಿಕೊಟ್ಟರು. ತೀ.ನಂ.ಶ್ರೀ.ಯವರನ್ನು ನೋಡಿ ಬಲ್ಲವರೆಲ್ಲರು ಈ ಪ್ರತಿಮೆಯ ರೂಪದ ಬಗ್ಗೆ ತುಂಬಾ ಸಮಾಧಾನ ಸಂತೋಷಗಳನ್ನು ವ್ಯಕ್ತಪಡಿಸಿದರು.

ಈ ಪ್ರತಿಮೆಯ ಸ್ಥಾಪನೆಗೆ ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್, ಕಮಿಷನರ್ ಮತ್ತು ಅಧಿಕಾರಿಗಳನ್ನು ಸಂಪರ್ಕಿಸಲಾಯಿತು. ನಮ್ಮ ಕೋರಿಕೆಯನ್ನು ಮನ್ನಿಸಿ ಮಹಾನಗರ ಪಾಲಿಕೆಯ ಸಭೆಯ ನಿರ್ಣಯದಂತೆ ಬೆಂಗಳೂರಿನ ದಕ್ಷಿಣ ಭಾಗದ ಜನ ನಿಬಿಡವಾದ ಸೌತ್‌ಎಂಡ್ ಸರ್ಕಲ್‌ನಲ್ಲಿ ಈ ಪ್ರತಿಮೆಯನ್ನು ಸ್ಥಾಪಿಸಿವುದೆಂದು ನಿರ್ಧರವಾಯಿತು.

೧೯೯೮ನೆ ಇಸವಿ ನವೆಂಬರ್ ೧೪ನೇ ತಾರೀಖಿನಂದು ಸೌತ್‌ಎಂಡ್ ಸರ್ಕಲ್‌ನ ಮೂಲೆಯಲ್ಲಿ ಉದ್ಯಾನವನದ ಮುಂದೆ ಹಸಿರುಗಿಡಗಳ ಹಿನ್ನೆಲೆಯಲ್ಲಿ ತೀ.ನಂ.ಶ್ರೀಯವರ ಪ್ರತಿಮೆ ಬಹು ಅದ್ಧೂರಿಯ ಸಮಾರಂಭದಲ್ಲಿ ಸ್ಥಾಪಿತವಾಯಿತು. ಅಂದಿನ ಮೇಯರ್ ಶ್ರೀ ಹುಚ್ಚಪ್ಪ, ಉಪಮೇಯರ್ ಶ್ರೀ ವಾಸುದೇವಮೂರ್ತಿ ಮತ್ತು ವಿಧಾನಸಭೆ ಸದಸ್ಯ ಶ್ರೀ ರಾಮಲಿಂಗಾರೆಡ್ಡಿ ಮತ್ತು ಹಿರಿಯ ಸಾಹಿತಿಗಳು ಅಭಿಮಾನಿಗಳ ಸಮ್ಮುಖದಲ್ಲಿ ಹಿರಿಯರು ಮತ್ತು ತೀ.ನಂ.ಶ್ರೀಯವರ ಸ್ನೇಹಿತರಾಗಿದ್ದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಪ್ರತಿಮೆಯನ್ನು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ಮೇಯರ್ ಅವರು ಈ ವೃತ್ತಕ್ಕೆ ತೀ.ನಂ.ಶ್ರೀಯವರ ಹೆಸರನ್ನಿಡುವುದಾಗಿ ಘೋಷಿಸಿದರು. ಪ್ರೊ. ಎಂ.ಎಚ್. ಕೃಷ್ಣಯ್ಯನವರು ತೀ.ನಂ.ಶ್ರೀಯವರ ಬಗ್ಗೆ ಮಾತನಾಡಿದರು. ಅಂದಿನಿಂದ ಈ ಪ್ರತಿಮೆ ಎಲ್ಲರ ಕಣ್ಣು ಸೆಳೆಯುತ್ತಿದೆ. ಕತ್ತಲೆಯಲ್ಲಿ ಕಾಣಲು ಹೊನಲು ಬೆಳಕನ್ನು ವ್ಯವಸ್ಥೆ ಮಾಡಲಾಗಿದೆ.

ಅಂದು ಸಂಜೆ ತೀನಂಶ್ರೀ ಪ್ರತಿಮಾ ಸಮಿತಿಯವರು ನ್ಯಾಷನಲ್ ಕಾಲೇಜು ಎಚ್.ಎನ್. ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಚಾರಗೋಷ್ಠಿಗೆ ಪ್ರೊ. ಎಲ್.ಎಸ್. ಶೇಷಗಿರಿರಾಯರು ಅಧ್ಯಕ್ಷತೆ ವಹಿಸಿದ್ದರು. ಡಾ॥ ಎಚ್.ಎಸ್. ವೆಂಕಟೇಶ ಮೂರ್ತಿಯವರು "ತೀನಂಶ್ರೀಯವರ ಸೃಜನ ಶೀಲ ಬರಹಗಳು", ಡಾ.ಜಿ.ಎಸ್. ಶಿವರುದ್ರಪ್ಪನವರು "ತೀನಂಶ್ರೀಯವರ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ", ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು "ಸಂಶೋಧನ ಕ್ಷೇತ್ರಕ್ಕೆ ತೀನಂಶ್ರೀ ಅವರ ಕೊಡುಗೆ" ಮತ್ತು ಡಾ.ಎಂ. ಚಿದಾನಂದಮೂರ್ತಿ ಅವರು "ಭಾಷಾ ವಿಜ್ಞಾನಿಯಾಗಿ ತೀ.ನಂ.ಶ್ರೀ" ವಿಷಯಗಳ ಬಗ್ಗೆ ವಿಚಾರ ಮಂಡನೆಗಳನ್ನು ಮಾಡಿದರು. ವಿದ್ವಾನ್ ಶ್ರೀ ಎನ್. ಶಂಕರ್ ಮತ್ತು ವಿದುಷಿ ಶ್ರೀಮತಿ ಎಂ.ಎಸ್. ಶೀಲಾ ವೃಂದವರಿಂದ ತೀನಂಶ್ರೀ ಮತ್ತು ಪುತಿನ ಅವರ ಗೀತೆಗಳ ಗಾಯನವನ್ನು ಏರ್ಪಡಿಸಲಾಗಿತ್ತು.

ತೀನಂಶ್ರೀಯವರ ಪ್ರತಿಮೆ ಸ್ಥಾಪಿಸಿರುವ ಗ್ರಾನೈಟ್ ಶಿಲೆಯ ಪೀಠದಮೇಲೆ ಸಮಿತಿ ಸದಸ್ಯರು ಮತ್ತು ಸಮಾರಂಭದಲ್ಲಿ ಭಾಗವಹಿಸಿದ್ದ ಆಹ್ವಾನಿತರುಗಳ ಹೆಸರಿನೊಡನೆ ತೀನಂಶ್ರೀಯವರ ಈ ಕೆಳಗಿನ ಉಕ್ತಿಗಳನ್ನು ಕೆತ್ತಲಾಗಿದೆ.

ತೀ.ನಂ.ಶ್ರೀಕಂಠಯ್ಯ (೧೯೦೬-೧೯೬೬)

"ನಾವೆಲ್ಲರೊಡಗೂಡಿ ಒಡನಾಡಿ, ಕಲೆತು
ಕನ್ನಡದ ಸೇವೆಯಲೆ ನಮ್ಮ ಮೈಮರೆತು
ಕುಂದು ಕೊರತೆಗಳೊಂದಕಿಂಬಿಲ್ಲದಂತೆ
ನಮ್ಮ ಸಖ್ಯದ ಮೊಗ್ಗು ಬಿರಿದರಳುವಂತೆ
ದೇವ ಕರುಣಿಸಲಿ ವರವ-ಕನ್ನಡದ
ದೇವಿ ಕೈಕೊಳ್ಳಲು ಫಲವ"

"ಯಾವ ಗಣಿಯಲಿ ಎಂಥ ಮಣಿ ಅಡಗಿರುವುದೋ"

"ಅಭಿಮಾನ ಸತ್ಯದ ಕಣ್ಣು ಮುಚ್ಚಬಾರದು"

"ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು"

ತೀ.ನಂ.ಶ್ರೀ

* * *

ಪ್ರೊಫೆಸರ್ ತೀನಂಶ್ರೀ ವೃತ್ತ ನಾಮಕರಣ

ತೀನಂಶ್ರೀಯವರ ಪ್ರತಿಮೆಯ ಅನಾವರಣದ ಸಮಯದಲ್ಲಿ ಸೂಚಿಸಿದಂತೆ ಬೆಂಗಳೂರು ಮಹಾನಗರಪಾಲಿಕೆಯೊಡನೆ ಸೌತ್‌ಎಂಡ್ ಸರ್ಕಲ್‌ಗೆ ತೀನಂಶ್ರೀಯವರ ಹೆಸರನ್ನು ಇಡುವ ಪ್ರಸ್ತಾವನೆಯನ್ನು ಮುಂದಿಡಲಾಯಿತು. ಶ್ರೀ ಕೆ. ಚಂದ್ರಶೇಖರ್ ಅವರು ಮೇಯರಾಗಿದ್ದಾಗ ಈ ವಿಷಯಕ್ಕೆ ಚಾಲನೆಕೊಟ್ಟು ಮಹಾನಗರ ಪಾಲಿಕೆಯ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಪಡೆದು ೨೦೦೨ನೆಯ ಇಸವಿಯ ಆಗಸ್ಟ್ ೫ನೆಯ ತಾರೀಖಿನಂದು ಮೇಯರ್ ಅವರು ಸರಳ ಸಮಾರಂಭದಲ್ಲಿ ಸೌತ್‌ಎಂಡ್ ಸರ್ಕಲ್‌ಗೆ "ಪ್ರೊಫೆಸರ್ ತೀನಂಶ್ರೀ ವೃತ್ತ" ಎಂದು ನಾಮಕರಣ ಮಾಡಿದರು. ಈ ವೃತ್ತದಲ್ಲಿ ಐದು ಜಾಗಗಳಲ್ಲಿ ದೊಡ್ಡದಾಗಿ ಈ ಫಲಕವನ್ನು ಹಾಕಲಾಗಿದೆ. ಈ ವೃತ್ತವನ್ನು ಬಳಸುವವರೆಲ್ಲ ಇದರಿಂದ ತೀನಂಶ್ರೀಯವರ ಸ್ಮರಣೆ ಮಾಡುವಂತಾಗಿದೆ.

ಈ ಸಂದರ್ಭಕ್ಕೆ ಅನುಗುಣವಾಗಿ ಕರ್ನಾಟಕ ಸಾಹಿತ್ಯ ಆಕಾಡೆಮಿಯವರು ಅಂದು ಸಂಜೆ ತೀನಂಶ್ರೀ ಗೌರವ ಸಮರ್ಪಣೆ ಸಮಾರಂಭವನ್ನು ಏರ್ಪಡಿಸಿದ್ದರು. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಪ್ರೊ|| ಗುರುಲಿಂಗ ಕಾಪಸೆಯವರ ನೇತೃತ್ವದಲ್ಲಿ ಕನ್ನಡ ಭವನದಲ್ಲಿ ನಡೆದ ಸಮಾರಂಭದಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪನವರು ಮತ್ತು ಪ್ರೊ|| ತೀ.ಶ್ರೀ. ನಾಗಭೂಷಣ ಅವರು ತೀನಂಶ್ರೀಯವರ ಬಗ್ಗೆ ಮಾತನಾಡಿದರು.

ತೀ.ನಂ.ಶ್ರೀ. – ಪತ್ರ ವ್ಯವಹಾರ

ತೀ.ನಂ.ಶ್ರೀ.ಯವರು ಪತ್ರ ಬರೆಯುವುದು ತಮಗೆ ಒಗ್ಗಿದ್ದಲ್ಲವೆಂದು ಹೇಳುತ್ತಿದ್ದರೂ, ತಮ್ಮ ಸ್ನೇಹಿತರುಗಳೊಡನೆ ಮತ್ತು ಅಧಿಕೃತ ವಿಷಯವಾಗಿ ಬಹಳ ಪತ್ರವ್ಯವಹಾರ ಮಾಡುತ್ತಿದ್ದರು. ಸಂಸಾರದವರಿಗೂ ಅವಶ್ಯವಾದಾಗ ಪತ್ರ ಬರೆಯುತ್ತಿದ್ದರು. ಅವರಿಗೂ ಸ್ನೇಹಿತರುಗಳಿಂದ ಮತ್ತು ಅಧಿಕೃತ ವಿಷಯವಾಗಿ ತುಂಬಾ ಪತ್ರಗಳು ಬರುತ್ತಿದ್ದವು. ಆ ಕಾಲದಲ್ಲಿ ದೂರವಾಣಿಯ ಬಳಕೆ ತುಂಬಾ ಕಮ್ಮಿ ಮನೆಗಳಲ್ಲಿದ್ದುದರಿಂದ (ನಮ್ಮ ಮನೆಯಲ್ಲೂ ಇರಲಿಲ್ಲ) ಈ ಪತ್ರವ್ಯವಹಾರವೇ ಸಂವಹನೆಯ ಮುಖ್ಯ ಮಾಧ್ಯಮವಾಗಿತ್ತು.

ತೀ.ನಂ.ಶ್ರೀ.ಯವರು ನಮ್ಮ ಮನೆಯವರಿಗೆ ಮತ್ತು ಪುತಿನ ಅವರಿಗೆ ಬರೆದ ಪತ್ರಗಳು ಸಾಕಷ್ಟು ನಮ್ಮಲ್ಲಿವೆ. ಅದನ್ನು ಇಲ್ಲಿ ಪ್ರತ್ಯೇಕವಾಗಿ ಸೇರಿಸಲಾಗಿದೆ. ಮತ್ತೊಬ್ಬರು ಸ್ನೇಹಿತರಾದ ಪ್ರೊ. ಎ.ಎನ್. ಮೂರ್ತಿರಾಯರೊಡನೆ ವಿಪುಲವಾಗಿ ಪತ್ರವ್ಯವಹಾರ ಮಾಡಿದ್ದರು. ಪ್ರೊ. ಎ.ಎನ್. ಮೂರ್ತಿರಾಯರು ತೀ.ನಂ.ಶ್ರೀ.ಯವರಿಗೆ ಬರೆದ ಆಯ್ಕೆಮಾಡಿದ ಅನೇಕ ಪತ್ರಗಳನ್ನು ತಮ್ಮ 'ಚಿತ್ರಗಳು–ಪತ್ರಗಳು' ಪುಸ್ತಕದಲ್ಲಿ ಸೇರಿಸಿದ್ದಾರೆ. ಆದರೆ ತೀ.ನಂ.ಶ್ರೀ.ಯವರು ಅವರಿಗೆ ಬರೆದ ಅನೇಕ ಕಾಗದಗಳನ್ನು ಉಳಿಸಿಕೊಳ್ಳಲಾಗಲಿಲ್ಲ ಎಂದು ಪಶ್ಚಾತ್ತಾಪ ಪಟ್ಟಿದ್ದಾರೆ.

'ತೀ.ನಂ.ಶ್ರೀ.ಯವರ ಜೀವನ ಪಥ', 'ಕೃತಿಗಳ ವಿಮರ್ಶೆ' ಮತ್ತು 'ವಿದೇಶ ಪ್ರವಾಸ' ಭಾಗಗಳಲ್ಲಿ ಸಂದರ್ಭೋಚಿತವಾಗಿ ತೀ.ನಂ.ಶ್ರೀ. ಪತ್ರವ್ಯವಹಾರದ ಕೆಲವು ಭಾಗಗಳನ್ನು ಕೊಡಲಾಗಿದೆ.

ತೀ.ನಂ.ಶ್ರೀ.ಯವರು ಬೇರೆಯವರಿಗೆ ಬರೆದ ಕೆಲವು ಪತ್ರಗಳು ಮಾತ್ರ ಮೂಲಪ್ರತಿ, ಪ್ರತಿ ಅಥವಾ ಕರಡುಪ್ರತಿಯಾಗಿ ದೊರಕಿದ್ದು ಅವನ್ನು ಮತ್ತು ತೀ.ನಂ.ಶ್ರೀ.ಯವರಿಗೆ ಬೇರೆ ಯವರಿಂದ ಬಂದ ಪತ್ರಗಳಲ್ಲಿ ಕೆಲವನ್ನೂ ಆಯ್ಕೆಮಾಡಿ – ಪೂರ್ತಿ ಅಥವಾ ಭಾಗಶಃ – ಅದರಲ್ಲಿರುವ ವಿಷಯದ ಮಹತ್ವ, ಸ್ವಾರಸ್ಯಗಳನ್ನು ನಿರೂಪಿಸಲು ಇಲ್ಲಿ ಕೊಡಲಾಗಿದೆ. ಈ ಪತ್ರಗಳಿಂದ ತೀ.ನಂ.ಶ್ರೀ.ಯವರ ಜೀವನದಲ್ಲಿ ಅವರಿಗಿದ್ದ ಸಂಪರ್ಕಗಳು ಮತ್ತು ಆಗ ಮುಕ್ತವಾಗಿ ಮಾಡುತ್ತಿದ್ದ ಚರ್ಚೆಗಳು ಮತ್ತು ಹಿರಿಯರು ಮತ್ತು ಸ್ನೇಹಿತರು ಮತ್ತು ಸಂಸಾರದವರೊಡನೆ ಇದ್ದ ಗೌರವ, ಅಭಿಮಾನ ಮತ್ತು ಪ್ರೀತಿಗಳು ವ್ಯಕ್ತವಾಗುತ್ತವೆ.

೧೯೨೬ರಿಂದ ಪ್ರಾರಂಭವಾಗಿ ಸುಮಾರು ೪೦ ವರ್ಷಗಳ ಕಾಲ ನಡೆದಿರುವ ಈ ಪತ್ರ ವ್ಯವಹಾರಗಳ ಮೂಲಕ ಆ ಕಾಲದ ಶೈಕ್ಷಣಿಕ ಮತ್ತು ಸಾಮಾಜಿಕ ವಾತಾವರಣದ ಒಂದು ಮಾದರಿ ಇಲ್ಲಿ ನಿರೂಪಿತವಾಗಿದೆ. ಕೆಲವು ವಿಷಯ ಮತ್ತು ಅಭಿಪ್ರಾಯಗಳಲ್ಲಿ ಭಿನ್ನಾಭಿಪ್ರಾಯ ಗಳಿದ್ದರೂ ಆ ಹಿರಿಯರುಗಳು ಅವರ ನಡವಳಿಕೆಗಳಲ್ಲಿ ಪರಸ್ಪರ ತೋರಿಸುತ್ತಿದ್ದ ಗೌರವ, ವಿಶ್ವಾಸ ಮತ್ತು ಅಭಿಮಾನಗಳು ಅನುಕರಣೀಯವಾಗಿವೆ. ಈ ದೃಷ್ಟಿಯಿಂದ ಈ ಪತ್ರವ್ಯವಹಾರದ ಪ್ರಕಟಣೆ ಉಪಯುಕ್ತವೆಂದು ಭಾವಿಸಲಾಗಿದೆ.

ತೀ.ನಂ.ಶ್ರೀ. ಅವರು ಬರೆದ ಪತ್ರಗಳು

●

Mysore, 12th June 1931

Dear Sir,

Enclosed you will find a letter from Mr. S.V. Ranganna with my signature also. If I remember rightly, you proposed to me a somewhat different scheme for the monograph. It would help us very much if you could favour us with your plan in detail. Personally, I feel that Mr. S.V.R.'s scheme does not pay sufficient importance to the comparitive work. I propose that the work be divided into two parts - the First part consisting of two sections dealing with the History of Poetics in the west and in the east respectively. Here the various schools, the writers and the theories might be mentioned without going into too many details. This part will serve as an introduction to the body of the work, the second part, in which Comparison and Description will go hand in hand. We shall have to divide it into a number of sections, each of us being responsible for a certain number of them. What exactly these sections should be, what topics they should deal with etc., will have to be settled after a personal discussion, with your advice.

May we hope to receive your guidance early in this matter!

Thanking you,

Dear Sir, I remain,
Yours most obediently

(ಇದು ಬಿ.ಎಂ.ಶ್ರೀ.ಯವರಿಗೆ ಬರೆದ ಪತ್ರದ ಪ್ರತಿ)

* * *

ಮೈಸೂರು, ೩೧-೩-೪೨

ಕಪಿನೀಪತಿಭಟ್ಟರಲ್ಲಿ ಕ್ಷಮಾಯಾಚನೆಯೊಡಗೂಡಿದ ವಿಜ್ಞಾಪನೆಗಳು

ನನ್ನ ವಿಷಯದಲ್ಲಿ ನಿಮಗೆ ಕೋಪ ಚೆನ್ನಾಗಿಯೇ ಬಂದಿರಬೇಕಲ್ಲವೆ! 'ನೀರಿನ ಸರಬರಾಯಿ' ಮೊದಲು ಬಂದಿತು. ಅದರ ಬರೆವಣಿಗೆಯನ್ನು ನಾನು ಮೊದಲೇ ಮೆಚ್ಚಿದ್ದೆನು; ಈಗಲೂ ಮೆಚ್ಚುತ್ತೇನೆ-ಎಂದು ನಿಮಗೆ ತಿಳಿಸಿ ಬರೆಯುವುದಿರಲಿ, ಅದು ಬಂದು ತಲಪಿತೆಂದು ಒಂದು ಪಂಕ್ತಿಯನ್ನೂ ಬರೆಯಲಿಲ್ಲ. ಬಳಿಕ ನಿಮ್ಮ ಕಾಗದ-"ಆಹ್ವಾನ"ದ ಕಾಗದ ಬಂದಿತು. ಅದಕ್ಕೂ ಉತ್ತರ ಕೊಡಲಿಲ್ಲ. ಕೊಡಬೇಕು ಕೊಡಬೇಕು ಎಂದು ಆಲೋಚಿಸುತ್ತಿರುವುದರಲ್ಲೇ ಈ ಬೇಸಗೆಯ ದೀರ್ಘ ದಿನಗಳು ಉರುಳುತ್ತಾ ನಡೆದುವು. ಈಗ ಎರಡು ದಿನಗಳ ಹಿಂದೆ ಕಾಗದ ಬರೆದೇ ತೀರಬೇಕೆಂದು ನಿರ್ಧರಿಸಿದೆನು. ಆದರೆ ಸಮಯಕ್ಕೆ ಸರಿಯಾಗಿ ನಿಮ್ಮ ಹಿರಿಯ ಮಗನ ಉಪನಯನಕ್ಕೆ ಆಹ್ವಾನ ಬಂದಿದೆ. ಇದೇನು ವಿಚಿತ್ರವೋ ಕಾಣೆ. ನಾನು ಉತ್ತರ ಬರೆಯುವುದು ಇನ್ನೆರಡು ದಿನ ಮುಂದಕ್ಕೆ ತಳ್ಳಿತು. ಆದರೆ ಬಹಳ ದಿನ ತಳ್ಳುವಂತಿರಲಿಲ್ಲ. ಉಪನಯನ ಬಹಳ ಹತ್ತಿರ ಬಂದಿತು. ಎರಡನೆಯದಾಗಿ ಅಂಚೆಯ ದರ ನಾಳೆಯಿಂದ ಏರುತ್ತದೆ. ಇನ್ನು ಕಾಲುಘಂಟೆಯೊಳಗಾಗಿ ಈ ಕಾಗದವನ್ನು ಬರೆದು ಮುಗಿಸಿ ಅಂಟಿಸಿ ಟಪಾಲು ಪೆಟ್ಟಿಗೆಗೆ ಹಾಕಿ ಬಿಡಬೇಕು. ಈ ಚಾವಟಿಯ ಏಟಿಗೆ ಸಿಕ್ಕಿ ಮೇಜಿನ ಮುಂದೆ ಕುಳಿತು ಕಾಗದವನ್ನು ಬರೆಯುತ್ತಿದ್ದೇನೆ-ಕ್ಷಮಿಸಿ.

ಉಪನಯನಕ್ಕೆ ಬರಲು ನನಗೆ ಅನೇಕ ತೊಂದರೆಗಳಿವೆ. ಎಲ್ಲಕ್ಕಿಂತ ದೊಡ್ಡ ಪ್ರತಿಬಂಧಕ ವೊಂದುಂಟು [ಚೈತ್ರ ಬ॥ ಪಂಚಮಿ (ಭಾನುವಾರ) ನಮ್ಮ ತಾಯಿಯ ಹೆಚ್ಚಕಟ್ಟಳೆ].... ಈಗ ನಿಮ್ಮೂರಿಗೆ ಬರಲು ಸಾಧ್ಯವಿಲ್ಲ ಎಂದು ಬರೆಯುವುದು ಅನಾವಶ್ಯಕ. ಮುಂದೆ ಸಾಧ್ಯವಾದರೆ ನೋಡೋಣ; ಆದರೆ ನಿರ್ಧರವಾಗಿ ಈಗಲೇ ಹೇಳುವುದು ಹೇಗೆ? ನಿಮ್ಮ ಸ್ಥಳದಲ್ಲೂ ಬಿಸಿಲು ಜೋರಾಗಿರಬೇಕು; ಜೋಗದ ಜಲಪಾತದಲ್ಲಿ ನೀರಿಲ್ಲ; ಅಲ್ಲವೇ? ಇದರ ಮೇಲೆ ಯುದ್ಧಪರಿಸ್ಥಿತಿ ಹೇಗೆ ಹೇಗೆ ತಿರುಗುತ್ತದೆಯೋ? ಆದರೂ ನೋಡೋಣ.

ಮೂರ್ತಿರಾಯರು ಅಲ್ಲಿಗೆ ಬರುತ್ತಾರಲ್ಲವೆ? ನನ್ನ ನಮಸ್ಕಾರಗಳನ್ನು ಅವರಿಗೆ ತಿಳಿಸಿ, ನನ್ನ ನೆನಪು ಕೊಡಿ ಎಂದು ಹೇಳಿದರೂ ನಡೆಯುತ್ತದೆ. ಅವರು ಶಿವಮೊಗ್ಗದಿಂದ ಈಚೆಗೆ ಇಲ್ಲಿಗೆ ಕಾಗದವನ್ನು ಬರೆದಿಲ್ಲ. (ನಾನೂ ಅವರಿಗೆ ಬರೆದಿಲ್ಲ; ನಿಜ. ಆದರೆ ಅವರಿಂದಲೇ ಮೊದಲು ಕಾಗದ ಬರಬೇಕಾಗಿತ್ತೆಂದು ನನ್ನ ತಿಳಿವಳಿಕೆ.)

ನಿಮ್ಮ ಕೆಲಸ ಹೇಗೆ ನಡೆಯುತ್ತಾ ಇದೆ? ಶ್ರಮ ಹೆಚ್ಚಾಗಿರಬೇಕೆಂದು ತೋರುತ್ತದೆ. ಹಿರೇಭಾಸ್ಕರದ ಪ್ರಾಕೃತಿಕ ಸೌಂದರ್ಯ ನಿಮ್ಮ ಲೇಖನಿಯನ್ನೇನಾದರೂ ಆಡಿಸಿದೆಯೆ! ಬರೆಯಿರಿ.

ಶ್ರೀಮತಿ ಸೌ॥ ಗೀತಮ್ಮನವರಿಗೆ ನಮ್ಮೆಲ್ಲರ ನಮಸ್ಕಾರಗಳನ್ನು ತಿಳಿಸಿ. ಚಿ॥ ವಟುವಿಗೆ ನನ್ನ ಆಶೀರ್ವಾದಗಳು. ಉಪನಯನವು ಸಾಂಗವಾಗಿ ನೆರವೇರಿದ್ದಕ್ಕೆ ಬರೆಯಿರಿ, ಅದರ ವೈದಿಕ ಭಾಗವನ್ನೇನೋ ನೀವು ಎಚ್ಚರಿಕೆಯಿಂದಲೇ ನೋಡಿಕೊಳ್ಳುತ್ತೀರಿ.

ಎಲ್ಲ ವಿಚಾರಕ್ಕೂ ಈ ಕಾಗದದ ಮೇಲೆ ಲೇಖನಿ ಕನ್ನಡದಲ್ಲೇ ಹರಿಯಿತು. ನಿಮಗೂ ಸಮಾಧಾನವಷ್ಟೇ!

* * *

Bangalore, 30-7-1943

My Dear Bhatta,

You must have despaired of receiving a letter from me by now. For the past three months or so, not a couple of days has passed without my thinking of my guilt in not writing to you. But what can pious resolutions do against my pristine indolence? ಅಲಸತ್ವೈವ ಬಲೀಯಸೀ. When I received your kind letter some ten days ago, I determined not to put off this duty any longer. What touched me most in it was the fact that you had omitted all reference to my unpardonable silence. Here was I, who had been practically uprooted from Mysore and had some-how settled down at a place which I had never loved much - and had some how been trying to feel at home in an environment which was in every way different from the one I had been accustomed to; and I had not even scribbled a few lines to a friend who was anxiously watching my welfare from so far. But I knew that you would understand my feelings and forgive my silence. At last today, I am sitting up to give you a brief* reply.

Let me assure you at the very outset, that I am not downcast in spirit. I am trying to make the best of the new situation. Of course it was a wrench to leave Mysore. It had grown so dear to me. My association with the place extended over twenty years, it was my spiritual ತೌರುಮನೆ. I could easily apply the line of the uttararamācaṙ-ita to myself. "ಯತ್ರ ದ್ರುಮಾ ಅಪಿ ಮೃಗಾ ಅಪಿ ಬಂಧವೋ ಮೇ." I had to give up all, friends, books, libraries, ''the dreamy, gloomy, friendy''

---

* 'It is no longer brief' ಎಂದು ಅನಂತರ ಪಕ್ಕದಲ್ಲಿ ಸೇರಿಸಿದ್ದಾರೆ

common room, the congenial higher teaching work, the evening, haunts, the ''Aṡokan'' pillar, & so on & so on. I have felt like the half-grown tree-trunk which the officers of your department often transport from a distance and plant in the high roads of cities and expect to grow into full bloom at short notice. But I shall not complain and feel miserable. Now I have fairly well got into the rut. I trudge for nearly 40 minutes (or bike for some 15 minutes) to the college every morning, spend hours and hours at the college, doing some clerical work in addition to teaching, meet few agreeable companions, miss entirely the delightful word-bandying of the Common Room and trudge back home. And at home, I miss ಅತ್ತೆ. But my wife has heroically taken upon herself the entire management of the house. She cooks our food in time and cooks it well too-, looks after children and the baby, puts up with the inconveniences of Bangalore. She has become a really ಸಹಚರೀ to me. But we have one great compensation: there is the Lal Bagh-so near to us that we can escape into it at a moment's notice. Even my wife can do so, only, the household work should allow her. Bhatta, I can't say, that I like Bangalore, I may never like it as you do, but I like the Lal Bagh, (and also the Cubbon Park.) ಗುಣಕ್ಕೆ ಮತ್ಸರವಿಲ್ಲ. I sometimes even think that I pay ten rupees or so more of house-rent for the pleasure of being near the Lal Bagh..... And, I find that I like teaching the youngsters of the Intermediate college. They are less sophisticated, and less indifferent than the usual run of the full-fledged senior undergraduates. I have to repeat the lectures a number of times but even this is not so timesome, as I throught it would be.... Thus I go on. But let me stop this babbling.

It is a pity that Anm & myself could not be in Mysore together. But Anm is so overworked at the 'Akashvani' that even if I had stayed at Mysore, we should have made special effort to see each other once a week or even once a fortnight. I wish for his own sake that he would get back to the university..... And I wish that you were here.

But monetarily you would have lost a good deal. Bangalore life has become very expensive. But let us wait for the return of good normal times. They might be very slow in coming. All the same, ಜೀವನ್ ಭದ್ರಾಣಿ ಪಶ್ಯತಿ.

I have conveyed your compliments to all the friends here. T.P.K. and myself meet often and P.T.N. & myself have made it a point to meet each other at least once a week if not more often.......

You ask me about the Parishat & myself. I may mention that, I recently refused the editorship of the ಪರಿಷತ್ಪತ್ರಿಕೆ. I felt that I needed sometime for my own work & studies

I trust that by now, you have all got over your various indispositions and become accustomed to the haunting roar of the Falls. How do you like the change? Anyhow the attraction of Jog has become even stronger for me. I shall make every effort to visit the place during the course of this year, with wife & children if possible. My best regards to Mrs. Bhatta, ಅಕ್ಕ & ಚಿಕ್ಕಿ if they are there with you. Please convey my best compliments to Mr. Narasinga Rao, your Boss. I had met him when he was here a month & a half or so ago. It was he that told me for the first time that you had been transferred to Jog.

I sometimes meet your brother Mr. Shankar Bhatta. And your faithful servant Byra had come to my house once, just to enquire after our welfare.

The letter has grown longer than I intended. Hope it won't bore you too much. Please write to me.

(ಮೇಲಿನ ಎರಡು ಪತ್ರಗಳು ಅವರ ಸ್ನೇಹಿತ ಶ್ರೀ ಹೆಚ್.ಸಿ. ಕಪನಿಪತಿಭಟ್ಟ ಅವರಿಗೆ ಬರೆದ ಪತ್ರಗಳ ಮೂಲಪತ್ರಿಗಳು)

* * *

ಬೆಂಗಳೂರು, ೨೮-೮-೧೯೪೩

ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದ ಅಧ್ಯಕ್ಷರವರಲ್ಲಿ ವಿಜ್ಞಾಪನೆಗಳು

ಸ್ವಾಮಿ,

ನನ್ನ ಹಿರಿಯಮಗಳು ಟಿ.ಎಸ್. ವಿಶಾಲಾಕ್ಷಿ ಇದೇ ಶ್ರಾವಣ ಬ॥ ೫ (೨೦.೮.೧೯೪೩) ಶುಕ್ರವಾರ ದೈವಾಧೀನವಾದಳು. ಅವಳ ನೆನಪಿಗಾಗಿ ಕೊಂಚ ಹಣವನ್ನು ಮುಡಿಪಿಟ್ಟು ಅದರ ವ್ಯವಸ್ಥೆಯನ್ನು ನನಗೆ ಪ್ರಿಯವಾದ ಕರ್ಣಾಟಕ ಸಂಘದ ಕೈಯಲ್ಲಿಡಬೇಕೆಂಬ ಉದ್ದೇಶದಿಂದ ಈ ಕಾಗದವನ್ನು ಬರೆಯುತ್ತಿದ್ದೇನೆ. ಇದರೊಂದಿಗೆ ಒಂದು ಚೆಕ್ಕನ್ನು (ರೂ. ೨೬೦-೪-೦) ಇರಿಸಿದ್ದೇನೆ. ಅದನ್ನು ಸಂಘವು ದಯವಿಟ್ಟು ಸ್ವೀಕರಿಸಿ, ಇದರ ಹಣದಲ್ಲಿ ಇನ್ನೂರ ಐವತ್ತು ರೂಪಾಯಿಗಳನ್ನು ಒಂದು ಪುದುವಟ್ಟಾಗಿ ಕಲ್ಪಿಸಿ, ಆದಷ್ಟು ಲಾಭಕರವಾದ ರೀತಿಯಲ್ಲಿ ಅದನ್ನು ಬ್ಯಾಂಕಿನಲ್ಲಾಗಲಿ, ಸರ್ಕಾರದಲ್ಲಾಗಲಿ ಸೂಕ್ತ ಕಂಡಂತೆ ಇರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಪ್ರತಿ ವರ್ಷವೂ, ಮೈಸೂರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿನಿಯರಿಗೆ ಅನ್ವಯಿಸುವಂತೆ ಒಂದು ಕನ್ನಡ ಸ್ಪರ್ಧೆಯನ್ನು ಏರ್ಪಡಿಸಿ ಪುದುವಟ್ಟಿನ ಬಡ್ಡಿಯಿಂದ ಒಂದು ಬಹುಮಾನವನ್ನು ನನ್ನ ಮಗಳ ಹೆಸರಿನಲ್ಲಿ ಕೊಡುತ್ತಾ ಹೋಗಬೇಕು. ಸ್ಪರ್ಧೆ ಯಾವ ಬಗೆಯದಾಗಿರಬೇಕು; ಅದನ್ನು ಹೇಗೆ ನಡೆಸಬೇಕು, ಬಹುಮಾನಗಳನ್ನು ಹೇಗೆ ವಿನಿಯೋಗಿಸಬೇಕು – ಈ ಮೊದಲಾದ ವಿವರಗಳನ್ನೆಲ್ಲಾ ಸಂಘದ ನಿರ್ಣಯಗಳಿಗೆ ಬಿಡುತ್ತೇನೆ. ಯಾವುದಾದರೂ ಕಾರಣದಿಂದ ಈ ಪುದುವಟ್ಟಿನ ಮೇಲ್ವಿಚಾರಣೆಯನ್ನು ನೋಡಿಕೊಂಡು ಬಹುಮಾನವನ್ನು ವಿನಿಯೋಗಿಸುವುದು ಅಶಕ್ಯವೆಂದು ಸಂಘಕ್ಕೆ ತೋರಿದಲ್ಲಿ ಈ ಹಣವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ವಶಕ್ಕೆ ವರ್ಗಮಾಡಿ ಮೇಲಿನ ನನ್ನ ಉದ್ದೇಶವನ್ನು ಸಾರ್ಥಕಗೊಳಿಸುವಂತೆ ಕೋರುತ್ತೇನೆ.

ಸ್ಪರ್ಧೆಯನ್ನು ಈ ವರ್ಷವೇ ಸಂಘದವರು ನಡೆಸಬೇಕೆಂದು ನನ್ನ ಪ್ರಾರ್ಥನೆ. ಅದರಲ್ಲಿ ಬಹುಮಾನ ಕೊಡಲು ಅನುಕೂಲಿಸುವಂತೆ ಹತ್ತು ರೂಪಾಯಿಗಳನ್ನು ಹೆಚ್ಚಾಗಿ ಸೇರಿಸಿ ಚೆಕ್ ಬರೆದಿದ್ದೇನೆ. ಮಿಕ್ಕ ನಾಲ್ಕಾಣೆಗಳು ಬ್ಯಾಂಕ್ ಕಮಿಷನ್ ಬಗ್ಗೆ ಎಂದು ಬೇರೆ ಹೇಳಬೇಕಾಗಿಲ್ಲ.

(ಇದು ಪತ್ರದ ಕರಡು ಪ್ರತಿ. ಇದರ ಮೇಲೆ recast ಎಂದು ಬರೆದಿದೆ.)

* * *

Dharwar, 22-2-1952

Dear Sri Sitaramaiah,

It was very kind of you to have sent me a copy of your review-article 'Samskrit and Prākrt Poetry'. I saw it a few weeks ago in the latest number of the JOR, Madras but could not go through it. I was

even thinking of writing to you for a copy of it!...... In the meanwhile, I paid a personal visit to Bangalore last week, but was unable to see you. On my return I was pleasantly surprised to see that a reprint of the article was awaiting me here!

You have done a good service by exposing the hollowness and superficiality of the "trika" system, and stressing the fundamental importance of Yati for understanding the structure of classical Sanskrit metres. I do wish, as you have observed, that our teacher Prof. B.M.S. had worked out his penetrating ideas on Sanskrit prosody in a fuller form. I cannot also help wishing that he had written in English too on the subject.

I believe that the music of the Sanskrit aksara Vrttas too will, in the ultimate analysis, be found to depend to a large extent on "mātrāganas", though the rhythm here is subtler and more complicated. In fact, the "fossils" (or rather, the "Yati units", if we may call them so) and the mātrāganas (ranging from 2 to 8 m̄atras in harmonious combinations), taking also into account plutas and pauses, should enable us to explain satisfactorily almost all the significant aksaravrttas. It is a pity that Prof. Patwardhan in the **Chandracanē** contented himself with measuring all the Skt. Vrttas with mātrāganas foot-rule only, without giving the Yati-idea its proper value. By-the bye I don't find any reference to his work in the **"Jayadāman"** or in your article.

Lastly, I don't think that Velankar has caught the scent of our Aṁśa ganas! .... Let me close here.

I shall see you when I go to Bangalore for the summer vacation.

(ಇದು ಶ್ರೀ ವಿ. ಸೀತಾರಾಮಯ್ಯನವರಿಗೆ ಬರೆದ ಪತ್ರದ ಪ್ರತಿ)

* * *

ಧಾರವಾಡ, ೬-೯-೧೯೫೩

ಶ್ರೀಮಾರ್ ಸುಬ್ಬರಾಯರಲ್ಲಿ ವಿಜ್ಞಾಪನೆಗಳು

ನಿಮ್ಮ ಕಾಗದ ಮೊದಲು ತಲುಪಿತು. ಮನೆಯ ತೊಂದರೆ ತಾಪತ್ರಯಗಳ ವಿಷಯವನ್ನು ಅರಿತು ನನ್ನ ಮನಸ್ಸು ಕುದಿಯಿತು. ನಮ್ಮ ನಾಡಿನ ಒಳ್ಳೆಯ ಬರಹಗಾರರಿಗೆ ಒದಗಿರುವ ಈ ದುಃಸ್ಥಿತಿಗೆ ಪರಿಹಾರೋಪಾಯವೇನು ಎಂದು ಇನ್ನೊಮ್ಮೆ ಚಿಂತಿಸಿದೆ. ಒಬ್ಬನ ಬುದ್ಧಿಗೆ ಹರಿಯುವ ಸಮಸ್ಯೆ ಅಲ್ಲ ಇದು ಎಂದು ನನಗೆ ಮತ್ತೆ ಅನ್ನಿಸಿತು. ನಾನು ಮರುಗಿದೆ ಎಂದು ಹೇಳಿದ ಮಾತ್ರಕ್ಕೆ ನಿಮಗೆ ಏನು ಪ್ರಯೋಜನ? ಗಾಣಗಿತ್ತಿಯ ಗಾದೆ ನೆನಪಾಗುತ್ತದೆ, ಅಷ್ಟೆ. ಈಚೆಗೆ ನಾನು ಮೈಸೂರಿಗೆ ಬಂದಿದ್ದಾಗ ನಿಮ್ಮನ್ನು ಕಾಣಬೇಕು ಎಂಬ ಆಲೋಚನೆ ಮನಸ್ಸಿನಲ್ಲಿ ನನಗೂ ಸುಳಿದಿತ್ತು; ನಿಮ್ಮ ಮನೆಗೆ ಒಂದು ಬಾರಿಯಾದರೂ ಬಂದು ಹೋಗಲು ಆಗಿಲ್ಲವೆಂಬ ಭಾವವೂ ಬಾಧಿಸಿತು. ಆದರೆ ನಿಜವಾಗಿ ಬಿಡುವು ದೊರೆಯಲಿಲ್ಲ.... ಈಗ ನಿಮ್ಮ ಮನೆಯವರು ಗುಣ ಹೊಂದುತ್ತಿದ್ದಾರೆಯೆ?

ಮರುದಿನ 'ಹಂಸಗೀತೆ' ಬಂದಿತು. ನಿನ್ನೆಯ ರಾತ್ರಿ ಈ ಮಧ್ಯಾಹ್ನ ಅದನ್ನು ಓದಿ ಮುಗಿಸಿದ್ದೇನೆ. ಸುಬ್ಬರಾವ್, ಈ ಕಾದಂಬರಿಗಾಗಿ ನನ್ನ ಮನಸ್ಸು ತುಂಬಿ ಬಂದ ಅಭಿನಂದನೆಗಳನ್ನು ಸ್ವೀಕರಿಸಿ. ನಿಮ್ಮ ಬರವಣಿಗೆ ಶಕ್ತಿಯುಕ್ತವೆಂದು ನಾನು ಹಿಂದಿನಿಂದಲೂ ಬಲ್ಲೆ; ಕೆಲವು ಮಂದಿ ಮಿತ್ರರ ಎದುರಿಗೂ ಹೇಳಿದ್ದೇನೆ. ನಿಮ್ಮ ಹಲವು ಗ್ರಂಥಗಳನ್ನೇ ಓದಿದ್ದೇನೆ; ಅವುಗಳಲ್ಲಿ 'ಪುರುಷಾವತಾರ' ನಾನು ಹೆಚ್ಚಾಗಿ ಮೆಚ್ಚಿದ್ದ ಕೃತಿ. ಈಗ ಕೈಗೆ ಬಂದ 'ಹಂಸಗೀತೆ' ಯಂತೂ ನನ್ನನ್ನು ವಿಶೇಷವಾಗಿ ಆಕರ್ಷಿಸಿತು. ಮೊದಲನೆಯ ಪುಟದಿಂದ ಹಿಡಿದು ಕೊನೆಯ ಪುಟದ ತನಕ ಬಹುಶಃ ಎಲ್ಲಿಯೂ ತಡೆಯದೆ ಸರಾಗವಾಗಿ ಹರಿಯುತ್ತದೆ. ಕಥಾವಸ್ತುವೂ ಅಷ್ಟೆ, ನಿರೂಪಣೆಯ "ತಂತ್ರ"ವೂ ಅಷ್ಟೆ ರಮ್ಯವಾಗಿವೆ; ಕಲೆ, ಜೀವನ ಎರಡರ ಜೀವಾಳವನ್ನು ಹೊರಸೂಸುತ್ತವೆ. ಹುಟ್ಟು ಕಲೆಗಾರನ ಏಕಾಗ್ರತೆ, ಸಾಧನೆ, ಅಹಂಕಾರ, ಉಪಾಸನೆ, ಸಿದ್ಧಿ, ನಿಷ್ಠೆ – ಎಲ್ಲ ಮುಖಗಳನ್ನೂ ತಿರುಳರಿತು ಹದವರಿತು ಚಿತ್ರಿಸಿದ್ದೀರಿ. ತತ್ವ, ಉಪದೇಶ, ಇವು ರಸಾರ್ದ್ರವಾಗದೆ ಸನ್ನಿವೇಶ ಬಲದಿಂದ ಅರಳದೆ ಬರುವುದು ಬಲು ಕಡಮೆ. ಇದಕ್ಕೆ ಅಪವಾದವೆಂದರೆ ಬಹುಶಃ ಸದಾನಂದ ಬುವಾನ ಉಪದೇಶ; ಒಂದೇ ಕಡೆ ದೀರ್ಘವಾಗಿ ಬರುವುದರಿಂದ ವಾಚಕರನ್ನು ಕೆಲವು ಮಟ್ಟಿಗೆ ಅನುಲ್ಲಾಸಗೊಳಿಸಬಹುದು. ಕೊನೆಯ ಪುಟದ ಕೊನೆಯ ಸಂದರ್ಭ ಹೃದಯಗ್ರಾಹಿಯಾಗಿದೆ. ಒಂದೆರಡು ಸಣ್ಣ ಕೊರತೆಗಳನ್ನು ಸೂಚಿಸಲೆ? ವ್ಯಾಕರಣದ ಉಪಾಧ್ಯಾಯನ ಕಣ್ಣು ಕುಕ್ಕುವ ಕಾಗುಣಿತದ ತಪ್ಪುಗಳು ಅಲ್ಲಲ್ಲೇ ಇವೆ; ಇವನ್ನು ಸುಲಭವಾಗಿ ಸರಿಪಡಿಸಬಹುದು. ಚಂದ್ರಸಾನಿಯ ಪ್ರಸಂಗ ಬಂದಿರುವುದು ಸರಿ; ಅಷ್ಟು ಭೋಗವೈಭವಗಳಲ್ಲಿ ಮುಳುಗಿದ್ದಾಕೆ, ದಾಸಿಯರ ತಂಡವೇ ಸುತ್ತುಗಟ್ಟಿದ್ದಾಕೆ ಜೊತೆಗೆ ಯಾರೂ ಇಲ್ಲದೆ ಒಬ್ಬಳೇ ಬೆಳಗಿನ ಜಾವದಲ್ಲಿ ಮಾಘ ಸ್ನಾನಕ್ಕೆ ಕೊಳಕ್ಕೆ ಬಂದಿದ್ದಾಳೆಂದರೆ ನಂಬುವುದು ಸ್ವಲ್ಪ ಕಷ್ಟವಾಗುತ್ತದೆ. ಆಕೆಯ ಜೀವತ್ಯಾಗ ಅಸಂಭವವಲ್ಲ; ಅದರ ಸಂಭಾವ್ಯತೆ ನಮ್ಮ ಮನಸ್ಸಿಗೆ ಹಿಡಿಯಲು ಕಾದಂಬರಿಕಾರರ ಸಹಾಯ ಇನ್ನೂ ಕೊಂಚ ಬೇಕೋ ಏನೋ.

ಮಿತ್ರರು ವಿಶ್ವಾಸದಿಂದ ಕಳಿಸಿದ ಗ್ರಂಥಗಳನ್ನು ನಾನು ಓದುತ್ತೇನೆ. ಆದರೆ ಆಗ ಮೂಡಿದ ಆಲೋಚನೆಗಳನ್ನು ಬರೆದು ತಿಳಿಸುವ ಅಭ್ಯಾಸ ನನ್ನಲ್ಲಿ ಬಲು ಕಡಮೆ. ಅದೇಕೋ, ಈ ದಿನವೇ ನಿಮಗೆ ಕೆಲವು ಮಾತುಗಳನ್ನು ಬರೆಯಬೇಕೆನ್ನಿಸಿತು. ತೋರಿದ ಹಾಗೆ ಬರೆದಿದ್ದೇನೆ. ಇದು ಗ್ರಂಥದ ವಿಮರ್ಶೆಯೆಂದು ನೀವು ಭಾವಿಸಬಾರದು.........

ಗ್ರಂಥಕ್ಕೆ ಪ್ರೋತ್ಸಾಹದ ವಿಷಯವಾಗಿ ನಿಮ್ಮ ಅಪೇಕ್ಷೆಯನ್ನು ನೆನಪಿನಲ್ಲಿ ಇಟ್ಟುಕೊಂಡಿರುತ್ತೇನೆ.

(ಇದು ಶ್ರೀ ತರಾಸು ಅವರಿಗೆ ಬರೆದ ಪತ್ರದ ಕರಡು ಪ್ರತಿ.
ಇದನ್ನು revised ಎಂದು ಮೇಲೆ ಬರೆದಿದ್ದಾರೆ)

* * *

ಧಾರವಾಡ, ೧೨-೯-೧೯೫೩

ಪ್ರಿಯ ಮಿತ್ರ ಮುಗಳಿಯವರಲ್ಲಿ ಸಸ್ನೇಹ ವಿಜ್ಞಾಪನೆಗಳು,

ನನ್ನ ಹಿಂದಿನ ಕಾಗದ ನಿಮಗೆ ತಲಪಿರಬೇಕು. ನಿಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇದುವರೆಗೆ ೧೭೦ ಪುಟಗಳನ್ನು ಓದಿದ್ದೇನೆ. ನಾನು ಸೂಚಿಸಬಹುದಾದ ಹೆಚ್ಚಿನ ಮಾರ್ಪಾಡುಗಳೇನೂ ಇಲ್ಲ. ಈ ಕೆಳಗಿನ ಕೆಲವನ್ನು ಗಮನಿಸಬಹುದು.

ಪು. ೨೮ : ಇತ್ಯಾದಿ ಗುಣಗಾಂಕಿಯಂ :
ಇದು ಬಹುಶಃ ಗುಣಗಾಂಕೀಯಂ ಎಂದಿದ್ದಿರಬಹುದು. ಇದರಲ್ಲಿ ಗ್ರಂಥಕರ್ತೃ ತನ್ನ ಪತ್ನಿಯನ್ನು ಸಂಬೋಧಿಸಿ ಹೇಳಿದಂತೆ ಗ್ರಂಥ ಬರೆದಿರುವುದಾಗಿಯೂ, ಅದನ್ನೇ ತಾನೂ ಅನುಸರಿಸುವುದಾಗಿಯೂ ಇದರ ಉಲ್ಲೇಖ ಮಾಡಿರುವ ತಮಿಳು ಗ್ರಂಥಕಾರನ ಹೇಳಿಕೆ. (ಈ ಅಂಶವನ್ನು ಸರಿನೋಡಿಕೊಳ್ಳಿ. ನಾನು ನೆನಪಿನಿಂದ ಬರೆಯುತ್ತಿದ್ದೇನೆ.) ಹೀಗಾದರೆ ನಾಗವರ್ಮನ ಪದ್ಧತಿಗೆ ಪ್ರಾಚೀನವಾದ ಮೇಲ್‌ಪಂಕ್ತಿ ದೊರೆಯಿತಲ್ಲವೆ.

೩೧ : ಬೌದ್ಧರು ತಮಿಳಲ್ಲಿ ರಚಿಸಿದ ಕಾವ್ಯಗಳು ಈಗಲೂ ಇವೆ. ಕನ್ನಡದಲ್ಲಿಯೂ ರಚಿಸಿರಬಹುದಲ್ಲವೆ.

೩೩ : ಶತಕದಷ್ಟೊತ್ತಿಗೆ : ಈ ರೂಪಗಳನ್ನು ಒಪ್ಪಬಹುದೇ? (ಅಷ್ಟು ಹೊತ್ತಿಗೆ?).

೪೭ : ಕರ್ಣಾಟಕುಮಾರ ಸಂಭವ ಕಾವ್ಯಂ ಎಂದಿರಬೇಕು.
ಗುಣಗಾಂಕಿಯದ ಕಾಲವನ್ನು ಸು. ೯೦೦ (೮೪೪-೮೮೮) ಎಂದು ಕೊಡುವುದರ ಔಚಿತ್ಯವೇನು? ಇಂಥ ಕಡೆಗಳಲ್ಲೆಲ್ಲ ಸು. ೯೦೦ ಇಂಥ ಅನಾವಶ್ಯಕವೂ, ಒಮ್ಮೊಮ್ಮೆ ಅಸಮಂಜಸವೂ ಆದ ಕಾಲನಿರ್ದೇಶಕವನ್ನು ಕೊಡದಿದ್ದರೆ ಉತ್ತಮವಾಗುತ್ತಿತ್ತು. ಈ ವಿಷಯವನ್ನು ಹಿಂದೆಯೇ ನಿಮ್ಮ ಗಮನಕ್ಕೆ ನಾನು ತಂದಿದ್ದೆನಲ್ಲವೆ!

೫೫ : ಸರಸ್ವತಿ ಬ್ರಹ್ಮನ ಮುಖವಾಸಿನಿ ಎಂದಿರಬೇಕು. (ಅಚ್ಚಿನ ತಪ್ಪು) ನಿಮ್ಮ ಗ್ರಂಥದಲ್ಲಿ ಅಚ್ಚಿನ ತಪ್ಪುಗಳು ಅತ್ಯಲ್ಪ. ಅಭಿನಂದನೆಗಳು.

೬೧ : ವಿರೋಧಾಭಾಸದ ಪ್ರಕಾರವೆ?
ನನ್ನ ಗ್ರಂಥದ ಪರಿಶಿಷ್ಟದಲ್ಲಿ ಬರುವ ವಿಚಾರಗಳನ್ನು ನೋಡಿ. **ವಡ್ಡಾರಾಧನೆ,** ವೊಡ್ಡಾರಾಧಣ(ನ) : ಮೊದಲನೆಯ ರೂಪವನ್ನೇ ಎಲ್ಲ ಕಡೆಯಲ್ಲೂ ಇರಿಸಿಕೊಳ್ಳಬೇಕಾಗಿತ್ತು.

೮೬ : ಸೇನಬೋವ ಮಾದಿಮಯ್ಯನು "ಕಾವ್ಯನಾಟಕಕಾರ"ನೆಂಬ ವಿಷಯ. ಯಾವ ಭಾಷೆಯಲ್ಲಿ? ಸಂಸ್ಕೃತದಲ್ಲಿ ಏಕಿರಬಾರದು? ರಾ.ನ. ಅವರು ಕೊಟ್ಟಿರುವ ಸಾಮಗ್ರಿ ಅತ್ಯಲ್ಪ.

೮೮ : ಮಲೆನಾಡಿನಲ್ಲಿ ಅವನ (ಅಚ್ಚಿನ ತಪ್ಪು)

೯೫ : ಕೇಂದ್ರೀಕರಿಸಿ, ಸಮಸ್ತ (ಅಚ್ಚಿನ ತಪ್ಪು)

೯೭ : ಅಕ್ಷಯಾಂಬರದಾನದ ವಿಷಯ : ಮೂಲಭಾರತದಲ್ಲಿರಲಿಲ್ಲ. ಪಂಪನಿಗೆ ಅದು ತಿಳಿವಿರಲಿಲ್ಲವೆಂದೇ ತೋರುತ್ತದೆ.

೯೮ : ಪುರುಷೋತ್ತಮನೂ (ಅಚ್ಚಿನ ತಪ್ಪು)

೧೦೪ : ಶಾಂತಿ ಪುರಾಣದಲ್ಲಿ ಮಹಾಕವಿಯ ಯೋಗ್ಯತಾಂಶ ಇದೆಯೆ?

೧೦೬-೦೭ : ಅಜಿತಪುರಾಣದಲ್ಲಿ ಸಗರನ ಕಥೆಯ ಸೊಗಸು?

೧೦೯ : "ನಿರ್ದೋೞಿಗಳಿಕ್ಕೆ ಯಮಜನೊಳ್‌ಪುದುವಾಪೆಂ"-ಈ ಪಾಠವೇ ಸರಿಯಲ್ಲವೆಂದು ತೋರುತ್ತದೆ. ಗದಾ. ಸಂಗ್ರಹ ನೋಡಿ.

೧೧೧ : ಸಮಾನಸ್ಕಂಧತೆ
(ಮರೆತೆ : ರನ್ನನ ವಿಷಯ ಬರೆಯುವಾಗ ಲಕ್ಕುಂಡಿಯ ಶಾಸನಗಳನ್ನು ಕುರಿತು ಒಂದು ಮಾತು ಹೇಳಬಹುದಾಗಿತ್ತಲ್ಲವೇ?)

೧೩೧ : ನಯಸೇನ II: ಚಂದ್ರಿಕಾವಟರ ಯತಿಗಳು:
ಪಾ.ಭೀ. ದೇಸಾಯಿ ಲೇಖನ ಸ್ಮರಿಸಬಹುದು.

೧೩೪ : ಬ್ರಹ್ಮಶಿವನು ನಾಗಚಂದ್ರನ ಮೊಮ್ಮಗನೆಂಬ ವಿಷಯ?
(ದೇವೀರಪ್ಪನವರ ಲೇಖನ : ನಾನು ತಿರುಗಿ ನೋಡಿಲ್ಲ).

೧೪೨-೧೪೪ : ಪಾಲ್ಕುರಿಕೆ ಸೋಮನಾಥನ ಕಾಲ : ಇತ್ತೀಚೆಗೆ ಎಂದು Madras University : Annals of Oriental Rasearchನಲ್ಲಿ ಬಂದಿರುವ ಲೇಖನ ಗಮನಾರ್ಹ.

೧೫೦ : ಸೂಳ್ನುಡಿ ಎಂದರೆ ಸಂಭಾಷಣೆ, ಸಂವಾದ ಮಾತಿಗೆ ಉತ್ತರವಾಗಿ ಮಾತು; ಪ್ರತ್ಯುಕ್ತಿ "ವಚನ" ಎಂದು ಅರ್ಥವಲ್ಲ. ಹರಿಶ್ಚಂದ್ರ ಕಾವ್ಯ ಸಂಗ್ರಹ, ೫-೩೯ "ಮುನಿಯೊಡನೆ ಸೂಳ್ನುಡಿಗೊಟ್ಟನು."

೧೫೧ : ನಾಲಗೆ?

೧೬೨ : ಆಲಿಕಲ್ಲ,

೧೬೪ : ಒದಲಿಲ್ಲದ ಅಲ್ಲಮಪ್ರಭುವನ್ನು ಕುರಿತು ಎಂ.ಆರ್.ಶ್ರೀ. ಲೇಖನ ಜ್ಞಾಪಿಸಬಹುದು (ಪರಿಷತ್ಪತ್ರಿಕೆ)

೧೬೭-೧೬೮ : "ಪಚ್ಚೆಯ ನೆಲಗಟ್ಟು" ಇದು ಮೊದಲಿಗೆ ಹಾಡೇ ಆಗಿತ್ತೆಂದು ಈಗಲೂ ನನ್ನ ಮತ. ತ್ರಿಪದಿ ಬರೆದಾಕೆ ಹಾಡನ್ನೂ ಕಟ್ಟಿರಬಹುದು. ಎಲ್ಲ ವಚನಗಳೂ ಹಾಡಾಗಿದ್ದುವು ಎಂದು ನನ್ನ ಅಭಿಪ್ರಾಯವಲ್ಲ.

ಹರಿಹರನಿಗೆ ಕೊಟ್ಟಿರುವ ಸ್ಥಳ ಸಾಲದು ಎನ್ನಿಸುತ್ತದೆ.
ನೀವು ಇಲ್ಲಿಗೆ ಬರುವುದರೊಳಗಾಗಿ ಮಿಕ್ಕ ಭಾಗಗಳನ್ನೂ ಓದಿರುತ್ತೇನೆ.
ಗ್ರಂಥ ಚೆನ್ನಾಗಿದೆ, ಅತ್ಯುಪಯುಕ್ತವಾಗಿದೆ.
ತುಂಬ ತ್ವರೆಯಲ್ಲಿ ಈ ಕಾಗದ ಬರೆದಿದ್ದೇನೆ ಕ್ಷಮಿಸಿ.

* * *

ಧಾರವಾಡ, ೦೧-೧೦-೧೯೫೩

ಪ್ರಿಯ ಮುಗಳಿಯವರಲ್ಲಿ ಸಸ್ನೇಹ ವಿಜ್ಞಾಪನೆಗಳು,

ನೀವು ಸಾಂಗಲಿಗೆ ತಲಪಿದ ಬಳಿಕ ನನ್ನ ಕಾಗದವನ್ನು ನೋಡಿಕೊಂಡಿರಬೇಕೆಂದು ಭಾವಿಸುತ್ತೇನೆ. ನಿಮ್ಮ 'ಕನ್ನಡ ಸಾಹಿತ್ಯ ಚರಿತ್ರೆ'ಯ ವಿಷಯವಾಗಿ ನನ್ನ ಟಿಪ್ಪಣಿಗಳನ್ನು ಇಲ್ಲಿ ಮುಂದುವರಿಸುತ್ತೇನೆ.

ಪು. ೧೭೧ : ಹರಿಹರನನ್ನು ಕುರಿತು ಬರವಣಿಗೆ ಇನ್ನು ಸ್ವಲ್ಪ ವಿಸ್ತಾರವಾಗ ಬಹುದೆನಿಸಿತ್ತು. ಈಗಲೂ ಹಾಗೆಯೇ ತೋರುತ್ತಿದೆ. ಪ್ರಕಟಿತವಾಗಿರುವ ಅವನ ರಗಳೆಗಳಲ್ಲೇ ಮತ್ತೆ ಕೆಲವನ್ನು ಕುರಿತು, ಪುಷ್ಪರಗಳೆ, ಮಲುಹಣನರಗಳೆ ಇತ್ಯಾದಿ ಎರಡು ಮಾತನ್ನು ಹೆಚ್ಚಾಗಿ ಬರೆಯ ಬಹುದಾಗಿತ್ತು. ಪಂಪಶತಕಕ್ಕಿಂತ ರಕ್ಷಾಶತಕ ಮೇಲೆಂಬುದನ್ನು ನಾನೂ ಒಪ್ಪುತ್ತೇನೆ.

೧೭೨ : ಅಸಗನ ಕರ್ಣಾಟಕ ಕುಮಾರ ಸಂಭವ ಕಾವ್ಯದ ಉಲ್ಲೇಖ ನಿಮ್ಮ ಪುಸ್ತಕದಲ್ಲಿ ಬಂದಿದೆಯೇ? ಅದರ ಕೆಲವು ಪದ್ಯಗಳಾದರೂ

ಕಾವ್ಯಾಲೋಕದಲ್ಲಿ ಉದಾಹೃತವಾಗಿವೆ. ಈಚೆಗೆ ಈ ವಿಷಯವಾಗಿ ಲೋಕಾಪೂರರು ಕನ್ನಡನುಡಿಯಲ್ಲಿ ಬರೆದಿರುವ ಲೇಖನಗಳನ್ನು ನೀವೂ ನೋಡಿರಬೇಕು.

೧೭೯ : ಚಾರಿತ್ರ್ಯ : ಈ ರೂಪವನ್ನು ಪರಿಶೀಲಿಸಬೇಕು. ನನ್ನ ಮಟ್ಟಿಗೆ ಹೇಳುವುದಾದರೆ, ಚರಿತ್ರೆ=history ಚಾರಿತ್ರ-ಶೀಲ, ನಡೆವಳಿಕೆ

೧೮೧ : 'ಮೀಸಲುಗವಿತೆ'ಯ ಅರ್ಥವನ್ನು ನಿರ್ದೇಶಿಸಿದ್ದು ಒಳ್ಳೆಯದಾಯಿತು. ಈ ಪದ್ಯವನ್ನು ರಾ.ನ. ಕವಿಚರಿತೆಯಲ್ಲಿ ಆಗಲೆ ಉದಾಹರಿಸಿದ್ದಾರೆ.

೧೮೦ : "........ದಕ್ಷನ ಅಭವಂ......." : ಉದ್ಧರಣ ಸರಿಯಾಗಿದೆಯೆ?- ಮುಂದೆಯೂ ಕೆಲವು ಕಡೆಗಳಲ್ಲಿ ಸ್ವಲ್ಪ ತಪ್ಪು ಗೋಚರವಾಗುತ್ತದೆ.

೧೮೪ : ರಾಘವಾಂಕನಿಗಿಂತ ಹರಿಹರ ನಿಜವಾಗಿಯೂ ದೊಡ್ಡವನು, **ಗುರು.**

"ಮಹಾಕವಿ" ಎಂಬ ಪ್ರಶಸ್ತಿಯನ್ನು ನೀವೂ ಸ್ವಲ್ಪ "ಧಾರಾಳ"ವಾಗಿಯೇ ಈ ಗ್ರಂಥದಲ್ಲಿ ಕೊಟ್ಟಿರುವಂತೆ ನನಗೆ ತೋರುತ್ತದೆ.

೧೮೮; ೨೭೮ : ಮುಂದರಿ : ಮುಂದುವರಿ ಆಗಬೇಡವೆ?

೧೯೨ : ಹಾತಾಳಿಸು ಎಂದರೇನು?

೧೯೬ : ಸುಭಾಷ್ಶಿತ್ವ X **ಸುಭಾಷಿತ.**

೨೦೨ : ಸಂಸ್ಕೃತ ಉದ್ಧರಣದಲ್ಲಿ **ತಪ್ಪಿದೆ.** "ಯಾವುದಾಯು: ಅನಾದರ್ತ್ನ".

೨೦೪ : ಕೈಕೊಡು ಎಂಬ ಮಾತಿಗೆ ಮೈಸೂರಿನ ರೂಢಿಯಲ್ಲಿ 'ವಂಚಿಸು' ಎಂಬ ಅರ್ಥವಿದೆ; ಕೈಗೂಡು=ನೆರವಾಗು

೨೦೬ : ಬಾಟಿ ಬಟ್ಟೆ : ಬಟಿಕೆಯ್ಯ.

೨೫೩ : "ಮರನಂ ಗಾಳಿಯಂ....."; ಏನೋ ಬಿಟ್ಟು ಹೋಗಿದೆ.

೨೧೭ : ಚೌಂಡರಸನ ನಳಚರಿಪುವನ್ನೂ ಸ್ಮರಿಸಬೇಕು : ಕೃತಿಯೇನೂ ಅಷ್ಟು ಉತ್ಕೃಷ್ಟವಲ್ಲ.

೨೩೪ : ನಂದಳಿಕೆ ಲಕ್ಷ್ಮೀನಾರಣಪ್ಪ : ಕಾಲವನ್ನು ನಿರ್ದಿಷ್ಟವಾಗಿಯೇ ಕೊಡಬೇಕಾಗಿತ್ತು.

೨೩೮ : ಅವರ ನಿದರ್ಶನಕ್ಕೆ-? ಪ್ರಯೋಗ ಒಪ್ಪಿಗೆಯೆ?

೨೫೦ : ಕೊನೆಯಪಂಕ್ತಿ : ನಿರೂಪಣೆ.

೨೫೪ : ಇಂಗ್ಲಿಶ್(ಷ್) ಸೇಕ್ಸಪಿಯರನ (ಷೇಕ್ಸ್-?)

೨೬೦ : ಕೇಳಿದು, ತೊಳಲಿದು-ಈ ಬಗೆಯ ಪ್ರಯೋಗಗಳು ಆ ಸಂಕ್ರಮಣ ಕಾಲದಲ್ಲಿ ಬಳಕೆಯಲ್ಲಿದ್ದಿರಬಹುದು, ಇರಲೇ ಇಲ್ಲವೆಂದು ಸಾಧಿಸುವುದು ಕಷ್ಟ.

೨೬೩ : ಜಾಬಾಳವಾದ ?

೨೬೬ : ಹೇಳಿದೊಡೆನೆ : ಡ

೨೭೨ : ಸುಪರಿಚಿವಾದ : ರಾ?

೨೮೦ : ಜ್ಞಾನಿನಾ ಚರಿತುಂ ಶಕ್ಯಂ.....

-ಪುರಂದರದಾಸರ ಕೃತಿಗಳಲ್ಲಿ ಎಲ್ಲವೂ ಸಾಹಿತ್ಯ ಕೃತಿಗಳಲ್ಲ ಎಂದು ಸ್ಪಷ್ಟಪಡಿಸಿದ್ದು ಒಳ್ಳೆಯದಾಯಿತು.

೩೦೦ : ಪರಿಪೂರ್ಣತೆಯನ್ನೂ

೩೦೧ : ನಂಜುಂಡನ ಕುಮಾರರಾಮಚರಿತೆಯನ್ನು ಕುರಿತು ವಿಸ್ತಾರವಾದ ವಿಮರ್ಶೆ ನಿಮ್ಮ ಗ್ರಂಥದಲ್ಲಿ ಬರಬೇಕಾಗಿತ್ತು.

ಭರತೇಶ ವೈಭವವನ್ನು ಬಿಟ್ಟರೆ ಇದೇ ಅತ್ಯುತ್ಕೃಷ್ಟ ಸಾಂಗತ್ಯ ಕೃತಿ.

೩೦೯ : ಸಂಚಿಯ ಹೊನ್ನಮ್ಮ ಚಿಕ್ಕದೇವರಾಯನ ಅಂತಃಪುರದಲ್ಲಿ ಬಹುಶಃ "ಬಂಗಾರ"ದವಳಾಗಿ ಸ್ಥಾನಪಡೆದಿದ್ದಾಳೆಂದೇ ನನ್ನ ಅಭಿಪ್ರಾಯ ಕೂಡ. ಇದಕ್ಕೆ ಪೋಷಣೆ ಶ್ರೀ ಮುಳಿಯ ತಿಮ್ಮಪ್ಪಯ್ಯನವರ ವಿಮರ್ಶೆಯಲ್ಲಿ ದೊರೆತಿದೆ. "ಸವತಿಯಾಗಿ" ಎಂಬ ಪದ ಅಷ್ಟು ಉಚಿತವಲ್ಲವೆಂದು ತೋರುತ್ತದೆ.

೩೩೧ : ನೂರುಗಂಟಲೆ (ಗಟ್ಟಲೆ)

೩೩೨ : ಚಾಮರಸ : 'ಅರಸ' ಎಂಬ ಉಪಪದವುಳ್ಳ ಅನೇಕರು ಬ್ರಾಹ್ಮಣರೆಂದು ನನಗೆ ತೋರುತ್ತದೆ. ಚೌಂಡರಸ ಎಂಬುದನ್ನು ಹೋಲಿಸಿ. ಹಾಗೆಯೇ ಈಗಿನ "ರಾವ್", "ಮಹಾರಾಜ್" ಇವನ್ನೂ ಹೋಲಿಸಿ. ಚಾಮರಸನು ಜಾತ್ಯಾ (ವೀರ?)ಶೈವ ಬ್ರಾಹ್ಮಣನೆಂದು ನನಗೆ ತೋರುತ್ತದೆ. ಕುಮಾರ ವ್ಯಾಸನು ಅವನ ತಂಗಿಯನ್ನು ಮದುವೆಯಾಗಿದ್ದಾನೆಂಬ ಕಥೆಯನ್ನು ಜ್ಞಾಪಿಸಿಕೊಳ್ಳಿ.-ಪ್ರಭುಲಿಂಗಲೀಲೆಯಲ್ಲಿ, (ಭೀಮಕವಿಯ ಬಸವ ಪುರಾಣದಿಂದೇಚೆಗೆ) ಬಸವಣ್ಣನಿಗೆ ಉಪನಯನವಾಗಿರು ವುದೂ ಗಮನಾರ್ಹ.

೩೩೪ : ಒಂದು ಗೂಡುವೆವೆಂಬ ಬೀಸಿದೊಡಲೆವುದೇ,

೩೩೬ : ಕೇಳುದಕದಲ್ಲಿ; ತಿಳಿವು....ತಿಟ್ಟವಿಟ್ಟಿತು.
(Quotations must be checked carefully-)

೩೪೨ : ಕಡಬರಸನಲ್ತೆ : ಕಡುಬರಸ ಎಂದಿರಬೇಕಲ್ಲವೆ, Cp. ಸಜ್ಜರಸ (ಒಂದು ತಿಂಡಿ).

೩೪೩ : ಖಂಡಿತ ಎಂದೇ ಸರಿಯಾದ ರೂಪ; ಸಂಸ್ಕೃತ ಪದ (in spite or Kittel)

೩೪೫ : ಇದಂ ಸರ್ವವಿದಿತಂ. Quotation?

೩೪೬ : ಉತ್ತಮಕಾವ್ಯವಾಗಿದೆ.

೩೪೭ : ಕಿಚಿ‍ೆದಚಿ ಳೆ

೩೪೮ : ಸುರಂಗಕವಿಯ ಕೃತಿಯನ್ನೇ ಕುರಿತು ನಾಲ್ಕು ಮಾತು ಹೇಳಬೇಕಾಗಿತ್ತು.

೩೪೯ : ಚಂಪೂ ರೂಪದಲ್ಲಿದೆ.

ಅಚ್ಚರಿಯ ಬೆರಕೆಯಾಗಿವೆ? ನನಗೇನೋ ಸಂದೇಹ.

ಷಡಕ್ಷರದೇವನನ್ನು ಅನೇಕರು ಹಾಡಿಹೊಗಳುತ್ತಿದ್ದರೂ, ಅವನಲ್ಲಿ ಚಮತ್ಕಾರ-ಪ್ರೇಮ ಹೆಚ್ಚೆಂದೂ ಅವನನ್ನು ದೊಡ್ಡ ಕವಿಯೆಂದು ಕರೆಯುವುದು ಕಷ್ಟವೆಂದೂ ನನ್ನ ಅಭಿಪ್ರಾಯ. ಅವನ ಶ್ಲಾಘನೆಯಲ್ಲಿ ನಿಮ್ಮಷ್ಟು ದೂರ ಕೂಡ ನಾನು ಹೋಗಲಾರೆ.

(ಮರೆತಿದ್ದೆ : ಚಾಮರಸನೂ ಕುಮಾರವ್ಯಾಸನೂ ಒಂದೇ ತೂಕವೆ? ಚಾಮರಸನಲ್ಲಿ ಔಚಿತ್ಯ ಜ್ಞಾನ ಹೆಚ್ಚಿರಬಹುದು. ಆದರೆ ಕವಿತಾ ಶಕ್ತಿಯಲ್ಲಿ ರಸನಿರ್ಭರತೆಯಲ್ಲಿ ಕುಮಾರವ್ಯಾಸ ಎಷ್ಟೋ ಮೇಲಲ್ಲವೇ?)

೩೫೯ : ಭರತೇಶ ವೈಭವ. (ಮೊದಲ ಪಂಕ್ತಿ).

೩೬೦ : I ಗುಣವರ್ಮ 'ಹರಿವಂಶ' ಚಂಪೂಕೃತಿಯಾಗಿರಬೇಕು; ಆದರೆ ಕಾವ್ಯಸಾರದಿಂದ ಅದು ನಿರ್ಧರವಾಗುವುದಿಲ್ಲ, ವಿದ್ಯಾನಂದನು 'ಹರಿವಂಶ'ವನ್ನು ನೋಡಿದ್ದನೆಂಬ ವಿಷಯದಲ್ಲೇ ನನಗೆ ಸಂದೇಹ!

೩೬೨ ಮುಂ : ರತ್ನಾಕರ ದೊಡ್ಡಕವಿ. ಆದರೆ ನಿಮ್ಮ ಪ್ರಶಂಸೆಯನ್ನು ನಾನು ಪೂರ್ಣವಾಗಿ ಒಪ್ಪಲು ಸಾಧ್ಯವಾಗಿಲ್ಲ. ಅದರ ಚರ್ಚೆ ಇಲ್ಲಿ ಅಪ್ರಕೃತ.

೩೬೭ : ರತ್ನಾಕರನ ಕಾಣ್ಕೆ : (ಅಚ್ಚಿನ ತಪ್ಪು)

೩೬೮ : ಅಂಭೋಧಿಯಾನಿಹುದು (Check Quotation)

೩೭೭ : 'ಮಣಿಬಲ್ಲತನ' ಎಂದರೇನು?

ಕುಮಾರವ್ಯಾಸಯುಗವನ್ನು ಸುಮಾರು ೧೬೫೦ರಪಷ್ಟಕ್ಕೆ ನಿಲ್ಲಿಸಿ, ಕನ್ನಡ ಸಾಹಿತ್ಯದ ಮಾರ್ಗ ಪ್ರಕಾರಕ್ಕೆ ಹೊಸ ಜೀವಕೊಟ್ಟ ಚಿಕ್ಕ ದೇವರಾಜ ಒಡೆಯರ ಕಾಲವನ್ನು ಪ್ರತ್ಯೇಕವಾಗಿ ಹೇಳಬೇಕಾಗಿತ್ತೆಂದು ನನಗೆ ತೋರುತ್ತದೆ. ಆಗ ನಿಮ್ಮ ನಿರೂಪಣೆಯಲ್ಲಿ ಕಾಲದ ಪರಿಮಿತಿ ಅಂತರ-ಇತ್ಯಾದಿಗಳಿಗೆ ಹೆಚ್ಚಿನ ಪ್ರಾಧಾನ್ಯ ಬರುತ್ತಿತ್ತು.

ತೋರಿದ ನಾಲ್ಕು ಮಾತನ್ನು ಮೇಲೆ ಬರೆದಿದ್ದೇನೆ. ನಿಮ್ಮ ಗ್ರಂಥವನ್ನು ಮತ್ತೆ ಅಮೂಲಾಗ್ರವಾಗಿ (೩೮೪ನೆಯ ಪುಟದವರೆಗೆ!) ಓದಿ ವಿಶೇಷ ಸಂತೋಷವಾಯಿತು. ಇಷ್ಟು ವಿಷಯವನ್ನು ಒಟ್ಟುಗೂಡಿಸಿ ಸಮತೂಕದ ದೃಷ್ಟಿಯಿಂದ ವಿಮರ್ಶಿಸಿರುವುದಕ್ಕಾಗಿ ನನ್ನ ಅಭಿನಂದನೆಯನ್ನು ಸ್ವೀಕರಿಸಿ. ಕವಿಗಳ ಸ್ಥಾನ ನಿರ್ದೇಶ, ಹೋಲಿಕೆ ಇವುಗಳಲ್ಲಿ ಒಮ್ಮೊಮ್ಮೆ ಭಿನ್ನಾಭಿಪ್ರಾಯ ಬರುವುದು ಅನಿವಾರ್ಯ. ಆದರೆ ಸಮುಚಿತ ದೃಷ್ಟಿ ನಿಮ್ಮ ಬರಹದಲ್ಲಿ ಸಮಲ್ಲಸಿತವಾಗಿದೆ.

*

ಅಕ್ಟೋಬರ್ ೫ಕ್ಕೆ ಪುಣೆಯ ವಿಶ್ವವಿದ್ಯಾಲಯದ ಸಭೆ ಉಂಟೆಂದು ಪತ್ರ ಬಂದಿದೆ. ನಾನು ಆಗ ಬರಲು ಸಾಧ್ಯವಿಲ್ಲ. UNESCO ಸಂಬಂಧದ 'Spoken Kannada Project' ಸಲುವಾಗಿ ಈ ಮಧ್ಯಾಹ್ನ ನಾನು ಮೈಸೂರಿಗೆ ಪ್ರಯಾಣ ಮಾಡಬೇಕಾಗಿದೆ. ೫ನೆಯ ತಾರೀಖು ಇಲ್ಲಿಗೆ ಹಿಂದಿರುಗಬೇಕೆಂದಿದ್ದೇನೆ

(ಮೇಲಿನ ಎರಡು ಪತ್ರಗಳು ಶ್ರೀ ರಂ.ಶ್ರೀ. ಮುಗಳಿ ಅವರಿಗೆ ಬರೆದ ಪತ್ರಗಳ ಮೂಲಪ್ರತಿಗಳು)

* * *

ಧಾರವಾಡ, ೨೧-೯-೧೯೫೩

ಶ್ರೀಮರ್ಾ ಮಹಾಬಲರಾಯರಲ್ಲಿ ವಿಜ್ಞಾಪನೆಗಳು

ದೊಡ್ಡ ವಸ್ತುವನ್ನು ಕಳೆದುಕೊಂಡೆವು. ಶ್ರೀ ಶ್ರೀನಿವಾಸಮೂರ್ತಿಗಳು ನಿಮಗೆ ಮಾತ್ರವಲ್ಲ, ನನಗೂ ಹಿರಿಯಣ್ಣನಂತೆ ಇದ್ದರು. ಅಷ್ಟೊಂದು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರು ಹೀಗೆ ಅನಿರೀಕ್ಷಿತವಾಗಿ ದಿವಂಗತರಾದರೆಂದು ಪತ್ರಿಕೆಯಲ್ಲಿ ಓದಿದಾಗ ನನಗೆ ನಂಬುವುದಕ್ಕೇ ಸಾಧ್ಯವಾಗಲಿಲ್ಲ; ದಿಗ್ಭ್ರಮೆಯಾಯಿತು. ಈಗ ಕೂಡ ದಿವಸಕ್ಕೆ ಹತ್ತಾರು ಸಲ ಇದ್ದಕ್ಕಿದ್ದಂತೆ ಆ ಹಿರಿಯರ ನೆನಪು ಮೂಡಿ ಮನಸ್ಸು ಬೆಚ್ಚುತ್ತದೆ. ನನ್ನ ವಿಷಯದಲ್ಲಿ ಅವರು ತುಂಬ ಪ್ರೀತಿಯನ್ನಿಟ್ಟಿದ್ದರು. ಅವರನ್ನು ಕಳೆದುಕೊಂಡು ನನ್ನ ಹೃದಯವೇ ಹೀಗೆ ಶೂನ್ಯವಾಗಿರುವಾಗ ನಿಮ್ಮೆಲ್ಲರ ದುಃಖ ಸಂಕಟ ಎಷ್ಟೊಂದು ಅಧಿಕವಾಗಿರಬೇಕೆಂಬುದನ್ನು ಊಹಿಸುವುದಕ್ಕೆ ದಿಗಿಲಾಗುತ್ತದೆ. ಆದರೂ ನೀವು ಮನಸ್ಸಿಗೆ ಸಮಾಧಾನ ತಂದುಕೊಳ್ಳಬೇಕು; ನಿಮ್ಮ ಅತ್ತಿಗೆ

ಯವರಿಗೂ, ಮಕ್ಕಳಿಗೂ ಸಮಾಧಾನ ಹೇಳಬೇಕು. ಹೀಗೆ ಬರೆಯುವುದು ಉಪಚಾರೋಕ್ತಿಯೆನಿಸಿದರೂ ಇಷ್ಟನ್ನೂ ಮಾಡದಿದ್ದರೆ ಕರ್ತವ್ಯಲೋಪವೆಂದು ಭಾವಿಸಿ ಈ ಎರಡು ಪಂಕ್ತಿಗಳನ್ನು ಬರೆಯುತ್ತಿದ್ದೇನೆ; ಇಷ್ಟು ಮಾಡುವುದಕ್ಕೆ ಕೂಡ ಇದುವರೆಗೆ ಮನಸ್ಸು ಹದಕ್ಕೆ ಬಂದಿರಲಿಲ್ಲ.

ಕನ್ನಡಕ್ಕೆ ಅಗಾಧ ನಷ್ಟವಾಯಿತು. ಪರಿಷತ್ತಿನ ಕಲಶವೇ ಬಿದ್ದುಹೋದಂತೆ ನನಗೆ ತೋರುತ್ತಿದೆ. ಪರಿಷತ್ತಿಗಾಗಿ ನಮ್ಮ ಈ ಹಿರಿಯರು ಎಷ್ಟು ಕಾಲ ಎಷ್ಟು ವಿಧವಾಗಿ ದುಡಿದರು, ಹಣವನ್ನು ಗಳಿಸಿದರು, ಜನರನ್ನು ಕೂಡಿಸಿದರು. ಅದರ ಕೀರ್ತಿಯನ್ನು ಪ್ರಯೋಜನವನ್ನು ಶತಾಧಿಕವಾಗಿ ಹೆಚ್ಚಿಸುವ ಯೋಜನೆಗಳನ್ನು ಅನನ್ಯ ನಿಷ್ಠೆಯಿಂದ ಬೆಳೆಸಿದರು. ಎಲ್ಲವನ್ನೂ ಸಜ್ಜುಗೊಳಿಸಿ, ವ್ಯವಸ್ಥೆಗೊಳಿಸಿ ಮಹಾಕಾರ್ಯಗಳು ನಿರಾತಂಕವಾಗಿ ನಡೆಯುವುದಕ್ಕೆ ಏರ್ಪಡಿಸಿ, ಈ ಸೂತ್ರಧಾರರೇ ನಮ್ಮನ್ನೆಲ್ಲ ಅಗಲಿ ನಡೆದುಬಿಟ್ಟರು! ಎರಡು ವಾರದ ಕೆಳಗೆ ಅವರಿಂದ ಒಂದು ಪ್ರೀತಿಯ ಕಾಗದ ನನಗೆ ಬಂದಿತ್ತು. ಪರಿಷತ್ತಿನ ವಿಷಯವೆಲ್ಲ ಪ್ರಸ್ತಾಪಿಸಿ ಹೊಸ ಕಾರ್ಯದರ್ಶಿಗಳೂ, ಕೋಶಾಧ್ಯಕ್ಷರೂ ತಮ್ಮಲ್ಲಿ ಕೋರಿಕೆಯನ್ನು ಮನ್ನಿಸಿ ಕೆಲಸವನ್ನು ಮಾಡಲು ಒಪ್ಪಿಕೊಂಡ ವಿಷಯವನ್ನು ತಿಳಿಸಿ "ಈಗ ಮನಸ್ಸಿಗೆ ನೆಮ್ಮದಿಯಾಯಿತು" ಎಂದು ಅದರಲ್ಲಿ ಬರೆದಿದ್ದಾರೆ!..... ಅಯ್ಯೋ, ಈ ನೆಮ್ಮದಿಯನ್ನು ಪಡೆದ ಅವರೇ ಈಗ ಕಣ್ಮರೆಯಾಗಿ ನಮ್ಮೆಲ್ಲರ ನೆಮ್ಮದಿಯನ್ನು ಕಳೆದುಬಿಟ್ಟರು!

ಈ ಹಲುಬಾಟಕ್ಕೆ ಕೊನೆಯಲ್ಲಿ! ಕಾಗದವನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ನಿಮ್ಮೆಲ್ಲರ ಮಹಾದುಃಖದಲ್ಲಿ ನಾನು ಸಮಭಾಗಿಯಾಗಿದ್ದೇನೆಂದು ಮಾತ್ರ ಮತ್ತೊಮ್ಮೆ ಹೇಳಬಯಸುತ್ತೇನೆ.

(ಇದು ಎಂ.ಆರ್.ಶ್ರೀ.ಯವರು ನಿಧನರಾದ ಸಂದರ್ಭದಲ್ಲಿ ಬರೆದ ಪತ್ರದ ಕರಡು ಪ್ರತಿ)

* * *

ಧಾರವಾಡ, ೧೭-೧-೧೯೫೫

ಪ್ರಿಯ ಮೂರ್ತಿರಾವ್,

ನಿಮ್ಮ ಎರಡು ಕಾಗದಗಳೂ ತಲಪಿದುವು. ಡಾ॥ ಗೋವಿಂದಸ್ವಾಮಿಯವರ ಕಾಗದವೂ ತಲಪಿತು.

ನನ್ನ ಜಡಸ್ವಭಾವ ನಿಮಗೆ ತಿಳಿದೇ ಇದೆ. ಪುಣೆಯಿಂದ ಬಂದ ಈಚೆಗಂತೂ ಆಲಸ್ಯದ ಜಾಡ್ಯ ಸ್ವಲ್ಪ ಹೆಚ್ಚೇ ಆಗಿದೆ. ಕೆಲವು "ಅವಶ್ಯ"ವಾದ "ಅನಿವಾರ್ಯ"ವಾದ ಕಾಗದಗಳಿದ್ದುವು. ಅವಕ್ಕೆ ಮಾತ್ರ ಗಮನಕೊಟ್ಟು ಸ್ನೇಹದ ಪತ್ರಗಳನ್ನು ಹಾಗೆಯೇ ಮೇಜಿನ ಮೇಲೆ "ಉಪ್ಪಿನಕಾಯಿ ಹಾಕಿ" ಇರಿಸಿದ್ದೆ. ಅವು ಕಳಿಯಲಿ ಎಂದಲ್ಲ; ನನ್ನ ಮನಸ್ಸಿನ ಸೋಮಾರಿತನ ಹರಿಯಲಿ ಎಂದು!

ನನ್ನ ಕಾಗದವನ್ನು ಕುರಿತು ನೀವೂ ಡಾ॥ ಗೋವಿಂದಸ್ವಾಮಿಯೂ ನಕ್ಕಿರಬೇಕು, ಅಲ್ಲವೆ! ಅದರಿಂದ ನನಗೇನೂ ವ್ಯಥೆಯಿಲ್ಲ. ಪುಣೆಗೆ ನಿಮ್ಮ ಕಾಗದ ಬಂದ ದಿನ ನನ್ನ ಮನಸ್ಸು ತಳಮಳಿಸಿದ್ದು ನಿಜ. ನಿಮ್ಮ ಪ್ರೀತಿಯನ್ನು ಕಳೆದುಕೊಂಡೆ ಎಂದು ಅಲ್ಲ. ಆ ರೀತಿ ನನ್ನನ್ನು ನೀವು ದೂರೀಕರಿಸಬಹುದೆಂದು ನನಗೇನೋ ಎಂದೂ ಅನ್ನಿಸಿಲ್ಲ. ನನ್ನನ್ನು ಸ್ವಲ್ಪ ಚುಚ್ಚಬೇಕೆಂದೇ ಆ ರೀತಿ ನೀವು ಬರೆದಿದ್ದೀರಿ ಎಂದೂ ಅನ್ನಿಸಿತು. ಇದರ ಜೊತೆಗೆ ನನ್ನ ಆಲಸ್ಯದ ತಪ್ಪು ನನ್ನನ್ನು ಎಲ್ಲಕ್ಕಿಂತ ಹೆಚ್ಚಾಗಿ ಚುಚ್ಚುತ್ತಿತ್ತು. ಇದೆಲ್ಲದರ ಕಾವಿನಲ್ಲಿ ಅದೇ ಮಧ್ಯಾಹ್ನ ಕೂತು ನನ್ನ ಕಾಗದವನ್ನು ಬರೆದೆ. ಒಪ್ಪೊತ್ತು ತಡಮಾಡಿದ್ದರೆ, ಕಾಗದ ಹೆಚ್ಚು ಹಗುರವಾಗುತ್ತಿತ್ತೋ ಏನೋ. ಆದರೆ ಅದಕ್ಕೆ ಅವಕಾಶವಿರಲಿಲ್ಲ. ನೀವು ತಿರುವಾಂಕೂರಿಗೆ ಹೊರಡುವುದರೊಳಗೆ ನನ್ನ ಕಾಗದ ನಿಮಗೆ ತಲಪಲೇಬೇಕಾಗಿತ್ತು! – ಅಂತೂ ಬರೆದೆ. ಯಾಕೆ ಬರೆಯಬಾರದು? ಒಮ್ಮೊಮ್ಮೆ ಹೀಗೆ ಆಗುವುದು ಒಳ್ಳೆಯದು – ಇಬ್ಬರಿಗೂ ಒಳ್ಳೆಯದು ಎಂದು ನಾನು ಹೇಳಿದರೆ ತಪ್ಪಾಗುವುದಿಲ್ಲವಷ್ಟೆ. ಅಂತೂ ಆ ಕಾಗದ ಬರೆದ ಮೇಲೆ ನನ್ನ ಮನಸ್ಸೇನೋ ಹಗುರವಾಯಿತು. ಅದರಿಂದ ನಿಮಗೆ ಸ್ವಲ್ಪ ಬಾಧೆಯಾಗಿದ್ದರೆ ನಾನು ಅದಕ್ಕಾಗಿ ಪರಿತಾಪ ಪಡುವುದಿಲ್ಲ. ..... ನಿಮ್ಮ "ಇಂಪುತನ" ನನಗೆ ಚೆನ್ನಾಗಿ ಗೊತ್ತು. ಆದರೆ ನಿಮ್ಮ ಕಾಗದದಲ್ಲಿ ಅದರ ಜೊತೆಗೆ ನೋವೂ ಇತ್ತೆಂದು ನನಗೆ ಅನ್ನಿಸಿತು. ಇದು ಸುಳ್ಳಲ್ಲ ತಾನೆ? ಅದಕ್ಕಾಗಿ ಅಷ್ಟೊಂದು ಹಗರಣದ ಕಾಗದ ಬರೆಯಬೇಕಾಯಿತು. ಇಲ್ಲಿಗೆ ಈ ಮಾತನ್ನು ಸದ್ಯಕ್ಕೆ ನಿಲ್ಲಿಸೋಣ. ನನ್ನ ಮನಸ್ಸೇನೋ ಎಂದೋ ಪ್ರಶಾಂತವಾಯಿತು. ನಿಮ್ಮದು ಹಾಗೆಯೇ ಆಗಿದೆಯೆಂದೂ ಲೇಖನಿ ಧಾರಾಳವಾಗಿ ಆಡುತ್ತಿದೆಯೆಂದೂ ನಿಮ್ಮ ೪ನೆಯ ತಾರೀಖಿನ ಕಾಗದದಿಂದ ಸ್ಪಷ್ಟವಾಗಿದೆ!

ನನ್ನ ಪುಣೆಯ ಪ್ರವಾಸ ಹಿತವಾಗಿತ್ತು, ಉತ್ತೇಜಕವಾಗಿತ್ತು. ನನ್ನ ಪಾಠಗಳೂ ತಕ್ಕಮಟ್ಟಿಗೆ ಚೆನ್ನಾಗಿದ್ದವೆಂದು ನನ್ನ ಭಾವನೆ. ಡಾ॥ ಛಟರ್ಜಿಯವರ ಸಹವಾಸವಂತೂ ಉಲ್ಲಾಸಕರವಾಗಿತ್ತು. ಹಲವು ವಾರಗಳು ಅವರೊಂದಿಗೆ ನಿಕಟಸಂಪರ್ಕ ಹೀಗೆ ದೊರೆತದ್ದೇ ನನ್ನ ಭಾಗ್ಯ; ಇದು ಹದಿನೈದು ಇಪ್ಪತ್ತು ವರ್ಷದ ಹಿಂದೆ ದೊರೆತಿದ್ದರೆ, ನಾನು ಒಂದಿಷ್ಟು ಪ್ರಯೋಜನಕರವಾದ ಕೆಲಸವನ್ನು ಮಾಡಿರಬಹುದಾಗಿತ್ತು. ಆಗಲಿ, Better late than never. ಭಾಷಾಶಾಸ್ತ್ರಕ್ಕೆ ತಲೆಕೊಟ್ಟರೂ ಸರಸತ್ವವನ್ನು ಹೇಗೆ ಉಳಿಸಿ, ಬೆಳೆಸಿಕೊಳ್ಳಬಹುದೆಂಬುದಕ್ಕೆ ಡಾ॥ ಛಟರ್ಜಿ ಉತ್ತಮ ನಿದರ್ಶನ – ಆ ಗುರುವಿನ ಗುಣ ನನ್ನಲ್ಲೂ ಸ್ವಲ್ಪ ಬರಲಿ ಎಂದು ನೀವೆಲ್ಲ ಹಾರೈಸಿ.

ಬೆಂಗಳೂರಿನಲ್ಲಿ, ಪರಿಷತ್ತಿನಲ್ಲಿ ಈಚೆಗೆ ಏನು ನಡೆಯುತ್ತಿದೆ ಎಂಬುದಕ್ಕೆ ನಿಮ್ಮ ಕಾಗದದಲ್ಲಿ ಏನೂ ಸೂಚನೆಯಿಲ್ಲ. ಡಿ.ಎಲ್.ನ. ಕಾಗದ ಎರಡು ದಿನದ ಹಿಂದೆ ಬಂತು. ಬೆಂಗಳೂರಿನಲ್ಲಿ ಮನೆ ಮಾಡಿದ್ದಾರಂತೆ, ಸಂತೋಷ. ಬೆಂಗಳೂರಲ್ಲೇ ಇರುವುದಕ್ಕೆ ಮನಸ್ಸನ್ನು ಒಗ್ಗಿಸಿ ಕೊಂಡಿದ್ದಾರಷ್ಟೆ. ಅವರ ಸಹಾಯಕರು ಇನ್ನೂ ಒದಗಿಲ್ಲವೆಂದು ಕಾಣಿಸುತ್ತದೆ. ಇನ್ನೇನೂ ತೊಡಕು ಇಲ್ಲವೆಂದು ನಂಬುತ್ತೇನೆ.

ತಿರುವನಂತಪುರದ ಕಾರ್ಯಕಲಾಪಗಳೇನು? ಅಲ್ಲಿಯ ಪ್ರವಾಸದ ಇನ್ನೊಂದು ಮುಖದ (ಹಣಕಾಸಿನದು) ವಿಷಯ ಶ್ರೀ ಬೇಂದ್ರೆಯವರಿಂದ ಸ್ವಲ್ಪ ತಿಳಿಯಿತು. Dravidian Lang. & Lit. Conference ಏರ್ಪಡಿಸಬೇಕೆಂದು ಇದ್ದೀರಂತೆ. ಅವಶ್ಯವಾಗಿ ನಡಸಿ. ಇದು ಆಗ ಬೇಕೆಂದು ನಾನೂ ಒಂದೆರಡು ಬಾರಿ ಹೇಳಿದ್ದು ನಿಮಗೆ ನೆನಪಿರಬಹುದು. ಅದಕ್ಕೆ 'South Indian Lang. & Lit. Conference ಎಂದು ಹೆಸರು ಕೊಟ್ಟು, ದ್ರಾವಿಡಭಾಷೆಗಳ ಜೊತೆಗೆ ಮರಾಠಿ, ಹಿಂದಿ, ಉರ್ದು – ಈ ಮೂರರ ಪ್ರತಿನಿಧಿಗಳಿಗೆ "observers" ಎಂದಾದರೂ ಸ್ಥಾನ ಕೊಡುವುದು ಉಚಿತವಲ್ಲವೆ?

ನೀವು ಇಲ್ಲಿಗೆ ಕೆಲವು ದಿನದ ಮಟ್ಟಿಗಾದರೂ ಖಂಡಿತ ಬನ್ನಿ. ಹಾಯಾಗಿ ನಾಲ್ಕುದಿನ (ನಾಲ್ಕೇ ಎಂದಲ್ಲ; ನಾಲ್ಕಕ್ಕೆ ಕಡಿಮೆಯಿಲ್ಲದೆ ಎಂದು ಅರ್ಥ) ಕಾಲ ಕಳೆಯಬಹುದು. ಮಾತಾಡ ಬಹುದು. ನಾನು ನಿಮಗೆ ಮುಖತಃ ಹೇಳಬೇಕಾದದ್ದೂ ಬಹಳ ಇದೆ – ಬನ್ನಿ. ಯಾವಾಗ ಬರುತ್ತೀರಿ, ತಿಳಿಸಿ.

ಇಂದೆ ೨೦ಕ್ಕೆ Mys. Univ. Kan. Publication Committee ಸಭೆ ಬೆಳಗ್ಗೆ ಇದೆ. ಅದಕ್ಕೆ ಬಹುಶಃ ಬರುವುದಿಲ್ಲ. ಇಲ್ಲಿ ಕೆಲಸವಿದೆ.

ಕಾಗದ ಬರೆಯಿರಿ.

(ಇದು ಶ್ರೀ ಎ.ಎನ್. ಮೂರ್ತಿರಾಯರಿಗೆ ಬರೆದ ಪತ್ರದ ಮೂಲ ಪ್ರತಿ)

ತೀ.ನಂ.ಶ್ರೀ. ಅವರಿಗೆ ಬಂದ ಪತ್ರಗಳು

●

ನಂ. ಶಿವರಾಮ ಶಾಸ್ತ್ರಿ ನಂಜನಗೂಡು, ೨೯–೦೫–೧೯೨೬

ನೀವು 'ಲೈಬ್ರೆರಿ' ವಿಷಯ ಬರೆಯುತ್ತೀರಿ? ನಾನು ಒಂದು ಪುಸ್ತಕದ ವಿಷಯ ಹೇಳುತ್ತೇನೆ. ಇಲ್ಲಿಗೆ ಯಾವನೋ ಒಬ್ಬ ಪುಸ್ತಕ ವ್ಯಾಪಾರಿಯು ೧೧೮ ವರ್ಷಗಳ ಕೆಳಗೆ ಅಚ್ಚಾದ (ದೇವನಾಗರಿ ಲಿಪಿ) ಶ್ರೀಮದ್ರಾಮಾಯಣವನ್ನು ತಂದಿದ್ದನಂತೆ. ಅದನ್ನು ಅವನು ಬಿಟ್ಟಿಯಾಗಿ ಕೊಡುವುದಕ್ಕೂ ಸಿದ್ಧವಾಗಿದ್ದನಂತೆ. ಅಂತಹವನ ಹತ್ತಿರ ಅಂತಹ ಅಮೂಲ್ಯವಾದ ಪುಸ್ತಕವನ್ನು ಒಬ್ಬ ವಕೀಲ ಮಹಾಶಯರು ಮೂರು ರೂಪಾಯಿ ಕೇಳಿದನೆಂದು ಎರಡು ರೂಪಾಯಿಗೆ 'ಚೌಕಾಶಿ' ಮಾಡಿ ವಾಪಸು ಕಳುಹಿಸಿಬಿಟ್ಟರು. ಅದೇ ಪುಸ್ತಕವನ್ನು ಇನ್ನೊಬ್ಬ ಪುರಾಣಿಕರು ಮೂರು ರೂಪಾಯಿಗೆ ಕೊಂಡುಕೊಂಡರು. ಆ ಪುಸ್ತಕವನ್ನು ನಾನು ನೋಡಿದ್ದರೆ ಖಂಡಿತವಾಗಿ ಐದು ರೂಪಾಯಿಯೆಂದರೂ ಕೊಳ್ಳುತ್ತಿದ್ದೆ. ಆದರೆ ಆ ಪುಸ್ತಕವನ್ನು ನೋಡುವ ಅದೃಷ್ಟವೂ ನನಗೆ ಸಿಕ್ಕಲಿಲ್ಲ. ಎಲ್ಲಾ ದೈವೇಚ್ಛೆ!

ನಿಮ್ಮ ತಂಗಿಯು ಹೇಳಿದ ಹಾಡನ್ನು ಬರೆದುಕೊಂಡೆನೆಂದು ಹೇಳಿದ್ದೀರಿ. ಈ ಹಾಡನ್ನು ನಾನು ಕೇಳಿದ್ದೆ. ಕೋಪಮಾಡಬೇಡಿ! ನಾನೂ ಕೆಲವು ಪದ್ಯಗಳನ್ನು ಶೇಖರಿಸಿ ಇಟ್ಟಿದ್ದೇನೆ. ಅದರಲ್ಲಿ ಇನ್ನೂ ಚೆನ್ನಾದ 'ಮಾದರಿ'ಗಳೇ ಇವೆ. ಪದ್ಯದ ವಿಷಯ ಮಾತಾಡುವಾಗ ಇನ್ನೊಂದು ವಿಷಯವನ್ನು ಹೇಳುತ್ತೇನೆ. ನಮ್ಮ ರಂಗನಾಥ ಬರೆದಿದ್ದಾನಲ್ಲ 'ಸುಲಿದ ಬಾಳೆಯ......' ಆ ಪದ್ಯ ಅವನ 'ಅನುಭವಾಮೃತ'ದಲ್ಲಿದೆ (೧–೫). ಆದರೆ ಸ್ವಲ್ಪ ವ್ಯತ್ಯಾಸಗಳಿವೆ.

...............................।
ಕಳಿದ...........................ದ।
ಲಿಳಿಸಿದುಷ್ಣ...............................॥
....।
.... ಮೋಕ್ಷವ।
....॥

ನಮ್ಮ ರಂಗನಾಥನ ಹೆಸರು 'ಮಹಲಿಂಗ ರಂಗ' ಇದರ ವಿಷಯವಾಗಿ (ಅನುಭವಾಮೃತ) ಸಾ.ಪ. ಪತ್ರಿಕೆಯಲ್ಲಿ ಒಂದು ಲೇಖನವಿದೆ. ಇದೆಲ್ಲಾ ಸರಿ! 'ಚೌಕಾಶಿ' ರೂಪ ನಿಷ್ಪತ್ತಿ ಬರೆಯಿರಿ.

* * *

ಕೂಡಲಿ ಚಿದಂಬರಂ, ಪುಣೆ, ೨೭-೦೭-೧೯೨೬

ನಾನು ಇರುವ ಸ್ಥಳವು Ry. station ಇಂದ ೨½ ಮೈಲಿಗಳ ದೂರದಲ್ಲಿದೆ. ನಾನಿರುವ ಸ್ಥಳದಿಂದ ೧೦ ನಿಮಿಷಗಳೊಳಗಾಗಿ ಫರ್ಗುಸ್ಸನ್ ಕಾಲೇಜಿಗೆ ಹೋಗಬಹುದು. ಲಾ ಕಾಲೇಜಿನ ಪಾಠಗಳು ನಡೆಯುವುದು ಫರ್ಗುಸ್ಸನ್ ಕಾಲೇಜಿನ Amphitheatre ನಲ್ಲಿ. ಲಾ ಕಾಲೇಜಿನವರ ಸ್ವಂತವಾದ ಕಟ್ಟಡವು ಯಾವುದೂ ಇಲ್ಲ. ಬೆಳಗಿನ ಹೊತ್ತು Ferguson College ನವರಿಗೆ ಕೆಲಸವಿಲ್ಲದಿರುವುದರಿಂದ ಲಾ ಕಾಲೇಜಿನ ಪಾಠಗಳು ಬೆಳಗಿನ ಹೊತ್ತು ನಡೆಯುತ್ತವೆ. ಬೆಳಗ್ಗೆ ೧ ಘಂಟೆಯ ಹೊತ್ತು ಪಾಠವಾದರೆ ಆ ದಿವಸದ ಕೆಲಸ ಮುಗಿಯಿತು. ಪ್ರೊಫೆಸರುಗಳು ಸಂಬಳವಿಲ್ಲದೆಯೆ ಕೆಲಸ ಮಾಡುತ್ತಿದ್ದಾರೆ. (ಲಾ ಕಾಲೇಜು ಸರಕಾರಕ್ಕೆ ಸೇರಿದುದಲ್ಲ.) ೪ ಜನ ಪ್ರೊಫೆಸರುಗಳು ಬೊಂಬಾಯಿಯಲ್ಲಿ ವಕೀಲಿ ಮಾಡುತ್ತಿದ್ದಾರೆ. ಒಬ್ಬರು ಸಾಂಗ್ಲಿಯಲ್ಲಿದ್ದಾರೆ, ಉಳಿದವರೊಬ್ಬರು ಇಲ್ಲಿಯವರು. ಇಲ್ಲಿನ ಪ್ರೊಫೆಸರುಗಳು ವಿಚಿತ್ರ ಪುರುಷರು. ಒಟ್ಟಿನ ಮೇಲೆ ಉಪಯೋಗವಿಲ್ಲದವರು. ಅಷ್ಟಲ್ಲದೆ ಲಾ ಕಾಲೇಜೊಂದು ಕಾಲೇಜಲ್ಲ, ಲಾ students ವಿದ್ಯಾರ್ಥಿಗಳ ಹುಟ್ಟಲ್ಲವೆಂದು ಹೇಳುತ್ತಾರೆಯೆ. ನಮ್ಮ ಪ್ರಿನ್ಸಿಪಾಲರವರ ಹೆಸರು ಘರ್‌ಪುರೆ. Principles of Hindu Law ಎಂಬ ಪುಸ್ತಕವನ್ನೊಂದನ್ನು ಬರೆದಿದ್ದಾರೆ. ಅದು ಗಣ್ಯವಾದ ಪುಸ್ತಕವೆಂದು ಎಲ್ಲರೂ ಹೇಳುತ್ತಾರೆ. ಆದರೆ ಪ್ರಿನ್ಸಿಪಾಲರಿಗೆ ಸರಿಯಾಗಿ ಇಂಗ್ಲಿಷ್ ಮಾತನಾಡು ವುದಕ್ಕೆ ಬರುವುದಿಲ್ಲ – ಪಾಠ ಹೇಳುವುದಕ್ಕೂ ಬರುವುದಿಲ್ಲ. ಬಹು ಒಳ್ಳೆಯ ಮನುಷ್ಯರು, ನಿಗರ್ವಿಗಳು, ಆಡಂಬರವೆಂಬುದು ಅವರಿಗೆ ತಿಳಿಯದು. ಅವರು ತೊಡುವ ಉಡುಪು ಅತ್ಯಂತ ಸಾಧಾರಣದ್ದು. ಅನೇಕ ವೇಳೆ ಅವರುಡುವ ಪಂಚೆಯು ಮೊಣಕಾಲಿನ ಕೆಳಗೆ ಬರುವುದೇ ಇಲ್ಲ. ಆ ರೀತಿಯ ಉಡುಪು ನಗೆಗೇಡೆಂಬುದನ್ನೂ ಅವರು ತಿಳಿಯರೋ ಏನೋ.

ನಮ್ಮ ಉಪಾಧ್ಯಾಯ ವರ್ಗದಲ್ಲಿ ಒಬ್ಬರನ್ನು ಮಾತ್ರ ಪ್ರೊಫೆಸರೆಂದು ಧಾರಾಳವಾಗಿ ಕರೆಯಬಹುದು. ಅವರ ಹೆಸರು ಶಿಂಗ್ಣೆ, ಅವರಿಗೆ ಬೊಂಬಾಯಿಯಲ್ಲಿ ವಕೀಲಿಯಲ್ಲಿ ತಿಂಗಳಿಗೆ ೧೦,೦೦೦ ರೂ.ಗಳ ಆದಾಯವು ಇದೆಯಂತೆ, ಮೊನ್ನೆತಾನೆ ಗೌರ್ನಮೆಂಟು ಪ್ಲೀಡರಾಗಿ ನಿಯಮಿಸಲ್ಪಟ್ಟರು. ಅವರು ಒಳ್ಳೆಯ ವಾಗ್ಮಿಗಳು. ಅವರ ಮಾತಿನಲ್ಲಿ ಸರಳತೆಯೂ ಗಾಂಭೀರ್ಯವೂ ತುಂಬಿದೆ. ಹಾಸ್ಯರಸದಿಂದ ತುಂಬಿ ತುಳುಕುವಂತೆ ಮಾತಾಡುವುದು ಅವರಿಗೆ ಸ್ವಾಭಾವಿಕ. ತೊಡಕು ತೊಡರುಗಳಿಲ್ಲದಂತೆ ಪಾಠವನ್ನು ಹೇಳುತ್ತಾರೆ. ಅವರು ಎಂತಹ ಮೂಢನೂ ತಿಳಿದುಕೊಳ್ಳುವಂತೆ ಪಾಠ ಮಾಡುತ್ತಾರೆ. ಪೀನಲ್ ಕೋಡನ್ನು ತೆಗೆದುಕೊಳ್ಳುತ್ತಾರೆ.

ಉಳಿದವರಲ್ಲಿ ಅಭ್ಯಂಕರ್ ಎಂಬುವವರು ಕುರುಡರಲ್ಲಿ ಮೆಳ್ಳನಿದ್ದ ಹಾಗೆ. Constitutional law, Govt. of India acts– ಇವುಗಳು ಸೇರಿ ಒಂದು ಪೇಪರು ಪರೀಕ್ಷೆಗೆ. ಇವುಗಳನ್ನು ಅಭ್ಯಂಕರ್ ಅವರು ತೆಗೆದುಕೊಳ್ಳುತ್ತಾರೆ. ಕೃಷ್ಣಸ್ವಾಮಿ ಐಯಂಗಾರ್ಯರ Politics Class ನಲ್ಲಿ ಕೇಳಿದ ವಿಚಾರವನ್ನೇ ಇಲ್ಲಿ ಹೇಳುವುದು. Dicey's Law of the Constitution ಎಂಬುದು ಪಠ್ಯಪುಸ್ತಕ. ಅಭ್ಯಂಕರ್ ಅವರು ಇಂಡಿಯಾ ದೇಶದ ರಾಜ್ಯ ಆಡಳಿತದ ವಿಷಯವಾಗಿ ಮಾತನಾಡುವಾಗಲೂ, ಆಶ್ರಿತ ರಾಜರ ವಿಚಾರವನ್ನೂ ಮಾತನಾಡುವಾಗಲೂ ಉತ್ತೇಜಿತರಾಗಿ,

ಕೇಳುವವರ ರಕ್ತ ಕುದಿಯುವಂತೆ ಮಾತನಾಡುವರು. ಅದೊಂದು ಗಳಿಗೆ ಮಾತ್ರ ಅವರಿಗೆ ಇಲ್ಲದ ಸ್ಫೂರ್ತಿ ಬರುತ್ತದೆ.

ಇಲ್ಲಿಯ ಜನರ ಇಂಗ್ಲಿಷ್ ಉಚ್ಚಾರಣೆಯು ವಿಚಿತ್ರವಾಗಿದೆ. ಮ। ರಾ। ಶಿಂಗ್ಣೆಯವರು ಒಬ್ಬರು ಬಹಳ ಚೆನ್ನಾಗಿ ಉಚ್ಚಾರ ಮಾಡುತ್ತಾರೆ. ಇತರರ ಉಚ್ಚಾರದಲ್ಲಿ ಹಕಾರವು ಎಲ್ಲೆಲ್ಲಿಯೂ ಬರುತ್ತದೆ. ಅನೇಕ ವರ್ಣಗಳು ಕಾರಣವಿಲ್ಲದೆಯೇ ಅನುನಾಸಿಕವಾಗಿ ಉಚ್ಚಾರ ಮಾಡಲ್ಪಡುತ್ತವೆ. Advantage ಎಂಬುದನ್ನು ಅಡ್ಡವ್ಹಾಂಟೆಜ್ ಎಂದು ಉಚ್ಚಾರ ಮಾಡುತ್ತಾರೆ. Power–ಪಾವರ್ ಎಂದೂ, fundamental ಎಂಬುದನ್ನು ಫಂಡಾಮೆಂಟಲ್ ಎಂದೂ, system ಎಂಬುದನ್ನು ಸಿಸ್ಟಿಮ್ ಎಂದೂ, ಉಚ್ಚಾರ ಮಾಡುತ್ತಾರೆ. Is, was, has, ಇವುಗಳನ್ನು ಈಜ್, ವಾಜ್, ಹ್ಯಾಜ್ ಎಂದು ಉಚ್ಚರಿಸುವವರೂ ಇದ್ದಾರೆ. ತಾವು ಉಚ್ಚರಿಸುವ ರೀತಿಯು ಸರಿಯಾದುದೆಂದು ಈ ಮರಾಟರ ಭಾವನೆ. ಇಂಗ್ಲಿಷರ ಉಚ್ಚಾರವೇ ತಪ್ಪೆಂದು ಬೇಕಾದರೂ ಸಮರ್ಥಿಸುವವರು ಅನೇಕರಿದ್ದಾರೆ. ಮರಾಟರಲ್ಲಿ ಇದೊಂದು ದುರ್ಗುಣ : ತಾವು ಮಾಡುವ ರೀತಿಯೇ ಸರಿ ಎಂಬುದು. ಇವರ ಸ್ವಾಭಿಮಾನಕ್ಕೆ ಎಲ್ಲೆಯಿಲ್ಲ; ಕೊಚ್ಚಿಕೆಗೆ ಮಿತಿಯಿಲ್ಲ.

ಸಾಮಾನ್ಯವಾಗಿ ಮರಾಟರೆಲ್ಲರೂ ದೃಢಕಾಯರು. ಚಿಕ್ಕವಯಸ್ಸಿನ ವಿದ್ಯಾರ್ಥಿಗಳು ಇಲ್ಲಿ ದುರ್ಲಭ. ನಯವಿನಯಗಳು ಇವರಿಗೆ ಗೊತ್ತಿಲ್ಲ. ನಡತೆ ತಿಳಿಯದು. ಹೊತ್ತಾಗಿ ಬಂದವರು ಬೆಂಚಿನ ಮೊದಲಿನಲ್ಲಿ ಕೂತಿದ್ದವನ ಮೇಲೆ ಎಮ್ಮೆಯ ಹಾಗೆ ಬಿದ್ದು ಅವನನ್ನು ಕ್ಷಣದಲ್ಲಿ ದೂಡಿ ಸ್ವಸ್ಥಚಿತ್ತರಾಗಿ ಆ ಸ್ಥಳದಲ್ಲಿ ಕೂಡುತ್ತಾರೆ. 'ಸ್ವಲ್ಪ ಸರಿದುಕೊಳ್ಳಿ' ಎಂದು ಹೇಳುವಷ್ಟು ನಡತೆಯೂ ಇವರಿಗೆ ಗೊತ್ತಿಲ್ಲ. ತಮ್ಮ ದೇಶ ತಮ್ಮ ಭಾಷೆ ತಮ್ಮ ಜನ ಇವು ಮೂರು ಮಾತ್ರ ಮರಾಟರಿಗೆ ಗೊತ್ತು. ಇತರ ಜನರ ಸಹವಾಸವು ಇವರಿಗೆ ಬೇಡ. ಇತರರನ್ನು ತುಚ್ಛವಾಗಿ ಕಾಣುತ್ತಾರೆ. ಇತರ ಜನರ ನಡೆನುಡಿಗಳು ಆಚಾರ ವ್ಯವಹಾರಗಳು ಹೇಗಿದ್ದರೂ ಇವರ ಅಪಹಾಸ್ಯಕ್ಕೆ ಗುರಿಯಾಗುತ್ತವೆ. ವಿಷಕ್ಕೆ ವಿಷ : ಇವರನ್ನು ಕಂಡರೆ ಇತರರಿಗೂ ಆಗುವುದಿಲ್ಲ. ಗುಜರಾತಿಗಳು ಇವರನ್ನು ಸಿಕ್ಕಿದ ಹಾಗೆ ಬಯ್ಯುತ್ತಾರೆ. ಕರ್ಣಾಟಕದ ನಮ್ಮನ್ನು ಕುರಿತು – "ನೀವು ಏತಕ್ಕೆ ಇಲ್ಲಿಗೆ ಬಂದಿರಿ. ಈ ಮರಾಟಿ fools ಹತ್ತಿರಕ್ಕೆ? ನಿಮ್ಮ ಯೂನಿವರ್ಸಿಟಿಯಲ್ಲಿ ಲಾ facultyಯನ್ನು ಇಟ್ಟುಕೊಳ್ಳುವುದಕ್ಕಿಲ್ಲವೆ. ನಮಗಂತೂ ಹಣೆಯ ಬರಹ–ಇವರೊಡನೆ ಹೋರಾಡುವುದು. ಈ ಮರಾಟಿ ಮಂದಿಯಂತಹ ಕೆಟ್ಟ ಮಂದಿ ಯಾರೂ ಇಲ್ಲ ನೋಡಿರಿ" ಎಂದು ಹೇಳುತ್ತಾರೆ.

ಮೈಸೂರಿನವರಂತೂ ಹಗಲಿರುಳೂ ಈ ಊರನ್ನೂ ಇಲ್ಲಿಯ ಜನರನ್ನೂ ಶಪಿಸುತ್ತಾರೆ. Sports, Reading Room ಮುಂತಾದವುಗಳಿಗೆಲ್ಲಾ ಗುಜರಾತಿಗಳು, ಕರ್ಣಾಟಕರು, ಮೈಸೂರಿನವರು ಸೇರಿ ತಾವೇ ಎಲ್ಲಕ್ಕೂ ಹಕ್ಕುದಾರರಾಗಿದ್ದಾರೆ. ಒಬ್ಬ ಮರಾಟಿಯವನಿಗೂ ಸೆಕ್ರೆಟೆರಿಷಿಪ್ ಆಗಲಿ ಮೆಂಬರ್‌ಷಿಪ್ ಆಗಲಿ ಸಿಕ್ಕದಂತೆ ನೋಡಿಕೊಂಡಿದ್ದಾರೆ.

ತಿಂಡಿ ತೀರ್ಥಗಳಲ್ಲಿಯೂ ಊಟಉಪಚಾರಗಳದಲ್ಲಿಯೂ ಇಲ್ಲಿ ಜಾತಿ ಪ್ರಭೇದವಿಲ್ಲ. ಹೆಸರಿಗೆ ಮಾತ್ರ ಜಾತಿಯಿದೆ. ಬ್ರಾಹ್ಮಣರ ಹೋಟಲುಗಳೆಂದು ಹೆಸರಿಗೆ ಮಾತ್ರ, ಸಕಲ

ಜಾತಿಯವರಿಗೂ ಊಟಕ್ಕೆ ಒಂದೇ ಸ್ಥಳ. ಇಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರನ್ನು ಬಾಹ್ಯವೇಷದಿಂದ ಗುರುತಿಸುವುದು ಅಸಾಧ್ಯ. ಬ್ರಾಹ್ಮಣ ಬ್ರಾಹ್ಮಣರೇತರರ ಪರಸ್ಪರ ದ್ವೇಷವು ಇಲ್ಲಿರುವಂತೆ ಎಲ್ಲಿಯೂ ಇಲ್ಲ. ಪೇಟೆಯ ಚೌಕದಲ್ಲಿ ತಿಲಕರವರ ಪ್ರತಿಮೆಯಿದೆ. ಬ್ರಾಹ್ಮಣನ ಪ್ರತಿಮೆಯನ್ನು ಪೇಟೆಯ ಚೌಕದಲ್ಲಿಟ್ಟಿರುವುದು ತಪ್ಪೆಂದು ಬ್ರಾಹ್ಮಣೇತರರು ಕೊಂಕು ತೆಗೆಯುತ್ತಲಿರುವರು. ಸರ್ವ ಸಾಹಸದಿಂದಲೂ ಆ ಪ್ರತಿಮೆಯನ್ನು ಒಡೆದು ಬಿಡಬೇಕೆಂದು ಅವರ ಸಂಕಲ್ಪ. ಬ್ರಾಹ್ಮಣರು ಸರ್ವ ಪ್ರಕಾರದಿಂದಲೂ ಅದನ್ನು ಆಗಗೊಡಿಸದಂತೆ ನೋಡಿಕೊಳ್ಳುತ್ತಿರುವರು. ೨-೩ ಸಾರಿ ದ್ವಿಪಕ್ಷದವರಿಗೂ ಕೈಕೈ ಹತ್ತಿ Reserve Policeನವರ ಸಹಾಯದಿಂದ ಬ್ರಾಹ್ಮಣರು ಪ್ರತಿಮೆಯನ್ನು ಕಾಪಾಡಿದರಂತೆ! ವಿಚಿತ್ರ ಪ್ರಪಂಚ.

B.O.R. Institute ಗೆ ಹೋಗಿದ್ದೆ. ಮುಂದಿನ ಕಾಗದದಲ್ಲಿ ಅದರ ವಿಚಾರವನ್ನೆಲ್ಲ ಬರೆಯುತ್ತೇನೆ.

ಮ। ರಾ। ಕೃಷ್ಣಪ್ಪನವರಿಗೆ ಕಣ್ಣು ಪೂರ್ತಿಯಾಗಿ ಹೋಗಿ ಕೆಲಸದಿಂದ ನಿವೃತ್ತರಾದರೆಂದು ಕೇಳಲು ಬಹಳ ವ್ಯಸನವಾಗುತ್ತದೆ. ಮೈಸೂರಿನಲ್ಲಿ ಕಾಲೇಜಿನಲ್ಲಿ ಆಗಿರುವ ಬದಲಾವಣೆಗಳನ್ನೆಲ್ಲ ವನ್ನು ದಯವಿಟ್ಟು ತಿಳಿಸಬೇಕು. ಸ್ನೇಹಿತರು ತಿಳಿಸದ ಹೊರತು ಮೈಸೂರು ವರ್ತಮಾನವು ನಮಗೆ ತಿಳಿಯುವುದೇ ಕಷ್ಟ.

* * *

ಕೂಡಲಿ ಚಿದಂಬರಂ ಪುಣೆ, ೧೨-೮-೧೯೨೬

ನಿಮ್ಮ ಕಾಗದವು ಬಂದು ಬಹುದಿವಸವಾದರೂ ಉತ್ತರವನ್ನು ಬರೆಯಲಿಲ್ಲ: ವಿಶೇಷ ಕಾರಣವೇನು ಇಲ್ಲ. 'ಕೆಲಸವಿಲ್ಲ ಪುರುಸೊತ್ತಿಲ್ಲ' ಎಂಬ ನುಡಿಯನ್ನು ನೀವು ಕೇಳಿರಬಹುದು. ಈ ನುಡಿಯು ಲಾ ಕಾಲೇಜು ವಿದ್ಯಾರ್ಥಿಗಳ ಮೇಲುಪಂಕ್ತಿ. ನಮ್ಮ ಕಾಲೇಜು ಉದ್ಯೋಗ ಶೀಲರನ್ನು ಸೋಮಾರಿಗಳನ್ನಾಗಿ ಮಾಡಬಲ್ಲುದು. ಸ್ವತಃ ಸೋಮಾರಿಗಳಾದವರ ವಿಚಾರ ವನ್ನಿನ್ನೇನು ಹೇಳಬೇಕಾಗಿದೆ.

B.O.R.I. - ಪ್ರಾಚ್ಯ ವಿದ್ಯಾ ಸಂಶೋಧನ ಮಂದಿರದ ವಿಚಾರವಾಗಿ ಬರೆಯುವುದು ಹೆಚ್ಚಿಗೆಯೇನು ಇಲ್ಲ. ಮಂದಿರವು ನಮ್ಮ ಸ್ಥಳದಿಂದ ಬಹಳ ದೂರದಲ್ಲಿಲ್ಲ. ಮಂದಿರವು ನೋಡುವುದಕ್ಕೆ ದೇವ ಮಂದಿರದಂತೆ ಕಾಣಿಸುತ್ತದೆ. ಕಲ್ಲಿನ ಕಟ್ಟಡ: ದೊಡ್ಡದಲ್ಲ; ಬಹು ಚಿಕ್ಕದೂ ಅಲ್ಲ. ಸಾಧಾರಣವಾಗಿದೆ. ಇರುವ ಸ್ಥಳ ಗುಡ್ಡದ ಹತ್ತಿರ – ಬುಡದಲ್ಲಿಯೆ ಇದೆಯೆನ್ನ ಬಹುದು. (ಪುಣೆಯು ಸುತ್ತಲು ರಮ್ಯವಾದ ಗುಡ್ಡಗಳಿಂದ ಆವೃತವಾಗಿದೆ.) ಮಂದಿರದ ಹತ್ತಿರದಲ್ಲಿಯೇ ಡಾ॥ ಬೆಲ್ವಾಲ್ಕರ್ ಅವರ ಮನೆಯಿದೆ. ನಾನು ಬಹು ದಿವಸದವರೆಗೆ ಅದು ಭಂಡಾರ್ಕರ್ ಅವರ ಮನೆಯಿರಬಹುದೆಂದು ತಿಳಿದಿದ್ದೆ. ಮಂದಿರದಲ್ಲಿ ಉಪನ್ಯಾಸಗಳು ನಡೆಯುವುದಿಲ್ಲ. Researchಗೆ ಬೇಕಾಗುವ ಅನುಕೂಲಗಳನ್ನು ಒದಗಿಸಿದ್ದಾರೆ. ಒಳ್ಳೆಯ ಪುಸ್ತಕ ಭಂಡಾರವಿದೆ. ಓಲೆಗರಿಯ ಪುಸ್ತಕಗಳು ಅನೇಕವಿವೆ. ಡಾ॥ ಜಿಮ್ಮರ್‌ಮನ್ ಅವರು

ಬಹು ಪುಸ್ತಕಗಳನ್ನು ವಿಮರ್ಶಾಪೂರ್ವಕವಾಗಿ ರಚಿಸಿದ್ದಾರೆ....... ಈ ಮಂದಿರವು ಈ ಊರಿನ 'Oriental Library'. ಆದರೆ 'Oriental Library'ಯಲ್ಲಿ ಕಾಣುವ ಅಶ್ರದ್ಧೆಯೂ, ಅವ್ಯವಸ್ಥೆಯೂ ಇಲ್ಲಿ ಕಂಡುಬರುವುದಿಲ್ಲ. ಸದ್ಯದಲ್ಲಿ ಮಂದಿರದವರು ಶೋಧನಪೂರ್ವಕವಾಗಿ ಮಹಾಭಾರತವೊಂದನ್ನು ರಚಿಸುವುದರಲ್ಲಿ ತೊಡಗಿದ್ದಾರೆ. (critical edition of the Mahabharata).

ಮ।।ರಾ।। ಕಾಳೆಯವರು ಚೆನ್ನಾಗಿ ಪಾಠ ಹೇಳುತ್ತಾರೆ. ಹೊತ್ತು, ಆದಿತ್ಯವಾರದ ದಿವಸ ೮ ಗಂಟೆಯಿಂದ ೯ ಗಂಟೆಯವರೆಗೆ. ಅವರು 'Lecture' ಹೊಡೆದು ಹುಡುಗರನ್ನು ದಂಗು ಮಾಡುವುದಿಲ್ಲ. ಯಾವ ವಿಚಾರವನ್ನು ತೆಗೆದುಕೊಂಡರೂ ಸ್ಪಷ್ಟವಾಗಿ ಮನಸ್ಸಿಗೆ ಹಿಡಿಯುವಂತೆ, ಎಲ್ಲರಿಗೂ ತಿಳಿಯುವಂತೆ ಹೇಳುತ್ತಾರೆ. ಇನ್ನೊಂದು ಗಂಟೆ ಹೆಚ್ಚಾಗಿ ಪಾಠ ಹೇಳಬಾರದೆ ಎನ್ನಿಸುತ್ತದೆ. Currency Commission Report ಪ್ರಕಾಶವಾಗಿರುವುದು ನಿಮಗೆ ತಿಳಿದಿದೆ. ಹೋದ ಶನಿವಾರ Fergusson Collegeನಲ್ಲಿ ಕಾಳೆಯವರು Commission Reportನ ಮೇಲೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಬರುವ ಭಾನುವಾರ ನಮ್ಮ ಕ್ಲಾಸಿನಲ್ಲಿ ಅದರ ವಿಚಾರವಾಗಿ ಚರ್ಚೆ ಮಾಡುತ್ತಾರೆ.

ನಮ್ಮ Debating Societyಯನ್ನು ಕೆಲವು ದಿವಸಗಳ ಹಿಂದೆ Rt. Hon. ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳು 'address' ಮಾಡಿದರು. ಶ್ರೀ ಮಾಲವೀಯರು ಇಲ್ಲಿಗೆ ಬರುತ್ತಾರೆಂಬ ವರ್ತಮಾನವಿತ್ತು. ಅವರು ಕಾರಣಾಂತರಗಳಿಂದ ಬಾರದಿದ್ದುದರಿಂದ ಮ।।ರಾ।। ಶ್ರೀನಿವಾಸ ಶಾಸ್ತ್ರಿಗಳನ್ನು ಸಂಭಾಷಣೆ ಮಾಡುವಂತೆ ಪ್ರಾರ್ಥಿಸಿದೆವು. ೧ ಗಂಟೆ ೧೦ ನಿಮಿಷಗಳ ಕಾಲ ಮಾತನಾಡಿದರು. ಎದ್ದು ನಿಂತು ಮಾತನಾಡಲು ಶಕ್ತಿಯಿಲ್ಲದುದರಿಂದ ಕೂತುಕೊಂಡು ಮಾತನಾಡಿದರು. ಶಾಸ್ತ್ರಿಗಳ ವಾಣಿ ಮಧುರವಾಣಿ. ಅವರ ಮಾತುಗಳು ಹಾಸ್ಯರಸದಿಂದ ಶೋಭಿಸಿದುವು. ವಕೀಲರಾಗಿರುವವರಿಗೂ ಮುಂದೆ ಆಗುವವರಿಗೂ ಉಪಯುಕ್ತವಾದ ಬುದ್ಧಿ ವಾದಗಳನ್ನು ಹೇಳಿದರು. ಅವರ ಬುದ್ಧಿವಾದಗಳನ್ನು ಮರೆಯದೆ ಅನುಸರಿಸಿದರೆ ದೇಶಕ್ಕೆ ಬಹಳ ಹಿತವಾಗುವುದರಲ್ಲಿ ಸಂಶಯವಿಲ್ಲ. ಅವರ ಅಂದಿನ ಭಾಷಣವು ಎಂದಿಗೂ ಮರೆಯ ತಕ್ಕುದಲ್ಲ. ಅವರ ಭಾಷಣ ನಡೆಯುತ್ತಿರುವಾಗ platformನ ಹಿಂದುಗಡೆಯ ಕಿಟಕಿಯೊಳಗಿಂದ ಒಬ್ಬ ಪುಣ್ಯಾತ್ಮನು ಹಾರಿ ಒಳಗೆ ಬಂದು platform ಮೇಲಿದ್ದ ಒಂದು ಕುರ್ಚಿಯ ಮೇಲೆ ಕುಳಿತುಕೊಂಡನು. ಆತನು ಯಾರೆಂದು ವಿಚಾರಿಸಿದುದರಲ್ಲಿ II LL.B ಕ್ಲಾಸಿನ ಪ್ರೊಫೆಸರ್ ಚಂದ್ರಚೂಡ್ ಎಮ್.ಎ., ಎಲ್.ಎಲ್.ಎಮ್ – ಅವರು ಎಂದು ತಿಳಿಯಬಂದಿತು. ಉಪಾಧ್ಯಾಯರುಗಳಿಗೆ ಇಷ್ಟರ ಮಟ್ಟಿನ ನಡತೆ – ಇದೇನು ಇಲ್ಲಿಯ ಜನವೋ! ಇಲ್ಲಿಯ ನಡತೆಯೋ!

ನಮ್ಮ ಕಾಲೇಜಿನಲ್ಲಿ ಭಾಷಣ ಮಾಡಿದ ಹಿಂದಿನ ದಿವಸ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಶಾಸ್ತ್ರಿಗಳ ಭಾಷಣ ನಡೆಯಿತು. ಪ್ರಸಿದ್ಧ ಪುರುಷಾದರೆ ಇದೊಂದು ಗೋಳು – ಎಲ್ಲವುದಕ್ಕೂ ಅವರನ್ನು ಅಧ್ಯಕ್ಷರಾಗುವಂತೆ ಜನಗಳು ಬಲವಂತ ಮಾಡುತ್ತಾರೆ – ಶಾಸ್ತ್ರಿಗಳು ಹೇಳಿದರು

– ಹಿಂದೊಂದು ಸಾರಿ ಅಗ್ರಿಕಲ್ಚರಲ್ ಕಮಿಟಿಯೊಂದಕ್ಕೆ ನನ್ನನ್ನ ಒಬ್ಬ ಮೆಂಬರನ್ನಾಗಿ ನೇಮಿಸಿದರು (ಸರಕಾರದವರು). ನನ್ನ ಗುಣಾವಗುಣ ವಿಮರ್ಶಕರು ಆಗ ಹೇಳಿದುದೇನೆಂದರೆ – The one qualification he has to be nominated as a member of agr. committee is that he has eaten agricultural produce.

* * *

ಕೂಡಲಿ ಚಿದಂಬರಂ ಶಿವಮೊಗ್ಗ, ೧೫-೭-೧೯೨೭

ನಮ್ಮ ಯೂನಿವರ್ಸಿಟಿಯವರ ಅಚಾತುರ್ಯವನ್ನು ಎಷ್ಟು ಹೇಳಿದರೂ ತೀರದು. ಹೋದ ವರ್ಷ ಇಂಗ್ಲಿಷ್ ಪ್ರೊಫೆಸರನ್ನು Head Clerk ಮಾಡಿದರು. ಬೆಂಗಳೂರಲ್ಲಿ ಮ।ರಾ। ಎಂ.ಜಿ. ನಾರಾಯಣಯ್ಯಂಗಾರ್ಯರ ಬದಲು ಒಬ್ಬ Mathematics ಪ್ರೊಫೆಸರನ್ನು ತರುವುದು ಬಿಟ್ಟು ಬ್ರಹ್ಮಸಾಮಾಜಿಕನನ್ನು ತಂದರು. ಆತನ ಪಾಂಡಿತ್ಯ – Central Collegeನ ಹುಡುಗರನ್ನು ಕೇಳಿ, ಹೇಳುತ್ತಾರೆ. ಆತನ ಗೌರವ – ಏನು ಹೇಳಲಿ! ಕೆಲವರು ವಿದ್ಯಾರ್ಥಿಗಳು ಆತನ ಹೆಗಲ ಮೇಲೆ ಕೈಹಾಕಿಕೊಂಡು 'ಇಲ್ಲೊಂದು ಸಿಗರೇಟ್ ಕೊಡೊ' ಎನ್ನುತ್ತಾರಂತೆ..... ಈ ಸೌಭಾಗ್ಯಕ್ಕೆ Mathematics M.Sc. ಪ್ರಾರಂಭ ಈ ವರ್ಷದಿಂದ. ನಮ್ಮ ವೈಸ್ ಛಾನ್ಸಲರು ಕೊಚ್ಚಿಕೊಂಡಿದ್ದಾರೆ – ನಮ್ಮ University ಪ್ರೊ।ಗಳು M.Sc. ಗಲ್ಲ ಅದರಪ್ಪನಂತಹ ಪರೀಕ್ಷೆಗೂ ಪಾಠ ಹೇಳಬಲ್ಲರು ಎಂದು. ನಮ್ಮ ವೈಸ್ ಛಾನ್ಸಲರು – ಅಗಸ್ತ್ಯರೊ, ವಿಂಧ್ಯ ಪರ್ವತವೊ! – ಮುದುಕರಾದರೂ ದೊಡ್ಡಗಂಟಲಿದೆ ಕಿರಚಿಕೊಳ್ಳುವುದಕ್ಕೆ – ಅವರ ಮುಂದೆ ಸಿನೇಟು ಮೆಂಬರುಗಳು ಧೈರ್ಯದಿಂದ ಮಾತನಾಡುವುದಿಲ್ಲ. ಕಲ್ಲಿನಲ್ಲಿ ಕಡೆದ ಬೊಂಬೆಗಳಂತೆ ಕೂತಿರುತ್ತಾರೆಂದು ಕಾಣುತ್ತದೆ. ಸ್ವಲ್ಪ ಚತುರರಾದವರು ವೈಸ್ ಛಾನ್ಸಲರ ಆಶ್ರಯಕ್ಕೆ ನೋಡುತ್ತಾರೆ... ಅಲ್ಲದೆ ಈಗಿನ ಕಾಲದ ರೀತಿ ನೀತಿಗಳೇ ಬೇರೆ – ಮ್ಯಾನರ್ಸನ್ನು ಅನುಸರಿಸಿ ಹೋಗಬೇಕು: ಅಯೋಗ್ಯರನ್ನು ಅಯೋಗ್ಯರೆಂದು ಹೇಳಕೂಡದು ಸೊಸೈಟಿಯಲ್ಲಿ; Incapable ಪ್ರೊಫೆಸರುಗಳನ್ನು Capable ಎಂದೇ ಹೇಳಬೇಕು.... ಏನಾದರೂ ಇಪ್ಪತ್ತನೆಯ ಶತಮಾನವು Age of Reason!

ಮ।ರಾ। ಶ್ರೀನಿವಾಸಾಚಾರ್ಯರು ಪ್ರೊಫೆಸರ್ ಆದರು, ಅದೃಷ್ಟಶಾಲಿಗಳು. All progress to his sleep. ಮ।ರಾ। ನರಸಿಂಹ ಶಾಸ್ತ್ರಿಗಳು ಅ. ಪ್ರೊ. ಆಗುವುದಕ್ಕೆ ಹಾತೊರೆಯುತ್ತಿದ್ದರು. ಅವರ ಇಷ್ಟಾರ್ಥವು ನೆರವೇರಿತು. ಲೆಕ್ಚರರ್ ಆಗಿರುವಾಗಲೆ ಹೊಟ್ಟೆ ಬಂದಿತ್ತು; ಇನ್ನು ಮೇಲೆ ಹೇಳಬೇಕೆ? All progress to his laziness.

ಮ।ರಾ। ಸೂರ್ಯನಾರಾಯಣರಾಯರು ಸುಮಾರು ೨೦ ದಿನಗಳ ಕೆಳಗೆ ಇಲ್ಲಿಗೆ ಬಂದಿದ್ದರು. ಹಾಗೆಯೆ ಪೂನಾಕ್ಕೆ ಹೋದರು. ಮ।ರಾ। ಹಿರಿಯಣ್ಣನವರ ಸತ್ಕಾರ ವಿಚಾರವನ್ನು ಕೇಳಿದುದೆ ತಡ, ಸೂರ್ಯನಾರಾಯಣ ರಾಯರು – 'ನಾನು ಅವರ student ಅಲ್ಲದಿದ್ದರೂ...' ಎಂದು ಹೇಳಿ ಉದಾರ ಮನಸ್ಸಿನಿಂದ ಸತ್ಕಾರಕ್ಕೆ ಚಂದಾ ಕೊಟ್ಟರು. ಎಲ್ಲರೂ ಹೀಗೆಯೇ student

ಆದರೆ ಸತ್ಕಾರ ಸಹಾಯ ಮಾಡಬೇಕು - ಎಂಬ ಸಣ್ಣ ಮನಸ್ಸನ್ನು ಬಿಟ್ಟು, ಮಿ।ರಾ। ಹಿರಿಯಣ್ಣನವರ ಗುಣವನ್ನೂ ಪಾಂಡಿತ್ಯವನ್ನೂ ನೋಡಿ, ಉದಾರ ಬುದ್ಧಿಯಿಂದಲೂ ದೊಡ್ಡ ಮನಸ್ಸಿನಿಂದಲೂ ಸಹಾಯ ಮಾಡಿದರೆ ಮಿ।ರಾ। ಹಿರಿಯಣ್ಣನವರ ಯೋಗ್ಯತೆಗೆ ತಕ್ಕ ಸತ್ಕಾರವನ್ನು ನಡೆಯಿಸಬಹುದು.

MCS ಪರೀಕ್ಷೆಯಲ್ಲಿ ನೀವು ಜಯಶಾಲಿಗಳಾಗಬೇಕೆಂಬುದೇ ನನ್ನ ಹಾರೈಕೆ. ಈ ಪರೀಕ್ಷೆಯು ಇತರ ಪರೀಕ್ಷೆಗಳಂತಲ್ಲವೆಂದು ಹೇಳುತ್ತಾರೆ. ಈ ಪರೀಕ್ಷೆಯಲ್ಲಿ ಮೆರಿಟ್ಟೇ (Merit) ಮುಖ್ಯ ವಲ್ಲವಂತೆ. ಕೆಲವು ಪರೀಕ್ಷಕರ ಕರುಣಾಕಟಾಕ್ಷ ಪಾತ್ರವು ನಿಯಮಬದ್ಧವಲ್ಲವಂತೆ..... ಏನೇನೋ ಹೇಳುತ್ತಾರೆ. ಏನೇ ಆಗಲಿ - ಅನ್ಯಾಯವು ಇನ್ನು ತಾನೇ ತಾನು ಆಗಿಲ್ಲ. ನ್ಯಾಯಶೇಷ ಸ್ವಲ್ಪವಿರುವವರೆಗೂ ಧೈರ್ಯಕ್ಕೆ ಅವಕಾಶವಿದೆ.

ಪುಸ್ತಕಗಳ ವಿಚಾರವನ್ನು ಕೇಳಿದ್ದೀರಿ. ಭಾಮಿನೀ ವಿಲಾಸ, ಭರ್ತೃಹರಿ ಶತಕಗಳನ್ನು ತಂದಿದ್ದೆ. ಶತಕಗಳಲ್ಲಿ ಸ್ವಲ್ಪ ಓದಿದೆ Annals of the Bhandarkar Institute-ಒಂದು ಭಾಗವನ್ನು secondhand Bookshopನಲ್ಲಿ ಕೊಂಡು ಕೊಂಡೆ- ಆ ಪುಸ್ತಕದಲ್ಲಿ Institute ನವರು ಹೊಸದಾಗಿ ರಚಿಸುತ್ತಿರುವ ಮಹಾಭಾರತದಲ್ಲಿ ಯಾವ ವಿಧವಾದ ಚಿತ್ರಗಳನ್ನು ಸೇರಿಸಬೇಕು ಎಂಬ ವಿಷಯವಿದೆ.

ಇಂಗ್ಲಿಷ್ ಪುಸ್ತಕಗಳು-

Rudyard Kipling ಅವರ ಪದ್ಯಗಳ ಪುಸ್ತಕವೊಂದು, sketches ಒಂದು-Kipling ಅವರ ವಿಚಾರ ನಿಮಗೆ ಗೊತ್ತೇ ಇದೆ. ಅವರಿಗೆ ಇಂಗ್ಲಿಷ್‌ರನ್ನೊಬ್ಬರನ್ನು ಬಿಟ್ಟರೆ civilised people ಸಿಕ್ಕುವುದಿಲ್ಲ. ಅವರ ಪುಸ್ತಕಗಳನ್ನು ತಾಳ್ಮೆಯಿಂದೋದುವುದು ಕಷ್ಟ. Kipling ಅವರಿಗೂ H.G. Wellsರಿಗೂ ಭೂಮ್ಯಾಕಾಶಗಳಷ್ಟು ಅಂತರ. H.G. Wellsರ ಮನೋ ವೈಶಾಲ್ಯವು Kipling ಅವರಿಗೆ ಇಲ್ಲ. ''Mr. Britling sees it through'' ಎಂಬ ಪುಸ್ತಕದಲ್ಲಿ H.G. Wellsರ Philosophy about the great war ಇದೆ. ಬ್ರಿಟ್ಲಿಂಗರನ್ನು ಅಂತರ್ಯದಲ್ಲಿ ಕೇಳಿದರೆ ನಾನೇ H.G. Wells ಎಂದು ಹೇಳುತ್ತಾರೆ. E.F. Benson ಎಂಬುವವರ ಎರಡು ನಾವೆಲುಗಳನ್ನು ಓದಿದೆ. ತಕ್ಕಮಟ್ಟಿಗಿವೆ. ''Master man & other parables Tales'' by Tolstoi-ಇದರಲ್ಲಿರುವ ಸಣ್ಣ ಕತೆಗಳು ನೀತಿಬೋಧನೆಗೆ ಬರೆದವುಗಳಾದರೂ ಚೆನ್ನಾಗಿವೆ. Quiller Couch, Jack London, O'Henry ಇವರುಗಳ short stories. ಅಲ್ಲೊಂದು ಇಲ್ಲೊಂದು ಕತೆಯನ್ನು ಓದಿದ್ದೇನೆ. Oliver Wendell Holmesರ Autocrat of the Breakfast Table ಎಂಬ ಪುಸ್ತಕವನ್ನು ಓದಿದೀರಾ? Discursive writing ಎಂದರೆ ಈ ಪುಸ್ತಕದ್ದು. ಪುಸ್ತಕದಲ್ಲಿ Humour ತುಂಬಿದೆ. James Barrie ಎಂಬುವವರ Little Minister ಎಂಬ ನಾವೆಲನ್ನೂ ಓದೋಣವೆಂದಿದ್ದೇನೆ. Barrie ಯವರ ನಾಟಕಗಳೂ ನಾವೆಲುಗಳೂ ಬಹಳ ಚೆನ್ನಾಗಿವೆಯಂತೆ. ಪುಸ್ತಕಗಳ ವಿಚಾರವೇನು-ಎಷ್ಟು ಬರೆದರೂ ಬರೆಯಬಹುದು.

ಮ। ರಾ। ಗುಂಡಪ್ಪನವರನ್ನು–ನ್ಯಾಯ ವಿಧಾಯಕ ಸಭೆಗಂತೂ ಸರಿಯಷ್ಟೆ–Senateಗೂ ಸರ್ಕಾರದವರೇ ನೇಮಿಸಿದ್ದಾರೆ. ಇದಕ್ಕಾರು ಕಾರಣಭೂತರು–ಮಿರ್ಜಾ ಸಾಹೇಬರೊ?

September ತಿಂಗಳವರೆಗೆ ಇಲ್ಲಿಯೆ ಇರುತ್ತೇನೆ.

* * *

ಕೂಡಲಿ ಚಿದಂಬರಂ ಶಿವಮೊಗ್ಗ, ೨–೧೨–೧೯೩೦

ಸಾಹಿತ್ಯ ಪರಿಷತ್ತಿನಿಂದ ಬಂದ ಮೇಲೆ ನಿಮಗೆ ಕಾಗದವನ್ನು ಬರೆದಿದ್ದೆ. ಅದನ್ನು ಅಂಚೆಗೆ ಕಳುಹಿಸುವುದರೊಳಗೆ ಅದು ಕಳೆದುಹೋಯ್ತು. ನಮ್ಮ ಸಂಘವು ಸ್ಥಾಪಿತವಾಗುವುದಕ್ಕೆ ಸ್ವಲ್ಪ ಮುಂಚೆ ಅದು ಸಿಕ್ಕಿತು. ಆದರೆ ಸಂಘದ ಕೆಲಸಗಳ ಗಡಿಬಿಡಿಯಲ್ಲಿ ಆ ಕಾಗದವು ಹಾಗೆ ಉಳಿಯಿತು.

ಬೆಂಗಳೂರಿನಲ್ಲಿ (ಅಕ್ಟೋಬರ್ ತಿಂಗಳಲ್ಲಿ) ಮ।ರಾ। ಬೇಂದ್ರೆಯವರಿಗೂ ನರಸಿಂಹಾಚಾರ್ಯರಿಗೂ ಭೇಟಿ ಮಾಡಿಸಿದೆ. ಒಂದು ರಾತ್ರಿ ನರಸಿಂಹಾಚಾರ್ಯರ ಮನೆಗೆ ಊಟಕ್ಕೆ ಬಂದಿದ್ದರು – ಆಗ ನರಸಿಂಹಾಚಾರ್ಯರ ಪದ್ಯಗಳನ್ನು ಕೇಳಿ ಬೇಂದ್ರೆಯವರು ಆನಂದಪಟ್ಟರು.

ಅಕ್ಟೋಬರ್ ಕೊನೆಯಲ್ಲಿ ಮ।ರಾ। ವೆಂಕಟೇಶ ಐಯ್ಯಂಗಾರ್ಯರೊಡನೆ ಬೇಂದ್ರೆಯವರು ಇಲ್ಲಿಗೂ ಬಂದಿದ್ದರು. ಹೈಸ್ಕೂಲಿನಲ್ಲಿ ಅವರ ಕವನಗಳನ್ನು ಕೆಲವನ್ನು ಓದಿದರು. ಸೀತಾರಾಂ, ಪುಟ್ಟನಂಜಪ್ಪ, ನಾನು ಮಾತ್ರ ಅವರ ಉತ್ತರನ ಮೇಲಿನ ಲೇಖನಗಳೆರಡನ್ನು ಪೂರ್ತಿಯಾಗಿ ಕೇಳಿದೆವು. ನಮ್ಮ ಸಂಘ ಸ್ಥಾಪನೆಗೆ ಬೇಂದ್ರೆಯವರೇ ಕಾರಣವೆಂದು ಹೇಳಬೇಕು. For he told us that we should do something in this place. ಹೋದ ವರುಷ ಇಲ್ಲಿ ಸಾಹಿತ್ಯ ಪರಿಷತ್ತನ್ನು ಸೇರಿಸಬೇಕೆಂದು ನಮ್ಮ ಸ್ನೇಹಿತರು ಬಿ. ಚಂದ್ರಶೇಖರಶೆಟ್ಟರು ಪ್ರಯತ್ನಿಸಿದರು – ಮೀಟಿಂಗಿಗೆ ಜನರೇ ಬರಲಿಲ್ಲ. ಮೀಟಿಂಗಿನ ಬಿಲ್ಸ್‌ಗಳ ಛಾರ್ಜು ಕೂಡ ಕೊನೆಗೆ ತಮ್ಮ ಕೈಯಿಂದಲೇ ಕೊಟ್ಟರು. ಇದನ್ನರಿತ ನಾವು ಈ ವೂರಿನಲ್ಲಿ ಯಾವುದಕ್ಕೂ ಮುಂದುವರಿದು ಹೋಗಬಾರದು, ಹೋದರೆ ನಾಚಿಕೆಗೇಡೆಂದು ಇದ್ದೆವು. ಸಂಘವನ್ನು ಸ್ಥಾಪಿಸುವುದು ಇಲ್ಲಿ ಸಾಧ್ಯವಲ್ಲವೆಂದೇ ಸುಮ್ಮನಿದ್ದೆವು. ಪುಟ್ಟನಂಜಪ್ಪನವರು – ಉತ್ಸಾಹಿಗಳು – ಏನಾದರೂ ಆಗಲಿ, ಸಂಘವನ್ನು ಸ್ಥಾಪಿಸಬೇಕೆಂದು ಹೇಳಿದರು. ಊರಿನವರಿಗೆ ಯಾವ ತಿಳಿವಳಿಕೆಯನ್ನೂ ಕೊಡದೆ ನಾವು ಮೂರುನಾಲ್ಕು ಜನರು ಸೇರಿ ಸಂಘವನ್ನು ಸ್ಥಾಪಿಸುವುದೆಂದೇ ನಿರ್ಧರಿಸಿ ಶ್ರೀಮಾನ್ ಪುಟ್ಟಪ್ಪನವರನ್ನು ಬರಮಾಡಿ, ಬೇಂದ್ರೆಯವರು ಈ ವೂರನ್ನು ಬಿಟ್ಟ ೭–೮ ದಿನಗಳಲ್ಲೆ, ಈ ವೂರಿನವರಿಗೆಲ್ಲ ಒಂದು ದೊಡ್ಡ ಹಬ್ಬವನ್ನುಂಟುಮಾಡಿದೆವು. ಪುಟ್ಟಪ್ಪನವರು ಒಳ್ಳೆಯ ಮುಹೂರ್ತದಲ್ಲಿ ಸಂಘವನ್ನು ಸ್ಥಾಪಿಸಿದರು. ಈಗ ಸುಮಾರು ನೂರು ಜನ ಸದಸ್ಯರನ್ನು ಸಂಪಾದಿಸಿದ್ದೇನೆ. ಶ್ರೀಮಾನ್ ಡಿ. ಗುರುರಾಯರು (1st Secy. of Central College Karnataka Sangha - now a teacher in the High School here)

ಪ್ರಯತ್ನಿಸಿದರೆ ೧೦೦ ಜನ ವಿದ್ಯಾರ್ಥಿ ಸದಸ್ಯರೂ ೨೦-೩೦ ಜನ ಉಪಾಧ್ಯಾಯರೂ ನಮ್ಮ ಸಂಘಕ್ಕೆ ಸದಸ್ಯರಾಗಬಹುದು.

ಸಂಘದ ಕಾರ್ಯಕ್ರಮದ ಪಟ್ಟಿಯನ್ನೇನೂ ನಾನು ಸಿದ್ಧಮಾಡಿಲ್ಲ. ಸಂಘವನ್ನು ಜರುಗಿಸಿ ಕೊಂಡು ಹೋಗುವ ದೊಡ್ಡ ಭಾರವು ನನ್ನ ತಲೆಯ ಮೇಲೂ ಬಿದ್ದಿದೆ. ಈ ವೂರಲ್ಲಿ ಉಪನ್ಯಾಸಕರು ಸಿಕ್ಕುವುದು ಕಷ್ಟ. ಹೊರಗಿನಿಂದ ಆಗಾಗ್ಗೆ ೨-೩ ತಿಂಗಳಿಗೊಂದಾವರ್ತಿ ಯಾದರೂ ಕವಿಗಳನ್ನೂ, ಲೇಖಕರನ್ನೂ ಕರೆಯಿಸಬೇಕೆಂದು ಆಲೋಚಿಸಿದ್ದೇನೆ. ಸಂಘದ ಉದ್ದೇಶಗಳ ಪ್ರತಿಯನ್ನು (as drafted by me) ಕಳುಹಿಸಿದ್ದೇನೆ. ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರಿಗೂ, ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರಿಗೂ ಕಾಗದಗಳನ್ನು ಬರೆದಿದ್ದೇನೆ. ಮ।ರಾ। ವೆಂಕಟೇಶ ಐಯ್ಯಂಗಾರ್ಯರು ಈ ವೂರಿಗೆ ಬಂದು ನಮ್ಮ ಸಂಘದಲ್ಲಿ ಉಪನ್ಯಾಸ ಮಾಡುವಂತೆ ಒಪ್ಪಿದ್ದಾರೆ. ಪ್ರಾಯಃ ಮ।ರಾ। ವೆಂಕಣ್ಣಯ್ಯನವರು ಈ ವೂರಿಗೆ ಬರಬಹುದಲ್ಲವೆ (on Univ. Commission)? ನಾನು ಅವರಿಗೆ ಕಾಗದ ಬರೆಯುತ್ತೇನೆ – ದಯವಿಟ್ಟು ನೀವೂ ತಿಳಿಸಿ – ಇಲ್ಲಿಗೆ ದಯಮಾಡಿ ಸಂಘದಲ್ಲಿ ಉಪನ್ಯಾಸ ಮಾಡಿ, ಇಲ್ಲಿನ ಜನರಲ್ಲಿ ಸಾಹಿತ್ಯಾಭಿರುಚಿಯನ್ನುಂಟು ಮಾಡುವಂತೆ. ನೀವು ಇಲ್ಲಿಗೆ ಖಂಡಿತ ಬಂದು ಹೋಗಬೇಕು. ಶುಕ್ರವಾರ ಇಲ್ಲಿಗೆ ಬನ್ನಿ, ಶನಿವಾರ ನಿಮ್ಮ ಕವನಗಳನ್ನು ಓದಿ ಹೇಳಿ, ಆದಿತ್ಯವಾರ ಛಂದಸ್ಸಿನ ವಿಚಾರವಾಗಿ ನೀವು ಬರೆದಿರುವ ಲೇಖನದಿಂದ ಭಾಗಗಳನ್ನು ಓದಿ; ಸೋಮವಾರ ನೀವು ಮೈಸೂರಿಗೆ ಹೊರಡಬಹುದು. ಅಂತು ಖಂಡಿತ ಬನ್ನಿ. ಉದಾಸೀನ ಮಾಡಬೇಡಿ.

ಮಹಾಭಾರತದ ಎಡಿಟಿಂಗ್‌ಗೆ ಪ್ರಾರಂಭಿಸಿದ್ದೀರಾ?

ಈ ವರ್ಷದ ಪ್ರಬುದ್ಧ ಕರ್ಣಾಟಕದ ವಿನಾಯಕನ ಸಂಚಿಕೆಯಲ್ಲಿ 'ಶಾಂತಿ ಎಲ್ಲಿ' ಎಂಬ ಕವನವು ಬಂದಿದೆಯಷ್ಟೆ. ಅದರ ಕರ್ತೃವಾದ ಹುಲಿಮನೆ ಕಾಳೆ ತಿಮ್ಮಪ್ಪ ಎಂಬುವರು ಸ್ವರ್ಗಸ್ಥರಾದರೆಂಬುದು. ದುಃಖವಾರ್ತೆಯನ್ನು ನೀವು ವಿಶ್ವ ಕರ್ಣಾಟಕದಿಂದ ತಿಳಿದಿರಬಹುದು. I believe he was a promising poet. ಆತನ ಸ್ಥಳ ಸಾಗರ. ನಮ್ಮ ಸಂಘದಲ್ಲಿ ಅವರ ಭಾವಚಿತ್ರವನ್ನು ಅನಾವರಣ ಮಾಡಿ, ಅವರ ಜೀವನ ವಿಚಾರಗಳನ್ನು ತಿಳಿಸಿ, ಅವರ 'ಸ್ಮರಣೆ' ಮಾಡಬೇಕೆಂಬ ಇಷ್ಟವಿದೆ. ಸಾಧ್ಯವಾದರೆ ಅವರ ಕೆಲವು ಕವಿತೆಗಳನ್ನು ಅಚ್ಚು ಹಾಕಿಸಬೇಕೆಂದೂ ಇದ್ದೇವೆ. ಆತನ ಸ್ನೇಹಿತರು, ಸಹಪಾಠಿಗಳನ್ನು ಹುಡುಕಿ, ಆತನ ಮನೆಯವರಿಗೆ ಪತ್ರವನ್ನು ಹಾಕಿಸಿದ್ದೇನೆ – 'ಸ್ಮರಣೆ'ಗೆ ಅನುಕೂಲವಾಗುವಂತೆ ದಯವಿಟ್ಟು ಆತನ ಭಾವಚಿತ್ರವನ್ನೂ, ಕವಿತೆಗಳ ಪುಸ್ತಕಗಳನ್ನು ಕಳುಹಿಸುವಂತೆಯೂ ಆತನ ಜೀವನ ವಿಷಯಗಳನ್ನೂ ತಿಳಿಸುವಂತೆಯೂ. ಅವರ ತಮ್ಮಂದಿರು ಹುಲಿಮನೆಯೆಂಬ ಹಳ್ಳಿಯಲ್ಲಿದ್ದಾರೆ ಯಂತೆ. ಅವರಿಂದ ಇನ್ನೂ ಉತ್ತರ ಬಂದಿಲ್ಲ. ಮೈಸೂರಿನಲ್ಲಿ ತಿಮ್ಮಪ್ಪನವರ ಪ್ರಿಯಸ್ನೇಹಿತರು ಇಬ್ಬರು ಇದ್ದಾರಂತೆ – ಒಬ್ಬರು ಅಪ್ಪೂರಾವ್ (Ec. Hons. ಕ್ಲಾಸಿನಲ್ಲಿ); ಇನ್ನೊಬ್ಬರು ಅಚ್ಯುತರಾವ್ (Inter-collegeನಲ್ಲಿ). ನಿಮಗೆ ಅವರನ್ನು ನೋಡುವುದು ಸಾಧ್ಯವೆ? ಅವರಿಂದ ತಿಮ್ಮಪ್ಪನವರ ವಿಷಯಗಳನ್ನು ತಿಳಿಯುವುದು, ಮತ್ತು ಭಾವಚಿತ್ರ ಕವಿತೆಗಳ ಪುಸ್ತಕಗಳನ್ನು

ಹೊಂದುವುದು ಹೇಗೆ ಎಂಬ ವಿಚಾರಗಳನ್ನು ತಿಳಿದು, ನಮ್ಮ ಸಂಘಕ್ಕೆ ನೆರವಾಗುವಂತೆ ಮಾಡುವುದು ಸಾಧ್ಯವೆ?

ದಯವಿಟ್ಟು ಬೇಗ ಬರೆಯಿಸಿ.

* * *

ಕೂಡಲಿ ಚಿದಂಬರಂ ಮೈಸೂರು, ೧-೧೨-೧೯೪೬

ಕಾವ್ಯಾಲಯ, ಪ್ರಕಾಶಕರು

ಪ್ರೊ. ಹಿರಿಯಣ್ಣನವರ Commemoration ಸಂಪುಟದ ಪ್ರಕಟನೆಯ ಕಾರ್ಯವನ್ನು ತ್ವರೆಗೊಳಿಸುವುದು ಅಗತ್ಯವಲ್ಲವೆ? ಹೊಸಾಲಿ ಪ್ರೆಸ್ಸಿನಿಂದ ಏನೂ ಉತ್ತರ ಬಂದಿಲ್ಲವಾಗಿ ಶ್ರೀಮಾನ್ ಹನುಮಂತರಾಯರು ತಿಳಿಸಿದರು. ಹೊಸಾಲಿಯವರು ಕಾರ್ಯವನ್ನು ಕೂಡಲೆ ಕೈಕೊಳ್ಳುತ್ತಾರೆಯೆ ಹೇಗೆ ಎಂಬುದನ್ನು ನೀವು ಮುಖತಃ ವಿಚಾರಿಸುವುದು ಮೇಲಲ್ಲವೆ? ಅವರು ತಡಮಾಡುವುದಾದರೆ ನಾವು ಬೇರೆ ಏರ್ಪಾಡು ಮಾಡುವುದು ತೀರ ಅಗತ್ಯ. ಚಂದಾ ಕೊಟ್ಟಿರುವವರಿಗೆ ಉತ್ತರ ಹೇಳುವುದು ಕಷ್ಟವಾಗಿದೆ. ಪ್ರೊ. ಹಿರಿಯಣ್ಣನವರಿಗೆ ಮುಖ ತೋರಿಸುವಂತೆ ಇಲ್ಲ.

ಮೈಸೂರು ಪ್ರಿಂಟಿಂಗ್ & ಪಬ್ಲಿಷಿಂಗ್ ಹೌಸಿನ ಶ್ರೀ ರಾಮರಾಯರು ಹೊಸತಾಗಿ ಇಂಗ್ಲಿಷ್ ಟೈಪುಗಳನ್ನು ತರಿಸಿಕೊಂಡಿದಾರೆ. ಶ್ರೀ ಆರ್.ಕೆ. ನಾರಾಯಣ್ ಅವರ Dark Room ಎಂಬ ಕಾದಂಬರಿ ಅವರಲ್ಲಿ ಅಚ್ಚಾಗುತ್ತಿದೆ. ಅಚ್ಚಾದ ಒಂದು Formನ್ನು ಬುಕ್ ಪೋಸ್ಟ್ ಮೂಲಕ ನಿಮಗೆ ರವಾನಿಸಿದ್ದೇನೆ. ಟೈಪೂ, ಪ್ರಿಂಟಿಂಗೂ ಚೆನ್ನಾಗಿವೆಯೆಂದು ತೋರಿದರೆ, Mysore Printing & Publishing House ನಲ್ಲಿ ಸಂಪುಟ ಅಚ್ಚು ಮಾಡಿಸುವ ಏರ್ಪಾಡು ಏಕೆ ಮಾಡಬಾರದು? ಕೆಲಸವೂ ಜಾಗ್ರತೆಯಾಗಿ ಪೂರೈಸುತ್ತದೆ. ಮೊನ್ನೆ ತಾನೆ ಶ್ರೀ ಎಂ.ಎಚ್. ಗೋಪಾಲ್‌ರವರ The Basis of Public Salaries ಎಂಬ ಪುಸ್ತಕ ಅಲ್ಲಿಯೇ ಅಚ್ಚಾಯಿತು ಶೀಘ್ರವಾಗಿ ಯಾವುದಕ್ಕೂ ಯೋಚಿಸಿ ಬರೆಯಿರಿ, ಜಾಗ್ರತೆಯಾಗಿ.

ಇನ್ನೊಂದು ವಿಚಾರ: ಸಂಪುಟವನ್ನು ಕ್ರೌನ್ ೧/೮ ಆಕಾರದಲ್ಲಿ ಹಾಕಿಸಬಾರದೇಕೆ? ಪುಸ್ತಕ ಗಾತ್ರವಾಗಿ ಕಾಣುತ್ತದೆ. ಈಗ ಮೊದಲು ಕೊಂಡಿರುವ ಕಾಗದವನ್ನು ಕ್ರಯಕ್ಕೆ ಕೊಟ್ಟು ಈಚೆಗೆ ಬಂದಿರುವ ಉತ್ತಮ ಕಾಗದವನ್ನು (crown size) ಕೊಳ್ಳಬಹುದು.

ಈಚಿನ ಎರಡು ಬಾರಿಯೂ ಪ್ರೊ. ಹಿರಿಯಣ್ಣನವರಲ್ಲಿ ಹೋಗಲು ಬಹು ಸಂಕೋಚಪಟ್ಟು ಹೋದೆ – ಅವರ ವಿಷಯದ ಕೆಲಸ ತೀರ ಹಿಂದೆ ಬಿದ್ದಿರುವುದರಿಂದ. ಆದರೆ ಅವರ ವಿಶ್ವಾಸದ ಎದುರಿನಲ್ಲಿ ನನ್ನ ಸಂಕೋಚವೆಲ್ಲ ಮಾಯವಾಯಿತು. ಈವರೆಗೆ ನಾನು ಅವರಲ್ಲಿ ಒಬ್ಬನೇ ಹೋದ ಹಾಗಿಲ್ಲ; ಅವರಲ್ಲಿ ಮಾತನಾಡಿದ್ದೂ ಬಲು ಅಲ್ಪ. ಆದರೆ ಈಚೆಗೆ ಎರಡು ಬಾರಿಯೂ–ನರಸಿಂಹಾಚಾರ್ಯರ ಪುಸ್ತಕಗಳನ್ನು ತೆಗೆದುಕೊಂಡು ಹೋದಾಗ–ಅವರ ಮತ್ತು ಅವರ ಕೃತಿಗಳ ವಿಚಾರವಾಗಿ ಸ್ವಲ್ಪ ಹೆಚ್ಚಾಗಿಯೇ ಮಾತನಾಡಿದೆ. ನನಗೇ ಆಶ್ಚರ್ಯವಾಯಿತು

ಆಮೇಲೆ, ಶ್ರೀ ಹಿರಿಯಣ್ಣನವರಲ್ಲಿ ನನಗೆ ಅಷ್ಟೊಂದು ಬಳಕೆ ಹೇಗೆ ಸಂಪಾದನೆಯಾಯಿತೆಂದು. ನನ್ನಿಂದ ಒಂದೆರಡು ಮಾತು ಹೊರಬೀಳುವುದೆ ತಡ, ಅವರ ಹೃದಯದ ಬಾಗಿಲು ತೆರೆದು, ಅಂತಃಕರಣದ ಮಾತುಗಳ ಧಾರೆ ನಿರ್ವಂಚನೆಯಾಗಿ ಸುರಿಯಿತು. ಅವರ ಸರಳತೆ, ನಿಷ್ಕಪಟ ಅಂತಃಕರಣ ಅಪೂರ್ವವಾದುವೇ ಸರಿ. ಮಕ್ಕಳಂತೆ ಮನಬಿಚ್ಚಿ ಮಾತನಾಡುತ್ತಾರೆ. ಹೃದಯವನ್ನು ತೆರೆದಂತೆ ಮಾಡಿ, ನೋಡುವ ಎನ್ನುವ ಹೊತ್ತಿಗೆ ಬಾಗಿಲು ಓರೆ ಮಾಡುವವರೇ ಹೆಚ್ಚು ಮಂದಿ. ಆದರೆ, ನಾನು ಸಂಕೋಚದಿಂದ ಬಾಗಿಲ ಹೊರಗೆ ನಿಂತರೂ, ಬನ್ನಿ ಎಂದು ಹೃದಯದೊಳಕ್ಕೇ ಎಳೆದೊಯ್ಯುವಂತಹವು – ಅವರ ನಿರ್ಮಲಾಂತಃಕರಣದ ಮಾತುಗಳು. ಎರಡು ಬಾರಿ ಹೋದಾಗಲೂ ನಾನು ಅವರ ವಿಶ್ವಾಸವನ್ನು ಕಂಡು ಕರಗಿ ನೀರಾಗಿಬಿಟ್ಟೆ. ನರಸಿಂಹಾಚಾರ್ಯರ ವಿಷಯವಾಗಿ ಅವರು ತೆರೆದ ಮನಸ್ಸಿನಿಂದ ಮಾತನಾಡುತ್ತಿದ್ದಾಗ, ಎಲ್ಲಿ, ಯಾವ ಕ್ಷಣದಲ್ಲಿ, ಕರಗಿದ ನನ್ನ ಹೃದಯ ಕಣ್ಣಲ್ಲಿ ಹರಿದು ಬರುತ್ತದೆಯೊ ಎಂಬ ಭಯ ನನಗೆ. 'ನಾರಾಯಣನ ದೇಗುಲದಲ್ಲಿ' – ವಿಷಯ ಮಾತನಾಡುವಾಗ ಇಬ್ಬರ ಕಣ್ಣುಗಳಲ್ಲಿಯೂ ಕ್ಷಣಕಾಲ ಹನಿತೋರದಿರಲಿಲ್ಲ. ಜ್ಞಾನಿಗಳ ಸಹವಾಸವಿರುವಾಗ ಸ್ನಾನವೇತಕ್ಕೆ ಎಂತಲೊ ಏನೋ ಒಂದು ನುಡಿಯಿರಬೇಕಲ್ಲವೆ. ಇಂಥವರ ಸಹವಾಸದ ಅನುಭವದ ಫಲವಾಗಿಯೆ ಕವಿ ಆ ಮಾತನ್ನು ಹೇಳಿರಬೇಕು ಎನ್ನಿಸಿತು.

*

ನಿಮಗೆ ಎರಡು ವಾಯಿದೆ ಹೇಳಿ ಎರಡನ್ನೂ ಮೀರಿದ್ದಾಗಿದೆ. ಇನ್ನು ಯಾವ ಧೈರ್ಯದಿಂದ ಕಾಗದ ಬರೆಯುವುದು? ಈ ವರ್ಷ ಪ್ರಕಟಣೆಗಳು ಜಾಸ್ತಿಯಾಗಿದ್ದರೂ ವರಮಾನ ನಿರೀಕ್ಷಿಸಿದಷ್ಟು, ಏನು ಕಾರಣವೊ, ಬರಲಿಲ್ಲ. ಈಗೀಗ ಮಾರಾಟ ಉತ್ತಮಗೊಳ್ಳುವ ಸೂಚನೆಗಳು ತೋರುತ್ತಿವೆ.........

ಬೇಗ ಮಾರಾಟವಾಗಬಹುದಾದ ಕೃತಿ – ಆಗದಿರುವ ಕೃತಿ ಎಂದು ಯೋಚಿಸುತ್ತ ನೀವು ಸಂಕೋಚ ಪಟ್ಟುಕೊಳ್ಳಬೇಕಾಗಿಲ್ಲ. ಗ್ರಂಥ ಯಾವುದೇ ಆಗಲಿ–ಭಾಷೆ, ವ್ಯಾಕರಣ, ಛಂದಸ್ಸು–ಸಂಬಂಧದ್ದಾಗಲಿ, ವಿಮರ್ಶೆ ಪ್ರಬಂಧಗಳಾಗಲಿ, ಕವನ ಸಂಗ್ರಹವಿರಲಿ – ಕಾಲಗರ್ಭಕ್ಕೆ ತಳ್ಳದೆ ನನ್ನಲ್ಲಿಗೆ ಕಳಿಸಿ. ಅನುಕೂಲವಾದಂತೆ ಸಾಧ್ಯವಾದಷ್ಟು ಜಾಗ್ರತೆಯಾಗಿಯೆ ಅಚ್ಚಿನ ವ್ಯವಸ್ಥೆ ಮಾಡುತ್ತೇನೆ. ನೀವು ಈಗಾಗಲೆ ಅರೆವಾಸಿ ಮುಕ್ಕಾಲು ಪಾಲು ಬರೆದಿರುವ ಕೃತಿಗಳನ್ನು ಪೂರ್ತಿ ಮಾಡಿ ಕೊಡಿ. ಅವುಗಳಿಂದ ಕಾಲಕಾಲಕ್ಕೆ ಹಣ ಬರುವಂತೆ ನಾನು ಮಾಡಿಕೊಡುತ್ತೇನೆ.

೧) 'ಮುದ್ರಾಮಂಜೂಷ'ದ ಕೆಲಸ ಕೂಡಲೆ ಕೈಕೊಳ್ಳಿ. ಶೀಘ್ರವಾಗಿ ಅಚ್ಚುಮಾಡಿಸಿ ಹಣ ಬರುವಂತೆ ಮಾಡೋಣ.

೨) ವಿಮರ್ಶೆ ಲೇಖನಗಳನ್ನು ಪ್ರಕಟಿಸಲು ಅಡ್ಡಿ ಇಲ್ಲ ಎಂದು ಬರೆದಿದೀರಿ. ನನ್ನಿಂದಲೂ ಏನೂ ಅಡ್ಡಿ ಇಲ್ಲ – ಹಸ್ತಪ್ರತಿ ನನ್ನ ಕೈ ಸೇರುವುದೊಂದೇ ಅಡ್ಡಿ! ಜಾಗ್ರತೆಯಾಗಿ ತಿದ್ದಿಕೊಡಿ. ಮುದ್ರಾಮಂಜೂಷದ ಕೆಲಸ ಮುಗಿದ ಕೂಡಲೆ ಈ ಲೇಖನಗಳ ಸಂಗ್ರಹವನ್ನು ಪ್ರಕಟನೆಗೆ ತೆಗೆದುಕೊಳ್ಳುತ್ತೇನೆ.

ಅಥವಾ ಈಗಲೇ ಬೇಕಾದರೂ ಅಚ್ಚಿಗೆ ತೆಗೆದುಕೊಳ್ಳಲು ಅಡ್ಡಿಯಿಲ್ಲ. Indian Thought ಗೆ ಒಂದು ಲೇಖನ ಬರೆದಿದ್ದಿರಿ – ಇಂಗ್ಲಿಷಿನಲ್ಲಿ. ಸುಂದರವಾದ ಲೇಖನ. ಅದನ್ನು ಕನ್ನಡಕ್ಕೆ ಹಾಕಿ ಈ ಸಂಗ್ರಹಕ್ಕೆ ಸೇರಿಸಿಕೊಳ್ಳಬಾರದೇಕೆ? ಇಷ್ಟಬಂದರೆ ಕೊಂಚ ವಿಸ್ತರಿಸಿ – ಹೆಚ್ಚು ಶ್ಲೋಕಗಳನ್ನು ಉದ್ಧರಿಸುವುದರ ಮೂಲಕ.

(೩) ಒಲುಮೆ–ಪ್ರತಿಗಳೆಲ್ಲ ಮುಗಿದಿವೆಯೆ? ಗಾತ್ರವನ್ನು ಹೆಚ್ಚಿಸಿಕೊಡಿ. ಅಚ್ಚು ಹಾಕಿಸೋಣ.

(೪) ಭಾವಗೀತೆಗಳ ಸಂಕಲನ: ನಾಲ್ಕಾರು ದಿನ ಕುಳಿತು ಕವನಗಳನ್ನೆಲ್ಲ ಗುರುತುಹಾಕಿ. ನಾನು ನಕಲು ಮಾಡಿಸುತ್ತೇನೆ. ಆಧುನಿಕ ಕವಿತೆಯನ್ನು ಕುರಿತು ಪ್ರಬಂಧ ಸಿದ್ಧಗೊಳಿಸಿ.

(೫) ಛಂದಸ್ಸಿನ ಮೇಲಣ ಲೇಖನಗಳನ್ನು ಸೆರೆಯಿಂದ ಬಿಡಿಸಿ. ಪೂರ್ಣ ಗ್ರಂಥವನ್ನು ಕೂಡಲೆ ಸಿದ್ಧಗೊಳಿಸಲು ಸಾಧ್ಯವಾಗದಿದ್ದರೂ, ಈಗಾಗಲೆ ಪ್ರಕಟವಾಗಿರುವ ಲೇಖನಗಳನ್ನೂ ಇನ್ನು ಒಂದೆರಡನ್ನೂ ಸೇರಿಸಿ ಸದ್ಯಕ್ಕೆ ಪ್ರಕಟಿಸಬಹುದು. ಕ್ರಮಶಃ ಪ್ರಕಟವಾಗುವುದರಲ್ಲಿ ದೋಷವೇನು?

(೬) ಹಳಗನ್ನಡ ರೀಡರ್ – ಮರೆಯಬೇಡಿ. ನನಗೆ ತಿಳಿಸಿಯೇ ಹನ್ನೆರಡು ವರ್ಷಗಳ ಹತ್ತಿರಕ್ಕೆ ಬಂದಿರಬೇಕು. ಈ ಪುಸ್ತಕ ನಿಮಗೆ ಹಣವನ್ನು ತರುತ್ತದೆ. ಅವಶ್ಯವಾದ ಪುಸ್ತಕ. ಇದನ್ನು ಬರೆಯುವ ಯೋಚನೆ ಹಿಂದಕ್ಕೆ ತಳ್ಳಬೇಡಿ.

(೭) ಪಂಪನ ವಿಷಯವಾಗಿ ದೊಡ್ಡ ಪುಸ್ತಕಕ್ಕಾಗುವಷ್ಟು ವಿಷಯ ಸಂಗ್ರಹ ಮಾಡಿದ್ದೀರಿ. ಪುಸ್ತಕ ಬರೆಯಿರಿ.

ಹೀಗೆ ಬೇಕಾದಷ್ಟಿದೆ. ನಾನು ಹೇಳಬೇಕೆ? ಇನ್ನು ೧೦–೧೨ ವರ್ಷಗಳಲ್ಲಿ ಮಾಡುವ ಕೆಲಸವೇ ಕೆಲಸ. ಆಮೇಲೆ ದೇಹ ಸುಖವನ್ನೂ ವಿರಾಮವನ್ನು ಬಯಸುತ್ತದೆಯಲ್ಲವೇ? ನಿಮ್ಮನ್ನು ಒತ್ತಾಯಪಡಿಸುವುದರಲ್ಲಿ ನನಗೆ ಬೇಸರವಿಲ್ಲ – ನಿಮಗೆ ಬೇಸರವಾಗದಿದ್ದರೆ. ಶ್ರೀಯವರ ಕೃತಿಗಳನ್ನು ಕುರಿತು ಒಂದು ವಿಸ್ತಾರವಾದ ಗ್ರಂಥಕ್ಕೆ ಅವಕಾಶವಿದೆ. ನೀವು ಬರೆಯಬಹುದು – ಆಕಾಶವಾಣಿಯಲ್ಲಿ ಅವರ ಕೃತಿಗಳನ್ನು ಕುರಿತು ನೀವು ಮಾಡಿದ ಭಾಷಣ ಇದನ್ನು ನನ್ನ ನೆನಪಿಗೆ ತರುತ್ತದೆ.

*

ಬಿ.ಎಂ.ಶ್ರೀ.ಯವರ ಕೃತಿಗಳ ಪ್ರಕಟನೆಗೇನಾದರೂ ವ್ಯವಸ್ಥೆ ನಡೆದಿದೆಯೆ? ಕಾವ್ಯಾಲಯ ದಿಂದ ಅವರ ಕೃತಿ ಯಾವುದಾದರೂ ಪ್ರಕಟಿಸಬೇಕೆಂಬ ಆಸೆಯಿದೆ. ಸಾಧ್ಯವಾಗಬಹುದೆ? ಯಾರನ್ನು ಕೇಳಬೇಕು? – ನಿಮಗೆ ವಿಚಾರ ತಿಳಿದಿದ್ದರೆ ನನಗೆ ತಿಳಿಸಬಹುದೆ?

ಗಣೇಶ ದರ್ಶನ– ಯಾವಾಗ ಕಳಿಸುತ್ತೀರಿ? ಶ್ರೀ ಹಿರಿಯಣ್ಣನವರ ಕಿವಿಗೂ ಅದರ ಹೆಸರನ್ನು ಹಾಕಿದ್ದೇನೆ! ನಿಮ್ಮ ಕಾಗದ ಬರುವುದಕ್ಕೆ ಮುಂಚೆಯೇ.

* * *

ಕೂಡಲಿ ಚಿದಂಬರಂ ಮೈಸೂರು, ೯-೨-೧೯೫೪

ನಿಮ್ಮ ೨೩-೧-೫೪ರ ಪತ್ರ ಸೇರಿ ಬಹುದಿನಗಳಾದವು. ತಡವಾಗಿ ಉತ್ತರ ಬರೆಯುತ್ತಿರುವುದನ್ನು ಕ್ಷಮಿಸಿ. ಈ ಮಧ್ಯೆ ಶ್ರೀ ಡಿ.ಎಲ್.ನ. ಅವರನ್ನು ನೋಡಿ ನಿಮ್ಮ ಕ್ಷೇಮ ಸಮಾಚಾರವನ್ನು ತಿಳಿದುಕೊಂಡೆ.

ಒಂದು ಕಡೆ–ಆಲಸ್ಯ, ಇನ್ನೊಂದು ಕಡೆ–ಪ್ರೊ. ಹಿರಿಯಣ್ಣನವರ ಪುಸ್ತಕದ ಕರಡುಗಳು ಬಂದೊಡನೆ ನಿಮಗೆ ಪತ್ರ ಬರೆಯೋಣವೆಂಬ ಯೋಚನೆ, ಈ ಕಾರಣಗಳಿಂದ ಪತ್ರ ಬರೆಯುವುದು ಇಷ್ಟು ತಡವಾಯಿತು. ವೆಸ್ಲಿ ಪ್ರೆಸ್ಸಿನವರು ಈವರೆಗೂ ಮುಂದಿನ ಕರಡುಗಳನ್ನು ಕೊಟ್ಟಿರುವುದಿಲ್ಲ. ಈ ವಾರದಲ್ಲಿ ಖಂಡಿತವಾಗಿ ಕೊಡುವುದಾಗಿ ಹೇಳಿದ್ದಾರೆ. ಏನು ಮಾಡುತ್ತಾರೊ ನೋಡಬೇಕು. "Art Experience" ಸಂಪುಟ ಶೀಘ್ರವಾಗಿ ಬಂದರೆ ಅನುಕೂಲವಿದೆ.

'Art Experience' ಲೇಖನವನ್ನು ಕುರಿತು American Oriental Society Journalನಲ್ಲಿ ಬರೆದ ಮಾತುಗಳನ್ನು ಶ್ರೀ ಶಿವರಾಮ ಶಾಸ್ತ್ರಿಗಳು ನನ್ನ ಗಮನಕ್ಕೆ ಈ ಮೊದಲೆ ತಂದಿದ್ದರು. ನೀವು ಹೇಳುವಂತೆ ಹೃದಯದಿಂದ ಬಂದ ಮಾತುಗಳವು. ನಮ್ಮ ದೇಶದ ಪತ್ರಿಕೆಗಳಲ್ಲಿ ವಿಮರ್ಶಿಸುವ ವಿದ್ವಾಂಸರು ಹೀಗೇಕೆ ಬರೆಯಲಾರರೊ? ಗುಣವನ್ನು ಕಂಡಲ್ಲಿ ಮುಕ್ತ ಕಂಠದಿಂದ ಮಾತನಾಡಬಾರದೆ?

ಎರಡು ದಿನಗಳ ಕೆಳಗೆ 'ಇಂಗ್ಲಿಷ್ ಗೀತಗಳ' ಹೊಸ ಮುದ್ರಣದ ಪ್ರತಿಯನ್ನು ನೋಡಿದೆ. ನಿಮ್ಮ ಪ್ರಸ್ತಾವನೆಯನ್ನು ಓದಿ ನೋಡಿ ಸಂತೋಷ ಪಟ್ಟೆ. 'ಅಶ್ವತ್ಥಾಮನ್' ಕೃತಿಯನ್ನು ಕುರಿತೂ ನೀವು ಲೇಖನವನ್ನು ಬರೆಯಬೇಕು.

ಭಾರತೀಯ ಕಾವ್ಯಮೀಮಾಂಸೆಯನ್ನು ಕುರಿತು ಇಂಗ್ಲಿಷಿನಲ್ಲಿ ಗ್ರಂಥವನ್ನು ಖಂಡಿತವಾಗಿ ಬರೆಯಿರಿ. ಬಿಡುವು ದೊರೆತಾಗಲೆಲ್ಲ ಸ್ವಲ್ಪ ಸ್ವಲ್ಪ ಬರೆಯುತ್ತಾ ಹೋದರೆ ಗ್ರಂಥ ಶೀಘ್ರವಾಗಿ ಸಿದ್ಧವಾಗುವ ಸಂಭವ ಹೆಚ್ಚು. ಕಾವ್ಯಮೀಮಾಂಸೆಯನ್ನು ಕುರಿತು ನೀವು ಒಂದು "Loci Critici" ತಯಾರಿಸಬಹುದಾಗಿ ನನಗೆ ತೋರುತ್ತದೆ. ಆ ಬಗೆಯ ಗ್ರಂಥ ನಮ್ಮ ದೇಶಕ್ಕೇ ಹೊಸತೂ ವಿಶೇಷ ಪ್ರಯೋಜನಕಾರಿಯೂ ಆಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಈ ತಿಂಗಳಲ್ಲಿ 'Art Experience'ನ proofsಗಳೆಲ್ಲ ದೊರೆತರೆ, ಮುಂದಿನ ತಿಂಗಳು ನಿಮ್ಮಲ್ಲಿಗೆ ಬರುತ್ತೇನೆ. ಮುಂದಿನ ತಿಂಗಳಲ್ಲಿ ನಿಮ್ಮ ಕೆಲಸ ಕಾರ್ಯಗಳು ಹೇಗಿವೆಯೊ? ಬರುವ ಮುಂಚೆ ನಿಮಗೆ ತಿಳಿಸುತ್ತೇನೆ.

"ಗದಾಯುದ್ಧ ಸಂಗ್ರಹಂ": ಸುಮಾರು ೬೦೦ ಪತ್ರಿಗಳಿವೆ. ಬರುವ ಜೂನ್ ತಿಂಗಳಿಂದ I.A.ಗೆ ಅದು ಪಠ್ಯಪುಸ್ತಕವಾಗಿರುವುದಾದಲ್ಲಿ ಈಗಿರುವ ಪ್ರತಿಗಳು ಸಾಕಾಗಬಹುದು ಅಥವಾ ೧೦೦–೧೫೦ ಪ್ರತಿಗಳು ಹೆಚ್ಚಾಗಿ ಬೇಕಾಗಬಹುದು.

ನಿನ್ನೆ ರಾತ್ರಿ ಮೂರ್ತಿರಾಯರು ಆಕಾಶವಾಣಿಯಲ್ಲಿ ಸಣ್ಣಕಥೆಗಳನ್ನು ಕುರಿತು ಇಂಗ್ಲಿಷಿನಲ್ಲಿ ಮಾತನಾಡಿದರು. ಭಾಷಣ ಬಲು ಚೆನ್ನಾಗಿತ್ತು. ಪ್ರಾಯಶ ನೀವೂ ಭಾಷಣವನ್ನು ಕೇಳಿರಬೇಕು.

* * *

ಕೂಡಲಿ ಚಿದಂಬರಂ ಮೈಸೂರು, ೧೮–೭–೧೯೫೬

ನಿಮ್ಮ ಪತ್ರ. ಇಲ್ಲಿನ ಪರಿಸ್ಥಿತಿ ವಿಶೇಷ ವಿದ್ಯಮಾನಗಳ ವಿಚಾರವನ್ನು ಶ್ರೀಮಾನ್ ಡಿ.ಎಲ್.ನ ಅವರಿಂದ ತಿಳಿದಿರಬಹುದಾಗಿ ನಂಬಿದ್ದೇನೆ. ಇದೇ ತಿಂಗಳು ೧೪–೧೫ನೆಯ ತಾರೀಕುಗಳಲ್ಲಿ ಕನ್ನಡ ನಿಘಂಟಿನ ಸಂಬಂಧ ಕಮಿಟಿಯ ಸಭೆ ಬೆಂಗಳೂರಿನಲ್ಲಿ ಸೇರಿತ್ತಲ್ಲವೆ? ಆ ಸಂದರ್ಭದಲ್ಲಿ ನೀವೂ ಸಭೆಗೆ ಬೆಂಗಳೂರಿಗೆ ಬಂದಿದ್ದಿರಿ ಮತ್ತು ಡಿ.ಎಲ್.ನ. ಅವರಿಂದ ಪರಿಸ್ಥಿತಿಯ ವಿವರಗಳನ್ನು ತಿಳಿದುಕೊಂಡಿರಿ ಎಂದು ತಿಳಿಯುತ್ತೇನೆ. ಮೈಸೂರಿಗೆ ಹಿಂದಿರುಗುವ ವಿಷಯದಲ್ಲಿ ಏನು ನಿರ್ಧರಿಸಿದ್ದೀರಿ.

'ಬಿಡಿಮುತ್ತಿ'ನ ಕಡೆ ಕೈ ಹರಿಯುತ್ತಿರುವುದು ಸಂತೋಷದ ಸುದ್ದಿ. ೬೪ನೆಯ ಪುಟದ ಮುಂದಿನ ಭಾಗದ ಪ್ರೂಫಿನ ಒಂದು ಪ್ರತಿ ನನ್ನಲ್ಲಿದೆ. ಆದರೆ ಮೊಳೆಗಳನ್ನು ಜೋಡಿಸಿಟ್ಟು ಬಹು ದಿವಸಗಳಾಗಿರುವುದರಿಂದಲೂ ಕೆಲವು ಅಕ್ಷರಗಳು ಬಿದ್ದು ಹೋಗಿರುವ ಸಂಭವವಿರುವುದ ರಿಂದಲೂ ೬೪ನೆಯ ಪುಟದ ಮುಂದಿನ ಭಾಗವನ್ನೆಲ್ಲ ಪುನಃ ಕಂಪೋಸ್ ಮಾಡಿಸೋಣ.

ಸಂಸ್ಕೃತ ಮೂಲದ ಪೂರ್ಣಪದ್ಯವನ್ನೇ ಅಗತ್ಯವಾಗಿ ಕೊಡಬಹುದು. ಟಿಪ್ಪಣಿಯನ್ನು ಸಿದ್ಧಪಡಿಸಿ ಕಳಿಸಿಕೊಡಿ. ಅದರ ಪ್ರೂಫಿನ ಜೊತೆಗೆ textನ ಪ್ರೂಫನ್ನು ಕಳಿಸುತ್ತೇನೆ.

ಅಮೆರಿಕದ ಪ್ರವಾಸದ ಅನುಭವಗಳನ್ನು ನೀವು ಅಗತ್ಯವಾಗಿ ಬರೆಯಬೇಕು. ನಿಮ್ಮ ಅನುಭವ ಇತರ 'ಪ್ರವಾಸಿ'ಗಳ ಅನುಭವದಿಂದ ಹಲವು ವಿಷಯಗಳಲ್ಲಿ ಭಿನ್ನವಾಗಿದೆ. ನಿಮ್ಮ ಅನುಭವದಲ್ಲಿ ಮುಖ್ಯವಾಗಿ human interest ನಿಂದ ಕೂಡಿರುವ ಹೃದಯವನ್ನು ಕಲಕುವ ಸಂಗತಿಗಳೆಷ್ಟೋ ಇರುವಂತಿದೆ. ಹನುಮಂತರಾಯರ ಮನೆಯಲ್ಲಿ ಊಟಕ್ಕೆ ಕುಳಿತಾಗ ನೀವು ತಿಳಿಸಿದ ಹೆಣ್ಣುಮಗಳ ಕಥೆಯಿಂದ ನನಗೆ ಹೃದಯ ತುಂಬಿ ಬಂದು ಕಣ್ಣಲ್ಲಿ ಹನಿಗೂಡಿತು. ಅಂಥ ಸಂಗತಿಗಳನ್ನು ಮರೆಯುವುದು ಅಸಾಧ್ಯ. ಮನುಷ್ಯರ ವೇಷಭೂಷಣಗಳೂ ಮಾತು ಕಥೆಗಳೂ ದೇಶದಿಂದ ದೇಶಕ್ಕೆ ಬೇರೆಯಾಗಿರಬಹುದು, ಆದರೆ ಮಾನವಕುಲದ ಹೃದಯ ಒಂದೇ ಎಂದು ತೋರುತ್ತದೆ. ನೆನಪು ಬಂದಂತೆಲ್ಲ ಸಂಗತಿಗಳನ್ನು ನೀವು ಬರೆದಿಡುವುದು ಒಳ್ಳೆಯದಲ್ಲವೆ? ಅನಂತರ ಅವುಗಳನ್ನು ಸೂಕ್ತ ತೋರಿದ ರೀತಿಯಲ್ಲಿ ಜೋಡಿಸಿ ಕಟ್ಟಡವನ್ನು ನಿರ್ಮಿಸಿಕೊಳ್ಳಬಹುದಲ್ಲವೆ? ಒಟ್ಟು ಗ್ರಂಥವನ್ನು ಒಂದೇ ವ್ಯವಧಾನದಲ್ಲಿ ಬರೆಯಬೇಕೆಂದರೆ ಸಮಯ ಸರಿಯಾಗಿ ದೊರೆಯದಿರಬಹುದು.

ನಮ್ಮ ಮನೆಯಲ್ಲಿ ನೀವೂ ಮಕ್ಕಳೂ ತಂಗಿದ್ದು ನಮಗೇನೋ ಮನಸ್ಸಿಗೆ ತುಂಬ ಹರ್ಷವಾಯಿತು. ಊಟತಿಂಡಿ ಇತ್ಯಾದಿ ನಿಮಗೆ ಅನುಕೂಲವಾಗಿತ್ತೊ ಇಲ್ಲವೊ ತಿಳಿಯದು. ಒಂದು ರಾತ್ರಿ ಉಪವಾಸ ಮಲಗಿದ್ದು ನಿಮಗೆಲ್ಲ ಹೇಗೆ ಸುಖವಾಯಿತೊ ತಿಳಿಯದು.

* * *

T.S. Venkannaiah Bangalore, 3-4-1928

The Parishat Conference will be held on the 11th, 12th & 13th of May at Gulbarga. We (ARK & myself) have a desire to stage ಗದಾಯುದ್ಧ & ಯಮನ ಸೋಲು at the time of the conference. As regards the travelling & other expenses of the actors, we will try to induce the Parishat to meet it; if not, find out some other way of meeting the expenditure. With a view to minimise the number of actors we propose selecting only about a dozen people. From the Maharaja's College, we propose taking the following persons: Messrs - Narayana Sastri (ಭೀಮ & ಯಮ), Subba Rao (ಯಕ್ಷ & ಲಕ್ಷ್ಮಿ), Venkatachar (ಸಂಜಯ), Anantarangachar (ಯಮದೂತ & ಧೃತರಾಷ್ಟ್ರ & ಧರ್ಮರಾಜ) & the students who took the parts of ಸಾವಿತ್ರಿ & ಸತ್ಯವಾನ್. I do not know the names of the last two persons. Can you please find out (with the help of Mr. Anantarangachar) the address of the persons mentioned above? Also can you meet Mr. Narayana Sastri & enquire if he can make it convenient to go to Gulbarga. After hearing from you, we will meet the Parishat Secretary, and have a talk with him.

This is only a tentative move. How far we can succeed depends upon various conveniences. We shall try to see.

* * *

T.S. Venkannaiah Bangalore, April 21, 1928

It is only yesterday we decided to stage Gadayuddha & Yamana Solu at Gulbarga. It is a very responsible undertaking and so we hesitated for a long time.

It will be very convenient if we can get concession tickets; but that is doubtful. We are trying. It is yet to be seen how far we will be successful.

I have written to Messrs Puttappa and Gundappa. I hope they will come. Please make it convenient to go to Gulbarga with Mr. Nanjundaiya.

The trainage from Bangalore to Gulbarga is Rs. 7-2-0 or so. So each will have to spend Rs. 15/- for trainage alone. The other expenses come up to about Rs. 10/-. If we can get Railway concession tickets the total expenses may come 17 Rs. Efforts will be made to minimise the expenditure.

We have written to the actors concerned. A copy of the letter is enclosed herein.

The Parishat will grant Rs. 200/- to meet the expenses of the Drama Party. There is a theatre at Gulbarga. The majority of the actors are not only willing, but are as enthusiastic. These are the conveniences. The inconveniences are 1) the actors are in different places, some of them are in far off places, 2) for Gadayuddha, actors are selected from both the colleges & Bhima's part is to be taken by Mr. Narayana Sastri, while Duryodhana's part is to be taken by a student of the Central College.

When may we expect you here? Kindly write a line in reply.

* * *

A.R. Wadia Mysore, 24-4-1928

I am so very much obliged to you for your note on Mr. Krishnappa. It is short, but excellent in quality. I do wish you could have given us a little more in that strain.

Pray accept my best thanks. I trust you are having a pleasant holiday.

With best wishes,

* * *

ದತ್ತಾತ್ರೇಯ ಬೇಂದ್ರೆ **ಪುಣೆ, ೩–೫–೩೪**

ತಮ್ಮ ಕಾಗದ ಬಂದು ಎರಡು ತಿಂಗಳಾಗುತ್ತ ಬಂತು. ಇಂದು ನಾಳೆಯೆಂದು ಪ್ರತ್ಯುತ್ತರ ಬರೆಯುವದು ಮುಂದೆ ಬಿತ್ತು. ಇಲ್ಲಿ ನಮ್ಮ ಚಿಕ್ಕಪ್ಪನಿಗೆ ಮೈಯಲ್ಲಿ ಸರಿಯಾಗಿಲ್ಲದ್ದರಿಂದ ಒಮ್ಮೊಮ್ಮೆ ಉತ್ಸಾಹ ಕುಗ್ಗುತ್ತದೆ. ನಾನು ಏಪ್ರಿಲ್ ೧೯೩೫ರಲ್ಲಿ ಪರೀಕ್ಷೆಯಿಂದ ಮುಕ್ತನಾಗುವೆ. ಪರೀಕ್ಷೆಗಾಗಿ ಸಂಶೋಧನವೇನೂ ಬೇಕಾಗಿಲ್ಲ. ನನ್ನ ಪ್ರೀತಿಗಾಗಿ ನಾನು ನೃಪತುಂಗನ ಪೂರ್ವ ಕಾಲದ ಕನ್ನಡದ ಬಗ್ಗೆ ಕಣಗಳನ್ನು ಕೂಡಹಾಕುತಲಿದ್ದೇನೆ. ನಮ್ಮ ಸಾಹಿತ್ಯ ಚರಿತ್ರೆಯೊಳಗೆ ಎಷ್ಟೋ ಸಮಸ್ಯೆಗಳಿವೆ. ಅವುಗಳನ್ನು ಬಿಡಿಸಲು ನಮ್ಮಲ್ಲಿ ಕೆಲವರು ಮನಸು ಹಾಕುವದು ಒಳ್ಳೆಯದು. ಪೈಶಾಚಿಗೂ (ಗ್ರಿಯರ್ಸನ್ನರ ಪೈಶಾಚಿಯಲ್ಲ ಸಂಸ್ಕೃತ ವೈಯಾಕರಣಿಗಳ ಪೈಶಾಚಿ) ಕನ್ನಡ ಮೊದಲಾದ ದ್ರಾವಿಡ ಭಾಷೆಗಳಿಗೂ ನಿಕಟ ಸಂಬಂಧವಿದೆಯೆಂದು ನನಗೆ ತೋರುವುದು. ಅದಕ್ಕಾಗಿ ಒಂದು ಪ್ರಬಂಧ ಸಿದ್ಧಗೊಳಿಸುತ್ತಿದ್ದೇನೆ. ಕನ್ನಡ ಸಾಹಿತ್ಯ ಚರಿತ್ರೆಯು ಹೃದಯಂಗಮವಾಗಬೇಕಾದರೆ ಸಮಾಜದ ಅನೇಕ ಶಕ್ತಿಗಳ ಚರಿತೆಯನ್ನು ಸಮನ್ವಯಿಸಿ ನೋಡಬೇಕಾಗುವುದು. ಅದಕ್ಕಾಗಿ ಪ್ರಯತ್ನ ಪಡುತ್ತಿದ್ದೇನೆ. ಹೀಗೆ ಮತ್ತೆ ಕೆಲವು.

ತಾವು ನನಗಾಗಿ 'ಗರಿ'ಯ ಪ್ರತಿಗಳನ್ನು ಇಷ್ಟಮಿತ್ರರಲ್ಲಿ ಹಂಚಿದುದು ಬಹಳ ಹಿತವಾಯಿತು. ಪ್ರತ್ಯೇಕವಾಗಿ ಕಳಿಸುವುದು ನನಗೆ ತುಂಬ ಅನಾನುಕೂಲ. ನಾನು ಬರಿಗೈಯಿಂದಿರುವುದರಿಂದ ಅಸಾಧ್ಯವೆನ್ನಬಹುದು. ಹಿರಿಯರಾದ ಹಿರಿಯಣ್ಣನವರಿಂದ 'ಗರಿ' ಕೈಸೇರಿದ ಬಗ್ಗೆ ಕಾಗದ ಬಂದಿತ್ತು. ಅವರಿಗೂ ಕಾಗದ ಬರೆದಿಲ್ಲ. ಅವರಂಥ ಹಿರಿಯರು ನಾವು ಬರೆದುದನ್ನೋದಿದರೆ ನಮಗೆಷ್ಟೋ ಉತ್ಸಾಹ. ಅವರ ವಿಮರ್ಶೆಯ ಒಂದೆರಡು ಮಾತುಗಳೂ ನಮಗೆ ಮಾರ್ಗದರ್ಶಕ. ಈ ಅಭಿಪ್ರಾಯ ನನಗಿದೆಯೆಂದು ಅವರಲ್ಲಿ ಅರಿಕೆ ಮಾಡಬೇಕು. ಶ್ರೀಮಾನ್ ವೆಂಕಣ್ಣಯ್ಯನವರಿಗೂ ನಾನು ಪ್ರತ್ಯೇಕ ಕಾಗದ ಬರೆದಿಲ್ಲ. ಬರೆದುದೆಲ್ಲ ಮಿತ್ರ ಸೀತಾರಾಮ 'ಆನಂದ'ರ ಮುಖಾಂತರ. ಅದಕ್ಕಾದರೂ ಮೇಲೆ ಬರೆದ ಮಾತೇ ಕಾರಣ. ಅವರಿಗೂ ಹಿರಿಯಣ್ಣನವರಿಗೂ ನನ್ನ ನಮಸ್ಕಾರ ಹೇಳಿ.

ತಮ್ಮ ಹತ್ತರ ಉಳಿದ 'ಗರಿ'ಯ ಪ್ರತಿಯನ್ನು ತಮ್ಮ ಯಾವನಾದರೂ ಒಬ್ಬ ರಸಿಕ ಮಿತ್ರನಿಗೆ ಕೊಡಬೇಕು. ಶ್ರೀ ಚಿದಂಬರಂ ಅವರಿಗೆ ನಾನು 'ಗರಿ' ಕಳಿಸುತ್ತಿದ್ದೇನೆ. "ಆವಿದ್ಧ ನಾಟಕಗಳ' ಬಗ್ಗೆ ತಮ್ಮ ಅಭಿಪ್ರಾಯವನ್ನು ಅನುಕೂಲವಾದಾಗ ಬರೆಯಬೇಕು. ಮಿ. ಗೋಕಾಕ್ ಹಾಗು ಸೀತಾರಾಮ ತಮ್ಮ ನಮಸ್ಕಾರ ತಿಳಿಸಿದ್ದಾರೆ.

'ಹೆಣದ ಹಿಂದೆ' ಈ ಪದ್ಯದ ಗತಿಯೇನು? ತಿಳಿಯಬಹುದೇ? ನಾನೂ ಇತ್ತೀಚೆಗೆ ಕೆಲವು ಪದ ಪದ್ಯಗಳನ್ನು ಬರೆದಿದ್ದೇನೆ. ತಮ್ಮ ಬರವಣಿಗೆ ಏನಾಗಿದೆ ತಿಳಿಯಬಹುದೇ? ಶ್ರೀ ಡಿ.ಎಲ್. ನರಸಿಂಹಾಚಾರ್ಯರಿಗೆ, ಶ್ರೀ ರಾಜರತ್ನಂ ಅವರಿಗೆ ನನ್ನ ನಮಸ್ಕಾರ ಹೇಳಿ.

ಸದ್ಯಕ್ಕೆ ಅತ್ತ ಕಡೆಗೆ ಬರುವ ಸಂದರ್ಭ ತೋರುತ್ತಿಲ್ಲ. ಜನ್ನನ ಪ್ರಣಯನಿರೂಪಣೆ ಸೊಗಸಾಗಿದೆ.

* * *

ದ.ರಾ. ಬೇಂದ್ರೆ ಧಾರವಾಡ, ೨-೭-೧೯೩೭

ತಮ್ಮಲ್ಲಿಂದ ಬಂದ ಮೇಲೆ ತಮಗಾರಿಗೂ ಒಂದೂ ಕಾಗದವನ್ನು ಬರೆಯಲಾಗಲಿಲ್ಲ. ಮಿತ್ರ ಡಿ.ಎಲ್.ನರಸಿಂಹಾಚಾರ್ಯರ ಕಾಗದಕ್ಕೂ ಉತ್ತರ ಬರೆಯಲಿಲ್ಲ. ಇಂದೆ ಪಂಪ ರಾಮಾಯಣ ಸಂಗ್ರಹ ವಿಮರ್ಶೆಯನ್ನು ಇದರೊಂದಿಗೆ ಕಳುಹಿದ್ದೇನೆ. ಅವರಿಗೆ ಕೊಡಬೇಕು. ತಡವಾದುದಕ್ಕೆ ಕ್ಷಮೆಯಿರಬೇಕೆಂದು ಸಂಪಾದಕ ಮಂಡಲದಲ್ಲಿ ನನ್ನ ಪರವಾಗಿ ವಿಜ್ಞಾಪಿಸಬೇಕು.

ಮೈಸೂರಿಗೆ ಬರುತ್ತೇನೆಂದೆ, ಬರಲಾಗಲಿಲ್ಲ. ಕಾರಣಗಳನ್ನು ಹೇಳಿಯೇನು? ಮುಂಬಯಿ ಕಾಲೇಜಿನಲ್ಲಿ ಸಿಕ್ಕಬೇಕಾದ ಸ್ಥಳವು ಅಲ್ಲಿ ಕನ್ನಡ ವಿದ್ಯಾರ್ಥಿಗಳೇ ಬರದ್ದರಿಂದ ನನ್ನ ಪಾಲಿಗೆ ಬರಲಿಲ್ಲ. ಮುಂದಿನ ಹಾದಿಯನ್ನು ಹುಡುಕುತ್ತಿದ್ದೇನೆ. ನಿಶ್ಚಯವಾದ ಮೇಲೆ ಬರೆಯುವೆ.

ಜೈಮಿನಿ ಭಾರತದ ಕೆಲಸ ಸಾಗಿಸಿದ್ದೇನೆ. ಹಿರಿಯರಾದ ಶ್ರೀಕಂಠಯ್ಯನವರಿಂದ ಬರುವ ಸಲಹೆ ಬಂದಿವೆ. ನಿಮ್ಮ ಹಾಗು ಮಿತ್ರ ನರಸಿಂಹಾಚಾರ್ಯ ತಾಳೆಗರಿ ಪ್ರತಿಗಳನ್ನು ಕಳುಹಿದರೆ ಸಂಗ್ರಹವನ್ನು ಯುಕ್ತ ಪಾಠಗಳಿಂದ ಸಿದ್ಧಗೊಳಿಸುವೆ. ಸದ್ಯಕ್ಕೆ ಬೇರೆ ಕೆಲಸವಿಲ್ಲ. ಇವು ಬಂದರೆ ಒಳಿತು.

ಗೋಕಾಕ ಇದೇ ಜುಲೈ ೮ನೆಯ ತಾರೀಖಿಗೆ ಬೊಂಬಾಯಿಗೆ ಬರುವರು. ಮತ್ತೆ ಮರಳಿ ಸಪ್ಟೆಂಬರ ತಿಂಗಳಿನಲ್ಲಿ ಇಂಗ್ಲೆಂಡಿಗೆ ಹೋಗುವರು.

ನನಗೆ 'ಪರ್ಸ' ಕೊಡುವಲ್ಲಿ ಧನಸಹಾಯ ಮಾಡಿದ ಮಿತ್ರರ ಪಟ್ಟಿಯೊಂದನ್ನು ಕಳುಹಿದರೆ ಅವರಿಗೆ ಕೊಡಲು ನನ್ನ ಪುಸ್ತಕಗಳನ್ನು ನಿಮ್ಮೆಡೆಗೆ ಕಳುಹಿಸಬೇಕೆನ್ನುತ್ತೇನೆ. ಹೆಸರುಗಳನ್ನು ದಯವಿಟ್ಟು ತಿಳುಹಬೇಕು.

* * *

ಬಿ.ಎಂ. ಶ್ರೀಕಂಠಯ್ಯ ಬೆಂಗಳೂರು, ೪-೩-೩೯

ನಿಮ್ಮ ಕಾಗದ. ಅವತ್ತು ರಾತ್ರಿ ೯॥ ಗಂಟೆಗೆ ಮನೆಗೆ ಬಂದು ನೀವು ಕಾದು ಕಾದು ಹೊರಟು ಹೋದ ಸಂಗತಿ ತಿಳಿದು ವಿಷಾದ ಪಟ್ಟೆ. ಆ ರಾತ್ರಿಯೇ ನಿಮ್ಮನ್ನು ನೋಡಲಾಗಲಿಲ್ಲ. ಬೆಳಗ್ಗೆ ರೈಲಿಗೆ ಹೊರಡಬೇಕಾಯಿತು.

ನೀವು ಏರ್ಪಡಿಸಿರುವ ಸಮಿತಿಯೂ, ಕೈಕೊಂಡ ನಿರ್ಧಾರಗಳೂ ಸರಿಯೇ ಎಂದು ಹೇಳಬೇಕಾಗಿಲ್ಲ. ೯ಕ್ಕೆ ಅಲ್ಲಿಗೆ ಕೃಷ್ಣಶಾಸ್ತ್ರಿಗಳು ಬರುತ್ತಾರೆ. ಅವರೂ ನಾನೂ ಮಾತಾಡಿದ ಸಂಗತಿಗಳನ್ನು ತಿಳಿಸುತ್ತಾರೆ. ಅದಕ್ಕೆ ತಕ್ಕಂತೆ ಕಾರ್ಯವನ್ನು ವಿಳಂಬ ಮಾಡದೆ ನಡೆಸಬಹುದಾಗಿದೆ. ಸಮಿತಿಯವರೆಲ್ಲಾ ಅಲ್ಲಿ ಸೇರಿ. ನಾನು ಸೆನೆಟ್ ಮೀಟಿಂಗಿಗಾಗಿ ಬಂದಾಗ ಮತ್ತೆ ಸೇರ ಬಹುದಾಗಿದೆ. ಮೈಸೂರು ೯ ಜಿಲ್ಲೆಗಳಿಗೆ ಪ್ರತಿನಿಧಿಗಳನ್ನೂ, ಇತರ ಕನ್ನಡನಾಡಿನ ಭಾಗಗಳಿಗೆ ಸಹಾಯಕರನ್ನು ನೇಮಿಸಿಕೊಳ್ಳಬಹುದು.

ನನ್ನ ಬಡಕಾಣಿಕೆಯಾಗಿ ೧೦೦ ರೂ. ಗಳನ್ನು ಸ್ವೀಕರಿಸಬೇಕು. ಬೆಂಗಳೂರು ಕರ್ನಾಟಕ ಸಂಘದಿಂದ ೫೦ ರೂ. ಕೊಡಲಾಗುತ್ತದೆ. ಕೃಷ್ಣಶಾಸ್ತ್ರಿಗಳು ೫೦ ರೂ. ಕೊಡುವುದಾಗಿ ಹೇಳಿದ್ದಾರೆ. ಸಮಿತಿಯ ಸದಸ್ಯರೂ ಮೈಸೂರಿನ ಮಿತ್ರರೂ ಸೇರಿ ಮೊದಲನೆಯ ಪ್ರಕಟನೆಯಾಗಿ ೫೦೦-೧೦೦೦ ಚಂದವನ್ನಾದರೂ ಪತ್ರಿಕೆಗಳಲ್ಲಿ ಹೊರಡಿಸಿದರೆ ಮಿಕ್ಕವರು ಹೆಚ್ಚಾಗಿ ಸಹಾಯ ಮಾಡಬಹುದು. ದಿವಂಗತರ ಶಿಷ್ಯ ಮಿತ್ರವರ್ಗಕ್ಕೆಲ್ಲಾ ಮುಟ್ಟ ನಿಧಿ ದೊಡ್ಡದು ಮಾಡೋಣ.

ಮುಂದಿನ ಸಂಚಿಕೆಗೆ, ಇಲ್ಲಿ ಪರಿಷತ್ತಿಗೆ ಲೇಖನಗಳನ್ನು ತಯಾರು ಮಾಡಬೇಕಾಗಿದೆ. ನಾನು ತೋರಿದ ಎರಡು ಮಾತನ್ನು ಬರೆಯಲು ಕಳಿಸುತ್ತೇನೆ. ಪರಿಷತ್ತಿನಲ್ಲಿ ೮ನೇ ತಾರೀಖು ಸಂತಾಪ ಸೂಚಕ ಸಭೆ ಗೊತ್ತುಮಾಡಿದೆ. ಒಂದು ಭಾವಚಿತ್ರವನ್ನು ಅನಾವರಣ ಮಾಡುತ್ತದೆ.

ಸ್ವಲ್ಪ ವಿರಾಮವಾದ ಕೂಡಲೇ, ಕುಮಾರವ್ಯಾಸ ಮುನ್ನುಡಿಯನ್ನು ಹಿಡಿದು ಮುಗಿಸುತ್ತೇನೆ. ಈ ಮೊದಲೇ ಮಾಡಿ ವೆಂಕಣ್ಣಯ್ಯನವರ ಮನಸ್ಸನ್ನು ಸಂತೋಷ ಪಡಿಸಬಹುದಾಗಿತ್ತು! ಕೆಟ್ಟಮೇಲೆ ಬುದ್ಧಿ!

(ಇದು ಶ್ರೀ ಟಿ.ಎಸ್. ವೆಂಕಣ್ಣಯ್ಯನವರ ನಿಧನದ ಸಂದರ್ಭದಲ್ಲಿ ಬರೆದ ಪತ್ರ.)

* * *

ವಿ.ಕೃ. ಗೋಕಾಕ್ ಸಾಂಗಲಿ, ೩೧-೧-೪೦

ತಮ್ಮ 'ಪಂಪ' ಮುಟ್ಟಿತು. ಓದಿ 'ಜೀವನ'ದಲ್ಲಿ ಅದರ ವಿಮರ್ಶೆ ಹಾಕುತ್ತೇನೆ.

ಈ ಮೊದಲೇ ನಾನು ನಿಮಗೆ ಬರೆಯಬೇಕಾಗಿತ್ತು. ಆದರೆ ಹೀಗೇ ನೋಡಿರಿ – ಕೆಲಸದಲ್ಲಿ ಬೇಸರ-ಆಲಸ್ಯ ಬರುತ್ತದೆ! 'ಸಮುದ್ರದಾಚೆಯಿಂದ'ದ ವಿಮರ್ಶೆಯನ್ನೋದಿ ನಾನು ಎಷ್ಟೋ ಧೈರ್ಯ ಹೊಂದಿದ್ದೇನೆ. ಇಲ್ಲದಿದ್ದರೆ ಕೆಲವರು ಅದನ್ನು ಬರಿ 'ರೇಲ್ವೆ ಗೈಡ್' ಎಂದು ಹೇಳಿ ಬದಿಗೆ ಸರಿಸಿದ್ದರು!

ಇತ್ತ ಕಡೆಗೆ ನೀವೂ ಮೂರ್ತಿರಾಯರೂ ಡಿ.ಎಲ್. ಅವರೂ ದಯವಿಟ್ಟು ಬರಬೇಕು, ನಮ್ಮ ಆಮಂತ್ರಣ ಬಂದಾಗ ಬಂದು ಬಿಡಿರಿ, – ಎಲ್ಲ ಅನಾನುಕೂಲಗಳನ್ನು ಬದಿಗೊತ್ತಿ:

ಮೂರ್ತಿರಾಯರ ರಾಯಚೂರು ಉಪನ್ಯಾಸದ ಬಗ್ಗೆ ಪತ್ರಿಕೆಗಳಲ್ಲಿ, ಓದಿದೆ. ಗೂಡು ಬಿಟ್ಟು ಹೊರಬಿದ್ದ ಮೇಲೆ ಇತ್ತ ಕಡೆಗೂ ಅವರು ಬರಬೇಕಾಗುತ್ತದೆ.

* * *

ಎಸ್.ವಿ. ಪರಮೇಶ್ವರ ಭಟ್ಟ ತುಮಕೂರು, ೧೩-೭-೧೯೪೦

ನಾನು ತುಮಕೂರಿಗೆ ಬಂದು ಇವತ್ತಿಗೆ ತಿಂಗಳಮೇಲೆ ಮೂರು ದಿನವಾಯಿತು. ಈ ಮೂವತ್ತುಮೂರು ದಿನಗಳ ಅವಧಿಯಲ್ಲಿ 'ವಿಶ್ವವಿದ್ಯಾನಿಲಯದ ಅಧಿಕಾರಿಗಳು ನನ್ನನ್ನು ಈ

ಸ್ಥಳದಿಂದ ಕದಲಿಸದಿದ್ದರೆ ಸಾಕೆನ್ನುವಷ್ಟರ ಮಟ್ಟಿಗೆ' ತುಮಕೂರು ನನಗೆ ಒಗ್ಗಿ ಹೋಗಿದೆ. ಈಗಂತೂ ಕಾಲೇಜಿಗೆ ಅತಿ ಸಮೀಪದಲ್ಲಿರುವ 'ಜೈಲು ಬಡವಾಣೆ'ಯಲ್ಲಿ ಪುಟ್ಟದೊಂದು 'ಹೊರಮನೆ' (out house) ಯನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ಏಕಾಂತವಾದ ಸವಿ(?)ಯನ್ನು ಅನುಭವಿಸುತ್ತಿರುವುದರಿಂದ ಮನಸ್ಸಿಗೆಷ್ಟೋ ಹಿತವಾಗಿದೆ.

ನಾನಿರುವ ಮನೆಗೆ ಒಂಭತ್ತು ರೂಪಾಯಿ ಬಾಡಿಗೆ. ದೀಪ ನೀರಿನ ಸೌಕರ್ಯವಿದೆ. ನೀರುಮನೆ ಊಟದಮನೆ ಅಡಿಗೆಮನೆ ಮಲಗುವಮನೆ ಹೊರಗೊಂದು ರೂಮು ಹೀಗೆ ಎಲ್ಲವೂ ಒಂದರೊಳಗೊಂದು ಅಡಕವಾಗಿ ಪೆಟ್ಟಿಗೆಯಂತೆ ಪುಟ್ಟದಾಗಿ ಅಚ್ಚುಕಟ್ಟಾಗಿದೆ. ಈ ಮನೆಯಲ್ಲಿ ವಾಸವಾಗಿದ್ದರೆ ರೈಲ್ವೆಬಂಡಿಯೊಂದರಲ್ಲಿ ವಾಸವಾಗಿರುವ ಅನುಭವವಾಗುತ್ತದೆ. ಇದರ ಮೇಲೆ ಈ ಮನೆಗೆ ಸುತ್ತಲೂ ಕಾಂಪೌಂಡಿದೆ. ಅದರೊಳಗೆ ಜಾಜಿ, ಮಲ್ಲಿಗೆ, ಗುಲಾಬಿ, ಡೇರ, ನಿಮಗೆ ಮೆಚ್ಚಾದ ಪಾರಿಜಾತ ಮೊದಲಾದ ಹೂವಿನ ಗಿಡಗಳಿವೆ. ಬೆಳಿಗ್ಗೆ ಎದ್ದು ಹೊರಗೆ ಬಂದರೆ ಸಾಕು, ಹೂವಿನ ನರುಗುಂಪು ಅಂಗಳದಲ್ಲೆಲ್ಲ ಹರಡಿಕೊಂಡಿರುತ್ತದೆ. ಸುವಾಸನೆ ಬೀರಿ ಅರಳಿದ ಮಲ್ಲಿಗೆಯೊಂದಿಗೆ ಮನಸ್ಸು ಅರಳಿ ಘಮಘಮಿಸುತ್ತದೆ. ಎಲ್ಲಕ್ಕೂ ಹೆಚ್ಚಾದ ಸೌಕರ್ಯವೆಂದರೆ ಈ ಮನೆಯಲ್ಲಿ ಅನುಭವಿಸಬಹುದಾದ ಸ್ವಾತಂತ್ರ್ಯ. ಇದು ಹೊರಮನೆ ಯಾದರೂ ಇದರ ಕಟ್ಟಡವನ್ನು 'ವೆಟರ್ನರಿ ಆಫೀಸಿ'ನವರಿಗೆ ಬಾಡಿಗೆ ಕೊಟ್ಟಿದ್ದಾರೆ. ಅವರ ಆಫೀಸು ೧೧ರಿಂದ ೫ರ ವರೆಗೆ. ಆಮೇಲೆ ಈ ಮನೆಯ ಪ್ರದೇಶಕ್ಕೆಲ್ಲ ಅಧಿಕಾರಿ ನಾನೊಬ್ಬನೇ. ಆಫೀಸು ವೇಳೆಯಲ್ಲಿ ಕೂಡ ಏನೂ ಗದ್ದಲವಿರುವುದಿಲ್ಲ. ಹೀಗಾಗಿ ಈ ಮನೆಯಲ್ಲಿ ಇರುವವರಿಗೆ ಅರಸನ ಅಂಕೆಯಿಲ್ಲ ದೈವದ ಕಾಟವಿಲ್ಲ. ಆದರೆ ಸೊಳ್ಳೆಯ ಕಾಟ ಮಾತ್ರ ಒಮ್ಮೊಮ್ಮೆ ಅನುಭವವಾಗಬಹುದು.

ಕಾಲೇಜಿಗೆ ಅತಿ ಸಮೀಪವಾಗಿ, ವಿಶಾಲವಾದ ಕಾಂಪೌಂಡನ್ನೊಳಗೊಂಡು ಹೊಸ ಬಡಾವಣೆಯಲ್ಲಿ ಆರೋಗ್ಯಕರವಾದ ಸನ್ನಿವೇಶದಲ್ಲಿ ಇಷ್ಟು ಸ್ವತಂತ್ರವಾಗಿರುವ ಈ ಮನೆಗೆ ನಾನು ಗೊತ್ತುಮಾಡಿದ ಬಾಡಿಗೆ ಹೆಚ್ಚಲ್ಲ. ಹೀಗೆಂದು ಇಲ್ಲಿ ನನ್ನ ಸಹೋಪಾಧ್ಯಾಯರೆಲ್ಲ ಹೇಳುತ್ತಾರೆ. ಶ್ರೀಯುತ ಎಂ.ವಿ. ಕೃಷ್ಣರಾಯರಂತೂ ಈ ಮನೆಯನ್ನು ವಿಶೇಷವಾಗಿ ಪ್ರಶಂಸೆ ಮಾಡಿ ನನಗೆ ಇದನ್ನು ತೆಗೆದುಕೊಳ್ಳಲು ನೆರವಾಗಿ ಬಂದರು.

ಈ ಮನೆಗೆ ನಾನು ಬಂದು ಎರಡು ಮೂರು ದಿನಗಳಷ್ಟೇ ಆದವು. ಅಲ್ಲಿಯವರೆಗೆ ಇಲ್ಲಿಗೆ ಬಂದಂದಿನಿಂದ ಶ್ರೀಯುತ. ಎಂ.ವಿ. ಕೃಷ್ಣರಾಯರು ನನ್ನನ್ನು ತಮ್ಮೊಂದಿಗೆ ಕರೆದುಕೊಂಡು ಅವರು ಬಾಡಿಗೆಗೆ ತೆಗೆದುಕೊಂಡ ಒಂದು ಭಾಗದಲ್ಲಿಯೇ ನನಗೆ ಸ್ಥಳ ಕೊಟ್ಟು ಹೊಟೇಲಿನಿಂದ ಮನೆಗೆ ಊಟತರಿಸಿ ತಮ್ಮೊಂದಿಗೇ ನನಗೂ ಊಟದ ಏರ್ಪಾಡುಮಾಡಿ ನನಗೆ ಮಹೋಪಕಾರ ಮಾಡಿದರು. ಅವರೊಂದಿಗೆ ಇದ್ದಷ್ಟು ದಿವಸವೂ ನಾನು ರೂಮಿನ ಬಾಡಿಗೆ ಕೊಡಲಿಲ್ಲ. ಕಾಫಿ ತಿಂಡಿಗೆ ಹಣ ಕೊಡಲಿಲ್ಲ. ಊಟದ ಖರ್ಚನ್ನೂ ಅವರೇ ನಿರ್ವಹಿಸುತ್ತಿದ್ದರೋ ಏನೊ? ನಾನೇ ಹಠ ಹಿಡಿದು ನನ್ನ ಪಾಲಿನ ಆ ಹಣವನ್ನು ಹೊಟೇಲಿಗೆ ಕೊಟ್ಟುಬಂದೆ. ಇವೆಲ್ಲಕ್ಕೂ ಮೇಲಾಗಿ ಅವರು ಕಾಲೇಜಿನಲ್ಲಿ, ಮನೆಯಲ್ಲಿ, ಹೊಟೇಲಿನಲ್ಲಿ, ಸಂಜೆ ಸಂಚಾರ ಹೊರಟಾಗ ಹೊಲಗದ್ದೆಗಳಲ್ಲಿ ನನ್ನೊಡನೆ ಇದ್ದು ವಿಶ್ವಾಸದಿಂದ ಸಲಿಗೆಯಿಂದ ಮೈತ್ರಿಯಿಂದ

ನನ್ನನ್ನು ನೋಡಿಕೊಂಡು ಬರುತ್ತಿದ್ದಾರೆ. ನಿಜವಾಗಿಯೂ ಅವರು ನನಗೆ ಇಲ್ಲಿ 'ಹಿರಿಯಣ್ಣ'ನಂತೆ ಇದ್ದಾರೆ. ಮೈಸೂರಿನಲ್ಲಿ ಇದ್ದಾಗ ನೀವೂ ಶ್ರೀಮಾನ್ ನರಸಿಂಹಾಚಾರ್ಯರೂ ನನಗೆ ಹಿರಿಯಣ್ಣನಂತೆ ಇದ್ದಿರಿ. ಇಲ್ಲಿ ಶ್ರೀ ಕೃಷ್ಣರಾಯರು ನನಗೆ ಹಾಗೆ ಇದ್ದಾರೆ. ಅವರು ನನ್ನನ್ನು ಹೀಗೆ ನೋಡಿ ಕೊಳ್ಳುತ್ತಿರುವುದು ನನ್ನ ಪುಣ್ಯ.

ಈ ಮನೆಗೆ ಬಂದ ಮೇಲೂ ಹೊಟೇಲಿನಿಂದ ಊಟ ತರಿಸಿಕೊಳ್ಳುತ್ತಿದ್ದೇನೆ. ಮನೆ ಮಾಡಿದುದರ ಉದ್ದೇಶ ನಮ್ಮ ಅಕ್ಕನವರನ್ನು ಕರೆಸಿಕೊಳ್ಳಬೇಕೆಂದು. ಬಹುಶಃ ಮುಂದಿನ ತಿಂಗಳ ಮೊದಲಿಗೆ ಅವರು ಇಲ್ಲಿಗೆ ಬರುತ್ತಾರೆ. ಬಂದ ಮೇಲೆ ನನ್ನದು ನಿಜವಾಗಿಯೂ 'ಮನೆ'ಯಾಗುತ್ತದೆ.

ತಾವು ಮುಂದಿನ ಶನಿವಾರ ಇಲ್ಲಿಗೆ ಬರುತ್ತೀರೆಂದು ಕೇಳಿದೆ. ಬರುವವರು ಒಂದೆರಡು ದಿನ ಇದ್ದು ಹೋಗುವಂತೆ ಅವಕಾಶ ಮಾಡಿಕೊಂಡು ಬರಬೇಕಾಗಿ ಪ್ರಾರ್ಥಿಸುತ್ತೇನೆ. ನಮ್ಮ ಕಾಲೇಜಿನಲ್ಲಿ ಕರ್ನಾಟಕ ಸಂಘವೊಂದರ ಸ್ಥಾಪನೆಯಾಗಿದೆ. ಅದರ ಆಶ್ರಯದಲ್ಲಿ ತಾವು ಒಂದು ಉಪನ್ಯಾಸವೀಯಬೇಕೆಂದು ಸಂಘದ ಪರವಾಗಿ ಬೇಡಿಕೊಳ್ಳುತ್ತೇನೆ.

ನಮ್ಮ ಸಂಘದವರೆಲ್ಲರೂ ತಮ್ಮ ಉಪನ್ಯಾಸವನ್ನು ಕೇಳಲು ಕುತೂಹಲಿಗಳಾಗಿದ್ದಾರೆ. ತಾವು ನನ್ನ ಮತ್ತು ನಮ್ಮ ಸಂಘದ ಮೇಲೆ ಅಭಿಮಾನವಿಟ್ಟು ತಾವು ಇಲ್ಲಿಗೆ ಬಂದಾಗ ಕಾಲೇಜಿನಲ್ಲಿ ಉಪನ್ಯಾಸ ಕೊಡಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ತಾವು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಳ್ಳುತ್ತಿರೆಂದು ನಂಬಿದ್ದೇನೆ. ಈ ವಿಚಾರವಾಗಿ ಶ್ರೀಮಾನ್ ಕೃಷ್ಣರಾಯರೂ ತಮಗೆ ಕಾಗದ ಬರೆಯುತ್ತೇನೆಂದು ಹೇಳಿದರು. ತಾವು ಉಪನ್ಯಾಸದ ವಿಷಯ ವನ್ನು ಕಾಲವನ್ನೂ ಆದಷ್ಟು ಜಾಗ್ರತೆಯಾಗಿ ತಿಳಿಸಬೇಕೆಂದು ಬೇಡಿಕೊಳ್ಳುತ್ತೇನೆ. ಇಲ್ಲಿ ಬಂದಾಗ ನಮ್ಮ ಮನೆಯಲ್ಲೇ ಇಳಿದುಕೊಳ್ಳಬೇಕೆಂದು ಬೇಡುತ್ತೇನೆ. ತಾವು ಬರುವಾಗ ಶ್ರೀಮಾನ್ ನರಸಿಂಹಾಚಾರ್ಯರನ್ನೂ ದಯಮಾಡಿ ಬರಬೇಕೆಂದು ಹೇಳಿ ಕರೆದುಕೊಂಡು ಬರಬೇಕಾಗಿ ಪ್ರಾರ್ಥನೆ.

ನನ್ನ ವಿಜ್ಞಾಪನೆಗಳನ್ನು ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರವರಿಗೂ ಶ್ರೀಮಾನ್ ವೆಂಕಟರಾಮಪ್ಪನವರಿಗೂ ತಿಳಿಸಬೇಕಾಗಿ ಪ್ರಾರ್ಥನೆ.

ಮಿಕ್ಕ ವಿವರ ಬಳಿಕ.

* * *

ಶಿ.ಶಿ ಬಸವನಾಳ್ ಬೆಳಗಾವಿ, ೧-೧೦-೧೯೪೦

ತಮ್ಮ ಆಗಸ್ಟ್ ೧೩ನೆಯ ತಾರೀಖಿನ ಪತ್ರವು ನನಗೆ ಬೆಳಗಾವಿಯಲ್ಲಿ ಕೈ ಸೇರಿತು. ಆದರೆ ನಮ್ಮ ವಾಙ್ಮಯ ಶಾಖೆಯು ಧಾರವಾಡದಲ್ಲಿರುವುದರಿಂದ ಅಲ್ಲಿಗೆ ತಮ್ಮ ಪತ್ರವನ್ನು ಕಳಿಸಿಕೊಟ್ಟಿದ್ದೆನು. ಅವರನ್ನು ಮೊನ್ನೆ ವಿಚಾರಿಸಲಾಗಿ ಹರಿಹರದೇವರ ನಂಬಿಯಣ್ಣನ ರಗಳೆಯ

ಹಸ್ತಲಿಖಿತ ಪ್ರತಿ ವಾಙ್ಮಯ ಶಾಖೆಯಲ್ಲಿ ಇಲ್ಲವೆಂಬುದಾಗಿ ಹೇಳಿದರು. ಹಾಗೆಯೇ ತಮಗೆ ತಿಳಿಸಲು ಪ್ರೊ. ಮಾಳವಾಡರವರಿಗೆ ತಿಳಿಸಿರುವರೆಂದೂ ಹೇಳಿದರು. ತಮಗೆ ವರ್ತಮಾನ ಕೊನೆಗೆ ಮುಟ್ಟಿತೋ ಇಲ್ಲವೋ ಗೊತ್ತಾಗಲಿಲ್ಲ. ನಂಬಿಯಣ್ಣನ ರಗಳೆಯ ಹಸ್ತ ಲಿಖಿತ ಪ್ರತಿಯೊಂದು ದಾವಣಗೆರೆಯ ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರಲ್ಲಿರುವುದೆಂದು ಅವರು ಅದನ್ನು ಅಚ್ಚು ಹಾಕಿಸುವ ವಿಚಾರದಲ್ಲಿದ್ದಾರೆಂದು ನನಗೆ ತಿಳಿದಿದೆ. ಅವರಿಗೆ ತಾವು ಬರೆದಲ್ಲಿ ಹೆಚ್ಚಿನ ಸಂಗತಿ ತಿಳಿಯಬಹುದಾಗಿ ನನಗೆ ತೋರುತ್ತದೆ.

ಹರಿಹರದೇವನ ರಗಳೆಗಳೆಲ್ಲ ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘಾರಾಜೇಂದ್ರರವರ ಮಠದಲ್ಲಿ ದೊರೆಯುತ್ತವೆ. ತಮಗೆ ಗೊತ್ತಿರಬಹುದು.

ನನ್ನಿಂದ ಪತ್ರ ಬರೆಯುವುದು ವಿಲಂಬವಾದುದಕ್ಕಾಗಿ ಕ್ಷಮಿಸುವಿರೆಂದು ಆಶಿಸುತ್ತೇನೆ.

* * *

Hck Bhatta Hirebhaskara, 3-4-43

We are all shocked to hear that 'ಅತ್ತೆ' left us so suddenly. I had the opportunity of knowing that type of womanhood which is so rare to see normally. She met with no personal happiness in her youth. No children of her own gave her the hope of pleasure postponed. No relations on the other side to comfort her. In these circumstances in which even a saint would turn out to be bitter, she chose to lead a life of unostentatious but hard service through her brother and then through you. That she did became a mother to a motherless chap like you is the highest compliment to her devoted and really selfless work. It is touching to hear that her end was in keeping with her life, that she left no part of the day's work in arrears and retired to sleep rather long. Tomorrow is the day of ಧರ್ಮೋದಕ and I would add my tears with yours while you discharge that last bit of duty to her.

It is in an atmosphere like this that we hear that you are made an Assistant Professor. There was little charm in it already but even the residual satisfaction has been washed away. Irony seems to be the ruling affair in some lives. I recollect how cheerful we were, soon after your college staff visited my camp at Kalamuddanadoddi, and then Siva under the efficient police bandobust of Md. Amin when I

lost my father under tragic circumstances. That is all that we deserve, perhaps.

Where are you getting the ceremonies performed? The Hosadurga people are in charge of that work, evidently.

Please let me know if you were able to tell ಅತ್ತೆ of your belated promotion on Friday. It would be some satisfaction in her last moment to her that she saw you an A.P. & the father of a boy.

You are transferred to Bangalore, I see, but I don't suppose you will leave till after the holidays. You have a problem staring you in the face to reman yourself to new surrounding without the protecting influence of ಅತ್ತೆ. One worry following another.

(ತೀ.ನಂ.ಶ್ರೀ.ಯವರಿಗೆ ಮಾತೃಸಮಾನರಾಗಿದ್ದ ಅವರ ಸೋದರತ್ತೆಯವರು ನಿಧನರಾದ ಸಂದರ್ಭದಲ್ಲಿ, ತೀ.ನಂ.ಶ್ರೀ. ಅವರಿಗೆ ಅವರ ಸ್ನೇಹಿತರಿಂದ ಬಂದ ಪತ್ರ)

* * *

M. Hiriyanna Mysore, 18 Dec 1945

You may know that certain gentlemen, connected with a Theatre in Bangalore, are arranging for the publications of a Centenary Volume. They asked me to send a contribution to it; and, in a moment of weakness as it now seems, I agreed to do so. I have selected **Rasa** as the topic & my draft of the contribution is nearly ready. I do not know if you can spare any time now; but, if you can, I should very much like the draft to be revised by you. There will be plenty for you to alter in its Kannada; but it is not merely the form which, I like, you should scrutinize. I request you to kindly look into the content also and freely suggest changes where you consider them to be necessary. The Christmas Holidays are approaching, and, if you are going out then, I shall send the draft to you after your college reopens.

* * *

M. Hiriyanna Mysore, 20 Jan 1946

I trust my last letter has reached you. I am now sending to you, separately by Book-post, my article on **Rasa.** I request you to kindly revise its language & also make suggestions for improving its substance. I want to remove from it all avoidable errors and inaccuracies. Please do not therefore hesitate to make or suggest additions & alterations freely wherever you think them to be necessary. You may note all the changes in the margin of the article, without taking the trouble of writing them out separately. Two padyas have been copied from the printed Kannada Sākuntalam. Kindly see if they have been correctly copied. There is no need for hurry & you may take your own tine to return the article to me

* * *

N.S. Subba Rao Allahabad, 20.04.1943

It was only this morning that I was telling my wife that you would have been an Assistant Commissioner on Rs. 400-450 if you had not elected to become a pedagogue. Your letter, which came hours after was a pleasant surprise, as I thought it was at first congratulatory on my son's nomination. Better late than never, and their seniority does not mean much now that the Professorship will obviousy go to one younger than both of you! Your transfer to Bangalore will give you some relief and you can write.

Thank you very much for what you say about Ramu's appointment. One has to be a father of advanced age to realise what relief the appointment has brought to one's mind.

* * *

ಆರ್.ಎಲ್. ನರಸಿಂಹಯ್ಯ ಬೆಂಗಳೂರು, ೨೩-೪-೧೯೫೧

ನಿಮ್ಮ ಕಾರ್ಡು ಸ್ವಲ್ಪವೂ ವಿಳಂಬವಿಲ್ಲದೆ - ನಾನು ಕಾಲೇಜಿಗೆ ಹೋಗಿದ್ದಿದ್ದರಿಂದ - ನನ್ನ ಕೈಸೇರಿತು. ಹಿಂದೊಂದು ಸಲ 'ಪ್ರಿಯ ನರಸಿಂಹಯ್ಯ' ಎಂದು ನನಗೆ ಕಾಗದ

ಬರೆದಿದ್ದು, ಈಗ 'ಶ್ರೀಮಾನ್ ನರಸಿಂಹಯ್ಯನವರಲ್ಲಿ......" ಎಂದು ಬರೆದಿದ್ದನ್ನು ಓದಿದಾಗ ಮೈಸೂರು ವಿಶ್ವವಿದ್ಯಾಲಯದ ಛಾಳಿ ನಿಮಗೂ ಸಾಕಷ್ಟು ಸೋಕಿ ಪ್ರಭಾವ ಬೀರಿದೆಯಲ್ಲಾ ಎಂದು ಕೊಂಡೆ. ಮೂರ್ತಿರಾಯರನ್ನು 'ಪ್ರೊಫೆಸರ್' ಎಂದು ಮೊದಲು ಕರೆದು ಆಮೇಲೆ 'ಅಸಿಸ್ಟೆಂಟ್ ಪ್ರೊಫೆಸರ್' ಗಿರಿಗೆ ಡಿಪ್ರೊಮೋಷನ್ ಮಾಡಲಿಲ್ಲವೇ ಹಾಗೆ! ನಿಮಗೆ ಈ ಉಪಮೆ ಸರಿಯಾಗಿ ಕಾಣಲಿ ಕಾಣದಿರಲಿ, ನಿಮ್ಮ ಒಕ್ಕಣಿ ಓದಿದ ಕ್ಷಣದಲ್ಲಿಯೇ ನನ್ನ ಮನಸ್ಸಿಗೆ ಹೀಗೆ ಹೊಳೆಯಿತು.

'ಪು.ತಿ.ನ' ಅವರ ಮಗಳ ಮದುವೆಯ ದಿನ ಮೂರ್ತಿರಾಯರ ಕಾರಿನಲ್ಲಿ ಅವರು, ಡಿ.ವಿ.ಜಿ. ಮತ್ತು ಮಾಸ್ತಿಯವರ ಜೊತೆಯಲ್ಲಿ ನಾನೂ ಮೂರ್ತಿರಾಯರ ಚಿಕ್ಕಮಗ, ಲಲಿತಾ ಹೋಗಿದ್ದೆವು. ಮೂವರು ಮಹಾಸಾಹಿತಿಗಳ ಭಾರಕ್ಕೆ ಕಾರಿನ ಸ್ಪ್ರಿಂಗ್ ಏನಾದೀತೋ ಎಂದು ಹೆದರಿ ಮೂವರು Negative weight ನವರನ್ನು ಡ್ರೈವರ್ ಹುಡುಕಿಕೊಂಡಿದ್ದ. ಗೊರೂರು, ಚಿದಂಬರಂ, ಗೋಪಾಲಕೃಷ್ಣರಾಯರು, ನಿಟ್ಟೂರ್, ಶಿವರಾಂ ಶಾಸ್ತ್ರಿಗಳು, ದೇಶಿಕಾಚಾರ್ಯರು ಎಲ್ಲರೂ ಬಂದಿದ್ದರು. ನನಗೆ ತಿಳಿದ ಮಟ್ಟಿಗೆ ಅವರ ಸ್ನೇಹಿತರ ಪೈಕಿ ಕೃಷ್ಣಾಚಾರ್ಯರನ್ನು ಕಾಣಲಿಲ್ಲ.

೨೦ನೆಯ ರಾತ್ರಿ ಊಟಕ್ಕೆ ಮೂರ್ತಿರಾಯರು ನನ್ನನ್ನು ಕರೆದುಕೊಂಡು ಹೋಗ ಬೇಕಾಗಿದ್ದದ್ದು, ಮೈಸೂರಿಗೆ ಹೋಗಬೇಕು ಎಂದು ನೆವ ಹಾಕಿಕೊಂಡು ಚಕ್ಕರ್ ಕೊಟ್ಟರು. ಆದರೆ ನಾನೇನೋ ಊಟ ತಪ್ಪಿಸಿಕೊಳ್ಳಲಿಲ್ಲ. ಹೆಬ್ಬಾಳದಲ್ಲಿ ರಾತ್ರಿ ೧೦ ಘಂಟೆಗೆ ಊಟಕ್ಕೆ ಕರೆದಿದ್ದರೂ ಸುಮಾರು ೨೦೦ಕ್ಕೆ ಮೀರಿ ಜನ ಬಂದಿದ್ದರು. ಅಂದ ಮೇಲೆ ಬೆಂಗಳೂರಲ್ಲೇ ಮದುವೆ ಮಾಡಿದ್ದರೆ ನರಸಿಂಹಾಚಾರ್ರ ಗತಿ ಏನಾಗುತ್ತಿತ್ತೋ ಅಂದೆನಿಸಿತು ನನಗೆ. 'ಪು.ತಿ.ನ' ಅವರ ಅಳಿಯ ನನ್ನ ಶಿಷ್ಯನಾಗಿದ್ದ ಎಂದು ಪತ್ತೆಯಾಯಿತು. ನನಗೂ ನಿಮಗೂ ಅದರಲ್ಲಿ ಆಶ್ಚರ್ಯ ಏನು?

ನಮ್ಮ ತಂದೆಯವರು ತೀರಿಹೋದ ಮೇಲೆ ನನ್ನ ಹೆಂಡತಿಗೆ ಅಪರೂಪವಾಗಿ ಕಾಗದ ಬರೆಯುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೆ, ಕನ್ನಡದಲ್ಲಿ ಕಾಗದ ಬರೆದಿರುವುದು ಇದೇ ಮೊದಲು! ನಾಚಿಕೆಗೇಡೋ?

ಅಂಕಿಗಳ ನರ್ತನ ದೇವ ನರ್ತನವಾಗಿದೆಯೋ ದೆಯ್ಯ ನರ್ತನವಾಗಿದೆಯೋ?

೨೬ರ ಬೆಳಿಗ್ಗೆ ನಿಮ್ಮ ಭೇಟಿ ತೆಗೆದುಕೊಳ್ಳುತ್ತೇನೆಂದು ನಂಬಿದ್ದೇನೆ.

* * *

ಆರ್.ಎಲ್. ನರಸಿಂಹಯ್ಯ ಬೆಂಗಳೂರು, ೧೬-೧-೧೯೫೨

ನಿಮ್ಮ ಕಾರ್ಡು ಮಂಗಳವಾರ ನನ್ನ ಕೈಸೇರಿತು. ನೀವು ಭಾನುವಾರ ಪ್ರಾತಃಕಾಲ ಕೆಲಸಕ್ಕೆ ಸೇರಿದ ಹಾಗೆ ಬರೆದಿದ್ದೀರಿ. ಶ್ರೀ ನರಸಿಂಹಚಾರ್ಯರಿಗೂ ಹಾಗೆಯೇ ಬರೆದಿದ್ದೀರಿ. ಆದರೂ ತಪ್ಪಿ ಬರೆದಿರಬೇಕಲ್ಲವೇ? ಶನಿವಾರ ಪೂರ್ವಾಹ್ನ ಸೇರಬೇಕೆಂದು ಏರ್ಪಾಟಾಗಿತ್ತಲ್ಲವೇ?

ನರಸಿಂಹಾಚಾರ್ಯರಿಗೆ ನೀವು ಬರೆದ ಕಾರ್ಡು ನೋಡಿ ನನಗೆ ಬಹಳ ಅಸೂಯೆಯಾಯಿತು. ನಾನೂ ಧಾರವಾಡಕ್ಕೆ ಹೊರಟಿದ್ದರೆ ನನಗೂ ಮನೋಹರ ಸಿಕ್ಕುತ್ತಿತ್ತಲ್ಲ ಎಂದು. ಸದ್ಯಕ್ಕಂತೂ ಲಭ್ಯವಿಲ್ಲ.

ನಿನ್ನೆ ಸಂಜೆ ಮಾಸ್ತಿಯವರ ಮನೆಯಲ್ಲಿ Gilpatrickನ್ನು ನೋಡಲು ಸೇರಿದ್ದೆವು. ಅವ ಬಹಳ ಬುದ್ಧಿವಂತ, ರಸಿಕ, ಒಳ್ಳೆಯವ ಎಂದೂ ತೋರಿತು. ಆದರೆ ನಾವು ಅವನಿಗೆ ಸಮರ್ಪಕವಾದ ಉತ್ತರ ಹೇಳಲಿಲ್ಲ. ಸೂಕ್ತವಾದ ಸಲಹೆಗಳನ್ನು ಕೊಡಬಲ್ಲವರಲ್ಲಿ ನಮ್ಮಲ್ಲಿ ಕೆಲವರಿದ್ದರೂ ಅವರಿಗೆ ಮಾತನಾಡಲು ಅವಕಾಶ ದೊರಕದಂತೆ ಇತರರು ನಡೆದುಕೊಂಡರು. ಆತನಿಗೆ ಸ್ವಲ್ಪ ಜಿಗುಪ್ಸೆಯೇ ಆಗಿರಬೇಕು. ಆತನ ಜಾಣತನಕ್ಕೆ ಒಂದು ನಿದರ್ಶನ–ಸಭೆ ಮುಕ್ತಾಯವಾದ ಮೇಲೆ ಮೂರ್ತಿರಾಯರನ್ನು ಬೇರೆ ಕರೆದು ಈ ದಿನ ಬೆಳಿಗ್ಗೆ ೯ ಘಂಟೆಗೆ ಅವರೊಬ್ಬರೊಂದಿಗೆ ಮಾತುಕತೆಗೆ ಗೊತ್ತುಮಾಡಿಕೊಂಡ. ನನಗೆ ತಿಳಿದ ಮಟ್ಟಿಗೆ ಪರಿಚಯ ಮಾಡಿಕೊಡುವಾಗ ಮೂರ್ತಿರಾಯರ ವಿಶೇಷ ಪರಿಚಯ ಯಾರೂ ಅವನಿಗೆ ಮಾಡಿಕೊಡಲಿಲ್ಲ. ಅವರ ಇಂದಿನ ಭೇಟಿಯು ನಿನ್ನೆಯ ವ್ಯರ್ಥ, ಅಪ್ರಕೃತ ಮಾತುಗಳನ್ನು ಮರೆಸಬಹುದೆಂದು ನಾನು ನಂಬಿದ್ದೇನೆ. ನಾನು ಮೂರ್ತಿರಾಯರನ್ನಿನ್ನೂ ನೋಡಿಲ್ಲ.

ಚಿ॥ ಸುಮಿತ್ರ, ವಿಮಲ ಅವರ "ನಂದ ನಂದನಾ", "ನಲವು ನಲವು" ಗೀತಗಳನ್ನು ಕಳೆದ ಶನಿವಾರ record ಮಾಡಿಸಿತು. ನರಸಿಂಹಾಚಾರ್ಯರು ಬಹಳ ಚೆನ್ನಾಗಿ ಬಂದಿದೆಯೆಂದು ಹೇಳುತ್ತಾರೆ. Recording ಅಷ್ಟು ಸಮರ್ಪಕವಾಗಿಲ್ಲವೆಂದು ನನ್ನ ಅಭಿಪ್ರಾಯ. ಅದಕ್ಕೆ ಕಾರಣವೂ ಇದೆ. ಯಂತ್ರ ಅವತ್ತು ಸರಿಯಾದ formನಲ್ಲಿ ಇರಲಿಲ್ಲ. ಇನ್ನೊಂದು ಸಲ ಸಮರ್ಪಕವಾಗಿ ಗೀತೆಗಳನ್ನು record ಮಾಡಿಸಬೇಕೆಂದಿದ್ದೇನೆ.

ಶ್ರೀ ಎಂ.ವಿ. ಸೀತಾರಾಮಯ್ಯನವರು ನನ್ನ ಚಿತ್ರಗಳನ್ನು ಮುದ್ದಾಗಿ ಬರೆಯುತ್ತಿದ್ದಾರೆ. ಕೆಲಸವಿನ್ನೂ ಮುಗಿದಿಲ್ಲ. ಆದರೆ ಮುಗಿದ ಮೇಲೆ ಚೆನ್ನಾಗಿರುತ್ತದೆಂಬ ನಂಬಿಕೆ ನನಗೆ ಬಂದಿದೆ. ಆವರಿಗೆ ಒದಗಿಸಿದ ಸಲಕರಣೆಗಳ ಬೆಲೆ ಸುಮಾರು ೮ ರೂಪಾಯಿಗಳಾಯಿತು.

ನೀವು ಈ ಊರು ಬಿಟ್ಟು ಹೋಗುವುದಕ್ಕ ಮುಂಚೆ ನೀವೊಬ್ಬರಿಲ್ಲದಿದ್ದರೆ ಊರಿನ ಜನಸಂಖ್ಯೆ ಇಷ್ಟೊಂದು ಮಟ್ಟಕ್ಕೆ ನನ್ನ ದೃಷ್ಟಿಯಿಂದ ಇಳಿಯುತ್ತದೆಂದು ನಾನು ನಂಬಿರಲಿಲ್ಲ.

(ಈ ಪತ್ರದ ಕೊನೆಯ ಪ್ಯಾರಾಕ್ಕೆ ತೀ.ನಂ.ಶ್ರೀ. ಈ ರೀತಿ ವ್ಯಾಖ್ಯಾನ ಬರೆದಿದ್ದಾರೆ: "ಇದಕ್ಕೆ ಕೆಲವು ಮಟ್ಟಿಗೆ ನನ್ನ ಗಾತ್ರವೂ ಕಾರಣವಾಗಿರಬೇಕು!")

* * *

ಆರ್.ಎಲ್, ನರಸಿಂಹಯ್ಯ ಬೆಂಗಳೂರು, ೧೧–೦೨–೧೯೫೩

ನಿಮ್ಮ ಕಾಗದ ಬಂದು ಹಲವು ದಿನಗಳಾದರೂ ನಾನೂ ಇದುವರೆಗೂ ಉತ್ತರ ಬರೆದಿಲ್ಲವೆಂದು ನಿಮಗೆ ಅಸಮಾಧಾನವಾಗಿರಬಹುದು. ಮೂರ್ತಿರಾಯರು ಆ ಧ್ವನಿ

ಬರುವಹಾಗೆ ನೀವು ಅವರಿಗೆ ಬರೆದಿರೆಂದು ನಿನ್ನೆ ನಮಗೆ ಹೇಳಿದರು. ನಾವು ಅಂದರೆ ನಾನು, ಪು.ತಿ.ನ. ನಿನ್ನೆ ನಾವು ಮೂರು ಜನ ಮೊದಲು ನಮ್ಮ ಮನೆಯಲ್ಲಿ ಅನಂತರ ಮೂರ್ತಿರಾಯರ ಮನೆಯಲ್ಲಿ ಸೇರಿದ್ದೆವು. ಮೂರ್ತಿರಾಯರು ಕೋಡಬಳೆ ಹವಣಿಸಿದ್ದರು. ಎಷ್ಟು ಚೆನ್ನಾಗಿತ್ತು ಎಂದರೆ ನಿಮ್ಮ ಜ್ಞಾಪಕ ಬಂತು. ನಿಮಗೆ ಪುಣ್ಯವಿಲ್ಲವೋ ನಮಗೇ ಇಲ್ಲವೋ ಒಟ್ಟಿಗೆ ರುಚಿ ಅನುಭವಿಸಲು ಎಂಬುದು ತೀರ್ಮಾನ ಮಾಡುವುದು ಕಷ್ಟ. ಕಡೆಯ ಹತ್ತು ನಿಮಿಷಗಳಲ್ಲಿ ಡಾ॥ ಗೋವಿಂದಸ್ವಾಮಿಯವರೂ ಜೊತೆಗೆ ಸೇರಿದರು. ಬಾಯಲ್ಲಿ ನೀರೂರಿರಬೇಕಲ್ಲವೆ? ಹಾಗಾದರೆ, ಇದನ್ನು ಬರೆದಿದ್ದಕ್ಕೆ ಸಾರ್ಥಕವಾಯಿತು, ಅಂದುಕೊಳ್ಳುತ್ತೇನೆ.

ಚಿ॥ ರಾಮಚಂದ್ರ ಪ್ರಭು ಅರ್ಧ ಘಂಟೆ ಹಿಂದೆ ಬಂದಿದ್ದ. ನಾನು ಕಾಲೇಜಿನಲ್ಲಿ ಕೂತು ಕಾಗದ ಬರೆಯುತ್ತಿದ್ದೇನೆ. ನೀವು ನರಸಿಂಹಯ್ಯನನ್ನು ವಿಚಾರಿಸಿದೆ ಅಂತ ಅವರಿಗೆ ತಿಳಿಸು ಎಂದಿದ್ದರಂತೆ. ಧಾರವಾಡದಲ್ಲಿ ಬೇರೂರಿ ನೆಮ್ಮದಿಯಾಗಿದೀರಿ ಅಂತಲೂ ಆತ ತಿಳಿಸಿದ. ಅದಕ್ಕೆ ರುಜುವಾತಾಗಿ–ಬೇರೂರಿರುವುದಕ್ಕೆ ರುಜುವಾತಾಗಿ–ಒಂದು ತಿಂಗಳ ಸಂಬಳ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ದಾನ ಮಾಡಿದ್ದೀರಿ ಎಂದು ತಿಳಿಸಿದ. ನಿಜವೇ? ಭಲೇ ಎನ್ನೋಣವೇ, ಪಾಪ ಎನ್ನೋಣವೆ?

ಅಂದಹಾಗೆ ನಾನು ಉತ್ತರ ಬರೆಯಲು ಇಷ್ಟು ತಡವಾದದ್ದಕ್ಕೆ ಕಾರಣ, ಹೋಗಲಿ ನೆಪ ಏನು ಅಂತ ಬರೆಯೋದು ಮರೆತುಬಿಟ್ಟೆ. ಧರ್ಮಸ್ಥಳದಲ್ಲಿ ನಾನು ಮಾಡಿದ ಭಾಷಣವನ್ನು ಕನ್ನಡ ನುಡಿಗೆ ಕೊಟ್ಟಿದ್ದೇನೆ. ಅವರು ಅದರ ಪ್ರೂಫನ್ನು ನನಗೆ ಕಳಿಸಿ ಆಗಲೇ ಮೂರು ವಾರಗಳ ಮೇಲೆ ಆಯಿತು. ಇಂದೋ, ನಾಳೆಯೋ ಅದು ಬರುತ್ತೆ, ಒಂದು ರಿಪ್ರಿಂಟನ್ನೂ ಕಾಗದದ ಜೊತೆಯಲ್ಲೇ ಕಳಿಸೋಣ ಅಂದುಕೊಂಡೆ. ಪ್ರೂಫ್‌ತಿದ್ದಿ ಹೆಚ್ಚು ಕಡಮೆ ಒಂದು ತಿಂಗಳಾದರೂ ಕನ್ನಡ ನುಡಿಯ ಮುಖವೂ ಇಲ್ಲ, ರಿಪ್ರಿಂಟ್‌ಗಳ ಮುಖವೂ ಇಲ್ಲ. ಕಾದು ಪ್ರಯೋಜನವಿಲ್ಲವೆಂದು ಈಗ ಬರೆಯುತ್ತಾ ಇದೇನೆ.

ಈ ಸಲ ಡಿಸೆಂಬರ್ ತಿಂಗಳ ೩ರಿಂದ ೨೦ನೆಯ ತಾರೀಖಿನೊಳಗೆ ನಾನು ಅಭೂತ ಪೂರ್ವದ ಸಾಹಸದ ಕೆಲಸ ಮಾಡಿದ್ದೇನೆ. ಯಾರೂ ಬೆನ್ನು ತಟ್ಟಿದವರೇ ಇಲ್ಲ. ಆ ೧೬–೧೭ ದಿವಸಗಳೊಳಗೆ, ಧರ್ಮಸ್ಥಳದ ಭಾಷಣವನ್ನು ಲೇಖನರೂಪಕ್ಕೆ ತಂದದ್ದೇ ಅಲ್ಲದೆ, ಪುಟ್ಟಣ್ಣಸೆಟ್ಟಿ ಗ್ರಂಥಮಾಲೆಗಾಗಿ ರೇಡಾರ್ ಪುಸ್ತಕವನ್ನು ಮೊದಲಿನಿಂದ ಕೊನೆಯವರೆಗೆ ಹೊಸದಾಗಿ ಬರೆದು, ಅದಕ್ಕೆ ೮ ಚಿತ್ರಗಳನ್ನು ಸಿದ್ಧಪಡಿಸಿ, ಕರಡು ಪತ್ರಿಯನ್ನು ನಕಲು ಮಾಡಿ, ನ್ಯೂಯಾರ್ಕಿನ ಮೆಕ್‌ಗ್ರಾಹಿಲ್ ಕಂಪೆನಿಗೆ ಅವರ ಪುಸ್ತಕವೊಂದರಿಂದ ಚಿತ್ರಗಳನ್ನು ಆರಿಸಿಕೊಳ್ಳಲು ಅಪ್ಪಣೆ ಪಡೆದು ಬರೆಹದ ಪ್ರತಿಯನ್ನೂ, ಚಿತ್ರಗಳನ್ನೂ ಹನುಮಂತರಾಯರಿಗೆ ಕಳಿಸೇಬಿಟ್ಟೆ! ಹೊಸದಾಗಿ ಎನ್ನುವುದರ ಮರ್ಮ ಪ್ರಬುದ್ಧ ಕರ್ಣಾಟಕದ ಹಿಂದಿನ ಲೇಖನವನ್ನೇ ತಿದ್ದಲಿಲ್ಲ ಎಂಬುದು.

ನಿಮ್ಮ ಗ್ರಂಥದ ಮುನ್ನುಡಿಯನ್ನು ಅಚ್ಚುಮಾಡಿ ಪ್ರೂಫ್ ಕೂಡಲೆ ನಿಮಗೆ ಕಳಿಸುವಂತೆ ಪು.ತಿ.ನ ಅವರು ಇಲ್ಲಿ ಸರ್ಕಾರಿ ಪ್ರೆಸ್ಸಿಗೆ ಹೇಳಿದಾರಂತೆ. ಅವರ ಹಂಚಿಕೆಯ ಪ್ರಕಾರ ಪ್ರೂಫ್

ನಿಮಗೆ ಈಗಾಗಲೇ ಸೇರಿರಬೇಕು. ನನ್ನ "ಜಗತ್ತುಗಳ ಹುಟ್ಟು ಸಾವು" ಬೈಂಡಿಗಾಗಿ ಮಾತ್ರ ಕಾದಿದೆ. ಅದರ ರಟ್ಟಿನ ಚಿತ್ರ ಕೂಡ ತಯಾರಾಗಿ ೬-೭-ವಾರಗಳಾಗಿರಬೇಕು. ಚಿದಂಬರಂ ಎಂದು ಹೊರಗಟ್ಟುತ್ತಾರೋ ಅದನ್ನು, ಅದು ನನಗೆ ತಿಳಿಯದು. ಅದೇ ಸ್ಥಿತಿಯಲ್ಲಿದ್ದ ರಾಳ್ಳಪಲ್ಲಿ ಅನಂತಕೃಷ್ಣಶರ್ಮರ "ಗಾನಕಲೆ" ಹೊರಬಿದ್ದಿದೆ.

ನಾವು ಕೆಲವು ದಿನಗಳ ಕೆಳಗೆ "ಶ್ರೀಕಂಠಯ್ಯನವರಿಗೆ ಹೋದಕಡೆಯಲ್ಲೆಲ್ಲ ಒಂದೊಂದು ಮನೆ – ನಾವಿಕರಿಗಿರುವಂತೆ" ಎಂದುಕೊಂಡದ್ದು ನಿಜ. ಆದರೆ ಅದರಲ್ಲಿ ಆಕ್ಷೇಪಣೆಗಿಂತ, ಆರೋಪಕ್ಕಿಂತ, ಹೆಮ್ಮೆ ಅಥವಾ ಸಂತೋಷ ಹೆಚ್ಚಿತ್ತೆಂದು ನನ್ನ ಭಾವನೆ. ಹೋಗಲಿ ಆಕ್ಷೇಪಣೆ ಎಂದುಕೊಂಡು ಅದರಿಂದ ನೀವು ಒಂದು ಕಾರ್ಡಾದರೂ ಗೀಚಿದಿರಲ್ಲ, ಅಷ್ಟೇ ಆಯಿತು.

ಪು.ತಿ.ನ ಇವತ್ತು ಪಶ್ಚಿಮವಾಹಿನಿಗೆ ಹೋಗಿದ್ದಾರೆ. ಸರ್ವೋದಯ ಸಮಾರಂಭದ ಅಧ್ಯಕ್ಷ ಗೊರೂರು ರಾಮಸ್ವಾಮಯ್ಯಂಗಾರ್ರಿಗೆ ಆಸರೆಯಾಗಿ, ಮೂರ್ತಿರಾಯರು ಕಳೆದವಾರ ಅನಂತ ಪುರಕ್ಕೆ ಹೋಗಿದ್ದರು, ಈ ವಾರಾಂತ್ಯ ತರೀಕೆರೆ, ಭದ್ರಾವತಿ, ತೀರ್ಥಹಳ್ಳಿಗೆ ಹೋಗುತ್ತಾರೆ. ಮುಂದಿನ ವಾರ ಇಲ್ಲಿನ ಇಂಗ್ಲಿಷ್ ಸೆಮಿನಾರಿನಲ್ಲಿ ಏನೋ ಮಾಡುತ್ತಾರೆ. ಅದರ ಮುಂದಿನ ವಾರ ಗುಬ್ಬಿಗೆ ಹೋದಾರು. ಅದರ ಮುಂದಿನ ವಾರ ಶ್ರವಣಬೆಳಗೊಳಕ್ಕೆ ಹೋಗಬೇಕೆಂದಿದ್ದಾರೆ. ಆ ಮುಂದಿನ ವಾರ-ನಾನು ಏಕೆ ಬರೆಯಲಿ? ನಾನು ಎಲ್ಲಿಗೂ ಹೋಗುವ ಯೋಚನೆಯಲ್ಲಿಲ್ಲ, ಗುಬ್ಬಿಯೊಂದು ಬಿಟ್ಟು!

ಈ ಕಾಗದ ಎಕ್ಸ್‌ಪ್ರೆಸ್ ವೇಗದಲ್ಲಿ ಜೆಟ್‌ಪ್ಲೇನ್ ವೇಗದಲ್ಲಿ ಬರೆದಿದ್ದೇನೆ. ಇನ್ನೂ ಹೀಗೆ ಬರೆಯುತ್ತ ಹೋದರೆ ನಿಮಗೆ ಬೇಜಾರಾಗೋದು ಹಾಗಿರಲಿ – ನನಗೇನು ನಷ್ಟ ಅದರಿಂದ – ಕಾಗದ ಸಾಲೋದಿಲ್ಲ. ಎರಡಾಣೆಗಿಂತ ಹೆಚ್ಚಾಗಿ ಖರ್ಚು ಮಾಡಲು ಇಷ್ಟವೂ ಇಲ್ಲ. ಜೊತೆಗೆ ಭೌತ, ರಾಸಾಯನಿಕ, ಗಣಿತಶಾಸ್ತ್ರಗಳ ಮತ್ತು ತತ್ಸಂಬಂಧದ ಪದಗಳ ಒಂದು ಕೋಶವನ್ನು ಬರೆಯೋಣ ಎಂದಿದ್ದೇನೆ. ಅದಕ್ಕೆ ಕಾಲ ಉಳಿಯಬೇಡವೆ! ಕೋಶದಲ್ಲಿ ೧೦೦೦ಕ್ಕೆ ಕಡಿಮೆಯಿಲ್ಲದೆ, ೨೦೦೦ಕ್ಕೆ ಹೆಚ್ಚಿಲ್ಲದೆ ಶಬ್ದಗಳಿರಬೇಕೆಂದು ನನ್ನ ಬಯಕೆ. ಆದರೆ ಒಂದು ರಹಸ್ಯ. ಮೊದಲನೆಯ ಪುಟದ ಮೊದಲನೆಯ ಅಕ್ಷರವನ್ನು ಇನ್ನೂ ಪ್ರಾರಂಭಿಸಿಲ್ಲ........

* * *

ಆರ್.ಎಲ್, ನರಸಿಂಹಯ್ಯ ಬೆಂಗಳೂರು, ೧೫-೯-೧೯೫೩

ನಿಮ್ಮ ಕಾಗದ ಬಂತು, ಕಾಗದಗಳು ನಿಮ್ಮಿಂದ ದೀಪಾವಳಿಗೊಂದು, ಯುಗಾದಿ ಗೊಂದರಂತೆಯೂ ಬರುವ ಹಾಗೆ ಕಾಣುವುದಿಲ್ಲ. ಸಹರಾ ಮರುಭೂಮಿಗೆ ಮಳೆ ಬಂದಂತೆ ಎಂದು ಕಾಣುತ್ತದೆ.

ನಾನು ಆರ್ಗ್, ಕುಲೂಂಬ್, ಕಾಂಕ್ರೀಟ್ ಇತ್ಯಾದಿ ಪದಗಳನ್ನು ಉಪಯೋಗಿಸಿದ್ದಕ್ಕೆ ನನಗೆ ನೀವು ಕಳಿಸಿರುವ ಅಭಿನಂದನೆಗಳಿಗಿಂತ ಭಾರಿ ಅಭಿನಂದನೆಗಳನ್ನು ನೀವು ಇಂಗ್ಲಿಷ್

ಶಿರೋನಾಮೆಯ ಪತ್ರವನ್ನು ಉಪಯೋಗಿಸಿರುವುದಕ್ಕಾಗಿ ನಾನು ಕಳಿಸಬಯಸುತ್ತೇನೆ. ಅಲ್ಲದೆ ನಿಮ್ಮ Letter head ಬಹಳ ಮುದ್ದಾಗಿದೆ. ಧಾರವಾಡದಲ್ಲಿಯೂ ನಯವಾದ ಅಚ್ಚುಕೆಲಸ ಮಾಡುವವರಿದ್ದಾರಲ್ಲ ಎಂದು ನನಗೆ ಆಶ್ಚರ್ಯವಾಗಿದೆ.

ಯಾವ ಪಾರಿಭಾಷಿಕ ಪದಗಳು ಇಂಗ್ಲಿಷಿನಲ್ಲಿ ಅಂಕಿತಮಾತ್ರವಾಗಿವೆಯೋ ಅಥವಾ ಅಂಕಿತಮಾತ್ರವೆಂದು ನಾನಂದುಕೊಂಡಿದ್ದೇನೆಯೋ ಅಂಥ ಶಬ್ದಗಳನ್ನು ನಾನು ಕನ್ನಡಿಸಿಲ್ಲ, ಅದಕ್ಕೆ ಪ್ರತಿಯಾಗಿ ಯಾವ ಪಾರಿಭಾಷಿಕ ಶಬ್ದಗಳು ಅರ್ಥಗರ್ಭಿತವಾಗಿಯೋ, ಅಥವಾ ಲಕ್ಷ್ಮಣಯುಕ್ತವಾಗಿದೆಯೋ ಅಂಥವನ್ನು ಕನ್ನಡಕ್ಕೆ ಅಥವಾ ಸಂಸ್ಕೃತಕ್ಕೆ ತರುವುದೇ ಸೂಕ್ತವೆಂದು ನಾನಂದುಕೊಂಡಿರ್ದ್ದೇನೆ. ನನ್ನ ಹಿಂದಿನ ಪುಸ್ತಕದಲ್ಲಿಯೂ ('ಜಗತ್ತುಗಳ' ಇತ್ಯಾದಿ) ಇದೇ ನಿಯಮವನ್ನು ಸರಿಸಿದ್ದೇನೆ. ಒಂದೆರಡು ಪ್ರತಿಷೇಧಗಳು ಇದ್ದರೆ ಅದಕ್ಕೆ ಸಾಮಾನ್ಯವಾಗಿ ವಿಶೇಷ ಕಾರಣಗಳಿರುತ್ತವೆ.

ಥಾಲಿಸ್ ಎನ್ನುವುದೇ ಸರಿಯಾದ ವಿಚಾರಣೆ. ಅದು ನನಗೆ ಈಗ ತಿಳಿಯಿತು. ಥೇಲ್ಸ್ ಎಂಬುದನ್ನು ನಮ್ಮ ಗುರುಗಳಿಂದ (ಬಂಗಾಲಿ) ಕಲಿತಿದ್ದೆ. ಅಪರೂಪವಾಗಿ ಅರಿಸಮಾಸ ವನ್ನು ಬಳಸುವುದು ಅಷ್ಟೊಂದು ದೋಷವಲ್ಲವೆಂದು ನನ್ನ ನಂಬಿಕೆ. ಆದರೂ ಸರಪಣಿಕ್ರಿಯೆಯ ಬದಲು ನಿಗಡಕ್ರಿಯೆಯೆಂದು ಉಪಯೋಗಿಸಿದರೆ ಚೆನ್ನವೆಂದು ಈಗ ತೋರುತ್ತಿದೆ. ಡಿ.ಎಲ್.ಎನ್. ಅವರು ಮಾಲಾಕ್ರಿಯೆ ಏಕೆ ಉಪಯೋಗಿಸಬಾರದೆಂದು ಬರೆದಿದ್ದಾರೆ. ನಿಗಡ ಕ್ರಿಯೆ ಪು.ತಿ.ನ. ಅವರ ಸಲಹೆ. ಮೂರರಲ್ಲಿ ಈ ಪದ ಉತ್ತಮವೆಂದು ನನಗನ್ನಿಸುತ್ತಿದೆ ಶೃಂಖಲಾಕ್ರಿಯೆ ಎಂಬುದು ನನ್ನ ಗಮನಕ್ಕೆ ಈ ಮೊದಲೇ ಬಂದಿತ್ತು. ಅನೇಕ ಕಾರಣಗಳಿಂದ ರುಚಿಸಲಿಲ್ಲ.

Contuinuous ಎಂಬುದಕ್ಕೆ ಅವಿಚ್ಛಿನ್ನವೆಂದೇ ನಾನು ಮುಕ್ಕಾಲು ಪಾಲು ಉಪಯೋಗಿಸಿರುವುದು. Quantum Theoryಗೆ 'ವಿಚ್ಛಿನ್ನವಾದ' ಎಂಬುದರ ಬದಲು 'ಖಂಡವಾದ' ಎಂಬುದು ಉತ್ತಮವೆಂದು ತೋರುತ್ತದೆ. ಅಂಥ ಸನ್ನಿವೇಶದಲ್ಲಿ ಮಾತ್ರ ಖಂಡ ಅಖಂಡವನ್ನು ಉಪಯೋಗಿಸಿದ್ದೇನೆ. ಇಂಗ್ಲಿಷಿನಲ್ಲಿ Discontinuous, Quantum ಇರುವಂತೆ. ಸ್ವಲ್ಪ ವಿಚಾರಮಾಡಿ ತಿರುಗಿ ಬರೆಯಿರಿ.

Inter, Intra ಇತ್ಯಾದಿ ವಿಚಾರ ಮಾಡಬೇಕಾಗಿದೆ. ನೀವು ಹೇಳಿರುವಂತೆ, Structure ಎಂಬ ಪದಕ್ಕೆ 'ದಾರ್ಢ್ಯ' ಭಾಷಾಂತರವಲ್ಲ. ಆದರೆ ಅನೇಕ ಕಾರಣಗಳಿಂದ ಆ ಸನ್ನಿವೇಶದಲ್ಲಿ Structure ಎನ್ನುವುದನ್ನು 'ರಚನೆ'ಯ ಅರ್ಥದಲ್ಲಿ ಉಪಯೋಗಿಸಿಲ್ಲ. 'ದಾರ್ಢ್ಯ'ದ ಅರ್ಥದಲ್ಲಿಯೇ ಉಪಯೋಗಿಸಿದ್ದಾರೆ. ಇಂಥ ಪ್ರಸಂಗಗಳು ಹಲವು ಬರುತ್ತವೆ.

'ಭದ್ರ' ದ ಬದಲು 'ಸ್ಥಿರ' ಉಪಯೋಗಿಸಬೇಕಾಗಿತ್ತು, ನಿಜ. ಇದೂ ಅಜ್ಞಾನದ 'ಬಾಬತು'

ನಿಮ್ಮ ಕಾಗದ **ಈಗ** ನನ್ನ ಪಕ್ಕದಲ್ಲಿಲ್ಲ. ಆದ್ದರಿಂದ ಸದ್ಯಕ್ಕೆ ನನಗೆ ಇತರ ಶಬ್ದಗಳ ಜ್ಞಾಪಕ ಬರುತ್ತಿಲ್ಲ. ಆದರೆ ಎಲ್ಲಕ್ಕೂ, ಹಿಂದೆ 'ಜಗತ್ತುಗಳ....' ಸಂಬಂಧವಾಗಿ ಕಳಿಸಿರುವ

ಶಬ್ದಗಳ ಟೀಕೆಗೂ ಗಮನ ಕೊಡದೆ ಏನೂ ಇಲ್ಲವೆಂದು ಭರವಸೆ ಕೊಡುತ್ತೇನೆ. ಪುಸ್ತಕವನ್ನು ಪೂರ್ತಿಯಾಗಿ ಓದಿದ್ದರೆ, ಶಬ್ದಕೋಶವಲ್ಲದೆ, ಗ್ರಂಥ ವಿಷಯವಾಗಿಯೂ ಟೀಕೆ ಕಳಿಸಿರೆಂದು ಕೇಳಬಹುದೇ? ನಾಗರತ್ನಳನ್ನೂ ಪುಸ್ತಕ ಓದೆಂದು ಹೇಳಿ ಆಕೆಯ ಅಭಿಪ್ರಾಯಗಳನ್ನೂ ಕಳಿಸಿದರೆ ಸಂತೋಷ.

"ಭಾರತೀಯ ಕಾವ್ಯಮೀಮಾಂಸೆ"ಯನ್ನು ಭಾನುವಾರ ಪು.ತಿ.ನ. ಮನೆಯಲ್ಲಿ ನೋಡಿದೆ. ಮೂರ್ತಿರಾಯರು ಏನು ವಿಚಾರವನ್ನೂ ನನಗೆ ತಿಳಿಸಿಲ್ಲ. ಆದರೆ ಈಗ ನೀವೇ ತಿಳಿಸಿರುವಂತೆ ಪುಸ್ತಕದ ಪ್ರತಿಗಾಗಿ ಕಾದಿದ್ದೇನೆ. ಕಾಗದ ಬರೆಯುವುದರಲ್ಲಿ ಇರುವ ಜಾಗ್ರತೆಯೇ ಇದಕ್ಕೂ ಅನ್ವಯಿಸುವುದಿಲ್ಲ ತಾನೆ.

* * *

B.S. Kesavan Calcutta, 6-9-51

I have got the better of the germs ! As you say, to business first : I am surprised that you should ask me about the number of books that I may require as also the amount of money that I can spend on Kannada books. My dear fellow, you are writing to the Librarian of the National Library ! Please remember that ! I want you to make, not an exhaustive list of all Kannada publications going into ramifications of all classes of production. I want you to ask yourself this question: What would be the basic books that I would like to see in a National Library embodying the best that is thought and written in the language. All the classics must be there. All the periods must be represented. But the list should not be such that you cannot see the wood for the trees. Got me! I want that list **at once** and I do not care a damn how busy your Lordship is. I also want the sources from which I can get these books. I am writing to the Director of Printing & Stationery and Publications in Mysore for the English Kannada Dictionary.

When I go to Delhi. I shall look to P.T.N.'s case. Give him my love and regards.

* * *

THE ROCKEFELLER FOUNDATION, NEWYORK

Chadbourne Gilpatric Written from Poona

Jan. 23, 52

It was highly unfortunate for me that you had to leave for Dharwar so soon after our meeting at Masti Venkatesa Iyengar's on January 3rd. Your name has occured frequently in literary discussions since, and always you have been referred to with high regard.

Perhaps you have already heard from A.N. Moorthy Rao about our talk concerning the development of Kannada literature and in particular about the more vigorous role criticism can play. This last is surely an important direction of work, and one in which you have long taken a leading interest. I hope you and Mr Moorthy Rao will be able to write me about significant developments and specific actions which might be taken to improve the quality and effectiveness of criticism.

This letter is to ask if you will send me a summary of your own literary interests and achievements to date; also a brief description of your present commitments and major purposes. What I missed in personal encounter may be partially filled in through correspondence. It would be helpful to know more of your work and line of approach as a background for proposals you, Moorthy Rao and others might make for development of constructive criticism. I leave Mysore with the vivid impression that you have ideas which deserve outside encouragement, possibly financial support.

Please let me have any ideas you feel have special value at this time. I can be reached in India................until March 5.

With every good wish for your new work at Dharwar, and with best personal regards.

* * *

Chadbourne Gilpatric New York,
Febuary 4, 1952

Thank you for the interesting letter or February 1. It is helpful to have this information on your own past work and current interests.

This is probably too soon after your move to Dharwar for you to have decided on main problems and approaches for literary study there. Assuming these would give major attention to contemporary writing and wider enjoyment of literature, please let me know what work comes foremost in your own view. If there is time, I would appreciate knowing the contributions Kannada and English literature can make to each other. I hope through correspodence to gain what I missed from personal talks to you.

* * *

ಎಸ್.ವಿ. ಕೃಷ್ಣಮೂರ್ತಿರಾವ್ ರಾಜ್ಯಸಭೆ, ನವದೆಹಲಿ
೩–೬–೫೨

ತಮ್ಮ hritpurvaka abhinandane ಗಳಿಗಾಗಿ ನನ್ನ ಹೃತ್ಪೂರ್ವಕ ವಂದನೆಗಳು. ನಮ್ಮ ಆಗು ಹೋಗುಗಳ ಹಿಂದೆ ಯಾವುದೋ ಒಂದು ಅವ್ಯಕ್ತ ಶಕ್ತಿ ಇದೆ ಎನ್ನುವುದಕ್ಕೆ ಇದೊಂದೇ ಸಾಕ್ಷಿ ಸಾಕು. ತಮ್ಮಂಥ ಗೆಳೆಯರ ವಿಶ್ವಾಸ ಮತ್ತು ಪ್ರೇಮವಿದ್ದರೆ ಏನನ್ನಾದರೂ ಸಾಧಿಸಬಲ್ಲೆ. ಬೆಂಗಳೂರಿಗೆ ಬಂದಾಗ ಒಳ್ಳೆ ಊಟ ಹಾಕಬೇಕು? ಶ್ರೀ ಮೂರ್ತಿರಾಯರಿಗೆ ನಮಸ್ಕಾರ ತಿಳಿಸಿ. ನಮಸ್ಕಾರ.

* * *

ಕೆ.ಎಸ್. ನರಸಿಂಹಸ್ವಾಮಿ ಮೈಸೂರು, ೨೦–೦೨–೧೯೫೩

ನಿಮ್ಮ M.O. ತಲುಪಿತು. ಈ ಉಪಕಾರಕ್ಕೆ ನಾನು ಚಿರಋಣಿ. ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ದಿನ ಬಿಟ್ಟು ದಿನ ಸೂಜಿಮದ್ದು ಕೊಡುತ್ತಿದ್ದಾರೆ. ನಾನೂ ಒಬ್ಬ ಬರೆಯುವ ಮನುಷ್ಯ ಎಂಬುದನ್ನು ಹೇಗೋ ತಿಳಿದ ಯುವಕ ಡಾಕ್ಟರೊಬ್ಬರು ನನ್ನಲ್ಲಿ ಅಭಿಮಾನಪಟ್ಟು ನೋಡಿಕೊಳ್ಳುತ್ತಿದ್ದಾರೆ. ಆದರೂ ತಿಂಗಳಿಗೆ ಇಂದಿಗೆ ಸ್ವಲ್ಪ ಗುಣ ಕಂಡುಬಂದರೂ, ಇನ್ನೂ ರಕ್ತ ಕೂಡಿಲ್ಲ. ಇನ್ನೂ ಒಂದು ತಿಂಗಳು ಕಳೆದರೆ, ಸ್ವಲ್ಪ ಮುಖದ ಬಿಳುಪು ತೆಗೆಯಬಹುದು. ಈಗ ಓಡಾಡುವಷ್ಟು ತ್ರಾಣ ಬಂದಿದೆ; ಮೊದಲಿಗೆ ಅದೂ ಇರಲಿಲ್ಲ.

ನನ್ನ ಕೈಲಿದ್ದ ಸ್ವಲ್ಪ ಹಣ ಮುಗಿದು, ಹುಟ್ಟಬಹುದಾದ ಅಲ್ಪಸ್ವಲ್ಪ ಸಾಲವೂ ಸಿಕ್ಕಿ ಔಷಧಿ ನಡೆಸಿದರೂ, ಸಣ್ಣ ಸಂಬಳ–ರಜದ ಹಂಗಿನ ಸಂಬಳ– ಚಿಕ್ಕದೆನ್ನುವ ಅಧೈರ್ಯವೂ, ಸ್ವಲ್ಪ ಹಣ ಒದಗಿದರೆ ಬೇಗ ಗುಣವಾದೀತೆನ್ನುವ ಚಪಲತೆಯೂ, ಏನೋ ಮನಸ್ಸು ಗಟ್ಟಿಮಾಡಿ ಸ್ನೇಹಿತರಲ್ಲಿ ಹೇಳಿಕೊಳ್ಳೋಣವೆ? ಎನ್ನುವ ಭಾವನೆಗೆ ಅವಕಾಶ ಕೊಟ್ಟಿತು. ಅದರಿಂದ ಶ್ರೀ ಪು.ತಿ.ನ. ಅವರಿಗೆ ಬರೆದು ತಿಳಿಸಿದೆ. ಮನೋದೌರ್ಬಲ್ಯದಿಂದ ಹೀಗಾಯಿತೆಂದರೂ ಸರಿಯೆ! ಅವರು ನಿಜವಾಗಿ ಸ್ನೇಹಿತರು; ನನಗಾಗಿ ತಮ್ಮ ತೊಂದರೆಗಳನ್ನು ಬದಿಗಿರಿಸಿ ಉಪಕಾರ ಮಾಡುತ್ತಿದ್ದಾರೆ. ಅವರಿಗೆ ನನ್ನ ಕವಿತೆಯಲ್ಲಿ ಅಷ್ಟೇ ಅಲ್ಲ, ನನ್ನ ವ್ಯಕ್ತಿತ್ವದಲ್ಲೂ ಆಸಕ್ತಿ. ಯಾರಿಗೆ ಬರೆಯುವುದು ಎಂಬುದು ತೋಚದೆ, ಅವರಿಗೆ ಬರೆದೆ. ಇಂಥ ದುಷ್ಕಾಲ; ನನ್ನಿಂದ ನಿಮಗೆಲ್ಲ ತೊಂದರೆಯೂ ಆಗಿರಬೇಕು. 'ಹಿಂಡ ಬಾರದು ದುಂಡು ಮಲ್ಲಿಗೆಯ ದಂಡೆಯನ್ನು', ನೀವು ನಮ್ಮವರು, ಹಿರಿಯರು. ನಿಮ್ಮ ಆಶೀರ್ವಾದದಿಂದಲೇ ನಾನು ಅಷ್ಟಿಷ್ಟು ಪದ್ಯ ಬರೆದಿರುವುದು. ನನ್ನನ್ನು ಕ್ಷಮಿಸುವ ಔದಾರ್ಯ ನಿಮಗಿದೆ ಎಂಬುದೇ ನನ್ನ ನಂಬಿಕೆ. ನಿಮ್ಮ M.O ಕೂಪನ್ನಿನಲ್ಲಿರುವ ಮಾತುಗಳನ್ನು ನೋಡಿದಾಗ ನನ್ನ ಕಣ್ಣಿಗೆ ಬಂದ ಹನಿಗಳೇ ನನ್ನ ಕೃತಜ್ಞತೆಯ ಉತ್ತರ.

ಇದರೊಂದಿಗೆ ನನ್ನ 'ಇರುವಂತಿಗೆ'ಯ ಪ್ರತಿಯೊಂದನ್ನು ನಿಮ್ಮ ಅವಗಾಹನೆಗೆ ತಂದಿದ್ದೇನೆ. ಹೇಗಿದೆಯೋ, ಏನು ಕಥೆಯೋ! ಕ್ಷಮಿಸಿ.

ಇದ್ದ ಒಬ್ಬ ತಮ್ಮ ಓಡಿಹೋಗಿ ಆರು ವರುಷವಾಯಿತು, ಹೆಣ್ಣು ಕೊಟ್ಟವರು ನನ್ನಂತೆ ಬಡವರು: ಇತರ ಸಂಬಂಧಿಗಳು ದೂರವಾಗಿದ್ದಾರೆ. ಅಲ್ಲದೆ ಕಾಲಸ್ಥಿತಿ ಹಾಗೆಯೇ ಇದೆ. ಇಂಥ ಕಾಲದಲ್ಲಿ ನಿಮ್ಮಂಥ ಹಿರಿಯರನ್ನೂ, ಪು.ತಿ.ನ ಅವರಂಥ ಸ್ನೇಹಿತರನ್ನೂ ಮರೆ ಹೊಕ್ಕಿದ್ದಾಯಿತು; ನಿಮ್ಮೆಲ್ಲರ ಸೌಜನ್ಯದಿಂದ ಬೆಳಕು ಹರಿದೀತು. ನನ್ನ ನಮಸ್ಕಾರಗಳು,

* * *

ಕೆ.ಎಸ್. ನರಸಿಂಹಸ್ವಾಮಿ ಮೈಸೂರು, ೧೨–೨–೫೪

ತಾವು ಶ್ರೀ ಹೆಚ್.ಎಂ. ಶಂ. ಅವರ ಮೂಲಕ ಕಳುಹಿಸಿದ ಶ್ರೀ ಇಟಗಿ ಎಂಬವರಿಂದ ಬಂದ ಸಹಾಯದ್ರವ್ಯ (Rs. 5/-) ನನಗೆ ತಲುಪಿತು. ತಮ್ಮ ಪ್ರೀತಿವಾತ್ಸಲ್ಯಗಳಿಗೂ, ದಾನಿಗಳು ಆ ಮೂಲಕ ಕನ್ನಡದ ಬರಹಗಾರರಲ್ಲಿ ಒಬ್ಬನಿಗೆ ತೋರಿಸಿರುವ ಕೃಪೆಗೂ ನಾನು ಚಿರಋಣಿ ಯಾಗಿದ್ದೇನೆ. ನಾನು ಈ ಸಲವೂ ಯಥಾರೀತಿ ರಕ್ತದೌರ್ಬಲ್ಯಕ್ಕೆ ತುತ್ತಾಗಿ ತುಂಬ ಹೀನಸ್ಥಿತಿಯಲ್ಲಿ ಜನವರಿ ೧ನೇ ದಿನ ಆಸ್ಪತ್ರೆಗೆ ಸೇರಬೇಕಾಯಿತು: ಅಲ್ಲಿ ೨೪ ದಿನ ಚಿಕಿತ್ಸೆ ನಡೆದ ಮೇಲೆ ಮನೆಗೆ ಬಂದು ಹದಿನೈದು ದಿನ ವಿಶ್ರಾಂತಿ ಪಡೆದು, ಈಗ ನೆನ್ನೆಯಿಂದ ಕೆಲಸಕ್ಕೆ ಹೋಗುತ್ತಿದ್ದೇನೆ. ಈಗ ಎಷ್ಟೋ ವಾಸಿ. ನನ್ನ ಅನಾರೋಗ್ಯಕ್ಕೆ ಈ ಎರಡು ವರುಷಗಳಿಂದ ಒದಗಿರುವ ಅರ್ಥಿಕ ಕ್ಲೇಶವೂ, ಆರ್ಥಿಕ ಕ್ಲೇಶಕ್ಕೆ ನನ್ನ ವರ್ಷಂಪ್ರತಿ ಒಂದು ತಿಂಗಳ ಬೆಲೆಯಾದ ಚಿಕಿತ್ಸೆಯೂ ಕಾರಣ. ಹದಿನೆಂಟು ವರುಷ ಬಡತನವೊ, ಭಾಗ್ಯವೊ ಬಾಯಿಬಿಡದೆ ಸಂಸಾರ ಮಾಡಿ, ಈಗೀಗ ಯಾರಲ್ಲಾದರೂ ಮೊರೆಯಿಟ್ಟು ಸಹಾಯ ಬೇಡುವಂತಾದದ್ದು ದೈವಚಿತ್ತ;

ಪ್ರೀತಿ ಸ್ನೇಹ ವಿಶ್ವಾಸಗಳನ್ನು ಹೀಗೆ ಬಳಸಿಕೊಂಡದ್ದು "ಹಿಂಡಬಾರದು ದುಂಡುಮಲ್ಲಿಗೆಯ ದಂಡೆಯನ್ನು" ಎಂದು ಬರೆದ ಕೈಗೆ ಹಾವು ಕಚ್ಚಿದಂತಾಗಿದೆ. ನನ್ನ ಸ್ಥಿತಿ ಹೀಗೆ ಅಸಮರ್ಪಕ ವಾಗಿದ್ದರೂ ನಾನರಿಯದಂತೆ, ನನ್ನ ಬಾಳಿಗೆ ಬಂದು ಆಗಾಗ ಕವಿತೆಯಾಗುತ್ತಿರುವ, ಒಂದು ಅಪೂರ್ವ ಜೀವನ ಸಂತೋಷದ ಅನವರತ ಪ್ರತಿಧ್ವನಿಯೊಂದೇ ನನ್ನನ್ನು ಕಾಯುತ್ತಿದೆ. ಆರ್ಥಿಕ ಮುಗ್ಗಟ್ಟಿನಲ್ಲಿ ಕಳೆದುಕೊಂಡ ಅಭಿಮಾನವನ್ನು ಪದ್ಯ ಬರೆದು ಸಂಪಾದಿಸಲು ಹೋರಾಡುತ್ತಿದ್ದೇನೆ. ಕಷ್ಟ ಪಡುತ್ತಲೇ, ಪಟ್ಟ ಕಷ್ಟವನ್ನು ಮರೆಯುವಂತೆ ಮಾಡಿ ಬದುಕಿ, ಬರೆಯುವಂತೆ ಹರಸುತ್ತಿರುವ ಹಿರಿಯರೂ, ನನ್ನ ಪ್ರೇಮಗೀತೆಗಳ ಗುರುಗಳೂ ಆಗಿರುವ ನಿಮಗೆ ನನ್ನ ಕೃತಜ್ಞತೆಯನ್ನು ಸೂಚಿಸಲು ಮಾತು ಬಾರದಾಗಿದೆ. ನನ್ನಿಂದ ಬೇಸರವಾಗಿದ್ದರೆ, ಉದಾರವಾಗಿ ಕ್ಷಮಿಸಿ.

* * *

ಶ್ರೀ ಪೇಜಾವರ ಮಠದ ಸ್ವಾಮೀಜಿಯವರು ಉಡುಪಿ, ೯–೪–೧೯೫೩

ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಮುಖ್ಯಾಭಿಮಾನಿಗಳೂ ಪರಮಪ್ರಿಯರೂ ಆದ ತೀ.ನಂ. ಶ್ರೀಕಂಠಯ್ಯನವರಿಗೆ ಮಾಡುವ ನಾರಾಯಣ ಸ್ಮರಣೆಗಳು. ನಾವೀಗ ಪರ್ಯಾಯ ಪೀಠಾರೂಢರಾಗಿ ಕುಶಲಗಳಿರುವೆವು. ನಮ್ಮ ಪರ್ಯಾಯದ ಎರಡು ವರುಷಗಳ ಅವಧಿಯಲ್ಲಿ ಅಭಿಮಾನಿಗಳಾದ ನಿಮ್ಮ ಆಗಮನವನ್ನು ನಾವೊಮ್ಮೆ ಬಯಸುವುದು ಸ್ವಾಭಾವಿಕ. ಅದನ್ನು ಪೂರೈಸುವುದರಲ್ಲೂ ನೀವು ಹಿಂದೆ ಮುಂದೆ ನೋಡಲಾರಿರಿ. ಈ ವರುಷ ಮೇ ೨೦ರಿಂದ ೨೩ರ ವರೆಗೆ ಕೃಷ್ಣಮಠದಲ್ಲಿ ವಸಂತೋತ್ಸವದ ಸಂದರ್ಭದಲ್ಲಿ ಉಪನ್ಯಾಸ ಗೋಷ್ಠಿಯು ನಡೆಯಲಿದೆ. ತಾ ೩೦ ಮತ್ತು ೩೧ ಈ ಎರಡು ದಿನಗಳಲ್ಲಿ ನಿಮ್ಮ ಭಾಷಣಗಳನ್ನು ಸವಿಯಲು ನಾವೂ ಉಡುಪಿಯ ನಾಗರಿಕರೂ ತುಂಬ ಉತ್ಕಂಠಿತರಾಗಿದ್ದಾರೆ. ಆದ್ದರಿಂದ ನಮ್ಮ ಈ ವಿಶ್ವಾಸಪೂರ್ಣವಾದ ಆಹ್ವಾನವನ್ನು ಸ್ವೀಕರಿಸಿ ಆ ಎರಡು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಕೃಷ್ಣಾನುಗ್ರಹ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ನಿಮ್ಮ ಪತ್ರವನ್ನೇ ಎದುರು ನೋಡುತ್ತಿದ್ದೇವೆ. ಪತ್ರದಲ್ಲಿ ನೀವು ಕೊಡಲಿರುವ ಎರಡು ಭಾಷಣಗಳ ವಿಷಯಗಳನ್ನು ಉಲ್ಲೇಖಿಸುವಿರಾಗಿ ನಂಬಲೇ? ಇತಿ ಪ್ರೀತಿಪೂರ್ವಕ ನಾರಾಯಣ ಸ್ಮರಣೆಗಳು.

* * *

ಶ್ರೀ ಪೇಜಾವರ ಮಠದ ಸ್ವಾಮೀಜಿಯವರು ಉಡುಪಿ, ೨೦–೪–೧೯೫೩

ಶ್ರೀ ಪೇಜಾವರ ಮಠದ ಶ್ರೀಪಾದಂಗಳವರು ಪರಮಪ್ರಿಯರಾದ ಶ್ರೀ ತೀ.ನಂ.ಶ್ರೀಕಂಠಯ್ಯ ನವರಿಗೆ ಮಾಡುವ ನಾರಾಯಣ ಸ್ಮರಣೆಗಳು. ನಿಮ್ಮ ಪತ್ರ ತಲುಪಿದೆ. ನಮ್ಮ ಆಹ್ವಾನದಂತೆ ನೀವು ಉಡುಪಿಗೆ ಬರಲು ಒಪ್ಪಿದುದಕ್ಕಾಗಿ ಆನಂದ ಪಟ್ಟಿದ್ದೇವೆ. ಉಡುಪಿಗೆ ಬರಲು ವಿಶ್ವವಿದ್ಯಾಲಯದ ಕೆಲಸವು ತೊಂದರೆಯಾಗಲಾರದು. ವಸಂತೋತ್ಸವದ ಮೊದಲೇ ಆ ಕಾರ್ಯಭಾರವು ನಿಮ್ಮ ಮೇಲೆ ಬೀಳುವುದು, ಆದ್ದರಿಂದ ನಿಶ್ಚಿತವಾಗಿ ಈ ಸಂದರ್ಭದಲ್ಲಿ

ಉಡುಪಿಗೆ ಬರಲಿರುವಿರಿ ಎಂದು ನಂಬಿದ್ದೇವೆ. ನಾಲ್ಕುದಿನಗಳಲ್ಲಿ ನಿಮಗೆ ಅನುಕೂಲವಾಗುವಂತೆ ದಿನಗಳನ್ನು ಬದಲಾಯಿಸಬಹುದಾಗಿದೆ. ಅಂತೂ ಅವಶ್ಯವಾಗಿ ಉಡುಪಿಗೆ ಬರುವುದೆಂದೇ ನೀವು ಸಂಕಲ್ಪಿಸಬೇಕಾಗಿ ಅಪೇಕ್ಷಿಸುವೆನು. ಅಂತಹ ಬಲವತ್ತರವಾದ ತೊಂದರೆಯು ಬಂದರೆ ನಿಮ್ಮನ್ನು ಇಕ್ಕುಳದಲ್ಲಿ ನಾವು ಸಿಕ್ಕಿಸಲಾರೆವು. ಸಾಮಾನ್ಯವಾದ ತೊಂದರೆಗಳಿಗಾಗಿ ನೀವು ಉಡುಪಿಯ ಆಗಮನವನ್ನು ತಡೆಹಿಡಿಯಲಾರಿರಿ ಮತ್ತು ಅಂತಹ ಬಲವಾದ ತೊಂದರೆ ಬರಲಾರದು ಎಂದೂ ಭರವಸೆಪಟ್ಟಿದ್ದೇವೆ. ಅನಿವಾರ್ಯವಾಗಿ ತೊಂದರೆಗಳು ಬಂದರೆ ಆಗ ನೀವು ಸ್ವತಂತ್ರರಿರುವಿರಿ. ಅಂತೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆಯೇ ನೀವು ಪ್ರಯತ್ನಿಸುವಿರಾಗಿ ನಂಬಿದ್ದೇವೆ. ಅದರಂತೆ ಕಾರ್ಯಕ್ರಮಗಳಲ್ಲಿ ನಿಮ್ಮ ಹೆಸರನ್ನು ಕಾಣಿಸುವೆವು. ಉಪನ್ಯಾಸದ ವಿಷಯಗಳನ್ನು ಬರೆದು ತಿಳಿಸಬೇಕಾಗಿ ಅಪೇಕ್ಷಿಸುವೆವು. ಇತಿ ನಾರಾಯಣ ಸ್ಮರಣೆಗಳು

* * *

ಡಿ.ಕೆ. ಭೀಮಸೇನ್ ರಾವ್ ಹೈದರಾಬಾದ್, ೧-೮-೫೩

ನಿಮ್ಮ ೨೮-೭-೫೩ರ ಕಾಗದ ನಿನ್ನೆ ಸಾಯಂಕಾಲ ಕೈಸೇರಿತು. ಈ ಸಭೆಗೆ ನೀವು ಬರುತ್ತೀರೆಂದು ತುಂಬ ಆಸೆ ಇತ್ತು. ನಿಮಗೆ ರಿಜಿಸ್ಟ್ರಾರ್ ಅವರ ಕಾಗದ ಮುಂಚೆಯೇ ತಲುಪಿರಬಹುದೆಂದೂ ಆಮೇಲೆ ನನ್ನ ಕಾಗದ ನಿಮಗೆ ಸೇರಿದ ಮೇಲೆ ಹೊರಡಬಹುದೆಂದೂ ತಿಳಿದುಕೊಂಡಿದ್ದೆ. ಆದರೆ ನೀವು ಬೆಂಗಳೂರಿಗೆ ಹೋಗಿದ್ದುದರಿಂದ ರಿಜಿಸ್ಟ್ರಾರ್ ಅವರ ಕಾಗದ ನಿಮಗೆ ಸಮಯಕ್ಕೆ ಸರಿಯಾಗಿ ಸಿಕ್ಕಲಿಲ್ಲ. ನನಗೆ ಕಾಗದ ಸಭೆಗೆ ಮುಂಚೆ ಬಾರದೇ ಇದ್ದುದರಿಂದ ಪ್ರಾಯಶಃ ಕಾಗದ ಬರೆಯಲು ಅವಕಾಶವಿರಲಿಲ್ಲವೇನೋ ಎಂದು ಭಾವಿಸಿ ನನ್ನ ಸ್ನೇಹಿತರೊಡನೆ ಬುಧವಾರ (೨೯-೭-೫೩) ಸಾಯಂಕಾಲ ರೈಲಿಗೆ ಬರಬಹುದೆಂದು ಸ್ಟೇಷನ್ನಿಗೆ ಹೋಗಿದ್ದೆ. ನೀವು ಬರಲಿಲ್ಲವೆಂದು ನನಗೂ ನಮ್ಮ ಸ್ನೇಹಿತರಿಗೂ ತುಂಬ ನಿರುತ್ಸಾಹವಾಯಿತು. ಮಾರನೆಯ ದಿನ ಬೆಳಗಿನ ರೈಲಿಗಾದರೂ ಬರಬಹುದೆಂದು ಬೆಳಗ್ಗೆ ೫ ಗಂಟೆಗೆ ಸ್ಟೇಷನ್ನಿಗೆ ಹೋದೆ. ಆಗ ನೀವು ಬಾರದಿದ್ದುದರಿಂದ ಮತ್ತಷ್ಟು ನಿರಾಶೆಯಾಯಿತು. ಏನೇನೋ ಆಲೋಚನೆಗಳು ಬಂದುವು. ಅವುಗಳಲ್ಲಿ ನೀವು ಊರಲ್ಲಿ ಇರದಿರುವುದು ಒಂದು. ನಿಮ್ಮ ಕಾಗದದಿಂದ ಈ ಮಾತು ಸತ್ಯವಾಯಿತು.

ನಮ್ಮ ಸ್ನೇಹಿತರೆಲ್ಲರೂ ನಿಮ್ಮನ್ನು ಹೈದರಾಬಾದಿಗೆ ಬರಮಾಡಿಕೊಳ್ಳಬೇಕೆಂದು ಉತ್ಕಟವಾದ ಅಪೇಕ್ಷೆ ಇರಿಸಿಕೊಂಡಿದಾರೆ. ನಾನು ಈ ಸಲ ನೀವು ಇಲ್ಲಿಗೆ ತಪ್ಪದೆ ಬರುತ್ತೀರೆಂದು ಅವರಿಗೆ ಆಶ್ವಾಸನವನ್ನೂ ಕೊಟ್ಟಿದ್ದೆ. ನಮ್ಮಿಂದ ನಿಮಗೆ ಸರಿಯಾದ ಅವಕಾಶ ಬರಲು ಸಿಕ್ಕದೆ ಇದ್ದುದರಿಂದ ತುಂಬ ವಿಷಾದವಾಗಿದೆ.

ಇನ್ನು ಮುಂದೆ ನಿಮ್ಮ ಸೂಚನೆಯಂತೆ ಹೆಚ್ಚು ದಿವಸ ಅವಕಾಶವಿಟ್ಟು ಸಮಿತಿಯು ತಾರೀಕನ್ನು ಏರ್ಪಡಿಸುತ್ತದೆ. ಸಾಧ್ಯವಾದರೆ ಮೊದಲೆ ನಿಮಗೆ ಕಾಗದವನ್ನು ಬರೆದು ನಿಮಗೆ

ಅನುಕೂಲವಾದ ತಾರೀಕನ್ನು ತಿಳಿದುಕೊಂಡು ಆ ತಾರೀಕಿನಲ್ಲಿಯೇ ಸಭೆ ನಡೆಯುವಂತೆ ಏರ್ಪಾಟು ಮಾಡಲಾಗುತ್ತದೆ.

ಹನ್ನೆರಡು ಹದಿಮೂರು ವರ್ಷವಾದರೂ ಇಲ್ಲಿನ ಆತಿಥ್ಯ ನೀವು ಮರೆತಿಲ್ಲ ಎಂದು ಬರೆದಿರುವದು ನಿಮ್ಮ ಸ್ನೇಹವನ್ನು ತಿಳಿಸುತ್ತದೆ. ಎಷ್ಟು ವರ್ಷವಾದರೆ ಏನು ಸ್ನೇಹಾತಿಥ್ಯ ಯಾವಾಗಲೂ ನವೀನವಾಗಿಯೇ ಇರುತ್ತದೆ. ಆದಷ್ಟು ಬೇಗ ನಿಮ್ಮನ್ನು ನೋಡಬೇಕೆಂದು ನಾವೆಲ್ಲ ಬಹಳ ಕುತೂಹಲವುಳ್ಳವರಾಗಿದ್ದೇವೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಶಬ್ದಮಣಿದರ್ಪಣದ ಅಪೂರ್ವ ಪ್ರತಿಯೊಂದಿದೆ. ಅದನ್ನೇ ಆಧರಿಸಿ ನಾನು ಧಾರವಾಡದಲ್ಲಿ ಮಾಡಿದ 'ಶಬ್ದಮಣಿದರ್ಪಣದ ಪಾಠಾಂತರಗಳು' ಎಂಬ ಭಾಷಣ ಮಾಲಿಕೆ ಪುಸ್ತಕರೂಪವಾಗಿ ಧಾರವಾಡದಿಂದ ಪ್ರಕಟವಾದುದು ನಿಮಗೆ ತಿಳಿದಿರ ಬಹುದು. ಪ್ರಾಯಶಃ ನೋಡಿಯೂ ಇರಬಹುದು. ಈಗ ಆ ಮೂಲಪ್ರತಿಯನ್ನು ಪ್ರಕಟಿಸ ಬೇಕೆಂದು ವಿಶ್ವವಿದ್ಯಾಲಯದವರು ನಿರ್ಣಯಿಸಿದಾರೆ. ಸಂಪಾದನೆಯ ಕಾರ್ಯವನ್ನು ಕೈಗೊಂಡು ಈಗಾಗಲೆ ಆಖ್ಯಾತ ಪ್ರಕರಣ ಪೂರ್ತಿ ಕೆಲಸ ಆಗಿದೆ. ನೀವು ಇಲ್ಲಿಗೆ ಬಂದಾಗ ಅದನ್ನು ನಿಮಗೆ ನೋಡಿಸಬೇಕೆಂಬ ಬಲವಾದ ಅಪೇಕ್ಷೆ ಇತ್ತು. ಆ ಸಂದರ್ಭ ತಪ್ಪಿದುದಕ್ಕಾಗಿ ನನ್ನ ವಿಷಾದ ಮತ್ತಷ್ಟು ಹೆಚ್ಚಾಗಿದೆ. ಈಗ ಅಚ್ಚಾಗಿರುವ ಶಬ್ದಮಣಿದರ್ಪಣದ ಪ್ರತಿಗಳ ಪಾಠಾಂತರ ಗಳನ್ನು ಈ ಸಂಪಾದನೆಯಲ್ಲಿ ಸೇರಿಸಿದೇನೆ. ಬೇರೆ ಹಸ್ತಪ್ರತಿಗಳು ಸಿಕ್ಕದೇ ಇರುವುದರಿಂದ ಕೆಲವೆಡೆಯ ಪಾಠಗಳಲ್ಲಿ ಇನ್ನೂ ಸಂದೇಹಗಳು ಉಳಿದುಕೊಂಡಿವೆ. ಧಾರವಾಡದ ಸಂಶೋಧನ ಸಂಸ್ಥೆಯಲ್ಲಿ ಕೆಲವು ಹಸ್ತಪ್ರತಿಗಳು ಇವೆಯೆಂದು ತಿಳಿದುಬಂದಿದೆ. ಆ ಹಸ್ತಪ್ರತಿಗಳನ್ನು ದಯವಿಟ್ಟು ಕಳಿಸಿಕೊಡಬೇಕೆಂದು ಅಲ್ಲಿನ ಡೈರೆಕ್ಟರ್ ಅವರನ್ನು ಪ್ರಾರ್ಥಿಸಿಕೊಂಡಿದ್ದೆ. ನಮ್ಮ ಮಿತ್ರರು ಶ್ರೀಮಾನ್ ಮಾಳವಾಡರು ಆಗಲೆ ಆ ಸಂಸ್ಥೆಯ ಅಧಿಕಾರ ಸ್ಥಾನವನ್ನು ವಹಿಸಿಕೊಂಡಿದ್ದರು. ಅವರು ದಯವಿಟ್ಟು ತಕ್ಷಣ ನನಗೆ ಉತ್ತರ ಬರೆದರು. ಅವರು ಹಸ್ತಪ್ರತಿಗಳ ಪತ್ರ ಸಂಖ್ಯೆ ಮೊದಲಾದ ಪರಿಶೀಲನೆಯ ಕಾರ್ಯ ಈಗ ತಾನೆ ನಡೆದಿದೆಯೆಂದೂ ಅದು ಮುಗಿಯಲು ಸುಮಾರು ಎರಡುವಾರಗಳು ಆಗಬಹುದೆಂದೂ ತಿಳಿಸಿದ್ದರು. ಆ ಕೆಲಸ ಮುಗಿದಿದ್ದರೆ ದಯವಿಟ್ಟು ನೀವು ಅವರಿಗೆ ಈ ವಿಷಯವನ್ನು ಜ್ಞಾಪಿಸಿ ಹಸ್ತಪ್ರತಿಗಳನ್ನು ನನಗೆ ಕಳಿಸಿಕೊಡಲು ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇನೆ. ನಮ್ಮ ಮಿತ್ರರಾದ ಶ್ರೀ ಡಿ.ಎಲ್. ನರಸಿಂಹಚಾರ್ಯರ ಹಸ್ತಪ್ರತಿಯೊಂದು ನಿಮ್ಮ ಹತ್ತಿರ ಇದೆ ಎಂದು ಹೇಳಿದರು. ಆ ಪ್ರತಿಯನ್ನು ನೀವು ಧಾರವಾಡಕ್ಕೆ ತಂದಿದ್ದರೆ ದಯವಿಟ್ಟು ಕಳಿಸಿಕೊಡಿ. ಈ ಎಲ್ಲ ಪ್ರತಿಗಳ ಪಾಠಾಂತರಗಳನ್ನು ಗುರುತಿಸಿದ ಮೇಲೆ ಅವುಗಳನ್ನು ತಿರುಗಿ ಕಳಿಸಿಕೊಡುತ್ತೇನೆ.

ಸಂಪಾದನೆಯ ಕೆಲಸ ಪೂರ್ತಿಯಾದ ಮೇಲೆ ಅಚ್ಚಿಗೆ ಹೋಗುವುದಕ್ಕೆ ಮುಂಚೆ ಅಚ್ಚಿನ ಪ್ರತಿಯನ್ನು ನೀವು ನೋಡಬೇಕೆಂದೂ ನಿಮ್ಮಿಂದ ಸೂಚನೆಗಳನ್ನು ಪಡೆಯಬೇಕೆಂದು ಮಾಡಿದ್ದೇನೆ. ಅದಕ್ಕಾಗಿಯಾದರೂ ನೀವು ಇಲ್ಲಿಗೆ ಬರಬೇಕು. ನಿಮ್ಮನ್ನು ಇಲ್ಲಿಗೆ ಬರುವಂತೆ ಮಾಡಿಕೊಳ್ಳಬೇಕು. ಅಚ್ಚಿನ ಪ್ರತಿ ಸಿದ್ಧವಾಗಬೇಕಾದರೆ ಇನ್ನು ಆರು ತಿಂಗಳ ಸಮಯ ಬೇಕಾಗಬಹುದು. ಈ ಕಾರ್ಯದಲ್ಲಿ ನೀವು ಸಹಾಯಮಾಡಬೇಕೆಂದು ಕೋರುತ್ತೇನೆ.

* * *

ಎಂ.ಆರ್. ಶ್ರೀನಿವಾಸ ಮೂರ್ತಿ ಬೆಂಗಳೂರು, ೨-೯-೩೩

ತಾವು ಮಾಡಿರುವ ಉಪಕಾರಕ್ಕಾಗಿ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು. ಶ್ರೀ ಮೂರ್ತಿರಾಯರು ತಾವು ಆಲೋಚನೆ ಮಾಡುವುದಕ್ಕಾಗಿ ವಾರ ಕಾಲಾವಕಾಶಬೇಕೆಂದು ಕೇಳಿದಾಗ ಅವರು ತಮ್ಮ ಆಪ್ತರನ್ನು ಸಲಹೆ ಕೇಳುತ್ತಾರೆಂದು, ತಮಗೆ ಅವರು ಕಾಗದ ಬರೆಯುತ್ತಾರೆಂದೂ ನಾನು ಊಹಿಸಿದೆ. ಆದರೆ ತಾವು ಪರಿಷತ್ತಿನ ಹಿತ ಚಿಂತಕರಾಗಿರುವುದರಿಂದಲೂ ನನ್ನಲ್ಲಿ ಅಕೃತ್ರಿಮ ವಿಶ್ವಾಸವುಳ್ಳವರಾದ್ದರಿಂದಲೂ, ತಾವಾಗಿಯೇ, ಅಪ್ರಾರ್ಥಿತರಾಗಿ-ಸಹಾಯಮಾಡುತ್ತೀರೆಂದು ನಂಬಿ ನಾನು ತಮಗೆ ಯಾವ ಕಾಗದವನ್ನು ಬರೆಯಲಿಲ್ಲ. ತಮ್ಮ ಕಾಗದವನ್ನು ಶ್ರೀ ಮೂರ್ತಿರಾಯರು ನನಗೆ ತೋರಿಸಿದಾಗ ಈ ಮಾತುಗಳನ್ನೇ ನಾನು ಹೇಳಿದೆ.

ಒಂದು ತಿಂಗಳಿಂದ ಕಷ್ಟಗಳನ್ನು ಅಪಮಾನಗಳನ್ನು ಸಹಿಸಿಕೊಂಡು, ಕಡೆಯಲ್ಲಿ ಮನಸ್ಸನ್ನು ಗಟ್ಟಿಮಾಡಿಕೊಂಡು ಉಚ್ಚಾಟನೆ ಮಾಡಬೇಕಾಯಿತು. ತಾವು ನನ್ನ ವಿಚಾರದಲ್ಲಿ ಒಂದು ಮಾತನ್ನು ಹೇಳಿದ್ದಿರಿ: ನಾನು ಒಂದು ವಿಚಿತ್ರಮೃಗ, ಪರಿವಾರದವರು ನನ್ನನ್ನು ಪ್ರೀತಿಸುವಂತೆ ನಾನು ಸೌಮ್ಯನಾಗಿ ನಡೆದುಕೊಳ್ಳುವುದಿಲ್ಲ – ಎಂಬುದು ಒಟ್ಟಿನಲ್ಲಿ ಅಭಿಪ್ರಾಯ. ಆ ಅಭಿಪ್ರಾಯಕ್ಕೆ ಮಾನ್ಯತೆ ಕೊಟ್ಟಿದ್ದೇನೆ. ಆದರೆ ಹತ್ತಿರ ಸೇರುತ್ತಿದ್ದವರು ಎಂಥವರು? ಪರಿಷತ್ತಿನ ಹಿತಗಳನ್ನು ಬಲಿಕೊಟ್ಟು ಸ್ವಾರ್ಥಸಾಧನೆ ಮಾಡಿಕೊಳ್ಳತಕ್ಕವರು, ಮಾನ ಮರ್ಯಾದೆ ತಿಳಿಯದವರು, ಯೋಗ್ಯತೆಯಿಲ್ಲದಿದ್ದರೂ ಪ್ರತಿಷ್ಠಾಕಾಂಕ್ಷಿಗಳು, ಉದ್ಧತರು. ಗಣ್ಯರಾದವರೂ ಸ್ನೇಹಿತರೂ ಆದವರು ಜವಾಬ್ದಾರಿಯನ್ನು ವಹಿಸುವುದಕ್ಕೆ ಹಿಂಜರಿಯುತ್ತಿದ್ದರು. ಈಗ ಶ್ರೀ. ಮೂರ್ತಿರಾಯರು ದೊಡ್ಡ ಮನಸ್ಸುಮಾಡಿ ನಮ್ಮೆಲ್ಲರ ಪ್ರಾರ್ಥನೆಯನ್ನು ಮನ್ನಿಸಿ ಕಾರ್ಯದರ್ಶಿಗಳಾಗಿ ನಿಂತಿದ್ದಾರೆ. ಪರಿಷತ್ತಿಗೆ ಬಂಗಾರದ ಕಲಶ ಇಟ್ಟ ಹಾಗಾಯಿತು. ರಾಜಸೇವಾಸಕ್ತ ಡಿ.ಸಿ. ಸುಬ್ಬರಾಯಪ್ಪನವರನ್ನು ಗೌ॥ ಕೋಶಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದೇನೆ. ಆ ಹಿರಿಯರು ನನ್ನ ಕಷ್ಟಗಳನ್ನು ನೋಡಿ ಕನಿಕರಿಸಿ ಒಪ್ಪಿಕೊಂಡಿದ್ದಾರೆ. ಈಗ ಮನಸ್ಸಿಗೆ ನೆಮ್ಮದಿಯಾಯಿತು.

ಕುಮಟದಲ್ಲಿ ಸಾಹಿತ್ಯ ಸಮ್ಮೇಳನವನ್ನು ಮುಂದಿನ ಡಿಸೆಂಬರಿನಲ್ಲಿ ನಡೆಸಬೇಕೆಂದು ಅಲ್ಲಿಂದ ಆಹ್ವಾನ ಬಂದಿದೆ. ಈ ವಿಚಾರವಾಗಿಯೂ ಇನ್ನಿತರ ವಿಷಯಗಳ ಬಗ್ಗೆಯೂ ಮುಂದಿನ ಕಾಗದದಲ್ಲಿ ಬರೆಯುತ್ತೇನೆ.

ನಾನು ಪಂಡಿತನಲ್ಲ. ಆದರೂ ಚಿಕ್ಕಂದಿನಲ್ಲಿ ಗಟ್ಟಿಮಾಡಿದ್ದ ಒಂದು ಪದ್ಯವನ್ನು ಇಲ್ಲಿ ಬರೆಯುತ್ತೇನೆ.

ಕರಾವಿವ ಶರೀರಸ್ಯ ಅಕ್ಷ್ಣೋರಿವ ಚ ಪಕ್ಷ್ಮಣೀ।
ಅಪ್ರೇರಿತ ಹಿತಂ ಕಾರ್ಯಮಿದಂ ಸನ್ಮಿತ್ರ ಲಕ್ಷಣಂ॥

* * *

ಎ.ಆರ್. ಕೃಷ್ಣಶಾಸ್ತ್ರಿ ಬೆಂಗಳೂರು, ೧-೨-೧೯೫೪

ಮ॥ ಹನುಮಂತರಾಯರು ಇಂಗ್ಲಿಷ್ ಗೀತಗಳ (ಎರಡನೆಯ ಮುದ್ರಣ) ಒಂದು ಪ್ರತಿಯನ್ನು ದಯವಿಟ್ಟು ಕಳುಹಿಸಿದ್ದಾರೆ. ನಾವೆಲ್ಲರೂ ಅದಕ್ಕಾಗಿ ಇಷ್ಟು ವರ್ಷ ಕಾದಿದ್ದು ಸಾರ್ಥಕವಾಯಿತು. ನಿಮ್ಮ ಪ್ರಸ್ತಾವನೆಯು ಚೆನ್ನಾಗಿದೆ. ಅದರಲ್ಲಿ ನೀವು ತುಂಬಿರುವ ಕಿತ್ತಳೆ ಹಣ್ಣುಗಳನ್ನು ಶ್ರೀಯವರು ಬಹಳ ದಿನಗಳವರೆಗೂ ಜ್ಞಾಪಕದಲ್ಲಿಟ್ಟುಕೊಂಡಿದ್ದು ಆಗಾಗ್ಗೆ ಪ್ರಸ್ತಾಪಿಸುತ್ತಿದ್ದರು. ಅದು ಒಳ್ಳೆಯ ಕಾಲ–ಎಲ್ಲ ದೃಷ್ಟಿಯಿಂದಲೂ. ತೇಹಿನೋ ದಿವಸಾಗತಾಃ!

* * *

ಎ.ಆರ್. ಕೃಷ್ಣಶಾಸ್ತ್ರಿ ಬೆಂಗಳೂರು, ೧೯-೮-೫೪

ನಿಮ್ಮ ಪತ್ರ ತಲುಪಿತು. ಕನ್ನಡ ಸಾಹಿತ್ಯದ ವಿಚಾರವಾಗಿ ಒಂದು ವಿಸ್ತಾರವಾದ ಉದ್ಗ್ರಂಥ ಬರಬೇಕಾದ ಅವಶ್ಯಕತೆ ಇದ್ದೇ ಇದೆ. ಅದನ್ನು ನೀವು ಕೈಕೊಂಡಿರುವುದರಿಂದ ಅದು ಚೆನ್ನಾಗಿ ಆಗುವುದೆಂಬ ನಂಬಿಕೆಯೂ ನನಗಿದೆ. ನಾನು ಕನ್ನಡ ಸಾಹಿತ್ಯದ ಸಂಬಂಧ ಬಿಟ್ಟು ಹಲವು ವರ್ಷಗಳಾದವು. ಮೈಸೂರಿನಿಂದ ಬರುತ್ತ ನನ್ನ ಮುಕ್ಕಾಲು ಮೂರು ಮೀಸಪಾಲು ಕನ್ನಡ ಪುಸ್ತಕಗಳನ್ನೆಲ್ಲಾ ಅವರಿವರಿಗೆ ಕೊಟ್ಟು ಬಂದೆ. ಇಲ್ಲಿ ಕನ್ನಡ ಲೇಖನಗಳು ಗ್ರಂಥಗಳು ಸಿಕ್ಕುವುದು ನಿಮಗೇ ಗೊತ್ತಿದೆ. ಮೈಸೂರಿನ ಲೈಬ್ರರಿಯಲ್ಲಾದರೂ ರಿ. ಪ್ರೊಫೆಸರ್ ಎಂಬ ಗೌರವವಿದೆ – ಅವರಿಗೆ ಪ್ರವೇಶವಿದೆ – ಇಲ್ಲಿ ಮಿಥಿಕ್ ಸೊಸೈಟಿ ಬಿಟ್ಟರೆ ಉಪಯುಕ್ತವಾದ ಪುಸ್ತಕ ಬೇರೆಲ್ಲೂ ದೊರೆಯುವುದಿಲ್ಲ. ಅದೂ ಪ್ರಕೃತ ಗ್ರಂಥಕ್ಕೆ ಉಪಯುಕ್ತವಾಗುವುದಿಲ್ಲ. ಹೀಗಿರಲು ನಾನು ಯಾವ ಧೈರ್ಯದ ಮೇಲೆ ಕನ್ನಡ ಸಾಹಿತ್ಯದ ವಿಚಾರವಾಗಿ ಬರೆಯುತ್ತೇನೆಂದು ಹೇಳಲಿ? ನನ್ನನು ಕ್ಷಮಿಸಿಬಿಡಿ. ಅದೇ ವಿಷಯದಲ್ಲಿಯೇ ಕೈ ಇಟ್ಟುಕೊಂಡು ಸಲಕರಣೆಗಳನ್ನೆಲ್ಲ ಉಳ್ಳ ಕಿರಿಯರು ಈಗ ಬೇಕಾದ ಹಾಗಿದ್ದಾರೆ ಮೈಸೂರು ವಿಶ್ವವಿದ್ಯಾಲಯವು ಹ.ಕಾ. ಸಂಗ್ರಹ, ಸಂಸ್ಕೃತ ನಾಟಕಗಳನ್ನು ಪುನರ್ಮುದ್ರಣಕ್ಕೆ ತೆಗೆದುಕೊಂಡಿದೆ. ಅವುಗಳನ್ನು ತಿದ್ದಲು ನಿಮ್ಮ ಸಲಹೆ ಕೊಟ್ಟರೆ ತುಂಬ ಸಂತೋಷ. ಡಾ. ಕೃಷ್ಣಮೂರ್ತಿಗಳ 'ಭವಭೂತಿ'ಯನ್ನು ಗುರುತು ಮಾಡಿಕೊಂಡಿದ್ದೇನೆ. ಒಂದು ಸಲ ಗ್ರಂಥವನ್ನು ಈ ದೃಷ್ಟಿಯಿಂದ ಓದಿನೋಡಿ. ಕೈಪಿಡಿ I ಅನ್ನು ಅಚ್ಚಿಗೆ ತೆಗೆದುಕೊಂಡಂತಿದೆ. ಅದನ್ನು ಸಂಸ್ಕರಣಗೊಳಿಸುವ ಕೆಲಸವನ್ನು ನಿಮಗೆ ವಹಿಸಿತ್ತು. ನೀವು ಏನಾದರೂ ಮಾಡಿದ್ದೀರಾ?

ಕೋಶದ ಕೆಲಸ ನಿಂತಲ್ಲಿ ನಿಂತಿದೆ. ಸದ್ಯದಲ್ಲಿಯೇ ಡಿ.ಎಲ್‌ಎನ್ ಅವರನ್ನು ಈ ಕಾರ್ಯಕ್ಕೆ ನೇಮಿಸುವ ಅಪ್ಪಣೆ ಬರಬಹುದು. ಅದು ತೃಪ್ತಿಕರವಾಗದೆ ಮತ್ತೆ ಪತ್ರವ್ಯವಹಾರವಾಗಬೇಕಾಗುತ್ತದೆ. ಅವರಿಲ್ಲದೆ ಕೆಲಸ ಮುಂದುವರಿಸುವ ಹಾಗಿಲ್ಲ.

* * *

A.R. Krishna Sastri Bangalore, 23-7-57

Personal and Confidential

May I request you to kindly let me know three or four Kannada books of outstanding merit published during the last three years? I am not quite sure that I am in touch with the latest publications - especially of Northern Karnataka. You can guess the purpose for which this informtion is required. You know I value your opinion. Thanking you for a very early reply.

* * *

A.R. Krishna Sastri Bangalore, 2-8-57

Confidential

Your letter of 31/7. I am glad to learn that you are also one of the scholars consulted. I can now write more freely.

My thoughts naturally went first towards the recent Kannada publications of the Mysore University, and I found Dr. S.S. Sastry's ಭಾರತೀಯ ಸಂಸ್ಕೃತಿ came within the period. It shows an outstanding amount of scholarship. Second edition of ಸಂಸ್ಕೃತ ನಾಟಕ also comes within this period. The fourth para of the Delhi communication seems to be contemplating second and subsequent editions also. But it is not explicit. I asked ANM if he could clear my doubt. He said he did not know and would write for clarification. Any way, it is not for me to mention the book in my recommendations or to say anything about it either to you or anybody else. If you are going over here in the course of next week on any business, private or official, we can put our heads together as "Three wise men" and decide. This is the first time I am being consulted.

Outside the Mysore University publications I can only think of Dr. ಮಾಸ್ತಿ's ಚಿಕ್ಕವೀರ ರಾಜೇಂದ್ರ. It is published within the three year period and comes on the top of his nearly half a century's literary activity.

He is a brilliant university man and has done yeomen service to modern Kannada literature.

I have mentioned these two books - Dr. Sastry's and Dr. Masthi's to ANM in an informal talk. I believe he is also in correspondence with you on the subject.

If you don't reply in a day or two, the post office may strike! I don't know if I can reply to Delhi before the threatened strike. What shall we do if the strike comes off? - and goes on?

* * *

A.R. Krishna Sastri Bangalore, 6th Aug 1957

Confidential

Your kind letter of yesterday. I have written to Delhi for clarification; but no reply is received. If a book is published more than once during the three year period itself, there is no point in asking for the date of the first edition. It can stand on the strength of any of the editions. But let me not dilate on it.

ಸಮರಸವೇ ಜೀವನ is the production of a decade or more. I can compare it only to a long goods-train with a number of waggons containing materials varying in quality and quantity, stopping at each and every station without any sense of time and jogging along...... It has changed its name with every part and I don't know if it has appeared in its final form, shape and nomenclature. I must confess that I had not the patience to read any of the several parts through - though I honestly tried to.

ಶಾಂತಲಾ is no doubt good writing (at present the book is not with me; and I can't verify the date). I felt, when I read it first, that it could not all be Iyer's. It appeared to be artificial and strained at places. The dream or vision coming in the middle was too too long and was like the 'roughage'.

ರಸಸರಸ್ವತಿ is in P.T.N's usual style and quality; it would be considered meagre even for a smaller prize like the DBC; similarly re Bendre's recent books.

What do you think of Dr. K.M.K. Rao's ಜಗನ್ನಾಥ ದಾಸರು ? (June 1956). He seems to have taken immense pains to collect the material and present it well. The 5 ಅನುಬಂಧs maps and illustrations are all good and are very helpful to the study of the subject.

I shall meet Mr. ANM today or tomorrow and have further talks with him.

* * *

ಜಿ.ಪಿ. ರಾಜರತ್ನಂ ಬೆಂಗಳೂರು, ೨೩-೨-೧೯೫೫

ಹಿಂದೆ ಒಂದು ಸಲ ಶ್ರೀ ಪು.ತಿ.ನ. ಅವರ ಮನೆಯಲ್ಲಿ, ದಿವಂಗತ ಎಂ.ಆರ್.ಶ್ರೀ. ತಮಗೆ ಬರೆದ ಒಂದು ಕಾರ್ಡಿನಿಂದ 'ಸ್ನೇಹ'ವನ್ನು ಕುರಿತ ಒಂದು ಸಂಸ್ಕೃತ ಸುಭಾಷಿತವನ್ನು ಪ್ರಸ್ತಾಪ ಮಾಡಿದಿರಿ. ಅದು ತಮಗೆ ಜ್ಞಾಪಕವಿರುವುದಾದರೆ, ಕೈಬಿಡುವಾದಾಗ, ಒಂದು ಕಾರ್ಡಿನಲ್ಲಿ ಅದನ್ನು ನನಗೆ ಗುರುತುಮಾಡಿ ಕಳಿಸಬೇಕೆಂದು ಪ್ರಾರ್ಥನೆ.

ಮೊನ್ನೆ ಸಂಸರನ್ನು ಕುರಿತು ನಮ್ಮ ಸಂಘ ಏರ್ಪಡಿಸಿದ್ದ ಉತ್ಸವ, ತಮ್ಮೆಲ್ಲರ ಶುಭಾಶಯಗಳ ಬೆಂಬಲದಿಂದ ತುಂಬ ವಿಜೃಂಭಣೆಯೊಡನೆ ಗಂಭೀರವಾಗಿ ನಡೆಯಿತು ಎಂದು ತಿಳಿಸಲು ಸಂತೋಷವಾಗುತ್ತದೆ.

* * *

ಜಿ.ಪಿ. ರಾಜರತ್ನಂ ಬೆಂಗಳೂರು, ೩-೨-೧೯೫೮

ಆದಾಗಿ-ಆ ಶನಿವಾರ ಹೇಳಿದ್ದಂತೆ ಪರಿಷತ್ತಿಗೆ ಬರಲು ಆಗಿದಿದ್ದಕ್ಕಾಗಿ ಕ್ಷಮಿಸಬೇಕು. ನಾನು ಮೈಸೂರಿಂದ ಬರುವ ವೇಳೆಗೆ ನನ್ನ ಮನೆಯವರು ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟಿದ್ದರಾದ್ದರಿಂದ, ನನಗೆ ಬರಲು ಬಿಡುವೇ ದೊರಕಲಿಲ್ಲ. ಆಮೇಲೆ ನೀವು ಊರಲ್ಲಿ ಇರುವುದಿಲ್ಲವೆಂದು ಹೇಳಿದ್ದದ್ದರಿಂದ ಕಾಗದ ಬರೆಯಲಿಲ್ಲ. ಆದರೂ ಆ ದಿವಸದ ಮಾತು ಕತೆಗಳಿಂದ ನನ್ನ ಕರ್ತವ್ಯ ನನಗೆ ತಕ್ಕ ಮಟ್ಟಿಗೆ ಸ್ಪಷ್ಟವಾಗಿದೆ. ಅಷ್ಟು ಸಾಕಾಗಬಹುದು.

ಇನ್ನೊಂದು ವಿಷಯ: ಸುಮಾರು ೪೦ ವರ್ಷಗಳ ಹಿಂದೆ ನಮ್ಮ ಕಡೆ ಪ್ರಚಾರದಲ್ಲಿದ್ದ 'ರೀಡರ್'ಗಳು - "ರಾಮಯ್ಯಾ, ಬಾಳೆಯ ತೋಟವನ್ನು ನೋಡು....... ಶಂಕರ, ಏಳು, ನೆಟ್ಟಗೆ ನಿಲ್ಲು.......ನೋಡು ಕಾವೇರಿಯು ನಾಡಿನ ಜನರಿಗೆ...... ಇಟ್ಟರೆ ಸೆಗಣಿಯಾದೆ........

ಆಡಿಸಿದವಳಾರ್ ಎನ್ನ ತಾಯಿ........" ಮೊದಲಾದ ಪಾಠಗಳಿದ್ದುವು-ನಿಮ್ಮಲ್ಲಿ ಏನಾದರೂ ರಕ್ಷಿತವಾಗಿರುವ ಸಂಭವವುಂಟೆ? ಅಥವಾ ಇನ್ನೆಲ್ಲಿ ಇರಬಹುದು? ದಯಮಾಡಿ ಒಂದು ಪಂಕ್ತಿ ಉತ್ತರ ಬರೆಯಬೇಕಾಗಿ ಪ್ರಾರ್ಥನೆ.

* * *

ಹೆಚ್.ಎಸ್. ಬಿಳಿಗಿರಿ ಬರ್ಕಲಿ, ೨-೧-೫೭

ತಾವು ಕೆಲವು ತಿಂಗಳುಗಳ ಹಿಂದೆ ಬರೆದಿದ್ದ ಕಾಗದ, ನಾನು Ann Arborನಲ್ಲಿದ್ದಾಗಲೇ ತಲುಪಿತು. ಅದಕ್ಕೆ ಈಗ ಉತ್ತರ ಬರೆಯುತ್ತಿದ್ದೇನೆ! ದಯವಿಟ್ಟು ಕ್ಷಮಿಸುವುದು.

ನಾನು ಇಲ್ಲಿಗೆ ಹೋದ ವರ್ಷ ಸೆಪ್ಟೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ಬಂದು ತಲುಪಿದೆ. ಬರುವಾಗ "ದಾರಿಯಲ್ಲಿ", ನ್ಯೂ ಹೇವನ್, ಇಥಕ, ನಯಾಗರಾ, ಗ್ರ್ಯಾಂಡ್ ಕ್ಯಾನಿಯನ್, ಪೇಂಟೆಡ್ ಡೆಸರ್ಟ್ಸ್, ಪೆಟ್ರಿಫೈಡ್ ಫಾರೆಸ್ಟ್ಸ್ ಮುಂತಾದ ಅನೇಕ ಸ್ಥಳಗಳನ್ನು ನೋಡಿದೆ. ಇಥಕದಿಂದ ಇಲ್ಲಿಯವರೆಗೂ ಡಾ. ಗಂಪರ್ಜ್ ಅವರ ಕಾರಿನಲ್ಲಿ ಬಂದೆ. ಪ್ರವಾಸ ಬಹಳ ಚೆನ್ನಾಗಿತ್ತು. ರೋಮಾಂಚಕಾರಿಯಾಗಿತ್ತು.

ಇಲ್ಲಿ ನಾನು ಮೂರು ಕೋರ್ಸುಗಳನ್ನು ತೆಗೆದುಕೊಂಡಿದ್ದೇನೆ: Phonetics and Phonemics, Linguistics Laboratory (Field methods), Special Study. ಮೊದಲನೆಯ ಕೋರ್ಸಿಗೆ ಡಾ. ಮೇರಿ ಹಾಸ್ ಅವರು ಅಧ್ಯಾಪಕಿ. ಎರಡನೆಯ ಕೋರ್ಸಿಗೆ ಮಿ. ಸಿಡ್ನಿಲ್ಯಾಂಬ್ ಎನ್ನುವವರು ಅಧ್ಯಾಪಕರು, Finnish ಭಾಷೆಯನ್ನು analyze ಮಾಡುತ್ತಿದ್ದೇವೆ. ಈ ಟರ್ಮಿನಲ್ಲಿ Phonology, ಮುಂದಿನದರಲ್ಲಿ Morphology and Syntax. Special studyಗೆ Kannada Verb Inflection ಎಂಬ ವಿಷಯವನ್ನು ಆರಿಸಿಕೊಂಡಿದ್ದೇನೆ. ಅದನ್ನು Item and Arrangement ಮತ್ತು Item and Process – ಈ ಎರಡು ರೀತಿಗಳಲ್ಲೂ ಬರೆದು, ಯಾವ ರೀತಿ ಕನ್ನಡದ ದೃಷ್ಟಿಯಿಂದ ಉತ್ತಮವಾದುದು ಎಂಬುದನ್ನು ಚರ್ಚಿಸಬೇಕೆಂದಿದ್ದೇನೆ. ಈ ವಿಷಯವನ್ನು ನನಗೆ Ann Arbor ನಲ್ಲಿದ್ದಾಗಲೇ ಡಾ. ಹಾಸ್ ಅವರೇ ಸೂಚಿಸಿದ್ದರು. ಸದ್ಯಕ್ಕೆ, Item and Arrangement ರೀತಿಯನ್ನೂ, ಅದಕ್ಕಿಂತ ಮೊದಲು Phonemicsನ ಮೇಲಿನ ಒಂದು ಸಣ್ಣ ಭಾಗವನ್ನೂ ಮುಗಿಸಿದ್ದೇನೆ. ನಾನು Ann Arborನಲ್ಲಿದ್ದಾಗ ಮೂರು ಕೋರ್ಸುಗಳನ್ನು ತೆಗೆದುಕೊಂಡಿದ್ದೆ. Phonetics ನಲ್ಲಿ A, Field methodsನಲ್ಲಿ B+, ಮತ್ತು Language and Cultureನಲ್ಲಿ B, ಹೀಗೆ ಗ್ರೇಡುಗಳು ಬಂದಿವೆ. ಇಲ್ಲಿ Phonetics and Phonemicsನಲ್ಲಿ ನಡೆದ Mid-Term ಪರೀಕ್ಷೆಯಲ್ಲಿ A ಗ್ರೇಡು ಬಂದಿದೆ. ಮುಂದಿನ Semesterನಲ್ಲಿ ಮತ್ತೆರಡು ಕೋರ್ಸು ಗಳನ್ನು ತೆಗೆದುಕೊಳ್ಳಬೇಕೆಂದಿದ್ದೇನೆ.

ಇಲ್ಲಿಯವರೆಗೂ ಈ ಕಾಗದವನ್ನು ಓದಿದ ತಮಗೆ, ನನ್ನ ವಿಚಾರದಲ್ಲಿ ತೃಪ್ತಿಯುಂಟಾಗಿರ ಬೇಕು. ಆದರೆ, ನನಗೆ ಬಹಳ ನಿರಾಸೆಯಾಗಿದೆ. ಕಾರಣ, ಇಲ್ಲಿಗೆ ಬಂದು ಏನನ್ನೂ ಹೊಸದಾಗಿ

ಕಲಿಯಲು ಆಗಿಲ್ಲ. ತಪ್ಪು ನನ್ನದಲ್ಲ. ಇಲ್ಲಿಯ Ling. Dept.ನದು ಮತ್ತು ಪಾಠಕ್ರಮದ್ದು. ಡಾ. ಹಾಸ್‌ರವರಿಗಂತೂ ಬಹಳ ಕೆಲಸ. ಹದಿನೈದು ದಿನಗಳಿಗೊಮ್ಮೆ ಅವರನ್ನು ನೋಡುವುದು. Ling. Lab.ನಲ್ಲಿ ಸ್ವಲ್ಪ ಅಭ್ಯಾಸ ದೊರಕುತ್ತಿರುವುದು ನಿಜವಾದರೂ, ಮಿ. Lamb ಅವರು ಬಹಳ ಬುದ್ಧಿವಂತರಾದರೂ, ಆ ಕೋರ್ಸಿನಿಂದ ಇದುವರೆಗೂ ಏನೂ ಪ್ರಯೋಜನವಾಗಲಿಲ್ಲ. ನಾನು ಇಲ್ಲಿಗೆ ಬಂದು, ಮುಖ್ಯವಾಗಿ Phonetics (ಅದರಲ್ಲೂ pitch, stress ಮುಂತಾದ ವಿಚಾರಗಳು), Morphology and Syntax ಮುಂತಾದುವುಗಳಲ್ಲಿ ಚೆನ್ನಾಗಿ ಶಿಕ್ಷಣ ಪಡೆಯಬೇಕೆಂದಿದ್ದೆ. Morphology ಮತ್ತು Syntaxನಲ್ಲೇನೋ ಮುಂದಿನ Termನಲ್ಲಿ ಶಿಕ್ಷಣ ದೊರೆಯುತ್ತದೆಯಂತೆ, ನೋಡಬೇಕು! Phoneticsನಲ್ಲಂತೂ ಡಾ. ಹಾಸ್ ಅವರ ಕೋರ್ಸು ಬಹಳ ನಿರಾಶಾದಾಯಕವಾಗಿತ್ತು. Ling. Lab.ನಲ್ಲಿ pitch ಮತ್ತು stressಗಳ ವಿಚಾರ ಚರ್ಚೆ ಕೆಲವು ಗಂಟೆಗಳ ಕಾಲ ನಡೆದರೂ, ಅದನ್ನು ನಡೆಸಿದ ರೀತಿ ಬಹಳ ಅಸಮರ್ಪಕವಾಗಿದ್ದುದರಿಂದ, ಆ ವಿಚಾರದಲ್ಲಿ ನನಗೆ ಇನ್ನೂ ಅಧೈರ್ಯವೇ. ನಾವೇ ಸ್ವತಂತ್ರರಾಗಿ ಕೆಲಸ ಮಾಡಿ, ನಮ್ಮ ಕಾಲುಗಳ ಮೇಲೆ ನಿಂತುಕೊಳ್ಳಬೇಕು ಎಂಬುದು ಡಾ. ಹಾಸ್ ಅವರ ಅಭಿಪ್ರಾಯ. ಇದರಲ್ಲಿ ಒಳ್ಳೆಯ ಅಂಶಗಳೇನೇ ಇದ್ದರೂ, ಅದಕ್ಕೂ ಒಂದು ಮಿತಿ ಇದೆ ಎಂದೆನಿಸುತ್ತದೆ ನನಗೆ. Special Studyಯಲ್ಲಿ ಸರಿಯಾದ guidance ದೊರಕುತ್ತಿಲ್ಲ. ದೊರಕಿದ್ದರೆ ಈ ವೇಳೆಗೆ ಆ ಪೇಪರು ಮುಗಿಯಬೇಕಾಗಿತ್ತು. ಅದೂ ಅಲ್ಲದೆ, ಡಾ. ಹಾಸ್ ಅವರಿಗೆ Morphology ಮತ್ತು Syntaxನಲ್ಲಿ ಅಷ್ಟೇನೂ ಪರಿಶ್ರಮವಿರುವ ಹಾಗೆ ಕಾಣಲಿಲ್ಲ. ನಾನು ಈ ಕೋರ್ಸಿನಿಂದ ಏನಾದರೂ ಕಲಿತಿದ್ದರೆ, ಅದು ಮಿ. Lamb ಅವರೊಡನೆ ನಡೆಸುವ ಚರ್ಚೆಗಳಿಂದ. ಅವರಿಗೂ ಡಾ. ಹಾಸ್ ಅವರಿಗೂ ಮನಸ್ತಾಪ. ಆತ ಹೇಳಿದ್ದನ್ನು ಈಕೆ ಒಪ್ಪುವುದಿಲ್ಲ, ಈಕೆಗೆ ವಿಷಯವೇ ಗೊತ್ತಿಲ್ಲ ಎಂದು ಆತ! ಅಂತು ನನಗೆ ಬಹಳ ನಿರಾಸೆಯಾಗಿದೆ. ನಾನು ಈ ವಿಷಯವನ್ನೆಲ್ಲಾ ಹೀಗೆ ಬರೆದಿರುವುದರಲ್ಲಿ ಏನಾದರೂ ಅನೌಚಿತ್ಯಗಳಿದ್ದರೆ ದಯವಿಟ್ಟು ಕ್ಷಮಿಸಿ.

ಈ ಸ್ಥಳ ಸುಂದರವಾಗಿದ್ದರೂ, ಎಲ್ಲಾ ಅನುಕೂಲಗಳಿದ್ದರೂ, ಆದಷ್ಟು ಬೇಗ ಭಾರತಕ್ಕೆ ಹಿಂತಿರುಗಬೇಕೆಂಬ ಆಸೆಯಾಗಿದೆ. ಇಲ್ಲಿಯ "ಶಿಕ್ಷಣ" ಮುಗಿದ ಕೂಡಲೇ ಭಾರತಕ್ಕೆ ಹಿಂದಿರುಗಿ ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಭಾಷೆಯನ್ನು analyze ಮಾಡಬೇಕೆಂದಿದ್ದೇನೆ. ಅಲ್ಲಿಗೆ ಬಂದ ಮೇಲೆ ನಾನು ಭಾರತ ಸರ್ಕಾರದ ಸ್ಕಾಲರ್‌ಶಿಪ್ ಒಂದಕ್ಕೆ ಪ್ರಯತ್ನಿಸಬೇಕೆಂದಿದ್ದೇನೆ. ಈ ವಿಚಾರದಲ್ಲಿ ತಾವು ನನಗೆ ಏನಾದರೂ ಸಹಾಯ ಮಾಡಬಲ್ಲಿರಾ? ನಾನು ಭಾಷಾವಿಜ್ಞಾನದ ಕ್ಷೇತ್ರದಲ್ಲಿ ಕಾಲಿಡುವುದಕ್ಕೆ, ನಂತರ ಮುಂದೆ ಬರುವುದಕ್ಕೆ ತಾವು ಅನೇಕ ರೀತಿಗಳಲ್ಲಿ ಸಹಾಯ ಮಾಡಿದ್ದೀರಿ. ಇದಕ್ಕಾಗಿ ನಾನು ತಮಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದು. ತಾವು ನನಗೆ ಹಿಂದೆ ಸಹಾಯ ಮಾಡಿದ್ದೀರಿ ಎಂಬ ಆಧಾರದ ಮೇಲೆಯೇ ತಮ್ಮನ್ನು ಹೀಗೆ ಬೇಡಿಕೊಳ್ಳುವ ಸಾಹಸ ಮಾಡಿದ್ದೇನೆ. ಈ ವಿಚಾರವಾಗಿ ಡಾ. ಕತ್ರೆ ಅವರಿಗೂ ಒಂದು ಕಾಗದ ಬರೆದಿದ್ದೇನೆ.

ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ತಾವೆಲ್ಲರೂ ಆರೋಗ್ಯವಾಗಿದ್ದೀರೆಂದು ನಂಬಿದ್ದೇನೆ. ನಾನು ಇಲ್ಲಿಯ International Houseನಲ್ಲಿ ಊಟ ಮಾಡುತ್ತಿದ್ದೇನೆ. ಪ್ರತಿನಿತ್ಯವೂ ಅನ್ನ

ಮೊಸರು ದೊರಕುತ್ತದೆ. ಈಗ, ಇಲ್ಲಿಗೆ ರಾಕ್‌ಫೆಲರ್ ಫೌಂಡೇಷನ್ನಿನ ಫೆಲೊಷಿಪ್ ಮೇಲೆ ಶ್ರೀಯುತರಾದ ಆರ್.ಕೆ. ನಾರಾಯಣ್, ಎಂ.ಎನ್. ಶ್ರೀನಿವಾಸ್ ದಂಪತಿಗಳು ಬಂದಿದ್ದಾರೆ. ಡಾ. ಗಂಪರ್ಜ್ ಅವರು ಇಲ್ಲೇ ಹಿಂದೀ ಬೋಧಕರಾಗಿದ್ದಾರೆ. ಅವರೆಲ್ಲರೂ ಚೆನ್ನಾಗಿದ್ದಾರೆ, ಆರೋಗ್ಯವಾಗಿದ್ದಾರೆ. ಡಾ. ಮೆಕಾರ್ಮೆಕ್ ಅವರನ್ನು ಬಹಳವಾಗಿ ಕೇಳಿದೆನೆಂದು ಅವರಿಗೆ ದಯವಿಟ್ಟು ತಿಳಿಸಿ. ಆದಷ್ಟು ಬೇಗ, ಉತ್ತರವನ್ನು ದಯವಿಟ್ಟು ಬರೆಯಿರಿ.

* * *

S.V. Desikachar National Archives of India, New Delhi

21-2-1957

I am writing this in connection with a large number of Kannada letters, dating from 1799 to the end of the last century, that are found in this Department. They are mostly petitions addressed to the Governor General by the Rajas of Coorg, the Mysore Darbar, and the Public of Karnatak. Under our publication programme it was proposed to entrust the publication of these letters to any organisation that was willing to undertake the work and also foot the bill. For the last few years we were in correspondence with the Karnatak University, and our late Director, Dr. Saletore, was to have edited them. On closer examinations the letters were considered to be not of any great historical value by him, and it is now decided to drop the project. While the decision is not to sponser the publication of the whole of the letters, we feel that it would not be a bad idea to publish a few select letters that may be of importance from a historical, linguistic, or any other angle. From a cursory study I have made of the letters, a number of them are in highly persianised Kannada and refer to revenue matters, inheritance, adoption, etc. I was wondering if you or any of our friends there could help in deciphering the modi and translating a couple of the letters and contribute an article to the Department's Journal 'The Indians Archives' on the linguistic and literary side of the letters. If you think it fit, there should be no difficulty in obtaining permission for the publications of these letters with critical notes etc

in the Prabuddha Karnataka or any other standard journal. If you like the idea, we shall send photostat copies of certain select letters for your scrutiny and use with an official request for a contribution for our Journal. I have informally discussed the matter with our Acting Director, and he would be grateful if you could help us.

* * *

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಗೊರೂರು, ೧೬-೧೦-೫೮

ಚಿ॥ಸೌ॥ ನಾಗರತ್ನಗೆ ವೇದೋಕ್ತ ಆಶೀರ್ವಾದ. ಆದಾಗಿ ಈವರವಿಗೆ ಉ.ಕು.ಸಾಂ॥

ಮನೆಯಲ್ಲಿ ಎಲ್ಲ ಕ್ಷೇಮವೇ ಎಂದು ನಿಮ್ಮ ತಂದೆಯವರನ್ನು ಬೆಂಗಳೂರಲ್ಲಿ ಕೇಳಿದ್ದಕ್ಕೆ "ಬಂದು ನೋಡಿ" ಎಂದು ಜವಾಬ್ ಕೊಟ್ಟರು. ಹೇಗಿದೆ ನಿಮ್ಮ ತಂದೆಯವರ "ಪೊಗರು".

ಇಲ್ಲಿ ೪-೫ ಪುಸ್ತಕ ಕಳುಹಿಸಿದ್ದೇನೆ. ನಿಮ್ಮ ತಂದೆಯವರು ಭಾಷಾಶಾಸ್ತ್ರಕ್ಕಾಗಿ ಪ್ರವಾಸ ಮಾಡುತ್ತಿದ್ದರೆ ಇದು ಹಿಂದಕ್ಕೆ ಬರಬಾರದೆಂದು ನಿನ್ನ ವಿಳಾಸ ಬರೆದಿದ್ದೇನೆ. ಇಷ್ಟರಮೇಲೆ ಈ ಪುಸ್ತಕಗಳನ್ನೆಲ್ಲ ಅವರು ಓದುತ್ತಾರೋ ಇಲ್ಲವೋ ನಮಗೆ ಅದೂ ಗಾಬರಿ.

ನಿಮ್ಮ ತಂದೆಯವರು ಊರಲ್ಲಿದ್ದರೆ ಅವರಿಗೂ ನಿಮ್ಮ ತಾಯಿಯವರಿಗೂ ನಮಸ್ಕಾರ ಹೇಳು. ನಾಗಭೂಷಣನಿಗೆ ಆಶೀರ್ವಾದ ಹೇಳು.

ಇಲ್ಲಿ ಪುಸ್ತಕ ಕಳುಹಿಸಿರುವುದು ಒಂದು ನೆಪ. ಮುಖ್ಯವಾಗಿ ನಿಮ್ಮ ಜ್ಞಾಪಕ ಬಂದು ನಿಮಗೆ ಕಾಗದ ಬರೆಯಬೇಕೆಂದು ತೋರಿತು.

ಸೀಮೆಯಿಂದ ಬಂದಿದ್ದ ಮಂಚ ಸರಿಯಾಗಿದೆಯೇ?

ನಿಮ್ಮ ತಂದೆಯವರ Man in the Dark ಎಂಬ ಪುಸ್ತಕ ಕಳುಹಿಸಿದೆ. ಮರೆಯದೆ ಅವರಿಗೆ ಕೊಡು. ಎಸೆಯಬೇಕೆಂದು ಮಾಡಿದ್ದವನು ಅವರು ಬೇಕು ಎಂದುದರಿಂದ ಎಚ್ಚರಿಕೆ ಯಿಂದ ಇಟ್ಟಿದ್ದೆ.

ಕೊನಷ್ಟೈ ಕಥೆಗಳು ಎಂಬುದನ್ನು ಕ್ಯಾಲಿಕೊ ಪ್ರತಿ ಮಾಡಿಸಿದ್ದೆ. ಈಗ ಇಲ್ಲ. ಆದುದರಿಂದ ಸಾದಾ ಪ್ರತಿ ಕಳುಹಿಸಿದೆ. ಎರಡನೆಯ ಮುದ್ರಣಕ್ಕೆ ಬಂದಿದೆ. ಆಗ ಕ್ಯಾಲಿಕೊ ಪ್ರತಿ ಒಂದನ್ನು ಕಳುಹಿಸುತ್ತೇನೆ. ಉಳಿದುವಾವುದನ್ನು ಕ್ಯಾಲಿಕೊ ಮಾಡಿಸಿಲ್ಲ.

* * *

ಹೆಚ್.ಕೆ. ರಂಗನಾಥ್ ಧಾರವಾಡ, ೧೯.೧೦

ತಿಂಗಳ ಕೆಳಗೆ ಈ ಕಡೆಯಿಂದ ಪೂನಾಗೆ ಹೋದಿರಂತೆ. ನನಗೆ ತುಂಬಾ late ಆಗಿ ತಿಳಿಯಿತು.

ನನಗೆ ಮತ್ತೊಬ್ಬ ಮಗಳು ಹುಟ್ಟಿದ್ದಾಳೆ. ಎಲ್ಲರೂ ಅಂಕೋಲಾದಲ್ಲಿದ್ದಾರೆ. ಎಂದರೆ ಇಲ್ಲಿ ಒಬ್ಬನೇ – ಹಿಂದೆ ಒಬ್ಬನೇ ಇದ್ದಾಗ ನಿಮ್ಮ ಮನೆಯಿಂದ ತಂದಿದ್ದ ಹುಳಿಯಸ್ನದ ಗೊಜ್ಜು – ಈಗ ಮತ್ತೆ ಒಬ್ಬನೇ ಇರುವಾಗ, ಬಾಯಲ್ಲಿ ನೀರು ಮಿಡಿಯಿಸುತ್ತಿದೆ. ಮಾತೋಶ್ರೀಯವರಿಗೆ ಹೇಳಿ ಸ್ವಲ್ಪ ಗೊಜ್ಜು ಮಾಡಿ ಇಲ್ಲಿ ಬರುವವರಾರಾದರೂ ಇದ್ದರೆ ಕಳುಹಿಸುತ್ತೀರಾ? Please!

* * *

Bh. Krishnamurthy Waltair, Feb 19, 1958

Dear Professor Sreekantaiyanavarē:

Your letter reached here when I was away at Hyderabad in connection with AP Sahitya Akademi meeting. My wife misplaced it and forgot all about it. Last night I was surprised when I saw it in one of my books on the shelf. Anyway thank you very much for redirecting the D.C. letter, -excuse me for the delay. I actually got the one intended for Dr. Vishwanatha Prasad. I sent it back to Dr. Ghatage. Subsequently, I got my own.

The A.P. Sahitya Akademi recently asked me to draft a scheme for the preparation of dialectal dictionaries for the native professions and crafts (vrttipadakosas). I am going to survey these professions in a couple of nearby villages in order to prepare a questionnaire to be sent to atleast 1000 villages throughout Andhra. Will you kindly let me know, if possible, the activities of the "Blue Print Committee" of the LSI, of which you are a member? I have been drafted into the Etymological Dictionary since a month and certain changes in the method have been effected. I don't see any bright prospects for me at this University in any foreseeable future. Kindly drop a card informing me the latest activities of the "Linguistic Circle of Mysore".

* * *

THE FOREIGN SERVICE OF THE
UNITED STATES OF AMERICA

New Delhi, September 19, 1958

I would like to take this opportunity to thank you for the very significant contribution you made to the success of the conference on General Education at Mysore University. Certainly, the lion's share of the responsibility for the success of any group discussions falls upon the chairman of the group. Your skill and experience in guiding the discussions account ultimately for the specific and worthwhile resolutions which the conference adopted.

Many thanks to you for undertaking, and discharging, so successfully the responsibilities of leading the discussions on general education. It was a privilege and a pleasure to have met you and I hope that I will have the opportunity very soon of continuing this pleasant association.

Blanchard K. Parsons
Adiministrative Officer
India Wheat Loan Educational Exchange Program

* * *

T.M.A. Pai Udipi, 7th August, 1959

I was very happy to have a short contact with you when I visited the University on 9-7-1959. I am sure, you have always been taking a helpful attitude regarding the problems of this District. It has always been possible for us to solve a good deal of problems with the sympathetic co-operation from friends like you.

I have just at present a desire to work out three more Colleges, each for Arts, Science & Commerce, leading to B.A., B.Sc. and B.Com at Coondapoor, Karkal & Moolky. The people have begun to realise the importance of higher education and I am sure, one by one, these Colleges will be possible.

On my way to Bangalore, I just wanted to spend some time in Mysore and I was very happy that I could see our old friends.

*   *   *

ಮನೋಹರ ಗ್ರಂಥ ಮಾಲಾ (ಸ್ಥಾಪನೆ, ೧೯೩೩)

ಜಿ.ಬಿ. ಜೋಶಿ   ಧಾರವಾಡ, ೨೦-೭-೫೯

'ಮಮತೆ' ಬಂತು. ಕೂಡಲೆ ಓದಿದೆ. ಬಹಳ ಸೊಗಸಾಗಿದೆ. ಅಂತೂ ನಿಮಗೆ ಇಷ್ಟು ಹಿಂಸೆ ಕೊಟ್ಟೆನಲ್ಲಾ ಎಂದು ಬಹಳ ಮಿಡುಕುತ್ತಿದ್ದೇನಾದರೂ ಒಂದು ಕಲೆ ಹುಟ್ಟಿತಲ್ಲಾ ಎಂಬ ಸಂತೋಷ ಅದನ್ನು ಮರೆಯಿಸಿದೆ.

ಇದೆಲ್ಲಾ ಒದಗಿ ಬಂದದ್ದು ಸಂಪುಟದ ಪುಣ್ಯ ಎಂದುಕೊಂಡಿದ್ದೇನೆ. ನಿಮ್ಮ ಈ ಸಹಕಾರಕ್ಕೆ ನಾನು ಎಷ್ಟು ಕೃತಜ್ಞನಾಗಿದ್ದರೂ ಕಡಿಮೆಯೇ.

ನೀವು ತಿಳಿಸಿದಂತೆಯೇ ಹೆಸರು ಹಾಕುತ್ತೇನೆ.
ನನ್ನ ತೊಂದರೆಗೆ ಕ್ಷಮಿಸಿ ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

*   *   *

ತೀ.ನಂ.ಶ್ರೀ.ಯವರು ಈ ಕೆಳಗಿನ ಪತ್ರದಲ್ಲಿ ಬರೆದಿರುವಂತೆ ಶ್ರೀಮತಿ ಬರ್ಟ್ ಸಾಲ್‌ಝ್‌ಮನ್ ಅವರು ಪ್ರತಿವರ್ಷವು ತಮಗೆ ಬಂದ ಪತ್ರಗಳಲ್ಲಿ ಕೆಲವನ್ನು ಆಯ್ಕೆಮಾಡಿ ಅದರ ನಕಲು ಮಾಡಿ ತಮ್ಮ ವ್ಯಾಖ್ಯಾನಗಳೊಡನೆ ಅದನ್ನು ತಮ್ಮ ಎಲ್ಲ ಸ್ನೇಹಿತರಿಗೂ ಬಂಧುಗಳಿಗೂ ಕಳಿಸುತ್ತಿದ್ದರು. ಇದರಲ್ಲಿ ತೀನಂಶ್ರೀ ಅವರ ಪತ್ರ ಮತ್ತು ಅದರ ಮೇಲಿನ ವ್ಯಾಖ್ಯಾನದ ಭಾಗಗಳನ್ನು ಕೊಡಲಾಗಿದೆ. ಇದರಿಂದ ಈ ಪತ್ರ ವ್ಯವಹಾರದ ಸ್ವಾರಸ್ಯ ತಿಳಿದು ಬರುತ್ತದೆ : ತೀ.ನಂ.ಶ್ರೀ ಅವರು ಶ್ರೀಮತಿ ಬರ್ಟ್ ಅವರನ್ನು ಅಮೆರಿಕದಲ್ಲಿದ್ದಾಗ ಭೇಟಿಮಾಡಲು ಸಾಧ್ಯವಾಗಲಿಲ್ಲ.

ಅನಂತರ ಅವರನ್ನು ಭೇಟಿ ಮಾಡಲೇ ಇಲ್ಲ.

*

Bert Salzman   Miami

LIFE IN INDIA

(-Or,—Do finish your Tea and Crumpets, Old Bean... Here is a WIZARD bit of mail from "Sree"!! Bert.)

PREFACE...

T.N. Sreekantaiya is Professor and Head of the Department of Kannada, Maharaja's College, MYSORE, INDIA. The nickname "Sree" was bestowed by Bert, because the initials "T.N." are really not part of a "name" as such. (Calling him Mr. T.N. Sreekantaiya is the equivalents of calling an American, Mr. Wisconsin, Milwaukee, John!.) Gary met "Sree" while on vacation the Summer of 1955. They were each on separate tours of the Grand Canyon at the time, and were being "treated" to an INDIAN dance-which was the "conversation piece" that started the friendship; and "come-to-findout" they are both teachers........

*

MYSORE, November 24, 1959

My Dear Bert,

It was a delightful packet that I received from you nearly three weeks ago, on November 4 to be exact. It gave me a thrill and a pang as well. A pang because I had put off writing to you for months and months, and now my slumbering conscience woke up with a jerk; the pangs of remorse were sharp enough. And there was the thrill too since you forgave my unpardonable silence and wrote to me a gentle and affectionate letter. There is hardly a hint of any rebuke in it though I deserve thorough chastisement. In addition there is all this fascinating information about the doings and "non-doings" of you all.

(Bert: The lovely wordage will make me give up slang and swearing! This "Sree" sounds like an Indian-HARRY KOVENOCK!!....... Sree, he is **another** dear soul, and a former employer, from Milwaukee, Wis. Say...... I sure took care of the "non"doings in short order, no???!)

To my great surprise I find that even I get into the mimeographed sheets! I firmly believe even today that you are a "jewel of a girl",

(Bert: NOW you can see why I quoted the letter!) but in the interests of truth may I suggest a small correction? Did you not write to me, long ago (unfortunately I connot lay my hands upon the letter just now, though I have carefully preserved it), that your name was BALA in Hebrew? Here I find it spelled as BAYLA. Which is the correct form?

(Bert: Our confusion results because in Sanskrit you write the letter A with a line over it and then SOUND it "ah" as in ARM. In English we would SOUND it "ay" as in SAY. So, you have been sounding may Hebrew name BAH-LAH, while I sound it BAY-LAH. I do like the Sanskrit sound best. And this whole MISHMASH sound like and Old Song—"You say poTAYTO, and I say poTAHto: you say toMayto, and I say toMAHto; ......let's call the whole thing off!" (By the way... that's Mish MAHsh!!)

BALA in Sanskrit means "a girl";—(Bert : Boy! They sure took my "jewels" away in a big fat hurry!) she is of course "a jewel,"-(Bert: Oh.) but to make this excellence explicit you must add another word and call her BALAMANI. Shall I use this as your name in Sanskrit? Would Gary agree? (Bert: When Gary "makes" with the pen, pencil, or typewriter... he can answer that, himself. As of now, it's My privilege!)

You have done me grave injustice by recording the unfounded opinion—"by now he probabley thinks my name is 'MUD'!" How could you even dream of such a possibility? Wait, however. In India we deify even the "MUD"; MRTTIKA is" holy mud", used for purposes of religious purification. And then the Earth is "Mother Earth" (BHUMATA) to us; we even call her "the Divine Earth" (BHUDEVI). Further there is another Sanskrit synonym for the Earth—KSHAMA—which just means "forgiveness". Does not the Earth, like a patient mother, forgive lovingly all the wrongs that her

children commit on her? Did you feel intuitively all this when you characterized youself as "MUD"! (Bert: You're not going to get ME to answer THAT question, no matter HOW strong the temptation! MRTTIKA!!!) (Is that also the equivalent of the American "Holy Toledo!?!")

Please excuse me for trotting out all this lexical lore from Sanskrit—but you asked for it! No, I dont' think it is so very inappropriate if a student of India's Classical and religious Language should discourse on its verbal reaches before an enthusiastic (and self-appointed?) teacher of another great religious Language.

(Bert: No apology necessary: I'm delighted. But "appointed by the suggestion of my friend Trudy Harris who was one of the students... and yes, ENTHUSIASTIC, but appointed ONLY because they were "stuck" for a teacher – in spite of the Rabbi's CAREFULLY-worded request. The "job" carried no salary, and I said I would be glad to pay THEM, for allowing me to teach!!)

Dear Bert, when did you resolve to take up the profession of a teacher of Hebrew?

(Bert: RESOLVED, two years ago, when Kenny had reached the age of having to start Hebrew School, and he is a worrier-type. So I said if I study WITH you, will it ease your mind. And he said, yes, but YOU Don't KNOW any Hebrew. And the Hebrew Teacher, CALIE LOSS, said yes, Bert could sit in the back of the classroom and study with the little children. Calie told me a year later that her calm ANSWER was not at all what she was thinking at the time, to-wit; "It's not ENOUGH I have to teach twenty or thirty little children... I have to have a MOMMY in the class, too ???"

I nearly fell off my chair, one day, when Mrs. Loss was testing the children in reading, and suddenly; "And now, Mrs.

Salzman, if you will read, please!"... and the dear kids in that class, when I finished reading, with my knees knocking and my voice almost shaking.... they broke out into a round of APPLAUSE! Is it any wonder that I "fell in love" with Hebrew???? Seriously, Sree, it is written that Rabbi Ishmael said (Ethics of the Fathers), "He who learns in order to teach will be granted adequate means to learn and to teach..." (So, how could I "lose" ?!)

The Temple bulletin that semester carried the "news"... "Not the youngest, nor the smallest; perhaps the oldest, and the tallest..... is Calie Loss' New Hebrew student—Bert, Salzman!")

How do your elderly pupils respond? Are they earnest? Do they do the homework properly? And—how long do they retain their new-found learning?

(Bert: I read that part of the letter to the Hebrew class... and the laughter of these "young" Mommies and Daddies really filled the room! Yes, earnest—one of the joys of ADULT education. Yes, as to homework—thrilled when I marked "this is a BEAUTIFUL paper!" in their printed Hebrew. As for retaining; we use the Hebrew each Friday evening at the Sabbath services, so that each time the students attended services, they were actually getting a "refresher course". This reminds me of a cartoon in the Jewish newspaper recently: Two "space-men" landed on a strange planet and met some of the "natives" on the planet. One space-man said to the other: "He said something that sounded like SHAW-LOM A-LIKE-EM.!" (Sholom Alaychem!)

In India too there is now a move to take Sanskrit to the doorsteps of the common man, as it were, Easy and graded lessons are prepared, the grammatical intricacies are reduced to the minimum, evening

classes are conducted, periodical examinations are given, and the successful candidates—among them you can see some "middle-agers" too-are awarded certificates of proficienccy at a public function. This catches the attention of the ordinary man. For once, I think, you Americans can learn some Publicity methods from us Indians!

(Bert: The Tribe will please rise and "solemnly" intone, "Heap Big Chief say UGH!" – American-Indian translation: "yes!") (-reat White Father, Gary I., better shuttum-up Heap Big Yap!) (That was in "answer" to his comments that I KNOW he is THINKING!)

Now for personal enquiries. How are the Kids? Growing up nicely, I am sure. I don't wonder that Lora, instigated by Gary, disapproved of your Hebrew-teaching activities. And how is Gary? Building more apartments? Does he find any time to speak to the children and their patient Mother? And how about you? Don't you find all this work and bustle rather tiring?

(Bert: I Loved that "patient Mother" bit! I am sure this Blessed Laughter "review" will answer most of your dear questions, Sree! As for the work-and-bustle, our children are truly blessed, because even though the Daddy has several occupations to busy himself with, the hours are such that he actually is with his children MORE than the "typical" nine-to-five-job Father. If all the busy-ness meant not time for truly LIVING.... that would be the day that the work-and-bustle would End—with a capital Eh-h!!)

It would not be fair if I did not give you some news about the family here. The wife—patient woman that she is—manages the household with her usual efficiency. She complains a little sometimes about my neglect of this duty or that—but I have learned to just ignore it. And she puts up with it all! My daughter NAGARATNA has resumed her studies after break of three years. She is studying in my

own college for the M.Sc. Degree in Statistics. But thank God, I don't have to teach her. (Bert: No comment; just laughter!)

My son NAGABHUSHANA is growing up fast. The saying in the family is.... if you take a look at him now and another five minutes later, he will have grown taller by half an inch in the interval. He is now taller than myself (I am five feet, eight.) NAGABHUSHANA is a budding Engineer. Please tell Gary that if he wants any building plans, my son will be able to supply them—four, years later.

I almost forgot to mention another delight the family has temporarily acquired. My wife's (Bert : Sree's wife is named: JAYALAKSHMI-called JAYA for short.... from a letter of Dec 23/ 55)sister with her two kids is staying with us now. How lovely they are - especially the younger who is now a little more than a year old. He is called RAVI, which means "the Sun". His charming toothless smile does bring sunshine into the room. There is always a fight as to who should grab and fondle him. But the wily fellow has his preferences. Till recently he favoured me, but now his Aunt and his male cousin are the favourites.

Recently some American friends, Professor and Mrs. M.B. Emeneau (Emereau?) of Berkeley, California, and Dr. and Mrs. Leigh Lisker of Philadelphia, visited Mysore. They were kind enough to taste our South Indian Vegetarian Food. (Let me whisper in your ears that my wife prepares some delicious dishes). When will you and Gary visit us? You must stay with us. (Bert: Any day, now.)

I now live in a big bungalow—rented of course, the University being the landlord. It stands in its own grounds with lawns—not well-kept—and trees on all sides. We have spacious rooms and lovely views. Make up your mind to visit India. Now is the time. Even your President is visiting our land; (Bert: Sreee, My dear...... My MIND is made up!!!—At this point I'm afraid a Salzman Safari would be mistaken for an INVASION!)

Dear Bert, I must close now. Please write soon. The very best wishes and greetings to all of you: to you, to Gary and all the children.

Yours affectionately,
'SREE"

Dear SREE

I hope you don't become annoyed that I quoted every word of your lovely letter. It is just a wee bit short of "bragging" that I am YOUR correspondent. I'm so proud of all the nice things you have to say (to and about us), and I ADMIT IT without even being "shamefaced"! Then, too, your INDIAN way of life is so much OUR OWN way of life, only half-a-world apart.... Your comments about RAVI bringing sunshine into the house..... Well, I don't have any CHOPPED LIVER in front of me..... but, oh... the "salty tears"! (Laughter is four parts Lump-in-the-Throat!)

Remember Cindy's "backward" language of a few years ago? Well, Lora Beth has "reached" that stage. (Cindy used to say stuff like: "MELON-WATER" for watermelon... and "SCOTCH-CORN" for... cornstarch.) Lora asks me to open the door-porch (porch door), and says that she scratched her back with Kenny's Scratch-BACKER (back-scratcher!). There are many, many delightful "ages" of Children... but I think age FOUR is that ONE age in children when they are little enough to think grownups are the SUN, MOON, and STARS... and big enough not to pester this "universe"... and be able to "do" for themselves, somewhat. This is an age of Dearness, as well as somewhat startling thought and humor!

Goodbye for now. Our best to you and all your dear family, from Gary and myself, Kenny and Gerald, Cindy and Lora Beth.... and Brian Ira.

Love, BERT.

* * *

M.B. Emeneau Berkely, May 5, 1961

We were very happy to have your letter of April the 25th and to hear your news, including that about your daughter's wedding, which we were very sorry to miss. We wish her all happiness.

About the Dictionary (Dravidian Etymological Dictionary). I am happy to hear that you are finding it of use in your work. The price, which Burrow and I both found very shocking, was set by the press and we could do nothing about it. It was obviously an expensive book to print, and, on second thoughts, I find it somewhat surprising that, even with subsidies, it was possible to keep the price down to that level. Book in general are so expensive in the Western world these days. But we realised that the price would prevent Indian students (as well as American and English students) from buying it. I have hopes that it may be possible sometime in the future to make some kind of arrangement to obviate this difficulty. How, I do not yet know, but I have started to give it some thought and to explore possibilities. Needless to say, neither Burrow nor I is making any profit out of the book. Any royalties we may get will not start for a very long time and then will be negligible. The Press made only a token arrangement.

I wonder if it would be possible for the two of us together to make a bibliography of L.V. Ramaswami Ayyar's works, that would be publishable. I have been thinking of starting with your bibliography which I have and going on from there to complete it. I even made an attempt to find in this country a file of Educational Review, so that I could complete photographically my own set of his publications in that journal. But there seems not to be a complete set, nor perhaps even any set, of ER anywhere here. That stopped me for the moment. I should welcome any thing you have to say on this subject.

* * *

M.B. Emeneau Berkeley, August 3, 1962

It was very pleasant to have a letter from you. I at once sent off a package containing some recent publications including the one you asked for. My collected papers will presumably appear some time in the future, but I do not know when. Professor Meenakshisundaran came through here recently and asked whether I had by now read all the proof. I had to say that Annamalai's printer has so far set only about one-third of the material.

This last year I got very little work done of any real substance. I was serving in my third year as chairman of the Department of Classics, and crisis followed crisis, so that I began to feel my years very badly. I have resigned from the chairmanship as of June 30th, and have spent this summer recuperating! I have lots of work blocked out, and hope in time to finish some of it to the printing stage.

I should be very happy to continue with L.V. Ramaswami Ayyar's bibliography. If you can send me any more items, perhaps we can then put them into final shape and together have them printed in India.

I suppose I should congratulate you on your leisure of retirement. It will be pleasant to see some of the research that issues from your freedom.

All best wishes to all your family and to you from both of us.

* * *

ಮೈಸೂರು ಸರ್ಕಾರ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲದೆ ತೀ.ನಂ.ಶ್ರೀಯವರ ಪುಸ್ತಕಗಳನ್ನು ಪ್ರಕಟಿಸಿದವರು ಅವರ ಆಪ್ತಮಿತ್ರರಾದ ಶ್ರೀ ಕೂಡಲಿ ಚಿದಂಬರಂ ಅವರು ಮತ್ತು ಪ್ರಿಯ ಶಿಷ್ಯಮಿತ್ರರಾದ ಶ್ರೀ ಎಚ್.ಎಂ. ಶಂಕರನಾರಾಯಣರವರು. ಇವರ ನಡುವೆ ಯಾವ ರೀತಿಯಾದ ಲಿಖಿತ ಒಪ್ಪಂದಗಳೂ ಇರುತ್ತಿರಲಿಲ್ಲ ಮತ್ತು ಅದರ ಅವಶ್ಯಕತೆಯೂ ಎಂದೂ ಇರಲಿಲ್ಲ. ಆದರೆ 'ನಂಟರು' ಪುಸ್ತಕ ಪಿ.ಯು.ಸಿ. ತರಗತಿಗೆ ಪಠ್ಯಪುಸ್ತಕವಾಗಿ ನಿಯಮಿತವಾದಾಗ, ಅದರ ಪ್ರಕಾಶಕರಾದ ಶ್ರೀ ಎಚ್.ಎಂ. ಶಂಕರನಾರಾಯಣರಾಯರು ತಮ್ಮ ಸ್ವಂತ ಇಚ್ಛೆಯಿಂದ ತೀನಂಶ್ರೀಯವರಿಗೆ ಬರೆದುಕೊಟ್ಟ ಪತ್ರವನ್ನು ಪ್ರಸ್ತುತವಾಗಿರಬಹುದೆಂದು ಇಲ್ಲಿ ಕೊಡಲಾಗಿದೆ.

H.M. Shankar Narayana Rao — Mysore, 4th October 1963

Editor and Publisher

Kannada Kavi Kavya Male

ಮೈಸೂರು ಶಾರದಾ ವಿಲಾಸ ಕಾಲೇಜಿನ ಕನ್ನಡ ಪ್ರಾಧ್ಯಾಪಕರೂ, ಹಾಗೂ ಆ ಇಲಾಖೆಯ ಮುಖ್ಯಾಧಿಕಾರಿಗಳೂ ಮತ್ತು ಇದೇ ನಗರದ ರಾಮಯ್ಯರ್ ರಸ್ತೆಯಲ್ಲಿರುವ ಕನ್ನಡ ಕವಿಕಾವ್ಯ ಮಾಲೆಯ ಸಂಪಾದಕರೂ ಮತ್ತು ಪ್ರಕಾಶಕರೂ ಆದ ಎಚ್.ಎಂ. ಶಂಕರನಾರಾಯಣರಾವ್, ಎಂ.ಎ. ಅವರು, ಮೈಸೂರು ವಿಶ್ವವಿದ್ಯಾನಿಲಯದ ಅಂಗವಾದ ಮಾನಸಗಂಗೋತ್ರಿಯ ನಿವೃತ್ತ ಕನ್ನಡ ಪ್ರಾಧ್ಯಾಪಕರೂ, ೨/೨ ಟೆಂಪಲ್ ಬೀದಿ, ಜಯಲಕ್ಷ್ಮೀ ಬಡಾವಣೆ, ಮೈಸೂರು –ಇದರಲ್ಲಿ ವಾಸಮಾಡುತ್ತಿರುವವರೂ ಆದ ಪ್ರೊ. ತೀ.ನಂ.ಶ್ರೀಕಂಠಯ್ಯ, ಎಂ.ಎ. ಅವರಿಗೆ ಬರೆದು ಕೊಟ್ಟ ಪುಸ್ತಕ ವ್ಯಾಪಾರದ ಕರಾರು ಪತ್ರದ ವಿವರ ಏನೆಂದರೆ–

ನೀವು ರಚಿಸಿದ 'ನಂಟರು' ಎಂಬ ಪ್ರಬಂಧ ಸಂಕಲನವನ್ನು, ನಿಮ್ಮ ವಿಶ್ವಾಸದ ಒಪ್ಪಿಗೆಯ ಮೇಲೆ ಕಳೆದ ಆಗಸ್ಟ್ (೧೯೬೩) ತಿಂಗಳಲ್ಲಿ ಮೇಲ್ಕಂಡ ಮಾಲೆಯಲ್ಲಿ ಪ್ರಕಟಿಸಿದುದು ಸರಿಯಷ್ಟೆ. ಈಗ ಈ ಗ್ರಂಥ ಮೈಸೂರು ವಿಶ್ವವಿದ್ಯಾನಿಲಯದ ಪ್ರಿ-ಯೂನಿವರ್ಸಿಟಿಯ ೧೯೬೪ನೆಯ ವರ್ಷದ ಪರೀಕ್ಷೆಗೆ ಪಠ್ಯಪುಸ್ತಕವಾಗಿದೆಯೆಂದು ತಿಳಿದುಬಂದಿದೆ.

ನಿಮ್ಮ ವಿಶ್ವಾಸದ ಒಪ್ಪಿಗೆಯ ಮೇಲೆ ಈ ಗ್ರಂಥದ ಪಠ್ಯ ಪುಸ್ತಕದ ಸಂಸ್ಕರಣವನ್ನು ಈ ಕೆಳಗೆ ಕಂಡ ನಿಯಮಗಳಿಗೆ ಅನುಸಾರವಾಗಿ ಪ್ರಕಟಿಸಲು ಸಿದ್ಧನೂ ಹಾಗೂ ಬದ್ಧನೂ ಆಗಿದ್ದೇನೆ.

೧) ಗ್ರಂಥದ ಹನ್ನೊಂದು ಸಾವಿರದ ಇನ್ನೂರೈವತ್ತು (೧೧,೨೫೦) ಪ್ರತಿಗಳನ್ನು ಅಚ್ಚಿಡಲು ಏರ್ಪಾಟು ಮಾಡುತ್ತೇನೆ. ಗ್ರಂಥದ ಮೊದಲ ಮುದ್ರಣದ ಏಳು ನೂರು ಐವತ್ತು (೭೫೦) ಪ್ರತಿಗಳೂ, ಸೇರಿ, ಒಟ್ಟು ಹನ್ನೆರಡು ಸಾವಿರ ಪ್ರತಿಗಳನ್ನು ಮಾರಾಟಕ್ಕೆ ಬಿಡುತ್ತೇನೆ.

೨) ಮೇಲ್ಕಂಡ ಹನ್ನೆರಡುಸಾವಿರ ಪ್ರತಿಗಳ ಮೇಲೆ ನಿಮಗೆ ಶೇಕಡ ನಲವತ್ತರಂತೆ ಗೌರವಧನವನ್ನು ಕಾಲೇಜಿನ ಬಾಗಿಲುಗಳು ತೆರೆದ ಒಂದೂವರೆ ತಿಂಗಳಲ್ಲಿ ಕೊಟ್ಟು, ರಸೀದಿಯನ್ನು ನಿಮ್ಮಿಂದ ಪಡೆಯುತ್ತೇನೆ. ಇದರಲ್ಲಿ ಗ್ರಂಥದ ಮೊದಲ ಮುದ್ರಣಕ್ಕೆ ಸಂಬಂಧಿಸಿದ ಗೌರವಧನವೂ ಸೇರಿರುತ್ತದೆ.

೩) ಗ್ರಂಥದ ಎರಡನೆಯ ಮುದ್ರಣಕ್ಕೆ ಸಂಬಂಧಿಸಿದ ಕಾಗದ ಮುದ್ರಣದ ವೆಚ್ಚ, ಪ್ರತಿಗಳ ಮಾರಾಟದ ವಿತರಣೆ ಇವುಗಳನ್ನೆಲ್ಲ ಪ್ರಕಾಶಕರೇ ನೋಡಿಕೊಳ್ಳುತ್ತಾರೆ. ಮಾರಾಟವಾಗದೆ ಪ್ರತಿಗಳು ಉಳಿಯುವುದರಿಂದಲೂ, ಇತರ ಕಾರಣಗಳಿಂದಲೂ ಉಂಟಾಗುವ, ಉಂಟಾಗಬಹುದಾದ ನಷ್ಟಕ್ಕೆ ಗ್ರಂಥಕರ್ತರು ಯಾವ ವಿಧವಾಗಿಯೂ ಹೊಣೆಯಲ್ಲ.

೪) ಕಾಲೇಜು ಬಾಗಿಲುಗಳು ತೆರೆಯುವುದಕ್ಕೆ ಹದಿನೈದು ದಿನಗಳು ಮುಂಚಿತವಾಗಿ, ಗ್ರಂಥದ ಪ್ರತಿಗಳನ್ನು ಮಾರಾಟಕ್ಕೆ ಸಿದ್ಧಗೊಳಿಸುವ ಹೊಣೆ ಪ್ರಕಾಶಕರದು. ಈ ಸಂಬಂಧದಲ್ಲಿ ಪ್ರಕಾಶಕರು ಯಾವ ತೆರನಾದ ಆಕ್ಷೇಪಣೆಗಳಿಗೂ ಅವಕಾಶ ಕೊಡುವುದಿಲ್ಲ.

೫) ಈ ವ್ಯವಹಾರ ಮುಗಿಯುವವರೆಗೆ ಗ್ರಂಥಕರ್ತರು ಇತರ ಪ್ರಕಾಶಕರೊಡನೆ ವ್ಯವಹರಿಸ ಬಾರದು.

೬) ಮೇಲ್ಕಂಡ ನಿಯಮಗಳಿಗೆ ತಪ್ಪಿದಲ್ಲಿ ಗ್ರಂಥಕರ್ತರಿಗೆ ಆಗುವ ನಷ್ಟವನ್ನು ಸರಿಪಡಿಸಿ ಕೊಳ್ಳಲು ಗ್ರಂಥಕರ್ತರು ಪ್ರಕಾಶಕರ ಮೇಲೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಕೊಳ್ಳಬಹುದು.

ಈ ಪತ್ರವನ್ನು ಖುದ್ದು ರಾಜಿಯಿಂದ ಬರೆದು ಕೊಟ್ಟಿರುತ್ತೇನೆ.

(ಸಹಿ) H.M. Shankar Narayana Rao

* * *

ಪ್ರೊ. ಎ.ಎನ್. ಮೂರ್ತಿರಾಯರಿಗೆ ಅವರ 'ಚಿತ್ರಗಳು ಪತ್ರಗಳು' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಅವರು ನನಗೆ ಬರೆದ ಕಾಗದದಲ್ಲಿ ಅವರ ಮತ್ತು ತೀ.ನಂ.ಶ್ರೀ.ಯವರ ನಡುವಿನ ಪತ್ರವ್ಯವಹಾರದ ಬಗ್ಗೆ ಬರೆದಿರುವ ಮಾತುಗಳು ಪ್ರಸ್ತುತವಾಗಿದೆ ಯೆಂದು ಇಲ್ಲಿ ಉಲ್ಲೇಖಿಸಲಾಗಿದೆ. ಈ ಪುಸ್ತಕದಲ್ಲಿ ಪ್ರೊ. ಎ.ಎನ್. ಮೂರ್ತಿರಾಯರು ತೀ.ನಂ.ಶ್ರೀ.ಯವರಿಗೆ ಬರೆದಿರುವ ಆಯ್ದ ಸುಮಾರು ೭೫ ಪತ್ರಗಳನ್ನು ಸೇರಿಸಲಾಗಿದೆ.

(ಪ್ರೊ. ಎ.ಎನ್. ಮೂರ್ತಿರಾಯರು ತೀ.ನಂ.ಶ್ರೀ.ಯವರ ಬಗ್ಗೆ ಬರೆದಿರುವ "ತೀನಂಶ್ರೀ – ಆಪ್ತರೊಡನೆ" ಲೇಖನವೂ ಪುಸ್ತಕದ 'ಚಿತ್ರಗಳು' ಭಾಗದಲ್ಲಿ ಸೇರ್ಪಡೆಯಾಗಿದೆ.)

*

ಮೈಸೂರು, ೧೮–೧೨–೧೯೭೬

ಪ್ರಿಯ ನಾಗಭೂಷಣ

ನಿನ್ನ ಕಾಗದ ತಲುಪಿತು, ಸಂತೋಷವಾಯಿತು. ಇಷ್ಟವಾದವರ ಮನಸ್ಸಿಗೆ ಸಂತೋಷ ತಂದದ್ದೆಲ್ಲ ನನಗೂ ಸಂತೋಷ ತರುತ್ತದೆ. ಪುಸ್ತಕದ 'ಒಂದು ಭಾಗವು' ನನ್ನ–ಶ್ರೀಕಂಠಯ್ಯನ ಪ್ರೀತಿಯ ಸಂಕೇತವೆಂದು ಬರೆದಿರುವುದು ಸಾಲದು–ಬಹುಭಾಗ ಎನ್ನಬೇಕು. ಶ್ರೀಕಂಠಯ್ಯನಲ್ಲದೆ ನನ್ನ ಆಗಿನ ಇತರ ಸ್ನೇಹಿತರಿಗೆ ಆ ಬಗೆಯ ಕಾಗದಗಳನ್ನು ನಾನು ಬರೆಯುತ್ತಿರಲಿಲ್ಲ; ಆ ಕಾಗದಗಳನ್ನು ಶ್ರೀಕಂಠಯ್ಯ ಉಳಿಸದಿದ್ದರೆ ಈ ಪುಸ್ತಕವೇ ಅಸ್ತಿತ್ವಕ್ಕೆ ಬರುತ್ತಿರಲಿಲ್ಲ. ಮಾನವ

ಅಳಿದ ಮೇಲೆ ಬೇರೆ ಎಲ್ಲೋ ಒಂದು ಕಡೆ ಇರುತ್ತಾನೆಂಬುದು ನಿಜವಾದರೆ-ಶ್ರೀಕಂಠಯ್ಯ ನಮ್ಮೆಲ್ಲರಿಗಿಂತ ಹೆಚ್ಚು ಸಂತೋಷ ಪಡುತ್ತಿರಬೇಕು.

ಮೊನ್ನೆ ಭಾನುವಾರ ಸ್ನೇಹಿತರು ನನಗೆ ಈ ಪ್ರಶಸ್ತಿ (ಕೇಂದ್ರ ಸಾಹಿತ್ಯ ಅಕಾಡೆಮಿ) ವಿಷಯ ರೇಡಿಯೋದಲ್ಲಿ ಕೇಳಿದ್ದನ್ನು ತಿಳಿಸಿದರು – ಶ್ರೀಕಂಠಯ್ಯನನ್ನು ನೆನಪಿಸಿಕೊಂಡೆ.

ಬಾಕಿಪಟ್ಟಿಯಲ್ಲಿರುವ ಗ್ರಂಥಗಳು ಎಷ್ಟು ಬರವಣಿಗೆಗೆ ಇಳಿಯುತ್ತವೆಯೋ ಕಾಣೆ. ಅದು ದೇಹದ ಮನಸ್ಸಿನ ಆರೋಗ್ಯವನ್ನು ಅವಲಂಬಿಸಿದೆ.

* * *

(ಪ್ರೊ. ತೀನಂಶ್ರೀಯವರ ನಿಧನದ ನಂತರ ಅವರ ಶಿಷ್ಯರೊಬ್ಬರು ನನಗೆ ಬರೆದ ಕಾಗದದಲ್ಲಿ ತೀನಂಶ್ರೀಯವರ ವಚನ ಸಾಹಿತ್ಯದ ಬಗ್ಗೆ ಮಾಡಿದ ಸೊಗಸಾದ ವ್ಯಾಖ್ಯಾನದ ಉಲ್ಲೇಖವಿರುವುದರಿಂದ ಆ ಭಾಗವನ್ನು ಇಲ್ಲಿ ಕೊಡಲಾಗಿದೆ.)

*

ಮಹಾದೇವಪ್ಪ ಕ್ಯಾಂಪ್ ಚಿತ್ರದುರ್ಗ, ೨೮-೧-೮೧
ಕನ್ನಡ ಉಪನ್ಯಾಸಕ

೧೯೬೫-೬೬ರಲ್ಲಿ ಕನ್ನಡ ರಾಜ್ಯೋತ್ಸವದ ಸಮಾರಂಭವೊಂದರಲ್ಲಿ ತೀ.ನಂ.ಶ್ರೀ.ಯವರು ಮಾತನಾಡುತ್ತಾ ವಚನ ಸಾಹಿತ್ಯದ ಉಲ್ಲೇಖ ಬಂದಾಗ ಅದಕ್ಕೆ ಅವರು ಒಂದು ವಿಶಿಷ್ಟ ರೀತಿಯ ವ್ಯಾಖ್ಯೆಯನ್ನು ನೀಡಿದ್ದರು. ಅದು ತುಂಬ ಸೊಗಸಾಗಿದೆ. ಬಹುಶಃ ಅವರು ತಮ್ಮ ಲೇಖನಗಳಲ್ಲಿ ಎಲ್ಲಿಯಾದರೂ ಬರೆದಿರಬಹುದೆಂದು ಭಾವಿಸಿದ್ದೆ. ಆದರೆ ಅದು ಅಚ್ಚಾಗಿಲ್ಲವೆಂದು ತಿಳಿಯಿತು.

ಆ ವಿಷಯ ಹೀಗಿದೆ: "ಶರಣರ ವಚನ ಸಂಪೂರ್ಣ ಗದ್ಯವೂ ಅಲ್ಲ. ಪೂರ್ಣ ಪದ್ಯವೂ ಅಲ್ಲ: ಅವೆರಡರ ಹದವಾದ ಬೆಸುಗೆ. ಪದ್ಯವನ್ನು ಹೆಣ್ಣುಮಕ್ಕಳು ತಮ್ಮ ತಲೆಯ ಹೆರಳನ್ನು ಎರಡೋ ಮೂರೋ ಅಥವಾ ನಾಲ್ಕು ಸಮಭಾಗವಾಗಿ ವಿಂಗಡಿಸಿ ಅಚ್ಚುಕಟ್ಟಾಗಿ ಬಾಚಿ ಬಿಗಿಯಾಗಿ ಹೆಣೆದು ಕೊನೆಗೆ ಟೇಪಿನಿಂದ ಬಿಗಿದ ಜಡೆಯಂತಿದ್ದರೆ, ಗದ್ಯ ಬಿಚ್ಚಿದ ದ್ರೌಪದಿಯ ಶ್ರೀಮುಡಿಯಂತೆ. ಹಾಗಾದರೆ ವಚನ ಯಾವ ಥಾಟಿಯದು ಎಂದು ಭಾವಿಸಿದರೆ ಅದು ಹೆಣ್ಣುಮಕ್ಕಳು ವಾರಕ್ಕೊ, ಹದಿನೈದು ದಿನಕ್ಕೋ ತಲೆಗೆ ನೀರು ಎರೆದುಕೊಂಡಾಗ ಹೆರಳನ್ನು ತಕ್ಷಣ ಎಣ್ಣೆ ಹಾಕಿ ಬಾಚಿ ಜಡೆ ಹೆಣೆಯದೆಯೂ ಮತ್ತು ಹಾಗೇ ಬಿಚ್ಚಿ ಕೆದರಿ ಬಿಟ್ಟುಕೊಳ್ಳದೆಯೂ ಇವೆರಡನ್ನು ಸಮನ್ವಯಗೊಳಿಸಿ ಕೂದಲನ್ನು ಒಂದು ಗೊತ್ತಾದ ವಿನ್ಯಾಸದಲ್ಲಿ ಶಿಥಿಲವಾಗಿ ತೊಡಕಿ ಬಿಡುವರು. ಬಹುಶಃ ಇದರಂತೆ ವಚನ ಸಾಹಿತ್ಯ" ಎಂದರು. ಮುಂದೆ ಏನೆಲ್ಲ ಕನ್ನಡ ಏಕೀಕರಣ ಇತಿಹಾಸ ಸಾಹಿತ್ಯ ನಡೆದು ಬಂದ ದಾರಿ......... ಮಾತನಾಡಿದರು.

ಅವುಗಳಲ್ಲಿ ನನ್ನ ಗಮನ ಸೆಳೆದ ಅಂಶ ಇದು. ಇದು ತುಂಬಾ ಸೊಗಸಾದ ಉಪಮೆ. ಅವರಲ್ಲಿನ ಕವಿ ಹೃದಯಕ್ಕೆ ದ್ಯೋತಕವಾಗಿದೆ. ಇದನ್ನು ನಾನು ವಚನ ಸಾಹಿತ್ಯ ಬೋಧಿಸುವಾಗ ಲೆಲ್ಲಾ ಎಷ್ಟೋ ವಿದ್ಯಾರ್ಥಿ ಸಮೂಹಕ್ಕೆ ಹೇಳಿ ಸಂತಸಗೊಂಡಿದ್ದೇನೆ, ಗುರುಗಳ ಹೆಸರಿನಲ್ಲಿ. ತಾವು ಅವರು ಬರೆದಿಡದೆ ಅಲ್ಲಿ ಇಲ್ಲಿ ಹೇಳಿದ ಇಂತಹ ಸ್ವಾರಸ್ಯ ವಿಷಯಗಳ ಬಗ್ಗೆ ಕೃತಿ ತರುವಾಗ್ಗೆ ಇದನ್ನು ತಪ್ಪದೆ ಉಲ್ಲೇಖಿಸಿರಿ. ಅವರ ಮಾತನ್ನು ನಾನು ಯಾವ ಟೇಪಿನಲ್ಲೂ ರೆಕಾರ್ಡ್ ಮಾಡಿಕೊಂಡಿರಲಿಲ್ಲವಾದ ಕಾರಣ ನಿರೂಪಣೆಯಲ್ಲಿ ತುಸು ವ್ಯತ್ಯಾಸವಾಗಿರಬಹುದು. ಅವರ ಮಾತಿನ ಧಾಟಿ ಬಹುಮಟ್ಟಿಗೆ ಹಾಗಿತ್ತು ಎಂದಷ್ಟೇ ಹೇಳಬಲ್ಲೆ.

ತೀ.ನಂ.ಶ್ರೀ. ಸಂಸಾರದೊಡನೆ

●

ತೀ.ನಂ.ಶ್ರೀ.ಯವರು ಮನೆಯವರೊಡನೆ ಮಾಡಿದ ಪತ್ರ ವ್ಯವಹಾರ ಹೆಚ್ಚಿನ ಸಂಖ್ಯೆಯದೇನಲ್ಲ. ನಾವು ಸಾಮಾನ್ಯವಾಗಿ ಅವರೊಡನೆಯೇ ಯಾವಾಗಲೂ ಇದ್ದುದರಿಂದ ಅದರ ಅವಶ್ಯಕತೆ ಬೀಳಲಿಲ್ಲ. ಆದರೆ ೧೯೪೦ರ ದಶಕದ ಕೊನೆಯಲ್ಲಿ ಕೆಲವು ತಿಂಗಳ ಕಾಲ ಅವರು ದಾವಣಗೆರೆ ಮತ್ತು ಕೋಲಾರಕ್ಕೆ ವರ್ಗವಾಗಿದ್ದರು. ಅನಂತರ ನನ್ನ ಅಕ್ಕ ಸೌ॥ ನಾಗರತ್ನ ಮದುವೆಯಾಗಿ ೧೯೬೨ರಲ್ಲಿ ರಾಂಚಿಗೆ ತೆರಳಿದ ನಂತರ ಮತ್ತು ನಾನು ನನ್ನ ಸ್ನಾತಕೋತ್ತರ ಅಧ್ಯಯನಕ್ಕಾಗಿ ೧೯೬೫ರಲ್ಲಿ ಕಲ್ಕತ್ತಾಕ್ಕೆ ಹೋದ ನಂತರ ನಮ್ಮ ತಂದೆ ನಮ್ಮೊಡನೆ ಸಾಕಷ್ಟು ಪತ್ರವ್ಯವಹಾರ ಮಾಡಿದ್ದರು.

ನಮ್ಮ ತಂದೆಯವರು ೧೯೫೫-೫೬ರಲ್ಲಿ ವಿದೇಶ ಪ್ರವಾಸದಲ್ಲಿದ್ದಾಗ ಅವರು ನಮ್ಮೊಡನೆ ಮಾಡಿದ ಪತ್ರವ್ಯವಹಾರವನ್ನು – ವಿದೇಶದ ಅನುಭವಗಳು ಸಮಗ್ರವಾಗಿ ಇರಲೆಂದು – ಅವರ ವಿದೇಶ ಪ್ರವಾಸದ ಭಾಗದಲ್ಲಿ ಸೇರಿಸಲಾಗಿದೆ. ಅದರಲ್ಲಿ ಅವರು ನಮ್ಮ ಮಾತೋಶ್ರೀಯವರಿಗೆ ಬರೆದ ಪತ್ರಗಳೂ ಸೇರಿವೆ.

ಈ ಪತ್ರಗಳ ಭಾಗಗಳನ್ನು ಇಲ್ಲಿಕೊಟ್ಟಿರುವ ಮುಖ್ಯವಾದ ಉದ್ದೇಶ – ನಮ್ಮ ತಂದೆಯವರು ನಮಗೆ ನಿರೂಪಿಸುತ್ತಿದ್ದ ವಿಷಯಗಳ ವೈವಿಧ್ಯ, ಬಹು ನಯವಾದ ಮತ್ತು ಪ್ರೀತಿಯ ರೂಪದಲ್ಲಿ ನಮಗೆ ಸೂಚಿಸುತ್ತಿದ್ದ ನಮ್ಮ ತಪ್ಪುಗಳು ಮತ್ತು ನಮ್ಮ ಬೆಳವಣಿಗೆಗಾಗಿ ಅವರು ಕೊಡುತ್ತಿದ್ದ ಸೂಕ್ತವಾದ ಸಲಹೆಗಳು ಮತ್ತು ನಮ್ಮ ಯಶಸ್ಸು, ಅಭಿವೃದ್ಧಿಯಿಂದ ಅವರು ಪಡೆಯುತ್ತಿದ್ದ ಸಂತೋಷಗಳನ್ನು ತೋರಿಸುವುದಾಗಿದೆ. ತಂದೆ ಮಕ್ಕಳ ನಡುವೆ ಯಾವ ಬಿಗುಮಾನದ ಕಂದರವೂ ಇಲ್ಲದೆ ನಡೆಯುತ್ತಿದ್ದ ಸಲಿಗೆಯ ವ್ಯವಹಾರವನ್ನು ಈ ಪತ್ರಗಳು ಬಿಂಬಿಸುತ್ತವೆ. ಅಲ್ಲಲ್ಲಿ ನಮ್ಮ ಪ್ರಶಂಸೆಯೂ ಸೇರಿದೆ ಎನಿಸಿದರೆ ಅದು ಕೇವಲ ನಮ್ಮ ತಂದೆಯವರ ಆತ್ಮೀಯತೆ ಮತ್ತು ಪ್ರೀತಿಯನ್ನು ತೋರಿಸುವುದು ಮಾತ್ರ ಇಲ್ಲಿಯ ಉದ್ದೇಶವಾಗಿದೆಯೆಂದು ಸ್ಪಷ್ಟಪಡಿಸುತ್ತೇನೆ. ಈ ಬಗ್ಗೆ ಪು.ತಿ.ನ. ಮತ್ತು ಎ.ಎನ್.ಎಮ್. ಅವರ ಸಲಹೆಯನ್ನು ಕೇಳಿದಾಗ ತೀ.ನಂ.ಶ್ರೀ. ಅವರ ದೃಷ್ಟಿಯಿಂದ ಅವನ್ನು ಸೇರಿಸಬೇಕೆಂದು ಒತ್ತಾಯಿಸಿದ್ದರು. ಈ ವಿಷಯದಲ್ಲಿ ಸಂಕೋಚ ಸಲ್ಲದೆಂದು ನಮ್ಮ ತಂದೆಯವರೇ ತಮ್ಮ ಪುಸ್ತಕ 'ನಂಟರು'ವಿನಲ್ಲಿ 'ಅರಿಕೆ' ಮಾಡಿರುತ್ತಾರೆ.

ಇನ್ನೊಂದು ಗಮನಿಸಬಹುದಾದ ಸ್ವಾರಸ್ಯದ(!) ವಿಷಯವೆಂದರೆ ನಮ್ಮ ತಂದೆಯವರು ನಮ್ಮ ತಾಯಿಯವರ ಹೆಸರಿಗೆ ಸ್ವದೇಶದಲ್ಲಿ ಬರೆದ ಯಾವ ಪತ್ರವೂ ನನಗೆ ದೊರಕಿಲ್ಲ.

ದಾವಣಗೆರೆ, ೪–೯–೧೯೪೮

ಚಿ॥ಸೌ॥ ನಾಗರತ್ನನಿಗೆ ಪ್ರೀತಿಯ ಆಶೀರ್ವಾದಗಳು

ಎಲ್ಲ ಕಾಗದಗಳೂ ತಲುಪಿದುವು. ನೀನು ಬರೆದ ಕಾಗದವನ್ನು ಓದಿ ಸಂತೋಷಪಟ್ಟೆನು. ನಿನ್ನ ಅಕ್ಷರ ಚೆನ್ನಾಗುತ್ತಿದೆ. "ವಾರಾಂತ್ಯ" ಎಂಬ ಪದವನ್ನು ನೀನು ಉಪಯೋಗಿಸಿರುವುದನ್ನು ನೋಡಿ ನನ್ನ ಮನಸ್ಸಿಗೆ ಹರ್ಷವಾಯಿತು. ಯಾರನ್ನಾದರೂ ಕೇಳಿ ತಿಳಿದುಕೊಂಡೆಯೋ, ಮೊದಲೇ ಅದು ನಿನಗೆ ಗೊತ್ತಿದ್ದಿತೊ?... ಒಂದೆರಡು ತಪ್ಪುಗಳನ್ನು ತಿದ್ದಿತೋರಿಸಿದರೆ ನಿನಗೆ ಕೋಪ ಬರುವುದಿಲ್ಲವಷ್ಟೆ. "ಈ ವರಿವಿಗೆ" – "ಈ ವರೆಗೆ" ಎಂದಿರಬೇಕು. "ವಿಷೇಷ" ಎಂದು ಬರೆಯುತ್ತಾರೆಯೇ? – ಅದು "ವಿಶೇಷ" ಆಗಬೇಕೆಂದು ನಿನಗೇ ಗೊತ್ತಿರಬೇಕಲ್ಲವೆ!

ಚಿ॥ ನಾಗಭೂಷಣ ಈಗ ಆರೋಗ್ಯವಾಗಿದ್ದಾನೆಯೆ? ಅವನು ಚೇಷ್ಟೆ ಮಾಡುತ್ತಾನೆಂದು ನೀನು ಬರೆದಿದ್ದೀಯೆ. ಚೇಷ್ಟೆ ಮಾಡುವುದು ಬುದ್ಧಿವಂತರಾದ ಹುಡುಗರ ಲಕ್ಷಣ. ಆದರೆ ಇನ್ನೊಬ್ಬರಿಗೆ ತೊಂದರೆಯಾಗದಂತೆ ಚೇಷ್ಟೆ ಮಾಡಬೇಕು. ಈ ವಿಷಯವನ್ನು ಅವನಿಗೆ ತಿಳಿಸು. ಅವನಿಗೂ ಒಂದು ಚಿಕ್ಕಕಾಗದ ಬರೆದು ಇದರ ಜೊತೆಗೆ ಇರಿಸಿದ್ದೇನೆ. ಅದನ್ನು ಅವನಿಗೆ ಕೊಡು. ಸರಿಯಾಗಿ ಓದಿಕೊಳ್ಳಲು ಬಾರದಿದ್ದರೆ ಅವನಿಗೆ ಓದಿಹೇಳು.

ನೀನು ಪಾಠಗಳನ್ನು ಚೆನ್ನಾಗಿ ಓದಿಕೊಳ್ಳುವೆಯೆಂದು ನನಗೆ ಗೊತ್ತು. ಆದ್ದರಿಂದ ಆ ವಿಷಯವಾಗಿ ನಾನು ಏನನ್ನೂ ಬೇರೆ ಬರೆಯುವುದಿಲ್ಲ.

ನಿಮ್ಮನ್ನೆಲ್ಲ ದಾವಣಗೆರೆಗೆ ಕರೆತರಬೇಕೆಂದು ನನಗೂ ಇಷ್ಟವಿತ್ತು. ಆದರೆ ಈಗಿನ ಅನಿಶ್ಚಿತ ಪರಿಸ್ಥಿತಿಯಲ್ಲಿ ಏನು ಮಾಡಲೂ ಅವಕಾಶವಿಲ್ಲದಾಗಿದೆ. ಆಗಲಿ ನೋಡೋಣ.

ಇಂತು ಪ್ರೇಮದ ಆಶೀರ್ವಾದಗಳು
ನಿನ್ನ ತಂದೆ ಶ್ರೀಕಂಠಯ್ಯ

* * *

ದಾವಣಗೆರೆ, ೨–೧೧–೧೯೪೮

ಚಿ॥ಸೌ॥ ನಾಗರತ್ನನಿಗೆ

ನಿನ್ನ ಸೊಗಸಾದ ಕಾಗದ ನನಗೆ ಬಂದು ಎಷ್ಟೋದಿನವಾದರೂ, ಅದು ಕೈಸೇರಿದ ಬಳಿಕ ಎರಡು ಕಾಗದಗಳನ್ನು ನಾನು ಬೆಂಗಳೂರಿಗೆ ಬರೆದರೂ, ನಿನಗೆ ಪ್ರತ್ಯೇಕವಾಗಿ ನಾನು ಉತ್ತರ ಬರೆಯಲಿಲ್ಲವೆಂದು ನಿನಗೆ ಸಿಟ್ಟು ಬಂದಿದೆಯಂತೆ. ಅಷ್ಟೊಂದು ಸಿಟ್ಟುಮಾಡಿಕೊಳ್ಳಬೇಡ, ತಾಯಿ! ಇಲ್ಲಿಯ ಕೆಲಸದ ತೊಂದರೆಗಳಿಂದ ಬರೆಯಲು ನನಗೆ ಆಗಲಿಲ್ಲ; ಉದಾಸೀನ ಮಾಡಿದೆನೆಂದು ಭಾವಿಸಬೇಡ. ಇಷ್ಟು ದೂರದಲ್ಲಿ ನಿಮ್ಮನ್ನೆಲ್ಲ ಬಿಟ್ಟು ನಾನು ಇರುವಾಗ ಮತ್ತೆ ಮತ್ತೆ ನಿಮ್ಮೆಲ್ಲರ ನೆನಪೇ ಬರುತ್ತಿರುತ್ತದೆ. ಈ ನಿರ್ಬಂಧದ, ಫಲವಿಲ್ಲದ, ಅಗಲಿಕೆ ಯಾವಾಗ ಕೊನೆಮುಟ್ಟುವುದೋ ಕಾಣೆ.

ದೀವಳಿಗೆ ಹಬ್ಬಕ್ಕೆ ನಿಮ್ಮೆಲ್ಲರ ಜೊತೆಯಲ್ಲಿ ಇರಲು ನನಗೆ ಆಗಲಿಲ್ಲ. ನನ್ನ ರಜವೆಲ್ಲ ಮುಗಿದುಹೋಗಿದೆ, ಇನ್ನು ಎರಡೇ ದಿನ ಉಳಿದಿದೆ. ಅಲ್ಲದೆ, ಇಂಟರ್‌ಮೀಡಿಯೆಟ್ ಪರೀಕ್ಷೆಗಳು ನಡೆಯುತ್ತಿವೆ. ಈ ನಡುವೆ ನಾನು ಸ್ಥಳ ಬಿಟ್ಟು ಕದಲುವ ಹಾಗಿಲ್ಲ. ಇಲ್ಲಿಯ ಮಿತ್ರರ ವಿಶ್ವಾಸ ದಿಂದ ಹಬ್ಬದ ಯಾವ ಊಟವೂ ತಪ್ಪಿಲ್ಲ. ಮೊನ್ನೆಯ ದಿನ ಡಾಕ್ಟರ ಮನೆಗೆ ಕರೆದಿದ್ದರು; ಈ ದಿನ ಬ್ಯಾಂಕ್ ಮ್ಯಾನೇಜರ ಮನೆಗೆ ಊಟಕ್ಕೆ ಹೋಗುತ್ತೇನೆ.

ಇಲ್ಲಿಯ ಡಾಕ್ಟರ ಮನೆಯಲ್ಲಿ ನಾರಾಯಣಸ್ವಾಮಿ ಎಂಬ ಚಿಕ್ಕ ಹುಡುಗ ಇದ್ದಾನೆ, ನಮ್ಮ ನಾಗಭೂಷಣನ ವಯಸ್ಸೇ ಅವನಿಗೂ. ಅವನು ಚೆನ್ನಾಗಿ ಮಾತಾಡುತ್ತಾನೆ, ತುಂಟತನ ವನ್ನೂ ಸ್ವಲ್ಪ ಮಾಡುತ್ತಾನೆ – ನಾಗಭೂಷಣನಷ್ಟಲ್ಲ; ಅಲ್ಲದೆ ನಾಗಭೂಷಣನಷ್ಟು ಅವನು ಕಿರಿಚುವುದಿಲ್ಲ. ಈ ಹುಡುಗನಿಗೂ ನನಗೂ ಸಲಿಗೆ ಹೆಚ್ಚು. ಅವನಿಗೆ ಮೊನ್ನೆಯ ದಿನ "ವಿಷ್ಣುಚಕ್ರ" ಮೊದಲಾದ ಒಂದೆರೆಡು ಆಟದ ಸಾಮಾನನ್ನು ತೆಗೆದುಕೊಂಡು ಹೋಗಿ ಕೊಟ್ಟೆನು. ಚಿ॥ ನಾಗಭೂಷಣನೂ ನೀನೂ ಈ ಹಬ್ಬದಲ್ಲಿ ಇವನ್ನೆಲ್ಲ ಹತ್ತಿಸಿ ನೋಡಿರಬೇಕೆಲ್ಲವೆ.

* * *

ಹೊಸದೆಹಲಿ, ೩೦–೧೧–೧೯೪೯

ಚಿ॥ಸೌ॥ ನಾಗರತ್ನನಿಗೆ

ನಾನು ಈ ಸಲವೂ ಶ್ರೀ ದಿವಾಕರರ ಮನೆಯಲ್ಲಿ ಶ್ರೀ ಕೃಷ್ಣಮೂರ್ತಿರಾಯರ ಜೊತೆಯಲ್ಲಿ ಇದ್ದೇನೆ. ಎಲ್ಲವೂ ಅನುಕೂಲವಾಗಿದೆ; ವಿಶ್ವಾಸವಾಗಿ ಕಾಣುತ್ತಿದ್ದಾರೆ.

ಇಲ್ಲಿಗೆ ಬಂದ ಮೇಲೆ, ೨೬ನೆಯ ತಾ॥ ರಾತ್ರಿ ೮.೪೫ ಘಂಟೆಗೆ ದೆಹಲಿಯ ರೇಡಿಯೋದಲ್ಲಿ ನಾನು ಭಾಷಣ ಮಾಡಿದೆನು. ಅದನ್ನು ನೀವು ಯಾರೂ ಕೇಳಲಿಲ್ಲವೆ, ಹೇಗೆ? ಕೇಳಿದ ವಿಚಾರಕ್ಕೆ ನಿಮ್ಮ ಯಾರ ಕಾಗದದಲ್ಲೂ ಪ್ರಸ್ತಾವವೇ ಇಲ್ಲವಲ್ಲ! ೨೭ನೆಯ ತಾರೀಖು ಬೆಳಗ್ಗೆ ದೆಹಲಿ ಕರ್ಣಾಟಕ ಸಂಘದವರು ರನ್ನ ಜಯಂತಿಯನ್ನು ನಡೆಸಿದರು. ನಾನೇ ಮುಖ್ಯ ಭಾಷಣ ಮಾಡಿದೆ. ಅದು ಇಲ್ಲಿಯ ಮಿತ್ರರಿಗೆಲ್ಲ ಒಪ್ಪಿಗೆಯಾಯಿತೆಂದು ಕಾಣುತ್ತದೆ. (ರೇಡಿಯೋ ಭಾಷಣವೂ ಚೆನ್ನಾಗಿತ್ತೆಂದು ಅದನ್ನು ಕೇಳಿದವರು ಹೇಳಿದರು.) ಅದು ಚೆನ್ನಾಗಿತ್ತೆಂದು ಪು.ತಿ.ನ ಕೂಡ ಬರೆದಿದ್ದಾರೆ. ಅದೇ ಭಾನುವಾರ ಸಂಜೆ ಪಂಡಿತ ಜವಹರಲಾಲ್ ನೆಹರೂ ಅವರಿಗೆ ದೆಹಲಿಯ ಪುರಪ್ರಮುಖರು ಕೆಂಪುಕೋಟೆಯಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ನನಗೂ ಆಹ್ವಾನ ಬಂದಿತ್ತು. ಬಹಳ ಮುಂದುಗಡೆಯೇ ಕುಳಿತುಕೊಳ್ಳಲು ಜಾಗಸಿಕ್ಕಿತ್ತು. ಹೆಚ್ಚಿನ ವಿಶೇಷವೇನೆಂದರೆ, ಪಂಡಿತ ನೆಹರೂ ಅವರು ಅತಿಥಿಗಳ ಮೇಜಿನಿಂದ ಮೇಜಿಗೆ ಹೋಗುತ್ತಾ ನಾನು ಕುಳಿತಿದ್ದ ಬಳಿಗೂ ಬಂದರು. ಅವರ ಸಂಗಡ ಕೈಕುಲುಕುವ ಸುಯೋಗ ನನಗೂ ಒದಗಿತು ಅನಿರೀಕ್ಷಿತವಾಗಿ!... ಆಮೇಲೆ ಅವರ ಭಾಷಣ, ಅದು ಹೆಚ್ಚುಕಡಮೆ ಉರ್ದು ಭಾಷೆಯಲ್ಲಿದ್ದುದ್ದರಿಂದ ನನಗಂತೂ ಅರ್ಥವಾಗಲಿಲ್ಲ! ಆ ಬಳಿಕ ಶ್ರೀ ದಿವಾಕರ ಅವರನ್ನು ಕೇಳಿ, ಪತ್ರಿಕೆಯಲ್ಲಿ ಓದಿ ವಿಷಯವನ್ನು ತಿಳಿದುಕೊಂಡೆ...... ನಿನ್ನೆಯ ಬೆಳಗ್ಗೆ

ಥಕ್ಕರ್ ಬಾಪಾ ಅವರ ಎಂಬತ್ತನೆಯ ಜನ್ಮೋತ್ಸವವನ್ನು ಇಲ್ಲಿಯ ಪ್ರಮುಖರು ಆಚರಿಸಿದರು. ಅದಕ್ಕೂ ಹೋಗಿದ್ದೆ, ತುಂಬ ಚೆನ್ನಾಗಿತ್ತು. ಶ್ರೀ ನೆಹರೂ, ಪಟೇಲ್, ಆಜ಼ಾದ್, ಪಟ್ಟಾಭಿ ಮೊದಲಾದವರೆಲ್ಲ ಸ್ವಲ್ಪ ಸ್ವಲ್ಪ ಮಾತಾಡಿದರು. ಅಂತೂ ಈ ಸಲ ದೆಹಲಿಗೆ ಬಂದದ್ದಕ್ಕೆ ಜನ ನಾಯಕರನ್ನೆಲ್ಲ ಹತ್ತಿರದಲ್ಲಿ ನೋಡಿದ ಹಾಗಾಯಿತು. ಕೆಂಪುಕೋಟೆಯ ಸಮಾರಂಭದಲ್ಲಿ ಸುಮಾರು ಐದುಸಾವಿರ ಜನಗಳು 'ಟೀ'ಗೆ ಬಂದಿದ್ದರು.

* * *

ಧಾರವಾಡ, ೧೪-೧-೧೯೫೨

ಚಿ॥ಸೌ॥ ನಾಗರತ್ನನಿಗೆ

ನಾನು ೧೨ನೆಯ ತಾರೀಖು ಕಳಿಸಿದ ತಂತಿಯೂ ಅದಕ್ಕೆ ಸ್ವಲ್ಪ ಮುಂಚೆ ಬರೆದ ಕಾಗದವೂ ನಿಮ್ಮ ಕೈಸೇರಿರಬೇಕು. ಇಲ್ಲಿ ಒಂದೊಂದಾಗಿ ಏರ್ಪಾಡು ಮಾಡಿಕೊಳ್ಳುತ್ತಿದ್ದೇನೆ. ಊಟಕ್ಕೂ, ವಸತಿಗೂ ಹೆಚ್ಚಿನ ತೊಂದರೆಯೇನೂ ಇಲ್ಲ; ಅನುಕೂಲವಾಗಿದೆಯೆಂದೇ ಹೇಳಬೇಕು. ಸ್ನಾನದ ವಿಷಯ ಮಾತ್ರ ತೊಡಕಾಗಿದೆ. ಅದನ್ನೂ ಹೇಗೋ ಸರಿಪಡಿಸಿಕೊಳ್ಳುತ್ತೇನೆ. ಈ ವಿಷಯವಾಗಿ ನೀವು ಚಿಂತೆ ಮಾಡಬೇಕಾಗಿಲ್ಲ.

ಧಾರವಾಡಕ್ಕೆ ನಾನು ಶುಕ್ರವಾರ ಮೂರು ಘಂಟೆಗೆ ಬಂದು ಇಳಿಯುತ್ತಲೇ ಇಲ್ಲಿಯ ಮಿತ್ರರೊಬ್ಬರ ಸ್ವಾಗತ ಕಾದಿತ್ತು. ಶ್ರೀ ಆರ್.ಎಲ್. ನರಸಿಂಹಯ್ಯನವರ ಶಿಷ್ಯ ಶ್ರೀ ರಾಮಚಂದ್ರ ಪ್ರಭು ಎಂಬುವರು ಇಲ್ಲಿ "ಇನ್‌ಕಮ್‌ಟ್ಯಾಕ್ಸ್ ಆಫೀಸರ್" ಆಗಿದ್ದಾರೆ. ಅವರು ನನ್ನನ್ನು ಸ್ಟೇಷನ್ನಿನಲ್ಲಿ "ಭೆಟ್ಟಿ" ಮಾಡಿ ಕಾರಿನಲ್ಲಿ ಇಲ್ಲಿಯ "ಪ್ರವಾಸಿಗರ ಮನೆ"ಗೆ ಕರೆತಂದು ಬಿಟ್ಟರು. ಮೊದಲ ಎರಡು ದಿನ ಅವರೊಡನೆಯೇ ಊಟಕೂಡ ಆಯಿತು.

ಇನ್ನೊಂದು ವಿಷಯ. ಬೆಂಗಳೂರಿನಲ್ಲಿ ಶ್ರೀ ಪು.ತಿ.ನ. ಸ್ಟೇಷನ್ನಿಗೆ ಬಂದಿದ್ದರು. ಹೊರಡುವಾಗ, ಅವರ ಶ್ರೀಮತಿಯವರು ಮಾಡಿ ಕಳಿಸಿದ್ದ ಉಂಡೆಗಳ ಪೊಟ್ಟಣವನ್ನು ಕೊಟ್ಟು ಹೋದರು. ಉಂಡೆಗಳ ರುಚಿ ತುಣಿತ್ತೇಂಗೊಳಲಿನ ರುಚಿಯಂತೆ ಇದೆ; ಆದರೆ ಇದನ್ನು ಲಾಡು ಕಾಳಿನಂತೆ ಕರಿದು ಉಂಡೆ ಕಟ್ಟಿದ್ದಾರೆ. ಇದರ ಹೆಸರು 'ಮನೋಹರದುಂಡೆ' ಎಂದು ಕಾಣುತ್ತದೆ. ಪು.ತಿ.ನ. ನಮ್ಮ ಮನೆಗೆ ಬಂದಾಗ ವಿಚಾರಿಸಿ ತಿಳಿದುಕೊಳ್ಳಿ.

ಕೆಲಸವನ್ನು ಶನಿವಾರ ಪೂರ್ವಾಹ್ನದಲ್ಲೇ ವಹಿಸಿಕೊಂಡದ್ದಾಯಿತು. ಆದರೆ ಕೆಲಸದ ಸ್ವರೂಪವೇನೆಂಬುದು ಇನ್ನೂ ನಿಷ್ಕರ್ಷೆಯಾಗಬೇಕು..... ಇಲ್ಲಿ ನನಗೆ ಪರಿಚಿತರಾದ ಮುಖ್ಯ ವ್ಯಕ್ತಿಗಳನ್ನೆಲ್ಲಾ ನೋಡಿಕೊಂಡು ಬರುತ್ತಿದ್ದೇನೆ. ಕಾಲೇಜು ಉಪಾಧ್ಯಾಯರನ್ನೂ ನೋಡುತ್ತಿದ್ದೇನೆ. ....ಬಹುಶಃ ಬುಧವಾರದಿಂದ ಎಂ.ಎ. ತರಗತಿಗೆ ಕೆಲವು ಪಾಠಗಳನ್ನು ತೆಗೆದುಕೊಳ್ಳುತ್ತೇನೆ. ರಿಜಿಸ್ಟ್ರಾರರನ್ನು, ವೈಸ್ ಛಾನ್ಸಲರನ್ನು ಆಗಲೇ ಕಂಡಿದ್ದೆ.

ಈ ದಿನ ಸಂಕ್ರಾಂತಿಯ ಹಬ್ಬವಲ್ಲವೆ! ನನ್ನ ಹಬ್ಬದ ಊಟಕ್ಕೇನೂ ಕೊರತೆಯಿಲ್ಲ. ಶ್ರೀ ಗಾಯಿ ಎಂಬ ಮಿತ್ರರು ಮನೆಗೆ ಕರೆದುಕೊಂಡು ಹೋಗುತ್ತಾರೆ. ಇವರು ಹಿಂದೆ ಮೈಸೂರಿನಲ್ಲಿ

ಕೆಲವು ವ್ಯಾಸಂಗಕ್ಕಾಗಿ ಡಾ॥ ನರಸಿಂಹಯ್ಯನವರ ಹತ್ತಿರ ಇದ್ದವರು. ಇವರ 'Historical Grammar of Old Kannada' ಎಂಬ ಪುಸ್ತಕವನ್ನು ನೀನು ನೋಡಿರಬೇಕು. ನಮ್ಮ ಮನೆಯಲ್ಲಿ ಪರಿಷತ್ತಿನ ಪುಸ್ತಕಗಳ ಸಾಲಿನಲ್ಲಿದೆ.

ಶ್ರೀ ಮಾಸ್ತಿಯವರ ಅಳಿಯಂದಿರು ಇಲ್ಲಿ ಮನೆ ಮಾಡಿದ್ದಾರೆ. ಅವರ ಕುಟುಂಬ ಬಹುಶಃ ಗುರುವಾರ ಬೆಂಗಳೂರಿನಿಂದ ಇಲ್ಲಿಗೆ ಹೊರಟು ಬರುತ್ತಾರೆಂದು ಕಾಣುತ್ತದೆ. (ನಿನ್ನೆ ಅವರೂ ಶ್ರೀಮತಿ ವಿಜಯಲಕ್ಷ್ಮಿಯವರೂ ನನಗೆ ಸಿಕ್ಕಿದ್ದರು.) ಶ್ರೀ ಮಾಸ್ತಿಯವರ ಮಗಳು ಇಲ್ಲಿಗೆ ಬರುವಾಗ ನಾನು ಇದರೊಂದಿಗೆ ಪಟ್ಟಿಯಲ್ಲಿ ಗುರುತುಮಾಡಿರುವ ಪದಾರ್ಥಗಳನ್ನು ಕಳಿಸಿಕೊಡಿ.

ಕಾಶ್ಮೀರದ ಶಾಲು ಸದ್ಯಕ್ಕೆ ಬೇಡ. ಮನೆಯಲ್ಲೇ ಜೋಪಾನವಾಗಿ ಇಟ್ಟಿರಿ. ಇಲ್ಲಿಗೆ ಈಗಲೇ ಬಂದರೆ ಅದು ಎರಡೇ ದಿನದಲ್ಲಿ ಕಾವಿಯ ಬಣ್ಣಕ್ಕೆ ತಿರುಗಿಬಿಡುತ್ತದೆ.

ಇಲ್ಲಿ ಬಿಸಿಲು ಬೆಂಗಳೂರಿಗಿಂತ ಹೆಚ್ಚು : ಸೊಳ್ಳೆಯೂ ಹೆಚ್ಚು. ನನ್ನ ಪರದೆಯ ಸುತ್ತಲೂ ಸೊಳ್ಳೆಗಳು ಸಂಗೀತ ಹಾಡುತ್ತಿರುತ್ತವೆ. ನಾನು ಕೈಗೆ ಸಿಕ್ಕಲಿಲ್ಲವಲ್ಲ ಎಂದು ಅವಕ್ಕೆ ಸಂಕಟ.

* * *

ಮೈಸೂರು, ೧೫-೧೦-೧೯೬೩

ಚಿ॥ಸೌ॥ ನಾಗರತ್ನನಿಗೆ

ನಾವು ಮೂರುನಾಲ್ಕು ದಿನಗಳಿಂದ ಎದುರುನೋಡುತ್ತಿದ್ದ ನಿನ್ನ ಕಾಗದ ನಿನ್ನೆಯ ಬೆಳಗ್ಗೆ ಕೈಸೇರಿತು. ನಿಮ್ಮ ತಾಯಿಯಂತೂ ಪ್ರತಿದಿನವೂ ಪೋಸ್ಟ್‌ಮನ್ ಬಂದು ಹೋಗುವುದನ್ನೇ ಕಾದಿರುತ್ತಿದ್ದಳು. ನಿನ್ನೆ ನಿನ್ನ ಕಾಗದವನ್ನು ನೋಡಿ ನಮ್ಮೆಲ್ಲರಿಗೂ ತುಂಬ ಸಂತೋಷವಾಯಿತು. ಈ ಬಾರಿ ಟಪಾಲು ಇಲಾಖೆಯವರೂ ಕಾಗದವನ್ನು ತಡ ಮಾಡುವುದರಲ್ಲಿ ಸ್ವಲ್ಪಭಾಗಿಗಳಾಗಿರುವಂತೆ ತೋರುತ್ತದೆ. ನಿನ್ನ ಕಾಗದದ ಮೇಲಿನ ಮೈಸೂರಿನ ಮುದ್ರೆಯಲ್ಲೇನೋ ನಿನ್ನೆಯ ತಾರೀಖೇ ಇದೆ.

ಚಿ॥ ಉಮಾ ಚಟುವಟಿಕೆಯಿಂದ ಇದ್ದಾಳೆಂದು ಕೇಳಿ ಹರ್ಷವಾಯಿತು. ಇನ್ನು ಅವಳು ಮಾತಾಡುವುದಕ್ಕೂ ಪ್ರಾರಂಭಿಸಬಹುದು; ಹಲ್ಲುಗಳು ಕಾಣಿಸಿಕೊಳ್ಳುತ್ತಿವೆಯೆ? ಅಲ್ಲಿ ಒಳ್ಳೆಯ ಟೊಮ್ಯಾಟೋ ಸಿಕ್ಕುತ್ತಿಲ್ಲವೆಂದು ಕೇಳಿ ವ್ಯಸನವಾಯಿತು. ಅವಳು ಇಲ್ಲಿ ಇರುವ ತನಕ ನಮ್ಮ ಗಿಡಗಳಲ್ಲಿ ಒಂದು ಹಣ್ಣೂ ಕಾಣಿಸಿಕೊಳ್ಳಲಿಲ್ಲ. ಈಗ ಅವು ಮಾಗುತ್ತಿವೆ. ಮೊನ್ನೆ ಒಂದೆರಡು ಹಣ್ಣುಗಳನ್ನು ಕಿತ್ತು ಉಪಯೋಗಿಸಿದಾಗ ಚಿ॥ ಉಮನ ನೆನಪು ಸಹಜವಾಗಿ ಬಂದಿತು. ಇಲ್ಲಿಂದ ಅಲ್ಲಿಗೆ ಕಳಿಸಿಕೊಡೋಣವೆಂದರೆ ಟೊಮ್ಯಾಟೋ ಹಣ್ಣು ನಿಲ್ಲುವ ವಸ್ತುವಲ್ಲ!

ಚಿ॥ ಉಮನಿಗೆ ನಮ್ಮ ಮುತ್ತುಗಳನ್ನು ಸಲ್ಲಿಸು... ಟೊಮ್ಯಾಟೋ ಹಣ್ಣಿನಂತೆ ಅವಳೂ ಪಾರ್ಸೆಲ್ ಮೂಲಕ ಕಳಿಸಬಹುದಾದ ವಸ್ತುವಲ್ಲ; ಇಲ್ಲವಾದರೆ ನಿಮ್ಮ ಯಜಮಾನರ ಸಲಹೆ

ಯನ್ನು ಸಂತೋಷದಿಂದ ಸ್ವಾಗತಿಸುತ್ತಿದ್ದೆವು. ಹೋಗಲಿ, ಮೈಸೂರಿನಿಂದ ರಾಂಚಿಗೆ ನೇರವಾಗಿ ವಿಮಾನ ಸೌಕರ್ಯ ಇದ್ದಿದ್ದರೆ! ಅಲ್ಲಿ ಏರ್‌ಹೋಸ್ಟೆಸ್‌ಗೆ ಮಗುವನ್ನು ಒಪ್ಪಿಸಿ ಇಲ್ಲಿ ಎತ್ತಿಕೊಳ್ಳ ಬಹುದಾಗಿತ್ತು; ಹಾಗೆಯೇ ಹಿಂದಕ್ಕೆ ಕಳಿಸಬಹುದಾಗಿತ್ತು! ಆ ಆಲೋಚನೆಯನ್ನು ಮಾಡುವ ಹಾಗಿಲ್ಲ... ಆ ತುಂಟಿಯ ಫೋಟೋವನ್ನು ತೆಗೆದು ಕಳಿಸಿಕೊಡಿ. ಅದನ್ನು ನೋಡಿದರೆ ಎಲ್ಲರಿಗಿಂತ ಹೆಚ್ಚಾಗಿ ನಿಮ್ಮ ತಾಯಿಗೆ ಎಷ್ಟೋ ಸಮಾಧಾನವಾಗುತ್ತದೆ.

ಬೆಂಗಳೂರಲ್ಲಿ ನಿಮ್ಮನ್ನು ಸಂಧಿಸಿದ ನಂತರದಿಂದ ಮಿತ್ರರಿಂದ ಕಾಗದಗಳು ಬಂದಿವೆ. ಎಲ್ಲರೂ ಸಂತೋಷ ಪಟ್ಟಿದ್ದಾರೆ. ಈಚೆಗೆ ನಾನು ಎರಡು ದಿನದ ಮಟ್ಟಿಗೆ ಬೆಂಗಳೂರಿಗೆ ಹೋಗಿದ್ದಾಗ ಕೆಲವರನ್ನು ಕಂಡಿದ್ದೆ. ಆಗಲೂ ಅವರ ಬಾಯಲ್ಲಿ ಒಳ್ಳೆಯ ಮಾತುಗಳನ್ನು ಕೇಳಿದೆನು....

ನನಗೆ ಬಂದ ಕಾಗದಗಳಿಂದ ಒಂದೆರೆಡು ವಾಕ್ಯಗಳನ್ನು ಎತ್ತಿ ಬರೆದರೆ ನಿನಗೂ ನಿಮ್ಮ ಯಜಮಾನರಿಗೂ ಜಂಬ ಬರುವುದಿಲ್ಲ ತಾನೆ :

ಶ್ರೀ ಪು.ತಿ.ನ. :–

"... The child in the arms of her father looked very pretty indeed. Your son-in-law is a gem. Look at Nagaratna touching my feet there on the platform in front of the crowd! She did it so affectionately and so naturally. I felt quite embarrassed and humble; but I remembered my father and his. Both were grand old men, pious, gentle and true. And blessed her. What sweet children you have.... And your son-in-law, so quite, so solicitous and efficient. It made me glad to see them....."

ಶ್ರೀ ಬಿ. ನಂಜುಂಡಯ್ಯ :–

It is not flattering. I write the following-We feel you are lucky in having ಶ್ರೀ ಚಂದ್ರಶೇಖರ್ as your son-in-law. Instinctively he is a good natured boy and highly balanced. That is our sincere impression. May God bless them all"

ಶ್ರೀ ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟ :–

"ಉಮಾ ಸ್ಟೇಷನ್ನಿನಲ್ಲಿಳಿದಾಗ ಎಚ್ಚರವಾಗಿದ್ದಳು. ಈಗ ಮೊದಲಿಗಿಂತ ಚೆನ್ನಾಗಿ ಮೈತುಂಬಿ ಕೊಂಡಿದ್ದಾಳೆ ಅಲ್ಲವೇ ಸಾರ್? ಬಂದವರೆಲ್ಲ ಅವಳನ್ನು ಎತ್ತಿಕೊಂಡು ಮುದ್ದಾಡುವವರೇ. ಕೆಲವರ ಪ್ರೀತಿಯ ಅಬ್ಬರ ನೋಡಿದಾಗ ಮಗುವಿಗೆ ಸ್ವಲ್ಪ ಹಿಂಸೆಯಾಗಿರಬಹುದು ಎಂದು ಅನಿಸಿತು.... ಚಂದ್ರಶೇಖರಯ್ಯ ಯಾರಿಗೋ ಹೇಳುತ್ತಿದ್ದರು – 'ಇವಳು (ಉಮಾ) ಚೋಟುದ್ದದ

ಹುಡುಗಿ ನಿಜ. ಆದರೆ ಅವಳ ಪ್ರತಾಪ ನೋಡಿ! ಮೊದಲು ನಾನು ಒಂದು ಸೂಟ್‌ಕೇಸು ಹಿಡಿದುಕೊಂಡು ಪ್ರಯಾಣಮಾಡುತ್ತಿದ್ದೆ. ಈಗ ಮಣಗಟ್ಟಲೆ ತೂಕದ ಸಾಮಾನು ಕಾಯುತ್ತ ಹೋಗಬೇಕಾಗಿದೆ. ರಾಂಚಿಗೆ ತಲುಪುವ ಹೊತ್ತಿಗೆ ಈ 'ಹದಿನಾರು' ಅನ್ನೋ ಸಂಖ್ಯೆ ಮೆದುಳಿನ ಆಳಕ್ಕಿಳಿದು ಬಿಟ್ಟಿರುತ್ತದೆಯೇ ಏನೋ' ಅಂತ"

– ಇದೆಲ್ಲವನ್ನೂ ಓದಿ ಇಲ್ಲಿ 'ನಮಗೆ' ಎಷ್ಟು ಹರ್ಷವಾಯಿತೆಂಬುದನ್ನು ಬೇರೆ ವರ್ಣಿಸುವುದಿಲ್ಲ!

ಹಾಗೆಯೇ ಈಚೆಗೆ ಬಂದ ಇನ್ನೊಂದು ಕಾಗದದಿಂದಲೂ ಎರಡು ಮಾತು ಬರೆಯಬಹುದು. 'ನಂಟರು' ಪುಸ್ತಕವನ್ನು ಶ್ರೀ ಡಿ.ವಿ.ಜಿ. ಅವರಿಗೆ ಕಳಿಸಿದ್ದೆ. ಅದನ್ನು ಕುರಿತು ಬರೆಯುತ್ತಾ, ಈ ಕೆಲವು ವಾಕ್ಯಗಳನ್ನು ಬರೆದಿದ್ದಾರೆ :

"I am delighted with your ನಂಟರು - the book of course....

I suppose you have assured your son-in-law that the ಮಾವ–ಅಳಿಯ references do not apply to him. I want to ask Mr. ANM to find out from Mrs. T.N.S. whether she is sure the references don't apply to her father. I hope they will both forgive you...."

ನೋಡಿದೆಯಾ, ಮೂವತ್ತೈದು ವರ್ಷಗಳ ಹಿಂದೆ, ನಾನು ಇನ್ನೂ ವಿದ್ಯಾರ್ಥಿದಶೆಯಲ್ಲಿ ಇದ್ದಾಗ ಬರೆದ ನಾಲ್ಕು ಪಂಕ್ತಿ ನನ್ನನ್ನು ಹೇಗೆ ಆಕ್ಷೇಪಣೆಗೆ ಗುರಿಮಾಡುತ್ತಿದೆ! ಶ್ರೀ ಗುಂಡಪ್ಪನವರಿಗೆ ಯಥೋಚಿತವಾಗಿ ಉತ್ತರ ಬರೆಯುತ್ತೇನೆ.... ನೀನೂ ನನ್ನ ವಾಕ್ಯಗಳನ್ನು ಒಪ್ಪಲಿಲ್ಲ. ಶ್ರೀ ಪು.ತಿ.ನ. ಅವರೂ ತಮ್ಮ ಅನುಭವ ನನ್ನ ಬರವಣಿಗೆಗೆ ವಿರುದ್ಧವಾಗಿದೆಯೆಂದು ಹೇಳಿದರು. ನಿಜವನ್ನು ಹೇಳಬೇಕಾದರೆ, ನನ್ನ **ಅನುಭವವೂ ಹಾಗೆಯೇ!** ದೇವರ ದಯದಿಂದ ನಾನು ಅಳಿಯನಾಗಿ ಆಗಲಿ ಮಾವನಾಗಿ ಆಗಲಿ ಯಾವ ವಿರಸವನ್ನೂ ಕಾಣಲಿಲ್ಲ, ಕಾಣುವಂತೆಯೂ ಇಲ್ಲ. ಕಳೆದ ಮೂವತ್ತೈದು ನಲವತ್ತು ವರ್ಷಗಳಲ್ಲಿ ಈ ಸಂಬಂಧವೇ ನಿಜವಾಗಿ ಮಾರ್ಪಟ್ಟಿವೆ. ಮೊನ್ನೆ ನಾನು ಶ್ರೀ ಪು.ತಿ.ನ. ಅವರ ಸಂಗಡ ಈ ವಿಷಯವಾಗಿ ಬೆಂಗಳೂರಲ್ಲಿ ಮಾತಾಡುತ್ತಿರುವಾಗ, ಇದಕ್ಕೆ ಕಾರಣ ನನಗೆ ಹೊಳೆಯಿತು: Where the son-in-law loves **and** respects his wife, his relationship with his father-in-law also will be on a happy footing. ಈ ನನ್ನ ಹೇಳಿಕೆ ನಿಜವಲ್ಲವೆ? ಮೂವತ್ತೈದು ವರ್ಷದ ಹಿಂದೆ ಪರಿಸ್ಥಿತಿ ಇಷ್ಟು ಸುಖವಾಗಿರಲಿಲ್ಲ. (ಮಾವ–ಅಳಿಯಂದಿರಿಗೆ ವಿರಸವಿದ್ದುದನ್ನು ನಮ್ಮ ಬಂಧುವರ್ಗದಲ್ಲೇ ನಾನು ನೋಡಿದ್ದೆ.) ಅಲ್ಲದೆ ನನ್ನ ಲೋಕಜ್ಞಾನವೂ ಈಗಿನಷ್ಟು ಇರಲಿಲ್ಲ! ಆ ಪ್ರಬಂಧವನ್ನು ನಾನು ಈಗೇನಾದರೂ ಬರೆದಿದ್ದರೆ ಅದರ ಸ್ವರೂಪವೇ ಬೇರೆಯಾಗಿರುತ್ತಿತ್ತು!.... ಈ ವಿಷಯವನ್ನು ಇಲ್ಲಿಗೆ ಬಿಡೋಣ. ನಿಮ್ಮ ಯಜಮಾನರಿಗೆ ನನ್ನ ಪರವಾಗಿ ನೀನು ಆಶ್ವಾಸನ ಕೊಟ್ಟಿದ್ದೀಯಷ್ಟೇ – ಆಶ್ವಾಸನ ಅವಶ್ಯಕವಾಗಿದ್ದರೆ. ನಿಮ್ಮ ಮದುವೆಯಾದ ಹೊಸದರಲ್ಲಿ. ಒಂದು ರಾತ್ರಿ ಊಟಮಾಡುತ್ತಿರುವಾಗ, ನಂಟರ ಪ್ರಸ್ತಾಪ

ಬಂದಿತು. ಆಗ ಚಿ॥ ಚಂದ್ರಶೇಖರಯ್ಯ "ನಾನು ನಂಟನಲ್ಲ, ಮನೆಯ ಅಳಿಯ" ಎಂದು ಹೇಳಿ ನಮ್ಮನ್ನೆಲ್ಲ ತುಂಬ ಸಂತೋಷಪಡಿಸಿದರು. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, "ಮಗಳ ಗಂಡ ಅಳಿಯ ಮಾತ್ರವಲ್ಲ, ಅವನು ಇನ್ನೊಬ್ಬ ಮಗ" ಎಂದು ಹೇಳುತ್ತೇನೆ.

ಒಂದು ಸಂತೋಷದ ಸುದ್ದಿ: ನಮ್ಮ ನಿಜವಾದ ಮಿತ್ರರ ಪ್ರಯತ್ನದ ಫಲವಾಗಿ 'ನಂಟರು' ಮುಂದಿನ ವರ್ಷದ P.U.C.ಗೆ ಪಠ್ಯಪುಸ್ತಕವಾಗಿ ನೇಮಕವಾಗಿದೆ. ಈ ಸುದ್ದಿ ಅಧಿಕೃತವಾಗಿ ಪ್ರಕಟವಾಗಲು ಇನ್ನೂ ಕೆಲವು ತಿಂಗಳು ಬೇಕಾಗಬಹುದು. ಆದರೆ ಇದನ್ನು ತಿಳಿದು ನಿಮ್ಮಿಬ್ಬರಿಗೂ ಹರ್ಷವಾಗುವುದೆಂದು ನಾನು ಬಲ್ಲೆ.

ಇಲ್ಲಿಗೆ ಕಾಗದವನ್ನು ನಿಲ್ಲಿಸುತ್ತೇನೆ. ನಿಮ್ಮ ತಾಯಿಗೂ ನಾಲ್ಕು ಪಂಕ್ತಿ ಬರೆಯಲು ಜಾಗ ಇರಲಿ ಎಂದು.

* * *

ಮೈಸೂರು, ೯-೧೨-೧೯೬೩

ಚಿ॥ಸೌ॥ ನಾಗರತ್ನನಿಗೆ

ನಿನ್ನ ಈ ಸಲದ ಕಾಗದ ತುಂಬ ಚೆನ್ನಾಗಿದೆ. ಚಿ॥ ಉಮಾಳ ಚೇಷ್ಟೆಗಳು ಕಣ್ಣಿಗೆ ಕಟ್ಟುವಂತೆ ಬರೆದಿದ್ದೀಯೆ; ಆದರೆ ಅವನ್ನು ನಾನು ಹೊರಗಣ್ಣುಗಳಿಂದ ನೋಡಲು ಸಾವಿರಾರು ಮೈಲಿಗಳ ದೂರ ಅಡ್ಡಿಯಾಗಿದೆ. ಏನು ಮಾಡುವುದು. ನಿಮ್ಮ ತಾಯಿ ಪ್ರತಿದಿನವೂ ಉಮ್ಮಚ್ಚಿಯ ಧ್ಯಾನಮಾಡುತ್ತಿರುತ್ತಾಳೆ! ...ಅವಳ ಬೇಸರ ಸ್ವಲ್ಪ ಮಟ್ಟಿಗೆ ಕಳೆಯಲೆಂದು ನನ್ನ ಜೊತೆಗೆ ಉಡುಪಿಗೆ ಕರೆದುಕೊಂಡು ಹೋಗಲು ಏರ್ಪಾಡು ಮಾಡಿದ್ದೇನೆ.

ನನ್ನ ಈಚಿನ ಲೇಖನಗಳನ್ನು ನೀನು ಓದಿ ಸಂತೋಷಿಸಿದೆ ಎಂದು ತಿಳಿದು ಸಮಧಾನವಾಯಿತು. ನನ್ನ 'ಹಿಮದರ್ಶನ' "ಕೈಲಾಸ" ಮಾಸಪತ್ರಿಕೆಯ ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾಗಿದೆ (ಡಿಸೆಂಬರ್ ೧೯೬೩ ಎಂದು ಸಂಚಿಕೆಯ ಮೇಲೆ ಅಚ್ಚುಮಾಡಿದ್ದಾರೆ.). ಅಲ್ಲಿ ಸಿಕ್ಕಿದರೆ ತರಿಸಿಕೊಂಡು ನೋಡು. ಇದೇ ಡಿಸೆಂಬರ್ ತಿಂಗಳ ಕಸ್ತೂರಿಯಲ್ಲಿ ನನ್ನ 'ನಂಟರು' ಸಂಕಲನದಿಂದ 'ನೆಗಡಿ'ಯನ್ನು ಎತ್ತಿ ಪ್ರಕಟಿದ್ದಾರೆ (ಕೆಲವು ವಾಕ್ಯಗಳನ್ನು ಬಿಟ್ಟು). ಅಂತೂ ಈಚೆಗೆ ಪತ್ರಿಕೆಗಳಲ್ಲೂ ನನ್ನ ಲೇಖನಗಳ ಪ್ರಚಾರ ತಕ್ಕಮಟ್ಟಿಗೆ ಆಗಿದೆ ಎನ್ನಬೇಕು.

ಆಕಾಶವಾಣಿಗೂ ನನಗೂ ಒಂಬತ್ತುವರ್ಷಗಳಿಂದ ಇದ್ದ ವಿವಾದ ಪರಿಹಾರವಾಯಿತು; (ಪ್ರಸಾರಮಾಡಿದ ಭಾಷಣವನ್ನು ಪ್ರಕಟಿಸಲು ಈಗ ರಾಯಲ್ಟಿ ಕೊಡಬೇಕಾಗಿಲ್ಲ!) ೨೯-೧೧-೧೯೬೩ರಂದು 'ಸಾಹಿತ್ಯದ ಕಾಣಿಕೆ' ಎಂಬ ಮಾಲೆಯಲ್ಲಿ ನನ್ನನ್ನು ಕುರಿತ ಪ್ರಸಾರ ಇತ್ತು. ಶ್ರೀ ಡಿ. ಜವರೇಗೌಡರು ನನ್ನ ವಿಷಯವಾಗಿ ಪರಿಚಯ ಭಾಷಣ ಮಾಡಿದರು; ಬಳಿಕ ಅವರು ನನಗೆ ಕೆಲವು ಪ್ರಶ್ನೆಗಳನ್ನು – ನನ್ನ ಕೃತಿಗಳ ವಿಷಯದಲ್ಲಿ ಮುಖ್ಯವಾಗಿ – ಕೇಳಿದ್ದಕ್ಕೆ ನಾನು ಉತ್ತರಕೊಟ್ಟೆ; ಆ ಬಳಿಕ ನನ್ನ ಗದ್ಯಪದ್ಯಗಳಿಂದ ಕೆಲವು ಭಾಗಗಳನ್ನು ನಾನು ಓದಿದೆ: ಇದಿಷ್ಟು ಹದಿನಾಲ್ಕುವರೆ ನಿಮಿಷಗಳ ಕಾಲದಲ್ಲಿ! 'ನೆಗಡಿ'ಯಿಂದ ಒಂದೂವರೆ

ಪುಟ ಓದಿದೆ. ಸಮಯೋಚಿತವಾಗಿ ಆಗ ನನಗೆ ನೆಗಡಿಯೂ ಹಿಡಿದಿತ್ತು! ಈ ಕಾರ್ಯಕ್ರಮವನ್ನು ೨೫ನೆಯ ತಾರೀಖು ನಾವಿಬ್ಬರೂ ಬೆಂಗಳೂರಿನಲ್ಲಿದ್ದಾಗ ಟೇಪ್‌ರೆಕಾರ್ಡ್ ಮಾಡಿಕೊಂಡು, ೨೯ರಂದು ಪ್ರಸಾರ ಮಾಡಿದರು. ಪ್ರಸಾರವನ್ನು ಮನೆಯಲ್ಲೇ ಕುಳಿತು ನಾವೆಲ್ಲ ಕೇಳಿದೆವು. ನನ್ನ ಧ್ವನಿ ನನಗೆ ಗುರುತು ಸಿಕ್ಕಲಿಲ್ಲ! – ಹೀಗಾಗುವುದು ಸಹಜ ತಾನೆ.

ನನ್ನ ರಿಸರ್ಚ್ ಕೆಲಸ ಮಾತ್ರ ಹಿಂದೆ ಬಿದ್ದಿದೆ. ಇನ್ನು ಅದಕ್ಕೆ ಗಮನ ಕೊಡಬೇಕು. ಬಾಕಿ ಉಳಿದಿರುವ ಇನ್ನೂ ಒಂದೆರೆಡು ಲೇಖನಗಳನ್ನು ಬರೆದು ಮುಗಿಸಬೇಕು – ತಗಾದೆ ಬರುತ್ತಿದೆ. ಅಂತೂ ಈ “ಸಾಲಗಾರಿಕೆ” ನನಗೆ ಯಾವಾಗ ಇಳಿಯುತ್ತದೆಯೋ.

* * *

ಮೈಸೂರು, ೨೯–೯–೧೯೬೫

ಚಿ॥ಸೌ॥ ನಾಗರತ್ನನಿಗೆ

ನಿನ್ನ ಕಾಗದದ ನಿರೀಕ್ಷೆಯಲ್ಲೇ ನಾನೂ ನಿನ್ನ ತಾಯಿಯೂ ಇದ್ದೆವು. ಮೊನ್ನೆಯ ದಿನ ಅದು ಬಂದಾಗ, ಅದರೊಳಗೆ ಚಿ॥ ಉಮ್ಮಚ್ಚಿಯ ಸ್ವಹಸ್ತದ ಗೆರೆಗಳನ್ನು ಕಂಡಾಗ, ಜೊತೆಗೆ ಚಿ॥ ನಾಗಭೂಷಣನ ಕಾಗದವೂ ಅನಿರೀಕ್ಷಿತವಾಗಿ ಕಲ್ಕತ್ತದಿಂದ ಇಲ್ಲಿಗೆ ಎರಡೇ ದಿನಗಳಲ್ಲಿ ಬಂದಾಗ ನಮಗೆ ಅತಿಶಯವಾದ ಸಂತೋಷವಾಯಿತು. ಚಿ॥ ಉಮ್ಮಚ್ಚಿಯ ಗೆರೆಗಳು ಇಂದಿನ Abstract Art ನಂತೆ ಇವೆ. ದೂರದ ದಿಗಂತ, ಬೆಟ್ಟಸಾಲು, ನದೀರೇಖೆಗಳು – ಇವನ್ನೆಲ್ಲಾ ಅದರಲ್ಲಿ ಕಲ್ಪನಾಶಕ್ತಿಯ ಸಹಾಯದಿಂದ ಗುರುತಿಸಬಹುದು. ಅವುಗಳ ನಡುವೆ ಅವಳ ಚಿತ್ರವೂ ಇದೆಯೋ ಏನೋ! ಅಂತೂ ಪ್ರತಿಯೊಂದು ಕಾಗದದಲ್ಲೂ ಅವಳ ರೇಖಾ ವಿನ್ಯಾಸ ವಿಲಾಸಗಳು ಹೀಗೆಯೇ ಬರುತ್ತಿರಲಿ.

ನೀವು ಇಲ್ಲಿಂದ ಹೊರಟಾಗ ಯುದ್ಧದ ದಿಗಿಲು, ಮಗುವಿನ ಅಸ್ವಸ್ಥತೆ ಈ ಎರಡೂ ನಮ್ಮ ಮನಸ್ಸಿನಲ್ಲಿ ಕೊಂಚ ಕಳವಳವನ್ನು ಉಂಟುಮಾಡಿದ್ದವು. ಚಿ॥ ಚಂದ್ರಶೇಖರಯ್ಯನ ಜೊತೆಯಲ್ಲಿ ಈ ಸಂದರ್ಭದಲ್ಲಿ ನೀವೂ ಹೊರಡುವುದು ಸರಿಯೇ ಹೇಗೆ ಎಂಬುದು ನಮಗೆ ಸರಿಯಾಗಿ ನಿರ್ಧಾರವಾಗಿರಲಿಲ್ಲ. ಆದರೆ ನೀನು ಮಾತ್ರ ಏಕ ಮನಸ್ಸಿನಿಂದ, “ಅವರೊಂದು ಕಡೆ ನಾವೊಂದು ಕಡೆ ಇರುವುದು ಸಾಧ್ಯವಿಲ್ಲ. ಜೊತೆಗೇ ಹೊರಡುತ್ತೇನೆ” ಎಂದು ದೃಢವಾಗಿ ಹೇಳಿದ್ದು ನನ್ನನ್ನು ಪುಲಕಿತನನ್ನಾಗಿ ಮಾಡಿತು. ಒಳ್ಳೆಯ ಗೃಹಿಣಿಯಂತೆ ನೀನು ಆ ಮಾತನ್ನು ಆಡಿದೆ. (I felt proud of you!). ನಿನ್ನ ಕಾಗದದಲ್ಲಿಯೂ ಅದೇ ಮಾತನ್ನೇ ಬರೆದಿದ್ದೀಯೆ. ನೀನು, ನಿನ್ನ ಗಂಡ, ನಿನ್ನ ಮಗು – ಎಲ್ಲರನ್ನೂ ಭಗವಂತ ಸುಖವಾಗಿ ಕಾಪಾಡಿಕೊಂಡು ಬರಲಿ ಎನ್ನುವುದೇ ನನ್ನ ಹಾರೈಕೆ, ನಿಮ್ಮ ತಾಯಿಯ ಹಾರೈಕೆ. ನನ್ನ ಅಭಿಪ್ರಾಯವೇ ಅವಳದು – ನೀನು ಹೊರಟುನಿಂತ ವಿಷಯದಲ್ಲಿ.

ಪಾಕಿಸ್ತಾನದೊಂದಿಗೆ ಹತ್ತಿ ಬೇಯುತ್ತಿರುವ ವಿರೋಧ, ಸೆಣಸಾಟ ಶಮನವಾಗುವಂತೆ ಕಾಣುತ್ತಿಲ್ಲ. ದ್ವೇಷವನ್ನೇ ನಮ್ಮ ಮೇಲೆ ಬೆಳಸಿಕೊಂಡು ಕಾರುತ್ತಿದ್ದಾರೆ. ಅವರಿಗೆ ಯಾವುದ ರಿಂದಲೂ ಸಮಾಧಾನ ಬರುವಂತಿಲ್ಲ. ನಮ್ಮ ಯೋಧರ ಸಾಹಸಗಳನ್ನು ನೆನೆದರೆ ಕಣ್ಣಿನಲ್ಲಿ

ನೀರು ಬರುತ್ತದೆ. ಎಷ್ಟು ಮಂದಿ ಅಭಿಮನ್ಯುಗಳು ಈಗಾಗಲೆ ಯುದ್ಧಕ್ಕೆ ಆಹುತಿಯಾದರೋ. ಅವರ ಕುಟುಂಬದವರ ವಿನೋದಾರ್ಥವಾಗಿ ನೀವು ನಡೆಸಿದ ಕಾರ್ಯಕ್ರಮದಲ್ಲಿ ನೀನೂ ಭಾಗವಹಿಸಿದ್ದು ನನಗೆ ಸಮಾಧಾನ ತಂದಿತು. ಅದನ್ನು ನೋಡಲು ಬಂದಿದ್ದಾಗ ಹೆಂಗಸರು ಮಕ್ಕಳ ಮುಖಗಳೆಲ್ಲವೂ ತುಂಬ ಸಪ್ಪೆ ಬಿದ್ದು ಹೋಗಿದ್ದವು ಎಂದು ಬರೆದಿದ್ದೀಯೆ. ಅಯ್ಯೋ ಪಾಪ!

ಯುದ್ಧದ ಉರಿ ಇನ್ನೂ ಎಲ್ಲೆಲ್ಲಿಗೆ ಹೇಗೆ ಹೇಗೆ ಹಬ್ಬುತ್ತದೋ. ನೀವುಗಳು ಎಚ್ಚರಿಕೆಯಿಂದ ಇರಿ. ಧೈರ್ಯದಿಂದ ಇರಿ. ಒಟ್ಟು ದೇಶಕ್ಕೇ ಪರೀಕ್ಷಾಕಾಲ ಬಂದಿದೆ. "ನ ಭೀತಿಃ ಪಂಚಭಿಃ ಸಹ"!

ಈ ಪತ್ರ ನಿಮ್ಮ ಕೈಸೇರುವ ವೇಳೆಗೆ ಚಿ॥ ನಾಗಭೂಷಣ ನಿಮ್ಮೊಡನೆ ಇರುತ್ತಾನೆ. ನವರಾತ್ರಿಯನ್ನು ನೀವೆಲ್ಲರೂ ಸಂತೋಷದಿಂದ ಕಳೆಯಿರಿ. ನಿಮ್ಮನ್ನು ಜ್ಞಾಪಿಸಿಕೊಂಡು ನಾವು ಇಲ್ಲಿ ಸಮಾಧಾನ ಪಡುತ್ತೇವೆ.

* * *

ಮೈಸೂರು, ೬-೭-೧೯೬೬

ಚಿ॥ಸೌ॥ ನಾಗರತ್ನನಿಗೆ

ಚಿ॥ ಉಮಾ ಸ್ಕೂಲಿನ ಸೀಟಿನ ವಿಷಯವಾಗಿ ಮಾತಾಡುತ್ತಾ, "ಅಲ್ಲಿ ಒಂದು ಕುರ್ಚಿ ಹಾಕಿದ್ದಾರೆ. ಅಮ್ಮ, ನೋಡಿದ್ದೀನಿ" ಎಂದು ಹೇಳಿದಳು ಎಂದು ಬರೆದಿದ್ದೀಯೆ. ಅದನ್ನು ಓದಿ ನಗು ಬಂತು. ಹಾಗೆಯೇ ಮೂವತ್ತು - ಮೂವತ್ತೈದು ವರ್ಷಗಳ ಹಿಂದೆ ಕೇಳಿದ್ದ ಒಂದು ಸಂಗತಿಯೂ ಜ್ಞಾಪಕಕ್ಕೆ ಬಂತು. ಮೈಸೂರಿನಲ್ಲಿ ಬನುಮಯ್ಯ ಹೈಸ್ಕೂಲ್ ಇದೆಯಲ್ಲ, ಅದರ ಸಂಸ್ಥಾಪಕರು ಸಾಹುಕಾರ್ ಬನುಮಯ್ಯನವರು - ಪ್ರಿನ್ಸಿಪಲ್ ಬನುಮಯ್ಯನವರ ಅಜ್ಜ - ಹೀಗೆಯೇ ಒಮ್ಮೆ ಹೇಳಿದರಂತೆ. ಅವರ ಹೈಸ್ಕೂಲಿಗೆ ಹೆಚ್ಚು ಜನ ವಿದ್ಯಾರ್ಥಿಗಳು ಸೇರಬೇಕೆಂದು ಬಂದರಂತೆ. "ಸೀಟುಗಳು ಭರ್ತಿಯಾಗಿವೆ, ಇನ್ನು ಸೇರಿಸಲು ಅವಕಾಶವಿಲ್ಲ" ಎಂದು ಮುಖ್ಯೋಪಾಧ್ಯಾಯರು ಹೇಳಿದರಂತೆ. "ಅದಕ್ಕೇನು, ಇನ್ನೂ ಎರಡು ಬೆಂಚುಗಳನ್ನು ಹಾಕಿಸಿ, ಸೇರಿಸಿಕೊಳ್ಳಿ" ಎಂದು ಶ್ರೀ ಬನುಮಯ್ಯನವರು ಸಲಹೆ ಮಾಡಿದರಂತೆ!

ಆಗಲಿ. ರಾಂಚಿಯ ಸೀಟುಗಳ ವಿಷಯ ಏನಾಯಿತು! ಚಿ॥ ಉಮಾ ಸ್ಕೂಲಿಗೆ ಸೇರಿದಳೆ? ಇಲ್ಲವೇ? ಇನ್ನೂ ಆರು ತಿಂಗಳು ಹಾಯಾಗಿ ಆಡಿಕೊಂಡಿರಲು ಅವಕಾಶವಿದೆಯೆ? ಅವಳ ಟಾನ್ಸಿಲ್ಸ್ ಈಗ ಹದಕ್ಕೆ ಬಂದಿದೆಯೆ! ಆಪರೇಷನ್ ಮಾಡಿಸಲೇ ಬೇಕಾದರೆ ಮೈಸೂರಲ್ಲೇ ಮಾಡಿಸಬಹುದಲ್ಲ. ಎಲ್ಲ ವಿಚಾರಕ್ಕೂ ಕಾಗದ ಬರಿ.

ಮೈಸೂರು-ಮಹಾರಾಷ್ಟ್ರ ಗಡಿಯ ಸಮಸ್ಯೆಯ ವಿಷಯವಾಗಿ ನನ್ನ ಅಭಿಪ್ರಾಯವನ್ನು ಕೇಳಿದ್ದೀಯೆ. ಎಷ್ಟೇ ನಾಜೂಕಾಗಿ ಕರಾರುವಾಕಾಗಿ ಗೆರೆಯೆಳೆದರೂ ದ್ವೈಭಾಷಿಕ ಸ್ಥಳಗಳು ಗಡಿಯ ಎರಡು ಕಡೆಗಳಲ್ಲೂ ಉಳಿದೇ ಉಳಿಯುತ್ತವೆ. ಇದಕ್ಕೆ ಎರಡು ರಾಜ್ಯಗಳವರೂ ಸರಿಹೊಂದಿಸಿಕೊಳ್ಳಲೇಬೇಕು. ಅಲ್ಲದೆ ಮಹಾರಾಷ್ಟ್ರದವರು ಇಂಥ ವಿಷಯಗಳಲ್ಲಿ ಹಠವಾದಿಗಳು;

ಹಿಡಿದಪಟ್ಟನ್ನು ಏನು ಮಾಡಿದರೂ ಬಿಡುವುದಿಲ್ಲ, ಉಡುವಿನ ಹಾಗೆ. ಮಹಾರಾಷ್ಟ್ರದ ಮುಖಂಡರ ವಾದಕ್ಕೆ ಸೋತು, ಅವರ ಒತ್ತಾಯಕ್ಕೆ ಕಟ್ಟುಬಿದ್ದು ಪ್ರಧಾನಮಂತ್ರಿ ಈ ಪ್ರಶ್ನೆಯನ್ನು ಈಗ ಬಿಚ್ಚಿ ತೊಡಕನ್ನು ಎಬ್ಬಿಸಿದರು ಎಂಬ ಭಾವನೆಯೂ ಇಲ್ಲಿ ಇದೆ. ನಾವು ಸುಮ್ಮನೆ ಕುಳಿತರೆ ನಮ್ಮನ್ನು ಅಲಕ್ಷ್ಯಮಾಡುತ್ತಾರೆ, ತುಳಿದುಬಿಡುತ್ತಾರೆ ಎಂಬ ಭಾವನೆಯೂ ಮೈಸೂರಲ್ಲಿ ಬೆಳೆದಿದೆ. ಅದರಿಂದ ಈ ರೈಲು ದಾರಿ ಹೆದ್ದಾರಿಗಳ "ಸತ್ಯಾಗ್ರಹ" ಪ್ರಾರಂಭವಾಯಿತು. ಮೊದಮೊದಲಲ್ಲಿ ಇದು ಚೆನ್ನಾಗಿಯೇ, ಎಂದರೆ ಶಾಂತವಾಗಿ ನಡೆಯಿತು. ಸ್ವಯಂಪ್ರೇರಣೆಯಿಂದ ಅನೇಕರು, ಸಹಸ್ರಾರು ಮಂದಿ ಇದರಲ್ಲಿ ಭಾಗವಹಿಸಿದಂತೆ ಕಾಣುತ್ತದೆ. ಆದರೆ ಕೆಲವು ದಿನಗಳಲ್ಲೇ ಇದು ಹಿಂಸೆಯ ದಿಕ್ಕಿಗೆ ತಿರುಗಿ "ಸತ್ಯಾಗ್ರಹ" "ದುರಾಗ್ರಹ"ವೂ ಆಗುತ್ತ ಬಂತು. ರೈಲಿನಲ್ಲಿ ಪ್ರಯಾಣಮಾಡುತ್ತಿದ್ದ ನಿರಪರಾಧಿಗಳಿಗೆ ತೊಂದರೆಯಾಯಿತು. ಜನದ ಸಂದಣಿಯಲ್ಲಿ ಕೇವಲ ಊಟಕ್ಕಾಗಿ ಬಂದಿದ್ದ ಕೆಲವರು ಪ್ರಾಣವನ್ನು ಒಪ್ಪಿಸಬೇಕಾಯಿತು. ಇಂಥ ಸಂದರ್ಭಗಳಲ್ಲಿ ಚಳವಳಿ ಬಲುಬೇಗ ಹತೋಟಿಗೆ ಮೀರುತ್ತದೆ; ಪುಂಡರು ಅದರ ದುರುಪಯೋಗಮಾಡಿ ಕೊಳ್ಳುತ್ತಾರೆ. ಅವರ ಕೈಗೆ ಅದು ಸಿಕ್ಕಿಬಿಡುತ್ತದೆ. ಅಸ್ತ್ರವನ್ನು ತೊಡುವುದು ಸುಲಭ; ಉಪಸಂಹಾರ ಮಾಡುವುದು ಕಷ್ಟ.

ನಿನ್ನೆಯ Working Committee ಯ ತೀರ್ಮಾನವನ್ನು ನೀವೂ ಓದಿರಬೇಕಷ್ಟೆ. ಬೀಸುವ ದೊಣ್ಣೆ ಇನ್ನೆರಡು ತಿಂಗಳು ಮುಂದಕ್ಕೆ ಹೋಯಿತು. ಆಗಲೂ ಇಬ್ಬರು ಮುಖ್ಯ ಮಂತ್ರಿಗಳು ಒಮ್ಮತಕ್ಕೆ ಬರುವ ಸಂಭವ ಬಲು ಕಡಮೆ. ಸಾರ್ವತ್ರಿಕ ಚುನಾವಣೆ ಮುಗಿದ ಮೇಲೇ ಈ ಪ್ರಶ್ನೆಯನ್ನು ತೆಗೆದುಕೊಂಡರೆ ಹೆಚ್ಚು ಗಲಭೆ ಇಲ್ಲದೆ ಒಂದು ನಿರ್ಣಯಕ್ಕೆ ಬರಲು ಸಾಧ್ಯ. ಮಹಾರಾಷ್ಟ್ರೀಯರ ಕಣ್ಣು ಮುಖ್ಯವಾಗಿ ಬೆಳಗಾವಿಯ ಮೇಲೆ. ಅದರ ವ್ಯವಸ್ಥೆ ಹೇಗಾಗುತ್ತದೋ ಭವಿಷ್ಯ ಹೇಳುವುದು ಬಲು ಕಠಿನ.

ಇದರ ಜೊತೆಗೆ ಗೋವಾದ ಪ್ರಶ್ನೆ ಬೇರೆ ಇದೆ!..... ಅಂತೂ ಚಳವಳಿ ಸದ್ಯಕ್ಕೆ ನಿಂತಿದೆ; ಇದೇನೋ ನನ್ನ ಮನಸ್ಸಿಗೆ ಒಪ್ಪಿಗೆ. (ಮೈಸೂರುನಗರ ಇನ್ನೂ ಶಾಂತವಾಗಿ ಇದೆ.) ಇನ್ನೂ ಈ ವಿಷಯವಾಗಿ ಬರೆಯುವುದು ಇದೆ. ಆದರೆ ಸದ್ಯಕ್ಕೆ ನಿಲ್ಲಿಸುತ್ತೇನೆ.

* * *

ಪುಣೆ, ೧೧-೧೨-೧೯೫೬

ಚಿ॥ ನಾಗಭೂಷಣನಿಗೆ – ಪ್ರೀತಿಯ ಆಶೀರ್ವಾದಗಳು ಉ॥ಕು॥ಸಾಂ॥

ನೀನು ಎರಡು ಮೂರು ಬಾರಿ ನನಗೆ ಕಾಗದ ಬರೆದರೂ ನಾನು ಉತ್ತರವನ್ನೇ ಬರೆದಿರಲಿಲ್ಲ. ಅದಕ್ಕಾಗಿ ಈ ಬಾರಿ ಎರಡು ಪಂಕ್ತಿಯನ್ನು ಬರೆಯುತ್ತಿದ್ದೇನೆ.

ನಾವು ಕಾರ್ಲಾಕ್ಕೆ ಹೋಗಿದ್ದೆವೆಂದು ಹಿಂದೆ ಬರೆದಿದ್ದೇನಷ್ಟೆ. ಮಿತ್ರರೊಬ್ಬರು ಅಲ್ಲಿ ತೆಗೆದ ಫೋಟೋ ಪ್ರತಿಯೊಂದನ್ನು ಇದರೊಡನೆ ಕಳಿಸಿದ್ದೇನೆ. ಎಲ್ಲರಿಗೂ ತೋರಿಸಿ, ಜೋಪಾನವಾಗಿ ಇಟ್ಟಿರು. ಅದರಲ್ಲಿ ಯಾರು ಯಾರೆಂದು ನಿನಗೆ ಗೊತ್ತಾಗುತ್ತದೆಯೆ?. ("ಯಾರು ಯಾರೆಂದು"

ಎಂದು ಇಷ್ಟೆ ಬರೆದರೆ ಸಾಕೆ ಎಂದು ನಾನು ಆಲೋಚಿಸಿದೆ. ಆದರೆ ವ್ಯಾಕರಣಕ್ಕೆ ತೃಪ್ತಿಯಾದರೆ "ಯಾರು" ನಾಲ್ಕು ಬಾರಿ ಬರಬೇಕೆಂದು ತೋರುತ್ತದೆ!)

ಇಂತು ಪ್ರೀತಿಯ ಅನೇಕ ಆಶೀರ್ವಾದಗಳು
ನಿನ್ನ ತಂದೆ ಶ್ರೀಕಂಠಯ್ಯ

* * *

ಮೈಸೂರು, ೨೧-೮-೧೯೬೫

ಚಿ॥ ನಾಗಭೂಷಣನಿಗೆ

ಕಳೆದ ಐದಾರು ದಿನಗಳಿಂದ ಕೆಲಸ ಮಾಡಿ Emeneau ಸಂಪುಟದ ಲೇಖನವನ್ನು ಬರೆದು ಮುಗಿಸಿದ್ದಾಯಿತು; ಟೈಪ್ ಮಾಡಿಸಿಯೂ ಆಗಿದೆ. ದೆಹಲಿಗೆ ಜೊತೆಯಲ್ಲಿ ತೆಗೆದು ಕೊಂಡು ಹೋಗುತ್ತೇನೆ. ಶ್ರೀ ಎಚ್. ಕೃಷ್ಣರಾಯರ ಪುಸ್ತಕದ ಮುನ್ನುಡಿಯನ್ನು ಈ ಬೆಳಗ್ಗೆ ಬರೆದೆ! – ಇಷ್ಟಾದರೂ ಆಕಾಶವಾಣಿಯ ಭಾವಗೀತೆಯ ಮೇಲಿನ ಭಾಷಣವನ್ನು ಇಷ್ಟರಲ್ಲೇ (೨೪ರ ಬೆಳಗಿನ ವೇಳೆಗೆ) ಸಿದ್ಧಪಡಿಸಬೇಕು. Karnataka through the Ages ನ ಲೇಖನ, 'ಮಟ್ಟರಗಳೆ', 'Skeleton Grammar' ಈ ಭೂತಗಳೆಲ್ಲ ಹಾಗೆಯೇ ಎದುರಿಗೆ ಕೂತುಕೊಂಡು ಬೆದರಿಸುತ್ತಿವೆ. ನಾನು ಈ ಲೇಖನ ಋಣಮುಕ್ತನಾಗುವುದು ಯಾವಾಗ!

ನಿನ್ನ ಪಾಠಗಳು ಸಮರ್ಪಕವಾಗಿ ನಡೆಯುತ್ತಿವೆಯಷ್ಟೆ. ಡಾ. ಸುನೀತಿಕುಮಾರ ಛಟರ್ಜಿ ಅವರನ್ನು ನೋಡಿದ್ದೆಯ!

I too miss you. But don't worry about us!

* * *

ನವದೆಹಲಿ, ೨೮-೮-೧೯೬೫

ಚಿ॥ ನಾಗಭೂಷಣನಿಗೆ

ನಾನು ಇಲ್ಲಿಗೆ ೨೫ನೆಯ ರಾತ್ರಿ ಬಂದು ತಲುಪಿದೆ. ವಿಮಾನ ಬೆಂಗಳೂರನ್ನು ಬಿಡುವುದಕ್ಕೆ ಎರಡೂ ಮುಕ್ಕಾಲು ಘಂಟೆ ತಡವಾಯಿತು. ಇಲ್ಲಿಗೆ ಸೇರಿದಾಗ ರಾತ್ರಿ ಸುಮಾರು ಒಂಬತ್ತು ಘಂಟೆ. ಪ್ರಯಾಣ ಸುಖವಾಗಿತ್ತು. ಡಾ॥ ದೇಶಿಕಾಚಾರ್ಯರ ಮನೆಯಲ್ಲೇ ಎಂದಿನಂತೆ ಇಳಿದು ಕೊಂಡಿದ್ದೇನೆ.

ಟಪಾಲಿನ ದೃಷ್ಟಿಯಿಂದ ಕಲ್ಕತ್ತಕ್ಕೆ ಮೈಸೂರೇ ಹೆಚ್ಚು ಹತ್ತಿರ ಎನ್ನಿಸುತ್ತದೆ! ನೀನು ೨೪ರಂದು ಬರೆದು ಸಂಜೆ ಟಪಾಲಿಗೆ ಹಾಕಿದ ಕಾಗದ ಇಲ್ಲಿಗೆ ೨೭ರಂದು ತಲುಪಿದೆ. ಬಹುಶಃ ರೈಲು ಮಾರ್ಗದಲ್ಲಿ ಕಳಿಸಿಬಿಟ್ಟರೋ ಏನೋ. ಸರ್ಕಾರದ ಇಲಾಖೆಗಳ ಚರ್ಯೆ ನಮ್ಮಂಥವರಿಗೆ ಅರ್ಥ ವಾಗುವುದು ಕಷ್ಟ.

ಇಲ್ಲಿಯ ಮೀಟಿಂಗಿಗೆ ಡಾ॥ ಕತ್ರೆ, ಡಾ॥ ಘಾಟಗೆ, ಪ್ರೊ. ಮೀನಾಕ್ಷಿಸುಂದರನ್ – ಈ ಮಿತ್ರರೆಲ್ಲ ಬಂದಿದ್ದಾರೆ. ಎಮೆನೋ ಸಂಪುಟಕ್ಕಾಗಿ ನನ್ನ ಲೇಖನವನ್ನು, ೨೧ರಂದು ಮೈಸೂರನ್ನು ಬಿಡುವವೇಳೆಗೆ ಬರೆದು ಮುಗಿಸಿ ಟೈಪ್ ಮಾಡಿಸಿದ್ದೆ; ಅದನ್ನು ಜೊತೆಗೆ ತಂದು ಡಾ॥ ಕತ್ರೆ ಅವರಿಗೆ ತೋರಿಸಿದ್ದೇನೆ. ಒಂದೆರೆಡು ಚಿಕ್ಕಪುಟ್ಟ ತಿದ್ದುಪಡಿಗಳನ್ನು ಮಾಡಬೇಕು. ಊರಿಗೆ ತಲಪಿದ ಕೂಡಲೇ ಅದನ್ನು ಮಾಡಿ ಪುಣೆಗೆ ಕಳಿಸಿಕೊಡುತ್ತೇನೆ.

ಮೈಸೂರನ್ನು ಬಿಡುವ ಮೊದಲೇ ಪ್ರೊ. ಎಚ್. ಕೃಷ್ಣರಾಯರ ಪುಸ್ತಕಕ್ಕೆ ಮುನ್ನುಡಿ ಬರೆದೂ ಆಯಿತು. ಬೆಂಗಳೂರಿಗೆ ಬಂದ ಮೇಲೆ ಆಕಾಶವಾಣಿಯ ಭಾಷಣವನ್ನು ಬರೆದು ಮುಗಿಸಿ ೨೪ರಂದು ರಿಕಾರ್ಡ್ ಮಾಡಿದ್ದೂ ಆಯಿತು!... ಅಂತೂ ಇಷ್ಟಾದರೂ ಆಯಿತಲ್ಲ. ನನಗೂ ಆಶ್ಚರ್ಯವೇ. ಇನ್ನು ಊರಿಗೆ ಹೋದ ಕೂಡಲೇ Languages of Karnataka ಲೇಖನವನ್ನು ಮುಂದುವರಿಸಬೇಕು. ನೋಡೋಣ.

ನಿನ್ನ Institute ಕೆಲಸದಲ್ಲಿ ನಿನಗೆ ಹೆಚ್ಚು ಉತ್ಸಾಹ ಬರುತ್ತದೆ ಎಂದು ಕೇಳಿ ತುಂಬ ಸಂತೋಷವಾಯಿತು. Management Course ಒಳ್ಳೆಯದು ಎಂದು ಇಲ್ಲಿಯೂ ಹೇಳುತ್ತಾರೆ. ಇದನ್ನು ನೀನು ಆರಿಸಿಕೊಂಡದ್ದರಿಂದ ನಿನಗೆ ಶ್ರೇಯಸ್ಸು ಒದಗಲಿ ಎಂದು ನನ್ನ ನಿರಂತರವಾದ ಹಾರೈಕೆ. ನಿಮ್ಮ ವಿದ್ಯಾಶಾಲೆಯ ಪರಿಸರಕ್ಕೆ ನೀನು ಈಗಾಗಲೆ ಹೊಂದಿಕೊಳ್ಳುತ್ತಿರಬೇಕು. ಅಲ್ಲಿ ಒಳ್ಳೆಯ ಹೊಸ ಸ್ನೇಹಿತರು ಯಾರಾದರು ಸಿಕ್ಕಿದ್ದಾರೆಯೆ?

ಡಾ॥ ಸುನೀತಿಕುಮಾರ ಛಟರ್ಜಿ ಇಲ್ಲಿಗೆ ಬಂದಿದ್ದರೆಂದೂ ಆದರೆ ಹಿಂದಿರುಗಿದರೆಂದೂ ತಿಳಿಯಿತು. ಅವರು ಇಷ್ಟರಲ್ಲೇ ರುಮೇನಿಯಾಕ್ಕೆ ಹೋಗಿಬರುತ್ತಾರಂತೆ! ಅಂತೂ ಈ ವಯಸ್ಸಿನಲ್ಲೂ ಪ್ರಯಾಣದ ವಿಷಯದಲ್ಲಿ ಅವರು ಉತ್ಸಾಹಪಡುವುದನ್ನು ನೋಡಿದರೆ ನನಗೆ ವಿಸ್ಮಯವಾಗುತ್ತದೆ.

ಈ ಬಾರಿ ಶ್ರೀ ಕೆ.ವಿ. ರಾಘವಾಚಾರ್ಯರನ್ನು ಸಂಧಿಸಿದ್ದೆ. ನಿನ್ನೆಯ ಸಂಜೆ ದೇಶಿಕಾಚಾರ್ಯರೂ ನಾನೂ ಅವರ ಮನೆಗೆ ಹೋಗಿದ್ದೆವು. ಅದು ಇಲ್ಲಿಗೆ ಬಲುದೂರ. ಆದರೆ ಎಂದಿನಂತೆ ಉಪಾಹಾರ ಚೆನ್ನಾಗಿತ್ತು. ಅಲ್ಲಿಗೆ ಡಾ॥ ದಾಸ್‌ಗುಪ್ತ – Dean of the Faculty of Arts ಬಂದಿದ್ದರು. ನನ್ನ ಡೆಲ್ಲಿಯ ಪ್ರೊಫೆಸರ್ ಕೆಲಸದ ವಿಷಯ ಪ್ರಸ್ತಾಪಕ್ಕೆ ಬಂತು. ವಿಶ್ವವಿದ್ಯಾನಿಲಯದವರದ ಪತ್ರವ್ಯವಹಾರದ ವೈಖರಿಯನ್ನು ಕೊಂಚ ವರ್ಣಿಸಿ, ಏಕೆ ಇಲ್ಲಿಯ ಆಲೋಚನೆಯನ್ನು ಬಿಟ್ಟೆ ಎಂಬುದನ್ನು ಅವರಿಗೆ ತಿಳಿಸಿದೆ. ಅವರೂ ಅರ್ಥಮಾಡಿಕೊಂಡಂತೆ ಕಾಣುತ್ತದೆ. University Grants Commission ನಲ್ಲೂ ನಾನು ಸಂಧಿಸಿದ ಒಬ್ಬಿಬ್ಬರು I am sorry that you didn't come here ಎಂದರು. ಒಳ್ಳೆಯದು. ನನ್ನನ್ನು ಕುರಿತ ಸದಭಿಪ್ರಾಯ ಹೀಗೆಯೇ ಉಳಿಯಲಿ........ One who is reemployed in this way may be paid the maximum in the grade inclusive of pension ಎಂದು ಈಚೆಗೆ ನಿರ್ಧರಿಸಿದ್ದಾರಂತೆ. ಆ ಪ್ರಕಾರವೂ, ಡೆಲ್ಲಿಯ ಕೆಲಸದಿಂದ ಅಷ್ಟೇನೂ ಲಾಭವಾಗುತ್ತಿರಲಿಲ್ಲ. ಹೇಗೂ ನಾನು ಮಾಡಿದ ತೀರ್ಮಾನ ಸರಿ ಎಂದೇ ನನ್ನ ಭಾವನೆ.

ಮೊನ್ನೆಯ ರಾತ್ರಿ ಶ್ರೀ ನಿಟ್ಟೂರ್ ಅವರ ಮನೆಯಲ್ಲಿ ಕೆಲವು ಮಂದಿ ಫ್ರೆಂಚ್ ವಿದ್ಯಾರ್ಥಿಗಳೊಡನೆ ಭೋಜನ. ಇಂದು ರಾತ್ರಿ ಶ್ರೀ ಎಸ್.ವಿ.ಕೃ. ಅವರ ಮನೆಯಲ್ಲಿ. ಈ ಸಂಜೆ ಸಾಧ್ಯವಾದರೆ ದೇಶಿಕಾಚಾರ್ಯರೊಂದಿಗೆ My Fair Lady ನೋಡಿಕೊಂಡು ಬರೋಣ ಎಂದಿದ್ದೇನೆ.

ಕಾಗದ ಉದ್ದವಾಯಿತು. ಎದುರಿಗೆ ಕಂಡಾಗ ನಾನು ಮಾಡಿದ್ದು ಬಿಟ್ಟದ್ದು ಎಲ್ಲವನ್ನೂ ವರದಿ ಒಪ್ಪಿಸಬಹುದು. ಕಾಗದದಲ್ಲಿ ಬರೆಯುವುದು ಕೊಂಚ ಬೇಸರ!

* * *

ಮೈಸೂರು, ೬-೯-೧೯೬೫

ಚಿ॥ ನಾಗಭೂಷಣನಿಗೆ

ಟಪಾಲು ಇಲಾಖೆಯವರು ತಮ್ಮ ವಿಳಂಬನೀತಿಯನ್ನು ಮುಂದುವರಿಸುತ್ತಿದ್ದಾರೆ. ನಿನ್ನ ೩೧/೮ ರ ಪತ್ರ ಇಲ್ಲಿಗೆ ೪ನೆಯ ತಾರೀಖು ತಲುಪಿತು.

ನಿನ್ನ ಈ ಸಲದ ಪತ್ರವೂ ಚೆನ್ನಾಗಿದೆ. ಭಾಷೆ ಹದವಾಗಿ ಬರುತ್ತಿದೆ. "ತಡ ತಡೆಗಳಿಲ್ಲದೆ" ಎಂಬ ಮಾತು ನನ್ನ ಗಮನವನ್ನು ಸೆಳೆಯಿತು. ನನ್ನ ಮರುಪ್ರಯಾಣದ ರೀತಿಯೂ ಹಾಗೆಯೆ ಇತ್ತು. ವಿಮಾನ ದೆಹಲಿಯಿಂದ ೧೧.೪೫ಕ್ಕೆ ಸರಿಯಾಗಿ ಬಿಟ್ಟು ಬೆಂಗಳೂರಿಗೆ ಸಂಜೆ ೫ಕ್ಕೆ ತಲಪಿತು. ಸಂಜೆ ೬ ಘಂಟೆಯೊಳಗೆ ಪು.ತಿ.ನ. ಅವರ ಮನೆಯಲ್ಲಿದ್ದೆ. ಅದೇ ರಾತ್ರಿ ರೈಲು ಹತ್ತಿ ಮೈಸೂರಿಗೆ ಗಣೇಶನ ಹಬ್ಬದ ಬೆಳಗ್ಗೆ ತಲಪಿದೆ. ರಾತ್ರಿ ನಿದ್ದೆಯೂ ಬಂತು. ಒಂದೆರಡು ತಗುಣೆಗಳು ಕಚ್ಚಿದರೂ ಗೊತ್ತಾಗದಂಥ ಗಾಢನಿದ್ರೆ! ಮಾರನೆಯ ಬೆಳಗ್ಗೆ ನೋಡಿಕೊಂಡಾಗ ನೆತ್ತಿ, ಹಣೆ ಇವುಗಳ ಮೇಲೆ ಉರಿಯಿಲ್ಲದ (!) ಗಂದೆಗಳು ಆಗಿದ್ದುವು.

ಈಚಿನ Akashvani ಯಲ್ಲಿ 'Leadership in Management' ಎಂಬ ಶ್ರೀ ಪಿ.ಎಲ್. ತಂಡನ್ ಅವರ ಭಾಷಣ ಬಂದಿತ್ತು. (ಈತ ಯಾರೆಂಬುದು ನನಗಿಂತ ಚೆನ್ನಾಗಿ ನಿನಗೆ ಗೊತ್ತಿರಬೇಕು.) ಅದರ ಹಾಳೆಗಳನ್ನು ಇದರೊಂದಿಗೆ ಕಳಿಸಿದ್ದೇನೆ. ಸ್ವಾರಸ್ಯಕರವಾದ ಕೆಲವು ಸಂಗತಿಗಳು ಅದರಲ್ಲಿವೆ.

* * *

ಬೆಂಗಳೂರು, ೧೬-೯-೧೯೬೫

ಚಿ॥ ನಾಗಭೂಷಣನಿಗೆ

ನಾನು ಮೊನ್ನೆ (ಎಂದರೆ ೧೪ ರಂದು) ಟಪಾಲಿಗೆ ಹಾಕಿದ ಕಾಗದ ನಿನಗೆ ಇಷ್ಟರೊಳಗೆ ತಲಪಿರಬಹುದು. ಅದರಲ್ಲಿ, ಬರೆದ ತಾರೀಖನ್ನು ೧೫ ಎಂದು ಹಾಕಿದ್ದೆನೋ ಏನೋ?

ನಿನ್ನಿಂದ ಕಾಗದ ಏಕೆ ಬರಲಿಲ್ಲವೆಂದು ನಿಮ್ಮ ತಾಯಿಯೂ ನಾನೂ ಚಿಂತಿಸುತ್ತಿರುವಾಗ ನಿನ್ನೆಯ ಮಧ್ಯಾಹ್ನದ ಟಪಾಲಿನಲ್ಲಿ ನಿನ್ನ ೧೦, ೧೩ ಈ ಎರಡು ತಾರೀಖುಗಳ ಕಾಗದಗಳೂ ಬಂದುವು. ಮೊದಲನೆಯದು ರೈಲಿನಲ್ಲಿ, ಎರಡನೆಯದು ವಿಮಾನದಲ್ಲಿ ಬಂದಿರಬೇಕೆಂದು ತೋರುತ್ತದೆ. ಜೊತೆಗೆ, ಚಿ॥ಸೌ॥ ನಾಗರತ್ನ ಗಂಡ, ಮಗಳು ಇವರೊಡನೆ ರಾಂಚಿಗೆ ಸುರಕ್ಷಿತವಾಗಿ ತಲಪಿದ್ದಕ್ಕೆ ಬರೆದ ಕಾಗದವೂ ಬಂದಿತು! ನಮ್ಮಿಬ್ಬರಿಗೂ ಈ ಕಾಗದಗಳನ್ನು ನೋಡಿ ತುಂಬ ಸಮಾಧಾನವಾಯಿತು.

"ಸುರಕ್ಷಿತ" ಎಂಬ ಶಬ್ದಕ್ಕೆ ಈಗ ವಿಶೇಷಾರ್ಥ ಬರುತ್ತಿದೆ. ಚಿ॥ಸೌ॥ ನಾಗರತ್ನ ಇವರುಗಳು ಖರಗ್‌ಪುರದಲ್ಲಿ ತಂಗಿದ್ದಾಗಲೆ ವಿಮಾನ ದಾಳಿಯ ಸೈರನ್‌ಗಳು ಕೂಗಿದುವಂತೆ! ಆ ರಾತ್ರಿ ಮಾತ್ರ ರೈಲು ಹೊರಡಲು ಯಾವ ಅಡ್ಡಿಯೂ ಇಲ್ಲದೆ ಅವರು ಪ್ರಯಾಣ ಮಾಡಿ ಮರುದಿನ ರಾಂಚಿಯನ್ನು ಸೇರಿದರು. ಬ್ಯಾರಕ್‌ಪುರ ಟ್ರಂಕ್ ರೋಡಿನಲ್ಲಿರುವ ನಿನಗೂ ಹೀಗೆಯೇ ಸೈರನ್ ಆಗಾಗ ಕೇಳಿಸುತ್ತಲೇ ಇರಬೇಕಲ್ಲವೆ? ವಿಮಾನ ದಾಳಿಯ ಸದ್ದು ಮಾತ್ರ ನಿಮ್ಮೆಲ್ಲರಿಂದ ದೂರದಲ್ಲಿಯೇ ಇರಲಿ ಎಂದು ನಮ್ಮ ಹಾರೈಕೆ.

ಈ ಗದ್ದಲದಲ್ಲಿ ನಿನ್ನ ಮನಸ್ಸು ಆಕಡೆ, ಈಕಡೆ, ಮನೆಯ ಕಡೆ ಹಾಯ್ದಾಡುವುದು ಸಹಜ. ಆದರೆ ನೀನು ವ್ಯಾಸಂಗವನ್ನು ಸರಿಯಾಗಿ ಮುಂದುವರಿಸುತ್ತಿದ್ದೀಯ ಎಂದು ನಂಬುತ್ತೇನೆ. "ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು" ನಿಜ. ಆದರೆ ಯೌವನದಲ್ಲಿ ಹೆಚ್ಚಾಗಿ ಕಲಿಯಬೇಕು. ಆಗ ಕಲಿಯುವುದರಲ್ಲಿ ಶ್ರಮ ಕಡಮೆ; ಫಲ ಹೆಚ್ಚು.

ಅಕ್ಟೋಬರ್ ತಿಂಗಳಲ್ಲಿ ಬಿಡುವು ಮಾಡಿಕೊಂಡು ಒಂದೆರೆಡು ದಿನದ ಮಟ್ಟಿಗಾದರೂ ರಾಂಚಿಗೆ ಹೋಗಿ ಬಾ.

ನಿಮ್ಮ ತಾಯಿ ಈ ಕಾಗದದಲ್ಲಿ ಏನನ್ನೂ ಬರೆದಿಲ್ಲ. ಬರೆಯಲು ಸಾಧ್ಯವಿರಲಿಲ್ಲ, ನಿನ್ನನ್ನು ತುಂಬ ಜ್ಞಾಪಿಸಿಕೊಳ್ಳುತ್ತಿರುತ್ತಾಳೆ. ನಿನಗೆ ಒಳ್ಳೆಯದಾಗಲಿ ಎಂದು ಹಾರೈಸುತ್ತಿರುತ್ತಾಳೆ. ಅದನ್ನು ನಾನೇ ಬರೆದು ತಿಳಿಸುವಂತೆ ಹೇಳಿದ್ದಾಳೆ.

* * *

ಮೈಸೂರು, ೨೭-೯-೧೯೬೫

ಚಿ॥ ನಾಗಭೂಷಣನಿಗೆ

ನಾನು ನನ್ನ ಹಿಂದಿನ ಕಾಗದವನ್ನು ಟಪಾಲಿಗೆ ಹಾಕಿದ ಕೆಲವು ಘಂಟೆಗಳೊಳಗೆ ಕದನ ವಿರಾಮಕ್ಕೆ ಎರಡು ಪಕ್ಷಗಳೂ ಒಪ್ಪಿಕೊಂಡಿವೆಯೆಂಬ ಸುದ್ದಿ ಬಂತು. ಇದರಿಂದ ಮನಸ್ಸಿಗೆ ಸಮಾಧಾನವಾದರೂ ಪಾಕಿಸ್ತಾನ ನಿಬಂಧನೆಗಳನ್ನು ಮನಃಪೂರ್ವಕವಾಗಿ ಪಾಲಿಸಬಹುದೆಂಬ ಭರವಸೆ ಇರಲಿಲ್ಲ. ಅದು ಪಾಲಿಸುವುದಿಲ್ಲವೆಂಬುದಕ್ಕೆ ನಿದರ್ಶನಗಳೇ ಈಗ ಹೆಚ್ಚು ಹೆಚ್ಚಾಗಿ ಬರುತ್ತಿವೆ. ಮತ್ತೆ ಎಂದು ದೊಡ್ಡಪ್ರಮಾಣದ ಯುದ್ಧ ಪ್ರಾರಂಭವಾಗುವುದೋ!

ನೀನು Test ಗಳ ವಿಷಯದಲ್ಲಿ ಚೆನ್ನಾಗಿ ಓದಿಕೊಂಡು ಚೆನ್ನಾಗಿ ಉತ್ತರಿಸುತ್ತೀಯೆ ಎಂದು ನನ್ನ ನಂಬಿಕೆ. ಹೊಸ ವಿಷಯಗಳನ್ನು ಅಭ್ಯಾಸ ಮಾಡುವಾಗ ಸ್ವಲ್ಪ ತೊಡಕು, ಕ್ಲೇಶ ಉಂಟಾಗುವುದು ಅನಿವಾರ್ಯ. ಆದರೆ ಅದಕ್ಕೆ ನೀನು ಹೆದರುವುದಿಲ್ಲವೆಂದೂ ನನಗೆ ಗೊತ್ತು.

* * *

ಮೈಸೂರು, ೨೯-೯-೧೯೬೫

ಚಿ॥ ನಾಗಭೂಷಣನಿಗೆ

ನಿನ್ನ Mid term ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ್ದೀಯೆ ಎಂದು ನಂಬುತ್ತೇನೆ. ಹೊಸ ವಿಷಯ ಮೊದಲಲ್ಲಿ ಸ್ವಲ್ಪ ಕಷ್ಟಕೊಡುತ್ತದೆ, ಮುಖಸುತ್ತಾಗುತ್ತದೆ. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಕೆಲವು ದಿನ gymnastics ಗೆ ಹೋಗುತ್ತಿದ್ದೆ. Parallel Bars ಅಭ್ಯಾಸವನ್ನೂ ಕೂಡ ನಾಲ್ಕು ದಿನ ಮಾಡಿದೆ! ಮೊದಲ ದಿನಗಳಲ್ಲಿ ಕೈಕಾಲುಗಳೆಲ್ಲ ಹಿಡಿದುಕೊಂಡ ಹಾಗಾಯಿತು. ಆ ಬಳಿಕ ಸರಿಹೋಗುತ್ತಾ ಬಂತು. There is a critical point in one's study, after reaching which things become quite easy and one can take the whole thing in one's stride!

ರಾಂಚಿಯಲ್ಲಿ ನೀನು ಅಕ್ಕ, ಭಾವ, ಸೋದರಸೊಸೆ ಇವರೊಡನೆ ಸಂತೋಷವಾಗಿ ಕಾಲ ಕಳೆಯುತ್ತೀಯೆ ಎಂದು ನಂಬುತ್ತೇನೆ. ಹಾಗೆ ಏಳೆಂಟು ದಿನ ಸುಖವಾಗಿ ಇದ್ದು ಅಕ್ಕನ ಮನೆಯಲ್ಲಿ ರುಚಿಯಾದ ಊಟವನ್ನು ಮಾಡಿ ಕಲ್ಕತ್ತಕ್ಕೆ ಮತ್ತೆ ಪಾಠಪ್ರವಚನಗಳಿಗೆ ಸಿದ್ಧವಾಗಿ ಬರುತ್ತೀಯೆ ಎಂದು ನಿರೀಕ್ಷಿಸುತ್ತೇನೆ.

* * *

ಮೈಸೂರು, ೨೬-೧೦-೧೯೬೫

ಚಿ॥ ನಾಗಭೂಷಣನಿಗೆ

ಪರೀಕ್ಷೆಗಳಲ್ಲಿ ನಿನಗೆ ಚೆನ್ನಾಗಿ ಅಂಕಗಳು ಬರುತ್ತಿವೆಯೆಂದು ತಿಳಿದು ನನಗೇನೋ ಸಮಾಧಾನವಾಗಿದೆ. ಹೀಗೆಯೇ ಎಲ್ಲವೂ ಮುಂದೆಯೂ ಸರಿಹೋಗುವುದೆಂದು ನಿರೀಕ್ಷಿಸುತ್ತೇನೆ. ಯಾವ ಸಂಸ್ಥೆಯಲ್ಲಾಗಲಿ, ವ್ಯಕ್ತಿಯಲ್ಲಾಗಲಿ ಪರಿಪೂರ್ಣತೆ ಇರುವುದು ಅಶಕ್ಯ. ಅದೆಲ್ಲ ನಮ್ಮ ನಿರೀಕ್ಷೆಯ ಆದರ್ಶ; ಅದನ್ನು ನಿಲುಕಿಸಿಕೊಳ್ಳಲು ಪ್ರಯತ್ನ ನಡೆಯುತ್ತಿರಬೇಕು ಅಷ್ಟೆ. ಆದರೆ ನಮ್ಮ ಈ ಮನಸ್ಸನ್ನು ವಸ್ತು ಸ್ಥಿತಿಗೆ ಒಗ್ಗಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು – ಅದನ್ನೂ ನೀನು ಮಾಡುತ್ತಿದ್ದೀಯೆ ಎಂದು ನಾನು ಬಲ್ಲೆ. ಅಲ್ಲಿನ ಹೆಚ್ಚಿನ ವಿವರಗಳನ್ನು ಆಗಾಗ ತಿಳಿಸುತ್ತಿರು.

ನೀನು ಡಾ॥ ಸುನೀತಿಕುಮಾರ್ ಛಟರ್ಜಿ ಅವರನ್ನು ನೋಡಿಕೊಂಡು ಬಂದದ್ದು ನನಗೆ ಸಂತೋಷವನ್ನು ತಂದಿತು. ಅವರನ್ನು ನಾನು ಗುರುಗಳೆಂದೇ ಭಾವಿಸಿದ್ದೇನೆ. ಅವರು ನನ್ನಲ್ಲಿ

ವಿಶ್ವಾಸವಿಟ್ಟಿದ್ದಾರೆ. ಈ ವಯಸ್ಸಿನಲ್ಲೂ ಅವರು ಅವಿಶ್ರಾಂತವಾಗಿ ದುಡಿಯುವುದನ್ನು ನೋಡಿ ನನಗೆ ನಾಚಿಕೆಯಾಗುತ್ತದೆ. ಬೇಸರವಿಲ್ಲದೆ ಲೇಖನಿಯನ್ನು ಆಡಿಸುವುದನ್ನು ಹೇಗೆ ಕಲಿತು ಕೊಳ್ಳುವುದೋ ನನಗೆ ತಿಳಿಯದು! ಹೇಗಾದರೂ ಮಾಡಿ ಲೇಖನ ಋಣವನ್ನು ತೀರಿಸುತ್ತಾ ಹೋಗಬೇಕು. ಅವರ ಆಶೀರ್ವಾದದಿಂದಲಾದರೂ ನನ್ನ History of the Kannada Language ಬೇಗ ರೂಪುಗೊಳ್ಳಲಿ ಎಂದು ನನ್ನ ಹಾರೈಕೆ... ಅವಕಾಶ ದೊರೆತಾಗ ನೀನು ಅವರನ್ನು ನೋಡಬಹುದು. ನನ್ನ ನಮಸ್ಕಾರಗಳನ್ನು ಅವರಿಗೆ ತಿಳಿಸು.

* * *

ಮೈಸೂರು, ೫–೧೧–೧೯೬೫

ಚಿ|| ನಾಗಭೂಷಣನಿಗೆ

ಈಗ ನಿನ್ನ ಪರೀಕ್ಷೆಗಳು ನಡೆಯುತ್ತಿವೆ, ಅಲ್ಲವೆ. ಚೆನ್ನಾಗಿ ಉತ್ತರ ಬರೆಯುತ್ತಿದ್ದೀಯೆ ಎಂದು ನಂಬುತ್ತೇನೆ. ದಿನವೆಲ್ಲ, ಹಗಲು ರಾತ್ರಿ ಕೂಡ, "ಓದು ಓದು" ಇದೇ ಆಗಿದೆ ಎಂದು ಸ್ವಲ್ಪ ಬೇಸರದ ದನಿಯಲ್ಲೇ ಬರೆದಿದ್ದೀಯೆ. ಇದು ಅಷ್ಟೇನೂ ಉಲ್ಲಾಸದಾಯಕವಾದ ವಿಷಯವಲ್ಲವಾದರೂ, ವಿದ್ಯಾರ್ಥಿ ಜೀವನದಲ್ಲಿ ಅನಿವಾರ್ಯ. ಇನ್ನು ಕೆಲವು ದಿನದಲ್ಲಿ ಇದೂ ಅಭ್ಯಾಸವಾಗುತ್ತದೆ. ಈ ಮಾತನ್ನು ನಂಬು. "ಓದು ಓದು" ಎನ್ನುವುದು "ಬರೆ, ಬರೆ, ಬರೆ" ಎನ್ನುವುದಕ್ಕಿಂತ ಉತ್ತಮವಲ್ಲವೆ! ನಿನ್ನ ಪಾಠಗಳಲ್ಲಿ ಹಲವು ಸ್ವಾರಸ್ಯಕರವಾಗಿವೆ ಎಂದು ನೀನು ಬರೆದಿರುವ ಕಾಗದದಿಂದ ತಿಳಿಯಿತು. ಅದನ್ನು ತಿಳಿದು ಸಂತೋಷವಾಯಿತು.... ಪಂಡಿತ ದೇಶಿಕಾಚಾರ್ಯರ ಮಗನೂ ಓದಬೇಕಾದ ಪಾಠ ಬಹಳ ಹೆಚ್ಚು. ಊರಿಗೆ ಕಾಗದ ಬರೆಯಲು ಕೂಡ ಪುರಸತ್ತು ಇರುವುದಿಲ್ಲ ಎಂದು ಅವರ ತಂದೆಗೆ ಬರೆಯುತ್ತಾರಂತೆ!

ಅಲ್ಲಿಯ ಊಟ ಸಮರ್ಪಕವಾಗಿಲ್ಲ ಎಂದು ಬರೆದಿದ್ದೀಯೆ ಅಷ್ಟೊಂದು ಹಣ ತೆತ್ತರೂ ಎರಡು ಹೊತ್ತಿನ ಊಟವೂ ಸರಿಹೋಗದಿದ್ದರೆ ಖಂಡಿತ ಬೇಸರವಾಗುತ್ತದೆ. ನಿಮ್ಮೆಲ್ಲರ "ಸತ್ಯಾಗ್ರಹ"ದ ಪರಿಣಾಮ ಏನಾಯಿತು! ಆಗಾಗ ಕೂಗಾಡದಿದ್ದರೆ, ಗಲಾಟೆ ಮಾಡದಿದ್ದರೆ, ಯಾವ ಕೆಲಸವೂ ನಡೆಯುವುದಿಲ್ಲ. ಅಂತೂ ನಿಮ್ಮ Institute ನವರಿಗೆ "Management" ನ ಪ್ರಾಯೋಗಿಕ ಪಾಠವನ್ನು ವಿದ್ಯಾರ್ಥಿಗಳಾದ ನೀವೇ ಕಲಿಸಬೇಕಾಗಿದೆಯೇ ಏನೋ....

ಈ ಬಾರಿ ನಾನು ಬೆಂಗಳೂರಿನಲ್ಲಿ ಆರು ದಿನ ಇರಬೇಕಾಗಿತ್ತು. Hotel Tourist ನಲ್ಲಿ ಇಳಿದುಕೊಂಡಿದ್ದೆ. ಅಲ್ಲಿಯ ಊಟ, ತಿಂಡಿ ಪರವಾಯಿಲ್ಲ. ಆದರೆ ಈ ವಯಸ್ಸಿನಲ್ಲಿ ಹೀಗೆ ಹಲವು ದಿನಗಳನ್ನು ಮನೆಯ ಹೊರಗೆ ಹೋಟಲಿನಲ್ಲಿ ಕಳೆಯುವುದು ಕೊಂಚ ಬೇಸರವೆ. ಆದರೆ ವಿಧಿಯಿಲ್ಲ, ನಿಘಂಟು ನನ್ನ ಹೆಗಲ ಮೇಲೆ ಬಲವಾಗಿಯೆ ಕುಳಿತುಕೊಂಡಿದೆ!

* * *

ಮೈಸೂರು, ೧೩-೧೧-೧೯೬೫

ಚಿ॥ ನಾಗಭೂಷಣನಿಗೆ

ಈ ವೇಳೆಗೆ ನಿನ್ನ ಪರೀಕ್ಷೆಗಳೆಲ್ಲವೂ ಮುಗಿದು ಈಚಿನ ಪ್ರಶ್ನೆಪತ್ರಿಕೆಗಳಿಗೆ ಸಮರ್ಪಕವಾಗಿ ಉತ್ತರ ಬರೆದಿದ್ದೀಯೆ ಎಂದು ನಂಬುತ್ತೇನೆ. ನಮ್ಮ ಕೆಲಸ ಕಾರ್ಯಗಳಲ್ಲಿ ಅತೃಪ್ತಿ ಯಾವಾಗಲೂ ಇದ್ದೇ ಇರುತ್ತದೆ. ಆ ಚಿಂತೆಯನ್ನು ಹೆಚ್ಚಾಗಿ ಹಚ್ಚಿಕೊಳ್ಳಬಾರದು. ಪ್ರಯತ್ನ ನಮಗೆ ಸಾಧ್ಯವಾದಷ್ಟು ಸಮರ್ಪಕವಾಗಿ ಇದ್ದರೆ ಸರಿ. ಅದಷ್ಟೇ ನಮ್ಮ ಕೈಯಲ್ಲಾಗುವುದು. "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬ ಗೀತೆಯ ವಾಕ್ಯ ನಿನಗೂ ಗೊತ್ತೇ ಇದೆ. ಅದರ ಅರ್ಥ ಮನದಟ್ಟಾಗುವುದು ಇಂಥ ಸಂದರ್ಭಗಳಲ್ಲಿ. "ಇದೇನು, ಅಣ್ಣ ಉಪದೇಶ ಮಾಡುವುದಕ್ಕೆ ಪ್ರಾರಂಭಿಸಿದ್ದಾನೆ" ಎಂದುಕೊಳ್ಳಬೇಡ. ಉಪದೇಶವೂ ಒಮ್ಮೊಮ್ಮೆ ಬೇಕಲ್ಲವೆ. ಇಂಥ ವಾಕ್ಯಗಳನ್ನು ಕೇಳಿ ಕೇಳಿ ಅವು ಬರಿಯ "ಕಾಪಿ" ಪುಸ್ತಕದ ವಾಕ್ಯಗಳಾಗಿ ಬಿಟ್ಟಿರುತ್ತವೆ. ನಮ್ಮ ಜೀವನದ ಯಾವುದೋ ಸಂದರ್ಭಕ್ಕೆ ಅದು ಅನ್ವಯಿಸಿದಾಗ ಅದರ ಅರ್ಥ ಮನಸ್ಸಿಗೆ ಹತ್ತುತ್ತದೆ. Then platitudes become truths!

ಈ ಪತ್ರ ನಿನ್ನ ಕೈಸೇರುವ ವೇಳೆಗೆ ನೀವು ಶಾಂತಿನಿಕೇತನದ ಯಾತ್ರೆಯನ್ನು ಮುಗಿಸಿಕೊಂಡು ಹಿಂದಕ್ಕೆ ಬಂದಿರುತ್ತೀರಿ ಎಂದು ಭಾವಿಸುತ್ತೇನೆ – ರವೀಂದ್ರನಾಥ ಠಾಕೂರರ ಕಾಲದಲ್ಲಿ ಅದು ಯಾವ ಉಚ್ಛ್ರಾಯ ಸ್ಥಿತಿಯಲ್ಲಿತ್ತೋ ಹೊಸ ಹೊಸ ಸೃಜನಕಾರ್ಯಗಳಿಂದ (creative activities) ಉಲ್ಲಾಸಗೊಳ್ಳುತ್ತಿತ್ತೋ ಅದು ಈಗ ಕೇವಲ ಮಂದ್ರ ರೂಪದಲ್ಲಿ ಮಾತ್ರ ಇರಬಹುದು. ಮಹಾಪುರುಷರು ಬಿಟ್ಟು ಹೋದ ಸ್ಥಳ ವಿದ್ಯುಚ್ಛಕ್ತಿ ಹರಿಯುವುದು ನಿಂತುಹೋದ ಬಲ್ಬಿನಂತೆ........ ಅಥವಾ ನೀವು ಶಾಂತಿನಿಕೇತನಕ್ಕೆ ಹೋಗಲು ಆಗಲೇ ಇಲ್ಲವೋ!

Management Course ಅನ್ನು ತೆಗೆದುಕೊಂಡದ್ದು ಉಪಯುಕ್ತವಾಯಿತೆ, ಇಲ್ಲವೆ ಎಂದು ಚಿಂತಿಸಬೇಡ. ಇದು ಒಳ್ಳೆಯದೆಂದು ಭಾವಿಸಿ, ವಿಚಾರಿಸಿ ತೆಗೆದುಕೊಂಡದ್ದಾಯಿತು. ಹೆಚ್ಚಿನ ತಿಳಿವಳಿಕೆ ನಿನಗೆ ಬರುತ್ತಿದೆ. ಹೆಚ್ಚಿನ ಅನುಭವ – ಒಳ್ಳೆಯದು, ಅಷ್ಟೇನೂ ಒಳ್ಳೆಯದಲ್ಲದ್ದೂ – ಬರುತ್ತಿದೆ. ಜೀವನದಲ್ಲಿ ದೇಹ, ಮನಸ್ಸು ಇನ್ನೂ ಎಳೆತನದಲ್ಲಿ ಇರುವಾಗ ಇದು ಅತ್ಯವಶ್ಯ. ಇನ್ನೂ ಒಂದುವರೆ ವರ್ಷದ ಕೊನೆಗೆ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ಈಗಲೆ ನಿರ್ಧರಿಸುವುದು ಹೇಗೆ. ಆದ ಕಾರಣ ಮನಸ್ಸನ್ನು ಅತಿಯಾದ ಗೊಂದಲಕ್ಕೆ ಸಿಕ್ಕಿಸದೆ ನೀನು ವ್ಯಾಸಂಗವನ್ನು ಮುಂದುವರಿಸು. ನೋಡೋಣ. ನನಗೇನೋ ಈ ವಿಷಯದಲ್ಲಿ ನಿನಗಿಂತ ಹೆಚ್ಚಿನ ಆಶಾವಾದವಿದೆ.

* * *

ಮೈಸೂರು, ೨೪-೧೧-೧೯೬೫

ಚಿ॥ ನಾಗಭೂಷಣನಿಗೆ

ಕಳೆದವಾರ ನಾನು ನಿನಗೆ ಕಾಗದ ಬರೆಯಲು ಆಗಲಿಲ್ಲ. ಅಂತರ್ದೇಶೀಯ ಪತ್ರದ ಮೇಲೆ ನಿನ್ನ ವಿಳಾಸವನ್ನು ಬರೆದು ಇಲ್ಲಿಂದ ಬೆಂಗಳೂರಿಗೆ ಪ್ರಯಾಣ ಮಾಡಿದ್ದೆ. ಇಲ್ಲಿಗೆ

ಭಾನುವಾರ ಸಂಜೆ ಹಿಂದಿರುಗಿದಾಗ ನಿನ್ನ ಒಂದು ಕಾಗದ ಕಾದಿತ್ತು. ಅದಕ್ಕೆ ಉತ್ತರ ಬರೆಯಬೇಕೆಂದು ಯೋಚಿಸುತ್ತಿರುವಷ್ಟರಲ್ಲಿ ಇನ್ನೊಂದೂ ಬಂದಿತು. ಎರಡನ್ನೂ ನೋಡಿ ಸಂತೋಷವಾಯಿತು. ಅಂತೂ ಈ ಬಾರಿ ನಮ್ಮ ವಿಮಾನಗಳು ಮೈಸೂರಿನಿಂದ ಕಲ್ಕತ್ತಕ್ಕೆ ಅಲ್ಲಿಂದ ಇಲ್ಲಿಗೆ ಟಪಾಲನ್ನು ಚುರುಕಾಗಿ ಸಾಗಿಸಿವೆ!

ನಿಮ್ಮ ಪರೀಕ್ಷೆಗಳಲ್ಲಿ ಗ್ರೇಡ್‌ಗಳನ್ನು ಗುರುತಿಸುವ ವಿಧಾನವನ್ನು ನೀನು ವಿವರಿಸಿದ್ದು ಒಳ್ಳೆಯದಾಯಿತು. A_1, A_2, A_3...ಈ ಶ್ರೇಣಿಯಲ್ಲಿ ಸ್ಥೂಲವಾಗಿ ನಾನು ಅರಿತಿದ್ದೇನೇ ಹೊರತು "Points" ವಿಷಯ ನನಗೆ ಗೊತ್ತಿರಲಿಲ್ಲ. ಪ್ರತಿಯೊಂದು ವಿಷಯದಲ್ಲೂ ನಿನಗೆ ಬಂದಿರುವ ಗ್ರೇಡ್‌ಗಳನ್ನು ತಿಳಿಸಿದ್ದೀಯೆ. Economics ಒಂದು ಹೊರತು ಮಿಕ್ಕವುಗಳಲ್ಲಿ ಗ್ರೇಡ್‌ಗಳು ಚೆನ್ನಾಗಿಯೇ ಇವೆ. Economics ನಲ್ಲಿ ಕೆಳಗಿಳಿದಿದೆ ಎಂಬುದು ನಿಜ. ಆದರೆ ಇದಕ್ಕಾಗಿ ನೀನು ಅಧೈರ್ಯ ಪಡಬೇಡ. ನಾನು ಮೈಸೂರಿಗೆ ಬಂದು ಮೊದಲನೆಯ ವರ್ಷದ ಬಿ.ಎ. ತರಗತಿಯಲ್ಲಿ ಈ ವಿಷಯವನ್ನು ಮೊದಲಬಾರಿಗೆ ಓದಿ ಕೇಳಿ ಉತ್ತರ ಬರೆಯಬೇಕಾಗಿಬಂದಾಗ – ಅದುವರೆಗೆ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ನನಗೆ – ಕಷ್ಟವೇ ಆಯಿತು. ಉತ್ತರಗಳನ್ನು ಬರೆಯುವಾಗ ೧, ೨, ೩, ೪ ಎಂದು ಅಂಶಗಳನ್ನು ಮಾತ್ರ ಸೂಚಿಸಿ ಬರೆಯುತ್ತಿದ್ದೆ. ಪ್ರಬಂಧ ರೂಪದಲ್ಲಿ ಬರೆಯಬೇಕೆಂಬುದೂ ಗೊತ್ತಿರಲಿಲ್ಲ. ಆಮೇಲೆ ಎಲ್ಲ ಸರಿ ಹೋಯಿತು. ಬಿ.ಎ. ಪರೀಕ್ಷೆಯಲ್ಲಿ ಉತ್ತಮವಾಗಿಯೇ ಅಂಕಗಳು ಬಂದವು. ನನ್ನ ವಿಷಯ ಜ್ಞಾನ ಅಷ್ಟೇನೂ ಉತ್ತಮವಾಗಿಲ್ಲದಿದ್ದರೂ ಕೂಡ! ಇದರಿಂದ ನೀನೂ ಧೈರ್ಯ ತಂದುಕೊಳ್ಳಬಹುದು. ಕೆಲವು ಪ್ರಬಂಧಗಳನ್ನು ಬರೆದು ನಿಮ್ಮ ಪ್ರಾಧ್ಯಾಪಕರಿಗೆ ತೋರಿಸಿ ತಪ್ಪು ನ್ಯೂನತೆ ಎಲ್ಲಿ ಇವೆ ಎಂಬುದನ್ನು ತಿಳಿದುಕೊಳ್ಳಬಹುದು. ಅದಕ್ಕೆ ನಿಮ್ಮಲ್ಲಿ ಅವಕಾಶವಿರಲೇಬೇಕಷ್ಟೆ. ನಿನಗೆ ಎರಡನೆಯ ಟರ್ಮಿನಲ್ಲಿ Economics II ಇರುವುದರಿಂದ, ಅದನ್ನು ಎದುರಿಸಲು ಸಿದ್ಧತೆ ಆವಶ್ಯಕವಾಗಿ ರುವುದರಿಂದ ಹೀಗೆ ಬರೆಯುತ್ತಿದ್ದೇನೆ. Don't worry too much about Economics. You will do very much better in the second term.... ಓದುವುದರ ಜೊತೆಗೆ ಪ್ರಬಂಧ ಬರೆಯುವುದನ್ನು ಸ್ವಲ್ಪ ಅಭ್ಯಾಸ ಮಾಡು. ಎಲ್ಲವೂ ಸರಿಹೋಗುತ್ತದೆ.

ನಿನ್ನ ಶಾಂತಿನಿಕೇತನದ ಪ್ರವಾಸದ ವಿಷಯವನ್ನು ತಿಳಿದು ನನಗೂ ಹರ್ಷವಾಯಿತು. ಅಂತೂ ಠಾಕೂರರ ವ್ಯಕ್ತಿಮುದ್ರೆ ಅಲ್ಲಿ ಇನ್ನೂ ಕೆಲವು ಮಟ್ಟಿಗೆ ಉಳಿದಿದೆ ಎಂದಾಯಿತು. ಕಲ್ಕತ್ತಾ ಕಡೆ ನಾನು ಮತ್ತೊಮ್ಮೆ ಬಂದಾಗ ನೋಡಿಕೊಂಡು ಬರಬೇಕು.

ಸೀ ತಿಂಡಿಗಳು – ಹಾಲಿನಲ್ಲಿ ಮಾಡಿದವು – ಇನ್ನು ಮುಂದೆ ಅಲ್ಲಿಯ ಹೋಟಲುಗಳಲ್ಲಿ ದೊರೆಯುವುದಿಲ್ಲ ಎಂದು ಕೇಳಿ ನಿನಗಾಗಿ ನನಗೆ ವ್ಯಥೆಯಾಯಿತು. ಆದರೆ ಸ್ನೇಹಿತರ ಮನೆಗಳಲ್ಲಿ ಆಗಾಗ ಮಾಡಿ ಬಡಿಸಬಹುದಲ್ಲವೆ! ಹೇಗೂ ನಿನ್ನ ಸ್ನೇಹಿತರ ಸಂಖ್ಯೆಯೂ ಹೆಚ್ಚುತ್ತಿದೆ.

* * *

ಮೈಸೂರು, ೨-೧೨-೧೯೬೫

ಚಿ॥ ನಾಗಭೂಷಣನಿಗೆ

ಇಲ್ಲಿ ಬರೆಯುವಂಥ ಹೆಚ್ಚಿನ ವಿಷಯಗಳೇನೂ ಇಲ್ಲ. ಅಂದ ಹಾಗೆ ನವೆಂಬರ್ ೨೬ನೆಯ ತಾರೀಖಿನ ದಿನವೇ ಮಹಾರಾಜ ಕಾಲೇಜಿನಲ್ಲಿ ನನ್ನ ಮತ್ತು ಡಿ.ಎಲ್. ನರಸಿಂಹಾಚಾರ್ಯರ ಭಾವಚಿತ್ರಗಳನ್ನು ಅನಾವರಣ ಮಾಡಿದರು. ಡಾ. ಚಿದಾನಂದಮೂರ್ತಿ ನನ್ನ ವಿಷಯವಾಗಿಯೂ ಶ್ರೀ ಪರಮೇಶ್ವರಭಟ್ಟರು ಡಿ.ಎಲ್.ನ ವಿಷಯವಾಗಿಯೂ ಭಾಷಣ ಮಾಡಿದರಂತೆ, ಶ್ರೀ ಜವರೇಗೌಡರ ಅಧ್ಯಕ್ಷತೆ. ಸಮಾರಂಭ ಒಟ್ಟಿನಲ್ಲಿ ಚೆನ್ನಾಗಿ ನಡೆಯಿತೆಂದು ತಿಳಿಯಬಂದಿತು. ಅದೇ ಸಂಜೆ ನಾನು ಇಲ್ಲಿ Lions Club ನಲ್ಲಿ 'ಸಾಹಿತ್ಯ ನಮಗೆ ಏಕೆ ಬೇಕು' ಎಂಬ ವಿಷಯವಾಗಿ ಭಾಷಣ ಮಾಡಿದೆ. ಅಂದು ನನ್ನ ಹುಟ್ಟಿದ ದಿನವೆಂದು ಅಲ್ಲಿಯವರು ಯಾರಿಗೂ ಹೇಳಲಿಲ್ಲ!

ನಿನ್ನ ಎರಡನೆಯ ಟರ್ಮಿನ ಪಾಠಪ್ರವಚಗಳೂ, ನಿನ್ನ ಅಭ್ಯಾಸವೂ ಚೆನ್ನಾಗಿ ಮುಂದುವರಿಯುತ್ತಿವೆಯೆಂದು ನಂಬುತ್ತೇನೆ.

* * *

ಮೈಸೂರು, ೧೬-೧೨-೧೯೬೫

ಚಿ॥ ನಾಗಭೂಷಣನಿಗೆ

ನಾನು ನಿನ್ನೆಯ ಮಧ್ಯಾಹ್ನ ಇಲ್ಲಿಗೆ ಹಿಂದಿರುಗಿದೆ. ಈ ಬಾರಿಯ ಪ್ರವಾಸ ದೀರ್ಘವಾಗಿಯೇ ಇತ್ತು. ಆದರೆ ಹೈದರಾಬಾದಿನಿಂದ ಹಿಂದಿರುಗಿದಾಗ ಬೆಂಗಳೂರಿನಲ್ಲಿ ತಂಗಿ, ಚಿ॥ ಸುಬ್ಬಣ್ಣನ ಚೂಡಾಕರ್ಮದ ಭೋಜನ ಸಮಾರಂಭದಲ್ಲಿ ಸೇರಿ, ಮುಂದಕ್ಕೆ ಪ್ರಯಾಣಮಾಡಲು ಅವಕಾಶವಾಯಿತು.

ನನ್ನ ಪ್ರಯಾಣಗಳು ಒಟ್ಟಿನಲ್ಲಿ ಹಿತವಾಗಿಯೇ ಇದ್ದುವು. ಹೈದರಾಬಾದಿನಲ್ಲಿ ಶ್ರೀ ಮರಿಯಪ್ಪ ಭಟ್ಟರೊಂದಿಗೆ University Guest House ನಲ್ಲಿ ಇಳಿದುಕೊಂಡಿದ್ದೆ. ವಸತಿ ಚೆನ್ನಾಗಿದೆ. ಊಟ ಮಾತ್ರ ಅಷ್ಟು ಸರಿಹೋಗಲಿಲ್ಲ. ಪಾಶ್ಚಾತ್ಯ ಶೈಲಿಯಲ್ಲಿ ನಮ್ಮ ಶಾಕಾಹಾರ! ಆದರೆ ೯ನೆಯ ರಾತ್ರಿ ಡಾ. ಭ. ಕೃಷ್ಣಮೂರ್ತಿಯವರ ಮನೆಯ ಭೋಜನ (ಆತನ ಹೆಂಡತಿ ಚೆನ್ನಾಗಿ ಅಡಿಗೆ ಮಾಡುತ್ತಾರೆ).

...೧೧ರ ಸಂಜೆ ನಾನು ಮದರಾಸಿಗೆ ತಲಪಿದ ನಂತರ ಬಳಿಕ ನಮ್ಮ UGC Assessment Committee ಯವರಿಗೆ VIP ಉಪಚಾರ ಪ್ರಾರಂಭವಾಯಿತು. ಮದರಾಸಿನ ಪ್ರಸಿದ್ಧವಾದ ಹೋಟಲಾದ Hotel Oceanic ನಲ್ಲಿ ನಮ್ಮನ್ನು ಇಳಿಸಿದ್ದರು. (ಈ ಹೋಟಲಿನ ಹೆಸರನ್ನು ನಾನು ಅದುವರೆಗೂ ಕೇಳಿರಲಿಲ್ಲ!) ಇಲ್ಲಿ ಒಂಟಿ ರೂಮಿಗೆ ದಿನಕ್ಕೆ ೪೪/– ಶುಲ್ಕ! Airconditioning, Radio - ಎಲ್ಲ ಸೌಕರ್ಯವೂ ಉಂಟು. ಊಟವು ಶಾಕಾಹಾರಿಗಳಿಗೆ ಅಷ್ಟೇನೂ ಅಹಿತಕರವಾಗಿರಲಿಲ್ಲ. ಮಾರನೆಯ ದಿನ ಬೆಳಗ್ಗೆ ಮದರಾಸಿನಿಂದ ಕಾರಿನಲ್ಲಿ

ಅಣ್ಣಾಮಲೈ ನಗರಕ್ಕೆ ಪ್ರಯಾಣ. ನನ್ನ ಜೊತೆಗೆ ಪ್ರೊ. ಸುನೀತಿಕುಮಾರ ಛಟರ್ಜಿ ಇದ್ದರು. ಅವರೊಂದಿಗೆ ಬೇಕಾದಷ್ಟು ಮಾತುಕಥೆ ನಡೆಯಿತು. ಆತ ಯಾವಾಗಲೂ ತುಂಬ ಮಾತಾಡುತ್ತಾರೆ; ಹೇಳಿದ್ದನ್ನು ಮತ್ತೆ ಹೇಳುವುದೂ ಉಂಟು. ಆದರೆ ಅದೆಲ್ಲ ವಿಷಯ ಗರ್ಭಿತವಾಗಿರುತ್ತದೆ. ನನಗೇನೂ ಬೇಸರವಾಗಲಿಲ್ಲ. ಅಣ್ಣಾಮಲೈನಗರದಲ್ಲಿ ಊಟಉಪಚಾರ ಯಾವಾಗಲೂ ಪ್ರಶಸ್ತ. ಅಲ್ಲಿಯ ಕೆಲಸ ಮುಗಿಸಿಕೊಂಡು ಮದರಾಸಿಗೆ ೧೩ರ ರಾತ್ರಿ ಹಿಂದಿರುಗಿದೆವು – ಕಾರಿನಲ್ಲಿ. ದಾರಿಯಲ್ಲಿ ಪಾಂಡಿಚೆರಿಯನ್ನು ನೋಡಿದೆವು. ಹೋಗುವಾಗ, ಬರುವಾಗ ಕೂಡ, ಶ್ರೀ ಅರವಿಂದರ ಸಮಾಧಿಯ ದರ್ಶನವೂ ಆಯಿತು. ಪಾಂಡಿಚೆರಿಗೆ ಮತ್ತೆ ಹೋಗಿ ಬರಬೇಕೆಂಬ ಅಪೇಕ್ಷೆಯೇನೂ ನನಗೆ ಹುಟ್ಟಲಿಲ್ಲ. ೧೪ರ ಬೆಳಗ್ಗೆ ಅಣ್ಣಾಮಲೈ ವೈಸ್‌ಛಾನ್ಸೆಲರ್ ಶ್ರೀ ಸಿ.ಪಿ. ಅವರ ಭೇಟಿ ಸಮಯ ಎಲ್ಲ ಸದಸ್ಯರಿಗೆ. ಮತ್ತೆ Hotel Oceanic ನಲ್ಲೇ ಹಿಂದಿರುಗಿದಾಗಲೂ ನಿವಾಸ. ೧೪ರ ರಾತ್ರಿಯ ತನಕ ಅಲ್ಲೇ ಇದ್ದೆ. ಈ ಬಾರಿ ಅಲ್ಲಿಯ Chief Accountant ಶ್ರೀ ಜಿ.ಪಿ.ಎನ್. ಮೂರ್ತಿ ಎಂಬುವರು ನನ್ನನ್ನು ನೋಡಿ, ಗುರುತಿಸಿ ಮಾತಾಡಿಸಿ, ಆ ಮಧ್ಯಾಹ್ನ ನನ್ನ ಕೊಠಡಿಗೆ ಮದರಾಸು ರೀತಿಯ ಒಳ್ಳೆಯ ಶಾಕಾಹಾರವನ್ನು ಕಳಿಸಿಕೊಟ್ಟರು. ನನಗೂ ತುಂಬ ಸಂತೋಷವಾಯಿತು. ಈತ ಬೆಂಗಳೂರಿನವರಂತೆ, ನನ್ನನ್ನು ನೋಡಿರುವುದಲ್ಲದೆ ನನ್ನ ವಿಷಯವನ್ನೂ ಬಲ್ಲರಂತೆ.

ಡಾ. ಛಟರ್ಜಿಯವರು ಎಂದಿನಂತೆ ವಿಶ್ವಾಸಪರರಾಗಿಯೇ ಇದ್ದಾರೆ. ನೀನು ಅವರನ್ನು ನೋಡಿದ್ದ ವಿಷಯ ಅವರಿಗೆ ನೆನಪಿದೆ. ಮತ್ತೊಮ್ಮೆ ಅವಕಾಶವಾದಾಗ ಹೋಗಿ ನೋಡಬಹುದು.

ಇಲ್ಲಿ ಶ್ರೀ ಜವರೇಗೌಡ, ಡಾ. ಮಾನಪ್ಪನಾಯಕ್ ಇವರು ನನ್ನ ಇಂಗ್ಲಿಷ್ ಲೇಖನಗಳ ಸಂಕಲನವನ್ನು ಪ್ರಕಟಿಸಬೇಕೆಂದು ಆಲೋಚಿಸಿದ್ದಾರೆ. ಅದರ ಪ್ರಸ್ತಾಪವನ್ನು ಡಾ. ಛಟರ್ಜಿಯವರ ಎದುರಿಗೆ ಎತ್ತಿ ಆ ಗ್ರಂಥವನ್ನು ಅವರಿಗೆ ಸಮರ್ಪಿಸಲು (Dedicate) ಒಪ್ಪಿಗೆ ಕೇಳಿದೆ. ಸಂತೋಷದಿಂದ ಒಪ್ಪಿದ್ದಾರೆ.

* * *

ಮೈಸೂರು, ೨೩–೧೨–೧೯೬೫

ಚಿ॥ ನಾಗಭೂಷಣನಿಗೆ

'ಒಲುಮೆ'ಯ ಮೂರನೆಯ ಮುದ್ರಣದ ಪ್ರತಿಗಳು ಕೆಲವು ದಿನಗಳ ಹಿಂದೆ ಕೈಸೇರಿದುವು. ಒಂದು ಪ್ರತಿಯನ್ನು ನಿನಗೆ ಈ ದಿನ ಪ್ರತ್ಯೇಕವಾಗಿ ರಿಜಿಸ್ಟರ್ಡ್ ಬುಕ್ ಪೋಸ್ಟ್ ಮೂಲಕ ಕಳಿಸಿದ್ದೇನೆ. ಕೈ ಸೇರಿದ್ದಕ್ಕೆ ಉತ್ತರ ಬರೆಯುವುದು.

ನಿಮ್ಮ Institute ನ Emblem ವಿಷಯವಾಗಿ ಬರೆದಿದ್ದೀಯೆ. ಅದರಲ್ಲಿ ಇರಬೇಕಾದ ಚಿತ್ರದ ವಿಷಯವಾಗಿ ನಾನು ಏನನ್ನೂ ಸದ್ಯದಲ್ಲಿ ಸೂಚಿಸಲಾರೆ Let it be simple ಎಂದು ಮಾತ್ರ ಹೇಳಬಲ್ಲೆ.

ಅದರ Motto ವನ್ನು ಕುರಿತು ಆಲೋಚಿಸುತ್ತಿರುವಾಗ ಭಗವದ್ಗೀತೆಯ ಒಂದು ಪಂಕ್ತಿ ಹೊಳೆಯಿತು. योगः कर्मसु कौशलम् (II. 50). "Yoga is skill in action" ಎಂದು ಡಾ. ರಾಧಾಕೃಷ್ಣನ್ ಇದನ್ನು ಭಾಷಾಂತರಿಸಿದ್ದಾರೆ. ಇಷ್ಟವಾದರೆ ಇಡೀ ಪಂಕ್ತಿಯನ್ನೇ ಇರಿಸಿಕೊಳ್ಳಬಹುದು. ಇಲ್ಲವಾದರೆ कर्मसु कौशलम् ("ಕರ್ಮಸು ಕೌಶಲಮ್") ಎಂದು ಇಷ್ಟೇ ಭಾಗವನ್ನು ("Skill in action") ನಿಮ್ಮ Motto ಆಗಿ ತೆಗೆದುಕೊಳ್ಳಬಹುದು.

ಈ ಬಾರಿಯೂ ನಿನ್ನ ಕವರು ಎರಡು ಕಡೆ ಅಂಚಿನಲ್ಲಿ ಸೀಳಿ ಹೋಗಿ ಟಪಾಲು ಕಚೇರಿ ಯವರು ದಾರವನ್ನು ಕಟ್ಟಿ ಕಳಿಸಿದ್ದರು. ಇನ್ನು ಮುಂದೆ ಅಂಗಡಿಯಿಂದ ಖಾಲಿ ಕವರುಗಳನ್ನು ಕೊಂಡುತಂದು ಅದಕ್ಕೆ ಸ್ಟಾಂಪು ಹಚ್ಚಿ ಕಳಿಸುವುದು ಉತ್ತಮ. ನಾನೂ ಹಾಗೆಯೇ ಮಾಡುತ್ತೇನೆ.

* * *

ಮೈಸೂರು, ೩೧-೧೨-೧೯೬೫

ಚಿ॥ ನಾಗಭೂಷಣನಿಗೆ

ನಿಮ್ಮ Statistics Professor ನಿಮ್ಮನ್ನೆಲ್ಲ ಮನೆಗೆ ಕರೆದು ಸತ್ಕರಿಸಿದರೆಂದು ಕೇಳಿ ಸಂತೋಷವಾಯಿತು. ನಮ್ಮ ಮನೆಯಲ್ಲಿ ಇಂಥ ಸಮಾರಂಭಗಳು ನಡೆಯುತ್ತಿದ್ದುದನ್ನು ನೀನು ಜ್ಞಾಪಿಸಿಕೊಂಡದ್ದು ಸಹಜವೇ. ನಿಮ್ಮ ಪ್ರೊಫೆಸರ್‌ಗಳು ಹೀಗೆ ನಿಮ್ಮನ್ನು ಉಪಾಹಾರಕ್ಕೆ ಕರೆಯುವುದಿಲ್ಲವಲ್ಲ ಎಂಬ ನಿನ್ನ ಆಗಿನ ಕೊರಗು ಈಗ ಪರಿಹಾರವಾಗಿರಬೇಕಲ್ಲವೆ! ಒಳ್ಳೆಯ ಪ್ರಾಧ್ಯಾಪಕರನ್ನು ಪಡೆಯಬೇಕೆನ್ನುವ ನಿನ್ನ ಆಸೆಯೂ ಕೆಲವು ಮಟ್ಟಿಗೆ ಈಗ ಕೈಗೂಡಿದೆ. ಇದೇ ರೀತಿಯಲ್ಲಿ ನಿನ್ನ ವ್ಯಾಸಂಗವೂ ಚೆನ್ನಾಗಿ ನಡೆದು ಮುಂದೆ ನೀನು ಶ್ರೇಯೋವಂತನಾಗಿ ಬಾಳಬೇಕೆಂದು ನಿನ್ನ ತಾಯಿಯ ಮತ್ತು ನನ್ನ ಹಾರೈಕೆ. Mathematics ಮತ್ತು Accountancy ಇವುಗಳಲ್ಲಿ ನಿನ್ನ ಅಂಕಗಳು ಗೊತ್ತಾದುವೆ?

* * *

ಮೈಸೂರು, ೭-೧-೧೯೬೬

ಚಿ॥ ನಾಗಭೂಷಣನಿಗೆ

ಮೂರು ದಿನಗಳ ಕೆಳಗೆ ನಿಮ್ಮ ತಾಯಿ ಇಲ್ಲಿಂದ ನಿನಗೆ ಸಂಕ್ರಾಂತಿಯ ಎಳ್ಳನ್ನು ಕಳಿಸುತ್ತಾ ಡಬ್ಬದೊಳಗೆ ಒಂದು ಕಾಗದವನ್ನು ಬರೆದು ಇರಿಸಿದ್ದಳು. ನಾನು ವಿಳಾಸವನ್ನು ಮಾತ್ರ ಬರೆದಿದ್ದೆ, ಅಷ್ಟೆ. ಎಳ್ಳು ತಲುಪುವುದು ತಡವಾಗಬಹುದು. ಚಿ॥ ನಾಗಭೂಷಣನಿಂದ ಈಚೆಗೆ ಬಂದ ಕಾಗದಗಳಿಗೆ ಎರಡು ಪಂಕ್ತಿ ಉತ್ತರ ಬರೆದರೆ ಉತ್ತಮ ಎಂದು ನನ್ನನ್ನು ಒತ್ತಾಯಪಡಿಸಿದ್ದರಿಂದ ಈ ಕಾಗದವನ್ನು ಬರೆಯಲು ಕುಳಿತಿದ್ದೇನೆ. ಅಲಂಕೃತವಾದ ಅಂತರ್ದೇಶೀಯ ಪತ್ರಗಳು ಮುಗಿದು ಹೋಗಿವೆ. ಟಪಾಲು ಕಚೇರಿಯಲ್ಲೂ ಸಿಕ್ಕುತ್ತಿಲ್ಲ. ಆದ ಕಾರಣ ಹಳೆಯ ಪತ್ರವನ್ನೇ ಉಪಯೋಗಿಸಿದ್ದೇನೆ.

ಬರೆಯಲು ವಿಷಯ ಏನು ಇಲ್ಲ. ಹಾಗಲ್ಲ. ಕಲ್ಕತ್ತದ Ramakrishna Mission Instituteನ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದರು ಮೈಸೂರಿಗೆ ಕೆಲವು ದಿನಗಳ ಕೆಳಗೆ ಬಂದು ವಿಶ್ವವಿದ್ಯಾನಿಲಯದಲ್ಲಿ ಕೆಲವು ವಿಶೇಷೋಪನ್ಯಾಸಗಳನ್ನು ಕೊಟ್ಟರು. ಜನವರಿ ೫ ರಂದು ವೈಸ್‌ಛಾನ್ಸೆಲರ್ ಏರ್ಪಡಿಸಿದ್ದ "Tea"ಯಲ್ಲಿ ಸ್ವಾಮೀಜಿಯವರನ್ನು ನಾನು ಸಂಧಿಸಿದ್ದೆ. ನೀನು ಕಲ್ಕತ್ತಾದಲ್ಲಿ ಇರುವುದಾಗಿ ಅವರಿಗೆ ಹೇಳಿದೆ. ನನ್ನನ್ನು ನೋಡುವಂತೆ ಬರೆಯಿರಿ ಎಂದು ಹೇಳಿದರು. ಇವರ ವಿಷಯವನ್ನು ನಿನಗೆ ಹಿಂದೆಯೇ ಹೇಳಿದ್ದೆನಲ್ಲವೆ; ಕನ್ನಡ ಮಾತಾಡುತ್ತಾರೆ. ನಿನಗೆ ಅವಕಾಶವಾದಾಗ ಹೋಗಿ ನೋಡಿಕೊಂಡು ಬಾ. ಅವರ Institute ಚೆನ್ನಾಗಿದೆ.

ಕೆಲವು ವಾರಗಳಿಂದ – ಕೆಲವು ತಿಂಗಳುಗಳಿಂದ ಎಂದೇ ಹೇಳಬೇಕು – ನನ್ನ ಬಲಭುಜದ ಕೀಲಿನಲ್ಲಿ ನೋವು ಕಾಣಿಸಿಕೊಂಡಿದೆ – ನೋವು ಅಷ್ಟೇನೂ ಪ್ರಬಲವಾಗಿಲ್ಲ. ಆದರೆ ತೋಳನ್ನು ಮನಸ್ಸು ಬಂದಂತೆ ಆಡಿಸುವ ಹಾಗಿಲ್ಲ, ಡಾ. ಸೂರ್ಯನಾರಾಯಣರಾಯರ ವಿಶ್ವಾಸ ಸಹಾಯಗಳಿಂದ ಈ ಬೆಳಗ್ಗೆ ಎಕ್ಸ್–ರೇ ಶಾಖೆಗೆ ಹೋಗಿ ಬಂದೆ. ಅದರ ಫೋಟೋ ತೆಗೆದುಕೊಂಡಿದ್ದಾರೆ. ಮೂರುನಾಲ್ಕು ದಿನ ಆಸ್ಪತ್ರೆಗೆ ಹೋಗಿ Deep X-Ray ತೆಗೆದು ಕೊಳ್ಳಬೇಕಾಗುತ್ತದೆ. ಈ ನೋವಿಗೆ Osteoarthritis ಎಂದು ಹೆಸರು. ಯಾವ ಆತಂಕ ಅಥವಾ ಯೋಚನೆಗೂ ಏನೇನೂ ಕಾರಣವಿಲ್ಲ. ನಾನು ಈ ಕಾಗದವನ್ನು ಬರೆಯುತ್ತಿರು ವುದೇ ಅದಕ್ಕೆ ಗುರುತು. ಅಲ್ಲದೆ ಇದೇ ಭಾನುವಾರ (೯ನೆಯ ತಾ॥) ಇಲ್ಲಿಂದ ಹೈದರಾಬಾದಿಗೆ ಹೋಗಿ ಬರುವುದೇ ಗುರುತು. ಬೆಂಗಳೂರಿನಿಂದ ವಿಮಾನದಲ್ಲಿ ಹೋಗಿ, ೧೨ರ ಬೆಳಗ್ಗೆ ಇಲ್ಲಿಗೆ ಹಿಂದಿರುಗುತ್ತೇನೆ.

* * *

ಮೈಸೂರು, ೧೪–೧–೧೯೬೬

ಚಿ॥ ನಾಗಭೂಷಣನಿಗೆ

ನಾನು ಇಲ್ಲಿಗೆ ೧೨ನೆಯ ತಾರೀಖು ಮಧ್ಯಾಹ್ನ ಹಿಂದಿರುಗಿದೆನು. ನಾನು ಹೈದರಾಬಾದಿನಲ್ಲಿ ಇದ್ದಾಗಲೆ, ೧೧ನೆಯ ತಾರೀಖು ಬೆಳಗ್ಗೆ ಲಾಲ್‌ಬಹದ್ದೂರ್ ಶಾಸ್ತ್ರಿಯವರು ದಿವಂಗತರಾದ ಘೋರ ವಾರ್ತೆ ಕಿವಿಗೆ ಬಿತ್ತು. ನಂಬಲಾರದ ವಿಷಯ. ನಮ್ಮ ದೇಶದ ಗ್ರಹಚಾರ ಚೆನ್ನಾಗಿಲ್ಲ. He was great in pursuit of war and great in pursuit of peace.

* * *

ಮೈಸೂರು, ೨೦–೧–೧೯೬೬

ಚಿ॥ ನಾಗಭೂಷಣನಿಗೆ

ಶ್ರೀಮತಿ ಇಂದಿರಾಗಾಂಧಿ ಭಾರತದ ಪ್ರಧಾನಮಂತ್ರಿ ಆಗುವರೆಂದು ನಿರೀಕ್ಷಿಸಿದ್ದ ಹಾಗೆಯೇ ನಿನ್ನೆಯ ಚುನಾವಣೆಗಳೂ ಖಚಿತಪಡಿಸಿದುವು. ಮಹಿಳೆಯರಿಗೆಲ್ಲ ಕೋಡು ಬಂದಿದೆ. ಅದರ

ಜೊತೆಗೆ ಆಕೆಯ ಅನುಭವ ವಿವೇಕಗಳು ಬೆಳೆಯಲೆಂದು ಹಾರೈಸೋಣ. ಮುರಾರ್‌ಜೀಗಿಂತ ಈಕೆ ವಾಸಿ ಎಂದು ಹೇಳಬಹುದು. ಕಾಮರಾಜರ ಈ ಆಯ್ಕೆ ಹಿಂದಿನ ಸಲದ ಆಯ್ಕೆಯಂತೆಯೇ ಯಶಸ್ವಿಯಾದರೆ ದೇಶಕ್ಕೆ ಕ್ಷೇಮ.

* * *

ಮೈಸೂರು, ೨೬–೧–೧೯೬೬

ಚಿ॥ ನಾಗಭೂಷಣನಿಗೆ

ನಿನ್ನ ೨೨/೧ ರ ಕಾಗದ ಮೊನ್ನೆಯ ಮಧ್ಯಾಹ್ನ ಕೈಸೇರಿತು. ಫೆಬ್ರುವರಿ ೧ನೆಯ ತಾರೀಖು ಕಲ್ಕತ್ತಾದಿಂದ ಮದರಾಸು ಮೇಲ್ ಗಾಡಿಯಲ್ಲಿ ಹೊರಡಲು ನಿನಗೆ ರಿಸರ್ವೇಷನ್ – ಸ್ವಲ್ಪ ಶ್ರಮ ಪಡಬೇಕಾಗಿದ್ದರೂ ಚಿಂತೆಯಿಲ್ಲ – ಸಿಕ್ಕಿತೆಂದು ತಿಳಿದು ನಮಗೆಲ್ಲ ಸಂತೋಷ ವಾಯಿತು. ೩ನೆಯ ತಾರೀಖು ರಾತ್ರಿ ನೀನು ಮನೆಗೆ ಬರುವುದನ್ನೇ ನಿರೀಕ್ಷಿಸುತ್ತಿರುತ್ತೇವೆ. ನಿನ್ನ ಎರಡನೆಯ ಟರ್ಮಿನ ಪರೀಕ್ಷೆಯಲ್ಲಿ ನೀನು ಚೆನ್ನಾಗಿ ಉತ್ತರಗಳನ್ನು ಬರೆಯುತ್ತೀಯೆ ಎಂದು ನನಗೆ ಭರವಸೆ ಇದೆ.

ಕೆಲವು ದಿನಗಳ ಕೆಳಗೆ ಡಾ॥ ಸುನೀತಿಕುಮಾರ ಛಟರ್ಜಿ ಅವರಿಂದ ಒಂದು ಕಾಗದ ಬಂದಿತು. ಅವರು ಈ ತಿಂಗಳ ಕೊನೆಗೆ ಬೆಂಗಳೂರಿಗೆ ಬಂದು, ಫೆಬ್ರುವರಿ ಒಂದರಂದು ಇಲ್ಲಿ ಒಪ್ಪೊತ್ತು ತಂಗಿ, ೨ರಂದು ಮಡಕೇರಿಗೆ ಪ್ರಯಾಣಮಾಡುವ ಏರ್ಪಾಡನ್ನು ಇಟ್ಟು ಕೊಂಡಿದ್ದಾರೆ. ಸಾಧ್ಯವಾದರೆ ಬೆಂಗಳೂರಿನಲ್ಲಿಯೇ, ಎಂತೂ ಇಲ್ಲಿ, ಅವರನ್ನು ಸಂಧಿಸುತ್ತೇನೆ. ನಮ್ಮ ಮನೆಗೂ ಬರಬೇಕೆಂದು ಆಹ್ವಾನಿಸಿದ್ದೇನೆ..... ಅವರ ಪತ್ರದಲ್ಲಿ ಈ ವಾಕ್ಯಗಳಿವೆ, ನಿನಗೆ ಸಂಬಂಧಿಸಿದಂತೆ –

"Yesterday your son Sri Nagabhushana came and saw me. He is a very fine young man and quite serious, and an exceedingly loveable chap.

पुत्रे तोये यशसि च नराणां पुण्य लक्षणम् ॥
May this be true in every regard in your case.''

ಇದನ್ನು ಓದಿ ನನಗೆ ತುಂಬ ಸಂತೋಷವಾಯಿತು, ಅವರಿಗೆ ಬರೆದ ಪ್ರತ್ಯುತ್ತರದಲ್ಲಿ ಈ ಸಂತೋಷವನ್ನು ವ್ಯಕ್ತಪಡಿಸಿ "May your blessings be always with my son" ಎಂದು ಕೋರಿದ್ದೇನೆ.

ಮೇಲಿನ ಸಂಸ್ಕೃತ ವಾಕ್ಯದ ಅರ್ಥ ನಿನಗೆ ತಿಳಿದಿರಬೇಕಷ್ಟೆ. "ಮಗ, ನೀರು, ಯಶಸ್ಸು – ಈ ಮೂರರಲ್ಲೂ ಒಳಿತು ದೊರೆಯುವುದು ಮನುಷ್ಯರ ಪುಣ್ಯದ ಲಕ್ಷಣ. ಎಂದರೆ ಒಳ್ಳೆಯ ಮಗ, ಸಮೃದ್ಧಿಯಾದ ನೀರು, ಹೆಸರುವಾಸಿ – ಇವು ದೊರೆಯುವುದು ಪುಣ್ಯದ ಫಲ."

ಈ ಸಂಸ್ಕೃತದ ಶ್ಲೋಕಾರ್ಥವನ್ನು ಪರಿಭಾವಿಸುತ್ತಿರುವಾಗ ತಮಿಳಿನ 'ಕುಱಳ್' ಎಂಬ ಮಹಾಕೃತಿಯ ಒಂದೆರೆಡು ಪದ್ಯ ನೆನಪಿಗೆ ಬರುತ್ತದೆ: ಆ ಪದ್ಯಗಳು ನನಗೆ ಬಾಯಿಗೂ ಬರುತ್ತವೆ. (ತಮಿಳಿನಲ್ಲಿ ನನಗೆ ಬಾಯಿಗೆ ಬರುವುದು ಇನ್ನು ಮೂರುನಾಲ್ಕು ಪದ್ಯ, ಅಷ್ಟೆ!)

ಈನ್ಱ ಪೊೞುದಿನ್ ಪೆರಿದುವಕ್ಕುಂ ತನ್ ಮಗನ್ನೈ
ಚ್ಚಾನ್ಱೋನ್ ಎನ ಕ್ಕೇಟ್ಟ ತಾಯ್
ಮಗನ್ ತನ್ದೈಕ್ಕಾಱ್ಱುಮುದವಿ – ಇವನ್ದನ್ದೈ
ಎನ್ ನೋಱ್ಱಾನ್ ಗೊಲ್ ಎನ್ನುಂ ಶೊಲ್

"ಹೆತ್ತ ವೇಳೆಗಿಂತಲೂ ಹೆಚ್ಚು ಹಿಗ್ಗುತ್ತಾಳೆ – ತನ್ನ ಮಗನು
ಸಂಪನ್ನ ಎಂದು ಕೇಳಿದ ತಾಯಿ.
ಮಗನು ತಂದೆಗೆ ಮಾಡುವ ಉಪಕಾರ – 'ಇವನ ತಂದೆ
ಏನು ಪುಣ್ಯ ಮಾಡಿದನೊ' ಎಂಬ ಮಾತು".

*

ಇಂದು ಗಣರಾಜ್ಯೋತ್ಸವದ ದಿನ. ಆದರೆ ಮನಸ್ಸು ಭಾರವಾಗಿದೆ. ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು ಕಳೆದುಕೊಂಡ ದುಃಖ ಇನ್ನೂ ಹಸಿಯಾಗಿರುವಾಗಲೇ, "ಶುಭಸ್ವೀಕಾರ"ಕ್ಕೂ ಮೊದಲೇ ಡಾ. ಭಾಭಾ ವಿಮಾನಾಪಘಾತದಲ್ಲಿ ತೀರಿಹೋದರೆಂಬ ಘೋರವಾರ್ತೆ. ಶಾಸ್ತ್ರಿಯವರನ್ನು ಕಳೆದುಕೊಂಡ ನಷ್ಟಕ್ಕೇನೂ ಕಡಮೆಯದಲ್ಲ ಈ ನಷ್ಟ! ಡಾ॥ ಭಾಭಾ ಜಾಗಕ್ಕೆ ಮತ್ತಾರು ಬರಬಲ್ಲರು!

ಈ ಕಾಗದ ಕೈಸೇರಿದ್ದಕ್ಕೂ ನಿನ್ನ ಪ್ರಯಾಣ ಸಿದ್ಧತೆ ನಡೆದಿರುವ ವಿಷಯಕ್ಕೂ ನಿನ್ನ ಉತ್ತರವನ್ನೇ ನಿರೀಕ್ಷಿಸುತ್ತಿರುತ್ತೇವೆ.

* * *

ಮೈಸೂರು, ೩–೨–೧೯೬೬

ಚಿ॥ ನಾಗಭೂಷಣನಿಗೆ

ಮೊದಲು "ತೋಳದ" – ಅಲ್ಲ ನನ್ನ ತೋಳಿನ – ವಿಷಯ. ಡಾ॥ ರೈ – ಅಸ್ಥಿರೋಗಗಳ ತಜ್ಞರು – ಇವರನ್ನು ನೋಡುವಂತೆ ಡಾ॥ ಸೂರ್ಯನಾರಾಯಣರಾಯರು ಸಲಹೆ ಮಾಡಿದ್ದರು. ಅದಕ್ಕೆ ಸರಿಯಾಗಿ ಡಾ॥ ರೈ ಅವರೇ ಕೆಲವು ದಿನಗಳ ಕೆಳಗೆ ನನ್ನನ್ನು ಹುಡುಕಿಕೊಂಡು ಬಂದರು – ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವದಂದು ಮುಖ್ಯ ಅತಿಥಿಯಾಗಿ ಬರಬೇಕೆಂದು ಕರೆಯುವ ಸಲುವಾಗಿ. ಉತ್ಸವ ೨೭/೨ ರಂದು ನಡೆಯಿತು. ಅವರನ್ನು ಕಾಣಲು ನಾನು ರೋಗಿಯಾಗಿ ೧/೩ ರ ಸಂಜೆ ಹೋಗಿದ್ದೆ. ಇನ್‌ಜೆಕ್ಷನ್ ಕೊಡುತ್ತಾರಂತೆ. ಇದನ್ನು ಆಸ್ಪತ್ರೆಯಲ್ಲೇ ತೆಗೆದುಕೊಳ್ಳಬೇಕು. ಇದೇ ೫ರಿಂದ ೧೦ ಪೂರ್ತಿ

History of Kannada Language ಸೆಮಿನಾರ್ ನಡೆಯುತ್ತದೆ. ಅದರಲ್ಲಿ ಪ್ರತಿದಿನವೂ ನಾನೂ ಉಪನ್ಯಾಸ ಕೊಡಬೇಕು. ಆದಕಾರಣ ೧೦ನೆಯ ತಾರೀಖು ಆದಬಳಿಕ ಇನ್‌ಜೆಕ್ಷನ್‌ಗಾಗಿ ಬರುತ್ತೇನೆ ಎಂದು ಅವರಿಗೆ ಹೇಳಿದೆ. ಸದ್ಯಕ್ಕೆ ನೋವನ್ನು ಉಪಶಮನ ಮಾಡಲು ಮಾತ್ರೆಗಳನ್ನು ಕೊಟ್ಟಿದ್ದಾರೆ; ದಿವಸಕ್ಕೆ ಮೂರನ್ನು ತೆಗೆದುಕೊಳ್ಳಬೇಕು. (ಅಂತೂ ನನ್ನ ಶರೀರ Medicine chest ಆಗುತ್ತಿದೆ!) ಈ ಮಾತ್ರೆಗಳ ಪ್ರಯೋಜನವೆಂದರೆ ಜೂಗರಿಕೆ ಹೆಚ್ಚಾಗಿದೆ; ನೋವು ಆಗಾಗ ಕಾಣಿಸಿಕೊಳ್ಳುತ್ತದೆ..... ಆತಂಕಕ್ಕೇನೂ ಕಾರಣವಿಲ್ಲ.

ಈ ಟರ್ಮಿನಲ್ಲಿ ನಿನ್ನ ಪಾಠಗಳ ಕೋಟಲೆ ಹೆಚ್ಚಾಗಿದೆ ಎಂದು ವ್ಯಕ್ತವಾಯಿತು; ಬಿಸಿಲೂ ಈಗಾಗಲೆ ಅಲ್ಲಿ ಹೆಚ್ಚುತ್ತಿರಬಹುದು. ಪ್ರೊಫೆಸರ್‌ಗಳು ಒಳ್ಳೆಯವರು. ಪಾಠ ತೆಗೆದುಕೊಳ್ಳುತ್ತಿದ್ದಾರೆ ಎಂದು ಬರೆದಿದ್ದೀಯೆ. ಈ ಕಾರಣದಿಂದ ಪಾಠದ ಕ್ಲೇಶ ಹಗುರವಾಗಬಹುದು.

ಹೆಚ್ಚಾಗಿ ಏನನ್ನು ಬರೆಯಲೂ ತೋರುತ್ತಿಲ್ಲ.

* * *

ಮೈಸೂರು, ೭-೪-೧೯೬೭

ಚಿ॥ ನಾಗಭೂಷಣನಿಗೆ

ನಾನು ನಿನ್ನೆಯ ರಾತ್ರಿ ಆಕಾಶವಾಣಿಯ ಸುದ್ದಿಯನ್ನು ಕೇಳಿದೆ, ಈ ಬೆಳಗಿನ ಸುದ್ದಿ ಪತ್ರಿಕೆ ಇವನ್ನು ಗಮನಿಸಿದೆ. ಕಲ್ಕತ್ತಾದಲ್ಲಿ ಹರತಾಳ ಒಟ್ಟಿನ ಮೇಲೆ ಶಾಂತ ರೀತಿಯಲ್ಲಿ ನಡೆಯಿತೆಂದೂ, ಈ ಬೆಳಗ್ಗೆನೇ ಮುಕ್ತಾಯಗೊಳ್ಳುವುದೆಂದೂ ತಿಳಿದು ಸಮಾಧಾನವಾಯಿತು. ಹಾಗಾದರೆ ಹಳೆಯ ಪಾಠಗಳನ್ನು ಓದಿಕೊಳ್ಳಲು ನಿನಗೆ ದೊರೆತದ್ದು ಒಂದೇ ದಿನ! ಇಂದಿನಿಂದ ಪಾಠಗಳು ಮತ್ತೆ ನಡೆಯುತ್ತವೆ! .... ನಿಮಗೆ ಈ ಬಾರಿ vacation ಯಾವಾಗ ಪ್ರಾರಂಭ ವಾಗುತ್ತದೆ? ಆಗ ಎಲ್ಲಿ ಯಾವ ಕಂಪನಿಯಲ್ಲಿ ನೀನು ಎಷ್ಟು ದಿನ ಕೆಲಸ ಮಾಡಬೇಕು ಎಂಬುದು ಏನಾದರೂ ಗೊತ್ತಾಯಿತೆ?

ಒಂದು ಸಂತೋಷದ ಸುದ್ದಿ. ನಾನು ಪ್ರೊಫೆಸರ್ ಆಗಿ ಯು.ಜಿ.ಸಿ ದರ್ಜೆಯ ಸಂಬಳದ ಮೇಲೆ ನೇಮಕವಾದಾಗ, ೧೦೦೦ ರೂ. ಸಂಬಳದಿಂದ ಪ್ರಾರಂಭಿಸಬೇಕು ಎಂದು ಸಮಿತಿ ಯವರು ಶಿಫಾರಸು ಮಾಡಿರಲಿಲ್ಲವೆ, ಅದು ಮಂಜೂರಾಗಿ ಬಂದಿದೆ. ಆ ಸಂಬಂಧದ ಪತ್ರ ಈ ಬೆಳಗ್ಗೆ ತಾನೆ ಬಂದಿತು. ೭-೪-೬೦ ರಿಂದ ೩೧-೩-೬೬ರ ಅವಧಿಗೆ ಇದು ಅನ್ವಯಿಸುತ್ತದೆ. ಈ ಸಂಬಂಧದಲ್ಲಿ ಬಾಕಿ ಹಣ ಎಷ್ಟು ನನಗೆ ಬರತಕ್ಕದ್ದು ಎಂಬುದರ ಲೆಕ್ಕಾಚಾರವಾಗಬೇಕು. ಸುಮಾರು ೩೩೮೦ರೂ ಬರಬಹುದು. ಸರಿಯಾಗಿ ಲೆಕ್ಕ ಮಾಡಿ ನೋಡಬೇಕು. ಅದಕ್ಕೆ ತಕ್ಕಂತೆ ಆದಾಯದ ತೆರಿಗೆಯನ್ನು ಕಟ್ಟಬೇಕು!

* * *

ಮೈಸೂರು, ೨೮-೪-೧೯೬೬

ಚಿ॥ ನಾಗಭೂಷಣನಿಗೆ

ನಾನು ೨೧ನೆಯ ತಾ॥ ಮಧ್ಯಾಹ್ನದ ಮೇಲೆ ಮೇಲ್‌ಗಾಡಿಯಲ್ಲಿ ಬೆಂಗಳೂರಿಗೆ ಹೋಗಿ ೨೫ನೆಯ ಬೆಳಗಿನ ಗಾಡಿಯಲ್ಲಿ ಇಲ್ಲಿಗೆ ಹಿಂದಿರುಗಿದೆನು. ನಾನು ಬರುವ ವೇಳೆಗೆ ನಿನ್ನ ಕಾಗದ ಬಂದಿತ್ತು.

೨೪ರಂದು ಪು.ತಿ.ನ. ಅವರ ಮಗಳ ಮದುವೆ. ಬೆಳಗ್ಗೆ ಅಲ್ಲಿಗೆ ಹೋಗಿ ಸಂಜೆಯವರೆಗೂ ಇದ್ದೆ. ಶಿವರಾಮಶಾಸ್ತ್ರಿಗಳು, ಗೊರೂರ್ ಇವರೆಲ್ಲ ಜೊತೆಗೆ ಸಿಕ್ಕಿದ್ದರು. ರಾತ್ರಿ ದೊರೆಸ್ವಾಮಿ ಅಯ್ಯಂಗಾರರ ವೀಣೆ ಇತ್ತು. ಮದುವೆ ಚೆನ್ನಾಗಿ ನಡೆಯಿತು. ನರಸಿಂಹಾಚಾರ್ಯರ ಹೆಂಡತಿಯವರ ಮುಖದಲ್ಲಿ ಗೆಲುವು ಕಾಣಿಸುತ್ತಿತ್ತು.

ನನ್ನ ಆರೋಗ್ಯ ಎಂದಿನಂತೆ ಇದೆ. ಈ ಬಾರಿ ನಾನು ಬೆಂಗಳೂರಿಗೆ ಹೋಗಿದ್ದಾಗ ಶ್ರೀ ರಾಜರತ್ನಂ ಸಿಕ್ಕಿದ್ದರು. ಅವರ ಸಲಹೆಯಂತೆ Rumalaya ಎಂಬ ಮುಲಾಮನ್ನು ಕೊಂಡು ತಂದಿದ್ದೇನೆ. ಪ್ರತಿದಿನವೂ ತಿಕ್ಕಿಸಿಕೊಳ್ಳುತ್ತಿದ್ದೇನೆ; ಕಾಲಕ್ರಮದಲ್ಲಿ ಪ್ರಯೋಜನ ಆದೀತೋ ಏನೋ ನೋಡಬೇಕು. (ಈ ಮುಲಾಮನ್ನು ಕೆ.ವಿ. ಅಯ್ಯರ್ ಅವರು ಶಿಫಾರಸು ಮಾಡುತ್ತಾರಂತೆ!)

ನಾನು ೨೫ರಂದು ಮನೆಗೆ ಬಂದಾಗ ನಿಮ್ಮ ತಾಯಿ ಜ್ವರ ಬಂದು ಹಾಸಿಗೆಯಲ್ಲಿ ಮಲಗಿದ್ದಳು. ಶ್ರೀಮತಿ ಸರೋಜಮ್ಮನವರು ಬಂದು ಅಡಿಗೆ ಮಾಡುತ್ತಿದ್ದರು. ಆ ದಿನ ರಾತ್ರಿ ಜ್ವರ ಬಿಟ್ಟಿತು. ಮೊನ್ನೆ ನಿನ್ನೆ ಅದು ಹೇಗೆ ನಿಮ್ಮ ತಾಯಿ ಸುಮ್ಮನೆ ಕೂತಿದ್ದಳೋ ಕಾಣೆ. ಈ ದಿನ ಬೆಳಗಿನಿಂದ ಅಡಿಗೆಯ ಕೆಲಸ ಮೊದಲುಗೊಂಡು ತನ್ನ ನಿತ್ಯ ಕ್ರಮವನ್ನು ಕೈಗೊಂಡಿದ್ದಾಳೆ. ಆರೋಗ್ಯವಾಗಿದ್ದೇನೆ; ಸ್ವಲ್ಪ ನಿಶ್ಶಕ್ತಿ ಮಾತ್ರ ಇದೆ ಎನ್ನುತ್ತಾಳೆ (ಅದು ನಿಜವೆಂದೂ ಕಾಣುತ್ತದೆ!) ಅವಳಿಗೆ ಬಂದಿದ್ದದ್ದೂ ಫ್ಲೂ ಅಷ್ಟೆ. ಜ್ವರ ಬಿಟ್ಟು ಆಗಲೆ ಮೂರುದಿನ ಆಯಿತು. ಯಾವ ಆತಂಕಕ್ಕೂ ಕಾರಣವಿಲ್ಲ.

* * *

ಮೈಸೂರು, ೨೨-೬-೧೯೬೬

ಚಿ॥ ನಾಗಭೂಷಣನಿಗೆ

ಬರೆಯಲು ಹೆಚ್ಚಿನ ವಿಷಯವೇನೂ ಇಲ್ಲ. ನಿನ್ನ ೧೯/೬ ರ ಕಾಗದದಿಂದ ಅಲ್ಲಿಯ ಎಲ್ಲ ವಿವರಗಳನ್ನೂ ತಿಳಿದು ಮನಸ್ಸಿಗೆ ಎಷ್ಟೋ ಸಮಾಧಾನವಾಗಿದೆ. ಅಣ್ಣ ತುಂಬ "Fussy" ಎಂದು ನೀನೂ, ಚಿ॥ ಚಂದ್ರಶೇಖರನೂ ಭಾವಿಸುತ್ತೀರೋ ಏನೋ! ಹಾಗೆ ಭಾವಿಸಿದರೂ ಚಿಂತೆಯಿಲ್ಲ. ಎರಡು ಮೂರುದಿನ ಅದರಲ್ಲೂ ಸೋಮವಾರ ರಾತ್ರಿಯ ಆಕಾಶವಾಣಿಯಲ್ಲಿ ರೈಲ್ವೆ ಅಪಘಾತದ ವಿಷಯವನ್ನು ಕೇಳಿದಾಗಿನಿಂದ ಮಂಗಳವಾರ ಬೆಳಗ್ಗೆ, Indian Express, Hindu ಗಳಲ್ಲಿ, ಅಪಘಾತ ಬೆಳಗ್ಗೆ ೬.೫೫ಕ್ಕೆ ಜರುಗಿತೆಂದು ಓದುವವರೆಗೆ ಮನಸ್ಸು ತಳಮಳದಲ್ಲಿ

ಇದ್ದದ್ದೇ ನಿಜ. ('ಪ್ರಜಾವಾಣಿ'ಯಲ್ಲಿ 'ಸೋಮವಾರ ಬೆಳಗ್ಗೆ' ಎಂದು ಬರೆದಿತ್ತೇ ಹೊರತು ವೇಳೆಯನ್ನೇ ತಿಳಿಸಿರಲಿಲ್ಲ. ಇಷ್ಟು ಚೆನ್ನಾಗಿದೆ ಕನ್ನಡದ ಪತ್ರಿಕೋದ್ಯಮ!)–ನನ್ನ ತಂತಿ ಇದುವರೆಗೂ ಏಕೆ ತಲಪಲಿಲ್ಲವೋ ಬೊಂಬಾಯಿಗೆ! ಹೀಗಾದರೆ ಏನು ಗತಿ!

(TELEGRAM ಎಂಬುದು ಸರಿಯಾದ ಕಾಗುಣಿತ; TELEGRAMME ಅಲ್ಲ – The schoolmaster in me cannot be suppressed!)

ಅಜ್ಮೇರ್ ಬಳಿ ಇನ್ನೊಂದು ಅಪಘಾತವಾದ ಸುದ್ದಿ ಕೆಲವು ದಿನಗಳ ಕೆಳಗೆ ಬಂದಿತು. ಮೂರು ದಿನಗಳ ಕೆಳಗೆ ಮಂಡ್ಯದ ಬಳಿ ಒಂದು Goods ಗಾಡಿ ಉರುಳಿತು!..... ಈ ಅಪಘಾತ ಪರಂಪರೆಯಲ್ಲಿ ಅಪಮೌಲ್ಯವನ್ನು ಕುರಿತು ಏನನ್ನು ಬರೆಯಲೂ ತೋರಲೇ ಇಲ್ಲ. ಈಗಲೂ 'ಅಪ್ರವೀಣ'ರಾದ ನನ್ನಂಥವರಿಗೆ ಏನೂ ಅರ್ಥವಾಗುತ್ತಿಲ್ಲ. ಬೆಲೆಗಳು ಏರುತ್ತಲೇ ಇವೆ. ಪುಸ್ತಕ ವ್ಯಾಪಾರಿಗಳೂ ಪುಸ್ತಕಕೊಳ್ಳುವವರೂ ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ! – ಅಪಮೌಲ್ಯವೊಂದೇ ನಮ್ಮ ಆರ್ಥಿಕ ವ್ಯಾಧಿಗೆ ಔಷಧ ಎಂದು ನೀನು ಹೇಳುತ್ತಿದ್ದೆ, ನಿಮ್ಮ ಗುರುಗಳನ್ನು ಅನುಸರಿಸಿ, ಅಲ್ಲವೇ? ಈಗ ಏನು ಹೇಳುತ್ತೀರಿ!

ತೀ.ನಂ.ಶ್ರೀ. – ಪು.ತಿ.ನ.

●

ತೀ.ನಂ.ಶ್ರೀ. ಮತ್ತು ಪು.ತಿ.ನ ಅವರದು ಸುಮಧುರವಾದ ತುಂಬಾ ಉಪಯುಕ್ತವಾದ ಮತ್ತು ಬಹು ವಿರಳವಾದ ಆತ್ಮೀಯ ಸ್ನೇಹ. ಅದು ಒಂದು ಭಾಷೆಯಲ್ಲಿ ಒಬ್ಬ ಶ್ರೇಷ್ಠ ವಿದ್ವಾಂಸ ಹಾಗೂ ಸಹೃದಯ ವಿಮರ್ಶಕ ಮತ್ತು ಒಬ್ಬ ಶ್ರೇಷ್ಠ ಕವಿಯ ನಡುವೆ ಇದ್ದ ಅತೀವ ಸ್ಪಂದಿಸುವ ಮತ್ತು ತೀವ್ರವಾದ ಸ್ನೇಹ. ಈ ರೀತಿಯ ಸ್ನೇಹ ಪ್ರಪಂಚದ ಯಾವ ಭಾಷೆಯಲ್ಲಿಯೂ ಇದ್ದಿರಲಾರದು ಎಂದು ಪು.ತಿ.ನ. ಅವರ ಭಾವನೆ. ತೀ.ನಂ.ಶ್ರೀ., ಪು.ತಿ.ನ. ಮತ್ತು ನಂ. ಶಿವರಾಮಶಾಸ್ತ್ರಿ ಅವರುಗಳು ಬಿ.ಎ. ತರಗತಿಯಲ್ಲಿ ಮೂರು ವರ್ಷಗಳು (ಆ ಕಾಲದಲ್ಲಿ ಬಿ.ಎ. ಕಾಲಾವಧಿ ಮೂರು ವರ್ಷ) ಮಹಾರಾಜ ಕಾಲೇಜಿನಲ್ಲಿ ಸಹಪಾಠಿಗಳು, ಮತ್ತು ಆಪ್ತ ಸ್ನೇಹಿತರು. ಈ ಸ್ನೇಹಿತರುಗಳ ವಾತಾವರಣದಲ್ಲಿ ನಾನು ಸಾವಿರ ವರ್ಷಗಳ ಕಾಲ ಬೇಕಾದರೂ ಬದುಕಿರಬಲ್ಲೆ ಎಂದು ಪು.ತಿ.ನ. ನನ್ನೊಡನೆ ಒಮ್ಮೆ ಹೇಳಿದ್ದರು.

ಪು.ತಿ.ನ. ಅವರಿಗೆ ೧೯೨೦ರಿಂದ ೧೯೬೬ರ ವರೆಗೆ ಸುಮಾರು ೪೦ ವರ್ಷಗಳ ಕಾಲ ತೀ.ನಂ.ಶ್ರೀ.ಯವರು ಬರೆದ ಅನೇಕ ಪತ್ರಗಳು ನನಗೆ ದೊರೆಕಿವೆ. ೧೯೪೩ರಿಂದ ೫೨ರ ವರೆಗೆ ತೀ.ನಂ.ಶ್ರೀ.ಯವರೂ ಬೆಂಗಳೂರಿನಲ್ಲೆ ನೆಲೆಸಿದ್ದು, ಪು.ತಿ.ನ. ಅವರೂ ಬೆಂಗಳೂರಿನಲ್ಲೇ ಇದ್ದು, ಅವರು ಆಗಾಗ ಮುಖತಃ ಭೇಟಿ ಮಾಡುತ್ತಿದ್ದುದರಿಂದ ಈ ಕಾಲಾವಧಿಯಲ್ಲಿ ಅವರ ನಡುವೆ ಅಷ್ಟೊಂದು ಪತ್ರವ್ಯವಹಾರ ನಡೆದಿಲ್ಲ. (ಮಧ್ಯದಲ್ಲಿ ಕೆಲವು ತಿಂಗಳು ಕಾಲ ತೀ.ನಂ.ಶ್ರೀ. ದಾವಣಗೆರೆ ಮತ್ತು ಕೋಲಾರದಲ್ಲಿದ್ದಾಗ ಬಿಟ್ಟರೆ.) ಆದರೆ ಪು.ತಿ.ನ. ಅವರು ತೀ.ನಂ.ಶ್ರೀ. ಅವರಿಗೆ ಬರೆದ ಕಾಗದ ನನಗೆ ಹೆಚ್ಚು ದೊರಕಿಲ್ಲ. ಅವುಗಳನ್ನು ನಮ್ಮ ತಂದೆಯವರು ಸಂರಕ್ಷಿಸಿದ್ದುದು ನನಗೆ ನೆನಪಿದ್ದರೂ ಅವುಗಳನ್ನು ಪು.ತಿ.ನ. ಅವರು 'ಶ್ರೀಕಂಠತೀರ್ಥ' ಗ್ರಂಥಕ್ಕೆ ತೀ.ನಂ.ಶ್ರೀ.ಯವರ ಬಗ್ಗೆ ಲೇಖನ ಬರೆಯುವಾಗ ಅವರಿಗೆ ತಲುಪಿಸಿ ಮತ್ತೆ ಅವು ನನಗೆ ಹಿಂದಕ್ಕೆ ಬರಲಿಲ್ಲವೆಂದು ಅನಿಸುತ್ತದೆ. ಏನೇ ಇರಲಿ ಪು.ತಿ.ನ. ಅವರು ಪತ್ರಗಳಲ್ಲಿ ಏನು ವಿಷಯ ಬರೆದಿರಬಹುದೆಂದು, ತೀ.ನಂ.ಶ್ರೀ.ಯವರ ಪತ್ರಗಳಲ್ಲಿ ವ್ಯಕ್ತಪಡಿಸಿದ ಪ್ರತಿಕ್ರಿಯೆ ಗಳಿಂದ ಊಹಿಸಬಹುದಾಗಿದೆ. ಪು.ತಿ.ನ. ಅವರ ದೊರಕಿದ ಕೆಲವು ಪತ್ರಗಳನ್ನು ಇಲ್ಲಿ ಸೇರಿಸಲಾಗಿದೆ. ತೀ.ನಂ.ಶ್ರೀ.ಯವರು ವಿದೇಶದಲ್ಲಿದ್ದಾಗ ಇವರ ನಡುವಿನ ಪತ್ರ ವ್ಯವಹಾರ ವನ್ನು ಸಂದರ್ಭೋಚಿತವಾಗಿ ಆ ಭಾಗದಲ್ಲಿ ಸೇರಿಸಲಾಗಿದೆ. (ಪು.ತಿ.ನ. ಅವರ ಈ ಪತ್ರಗಳೂ ಹೇಗಾದರೂ ದೊರಕಿ ಅವು ಸಹೃದಯರ ಗಮನಕ್ಕೆ ಬರುತ್ತದೆಂದು ಆಶಿಸುತ್ತೇನೆ.)

ತೀ.ನಂ.ಶ್ರೀ.ಯವರು ಪು.ತಿ.ನ. ಅವರ ಬಗ್ಗೆ ಸಿದ್ಧಪಡಿಸಿದ್ದ ಒಂದು ಟಿಪ್ಪಣಿಯನ್ನು ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಿಗೆ ಕಳಿಸಿದ್ದರು. ಈ ಟಿಪ್ಪಣಿಯನ್ನೂ ಇಲ್ಲಿ ಸೇರಿಸಲಾಗಿದೆ. ಇಲ್ಲಿಯ ಪತ್ರಗಳಿಗೆ ಸಾಂದರ್ಭಿಕವಾಗಿ ಅತಿ ಅವಶ್ಯಕವೆನಿಸಿದ ಹೊರತು ಯಾವ ವಿವರಣೆ ಮತ್ತು ಟಿಪ್ಪಣಿಗಳನ್ನು ಇಲ್ಲಿ ಕೊಟ್ಟಿಲ್ಲ. ತೀ.ನಂ.ಶ್ರೀ. ಮತ್ತು ಪು.ತಿ.ನ. ಅವರ ನಡುವಿನ ಮಧುರವಾದ ಸ್ನೇಹ, ನಿಷ್ಕಲ್ಮಶವಾದ ಪ್ರೀತಿ, ಪರಸ್ಪರ ಗೌರವ ಮತ್ತು ಪ್ರಭಾವಗಳು ಪತ್ರಗಳ ಮೂಲಕವೇ ವ್ಯಕ್ತವಾಗುತ್ತವೆ. ಮತ್ತು ಅವರಿಬ್ಬರೂ ತಮ್ಮ ಜೀವನದಲ್ಲಿ ಸ್ನೇಹಕ್ಕೆ ಕೊಟ್ಟಿದ್ದ ಅದ್ವಿತೀಯ ಸ್ಥಾನವನ್ನು ಇದು ತೋರಿಸುತ್ತದೆ. ಅವರಿಬ್ಬರ ನಡುವೆ ಗೌಪ್ಯವಾಗಿಡುವಂತಹ ಯಾವ ವಿಷಯವೂ ಇದ್ದಂತೆ ಕಾಣಲಿಲ್ಲ. ಎಲ್ಲವೂ ಬಹಳ ನೇರವಾದ ಚರ್ಚೆಗಳು, ಮಾತುಕತೆಗಳು. ಪತ್ರವ್ಯವಹಾರದ ಈ ಸ್ವಾರಸ್ಯವನ್ನು ಅನುಭವಿಸಲು ಬೇರೆ ಯಾವ ವಿವರಣೆಯ ಸಹಾಯವೂ ಬೇಕಿಲ್ಲವೆಂದು ನನ್ನ ಭಾವನೆ. ಅಥವಾ ಹೆಚ್ಚಿನ ವಿವರಣೆ ಈ ಪತ್ರ ವ್ಯವಹಾರದ ಸೊಗಡನ್ನು ಆಸ್ವಾದಿಸಲು ಅಡ್ಡಿಯಾಗಲೂಬಹುದು! ಓದುಗರ ಮನಸ್ಸಿನಲ್ಲಿ ಉದ್ಭವಿಸಬಹುದಾದ ಕೆಲವು ಪ್ರಶ್ನೆ ಮತ್ತು ಸಂದೇಹಗಳಿಗೆ ಪತ್ರಗಳಲ್ಲಿಯೇ ಉತ್ತರ ದೊರಕುತ್ತದೆಂದು ನನ್ನ ನಂಬಿಕೆ.

ಈ ಪತ್ರ ವ್ಯವಹಾರವನ್ನು 'ಪತ್ರ ಸಾಹಿತ್ಯ'ವೆಂದು ಕರೆಯಬಹುದೋ, ಅಥವಾ ಇವು 'ಸಾಹಿತ್ಯ ಪತ್ರ'ಗಳೋ?

ಪು.ತಿ.ನ. ಅವರಿಗೆ ತಮ್ಮ ಪ್ರೀತಿಯ ಸ್ನೇಹಿತ ತೀ.ನಂ.ಶ್ರೀ.ಯವರ ಅಭಿವೃದ್ಧಿ, ಆರೋಗ್ಯ ಮತ್ತು ಸಂಸಾರದವರ ಬಗ್ಗೆ ಸದಾ ಯೋಚನೆ ಮತ್ತು ಕಾಳಜಿ. ತೀ.ನಂ.ಶ್ರೀ.ಯವರು ತಮ್ಮನ್ನು ಮೀರಿ ಬದುಕಬೇಕೆಂದು ಪು.ತಿ.ನ. ಅವರ ಆಶಯ: ತೀ.ನಂ.ಶ್ರೀ.ಯವರು ನಿಧನರಾದ ದಿನ ಸಂಜೆಯೇ ಗೋಕುಲಾಷ್ಟಮಿ. (ತೀ.ನಂ.ಶ್ರೀ. ಅವರು ನಿಧನರಾದುದು ಶ್ರಾವಣ ಬಹುಳ ಸಪ್ತಮಿಯಂದು.) ಅಂದು ಆ ಸುದ್ದಿ ಬೆಂಗಳೂರಿನಲ್ಲಿ ತಿಳಿದಾಗ, ಪು.ತಿ.ನ. ಹೇಗಾದರೂ ಆ ಸಂಜೆಯ ವೇಳೆಗೆ ಕಲ್ಕತ್ತೆಯನ್ನು ಸೇರಬೇಕೆಂದು ಪ್ರಯತ್ನ ಪಟ್ಟರು. ಆದರೆ ಅದು ಸಾಧ್ಯವಾಗಲಿಲ್ಲ. ಪು.ತಿ.ನ. ಅವರಿಗೆ ಶ್ರೀಕೃಷ್ಣನಲ್ಲಿ ಅಪಾರ ಭಕ್ತಿ. ಅವರು ತಮ್ಮ ಜೀವಮಾನದಲ್ಲಿ ಎಂದೂ ಶ್ರೀಕೃಷ್ಣನ ಪೂಜೆಯನ್ನು ತಪ್ಪಿಸಿದವರಲ್ಲ. ಅಂದು ಅವರನ್ನು ಭೇಟಿ ಮಾಡಿದವರೊಬ್ಬರು ಇಂದು ಸಂಜೆ ಗೋಕುಲಾಷ್ಟಮಿಯ ಪೂಜೆಯಲ್ಲವೇ ಎಂದು ನೆನಪಿಸಿದಾಗ "ನನ್ನ ಪರಮ ಸ್ನೇಹಿತನನ್ನು ಕಸಿದುಕೊಂಡ ಆ ಕೃಷ್ಣನನ್ನು ನಾನು ಇನ್ನೇಕೆ ಪೂಜೆ ಮಾಡಬೇಕು?" ಎಂದು ಪ್ರತಿಕ್ರಿಯಿಸಿದರಂತೆ! ಆ ಅಗಲಿಕೆಯಿಂದ ಪು.ತಿ.ನ. ಚೇತರಿಸಿಕೊಳ್ಳಲೇ ಇಲ್ಲ. ಮುಂದೆ ಅವರ ಜೀವಿತಕಾಲದಲ್ಲಿ ತೀ.ನಂ.ಶ್ರೀ. ಇಲ್ಲದಿದ್ದರೂ ನಾನು ಮತ್ತು ನನ್ನ ಪತ್ನಿ ಅವರನ್ನು ಸದಾ ಹೋಗಿ ಭೇಟಿ ಮಾಡುತ್ತಲೇ ಇರಬೇಕು. ಅವರು ನನ್ನಲ್ಲಿ ತಮ್ಮ ಅಗಲಿದ ಪ್ರೀತಿಯ ಸ್ನೇಹಿತನನ್ನು ನೋಡಲು ಪ್ರಯತ್ನಿಸಿದರು. ಅನಂತರವೂ ನಮ್ಮ ಸಂಸಾರದ ಮತ್ತು ನಮ್ಮ ಅಭಿವೃದ್ಧಿಯ ಬಗ್ಗೆಯ ನಿರಂತರವಾದ ಕಾಳಜಿ. 'ಶ್ರೀಕಂಠತೀರ್ಥ' ಪ್ರಕಟವಾದಾಗ ಅವರಿಗಾದ ಸಂತೋಷ ಹೇಳತೀರದು. ತೀ.ನಂ.ಶ್ರೀ.ಯ ಪುತ್ಥಳಿ ಪ್ರತಿಷ್ಠಾಪನೆ ವಿಷಯ ತಿಳಿದು ತುಂಬಾ ಪುಳಕಿತರಾಗಿದ್ದರು.

ಆದರೆ ತಮ್ಮ ಸ್ನೇಹಿತನ ಪುತ್ಥಳಿಯ ಅನಾವರಣದ ಒಂದು ತಿಂಗಳ ಮೊದಲು ಇಹಲೋಕ ತ್ಯಜಿಸಿದರು! ತೀ.ನಂ.ಶ್ರೀ. ಮತ್ತು ಪು.ತಿ.ನ. ಒಬ್ಬರೊಬ್ಬನ್ನೊಬ್ಬರು ನೆನೆಯದ ದಿನವೇ ಇಲ್ಲ.

ಪು.ತಿ.ನ. ಅವರು ತಮ್ಮ ಕವನ ಸಂಕಲನ 'ಹಣತೆಯ' ಅರಿಕೆಯಲ್ಲಿ ನಿರೂಪಿಸಿದಂತೆ ಅವರ ಕವಿತೆಗಳಿಗೆ ನೀರೆರೆದು ಬೆಳೆಸಿದವರು ತೀ.ನಂ.ಶ್ರೀ.ಯವರು. ತೀ.ನಂ.ಶ್ರೀ.ಯವರು ಅವರ ಕವಿತೆಗಳ 'ಸಾಕುತಾಯಿ'. ತಮ್ಮ ಸ್ನೇಹಿತನ ಬಗ್ಗೆ ಪು.ತಿ.ನ. ಅವರಿಗೆ ಅಪಾರ ಅಭಿಮಾನ ಮತ್ತು ಗೌರವ. ಆದ್ದರಿಂದ ಈ ಪತ್ರಗಳಲ್ಲೂ ಪು.ತಿ.ನ. ಅವರ ಕವಿತೆಗಳ ಬಗ್ಗೆಯೇ ಸಾಕಷ್ಟು ಚರ್ಚೆ ಕಂಡುಬರುತ್ತದೆ. ಇದರ ಚಾರಿತ್ರಿಕ ಮಹತ್ವವನ್ನು ಅರಿತು ಈ ಪತ್ರಗಳನ್ನು ಇಲ್ಲಿ ದೀರ್ಘವಾಗಿಯೇ ಕೊಡಲಾಗಿದೆ.

ಮೈಸೂರು, ೭-೪-೧೯೬೬

ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಎಸ್.ನಿಜಲಿಂಗಪ್ಪನವರಲ್ಲಿ ಸವಿನಯ ವಿಜ್ಞಾಪನೆಗಳು.

ಮಾನ್ಯರೆ,

ತಮ್ಮನ್ನು ಮಾರ್ಚ್ ೨೮ರಂದು ನಾನು ಭೇಟಿ ಮಾಡಿದಾಗ ತಿಳಿಸಿದ್ದ ಮೇರೆಗೆ, ಶ್ರೀ ಪು.ತಿ.ನರಸಿಂಹಾಚಾರ್ಯರನ್ನು ಕುರಿತು ಸ್ವಲ್ಪ ಕಾಲದ ಹಿಂದೆ ನಾನು ಸಿದ್ಧಪಡಿಸಿದ್ದ ಟಿಪ್ಪಣಿಯನ್ನು ಇದರೊಡನೆ ಕಳಿಸಿದ್ದೇನೆ. ಅವರ ಬರವಣಿಗೆಯ ವಿಸ್ತಾರ ವೈವಿಧ್ಯಗಳು, ಸಾಹಿತ್ಯ ಸಂಗೀತ ಕ್ಷೇತ್ರಗಳೆರಡರಲ್ಲೂ ಅವರ ಪ್ರತಿಭೆ ಒಂದೇ ರೀತಿಯಾಗಿ ಹರಿದು ಉನ್ನತವೂ ಜನಪ್ರಿಯವೂ ಆಗಿರುವ ಅನೇಕ ಕೃತಿಗಳನ್ನು ಅವರು ರಚಿಸಿರುವ ವಿಷಯ – ಇದನ್ನೆಲ್ಲ ಈ ಟಿಪ್ಪಣಿ ಕೆಲವು ಮಟ್ಟಿಗೆ ಸೂಚಿಸುವುದೆಂದು ನಂಬುತ್ತೇನೆ.

ಶ್ರೀ ನರಸಿಂಹಾಚಾರ್ಯರು ಮೈಸೂರು ರಾಜ್ಯದ ವಿಧಾನಮಂಡಲದಲ್ಲಿ 'ಚರ್ಚೆಗಳ ಸಂಪಾದಕ' (Editor of Debates) ಆಗಿದ್ದು ನಿವೃತ್ತಿ ಹೊಂದಿದ ಬಳಿಕ, ಸದ್ಯದಲ್ಲಿ ಕನ್ನಡ ವಿಶ್ವಕೋಶದ ಕಚೇರಿಯಲ್ಲಿ ಭಾಷಾಂತರಕಾರರಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕಳೆದ ಮಾರ್ಚ್ ೧೭ಕ್ಕೇ ಅರುವತ್ತು ವರ್ಷಗಳು ತುಂಬಿದವು.

ಕನ್ನಡ ಸಾರಸ್ವತ ಪ್ರಪಂಚದಲ್ಲಿ ಅವರು ಪಡೆದಿರುವ ಉನ್ನತ ಸ್ಥಾನಕ್ಕೆ ಅನುಗುಣವಾಗಿ ಅವರಿಗೆ ಸನ್ಮಾನ ಪುರಸ್ಕಾರಗಳು ದೊರೆಯಲೆಂದು ನನ್ನ ಮತ್ತು ನನ್ನಂಥ ಹಲವರ ಹಾರೈಕೆ.

ಇಂತಿ ಸವಿನಯ ವಿಜ್ಞಾಪನೆಗಳು
ತೀ.ನಂ.ಶ್ರೀಕಂಠಯ್ಯ

*

A note on Sri P.T. Narasimhachar and his works

Sri P.T. Narasimhachar was born at Melkote, Mandya District, on the 17th March 1905. Melkote is an important religious centre, sacred to the followers of Ramanujacharya. Narasimhachar, the son of an orthodox scholar, grew up in the shadow, so to say, of the celebrated temple there, fascinated by its processions and festivals, its rituals and music. Melkote is situated on a small hil!; its peaks and valleys, its rivulets, tanks and groves had a considerable part in shaping the mind of the future poet.

Narasimhachar was educated first at his birth-place and later at Mysore where he entered the Maharaja's College in 1923. He took his B.A. Degree is 1926 with English, Sanskrit and Philosophy as his principal subjects of study. It must be mentioned that he was a devoted student of the late Prof. M. Hiriyanna who evinced a keen and enduring interest in the creative work of his pupil.

Though Narasimhachar did not undergo any formal instruction in Kannada at the college he began to write poetry in Kannada using modern metres even while he was a student. His poems appeared in **Kiriya Kanike,** a volume of poems dedicated to the late Prof. B.M. Srikantiah by his students in 1928. And ever since poems and other literary works have continued to flow from the pen of Narasimhachar. The following list (not exhaustive) may give an idea of the volume and variety of his writings in Kannada.*

Narasimhachar has also published some critical essays in English.

Narasimhachar is in the very front rank of modern Kannada poets. His poems, mostly lyrical, reveal an original imagination and acute observation. They are infused with rare thought and chiselled feeling. As Prof. Hiriyanna has put it in his Foreward to the collection **Mandaliru,** "Narasimhachar can give expression in unforgettable

* The list of PTN's works is given here.

words to the beauty of Nature as well as to the mystery of human life." Though the background of many of his poems is traditional, Narasimhachar is intensely aware of the implications of modern science. In a poem like his **Ganesa Darsana** giving a breath-taking vision of the cosmic dance of Siva and Parvati, we find a unique blend of both these elements. His **Maledegula** ('The Hill Temple') is a testament of the modern man's search for abiding peace. His **Rasa Sarasvati** is an Ode to the Spirit of Beauty in Nature and Art. And so on. There can be no doubt that Narasimhachar has profoundly enriched the discerning reader's experience of the subtle and the elevated in life and Art.

Narasimhachar's prose writings also reveal the same sensitive and imaginative mind as his poems. In his personal essays he has viewed many a commonplace situation from an uncommon angle. He has evolved a comprehensive theory of poetic creation and experience to which he has given expression in the several Forewards he has contributed to the publications of young Kannada writers.

Narasimhachar's plays are a class by themselves. His **Ahalye** is a powerful play dealing with the fall and the resurrection of Ahalya. His **Gokula Nirgamana** depicts in a series of haunting songs the situation where Krishna gives up his flute and the sheltered life at Brindavan and sets out to fulfil his duty to the wider world. **Vikata-Kavi Vijaya** is a keen satire dealing with the complicated Indian political scene of the forties as it menifested itself in a "native state".

The rich poetical content of Narasimhachar's plays is enhanced by the unusual musical quality of the songs which are a major and integral part of them. It must be remembered that Narasimhachar is himself a composer of note in addition to being a poet – a rare combination indeed. His **Gokula Nirgamana,** which for the first time revealed the qualities of his musical imagination to the outside world, was conceived and composed as an opera (geyanataka). Its songs are full-fledged musical compositions and many of them have

won the praise and admiration of eminent musicians like Vidwan Veena Doreswamy Iyengar. Of late, Narasimhachar has composed a number of song-plays like **Vasanta Chandana** and **Hamsa-Damayanti,** specially commissioned by the All India Radio; he has himself directed their production.

Lastly we must not forget the metrical translations of Narasimhachar, among which his close rendering of the **Bhagavadgita** deserves special mention. Very recently he completed his translation of Goethe's Faust - which he undertook at the request of the Sahitya Akademi.

A collected edition of all the eight song-plays (excluding **Gokula-Nirgamana**) with musical notations of all the songs is in the press and will come out in a few weeks.

* * *

ಮೈಸೂರು, ೬-೧೨-೧೯೨೭

ನರಸಿಂಹಾಚಾರ್ಯರ ಸಮಕ್ಷಮದಲ್ಲಿ – ಶ್ರೀಕಂಠಯ್ಯನ ನಮಸ್ಕಾರಗಳು ಉ॥ ಕು॥ ಸಾಂ॥

ನಿಮಗೆ ಈಗ ಒದಗಿರುವ ತೊಂದರೆಯನ್ನು ನೋಡಿ ನನಗೆ ಸಂಕಟವಾಗುತ್ತದೆ. ನಾನು ಏನು ಸಲಹೆಯನ್ನು ಕೊಡಬಲ್ಲೆ. ಈ ಯೋಚನೆ ಹರಿಯುವುದು ಹೇಗೆ? ನನಗೂ ಹೋದ ವರ್ಷ ಹೀಗೆಯೇ "ಮಾಡಲೋ ಬೇಡವೋ" ಎನ್ನುವ ಸಮಸ್ಯೆ ಬಿದ್ದಿತ್ತು. ನಿಮಗೆ ಹೇಳಿದ್ದೇನೆ – ನೆನಪಿರಬಹುದು. ಅದರ ಯಾತನೆಯನ್ನು ಚೆನ್ನಾಗಿ ಅನುಭವಿಸಿದ್ದೇನೆ. ಯಾವುದೋ ಒಂದು ಬಗೆಯಲ್ಲಿ ತೀರ್ಮಾನ ಮಾಡಿಬಿಡಿ. ಕಷ್ಟವೋ ಸುಖವೋ ಅನುಭವಿಸುವುದಾಗುತ್ತದೆ – "ಹೀಗೆ ಮಾಡಿ" ಎಂದು ಹೇಳುವ ಶಕ್ತಿ ನನಗಿಲ್ಲ.

ನಂಜುಂಡಯ್ಯನ* ಮತ್ತು ನನ್ನ ವಿಚಾರವಾಗಿ ನೀವು ಇಷ್ಟೊಂದು ಆತಂಕವನ್ನು ವಹಿಸಿದ್ದಕ್ಕಾಗಿ ನನಗೆ ಸಂತೋಷವಾಗುತ್ತದೆ – ಆದರೆ ನೀವು ಚಿಂತಿಸಬೇಕಾಗಿಲ್ಲ. ನಾವು ಜಗಳವಾಡುವುದು ಬಲು ಹೆಚ್ಚು. ದಿವಸಕ್ಕೆ ಒಂದು ಸಲವಾದರೂ ಮುನಿಸಿಕೊಳ್ಳದಿದ್ದರೆ ತೀರದೆಂದು ತೋರುತ್ತದೆ. ಆದರೆ ಬೇಗ ಸಮಾಧಾನವೂ ಬಂದುಬಿಡುತ್ತದೆ. ಯಾರಾದರೂ ಒಬ್ಬರು ಸೋಲಬೇಕಾಗುತ್ತದೆ. ಆದರೆ ಇಲ್ಲಿ ಸೋತರೆ ಅವಮಾನವಿಲ್ಲ: ಗೆದ್ದರೆ ಕೀರ್ತಿಯಿಲ್ಲ

* ನಂಜುಂಡಯ್ಯನವರು ತೀ.ನಂ.ಶ್ರೀ ಮತ್ತು ಪು.ತಿ.ನ. ಅವರಿಗೆ ಬಿ.ಎ. ತರಗತಿಯಲ್ಲಿ ಸಹಪಾಠಿಗಳು ಮತ್ತು ಮಿತ್ರರು.

– ಒಂದೊಂದು ವೇಳೆ ಸೋತವರಿಗೇ ಗೌರವವು ಸಲ್ಲಬೇಕಾಗಿರುತ್ತದೆ – ಇದು ವಿಧಿನಿಯಮ: ಪ್ರೇಮವು ಹೆಚ್ಚಿದ ಹಾಗೆಲ್ಲ ಕಲಹವೂ ಹೆಚ್ಚುತ್ತದೆ.

“ಇರಿತಗಳನು ತಾಳದವರಿಗಿದರ ಗೊಡವೆಯೇತಕೆ” – ನಮಗೆ ಇದು ಎಷ್ಟು ಚೆನ್ನಾಗಿ ಮಂದಟ್ಟವಾಗಿದೆಯೋ ನಂಜುಂಡಯ್ಯನಿಗೂ ಅಷ್ಟು ಚೆನ್ನಾಗಿಯೇ ಆಗಿದೆ. ಅದು ನನಗೆ ಗೊತ್ತು. ನೀವು ಶಂಕಿಸಬೇಕಾಗಿಲ್ಲ.

ನಿಮ್ಮ ಕಾಗದವು ಬರುವುದಕ್ಕೆ ಮುಂಚೆ “ಗಾನವೀಥಿವಿಯನಾವರಿಪುದಾಗ” “ನನ್ನ ನಾಯಿ” – ಇವೆರಡನ್ನೂ ವೆಂಕಣ್ಣಯ್ಯನವರ ಕೈಗೆ ಕೊಟ್ಟಿದ್ದೆನು – ಈಗ ಪದ್ಯಗದ್ಯಗಳನ್ನು ಕೂಡಿಸುತ್ತಿದ್ದೇವೆಯಷ್ಟೆ; ಆ ಸಂದರ್ಭದಲ್ಲಿ ಮಿಕ್ಕವರ ಪದ್ಯಗಳೊಡನೆ–. ನಿನ್ನೆಯ ದಿನ ಅವರು ಮಾತಾಡುತ್ತಾ “ನನ್ನ ನಾಯಿ”ಯನ್ನು ಹೊಗಳಿದರು–ಅದನ್ನು ಓದಿದವರು ಯಾರು ತಾನೆ ಹೊಗಳಿಲ್ಲ! ಬಂದ ಪದ್ಯಗಳಲ್ಲೆಲ್ಲಾ “ನನ್ನ ನಾಯಿ” ಮ॥ರಾ॥ ಕೆ.ವಿ. ಪುಟ್ಟಪ್ಪನವರ “ಸಾವಿತ್ರಿ” ಇವೆರಡೇ ಮಿಕ್ಕವೆಲ್ಲಕ್ಕಿಂತಲೂ ಮನಸ್ಸಿಗೆ ನಾಟಿದುವಂತೆ. ನೀವು ಹೇಳಿದ ತಿದ್ದುಪಾಡನ್ನು ಮಾಡುತ್ತೇನೆ: ಪ್ರತಿ ಇನ್ನೂ ಅವರ ಬಳಿಯಲ್ಲಿಯೇ ಇದೆ, ಅದು ಸಿಕ್ಕಿದಾಗ “ಜನುಮ” ಎಂದೇ ತಿದ್ದುತ್ತೇನೆ.

“ತೊರೆ”, “ಕೊಳದ ತಡಿಯಲ್ಲಿ” ಇವೆರಡನ್ನೂ ತಿದ್ದುಪಾಡುಗಳೊಡನೆ ನಕಲುಮಾಡಿ ನಿನ್ನೆ ಕೊಟ್ಟೆ. ತೊರೆಯಲ್ಲಿ ಎಂಟನೆಯ ಪದ್ಯದಲ್ಲಿ – “ಶಿರವ ತೂ। ಗುತ ತನ್ನ। ಮೆಚ್ಚಿಕೆಯ। ತೋರೆ” ಎಂದು ನೀವು ಹೇಳುವಂತೆ ಇಟ್ಟುಕೊಂಡರೆ ೫।೫।೫।೨। ಗ–ಎಂದು ಆಗಿ ಎರಡು ಮಾತ್ರೆ ಹೆಚ್ಚಾಗುತ್ತದೆ. ಮಿಕ್ಕ ಪದ್ಯಗಳಲ್ಲೆಲ್ಲಾ ೫।೫।೫। ಗ–ಈ ರೀತಿಯಾಗಿ ಇದೆ. ಆದದ್ದರಿಂದ ಸ್ವಾತಂತ್ರ್ಯವನ್ನು ವಹಿಸಿ ಈ ಚರಣವನ್ನು “ಶಿರವ ತೂ।ಗುತ ಮೆಚ್ಚಿ।ಕೆಯ ತೋರ।ಲು ೫।೫।೫। ಗ ಎಂದು ತಿದ್ದಿದ್ದೇನೆ. ಅರ್ಥವ್ಯತ್ಯಾಸವೇನೂ ಆಗಿಲ್ಲ. ಇದು ನಿಮಗೆ ಒಪ್ಪದಿದ್ದರೆ ಮೊದಲಿನಂತೆಯೇ ಇರಿಸುತ್ತೇನೆ. ನಿಮ್ಮ ಅಭಿಪ್ರಾಯವನ್ನು ತಿಳಿಸಿ.

“ಕೊಳದ ತಡಿಯಲ್ಲಿ”, ನೀವು ಹೇಳಿದಂತೆ ತಿದ್ದಿದ್ದೇನೆ. ೧೫ನೆಯ ಪದ್ಯದಲ್ಲಿ ನೀವು ಕೊಟ್ಟಿರುವ ಎರಡು ಪಾಠಗಳಲ್ಲಿ ಮೊದಲನೆಯದನ್ನೇ ಅಂಗೀಕರಿಸಿದ್ದೇನೆ.

ನಾನು ಇನ್ನೂ ಒಂದೆರಡು ಕಡೆ ಕ್ಲೇಶಗಳನ್ನು ಸೂಚಿಸಿದ್ದೆ. ಅವನ್ನು ನೀವು ಮರೆತಿರೋ, ಉಪೇಕ್ಷಿಸಿದಿರೋ ಗೊತ್ತಾಗಲಿಲ್ಲ.

೨. ಪ. “ಚೆಲುವನು ಬಾನಿನ”,

೧೬. ಅರುಣನು ತಲೆದೋರುದಯದಿ
        ತಲೆದೋರೆ+ಉದಯದಿ.
    ಇದನ್ನು ಹೀಗೆ ತಿದ್ದಬಹುದೆ?
                                        ದಿದ
    “ಅರುಣನು ತಲೆದೋರುತ್ತಿರೆ ಕಂದುವ
    ತಾರಗೆ ವೊಲು ಚೆಲುವು.”

೧೮. ಮನದುದ್ವೇಗದ...........
ಇರವು"

ಈ ಭಾವವು ಬಲುಸೊಗಸಾಗಿದೆ; "ನನ್ನ" ಮನದ – ಎಂದು ಹೇಳಿದ್ದರೆ ಅರ್ಥವು ಇನ್ನೂ ಸ್ಪಷ್ಟವಾಗುತ್ತಿತ್ತೋ ಏನೋ?–

೨೨. ಇದರ ಭಾವವನ್ನು ಇನ್ನೂ ಸ್ಪಷ್ಟಪಡಿಸಲು ಸಾಧ್ಯವಿಲ್ಲವೇ?

– ಇಲ್ಲೆಲ್ಲಾ ನೀವು ತಿದ್ದುಪಾಡುಗಳನ್ನು ಮಾಡಲೇಬೇಕೆಂದಲ್ಲ. ಮಾಡದಿದ್ದರೂ ತಡೆಯುತ್ತದೆ. ಆದರೆ ಮಾಡಿದರೆ ಇನ್ನೂ ಸೊಗಸಾದೀತು ಎಂದು ನನ್ನ ಆಸೆ. ಸಾಧ್ಯವಾಗದಿದ್ದರೆ ಹಾಗೆಯೇ ಇರಲಿ.

ಪ್ರಕಟಣೆಯ ವಿಚಾರದಲ್ಲಿ, ನಿಮ್ಮ ಸಂಕಲ್ಪಕ್ಕೆ ವಿರೋಧ ಬಾರದಂತೆ ನಾನು ನೋಡಿಕೊಳ್ಳುತ್ತೇನೆ.

* * *

Srirangapatnam, 6th July 1928

My dear Narasimhachar

It is long since I received your affectionate and touching letter. But unfortunately I could not give an immediate reply. For a few days I was daily coming over here from Mysore. But since the higher authorities (the D.C.) do not allow me to continue this practice, I have decided to stop here till I am enabled to go back to Mysore once for all.

I am staying with the Amildar, in his house. I take my meals with him. He is very hospitable to me. In the office I have no regular work. I sit in his room and simply observe his doings. I must first go through the Revenue Code & Rules before I can sit with any clerk regularly. Unfortunately I have not the inclination to read those things.

So much for my work here. I am glad to tell you that the University Council which met on the 30th June decided in my favour. I have been posted to Mysore - according to my wishes. These appointments however must be sanctioned by the Government. I am anxiously awaiting the Governments decision. It may take a fortnight or so for

me to be relieved of my duty here, if the Government is willing to agree to my change of appointment. (Mr. ವಿ.ಸೀ. is posted to Bangalore. Mr. V.T.T. is appointed the Sanskrit Lecturer at Bangalore.)

* * *

Mysore, 14-1-1929

You wonder if your poem can really be called a "poem". It surprises me. What else is it? And I think & honestly feel, that it is a good one too. BN also said the same thing about it, mind you, he spoke so even before hearing your explanatory comment which is, as ever, delightful. The poem is simple no doubt, but expresses your ideas quite well - my only regret is that it is not as superbly clear as your comment. But it is inevitable. Poetry half reveals & half conceals. Perhaps I am making a fetish of "clearness" in poetry. I am sending herewith a transcription of your poem. I have also, in my usual detestable way, made a few trivial comments, this time on the copy itself.

In return for your poem. I am sending one of mine. It is based on a real incident which, I hear, happened a year ago. What do you think of it? Is it too voluptuous? Is it a fit subject for poetry? They say that some griefs, some disappointments, some incidents are too cruel to become good poetry.

I thank you for wishing me a happy (summer). Let me tell you about somethings which happened a week ago. My F-in-law's mother was seriously ill. He wrote to me in the holidays to go over there. I could not go. On the 3rd inst. I received an urgent letter stating that unless I started immediately, I could not see her again. On Friday I had to appear for the exam, so could start only that night. When I reached Turuvekere on Saturday afternoon, I learnt the lady had passed away so early as Thursday. It seems she longed extremely to see me and died with that one wish unfulfilled. What could I do? I wrung my hands......

This grief would have been terrible for me if I could not have talked to my wife even. Happily I had an hour of confidential talk with her. I am glad to tell you that I was happy to revise my opinion of her to a considerable extent. She has really changed during these six months - for the better.

I am sorry to learn that the burden of the family is pressing heavy on you. You needn't hesitate to confide to me your troubles. You shall always find me a willing listener and much **more** than that, if it does not offend you.

Some how I have lost the art of writing a good-letter. Probably I had never acquired it. One cannot write good letters from a place where there is too much of worry & distraction.

Shall I expect an early reply from you.

P.S. on the 1st inst. Sastry & I had a talk. I have been seriously thinking of publishing your poems in a book form. I told him about that. I suggested that we might prevail on Mr. Venkata Rao of the Progress BK - stall to publish them. I wanted to speak to you personally and coax you. But Sastry told me that he had written you about this some days ago. So I am also **writing** to you. You must consent to publish. Shall I sound Mr. Venkata Rao? I am eagerly awaiting your reply.

* * *

Mysore, 28th July 1929

I cannot write much. I did not feel my father's death, at the moment. I did not shed single tear. I am perceiving the unexpected effects of my loss, only recently...... some how my words don't flow. I want to write about my feelings but I dare not keep back this letter any longer. I shall write to you about my feelings sometime in the future.

It will please you to know that I have been transferred to the Maharaja's College on the same salary. ...I have been advised to study the M.A. Degree Exam in Kannada too. I have to study for two years paying a fee of Rs. 15/- per month. Till then I can't take my degree. I hope that BN has written to you about his appointment in the Maharani's Women's Training College. It is only Sastry that is still unemployed.

* * *

Mysore, 8-1-1931

Let me come to business. I shall call the book "ಹಣತೆ" if you are not averse to it. I feel that it is much more expressive... As regards placing ಹೂಗಳೇತಕೆ Sastry & myself had deliberation (!) last night. Both felt that it should follow ಒಲುಮೆವೆಣ್ಣು. Don't fear that there will be any monotony. We have slightly changed the order at the beginning. ನನ್ನ ಹಾಡು, ಒಲುಮೆವೆಣ್ಣು, ಹೂಗಳೇತಕೆ, ತ್ಯಾಗವೆ ಒಲುಮೆ, ನನ್ನ ನಾಯಿ, ಬಯಕೆ ಕೊಡಿಗೆ, ಮಗುವೆ ನಿನ್ನೀನಗೆಯಲ್ಲಿತ್ತು.

I have not yet named all the pieces. I must do something about them. The book will be sent to the director on monday the 12th inst.

Mr. T.S.V. asked for the poems & read through them in a single day. I feel that he likes them much. He suggested that the Nature poems may come first. What do you think? I feel that they stand best where they are.......... Of course one can't form a final opinion on such matters.

I have effected the correction you suggested in ಆನಂದನ "ಗೆಜ್ಜಸ್ರ". I must especially remonstrate with you over one thing. Merely because I suggest a change or two, why on earth should you think that the poem has ceased be your own? I can't understood. This is being over scrupulous..... Please don't make such a distinction between yourself & myself.

I hope the D.B.C. judge will award you the prize. Unless they be fools, they ought to award it to you. I read many of your poems to BN too. He liked them very much.

You are too grateful, Narasimhachar! If I do any slight thing out of my love for you, you praise it to the sky. You make very vain & it demonalizes me.

This English letter need not necessarily, get a reply in English.

* * *

Mysore, 15-11-1931

I have become incorrigible, My laziness knows no limits. It is ten days since your loving and regretful letter to me and I have just now sat down to pen a reply to it. I am a criminal - but a habitial criminal. Hence there is no use in whipping myself upto remorse and repentence. I am sure to go wrong again at the very next opportunity.

I regret very much that I couldn't meet you before I left for Turuvekere. Sastry must have told you that I went to his house in the early morning on Friday for the express purpose of seeing you, but found to my disappointment that you had left already. Hence I resigned myself to my ill-luck. Friday was the last day on which I could have started for my wife's place. I could not postpone the visit.

I am glad that I went there. The little misunderstanding between my wife and myself cleared up. She was not in the wrong, poor girl. As I have told you, I went there more with the desire of seeing her than the child. Not that I disliked the child. I welcomed it as every father should. But seeing it was a secondary matter. It would not be hurt if it's father did not pay it an early visit. The child is lean and slightly dimunitive - quite contrary to our expectations. Its complexion is fair - as was to be expected, I suppose. I can't tell you yet if it is pretty. It possesses the thick underlip of its father. They say it resembles me - at any rate my wife said so and probably she should be regarded as the best authority on the subject.

No supernatural thrill or sensation did I experience when I met my daughter for the first time in my life. I did not even feel any special fondness for her. I took her only once on my knees - that too more from a sense of duty. It is now, here, that I perceive that I am gradually building up a sense of ownership and hence of affection towards the girl. That is my experience of fatherhood so far. My wife, on the contrary, seems to love the girl quite well. She coddles her and fondles her though the child robs her of her sleep by her untimely cries and ailments. But it is a matter of happiness to me that this child has not at all come in the way of the fondness of my wife for me...

When do you send me your sketches? Mr. T.S.V. of his own accord, told me that on Sunday morning yourself and Sastry paid him a visit and that you read your sketch. He said it was a 'very beautiful sketch'.

Your poems have not yet been sent to the press. I have been thinking of the matter. I shall consult Mr. T.S.V. and probably send it for printing shortly. Have you completed your foreword? The delay in printing is entirely due to my want of energy. I wish I had something of it.

Sorry I can't write a longer letter. But I, unreasonably do expect a long reply from you.

* * *

Mysore, on the Yugadi night. 1932

I was thinking today how to make up my mind to write you my long-over-due letter, when the postman delivered your happy New Year's Greetings. You are so watchful, prompt and loving that you make me ashamed of myself. To me at, any rate, you have ever shown the patience of a mother and you need all that to like me. I have read somewhere that laziness is not fault but a disease. I am infected with that disease. You wrote an immediate reply to my last letter to Chickmagalur, even promised to send a poem to me after receiving

my reply, and here I am after more than half a month coolly going about Mysore without an attempt at seribbling two lines to you. I don't know what you must be thinking of me. I have grown desperate even at inventing excuses or at expressing the old ones in a new way. Henceforth, I shall simply throw up my hands at this hopeless business, and simply say I didn't write a letter to you because I didn't. There is an end of the matter. "I plead guilty". It is very rare that I get the better-writing mood. I can't write a tolerable letter even to my wife who as you know is away. It doesn't mean that she is not in my thoughts. On the other hand I feel her absence very much - I want her badly. But somehow my love has become mute, inarticulate. You can now understand, my dear friend, what an arid thing my pen has become. I should be very glad to write a fine letter to you-the only person on earth who writes to me such splendid letters. But somehow I can't. It is not because I haven't the desire to do so but because somehow I lack the power to do so.

Yesterday I had occasion to read two of your pieces to two friends Mr. G. Hanumantha Rao & Mr. A.N. Murthy Rao. I read ಯದುಗಿರಿಯ ಮೌನವಿಕಾಸ first. You know how I feel about it. The first two sections are very good because the expression there is adequate to the thought. The third section is really in excellent in parts, but on the whole the thought preponderates there. Messers GH & ANM also felt the samething. One stanza expecially - ಮಾನುಷ ಪದರದಿ....... is really hard. The line 'ತಮವೇ ಪುಷ್ಪಿತವಾದಂತೆ' was much appreciated. Objection was taken to the word ಆತುಮ, which I also emphatically echo.... Shouldn't you make your expression less concentrated? Don't pack so much. Sometimes one wishes that the verses were a little more fluid. I write frankly because I admire your poetry so much and want it to be perfect. You are our deepest poet; and let the deep ಹ್ರದ be transparent also - clear as crystal.

I next read your sonnet on ಬುದ್ಧ. It was very well appreciated. I have come to like it more and more. The expression is really very

clear, considering the nature of the thought. The verses flow quite smoothly. And the essence of Buddha's doctrine, - the transition from ಭವ to ಶೂನ್ಯ - is so well presented to us. Please **continue** to write sonnets.

May I now claim the promised poem?

Have you seen ಬೇಂದ್ರೆ's "ಗರಿ"? There are all sorts of pieces in it - good and middling and even positively bad. I have been asked to review the book for the 'ಜಯಕರ್ನಾಟಕ'. I dared not refuse. But I am taking my own time over it. How do you like "ಯುಗಾದಿ" there? I enjoyed it very much. How sad but how profoundly true it is. The whole of creation awakens into a new birth when the year is born again, Man only is left forgotten. "ನಮ್ಮನಷ್ಟೆ ಮರೆತಿದೆ" yes. Yugadi doesn't bring fresh life to me as it brings even to the neem tree in the port of my house - the neem tree which supplied the requisite ಕುಡಿ for today's bitter-sweet ಪ್ರಸಾದ. Thanks to Visvanatha's foresight the ಬೆಲ್ಲ preponderated. May this presage this year's offering to me and to you and all our friend as well!

Messrs Ram Mohan have written to Mr. TSV giving him their own version of the matter. It seems the delay occurred because they had to order the paper from England. They also suggest that you took the book for reading some of the poems to the Hebbal Sangha and later wrote to them about Mr. TSV's permission. Of course, they are bound to give their explanations to defend their unpardonable delay and neglect. Mr. TSV said he would write a suitable reply. The Karnataka Sangha, I am sure, won't come in the way of your publishing "ಹಣತೆ". They daren't continue their "dog in the Manger policy" any longer.

You wrote to me that you had now your own means for publishing "ಹಣತೆ". May I know the source? You know how anxious - at least at heart if not in action - I am to see the beloved volume in print. Have you made any arrangements about it?

Receive my congratulations though very belated on getting the S.L. Society's prize (or grant!) of Rs. 50/-. It was announced in the paper sometime back. Did you get the amount to hand?

When shall I expect your reply? I learnt that your wife too is expecting. When shall we have the good news!

* * *

Mysore, 4-9-1932

.... But as regards writing letters for pleasure - even to those whom we love best - I feel it to be a sheer impossibility. It is not because you have ceased to interest me or any such nonsense. You might have known better. It is simply because I find it so hard to sit down to do any writing, and of all things to write a letter..... It is indeed few people are fortunate enough to express themselves admirably in their letters and you are a prince of letter - writers. I have genuinely envied your personal, free and intimate letters - letters which have the stamp of literature on them. But for myself - I express myself at my worst in my infrequent letters. Please don't judge my heart by them..... In the words of Janna, misapplied to the present context. I ask you "ಕಣ್ಣಱಿಯದೊಡಂ ಕರುಳಱಿಯದೆ!"

This quotation has afforded me a natural transition from the detestable apology. I am immensely pleased to learn that you mastered Janna's masterpiece. I love that book very much. I have had to teach Janna's ಅನಂತನಾಥ ಪುರಾಣ to the M.A. and Hons classes here and that has only made me prize ಯಶೋಧರ ಚರಿತೆ all the better. I have recently finished an essay on "Janna's treatment of Love". It is possible that it will be published at least in parts in the Pr. Karnataka . In the meanwhile you will see it in MS when you go over here for Dasara to pass your opinion on it. I fear it has not comeont quite all right. But more of it later.

I am glad to learn that you have added one more triumph to your sketches. But is it necessary to wait till the Dasara to have a sight of

it? Consider you have a very willing and ardent reader in me if not a voluble critic. If I don't find the tongue to speak appreciation in discerning and appropriate words, it is only because I lack the power and not the heart....

The Pr. Karnataka will be issued in a week or so. Your "ಉಷಃಕಾಲ" very appropriately heralds it. So far only Mr. TSV has read it and he is your ardent admirer like myself.

* * *

Mysore, 15th Oct 1932

It is a fortnight since I received your letter. How have your deliberations regarding the order of the poems ended? Have you handed the MS to the Ram Mohan Company? The 10th inst. is over. Printing must have commenced. When will the sample sheets be sent to us? I hope the press will execute the work speedily. I am very anxious the Book should come out before the close of this year. By - the - bye, what is the talk in Bangalore about the venue of the Sahitya Sammelana? Will it be Bangalore, as the rumour went some days - why, months - back?

My volume of poems was given to the press some days back. The press sent a sample sheet for approval last Friday. I am expecting the regular proofs shortly. Contrary to your expectations, I know quite well that it will occupy only about 50 pages at the most. Hence it will be quite slender; and I find it too costly to get it printed on Feather-weight paper. For aught I know my book may come out earlier than yours. It will be the morning - bird heralding the sun.

You typed your last letter isn't it. A day will soon come when both of us may type our letters in Kannada. There is an enthusiast here from Sagar (But he has been a resident of Hyderabad for these ten years & more) who has set about devising a Kannada Type-writer. It is a practical proposition too. The Palace office has agreed to provide

him with a suitable Machine on which he can try his experiment. This evening a few of us had gathered at Mr. TSV's to consider some simplification of our cumbruous alphabet to suit it to the Type-writing machine. The gentleman's principle is to type every letter in two strokes only : Hence you will be able to type ಮೌ or ಯೌ or ಕೋ for instance in two strokes only. Wouldn't it give you speed! There are a few alterations in the shapes of his letters too..... But the deviations on the whole are very minor. How would you like the whole thing? And, see a man like me who doesn't know the ABC of Type-writing getting into this tangle and taking genuine interest in it too!

I feel tired. Shall I stop here! Expect your early reply.

P.S. - I expect you will get the Prabuddha Karnataka along with the letter. Sorry for the delay in posting the complimentary copies. It is a good issue, isn't it? How do you like my article in its new form?

We have selected your ಅಭಿಸಾರಿಕೆ for the ಸಂಕ್ರಾಂತಿ ಸಂಚಿಕೆ. It has gone to the press already.

Please tell Mr. Gorur that I received the sketches long back. Out of considerations of space we can publish only one of them this year. The essay will probably be "ಬಯಲಾಟ". The other will be sent to him shortly.

* * *

10-3-33, 5.30 A.M.

I was saying that the value of your poems does not in the least depend upon the reception is gets at the hands of commercial people. What they care for is money only. Let me assure you that your poetry as well as your prose is unique in Kan. Lit. None has probed as deep as you into the mysteries & mainsprings of life and given it such terse but beautiful expression. Thought & feeling are so harmoniously blended in your best pieces that they are superb - I am sure they will **live.** Should not the unstinted appreciation of a person like Mr.

Hiriyanna assure you on this point against a whole world? Hanate will live. The torch has been lighted so don't worry about your worthiness & poetic capacity. You must go on with your work without thinking about them for they are good in unbounded measure.

Re: the future action you have taken. I shall write again to you after consulting Mr. TSV.

..... I think I like your revised Sonnet on Buddha better. The thought preponderates a little still, isn't it? But that is as it should be: The Sonnet is always a thoughtful bit of art.

Your praise of my poems pleased me very much.

* * *

'ಹಣತೆ'ಯ ಅರಿಕೆ (ಪು.ತಿ.ನ.)

ಅಲ್ಪಾತ್ಮನದಾದರೂ ನನ್ನ ಸತ್ವಸಾರಾವಾಗಿರುವುದರಿಂದ ಈ 'ಹಣತೆ'ಯು ಜನತಾ ಜನಾರ್ದನನ ಪೂಜಾದ್ರವ್ಯವಾಗುವುದಕ್ಕೆ ಯೋಗ್ಯವಾಗಿದೆ ಎಂದು ನಂಬಿ ಕನ್ನಡ ವಾಙ್ಮಯ ಪುಣ್ಯವಾಹಿನಿಯಲ್ಲಿ ಇದನ್ನು ಇಂದು ಗುರು ನಿವೇದನ ಪುರಸ್ಸರವಾಗಿ ತೇಲಿ ಬಿಟ್ಟಿದ್ದೇನೆ. ಈ ಪೂಜೆಯಿಂದ ಆ ಜನಾರ್ದನನು ಪ್ರೀತನಾಗಬಹುದು, ಆಗದಿರಬಹುದು. ಹೇಗಿದ್ದರೂ ಪೂಜೆ ಸಲ್ಲಿಸಿದ ಮಾತ್ರದಿಂದಲೇ ನಾನು ಧನ್ಯ. ಹೀಗೆಂದು ನನ್ನ ನಂಬಿಕೆ.

ಇಂದು ಹೀಗೆ ನನ್ನ ಪೂಜೆಯನ್ನು ಸಲ್ಲಿಸುವ ಸುಯೋಗವವನ್ನು ನನಗೆ ಕಲ್ಪಿಸಿಕೊಟ್ಟ ಪುಣ್ಯವು, ಈ ಕವನಗಳು ಹುಟ್ಟಿದ ತಕ್ಷಣವೇ ತಮ್ಮ ಮಡಲಲ್ಲಿ ಹಾಕಿಕೊಂಡು ಸಲಹಿ, ಸಿಂಗರಿಸಿ, ಜತೆಗೂಡಿಸಿ, ಹೊರಗೆ ತೋರಿ, ಹಿರಿಯರ ಮತ್ತು ವಿದ್ವಾಂಸರ, ಮುಖ್ಯವಾಗಿ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರ ಮತ್ತು ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯನವರ, ಮೆಚ್ಚುಗೆಯನ್ನು ಆಶೀರ್ವಾದವನ್ನು ಸಂಪಾದಿಸಿಕೊಟ್ಟ, ಇವುಗಳಿಗೆ ಸಾಕುತಾಯಿಯಾದ, ಸನ್ಮಿತ್ರ ತೀ.ನಂ.ಶ್ರೀಕಂಠಯ್ಯನವರಿಗೆ ಸೇರಿದುದು: ಮತ್ತು ನನ್ನಲ್ಲು ನನ್ನ ಕೃತಿಗಳಲ್ಲೂ ವಿಶೇಷವಾದ ಕೃಪೆಯನ್ನು ಪ್ರೇಮವನ್ನು ತೋರಿಸಿ ನನ್ನ ಬಾಳಿಗೊಂದು ಬೆಲೆ ಕೊಟ್ಟಿರುವ ನನಗೆ ಗುರುಸ್ಥಾನೀಯರಾಗಿ ಪೂಜ್ಯರಾದ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಸೇರಿದುದು. ಈ ಉಪಕಾರವನ್ನು ನನ್ನ ಕೃತಜ್ಞತಾಭಾವವನ್ನೂ ನುಡಿಯಿಂದ ಅಳೆಯಲೆತ್ನಿಸಲು ನನಗೆ ಅಂಜಿಕೆಯಾಗುತ್ತದೆ, ನಾಚಿಕೆಯಾಗುತ್ತದೆ.

(ಮುಂದಿನ ತೀನಂಶ್ರೀಯವರ ಪತ್ರಕ್ಕೆ ಹಿನ್ನೆಲೆಯಾಗಿ ಇದನ್ನು ಇಲ್ಲಿ ಕೊಡಲಾಗಿದೆ)

* * *

ಮೈಸೂರು, 21-3-1933

I am so very glad to receive your lovely gift of love (ಹಣತೆ). The book is splendidly got up. I only wish there had not been the few spelling mistakes. But none except a grammarian like me even notices them.

I was able to deliver almost all the copies yesterday itself. Only Mr. TSV's remains with me. I shall give it to him tomorrow after he returns here from Bangalore.

I have read and re-read the ಮುನ್ನುಡಿ and the ಅರಿಕೆ. I **don't** think the Remarks of Mr. Masti at the beginning are out of place. Such a defence on this of the ಮುನ್ನುಡಿ was necessary at this juncture. Only he need not have made it so long, at the cost of shortening his introduction to the poet himself. The **introduction** is short but quite good. He has really felt the secret of your personality and of your poetry and has given adequate expression to it. "ಹೊಸ ಸಾಹಿತ್ಯದ ಅತ್ಯುತ್ತಮ ಕೃತಿ" "ಬಹಳ ಸಂಕೋಚ ಸ್ವಭಾವದ ಕವಿಗಳು" ".... ನಕ್ಷತ್ರದಂತೆ ಮಿನುಗುತ್ತದೆ" "ಕಾವ್ಯದೃಷ್ಟಿ ಮೊನೆಯಾದದ್ದು...... ಬಲವುಳ್ಳದ್ದು" "ಇಲ್ಲಿ ಕಾಣುವುದು ಕಾಳಿದಾಸ ವರ್ಡ್ಸ್‌ವರ್ತ್ ಕವಿಗಳು ಜೊತೆಯಾಗಿ ತಿದ್ದಿದ ಕವಿ ಮನೋಧರ್ಮ" etc. You don't know how much I appreciated these words. They really tell us what might be told about you.

What shall I write about your ಅರಿಕೆ! Let me take you to task only after admiring the first paragraph sufficiently. But I cannot admire it sufficiently. It is so splendid -nay so **great.** It is just the thing & only the author of "ಹಣತೆ" could have written it. - Now, Narasimhachar you have done me positive wrong by praising me so much. I like the word "ಸಾಕುತಾಯಿ"; but I am quite certain I don't deserve it. And what about the heap of verbs! For once your sense of fitness has run away with your pen. It is extravagant - your praise. I am however very glad to be so affectionately remembered by you. - But I cannot forgive you for one grave omission. You have omitted Sastry's (ನಂ. ಶಿವರಾಮ

ಶಾಸ್ತ್ರಿ) name - I really feel it is crime not to have coupled his name with mine. There is certainly ಅಭೇದ ಭಾವ between you two, but that shouldn't have prevented you from speaking about him.

About the poems themselves I shall write nothing. For one thing it is time for the college, for another, I admire then so much I don't know what to write . I miss ಹಣತೆ, ಹೇಮಾವತಿಯ ತೀರದಲ್ಲಿ, ನನ್ನ ನಾಯಿ, etc. But I have already complained about it.

* * *

Mysore, 14th Jan 1936
"ಸಂಕ್ರಾಂತಿ"

I am very sorry to learn that you did not feel 'at home' at the Parishat Conference. I have also gathered from other sources that the Bombay people didn't manage it quite well. I was all the while regretting that I was not there at Bombay with you all. The sight seeing must have been good. When did you return?

B.N. has made very full use of his 12-8-0 ticket. He had gone to Goa, and then to Waltair on the east, down to Madras, etc.... Lucky fellow. I haven't seen the **sea** yet!

Why do you feel so despondent about your powers? One can't always be at the peak of one's energy. Moreover, you worry yourself too much over even the slightest matter. Come out of yourself - your broodings, etc. Your place is assured. You have a task in Kannada poetry to perform, which none else so for has shown the capacity to perform. This is my sincerest view of the matter. You have an absolutely original **way** of looking at things, - an original insight into aspects of Reality. I can't say that your expression is always easy or even lucid and smooth. But whatever you say, in however uncouth a language, is valuable for its own sake. It is easy to achieve smooth expression, but very hard to possess true insight!

The Poet's conference here was mostly a farce. I was never able to think of it enthusiastically. You must have seen "Poets" from Tamil Nad, Andhradesa, Malabar, Karnatak etc., reading before a handful of people mutually unintelligible verses. (There were also poems in Urdu, Hindi & Sanskrit). The President himself was not a man of any distinction. In Kannada especially, but for Puttappa's 'Kalki' - all the poems & poets belonged to the old school. Puttappa was awarded a medal for his poem. I am glad to mention that Mr. Desikachar read two or three of his poems which impressed the audience. You needn't in the least regret that you didn't attend this 'conference'. There was an Urdu poem by some teacher from Dacca that seems to have been quite good. But none of us understood it owing to the language difficulty! Sastry will be able to give you further details about the conference.

I hope you have got over your "moods".

Please excuse this shabby letter and the shabbier script.

* * *

Mysore, 23rd May 1936

This time my delay has been unpardonable. Throughout this week I have been impossibly lazy; I have turned out no work, and haven't exerted myself even to give a quite reply to your kind letters. I am afraid I am degenerating:- "जानामि धर्मं न च मे प्रवृत्तिः । जानाम्यधर्मं न च मे निवृत्तिः" what shall I do?

I am glad - really glad - that you are seriously contemplating the publication of a second volume of poems. You know that I have always admired your poems. Usually they grow slowly on me, but they build up an abiding fascination. Have you collected the pieces and copied them? Would it not be better to go with the material to Mr. Hiriyanna and request him to write the introduction? I am sure he would agree but probably he would like to go through the poems before doing so.

I shall most willingly and with the greatest pleasure undertake the "ದೌತ್ಯ". In the meanwhile shall I approach him & broach the topic? Please get the poems copied if possibly in the neat hand of Sivarama Sastry.

Are you prepared to bear all the publication expenses yourself? Is there no less costly (- to you) way of managing it?

I shall see Mr. Hiriyanna as soon as I hear from you.

I am glad that you kindly remembered to send me your version of a passage from the Bhagavadgita. I must read it carefully & repeatedly before forming the final opinion. In the first impression, one misses the majestic घोष of the Sanskrit Anustup in the 4-mātra Kannada verse. But I do not know what exactly is the proper equivalent in Kannada of the Śloka metre. I find that the introductory stanzas are good, there is emotion in them. But later on, in philosophical disquisition, the stanzas seem to run somewhat flat. .....But I must read again & think again. In the meanwhile I urge you to proceed with the work and finish it.

* * *

Mysore, 27-2-1937

Here is a very brief reply to your moving letter which I received just now. This is probably the first time in the history of our friendship that I have sat down within a few minutes of receiving your letter to give it a reply. I was somehow moved by your letter. I wonder why you should feel so despondent at times. I am sure that it will pass way - this mood; probably it has sprung up for the purpose of stirring you to the depths & thus bringing forth some rare gem of poetry.

I am very glad to read what you have written about Bendre. It was a thrilling time I had-all of us here had - when he was with us. I was fortunate enough in being able to spend a great deal of my time

with him. He is so affectionate, so simple yet so fiery with an abiding firmness of mind and character. The reading he gave at the union- Sastry attended it - is unforgettabe. So is his lecture delivered under the auspices of the City Karnataka Sangha. He has stirred Mysore & has even shaked some self - complacent people. I trust that the people in Mysore have been moved to a better love of Kannada & Kannada poetry by his readings & lectures. He was literally beseiged with invitations to dinner & lectures. We must have sent him out of Mysore extremely tired; but happy all the same.

I am glad that you like his ಬೆಳುದಿಂಗಳು; it is a favourite of mine also. Unfortunately I couldn't hear him recite it. His 'ಮೊದಲಗಿತ್ತಿ' & 'ಭೃಂಗದ ಬೆನ್ನೇರಿ' have created a profound impression on the Mysore audience.

My dear P.T.N., do you know that I find a great deal of similarly between your 1937 poetry & Bendre's? I spoke about it to Bendre & he agrees with me. .....Please let me know as soon as you finish your sonnet. Write poetry - as your spirit moves you. That is fit enough sacrifice.

* * *

Mysore, New Year's Eve 11-4-1937

Let me hope that you will receive this very belated letter of mine on the 'Yugadi' day. I have tried to time it all right; may the fates be kind to my undeserving self and permit the letter to reach you when you are tasting 'ಬೇವು–ಬೆಲ್ಲ' – "ಬೆಲ್ಲ ಮುಂದು ಮಾಡಿ" (as you have so penetratingly expressed).

I wonder what you are thinking of me. You have sent me four significant poems - poems which have given me genuine pleasure - poems that contain some undying lines - and here I am, without even acknowledging them. But my dear Narasimhachar, I seriously propose to turn a new leaf in this matter. Letter - writing is a very hard matter

with me; it is a much greater task than even valuing answer-papers. (By-the-bye I am deep in the midst of this really unwelcome, but all that same paying papers. Do you know what worry and searching of that heart this apparently mechanical work causes? Oh, it is an ordeal. You are never sure if you have done the right thing by the candidate.) Well, as I was saying, henceforth I propose not to delay too long in writing letters. I pray that I may be given the strength to realise this ambition.

I have liked all your poems. Probably the first part of the sonnet on ಬೇಂದ್ರೆ looks a little like a test of qualities, but your characterization of the present state of ನಮ್ಮ ನುಡಿ is really touching. "ತನಗಾದ ನಾಡಿನೊಳೆ **ತಾನಮಂಗಳೆಯೆನಿಸಿ**." The word ಅಮಂಗಳೆ - it expresses perfectly the treatment meted out to Kannada now. Again I like the apt expression **"ಗಾಳಿಗೂ ಬಾಳೀವ** ರೂವಾರಿ". But I wonder a little if the poem doesn't accord too much praise to ಬೇಂದ್ರೆ. I should like to have my critical faculties about me even when we speak of ಬೇಂದ್ರೆ.

Your 'ಮಳೆಮುಗಿಲು' & 'ಮೊದಲನೆಯ ಪದ್ಯ' have captured my heart. Yes, one does feel 'ಮಂಗಳ ಕೇಕೀ ವೇಷ, ಈ ತೆರ ವಿಷಮ ವಿಲಾಸ!" Yet it draws you towards itself even while you tremble: **The feeling of the sublime** without the ದಿಗಿಲು, you would not probably get the fullest thrill of it..... In ಮೊದಲನೆಯ ಪದ್ಯ the last stanza is unforgettable: the simile is so **illuminating**. You have really created a neat little gem in that poems.

Now about the poem commemmorating your ದೇವನಹಳ್ಳಿ experience. I can imaginatively understand your attitude - and I think that a Hindu at any rate, with his belief active or passive in successive births, can follow it, though it might seem to be out of the ordinary. Of course, there is sure to be a difference of opinion about the value of that poem as a whole. But even those who are not attracted by the theme cannot fail to feel the beauty of the word pictures you have given in the poem: especially the stanza - let me quote it -:

ಆವುದೋ ಹಾಡಿಗೆ ಅಭಿನಯಿಸುವ ತೆರ
ಅರಳಿಯು ಎಲೆಗೈಯಲುಗಿಸುತಿತ್ತು.
ಮುಗಿಲಳೆ ಕೂಡುವ ತಾಣದಿ ಬೆಟ್ಟವು
ಮುಗಿಲಿಗಿಂತಲೂ ಹಗುರಾಗಿತ್ತು.

It is this suggestive quality of your writing - saying a little but conveying so much profound thoughts & impressions - that one likes so much.

Well, my brain is already running dry. The pen is utterly refractory. It scribbles when I want to form neat letters. Allow me to stop here. The papers are calling me.

Will you kindly write to me early? Hope you are all keeping fit.

Wish you, your wife, & your kids happy **"Yugadi".** My baby is **"Nagaratna"**. I am glad she is a girl. A boy probably would not have remained long with us - I am almost becoming superstitious in this matter. You know I have reason to be.....* Let me finish with cheers.

A happy **"Yugadi"** to you all.

This is quite rambling letter. My remarks about your poems may even bore you. I find it so hard to express myself informally in my letters-why-in all my writing.

* * *

Mysore, 13-9-1937

I am heartily ashamed of myself. Your mild, but pained, reproaches are quite just, nay they are merciful. But don't for a moment imagine that I care less for you since I have not written to you. On the contrary, you are really always in my thoughts. Honestly not a day passes without my thinking of you..... When I had been to Bangalore I regretted very much that I was not able to meet you. Sastry must

* ಇದಕ್ಕೆ ಮೊದಲು ತೀ.ನಂ.ಶ್ರೀ.ಯವರಿಗೆ ಎರಡು ಗಂಡುಮಕ್ಕಳು ಶೈಶಾವಸ್ಥೆಯಲ್ಲಿಯೇ (೧೧ ದಿನ ಮತ್ತು ೪ ತಿಂಗಳು) ತೀರಿಕೊಂಡಿದ್ದವು.

have spoken to you about it. Anyhow I hope to see you here during the Dasara Holidays.

Mr. T.N. Shama Rao had showed me the translation before its publication, and was kind enough to give me a printed copy of it already. 'nip' is really a horrid word, it was not there in the translation at first, isn't it? Of course it is impossible to bring out in English that too in unmetrical language, the effect of the original - It is very hard for us, Indians to do so. Still we must commend Mr. T.N.S. for his praiseworthy attempt. It is absolutely necessary that what is good in our literature should be placed before the outside world. Otherwise we shall be nowhere in these competitive times. I wish some more of your poems could be translated into English.

Thank you very much for speaking highly of my article. It really heartens me. I have received some kind words about it from my elderly well wishers too. I still read the chapters in Ruskin suggested by you.

What are you doing now? No creative work? Haven't you attempted writing anything in prose? I wish you would...... Don't fall into despondency so much. I hope you will be able to secure the leave.

Are you all keeping well?

* * *

Mysore, 10-9-41

At last we have received the First Proof from the press. The press also has cooperated with me in delaying the publication of your play (ಅಹಲ್ಯೆ). I have sent it today separately to you by book-post.

Sastry has seen the Proofs. I don't know what he thinks of the ಪ್ರಸ್ತಾವನೆ. I believe he thinks that it is rather detailed. But I told him that I had undertaken to write an Introduction and not a foreword (ಮುನ್ನುಡಿ). Well, there it is. Please let me know frankly how it impresses you. Do you think that any alterations are necessary.

A word or two about your dedicatory piece. Should we insert a work like ಅರ್ಪಣ at the top? Or, shall we leave it as it is? K.C. thinks that such a heading is unnecessary We shall leave it as it is.

Next, there are three places, in the dedication which give some trouble. What do you mean by the words ಹೊರಕೊಳು, and ಅರುಮೆ. How to construe : ನಿಗ್ರಹದೇತರ ಮಾತು? Does it mean ನಿಗ್ರಹದ್ದು ಏತರ ಮಾತು? In that case some alteration is necessary. I have tried to punctuate the piece. Your MS.contained hardly any punctuation marks; and the few of them that you had used were rather misleading.

And, Sastry suggests that the missing stanza of the text (which was missed by your copyist - in the ಮಧ್ಯಮಾಂಕ isn't it?) may be given somewhere, in the errata probably. What do you think of it? If you approve, please send the stanza.

* * *

Bombay, 25-7-1947

Your letter was in English & it has somehow induced me to pen these lines in English. I have yielded to this bad impulse.

I envy your facile pen & fertile mind! How I wish I had at least a fraction of your powers! I have been asked to deliver a 10-12 minute talk in Kannada at the AIR on a subject of my choice. I have agreed to speak on 'ಕೆರೆಗೆ ಹಾರ', since the preference of Mr. N.K. Kulakarni was for ಜನಪದ ಸಾಹಿತ್ಯ (-what a high sounding name for a simple thing!). I have to prepare the script - they will take an electrical recording of it at my convenience & play it at their convenience. Hence I can hear the distortion of my own voice & judge my own wretched performance........ I haven't been able to prepare the script yet. (But I must have it ready by this evening.)

In Mr. NVS Murthy's house my room is very spacious & very comfortable. I hear the sea always and can see it, if I just walk across

the street. It is the Arabian sea, mind you; not your "back bay" or any such paltry thing. For three days in succession I paid my homage to the sea, in the morning at low tide and in the afternoon at high tide. It is magnificient to watch the breakers : "ತರಂಗ ತುರಂಗಗಳು ದಡಕ್ಕೆ ಬಂದು ಘಟ್ಟಿಸುವುದು ಅತಿ ರಮ್ಯ. ದಡವನ್ನು ಗೆಲ್ಲಬೇಕೆಂದು ಅವುಗಳ ಸಂತತ ಪ್ರಯತ್ನ – ಆದರೆ ಸಂತತವೂ ಅದು ವಿಫಲ. ಅಥವಾ ಕೀಟ್ಸ್ ಹೇಳುವಂತೆ ದಡವನ್ನು ತೊಳೆದು ಶುಚಿಯಾಗಿರಿಸ ಬೇಕೆಂಬುದೇ ಅವುಗಳ ಸಂತತೋದ್ದೇಶವೋ. ಅವುಗಳ ಪ್ರಯತ್ನ ನಿಲ್ಲದ್ದನ್ನು ನೋಡಿದರೆ ಅದೂ ಸಫಲವಾದಂತಿಲ್ಲ. ಹೇಗಾದರೂ ಆಗಲಿ; ಸಮುದ್ರದ ನೋಟ ಚಿರನೂತನ. ಇಲ್ಲಿ ನಮ್ಮ ಮನೆಯ ಮುಂದಿನ ದಡದಲ್ಲಿ ಬರಿಯ ಕಲ್ಲು; ಮರಳಿಲ್ಲ – ಇದೊಂದೇ ಇಲ್ಲಿಯ ಕೊರತೆ. "ಚೌಪಾತಿ ದಡ" ಪ್ರಸಿದ್ಧವಷ್ಟೆ. ತಿಲಕರ ಪ್ರತಿಮೆ ಅದರ ಮೇಲೆ ಎದ್ದು ನಿಂತಿದೆ – ಅಲ್ಲೇನೋ ಮರಳುಂಟು. ಆದರೆ ಅದರ ಹರಹೂ ನನಗೆ ತೃಪ್ತಿ ಕೊಡಲಿಲ್ಲ. ಮದರಾಸಿನ ತಿರುವಲ್ಲಿಕ್ಕೇಣಿ, ಮೈಲಾಪೂರ, ಅಡ್ಯಾರ್ ಈ ದಡಗಳನ್ನು ಜ್ಞಾಪಿಸಿಕೊಳ್ಳಿ. ನಾನಂತೂ ಎಷ್ಟೋ ಸಲ ಜ್ಞಾಪಿಸಿಕೊಂಡೆ–

How do you like my scribble. Does it approach your to some extent at least? Mrs. Murthy is a very good hostess. I can't close without telling this to you.

* * *

ದಾವಣಗೆರೆ, ೧೦–೭–೧೯೪೪

ಟಿ.ಬಿ.ಯನ್ನು ಬಿಟ್ಟು ಎಷ್ಟೋ ದಿನವಾಯಿತು. ಈಗ ನನ್ನ ಹಳೆಯ ಶಿಷ್ಯರೊಬ್ಬರು ವಿಶ್ವಾಸದಿಂದ (ಕೆಲವು ದಿನಗಳ ಮಟ್ಟಿಗೆ) ಬಿಟ್ಟುಕೊಟ್ಟ ಒಂದು ಕೊಠಡಿಯಲ್ಲಿದ್ದೇನೆ. ಹೋಟೆಲಿನಿಂದ ಊಟ ತರಿಸಿಕೊಳ್ಳುತ್ತಿದ್ದೇನೆ. ಅಸೌಕರ್ಯ ಅಷ್ಟೇನೂ ಹೆಚ್ಚಾಗಿಲ್ಲ. ಆದರೆ ಬೇಸರವೇನೋ ಹೆಚ್ಚಾಗಿದೆ. ಮಡದಿ ಮಕ್ಕಳ ಮಾತು ಕಥೆಯಿಲ್ಲ. ಮಿತ್ರರ ಸಲ್ಲಾಪವಿಲ್ಲ. ಓದಲು ಬೇಕಾದ ಪುಸ್ತಕಗಳೂ ಇಲ್ಲ – ಎಲ್ಲವೂ ದೂರ, ಬಲುದೂರ: ಈ ಪ್ರವಾಸಾನುಭವವೂ ಆತ್ಮಸಂಸ್ಕಾರಕ್ಕೆ ಅಗತ್ಯವೋ ಏನೋ.

ಈ ಸಲದ 'ತ್ರಿವೇಣಿ' ಇಲ್ಲಿಗೆ ಬಂತು. ಆ ಪದ್ಯ ನಿಜವಾಗಿ ಚೆನ್ನಾಗಿದೆ. (ಬೇಂದ್ರೆಯವರ 'ಮೊದಲಗಿತ್ತಿ' ಸ್ವಲ್ಪ ನೆನಪಿಗೆ ಬಂತು. ಪೃಥಿವಿ ಗತಯೌವನೆಯಲ್ಲ. ನಾವೇ ಗತಯೌವನರು.) ಈಚಿನ ವರ್ತಮಾನವೇನು? ಏನೇನು ಬರೆದಿದ್ದೀರಿ?

ನಾನು ಗದಾಯುದ್ಧದ ಕೆಲಸವನ್ನು ಕೊಂಚ ಮುಂದುವರಿಸುತ್ತಿದ್ದೇನೆ. ಕೆಲಸಕ್ಕೆ ಹೆಚ್ಚು ವೇಳೆ ಸಿಕ್ಕುತ್ತಿಲ್ಲ.

* * *

ದಾವಣಗೆರೆ, ೨೬-೮-೧೯೪೮

ಸ್ವಾತಂತ್ರ್ಯದಿನದ ಕುರುಹಾಗಿ ಗಾಂಧೀ ಚೀಟಿಯನ್ನು ಹಚ್ಚಿ ನೀವು ಕಳಿಸಿದ ಕಾಗದ ಕೈಸೇರಿತು; ತಲೆಚೀಟಿಯ ಲಕೋಟಿಯನ್ನು ಮಾತ್ರವಲ್ಲ, ಅದರೊಳಗಿನ ನಿಮ್ಮ ಕಾಗದವನ್ನು ಭದ್ರವಾಗಿ ಇರಿಸಿಕೊಂಡಿದ್ದೇನೆ. ಎರಡೂ ನನಗೆ ಪ್ರಿಯ.

ಆಗಸ್ಟ್ ೧೫ಕ್ಕೆ ಮೈಸೂರಿಗೆ ಬರಬೇಕೆಂದು ನನಗೂ ಆಹ್ವಾನ ಬಂದಿತ್ತು. ಆದರೆ ವಾರ ವಾರಕ್ಕೂ ಈ ಸ್ಥಳವನ್ನು ಬಿಟ್ಟು ಹೊರಡುವುದು ನನಗೆ ಚೆನ್ನಾಗಿ ಕಾಣಿಸಲಿಲ್ಲ; ಅಲ್ಲದೆ ಎರಡು ರಾತ್ರಿಯ ಪ್ರಯಾಣ, ಎಲ್ಲಕ್ಕೂ ಮುಖ್ಯವಾಗಿ ಒಂದು ಪದ್ಯವನ್ನು ಬೇರೆ ಕಟ್ಟಬೇಕಾಗಿತ್ತು! ಇದ್ದಕಡೆ ಇರುವುದೇ ಉತ್ತಮವೆಂದು ತೋರಿ ಸುಮ್ಮನಿದ್ದುಬಿಟ್ಟೆ!

ರಾಜಾಜಿ ಬೆಂಗಳೂರಿಗೆ ಬಂದಾಗ ಆ ಸಂಭ್ರಮವನ್ನು ನೋಡಲು ನನಗೆ ಆಗಲಿಲ್ಲವಲ್ಲ ಎಂದು ಮನಸ್ಸು ಕೊರೆಯುತ್ತಿದೆ. ಮೈಸೂರಿನಲ್ಲಿ ಬೆಂಗಳೂರಿನಲ್ಲಿ ಅವರು ಮಾಡಿದ ಭಾಷಣಗಳ ವರದಿಗಳನ್ನು ಎರಡುದಿನ ತಡವಾಗಿ ಇಲ್ಲಿಗೆ ಬರುವ ಹಿಂದೂಪತ್ರಿಕೆಯಲ್ಲಿ ಓದಿ ತೃಪ್ತಿ–ಅಲ್ಲ, ಅತೃಪ್ತಿ – ಪಟ್ಟುಕೊಳ್ಳಬೇಕಾಯಿತು. ಪರಿಷತ್ತಿಗೆ ಅವರು ಭೇಟಿ ಕೊಟ್ಟಾಗ ನೀವು ಅಲ್ಲಿಗೆ ಹೋಗಿದ್ದಿರಾ? ಹೇಗಿತ್ತು? ...ಮಾತೃಭಾಷೆ ಆರೈಕೆಯಿಲ್ಲದೆಯೆ ಬೆಳೆಯುವುದೆಂಬ ಅವರ ವಾದವನ್ನು ನಾನು ಒಪ್ಪಲಾರೆ. ತಾಯಿಯನ್ನು ಮನೆಯಿಂದ ಹೊರಕ್ಕೆ ದಬ್ಬಿ ಅನ್ನನೀರು ಹಾಕದೆ ಸಾಯಲಾಗಿಸುವ ಎಷ್ಟೊಂದು ಸಂಸಾರಗಳಿಲ್ಲ! ಮಾತೃಭಾಷೆಗೂ ಪೋಷಣೆ ರಕ್ಷಣೆ ಬೇಕು! – ಈ ವಿಚಾರ ಹಾಗಿರಲಿ. ರಾಜಾಜಿಯವರ ಭಾಷಣಗಳಲ್ಲಿ ವಿವಾದಾಂಶ ಏನೇ ಇದ್ದರೂ ಅವುಗಳ ಸರಣಿ ಮನೋರಂಜಕ, ವಿಚಾರ ಪ್ರಚೋದಕ. ದೇಶಭಕ್ತಿಗೆ ಇನ್ನು ಮೇಲೆ ಹೊಸ ರೂಪು ಕೊಡಬೇಕು – ಎಂದು ಅವರು ಒತ್ತಿ ಹೇಳುತ್ತಿರುವುದು ಈಗಿನ ಪರಿಸ್ಥಿತಿಯಲ್ಲಿ ಅತ್ಯುಚಿತ.........

ನನ್ನ ಮಿತ್ರರೆಲ್ಲ ನನ್ನನ್ನು ಮರೆತಂತೆ ತೋರುತ್ತದೆ. ಯಾರಿಂದಲೂ ಈಚೆಗೆ ಕಾಗದವಿಲ್ಲ. ನಿಮ್ಮನ್ನು ಮಾತ್ರ ನಾನು ಆಕ್ಷೇಪಿಸುವ ಹಾಗಿಲ್ಲ. ಏಕೆಂದರೆ ನಿಮ್ಮ ಕಾಗದಕ್ಕೆ ಉತ್ತರ ನನ್ನಿಂದಲೇ ಬಾಕಿ ನಿಂತಿದೆ! ಡಿ.ಎಲ್.ನ.ರಿಂದ ಒಂದು ಕಾಗದ ಬರಬೇಕಾಗಿತ್ತು. ಶಾಸ್ತ್ರಿಗಳು ಹೇಗಿದ್ದಾರೆ? ಕೊಠಡಿ, ಊಟ? ಇನ್ನೂ "ರೂಂ ರೂಂ....... ಸೂಸೂ.........." ಗಾನ ಸಾಗುತ್ತಿದೆಯೊ?..........

ಕಾ. ಅಸೆಂಬ್ಲಿಯ ಕೆಲಸದ ವಿಚಾರ ನನ್ನ ಮಟ್ಟಿಗೆ ಹಾಸ್ಯಾಸ್ಪದವಾಗಿ ಪರಿಣಮಿಸಿತು. ಇಲ್ಲಿ ಮನೆ ಮಾಡಿ ಬಾಡಿಗೆ ತೆರುತ್ತಿದ್ದೇನೆ. ಹಾಸ್ಟೆಲಿಗೆ ಹೇರಳವಾಗಿ ಹಣ ತೆರುತ್ತಿದ್ದೇನೆ. ಇಲ್ಲಿಯ ನನ್ನ ವೆಚ್ಚದಲ್ಲಿ ಇಬ್ಬರಲ್ಲ, ಮೂರು ಜನ ಸಂಸಾರ ಮಾಡಿಕೊಂಡಿರಬಹುದು. – ಆದರೆ ಇಲ್ಲಿ ನಾನೊಬ್ಬನೇ; ಮನೆಯುಂಟು, ಮನೆಯ ಹಿತವಿಲ್ಲ! ಅಲ್ಲಿ, ಬೆಂಗಳೂರಿನಲ್ಲಿ, ನಾನಿಲ್ಲವೆಂದು ಯಾವ ಭಾರವೂ ಕಡಿಮೆಯಾಗಿಲ್ಲ. ಈ ಕೆಲಸದ ವಿಷಯ ಹೀಗೋ ಹಾಗೋ ನಿಷ್ಕರ್ಷೆಯಾದ ಹೊರತು, ಮನೆಯವರನ್ನು ಇಲ್ಲಿಗೆ ಬರಮಾಡಿಕೊಳ್ಳುವಹಾಗಿಲ್ಲ. ಸಂನ್ಯಾಸಿಯ ಹೆಂಡತಿಯ ಕಥೆಯಾಯಿತು ನನ್ನ ಪರಿಸ್ಥಿತಿ! ಏನು ಮಾಡಬೇಕೆಂದು ತೋರದಂತಾಗಿದೆ. ಒಂದು ಬಾರಿ ಬೆಂಗಳೂರಿಗೆ ಬಂದು ಹೋಗಲು ಸುಮಾರು ೨೦-೨೫ ರೂಪಾಯಿ

ವೆಚ್ಚವಾಗುತ್ತದೆ; ರಜ–ಜಿಪುಣನಂತೆ ರಕ್ಷಿಸಿಕೊಳ್ಳಬೇಕಾದ ರಜ–ವೆಚ್ಚವಾಗುತ್ತದೆ. ಇದರ ಮೇಲೆ ಬಂದುಹೋದರೆ ತಾನೆ ಏನು ಫಲವೋ. ಏನೂ ತೋರುವುದಿಲ್ಲ – ಇರಲಿ, ನನ್ನ ಗೋಳು!

ನೀವು ಈಚೆಗೇನಾದರೂ ಬರೆದಿರಾ?.... ಮೈಸೂರಿನಲ್ಲಿ ಏನೇನು ಮಾಡಿದಿರಿ? ಬೆಂಗಳೂರಿನಲ್ಲಿ ಸಂಭ್ರಮ ಹೇಗಿತ್ತು! ಎಲ್ಲವನ್ನೂ ವರ್ಣಿಸಿ ಒಂದು ಕಾಗದವನ್ನು ದೀರ್ಘವಾಗಿ ಬರೆಯಿರಿ. ಅಲ್ಲದೇ ನೀವು ಕೆಲವುದಿನದ ಮಟ್ಟಿಗೆ ದಾವಣಗೆರೆಗೆ ಬರುವುದಾಗಿ ಹೇಳಿದ್ದಿರಿ. ಈಗ ಏಕೆ ಬರಬಾರದು? ಹೇಗಿದ್ದರೂ ನಾಳೆಯ ದಿನ ಗೋಕುಲಾಷ್ಟಮಿ ಮುಗಿದು ಹೋಗುತ್ತದೆಯಲ್ಲ! ಸ್ವಲ್ಪ ತಿಂಡಿಯನ್ನೂ ಜೊತೆಗೆ ತಂದರೆ ನಾನೇನೂ ಬೇಡವೆನ್ನುವುದಿಲ್ಲ. (ಹಾಗೆಂದರೆ ಇಲ್ಲಿ ನನಗೆ ಊಟ ತಿಂಡಿಗೇನೂ ಕೊರತೆಯಿಲ್ಲ. ನಾಳೆಯ ರಾತ್ರಿಗೆ ಗೋಕುಲಾಷ್ಟಮಿಯ ಪ್ರಸಾದ ಡಾಕ್ಟರ್ ಕೃಷ್ಣಸ್ವಾಮಿಯವರ ಮನೆಯಲ್ಲಿ ಕಾದಿದೆ.)

ನೋಡಿ, ಬಿಡುವು ಮಾಡಿಕೊಂಡು ಬನ್ನಿ. ದಾವಣಗೆರೆಯಲ್ಲಿ ಈಗ ಸೆಕೆ ಇಲ್ಲ. ಆಗಾಗ ತುಂತುರುಮಳೆ ಬೀಳುತ್ತದೆ. ನಾನಿರುವ ಪ್ರದೇಶ ಊರಿನ ಒಂದು ಅಂಚು; ಎರಡು ಹೆಜ್ಜೆ ಇಟ್ಟರೆ ಹೊಲಸಾಲು ಸಿಕ್ಕುತ್ತದೆ. ಪೈರು ಈಗತಾನೆ ಮೊಳೆತಿದೆ, ನೆಲದ ಮೇಲೆ ಹಸುರು ಜಮಖಾನ ಹಾಸಿದಂತೆ ಕಾಣಿಸುತ್ತದೆ. ಈ ಜಮಖಾನ ಇನ್ನೂ ನಾಲ್ಕಾರು ದಿನಗಳಲ್ಲಿ ರತ್ನಗಂಬಳಿಯಾಗುತ್ತದೆ. ಸಂಚಾರ ಹೋಗಲು ಮೂರು ದಾರಿಗಳಿವೆ. ಸಂಜೆಯ ಹೊತ್ತು ಇಬ್ಬರು ಮೂವರು ಮಿತ್ರರೊಡನೆ ಒಂದೆರಡು ಘಂಟೆಯಕಾಲ 'ವಾಕಿಂಗ್' ಹೋಗುವುದೊಂದೇ ನನಗಿರುವ ಉಲ್ಲಾಸ ಇಲ್ಲಿ.

ಎಲ್ಲ ವಿಚಾರವನ್ನು ಕೂಡಲೇ ಬರೆಯಿರಿ. ಈ ಕಾಗದ ಗೋಕುಲಾಷ್ಟಮಿಯ ವೇಳೆಗೆ ನಿಮ್ಮ ಕೈಸೇರಬೇಕೆಂದು ಈ ದಿನವೇ ಬರೆದಿದ್ದೇನೆ.

ನಮ್ಮ ಮನೆಯ ಕಡೆಗೇನಾದರೂ ಈಚೆಗೆ ಹೋಗಿದ್ದಿರಾ? ನಿಮ್ಮಲ್ಲಿ ಎಲ್ಲರೂ ಆರೋಗ್ಯವಷ್ಟೆ

ಈ ಪುಟವನ್ನು ಹಾಗೆಯೇ ಬಿಡಬೇಕಲ್ಲ. ಎನ್ನಿಸಿತು. ಆದರೆ ಇದರಲ್ಲಿ ಸೇರಿಸಲು ಏನೂ ವಿಷಯ ತೋರುತ್ತಿಲ್ಲ. ಮನಸ್ಸಿನಲ್ಲಿ ಉತ್ಸಾಹವೂ ಇಲ್ಲ.

* * *

ದಾವಣಗೆರೆ, ೧೦–೯–೧೯೪೪

ನೀವು ಬಿ.ಎಂ.ಶ್ರೀ.ಯವರ ಭಕ್ತರಾದುದನ್ನು ಓದಿ ಮೆಚ್ಚಿದೆ. ಅಭಿನಂದನೆಗಳನ್ನು ಸಲ್ಲಿಸಬೇಕಾಗಿತ್ತು. ಆದರೆ ಮರೆತು ತಪ್ಪುಮಾಡಿದೆ. ಇದರ ಮೇಲೆ ನಿಮ್ಮ ಕರ್ತವ್ಯವನ್ನಷ್ಟೇ ನೀವು ಮಾಡಿದ್ದೀರಿ. ಇದರಲ್ಲಿ ಹೆಚ್ಚಿನದೇನು!

ಮೊನ್ನೆಯ ರಾತ್ರಿ ಇಲ್ಲಿಯ ಒಂದು ವಿದ್ಯಾರ್ಥಿ ಸಂಘದಲ್ಲಿ ನಿಮ್ಮ ಗಣೇಶ ದರ್ಶನವನ್ನು ವ್ಯಾಖ್ಯಾನಸಹಿತ ಓದಿದೆ. ಸಭೆಯಲ್ಲಿ ಸಾಂಪ್ರದಾಯಿಕವಾದ ಮಹಿಳೆಯರೂ ಹಲವರು ಇದ್ದರು. ಸಾವಧಾನವಾಗಿ ಎಲ್ಲರೂ ಕೇಳಿದರು. ಸದ್ಯಃ ನನ್ನಿಂದ ನಿಮ್ಮ ಕಾವ್ಯಕ್ಕೆ ಅಗೌರವವೇನೂ ಆಗಲಿಲ್ಲ.

* * *

ದಾವಣಗೆರೆ, ೧೫-೧೦-೯೪೪

ಇದು ಹೊಸಮಾದರಿಯ ಕಾಗದ. ಅಂದರೆ ಸಂಕ್ಷೇಪಕ್ಕಿಂತ ಸಂಕ್ಷೇಪ!

'ಕಟ್ಟುವೆವು ನಾವು' ಸಂಗ್ರಹಕ್ಕೆ ನಿಮ್ಮ ಮುನ್ನುಡಿ ಬಲು ಸೊಗಸಾಗಿದೆ. ಓದಿ ತುಂಬಾ ಸಂತೋಷವಾಯಿತು. "ಶಬ್ದದೊಳಗಣ ನಿಶ್ಶಬ್ದದಂತೆ" ಯಾವಾಗ ನಿಮ್ಮ ಕಿವಿಗೆ ಕಣ್ಣಿಗೆ ಗೋಚರವಾಗಿತ್ತು?

ಬೇಂದ್ರೆ, ಮೂರ್ತಿರಾವ್ ಇವರ ಸಹವಾಸದಲ್ಲಿ ಕಳೆದ ಎರಡು ಮೂರು ದಿನಗಳು ಇಲ್ಲಿ ಬಲುಹಿತವಾಗಿದ್ದವು. ಬೇಂದ್ರೆ ನಿನ್ನೆಯ ಬೆಳಗ್ಗೆ, ಮೂರ್ತಿರಾವ್ ಈ ಬೆಳಗ್ಗೆ ಹಿಂತಿರುಗಿದರು. ನನ್ನ ಮನೆಯಲ್ಲಿ–ಮನದಲ್ಲಿ ಮತ್ತೆ ಮೌನ, ಬೇಸರ–ಮುಸುಕಿಕೊಂಡಿವೆ.

ಉದ್ದವಾದ ಕಾಗದ ಬರೆಯಲು ವ್ಯವಧಾನವಿಲ್ಲ. ಮನಸ್ಸೂ ಇಲ್ಲ.

* * *

ದಾವಣಗೆರೆ, ೨-೧೧-೯೪೪

ನಿಮ್ಮ ಎರಡು ಕಾಗದಗಳೂ ತಲಪಿವೆ. ಕೋಲಾರದ ಪ್ರವಾಸದ–ಅಲ್ಲ, ದಿಗ್ವಿಜಯದ – ವರ್ಣನೆ ಸೊಗಸಾಗಿ ಬಂದಿದೆ. ಅದರ ಕನ್ನಡ ಎಷ್ಟು ಹದವಾಗಿ ಸರಾಗವಾಗಿ ಹರದಿದೆ! ನಿಮ್ಮ ಪ್ರಬಂಧಗಳಲ್ಲೂ ಈ ಲಾಲಿತ್ಯ ಇನ್ನು ಸ್ವಲ್ಪ ಹೆಚ್ಚಾಗಿ ಬರಬಾರದೆ!

ಕೋಲಾರದಲ್ಲಿ ಎಲ್ಲವೂ ಹಿತವಾಗಿತ್ತೆಂದು ಕೇಳಿ ನನಗೆ ತುಂಬ ಸಂತೋಷವಾಯಿತು, ಸಮಾಧಾನವಾಯಿತು. ನಿಮ್ಮನ್ನು ಮೆಚ್ಚುವವರು ಎಲ್ಲ ಕಡೆಯೂ ಇದ್ದಾರೆ; ಇನ್ನು ಸ್ವಲ್ಪ ಹೆಚ್ಚು ಬಳಕೆ ಬೇಕು, ಅಷ್ಟೆ. ನಿಮ್ಮ ಕಾವ್ಯಶ್ರವಣ ಫಲಕಾರಿಯಾಗುವುದು ಗೋಷ್ಠಿಗಳಲ್ಲಿ; ಅಲ್ಲಂತೂ ಅದು ಅದ್ಭುತ ಫಲವನ್ನೇ ಕೊಡುತ್ತದೆ. ಇದು ನನ್ನ ಅನುಭವದ ಮಾತು, ನಿಮ್ಮ ಅನುಭವದ ಮಾತೂ ಕೂಡ. ಆದಕಾರಣ, ಯಾರದರೂ ನಿಮ್ಮನ್ನು ಆಹ್ವಾನಿಸಿದರೆ ಧೈರ್ಯವಾಗಿ ಒಪ್ಪಿಕೊಳ್ಳಿ; ಸಂಕೋಚಬಿಟ್ಟು ಮಾತಾಡಿ; ಗಂಟಲು ಬಿಟ್ಟು ಪದ್ಯಗಳನ್ನೂ ಗೀತೆಗಳನ್ನೂ ಹಾಡಿ; ಆಗ ನೋಡಿ!

ಕೋಲಾರದ ಭಾಷಣ ಎಲ್ಲಿ ಅಚ್ಚಾಗುತ್ತದೆ! ಏನಾದರೂ ಏರ್ಪಾಡು ಮಾಡಿದ್ದೀರಾ? ಅದು ಅಚ್ಚಾಗುವ ತನಕ ನಾನು ಅದನ್ನು ಓದಕೂಡದೆಂಬ ನಿರ್ಬಂಧವೇನಾದರೂ ಉಂಟೆ?

'ವಿಕಟಕವಿ ವಿಜಯ'ದ ಇನ್ನೊಂದು ಪ್ರೂಫನ್ನು ನನಗೆ ಚಿದಂಬರಂ ಕಳಿಸಿಲ್ಲ. ಆ್ಯಂಟಿಕ್ ಅಕ್ಷರಗಳನ್ನು ಉಪಯೋಗಿಸಿರುವುದಾಗಿ ನನಗೆ ಕಾಗದ ಬರೆದಿದ್ದರು ಅಷ್ಟೆ. ಪ್ರೂಫುಗಳನ್ನು ನನಗೂ ಕಳಿಸಿದರೆ ಸಂತೋಷದಿಂದ ಓದಿ, ಆದಷ್ಟು ಬೇಗ ಹಿಂದಿರುಗಿಸುತ್ತೇನೆ....... ಅಲ್ಲ, ವಿ.ವಿಜಯದ ವಿಚಾರದಲ್ಲಿ ನಿಮಗೇಕೆ ಮತ್ತೆ ಸಂದೇಹ! ಅದು ಬಲು ಸೊಗಸಾದ ನಾಟಕವೆಂದೇ ನನ್ನ ದೃಢವಾದ ಅಭಿಪ್ರಾಯ. ಒಂದು ಸಂಗತಿಯನ್ನು ಕೇಳಿ. ನಿಮ್ಮ ಪ್ರೂಫ್ ಬಂದಾಗ ನಾನು ಹಾಸಿಗೆ ಹಿಡಿದಿದ್ದೆನಷ್ಟೆ. ಜ್ವರ ಬಿಟ್ಟಿತ್ತು; ಪ್ರೂಫನ್ನು ಹಿಂದಕ್ಕೆ ಕಳಿಸಬೇಕೆಂದು

ಆಲೋಚಿಸುತ್ತಿದ್ದೆ. ಅಂದು ಮಂಗಳವಾರ; ಮಂಗಳವಾರ ಮಧ್ಯಾಹ್ನ ನಮ್ಮ ಡಾಕ್ಟರು "ಷಾಪಿ"ಗೆ ಹೋಗುವುದಿಲ್ಲ; ವಿರಾಮ ತೆಗೆದುಕೊಳ್ಳುತ್ತಾರೆ. ನನ್ನನ್ನು ನೋಡಿಕೊಂಡು ಹೋಗಲು ಸುಮಾರು ಮೂರೂವರೆ ಘಂಟೆಗೆ ಬಂದರು. ಆ ಮಾತು ಈ ಮಾತು ಆಡುತ್ತಾ ನಿಮ್ಮ ಪದ್ಯದ ವಿಷಯ ಬಂತು. ನನಗೂ ಈಚೆಗೆ ಬಾಯಿ ಕಟ್ಟಿತ್ತು; ಇನ್ನು ಸುಮ್ಮನೇಕೆ ಇರಬೇಕು ಎಂದುಕೊಂಡು ವಿ.ವಿಜಯದ ಪ್ರೂಫ್ಷಿನ ಬಹುಭಾಗವನ್ನು ಅವರಿಗೆ ಓದಿ ಹೇಳಿದೆ. ಅವರು ಆಲಿಸಿ ಕೇಳಿದರು, ಮೆಚ್ಚಿದರು. ನಾಟಕ ಅಚ್ಚಾಗಿ ಬಂದ ಮೇಲೆ ಓದುತ್ತೇನೆ; ಪು.ತಿ.ನ. ಅವರ ಕವನ ಕಷ್ಟವೆಂದು ಕೊಂಡಿದ್ದೆ; ಇದು ಅರ್ಥವಾಗುತ್ತದೆ, ಚೆನ್ನಾಗಿದೆ – ಎಂದರು......... ನಾನೂ ನಿಮಗೆ ಅಲ್ಲಲ್ಲಿ ಸಹೃದಯ ಪಾಠಕರನ್ನು ಸಿದ್ಧಪಡಿಸುತ್ತಿದ್ದೇನೆ! – ಏನು "ದಳ್ಳಾಳಿ" ಕೊಡುತ್ತೀರಿ!

ನಿಮ್ಮ ರೇಡಿಯೋ ಯಾವ ಮಾದರಿಯದು, ಎಷ್ಟು ಬೆಲೆ ಕೊಟ್ಟಿರಿ! ದುಡ್ಡು ಎಲ್ಲಿಂದ ಬಂದಿತು! ಅದನ್ನು ಹಾವಿನ ಬುಟ್ಟಿಗೆ ನೀವು ಹೋಲಿಸಿರುವುದು ಚೆನ್ನಾಗಿದೆ.

ಇನ್ನು ನನ್ನ ವಿಚಾರ ಸ್ವಲ್ಪ ಬರೆಯುತ್ತೇನೆ. ಈ ತ್ರಿಶಂಕು 'ನರಕ' ನನಗೆ ಬಲು ಬೇಸರವಾಗಿದೆ. ಮಡದಿಯ ಮಕ್ಕಳ ಅಗಲಿಕೆ, ಈ ಶೂನ್ಯಪ್ರದೇಶದಲ್ಲಿ ಏಕಾಂಗವಾಸ, ಅಷ್ಟೇನೂ ಹಿತವಲ್ಲದ ಕಚೇರಿಯ ಕೆಲಸ, ಹಣಕಾಸಿನ ಮುಗ್ಗಟ್ಟು – ಇವೆಲ್ಲ ನಿಜವಾಗಿಯೂ ಮನಸ್ಸನ್ನು ಬಾಧಿಸುತ್ತಿವೆ. ಆದರೆ ಏನು ಮಾಡಲಿ? ಏನಾದರೂ ಒಂದು ನಿರ್ಣಯ ಬೇಗ ಗೊತ್ತಾದರೆ ಮುಂದಿನ ಏರ್ಪಾಡನ್ನು ಮಾಡಿಕೊಳ್ಳಬಹುದು!

ಇನ್ನೊಂದು ವಿಷಯವೂ ನನಗೆ ಈ ದಿನಗಳಲ್ಲಿ ಖಚಿತವಾಯಿತು! "ಸೂಪರ್ರಿಟೆಂಡೆಂಟ್" ಕೆಲಸ ನನಗೆ ಹೇಳಿದ್ದಲ್ಲ! ದಿನದಿನದ ಕೆಲಸವನ್ನೇನೋ ಶ್ರದ್ಧೆಯಿಂದಲೇ ಮಾಡಿಕೊಂಡು ಹೋಗುತ್ತಿದ್ದೇನೆ. ಅಂಥ ಕ್ಲೇಶಗಳೂ ಇದುವರೆಗೆ ಯಾವುವೂ ಒದಗಿಲ್ಲ. ಆದರೆ ಇದಲ್ಲ ನನ್ನ ಕೆಲಸ! – ಇದು ವಿಧಿಯಿಲ್ಲದೆ ಮಾಡಬೇಕಾಗಿರುವ ಕೆಲಸ. ಇಲ್ಲಿಗೆ ಬಂದ ಮೇಲೆ ಪಾಠ ಹೇಳುವುದು ಕಡಿಮೆಯಾಯಿತು; ನಾನೇ ಉದ್ದೇಶಪಟ್ಟು ವಾರಕ್ಕೆ ಆರು ಘಂಟೆಯ ಪಾಠವನ್ನು ಇಟ್ಟುಕೊಂಡಿದ್ದೇನೆ. ಆದರೆ ಈಚೆಗೆ ಪರೀಕ್ಷೆ ಮಿಕ್ಕ ಕೆಲಸದ ತೊಂದರೆ ಇದರಿಂದ ವಾರಕ್ಕೆ ಒಂದು ಘಂಟೆ ಮಾತ್ರ ಪಾಠ ಹೇಳಲು ಸಾಧ್ಯವಾಯಿತು. ನಿನ್ನೆಯ ದಿನ ಆ ಪಾಠವಿತ್ತು – ಪಂಪರಾಮಾಯಣದಲ್ಲಿ ಒಂದು ಭಾಗವನ್ನು ಓದಿ ವಿವರಿಸುತ್ತಿದ್ದೆ. ಆಗ ನನಗೇ ಅನ್ನಿಸಿತು: ಇದೇನು ನನ್ನ ಸ್ಥಿತಿ! ಹುಡುಗರಿಗೆ ಸಂತೋಷವಾಗಲಿ, ಬಿಡಲಿ, ನನಗಂತೂ ಈ ಪ್ರವಚನ ಇಷ್ಟೊಂದು ಉಲ್ಲಾಸ ಕೊಡುತ್ತಿದೆ; ಅಲ್ಲದೆ, ಹುಡುಗರಿಗೂ ಅತೃಪ್ತಿಯಾದಂತೇನೂ ಕಾಣಿಸಲಿಲ್ಲ! ಈ ವೃತ್ತಿಯನ್ನು ಮೂಲೆಗೊತ್ತಿ, ರುಜುಹಾಕುವ, ಯಾವುದೋ ಆಡಳಿತದ ವಿಚಾರಗಳಿಗೆ ಹಲುಬುವ, ಆತಂಕ ಪಡುವ, ಸರ್ಕಾರಿ ಕಾಗದಗಳನ್ನು ಸುಮ್ಮನೆ ಬರೆಯುವ ಕೆಲಸಕ್ಕೆ ತಲೆಕೊಟ್ಟೆ ನಲ್ಲ–ಎನ್ನಿಸಿತು! ಇದರಿಂದ ಎಷ್ಟು ಬೇಗ ಬಿಡುಗಡೆಯಾದರೆ ಅಷ್ಟೂ ಕ್ಷೇಮ...... ಇತ್ತೀಚೆಗೆ ಮೈಸೂರಿನಿಂದ ತಂದ ಭಾಷಾಶಾಸ್ತ್ರ ವಿಷಯದ ಕೆಲವು ಪುಸ್ತಕಗಳನ್ನು ಓದುತ್ತಿದ್ದೇನೆ. ಅದರಿಂದಲೂ ಒಂದು ಅಂಶ ಖಚಿತವಾಯಿತು: ಈ ಶಾಸ್ತ್ರದಲ್ಲಿ ನನಗೆ ಒಲವು ಹೆಚ್ಚು. ಶೋಧಕದೃಷ್ಟಿಯೂ ಉಂಟು. ನನ್ನ ಜೀವನವನ್ನು ಇದಕ್ಕೆ ಮುಡಿಪಾಗಿ ಇಟ್ಟು ಸಂತತವಾಗಿ

ಕೆಲಸ ಮಾಡಲು ಆಗಿದ್ದರೆ ಲೋಕಕಲ್ಯಾಣವನ್ನೂ ಕೆಲಮಟ್ಟಿನ ಕೀರ್ತಿಯನ್ನೂ ಸಾಧಿಸಬಹುದಾಗಿತ್ತು! ಅದೂ ನನಗೆ ಲಭ್ಯವಿಲ್ಲ! ಹೋಗಲಿ ಬಿಡಿ.

ಕಾಗದ ನಾನು ನಿರೀಕ್ಷಿಸಿದ್ದಕ್ಕಿಂತ ಉದ್ದವಾಯಿತು, ಬೇಸರ ಪಡಬೇಡಿ. ಬೇಗ ನೀವು ಇನ್ನೊಂದು ಉದ್ದವಾದ ಕಾಗದ ಬರೆಯಿರಿ......... ಕೊನೆಯ ಮಾತು: ಈ ಕಾಗದದ ಹಾಳೆಗಳಲ್ಲಿ "Assistant Profesor of Kannada" ಎಂಬ ಮಾತುಗಳನ್ನು ಹೊಡೆದು ಹಾಕುವಾಗ ಮನಸ್ಸು ನನಗೆ ಚುಳ್ಳೆನ್ನುತ್ತದೆ!

* * *

ದಾವಣಗೆರೆ, ೨೨-೧೧-೧೯೪೮

ನಿಮ್ಮ ಕಾಗದ ಶನಿವಾರ ತಲುಪಿತು, ಅಂದು ಸುದಿನ. ನಿಮ್ಮದರ ಜೊತೆಯಲ್ಲಿ, ಯಾವುದೋ ಅಜ್ಞಾತ ಶಕ್ತಿಯಿಂದ ಪ್ರೇರಿತವಾಗಿ, ಡಿ.ಎಲ್.ನ., ಚಿದಂಬರಂ, ಮೂರ್ತಿರಾವ್, ನಂಜುಂಡಯ್ಯ- ಇವರ ಕಾಗದಗಳೂ ಬಂದುವು. ಒಂದೇ ಸಲಕ್ಕೆ ಎಷ್ಟು ಕಾಗದಗಳು, ಪ್ರಿಯಮಿತ್ರರ ಕಾಗದಗಳು! ಆದರೆ ಎಲ್ಲವೂ ಚಿಕ್ಕವು, ಎಲ್ಲವೂ ಕಾರ್ಡುಗಳು! ಆದರೂ ಅವನ್ನು ಓದಿ ಹರ್ಷವಾಯಿತು. ಇಲ್ಲಿಯ ಏಕಾಂತವಾಸ ಬಲುಮಟ್ಟಿಗೆ ಹಗುರವಾಯಿತು. ಇನ್ನೂ ಒಬ್ಬಿಬ್ಬರು ಪ್ರಿಯಮಿತ್ರರ ಕಾಗದಗಳು ಬಂದಿದ್ದರೆ ಉತ್ಕೃಷ್ಟವಾಗುತ್ತಿತ್ತು. ಆದರೆ ಅದು ಆಶೆಗೆ ಮೀರಿದ ಭಾಗ್ಯ! ಅಲ್ಲದೆ ಅವರಲ್ಲಿ ಒಬ್ಬರಿಗಂತೂ ನಾನು ಇನ್ನೂ ಇಲ್ಲಿಂದ ಬರೆದಿಲ್ಲ. ನನ್ನ ಕಾಗದದ ಪಾತಾಳಗರುಡಿಗೇ ಆತನ ಉತ್ತರ ನಿಲುಕುವುದು ಕಷ್ಟ; ಸುಮ್ಮಸುಮ್ಮನೆ ಬಾ ಎಂದರೆ ಬರುತ್ತದೆಯೆ? ಆತ ಯಾರೆಂದು ನಾನು ಹೆಸರಿಸದೆಯೇ ಈ ವೇಳೆಗೆ ನಿಮಗೆ ತಿಳಿದಿರಬೇಕು......... ಅಂದು ನಮ್ಮ ಮನೆಯಿಂದ ನಾನು ನಿರೀಕ್ಷಿಸುತ್ತಿದ್ದ ಕಾಗದ ಮಾತ್ರ ಬರಲಿಲ್ಲ,-ಇನ್ನೂ ಬಂದಿಲ್ಲ - ಅದರಿಂದ ಕೊಂಚ ಆಶಾಭಂಗವಾಯಿತು. ನನ್ನ ಪರಿತೃಪ್ತಿ ಹಳೆಯಬೀಡಿನ ದೇವಸ್ಥಾನವಾಯಿತು!

ಪದ್ಯವನ್ನು ಕಳಿಸುವ ಒತ್ತಾಯ ಇಲ್ಲದಿದ್ದರೆ ಇಂದು ನಾನು ಈ ಉತ್ತರವನ್ನು ಬರೆಯುತ್ತಿರಲಿಲ್ಲ. ಕಾಗದ ಬರೆಯಲು ಅಷ್ಟೊಂದು ಉತ್ಸಾಹವಿಲ್ಲ, ಅಲ್ಲದೆ ಮಧ್ಯಾಹ್ನದ ಕಾಲೇಜಿಗೆ ಬೇರೆ ಹೊತ್ತಾಗುತ್ತಿದೆ. ಎರಡು ಪಂಕ್ತಿಗಳಲ್ಲಿ ಮುಗಿಸುತ್ತೇನೆ.

'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ನಿಜವಾಗಿಯೂ ಚೆನ್ನಾಗಿದೆ. ನೀವು ಬಿ.ಎಂ.ಶ್ರೀ.ಯವರ ಭಕ್ತರಾದದ್ದನ್ನು ಕಂಡು ನನಗೆ ಅಮಿತಾನಂದ. ಅವರ ಮೊದಮೊದಲಿನ ಗದ್ಯ ಬಲು ಹದ. ಅವರ ಶೈಲಿ ಭಾಷಣದ ಶೈಲಿ ಎಂದು ರಂಗಣ್ಣನವರು ಹೇಳಿದ್ದಾರೆ. ಈ ಮಾತು ಬಲುಮಟ್ಟಿಗೆ ನಿಜ. ಲೇಖನಗಳನ್ನು ಇನ್ನೂ ಪೂರ್ತಿಯಾಗಿ ಓದಲು ಆಗಿಲ್ಲ. ರಂಗಣ್ಣನವರ ಮುನ್ನುಡಿಯನ್ನೇನೋ ಓದಿದೆ - ಶೈಲಿ ನನಗೆ ಪೂರ್ತಿ ಸುಖ ಕೊಡದಿದ್ದರೂ ವಿಷಯ ಹಿಡಿಸಿತು. ಬಲುಮಟ್ಟಿಗೆ - ಏಕೆ ಹಿಡಿತದ ಮಾತು? ಮುಕ್ಕಾಲು ಮೂರು ವೀಸೆಪಾಲು - ಒಪ್ಪಿತು. ಮೂರ್ತಿರಾಯರು ಕಾಗದದಲ್ಲಿ ನನಗೆ ಬರೆದಿರುವಂತೆ "there is the right blend of reverence and clear sightedness".... ಇಂಥ ಉತ್ಕೃಷ್ಟ ಸಂಪುಟವನ್ನು ಶ್ಲಾಘ್ಯವಾದ

ಮುನ್ನುಡಿಯೊಡನೆ ಹೊರತಂದದ್ದಕ್ಕಾಗಿ ಚಿದಂಬರಂ ಅವರಿಗೆ ಅಭಿನಂದನೆಗಳು–ನಾನು ಇನ್ನೂ ಅವರಿಗೆ ಬರೆದಿಲ್ಲ!.......

ಯಾರು ಹೇಳಿದರು ನಿಮಗೆ ನಾನು ಶನಿವಾರ ಭಾನುವಾರದಲ್ಲಿ ಬರುವುದಾಗಿ. ಇಲ್ಲಿ ದಿನ ಎಣಿಸುತ್ತ ಕೂತಿದ್ದೇನೆ, ಯಾವ ವರ್ತಮಾನವೂ ಇಲ್ಲದೆ!....... ಸಹೃದಯಗೋಷ್ಠಿಗಳು ಚೆನ್ನಾಗಿ ನಡೆಯುತ್ತಿವೆಯೆ? ನನ್ನ ಪದ್ಯವನ್ನು ನೀವು ಓದುವುದು ಅಪೂರ್ವ ಪ್ರಸಂಗ, ನನಗೂ ಹಿತವೇ – ಆದರೆ ಕೇಳಲು ನಾನು ಅಲ್ಲಿ ಇರುವುದಿಲ್ಲವಲ್ಲ! – ಆಗಲಿ, ಪದ್ಯವನ್ನು ಕೇಳಿದವರ ಅಭಿಪ್ರಾಯವೇನು ಎಂಬುದನ್ನು ಮುಚ್ಚುಮರೆಯಿಲ್ಲದೆ ತಿಳಿಸಿ.

ಬೇಂದ್ರೆ ಇಲ್ಲಿಗೆ ನಮ್ಮ ಕಾಲೇಜ ಯೂನಿಯನ್ನಿನ ವಾರ್ಷಿಕೋತ್ಸವಕ್ಕಾಗಿ ಬಂದಿದ್ದರು. ಮತ್ತೆ ಸೊಲ್ಲಾಪುರಕ್ಕೆ ಹಿಂದಿರುಗಿದರು, ಅವರು ಮೈಸೂರಿಗೆ ಹೋಗಲು ಒಪ್ಪಿಕೊಂಡಿದ್ದರೂ, ಸರಿಯಾಗಿ ಏರ್ಪಡಿಸಿ ಕರಸಿಕೊಳ್ಳಲು ಮೈಸೂರಿನ ವ್ಯವಸ್ಥಾಪಕರಿಗೆ ಲಭ್ಯವಿರಲಿಲ್ಲ ಎನ್ನಬೇಕು! ಎರಡು ಮೂರು ದಿನ ಬಲುಹಿತವಾಗಿತ್ತು ಇಲ್ಲಿ. ಹೆಚ್ಚಿನ ಪದ್ಯಗಳನ್ನೇನೂ ಬರೆದಿರುವಂತೆ ತೋರಲಿಲ್ಲ. ಒಂದೇ ಒಂದು ಹೊಸ ಪದ್ಯವನ್ನು ಓದಿದರು – ಕನ್ನಡಿಗರನ್ನು ಕುರಿತು. ಈಚೆಗೆ ಮರಾಠಿಯಲ್ಲಿ ಲೇಖನಗಳನ್ನು ಬರೆಯುತ್ತಿದ್ದಾರಂತೆ: ಕನ್ನಡದಲ್ಲೂ ಅವನ್ನು ಕೊಡಿ ಎಂದು ನಾನು ಹೇಳಿದೆ...... ಭಗವದ್ಗೀತೆಯಲ್ಲಿ ವಿಶ್ವರೂಪ ದರ್ಶನ ವಿಚಾರವನ್ನು ಕುರಿತು, ನನ್ನ ಮನಸ್ಸಿಗೆ ತುಂಬ ತಟ್ಟಿದ, ಒಂದು ಅಂಶವನ್ನು ಹೇಳಿದರು. ಕೇಳಿದಾಗ, ಮೈ ಜಮ್ಮೆಂದಿತು. ಅದನ್ನು ಕುರಿತು ಇನ್ನೊಂದು ಬಾರಿ ಬರೆಯುತ್ತೇನೆ. ಆ ಮೊದಲು ಆದಷ್ಟು ಬೇಗ ನಿಮ್ಮಿಂದ ಒಂದು ಕಾಗದ ಬರಲಿ.

* * *

ವರ್ಧಾಪತ್ತಿರ, ೨೭–೧೦–೧೯೪೪

ಓಡುತ್ತಿರುವ ರೈಲಿನಲ್ಲಿ ಕುಳಿತು ಬರೆಯುವುದು ಕಷ್ಟ. ಮಕ್ಕಳು ಕಾಪಿ ಪುಸ್ತಕದಲ್ಲಿ ಬರೆದಂತೆ ಅಕ್ಷರಗಳಾಗುತ್ತವೆ. ಆದರೂ ಮಾರ್ಗಮಧ್ಯದಲ್ಲಿ ಈ ಕಾಗದವನ್ನು ಟಪಾಲಿಗೆ ಹಾಕಬೇಕೆಂದಿದ್ದೇನೆ. ಅದಕ್ಕಾಗಿ ಈ ಪ್ರಯತ್ನ

ಪ್ರಯಾಣ ಹಿತವಾಗಿದೆ. ಎರಡು ರಾತ್ರಿ ಕಳೆಯಿತು.

ನಿನ್ನೆ ಮದ್ರಾಸಿನಲ್ಲಿ ಒಂದು ಸ್ನಾನಕ್ಕೆ ಮೂರು ರೂಪಾಯಿ ಮೂರಾಣೆ ಕೊಟ್ಟೆನೆಂದು ತಿಳಿದು ನಿಮಗೆ ಆಶ್ಚರ್ಯವಾಗುತ್ತದೆಯೇ? ಆದರೆ ಇನ್ನೂ ಆರಾಣೆಯನ್ನು ಅದರಲ್ಲಿ ಮಿಗಿಸಿದ ನೆಂದು ಹೇಳಬೇಕು. ಇದು ಹೇಗೆ ಎಂಬುದನ್ನು ಮುಂದಿನ ಕಾಗದದಲ್ಲಾಗಲಿ ಮುಖತಃ ಕಂಡಾಗಲಾಗಲಿ ವಿವರಿಸುತ್ತೇನೆ. "ಶಠಂ ಪ್ರತ್ಯಪಿ ಸತ್ಯಂ" ಎಂಬ ಗಾಂಧೀ ತತ್ವವನ್ನು ನಾನು ಅನುಸರಿಸಲಿಲ್ಲವಲ್ಲಾ ಎಂಬ ವ್ಯಥೆ ಸ್ವಲ್ಪಮಟ್ಟಿಗೆ ಇದೆ.

* * *

ದಾವಣಗೆರೆ, ೧೧-೨-೧೯೫೦

ನಾನು ಇಲ್ಲಿಗೆ ತಲಪಿ ಸರಿಯಾಗಿ ಒಂದು ವಾರವಾಯಿತು. ಅಧಿಕಾರವನ್ನು ವಹಿಸಿಕೊಳ್ಳುವುದು, ಬಸವನ ಹಿಂದೆ ಬಾಲದಂತೆ, ಶ್ರೀ ತ್ಯಾಗರಾಜನ್ ಅವರಿಗಾಗಿ ಏರ್ಪಟ್ಟ ಉಪಾಹಾರ, ಫೋಟೋ, ಉಪನ್ಯಾಸ ಸಮಾರಂಭ, ಭೋಜನ ಮೊದಲಾದವುಗಳಲ್ಲಿ ಅವರೊಂದಿಗೆ ನಾನು ಕುಳಿತುಕೊಳ್ಳುವುದು, ಇಲ್ಲಿಯ ವಿದ್ಯಮಾನಗಳನ್ನು ಕುರಿತ ಮಾತನ್ನು ಎಲ್ಲರ ಬಾಯಿಂದಲೂ ನನ್ನ ಪ್ರಯತ್ನವೇನೂ ಇಲ್ಲದೆಯ ಕೇಳುವುದು - ಇತ್ಯಾದಿಗಳಲ್ಲಿ ಒಂದುವಾರ ಕಳೆದುಹೋಯಿತು. ಮೊದಲನೆಯ ದಿನ ಸ್ಟೇಷನ್ನಿನಲ್ಲಿ ಶ್ರೀ ತ್ಯಾಗರಾಜನ್ ನನ್ನನ್ನು ಸ್ವಾಗತಿಸಿ ಆ ದಿನವೆಲ್ಲ ತಮ್ಮ ಮನೆಯಲ್ಲೇ ಆತಿಥ್ಯ ನಡೆಸಿದರು. ಮರುದಿನ ಆಚೆಯದಿನ - ಒಬ್ಬಿಬ್ಬರು ಮಿತ್ರರಲ್ಲಿ ಊಟ, ಎರಡು ಮೂರು ದಿನ ಟಿ.ಬಿ.ಯಲ್ಲಿ ವಾಸ; ಈಗ ಕಾಲೇಜಿಗೆ ಹತ್ತಿರದಲ್ಲಿ ಒಂದು ಚಿಕ್ಕಕೊಠಡಿಯನ್ನು ಗೊತ್ತುಮಾಡಿಕೊಂಡು ಅಲ್ಲಿಗೇ ಹೋಟಲಿನಿಂದ ಊಟ ತರಿಸಿಕೊಳ್ಳುತ್ತಿದ್ದೇನೆ. ಅಂತೂ "ಪ್ರವಾಸ"ದ ನಿತ್ಯವಿಧಿ ನಡೆಯುತ್ತಿದೆ. ಬೇಸಗೆಯ ರಜ ಬರುವ ತನಕ ಹೀಗೆಯೇ ತಳ್ಳಲೇ ಬೇಕು. ಆಮೇಲೆ ಹೇಗೋ ನೋಡೋಣ.

ನಿಮ್ಮ ಮನೆಯ ಆತಿಥ್ಯ ಉತ್ಕೃಷ್ಟವಾಗಿತ್ತು; ಇದೇಕೆ ಹೀಗೆ ಚಿಂತೆ ಪಡುತ್ತಿದ್ದೀರಿ? ನಿಮ್ಮ ಮನೆಯ ಊಟಗಳಲ್ಲಿ ಮಾಡುವಷ್ಟು "ಬಗೆ"ಗಳನ್ನು ಬೇರೆ ಕಡೆ ಪಡೆಯುವುದು ದುರ್ಲಭ; ಆ ರುಚಿಯೂ ಅಷ್ಟೆ. ನನಗಂತೂ ಯಾವ ಅರಕೆಯೂ ನಿಜವಾಗಿಯೂ ತೋರಲಿಲ್ಲ. ಈ ತಾಪತ್ರಯದ ದಿನಗಳಲ್ಲಿ ಇಷ್ಟನ್ನು ಮಾಡುವುದೇ ಮಹಾಕಷ್ಟವಲ್ಲವೆ?....... ನಿಮ್ಮ ಚೆಕ್ ಈ ವೇಳೆಗೆ ಬಂದಿರಬಹುದು. ಅಂತೂ ಧಾರವಾಡದ ಮಹನೀಯರು "ನಿಧಾನ" ಶಾಲಿಗಳಲ್ಲ ಗುರುಗಳಾಗಲು ತಕ್ಕವರು! ಇನ್ನೂ ಬರದೆ ಇದ್ದರೆ ಒಂದು ರಿಜಿಸ್ಟರ್ಡ್ ಕಾಗದವನ್ನು ಬರೆಯಿರಿ......... ಜಹಗೀರದಾರರ (ಅಲ್ಲ ಆದ್ಯರಂಗಾಚಾರ್ಯರ) "ಸಂವಿಧಾನ" ಭಾಷಾಂತರ ಸಿದ್ಧವಾಗಿ ಬಂತೆ ಹೇಗೆ?

ನಿಮ್ಮ ಹರಿಶ್ಚಂದ್ರ ನಾಟಕವನ್ನು ನನಗಂತೂ ನೀವು ಓದಿಲ್ಲವಷ್ಟೆ; ಆದಕಾರಣ ಸರಸ್ವತಿ ಮುನಿಸಿಕೊಳ್ಳಲಾರಳು. ಬೇಗ ಅದನ್ನು ಮುಗಿಸಿಬಿಡಿ; ಬೇಸಗೆಯ ರಜದಲ್ಲಾದರೂ ನನಗೆ ಪೂರ್ಣ ಕೃತಿಯನ್ನೇ ಓದಿ. ನಿಮ್ಮ ಭಗವದ್ಗೀತೆ ಏನಾಯಿತು? ಇನ್ನೂ ಹಿಂದಕ್ಕೆ ಬರಲಿಲ್ಲವೆ?........

ದಾವಣಗೆರೆಯಲ್ಲಿ ಸೆಕೆ ಆಗಲೆ ಕಾಣುತ್ತಿದೆ. ಸೂಪರಿಂಟೆಂಡೆಂಟರ ಕೊಠಡಿಯಲ್ಲಂತೂ ಯಾವಾಗಲೂ ಸೆಕೆ. "That room is the hottest place in Davangare literally and metophorically" ಹೀಗೆಂದು ಈ ಊರಿನ ಕೆಲವು ಮಿತ್ರರಿಗೆ ಆಗಲೇ ಹೇಳಿದ್ದೇನೆ. ಇದುವರೆಗೂ ಇಲ್ಲಿಗೊಂದು ಬೀಸಣಿಗೆಯನ್ನು ವಿಶ್ವವಿದ್ಯಾನಿಲಯದವರು ಮಂಜೂರು ಮಾಡಿರಲಿಲ್ಲ. ನಾನು ಹಿಂದೆ ಇಲ್ಲಿದ್ದಾಗಲೆ ಈ ವಿಷಯವಾಗಿ ಪತ್ರವ್ಯವಹಾರವನ್ನು ಮೊದಲು ಮಾಡಿತ್ತು; ಅದು ಫಲಿಸಲು ಎಷ್ಟೋಕಾಲ ಹಿಡಿದು, ನಾನು ಇಲ್ಲಿಗೆ ಬಂದು ಛಾರ್ಜ್ ತೆಗೆದುಕೊಂಡ ದಿನವೇ ವಿ.ನಿ.ದ ಮಂಜೂರಾತಿ ಇಲ್ಲಿಗೆ ಬಂತು. ಕೂಡಲೆ ಬೆಂಗಳೂರಿನ ಕಂಪನಿಗೆ ಕಾಗದ ಬರೆದೆ. ನಿನ್ನೆಯ ಸಂಜೆ ಬೀಸಣಿಗೆ ಬಂದೇಬಿಟ್ಟಿತು. ಅದನ್ನು ವಿಧ್ಯುಕ್ತವಾಗಿ ಕೊಠಡಿಯಲ್ಲಿ ಸ್ಥಾಪನೆಮಾಡಿ, ಅದರ ಗಾಳಿಯ ತಂಪನ್ನು ಕೆಲವು ನಿಮಿಷ ಅನುಭವಿಸಿದ್ದಾಯಿತು!

ಬೀಸಣಿಗೆ ಅಷ್ಟೇನೂ ಉತ್ತಮ ವರ್ಗದ್ದಲ್ಲ, ಅಲ್ಲದೆ ಅದು ಸ್ಥಿರ; ದಿಕ್ಕುದಿಕ್ಕಿಗೆ ತಿರುಗಿ ತನ್ನ ಪ್ರಭಾವವನ್ನು ಎಲ್ಲ ಕಡೆಗೂ ಎರಚುವುದಲ್ಲ. ಆದರೆ ಇದಾದರೂ ಬಂದದ್ದೇ ನಮ್ಮ ಅದೃಷ್ಟ!........ ಬೀಸಣಿಗೆ ಬಂದದ್ದರ ಮಹಿಮೆಯಿಂದಲೋ ಏನೋ ಈ ಬೆಳಗ್ಗೆ ಸ್ವಲ್ಪ ಚಳಿ ವಾತಾವಣದಲ್ಲೇ ಕಾಣಿಸಿಕೊಂಡಿದೆ. ನಾನು ಸ್ವೆಟರ್ ಹಾಕಿಕೊಂಡು ನನ್ನ ವಾಸದ ಕೊಠಡಿಯಲ್ಲಿ ಕುಳಿತು ಈ ಕಾಗದ ಬರೆಯುತ್ತಿದ್ದೇನೆ!........

* * *

ಕೋಲಾರ, ೨೫-೭-೫೦

ನನ್ನ ಬಾಯಿಂದ ನಿಮ್ಮ ಚರಮಗೀತೆಯನ್ನು ಇಷ್ಟು ಸುಲಭವಾಗಿ ಹೇಳಿಸಲು ಸಾಧ್ಯವೇ? ಸ್ನಾನ ಮಾಡುವಾಗ ನಿಮ್ಮ ಕಾಗದದ ವಿಷಯವನ್ನು ನೆನಸಿಕೊಂಡೆನು. ಆದರೆ ನಿಮ್ಮ ಮರಣದ ಸಂಭಾವ್ಯತೆಯೇ ನನಗೆ ತೋರಲಿಲ್ಲ. ಈ ಕಾಗೆಗಳ ಕೂಟದಲ್ಲಿ ನನಗೆ ನಂಬಿಕೆಯಿಲ್ಲ. ಅಂಥದನ್ನು ಹಲವು ಬಾರಿ ನಾನು ನೋಡಿದ್ದೇನೆ: (ಅವೇನು ಪ್ರೇಮಕ್ಕೆ ನೆರೆದಿವೆಯೋ ಕಲಹಕ್ಕೆ ನೆರೆದಿವೆಯೋ ಎಂದು ನಿರ್ಣಯಿಸಲು ಕೂಡ ಒಮ್ಮೊಮ್ಮೆ ನನಗೆ ಸಾಧ್ಯವಾಗಿಲ್ಲ.) ಕಾಗೆಯ ಕೈಯಲ್ಲಿ ತಲೆಯನ್ನು ಕುಕ್ಕಿಸಿಕೊಂಡಿದ್ದೇನೆ. ಆದಕಾರಣ ಈ ವಿಷಯವನ್ನು ಗಂಭೀರ ವಾಗಿ (‘seriously”!) ಪರ್ಯಾಲೋಚಿಸಲು ನನಗೆ ಆಗಿಲ್ಲ.

ಅದು ಹೋಗಲಿ–ನೀವು ಶತಾಯುವಾಗಿ ಇರಬೇಕು ಇರುತ್ತೀರಿ– ಎಂದೇ ನನ್ನ ನಂಬಿಕೆ ನನ್ನ ಹಾರೈಕೆ.

* * *

ಕೋಲಾರ, ೨೯-೯-೧೯೫೦

ಕಳೆದ ಶನಿವಾರ ನಮ್ಮ ಮನೆಯವರೆಲ್ಲ (ಮಡದಿಯೂ ಸೇರಿ) ಸುಮಾರು ಒಂದೂವರೆ ಘಂಟೆಗೆ ಬಂದರು. ಬಸ್ಸು ಅಷ್ಟು ತಡವಾಗಿ ಬಂದಿತು. ಆಮೇಲೆ ಎಲ್ಲವೂ ಹಿತವಾಗಿತ್ತು. ಅಂತರಗಂಗೆಗೆ ಆ ರಾತ್ರಿ ಬೆಳದಿಂಗಳಲ್ಲಿ ಹೋಗಿಬಂದೆವು. ಮರುದಿನ ಚಿನ್ನದ ಗಣಿ – ಚೆನ್ನಾಗಿತ್ತು. ಇಲ್ಲಿಂದ ಮಂಗಳವಾರ ಮಧ್ಯಾಹ್ನ ಹೊರಟರು. It was a belated and brief honeymoon but a honeymoon all the same, with the children and nephew to give it greater zest!

* * *

ಧಾರವಾಡ, ೩೦-೧-೧೯೫೨

ನಿಮ್ಮ ಕಾಗದ ಕೈಸೇರಿ ಹತ್ತು ದಿನಕ್ಕೆ ಬಂತು. ಈ ಸರ್ವೋದಯ ದಿನದ ರಾತ್ರಿ ಅವಕಾಶ ಮಾಡಿಕೊಂಡು ಉತ್ತರ ಬರೆಯಲು ಕುಳಿತಿದ್ದೇನೆ. ಇದೇನೂ ಹೊಸದಲ್ಲವಷ್ಟೆ!

ಮೊದಲ ವಿಷಯ ಮೊದಲು. ನಿಮಗೆ ಯಾವ ಕೆಲಸವನ್ನು ಮೈಸೂರು ಸರ್ಕಾರದವರು ಕೊಡುತ್ತಾರೆಂಬುದು ಈ ವೇಳೆಗೆ ಗೊತ್ತಾಗಿರಬೇಕಲ್ಲವೆ? ವಿವರಗಳನ್ನು ದಯವಿಟ್ಟು ತಿಳಿಸಿ. ಅನುಕೂಲವಾದ ಅನುಗುಣವಾದ ಕೆಲಸ ನಿಮಗೆ ದೊರೆಯುವುದೆಂದು ನಂಬುತ್ತೇನೆ, ದೊರೆಯಲೆಂದು ಹಾರೈಸುತ್ತೇನೆ.

ಮೊನ್ನೆಯ ಸಂಜೆ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದಲ್ಲಿ ನನ್ನ 'ಸಮಾರೋಪ' ಭಾಷಣವಿತ್ತು; 'ಕಾವ್ಯದಲ್ಲಿ ಬೆಳುದಿಂಗಳು' ಎಂಬ ವಿಷಯವನ್ನು ಆರಿಸಿಕೊಂಡಿದ್ದೆ. ಉಪನ್ಯಾಸ ಶ್ರೋತೃಗಳಿಗೆ ಪ್ರಿಯವಾಯಿತೆಂದು ತೋರುತ್ತದೆ. ನಿಮ್ಮ 'ಬೆಳುದಿಂಗಳ ಹಾಡು,' ಅಹಲ್ಯೆಯಲ್ಲಿ ಬರುವ 'ಚಂದ್ರೋದಯ ವರ್ಣನೆ' ಇವನ್ನೂ ವ್ಯಾಖ್ಯಾನ ಸಮೇತವಾಗಿ ಉದಾಹರಿಸಿದೆ. ಇಲ್ಲಿಯ ರಸಜ್ಞರು ಅವನ್ನು ತುಂಬ ಮೆಚ್ಚಿದರು; ನಿಮ್ಮ ಕವನಗಳ ಪ್ರಚಾರ ಇಲ್ಲಿ ಹೆಚ್ಚಾಗಿ ಆಗಬೇಕೆಂದು ಹೇಳಿದರು. ನಾನು ಯಥಾಶಕ್ತಿ ಮಾಡುವುದಾಗಿ, ಮಾಡಿಸುವುದಾಗಿ (ಶ್ರೀಮತಿ ಸುಮಿತ್ರ, ಶ್ರೀಮತಿ ವಿಮಲ ಇವರ ಮೂಲಕ) ಆಶ್ವಾಸನೆ ಕೊಟ್ಟಿದ್ದೇನೆ. ಅಂತೂ ಅಂದಿನ ಉಪನ್ಯಾಸದಿಂದ ನನಗೆ ಬಂದ ಯಶಸ್ಸಿನಲ್ಲಿ ತಕ್ಕ ಮಟ್ಟಿನ ಭಾಗ ನಿಮಗೂ ಸಲ್ಲಬೇಕು.

ಧಾರವಾಡಕ್ಕೆ ಬಂದಮೇಲೆ ಹಳೆಯ ಪರಿಚಯಗಳನ್ನು ಬೆಳಸಿಕೊಳ್ಳುತ್ತಿದ್ದೇನೆ, ಹೊಸಬರ ಗುರುತು ಮಾಡಿಕೊಳ್ಳುತ್ತಿದ್ದೇನೆ. ಆದರೂ ಎಲ್ಲರೂ ಇನ್ನೂ ಸಿಕ್ಕಿಲ್ಲ. ಉದಾಹರಣೆಗೆ ಶ್ರೀ ಜಿ.ಬಿ. ಜೋಶಿಯನ್ನು ಕಾಣಲು ಆಗಿಲ್ಲ. ಒಮ್ಮೆ ಅವರ ಕಾರ್ಯಾಲಯದ ಕಡೆ ಹೋಗಿದ್ದೆ, ಬಾಗಿಲು ಹಾಕಿತ್ತು. ಶ್ರೀ ಬೆಟಗೇರಿ ಕೃಷ್ಣಶರ್ಮರನ್ನು ನಾನು ಇಲ್ಲಿಗೆ ಬಂದ ದಿನವೇ ಕಂಡೆ; ಮತ್ತೆ ಕಾಣಲು ಆಗಿಲ್ಲ. ಅವರು ಬೆಂಗಳೂರಿಗೆ ಸಮ್ಮೇಳನಾಧ್ಯಕ್ಷರಾಗಿ ಬರುವ ಮುಂದು ಕಾಣಲು ಸಾಧ್ಯವಾಗುವಂತೆ ತೋರಲಿಲ್ಲ.

ವಿಶ್ವವಿದ್ಯಾಲಯದಲ್ಲಿ ಪಾಠಪ್ರವಚನ ಸಾಗುತ್ತಿದೆ. ಜೊತೆಗೆ ವಿದ್ಯಾರ್ಥಿ ವಸತಿಗೃಹಗಳಲ್ಲಿ ಒಂದೆರಡು ಭೋಜನಗಳನ್ನೂ ಸವಿದಿದ್ದೇನೆ. ಒಂದು ಸಮಾರಂಭಕ್ಕೆ ನಾನು ಮುಖ್ಯ ಅತಿಥಿಯಾಗಿ ಹೋಗಿದ್ದೆ; ಊಟದ ವ್ಯವಸ್ಥೆ ಚೆನ್ನಾಗಿತ್ತು. ಪೂರಿ, ಬಾಸುಂದೆ–ಇವೇ ಮುಖ್ಯಾಂಶಗಳು ಕಂಠಪೂರ್ತಿ ಹೀರಿದ್ದಾಯಿತು. ಆ ಬಳಿಕ ನನ್ನ ಭಾಷಣವಾಗಬೇಕಾಗಿತ್ತು. ಆದರೆ ಪದ್ಧತಿಯನ್ನೇ ಸ್ವಲ್ಪ ವ್ಯತ್ಯಾಸಗೊಳಿಸಿ, ಅವರವರ ಪರಿಚಯ ಅವರವರೇ ಮಾಡಿಕೊಡುವಂತೆ ಏರ್ಪಾಡು ಮಾಡಿದೆ. ನನ್ನ ಪರಿಚಯವನ್ನು ನಾನೇ ಕೊಟ್ಟು ಮೇಲ್ಪಂಕ್ತಿಯನ್ನು ಹಾಕಿದೆ. ಕೆಲವುಮಂದಿ ವಿದ್ಯಾರ್ಥಿಗಳು ಸ್ವಾರಸ್ಯವಾಗಿ ಮಾತಾಡಿದರು. ಒಬ್ಬಾತನು "ನನ್ನ ಹೆಸರು ಇಂಥಾದ್ದು; ಹೆಚ್ಚಿನ ವಿಷಯ ಇದೇ ನಿಲಯದ ಎರಡನೆಯ ನಂಬರ್ ಖೋಲಿಗೆ ಬನ್ನಿ, ತಿಳಿಸುತ್ತೇನೆ" ಎಂದ. ಇನ್ನೊಬ್ಬ "ನನ್ನ ಹೆಸರು ಇಂಥಾದ್ದು; ನಾನು ವಾಸಮಾಡುವುದು ಬೆಳಗಾವಿ ರಸ್ತೆಯಲ್ಲಿ" ಎಂದ, ಎಲ್ಲರೂ ಘೊಳ್ಳೆಂದು ನಕ್ಕರು. ನಾನು ವಿಚಾರಿಸಿದಾಗ ಬೆಳಗಾವಿ ರಸ್ತೆಯಲ್ಲಿ ಹುಚ್ಚರ ಆಸ್ಪತ್ರೆಯಿರುವುದು ಗೊತ್ತಾಯಿತು. ಮತ್ತೊಬ್ಬನು "ನಮ್ಮ ಊರು ಸತ್ತಿ; ಯಾರಾದರೂ ನನ್ನನ್ನು ಕೇಳಿದರೆ 'ಸತ್ತೀರೀ' ಎಂದು ಉತ್ತರ ಕೊಡುತ್ತೇನೆ" ಎಂದ. (ಸತ್ತಿ = ನಾನು ಸತ್ತೆ); (ಸತ್ತೀರೀ = ನೀವು ಸತ್ತಿದ್ದೀರಿ.) ಹೀಗೆಯೇ ಗೋಷ್ಠಿ ನಗುಮುಖವಾಗಿ ನಡೆಯಿತು.

ವಿಶ್ವವಿದ್ಯಾನಿಲಯದವರು ಏರ್ಪಡಿಸಿದ್ದ ಒಂದೆರಡು ಉಪನ್ಯಾಸಗಳಿಗೆ ಹೋಗಿದ್ದೆ. ಅರಣ್ಯಶಾಸ್ತ್ರದ ಮೇಲೆ ಒಂದು ಉಪನ್ಯಾಸ. ನಿಮಗೆ ಈ ವಿಷಯ ಗೊತ್ತಿದೆಯೆ? – ಗಂಧದ ಮರಗಳು ಇನ್ನೂ ಹೊಸ ಹೊಸ ಜಾಗಗಳಲ್ಲೆಲ್ಲಾ ವ್ಯಾಪಿಸಿ ಹಬ್ಬುತ್ತಲೆ ಇವೆಯಂತೆ; ಅವುಗಳ ಪ್ರಸಾರ ಇನ್ನೂ ನಿಲುಗಡೆಗೆ ಬಂದಿಲ್ಲವಂತೆ; ಹಾಗೆಯೇ ಹರಡುತ್ತಿರುವ ಇನ್ನೊಂದು ಜಾತಿಯೆಂದರೆ ಲಾಂಟಾನಾ!

ಮತ್ತೊಂದು ಉಪನ್ಯಾಸದಲ್ಲಿ ಕೇಳಿದ ವಿಷಯ: The British army gave up red tape during the first world war, since the red dye which was almost solely produced by the Germans was no longer available. Then they began to use white tape instead!

ಇನ್ನೊಂದು ವಿಷಯವನ್ನು ಬರೆಯುವುದು ಮರೆತೇಹೋಗಿತ್ತು. ಈಚೆಗೆ ಕವಿಚರಿತೆ ಎರಡನೆಯ ಸಂಪುಟವನ್ನು ಏತಕ್ಕೋ ತಿರುವಿಹಾಕುತ್ತಿರುವಾಗ ಒಂದು ಕಡೆ "ಮನೋಹರ ದುಂಡೆ"ಯ ಉಲ್ಲೇಖ ದೊರೆಯಿತು. (ಮನೋಹರದುಂಡೆಯನ್ನು ಪಡೆಯುವ ಸಲುವಾಗಿ ಧಾರವಾಡಕ್ಕೆ ಬರಲು ಕೂಡ ಕೆಲವರು ಸಿದ್ಧರಾಗಿರುವ ವಿಷಯ ಈ ವೇಳೆಗಾಗಲೆ ನಿಮಗೆ ತಿಳಿದೇ ಇರಬೇಕಲ್ಲವೆ? ಯಾರು ಅಂಥವರೆಂದು ಥಟ್ಟನೆ ನೆನಪಿಗೆ ಬಾರದಿದ್ದರೆ ರೊ.ಲ.ನ. ಕೇಳಿ. ಈಗ ಪ್ರಕೃತ ವಿಷಯಕ್ಕೆ ತಿರುಗೋಣ:)

ಇದೊಂದು ಮಿಠಾಯಿಯಂಗಡಿಯ ವರ್ಣನೆ:

> ಕರಜಿಗೆಯ ಕಾಯಿಯತಿರಸುವುದ್ದಿನೊಡೆಯ ಹಿಮ
> ಕರನಂತೆ ರಾಜಿಸುವ ಇಡ್ಡಲಿಗೆಯೆಳ್ಳುಂಡೆ
> ತರಣಿಮಂಡಲದಂತೆಯೆಸೆವ ಒಬ್ಬಟ್ಟು ಗಾರಗೆಯ ಚಕ್ಕುಲಿ ಸೇವಗೆ ।
> ಹೊರೆಯ ಪೇಣಿಯ ಮನೋಹರದುಂಡೆಯರಗು ಸ
> ಕ್ಕರೆ ಬುರುಡೆ ಹಾಲುಂಡಲಿಗೆಯು ಸ್ವಾದಿಸಲಮೃತ
> ಸರಳಿನಿಂ ನಿರ್ಮಿಸಿದಲತೆಯಂತೆ ಜಲ್ಲಬಿಯ ಅಂಗಡಿಗಳೆಸೆದಿದೆಳವು ॥

ಪದ್ಯ ಚೆನ್ನಾಗಿಲ್ಲವೆ! ಈ ಎಲ್ಲ ತಿಂಡಿಗಳನ್ನೂ ಈಗ ಏಕೆ ಮಾಡಿ ಮಾರುವುದಿಲ್ಲವೋ! (ಊರು ಬಿಟ್ಟು ಬಂದಿರುವ ನನಗೆ ತಿಂಡಿಗಳ ಆಸೆ ಹೆಚ್ಚಾಗಿರುವಂತೆ ತೋರುತ್ತದೆ.) ಹೋಲಿಕೆಗಳು ಎಷ್ಟು ಚೆನ್ನಾಗಿವೆ! ಜಿಲೇಬಿಯನ್ನು ಬಲು ಸವಿಯಾಗಿ ರೂಪಿಸಿದ್ದಾನೆ. ಅಂತೂ ಮನೋಹರದುಂಡೆ ನಮ್ಮ ದೇಶದಲ್ಲಿ ಕ್ರಿ.ಶ.ಸು. ೧೬೦೦ರಷ್ಟಾದರೂ ಹಳೆಯದು. (ಇದರ ಕರ್ತೃ ಅಣ್ಣಾಜಿಯ ಕಾಲ....... ಎಂದು ರಾ.ನ. ಊಹಿಸಿದ್ದಾರೆ.)

ಹರಟೆ ಎಲ್ಲೆಲ್ಲಿಗೋ ಹೋಯಿತು! – ಇನ್ನು ನಿಲ್ಲಿಸುತ್ತೇನೆ.

ಗಿಲ್‌ಪ್ಯಾಟ್ರಿಕ್ ಸಭೆಯ ವಿಷಯವಾಗಿ ನಿಮ್ಮಿಂದ, ರೊ.ಲ.ನ.ರಿಂದ, ಮೂರ್ತಿರಾಯರಿಂದ ಅಭಿಪ್ರಾಯ ಬಂದಿದೆ – ಎಲ್ಲವೂ ಒಂದೇ ರೀತಿಯಾಗಿದೆ. ಆ ಬಳಿಕ ಮೂರ್ತಿರಾಯರನ್ನು ಆತ ಪ್ರತ್ಯೇಕವಾಗಿ ಕಂಡಿದ್ದನಂತೆ. ಆಗ ಆತನ ಮನಸ್ಸು ಸ್ವಲ್ಪ ಹದಗೊಂಡಿರಬೇಕು. ಎರಡು

ಮೂರು ದಿನದ ಕೆಳಗೆ ನನಗೂ ಗಿಲ್‌ಪ್ಯಾಟ್ರಿಕ್‌ನಿಂದ ಒಂದು ಕಾಗದ ಬಂದಿದೆ; ಆತನಿಗೆ ಇನ್ನೂ ನಾನು ಉತ್ತರ ಬರೆದಿಲ್ಲ. ಇಷ್ಟರಲ್ಲೇ ಬರೆಯಬೇಕು.

ಕಥಾ ಕಾದಂಬರೀಕಾರರ ಸಮ್ಮೇಳನ ಹೇಗೆ ನಡೆಯುತ್ತೆಂಬುದಕ್ಕೆ ಸವಿಸ್ತಾರವಾದ ವರದಿಯನ್ನು ಬರೆಯಿರಿ. ಓದಿ ಸಂತೋಷಪಡುತ್ತೇನೆ.

ನಿಮ್ಮ ಶ್ರೀಮತಿಯವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ.

ಜನಪ್ರಗತಿಯಲ್ಲಿ ಬಂದಿದ್ದ ನಿಮ್ಮ ಯಕ್ಷಗಾನವನ್ನು ನಾನು ಹುಬ್ಬಳ್ಳಿಯ ಸ್ಟೇಷನ್ನಿನಲ್ಲಿಯೇ ಓದಿದೆ. ಅದರ 'point' (ಇದಕ್ಕೆ ಕನ್ನಡದಲ್ಲಿ ಏನು ಮಾತು? – ಮೊನೆ?) ಚೆನ್ನಾಗಿದೆ........ ಆತನಿಂದ ನಾನೂ ದುಡ್ಡು ವಸೂಲು ಮಾಡಿಲ್ಲ. ಲೇಖನದ ಪ್ರತಿಯನ್ನು ನನಗೆ ಕಳಿಸಿದ್ದಕ್ಕಾಗಿ ವಂದನೆ. ಶ್ರೀ ನಾಗರಾಜ ಅಂತೂ ಕಳಿಸಲೇ ಇಲ್ಲ.

ಕು.ವೆಂ.ಪು. ರಾಮಾಯಣ ದರ್ಶನ II ಇನ್ನೂ ನನ್ನ ಕೈಗೆ ಸಿಕ್ಕಿಲ್ಲ. – ಮೊದಲನೆಯ ಭಾಗವನ್ನೂ ನಾನಿನ್ನೂ ಪೂರ್ತಿ ಓದಿಲ್ಲ....... ನಿಮ್ಮ ಅಭಿಪ್ರಾಯಕ್ಕೂ ನನ್ನದಕ್ಕೂ ಹೆಚ್ಚು ಭೇದವಿರುವಂತೆ ತೋರುವುದಿಲ್ಲ.

ಕೊನೆಯದಾಗಿ "ಸೂರ್ಯೋ ದೃಷ್ಟಿ ಸಮಾಗಮಃ" ಸಾಧ್ಯವಿಲ್ಲ, ನಿಜ... ಆದರೆ ಪ್ರತಿಪತ್ತಿನ ಚಂದ್ರನಲ್ಲಿ ಕೂಡಬಹುದಲ್ಲ, ಈಗಾಗಲೆ ಕೂಡಿರಬಹುದಲ್ಲ! ಆದರೆ ನಮ್ಮಿಬ್ಬರಿಗೂ ವಯಸ್ಸು ಮೀರಿತು ಎನ್ನುತ್ತೀರೇನೋ!

ಕಾಗದ ಬರೆಯಿರಿ. ರಾತ್ರಿ ಹತ್ತು ಘಂಟೆ ವೇಳೆಯಲ್ಲಿ ನಿದ್ದೆ ಎಳೆಯುವ ಕಣ್ಣಿನಲ್ಲಿ ಬರೆದ ಕಾಗದ ಹೊಂದಿಕೆ ತಪ್ಪಿರಬಹುದು ಕ್ಷಮಿಸಿ.

* * *

ಧಾರವಾಡ, ೨೮–೮–೧೯೫೨

ನಿಮ್ಮ ಕಾಗದ ಕೈಸೇರಿತು. ಕಳೆದ ಭಾನುವಾರದಿಂದ ನಿನ್ನೆಯ ಬೆಳಗಿನವರೆಗೆ ಇಲ್ಲಿಯ ಗಜಾನನೋತ್ಸವಗಳ ನಿಮಿತ್ತವಾಗಿ ಭಾಷಣ ಪ್ರವಾಸದಲ್ಲಿ ತೊಡಗಿದ್ದೆ. ಭಾನುವಾರ ಗೋಕಾಕದಲ್ಲಿ, ಸೋಮವಾರ ಹುಬ್ಬಳ್ಳಿಯಲ್ಲಿ, ಮಂಗಳವಾರ ಕೊಪ್ಪಳದಲ್ಲಿ – ಮೂರು ಕಡೆಯಲ್ಲೂ ವಿಷಯ "ಪು.ತಿ.ನ.ರ ಗಣೇಶ ದರ್ಶನ"! – ನಿಮಗೆ ನನ್ನ ವ್ಯಾಖ್ಯಾನದಿಂದ ಎಷ್ಟು ಅನ್ಯಾಯವಾಯಿತೋ ಕಾಣೆ. ಕಾವ್ಯವಸ್ತು ಕೆಲವು ಮಟ್ಟಿಗೆ ಕ್ಲಿಷ್ಟವೆನ್ನಿಸಿದರೂ, ಅದರ ಭಾವ ಪುಷ್ಟಿಯನ್ನು ಮೆಚ್ಚಿದ ಜನ ಎಲ್ಲ ಕಡೆಯಲ್ಲೂ ಸಿಕ್ಕಿದರು. ಹುಬ್ಬಳ್ಳಿಯಲ್ಲಿ ಕೆಲಮಂದಿ ಚಿಕ್ಕ ಹುಡುಗರು ಗ್ರಂಥದ ಬೆಲೆ ಸಿಕ್ಕುವ ವಿಳಾಸ ಇವೆಲ್ಲಾ ಕೇಳಿ ತಿಳಿದುಕೊಂಡರು!

ಸ್ವಾತಂತ್ರ್ಯೋತ್ಸವದ ದಿನ ನಿಮ್ಮ ಅಹಲ್ಯೆಯ ಪ್ರಸಾರವನ್ನು ಕೇಳಬೇಕೆಂಬ ಕುತೂಹಲ ನಮ್ಮೆಲ್ಲರಿಗೂ ಇತ್ತು. ಆದರೆ ಆ ದಿನ ರಾತ್ರಿ ೮ ಘಂಟೆಗೇ ನಮ್ಮ ರೇಡಿಯೋ ತೊಂದರೆ

ಕೊಟ್ಟಿತು. 'ಮುಳ್ಳು' ಆ ಕಡೆ ಈ ಕಡೆ ಚಲಿಸದೆ ಮದರಾಸಿನ ಎಡಕ್ಕೆ ನಿಂತುಬಿಟ್ಟಿತ್ತು. ಇತ್ತ ಮೈಸೂರೂ ಇಲ್ಲ ಅತ್ತ ಧಾರವಾಡವೂ ಇಲ್ಲ – ಮದರಾಸೂ ಇಲ್ಲ–ಈಚೆಗೆ ಸರಿಪಡಿಸಿದ್ದೇನೆ.

* * *

ಧಾರವಾಡ, ೧೮–೯–೧೬೫೨

"ನಿಷ್ಕಂಪನಿರುದ್ಧನಿಶ್ವಾಸದತ್ತ ಕರ್ಣಯೋಃ ಕೋಮಲ್ಲಃ!" ನೀವೇ ಗೆದ್ದಿರಿ!

ಮನೆಯ ಅನನುಕೂಲತೆ, ಎಂ.ಎ. ತರಗತಿಗೆ ತಕ್ಕ ವಿದ್ಯಾರ್ಥಿಗಳು ಸೇರದೆ ಮನಸ್ಸಿಗಾಗಿರುವ ಬೇಸರ, ಜಡಿಮಳೆ ಹಿಡಿದಿರುವುದರ ಪರಿಣಾಮ – ಇದು ಹೊರತು ಬೇರೇನೂ ಬರೆಯುವ ವಿಷಯವಿಲ್ಲ. ಇದನ್ನು ವರ್ಣಿಸಿ ಬರೆಯೋಣವೆಂದರೆ ನಿಮಗೆ ತಿಳಿದಿರುವ ಹಾಗೆ ಉತ್ಸಾಹವಿಲ್ಲ – ಅಲ್ಲಿ ಹೇಗಿದೆ? "ವಿಧಾನಸಭೆ ವಿಧಾನಪರಿಷತ್ತು"ಗಳ ಕೆಲಸ ಹೇಗೆ ಸಾಗಿದೆ? ನಿಮ್ಮ ಗದ್ಯಕ್ಕಾಗಲಿ ಪದ್ಯಕ್ಕಾಗಲಿ ಅಲ್ಲಿ ಆಹಾರ ಸಿಕ್ಕಿತೆ?

* * *

ಧಾರವಾಡ, ೧೭–೧೦–೧೯೫೨
ನರಕ ಚತುರ್ದಶಿ

.........ನನ್ನ ಅಕ್ಷಮ್ಯವಾದ ಮೌನ ನಿಮ್ಮನ್ನು ಇಷ್ಟರ ಮಟ್ಟಿಗೆ ನೋಯಿಸುವುದೆಂದು ನಾನು ಭಾವಿಸಿರಲಿಲ್ಲ.............

ಈ ಎರಡು ಪಂಕ್ತಿಗಳನ್ನು ಅವಸರದಲ್ಲಿ ಬರೆದು ಈ ಮಧ್ಯಕಾಲಿಕ ಉತ್ತರವನ್ನು ನಿಮಗೆ ಕಳಿಸುತ್ತಿದ್ದೇನೆ. ಪದ್ಯ ನನಗೆ ಮೆಚ್ಚಿಗೆಯಾಗಲಿಲ್ಲವೆಂದು ನನ್ನ ಮೌನಕ್ಕೆ ಸರ್ವಾತ್ಮನಾ ಅರ್ಥವಲ್ಲ. ನಿಮ್ಮ ಹತ್ತಿರ ಆ 'Trick' ನನಗೆ ಅಗತ್ಯವೆ? ಅರ್ಥವಾಗದ ಪದ್ಯವಿದ್ದರೆ ಅರ್ಥವಾಗಲಿಲ್ಲ ಎಂದು ನಾನು ಎಷ್ಟೋ ಸಲ ನಿಮಗೆ ಹೇಳಿಲ್ಲವೆ? ಈ ಪದ್ಯ ನಿಜವಾಗಿಯೂ ಚೆನ್ನಾಗಿದೆಯೆಂದು ನನಗೆ ತೋರುತ್ತದೆ. ಆದರೆ ಇನ್ನೊಮ್ಮೆ ಓದಿ ಪರಿಭಾವಿಸಿ ನಿಮಗೆ ಬರೆಯಬೇಕು. –ಬರೆಯುತ್ತೇನೆ.

* * *

ಧಾರವಾಡ, ೧–೧೨–೧೯೫೨

ನೀವು ಪ್ರೀತಿಪೂರ್ವಕವಾಗಿ ಕಳಿಸಿದ ತಂತಿ ಸಕಾಲಕ್ಕೆ ತಲುಪಿತು. ಕನ್ನಡದಲ್ಲಿ ನನಗೆ ಬಂದದ್ದು ಇದೇ ಮೊದಲನೆಯ ತಂತಿ. ವಂದನೆಗಳು. ನನ್ನ ಹುಟ್ಟಿದ ಹಬ್ಬದ ಉತ್ಸವವೆಂದರೆ ಈ ತಂತಿ ಕೈಸೇರಿದ್ದೇ. ಬೇರೆ ಯಾವ ಆಚರಣೆಯೂ ನಮ್ಮ ಮನೆಯಲ್ಲಿ ಇಲ್ಲ. ಇಟ್ಟುಕೊಂಡಿಲ್ಲವೆಂದು ನೀವೂ ಬಲ್ಲಿರಿ. ಇಷ್ಟಕ್ಕೂ ದೇಶದಾದ್ಯಂತ "ಗೀತಾಜಯಂತಿ"ಯ ಹೆಸರಿನಲ್ಲಿ ಉತ್ಸವ ನಡೆಯುವಾಗ ನಾನೇಕೆ ಬೇರೆಯಾಗಿ ಹಬ್ಬ ಮಾಡಬೇಕು!

* * *

ಧಾರವಾಡ, ೪-೧-೯೫೩ (ರಾತ್ರಿ)

ಸಾಮಾನ್ಯವಾಗಿ ಅಪರಾಧ ನನ್ನದು; ಆದರೆ ಈ ಬಾರಿ ನೀವೇಕೆ 'ಮೌನವ್ರತಾಚಾರಿ'ಗಳಾಗಿದ್ದೀರೀ? ಚಳಿಗಾಲ ಎಂದೋ? ಸುಮಾರು ಎರಡು ವಾರದ ಹಿಂದೆ ಇರಬೇಕು – ನಿಮ್ಮ ಕಾರ್ಡು ಬಂದ ಮರುದಿನವೇ ನಿಮಗೆ ನಾನು ಉತ್ತರ ಬರೆದೆ. ಅದು ತಲಪಿರಲೇಬೇಕಲ್ಲವೆ?...... ಈಚೆಗೆ ನೀವು ಮೈಸೂರಿಗೆ ತತ್ತ್ವಶಾಸ್ತ್ರ ಸಮ್ಮೇಳನಕ್ಕೆ ಹೋಗಿದ್ದಿರೆಂದೂ ಬಾತ್ಮಿ ಬಂದಿತು. ಅದನ್ನಾದರೂ ಕುರಿತು ದೂರದಲ್ಲಿರುವ ನನಗೆ ಎರಡು ಪಂಕ್ತಿ ಬರೆಯಬಹುದಾಗಿತ್ತಲ್ಲವೆ? ಹೋಗಲಿ, ಹೇಗಿತ್ತು ಸಮ್ಮೇಳನ? ಹಿರಿಯಣ್ಣನವರ ಪ್ರಬಂಧಗಳ ಎರಡು ಸಂಪುಟ ಹೊರಬಿದ್ದಿವೆಯಂತೆ–ಚೆನ್ನಾಗಿ ಬಂದಿರಬೇಕಲ್ಲವೆ? ಈ ಭಾನುವಾರದ 'ಹಿಂದೂ' ಪತ್ರಿಕೆಯಲ್ಲೂ ಅವುಗಳ ಉಲ್ಲೇಖವಿದೆ. ಇಲ್ಲಿ ನಾನು ಭಾನುವಾರದ 'ಹಿಂದೂ'ವನ್ನು ಕೊಳ್ಳುತ್ತೇನೆ.

೬-೧-೯೫೩, (ಬೆಳಿಗ್ಗೆ)

ಮೊನ್ನೆಯ ರಾತ್ರಿ ಕಾಗದದ ಲೇಖನ ಅಷ್ಟಕ್ಕೇ ನಿಂತು ಹೋಯಿತು. ನಿನ್ನೆಯೆಲ್ಲ ಕೈಗೆ ತೆಗೆದುಕೊಳ್ಳಲು ಆಗಲೇ ಇಲ್ಲ. – ಸಂಜೆಯೊಳಗೆ ನಿಮ್ಮ ನಿರೀಕ್ಷಿತವಾದ ಕಾಗದವೂ ಬರಲಿಲ್ಲ! 'ever expected' ಎನ್ನುವುದಕ್ಕೆ ಕನ್ನಡದಲ್ಲಿ ಸಮಾನ ಪದ ಏನು? ಈಗ ಇದನ್ನು ಪೂರೈಸಿ ಟಪಾಲಿಗೆ ಹಾಕಬೇಕೆಂದು ನಿರ್ಧರಿಸಿ ಕುಳಿತಿದ್ದೇನೆ.

*

ಜೀವನದ ಡಿಸೆಂಬರ್ ಸಂಚಿಕೆಯಲ್ಲಿ 'ನವರಾತ್ರಿ'ಯ ವ್ಯಕ್ತಿ ಚಿತ್ರಗಳಲ್ಲಿ ನನ್ನದೂ ಸೇರಿರುವುದನ್ನು ಜ್ಞಾಪಿಸಿದಿರಿ. ಜನವರಿ ಸಂಚಿಕೆಯಲ್ಲಿ ನಿಮ್ಮದು ಬಂದಿರುವುದನ್ನು ಗುರುತಿಸಿರಬೇಕಲ್ಲವೆ. 'ಪಟ್ಟಾಭಿ ನಮ್ಮ ಹೊಸ ಕವಿ ಪರಂಪರೆಯಲ್ಲಿ ಹೆಸರಾಂತ ಬಹು ಪುಣ್ಯಶಾಲಿ ಕವಿ...... ಮನಸು ನವಿರಲಿ ನವಿರು....... ಇವರ ಕೃತಿ ಎಲ್ಲ ಹೊತ್ತಲು ಒಂದು ಗೀತದಂತೆಸೆಯುವುದು...... ಸಹಜದಲಿ ಕವಿಯಾದ ಮನುಜ ತನ್ನನುಭವದ ನಿಷ್ಠೆಯಲುಪಾಸಿಸಲು ಒಂದು ದರ್ಶನ ಸಿದ್ಧಿಸುವುದೆಂಬುದಕೆ ನಮ್ಮ ಪಟ್ಟಾಭಿ ಸಾಕ್ಷಿ."........ ವಿವರಗಳು ಇವೆ; ಮಾಸ್ತಿಯವರ ಉಕ್ತಿಯಲ್ಲಿ ಇನ್ನಷ್ಟು ಉತ್ಸಾಹ ಇರಬಹುದಾಗಿತ್ತು. "ಹೆಸರಾಂತ" ಏಕೋ "considerable" ಎಂಬುದನ್ನು ನೆನಪಿಗೆ ತರುತ್ತದೆ. "ಬಹು ಪುಣ್ಯಶಾಲಿ" ಎಂಬ ಮಾತು ಚೆನ್ನಾಗಿದೆ. ಪುಣ್ಯ ಗಳಿಸಿದವರು ಎಂದು ಇದಕ್ಕೆ ಅರ್ಥ ಮಾಡುತ್ತೇನೆ. ಇದರಲ್ಲಿ ನಿಮ್ಮ ದೈವನಿಷ್ಠೆ, ಸಾತ್ವಿಕತೆ, ದರ್ಶನಶಕ್ತಿ ಎಲ್ಲ ಅಳವಡಿಸಿ ಹೇಳಿದ್ದಾರೆ.........

ಒಂದು ಪ್ರಶ್ನೆ ರಘುನಾಥಯ್ಯ (ಡಿಸೆಂಬರ್ ಸಂಚಿಕೆ), ದೀಕ್ಷಿತರು, ಶರ್ಮ, ನಾಗರಾಜ (ಜನವರಿ ಸಂಚಿಕೆ) ಇವರು ಯಾರು?

*

'ರಸ ಸರಸ್ವತಿಗೆ' ಎಂಬ ನಿಮ್ಮ ಕವನವನ್ನು ಈಚೆಗೆ ಮತ್ತೆ ಓದಿದೆನು; ಎರಡು ಬಾರಿ ಓದಿದೆನು. ಎಲ್ಲೋ ಒಂದು ಕಡೆ-ಒಂದೊಂದು ಕಡೆ ಮಾತ್ರ-ಭಾವ ಸ್ವಲ್ಪ ಅಸ್ಫುಟವೆನಿಸಿದರೂ ಅದರ ತಿರುಳನ್ನು ಸವಿಸವಿದು ಸಂತೋಷದಿಂದ ಓದಿದೆನು. ಕವನ ಉಜ್ವಲವಾಗಿದೆಯೆಂದು ನನಗೆ ಅನ್ನಿಸುತ್ತದೆ. ಉಜ್ವಲವಾಗಿದೆ, ಮಧುರವಾಗಿದೆ. ಅರ್ಥನಿರ್ಭರವಾಗಿದೆ. ಅದರ ಆಶಯವೂ ನನಗೆ ಮೆಚ್ಚು, ಒಪ್ಪು. ಉಕ್ತಿಯೂ ಹದವಾಗಿ, ಚಿನ್ನದ ತಂತಿಯನ್ನೆಳೆದಂತೆ ನಯವಾಗಿ ನವಿರಾಗಿ ಬಂದಿದೆ. ಕೆಲಕೆಲವು ಮಾತುಗಳಂತೂ 'ಹರಳು'ಗಳಾಗಿವೆ (ನಿಮ್ಮ ಮಾತಿನಲ್ಲಿ)- 'ಸ್ಫಟಿಕ'ಗಳಾಗಿವೆ (ನಮ್ಮ ಮಾತಿನಲ್ಲಿ!).

'ಅರ್ಥದೊಳು ರಮಿಸಿಯೂ ವಿರಮಿಸದ ತೆರದೊಳಗೆ' -ಧ್ವನಿತತ್ತ್ವವೆಲ್ಲ ಇಲ್ಲಿ ಅಡಕವಾಗಿದೆ. 'ಸದ್ಯೋಜಾತ' ಎಂಬುದು ಹೊಸ ಅರ್ಥದಿಂದ ತುಳುಕುತ್ತಿದೆ. 'ಸೈತಿಕರ ನಗುವ ಸರಸೇ', 'ಕ್ಷುದ್ರವಿರಸೇ'-ಚೆನ್ನಾಗಿವೆ. 'ದೇವದಾನವ ದುಗ್ಧ ದುಗ್ಧಾಬ್ಧಿಯಿಂ ದಿವ್ಯವಸ್ತೂದಯಗಳಿನ್ನು ತೀರಿಲ್ಲವೆನ್ನೆ'-ನಿಜ, ನಿಜ! (ಆಸಂಸಾರಮುದಾರೈಃ ಪ್ರತಿದಿನಗೃಹೀತ......... ಈ ಪದ್ಯ ನಿಮಗೆ ನೆನಪಿದೆಯೇ?) "ಮುಸುಡನೆತ್ತಿಹ ಮಲೆಯ ಕೋಡ ತುರುವನು ತಣಿಸೆ ಮೋಡ ಮೊಲೆಯೂಡುತಿರೆ"-ಮನೋಹರವಾಗಿದೆ, and characteristic of you! - "ತನ್ನ ನಲ್ಲನನೆನ್ನ....... ಕಿರುತಾರೆ"-ಈ ಬಗೆಯ ಸೂಕ್ಷ್ಮಭಾವ ನಿಮಗೆ ಮಾತ್ರ ಲಭ್ಯವೋ ಏನೋ! ಹಾಗೆಯೇ, 'ಎದೆಯೊಪ್ಪಿತಕೆ..... ಕೂಡೆ'-ಇದೂ ನಿಮ್ಮ ಸ್ವಂತದ್ದೇ!...... ಇಲ್ಲಿಗೆ ನಿಲ್ಲಿಸೋಣ. ಆದರೆ ಒಂದು ಮಾತು, "ಜಗದ್ಧಾತ್ರಿಯ ಕರುಣೆ" "ಕ್ಷಣ ಚಿಚ್ಚಲಕಾಂತಿ" "ಮನೋವಿಕೃತಿಯ ರಚಿಸಿ" ಇಂಥ ಕಡೆ ಗುರುವಿನ್ಯಾಸ ಸರಿಯಾಗಲಿಲ್ಲ, ಕಿವಿಗೆ ಹಿತವಾಗಲಿಲ್ಲ ಎನ್ನಿಸುತ್ತದೆ. ಆದರೆ ಇದು ನಿಮ್ಮ ನನ್ನ ಹಳೆಯ ಜಗಳ! 'ಮೊದಲಾದ ಧರ್ಮಜ್ಞ......' ಎಂಬಲ್ಲಿ 'ಮೊದಲಾದ' ಎಂಬುದನ್ನು ತೆಗೆದು ಅರ್ಥವತ್ತಾದ ಬೇರೆ ಮಾತನ್ನು ಹಾಕಿದರೆ ಒಳ್ಳೆಯದು.

* * *

ಧಾರವಾಡ, ೨೮-೧-೧೯೫೩

ಇಲ್ಲಿ ದಿನಗಳು ಸಾಗುತ್ತಿವೆ. ವಿದ್ಯಾರ್ಥಿ ಸಂಪತ್ತು ಇಲ್ಲದ್ದು ನನಗೆ ದೊಡ್ಡ ಕೊರತೆಯಾಗಿದೆ. ಏಕಮೇವಾದ್ವಿತೀಯನಾಗಿ ಒಬ್ಬನೇ ಒಬ್ಬನು ಉಳಿದಿದ್ದಾನೆ; ಅವನಿಗೆ ಕನ್ನಡದಲ್ಲಿ ಅಭಿಮಾನ ಮಾತ್ರ; ಅಭಿರುಚಿ ಬಲು ಕಡಮೆ. ಮೊನ್ನೆ ಅವನಿಗೆ ಮದುವೆಯೂ ಆಯಿತು, ಇದರಿಂದ ಅತ್ತ ಒಂದುವಾರ ಇತ್ತ ಒಂದುವಾರ ನನಗೆ ಪಾಠದ ರಜ. ವಿಶ್ವವಿದ್ಯಾಲಯಕ್ಕೆ ಸುಮ್ಮನೆ ಹೋಗುವುದು, ಪುಸ್ತಕ ಭಂಡಾರದಲ್ಲಿ ನೋಡಿದ ಪುಸ್ತಕಗಳನ್ನೇ ಇನ್ನೊಮ್ಮೆ ಹಿಡಿದು ನೋಡುವುದು, ಮಾಡಬೇಕಾದ ಬರೆವಣಿಗೆಯ ಕೆಲಸವನ್ನು ಮಾಡದಿರುವುದು, ಅಂತೂ ಹೊತ್ತು ಕಳೆದು ಮನೆಗೆ ಬರುವುದು – ಹೀಗಾಗಿದೆ ನನ್ನ ಸ್ಥಿತಿ. ಹರಟೆ ಕೊಚ್ಚಲು ಜೊತೆಗೆ ಮಿತ್ರರಿಲ್ಲ. ಬೆಂಗಳೂರಿನ ನೆನಪು ದಿನದಿನವೂ ಬರುತ್ತಿರುತ್ತಿರುತ್ತದೆ.

ಇನ್ನೊಂದು ವಿಷಯ. ಕರ್ನಾಟಕ ವಿಶ್ವವಿದ್ಯಾಲಯ ಸಪ್ತಾಹವನ್ನು ಇದರ ನಿಧಿಗೆ ಹಣ ಕೊಡಿಸುವ ಸಲುವಾಗಿ ನಡೆಸಿದರು. ನಮ್ಮಲ್ಲಿ ಅನೇಕರು ಒಂದು ತಿಂಗಳ ಸಂಬಳವನ್ನು ಕಾಣಿಕೆಯಾಗಿ ಒಪ್ಪಿಸಲು ಒಪ್ಪಿದೆವು. ಸದ್ಯಃ ಕಂತಿನ ಪ್ರಕಾರ ಕೊಡಲು ಅವಕಾಶವಿದೆ!

ಮೊನ್ನೆ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಲ್ಲಿ ಎ.ಆರ್.ಕೃ ಭಾವಚಿತ್ರದ ಅನಾವರಣ ನಡೆದಾಗ ನೀವು ಹೋಗಿದ್ದಿರಾ?

ಶಿವರಾಮಶಾಸ್ತ್ರಿಯ ಮೇಲೆ ಹರಿಯಪ್ಪ ಏರಿದ ಸಂಗತಿ ಡಿ.ಎಲ್.ನ. ಕಾಗದದಿಂದ ಗೊತ್ತಾಯಿತು. ತಿಳಿದ ಬಳಿಕ ಶಾಸ್ತ್ರಿಗೆ ನಾನು ಒಂದು ಕಾಗದ ಬರೆದೆ. ಅದಕ್ಕೇನೂ ಉತ್ತರವಿಲ್ಲ. ಇದು ಶಾಸ್ತ್ರಿಗೆ ಸಹಜಗುಣತಾನೆ!

'ಭಾರತೀಯ ಕಾವ್ಯಮೀಮಾಂಸೆ'ಗೆ ಶ್ರೀ ಕುವೆಂಪು ಮುನ್ನುಡಿ ಬರೆದು ಮುಗಿಸಿದರಂತೆ; ಅದು ಬೆಂಗಳೂರಿಗೆ ಮುದ್ರಣಾಲಯಕ್ಕೆ ಹೋಗಿದೆಯಂತೆ; ಇದೊಂದು ಹೆಚ್ಚಿನ ಸಮಾಚಾರ. ಶ್ರೀ ಗೋಪಾಲಯ್ಯಂಗಾರರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ. ಪ್ರಾರಂಭದ ಪುಟಗಳ ಎಲ್ಲ ಪ್ರೂಫುಗಳನ್ನು ನನಗೆ ಬೇಗ ಕಳಿಸಬೇಕೆಂದು ಪುಸ್ತಕವನ್ನು ಬೇಗ ಹೊರತರಲು ಸರ್ವಪ್ರಯತ್ನವನ್ನು ಮಾಡಬೇಕೆಂದೂ ಪ್ರಾರ್ಥಿಸಿ.

* * *

ಧಾರವಾಡ, ೧೮–೨–೧೯೫೩

ನಿಮ್ಮ ೧೦–೨ರ ಕಾಗದ ಮೊನ್ನೆಯ ಸಂಜೆ ನನ್ನ ಕೈಸೇರಿತು! (ನೀವು ಟಪಾಲಿಗೆ ಹಾಕಿದ್ದೇ ತಡವೆಂದು ತೋರುತ್ತದೆ.)

ನಿಮ್ಮ ಕಾಗದವನ್ನು ಓದಿದಾಗಿನಿಂದ ಕೆ.ಎಸ್. ನರಸಿಂಹಸ್ವಾಮಿಯವರನ್ನು ಕುರಿತು ನನ್ನ ಮನಸ್ಸು ಕುದಿಯುತ್ತಿದೆ. ನಮ್ಮ ಗ್ರಂಥಕಾರರು ಹೀಗೆ ದುಸ್ಥಿತಿಗೆ ಇಳಿದಾಗ ಅವರಿಗೆ ಸಹಾಯ ಮಾಡಲು ಯಾವ ಸಂಸ್ಥೆಯೂ ಇಲ್ಲವಲ್ಲ! ಎಲ್ಲರಿಗೂ ಸಂಘಗಳುಂಟು – ನಮಗೆ ಇಲ್ಲ! 'ಸಾಹಿತಿಗಳ ಸಂಘ' ಈ ದಿಕ್ಕಿನಲ್ಲಿ ಪ್ರಯತ್ನಮಾಡುವುದು ಅವಶ್ಯವೆನಿಸುತ್ತದೆ. ನಾನು ಈ ದಿನ ಆತನಿಗೆ ಇಪ್ಪತ್ತು ರೂಪಾಯಿಗಳನ್ನು ಕಳಿಸಿದ್ದೇನೆ. ಹೆಚ್ಚನ್ನು ಕಳಿಸಲು ಸಾಧ್ಯವಿರಲಿಲ್ಲ. ಇದನ್ನು ಆತನು ಹಿಂದಿರುಗಿಸಬೇಕೆಂಬ ಬುದ್ಧಿಯಿಂದ ಕಳಿಸಿಲ್ಲ. ಆತನ ತೊಂದರೆಯ ಸಮಯಕ್ಕೆ ನನ್ನ ಅಲ್ಪ ಸಹಾಯ ಒದಗಿಸಿದರೆ ಸಾಕು. ಹಣವನ್ನು ನಿಮ್ಮ ಮೂಲಕ ಕಳಿಸಬೇಕೆಂದು ಮೊದಲು ಯೋಚನೆ ಮಾಡಿದೆ. ಆದರೆ ಅವರಿಂದ ತಡವಾಗಬಹುದೆಂದು ತೋರಿತು. ನೀವು ವಿಳಾಸ ಕೊಟ್ಟದ್ದು ಅನುಕೂಲವಾಯಿತು. ಆತನ ಆರೋಗ್ಯ ವಿಚಾರವನ್ನು ತಿಳಿದು ಬರೆಯಿರಿ. ಅಲ್ಲಿ ಮಿಕ್ಕ ಮಿತ್ರರಿಂದ ಸಹಾಯ ಒದಗಿತೆ?

ಕೋಡಬಳೆ, ಸಲ್ಲಾಪ – ಇವುಗಳ ವಿಷಯವನ್ನು ಕೇಳಿ ಬಾಯಿ ಬುದ್ಧಿ ಎರಡರಲ್ಲೂ ನೀರೂರುತ್ತಿದೆ. ಆದರೆ ಈ ದೂರವಾಸದ ಫಲಗಳನ್ನೆಲ್ಲಾ ಹೀಗೆ ನಾನು ಸವಿಯಲೇ ಬೇಕಲ್ಲ, ಶ್ರೀ ಗೋಪಾಲಯ್ಯಂಗಾರರಿಂದ ಇನ್ನೂ ಪ್ರೂಫ್ ಬರಲಿಲ್ಲ. ನನ್ನ ಪರವಾಗಿ ನೀವು ಬೇಸರಗೊಳ್ಳದೆ ದಿನಕ್ಕೊಂದು ಬಾರಿ ಅವರಿಗೆ ಜ್ಞಾಪಿಸುತ್ತಿರಿ. ನನ್ನ ಆದೇಶದ ಪ್ರಕಾರ ಹೀಗೆ ತೊಂದರೆ ಕೊಡುತ್ತಿರುವುದಾಗಿ ಅವರಿಗೆ ತಿಳಿಸಿದರೂ ತಪ್ಪಲ್ಲ. ಅಂತೂ ಪುಸ್ತಕ ಬೇಗ ಹೊರಬರುವಂತೆ ಸರ್ವಪ್ರಯತ್ನವನ್ನೂ ಮಾಡಿ.

* * *

ಧಾರವಾಡ, ೧೪-೩-೧೯೫೩

ನೀವು ನನ್ನನ್ನು ಮರೆತಿದ್ದೀರಿ ಎಂದು ಹೇಳುವುದಿಲ್ಲ: ಅದು ಅನ್ಯಾಯವಾಗುತ್ತದೆ. ದ್ರೋಹವಾಗುತ್ತದೆ. ಆದರೆ ನನಗೆ ಕಾಗದ ಬರೆಯಲು ಮರೆತಿದ್ದೀರಿ ಎಂದು ಹೇಳಬಹುದೆ? ಈಚೆಗೇಕೆ ನಿಮ್ಮ ಲೇಖನ ಇಷ್ಟು ತಡಮಾಡುತ್ತಿದೆ? - ನಿಮ್ಮಿಂದ ಕಾಗದ ಬರಲಿ ಎಂದು ನಾನು ಸುಮ್ಮನಿರದೆ ಯುಗಾದಿಯ ಶುಭಾಶಯಗಳನ್ನು ಈ ಮೂಲಕ ಕಳಿಸುತ್ತಿದ್ದೇನೆ. ಹಬ್ಬದ ದಿನ ಈ ಕಾಗದ ನಿಮ್ಮ ಕೈ ಸೇರುವುದೆಂದು ನಂಬುತ್ತೇನೆ.

* * *

ಧಾರವಾಡ, ೪-೪-೧೯೫೩

ಇದರೊಂದಿಗೆ ಎರಡು ಕವನಗಳನ್ನು ಕಳಿಸಿದ್ದೇನೆ. ಗಾಬರಿ ಬೀಳಬೇಡಿ. ಅವುಗಳಲ್ಲಿ ಒಂದು ಮಾತ್ರ ನನ್ನದು! ಇನ್ನೊಂದು 'ಅಂಬಿಕಾತನಯದತ್ತ'ರದು - ಪು.ತಿ.ನ. ಅವರನ್ನು ಕುರಿತದ್ದು!

ಬೇಂದ್ರೆ ಕೆಲವು ದಿನಗಳ ಕೆಳಗೆ ಇಲ್ಲಿಗೆ ಬಂದಿದ್ದರು, ಕೆಲವು ದಿನ ಇದ್ದರು-ವಸತಿ ಗೋಕಾಕರ ಮನೆಯಲ್ಲಿ. ನಮ್ಮ ಮನೆಗೂ ಒಂದೆರಡು ಬಾರಿ ಬಂದಿದ್ದರು. (ಮೊದಲ ಸಲ ಬಂದಾಗ ಬೆಳಗ್ಗೆ ಒಂದು ಹಲ್ಲನ್ನು ಕೀಳಿಸಿಕೊಂಡದ್ದರಿಂದ ಕೇವಲ ಪಾಯಸವನ್ನು ಕುಡಿದು ನಮ್ಮನ್ನು ತೃಪ್ತಿಪಡಿಸಿದರು!)

ನಿಮ್ಮ 'ಭಗವದ್ಗೀತೆ' ಅವರ ಕೈಸೇರುವುದಕ್ಕೆ ಹಿಂದಿನ ದಿನ ಈ 'ಅಷ್ಟಷಟ್ಪದಿ'ಯನ್ನು ಬರೆದರಂತೆ! ಮರು ದಿನವೇ ಭಗವದ್ಗೀತೆ ಕೈಸೇರಿತಂತೆ... ಇದನ್ನು ನನಗೆ ಓದಿ ತೋರಿಸಿದರು. ಇದರ ಪ್ರಯತ್ನವನ್ನು ನಿಮಗೆ ತಲುಪಿಸಬೇಕು ಎಂದರು. ನಾನು ತುಂಬ ಸಂತೋಷದಿಂದ ಒಪ್ಪಿಕೊಂಡೆ. ಆದರೆ ಪದ್ಯದ ನಕಲನ್ನು ಅವರಿಂದ ಪಡೆಯಬೇಕಾದರೆ ಕೆಲವು ದಿನವೇ ಹಿಡಿಯಿತು - ಕವನ ಹೇಗಿದೆ? "ಇಕ್ಷುಪಾಕ"- ನಿಮ್ಮ ಶೈಲಿಗೆ ಚೆನ್ನಾಗಿ ಒಪ್ಪುತ್ತದೆಂದು ನನಗೆ ತೋರುತ್ತದೆ. "ಬಿದಿಗೆಯ ಚಂದ್ರ" ಎನ್ನುವುದಕ್ಕಿಂತ "ದಶಮಿಯ ಚಂದ್ರ" ಎಂದಿದ್ದರೆ ಸತ್ಯಕ್ಕೆ ಸಮೀಪವಾಗುತ್ತಿತ್ತೋ ಏನೋ. ಆದರೂ ಪದ್ಯ ಚೆನ್ನಾಗಿದೆಯಲ್ಲವೆ?

ಇನ್ನೊಂದು ಪದ್ಯ ನಾನು ರಚಿಸಲೇಬೇಕಾಗಿ ಬಂದದ್ದು - ಇಲ್ಲಿಯ AIR ಬಲಾತ್ಕಾರಕ್ಕಾಗಿ. Practical excercise ! ನನ್ನ ಲೇಖನಿಗೆ ಈ ವರ್ಷ ಕೆಲಸ ಹೆಚ್ಚಾಗಲಿ ಎಂದು ನೀವು ಹಾರೈಸಿದ್ದೀರಿ. ಅದಕ್ಕಾಗಿ ಈ ಪದ್ಯದ ಪ್ರತಿಯನ್ನು ನೀವು ನೋಡಲಿ ಎಂದು ಕಳಿಸಿದೆ. ನನ್ನ ಕವಿತ್ವದ ವಿಷಯದಲ್ಲಿ ನನಗೆ ಯಾವ ಭ್ರಮೆಯೂ ಉಳಿದಿಲ್ಲ. ಆದರೂ ಎಂತೋ ಏನೋ ಬರೆದದ್ದು ನಿಮ್ಮ ಕಣ್ಣಿಗೆ ಬೀಳದಿರಬಾರದು, ಅದಕ್ಕಾಗಿ ಕಳಿಸಿದ್ದೇನೆ. (ಇದು ಆಗಲೇ ಜಯಕರ್ನಾಟಕದಲ್ಲಿ, ಅದರ ವಸ್ತುತಃ ಸಂಪಾದಕರಾದ ಪಾಂಡೇಶ್ವರ ಗಣಪತಿರಾಯರ ಒತ್ತಾಯದಿಂದ ಅಚ್ಚು ಆಗಿ ಬಂತು-ಎರಡು ಪಂಕ್ತಿಗಳನ್ನು ಕಳೆದುಕೊಂಡು!)

* * *

ಧಾರವಾಡ, ೧-೭-೧೯೫೩

ನಿನ್ನೆಯ ಸಂಜೆ Karel čapek ನ 'Intimate Things' ಎಂಬ ಲಘು ಪ್ರಬಂಧ ಸಂಕಲನವನ್ನು ಓದುತ್ತಿದ್ದೆನು. ಅದರಲ್ಲಿ 'The Post' ಎಂಬ ಪ್ರಬಂಧದ ಮೊದಲನೆಯ "ಪ್ಯಾರಾ" ಮನಸ್ಸಿಗೆ ಚೆನ್ನಾಗಿ ಹಿಡಿಯಿತು. ಅದನ್ನು ಈ ಕೆಳಗೆ ಎತ್ತಿ ಬರೆದಿದ್ದೇನೆ.

"Human nature is full of contradictions; look at the way most people love to get letters and hate to write them, though both are perforce linked together as cause and effect. There are, it is true, people who are indecently fond of writing letters, such as lovers and the people who sign themselves "One of many" or "A reader", and write to the papers attacking some article in yesterday's issue; but these are on the whole oddities, like the folk who adore listening to lectures, or those who will keep on chasing a buzz and rattle from station to station on their wireless all night, or those who like to move house often. Most people dislike moving, dislike letting other people talk and in particular answering letters. As regards the last it is safe to assume that an ordinary man only writes a letter when he wants to get an answer to it, a motive which regularly disappears if he receives a letter himself. The dislike of writing letters probably arises from general human laziness; but the craving to receive letters has, seemingly deeper and more mysterious roots".

ಇದರ ಮೇಲೆ ವ್ಯಾಖ್ಯಾನ ಅನಾವಶ್ಯಕವಲ್ಲವೇ!

ಈ ಕಾಗದವನ್ನು ಕೇವಲ ನಿಸ್ಪೃಹತೆಯಿಂದ ಬರೆದಿದ್ದೇನೆ. ನೀವು ನನಗೆ ಏಕೆ ಇದುವರೆಗೆ ಬರೆಯಲಿಲ್ಲ ಎಂದು ಕೇಳುವುದಿಲ್ಲ, ಇದಕ್ಕೆ ಬೇಗ ಉತ್ತರ ಬರೆಯಿರಿ ಎಂದು ಕೇಳುವುದಿಲ್ಲ. ಎಲ್ಲವನ್ನೂ ನಿಮ್ಮ ಸದ್ವಿಚಾರಕ್ಕೇ ಬಿಟ್ಟಿದ್ದೇನೆ!

ಇಲ್ಲಿ ಕಳೆದ ಹತ್ತು-ಹನ್ನೆರಡು ದಿನದಿಂದ ಮಳೆ ಚೆನ್ನಾಗಿಯೇ ಬಿದ್ದಿದೆ. ಮಲೆನಾಡಿನ ಅನುಭವಗಳನ್ನು ಸ್ವಲ್ಪ ತರುತ್ತಿದೆ.

ಬೆಂಗಳೂರಿನ ವಿಷಯವೇನು?

ಈ ವರ್ಷವೂ ಇನ್ನೂ ವಿದ್ಯಾರ್ಥಿಗಳ ನಿರೀಕ್ಷೆಯಲ್ಲೇ ಇದ್ದೇನೆ. ಒಬ್ಬಿಬ್ಬರು ಬರಬಹುದೆಂಬ ಸೂಚನೆ ಇದೆ. ಆದರೆ ನೋಡಬೇಕು. ಇಂಥ ಅನುಭವ ಮನಸ್ಸಿಗೆ ಬೇಸರ ತರುತ್ತಿದೆ.

ಭಾಷಾ ಸಾಹಿತ್ಯ ವ್ಯಾಸಂಗಕ್ಕೆ ಜೀವನದಲ್ಲಿ ಪುರಸ್ಕಾರ ತುಂಬ ಕಡಮೆಯಾಗಿರುವಾಗ ಅದರಿಂದ ಕೂಳು ಹುಟ್ಟುವುದು ಕಷ್ಟವಾಗಿರುವಾಗ ವಿದ್ಯಾರ್ಥಿಗಳನ್ನು ನಿರೀಕ್ಷಿಸುವುದು ನಮ್ಮದೇ ತಪ್ಪು!

* * *

ಧಾರವಾಡ, ೧೬-೧೨-೧೯೫೩

ಈ ಕಾಗದವನ್ನು ನಮ್ಮ ಚಿ॥ ಸೌ॥ ನಾಗರತ್ನನ ಕಾಗದಕ್ಕೆ ಕೇವಲ 'ಪುಚ್ಛ'ವಾಗಿ ಜೋಡಿಸಿ ಕಳಿಸಿದ್ದೇನೆ. "ಬಾಲಂಗೋಸಿ"ಯೆಂದು ಬರೆಯಲು ಹೊರಟಿದ್ದೆ. ಆದರೆ ಆ ಉದ್ದವೂ ವರ್ಣರಂಜನೆಯೂ ಇಲ್ಲದ್ದರಿಂದ ಎರಡಕ್ಷರಕ್ಕೇ ಹೊಡೆದು ಹಾಕಿದೆ.

* * *

ಧಾರವಾಡ, ೯-೯-೧೯೫೪

ನಿಮ್ಮ ಎರಡನೆಯ ತಾರೀಖಿನ ಕಾಗದ ಕೈಸೇರಿತು. ನನ್ನ ಸ್ವಾಭಾವಿಕ ಮೌನ ಇಷ್ಟೊಂದು ಆತಂಕವನ್ನು ನನ್ನ ಹ್ರಸ್ವವಾದ ಕಾಗದ ಇಷ್ಟೊಂದು ಅತೃಪ್ತಿಯನ್ನು ಉಬ್ಬಿಸಬಹುದೆಂದು ನನಗೆ ಅನಿಸಿರಲಿಲ್ಲ. ನಿಮ್ಮ ನಿರಂತರವಾದ ಪ್ರೀತಿಯೇ ಇದೆಲ್ಲಕ್ಕೂ ಮೂಲ. ಆ ಪ್ರೀತಿ ನನಗೆ ಇನ್ನಷ್ಟು ಸಂತೋಷವನ್ನೆ ಕೊಟ್ಟಿತು. ನನ್ನ ಆಲಸ್ಯಕ್ಕೆ ಹೆಚ್ಚಿನ ಪ್ರಾಯಶ್ಚಿತವೇನನ್ನಾದರೂ ಮಾಡಿಕೊಳ್ಳಬೇಕೆಂದು ನನಗೆ ತೋರಿಲ್ಲ – unrepentent Sinner ! - ಒಂದೇ ನಿಷ್ಕೃತಿ: ನೀವು ಇಲ್ಲಿಗೆ ಬೇಗ ಬರಬೇಕು. ಹತ್ತಾರು ದಿನ ಇಲ್ಲಿ ನನ್ನೊಡನೆ ಕಾಲ ಕಳೆಯಬೇಕು. ಆ ರೀತಿ ಮಾಡಿ.

ನನ್ನ ಆಲಸ್ಯದಿಂದ ನಿಮ್ಮ ಕಾವ್ಯಸ್ಫೂರ್ತಿ ಮಾತ್ರ ಕುಂದದಿರಲಿ! (ಅದು ಆಲಸ್ಯವೇ ಹೊರತು ಔದಾಸೀನ್ಯವಲ್ಲ!)

* * *

ಧಾರವಾಡ, ೨೧-೧೦-೧೯೫೪

ನಿಮ್ಮ ಎರಡು ಕಾಗದಗಳೂ ತಲುಪಿದವು. ಶ್ರೀ ಬಿಳಿಗಿಯವರ ಕಾಗದವೂ ನನಗೆ ಬಂದಿದೆ.

ಇಲ್ಲಿಯ ನಿಮ್ಮ ಪ್ರವಾಸ ಪ್ರಿಯವಾಗಿ ಹಿತವಾಗಿ ಇತ್ತೆಂದು ಅರಿತು ನನಗೆ ತುಂಬ ಸಮಾಧಾನವಾಗಿದೆ. ಇನ್ನೆರಡು ದಿನ ಇರಲು ಆಗಿದ್ದರೆ ಅಲ್ಲಲ್ಲಿ ಸುತ್ತಾಡಬಹುದಾಗಿತ್ತು. "ಸಂಕಾಲಿಯನ ಸಂಕೋಲೆ"ಯಿಂದ ಸ್ವಲ್ಪ ಬಿಡುವು ದೊರೆಯಬಹುದಾಗಿತ್ತು!* ಆಗಲಿ ಮತ್ತೊಮ್ಮೆ! ಅಂತೂ ಆ ಒಂದು ವಾರ ಹತ್ತುದಿನ ನಾನೂ ನಲಿದು ನಕ್ಕು ಉಲ್ಲಾಸಗೊಂಡೆ, ಸ್ಫೂರ್ತಿ

* ಆ ಸಮಯದಲ್ಲಿ ಇತಿಹಾಸ ತಜ್ಞ ಡಾ॥ ಸಂಕಾಲಿಯಾ ಅವರ ಭಾಷಣಗಳು ವಿಶ್ವವಿದ್ಯಾಲಯದಲ್ಲಿ ವ್ಯವಸ್ಥೆಯಾಗಿದ್ದರಿಂದ ತೀ.ನಂ.ಶ್ರೀ.ಯವರು ಅದನ್ನು ತಪ್ಪದೆ ಹೋಗಿ ಕೇಳುತ್ತಿದ್ದರು.

ಪಡೆದೆ–ಬಹಳ ದಿನವಾಗಿತ್ತು ಆ ಸುಖವನ್ನು ಪಡೆದು. ಧಾರವಾಡದಲ್ಲಂತೂ ಅಂಥದಕ್ಕೆ ಅವಕಾಶವೇ ಇಲ್ಲ, ನನ್ನ ಪಾಲಿಗೆ.

'ಶ್ರೀಕೃಷ್ಣಚರಿತ'ದ ಛಂದಸ್ಸಿನ ವಿಷಯದಲ್ಲಿ ನಾನೂ ಆಲೋಚಿಸುತ್ತಿದ್ದೇನೆ. ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ನಾನು ಅಭಿಪ್ರಾಯಪಡುವುದು ಸಾಹಸವೇ ಸರಿ. ಅದರಿಂದ ಮತ್ತೊಮ್ಮೆ ಪರಿಶೀಲಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಮನಸೂರ್ ಅವರನ್ನು ಈಚೆಗೆ ನಾನು ಕಾಣಲು ಆಗಿಲ್ಲ. ನಿಮ್ಮ ಮೆಚ್ಚಿಗೆಯನ್ನು ಅವರಿಗೆ ತಿಳಿಸಲು ಏರ್ಪಾಡು ಮಾಡುತ್ತೇನೆ.

* * *

ಪುಣೆ, ೮–೧೨–೧೯೫೪

ನಿಮ್ಮ ಪ್ರೀತಿಯ ಪತ್ರಗಳೆರಡೂ ಸಕಾಲದಲ್ಲಿ ತಲಪಿದವು. ಮೊದಲನೆಯದು ನಾನು ಧಾರವಾಡದಿಂದ ಹೊರಡುವ ಹಿಂದಿನ ದಿನ. ಎರಡನೆಯದು ೬ನೆಯ ತಾರೀಖು ಸೋಮವಾರ: ಡಾ. ಸುನೀತಿಕುಮಾರ ಛಟರ್ಜಿ (ಚಾಟೂರ್ಜ್ಯಾ! ಬಂಗಾಳಿಯಲ್ಲಿ) ಮತ್ತು ಡಾ. ಸುಕುಮಾರ ಸೇನ್ ಇವರೊಡನೆ (ಇಬ್ಬರೂ ಗಟ್ಟಿಗರು; ಮೊದಲನೆಯವರಂತೂ ಲೋಕವಿಖ್ಯಾತರು, ನಮ್ಮೆಲ್ಲರಿಗೂ ಆಚಾರ್ಯಸ್ಥಾನೀಯರು) 'ಚಾ' ಸೇವಿಸುತ್ತಾ ಕುಳಿತಿರುವಾಗ ನಿಮ್ಮ ಕಾಗದ ಬಂದಿತು. ಆ ದಿನ ನನ್ನ ಹುಟ್ಟಿದ ದಿನವೆಂಬುದೇ ನನಗೆ ಮರೆತು ಹೋಗಿತ್ತು. ಆದರೆ ನಿಮಗೆ ಮರೆಯಲಿಲ್ಲ! ಕಾಗದವನ್ನು ನೋಡಿ ತುಂಬ ಸಂತೋಷವಾಯಿತು. "ವರ" ಪಟ್ಟಿಯೂ ಸಕಾಲಕ್ಕೆ ಬಂದಿದೆ. ಅದು ಸಫಲವಾಗಿ, ಶೀಘ್ರವಾಗಿ ನನ್ನನ್ನು ಕಾರ್ಯೋನ್ಮುಖನನ್ನಾಗಿ ಮಾಡಲಿ.

ಇಲ್ಲಿ ನನ್ನ ಕೈಮೇಲಿನ ಕೆಲಸ ಹೆಚ್ಚಾಗಿಯೇ ಇದೆ. ವಾರಕ್ಕೆ ಮೂರು ಘಂಟೆ ಮಾತ್ರ ಪಾಠ ಎಂದರೂ ಸಿದ್ಧತೆಗೆ ಬಹಳಕಾಲ ಬೇಕಾಗುತ್ತದೆ. ಅಂತೂ ಇದುವರೆಗೆ ಹಾಗೂ ಹೀಗೂ ನಿಭಾಯಿಸಿಕೊಂಡು ಬಂದಿದ್ದೇನೆ. ಒಂದೊಂದು ಸಲ ಮಲಯಾಳ ತೆಲುಗು ಭಾಷೆಗಳ ರೂಪಗಳನ್ನು ಉದಾಹರಿಸುವಾಗ ಎಡವಿರುವುದೂ ಉಂಟು. ಆದರೂ ಪಾಠಗಳು ಕೆಲವು ಮಟ್ಟಿಗಾದರೂ ಉಪಯುಕ್ತವಾಗಿವೆಯೆಂದು ಭಾವಿಸಿಕೊಂಡಿದ್ದೇನೆ. ನನಗೇನೋ ಇದರಿಂದ ಬಲುಮಟ್ಟಿಗೆ ವಿಷಯಜ್ಞಾನವೂ ವಿಷಯ ಪರಿಷ್ಕಾರವೂ ಆಗುತ್ತಿದೆ.

ಶೇಷಭಾಷ್ಯಂ ತು ಕಾವ್ಯೇನ ಕಾವ್ಯಂ ಗೀತೇನ ಹನ್ಯತೇ
ಗೀತಂ ತು ಸ್ತ್ರೀವಿಲಾಸೇನ ಸ್ತ್ರೀವಿಲಾಸೋ ಬುಭುಕ್ಷಯಾ

ಎಂಬ ಶ್ಲೋಕ ನಿಮಗೆ ಗೊತ್ತಿದೆಯಷ್ಟೆ. ಇಲ್ಲಿ ಅದು ತಲೆಕೆಳಗಾಗಿದೆ. ಮೊದಲನೆಯದು (ಶೇಷಭಾಷ್ಯ = ಮಹಾಭಾಷ್ಯ. ∴ ವ್ಯಾಕರಣ), ಕೊನೆಯದು ಇವೆರಡಕ್ಕೇ ಇಲ್ಲಿ ಸ್ಥಾನ, ಉಪಾಂತ್ಯದ್ದಕ್ಕಂತೂ ಅವಕಾಶವೇ ಇಲ್ಲವಷ್ಟೆ. ಇನ್ನು ಕಾವ್ಯ, ಗೀತ ಇವಕ್ಕೆ ವಾರಕ್ಕೊಮ್ಮೆ ಸ್ಥಾನ. ಬೇರೆ ಬೇರೆ ಪ್ರಾಂತಗಳ ವಿದ್ಯಾರ್ಥಿಗಳು ತಮ್ಮ ತಮ್ಮ ಭಾಷೆಗಳ ಕವನಗಳನ್ನು ಸಂಧ್ಯಾಸಭೆಗಳಲ್ಲಿ ಓದುತ್ತಾರೆ. ಕೆಲವು ಚೆನ್ನಾಗಿಯೂ ಇರುತ್ತವೆ. ನಿನ್ನೆಯ ದಿನ ಇಲ್ಲಿನ

ಸಂಸ್ಕೃತಕೋಶ ಶಾಖೆಯ ಪ್ರೊ. ರಾಮಸ್ವಾಮಿಶಾಸ್ತ್ರಿಗಳ ಮಗಳು ಲಕ್ಷ್ಮಿ ಚೆನ್ನಾಗಿ ಭರತ ನಾಟ್ಯಾಭಿನಯ ಮಾಡಿದಳು. ಒಮ್ಮೆಯಾದರೂ ಸಂಗೀತ ಏರ್ಪಾಡನ್ನು ಮಾಡುವ ಉದ್ದೇಶವೂ ಇದೆ. ಭಾನುವಾರಗಳಲ್ಲಿ ಕಾರ್ಲ್ಲಾಗುಹೆ, ಖಡಕ್‌ವಾಸ್ಲಾ ಇಂಥ ಕಡೆಗಳಿಗೆ ಯಾತ್ರೆ, ಅಪೂರ್ವವಾಗಿ ಊರೊಳಗಿನ ಮಿತ್ರರ ಭೇಟಿ-ಹೀಗೆ ವಿರಾಮ ಕಳೆಯುತ್ತಿದೆ. ಇಲ್ಲವಾದರೆ Linguistics for brakfast, Linguistics for lunch, Linguistics for tea and Linguistics again for dinner ಹೀಗೆ ಆಗುತ್ತಿತ್ತು. 'ಮನೆಯಲ್ಲಿ ಲಿಂಗಾಕಾರ.....ಜ್ಞಾಪಕವಿಲ್ಲವೆ?' ಆದರೂ ನನಗೇನೂ ಬೇಸರವಾಗುತ್ತಿಲ್ಲ. ಡಾ. ಛಟರ್ಜಿಯವರ ವಿಷಯ ನಿಮಗೆ ಹಿಂದೆಯೇ ಹೇಳಿದ್ದೇನೆ. ಆತ ಅಪೂರ್ವ ವ್ಯಕ್ತಿ. ಆತನ ದೇಶಜ್ಞಾನ, ಭಾಷಾಜ್ಞಾನ, ಕಲಾವಸ್ತು ಜ್ಞಾನ, ಭೋಜನವಸ್ತುಜ್ಞಾನ ಇವು ಅದ್ಭುತ. ಜ್ಞಾಪಕಶಕ್ತಿಯಂತೂ ಅಮೇಯ. ಘಂಟೆಗಟ್ಟಲೆ ಜೊತೆಗೆ ಮಾತನಾಡುತ್ತಿದ್ದರೂ ಬೇಸರವಾಗುವುದಿಲ್ಲ. ಅವರೊಂದಿಗೆ ನಿಮ್ಮ 'ಗಣೇಶ ದರ್ಶನ'ವನ್ನು ಕುರಿತು ಎರಡು ಮಾತು ಹೇಳಿದೆ. ಆತನಿಗೆ 'ನಟರಾಜ' ಕಲ್ಪನೆಯ ವಿಷಯದಲ್ಲಿ ವಿಶೇಷ ಅಭಿಮಾನ.

ಹೀಗೆಯೇ ಬರೆಯುತ್ತಾ ಹೋಗೋಣವೆಂದರೆ ವ್ಯವಧಾನವಿಲ್ಲ, ಬೆರಳುಗಳಲ್ಲಿ ತ್ರಾಣವೂ ಇಲ್ಲ......

* * *

ಧಾರವಾಡ, ೨೮-೧-೧೯೫೫

ನಿಮಗೆ ಹೀಗೆ ನನ್ನ ನೆನಪು ಪದೇ ಪದೇ ಬರುತ್ತಿರುವುದು ನನ್ನ ಭಾಗ್ಯ. ಅದಕ್ಕೆ ಸಂಪೂರ್ಣವಾಗಿ ನಾನು ಪಾತ್ರವಾಗಿದ್ದೇನೋ ಇಲ್ಲವೋ ಎಂಬ ಸಂದೇಹ ನನ್ನನ್ನು ಬಾಧಿಸುತ್ತಿದೆ. ಆಗಲಿ, ಪ್ರೀತಿಗೆ ಅಳತೆಕೋಲೇಕೆ, "ಡಿಗ್ರಿಕಡ್ಡಿ"ಯೇಕೆ!

ಆಕಾಶವಾಣಿಗಾಗಿ "ಹರಿಣಾಭಿಸರಣ"ವನ್ನು ಬರೆದು ಮುಗಿಯಿತೆಂದು ಕೇಳಿ ಸಂತೋಷ ವಾಯಿತು. ಕಾವ್ಯಸ್ಫೂರ್ತಿಗೆ ಬಾಹ್ಯ ಪ್ರಚೋದನೆಯೂ ಬೇಕು. ಇದರಲ್ಲೇನೂ ಆಶ್ಚರ್ಯವಿಲ್ಲ. ನಾಟಕ ಯಾವಾಗ ಪ್ರಸಾರವಾಗುತ್ತದೆ?

ಡಾ॥ ಸುನೀತಿ ಕುಮಾರ ಛಟರ್ಜಿಯವರಿಗೆ 'ಪದ್ಮಭೂಷಣ' ಗೌರವ ದೊರೆಯಿತೆಂದು ನೀವು ಪತ್ರಿಕೆಯಲ್ಲಿ ಓದಿರಬೇಕಲ್ಲವೆ. ಅದನ್ನು ತಿಳಿದು ನನಗೇನೋ ಸಂತೋಷವಾಯಿತು. ಅಭಿನಂದನ ಕಳಿಸಬೇಕೆನ್ನಿಸಿತು. ಇಂಗ್ಲಿಷಿನಲ್ಲಿ ತಂತಿ ಕೊಡಲು ಮನಸ್ಸು ಒಪ್ಪಲಿಲ್ಲ. ಕನ್ನಡ ಅವರಿಗೆ ಅರ್ಥವಾಗದಿರಬಹುದು. ಸಂಸ್ಕೃತವನ್ನೇಕೆ ಉಪಯೋಗಿಸಬಾರದು! ಗದ್ಯವಾಕ್ಯಕ್ಕಿಂತ ಶ್ಲೋಕ ಬರೆಯುವುದು ಸುಕರವೆಂದು ತೋರಿತು. ಸರಿ. ನಿನ್ನೆ ದಿನ ಎರಡು ಸಾಲನ್ನು ಕೂಡಿಸಿ ಈ ದಿನ ಬೆಳಗ್ಗೆ ತಂತಿಯ ಮೂಲಕ ರವಾನಿಸಿದೆ;

"ಸುನೀತಿ ವಿಶ್ರುತಂ ಶಾಸ್ತ್ರಪಾರಗಂ ಛಾತ್ರವತ್ಸಲಂ!
ಭವಂತಮಭಿನಂದಾಮಿ ಪದ್ಮಭೂಷಣ ಭೂಷಿತಂ॥

ಓದಿ ನಗಬೇಡಿ" ಇದು ಕಾವ್ಯವಲ್ಲ. ಗದ್ಯವಾಕ್ಯವಲ್ಲದ್ದರಿಂದ ಪದ್ಯ!

* * *

ಧಾರವಾಡ, ೨೫-೫-೧೯೫೫

ನಾನು ಕಳೆದ ಗುರುವಾರ ಮಧ್ಯಾಹ್ನದಿಂದ ಪುಣೆಯಲ್ಲಿ ಇರಲಿಲ್ಲ; ಬೊಂಬಾಯಿಗೆ Passport, American visa ಇವನ್ನು ಸಂಪಾದಿಸುವ ಸಲುವಾಗಿ ಹೋಗಿದ್ದೆ. ನಿನ್ನೆಯ ಬೆಳಿಗ್ಗೆ ಇಲ್ಲಿಗೆ ಹಿಂದಿರುಗಿದೆ. ನಿಮ್ಮ 'ದಪ್ಪ'ವಾದ Express ಕಾಗದ ಕೈಸೇರಿತು; ಅದನ್ನು ನೋಡಿ ಗಾಬರಿಯೇನೂ ಆಗಲಿಲ್ಲ! ಪದ್ಯಗಳನ್ನು ನೋಡಿ ಸಂತೋಷವಾಯಿತು. ಓದಿ ಆದಷ್ಟು ಬೇಗ ಓದಿ, ನನ್ನ ಸಂತೋಷವನ್ನೂ ಸೂಚನೆಗಳೇನಾದರೂ ಇದ್ದಲ್ಲಿ ಅವನ್ನೂ ಮತ್ತೆ ನಿಮಗೆ ತಿಳಿಸುತ್ತೇನೆ. ನನಗೆ ಈಗ ಕೈಮೇಲೆ ಕೆಲಸವೂ ಮನಸ್ಸಿನಲ್ಲಿ ಚಿಂತೆಗಳೂ ಇರುವುದು ನಿಜ. ಆದರೆ ನಿಮ್ಮ ಪದ್ಯಗಳನ್ನು–ಇದುವರೆಗಿನ ಜೀವನಾನುಭವದ, ಉತ್ಕೃಷ್ಟ ಚಿಂತನೆಗಳ ಸಾರಭೂತವಾದ ಪದ್ಯಗಳನ್ನು–ಓದಲಾರದಷ್ಟೇನೂ ಕೆಲಸವಿಲ್ಲ. ಖಂಡಿತ ಓದುತ್ತೇನೆ; ಸಾವಧಾನವಾಗಿ ಓದುತ್ತೇನೆ–ಅದಕ್ಕಾಗಿ ನಾಲ್ಕುದಿನದ ಅವಕಾಶವನ್ನು ಕೊಡಿ.

ಪ್ರಿಯ ನರಸಿಂಹಾಚಾರ್, ನಿಮ್ಮ ಕವಿತಾಶಕ್ತಿಯ ವಿಷಯದಲ್ಲಿ ನಿಮಗೇಕೆ ಹೀಗೆ ಆಗಾಗ ಶಂಕೆ ಹುಟ್ಟುತ್ತದೆ? ಈ ಅಳುಕಿನ ಭಾವನೆಯನ್ನು ನೀವು ಸಂಪೂರ್ಣವಾಗಿ ತ್ಯಜಿಸಬೇಕು–ತ್ಯಜಿಸಲೇಬೇಕು. ನಿಮ್ಮ ಕಾವ್ಯದ ವಿಷಯದಲ್ಲಿ ನಾನು ಅನಾದರ ತೋರಿಸುತ್ತಿದ್ದೇನೆಂಬ ಧ್ವನಿ–ಧ್ವನಿಯೇಕೆ, ಅಭಿಪ್ರಾಯ–ನಿಮ್ಮ ಕಾಗದದಲ್ಲಿ ನನಗೆ ಗೋಚರವಾಗುತ್ತಿದೆ. ಈ ಸಂಬಂಧದಲ್ಲಿ ನಾನು ಸಣ್ಣಪುಟ್ಟ ಅಪಚಾರಗಳನ್ನು ಮಾಡಿರಬಹುದೇ ಹೊರತು ದೊಡ್ಡ ಅಪರಾಧವೇನನ್ನೂ ಇದುವರೆಗೆ ಮಾಡಿಲ್ಲವೆಂದು ನಾನು ಭಾವಿಸುತ್ತೇನೆ. ಇದು ಸರಿತಾನೆ? ನಿಮ್ಮ ಕಾವ್ಯದ ರಸ ನನಗೆ ಸರಿಯಾಗಿ ಸಿಕ್ಕಬೇಕಾದರೆ, ಮೊದಲನೆಯ ಪಠನದಲ್ಲಿ ಅನೇಕವೇಳೆ ಸಾಧ್ಯವಾಗುವುದಿಲ್ಲ. ಇದಕ್ಕೆ ನನ್ನ ಭಾವಸಂಚಾರದ ಮತ್ತು ಆಶಯಗ್ರಹಣದ ಮಂದಗತಿ ಬಲುಮಟ್ಟಿಗೆ ಕಾರಣವಾಗಿರ ಬಹುದು. ಆದರೆ ನನಗೇನೋ ವೇಳೆ ಬೇಕು. ಎರಡು ಮೂರು ಬಾರಿ ತಿರುವಿಹಾಕಬೇಕು. ನಾಲ್ಕು ದಿನ ಬಿಟ್ಟು ಮಗುಚಿ ನೋಡಬೇಕು. ಆಗ ಕೃತಿಯ ಸೊಗಸು ಮನಸ್ಸಿನಲ್ಲಿ ಬೇರೂರಿ ನಿಲ್ಲುತ್ತದೆ. 'ರಸ ಸರಸ್ವತಿ'ಯ ವಿಷಯದಲ್ಲಿ ಹೀಗೆ ಆದದ್ದು ನಿಮಗೆ ಜ್ಞಾಪಕವಿರಬೇಕಲ್ಲವೆ. ನನ್ನ ಈ ವ್ಯಕ್ತಿದೌರ್ಬಲ್ಯವನ್ನು ನೀವು ಅನಾದರವೆಂದು ಭಾವಿಸುವುದಿಲ್ಲವೆಂದು ನಾನು ನಂಬಲೆ? ಇಷ್ಟು ವರ್ಷಗಳ ಈಚೆಗೆ ನಿಮ್ಮ ಕವಿತ್ವದ ಮಹತ್ವವನ್ನು ಯಾರೂ ಹೊಸದಾಗಿ ಸ್ಥಾಪಿಸಬೇಕಾಗಿಲ್ಲ. ಅಲ್ಲದೆ ಜನತೆ ಒಂದು ಬಗೆಯ ಕವಿತ್ವಕ್ಕೆ ಮೋಹಗೊಂಡರೆ, ಇನ್ನೊಂದು ಬಗೆಯ ಕವಿತ್ವನ್ನು ಅದು ಅಲ್ಲಗಳೆದಂತೆ ಎಂದೆಂದಿಗೂ ಅಲ್ಲ. ಹಲವು ರೀತಿಯ ಕವಿತೆಗೆ ಲೋಕದಲ್ಲಿ ಸ್ಥಾನವುಂಟು. ಅವುಗಳ ತಾರತಮ್ಯವನ್ನು ನಿರ್ಣಯಿಸುವಾಗ ಮಾತ್ರ ಭಿನ್ನಮತಗಳಿಗೆ ಅವಕಾಶ ಹುಟ್ಟುತ್ತದೆ. ಅರಿತವರು ನಿಮ್ಮ ಕಾವ್ಯವನ್ನು ಮೆಚ್ಚಿದ್ದಾರೆ, ಮುಂದೆಯೂ ಮೆಚ್ಚುತ್ತಾರೆ; ಅಲ್ಲಿಯ ಅಪೂರ್ವವಾದ ಅರ್ಥಸಂಪತ್ತನ್ನು ಆಸ್ವಾದಿಸುತ್ತಾರೆ.

ನಿಮ್ಮ ಪದ್ಯಗಳನ್ನು ಕೆಲವು ದಿನಗಳಲ್ಲಿಯೇ ಓದಿ ಮತ್ತೆ ನಿಮಗೆ ಬರೆಯುತ್ತೇನೆ. ನನ್ನ ಆಲಸ್ಯವನ್ನು ಕ್ಷಮಿಸಿ.

ಕುವೆಂಪು ಕವಿತ್ವವನ್ನು ನಾವು ಈಗಾಗಲೆ ಚರ್ಚಿಸಿದ್ದೇವೆ; ಮತ್ತೆ ಸಂಧಿಸಿದಾಗ ಮಾತಾಡೋಣ. ಉತ್ಸವ ಚೆನ್ನಾಗಿ ನಡೆಯಿತೆಂದು ತಿಳಿದು ಸಂತೋಷವಾಯಿತು.

ಇನ್ನು ನನ್ನ ವಿಚಾರ ಸ್ವಲ್ಪ. ಬೊಂಬಾಯಲ್ಲಿ American visaಕ್ಕಾಗಿ ಮೂರು ಮಂದಿ ಡಾಕ್ಟರುಗಳ ಪರೀಕ್ಷೆಗೆ ದೇಹವನ್ನು ವಶಪಡಿಸಬೇಕಾಯಿತು. ನನಗೇ ತಿಳಿಯದಂತೆ ನನ್ನ ಕರುಳಿನಲ್ಲಿ latent amoeba ಇವೆಯಂತೆ! ಅವನ್ನು ಕಳೆದುಕೊಳ್ಳಲು ಎಂಟು ದಿನ ಔಷಧಿ ಸೇವಿಸಬೇಕು. ಮತ್ತೆ ಬೊಂಬಾಯಿಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡು ನಿರೋಗನೆನಿಸಿಕೊಂಡು visa ಪಡೆಯಬೇಕು. ಇದಕ್ಕಾಗಿ ಬಹುಶಃ ಜೂನ್ 1ನೆಯ ತಾರೀಖು ಮತ್ತೆ ಬೊಂಬಾಯಿಗೆ ಹೋಗುತ್ತೇನೆ. ಜೂನ್ ೧೬ಕ್ಕೆ ಧಾರವಾಡದಿಂದ ಹೊರಟು ೧೭ರ ರಾತ್ರಿ ಬೊಂಬಾಯಲ್ಲಿ ವಿಮಾನ ಹತ್ತಬೇಕೆಂದು ಸದ್ಯಕ್ಕೆ ಗೊತ್ತಾಗಿದೆ. ಎಲ್ಲವೂ ನಿಶ್ಚಿತವಾದ ಬಳಿಕ ನಿಮಗೆ ತಿಳಿಸುತ್ತೇನೆ.

ನಮ್ಮ ಮನೆಯವರು ಈ ವೇಳೆಗೆ ಧಾರವಾಡಕ್ಕೆ ಬಂದಿರಬೇಕೆಂದು ನಂಬುತ್ತೇನೆ. ಅವರು ಬಂದದ್ದಕ್ಕೆ ಇನ್ನೂ ಕಾಗದ ಬಂದಿಲ್ಲ. ಇಲ್ಲಿ ಕೈಮೇಲಿನ ಕೆಲಸ ಹೆಚ್ಚಾಗಿದೆ. ಕಾಗದವನ್ನು ಇಲ್ಲಿಗೇ ನಿಲ್ಲಿಸಬೇಕು....ಬೊಂಬಾಯಲ್ಲೂ ಪುಣೆಯಲ್ಲೂ ಸೆಕೆ ಅತಿಯಾಗಿದೆ, ಮೈಮೇಲೆ ಬೆವರಿನ ಗುಳ್ಳೆಗಳು ಎದ್ದಿವೆ.

ಹತ್ತು ಹನ್ನೊಂದು ದಿನದ ಕೆಳಗೆ ಶ್ರೀ (ಶಿವರಾಮ)ಶಾಸ್ತ್ರಿ, ಶ್ರೀ ಬಿಳಿಗಿರಿ ನಾನು ಮೂರು ಮಂದಿ ಚಿ॥ ಸೌ॥ ಶಾರದನ ಮನೆಗೆ ಊಟಕ್ಕೆ ಹೋಗಿದ್ದೆವು. ತುಂಬ ಪ್ರೀತಿಯಿಂದ ಔತಣ ಮಾಡಿದರು. ಈ ವಾರಾಂತ್ಯದಲ್ಲಿ ಮಗಳು ಅಳಿಯ ಬೆಂಗಳೂರಿಗೆ ಬರುತ್ತಾರಲ್ಲವೇ? ಶ್ರೀ ಶಾಸ್ತ್ರಿ ಆರೋಗ್ಯವಾಗಿದ್ದಾರೆ. ಪ್ರತಿದಿನವೂ ನೋಡುತ್ತಿರುತ್ತೇವೆ. ಆಗಾಗ ಜೊತೆಗೂಡಿ ಊರೊಳಗೆ ಹೋಗಿ ಬರುತ್ತೇವೆ.

* * *

ಧಾರವಾಡ, ೧೧-೬-೧೯೫೫

ನಾನು ಇಲ್ಲಿಂದ ೧೫ನೆಯ ತಾ॥ ಬುಧವಾರ ಮಧ್ಯಾಹ್ನತ್ವರ ಮೇಲ್‌ಗಾಡಿಗೆ ತಪ್ಪಿದರೆ ರಾತ್ರಿ ಎಕ್ಸ್‌ಪ್ರೆಸ್ಸಿಗೆ ಹೊರಡುತ್ತೇನೆ. ಪುಣೆಯಲ್ಲಿ ಒಪ್ಪತ್ತು ನಿಂತು ೧೭ನೆಯ ರಾತ್ರಿ ಬೊಂಬಾಯಿಯಲ್ಲಿ ವಿಮಾನವನ್ನು ಹತ್ತಬೇಕು. ೨೦ನೆಯ ತಾ॥ ನ್ಯೂಯಾರ್ಕ್. (ನಡುವೆ ಲಂಡನ್ನಿನಲ್ಲಿ ಒಪ್ಪೊತ್ತು ವಿಶ್ರಾಂತಿ!) ಪ್ರಿಯಮಿತ್ರರ ಹರಕೆಗಳಿಂದ ಪ್ರಯಾಣವೂ ಪ್ರವಾಸವೂ ಸುಗಮವಾಗಿ ಸುಖಕರವಾಗಿ ನೆರವೇರಬೇಕಾಗಿದೆ.

ನಿಮ್ಮ ಕವನವನ್ನು ಒಂದು ಬಾರಿ ಪೂರ್ತಿ ಓದಿದ್ದೇನೆ. ಆದರೆ ಅದನ್ನು ಜೀರ್ಣಿಸಿಕೊಳ್ಳಲು ಮತ್ತೊಂದು ಬಾರಿಯಾದರೂ ಓದಲೇಬೇಕು. ಪ್ರಥಮಪಾಠದಲ್ಲಿ ಅನೇಕ ಚರಣಗಳು ಸುಂದರವಾಗಿ ಕಂಡವು. ಒಟ್ಟು ಭಾವವೂ ಧೀರೋನ್ನತ ಗತಿಯಲ್ಲಿ ಸಾಗುತ್ತದೆ. ಛಂದಸ್ಸಿನ ವಿಷಯದಲ್ಲಿ ಮಾತ್ರ ಕೆಲವು ಚರಣಗಳು ಅಷ್ಟಾಗಿ ಹಿಡಿಸಲಿಲ್ಲ. ಇದನ್ನೆಲ್ಲ ಗುರುತುಮಾಡಿ ನಾನು ಇಲ್ಲಿಂದ ಹೊರಡುವುದರೊಳಗೆ ಬೆಂಗಳೂರಿನ ವಿಳಾಸಕ್ಕೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ನಿಮಗೆ ಕಳಿಸಿಕೊಡುತ್ತೇನೆ. ಕವನವನ್ನು ಅವಶ್ಯವಾಗಿ ಅಚ್ಚುಮಾಡಿಸಿ.

ಪುಣೆಯಲ್ಲಿ ಕಳೆದ ೨೭ನೆಯ ತಾರೀಖು ನಿಮ್ಮ 'ವಸಂತಚಂದನ'ದ ಪ್ರಸಾರವನ್ನು ಕೇಳಬೇಕೆಂದು ಶಾಸ್ತ್ರಿ ನಾನು ಪ್ರಯತ್ನಪಟ್ಟೆವು ಸಾಧ್ಯವಾಗಲಿಲ್ಲ. ಶ್ರೀ ಬಿಳಿಗಿರಿ ಕೇಳಿದರಂತೆ. ದೂರದ ಮೂಲಕ ಶ್ರವಣ ಅಷ್ಟೊಂದು ಸರಿಯಾಗಿರಲಿಲ್ಲವಂತೆ.

* * *

ಧಾರವಾಡ, ३೧-೧೦-೧೯೫೬

ನಾಳೆ ಹೊಸ ಮೈಸೂರು (=ಕರ್ಣಾಟಕ) ರಾಜ್ಯದ ಪ್ರತಿಷ್ಠಾಪನೆಯಾಗುತ್ತದೆ. ಹಲವು ಮಂದಿ ಹಿರಿಯರ ಹಾರೈಕೆಗಳು ಕಡೆಗೆ ಫಲಿಸಿದವು. ಅವರ ಹರಕೆಗಳೂ ಫಲಿಸಿ ದೇಶಕ್ಕೂ ಜನತೆಗೂ ಕಲ್ಯಾಣವಾಗಲೆಂದು ಹಾರೈಸೋಣ.

ಇದು ಪರಸ್ಪರ ಅಭಿನಂದನದ ಸಮಯ. ಅದಕ್ಕಾಗಿ ಈ ಕಾರ್ಡನ್ನು ಬರೆದಿದ್ದೇನೆ.

* * *

ಧಾರವಾಡ, ೭-೧೨-೧೯೫೬

ನಿಮ್ಮ ೪ನೆಯ ತಾರೀಖಿನ ಕಾಗದ ನಿನ್ನೆಯ ಮಧ್ಯಾಹ್ನ ನಾವು ಊಟಕ್ಕೆ ಕುಳಿತಿದ್ದಾಗ ಇಲ್ಲಿಗೆ ಬಂದಿತು. ಅದನ್ನು ಓದಿನೋಡಿದಾಗ ಮನಸ್ಸಿಗೆ ಆತಂಕವಾಯಿತು; ಅನ್ನ ಅಷ್ಟು ರುಚಿಸಲಿಲ್ಲ ಎಂದರೆ ನಂಬುತ್ತೀರಿ ತಾನೆ. ನಿಮ್ಮ ಒಂದು ಸ್ಥಾಯಿಯಾದ ವಿಷಾದದಲ್ಲಿ ಅದನ್ನು ಬರೆದಿರೆಂದು ತೋರುತ್ತದೆ. ಆದರೆ ಸಹಜ ಕವಿಗೆ, ಸ್ಥಾಯಿ ಒಂದೇ ಅಲ್ಲ ಹಲವುಂಟು ಎನ್ನುವುದು ನೆನಪಿಗೆ ಬಂದಿತು. ಎರಡು ವಾರದ ಕೆಳಗೆ ಬಂದಿದ್ದ ಇನ್ನೊಂದು ಕಾಗದವನ್ನು ಜ್ಞಾಪಿಸಕೊಂಡೆ. ಅದರಲ್ಲಿ ಮೇಲುಕೋಟೆಯ ಬೆಳಕು, ಗಾಳಿಗಳನ್ನು ತುಂಬಿದ್ದೀರಿ; ಕಾಗದದಲ್ಲಿ ಗೆಲವು, ಉಲ್ಲಾಸ ಹರಿದಾಡಿದೆ. ಬಹುಶಃ ಈ ಕಾಗದ ನಿಮಗೆ ಮುಟ್ಟುವ ವೇಳೆಗೆ ಇನ್ನೂ ಒಂದೆರಡು ಕಡೆಗಳಿಂದ ನಿಮಗೆ ಕಾಗದಗಳು ಬಂದು ನಿಮ್ಮ ಮನಸ್ಸಿನ ಅಕುಶಲತೆ ಚೆದರಿಹೋಗಿರುತ್ತದೆ. ನೀವು ಕಾಗದ ಬರೆದ ವೇಳೆಯಲ್ಲಿ ಬೆಂಗಳೂರಲ್ಲೇನಾದರೂ ಅಕಾಲದ ಮೋಡಕವಿದಿತ್ತೋ ಹೇಗೆ? ಅಂತೂ ಸ್ನೇಹ ಬೇಕೆನ್ನಿಸಿದ ವೇಳೆಯಲ್ಲಿ ನನ್ನನ್ನು ಪ್ರೀತಿಯಿಂದ ನೆನೆದು ಕಾಗದ ಬರೆದಿರಲ್ಲ: ನಾನು ಧನ್ಯ! ಆದರೆ ಈ ಸಪ್ಪೆಕಾಗದದ ಮೂಲಕ ನಾನೇನು ಉತ್ಸಾಹವನ್ನು ನಿಮ್ಮಲ್ಲಿ ತುಂಬಬಲ್ಲೆ?

ಪುಣೆಗೆ ನಾನು ಹೋಗಿದ್ದಾಗ, ನಿಮ್ಮ ಕಾಗದ ಬರಲಿಲ್ಲ ಎಂದು ನಾನು ತಪಿಸುತ್ತಿದ್ದೆ. ಚಿ॥ಸೌ॥ ಶಾರದಳ ಆರೋಗ್ಯದ ವಿಷಯವಾಗಿ ನನಗೆ ಆತಂಕವಿತ್ತು. ಅವಳು ಪುಣೆಗೆ ಬಂದಳೇ ಹೇಗೆ ಎಂಬುದೂ ಗೊತ್ತಾಗಿರಲಿಲ್ಲ. ಶ್ರೀ (ಗರ್ಗೇಶ್ವರಿ) ವೆಂಕಟಸುಬ್ಬಯ್ಯನವರು ನಾನು ಪುಣೆಗೆ ಹೋದ ಕೆಲವು ದಿನಗಳಲ್ಲೇ ಹೈದರಾಬಾದಿಗೆ ಹೊಸ ಕೆಲಸದ ಮೇಲೆ ಪ್ರಯಾಣ ಮಾಡಿಬಿಟ್ಟರು; ಆದಕಾರಣ ಅವರಿಂದಲೂ ವಿಷಯ ತಿಳಿಯಲಿಲ್ಲ. ನಾನು ಪುಣೆಯನ್ನು ಬಿಡುವ ಹಿಂದಿನ ದಿನ ನಿಮ್ಮ ಅಳಿಯಂದಿರ ಮನೆಯ ಕಡೆ ಸಂಜೆ ಹೋಗಿಬಂದೆ. ಬಾಗಿಲು ಕಿಟಕಿ ಎಲ್ಲ

ಮುಚ್ಚಿತ್ತು. ಗೃಹಿಣಿ ಹಿಂದಿರುಗಿಲ್ಲವೆಂದು ನಿರ್ಧರಿಸಿಕೊಂಡೆ. ಇಲ್ಲಿಗೆ ಬಂದಮೇಲೂ ನಿಮ್ಮ ವಿಷಯವಾಗಿ ಯೋಚಿಸುತ್ತಾ ಇನ್ನೊಂದು ಕಾಗದವನ್ನು ಈ ಬಾರಿ ಟಿಪಿ ಕೃಷ್ಣಾಚಾರ್ಯರಿಗೆ, ಬರೆದು ವಿಚಾರಿಸಬೇಕು ಎಂದುಕೊಳ್ಳುತ್ತಿದ್ದೆ. ಅಷ್ಟರಲ್ಲಿ ನಿಮ್ಮ ಹಿಂದಿನ ಕಾಗದ ಬಂದಿತು. ಮನಸ್ಸಿಗೆ ಸಮಾಧಾನವಾಯಿತು. ನಾಲ್ಕು ದಿನ ಬಿಟ್ಟು ಉತ್ತರ ಬರೆಯೋಣ ಎನ್ನುವಾಗ ಪ್ರಜಾವಾಣಿಯ ಸಂಚಿಕೆ – ನೀವು ಕಳಿಸಿದ್ದು–ಬಂದಿತು, ಅದರಲ್ಲಿ ಮೊದಲು ಆಕರ್ಷಕವಾಗಿ ಕಾಣಿಸಿದ್ದು ನಿಮ್ಮ ಭಾವಚಿತ್ರ. ನಾನು ಇತ್ತೀಚೆಗೆ ನೋಡಿರುವ ನಿಮ್ಮ ಚಿತ್ರಗಳಲ್ಲೆಲ್ಲ ಅದೇ ಉತ್ತಮವೆನ್ನಬಹುದು. ಮನೆಯವರೆಲ್ಲರೂ ಅದನ್ನು ಮೆಚ್ಚಿದರು. ಯಾರು ಅದನ್ನು ತೆಗೆದವರು? ಅದರ ಒಂದು ಪ್ರತಿ ನನಗೂ ಬೇಕು. ರಾಮಚಂದ್ರಶರ್ಮರ ಲೇಖನ ಚೆನ್ನಾಗಿದೆ. ನಿಮ್ಮ ಕವಿತೆಯ ಗುಣಗಳಲ್ಲಿ ಕೆಲವನ್ನು ಗುರುತಿಸಿದ್ದಾರೆ. ಆದರೆ ಒಟ್ಟಿನಲ್ಲಿ ಅವರಿಗೆ ತಾದಾತ್ಮ್ಯ ದೊರೆಯಲಿಲ್ಲವೆನ್ನಿಸುತ್ತದೆ. ಕ್ಲಿಷ್ಟವಾದ ಕಾವ್ಯಗಳನ್ನು ಬರೆಯುವುದರಲ್ಲಿ ಪ್ರವೀಣರಾದ ನವ್ಯಕವಿಗಳು ನಿಮ್ಮ ಕವನಗಳಲ್ಲಿ ಕೆಲವು "ಅರ್ಥವಾಗುವುದೇ ಕಷ್ಟ" ಎಂದು ಬರೆದಿರುವುದನ್ನು ನೋಡಿ ನನಗೆ "ಮೋಜೆನ್ನಿಸಿತು"!...... "ಕಾವ್ಯಕ್ಕೆ ಸಂಗೀತ ಅವಶ್ಯ" ಎಂದು ನೀವು ಹೇಳಿದಿರಾ?... ನಿಮ್ಮಲ್ಲಿ ನವೀನದೃಷ್ಟಿ ಉಂಟೆಂಬುದು ಅವರಿಗೆ ಮನಮುಟ್ಟಿದಂತೆ ಅವರ ಲೇಖನದಿಂದ ವ್ಯಕ್ತವಾಗುವುದಿಲ್ಲ. ಆದರೂ ಲೇಖನದಲ್ಲಿ ನಿಮ್ಮ ಹಲವು ಪಂಕ್ತಿಗಳನ್ನೂ ಉಕ್ತಿಗಳನ್ನೂ ಉದಾಹರಿಸಿರುವುದರಿಂದ ಉಪಾದೇಯವಾಗಿದೆ. "....ಹುಚ್ಚು" ಎನ್ನುವುದು ನಿಮ್ಮ "madness" ಎಂಬ ಮಾತಿನ ಭಾವವನ್ನೆಲ್ಲಾ ತಿಳಿಸುತ್ತದೋ ಇಲ್ಲವೋ!......

ಕಳೆದ ಸೋಮವಾರ ಇಲ್ಲಿ ನಮ್ಮ ವಿಶ್ವವಿದ್ಯಾಲಯ ಕಾನ್‌ವೋಕೇಷನ್ ನಡೆಯಿತು. ಗೌರವ ಡಾಕ್ಟರ್ ಪ್ರಶಸ್ತಿಯನ್ನು ಪಡೆಯಬೇಕಾಗಿದ್ದವರಲ್ಲಿ ಇಬ್ಬರು ಮಾತ್ರ ಬಂದಿದ್ದರು. ಉಳಿದವರು ಇಬ್ಬರು ಅನಾರೋಗ್ಯದಿಂದ ಬರಲಿಲ್ಲ. ಇನ್ನಿಬ್ಬರು ಕಾರ್ಯಗೌರವದಿಂದ–ಬಹುಶಃ ಅನಾದರ ಎಂಬುದಕ್ಕೆ ಇದು ವಿನಯದ ನಾಮಧೇಯ–ಬಂದಿರಲಿಲ್ಲ. ಬಂದಿದ್ದವರು ಮಾಸ್ತಿ ಮತ್ತು ಹಳಕಟ್ಟಿ. ಮಾಸ್ತಿಯವರು ಭಾಷಣವನ್ನು ಮಾಡಿದರು. ಕೇವಲ ಹತ್ತುದಿನಗಳ ಹಿಂದೆ ಭಾಷಣಮಾಡಬೇಕೆಂಬ ಕೋರಿಕೆ ಅವರಿಗೆ ಮುಟ್ಟಿತಂತೆ. ಕನ್ನಡದಲ್ಲಿ ಆಗಲಿ ಎಂದರೆ ಆಗಬಹುದು ಎಂದು ಈ ಧೀರ ಉತ್ತರ ಹೇಳಿದರು, ಇಲ್ಲಿಯವರೂ ವಿವೇಕದಿಂದ ಒಪ್ಪಿ ಕೊಂಡರು. ಅಂತೂ ಕರ್ನಾಟಕ ವಿಶ್ವವಿದ್ಯಾಲಯದ ಚರಿತ್ರೆಯಲ್ಲಿ ಅದೊಂದು ಅಪೂರ್ವ ಘಟನೆ. ಮೈಸೂರಿನ ಗವರ್ನ್‌ರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತಿಗಳಿಬ್ಬರು ಗೌರವ ಪ್ರಶಸ್ತಿಯನ್ನು ಪಡೆಯುವಾಗ, ಅವರಲ್ಲಿ ಒಬ್ಬರು ಕನ್ನಡದಲ್ಲೇ ಭಾಷಣ ಮಾಡಿದರು. (ಅಂದು ನನ್ನ ಮಗಳೂ ಅಣ್ಣನ ಮಗನೂ ಬಿ.ಎಸ್‌ಸಿ., ಬಿ.ಕಾಮ್ ಪ್ರಶಸ್ತಿಯನ್ನು ಪಡೆದರು. ಆದ ಕಾರಣ ಮನೆಯವರಿಗೆಲ್ಲ ಉತ್ಸಾಹ. ಅಷ್ಟು ಮಂದಿಯೂ–ಮಡದಿ ಸಹಿತ!–ಕಾನ್‌ವೋಕೇಷನ್ನಿಗೆ ಹೋಗಿದ್ದೆವು.) ಭಾಷಣ "ಸುದೀರ್ಘ"ವಾಗಿತ್ತು; ವೇಗವಾಗಿ ಮಾಸ್ತಿಯವರು ಓದಿದರೂ ಐವತ್ತೈದು ದೀರ್ಘ ನಿಮಿಷಗಳು ಹಿಡಿದವು ಅದನ್ನು ಮುಗಿಸುವುದಕ್ಕೆ. ರಾಯಲ್ ಆಕಾರದ ಇಪ್ಪತ್ತೂವರೆ ಪುಟಗಳಿಗೆ ಕಡಮೆ ಕಾಲ ಸಾಕಾಗುತ್ತದೆಯೆ? ಹಲವರಿಗೆ ಅದರಲ್ಲೂ ಡಿಗ್ರಿ ಪಡೆದವರಿಗೆ, ಪ್ರೇಕ್ಷಕರಾಗಿ ಬಂದಿದ್ದ ಹಲವರಿಗೆ–ಬೇಸರವಾಯತೆಂದೇ ತೋರುತ್ತದೆ. ಅಧ್ಯಕ್ಷತೆ

ವಹಿಸಿದ್ದ ಮಹಾರಾಜರಿಗೂ ಇದು ಅತಿ ದೀರ್ಘ ಎನ್ನಿಸಿರಬೇಕು. ಏಕೆಂದರೆ, ಕಾನ್‌ವೋಕೇಷನ್ ಆದ ಕೂಡಲೆ (ಸಂಜೆ ಆರು ಘಂಟೆಯ ಮೇಲೆ!) ಅವರು ಕಾರಿನಲ್ಲಿ ಧಾರವಾಡ ಬಿಟ್ಟು ದಾವಣಗೆರೆಯಲ್ಲಿ ಬೆಂಗಳೂರು ಮೇಲ್ ಗಾಡಿಯನ್ನು ಹಿಡಿಯಬೇಕಾಗಿತ್ತು, ಮಾರನೆಯ ಬೆಳಿಗ್ಗೆ ಬೆಂಗಳೂರಿನಲ್ಲಿ ಚೀನಾದ ಪ್ರಧಾನಿಯನ್ನು ಸ್ವಾಗತಿಸುವ ಸಲುವಾಗಿ. ಆದರೂ ಅವರು ಮಾಸ್ತಿಯವರ ಭಾಷಣ ಮುಗಿದಾಗ "ನಿಮ್ಮ ಭಾಷಣ ಬಹಳ ಚೆನ್ನಾಗಿತ್ತು" ಎಂದು ಮಾಸ್ತಿಯವರನ್ನು ಅವರು ಕನ್ನಡದಲ್ಲೇ ಶ್ಲಾಘಿಸಿದ್ದು ಅನತಿ ದೂರದಲ್ಲಿ ಸೆನೇಟರ್ ಆಗಿ ಕುಳಿತಿದ್ದ ನನ್ನ ಕಿವಿಗೆ ಬಿತ್ತು. ಭಾಷಣ ನಿಜವಾಗಿಯೂ ವಿಷಯಗರ್ಭಿತವಾಗಿದೆ; ಆದರೆ ಅಷ್ಟನ್ನೂ ಸಭೆಯಲ್ಲಿ ಓದದೆ, ಕೆಲಕೆಲವು ಭಾಗಗಳನ್ನು ಶ್ರವಣಮಾಡಿಸಿದ್ದರೆ ಇನ್ನಷ್ಟು ಹಿತವಾಗುತ್ತಿತ್ತು. ಆ ಮಾತಿರಲಿ. ಇದು ಕನ್ನಡದ ಒಂದು ವಿಜಯ. ಮಾಸ್ತಿಯವರಿಂದ ಅದು ನಡೆದದ್ದು ನನಗೆ ಸಂತೋಷ. ಏಕೆಂದರೆ ಇಂದಿನ ನಮ್ಮ ಹಿರಿಯರಲ್ಲಿ ಅವರೊಬ್ಬರೇ ಕನ್ನಡದ ಅಭ್ಯುದಯದ ಅಧ್ವರ್ಯುಗಳು–ಈಚೆಗೆ ಅವರನ್ನು ನೀವು ನೋಡಿದ್ದಿರಾ?

ನಾನು ಧಾರವಾಡವನ್ನು ಬಿಡುವ ಕಾಲ ಸಮೀಪಿಸುತ್ತಾ ಬಂತು. ಎಂದು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಜನವರಿ ೧೨ಕ್ಕೆ ಅವಧಿ ಮುಗಿಯುತ್ತದೆ; ಆದರೆ ಮಾರ್ಚಿ ತನಕ ಇರಬೇಕಾಗಬಹುದು. ಇನ್ನು ಎರಡು ಮೂರು ವಾರದಲ್ಲಿ ಎಲ್ಲವೂ ನಿಷ್ಕರ್ಷವಾಗಬೇಕು. ಕುಟುಂಬ ಸಮೇತ ಇಲ್ಲಿಗೆ ನೀವು ಬಂದು ಹೋಗಲೇಬೇಕು.

ಡಾ॥ ಅಂಬೇಡ್ಕರ್ ದೈವಾಧೀನರಾದರೆಂದು ಈಗ ತಾನೆ ಪತ್ರಿಕೆಯಿಂದ ತಿಳಿಯಿತು: "ನೊಂದ ಜೀವಂ ತಣ್ಣಗಾಯ್ತು"!

* * *

ಮೈಸೂರು, ೧–೩–೧೯೫೭

ಇಲ್ಲಿ ನೀವು ಭಾಷಣ ಮಾಡಿದ "ರೀತಿ"ಯನ್ನು–ವಿಷಯವನ್ನಲ್ಲ – ಕುರಿತು ನಾನು ಆಡಿದ ಕೆಲವು ಮಾತುಗಳು ನಿಮ್ಮ ಮನಸ್ಸನ್ನು ನೋಯಿಸಿದುವೋ ಹೇಗೋ ತಿಳಿಯದು. ಆದರೂ ಅದರ "ಸವಾಲ"ನ್ನು ಎದುರಿಸಿ, ಲಾ ಕಾಲೇಜಿನಲ್ಲಿ "ಭರ್ಜರಿ" ಭಾಷಣ ಮಾಡಿದಿರೆಂದು ಕೇಳಿ ನನಗೆ ತುಂಬ ಸಂತೋಷವಾಯಿತು. ಹೀಗೆಯೇ ನಾಲ್ಕುಬಾರಿ ಮಾಡಿದರೆ, ಕೂಡಿದ ಮಟ್ಟಿಗೂ ಶ್ರೋತೃಗಳನ್ನು ಗಮನದಲ್ಲಿಟ್ಟುಕೊಂಡು, ಧ್ವನಿಯನ್ನು ತೇಲುವುದಕ್ಕೆ ಬಿಡದೆ ಸ್ಪಷ್ಟೋಚಾರಣೆ ಮಾಡಿದರೆ, ನೀವು ಉತ್ತಮ ಭಾಷಣಕಾರರೂ ಆಗುತ್ತೀರಿ. ಹಾಗೆ ನೀವು ಬೇಗ ಆಗಬೇಕೆಂದು ನನ್ನ ಆಸೆ. ಮೊದಲೇ ಭಾಷಣವನ್ನು ಬರೆದು ಇಟ್ಟುಕೊಂಡಿದ್ದರೆ, ಭಾಷಣದ ವೇಳೆಯ ತಾತ್ಕಾಲಿಕ ನಿರುತ್ಸಾಹಗಳು ನಿಮ್ಮ ಮನಸ್ಸನ್ನು ದನಿಯನ್ನೂ ಕುಗ್ಗಿಸಲಾರವು!

'ಮಲೆದೇಗುಲ'ದ ಪ್ರವಚನ ಹೇಗೆ ನಡೆಯುತ್ತಿದೆ?
ನಿಮ್ಮ ಭಾಷಣ ಪ್ರಬಂಧವನ್ನು ಬರೆದು ಮುಗಿಸಿದಿರಾ?
ಈ ಕಾಗದ ತಲಪಿದ್ದಕ್ಕೆ ಉತ್ತರ ಬರೆಯಿರಿ.

ನಾನು ಮುಂದಿನ ವಾರಾಂತ್ಯಕ್ಕೆ ಎಂದರೆ ೯ನೆಯ ತಾ॥ ಸುಮಾರಿಗೆ ಧಾರವಾಡಕ್ಕೆ ಒಂದುವಾರ ಹೋಗಿಬರಬೇಕೆಂದಿದ್ದೇನೆ. ನಿಮ್ಮ ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ.

ಶಾಸ್ತ್ರಿ, ಡಿ.ಎಲ್.ನ., ನಾನು ಆಗಾಗ ಸೇರುತ್ತಿರುತ್ತೇವೆ. ಇದು ಮೈಸೂರಿನ ಅನುಕೂಲ.

* * *

(ಪು.ತಿ.ನ. ಅವರ ಪತ್ರ)

ಬೆಂಗಳೂರು, ೨೧-೪-೧೯೫೭

ಪ್ರಿಯ ಶ್ರೀಕಂಠಯ್ಯ

ಈ ಕಾಗದಕ್ಕೆ ಪ್ರೇರಣೆ ಮುಂದೆ ವಿಶದವಾಗುತ್ತದೆ. ಭಾನುವಾರ ದೇಶಿಕಾಚಾರ್ಯರ ಮನೆಯಲ್ಲಿ ಊಟ ಮುಗಿಸಿಕೊಂಡು ಸುಮಾರು ಮೂರು ಗಂಟೆಯ ಹೊತ್ತಿನಲ್ಲಿ ಮನೆಗೆ ವಾಪಸು ಬರಬೇಕೆಂದಿದ್ದಾಗ ಬೇಸಿಗೆಯ ಮೊದಲ ಮಳೆ ಬಿದ್ದು ಹಗಲು ಬಹಳ ಹಿತವಾಗಿತ್ತು. ಸಂಗೀತ ಕೇಳಬೇಕೆನಿಸಿತು – ವೀಣಾ ರಾಜಾರಾಯರ ಮನೆಗೇಕೆ ಹೋಗಬಾರದು ಎನ್ನಿಸಿತು. ಹಾಗೆ ಹೋಗುತ್ತಿರುವಾಗ ದಾರಿಯಲ್ಲಿ ಕಪನೀಪತಿ ಎಂಬ ಹಳೆಯ ಸ್ನೇಹಿತರು (Oriental Company Supervisor and Agent) ಸಿಕ್ಕಿ ಮನೆಗೆ ಆದರದಿಂದ ಕರೆದುಕೊಂಡು ಹೋದರು. ಆಗತಾನೆ ಕರೆದ ಹೀರೇಕಾಯಿ ಬೋಂಡ ಕೊಟ್ಟರು. ಕೊಟ್ಟ ಪ್ಲೇಟು ಬಹಳ ನಾಜೂಕಾಗಿ ಚೆನ್ನಾಗಿತ್ತು. ಮನೆಯೂ ಬಲು ಅಚ್ಚುಕಟ್ಟು. ಮೇಜಿನ ಮೇಲೆ Hindu Aryan path, Readers Digest, ಉಪನಿಷದ್ಭಾಷ್ಯ ಇತ್ಯಾದಿ ಶಿಷ್ಟ ದಾಖಲೆಗಳಿದ್ದವು ಇರಲಿ. ಆದರೆ ಆ ಬೋಂಡ ಅದರ ಬಣ್ಣ, ಅದರ ಗಾತ್ರ, ಅದರ ರೂಪ ಹಾ–ಅದರ ರುಚಿ ಬಾಯಿಗೆ ಹಾಕಿದರೆ ನುರುಚ್ಚನೆ ಹಲ್ಲೂರಿದರೆ ಮೃದುವಾಗಿ, ನಾಲಗೆಯ ಒಂದು ತಿರುವಿಗೆ ರುಚಿಯೆಲ್ಲವನ್ನು ಕೊಟ್ಟು ಜಠರ ಪ್ರದೇಶಕ್ಕೆ – ಹಿತವಾದ ಸ್ನೇಹಿತ ಹೆಚ್ಚು ಉಪಚಾರವಿಲ್ಲದೆ ದೇವರ ಮನೆಗೆ ಬರುವಂತೆ–ಹೊಗುವ ರಸಕವಳ ಬೋಂಡ. ಅಂಥದ್ದನ್ನು ಈವರೆಗೆ ನಾನು ತಿಂದು ಕಾಣೆ–ಎಣ್ಣೆಯಲ್ಲಿ ಕರಿದದ್ದಲ್ಲ–ತುಪ್ಪದಲ್ಲಿ ಕರಿದದ್ದು. ಆಗ ನೀವೊಬ್ಬರೇ ನನ್ನ ಜ್ಞಾಪಕಕ್ಕೆ ಬಂದವರು – ಹಿಂದೆ ಒಳ್ಳೆಯ ಕವಿತೆಯ ಸಾಲು ಬರುತ್ತಿದ್ದಾಗ ಜ್ಞಾಪಕಕ್ಕೆ ಬರುತ್ತಿದಂತೆ. ಈಗ ಇಂಥ ರಸಕವಳದ ವೇಳೆಯಲ್ಲಿ. ನಿಮಗೆ ಕವಳದ ರುಚಿ ಹತ್ತುತ್ತಿದ್ದಂತೆಯೇ ನೀವು ಪದ್ಯ ಬರೆಯುವುದನ್ನು ಬಿಟ್ಟ ರಹಸ್ಯ ಈಗೀಗ ಅರಿವಾಗುತ್ತಿದೆ. ನಾನು ನರಸಿಂಹಯ್ಯನವರಿಗೂ ಊತಪ್ಪ ತಿನ್ನಿಸಬೇಕೆಂದು ಆ ಹೋಟಲ್‌ವರೆಗೆ ಕರೆದುಕೊಂಡು ಹೋಗಿ ಆ ದಿನ ಅದಿಲ್ಲದ್ದರಿಂದ ವಿಫಲನಾದೆ. ಇನ್ನೇನು ವಿಷಯವಿಲ್ಲ.

* * *

ಮೈಸೂರು, ೩೦-೪-೧೯೫೨

ಪ್ರಿಯ ನರಸಿಂಹಾಚಾರ್

ನಿಮ್ಮ ಮೂರು ಕಾರ್ಡುಗಳೂ ತಲುಪಿದವು – ಕೊನೆಯದು ಈಗ ತಾನೆ ಮುಟ್ಟಿ, ಚುರುಕನ್ನು ಮುಟ್ಟಿಸಿತು! ನಿಮ್ಮ ಹಿಂದಿನ ಕಾಗದಕ್ಕೆ ನಾನು ಉತ್ತರ ಬರೆಯದಿದ್ದುದು, ಹಿಂಜರಿಯಕೆಯಿಂದ ಅಲ್ಲ, ನಿಜವಾಗಿ ಅವ್ಯವಧಾನದಿಂದ.

ಮೂರ್ತಿರಾಯರು ಇಲ್ಲಿಗೆ ಬಂದಿದ್ದಾಗ ಅವರನ್ನು ನಾನೂ ವಿಚಾರಿಸಿದ್ದೆ. (ನನ್ನ "ನೀಡು ಪಾಥೇಯವನು" ಕವನವನ್ನು ಆರಿಸಿಕೊಂಡು ಅದರ ಪ್ರಕಟಣೆಗೆ ಅನುಮತಿ ಕೇಳಿದ್ದಾರೆ.) ನನ್ನ ಕವನಕ್ಕೆ ನಾನು ಅನುಮತಿ ಕೊಡುತ್ತೇನೆ, ನೀವೂ ನಿಮ್ಮದಕ್ಕೆ ಕೊಡಿ. ಬೇಂದ್ರೆ ಆರಿಸಿದ್ದಾರಂತೆ, ಅವರ ಮೇಲಿನ ಗೌರವದಿಂದ ಒಪ್ಪಿಕೊಳ್ಳಬಹುದು ಎಂದು ನಿಮಗೆ ಬರೆಯಬೇಕೆಂದಿದ್ದೆ. ಅಷ್ಟರಲ್ಲಿ ನಿಮ್ಮ ಇಂದಿನ ಕಾಗದ!–ನಿಮ್ಮ ನಿರ್ಣಯ ಸರಿ ಎಂದು ಬೇರೆ ಹೇಳಬೇಕೆ!

ಬೆಂಗಳೂರಿನ ಬೋಂಡ ಇಲ್ಲಿ ನನ್ನ ಬಾಯಲ್ಲಿ ನೀರೂರಿಸಿತು!

* * *

ಮೈಸೂರು, ೧೫-೧-೧೯೫೮

ನನ್ನ ಡಿಲ್ಲಿಯ ಭಾಷಣ ಅಚ್ಚಾಗಿಲ್ಲ; ಇನ್ನೂ ಬರೆದು ಮುಗಿಸಿಯೇ ಇಲ್ಲ. ಇದು ಅತೃಪ್ತಿಕರವಾದರೂ, ಒಂದು ವಿಷಯದಲ್ಲಿ ಅದರಿಂದ ಅನುಕೂಲವೂ ಆಯಿತೆನ್ನಬಹುದು. ಮಿಕ್ಕ ಅಧ್ಯಕ್ಷರುಗಳೆಲ್ಲರೂ ತಮ್ಮ ತಮ್ಮ ಭಾಷಣಗಳನ್ನು ಓದಿದರು. (ಅವೂ ಅಚ್ಚಾಗಿರಲಿಲ್ಲ.) –ಎಷ್ಟೋ ವೇಳೆ ಹಸ್ತಪ್ರತಿಗೆ ಅಂಟಿಕೊಂಡಿದ್ದ ಕಣ್ಣುಗಳನ್ನು ಮೇಲಕ್ಕೆತ್ತಿ ಸಭಿಕರನ್ನು ಒಮ್ಮೆ ಯಾದರೂ ನೋಡದಿರುವಷ್ಟು ಮಟ್ಟಿಗೆ ಸ್ವಲಿಪಿ ಮಗ್ನರಾಗಿರುತ್ತಿದ್ದರು. ನನ್ನ ಬಳಿ ಇದ್ದದ್ದು ಟಿಪ್ಪಣಿಗಳು ಮಾತ್ರ – ಅವನ್ನೇ ಸಮಯೋಚಿತವಾಗಿ ಉಪಯೋಗಿಸಿಕೊಂಡು ಕಾಲದ ಅಳತೆಗೆ ಮೀರದಂತೆ, ಶ್ರೋತೃಗಳ ಗಮನವನ್ನೂ ಸ್ವಲ್ಪ ಆಕರ್ಷಿಸಿ ಭಾಷಣ ಮಾಡಲು ಸಾಧ್ಯವಾಯಿತು. ಅದು ತಕ್ಕಮಟ್ಟಿಗೆ ಹಿಡಿಸಿತೆಂದೂ ತೋರುತ್ತದೆ.

ನೀವು ಬಳ್ಳಾರಿಗೆ ಯಾವಾಗ ಹೊರಡುತ್ತೀರಿ? ಕವಿ ಸಮ್ಮೇಳನದ ಅಧ್ಯಕ್ಷರಾಗಲು ಒಪ್ಪಿಕೊಂಡದ್ದರಿಂದ ನನಗೆ ತುಂಬ ಸಂತೋಷವಾಯಿತು. ನಾನು ಬಳ್ಳಾರಿಗೆ ಬರಲು ಸಾಧ್ಯ ವಾಗುವುದಿಲ್ಲ. ಇಲ್ಲಿ ಇನ್ನೂ ಏನೇನೋ ಕೆಲಸಗಳಿವೆ.

* * *

ಮೈಸೂರು, ೧೩-೧-೧೯೫೯

ನಿಮ್ಮ ಪ್ರಿಯವಾದ "ಆಕ್ಷೇಪಣೆ"ಯ, "ಕೋಪ"ದ ಕಾಗದ ಈಗ ತಾನೆ ಕೈಸೇರಿತು. ಆ ದಿನ ನಿಮ್ಮನ್ನು ನೋಡಬೇಕೆಂಬ ಆಸೆ ನನಗೂ ಬಲವಾಗಿ ಇತ್ತು. ಆದರೆ ಗುಟ್ಟಹಳ್ಳಿ, –

ಶಂಕರಪುರ, ಗವೀಪುರಗಳ ನಡುವೆ ಓಡಾಡಿ ಮಲ್ಲೇಶ್ವರಕ್ಕೆ ಬರಲು ಅಸಾಧ್ಯವಾಯಿತು. ನಿಮಗೆ ವರ್ತಮಾನ ಕಳಿಸಲೂ ಸಾಧ್ಯವಿರಲಿಲ್ಲ. ನಾನು ಆ ದಿನ ಸಂಜೆ ಎಕ್ಸ್‌ಪ್ರೆಸ್‌ಗೇ ಹೊರಟೆ.

ನಿಮ್ಮ "New Wine in New Bottle"ನ್ನು ತಲುಪಿಸಬೇಕೆಂದು ಚೀಲದಲ್ಲೇ ಇಟ್ಟುಕೊಂಡು ಓಡಾಡಿದೆ. ನನ್ನ ಜೊತೆಯಲ್ಲೇ ಅದು ಮತ್ತೆ ಮೈಸೂರಿಗೆ ಬಂದಿದೆ!

ಸಂಕ್ರಾಂತಿಯ ಶುಭಾಶಯಗಳು! ನಾಳೆ (ಎಂದರೆ ಈ ಕಾಗದ ಕೈಸೇರಿದಾಗ) ಬೆಲ್ಲ ಎಳ್ಳು ತಿನ್ನುವಾಗ ನನ್ನ ಮೇಲಿನ ಆಕ್ರೋಶವನ್ನು ಮರೆತುಬಿಡಿ.

ನೀವು ಮೈಸೂರಿಗೆ ಯಾವಾಗ ಬರುತ್ತೀರಿ?

ನಿಮ್ಮ ಹಾಡನ್ನು ಸ್ವರ ಪ್ರಸ್ತಾರಗಳೊಂದಿಗೆ ಕಳಿಸಿಕೊಡಿ. ಚಿ॥ಸೌ॥ ನಾಗರತ್ನ ತುಂಬ ಸಂತೋಷದಿಂದ ಸ್ವಾಗತಿಸುತ್ತಾಳೆ.

ಕಾಗದವನ್ನು ಕಾಲೇಜಿಗೆ ಹೊರಡುವ ಆತುರದಲ್ಲಿ ಗೀಚಿದ್ದೇನೆ. ಕೋಪ ಇಲ್ಲವೆಂದು ಉತ್ತರ ಬರೆಯಿರಿ.

ಪ್ರಾಕೃತದ ಒಂದು ಪದ್ಯವನ್ನು ಈಚೆಗೆ ಯಾವುದೋ ಸಂದರ್ಭದಲ್ಲಿ ಮತ್ತೆ ನೋಡಿದಾಗ ಅದರ ಭಾಷಾಂತರ ಈ ರೀತಿ ರೂಪುಗೊಂಡಿತು.

ಬೇಡಿಕೆಗೆ ಸಿಲುಕಿದ
ಬಲಾತ್ಕರಿಸಿ ಚುಂಬಿಸಿದ
ತಾನಾಗಿ ಮುಂದೊಡ್ಡಿದ –
ಪ್ರೇಯಸಿಯ ಆ ಒಂದೆ ಅರ್ಥದಲ್ಲಿ
ಬೇರೆ ಬೇರೆ ರುಚಿಯ ಸವಿಗಳಲ್ಲಿ!

(ಛಾಯ:
ಮಾರ್ಗಿತಲಬ್ಧೇ
ಬಲತ್ಕಾರ ಚುಂಬಿತ
ಆತ್ಮನಾಂಚ ಉಪನೀತೇ।
ಏಕಸ್ಮಿನ್ನೇವ ಪ್ರಿಯಾಧರೇ
ಅನ್ಯೇ ಅನ್ಯೇ ಭವಂತಿ ರಸಭೇದಾಃ)

ಈ ವಯಸ್ಸಿನಲ್ಲಿ ಈ ಭಾಷಾಂತರ ಚಪಲವೇಕೆ ಎನ್ನಬೇಡಿ!

ಉತ್ತರ ಬರೆಯಿರಿ.

* * *

ಮೈಸೂರು, ೮-೪-೧೯೫೫

ನಿಮ್ಮ ದೊಡ್ಡ ಕಾಗದವೂ ಅದರ ಅನುಬಂಧವೂ ಕೈಸೇರಿದವು. ಅಷ್ಟೊಂದು ವಿಶ್ವಾಸದಿಂದ Freeman's worship ಮೊದಲಾದ ಲೇಖನಗಳ ಭಾಗವನ್ನು ಉದ್ಧರಿಸಿ ಬರೆದದ್ದಕ್ಕಾಗಿ ಕೃತಜ್ಞತೆ!

Freeman's worship ಪ್ರಬಂಧವನ್ನು ಇಲ್ಲಿ ನಾವು ಕೆಲವರು ಸುಮಾರು ಮೂವತ್ತು ವರ್ಷದ ಹಿಂದೆಯೇ ಪರಿಚಯಮಾಡಿಕೊಂಡೆವು. ಶ್ರೀ ಎಂ.ಎ. ವೆಂಕಟರಾಯರು ಅದನ್ನು ಕನ್ನಡಕ್ಕೆ ಭಾಷಾಂತರಮಾಡಿದರೆಂದೂ ನೆನಪು: ಅಚ್ಚಾಯಿತೋ ಇಲ್ಲವೋ ಮರೆತು ಹೋಗಿದೆ. ಅಷ್ಟೇ ಅಲ್ಲ; ಪ್ರಬಂಧದ ವಿವರಗಳು ಪೂರ್ತಿಯಾಗಿ ಮರೆತು ಹೋಗಿದ್ದವು. ನಿಮ್ಮ ಕಾಗದದಲ್ಲಿ ಉದಾಹರಿಸಿದ್ದ ಭಾಗಗಳನ್ನು ನೋಡಿದ ಮೇಲೆ ಅದರ ಸೊಗಸು ಮತ್ತೊಮ್ಮೆ ಮನದಟ್ಟಾಯಿತು. Mysticism & Logic ನನ್ನ ಬಳಿ ಇದೆ; ಈಗ ಮೇಜಿನ ಬಳಿ ಕೈಗೆ ನಿಲುಕುವ ಕಡೆ, ಇರಿಸಿಕೊಂಡಿದ್ದೇನೆ. ಪ್ರಬಂಧವನ್ನು ಇಷ್ಟರಲ್ಲೇ ಪೂರ್ತಿಯಾಗಿ ಓದುತ್ತೇನೆ.

'ಮಲೆದೇಗುಲ'– ಇದನ್ನು ಕುರಿತು ನನಗೆ ಅಭಿಮಾನವಿಲ್ಲ ಎಂದು ನಿಮಗೇಕೆ ಅನ್ನಿಸಿತು? ಅದರ ಎಲ್ಲ ಪದ್ಯಗಳನ್ನು ನಾನು ಪೂರ್ಣವಾಗಿ ಅರ್ಥಮಾಡಿಕೊಳ್ಳದಿರಬಹುದು. ಅದಕ್ಕೆ ನನ್ನ ಚಿತ್ತ ವಿಕ್ಷಿಪ್ತತೆ–ಕೆಲಸದ ಪರೆದಾಟ – ಇದೇ ಕಾರಣ. "ಬೆರಣಿಯ ನಾಯಲಲ್ಲದೆ ಅಟ್ಟುಣ್ಣ ತೆಱಹಿಲ್ಲನಗೆ" –ಹೀಗಾಗಿದೆ ನನ್ನ ಬಾಳು. ಯಾವಾಗ ಕೆಲಸ–ಅದಕ್ಕಿಂತ ಹೆಚ್ಚಾಗಿ ಮನಸ್ಸು–ಹಗುರವಾಗುತ್ತದೆಯೋ ಕಾಣೆ.

'ಮಲೆದೇಗುಲ'ವನ್ನು ಇನ್ನೊಮ್ಮೆ ಓದುತ್ತೇನೆ. ಈ ಕಾಗದ ಮುಗಿಸಿದ ಬಳಿಕ ಅದರ ಪ್ರತಿಯನ್ನು ಮೇಜಿನ ಮೇಲೆ ತಂದು ಇರಿಸಿಕೊಳ್ಳುತ್ತೇನೆ. ಅದಕ್ಕೆ ನೀವು ಹೇಳುವಂತೆ 'ಸ್ವತಂತ್ರನ ಉಪಾಸನೆ' ಎಂದು ಹೆಸರಿಟ್ಟಿದ್ದರೆ ಚೆನ್ನಾಗುತ್ತಿತ್ತೋ ಏನೋ. ಆಗಲಿ ಹೆಸರೊಂದರಿಂದ ಏನಾಗುತ್ತದೆ? ನಮ್ಮ ಜನದ ಮನಸ್ಸು ಹದವಾಗಬೇಕು; ಸಹೃದಯತೆ ಹೆಚ್ಚಾಗಬೇಕು.

ಈ ಕಾಗದವನ್ನು ಇನ್ನೂ ಬೆಳಸಬೇಕೆಂದು ಇಷ್ಟ. ಆದರೆ ಕಾಲಾವಕಾಶವಿಲ್ಲ. ಇನ್ನೇನೋ ಕೆಲಸ ಕಾದಿದೆ.

ನಿಮಗೆ ಯುಗಾದಿಯ ಶುಭಾಶಯಗಳು.

ಮೈಸೂರು ಸರಕಾರದವರು ಕನ್ನಡ ಗ್ರಂಥಗಳಿಗೆ ಬಹುಮಾನ ವಿತರಣೆ ಮಾಡಿರುವ ವಿಷಯವಾಗಿ ಎದ್ದಿರುವ ಕೋಲಾಹಲಗಳನ್ನು ನೋಡಿದಿರಾ? ನಿಮ್ಮ 'ಮಲೆದೇಗುಲ' ಪಟ್ಟಿಯಲ್ಲಿ ಸೇರಬೇಕಾಗಿತ್ತೆಂದು ಇಲ್ಲಿ ನಾನೂ ನನ್ನ ತರುಣ ಅಧ್ಯಾಪಕ ಮಿತ್ರರು ಕೆಲವರೂ ಅಂದುಕೊಂಡೆವು. ಇಂಥ ಅತೃಪ್ತಿಗೆ ಸರ್ಕಾರದ ಪಟ್ಟಿಯಲ್ಲಿ ಅವಕಾಶ ತಕ್ಕಮಟ್ಟಿಗೆ ಇದೆ.

ಈ ಕಾಗದ ತಲುಪಿತೆಂದು ಬರೆಯಿರಿ.

ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ. ಇತ್ತ ಕಡೆ ಯಾವಾಗ ಬರುತ್ತೀರಿ? ರಾಮನವಮಿಯ ವೇಳೆಗೆ ಬರಲು ಸಾಧ್ಯವೆ? ಆ ದಿನ ನಮ್ಮ ಎಂ.ಎ. ವಿದ್ಯಾರ್ಥಿಗಳನ್ನು ಮನೆಗೆ ಉಪಾಹಾರಕ್ಕಾಗಿ ಕರೆಯಬೇಕೆಂದಿದ್ದೇನೆ.

ವಿದ್ಯಾಕರನ 'ಸುಭಾಷಿತರತ್ನಕೋಷ'ದಲ್ಲಿ ಒಂದೆರಡು ಪದ್ಯಗಳನ್ನು ನಿನ್ನೆ ನೋಡಿದೆ: ಈ ಪದ್ಯ ಚೆನ್ನಾಗಿದೆಯಲ್ಲವೆ:

ಆತ್ಮಜ್ಞಾನ ವಿವೇಕ ನಿರ್ಮಲಧಿಯಃ ಕುರ್ವಂತ್ಯಹೋ ದುಷ್ಕಾರಂ
ಯನ್ಮುಂಚಂತ್ಯುಪಯೋಗ ಭಾಂಜ್ಯಪಿ ಧನಾನ್ಯೇಕಾಂತತೋ ನಿಃಸ್ಪೃಹಾಃ।
ನಪ್ರಾಪ್ತಾನಿ ಪುರಾ ನ ಸಂಪ್ರತಿ ನ ಚ ಪ್ರಾಪ್ತೌ ದೃಢಪ್ರತ್ಯಯೋ
ವಾಂಛಾ ಮಾತ್ರ ಪರಿಗ್ರಹಾಣ್ಯಪಿ ವಯಂ ತ್ಯಕ್ತುಂ ನ ತಾನಿ ಕ್ಷಮಾಃ ॥

ಆದರೆ ಏನು ಮಾಡುವುದು ಸಂಸಾರ ನಡೆಯಬೇಡವೆ!
ಅದಕ್ಕಾಗಿ ತಾನೆ ನಾವು ಹಣವನ್ನು ಬಯಸುವುದು!

ಮುಖ್ಯವಾದ ವಿಷಯವನ್ನೇ ಮರೆತುಬಿಟ್ಟೆ. ಶ್ರೀ ಕೆ. ವೆಂಕಟಾರಾಮನ್ ಅವರಿಗೆ ಡಿಲ್ಲಿಗೆ ಈಚೆಗೆ ಬರೆದಿದ್ದೇನೆ. ಅವರಿಂದ ಉತ್ತರ ಬರಲು ಇನ್ನೂ ಕೆಲವು ದಿನ ಬೇಕಾಗಬಹುದು. ನೀವು ಈ ಮಧ್ಯೆ ಪ್ರಯತ್ನವನ್ನು ತಪ್ಪದೆ ಮುಂದುವರಿಸಿ. "Report me about the progress of that attempt!"

* * *

ಮೈಸೂರು, ೧೧-೧೨-೧೯೫೫

ನಿಮ್ಮ ಕಾರ್ಡೂ, ತಂತಿಯೂ ನಿನ್ನೆಯ ದಿನ ತಲುಪಿದವು. ನಿಮ್ಮ ತಂತಿಯನ್ನು ನೋಡಿದಾಗಲೇ ಅಂದು ಮಾರ್ಗಶಿರ ಶುದ್ಧ ಎಂದು ನನಗೆ ನೆನಪಾದದ್ದು. ವಯಸ್ಸು ಹೆಚ್ಚಿದ ಹಾಗೆಲ್ಲ, ಇನ್ನೊಂದು ವರ್ಷ ಸಂದಿತು ಎಂದು ನೆನಯುವುದು ಅಂತಶ್ಚೇತನಕ್ಕೆ ಇಷ್ಟವಾಗುವುದಿಲ್ಲವೋ ಏನೋ! ಅಂತು ನಿಮ್ಮ ಶುಭಾಶಯಕ್ಕಾಗಿ ವಂದನೆಗಳು.

ನಿನ್ನೆಯ ದಿನ ಫೇಡ ತಿನ್ನುವುದು ಎಲ್ಲಿ ಬಂತು! ಇಲ್ಲಿಯ ಯುವಜನೋತ್ಸವ (!)ದ ಗಲಭೆ ವಿಕಾರ ರೂಪಗಳನ್ನು ತಾಳುತ್ತ ಬಂದಿತು. ಮೊನ್ನೆ ಹುಡುಗರಿಂದ, ದುಷ್ಟರಿಂದ ಬೆಂಕಿ, ದಾಂಧಲೆ; ನಿನ್ನೆ ಪೊಲೀಸಿನವರಿಂದ ದಾರಿಯಲ್ಲಿ-ಕೆಲವು ಮನೆಗಳಲ್ಲಿ ಕೂಡ-ಸಿಕ್ಕಿದವರ ಮೇಲೆ ಪ್ರಹಾರ! ಮನಸ್ಸು ಉದ್ವಿಗ್ನವಾಗಿದೆ. ಇದಕ್ಕೆ ಪರಿಹಾರ ಬಡ ಉಪಾಧ್ಯಾಯರ ಕೈಯಲ್ಲಿ ಇಲ್ಲ. ಈಚಿನ ಅನೇಕ ವರ್ಷಗಳಿಂದಲೂ ಇಲ್ಲವೇ ಇಲ್ಲ.

ವಿದ್ಯಾರ್ಥಿಗಳಲ್ಲಿ ನೂರಕ್ಕೆ ಸುಮಾರು ಎಂಬತ್ತು-ಎಂಬತ್ತೈದು ಮಂದಿ ಸಭ್ಯರು-ಆದರೆ ಅಶಕ್ತರು, ಭೀರುಗಳು. ಉಳಿದವರು ತುಂಟರು, ಅವಕಾಶ ಸಿಕ್ಕಿದಾಗಲೆಲ್ಲ ಕೇಡಿಗರು. ಪರಿಸ್ಥಿತಿ ಈ ಎರಡನೆಯವರು ನಡಸಿದಂತೆ ಹದಗೆಡುತ್ತದೆ. ಈ ಅವಕಾಶವನ್ನೇ ನೋಡಿಕೊಂಡು ಊರಿನ ದುಷ್ಟರು ಮುಂದೆ ನುಗ್ಗುತ್ತಾರೆ. ಈ ಉದ್ವಿಗ್ನ ಸ್ಥಿತಿಯ ಉಪಯೋಗವನ್ನು ಅನೇಕ ವೇಳೆ ರಾಜಕೀಯ ಪಕ್ಷದವರು ಮಾಡಿಕೊಳ್ಳುತ್ತಾರೆ. ಮೊದಲು ಅಧಿಕಾರಿಗಳು ಸಡಿಲಬಿಡುತ್ತಾರೆ. ಬಳಿಕ ಬಿಗಿಯಾಗುತ್ತಾರೆ. ಬಿರುಸಾಗುತ್ತಾರೆ; ಕೊನೆಗೆ ಕೈಸೋಲುತ್ತಾರೆ. ಆ ಮಧ್ಯೆ ಪೊಲೀಸಿನವರು ಪ್ರವೇಶಿಸಿದರೆ, ಮೊದಲು ಅವರೂ ತಾಳ್ಮೆ ತೋರಿಸುತ್ತಾರೆ; ಪರಿಸ್ಥಿತಿ ಪ್ರಕೋಪಕ್ಕೆ ಬಂದರೆ

ಅಮಲೇರಿದಂತಾಗಿ, (ನಿಜವಾದ ಅಮಲೂ ಏರುತ್ತದೋ ಏನೋ!) ಮುಖಮೋರೆ ನೋಡದೆ ಸಿಕ್ಕಿದವರನ್ನು ಸದೆ ಬಡಿಯುತ್ತಾರೆ!

ಈ ದಿನ ಬಿರುಸು ಕಡಮೆಯಾಗಿದೆ. ಕಾಲೇಜುಗಳನ್ನು ಅಶಾಂತಿಗಾಗಿ ಮುಚ್ಚಿದ್ದಾರೆ. ಯುವಜನೋತ್ಸವ ಈ ನಡುವೆ ನಡೆಯುತ್ತಲೇ ಇದೆ. "ಏಕಲವ್ಯಪುರ"ದ ಬಿಡಾರದ ಧ್ವನಿವರ್ಧಕಗಳು ನಮ್ಮ ಕಿವಿಗಳನ್ನು ಬೆಳಗಿನಿಂದ ರಾತ್ರಿ ಒಂದು ಘಂಟೆಯವರೆಗೂ ಕೊರೆಯುತ್ತಲೇ ಇರುತ್ತವೆ.

ನಾನು ಇಲ್ಲಿಂದ ೧೫ನೆಯ ತಾರೀಖು (ಮಂಗಳವಾರ) ಮೇಲ್ ಗಾಡಿಯಲ್ಲಿ ಹೊರಟು ಬೆಂಗಳೂರು ಮೂಲಕ ನೇರವಾಗಿ ಮದರಾಸಿಗೆ ಹೋಗಬೇಕೆಂದಿದ್ದೇನೆ. ರೈಲು ಬೆಂಗಳೂರಿಗೆ ಸಂಜೆ ಸುಮಾರು ೭.೩೫ ಸೇರಬೇಕು. ನೀವು ಸ್ಟೇಷನ್ನಿಗೆ ಮೊಸರನ್ನ ತರಲು ಸಾಧ್ಯವಾದರೆ ಸಂತೋಷ.

* * *

ಮೈಸೂರು, ೨೭-೧-೧೯೬೧

ಪುಣೆಯಿಂದ ಹಿಂದಿರುಗಿದಾಗ ನಿಮ್ಮ ಕಾಗದ ಕಾದಿತ್ತು. ನಿಮ್ಮ ಗದ್ಯಪದ್ಯ ಭಾಷಾಂತರಗಳೆರಡನ್ನೂ ಬೇಗನೆ ಓದಿ ಮುಗಿಸಿದೆನು. ಎರಡೂ ಚೆನ್ನಾಗಿ ಬಂದಿವೆ. ಪದ್ಯಭಾಷಾಂತರ ನಿಜವಾಗಿಯೂ ಹದವಾಗಿದೆ; "ಹಗುರ"ವಾಗಿದೆ. ಒಳ್ಳೆಯ ಅರ್ಥದಲ್ಲಿ. ಅದೇ ಧಾಟಿಯಲ್ಲೇ ನೀವು ಮಾಡಲು ಸಾಧ್ಯವಾದರೆ ನನಗೇನೋ ಇಷ್ಟವಾಗುತ್ತದೆ. ಇದರ ಮೇಲೆ ನಿಮ್ಮ ಅನುಕೂಲತೆಗಳನ್ನು ನೋಡಿಕೊಳ್ಳಿ. ಮೊದಲು ಪದ್ಯ ರಚನೆ ಮಾಡಿ, ಬಳಿಕ ಅದನ್ನು ಗದ್ಯಕ್ಕೆ ತಿರುಗಿಸಿದಿರೋ ಹೇಗೋ?

ಡಾ. ಜಾರ್ಜ್ ಅವರ ಪತ್ರದಲ್ಲಿ ಅಸದ್ಭಾವನೆಯೇನೂ ಇಲ್ಲ. ಪದ್ಯ, ಗದ್ಯ-ಎರಡರಲ್ಲಿ ಯಾವುದಾದರೂ ಒಂದರಲ್ಲಿ ನಾನು ಭಾಷಾಂತರ ಮಾಡಬಲ್ಲೆ. ತೀರ್ಮಾನ ನಿಮಗೇ ಸೇರಿದ್ದು ಎಂದು ಅವರಿಗೆ ಉತ್ತರ ಕೊಡಬಹುದಲ್ಲವೆ? **ಸಾಧ್ಯವಾದರೆ,** ಶ್ರೀ ಮೂರ್ತಿರಾಯರನ್ನು ವಿಚಾರಿಸಿ.

ನನ್ನ ಬಳಿ Penguin Translations ಮಾಲೆಯಲ್ಲಿ ಇತ್ತೀಚೆಗೆ ಪ್ರಕಟವಾದ Faust ಭಾಷಾಂತರವಿದೆ. ಭಾಷಾಂತರಕಾರ Philip Wayne. ಇದನ್ನು ನೀವು ನೋಡುವುದು ಒಳ್ಳೆಯದು. (Everyman Library ಯದು ನನ್ನ ಬಳಿ ಇಲ್ಲ.) ಇದರ ಒಕ್ಕಣೆಗೂ ನಿಮ್ಮ ಭಾಷಾಂತರದ್ದಕ್ಕೂ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸವಿರುವಂತೆ ತೋರುತ್ತದೆ. ಇದನ್ನು ಪರಿಶೀಲಿಸಿ ನೋಡಿ.

ನಾನು ಪುಣೆಯಿಂದ ಹಿಂದಿರುಗಿದ ದಿನದಿಂದಲೂ ಏನೇನೋ ಕೆಲಸದಲ್ಲಿ ನಾಲ್ಕು ನಿಮಿಷ 'ಜಿತ"ವಾಗಿ ಕುಳಿತು ನಿಮಗೆ ಕಾಗದ ಬರೆಯಲು ಆಗಲಿಲ್ಲ. "Don't keep mum" ಎಂದು ನೀವು ಬರೆದಿದ್ದರೂ ಆಗಲಿಲ್ಲ. ಈ ಬೆಳಗ್ಗೆ ನಾಲ್ಕು ಪಂಕ್ತಿಯನ್ನು ಗೀಚಿದ್ದೇನೆ.

ಒಂದು ಸಂತೋಷದ ಸಮಾಚಾರ. ನಮ್ಮ ಚಿ॥ಸೌ॥ ನಾಗರತ್ನಗಳ ಮದುವೆ ಫ್ರೆಬ್ರುವರಿ ೨೪ರಂದು ನೆರವೇರಬೇಕೆಂದು ಗೊತ್ತಾಗಿದೆ. ನಾಡಿದ್ದು ಭಾನುವಾರ ಲಗ್ನಪತ್ರಿಕೆ ಬರಲು ನಮ್ಮ "ಬೀಗರು" ಒಪ್ಪಿದ್ದಾರೆ.

* * *

ಮೈಸೂರು, ೧೪-೧-೧೯೬೨

ಶ್ರೀ॥ ಆರ್.ಎಲ್. ನರಸಿಂಹಯ್ಯನವರು ಕೆಲಸವನ್ನು ವಹಿಸಿಕೊಂಡಿದ್ದಾರೆಂದು ತಿಳಿದು ನನಗೂ ಸಂತೋಷವಾಯಿತು. ಅಂತು ಸರಕಾರದವರು ಆ ಸ್ಥಾನಕ್ಕೆ ಯೋಗ್ಯ ವ್ಯಕ್ತಿಯನ್ನೇ ಆರಿಸಿ ನೇಮಿಸಿದರು. "ಚಿರಸ್ಯವಾಚ್ಯಂ ನ ಗತಃ ಪ್ರಜಾಪತಿಃ." ಅವರಿಗೆ ನನ್ನ ಅಭಿನಂದನೆಯನ್ನು ತಿಳಿಸಿ.

ನಾಲ್ಕು ದಿನದ ಹಿಂದೆ ಶ್ರೀಮಾನ್ ಧರಣೇಂದ್ರಯ್ಯನವರು ಇಲ್ಲಿಗೆ ಬಂದಿದ್ದರು. ಅವರ ಸಂಗಡ ಮಾತಾಡುವಾಗ "Humanities Editor" ಪ್ರಸ್ತಾಪ ಬಂದಿತು. "ಆ ನೇಮಕ ಮಾಡವುದಿಲ್ಲವೆ?" ಎಂದು ನಾನು ಕೇಳಿದೆ. "ನಿಮ್ಮ ಸಲಹೆಯನ್ನು ಕೇಳಬೇಕೆಂದಿದ್ದೆ" ಎಂದು ಅವರು-ಕೇವಲ ಔಪಚಾರಿಕವಾಗಿ ಇರಲಾರದು! - ಹೇಳಿದರು. ಪು.ತಿ.ನ. ಅವರನ್ನು ನೇಮಿಸಿ ಕೊಳ್ಳಿ ಎಂದು ನಾನು ಸ್ಪಷ್ಟವಾಗಿ ಒತ್ತಿಯೇ ಹೇಳಿದೆ. ಇದರಿಂದ ವಿಶ್ವಕೋಶಕ್ಕೂ ನಿಮಗೂ ಉಪಯೋಗವಾದರೆ ನನಗೆ ತುಂಬಾ ಸಂತೋಷವಾಗುತ್ತದೆ. "ಸರ್ಕಾರಕ್ಕೆ ಬರೆಯುತ್ತೇನೆ" ಎಂದು ಅವರು ಹೇಳಿದರು. ಅದು ದೃಢ ನಿರ್ಧಾರವಾಗಿ ಕಾರ್ಯರೂಪಕ್ಕೆ ಇಳಿಯಲಿ ಎಂದು ಹಾರೈಸುತ್ತೇನೆ. ಈ ಸಂದರ್ಭದಲ್ಲಿ ನೀವು ಒಮ್ಮೆ ಧರಣೇಂದ್ರಯ್ಯನವರನ್ನೂ, ಸಿದ್ಧಯ್ಯ ಪುರಾಣಿಕರನ್ನು ನೋಡಿದರೆ ಉತ್ತಮವೆಂದು ನನಗೆ ತೋರುತ್ತದೆ-ಇನ್ನೊಬ್ಬರನ್ನು ನೋಡು ವುದೇನೋ ಮುಜುಗರದ ಕೆಲಸ: ಮನಸ್ಸು, ದೇಹ ಎರಡೂ ಹಿಂಜರಿಯುತ್ತದೆ. ಆದರೆ ಆ ಸಂದರ್ಭದಲ್ಲಿ ಸ್ವಾಭಾವಿಕವಾದ ಸಂಕೋಚವನ್ನು ಕೆಲವು ಮಟ್ಟಿಗೆ ಸಡಲಿಸಿ ನೀವು ಬೇಗ ಅವರನ್ನು ನೋಡಬೇಕೆಂದು ನನ್ನ ಕೋರಿಕೆ. ಶಿವರಾಮಶಾಸ್ತ್ರಿಗಳ ಕೈಯಲ್ಲೂ ಇದನ್ನು ಹೇಳಿ ಕಳಿಸಿದ್ದೇನೆ. ಏನು ಮಾಡಿದಿರಿ ಎಂಬುದಕ್ಕೆ ಬರೆಯಿರಿ.

ವಿ.ಸೂ: - ಈ ಕಾಗದ ಬರೆಯುವಾಗ ಅನೇಕ ಚಿತ್ತುಗಳಾಗಿವೆ. ವಯಸ್ಸು ಹೆಚ್ಚುತ್ತಾ ಹೋದ ಹಾಗೆ ಹೀಗೆಯೇ ಎಂದು ತೋರುತ್ತದೆ. ಮನಸ್ಸಿನ ನೆಲೆಗೆ, ವೇಗಕ್ಕೆ ದೇಹ ಹೊಂದಿ ಕೊಳ್ಳುವುದಿಲ್ಲ. ಹಿಂದೆ ಬೀಳುತ್ತದೆ; ಅಡ್ಡದಾರಿಗೆ ತಿರುಗುತ್ತದೆ!

* * *

ಮೈಸೂರು, ೧೧-೧೨-೧೯೬೨

ನಿಮ್ಮ ೪ನೆಯ ತಾರೀಖಿನ ಪತ್ರ ನನ್ನ ಕೈಸೇರಿ ಒಂದು ವಾರದ ಹತ್ತಿರಕ್ಕೆ ಬಂತು. ನೀವು ತಿರುಪತಿಗೆ ಹೋಗಿರುತ್ತೀರಿ ಎಂದು ನಾನು ಕೂಡಲೆ ಉತ್ತರ ಬರೆಯಲಿಲ್ಲ. ಈ ದಿನ

ಬೆಳಗ್ಗೆ ಬರೆಯಬೇಕು ಎಂದುಕೊಳ್ಳುತ್ತಿರುವಾಗ ನಿಮ್ಮ ಶುಭಾಶಯದ ಕಾರ್ಡು ಬಂದಿತು. ನನ್ನ ಹುಟ್ಟಿದ ಹಬ್ಬಕ್ಕೆ ಸರ್ಕಾರದವರೂ ಇನ್‌ಷೂರೆನ್ಸಿನವರೂ ಗಮನಕೊಟ್ಟರೇ ಹೊರತು, ನಾನಾಗಲಿ ನಮ್ಮ ಮನೆಯಲ್ಲಾಗಲಿ ಅಷ್ಟೇನೂ ಗಮನಕೊಡುತ್ತಿಲ್ಲ. ಮಾರ್ಗಶಿರ ಶು॥ ೧೧ ಬಂದರೆ ಇನ್ನೊಂದು ವರ್ಷ ವಯಸ್ಸು ಹೆಚ್ಚಿತು ಎಂದಷ್ಟೇ ಭಾವನೆ. ನನಗೂ ಐವತ್ತಾರು ತುಂಬಿತು! ಇದುವರೆಗೆ ಮಾಡಿದ ಕೆಲಸ ಅಲ್ಪ. ಮಾಡಬೇಕಾಗಿರುವುದು – ನಾನು ಮಾಡುವಂಥದು ಇನ್ನೂ ಬಹಳ ಇದೆ. ಮೊದಲೇ ನಾನು ಅಲಸಿ. ಈಗಲಂತೂ ಕೇಳ ಬೇಕಾಗಿಯೇ ಇಲ್ಲ. ಮೇಜಿನ ಮುಂದೆ ಕುಳಿತುಕೊಳ್ಳುವುದೇ ವಿರಳವಾಗುತ್ತಿದೆ; ಬೆನ್ನು ಹೆಚ್ಚುಕಾಲ ಹೀಗೆ ನಿಲ್ಲಲಾರೆ ಎನ್ನುತ್ತದೆ; ಹಾಯಾಗಿ ಹಾಸಿಗೆಯಲ್ಲಿ ಉರುಳಿಕೊಂಡೇನು ಎನ್ನುತ್ತದೆ. ಶಬ್ದಮಣಿದರ್ಪಣದಲ್ಲಿ "ಪಟ್ಕೆ ತಟ್ಕೆಸಿದು ತಡಕೈಯಂ ಮಾಡಿದನೆಂಬರ್ಥಂ" ಎಂಬ ಒಂದು ಮಾತು ಇದೆ! (ಡಿಎಲ್‌ನರ ಪರಿಷ್ಕರಣ, ಪು. ೨೦) "ಹಾಸಿಗೆಯನ್ನು ಆಲಿಂಗಿಸಿದನು" ಎಂಬ ಟೀಕೆ ನನ್ನಂಥವರಿಗೆ ಎಷ್ಟು ಚೆನ್ನಾಗಿ ಅಕ್ಷರಾರ್ಥ ಭಾವಾರ್ಥಗಳೆರಡರಲ್ಲಿಯೂ ಒಪ್ಪುತ್ತದೆ! ಇವನು ಮಾಡಬೇಕಾದ ಕೆಲಸವನ್ನು ಬೇಸರವಿಲ್ಲದೆ ಮಾಡಲು ಮನೋದಾರ್ಢ್ಯವೂ ದೇಹದಾರ್ಢ್ಯವೂ ಇವನಿಗೆ ಒದಗಲಿ ಎಂದು ನೀವು ಹಾರೈಸಿ ನನಗಾಗಿ!

ನಿಮ್ಮ ಮನಸ್ಸು ತಿರುಪತಿಗೆ ಬಂದಮೇಲೆ ಪ್ರಸನ್ನವಾಗಿದೆ ಎಂದು ತಿಳಿದು ನನಗೂ ಹರ್ಷವಾಗಿವೆ. ತಿರುಪತಿಯಲ್ಲಿ ಮೂರು ಸೊಗಸು; ಬೆಟ್ಟವನ್ನು ಬಳಸಿ ಏರುವ ಮೋಟಾರು ರಸ್ತೆ; ದೇವಸ್ಥಾನದ ಬಂಗಾರದ ಗೋಪುರ; ವೆಂಕಟರಮಣಸ್ವಾಮಿಯ ಮುಖ ತುಂಬಿದ ನಾಮ! ಇದಿಷ್ಟನ್ನೂ ನನ್ನಂತೆ ನೀವೂ ಮೆಚ್ಚಿರಲೇಬೇಕು.....

ಸಂಬಳವನ್ನು ನಿಮಗೆ ಕಡಮೆಯಾಗಿ ತುಂಬ ಕಡೆಮೆಯಾಗಿ ಗೊತ್ತುಮಾಡಿದ್ದಾರೆ. ಆದರೆ ಗತ್ಯಂತರವಿಲ್ಲ, ನೀವು ಬರೆದಿರುವ ಪತ್ರದ ಒಕ್ಕಣೆ ಸರಿ. ಪರಿಸ್ಥಿತಿ ಉತ್ತಮವಾಗಲೆಂದು ನಾನು ಹಾರೈಸಬಲ್ಲೆ ಮಾತ್ರ! ಅಧಿಕಾರಿಗಳಿಗೆ ಸದ್ಬುದ್ಧಿ ಬೇಗ ಬರಲಿ.

ಡಾ॥ ಜಾರ್ಜ್ ಅವರ ಕೋರಿಕೆಯನ್ನು ಖಂಡಿತ ಒಪ್ಪಿಕೊಳ್ಳಿ. ನೀವು ಒಪ್ಪಿಕೊಳ್ಳುತ್ತೀರಿ ಎಂದು ನಾನು ಅವರಿಗೆ, ಮತ್ತು ಸಮಿತಿಗೆ ಭರವಸೆ ಕೊಟ್ಟಿದ್ದೇನೆ: ಅದರಂತೆಯೇ 'ರಸನಿರೀಕ್ಷೆ'ಯ ಉಪನ್ಯಾಸಗಳನ್ನು ಮೈಸೂರಲ್ಲಿ ಖಂಡಿತ ಕೊಡಿ. ಜನವರಿ ೨೧, ೨೨ರಂದು ನಡೆಯುವ ಆ ಉಪನ್ಯಾಸಗಳಿಗೆ ನಾನು ಅಧ್ಯಕ್ಷನಾಗಬೇಕೆಂದು ಕೋರಿ ಶ್ರೀ ಮಲ್ಲಿಕಾರ್ಜುನಪ್ಪನವರು ಬರೆದ ಪತ್ರಕ್ಕೆ ನನ್ನ ಒಪ್ಪಿಗೆಯ ಉತ್ತರವನ್ನು ಕೊಟ್ಟಿದ್ದೇನೆ. ನಾನು ನಿಮಗೆ ಬೆಂಬಲವಾಗಿ ಕುಳಿತುಕೊಂಡಿರುತ್ತೇನೆ; ಎದುರಿಗೆ ಅಲ್ಲ. ಆದಕಾರಣ ನಿಮಗೆ ಸಮಾಧಾನವೇ ಆಗುವುದೆಂದು ನಂಬುತ್ತೇನೆ.

ಮೈಸೂರಿಗೆ ನೀವು ಬಂದಾಗ ಚಿ॥ ಸೌ॥ ನಾಗರತ್ನಳನ್ನು ನೋಡಬಹುದು. ಅವಳೂ ನಿಮ್ಮ ಆಶೀರ್ವಾದವನ್ನೇ ಕೋರುತ್ತಾಳೆ............. ಸೀತೆಯನ್ನು ಕುರಿತು ನೀವು ಉದಾಹರಿಸಿದ ಶ್ಲೋಕ ಚೆನ್ನಾಗಿದೆ. ಅದನ್ನು ನನ್ನ ಹೆಂಡತಿಯೂ ನೋಡಿದಳು. ನಿಮ್ಮ ಪ್ರಶಂಸೆ ಅವಳಿಗೆ ಸಂತೋಷ ಕೊಟ್ಟಿದೆ. ಆ ಶ್ಲೋಕ ರಾಮಾಯಣದ ಶ್ಲೋಕಾನುಕ್ರಮಣಿಕೆಯಲ್ಲಿ ನನ್ನ ಕಣ್ಣಿಗೆ ಬೀಳಲಿಲ್ಲ! ಭಾಗವತಕ್ಕೆ ಅನುಕ್ರಮಣಿಕೆ ಇಲ್ಲ–ನನ್ನ ಹತ್ತಿರವಂತೂ ಇಲ್ಲ.

ಯುದ್ಧ ದೀರ್ಘಕಾಲ ನಡೆಯುವಂತೆಯೇ ತೋರುತ್ತದೆ. ನನ್ನ ಮನಸ್ಸಿನಲ್ಲೂ ಅದು ಕಳವಳವನ್ನು ಮೂಡಿಸಿದೆ. ಉದ್ಯಮ ಉತ್ಸಾಹ ನಮ್ಮಲ್ಲಿ ಇನ್ನೂ ಹೆಚ್ಚಬೇಕು ಎನಿಸುತ್ತದೆ.

* * *

ಮೈಸೂರು, ೧೨-೨-೧೯೬೫

ಕಳೆದ ಒಂದು ವಾರದಿಂದ ನಿಮ್ಮಿಂದ ಎರಡು ಪತ್ರಗಳು, ಎರಡು ಪ್ರೂಫ್‌ಗಳು ಬಂದಿವೆ. ಇನ್ನಾದರೂ ನಾನು ಎರಡು ಪಂಕ್ತಿಯನ್ನು ನಿಮಗೆ ಬರೆಯದಿದ್ದರೆ ಹೇಗೆ?

ಕಳೆದ ವಾರದ ಕೊನೆಯಲ್ಲೇ ನಾನು ಬರೆಯಬೇಕಾಗಿತ್ತು. ಆದರೆ ನನ್ನ ಆರೋಗ್ಯ ಸರಿಯಾಗಿರಲಿಲ್ಲ. ಸೊಂಟ ಹಿಡಿದುಕೊಂಡು ("ರುಮ್ಯಾಟಿಕ್" ಬಾಧೆ) ಎರಡು ಮೂರುದಿನ ಹಾಸಿಗೆ ಹಿಡಿಯಬೇಕಾಯಿತು. ಇಂಜೆಕ್ಷನ್, ಮಾತ್ರೆ – ಎಲ್ಲ ಆಯಿತು. ಈಗ ದೇಹಸ್ಥಿತಿ ಹಿಡಿತಕ್ಕೆ ಬಂದಿದೆ; ಆದರೆ ನಿಶ್ಶಕ್ತಿ ಇನ್ನೂ ಇದೆ–ಹೆಚ್ಚು ಬರೆವಣಿಗೆಗೆ ಅವಕಾಶ ಕೊಡುತ್ತಿಲ್ಲ, ಇದರ ಮೇಲೆ ಹೆಚ್ಚು ಬರೆವಣಿಗೆಯ ಕೆಲಸವನ್ನು ನಾನು ಮಾಡಿದ್ದು ಯಾವಾಗ? – ಎಂದೂ ಇಲ್ಲ!!

ನನ್ನ ಕವನವಾಚನವನ್ನು ಕೇಳಿ ಒಟ್ಟಿನ ಮೇಲೆ ನೀವು ಸಂತೋಷ ಪಟ್ಟಿರೆಂದು ತಿಳಿದು ನನಗೂ ಸಂತೋಷವಾಯಿತು. 'ನೀಡು ಪಾಥೇಯವನು" ಕವನವನ್ನು ನೀವು ಬಲು ಹಿಂದೆಯೇ ಮೆಚ್ಚಿದ್ದಿರಿ. ಆ ಮೆಚ್ಚಿಕೆ ಇಳಿದಿಲ್ಲವೆಂದು ತಿಳಿದು ನನಗೂ ಸಮಾಧಾನ; ನನಗೂ ಅದು ಇಷ್ಟವಾದ ಕವನ. ಅದರಲ್ಲಿಯ "ಕಾವ್ಯಪ್ರತಿಮೆ" ಆಧುನಿಕರಿಗೆ ಹಿಡಿಸುವುದೋ ಹೇಗೋ ತಿಳಿಯದು. ಓದಿದ ಕೂಡಲೆ ಅರ್ಥವಾಗುತ್ತದೆ. ಆದಕಾರಣ ಹಿಡಿಸದೆ ಇದ್ದರೂ ಆಶ್ಚರ್ಯವಿಲ್ಲ!.......

ನನ್ನನ್ನು ಕುರಿತು ಅಭಿಮಾನಾತಿರೇಕದ ಮಾತುಗಳನ್ನು ಆಡಿದ್ದೀರಿ. ನನ್ನಲ್ಲಿದ್ದ ಕಾವ್ಯ ನಿರ್ಮಾಣ ಪ್ರತಿಭೆಯ ರೇಖೆ ಬಲು ಕೃಶ. ಅದು ಎಂದೋ ಮರೆಯಾದಂತೆ ತೋರುತ್ತದೆ. ಇನ್ನಷ್ಟು ಅನುವಾದಗಳನ್ನು ಮಾಡಬಹುದಾಗಿತ್ತು. ಆದರೆ ಆಲಸ್ಯಕ್ಕೆ ಔಷಧ ಎಲ್ಲಿದೆ!

"The famous two" ಎಂದು ಬರೆದಿದ್ದೀರಿ. "The Famous **three**" ಎಂದು ಹೇಳಬೇಕು – ನಾನಂತೂ ಹೇಳುತ್ತಲೇ ಇದ್ದೇನೆ, ಉದ್ದಕ್ಕೂ. ಇಷ್ಟೊಂದೇಕೆ ಆತ್ಮಾವಮಾನಮಾಡಿಕೊಳ್ಳುತ್ತೀರಿ? ಜನರ ನಾಲಗೆಯ ಮೇಲೆ ನಿಮ್ಮ ಹೆಸರು ಅಷ್ಟೊಂದು ಹೊರಳಾಡುತ್ತಿಲ್ಲವೆಂದೆ? ಆದರೆ ನಿಮ್ಮ ಸ್ಥಾನವನ್ನು ಕಾಲ ನಿರ್ಣಯಿಸುತ್ತದೆ. ಆ ಕಾರ್ಯದಲ್ಲಿ ಆಗಲೆ ತೊಡಗಿಯೂ ಇದೆ. "ಎಲೆಕ್ಟ್ರಿಕ್ ಸ್ಟೌವ್" ಪರಿಚಯ ನಿಮಗಿಲ್ಲವೆ. ಅದು ಕಾವೇರುವುದು ನಿಧಾನ. ಆ ಬಳಿಕ ಕಾವು ಬಹುಕಾಲ ಇರುತ್ತದೆ. ನಿಮ್ಮ ವಿಷಯದಲ್ಲಿ ನಮ್ಮ ಜನತೆಯ ಭಾವನೆ ಆ ಬಗೆಯದೆಂದು ನನಗೆ ತೋರುತ್ತದೆ. ಕಾವ್ಯ–ಗೀತ ಎರಡರಲ್ಲೂ ಔನ್ನತ್ಯವನ್ನು ಸಾಧಿಸಿರುವ ಸಾವ್ಯಸಾಚಿ ನೀವು. ಈ ಮೇಲ್ಮೆ ಬೇರೆ ಯಾರಿಗಿದೆ?

ಇತ್ತೀಚಿನ ಚಳವಳಿ, ದುಷ್ಕೃತ್ಯ ಇವುಗಳ ವಿವರಗಳನ್ನು ಪತ್ರಿಕೆಗಳಲ್ಲಿ ದಿನ ಬೆಳಗಾದರೆ ಓದಿ ಓದಿ ನನ್ನ ಮನಸ್ಸು ತುಂಬ ನೊಂದಿದೆ. ಹಿಂದಿ, ಇಂಗ್ಲಿಷ್, ದೇಶಭಾಷೆ ಇವುಗಳ ಸ್ಥಾನ ನಿರ್ಣಯಕ್ಕೆ ಬೇರೆ ಮಾರ್ಗವೇ ಇಲ್ಲವೆ? ತನ್ನನ್ನು ಸುಟ್ಟುಕೊಳ್ಳುವುದು, ಇನ್ನೊಬ್ಬರನ್ನು ಸುಟ್ಟುಹಾಕುವುದು – ಇದೇನು ಭಸ್ಮಾಸುರನ ತಾಂಡವ ಭೂಮಿಯಾಯಿತಲ್ಲ ನಮ್ಮ ನಾಡು! ನಮ್ಮ ಸರ್ಕಾರವೂ ಹಾಗೆಯೇ........ ಇವಕ್ಕೆ ಮಾತ್ರ ಹೆದರಿ ಕೆಲಸ ಮಾಡುತ್ತದೋ ಎನ್ನಿಸುತ್ತದೆ.

ಈ ಚಳವಳಿ ಕೇವಲ ಭಾಷೆಗಾಗಿ ಅಲ್ಲ ಎಂದು ನನ್ನ ಭಾವನೆ. ಆಹಾರ ಸಾಮಗ್ರಿ ಸಿಕ್ಕದಿರುವುದು, ಬೆಲೆಗಳು ಗಗನಕ್ಕೇರಿರುವುದು, ಇತರ ರೀತಿಯ ಅತೃಪ್ತಿ, ವಿರೋಧಿಗಳ ಒಳಗಿಂದೊಳಗಿನ ಕುಟಿಲ ಪ್ರೋತ್ಸಾಹ–ಇದೆಲ್ಲ ಭಾಷಾಪ್ರಶ್ನೆಯ ಮುಖವಾಡ ಹಾಕಿಕೊಂಡು ಬಂದು ಈ ವಿಕಟನರ್ತನವನ್ನು ನಡೆಸುತ್ತಿರುವಂತೆ ತೋರುತ್ತದೆ.

ಈ ಹಾಲಾಹಲ ಯಾವಾಗ ಶಮನವಾಗುತ್ತದೋ; ಯಾವ ವಿಷಕಂಠ ಬಂದು ನಮ್ಮನ್ನು ಕಾಪಾಡುತ್ತಾನೋ. ಭಾರತದ ಐಕ್ಯ ಹೇಗೆ ಉಳಿಯುತ್ತದೋ?

ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ನೂರು ವರ್ಷಗಳ ಹಿಂದೆ Civil war ನಡೆದಾಗ ಲಿಂಕನ್ ಎದ್ದು ನಿಂತು, ಐಕ್ಯವನ್ನು ಉಳಿಸಿದ. ಈಗ ನಮ್ಮಲ್ಲಿ? ನೆಹರೂ ಅನಂತರದ ಭಾರತ!

ಈ ಉದ್ಗಾರ ಇಲ್ಲಿಗೆ ಸಾಕು. ಎದುರಿಗೆ ಕಲೆತಾಗ ಮಾತಾಡೋಣ.

*

ಇನ್ನೊಂದು–ಅತಿ ಅಲ್ಪವಾದ ಆದರೆ ಜರೂರಾದ ವಿಷಯ ಇದೆ. ಅದನ್ನು ಹರಿಸಿಕೊಳ್ಳದೆ ನಿಮ್ಮ ಪ್ರೂಫ್‌ಗಳನ್ನು ಪ್ರೆಸ್ಸಿಗೆ ಕಳಿಸುವಂತಿಲ್ಲ.

ಸೀತಾಪರಿಣಯ, ಪು. ೨೯೮:

ವೃತ್ತ –

ಸುರರು ಋಷಿಗಳು ಸಾಧುವಾದವ ನುಡಿದು ಹರಸುತಿರೆ
ದೇವದುಂದುಭಿ ಮೊಳಗೆ ನಭದಿಂದಲರು ಸುರಿಯುತಿರೆ
ಇಂತು ಕರವಿಡಿದಿಳೆಯ ಮಗಳಿನ ಕಾಲ ಹಿಡಿಯುತಲಿ
ಏಳು ಹೆಜ್ಜೆಯ ನಡೆಸುತಗ್ನಿಯ ಬಳಸುತರಳೆರೆದು........

ಇಲ್ಲಿ ಮಗಳಿನ (-daughter's) ಎಂಬ ರೂಪ ಸರಿಯಲ್ಲವೆಂದೇ ನನ್ನ ಅಭಿಪ್ರಾಯ ಮಗಳ್–ಮಗಳು ಈ ಎರಡಕ್ಕೂ ನಾನು ಬಲ್ಲ ಮಟ್ಟಿಗೆ "ಮಗಳ" ಎಂಬುದೊಂದೇ ಷಷ್ಠಿಯ ರೂಪ. "ನಲ್ಲಳ," "ಇನಿಯಳ" "ಹಿರಿಯಳ" ಇತ್ಯಾದಿಗಳನ್ನು ಹೋಲಿಸಿ. ಇವೆಲ್ಲವೂ – ಅಳ್, (–ಅಳು)–ಅಂತವುಳ್ಳ ಪ್ರಕೃತಿಗಳಿಂದ ಬಂದವು. ಈ ವಿಷಯದ ಚರ್ಚೆಗೆ ಇದು ಸ್ಥಳವಲ್ಲ. ಎದುರಿಗೆ ಕಂಡಾಗ ನನ್ನ ವಾದವನ್ನು ನಿಮ್ಮ ಮುಂದೆ ವಿಶದಪಡಿಸುತ್ತೇನೆ.

ನಾನು "ಮಗಳಿನ" ಎಂಬುದನ್ನು ಒಂದು ಪ್ರೂಫ಼ಿನಲ್ಲಿ "ಮಗಳಾ" ಎಂದು ತಿದ್ದಿದ್ದೆ. ನೀವು ಮತ್ತೆ "ಮಗಳಿನ" ಎಂದೇ ಇರಿಸಿಕೊಂಡಿದ್ದೀರಿ. "ಮಗಳಾ" ಎಂಬುದು ಇಷ್ಟವಾಗದಿದ್ದರೆ, "ಪುತ್ರಿಯ" "ತನುಜೆಯ"–ಹೀಗೆ ಬೇರೊಂದು ಪದವನ್ನು ಹಾಕಬಹುದಲ್ಲವೆ? ನಿಮ್ಮ ನಿರ್ಧಾರ ವನ್ನು ಕೂಡಲೆ ತಿಳಿಸಿ.

"ಉಪ್ಪಿನಕಾಯಿ"ಯ Preservative ಅನ್ನು ಡಾ. ರಾಮಚಂದ್ರರಾಯರು ಕೊಡುವುದಾಗಿ ಭರವಸೆ ಕೊಟ್ಟಿದ್ದಾರೆ. ನನ್ನ ಜೊತೆಗೆ ತರುತ್ತೇನೆ...... ಈ ಬಾರಿಯೂ ನಿಮ್ಮಲ್ಲಿ ಇಳಿದು ಕೊಳ್ಳಬೇಕೆಂದು ಒತ್ತಾಯ ಪಡಿಸಬೇಡಿ. ನಾನು ಹಿಂದೆಯೇ ನಿಮಗೆ ಹೇಳಿದ್ದಂತೆ. Let me "space" my stays with you, **please.**

ನಿಮ್ಮಲ್ಲಿ ಎಲ್ಲರೂ ಕ್ಷೇಮವಷ್ಟೆ. ನಾಳೆಯೇ ಉತ್ತರ ಬರೆಯಿರಿ.

'ಹಂಸದಮಯಂತಿ" ಕೊನೆಗೆ "ಹಾಡುಗಳ ಸೂಚಿಕೆ" ಬರುತ್ತದೆಯೆ? ಅಚ್ಚಿನ ಹಾಳೆಗಳನ್ನು ನಿಮಗೆ ಕಳಿಸಬೇಕೆಂದು ಶ್ರೀ ಎಚ್.ಎಂ.ಶಂ. ಅವರಿಗೆ ಹೇಳಿಕಳಿಸಿದ್ದೇನೆ.

* * *

ಮೈಸೂರು, ೪–೧೨–೧೯೬೫

ನಿನ್ನೆಯ ಮಧ್ಯಾಹ್ನ ಒಂದು ಸಂಗತಿ ನಡೆಯಿತು. ನಾನು ಊಟಕ್ಕೆ ಕುಳಿತಾಗ ಬೆಂಗಳೂರಿನ ಆಕಾಶವಾಣಿಯಿಂದ ಗೀತೆಯ ಕೆಲವು ಶ್ಲೋಕಗಳು ಬರುತ್ತಿದ್ದವು. "ಈ ದಿನ ಗೀತಾಜಯಂತಿ ಇರಬಹುದು; ಹಾಗಾದರೆ ಇಂದು ನನ್ನ ಹುಟ್ಟಿದ ಹಬ್ಬವಾಗುತ್ತದೆ" ಎಂದೆ. ಅದಕ್ಕೆ ನನ್ನ ಹೆಂಡತಿ "ಏಕಾದಶಿ ನಾಳೆ ಎಂದು ಕಾಣುತ್ತದೆ; ಈ ದಿನವೇ ಆಗಿದ್ದರೆ ನರಸಿಂಹಾಚಾರ್ಯರ ಕಾಗದವೋ ತಂತಿಯೋ ಬರುತ್ತಿತ್ತು. ಅಲ್ಲವೆ?" ಎಂದಳು. ಅವಳು ಹೇಳಿದ್ದು ಸರಿ. ಇಂದು ನಮ್ಮ ಲೆಕ್ಕದ ಪ್ರಕಾರ ನನಗೆ ೫೯ ತುಂಬಿ ೬೦ಕ್ಕೆ ಬಿದ್ದಿತು. ನಿಮ್ಮ ಪ್ರೀತಿಮಯವಾದ ಶುಭಾಶಯದ ಪತ್ರವೂ ಕೈಗೆ ಬಂದು ಅದನ್ನು ಸಮರ್ಥಿಸಿತು. ನಿಮ್ಮ ಮಂಗಳಾಶಂಸೆಗಳಿಗಾಗಿ ನನ್ನ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಆರೋಗ್ಯ ಎಂದಿನಂತೆ ಇದೆ; ಇದಕ್ಕಿಂತ ಅದು ಉತ್ತಮವಾಗುವ ಸಂಭವವಿಲ್ಲ – ಇನ್ನೂ ಕೆಳಕ್ಕೆ ಬೇಗ ಇಳಿಯದಿದ್ದರೆ ಸಾಕು. ಹೆಚ್ಚು ಹೊತ್ತು ಮೇಜಿನ ಮುಂದೆ ಕುಳಿತರೆ ಬೆನ್ನು ನೋವು ಬರುತ್ತದೆ. ಆದರೂ Languages of Karnataka ಕೆಲಸ ಮಾಡುತ್ತಿದ್ದೇನೆ. ಈ ವಾರದಲ್ಲೇ ಮುಗಿಸಬೇಕೆಂದಿದ್ದೆ; ಸಾಧ್ಯವಾಗುವಂತೆ ಕಾಣೆ.

ನಾನು Languages of Karnataka ದ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದೇನೆ ಎಂಬುದನ್ನು ದೃಢಪಡಿಸಲು ಅದರ ಅರ್ಧಕ್ಕೆ ಮೇಲ್ಪಟ್ಟ ಭಾಗದ Typescript ಅನ್ನು ಬೆಂಗಳೂರಿಗೆ ೭ರಂದು ಬಂದಾಗ ಜೊತೆಗೆ ತಂದಿರುತ್ತೇನೆ. ಈ ವಿಷಯವನ್ನು ಶ್ರೀ ಸಂಪದ್ಗಿರಿ ರಾಯರಿಗೂ ದಯವಿಟ್ಟು ತಿಳಿಸಿ. ಅವರಿಗೆ ನನ್ನ ಮೇಲೆ ತುಂಬ ಕೋಪ ಬಂದಿರಬಹುದು!...... ಅಂತೂ ಲೇಖನ ಶೀಘ್ರದಲ್ಲಿಯೇ ಮುಗಿಯುವ ಸೂಚನೆಗಳು ಕಾಣುತ್ತಿವೆ.

ಮದರಾಸಿಗೆ ಏತಕ್ಕೋಸ್ಕರ ಪ್ರಯಾಣ ಮಾಡಿದ್ದಿರಿ! ಅದರ ವಿವರಗಳನ್ನು ನನಗೆ ತಿಳಿಸಿಯೇ ಇಲ್ಲವಲ್ಲ.

* * *

ಮೈಸೂರು, ೧೨-೨-೧೯೬೬

ವಿ.ವಿ. ಮೇಲುಕೋಟೆಯ ಉತ್ಸವ ತುಂಬ ಚೆನ್ನಾಗಿ ನಡೆಯಿತೆಂದು ತಿಳಿದು ನನಗೆ ಸಂತೋಷವಾಯಿತು. ಶ್ರೀ ನಾರಾಯಣಸೆಟ್ಟಿ ಅದನ್ನೇ ಮತ್ತಷ್ಟು ಸಮರ್ಥಿಸಿದರು.

ಗೀತಸೂಕ್ತಿರಲೆಕ್ರಾಂತೊ ಸ್ತೋತಾ ದೇಶಾಂತರಸ್ಥಿತೇ
ಪ್ರತ್ಯಕ್ಷೇ ತು ಕವೌ ಲೋಕಃ ಸಾವಜ್ಞಃ ಸುಮಹತ್ಯಪಿ॥

"ಹಾಡುವುದು ಸೂಕ್ತಿಗಳನವನು ಗತಿಸಿರಲು
ಹೊಗಳುವುದು ಹೊರನಾಡೊಳವನು ನೆಲಸಿರಲು,
ಕಣ್ಣ ಮುಂದಿರಲು ಕವಿ, ಮಂದಿ ಆತನನು
ಕಡೆಗಣಿಸುವುದು ಹಿರಿಮೆವೆತ್ತವನನೂ!"

ಎಂಬ ಉಕ್ತಿ ನಿಮ್ಮ ವಿಷಯದಲ್ಲಿ ಅನ್ಯತವಾಯಿತಲ್ಲ, ಅಷ್ಟೇ ನಮಗೆಲ್ಲ ಸಮಾಧಾನ. ಅದು ಇನ್ನೂ ಅನ್ಯತವಾಗಲಿ. ನಿಮ್ಮ ಕೃತಿಗಳು ಮತ್ತಷ್ಟು ನಮ್ಮವರ ಹೃದಯವನ್ನು ಸೆಳೆಯಲಿ ಅವರ ಆನಂದವನ್ನು ಅಧಿಕಗೊಳಿಸಲಿ.

* * *

ನವದೆಹಲಿ, ೨೨-೮-೧೯೬೬

ಇಲ್ಲಿ ಎಸ್.ವಿ. ಕೃಷ್ಣಮೂರ್ತಿರಾಯರ ಮನೆಯಲ್ಲೇ ಇಳಿದುಕೊಂಡಿದ್ದೇವೆ. ನಿಮ್ಮ 'ಕಾವ್ಯ ಕುತೂಹಲ'ದ ಪ್ರತಿಯನ್ನು ಅವರಿಗೆ ತಲುಪಿಸಿದ್ದೇನೆ. ಅವರೊಡನೆ ನಿಮ್ಮ ವಿಷಯವಾಗಿ ನಿನ್ನೆಯ ಸಂಜೆ ಮಾತನಾಡಿದೆನು. ಬೇಂದ್ರೆಯವರು ಬಿಟ್ಟಿರುವ ಆಕಾಶವಾಣಿ "ಸಲಹಾಕಾರ" (Advisor) ಜಾಗದ ಪ್ರಸ್ತಾಪವನ್ನು ಎತ್ತಿದೆನು. ಇಲ್ಲಿ ಡಾ॥ ನಾರಾಯಣ ಮೆನನ್ ಅವರೊಡನೆ ಮಾತನಾಡುವುದಾಗಿ ಶ್ರೀ ಎಸ್.ವಿ. ಕೃ. ಹೇಳಿದರು. ಬೆಂಗಳೂರಿಗೆ ಅವರು ಸೆಪ್ಟೆಂಬರ್‌ನಲ್ಲಿ ಬಂದಾಗ ಶ್ರೀ॥ ದೀಕ್ಷಿತ್ ಅವರೊಂದಿಗೂ ಮಾತಾಡುತ್ತಾರಂತೆ. ದಯವಿಟ್ಟು ಕೂಡಲೆ ನಿಮ್ಮ "ಹಂಸ-ದಮಯಂತಿ"ಯ ಒಂದು ಪ್ರತಿಯನ್ನು ಶ್ರೀ ಎಸ್.ವಿ.ಕೃ. ಅವರಿಗೆ ರಿಜಿಸ್ಟರ್ಡ್ ಮೂಲಕ ಕಳಿಸಿ. ಶ್ರೀ ವೀಣಾ ದೊರೆಸ್ವಾಮಿ ಅಯ್ಯಂಗಾರರು ನಿಮ್ಮ ಸಂಗೀತವನ್ನು ಕುರಿತು ಬರೆದ ಪ್ರಶಂಸಾವಾಕ್ಯಗಳು ಅದರಲ್ಲಿ ಇವೆ ಎಂದು ಶ್ರೀ ಎಸ್.ವಿ.ಕೃ. ಅವರಿಗೆ ತಿಳಿಸಿದ್ದೇನೆ. ಅಲ್ಲದೆ ನಿಮ್ಮನ್ನು ಕುರಿತು ನಾನು ತಯಾರಿಸಿದ್ದ ಒಂದು ಟಿಪ್ಪಣಿಯ ಪ್ರತಿ ನಿಮ್ಮ ಬಳಿ ಇದೆಯಷ್ಟೆ. ಅದನ್ನೂ ಕೂಡಲೆ ಶ್ರೀ ಎಸ್.ವಿ.ಕೃ. ಅವರಿಗೆ ಕಳಿಸಿಕೊಡಿ-ಒಂದು ವೇಳೆ ಅದು ಕಳೆದು ಹೋಗಿದ್ದರೆ ಡಾ॥ ಮುಗಳಿ ಅವರ ಬಳಿ ನಾನು ಈಚೆಗೆ ಕಳಿಸಿದ ಪ್ರತಿ ಅವರಲ್ಲಿ ಇದೆ – ಅದನ್ನು ತೆಗೆದುಕೊಂಡು ಕಳಿಸಿಕೊಡಿ. ನಾನು ಊರಿಗೆ ಬಂದ ಮೇಲೆ ಅವರಿಗೂ

ನಿಮಗೂ ಪ್ರತಿಗಳನ್ನು ಮಾಡಿ ಕಳಿಸಿಕೊಡುತ್ತೇನೆ. ಅಂತೂ ಪುಸ್ತಕ, ನನ್ನ Note ಎರಡನ್ನೂ ಕೂಡಲೆ ಕಳಿಸಿ.

* * *

(ಪು.ತಿ.ನ. ಅವರ ಎರಡು ಪತ್ರಗಳು)

ಬೆಂಗಳೂರು, ೭-೯-೧೯೬೧

ಪ್ರಿಯ ಶ್ರೀಕಂಠಯ್ಯ

ನಿಮ್ಮ ಕಾಗದ ತಲುಪಿತು. ನನಗೆ ಈಗ ನಿತ್ಯ ರಜ ಇರುವುದರಿಂದ ನೀವು ಬೆಂಗಳೂರಿಗೆ ಬರುವ ವಿಚಾರವನ್ನು ಎಲ್ಲಿ ಇಳಕೊಳ್ಳುತ್ತೀರಿ ಎಂಬುದನ್ನು ಒಂದು ಕಾರ್ಡಿನಲ್ಲಿ ಏಕೆ ತಿಳಿಸಬಾರದು? ನಾನೆ ಬಂದು ಕಾಣುತ್ತಿದ್ದೆ. ಆದರೆ ನಿಮಗೆ ಕಾರ್ಡು ಅಥವಾ ಕಾಗದ ಬರೆಯಬೇಕೆಂದರೆ ತುಂಬ ಬೇಸರ. ನನಗೆ ಗೊತ್ತು. ಆ ಬೇಸರ ನನಗೆ ಈಚೀಚೆಗೆ ಬರುತ್ತಿದೆ. ಬರವಣಿಗೆಯೆಂದರೇ ಬೇಸರ. ಅಷ್ಟೇಕೆ ಇರುವಿಕೆಯೇ ಒಂದು ತರದಲ್ಲಿ ಬೇಸರವೆನಿಸುತ್ತಿದೆ. ಬಂದ ಕಾರ್ಯ ಮುಗಿಯಿತು. ಇನ್ನೇಕೆ ಇಲ್ಲಿ ನಿಲ್ಲಬೇಕು? ಹೇಳಿ ನೋಡೋಣ.

ಇಲ್ಲ ಇನ್ನೂ ಸ್ವಲ್ಪ ಉಳಿದಿದೆ. "ಹಂಸ-ದಮಯಂತಿ" ಮುದ್ರಿತವಾಗುವುದನ್ನು ನೋಡಬೇಡವೆ-ವೆಸ್ಲಿ ಪ್ರೆಸ್ಸಿಗೆ ಕೊರುಲಗೆ ಬರೆದಿದ್ದೆ. ಆತ ಈಗ ತೆಗೆದುಕೊಳ್ಳುತ್ತೇನೆ, proof batch by batch ಕಳಿಸುತ್ತೇನೆಂದು ಬರೆದಿದ್ದಾನೆ. proofಗಳನ್ನು ನಿಮಗೆ ಮೊದಲು ಕಳಿಸುವಂತೆ ಆತನಿಗೆ ಬರೆದಿದ್ದೇನೆ. ದಯವಿಟ್ಟು ಯಾವ ಅಳುಕನ್ನೂ ಇಟ್ಟುಕೊಳ್ಳದೆ ಮುತುವರ್ಜಿಯಿಂದ ನೋಡಿ. Perhaps this may be my last book. ಆದುದರಿಂದ ಅದು ಎಷ್ಟು ಶೋಭಾಯಮಾನವಾಗಿ ಬಂದರೆ ಅಷ್ಟು ಸಂತೋಷ. ದೊರೆಸ್ವಾಮ್ಯೆಯ್ಯಂಗಾರ್ಯರು ಸಂಗೀತವನ್ನು ಶೋಧಿಸಿ ಕೊಡುತ್ತಾರೆ – ನೀವು ಸಾಹಿತ್ಯ-ಇನ್ನದರ ಪರಿಶುದ್ಧ್ಯದ ವಿಷಯದಲ್ಲಿ ನನಗೇಕೆ ಚಿಂತೆ – ನಿಮಗೆ ರುಚಿಸದ ಭಾಗವನ್ನು ನಿರ್ದಾಕ್ಷಿಣ್ಯವಾಗಿ ತಿಳಿಸಿ.

(ಶಿವರಾಮ) ಶಾಸ್ತ್ರಿ (ಬೆಂಗಳೂರಿನಿಂದ) ಹೊರಟುಹೋದದ್ದು ತುಂಬಾ ಬಿಮ್ಮೆನಿಸಿದೆ, ದೇಹ ಪ್ರಕೃತಿ ಅಷ್ಟಕ್ಕಷ್ಟೆ. Lever is dull. Piles not giving me enough trouble. ಆದುದರಿಂದ ಬರಹವನ್ನೂ ಮುಂದುವರಿಸುತ್ತಿದ್ದೇನೆ. ಮೂರ್ತಿರಾಯರು ಈ ವೇಳೆಗೆ ಮೈಸೂರಿಗೆ ಬಂದಿರಬೇಕಲ್ಲವೆ? ಕೊರುಲಾಗಾಲಿ ಶಂಕರನಾರಾಯಣ ರಾಯರಿಗಾಗಲಿ ಹಂಸ-ದಮಯಂತಿ ವಿಚಾರ ಹೆಚ್ಚು ಗಮನ ಕೊಡಿರೆಂದು ಸಂದರ್ಭ ಸಿಕ್ಕಿದಾಗ ತಿಳಿಸಿ.

ಏನೇನೋ ಬರೆಯಬೇಕೆಂದಿದ್ದೆ. ಏಕೋ ಕಾಗದ ಬಹಳ ನೀರಸವಾಯಿತು. ಆದರೆ ಸುಭಾಷಿತವೊಂದಿದೆ – "ಘೃತಲವಣ ತೈಲ ತುಂಡುಲ ಶಾಕೇಂಧನ ಚಿಂತಯಾನುದಿನಂ । ವಿಪುಲಮತೇರಪಿ ಪುಂಸೋನಶ್ಯತಿ ಧೀಮನಂದ ವಿಭವತ್ವಾತ್॥" ಶಂಕರನಾರಾಯಣರಾಯರ ಚೆಕ್ ಬುದ್ಧಿಯನ್ನು ಕುದಿರಸುತ್ತೋ ಏನೋ ನೋಡಬೇಕು. ಆದರೆ ನನ್ನ ಹೆಂಡತಿ ಬೆಂಗಳೂರಿನಲ್ಲಿ

ಒಂದು ಮನೆಯನ್ನು ಕಟ್ಟುವ ಕಣಸನು ಕಾಣುತ್ತಾ ನಮ್ಮೆಲ್ಲರ ಮನಸ್ಸಿಗೂ ಶೈತ್ಯವನ್ನು ಹರಡುತ್ತಿದ್ದಾಳೆ. Think of a house now in Bangalore. It requires 20000/- plus. Those girls on hand........ ನನಗೆ ನನ್ನ ನಾಲ್ಕಾಣೆ ಪದ್ಯ ಜ್ಞಾಪಕಕ್ಕೆ ಬರುತ್ತಿದೆ. "ತಾಯಿ ಕಂಡರೆ ತಲೆ ಬೇನೆ". ತೀರ ಅನರ್ಹನಲ್ಲಿ ಇಷ್ಟು ವಿಶ್ವಾಸವಿಟ್ಟಿರುವುದು ನಿಮ್ಮ ತಪ್ಪು. ನಾನೇನು ಮಾಡಲಿ? ಚಿ॥ಸೌ॥ ನಾಗರತ್ನಳ ಪರೀಕ್ಷೆ ಈ ವೇಳೆಗೆ ಮುಗಿದು ಈಗ ಹಾಯಾಗಿರ ಬಹುದಲ್ಲವೆ? ಏಕೋ ಐದಾರು ದಿನಗಳಿಂದ ನಿಮ್ಮ ಮನೆಯ ಬೆಂಡೆಕಾಯಿ ಗೊಜ್ಜು ನಾಲಗೆಯ ಮೇಲೆ ಆವೇಶ ಬಂದಹಾಗೆ ಬರುತ್ತಿದೆ. ಏನು ಮಾಡಿದರೂ ಆ ರುಚಿ ಇಲ್ಲಿ ಬರಲೊಲ್ಲದು. ನಾಗಭೂಷಣನಿಗೆ ನೆನಪು ನಿಮ್ಮ ಯಜಮಾನಿಗೆ ನಮಸ್ಕಾರ.

* * *

ಬೆಂಗಳೂರು, ೨೬-೨-೧೯೬೫

ಪ್ರಿಯ ಶ್ರೀಕಂಠಯ್ಯ

ಮೈಸೂರಿನ ಸಮಾರಂಭದ ವಿಚಾರವಾಗಿ ಹುಡುಗರಿಂದ ಸಮಾಚಾರವೆಲ್ಲ ತಿಳಿದಿರ ಬೇಕಲ್ಲವೆ?* ಪರವಾಗಿಲ್ಲ ತಾನೆ? ಹೇಗಾದರೂ ಇರಲಿ ಹುಡುಗರು ನನಗೂ ತುಂಬಾ ವಿಶ್ವಾಸ ತೋರಿದರು. ಇದೇನಿದು, ನಾನೂ ಒಬ್ಬ University ಪ್ರಸಾರಾಂಗದ ಸಲಹಕಾರರ ಪೈಕಿ ಸೇರಿಕೊಂಡಿದ್ದೇನಲ್ಲ. ಒಳ್ಳೇದಾಯಿತು ಮೈಸೂರಿಗೆ ಬರಲು ಒಂದು ಸಬೂಬು ಸಿಕ್ಕಿತು. ನಿಮ್ಮ ಮನೆಯಲ್ಲಿ ಎರಡು ಎರಡೂವರೆ ಗಂಟೆ ತುಂಬಾ ಸುಖವಾಗಿ ಕಳೆದೆ – ನಗುವಿನ ಹುಚ್ಚೆಬ್ಬಿಸಿಬಿಟ್ಟೆ. ಊಟವಂತೂ ತುಂಬಾ ಸೊಗಸಾಗಿತ್ತು. ರಸಾಯನಕ್ಕೆ ಏನು ಹೇಳೋಣ. ಅದಿರಲಿ ನಿಮ್ಮ ಮನೆಯವರು ಎಷ್ಟು ಆದರ ತೋರುತ್ತಾರೆ........

ಇನ್ನೇನು ಹೆಚ್ಚು ಕಾಣೆ. ಮರೆತೆ, ಮೊನ್ನೆ ರಾಜರತ್ನಂ ಅವರನ್ನು Arts College ನವರು ಆದರಿಸಿದರು. ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯಿತು. ಪಂಪ ರನ್ನರ ಹೆಸರುಗಳು ಎಲ್ಲರ ಬಾಯಲ್ಲೂ ಓಡಾಡಿದವು. ಮಾಸ್ತಿಯವರು Political speech ಮಾಡಿದರು. ರಾಜಕಾರಣಿಗಳೆಲ್ಲರನ್ನೂ ಬೈದರು – ಕೇಂದ್ರ ೧೩ ಭಾಷೆಗಳನ್ನು ಎತ್ತಿ ಹಿಡಿಯ ಬೇಕೆಂದರು, ಇತ್ಯಾದಿ. ನಾನೂ ಸಭೆಗೆ ಹೋಗಿದ್ದೆ. ಮಾಸ್ತಿ ನನ್ನ ವಿಷಯದಲ್ಲಿ ಶೀತಲವಾಗಿಯೇ ಇದ್ದರು. ಅವರ ಅರಣ್ಯಕಾಂಡ ನನ್ನನ್ನು ಬಾಧಿಸುತ್ತಿದೆ. ನನಗೋ ಕ್ಷಣ ಕೂಡ ವಿರಾಮವಿಲ್ಲ. ನಿಜವಾಗಿ ಬಾಳು ಬೇಸರಿಸುತ್ತಿದೆ. ಜತೆಗೆ ಈ ರೀತಿ ಬಾಧೆಗಳು. ಬೇರೆ ಯಾವ ದೈವದ ಕಾಟವೋ ಕಾಣೆ. ತಿರುಪತಿಗಾದರೂ ಹೋಗಬೇಕು. ಅಕ್ಷರ ಚೆನ್ನಾಗಿಲ್ಲ – ನಿಮಗೆ ಕ್ಲೇಶ. ಆದ್ದರಿಂದ ಬರವಣಿಗೆಯನ್ನೇ ಮೊಟಕು ಮಾಡಿದ್ದೇನೆ.

---

* ಪು.ತಿ.ನ. ಅವರು ಕುವೆಂಪು ಅವರ ಸನ್ಮಾನದ ಅಧ್ಯಕ್ಷತೆ ವಹಿಸಲು ಮೈಸೂರಿಗೆ ಬಂದಿದ್ದರು. ಆಗ ತೀ.ನಂ.ಶ್ರೀ.ಯವರು ಊರಿನಲ್ಲಿರಲಿಲ್ಲ.

Mysore

14th March 1935.

My dear Narasimhachar,

I received your kind letter on Monday. Mr. [illegible] and Myself had been to Mercara to deliver lectures (!) before the Karnataka Sangha there and were returned here on Monday. I might mention that we were very kindly received there.

I am glad to hear that you & your wife have almost completely recovered your health. I am sure your un-productive mood will soon pass away.

I must hasten to mention that I have committed a "breach of promise" in your case. I have sent your Sonnet "[illegible]" to the press today. We wanted it to be the first poem for the [illegible]. Since you refused to send any matter of late to us, I had to take this poem out of the Reserve. I hope you will pardon me immediately.


My mind is absolutely blank. I can't write anything interesting.

Sankranti Sanchike will be posted probably today. The [illegible] of [illegible] appears in it. I hope it will please you.

Expecting your reply...

Yours affly

T. N. Srikantaiya



ಜುಲೈ 23, 1955

S. Jaya-lakshmamma

(orphanage)

ಕನ್ನಡಿಗನ ಕೊರಗು

(An attempt at a Sonnet form in Kannada)

ಸೊಕ್ಕಿನಲಿ ತಲೆಯೆತ್ತಿ, ಜೊತೆಯವರ ಕೂಟದಲಿ,
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ!
ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆ ಬಿದ್ದು,
ಯಾವ ಮಂಕೋ ಕವಿದು, ಹುದುಗಿರುವೆವಲ್ಲ!
ರೊಕ್ಕ ಕೈಯೊಳಗಿಲ್ಲ, ಹುರುಡು ಮೈಯೊಳಗಿಲ್ಲ.
ಹೆಮ್ಮೆಯೊಂದನು ನೆಚ್ಚಿ ದೆಸೆಗೆಟ್ಟೆವಲ್ಲ!
ಅಕ್ಕತಂಗಿಯರೆಲ್ಲ ಮುಂದು ಮುಂದಾಗಿರಲು
ನಮ್ಮ ತಾಯೊಬ್ಬಳೇ ಸೊರಗಿರುವಳಲ್ಲ!
ಅಮ್ಮನನು ಕೈಬಿಡದೆ ಇನ್ನು ಮೆರೆಸುವೆವೆ?
ರಾಯ ಹೆಸರನು ತಿರುಗಿ ಗಳಿಸಿ ಕೊಳ್ಳುವೆವೆ?
ಸರಿಯವರ ತಲೆ ಮೆಟ್ಟಿ ಮುಂದೆ ನಿಲ್ಲುವೆವೆ?
ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೆ!

ಅಕ್ಷಯ ಪುಷ್ಯ ಶು॥ ೭]

ಈ ಗ್ರಂಥ ನಮ್ಮ ಪೂಜ್ಯ ತಂದೆಯವರಾದ (ದಿ) ಪ್ರೊ॥ ತೀ.ನಂ.ಶ್ರೀಕಂಠಯ್ಯನವರ ಪುಣ್ಯ ಸ್ಮರಣೆ. ಅವರ ಜೀವನ, ವ್ಯಕ್ತಿತ್ವ ಮತ್ತು ಪರಿಸರಕ್ಕೆ ಸಂಬಂಧಪಟ್ಟ ಅನೇಕ ದಶಕಗಳ ಸ್ವಾರಸ್ಯಕರವಾದ ಮತ್ತು ಉಪಯುಕ್ತವಾದ ಸಂಗತಿಗಳು ಮತ್ತು ದಾಖಲೆಗಳನ್ನು ಸಂಗ್ರಹಿಸಿ ಸಹೃದಯರ ಗಮನಕ್ಕೆ ತರಬೇಕೆನ್ನುವ ನಮ್ಮ ಅನೇಕ ವರ್ಷಗಳ ಮಹದಾಶೆಯ ಫಲ. "ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು" ಎನ್ನುವ ತೀ.ನಂ.ಶ್ರೀ. ಅವರದೇ ಆದ ಉಕ್ತಿಯಂತೆ ಸುಪ್ರಸಿದ್ಧ ವಿದ್ವಾಂಸ ರಾದರೂ ನಮ್ರತೆಯ ಚಿರ ವಿದ್ಯಾರ್ಥಿಯಾಗಿ ಅವರು ಬಾಳಿದ ಆದರ್ಶ ಜೀವನವನ್ನು ಅವರ ಸ್ವಂತ ಬರಹಗಳು, ಘಟನೆಗಳು ಮತ್ತು ವಿವಿಧ ಲೇಖಕರ ದೃಷ್ಟಿಗಳಲ್ಲಿ ಪರಿಶೀಲಿಸಿ, ಅದರ ಶೈಕ್ಷಣಿಕ ಮತ್ತು ಮೌಲಿಕ ಮಹತ್ವ ಗಳನ್ನು ಗುರುತಿಸುವ ಒಂದು ಪ್ರಯತ್ನ ಇದಾಗಿದೆ. "ಪ್ರೊ॥ ತೀ.ನಂ.ಶ್ರೀ. ಜನ್ಮ ಶತಮಾನೋತ್ಸವ ವರ್ಷ"ದಲ್ಲಿ ಇದು ನಾವು ಅವರಿಗೆ ಸಲ್ಲಿಸುವ ನಮನ.

ತೀ. ಶ್ರೀ. ನಾಗಭೂಷಣ

ಬೆಲೆ : ರೂ. 300/-

